REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ | ಉಡುಪಿ, 6—1—1955 | ಸಂಚಿಕೆ ೧೮

VOL. 34 | NO. 18

ಸ್ವಾತಂತ್ರ್ಯಾಂದೋಲನ ಕಾಲದಲ್ಲಿ ತೋರಿಸಲಾದ ಉತ್ಸಾಹದಿಂದಲೇ ಸಮಾನ ಅವಕಾಶವುಳ್ಳ ಸಾಮಾಜಿಕ ವ್ಯವಸ್ಥೆಯನ್ನು ನೆಲೆಗೊಳಿಸುವುದಕ್ಕೂ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸುವುದಕ್ಕೂ ನಿಸ್ವಾರ್ಥವೃತ್ತಿಯಿಂದ ಮತ್ತು ಶಿಸ್ತಿನಿಂದ ಭಾರತೀಯರು ಕಾರ್ಯಪ್ರವೃತ್ತರಾಗದೆ ಗತ್ಯಂತರವಿಲ್ಲ. ರಾಜಕೀಯ ಸ್ವಾತಂತ್ರ್ಯ, ಸಾಮಾಜಿಕ ನ್ಯಾಯ ಮತ್ತು ಅಂತಾರಾಷ್ಟ್ರೀಯ ಶಾಂತಿ—ಇವು ಮೂರು ತತ್ವಗಳೇ ಮಾನವನ ಪ್ರಗತಿಯ ಮತ್ತು ಪ್ರಜಾಪ್ರಭುತ್ವ ಸಿದ್ಧಾಂತದ ಮೂಲಾಧಾರ. ಸಂಪತ್ತಿನ ಸಮಾನ ವಿತರಣೆಯೂ ನಾಗರಿಕ ಅಧಿಕಾರಗಳ ಮನ್ನಣೆಯೂ ಎಲ್ಲರಿಗೂ ಉತ್ಕರ್ಷಹೊಂದುವ ಅಧಿಕಾರವೂ ದೊರಕುವುದು ಅವಶ್ಯ.

—ಡಾ. ರಾಧಾಕೃಷ್ಣ.

ಮೂಲಭೂತ ಆದರ್ಶ

ಕಲ್ಯಾಣ ರಾಷ್ಟ್ರದ ಕರ್ತವ್ಯ ಧರ್ಮಗಳನ್ನು ಕುರಿತಾಗಿ ಕಳೆದವಾರ ಪ್ರಸಿದ್ಧ ವ್ಯಕ್ತಿಗಳು ಕೆಲವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಪ್ರಧಾನ ಮಂತ್ರಿಗಳು ಮಹಾರಾಷ್ಟ್ರದ ಸಾಮಾಜಿಕ ಪರಿಷತ್ತಿಗೆ ಕಳುಹಿಸಿದೊಂದು ಸಂದೇಶದಲ್ಲಿ "ಇಷ್ಟರ ವರೆಗೆ ನಮ್ಮ ದೃಷ್ಟಿಕೋಣವು ಸ್ಥೂಲವಾಗಿ ರಾಜಕೀಯವೇ ಆಗಿದ್ದು ಆರ್ಥಿಕ, ಅದಕ್ಕೂ ಹೆಚ್ಚಾಗಿ ಸಾಮಾಜಿಕ ಮುಖವನ್ನು ನಾವು ಮರೆತಿದ್ದೇವೆ. ಆದರೆ ಒಂದರೊಡನೊಂದು ಸಂಬಂಧಿಸಿರುವ ಇವೆಲ್ಲ ಮೂಲ ಸಮಸ್ಯೆಗಳನ್ನು ಒಟ್ಟಿಗೆ ನಿವಾರಿಸದಿದ್ದರೆ ರಾಷ್ಟ್ರವು ಪ್ರಗತಿಹೊಂದಲಾರದು" ಎಂದರು. ಅಹಮದಾಬಾದಿನ ನಗರ ಸಭೆಯ ಶತವಾರ್ಷಿಕೋತ್ಸವದ ಸಂದರ್ಭದಲ್ಲಿ ಮಾತನಾಡಿದ ಉಪರಾಷ್ಟ್ರಾಧ್ಯಕ್ಷರು "ನಮ್ಮ ರಾಜಕೀಯ ಸಮಸ್ಯೆಗಳು ಸ್ವಾತಂತ್ರ್ಯೋತ್ತರದಲ್ಲಿ ಕಡಿಮೆಯಾಗಿವೆ; ಆದರೆ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಬಹಳವಾಗಿ ಬೆಳೆದಿವೆ" ಎಂದುದಲ್ಲದೆ "ಸಾಮಾಜಿಕ ನ್ಯಾಯ ದೊರೆತು ದೇಶದಲ್ಲಿ ಸಂಘಟನೆಯುಂಟಾದರೆ ಮಾತ್ರ ಪ್ರಜಾಪ್ರಭುತ್ವವು ಉಳಿಯುತ್ತದೆ ಎಲ್ಲ ಸುಖ ಸೌಕರ್ಯಗಳು ಕೆಲವೇ ಜನರಿಗೆ ದೊರೆತು ಅನೇಕರು ಸದಾ ತೊಂದರೆ ಮತ್ತು ಸಿರಾಶೆಗಳಿಂದ ಬಹುಕಾಲ ಬಳಲುತ್ತಿರಲಾರರು" ಎಂದು ಎಚ್ಚರಿಕೆಯನ್ನೂ ಕೊಟ್ಟರು ಶ್ರೀ ಎಸ್. ಕೆ. ಪಾಟೀಲರು ಮುಂಬಯಿಯಲ್ಲಿ ತಮ್ಮ ಗೌರವಾರ್ಥ ಹಿಂದ್ ರಾಷ್ಟ್ರೀಯ ಮಜೂರ ಸಭೆಯವರು ಏರ್ಪಡಿಸಿದ್ದ ಸಭೆಯಲ್ಲಿ "ಭಾರತದಲ್ಲಿ ವರ್ಗರಹಿತ ಸಮಾಜವಾದಿ ಪದ್ಧತಿಯನ್ನು ಅನುಷ್ಠಾನಕ್ಕೆ ತರಲು ಎಲ್ಲ ಮುಖಂಡರೂ ಪ್ರಯತ್ನಿಸಬೇಕು; ಸಮಾಜದ ಹಿತದೃಷ್ಟಿಯಿಂದ ಸಾರ್ವಜನಿಕ ಅಥವಾ ಖಾಸಗಿ ರೀತಿಯಲ್ಲಿ ಕೆಲಸಮಾಡುವ ಕಾರ್ಮಿಕರನ್ನು ಶಾಂತವಾದ ಮತ್ತು ಪ್ರಜಾಪ್ರಭುತ್ವ ತತ್ವಕ್ಕೆ ತಕ್ಕುದಾದ ದಾರಿಯಲ್ಲಿ ಮುನ್ನಡೆಸಬೇಕು" ಎಂದು ಉಪದೇಶಿಸಿದರು.

ಪ್ರಮುಖರಾದವರ ಮೇಲಿನ ಮಾತುಗಳನ್ನು ಪರಿಶೀಲಿಸಿದರೆ, ನಾವಿನ್ನೂ ಕಲ್ಯಾಣ ರಾಷ್ಟ್ರದ ವೈಶಿಷ್ಟ್ಯವಾದ ಸಾಮಾಜಿಕ ಸಾಧಾರಣೆಯ ಮೂಲಭೂತ ಆದರ್ಶವನ್ನು ಸಾಧಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಮಧ್ಯ ಯುಗೀನ ಕಾಲದಲ್ಲಿ ರಾಷ್ಟ್ರವನ್ನು ವಿದೇಶಗಳ ಆಕ್ರಮಣದಿಂದಲೂ ದೇಶದೊಳಗಿನ ಪುಂಡರಿಂದಲೂ ರಕ್ಷಿಸಿಕೊಳ್ಳುವುದಕ್ಕೋಸ್ಕರ ಸುವ್ಯವಸ್ಥಿತ ಸೈನ್ಯವನ್ನೂ ಸಮರ್ಥ ಪೋಲೀಸು ಪಡೆಯನ್ನೂ ಸರಕಾರವು ಇಟ್ಟುಕೊಂಡರೆ ಸಾಕೆಂಬ ಭಾವನೆ ಇದ್ದಿತು. ಆರ್ಥಿಕ ಹಾಗು ಸಾಮಾಜಿಕ ರಂಗದಲ್ಲಿ ಸರಕಾರದವರು ಯಾವತರದ ಹಸ್ತಕ್ಷೇಪವನ್ನೂ ಮಾಡುತ್ತಿರಲಿಲ್ಲ—ಜನರೇ ತಮಗೆ ತಿಳಿದಂತೆ ಸಮಾಜದ ಏಳಿಗೆಗಾಗಿ ಪ್ರಯತ್ನಿಸುತ್ತಿದ್ದರು. ಭಾರತದಲ್ಲಿ ಮತ ಪ್ರವರ್ತಕರೂ ಸಾಧು ಸಂತರೂ ಧರ್ಮ ಭೀರುಗಳೂ ಅದೃಷ್ಟ ಹೀನರಾದ ಬಾಂಧವರಿಗೆ ಅನ್ನದಾನ, ವಸ್ತ್ರದಾನಾದಿಗಳನ್ನು ಮಾಡಿ ಅವರನ್ನು ಪೋಷಿಸುವ, ಬಡವರಿಗೆ ನೆರವಾಗುವ, ದುಃಖಿತರ ಕಣ್ಣೀರನ್ನು ಒರಸಿ ಸಂತೈಸುವ ಘನವಾದ ಕಾರ್ಯದಲ್ಲಿ ತಾವಾಗಿಯೇ ನಿರತರಾಗುತ್ತಿದ್ದರು ಅವರ ಮೇಲೆ ಧರ್ಮದ ಅನುಶಾಸನ ನಡೆಯುತ್ತಿತ್ತೇ ಹೊರತು, ಸರಕಾರವು ಅವರಿಗೇನೂ ಹೇಳುತ್ತಿರಲಿಲ್ಲ. ಇದು ಅವರ ಗೊಡವೆಗೆ ಹೋಗುತ್ತಿರಲಿಲ್ಲ. ಯುರೋಪುಖಂಡದಲ್ಲೂ ಔದ್ಯೋಗಿಕ ವಿಪ್ಲವವು ನಡೆಯುವವರೆಗೆ ಪರಿಸ್ಥಿತಿ ಇದೇತೆರನಾಗಿದ್ದಿತು—ಭೂತ ದಯೆಯ ಭಾವನೆಯಿಂದ ಪ್ರೇರಿತರಾದ ಎಷ್ಟೋ ಮಂದಿ ಶಾಲೆಗಳನ್ನು ತೆರೆದು ಜನರನ್ನು ಸುಸಂಸ್ಕೃತರನ್ನಾಗಿ ಮಾಡಲು, ಆಸ್ಪತ್ರೆಗಳನ್ನು ತೆರೆದು ರೋಗಿಗಳಿಗೆ ಹೊಸ ಜೀವನವನ್ನು ದಯಪಾಲಿಸಲು, ಬೇರೆ ಬೇರೆ ರೀತಿಯ ಸಾಮಾಜಿಕ ಸುಧಾರಣೆಗಳನ್ನು ಮಾಡಲು ಮುಂದಾದರು. ಭಾರತದಲ್ಲಿ ಅಸ್ಪೃಶ್ಯತೆಯ ನಿವಾರಣೆ, ಸರ್ವಧರ್ಮ ಸಮನ್ವಯ ದೃಷ್ಟಿ ಮುಂತಾದವುಗಳ ಕಡೆಗೆ ಸಾಮಾಜಿಕರು ಗಮನ ಹರಿಸಿದಂತೆಯೇ ಯುರೋಪ್ಯ ರಾಷ್ಟ್ರಗಳಲ್ಲಿ ಸೆರೆಮನೆಯ ಸುಧಾರಣೆ, ವೇಶ್ಯಾವೃತ್ತಿಯ ಉಚ್ಚಾಟನೆ ಮುಂತಾದವುಗಳ ಕಡೆಗೆ ಸುಧಾರಕರು ಲಕ್ಷ್ಯವಿತ್ತರು.

ಔದ್ಯೋಗಿಕ ವಿಪ್ಲವದ ದೆಸೆಯಿಂದ ಯಂತ್ರಗಳನ್ನು ಇಟ್ಟುಕೊಂಡು ಅವುಗಳು ಉತ್ಪಾದಿಸಿದ ಸರಕನ್ನು ಮಾರಿ ಹಣವುಳ್ಳವನೊಬ್ಬನೇ ಸಂಪತ್ತನ್ನು ಸಂಗ್ರಹ ಮಾಡಿಟ್ಟುಕೊಳ್ಳುವುದು ಸಾಧ್ಯವಾಯಿತು; ಜನರು ಕೆಲಸವನ್ನು ಕಳೆದುಕೊಂಡರು; ಅಥವಾ ಲಾಭವೇ ಗುರಿಯಾಗಿರುವ ವ್ಯವಸ್ಥಾಪಕರ ಕೈಯಲ್ಲಿ ಅತ್ಯಲ್ಪ ಕೂಲಿಗಾಗಿ ಅತ್ಯಧಿಕ ಸಮಯ ದುಡಿಯಲೇಬೇಕಾದ ಪರಿಸ್ಥಿತಿ ಬಂದೊದಗಿತು. ಇದರಿಂದ ಸಾಮಾಜಿಕ ಮನೋಭಾವನೆಯ ಮೇಲೆ ಗಾಢವಾದ ಪ್ರಭಾವ ಪುಂಟಾಯಿತು.—ಸಂಪತ್ತು ಸಮಾಜದ್ದು ಎಂಬ ತತ್ವಕ್ಕೆ ಬಂಡವಾಳದಾರರ ಶೋಷಕ ನೀತಿಯೇ ಜನ್ಮ ಕೊಟ್ಟಿತು! ಯಂತ್ರಗಳೊಡನೆ ಜೀವನ—ಮರಣದ ಹೋರಾಟವನ್ನೂ ಸ್ಪರ್ಧೆಯ

(೧೧ನೇ ಪುಟ ನೋಡಿರಿ)

ವ್ಯಕ್ತಿಸ್ವಾತಂತ್ರ್ಯದ ಅಪಹಾರವನ್ನು ಕುರಿತು ಅಮೆರಿಕದಅಧ್ಯಕ್ಷ ಅಬ್ರಹಾಂ ಲಿಂಕನ್ನರು ಒಂದು ರೂಪಕದ ನೆನಪು ಮಾಡಿಕೊಡುತ್ತಿದ್ದರು. ಆದರಂತೆ ಕುರಿಹಿಂಡಿನಲ್ಲಿ ತೋಳವೊಂದು ಪ್ರವೇಶಿಸಿತು. ಕುರುಬನು ಅದನ್ನು ನೋಡಿದವನೇ ದೊಣ್ಣೆಯನ್ನೆತ್ತಿ ತೋಳವನ್ನು ಓಡಿಸಿದನಲ್ಲದೆ ಕುರಿಹಿಂಡನ್ನು ಸುರಕ್ಷಿತ ಪ್ರದೇಶಕ್ಕೆ ಅಟ್ಟಿದನು.

ಇದರಿಂದ ಸಂಪ್ರೀತಗೊಂಡ ಕುರಿಗಳು ತಮ್ಮ ರಕ್ಷಕನೆಂದು ಕುರುಬನನ್ನು ಶ್ಲಾಘಿಸಿದವು. ಆದರೆ ತೋಳವು ಮಾತ್ರ ಸ್ವೇಚ್ಛಾ ವಿಹಾರದ ಸ್ವಾತಂತ್ರ್ಯವನ್ನು ಕಸಿದುಕೊಂಡವನೆಂದು ಕುರುಬನ ಅವಹೇಳನೆಯನ್ನು ಮಾಡಿತು

ಹಿಂದುಸ್ಥಾನ್ ಕೋ ಒಪರೇಟಿವ್ 1953ರ ಹೊಸ ವ್ಯವಹಾರ ರೂಪಾಯಿ

31 ದಶಂಬರ 1953ಕ್ಕೆ ಅಂತ್ಯವಾಗುವ
ತ್ರೈವಾರ್ಷಿಕ ಮೌಲ್ಯ ನಿರ್ಣಯದಲ್ಲಿ
ಹೊಸ ಬೋನಸನ್ನು ಘೋಷಿಸುತ್ತದೆ.
18 ಕೋಟಿ 92 ಲಕ್ಷಕ್ಕೂ ಮಿಕ್ಕಿದೆ.

ಬೋನಸ್ಸು!
ಒಂದು ವರ್ಷಕ್ಕೆ ಸಾವಿರಕ್ಕೆ
ಜೀವಾವಧಿ ವಿಮೆಯ ಮೇಲೆ ರೂ. 17/8-
ಅವಧಿ ವಿಮೆಯ ಮೇಲೆ ರೂ. 15/

ಸೇಕಡ $2\frac{1}{4}$ರಂತೆ ಬಡ್ಡಿ ಅಂದಾಜು ಮಾಡಲಾಗಿದೆ.

ಭಾರತೀಯ ವಿಮಾ ಕ್ಷೇತ್ರದಲ್ಲಿ, 1953ರಲ್ಲಿ ಹೊಸ ವ್ಯವಹಾರದಲ್ಲಿ ಅತ್ಯಧಿಕ ಹೆಚ್ಚು— ಅಂದರೆ ರೂ. 2 ಕೋಟಿ 50 ಲಕ್ಷದಷ್ಟು ಹೆಚ್ಚು ವಿಮೆಯನ್ನು ಮಾಡಿ, ಹೊಸ ಮೌಲ್ಯ ನಿರ್ಣಯದಲ್ಲಿ ಉತ್ತೇಜಕ ಫಲವನ್ನು ಘೋಷಿಸುತ್ತದೆ.

ಪ್ರಗತಿದಾಯಕ ರಕ್ತ ಮತ್ತು ರಚನಾತ್ಮಕ ತತ್ವಗಳೊಡನೆ ಕೂಡಿ—ಹಿಂದೂಸ್ಥಾನ್—ದವರು ಎಂದಿಗಿಂತಲೂ ಸ್ಥಿರ ಮತ್ತು ಬಲ್ಪವಾದ ಪರಿಸ್ಥಿತಿಯಲ್ಲಿ ತಮ್ಮ ಜವಾಬ್ದಾರಿಯನ್ನರಿತು ದೃಢತೆಯಿಂದ ಮುನ್ನಡೆಯುತ್ತಲಿದ್ದಾರೆ.

ಮಿಲಿಯಾಂತರ ಜನರ ಭವಿಷ್ಯತ್ತಿನ ಹೊಣೆಗಾರಿಕೆಯಾಗಿದೆ.

ಹಿಂದೂಸ್ಥಾನ್ ಕೋ-ಓಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್
ಪ್ರಧಾನ ಕಛೇರಿ: ಹಿಂದೂಸ್ಥಾನ್ ಬಿಲ್ಡಿಂಗ್ಸ್—ಕಲ್ಕತ್ತಾ-13.
ಮದ್ರಾಸು ಆಫೀಸು: ಹಿಂದೂಸ್ಥಾನ್ ಬಿಲ್ಡಿಂಗ್ಸ್, ಆರ್ಮೇನಿಯಂ ಸ್ಟ್ರೀಟ್, ಮದ್ರಾಸು-1.
ಮಂಗಳೂರು ಆಫೀಸು. ಕೆ ಎಸ್. ರಾವ್ ರೋಡ್, ಮಂಗಳೂರು-1.

ಆಸ್ತಿಯನ್ನು ವಶಪಡಿಸಿಕೊಳ್ಳುವ ಹಕ್ಕು

ಘಟನೆಯ ತಿದ್ದುಪಡಿಯಲ್ಲಿ ವ್ಯಕ್ತಗೊಂಡ ಆಶಯ

ಮದ್ರಾಸು ರಾಜ್ಯದ ವಕೀಲರ ಪರಿಷತ್ತು ಕಳೆದ ವಾರ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತಿಹೊಂದಿರುವ ಶ್ರೀ ಎಂ. ಪತಂಜಲಿ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿದಾಗ ಭಾರತದ ರಾಜ್ಯ ಘಟನೆಯ ೩೧ನೇ ಕಲಮಿಗೆ ಸರಕಾರದವರು ಮಾಡಬೇಕೆಂದಿರುವ ತಿದ್ದುಪಡಿಯ ಕುರಿತು ವಿಶೇಷವಾದ ಕಳವಳವನ್ನು ವ್ಯಕ್ತಪಡಿಸಿತು. "ಆಸ್ತಿಯ ಒಡೆತನದ ಅಧಿಕಾರಕ್ಕೆ ಸಂಬಂಧಿಸಿದ ಈ ಕಲಮಿಗೆ ವರಿಷ್ಠ ನ್ಯಾಯಾಲಯದ ತೀರ್ಮಾನಗಳ ಬಗ್ಗೆ ಉಂಟಾದ ತಪ್ಪು ಕಲ್ಪನೆಯೇ ಹೇತುವೆಂದು ಭಾಸವಾಗುತ್ತದೆ. ಘಟನೆಯ ೩೧ನೇ ಕಲಮಿನ ೨ನೇ ಉಪನಿಯಮದಲ್ಲಿ ಹೇಳಲ್ಪಟ್ಟ ರೀತಿಯಲ್ಲಿ ಹೊರತು ಬೇರಾವ ಉದ್ದೇಶಕ್ಕಾದರೂ ಯೋಗ್ಯ ಪರಿಹಾರವಿಲ್ಲದೆ ಆಸ್ತಿಯ ಒಡೆತನವನ್ನು ಕಸಿದುಕೊಳ್ಳುವುದು ಮಾನವನ ಮೂಲಭೂತ ಅಧಿಕಾರವನ್ನೇ ಅಲ್ಲಗಳೆಯುವ, ದೇಶದ ಆರ್ಥಿಕ ವ್ಯವಸ್ಥೆಯನ್ನು ಕೆಡಿಸಿಬಿಡುವ ಮತ್ತು ವಿದೇಶಗಳ ಬಂಡವಾಳವನ್ನು ನಿರುತ್ಸಾಹಗೊಳಿಸುವ ಗಂಡಾಂತರಪ್ರಾಯವಾದ ಕ್ರಮವಾಗಿದೆ" ಎಂದು ಪರಿಷತ್ತು ಒಂದು ಗೊತ್ತುವಳಿಯನ್ನು ಸ್ವೀಕರಿಸಿತು. "ಆಸ್ತಿಯನ್ನು ವಶಪಡಿಸಿಕೊಳ್ಳುವ ಕ್ರಮಗಳ ನ್ಯಾಯಾನ್ಯಾಯ ವಿಮರ್ಶೆಯನ್ನು ಮಾಡುವ ನ್ಯಾಯಸ್ಥಾನಗಳ ಅಧಿಕಾರವನ್ನು ಕಸಿದುಕೊಳ್ಳುವ ಈ ತಿದ್ದುಪಡಿಯಿಂದ ನಮ್ಮ ಶಾಸನಾಂಗ ಮತ್ತು ಕಾರ್ಯಾಂಗಗಳು ಅಧಿಕಾರದ ದುರುಪಯೋಗ ನಡೆಸದಂತೆ ಮತ್ತು ಮಿತಿಮೀರಿ ವರ್ತಿಸದಂತೆ ನೋಡಿಕೊಳ್ಳಲು ಘಟನೆಯು ನ್ಯಾಯಪ್ರಾಪ್ತವಾದ ಭದ್ರತೆಯನ್ನೆ ನಷ್ಟಪಡಿಸಿದಂತಾಗುವುದು" ಎಂದೂ ಪರಿಷತ್ತು ಅಭಿಪ್ರಾಯವನ್ನಿಟ್ಟಿತು.

ವಕೀಲರ ಪರಿಷತ್ತಿನಲ್ಲಿ ಸಾರ್ವಜನಿಕರ ಗಮನವನ್ನು ಸೆಳೆದ ವಿಶೇಷ ಸಂಗತಿಯೆಂದರೆ ಮೇಲಿನ ನಿರ್ಣಯ ಮತ್ತು ಅದಕ್ಕೆ ಸಂಬಂಧಿಸಿದಂತೆ ನಡೆದ ವಿಚಾರವಿನಿಮಯ ರೂಪದ ಭಾಷಣಗಳೆಂದು ಹೇಳಬಹುದು. ಇಲ್ಲಿ ತಿದ್ದುಪಡಿಗೆ ಪರವಾಗಿಯೂ ವಿರೋಧವಾಗಿಯೂ ಸಮರ್ಥರು ಅಭಿಪ್ರಾಯಗಳನ್ನು ಮಂಡಿಸಿದ್ದರು. ಸರಕಾರದೊಡನೆ ಸಂಬಂಧವಿಟ್ಟುಕೊಂಡು ಅದರಲ್ಲಿ 'ಆಸ್ಥೆ'' ಯುಳ್ಳವರು ತಿದ್ದುಪಡಿಯನ್ನು ಬೆಂಬಲಿಸಿದರೆ ಸಾರ್ವಜನಿಕ ಹಿತದೃಷ್ಟಿಯನ್ನೆ ಹೊಂದಿದ ನಿಷ್ಪಕ್ಷಪಾತ ಮನೋಭಾವದ ವಕೀಲ ವರ್ಗದ ಪ್ರಭೃತಿಗಳು ಅದನ್ನು ಖಂಡಿಸಿದರು. ಇವರಿಬ್ಬರವಾದವನ್ನು ಭಾರತದ ಪ್ರಸ್ತುತ ಪರಿಸ್ಥಿತಿಯ ಒರೆಗಲ್ಲಿಗೆ ಹಚ್ಚಿದ ಪಕ್ಷದಲ್ಲಿ ಸರಕಾರ ತಂದಿರುವ ತಿದ್ದುಪಡಿಯಲ್ಲಿ ಕೆಡುಕಿನ ಅಂಶಕ್ಕಿಂತಲೂ ಒಳಿತಾದ ವಿಷಯಗಳೇ ಹೆಚ್ಚಿಗಿರುತ್ತವೆಂಬ ಸಂಗತಿ ವೇದ್ಯವಾಗದಿರದು. ಇದನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕಾದರೆ, ಇಂದಿನ ರಾಜ್ಯ ವ್ಯವಸ್ಥೆಯ ಮೂಲಭೂತ ಧ್ಯೇಯ ಮತ್ತು ವೈಶಿಷ್ಟ್ಯಗಳೇನೆಂಬುದನ್ನು ತಿಳಿದಿರುವುದು ಅತ್ಯಗತ್ಯ: ಪತಂಜಲಿ ಶಾಸ್ತ್ರಿಗಳ ಮಾತಿನಲ್ಲಿಯೇ ಇದನ್ನು ವರ್ಣಿಸುವುದಾದರೆ "ನಮ್ಮ ಘಟನೆಯು ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಉದ್ದೇಶವನ್ನು ಪ್ರತಿಪಾದಿಸುತ್ತದೆ. ಇದರ ಅರ್ಥವೆಂದರೆ, ಇಷ್ಟರವರೆಗೆ ಬಂಡವಾಳಶಾಹಿತ್ವಕ್ಕೆ ಅವಕಾಶವಿದ್ದ ವ್ಯವಸ್ಥೆಯು ವಯಸ್ಕ ಮತದಾನದ ಅಧಿಕಾರವನ್ನು ಪಡೆದಿರುವ ಜನಸಾಮಾನ್ಯರೇ ಕೇಂದ್ರವಾದ ಸಮಾಜವಾದ ಪದ್ಧತಿಯಲ್ಲಿ ಪರಿವರ್ತನೆ ಹೊಂದುತ್ತದೆ. ಆಗ ಆಸ್ತಿಯುಳ್ಳ ವರ್ಗದ ಕೈಯಲ್ಲಷ್ಟೇ ಇದ್ದ ಅಧಿಕಾರವು ಸಮಗ್ರ ಜನತೆಯನ್ನು ಸೇರುತ್ತದೆ. ಘಟನೆಯ ನಿರ್ದೇಶಕ ತತ್ವಕ್ಕೆ ಅನುಗುಣವಾಗಿ ಸಂಪತ್ತು ಕೆಲವೇ ಜನರ ಕೈಯಲ್ಲಿ ಸಂಗ್ರಹವಾಗದೆ, ಎಲ್ಲರಲ್ಲಿಯೂ ಹಂಚಿಹೋಗುವಂತೆ ಸರಕಾರ ನೋಡಿಕೊಳ್ಳಬೇಕಾಗಿದ್ದು, ಬಡವರ ಮತ್ತು ಧನಿಕರ ನಡುವಣ ಅಂತರವನ್ನು ಅದು ಕಡಿಮೆ ಮಾಡಲು ಬದ್ಧವಿರುತ್ತದೆ."

ಘಟನೆಯ ಮೂಲಭೂತ ಅಂಶಗಳನ್ನು ಮೇಲಿನಂತೆ ಯಥಾರ್ಥವಾಗಿ ವರ್ಣಿಸಿದ ನಿವೃತ್ತ ನ್ಯಾಯಾಧೀಶರು ಇದ್ದುದನ್ನು ಹಂಚಿಕೊಳ್ಳುವ ಕ್ರಮಗಳ ಕಡೆಗೆ ಲಕ್ಷ್ಯ ಹೆಚ್ಚಾಗಿ ಪೂರೈಸಲ್ಪಡುತ್ತಿವೆಯೇ ಹೊರತು, ಸಂಪತ್ತನ್ನು ಹುಟ್ಟಿಸಿ, ಜೀವನ ಮಟ್ಟವನ್ನು ಎತ್ತರಿಸುವ ಕಡೆಗೆ ಯಾರ ಗಮನವೂ ಸಾಕಷ್ಟು ಹರಿದಿಲ್ಲ ಎಂಬ ವ್ಯಂಗ್ಯವನ್ನಾಡಿದ್ದು ಅಷ್ಟು ಸಮಂಜಸವಲ್ಲ. ಯಾವ ಮೂಲಭೂತ ಅಧಿಕಾರದ ಹೆಸರಿನಲ್ಲಿ ಆಸ್ತಿಯನ್ನು ಪರಿಹಾರವಿಲ್ಲದೆ ಕಸಿದುಕೊಳ್ಳುವ ಕ್ರಮವನ್ನು ಉಳ್ಳವರು ವಿರೋಧಿಸುವರೋ ಅದೇ ಮೂಲಭೂತ ಅಧಿಕಾರದ ಬಲದಿಂದ ಜನಸಾಮಾನ್ಯರು ಸಂಪತ್ತಿನಲ್ಲಿ ತಮ್ಮ ಪಾಲನ್ನು ಕೇಳುತ್ತಿರುವರೆಂದರೆ ತಪ್ಪಾಗದು. ತಮ್ಮ ಜೀವನ ಮಟ್ಟವನ್ನು ಎತ್ತರಿಸುವುದಕ್ಕಾಗಿಯೇ ಉಳ್ಳವರ ಸಂಪತ್ತಿನಲ್ಲಿ ತಮಗೂ ಪಾಲು ಸಿಗಬೇಕೆಂದು ಸಾಮಾನ್ಯರು ಕೇಳುತ್ತಿರುವರೆಂದೂ ಹೇಳಬಹುದು—ಬೀಡದ ಅಂಡಿಯನ್ನಿಟ್ಟಾದರೂ ದಿನಗಳೆಯಬೇಕಾದರೆ ಕೆಲವು ರೂಪಾಯಿಗಳ ಬಂಡವಾಳವಾದರೂ ಬೇಡವೆ? ಅದನ್ನು ಉಳ್ಳವರ ಕೈಯಿಂದ ಪಡೆಯುವುದರಲ್ಲಿ ಅಯೋಗ್ಯವಾದದ್ದೇನೂ ಇಲ್ಲ—ದುರುದ್ದೇಶವೂ ಇದರಲ್ಲಿಲ್ಲ. ಭಾರತದಲ್ಲಿ ಭೂಮಿಯ ಸಮಸ್ಯೆಯೇ ಎಲ್ಲ ಸಮಸ್ಯೆಗಳಿಗಿಂತಲೂ ದೊಡ್ಡದೆಂಬ ಮದ್ರಾಸಿನ ಅಡ್ವೊಕೇಟ್ ಜನರಲ್ ಶ್ರೀ ವಿ.ಟಿ. ತಿರುವೆಂಕಟಾಚಾರಿಯವರ ಮಾತನ್ನು ನೆನೆದರೆ, ಭೂವಿತರಣೆ ಮಾಡುವುದರಿಂದ ಮಾತ್ರವೇ ಕೃಷಿಕರ ಸಂಪತ್ತನ್ನು ಹೆಚ್ಚಿಸಬಹುದೆಂದು ಮನವರಿಕೆಯಾಗುತ್ತದೆ. ಕೃಷಿಕರ ಇಂದಿನ ಪರಿಸ್ಥಿತಿಯಲ್ಲಿ ಅವರು ಬೆಳೆದುದರಲ್ಲಿ ದೊಡ್ಡ ಪಾಲೊಂದು ಉತ್ಪಾದನೆಯಲ್ಲಿ ಪ್ರತ್ಯಕ್ಷವಾಗಿ ಸಹಕರಿಸಿಯೇ ಇಲ್ಲದ ಭೂಮಾಲಿಕ ವರ್ಗಕ್ಕೆ ಹೋಗುತ್ತದೆ. ಬೆವರಿಳಿಸಿ ದುಡಿದವನಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ಹೋಗುವ, ಆದರೆ ಯಾವ ಕೆಲಸವನ್ನೂ ಮಾಡದವನು ಸಂಪತ್ತನ್ನು ಅನುಭವಿಸುವ ಪದ್ಧತಿಯನ್ನು ನಿರ್ಮೂಲನ ಮಾಡುವುದೊಂದೇ ಕಲ್ಯಾಣ ರಾಷ್ಟ್ರದ ಧ್ಯೇಯವನ್ನು ಕೈಗೂಡಿಸಲಿಕ್ಕಿರುವ ಮಾರ್ಗ.

ಕಲ್ಯಾಣ ರಾಷ್ಟ್ರವನ್ನು ಕಟ್ಟುವ ವ್ಯಾಮೋಹಕ್ಕೆ ಬಲಿಬಿದ್ದು ಬಡತನವನ್ನೆ ಸಮಾನವಾಗಿ ಹಂಚಿಕೊಳ್ಳುವ ಪದ್ಧತಿಯನ್ನು ಅನುಸರಿಸುವ ಉತ್ಸಾಹವನ್ನು ತೋರಿಸುತ್ತಿದ್ದೇವೆ— ಇದು ಸರಿಯಾದುದಲ್ಲ ಎಂದು ವಕೀಲ ಮಹಾಶಯರೊಬ್ಬರು ಪರಿಷತ್ತಿನಲ್ಲಿ ಹೇಳಿದರು. ಅವರ ಹೇಳಿಕೆಯಂತೆ ಚುನಾವಣೆಯಲ್ಲಿ ಮತದಾರರ ಪ್ರೀತಿಯನ್ನು ಸಂಪಾದಿಸುವ ರಾಜಕೀಯ ಉದ್ದೇಶದಿಂದಲೇ ಸರಕಾರದವರು ಘಟನೆಗೆ ತಿದ್ದುಪಡಿಯನ್ನು ಮಾಡಲು ಮುಂದಾದರೆಂದು ಭಾವಿಸಬೇಕಾಗುತ್ತದೆ. ಆದರೆ ಚುನಾವಣೆಗಳನ್ನಾಗಲೀ ಮತದಾರರ ಪ್ರೀತಿಯನ್ನು ಗಳಿಸಿಕೊಳ್ಳುವ ಯೋಗ್ಯ ಕಾರ್ಯ ಪದ್ಧತಿಯನ್ನಾಗಲೀ ನಮ್ಮ ಘಟನೆಯು ನಿಷೇಧಿಸಿಲ್ಲ— ಕಾರಣ, ರಾಜಕೀಯ ಉದ್ದೇಶದಿಂದ ತಿದ್ದುಪಡಿಯನ್ನು ತಂದುದೆಂದೇ ಹೇಳಿದರೂ ಅದರಲ್ಲಿ ಅಸಂಗತವಾದ, ಮತು ದುಷ್ಟ ಹೇತುವಿನಿಂದ ಕೂಡಿದ ಅಂಶವಿಲ್ಲ ಎಂಬುದು ಸ್ಪಷ್ಟ. ಇದರಂತೆ, ಆರ್ಥಿಕ ವಿಷಮತೆಯನ್ನು ನಿವಾರಿಸುವುದಕ್ಕೋಸ್ಕರ, ತೆರಿಗೆ ಮುಂತಾದವುಗಳನ್ನು ಹೊರಿಸಬಹುದೆಂದೂ ಘಟನೆಗೆ ತಿದ್ದುಪಡಿ ಮಾಡುವಷ್ಟು ಮುಂದೆ ಹೋಗುವುದು ಅನವಶ್ಯವಿಲ್ಲವೆಂದೂ ಹೇಳುವುದು ಸಮಂಜಸವಲ್ಲ— ಏಕೆಂದರೆ, ಭೂಮಾಲಿಕರ ಮೇಲೆ ತೆರಿಗೆ ಹೊರಿಸಿದ ಮಾತ್ರಕ್ಕೆ, ಕೃಷಿಕರ ಕಷ್ಟ ತಪ್ಪುವುದಿಲ್ಲ. ಭೂಮಿಯ ಮೇಲೆ ಮಮತೆ ಹುಟ್ಟಿ, ಅದನ್ನು ಅಧಿಕ ಉತ್ಪಾದನೆಗಾಗಿ ಉಪಯೋಗಿಸುವಂತೆ ಕೃಷಿಕರನ್ನು ಪ್ರೋತ್ಸಾಹಿಸಬೇಕಾದರೆ, ಅವರಿಗೆಯೇ ಭೂಸ್ವಾಮ್ಯವನ್ನು ವಹಿಸಿಕೊಡಬೇಕೇ ಹೊರತು ಅದಕ್ಕೂ ಸೌಮ್ಯಕ್ರಮಗಳು ಇಂದಿನ ಉಗ್ರಸ್ವರೂಪದ ರೋಗಕ್ಕೆ ಯೋಗ್ಯ ಔಷಧವಾಗಲಾರದು.

ತಿದ್ದುಪಡಿಗೆ ವಿರೋಧವನ್ನು ತೋರಿಸಿದವರ ಮನೋಭಾವವನ್ನು ಪರಿಶೀಲಿಸಿದರೆ, ಕಸಿದುಕೊಂಡ ಆಸ್ತಿಗೆ ಯೋಗ್ಯ ಪರಿ

(೧೧ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ. ಹಣವನ್ನು ಠೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲೆ ನಿಮ್ಮ ಹಣವನ್ನು ಠೇವಿರಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೫೩ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಸೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. ೨—0 - 0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಮಕ್ಕಳ ಚಲಚ್ಚಿತ್ರಗಳು

ನಾವಿನ್ನೂ ಕೈಯಾಡಿಸಿರದ ಫಲವತ್ತಾದ ಕ್ಷೇತ್ರ

ಇಂದಿನ ಜಗತ್ತಿನಲ್ಲಿ ಚಲಚ್ಚಿತ್ರವು ಅತ್ಯಂತ ಸುಲಭದಲ್ಲಿ ಒದಗಬಲ್ಲ ಮತ್ತು ಸರ್ವ ಜನಾದರಣೀಯವಾದ ಮನೋರಂಜನೆಯ ಸಾಧನವೆಂದು ಎಲ್ಲರೂ ಒಪ್ಪುವರು. ಮಕ್ಕಳನ್ನು ಕುರಿತು ಹೇಳುವುದಾದರೆ ಚಲಚ್ಚಿತ್ರಗಳು ಅವರಿಗೆ ಮಹತ್ತರವಾದ ಆಕರ್ಷಕ ವಸ್ತುಗಳಲ್ಲಿ ಬರುತ್ತವೆ. ನಮ್ಮ ರಾಷ್ಟ್ರದಲ್ಲಿ ಹದಿನೇಳಕ್ಕಿಂತ ಕಡಿಮೆ ವಯಸ್ಸಿನ, ಮಕ್ಕಳ ಸಾಲಿಗೆ ಸೇರುವ, ಒಂದು ಕೋಟಿ ಪ್ರಜೆಗಳಿದ್ದು ಇವರಿಗೆ ಸಾತ್ವಿಕವಾದ ಮನೋರಂಜನೆಯನ್ನೊದಗಿಸುವುದು ದೊಡ್ಡ ಹೊಣೆಗಾರಿಕೆಯ ಕೆಲಸವಾಗಿದೆ. ಚಲಚ್ಚಿತ್ರವು ಪ್ರೇಕ್ಷಕರ ಮನೋಭಾವದ ಮೇಲೆಯೂ ಅಗಾಧವಾದ ಪರಿಣಾಮವನ್ನು ಮಾಡುವುದರಿಂದ, ಅದಕ್ಕೆ ಶಿಕ್ಷಣದ ಯೋಗ್ಯತೆಯೂ ದೊರಕಿದೆಯೆಂದು ತಿಳಿಯಬಹುದು. ಚಲಚ್ಚಿತ್ರಗಳಿಗೆ ಆಗಿಂದಾಗ್ಗೆ ಹೋಗುವ ಮಕ್ಕಳ ಸೂಕ್ಷ್ಮವಾದ ಮನಸ್ಸಿನ ಮೇಲೆ ಆಗುವ ಪ್ರಭಾವವನ್ನು ನಾವು ಯಾರೂ ಉಪೇಕ್ಷಿಸುವಂತಿಲ್ಲ. ಮನೋರಂಜನೆಯ ಹೊರ ಕವಚದಲ್ಲಿ ಒಳ್ಳೆಯದನ್ನೋ ಕೆಟ್ಟದನ್ನೋ ಉಂಟುಮಾಡುವ ಶಕ್ತಿ ಚಲಚ್ಚಿತ್ರಗಳಲ್ಲಿ ಇರುವುದರಿಂದ, ಪ್ರಾಜ್ಞರಾದವರು ಮಕ್ಕಳ ಚಲಚ್ಚಿತ್ರಗಳ ಬಗ್ಗೆ ವಿಶೇಷವಾದ ಜಾಗ್ರತೆಯನ್ನು ಸಾರ್ವಜನಿಕರೂ ಅವರನ್ನು ಪ್ರತಿನಿಧೀಕರಿಸುವ ಸರಕಾರವೂ ವಹಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಮೊನ್ನೆ ಡಿಸೆಂಬರ ೨೫ನೇ ತಾರೀಕಿನಿಂದ ಜನವರಿ ೩ನೇ ತಾರೀಕಿನ ವರೆಗೆ ಹೊಸದೆಹಲಿಯಲ್ಲಿ ಮಕ್ಕಳ ತೃತೀಯ ಚಲಚ್ಚಿತ್ರೋತ್ಸವವನ್ನು ಆಚರಿಸಲಾಯಿತು. ಮಕ್ಕಳಿಗಾಗಿ ತಯಾರಿಸಲಾದ ವಿಶೇಷ ಬಗೆಯ ಚಲಚ್ಚಿತ್ರಗಳನ್ನು ಇಲ್ಲಿ ಪ್ರದರ್ಶಿಸಿದರು. ಅಮೇರಿಕ, ರಶಿಯ, ಝೆಕೊಸ್ಲೊವಾಕಿಯ, ಜರ್ಮನಿ, ಹಂಗರಿ ಮತ್ತು ಬ್ರಿಟನುಗಳ ಚಲಚ್ಚಿತ್ರಗಳೊಂದಿಗೆ ಭಾರತದಲ್ಲಿ ತಯಾರಿಸಲಾದ ಮಕ್ಕಳ ಚಲಚ್ಚಿತ್ರಗಳನ್ನೂ ನೋಡುವ ಭಾಗ್ಯ ಹೊಸದೆಹಲಿಯ ಮಕ್ಕಳಿಗೆ ಲಭಿಸಿತು. ಸಮಾರಂಭಕ್ಕೆ ಶುಭ ಸಂದೇಶವನ್ನು ಕಳಿಸಿದ ರಾಷ್ಟ್ರಾಧ್ಯಕ್ಷರು ಅಮೇರಿಕೆಯ ಬಳಿಕ ಚಲಚ್ಚಿತ್ರಗಳ ಉತ್ಪಾದನೆಯಲ್ಲಿ ಭಾರತದ ಹೆಸರು ಬರುತ್ತಿದ್ದರೂ ಮಕ್ಕಳ ಚಲಚ್ಚಿತ್ರಗಳು ಸಾಕಷ್ಟು ಹೆಚ್ಚು ಸಂಖ್ಯೆಯಲ್ಲಿ ಪ್ರದರ್ಶನಕ್ಕೆ ಬಾರದಿರುವುದಕ್ಕೆ ವ್ಯಸನವನ್ನು ವ್ಯಕ್ತಪಡಿಸಿದರು. ನಮ್ಮಲ್ಲಿಯ ಕೊರತೆಯನ್ನು ತುಂಬಿಕೊಳ್ಳುವುದಕ್ಕೆ ವಿದೇಶಗಳ ತಯಾರಿಕೆಯನ್ನು ಆಶ್ರಯಿಸುವುದೇ ಉಪಾಯವಾಯಿತು—ಎಂದವರು ಖೇದದಿಂದ ಹೇಳಿದರು. ಅರ್ಥ ಸಚಿವರಾದ ಶ್ರೀ ಚಿಂತಾಮಣ ದೇಶಮುಖರು ಸಮರ್ಥ ಹಾಗು ಉಪಯುಕ್ತ ಮಾಧ್ಯಮವೆನಿಸಿದ ಚಲಚ್ಚಿತ್ರಗಳ ಮೂಲಕ ಮಕ್ಕಳು ದೊಡ್ಡವರಾದಾಗ ಉತ್ತಮ ಗುಣಶೀಲ ಸಂಪನ್ನರಾದ ನಾಗರಿಕರಾಗುವಂತೆ ನೋಡಿಕೊಳ್ಳಬೇಕೆಂದು ಆಶಿಸಿದರು. "ಬಾಕ್ಸ್ ಆಫೀಸ್" ದೃಷ್ಟಿಯಿಂದ ಯಶಸ್ವಿಯಾಗಿ ಹಣವನ್ನು ಸೂರೆಗೊಳ್ಳುವ ಚಲಚ್ಚಿತ್ರಗಳಿಗೆ ಸಲ್ಲಿಸಲ್ಪಡುವ ಗೌರವ ಮತ್ತು ಮಹತ್ವದ ದೆಸೆಯಿಂದ ಮಕ್ಕಳ ಆವಶ್ಯಕತೆಯನ್ನು ಉತ್ಪಾದಕರು ಕಡೆಗಣಿಸಿರುವುದಕ್ಕೆ ಅವರು ವಿಷಾದವನ್ನು ಸೂಚಿಸಿದರು. ಕೇವಲ "ಪ್ರಾಯ ಪ್ರಬುದ್ಧರಿಗೋಸ್ಕರ" ಎಂಬ ಪಟ್ಟಿಯನ್ನು ಹಚ್ಚಿದ ಮಾತ್ರಕ್ಕೆ ನಾವು ಮಕ್ಕಳ ಶ್ರೇಯಸ್ಸಿಗಾಗಿ ಕೆಲಸಮಾಡಿದ ಹಾಗಾಗಲಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು. ಕೇಂದ್ರದ ಇಸ್ಟೇಟ್ಸ ಮಂತ್ರಿ ಶ್ರೀ ಎಂ. ಸಿ. ಶಹರು ದೊಡ್ಡವರಿಗಾಗಿ ತಯಾರಿಸಲಾದ ಚಲಚ್ಚಿತ್ರಗಳಿಂದ ಮಕ್ಕಳನ್ನು ಪ್ರತ್ಯೇಕಿಸಿ ಇಡುವಷ್ಟಕ್ಕೆ ಸಮಸ್ಯೆಯ ಪರಿಹಾರವಾಗಲಾರದು ಎಂದು ನುಡಿದು, ಸರಕಾರದವರು ಉದ್ದೇಶಿಸಿದ ಕ್ರಮಗಳನ್ನು ವಿವರಿಸಿದರು.

ಮಕ್ಕಳ ಬೆಳವಣಿಗೆ ಮತ್ತು ಬುದ್ಧಿವಿಕಾಸದಲ್ಲಿ ಚಲಚ್ಚಿತ್ರಗಳು ವಹಿಸುವ ಪಾತ್ರವನ್ನು ಉಪೇಕ್ಷಿಸುವುದು ದಡ್ಡತನವಾದೀತು—ಹಾಗೆಯೇ ಹಿರಿಯರಿಗಾಗಿ ತಯಾರಿಸಲಾದ ಚಲಚ್ಚಿತ್ರಗಳನ್ನು ಮಕ್ಕಳು ನೋಡದಂತೆ ಪ್ರತಿಬಂಧಿಸುವುದರಲ್ಲೂ ವ್ಯಾವಹಾರಿಕವಾದ ತೊಂದರೆ ಉಂಟಾದೀತು. ಮಕ್ಕಳ ದುರ್ವರ್ತನೆಗೂ ಅವರು ನೋಡುವ ಚಲಚ್ಚಿತ್ರಗಳಿಗೂ ನಿಕಟವಾದ ಸಂಬಂಧವಿದೆ ಎಂದು ಅನೇಕ ತಾಯ್ತಂದೆಯರೂ ಅಧ್ಯಾಪಕರೂ ನಂಬಿದ್ದಾರೆ. ಮಕ್ಕಳ ಅಭಿರುಚಿಯು ಕೆಡದಂತೆ ಸರಿಯಾದ ವ್ಯವಸ್ಥೆಯನ್ನು ಮಾಡದಿದ್ದರೆ ಅವರು ಹಾನಿಕರವಾದ ಪ್ರಭಾವಗಳಿಗೆ ಒಳಗಾಗುವುದು ನಿಶ್ಚಯವೆಂದು ಈ ಹಿರಿಯರು ಹೆದರಿದ್ದಾರೆ. ಮಕ್ಕಳ ಈಗಿನ ಹಾಗು ಭವಿಷ್ಯತ್ತಿನ ಸುಖ ಸಂತೋಷವನ್ನೂ ಅಭ್ಯುದಯವನ್ನೂ ಬಯಸುವವರೆಲ್ಲರೂ ಚಲಚ್ಚಿತ್ರಗಳ ಬಗ್ಗೆ ಮಕ್ಕಳ ಅಭಿಪ್ರಾಯವೇನು, ಅವುಗಳಿಂದ ಮನಸ್ಸಿನ ಮೇಲಾಗುವ ಪರಿಣಾಮವೇನು ಮತ್ತು ಸತ್ಪರಿಣಾಮವಾಗುವಂತೆ ಚಲಚ್ಚಿತ್ರದ ಮಾಧ್ಯಮವನ್ನು ಹೇಗೆ ಯಶಸ್ವಿಯಾಗಿ ಬಳಸುವುದು ಸಾಧ್ಯ ಎಂದು ಮುಂತಾಗಿ ಕಾತರವನ್ನು ತೋರಿಸುತ್ತಿದ್ದಾರೆ. ಹೆಚ್ಚು ಕಡಿಮೆ ಎಲ್ಲ ಪ್ರಗತಿಪರ ರಾಷ್ಟ್ರಗಳಲ್ಲಿಯೂ ಚಲಚ್ಚಿತ್ರಗಳ ಸಾಮಾನ್ಯ ಮಟ್ಟವನ್ನು ಎತ್ತರಿಸುವುದಕ್ಕೆ ನಡೆಸಲಾಗುವ ಪ್ರಯತ್ನಗಳೊಂದಿಗೆ ಮಕ್ಕಳು ನೋಡಬಹುದಾದ ವಿಶಿಷ್ಟ ಮಾದರಿಯ ಚಲಚ್ಚಿತ್ರಗಳ ಬಗ್ಗೆ ವಿಶೇಷ ಜಾಗರೂಕತೆಯನ್ನು ವಹಿಸಲಾಗುತ್ತದೆ. ತಜ್ಞರ ಸಮಿತಿಗಳನ್ನು ನೇಮಿಸಿ, ಅವುಗಳ ಮೂಲಕ ಮಕ್ಕಳ ಮನಸ್ಸಿನ ಬೆಳವಣಿಗೆಯಲ್ಲಿ ಚಲಚ್ಚಿತ್ರಗಳಿಂದ ಎಷ್ಟರ ಮಟ್ಟಿನ ಪ್ರಯೋಜನವನ್ನು ಪಡೆಯುವುದು ಸಾಧ್ಯ ಎಂದು ಆ ಸರಕಾರಗಳು ಪರ್ಯಾಲೋಚಿಸುತ್ತವೆ. ಅನೇಕ ಚಲಚ್ಚಿತ್ರಗಳು ಸಾರ್ವಜನಿಕ ಪ್ರದರ್ಶನದ ಅಂಗೀಕಾರವನ್ನು ಪಡೆದಿದ್ದರೂ ಅವುಗಳು ದುಷ್ಕಾರ್ಯಗಳನ್ನೂ ಹಿಂಸೆ ಮತ್ತು ಕಾಮಪ್ರಚೋದನೆಯನ್ನೂ ಚಿತ್ರಿಸುವುದರಿಂದ ಮಕ್ಕಳನ್ನು ತಪ್ಪು ಹಾದಿಗೆ ಎಳೆಯುತ್ತವೆ. ಸಾಮಾನ್ಯ ವಯಸ್ಕರು ತಮ್ಮ ಬುದ್ಧಿ ಹಾಗು ವಿವೇಕ ಶಕ್ತಿಯಿಂದ ಚಲಚ್ಚಿತ್ರಗಳ ದುಷ್ಪರಿಣಾಮದಿಂದ ತಮ್ಮನ್ನು ರಕ್ಷಿಸಿ ಕೊಳ್ಳಲು ಶಕ್ತರಾಗಬಹುದು; ಆದರೆ ಬುದ್ಧಿ ಪಕ್ವವಾಗಿಲ್ಲದ, ಲೋಕಾನುಭವ ಶೂನ್ಯರಾದ, ಮಕ್ಕಳಲ್ಲಿ ಅಷ್ಟು ಸಂಯಮವಿರುವುದಿಲ್ಲ.

ನಮ್ಮ ಬಹುಸಂಖ್ಯಾಕ ಚಲಚ್ಚಿತ್ರಗಳು ಅಪಾಯಕರವಾದ ಹಾದಿಯನ್ನು ಹಿಡಿದು ಸಾಗುತ್ತಿವೆ ಎಂಬುದರಲ್ಲಿ ಬಲ್ಲವರಲ್ಲಿ ಭಿನ್ನಾಭಿಪ್ರಾಯ ಈಗ ಉಳಿದಿಲ್ಲ. ರಾಜ್ಯಸಭೆಯು ಮೊನ್ನೆ ತಾನೆ ಮುಕ್ತಾಯವಾದ ಅಧಿವೇಶನದಲ್ಲಿ ಸ್ವೀಕರಿಸಲಾದ ಗೊತ್ತುವಳಿಯೆ ಇದಕ್ಕೆ ನಿದರ್ಶನ. ಸಾಮಾಜಿಕ ನೀತಿಯ ವಿರುದ್ಧ ನಡೆಯುವ ಮತ್ತು ಅಶ್ಲೀಲ ವರ್ತನೆಯನ್ನು ಚಿತ್ರಿಸುವ ಸನ್ನಿವೇಶಗಳನ್ನು ಈಗಿನ ಚಲಚ್ಚಿತ್ರಗಳಲ್ಲಿ ಹೇರಳವಾಗಿ ಕಾಣುತ್ತೇವೆ. ಜೀವನದಲ್ಲಿ ವಾಸ್ತವಿಕತೆಯನ್ನು ವ್ಯಕ್ತಪಡಿಸುವ ಚಲಚ್ಚಿತ್ರಗಳು ಹೆಣ್ಣು—ಗಂಡಿನ ಶೃಂಗಾರದ ಮತ್ತು ಪ್ರಣಯದ ಕ್ಷೇತ್ರವನ್ನು ಮೀರಿ ಹೋಗಿಲ್ಲ! ಸಾಮಾಜಿಕ ಮಹತ್ವ ಮತ್ತು ವ್ಯಕ್ತಿಗತ ಜವಾಬ್ದಾರಿಯ ವಿಷಯಗಳನ್ನು ನಿರೂಪಿಸುವ ಚಲಚ್ಚಿತ್ರಗಳೂ—ಪ್ರೇಮದ ಚೌಕಟ್ಟಿನ ಹೊರಗಿರುವ ಅಂಶವನ್ನು ಇನ್ನೂ ಸ್ಪರ್ಶಿಸಿಲ್ಲ. ಒಂದೇ ಸಮನೆ ಇಂಥ ಚಲಚ್ಚಿತ್ರಗಳನ್ನು ನೋಡುವುದರಿಂದ ಮಕ್ಕಳ(ಹಾಗು ಹಿರಿಯರ) ಅಭಿರುಚಿಯು ಕೆಡುವುದಲ್ಲದೆ, ಸಾಮಾಜಿಕ ಜ್ಞಾನವೂ ಶಿಥಿಲವಾಗುತ್ತದೆ; ಮತ್ತು ರಾಷ್ಟ್ರೀಯ ಶಿಕ್ಷಣಕ್ಕೆ ಅದು ಹಾನಿಮಾಡುತ್ತದೆ. ಜೀವನದ ಹಿರಿಮೆಯು ಹಣಕಾಸಿನ ಅನುಕೂಲತೆ, ಅಧಿಕಾರದ ಚಲಾವಣೆ ಮತ್ತು ಭೋಗ ವಿಲಾಸದಲ್ಲಿದೆಯೆಂದೂ ಅದೃಷ್ಟದಾಟವೇ ದೊಡ್ಡದೆಂದೂ ಕಷ್ಟ ಕೆಲಸವಿಲ್ಲದೆ, ಹೆಚ್ಚಿನ ಪ್ರಯತ್ನವಿಲ್ಲದೆ, ನೀತಿ ನಿಯಮಗಳ ನಿರ್ಬಂಧವಿಲ್ಲದೆ ಸುಖವಾಗಿರಬಹುದೆಂದೂ ತಪ್ಪು ಭಾವನೆಯನ್ನು ನಮ್ಮ ಹೆಚ್ಚಿನ ಚಲಚ್ಚಿತ್ರಗಳು ಉಂಟುಮಾಡುತ್ತವೆ. ಮಕ್ಕಳು ನೋಡುವ ಚಲಚ್ಚಿತ್ರಗಳು ಮೇಲೆ ಉಲ್ಲೇಖಿಸಿದ ನ್ಯೂನಾತಿರೇಕಗಳಿಂದ ಮುಕ್ತವಾಗಿರದಿದ್ದರೆ ರಾಷ್ಟ್ರದ ಭವಿಷ್ಯವು ಉಜ್ವಲವಾಗಲಾರದು. ನೈತಿಕ ತತ್ವಗಳಿಗೂ ಆಧ್ಯಾತ್ಮಿಕ ಸಿದ್ಧಾಂತಗಳಿಗೂ ಮಕ್ಕಳು ನೋಡುವ ಚಲಚ್ಚಿತ್ರಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುವು. ಅಪೇಕ್ಷಣೀಯ ಕೇವಲ ಭೌತಿಕ ಪಿಪಾಸೆಯನ್ನು ಹಿಂಗಿಸುವ ಆದರ್ಶರಹಿತ ಚಲಚ್ಚಿತ್ರಗಳಿಂದ ಶಿಕ್ಷಣವನ್ನು ಪ್ರಸಾರ ಮಾಡುವ ಘನವಾದ ಕಾರ್ಯವನ್ನು ನೆರವೇರಿಸುವುದು ಸಾಧ್ಯವಿಲ್ಲ—ಸಾಮಾಜಿಕ ಪುರೋಗತಿಯು ಅಬಾಧಿತವಾಗಿ ನಡೆಯುವಂತೆ ನಾವು ಜೀವನದ ಮೂಲಭೂತ ಅಂಶಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿಂಬಿಸುವುದಕ್ಕೆ ತಪ್ಪಬಾರದು.

ನೀತಿ ಬೋಧನೆಯೇ ಚಲಚ್ಚಿತ್ರಗಳ ಗುರಿಯಲ್ಲ—ಮನೋರಂಜನೆಯೇ ಅವು

(೧೨ನೇ ಪುಟ ನೋಡಿರಿ)

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)

ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತ್ರಾಣ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ.

ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿವೆ. ಬೆಲೆ: ಕಾಲು ತೊಲೆಗೆ ರೂ. 6—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—

ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.

ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,

113 Nainiappa Naicken Street, P. T.-MADRAS-3.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ	...	ರೂ. 25,00,000
ಚಂದಾ ಆರ್ಪಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	...	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾಯಿ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲಿ)

THE CANARA BANKING CORPORATION LIMITED

Estd:- 1906] [H. O. UDIPI (S. India).

ಅಣುಶಸ್ತ್ರಗಳ ಸ್ಫೋಟನ ಪ್ರಯೋಗದಿಂದ ಜಗತ್ತಿನ ವಿನಾಶ

ವಾತಾವರಣವೇ ವಿಷಮಯವಾಗುವ ಭೀಕರ ಸಂಭವ

ಅಣು ಶಸ್ತ್ರಗಳ ವಿಷಯದಲ್ಲಿ ಜಗತ್ತಿನ ಮಹಾ ರಾಷ್ಟ್ರಗಳು ಏನೇ ಅಭಿಪ್ರಾಯವನ್ನು ಹೊಂದಿರಲಿ — ಹೆಚ್ಚಿನ ಜನರು ಅವುಗಳನ್ನು ಬಹಿಷ್ಕರಿಸಿ ಬಿಡಬೇಕೆಂಬ ಸೂಚನೆಯನ್ನು ಅನುಮೋದಿಸುತ್ತಿರುವರೆಂಬುದು ಹೆಚ್ಚು ಸ್ಪಷ್ಟವಾಗುತ್ತಾ ಬರುತ್ತಿದೆ. ಭಾರತದ ಗವರ್ನರ್ ಜನರಲರಾಗಿದ್ದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಅಣುಬಾಂಬುಗಳ ಸಂಗ್ರಹವನ್ನು ಸಮುದ್ರದಲ್ಲಿ ಮುಳುಗಿಸಿ ಬಿಟ್ಟು, ಕಳೆದುಕೊಂಡ ಸ್ವರ್ಗವನ್ನು ಮರಳಿ ಸಂಪಾದಿಸಬೇಕೆಂದು ಉಪದೇಶಿಸಿದರೆ, ಭಾರತದ ಪ್ರಸಿದ್ಧ ವಿಜ್ಞಾನಿ ಶ್ರೀ ಚಂದ್ರಶೇಖರ ವೆಂಕಟರಮಣರು ಅಣುಶಸ್ತ್ರಗಳ ಉತ್ಪಾದಕರ ಕುಲ ನಾಶವಾಗಬೇಕೆಂದು ಕಠೋರವಾಗಿ ನುಡಿದರು. ಮದ್ರಾಸಿನಲ್ಲಿ ಸೇರಿದ ಶಾಂತಿ ಪರಿಷತ್ತು ಅಣುಬಾಂಬುಗಳ ವಿಷಯದಲ್ಲಿ ತೀವ್ರ ಜುಗುಪ್ಸೆಯನ್ನು ವ್ಯಕ್ತಪಡಿಸಿತು. ಬೋಗೋರದಲ್ಲಿ ನೆರೆದ ಕೊಲೊಂಬೋ ರಾಷ್ಟ್ರಗಳ ಸಮ್ಮೇಳನದಲ್ಲೂ ಅಣುಶಸ್ತ್ರಗಳ ಪ್ರಯೋಗವನ್ನು ಬಿಟ್ಟುಗೊಡಬೇಕೆಂದು ವಿನಂತಿಸಲಾಯಿತು.

ಲೋಕ ವಿನಾಶದ ಭಯ

ಜಗತ್ತಿನ ಮೇಧಾವಿಗಳು ಮತ್ತು ಶಾಂತಿ ಪ್ರಿಯರು ಅಣುಶಸ್ತ್ರಗಳ ಬಹಿಷ್ಕಾರಕ್ಕೋಸ್ಕರ ಏಕೆ ಆತುರ ವ್ಯಕ್ತಪಡಿಸುವರೆಂಬುದನ್ನು ನೆಹರುಗಳು ಜಕಾರ್ತದಲ್ಲಿ ಪತ್ರಿಕಾ ಪರಿಷತ್ತಿನ ಮುಂದೆ ಹೀಗೆ ವಿವರಿಸಿದರು—"ಯುದ್ಧದ ಕುರಿತಾಗಿ ವಿಜ್ಞಾನಿಗಳು ಏನು ಹೇಳುವರೆಂದು ನಮಗೆಲ್ಲರಿಗೂ ಗೊತ್ತು. ನೋಬೆಲ್ ಪಾರಿತೋಷಕವನ್ನು ಪಡೆದೊಟ್ಟ ಫ್ರೆಂಚ್ ಭೌತ ವಿಜ್ಞಾನಿ ಹಾಗು ಮತ್ತಿತರರ ಅಭಿಪ್ರಾಯದಂತೆ, ಇಷ್ಟರ ವರೆಗೆ ಸ್ಫೋಟಿಸಲ್ಪಟ್ಟ ಆರೇಳು ಅಣು ಬಾಂಬುಗಳ ದೆಸೆಯಿಂದಲೇ ಹವಾಮಾನವು ಕೆಟ್ಟು ಹೋಗಿ, ಹಾನಿಕರ ಪರಿಣಾಮವಾಗಿರುತ್ತದೆ. ಇದೇ ಪರಿಸ್ಥಿತಿಯು ಮುಂದುವರಿದರೆ ಲೋಕ ವಿನಾಶ ಕಟ್ಟಿಟ್ಟದ್ದು. ನಮ್ಮ ಕೂದಲು, ಚರ್ಮ ಮತ್ತು ಶ್ವಾಸಕೋಶಗಳ ಮೇಲೆ ಅಣುವಿಸರಣ ಕ್ರಿಯೆಯಿಂದ ಅಪಾಯಕರ ಪರಿಣಾಮವಾಗುತ್ತಾ ಹೋದರೆ, ಮಾನವ ಜನಾಂಗ ಚ್ಯುತಿ ಹೊಂದುವುದು ನಿಶ್ಚಯ." ಇದನ್ನು ತಿಳಿದಿದ್ದರೂ ತಮ್ಮ ಅಭಿಪ್ರಾಯವನ್ನು ಅಣುಶಸ್ತ್ರಗಳನ್ನು ಉತ್ಪಾದಿಸುವ ರಾಷ್ಟ್ರಗಳು ಮೆಚ್ಚಲಿಕ್ಕಿಲ್ಲ; ಹಾಗೆ ಮೆಚ್ಚಿ ಯುದ್ಧ ಮಾಡುವುದನ್ನು ಬಿಡಲಿಕ್ಕೂ ಇಲ್ಲ ಎಂಬ ಸಂಶಯ ಭಾವವನ್ನು ನೆಹರು ಹೊರಗೆಡವಿದರು.

ಶಾಂತಿ ಪ್ರಿಯರ ಹಿತನುಡಿ

ನೆಹರುಗಳ ಸಂದೇಹವು ಯಥಾರ್ಥರೀತಿಯದು— ಏಕೆಂದರೆ ಅಮೇರಿಕಾದ ಟೆಕ್ಸಾಸಿನಿಂದ ಬಂದೊಂದು ವರದಿಯಂತೆ, ಈಚೆಗೆ ಅಲ್ಲಿ ಅಣುಶಸ್ತ್ರಗಳ ಸ್ಫೋಟನ ಪ್ರಯೋಗ ನಡೆಯಿತು; ಅದರಲ್ಲಿ ಹಲವು ಅತ್ಯಾಧುನಿಕ ರೀತಿಯ ವಿಮಾನಗಳನ್ನು ಉಪಯೋಗಿಸಲಾಯಿತು. ಅಣುಶಕ್ತಿಯನ್ನು ವೈರಿಯು ತಲೆಎತ್ತದಂತೆ, ಅವನನ್ನು ಹಣ್ಣುಮಾಡುವುದಕ್ಕೆ ಹೇಗೆ ಬಳಸಬಹುದೆಂಬುದನ್ನು ಕಂಡುಕೊಳ್ಳುವುದಕ್ಕೆಯೇ ಈ ಪ್ರಯೋಗಗಳು ನಡೆಯುತ್ತಿವೆ. ಇದರಿಂದ ಪ್ರಯೋಗವನ್ನು ನಡೆಸಿದ ರಾಷ್ಟ್ರಗಳವರು ಮಾತ್ರ ಹಾಳಾದರೆ, ಯುದ್ಧದಲ್ಲಿ ಭಾಗವಹಿಸಿದವರಿಗೆ ಮಾತ್ರ ಅಪಾಯವಾದರೆ, ಶಾಂತಿಪ್ರಿಯರು ತುಟಿಬಿಚ್ಚದೆ ಕುಳಿತಿರಲೂ ಬಹುದು. ಆದರೆ, ಹಾಗಾಗದೆ, ಸುಖಜೀವನವನ್ನು ನಡೆಸಬಯಸುವವರಿಗೂ ಅದರಿಂದ ಕೆಡುಕೇ ಸಂಭವಿಸುವುದರಿಂದ ಪದೇ ಪದೇ ಎಚ್ಚರಿಕೆಯ ಮಾತನ್ನಾಡುತ್ತಿರುವ ಪ್ರಸಂಗ ಬಂದೊದಗುತ್ತದೆ. ನೆಹರುಗಳಂಥ ಪ್ರಭಾವಶಾಲಿ ವ್ಯಕ್ತಿಗಳು ಹೇಳಿದ ಮಾತುಗಳನ್ನೇ ಜನಸಾಮಾನ್ಯರೂ ಒಪ್ಪುವರೆಂಬುದಕ್ಕೆ ಶಾಂತಿ ಪರಿಷತ್ತಿನಲ್ಲಿ ಭಾರತದ ವಿದೇಶ ಧೋರಣೆಯ ಸಮರ್ಥಕತೆಯನ್ನು ಮೆಚ್ಚಿ ಮಾತನಾಡಿದ ಡಾ| ಸೈಫುದ್ದೀನ ಕಿಚ್ಲೂರ ಅಧ್ಯಕ್ಷ ಭಾಷಣವೇ ನಿದರ್ಶನ.

ಕಾರ್ಮಿಕರ ಹಿತ

ತೊಂದರೆಗಳೇ ಕಾಣಿಸುತ್ತಿರುವ ಈ ದಿನಗಳಲ್ಲಿ ಭಾರತಕ್ಕೆ ಸಮಂಜಸವಾದ ಮಾರ್ಗದರ್ಶನವನ್ನು ಮಾಡಬಲ್ಲ ಧುರೀಣರು ದೊರೆತದ್ದು ನಮ್ಮ ಭಾಗ್ಯವೆಂದೇ ಹೇಳಬೇಕು. ಆಂತರಿಕ ಸಮಸ್ಯೆಗಳನ್ನು ಹೆಸರಿಸುವುದಾದರೆ, ಉದ್ಯಮಗಳ ಪ್ರಗತಿಗೆ ಅಗ್ರಸ್ಥಾನ ದೊರಕುತ್ತದೆ. ಆರ್ಥಿಕ ವಿಕಾಸಕ್ಕೆ ಕೈಗಾರಿಕೆಗಳೇ ಮೂಲಾಧಾರವೆಂದು ಸ್ಪಷ್ಟವಾಗಿರುವುದರಿಂದ ಕಾರ್ಮಿಕರ ಜೀವನವನ್ನು ಸುಖಮಯವಾಗಿಸುವುದು ಅವಶ್ಯವೆಂಬ ಅಂಶವನ್ನು ಮರೆಯಲಿಕ್ಕಾಗದು ನಾಗಪುರದಲ್ಲಿ ಜರಗಿದ ರಾಷ್ಟ್ರೀಯ ಮಜೂರರ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಶ್ರೀ ವಾಸವದಾರು ಇದನ್ನೇ ಹೇಳಿದರು. ಕೆಲಸಗಾರರ ಜೀವನವು ಸುಗಮವಾಗಿ ಸಾಗುವಂತೆ ಕನಿಷ್ಠ ಕೂಲಿ ಮತ್ತು ಇತರ ಸೌಕರ್ಯಗಳ ನಿರ್ಣಯವಾಗಬೇಕೆಂದು ಅವರು ಒತ್ತಾಯಿಸಿದರು. ಉದ್ಘಾಟಕರಾಗಿ ಬಂದಿದ್ದ ನಿಯೋಜಿತ ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ಸಮಾಜವಾದಿ ಪದ್ಧತಿಯನ್ನು ಅನುಷ್ಠಾನಕ್ಕೆ ತರುವ ರಾಷ್ಟ್ರೀಯ ಸರಕಾರದಲ್ಲಿ ಕಾರ್ಮಿಕರ ಶ್ರದ್ಧೆ ನೆಲೆಯೂರಬೇಕೆಂದು ಬಯಸಿದರು. ಸಮ್ಮೇಳನಕ್ಕೊಂದು ಶುಭಸಂದೇಶವನ್ನು ಕಳಿಸಿದ ಪ್ರಧಾನ ಮಂತ್ರಿಗಳು ಇನ್ನೂ ಒಂದು ಹೆಜ್ಜೆ ಮುಂದರಿದು ಇನ್ನೊಬ್ಬರಿಗೆ ಅಹಿತ ಮಾಡುವುದರಿಂದ ನಮ್ಮ ಹಿತವಾಗುವುದೆಂಬ ಮನೋಭಾವವನ್ನು ಬಿಟ್ಟುಗೊಟ್ಟು ಶಿಸ್ತಿನಿಂದ ನಡೆದು ಉತ್ಪಾದನೆಯನ್ನು ಹೆಚ್ಚಿಸುವ, ತನ್ಮೂಲಕ ಉದ್ಯೋಗದ ಅವಕಾಶಗಳನ್ನು ವಿಸ್ತರಿಸುವ ಹಾಗೆ ಜೀವನ ಮಟ್ಟವನ್ನು ಎತ್ತರಿಸುವ ಉತ್ಸಾಹವನ್ನೂ ಪರಸ್ಪರ ಸಹಕಾರ ಬುದ್ಧಿಯನ್ನೂ ತೋರಿಸಬೇಕೆಂದು ವಿನಂತಿಸಿದರು.

ಆರ್ಥಿಕ ಭದ್ರತೆ

ಪ್ರಕೃತದ ಆದಾಯಕ್ಕಿಂತ ಸ್ವಲ್ಪ ಹೆಚ್ಚಿನ ಮಟ್ಟವನ್ನು ಜನರೆಲ್ಲರೂ ನಿತ್ಯ ಜೀವನದಲ್ಲಿ ಕಾಣಬೇಕೆಂಬ ಆಶೆ ಸರಕಾರಕ್ಕಿದ್ದು ಇದುವರೆಗಿನ ಅವರ ಅನುಭವವು ನಿಧಾನವಾಗಿ ಇದು ಸಾಧ್ಯವಾದೀತೆಂದು ಹೇಳುತ್ತದೆ. ಭಾರತ ಸರಕಾರದ ಮಂತ್ರಿಗಳು ಮಾಡಿದ ವಾಣಿಜ್ಯ ಮತ್ತು ಆರ್ಥಿಕ ವ್ಯವಹಾರದ ವಿಮರ್ಶೆಯನ್ನು ನೋಡಿದರೆ, ನಮ್ಮ ಪರಿಸ್ಥಿತಿ ಸುಧಾರಿಸುತ್ತಾ ಹೋಗುತ್ತಿರುವುದು ವೇದ್ಯವಾಗುತ್ತದೆ. ಪೂರ್ಣ ಉದ್ಯೋಗವನ್ನು ಒದಗಿಸುವ ನಮ್ಮ ಸಂಕಲ್ಪ ನೆರವೇರುವುದಕ್ಕೆ ಇಪ್ಪತ್ತು ಸಾವಿರ ಕೋಟಿ ರೂಪಾಯಿಗಳಗಿಂತಲೂ ಹೆಚ್ಚು ಹಣವನ್ನು ವ್ಯಯಿಸಬೇಕಾದೀತು; ಮತ್ತಿದು ಎರಡು-ಮೂರು ದಶಕಗಳ ಅವಧಿಯನ್ನೂ ತೆಗೆದುಕೊಂಡೀತು. ಆದರೆ ಉತ್ಕರ್ಷದ ಬಗ್ಗೆ ನಿರಾಶೆಯನ್ನು ಹೊಂದುವ ವಾತಾವರಣ ಮಾತ್ರ ದೇಶದಲ್ಲಿಲ್ಲ—೧೯೫೪ರ ಪ್ರಥಮಾರ್ಧಕ್ಕೆ ಸಂಬಂಧಿಸಿದ ಆಯಾತ ಧೋರಣೆಯ ಮೇಲಿಂದ ಇದು ಸ್ಪಷ್ಟವಾಗುತ್ತದೆ. ಸುಲಭ ವಿನಿಮಯ ಪ್ರದೇಶಕ್ಕಿಂತ ಡಾಲರು ಪ್ರದೇಶಗಳಲ್ಲಿ ಸರಕುಗಳು ಅಗ್ಗಕ್ಕೆ ದೊರಕುತ್ತವಾದರೆ, ಅಲ್ಲಿಂದಲೂ ತರಿಸಬಹುದೆಂದು ಸರಕಾರ ಹೇಳಿರುವುದು ಗಮನಿಸಬೇಕಾದ ಅಂಶ. ಆರ್ಥಿಕ ಕ್ಷೇತ್ರದಲ್ಲಿ ಸ್ಥಿರತೆ ನೆಲೆಗೊಳ್ಳುತ್ತಿರುವುದರಿಂದಲೇ ಇದು ಸಾಧ್ಯವಾಯಿತು. ಸರಕಾರದ ಹೇಳಿಕೆಯಲ್ಲಿ ಎದ್ದು ತೋರುವ ಇನ್ನೊಂದು ಸಂಗತಿಯೆಂದರೆ ಪೆನಿಸಿಲಿನ್, ಸ್ಟ್ರೆಪ್ಟೊಮೈಸಿನ್ ಮುಂತಾದ ಅಮೂಲ್ಯ ಔಷಧ ದ್ರವ್ಯಗಳನ್ನೊಳಗೊಂಡು ಒಟ್ಟು ೨೩ ಬಗೆಯ ಪದಾರ್ಥಗಳ ಉತ್ಪಾದನೆ ನಮ್ಮಲ್ಲಿ ಹೆಚ್ಚಿರುವುದು.

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

THE CANARA MUTUAL ASSURANCE COMPANY, LTD.,

Managing Director: T. R. A. PAI

Head Office: UDIPI, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ

ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD.,

"Mukund Nivas" UDIPI, S. India.

UDIPI MUNICIPALITY

NOTIFICATION.

Applications will be received by the Commissioner, Udipi Municipality, Udipi upto 15—1—1955 from Higher Elementary Grade Urdu trained Teachers for appointment in a permanent vacancy in the Municipal Hindustani School. The selected candidate will be paid a salary of Rs. 30 - per mensem in the scale of pay of Rs. 30-1-45 with the usual dearness allowance of Rs. 19- a/nd house rent allowance of Rs. 3/- respectively per mensem.

Municipal Office, Udipi,
Dated: 29-12-1954

K. Gopala Menon,
Commissioner,
Udipi Municipality, Udipi.

ಎಪ್ರೀಲಿನ ಕೊನೆಯಲ್ಲಿ ಆಫ್ರೇಸ್ಯ ಸಮ್ಮೇಳನ

ಇಪ್ಪತ್ತೈದು ರಾಷ್ಟ್ರಗಳಿಗೆ ಕೊಲೊಂಬೋ ಪ್ರಧಾನರ ಆಮಂತ್ರಣ

ಜಗತ್ತಿನ ದೊಡ್ಡ ಭೂಖಂಡಗಳಾಗಿದ್ದರೂ ಇದು 'ವರೆಗೆ ತೀರ ದುರ್ಲಕ್ಷಿಸಲ್ಪಟ್ಟಿದ್ದ ಏಶ್ಯಾ ಮತ್ತು ಆಫ್ರಿಕದಲ್ಲಿ ಇದೀಗ ನವಜಾಗೃತಿಯ ಲಕ್ಷಣಗಳು ಕಂಡುಬರುತ್ತಿದ್ದು, ಅವುಗಳೆಲ್ಲ ಉಜ್ವಲ ಭವಿಷ್ಯದ ದಾರಿಯನ್ನು ನೋಡುತ್ತಿರುವಂತೆ ಭಾಸವಾಗುತ್ತದೆ. ಇದಕ್ಕೆ ತಕ್ಕ ಅನುಕೂಲತೆಯನ್ನು ಕಲ್ಪಿಸಿಕೊಡುವುದಕ್ಕೆ ಇಂಡೋನೇಶಿಯದ ಪ್ರಧಾನ ಮಂತ್ರಿ ಜೋಜೋರ ಓರಿತನದಲ್ಲಿ ಕೊಲೊಂಬೋ ರಾಷ್ಟ್ರಗಳಲ್ಲಿ ಸೇರಿದ ಸಿಂಹಳ, ಭಾರತ, ಬರ್ಮ, ಇಂಡೋನೇಶಿಯ ಮತ್ತು ಪಾಕಿಸ್ತಾನಗಳು ಮನಸ್ಸು ಮಾಡಿದ್ದು ಮಹಾ ಸಾಹಸವೆಂದು ರಾಜಕೀಯ ನಿರೀಕ್ಷಕರ ಅಭಿಪ್ರಾಯ. ಬೋಗೋರಿನಲ್ಲಿ ದಶಂಬರ ತಿಂಗಳಾಂತ್ಯದಲ್ಲಿ ಜರಗಿದ ಕೊಲೊಂಬೋ ರಾಷ್ಟ್ರಗಳ ಪ್ರಧಾನಿಗಳ ಪರಿಷತ್ತು ಜಗತ್ತಿನಲ್ಲಿ ವಾಸಿಸುವ ಜನರಲ್ಲಿ ಮೂರರಲ್ಲಿ ಎರಡಾಂಶವನ್ನು ಪ್ರತಿನಿಧೀಕರಿಸುವ ಇಪ್ಪತ್ತೈದು ರಾಷ್ಟ್ರಗಳಿಗೆ "ಆಫ್ರೇಸ್ಯ" ಪರಿಷತ್ತಿನಲ್ಲಿ ಭಾಗವಹಿಸಬೇಕೆಂದು ಆಹ್ವಾನವನ್ನು ಕೊಟ್ಟಿತು. ಇದು ಎಪ್ರೀಲು ತಿಂಗಳ ಕೊನೆಯ ವಾರದಲ್ಲಿ ನಡೆಯಲಿದ್ದು ಇಂಡೋನೇಶಿಯವು ಎಲ್ಲ ವ್ಯವಸ್ಥೆಗಳನ್ನೂ ಮಾಡುತ್ತದೆ. ಸಮ್ಮೇಳನದಲ್ಲಿ ಆಯಾ ಪ್ರಧಾನ ಮಂತ್ರಿಗಳೂ ವಿದೇಶ ಮಂತ್ರಿಗಳೂ ಇತರ ಮುತ್ಸದ್ದಿಗಳೂ ಭಾಗವಹಿಸಿ, ಉಚ್ಚ ಮಟ್ಟದ ಸಮಾಲೋಚನೆಗಳನ್ನು ನಡೆಸುವರು.

ಸಮ್ಮೇಳನದ ಉದ್ದೇಶ

- ಹೀಗೆ ಸಮ್ಮೇಳನವನ್ನು ನೆರೆಯಿಸುವ ಉದ್ದೇಶವನ್ನು ಕೊಲೊಂಬೋ ರಾಷ್ಟ್ರಗಳ ಪ್ರಧಾನರು ಕೊಟ್ಟ ಸಂಯುಕ್ತ ಹೇಳಿಕೆಯು 'ಆಫ್ರಿಕ ಮತ್ತು ಏಶ್ಯಾ ಖಂಡದ ಜನರಲ್ಲಿ ಪರಸ್ಪರ ಸದ್ಭಾವನೆಯನ್ನು ಜಾಗೃತಗೊಳಿಸುವುದು, ಸಾಮಾನ್ಯ ಹಿತಾಸಕ್ತಿಯುಳ್ಳ ವಿಷಯಗಳಲ್ಲಿ ಅಭಿವೃದ್ಧಿಯನ್ನು ಸಾಧಿಸುವ ಸಂಗತಿಯನ್ನು ವಿಮರ್ಶಿಸುವುದು, ಸ್ನೇಹಪರ ಸಂಬಂಧವನ್ನು ಪರಸ್ಪರರಲ್ಲಿ ಪ್ರಸ್ಥಾಪಿಸುವುದು, ಪ್ರತಿನಿಧೀಕರಿಸಲ್ಪಟ್ಟ ರಾಷ್ಟ್ರಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ವಿಚಾರಿಸಿ ಪ್ರಗತಿಯ ಮಾರ್ಗವನ್ನು ನಿರ್ಧರಿಸುವುದು, ಈ ರಾಷ್ಟ್ರಗಳಿಗೆ ವಿಶೇಷ ಆಸಕ್ತಿ ಇರುವ ಸಾರ್ವಭೌಮಾಧಿಕಾರ ಸಂಪನ್ನವಾದ ಸ್ವಾತಂತ್ರ್ಯ, ವಸಾಹತುವಾದದ ಉಚ್ಚಾಟನೆ, ವರ್ಣದ್ವೇಷದ ನಿರ್ಮೂಲನವೇ ಮುಂತಾದ ಸಂಗತಿಗಳನ್ನು ಚರ್ಚಿಸುವುದು, "ಆಫ್ರೇಸ್ಯ" ಜನತೆಯು ಜಗತ್ತಿನಲ್ಲಿ ಹೊಂದಿದ ಸ್ಥಾನಮಾನವನ್ನು ವಿಮರ್ಶಿಸಿ, ವಿಶ್ವಶಾಂತಿಯ ರಕ್ಷಣೆಯಲ್ಲಿ ವಹಿಸತಕ್ಕ ಪಾತ್ರದ ಸ್ವರೂಪವನ್ನು ಗೊತ್ತುಹಚ್ಚುವುದು' ಎಂಬುದಾಗಿ ವಿವರಿಸುತ್ತದೆ. ಸಮ್ಮೇಳನದಲ್ಲಿ ವಿವಾದಾತ್ಮಕವಾದ ಪ್ರಶ್ನೆಗಳು ಕಾಣಿಸಿಕೊಂಡು, ವಿರಸವುಂಟಾಗದಂತೆ ನೋಡಿಕೊಳ್ಳುವದಕ್ಕಾಗಿ, ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಹುಳುಕನ್ನು ಎತ್ತಿತೋರಿಸತಕ್ಕದ್ದಲ್ಲವೆಂದೂ ಸಹಕಾರದಿಂದ ವರ್ತಿಸಲು ಅನುಕೂಲವಾದ ವಾತಾವರಣವನ್ನು ನಿರ್ಮಿಸಬೇಕೆಂದೂ ಕೊಲೊಂಬೋ ರಾಷ್ಟ್ರಗಳು ಇಚ್ಛಿಸುತ್ತವೆ.

ಸಂಶಯಕ್ಕೆ ಸ್ಪಷ್ಟೀಕರಣ

ಪರಸ್ಪರ ತಿಳುವಳಿಕೆಯನ್ನು ಹೆಚ್ಚಿಸುವುದೂ ಲೋಕಶಾಂತಿಗಾಗಿ ಪ್ರಯತ್ನಿಸುವುದೂ ಈ ಸಮ್ಮೇಳನದ ನಿಜವಾದ ಉದ್ದೇಶವಿರುವುದರಿಂದ ತಮ್ಮ ಆಮಂತ್ರಣವನ್ನು ಸ್ವೀಕರಿಸಿದ ಮಾತ್ರಕ್ಕೆ ಒಂದು ರಾಷ್ಟ್ರದ ಧೋರಣೆಯಲ್ಲಿ ಪರಿವರ್ತನೆಯಾಯಿತೆಂದು ಭಾವಿಸಬೇಕಾಗಿಲ್ಲವೆಂದು ಕೊಲೊಂಬೋ ರಾಷ್ಟ್ರಗಳ ಪ್ರಧಾನರು ಸ್ಪಷ್ಟೀಕರಣವಿತ್ತರು. ಆದುದರಿಂದ ತನಗೆ ಒಪ್ಪಿಗೆಯಿಲ್ಲದ ಧೋರಣೆಯನ್ನು ಅನುಸರಿಸುವ ರಾಷ್ಟ್ರಗಳ ಪ್ರತಿನಿಧಿಗಳ ಸಮ್ಮೇಳನದಲ್ಲಿ ಭಾಗವಹಿಸುವುದರಿಂದ ತಾವು ಅವರಿಂದ ದೂರವುಳಿಯುತ್ತೇವೆಂದು ಯಾರೂ ನಿರ್ಣಯಿಸಬೇಕಾಗಿಲ್ಲ. ಅದರಂತೆ ಈ ಸಮ್ಮೇಳನವು ಸಂಯುಕ್ತ ರಾಷ್ಟ್ರಸಂಘದ ಬಲವನ್ನು ಕುಂದಿಸುವುದಕ್ಕಾಗಿ ಮತ್ತು ಪ್ರಾದೇಶಿಕ ಗುಂಪನ್ನು ಕಟ್ಟಿಕೊಳ್ಳುವುದಕ್ಕಾಗಿ ಸೇರಿದೆಯೆಂದು ಭಾವಿಸುವುದೂ ಸರಿಯಲ್ಲ- ಹಾಗೆ ಗುಂಪೊಂದನ್ನು ಕಟ್ಟಿಕೊಳ್ಳುವುದು ಕೊಲೊಂಬೋ ರಾಷ್ಟ್ರಗಳ ಉದ್ದೇಶವಲ್ಲವೆಂದು ಸಂಯುಕ್ತ ಪ್ರಕಟಣೆ ಸ್ಪಷ್ಟಗೊಳಿಸುತ್ತದೆ. ಇಷ್ಟು ಮಾತ್ರವಲ್ಲದೆ, ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳನ್ನು ಪ್ರತಿನಿಧೀಕರಿಸಲ್ಪಟ್ಟ ರಾಷ್ಟ್ರಗಳು ಕಾರ್ಯರೂಪಕ್ಕೆ ತರಬೇಕೆಂಬ ಇಚ್ಛೆಯಿಂದ, ಸ್ವತಂತ್ರವಾಗಿ ಆಡಳಿತೆಯನ್ನು ನಡೆಸುವ ದೇಶಗಳ ಸರಕಾರವನ್ನು ಮಾತ್ರ ಆಹ್ವಾನಿಸುವ ನಿರ್ಣಯವನ್ನು ಸಾಮಾನ್ಯವಾಗಿ ಕೈಗೊಳ್ಳಲಾಯಿತು. ಈ ಸೂತ್ರಕ್ಕೆ ಕೆಲವು ಅಪವಾದಗಳಿದ್ದರೂ ಅದರ ಹಿಂದೆ ಬಲವಾದ ಕಾರಣಗಳಿವೆಯೆಂದೂ ಪ್ರಧಾನಿಗಳು ವಿದಿತಪಡಿಸಿದರು.

ಚೀನಕ್ಕೂ ಆಮಂತ್ರಣ

ಆಹ್ವಾನಿತರ ಪಟ್ಟಿಯಲ್ಲಿ ಈ ಕೆಳಗಿನ ರಾಷ್ಟ್ರಗಳು ಸೇರುತ್ತವೆ–ಅಫಘಾನಿಸ್ತಾನ, ಕಂಬೋಡಿಯ, ಸೆಂಟ್ರಲ್ ಆಫ್ರಿಕನ್ ಫೆಡೆರೇಶನ್, ಚೀನಾದ ಜನತಾ ರಾಜ್ಯ, ಈಜಿಪ್ಟ್, ಇಥಿಯೋಪಿಯ, ಗೋಲ್ಡ್ ಕೋಸ್ಟ್, ಇರಾನ್, ಇರಾಕ್, ಜಪಾನ್, ಜೋರ್ಡಾನ್, ಲಾವೋಸ್, ಲೆಬನಾನ್, ಲೈಬೀರಿಯಾ, ಲಿಬಿಯಾ, ನೇಪಾಳ, ಫಿಲಿಪೀನ, ಸೌದಿ ಅರೇಬಿಯ, ಸೂಡಾನ್, ಸಿರಿಯ, ಥ್ಯಾಲೆಂಡ್, ಟರ್ಕಿ, ಉತ್ತರ ಹಾಗೂ ದಕ್ಷಿಣ ವೀಟನಾಂ, ಮತ್ತು ಯೆಮೆನ್. ಕಮ್ಯೂನಿಸ್ಟರು ಮತ್ತು ಪ್ರಜಾಪ್ರಭುತ್ವವಾದಿಗಳು ಎಂಬ ತಾರತಮ್ಯವನ್ನು ಸಮ್ಮೇಳನದ ಪ್ರವರ್ತಕರು ಇಟ್ಟುಕೊಂಡಿಲ್ಲವೆಂದು ಮೇಲಿನ ಪಟ್ಟಿಯು ತಿಳಿಸುತ್ತದೆ. ಆದರೆ ಸರ್ವಾನುಮತದ ನಿರ್ಣಯಕ್ಕೆ ಬರಲು ಆತಂಕವಾಗಬಹುದಾದ ರಾಷ್ಟ್ರಗಳನ್ನು (ಉದಾ: ಇಸ್ರೇಲ್) ಪಟ್ಟಿಯಲ್ಲಿ ಸೇರಿಸಿಲ್ಲ. ಹಾಗೆಯೇ ಸಂಪೂರ್ಣ ಸ್ವತಂತ್ರ ರಾಷ್ಟ್ರಗಳಾಗಿರದಿದ್ದರೂ ತಮ್ಮ ದೇಶದ ಜನತೆಯ ಸ್ವರವನ್ನು ಆಡಳಿತ ನಡೆಸುವ ಸರಕಾರದಲ್ಲಿ ಎತ್ತಬಲ್ಲ ಶಕ್ತಿ ಹೊಂದಿರುವರೆಂಬುದೇ ಗೋಲ್ಡ್ ಕೋಸ್ಟ್, ಸುಡಾನುಗಳಂಥ ರಾಷ್ಟ್ರಗಳಿಗೆ ನೀಡಿದ ಆಹ್ವಾನದ ಕಾರಣ. ಪರಿಸ್ಥಿತಿಯು ಸ್ಪಷ್ಟವಾಗಿಲ್ಲವೆಂದು ಕೊರಿಯವನ್ನು ಬಿಟ್ಟುಗೊಟ್ಟದ್ದರೂ ಇಂಡೋಚೀನದ ರಾಷ್ಟ್ರಗಳಿಗೆ ಆಮಂತ್ರಣ ಕೊಡುವುದಕ್ಕೆ, ಕೊಲೊಂಬೋ ರಾಷ್ಟ್ರಗಳ ಪ್ರಥಮ ಪರಿಷತ್ತಿನಲ್ಲಿ ಕೈಗೊಂಡ ನಿರ್ಣಯದಂತೆ ಜಿನೇವಾ ಸಮ್ಮೇಳನವು ವರ್ತಿಸಿ, ಇಂಡೋಚೀನ ಸಮಸ್ಯೆಯನ್ನು ಕೊನೆಗೊಳಿಸಿರುವುದು ಹೇತು. ಏಶಿಯದ ದೊಡ್ಡ ಭೂಭಾಗವೊಂದು ರಶಿಯದ ಅಧೀನವಿದ್ದರೂ ರಶಿಯವು ಯುರೋಪಿನೊಡನೆ ನಿಕಟ ಸಂಬಂಧವಿಟ್ಟುಕೊಂಡಿರುವುದರಿಂದ ಅದನ್ನು ಆಫ್ರೇಸ್ಯ ಸಮ್ಮೇಳನದ ಹೊರಗೆ ಇರಿಸಲಾಯಿತು.

ಶಾಂತಿಗಾಗಿ ಸಹಕಾರ

ಸಹಕಾರದ ಸಂವರ್ಧನೆಯೇ ಸಮ್ಮೇಳನದ ಉದ್ದೇಶವೆಂಬುದೀಗ ತೀರ ಸ್ಪಷ್ಟವಾಗಿದ್ದು ಇಲ್ಲಿ ಕೈಗೊಳ್ಳುವ ನಿರ್ಣಯಗಳಿಂದ ಪಾಶ್ಚಾತ್ಯರಾಷ್ಟ್ರಗಳು ಕೆಲವು ಸಂಗತಿಗಳನ್ನು ಕಲಿಯಬೇಕಾದೀತು. ಪ್ರಾಸ್ತಾವಿಕ ಸಿದ್ಧತೆಯನ್ನು ನಡೆಸುವ ಪಟ್ಟಿಯಿಂದಲೇ ಏಶಿಯ ಮತ್ತು ಆಫ್ರಿಕಗಳಲ್ಲಿ ಯಾರ ಮಾತಿಗೆ ಬೆಲೆಕೊಡಬೇಕೆಂಬ ಅಂಶವು ವ್ಯಕ್ತವಾಗಿದೆ ಯೆಂದರೆ ತಪ್ಪಲ್ಲ. ಉದಾಹರಣೆಗೆ, ವರ್ಣ ದ್ವೇಷ ಧೋರಣೆಯ

(೬ನೇ ಪುಟ ನೋಡಿರಿ)

ಉದ್ಯೋಗಕ್ಕೆ ಪ್ರಾಶಸ್ತ್ಯ

ಉತ್ಪಾದನೆಯನ್ನು ಹೆಚ್ಚಿಸುವುದೇ ಭಾರತದ ಗುರಿಯಾಗಿದೆ ಎಂಬುದರಲ್ಲಿ ಪ್ರತಿ ಮಾತಿಲ್ಲ. ನಮ್ಮ ನೀರಾವರಿ ಯೋಜನೆಗಳೂ ವಿದ್ಯುದುತ್ಪಾದನಾ ಕೇಂದ್ರಗಳೂ ಇದನ್ನೇ ತೋರಿಸಿ ಕೊಡುತ್ತವೆ. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರ ಮಾತಿನಲ್ಲಿ "ಅಭಾವವನ್ನೂ ಬಡತನವನ್ನೂ ಗೆಲ್ಲಬೇಕೆಂಬ ನಮ್ಮ ದೃಢ ನಿರ್ಧಾರಕ್ಕೂ ರಾಷ್ಟ್ರೀಯ ಸ್ಫೂರ್ತಿಗೂ" ಇವು ಜೀವಂತ ನಿದರ್ಶನ. ಆದರೆ ವಿದ್ಯುಚ್ಛಕ್ತಿ ಸೌಲಭ್ಯ ಮುಂತಾದವುಗಳಿಂದ ಯಂತ್ರಗಳ ಪ್ರಾಬಲ್ಯವು ಬೆಳೆದು ಈಗ ಕೆಲಸ ಮಾಡುತ್ತಿರುವ ಕೈಗಳು ಕೆಲಸವಿಲ್ಲದೆ ಬಳಲುವ ಪರಿಸ್ಥಿತಿ ಮಾತ್ರ ಬಂದೊದಗಬಾರದು. ಉತ್ಪಾದನೆಯನ್ನು ಹೆಚ್ಚಿಸುವ ನಮ್ಮ ಪ್ರಯತ್ನಕ್ಕೆ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ನೆರವಾದರೆ ಮಾತ್ರ ಪ್ರಯೋಜನ ಲಭಿಸುತ್ತದೆ. ವಿದ್ಯುಚ್ಛಕ್ತಿಯು ಧಾರಾಳ ಪೂರೈಕೆಯಿಂದ ಹೊಸ ಕೈಗಾರಿಕೆಗಳು ತೆರೆಯಲ್ಪಟ್ಟು ಇನ್ನಷ್ಟು ಜನರಿಗೆ ಉದ್ಯೋಗ ಸಿಗುವಂತಾಗಬೇಕೆಂಬುದೇ ನಮ್ಮ ನಿಜವಾದ ಉದ್ದೇಶ. ಪಂಜಾಬಿನ ಭಾಕ್ರಾ–ನಾಂಗಲ ಯೋಜನೆಯಂತೆ ಕಟ್ಟಿಸಿದ ಗಂಗುವಾಲಿನ ವಿದ್ಯುಚ್ಛಕ್ತಿ ಕೇಂದ್ರದ ಉದ್ಘಾಟನೆಯನ್ನು ಮಾಡುವಾಗ ಮೇಲಿನ ಅಭಿಪ್ರಾಯವನ್ನು ರಾಷ್ಟ್ರಾಧ್ಯಕ್ಷರು ಪ್ರಕಟಿಸಿದರು. ಗಂಗುವಾಲಿನ ಕೇಂದ್ರವು ಪಂಜಾಬು, ಪೆಪ್ಸು, ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶಗಳ ಅಭಿವೃದ್ಧಿಯಲ್ಲಿ ಹೊಸ ಅಧ್ಯಾಯವನ್ನು ತೆರೆಯುತ್ತದೆ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives. At whatever stage we welcome your association with the POPULAR.

THE POPULAR INSURANCE CO., LTD.
"POPULAR BUILDINGS" MANGALORE-1

ದಕ್ಷಿಣ ಕನ್ನಡ ಜಿಲ್ಲಾ ವ್ಯಾಪಾರಿಗಳಿಗೆ ಸುಸಂಧಿ.

ಮೆಣಸು, ಹುಳಿ, ಹರಸಿನ, ವ, ಇತರ ಸಂಬಾರ ಜೀನಸುಗಳಲ್ಲಿ ಬೊಂಬಾಯಿ ಶಹರಿನಲ್ಲಿ ರಖಂ ವ್ಯಾಪಾರ ಮಾಡಲಿಚ್ಛಿಸುವವರು ಈ ಕೆಳಗಿನ ವ್ಯಾಪಾರಸ್ಥರಿಗೆ ಬರೆದು ತಿಳಿಯುವುದು:—

JANALAXMI LTD.,
LAXMI BLDG., SIR P. M. ROAD,
FORT, BOMBAY.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೬-೧-'೫೫	೧೪

ಭಾರತದ ಅರ್ಥಮಂಡಲ

ಜಯಪುರದಲ್ಲಿ ಅಖಿಲ ಭಾರತ ವಾಣಿಜ್ಯ ಪರಿಷತ್ತಿನ ಎಂಟನೆಯ ಅಧಿವೇಶನವನ್ನು ಉದ್ಘಾಟಿಸಲು ಬಂದಿದ್ದ ಕೇಂದ್ರದ ಮಂತ್ರಿ ಶ್ರೀ ಅರುಣ ಚಂದ್ರ ಗುಹಾರು ಭಾರತದ ಆರ್ಥಿಕ ಪರಿಸ್ಥಿತಿಯ ಸತ್ಯ ಚಿತ್ರವನ್ನು ಜನತೆಯ ಮುಂದಿಡಲು ಈ ಸಂದರ್ಭವನ್ನು ಉಪಯೋಗಿಸಿಕೊಂಡುದು ಉಚಿತವಾಯಿತು. ಸ್ವಾತಂತ್ರ್ಯೋತ್ತರದಲ್ಲಿ ಆರ್ಥಿಕ ಪರಿಸ್ಥಿತಿಯು ಯಾವ ರೀತಿಯಲ್ಲಿ ಸುಧಾರಿಸಿತು ಎಂಬುದರ ವಿವರಗಳನ್ನು ಅವರು ತಿಳಿಸಿದುದರಿಂದ ನಮ್ಮಲ್ಲಿ ಆತ್ಮವಿಶ್ವಾಸವು ಜಾಗೃತವಾಗಿ, ಉತ್ಸಾಹದಿಂದ ಅಭಿವೃದ್ಧಿ ಪ್ರಯತ್ನಗಳಲ್ಲಿ ಮಗ್ನರಾಗುವುದಕ್ಕೂ ಪರಸ್ಪರ ಸಹಕಾರ ಭಾವನೆಯಿಂದ ನಡೆದುಕೊಳ್ಳುವುದಕ್ಕೂ ಹೆಚ್ಚಿನ ಉತ್ತೇಜನೆ ದೊರಕದಿರದು. ಸಮರ್ಥ ಮಾರ್ಗದರ್ಶಕರ ಕೈಯಲ್ಲಿ ಭಾರತದ ಆರ್ಥಿಕ ಧೋರಣೆಯು ಇರುವುದರಿಂದ ಕಳೆದ ಮೂರು ವರ್ಷಗಳಲ್ಲಿಯೇ ವಿಶೇಷವಾದ ಮತ್ತು ಗಮನಾರ್ಹವಾದ ಘಟನೆಗಳನ್ನು ನಾವು ಕಾಣುವಂತಾಯಿತು. ೧೯೫೦ನೇ ಇಸವಿಯಲ್ಲಿದ್ದುದಕ್ಕಿಂತ ೧೯೫೩ನೇ ಇಸವಿಗೆ ರಾಷ್ಟ್ರೀಯ ಉತ್ಪನ್ನವು ಹೆಚ್ಚಿಕೊಂಡಿರುವುದಲ್ಲದೆ ಕೈಗಾರಿಕೆಗಳಲ್ಲಿ ನೂರಕ್ಕೆ ನಲ್ವತ್ತರಷ್ಟು ಉತ್ಪಾದನೆಯು ಅಧಿಕಗೊಂಡಿತು. ಬ್ರಿಟನು ಹಾಗು ಅಮೇರಿಕಗಳಲ್ಲಿ ನೂರಕ್ಕೆ ಮೂವತ್ತರಷ್ಟು ಮಾತ್ರ ಕೈಗಾರಿಕೆಗಳ ಉತ್ಪಾದನೆ ಹೆಚ್ಚಿಕೊಂಡಿರುವುದೆಂಬುದನ್ನು ಗಮನಿಸಿದರೆ ನಮ್ಮ ದೇಶದ ಪ್ರಗತಿ ತುಂಬ ತೃಪ್ತಿಕರವಿರುತ್ತದೆ ಎಂಬ ನಂಬಿಕೆಯಾಗುವುದು ನಿಶ್ಚಯ. ಇದರಂತೆ ಜೀವನ ವೆಚ್ಚದ ಪ್ರಮಾಣದಲ್ಲಿ ಸಹ ನಾವು ಜಗತ್ತಿನ ಇತರ ರಾಷ್ಟ್ರಗಳವರಿಗಿಂತ ಹೆಚ್ಚು ಸುಖದಲ್ಲಿ ಇದ್ದೇವೆ. ೧೯೪೮ಕ್ಕಿಂತ ಇಂದಿನ ಭಾರತದಲ್ಲಿ ನೂರಕ್ಕೆ ಮೂರು ಅಥವಾ ನಾಲ್ಕು ಅಂಶದಷ್ಟು ಮಾತ್ರ ಜೀವನ ವೆಚ್ಚ ಹೆಚ್ಚಿರುತ್ತದೆ—ಆದರೆ ಪಾಶ್ಚಾತ್ಯ ದೇಶಗಳಲ್ಲಿ ೧೫ರಿಂದ ೪೦ರ ತನಕ ವೆಚ್ಚದ ಪ್ರಮಾಣ ಅಧಿಕಗೊಂಡಿರುವುದನ್ನು ಕಾಣಬಹುದು. ಆದುದರಿಂದ ನಾವು ಬಡತನದಿಂದ ಜೀವನ ನಡೆಸುವುದನ್ನು ಬಿಟ್ಟುಗೊಟ್ಟರದಿದ್ದರೂ ಆರ್ಥಿಕ ಭದ್ರತೆಯ ದೃಷ್ಟಿಯಿಂದ ಸ್ಫುಹಣೀಯವಾದ ಉತ್ಕರ್ಷವನ್ನು ಹೊಂದಿರುವೆವೆಂಬ ಅಂಶದಲ್ಲಿ ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲ. ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತದ ರೂಪಾಯಿಗೆ ತಕ್ಕ ಗೌರವ ಕೊಡಲಾಗುತ್ತಿರುವುದಕ್ಕೆ ಇದೇ ಕಾರಣ—ನಾವು ರೂಪಾಯಿಯ ಮೌಲ್ಯ ವಿಚ್ಛೇದನವನ್ನು ಮಾಡಿದ್ದರೂ ಅದರಿಂದ ವ್ಯವಹಾರಕ್ಕೆ ಹೆಚ್ಚಿನ ತೊಂದರೆಯಾಗಿಲ್ಲ. ೧೯೪೮ರಲ್ಲಿ ೯೬ ಕೋಟಿ ರೂಪಾಯಿಗಳ ಕೊರತೆಯನ್ನು ನಮ್ಮ ಆರ್ಥಿಕ ವಾತಾವರಣ ತೋರಿಸುತ್ತಿದ್ದರೆ, ಮರು ವರ್ಷ ಪರಿಸ್ಥಿತಿ ಇನ್ನಷ್ಟು ಕೆಟ್ಟು ೧೭೬ ಕೋಟಿ ರೂಪಾಯಿಗಳ ಅಭಾವವುಂಟಾಯಿತು. ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವ ಮೂಲಕ ನಾವು ಆಹಾರ ರಂಗದಲ್ಲಿಯೂ ಔದ್ಯೋಗಿಕ ಕ್ಷೇತ್ರದಲ್ಲಿಯೂ ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಆಯಾತ-ನಿರ್ಯಾತ ವ್ಯಾಪಾರದಲ್ಲಿ ಯೋಗ್ಯ ನಿಯಂತ್ರಣವನ್ನಿಡಲು ಸಾಧ್ಯವಾದುದರಿಂದ ಇಂದು ೫೫ ಕೋಟಿ ರೂಪಾಯಿಗಳ ಉಳಿಕೆಯನ್ನು ತೋರಿಸುವ ಸುಯೋಗ ನಮ್ಮದಾಯಿತು. ಇಷ್ಟರಿಂದ ಎಲ್ಲ ದುಃಖಗಳೂ ದೂರಾದವೆಂದು ಭಾವಿಸುವುದು ಇಷ್ಟವಲ್ಲ—ಏಕೆಂದರೆ, ನಮ್ಮ ಜೀವನದ ಮಟ್ಟವು ಉಳಿದ ದೇಶಗಳವರಿಗಿಂತ ನಿಕೃಷ್ಟವಾಗಿದ್ದು ಅದನ್ನು ಊರ್ಜಿತಪಡಿಸಬೇಕೆಂಬ ನಮ್ಮ ಧ್ಯೇಯ ಇನ್ನೂ ಕೈಗೂಡಿಲ್ಲ. ಆದಾಯವನ್ನು ದ್ವಿಗುಣಿತಗೊಳಿಸಬೇಕೆಂಬುದೇ ನಮ್ಮ ಕನಿಷ್ಠ ಇಚ್ಛೆಯಾಗಿದ್ದು, ಇದು ಇನ್ನೆರಡು ದಶಕಗಳ ಅವಧಿಯನ್ನು ತೆಗೆದುಕೊಂಡೀತು. ಆಹಾರ ರಂಗದಲ್ಲಾಗಲೀ ಔದ್ಯೋಗಿಕ ಕ್ಷೇತ್ರದಲ್ಲಾಗಲೀ ನಾವು ಸಾಧಿಸಲಿಕ್ಕಿರುವ ಅಂಶಗಳು ಇನ್ನೂ ಬಹಳಷ್ಟು ಕಾಣಿಸುತ್ತವೆ—ನಮ್ಮ ಬೆಳೆಯುತ್ತಿರುವ ಜನಸಂಖ್ಯೆಯನ್ನೂ ಹೊಟ್ಟೆ ತುಂಬ ಉಂಡು, ಶುಚಿಯಾದ ಮನೆಯಲ್ಲಿ ಸುಖದಿಂದ ಬಾಳುವ ಉದ್ದೇಶವನ್ನೂ ಗಮನದಲ್ಲಿಟ್ಟುಕೊಂಡರೆ ಇನ್ನಷ್ಟು ತ್ಯಾಗಮಯ ಜೀವನಕ್ಕೆ ಈಗಿನ ತಲೆಮಾರಿನವರು ಸಿದ್ಧರಾಗಬೇಕಾದ ಆವಶ್ಯಕತೆ ಗೋಚರಿಸುತ್ತದೆ. ಇದಕ್ಕೆ ಹಿನ್ನೆಲೆಯಲ್ಲಿ ನಿಲ್ಲುವ ನಮ್ಮ ಆರ್ಥಿಕ ಪರಿಸ್ಥಿತಿ ಕೆಟ್ಟಿಲ್ಲವೆಂಬ ಮತ್ತದು ಭದ್ರವಾಗಿದ್ದು ಸುಧಾರಿಸುತ್ತಿದೆಯೆಂಬ ವಿಶ್ವಾಸದ ಬಲವು ನಮ್ಮ ಚೈತನ್ಯವನ್ನು ಹೆಚ್ಚಿಸುವುದೆಂಬುದೇ ಗುಹಾರ ನುಡಿ ಚಿತ್ರದ ತಿರುಳು.

ಹ್ಯಾಮರಶೀಲ್ಡರ ಪ್ರಯಾಣ

ಸಂಯುಕ್ತ ರಾಷ್ಟ್ರಸಂಘದ ಮಹಾಕಾರ್ಯದರ್ಶಿಗಳಾದ ಹ್ಯಾಮರಶೀಲ್ಡರು ಬಂಧಿತ ಅಮೇರಿಕನ್ನರ ಬಿಡುಗಡೆಯ ಪ್ರಯತ್ನವನ್ನು ಮಾಡುವುದಕ್ಕೋಸ್ಕರ ಪೇಕಿಂಗಿಗೆ ಪ್ರಯಾಣ ಹೊರಟುದನ್ನು ಜಾಗತಿಕ ಇತಿಹಾಸದಲ್ಲಿ ಮಹತ್ವದ ಘಟನೆಯಾಗಿ ಭಾವಿಸಿದರೆ ತಪ್ಪಾಗದು. ಚೀನದ ಜನತಾರಾಜ್ಯಕ್ಕೆ ಪ್ರವೇಶವಿಲ್ಲದ ಸಂಯುಕ್ತ ರಾಷ್ಟ್ರಸಂಘದ ಆಡಳಿತ ಪ್ರಮುಖನು ಚೀನದ ಪ್ರಧಾನ ಮಂತ್ರಿಯನ್ನು ಕಾಣಲು ಹೋಗುವುದು ಜಾಗತಿಕ ಮಹಾಸಂಸ್ಥೆಯ ಪಾಲಿಗೆ ಹಾಸ್ಯಾಸ್ಪದನಾದ ವಿಷಯವೆಂದು ಹೊರನೋಟಕ್ಕೆ ಕಾಣಿಸುತ್ತದೆ. ಚೀನದ ಅಭಿಪ್ರಾಯವನ್ನು ಕೇಳಿಕೊಳ್ಳುವಷ್ಟು ಸಹನೆಯನ್ನು ತೋರಿಸದೆ, ಅಲ್ಲಿಯ ಪ್ರತಿನಿಧಿಗೆ ಉಪಸ್ಥಿತರಿರಲು ಅವಕಾಶವನ್ನು ನೀಡದೆ, ಏಕಪಕ್ಷೀಯವಾಗಿ ಚೀನವನ್ನು ಅಪರಾಧಿಯೆಂದು ಸಾರಿದ ರಾಷ್ಟ್ರಸಂಘದ, ಮಹಾ ಕಾರ್ಯದರ್ಶಿಯು ದೈನ್ಯಯಾಚಕನಂತೆ ಪೇಕಿಂಗಿಗೆ ಹೊರಟರುವುದು ಶೋಭೆಯ ವಿಷಯವಾಗದು. ಆದರೆ ಇದರ ತಪ್ಪು ಚೀನದ್ದಲ್ಲ—ರಾಷ್ಟ್ರಸಂಘದ್ದೇ ತಪ್ಪು. ಅರುವತ್ತು ಕೋಟಿ ಜನತೆಯನ್ನು ಪ್ರತಿನಿಧೀಕರಿಸುವ ಶಾಸನಬದ್ಧ ಸರಕಾರಕ್ಕೆ ಮನ್ನಣೆಯನ್ನು ಕೊಡದೆ, ಫೊರ್ಮೋಸಾ ದ್ವೀಪದಲ್ಲಿ ಆಶ್ರಯಹೊಂದಿದ ಚಿಯಾಂಗರನ್ನೇ ಬೆಂಬಲಿಸುವ ಅಮೇರಿಕದ ಮತ್ತು ಅದರ ಅನುಯಾಯಿ ರಾಷ್ಟ್ರಗಳ ಹಟಮಾರಿತನದಿಂದ ರಾಷ್ಟ್ರಸಂಘದ ಇತಿಹಾಸದಲ್ಲಿ ಶೋಚನೀಯವಾದ ಪ್ರಸ್ತುತ ಘಟನೆ ನಡೆಯುವಂತಾಯಿತು. ಹ್ಯಾಮರಶೀಲ್ಡರ ಯಾತ್ರೆಯು ಚೀನದ ಜನತಾರಾಜ್ಯಕ್ಕೆ ಸ್ಥಾನವನ್ನು ಕೊಡದೆ ರಾಷ್ಟ್ರಸಂಘವು ಗೌರವಾರ್ಹವಾದ ರೀತಿಯಲ್ಲಿ ತನ್ನ ಕೆಲಸವನ್ನು ನಡೆಸಲಾರದೆಂದು ಇನ್ನೊಮ್ಮೆ ತೋರಿಸಿಕೊಟ್ಟಿತು. ರಾಷ್ಟ್ರಸಂಘವು ಬುದ್ಧಿಗೆಟ್ಟವರಂತೆ ವರ್ತಿಸಿದ್ದರೂ, ಚೀನದ ಜನತಾ ರಾಜ್ಯಕ್ಕೆ ಅನ್ಯಾಯವನ್ನೆ ಬಗೆದಿದ್ದರೂ, ಭಾರತದ ಪ್ರಧಾನ ಮಂತ್ರಿಗಳ ಸಲಹೆಯಂತೆ ಚೀನೀ ಪ್ರಧಾನಿಗಳು ಸ್ನೇಹಪೂರ್ಣವಾದ ಸದ್ವರ್ತನೆಯನ್ನು ತೋರಿಸಿ, ಹ್ಯಾಮರಶೀಲ್ಡರನ್ನು ಸ್ವಾಗತಿಸಿ, ಮಾತುಕತೆ ನಡೆಸಲು ಸಿದ್ಧರಾದದ್ದು ಸಮಾಧಾನಕರವಾದ ಅಂಶ. ಹ್ಯಾಮರಶೀಲ್ಡರ ರಾಯಭಾರವು ಯಶಸ್ವಿಯಾಗಲಿ, ಬಿಡಲಿ—ಚೀನದ ಜನತಾರಾಜ್ಯವನ್ನು ಉಪೇಕ್ಷಿಸಿ ಅದರ ಅಸ್ತಿತ್ವವನ್ನು ಅಲ್ಲಗಳೆದು, ಜಗತ್ತಿನ ವ್ಯವಹಾರವನ್ನು ಸಾಗಿಸಬೇಕೆನ್ನುವವರು ಏನನ್ನೂ ಸಾಧಿಸಲಾರರೆಂದು ಮಾತ್ರ ಎಂದೆಂದಿಗೂ ನೆನಪುಳಿಯುವುದು ನಿಶ್ಚಯ.

ಬರ್ಮಾಕ್ಕೆ ಟಿಟೋರ ಪ್ರಯಾಣ

ಭಾರತದ ಪ್ರಗತಿಯ ಬಗ್ಗೆ ಸಂತೋಷ

ಯುಗೋಸ್ಲಾವಿಯದ ಅಧ್ಯಕ್ಷ ಟಿಟೋ ಮತ್ತವರ ಪರಿವಾರದವರು ಭಾರತ ಯಾತ್ರೆಯ ಪ್ರಥಮ ಘಟ್ಟವನ್ನು ಮುಗಿಸಿ ದಿನಾಂಕ ೩ರಂದು ಕಲ್ಕತ್ತೆಯಿಂದ ರಂಗೂನಿಗೆ ಬರ್ಮದ ಸಂಚಾರಕ್ಕಾಗಿ ಹೊರಟರು. ಜನವರಿ ೨೦ನೇ ತಾರೀಕು ಅವರು ಮದ್ರಾಸಿಗೆ ಆಗಮಿಸಿ ದಕ್ಷಿಣ ಭಾರತದ ಪ್ರವಾಸವನ್ನು ಕೈಗೊಂಡು ತಮ್ಮ ಯಾತ್ರೆಯ ದ್ವಿತೀಯ ಘಟ್ಟವನ್ನು ಮುಗಿಸುವರು.

ಕಲ್ಕತ್ತೆಯಿಂದ ಹೊರಡುವ ಮುಂಚೆ ಟಿಟೋರು ಏಳೆಂಟು ವರ್ಷಗಳ ಅವಧಿಯಲ್ಲಿ ಭಾರತವು ಅದ್ಭುತ ಪ್ರಗತಿಯನ್ನು ಸಾಧಿಸಿದೆ ಎಂದು ಉದ್ಗರಿಸಿದರು. ಪ್ರಧಾನ ಮಂತ್ರಿ ನೆಹರುಗಳ ಕರ್ತವ್ಯ ದಕ್ಷತೆಯನ್ನೂ ಧೋರಣೆಯನ್ನೂ ಅವರು ಮನವಾರೆ ಪ್ರಶಂಸಿಸಿದರು. ಭೂಸಮಸ್ಯೆಯತ್ತ ಹೊರಳಿ ರೈತರ ಏಳಿಗೆಗೆ ಇನ್ನಷ್ಟು ಶ್ರಮವಹಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ದಿಲ್ಲಿಯಲ್ಲಿ ಹ್ಯಾಮರಶೀಲ್ಡರು

ಪೇಕಿಂಗಿಗೆ ಹೋಗುವ ಮಾರ್ಗದಲ್ಲಿ ರಾಷ್ಟ್ರಸಂಘದ ಕಾರ್ಯದರ್ಶಿ ಹ್ಯಾಮರಶೀಲ್ಡರು ದಿನಾಂಕ ೩ರಂದು ಹೊಸದೆಹಲಿಗೆ ಬಂದರು. ನಿಮ್ಮ ರಾಯಭಾರವು ವ್ಯಾಪಕ ಒಪ್ಪಂದಗಳಿಗೆ ತಳಹದಿಯಾದೀತೆ ಎಂದು ಕೇಳಿದುದಕ್ಕೆ "ಭಾಂತದಲ್ಲಿ ತುಂಬಾ ರಾಜಕೀಯ ಪ್ರಜ್ಞೆ ಇದೆ ಎಂದು ನಾನು ಕೇಳಿದ ಸಂಗತಿ ನಿಜವಾಯಿತು" ಎಂದು ಹಾರಿಕೆಯ ಉತ್ತರವಿತ್ತರು.

ಅವರು ಮಹಾತ್ಮಾಗಾಂಧೀಜಿಯ ಸಮಾಧಿಗೆ ಪುಷ್ಪ ಗುಚ್ಛವನ್ನು ಸಮರ್ಪಿಸಿದರಲ್ಲದೆ ರಾಷ್ಟ್ರಾಧ್ಯಕ್ಷರನ್ನೂ ಭೇಟಿ ಮಾಡಿದರು. ಜಕಾರ್ತದಿಂದ ಮರಳಿದ್ದ ನೆಹರುಗಳನ್ನೂ ಕಂಡು ಎರಡು ತಾಸು ಗುಪ್ತ ಸಮಾಲೋಚನೆಗಳನ್ನು ನಡೆಸಿದರು. ಆಗ ಚೀನದ ಮನೋಭಾವನೆಯನ್ನು ನೆಹರುಗಳು ಅವರಿಗೆ ತಿಳಿಯಪಡಿಸಿದರೆಂದು ಹೇಳಲಾಗುತ್ತದೆ. ತಮ್ಮ ಗೌರವಾರ್ಥ ಏರ್ಪಡಿಸಿದ ಭೋಜನ ಸಮಾರಂಭದಲ್ಲಿ ಭಾಗವಹಿಸಿ, ಅವರು ನಿರೋಪ ತೆಗೆದುಕೊಂಡರು.

ಕಾಶ್ಮೀರ ತಂಟೆಯ ಇತ್ಯರ್ಥ

ಪಾಕಿಸ್ತಾನದ ಪ್ರಧಾನ ಮಂತ್ರಿಗಳು ಕಾಶ್ಮೀರ ತಂಟೆಯನ್ನು ಪರಸ್ಪರ ಸಂಧಾನದಿಂದ ಬಿಡಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದು ಮುಂದಿನ ಮಾರ್ಚ ತಿಂಗಳಲ್ಲಿ ಕರಾಚಿಯಲ್ಲಿ ಉಭಯ ರಾಷ್ಟ್ರಗಳ ಪ್ರಧಾನಿಗಳ ಭೇಟಿಯಾಗುವುದೆಂದು ಕರಾಚಿಯ ಆಕಾಶವಾಣಿ ಭಾಷಣದಲ್ಲಿ ಹೇಳಿದರು. ನೆಹರುಗಳನ್ನು ಸುದ್ದಿಗಾರರು ಈ ಒಗ್ಗೆ ಪ್ರಶ್ನಿಸಿದಾಗ, ಅದು ಇನ್ನೂ ನಿಶ್ಚಯವಿಲ್ಲವೆಂದೂ ಮಾರ್ಚಿಗೆ ಮೊದಲು ಮಾತುಕತೆಗಳನ್ನು ತೊಡಗಲು ತಮಗೆ ಸಮಯವಿಲ್ಲವೆಂದಷ್ಟೆ ಜಕಾರ್ತದಲ್ಲಿ ಮಹನಮಾಲೀಗಳಿಗೆ ತಾವು ತಿಳಿಸಿರುವುದಾಗಿಯೂ ಹೇಳಿದರು.

ರಶಿಯಾಕ್ಕೆ ನೆಹರುಗಳ ಭೇಟಿ

ಲಂಡನ್ನಿನಲ್ಲಿ ಜನವರಿ ಮಾಸಾಂತ್ಯದಲ್ಲಿ ಸೇರುವ ರಾಷ್ಟ್ರಕೂಟ ಪ್ರಧಾನರ ಪರಿಷತ್ತಿನಲ್ಲಿ ಭಾಗವಹಿಸಿ, ಭಾರತಕ್ಕೆ ಮರಳುವಾಗ ನೆಹರುಗಳು ಫ್ರಾನ್ಸಿನಲ್ಲಿ ಇಳಿದು ಪ್ರಧಾನಿ ಮೆಂಡೆಯವರನ್ನು ಭೇಟಿ ಮಾಡುವರೆಂದು ತಿಳಿಯುತ್ತದೆ. ಸಂಸತ್ತಿನ ಮುಂಗಡ ಪತ್ರದ ಅಧಿವೇಶನವು ಮುಗಿದ ಬಳಿಕ ರಶಿಯಕ್ಕೆ ನೆಹರುಗಳು ಹೋಗಲಿರುವರೆಂದೂ ವರದಿಗಳು ಹೇಳುತ್ತವೆ.

ಮಂಗಳೂರ ಬಿಶೋಪರ ನಿಧನ

ತಮ್ಮ ಕಾರ್ಯಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದವರೂ ಹಲವು ಪ್ರಗತಿಪರ ಕಾರ್ಯಗಳನ್ನು ಜಯಶೀಲವಾಗಿ ನೆರವೇರಿಸಿ ಶಕ್ತರಂದೂ ದಕ್ಷರೆಂದೂ ಪ್ರಸಿದ್ಧರಾದವರೂ 74 ವರ್ಷಗಳ ವಯೋವೃದ್ಧರೂ ಆದ ಮಂಗಳೂರು ಡಾಯೋಸೀಜಿನ ಬಿಶೋಪ್ ರ್ಯಾಯ್ಟ್‌ರೆವರೆಂಡ್ ಡಾಕ್ಟರ್ ವಿಕ್ಟರ್ ರೊಜಾರಿಯೋ ಫೆರ್ನಾಂಡಿಸರವರು ತಾ. ೪ರಂದು ಕೊಡಿಯಾಲಬೈಲು ಇಗರ್ಜಿಯಲ್ಲಿ ಪ್ರಾತಃಕಾಲದ ಪ್ರಾರ್ಥನೆಯನ್ನು ಮಾಡುತ್ತಿರುವಾಗಲೇ ಹೃತ್ಕ್ರಿಯೆ ನಿಂತು ಮೃತರಾದುದು ಅತ್ಯಂತ ವಿಷಾದಕರವಿದೆ. ಇವರು ಸುಮಾರು ಮೂರು ವರುಷಗಳಿಂದ ಅನಾರೋಗ್ಯಪೀಡಿತರಿದ್ದರೆಂದು ತಿಳಿದುಬರುತ್ತದೆ. ಅಂತ್ಯಸಂಸ್ಕಾರವು ತಾ. ೫ರಂದು ರೊಜಾರಿಯೋ ಚರ್ಚಿನಲ್ಲಿ ಅಭೂತಪೂರ್ವ ವೈಭವದಿಂದ ನೆರವೇರಿತು.

ಸಾಲಾಝಾರರ ಹಟ

ಗೋವೆಯ ಆರ್ಥಿಕ ಪರಿಸ್ಥಿತಿಯು ಪೂರಾ ಹದಗೆಟ್ಟಿದೆಯೆಂದು ಅಲ್ಲಿಯ ಪ್ರತ್ಯಕ್ಷದರ್ಶಿಗಳ ಮಾತಿನಿಂದ ವ್ಯಕ್ತವಾಗುತ್ತದೆ. ಸರಕಾರದ ಆದಾಯವು ಅರ್ಧದಷ್ಟು ಇಳಿಮುಖವಾಗಿದೆಯಲ್ಲದೆ ದಿನಕ್ಕೆ ಒಂದು ಲಕ್ಷ ರೂಪಾಯಿ ವೆಚ್ಚ ಬಯಸುವ ಸೈನ್ಯವನ್ನು ಪೋಷಿಸುವ ಹೆಚ್ಚಿನ ಹೊರೆಯೊಂದಕ್ಕೆ ಅದು ಹೆಗಲು ಕೊಟ್ಟಿರುತ್ತದೆ ಹೀಗೆ ಪೋರ್ಚುಗಾಲದ ಮೇಲೆ ವಿಶೇಷ ಭಾರ ಬೀಳುತ್ತಿದ್ದರೂ ಸಾಲಾಝಾರರು ಮಾತ್ರ ವಸಾಹತುವಾದವನ್ನು ಕೊನೆಗೊಳಿಸುವ ಮನೋಭಾವವನ್ನು ಹೊಂದಿಲ್ಲ. ಬದಲಿಗೆ ದಮನದ ಮೇಲೆ ವಿಶೇಷ ಧಾಳಿಯನ್ನು ಭಾರತದ ಗಡಿಯಿಂದ ನಡೆಸಲಾಗುತ್ತದೆ ಎಂದು ಮುಂತಾಗಿ ಅವರು ನ್ಯಾಟೋ ರಾಷ್ಟ್ರಗಳಿಗೂ ಬ್ರಿಟನಿಗೂ ಸುಳ್ಳು ಸುಳ್ಳೇ ದೂರುಕೊಡಲು ಉದ್ಯುಕ್ತರಾದರು.

ಹೊಸ ದಾಖಲೆ

ಆವಡಿಯಲ್ಲಿ ಜನವರಿ ೧೭ರಿಂದ ೨೩ನೇ ದಿನಾಂಕ ಜರಗಲಿರುವ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ೬೦ನೇ ಅಧಿವೇಶನದ ಸ್ವಾಗತಾಧ್ಯಕ್ಷ ಸ್ಥಾನಕ್ಕೆ ಶ್ರೀಮತಿ ಅಂಬುಜಮ್ಮಾಳರು ಸರ್ವಾನುಮತದಿಂದ ಆಯ್ಕೆ ಹೊಂದಿದರು. ಸ್ತ್ರೀಯೋರ್ವಳು ಈ ಪದವಿಯನ್ನು ಅಲಂಕರಿಸುವುದು ಕಾಂಗ್ರೆಸಿನ ಇತಿಹಾಸದಲ್ಲಿಯೇ ಇದು ಮೊದಲ ಸಲ.

ತಮಿಳುನಾಡು ಕಾಂಗ್ರೆಸು ಇನ್ನೂ ಒಂದು ವಿಶೇಷವನ್ನು ಸಾಧಿಸಿತು—ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಸ್ಥಾನಕ್ಕೆ ಭಾರತದಲ್ಲಿಯೇ ಪ್ರಥಮ ಸಲ ಹರಿಜನರೊಬ್ಬರನ್ನು ಅದು ಚುನಾಯಿಸಿತು. ಈ ಭಾಗ್ಯಗಳಿಸಿದವರು ಶ್ರೀ. ಪಿ. ಕಕ್ಕನ್ನರು.

ಚನ್ನಯ್ಯನವರ ಆಯ್ಕೆ

ಮೈಸೂರು ಪ್ರದೇಶ ಕಾಂಗ್ರೆಸಿಗೆ ಸಾಹುಕಾರ ಚೆನ್ನಯ್ಯನವರು ಬಹುಮತದಿಂದ ಆರಿಸಿ ಬಂದರು. ಕಾಂಗ್ರೆಸು ವರಿಷ್ಠರ ಪ್ರತಿನಿಧಿಯಾಗಿ ಬಂದಿದ್ದ ಶ್ರೀ ಕೆ. ಸದಾನಂದ ಹೆಗ್ಡೆಯವರು ಭಿನ್ನಾಭಿಪ್ರಾಯಗಳನ್ನು ಕಾಂಗ್ರೆಸು ಸದಸ್ಯರು ಬಿಟ್ಟುಗೊಡಬೇಕೆಂದು ಉಪದೇಶಿಸಿದರು

ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಸ್ಥಾನಕ್ಕೆ ರಂಗಸ್ಥಳ ಸಿದ್ಧವಾಗಿದ್ದು, ಶ್ರೀ ನಿಜಲಿಂಗಪ್ಪನವರ ಗದ್ದುಗೆ ಅಲುಗಾಡುತ್ತಿರುವ ಎಲ್ಲ ಲಕ್ಷಣಗಳೂ ಗೋಚರಿಸುತ್ತವೆ

ಪ್ರಾಥಮಿಕ ಶಿಕ್ಷಣ

ಮದ್ರಾಸು ಸರಕಾರದವರು ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಪರಿಷ್ಕರಿಸುವ ಉದ್ದೇಶದಿಂದ ನೇಮಿಸಿರುವ ಸಮಿತಿಯು ಎಪ್ಪತ್ತೆರಡು ಪ್ರಶ್ನೆಗಳನ್ನೊಳಗೊಂಡ ಪತ್ರಿಕೆಯೊಂದನ್ನು ಸಿದ್ಧಗೊಳಿಸಿ ಸಂಸತ್ತು ಹಾಗು ಶಾಸನ ಸಭೆಗಳ ಸದಸ್ಯರಿಗೆ, ಜಿಲ್ಲಾ ಬೋರ್ಡು, ನಗರ ಸಭೆ ಮತ್ತು ಗ್ರಾಮ ಪಂಚಾಯತುಗಳ ಅಧ್ಯಕ್ಷರಿಗೆ, ಅಧ್ಯಾಪಕರ ಮತ್ತು ಮೆನೇಜರರ ಸಂಘಗಳಿಗೆ, ಮತ್ತು ಶಿಕ್ಷಣ ತಜ್ಞರಿಗೆ ಕಳಿಸಿರುವುದು. ಪಾಠಪಟ್ಟಿ, ವಾರದ ಅವಧಿ, ಶಾಲೆಯ ಆಡಳಿತೆ, ಕಟ್ಟಡ ಮತ್ತು ಉಪಕರಣೆಗಳು, ಅಧ್ಯಾಪಕರ ಸ್ಥಾನಮಾನ, ಸಾರ್ವಜನಿಕರ ಸಹಕಾರ ಮುಂತಾದ ವಿಷಯಗಳನ್ನು ಪ್ರಶ್ನಾವಳಿ ಸ್ಪರ್ಶಿಸುತ್ತದೆ.

ಹೆಚ್ಚು ಪಕ್ಷಗಳು ಬೇಕಿಲ್ಲ

ಪ್ರಜಾಪ್ರಭುತ್ವವು ಬೆಳೆದು ಬಾಳಬೇಕಾದರೆ ರಾಜಕೀಯ ಪಕ್ಷಗಳ ಸಂಖ್ಯೆಯು ತಗ್ಗಬೇಕೆಂದು ರಾಜ್ಯಗಳ ಶಾಸನ ಸಭಾಧ್ಯಕ್ಷರ ಸಮ್ಮೇಳನವು ರಾಜಕೋಟೆಯಲ್ಲಿ ಜರಗಿದಾಗ, ಲೋಕ ಸಭಾಧ್ಯಕ್ಷ ಶ್ರೀ ಮಾವಳಣಕರರು ಹೇಳಿದರು. ಪರಸ್ಪರ ತೂಕ ತಪ್ಪದಂತೆ ನಡೆದುಕೊಳ್ಳಬಲ್ಲ ಸರಕಾರಿ ಪಕ್ಷವೂ ಮತ್ತೊಂದು ಪ್ರತಿಪಕ್ಷವೂ ಇದ್ದರೆ ಸಾಕು—ಇವೆರಡಕ್ಕಿಂತ ಹೆಚ್ಚಿರಬಾರದು. ಪೆಪ್ಸು, ತಿರುಕೊಚ್ಚಿ, ಆಂಧ್ರಗಳು ಇದೇ ಪಾಠ ಕಲಿಸುತ್ತವೆ ಎಂದವರು ತಿಳಿಸಿದರು.

ವೈಜ್ಞಾನಿಕ ಪರಿಷತ್ತು

ಬಡೋದೆಯಲ್ಲಿ ದಿನಾಂಕ ೪ರಂದು ಭಾರತೀಯ ವೈಜ್ಞಾನಿಕ ಪರಿಷತ್ತಿನ ಅಧಿವೇಶನವು ಪ್ರಧಾನ ಮಂತ್ರಿಗಳಿಂದ ಉದ್ಘಾಟಿಸಲ್ಪಟ್ಟಿತು. ರಾಜಕೀಯ ಪಟುಗಳ ವರ್ಚಸ್ಸಿನಿಂದ ವಿಜ್ಞಾನಿಗಳು ದೂರವಿದ್ದುಕೊಂಡು ದುಡಿಯಬೇಕಾಗಿ ಅವರು ಹೇಳಿದರು. ಅಧ್ಯಕ್ಷರು ಅಣುಬಾಂಬುಗಳ ಸಂಶೋಧನೆಯಿಂದ ವಿಜ್ಞಾನಿಗಳ ವ್ಯವಹಾರದಲ್ಲಿ ಜನಸಾಮಾನ್ಯರಿಗೆ ಸಂಶಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಮದ್ಯಪಾನ ಪ್ರತಿಬಂಧ

ಯೋಜನಾ ಆಯೋಗದಿಂದ ನೇಮಕಗೊಂಡಿರುವ ಪಾನನಿರೋಧ ಸಮಿತಿಯ ಅಧ್ಯಕ್ಷರಾದ ಶ್ರೀಮನ್ನಾರಾಯಣ ಅಗ್ರವಾಲರು ಪಾನನಿರೋಧವು ಒಳ್ಳೆಯದೊ ಕೆಟ್ಟದೋ ಎಂಬ ಅಂಶವನ್ನು ವಿಚಾರಿಸುವ ಪ್ರಶ್ನೆಯೇ ತಮ್ಮ ಮುಂದಿಲ್ಲವೆಂದು ತಿಳಿಸಿರುವರು. ರಾಷ್ಟ್ರೀಯ ಪ್ರಗತಿಯ ಸಾಧನವಾಗಿ ಪಾನನಿರೋಧ ಧೋರಣೆಯನ್ನು ಹೇಗೆ ಕಾರ್ಯಗತಗೊಳಿಸಬಹುದೆಂಬ ವಿಷಯವನ್ನಷ್ಟೆ ತಾವು ವಿಮರ್ಶಿಸುವುದಾಗಿ ಅವರು ವಿದಿತಪಡಿಸಿದರು.

ಭಾಟ್ನಗರರ ಮೃತ್ಯು

ಹೊಸ ವರ್ಷದ ಶುಭದಿನದಂದು ಅಖಿಲ ಭಾರತವನ್ನು ಶೋಕ ಸಾಗರದಲ್ಲಿ ಮುಳುಗಿಸುವ ಘಟನೆಯೊಂದು ನಡೆಯಿತು. ಅಂತಾರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳೂ ಭಾರತ ಸರಕಾರದ ನೈಸರ್ಗಿಕ ಸಂಪತ್ತು ಮತ್ತು ವೈಜ್ಞಾನಿಕ ಸಂಶೋಧನ ಖಾತೆಯ ಕಾರ್ಯದರ್ಶಿಗಳೂ ಆದ ಡಾ| ಶಾಂತಿ ಸ್ವರೂಪ ಭಾಟ್ನಗರರು ಹೃದ್ರೋಗದಿಂದ ಆಕಸ್ಮಿಕವಾಗಿ ನಿಧನ ಹೊಂದಿದರು. ಸ್ವಾತಂತ್ರ್ಯೋತ್ತರದಲ್ಲಿ ಹದಿನೈದು ರಾಷ್ಟ್ರೀಯ ಪ್ರಯೋಗ ಶಾಲೆಗಳನ್ನು ಸ್ಥಾಪಿಸಿದ ಈ ವಿಜ್ಞಾನಿಗಳ ಪ್ರಧಾನ ಮಂತ್ರಿಗಳಲ್ಲಿದ್ದ ಉತ್ಸಾಹಕ್ಕೆ ತಕ್ಕ ಸೇನಾನಿಯಂತಿದ್ದರು. ಅವರಸ್ಥಾನಕ್ಕೆ ಇನ್ನೊಬ್ಬರನ್ನು ಹುಡುಕುವುದು ನೆಹರುಗಳ ಪಾಲಿಗೆ ಸುಲಭವಾದ ಕೆಲಸವಲ್ಲ.

ಉಡುಪಿ.

ನಗರಸಭೆಯು ಕಳೆದ ತಾ. 30ರಲ್ಲಿ ಚೇರ್‌ಮನ್ ಡಾ| ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ನಗರಸಭೆಯ 1953-54ನೆ ವರ್ಷದ ಆಡಿಟ ರಿಪೋರ್ಟಿನ ಕುರಿತು ಬಂದ ಸರಕಾರಿ ನಿರ್ಣಯವನ್ನು ರಿಕಾರ್ಡು ಮಾಡಲಾಯಿತು. ಹೊರಬಾಕಿಯಿರುವ ತೆರಿಗೆ ಹಣದಲ್ಲಿ ಸರಕಾರದಿಂದ ಬರತಕ್ಕ ಹಣವನ್ನು ಬೇಗನೆ ನಗರಸಭೆಗೆ ಕೊಡುವಂತೆ ಸರಕಾರವನ್ನು ವಿನಂತಿಸಲಾಯಿತು.

ಪ್ರೊಟೆಸ್ಟಾಂಟ್ ಕ್ರೈಸ್ತ ದೇವಾಲಯ ಸೆಂಟೆನರಿ—ಉಡುಪಿ ಪ್ರೊಟೆಸ್ಟಾಂಟ್ ಕ್ರೈಸ್ತ ಸಮಾಜದ ದೇವಾಲಯವು ನಿರ್ಮಾಣ ಹೊಂದಿ ಇದೀಗ ಒಂದು ನೂರು ವರ್ಷಗಳಾದುವು. ಈ ಸಂತೋಷ ಸೂಚನಾರ್ಥವಾಗಿ ಕಳೆದ ತಿಂಗಳ ತಾ. 26ರಿಂದ ಮೂರು ದಿವಸಗಳ ತನಕ ದೇವಾಲಯದಲ್ಲಿ ಪ್ರಾರ್ಥನೆ, ಧಾರ್ಮಿಕಭಾಷಣ, ಮಾಯಾಲಾಂದ್ರ ಪ್ರದರ್ಶನ ಮೊದಲಾದ ಕಾರ್ಯಕ್ರಮಗಳಾದುವು. ಜಿಲ್ಲೆಯ ಹಾಗೂ ಮದ್ರಾಸಿನ ಇತರ ಭಾಗಗಳಿಂದ ಸಮಾಜ ಬಂಧುಗಳು ಬಹುಸಂಖ್ಯೆಯಲ್ಲಿ ಬಂದಿದ್ದರು. ಸೆಂಟಿನರಿ ನೆನಪಿಗಾಗಿ ಗಂಟೆ ಗೋಪುರವು ಉದ್ಘಾಟಿಸಲ್ಪಟ್ಟಿತು. ಕೊನೆಯ ದಿನ ಸಮಾಜದ ಅಬಾಲವೃದ್ಧರ ಮೆರವಣಿಗೆಯಾಗಿ, ಎಲ್ಲರಿಗೂ ಉಪಾಹಾರ ನಡೆಯಿತು. ಮಿಶನ್ ಆಸ್ಪತ್ರೆಯ ಕಾಯಿಲೆಗ್ರಸ್ತರಿಗೂ ಚಿಕ್ಕಮಕ್ಕಳಿಗೂ ಹಾಲು ಉಣಿಸಲಾಯಿತು.

ನವ-1955-ವರ್ಷವು

"ನವಯುಗ"ದ

ಚಂದಾದಾರರಿಗೆ,
ಜಾಹೀರಾತುದಾರರಿಗೆ,
ಏಜಂಟರಿಗೆ,
ಯಾವತ್ತೂ ಹಿತೈಷಿಗಳಿಗೆ

ಶುಭದಾಯಕವಾಗಲಿ.

ಹೊಸವರ್ಷ ದಿನಾಚರಣೆ—ದಿ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೊರ್ಪರೇಶನ್ ನೇತೃತ್ವದಲ್ಲಿ ಹೊಸವರ್ಷ ದಿನಾಚರಣೆಯು ತಾ 1 ರಲ್ಲು ಸಂಜೆ ಸಿಂಡಿಕೇಟ್ ಬೇಂಕಿನ ಉಪ್ಪರಿಗೆಯಲ್ಲಿ ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಆರೂರು ಲಕ್ಷ್ಮೀನಾರಾಯಣರಾಯರು ಹೊಸವರ್ಷದ ಪ್ರಮುಖ ಅತಿಥಿಗಳಿದ್ದು ಅವರಿಗೆ ಶ್ರೀ ಟಿ. ರಮೇಶಪೈಗಳು ಮೊದಲಾಗಿ ಮಾಲಿಕೆಯನ್ನಿತ್ತು, ಸಭಿಕರನ್ನು ಸ್ವಾಗತಿಸಿದರು. ಡಾ| ಕೆ. ಎಲ್. ಐತಾಳ್, ಡಾ| ಟಿ. ಮಾಧವಪೈ, ಶ್ರೀಗಳಾದ ಟಿ. ಎ. ಪೈ, ಎಂ. ಎಲ್. ಎ; ಎ. ಜೆ ಆಲ್ವ, ಯು. ಎ. ಪೈಗಳು ಪ್ರಮುಖ ಅತಿಥಿ ಶ್ರೀ ಆರೂರರವರಿಗೆ ಹೊಸವರ್ಷದ ಶುಭಾಶಯಗಳನ್ನು ಸಲ್ಲಿಸಿ ಅವರ ಸೇವಾಕಾರ್ಯಗಳನ್ನು ವಿವರಿಸಿದರು. ಶ್ರೀ ಆರೂರರವರ ಮರುನುಡಿ ಅಧ್ಯಕ್ಷಭಾಷಣ ಶ್ರೀ ಟಿ. ರಮೇಶಪೈಗಳಿಂದ ಧನ್ಯವಾದರ್ಪಣೆ ಫಲ ವಿತರಣೆ ಕಾರ್ಯಗಳಾಗಿ ರಾಷ್ಟ್ರಗೀತೆಯೊಡನೆ ಸಮಾರಂಭ ಕೊನೆಗೊಂಡಿತು.

ನೀರಾಪಾರ್ಲರ್—ಉದ್ಯಾವರದಲ್ಲಿ ಕಳೆದ ತಾ. 31ರಂದು ತಹಸೀಲ್ದಾರ್ ಶ್ರೀ. ಕೆ. ಲಿಂಗಪ್ಪಯ್ಯ ನವರಿಂದ ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿಯೂ, ಇದೇ ತಾ. 30ರಂದು ಬಾರಕೂರಲ್ಲಿ ಶ್ರೀ. ಎಸ್. ಎಲ್. ಕೊಳ್ಕೆಬೈಲು, ಎಂ. ಎಲ್. ಎ. ಅವರಿಂದ ಡಿ| ಕಲೆಕ್ಟರ್ ಶ್ರೀ. ಟಿ. ವಿ. ಪಿ. ಕುರುಪ್‌ರವರ ಅಧ್ಯಕ್ಷತೆಯಲ್ಲಿಯೂ ಉದ್ಘಾಟಿಸಲ್ಪಟ್ಟವೆ.

ಲೋಕಲ್ ಕೋಪರೇಟಿವ್ ಯೂನಿಯನ್ ಮಹಾಸಭೆಯು ಕಳೆದ ತಾ. 26ರಲ್ಲು ವಕೀಲ್ ಶ್ರೀ. ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಕಾರ್ಯದರ್ಶಿ ಶ್ರೀ. ಪಿ. ವಿ. ಆಚಾರ್ಯರು ವರದಿವಾಚನ ಮಾಡಿದರು. ಶ್ರೀಗಳಾದ ಕೆ. ಜಿ. ಬಲ್ಲಾಳ್, ಪಿ. ವಿ. ಆಚಾರ್, ಕುರ್ಕಾಲು ಗಣಪಯ್ಯ ಸೆಟ್ಟಿ, ಎಸ್. ಅಣ್ಣಯ್ಯ ಹೆಗ್ಡೆ, ಎಮ್. ರಾಮಕೃಷ್ಣ ಭಟ್, ಪಿ. ವೆಂಕಟಕೃಷ್ಣ ರಾವ್ ಮತ್ತು ಎಲ್. ಎಮ್. ದೇಸಾಯರವರು ಪುನಹ ಡೈರೆಕ್ಟರರಾಗಿ ಹೊಸವರ್ಷಕ್ಕೆ ಆರಿಸಲ್ಪಟ್ಟರು.

ಸಹಕಾರಿಗಳ ಸೌಹಾರ್ದ ಸಭೆಯು ಕಳೆದ ತಾ. 26ರಲ್ಲು ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಶ್ರೀ ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘಗಳಲ್ಲಿ ಸದಸ್ಯರನ್ನು ಹೆಚ್ಚು ಮಾಡುವ ಇತ್ಯಾದಿ ವಿಚಾರಗಳಲ್ಲಿ ಮಾತುಕತೆಗಳಾದುವು.

ಉಡುಪಿ ಜಾತ್ರೆ—ಶ್ರೀ ಕೃಷ್ಣ ದೇವಸ್ಥಾನದಲ್ಲಿ ವಾಡಿಕೆಯಂತೆ ನೆರವೇರುವ ಜಾತ್ರೆಯು ಇದೇ ತಾ. 3ಕ್ಕೆ ಪ್ರಾರಂಭವಾಗಿ ತಾ 11ರಂದು ಮಕರ ಸಂಕ್ರಾಂತಿ ವಿಶೇಷ ಉತ್ಸವವೂ ಮರುದಿನ ಚೂರ್ಣೋತ್ಸವವೂ ಜರಗುವವು.

(೫ನೇ ಪುಟದಿಂದ)

ನ್ನು ಪ್ರತಿಪಾದಿಸುವ ದಕ್ಷಿಣ ಆಫ್ರಿಕ ಸರಕಾರದೊಡನೆ ಸಹಕಾರದ ಮಾತನ್ನಾಡುವುದು ನಿಷ್ಪ್ರಯೋಜಕವೆಂದು ಭಾವಿಸಲ್ಪಟ್ಟಿರುವುದು; ಅದರಂತೆ ನ್ಯೂಗಿನಿಯ ಪೂರ್ವಾರ್ಧವನ್ನು ಇನ್ನೂ ತನ್ನ ಕೈಯಲ್ಲಿಟ್ಟು ಕೊಂಡಿರುವ ನೆದರ್ಲೆಂಡದ ವಸಾಹತುವಾದವೂ ತಿರಸ್ಕರಿಸಲ್ಪಟ್ಟಿರುವುದು. ಶಾಂತಿ ಸಾಧನೆಯ ದೃಷ್ಟಿಯಿಂದ ಅಣುಶಸ್ತ್ರಗಳ ಸ್ಫೋಟನ ಪ್ರಯೋಗವನ್ನು ಬಿಟ್ಟುಗೊಡಬೇಕೆಂದುಒತ್ತಾಯಿಸಲ್ಪಟ್ಟಿರುವುದು-ಇವೆಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕ, ಹಾಗು ಸಾಮಾಜಿಕ ಪುರೋಗತಿಗೆ ಸಹಕಾರ ಮತ್ತು ವಿಚಾರ ವಿನಿಮಯದ ತತ್ವವನ್ನು ಅಂಗೀಕರಿಸಲಾಗಿರುವುದು. ಇಷ್ಟರ ತನಕ ಪಾಶ್ಚಾತ್ಯರಾಷ್ಟ್ರಗಳ ವಸಾಹತು ಪ್ರದೇಶಗಳಾಗಿದ್ದು, ಅಲ್ಲಿಯ ಔದ್ಯೋಗಿಕ ಕೇಂದ್ರಗಳಿಗೆ ಕಚ್ಚಾಸರಕನ್ನು ಪೂರೈಸುತ್ತಿದ್ದ ಏಶ್ಯದ ರಾಷ್ಟ್ರಗಳು ಇನ್ನು ಮುಂದೆ ಈ ಪದ್ಧತಿಯನ್ನು ಅನುಸರಿಸದೆ, ತಮ್ಮ ದೇಶದ ಸಂಪತ್ತನ್ನು ಹೆಚ್ಚಿಸುವುದಕ್ಕಾಗಿಯೇ ಪ್ರಯತ್ನಿಸುವುವೆಂಬುದರಲ್ಲಿ ಯಾವ ಸಂಶಯವೂ ಉಳಿದಿಲ್ಲ.

ಆರ್ಥಿಕೋನ್ನತಿಯ ಧ್ಯೇಯ

ಆಫ್ರಿಕ ಮತ್ತು ಏಶ್ಯಾ ರಾಷ್ಟ್ರಗಳನ್ನು ಸೈನ್ಯ ಶಕ್ತಿಯಿಂದ ಆಳುವೆವೆಂದು ಹೇಳುವವರ ಮಾತಿನಲ್ಲಿ ಇಲ್ಲಿಯ ಜನರಿಗೆ ವಿಶ್ವಾಸವುಳಿದಿಲ್ಲ. ರಾಷ್ಟ್ರೀಯ ಸ್ವಾತಂತ್ರ್ಯದ ತೀವ್ರ ಆಕಾಂಕ್ಷೆಯನ್ನು ಇವು ವ್ಯಕ್ತಪಡಿಸುತ್ತವೆ; ಸ್ವಾತಂತ್ರ್ಯವನ್ನು ಸಂಪಾದಿಸಿದ ರಾಷ್ಟ್ರಗಳು ವಸಾಹತುವಾದದ ಉಚ್ಚಾಟನೆಗಾಗಿ ನೈತಿಕ ಬೆಂಬಲವನ್ನು ಕೊಡುತ್ತವೆಯಲ್ಲವೆ, ಜಾಗತಿಕ ಅಭಿಪ್ರಾಯವನ್ನು ತಮ್ಮ ನಿಲುಮೆಯ ಪರವಾಗಿ ರೂಪಿಸುವುದಕ್ಕೂ ಪ್ರಯತ್ನ ಮಾಡುತ್ತವೆ. ಯುದ್ಧಕ್ಕೆ ಬಹಿಷ್ಕಾರ ಹಾಕುವುದು ಅವುಗಳ ತೀವ್ರೇಚ್ಛೆಯಾಗಿದ್ದು ಇದಕ್ಕೆ ನೆರವಾಗುವಂತೆ ಸಹಕಾರದಿಂದ ನಡೆಯುವ ಉತ್ಸಾಹವನ್ನು ಅವು ಪ್ರಕಟಿಸುತ್ತವೆ. ಕಮ್ಯೂನಿಸಮ್ಮನ್ನು ಅವು ಸ್ವಾಗತಿಸುವುದಿಲ್ಲ—ಆದರೆ ಚೀನದಂಥ ಮಹಾರಾಷ್ಟ್ರದ ಅಸ್ತಿತ್ವವನ್ನು ಅಲ್ಲಗಳೆಯುವುದಕ್ಕೂ ಅವಕೆ ಮನಸ್ಸಿಲ್ಲ. ಆದ್ದರಿಂದ ಕಮ್ಯೂನಿಸಮ್ಮು ಚೀನದಿಂದ ಹೊರಗೆ ವಿಸ್ತರಿಸದಂತೆ ನೋಡಬೇಕೆಂಬ ಹಂಬಲವನ್ನು ಅವು ತಮ್ಮಲ್ಲಿ ತೋಡಿಕೊಳ್ಳುತ್ತವೆ. ಆರ್ಥಿಕ ಹಾಗು ಸಾಮಾಜಿಕ ಕ್ಷೇತ್ರದಲ್ಲಿ ವ್ಯಾಪಕವಾದ ಪ್ರಗತಿಯನ್ನು ಶೀಘ್ರದಲ್ಲಿ ಸಾಧಿಸಬೇಕೆಂಬ ಮಾತಿನ ಹಿನ್ನಲೆಯಲ್ಲಿರುವುದು ಇದೇ ಭಾವ. ಇದನ್ನು ಪಾಶ್ಚಾತ್ಯ ರಾಷ್ಟ್ರಗಳೂ ಏಶ್ಯ-ಆಫ್ರಿಕ ರಾಷ್ಟ್ರಗಳ ವ್ಯವಹಾರದಲ್ಲಿ ಆಸಕ್ತಿಯುಳ್ಳವರೂ ಮನವರಿಕೆ ಮಾಡಿಕೊಳ್ಳುವುದು ಹಿತ.

ಅಂಬ್ಲಪಾಡಿ: ಇದೇ ತಾ 1 ರಲ್ಲು ಸ್ಥಳೀಯ ಯುವಕರ ಸಭೆಯೊಂದು ಶ್ರೀ ಕಿದಿಯೂರು ಶಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿ 'ದಿ ಪ್ರಭಾತ ಕ್ಲಬ್' ಪ್ರಾರಂಭಿಸಲ್ಪಟ್ಟಿತು. ಕ್ಲಬ್ಬಿನ ಕಾರ್ಯ ಕ್ರಮಗಳನ್ನು ನಡೆಸಿಕೊಂಡು ಹೋಗಲು ಹತ್ತು ಜನರಿರುವ ಕಾರ್ಯನಿರ್ವಾಹಕ ಮಂಡಳಿ ರಚಿಸಲಾಯಿತು.

ನಿಂಜೂರು—ಶ್ರೀ ವಿವೇಕಾನಂದ ಸೇವಾ ಸಂಘದ ಮಹಾ ಸಭೆಯು ತಾ 1–1–55 ರಲ್ಲು ನಿಂಜೂರು ಶಾಲೆಯಲ್ಲಿ ಶ್ರೀ ಯನ್. ರಾಜು ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಪಂಬರಿಕೆಯಲ್ಲಿ ಸಂಗ್ರಹವಾದ ರೂ 60/ ನ್ನು ಸಂಘದಲ್ಲಿ ಜಮೆ ಇಡಲಾಯ್ತು. ಅನಂತರ ಹೊಸ ಕಮಿಟಿಗೆ, ಶ್ರೀ ಯನ್. ಶ್ರೀನಿವಾಸ ಆಚಾರ್ಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ. ಯನ್. ವಿಟ್ಠಲ ಶೆಟ್ಟಿ ಮತ್ತು ಶ್ರೀ ಯನ್. ಮಹಾಬಲ ಶೆಟ್ರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಯನ್. ಹಿರಿಯಣ್ಣ ಶೆಟ್ಟಿ ಮತ್ತು ಶ್ರೀ ಯನ್. ತಿಮ್ಮಪ್ಪ ಶೆಟ್ರನ್ನು ಜತೆಕಾರ್ಯದರ್ಶಿಗಳನ್ನಾಗಿಯೂ, ಶ್ರೀ ಯನ್. ಜಗನ್ನಾಥಶೆಟ್ರನ್ನು ಕೋಶಾಧಿಕಾರಿಯನ್ನಾಗಿಯೂ ಮತ್ತು ಶ್ರೀ ಯನ್. ರಾಜು ಶೆಟ್ಟಿ, ಯನ್. ಸಂಜೀವ ಶೆಟ್ಟಿ, ಯನ್. ಕರುಣಾಕರ ಹೆಗ್ಡೆ, ವೈ. ಕೊರಗ ಶೆಟ್ಟಿ, ಸುಬ್ಬಣ್ಣ ನ್ಯಾಕ, ಕೃಷ್ಣ ಶೆಟ್ಟಿ, ಕಾಡ್ಯ ಶೆಟ್ಟಿ, ಮುದಣ್ಣ ಶೆಟ್ಟಿ, ಪಾವುಲು ಸಾಲ್ದಾನ್ಹ ಮೊದಲಾದವರನ್ನು ಕಾರ್ಯಕಾರಿ ಸದಸ್ಯರನ್ನಾಗಿಯೂ ಬಹುಮತದಂತೆ ಚುನಾಯಿಸಲಾಯ್ತು. ಬರುವ ಸಭೆಯು ತಾ 26 ನೇ ಪ್ರಜಾರಾಜ್ಯದಿನ ಜರಗಲಿದೆ.

ಸುರತ್ಕಲ್: ಸ್ಥಳೀಯ ಶ್ರೀ ಸದಾಶಿವ ದೇವಾಲಯದಲ್ಲಿ ನಡೆಯುವ ವಾರ್ಷಿಕ ಜಾತ್ರೆಯು ಇದೇ ತಾ 7 ರಲ್ಲು ಆರಂಭವಾಗಿ ತಾ 10 ರಲ್ಲು ಮಹಾ ರಥೋತ್ಸವ ಜರಗಿ ತಾ 11 ರಲ್ಲು ಅವಭೃತ ಸ್ನಾನ ಕಾರ್ಯಕ್ರಮಗಳಿಂದ ಮುಕ್ತಾಯವಾಗಲಿರುವುದು

ಶಿರ್ವ: ಶಿರ್ವ ಕೇಂದ್ರದ ಅಧ್ಯಾಪಕರ ಸಭೆಯು ವಿದ್ವಾನ್ ಗೋವಿಂದಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ವಾನ್ ಕೆ. ಎಂ. ಬೊಳ್ಳರು ಸಾಹಿತ್ಯವಚನ ಮಾಡಿದರು.

ಬಳಿಕ ಹೊಸವರ್ಷದ ಅಧಿಕಾರಿಗಳ ಚುನಾವಣೆ ನಡೆಯಿತು. ಶ್ರೀ ಬಿ. ಟಿ. ಸೆಟ್ಟಿ ಮತ್ತು ಕುಮಾರಿ ಮೇರಿ ಮಗ್ದಲೀನ, ಅವರು ಅನುಕ್ರಮವಾಗಿ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಮೂಲ್ಕಿ—ಸ್ಥಳೀಯ ಬೋರ್ಡು ಹಾ! ಸ್ಕೂ! ಶಾಲಾ ವರ್ಧಂತ್ಯುತ್ಸವವು ಕಳೆದ ತಾ. 27 ರಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ! ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ ವರದಿವಾಚನಗಳಾದ ಬಳಿಕ ಸ್ಥಳೀಯ ಸರಕಾರಿ ಹ್ಯಾಸ್ಕೂಲಿನ ಉಪಾಧ್ಯಾಯ ಶ್ರೀ ಎ. ಸದಾನಂದನವರು ಶ್ರೀ ಶಾಲಾಭಿನಂದನೆಯನ್ನು ಮಾಡಿದರು. ಶ್ರೀಗಳಾದ ಬಿ. ಭೋಜರಾವ್, ಬಿ. ಆರ್. ಕರ್ಕೇರ ಮೊದಲಾದವರ ಕಾಲೋಚಿತ ಭಾಷಣಗಳಾದುವು. ಅಧ್ಯಕ್ಷರ ಭಾಷಣ ಮತ್ತು ವಿವಿಧ ವಿನೋದಾವಳಿಗಳಾದ ನಂತರ ಸಮಾರಂಭ ಕೊನೆಗೊಂಡಿತು.

'ರಾಷ್ಟ್ರಬಂಧು' ಕಥಾಸ್ಪರ್ಧೆ

ಕನ್ನಡದಲ್ಲಿ ಉತ್ತಮವಾದ ಚಿಕ್ಕ ಕಥೆಗಳಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಚಿಕ್ಕಕಥೆಗಳ ಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ. ಕಥೆಗಳು ತಾ. 31—1—1955ರೊಳಗೆ ತಲಪಬೇಕು. ಫೆಬ್ರವರಿ ತಿಂಗಳಲ್ಲಿ ಫಲಿತಾಂಶ ಪ್ರಕಟಿಸಲಾಗುವುದು. ಬಹುಮಾನ: ಪ್ರಥಮ ಬಹುಮಾನ ರೂ. 50, ದ್ವಿತೀಯ ಬಹುಮಾನ ರೂ. 25, ತೃತೀಯ ಬಹುಮಾನ ರೂ. 15.

ನಿಯಮಗಳು: ೧ ಕಥೆಗಳು ಸ್ವತಂತ್ರವಾಗಿರಬೇಕು; ಸ್ವಾಭಾವಿಕವಾಗಿರಬೇಕು. ೨. 'ರಾಷ್ಟ್ರಬಂಧು'ವಿನ ಒಂದೂವರೆ ಪುಟ (ಡೆಮಿ ಒಂದೂವರೆ ಪುಟ) ಮೀರದಂತಿರಬೇಕು. ಕಥೆಯಲ್ಲಿ ಲೇಖಕರು ತಮ್ಮ ಹೆಸರನ್ನು ಬರೆಯದೆ 'ರಾ. ಬಂಧು ಕಥಾಸ್ಪರ್ಧೆಗಾಗಿ—ಎಂದು ನಮೂದಿಸಬೇಕು ೩. ಹೆಸರು ವಿಳಾಸ ಮೊದಲಾದ ವಿವರಗಳನ್ನು ಪ್ರತ್ಯೇಕ ಕಾಗದದಲ್ಲಿ ಬರೆದು ಕಥೆಯೊಂದಿಗೆ ಕಳುಹಿಸಬೇಕು. ೪. ಬಹುಮಾನಿತ ಕತೆಗಳನ್ನು ಮೊದಲು ಪ್ರಕಟಿಸುವ ಹಕ್ಕು 'ರಾ ಬಂಧು'ವಿಗೆ ಸೇರಿದುದು ೫ ಸ್ಪರ್ಧೆಗಾಗಿ ಬಂದ ಕತೆಗಳನ್ನು ಹಿಂದಕ್ಕೆ ಕಳುಹಿಸಲಾಗುವುದಿಲ್ಲ. ಪ್ರಕಟಣೆಯೋಗ್ಯವಾದವುಗಳನ್ನು ಕ್ರಮಶಃ 'ರಾ ಬಂಧು'ವಿನಲ್ಲಿ ಪ್ರಕಟಿಸಲಾಗುವುದು.

ಸಂಪಾದಕ,—'ರಾಷ್ಟ್ರಬಂಧು',
ಮಂಗಳೂರು—3.

ಮೂಲ್ಕಿ ಜಾನುವಾರು ಪ್ರದರ್ಶನವು—ಕಳೆದ ತಾ. 26ರಲ್ಲು ಮೂಲ್ಕಿ ಹಾಲು ಸರಬರಾಯಿ ಸೊಸೈಟಿ ನೇತೃತ್ವದಲ್ಲಿ ಮಿಶನ್ ಕಂಪೌಂಡಿನಲ್ಲಿ ಡಾ! ಕೆ. ಬಾಲಪ್ಪ ಸೆಟ್ಟರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಅಧ್ಯಕ್ಷತೆ ವಹಿಸಿದ್ದರು. ಪ್ರದರ್ಶನ ಕಮಿಟಿ ಅಧ್ಯಕ್ಷ ಶ್ರೀ ಎಮ್. ಆರ್. ಎಚ್. ಪೂಂಜರು ಸ್ವಾಗತ ಭಾಷಣ ಮಾಡಿದರು. ಕೊಲ್ಯಾ ಪಶು ಸಂರಕ್ಷಣಾ ಕೇಂದ್ರದ ಸೂಪರಿಂಟೆಂಡೆಂಟ್ ಡಾ! ಕೆ. ಷಣ್ಮುಗ ಸುಂದರಂ ನವರು "ಜಾನುವಾರು ಸಾಕುವಿಕೆ" ಜಿಲ್ಲಾ ವೆಟರ್ನರಿ ಆಫೀಸರ್ ಡಾ! ಡಿ. ಸಾಮ್ಯುಲ್‌ರವರು "ಜಾನುವಾರುಗಳ ರೋಗ ನಿವಾರಣೆ" ಮತ್ತು ಜಿಲ್ಲಾ ಕೃಷಿ ಆಫೀಸರ್ ಶ್ರೀ ಕೆ. ಸಂಜೀವ ಸೆಟ್ಟರು 'ಆಧುನಿಕ ಕೃಷಿವಿಜ್ಞಾನ'ದ ಕುರಿತು ಭಾಷಣವಿತ್ತರು. ಕಮ್ಯೂನಿಟಿ ಪ್ರೊಜೆಕ್ಟ್ ಆಫೀಸರ್ ಶ್ರೀ ಎಚ್. ನರಸಿಂಹನವರು ಬಹುಮಾನ ವಿತರಣೆ ಮಾಡಿದರು.

ಕುಂಬಳೆ: ದ. ಕ. ಜಿಲ್ಲಾ ಕಲೆಕ್ಟರ್ ಜನಾಬ್ ಎ. ಕುಂಞಿಹಸ್ಸನ್ ಸಾಹೇಬರು ಕಳೆದ ತಾ 28 ರಲ್ಲು ಕಾಸರಗೋಡು ತಶಿಲ್ದಾರ್ ಶ್ರೀ ಟಿ. ಜೆ. ಬಂಗೇರ ಮೊದಲಾದವರೊಡನೆ ಮೊಗ್ರಾಲ್ ಪುತ್ತೂರು ಗ್ರಾಮವನ್ನು ಸಂದರ್ಶಿಸಿ ಮಂಗಳೂರು-ಚೆರ್ವತ್ತೂರು ಹೈವೇಸ್ ರಸ್ತೆಯ 24 ನೇ ಮೈಲುಕಲ್ಲಿನಿಂದ ಬೆಪ್ಪಡ್ಕ, ಕೋಟೆಕುಂಜೆಗಾಗಿ ಹೊಸರಸ್ತೆ ಮಾಡುವ ಕುರಿತು ವಿಚಾರ ವಿನಿಮಯ ನಡೆಸಿದರು.

ಶೂರಸೇನ ನಾಟಕದಲ್ಲಿ ಅಭಿನಯಭೂಷಣ ಎಂ. ರಂಗನಾಥ ಭಟ್ಟರು—ಉಡುಪಿ ಕಲಾಧಿಪೇಟೆಂಟಿನಲ್ಲಿ ಸದ್ಯದಲ್ಲಿಯೇ ಕನ್ನಡ ಶೂರಸೇನ ನಾಟಕವನ್ನು ಅಭಿನಯಿಸುವರು. ಅಭಿನಯ ಭೂಷಣ, ನಾಟ್ಯಕಲಾ ವಿಶಾರದರೆಂದು ಪ್ರಖ್ಯಾತರಾದ ಎಂ. ರಂಗನಾಥ ಭಟ್ಟರು 'ಶೂರಸೇನ'ನ ಪಾತ್ರ ವಹಿಸುವರು. 'ಅಂಬಾಪ್ರಸಾದಿಕ ನಾಟಕ ಮಂಡಳಿ ಮಂಗಳೂರು' ಎಂಬ ನಾಟಕ ಕಂಪೆನಿಯನ್ನು ೩೦ ವರ್ಷಗಳ ಕಾಲ ಅಖಿಲ ಕರ್ನಾಟಕದಲ್ಲಿ ಕಲಾಯಾತ್ರೆ ಮಾಡಿಸಿ, ಪದಕಗಳನ್ನೂ ಬಿರುದುಗಳನ್ನೂ ಪಡೆದಿರುವ ಶ್ರೀ ಭಟ್ಟರು ಕಂಪನಿಯನ್ನು ಕಾರಣಾಂತರದಿಂದ ನಿಲ್ಲಿಸಿ, ಕಳೆದ 15 ವರ್ಷಗಳಲ್ಲಿ ಮುಂಬಾಯಿಯ ಸ್ವಂತ ಮನೆಯಲ್ಲಿಯೇ ಇದ್ದರು. ಶ್ರೀ ಧರ್ಮಸ್ಥಳ ಹೆಗ್ಗಡೆಯವರ ಕೃಪಾಪೋಷಿತವಾದ ಲಲಿತಕಲಾ ವೃಂದದವರು ಈ ಸುಸಂದರ್ಭವನ್ನು ಒದಗಿಸಿದ್ದಾರೆ. ಬಹುಜನ ಮಹನೀಯರ ಅಪೇಕ್ಷೆ, ಶ್ರೀ ಮಂಜಯ್ಯ ಹೆಗ್ಗಡೆಯವರ ಕಲಾಭಿಮಾನಗಳೇ ಭಟ್ಟರನ್ನು ರಂಗಭೂಮಿಗೆ ಅಪೂರ್ವವಾಗಿ ತಂದಿವೆ. ಶೇಕ್ಸ್‌ಪಿಯರ್ ಮಹಾಕವಿಯ 'ಒಥೆಲೋ' ನಾಟಕದ ಕನ್ನಡ ಭಾಷಾಂತರ 'ಶೂರಸೇನ' ನಾಟಕ ರಂಗಭೂಮಿಯ ವ್ಯವಸ್ಥೆ, ವೇಷಭೂಷಣ, ಪರದೆ ಸೀನರಿಗಳು, ಶಿಸ್ತು, ನಡತೆಗಳಿಂದ ನಾಟಕ ಕಂಪೆನಿಗಳಿಗೆ ಆದರ್ಶವಾಗಿ ೩೦ ವರ್ಷಕಾಲ ನಡೆಯಿಸಿಕೊಂಡು ಬಂದ ಪ್ರಸಿದ್ಧರಾದ ಶ್ರೀ ಭಟ್ಟರು ನಮ್ಮ ಜಿಲ್ಲೆಗೇ ಒಂದು ಹೆಮ್ಮೆಯಾಗಿದ್ದಾರೆ. ರಸಿಕರೂ, ಕಲಾಭಿಮಾನಿಗಳೂ ಈ ಅಪೂರ್ವ ಸಂದರ್ಭವನ್ನು ಕಳಕೊಳ್ಳಲಾರರೆಂದು ನಂಬಿಕೆ.

ತಿರುವಾಂಕೂರು—ಇಲ್ಲಿಯ ಕೊಚ್ಚಿಕಾರ್ ಬ್ರದರ್ಸ್‌ರವರ ಆಫೀಸು ಇನ್ಸ್‌ಪೆಕ್ಟರ್ ಶ್ರೀ ಕೆ. ಆರ್. ಶೆಣೈಯವರು ಇಲ್ಲಿಗೆ ಕಳೆದ ತಾ. 25ರಲ್ಲಿ ಬಂದ ಉಡುಪಿಯ ಎಮ್. ಜಿ. ಎಮ್. ಕಾಲೇಜಿನ ವಿದ್ಯಾರ್ಥಿಗಳು ಮತ್ತು ಅವರ ಮುಂದಾಳು ಶ್ರೀ ತ್ಯಾಗರಾಜನ್, ಅವರಿಗೆ ಉಪಾಹಾರವಿತ್ತು ಸತ್ಕರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.-೧೯೫೪ರ ಸಾಹಿತ್ಯ ಪರೀಕ್ಷೆಗಳು ೧೯೫೫ ನೆಯ ಜನವರಿ ತಿಂಗಳು ೨೯ ಮತ್ತು ೩೦ ನೆಯ ತಾರೀಕುಗಳಲ್ಲಿ ನಡೆಯುವುವೆಂದು ಈ ಹಿಂದೆ ಪ್ರಕಟಿಸಿತ್ತು. ಇದೇ ಸಂದರ್ಭದಲ್ಲಿ ಬೀದರ್ ಜಿಲ್ಲೆಯ ಬಸವ ಕಲ್ಯಾಣದಲ್ಲಿ ಅಖಿಲ ಭಾರತ ವೀರಶೈವ ಮಹಾ ಸಮ್ಮೇಳನ ನಡೆಯಲಿರುವುದರಿಂದ ಪರೀಕ್ಷೆಗಳನ್ನು ೧೯೫೫ ನೆಯ ಫೆಬ್ರವರಿ ೫ ಮತ್ತು ೬ ನೆಯ ತಾರೀಕುಗಳಿಗೆ ಮುಂದುವರಿಸಲಾಗಿದೆ ಎಂದು ಗೌ! ಕಾರ್ಯದರ್ಶಿಗಳು ತಿಳಿಸುತ್ತಾರೆ.

ಗೌರಮ್ಮ ಸ್ಮಾರಕ ಸಮಿತಿ, ಮಡಿಕೇರಿ ಕಥಾಸ್ಪರ್ಧೆ-ಸುಪ್ರಸಿದ್ಧ ಕತೆಗಾರ್ತಿ ದಿವಂಗತ ಗೌರಮ್ಮ (ಮಿಸೆಸ್ ಬಿ. ಟಿ. ಜಿ. ಕೃಷ್ಣ) ನವರ ಜ್ಞಾಪಕಾರ್ಥವಾಗಿ ಮೇಲಿನ ಸಮಿತಿಯು ಹಿಂದಿನ ವರ್ಷದಂತೆ ಈ ವರ್ಷವೂ ಒಂದು ಕಥಾಸ್ಪರ್ಧೆಯನ್ನೇರ್ಪಡಿಸಿದೆ. ಮೊದಲನೇ ಬಹುಮಾನವು ೨೦ ರೂ., ಎರಡನೇ ಬಹುಮಾನವು ೧೦ ರೂ., ಮೂರನೇ ಬಹುಮಾನವು ೧೦ ರೂ., ಬೆಲೆಯುಳ್ಳ ಕನ್ನಡ ಪುಸ್ತಕಗಳು (ಒಂದು ಬಹುಮಾನ ಸ್ತ್ರೀಯರಿಗಾಗಿ ಮೀಸಲಾಗಿಡಲಾಗಿದೆ. ಮೊದಲನೇ ಹತ್ತು ಸ್ಥಾನ ಪಡೆದ ಕಥೆಗಾರರಿಗೆ ''ಗೌರಮ್ಮನ ಕಥೆಗಳು- ೨''ರ ಒಂದೊಂದು ಪ್ರತಿಯನ್ನು ಬಹುಮಾನವಾಗಿ ಕೊಡಲಾಗುವುದು.)

ಸ್ವತಂತ್ರವಾಗಿ, ಕಥೆಗಳು ಚಿಕ್ಕವಾಗಿದ್ದು ಫೂಲ್‌ಸ್ಕೇಪ್ ಕಾಗದದ ೮ ಪುಟಗಳನ್ನು ಮೀರಕೂಡದು, ಕಥೆಗಳು ಸಮಿತಿಯ ಕಛೇರಿಗೆ ೧೯೫೫ ನೇ ಫೆಬ್ರವರಿ ತಿಂಗಳ ಅಂತ್ಯದೊಳಗಾಗಿ ತಲಪಬೇಕು. ಕಥೆಬರೆದ ಕಾಗದದ ಯಾವ ಭಾಗದಲ್ಲೂ ಹೆಸರುಗಳಾಗಲೀ ಗುರುತುಗಳಾಗಲೀ ಇರಕೂಡದು. ಪ್ರತ್ಯೇಕ ಕಾಗದದಲ್ಲಿ ಹೆಸರು ವಿಳಾಸಗಳನ್ನು ಕಳುಹಿಸಬೇಕು. ಹೆಚ್ಚಿನ ಮಾಹಿತಿಗಳನ್ನು ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಗೌರಮ್ಮ ಸ್ಮಾರಕ ಸಮಿತಿ,
C/o ಕಾವೇರಿ ಪ್ರಕಟಣಾಲಯ
ಮಡಿಕೇರಿ, ಕೊಡಗು.

ನಡೆಯುವ ಚಿತ್ರ—
ಬಾಲಕನೊಬ್ಬನ ಹೃದ್ರಾವಕ ಕಥೆ —
ಟೂಟಿ ಖಿಲೋನ (ಹಿಂದಿ)
ಪೂರ್ಣಿಮಾ, ಆಶಾಮಥೂರ್, ಶೇಖರ್ ಮತ್ತು ಬಾಲನಟಿ ರೋಮಿ.
ಬರುವ ಚಿತ್ರ:-
ನಿಮ್ಮ ಬಹುದಿನದ ನಿರೀಕ್ಷೆಯ ಬಹುಮಾನಪಡೆದ ಚಿತ್ರ
ಜಾಗ್ರತ್ (ಹಿಂದಿ)
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

७० वर्षों से जगप्रसिद्ध और विजयी होनेवाला।
प्रत्येक स्टोर में और सब स्थानों पर बिकता है।
बाटलीवाला एग्यू मिक्चर
और गोलियाँ
मलेरिया इन्फ्लुएंजा और प्रत्येक प्रकारके बुखार के लिये।
सोल मेन्युफेक्चरर: डॉ. एच. एल. बाटलीवाला सन्स एण्ड कं. लि.
बाटलीवाला बिल्डिंग, ९३ बी. पोर्तुगीज़ चर्च स्ट्रीट,
Tele. Add. "CAWASHABAD" दादर, बम्बई २८.

ಡಾ. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್. ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಶೂಲೆ, ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.
ಗರ್ಭ ರಕ್ಷಕ- ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಜವಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.
ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ,
1929ರಲ್ಲಿ ಸ್ಥಾಪಿತವಾಗಿ 26 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡುವಂತೆ ಕೇಳಿಕೊಳ್ಳುತ್ತೇವೆ.

ಮಂಗಳೂರು

ದ. ಕ. ಶ್ರೀ ರಜಕಕುಲೋದ್ಧಾರಕ ಸಂಘದ— ವರ್ಷಾವಧಿ ಮಹಾಸಭೆಯು ಕಳೆದ ತಾ. 31ರಲ್ಲಿ ಕದ್ರಿ ವಿದ್ಯಾಭೋಧಿನಿ ಶಾಲೆಯಲ್ಲಿ ಡಾ। ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ. ಎಮ್ ಕುಂಞಣ್ಣನವರಿಂದ ಸ್ವಾಗತ ಭಾಷಣ, ವಿದ್ವಾನ್ ಕೆ. ವಾಮನರಿಂದ ವರದಿವಾಚನಗಳಾದುವು. ಜಾತಿ ವೇಷಭೂಷಣವನ್ನು ನಿಲ್ಲಿಸಬೇಕೆನ್ನುವ, ಮಂಗಳೂರಲ್ಲಿ ಜೋಬಖಾನೆ ಮಾಡುವ ಸಮಪ್ರಯೋಜನೆಯೊಂದು ಕಾರ್ಯಕ್ರಮಕ್ಕೆ ಕೊಳ್ಳಬೇಕೆನ್ನುವ, ಹಿಂದುಳಿದ ಜಾತಿಗಳಿಗೆ ಅರ್ಥಸಂಬಳದ ಸವಲತ್ತು ಸಿಗಬೇಕೆನ್ನುವ ಇತ್ಯಾದಿ ಠರಾವುಗಳಾದುವು.

ಶಾಂತಿ ಸಮ್ಮೇಳನ— ದ. ಕ. ಜಿಲ್ಲಾ ಪ್ರಥಮ ಶಾಂತಿ ಸಮ್ಮೇಳನವು ಕಳೆದ ತಾ. 20ರಲ್ಲಿ ಮಂಗಳೂರಲ್ಲಿ ಶ್ರೀ ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಇವರ್ಾಟಿ ಆನಂದ ಸೆಟ್ಟರು ಸ್ವಾಗತ ಭಾಷಣ ಮಾಡಿದ ಮೇಲೆ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತವು ಮೊದಲಿನಿಂದಲೂ ಶಾಂತಿಯ ನೆಲೆಯೆಂದೂ ಇಂದು ಕೂಡಾ ಪ್ರಧಾನ ಮಂತ್ರಿ ನೆಹರೂರವರ ನೇತೃತ್ವದಲ್ಲಿ ಅದು ನನ್ನ ಸಂದೇಶ ಸಾರುವುದೆಂದು ಹೇಳುತ್ತ ಜಗತ್ತಿನ ರಾಜಕಾರಣಗಳು ಶಾಂತಿ ವಿಚಾರದಲ್ಲಿ ಜನತೆಯ ಅಭಿಪ್ರಾಯಕ್ಕೆ ಕಿವಿಗೊಡಬೇಕೆಂದರು. ಅನಂತರ ಜಾಗತಿಕ ಶಾಂತಿ ಸಮಿತಿಯ ಸದಸ್ಯ ಆಸ್ಟೇಲಿಯದ ಶ್ರೀಮತಿ ಜೆಸ್ಸಿ ಸ್ಟ್ರೀಟರು ಮಾತನಾಡುತ್ತ ಯುಕ್ತ ರಾಷ್ಟ್ರ ಸಂಘವು ತಾನುಮಾಡಿದ ನಿರ್ಣಯಗಳನ್ನೇ ಮುರಿಯುತ್ತಿದೆಯೆಂದೂ ಆಟಂ ಬಾಂಬು ಮತ್ತು ಹೈಡ್ರೋಜನ್ ಬಾಂಬುಗಳಿಂದಾಗಿ ಶಾಂತಿ ಚಳವಳಿಗೆ ಶಕ್ತಿ ಬಂದಿದೆಯೆಂದು ಹೇಳಿದರಲ್ಲದೆ, ಮಂಗಳೂರಿನ ಸಮ್ಮೇಳನದ ಅಧ್ಯಕ್ಷರು ವಕ್ಷಾತೀತರಾಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು.

ಸಾರ್ವಜನಿಕ ಸಭೆ ಕುಳೂರು ಕಾಂಗ್ರೆಸ್ ಎಡ್-ಹೋಕ್ ಕಮಿಟಿಯ ಆಶ್ರಯದಲ್ಲಿ ಕಳೆದ ತಾ 26 ರಲ್ಲು ಶ್ರೀ ಎಲ್. ಸಿ. ಪ್ಯಾಸ್, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲೊಂದು ಸಾರ್ವಜನಿಕ ಸಭೆಯು ಜರಗಿತು. ಶ್ರೀ ಯು. ಮಹಾಬಲ, ಅವರುಸ್ವಾಗತ ಭಾಷಣ ಮಾಡಿದರು. ಶ್ರೀ ಪಿ. ಕೆ. ಬೂಬನವರು ಸಮಿತಿಯ ಕಾರ್ಯಕಲಾಪಗಳ ವರದಿಯನ್ನೋದಿದರು. ಸಭೆಯಲ್ಲಿ ವಿಶೇಷತ ಹಾಜರಿದ್ದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿ ಶ್ರೀ ಜ. ವಿ. ಹಳ್ಳಿಕೇರಿಯವರು ಭಾಷಣಮಾಡುತ್ತ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕೆಂದು ಕೇಳಿಕೊಂಡರು.

ಸಹಾಯಾರ್ಥ ವಿನೋದಾವಳಿಗಳು— ಪಾವೂರು ಮತ್ತು ಹರೇಕಳ ಗ್ರಾಮಾಭಿವೃದ್ಧಿ ಸಂಘದ ಸಹಾಯಾರ್ಥವಾಗಿ ಮಿಲಾಗ್ರಿಸ್ ಹ್ಯಾಸ್ಕೂಲು ವಠಾರದಲ್ಲಿ ಕಳೆದ ತಾ. 29ರಲ್ಲಿ ವಿವಿಧ ವಿನೋದಾವಳಿಗಳ ಪ್ರದರ್ಶನವು ಶ್ರೀ ಬಿ ವೈಕುಂಠ ಬಾಳಿಗ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸೈಂಟ್ ಎಲೋಸಿಯಸ್ ಕಾಲೇಜಿನ ಸಮಾಜ ಸೇವಕದಳದ ಅಧ್ಯಕ್ಷ ಪ್ರೋ। ಮಥ್ಯಾ, ಅವರು ಗ್ರಾಮ ಸಂಘದ ಚಟುವಟಿಕೆಗಳು, ಆ ಬಗ್ಗೆ ನಿಧಿಸಂಗ್ರಹದ ಕಾರ್ಯಕ್ರಮಗಳ ಕುರಿತು ಮಾತನಾಡಿದರು.

ಸೇಲಂ ಕ್ರಿಕೆಟ್ ಟೀಮಿನವರು ಕಳೆದ ತಾ 25 ಮತ್ತು 26 ರಲ್ಲು ಮಂಗಳೂರಿನ ಕೆನರಾ ಕ್ರಿಕೆಟ್ ಎಸೋಸಿಯೇಶನ್ ಟೀಮಿನವರೊಂದಿಗೆ ಆಡಿದ ಪಂದ್ಯಾಟದಲ್ಲಿ ಮಂಗಳೂರು ಟೀಮಿನವರುಒಂದು ಇನ್ನಿಂಗ್ಸ್ ಮತ್ತು 71 ರನ್ನುಗಳಿಂದ ಸೇಲಂ ಟೀಮಿನವರನ್ನು ಪರಾಜಯಗೊಳಿಸಿದರು. ಧ್ವಜನಿಧಿಯ ಸಹಾಯಾರ್ಥವಾಗಿ ಈ ಪಂದ್ಯಾಟ ಏರ್ಪಡಿಸಲಾಗಿತ್ತು.

ವಾರ್ಷಿಕೋತ್ಸವ: ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಭೆಯ ವಾರ್ಷಿಕೋತ್ಸವವು ಕಳೆದ ತಾ 21 ರಲ್ಲು ಸಂಜೆ ಶ್ರೀ ಪಿ. ಆರ್. ರಂಗನಾಥ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲಾ ಹಿಂದೀ ಪ್ರಚಾರಕರ ಸಮ್ಮೇಲನವು ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಮಂತ್ರಿ ಶ್ರೀ ಎ. ರಾಮಕೃಷ್ಣ ನಾವಡರ ಅಧ್ಯಕ್ಷತೆಯಲ್ಲಿ ಜರಗಿತು.

ಜನ್ಮ ದಿನೋತ್ಸವ— ಶ್ರೀ ರಾಮಕೃಷ್ಣ ಪರಮಹಂಸ. ಶ್ರೀ ಶಾರದಾಮಣಿ ದೇವಿ ಮತ್ತು ಸ್ವಾಮಿ ವಿವೇಕಾನಂದ ಜನ್ಮದಿನೋತ್ಸವವು ಮಂಗಳೂರು ಶ್ರೀ ರಾಮಕೃಷ್ಣ ಮಠದಲ್ಲಿ ಕಳೆದ ತಾ. 25ರಿಂದ 27ರ ತನಕ ಜರಗಿತು.

ಪ್ರಾರಂಭದಿನ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ, ಮೈಸೂರು ಮಹಾರಾಜ ಕಾಲೇಜಿನ ಅಧ್ಯಾಪಕಿ ಶ್ರೀಮತಿ ರತ್ನಮ್ಮ ಮತ್ತು ಶ್ರೀಗಳಾದ ಎಸ್. ಅನಂತ ನಾರಾಯಣ ರಾವ್ ಮತ್ತು ಪ್ರಭುಶಂಕರನವರು ಭಾಷಣ ವಿತ್ತರು ಎರಡನೆ ದಿವಸದ ಅಧ್ಯಕ್ಷತೆಯನ್ನು ಶ್ರೀ. ಕೆ. ವಿ. ಕಾರಂತರು ವಹಿಸಿದ್ದರು ಅಂದು ಮೈಸೂರಿನ ಶ್ರೀಮತಿಯರಾದ ಕನಕಮ್ಮ ಗೌರಮ್ಮ, ಶಾರದಮ್ಮನವರ ಉಪನ್ಯಾಸಗಳಾದುದಲ್ಲದೆ ಶ್ರೀಸೋಮನಾಥಾ ನಂದರ ಭಾಷಣವೂ ಆಯಿತು. ಕೊನೆಯ ದಿವಸದ ಸಭೆಯಲ್ಲಿ ಶ್ರೀಗಳಾದ ಕೆ. ವಿ ಪಿಳ್ಳೆ ರರ್ಮ ಶ್ರೀನಿವಾಸ ತಾತಾಚಾರ್ಯ, ತಂಗವೇಲನ್, ಎಸ್ ಎಸ್. ರಾಘವಾಚಾರ್ ಮೊದಲಾದವರು ಉಪನ್ಯಾಸವಿತ್ತರು.

ಸೌಹಾರ್ದ ಸಪ್ತಾಹ— ಮಂಗಳೂರಿನ ಜೆಜ್ ಫೋಟೋಗ್ರಾಫಿಸು ಮೊದಲಾದ ಅಂಚೆ ಶಾಖೆಗಳಲ್ಲಿ ಕಳೆದ ತಾ. 23ರಿಂದ 29ರತನಕ ಸೌಹಾರ್ದಸಪ್ತಾಹ ಆಚರಿಸಲ್ಪಟ್ಟಿತು.

ಕೆನರಾ ಗರ್ಲ್ಸ್ ಹೈಸ್ಕೂಲಿನ ವಜ್ರೋತ್ಸವವು ಕಳೆದ ತಾ 25 ರಲ್ಲು ಪ್ರಾರಂಭವಾಗಿ 30 ರಲ್ಲು ಅತ್ಯಂತ ಯಶಸ್ವಿಯಾಗಿ ಕೊನೆಗೊಂಡಿತು. ಈ ಐದು ದಿವಸಗಳಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಕೆ. ಕೆ. ಹೆಗ್ಡೆ, ಶ್ರೀ ಬಿ. ಎ ಸುಬ್ರಹ್ಮಣ್ಯ, ಡಿ ಎಸ್ ಓ; ಶ್ರೀ ಟಿ. ಕೆ. ಲಕ್ಷ್ಮಣನ್, ಸರಕಾರಿ ಕಾಲೇಜು ಪ್ರಿನ್ಸಿಪಾಲ್; ಜಿಲ್ಲಾ ಮೆಜಿಸ್ಟ್ರೇಟ್ ಶ್ರೀ ಡಿ ನರೊಂಞ; ಮುನಿಸಿಪಲ್ ಚೇರ್ಮನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅಧ್ಯಕ್ಷರಾಗಿದ್ದುಕೊಂಡು ಸಂಸ್ಥೆಗೆ ಯಶಸ್ಸನ್ನು ಬಯಸಿದರು. ತಾ 28 ರಲ್ಲು ಜರಗಿದ ವಜ್ರೋತ್ಸವ ಸಭೆಯಲ್ಲಿ ಶ್ರೀಮತಿ ಬಿ. ಲೀಲಾಬಾಯಿ ಬಾಳಿಗರು ವಜ್ರೋತ್ಸವ ಭಾಷಣವಿತ್ತರು.

ಸಭಾಧ್ಯಕ್ಷತೆ ವಹಿಸಿದ್ದ ಉಡುಪಿಯ ಶ್ರೀ ಟಿ. ಎ. ಪೈ, ಎಂ. ಎಲ್. ಎ, ಅವರು ತಮ್ಮ ಭಾಷಣದಲ್ಲಿ,, ಪಲವೊಮ್ಮೆ ಸಂಸ್ಥೆಗಳು ಬೆಳೆದಂತೆ ಆ ಸಸ್ಥೆಗಳ ಸ್ಥಾಪನೆಗೆ ಕಾರಣರಾದವರನ್ನು ಅವುಗಳಿಗೆ ಸಹಾಯಕರಾಗಿ ನಿಂತ ಪಲವರನ್ನು ಮರೆಯುವುದು ನಮ್ಮಲ್ಲಿ ರೂಢಿಯಾಗಿದೆ. ಇದು ಶೋಚನೀಯ, ಸ್ಥಾಪಕರನ್ನು ಮರೆಯದಿರಲು ಉತ್ತಮ ಉಪಾಯ ಎಂದರೆ ಅವರು ಕಷ್ಟಪಟ್ಟು ಸ್ಥಾಪಿಸಿದ ಸಂಸ್ಥೆಗಳಿಗೆ ಉದಾರ ಸಹಾಯ ನೀಡಿ ಅವು ಸ್ಥಿರವಾಗಿ ಬೆಳಗುವಂತೆ ಮಾಡುವುದಾಗಿದೆ" ಎನ್ನುತ್ತ, ವಿದ್ಯಾವಂತರಾದ ಉದ್ಯೋಗಿ ಸ್ತ್ರೀಯರ ಸಂಖ್ಯೆ ಬೆಳೆಯುತ್ತಿರುವ ಸಮಸ್ಯೆಯ ಕಡೆಗೆ ಎಲ್ಲರೂ ಗಮನಕೊಟ್ಟು ಅದನ್ನು ಬಗೆಹರಿಸಲು ಪ್ರಯತ್ನಿಸ ಬೇಕೆಂದು ಕೇಳಿಕೊಂಡರು.

ಮಂಗಳೂರು ಜಿಲ್ಲಾ ಮುಜೂರ ಸಮ್ಮೇನವು ಫೆಬ್ರವರಿ ತಿಂಗಳಲ್ಲಿ ಕಾಮ್ರೇಡ್ ಡಾಂಗೆಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಸ್ವಾಗತ ಸಮಿತಿಯ ಸಭೆಯೊಂದು ಕಳೆದ ತಾ 30 ರಲ್ಲು ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಸಮ್ಮೇಳನದ ಪೂರ್ವ ಸಿದ್ಧತೆಗಳ ಕುರಿತು ವಿಚಾರ ವಿನಿಮಯ ನಡೆಯಿತೆಂದೂ ಸ್ವಾಗತ ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬೊಂಬಾಯಿ

ದೇವಾಡಿಗ ಸುಧಾರಕ ಸಂಘದ ವಾರ್ಷಿಕೋತ್ಸವವು ಕಳೆದ ತಾ. 25ರಲ್ಲಿ ಶ್ರೀನಾವಲಾಲ್ ವಿ. ಪಾರಿಖ್, ಎಮ್. ಎಲ್. ಎ. ಜೆ. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು, ವರದಿವಾಚನ, ಸಂದೇಶವಾಚನ, ಸಭಿಕರ ಭಾಷಣಗಳಾದ ಬಳಿಕ ಶ್ರೀ ಬ್ರಿಜ್ ಮೋಹನ್. ಜಿ ಮೂದು ಅವರು ಸಂಘದ ನಿಧಿಗೆ ರೂ. 20/- ಮತ್ತು ಶ್ರೀಮತಿ ಪಾರಿಖ್, ಅವರು ಪಾರಿತೋಷಕನಿಧಿಗೆ ರೂ 50/- ನ್ನು ದಾನಮಾಡಿದ ವಿಷಯ ಜಾಹೀರು ಮಾಡಲಾಯಿತು.

ಗಂಗಯ್ಯ ಸ್ಮಾರಕ ಫಂಡು— ಇದರ ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ದತ್ತ ಎಸ್ ರವರ್, ಅಧ್ಯಕ್ಷ; ಕೃಷ್ಣಪ್ಪ ಬಂಗೇರ, ಗೌ ಕೋಶಾಧಿಕಾರಿ, ಎಮ್. ಲಕ್ಷ್ಮಣ ಗುರಿಕಾರ, ಗೌ ಕಾರ್ಯದರ್ಶಿ, ಜಿ. ಕುಂದರ್. ರಾಜು ಕೆ ಶ್ರೀಯನ್, ಕೇಶವ ಎಮ್. ಬಂಗೇರ ಮತ್ತು ಸೇಸು ಜಿ. ಸುವರ್ಣರು ಇತರ ಸದಸ್ಯರಾಗಿ ಆರಿಸಲ್ಪಟ್ಟರು.

ವರ್ಲಿ ಕರ್ನಾಟಕ ಸಂಘದ ಪ್ರಥಮ ವಾರ್ಷಿಕ ಮಹಾ ಸಭೆಯು ಕಳೆದ ತಾ 26 ರಲ್ಲಿ ಡಾ। ಎಲ್ ಜಿ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ವರದಿ ಕುರಿತು ಮಾತನಾಡುತ್ತಾ, ವರ್ಲಿ ವಿಭಾಗದಲ್ಲಿ ಕನ್ನಡ ಪ್ರೈಮರಿ ಶಾಲೆ ಇದ್ದರೂ, ಶಾಲೆಗೆ ಬೇಕಾದಷ್ಟು ಮಕ್ಕಳ ಸಂಖ್ಯೆಯ ಕೊರತೆಯಿರುವುದರಿಂದ ಆ ಭಾಗದಲ್ಲಿ ಕೇಂದ್ರದ ಕನ್ನಡಿಗರು ಪ್ರಚಾರ ಕಾರ್ಯನಡೆಸಿ ಶಾಲೆಯ ಅಭಿವೃದ್ಧಿ ಹೊಂದುವಂತೆ ಪ್ರಯತ್ನಿಸಬೇಕೆಂದರು ಈ ಸಾಲಿ ವರ್ಷಕ್ಕೆ ಶ್ರೀಗಳಾದ ಎಲ್. ಜಿ. ಭಟ್, ಅಧ್ಯಕ್ಷ; ಬಿ. ಎಸ್. ನಾಯರಿ, ಉಪಾಧ್ಯಕ್ಷ ಪಿ. ಕರುಣಾಕರ ಮತ್ತು ಸದಾನಂದ ಎಲ್. ಪ್ರಭು, ಗೌ। ಜತೆ ಕಾರ್ಯದರ್ಶಿಗಳು; ಬಿ. ಡಿ ಸೆಟ್ಟಿ, ಗೌ। ಕೋಶಾಧಿಕಾರಿ; ವೈ. ಆರ್. ಸೆಟ್ಟಿ ಗೌ। ಲೆಖ್ಖ ಪರಿಶೋಧಕ ಮತ್ತು ಹತ್ತು ಜನ ಇತರ ಸದಸ್ಯರು ಆರಿಸಲ್ಪಟ್ಟರು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೊಟ್ಟೆ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈ ಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ನೂರಿ ಇದ್ದವ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಅಲ್ಮೋರಕೆ	೫	೦
ಸಂಜಾವ ತರಂಗಿಣಿ	೫	೮
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಮಾಲೆ	೪	೦
ಜ್ಞಾನಯೋಗ	೪	೦
ಗುರುವಿನೊಡನೆ ದೇವರೆಡೆಗೆ (ಕುವೆಂಪು)	೪	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಿಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾದ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ಶ್ರೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ		
ವೈರಾಗ್ಯದ ಸಾನ್ನಿಧ್ಯದಲ್ಲಿ (ಪರಿವ್ರಾಜಕರಿಂದ ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಸೋಲಿ ಸಂತ ಜನಾಬ್ದರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವದು

P. o Box No. 3219, BOMBAY 3.

ಶಾಸನ ರಹಿತ ಸಮಾಜದ ನಿರ್ಮಾಣ

ಆಚಾರ್ಯ ವಿನೋಬಾರ ವಿಚಾರಗಳು

ಸಾಧಾರಣ ಒಂದು ಶತಮಾನದಿಂದೀಚೆಗೆ ಲೋಕದಲ್ಲಿ ಪ್ರಜಾಸತ್ತೆಯ ಪ್ರಯೋಗವು ನಡೆಯುತ್ತಿದೆ; ಮೊದಲಿನ ರಾಜ ನೀತಿಗೆ ಮತ್ತು ಈಗಿನ ಪ್ರಜಾ ಸತ್ತೆಗೆ ಸಂಘರ್ಷಣವೂ ಆಗುತ್ತಿದೆ. ಲೋಕಸತ್ತೆಯ ಹೊಸ ವಿಚಾರದಲ್ಲಿ ಕೂಡ ಈಗ ಅನೇಕ ಪಕ್ಷಗಳುತ್ಪನ್ನವಾಗಿವೆ; ಆ ಬೇರೆ ಬೇರೆ ಪಕ್ಷ ಮತ್ತು ವಾದಗಳಲ್ಲಿ ವಿಜ್ಞ ವಿಚಾರವಂತರೂ ಸೇವಕರೂ ವಿಭಾಜಿಸಲ್ಪಟ್ಟಿರುತ್ತಾರೆ. ವಿಚಾರ ಭೇದಗಳಿರುವುದೇ ಜೀವನದ ಲಕ್ಷಣವೆಂದು ನಾವು ತಿಳಿಯುತ್ತೇವೆ. ಆದಕಾರಣ ವಾದವನ್ನು ಅಗತ್ಯವಾಗಿ ಒಪ್ಪಿಕೊಳ್ಳುತ್ತೇವೆ.

ಆದರೆ ವಿಚಾರ ಭೇದಗಳ ಆಧಾರದಿಂದ ಪಕ್ಷಭೇದಗಳಾದೊಡನೆ, ವಿಚಾರಗಳ ಯೋಗ್ಯತೆಯು ಗೌಣವಾಗಿ, ಸಂಘಟನೆ, ಅನುಶಾಸನ, ಬಾಹ್ಯ ಪ್ರಚಾರ ಇವುಗಳ ಪ್ರಾಬಲ್ಯವು ಹೆಚ್ಚಾಗುತ್ತದೆ. ಅದರ ಪರಿಣಾಮಸ್ವರೂಪವಾಗಿ ಇಂದು ಪ್ರಪಂಚದಲ್ಲೆಲ್ಲ ರಾಜನೈತಿಕ ಕ್ಷೇತ್ರಗಳಲ್ಲಿ ಕೋಲಾಹಲ ಹಬ್ಬಿಹೋಗಿದೆ. ರಾಜನೈತಿಕ ಕ್ಷೇತ್ರವು ಚಿಕ್ಕದಾಗಿರುತ್ತಿದ್ದರೆ ಚಿಂತೆಗೆ ಕಾರಣವಿಲ್ಲ; ಆದರೆ ಈಗ ರಾಜನೈತಿಕ ಕ್ಷೇತ್ರವು ಬಹಳವಾಗಿ ವಿಕಾಸಗೊಂಡು ಅದು ಸಮಾಜ ಜೀವನದ ಪ್ರತಿಯೊಂದು ಅಂಶವನ್ನೂ ಸ್ಪರ್ಶಿಸತೊಡಗಿದೆ. ಇಂಥ ವ್ಯಾಪಕ ಕ್ಷೇತ್ರದಲ್ಲಿ ಪರಸ್ಪರ ಸ್ಪರ್ಧೆಯು ಉಂಟಾದರೆ, ವಿಚಾರ ಮಂಥನ ಮಾತ್ರವಲ್ಲದೆ ಆಚಾರಗಳಲ್ಲೂ ಸಂಘರ್ಷವು ಸ್ಥಿರವಾಗಿ, ಮಾನವನ ವಿಕಾಸಕ್ಕೆ ತುಂಬ ತೊಡಕುಂಟಾಗುವುದು; ಅದರಿಂದ ಪ್ರಗತಿಯ ಮಾರ್ಗವೇ ಕುಂಠಿತವಾಗಬಹುದು. ಇದನ್ನು ತಪ್ಪಿಸುವುದಕ್ಕಾಗಿ, ಯಾವುದೊಂದು ಪಕ್ಷವಿಲ್ಲದ ಒಂದು ಸೇವಕ ವರ್ಗವನ್ನು ನಿರ್ಮಿಸಬೇಕೆಂದು ನಾವು ಪ್ರಯತ್ನಿಸುತ್ತಿದ್ದೇವೆ. ಆ ವರ್ಗವು ಪಂಥ, ಸಂಪ್ರದಾಯ, ಪಕ್ಷ ವಾದ ಇತ್ಯಾದಿಗಳಿಂದ ದೂರವಿರಬೇಕು; ಸ್ವಚ್ಛ, ನಿರಪರಾಧಿ ಹಾಗು ಸ್ವತಂತ್ರ ವಿಚಾರವನ್ನು ಮಾಡುತ್ತ, ಮಾನವನಿಗೆ ಮಾನವನ ಸಂಬಂಧದಲ್ಲಿ ಸೇವೆ ಮಾಡುತ್ತಿರುವಂತೆ ಆದಿರಬೇಕು. ಅಂಥ ಸೇವಕ ವರ್ಗ ಅಥವಾ ಸೇವಕರ ಕೂಟ ಅಥವಾ ಯತಿಸಂಘವೊಂದನ್ನು ತಯಾರಿಸಲು ನಾವು ಪ್ರಯತ್ನಿಸುತ್ತೇವೆ. ಅಂಥ ಸೇವಕ ವರ್ಗವು ಪ್ರತಿಯೊಂದು ದೇಶದಲ್ಲಿ ಈಗಲೂ ಇದೆ; ಅದಕ್ಕೆ ಮಾನವ ಸೇವಾ ಪರಾಯಣ ಸಂಘವೆನ್ನುತ್ತಾರೆ. ಆದರೆ ದಯಾಳು ಜನರ ವರ್ಗವೊಂದರಿಂದ ನನಗೆ ಸಮಾಧಾನವುಂಟಾಗುವುದಿಲ್ಲ. ದಯಾಳು ವರ್ಗವು ಮಾನವತೆಯ ಕಡೆಗೆ ಗಮನ ಕೊಡುತ್ತದಾದರೂ, ಅದು ಮಾನವತೆಯ ಸಕಲ ಭಾಗಗಳನ್ನು ಕುರಿತು ಆಲೋಚಿಸುವುದಿಲ್ಲ. ಮುಖ್ಯವಾಗಿ ರಾಜನೀತಿ, ಸಮಾಜಶಾಸ್ತ್ರ ಇತ್ಯಾದಿಗಳಿಂದ ಅದು ದೂರವಾಗಿರುತ್ತದೆ; ಅದು ಭೂತದಯಾತ್ಮಕ ಸೇವೆಯನ್ನು ಮಾತ್ರ ಸಲ್ಲಿಸುತ್ತದೆ.

ಭೂತದಯಾತ್ಮಕ ಸೇವೆಯು ಹಿತಕರವೂ ಉನ್ನತಿಕಾರವೂ ಆಗಿರುತ್ತದೆ. ಅದು ಸಮಾಜಕ್ಕೆ ಪ್ರಯೋಜನಕಾರಿಯಾಗಿದ್ದು, ಮಾನವನ ಮನಸ್ಸನ್ನು ಉನ್ನತಿಗೊಳಿಸುತ್ತದೆಯಾದಕಾರಣ ಅದನ್ನು ಆಚರಿಸುವುದು ಆಗತ್ಯವು. ನನ್ನ ದೃಷ್ಟಿಯಲ್ಲಿರುವ ಹೊಸ ವರ್ಗವು ಕೂಡ ಅಂಥ ಸೇವೆಯನ್ನು ಮಾಡಲಪೇಕ್ಷಿಸುತ್ತದೆ; ಆದರೆ ಈ ವರ್ಗವು ಜೀವನದ ಪ್ರತಿಯೊಂದು ಭಾಗವನ್ನು ಕುರಿತು ಚೆನ್ನಾಗಿ ಆಲೋಚಿಸಲಪೇಕ್ಷಿಸುತ್ತ, ರಾಜನೀತಿಗೆ ಲೋಕ ನೀತಿಯ ಸ್ವರೂಪವನ್ನು ಕೊಡಲೂ ಬಯಸುವುದು. ಎಂದ ಮೇಲೆ, ಸಾಮಾನ್ಯ ಭೂತದಯಾತ್ಮಕ ಸೇವೆಯೊಂದರಿಂದಲೇ ಅದು ತನ್ನನ್ನು ಕೃತಕಾರ್ಯವೆಂದೆಣಿಸದು. ಅದು ಅಂಥ ಸೇವೆಯನ್ನೊದಗಿಸುವಾಗಲೇ ಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ಅಂತಸ್ತನ್ನು ಕುರಿತು ಚೆನ್ನಾಗಿ ವಿಚಾರ ಮಾಡುವುದು. ರಾಜ್ಯಕರ್ತರ ಸಮೂಹದಲ್ಲಿ ಅಥವಾ ಭಿನ್ನ ಭಿನ್ನ ಪಕ್ಷಗಳಲ್ಲಿ ಕಂಡು ಬರುವ ದೋಷಗಳನ್ನು ಅದು ಜನತೆಯ ಮುಂದಿಟ್ಟು, ಅವರಲ್ಲಿರುವ ಗುಣಗಳನ್ನು ಅದು ಸ್ವೀಕರಿಸುವುದು; ಪಕ್ಷಭೇದಗಳು ನಾಶವಾಗಿ ಪಕ್ಷಾತೀತ ಲೋಕನೀತಿಯನ್ನವಲಂಬಿಸುವ ಸಮಾಜ ವ್ಯವಸ್ಥೆಯನ್ನು ಸ್ಥಿರಗೊಳಿಸಲು ಅದು ಮಾನವ ಸಮಾಜದಲ್ಲೆಲ್ಲ ಪ್ರಯತ್ನಿಸುವುದು. ಅದಕ್ಕೆ ರಾಜ್ಯವ್ಯವಸ್ಥೆಯೆಂಬ ಹೆಸರನ್ನು ಕೊಡಲು ನಾನು ಸಿದ್ಧನಿಲ್ಲ. ಏಕೆಂದರೆ ಇಲ್ಲಿ ರಾಜವ್ಯವಸ್ಥೆಯು ಕೂಡಾ ಸಮಾಜವ್ಯವಸ್ಥೆಯ ಅಂತರ್ಗತವಾಗಿರುವುದು ಇಂದು. ನಾವು ಸತ್ತೆಯೆನ್ನುವುದೆಲ್ಲ ಕೊನೆಗೆ ಅತ್ಯಂತ ವಿಕೇಂದ್ರಿತವಾಗಿ ಲುಪ್ತವೂ ಆಗುವುದು. ಅದು ವಿಕೇಂದ್ರಿತವಾಗಲು ಇಂದಿನಿಂದಲೇ ಆರಂಭವಾಗುವುದು. ಅದು ಮೆಲ್ಲ ಮೆಲ್ಲನೆ ಲುಪ್ತವಾಗುವುದು; ಪ್ರತಿಯೊಬ್ಬನಿಗೂ ಅದು ದೊರೆತು ಪ್ರತಿಯೊಬ್ಬನೂ ಶಾಸನಕ್ಕೆ ಅಧಿಕಾರವನ್ನು ಪಡೆಯುವವನು ಪ್ರತಿಯೊಬ್ಬನೂ ಅದರ ಪ್ರಜೆಯಾಗುವನು. ಒಬ್ಬ ವ್ಯಕ್ತಿಯಲ್ಲೇ ಶಾಸಕ ಮತ್ತು ಶಾಸಿತರಿಬ್ಬರ ಸಂಗಮವಾಗುವುದು.

ನಾನೇ ನನ್ನ ಶಾಸಿತನು, ನಾನೇ ನನ್ನ ಶಾಸಕನು ಎಂದಾಗುವ ಹೊಸ ಸಮಾಜದಲ್ಲಿ ಇತರರೆಲ್ಲರು ನನ್ನ ದೋಷಗಳನ್ನು ನನಗೆ ತೋರಿಸಿಕೊಟ್ಟು ನನ್ನ ಉತ್ತಮ ಕಾರ್ಯಗಳಲ್ಲಿ ಸಹಯೋಗವನ್ನು ಕೊಡುವವರಾಗುವರು. ನಾನು ಕೂಡ ಅವರ ದೋಷಗಳನ್ನು ನಮ್ರತಾಪೂರ್ವಕವಾಗಿ ತೋರಿಸಿಕೊಡುತ್ತ ಅವರ ಉತ್ತಮ ಕಾರ್ಯಗಳಲ್ಲಿ ಅವರಿಗೆ ಸಹಯೋಗವನ್ನು ಕೊಡುವವನಾಗುವೆನು. ಆದರೂ ನಾನು ನನ್ನ ಸ್ವಾಮಿ ಮತ್ತು ನನ್ನ ಸೇವಕ, ಅವರು ಅವರವರ ಸ್ವಾಮಿ ಮತ್ತು ಸೇವಕರಾಗಿರುವರು; ನಾವೆಲ್ಲರೂ ಪರಸ್ಪರ ಸಹೋದರರು, ಗೆಳೆಯರು ಎಂಬಂತೆ ಇರುವೆವು. ಒಂದೇ ವಿಚಾರದ ಉದರದಿಂದ ನಮ್ಮೆಲ್ಲರ ಜನ್ಮವು; ಆದರೆ ನಮ್ಮೊಳಗೆ ವಿಚಾರಭೇದಗಳಿರಲಾರವೆಂದು ಇದರರ್ಥವಲ್ಲ. ನಿಜವಾಗಿ ಇದರ ಅಭಿಪ್ರಾಯವೆಂದರೆ, ನಮ್ಮ ಹಾರ್ದಿಕ ವಿಚಾರವು ಒಂದೆ ಆಗಿರುವುದು, ಬೌದ್ಧಿಕ ವಿಚಾರಗಳು ಬೇರೆ ಬೇರೆಯಾಗಿರಬಹುದು.

ಹಾರ್ದಿಕ ವಿಚಾರ ಮತ್ತು ಬೌದ್ಧಿಕ ವಿಚಾರಗಳ ಭೇದಗಳನ್ನು ವ್ಯಕ್ತಪಡಿಸುತ್ತೇನೆ. ದಾನ, ತಪಸ್ಸು, ಯಜ್ಞ, ಕರುಣೆ, ಪ್ರೇಮ, ಸೌಹಾರ್ದ, ಇವೆಲ್ಲವುಗಳ ಬಗ್ಗೆ ಎಲ್ಲರ ಹೃದಯಗಳಲ್ಲಿ ಸಮಾನ ಭಾವದಿಂದ ಭಕ್ತಿಯಿರಬೇಕು. ಅದೇ ಹಾರ್ದಿಕ ಐಕ್ಯ. ಬೌದ್ಧಿಕ ಏಕತೆಯು ಸರ್ವಸಾಮಾನ್ಯ ಕಾರ್ಯವ್ಯವಹಾರಗಳಲ್ಲಿ ಏನು ಮಾಡಬೇಕೆಂಬುದರ ಕುರಿತಾಗಿರುವುದು. ಅದರಲ್ಲಿ ಸಮಾನಾಂಶವಿರುವ ಮಟ್ಟಿಗೆ ಅದನ್ನು ಕಾರ್ಯಗತಗೊಳಿಸಲಾಗುವುದು. ಅಷ್ಟೊಂದು ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟು, ಜನತೆಯು ಅಷ್ಟನ್ನು ಪೂರೈಸುವುದು.

ಈ ರೀತಿಯಲ್ಲಿ ಪಕ್ಷಗಳ ಶುದ್ಧೀಕರಣವಾಗಿ ಅವೆಲ್ಲ ಸಮೀಪವಾಗುವವು. 'ಶುದ್ಧೀಕರಣ', 'ಏಕೀಕರಣ', ಮತ್ತು ಕೊನೆಗ 'ವಿಲಯನ'ವನ್ನುಂಟುಮಾಡುವ ಶಕ್ತಿಯು ಅಂಥ ಸರ್ವಾಂಗೀಣವಾದ ಸೇವಕ ವರ್ಗದಲ್ಲಿರಬೇಕು. ಆ ಶಕ್ತಿಯು ಕೇವಲ ಭೂತದಯೆಯನ್ನೆ ತೋರಿಸುವ ಸೇವಕ ವರ್ಗದಲ್ಲಿರಲಾರದು.

ಅನುವಾದಕ:
ಎಸ್. ಯು. ರಾಮಚಂದ್ರ ರಾವ್, ಎಂ. ಎ.

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ
ನೀವೂ ಭಾಗಿಗಳಾಗಿರಿ !!!
! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ $4\frac{1}{4}\%$.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ
! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು
ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಜಿಶಿ: ರೂ. 5/- ಸ್ಪೆಶಲ್ ರೂ.8/-
(ವಿ. ಪಿ. ಪಿ. ಪ್ರತ್ಯೇಕ)

Mrs. P. DEVEE, F. Ds. (N. J.)
CALCUTTA—40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಆಸ್ತಿಯನ್ನು ವಶಪಡಿಸಿಕೊಳ್ಳುವ ಹಕ್ಕು

(೨ನೇ ಪುಟದಿಂದ)

ಹಾರ ಸಿಗಬೇಕೆಂಬುದೂ ಅದರ ಪ್ರಮಾಣವನ್ನು ನ್ಯಾಯಾಲಯದ ನಿಷ್ಕರ್ಷೆಗೆ ಬಿಡಬೇಕೆಂಬುದೂ ಅವರ ಇಚ್ಛೆಯಲ್ಲದೆ, ವಶಪಡಿಸಿಕೊಳ್ಳುವ ಕ್ರಮಕ್ಕೆ ಅವರ ವಿರೋಧವಿದ್ದಂತೆ ಕಾಣಿಸುವುದಿಲ್ಲ. ಪರಿಹಾರ ಧನವನ್ನು ಕೊಡುವ ಮೂಲಕ ಸರಕಾರವು ಆಸ್ತಿಯನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಹೊಂದುತ್ತದೆ ಎಂದವರ ಅಭಿಪ್ರಾಯ. ಆದರೆ, ಖಾಸಗಿ ವ್ಯಕ್ತಿಗಳ ಅಥವಾ ಕಂಪೆನಿಗಳ ಕೈಯಲ್ಲಿರುವ ಆಸ್ತಿಯು ಮೂಲದಲ್ಲಿ ಸರಕಾರದ ಒಡೆತನಕ್ಕೆಯೇ ಸೇರಿದ್ದೆಂಬ ವಾದವನ್ನು ಇಲ್ಲಿ ಸ್ಮರಣೆಗೆ ತಂದುಕೊಂಡರೆ ಆಸ್ತಿಗೆ ಯಾವ ನೈತಿಕ ಪಾವಿತ್ರ್ಯವೂ ಇಲ್ಲವೆಂದೂ ಆವಶ್ಯಕತೆಗಿಂತ ಹೆಚ್ಚು ಇದ್ದುದನ್ನು ಇಟ್ಟುಕೊಳ್ಳುವ ವ್ಯಕ್ತಿಯೇ ಅಪರಾಧಿಯಾಗುವನೆಂದೂ ಖಚಿತವಾಗುತ್ತದೆ. ತಾನಾಗಿ ತಪ್ಪನ್ನು ತಿದ್ದಿಕೊಳ್ಳದಿದ್ದರೆ (ವಿನೋಬಾರ ಪ್ರಯತ್ನ ವ್ಯಕ್ತಿಯನ್ನು ಹಾಗೆ ಪ್ರೇರಿಸುತ್ತದೆ) ಜನತೆಯನ್ನೂ ಸಮಾಜವನ್ನೂ ರಾಷ್ಟ್ರವನ್ನೂ ಪ್ರತಿನಿಧೀಕರಿಸುವ ಸರಕಾರವೇ ಹಾಗೆ ಮಾಡುವಂತೆ ಒತ್ತಾಯಿಸುವುದು ತಪ್ಪಲ್ಲ. ನೆಹರುಗಳಿಂದ ಮಂಡಿಸಲಾದ ತಿದ್ದುಪಡಿ ವಿಧೇಯಕವು ಭೂಸ್ವಾಮಿತ್ವದ ಮಟ್ಟಿಗೆ ಹಿಡುವಳಿಯ ಪರಮಾವಧಿ ಪ್ರಮಾಣ ಮಿತಿಯನ್ನು ನಿರ್ಣಯಿಸಿ, ಹೆಚ್ಚಿಗಿದ್ದುದನ್ನು ವಶಪಡಿಸಿಕೊಳ್ಳುವುದಕ್ಕೆ ಪರಿಹಾರ ಧನ ನೀಡುವ ಕಲಮು ಆತಂಕವಾಗಬಾರದೆಂದು ಹೇಳುತ್ತದೆ. ಇದು ನ್ಯಾಯವಾದ ನಿಲುಮೆಯಾಗಿದೆಯಲ್ಲದೆ, ಉಳ್ಳವರ ಉಚ್ಚಾಟನೆಯನ್ನು ಮಾಡುವ ಕ್ರಮವಲ್ಲ. ಪರಮಾವಧಿ ಮಿತಿನಿರ್ಣಯವು ಧನಿಕ ಹಾಗು ಬಡವರ ಅಂತರದಲ್ಲಿರುವ ವೈಷಮ್ಯವನ್ನು ಕಡಿಮೆಮಾಡುತ್ತದೆ; ಹೊರತು ಪೂರಾ ಅಳಿಸಿಬಿಡುವುದಿಲ್ಲ. ಆದುದರಿಂದ ಉಳ್ಳವರು ಹೇಳಿಕೊಳ್ಳುವಷ್ಟು ಅವರಿಗೇನೂ ಅನ್ಯಾಯವಾಗುವುದಿಲ್ಲ.

ಪರಿಹಾರ ಧನ ಕೊಡುವುದನ್ನು ತಿದ್ದುಪಡಿ ನಿಷೇಧಿಸುವುದಿಲ್ಲವೆಂಬ ಅಂಶವೂ ಗಮನಾರ್ಹವಿರುತ್ತದೆ. ಆದರೆ ಹಾಗೆ ಪರಿಹಾರ ಪಡೆಯಲು ಯೋಗ್ಯ ಪಾತ್ರರು ಯಾರು ಎಂಬುದನ್ನು ವ್ಯವಹಾರ ಜ್ಞಾನದಿಂದ ಶಾಸನಾಂಗ ಅಥವಾ ಕಾರ್ಯಾಂಗ ನಿರ್ಣಯಿಸಬೇಕು ಎಂದು ಮಾತ್ರ ತಿದ್ದುಪಡಿ ಹೇಳುತ್ತದೆ. ನ್ಯಾಯಸ್ಥಾನಗಳು ವ್ಯವಹಾರ ಜ್ಞಾನವನ್ನು ಪ್ರಕಟಿಸದೆ ಕಾಯಿದೆ ಬರಹದನ್ನೇ ಆಶ್ರಯಿಸುತ್ತಿರುವಷ್ಟು ಕಾಲ ಮತ್ತು ಕಾಯಿದೆಯಲ್ಲಿರುವ ಶಬ್ದಗಳಿಗೆ ಅರ್ಥ ಹಚ್ಚುವುದರಲ್ಲಿಯೇ ತೃಪ್ತಿಯನ್ನು ಕಂಡು ಅದರ ಹಿಂದಿರುವ ಭಾವನೆಯನ್ನು ಉಪೇಕ್ಷಿಸಿ ಬಿಡುವಷ್ಟು ಕಾಲ ಕಲ್ಯಾಣ ರಾಷ್ಟ್ರದ ಕಲ್ಪನೆ ಕೃತಿಯಲ್ಲಿಳಿಯಲಾರದು ಎಂದು ಜನಸಾಮಾನ್ಯರ ಅನುಭವ ಹೇಳುತ್ತದೆ. ಆದುದರಿಂದ ಶಬ್ದ ಜೋಡಣೆಯಲ್ಲಿನ ತಪ್ಪನ್ನು ಸರಿಪಡಿಸಿ ತನ್ನ ಉದ್ದೇಶ ಹೀಗೆಂದು ಸ್ಪಷ್ಟಪಡಿಸಲು ಶಾಸನಾಂಗವು ತಿದ್ದುಪಡಿಯನ್ನು ಮಂಡಿಸುವುದು ಕ್ರಮ ಪ್ರಾಪ್ತವಾದ ವಿಷಯ-ಗೃಹ ಮಂತ್ರಿ ಕಟಜೂರ ಮಾತಿನಲ್ಲಿ "ಆ ವಿಶಿಷ್ಟ ಕಲವನ್ನು ರಚಿಸುವಾಗ ತನ್ನ ಉದ್ದೇಶವೇನಿತ್ತೆಂದು ಶಾಸನಾಂಗದ ಸದಸ್ಯರೇ ವಿವರಿಸಬಲ್ಲರು." ಪರಿಹಾರ ಕೊಡುವ ಕಲಮನ್ನು ಭಾರತದಲ್ಲಿರುವ ವಿದೇಶದ ಬಂಡವಾಳದ ಮಟ್ಟಿಗೆ ಮತ್ತು ಜೀವನಾಧಾರವಾದ ಸಂಪತ್ತನ್ನು ಕಾಯಿದೆಯ ಬಲದಿಂದ ಕಳೆದುಕೊಳ್ಳಬೇಕಾಗಿ ಬಂದವರಿಗೆ ಮಾತ್ರ ಸೀಮಿತಗೊಳಿಸುವುದು ಘಟನೆಯನ್ನು ಸಿದ್ಧಪಡಿಸಿದವರ ಉದ್ದೇಶವೆಂದು—ಕನಿಷ್ಠ ಪಕ್ಷಕ್ಕೆ ಜನರನ್ನೀಗ ಪ್ರತಿನಿಧೀಕರಿಸುವವರ ಅಭಿಪ್ರಾಯವೆಂದು— ಹೇಳುವವರ ಮಾತನ್ನು ನಿರಾಕರಿಸುವುದು ಉಚಿತವಾಗಲಾರದು; ನಿಜವಾದ ನ್ಯಾಯ ಪಕ್ಷಪಾತಿಗಳಿಗೆ ಇದರಲ್ಲಿ ದೋಷವೂ ಕಾಣಿಸದು.

ಚರ್ಚೆಯ ಮಟ್ಟಿಗೆ ಇನ್ನೂ ಒಂದು ಹೆಜ್ಜೆ ಮುಂದಿಡಬಹುದು— ಸಾರ್ವಜನಿಕ ಉದ್ದೇಶಗಳಿಗಾಗಿ ಸರಕಾರದವರು ಶಾಸನ ಬಲದಿಂದ ಆಸ್ತಿಯನ್ನು ಪರಿಹಾರವಿತ್ತು ವಶಪಡಿಸಿಕೊಳ್ಳಬಹುದೆಂಬ ಘಟನಾಕರ್ತರ ಮಾತನ್ನು ಒಪ್ಪುವುದಾದರೆ, ಅವರೇ ಹೇಳಿದ ನಿಯಮದಂತೆ ಘಟನೆಯನ್ನು ರಕ್ಷಿಸುವ, ಮತ್ತು ತಿದ್ದುಪಡಿ ಮಾಡುವ ಅಧಿಕಾರವನ್ನು ಹೊಂದಿದ ವಾರೀಸುದಾರರು ದೇಶ, ಕಾಲ, ಪರಿಸ್ಥಿತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಹಾರ ಕೊಡದೆ ತೆಗೆದುಕೊಳ್ಳಬಹುದೆಂದು ತೀರ್ಮಾನಿಸಿದರೆ ತಪ್ಪೇನು? ಘಟನೆಯ ಪಾವಿತ್ರ್ಯವನ್ನು ಒಪ್ಪುವವರು ಕ್ರಮಬದ್ಧವಾದ ಪೂರ್ವೋಕ್ತ ಸ್ವರೂಪದ ತೀರ್ಮಾನವನ್ನು ಪ್ರತಿಭಟಿಸುವುದರಲ್ಲಿ ಹುರುಳಿಲ್ಲ; ಮತ್ತದು ಅಸಂಗತ. ೧೫ ವರ್ಷಗಳಲ್ಲಿ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡಬೇಕೆಂಬ ಘಟನೆಯ ಆದೇಶವು ವ್ಯವಹಾರಿಕವಾಗಿಲ್ಲವೆಂದು ಹೇಳಿ ಅವಧಿಯನ್ನು ಯೋಗ್ಯ ತಿದ್ದುಪಡಿಯ ಮೂಲಕ ೨೫ ವರ್ಷಕ್ಕೆ ವಿಸ್ತರಿಸಬೇಕೆಂಬ ವಕೀಲರ ಪರಿಷತ್ತಿನ ಗೊತ್ತುವಳಿಯ ರೀತಿಯನ್ನೆ ಆಸ್ತಿ ವಶಪಡಿಸಿಕೊಳ್ಳುವ ಕ್ರಮವನ್ನು ಸುಗಮಗೊಳಿಸುವ ಈಗಿನ ತಿದ್ದುಪಡಿಗೆ ಅನ್ವಯಿಸಿದರೆ, ಅದಕ್ಕೆ ತೋರಿಸಲ್ಪಡುವ ವಿರೋಧ ನಿಷ್ಕ್ರಿಯವಾಗುತ್ತದೆ, ಬೆಲೆಯಿಲ್ಲದ ವಸ್ತುವಾಗುತ್ತದೆ. ಆವಶ್ಯಕತೆಗಿಂತ ಹೆಚ್ಚಿದ್ದುದನ್ನು ಕಸಿದುಕೊಳ್ಳುವಾಗ ಪರಿಹಾರ ಕೊಟ್ಟರೆ, ಒಂದು ವಿಧದ ಸಂಪತ್ತಿನ ಬದಲು ಇನ್ನೊಂದು ಬಗೆಯ ಸಂಪತ್ತು ಅವನಿಗೆ ದೊರೆತಂತಾಯಿತಲ್ಲದೆ, ಸಂಪತ್ತಿನ ವಿತರಣೆಯನ್ನು ಮಾಡಿದಹಾಗಾಗಲಿಲ್ಲ; ಆರ್ಥಿಕ ವೈಷಮ್ಯವನ್ನು ದೂರೀಕರಿಸಿದ ಹಾಗೂ ಆಗಲಿಲ್ಲ. ಮೂಲಭೂತವಾದ ಈ ಅಂಶವನ್ನು ಗಮನಿಸದಿದ್ದರೆ, ಘಟನೆಗೆ ತಂದ ತಿದ್ದುಪಡಿಯ ಮಹತ್ವವನ್ನು ಮೆಚ್ಚುವ ಪ್ರವೃತ್ತಿ ಮೂಡುವುದು ಕಷ್ಟ. ಇವೇ ಎಲ್ಲ ಭಿನ್ನಾಭಿಪ್ರಾಯದ ಬೇರು.

(ಬರೆದು ಒಂದುದು)

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ! ವೈದ್ಯರಿಗೆ ವಿಶ್ವಾಸ!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ
ವಿವರಗಳಿಗೆ ವಿಚಾರಿಸಿರಿ.—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.



ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ —ಸಂ. ನ.)

ಸಂಜೆ ದಾರಿ—

ಬರೆದವರು: ಜಿ. ಎಸ್. ಶಿವರುದ್ರಪ್ಪ, ಪ್ರಕಾಶಕರು: ನೇತ್ರಾವತಿ ಪ್ರಕಾಶನ, ಬೆಂಗಳೂರು ೩ ಬೆಲೆ: ಹನ್ನೆರಡಾಣೆ.

ನವ್ಯ ಕಾವ್ಯಗಳ ಸೃಷ್ಟಿಯಲ್ಲಿ ಇನ್ನೂ ಪ್ರಯೋಗಗಳೇ ನಡೆಯುತ್ತಿದ್ದರೂ ಕೆಲವರಿಗಾದರೂ ಸ್ವಲ್ಪ ಮಟ್ಟಿನ ಸಿದ್ಧಿ ಲಭ್ಯವಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಛಂದೋನಿಯಮಗಳ ನಿರ್ಬಂಧವಿಲ್ಲದ ಸಾಲುಗಳು ನವ್ಯ ಕಾವ್ಯ ಸ್ವರೂಪದ ವೈಶಿಷ್ಟ್ಯವಾಗಿದ್ದರೂ, ಕೆಲವೊಮ್ಮೆ ಗದ್ಯಕ್ಕಿಂತ ಹೆಚ್ಚಿನ ಶಕ್ತಿ ಪದಸಂಘನದಲ್ಲಿ ಕಾಣಿಸದಿದ್ದರೂ ಹೊಸಭಾವಗಳನ್ನು ಪ್ರಕಟಿಸುವುದಕ್ಕೆ ಅವುಗಳಿಂದ ಸಹಾಯವಾಗುತ್ತದೆ. ವಿವಿಧ ರಾಗಗಳನ್ನು ಮೇಳವಿಸಿಕೊಂಡ ಸಂಗೀತ ಕಛೇರಿಗೆ ಒಂದು ನವ್ಯ ಕವಿತೆಯನ್ನು ಹೋಲಿಸಬಹುದು. ಶಿವರುದ್ರಪ್ಪನವರ ಇಪ್ಪತ್ತು ಕವಿತೆಗಳ ಈ ಸಂಕಲನವು ಇದನ್ನು ಪುಷ್ಟೀಕರಿಸುತ್ತದೆಯಲ್ಲದೆ ಶ್ರೀಯುತರು ಹೊಸ ಕ್ಷೇತ್ರದಲ್ಲಿ ಪಡೆದ ಯಶಸ್ಸನ್ನೂ ವ್ಯಕ್ತಪಡಿಸುತ್ತದೆ. ಅವರ ಭಾವಗಳು ಕವಿತೆಯ ಸಾಲುಗಳಲ್ಲಿ ಸ್ಫುಟವಾಗಿ ವ್ಯಕ್ತವಾಗಿ ಓದುಗನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಮಾಡುತ್ತವೆ. ನಮ್ಮೆಲ್ಲರ ದೈನಂದಿನ ಅನುಭವಕ್ಕೆ ಬರುವ ಸಾಮಾನ್ಯ ವಸ್ತುಗಳನ್ನೆ ಅವರು ಆರಿಸಿಕೊಂಡಿದ್ದರೂ ನಮಗೆಂದೂ ಹೊಳೆದಿರಲಾರದ ವಿಚಾರಗಳನ್ನು ಅವರು ಕವಿತೆಯಲ್ಲಿ ಕುಶಲತೆಯಿಂದ ಪೋಣಿಸಿರುವರು. ಪರಿಣಾಮವಾಗಿ ಹೊಸಲು ದಾಟದ ಹಸುಳೆ ಮಾನವನ ಪ್ರಗತಿಯ ಇತಿಹಾಸದಲ್ಲಿ ಮಟವೊಂದನ್ನು ತಿರುವಿತೆಂಬ ಅಂಶ ಗೋಚರಿಸುತ್ತದೆ. ಕವಿಯಲ್ಲಿ ವ್ಯಂಗ್ಯ ದೃಷ್ಟಿಯೂ ಇಲ್ಲದಿಲ್ಲ—ಜ್ವರ ರೆಮ್ಮು ನೆಗಡಿಗಳನ್ನು ನಾಲ್ಕು ದಿನ ನಿಂತ ಅತಿಥಿಗಳೆಂದು ಕರೆಯುವ ಮನೋಭಾವ ಅವರದು! ನ್ಯಾಯ ನಿಷ್ಠುರತೆಯೂ ಅವರಲ್ಲುಂಟು—ಬೆರಳ ತುಂಡೆಯ ನಡುವೆ ಬಚ್ಚಿ ಮಾಡಿದ ಕೊಳ್ಳಿಗೆ ಮಾನವರ ಲೋಕಕ್ಕೆ ಅನ್ವಯಿಸುವ ನ್ಯಾಯ—ನಿಯಮಗಳಿಲ್ಲ! ಅದನ್ನು ಕೊಂದ ಕೊಲೆಪಾತಕನನ್ನು ಕೋರ್ಟಿಗೆ ಕರೆಯುವವರಿಲ್ಲ. ಒಂದೇ ದೇವರ ಸೃಷ್ಟಿಯಲ್ಲಿ ಎಷ್ಟು ತಾರತಮ್ಯ! ಉದ್ಧಾರಕ ಕಾವ್ಯದ ಲಕ್ಷಣವನ್ನೂ ಅವರ ಕೆಲವು ಸಾಲುಗಳು ಹೊರಗೆಡವುತ್ತವೆ— ಅಡಿನೆಲದಲಿ, ಕಗ್ಗ ಮುಗಿಲಲಿ, ರೆಕ್ಕೆಯೊಳಗೆ ಬಿಗಿದ ತಬ್ಬ್ರವಂಥ ಗರುಡ ಶಕ್ತಿ ಬರುವದಿನವನ್ನು ಅವರ ಕಾವ್ಯಪ್ರತಿಭೆ ನಿರೀಕ್ಷಿಸುತ್ತದೆ. ಸಂಕ್ಷೇಪದಲ್ಲಿ ಇದು ಸುರಸವಾದ ಕವನ ಸಂಕಲನವಾಗಿದ್ದು ಚೊಕ್ಕದಾದ ಮುದ್ರಣವು ಅದರ ಸೌಂದರ್ಯವನ್ನು ಇಮ್ಮಡಿಸಿರುವುದು. ಬೆಲೆಮಾತ್ರ ತುಸು ಹೆಚ್ಚಾಯಿತು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 114/1954.

ರಾಜು ಮಡಿವಾಳ—ಅರ್ಜಿದಾರ

ಮತ್ತು

ಪುಟ್ಟಮ್ಮ-ಅಕ್ಕು ಮಡಿವಾಳ್ತಿ ಮಗಳು. ಉಡುಪಿ ತಾಲ್ಲೂಕು ಶಿವಳ್ಳಿಗ್ರಾಮದ ಕುಂಜಿಬೆಟ್ಟಿನಲ್ಲಿ ಗುಡ್ಡ ಮಡಿವಾಳನ ಮನೆಯಲ್ಲಿರುತ್ತಾಳೆ
Post Udipi— ಎದ್ರಿಲು.

ಇವರೊಳಗೆ,

ಈ ಮೂಲಕ ಸದ್ರಿ ಎದ್ರಿಗೆ ತಿಳಿಸುವ ಏನೆಂದ್ರೆ

ಮೇಲ್ಕಂಡ ವ್ಯವಹರಣೆಯು, ವಿಚಾರಣೆ ಬಗ್ಗೆ ತಾರೀಕು 13—1—1955 ಕ್ಕೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲನ್ಮೂಲಕ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿ ಸಂಬಂಧ ನಿಮನ್ನು ಶಿವಾಯ್ ಮಾಡಿ ಸದ್ರಿ ವ್ಯವಹರಣೆಯನ್ನು ತೀರ್ಮಾನಿಸಲಾಗುವುದು.

By Order of the Court.

N. M. Advanthaya.
Advocate for petitioner.

Karkala 31—12—1954

(೧ನೇ ಪುಟದಿಂದ)

ನ್ನೂ ಹೂಡ ಬೇಕಾಗಿಬಂದ ಬಹುಸಂಖ್ಯಾಕ ಜನರ ನೆರವಿಗೆ ಸರಕಾರದವರು ಧಾವಿಸಬೇಕಾಯಿತು – ಸಮಾಜ ಸುಧಾರಕರು ಸರಕಾರದ ತಟಸ್ಥ ನೀತಿಯನ್ನು ಬಹಿರಂಗವಾಗಿ ಖಂಡಿಸಿದುದರಿಂದ ಶಾಸನಗಳನ್ನು ರಚಿಸಿ ಕಲ್ಯಾಣಕಾರ್ಯಗಳನ್ನು ಕಡ್ಡಾಯವಾಗಿ ನೆರವೇರಿಸುವುದು ಸರಕಾರದ ಕರ್ತವ್ಯವಾಯಿತು. ಇದರಿಂದ ಸರಕಾರ ವಿಮುಖವಾಗದಂತೆ ಅದರ ಮೇಲೆ ಪ್ರಭಾವಶಾಲಿಯಾದ ನಿಯಂತ್ರಣ ಶಕ್ತಿಯನ್ನು ಹೊಂದಿರುವುದಕ್ಕೋಸ್ಕರ ಪ್ರತಿಯೊಬ್ಬ ಪ್ರಾಯಪ್ರಬುದ್ಧನಿಗೂ ಮತದಾನಮಾಡುವ, ತನ್ಮೂಲಕ ತನ್ನ ಹಿತವನ್ನು ಲಕ್ಷಿಸುವ ಸರಕಾರ ಸ್ಥಾಪನೆಯಾಗುವಂತೆ ನೋಡುವ ಅಧಿಕಾರವು ದೊರಕಿತು. ರಾಜ್ಯವ್ಯವಸ್ಥೆಯಲ್ಲಿ ಆದ ಈ ಪರಿವರ್ತನೆಯೇ ಪ್ರಜಾಪ್ರಭುತ್ವವೆಂದೆನಿಸಿ ಕೊಳ್ಳುತ್ತದೆ. ಇಲ್ಲಿ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸ್ವರೂಪದ ಎಲ್ಲ ಅಧಿಕಾರಗಳೂ ನಾಗರಿಕನ ಕೈಗೆ ಬರುತ್ತವೆ— ಆದರೆ "ಕಲ್ಯಾಣ ರಾಷ್ಟ್ರ"ದ ಧ್ಯೇಯವನ್ನೇ ಇಟ್ಟುಕೊಂಡ ಇನ್ನೊಂದು ಪದ್ಧತಿಯಾದ ಕಮ್ಯೂನಿಜಮ್ಮಿನಲ್ಲಿ ವ್ಯಕ್ತಿಯ ರಾಜಕೀಯಸ್ವಾತಂತ್ರ್ಯವನ್ನು ನಿಷ್ಕ್ರಿಯಗೊಳಿಸಿ, ಒಂದೇ ಒಂದುರಾಜಕೀಯ ಪಕ್ಷದ ಪ್ರವೃತ್ತಿಗಳ ವಶಕ್ಕೆ ಎಲ್ಲ ಅಧಿಕಾರಗಳನ್ನೂ ಒಪ್ಪಿಸಿಕೊಡಲಾಗುತ್ತದೆ. ಬಹುಜನ ಸಮ್ಮತವಾದ ಕೆಲಸ ನಡೆಯುವ ಬದಲು ಕೆಲವೇ ಮುಖಂಡರ ಮಾತಿಗೆ ಬೆಲೆಬರುವುದು ಕಮ್ಯುನಿಸ್ಟ ರಾಷ್ಟ್ರಗಳ ವೈಶಿಷ್ಟ್ಯ.

ಸರಕಾರದ ಧೋರಣೆಯಲ್ಲಿ ಯಾವ ಬದಲಾವಣೆಯನ್ನೂ ಸಾಮಾನ್ಯ ನಾಗರಿಕನು ಸಾಧಿಸಲಾಗದ ಕಮ್ಯುನಿಸ್ಟ ಪದ್ಧತಿಯನ್ನು ವ್ಯಕ್ತಿಸ್ವಾತಂತ್ರ್ಯದ ಪುರಸ್ಕರ್ತರಲ್ಲಿ ಯಾರೊಬ್ಬರೂ ಮೆಚ್ಚುವುದಿಲ್ಲ—ಅವರಿಗೆ ಪ್ರಜಾಪ್ರಭುತ್ವ ಸಿದ್ಧಾಂತದ ಮೇಲೆಯೇ ಪ್ರೀತಿ ಹೆಚ್ಚು. ವ್ಯಕ್ತಿಸ್ವಾತಂತ್ರ್ಯವೇ ಪ್ರಜಾಪ್ರಭುತ್ವದ ಆಕರ್ಷಣೀಯವಾದ ಅಂಶ. ಅದಾಗ್ಯೂ ಬಂಡವಾಳ ಶಾಹಿಗಳ ಶೋಷಣೆಗೆ ಪ್ರಜಾಪ್ರಭುತ್ವವು ಸಮ್ಮತಿಸುವುದಿಲ್ಲ. ಅವರು ತಮ್ಮ ವ್ಯವಹಾರವನ್ನು ಬಹುಜನರ ಮನೋಭಾವಕ್ಕೆ ಹೊಂದಿಕೊಂಡು ನಡೆಸ ಬೇಕಾಗಿ ಸರಕಾರ ಒಂದು ಮಿತಿಯನ್ನು ಹಾಕುತ್ತದೆಂದರೂ ತಪ್ಪಲ್ಲ— ಆದರೆ ಇದನ್ನು ವ್ಯಕ್ತಿಸ್ವಾತಂತ್ರ್ಯದ ಅಪಹಾರವೆಂದು ಹೇಳುವುದು ಸರಿಯಾಗಲಾರದು. ಏಕೆಂದರೆ ಸಮಾಜದ ಸುಖಶಾಂತಿಗೆ ಭಂಗವೊದಗದಂತೆ ವ್ಯಕ್ತಿಸ್ವಾತಂತ್ರ್ಯವು ಕೆಲಸಮಾಡಬೇಕೇ ಹೊರತು, ಅದಕ್ಕೂ ಹೆಚ್ಚಿನ ವ್ಯಾಪ್ತಿಯನ್ನು ವ್ಯಕ್ತಿ ಸ್ವಾತಂತ್ರ್ಯದ ವ್ಯಾಖ್ಯೆ ಪಡೆದಿಲ್ಲ. ಆದುದರಿಂದ ಸಮಾಜದ ಬಹುಜನರ ಒಳಿತಿಗಾಗಿ ಸರಕಾರದವರು ಕಲ್ಯಾಣ ರಾಷ್ಟ್ರದ ಧ್ಯೇಯಕ್ಕನುಸಾರ ಶಾಸನಗಳನ್ನು ಮಾಡಿದಾಗ ತಮ್ಮ ಮೂಲಭೂತಾಧಿಕಾರಗಳು ಕಸಿದುಕೊಳ್ಳಲ್ಪಟ್ಟವೆಂದು ಶ್ರೀಮಂತರೂ ಭೂಮಾಲಿಕರೂ ಕಾರಖಾನೆದಾರರೂ ಉಳ್ಳವರೂ ಬೊಬ್ಬಿರಿಯುವುದು ಅರ್ಥಶೂನ್ಯವಾದ ವಿಷಯ. ಅವರಿಗೆ ಬದುಕುವ ಅವಕಾಶವೇ ಇರಬಾರದೆಂದು ಪ್ರಜಾಪ್ರಭುತ್ವ ಪದ್ಧತಿಯನ್ನು ಅಂಗೀಕರಿಸಿದ ಕಲ್ಯಾಣರಾಷ್ಟ್ರ ಹೇಳುವುದಿಲ್ಲ—ಆದರೆ ಸಾಮಾನ್ಯ ಜನರಿಗಿಂತ ಬಹಳ ವಿಶೇಷವಾದ ಸುಖ ಸೌಕರ್ಯಗಳು ಅವರಿಗೆ ಸಿಗುವುದೂ ಹೀಗೆ ಸಮಾಜದಲ್ಲಿ ಅಶಾಂತಿ ತಾಂಡವವಾಡುವುದೂ ಅದಕ್ಕೆ ಸಮ್ಮತವಾಗಲಾರದು.ಆಗ ಬಹುಜನರ ಯೋಗಕ್ಷೇಮದ ರಕ್ಷಣೆ ಮಾಡುವ ಜವಾಬ್ದಾರಿಯು ಸರಕಾರದ ಮೇಲೆ ಬೀಳುತ್ತದೆ. ಹಾಗೆ ಮಾಡುವ ಸರಕಾರವು ವ್ಯಕ್ತಿ ಸ್ವಾತಂತ್ರ್ಯದ ಅಪಹಾರಕವಲ್ಲ.

ಪ್ರಜಾಪ್ರಭುತ್ವದಲ್ಲಿ ಸಮಾನತೆ ಎಂಬ ಶಬ್ದದ ಅರ್ಥ ಅಷ್ಟು ಕಟ್ಟುನಿಟ್ಟಾಗಿರುವುದಿಲ್ಲ—ಕಮ್ಯುನಿಸ್ಟ ರಾಷ್ಟ್ರಗಳಲ್ಲಿಯೂ ಸಮಾನತೆ ಹೆಸರಿನಲ್ಲಷ್ಟೇ ಉಳಿದಿದೆಯಲ್ಲದೆ, ಭೇದಭಾವವೆಲ್ಲವನ್ನೂ ಅವು ದೂರೀಕರಿಸಿರುವವೆಂದು ಭಾವಿಸುವುದು ತಪ್ಪು. ಮನುಷ್ಯರಲ್ಲಿ ನೈಸರ್ಗಿಕವಾಗಿರುವ ವೈವಿಧ್ಯಗಳನ್ನು ಯಾವ ಸರಕಾರವೂ ಶಾಸನದ ಬಲದಿಂದ ನಿವಾರಿಸಲಾರದು– ಎಲ್ಲರ ಗುಣ ನಡತೆಗಳೂ ಒಂದೇಯಾಗಿರುವಂತೆ ಪ್ರಜೆಗಳನ್ನು ಎರಕ ಹೊಯ್ಯಬಲ್ಲ ಅಚ್ಚು ಕಮ್ಯೂನಿಸ್ಟ ರಾಷ್ಟ್ರಗಳಲ್ಲಿ ಸಹ ತಯಾರಿಸಲ್ಪಟ್ಟಿಲ್ಲ! ಸಮಾನತೆ ಎಂಬ ಪದವನ್ನು ಬಹಳ ಮಿತವಾದ ಕ್ಷೇತ್ರದಲ್ಲಿ, ಮಿತವಾದ ರೀತಿಯಲ್ಲಿ ಮಾತ್ರ ಬಳಸಲಾಗುತ್ತದೆ. ಎಲ್ಲರಿಗೂ ಸಂಬಳ ಒಂದೇಯೆಂದು "ಸಮಾನತೆ" ಹೇಳುವುದಿಲ್ಲ—ವ್ಯಕ್ತಿಯ ಮತ್ತು ಅವನ ಸ್ಥಾನದ ಯೋಗ್ಯತೆಗನುಸಾರ ವೈವಿಧ್ಯ ಇದ್ದೇ ಇರುತ್ತದೆ. ಹಾಗೆಯೇ ಎಲ್ಲರೂ ಒಂದೇ ವರ್ಗದವರೆಂದೂ "ಸಮಾನತೆ" ಹೇಳಲಾರದು—ಬರವಣಿಗೆಯಲ್ಲಿ ಬಿದ್ದವನೂ ಅಚ್ಚು ಮೊಳೆ ಜೋಡಿಸುವವನೂ ಕೆಲಸದಲ್ಲಿ ಸಮಾನತೆ ಪಡೆದಿಲ್ಲ. ಕಾರ್ಖಾನೆಯಲ್ಲಿ ವ್ಯವಸ್ಥಾಪಕನ ಆದೇಶದಂತೆ ಕೆಲಸ ನಡೆಯುತ್ತದೆಯಲ್ಲದೆ, ಕೂಲಿಕಾರನ ಮಾತು ಕೇಳಿಸುವುದಿಲ್ಲ ರಶಿಯದಲ್ಲೂ ಅಷ್ಟೇ–ಅಮೆರಿಕದಲ್ಲೂ ಅಷ್ಟೆ. ಆದರೆ ಅವನು ಕೂಲಿಕಾರ, ಇವನು ಮೆನೇಜರ ಎಂದು ತೋರಿಸುವ ಗೌರವ್ಯಕಾರಖಾನೆಯ ಹೊರಗೆ, ನಿತ್ಯ ವ್ಯವಹಾರದಲ್ಲಿ ಹೆಚ್ಚಿನ ಕ್ಲೇಶವನ್ನುಂಟುಮಾಡಬಾರದುಎಂಬುದೇ ಸಮಾನತೆಯ ಮಥಿತಾರ್ಥ. ಮೆನೇಜರನಿಗೆ ಸಾವಿರ ರೂಪಾಯಿ ಸಂಬಳಕೊಟ್ಟರೆ ಐವತ್ತು ರೂಪಾಯಿ ಮಜೂರಿ ಪಡೆಯುವ ಕೆಲಸಗಾರನಿಗಿಂತ ಅವನು ಹೆಚ್ಚು ಸೌಕರ್ಯವನ್ನು ಹೊಂದಿ, ತಾನು ಬೇರೆಯೇ ತರದವನೆಂದು ಸದಾಕಾಲ ತಿಳಿಯಬಹುದು; ಹಾಗೆ ತಿಳಿದು ಕೂಲಿಗಾರನ ವ್ಯಕ್ತಿತ್ವವನ್ನು ಕಡೆಗಣಿಸಬಹುದು: ಇದರಿಂದ ಪರಸ್ಪರ ವೈಷಮ್ಯ ತಲೆದೋರಬಹುದು—ಎಂಬ ಅಂಶಗಳೇ ಸಮಾಜ ಜೀವನದಲ್ಲಿ ನಾವಾಗಿ ತಂದುಕೊಂಡ ವ್ಯತ್ಯಾಸಗಳನ್ನು ಆದಷ್ಟು ಕಡಿಮೆಮಾಡಿಕೊಳ್ಳಬೇಕೆಂದೂ ಪ್ರತಿಯೊಬ್ಬರಿಗೂ ಉತ್ಕರ್ಷ ಹೊಂದಲು ಸಾಕಷ್ಟು ಅವಕಾಶಗಳನ್ನು ಕಲ್ಪಿಸಿ ಕೊಡಬೇಕೆಂದೂ ಒತ್ತಾಯಿಸುತ್ತವೆ. ಪ್ರಜಾಪ್ರಭುತ್ವ ಪದ್ಧತಿ ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಇನ್ನೊಬ್ಬನಿಗೆ ಕೇಡಾಗದಂತೆ ತನ್ನ ಜೀವನಕ್ರಮವನ್ನು ವ್ಯಕ್ತಿ ರೂಪಿಸಿಕೊಳ್ಳುವಂತೆ ನೋಡುವುದೇ ಕಲ್ಯಾಣ ರಾಷ್ಟ್ರದ ಮುಂದಿರುವ ಮೂಲಭೂತ ಆದರ್ಶ.

— ಕಾರ್ತಿಕೇಯ.

(೪ನೇ ಪುಟದಿಂದ)

ಗಳ ಮುಖ್ಯವಾದ ಉದ್ದೇಶ ಎಂದು ಹೇಳುವವರೊಡನೆ ಯಾರೂ ತರ್ಕಕ್ಕೆ ಇಳಿಯ ಬೇಕಾಗಿಲ್ಲ. ಏಕೆಂದರೆ ಇವೆರಡು ವಿಷಯಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸಿಡುವುದು ಅಸಾಧ್ಯ. ಸಾತ್ವಿಕ ಭಾವನೆಯನ್ನು ಪೋಷಿಸದ ಮನೋರಂಜನೆಯನ್ನು ಹೀಗೆ ಕರೆಯುವುದೇ ತಪ್ಪು—ಮಕ್ಕಳ (ಹಾಗು ಹಿರಿಯರ) ಮನಸ್ಸನ್ನು ಉತ್ತಮ ಪಡಿಸಬಲ್ಲ ಸನ್ನಿವೇಶಗಳಲ್ಲಿ ಮನೋರಂಜನೆಯ ಅಭಾವ ಇದೆಯಾಗಿ ನಾವು ಯಾರೂ ಭಾವಿಸಲಾಗದು. ಸಂತೋಷದಿಂದಿರುವ ಸಾಂಸಾರಿಕ ಜೀವನ, ರಾಷ್ಟ್ರ ಪ್ರೇಮವನ್ನು ಉಕ್ಕೇರಿಸುವ ಸನ್ನಿವೇಶ ಮುಂತಾದವುಗಳಿಂದ ಮನೋರಂಜನೆ ದೊರೆತೇ ದೊರೆಯುತ್ತದೆ. ಅಪಾಯಕರವಾದ ಅಂಶಗಳೇನೂ ಇಲ್ಲದೆಯೂ ಮಕ್ಕಳ ಮನಸ್ಸನ್ನು ಸೆರೆಹಿಡಿಯಬಲ್ಲ ಚಲಚ್ಚಿತ್ರಗಳನ್ನು ರಚಿಸುವುದು ಸಾಧ್ಯವೆಂಬ ಸಂಗತಿಯನ್ನು ಮರೆಯುವ ತಪ್ಪನವರಿಂದಾಗಬಾರದು. ಚಿಕ್ಕ ಮಕ್ಕಳಿಗೆ ಬಣ್ಣದ ಮೇಲೆ ಮತ್ತು ಜಿಗಿದು ಹಾರುವ ಪ್ರಾಣಿ ಜೀವನದ ಮೇಲೆ ವಿಶೇಷವಾದ ಮೋಹವಿರುತ್ತದೆ. ದೊಡ್ಡ ಮಕ್ಕಳಿಗೆ ಸಂಗೀತ ಮತ್ತು ನಟನಾ ಚಾತುರ್ಯದಿಂದ ತುಂಬ ತೃಪ್ತಿಯಾಗುತ್ತದೆ. ಕುತರ್ಕದ ಸಂಭಾಷಣೆಗಳಿಂದಲೂ ಕ್ಲಿಷ್ಟವಾದ ಒಳಸಂಚುಗಳಿಂದಲೂ ಮಕ್ಕಳು ಬೇಸರ ಹೊಂದುತ್ತಾರೆ. ಪ್ರಾಣಿಗಳಿಂದ ತುಂಬಿದ ಮತ್ತು ನಿಸರ್ಗ ಶೋಭೆಗೆ ಕನ್ನಡಿ ಹಿಡಿಯುವ ಚಲಚ್ಚಿತ್ರಗಳೆಂದರೆ ಮಕ್ಕಳಿಗೆ ಅತಿಶಯವಾದ ಪ್ರೀತಿ. ಹಾಸ್ಯ ಚಿತ್ರಗಳೂ ವ್ಯಂಗ್ಯ ಚಿತ್ರಗಳೂ ಸಣ್ಣ ಕತೆಗಳ ಚಿತ್ರಗಳೂ ಮಕ್ಕಳ ಮನಸ್ಸಿಗೆ ಚೆನ್ನಾಗಿ ಹಿಡಿಸುತ್ತವೆ. ಪ್ರವಾಸ ಚಿತ್ರಗಳೂ ಪ್ರೇಕ್ಷಣೀಯ ಸ್ಥಳಗಳ ಕಲ್ಪನೆ ಮಾಡಿಕೊಡಬಲ್ಲ ಸಾಕ್ಷಿ ಚಿತ್ರಗಳೂ ಮಕ್ಕಳ ಮನಸ್ಸನ್ನು ಮೋಹಿಸುತ್ತವೆ. ಆದುದರಿಂದ ಕೊಲೆ, ಸುಲಿಗೆ, ಪ್ರೇಮ, ಪ್ರಣಯಗಳ ಘಟನೆಗಳನ್ನು ಮುಟ್ಟದೆಯೆ, ಮಕ್ಕಳ ಮನೋರಂಜನೆ ಮಾಡುವ ಚಲಚ್ಚಿತ್ರಗಳನ್ನು ನಿರ್ಮಿಸುವುದು ಅಷ್ಟು ತೊಡಕಿನ ವಿಷಯವಾಗಲಾರದು.

ದುರ್ದೈವದಿಂದ ಭಾರತದಲ್ಲಿ ಚಲಚಿತ್ರಗಳ ಉತ್ಪಾದಕರು ಮಕ್ಕಳ ಮನೋರಂಜನೆಯ ಕ್ಷೇತ್ರದಲ್ಲಿ ಏನೇನೂ ಕೈಯಾಡಿಸಿಲ್ಲ—ಪ್ರಧಾನ ಮಂತ್ರಿಗಳ ಸುವರ್ಣ ಪದಕಕ್ಕೆ ಅರ್ಹವಾದ ಮಕ್ಕಳ ಚಲಚಿತ್ರವು ಭಾರತದಲ್ಲಿ ಉತ್ಪಾದಿಸಲ್ಪಡಲಿಲ್ಲವೆಂಬ ಅಂಶವನ್ನು ಗಮನಿಸಿದರೆ ಇದು ವೇದ್ಯವಾಗುತ್ತದೆ. ಖಾಸಗಿಯಾಗಿ ಮಕ್ಕಳ ಚಲಚ್ಚಿತ್ರವನ್ನು ಉತ್ಪಾದಿಸುವ ಜನರೇ ದುರ್ಲಭರಾಗುತ್ತಿರುವುದನ್ನು ಕಂಡ ಸರಕಾರದವರು ಈಗ ತಮ್ಮದೇ ಯೋಜನೆಯೊಂದನ್ನು ಕೈಗೊಂಡು, ಕೊರತೆಯನ್ನು ತುಂಬಿಸಿಕೊಡುವ ಪ್ರಯತ್ನದಲ್ಲಿದ್ದಾರೆ.ಇದರಂತೆ ಖಾಸಗಿಉತ್ಪಾದಕರಿಗೆ ಯೋಗ್ಯ ಪ್ರೋತ್ಸಾಹವನ್ನಿತ್ತು ಅವರಿಂದಲೂ ವಿದೇಶಗಳ ತಯಾರಿಕೆಯಿಂದಲೂ ಯೋಗ್ಯ ಚಿತ್ರಗಳನ್ನು ಸಂಗ್ರಹಿಸಿ, ಅವುಗಳ ವಿತರಣೆಯ ಮತ್ತು ಪ್ರದರ್ಶನದ ವ್ಯವಸ್ಥೆಯನ್ನು ಮಾಡಲಾಗುವುದು. ಸರಕಾರದವರು ಇದಕ್ಕಾಗಿ ಪ್ರತ್ಯೇಕ ಸಂಸ್ಥೆಯೊಂದನ್ನು ಘಟಿಸುವ ನಿಶ್ಚಯ ಮಾಡಿದ್ದು ಬರುವ ಸ್ವಾತಂತ್ರ್ಯದಿನೋತ್ಸವದ (೧೫–೮–೧೯೫೫) ಹೊತ್ತಿಗೆ ಪ್ರಥಮ ಮಕ್ಕಳ ಚಲಚ್ಚಿತ್ರವು ಪ್ರದರ್ಶನಕ್ಕೆ ಸಿದ್ಧವಾಗುವುದು. ಮಕ್ಕಳ ಚಲಚ್ಚಿತ್ರ ಪತ್ರಿಕೆಯೊಂದನ್ನೂ ಸರಕಾರ ಹೊರಡಿಸುವುದು. ಸರಕಾರದ ಚಲಚ್ಚಿತ್ರವಿಭಾಗವು "ಪಂಚತಂತ್ರ","ಹಿತೋಪದೇಶ" ಮತ್ತು "ಜಾತಕ" ಕತೆಗಳಿಂದಲೂ ಪೌರಾಣಿಕ ಸಾಹಿತ್ಯದಿಂದಲೂ ಉಪಯುಕ್ತವಾದುದನ್ನು ಆಯ್ದು ವ್ಯಂಗ್ಯಚಿತ್ರಗಳನ್ನು ತಯಾರಿಸುವುದು.ಅಷ್ಟುಮಾತ್ರವಲ್ಲದೆ, ಮಕ್ಕಳಚಲಚ್ಚಿತ್ರಗಳ ಉತ್ಪಾದನೆಯಲ್ಲಿ ಖಾಸಗಿ ವ್ಯಕ್ತಿಗಳು ಹೆಚ್ಚು ಆಸಕ್ತಿಯನ್ನು ತೋರಿಸಬೇಕೆಂಬ ಧ್ಯೇಯದಿಂದ ಒಟ್ಟು ಏಳು ಚಿತ್ರಗಳಿಗೆ ಸಹಾಯ ಧನವನ್ನು ಸರಕಾರ ಸಲ್ಲಿಸುತ್ತದೆ. ಅದರ ಪ್ರಕಾರ, ಪ್ರಥಮ ಕಥಾ ಚಿತ್ರದ ಸಂಪೂರ್ಣ ವೆಚ್ಚವನ್ನೂ ದ್ವಿತೀಯ ಕಥಾ ಚಿತ್ರದ ಮತ್ತು ಎರಡು ಚಿಕ್ಕ ಚಿತ್ರಗಳ ಮುಕ್ಕಾಲು ಪಾಲು ವೆಚ್ಚವನ್ನೂ ತೃತೀಯ ಕಥಾ ಚಿತ್ರದ ಮತ್ತು ಇನ್ನೆರಡು ಚಿಕ್ಕ ಚಿತ್ರಗಳ ಅರೆವಾಸಿ ವೆಚ್ಚವನ್ನೂ ಸರಕಾರ ವಹಿಸುತ್ತದೆ ಪಂಗಾಮದಲ್ಲಿ ಮಕ್ಕಳ ಚಲಚ್ಚಿತ್ರಗಳ ತಯಾರಿಕೆಯಿಂದ ಆರ್ಥಿಕ ಹಾನಿಯಾದೀತೆಂಬ ಭಯವು ದೂರಗೊಂಡು ಖಾಸಗಿ ಉತ್ಪಾದಕರು ಆಸಕ್ತಿಯಿಂದ ಹೊಸ ಕ್ಷೇತ್ರದಲ್ಲಿ ದುಡಿಯುವುದಕ್ಕೆ ಉತ್ತೇಜನ ದೊರಕದಿರದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

Edited, Printed & Published By K. H. Shetty at the Navayuga Press, Udipi, S. India

REGD. NO.
M. 3618

LICENCE NO. 31
Licensed to Post without Prepaymen

ನವಯುಗ

ಸಂಪುಟ ೩೪ | ಉಡುಪಿ, 13—1—1955 | ಸಂಚಿಕೆ ೧೯
VOL. 34 | | NO. 19

ವಕೀಲರಾದವರು ಪ್ರಕರಣದ ಗುಣದೋಷಗಳನ್ನು ತಮ್ಮ ಕಕ್ಷಿಗಾರರಿಗೆ ಚೆನ್ನಾಗಿ ತಿಳಿಸಿ, ನ್ಯಾಯಾಲಯಕ್ಕೆ ಹೋಗದೆ ಹೊರಗಿನಿಂದಲೇ ಅದನ್ನು ಇತ್ಯರ್ಥಪಡಿಸುವಂತೆ ಮನಸ್ಸೊಲಿಸುವುದು ಇಷ್ಟವಾದ ವಿಷಯ. ತಮ್ಮ ವೃತ್ತಿಯ ಗಾಂಭೀರ್ಯವನ್ನು ಉಳಿಸಿ ಕೊಳ್ಳುವ ಹಾಗೂ ನಾಗರಿಕರ ಕರ್ತವ್ಯವನ್ನು ನಿರ್ವಹಿಸುವ ಎರಡೂ ದೃಷ್ಟಿಯಿಂದಲೂ ಇದು ಶ್ರೇಯಸ್ಕರ.

—ನಿಟ್ಟೂರು ಶ್ರೀನಿವಾಸ ರಾಯರು

ವಕೀಲರೊಬ್ಬರಿದ್ದಲ್ಲಿಗೆ ಬಂದ ಕಕ್ಷಿಗಾರ ತನ್ನ ಪ್ರಕರಣವನ್ನು ಗೆದ್ದುಕೊಟ್ಟರೆ ಒಂದು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಹೇಳಿದ.

"ತಮಗೆ, ತಕ್ಕ ಸಾಕ್ಷಿದಾರರನ್ನು ಸೃಷ್ಟಿಸಿದರೆ ಸರಿ" ಎಂದು ವಕೀಲರು ಭರವಸೆ ಕೊಟ್ಟರು ಪ್ರಕರಣದಲ್ಲಿ ಜಯವನ್ನೂ ಸಂಪಾದಿಸಿದರು.

ಸಾಕಿದಂತೆ ತಮ್ಮ ರುಸುಮನ್ನು ಅವರು ಕೇಳಿದರು. ಅದಕ್ಕೆ 'ಸಾಕ್ಷಿದಾರರನ್ನು ಹಾಜರು ಮಾಡಿದರೆ ಕೊಡುತ್ತೇನೆ' ಎಂದ ಕಕ್ಷಿಗಾರ!

ವಕೀಲರ ಸಮಾಜ

ರಾಷ್ಟ್ರದಲ್ಲಿ ವಕೀಲರ ಸ್ಥಾನಮಾನಗಳೇನು? ಎಂಬ ಕುರಿತಾಗಿ ಕೆಲವು ದಿನಗಳ ಪೂರ್ವದಲ್ಲಿ ಮದ್ರಾಸಿನಲ್ಲಿಯೂ ಬೆಳಗಾಂವಿಯಲ್ಲಿಯೂ ಸೇರಿದ ವಕೀಲರ ಪರಿಷತ್ತುಗಳಲ್ಲಿ ಯೋಗ್ಯ ವಿಚಾರ ವಿನಿಮಯ ನಡೆಯಿತು. ಸಮಾಜದ ಮರೋಗತಿಗೆ ವಕೀಲರ ನೆರವು ಅತ್ಯಗತ್ಯವೆಂಬ ಭಾವನೆಯನ್ನು ಪರಿಷತ್ತುಗಳ ಕಾರ್ಯಕಲಾಪವು ಮಾಡಿಸಿಕೊಟ್ಟಿತು. ವಕೀಲರ ಸಮಾಜವು ರಾಷ್ಟ್ರದ ಪ್ರಗತಿಯ ಅಸ್ತಿವಾರವಾಗಿದೆಯೆಂದು ಹೇಳಿದರೂ ತಪ್ಪಾಗಲಾರದೆಂಬ ಭಾವನೆಯನ್ನು ಅಲ್ಲಿಯ ಭಾಷಣಕರ್ತರು ಹುಟ್ಟಿಸಿದರು. ಇಂದಿನ ವರೆಗಿನ ಇತಿಹಾಸವನ್ನು ನೋಡಿದರೆ, ಧರ್ಮ ಮತ್ತು ನ್ಯಾಯಗಳನ್ನು ಎತ್ತಿ ಹಿಡಿಯುವುದರಿಂದಲೇ ಸಮಾಜವು ಬದುಕಿ ಪುರೋಗತಿಯನ್ನು ಹೊಂದಿತೆಂಬ ಸಂಗತಿ ಮನವರಿಕೆಯಾಗುತ್ತದೆ — ಈ ದೃಷ್ಟಿಯಿಂದ ವಕೀಲರ ಪಾತ್ರ ಅತ್ಯಂತ ಮಹತ್ವದ್ದೆಂಬ ನಂಬಿಕೆ ಬಲವತ್ತರವಾಗುತ್ತದೆ.

ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ವಕೀಲ ವರ್ಗವು ನಡೆಸಿದ ಚಟುವಟಿಕೆಗಳು ಎಲ್ಲರ ಆದರಾಭಿಮಾನಗಳನ್ನು ಕೆರಳಿಸಿದವು ರಾಜಕೀಯ ರಂಗದಲ್ಲಿ ಅಗ್ರಸ್ಥಾನವನ್ನು ವಕೀಲರೇ ವಹಿಸಿದರು ಶಾಸನ ವಿಷಯಗಳಲ್ಲಿ ತಜ್ಞರಾದ ನಮ್ಮ ವಕೀಲರು ಬ್ರಿಟಿಷರು ಭಾರತವನ್ನು ತಮ್ಮ ಪ್ರಭುತ್ವದೊಳಗಿಟ್ಟುಕೊಂಡಿರುವುದು ಅನ್ಯಾಯ ಎಂಬುದಾಗಿ ಬಲವಾಗಿ ಪ್ರತಿಪಾದಿಸಿದರು ಅವರು ಶಾಸನ ರಂಗದ ಒಳಗೂ ಹೊರಗೂ ಬಲವಾದ ಚಳವಳಿಯನ್ನು ನಡೆಸಿದುದರಿಂದ ಮತ್ತು ತಮ್ಮ ವೃತ್ತಿಗೆ ಸಹಜವಾದ ವಾಕ್ಚಾತುರ್ಯದಿಂದ ಜನರನ್ನು ಮೋಹಿಸಿ, ಸಂಘಟಿಸಿ ನ್ಯಾಯವಾದ ನಿಲುವೆಯನ್ನು ಮೆಚ್ಚುವಂತೆ ಮಾಡಿದುದರಿಂದ ನಾವು ಸ್ವತಂತ್ರ ರಾಷ್ಟ್ರದ ಪ್ರಜೆಗಳಾಗಿ ಇಂದು ಬಾಳುವುದು ಸಾಧ್ಯವಾಯಿತು ಇವತ್ತಿಗೆ ಸಹ ನಮ್ಮ ರಾಜಕೀಯ ನಾಯಕರಲ್ಲಿ ವಕೀಲ ವೃತ್ತಿಯಲ್ಲಿ ನಿಷ್ಣಾತರಾದವರೇ ಅಧಿಕ ಸಂಖ್ಯಾಕರೆಂದು ಕಂಡು ಬರುತ್ತದೆ. ಇವರಲ್ಲಿ ತಪ್ಪೇನೂ ಇಲ್ಲ- ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಶಾಸನಗಳ ರಚಕರಾಗಿ ರಾಜಕೀಯ ಧುರೀಣರು ಇರುವಷ್ಟುಕಾಲ ಅಲ್ಲಿ ವಕೀಲರ ಪ್ರಾಬಲ್ಯವಿರುವುದೇ ಹಿತಕರ.

ಪ್ರಜಾಪ್ರಭುತ್ವ ತತ್ವವನ್ನು ಅಂಗೀಕರಿಸಿರುವ ಭಾರತದಲ್ಲಿ ವಕೀಲರು ಇನ್ನೂ ಪ್ರಭಾವಿಯಾದ ಪಾತ್ರವನ್ನು ವಹಿಸಬೇಕಾಗುತ್ತದೆ ಮುಖ್ಯವಾಗಿ ಅವರು ನಮ್ಮ ಪ್ರಜೆಗಳ ಘಟನಾತ್ಮಕ ಹಕ್ಕು ಬಾಧ್ಯತೆಗಳ ಸಂರಕ್ಷಣೆಯ ಕರ್ತವ್ಯಭಾರಕ್ಕೆ ಹೆಗಲು ಕೊಡಬೇಕಾಗುತ್ತದೆ ವ್ಯಕ್ತಿ ಹಾಗು ಸಮಾಜದ ಹಕ್ಕು ಬಾಧ್ಯತೆಗಳ ಮತ್ತು ಶ್ರೇಯಸ್ಸಿನ ಪ್ರಶ್ನೆಯು ಸೂಕ್ಷ್ಮ ಪಟ್ಟವನ್ನು ಮುಟ್ಟಿರುವ ಮತ್ತು ಅವೆರಡು ಅಂಗಗಳಲ್ಲಿ ಘರ್ಷಣೆಯು ಕಂಡು ಬರುವ ಇಂದಿನ ಪರಿಸ್ಥಿತಿಯಲ್ಲಿ ಸಮನ್ವಯ ದೃಷ್ಟಿಯಿಂದ ನ್ಯಾಯವನ್ನು ಎತ್ತಿ ಹಿಡಿಯುವ ಮತ್ತು ಆತಂಕಗಳನ್ನು ಲೆಕ್ಕಿಸದೆ ಸಮಂಜಸವಾದುದನ್ನು ಪ್ರತಿಪಾದಿಸುವ ದೊಡ್ಡ ಜವಾಬ್ದಾರಿಯು ವಕೀಲರ ಮೇಲಿರುತ್ತದೆ ಕಲ್ಯಾಣ ರಾಷ್ಟ್ರದಲ್ಲಿ ವ್ಯಕ್ತಿಯ ಶ್ರೇಯಸ್ಸು ಮತ್ತು ಸಾಮಾಜಿಕ ಹಿತದ ನಡುವೆ ಶಾಸನಕರ್ತರು ಗೆರೆಯನ್ನು ಹಾಕುವಾಗ ತಪ್ಪುತಡೆಗಳಾಗದಂತೆ ನೋಡಿಕೊಳ್ಳುವುದು ವಕೀಲರ ಪ್ರತಿಭೆಗೆ ಸೇರಿದ ವಿಷಯ.

ಸಾಮಾನ್ಯವಾಗಿ ನಮ್ಮ ಶಾಸನ ಕರ್ತರಲ್ಲಿ ವಕೀಲ ಸಮಾಜದ ಸದಸ್ಯರ ಸಂಖ್ಯೆಯೇ ಹೆಚ್ಚಿರುವುದರಿಂದ ಕಾನೂನು ಕಾಯಿದೆಗಳಲ್ಲಿ ಹೆಚ್ಚಿನ ದೋಷಗಳು ಕಾಣಿಸುವುದಿಲ್ಲ- ಆದಾಗ್ಯೂ ರಾಜಕೀಯ ಉದ್ದೇಶ ಸಾಧನೆಗಾಗಿಯೇ ಎಂಬಂತೆ ಅವರಿಂದ ಶಾಸನಗಳನ್ನು ರಚಿಸುವ ಹವ್ಯಾಸವನ್ನು ಸರಕಾರದಲ್ಲಿರುವ ಪರಿಷ್ಕರು ತೋರಿಸಿದಹಾಗೆಲ್ಲ ವೃತ್ತಿಯಲ್ಲಿರುವ ಇತರ ಸದಸ್ಯರು ಹೆಚ್ಚಿನ ಚುರುಕಿನಿಂದ ಕೆಲಸ ಮಾಡಬೇಕಾಗುತ್ತದೆ. ಹಿಂದಿನ ಶಾಸನಗಳಿಗಿಂತ ಇಂದಿನವು ಸಂಕೀರ್ಣವೂ ಕ್ಲಿಷ್ಟವೂ ಆಗಿವೆಯೆಂಬ ಮತ್ತು ಪ್ರತಿ ದಿನವೂ ಹೊಸ ಕಾಯಿದೆಯೊಂದು ರೂಪುಗೊಂಡು ಜ್ಯಾರಿಗೆ ಬರುತ್ತಿರುವುದೆಂಬ ಅಂಶವನ್ನು ನೆನೆದರೆ, ವಕೀಲರು ತುಂಬ ಪರಿಶ್ರಮಪೂರ್ವಕ ಕಾಯಿದೆಗಳ ಅಭ್ಯಾಸವನ್ನು ಮಾಡಬೇಕಾಗಿದೆಯೆಂದೂ ಅವುಗಳ ಸಾಧಕ ಬಾಧಕ ಅಂಶಗಳ ಬಗ್ಗೆ ಆಳವಾಗಿ ವಿಚಾರಿಸಬೇಕಾಗುವುದೆಂದೂ ಸ್ಪಷ್ಟವಾಗುತ್ತದೆ

ವಕೀಲರ ಸಮಾಜದ ಮುಂದೆ ಇಷ್ಟು ದೊಡ್ಡ ಅಭ್ಯಾಸಕ್ಷೇತ್ರವಿರುವುದರಿಂದ ಅವರು ಸಾಮಾಜಿಕ ರಂಗದಲ್ಲಿ ಕ್ರಿಯಾತ್ಮಕ ಪಾತ್ರವನ್ನು ವಹಿಸುವುದು ಸಾಧ್ಯವಾಗದೆ ಹೋದೀತು. ಆದಕ್ಕಾಗಿ ಅವರು ಚಿಂತಿಸುವುದೂ ಬೇಡ. ಅದಕ್ಕೆ ಬೇರೆ ಜನರಿದ್ದಾರೆಂದು ಭಾವಿಸುವುದೇ ವಿಹಿತ.

ಅದಲ್ಲದೆ, ತಮ್ಮ ವೃತ್ತಿಯಲ್ಲಿ ನಿರತರಾಗಿದ್ದಂತೆಯೆ ವಕೀಲರು ಸಮಾಜಕ್ಕೆ ಬಹಳ ಮುಖ್ಯವಾದ ಸೇವೆಯನ್ನು ಸಲ್ಲಿಸಬಲ್ಲರೆಂಬುದನ್ನು ಮರೆಯಲಾಗದು — ವಕೀಲ ವೃತ್ತಿಯಲ್ಲಿ ಬಿದ್ದವರೆಲ್ಲರೂ ಜನರ ಜಗಳ ಗಂಟಿ ಸ್ವಭಾವದ ಲಾಭವನ್ನು ಸ್ವಪ್ರಯೋಜನಾರ್ಥ ಮಾಡಿಕೊಳ್ಳುವರೆಂದೂ ಅನ್ಯಾಯದ ಪ್ರಸಂಗಗಳನ್ನು ಹಣ ದುಡ್ಡಿಗಾಗಿ ಪ್ರತಿಪಾದಿಸುವರೆಂದೂ ಹೇಳಲಾಗುತ್ತದೆ ತಮ್ಮ ಮೇಲಿನ ಈ ಅಪವಾದವನ್ನು ನಿವಾರಿಸುವುದಕ್ಕೆ ವಕೀಲರು ಪ್ರಯತ್ನಿಸುವುದಕ್ಕೆ ಹಿಂಜರಿಯಬಾರದು. ಸಾಧ್ಯವಾದಷ್ಟು ಮಟ್ಟಿಗೆ ನ್ಯಾಯಾಲಯದ ಹೊರಗೆ, ವಿವಾದಗಳನ್ನು ತೀರ್ಮಾನಿಸಿ ಕೊಳ್ಳುವಂತೆ ಕಕ್ಷಿಗಾರರಿಗೆ ಬೋಧಿಸುವುದು ಇವುಗಳಲ್ಲಿ ಬರುತ್ತದೆ.

ನ್ಯಾಯಸ್ಥಾನದ ಮುಂದೆ ವಕೀಲರು ಪ್ರಕರಣವನ್ನು ಮಂಡಿಸುವಾಗ ತಮ್ಮ ಕಕ್ಷಿಗಾರರ ನಿಲುವೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದಕ್ಕ ಮಹತ್ವಕೊಡಬೇಕೇ ಹೊರತು ವೈಯಕ್ತಿಕ ಅಭಿಪ್ರಾಯಗಳನ್ನು ಹೇರಲಾಗದೆಂದೂ ನ್ಯಾಯಾಧೀಶರಿಗೆ ಸಂಬಂಧಿಸಿದ ಪ್ರಶ್ನೆಗಳ ವಿವರವನ್ನೊದಗಿಸುವುದಕ್ಕೆ ಪ್ರಯತ್ನಿಸಬೇಕಲ್ಲದೆ, ನ್ಯಾಯಾಧೀಶರಿಗೆ ಅಗೌರವ ತೋರಿಸತಕ್ಕದ್ದಲ್ಲವೆಂದೂ ಅನುಭವಿಗಳಾದವರು ಹೇಳಿದ ಮಾತು ವಕೀಲರು ಮನನ ಮಾಡುವಂಥದು. ಸಮಾಜದಲ್ಲಿ ನ್ಯಾಯವನ್ನು ಸ್ಥಾಪಿಸಬೇಕಾದ ವಕೀಲರು ತಮ್ಮ ಚಟುವಟಿಕೆಗಳನ್ನು ಒಂದು ವಿಶಿಷ್ಟ ರೀತಿಯಲ್ಲಿ ಪ್ರಾವೀಣ್ಯ ನಡೆಸುವುದಕ್ಕೆ ಉಪಯೋಗಿಸುವುದೂ ಅಪೇಕ್ಷಣೀಯ ಉದಾಹರಣೆಗೆ, ಕೆಲವರು ಆದಾಯ ತೆರಿಗೆಯ ಶಾಸನದಲ್ಲಿ, ಇನ್ನು ಕೆಲವರು ಮೂಲಭೂತ ಹಕ್ಕುಗಳ ಪ್ರಕರಣದಲ್ಲಿ, ಮತ್ತೆ ಕೆಲವರು ಬಾಡಿಗೆ ನಿಯಂತ್ರಣದ ವಿಷಯದಲ್ಲಿ ಹೆಚ್ಚಿನ ಅನುಭವವನ್ನು ಪಡೆದರೆ, ಸಮಾಜಕ್ಕೆ ತಜ್ಞರ ನೆರವು ದೊರೆತ ಹಾಗಾಗುವುದಲ್ಲದೆ ವೃತ್ತಿಯಲ್ಲಿನ ಅನಾವಶ್ಯಕವಾದ ಪೈಪೋಟಿಯೂ ತಪ್ಪುವುದು.

— ಕಾರ್ತಿಕೇಯ.

THE CANARA INDUSTRIAL & BANKING SYNDICATE LTD
Estd: 1925
H O UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಠೇವಾಗಿರಿಸಲು ನೀವು ತಯಾರಿದ್ದವರಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಆಪೇಕ್ಷೆ ನಿಮಗಿದೆ ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಯಿಡಲು ನೀವು ಇಚ್ಛಿಸುವಿರಿ ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು ೬೩ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ

ಚಲಾವಣೆ ಭಂಡವಾಳ ರೂ ೬,೫೦,೦೦ ೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ ಉಡುಪಿ, ದ. ಭಾರತ.

ಕುಷ್ಠರೋಗದ ನಿಯಂತ್ರಣ ಸಮಸ್ಯೆ

ಸಾರ್ವಜನಿಕರು ಗಮನಿಸಬೇಕಾದ ಅಂಶ

ವಿಜ್ಞಾನವು ಬಹಳ ಮುಂದರಿದಿದ್ದರೂ ಜನರ ಅಜ್ಞಾನದ ದೆಸೆಯಿಂದ ಇನ್ನೂ ಭೀಕರವಾದ ಭಾವನೆಯನ್ನುಂಟುಮಾಡುವ ಕೋಟಲೆಗಳಲ್ಲಿ ಕುಷ್ಠ ರೋಗವನ್ನು ಹೆಸರಿಸಬಹುದು. ಕುಷ್ಠರೋಗವು ಈಗ ನಾಲ್ಕೈದು ಸಾವಿರ ವರ್ಷಗಳಿಂದ ಜಗತ್ತನ್ನು ಪೀಡಿಸುತ್ತಾ ಬಂದಿದ್ದು, ಆಫ್ರಿಕ ಖಂಡದಲ್ಲಿ ಅದರ ಪ್ರಸಾರ ಬಹಳ ಹೆಚ್ಚು. ಅಲ್ಲಿಂದಲೇ ಅದು ಯೂರೋಪಿಗೂ ಇತರ ದೇಶಗಳಿಗೂ ಹಬ್ಬಿತು. ಭಾರತದಲ್ಲಿ ಸುಮಾರು ಐವತ್ತು ಲಕ್ಷ ಜನರು ಕುಷ್ಠ ರೋಗದಿಂದ ಬಳಲುವರೆಂದು ಅಂದಾಜು. ಇವರ ಕುರಿತು ಜನರಲ್ಲಿ ಅಧಿಕ ಸಂಖ್ಯಾಕರು ಯಾವ ತರದ ಸಹಾನುಭೂತಿಯ ವರ್ತನೆಯನ್ನೂ ತೋರಿಸುವುದಿಲ್ಲ; ಕೈಬೆರಳುಗಳು ಕೊಳೆತು, ಬಿದ್ದು ಹೋದ, ಮೂಗು ಮೊಂಡಾದ, ಮುಖ ಬಾತು ಹೋದ, ಅಲ್ಲಲ್ಲಿ ಕೀವು ಒಸರುವ ಕುಷ್ಠ ರೋಗಿಗಳನ್ನು ಕಂಡು ಜನರಲ್ಲಿ ಅಸಹ್ಯ ಭಾವನೆ ಉಂಟಾಗುತ್ತದೆ. ಇದನ್ನು ಹೋಗಲಾಡಿಸಿ ಮಾನವೀಯ ಭಾವನೆಯಿಂದ ಅವರ ಸೇವೆಯನ್ನು ಮಾಡಿ, ಕುಷ್ಠ ರೋಗದ ನಿವಾರಣೆಯಲ್ಲಿ ಕ್ರಿಯಾತ್ಮಕ ಪಾತ್ರವಹಿಸುವ ಕಾರ್ಯಕರ್ತರು ವಿರಳ.

ನಮ್ಮ ದೇಶದಲ್ಲಿ ಸ್ವಲ್ಪವಾದರೂ ಕುಷ್ಠರೋಗಿಗಳ ಬಗ್ಗೆ ಭೂತ ದಯೆಯನ್ನು ತೋರಿಸಿದವರು ಕ್ರೈಸ್ತ ಸೇವಾ ಸಂಘದ ಕಾರ್ಯಕರ್ತರೆಂದು ಕೃತಜ್ಞತೆಯಿಂದ ನೆನೆಯಬಹುದು. ನಮ್ಮ ಜಿಲ್ಲೆಯಲ್ಲಿಯೇ ಕಂಕನಾಡಿಯಲ್ಲಿ ಕುಷ್ಠರೋಗಿಗಳ ಸೇವಾ ಶುಶ್ರೂಷೆಯನ್ನು ನಡೆಸುವ ಉತ್ತಮ ಕೇಂದ್ರವೊಂದನ್ನು ಕಾಣುತ್ತೇವೆ. ಕ್ರೈಸ್ತ ಮತಾನುಯಾಯಿಗಳಾದ ಸಾಮಾಜಿಕ ಕಾರ್ಯಕರ್ತರು ಹಾಕಿಕೊಟ್ಟ ಆದರ್ಶವನ್ನು ಕ್ರಮೇಣ ಬೇರೆಯವರೂ ಅನುಸರಿಸ ತೊಡಗಿದರು. ಅಖಿಲ ಭಾರತ ಕುಷ್ಠ ನಿವಾರಣಾ ಸಂಘವೊಂದು ಈಚೆಗೆ ಕೆಲವು ವರ್ಷಗಳಿಂದ ದೇಶಕ್ಕೆ ಉಪಯುಕ್ತವಾದ ದೊಡ್ಡ ಪ್ರಮಾಣದ ಸೇವೆಯನ್ನು ನೀಡುತ್ತಿದೆಯಲ್ಲದೆ, ಮಹಾತ್ಮಾ ಗಾಂಧಿಯವರ ಸ್ಮಾರಕಾರ್ಥವಾಗಿಯೂ ಕುಷ್ಠರೋಗ ನಿವಾರಕ ಸಂಘವೊಂದು ಸ್ಥಾಪಿಸಲ್ಪಟ್ಟು ಅದರ ಚಟುವಟಿಕೆಗಳೂ ವಿಸ್ತಾರ ಹೊಂದುತ್ತಾ ನಡೆದಿವೆ. ಆದರೆ ಇನ್ನಷ್ಟು ವ್ಯಾಪಕ ತಳಹದಿಯ ಮೇಲೆ ಕುಷ್ಠರೋಗ ನಿವಾರಣಾ ಕಾರ್ಯವನ್ನು ಕೈಗೊಳ್ಳುವ ಆವಶ್ಯಕತೆ ಕಂಡು ಬರುತ್ತಿದ್ದು, ರಾಜ್ಯ ಹಾಗು ಕೇಂದ್ರ ಸರಕಾರಗಳು ಇದನ್ನು ಮನಗಂಡಿರುತ್ತವೆ.

ಸರಕಾರದವರು ಸಹಾಯ ರೂಪದಲ್ಲಿ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ೧೪ ಲಕ್ಷ ರೂಪಾಯಿಗಳ ವೆಚ್ಚದ ಕಾರ್ಯಕ್ರಮಗಳನ್ನು ರೂಪಿಸಿ ಕುಷ್ಠ ರೋಗದ ಪ್ರಸಾರವನ್ನು ಪ್ರತಿಬಂಧಿಸುವುದಕ್ಕೂ ರೋಗಗ್ರಸ್ತರ ಉಪಶಮನಕ್ಕೂ ಜನಶಿಕ್ಷಣಕ್ಕೂ ಪ್ರಯತ್ನಿಸಬೇಕೆಂದು ಪ್ರಾರಂಭದಲ್ಲಿ ಯೋಚಿಸಿದ್ದರು. ಆದರೆ ಇದೇ ದಿನಾಂಕ ೩ರಂದು ಬಂದ ವರದಿಗಳ ಮೇಲಿಂದ ಕೇಂದ್ರ ಆರೋಗ್ಯ ಖಾತೆಯು ಇನ್ನೂ ೧೬ ಲಕ್ಷ ರೂಪಾಯಿಗಳ ವೆಚ್ಚವನ್ನೊಳಗೊಳ್ಳುವ ಕಾರ್ಯಕ್ರಮಗಳಿಂದ ಕುಷ್ಠ ರೋಗಪ್ರತಿಬಂಧಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನೂ ಪ್ರೋತ್ಸಾಹವನ್ನೂ ಕೊಟ್ಟದೆಯಾಗಿ ತಿಳಿಯುತ್ತದೆ. ೧೯೫೪ ೫೫ನೇ ಸಾಲಿನಲ್ಲಿ ೫ ಲಕ್ಷ ಹಾಗು ಮುಂದಿನ ವರ್ಷ ೧೧ ಲಕ್ಷ ರೂಪಾಯಿಗಳನ್ನು ಕುಷ್ಠ ರೋಗ ನಿವಾರಕ ಕೇಂದ್ರಗಳ ಸ್ಥಾಪನೆಗಾಗಿ ವ್ಯಯಿಸಲಾಗುತ್ತದೆ. ಪ್ರತಿಯೊಂದೂ ರಾಜ್ಯ ಸರಕಾರಗಳಲ್ಲಿ ಯೋಜನೆಯ ವಲಯಗಳನ್ನು ಘಟಿಸಲಾಗುತ್ತದೆ. ಜನ ಸಮುದಾಯಕ್ಕೆ ಅನ್ವಯಿಸುವ ರೋಗ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳುವುದು ಈ ಕೇಂದ್ರಗಳ ಮುಖ್ಯ ಉದ್ದೇಶ. ಇದರ ಹೊರತು ಇನ್ನೂ ೩೯ ಲಕ್ಷ ರೂಪಾಯಿಗಳನ್ನು ೧೯೫೪—೫೫ನೇ ಸಾಲಿನಲ್ಲಿ ಕುಷ್ಠರೋಗ ನಿವಾರಕ ಕೇಂದ್ರಗಳಿಗೆ ಸಹಾಯ ಧನವಾಗಿ ಸರಕಾರ ಕೊಡುತ್ತದೆ.

ಸಮಾಜದಲ್ಲಿ ಕುಷ್ಠ ರೋಗದ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದರಿಂದ ಇದನ್ನು ಹೋಗಲಾಡಿಸಲು ಕುಷ್ಠ ರೋಗ ನಿವಾರಕ ಕೇಂದ್ರಗಳು ಪ್ರಯತ್ನ ನಡೆಸಬೇಕಾಗುತ್ತದೆ. ಅತ್ಯಷ್ಟದಿಂದಲೂ ಮಿತಿಮೀರಿ ಸ್ತ್ರೀಸಂಭೋಗ ಸುಖವನ್ನು ಹೊಂದುವುದರಿಂದಲೂ ರೋಗಿಯು ಬಳಸುವ ನೀರು ಮುಂತಾದುವುಗಳನ್ನು ಉಪಯೋಗಿಸುವುದರಿಂದಲೂ ಈ ರೋಗ ತಗಲುತ್ತದೆಯಾಗಿ ಸಾಮಾನ್ಯವಾದ ಅಭಿಪ್ರಾಯ ಜನರಲ್ಲಿ ಕಂಡುಬರುತ್ತದೆ. ಇದರಲ್ಲಿ ತಥ್ಯಾಂಶವೇನೂ ಇಲ್ಲದಿದ್ದರೂ ಭ್ರಾಮಕ ಕಲ್ಪನೆಯ ದೆಸೆಯಿಂದ ಕುಷ್ಠರೋಗಿಗಳು ನರಳಿ ಸಾಯುವ ಪ್ರಸಂಗ ಅನೇಕ ಸಲಬಂದಿರುತ್ತದೆ. ಸಮಾಜದಿಂದಲೂ ಕುಟುಂಬದವರಿಂದಲೂ ತಿರಸ್ಕೃತರಾಗಿ ದುರಂತ ಜೀವನವನ್ನು ನಡೆಸಬೇಕಾಗಿ ಬಂದ ಕುಷ್ಠರೋಗಿಗಳ ನಿದರ್ಶನವೂ ಸಿಗುತ್ತದೆ. ಆದುದರಿಂದ ಸಾಮಾನ್ಯವಾಗಿ ಯಾರೊಬ್ಬರೂ ತಮಗೆ ಕುಷ್ಠರೋಗವು ತಗಲಿರುವ ಸಂಗತಿಯನ್ನು ರೋಗವು ತೀವ್ರಾವಸ್ಥೆಯನ್ನು ಮುಟ್ಟುವವರೆಗೆ ಬಹಿರಂಗಗೊಳಿಸುವುದಿಲ್ಲ. ಎಲ್ಲ ರೋಗಗಳಂತೆ ಕುಷ್ಠರೋಗವನ್ನೂ ಪ್ರಾರಂಭಿಕಾವಸ್ಥೆಯಲ್ಲಿ ಬಹುಬೇಗನೆ ಗುಣಪಡಿಸಬಹುದಾಗಿದ್ದರೂ ಸಮಾಜದ ನಿಂದೆಯಿಂದ ದೂರ ಉಳಿಯುವುದಕ್ಕಾಗಿ ರೋಗಿಗಳು ಮುಚ್ಚಿಟ್ಟುಕೊಳ್ಳುವ ಪ್ರವೃತ್ತಿಯನ್ನು ತೋರಿಸುತ್ತಿರುವಷ್ಟು ಕಾಲ ನಿವಾರಕ ಕಾರ್ಯವು ಹೆಚ್ಚಿನ ಪ್ರಗತಿಯನ್ನು ಹೊಂದಲಾರದು. ರೋಗಿಗಳು ಅಂಜದೆ, ಶುಶ್ರೂಷೆಯನ್ನು ಮಾಡಿಸಿಕೊಳ್ಳುವ ವಾತಾವರಣವನ್ನುಂಟುಮಾಡುವುದು ಅಗತ್ಯವೆಂದು ಇದರಿಂದ ಸ್ಪಷ್ಟವಾಗುತ್ತದೆ.

ಜನರಲ್ಲಿ ಸರಿಯಾದ ತಿಳುವಳಿಕೆಯನ್ನು ಮೂಡಿಸುವುದಕ್ಕೆ ಕೆಳಗಿನ ಸತ್ಯಾಂಶಗಳಿಂದ ನೆರವು ಸಿಗುತ್ತದೆ—ಕುಷ್ಠ ರೋಗವು ನಿವಾರಿಸಲಾಗದ ಕೋಟಲೆಯಲ್ಲ; ಅದು ಆನುವಂಶಿಕವೂ ಅಲ್ಲ; ದೈವೀ ಪ್ರಕೋಪ ಅಥವಾ ಅದೃಷ್ಟದ ಅಂಗ ಇದರಲ್ಲಿಲ್ಲ; ಪ್ಲೇಗು, ವಾಂತಿ ಭೇದಿ ಮುಂತಾದವುಗಳಷ್ಟು ತೀವ್ರವಾಗಿ ಹಬ್ಬುವ ಸಾಂಕ್ರಾಮಿಕ ರೋಗವೂ ಇದಲ್ಲ; ಬಹಳ ದೀರ್ಘಕಾಲದ ಸಂಸರ್ಗದಿಂದ ಮಕ್ಕಳಲ್ಲಿ ಇದು ಮುದುಕರಿಗಿಂತ ಹೆಚ್ಚು ಪ್ರಸಾರವನ್ನು ಹೊಂದುತ್ತದೆ; ಭಿಕ್ಷುಕರಲ್ಲಿ ಅನೇಕರು ಕುಷ್ಠ ರೋಗ ಪೀಡಿತರಿದ್ದರೂ ಅವರಿಂದ ಇದರ ಪ್ರಸಾರವಾಗುವ ಸಂಭವ ಅಷ್ಟೇನೂ ಇಲ್ಲ; ಮುಚ್ಚಿಟ್ಟುಕೊಳ್ಳುವ ಪ್ರವೃತ್ತಿಯನ್ನು ಬಹುಕಾಲ ತೋರಿಸಿದ ಸಭ್ಯ ಗೃಹಸ್ಥರಿಂದಲೇ ಕುಷ್ಠ ರೋಗವು ಹಬ್ಬುತ್ತದೆ. ಕುಷ್ಠ ರೋಗವು ಹೇಗೆ ಅಂಟಿಕೊಳ್ಳುವುದೆಂಬುದನ್ನು ತಿಳಿದಿದ್ದರೆ ಕೂಡಲೇ ವೈದ್ಯಕೀಯ ಉಪಚಾರವನ್ನು ಹೊಂದಲು ಅನುಕೂಲವಾದೀತು. ಆದಕ್ಕೋಸ್ಕರ ರೋಗದ ಪ್ರಾರಂಭಿಕ ಲಕ್ಷಣಗಳನ್ನು ವಿವರಿಸುವುದು ಅಪ್ರಸ್ತುತವಾಗಲಾರದು — ಸಾಮಾನ್ಯವಾಗಿ ಮೈಮೇಲೆ ಉರುಟಾದ ನಸುಗೆಂಪು ಅಥವಾ ನಸು ಬಿಳುಪು ಕಲೆಗಳು ಕಾಣಿಸುತ್ತವೆ; ಆ ಸ್ಥಾನದಲ್ಲಿ ಸ್ಪರ್ಶ ಜ್ಞಾನವೂ ಸಂವೇದನೆಯೂ ನಷ್ಟವಾಗುತ್ತದೆ. ಆದುದರಿಂದ ಸ್ಪರ್ಶ ಜ್ಞಾನದ ನಷ್ಟವನ್ನು ಕುಷ್ಠ ರೋಗದ ಲಕ್ಷಣವೆಂದು ಖಚಿತವಾಗಿ ತಿಳಿದುಕೊಳ್ಳಬಹುದು — ಎಲ್ಲಿಯ ವರೆಗೆಂದರೆ, ರೋಗವು ಪ್ರಬಲಿಸಿದವರು ಕೈಯಿಂದ ಕೆಂಡ ಮುಟ್ಟಿದರೂ ಅವರಿಗೆ ಬಿಸಿಯ ಅನುಭವವಾಗುವುದಿಲ್ಲ; ಕೈ ಮಾತ್ರ ಸುಟ್ಟು ಹೋಗುತ್ತದೆ!

ಹೈಡ್ರೋಕಾರ್ಪಸ್ (ಚಾಲಮೂಗ್ರಾ) ಎಂಬ ಗಿಡದ ಬೀಜವನ್ನು ತಿನ್ನಗೊಡುವ ಮೂಲಕ ಕುಷ್ಠರೋಗಿಗಳಿಗೆ ಚಿಕಿತ್ಸೆಯನ್ನು ನಡೆಸುವ ಪದ್ಧತಿ ಬಹಳ ಹಿಂದಿನಿಂದ ನಡೆದು ಬಂದಿದ್ದರೂ ಈಚೆಗೆ ಬೀಜದ ಬದಲು, ಅದರ ಎಣ್ಣೆಯನ್ನು ತೆಗೆದು ಇಂಜಕ್ಷನಿನ ಮೂಲಕ ರೋಗಿಯ ಉಪಚಾರವನ್ನು ಮಾಡುವ ಕ್ರಮವನ್ನು ಬಳಕೆಯಲ್ಲಿ ತರಲಾಯಿತು- ೧೯೫೦ ರಲ್ಲಿ ಇನ್ನೊಂದು ವಿಶೇಷ ರೀತಿಯ ಡಿ. ಡಿ. ಎಸ್. ಎಂಬ ಹೆಸರಿನಿಂದ ಕರೆಯಲ್ಪಡುವ ಔಷಧವು ಭಾರತದಲ್ಲಿ ಪ್ರಥಮಾವರ್ತಿ ಬಳಸಲಾಯಿತು. ಪರಿಣಾಮದಲ್ಲಿ ೩ರಿಂದ ೧೫ ವರ್ಷಗಳ ಅವಧಿಯ ಬದಲು ೨ರಿಂದ ೫ ವರ್ಷಗಳ ಶುಶ್ರೂಷೆಯಿಂದಲೇ ಕುಷ್ಠ ರೋಗವನ್ನು ಗುಣಪಡಿಸುವುದು ಸಾಧ್ಯವಾಯಿತು. ಜಗತ್ತಿನಲ್ಲಿ ನೂರಕ್ಕೆ ಅರುವತ್ತರಷ್ಟು ಭಾಗಗಳಲ್ಲಿ ಇದನ್ನೀಗ ಉಪಯೋಗಿಸಲಾಗುತ್ತದೆ. ಇಷ್ಟಲ್ಲದೆ ಕ್ಷಯರೋಗದ ಪ್ರಸಾರವನ್ನು ತಡೆಗಟ್ಟಲು

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935

- ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋವ್ಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA, LTD.,
"Mukund Nivas" UDIPI, S. India.

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೇಜ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮಿನಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು.

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ,

DAMODAR & CO.,
113 Nainiappa Naicken Street, P. T.-MADRAS-3.

ಮಕರ ಸಂಕ್ರಮಣ

ಸೂರ್ಯೋಪಾಸನೆಯ ಪರ್ವದಿನ

ಭಾರತೀಯ ಸಂಸ್ಕೃತಿಯಲ್ಲಿ ಧರ್ಮವು ಪ್ರಧಾನ ಪಾತ್ರವನ್ನು ವಹಿಸುತ್ತಿದ್ದರೂ ವೈಜ್ಞಾನಿಕ ಅಂಶವನ್ನು ಧರ್ಮವು ಎಳ್ಳಷ್ಟೂ ಉಪೇಕ್ಷಿಸಿರುವುದಿಲ್ಲ. ನಮ್ಮೆಲ್ಲ ಪರ್ವದಿನಗಳ ಮೂಲಭೂತ ಸಂಗತಿಗಳನ್ನು ಮನವರಿಕೆ ಮಾಡಿಕೊಂಡರೆ ಇದು ವೇದ್ಯವಾಗುತ್ತದೆ ನಮ್ಮ ಸಂಸ್ಕೃತಿಯು ಸುಖಜೀವನಕ್ಕೆ ಪೋಷಕವೆನಿಸುವ ರೀತಿಯಲ್ಲಿ ರೂಪಿಸಲ್ಪಟ್ಟಿದೆಯಲ್ಲದೆ, ಅದರಲ್ಲಿ ಮಾನವನ ವಿಕಾಸಕ್ಕೆ ಕಾರಣವಾಗಬಲ್ಲ ಪ್ರತಿಯೊಂದು ಅಂಶವೂ ಸಮಾವೇಶಗೊಂಡು ಸಮುಚಿತರೀತಿಯಲ್ಲಿ ವ್ಯಕ್ತವಾಗಿರುವುದನ್ನು ಸಹ ಕಾಣಬಹುದು ಇದೇ ಜನವರಿ ೧೪ರಂದು ವಿಜೃಂಭಣೆಯಲ್ಲಿ ದೇಶದ ಎಲ್ಲೆಡೆಯಲ್ಲೂ ಆಚರಿಸಲ್ಪಡುವ ಮಕರ ಸಂಕ್ರಾಂತಿಯ ಉತ್ಸವವೂ ಇದಕ್ಕೆ ಅಪವಾದವಾಗಿಲ್ಲ.

ಮಕರಸಂಕ್ರಾಂತಿಯು ಸೂರ್ಯನಿಗೆ ಸಂಬಂಧಿಸಿದ ಹಬ್ಬ— ಮೇಷಾದಿ ದ್ವಾದಶ ರಾಶಿಗಳಲ್ಲಿ ಕ್ರಮಿಸುತ್ತಿರುವ ಸೂರ್ಯ ಭಗವಾನನು ಮಕರ ರಾಶಿಯನ್ನು ಪ್ರವೇಶಿಸುವ ಸಂಭ್ರಮವೇ ಹಬ್ಬವಾಗಿ ಆಚರಿಸಲ್ಪಡುತ್ತದ. ನಮ್ಮ ವಿಜ್ಞಾನಿಗಳೂ ಜ್ಯೋತಿಷಿಗಳೂ ಭೂಗೋಲ ಶಾಸ್ತ್ರಜ್ಞರೂ ಒಪ್ಪುವಂತೆ ಮಕರ ಸಂಕ್ರಾಂತಿಯ ದಿನದಿಂದ ಸೂರ್ಯನು ಉತ್ತರಾಭಿಮುಖನಾಗಿ ಚಲಿಸುವಂತೆ ಭಾಸವಾಗುತ್ತದೆ. ಪೃಥ್ವಿಯ ಉತ್ತರಾರ್ಧದಲ್ಲಿ ಹಗಲು ಹೆಚ್ಚುತ್ತದೆ. ಈ ಭಾಗದಲ್ಲಿ ಚಳಿಗಾಲವು ನಿಧಾನವಾಗಿ ಕಳೆದು ವಸಂತಾಗಮನದ ಶುಭ ಸೂಚನೆಗಳು ಕಾಣಿಸತೊಡಗುತ್ತವೆ ಹೀಗೆ ಸೃಷ್ಟಿಯ ಉಲ್ಲಾಸವನ್ನು ಕಂಡ ಜನರು ಇದಕ್ಕೆ ಕಾರಣವಾದ ಮಕರ ಸಂಕ್ರಾಂತಿಯನ್ನು ಸಂತೋಷದಿಂದ, ಹಬ್ಬದ ಗದ್ದಲದೊಂದಿಗೆ ಬರಮಾಡಿಕೊಳ್ಳುವುದು ತೀರ ಸಹಜ.

ಹಿಂದೂಗಳ ಭಾವನೆಯಂತೆ ಉತ್ತರಾಯಣವು ದೇವತೆಗಳ ಪಾಲಿನ ಹಗಲಾಗಿದ್ದು, ಸ್ವರ್ಗದ ಬಾಗಿಲು ಮಕರ ಸಂಕ್ರಾಂತಿಯ ದಿನ ತೆರೆಯಲ್ಪಡುತ್ತದೆ ಆದುದರಿಂದ ಸಾಯುವವರು ಉತ್ತರಾಯಣದಲ್ಲಿ ಸತ್ತರೆ ಸ್ವರ್ಗವನ್ನೈದುತ್ತಾರೆಂಬ ನಂಬಿಕೆ ಜನರಲ್ಲಿ ಕಂಡು ಬರುತ್ತದೆ. ಭೀಷ್ಮಾಚಾರ್ಯರೇ ಮುಂತಾದ ವೃದ್ಧರುಗಳು ದೇಹ ತ್ಯಾಗಕ್ಕೋಸ್ಕರ ಉತ್ತರಾಯಣದ ಪ್ರಾರಂಭವನ್ನೇ ಇದಿರು ನೋಡುತ್ತಿದ್ದರೆಂಬ ಆಖ್ಯಾಯಿಕೆಯನ್ನು ಇಲ್ಲಿ ನೆನಪಿಗೆ ತಂದು ಕೊಳ್ಳಬಹುದು ಉತ್ತರಾಯಣಕ್ಕೆ ಕಾರಣ ಭೂತನಾದ ಸೂರ್ಯನ ಪ್ರೀತ್ಯರ್ಥವಾಗಿ ತಿಲ ದಾನವೇ ಮುಂತಾದುವನ್ನು ಮಾಡುವುದು ಮಕರ ಸಂಕ್ರಾಂತಿಯ ವೈಶಿಷ್ಟ್ಯ. ಅಂದು ಗಂಗಾ ಸ್ನಾನ, ಸಮುದ್ರ ಸ್ನಾನ, ತೈಲಾಭ್ಯಂಜನಾದಿಗಳನ್ನೂ ಶಾಸ್ತ್ರೋಕ್ತ ದಾನ ಧರ್ಮಗಳನ್ನೂ ಮಾಡುವುದು ಸಂಪ್ರದಾಯ.

ಉತ್ತರ ಭಾರತದಲ್ಲಿ ಸಂಕ್ರಮಣದ ಪುಣ್ಯ ಕಾಲದಲ್ಲಿ ಗೃಹಸ್ಥರು ನೀಡುವ ದಾನವನ್ನು ಸಂಗ್ರಹಿಸುವುದಕ್ಕಂದೇ ಒಂದು ತಿಂಗಳಷ್ಟು ಹಿಂದಿನಿಂದ ಜನರು ಹಳ್ಳಿ ಹಳ್ಳಿಯಲ್ಲಿ ತಿರುಗುತ್ತಾ ಮನೆಯವರಿಗೆ ತಮ್ಮ ನೆನಪು ಹುಟ್ಟಿಸುವುದು ರೂಢಿ ಸೂರ್ಯ ಪೂಜೆಯನ್ನು ಮಾಡಿ ಗೃಹಸ್ಥರು ಅನ್ನ ಮತ್ತು ವಸ್ತ್ರಗಳನ್ನು ದಾನವಾಗಿ ಕೊಟ್ಟು ಇವರನ್ನು ಸಂತುಷ್ಟಗೊಳಿಸುವರು ಹಳೆಯ ಬಟ್ಟೆಗಳೆಲ್ಲ ಆಗ ಪುಣ್ಯ ಸಂಗ್ರಹದ ಅಮೂಲ್ಯ ಸಾಧನವಾಗುತ್ತವೆ. ಮಹಾರಾಷ್ಟ್ರದಲ್ಲಿ ಮಕರ ಸಂಕ್ರಾಂತಿಯು ಮಹಿಳೆಯರ ಹಬ್ಬ ಸೌಭಾಗ್ಯವತಿಯಾಗಿ ಬಾಳ್ವೆಯನ್ನು ಕಳೆಯುವ ಹಂಬಲವುಳ್ಳ ನಾರೀಮಣಿಯರೆಲ್ಲ ಒಬ್ಬರನ್ನೊಬ್ಬರು ಉಡುಗೊರೆಗಳಿಂದಲೂ ದಾನಗಳಿಂದಲೂ ಸಿಹಿತಿಂಡಿಯಿಂದಲೂ ಸಂತುಷ್ಟಗೊಳಿಸಿ, ಆಶೀರ್ವಾದ ಪಡೆಯುವರು ಬೆಲ್ಲವನ್ನೂ ಎಳ್ಳನ್ನೂ ಬೆರೆಸಿದ ಸಿಹಿತಿಂಡಿಯನ್ನು ಚಪ್ಪರಿಸುತ್ತಿದ್ದಂತೆ ಇಷ್ಟೇ ಸವಿಯಾದ ಮಾತು ಹೊರಡುತ್ತಿರಲಿ ಎಂಬ ಆಕಾಂಕ್ಷೆಯನ್ನು ಮಹಾರಾಷ್ಟ್ರದ ಮಹಿಳಾವರ್ಗ ವ್ಯಕ್ತಗೊಳಿಸುತ್ತದೆ

ಹಿಂಗಾರು ಮಳೆ ಬೀಳುವ ಬಂಗಾಲ ಮತ್ತು ದಕ್ಷಿಣದ ತಮಿಳುನಾಡಿನಲ್ಲಿ ಇದು ರೈತರ ಹಬ್ಬ. ಭೋಜ್ಯ ಪದಾರ್ಥಗಳನ್ನು ರೇಶ್ಮೆ ಅಥವಾ ಉಣ್ಣೆಯ ಬಟ್ಟೆಯಲ್ಲಿ ಕಟ್ಟಿ ದೂರದ ಊರುಗಳಲ್ಲಿರುವ ಸ್ವಜನರಿಗೆ ಕಳಿಸಿ ಕೊಟ್ಟು ಹಬ್ಬದ ನೆನಪನ್ನು ವ್ಯಾಪಕಗೊಳಿಸುವುದಲ್ಲದೆ ಬಂಗಾಲಿಗಳು ಮಗ್ನರಾಗಿ ಧಾನ್ಯದ ಸಂಗ್ರಹವಿರುವ ಕೋಣೆಯ ಸುತ್ತಲೂ ಹುಲ್ಲಿನ ಹಗ್ಗವನ್ನು ಬಿಗಿದು, ಧಾನ್ಯ ಐವತ್ತು ಪಟ್ಟು ಹೆಚ್ಚಲಿ ಎಂದು ಪ್ರಾರ್ಥಿಸುವುದು ಬಂಗಾಲಿಗಳಲ್ಲಿ ಇನ್ನೊಂದು ವಿಶೇಷ. ತಮಿಳು ನಾಡಿನಲ್ಲೂ ಇದೇ ಬಗೆಯ ಉತ್ಸಾಹ ಮಕರ ಸಂಕ್ರಾಂತಿಯ ಹೊತ್ತಿಗೆ ಕಾಣಿಸುತ್ತದೆ. "ಪೊಂಗಲ್" ಎಂಬ ಸ್ವಾದಿಷ್ಟ ತಿಂಡಿಯ ಹೆಸರಿನಲ್ಲಿ ಕರೆಯಲ್ಪಡುವ ಈ ಹಬ್ಬ, ನಿಜವಾಗಿ ರೈತರ ಉಲ್ಲಾಸದ ದ್ಯೋತಕ ಭಾರತದ ಬೇರೆ ಭಾಗಗಳವರಿಗೆ ದೀಪಾವಳಿಯು ಹೇಗೋ ಹಾಗೆ ತಮಿಳರಿಗೆ ಪೊಂಗಲಿನ ಪರ್ವದಿನ.

ಮೂರು ದಿನಗಳ ವರೆಗೆ ತಮಿಳರಿಂದ ಆಚರಿಸಲ್ಪಡುವ ಈ ಹಬ್ಬದಲ್ಲಿ ಮೊದಲಾಗಿ ಮಳೆಯನ್ನು ಕರುಣಿಸುವ ದೇವರಾಜ ಇಂದ್ರನ ನೆನಪು ಮಾಡಲಾಗುತ್ತದೆ, ಬಳಿಕ ಸೂರ್ಯ ದೇವನಿಗೆ ಕೃತಜ್ಞತೆ ವ್ಯಕ್ತ ಪಡಿಸಲ್ಪಡುತ್ತದೆ, ಕಡೆಗೆ ರೈತರ ಉತ್ಕರ್ಷಕ್ಕೆ ಕಾರಣವೆನಿಸಿದ ಗೋವುಗಳ ಪೂಜೆ ನಡೆಯುತ್ತದೆ. ಮನೆಯನ್ನು ಶುಭ್ರವಾಗಿಯೂ ಸ್ವಚ್ಛವಾಗಿಯೂ ಗುಡಿಸಿ, ತಳಿರು ತೋರಣಗಳಿಂದಲೂ, ರಂಗೋಲಿಗಳಿಂದಲೂ, ಹಾರಣೆ ಹಾರಣೆಯಿಂದಲೂ, ಶೃಂಗರಿಸುವುದರಲ್ಲಿ ತಮಿಳರು ತನ್ಮಯರಾಗುತ್ತಾರೆ. ಹೆಂಗಸರು ಅಡುಗೆಗಾಗಿ ಹೊಸ ಪಾತ್ರೆಗಳನ್ನು ಕೊಂಡು ತರುತ್ತಾರೆ ಕೊಯ್ಲು ಮುಗಿಸಿ ಕಣಜವನ್ನು ತುಂಬಿಸಿಟ್ಟ ರೈತರು ಸೂರ್ಯನಿಗೆ ಪ್ರೀತಿಯಿಂದ ಪೊಂಗಲನ್ನು ನೈವೇದ್ಯವಾಗಿ ಅರ್ಪಿಸಿ ಪೂಜಿಸುತ್ತಾರೆ. ಕಬ್ಬಿನ ಕೊಯ್ಲು ಇದೇ ಸಮಯಕ್ಕೆ ಆಗುವುದರಿಂದ ಅದನ್ನು ದೇವರಿಗೆ ಸಮರ್ಪಿಸುವ ಮತ್ತು ತಾವೂ ಮೆಲ್ಲುವ ದೃಶ್ಯ ತಮಿಳುನಾಡಿನಲ್ಲಿ ನೋಡಸಿಗುತ್ತದೆ ಮಕ್ಕಳು ತಿಳಿನೀಲಿಬಣ್ಣದ ಆಕಾಶದಲ್ಲಿ ಗಾಳಿಪಟವನ್ನು ಹಾರಿಸಿ ಮೋಜು ಮಾಡುವುದೂ ಸಾಮಾನ್ಯವಾದ ವಿಷಯ



ದನಕರುಗಳನ್ನು ಚೆನ್ನಾಗಿ ತೊಳೆದು, ಹಣೆಗೆ ಕುಂಕುಮವನ್ನು ಹಚ್ಚಿ, ಕೊರಳಿಗೂ ಕೊಂಬಿಗೂ ಹೂಮಾಲೆಯನ್ನು ಹಾಕಿ ಶೃಂಗರಿಸಿ, ದೀಪ ತೋರಿಸಿ ಪೂಜಿಸುವುದೂ ಪೊಂಗಲನ್ನು ತಿನ್ನಗೊಡುವುದೂ ರೈತರ ವಿಶೇಷವಾದ ಕಾರ್ಯ. ಮಕ್ಕಳೂ, ಮುದುಕರೂ, ಎಲ್ಲರೂ ಇದರಲ್ಲಿ ಭಾಗವಹಿಸುವರು, ಎತ್ತುಗಳನ್ನು ಓಡಿಸುವ ಮನೋರಂಜನೆಯ ಉದ್ದೇಶವುಳ್ಳ ಕಾರ್ಯಕ್ರಮವೂ ಆಗ ಏರ್ಪಡಿಸಲಾಗುತ್ತದೆ. ತೀರ ಒರಟಾದ, ಹಾಗೂ ಬಲಿಷ್ಠವಾದ ಎತ್ತಿನ ಕೊಂಬುಗಳ ನಡುವೆ ಹಣದ ಚಿಕ್ಕ ಗಂಟೊಂದನ್ನು ಕಟ್ಟಿ, ಅದನ್ನು ಓಡಿಸುವುದು. ಹೀಗೆ ಓಡುವ ಎತ್ತನ್ನು ಹಿಡಿದು ನಿಲ್ಲಿಸಿ ಗಂಟನ್ನು ಬಿಚ್ಚಬಲ್ಲ ಧೀರನಿಗೆ ಆ ಹಣವನ್ನು ಮೆಚ್ಚಾಗಿ ಕೊಡುವುದೂ ಹಬ್ಬದ ಆಕರ್ಷಣೆಗಳಲ್ಲಿ ಬರುತ್ತದ

ನಮ್ಮ ಉಡುಪಿಯಲ್ಲಿ ಮಕರ ಸಂಕ್ರಾಂತಿಯನ್ನು ಏಳು ದಿನಗಳ ಉತ್ಸವದ ಮೂಲಕ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಭಾರತದಲ್ಲಿಯೇ ಅತ್ಯಂತ ಸುಂದರವಾದ ಮತ್ತು ಸೌಷ್ಠವಯುಕ್ತವಾದ ಶೃಂಗರಿಸಿದ ರಥಗಳಲ್ಲಿ ದೇವರ ಮೂರ್ತಿಯನ್ನು ಕುಳ್ಳಿರಿಸಿ, ತೇರು ಬೀದಿಯಲ್ಲಿ ಎಳೆಯಲಾಗುತ್ತದೆ ಮಕರ ಸಂಕ್ರಾಂತಿಯಂದು ಮೂರು ರಥಗಳು ಎಳೆಯಲಾಗುತ್ತಿದ್ದು, ಇದನ್ನು ನೋಡುವುದು ಬಹಳ ಆನಂದದಾಯಕವೆಂದ ನನ್ನಿಸೋಣವೆಂದರೆ ಅತಿಶಯೋಕ್ತಿಯಾಗದು. ಪ್ರೇಕ್ಷಣೀಯವಾದ ಮಹೋತ್ಸವದ ಜಾತ್ರೆಯಲ್ಲಿ ಭಾಗ ವಹಿಸುವುದಕ್ಕೋಸ್ಕರ ದಕ್ಷಿಣ ಭಾರತದ ಎಲ್ಲೆಡೆಯಿಂದಲೂ ಉಡುಪಿಗೆ ಪ್ರವಾಸಿಗಳ ಗುಂಪು ಸಂಚರಿಸುತ್ತದೆ ಬ್ರಾಹ್ಮಣರನ್ನು ಭೂರಿಭೋಜನದಿಂದ ಸಂತೃಪ್ತಿಗೊಳಿಸುವುದರಲ್ಲಿ ಇಲ್ಲಿಯ ಅಷ್ಟ ಮಠಗಳು ಒಳ್ಳೆಯ ಉತ್ಸಾಹವನ್ನು ಆಗ ತೋರಿಸುತ್ತವೆ. ಉಡುಪಿಯ ಮಕರ ಸಂಕ್ರಮಣೋತ್ಸವವು ಕಣ್ತುಂಬಿಕೊಂಡು ಹಬ್ಬ, ಅದನ್ನು ನೋಡಿದಲ್ಲಿ ಮನಸ್ಸಿಗೆ ತುಂಬ ಸಮಾಧಾನ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O P 1.6/54

A ರಾಧಾ ಯಾನೆ ಶಾಂತಾಬಾಯಿ ಕೂಡ ೩ ಜನರು ಅರ್ಜಿದಾರರು

ಮತ್ತು

P ರಾಮಚಂದ್ರ ನಾಯಕ್ ಕೂಡ ೭ ಜನರು ಎದುರಿದು

ಅರ್ಜಿದಾರರ ಮತ್ತು ಯೆದುರಿದರ ತಾಯಿ ಪಿ. ಸುಂದರಿ ಬಾಯಿಯವರು ಮೀಲು ವಸೀಯತ್ತು ಮಾಡದೆ ತಾ 14—10—51 ರಲ್ಲಿ ಮೃತಪಟ್ಟಿರುವುದರಿಂದ, ಸದ್ರಿಯವರ ಬಾಬ್ತು ಮೇಲ್ಕಾಣಿಸಿದ ಅರ್ಜಿಯಲ್ಲಿ ತೋರುವ ಹೆಸರಿನಿಂದ ಬರತಕ್ಕ ಪಾವತೀಗಳಿಗೂ, ಠೇವುಗಳಿಗೂ, 2 ನೇ 3 ನೇ ಅರ್ಜಿದಾರರ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಕೊಟ್ಟ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾ 31—1—55 ರಲ್ಲಿ ತನಿಖೆಗೆ ಇಟ್ಟಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ಕೋರ್ಟು ಮುಂದೆ ತಾ 31—1—55 ರಲ್ಲಿ ಹಗಲು ಘಂಟೆ 10—4" ಕ್ಕೆ ಹಾಜರಾಗಬೇಕಾಗಿ ಈ ಮೂಲಕ ತಿಳಿಸಲಾಗುತ್ತದೆ.

K. Vittal Nayak

Vakil for Petitioners

ಉಡುಪಿ, ತಾ 5—1—55

For safe investments and prompt settlements, join **CHITS** run on sound basis by

JANALAXMI LTD.,

Rs	500/	Lot 25 months	Rs	20/	per month.
,,	1000/-	25 ,,	,,	40/	,,
,,	2000/-	25 ,,	,,	80/	,,
,,	2500/-	25 ,,	,,	100/-	,,
,,	3000/	20 ,,	,,	150/	,,
,,	5000/-	25 ,,	,,	200/-	,,
,,	7500/-	25 ,,	,,	300/-	,,
,,	10000/	25 ,,	,,	400/-	,,

Auctions are held every month and Discounts are divided among the members At the request of our patrons we are also starting Daily Chits shortly Watch the date!

JANALAXMI LTD.,

LAXMI BLDG (Ground Floor), SIR P. M. MEHTA ROAD, FORT, BOMBAY.

ಸಾಲ

ಸ್ವಂತ ಜವಾಬ್ದಾರಿಯ ಮೇಲೆ ಮತ್ತು ಸುಲಭ ಕಂತಿನ ಸುಧಾರಣೆ ಇಂಗ್ಲಿಷನ್ನು ಕಲಿಗೆ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳತಕ್ಕದ್ದು

P O B. No 5119, BOMBAY 3

ಆಂಧ್ರ ರಾಜ್ಯದಲ್ಲಿ ಚುನಾವಣೆಯ ಸಂಭ್ರಮ

ತಿರು-ಕೊಚ್ಚಿಯಲ್ಲೂ ಹೊಸ ಚುನಾವಣೆ ಸಂಭವನೀಯ

ನೆರೆಯ ರಾಜ್ಯ ಆಂಧ್ರದಲ್ಲಿ ಮುಂದಿನ ಫೆಬ್ರವರಿಯಲ್ಲಿ ನಡೆಯಲಿರುವ ಚುನಾವಣೆಯ ಕುರಿತು ದೇಶದಾದ್ಯಂತ ಕುತೂಹಲವನ್ನು ತೋರಿಸಲಾಗುತ್ತದೆ. ಕಮ್ಯುನಿಸ್ಟರ ಮೇಲ್ಮೈ ಭಾರತದಲ್ಲಿ ಇರುವ ಪ್ರದೇಶಗಳಲ್ಲೆಲ್ಲ ಆಂಧ್ರವು ಬಲಿಷ್ಠವಾದುದಾಗಿದ್ದು, ನಾಳೆಯ ಚುನಾವಣೆಯಲ್ಲಿ ಗೆದ್ದುಬಂದು ತಮ್ಮ ಪ್ರಥಮ ಸರಕಾರವನ್ನು ಸ್ಥಾಪಿಸಬೇಕೆಂದು ಕಮ್ಯೂನಿಸ್ಟ ಪ್ರಭೃತಿಗಳ ಹಂಬಲ. ಒಮ್ಮೆ ಇಲ್ಲಿ ಕಮ್ಯೂನಿಸ್ಟರ ಆಡಳಿತೆಯು ಸ್ಥಾಪನೆಗೊಂಡರೆ, ದೇಶದಾದ್ಯಂತ ಅವರ ಚಟುವಟಿಕೆ ವಿಸ್ತರಿಸುವುದು ಬಹಳ ದೂರದ ದಿನದ ಮಾತಾಗಲಾರದು. ಕಮ್ಯೂನಿಸಮ್ಮಿನಲ್ಲಿ ಅನಿಷ್ಟಾಂಶಗಳಿವೆಯೆಂದೂ ಭಾರತಕ್ಕೆ ಪ್ರಜಾಪ್ರಭುತ್ವ ಪದ್ಧತಿಯೇ ವಿಹಿತವೆಂದೂ ಡಂಗುರ ಸಾರುತ್ತಿರುವವರು ಕಮ್ಯೂನಿಸ್ಟರು ಆಂಧ್ರದ ಚುನಾವಣೆಯಲ್ಲಿ ಬಹುಮತ ಸಂಪಾದಿಸುವುದನ್ನೂ ಅಲ್ಲಿ ಸರಕಾರ ಸ್ಥಾಪಿಸುವುದನ್ನೂ ಸಹಿಸುವುದಿಲ್ಲ. ಆದುದರಿಂದ ಪ್ರಜಾ ಪ್ರಭುತ್ವದಲ್ಲಿ ವಿಶ್ವಾಸವುಳ್ಳವರನ್ನೆಲ್ಲ ಒಟ್ಟು ಸೇರಿಸಿಯಾದರೂ ಕಮ್ಯೂನಿಸ್ಟರ ಪ್ರಾಬಲ್ಯವನ್ನು ತಡೆಯಬೇಕೆಂದು ಅವರ ವಿಚಾರ—ಕಾಂಗ್ರೆಸು ಮತ್ತಿತರ ಎರಡು ಪಕ್ಷಗಳು ಮಾಡಿಕೊಂಡ ಸಂಯುಕ್ತ ರಂಗದ ಗುಟ್ಟೇ ಇದು.

ಕಾಂಗ್ರೆಸಿಗಿರುವ ವಿಘ್ನ

ರಾಷ್ಟ್ರದಲ್ಲಿ ತಮ್ಮ ಚಟುವಟಿಕೆಗಳ ಭವಿಷ್ಯವನ್ನು ಆಂಧ್ರದಲ್ಲಿನ ಚುನಾವಣೆಯೇ ತೋರಿಸಿಕೊಡುತ್ತದೆಂದು ಕಮ್ಯುನಿಸ್ಟರಿಗೂ ಕಾಂಗ್ರೆಸು ಮತ್ತು ಮಿತ್ರ ವರ್ಗದವರಿಗೂ ಚೆನ್ನಾಗಿ ತಿಳಿದಿರುವುದರಿಂದಲೇ ಇಲ್ಲಿ ಒಹಳ ತುರುಸಿನ ಸ್ಪರ್ಧೆ ಕಂಡು ಬರುತ್ತದೆ. ಇಷ್ಟರ ವರೆಗೆ ಬೇರೆ ಪಕ್ಷಗಳೊಡನೆ ಚುನಾವಣೆಯ ಸ್ನೇಹ ಮಾಡಿಕೊಂಡು ತಮ್ಮ ಪಾವಿತ್ರ್ಯವನ್ನು ಕೆಡಿಸಿಕೊಳ್ಳುವುದಿಲ್ಲವೆಂದಿದ್ದ ಕಾಂಗ್ರೆಸಿನ ಪ್ರಭೃತಿಗಳು ತಿರುಕೊಚ್ಚಿಯಲ್ಲಿ ತಮ್ಮ ಮಹಿವಂತಿಕೆಯು ರಾಜಕೀಯ ಸೋಲಿಗೆ ಕಾರಣವಾದುದನ್ನು ಕಂಡು ಇಲ್ಲಿ ಸಂಯುಕ್ತ ರಂಗವನ್ನು ತಾವೇ ರಚಿಸಿಕೊಂಡರು. ಇದು ಸ್ಪರ್ಧೆಯಲ್ಲಿ ಜಯ ಸಂಪಾದಿಸುವ ದೃಷ್ಟಿಯಿಂದ ಒಳ್ಳೆಯ ಗತ್ತುಗಾರಿಕೆಯಾಗಿದ್ದರೂ ನಿಷ್ಠಾವಂತ ಕಾಂಗ್ರೆಸಿಗರಿಗೆ ಅಷ್ಟು ಮನಸ್ಸಿಗೆ ಬಂದಿಲ್ಲ. ಅವರು ಕಾಂಗ್ರೆಸಿನ ಮೇಲೆ ತಂದುಕೊಂಡ ಕಲಂಕವು ಅನಿವಾರ್ಯವೆಂದು ಒಪ್ಪುವುದಿಲ್ಲ. ಕಾಂಗ್ರೆಸಿನಲ್ಲಿಯೇ ಇನ್ನೊಂದು ಬಣಕ್ಕೆ ತಮಗೆ ಹುರಿಯಾಳಾಗಿ ಸ್ಪರ್ಧಿಸಲು ಟಿಕೇಟು ಸಿಗಲಿಲ್ಲ ಎಂಬ ಅಸಮಾಧಾನವೂ ಉಂಟು—ಕೃಷಿಕರ ಲೋಕ ಮತ್ತು ಪ್ರಜಾ ಪಕ್ಷಗಳ ಹುರಿಯಾಳುಗಳಿಗೆ ಸಹ ಸ್ಥಾನವನ್ನು ಬಿಟ್ಟುಕೊಡಬೇಕಾದುದರಿಂದ ಅನ್ಯಥಾ, ಕಾಂಗ್ರೆಸಿಗರಿಗೆ ಸಿಗುತ್ತಿದ್ದ ಅವಕಾಶಗಳಲ್ಲಿ ಕಡಿಮೆಯಾದದ್ದೇ ಇದರ ಹೇತು.

ಮುಖಂಡರ ಬಲ

ವಿಶ್ವಾಸಘಾತಕರ ಪ್ರಶ್ನೆಯೂ ಇಲ್ಲಿಯೊಂದು ಸಮಸ್ಯೆಯಾಗಿ ಪರಿಣಮಿಸಿದೆ- ಕೃಷಿಕರ ಲೋಕ ಪಕ್ಷದಿಂದ ಮಂತ್ರಿಪದವಿಗಾಗಿ ಪ್ರಕಾಶಮನ್ನು ಓಲೈಸಿದ್ದ ತಿಮ್ಮ ರೆಡ್ಡಿಯವರನ್ನು ಆ ಪಕ್ಷ ಅಷ್ಟು ಮೆಚ್ಚುವುದಿಲ್ಲ. ಇದರಂತೆ ಪ್ರಕಾಶಂ ಮಂತ್ರಿ ಮಂಡಲದ ವಿರುದ್ಧ ಮತ ಕೊಟ್ಟು, ಸರಕಾರದ ಪತನಕ್ಕೂ ಇಂದಿನ ಚುನಾವಣೆಗೂ ಕಾರಣ ಭೂತರಾದ ಶ್ರೀ ಶಂಕರ ರೆಡ್ಡಿಯವರ ಬೆಂಬಲ ಕಳೆದುದರಿಂದ ರಾಯಲಸೀಮೆಯಲ್ಲಿ ಕಾಂಗ್ರೆಸು ಜನರ ಮನವೊಲಿಸುವುದು ಕಷ್ಟ. ಇಷ್ಟು ಅಡಚಣೆಗಳಿದ್ದರೂ ಸಂಯುಕ್ತ ರಂಗದಲ್ಲಿ ಆಂಧ್ರದ ಜನಪ್ರಿಯ ಮುಂದಾಳುಗಳೆಲ್ಲ ಸೇರಿರುವರೆಂಬುದು ಗಮನಿಸಬೇಕಾದ ಅಂಶ— ಹಿಂದಿನ ಚುನಾವಣೆಯಲ್ಲಿ ಆಂಧ್ರದ ಜನಪ್ರಿಯ ಧುರೀಣರಾದ ಪ್ರಕಾಶಂ, ರಂಗಾ ಮುಂತಾದವರು ಕಾಂಗ್ರೆಸ್ಸನ್ನು ಸೋಲಿಸಲು ಪಣ ಕಟ್ಟಿದ್ದರು. ಇದರಿಂದಲೂ ತ್ರಿಪಕ್ಷೀಯ ಸ್ಪರ್ಧೆಯಿಂದಾಗಿ ಪ್ರಜಾಪ್ರಭುತ್ವ ತತ್ವದಲ್ಲಿ ವಿಶ್ವಾಸವುಳ್ಳವರ ಮತಗಳು ಒಡೆದು ಹೋದುದರಿಂದಲೂ ಪ್ರಬಲ ಸಂಘಟನೆಯುಳ್ಳ ಕಮ್ಯುನಿಸ್ಟರು ಗೆದ್ದು ಬರುವಂತಾಯಿತು. ಆದರೆ ಈಗ ಹಾಗಾಗಲಾರದು-ಆಂಧ್ರರಿಗೆ ಪ್ರಿಯವಾದ ಪ್ರತ್ಯೇಕ ರಾಜ್ಯವನ್ನು ಕಾಂಗ್ರೆಸಿನ ಪ್ರಭೃತಿಗಳು ಕೊಡಮಾಡಿರುವರಲ್ಲದೆ ಪಂಚ ವಾರ್ಷಿಕ ಯೋಜನೆಯ ಮೂಲಕ ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಂಡು, ಜನರ ಹಿತವನ್ನು ಸಾಧಿಸುವಲ್ಲಿ ಯಶಸ್ವಿಯಾಗಿರುವರು.

ಬಹು ಮತದ ವಿಚಾರ

ತಮ್ಮ ಗಂಡಂದಿರನ್ನು ಹೆಂಡಂದಿರೂ ತಂದೆಯನ್ನು ಮಗನೂ ಚುನಾವಣೆಯಲ್ಲಿ ಸೋಲಿಸುವ ಉದ್ದೇಶದಿಂದ ಸ್ಪರ್ಧೆಯ ಕಣಕ್ಕಿಳಿದಿರುವ ಉದಾಹರಣೆಗಳು ಆಂಧ್ರದಲ್ಲಿ ಕಂಡು ಬರುತ್ತವೆ. ಇಲ್ಲೆಲ್ಲ ಕಮ್ಯುನಿಸ್ಟರ ಕೈವಾಡ ಗೋಚರವಾಗುತ್ತದೆ. ಇದರೊಂದಿಗೆ ಜಾತೀಯ ಭಾವನೆಯೂ ರಾಜಕೀಯ ಭವಿಷ್ಯದ ನಿರ್ಣಾಯಕ ಅಂಶಗಳಲ್ಲಿ ಸೇರಿರುತ್ತದೆ. ರಾಯಲ ಸೀಮೆಯ ರೆಡ್ಡಿಗಳೂ ಕರಾವಳಿ ಪ್ರದೇಶದ ಕಮ್ಮಾಗಳೂ ಪರಸ್ಪರ ಸೇಡು ತೀರಿಸಿಕೊಳ್ಳುವುದಕ್ಕೆ ಚುನಾವಣೆಯನ್ನು ಸಾಧನವಾಗಿ ಮಾಡಿಕೊಳ್ಳುವುದರಲ್ಲಿ ತಲ್ಲೀನರಿರುವಂತೆ ತಿಳಿದು ಬರುತ್ತದೆ. ಕಮ್ಯುನಿಸ್ಟರಿಗೆ ರಾಯಲ ಸೀಮೆಗಿಂತಲೂ ಕರಾವಳಿ ಪ್ರದೇಶದಲ್ಲಿ ಬೆಂಬಲ ಹೆಚ್ಚು; ಪ್ರಜಾಸಮಾಜವಾದಿಗಳಿಗೆ ಶ್ರೀ ಕಾಕುಲಂ ಮತ್ತು ವಿಶಾಖ ಪಟ್ಟಣ ಜಿಲ್ಲೆಗಳಲ್ಲಿ ಬಹುಮತವುಂಟು. ಇಲ್ಲಿ ಪ್ರತಿ ಪಕ್ಷಗಳು ಗಳಿಸಬಹುದಾದ ಬಹುಮತಕ್ಕೆ ಪ್ರತಿಯಾಗಿ ತಮ್ಮವರು ಎಷ್ಟು ಸ್ಥಾನಗಳಿಸುವರೆಂಬುದನ್ನು ಕಾಂಗ್ರೆಸು ಮತ್ತು ಮಿತ್ರ ವರ್ಗದ ಸಂಯುಕ್ತ ರಂಗ ಯೋಚಿಸಿದಲ್ಲಿ ಒಂದೇ ಒಂದು ಸಂಗತಿ ವ್ಯಕ್ತವಾಗುತ್ತದೆ— ಅದೆಂದರೆ ಶುದ್ಧ ಬಹುಮತ ಪಡೆಯುವುದು ಸುಲಭದ ಕೆಲಸವಲ್ಲ.

ಹೊಸ ಚುನಾವಣೆಯೇ?

ಇತರ ಪಕ್ಷಗಳೊಡನೆ ಸ್ನೇಹ ಮಾಡಿಕೊಳ್ಳುವ ಮೂಲಕ ಹೇಗೂ "ಜಾತಿ" ಕೆಡಿಸಿಕೊಂಡ ಮೇಲೆ ಕಾಂಗ್ರೆಸಿಗರು ಪ್ರಜಾ ಸಮಾಜವಾದಿಗಳ ಮೈತ್ರಿಯನ್ನು ಸಾಧಿಸಿದ್ದರೆ ಇಂದಿನ ಕಳವಳಕ್ಕೆ ಕಾರಣವಿರುತ್ತಿರಲಿಲ್ಲ—ಆದರೆ ತಿರುಕೊಚ್ಚಿಯಲ್ಲಿ ಕಾಂಗ್ರೆಸು ಪಕ್ಷವು ಪ್ರಜಾ ಸಮಾಜವಾದಿಗಳು ಸ್ಥಾಪಿಸಿದ ಸರಕಾರಕ್ಕೆ ಬೆಂಬಲ ಕೊಡಬಾರದೆಂದು ನಿರ್ಧರಿಸಿರುವುದರಿಂದ ಆಂಧ್ರದಲ್ಲಿ ಪರಸ್ಪರ ಸ್ನೇಹವು ಅಸಾಧ್ಯವಾಯಿತು. ಆದುದರಿಂದ ಕಮ್ಯೂನಿಸ್ಟರು ಬಂದೇ ತೀರುವರಾದರೆ, ಬರಲಿ-ಎಂದು ಪ್ರಜಾ ಸಮಾಜವಾದಿಗಳು ಹೇಳುವಂತಾಯಿತು. ತಿರು-ಕೊಚ್ಚಿಯ ಇಂದಿನ ಪರಿಸ್ಥಿತಿಯಲ್ಲಿ ಇನ್ನೊಂದು ಚುನಾವಣೆ ನಡೆಯುವುದೇ ಸಂಭವನೀಯವೆಂದು ಅಲ್ಲಿಯ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರು ಕಾಂಗ್ರೆಸಿನ ರಾಜಕೀಯ ಪಂಡಿತರನ್ನು ಉದ್ದೇಶಿಸಿ ಹೇಳಿರುವುದನ್ನು ಇಲ್ಲಿ ನೆನೆಯಬಹುದು. ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನೂ ಹೊಸ ಚುನಾವಣೆಯ ಗೊಂದಲವನ್ನೂ ತಪ್ಪಿಸುವುದು ಇಷ್ಟವಾಗಿದ್ದರೂ ಭೂಸುಧಾರಣೆಯ ಶಾಸನವೇ ಮುಂತಾದ ಪ್ರಮುಖ ವಿಷಯಗಳಲ್ಲಿ ಸರಕಾರಕ್ಕೆ ಕಾಂಗ್ರೆಸು ಬೆಂಬಲ ಕೊಡದಿದ್ದರೆ, ಮಂತ್ರಿಮಂಡಳ ಉರುಳುವುದು ನಿಶ್ಚಯ. ಕಾಂಗ್ರೆಸಿನ ದೃಷ್ಟಿಯಲ್ಲಿ ಪ್ರಜಾಸಮಾಜವಾದಿಗಳು ತಂದ ಈ ಶಾಸನಗಳು "ಪ್ರತಿಗಾಮಿ ಸ್ವರೂಪ"ದವಿರುತ್ತವೆ.

ಕಾಂಗ್ರೆಸಿನಲ್ಲಿ ಐಕ್ಯ

ಕಾಂಗ್ರೆಸಿನ ಸೋಲಿಗೆ ಜನತೆಯೊಡನೆ ಸಂಪರ್ಕ ಕಡಿದುಕೊಂಡುದೇ, ಅಥವಾ ಕಡಿಮೆಯಾದುದೇ ಕಾರಣವೆಂದು ತಿರುಕೊಚ್ಚಿಯ ಪರಿಷತ್ತಿನಲ್ಲಿ ಹೇಳಲಾಯಿತು. ಕಮ್ಯುನಿಸ್ಟರಿಂದ ಕಾಂಗ್ರೆಸಿಗರು ಕಲಿಯತಕ್ಕ ಪಾಠವೇನಾದರೂ ಇದ್ದರೆ ಅದು ಸಂಘಟನೆಯ ಮಹತ್ವವನ್ನು ಕುರಿತೆಂದು ಹೇಳಬಹುದು. ಅವರ ಪ್ರಚಾರ ವೈಖರಿಯೂ ಸಂಘಟನೆಯ ಜಾದುಗಾರಿಕೆಯೂ ಆ ಪಕ್ಷದ ಶಕ್ತಿಯನ್ನು ಹೆಚ್ಚಿಸಿರುವುದು ಅವರಲ್ಲಿ ಭಿನ್ನಾಭಿಪ್ರಾಯಗಳಿಲ್ಲವೆಂದೇನಲ್ಲ-ಆಂಧ್ರದಲ್ಲಿನ ಚುನಾವಣೆಯಲ್ಲಿಯೇ ಅಭಿಪ್ರಾಯಭೇದಗಳು

(೯ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಶೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು-1.

(3) ಅಂಬಿಕಾ ಮೆಡಿಲ್ ಸ್ಟೋರ್ಸ್—ಚಿಂತಾಮಣಿ

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೩-೧-'೫೫	೧೯

ನಮ್ಮ ಆಹಾರಾಭ್ಯಾಸ

ಮುಂಬಯಿ ರಾಜ್ಯದ ಧಾರವಾಡದಲ್ಲಿ ಶಾರೀರಿಕ ಶಿಕ್ಷಣ ಮತ್ತು ಮನೋರಂಜನೆಯ ಪರಿಷತ್ತು ಇದೇ ದಿನಾಂಕ ೯ರಂದು ಜರಗಿದಾಗ ಕೇಂದ್ರದ ಕೃಷಿ ಮಂತ್ರಿಗಳಾದ ಡಾ। ಪಂಜಾಬರಾವ ದೇಶಮುಖರು ಮಕ್ಕಳ ಆರೋಗ್ಯಕ್ಕೂ ಆಹಾರಕ್ಕೂ ಇರುವ ನಿಕಟ ಸಂಬಂಧದ ಕುರಿತಾಗಿ ಕೆಲವು ಮನನೀಯ ಮಾತುಗಳನ್ನು ಹೇಳಿದರು. ಕೇವಲ ವ್ಯಾಯಾಮವನ್ನಷ್ಟೇ ಮಾಡುವುದರಿಂದ ಶಾರೀರಿಕ ಲಾಭವನ್ನೇನು ನಾವು ಪಡೆಯಲಾರೆವು; ಪೌಷ್ಟಿಕ ಆಹಾರದ ಸೇವನೆಯೂ ಅಗತ್ಯದ್ದಾಗಿದೆ ಎಂದು ಅವರು ಹೇಳಿದರಲ್ಲದೆ ಇದಕ್ಕೋಸ್ಕರ ನಾವು ನಮ್ಮ ಆಹಾರಾಭ್ಯಾಸಗಳಲ್ಲಿ ಕ್ರಾಂತಿಕರ ಸುಧಾರಣೆಗಳನ್ನು ಮಾಡಿಕೊಳ್ಳುವುದು ಇಷ್ಟವೆಂದೂ ಸೂಚಿಸಿದರು. ಸುಧಾರಣೆಯು ಮಾಂಸವನ್ನು ಸೇವಿಸುವುದಕ್ಕೆ ತೊಡಗುವುದರಿಂದಲೇ ಪೂರ್ಣವಾಗುವುದೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು ಎಂದು ಸ್ಪಷ್ಟಪಡಿಸುವುದಕ್ಕೂ ಅವರು ಮರೆಯಲಿಲ್ಲ. ಅವರ ಅಭಿಪ್ರಾಯದಂತೆ ಮಕ್ಕಳಿಗೆ ಹಾಲು ಬೆಣ್ಣೆ, ತುಪ್ಪ, ತತ್ತಿಗಳನ್ನೂ ಹೊಟ್ಟೆ ತುಂಬ ಅನ್ನವನ್ನೂ ಕೊಡುವುದು ಅವಶ್ಯ. ದೂರದ ಹಳ್ಳಿಗಳಿಂದ ಶಾಲೆಗೆ ವಿದ್ಯಾಭ್ಯಾಸಕ್ಕೆ ಬಂದು ಮಧ್ಯಾಹ್ನವನ್ನು ಊಟವಿಲ್ಲದೆ ಕಳೆಯಬೇಕಾದ ಬಡ ಮಕ್ಕಳ ವಿಷಯದಲ್ಲಿ ಅವರು ಬಹಳ ಕನಿಕರವನ್ನು ತೋರಿಸಿದರು. ಸರಕಾರವೇ ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ವಿಶ್ರಾಂತಿಯ ಕಾಲದಲ್ಲಿ ಊಟವನ್ನೊದಗಿಸುವ ದಿನ ಬರದಿರಲಾರದು ಎಂದವರು ಆಶಿಸಿದರು. ಮಧ್ಯಾಹ್ನ ಊಟ ಬಿಡಬೇಕಾದ ಮಕ್ಕಳ ಪರಿಸ್ಥಿತಿಯು ಚಿಂತಾಜನಕವಾಗಿದೆ ಎಂಬುದರಲ್ಲಿ ಯಾವ ಸಂದೇಹವೂ ನಮಗಿಲ್ಲ. ಮಧ್ಯಾಹ್ನ ಹೊತ್ತಿಗಷ್ಟೇ ಅಲ್ಲ—ಬೇರೆ ಸಮಯದಲ್ಲೂ ಸಾಕಷ್ಟು ಉಣ್ಣಲಿಕ್ಕಿಲ್ಲದ ಬಡವರೇ ನಮ್ಮಲ್ಲಿ ಹೆಚ್ಚು. ಇವರು ಹೊಟ್ಟೆ ತುಂಬ ಉಣ್ಣುವ ಹಾಗಾದರೂ ಸರಕಾರದವರು ಪ್ರಯತ್ನಿಸಬೇಕು. ಇಂಥ ಪ್ರಯತ್ನದಲ್ಲಿ ಶ್ರೀಮಂತರೂ ಬಡವರೂ ರಾಷ್ಟ್ರೀಯ ದೃಷ್ಟಿಯಿಂದ ನೆರವು ನೀಡುವುದು ನಿಶ್ಚಯ. ಪ್ರಥಮ ಪಂಚವಾರ್ಷಿಕ ಯೋಜನೆಯ ದೆಸೆಯಿಂದ ನಾವು ಆಹಾರ ಸ್ವಾವಲಂಬನದ ಗುರಿಯನ್ನು ಈಗಲೇ ಮುಟ್ಟಿದ್ದೇವೆಂದು ಹೇಳಲಾಗುತ್ತದೆ. ಆಹಾರ ಮಂತ್ರಿ ಶ್ರೀ ಜೈನರು ಮುಂಬಯಿಯಲ್ಲಿ ಮಾಡಿದ ಭಾಷಣ ಪರಿಸ್ಥಿತಿ ತುಂಬ ಆಶಾದಾಯಕವಿರುವಂತೆ ಹೇಳುತ್ತದೆ. ನಮಗೆ ಬೇಕಾದಷ್ಟು ಆಹಾರ ಧಾನ್ಯಗಳನ್ನು ಉಪಯೋಗಿಸಿ, ಹೊರದೇಶಕ್ಕೂ ನಿರ್ಯಾತ ಮಾಡಲು ಸ್ವಲ್ಪ ಸಮಯದಲ್ಲಿಯೇ ಸಾಧ್ಯವಾದೀತು ಎಂದವರ ಅಭಿಪ್ರಾಯ. ಆದರೆ ನಾವೀಗ ಹೊಂದಿದ ಸ್ವಾವಲಂಬನೆಯ ಮಟ್ಟ ನಮಗೆ ಪದ್ಧತಿಯು ಜಾರಿಯಲ್ಲಿದ್ದ ಸಮಯದ ಊಟದ ಪ್ರಮಾಣವನ್ನೇ ಹೊಂದಿಕೊಂಡಿದೆ ಎಂಬ ಸತ್ಯವನ್ನು ಮರೆಯಲಾಗದು. ನಾವಿನ್ನೂ ಹೊಟ್ಟೆತುಂಬ ಉಣ್ಣುವಷ್ಟು ಆಹಾರಧಾನ್ಯಗಳನ್ನು ಬೆಳೆಸಿಲ್ಲ ಎಂಬುದೇ ನಿಜವಾದ ವಿಷಯ. ಅರೆಹೊಟ್ಟೆಯಾದರೂ ಉಂಡು ಜೀವ ಹಿಡಿದುಕೊಂಡಿರುವುದಕ್ಕೆ ಸಹ ಹೊರದೇಶಗಳಿಂದ ಬರುವ ಆಹಾರಧಾನ್ಯವನ್ನು ಅವಲಂಬಿಸುವಕಾಲ ಈಗ ಹೋಗಿದೆ ಎಂಬುದೇ ಮಂತ್ರಿಗಳೂ ಸರಕಾರದ ವರಿಷ್ಠ ಅಧಿಕಾರಿಗಳೂ ಆಹಾರ "ಸ್ವಾವಲಂಬನ"ದ ಮಾತನಾಡುವುದರ ತಿರುಳು. ಇಷ್ಟು ಪ್ರಗತಿ ಎಷ್ಟು ಮಾತ್ರಕ್ಕೂ ಸಾಲದು—ಶರೀರ ದಾರ್ಢ್ಯವುಳ್ಳ, ಗೆಲವಿನ ಮುಖವುಳ್ಳ, ಉಲ್ಲಾಸ ಉಕ್ಕುವ ಜನಾಂಗವನ್ನು ರೂಪಿಸುವುದಕ್ಕೆ ಹೊಟ್ಟೆ ತುಂಬ ಅನ್ನ ಬೇಕು; ಅದಕ್ಕೆ ಸರಿಯಾದ ಪೂರಕ ಪೋಷಕಾಂಶಗಳೂ ಬೇಕು. ಆದುದರಿಂದ, ಆಹಾರ ಕ್ಷೇತ್ರದಲ್ಲಿ ನಾವು ಇನ್ನಷ್ಟು ಭರದಿಂದ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅಪೇಕ್ಷಣೀಯ. ಮಾತ್ರವಲ್ಲದೆ, ಪೋಷಕಾಂಶಗಳ ಉಪಯೋಗದ ಕಡೆಗೂ ಗಮನ ಕೊಡುವುದು ಶ್ರೇಯಸ್ಕರ. ಬಿಹಾರದ ರಾಜ್ಯಪಾಲರಾದ ಶ್ರೀ. ದಿವಾಕರರು ಇತ್ತೀಚೆ ಒಂದು ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರು. ಆಹಾರದ ಗುಣವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗದಿದ್ದರೆ, ನಾವು ಪ್ರಗತಿಯನ್ನು ಹೊಂದಿದಂತೇನೂ ಆಗಲಿಲ್ಲ ಎಂದವರು ಹೇಳಿದುದನ್ನು ಆಹಾರದ ಕುರಿತು ತೃಪ್ತಿಕರವಾದ ಮಾತನ್ನಾಡುವವರು ಗಮನಿಸುವುದು ಒಳ್ಳೇದು. ಪೋಷಕಾಂಶಗಳೇ ದೇಹವನ್ನು ಬಲಿಷ್ಠವಾಗಿಯೂ ನಿರೋಗಿಯಾಗಿಯೂ ಸೌಷ್ಠವಯುಕ್ತವಾಗಿಯೂ ರೂಪಿಸುತ್ತವೆ. ಅದಲ್ಲದೆ ಪ್ರಾಣಿಜನ್ಯ ಪೋಷಕಾಂಶಗಳ ಸೇವನೆಯಿಂದ ಜನನ ಪ್ರಮಾಣದ ಮೇಲೂ ನಿಯಂತ್ರಣವನ್ನು ಯಶಸ್ವಿಯಾಗಿ ಹೇರಬಹುದೆಂದು ವಿಜ್ಞಾನಿಗಳ ಸಂಶೋಧನೆಯಿಂದ ತಿಳಿಯುತ್ತದೆ. ಆದುದರಿಂದ ಹೆಚ್ಚುತ್ತಿರುವ ಜನಸಂಖ್ಯೆಯ ಪ್ರಮಾಣವನ್ನು ತಗ್ಗಿಸುವುದಕ್ಕೆ ಸಹ ಹಾಲು, ತತ್ತಿ, ಬೆಣ್ಣೆ, ತುಪ್ಪ ಮುಂತಾದ ಪ್ರಾಣಿಜನ್ಯ ಪೋಷಕಾಂಶಗಳನ್ನು ಧಾರಾಳವಾಗಿ ನಾವು ಬಳಸುವುದು ಹಿತಕರವೆಂದು ಹೇಳಬಹುದು. ಇದಕ್ಕಾಗಿ ಪಶು ಸಂಪತ್ತನ್ನು ಊರ್ಜಿತಗೊಳಿಸುವುದಕ್ಕೆ ನಾವು ಹೆಚ್ಚಿನ ಪ್ರಯತ್ನ ಮಾಡಬೇಕು. ಆಹಾರ ಧಾನ್ಯಗಳ ಉತ್ಪಾದನೆಯನ್ನು ಅಧಿಕಗೊಳಿಸುವ ಕೆಲಸದೊಂದಿಗೆಯೇ ಇದೂ ನಡೆಯಬೇಕು. ಆಗ ಸಮಸ್ಯೆಯ ಸುಲಭ ಪರಿಹಾರಕ್ಕೆ ಇಮ್ಮಡಿ ಶಕ್ತಿಯನ್ನು ಉಪಯೋಗಿಸಿ ಸುಖದ ದಿನಗಳನ್ನು ಬೇಗನೇ ಕಾಣುವಂತಾಗುವುದು.

ರಶಿಯ-ಅಮೇರಿಕೆಗಳ ಸಹಜೀವನ
ಶಾಂತಿ ಸಾಧನೆಯ ಏಕಮೇವ ಉಪಾಯ

ಬರ್ಮಾದ ಪ್ರವಾಸವನ್ನು ಕೈಗೊಂಡಿರುವ ಯುಗೊಸ್ಲಾವಿಯದ ಅಧ್ಯಕ್ಷರು ಸಹಜೀವನತತ್ವವನ್ನು ಬೋಧಿಸುವ ಪಂಚ ಸೂತ್ರಗಳನ್ನು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಯುದ್ಧವನ್ನು ಅವಲಂಬಿಸದೆ ಪ್ರಯತ್ನಿಸುವ ಮಾರ್ಗವೆಂದು ಅಲ್ಲಿಯ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದರು. ಶಸ್ತ್ರ ಸ್ಪರ್ಧೆಯ ಸುಳಿಯಲ್ಲಿ ಬೀಳದೆ ಉಳಿಯುವುದಕ್ಕೆ ಇದೊಂದೇ ಉಪಾಯವೆಂದು ಅವರು ಅಭಿಪ್ರಾಯಪಟ್ಟರಲ್ಲದೆ ರಶಿಯ—ಅಮೇರಿಕಗಳಿಗೆ ಇದನ್ನು ಯಾಕೆ ಅನ್ವಯಿಸಬಾರದೋ ತಿಳಿಯದೆಂದು ಉದ್ಗರಿಸಿದರು.

ಶಸ್ತ್ರ ಸಂಗ್ರಹವೇ ಶಕ್ತಿ!

ದ್ವೇಷ ನಿವಾರಣೆಗೆ ಶಾಂತವಾದ ಉಪಾಯಗಳನ್ನು ಕೈಗೊಳ್ಳಬೇಕೆಂಬ ಮತ್ತು ಮನುಷ್ಯನನ್ನು ಪ್ರೀತಿ—ಸಹಕಾರಗಳಿಂದ ಗೆಲ್ಲಬಹುದೆಂಬ ಮಹತ್ವದ ಸಂಗತಿ ಅಮೇರಿಕಕ್ಕಂತೂ ಇನ್ನೂ ಮನವರಿಕೆಯಾಗಿಲ್ಲ. ಅಲ್ಲಿಯ ಕಾಂಗ್ರೆಸಿಗೆ ಅಧ್ಯಕ್ಷ ಐಸೆನ್ ಹೋವರರು ಕಳಿಸಿದ ವರದಿ ಇದನ್ನು ಸ್ಪಷ್ಟಗೊಳಿಸುತ್ತದೆ. ಕಮ್ಯುನಿಸ್ಟರ ಆಕ್ರಮಣ ಭಯವನ್ನು ನಿವಾರಿಸುವುದಕ್ಕೆ ಸೈನ್ಯಶಕ್ತಿಯ ಸಂವರ್ಧನೆಯೇ ಉಪಾಯವೆಂದು ಐಕರ ಖಚಿತ ಅಭಿಪ್ರಾಯ. ಶಸ್ತ್ರಗಳ ಉತ್ಪಾದನೆಯನ್ನು ಹೆಚ್ಚಿಸುವುದೂ ಅಣುಶಕ್ತಿಯನ್ನು ಸೈನ್ಯಗಳ ಲಾಭಕ್ಕೆ ಉಪಯೋಗಿಸುವುದೂ ಅವರ ಉದ್ದೇಶ. ಶತ್ರುವನ್ನು ಹೀಗೆ ಹೆದರಿಸುವುದೇ ನಾವು ಬದುಕುವ ಮಾರ್ಗ ಎಂದವರ ನಿಲುವೆಯಿದ್ದಂತೆ ಕಾಣುತ್ತದೆ.

ನೆಹರು - ಈಡನ ಭೇಟಿ

ಐಕರ ಘೋಷಣೆಯು ಜಗತ್ತನ್ನು ಎಲ್ಲಿಗೆ ಒಯ್ದು ಮುಟ್ಟಿಸುವುದೆಂಬ ನಿಯಮವಿಲ್ಲವೆಂದು ಶಾಂತಿಪ್ರಿಯ ರಾಷ್ಟ್ರಗಳು ಹೇಳುತ್ತವೆ. ಐಕರೂ ಅವರ ಮಿತ್ರರೂ ಶಸ್ತ್ರ ಸಂಗ್ರಹದಲ್ಲಿ ನಂಬಿಕೆ ಇಲ್ಲದವರ ಭಾವನೆಯನ್ನು ತಿದ್ದುವುದಕ್ಕೆ ಹೆಣಗಾಡುತ್ತಾರೆ. "ಸೀಟೋ" ಒಪ್ಪಂದವು ಗಂಡಾಂತರಕಾರಿಯಾದ ಕಮ್ಮಟವೆಂದು ಭಾರತವೇ ಮುಂತಾದ ಏಶ್ಯದ ರಾಷ್ಟ್ರಗಳು ಹೇಳುವುದು ಸರಿಯಲ್ಲವೆಂದೂ ಅದು ಸಂರಕ್ಷಣೆಗೆ ಅತ್ಯಗತ್ಯವಾದ ಕ್ರಮವೆಂದೂ ಮನಗಾಣಿಸುವುದಕ್ಕೆ ಅವರು ಪ್ರಯತ್ನಿಸುತ್ತಾರೆ. "ಆಫ್ರೇಶ್ಯ" ಪರಿಷತ್ತು ಸೇರುವುದಕ್ಕೆ ಮೊದಲೇ ಫೆಬ್ರವರಿಯಲ್ಲಿ ಬಾಂಗ್‌ಕಕದಲ್ಲಿ ನೆರೆಯುವ "ಸೀಟೋ" ಪರಿಷತ್ತಿಗೆ ಹೋಗುವಾಗ ಬ್ರಿಟನ್ನಿನ ವಿದೇಶ ಮಂತ್ರಿ ಈಡನ್ನರು ಹೊಸ ದೆಹಲಿಯಲ್ಲಿಳಿದು, ನೆಹರುಗಳನ್ನು ಕಂಡು, ನಡೆಸಲಿರುವ ರಾಯಭಾರ ಇದಕ್ಕೊಂದು ನಿದರ್ಶನ.

ಹ್ಯಾಮರಶೀಲ್ಡರ ಮರುಪ್ರಯಾಣ

ಕಮ್ಯೂನಿಸ್ಟರನ್ನು ಬಗ್ಗುಬಡಿಯಲು ಸೈನ್ಯಶಕ್ತಿಯನ್ನು ಉಪಯೋಗಿಸುವ ಪಂಥದ ಮಾತನಾಡುತ್ತಿದ್ದರೂ ಚೀನದ ಜನತಾ ರಾಜ್ಯವು ಬಂಧಿಸಿದ ಹನ್ನೊಂದು ಅಮೇರಿಕನ್ನರ ಮತ್ತೆ ಬೇರೆ ನಾಲ್ವರ ಬಿಡುಗಡೆಗೆ ಸಂಧಾನವನ್ನೆ ಆಶ್ರಯಿಸಬೇಕಾಯಿತೆಂಬುದನ್ನು ಮರೆಯಲಾಗದು. ಎಲ್ಲ ಲಜ್ಜೆಯನ್ನೂ ಅಭಿಮಾನವನ್ನೂ ಬಿಟ್ಟುಕೊಟ್ಟು ಪೇಕಿಂಗಿನ ಯಾತ್ರೆಯನ್ನು ಕೈಗೊಂಡ ಸಂಯುಕ್ತ ರಾಷ್ಟ್ರಸಂಘದ ಮಹಾ ಕಾರ್ಯದರ್ಶಿ ಹ್ಯಾಮರಶೀಲ್ಡರೀಗ ನ್ಯೂಯಾರ್ಕಿಗೆ ಮರಳಿರುವರು. ನಾಲ್ಕು ಸಲ ಚೀನದ ಪ್ರಧಾನ ಮಂತ್ರಿಗಳನ್ನು ಅವರು ಭೇಟಿಯಾಗಿದ್ದರು. ಆದರೆ ಅಮೇರಿಕನ್ನರ ಬಿಡುಗಡೆಯ ಉದ್ದೇಶ ಎಷ್ಟರ ಮಟ್ಟಿಗೆ ಕೈಗೂಡಿತೋ—ಅವರೀರ್ವರು ಹೊರಡಿಸಿದ ಸಂಯುಕ್ತ ಪ್ರಕಟಣೆಯಿಂದ ತಿಳಿಯುವುದಿಲ್ಲ. ಅದರಲ್ಲಿ ಜಾಗತಿಕ ದ್ವೇಷ ಶಮನದ ಬಗ್ಗೆ ಮಾತುಕತೆ ನಡೆಯಿತೆಂದಿಷ್ಟೇ ಇದೆಯಲ್ಲದೆ ಅಮೇರಿಕನ್ನರ ಉಲ್ಲೇಖವಿಲ್ಲ.

ಶ್ರೀ. ಕೊಚ್ಚಿಕಾರ್ ನಾರಾಯಣ ಪೈಗಳ ನಿಧನ—ಉಡುಪಿಯ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಲ್ಲೊಬ್ಬರೂ ಕೊಚ್ಚಿಕಾರ್ ಸಹೋದರರಲ್ಲಿ ಮೂರನೆಯವರೂ ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡಿನ ಡೈರೆಕ್ಟರರೂ ಆದ ಶ್ರೀ ಕೊಚ್ಚಿಕಾರ್ ನಾರಾಯಣ ಪೈಗಳು ಇದೇ ತಾ. ೬ನೇ ಮಧ್ಯಾಹ್ನ ತಮ್ಮ 63ನೆ ವಯಸ್ಸಿನಲ್ಲಿ ನಿಧನ ಹೊಂದಿದುದು ಅತ್ಯಂತ ವಿಷಾದಕರವಿದೆ. ಶ್ರೀ ಪೈಗಳು ನಿಸ್ವಾರ್ಥಿಗಳೂ, ನಿರ್ಮಲ ಚಿತ್ತರೂ, ನಿರಾಡಂಬರ ಹಾಗೂ ಸರಳ ಸ್ವಭಾವದವರೂ ಆಗಿ ಸರ್ವಜನಪ್ರಿಯರಾಗಿದ್ದರು. ಹರಿಜನ ಪ್ರೇಮಿಗಳೂ ವಿದ್ಯಾರ್ಥಿ ಬಂಧುಗಳೂ ಆಗಿದ್ದರು. ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಕಾರಾಗ್ರಹವಾಸವನ್ನೂ ಅನುಭವಿಸಿದ್ದರು. ಮದ್ರಾಸು, ಬೊಂಬಾಯಿಗಳಲ್ಲಿದ್ದಾಗ ಜಿಲ್ಲೆಯವರಿಗೆ, ವಿಶೇಷತಃ ವಿದ್ಯಾರ್ಥಿಗಳಿಗೆ ನೆರವು ನೀಡುತ್ತಿದ್ದರು. ಇವರ ಸ್ಮಶಾನಯಾತ್ರೆಯಲ್ಲಿ ನಗರದ ಪ್ರಮುಖರನೇಕರು ಭಾಗವಹಿಸಿ ಅಂತಿಮ ಗೌರವ ಸಲ್ಲಿಸಿದರು.

ತಾ. 9ರಲ್ಲು ಸರ್ಕಲ್ ಕಾಂಗ್ರೆಸ್ ಕಮಿಟಿ ನೇತೃತ್ವದಲ್ಲಿ ಇವರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆಯು ಶ್ರೀ ಯು. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎ. ಜೆ. ಆಳ್ವ, ಡಾ। ಟಿ. ಮಾಧವ ಪೈ, ಶ್ರೀ. ರೋಕಿ ಫೆರ್ನಾಂಡಿಸ್, ಪಂಡಿತ ಟಿ. ಎಸ್. ಕೇಳುನಂಬಿಯಾರ್, ಡಾ। ಸುಂದರರಾವು ಪೈ, ಶ್ರೀ ಟಿ. ಎ. ಪೈ, ಎಂ. ಎಲ್. ಎ; ಶ್ರೀ. ಶ್ರೀಪತಿ ಆಚಾರ್ ಇವರು ದಿವಂಗತ ನಾರಾಯಣ ಪೈಗಳ ಸದ್ಗುಣಗಳನ್ನು ವಿವರಿಸಿ ಭಾಷಣವಿತ್ತರು. ಶ್ರೀ ಬಾಳ್ಕಟ್ಟೆಬೀಡು ಕೃಷ್ಣಯ್ಯ ಹೆಗ್ಡೆಯವರು ದುಃಖಸೂಚಕ ಠರಾವನ್ನು ಸಭೆಯ ಮುಂದಿಡಲು ಅದು ಒಮ್ಮತದಿಂದ ಪಾಸಾಯಿತು. ಶ್ರೀ. ಕೊಚ್ಚಿಕಾರ್ ಪದ್ಮನಾಭ ಪೈಗಳು ತಮ್ಮ ಸಹೋದರ ನಾರಾಯಣ ಪೈಗಳ ಬಗ್ಗೆ ವ್ಯಕ್ತಪಡಿಸಿದ ಸದಭಿಪ್ರಾಯಗಳಿಗಾಗಿ ಆಭಾರ ಸೂಚಿಸಿ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣವಾಗಿ ಸಭಾಂತ್ಯವಾಯಿತು.

ADVERTISE IN
NAVAYUGA
REPUBLIC DAY
SPECIAL.

ಆವಡಿಯ ಕಾಂಗ್ರೆಸು ಅಧಿವೇಶನ

ಇತಿಹಾಸದ ಹೊಸ ಪುಟ ತೆರೆಯುವ ಸಂಭವ

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ೬೦ ನೇ ಅಧಿವೇಶನವು ಮದ್ರಾಸಿಗೆ ೧೫ ಮೈಲು ದೂರದ ಆವಡಿಯಲ್ಲಿ ಜರಗುವುದಕ್ಕೆ ಎಲ್ಲ ಸಿದ್ಧತೆಗಳು ಭರದಿಂದ ಮಾಡಲಾಗುತ್ತವೆ. ಇಲ್ಲಿ ನೆರೆಯಲಿರುವ ಎರಡು ಲಕ್ಷ ಜನರ ಆರೋಗ್ಯ ರಕ್ಷಣೆಯ ಬಗ್ಗೆ ಯೋಗ್ಯ ಮುಂಜಾಗ್ರತೆಯನ್ನೂ ಸಾರಿಗೆ ಸಂಪರ್ಕದ ವಿಷಯದಲ್ಲಿ ತಕ್ಕ ಅನುಕೂಲತೆಯನ್ನೂ ಕೈಗೊಳ್ಳಲಾಗಿರುವುದು. ಪ್ರಧಾನ ಮಂತ್ರಿ ನೆಹರುಗಳು ಮದ್ರಾಸಿಗೆ ೧೫ ನೇ ತಾರೀಕು ಆಗಮಿಸುವರು; ಕಾಂಗ್ರೆಸಾಧ್ಯಕ್ಷ ಢೇಬರರು ಮರುದಿನ ಬರುವರು. ೧೬ ನೇ ತಾರೀಕಿನಿಂದ ನಾಲ್ಕು ದಿನಗಳವರೆಗೆ ಕಾಂಗ್ರೆಸುಪರಿಷ್ಕರು ಅಧಿವೇಶನದಪ್ರಾಸ್ತಾವಿಕ ಸಿದ್ಧತೆಗಳನ್ನು ನಡೆಸುವರು. ೨೧ ರಿಂದ ೨೩ ನೇ ತಾರೀಕು ವರೆಗೆ ಬಹಿರಂಗ ಅಧಿವೇಶನ ಜರಗುವುದು.

ಸಂಭ್ರಮದ ಸಿದ್ಧತೆ

ಶ್ರೀ ಢೇಬರರನ್ನು ಆನೆ ಹಾಗು ಮೋಟಾರು ಸೈಕಲುಗಳ ಮೆರವಣಿಗೆಯಲ್ಲಿ ಸ್ವಾಗತಿಸಲಾಗುವುದು. ಆರು ಮೈಲು ಉದ್ದದ ದಾರಿಯನ್ನು ತಳಿರು ತೋರಣಗಳಿಂದ ಶೃಂಗರಿಸುವ ಕೆಲಸ ಈಗಲೇ ತೊಡಗಿದೆ. ದಿವಂಗತ ಸತ್ಯಮೂರ್ತಿಯವರ ಮನುಷ್ಯ ಪ್ರಮಾಣದ ವಿಗ್ರಹವೊಂದು ಅವರ ಹೆಸರಿಟ್ಟಿರುವ ಅಧಿವೇಶನ ಸ್ಥಳದಲ್ಲಿ ಶೋಭಿಸುತ್ತದೆ. ಅಲ್ಲದೆ ಇಷ್ಟರ ವರೆಗೆ ಎಷ್ಟು ಕಾಂಗ್ರೆಸಾಧ್ಯಕ್ಷರುಗಳಾಗಿ ಹೋದರೋ ಅಷ್ಟು ನಿರ್ಗಮದ್ವಾರಗಳನ್ನು ಮಂಟಪದಲ್ಲಿ ಕಾಣಬಹುದು. ೧೫ ಅಡಿ ಎತ್ತರದ ಈ ಕಮಾನುಗಳ ಮೇಲ್ಗಡೆ ಕಾಂಗ್ರೆಸಾಧ್ಯಕ್ಷರುಗಳ ಚಿತ್ರವು ತೂಗುತ್ತದೆ.

ಧೋರಣೆ ಬದಲಾಗುವುದೇ?

ರಾಷ್ಟ್ರೀಯ ಕಾಂಗ್ರೆಸಿನ ಈ ಅಧಿವೇಶನವು ಇತಿಹಾಸದಲ್ಲಿ ಮಹತ್ವದ ಹೊಸ ಅಧ್ಯಾಯವೊಂದನ್ನು ತೆರೆಯಬಹುದೆಂದು ಹೇಳಲಾಗುತ್ತದೆ. ತಮ್ಮ ಚೀನ ಪ್ರವಾಸದ ಬಳಿಕ "ಸಮಾಜವಾದ"ದ ಕುರಿತು ಬಹಳವಾಗಿ ಜೋರು ಕೊಡುತ್ತಾಬಂದಿರುವ ನೆಹರುಗಳು ಕಾಂಗ್ರೆಸಿನ ಧ್ಯೇಯವನ್ನು ಇತ್ತ ತಿರುಗಿಸುವುದಕ್ಕೆಸಮರ್ಥರಾದಾರೆಂದು ಸಾಮಾನ್ಯ ಅಭಿಪ್ರಾಯ. ಇದಕ್ಕೋಸ್ಕರ ಕಾಂಗೆಸಿನ ಘಟನೆಗೆ ತಿದ್ದುಪಡಿಯನ್ನುಮಾಡಬೇಕೆಂಬ ಸೂಚನೆ ಹೊಸ ದೆಹಲಿಯಲ್ಲಿ ಸೇರಿದ ಪರಿಷ್ಕರ ಸಭೆಯಲ್ಲಿ ಬಂದಿತ್ತೆಂದೂ ಆದರೆ ಘಟನೆಯಲ್ಲಿ ಉಲ್ಲೇಖಿಸಲ್ಪಟ್ಟ ಧ್ಯೇಯವಾಕ್ಯವು ನೆಹರುಗಳ ಸಮಾಜದವಾದತತ್ವವನ್ನುಒಳಗೊಳ್ಳುವಷ್ಟು ಅರ್ಥ ವ್ಯಾಪ್ತಿ ಪಡೆದಿರುವುದರಿಂದ ತಿದ್ದುಪಡಿ ಅನಗತ್ಯವೆಂದೂ ಹೆಚ್ಚಿನವರು ಅಭಿಪ್ರಾಯಪಟ್ಟರೆಂದು ತಿಳಿಯುತ್ತದೆ. ಆವಡಿ ಅಧಿವೇಶನದಲ್ಲಿ ಪ್ರಥಮ ಹಾಗು ದ್ವಿತೀಯ ಪಂಚವಾರ್ಷಿಕ ಯೋಜನೆಗಳನ್ನು ಕುರಿತಾದ ಆರ್ಥಿಕ ನೀತಿಯ ಗೊತ್ತುವಳಿಯ ಚರ್ಚೆ ನಡೆದಾಗ ಇದರ ಕುರಿತು ಹೆಚ್ಚು ಬೆಳಕು ಬೀಳಬಹುದು.

ಪಂತರಿಗೆ ಗೃಹಖಾತೆ

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕಾಂಗ್ರೆಸಿನ ಶಕ್ತಿ ಹಾಗು ಸ್ಫೂರ್ತಿಯ ಸ್ರೋತವಾಗಿದ್ದ ಮತ್ತು ಸರ್ದಾರ ವಲ್ಲಭಾಯಿ ಪಟೇಲರ ನಿಧನದ ಬಳಿಕ ನೆಹರುಗಳಿಗೆ ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಬಲಗೈಯಂತಿರುವ ಶ್ರೀ ಗೋವಿಂದ ವಲ್ಲಭ ಪಂತರು ಭಾರತದ ಗೃಹಮಂತ್ರಿ ಪದವನ್ನು ಸ್ವೀಕರಿಸಿರುವರು. ಇಷ್ಟರ ವರೆಗೆ ಗೃಹಮಂತ್ರಿಯಾಗಿದ್ದ ಶ್ರೀ ಕೈಲಾಸನಾಥ ಕಟಜುಗಳು ಸಂರಕ್ಷಣಾ ಖಾತೆಯ ಮಂತ್ರಿಗಳಾಗಿ ಸೇವಾಕಗೊಂಡಿರುವರು. ಎರಡು ವರ್ಷಗಳ ಹಿಂದೆ ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರರು ನಿಧನ ಹೊಂದಿದಂದಿನಿಂದ ಸಂರಕ್ಷಣಾ ಖಾತೆಯನ್ನು ಪ್ರಧಾನ ಮಂತ್ರಿ ನೆಹರುಗಳೇ ನೋಡಿಕೊಳ್ಳುತ್ತಿದ್ದರು.

ಹಿಂದುಳಿದವರಿಗೆ ಶಿಕ್ಷಣ

ಸ್ವತಂತ್ರ ಭಾರತದ ಕೊನೆಯ ಗವರ್ನರ ಜನರಲರಾಗಿದ್ದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ನಾಗಪುರ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭದಲ್ಲಿ ಭಾಷಣ ಮಾಡುತ್ತ ಶಿಕ್ಷಣದಲ್ಲಿ ಮುಂದುವರಿದ ಕುಟುಂಬಗಳ ಮತ್ತು ಹಿಂದುಳಿದವರ ಮಕ್ಕಳಿಗೆ ಒಂದೇ ಬಗೆಯ ದೃಷ್ಟಿಕೋಣವನ್ನಿಟ್ಟುಕೊಂಡು ಶಿಕ್ಷಣ ಕೊಡುವುದು ಸರಿಯಲ್ಲವೆಂದು ಹೇಳಿದರು. ಮುಂದುವರಿದ ಪರಿವಾರಗಳಲ್ಲಿ ಮಕ್ಕಳಿಗೆ ಮಾರ್ಗದರ್ಶನ ಮಾಡಲು ವಿದ್ಯಾವಂತರಾದ ಹಿರಿಯರೂ ಬಂಧುಗಳೂ ಇರುವರು; ಆದರೆ ಹಿಂದುಳಿದವರಿಗೆ ಈ ಅನುಕೂಲತೆ ಇಲ್ಲ. ಆದುದರಿಂದ ಹಿಂದುಳಿದ ಕುಟುಂಬಗಳ ಮಕ್ಕಳಿಗೆ ವಿಶೇಷ ಉತ್ಸಾಹದಿಂದ ಶಿಕ್ಷಣ ಕೊಡುವ ಹೊಸ ಪದ್ಧತಿಯನ್ನು ಜ್ಯಾರಿಗೆ ತರಬೇಕು ಎಂದವರು ಸೂಚಿಸಿದರು. ಬೇರೆ ಬೇರೆ ರೋಗಗಳಿಗೆ ಬೇರೆ ಬೇರೆ ಔಷಧ ಹೇಗೆ ಅಗತ್ಯವೋ ಅದರಂತೆ ಬೇರೆ ಬೇರೆ ಬೌದ್ಧಿಕ ಮಟ್ಟದ ಮತ್ತು ಅನುಕೂಲತೆಯ ಮಕ್ಕಳಿಗೂ ಭಿನ್ನಭಿನ್ನ ಪ್ರಕಾರದ ಶಿಕ್ಷಣ ಅವಶ್ಯವೆಂದವರು ತಿಳಿಸಿದರು.

ರಾಷ್ಟ್ರಾಧ್ಯಕ್ಷರ ಪ್ರವಾಸ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಮಧ್ಯಭಾರತದ ಪ್ರವಾಸವನ್ನು ಕಳೆದ ವಾರ ಕೈಗೊಂಡರು. ಪ್ರಸಿದ್ಧ ಐತಿಹಾಸಿಕ ಕ್ಷೇತ್ರಗಳನ್ನು ಅವರು ಸಂದರ್ಶಿಸಿದರಲ್ಲದೆ ಗೊಂಡರೇ ಮುಂತಾದ ಗುಡ್ಡಗಾಡು ಜನರನ್ನು ಕಂಡು ಅವರ ಪರಿಸ್ಥಿತಿಯ ಪರಿಚಯವನ್ನು ಮಾಡಿಕೊಂಡರು.

ವೈಜ್ಞಾನಿಕ ಸಂಶೋಧನೆಗಳು ಇಂದಿನ ಜಗತ್ತಿನ ವೈಶಾಲ್ಯವನ್ನು ಕಡಿಮೆ ಮಾಡಿ, ಒಬ್ಬರಿನ್ನೊಬ್ಬರ ಹತ್ತಿರಕ್ಕೆ ಬರುವಂತೆಯೂ ಪರಸ್ಪರಾವಲಂಬನವು ಹೆಚ್ಚುವಂತೆಯೂ ಮಾಡಿರುತ್ತವೆ. ಆದುದರಿಂದ ಶಾಂತಿಯುತ ಸಹಕಾರದ ಮತ್ತು ಸಹಜೀವನದ ಅಗತ್ಯ ಹಿಂದಿನೆಲ್ಲ ದಿನಗಳಿಗಿಂತಲೂ ಇಂದು ಹೆಚ್ಚಾಗಿ ಅನುಭವಕ್ಕೆ ಬರುತ್ತಿದೆ. ಎಂದವರು ಭೋಪಾಳದ ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದರು. ಗುಡ್ಡಗಾಡು ಜನರ ಉದ್ಧಾರಕ್ಕಾಗಿ ಸರಕಾರವು ಕೈಗೊಂಡ ಕಾರ್ಯಕ್ರಮಗಳನ್ನು ಅವರು ವಿವರಿಸಿದರಲ್ಲದೆ ಇದರಲ್ಲಿ ಸಹಕಾರ ನೀಡಬೇಕೆಂದು ಗೊಂಡರನ್ನು ವಿನಂತಿಸಿದರು.

ಹೊಸ ಅಂಚೆ ಚೀಟು

ಪ್ರಜಾರಾಜ್ಯ ದಿನವಾದ ಇದೇ ಜನವರಿ ೨೬ ನೇ ತಾರೀಕಿಗೆ ಭಾರತ ಸರಕಾರದವರು ಪಂಚವಾರ್ಷಿಕ ಯೋಜನೆಯ ಚಿತ್ರಗಳನ್ನು ಮುದ್ರಿಸಿದ ಹೊಸ ಅಂಚೆ ಚೀಟುಗಳನ್ನು ಹೊರಡಿಸುವರೆಂದು ತಿಳಿದು ಬರುತ್ತದೆ. ಇವುಗಳನ್ನು ಬಹಳ ಆಕರ್ಷಕವಾದ ಬಣ್ಣಗಳಲ್ಲಿ ಮುದ್ರಿಸಿದ್ದು ಪಾವಾಣೆಯಿಂದ ಹತ್ತು ರೂಪಾಯಿ ವರೆಗಿನ ೧೮ ಪ್ರಕಾರದ ಚೀಟುಗಳು ದೊರಕುತ್ತವೆ.

ಸಂಖ್ಯಾ ಶಾಸ್ತ್ರ

ಅಂಕೆ ಸಂಖ್ಯೆಗಳನ್ನು ಸಾಕಾರದ ವರವಾಗಿ ಸಂಗ್ರಹಿಸುವಾಗ ಬಹಳ ಜಾಗ್ರತೆಯನ್ನು ವಹಿಸ ಬೇಕೆಂದು ಪೂಸಾದಲ್ಲಿ ಕೃಷಿ ಸಂಬಂಧದ ಸಂಖ್ಯಾತಜ್ಞರ ಪರಿಷತ್ತನ್ನು ಉದ್ದೇಶಿಸಿ ಭಾಷಣಮಾಡಿದ ಶ್ರೀ ಥಾಪರರು ಹೇಳಿದರು. ರಾಷ್ಟ್ರವು ಈಗ ಆರ್ಥಿಕ ಸ್ವಾತಂತ್ರ್ಯಕ್ಕಾಗಿಹೆಣಗಾಡುತ್ತಿರುವುದರಿಂದವಸ್ತುಸ್ಥಿತಿಯ ಸತ್ಯಚಿತ್ರವನ್ನು ಅಂಕೆ ಸಂಖ್ಯೆಗಳು ಕೊಡದಿದ್ದರೆ ತೊಂದರೆ ಸಂಭವಿಸುತ್ತದೆ. ಸುಳ್ಳು ಹಾಗು ತಪ್ಪು ಅಂಕೆ ಸಂಖ್ಯೆಗಳನ್ನು ಸಂಗ್ರಹಿಸುವುದೆಂದರೆ ರಾಷ್ಟ್ರಕ್ಕೆ ದ್ರೋಹ ಮಾಡಿದಂತೆಯೇ—ಎಂದವರು ಎಚ್ಚರಿಸಿದರು.

ಈ ಸಂಚಿಕೆಯಲ್ಲಿ, ಅನಾನುಕೂಲ ವಾದುದರಿಂದ ಬರೇ 10ಪುಟಗಳನ್ನು ಮಾತ್ರ ಕೊಡಲಾಗಿದೆ.

ಸಂ. ನ.

ನಿರೀಕ್ಷಿಸಿರಿ!

ಜನವರಿ 26
ಪ್ರಜಾರಾಜ್ಯ ಸಮಾರಂಭದ
ಸಂತೋಷ ಕಾಲದಲ್ಲಿ
ನವಯುಗವು
ವಾಡಿಕೆಯಂತೆ ತನ್ನ ವಾಚಕರಿಗೆ
ಪ್ರಜಾರಾಜ್ಯ ವಿಶೇಷಾಂಕದ
ಕಾಣಿಕೆಯನ್ನರ್ಪಿಸುವುದು.
ಆಕರ್ಷಕ ರೀತಿಯಲ್ಲಿ ಹೊರಡುವ ಈ
ಸಂಚಿಕೆಯು ಜಾಹೀರಾತುಗಳಿಗೆ
ಉತ್ತಮ ವಾಹಕ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಪಾಯಸ್ ಬಿಲ್ಡಿಂಗ್, ಹಂಪನ್‌ಕಟ್ಟಾ, ಮಂಗಳೂರು.
ಇನ್ಸ್‌ಪೆಕ್ಟರರು, ಒರ್ಗನೈಜರರು ಮತ್ತು ಎಲ್ಲಾ ತರದ ಏಜಂಟರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.
ಹೊಸತಾಗಿ ಏರ್ಪಡಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಿದೆ.
ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:—
B. B. SHETTY, B. A., LL. B.
Chairman.

ಪ್ರಿಂಟಿಂಗ್- ಬೈಂಡಿಂಗ್- ಕಟ್ಟಿಂಗ್
ಮೊದಲಾದ ಪ್ರೆಸ್ಸಿಗೆ ಸಂಬಂಧಪಟ್ಟ ಯಾವತ್ತೂ ಕೆಲಸಗಳನ್ನು ನಾಜೂಕಾಗಿ ಸಕಾಲದಲ್ಲಿ ಸುಲಭ ದರದಲ್ಲಿ ಮಾಡಿ ಕೊಡಲಾಗುವುದು. ಮದುವೆ ವರ್ಧಂತಿ ಮೊದಲಾದ ಯಾವತ್ತೂ ತರದ ಆಮಂತ್ರಣ ಪತ್ರಿಕೆಗಳನ್ನು ಅತಿ ತ್ವರ್ಯದಲ್ಲಿ ಅತಿ ಅಗ್ಗ ದರದಲ್ಲಿ ತಯಾರಿಸಿ ಕೊಡಲಾಗುವುದು.
ಎಕೌಂಟು ಪುಸ್ತಕಗಳು, ಕೋರ್ಟು ಫಾರ್ಮುಗಳು, ವರ್ಗ ಊಳಿಗಗಳು, ಸೊಸೈಟಿ ರಿಜಿಸ್ಟ್ರಿ ಫಾರ್ಮುಗಳು ಮೊದಲಾದುವು ಸಿಗುತ್ತವೆ.
ನವಯುಗ ಪ್ರೆಸ್, ಉಡುಪಿ.

ಕರ್ನಾಟಕದಲ್ಲೆಲ್ಲ ಜನಪ್ರಿಯವಾದ
ಅತಿ ಕಡಿಮೆ ಬೆಲೆಯ ಕೈ ಹೊತ್ತಿಗೆ—
ಗೀತೆಯ ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ
ಬೆಲೆ: ೦—೮—೦
ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ
ಮಗ್ಗಿ ಪುಸ್ತಕಗಳು
ರಖಂ ಆಗಿಯೂ
ಚಿಲ್ಲರೆಯಾಗಿಯೂ ದೊರೆಯುತ್ತವೆ
ನವಯುಗ ಪ್ರೆಸ್, ಉಡುಪಿ. ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಮಂಗಳೂರು

ಪತ್ರಿಕೋದ್ಯಮಿಗಳ ಸಂಘಸ್ಥಾಪನೆ—ಮಂಗಳೂರು ಪತ್ರಿಕೋದ್ಯಮಿಗಳ ಸಂಘವೊಂದು ತಾ. ೨ರಲ್ಲಿ ಸ್ಥಾಪಿಸಲ್ಪಟ್ಟಿತು. ಶ್ರೀಗಳಾದ ಕೆ. ಆರ್. ಆಚಾರ್, ಅಧ್ಯಕ್ಷ., ಬಿ. ಎನ್. ಇದಿನಬ್ಬ, ಉಪಾಧ್ಯಕ್ಷ, ಕೆ. ಎಸ್. ಉಪಾಧ್ಯ, ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಬಿ. ಸಿ. ಜಿ. ಟಾಕು:—ಮಂಗಳೂರು ನಗರ ಕ್ಷೇತ್ರದಲ್ಲಿಯೂ ಸಮೀಪದ ಐದಾರು ಮೈಲು ಪ್ರದೇಶದಲ್ಲಿಯೂ ಬಿ. ಸಿ. ಜಿ. ದಾಕು ಹಾಕುವ ಪ್ರಯೋಗವು ಮುಂದಿನ ಫೆಬ್ರವರಿ ತಿಂಗಳ ತಾ. ೨ರಿಂದ ಪ್ರಾರಂಭವಾಗಲಿರುವುದು. ಅದಕ್ಕಾಗಿ 160ಯಾ170 ಕೇಂದ್ರಗಳನ್ನು ರಚಿಸಿ ಮೊದಲ ಮೂರು ದಿವಸಗಳಲ್ಲಿ ಪ್ರಥಮ ಪರೀಕ್ಷೆಯಾಗಿ ಕ್ಷಯರೋಗವನ್ನು ತಡೆಯುವ ಶಕ್ತಿ ಇದೆಯೋ ಇಲ್ಲವೋ ಎಂದು ನೋಡಲಾಗುವುದು. ಬಳಿಕ ಮೂರು ದಿವಸಗಳಲ್ಲಿ ತಡೆಯುವ ಶಕ್ತಿಯಿಲ್ಲದವರಿಗೆ ಬಿ. ಸಿ. ಜಿ. ದಾಕು ಹಾಕುವರು. ಈ ಪ್ರಯೋಗವನ್ನು ೧ರಿಂದ 25 ವರ್ಷಪ್ರಾಯಸ್ಥರಿಗೆ ಮಾಡಲಾಗುವುದು ಎಂದು ಬಿ. ಸಿ. ಜಿ. ದಾಕು ಪ್ರಯೋಗ ಚಳವಳಿಯ ಸುಪರ್‌ವೈಸಿಂಗ್ ಆರೋಗ್ಯಾಧಿಕಾರಿ ಶ್ರೀ ಹರಿಹರನ್ ಅವರು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ವಿವರಣೆಯಿಂದ ತಿಳಿದು ಬರುತ್ತದೆ.

ಕೇಂದ್ರ ಮಂತ್ರಿ ಡಾ| ಬಿ. ವಿ. ಕೇಸ್ಕರರು—ಇದೇ ತಾ. 14ರಲ್ಲಿ ಬೆಳಿಗ್ಗೆ ಬೊಂಬಾಯಿಯಿಂದ ಮಂಗಳೂರಿಗೆ ಬಂದು ಸೀದಾ ಮಡಿಕೇರಿಗೆ ಹೋಗಿ ಅಲ್ಲಿಂದ ಮಾಯಿಗೆ ಹೋಗುವದೆಂದಿದ್ದರೂ ಅಸೌಖ್ಯದಿಂದಾಗಿ ಅವರು ಕಾರ್ಯಕ್ರಮವನ್ನು ಫೆಬ್ರವರಿ ಪ್ರಥಮ ವಾರಕ್ಕೆ ಮುಂದುವರಿಸಿರುವರೆಂದು ತಿಳಿದುಬರುತ್ತದೆ.

ಕೇಂದ್ರದ ಮಂತ್ರಿ ರಾಜಕುಮಾರಿ ಅಮೃತಕೌರ—ಅವರು ಇದೇ ತಾ. ೨೯ರಲ್ಲಿ ವಿಮಾನ ಮೂಲಕ ಕೊಚ್ಚಿಯಿಂದ ಮಂಗಳೂರಿಗೆ ಆಗಮಿಸಿ ಉಡುಪಿಗೆ ತೆರಳಿ ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಹೊಸತಾಗಿ ಕಟ್ಟಲ್ಪಟ್ಟ ಒಜಿಯೋಲಜಿ ಬ್ಲಾಕನ್ನು ಉದ್ಘಾಟಿಸುವರು. ತಾ. 30ರಲ್ಲಿ ಮಾನ್ಯಮಂತ್ರಿಗಳು ವಿಮಾನ ಮೂಲಕ ಬೊಂಬಾಯಿಗೆ ತೆರಳಲಿರುವರು.

(೫ನೇ ಪುಟದಿಂದ)

ಕೆಲವಮಟ್ಟಿಗೆ ಕಾಣಿಸಿರುತ್ತವೆ. ಆದರೂ ಅವರು ಶಿಸ್ತು ಪಾಲನೆಗೆ ಮಹತ್ವ ಕೊಡದೆಬಿಡುವುದಿಲ್ಲ-ಕಾಂಗ್ರೆಸಿನಲ್ಲಿ ಅಭಿಪ್ರಾಯ ಭೇದವಾದೊಡನೆ ಬಣಗಳೇರ್ಪಡುತ್ತವೆ; ಕಚ್ಚಾಟ ಪ್ರಾರಂಭವಾಗುತ್ತದೆ; ಕೊನೆಗೆ ಅವರು ಸಿಡಿದು ಹೋಗುವ ನಾಟಕವೂ ನಡೆಯುತ್ತದೆ. ಇಂಥ ಪರಿಸ್ಥಿತಿಯೊಂದು ನೇತಾಜಿ ಸುಭಾಷ್ಚಂದ್ರ ಭೋಸರ ಕಾಲದಲ್ಲು ಹಿಂದೆ ಬಂದಿದ್ದಾಗ ಕಾಂಗ್ರೆಸ್ಸನ್ನು ತ್ಯಜಿಸಿದ ಅಖಿಲ ಭಾರತ ಫೋರ್‌ವರ್ಡ್ ಬ್ಲಾಕಿನವರು ಪುನಃ ಕಾಂಗ್ರೆಸಿನಲ್ಲಿ ಸಮಾವೇಶಗೊಳ್ಳಲು ಈಗ ನಿರ್ಧರಿಸಿರುವುದು ಸ್ತುತ್ಯ. ಸಮಾಜವಾದವೇ ತನ್ನ ಗುರಿಯೆಂದು ಕಾಂಗ್ರೆಸು ಸರಕಾರ ಘಂಟಾಘೋಷವಾಗಿ ಸಾರಿರುವುದರಿಂದಲೂ ದೇಶದ ಪ್ರತಿಗಾಮಿ ಶಕ್ತಿಗಳನ್ನು ಪ್ರತಿಭಟಿಸುವುದಕ್ಕೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳವರು ಒಗ್ಗಟ್ಟಾಗಬೇಕಾದುದರಿಂದಲೂ ಹೀಗೆ ನಿರ್ಣಯಿಸಿದೆವೆಂದು ಪಕ್ಷದ ಕಾರ್ಯ ಸಮಿತಿ ತಿಳಿಸುತ್ತದೆ.

ಉಡುಪಿ ಜಾತ್ರೆ

ಯಾತ್ರಿಕರ ಸಲುವಾಗಿ
ರಥಬೀದಿಯಲ್ಲಿ
ಪೋಸ್ಟ್ ಆಫೀಸಿನ ಬಳಿ
ನಮ್ಮ ಬುಕ್ ಸ್ಟಾಲನ್ನು ತೆರೆಯಲಾಗಿದೆ.
ಉತ್ತಮ ಕನ್ನಡ ಪುಸ್ತಕಗಳು
ದೊರೆಯುತ್ತವೆ.
ನವಭಾರತ ಬುಕ್ ಡಿಪೊ.

ಪಳ್ಳಿ – ಕಾರ್ಕಳ ತಾಲೂಕಿನ ಪಳ್ಳಿ ಗ್ರಾಮಸ್ಥರ ಸಭೆಯು ತಾ. ೩ರಲ್ಲು ಶ್ರೀ. ಎನ್. ರಾಜು ಶೆಟ್ರಿ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಬೋರ್ಡ ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾರ್ಪಡಿಸುವರೆ ಯೋಗ್ಯ ಕಟ್ಟಡ ನಿರ್ಮಾಣಕ್ಕೆ ಬೇಕಾಗುವ ಹಣ ಸಂಗ್ರಹಕ್ಕಾಗಿ ಶ್ರೀಗಳಾದ ಎನ್. ರಾಜು ಸೆಟ್ಟಿ ಮತ್ತು ಸದಾಶಿವ ಹೆಗ್ಡೆಯವರು ಬೇಗನೇ ಬೊಂಬಾಯಿಗೆ ಪ್ರಯಾಣ ಬೆಳೆಸುವವರಿದ್ದಾರೆ.

ನಾಗರಮಠ (ಬಾರ್ಕೂರು) ವಿದ್ಯಾಯೋಜನೆಯ ಹೊಸ ಕ್ರಮಕ್ಕನುಸಾರವಾಗಿ ಇದೇ ತಾ. ೬ರಲ್ಲು ಹೊಸ ಶಾಲೆಯೊಂದನ್ನು ಉಡುಪಿ ಸರಕಾರಿ ಟ್ರೈನಿಂಗ್ ಶಾಲೆಯ ಹೆಡ್ಮಾಸ್ತರ್ ಶ್ರೀ ಯು. ಕೃಷ್ಣರಾಯರು ಉದ್ಘಾಟಿಸಿದರು. ಡಾ| ಯು. ಕೃಷ್ಣ ಬಾಯರಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಭಿಕರ ಭಾಷಣ ಅಧ್ಯಕ್ಷ ಭಾಷಣಗಳಾಗಿ ಸಮಾರಂಭ ಕೊನೆಗೊಂಡಿತು.

ಕಮ್ಯೂನಿಟಿ ಪ್ರೊಜೆಕ್ಟ್ ಸಹಾಯದಿಂದ ಹೊಸತಾಗಿ ರಚಿಸಲಾದ ಮಕ್ಕಳ ಆಟದ ಬಯಲಿನ ಉದ್ಘಾಟನಾ ಸಮಾರಂಭವು ತಾ. ೭ರಲ್ಲು ಜಿಲ್ಲಾ ಪ್ರೊಜೆಕ್ಟ್ ಆಫೀಸರ್ ಶ್ರೀ ಎಚ್. ನರಶಿಂಹನವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಎ. ಕೆ. ಎಲ್. ರಾವ್, ಕೇಶವ ಕಿಣಿಯರ ಭಾಷಣಗಳಾದುವು. ಶ್ರೀ. ಎನ್. ನಿರಲ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಮರವಂತೆ— ಇದೇ ತಾ. ೨೨ನೆ ಶನಿವಾರ ರಾತ್ರಿ ಶ್ರೀಚಕ್ಕನಕಟ್ಟೆ ಯಕ್ಷೇಶ್ವರಿ ದೇವಿ ಸನ್ನಿಧಿಯಲ್ಲಿ ಕಾಲಂಪ್ರತಿ ಜರಗುವ ಮಂಡಲಸೇವೆ ಮತ್ತು ಗೆಂಡ ಸೇವೆ ಜರಗಲಿರುವುದೆಂದೂ ಭಕ್ತಾದಿಗಳು ಬಂದು ಶ್ರೀದೇವಿ ಅನುಗ್ರಹಕ್ಕೆ ಪಾತ್ರರಾಗಬೇಕೆಂದೂ ಅರ್ಚಕ ಶ್ರೀ ಎಮ್. ಆರ್. ಆವಭೃತರು ಅಪೇಕ್ಷಿಸುತ್ತಾರೆ.

ತೆಕ್ಕಟ್ಟೆ—ಸ್ಥಳೀಯ ಗ್ರಾಮದ ಜನಪ್ರಿಯ ಪಟೇಲರೂ, ಕುಲೀನ ಬಂಟನುನೆತನದವರೂ ಆಗಿದ್ದ ಶ್ರೀ ಕೂಡಯ್ಯ ಸೆಟ್ಟರು ೭೨ನೇ ವಯಸ್ಸಿನಲ್ಲಿ ಇದೇ ತಾ. ೧ರಲ್ಲು ಸಂಜೆ ಹೃದಯಸ್ತಂಭನದಿಂದ ಕೈಲಾಸ ವಾಸಿಗಳಾದರು. ಇವರ ನಿಧನದಿಂದುಂಟಾದ ಇವರ ಕುಟುಂಬದವರೊಡನೆ ಸಹ ಸಂತಾಪವನ್ನು ಸೂಚಿಸಿ ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಉಜ್ರೆ—ಇಲ್ಲಿಯ ಕಲಾ ಥಿಯೇಟರಿನಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಎಮ್. ರಂಗನಾಥ ಭಟ್ಟರನ್ನು ಗ ರವಿಸುವ ಸಮಾರಂಭ ನಡೆಯುವುದು. ಅಂದು ಲಲಿತಕಲಾ ವೃಂದದವರು ಅಭಿನಯಿಸಲಿರುವ ಶೂರಸೇನ ನಾಟಕದಲ್ಲಿ ಶ್ರೀಭಟ್ಟರು ಶೂರಸೇನನ ಪಾತ್ರವಹಿಸಲಿರುವರು.

ಬೈಂದೂರು: ದ. ಕ. ಜಿಲ್ಲಾ ಕಲೆಕ್ಟರರು ತಾ ೭ ರಲ್ಲು ಬೈಂದೂರು- ಸೋಮೇಶ್ವರ (ಪಡುವರಿಗ್ರಾಮ) ರಸ್ತೆಯನ್ನು ಉದ್ಘಾಟಿಸಿದರು. ಶ್ರೀ ಗಳಾದ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ, ಆರ್. ಕೆ. ಸಂಜೀವರಾವ್, ಮೊದಲಾದವರು ಹಾಜರಿದ್ದರು. ರಾತ್ರಿ ಮಾರಣಕಟ್ಟೆ ಯಕ್ಷಗಾನ ಮೇಳದವರಿಂದ 'ವಿದ್ಯುನ್ಮತಿ ಕಲ್ಯಾಣ' ವೆಂಬ ಬಯಲಾಟವು ಪಡುವರಿಯಲ್ಲಿ ಯಶಸ್ವಿಯಾಗಿ ಜರಗಿತು. ಗ್ರಾಮ ಸೇವಾ ಸಂಘದ ಅಧ್ಯಕ್ಷ ಶಾ

ಉಡುಪಿ.

ಭಾಷಣ— ಬೆಳಗಾಂ ನಿಂದ ಲಿಂಗರಾಜ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಪರಮಶಿವಯ್ಯನವರು ತಾ. ೬ರಲ್ಲು ಸ್ಥಳೀಯ ಎಮ್. ಜಿ. ಎಮ್ ಕಾಲೇಜಿನಲ್ಲಿ "ಅಣುಶಕ್ತಿಯ ನವಯುಗ" ಎಂಬ ವಿಷಯದಲ್ಲಿ ಉಪನ್ಯಾಸ ವಿತ್ತರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ವಹಿಸಿದ್ದರು.

ಕಾರ್ಯದರ್ಶಿ ಶ್ರೀಗಳಾದ ಡಿ. ಆರ್ ಕುಂಬಳೆ, ಪಿ. ಸುಬ್ಬಣ್ಣ ಸೆಟ್ಟಿ, ಮೊದಲಾದವರು ಉಪಸ್ಥಿತರಿದ್ದರು.

ಮಣಿಪಾಲ—ಜಿಲ್ಲಾ ಕಲೆಕ್ಟರರು ತಾ. ೩ರಲ್ಲಿ ಬೆಳಿಗ್ಗೆ ಮಣಿಪಾಲದಲ್ಲಿ ಪ್ರಸೂತಿಕಾಗೃಹದ ಶಂಕುಸ್ಥಾಪನೆಮಾಡಿದರು. ಜಿಲ್ಲಾ ಹೆಲ್ತ್ ಆಫೀಸರ್ ಶ್ರೀ ರಾಮಚಂದ್ರ ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಡಾ| ಟಿ. ಎಮ್. ಎ. ಪೈ, ಶ್ರೀ ಟಿ. ಎ. ಪೈ. ಎಮ್. ಎಲ್. ಎ. ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಮೆಡಿಕಲ್ ಕಾಲೇಜಿಗೆ ಸಂದರ್ಶನ ಲೆ|ಕ|ಪಿ. ಆರ್. ಮಿರಾಜಕರ್ ಅವರು ತಾ. ೩ರಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿ ಕಾಲೇಜಿನ ಪ್ರಗತಿಯನ್ನು ಮೆಚ್ಚಿ ಸಂತೋಷ ಪಟ್ಟರು. ಕಾಲೇಜು ಲೈಬ್ರರಿಗೆ ಉಪಯುಕ್ತ ಪುಸ್ತಕಗಳನ್ನು ದಾನಮಾಡುವ ಆಶ್ವಾಸನೆಯಿತ್ತರು.

ತೆಂಕನಿಡಿಯೂರು:- ಸ್ಥಳೀಯ ಯುವಕ ಕಾಂಗ್ರೆಸಿನ ಸಮಿತಿಯಿಂದ ಏರ್ಪಡಿಸಲಾದ 'ಸಾರ್ವಜನಿಕ ವಾಚನಾಲಯ' ವನ್ನು ತಾ ೨ ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಉದ್ಘಾಟಿಸಿದರು. ಶ್ರೀ ಎ. ಜೆ. ಆಳ್ವ ಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಅಲೆವೂರು: ಇಲ್ಲಿಯ ಪ್ರಸೂತಿಕಾ ಗೃಹದ ಶಂಕುಸ್ಥಾಪನಾ ಕಾರ್ಯವನ್ನು ತಾ ೭ ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಕುಂಞ್‌ಮ್ಮದ್, ಅವರು ನೆರವೇರಿಸಿದರು. ಶ್ರೀ ಟಿ. ಎ ಪೈಗಳು ಸ್ವಾಗತ ಭಾಷಣ ಮಾಡಿದರು ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ರಂಗಣ್ಣ ಭಟ್ಟರು ವಹಿಸಿದ್ದರು. ಶ್ರೀಗಳಾದ ಎ. ಜೆ. ಆಳ್ವ, ಕೆ. ಲಿಂಗಪ್ಪಯ್ಯ ತಹಸಿಲ್ದಾರ್, ಎ. ಶ್ಯಾಮರಾವ್ ಮೊದಲಾದವರು ಮಾತನಾಡಿದರು.

ನಂಚಾರು— ಪಡುಕರೆಯಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್ ಎ, ಅವರ ಅಧ್ಯಕ್ಷತೆಯಲ್ಲಿ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಮನೊನ್ನರು ಹೊಸ ಪೋಸ್ಟಾಫೀಸನ್ನು ಉದ್ಘಾಟಿಸಿದರು. ಡಾ| ವಿ. ಕೆ. ಬಲ್ಲಾಳ, ಶ್ರೀಗಳಾದ ಎ. ಜೆ. ಆಳ್ವ ಮತ್ತು ರಾಮ ಸಾಲಿಯಾನರು ಕಾಲೋಚಿತ ಮಾತುಗಳನ್ನಾಡಿದರು. ಮೊಗವೀರರಿಗೆ 'ಡೀಪ್‌ಸೀ ಫಿಶ್ಶಿಂಗ್' ಅನುಕೂಲತೆಗಳನ್ನು ಸರಕಾರವು ಒದಗಿಸಿಕೊಡಬೇಕೆಂದು ಸಭಾಧ್ಯಕ್ಷರು ಮುಖ್ಯಾಯ ಮಾತುಗಳಲ್ಲಿ ಹೇಳಿದರು.

ಶಾಂಗಾಳ ಶ್ರೀ ಜನಾರ್ಧನ ದೇವಸ್ಥಾನದಲ್ಲಿ ಕಾಲಂಪ್ರತಿ ಜರಗುವ ಉತ್ಸವವು ತಾ. ೯ರೆಂದು ಜರಗಿತು. ರಾತ್ರಿ ಉತ್ಸವದ ನಂತರ ನುರಿತ ಅರ್ಥಧಾರಿಗಳ ಕೂಡುವಿಕೆಯಿಂದ ಯಕ್ಷಗಾನಕೂಟವು ಜರಗಿತು

ಸದ್ರಿದೇವಸ್ಥಾನದ ಕಮಿಟಿಯ ಮಹಾಸಭೆಯು ಇದೇ ಬರುವ ತಾ. 16—1—55ನೇ ಆದಿತ್ಯವಾರದಿನ ಜರಗಲಿರುವುದೆಂದ ಸಂಬಂಧಪಟ್ಟವರು ತಿಳಿಸುತ್ತಾರೆ.

ಮುನಿಸಿಪಲ್ ಸಭೆಯು— ಇದೇ ತಾ. ೬ರಲ್ಲು ಚೇರ್‌ಮೆನ್ ಡಾ| ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ 1954-55ರ ತಿದ್ದಿದ ಮತ್ತು 1955-56ರ ಅಂದಾಜು ಬಜೆಟನ್ನು ಕಮಿಷನರ್ ಶ್ರೀ ಕೆ. ಗೋಪಾಲ ಮೆನೋನ್ ಅವರು ಸಭೆಯ ಮುಂದಿರಿಸಿ ಮುಂಗಡ ಪತ್ರದಲ್ಲಿ ಕೊರತೆಯಿದೆ ಎಂದು ಹೇಳಿದರು. ಇದನ್ನು ಹೋಗಲಾಡಿಸಲು ತೆರಿಗೆಯನ್ನು ಏರಿಸಬೇಕು ಇಲ್ಲವೆ ಕೆಲವೊಂದು ಖರ್ಚುಗಳಲ್ಲಿ ಕಡಿತ ಮಾಡಬೇಕೆಂದು ಸೂಚಿಸಿದರು. ಬಜೆಟ್ ವಿಮರ್ಶೆ ಮತ್ತು ಅಂಗೀಕಾರವನ್ನು ಮುಂದಿನ ಸಭೆಗೆ ಮುಂದೆ ಇಡಲಾಯಿತು. ಮುನಿಸಿಪಲ್ ವ್ಯವಹಾರದ ಕ್ಷೇತ್ರದಲ್ಲಿ ಕೆಲವೊಂದು ಸರಕಾರಿ ಖಾಲಿ ಸ್ಥಳಗಳನ್ನು ಮುಕ್ತಟಿಯಾಗಿ ನಗರ ಸಭೆಗೆ ಬಿಟ್ಟು ಕೊಡಬೇಕೆಂದು ಆ ಸ್ಥಳಗಳನ್ನು ಉತ್ಪತ್ತಿದಾಯಕವಾಗಿ ಮಾಡಲು ಧನ ಸಹಾಯ ಕೊಡಬೇಕೆಂದು ಸರಕಾರವನ್ನು ಕೇಳಿ ಕೊಳ್ಳಲಾಯಿತು.

ಮುನಿಸಿಪಲ್ ಬಸ್‌ಸ್ಟೇಂಡಿನ ವಾರ್ನೆಲು ರೂಮು ಮತ್ತು ಬುಕಿಂಗ್ ಆಫೀಸನ್ನು ಬರುವ ಎಪ್ರಿಲ್ ತಿಂಗಳಿಂದ ಏಲಂ ಮಾಡಬೇಕೆಂದೂ, ಮಾರ್ಚ ತಿಂಗಳಾಂತ್ಯದಲ್ಲಿ ಅವುಗಳನ್ನು ಬಿಟ್ಟುಕೊಡುವಂತೆ ಕೆಂಟ್ಯಾಂಡ್ ಬುಕ್ಕಿಂಗ್ ಏಜನ್ಸಿಗೆ ನೋಟೀಸು ಕೊಡಬೇಕೆಂದೂ ಸಭೆಯು ತೀರ್ಮಾನವಾಯಿತು, ಲೋಕಲ್ ಲೈಬ್ರರಿ ಅಥೋರಿಟಿಗೆ ಡಾ| ಪಿ. ವಿ. ವ್ಯಾಸರಾಯರು ಬಹುಮತದಿಂದ ಆರಿಸಲ್ಪಟ್ಟರು. ಶಿರಿಬೀಡು ವಾರ್ಡನ್ನು ಕೂಡಲೇ ತೆಗೆದು ಬಿಡಬೇಕೆನ್ನುವ ನಿರ್ಣಯವು ಬಹುಮತದಿಂದ ಪಾಸಾಯಿತು.

ಹೆಬ್ರಿಯಲ್ಲಿ ಭೂದಾನಯಜ್ಞ ಕಾರ್ಯಕರ್ತರ ಸಭೆಯು - ಇದೇ ತಾ. ೧೬ರಲ್ಲಿ ಹೆಬ್ರಿಯಲ್ಲಿ ಪೂರ್ವಾಹ್ನ ೩ಗಂಟೆಗೆ ಜರಗಲಿರುವುದು. ಕರ್ನಾಟಕ ಭೂದಾನ ಯಜ್ಞ ಸಮಿತಿಯ ಸಂಯೋಜಕ ಹಾಗೂ ಅಖಿಲ ಕರ್ನಾಟಕ ಹಿರಿಯ ಕಾರ್ಯಕರ್ತರಾದ ಶ್ರೀ ತಿಮ್ಮಪ್ಪ ನಾಯಕರು ಈ ಸಭೆಗೆ ಬರಲಿರುವರು. ಜಿಲ್ಲೆಯ ಕಾರ್ಯಕರ್ತರೆಲ್ಲರೂ ಈ ಸಭೆಯಲ್ಲಿ ಭಾಗವಹಿಸಿ ಭೂದಾನ ಯಜ್ಞ ಆಂದೋಲನವನ್ನು ಯಶಸ್ವಿಗೊಳಿಸ ಬೇಕಾಗಿ ಶ್ರೀ ಗಳಾದ ಕೆ. ಶ್ರೀನಿವಾಸ ಪೈ, ಕೆ. ಕೆ. ಪಿ. ರಾಮಪೊತುವಾಳ್ ಮತ್ತು ಎಸ್. ಎಸ್. ವೆಂಕಟರಮಣನವರು ವಿನಂತಿಯಿವೆ.



ಉತ್ಸವದ ಸಂತೋಷ ಪರಿಪೂರ್ಣವಾಗಬೇಕೇ! ಹಾಗಾದರೆ ಮಹಾ ಪತಿವ್ರತಾ ಶಿರೋಮಣಿಯ ಈ ಪುಣ್ಯ ಕಥೆಯ ಚಿತ್ರವನ್ನು ತಪ್ಪದೆ ನೋಡಿರಿ
ಗುಬ್ಬಿ ಕರ್ನಾಟಕ ಪ್ರೊಡಕ್ಷನ್ಸ್‌ರವರ ಲಕ್ಷಾಂತರ ವೆಚ್ಚದ ಭವ್ಯ ಚಿತ್ರ
'ಗುಣಸಾಗರಿ' (ಕನ್ನಡ)
ಹೊನ್ನಪ್ಪ ಭಾಗವತರ್, ಬಾಲಯ್ಯ, ಪಂಡರಿ ಬಾಯಿ, ಬಿ. ಜಯಮ್ಮ, ಮತ್ತು ನಾಟಕ ರತ್ನ ವೀರಣ್ಣ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ಸ.)

ತ್ರಿಭುವನ ತಿಲಕಂ—
(ವಿರುಪರಾಜ ವಿರಚಿತ)

ಹರಿಹರಾದ್ವೈತ ಭೂಷಣಂ –
(ಬೋಧೇಂದ್ರ ಸರಸ್ವತಿ ಕೃತ)

ಸಂಪಾದಕರು ಮತ್ತು ಪ್ರಕಾಶಕರು: ಟಿ. ಚಂದ್ರಶೇಖರನ್, ಸರಕಾರದ ಪ್ರಾಚೀನ ಹಸ್ತ ಪ್ರತಿಗಳ ಗ್ರಂಥ ಭಂಡಾರ, ಮದ್ರಾಸು.

ಕನ್ನಡ ಸಾಹಿತ್ಯದಲ್ಲಿನ ಇನ್ನೂ ಬೆಳಕಿಗೆ ಬಾರದ ಗ್ರಂಥರತ್ನಗಳನ್ನು ಆಯ್ದು ಅವುಗಳನ್ನು ಪರಿಷ್ಕರಿಸಿ ಪ್ರಕಟಿಸುವ ಸರಕಾರದ ಪ್ರಯತ್ನದ ಫಲವಾಗಿ ವಿರುಪರಾಜನಿಂದ ರಚಿಸಲ್ಪಟ್ಟ "ತ್ರಿಭುವನ ತಿಲಕಂ" ಎಂಬ ಉತ್ತಮ ಸಾಂಗತ್ಯ ಕಾವ್ಯವನ್ನು ಓದುವ ಸಂದರ್ಭ ಕನ್ನಡಿಗರಿಗೆ ದೊರೆತುದು ಪ್ರಶಂಸಾರ್ಹವಾದ ವಿಷಯ. ಇದನ್ನು ಬರೆದವನು ಕೇರಳ ಪ್ರಾಂತದಲ್ಲಿ ಸುಮಾರು ೧೫೦೦ನೇ ಇಸವಿಯ ಹೊತ್ತಿಗಿದ್ದ ರಾಜಶ್ರೇಷ್ಠನೆಂಬುದನ್ನು ನೆನೆದರೆ, ಕನ್ನಡ ಸಾಹಿತ್ಯಕ್ಕೆ ರಾಜಕೀಯ ಧುರಂಧರರಿಂದಲೂ ಸೇವೆ ಸಂದಿದೆಯೆಂಬ ಸಂಗತಿ ಸ್ಪಷ್ಟವಾಗುತ್ತದೆ. ಇಲ್ಲಿಯ ಕಥಾವಸ್ತು ಚೇರಮಭೂಪನೆಂಬ ಶಿವಭಕ್ತನನ್ನು ಕುರಿತಾಗಿದ್ದು, ನಿರೂಪಣೆಯು ಲಲಿತವೂ ಸುಲಭಗ್ರಾಹ್ಯವೂ ಆಗಿದೆ. ವರ್ಣನೆಗಳು ಧಾರಾಳವಾಗಿ ಬಂದಿವೆಯಲ್ಲದೆ, ಶೃಂಗಾರ, ವೀರ, ಶಾಂತ, ಕರುಣಾದಿ ರಸಗಳನ್ನೂ ಕಾವ್ಯವು ಹೊರಸೂಸುತ್ತದೆ. ವಿರುಪರಾಜನು ತನ್ನ ಪತ್ನಿಯನ್ನು ಉದ್ದೇಶಿಸಿ ಕತೆಯನ್ನು ಹೇಳಿದಂತೆ ತಿಳಿದು ಬರುತ್ತದೆ. ಕಾವ್ಯಾಭಿರುಚಿಯುಳ್ಳ ಸಜ್ಜನರಿಗೆ ಇದು ಮನೋರಂಜನೆಯ ಉತ್ತಮ ಸಾಧನವಾಗಿದೆಯಲ್ಲದೆ ಆಧ್ಯಾತ್ಮಿಕ ಜಿಜ್ಞಾಸೆಯುಳ್ಳವರಿಗೆ ಶೈವ ಸಿದ್ಧಾಂತದಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆ. ಕನ್ನಡಿಗರಿಗೆ ದುರ್ಲಭವಾಗಿದ್ದ ಈ ಕಾವ್ಯವೀಗ ಮುದ್ರಣ ರೂಪದಲ್ಲಿ ಪ್ರಕಟಗೊಂಡುದರಿಂದ ರತ್ನಾಕರ ವರ್ಣಿಯ ಭರತೇಶ ವೈಭವದಂತೆ ಜನಪ್ರಿಯತೆಯನ್ನು ಇದು ಹೊಂದುವ ಕಾಲ ಇನ್ನು ಬಹಳ ದೂರವಿರಲಾರದು.

ಸಂಸ್ಕೃತದಲ್ಲಿ ಬರೆಯಲಾದ "ಹರಿಹರಾದ್ವೈತ ಭೂಷಣಂ" ಎಂಬುದು ಬಹಳ ಪ್ರಾಮುಖ್ಯವಾದ ವಿಚಾರವೊಂದರ ಸಮಗ್ರ ವಿವೇಚನೆಯನ್ನು ಮಾಡುತ್ತದೆ. ಹಿಂದುಗಳಲ್ಲಿ ಹರಿ ಮತ್ತು ಹರರಲ್ಲಿ ಭೇದವನ್ನೆಣಿಸುವವರು ಹಿಂದಿನಂತೆ ಇಂದಿಗೂ ಕಂಡುಬರುವುದರಿಂದ ಅವರ ಅಭಿಪ್ರಾಯವನ್ನು ತಿದ್ದುವುದಕ್ಕೆ ಈ ಗ್ರಂಥದ ವಾಚನದಿಂದ ನೆರವಾಗದಿರದು. ಹರಿಯೂ ಹರನೂ ಒಂದೇ ಚೈತನ್ಯದ ಎರಡು ಸ್ವರೂಪವಲ್ಲದೆ, ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲವೆಂಬ ವಿವೇಕವನ್ನು ಮೂಡಿಸುವ ಈ ಗ್ರಂಥವು ಪ್ರಾಚೀನ ಆರ್ಯರ ಪ್ರಮಾಣ ವಾಕ್ಯಗಳಿಂದ ತುಂಬಿ ತುಳುಕುತ್ತದೆ. ಮೂರು ಭಾಗದಲ್ಲಿ ಬರೆಯಲಾದ ಈ ಗ್ರಂಥವು ಮೊದಲಿಗೆ ವಿಷ್ಣುವಿನ ಶ್ರೇಷ್ಠಸ್ಥಾನವನ್ನೂ ಬಳಿಕ ಶಿವನ ಮಹಿಮೆಯನ್ನೂ ವರ್ಣಿಸಿ, ಕೊನೆಗೆ ಇವರಿಬ್ಬರೂ ಭೇದವಿಲ್ಲದ ಚೈತನ್ಯ ಸ್ವರೂಪರೆಂಬುದನ್ನು ಸಮನ್ವಯ ದೃಷ್ಟಿಯಿಂದಲೂ ದೃಷ್ಟಾಂತ ಶ್ಲೋಕಗಳಿಂದಲೂ ಮನಗಾಣಿಸುತ್ತದೆ. ವೇದೋಪನಿಷತ್ತುಗಳ, ಪುರಾಣೇತಿಹಾಸಗಳ ಮತ್ತು ಸ್ಮೃತಿಗಳ ಆಧಾರದಿಂದ ಗ್ರಂಥವನ್ನು ಬರೆದ ಬೋಧೇಂದ್ರ ಸರಸ್ವತಿಯವರು ಒಳ್ಳೆಯ ಪ್ರತಿಭೆಯನ್ನು ಪ್ರಕಟಿಸಿರುವರಲ್ಲದೆ, ದೇವರ ಹೆಸರಿನಲ್ಲಿ ಜಗಳವಾಡದಂತೆ ಜನರನ್ನು ಎಚ್ಚರ ಗೊಳಿಸಲೂ ಲೇಖನಶಕ್ತಿಯನ್ನು ಉಪಯೋಗಿಸಿರುವರು. ನಮಗೆ ಬಂದ ಗ್ರಂಥ ಪ್ರತಿಯ ಕೊನೆಯಲ್ಲಿ ಗದ್ಯ ರೂಪದಲ್ಲಿ ಮೂರು ಭಾಗಗಳಲ್ಲಿ ಮಂಡಿಸಲಾದ ವಿಚಾರಗಳನ್ನೇ ಪದ್ಯರೂಪದಲ್ಲಿ ಸಂಕ್ಷೇಪಿಸಿದ ಕಾರಿಕವೂ ಸೇರಿರುತ್ತದೆ. ಇದೆಲ್ಲವನ್ನೂ ಸಂಗ್ರಹಿಸಿ, ಪರಿಷ್ಕರಿಸಿ, ಪ್ರಕಟಿಸಿದವರ ತಾಳ್ಮೆಯನ್ನೂ ಜಾಣ್ಮೆಯನ್ನೂ ಕೊಂಡಾಡುತ್ತೇವೆ.

ರಾಮಚಂದ್ರ—

ಬರೆದವರು: ರಮಾನಂದ ಅಮೀನ್. ಪ್ರಕಾಶಕರು: ಚಂದ್ರಸಾಗರ ಪ್ರಕಾಶನ, ಗವರ್ನಮೆಂಟ್ ಬಿಲ್ಡಿಂಗ್ ೧, ಬ್ಲಾಕ್ ೫, ೭೦ನೇ ಬಿ. ಡಿ. ಚಾಳಿನ ಎದುರು, ವರ್ಲಿ, ಮುಂಬಯಿ ೧೮.

ಇದೊಂದು ಸಾಮಾನ್ಯವಾದ ಕತೆ — ತೀರ ಸಾಮಾನ್ಯವಾಗಿ ಹೇಳಲ್ಪಟ್ಟದ್ದು, ಕಥನ ಶೈಲಿಯ ಹಾಗು ತಂತ್ರದ ಪರಿಚಯವು ಲೇಖಕರಿಗೆ ಸಾಕಷ್ಟಿಲ್ಲವೆಂಬುದನ್ನು ತೋರಿಸಿಕೊಡುತ್ತದೆ. ಪ್ರಕಟಿಸುವ ಅನುಕೂಲತೆ ಇಲ್ಲದೆ ಮೂಲೆಗುಂಪಾದ ಪಕ್ವ ಕೃತಿಗಳಿದ್ದರೆ ಅವುಗಳನ್ನು ತಬ್ಬಲಿ ಮಾಡದೆ ಬೆಳಕಿಗೆ ತರುವ ಪ್ರಯತ್ನ ನಡೆಯುವುದು ಒಳ್ಳೇದು— ಆದರೆ "ರಾಮಚಂದ್ರ" ಮುದ್ರಣಗೊಳ್ಳದಿರುತ್ತಿದ್ದರೆ ಓದುಗರಿಗೆ ನಷ್ಟವೇನೂ ಆಗುತ್ತಿರಲಿಲ್ಲ. ಬರೆದುದನ್ನು ಪ್ರಕಟಿಸುವ ಹವ್ಯಾಸದ ಬದಲು ಒಳ್ಳೆಯ ರೀತಿಯಲ್ಲಿ ಬರೆಯಲು ತರುಣರು ಮನಸ್ಸು ಮಾಡಬೇಕೆಂದಷ್ಟೇ ನಾವು ಸೂಚಿಸುತ್ತೇವೆ.

ಜನಮತ

ಮೂಗಿಗಿಂತ ಮೂಗುತಿ ಭಾರ!

ಪ್ರಿಯರೇ,

ನಿಮ್ಮ ದಿನಾಂಕ ೩೦-೧೨-೧೯೫೪ ನೇ ಸಂಚಿಕೆಯಲ್ಲಿ ಬಂದ "ನವ್ಯಸಾಹಿತ್ಯ ನಿರ್ಮಾಣ" ಎಂಬ ನಾಲ್ಕಾಣೆ ಬೆಲೆಯ ಪುಸ್ತಕದ ಸವಿವರ ವಿಮರ್ಶೆಯನ್ನೋದಿ, ಪುಸ್ತಕವನ್ನು ಪ್ರಕಾಶಕರಾದ ಮೈಸೂರಿನ ಕಾರ್ಯಾಲಯದವರಿಂದ ತರಿಸುವ ಮನಸ್ಸಾಯಿತು. ಆದರೆ ನಾಲ್ಕಾಣೆ ಬೆಲೆಯ ಈ ಪುಸ್ತಕವನ್ನು ತರಿಸುವುದಕ್ಕೆ ಒಟ್ಟು ತಗಲುವ ಟಪ್ಪಾಲು ಖರ್ಚನ್ನು ನೋಡಿ, ಯೋಚನೆಯನ್ನು ದೂರಮಾಡಬೇಕಾಯಿತು. ನಾನು ಲೆಕ್ಕಕ್ಕೆ ಹಿಡಿದ ಖರ್ಚಿನ ವಿವರ ಹೀಗಿರುತ್ತದೆ:-

ಪುಸ್ತಕ ಕಳಿಸಿರೆಂದು ಕಾರ್ಯಾಲಯದವರಿಗೆ ಬರೆಯುವ ಕಾರ್ಡು	ರೂ. ೦. ೦. ೯
ಪುಸ್ತಕದ ಬೆಲೆ	ರೂ. ೦. ೪. ೦
ಅದರ ಮೇಲೆ ಸ್ಟಾಂಪು	ರೂ. ೦. ೧. ೦
ವಿ. ಪಿ. ಪಿ. ಚಾರ್ಜು	ರೂ. ೦. ೭. ೦
ಮನಿಯಾರ್ಡರು ಚಾರ್ಜು	ರೂ. ೦. ೨. ೦
ಒಟ್ಟು:	ರೂ. ೦. ೧೪. ೯

ಸಾಮಾನ್ಯವಾಗಿ ಎಲ್ಲ ಪುಸ್ತಕಗಳಿಗೂ ಇದೇ ಬಗೆಯ ಖರ್ಚು ಅನ್ವಯಿಸುತ್ತದೆ. ಆದುದರಿಂದ ಪುಸ್ತಕ ತರಿಸಿಕೊಳ್ಳುವವರು ಮುಖ ಬೆಲೆಯ ಇಮ್ಮಡಿ ಅಥವಾ ಮುಮ್ಮಡಿಯಷ್ಟು ಟಪ್ಪಾಲು ಖರ್ಚನ್ನು ಹೊರಬೇಕಾಗುತ್ತದೆ.

ಸರಕಾರದವರು ವಿ. ಪಿ. ರಿಜಿಸ್ಟ್ರೇಶನಿನ ಮತ್ತು ಮನಿಯಾರ್ಡರಿನ ಹಾಸಲನ್ನು ಐದು ರೂಪಾಯಿಗಳಿಗಿಂತ ಕಡಿಮೆ ಬೆಲೆಯ ಪುಸ್ತಕಗಳ ಮಟ್ಟಿಗಾದರೂ ಕಡಿಮೆ ಮಾಡದಿದ್ದರೆ ಜನರ ಓದುವ ಅಭಿರುಚಿಯನ್ನು ಅಭಿವೃದ್ಧಿಗೊಳಿಸುವುದು ಸಾಧ್ಯವಾಗಲಾರದೆಂದು ಅನಿಸುತ್ತದೆ. ಕೇಂದ್ರದ ಮುಂಗಡ ಪತ್ರವನ್ನು ಇದೇ ಫೆಬ್ರುವರಿಯಲ್ಲಿ ಸಂಸತ್ತಿನ ಮುಂದೆ ಮಂಡಿಸಲಿರುವ ಅರ್ಥಸಚಿವ ದೇಶಮುಖರು ದಯವಿಟ್ಟು ಈ ವಿಷಯವನ್ನು ಪರ್ಯಾಲೋಚಿಸಬೇಕಾಗಿ ಪ್ರಾರ್ಥಿಸುತ್ತೇನೆ.

— ಪುಸ್ತಕಪ್ರಿಯ.

1955 ಇಸವಿಯ ಕೆಲೆಂಡರ್ ಸ್ವೀಕಾರ— 1. ಎಸ್. ಆರ್. ಬೀಡಿ ವರ್ಕ್ಸ್, ಉಡುಪಿ, 2. ಹಿಂದುಸ್ತಾನ್ ಪೇಪರ್ ಮತ್ತು ಸ್ಟೇಶನರಿ ಮಾರ್ಟ್, ಉಡುಪಿ 3. ನೆಲ್ಸನ್ ಎಂಡ್ ಕೊ ಚೂಲೈಯಿ ಮದ್ರಾಸು. 4. 'ಮಧು' ಮಂಗಳೂರು ನಸ್ಯ, ಉಡುಪಿ. 5. ಮಂಗಳೂರು ದಿಲ್ ಖುಶ್ ಅಸಾದಿ ಸ್ನಫ್, ಶಿರ್ವ, 6. ಆಯುರ್ವೇದ ರಸಶಾಲಾ ಪೂನಾ ೨., ಪೂನಾ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ,

1929ರಲ್ಲಿ ಸ್ಥಾಪಿತವಾಗಿ 26 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—1—0; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ, ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ ಶ್ರೀ. ಎ. ಎಸ್. ಪಂಚಪಕೇಶ ಅಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್ ಲಾ, ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು— ಶ್ರೀ. ಕೋಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾಗಿ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಕತೆಗಳು ಬೆಲೆ ರೂ 1—12—0

ನವಭಾರತ ಪುಸ್ತಕ ಭಂಡಾರ, ಉಡುಪಿ

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ಶೀಘ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಶ್ರೀ ಶಿವರಾಮ ಕಾರಂತರ
ಕೆಲವು ಪುಸ್ತಕಗಳು

ಒಡಹುಟ್ಟಿದವರು	2—8—0
ಕುಡಿಯರ ಕೂಸು	3—4—0
ಚಿಗುರಿದ ಕನಸು	3—4—0
ಅಪೂರ್ವ ಪಶ್ಚಿಮ	4—0—0
ಕಲೆಯ ದರ್ಶನ	1—12—0
ನವೀನ ನಾಟಕಗಳು	1—8—0
ಬಾಳ್ವೆಯೇ ಬೆಳಕು	1—8—0

ನವಭಾರತ ಪುಸ್ತಕ ಭಂಡಾರ.
ಉಡುಪಿ.

(೨ನೇ ಪುಟದಿಂದ)

ಬಿಸಿ ಜಿದಾಕುಗಳನ್ನು ಹಾಕಿದಂತೆ,ಕುಷ್ಠ ರೋಗದ ಪ್ರಸಾರಕ್ಕೂ ಆ ದಾಕನ್ನು ಚು ಚ್ಚಲಾಗುತ್ತದೆ. ಕುಷ್ಠ ರೋಗದಿಂದ ಸಮುದಾಯವನ್ನು ರಕ್ಷಿಸುವುದಕ್ಕೆ ಬಿಸಿ ಜಿ ದಾಕೇ ಉಪಯುಕ್ತವೆಂದು ತಜ್ಞರ ಅಭಿಪ್ರಾಯ.

ಸಾಂಸರ್ಗಿಕ ಗುಣವನ್ನು ಕುಷ್ಠ ರೋಗ ಹೊಂದಿದ್ದರೂ ಎಲ್ಲ ರೋಗಗ ಳೂ ಕುಷ್ಠ ರೋಗವನ್ನು ಹರಡುವುದಿಲ್ಲ. ಅಮೇರಿಕದಲ್ಲಿ ನೂರಕ್ಕೆ ಎಪ್ಪತ್ತೈದರಷ್ಟು ಸಾಂಕ್ರಾಮಿಕ ಕುಷ್ಠ ರೋಗಿಗಳಿದ್ದರೂ ಭಾರತದಲ್ಲಿ ಇವರ ಪ್ರಮಾಣ ನೂರಕ್ಕೆ ಇಪ್ಪತ್ತೈದರಷ್ಟು ಮಾತ್ರ ಇದೆಯೆಂದು ತಿಳಿಯುತ್ತದೆ. ಹೀಗೆ ಸಾಂಸರ್ಗಿಕ ಸ್ವರೂ ಪದ ಕುಷ್ಠ ರೋಗ ಹೊಂದಿದವರನ್ನು ಪ್ರತ್ಯೇಕವಾಗಿ ಕುಷ್ಠ ಧಾಮಗಳಲ್ಲಿರಿಸು ವುದು ಅಪೇಕ್ಷಣೀಯ. ಕುಷ್ಠ ರೋಗಿಗ ಳೂ ಅವರ ಮನೆಯವರೂ ಕೆಲವು ಮುಂ ಜಾಗ್ರತೆಯ ಕ್ರಮಗಳನ್ನು ತೆಗೆದುಕೊಂ ಡರೆ, ರೋಗದ ನಿವಾರಣೆ ಮಾಡುವುದೂ ಪ್ರಸಾರವನ್ನು ತಡೆಗಟ್ಟುವುದೂ ಸುಲಭ ವಾಗುತ್ತದೆ. ಚಿಕ್ಕ ಮಕ್ಕಳನ್ನು ರೋಗಿ ಯಿಂದ ದೂರವಿಡಬೇಕಲ್ಲದೆ, ಅವನು ತನ್ನ ಬಟ್ಟೆಬರೆಗಳನ್ನೂ ಪಾತ್ರೆಗಳನ್ನೂ ಬೇರೆಯೇ ಇಡುವಂತೆ ನೋಡಿಕೊಳ್ಳುವು ದು ಹಿತಕರ. ರೋಗದ ಉಲ್ಬಣಾವಸ್ಥೆ ಯಲ್ಲಿ ಹುಟ್ಟಿದ ಹುಣ್ಣು ಮತ್ತು ಗಾಯಗ ಳನ್ನು ಪ್ರಾಯ ಪ್ರಬುದ್ಧರಾದವರೇ ತೊ ಳೆದು ಶುಚಿ ಮಾಡುವುದು ಒಳ್ಳೆಯದು ಹಾ ಗೆ ಮಾಡುವುದರಿಂದ ಅವರು ತಮಗೆಲ್ಲಿ ಕು ಷ್ಠ ರೋಗ ಬರುವುದೋ ಎಂದು ಅಂಜು ವುದು ಅಗತ್ಯವಿಲ್ಲ. ಮಹಾತ್ಮ ಗಾಂಧಿಯು ವರು ಸ್ವಹಸ್ತದಿಂದ ಕುಷ್ಠ ರೋಗಿಗಳ ನ್ನು ಉಪಚರಿಸುತ್ತಿದ್ದರು. ಕುಷ್ಠ ರೋಗಿ ಗಳ ಶುಶ್ರೂಷೆ ಮಾಡಿದ ಸಹಸ್ರಾರು ವೈ ದ್ಯರಲ್ಲಿ ಕೇವಲ ನಾಲ್ಕು ಮಂದಿ ಮಾತ್ರ ಆ ರೋಗವನ್ನು ಪಡೆದರೆಂದು ಜಗತ್ತಿನ ವೈದ್ಯಕೀಯ ಚರಿತ್ರೆ ತಿಳಿಸುತ್ತದೆ ಕುಷ್ಠ ರೋಗಿಗಳು ಕ್ಷೌರಿಕನ, ಶಿಕ್ಷಕನ ಮ ತ್ತು ಅಗಸನ ಕೆಲಸವನ್ನು ಬಿಟ್ಟು ಬೇರೆ ಉದ್ಯೋಗಗಳನ್ನು ಕೈಗೊಳ್ಳಲು ಅಡ್ಡಿ ಯಿಲ್ಲ—ಅವರು ಆತ್ಮ ವಿಶ್ವಾಸವನ್ನು ಕ ಳೆದು ಕೊಳ್ಳುವುದೂ ಧೈರ್ಯ ಕೆಡಿಸಿಕೊ ಳ್ಳುವುದೂ ಅಗತ್ಯವಿಲ್ಲ. ಗುಣಮುಖರಾ ದ ಬಳಿಕ ಅವರು ಎಲ್ಲರಂತೆಯೇ ಚೆನ್ನಾ ಗಿ ಬಾಳಬಲ್ಲರು.

ರಾಷ್ಟ್ರದ ಪ್ರಗತಿ ಮತ್ತು ಮೂಲಶಿಕ್ಷಣ

ಸೇವಾ ಭಾವನೆಯ ಪೋಷಣೆ

ಆತ್ಮ ಸಂಯಮ ಅಕ್ಕರೆ ಮತ್ತು ಸೇ ವೆಗಳೆಂಬ ಮೂರು ಆಧಾರ ಸ್ತಂಭಗಳ ಮೇಲೆ ಸಮಾಜವನ್ನು ನಿರ್ಮಿಸಲು ಮ ಹಾತ್ಮ ಗಾಂಧಿಯವರು ಆಶಿಸಿದರು. ಅಂ ತಹ ನೆಲವಿನಲ್ಲಿ ಸ್ವಪ್ರಯೋಜನಕ್ಕಾಗಿ ಒಬ್ಬರು ಮತ್ತೊಬ್ಬರಿಂದ ಬಾಡಿಸಿಕೊಳ್ಳ ಲು ಅವಕಾಶವಿರುವುದಿಲ್ಲ.

ದುಡಿಮೆಯನ್ನು ಗೌರವಿಸುವುದಲ್ಲದೆ ಮಾನವ ಶ್ರಮದ ಪ್ರತಿಷ್ಠೆಯೂ ಹೆಚ್ಚು ವುದು. ತನ್ನ ಮೇಲಿನ ಪ್ರೇಮವನ್ನು ತ ನ್ನ ಗ್ರಾಮಕ್ಕೂ ರಾಷ್ಟ್ರಕ್ಕೂ ವಿಸ್ತರಿಸು ವಂತೆ ಮಾಡಬೇಕೆಂದೂ ಮಾನವ ಜ ನಾಂಗದ ಮೇಲೆ ಸಹಾನುಭೂತಿಯನ್ನು ತೋರಿಸಬೇಕೆಂದೂ ಅವರು ಇಚ್ಛಿಸಿದ ರು. ಆತ್ಮ ಸಂಯಮ, ಒಲುಮೆ ಮತ್ತು ಸೇವಾಮನೋಭಾವನೆಯ ಕಲೆಯಲ್ಲಿ ಮಕ್ಕಳಿಗೆ ತರಬೇತನ್ನು ಕೊಡುವಂತಹ ಮಾದರಿಯ ಶಿಕ್ಷಣವನ್ನು ಅವರು ಪ್ರವ ರ್ತಿಸಿದರು. ಈ ರೀತಿಯಲ್ಲಿ ರಾಷ್ಟ್ರದಲ್ಲಿ ಮೂಲ ಶಿಕ್ಷಣದ ಭಾವರೂಪವು ಉದ ಯವಾಯಿತು.

"ಭಾರತವು ಪುನಃ ಉನ್ನತಿಗೆ ಏರಬೇ ಕಾದಲ್ಲಿ, ಪ್ರತಿಯೊಬ್ಬನೂ ದುಡಿಯುವ ಹೊಸ ಮಾದರಿಯ ಸಮಾಜವನ್ನು ನಾ ವು ಸೃಷ್ಟಿಸಬೇಕಾಗುತ್ತದೆ. ದುಡಿಮೆಯು ಪ್ರಕೃತಿಯೇ ಮನೋವಿಶ್ವಾಸವನ್ನೂ ಶ ಕ್ತಿಯನ್ನೂ ಹುರಿದುಂಬಿಸುವುದು. ಉತ್ತ ಮ ಜೀವನದ ಸಾಮಾಜಿಕ ರಚನೆಯ ಮೂಲ ಆಧಾರವು ದುಡಿಮೆ ಎಂಬುದ ನ್ನು ಗಾಂಧೀಜಿಯವರು ಕಂಡು ಹಿಡಿ ದರು. ಇದು ಮೂಲ ಶಿಕ್ಷಣದ ಅತ್ಯವ ಶ್ಯಕವಾದ ಮೂಲತತ್ವವಾಗಿದೆ" ಎಂದು ಶ್ರೀ. ಟಿ. ಎಸ್. ಅವಿನಾಶಲಿಂಗಮರು ಕೇಂದ್ರ ಶಿಕ್ಷಣ ಶಾಖೆಯ ಪ್ರಕಟಣೆಯಾ ದ "ಮೂಲ ಶಿಕ್ಷಣದ ತಿಳಿವಳಿಕೆ" ಎಂಬ ಪುಸ್ತಕದಲ್ಲಿ ಬರೆದಿದ್ದಾರೆ.

ವಾರ್ಧಾದಲ್ಲಿ ಸೇರಿದ್ದ ಶಿಕ್ಷಣ ಶಾಸ್ತ್ರ ಜ್ಞರ ಸಮ್ಮೇಳನವೊಂದನ್ನು ಗಾಂಧೀಜಿ ಯವರು ೧೯೩೭ರಲ್ಲಿ ನೇರಿಸಿದ್ದಾಗ ಮೂಲ ಶಿಕ್ಷಣದ ಪ್ರಥಮ ಕಲ್ಪನೆ ಯು ಅವರಿಗೆ ಹೊಳೆಯಿತು. ದುಡಿಮೆ ಯನ್ನೂ ಶಿಕ್ಷಣವನ್ನೂ ಒಟ್ಟುಗೂಡಿಸು ವ ವಿಚಿತ್ರದ ಶಿಕ್ಷಣ ಪದ್ಧತಿಯ ಹೊಸ ಭಾವನೆಯನ್ನು ಆಗ ಅನೇಕ ಶಿಕ್ಷಣದ ಲ್ಲಿನ ಪೂರ್ವಾಚಾರದ ಪಂಡಿತರು ವಿ ರೋಧಿಸಿದರು. ಆದರೆ ಸುಮಾರು ೧೫ ವರ್ಷಗಳ ನಂತರ ಈ ಧ್ಯೇಯ ಅಥವಾ ಭಾವನೆಗೆ ಜನರ ಅಂಗೀಕಾರ ದೊರೆತೇ ದೊರೆಯಿತು.

ಡಾ॥ ಎಸ್. ರಾಧಾಕೃಷ್ಣನ್ನರ ಅಧ್ಯ ಕ್ಷತೆಯಲ್ಲಿ ಈಚೆಗೆ ನೇಮಿಸಿದ ವಿಶ್ವವಿ ದ್ಯಾನಿಲಯ ಶಿಕ್ಷಣ ಸಮಿತಿಯೂ ಈ ಧ್ಯೇಯವನ್ನು ಸ್ವಾಗತಿಸಿದೆ. ಮಾಧ್ಯ ಮಿಕ ಶಿಕ್ಷಣ ಸಮಿತಿಯೂ ಮೂಲ ಶಿಕ್ಷ ಣದ ಭಾವನೆಯನ್ನು ಮೆಚ್ಚಿದೆ.

ಅಮೇರಿಕಾ ಮತ್ತಿತರ ಪ್ರಗತಿಶೀಲ ರಾಷ್ಟ್ರಗಳು ಪುಸ್ತಕಗಳಲ್ಲಿ ಕೇಂದ್ರೀಕೃತ ವಾದ ಶಿಕ್ಷಣವು ಮಕ್ಕಳನ್ನು ಉತ್ತಮ ವಾಗಿ ಬೆಳೆಸಲು ಸಹಾಯವಾಗುವುದಿಲ್ಲ ವೆಂಬುದನ್ನೂ ಮನಶ್ಶಾಸ್ತ್ರಾನುಗುಣವಾಗಿ ಕೂಡ ಮಕ್ಕಳಿಗೆ ಹೊಂದುವುದಿಲ್ಲವೆಂಬು ದನ್ನೂ ಮನಗಂಡಿವೆ. ಮಗುವಿನ ಮನ ಸ್ಸಿಗೆ ಅನುಗುಣವಾಗಿರುವ ಚಟುವಟಿಕೆ ಗಳ ವೈವಿಧ್ಯದಿಂದ ಬೋಧಿಸುವ ಕ್ರಮ ದ ಶಿಕ್ಷಣವನ್ನು ಆ ರಾಷ್ಟ್ರಗಳು ಸೂಚಿಸಿ ವೆ. ಇವನ್ನು ಪ್ರಗತಿಶೀಲ ಶಿಕ್ಷಣ ಕ್ರಮ ವೆಂದು ಒಪ್ಪಲಾಗಿದೆ. ಈ ಧ್ಯೇಯವನ್ನು ಮುಂದುವರಿಸಿ ಆ ಚಟುವಟಿಕೆಗಳನ್ನು ನಿರಂತರದ ಕಲೆಯ ಮೂಲಕ ಸದುದ್ದೇ ಶಪೂರ್ಣವನ್ನಾಗಿ ಗಾಂಧೀಜಿಯವರು ಮಾ ಡಿದರು

೧೯೩೭ರಲ್ಲಿ ಜನಪ್ರಿಯ ಅಥವಾ ಜನ ತಾ ಸರ್ಕಾರಗಳು ಅಧಿಕಾರವನ್ನು ವಹಿಸಿ ದಾಗ ಕೆಲವು ಪ್ರಾಂತಗಳಲ್ಲಿ ಮೂಲ ಶಿ ಕ್ಷಣದ ಬಗ್ಗೆ ಕಾರ್ಯವನ್ನು ಪ್ರಾರಂಭಿ ಸಲಾಯಿತು. ಆದರೆ ದ್ವಿತೀಯ ವಿಶ್ವ ಸಮರವು ಪ್ರಾರಂಭವಾದಾಗ ಕಾಂಗ್ರೆಸು ಮಂತ್ರಿ ಮಂಡಳವು ಅಧಿಕಾರಕ್ಕೆ ರಾಜಿ ನಾಮೆಯನ್ನು ಸಲ್ಲಿಸಿತು. ಅದರ ಹಾಗು ಅನೇಕ ಕಾಂಗ್ರೆಸ್ಸಿನವರು ಸೆರೆಮನೆ ವಾಸ ವನ್ನು ಅನುಭವಿಸಬೇಕಾಗಿ ಬಂದ ಕಾರಣ ದಿಂದ ಮೂಲಶಿಕ್ಷಣವು ಸರ್ಕಾರದ ಕೃಪಾಶ್ರಯವನ್ನು ಕಳೆದು ಕೊಂಡಿತು. ಸಮರ ಕಾಲದಲ್ಲಿ ಭಾರತ ಸ ರ್ಕಾರವು ಶಿಕ್ಷಣದಲ್ಲಿ ಪ್ರವೀಣರಾದವರ ಸ ಮಿತಿಯೊಂದನ್ನು ಸಮರಾ ನಂತರದ ವಿ ದ್ಯಾಭಿವೃದ್ಧಿ ಯೋಜನೆಯನ್ನು ತಯಾರಿ ಸಲು ನೇಮಕ ಮಾಡಿತು. ಈ ಸಮಿತಿಯು ಎಲ್ಲ ಸಂಬಂಧಿಸಿದ ವಿಷಯಗಳನ್ನೂ ಪರೀ ಕ್ಷಿಸಿ ಮೂಲ ಶಿಕ್ಷಣವು ಶಿಕ್ಷಣದ ರಾ ಷ್ಟ್ರೀಯ ವಿಧಾನವೆಂದು ಅಂಗೀಕರಿಸಿತು. ೧೯೪೬ರಲ್ಲಿ ಜನತಾ ಸರ್ಕಾರಗಳು ಏರ್ಪ ಟ್ಟಾಗ ಮೂಲ ಶಿಕ್ಷಣವು ಭಾರತದ ರಾ ಜ್ಯ ಸರ್ಕಾರಗಳ ಅಂಗೀಕೃತ ನೀತಿಯಾ ಯಿತು. ಈ ಶಿಕ್ಷಣ ಪದ್ಧತಿಯು ಪ್ರಾ ಯೋಗಿಕ ಹಂತವನ್ನು ದಾಟಿದೆ. ಈಗ ಇ ದು ಕೇಂದ್ರ ಮತ್ತು ರಾಜ್ಯ ಸರಕಾರಗಳ ಗಣ್ಯ ರಾಷ್ಟ್ರೀಯ ನೀತಿಯಾಗಿದೆ. ಅದ ನ್ನು ಕಾರ್ಯರೂಪದಲ್ಲಿ ಇಳಿಸುವುದಕ್ಕೆ ಇರುವ ಆತಂಕಗಳನ್ನು ಪರಿಹರಿಸುವುದ ಕ್ಕೆ ಬಹಳವಾಗಿ ಪ್ರಯತ್ನವನ್ನು ಮಾಡ ಲಾಗುತ್ತದೆ

ಭರ್ತರ್ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವ ದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ್ ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಒಲೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.



ಮದ್ರಾಸಿಗೆ ಹತ್ತಿರದ ಪ್ರೇಕ್ಷಣೀಯ ಸ್ಥಳಗಳು

ಆವಡಿಗೆ ಹೋಗುವವರು ಸಂದರ್ಶಿಸದೆ ಮರಳಬಾರದು

ಮದ್ರಾಸಿನ ಉಪನಗರವಾದ ಆವಡಿಯಲ್ಲಿ ಇದೇ ೧೭ರಿಂದ ೨೩ನೇ ತಾರೀಕಿನ ವರೆಗೆ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ೬೦ನೇ ಅಧಿವೇಶನವು ಜರಗಲಿರುವುದು ಎಲ್ಲರಿಗೂ ತಿಳಿದ ವಿಷಯ. ರಾಷ್ಟ್ರದ ಪುರೋಗತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುವ ಕಾಂಗ್ರೆಸಿನ ಅಧಿವೇಶನದಲ್ಲಿ ನೂರಾರು ನಾಲ್ಕು ಸಾವಿರ ಪ್ರತಿನಿಧಿಗಳು ಭಾಗವಹಿಸಬಹುದೆಂದು ಅಂದಾಜು. ಇಷ್ಟು ಮಂದಿಯಲ್ಲದೆ ಭಾರತದ ಮೂಲೆ ಮೂಲೆಯಿಂದಲೂ ಸಹಸ್ರಾರು ಪ್ರೇಕ್ಷಕರು ಅಧಿವೇಶನ ಕಾಲದಲ್ಲಿ ಉಪಸ್ಥಿತರಿದ್ದು ಕಾರ್ಯ ಕಲಾಪಗಳನ್ನು ನಿರೀಕ್ಷಿಸುತ್ತಿರಬಹುದೆಂದು ಊಹಿಸಿದರೆ ತಪ್ಪಾಗದು. ಈ ಪ್ರಕಾರವಾಗಿ ಲಕ್ಷಾಂತರ ಜನರು ಒಟ್ಟು ಸೇರುವಂತೆ ಆವಡಿಯಲ್ಲಿ "ಸತ್ಯಮೂರ್ತಿ ನಗರ" ಎಂಬ ಭವ್ಯ ಪಟ್ಟಣವನ್ನೇ ಈಗ ಕಟ್ಟಲಾಗುತ್ತದೆ. ಅದರ ಮಹಾ ದ್ವಾರವನ್ನು ಪ್ರಖ್ಯಾತರಾದ ಚಲಚ್ಚಿತ್ರ ಕಲಾವಿದರು ಸಿದ್ಧಗೊಳಿಸುತ್ತಿದ್ದು, ದಕ್ಷಿಣ ಭಾರತಕ್ಕೆ ವಿಶಿಷ್ಟವಾದ ಗುಡಿಗೋಪುರಗಳ ಶಿಲ್ಪಕಲಾ ವೈಭವವನ್ನು ಅದು ಪ್ರಕಟಿಸುತ್ತದೆ.

ಆರೇಳು ದಿನಗಳ ವರೆಗೆ ಕಾಂಗ್ರೆಸಿನ ಅಧಿವೇಶನವನ್ನೂ ತದಂಗವಾಗಿ ಏರ್ಪಡಿಸಲಾದ ವಸ್ತುಪ್ರದರ್ಶನ ಮುಂತಾದುವುಗಳನ್ನೂ ನಿರೀಕ್ಷಿಸಿ ಸಂತಸಗೊಂಡ ಪ್ರೇಕ್ಷಕರೂ ಪ್ರತಿನಿಧಿಗಳೂ ತಮ್ಮ ಪ್ರವಾಸದ ಪೂರ್ಣ ಫಲವನ್ನು ಪಡೆಯುವುದಕ್ಕಾಗಿ ಸಮೀಪದ ಬೇರೆ ಕೆಲವು ಇತಿಹಾಸ ಪ್ರಸಿದ್ಧ ಕ್ಷೇತ್ರಗಳಿಗೆ ಸಂದರ್ಶನ ನೀಯದೆ ಹೋಗಲಾರರೆಂದು ಭಾವಿಸಬಹುದು. ಉತ್ತರ ಭಾರತದಿಂದ ಬಂದವರಿಗಷ್ಟೇ ಅಲ್ಲ, ದಕ್ಷಿಣಾ ಪಥದಿಂದ ಆವಡಿಗೆ ತೆರಳಿದವರಿಗೆ ಸಹ ಮೆಚ್ಚಿಕೆಯಾಗುವ ಕೌತುಕಪ್ರದ ವಸ್ತುಗಳು ಮದ್ರಾಸಿನ ಸುತ್ತಮುತ್ತ ಕಂಡುಬರುತ್ತವೆ. ಒಂದಾನೊಂದು ಕಾಲದಲ್ಲಿ ದಂಡಕಾರಣ್ಯವೆಂಬ ದುರ್ಗಮ ಕಾಡು ಇಲ್ಲೆಲ್ಲ ವ್ಯಾಪಿಸಿದ್ದರೂ ಮೌರ್ಯಕಾಲದಿಂದೀಚೆಗೆ ಇಲ್ಲಿ ಇತಿಹಾಸವನ್ನು ರೂಪಿಸಿದ ಸಾಮ್ರಾಜ್ಯಗಳು ಸ್ಥಾಪಿಸಲ್ಪಟ್ಟು ಸಾಂಸ್ಕೃತಿಕ ಮಹತ್ವದ ಕಾರ್ಯಗಳನ್ನು ಮಾಡಿರುವುದು ಸುಳ್ಳಲ್ಲ.

ತಮಿಳು ನಾಡಿನ ಪ್ರದೇಶ ಕಾಂಗ್ರೆಸು ಆವಡಿಯ ಅಧಿವೇಶನದ ವ್ಯವಸ್ಥೆಯನ್ನು ಮಾಡಿರುವುದರಿಂದ ತಮ್ಮನ್ನು ಸತ್ಕರಿಸಿದ ತಮಿಳರ ನಿಕಟ ಪರಿಚಯವನ್ನು ಮಾಡಿಕೊಳ್ಳುವುದಕ್ಕೆ ಆವಡಿಗೆ ಬಂದವರೆಲ್ಲರೂ ಬಯಸುವುದು ಸ್ವಾಭಾವಿಕ. ಹಾಗೆ ತಮ್ಮ ಸಂಪರ್ಕಕ್ಕೆ ಬರಲಿಚ್ಛಿಸುವವರಿಗೆ ಹೆಮ್ಮೆಯಿಂದ ತೋರಿಸಬಹುದಾದ ಅಭಿಮಾನದ ವಸ್ತುಗಳನ್ನು ಪಡೆದಿರುವುದು ತಮಿಳರ ಪುಣ್ಯ. ಮಧುರೆಯ ಪಾಂಡ್ಯರೂ ಕಾಂಚಿಯ ಪಲ್ಲವರೂ ತಮಿಳುನಾಡು ಎಂದೆಂದಿಗೂ ಹೆಮ್ಮೆಯಿಂದ ತಲೆ ಎತ್ತಿನಿಲ್ಲುವಷ್ಟು ಉತ್ಕೃಷ್ಟ ಮಾದರಿಯ ವಾಸ್ತುವಿಗೂ ಶಿಲ್ಪಕ್ಕೂ ಆಶ್ರಯವಿತ್ತರು. ಎಂಟನೇ ಶತಮಾನದ ಬಳಿಕ ಕಲ್ಯಾಣದ ಚಾಲುಕ್ಯರು, ಬನವಾಸಿಯ ಕದಂಬರು, ದೇವಗಿರಿಯ ಯಾದವರು, ದ್ವಾರ ಸಮುದ್ರದ ಹೊಯ್ಸಳರು, ವಿಜಯನಗರದ ತುಳುವರು ಮುಂತಾದ ಕನ್ನಡದ ಅರಸುಗಳು ಪಲ್ಲವರನ್ನು ಪರಾಜಿತರಾಗಿ ಮಾಡಿದರೂ ಅವರ ಸಂಸ್ಕೃತಿಯ ನಾಶಕ್ಕೆ ಪ್ರಯತ್ನಿಸಲಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲೂ ಇಲ್ಲಿಯ ಗುಡಿಗೋಪುರಗಳು ಹಾಳು ಬೀಳಲಿಲ್ಲ.

ತಿರುಗಾಡಲು ಮನಸ್ಸಿದ್ದವರಿಗೆ ದಕ್ಷಿಣ ಭಾರತದಷ್ಟು ಆಹ್ಲಾದಕರವಾದ ಕ್ಷೇತ್ರವು ಇನ್ನೊಂದು ಸಿಗಲಾರದು. ಇಲ್ಲಿ ಕಂಡು ಬರುವ ಶಿಲ್ಪಕಲೆಯ ಚಮತ್ಕೃತಿಯು ಉತ್ತರ ಭಾರತದಲ್ಲಿ ಕಾಣಸಿಗದು. ಮಧುರೆ, ರಾಮೇಶ್ವರಗಳು ತೀರ ದಕ್ಷಿಣ ತುದಿಯಲ್ಲಿರುವುವೆಂದು ಯಾತ್ರಾರ್ಥಿಗಳಿಗೆ ಅನಿಸಿದರೂ ಮದ್ರಾಸಿಗೆ ಹತ್ತಿಪ್ಪತ್ತು ಮೈಲುಗಳ ಅಂತರದಲ್ಲಿರುವ ಮಹಾಬಲಿಪುರ, ಕಾಂಚಿ, ತಿರುವಣ್ಣಾಮಲೆ ಮುಂತಾದುವುಗಳ ಸಂದರ್ಶನವೇ ಸಾಕಷ್ಟು ತೃಪ್ತಿಯನ್ನು ಕೊಡುವುದು ನಿಶ್ಚಯ. ಮಹಾಬಲಿಪುರದಲ್ಲಿರುವ ಒಂದೇ ಶಿಲೆಯಲ್ಲಿ ಕೆತ್ತಲಾದ್ದೆನಿಸುವ ರಥಗಳು ಕಲಾಭಿಮಾನಿಗಳಲ್ಲಿ ವಿಸ್ಮಯವನ್ನುಂಟು ಮಾಡುತ್ತವೆ. ದೇವರ ಪಾದಗಳನ್ನು ಸಾಗರ ತರಂಗವು ಸ್ಪರ್ಶಿಸಿ ಹೋಗುವಂತೆ ಕಟ್ಟಲಾದ ಇಲ್ಲಿಯ ಮಂದಿರದ ಸ್ಥಾಪತ್ಯ ಕೌಶಲ್ಯವು ಮೂಢನನ್ನೂ ಮುಗ್ಧಗೊಳಿಸುತ್ತದೆ. ಕಲ್ಲಿನಲ್ಲಿ ಕಡೆಯಲಾದ ಇಲ್ಲಿಯ ಚಿತ್ರಸಮುದಾಯದ ಮುಂದೆ ಎಲ್ಲೋರ ಮತ್ತು ಅಜಂತದ ಭಿತ್ತಿ ಚಿತ್ರಗಳ ಚೆಲುವು ಮಸುಕಾಗುವುದೆಂದರೆ ಅತಿಶಯೋಕ್ತಿಯಾಗದು.

ವಿಶಾಲವಾದ ಒಂದು ಕೆರೆ, ಅದಕ್ಕೆ ಒತ್ತಿನಲ್ಲಿ ಕುಸುರಿನ ಕೆಲಸದಿಂದ ತುಂಬಿ ತುಳುಕುವ ರಾಕ್ಷಸ ಸದೃಶ ಸ್ತಂಭಗಳಿಂದ ರಾರಾಜಿಸುವ ಮಂದಿರ, ಅದರ ಮುಂದೆ ಆಕಾಶದಲ್ಲಿ ತಲೆ ಎತ್ತಿ ನಿಂತಿರುವ ಚತುರ್ಭುಜಾಕೃತಿಯ ಉನ್ನತ ಗೋಪುರ, ಭಾರತೀಯ ಇತಿಹಾಸವನ್ನು ಚಿತ್ರದಲ್ಲಿ ಬರೆದ ಶಿಲ್ಪ ಚಾತುರ್ಯ—ಇವು ಸಾಮಾನ್ಯವಾಗಿ ಪ್ರತಿಯೊಂದೂ ಪ್ರಸಿದ್ಧ ಪಟ್ಟಣದ ವೈಶಿಷ್ಟ್ಯ. ತಿರುವಣ್ಣಾಮಲೆಯಲ್ಲಿ ಮತ್ತು ಅದಕ್ಕೆ ತುಸು ದೂರದ ತಿರುಪತಿಯಲ್ಲಿ ನಿಸರ್ಗ ಶೋಭೆಯೂ ಮನುಷ್ಯ ಕೃತ ಸೌಂದರ್ಯಕ್ಕೆ ಒಪ್ಪವಿಡುತ್ತದೆ. ವೆಲ್ಲೂರು, ಚಂದ್ರಗಿರಿಗಳಂಥ ಸ್ಥಳಗಳಲ್ಲಿ ದೇವ ಮಂದಿರಗಳ ಬದಲು ಸೈನ್ಯ ವಿಜ್ಞಾನದ ಸೂಕ್ಷ್ಮ ಚಮತ್ಕಾರ ದೃಷ್ಟಿ ಗೋಚರವಾಗುತ್ತದೆ. ಇಲ್ಲಿಯ ಕೋಟೆಕೊತ್ತಳಗಳ ರಚನೆ ಮತ್ತು ಸೈನ್ಯ ಸಂಗ್ರಹ ವ್ಯವಸ್ಥೆಯ ಅವಶೇಷಗಳು ಕುತೂಹಲವನ್ನು ಕೆರಳಿಸುತ್ತವೆ. ಶೃಂಗಾರ ದೃಷ್ಟಿಗೆ ಕೊಟ್ಟಷ್ಟೇ ಪ್ರಾಮುಖ್ಯತೆಯನ್ನು ಪಾರಮಾರ್ಥಿಕ ವಿಚಾರಕ್ಕೆ ತಮಿಳುನಾಡಿನ ಪೂರ್ವಜರು ಕೊಟ್ಟಿದ್ದರೆಂಬುದು ವ್ಯಕ್ತವಾದಂತೆಯೇ, ರಾಜಕೀಯ ಭದ್ರತೆಯ ಬಗ್ಗೆಯೂ ಅಷ್ಟೇ ಮಹತ್ವ ಸಲ್ಲಿಸುತ್ತಿದ್ದರೆಂಬುದಕ್ಕೆ ಇವು ಪ್ರತ್ಯಕ್ಷ ನಿದರ್ಶನ.

ತಮಿಳುನಾಡಿನ ಕುರಿತು ಅಭಿಮಾನವಿದ್ದರೂ ಮದ್ರಾಸಿನ ಹೊರಗೆ ಹೋಗಲಾರದಷ್ಟು ಅನವಸರದಿಂದ ಆವಡಿಯ ಯಾತ್ರೆ ಕೈಗೊಂಡವರು ಆ ನಗರವನ್ನಾದರೂ ಕಣ್ತುಂಬ ನೋಡದೆ ಮರಳಬಾರದು. ಚಂದ್ರಗಿರಿಯಲ್ಲಿ ಆಳುತ್ತಿದ್ದ ವಿಜಯನಗರ ಅರಸರ ಕೃಪೆಯಿಂದ ಬ್ರಿಟಿಷರ ಪತಾಕೆಯನ್ನು ಮದ್ರಾಸಿನಲ್ಲಿ ನೆಟ್ಟುದಕ್ಕೆ ಮತ್ತು ಆ ಬಳಿಕದ ಇತಿಹಾಸಕ್ಕೆ ಸಾಕ್ಷಿರೂಪದಲ್ಲಿ ಸೈಂಟ್ ಜಾರ್ಜ್ ಕೋಟೆ ಮತ್ತು ಅದಕ್ಕೆ ತಾಗಿದ ಸೈನಿಕ ಸ್ಮೃತಿ ಚಿಹ್ನೆಗಳ ಸಂಗ್ರಹಾಲಯ ಇರುವುದು. ಶಾರ್ಕ್ ಎಂಬ ಉಗ್ರಜಾತಿಯ ಮೀನುಗಳಿಂದ ಬಂಗಾಳಖಾತವು ಕೂಡಿದ್ದರೂ ಬದಿರಿನ ತೆಪ್ಪಗಳಲ್ಲಿ ಕುಳಿತು ಮೀನು ಬಲೆ ಬೀಸುವ ಬೆಸ್ತರ ಯಾತ್ರೆಯನ್ನು ದಡದಿಂದಲೇ ನೋಡಿ ಸಂತೋಷಿಸುವ ವಿಶಾಲವಾದ ಮರೀನ ದಂಡೆ ಮದ್ರಾಸಿನ ಜನರ ಮನೋರಂಜನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಯಾತ್ರಾರ್ಥಿಗಳಿಗೆ ಬಂದವರ ಉಲ್ಲಾಸಕ್ಕೂ ಇದು ನೆರವಾಗದಿರದು. ಅತ್ಯಂತ ಸುಂದರವಾದ ಮತ್ಸ್ಯ ಸಂಗ್ರಹಾಲಯವೂ ಪಕ್ಷಿ ಹಾಗು ಪ್ರಾಣಿ ಸಂಗ್ರಹಾಲಯವೂ ಕೊನ್ನೆಮೆರಾ ಪುಸ್ತಕ ಭಂಡಾರವೂ ವಸ್ತುಪ್ರದರ್ಶನಾಲಯವೂ ಮದ್ರಾಸಿನಲ್ಲಿ ಜಿಜ್ಞಾಸುಗಳನ್ನು ಆಕರ್ಷಿಸುವ ಮುಖ್ಯ ಕೇಂದ್ರಗಳೆಂದು ಹೇಳಬಹುದು. ಟ್ರಿಪ್ಲಿಕೇನಿನ ಪಾರ್ಥಸಾರಥಿ ದೇವಾಲಯವೂ ಮೈಲಾಪುರದ ಕಪಾಲೇಶ್ವರ ಮಂದಿರವೂ ದರ್ಶನೀಯ ಸ್ಥಾನಗಳಲ್ಲಿ ಸೇರುತ್ತವೆ. ಅಡ್ಯಾರಿನ ತತ್ತ್ವಜ್ಞಾನ ಕೇಂದ್ರವು ಇಲ್ಲಿಯ ಬೃಹದಾಕಾರದ ನ್ಯಗ್ರೋಧ ವೃಕ್ಷದಷ್ಟೇ ಅಪೂರ್ವವಾದ ವ್ಯಾಸಂಗ ನಿಲಯ.

ಕೆಲವು ಉತ್ತಮ ಪುಸ್ತಕಗಳು.

ಬದುಕು ಬಂಗಾರ	(ಕುಮಾರಸ್ವಾಮಿ)	1	8
ಯುಗವಾಣಿ	(ಕು. ಶಿ. ಹರಿದಾಸಭಟ್)	0	8
ಘಂಟಮಾರಾ	(,,)	2	0
ಏಶಿಯದ ಸಂಪತ್ತು	(,,)	2	0
ಪ್ರಜಾಪ್ರಭುತ್ವವನ್ನು ಕುರಿತು	(ಶಿವರಾಮ ಕಾರಂತ)	0	8
ಅಂತರಂಗದ ಕತೆಗಳು	(ಸಂಕಲನ)	1	4
ಸ್ವಪ್ನಲೋಕ	(ಕಾರ್ತಿಕೇಯ)	0	8
ನೀತಿವಿನೋದ ಕತೆಗಳು		0	12
ಸೇವಾಪಥ	(ಸೇಟ್ ಗೋವಿಂದಾಸ್)	0	8
ಸರಸ್ವತಿ	(ಡಾ। ಎಂ. ಮಾಧವಾಚಾರ್ಯ)	0	12
ಗೀತೆಯ ಕೈಗನ್ನಡಿ	(ಚಿದಂಬರಯ್ಯ)	0	8
ಭಾರತದ ಕರ್ಣ	(ಎನ್. ಎಸ್. ಕಿಲ್ಲೆ)	0	6
ಪ್ರಾಚೀನ ತುಳುನಾಡು	(,,)	2	0
ಮುರಲಿ	(,,)	0	12
ಮಧುವನ	(ಸಂಕಲನ)	3	0
ಕಾವ್ಯಸಾಮ್ರಾಜ್ಯ	(,,)	1	8
ರವಗಳ ಸಾಗಾಟ	(ಕಳ್ಳ ಪೇಟೆ)	0	10
ಕವಿತಾಕಾಮಿನಿ	(ಎಸ್. ವೆಂಕಟರಾಜ)	2	0
ಆಕಾಶಗಂಗೆ		1	12
ಜೀವನ ಸಂಗ್ರಾಮ	(ಸಿ. ಶೀನ ಶೆಟ್ಟಿ)	1	8
ದೇಶಭಕ್ತ	(ಕೆ. ಕೆ. ಶೆಟ್ಟಿ)	1	4
ಪ್ರೇಮವಿಜಯ	,,)	1	0

ಏಜಂಟರು ಬೇಕು. ಶರ್ತಗಳಿಗೂ ನಮ್ಮಲ್ಲಿ ದೊರೆಯುವ ಎಲ್ಲಾ ಕಡೆಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಶೂಲೆ, ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಜವಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರವ, ಕೈಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ —
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨-೦-೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು.- 1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡುವಂತೆ ಕೇಳಿಕೊಳ್ಳುತ್ತೇವೆ.

Edited, Printed & Published By K. H. Shetty at the Navayuga Press, Udipi, S. India

REGD. NO.
M' 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ | ಉಡುಪಿ, 20—1—1955 | ಸಂಚಿಕೆ ೨೦

VOL. 34 | NO. 20

ಕಾಂಗ್ರೆಸು ಸಂಸ್ಥೆಯೊಳಗೆ ರಾಜ್ಯದ ಮುಖ್ಯಮಂತ್ರಿ ಮತ್ತು ಪ್ರದೇಶ ಕಾಂಗ್ರೆಸು ಸಮಿತಿಯ ಅಧ್ಯಕ್ಷ ಎಂಬೆರಡು ನಾಯಕತನವಿದ್ದು ಇವೆರಡು ಭಿನ್ನ ಭಿನ್ನ ವ್ಯಕ್ತಿಗಳು ಪರಸ್ಪರ ವಿರುದ್ಧ ದಿಕ್ಕಿಗೆ ಎಳೆದಾಡಿಕೊಳ್ಳುವ ದ್ವಿದಳ ರಾಜ್ಯಭಾರ ಪದ್ಧತಿ ಇರಬಾರದು. ಎರಡು ತರೆಗಳು ಮತ್ತೆ ಎರಡು ರೆಕ್ಕೆಗಳು ಎಂಬ ಈ ವಿಧಾನವನ್ನು ಕೇಂದ್ರದಲ್ಲಿ ತ್ಯಜಿಸಿದಂತೆ, ರಾಜ್ಯಗಳಲ್ಲೂ ಈ ತತ್ವ ಆಚರಣೆಗೆ ಬರುವೆಂದು ಆಶಿಸುತ್ತೇನೆ.

—ಕೆ. ಹನುಮಂತಯ್ಯ.

ತಮ್ಮ ಬುದ್ಧಿವಂತಿಕೆಯ ವಿಷಯದಲ್ಲಿ ಆ ನ್ಯಾಯಾಧೀಶರು ಒಳ್ಳೆಯ ದಾಖಲೆಯನ್ನೇನೂ ನಿರ್ಮಿಸಿರಲಿಲ್ಲ ಅವರಿಗೆ ತಪ್ಪು ತಿಮ್ಮಿಂದಾದೀತೆಂಬ ಸಂಶಯವೇ ಇರುತ್ತಿರಲಿಲ್ಲ. ಯಾವಾಗಲೂ ಇತರರದೇ ಅಪರಾಧವೆಂದು ಅವರು ಗುಡುಗುಡಿಸುತ್ತಿದ್ದರು.

ಒಮ್ಮೆ ಸಾಕ್ಷಿದಾರರೊಬ್ಬರನ್ನು ಅವರು ಹೀಗೆ ಗದರಿಸಿದರು—"ನಿಮ್ಮ ತಂಗಿ ಹೇಳುತ್ತಾಳೆ, ತನಗೆ ಇಬ್ಬರು ಅಣ್ಣಂದಿರು, ಎಂದು. ನೀವು ಮಾತ್ರ ನಿಮಗಿರುವುದು ಒಬ್ಬನೇ ಅಣ್ಣನೆಂದು ಹೇಳುತ್ತೀರಿ ಹೀಗೆ ಸುಳ್ಳು ಹೇಳುತ್ತಿರುವುದಕ್ಕೆ ಬಿಟ್ಟಿ ಹಾಕಲಾದೀತು! ಎಚ್ಚರ!"

ಮನನೀಯ ಸಿಫಾರಸು

ಕಿವಿಯನ್ನು ಅಕ್ಕಸಾಲಿಗನಿಂದ ಚುಚ್ಚಿಸಿಕೊಳ್ಳುವುದೇ ಕ್ರಮಪ್ರಾಪ್ತವೂ ಜಾಣತನವೂ ಆಗಿದೆ ಎಂದು ಕೇಳಿದ್ದಾಂಟು—ಕಾಂಗ್ರೆಸು ಸಂಸ್ಥೆಯ ಲೋಪದೋಷಗಳ ನಿವಾರಣೆಗಾದರೂ ಈ ಸೂತ್ರವಾಕ್ಯವನ್ನೆ ಆಶ್ರಯಿಸಿರುವುದು ಸಮ್ಮತವೇ ಸರಿ. ಕಾಂಗ್ರೆಸು ಸಂಸ್ಥೆ ಈಚೆಗೆ, ಅಂದರೆ ಸ್ವಾತಂತ್ರ್ಯೋತ್ತರದಲ್ಲಿ, ಬಹಳವಾಗಿ ದುರ್ಬಲವಾಗಿದೆಯೆಂದೂ ಜನರೊಡನೆ ಅದು ಇಟ್ಟುಕೊಂಡಿದ್ದ ಸಂಪರ್ಕ ಸಂಪೂರ್ಣ ಕಡಿದು ಬೀಳುವ ಸ್ಥಿತಿಯಲ್ಲಿದೆಯೆಂದೂ ಸಂಸ್ಥೆಯ ಅಭ್ಯುದಯದಲ್ಲಿ ಆಸಕ್ತಿ ಇದ್ದವರು ಪದೇ ಪದೇ ಎಚ್ಚರದ ಮಾತನ್ನಾಡುತ್ತಿದ್ದರೂ ವಾತಾವರಣವನ್ನು ಇಷ್ಟು ಕಲುಷಿತಗೊಳ್ಳಲು ಬಿಡಬಾರದೆಂದು ಬೋಧಿಸುತ್ತಿದ್ದರೂ ಅದನ್ನು ಲಕ್ಷಿಸಿದ ಕಾಂಗ್ರೆಸು ವರಿಷ್ಠರು ವಿರಳ. ಆದರೆ ತಿರು-ಕೊಚ್ಚಿಯಲ್ಲಿ ಕಾಂಗ್ರೆಸು ಹೊಂದಿದ ಪ್ರಚಂಡ ಪರಾಭವ, ಆಂಧ್ರದಲ್ಲಿ ಕಾಂಗ್ರೆಸು ತಂದುಕೊಂಡ ಪೇಚಾಟಗಳು ಸಂಸ್ಥೆಯ ವರಿಷ್ಠರ ಕಣ್ಣಿಗೆ ಕವಿದ ಮಬ್ಬನ್ನು ಸ್ವಲ್ಪ ಮಟ್ಟಿಗಾದರೂ ತೊಡೆದು ಹಾಕಿವೆಯೆಂದು ಕಾಣುತ್ತದೆ. ಎಂತಲೇ ಕಾಂಗ್ರೆಸು ಸಂಸ್ಥೆಯಲ್ಲಿ ಹೊಸ ಚೈತನ್ಯವನ್ನು ತುಂಬುವ ಬಗ್ಗೆ ಸಿಫಾರಸುಗಳನ್ನು ಮಾಡಲು ಪ್ರಸಿದ್ಧ ಕಾರ್ಯಕರ್ತರ ಒಂದು ಸಮಿತಿಯನ್ನು ಕಾಂಗ್ರೆಸು ಕೆಲವು ತಿಂಗಳ ಪೂರ್ವದಲ್ಲಿ ನೇಮಿಸುವಂತಾಯಿತು.

ಇದರಲ್ಲಿ ಡಾ. ಕೈಲಾಸನಾಥ ಕಟಜು, ಶ್ರೀ ಗುಲಾಬ ಲಾಲ ಬಹಾದುರ ಶಾಸ್ತ್ರಿ, ಗುಲಜಾರಿಲಾಲ ನಂದ, ಖಂಡು ಭಾಯಿ ದೇಸಾಯಿ, ಕೆ. ಪಿ. ಮಾಧವನ್ ನಾಯರ್, ಮಾಣಿಕ್ಯಲಾಲ್ ವರ್ಮ, ದೇವಕಿ ನಂದನ ನಾರಾಯಣ ಮತ್ತು ಶ್ರೀಮನ್ನಾರಾಯಣ ಅಗ್ರವಾಲ ಇಷ್ಟು ಮಂದಿ ಇದ್ದರು. ಶ್ರೀ ಅಗ್ರವಾಲರೇ ಈ ಕುರಿತು ವಿಶೇಷವಾದ ಆಸ್ಥೆಯನ್ನು ವಹಿಸಿದರೆಂದು ತೋರುತ್ತದೆ. ಕಾಂಗ್ರೆಸು ಸಂಸ್ಥೆಯ ಸದಸ್ಯರು ತಾವು ಎಲ್ಲಿ ನಿಂತಿದ್ದೇವೆ ಮತ್ತು ಇನ್ನೆಲ್ಲಿಗೆ ಹೋಗಬೇಕು ಎಂಬ ವಿಷಯದಲ್ಲಿ ಸ್ಪಷ್ಟ ಕಲ್ಪನೆಯನ್ನು ಹೊಂದಿರುವುದು ಅತ್ಯವಶ್ಯ ಎಂಬ ಅಭಿಪ್ರಾಯ ಅವರದು. ಸಾಮಾಜಿಕ ಮತ್ತು ಆರ್ಥಿಕ ಪುನಾರಚನೆಯ ವಿಷಯದಲ್ಲಿ ಸರಕಾರದ ಧೋರಣೆಗಳು ಕಾಂಗ್ರೆಸು ಕಾರ್ಯಕರ್ತರ ಕೆಲಸವನ್ನು ಸುಗಮಗೊಳಿಸಬೇಕು ಎಂಬ ಇಚ್ಛೆ ಅವರದು. ಕಾಂಗ್ರೆಸು ಸಂಸ್ಥೆಯು ಕೇವಲ ಸರಕಾರಿ ಮಟ್ಟದಲ್ಲಿ ಕೆಲಸಮಾಡುವ ಒಂದು ಯಂತ್ರವಾಗಿಯಷ್ಟೇ ಉಳಿಯಬಾರದು—ಅದು ಜನತೆಯ ಪ್ರಗತಿ ಮತ್ತು ಉತ್ಕರ್ಷಕ್ಕಾಗಿ ಅಹೋರಾತ್ರಿ ದುಡಿಯುವ ವಿಧಾಯಕ ಕಾರ್ಯಕರ್ತರ ಬೀಡಾಗಬೇಕು ಎಂದವರ ನಿಲುವು ಇದ್ದಂತೆ ಕಾಣುತ್ತದೆ. ಜನತೆಯೊಡನೆ ನಿಕಟ ಸಂಪರ್ಕವನ್ನು ಸ್ಥಾಪಿಸಿ, ಪ್ರಚಾರ ವೈಖರಿಯಿಂದ ಜನರ ಕಲ್ಪನೆಯನ್ನೂ ಕುತೂಹಲವನ್ನೂ ಕೆರಳಿಸಿ, ಅವರ ಸಹಕಾರವನ್ನು ಸಂಪಾದಿಸಬೇಕೆಂದೂ ಅಧಿಕಾರ ದಾಹದ ಸ್ಥಾನದಲ್ಲಿ ರಚನಾತ್ಮಕ ಕೆಲಸದ ಆದರ್ಶವು ನೆಲೆಯೂರಬೇಕೆಂದೂ ವರಿಷ್ಠರು ಯೋಚಿಸುವಂತೆ ಅವರ ವರದಿಯಿಂದ ಭಾಸವಾಗುತ್ತದೆ.

ಹೈಕಮಾಂಡಿಗೆ ಸಲ್ಲಿಸಲಾಗಿರುವ ಈ ವರದಿಯು ನಿಷ್ಕ್ರಿಯವಾಗದೆಂದು ಭಾವಿಸುವುದಕ್ಕೆ ಕೆಲವು ಕಾರಣಗಳು ತೋರುತ್ತವೆ—ಮುಖ್ಯವಾಗಿ ಕಾಂಗ್ರೆಸು ವರಿಷ್ಠರೇ ಮಾರ್ಗದರ್ಶನವನ್ನು ಬಯಸಿ ತರಿಸಿಕೊಂಡಂತಿದೆ ಈ ವರದಿ; ಎರಡನೆಯದಾಗಿ ಮಿಕ್ಕ ಪಕ್ಷಗಳ ಸಂಘಟನೆ ಬಲವಾಗುತ್ತ ಬರುತ್ತಿರುವಾಗ, ಕಾಂಗ್ರೆಸಿನ ವರ್ಚಸ್ಸು ಮತ್ತು ಶಕ್ತಿ ಪ್ರತಿದಿನವೂ ಕಡಿಮೆಯಾಗುತ್ತಿರುವುದು ಅನುಭವಕ್ಕೆ ಬಂದ ವಿಷಯ. ಇವರ ರಹಸ್ಯೋದ್ಘಾಟನವನ್ನು ಮಾಡದಿದ್ದರೆ ಪ್ರಜಾಪ್ರಭುತ್ವ ಪರಂಪರೆಯನ್ನು ಹೊಂದುವ ಹೊತ್ತಿಗೆ, ಭಾರತದಲ್ಲಿ ಕಾಂಗ್ರೆಸು ತೀರ ಶೋಚನೀಯಾವಸ್ಥೆಯನ್ನು ಮುಟ್ಟುವುದು ನಿಶ್ಚಯ. ಇಂಥ ದುರ್ದೈವವನ್ನು ತಡೆಗಟ್ಟಲು ಇನ್ನೂ ವಿಳಂಬ ಸಲ್ಲದೆಂಬುದರಿಂದ ವರದಿಯನ್ನು ಶೀಘ್ರದಲ್ಲಿ ಕಾರ್ಯರೂಪಕ್ಕೆ ಇಳಿಸಲು ಕಾಂಗ್ರೆಸ್ಸ ವರಿಷ್ಠರು ಮನಸ್ಸು ಮಾಡಿಯಾರೆಂದು ಹೇಳಬಹುದು. ಇಂಥ ವರದಿಯಲ್ಲಿರುವುದಾದರೂ ಏನು? ಮಂತ್ರಿಪದ, ಶಾಸನ ಸಭೆಯ ಸದಸ್ಯತ್ವ, ಕಾಂಗ್ರೆಸು ಸಂಸ್ಥೆಯ ಅಧಿಕಾರ ಸ್ಥಾನ ಮುಂತಾದವುಗಳಿಂತಲೂ ರಚನಾತ್ಮಕ ಕೆಲಸದಲ್ಲಿ ಮನಸ್ಸು ಹಾಕಿ ದುಡಿಯುವವರಿಗೆ ಹೆಚ್ಚಿನ ಮನ್ನಣೆಯನ್ನೂ ಗೌರವಾದರಗಳನ್ನೂ ಸಲ್ಲಿಸಬೇಕು ಎಂಬ ಒಂದೇ ಮಾತಿನಲ್ಲಿ ಮೇಲಿನ ಪ್ರಶ್ನೆಯನ್ನು ಉತ್ತರಿಸುವುದು ಸಾಧ್ಯ.

ಸರಳ ಜೀವನದ ಮತ್ತು ಸೇವಾ ಪರಾಯಣತೆಯ ಹಿಂದಿನ ಆದರ್ಶದ ಬದಲು ಬಂಗಲೆಗಳ ವಾಸ, ವಿಲಾಸೀ ಜೀವನ, ಮೋಟಾರು ಕಾರುಗಳ ತಿರುಗಾಟ, ಹೂಮಾಲೆ ಹಾಕಿಸಿಕೊಳ್ಳುವ ಮೋಹ, ಅಧಿಕಾರ ಸ್ಥಾನದ ದಾಹ ಇವುಗಳೇ ಕಾಂಗ್ರೆಸು ಸಂಸ್ಥೆಯ ಸದಸ್ಯರ ಧ್ಯೇಯವಾಗಿ ಪರಿಣಮಿಸಿವೆ ಎಂದು ವರದಿಯು ಸ್ಪಷ್ಟ ಮಾತುಗಳಲ್ಲಿ ಹೇಳುತ್ತದೆ. ಸರಕಾರವನ್ನು ರಚಿಸಿ ನಡೆಸುವ ಹೊಣೆಗಾರಿಕೆಯನ್ನು ಕಾಂಗ್ರೆಸು ಹೊರಬೇಕಾಗಿ ಬಂದುದರಿಂದ, ಹಿರಿಯ ಕಾಂಗ್ರೆಸು ಕೆಲಸಗಾರರು ಶಾಸನಾಂಗದಲ್ಲಿ ಪ್ರವೇಶಿಸಬೇಕಾಯಿತೇನೊ ನಿಜ. ಆದರೆ, ಅವರು ಕಿರಿಯರಿಗೆ ಆದರ್ಶಪ್ರಾಯರಾಗುವಹಾಗೆ ವಿಧಾಯಕ ಕಾರ್ಯಕರ್ತರಾಗಿ ದುಡಿಯುವುದೇ ಹೆಚ್ಚು ಇಷ್ಟವೆಂಬ ಅಭಿಪ್ರಾಯವನ್ನು ಮೂಡಿಸುವ ಹಾಗೆ ನಡೆದುಕೊಳ್ಳಲಿಲ್ಲ—ಎಂದು ವರದಿಯು ಆಕ್ಷೇಪಿಸುತ್ತದೆ. ಸಾಮಾನ್ಯ ಕೆಲಸಗಾರನನು ಗೌರವದಿಂದ ಕಾಣುವ ಚಟವೇ ಮಾಯವಾಯಿತು; ಚುನಾವಣೆಗಳಿಗೆ ಹುರಿಯಾಳನ್ನು ನಿಯುಕ್ತಗೊಳಿಸುವಾಗ ಗುಂಪಿನ ರಾಜಕೀಯ, ಜಾತೀಯ ಅಭಿಮಾನ, ಮತ್ತು ನೀರಿನಂತೆ ಚೆಲ್ಲಲು ಸಾಧ್ಯವಾಗುವಷ್ಟು ಹಣದ ಅನುಕೂಲತೆ—ಇವುಗಳ ಮುಖವನ್ನು ನೋಡಲಾಯಿತೇ ಹೊರತು, ಸಮಾಜ ಸೇವೆಯ ಕ್ಷೇತ್ರದಲ್ಲಿನ ಅನುಭವಕ್ಕೆ ಏನೇನೂ ಬೆಲೆ ಕೊಡಲಿಲ್ಲ ಎಂದೂ ವರದಿ ದೂರುತ್ತದೆ.

ಕಾಂಗ್ರೆಸು ವರಿಷ್ಠರು ಉಪರೋಕ್ತ ಸತ್ಯವನ್ನು ಇಷ್ಟು ತಡವಾಗಿಯಾದರೂ ಮನವರಿಕೆ ಮಾಡಿಕೊಳ್ಳುವಂಥಾದದ್ದು ನಮ್ಮ ದೇಶದ ಪುಣ್ಯವೆಂದೇ ಹೇಳಬೇಕು. ಚಿಂತಾ ಜನಕವಾದ ಈ ಪರಿಸ್ಥಿತಿಯಿಂದ ಬಿಡುಗಡೆ ಹೊಂದಿ ಆಶಾದಾಯಕವಾದ ಹೊಸ ವಾತಾವರಣದಲ್ಲಿ ಉಸಿರಾಡಿಸುವ ಯೋಗವನ್ನು ಹೊಂದುವಂತೆ ಸಮಿತಿಯು ಹತ್ತು ಸೂಚನೆಗಳನ್ನು ಮಾಡಿರುತ್ತದೆ. ಅದರಲ್ಲಿ ಮೊದಲನೆಯದು ಆಡಂಬರದ ಮತ್ತು ಆಕರ್ಷಕವಾದ ಜೀವನ ಕ್ರಮವನ್ನು ಮಂತ್ರಿಗಳೇ ಮುಂತಾದ ಅಧಿಕಾರ ಸ್ಥಾನದಲ್ಲಿರುವ ಮಹಾನುಭಾವರು ಈಗಿಂದೀಗ ತೊರೆದು ಸಾದಾ ಜೀವನವನ್ನು ಅವಲಂಬಿಸಬೇಕೆಂದೂ ಸಾಮಾಜಿಕ ಕಾರ್ಯಕರ್ತರನ್ನು

(೧೧ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 | H. O. UDIPI, S- India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಠೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಶೇಖರಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವು ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೯೩ ಶಾಖಾ ಕಛೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು, ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ನಡಿಸಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೭,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] | [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ಮಧ್ಯಭಾರತದ ಪ್ರಾಚೀನ ವೈಭವ

ಶೈವ ಹಾಗು ಬೌದ್ಧ ಸಂಸ್ಕೃತಿಯ ಕೇಂದ್ರ

ಭಾರತದ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಇದೇ ಜನವರಿ ೮ ಮತ್ತು ೯ ನೇ ದಿನಾಂಕಗಳಲ್ಲಿ ಮಧ್ಯಭಾರತದ ಚಿರಸ್ಮರಣೀಯವಾದ ಐತಿಹಾಸಿಕ ಕ್ಷೇತ್ರಗಳಿಗೆ ಸಂದರ್ಶನವನ್ನಿತ್ತರು. ನಮ್ಮ ಪ್ರಾಚೀನ ಸಂಸ್ಕೃತಿ ಮತ್ತು ಇತಿಹಾಸದ ಸುಸ್ಪಷ್ಟ ಚಿಹ್ನೆಗಳನ್ನು ಪಡೆದಿರುವ ಮಧ್ಯ ಭಾರತದ ಪ್ರದೇಶದಲ್ಲಿ ವಿಂಧ್ಯ ಪರ್ವತ ಶ್ರೇಣಿಯು ಹಬ್ಬಿಕೊಂಡಿದೆಯಲ್ಲದೆ ನರ್ಮದೆಯಂಥ ಪವಿತ್ರ ನದಿಗಳೂ ಸಾಂಚಿಯಂಥ ಅಮರ ಸ್ಥಾನಗಳೂ ಉದಯಗಿರಿಯಂಥ ಗುಹಾಲಯಗಳೂ ಭೋಜಪುರದಂಥ ವಿಹಾರಕ್ಷೇತ್ರಗಳೂ ಗೊಂಡರು ನೆಲಸಿದ ವಿಶಾಲ ಭೂಭಾಗವೂ ನೋಡಸಿಗುತ್ತವೆ. ಆದುದರಿಂದ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಆಸಕ್ತಿಯುಳ್ಳವರಿಗೆಲ್ಲ ಮಧ್ಯ ಭಾರತ, ಭೋಪಾಳ, ಮಧ್ಯ ಪ್ರದೇಶ, ಮತ್ತು ವಿಂಧ್ಯಪ್ರದೇಶ—ಎಂಬೀ ರಾಜ್ಯಗಳ ಪರಿಚಯ ಮಾಡಿಕೊಳ್ಳುವ ಮನಸ್ಸಾಗುವುದು ಸಹಜ. ಈ ಲೇಖನದ ಮಟ್ಟಿಗೆ ರಾಷ್ಟ್ರಾಧ್ಯಕ್ಷ ಪ್ರವಾಸ ಕೇಂದ್ರಗಳ ವಿವರಗಳನ್ನಷ್ಟೇ ಕೊಡುವುದು ನಮ್ಮ ಉದ್ದೇಶ.

ದಿಲ್ಲಿಯಿಂದ ಮುಂಬಯಿಗೆ ಬರುವ ಹೆದ್ದಾರಿಯು ಭೋಪಾಳದ ಐತಿಹಾಸಿಕ ಕ್ಷೇತ್ರಗಳನ್ನು ಹಾದು ಹೋಗುತ್ತದೆ. ಭೋಪಾಳವು ಏಳುಸಾವಿರ ಚದರಮೈಲು ವಿಸ್ತೀರ್ಣವುಳ್ಳ ಮತ್ತು ಒಂಭತ್ತು ಲಕ್ಷ ಪ್ರಜೆಗಳು ನೆಲಸಿರುವ "ಕ" ವಿಭಾಗದ ರಾಜ್ಯ. ಇದಕ್ಕೆ ಉತ್ತರ ಹಾಗು ಪಶ್ಚಿಮದಲ್ಲಿ ಮಧ್ಯಭಾರತವೂ ಪೂರ್ವ ಹಾಗು ದಕ್ಷಿಣದಲ್ಲಿ ಮಧ್ಯ ಪ್ರದೇಶವೂ ಚಾಚಿರುತ್ತವೆ. ದಕ್ಷಿಣದ ವಿಂಧ್ಯಪರ್ವತದ ತಪ್ಪಲುಗಳು ರಾಜ್ಯದ ಹವಾಮಾನವನ್ನು ವರ್ಷವಿಡೀ ತಂಪಾಗಿಡುತ್ತವಲ್ಲದೆ ಭೂಮಿಯನ್ನು ಸಸ್ಯ ಶ್ಯಾಮಲವಾಗಿ ಮಾಡುವ ಅನೇಕ ನದಿಗಳಿಗೆ ಆಶ್ರಯವೀಯುತ್ತವೆ. ದಟ್ಟವಾದ ಅರಣ್ಯಗಳು ತುಂಬಿಕೊಂಡಿದ್ದರೂ ನೀರಿನ ಆಸರೆಯಿರುವ ಕಾರಣದಿಂದ ಕೃಷಿ ಕ್ಷೇತ್ರವಾಗಿ ಮಾರ್ಪಡಿಸಿದ ಭೂಭಾಗಗಳೂ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ದೃಗ್ಗೋಚರವಾಗುತ್ತವೆ. ಅರಣ್ಯಗಳಿಂದ ಒಳ್ಳೆಯ ಲಾಭವನ್ನು ಸರಕಾರ ಸಂಪಾದಿಸುತ್ತಿದೆಯಲ್ಲದೆ ಈಗ ಕೃಷಿ ಕ್ಷೇತ್ರದ ವಿಸ್ತರಣೆಗಾಗಿಯೂ ಭೂಪಾಳವು ಪ್ರಯತ್ನ ಮಾಡುತ್ತದೆ.

ಹದಿನೆಂಟನೇ ಶತಮಾನದಲ್ಲಿ ಮಹಮ್ಮದಖಾನನೆಂಬ ಅಫಘಾನ ಸರದಾರನು ಈ ರಾಜ್ಯವನ್ನು ಸ್ಥಾಪಿಸಿದಂದಿನಿಂದ ೧೯೪೯ ನೇ ಜೂನ್ ತಿಂಗಳ ಪ್ರಥಮ ದಿನದ ವರೆಗೆ ಭೋಪಾಳವು ತನ್ನ ಅಖಂಡ ಅಸ್ತಿತ್ವವನ್ನು ಸಮರ್ಥವಾಗಿ ಕಾಪಾಡಿಕೊಳ್ಳುತ್ತಾ ಬಂತು. ಭಾರತವು ಸ್ವತಂತ್ರಗೊಂಡು ಹಳೆಯ ಸುಸ್ಥಾನಿಕರ ರಾಜ್ಯಗಳೆಲ್ಲ ವಿಲೀನ ಹೊಂದುವ ಕಾರ್ಯಕ್ರಮವು ನಡೆದಾಗ ಭೋಪಾಳದ ನವಾಬನೂ ಕೇಂದ್ರ ಸರಕಾರಕ್ಕೆ ರಾಜ್ಯವನ್ನು ಒಪ್ಪಿಸಿಕೊಟ್ಟನು. ಮೊನ್ನೆ ರಾಷ್ಟ್ರಾಧ್ಯಕ್ಷರು ಸಂಚಾರ ಕಾಲದಲ್ಲಿ ಈ ನವಾಬನನ್ನು ಭೇಟಿಯಾಗಿ ಕುಶಲ ಮಾತುಕತೆಗಳನ್ನು ನಡೆಸಲು ಮರೆಯಲಿಲ್ಲ— ಭಾರತದ ಐಕ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ್ತು ಪ್ರಜಾ ಪ್ರಭುತ್ವ ಪದ್ಧತಿಯ ಆಳ್ವಿಕೆಯಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸಿ ಹಿಂದಿನ ಸಂಸ್ಥಾನಿಕರು ಉದಾರವಾಗಿ ವರ್ತಿಸಿದ ಮನೋಭಾವವು ಪ್ರಶಂಸನೀಯವಾದುದೆಂಬುದರಲ್ಲಿ ಸಂಶಯಕ್ಕೆಡೆಯಿಲ್ಲ. ಹೀಗೆ ಭಾರತದೊಡನೆ ವಿಲೀನ ಹೊಂದಿದ ಮೂರು ವರ್ಷಗಳಲ್ಲಿ ಭೋಪಾಳವು ತನ್ನ ಪ್ರಥಮ ಜನಪ್ರಿಯ ಸರಕಾರವನ್ನು ಪಡೆಯಿತು. ಮುಖ್ಯಮಂತ್ರಿ ಡಾ. ಶಂಕರ ದಯಾಳ ಶರ್ಮರ ನೇತೃತ್ವದಲ್ಲಿ ಭೋಪಾಳ ರಾಜ್ಯವು ಪ್ರಗತಿಪಥದಲ್ಲಿ ಶೀಘ್ರವಾಗಿ ಹೆಜ್ಜೆಯನ್ನಿಡ ಹತ್ತಿತು.

ಶಿಕ್ಷಣ ಕ್ಷೇತ್ರದಲ್ಲಿ ಈ ಪ್ರಗತಿಯು ಚೆನ್ನಾಗಿ ಗುರುತಿಸಲ್ಪಡುತ್ತದೆ. – ಪ್ರಾಥಮಿಕ ಶಿಕ್ಷಣದಿಂದ ಪದವೀಧರರಾಗುವವರೆಗೆ ವಿದ್ಯಾರ್ಥಿಗಳಿಗೆ ಎಲ್ಲ ಬಗೆಯ ಅನುಕೂಲತೆಗಳನ್ನು ಹೆಚ್ಚಿಸಲಾಗಿದೆಯಲ್ಲದೆ, ತಾಂತ್ರಿಕ ಹಾಗು ವೃತ್ತಿಪರ ಶಿಕ್ಷಣಗಳನ್ನು ನೀಡುವುದಕ್ಕೂ ಸರಕಾರ ಪ್ರಯತ್ನಿಸಿತು. ಗ್ರಾಮ ಪಂಚಾಯತುಗಳ ಆಡಳಿತ ಕ್ರಮವನ್ನು ಸುವ್ಯವಸ್ಥಿತಗೊಳಿಸಿದುದಲ್ಲದೆ, ಹಳ್ಳಿಯ ಉಪಾಧ್ಯಾಯನನ್ನೇ ಪಂಚಾಯತಿನ ಕಾರ್ಯದರ್ಶಿಯಾಗಿ ನೇಮಿಸಿ, ಶಿಕ್ಷಕರ ಅಂತಸ್ತು ಸಮಾಜದ ದೃಷ್ಟಿಯಲ್ಲಿ ಮೇಲೇರುವುದಕ್ಕೂ ಅವರ ಆದಾಯದಲ್ಲಿ ತುಸು ಹೆಚ್ಚುವುದಕ್ಕೂ ಸರಕಾರ ನೆರವು ನೀಡಿತು. ಸುಮಾರು ೪೮೨ ಲಕ್ಷ ರೂಪಾಯಿಗಳ ಪ್ರಥಮ ಪಂಚವಾರ್ಷಿಕ ಯೋಜನೆಯಂತೆ ಭೋಪಾಳದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿದ್ದು, ಇವುಗಳಲ್ಲಿ ಕೃಷಿಕ್ಷೇತ್ರದ ಸುಧಾರಣೆಗಾಗಿಯೇ ೨೧೨ ಲಕ್ಷ ರೂಪಾಯಿಗಳ ವ್ಯಯವಾಗುತ್ತದೆ. ಮುಳ್ಳು ಸಸ್ಯಗಳಿಂದ ಕೂಡಿದ ಐದು ಲಕ್ಷ ಎಕ್ರೆಗೂ ಹೆಚ್ಚಿನ ಭೂಮಿಯನ್ನು ಕೇಂದ್ರ ಟ್ರ್ಯಾಕ್ಟರು ಸಂಸ್ಥೆಯ ಸಹಾಯದಿಂದ ಕೃಷಿ ಯೋಗ್ಯವಾಗಿ ಮಾರ್ಪಡಿಸುವ ಘನವಾದ ಕೆಲಸ ಇಲ್ಲಿ ನಡೆಯುತ್ತದೆ. ಕೃಷಿ ಕ್ಷೇತ್ರದ ಅಭಿವೃದ್ಧಿಯು ನಿರ್ದಿಷ್ಟ ರೀತಿಯಲ್ಲಿ ನಡೆದರೆ ದೇಶಕ್ಕೆ ಒಂದೂವರೆ ಲಕ್ಷ ಟನ್ನುಗಳಷ್ಟು ಹೆಚ್ಚು ಆಹಾರ ಧಾನ್ಯ ಸಿಕ್ಕುವುದೆಂದು ಲೆಕ್ಕಹಾಕಿದವರ ಅಭಿಪ್ರಾಯ. ಹೀಗೆ ಅಧಿಕ ಉತ್ಪಾದನೆಯನ್ನು ಮಾಡಲಾಗುವಂತೆ ಭೂಸ್ವಾಮ್ಯವನ್ನು ರೈತರಿಗೆ ಬಿಟ್ಟುಕೊಡುವುದಕ್ಕೂ ಸರಕಾರ ಯೋಗ್ಯ ಕ್ರಮಗಳನ್ನು ಕೈಗೊಂಡಿತು— ಶಾಸನ ಮಾಡುವುದಕ್ಕೆ ಮುಂಚೆಯೇ ಜಾಗೀರುದಾರರಿಗೆ ನಗದಿ ವರ್ಷಾಸನ ಕೊಡುವ ವಾಗ್ದಾನದ ಮೇಲೆ ಐದು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ವರಮಾನ ಬರುವ ಭೂಮಿಯನ್ನು ಸರಕಾರ ಅವರಿಂದ ಸಂಪಾದಿಸಿತು. ಜಾಗೀರುದಾರರು ಸ್ವೇಚ್ಛೆಯಿಂದ ಸರಕಾರದೊಡನೆ ಸಹಕರಿಸಿದ ಉದಾಹರಣೆ ಭಾರತದಲ್ಲಿಯೇ ಇದು ಮೊದಲು.

ಹರಿಜನರ ಜೀವನ ಮಟ್ಟವನ್ನು ಎತ್ತರಿಸುವುದಕ್ಕೆ ಸಹ ಸರಕಾರದಿಂದ ಪ್ರಯತ್ನಗಳನ್ನು ನಡೆಸಲಾಯಿತು. ರಾಜ್ಯದ ಪ್ರಜೆಗಳಲ್ಲಿ ನೂರಕ್ಕೆ ನಲ್ವತ್ತು ಮಂದಿ ಹರಿಜನರೂ ಆದಿವಾಸಿಗಳೂ ಆಗಿರುವುದರಿಂದ ಅವರ ನೈತಿಕ, ಬೌದ್ಧಿಕ ಮತ್ತು ಆರ್ಥಿಕ ಸುಧಾರಣೆಗೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕಾದದ್ದು ಕ್ರಮಪ್ರಾಪ್ತವೇ ನಿಜ. ಭೂಮಿ ಇಲ್ಲದವರಿಗೆ ಭೂಮಿಯನ್ನು ಹಂಚಿಕೊಡುವುದಕ್ಕೂ ಕೆಲಸವಿಲ್ಲದವರಿಗೆ ಕೆಲಸ ನೀಡುವುದಕ್ಕೂ ಶಿಕ್ಷಣದಲ್ಲಿ ಆಸ್ಥೆ ಹುಟ್ಟಿಸುವುದಕ್ಕೂ ಶೀಘ್ರ ಕಾರ್ಯಕ್ರಮಗಳನ್ನು ಅಳವಡಿಸಲಾಯಿತು. ಆರುವತ್ತುಸಾವಿರ ಗೊಂಡರ ಏಳಿಗೆಗಾಗಿ ಸರಕಾರವು ನಡೆಸಿದ . ಸುಧಾರಣೆಗಳನ್ನು ಕೊಂಡಾಡುವ ಮಾನಪತ್ರವನ್ನು ರಾಷ್ಟ್ರಾಧ್ಯಕ್ಷರಿಗೆ ಗೊಂಡ ರೈತ ಜಗರಾಮನು ಮೊನ್ನೆ ಅರ್ಪಿಸಿದುದೇ ಜನರ ಕೃತಜ್ಞತೆಯ ದ್ಯೋತಕ. ತನಗೆ ೧೬ ಸಾವಿರ ಎಕ್ರೆ ಭೂಮಿಯನ್ನು ಹಂಚಲಾಗಿದೆಯೆಂದೂ ಐದು ಲಕ್ಷ ರೂಪಾಯಿಗಳ ಸಹಾಯ ದೊರೆತಿದೆಯೆಂದೂ ಅವನು ಹೇಳಿದ್ದನು. ಮತ್ತೆ ಐದು ಲಕ್ಷ ರೂಪಾಯಿಗಳನ್ನು ಗೃಹೋದ್ಯಮಗಳ ವಿಸ್ತರಣೆಗಾಗಿ ತಮ್ಮ ಪ್ರದೇಶದಲ್ಲಿ ವ್ಯಯಿಸಲಾಗಿದೆಯೆಂದೂ ಸಹಕಾರ ಸಂಘಗಳ ಸ್ಥಾಪನೆಯಿಂದ ಪರಿಸ್ಥಿತಿಯನ್ನು ಊರ್ಜಿತಗೊಳಿಸಲಾಗಿರುವುದೆಂದೂ ಆ ಗೊಂಡ ರೈತನು ಕೃತಜ್ಞತೆಯಿಂದ ನೆನೆದನು. ಇದರ ಜೊತೆಗೆ ಸರಕಾರವು ಎಂಟು ಸಾವಿರ ನೇಕಾರರಿಗೂ ಜೀವನೋಪಾಯದ ಸಾಧನಗಳನ್ನೊದಗಿಸುವ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿತು.

ಹತ್ತಿಯ ಬಟ್ಟೆ, ಹುಲ್ಲಿನ ಸಾಮಗ್ರಿ ಸಕ್ಕರೆಯ ಉತ್ಪಾದನೆ ಮುಂತಾದ ಕೈಗಾ

(೧೧ನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊಪ್ರೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ...	...	ರೂ. 25,00,000
ಚಂದಾ ಅರ್ಪಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	...	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪ್ಯ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲು)

THE CANARA BANKING CORPORATION LIMITED

Estd:- 1906] [H. O. UDIPI (S. India).

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವನ್ಯ ಪ್ರಾಣಿಗಳ ಸಂರಕ್ಷಣ ಕ್ರಮ

ಬೇಟೆಗಾರರ ಚಪಲವೇ ವಿನಾಶದ ಹೇತು

ವನ್ಯ ಮೃಗ ಮತ್ತು ಪಕ್ಷಿಗಳ ನಾಶವನ್ನು ತಡೆಗಟ್ಟಿ, ಸಂರಕ್ಷಣೆಯ ಬಗ್ಗೆ ಯೋಗ್ಯ ಕ್ರಮಗಳನ್ನು ತೆಗೆದು ಕೊಳ್ಳುವ ಕುರಿತು ವಿಚಾರ ವಿನಿಮಯ ನಡೆಸಿ, ನಿರ್ಣಯಗಳಿಗೆ ಬರುವ ರಾಜ್ಯದ ವನ್ಯ ಪ್ರಾಣಿ ಮಂಡಳದ ಪರಿಷತ್ತು ಕಳೆದ ವಾರ ಮದ್ರಾಸಿನಲ್ಲಿ ಜರಗಿತು. ಇದನ್ನು ರಾಜ್ಯದ ಕೃಷಿ ಮಂತ್ರಿಗಳಾದ ಶ್ರೀ ಎಂ. ಭಕ್ತವತ್ಸಲಮರು ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ ವನ್ಯ ಪ್ರಾಣಿಗಳ ಬಗ್ಗೆ ವಿಶೇಷವಾದ ಲಕ್ಷ್ಯವನ್ನು ಪೂರೈಸುವಂತೆ ನಿಸರ್ಗ ಪ್ರಿಯರು ಸಂಘಟಿಸಿದ ಕೆಲವು ಸಂಸ್ಥೆಗಳು ಒತ್ತಾಯಿಸಿದವೆಂದು ಹೇಳಿದಲ್ಲದೆ, ತದನುಗುಣವಾಗಿ ಸರಕಾರವು ಜ್ಯಾರಿಗೆ ತಂದ ನಿಯಮಗಳನ್ನೂ ಈಗಿನ ಪರಿಸ್ಥಿತಿಯನ್ನೂ ವಿವರಿಸಿದರು.

ನಮ್ಮ ದೇಶದಲ್ಲಿ ವನ್ಯ ಪ್ರಾಣಿಗಳ ಸಂಪತ್ತು ದಿನದಿನಕ್ಕೂ ಕ್ಷೀಣಿಸುತ್ತಿದೆಯೆಂದು ಹೇಳಲಾಗುತ್ತದೆ. ಶಾಸನದ ಬಲವನ್ನು ಉಪಯೋಗಿಸಿ ಮೃಗ ಪಕ್ಷಿಗಳ ಬೇಟೆಯ ಮೇಲೆ ನಿಯಂತ್ರಣವನ್ನು ಸರಕಾರದವರು ಹೇರಿದುದರಿಂದ ನಾಮಾವಶೇಷವಾಗುವುದರಲ್ಲಿದ್ದ ಕೆಲವು ಜಾತಿಗಳು ಈಚೆಗೆ ಕೆಲವು ವರ್ಷಗಳಲ್ಲಿ ಅಭಿವೃದ್ಧಿಯನ್ನು ಹೊಂದುವಂತಾಯಿತು. ಉದಾಹರಣೆಗೆ ಭಾರತದಲ್ಲಿ ಸಿಂಹಗಳು ಹೇಳ ಹೆಸರಿಲ್ಲದೆ ಹೋಗುವ ಕಾಲ ಕೆಲವು ವರ್ಷಗಳ ಹಿಂದೆ ಇದ್ದಿತು— ಸೌರಾಷ್ಟ್ರದ ಗೀರ್ ಅರಣ್ಯ ಪ್ರದೇಶದಲ್ಲಿ ಅವುಗಳು ಸುರಕ್ಷಿತವಾಗಿ ಬೆಳೆಯುವುದಕ್ಕೆ ಅನುಕೂಲತೆಯನ್ನು ಕಲ್ಪಿಸಿಕೊಟ್ಟುದರಿಂದ ಈಗ ಸಿಂಹಗಳ ಸಂಖ್ಯೆ ಇಮ್ಮಡಿಸಿರುವುದೆಂದೂ ಹೆಣ್ಣು ಸಿಂಹಗಳ ಕಾಟವೀಗ ಮಿತಿಮೀರಿದೆಯೆಂದೂ ತಿಳಿಯುತ್ತದೆ. ಇದರಂತೆ ಅಸ್ಸಾಮಿನ ದಟ್ಟ ಅರಣ್ಯಗಳಲ್ಲಿ ತಿರುಗಾಡುವ ಖಡ್ಗಮೃಗದ ಸಂತತಿಯನ್ನು ಅಭಿವೃದ್ಧಿಗೊಳಿಸುವುದೂ ಭಾರತದ ವೈಶಿಷ್ಟ್ಯ ರಕ್ಷಣೆಗೆ ಹೇಳಿಸಿದ ವಿಷಯ. ನಮ್ಮ ಪ್ರಾಂತದಲ್ಲಿಯೇ ಆನೆಗಳನ್ನು ಗುಂಡು ಹೊಡೆದು ಕೊಲ್ಲಬಾರದೆಂಬ ನಿಯಮದ ದೆಸೆಯಿಂದ ಕಾಡಾನೆಗಳ ಸಂಖ್ಯಾಪ್ರಮಾಣ ದ್ವಿಗುಣಿತವಾಗಿದೆಯೆಂದು ಅಭಿಪ್ರಾಯ ಪಡಲಾಗುತ್ತದೆ.

ರಾಜ್ಯ ಸರಕಾರವು ನೇಮಿಸಿರುವ ಮಂಡಳವು ಕೆಳಗಿನ ವಿಷಯಗಳನ್ನು ಪರ್ಯಾಲೋಚಿಸಿ ಯೋಗ್ಯ ಸಲಹೆಗಳನ್ನು ಕೊಡುತ್ತದೆ— ವನ್ಯ ಪ್ರಾಣಿಗಳ ಸಂರಕ್ಷಣೆಗಾಗಿ ಯೋಗ್ಯ ಶಾಸನಗಳನ್ನು ರಚಿಸುವುದು; ಕಾಡು ಪ್ರಾಣಿಗಳ ಬಗ್ಗೆ ಸಾರ್ವಜನಿಕರಲ್ಲಿ ಆಸಕ್ತಿ ಹುಟ್ಟಿಸುವುದು, ರಾಷ್ಟ್ರೀಯ ವಿಹಾರ ಕ್ಷೇತ್ರವಾಗಿ ರಾಜ್ಯದ ಕೆಲವು ನಿರ್ದಿಷ್ಟ ಪ್ರದೇಶಗಳನು ಮಾರ್ಪಡಿಸುವುದಕ್ಕೆ ನೆರವಾಗುವುದು, ನಾಶ ಹೊಂದಿದ ಪ್ರಾಣಿಗಳ ಜಾತಿಯನ್ನು ಪುನ ಬೆಳೆಯಗೊಡುವುದು ಮತ್ತು ಅವಶೇಷ ಹೊಂದಲಿರುವವುಗಳ ಅಭಿವೃದ್ಧಿಗೆ ಪ್ರಯತ್ನಿಸುವುದು; ಮೃಗಾಲಯಗಳನ್ನೂ ಪಕ್ಷಿ ಸಂಗ್ರಹಾಲಯಗಳನ್ನೂ ಏರ್ಪಡಿಸುವುದು, ವನ್ಯ ಪ್ರಾಣಿಗಳ ಸಂರಕ್ಷಣೆಯಿಂದ ಕೃಷಿಗೆ ಬಾಧಕವಾಗದಂತೆ ಧೋರಣೆಯನ್ನು ತಿದ್ದುವುದು; ಸಂದರ್ಶಕರಿಗೆ ಉಚಿತ ಅನುಕೂಲತೆಗಳನ್ನು ಒದಗಿಸಿ ಕೊಡುವುದು. ಮದ್ರಾಸು ರಾಜ್ಯದ ನೀಲಗಿರಿಯಲ್ಲಿ ವನ್ಯ ಪ್ರಾಣಿಗಳ ದೊಡ್ಡ ಸಂರಕ್ಷಣ ಕೇಂದ್ರವು ನೆಲೆಗೊಂಡಿರುವಲ್ಲದೆ ಚಿಂಗಲ್ಪೇಟು ಜಿಲ್ಲೆಯಲ್ಲಿ ಪಕ್ಷಿಗಳ ಪೋಷಣಾ ವ್ಯವಸ್ಥೆಯನ್ನು ಮಾಡುವುದಕ್ಕೂ ಸರಕಾರ ಉದ್ದೇಶಿಸಿರುತ್ತದೆ.

ಸಾಕಷ್ಟು ಮುಂಜಾಗ್ರತೆಯನ್ನು ಸರಕಾರದವರು ತೆಗೆದುಕೊಂಡರೂ ಅನೇಕ ಕಾರಣಗಳಿಂದ ವನ್ಯ ಪ್ರಾಣಿಗಳ ಮತ್ತು ಪಕ್ಷಿಗಳ ಸಂರಕ್ಷಣ ವ್ಯವಸ್ಥೆಯು ಭಂಗ ಹೊಂದುತ್ತದೆ. ಇದರ ಕಾರಣಗಳಲ್ಲಿ ಕೋವಿ ಮುಂತಾದ ಆಯುಧಗಳನ್ನು ಇತರರಿಗೆ ಎರವಲು ಕೊಡುವುದು, ಕತ್ತಿ ಮುಂತಾದ ಸಾಮಾನ್ಯ ಹತ್ಯಾರುಗಳನ್ನೆ ಬೇಟೆಗೆ ಉಪಯೋಗಿಸುವುದು, ಕೋವಿಗಳಿಗೆ ಹೆಚ್ಚು ಹೆಚ್ಚಾಗಿ ಲೈಸೆನ್ಸು ಕೊಡುವುದು, ಹಾಗೆ ಲೈಸೆನ್ಸಿಲ್ಲದ ಕೋವಿಗಳ ಸಂಖ್ಯೆ ದಿನ ದಿನಕ್ಕೂ ಹೆಚ್ಚುತ್ತಿರುವುದು, ಕೃಷಿ ಕ್ಷೇತ್ರದ ವಿಸ್ತರಣೆಗಾಗಿ ಮನುಷ್ಯನು ನಡೆಸುವ ಪ್ರಯತ್ನಗಳಿಂದ ಅರಣ್ಯ ಪ್ರದೇಶಗಳ ವ್ಯಾಪ್ತಿ ತಗ್ಗುವುದು, ಹುಲಿ, ತೋಳ ಮುಂತಾದ ನೈಸರ್ಗಿಕ ಶತ್ರುಗಳ ದೆಸೆಯಿಂದ ಜಿಂಕೆ, ಮೊಲ ಮುಂತಾದವುಗಳ ಸಂತತಿ ನಶಿಸುವುದು, ಕಾಡು ಕೋಣ ಮುಂತಾದವುಗಳಿಗೆ ಬರುವ ಮಹಾ ರೋಗದ ಹಾವಳಿ, ಎಲ್ಲಕ್ಕೂ ಹೆಚ್ಚಾಗಿ ಅಲ್ಪ ಅಭಿಲಾಷೆಗೆ ತುತ್ತಾಗಿ ಬೇಟೆಯಾಡಿ ಚರ್ಮವನ್ನೂ ಮಾಂಸವನ್ನೂ ಮಾರುವ ಹಳ್ಳಿಯ ಬೇಟೆಗಾರರ ಚಪಲ—ಇವು ಬರುತ್ತವೆ.

ಅರಣ್ಯ ಸಂರಕ್ಷಣಾ ಇಲಾಖೆಯವರು ವನ್ಯ ಮೃಗ ಪಕ್ಷಿಗಳ ಕಡೆಗೆ ಸಾಕಷ್ಟು ಗಮನ ಕೊಡುತ್ತಿದ್ದರೂ ಮೇಲಿನಲ್ಲಿ ರೀತಿಯಿಂದ ನಿಯಮ ನಿರ್ಬಂಧಗಳನ್ನು ಮುರಿಯುವ ಜನರನ್ನು ಪತ್ತೆ ಹಚ್ಚಿ ದಂಡಿಸುವುದು ಅವರಿಗೆ ಸಾಧ್ಯವಾಗಿಲ್ಲ. ಅರಣ್ಯಗಳನ್ನು ರಕ್ಷಿಸಿ ಅಭಿವೃದ್ಧಿಗೊಳಿಸುವ ತಮ್ಮ ಮುಖ್ಯ ಉದ್ದೇಶವನ್ನೇ ಅವರು ದೃಷ್ಟಿಯಲ್ಲಿಟ್ಟುಕೊಂಡಿರುವುದರಿಂದ ವನ್ಯ ಪ್ರಾಣಿಗಳ ಮತ್ತು ಪಕ್ಷಿಗಳ ವಿಷಯದ ಕರ್ತವ್ಯ ಅವರ ಮಟ್ಟಿಗೆ ಗೌಣವಾಗಿರುವುದು ಸಹಜ. ಆದರೆ ವನ್ಯ ಪ್ರಾಣಿಗಳ ಮತ್ತು ಪಕ್ಷಿಗಳ ಕುಲ ನಾಶವಾಗುವುದಕ್ಕೆ ಸರಕಾರ ಎಷ್ಟು ಮಾತ್ರಕ್ಕೂ ಬಿಡಬಾರದು. ಕಠಿಣವಾದ ಶಾಸನಗಳಿಂದಲೂ ವಿಶೇಷ ನಿಬಂಧಿಯನ್ನು ನೇಮಿಸುವ ಮೂಲಕವೂ ಯೋಗ್ಯ ಮುಂಜಾಗ್ರತೆಯನ್ನು ವಹಿಸಿಕೊಳ್ಳುವುದು ಅಪೇಕ್ಷಣೀಯ. ಕೋವಿಗಳಿಗೆ ಲೈಸೆನ್ಸು ಕೊಡುವ ಧೋರಣೆಯನ್ನು ಪುನರ್ವಿಮರ್ಶಿಸುವುದೂ ಇಷ್ಟವೆನಿಸುತ್ತದೆ. ವಿಹಾರ ಕ್ಷೇತ್ರಗಳಲ್ಲಿ ಪ್ರವಾಸಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ದೊರಕಿಸಿ ಕೊಡುವುದು ಆವಶ್ಯವಿದೆ. ಅರಣ್ಯಪ್ರದೇಶದ ಪ್ರಾಣಿ ಮತ್ತು ಪಕ್ಷಿ ಜೀವನದ ಚಿತ್ರಗಳನ್ನು ಸಾರ್ವಜನಿಕರ ಕುತೂಹಲ ಕೆರಳುವ ರೀತಿಯಲ್ಲಿ ಸಂಗ್ರಹಿಸಿ ಪ್ರದರ್ಶಿಸುವುದರಿಂದಲೂ ಒಳ್ಳೆಯ ಪ್ರಯೋಜನವಾದೀತು.

ಬ್ರೂಕ್ ಬಾಂಡ್ ಚಹಾ

— ಪ್ರತಿದಿನವೂ ಲಕ್ಷೋಪಲಕ್ಷ ಜನರ ಬಯಸಿದ ಆಯಿಕೆ!



ಕಾರಣ - ಫ್ಯಾಕ್ಟರಿಯಿಂದ ಅಂಗಡಿಗೆ ತ್ವರಿತದಿಂದ ತಲುಪಿಸಲ್ಪಡುವುದರಿಂದ ಬ್ರೂಕ್ ಬಾಂಡ್ ಚಹಾ ಹಸನಾಗಿರುವುದನ್ನು ಖಂಡಿತ ಮಾಡುತ್ತದೆ, ಹಾಗೂ ಪೊಟ್ಟಣಗಳ ಸೀಲ್ ಮಾಡುವಿಕೆಯು ಅದಕ್ಕೆ ಧೂಳು, ಕೊಳೆ ಸೇರದಂತೆಯೂ, ಕೆಡಿಸಲಾಗದಂತೆಯೂ ಕಾಪಾಡುವುದು.

ಇತರ ಯಾವದೇ ಚಹಾಗಿಂತಲೂ ಬ್ರೂಕ್ ಬಾಂಡ್ ಚಹಾವನ್ನೇ ಹೆಚ್ಚು ಜನರು ಕೊಳ್ಳುತ್ತಾರೆ!

BB 390

ನೆಹರುಗಳಿಂದ ರಾಷ್ಟ್ರೀಯ ಧ್ಯೇಯದ ನಿರೂಪಣೆ

ಕಾಂಗ್ರೆಸಿನ ಅವಡಿಯ ಅಧಿವೇಶನದಿಂದ ನವಮನ್ವಂತರದ ಪ್ರಾರಂಭ

ಒಟ್ಟು ಹತ್ತು ಲಕ್ಷ ರೂಪಾಯಿಗಳಷ್ಟು ವೆಚ್ಚ ಬರಬಹುದೆಂದು ಅಂದಾಜು ಮಾಡಲಾಗಿರುವ ಆವಡಿಯ ಕಾಂಗ್ರೆಸು ಅಧಿವೇಶನವು ನಾಳೆಯಿಂದ (ದಿನಾಂಕ ೨೧) ಮೂರು ದಿನಗಳ ವರೆಗೆ ಬಹಿರಂಗ ಸಭೆಯ ರೂಪದಲ್ಲಿ ನೆರೆಯಲಿರುವುದು. ಇದರಲ್ಲಿ ಅಖಿಲ ಭಾರತ ಕಾಂಗ್ರೆಸು ಸಮಿತಿಯ ೩೦೦ ಮಂದಿ ಸದಸ್ಯರೂ ನಲ್ವತ್ತು ಲಕ್ಷಕ್ಕೂ ಮಿಕ್ಕಿದ ಕಾಂಗ್ರೆಸಿನ ಪ್ರಾಥಮಿಕ ಸದಸ್ಯರನ್ನು ಪ್ರತಿನಿಧೀಕರಿಸುವ ಮೂರು ಸಾವಿರಕ್ಕೂ ಹೆಚ್ಚು ಮುಂದಾಳುಗಳೂ ಬೇರೆ ಎರಡೂ ಕಾಲು ಲಕ್ಷದಷ್ಟು ಪ್ರೇಕ್ಷಕರೂ ಭಾಗವಹಿಸುವರೆಂದು ಹೇಳಲಾಗುತ್ತದೆ. ಇಷ್ಟು ದೊಡ್ಡ ಅಧಿವೇಶನದ ಸಿದ್ಧತೆಗಳು ಕಳೆದ ವಾರ ಅನಿರೀಕ್ಷಿತವಾಗಿ ಮಳೆ ಬಂದುದರಿಂದ ಸ್ವಲ್ಪ ಕುಂಠಿತಗೊಂಡರೂ ಮತ್ತೆ ಒತ್ತರದಿಂದ ಅದನ್ನು ಸಾಗಿಸಿಕೊಂಡು ಹೋಗಿ ನಿಶ್ಚಿತ ಸಮಯಕ್ಕೆ ಪೂರ್ಣಗೊಳಿಸಲಾಯಿತು.

ತೃತೀಯ ಘಟ್ಟ

ಎಪ್ಪತ್ತು ವರ್ಷಗಳ ಪೂರ್ವದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸು ಸ್ಥಾಪನೆಗೊಂಡ ಬಳಿಕ ಆವಡಿಯ ಈ ಅರುವತ್ತನೇ ಅಧಿವೇಶನವು ಚಾರಿತ್ರಿಕವಾದ ತೃತೀಯ ಘಟ್ಟವನ್ನು ಪ್ರವೇಶಿಸುವುದರಲ್ಲಿದೆಯಾಗಿ ನಿರೀಕ್ಷಕರ ಅಭಿಪ್ರಾಯ. ಪೂರ್ಣ ಸ್ವರಾಜ್ಯವನ್ನು ಪಡೆಯಬೇಕೆಂಬ ಉದ್ದೇಶದಿಂದ ಕಾಂಗ್ರೆಸು ಸ್ವಾತಂತ್ರ್ಯದ ಹೋರಾಟವೆಂಬ ಪ್ರಥಮ ಕಾರ್ಯಕ್ರಮವನ್ನು ಕೈಗೊಂಡಿತು. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ರಾಷ್ಟ್ರದ ಐಕ್ಯವನ್ನೂ ಭದ್ರತೆಯನ್ನೂ ಸಂಘಟನೆಯನ್ನೂ ಕಾಯ್ದುಕೊಂಡು ಸ್ವಾತಂತ್ರ್ಯಕ್ಕೆ ಭದ್ರವಾದ ಅಸ್ತಿವಾರವನ್ನು ರಚಿಸಿಕೊಳ್ಳುವ ದ್ವಿತೀಯ ಹೆಜ್ಜೆಯನ್ನಿಡಲಾಯಿತು. ಇವೆರಡರಲ್ಲಿಯೂ ಕೃತಾರ್ಥವೆನಿಸಿದ ಕಾಂಗ್ರೆಸು ತನ್ನ ಮೂಲಭೂತ ಆದರ್ಶವಾದ ಆರ್ಥಿಕ ಹಾಗು ಸಾಮಾಜಿಕ ಪುನಾರಚನೆಯನ್ನು ಶೀಘ್ರದಲ್ಲಿಯೇ ನೆರವೇರಿಸುವ ಮಹತ್ವದ ತೃತೀಯ ಹೆಜ್ಜೆಯನ್ನೀಗ ಇಡಲಿರುವುದು.

ಮಹತ್ವದ ಗೊತ್ತುವಳಿ

ಆವಡಿಯ ಅಧಿವೇಶನವು ದೇಶದಲ್ಲಿ ನವಚೈತನ್ಯವನ್ನು ತುಂಬುವ ಹಾಗು ಸಮಾಜವಾದಿ ರಾಷ್ಟ್ರದ ರಚನೆಗೆ ನೆರವಾಗುವಂತೆ ಜನತೆಯನ್ನು ಕಾರ್ಯಪ್ರವೃತ್ತವಾಗಿಸುವ ಮೂಲಕ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ತೆರೆಯುವ ಎಲ್ಲ ಲಕ್ಷಣಗಳೂ ತೋರುತ್ತವೆ. ಈ ದೃಷ್ಟಿಯಿಂದ ಕೇವಲ ಕಾಂಗ್ರೆಸಿನ ಇತಿಹಾಸದಲ್ಲಿಯಷ್ಟೇ ಅಲ್ಲ, ರಾಷ್ಟ್ರದ ಪ್ರಗತಿಯ ಮಾನದಿಂದಲೂ ಆವಡಿಯ ಅಧಿವೇಶನ ನವಮನ್ವಂತರವನ್ನು ಸೃಷ್ಟಿಸುವುದೆಂದು ಹೇಳಿದರೆ ಅತಿಶಯೋಕ್ತಿಯಾಗದು. ಪದ್ಧತಿಯಂತೆ ದಿನಾಂಕ ೧೭ರಿಂದ ಸಭೆ ಜರಗಿರುವ ವಿಷಯ ನಿಯಾಮಕ ಸಮಿತಿಯು ವಿದೇಶ ಧೋರಣೆ, ಸಹ ಜೀವನದ ಸಿದ್ಧಾಂತ, ವಸಾಹತುವಾದ ಮುಂತಾದ ವಿಷಯಗಳಲ್ಲಿ ಕಾಂಗ್ರೆಸಿನ ನಿಲುವೆಯನ್ನು ಪುನರುಚ್ಚರಿಸುವ ಗೊತ್ತುವಳಿಗಳನ್ನು ಶಿಫಾರಸು ಮಾಡಿರುವುದಾದರೂ ಆರ್ಥಿಕ ಹಾಗು ಸಾಮಾಜಿಕ ಪುನಾರಚನೆಯ ಧೋರಣೆಯನ್ನು ನಿರೂಪಿಸುವ ಠರಾವಿನಷ್ಟು ಇವುಗಳಿಗೆ ಮಹತ್ವ ಸಲ್ಲಲಾರದು.

ಸಂಘಟನೆಯ ರಂಗ

ದ್ವಿತೀಯ ಪಂಚ ವಾರ್ಷಿಕ ಯೋಜನೆಯು ಮುಗಿಯುವ ಹೊತ್ತಿಗೆ, ಅಂದರೆ ಮೂರನೆಯ ಮಹಾ ಚುನಾವಣೆ ಜರಗುವ ಸಮಯಕ್ಕೆ, ಸರಿಯಾಗಿ ದೇಶದಲ್ಲಿ ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡಿದ ಮತ್ತು ಉತ್ಕರ್ಷದ ಅವಕಾಶಗಳು ಪ್ರತಿಯೊಬ್ಬನಿಗೂ ಲಭ್ಯವಾದ ಸಮಾಜದ ರಚನೆಯನು ಕಾಣುವಂತಾಗಬೇಕು ಎಂದು ಕಾಂಗ್ರೆಸು ವರಿಷ್ಠರು ತೀವ್ರ ಆಕಾಂಕ್ಷೆಯನ್ನು ಹೊಂದಿರುವರೆಂದು ತಿಳಿಯುತ್ತದೆ ಇದಕ್ಕೋಸ್ಕರ ಜನತೆಯೊಡನೆ ನಿಕಟ ಸಂಪರ್ಕವನ್ನು ಬೆಳೆಸುವ ಹಾಗು ತನ್ಮೂಲಕ ಅವರ ವಿಶ್ವಾಸಾದರಗಳನ್ನು ಗಳಿಸುವ ಉಪಾಯಗಳನ್ನು ನಿಶ್ಚಯಿಸಲು ಸಂಸ್ಥೆಯ ಸಂಘಟನಾತ್ಮಕ ಚರ್ಚೆ ಅಧಿವೇಶನ ಕಾಲದಲ್ಲಿ ನಡೆಯುವುದೆಂದೂ ಇದರಲ್ಲಿ ಕಾಂಗ್ರೆಸಿನ ಶಾಸನಾಂಗವೂ ವಿಧಾಯಕ ರಂಗವೂ ಕೂಡಿಯೇ ಭಾಗ ವಹಿಸುವುದೆಂದೂ ನಿರೀಕ್ಷಿಸಿದರೆ ತಪ್ಪಾಗದು. ಮದ್ರಾಸಿಗಳಿಂದ ಅಪೂರ್ವ ಸ್ವಾಗತವನ್ನು ಪಡೆದ ಕಾಂಗ್ರೆಸಿನ ಅಧ್ಯಕ್ಷ ಢೇಬರರು ಸಂಘಟನೆಯ ಕಡೆಗೆ ವಿಶೇಷವಾದ ಗಮನವನ್ನು ಕೊಡುವುದೂ, ಪ್ರಧಾನ ಮಂತ್ರಿಗಳಾಗಿರುವ ನೆಹರು ಆರ್ಥಿಕ ಪುನಾರಚನೆಗಾಗಿ ಸರಕಾರಿ ಮಟ್ಟದ ಕಾರ್ಯಕ್ರಮಗಳನ್ನು ಕೈಗೊಳ್ಳುವುದೂ ಕಾಂಗ್ರೆಸಿನ ಮುಂದಿನ ಕಾರ್ಯಕ್ರಮದ ವೈಶಿಷ್ಟ್ಯ.

ನೈತಿಕ ಮಟ್ಟ

ಎರಡು ವರ್ಷಗಳಿಗೂ ಹೆಚ್ಚು ಅವಧಿಯ ವರೆಗೆ ಕಾಂಗ್ರೆಸಿನ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ಈಗ ನಿವೃತ್ತರಾದ ನೆಹರುಗಳು ಅಖಿಲ ಭಾರತ ಕಾಂಗ್ರೆಸಿಗೆ ಒಪ್ಪಿಸಿರುವ ತನ್ನ ಆರು ಸಾವಿರ ಶಬ್ದಗಳ ವರದಿಯಲ್ಲಿ ಸಂಘಟನೆಗೂ ಸಮಾಜವಾದದ ಗುರಿಗೂ ಬಹಳ ಪ್ರಾಮುಖ್ಯತೆ ಸಲ್ಲಿಸಿರುವುದನ್ನು ಕಾಣಬಹುದು. ಕಾಂಗ್ರೆಸಿನಲ್ಲಿ ನೈತಿಕ ಅಧಃಪತನವನ್ನು ಹೊಂದಿದ ವ್ಯಕ್ತಿಗಳ ಆಧಿಕ್ಯವೇ ಕಂಡು ಬರುತ್ತಿದೆ ಎಂದು ಅವರು ಬಹಳ ವಿಷಾದದಿಂದ ತಮ್ಮ ವರದಿಯಲ್ಲಿ ಉಲ್ಲೇಖಿಸಿರುವರು. "ಕಾಂಗ್ರೆಸಿಗರು ಜೈ 'ನ್ಯದಿಂದಲೂ ನಿರ್ಭಯವಾಗಿಯೂ ತಮ್ಮ ಧ್ಯೇಯದತ್ತ ನಡೆಯಬೇಕು. ಇದಕ್ಕೋಸ್ಕರ ದೃಢವಾದ ನಿಷ್ಠೆಯನ್ನೂ ಉಚ್ಚ ನೈತಿಕ ಮಟ್ಟವನ್ನೂ ಕಾಯ್ದುಕೊಳ್ಳಬೇಕು. ಕಾಂಗ್ರೆಸಿನ ಹೆಸರು ಕೆಡಿಸುವಂತೆ ಅನೇಕ ಸದಸ್ಯರು ವರ್ತಿಸಿರುವುದನ್ನು ಕಂಡು ನಾನು ದುಃಖಿಸಿದ್ದೇನೆ. ನಾವು ಮಟ್ಟವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲವೆಂದರೆ, ನಮ್ಮ ದಾರಿಯನ್ನು ಬೆಳಗಿದ ಜ್ಯೋತಿ ನಂದಿಹೋಗಿದೆಯೆಂದೂ ನಾವು ನಿರುಪಯುಕ್ತರಾಗಿದ್ದೇವೆಂದೂ ಅರ್ಥ. ಪ್ರತಿಯೊಬ್ಬ ಕಾಂಗ್ರೆಸಿಗನೂ ತಾನು ನೈತಿಕ ಮಟ್ಟವನ್ನೂ ಚಾರಿತ್ರ್ಯವನ್ನೂ ಕಾಯ್ದುಕೊಂಡಿರುವೆನೇ ಎಂದು ಆತ್ಮ ಶೋಧನೆ ಮಾಡಿಕೊಳ್ಳುವುದು ಅಪೇಕ್ಷಣೀಯ. ಏಕೆಂದರೆ ಅಲ್ಪರು ಮಹಾಕಾರ್ಯಗಳನ್ನು ಸಾಧಿಸಲಾರರು" ಎಂದು ನೆಹರುಗಳು ಕಾಂಗ್ರೆಸಿಗರನ್ನು ಎಚ್ಚರಿಸಿರುವರು.

ರಾಷ್ಟ್ರೀಯ ಧ್ಯೇಯ

ಸ್ವಾತಂತ್ರ್ಯೋತ್ತರದಲ್ಲಿ ಭಾರತದ ಕೀರ್ತಿಯೂ ಪ್ರತಿಷ್ಠೆಯೂ ಬಹಳ ಹೆಚ್ಚಿದೆಯೆಂದು ಅವರು ಆತ್ಮಾಭಿಮಾನದಿಂದ ತಮ್ಮ ವರದಿಯಲ್ಲಿ ಹೇಳಿರುವರಲ್ಲದೆ ರಕ್ತಪಾತ ಮತ್ತು ಹಿಂಸೆಗಳಿಲ್ಲದೆಯೇ ದೇಶದಲ್ಲಿ ಕ್ರಾಂತಿಯನ್ನು ಸಾಧಿಸುವಲ್ಲಿ ಸಾಕಷ್ಟು ಯಶಸ್ಸು ದೊರಕಿದೆಯೆಂದೂ ನುಡಿದಿರುವರು. ಭಾರತದಲ್ಲಿ ಫ್ರೆಂಚರ ಆಳ್ವಿಕೆಯ ಮುಕ್ತಾಯವನ್ನೂ ಜಮೀನುದಾರಿ, ಜಾಗೀರುದಾರಿ ಮುಂತಾದ ಭೂಧಾರಣ ಪದ್ಧತಿಗಳ ನಿರ್ಮೂಲವನ್ನೂ ಪಂಚವಾರ್ಷಿಕ ಯೋಜನೆಯ ಪ್ರಗತಿಯನ್ನೂ ಇದಕ್ಕೆ ನಿದರ್ಶನವಾಗಿ ಅವರು ಕೊಟ್ಟರು. "ಕಲ್ಯಾಣ ರಾಷ್ಟ್ರ ಮತ್ತು ಸಮಾಜವಾದಿ ರಚನೆಯ ಆರ್ಥಿಕ ಪದ್ಧತಿಯನ್ನು ಸ್ಥಾಪಿಸುವುದೇ ನಮ್ಮ ಧ್ಯೇಯ. ಇದಕ್ಕೆ ನಾವು ನಮ್ಮ ಸ್ವಭಾವ ವೈಶಿಷ್ಟ್ಯಕ್ಕನುಗುಣವಾಗಿಯೇ ಕಾರ್ಯಪ್ರವೃತ್ತರಾಗಬೇಕಲ್ಲದೆ, ಪರದೇಶಗಳ ಆದರ್ಶವನ್ನು ಸ್ವೀಕರಿಸುವುದು ಇಷ್ಟವಲ್ಲ. ಉತ್ಪನ್ನದ ಹೆಚ್ಚಳ, ಪೂರ್ಣ ಉದ್ಯೋಗ ಮತ್ತು ಸಂಪತ್ತಿನ ವಿತರಣೆಯಾಗುವಂತೆ ನಾವು ಕಾರ್ಯಕ್ರಮವನ್ನು ರೂಪಿಸಬೇಕು. ಈಗಿರುವ ಖಾಸಗಿ ಉದ್ಯಮಗಳು ಬೆಳೆಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದೂ ಅದೇ ಕಾಲದಲ್ಲಿ ಸರಕಾರದ ಚಟುವಟಿಕೆಗಳನ್ನು ವಿಸ್ತರಿಸುವುದೂ ನಮ್ಮ ಸಮಾಜ ವಾದದ ಧೋರಣೆ" ಎಂದು ನೆಹರು ತಮ್ಮ ವರದಿಯಲ್ಲಿ ತಿಳಿಸಿರುವರು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡುವಂತೆ ಕೇಳಿಕೊಳ್ಳುತ್ತೇವೆ.

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತ್ರಾಣ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ
ಮೈಸೂರು ಸ್ಯಾಂಡಲ್ ಸೋಪಿನಲ್ಲಿ
ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

Member: I. S. T. M. A.

ಮಧ್ಯ ಅಮೇರಿಕದಲ್ಲೊಂದು ಯುದ್ಧ ರಂಗ

ಕೋಸ್ಟರೀಕ ಪ್ರಜಾರಾಜ್ಯದ ಮೇಲೆ ಆಕ್ರಮಣ

ಜಗತ್ತಿನಲ್ಲಿ ಎಲ್ಲಿಯೂ ಯುದ್ಧವಿಲ್ಲದಂಥ ಒಂದು ಪರಿಸ್ಥಿತಿಯನ್ನು ಇಂಡೋಚೀನದ ಕದನ ವಿರಾಮ ಸಂಧಿಯು ಮಾಡಿಸಿತ್ತಷ್ಟೆ! ಆದರೆ ಯುದ್ಧವಿಲ್ಲದೆ ದಿನಗಳೆಯುವ ಅಭ್ಯಾಸ ಜಗತ್ತಿಗೆ ಇಲ್ಲವೇನೋ ಎಂಬಂತೆ ಮಧ್ಯ ಅಮೇರಿಕದ ಗೌಟೆಮಾಲದ ಮೇಲೆ ಹೊಂದುರಾಸ ಪ್ರದೇಶದಿಂದ ಧಾಳಿಯಾದ ವಾರ್ತೆ ಬಂತು. ಅದು ಉಪಶಮನ ಹೊಂದಿದ ಕಲವೇ ವಾರಗಳಲ್ಲಿ ಇದೀಗ ಮಧ್ಯ ಅಮೇರಿಕದ ಇನ್ನೊಂದು ರಾಷ್ಟ್ರವಾದ ಕೋಸ್ಟರೀಕದ ಮೇಲೆ ನೆರೆಯ ನಿಕರಾಗುವಾದಿಂದ ಧಾಳಿ ನಡೆಸಲಾಗುತ್ತಿದೆಯೆಂಬ ವಾರ್ತೆ ಬಂದಿರುವುದು. ಕೋಸ್ಟರೀಕವು ಎಂಟು ಲಕ್ಷ ನಾಗರಿಕರನ್ನು ಪಡೆದ ೨೩ ಸಾವಿರ ಚದರ ಮೈಲು ವಿಸ್ತಾರವಾದ ಒಂದು ಪ್ರಜಾರಾಜ್ಯ. ಆದರೊಡನೆ ಸೈನ್ಯ ಶಕ್ತಿಯೇನೂ ಇಲ್ಲ. ಆದರೆ ಧಾಳಿಗಾರರು ಸಶಸ್ತ್ರ ವಿಮಾನಗಳನ್ನು ಉಪಯೋಗಿಸಿ ಈ ರಾಜ್ಯವನ್ನು ಆಕ್ರಮಿಸುವ ಸರ್ವ ಸಿದ್ಧತೆಯನ್ನು ನಡೆಸಿರುವಂತೆ ತೋರುತ್ತದೆ.

ಹೊರಗಿನ ಪ್ರೇರಣೆ

ನಿಕರಾಗುವಾದ ಅಧ್ಯಕ್ಷರು ತಮ್ಮ ರಾಷ್ಟ್ರಕ್ಕೂ ಕೋಸ್ಟರೀಕದ ಮೇಲಾಗುತ್ತಿರುವ ಧಾಳಿಗೂ ಏನೂ ಸಂಬಂಧವಿಲ್ಲವೆಂದು ಹೇಳುತ್ತಿದ್ದರೂ ಕೋಸ್ಟರೀಕಕ್ಕೆ ತನ್ನ ಶತ್ರುಗಳು ನಿಕರಾಗುವದಿಂದಲೇ ಎಲ್ಲ ಶಸ್ತ್ರಗಳನ್ನೂ ಶಕ್ತಿಯನ್ನೂ ಪಡೆಯುತ್ತಾರೆಂಬ ಬಲವಾದ ಸಂಶಯವುಂಟು. ಅದು ನಿಕರಾಗುವಾದಿಂದ ತನ್ನ ಮೇಲೆ ಧಾಳಿಯಾಗುವ ಪೂರ್ವ ಸೂಚನೆಯನ್ನು ತಿಳಿದೊಡನೆಯೇ ಅಂತರ್—ಅಮೇರಿಕನ್ ರಾಷ್ಟ್ರ ಮಂಡಳಕ್ಕೆ ದೂರನ್ನು ಕೊಟ್ಟು ಯೋಗ್ಯ ಕ್ರಮಗಳನ್ನು ಶೀಘ್ರವಾಗಿ ಕೈಗೊಳ್ಳುವಂತೆ ಒತ್ತಾಯಿಸಿತು. ಒಟ್ಟು ಇಪ್ಪತ್ತೊಂದು ರಾಷ್ಟ್ರಗಳ ಸದಸ್ಯತ್ವವನ್ನು ಪಡೆದ ಈ ಮಂಡಳವು ಮೊದಲು ಅಷ್ಟೇನೂ ಉತ್ಸಾಹದಿಂದ ದೂರನ್ನು ವಿಚಾರಿಸಲು ಮುಂದಾಗಲಿಲ್ಲ. ಆದರೆ ನಿಕರಾಗುವಾದಿಂದ ಧಾಳಿಯ ಹೊಡೆತವು ತೀವ್ರವಾಗುತ್ತಾ ಬಂದಂತೆಲ್ಲ ತನ್ನ ಮೇಲೆ ಆಪವಾದ ಬರುವುದನ್ನು ತಪ್ಪಿಸಲೋ ಎಂಬಂತೆ ಐದು ಮಂದಿಯ ಸತ್ಯಾನ್ವೇಷಣ ಸಮಿತಿಯನ್ನು ಅದು ನೇಮಿಸಿ ಕಳಿಸಿತು. ಈ ಸಮಿತಿಯು ತನ್ನ ವರದಿಯನ್ನು ಇದೀಗ ಒಪ್ಪಿಸಿದ್ದು, ಅದರಲ್ಲಿ ಧಾಳಿಗಾರರು ಉಪಯೋಗಿಸುವ ಅಸ್ತ್ರ ಶಸ್ತ್ರಗಳೂ ಮದ್ದು ಗುಂಡುಗಳೂ ವಿದೇಶದಿಂದಲೇ ಬರುತ್ತಿವೆ ಎಂದು ಹೇಳಲಾಗಿದ್ದರೂ ಆ ಪರದೇಶದ ನಾಮನಿರ್ದೇಶವನ್ನೇನು ಮಾಡಿಲ್ಲ.

ಅಮೇರಿಕದ ನೆರವು

ಗೌಟೆಮಾಲದಲ್ಲಿ ನಡೆದಂತೆ ಅಮೇರಿಕದ ಕೈವಾಡದಿಂದಲೇ ಕೋಸ್ಟರೀಕ ಪ್ರಜಾರಾಜ್ಯದಲ್ಲಿಯೂ ದಂಗೆ ಎದ್ದಿರಬೇಕೆಂದು ಮೋಸ್ಕೋ ರೇಡಿಯೋ ಆರೋಪಿಸಿದೆ. ಇದಕ್ಕೆ ಪುಷ್ಟಿಕೊಡುವಂತೆ ಈ ದೇಶದಲ್ಲೂ ಅಮೇರಿಕದ ಬಂಡವಾಳಗರ ನಿಕ್ಷೇಪದಿಂದ ತುಂಬಿದ ಹಣ್ಣಿನ ತೋಟಗಳುಂಟು. ಆದರೆ ಅಮೇರಿಕವು ಧಾಳಿಗಾರರನ್ನು ಪ್ರತಿಭಟಿಸುವ ಉದ್ದೇಶದಿಂದ ಕೋಸ್ಟರೀಕಕ್ಕೆ ನಾಲ್ಕು ಸೈನಿಕ ವಿಮಾನಗಳ ಸಹಾಯ ಕೊಡಲು ಮುಂಬಂದಿರುವುದನ್ನು ನೋಡಿದರೆ, ಅಮೇರಿಕದ ಉದ್ದೇಶದ ಕುರಿತಿದ್ದ ಸಂಶಯ ತಾನಾಗಿ ನಿರಸನ ಹೊಂದುತ್ತದೆ. ಬಹಳ ಕಷ್ಟ ಪಟ್ಟು ಧಾಳಿಗಾರರನ್ನು ಹಿಮ್ಮೆಟ್ಟಿಸಲು ಕೋಸ್ಟರೀಕ ಸರ್ವ ಪ್ರಯತ್ನಗಳನ್ನು ನಡೆಸುತ್ತಿದ್ದರೂ ಒಮ್ಮೆ ಹಿಂದ ಸರಿದ ಧಾಳಿಗಾರರು ಮರಳಿ ಮುಂದೊತ್ತುತ್ತಿರುವರೆಂದು ದಿನಾಂಕ ೧೭ ರಂದು ಬಂದ ವರದಿಗಳು ಹೇಳುತ್ತವೆ. ಅಂತೂ ಮಧ್ಯ ಅಮೇರಿಕ ಮತ್ತು ಮಧ್ಯ ಏಶಿಯಗಳೇ ಉಳಿದೆಲ್ಲ ಸ್ಥಾನಗಳಿಗಿಂತ ಆಂತರಿಕ ಕಲಹದಲ್ಲಿ ಮುಂದಾಗುತ್ತಿವೆಯೆಂದು ಇದರಿಂದ ವ್ಯಕ್ತವಾಗುತ್ತದೆ. ಆದರೆ, ಇವು ಕ್ಷಣಿಕ ಸ್ವರೂಪದ ದಂಗೆಗಳೆನ್ನುವುದೇ ಸಮಾಧಾನಕರವಾದ ವಿಷಯ.

ಯಾತ್ರೆಯ ಫಲಶ್ರುತಿ

ಸಂಯುಕ್ತ ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿಗಳಾದ ಡಾಗ್ ಹ್ಯಾಮರ್ ಶೀಲ್ಡರು ಪೇಕಿಂಗಿಗೆ ಹೋಗಿ ನಡೆಸಿದ ಸಂಧಾನಗಳು ವಿಫಲವಾಗಲಿಲ್ಲ ಎಂದಿಷ್ಟೇ ತಿಳಿದು ಬರುತ್ತದೆ ಇದರ ಅರ್ಥವನ್ನು ಸಫಲವಾಗಲೂ ಇಲ್ಲವೆಂದು ನಾವು ಕಟ್ಟಿಕೊಂಡರೂ ಅಷ್ಟು ತಪ್ಪಾಗಲಾರದು. ಚೀನದ ಪ್ರಧಾನ ಮಂತ್ರಿ ಹಾಗು ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿಗಳ ನಡುವೆ ನಡೆದ ಮಾತುಕತೆಗಳು ಬಂಧಿತ ವೈಮಾನಿಕರ ಬಿಡುಗಡೆಗಷ್ಟೇ ಸಂಬಂಧಿಸಿರದೆ, "ಅಂತಾರಾಷ್ಟ್ರೀಯ ದ್ವೇಷ"ಕ್ಕೆ ಕಾರಣವಾದ ಬೇರೆ ಅನೇಕ ವಿಷಯಗಳನ್ನೂ ಸ್ಪರ್ಶಿಸಿತೆಂದು ಪತ್ರಿಕಾ ಪರಿಷತ್ತಿನಲ್ಲಿ ವ್ಯಕ್ತಪಡಿಸಿದ ಹೇಳಿಕೆಗಳಿಂದ ತಿಳಿಯುತ್ತದೆ "ಬಂಧಿತ ಕೈದಿಗಳನ್ನು ಒಟ್ಟಿಗೆ ಕರೆದುಕೊಂಡು ಬಂದಿದ್ದ ಮಾತ್ರಕ್ಕೆ ಸಂಧಾನ ವಿಫಲವಾಯಿತೆಂದು ಹೇಳುವುದಾದರೆ—ಹಾಗೆಯೇ ಭಾವಿಸಬಹುದು. ಆದರೆ ನನ್ನ ದೃಷ್ಟಿಯಲ್ಲಿ ಮಾತುಕತೆ ವ್ಯರ್ಥವಾಗಲಿಲ್ಲ—ಉಭಯ ಪಕ್ಷಗಳೂ ಬಾಗಿಲನ್ನು ತೆರೆದಿಟ್ಟಿವೆ; ಮತ್ತು ನಾನು ಇದರಿಂದ ಉತ್ತಮ ಪರಿಣಾಮವಾದೀತೆಂದು ಆಶಿಸಿದ್ದೇನೆ" ಎಂಬುದು ಹ್ಯಾಮರ ಶೀಲ್ಡರ ಅಭಿಪ್ರಾಯ.

ಮನ್ನಣೆ ಕೊಡುವ ಪ್ರಶ್ನೆ

ಕೆಂಪು ಚೀನಕ್ಕೆ ರಾಷ್ಟ್ರ ಸಂಘದಲ್ಲಿ ಸ್ಥಾನ ಕೊಡುವ ಪ್ರಶ್ನೆಯೂ ಈ ಭೇಟಿಯ ಕಾಲದಲ್ಲಿ ಚರ್ಚೆಗೆ ಬಂತೆಂಬುದನ್ನು ಮತ್ತು ಹಾಗೆ ಮಾಡುವುದೇ ಲೇಸೆಂಬ ಭಾವನೆ ರಾಷ್ಟ್ರ ಸಂಘದ ಕಾರ್ಯದರ್ಶಿಗಳಲ್ಲಿ ಮೂಡಿರುವುದೆಂಬುದನ್ನು ಅವರು ಪ್ರಶ್ನೆಯೊಂದಕ್ಕೆ ಕೊಟ್ಟ ಉತ್ತರ ಸ್ಪಷ್ಟಪಡಿಸಿತು. "ರಾಷ್ಟ್ರ ಸಂಘದ ದೃಷ್ಟಿಯಿಂದ ನೋಡಿದರೆ ಕೆಂಪು ಚೀನದಂಥ ಮಹಾ ರಾಷ್ಟ್ರಕ್ಕೆ ಪ್ರಾತಿನಿಧ್ಯವನ್ನು ಕೊಡುವುದರಿಂದ ತುಂಬ ಪ್ರಯೋಜನ ಲಭಿಸೀತು ಆದರೆ ಇದು ಕೆಲವು ಕಠಾರುಗಳನ್ನೂ ಪರಿಸ್ಥಿತಿಯನ್ನೂ ಹೊಂದಿರುತ್ತದೆ" ಎಂದು ಹ್ಯಾಮರ ಶೀಲ್ಡರು ಹೇಳಿರುವರು. ಎಲ್ಲರಿಗೂ ತಿಳಿದಿರುವಂತೆ ಅಮೇರಿಕದ ಮತ್ತು ಅದರ ಹಿಂಬಾಲಕ ರಾಷ್ಟ್ರಗಳ ವಿರೋಧದಿಂದಲೇ ಕೆಂಪು ಚೀನದ ಪ್ರಾತಿನಿಧ್ಯಕ್ಕೆ ವಿಳಂಬವಾಗುತ್ತಿದೆಯಲ್ಲದೆ, ನ್ಯಾಯವಾದ ಬೇರಾವುದೇ ಕಾರಣವೂ ಇದಕ್ಕಿಲ್ಲ. ಆದರೆ ಈಗೀಗ ಅಮೇರಿಕವೂ ತನ್ನ ಬೂಟಾಟಿಕೆ ಅಷ್ಟು ಪ್ರಯೋಜನಕ್ಕೆ ಬರಲಾರದೆಂದು ನಂಬಿರುವಂತೆ ತೋರುತ್ತದೆ. ಬಂಧಿತ ವೈಮಾನಿಕರ ವಿಷಯದಲ್ಲಿ ಶೀಘ್ರ ಫಲ ದೊರಕಿರದಿದ್ದರೂ ಕೆಂಪು ಚೀನವನ್ನು ಯುದ್ಧಾತುರವಾಗಿ ಭಂಗಿಸುವುದು ಈಗ ಇಷ್ಟವಲ್ಲವೆಂದೂ ರಾಷ್ಟ್ರ ಸಂಘದ ಪ್ರಯತ್ನ ಸಫಲವಾಗುವಂತೆ ಯೋಗ್ಯ ಬೆಂಬಲ ನೀಡುವುದೇ ವಿಹಿತವೆಂದೂ ಅದು ತಮ್ಮ ಜನರಿಗೆ ವಿನಂತಿಸಿರುವುದು ಇದಕ್ಕೆ ನಿದರ್ಶನ.

ಮೃದುವಾದ ವರ್ತನೆ

ಇನ್ನೂ ಒಂದು ನಿದರ್ಶನವನ್ನು ಕೊಡಬಹುದಾದರೆ ಫಾರ್ಮೋಸದ ಅಧ್ಯಕ್ಷ ಚಿಯಾಂಗರಿಂದ ಅಮೇರಿಕವು ಪಡೆದ ಭರವಸೆಯನ್ನು ಉಲ್ಲೇಖಿಸಬಹುದು ೮

(೮ನೇ ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

For safe investments and prompt settlements, join **CHITS** run on sound basis by

JANALAXMI LTD.,

Rs.	500/-	Lot 25 months	Rs.	20/-	per month.
,,	1000/-	25 ,,	,,	40/-	,,
,,	2000/-	25 ,,	,,	80/-	,,
,,	2500/-	25 ,,	,,	100/-	,,
,,	3000/-	20 ,,	,,	150/-	,,
,,	5000/-	25 ,,	,,	200/-	,,
,,	7500/-	25 ,,	,,	300/-	,,
,,	10000/-	25 ,,	,,	400/-	,,

Auctions are held every month and Discounts are divided among the members. At the request of our patrons we are also starting Daily Chits shortly. Watch the date!

JANALAXMI LTD.,
LAXMI BLDG (Ground Floor), SIR P. M. MEHTA ROAD,
FORT, BOMBAY.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆಯಾಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಿವಾರಣೆಮಾಡುವುದು. ಸಂತಾನವನ್ನು ಉಂಟುಮಾಡುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಬೆಲೆ ರೂ೧-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಶಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೨೦-೧-'೫೫	ಸಂಚಿಕೆ ೨೦

ನಾಳೆಯ ಯೋಜನೆ

ನಮ್ಮ ದೇಶದ ಆರ್ಥಿಕ ಸ್ಥಿತಿಗತಿಯು ಸಾಕಷ್ಟು ಊರ್ಜಿತಗೊಂಡಿದೆಯೆಂಬ ಸಂಗತಿ ವಿದೇಶಗಳ ತಜ್ಞರು ಭಾರತದ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಪುಷ್ಟೀಕರಿಸಲ್ಪಡುತ್ತಿರುವುದನ್ನು ಕಂಡ ರಾಷ್ಟ್ರೀಯರಿಗೆ ಸಮಾಧಾನವಾಗದಿರದು. ಕೊಲೊಂಬೋ ಯೋಜನೆಯ ಸಲಹಾಸಮಿತಿಯ ವರದಿ ಕಳೆದವಾರ ಪ್ರಕಟಿಸಲ್ಪಟ್ಟಿದ್ದು, ಭಾರತಕ್ಕೆ ಸಂಬಂಧಿಸಿದಂತಿರುವ ವರದಿಯ ಅಂಶಗಳನ್ನು ಇದಕ್ಕೆ ಇತ್ತೀಚಿನ ನಿದರ್ಶನವಾಗಿ ಉಲ್ಲೇಖಿಸಬಹುದು. ಕೃಷಿಗೆ ಸರಕಾರದವರು ನೀಡಿದ ಉತ್ತೇಜನೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗಗಳೂ ಉತ್ಪಾದನೆಯೂ ಹೆಚ್ಚಿದೆಯೆಂದು ಮತ್ತು ನಗರಗಳಲ್ಲಿರುವ ಉದ್ದಿಮೆ ಹಾಗು ವಾಣಿಜ್ಯ ಸಂಸ್ಥೆಗಳ ಚಟುವಟಿಕೆ ಬೆಳೆದಿರುವುದೆಂದು ಅದು ಹೇಳುತ್ತಾ ಇವರಿಂದ ಸಾಂಪತ್ತಿಕ ಸ್ಥಿತಿಯಲ್ಲಿ ಸುಧಾರಣೆಯಾಗಿದೆಯೆಂದೂ ಆರ್ಥಿಕ ವಾತಾವರಣವು ತೃಪ್ತಿಕರವಾಗಿ ಕಾಣಿಸುತ್ತಿದೆಯೆಂದೂ ವರದಿ ಹೇಳುತ್ತದೆ. ರಾಷ್ಟ್ರೀಯ ಸರಕಾರವು ಕೈಗೊಂಡ ಯೋಜನೆಗಳಿಂದ ಹೀಗೆ ಕಲ್ಯಾಣಪ್ರದವಾದ ಪರಿಣಾಮಗಳಾಗಿರುವುದಕ್ಕೆ ನಾವು ಅಭಿಮಾನಪಟ್ಟರೆ ತಪ್ಪೇನೂ ಇರಲಾರದು. ಅಂಥ ಆತ್ಮವಿಶ್ವಾಸ ಮೂಡಿದರೆ ಮಾತ್ರ ನಾವು ನಾಳೆಯ ಯೋಜನೆಯನ್ನು ಕುರಿತಾಗಿ ಧೈರ್ಯದಿಂದ ವಿಚಾರಿಸುವುದು ಸಾಧ್ಯವಾದೀತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ವಿಷಯದಲ್ಲಿ ನಾವು ಹೆಚ್ಚು ಉತ್ಸಾಹವನ್ನು ಹೊಂದಬೇಕಿದ್ದರೆ ಪ್ರಥಮ ಪಂಚವಾರ್ಷಿಕ ಯೋಜನೆಯಿಂದ ಒಳ್ಳೆಯ ಪ್ರಯೋಜನವಾಗಿದೆಯೆಂಬ ಅಂಶವು ಹೆಚ್ಚು ಸ್ಪಷ್ಟವಾಗಿ ಜನತೆಯ ಗಮನಕ್ಕೆ ಬರುತ್ತಿರುವುದು ಅಪೇಕ್ಷಣೀಯ. ವಿದೇಶಗಳಿಂದ ಬರುವ ಸಂದರ್ಶಕರೂ ತಜ್ಞರ ಮಂಡಳಿಗಳೂ ಭಾರತದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಈ ವಿಷಯದಲ್ಲಿ ಸಾಕಷ್ಟು ನೆರವು ಸಿಗುತ್ತಿದೆಯೆಂದು ಹೇಳಿದರೆ ತಪ್ಪಾಗಲಾರದು. ಅವರ ಹೊಗಳಿಕೆಯ ಮಾತುಗಳಿಂದ ನಾವು ಉಬ್ಬಿಕೊಳ್ಳಬೇಕಿಲ್ಲದಿದ್ದರೂ ನಮ್ಮ ಸಾಧನೆಯ ಬಗ್ಗೆ ಅಭಿಮಾನರಹಿತರಾಗಬೇಕಾದುದೇನೂ ಇಲ್ಲ—ಇದೇ ವಾರ್ತೆಯನ್ನು ಅರ್ಥ ಸಚಿವ ಶ್ರೀ ಚಿಂತಾಮಣಿ ದೇಶಮುಖರು ಮದ್ರಾಸಿನಲ್ಲಿ ಮೊನ್ನೆ ದಿನಾಂಕ ೧೫ರಂದು ವ್ಯಕ್ತಪಡಿಸಿದ ಅಭಿಪ್ರಾಯವೂ ಹೋಲುತ್ತದೆ. ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ನಾವು ಹಣದ ಕೊರತೆಯ ಅನುಭವಕ್ಕೆ ಬಂದಾಗ್ಯೂ ಯಶಸ್ವಿಯಾಗಿ ಪೂರೈಸುವುದು ಖಂಡಿತ ಎಂದವರು ಹೇಳಿದರು. ಯೋಜನೆಯ ಕೊನೆಯ ಎರಡು ವರ್ಷಗಳಲ್ಲಿ ೫೫೦ ಕೋಟಿ ರೂಪಾಯಿಗಳ ಕೊರತೆ ಧನ ವಿನಿಯೋಗವನ್ನು ಕೈಗೊಂಡರೂ ಅದರಿಂದ ಯಾವ ತರದ ದುಷ್ಪರಿಣಾಮವೂ ಆಗದಂತೆ ದಕ್ಷತೆಯನ್ನು ವಹಿಸಲಾಯಿತೆಂದೂ ಇದು ಸತ್ಫಲವನ್ನು ಕೊಟ್ಟಿದೆಯೆಂದೂ ಅವರು ತಮ್ಮ ಕಾರ್ಯಪಟುತ್ವಕ್ಕೆ ನಿದರ್ಶನವನ್ನಿತ್ತರು. ಇದರ ಹಿನ್ನೆಲೆಯಲ್ಲಿ ನಾಳೆಯ ಯೋಜನೆಗೆ ಸರಕಾರದ ಮಟ್ಟದಲ್ಲಿ ಮೂರು ಸಾವಿರ ಕೋಟಿ ರೂಪಾಯಿಗಳನ್ನು ವ್ಯಯಿಸುವ ನಿಶ್ಚಯ ಮಾಡಲಾಗಿದೆಯೆಂದೂ ಇದರಲ್ಲಿ ೧೨೦೦ ಕೋಟಿ ರೂಪಾಯಿಗಳ ಮಟ್ಟಿಗೆ ಕೊರತೆ ಧನ ವಿನಿಯೋಗ ಪದ್ಧತಿಯನ್ನು ಅನುಸರಿಸಲಾಗುವುದೆಂದೂ ಅವರು ತಿಳಿಸಿದರು. ಯೋಜನೆಯ ಆದಾಯ ಬಾಬುಗಳ ಬಗ್ಗೆ ಅವರು ಪ್ರಕಟಿಸಿದ ಅಂದಾಜು ಬಹಳ ಸಮತೂಕದಲ್ಲಿರುವುದು ಎಷ್ಟು ಸಮಾಧಾನಕರವೆನಿಸಿಯೋ ವರ್ಷಕ್ಕೆ ೨೦೦ರಿಂದ ೫೫೦ ರೂಪಾಯಿಗಳ ಕೊರತೆ ಧನ ವಿನಿಯೋಗವೂ ಅಷ್ಟೇ ಜಾಗ್ರತೆಯಿಂದ ಲೆಕ್ಕಕ್ಕೆ ಹಿಡಿಯಲ್ಪಟ್ಟಿದೆಯೆಂದು ನಮಗೆ ತೋರುತ್ತದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಮೊದಲಿನ ಯೋಜನೆಯ ಎಲ್ಲ ಸತ್ಫಲಗಳೂ ದೊರಕುವುದರಿಂದ ಸ್ವಾಭಾವಿಕವಾಗಿಯೇ ಉತ್ಪಾದನೆಯು ಹೆಚ್ಚಿಕೊಂಡು, ಸಂಪತ್ತು ಅಧಿಕಗೊಳ್ಳುತ್ತದೆ. ಆದುದರಿಂದ, ಈ ಯೋಜನೆಯಲ್ಲಿ ಅನುಸರಿಸಲಾದ ತಂತ್ರಗಳನ್ನೆ ತುಸು ವಿಸ್ತೃತ ಪ್ರಮಾಣದಲ್ಲಿ ಬಳಸುವ ಸರಕಾರದ ವಿಚಾರವು ಯೋಗ್ಯವಾಗಿಯೇ ಕಾಣುತ್ತದೆ. ಯೋಜನೆಯ ವೇಗವನ್ನು ನಾವು ಮಿತಿಮೀರಿ ತೀವ್ರಗೊಳಿಸಬೇಕಿಲ್ಲ; ಆದರೆ ಈಗಿನಕ್ಕಿಂತಲೂ ನಿಧಾನವಾಗಿ ಹೆಜ್ಜೆಯನ್ನಿಡುವ ಅಗತ್ಯವೂ ಅಷ್ಟಾಗಿ ಇಲ್ಲ — ಎಂದು ಅರ್ಥಸಚಿವರ ಮಾತಿನ ತಿರುಳು. ಇದು ಆತ್ಮವಿಶ್ವಾಸದಿಂದಲೂ ಸ್ವಂತಶಕ್ತಿ ಸಾಮರ್ಥ್ಯದ ಸ್ಪಷ್ಟಕಲ್ಪನೆಯ ಬಲದಿಂದಲೂ ಪೋಷಿಸಲ್ಪಟ್ಟ ವಿಚಾರವೆಂಬುದನ್ನು ನಾವು ಮರೆಯಲಾಗದು.

ರಷಿಯದ ಔದಾರ್ಯ

ಅಣುಬಾಂಬುಗಳನ್ನೆಲ್ಲ ಅಟ್ಲಾಂಟಿಕ ಸಾಗರಕ್ಕೆ ಎಸೆದು ಬಿಡಿರೆಂದು ಅಮೇರಿಕಕ್ಕೆ ಬುದ್ಧಿಹೇಳಿದ ರಾಜಾಜಿಯನ್ನು ಅವರ ಮೊಮ್ಮಗನು ಹಾಗೆ ಅವರು ಮಾಡಿದರೇ ಎಂದು ಪ್ರಶ್ನಿಸಿದನಂತೆ-ಇಲ್ಲವೆಂದು ಹೇಳಿ ರಾಜಾಜಿ ಅವನನ್ನು ಸಿರಿಕೆಗೊಳಿಸಿದರೂ ತಾವೇನೂ ಆಶೆತೊರೆದಿಲ್ಲ; ಅಮೇರಿಕದ ನಾಗರಿಕರ ಮೇಲೆ ತಮ್ಮ ಹಿತೋಪದೇಶದ ಪರಿಣಾಮ ನಿಧಾನವಾಗಿಯೇ ಆದರೂ ಆಗುತ್ತಿದೆ ಎಂದವರ ವಿಶ್ವಾಸ. ಅಣುಶಸ್ತ್ರಗಳನ್ನು ಅಮೇರಿಕನ್ನರು ತ್ಯಜಿಸಲಿ, ಬಿಡಲಿ— ಅಣುಶಕ್ತಿಯನ್ನು ಶಾಂತಿಕಾಲದ ಉಪಯೋಗಕ್ಕೆ ಪರಿಣಾಮಕರವಾದ ರೀತಿಯಲ್ಲಿ ಬಳಸಬೇಕೆಂಬ ವಿಚಾರ ಈಗ ಲೋಕಕ್ಕೆ ಹೆಚ್ಚು ಸಮ್ಮತವಾಗಿದೆಯೆಂಬುದರಲ್ಲಿ ಪ್ರತಿವಾದವಿಲ್ಲ. ಅಮೇರಿಕದ ಅಧ್ಯಕ್ಷ ಐಸೆನ ಹೋವರರೇ ಈ ವಿಷಯದಲ್ಲಿ ಜಗತ್ತಿನ ಬೇರೆ ರಾಷ್ಟ್ರಗಳಿಗೆ ನೆರವಾಗುವ ಮನೋಭಾವವನ್ನು ಮೊದಲಾಗಿ ವ್ಯಕ್ತಪಡಿಸಿ, ರಾಷ್ಟ್ರಸಂಘದ ನೇತೃತ್ವದಲ್ಲಿ ಕೆಲಸ ಮಾಡುವ ಒಂದು ಮಂಡಳದ ರಚನೆಯ ಕಲ್ಪನೆಯನ್ನು ಅವರು ಮುಂದಿಟ್ಟರು. ಅಂಥದೊಂದು ಮಂಡಳವು ರಶಿಯದ ಸಹಕಾರದಿಂದ ಅಸ್ತಿತ್ವಕ್ಕೆ ಬಂದಿರುವುದೂ ಒಳ್ಳೆಯ ಲಕ್ಷಣ. ರಾಷ್ಟ್ರಸಂಘದ ಪರವಾಗಿ ತಾಂತ್ರಿಕರ ಮತ್ತು ವೈಜ್ಞಾನಿಕರ ಪರಿಷತ್ತೊಂದನ್ನು ಇದೇ ಆಗೋಸ್ತು ತಿಂಗಳಲ್ಲಿ ಸೇರಿಸುವ ಇನ್ನೊಂದು ಪ್ರಯತ್ನವೂ ನಡೆಯುತ್ತಿದ್ದು ಇದರಲ್ಲಿ ಅಣು ವಿಜ್ಞಾನಕ್ಕೆ ಸಂಬಂಧಿಸಿದ ಸಂಗತಿಗಳನ್ನೆಲ್ಲ ಒಬ್ಬರಿನ್ನೊಬ್ಬರಿಗೆ ತಿಳಿಸಿ, ಶಾಂತಿ ಕಾಲದ ಉಪಯೋಗಕ್ಕೆ ಅಣುಶಕ್ತಿಯನ್ನು ಬಳಸುವ ಕುರಿತು ತೀರ್ಮಾನಗಳನ್ನು ಕೈಗೊಳ್ಳಲಾಗುವುದೆಂದು ತಿಳಿಯುತ್ತದೆ. ಹೀಗೆ ಪರಸ್ಪರ ವಿಚಾರ ವಿನಿಮಯಗಳನ್ನು ನಡೆಸುವುದರಿಂದ ಶಾಂತಿ ಕಾಲದ ಉಪಯೋಗದ ವೇಗವು ಹೆಚ್ಚುವುದೆಂದೂ ಮಾನವತೆಗೆ ಅಧಿಕ ಪ್ರಯೋಜನವು ಶೀಘ್ರದಲ್ಲಿಯೇ ಲಭ್ಯವಾಗುವುದೆಂದೂ ರಾಷ್ಟ್ರಸಂಘ ಅಭಿಪ್ರಾಯಪಡುತ್ತದೆ. ತಾಂತ್ರಿಕ ಜ್ಞಾನವನ್ನೂ ಸಲಕರಣೆಗಳನ್ನೂ ಹಿಂದುಳಿದ ದೇಶಗಳಿಗೆ ಒದಗಿಸಿ ಕೊಡುವ ವಿಚಾರವೂ ರಾಷ್ಟ್ರಸಂಘಕ್ಕಿದ್ದು, ಭಾರತದಂಥ ದೇಶದಲ್ಲಿ ಸಹ ವೈದ್ಯಕೀಯ ಮತ್ತು ವಿದ್ಯುಚ್ಛಕ್ತಿ ಕ್ಷೇತ್ರಗಳಲ್ಲಿ ಅದ್ಭುತ ಕ್ರಾಂತಿಯನ್ನು ಇದರಿಂದ ಸಾಧಿಸಲಾದೀತೆಂದು ಹೊಸ ದೆಹಲಿಗೆ ಕಳೆದವಾರ ಆಗಮಿಸಿದ ಯುನೆಸ್ಕೋದ ವಿಜ್ಞಾನ ವಿಭಾಗದ ದಿಗ್ದರ್ಶಕರು ಹೇಳಿದರು. ಭಾರತಕ್ಕೆ ಅಭಿವೃದ್ಧಿ ಹೊಂದಲು ಇಷ್ಟು ಒಳ್ಳೆಯ ಅವಕಾಶ ಬೇಗನೇ ಸಿಕ್ಕೀತೋ ಇಲ್ಲವೋ ಈಗಲೇ ಏನನ್ನೂ ಹೇಳಲಾಗದು— ರಶಿಯವು ಕಳೆದವಾರ ಬಹಿರಂಗವಾಗಿ ಅಣುಶಕ್ತಿಯ ಗುಟ್ಟನ್ನು ಶಾಂತಿಕಾಲದ ಬಳಕೆಗಾಗಿ ತಾನು ಜಗತ್ತಿಗೆ ನೀಡುವೆನೆಂದು ಹೇಳಿರುವುದನ್ನು ನೋಡಿದರೆ, ಅಂಥ ದಿನ ದೂರವಿಲ್ಲ ಎಂದು ಮಾತ್ರ ಖಚಿತವಾಗುತ್ತದೆ. ಲೋಕದ ಮುಂದೆ ರಶಿಯವು ಇಷ್ಟು ಉದಾರವಾಗಿ ವರ್ತಿಸಬಹುದೆಂದು ನಂಬುವುದೇ ಕಷ್ಟವೆನಿಸಿದ್ದ ಸಂಧಿ ಕಾಲದಲ್ಲಿ ಮೊಸ್ಕೋದಿಂದ ಈ ಸುದ್ದಿ ಬಂದಿರುತ್ತದೆ. ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದಕ್ಕೋಸ್ಕರ ಅಣು ವಿಜ್ಞಾನದಲ್ಲಿ ಸಂಪಾದಿಸಿರುವ ವಿಷಯಗಳನ್ನೆಲ್ಲ ಸಂಯುಕ್ತ ರಾಷ್ಟ್ರಸಂಘದ ಅಣುಶಕ್ತಿ ಮಂಡಳಕ್ಕೆ ತಿಳಿಸುವ ಭರವಸೆಯನ್ನು ರಶಿಯವು ಕೊಟ್ಟಿರುವುದು. ಆ ದೇಶದಲ್ಲಿ ವಿದ್ಯುದುತ್ಪಾದನೆಗಾಗಿ ಅಣುಶಕ್ತಿಯನ್ನು ಬಳಸಲಾಗುತ್ತಿದೆಯೆಂಬ ವರದಿಗಳು ಆಗಿಂದಾಗ್ಗೆ ಬರುತ್ತಿದ್ದು, ನೂರು ಸಾವಿರ ಕಿಲೋವಾಟುಗಳಷ್ಟು ಹೆಚ್ಚು ಶಕ್ತಿ ಸಂಪನ್ನವಾದ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೆಂದೂ ಇತ್ತೀಚಿನ ಸುದ್ದಿ ತಿಳಿಸುತ್ತದೆ. ಅಣುಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿದ್ಯೆಯಲ್ಲಿ ಬ್ರಿಟನು ಸಾಕಷ್ಟು ಯಶಸ್ಸುಗಳಿಸಿದ್ದರೂ ಅದರ ಯೋಜನೆಯು ಕಾರ್ಯರೂಪದಲ್ಲಿಳಿಯುವುದಕ್ಕೆ ಇನ್ನು ಎರಡೂವರೆ ವರ್ಷಗಳು ಬೇಕೆಂದು ತಿಳಿಯುತ್ತದೆ. ಪಾಶ್ಚಾತ್ಯದೇಶಗಳ ಪರಿಸ್ಥಿತಿ ಹೀಗಿರುವಾಗ ರಶಿಯವು ನೀಡುವ ತಾಂತ್ರಿಕ ಪರಿಜ್ಞಾನವು ಪ್ರಗತಿಯನ್ನು ತ್ವರಿತಗೊಳಿಸುವುದೆಂಬ ಭರವಸೆ ಮೂಡುತ್ತದೆ ಪಾಶ್ಚಾತ್ಯ ರಾಷ್ಟ್ರಗಳೂ ರಶಿಯವೂ ಕೂಡಿ ನಡೆದರೆ ಅಣುಶಕ್ತಿಯನ್ನು ವಿಧ್ವಂಸಕ ಕೃತ್ಯಗಳಿಗಾಗಿಯಲ್ಲ—ಜಗತ್ಕಲ್ಯಾಣಕ್ಕಾಗಿಯೇ ಬಳಸುವುದು ಸಾಧ್ಯ ಹಾಗಾಗಲೆಂದೇ ನಾವು ಹಾರೈಸುತ್ತೇವೆ.

ಉಡುಪಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜು

ಮಂಗಳೂರಲ್ಲಿ ಕ್ಲಿನಿಕಲ್ ಸೆಕ್ಷನಿನ ಪ್ರಾರಂಭೋತ್ಸವ

ಇದೇ ತಾ|18ನೇ ಸಂಜೆ ಕಾಲೇಜಿನ ಎರಡನೆ ಹೆಜ್ಜೆಯಾದ ಕ್ಲಿನಿಕಲ್ ವಿಭಾಗದ ಉದ್ಘಾಟನಾ ಸಮಾರಂಭವು ಕರ್ನಾಟಕ ಯುನಿವರ್ಸಿಟಿಯ ವೈಸ್ ಚಾನ್ಸಲರ್ ಶ್ರೀ. ಡಿ. ಸಿ. ಪಾವಟೆಯವರಿಂದ ಪೊಸ್ಟ್ಯುಲರ್ ಕಟ್ಟೋಣದಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಶ್ರೀ. ಪಾವಟೆಯವರು ಈ ಕಾಲೇಜಿನ ವೈಶಿಷ್ಟ್ಯ ಸುಭದ್ರತೆ, ಸೌಕರ್ಯ, ಸೌಲಭ್ಯತೆಗಳನ್ನು ಪ್ರಸ್ತಾಪಿಸಿ, ಸಂತೃಪ್ತಿಸೂಚಿಸಿ ಉದ್ಘಾಟನಾ ಭಾಷಣಮಾಡಿದರು. ಸಭಾರಂಭದಲ್ಲಿ ಡಾ| ಟಿ. ಮಾಧವ ಪೈಗಳು ಸ್ವಾಗತಭಾಷಣಮಾಡಿ, ಕಾಲೇಜುಸ್ಥಾಪನೆಯಾದಂದಿನಿಂದ ಅದು ಪಡೆದ ಪ್ರಗತಿ, ಕಾಲೇಜನ್ನು ಸಂದರ್ಶಿಸಿದ ಮೇಲೆ ಕೆಲವರ ಭ್ರಮೆ, ಸಂದೇಹಗಳು ನಿರಸನದ ಪ್ರಹಸನವನ್ನು ಪ್ರಸ್ತಾಪಿಸಿ, ಕ್ಲಿನಿಕಲ್ ವಿಭಾಗವು ರೂಪುಗೊಳ್ಳಲು ಮಂಗಳೂರು ಜನತೆಯ ಸಹಕಾರವನ್ನು ಕೋರಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ. ಬಿ. ವೈಕುಂಠಬಾಳಿಗರು ವಹಿಸಿದ್ದರು. ಸಮಾರಂಭಕ್ಕೆ ಶುಭಕೋರಿ ದೇಶದಮುಖಂಡರಿಂದ ಸಂದೇಶಗಳು ಬಂದಿದ್ದವು.

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: **UDIPI**, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA, LTD.,
"Mukund Nivas" UDIPI, S. India

ಗುಲಾಂ ಮಹಮದರ ದೆಹಲಿ ಸಂದರ್ಶನ

ರಾಷ್ಟ್ರಾಧ್ಯಕ್ಷರ ಆಮಂತ್ರಣ ಸ್ವೀಕಾರ

ಗವರ್ನರ ಜನರಲರಾದ ಗುಲಾಂಮಹಮ್ಮದರು ಪಾಕಿಸ್ತಾನದ ಉಕ್ಕಿನ ಮನುಷ್ಯನೆಂದು ಇತ್ತೀಚೆಗೆ ಸಿದ್ಧಪಡಿಸಿದ ಬಳಿಕ, ಭಾರತದೊಡನೆ ಸ್ನೇಹ ಪರವಾಗಿ ವರ್ತಿಸುತ್ತಿರುವರು. ಇದರಿಂದ ಉಭಯ ರಾಷ್ಟ್ರಗಳ ಪ್ರಧಾನಿಗಳು ಇದೇ ಮಾರ್ಚ ತಿಂಗಳಲ್ಲಿ ಹೊಸದೆಹಲಿಯಲ್ಲಿ ಮಾತುಕತೆ ನಡೆಸುವ ಕಾರ್ಯಕ್ರಮವನ್ನು ಸಿದ್ಧಗೊಳಿಸುವುದು ಸಾಧ್ಯವಾಯಿತು. ನೆಹರುಗಳು ಸಂಧಾನ ನಡೆಸುವುದಕ್ಕೆ ಈಗಿನಷ್ಟು ಪ್ರಶಸ್ತವಾದಕಾಲ ಹಿಂದೆಂದೂ ಬಂದಿರಲಿಲ್ಲ ಎಂಬ ಮುತ್ತಿನಂಥ ಮಾತನ್ನಾಡುವುದಕ್ಕೆ ಗುಲಾಂಮಹಮ್ಮದರ ಈಗಿನ ಧೋರಣೆಯಲ್ಲಿ ಕಂಡುಬಂದ ಭರವಸೆಯೇ ಕಾರಣ.

ಪ್ರಜಾರಾಜ್ಯದ ಉತ್ಸವ

ಉಭಯ ರಾಷ್ಟ್ರಗಳು ಹೇಗೆ ಸ್ನೇಹಕ್ಕಾಗಿ ಕಾತರಿಸುವ ಸಂಧಿಕಾಲದ ಸದುಪಯೋಗವನ್ನು ಪಡೆಯಲಪೇಕ್ಷಿಸಿ, ಭಾರತದ ರಾಷ್ಟ್ರಾಧ್ಯಕ್ಷರು ಗುಲಾಂಮಹಮ್ಮದರಿಗೆ ಪ್ರಜಾರಾಜ್ಯ ದಿನದಂದು ಉತ್ಸವಗಳಲ್ಲಿ ಭಾಗಿಯಾಗಲು ಆಮಂತ್ರಣವನ್ನು ನೀಡಿದರು. ಭಾರತವು ಸ್ವತಂತ್ರಗೊಂಡ ಇಷ್ಟು ವರ್ಷಗಳಲ್ಲಿ ಹಿಂದೆಂದೂ ಅಂಥ ಆಮಂತ್ರಣವನ್ನು ಪಾಕಿಸ್ತಾನದ ವರಿಷ್ಠಂಗೆ ಕೊಟ್ಟಿದ್ದಿಲ್ಲ. ಕಾರಣ ಈ ಆಮಂತ್ರಣವೇ ಮಹತ್ವಪೂರ್ಣವಾದ ವಿಷಯ— ಅದನ್ನು ಗುಲಾಂ ಮಹಮ್ಮದರು ಸಂತೋಷದಿಂದ ಸ್ವೀಕರಿಸಿರುವುದಂತೂ ಇನ್ನೂ ಮಹತ್ವದ ವಿಷಯ. ಇದರಿಂದ ಬೇರೇನೂ ಪರಿಣಾಮವಾಗದಿದ್ದರೂ— ಸ್ನೇಹ ಬಾಂಧವ್ಯವು ದೃಢವಾಗುವುದೆಂಬ ಆಶೆಯಂತೂ ತೋರುತ್ತದೆ. ಗುಲಾಂ ಮಹಮ್ಮದರೊಡನೆ ಪಾಕಿಸ್ತಾನದ ರಾಷ್ಟ್ರೀಯ ಮಂತ್ರಿಮಂಡಳದ ಕೆಲವು ಸದಸ್ಯರೂ ಬರುವರೆಂದು ತಿಳಿಯುತ್ತದೆ

ಆ್ಯಟ್ಲಿಯವರ ಅಭಿಪ್ರಾಯ

ಇವತ್ತು ಅಭಿಪ್ರಾಯ ಭೇದಗಳು ಎಷ್ಟೇ ಇರಲಿ—ಸಹಜೀವನದ ಆದರ್ಶವನ್ನು ಸ್ವೀಕರಿಸುವುದೇ ವ್ಯಾವಹಾರಿಕವಾದ, ಶ್ರೇಯಸ್ಕರವಾದ ಮಾರ್ಗ ಎಂಬುದು ನೆಹರುಗಳ ಧೋರಣೆಯ ತಿರುಳು. ಇದನ್ನು ಪಾಶ್ಚಾತ್ಯ ದೇಶಗಳ ಪ್ರಭೃತಿಗಳು ಸಹ ಒಪ್ಪಕೊಡಗಿರುವರೆಂಬುದಕ್ಕೆ ಜರ್ಮನಿಯ ರಾಜಧಾನಿಯಲ್ಲಿ ಬ್ರಿಟನ್ನಿನ ಮಾಜಿ ಮುಖ್ಯ ಮಂತ್ರಿ ಕ್ಲಿಮೆಂಟ ಆ್ಯಟ್ಲಿಯವರು ಮಾಡಿದ ಭಾಷಣವೊಂದು ನಿದರ್ಶನ. ಆ್ಯಟ್ಲಿಯವರು ಫಜೀತಿಗೆ ತಮ್ಮನ್ನು ನೂಕುವ ವಿಷಯವೊಂದನ್ನು ಪ್ರಸ್ತಾಪಿಸಿದರೆಂದು ಅವರ ಭಾಷಣಕ್ಕೆ ಪಶ್ಚಿಮ ರಾಷ್ಟ್ರಗಳಲ್ಲಿ ವ್ಯಕ್ತಗೊಂಡ ಪ್ರತಿಕ್ರಿಯೆಗಳು ಹೇಳುತ್ತಿದ್ದರೂ ನಮಗೆ ಹಾಗೇನೂ ತೋರುವುದಿಲ್ಲ. ನಮಗಿಂತ ಭಿನ್ನವಾದ ವಿಚಾರ ಸರಣಿಯ ಜನರಿದ್ದಾರೆಂದು ಒಪ್ಪಿಕೊಳ್ಳುವುದೇ ಜಾಣತನ ಎಂಬ ಆ್ಯಟ್ಲಿಯವರ ಮಾತನ್ನಾಗಲೀ ಕಮ್ಯುನಿಸ್ಟರ ಮತ್ತು ಪ್ರಜಾಪ್ರಭುತ್ವವಾದಿಗಳ ನಡುವೆ ಸಹಜೀವನವೇ ಈಗಿನ ಪರಿಸ್ಥಿತಿಯಲ್ಲಿ ಒಳ್ಳೆಯದೆಂಬ ಅವರ ವಿಚಾರವನ್ನಾಗಲೀ ಅಲ್ಲಗಳೆಯುವಂತಿಲ್ಲ.

ಯಾತ್ರೆಯ ಕೊನೆಯ ಘಟ್ಟ

ಪಶ್ಚಿಮದ ದೇಶಗಳಲ್ಲಿ ಯುಗೊಸ್ಲಾವಿಯದ ಅಧ್ಯಕ್ಷರೇ ಮೊದಲು ಸಹಜೀವನದ ಆದರ್ಶದ ಮಹತ್ವವನ್ನು ಮನವರಿಕೆ ಮಾಡಿಕೊಂಡರು. ನೆಹರುಗಳೊಡನೆ ಸಮಾಲೋಚನೆ ನಡೆಸಿದ ಬಳಿಕ ಅವರೀಗ ಬರ್ಮದ ಪ್ರಧಾನ ಮಂತ್ರಿಯು ನೂಗಳನ್ನು ಕಂಡು ಪಂಚಶೀಲಾ ತತ್ವಗಳೆಂದು ಹೆಸರಾದ ಈ ಸಿದ್ಧಾಂತವನ್ನು ಎತ್ತಿ ಹಿಡಿದರು. ಟಿಟೋರವರು ಆವಡಿಯ ಕಾಂಗ್ರೆಸಿನಲ್ಲಿ ಉಪಸ್ಥಿತರಿದ್ದು ಮುಂದೆ ಈ ತಿಂಗಳ ೨೫ನೇ ತಾರೀಕಿನಂದು ಕೊಚ್ಚಿಯ ಬಂದರದ ಮೂಲಕ ಸ್ವದೇಶಕ್ಕೆ ಮರು ಪ್ರಯಾಣ ಮಾಡುವರು.

ನಿರೀಕ್ಷಿಸಿರಿ!

ಬರುವ ವಾರ

ನವಯುಗವು

ಪ್ರಸಿದ್ಧರನೇಕರ ಲೇಖನಗಳಿಂದ

ಹೆಚ್ಚು ಪುಟಗಳಿಂದ

ಪ್ರಜಾರಾಜ್ಯ ವಿಶೇಷಾಂಕವಾಗಿ

ಹೊರಡುವುದು.

ಬೆಲೆ ಬರೇ 0—2—0 ಮಾತ್ರ.

ವಾರದ ಮಹಾನುಭಾವ

ಆವಡಿ ಕಾಂಗ್ರೆಸಿನ ಅಧ್ಯಕ್ಷ—ಶ್ರೀ ಢೇಬರ

ಸಾಮಾನ್ಯ ಕ್ಲಾರ್ಕನಾಗಿ ಕೆಲಸವನ್ನಾರಂಭಿಸಿಯೂ ಹೇಳಿಕೊಳ್ಳುವಷ್ಟು ಪಾಂಡಿತ್ಯವಾಗಲೀ ಪ್ರತಿಭೆಯಾಗಲೀ ಇಲ್ಲದಿದ್ದರೂ ಕೇವಲ ಸಂಘಟನ ಶಕ್ತಿ ಮತ್ತು ನಿರಂತರ ಸೇವೆಯ ಬಲದಿಂದ ಕಾಂಗ್ರೆಸಿನ ಅಧ್ಯಕ್ಷ ಸ್ಥಾನವನ್ನು ಏರಿದವರು ಸೌರಾಷ್ಟ್ರದ ಮಾಜಿ ಮುಖ್ಯ ಮಂತ್ರಿ ಶ್ರೀ ಉಛರಂಗರಾಯ ನವಲ ಶಂಕರ ಢೇಬರರು. ತಾವು ಅಧ್ಯಕ್ಷರಾಗಿದ್ದರೂ ನೆಹರುಗಳಿಗೆ ವಿಧೇಯನಾಗಿ ನಡೆದುಕೊಳ್ಳುವ ಶಿಸ್ತುಪಾಲಕ ಸೈನಿಕ ತಾನೆಂದೇ ಅವರು ತಿಳಿದುಕೊಂಡಂತೆ ತೋರುತ್ತದೆ.

ಇನ್ನೂ ಐವತ್ತು ತುಂಬದ ಢೇಬರರು ನೆಹರುಗಳ ಅನುಯಾಯಿಯಾಗಿ ವರ್ತಿಸುವುದಕ್ಕೆ, ಆವಡಿ ಕಾಂಗ್ರೆಸಿನಲ್ಲಿ ತಾವು ಮಾಡಲಿರುವ ಅಧ್ಯಕ್ಷ ಭಾಷಣವನ್ನು ನೆಹರುಗಳಿಗೆ ಮೊದಲು ಓದಿ ತೋರಿಸಿ ಮಂಜೂರಾತಿ ಪಡೆದಿರುವುದಕ್ಕೆ, ಅವರ ಅತಿರೇಕ ವಿನಯವೂ ಒಂದು ಕಾರಣ. ಕಾಂಗ್ರೆಸಿಗಾಗಿ ನಿಷ್ಠೆಯಿಂದ ದುಡಿದವರ ಮುಂದೆ ತಾನೆಷ್ಟರವನು ಎಂಬ ಭಾವನೆ ಅವರ ವ್ಯಕ್ತಿತ್ವದ ಶೋಭೆಯನ್ನು ಹಿನ್ನೆಲೆಗೆ ದೂಡುತ್ತಿದೆಯೆಂದರೆ ತಪ್ಪಲ್ಲ.

ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡು ತಬ್ಬಲಿಗಳಾದ ಢೇಬರರು ಕಾಲೇಜಿನ ಶಿಕ್ಷಣವನ್ನು ಸಹ ಹೊಂದಲಾರದೆ ಹೋದರು. ಕಷ್ಟಕಾರ್ಪಣ್ಯಗಳ ಪರಿಣಾಮವಾಗಿ ಅವರು ಮುಂಬೈ ವಕೀಲರೊಬ್ಬರಲ್ಲಿ ಗುಮಾಸ್ತರಾಗಿ ಸೇರಿದರು. ನಾಲ್ಕಾರು ವರ್ಷಗಳ ನಿಷ್ಠಾಪೂರ್ವಕ ದುಡಿಮೆಯಿಂದ ಅಲ್ಲಿಯ ಮುಖ್ಯ ಗುಮಾಸ್ತರಾದರಲ್ಲದೆ, ಬಿಡು ಸಮಯದಲ್ಲಿ ವಕೀಲಿ ಪರೀಕ್ಷೆಯನ್ನೂ ಕೊಟ್ಟು, ತಮ್ಮ ಯೋಗ್ಯತೆಯನ್ನು ಹೆಚ್ಚಿಸಿಕೊಂಡರು. ತಂದೆ ಮೃತ್ಯು ಮುಖದಲ್ಲಿದ್ದ ಗಂಡಾಂತರದ ದಿನಗಳು ಕಳೆದ ಬಳಿಕ, ರಾಜಕೋಟೆಯಲ್ಲಿಯೇ ವಕೀಲಿ ಪ್ರಾರಂಭಿಸಿದರು

ಕಕ್ಷಿಗಾರರಲ್ಲಿ ವೈಮನಸ್ಸು ಬೆಳೆಸಬಾರದೆಂಬ ಅಬ್ರಹಾಂ ಲಿಂಕನನ ಸೂತ್ರವಾಕ್ಯವನ್ನು ಅವರು ಮೆಚ್ಚುತ್ತಿದ್ದು, ಅದಕ್ಕೆ ತಕ್ಕ ರೀತಿಯಲ್ಲಿ ನಡೆಕೊಳ್ಳುತ್ತಿದ್ದರು. ಟಾಲಸ್ಟಾಯಿಯವರ ಪುಸ್ತಕಗಳಿಂದ ತುಂಬ ಪ್ರಭಾವಿತರಾದ ಅವರ ಗಮನವು ನಿಧಾನವಾಗಿ ಜನರ ದಾರುಣ ಜೀವನದತ್ತ ಹರಿಯಿತು. ಕಾಂಗ್ರೆಸು ಆಗ ಗಾಂಧೀಜಿಯ ಧುರೀಣತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಿತು. ೧೯೩೬ನೇ ಇಸವಿಯ ಒಂದು ಪ್ರಾತಃಕಾಲ ಢೇಬರರು ತಮ್ಮ ಮುದಿ ವಸಾಬೇನರನ್ನು ಸಮಾಧಾನಪಡಿಸಿ, ಐದು ಮೈಲು ದೂರದ ಹಳ್ಳಿಯಲ್ಲಿ ತಪಸ್ವಿಯಂತೆ ವ್ರತನಿಷ್ಠ ಜೀವನವನ್ನು ಕೈಗೊಳ್ಳಲು ನಿರ್ಧರಿಸಿದರು.

ತನ್ನ ಅಣ್ಣನನ್ನು ನೋಡಲೆಂದು ಇದೇ ಸಮಯ ಗಾಂಧೀಜಿ ರಾಜಕೋಟೆಗೆ ಬಂದಾಗ ಢೇಬರರು ಅವರನ್ನು ಕಂಡು ಆಶೀರ್ವಾದ ದೊರಕಿಸಿದರು. ಹರಿಪುರ ಕಾಂಗ್ರೆಸಿನಲ್ಲಿ ಅವರಿಗೆ ವಲ್ಲಭಭಾಯಿ ಪಟೇಲರ ಪರಿಚಯವಾಯಿತು. ಸೌರಾಷ್ಟ್ರದ ಹಳ್ಳಿಗಳ ಅಭಿವೃದ್ಧಿಗಾಗಿ ಕಳಕಳಿಯನ್ನು ವ್ಯಕ್ತಪಡಿಸುವ ಢೇಬರರನ್ನು ಕಾಂಗ್ರೆಸಿನ ಚುನಾವಣಾ ಪ್ರಚಾರಕ್ಕೆ ಪಟೇಲರು ಉಪಯೋಗಿಸಿಕೊಂಡರು. ಅಂದಿಂದ ಮುಂದೆ ಢೇಬರರು ಸಾರ್ವಜನಿಕ ವ್ಯಕ್ತಿಯಾಗಿ ಸೌರಾಷ್ಟ್ರದ ಕ್ರಾಂತಿಯನ್ನು ಸಾಧಿಸಿದರು.

ಮಜೂರ ಮುಖಂಡನಾಗಿಯೂ ತುಂಡು ರಾಜರ ಧೋರಣೆಯ ವಿರೋಧಕನಾಗಿಯೂ ಅವರು ಜನತೆಗಾಗಿ ಹೋರಾಡಿದರು. ವ್ಯಕ್ತಿಕ ಸತ್ಯಾಗ್ರಹ ಕಾಲದಲ್ಲಿ ಸೆರೆಮನೆಗೂ ಹೋದರು.. ಅಲ್ಲಿ ಇವರಿಗೆ ಸೌರಾಷ್ಟ್ರದ ಈಗಿನ ಮುಖ್ಯ ಮಂತ್ರಿ ರಸಿಕಲಾಲ ಪರೇಖ, ಕಾಂಗ್ರೆಸಿನ ಕಾರ್ಯದರ್ಶಿ ಬಲವಂತರಾಯ ಮಹತ ಇವರು ಸಂಗಾತಿಯಾದರು ಇದೇ ಸಮಯ ಅವರಿಗೆ ಪತ್ನೀ ವಿಯೋಗ ದುಃಖ ಬಂದೊದಗಿತು. ಸೆರೆಮನೆಯಿಂದ ಬಿಡುಗಡೆಗೊಂಡ ಬಳಿಕ ಭಾರತಕ್ಕೆ ಲಭಿಸಿದ ಸ್ವಾತಂತ್ರ್ಯದ ಸವಿಯನ್ನು ಸೌರಾಷ್ಟ್ರದ ೨೨೨ ತುಂಡರಸರ ಪ್ರಭುತ್ವಕ್ಕೊಳಪಟ್ಟಿದ್ದ ಪ್ರಜೆಗಳಿಗೆ ಉಣಿಸಲು ಅವರು ಸಾಹಸಪಟ್ಟು ಯಶಸ್ವಿಯಾದರು.

ಸರ್ದಾರ ಪಟೇಲರೇ ಢೇಬರರನ್ನು ಇದಕ್ಕೆ ಪ್ರೋತ್ಸಾಹಿಸಿದರು. ಜುನಾಗಡದ ವಿಲಯನ ಕಾರ್ಯದಲ್ಲಿ ಪಟೇಲರ ಯೋಜನೆಯಂತೆ ಚಾಚೂಬಿಡದೆ ಕೆಲಸಮಾಡಿದ ವ್ಯಕ್ತಿ ಢೇಬರರೆಂದು ಹೆಚ್ಚಿನವರಿಗೆ ತಿಳಿದಿಲ್ಲ. ಕರ್ತವ್ಯ ನಿಷ್ಠೆಯಲ್ಲಿ ಢೇಬರರು ತೋರಿಸಿದ ಸ್ಥೈರ್ಯ ಧೈರ್ಯವೇ ಅವರಿಗೆ ಅಲ್ಲಿಯ ಮುಖ್ಯಮಂತ್ರಿ ಸ್ಥಾನವನ್ನು ನೀಡಿತು — ಕಳೆದ ಮಹಾಚುನಾವಣೆಯಲ್ಲಿ ೬೦ರಲ್ಲಿ ೫೫ ಸ್ಥಾನಗಳನ್ನೂ ಕಾಂಗ್ರೆಸಿಗೆ ಸಂಪಾದಿಸಿಕೊಟ್ಟುದಾದ್ದರೂ ಢೇಬರರ ಪರಿಶ್ರಮವೆಂದರೆ ಅತ್ಯುಕ್ತಿಯಾಗದು.

ತೆಳ್ಳಗಿನ, ಕುಳ್ಳನಾದ, ಹಿಟ್ಲರನ ಮೀಸೆ ಹಾಗು ತೀಕ್ಷ್ಣ ಕಣ್ಣುಗಳುಳ್ಳ ಢೇಬರರ ಕಾರ್ಯಪಟುತ್ವದಿಂದಲೇ ಸೌರಾಷ್ಟ್ರವು ಭಾರತದಲ್ಲಿ ಬೇರಾವ ರಾಜ್ಯವೂ ಪಡೆದಿಲ್ಲದಷ್ಟು ಪ್ರಗತಿಯನ್ನು ಅಲ್ಪಾವಧಿಯಲ್ಲಿ ಹೊಂದುವುದು ಸಾಧ್ಯವಾಯಿತು ಗಾಂಧೀ ವಾದದಲ್ಲಿ ನಿಷ್ಠೆಯುಳ್ಳವರಾದರೂ ದರೋಡೆ ಖೋರರನ್ನು ಉಗ್ರಕ್ರಮದಿಂದ ಹತ್ತಿಕ್ಕಿದ ಉಕ್ಕಿನ ಕೈ ಅವರದು. ಇದರಿಂದಾಗಿಯೇ ಕಾಂಗ್ರೆಸಿನಲ್ಲಿ ಸಂಘಟನೆಯ ಶಕ್ತಿಯಿಂದ ಏನಾದರೂ ಅದ್ಭುತ ಕೆಲಸ ಮಾಡುವ ಯೋಗ್ಯತೆಯುಳ್ಳವರಿದ್ದರೆ, ಅದು ಢೇಬರರೊಬ್ಬರೆಂದು ಇಂದು ಹೇಳುವಂತಾಗಿರುವುದು. ಈ ದೃಷ್ಟಿಯಿಂದ ಅವರು ಬಲಿಷ್ಠ ಅಧ್ಯಕ್ಷರೆನಿಸುವುದು ನಿಶ್ಚಯ.

ದಿ| ಯನ್. ಯಸ್. ಕಿಲ್ಲೆ ಸ್ಮಾರಕ ಪುಸ್ತಕ ಭಂಡಾರ

ಬೋರ್ಡು ಹೈಸ್ಕೂಲ್, ಬೆಳ್ಳಾರೆ, ದ. ಕ.

ಇದರ

ಉದ್ಘಾಟನೆ

ಮತ್ತು

ಕಿಲ್ಲೆಯವರ ತೈಲಚಿತ್ರ ಅನಾವರಣ ಸಮಾರಂಭಗಳು

ತಾ. 1-2-1955ನೇ ಮಂಗಳವಾರ ಅಪರಾಹ್ನ ಗಂಟೆ 2-30ಕ್ಕೆ

ಮಾನ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರ ಹಸ್ತದಿಂದ

ನೆರವೇರಲಿದೆ.

ಸರ್ವರಿಗೂ ಸ್ವಾಗತವಿದೆ.

ಬಿ. ರಾಮ ರಾವ್, ಹೆಡ್ಮಾಸ್ತರ್.

ಬಿ. ನಾರಾಯಣ ಶೇಕ, ಅಧ್ಯಕ್ಷ, ಕಿಲ್ಲೆ ಸ್ಮಾರಕ ಪುಸ್ತಕ ಭಂಡಾರ ಸಮಿತಿ.

प्रत्येक स्टोर में और सब स्थानों पर बिकता है

बाटलीवाला फ्यूमिक्चर

और गोलीयां

मलेरिया इन्फ्लुएंजा और प्रत्येक प्रकारके बुखार के लिये।

सोल मेन्युफेक्चरर डो. एच. एल. बाटलीवाला सन्स एण्ड कं. लि.

बाटलीवाला बिल्डिंग, १३ वी. पोर्तुगीझ चर्च स्ट्रीट,

Tele. Add. "CAWASHABAD" दादर, बम्बई २८.

ಚೇರ್ಕಾಡಿ: ಸ್ಥಳೀಯ ಡಿ. ಪಿ. ಎಯಿಡೆಡ್ ಎಲಿಮೆಂಟರಿ ಶಾಲೆಯನ್ನು ಕಳೆದ ಐದು ವರ್ಷಗಳ ಹಿಂದೆ ಸ್ಥಾಪಿಸಿ ತನ್ಮೂಲಕ ಬಡ ಹಳ್ಳಿಗಾಡಿನ ಮಕ್ಕಳಿಗೆ ವಿದ್ಯಾದಾನಮಾಡಿ ಸಮಾಜ ಸೇವೆಯನ್ನು ಮಾಡುತ್ತಿದ್ದ ಶ್ರೀ ಸಿ. ಮಂಜಯ್ಯ ಹೆಗ್ಡೆಯವರು ಇದೇ ತಾ 10ರಲ್ಲು ರಾತ್ರಿ ಪರಂಧಾಮವನ್ನೈದಿದರೆಂದು ತಿಳಿಸಲು ವಿಷಾದವಾಗುತ್ತದೆ. ಮೃತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವೆವು.

ಮೂಲ್ಕಿ— ಇಲ್ಲಿಯ ಮೆಡಲೀನಾ ಮುಡುಗಿಯರ ಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ತಾ 10 ರಲ್ಲು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ| ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಪೆರ್ಡೂರು – ಈ ಗ್ರಾಮದ ಅಲಂಗಾರನಲ್ಲಿ ತಾ. 17ರಲ್ಲಿ ಓರ್ವಅಧ್ಯಾಪಕರಿರುವ ಬೋರ್ಡ್ ಎಲಿಮೆಂಟರಿ ಶಾಲೆಯನ್ನು ಶ್ರೀ. ಪಿ. ಅನಂತ ಪದ್ಮನಾಭ ಅಡಿಗರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎ. ಉಮಾನಾಥ ಹೆಗ್ಡೆಯವರು ವಹಿಸಿದ್ದರು. ಶ್ರೀಗಳಾದ ಬಿ. ಮಂಜುನಾಥ ಭಟ್ಟರಿಂದ, ಪ್ರಾರ್ಥನೆ, ಕೆ. ರಾಮರಾಯರಿಂದ ಮಕ್ಕಳಿಗೆ ಸಿಹಿತಿಂಡಿ ಮಂಚೋಣ ಕಾರ್ಯಕ್ರಮಗಳಾದುವು.

ಕುಂಬಳೆ—ಈ ಕೇಂದ್ರದ ಅಧ್ಯಾಪಕರ ಸಭೆಯು ತಾ. 15ರಲ್ಲಿ ಬಿ. ಎಚ್. ಇ. ಶಾಲೆಯಲ್ಲಿ ಮಂಗಳೂರು ಕೆನರಾ ಹೈಸ್ಕೂಲಿನ ಅಧ್ಯಾಪಕ ಶ್ರೀ ಎಸ್. ಮುಕುಂದ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಸಾಮಾನ್ಯಮಾದರಿ ಪಾಠವೀಯುವಿಕೆಗಳಾದ ನಂತರ ಅಧ್ಯಕ್ಷರು ನೂತನ ಇಂಗ್ಲಿಷ್ ಪಾಠಪಟ್ಟಿಯ ಕುರಿತು ಮಾತನಾಡಿದರು.

ಕಾರ್ಕಳ— ಈ ತಾಲೂಕಿನ ವಿಲ್ಯಾಡಿಯ ಪೆರಿಬೆಟ್ಟು ಸೆಂಟರಿನಲ್ಲಿ ಜಿಲ್ಲಾಬೋರ್ಡಿನ ಶಾಲೆಯೊಂದು ಪಟೇಲ್ ಶ್ರೀ ಬ್ರಹ್ಮಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.

ಅಜೆಕಾರು ಶಿರ್ಲಾಲು ಗ್ರಾಮದ 'ಸರಲಬೆಟ್ಟು' ಕೇಂದ್ರದಲ್ಲಿ ಜಿಲ್ಲಾ ಬೋರ್ಡಿನ ವತಿಯಿಂದ ಓರ್ವ ಅಧ್ಯಾಪಕರಿರುವ ಶಾಲೆಯೊಂದು ಶ್ರೀ ಜೆ. ಭೋಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.

ವಿಟ್ಲ: ಈ ಕೇಂದ್ರದ ಎಂಟು ಪಂಚಾಯತುಗಳ ಅಧ್ಯಕ್ಷರ ಪರಿಷತ್ತು ತಾ 14 ರಲ್ಲು ಶ್ರೀ ವಿ. ರಾಮ ವರ್ಮ ರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮೊಳಪಳ್ಳಿ ಶಿವರಾಯರು ಇಂತಹ ಪರಿಷತ್ತುಗಳು ಆಗಾಗ ಜರಗುವ ಆವಶ್ಯಕತೆಯನ್ನು ಸೂಚಿಸಿ ಮಾತನಾಡಿದರು.

ಬೆಳ್ಮಾರೆ: ಸ್ಥಳೀಯ ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ತಾ 22 ರಲ್ಲಿ ಸಂಜೆ 4. 30 ಕ್ಕೆ ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಸರ್ವರಿಗೂ ಸ್ವಾಗತವಿದೆಯೆಂದೂ ಹೈಸ್ಕೂಲ್ ಸಮಿತಿ ಅಧ್ಯಕ್ಷ ಶ್ರೀ. ಬಿ. ನಾರಾಯಣ ಶೇಕ, ಹೆಡ್ಮಾಸ್ತರ್ ಶ್ರೀ ಬಿ. ರಾಮರಾವ್ ಮತ್ತು ವಿದ್ಯಾರ್ಥಿ ಮುಖಂಡ ಶ್ರೀ ಶ್ರೀಧರ ಗೌಡರು ತಿಳಿಸುತ್ತಾರೆ.

(೫ನೇ ಪುಟದಿಂದ)

ಯಾಂಗರಿಗೆ ಅಮೇರಿಕವು ಮುಕ್ತ ಹಸ್ತದಿಂದ ಸೈನಿಕ ಸಹಾಯವನ್ನು ಕೊಡಮಾಡಿದರೂ ಅದನ್ನು ಕೆಂಪು ಚೀನದ ವಿರುದ್ಧ ತನ್ನ ಅಪ್ಪಣೆಯಿಲ್ಲದೆ ಪ್ರಯೋಗಿಸಬಾರದೆಂದೂ ಅಮೇರಿಕ ನಿರ್ಬಂಧಿಸಿರುತ್ತದೆ. ಅಮೇರಿಕದಲ್ಲೀಗ ಅಧ್ಯಕ್ಷ ಐಸೆನ ಹೋವರರ ರಿಪಬ್ಲಿಕನ ಪಕ್ಷದ ಬಲವು ಸ್ವಲ್ಪ ಮಟ್ಟಿಗೆ ಕುಂದಿದ್ದು, ಡೆಮೊಕ್ರಾಟರ ಪ್ರಾಬಲ್ಯವು ಕಂಡುಬರುತ್ತಿದೆ. ಅವರು ಐಕರ ಉಗ್ರ ಹಾಗು ಕಠಿಣ ಧೋರಣೆಯನ್ನು ಅಷ್ಟು ಮೆಚ್ಚುವುದಿಲ್ಲ. ಆದುದರಿಂದ ಚಿಯಾಂಗರಿಗೆ ಸೈನಿಕ ಸಹಾಯ ಕೊಡಮಾಡಿದರೂ ತೃತೀಯ ಮಹಾ ಯುದ್ಧಕ್ಕೆ ಅವರು ನಾಂದಿಯನ್ನು ಹಾಕನಂತೆ ನೋಡಿಕೊಳ್ಳುವ ಜಾಗರೂಕತೆಯನ್ನು ಐಕರು ವಹಿಸಬೇಕಾಯಿತು. ಡೆಮೊಕ್ರಾಟರಿನ್ನೂ ಚಿಯಾಂಗರ ಭರವಸೆಯ ಮಾತಿನಿಂದಲೇ ಸಂತುಷ್ಟಿ ಹೊಂದಿಲ್ಲವೆಂದೂ ಒಪ್ಪಂದದಲ್ಲಿಯೇ ಇದನ್ನು ಸೇರಿಸಲು ಐಕರನ್ನು ಒತ್ತಾಯಿಸುತ್ತಿರುವರೆಂದೂ ಹೇಳಲಾಗುತ್ತದೆ. ಅದೇನೇ ಇರಲಿ ಕೆಂಪು ಚೀನದ ಅಸ್ತಿತ್ವವನ್ನು ಅಲ್ಲಗಳೆಯುವುದು ಮೂರ್ಖತನವೆಂಬ ಮಾತಂತೂ ಹ್ಯಾಮರಶೀಲ್ಡರ ಯಾತ್ರೆಯಿಂದ ಸರ್ವ ಶ್ರುತವಾಯಿತು. ಜಾಗತಿಕ ಕ್ಷೇಮಶಮನದ ದೃಷ್ಟಿಯಿಂದ ಇದೊಂದು ಶುಭ ಲಕ್ಷಣ.

ಉಡುಪಿ

ಅಂಚೆ ಕೆಲಸಗಾರರ ಯೂನಿಯನ್ ಸ್ಥಾಪನೆ—ಉಡುಪಿ, ಕುಂದಾಪುರ, ಕಾರ್ಕಳ ತಾಲೂಕುಗಳ ಅಂಚೆಕೆಲಸಗಾರರು ತಾ. 16ರಲ್ಲಿ ಸಂಸ್ಕೃತಕಾಲೇಜು ಪಟಾರದಲ್ಲಿ ಸಭೆಗೂಡಿ ತಮ್ಮ ಯೂನಿಯನ್ ಸ್ಥಾಪಿಸಿದರು. ಅಧಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರು ಯೂನಿಯನ್ನಿನ ಉದ್ಘಾಟನೆ ಮಾಡಿದರು. ಶ್ರೀ ಕೊಚ್ಚಿಕಾರ್ ವರದರಾಯ ಪೈಗಳ ಸ್ವಾಗತಭಾಷಣ, ಶ್ರೀ ರಘು ಸೆಟ್ಟರ ವರದಿವಾಚನ, ಡಾ| ಪಿ. ಜಿ. ಆಚಾರ್ ಮೊದಲಾದವರ ಭಾಷಣಗಳಾದ ನಂತರ ಸಭಾಧ್ಯಕ್ಷತೆವಹಿಸಿದ ಶ್ರೀ ಬಿ. ಎಸ್. ಭಾಸ್ಕರರೈಗಳು ತಮ್ಮ ಭಾಷಣ ಮಾಡಿದರು. ಅಂಚೆ ಜವಾನರು ಯೂನಿಯನ್ನಿನ ದುರುಪಯೋಗ ಪಡಿಸಿಕೊಳ್ಳದೆ ಯೋಗ್ಯರೀತಿಯಲ್ಲಿ ಜನತೆಯೊಡನೆ ಸಂಪರ್ಕವನ್ನಿಟ್ಟುಕೊಂಡು ಯೋಗ್ಯನಾಗರಿಕರಾಗಬೇಕೆಂದು ಅಪೇಕ್ಷಿಸಿದರು. ನಂತರ ಟಪ್ಪಾಲು ಜವಾನರಿಗೆ ಸಂಬಂಧಿಸಿದ ಹಲವಾರು ನಿರ್ಣಯಗಳಾದುವು. ಹೊಸವರ್ಷಕ್ಕೆ ಶ್ರೀಗಳಾದ ಕೊಚ್ಚಿಕಾರ್ ವರದರಾಯ ಪೈ, ಅಧ್ಯಕ್ಷ; ಯು. ಶೇಷಪ್ಪ ಸೆಟ್ಟಿ, ಬಿ. ಚಿಕ್ಕಯ್ಯ ಉಪಾಧ್ಯಕ್ಷರು, ಕೆ. ರಘು ಸೆಟ್ಟಿ, ಜನರಲ್ ಸೆಕ್ರೆಟರಿಗಳಾಗಿರುವ 20 ಮಂದಿಯ ಕಾರ್ಯಕಾರಿಸಮಿತಿರಚನೆಯಾಯಿತು.

ನಗರ ಸಭೆಯು ಉಡುಪಿ ನಗರ ಸಭೆಯ ವಿಶೇಷ ಸಭೆಯೊಂದು ತಾ 11 ರಲ್ಲು ಡಾ| ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಮನೋರಮಾ ದೇವಿಯವರು ತನ್ನ ಸದಸ್ಯತನವನ್ನೂ ಊರ್ಜಿತದಲ್ಲಿಟ್ಟು ತಾನು ಸದಸ್ಯೆಯಾಗಿರಲು ಅರ್ಹತೆಯಿದೆ ಎಂಬುದನ್ನು ದೃಢ ಪಡಿಸಬೇಕೆಂದು ಜಿಲ್ಲಾ ನ್ಯಾಯಾಧೀಶರಲ್ಲಿ ಮಾಡಿದ ದಾವೆಯ ಕುರಿತು ಬಂದ ನೋಟಿಸನ್ನು ಪರಿಶೀಲಿಸಲಾಯಿತು. ದಾವೆಯನ್ನು ಪ್ರತಿಭಟಿಸಬೇಕೆಂದು ಶ್ರೀ ಪಿ. ವಿ. ಆಚಾರ್ಯರು ಸೂಚಿಸಿ ಆ ಬಗ್ಗೆ ಕಮಿಷನರಿಗೆ ಅಧಿಕಾರ ನೀಯಬೇಕೆಂದು ಸಂಬಂಧಪಟ್ಟ ರಿಕಾರ್ಡುಗಳನ್ನಷ್ಟೆ ಕಮಿಷನರರು ಕೋರ್ಟಿಗೆ ಹಾಜರು ಪಡಿಸಿದರೆ ಸಾಕೆಂದೂ ವ್ಯಾಜ್ಯಕ್ಕಾಗಿ ಹಣ ವೆಚ್ಚಮಾಡಬಾರದೆಂದೂ ಶ್ರೀ ಬಿ. ಎಸ್. ಆಚಾರ್ಯರು ಇನ್ನೊಂದು ನಿರ್ಣಯ ತಂದರು. ಮುನಿಸಿಪಾಲಿಟಿಯಿಂದ ಹಣ ಖರ್ಚು ಮಾಡುವುದು ಸರಿಯಲ್ಲವೆಂದು ಸೂಚಿಸಿ, ಹಣ ವೆಚ್ಚ ಮಾಡುವ ಸಂಭವ ತೋರುವುದನ್ನೆ ನಿಷೇಧಿಸಿ ಶ್ರೀ ದಾಸ ಸೇರಿಗಾರರು ಸಭಾತ್ಯಾಗಮಾಡಿದರು. ಆಚಾರ್ಯದ್ವಯರ ನಿರ್ಣಯಗಳು ಬಂದರ ನಂತರ ಒಂದು ವೋಟಿಗೆ ಹಾಕಲಾಗಿ ಕಾಂಗ್ರೆಸ್ ಪಕ್ಷದ ಶ್ರೀ ಪಿ. ವಿ. ಆಚಾರ್ಯರ ನಿರ್ಣಯವು ಬಹುಮತದಿಂದ ಪಾಸಾಯಿತು. ಪ್ರಜಾರಾಜ್ಯ ದಿನಾಚರಣೆಯನ್ನು ತಾ 26ರಲ್ಲು ಸಾಂಗವಾಗಿ ಆಚರಿಸಲು ಉಪಸಮಿತಿಯೊಂದು ರಚಿಸಲಾಯಿತು.

ಬೆಳ್ಮಾರೆ ಸೆಂಟರಿನ ಉಪಾಧ್ಯಾಯರ ಸಂಘದ ವತಿಯಿಂದ ಈ ಸೆಂಟರಿನ ಶಾಲೆಗಳೊಳಗೆ ನಡೆದ 'ಚೆಂಡು ಗುಡು' ಆಟದ ಸ್ಪರ್ಧೆಯ ಮುಕ್ತಾಯ ಸಮಾರಂಭವು ತಾ. 8ರಲ್ಲಿ ಬೆಳ್ಮಾರೆಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಪುತ್ತೂರುರೇಂಜಿನ ಶಾಲಾ ಡಿಪ್ಯುಟಿ ಇನ್ಸ್ಪೆಕ್ಟರ್ ಶ್ರೀ ಬಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಪಂದ್ಯಾಟದಲ್ಲಿ ಗೆದ್ದ ಬೆಳ್ಮಾರೆ ಶಾಲೆಗೆ, ಬೆಳ್ಮಾರೆ ಪಂಚಾಯತದ ಉಪಾಧ್ಯಕ್ಷ ಶ್ರೀ ಎ. ಆನಂದನವರು ಕೊಟ್ಟ ಬೆಳ್ಳಿಯ ಕಪ್ಪನ್ನು ಅಧ್ಯಕ್ಷರು ಕೊಟ್ಟರು.

ಬೆಳ್ತಂಗಡಿ—ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು, ಚಲಿಸುವ ಆಸ್ಪತ್ರೆಯೊಂದನ್ನು ರೋಗಿಗಳ ಸೌಕರ್ಯಕ್ಕಾಗಿ ಹಲವು ಕೇಂದ್ರಗಳಲ್ಲಿ ತೆರೆದು ನಡೆಸಿಕೊಂಡು ಬರುತ್ತಿರುವಂತೆ ಗೇರುಕಟ್ಟೆ ಕೇಂದ್ರದಲ್ಲಿಯೂ ತೆರೆದಿರುವರು. ಈ ಆಸ್ಪತ್ರೆಗೆ ಡಾ| ಸೋಮಸುಂದರ ರಾಯರು ಡಾಕ್ಟರರಾಗಿರುವರು.

ಉಜಿರೆ— ಕಲಾಥಿಯೇಟರಿನಲ್ಲಿ ತಾ. 21-1-55ನೇ ಶುಕ್ರವಾರ ರಾತ್ರಿ 9—30ಕ್ಕೆ 'ಶೂರಸೇನ' ನಾಟಕವು ಅಭಿನಯಿಸಲ್ಪಡುವುದು.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

ಬೆಲೆ: 0—2—0; ಮೂರಾಣೆ ಸ್ಟ್ಯಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ, ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.
ಅಥವಾ
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಇದೇ ಭಗವಾನ್ ಆರ್ಟ್ ಪ್ರೊಡಕ್ಷನ್ಸ್‌ನವರ—

ಝಮೇಲಾ (ಹಿಂದಿ)

ಭಗವಾನ್, ಗೀತಾಬಾಲಿ, ಶಕುಂತಲಾ, ಸುಂದರ್,
ಅನ್ವಾರ್, ಬದ್ರಿಪ್ರಸಾದ್ ಮೊದಲಾದವರು.
ಸಂಗೀತ: ಸಿ. ರಾಮಚಂದ್ರ.

ಶ್ರೀ ರಾಮಕೃಷ್ಣ ಥಿಯೇಟರ್, ಲಿ, ಉಡುಪಿ.
ತಾರೀಕು **18-1-1955**ರಿಂದ

ಬರುವ ಚಿತ್ರ: **ಪರಿಣೀತಾ** ಹಿಂದಿ
ಅಶೋಕ್ ಕುಮಾರ್, ಮೀನಾ ಕುಮಾರಿ, ಅಸಿತ್ ಭರನ್

ಯಂ. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಶೂಲೆ, ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಳಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು.. ಬಾಟ್ಲಿ 1ರ ರೂ. 3-8-0.
ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ. ಮೆನೇಜರ್,

ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

NAVAYUGA WEEKLY

AVERTISEMENT RATES

Display Advertisements:— Rs. 2/-8 per column inch for contracts of 50" or more and Rs.3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಮಂಗಳೂರು

ಮಂಗಳೂರು ನಗರ ಸಭೆಯು— ತಾ. 8ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿ 1954-55ರ ತಿದ್ದಿದ ಮತ್ತು 1955-56ರ ಅಂದಾಜು ಪಟ್ಟಿಗಳನ್ನು ಪಾಸುಮಾಡಲಾಯಿತು. 1954-55ರ ತಿದ್ದಿದ ಅಂದಾಜು ಪಟ್ಟಿಯ ಒಟ್ಟು ಜಮೆಯು ರೂ. 80,54,240 ಮತ್ತು 1955-56ರ ಅಂದಾಜು ಪಟ್ಟಿಯ ಜಮೆಯು ರೂ. 32,94,150 ಮತ್ತು ವೆಚ್ಚವು 1954-55ರಲ್ಲಿ ರೂ. 68,02,590 ಮತ್ತು 1955-56ರಲ್ಲಿ ರೂ. 24,26,080. ಈ ಪೈಕಿ ರಸ್ತೆಗಳ ಅಭಿವೃದ್ಧಿಗಾಗಿ ರೂ. 2,19,800 ಇಡಲಾಗಿದೆ. ಪ್ರಾಥಮಿಕ ಮತ್ತು ಇತರ ವಿದ್ಯಾಸಂಬಂಧಕ್ಕಾಗಿ ಒಟ್ಟು ರೂ. 3,29,100ನ್ನು ಇಡಲಾಗಿದೆ. ಅಂದಾಜು ಪಟ್ಟಿಪ್ರಕಾರ 1956ರ ಕೊನೆಯಲ್ಲಿ ರೂ. 8,68,070 ಉಳಿತಾಯವಿದೆ. ಫೈಲೇರಿಯಾ ನಿರೋಧ ಕಾರ್ಯಕ್ರಮವನ್ನು 9 ಮತ್ತು 10 ನೇ ವಾರ್ಡುಗಳಲ್ಲೂ ವಿಸ್ತರಿಸಿ ಹೆಟ್ರಾಜೆನ್ ಮಾತ್ರೆಗಳನ್ನು ಕೊಡುವ ನಿರ್ಣಯವಾಯಿತು. ಮಲ್ಲಿಕಟ್ಟೆಯಲ್ಲಿ ಉದ್ಯಾನವನ್ನು ದಿವಂಗತ ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಗಳ ಸ್ಮಾರಕಾರ್ಥವಾಗಿ ರಚಿಸಲು ಬೇಕಾದ ವೆಚ್ಚವನ್ನು ಕೊಡಲೊಪ್ಪಿದ ಶ್ರೀ ಶಾಸ್ತ್ರಿ ಸಹೋದರರ ದಾನವನ್ನು ಸ್ವೀಕರಿಸಲಾಯಿತು.

ಜಿಲ್ಲಾ ಬೋರ್ಡಿನ ಸಭೆಯು ತಾ 12ರಲ್ಲು ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಕೇಳಿದ ಪ್ರಶ್ನೆಗಳಿಗೆ ಸಭಾರಂಭದಲ್ಲಿ ಉತ್ತರ ಕೊಡಲಾಯಿತು. ಜಿಲ್ಲಾ ಬೋರ್ಡುಗಳ ಆಡಳಿತೆಯನ್ನು ಸುಸೂತ್ರವಾಗಿ ನಡೆಸಲು ತಕ್ಕಷ್ಟು ಅಧಿಕಾರ ಸಿಕ್ಕುವಂತೆ ಸರಕಾರವು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವೀಯ ಬೇಕೆನ್ನುವ, ಮಲೆನಾಡುಪ್ರಾಂತಗಳಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಗಳನ್ನು ಕೈಕೊಳ್ಳಬೇಕೆನ್ನುವ, ನೌಕರರಿಗೆ ಕೊಡಲಾದ ತುಟ್ಟಿ ಭತ್ತೆಯನ್ನು ಸರಕಾರವೇ ಕೊಡಬೇಕೆನ್ನುವ ನಿರ್ಣಯಗಳಾದುವು. ಹಿರಿಯಡಕ ಹ್ಯಾಸ್ಕೂಲಿಗೆ ಕಟ್ಟಡಕ್ಕಾಗಿ ರೂ. 65,700 ಮಂಜೂರು ಮಾಡಲಾಯಿತು. ಕಾರ್ಕಳ ತಾಲೂಕಿನ ನೀರೆಬೈಲೂರಲ್ಲಿ ಹ್ಯಾಸ್ಕೂಲೊಂದನ್ನು ತೆರೆಯುವ ನಿರ್ಧಾರವಾಯಿತು.

ಜಿಲ್ಲಾ ಬೋರ್ಡಿನ 1954—55ರ ತಿದ್ದಿದ ಮತ್ತು 1955—56ರ ಅಂದಾಜು ಮುಂಗಡ ಪಟ್ಟಿಗಳೂ ಮಂಜೂರಾದುವು. 1954-55ರ ತಿದ್ದಿದ ಅಂದಾಜು ಪಟ್ಟಿಯ ಮೇರೆಗೆ ಸಾಮಾನ್ಯ ಖಾತೆಯ ಜಮೆಯು ರೂ. 12,04,020. ವೆಚ್ಚವು — ರೂ. 11,51,800. ಇದರಲ್ಲಿ ಹೆಚ್ಚಾದ ವೆಚ್ಚ ರೂ. 50,220 ಸೇರಿದೆ. 1955-56ರಲ್ಲಿ ರೂ. 11,13,260 ವೆಚ್ಚದ ಅಂದಾಜುಮಾಡಲಾಗಿದೆ. ಮಾರ್ಗಗಳ ಬಗ್ಗೆ ಮೂರು ಲಕ್ಷ. 14 ಹೈಸ್ಕೂಲುಗಳ ಬಗ್ಗೆ ರೂ 303,070. ಪ್ರಾಥಮಿಕ ಶಿಕ್ಷಣದ ಬಗ್ಗೆ ರೂ 18,48,760. ಈ ದೃಷ್ಟಿಯಿಂದ ಒಟ್ಟು ಕೊರತೆಯು ರೂ 1, 91 020 ಆಗಬಹುದೆಂದು ಸೂಚಿಸಲಾಗಿದೆ.

ಶ್ರೀ ತ್ಯಾಗರಾಜ ಮಹೋತ್ಸವವು ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ತಾ 13ರಲ್ಲು ಡಾ| ಎಮ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಶ್ರೀನಿವಾಸ ಉಡುಪರು ತ್ಯಾಗರಾಜರ ಜೀವನ ಮತ್ತು ಕೀರ್ತನೆಗಳ ಸ್ತುತಿ ಭಾಷಣವಿತ್ತರು.

ವಸ್ತ್ರ ಮತ್ತು ಅನ್ನ ದಾನ ಇದೇ ತಾ 14 ರಲ್ಲು ಬೊಂಬಾಯಿಯ ಶ್ರೀಮತಿ ಸವಿತಾ ಬೆಹನ್ ಪುರುಷೋತ್ತಮದಾಸ್, ಅವರು ಮಂಗಳೂರಿನ ಸ್ವಾಮಿ ಕೃ ದಾ ನಂದ ಸೇವಾಶ್ರಮದ ಬಾಲಕ ಬಾಲಕಿಯರಿಗೆ ಬಟ್ಟೆ ದಾನವಿತ್ತರು. ಶ್ರೀ ಜಯಂತಿಲಾಲ್ ಜೆ: ಪಿತ್ತಿಯವರು ಮಕ್ಕಳಿಗೆ ಇದೇ ದಿನದ ಊಟದ ಏರ್ಪಾಡು ಮಾಡಿದರು. ಶ್ರೀ ವನಮಾಲಿದಾಸ್ ಜೀ ಗೋಕುಲದಾಸಜೀಯವರು ತಿಂಡಿ ಹಂಚಿದರು.

ಪದವು ಯುವಕ ಸಂಘದ ಉದ್ಘಾಟನೆಯನ್ನು ತಾ. 14ರಲ್ಲಿ ಸಮಾಜ ಶಿಕ್ಷಣ ಸಂಘಟಕರಾದ ಶ್ರೀ ಎಮ್. ಆರ್. ನಾರಾಯಣನವರು ಉದ್ಘಾಟಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಫಿಲ್ಟರ್ ಪ್ಲಾಂಟ್' ಬಾವಿಗಳು.

ಮದ್ರಾಸು ಸರಕಾರವು ಕಳೆದ ವರ್ಷದಂತೆಯೇ, ಈ ವರ್ಷಕೂಡಾ ಫಿಲ್ಟರ್ ಪ್ಲಾಂಟ್ ಬಾವಿಗಳನ್ನು ನಿರ್ಮಿಸುವ ಯೋಜನೆಯನ್ನು ಮಂಜೂರು ಮಾಡಿರುತ್ತದೆ. ಈ ಯೋಜನೆಯ ಪ್ರಕಾರ ಪ್ರತಿಯೊಬ್ಬ ಅರ್ಜಿದಾರನಿಗೆ ಪಂಪು ಸೆಟ್ಟು ಪಡಕೊಳ್ಳುವ ಕ್ಕೋಸ್ಕರ ರೂ 4000 ದವರೆಗೂ, ಪೈಪು ಫಿಟ್ಟಿಂಗುಗಳ ವಿಕ್ರಯ, ಬಾವಿ ತೋಡುವ ಮಜೂರಿ ಮುಂತಾದುವುಗಳ ಬಗ್ಗೆ ರೂ. 100ರವರೆಗೂ ಸಾಲವನ್ನು ತೆರುವುದಾಗಿದೆ. ಪ್ರತಿಯೊಬ್ಬ ಅರ್ಜಿದಾರನೂ ರೂ 25ನ್ನು "ರಿಜಿಸ್ಟ್ರೇಶನ್ ಫೀ" ಯಾಗಿ ತೆರಬೇಕಾಗಿದೆ. ಫಿಲ್ಟರ್ ಪ್ಲಾಂಟ್ (ಕೊರೆಬಾವಿ) ಗಳ ಕೆಲಸವನ್ನು ಮಾರ್ಚ ಆಖೈರು ವಳಗೆ ತೀರಿಸಬೇಕಾದುದರಿಂದ, ರೈತರು ತಮ್ಮ ಅರ್ಜಿಗಳನ್ನು ಆದಷ್ಟು ಬೇಗನೆ ತಮ್ಮ ತಾಲೂಕಿನ ಎಗ್ರಿಕಲ್ಚರಲ್ ಡಿಮೋನ್ಸ್ಟ್ರೇಟರಿಗೆ ಕಳುಹಿಸ ತಕ್ಕದ್ದು—

ರೈತರು ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಬೇಕೆಂದೂ, ಹೆಚ್ಚಿನ ವಿವರಗಳನ್ನು ಜಿಲ್ಲಾ ವ್ಯವಸಾಯ ಆಫೀಸರರು ಯಾ ತಾಲೂಕು ಡಿಮೋನ್ಸ್ಟ್ರೇಟರರಲ್ಲಿ ಪಡೆಯಬೇಕೆಂದೂ ಕೋರಲಾಗಿದೆ.

ಬಡ ಕ್ಷಯರೋಗಿಗಳಿಗೆ ದ್ರವ್ಯಸಹಾಯ

ಮದ್ರಾಸು ಸರಕಾರವು 1955 ನೇ ಇಸವಿ ಜನವರಿ 1ನೇತಾರೀಕಿನಿಂದ ಹಿಡಿದು ಪ್ರತಿವರ್ಷ,, ಭಾವನಗರ ಕ್ಷಯರೋಗನಿಧಿ"ಯ ವಾರ್ಷಿಕ ಆದಾಯದಿಂದ ಬಡವರಾದ ಕ್ಷಯರೋಗಿಗಳಿಗೆ ತಮ್ಮ ಶುಶ್ರೂಷೆಯ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಹಣಸಹಾಯವನ್ನು ಮಾಡಲು ನಿಶ್ಚಯಿಸಿರುತ್ತದೆ. ಇದಕ್ಕಾಗಿ ಅರ್ಜಿಯನ್ನು ಕಳಿಸುವ ಕ್ಷಯರೋಗಿಗಳು ಕೆಳಗಿನ ಅಂಶಗಳನ್ನು ಗಮನಿಸ ಬೇಕು:—

1. ಅರ್ಜಿಮಾಡುವ ಸಮಯದಲ್ಲಿ ಅಸ್ಪತ್ರೆಗಳಲ್ಲಾಗಲೀ ಆರೋಗ್ಯ ಧಾಮಗಳಲ್ಲಾಗಲೀ ಅವರು ಒಳರೋಗಿಗಳಾಗಿ in-patient) ದಾಖಲಾಗಿರ ಬಾರದು.

2. ಅಸಿಸ್ಟೆಂಟ್ ಸರ್ಜನ್ ಅಥವಾ ಆನರರಿ ಅಸಿಸ್ಟೆಂಟ್ ಸರ್ಜನಿನ ದರ್ಜೆಗಿಂತ ಕೆಳಗಿನವನಲ್ಲದೊಬ್ಬ ಸರಕಾರಿ ಡಾಕ್ಟರರಿಂದ ಒಂದು ವೈದ್ಯಕೀಯ ಪ್ರಶಸ್ತಿ ಪತ್ರವನ್ನೂ ತಹಸೀಲ್ದಾರರ ದರ್ಜೆಗಿಂತ ಕೆಳಗಿನವರಲ್ಲದ ಒಬ್ಬ ,,ಕಂದಾಯ ಅಧಿಕಾರಿಗಳಿಂದ ತಮ್ಮ ಬಡತನದ ಕುರಿತಾದ ಒಂದು ಪ್ರಶಸ್ತಿಪತ್ರವನ್ನೂ ಅರ್ಜಿಯೊಂದಿಗೆ ಹಾಜರು ಪಡಿಸತಕ್ಕದ್ದು.

3. ಮಂಜೂರಾದ ಹಣವನ್ನು ಆಯಾ ಜಿಲ್ಲೆಯ ವೈದ್ಯಕೀಯ ಅಧಿಕಾರಿಗಳ ವಶಕ್ಕೆ ಸರಕಾರ ಒಪ್ಪಿಸಿ ಕೊಡುತ್ತದೆ; ಅವರು ತಕ್ಕ ಮಾಸಿಕ ಕಂತುಗಳಲ್ಲಿ ಅದನ್ನು ರೋಗಿಗಳಿಗೆ ಪಾವತಿ ಮಾಡುವರು.

4 ಹಣಸಹಾಯ ಕೊಡಲ್ಪಟ್ಟ ರೋಗಿಗಳು ಹೊರರೋಗಿಗಳಾಗಿ (out-patient) ಚಿಕಿತ್ಸೆ ಪಡೆಯುವ ಬಗ್ಗೆ ಅಥವಾ ರೋಗವಾಸಿಸದಂತೆ ನೋಡಿಕೊಳ್ಳುವ ಬಗ್ಗೆ ಸಲಹೆಗಳನ್ನು ಪಡೆಯಲು ನಿರ್ದಿಷ್ಟ ಹೆಸರಿನ ಸಂಸ್ಥೆಯೊಂದಕ್ಕೆ ಹೋಗಬೇಕಾಗುತ್ತದೆ.

5. ಒಮ್ಮೆ ಧನಸಹಾಯ ಪಡೆದ ನಂತರ ಮುಂದಿನ ವರ್ಷಗಳಲ್ಲಿಯೂ ಅಂಥ ಸಹಾಯವನ್ನು ದೊರಕಿಸಿಕೊಳ್ಳಲು ಅವರು ಪುನಃ ಕ್ರಮ ಪ್ರಕಾರ ಅರ್ಜಿಯನ್ನು ಮೇಲೆ ಹೇಳಿದ ಪ್ರಶಸ್ತಿ ಪತ್ರಗಳೊಂದಿಗೆ ಮಾಡಬೇಕು. ಅವರ ಸಂಗತಿಯಲ್ಲಿ ವಿಶೇಷ ರಿಯಾಯಿತಿಯನ್ನು ತೋರಿಸಲಾಗುವುದು.

ಅರ್ಜಿಗಳನ್ನು Secretary of the Government of Madras, Health, Education and Local Health Dept; Fort St. George-Madras 9- ಈ ವಿಳಾಸಕ್ಕೆ ಕಳಿಸಬೇಕು.

ಸರ್ವೋದಯ ದಿನಾಚರಣೆ— ಗತ ವರ್ಷಗಳ ಅನುಭವದಿಂದ, ಮಹಾತ್ಮಾಗಾಂಧೀಜಿಯವರ ನಿರ್ವಾಣದಿನ (ಸರ್ವೋದಯ ದಿನ—ತಾ. 30ನೇ ಜನವರಿ)ದ ಆಚರಣೆಯ ಕಾರ್ಯಕ್ರಮವನ್ನು ಈ ಜಿಲ್ಲೆಯಲ್ಲಿ ಹಲವಾರು ರೀತಿಯಲ್ಲಿ ಜನರು ನಡೆಸುವುದು. ನಮ್ಮ ತಿಳುವಳಿಕೆ ಬಂದಿರುವುದರಿಂದ ದಕ್ಷಿಣ ಕನ್ನಡ ಮತ್ತು ಕೊಡಗಿನ ಈ ವಿಭಾಗದಲ್ಲೆಲ್ಲ ಏಕರೀತಿಯಲ್ಲಿ ಕಾರ್ಯಕ್ರಮವು ಸರ್ವೋದಯ ದಿನಾಚರಣೆಯಲ್ಲಿ ನಡೆಯುವಂತೆ, ಆ ದಿನಾಚರಣೆಯನ್ನು ಅಧಿಕೃತವಾಗಿ ಆಚರಿಸಲಿಚ್ಛಿಸುವವರು ಕಾರ್ಯಕ್ರಮದ ಸೂಚಕ ಪ್ರತಿಗಳನ್ನು ಸಂಚಾಲಕ, ಅ. ಭಾ. ಸರ್ವಸೇವಾ ಸಂಘ, ಮಂಗಳೂರು ವಿಭಾಗ, ರಥ ಬೀದಿ, ಮಂಗಳೂರು—1, ಈ ಕಚೇರಿಯಿಂದ ತರಿಸಿಕೊಳ್ಳಬಹುದು.

ಕನ್ನಡ ಕಲಾವಿದರ ನಾಟಕ ಅಭಿನಯ ತಾ 16 ರಲ್ಲು ರಾತ್ರಿ ಮಂಗಳೂರಿನ ಕನ್ನಡ ಕಲಾವಿದರು 'ಮಾತಂಗ ಕನ್ಯಾ' ಎಂಬ ನಾಟಕವನ್ನು ಗಣಪತಿ ಹ್ಯಾಸ್ಕೂಲಿನ ಶಾರದಾ ಸದನದಲ್ಲಿ ಸೊಗಸಾಗಿ ಅಭಿನಯಿಸಿದರು. ಸಮಾರಂಭದ ಅಧ್ಯಕ್ಷ ಸ್ಥಾನ ವಹಿಸಿದ ಡಾ| ಕೆ. ನಾಗಪ್ಪ ಆಳ್ವರು ಮಾತನಾಡುತ್ತಾ, 'ಇಂದು ಎರಡು ಆಡಳಿತೆಗಳ ಅಧಿಕಾರಕ್ಕೊಳಗಾದ ಕರ್ನಾಟಕದ ಏಕೀಕರಣವಾಗದೆ ಕನ್ನಡದ ಕಲೆಗಳಿಗೆ ಪ್ರೋತ್ಸಾಹ ಸಿಗಲಾರದೆಂದು ತಿಳಿಸಿದರು. ಜನರೂ ಸರಕಾರವೂ ಕಲಾವಿದರಿಗೂ ಕಲಾ ಸಂಘಗಳಿಗೂ ಹೆಚ್ಚು ಹೆಚ್ಚಾಗಿ ಪ್ರೋತ್ಸಾಹ ನೀಡಬೇಕಾಗಿದೆ ಎಂದು ಒತ್ತಿ ಹೇಳಿದರು. ಶ್ರೀ ಬೇಂಗನ್ನೆ ಅಣ್ಣಯ್ಯನವರು ನಾಟ್ಯಕಲೆಯ ಪ್ರೋತ್ಸಾಹದ ಆವಶ್ಯಕತೆಯ ಕುರಿತು ಮಾತನಾಡಿದರು. ಶ್ರೀ ಬಿ. ವಿ. ಬಾಳಿಗರು ಧನ್ಯವಾದಗಳನರ್ಪಿಸಿದರು.

ಭಾರತೀಯ ಮಹಿಳಾ ಸಮಾಜದ ಆಶ್ರಯದಲ್ಲಿ ತಾ 14 ರಲ್ಲು ಮಹಿಳೆಯರು 'ಮಕರ ಸಂಕ್ರಮಣ' ಉತ್ಸವವನ್ನು ಆಚರಿಸಿದರು. ಶ್ರೀಮತಿಯರಾದ ಭಾರತೀರಾವ್ ಮತ್ತು ಸುನಂದಾ ಗುರ್ಜರರು ಉತ್ಸವ ಆಚರಣೆ ಕುರಿತು ಮಾತನಾಡಿದರು. ಸಭಾ ಪೂಜೆಯಾಗಿ ಎಳ್ಳು ಸಕ್ಕರೆ ವಿತರಣೆಯಾಯಿತು.

ಹಾಸನ ಮಂಗಳೂರು ರೈಲ್ವೆ:— ಕೇಂದ್ರಸರಕಾರದ ರೈಲ್ವೆಮಂತ್ರಿಗಳಾದ ಶ್ರೀ ಲಾಲ್ ಬಹದ್ದೂರು ಶಾಸ್ತ್ರಿಗಳು ತಾ. 17ರಲ್ಲಿ ಮಥುರೆಯಲ್ಲಿ ರೈಲ್ವೆ ಕೆಲಸಗಾರರ ಪರಿಷತ್ತನ್ನು ಉದ್ಘಾಟಿಸುತ್ತಾ, ವಿಮಾನದ ಮೂಲಕ ಹಾಸನ—ಮಂಗಳೂರು ರೈಲ್ವೆಮಾರ್ಗದ ಸರ್ವೆಕೆಲಸ ಮುಗಿದಿದೆ ಎಂದೂ ಭೂಮಿಯ ಸರ್ವೆಕೆಲಸವು ಬೇಗನೆ ಮಾಡಲಾಗುವುದೆಂದೂ ಹೇಳಿದರು.

ಸಮಾಚಾರ ವಾರಪತ್ರಿಕೆಯು— 'ಸಮಾಚಾರ ಟ್ರಸ್ಟು' ಆಡಳಿತಕ್ಕೊಳಪಟ್ಟು ಶ್ರೀ ಎಚ್. ರಾಮರಾಯ ಮಲ್ಯರ ಸಂಪಾದಕತ್ವದಲ್ಲಿ ಇದೇ ತಾ. 14ರಲ್ಲಿ ಮರಳಿ ಪ್ರಕಟವಾಗಿರುವುದು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಮಾಲೆ	೪	೧
ಜ್ಞಾನಯೋಗ	೪	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೪	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಿಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೬
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೧
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಹೈಮಾಚಲ ಸಾನ್ನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ADVERTISE IN
NAVAYUGA
REPUBLIC DAY
SPECIAL.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಪದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-
Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ರಹಾಕಂಪೆನಿ, ಮಂಗಳೂರು

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ನ.)

೧) ಗೀತಾರ್ಥ ಚಂದ್ರಿಕೆ—
(ಬೆಲೆ: ರೂ. ೩—೪—೦)

೨) ನೀತಿಗಳ ನೆಲಗಟ್ಟು—
(ಬೆಲೆ: ರೂ. ೨—೦—೦)

ಬರೆದವರು: ಹೊಸಕೆರೆ ಚಿದಂಬರಯ್ಯ. ಪ್ರಕಾಶಕರು: ಎಸ್. ಎಸ್. ಎನ್. ಬುಕ್ ಡಿಪೊ, ಸಿಟಿ ಮಾರ್ಕೆಟ್, ಬೆಂಗಳೂರು ೨.

ಘನಪಂಡಿತರಾದ ಹೊಸಕೆರೆ ಚಿದಂಬರಯ್ಯನವರಿಂದ ರಚಿಸಲ್ಪಟ್ಟ ಮೇಲಿನೆರಡು ಗ್ರಂಥಗಳೂ ಕನ್ನಡದ ಧಾರ್ಮಿಕ ಸಾಹಿತ್ಯಕ್ಷೇತ್ರಕ್ಕೆ ಸಲ್ಲಿಸಲಾದ ಶ್ರೇಷ್ಠ ಕಾಣಿಕೆಗಳೆಂದು ಹೇಳಿದರೆ ಅತಿಶಯೋಕ್ತಿಯಾಗದು. ಸ್ವಲ್ಪದರಲ್ಲಿ ಮಹತ್ವವನ್ನು ವಿವರಿಸುವ ಶ್ರೀ ಮದ್ಭಗವದ್ಗೀತೆಯ ಶ್ಲೋಕಗಳಿಗೆ ಮನುಷ್ಯನ ಚಿಕಿತ್ಸಕ ಬುದ್ಧಿಯು ಎಷ್ಟೊ ಅರ್ಥವನ್ನು ಸಯುಕ್ತಿಕವಾಗಿ ಹಚ್ಚಬಲ್ಲುದು- ಮತ್ತು ಅಷ್ಟೂ ವ್ಯಾಖ್ಯೆಗಳನ್ನು ಅದು ಒಪ್ಪಿಕೊಳ್ಳಲೂ ಬಲ್ಲುದು. ಇದರಿಂದ ಗರ್ಭಸ್ಥರೂಪದಲ್ಲಿರುವ ಅರ್ಥವು ಹೊರಗೆ ಪ್ರಕಾಶಿತವಾಗುವುದಕ್ಕೆ ನೆರವಾಗುವುದೆಂತಲೇ ಪ್ರಾಜ್ಞರಾದವರೆಲ್ಲರೂ ಗೀತೆಯ ಅರ್ಥವನ್ನು ವಿವರಿಸುವ ಪ್ರಯತ್ನ ಮಾಡಿರುವರು. ಶ್ರೀ ಹೊಸಕೆರೆ ಚಿದಂಬರಯ್ಯನವರು ಶಾಂಕರ ಭಾಷ್ಯವನ್ನು ಆಧಾರವಾಗಿ ಇಟ್ಟುಕೊಂಡಿದ್ದರೂ ಹೇಳುವಬಗೆಯಲ್ಲಿ ತಮ್ಮ ಗೋಚರಕ್ಕೆ ಬಂದ ಕೆಲವು ಹೊಸವಿಚಾರಗಳನ್ನು ನಿರೂಪಿಸುವುದಕ್ಕೆ ಹಿಂಜರಿದಿಲ್ಲ. ಅಲ್ಲದೆ ಗೀತೆಯ ಪಾರಾಯಣವನ್ನು ಮಾಡುವಾಗ ಮೂಲಶ್ಲೋಕವನ್ನು ವಾಚಕನು ಚೆನ್ನಾಗಿ ಗ್ರಹಿಸಿಕೊಂಡು, ಅದರ ಅರ್ಥಮಾಡಿಕೊಂಡು, ಕೃತಾರ್ಥನಾಗುವುದಕ್ಕೆ ಅನುಕೂಲಿಸುವಂತೆ ಸಂಸ್ಕೃತಪದಗಳನ್ನು ಕಂಸದಲ್ಲಿ ಕೊಟ್ಟು, ಅವುಗಳ ಅರ್ಥವನ್ನು ಕನ್ನಡದಲ್ಲಿ ಸರಾಗವಾಗಿ ಓದಲು ಸಾಧ್ಯವಾದರೀತಿಯಲ್ಲಿ ಕೊಟ್ಟಿರುವರು. ಇಷ್ಟುಮಾತ್ರವಲ್ಲದೆ ಅಲ್ಲಲ್ಲಿ ವಿವರಣಾತ್ಮಕವಾದ ಟಿಪ್ಪಣಿಗಳನ್ನು ಜೋಡಿಸಿ ಕಠಿಣ ವಿಷಯಗಳ ಶೀಘ್ರ ಗ್ರಹಣಕ್ಕೂ ನೆರವಿತ್ತಿರುವರು. ಗೀತೆಯು ಉಪನಿಷತ್ತುಗಳೆಲ್ಲವರ ಸಾರವೆಂಬ ಉಕ್ತಿಯನ್ನು ಪುಷ್ಟೀಕರಿಸುವಂತೆ ಗೀತಾಶ್ಲೋಕಗಳಲ್ಲಿ ವ್ಯಕ್ತವಾದ ತಾತ್ಪರ್ಯವನ್ನೇ ಬಿಂಬಿಸುವ ಉಪನಿಷತ್ತಿನ ವಾಕ್ಯಗಳನ್ನು ಸಂದರ್ಭಕ್ಕೆ ತಕ್ಕಹಾಗೆ ಕೊಡುತ್ತಾ ಬಂದಿರುವುದರಿಂದಂತೂ ಈ ಪುಸ್ತಕದ ಪ್ರಯೋಜನವು ಇಮ್ಮಡಿಸಿರುವುದು. ಉಪನಿಷತ್ತಿನ ಮತ್ತು ಗೀತೆಯ ತುಲನಾತ್ಮಕ ಅಭ್ಯಾಸವನ್ನು ಮಾಡುವವರಿಗೆ ಇದರಿಂದ ಬಹಳಷ್ಟು ಲಾಭದೊರಕುವುದರಲ್ಲಿ ಸಂದೇಹವಿಲ್ಲ. ಒಟ್ಟಾರೆ, ಗೀತೆಯಬಗ್ಗೆ ಇದೊಂದು ಪ್ರೌಢ ಭಾಷ್ಯವಾಗಿದ್ದು, ಕನ್ನಡಿಗರಿಗೆಲ್ಲ ಉಪಯುಕ್ತವೆನಿಸುವಗ್ರಂಥವೆಂದು ನಮ್ಮ ಅಭಿಪ್ರಾಯ.

ಶ್ರೀ ಹೊಸಕೆರೆ ಚಿದಂಬರಯ್ಯನವರಿಂದಲೇ ಬರೆಯಲಾದ "ನೀತಿಗಳ ನೆಲಗಟ್ಟು" ಎಂಬ ಪುಸ್ತಕವು ಎಲ್ಲ ಮಕ್ಕಳೂ ಮನಸ್ಸುಗೊಟ್ಟು ಓದಿ, ಜೀರ್ಣಿಸಿಕೊಂಡು, ಅನುಷ್ಠಾನಕ್ಕೆ ತರಬೇಕಾದ ಅಮೂಲ್ಯ ವಿಚಾರಗಳನ್ನು ವ್ಯಕ್ತಪಡಿಸುತ್ತದೆ. ಎಲ್ಲ ತರದ ಶ್ರೇಯಸ್ಸನ್ನು ಹೊಂದುವುದಕ್ಕೂ ನೀತಿಯುಕ್ತವಾದ ನಡವಳಿಕೆಯೇ ಮೂಲಭೂತವಾದ ಅಂಶವೆಂಬುದನ್ನು ಪ್ರಥಮ ಅಧ್ಯಾಯದಲ್ಲಿ ಚೆನ್ನಾಗಿ ವಿವರಿಸಿದ ಬಳಿಕ ಮುಂದಿನ ೧೫ ಪ್ರಕರಣಗಳಲ್ಲಿ ವಿದ್ಯಾರ್ಥಿಗಳಿಗೂ ಪ್ರಾಯಪ್ರಬುದ್ಧರಿಗೂ, ಎಲ್ಲರಿಗೂ ಅನ್ವಯಿಸುವ ನೀತಿಸಂಬಂಧದ ಚರ್ಚೆಯನ್ನು ಸುಲಭವಾದ ಶೈಲಿಯಲ್ಲಿ ಅನೇಕ ಉದಾಹರಣೆಗಳಿಂದಲೂ ನಿದರ್ಶನೋಕ್ತಿಗಳಿಂದಲೂ ಸಯುಕ್ತಿಕವಾಗಿಯೂ ಹೃದಯಂಗಮವಾಗಿಯೂ ಮಾಡಿರುವರು. ಪ್ರಾಚೀನ ಶಾಸ್ತ್ರ ಗ್ರಂಥಗಳಿಂದಲೂ ಕಾವ್ಯಗಳಿಂದಲೂ ಗುರುಹಿರಿಯರ ವಚನಗಳಿಂದಲೂ ವಿಷಯದ ಪುಷ್ಟೀಕರಣಕ್ಕೆ ಬೇಕು ಬೇಕಾದ ಅಂಶಗಳನ್ನು ಧಾರಾಳವಾಗಿ ಉದ್ಧರಿಸಿರುವುದರಿಂದ ಈ ಪ್ರಬಂಧಗಳಲ್ಲಿ ಕಸುವೂ ಆಕರ್ಷಣೆಯೂ ಹೆಚ್ಚಿರುವುವು. ಧನ್ಯಜೀವನವನ್ನು ನಡೆಸುವುದಕ್ಕೆ ಈ ಗ್ರಂಥದಿಂದ ನೆರವಾದೀತೆಂದು ನಾವು ಮನಃಪೂರ್ವಕ ಹಾರೈಸುತ್ತೇವೆ.

ಜನಮತ

ಪ್ರಗತಿ ಮತ್ತು ಪ್ರಚಾರ

ರಾಷ್ಟ್ರದ ಪ್ರಗತಿಯನ್ನು ಸಾಧಿಸುವಲ್ಲಿ ಜನತಾ ಸಹಕಾರವು ಅತ್ಯಧಿಕ ಮಹತ್ವವನ್ನು ಪಡೆಯುತ್ತದೆಂದು ನಮ್ಮ ಸರಕಾರದ ಪ್ರಭೃತಿಗಳು ಹೇಳುತ್ತಿದ್ದರೂ ಹಾಗೆ ಜನರು ಸಹಕಾರವನ್ನು ಕೊಡುವಂತೆ ಪ್ರೇರಿಸುವ ಪ್ರಚಾರ ಕಾರ್ಯದಲ್ಲಿ ಮಾತ್ರ ಏನೇನೂ ಉತ್ಸಾಹವನ್ನು ತೆಗೆದುಕೊಳ್ಳುವುದಿಲ್ಲವೆಂದು ಆಕ್ಷೇಪಿಸಿದರೆ, ಅದು ತಪ್ಪಾಗಲಾರದೆಂದು ತೋರುತ್ತದೆ. ಉಡುಪಿಯಲ್ಲಿ ಮೊನ್ನೆ ದಿನಾಂಕ ೧೫-೧೬ಗಳಲ್ಲಿ ನಡೆದ ಚೀನದ ಕಲೆ ಮತ್ತು ಕಸೂತಿಯ ಪ್ರದರ್ಶನವನ್ನು ನೋಡಿದ ಬಳಿಕವಂತೂ ನನಗೆ ನಾವು ಪ್ರಚಾರದಲ್ಲಿ ಹಿಂದೆ ಬಿದ್ದಿದ್ದೇವೆ ಎಂದು ಖಚಿತವಾಯಿತು.

ಮೇಲಿನ ಪ್ರದರ್ಶನವನ್ನು ಸ್ಥಳೀಯ ಕಮ್ಯುನಿಸ್ಟ ಪಕ್ಷದ ಪ್ರಭೃತಿಗಳೂ ಚೀನಾದ ಅಭಿಮಾನಿಗಳೂ ಏರ್ಪಡಿಸಿದ್ದರು. "ಕಲೆ ಮತ್ತು ಕಸೂತಿ"ಯ ಪ್ರದರ್ಶನವೆಂದು ಕರೆದಿದ್ದರೂ ಅಲ್ಲಿ ಬೇರೆ ಎಷ್ಟೋ ಕಡೆ ಸುತ್ತಾಡಿಬಂದ ಕೆಲವು ಮಾಸಲು ಕಸೂತಿಗಳೂ ಪ್ರಾಚೀನ ಚಿತ್ರಗಳ ಫೋಟೋ ಪ್ರತಿಗಳೂ ಇದ್ದುದರ ಇಮ್ಮಡಿಯಷ್ಟಾದರೂ ಚೀನದ ರಾಜಕೀಯ ಮತ್ತು ಸಾಮಾಜಿಕ ಜೀವನವನ್ನು ಚಿತ್ರಿಸುವ ಫೋಟೋ ಪ್ರತಿಗಳನ್ನು ತೂಗಹಾಕಿದ್ದರು. ಸಂದರ್ಶಕರಿಗೆ ಚಿತ್ರಗಳನ್ನು ವಿವರಿಸಿ ಹೇಳುತ್ತಿದ್ದವರು ಸಹ ಕಲೆ ಮತ್ತು ಕಸೂತಿಯ ವಿಷಯದಲ್ಲಿ ಒಂದೂ ಶಬ್ದವನ್ನಾಡದೆ ನವಚೀನದ ಆರ್ಥಿಕ ಹಾಗು ರಾಜಕೀಯ ಪುನಾರಚನೆಯ ಕುರಿತಾಗಿಯೇ ಆಸಕ್ತಿಯನ್ನು ವಹಿಸಿದಂತೆ ಭಾಸವಾಯಿತು

ಅವರ ಹೇಳಿಕೆಗೆ ಸಂದರ್ಭವನ್ನೊದಗಿಸಿಕೊಟ್ಟ ಫೋಟೋಗಳೇನು? ಮತದಾನದ, ಭೂಸಾಗುವಳಿಯ, ಅನಾಥಾಲಯದ, ಕೈಗಾರಿಕಾ ಕೇಂದ್ರಗಳ ದೃಶ್ಯಗಳು. ನಮ್ಮ ದೇಶದಲ್ಲೂ ಇವುಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಧಾರಾಳವಾಗಿ ತೆಗೆಯಬಹುದು; ತೆಗೆದು ಪ್ರದರ್ಶನಕ್ಕೆ ಇಡಲೂ ಬಹುದು. ಹಾಗೆ ಮಾಡುವುದರಿಂದಲೇ ಜನತೆಗೆ ಶಿಕ್ಷಣ ಕೊಡುವ ಕೆಲಸ ಸಾರ್ಥಕವಾದೀತು. ಚೀನದ ಪ್ರಗತಿಯನ್ನು ತಿಳಿಯುವಷ್ಟು ಉತ್ಸಾಹ ತೋರಿಸುವ ನಮಗೆ ನಮ್ಮ ದೇಶದ ಅಭಿವೃದ್ಧಿಯ ಕಲ್ಪನೆಯೇ ಇಲ್ಲದಿದ್ದರೆ ಹೇಗೆ? ಪ್ರಗತಿ ಮತ್ತು ಪ್ರಚಾರವನ್ನು ಒಂದಿನ್ನೊಂದರ ಅವಿಭಾಜ್ಯ ಅಂಗವೆಂದು ಸ್ವೀಕರಿಸದಿದ್ದರೆ ಈ ಪ್ರಶ್ನೆಗೆ ಉತ್ತರ ಸಿಗಲಾರದು.

ಹೊಸದೆಹಲಿಯಲ್ಲಿ ವಾರ್ತಾ ಸಚಿವರ ಪರಿಷತ್ತು ಕಳೆದ ವಾರ ಜರಗಿದಾಗ ರಾಷ್ಟ್ರದ ಪ್ರಗತಿಯನ್ನು ಸೂಚಿಸುವ ಚಿತ್ರಗಳ ಪ್ರದರ್ಶನ ವ್ಯವಸ್ಥೆಯ ಕಡೆಗೆ ಹೆಚ್ಚಿನ ಗಮನ ಕೊಡುವ ಪ್ರಸ್ತಾಪ ಬಂದಿತೆಂದು ತಿಳಿಯುತ್ತದೆ. ಇಲ್ಲಿ ಕೈಗೊಂಡ ನಿರ್ಣಯದ ಬೆಳಕಿನಲ್ಲಿ ನಮ್ಮ ಕಾಂಗ್ರೆಸು ಕಾರ್ಯಕರ್ತರು ಜನತೆಯ ಜ್ಞಾನವನ್ನು ಸಂವರ್ಧಿಸುವುದಕ್ಕೋಸ್ಕರ ಯೋಗ್ಯ ಪ್ರದರ್ಶನಗಳನ್ನು ಏರ್ಪಡಿಸಲು ಮುಂದಾಗುವರೇ? ಜನತಾ ಸಹಕಾರವನ್ನು ಗಳಿಸುವುದಕ್ಕೆ ರಾಷ್ಟ್ರದ ಪ್ರಗತಿಯ ಚಿತ್ರವನ್ನು ನಾಗರಿಕರ ಕಣ್ಣೆದುರು ಇಡಬೇಕಾಗುತ್ತದೆ. ಪತ್ರಿಕೆಗಳಿಂದ ಓದಿ ತಿಳಿಯುವ ಜನರು ನೂರಕ್ಕೆ ಹತ್ತರಷ್ಟೂ ಇಲ್ಲದ ನಮ್ಮ ದೇಶದಲ್ಲಿ ಕಣ್ಣಿಗೆ ಹಬ್ಬ ಮಾಡಿಯೇ, ಮನಸ್ಸಿನ ಕೃಷಿ ಮಾಡಬೇಕಾಗುತ್ತದೆ. ಕಮ್ಯುನಿಸ್ಟರು ಚೀನದ ವಿಷಯದಲ್ಲಿ ಅನುಸರಿಸಿದ ತಂತ್ರವನ್ನು ಕಾಂಗ್ರೆಸು ವರ್ತುಲಗಳು ಭಾರತದ ಮಟ್ಟಿಗೆ ಬಳಸಿಕೊಳ್ಳದಿದ್ದರೆ ನಮ್ಮ ರಾಷ್ಟ್ರದ ಭವಿಷ್ಯ ಉಜ್ವಲವಾಗಲಾರದು. ಕಾರಣ ಈ ದಿಸೆಯಲ್ಲಿ ಶೀಘ್ರ ಕ್ರಮ ತೆಗೆದುಕೊಳ್ಳಲ್ಪಡುವುದೆಂದು ಆಶಿಸುತ್ತೇನೆ.

—ಒಬ್ಬ ರಾಷ್ಟ್ರಕ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ,
1929ರಲ್ಲಿ ಸ್ಥಾಪಿತವಾಗಿ 26 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್
ಕಂಪೆನಿ ಲಿಮಿಟೆಡ್.
ಪಾಯಸ್ ಬಿಲ್ಡಿಂಗ್, ಹಂಪನ್‌ಕಟ್ಟಾ, ಮಂಗಳೂರು.
ಇನ್ಸ್‌ಪೆಕ್ಟರರು, ಒರ್ಗನೈಜರರು ಮತ್ತು ಎಲ್ಲಾ ತರದ ಏಜಂಟರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.
ಹೊಸತಾಗಿ ಏರ್ಪಡಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಿವೆ.
ಹೆಚ್ಚಿನ ವಿವರಗಳಿಗೆ ವಿಚಾರಿಸಿ.—
B. B. SHETTY, B. A., LL. B.
Chairman.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ
1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್
ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ
(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)
ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಚೀಫ್ ಏಜಂಟ್ಸ್. ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.
ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು
The Bombay Life Assurance Co., Ltd., Bombay.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೊ: (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

SR
ಸೇವನೆಯ ಆನಂದಕ್ಕೆ
ಅತ್ಯುತ್ತಮವಾದುದನ್ನೇ ಪಡಕೊಳ್ಳಿರಿ
ಎಸ್. ಆರ್.
ತಾಜಾ ನಿಪ್ಪಾಣಿ ತಂಬಾಕು
ಮತ್ತು
ಬೊಂಬ್ಯಾ ಎಲೆ
ಇವುಗಳಿಂದ ತಯಾರಿಸಿದ
ಬೀಡಿಗಳಾಗಿರುತ್ತವೆ.
S.R. Beedi Works, UDIPI, S.K.

ಮಧ್ಯಭಾರತದ ಪ್ರಾಚೀನ ವೈಭವ

(೨ನೇ ಪುಟದಿಂದ)

ರಿಕೆಗಳು ಇಲ್ಲೀಗ ಇವೆಯಲ್ಲದೆ ಕಬ್ಬಿಣ ಮತ್ತು ಕಲ್ಲಿದ್ದಲಿನ ಅದುರು ಹೇರಳವಾಗಿ ದೆಯೆಂದೂ ಬಾಕ್ಸೈಟ್, ಲಾರೈಟ್, ವೈಕಾಗಳೂ ಧಾರಾಳವಾಗಿ ಇಲ್ಲಿ ಸಿಗುತ್ತವೆಂದೂ ತಿಳಿಯುತ್ತದೆ. ತನ್ನ ಬಣ್ಣದಿಂದ ಮನವೋಹಿಸುವ ಸಣ್ಣದ ಕಲ್ಲಿನ ಸಾವಿರ ಅಡಿ ದಪ್ಪನಾದ ಒಂದು ಬೆಟ್ಟವೇ ಭೋಪಾಳದಲ್ಲಿ ನೋಡಸಿಗುತ್ತದೆ. ಆದಾಗ್ಯೂ ಜನರ ಲಕ್ಷ್ಯವು ಇಲ್ಲಿಯ ಐತಿಹಾಸಿಕ ಕ್ಷೇತ್ರಗಳ ಕಡೆಗೆಯೇ ಮೊದಲು ಹೋಗುತ್ತದೆ. ಮುನ್ನೂರು ಅಡಿ ಎತ್ತರದ ಬಂಡೆಗಲ್ಲಿನ ಗುಡ್ಡದ ಮೇಲೆ ಬುದ್ಧದೇವನ ಅಮರ ಸಂದೇಶದ ನೆನಪನ್ನು ತಂದುಕೊಡುವ ಸಾಂಚಿಯ ಸ್ತೂಪವೇ ಇಲ್ಲಿಯ ಮುಖ್ಯ ಆಕರ್ಷಣೆಯಾಗಿದೆ. ಭೋಪಾಳದಿಂದ ಸಾಂಚಿಯು ಹತ್ತು ಮೈಲು ದೂರದಲ್ಲಿರುವುದು ಇಲ್ಲಿ ಕ್ರಿಸ್ತಪೂರ್ವ ಮೂರನೇ ಶತಮಾನದಿಂದ ಕ್ರಿಸ್ತಶಕ ಹನ್ನೆರಡನೇ ಶತಮಾನದ ವರೆಗಿನ ಅನೇಕ ಬುದ್ಧ ಸ್ತೂಪಗಳಿರುತ್ತವೆ. ಮಹಾಸ್ತೂಪಕ್ಕೆ ನಾಲ್ಕು ಹೆಬ್ಬಾಗಿಲುಗಳಿದ್ದು ಅವುಗಳಲ್ಲಿ ಸುಂದರವಾದ ಕುಸುರಿನ ಕೆಲಸಗಳು ಗೋಚರಿಸುತ್ತವೆ. ಆನೆ ಅಥವಾ ಸಿಂಹಗಳು ಬೆನ್ನಿಗೆ ಬೆನ್ನನ್ನು ಆನಿಸಿಕೊಂಡು ಕುಳಿತಿರುವಂತೆ ಅದ್ಭುತವಾದ ಶಿಲ್ಪ ಚಮತ್ಕಾರವನ್ನಿವು ತೋರ್ಪಡಿಸುತ್ತವೆ. ಜಾತಕ ಕಥೆಗಳ ರಮ್ಯ ಚಿತ್ರಣವೂ ಹೆಬ್ಬಾಗಿಲುಗಳಲ್ಲಿ ಶೋಭಿಸುತ್ತದೆ.

ಈ ಸ್ಮಾರಕಗಳ ಇತಿಹಾಸವು ಅಷ್ಟು ಸ್ಪಷ್ಟವಾಗಿಲ್ಲ. ಅಶೋಕ ಚಕ್ರವರ್ತಿಯು ಇದನ್ನು ಕಟ್ಟಿಸಿದನೆಂದು ಹೇಳಲಾಗುತ್ತದೆ. ಅವನು ವಿದಿಶಾ ನಗರದ ವರ್ತಕನೊಬ್ಬನ ಮಗಳನ್ನು ಮದುವೆಯಾಗಿದ್ದನು. ಅವಳ ಮಗನಾದ ಮಹೇಂದ್ರನು ಸಿಂಹಳ ದೇಶಕ್ಕೆ ಧರ್ಮ ಪ್ರಸಾರಕ್ಕಾಗಿ ಹೋಗುವುದಕ್ಕೆ ಮುಂಚೆ ಸಾಂಚಿಯ ದಿನ್ನೆಯ ಮೇಲೆ ತಂಗಿದನೆಂದೂ ಇದರ ನೆನಪಿಗಾಗಿ ರಾಣಿಯು ಅಲ್ಲಿ ಒಂದು ವಿಹಾರವನ್ನು ಮೊದಲು ಕಟ್ಟಿಸಿದಳೆಂದೂ ತಿಳಿದುಬರುತ್ತದೆ. ಭಾರತ ಸರಕಾರದ ನೆರವಿನಿಂದ ಸಾಂಚಿಯನ್ನು ಈಗ ಅಭಿವೃದ್ಧಿಗೊಳಿಸಲಾಗುತ್ತದೆ ಸಾಂಚಿಯಂತೆ ಮೂಲದ ಚರಿತ್ರೆ ಏನೂ ತಿಳಿದುಬಂದ, ಕೇವಲ ಕಿಂವದಂತಿಗಳನ್ನೇ ಆಶ್ರಯಿಸಬೇಕಾದ ಇನ್ನೊಂದು ಪ್ರಸಿದ್ಧ ಕ್ಷೇತ್ರವೆಂದರೆ ಭೋಜಪುರ. ಇಲ್ಲಿರುವ ಶೈವ ದೇವಾಲಯು ಗುಜರಾಥಿನ ಸೋಮನಾಥದಷ್ಟೇ ಪ್ರಸಿದ್ಧವಾದದ್ದು; ಅಲ್ಲದೆ ಅದ್ಭುತವಾದದ್ದು. ಭೋಜಪುರವು ಭೋಪಾಳದಿಂದ ಇಪ್ಪತ್ತು ಮೈಲುಗಳ ಅಂತರದಲ್ಲಿ ದಟ್ಟವಾದ ಹಾಗು ಸಸ್ಯ ಶ್ಯಾಮಲವಾದ ಅರಣ್ಯ ಪ್ರದೇಶಗಳ ನಡುವೆ ನೆಲಸಿರುತ್ತದೆ. ರಾಷ್ಟ್ರಾಧ್ಯಕ್ಷರು ಈ ಕ್ಷೇತ್ರಕ್ಕೆ ಸಂದರ್ಶನ ನಿತ್ತಾಗ ಸುತ್ತಣ ಕಾಡುಗಳಲ್ಲಿ ವಾಸಿಸುವ ಗೊಂಡ ಸ್ತ್ರೀಪುರುಷರೂ ಮಕ್ಕಳೂ ತಮಗೆ ವಿಶಿಷ್ಟವಾದ ಬಣ್ಣದ ವಸ್ತ್ರಾಭೂಷಣಗಳಿಂದ ಅಲಂಕಾರ ಮಾಡಿಕೊಂಡು ದಾರಿಯುದ್ದಕ್ಕೂ ನಿಂತಿದ್ದರು. ಶಿವಾಲಯವನ್ನು ತಲುಪಿದ ಬಳಿಕ ರಾಷ್ಟ್ರಾಧ್ಯಕ್ಷರು ಘಂಟೆ ಶಂಖ ಹಾಗೂ ಮಂಗಳ ವಾದ್ಯಗಳ ಮೊಳಗಿನೊಡನೆ ಶಿವಲಿಂಗದ ಅರ್ಚನೆಯನ್ನು ಮಾಡಿದರು ಇಲ್ಲಿಯ ಶಿವಲಿಂಗ ಏಳೂವರೆ ಅಡಿ ಎತ್ತರವಿದೆಯಲ್ಲದೆ ಅದರ ಪರಿಧಿಯು ಹದಿನೇಳು ಅಡಿ ಮತ್ತು ಎಂಟು ಅಂಗುಲಗಳಿರುವುದು.

ಹನ್ನೆರಡು ಅಥವಾ ಹದಿಮೂರನೇ ಶತಮಾನಕ್ಕೆ ಸೇರಿದುದೆಂದು ಹೇಳಲಾದ ಈ ಮಹಾ ಶಿವಾಲಯದ ಕುರಿತು ಭಾರತ ಸರಕಾರದ ಪ್ರಾಚ್ಯ ಸಂಶೋಧನ ಶಾಖೆಯವರು ಈಚೆಗೆ ಲಕ್ಷ್ಯಕೊಡಲಾರಂಭಿಸಿದರು. ಬೇತವಾ ನದಿಯ ತೀರದಲ್ಲಿರುವ ಈ ದೇವಾಲಯವು ಯಾವ ಕಾರಣದಿಂದ ಲೋ ಅಪೂರ್ಣವಾಗಿಯೇ ಉಳಿದಿರುವುದು. ಆದಾಗ್ಯೂ ಇಲ್ಲಿಯ ಶಿಲ್ಪ ಚಮತ್ಕಾರವು ಅನ್ಯಾದೃಶವಾದದ್ದು. ಒಂದು ಕಾಲದಲ್ಲಿ ಈ ಪ್ರದೇಶದಲ್ಲೆಲ್ಲ ಗೊಂಡರದೇ ರಾಜ್ಯ ಭಾರವಿದ್ದಂತೆ ಕಂಡು ಬರುತ್ತದೆ ಆದರೆ ಇತರ ಬಲಿಷ್ಠ ರಾಜರು ಅವರನ್ನು ಸೋಲಿಸಿ ಪಾದಾಕ್ರಾಂತಮಾಡಿಕೊಂಡ ಬಳಿಕ ಗೊಂಡರು ಇಂದಿನ ಅನಾಗರಿಕ ಸ್ಥಿತಿಯನ್ನು ಹೊಂದುವಂತಾಯಿತು. ಗೊಂಡರ ಹಾಳುಸ್ಥಿತಿಗೆ ಈ ದೇವಾಲಯ ಪೂಸಾಕ್ಷಿ ಹೇಳುತ್ತದೆ. ಅವರ ಉದ್ಧಾರಕ್ಕೆ ಸರಕಾರದವರು ಪ್ರಯತ್ನಿಸುವಂತೆ ದೇವಾಲಯದ ಜೀರ್ಣೋದ್ಧಾರಕ್ಕೆ ಸಹ ಮನಸ್ಸು ಮಾಡಬೇಕೆಂದು ಮಂದಿರದ ಮುಖ್ಯ ಅರ್ಚಕರಾದ ಶ್ರೀ ಆಶನಾರಾಯಣ ಜೋಶಿ ವಿನಂತಿಸಿದರು.

ಭೋಜಪುರದ ಇನ್ನೊಂದು ವೈಶಿಷ್ಟ್ಯವೆಂದರೆ, ಭಾರತದಲ್ಲೆಲ್ಲ ವಿಶಾಲವಾದುದೆಂದು ಒಂದು ಕಾಲದಲ್ಲಿ ಹೆಸರಾಗಿದ್ದ ಮಹಾ ಸರೋವರ. ಇದರಲ್ಲಿ ೨೫೦ ಚದರ ಮೈಲು ನೀರು ನಿಲ್ಲುತ್ತಿತ್ತೆಂದೂ ಎಲ್ಲಿಯಾದರೂ ದೊಡ್ಡ ಸರೋವರವಿದ್ದರೆ ಅದನ್ನು ಭೋಜಪುರದ ಸರೋವರವೆಂದು ಹೇಳುತ್ತಿದ್ದರೆಂದೂ ತಿಳಿದು ಬರುತ್ತದೆ. ಸಂಸ್ಕೃತದಲ್ಲಿ ಮಹಾ ಪಾಂಡಿತ್ಯವನ್ನು ಹೊಂದಿದ ಧಾರದ ಅರಸು ಭೋಜರಾಜನಿಗೂ ಈ ಸರೋವರಕ್ಕೂ ಸಂಬಂಧವನ್ನು ಜೋಡಿಸಲಾಗುತ್ತದೆ. ಅವನು ರೋಗಪೀಡಿತನಾದ ಒಂದು ಗಳಿಗೆಯಲ್ಲಿ ಅದರಿಂದ ಗುಣ ಹೊಂದಲು ಭಾರತದಲ್ಲಿಯೇ ವಿಶಾಲವಾದ ಸರೋವರವನ್ನು ರಚಿಸಿ ಅದರಲ್ಲಿ ಸ್ನಾನಮಾಡಬೇಕೆಂದು ಬೌದ್ಧ ಭಿಕ್ಷುವೊಬ್ಬನು ಹೇಳಿದನೆಂದೂ ಅದರಂತೆ ರಾಜನು ಬಹಳ ಕಷ್ಟಪಟ್ಟು ಇದನ್ನು ಕಟ್ಟಿಸಿದನೆಂದೂ ಐತಿಹ್ಯ. ಸರೋವರದ ಸುತ್ತಲೂ ಪರ್ವತದ ಸಾಲುಗಳು ತಲೆ ಎತ್ತಿ ನಿಂತಿದ್ದು ಎರಡು ಕಡೆ ಕಣಿವೆಗಳಿರುವಲ್ಲಿ ಕಟ್ಟೆವನ್ನು ಕಟ್ಟಿ ನೀರನ್ನು ನಿಲ್ಲಿಸಿದಂತೆ ತೋರುತ್ತದೆ. ಈ ಸರೋವರವನ್ನು ಅದರ ಪಾತ್ರವನ್ನು ಕೃಷಿಗಾಗಿ ಉಪಯೋಗಿಸಬೇಕೆಂದು ಮಂಡು ಮಂಶದ ಹೋಶಾಂಗ ಶಹಾನು ಒಡೆಸಿದನು—ಇದಕ್ಕಾಗಿ ಸಾವಿರಾರು ಜನರು ಮೂರು ತಿಂಗಳು ಪ್ರಯತ್ನ ನಡೆಸಿದರೆಂದೂ ತತ್ಪರಿಣಾಮವಾಗಿ ಸರೋವರದಲ್ಲಿದ್ದ ನೀರೆಲ್ಲ ಹರಿದು ಹೋಗುವುದಕ್ಕೆ ಮೂರು ವರ್ಷ ಹಿಡಿಯಿತೆಂದೂ ಗೊಂಡರು ಹೇಳುತ್ತಾರೆ. ಮುಂದೆ ಮೂವತ್ತು ವರ್ಷಗಳ ಬಳಿಕ ಅಲ್ಲಿ ಜನವಸತಿಯೂ ಕೃಷಿಯೂ ಸಾಧ್ಯವಾಯಿತು-ಈಗ ಈ ಪ್ರದೇಶದಲ್ಲಿ ಅತ್ಯುತ್ತಮವಾದ ಗೋಧಿಯನ್ನು ಬೆಳೆಸಲಾಗುತ್ತದೆ.

ಭೋಪಾಳದಿಂದ ಸಾಂಚಿಗೆ ಹೋಗುವಾಗ ನಡುವೆ ರಾಯಸೇನ ದುರ್ಗವು ನೋಡಸಿಗುತ್ತದೆ. ಹದಿನೈದನೇ ಶತಮಾನದಲ್ಲಿ ಇದು ಮಾಳವದ ಸುಲ್ತಾನರ ಭದ್ರ ಆಸ್ತಿಯಾಗಿದ್ದಿತು. ಸಮುದ್ರ ಮಟ್ಟಕ್ಕಿಂತ ಎರಡು ಸಾವಿರ ಅಡಿ ಎತ್ತರದ ಮೇಲೆ ನಿಂತಿರುವ ಈ ಕೋಟೆಯು ದಪ್ಪನಾದ ಕಲ್ಲು ಗೋಡೆಯನ್ನೊಳಗೊಂಡಿದೆ; ಒಂಭತ್ತು ಭೀಮಕಾಯದ ಬಾಗಿಲುಗಳೇ ಹೋಗಿ ಬರುವ ಅನುಕೂಲತೆಯನ್ನು ಮಾಡಿಕೊಡುತ್ತವೆ ರಾಷ್ಟ್ರಾಧ್ಯಕ್ಷರು ಭಿಲ್ಸಾ ಎಂಬ ನಗರಕ್ಕೂ ಅಲ್ಲಿಂದ ಉದಯಗಿರಿ ಗುಹೆಗಳಿಗೂ ಸಂದರ್ಶನವಿತ್ತರು.

ಭಿಲ್ಸಾ ನಗರವು ಮಧ್ಯ ಭಾರತದಲ್ಲಿ, ಭೋಪಾಳದಿಂದ ೬೦ ಮೈಲು ಅಂತರದಲ್ಲಿ, ಇರುತ್ತದೆ. ಕಾಲಿದಾಸನ ಮೇಘದೂತ"ದಲ್ಲಿ ಈ ಪಟ್ಟಣದ ಉಲ್ಲೇಖವಿರುತ್ತದೆ. ಇದು ಹಿಂದೆ ವಿದಿಶಾ ನಗರವೆಂದು ಪ್ರಖ್ಯಾತವಾದ ಪಟ್ಟಣ. ಇದಕ್ಕೆ ಹತ್ತಿರದಲ್ಲಿಯೇ ಉದಯ ಗಿರಿಯ ಗುಹೆಗಳಿರುತ್ತವೆ ಚಿಕ್ಕ ಗುಡ್ಡದಲ್ಲಿ ಒಟ್ಟು ಇಪ್ಪತ್ತು ಗುಹೆಗಳಿರುವುದನ್ನು ಇತ್ತೀಚಿಗೆ ಗೊತ್ತು ಹಚ್ಚಲಾಯಿತು. ಇವುಗಳೆಲ್ಲವೂ ಹಿಂದುಧರ್ಮದ ದೇವತೆಗಳ ಚಿತ್ರಗಳಿಂದ ಕೂಡಿದ್ದು ವಿಷ್ಣುವಿನ ವರಾಹಾವತಾರ ಅವುಗಳಲ್ಲಿ ಉಲ್ಲೇಖನೀಯ. ಅನಂತಶಯನನ ಹಾಗು ಶಿವನ ಸುಂದರವಾದ ಚಿತ್ರಗಳನ್ನೂ ಕೆಲವು ಗುಹೆಗಳಲ್ಲಿ ಕಾಣಬಹುದು. ವಿದಿಶಾ ನಗರದ ರಾಜನಾಗಿದ್ದ ಭಗಭದ್ರನ ಆಸ್ಥಾನಕ್ಕೆ ಒಂದು ಹಿಂದುಧರ್ಮವನ್ನು ಸ್ವೀಕರಿಸಿದ ಗ್ರೀಕರಾಯಭಾರಿ ಹೆಲಿಯೋರಸನು ನೆಡಿಸಿದ ಗರುಡಸ್ತಂಭವೂ ಇಲ್ಲಿಗೆ ಸಮೀಪದಲ್ಲಿರುವುದು. ಇವೆಲ್ಲವೂ ಮಧ್ಯ ಭಾರತದ ಪ್ರಾಚೀನ ಸಂಸ್ಕೃತಿಯ ವೈಭವವನ್ನು ವ್ಯಕ್ತಗೊಳಿಸುತ್ತವೆ.



ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮದ್ರಾಸು ನ್ಯಾಯಾಂಗ ಹ್ಯಾಕೋರ್ಟಿನಲ್ಲಿ

ಸಾಮಾನ್ಯ ಮೂಲ ಸಿವಿಲ್ ದಾವಾಕ್ಷೇತ್ರ

ಒ. ಪಿ. ನಂಬ್ರ 4/1955.

1913ನೆ ಇಂಡಿಯನ್ ಕಂಪೆನೀಸ್ ಆಕ್ಟು

ಮತ್ತು

ದಿ ಮಹರಾಷ್ಟ್ರ ಎಪೆಕ್ಸ್ ಬೇಂಕ್ ಲಿ., ಮತ್ತು ಇಳಿಸುವಿಕೆ ವಿಚಾರದಲ್ಲಿ,

ದಿ ಮಹರಾಷ್ಟ್ರ ಎಪೆಕ್ಸ್ ಬೇಂಕ್ ಲಿಮಿಟೆಡ್ ಮತ್ತು ಇಳಿಸುವಿಕೆ . ಅರ್ಜಿದಾರ.

ಮೇಲ್ಕಂಡ ಕಂಪೆನಿಯು ತಾ 30-11-1954ರಲ್ಲು ರೂ. 10/-ರ ಐದು ಲಕ್ಷ ಸಾಮಾನ್ಯ ಪಾಲುಗಳ ಅಧಿಕೃತ ಪಾಲು ಭಂಡವಾಳ ರೂ. 50,00,000/-ನ್ನು ರೂ. 2/-ರ ಐದು ಲಕ್ಷ ಪಾಲುಗಳ, ರೂ. 10,00,000ಕ್ಕೆ ಇಳಿಸಿ ಪಾಲು ಒಂದರ ರೂ. 10/-ರಂತೆ 2,53,518 ಪಾಲುಗಳ ತೆತ್ತ ಭಂಡವಳ ರೂ 25,35,180ನ್ನು ರೂ. 2/-ರಂತೆ 2,53,518 ಪಾಲುಗಳ ಭಂಡವಳವನ್ನು ರೂ. 5,07,036ಕ್ಕೆ ಇಳಿಸಬೇಕೆಂದು ಮಾಡಿದ ನಿರ್ಣಯವನ್ನು ಖಾಯಂ ಮಾಡಬೇಕಾಗಿ ಹ್ಯಾಕೋರ್ಟಿಗೆ ಮಾಡಿದ ಅರ್ಜಿ ಕುರಿತು ಕಂಪೆನಿಗೆ ಸಂಬಂಧಿಸಿದ ಸದ್ರಿ ನಿರ್ಣಯದ ತಾರೀಕಿನಲ್ಲಿ ಕಂಪೆನಿಯು ಕೊಡತಕ್ಕ ಮತ್ತು ಕಂಪೆನಿಗೆ ಬರತಕ್ಕ ಲೇವಾದೇವಿಯ ಕುರಿತು ತನಿಖೆ ನಡಿಸಲಾಗುವುದು.

ತಾ. 30—11—1954ರಲ್ಲು ಕಂಪೆನಿಗೆ ಸಾಲಿಗರಿಲ್ಲವೆಂದು ಕಂಪೆನಿಯ ಮೆನೇಜಿಂಗ್ ಡೈರೆಕ್ಟರರು ತಾ. 27—12—1954ರಲ್ಲು ಅಫಿಡಾವಿಟ್ ಸಮೇತ ಶೂನ್ಯ ಸ್ಟೇಟುಮೆಂಟನ್ನು ಹಾಜರುಪಡಿಸಿರುವರು. ದ. ಕ. ಜಿಲ್ಲಾ ಉಡುಪಿಯ ಶ್ರೀ ರಾಮಾಂಜನೇಯ ಬಿಲ್ಡಿಂಗ್ಸಿನಲ್ಲಿರುವ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಾಗಲೀ ಯಾ ಕಂಪೆನಿಯ ವಕೀಲ್ ಶ್ರೀ ಎ ನಾರಾಯಣ ಪೈ, ನಂಬ್ರ 1-ಎ, ಹೋಮ್ಸ್ ರೋಡ್, ಟಿ. ನಗರ್, ಮದ್ರಾಸು 17, ಅವರ ಆಫೀಸಿನಲ್ಲಾಗಲೀ ಆಫೀಸು ಸಮಯದಲ್ಲಿ ಒಂದು ರೂಪಾಯಿ ಫೀಸು ತೆತ್ತಲ್ಲಿ ಬಾಯಸ್‌ವುಳ್ಳವರು ಸದ್ರಿ ಸ್ಟೇಟ್‌ಮೆಂಟ್ ಮತ್ತು ಅಫಿಡಾವಿತನ್ನು ಪರೀಕ್ಷಿಸಬಹುದು.

ತಾ. 30—11—1954ರಲ್ಲಿ ಕಂಪೆನಿಯಿಂದ ಬರತಕ್ಕದ್ದಿದೆ ಎಂದಾಗಲೀ ಇನ್ನು ಬರತಕ್ಕದಿರುವುದೆಂದಾಗಲೀ ಹೇಳತಕ್ಕ ಸಾಲಿಗರು ತಮ್ಮ ಪೂರ್ಣ ಹೆಸರು, ವಿಳಾಸ ಮತ್ತು ತಮ್ಮ ಹಕ್ಕುಗಳ ವಿವರಣೆ ಹಾಗೂ ತಮ್ಮ ಹಕ್ಕುಗಳ ವಿತರಣೆ ಹಾಗೂ ತಮ್ಮ ವಕೀಲರ ವಿಳಾಸ (ಇದ್ದ ಸಂದರ್ಭದಲ್ಲಿ ಮಾತ್ರ) ವನ್ನು ತಾ 31—1—1955ರೊಳಗಾಗಿ ಈ ಕೆಳಗೆ ಸಹಿ ಮಾಡಿದವರಿಗೆ ಕೈಸೇರುವಂತೆ ಕಳುಹಿಸಿ ಸದ್ರಿ ಪಟ್ಟಿಗೆ ಸೇರಿಸಬೇಕೆಂದು ಕೇಳಿಕೊಳ್ಳಬಹುದು. ಇದಕ್ಕೆ ತಪ್ಪಿದ್ದಲ್ಲಿ ಕಂಪೆನಿ ಪಾಲು ಭಂಡವಳ ಇಳಿಸುವಿಕೆಯ ಕುರಿತು ಯಾವ ಆಕ್ಷೇಪಗಳೂ ಸಿಂಧುವಾಗಲಾರವು

(ಸಹಿ) ಎ. ನಾರಾಯಣ ಪೈ,

ತಾ 10-1-1955. ಕಂಪೆನಿಪರ ವಕೀಲ್.

ದಕ್ಷಿಣ ಭಾರತದ ಮಣ್ಣಿನ ಅಣೆಕಟ್ಟು

ಕೆಳ ಭವಾನಿ ನದಿ ಯೋಜನೆ

ದಕ್ಷಿಣ ಭಾರತದ ನಾಗರಿಕತೆಯು ಕಾಲದಷ್ಟೇ ಪುರಾತನವಾಗಿದೆಯಲ್ಲದೆ ಕಾವೇರಿನದಿಯ ಸುತ್ತಲೂ ಕೇಂದ್ರೀಕೃತವಾಗಿದ್ದು ಆರ್ಯರ ಕಾಲಕ್ಕೂ ಹಿಂದಿನದೆನಿಸಿ ಬೆಳವಣಿಗೆಯನ್ನು ಹೊಂದಿರುತ್ತದೆ. ಆರ್ಯರಿಗೂ ಪೂರ್ವದ ದ್ರಾವಿಡ ಸಂಸ್ಕೃತಿಯು, ಸ್ವತಂತ್ರವಾಗಿ ಜೀವಂತವಾಗಿದ್ದು, ಸಂಸ್ಕರಣೆಯನ್ನು ಹೊಂದಿ, ಜ್ಞಾನಿಗಳ ಪ್ರಭಾವದೊಂದಿಗೆ ಸಹಸ್ರಾರು ವರ್ಷಗಳ ಸಹಜೀವನವನ್ನು ಇಲ್ಲಿ ನಡೆಸಿದೆ. ಉತ್ತರ ಭಾರತದಿಂದ ನೂತನ ನಾಗರಿಕತೆಗಳು ಕಾವೇರಿ ಕಣಿವೆಯಲ್ಲಿ ಅಲೆಗಳ ಮೇಲೆ ಅಲೆಗಳಂತೆ ನುಗ್ಗಿ, ಶೋಧಿಸಲ್ಪಟ್ಟು ಪರಿಶುದ್ಧವಾದವು; ಮತ್ತು ಶಾಂತಿಯುತ ಸಾಮರಸ್ಯದಿಂದ ಪೋಷಿತವಾದವು ಆರ್ಯಾವರ್ತದಲ್ಲಿ ನ ಗಂಗಾನದಿಯಂತೆ, ಈಜಿಪ್ಟಿನ ನೈಲ್ ನದಿಯಂತೆ, ದಕ್ಷಿಣದಲ್ಲಿನ ಎಲ್ಲ ವಿಕಸನ ಮತ್ತು ಸಾಂಸ್ಕೃತಿಕ ಸಂಶ್ಲೇಷಣದ ಮೂಲವೂ ಸ್ಫೂರ್ತಿಯೂ ಆಗಿ ಈ ಸರ್ವಕಾಲಿಕ ಜೀವದಾನನೀಡುವ ನದಿ ಪರಿಣಮಿಸಿತು. ಹೀಗಾಗಿ ಕಾವೇರಿ ನದಿಯ ನೀರಿನ ಉಪಯೋಗದ ಚರಿತ್ರೆಯು ಮಾನವ ಜನಾಂಗದ ಒಂದು ವಿಭಾಗದ ಜನತೆಯ ಭೌತಿಕ ಬೆಳವಣಿಗೆ ಮತ್ತು ಪ್ರಾಪಂಚಿಕ ಅಭ್ಯುದಯವನ್ನು ಸೂಚಿಸುತ್ತದೆ.

ಕಾವೇರಿ ಕಣಿವೆಯು ರಾಷ್ಟ್ರದ ಅತ್ಯಂತ ಜನಭರಿತ ಪ್ರದೇಶಗಳಲ್ಲಿ ಒಂದಾಗಿದೆ. ನೀರಿನ ಉಪಯೋಗದ ವಿಧಾನವೂ ನೀರಿನ ಸಂಗ್ರಹಣ, ನೀರನ್ನು ಹಾಯಿಸುವುದು, ಮಳೆಬಿದ್ದ ನೀರನ್ನು ಕೆರೆಗಳಲ್ಲಿ ಶೇಖರಿಸುವುದು ಇವುಗಳ ತಂತ್ರಕೌಶಲವೂ ಜನಸಂಖ್ಯೆಯ ಒತ್ತಡವನ್ನೂ ನೀರಿನ ಬೇಡಿಕೆಯನ್ನೂ ತೋರಿಸಿಕೊಡುತ್ತವೆ. ನೂರಕ್ಕೆ ೬೦ರಷ್ಟು ಕಾವೇರಿ ನದಿಯ ನೀರನ್ನು ಉಪಯೋಗಿಸುತ್ತಿದ್ದರೂ ಕಣಿವೆಯ ಬಾಯಾರಿಕೆಯನ್ನು ಇದು ತಣಿಸಿಲ್ಲ

ಸ್ವಾಭಾವಿಕವಾಗಿ ಬೆಳವಣಿಗೆಯ ಕ್ರಮವು ಮೊದಲು ಮುಖ್ಯ ನದಿಯಿಂದ ಪ್ರಾರಂಭವಾಯಿತು. ಮೊದಲು, ಖರ್ಚಿಲ್ಲದ ಮತ್ತು ಸುಲಭವಿಧಾನಗಳಾದ ಅಣೆಕಟ್ಟುಗಳನ್ನು ಕಟ್ಟುವುದರಿಂದಲೂ ಕಾಲುವೆಗಳನ್ನು ತೋಡುವುದರಿಂದಲೂ ಕೆಲಸ ತೊಡಗಿತು. ಅನಂತರ ಸವಿಸ್ತಾರವಾದ ಮತ್ತು ಆಶಾದಾಯಕವಾದ ಅಧಿಕ ವೆಚ್ಚದ ಯೋಜನೆಗಳನ್ನು ಕೈಗೊಳ್ಳಲಾಯಿತು. ಅವುಗಳಲ್ಲಿ ಕೃಷ್ಣರಾಜ ಸಾಗರ ಮತ್ತು ಮೆಟ್ಟೂರು ಅಣೆಕಟ್ಟುಗಳು ಉಲ್ಲೇಖನೀಯ. ಇವುಗಳಿಂದ ಲಕ್ಷಾಂತರ ಎಕರೆಗಳ ಭೂಮಿಯು ಸಾಗುವಳಿಗೆ ತರಲಾಯಿತಲ್ಲದೆ ವಿದ್ಯುದಾಗರಗಳನ್ನೂ ಸ್ಥಾಪಿಸಲಾಯಿತು.

ಕೆಳ ಭವಾನಿಯೋಜನೆಯೂ ಕಾವೇರಿ ನದಿಯ ಉಪನದಿಗಳಿಗೆ ಕಟ್ಟುವ ಅಣೆಕಟ್ಟುಗಳಲ್ಲಿ ಒಂದಾಗಿರುವುದು.

ನೂರುವರ್ಷಗಳಿಗೂ ಹಿಂದೆ ೧೮೩೪ರಲ್ಲಿ ಮಾನ್ಸೂನಿನ ಪ್ರವಾಹದ ನೀರನ್ನು ಸಂಗ್ರಹಿಸಿ ಭವಾನಿಗೆ ಅಣೆಕಟ್ಟು ಕಟ್ಟಬೇಕೆಂಬ ವಿಚಾರ ಮೂಡಿತು. ಆಗ ಅನೇಕ ಪರಿಶೀಲನೆಗಳನ್ನು ಮಾಡಿದರೂ ಹುಟ್ಟುವಳಿಯು ಕಡಿಮೆ ಎಂಬ ಅಭಿಪ್ರಾಯದಿಂದ ಈ ಯೋಜನೆಯನ್ನು ಬಿಡಲಾಯಿತು. ದ್ವಿತೀಯ ಮಹಾಯುದ್ಧದ ಬಳಿಕ ಆಹಾರ ಮತ್ತು ವಸ್ತ್ರದ ಕೊರತೆಯ ಸಮಸ್ಯೆ ಉಲ್ಬಣಗೊಂಡುದರಿಂದ ನೀರಾವರಿ ಸೌಲಭ್ಯವನ್ನು ವಿಸ್ತರಿಸುವ ಮತ್ತು ಹೆಚ್ಚಿನ ಭೂಮಿಯನ್ನು ಸಾಗುವಳಿಗೆ ತರುವ ಈ ಯೋಜನೆಯನ್ನು ಕಾರ್ಯರೂಪಕ್ಕೆ ಇಳಿಸಲು ನಿರ್ಧರಿಸಲಾಯಿತು.

ಕಾವೇರಿ ನದಿಗೆ ಭವಾನಿಯು ಉಪನದಿಯಾಗಿದೆ. ಪಶ್ಚಿಮ ಘಟ್ಟಗಳ ಪೂರ್ವದ ಇಳಿಜಾರಿನಲ್ಲಿ ಮಲಬಾರ್ ಜಿಲ್ಲೆಯ ಪ್ರಶಾಂತ ಕಣಿವೆಯ ಅರಣ್ಯದಲ್ಲಿ ಭವಾನಿನದಿಯು ಜನ್ಮತಾಳಿ ಆಗ್ನೇಯ ದಿಕ್ಕಿನಲ್ಲಿ ೨೦ಮೈಲುಗಳವರೆಗೂ ಹರಿದು ಅನಂತರ ಈಶಾನ್ಯದಿಕ್ಕಿನಲ್ಲಿ ಹರಿದು ನೀಲಗಿರಿ ಶ್ರೇಣಿಯ ದಕ್ಷಿಣದ ಇಳಿಜಾರಿನ ಸುತ್ತಲೂ ಹೋಗುವುದು ಹೀಗಾಗಿ ನೀಲಗಿರಿಯಿಂದ ಹರಿದುಬರುವ ನೀರನ್ನು ಶೇಖರಿಸುವುದು. ಕೆಳಭವಾನಿ ಅಣೆಕಟ್ಟಿಗೆ ನೀಲಗಿರಿಯಲ್ಲಿ ಹುಟ್ಟುವ ಮೋಯಾರ್ ನದಿಯೂ ಸೇರುವುದು.

ನೈಋತ್ಯ ಮತ್ತು ಈಶಾನ್ಯ ಮುಂಗಾರು ಮಳೆಯ ಶ್ರೇಣಿಯಲ್ಲಿರುವ ಈ ನದಿಯು ಒಟ್ಟು ೨೩೭೭ಚದರ ಮೈಲು ವಿಸ್ತೀರ್ಣದಲ್ಲಿನ ನೀರನ್ನು ಬರಿದು ಮಾಡುವುದು.

ಕೆಳಭವಾನಿ ಯೋಜನೆಯಿಂದ ಭವಾನಿ ನದಿಗೆ 'ಮೇಲಿನ ಭವಾನಿ ಯೋಜನೆ' ಇದೆ ಎಂಬ ಅರ್ಥವು ಉಂಟಾಗುತ್ತದೆ. ಅಣೆಕಟ್ಟುಗೋಸ್ಕರ ಪರಿಶೀಲನೆಗಳನ್ನು ನಡೆಸಿದಾಗ ಎರಡು ಯೋಜನೆಗಳು ಸಾಧುವಾಗಿ ಕಂಡು ಬಂದವು. ಮೇಲಿನ ಯೋಜನೆಯ ನಿವೇಶನವು ಕೆಳ ಯೋಜನೆ ನಿವೇಶನಕ್ಕಿಂತ ೩೦ ಮೈಲಿಗಳ ಅಂತರದಲ್ಲಿತ್ತು. ಮೇಲಿನ ನಿವೇಶನವನ್ನು ಕೆಲವು ಕಾರಣಗಳ ಮೇಲೆ ತಿರಸ್ಕರಿಸಿದರೂ ೧೯೪೭ರ ಸಪ್ಟೆಂಬರ್‌ನಲ್ಲಿ ಕೆಳಭವಾನಿ ಯೋಜನೆಯನ್ನು ಸರಕಾರ ಮಂಜೂರು ಮಾಡಿತು. ಇದರ ಪ್ರಾರಂಭಿಕ ಕಾರ್ಯವು ಮರು ವರ್ಷ ಕೈಗೊಳ್ಳಲ್ಪಟ್ಟಿತು.

ಯೋಜನೆಯಲ್ಲಿ ಮೋಯಾರ್ ನದಿ ಸಂಗಮ ಸ್ಥಳದ ಕೆಳಗೆ ಮೆಟ್ಟುಪಾಳ್ಯ ರೈಲ್ವೆ ನಿಲ್ದಾಣಕ್ಕೆ ೨೨ ಮೈಲುಗಳ ದೂರದಲ್ಲಿರುವ ಭವಾನಿ ನದಿಗೆ ಅಣೆಕಟ್ಟನ್ನು ಕಟ್ಟುವುದು ಮತ್ತು ಅಣೆಕಟ್ಟಿನ ಬಲ ಭಾಗದಲ್ಲಿ ಕಾಲುವೆಯನ್ನು ತೋಡುವುದು ಅಡಕವಾಗಿದೆ. ಜಲಾಶಯದ ಸಾಮರ್ಥ್ಯವು ೨೮೦೦೦ ಲಕ್ಷ ಘನ ಅಡಿಗಳಷ್ಟಿದೆ. ಕಾಲುವೆಯು ೧೨೪ ಮೈಲುಗಳಷ್ಟಿದೆ. ಈ ಯೋಜನೆಯಿಂದ ಎರಡು ಲಕ್ಷ ಎಕರೆಗಳಷ್ಟು ಭೂಮಿಯನ್ನು ಸಾಗುವಳಿಗೆ ತರಬಹುದು ಈ ಪ್ರದೇಶವು ಕೊಯಮುತ್ತೂರು ಜಿಲ್ಲೆಯಲ್ಲಿ ನಾಲ್ಕು ತಾಲೂಕುಗಳನ್ನೂ ಮತ್ತು ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ಒಂದು ತಾಲೂಕನ್ನೂ ಆವರಿಸುವುದು.

ಅಣೆಕಟ್ಟಿನ ಕೇಂದ್ರ ಕಲ್ಲುಕಟ್ಟಡದ ಭಾಗವು ೧೫೨೪೬ ಅಡಿಗಳಷ್ಟಿದ್ದು ಅದರ ಎರಡು ಭಾಗಗಳಲ್ಲಿಯೂ, ಎಡ ಭಾಗದಲ್ಲಿ ಮೂರು ಮೈಲುಗಳಷ್ಟು ಬಲಭಾಗದಲ್ಲಿ ಎರಡೂ ಕಾಲು ಮೈಗಳಷ್ಟು ಮಣ್ಣಿನ ಅಣೆಕಟ್ಟಿದೆ. ಈ ಅಣೆಕಟ್ಟಿಗೆ ಒಂಭತ್ತು ನದಿ ತೂಬುಗಳಿವೆ. ಇಲ್ಲಿ ೧೦,೦೦೦ ಕಿಲೋ ವಾಟುಗಳಷ್ಟು ವಿದ್ಯುತ್ತನ್ನು ಉತ್ಪತ್ತಿ ಮಾಡಬಹುದಾದರೂ ಸದ್ಯಕ್ಕೆ ವಿದ್ಯುದಾಗರದ ನಿರ್ಮಾಣವನ್ನು ಮುಂದಕ್ಕೆ ಹಾಕಲಾಗಿದೆ. ಅಣೆಕಟ್ಟಿನ ರಚನೆಯಲ್ಲಿ ಎಲ್ಲಾ ಆಧುನಿಕ ವಿಧಾನಗಳನ್ನೂ ಈ ಕಲ್ಲು ಕಟ್ಟಡದ ಅಣೆಕಟ್ಟು ಒಳಗೊಂಡಿದೆ.

ಕಲ್ಲುಕಟ್ಟಡದ ವಿಭಾಗದ ಉಭಯ ಪಕ್ಕದಲ್ಲಿನ ಮಣ್ಣಿನ ಅಣೆಕಟ್ಟು ೧೧೦ ಅಡಿಗಳ ವರೆಗೂ ಏರಿದೆ. ದಕ್ಷಿಣ ಭಾರತದಲ್ಲಿ ಇಲ್ಲಿಯವರೆಗೂ ಯಾವ ಮಣ್ಣಿನ ಅಣೆಕಟ್ಟುಗಳನ್ನೂ ಇಷ್ಟು ಎತ್ತರ ಕಟ್ಟಿದ್ದಿಲ್ಲ. ಮಣ್ಣಿನ ಅಣೆಕಟ್ಟಿನ ನಿರ್ಮಾಣಕ್ಕೆ ೧೬೩೦ ಲಕ್ಷ ಘನ ಅಡಿಗಳಷ್ಟು ಮಣ್ಣು ಬೇಕಾಯಿತು. ಈ ಮಣ್ಣನ್ನು ಸರಾಸರಿ ಒಂದೂಮುಕ್ಕಾಲು ಮೈಲುಗಳ ದೂರದಲ್ಲಿರುವ ಜಲಾಶಯದ ಸರೋವರ ಪ್ರದೇಶದಿಂದ ತರಲಾಯಿತು. ಹೊಸಕಾಲುವೆಯ ಉದ್ದವು ೧೨೪ಮೈಲುಗಳಷ್ಟಿದ್ದು ತಳದ ಅಗಲವು ೧೧೧ ಅಡಿಗಳೂ ಆಳವು ಎಂಟೂವರೆ ಅಡಿಗಳೂ ಇರುವುದು. ಕಾಲುವೆಯನ್ನು ಹಾದು ಹೋಗಲು ೧೦೬ ಸೇತುವೆಗಳೂ ಇವೆ.

೧೯೫೩ರ ಸೆಪ್ಟೆಂಬರ್‌ನಿಂದಲೇ ಯೋಜನೆಯು ಫಲಕೊಟ್ಟಿದೆ. ೧೯೫೩-೫೪ರಲ್ಲಿ ೫೦೦೦ ಎಕರೆಗಳನ್ನು ಸಾಗುವಳಿಗೆ ತರಲಾಯಿತು. ೧೯೫೪—೫೫ರಲ್ಲಿ ೪೫೦೦೦ ಎಕರೆಗಳು ಸಾಗುವಳಿಗೆ ಬಂದವು. ೧೯೫೫-೫೬ರಲ್ಲಿ ೧೧೫೦೦೦ ಎಕರೆಗಳು ನೀರಾವರಿ ಸಾಗುವಳಿಗೆ ಬರಲಿವೆ. ಯೋಜನೆಯು ಅಂತ್ಯವಾದಾಗ ೩೫೦೦೦ ಟನ್‌ಗಳಷ್ಟು ಹತ್ತಿಯನ್ನೂ ಬೆಳೆಯಬಹುದು.

(೧ನೇ ಪುಟದಿಂದ)

ಮರ್ಯಾದೆಯಿಂದ ಕಂಡು ಅವರೂ ಸಮಾಧಾನಕರವಾಗಿ ತಮ್ಮ ಕೆಲಸ ನಡೆಸುವಂತೆ ಒತ್ತಾಸೆ ಕೊಡಬೇಕೆಂದೂ ನಿರ್ದೇಶಿಸುತ್ತದೆ.

ಪಂಚವಾರ್ಷಿಕ ಯೋಜನೆ, ಜನಪದ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ವಿಸ್ತರಣಾ ಯೋಜನೆ—ಇವೇ ಮುಂತಾದ ಕ್ಷೇತ್ರಗಳಲ್ಲಿ ಜನರ ಸಹಕಾರ ಹೆಚ್ಚು ಹೆಚ್ಚಾಗಿದೊರೆಯುವಂತೆ ಮಾಡುವುದಕ್ಕೂ ಜನರು ಕಾಂಗ್ರೆಸ್ಸಿನಲ್ಲಿ ವಿಶ್ವಾಸವನ್ನು ಇರಿಸುವಂತೆ ನೋಡಿಕೊಳ್ಳುವುದಕ್ಕೂ ವಿಧಾಯಕ ಕಾರ್ಯಕರ್ತರಿಲ್ಲದೆ ಆಗದೆಂದು ವರದಿ ತನ್ನ ಉಳಿದ ಸೂಚನೆಗಳಿಂದ ಧ್ವನಿಸುತ್ತದೆ. ಹತ್ತಾರು ಕೆಲಸಗಳನ್ನು ಒಮ್ಮೆಲೆ ಕೈಗೊಂಡು ಯಾವುದನ್ನೂ ಕೊನೆಗಾಣಿಸದಂಥ ವಿಚಿತ್ರ ಅಭ್ಯಾಸವನ್ನು ಬಿಟ್ಟು ಗೊಟ್ಟು ಒಂದೆರಡು ವಿಶಿಷ್ಟ ಕೆಲಸಗಳನ್ನೆ ಒತ್ತರದಿಂದ ನೆರವೇರಿಸುವ ಹೊಸ ಸಂಪ್ರದಾಯವನ್ನು ಪ್ರಾರಂಭಿಸಬೇಕೆಂದೂ ಆಗ ಪ್ರಗತಿಯ ಚಿತ್ರ ಬಹಳ ಸ್ಪಷ್ಟವಾಗಿ ಗೋಚರಿಸುವುದೆಂದೂ ವರದಿಯು ಹೇಳುತ್ತದೆ. ಕಾಂಗ್ರೆಸು ಸಂಸ್ಥೆಯು ಕೇವಲ ರಾಜಕೀಯ ಕ್ಷೇತ್ರದಲ್ಲಿ ಮಾತ್ರ ಕೆಲಸ ಮಾಡಿದರೆ ಸಾಲದು; ಜನರ ನಡುವೆ ಬೆರೆಯುವ ಹೊಣೆಗಾರಿಕೆಯನ್ನೂ ಚೆನ್ನಾಗಿ ನಿರ್ವಹಿಸಬೇಕು ಎಂದು ವರದಿಯ ಮಥಿತಾರ್ಥ. ಇದಕ್ಕೆ ಅಧಿಕಾರದ ಮೋಹವು ಕಡಿಮೆಯಾಗಿ ಜನ ಹಿತದ ದೃಷ್ಟಿಯು ತೀಕ್ಷ್ಣವಾಗಬೇಕು. ಒಳಜಗಳಗಳನ್ನು ಬಿಟ್ಟುಗೊಟ್ಟು ರಾಷ್ಟ್ರ ಹಿತಕ್ಕಾಗಿ ಒಗ್ಗಟ್ಟಿನಿಂದ ಕೆಲಸ ಮಾಡುವ ಪ್ರವೃತ್ತಿ ಉಂಟಾಗಬೇಕು. ಈ ವಿಷಯದಲ್ಲಿ ಸ್ವಾತಂತ್ರ್ಯೋತ್ತರದ ಏಳೆಂಟು ವರ್ಷಗಳಲ್ಲಿ ತನ್ನಿಂದ ಘಟಿಸಿದ ತಪ್ಪಿಗೆ ಕಾಂಗ್ರೆಸು ಬೇಗನೇ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದೆಂದು ಆಶಿಸುತ್ತೇವೆ.

— ಕಾರ್ತಿಕೇಯ.

ಸಾಲಿ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.
P. o. Box No. 3219, BOMBAY 3-

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ.
ದಿ| ಕೊರಡ್ಕಲ್ ಶ್ರೀನಿವಾಸ ರಾಯರಿಂದ ರಚಿತವಾದ

ಎಂಬ ಆಂಗ್ಲ ಸ್ವಯಂಬೋಧಿನಿಯಿಂದ ಸ್ವತಃ ಇಂಗ್ಲಿಷ್ ಕಲಿಯಿರಿ.

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ
ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ. ತ್ವರೆಯಾಗಿ ತರಿಸಿಕೊಳ್ಳಿರಿ.
ದೊರೆಯುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ. ಅಥವಾ ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ ಉಡುಪಿ, 17—2—1955 ಸಂಚಿಕೆ ೨೪

VOL. 34 NO. 24

ತಮ್ಮ ಸ್ವಂತ ದೇಶದ ಕುರಿತು ಸಾಕಷ್ಟು ತಿಳಿವಳಿಕೆ ಮಾಡಿಕೊಳ್ಳದೆ ಪರದೇಶಗಳ ಆಗುಹೋಗುಗಳ ವಿಷಯ ಹರಟೆ ಹೊಡೆಯುತ್ತಿರುವುದು ಭಾರತೀಯ ಯುವಕರ ಪಾಲಿಗೆ ಅತ್ಯಂತ ನಾಚಿಕೆಯ ವಿಷಯ. ನಮ್ಮ ಲೋಪದೋಷಗಳ ಕಡೆಗೆ ಬೊಟ್ಟು ಮಾಡಿ ತೋರಿಸುವ ಅವರು ಸತ್ಸಾಧನೆಗಳನ್ನು ಅವಲೋಕಿಸುತ್ತಿಲ್ಲವೆಂಬುದೇ ದುರ್ದೈವದ ಮಾತು. ಪ್ರಪಂಚದ ನೈತಿಕ ಮತ್ತು ಆಧ್ಯಾತ್ಮಿಕ ನಾಯಕತ್ವವನ್ನು ಭಾರತವು ಪುನಃ ಸಂಪಾದಿಸಿಕೊಳ್ಳಬೇಕಿದ್ದರೆ, ನಮ್ಮ ದೇಶದ ಕುರಿತು ವಿಶೇಷ ಜ್ಞಾನಪಡೆಯದಿದ್ದರೆ ನಡೆಯದು.

—ಕನ್ಹಯ್ಯಾಲಾಲ ಮುನ್ಶಿ

ಪ್ರೇಮ ವಿವಾಹದಲ್ಲಿ ಕಿಶ್ವಾಸವಿಟ್ಟ ಆ ತರುಣ—ತರುಣಿಯರು ತಾವು ಮದುವೆಯಾಗುವ ವಿಚಾರದಲ್ಲಿ ಮಾತ ಕತೆಗೆ ತೊಡಗಿದರು.

"ಈಗ ಒಂದೇ ಒಂದೇ ಸಂಗತಿಯ ವಿಚಾರವನ್ನು ಪ್ರಾರಂಭಿಸೋಣ" ಎನ್ನುತ್ತಾ ತರುಣನು "ನಿನಗೆ ಅಡಿಗೆ ಮಾಡಲು ಬರುತ್ತದೆಯೇ ಎಂಬುದು ಮೊದಲನೆಯ ವಿಷಯ" ಎಂದು ಹೇಳಿದ.

ಅದಕ್ಕೆ ತರುಣಿ "ಮೊದಲನೆಯ ವಿಷಯ ಅದಲ್ಲ—ನಿನಗೆ ಬೇಕಾಗುವ ಸಾಮಾನನ್ನು ಸಂಪಾದಿಸ ತರಲು ಸಾಧ್ಯವೇ ಎಂಬ ಬಗ್ಗೆ ನನಗೆ ಭರವಸೆ ಬೇಕು. ಇದೇ ಪ್ರಥಮ ಮಹತ್ವದ ವಿಷಯ" ಎಂದಳು.

ಮೊದಲನೆಯ ಭರವಸೆ

ನಮ್ಮ ಜನರ ನಿತ್ಯ ವ್ಯವಹಾರಗಳಲ್ಲಿ ತಮ್ಮ ಮುಂದೆ ಬಿದ್ದಿರುವ ಕುಂಬಳಕಾಯಿಯನ್ನು ಅತ್ತ ಸರಿಸದೆ ಇನ್ನೊಬ್ಬರ ಕಾಲಬಳಿಯ ಸಾಸಿವೆಯ ಕಡೆಗೆ ಬೊಟ್ಟು ಮಾಡುವ ಪ್ರವೃತ್ತಿ ಒಂದೆನಿಸುತ್ತದೆ. ಇದು ಅಷ್ಟು ಒಳ್ಳೆಯದಲ್ಲ ಎಂಬುದೇನೊ ನಿಜ—ಆದರೆ ಹೊಣೆಗಾರಿಕೆಯನ್ನು ಹಾರಿಸಿಕೊಳ್ಳಲು ಇದರಲ್ಲಿರುವಷ್ಟು ಅವಕಾಶ ಬೇರೆಲ್ಲೂ ಸಿಗುವುದಿಲ್ಲ. ಆದುದರಿಂದ ಎಲ್ಲರೂ ತಮ್ಮ ತಪ್ಪನ್ನು ಮರೆತು ಇತರರ ಲೋಪದೋಷಗಳ ಕಡೆಗೆ ಬೊಟ್ಟು ಮಾಡುತ್ತಾರೆ. ಅದರಂತೆ ಬೇರೆಡೆಯ ಚಿತ್ರಗಳನ್ನು ಹೊಗಳುವುದೂ ಸಹ ನಮಗಂಟಿಕೊಂಡಿರುವ ಜಾಡ್ಯಗಳಲ್ಲಿ ಒಂದು— ದೂರದ ಬೆಟ್ಟ ನುಣ್ಣಗೆ ಎಂಬಂತೆ, ಅಮೇರಿಕವೇ ಮುಂತಾದ ದೇಶಗಳ ಪ್ರಗತಿಯ ಚಿತ್ರ ನಮಗೆ ಅತಿ ಸುಂದರವಾಗಿ ಕಣ್ಣಿಗೆ ತೋರುತ್ತದೆ, ಆದರೆ ನಮ್ಮ ಸಾಧನೆಯ ವಿಷಯದಲ್ಲಿ ಯಾವ ಸ್ಪಷ್ಟ ಕಲ್ಪನೆಯೂ ಇರುವುದಿಲ್ಲ—ಇದ್ದರೂ ಅದು ಆ ಇನ್ನೊಂದು ದೇಶದಷ್ಟು ಉತ್ಸಾಹಜನಕವಾಗಿರುವುದಿಲ್ಲ.

ಸುಶಿಕ್ಷಿತರೆಂದು ಹೇಳಿಕೊಳ್ಳುವ ಜನರೇ ಹೀಗೆ ತಪ್ಪು ರೀತಿಯ ವಿಮರ್ಶಾತ್ಮಕ ದೃಷ್ಟಿಯನ್ನಿಟ್ಟುಕೊಂಡವರಲ್ಲಿ ಅಧಿಕರೆಂದು ಹೇಳಬಹುದು. ನಾಳೆಯ ಪದವೀಧರರಾದ ಇಂದಿನ ವಿದ್ಯಾರ್ಥಿಗಳಲ್ಲಿ ಸಹ ಇದೇ ಬುದ್ಧಿ ಮನೆಮಾಡಿಕೊಂಡಿರುವಂತೆ ಭಾಸವಾಗುತ್ತದೆ. ಸೃಷ್ಟಿಯನ್ನು ವಿಶುದ್ಧವಾಗಿಯೂ ಸಮತೋಲದಲ್ಲಿಯೂ ಇಡುವುದು ಪ್ರಯಾಸದ ಕೆಲಸ—ಆದರೆ, ಆ ಪ್ರಯಾಸಕ್ಕೆ ಸಿದ್ಧರಾಗದೆ ಸುಲಭ ತೀರ್ಮಾನಕ್ಕೆ ಬರುವುದು ಎಷ್ಟಕ್ಕೂ ಇಷ್ಟವಾದುದಲ್ಲ. ಸಮಗ್ರ ಹಾಗು ಸ್ಪಷ್ಟವಾಗಿ ಹಿನ್ನೆಲೆಯ ವಿಷಯಗಳನ್ನು ಗಣನೆಗೆ ತಂದುಕೊಳ್ಳದೆ ಏನಾದರೊಂದು ತೀರ್ಮಾನವನ್ನು ಮಾಡಿಕೊಳ್ಳುವವರೂ ಅವನ್ನು ಸಾರುವವರೂ ತಪ್ಪುಗಾರರಾಗುತ್ತಾರೆ.

ಅವರು ಅವಸರದಿಂದ ಅಥವಾ ಹೊಣೆಗಾರಿಕೆಗೆ ಹೆಗಲು ಕೊಡದೆ, ತಮ್ಮ ಮಾತಿನ ವಿಷಯದಲ್ಲಿ ಹೊಣೆ ಹೊತ್ತುಕೊಳ್ಳಬೇಕೆಂಬುದರ ಅರಿವಿಲ್ಲದೆ ಏನನ್ನಾದರೂ ಹೇಳುತ್ತಿದ್ದರೆ ಅದು ಹರಟೆಯಾದೀತಲ್ಲದೆ—ಬುದ್ಧಿವಂತಿಕೆಯ ಮಾತಾಗಲಾರದು.

ನಮ್ಮ ವಿದ್ಯಾರ್ಥಿಗಳಲ್ಲಿ ಜ್ಞಾನತೃಷೆಯನ್ನು ಹೆಚ್ಚಿಸಿದರೆ ಮಾತ್ರ ಈ ನ್ಯೂನತೆಯನ್ನು ನಿವಾರಿಸುವುದು ಸಾಧ್ಯವೆಂದು ತಜ್ಞರ ಅಭಿಪ್ರಾಯ. ಇಂದಿನ ಪದ್ಧತಿಯು ವಿದ್ಯಾರ್ಥಿಗಳ ಜ್ಞಾನತೃಷೆಯನ್ನು ಉಚಿತ ರೀತಿಯಲ್ಲಿ ಪೋಷಿಸುವುದಿಲ್ಲವೆಂಬುದು ದುಃಖದ ಮಾತು — ಈಗಿನ ಶಿಕ್ಷಣವು ಜ್ಞಾನತೃಷೆಯನ್ನು ತಣಿಸುವುದಕ್ಕೆ ತಪ್ಪಿದೆಯೆಂದಲ್ಲ, ಆದರೆ ಅದು ಬಹಳ ವಿಸ್ತಾರವಾದ ತಳಹದಿಯ ಮೇಲೆ ನಿಂತು ಕೂಲಂಕಷ ವಿವೇಚನೆಯನ್ನು ಕಡೆಗಣಿಸಿದೆಯೆಂದನಿಸುತ್ತದೆ. ಉದಾಹರಣೆಗೆ ಮೂರನೆಯ ತರಗತಿಯ ಮಕ್ಕಳಿಗೆ ನಾವು ತಂದ್ರಾ ಪ್ರದೇಶದ ಎಸ್ಕಿಮೋ ಜನರ ವಿಷಯವಾಗಿಯೂ ಆಫ್ರಿಕದ ಪಿಗ್ಮಿಗಳ ಕುರಿತಾಗಿಯೂ ಪಾಠಹೇಳುತ್ತೇವೆ. ಆದರೆ ನಮ್ಮ ಊರಿನ ಹತ್ತಿರದಲ್ಲಿ ಕುದುರೆಮುಖ ಶಿಖರ ಎಂಬುದೊಂದಿದೆಯೆಂದೂ ನಮ್ಮ ಮಲೆನಾಡುಗಳಲ್ಲಿ ಕುಡಿಯರೆಂಬ ಜಾತಿ ವಾಸಿಸುತ್ತಿದೆಯೆಂದೂ ಆ ಮಕ್ಕಳಿಗೆ ಯಾರೂ ತಿಳಿಸುವುದಿಲ್ಲ. ನಮ್ಮ ಭೂಗೋಳಪಾಠವು ಇಡೀ ಜಗತ್ತಿನ ಚಿತ್ರವನ್ನೆ ನಮ್ಮ (ಮಕ್ಕಳ) ಮುಂದೆ ಮಂಡಿಸಲು ನೋಡುತ್ತದೆ, ಆದರೆ ನಮ್ಮ ನಿಕಟ ಆವರಣದ ಯಾವ ಪರಿಚಯವನ್ನೂ ಮಾಡಿಕೊಡುವುದಿಲ್ಲ, ಅದರ ವೈಶಿಷ್ಟ್ಯದ ಕಲ್ಪನೆ ಮಾಡಿಸುವ ಗೋಜಿಗೇ ಅದು ಹೋಗುವುದಿಲ್ಲ.

ಚರಿತ್ರೆಯ ಪಾಠವನ್ನು ತೆಗೆದುಕೊಂಡರೆ ಸಹ ಇದೇ ಮಾತು ಅನುಭವಕ್ಕೆ ಬರುತ್ತದೆ—ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸವನ್ನು ಸ್ವಲ್ಪವೂ ತಿಳಿದಿರದ ಮಕ್ಕಳ ಮುಂದೆ ಜಗತ್ತಿನ ಇತಿಹಾಸ ವಿವರಿಸಲ್ಪಡುತ್ತದೆ. ನಮ್ಮ ಗ್ರಾಮ ಪಂಚಾಯತುಗಳ ಚರಿತ್ರೆಯ ಕಲ್ಪನೆಯಿಲ್ಲದ ಮಕ್ಕಳು ಸಂಯುಕ್ತ ರಾಷ್ಟ್ರಸಂಘದ ಕಾರ್ಯಕಲಾಪಗಳ ವಿಷಯದಲ್ಲಿ ಕಲಿಯುತ್ತಾರೆ! ಇದೆಲ್ಲ ಏನು? ಸಾಮಾನ್ಯ ತಿಳುವಳಿಕೆಯ ಹೆಸರಿನಲ್ಲಿ ನಮ್ಮ ಜ್ಞಾನವು ಬಹಳ ದುರ್ಬಲವಾಗುತ್ತಿರುವುದರ ನಿದರ್ಶನವೇ ಇದಲ್ಲವೆ? ಜ್ಞಾನತೃಷೆಯನ್ನು ಹಿಂಗಿಸುವ ನಮ್ಮ ಉತ್ಸಾಹದಲ್ಲಿ ನಾವು ಒಂದಿಷ್ಟು ಹಾಲಿಗೆ ಅದರ ಹತ್ತರಷ್ಟು ನೀರು ಬೆರಸಿ ಕುಡಿಯಕೊಡುತ್ತಿದ್ದೇವೆ, ಅರ್ಥಾತ್ ನಾವು ಮಕ್ಕಳಿಗೆ ಕಲಿಸುವ ನೂರು ವಿಷಯಗಳಲ್ಲಿ ನಿಜವಾದ ಜ್ಞಾನ ನೂರಕ್ಕೆ ಹತ್ತರಷ್ಟು ಇಲ್ಲ. ಮಾತ್ರವಲ್ಲ ಯಾವ ವಿಷಯದಲ್ಲೂ ಪೂರ್ಣ ಮಾಹಿತಿ ಇರುವುದಿಲ್ಲ. ಇಂಗ್ಲೀಷಿನಲ್ಲಿ ಹೇಳುವ ಹಾಗೆ ಎಲ್ಲವೂ ಗೊತ್ತಿದೆ—ಆದರೆ ಯಾವುದರಲ್ಲೂ ಪಾಂಡಿತ್ಯವಿಲ್ಲ. ನಮ್ಮ ವಿದ್ಯಾರ್ಥಿಗಳ ಇಂದಿನ ಪರಿಸ್ಥಿತಿಗೆ ಈ ಮಾತು ಬಹಳವು ಅನ್ವಯಿಸುತ್ತದೆ.

ಈಚೆಗೆ ದಕ್ಷಿಣ ಕನ್ನಡದ ಜಿಲ್ಲಾ ಬೋರ್ಡಿಗೆ ಅಧ್ಯಕ್ಷ ಚುನಾವಣೆಯೊಂದು ನಡೆಯುತ್ತಿದ್ದಾಗ ಮಂಗಳೂರಿನ ಪತ್ರಿಕೆಯೊಂದು ಅಧ್ಯಕ್ಷರು ಯಾರಾಗಬೇಕು ಎಂಬ ಬಗ್ಗೆ ಓದುಗರ ಅಭಿಪ್ರಾಯ ಸಂಗ್ರಹದ ಸ್ಪರ್ಧೆಯೊಂದನ್ನು ಏರ್ಪಡಿಸಿತು. ಇದನ್ನು ಉದ್ದೇಶಿಸಿಯೇ ಇರಬೇಕು —ಕನ್ನಡದ ಸಾಹಿತಿ ಶ್ರೀ ಕಾರಂತರು ನಮ್ಮ ಜನರು ಅಮೇರಿಕಕ್ಕೆ ಯಾರು ಅಧ್ಯಕ್ಷರಾಗಬೇಕೆಂಬುದರ ಕುರಿತಾಗಿಯೇ ಚೆನ್ನಾಗಿ ಬರೆದಾರು ಎಂದು ಹೇಳಿದರು. ಜಿಲ್ಲಾ ಬೋರ್ಡಿನ ಕೆಲಸಗಳೇನು, ಅದರ ಅಧ್ಯಕ್ಷನಾದವನು ನಿರ್ವಹಿಸಬೇಕಾದ ಹೊಣೆಗಾರಿಕೆಗಳೇನು, ಅವನ ಅಧಿಕಾರದ ವ್ಯಾಪ್ತಿ ಎಷ್ಟು, ಅವನು ಕೆಲಸಮಾಡತಕ್ಕ ಬೇಕಾದ ಪರಿಸ್ಥಿತಿ ಯಾವುದು ಎಂಬಿತ್ಯಾದಿ ಆವಶ್ಯಕ ವಿಷಯಗಳ ವಿವೇಚನೆಯನ್ನೇ ಮಾಡದೆ ಆದರ್ಶ ಪುರುಷನೊಬ್ಬನ ವರ್ಣನೆಮಾಡ ಹೊರಟವರು ನಮ್ಮ ಜನರೆಂದು ಅದರ ಅರ್ಥ. ಅದು ಏಕೆ ಹಾಗಾಯಿತು ಎಂಬುದರ ಗುಟ್ಟನ್ನು ಬೇರೆಲ್ಲೂ ಹುಡುಕಬೇಕಾಗಿಲ್ಲ— ಆ ಜಿಲ್ಲಾ ಬೋರ್ಡಿನ ಕುರಿತಾದ ಸಮಗ್ರಜ್ಞಾನ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ ಆ ನೂರಾರು ಮಂದಿಯಲ್ಲಿ ಯಾರಿಗೂ ಇರಲಿಲ್ಲವೆಂಬುದೇ ಸಮಸ್ಯೆಯ ರಹಸ್ಯ.

ಅಡಮುಟ್ಟದ ಸೋಗಯಿಲ್ಲ ಎಂಬಂತೆ ನಾವೆಲ್ಲರೂ ಎಲ್ಲ ವಿಷಯಗಳ ಮೇಲೂ ಚರ್ಚೆಮಾಡಲು ಇಚ್ಛಿಸುತ್ತೇವೆ—ನಮ್ಮ ವಿದ್ಯಾರ್ಥಿಗಳಲ್ಲಿಯಂತೂ ಈ ಚಪಲ ಬಹಳ ಹೆಚ್ಚು. ಇದರಿಂದ ನಾವು ಹೆಚ್ಚು ಬುದ್ಧಿವಂತರಾಗುತ್ತೇವೆ ಸುಸಂಸ್ಕೃತರಾಗುತ್ತೇವೆ ಎಂಬ ಭಾವನೆ ನಮ್ಮದು. ಆದರೆ ನಿಜವಾಗಿ ಹಾಗಿಲ್ಲ—ಮಂತ್ರಿಗಳಲ್ಲಿ ಕೆಲವರು ಶಾಸನ ಸಭೆಯಲ್ಲಿ ಪೂರಕ ಪ್ರಶ್ನೆಗಳು ಬಂದಾಗ ತಬ್ಬಿಬ್ಬಾಗಿ ತಡವರಿಸುವಂತೆ ವಿಷಯದ ಕುರಿತು ಏನೇ ಆದರೂ ವಿವರಗಳನ್ನು ಹೇಳತೊಡಗಿದರೆ ಯಾರಿಗೂ ಅದು ತಿಳಿದಿರುವುದಿಲ್ಲ! ಇಂಥ ಜ್ಞಾನ ಟೊಳ್ಳು—ಅಪಕ್ವ—ಎಂದರೆ ನಿಷ್ಪ್ರಯೋಜಕ.

(೧೩ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD
Estd: 1925 H O UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಿಟ್ಟು ಪಡೆಯಬಲ್ಲಿರಿ. ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ. ಹಣವನ್ನು ಕೇವಲ ನೀವು ತಿಜೋರಿಯಲ್ಲಿ ಇಡುವುದರಿಂದ ಅದಕ್ಕೆ ಬಡ್ಡಿ ಸಿಕ್ಕದವರಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿ ಇಡಬಯಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಇಂಥ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲದು. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ ೭,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ ದ ಭಾರತ

ಆಗ್ನೇಯ ಏಶಿಯದ ರಾಜಕೀಯ ಪ್ರಜ್ಞೆ

ಈಡನರ ಹೊಸದೆಹಲಿ ಸಂದರ್ಶನದ ಗೂಢ

ಇದೇ ಫೆಬ್ರವರಿ ೨೩ನೇ ತಾರೀಕಿಗೆ ಬಾಂಗ್‌ಕಾಕ್ ನಗರದಲ್ಲಿ ಸೀಟೋ (ಅಂದರೆ ಆಗ್ನೇಯ ಏಶ್ಯಾದ ಸಂರಕ್ಷಣ ಒಪ್ಪಂದಕ್ಕೆ ಸೇರಿದ) ಎಂಟು ರಾಷ್ಟ್ರಗಳ ಪ್ರತಿನಿಧಿ ಪರಿಷತ್ತೊಂದು ಸೇರುತ್ತದೆ. ಇದರಲ್ಲಿ ಸಾಮಾನ್ಯವಾಗಿ ಆಸ್ಟ್ರೇಲಿಯ, ಫ್ರಾನ್ಸ್, ನ್ಯೂಜೀಲೇಂಡ್, ಪಾಕಿಸ್ತಾನ್, ಫಿಲಿಪ್ಪೈನ್, ಥೈಲೆಂಡ್, ಬ್ರಿಟನ್ ಮತ್ತು ಅಮೇರಿಕೆಗಳ ವಿದೇಶಾಂಗ ಖಾತೆಯ ಪ್ರಭೃತಿಗಳು ಭಾಗವಹಿಸುವರು. ಈ ಸಮ್ಮೇಳನದ ಉದ್ದೇಶವು ಕಳೆದ ಶರತ್ಕಾಲದಲ್ಲಿ ಸಹಿ ಹಾಕಲಾಗಿರುವ ಮನಿಲಾ ಒಪ್ಪಂದದ ಸೂತ್ರಗಳನ್ನು ನೆರವೇರಿಸುವ ಉಪಾಯಗಳನ್ನು ಕಂಡು ಹಿಡಿಯುವುದಾಗಿದೆ. ಒಪ್ಪಂದದ ಕಕ್ಷೆಯಲ್ಲಿ ಒಳಪಟ್ಟ ಆಗ್ನೇಯ ಏಶ್ಯ ಮತ್ತು ೨೧° ೩೦' ಉತ್ತರ ಅಕ್ಷಾಂಶದ ದಕ್ಷಿಣಕ್ಕಿರುವ ಪಶ್ಚಿಮ ಶಾಂತ ಸಾಗರ ವಲಯದಲ್ಲಿ ಶಾಂತಿ ಮತ್ತು ಭದ್ರತೆಯ ಕುರಿತಾಗಿ ಪರಸ್ಪರ ವಿಚಾರ ವಿನಿಮಯವನ್ನು ನಡೆಸುವುದು ಇನ್ನೊಂದು ಉದ್ದೇಶ.

ಇದರಲ್ಲಿ ಭಾಗವಹಿಸಲೆಂದು ಹೊರಟ ಬ್ರಿಟನ್ನಿನ ವಿದೇಶಾಂಗ ಸಚಿವ ಅಂಥೋನಿ ಈಡನ್ನರು ಮಾರ್ಗ ಮಧ್ಯದಲ್ಲಿ ಕರಾಚಿ ಮತ್ತು ಹೊಸ ದೆಹಲಿಗಳಲ್ಲಿ ಸ್ವಲ್ಪ ಸಮಯವನ್ನು ಕಳೆದು ಆಯಾ ಸರಕಾರಗಳೊಡನೆ ವಾರ್ತಾಲಾಪ ನಡೆಸುವರೆಂದು ಸುದ್ದಿ ಸಂಸ್ಥೆಗಳ ವರದಿಯಿಂದ ತಿಳಿಯುತ್ತದೆ. ಈಡನ್ನರು ಬಾಂಗ್‌ಕಾಕ್‌ಗೆ ಪ್ರಯಾಣಿಸುವಾಗ ಕರಾಚಿಯಲ್ಲಿಯೂ ಅಲ್ಲಿಂದ ಸ್ವದೇಶಕ್ಕೆ ಹೋಗುವಾಗ ಹೊಸ ದೆಹಲಿಯಲ್ಲಿಯೂ ನಿಲ್ಲುವರು. ಈಜಿಪ್ಟಿನ ರಾಜಧಾನಿಯಾದ ಕೈರೋದಲ್ಲೂ ಅವರು ಉಳಿಯುವರು. ಅವರ ಮೊದಲಿನ ಕಾರ್ಯಕ್ರಮವು ಇನ್ನೂ ವ್ಯಾಪಕವಾಗಿತ್ತು—ಅದರಂತೆ ಅವರು ಬರ್ಮಾ ಮತ್ತು ಸಿಂಹಳಗಳ ರಾಜಧಾನಿಯನ್ನೂ ಸಂದರ್ಶಿಸಲು ನಿಶ್ಚಯಿಸಿದ್ದರು. ಆದರೆ ಈಚೆಗೆ ಫೊರ್ಮೋಸದ ಸ್ಫೋಟಕ ಸಮಸ್ಯೆಯ ದೆಸೆಯಿಂದ ಅಂತಾರಾಷ್ಟ್ರೀಯ ವಾತಾವರಣವು ಉದ್ವೇಗಕರವಾಗಿರುವುದರಿಂದ ಅವರು ತಮ್ಮ ಸಂಚಾರಾವಧಿಯಲ್ಲಿ ಕಡಿತ ಮಾಡಿಕೊಂಡರು.

ಆದಾಗ್ಯೂ ಈಡನ್ನರ ಈಗಿನ ಸಂದರ್ಶನದ ಮಹತ್ವವನ್ನೇನು ಕಡೆಗಣಿಸುವಂತಿಲ್ಲ. ಏಶಿಯದ ರಾಜಕಾರಣಿಗಳ ಮನದೊಲವಿನ ಸ್ವರೂಪ ದರ್ಶನವನ್ನು ಮಾಡಿಕೊಳ್ಳಬೇಕೆಂಬುದೇ ಈಡನ್ನರ ಉದ್ದೇಶವಿದೆಯೆಂಬುವದನ್ನು ಅವರ ಪ್ರಥಮ ಕಾರ್ಯಕ್ರಮವು ತೋರಿಸಿ ಕೊಡುತ್ತದೆ. ಏಶಿಯವು ಇಪ್ಪತ್ತು ವರ್ಷಗಳ ಹಿಂದಿನ ಸ್ಥಿತಿಯಲ್ಲಿ ಈಗಿರುವುದಿಲ್ಲ. ಅದೇಕೆ, ಹತ್ತು ವರ್ಷಗಳ ಪೂರ್ವದಲ್ಲಿದ್ದ ಏಶಿಯ ಈಗಿಲ್ಲ! ಹಿಂದೆಯಾದರೆ ಪರ್ಶಿಯ, ಥೈಲೇಂಡ್ ಮತ್ತು ಇರಾಕುಗಳನ್ನು ಬಿಟ್ಟರೆ ಆಗ್ನೇಯ ಏಶಿಯದ ಎಲ್ಲ ರಾಷ್ಟ್ರಗಳೂ—ಭಾರತವು ಸಹ—ವಸಾಹತು ವಾದದ ನೊಗಕ್ಕೆ ಬಿಗಿಯಲ್ಪಟ್ಟಿದ್ದವು. ಈ ರಾಷ್ಟ್ರಗಳ ಅಭಿಪ್ರಾಯವನ್ನು ಕೇಳುವ ತೊಂದರೆಯನ್ನೆ ರಾಜಕಾರಣಿಗಳು ತೆಗೆದು ಕೊಳ್ಳುತ್ತಿರಲಿಲ್ಲ. ಲಂಡನ್, ಪೇರಿಸ್, ಹೇಗ್ ಮತ್ತು ಲಿಸ್ಬನ್ ನಗರಗಳಲ್ಲಿನ ವಸಾಹತು ವಾದದ ಪ್ರಭೃತಿಗಳೇ ಏಶಿಯದ ರಾಜಕಾರಣವನ್ನು ರೂಪಿಸುತ್ತಿದ್ದರು. ಇಂದು ಮಾತ್ರ ಮಲಯ ಹಾಗು ಭಾರತದಲ್ಲಿರುವ ಪೋರ್ಚುಗೀಜರ ವಸಾಹತುಗಳನ್ನು ಬಿಟ್ಟರೆ ಆಗ್ನೇಯ ಏಶಿಯದ ರಾಷ್ಟ್ರಗಳೆಲ್ಲವೂ ಸ್ವತಂತ್ರವಾಗಿ, ತಮ್ಮ ಅಂತಾರಾಷ್ಟ್ರೀಯ ನಿಲುವೆಯನ್ನು ತಾವೇ ರೂಪಿಸಿಕೊಳ್ಳುತ್ತವೆ.

ಏಶಿಯದಲ್ಲಿ ಜಾಗೃತವಾದ ಸ್ವಾತಂತ್ರ್ಯಪ್ರಜ್ಞೆಯನ್ನು ಮೊದಲು ಮನ್ನಿಸಿ ವಸಾಹತುವಾದಕ್ಕೆ ತಿಲಾಂಜಲಿಯನ್ನು ಕೊಟ್ಟ ಸಾಮ್ರಾಜ್ಯವಾದಿ ರಾಷ್ಟ್ರವೆಂದರೆ ಬ್ರಿಟನ್—ಹಿಂದಿನಿಂದ ಡಚ್ಚರೂ ಫ್ರೆಂಚರೂ ಅದರ ಉದಾತ್ತ ಉದಾಹರಣೆಯನ್ನು ಅನುಸರಿಸಿದರು. ಆದುದರಿಂದ ಸ್ವತಂತ್ರಗೊಂಡ ಏಶಿಯದ ಮನೋಭಾವ ಏನೆಂಬುದನ್ನು ತಿಳಿದುಕೊಳ್ಳಲು ಬ್ರಿಟನಿನ ವಿದೇಶಾಂಗ ಕಚೇರಿ ಆತುರ ತೋರಿಸುವುದು ಸಹಜ. ಅತ್ಯಲ್ಪ ರಕ್ತವನ್ನು ಬಸಿದು ಇಷ್ಟು ದೊಡ್ಡ ರಾಜಕೀಯ ಕ್ರಾಂತಿಯನ್ನು ಹಿಂದೆಂದೂ ನಡೆಸಿರಲಿಲ್ಲ. ಬ್ರಿಟಿಷರ ಪ್ರಸಂಗಾವಧಾನತೆಯೂ ದೇಶೀಯರ ಚಳವಳವೂ ಒಟ್ಟಿಗೆ ಏಶಿಯದ ಮುಕ್ತಿಗೆ ನೆರವಾದವೆಂದರೆ ತಪ್ಪಲ್ಲ. ಹೀಗೆ ಸ್ವಾತಂತ್ರ್ಯದ ವಾತಾವರಣದಲ್ಲಿ ಉಸಿರಾಡತೊಡಗಿದ ಏಶಿಯದ ಜನತೆ ಏನು ಹೇಳುತ್ತದೆ ಎಂದು ಜಗತ್ತಿನ ಮಹಾರಾಷ್ಟ್ರಗಳಲ್ಲಿ ಒಂದಾದ ಬ್ರಿಟನು ಬಯಸುವುದರಲ್ಲಿ ತಪ್ಪೇನು?

ಬಾಂಗ್‌ಕಾಕ್ ಸಮ್ಮೇಳನದ ಮಟ್ಟಿಗೆ ಹೇಳುವುದಾದರೆ ಅದು ಮಹತ್ವದ ಸಂಧಿಕಾಲದಲ್ಲಿ ಸೇರುತ್ತದೆ. ಇದೇ ಎಪ್ರೀಲು ತಿಂಗಳಲ್ಲಿ ಇಂಡೋನೇಶಿಯದಲ್ಲಿ ಆಫ್ರೇಶ್ಯ ರಾಷ್ಟ್ರಗಳ ಪ್ರಧಾನಿಗಳು ಪರಿಷತ್ತಿನಲ್ಲಿ ಸೇರಲಿದ್ದಾರೆ ಇದರಲ್ಲಿ ಭಾಗವಹಿಸುವ ರಾಷ್ಟ್ರಗಳಲ್ಲಿ ಕೆಲವು ಸೀಟೋ ರಾಷ್ಟ್ರಗಳೂ ಸೇರಿವೆ. ಆದುದರಿಂದ ಸೀಟೋ ಸಮ್ಮೇಳನದಲ್ಲಿ ಈ ರಾಷ್ಟ್ರಗಳು ತಳೆಯುವ ನಿಲುವೆಯು ಆಫ್ರೇಶ್ಯ ಪರಿಷತ್ತಿನ ಮೇಲೆ ಗಾಢವಾದ ಪರಿಣಾಮವನ್ನು ಮಾಡಬಹುದು. ಬ್ರಿಟನಿನ ವಿದೇಶ ಮಂತ್ರಿಗಳು ಈ ಪರಿಣಾಮದ ಅಂದಾಜನ್ನು ಮಾಡಿಕೊಳ್ಳಲು ಉತ್ಸುಕರಾಗಿರುವರೆಂದು ನಾವು ಭಾವಿಸಿದರೆ ತಪ್ಪಾಗಲಾರದು. ಸೀಟೊ ಸಮ್ಮೇಳನ ಮತ್ತು ಆಫ್ರೇಶ್ಯ ಪರಿಷತ್ತಿನ ಉದ್ದೇಶಗಳಲ್ಲಿ ಸ್ವಲ್ಪ ಮಟ್ಟಿನ ಸಾಮ್ಯ ಕಂಡುಬರುತ್ತದೆ—ಎರಡೂ ಸಭೆಗಳು ಏಶಿಯದಲ್ಲಿ ಶಾಂತಿ ರಕ್ಷಣೆಯ ಕ್ರಮಗಳನ್ನು ಕೈಗೊಳ್ಳಬೇಕೆಂಬ ಉದ್ದೇಶದಿಂದ ಪ್ರೇರಿತವಾಗಿವೆ. ಸೀಟೊ ರಾಷ್ಟ್ರಗಳು ಆಕ್ರಮಣವನ್ನು ತಡೆಗಟ್ಟಲು ಮತ್ತು ಭದ್ರತೆಯನ್ನು ಕಾಯ್ದುಕೊಳ್ಳಲು ಸಾಮೂಹಿಕ ಕ್ರಿಯೆಗೆ ಅವಕಾಶವಿರುವ ಬಣ ಕಟ್ಟಿಕೊಳ್ಳುವುದರಲ್ಲಿ ವಿಶ್ವಾಸವಿಡುತ್ತವೆ; ಆದರೆ ಆಫ್ರೇಶ್ಯ ರಾಷ್ಟ್ರಗಳು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಮಾತುಕತೆ ಹಾಗು ವಿಚಾರ ವಿನಿಮಯಗಳೇ ಶಾಂತಿ ರಕ್ಷಣೆಯ ಉಪಾಯವೆಂದು ಭಾವಿಸುತ್ತವೆ.

ಮೇಲಿನೆರಡು ನಿಲುವೆಗಳು ಒಂದೇ ಉದ್ದೇಶವನ್ನು ಪ್ರತಿಪಾದಿಸುತ್ತಿದ್ದರೂ ಸಾಧನಗಳಲ್ಲಿ ಮೂಲಭೂತವಾದ ಭಿನ್ನತೆಯಿದೆಯೆಂದು ಕೆಲವರ ಅಭಿಪ್ರಾಯವಾದರೆ ಇನ್ನು ಕೆಲವರು ಇವು ಪರಸ್ಪರ ಪೂರಕ ವಿಷಯಗಳೆಂಬ ನಂಬಿಕೆಯನ್ನು ವ್ಯಕ್ತಪಡಿಸುವರು. ನೆಹರು ಮತ್ತು ಈಡನರನ್ನು ಇವೆರಡು ವಿಚಾರಗಳನ್ನು ಅಭಿವ್ಯಕ್ತಪಡಿಸುವ ಜನರ ಪ್ರತೀಕವೆಂದು ಪರಿಗಣಿಸಬಹುದು. ಏಶಿಯದ ರಾಷ್ಟ್ರಗಳಲ್ಲಿ ಬರ್ಮಾ, ಸಿಂಹಳ ಮತ್ತು ಭಾರತಗಳು ಸೀಟೊ ಒಪ್ಪಂದದಲ್ಲಿ ಸೇರಲು ನಿರಾಕರಿಸಿವೆಯಲ್ಲದೆ, ಆ ಒಪ್ಪಂದದ ತತ್ವವನ್ನು ಕಟು ಮಾತಿನಲ್ಲಿ ಖಂಡಿಸಿರುತ್ತವೆ. ಅದನ್ನು ಲೆಕ್ಕಿಸದೆ ಬಾಂಗ್‌ಕಾಕ್‌ನಲ್ಲಿ ಸಮ್ಮೇಳನವನ್ನು ನೆರೆಯಿಸಿ, ಸೈನಿಕ ಚಟುವಟಿಕೆಗಳ ವಿಷಯದಲ್ಲಿ ಸಾಮೂಹಿಕ ಕಾರ್ಯಾಚರಣೆಯನ್ನು ನಡೆಸುವ ವಿಧಾನಗಳನ್ನು ನಿರ್ಧರಿಸಲು ಸೀಟೊ ರಾಷ್ಟ್ರಗಳು ಪ್ರವೃತ್ತವಾಗಿರುತ್ತವೆ. ಸೈನಿಕ ಚಟುವಟಿಕೆಯು ಅಂತಾರಾಷ್ಟ್ರೀಯ ದ್ವೇಷವನ್ನು ಹೆಚ್ಚಿಸುವುದಿಲ್ಲ; ಶಾಂತಿ ರಕ್ಷಣೆಯನ್ನೆ ಮಾಡುತ್ತದೆ ಎಂಬ ನಂಬಿಕೆಯನ್ನು ಭಾರತವೇ ಮುಂತಾದ ವಿರೋಧಕ ರಾಷ್ಟ್ರಗಳಲ್ಲಿ ಹುಟ್ಟಿಸುವುದಕ್ಕೆ ಈಡನ್ನರು ಉದ್ದೇಶಿಸಿರುವಂತೆಯೂ ಕಾಣುತ್ತದೆ.

ಬಣಗಳನ್ನು ಕಟ್ಟಿಕೊಳ್ಳುವುದರಿಂದ ಅಂತಾರಾಷ್ಟ್ರೀಯ ದ್ವೇಷ ಹೆಚ್ಚುವುದೆಂಬ ನೆಹರುಗಳ ಮತ್ತಿತರ ಕೆಲವು ಏಶಿಯದ ರಾಷ್ಟ್ರಗಳ ಅಭಿಪ್ರಾಯವನ್ನು ಪಾಶ್ಚಾತ್ಯ ಪ್ರಭೃತಿಗಳು ಒಪ್ಪುವುದಿಲ್ಲ. ಯೂರೋಪಿನ ತಮ್ಮ ಅನುಭವವು ಆಕ್ರಮಣ ಮತ್ತು ಯುದ್ಧದ ಭಯವನ್ನು ನಿವಾರಿಸುವುದಕ್ಕೆ ಸಾಮೂಹಿಕ ಕಾರ್ಯಾಚರಣೆಯ ಸಂಕಲ್ಪವೇ ಯೋಗ್ಯ ಮಾರ್ಗವೆಂದು ತೋರಿಸಿಕೊಟ್ಟಿದೆಯಾಗಿ ಅವರ ಹೇಳಿಕೆ. ಕಮ್ಯುನಿಸ್ಟರು ಸಹ ಸಾಮೂಹಿಕ ಕಾರ್ಯಾಚರಣೆಯಲ್ಲಿ ವಿಶ್ವಾಸವಿಟ್ಟಿರುವರೆಂಬ ಸಂಗತಿಯನ್ನೂ ಅವರು ಜ್ಞಾಪಕಕ್ಕೆ ತಂದುಕೊಡುತ್ತಾರೆ. ಏಶಿಯದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಏಕಾಗಿ ಆಸ್ಥೆಯನ್ನು ವಹಿಸಬೇಕು? ಎಂಬ ಪ್ರಶ್ನೆಯಂತೂ ಪಾಶ್ಚಾತ್ಯ ರಾಷ್ಟ್ರಗಳವರ ದೃಷ್ಟಿಯಲ್ಲಿ ಹುರುಳಿಲ್ಲದ್ದು. ಏಕೆಂದರೆ, ಜಾಗತಿಕ ಶಾಂತಿಯು ಅವಿಭಾಜ್ಯ ವಸ್ತುವೆಂದೇ ಅವರ ವಿಶ್ವಾಸ. ಜಗತ್ತಿನಲ್ಲಿ ಶಾಂತಿ ನೆಲೆಸಬೇಕಾದರೆ ಏಶಿಯದಲ್ಲೂ ಶಾಂತಿಯಿರಬೇಕಾದದ್ದು ಅನಿವಾರ್ಯ—ಆದುದರಿಂದ ಜಾಗತಿಕ ಶಾಂತಿ ರಕ್ಷಣೆಗಾಗಿ ಎಲ್ಲರೂ ಒಟ್ಟಿಗೆ ಕೆಲಸ ಮಾಡುವುದು ಅಗತ್ಯ—ಅದರಲ್ಲಿ ಪಾಶ್ಚಾತ್ಯರು ಮತ್ತು ಪೌರಸ್ತ್ಯರು ಎಂಬ ಭೇದಕ್ಕೆ ಎಡೆಯಿಲ್ಲ—ಶಾಂತಿ ರಕ್ಷಕರು ಮತ್ತು ಶಾಂತಿ ಭಂಜಕರು ಎಂಬ ತಾರತಮ್ಯ ಮಾತ್ರ ಇರುತ್ತದೆ.

ನೆಹರುಗಳಿಗೆ ಮೇಲಿನ ಅಂಶವನ್ನು

(೧೨ನೇ ಪುಟ ನೋಡಿರಿ)

The Canara Mutual Assurance Company, Ltd.
Managing Director: **T. R. A. PAI.**
Head Office: **UDIPI**, S. India.] [Estd: 1935

ಹೊಸ ದಾಖಲೆ

ಕಂಪೆನಿಯು **1954**ನೇ ವರ್ಷದಲ್ಲಿ ಮಾಡಿದ ಹೊಸ ವ್ಯವಹಾರ:
ಬಂದ ಪ್ರೊಪೋಸಲುಗಳು: ರೂ. **1,02,73,700/-**
ಹೊರಡಿಸಲಾದ ಪಾಲಿಸಿಗಳು: ರೂ. **88,29,450/-**
ಇದು ಕಂಪೆನಿಯ ಹಿಂದಿನೆಲ್ಲ ದಾಖಲೆಗಳನ್ನೂ ಮೀರಿಸಿದೆಯಲ್ಲದೆ
1953ನೇ ವರ್ಷದ ವ್ಯವಹಾರದೊಡನೆ ಹೋಲಿಸಿದರೆ,
75%ಕ್ಕಿಂತಲೂ ಹೆಚ್ಚಾಗಿರುತ್ತದೆ.
31—12—1953ನೇ ತಾರೀಕಿಗಾದ ವಿಮಾಗಣನೆಯ ಫಲಿತಾಂಶ:
ಲಾಭ ಸಹಿತ ಪಾಲಿಸಿಗಳಿಗೆ ವಿಮಾ ಮೊಬಲಗಿನ
ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ರೂ. 15/-
ಹೋಲ್ ಲೈಫ್ ಎಶ್ಯೂರೆನ್ಸಿಗೆ ಎಂಡೋಮೆಂಟ್ ಎಶ್ಯೂರೆನ್ಸಿಗೆ
ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಪಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
Mukund Nivas, UDIPI, S. India.

ಉಡುಪಿ ಮತ್ತು ಮಂಗಳೂರು ನಗರಗಳಲ್ಲಿ ಬಿ. ಸಿ. ಜಿ ದಾಕುಗಳನ್ನು ಸಾಮೂಹಿಕ ಮಟ್ಟದಲ್ಲಿ ಹಾಕಿಸುವ ಸ್ತುತ್ಯ ಉಪಕ್ರಮವೊಂದನ್ನು ನಡೆಸಲು ಸರಕಾರದವರು ಈ ತಿಂಗಳು ಮುಂದಾದರು. ಕ್ಷಯರೋಗದ ಪ್ರಸಾರವನ್ನು ತಡೆಗಟ್ಟುವುದರಲ್ಲಿ ಬಿ. ಸಿ. ಜಿ. ದಾಕುಗಳ ಉಪಯುಕ್ತತೆಯು ಪ್ರಪಂಚದಾದ್ಯಂತ ಕೊಂಡಾದಲ್ಪಡುತ್ತದೆ. ನಮ್ಮ ದೇಶದಲ್ಲಿ ಕ್ಷಯರೋಗದಿಂದ ಲಕ್ಷಾಂತರ ಜನರು ಪ್ರತಿವರ್ಷ ಮೃತ್ಯುವಶರಾಗುತ್ತಾರೆ. ಕೆಲವು ಕೋಟಿ ಮಕ್ಕಳು ಕ್ಷಯರೋಗಕ್ಕೆ ಬಲಿಬೀಳುತ್ತಾರೆ-ಇದರಿಂದ ನಮ್ಮ ರಾಷ್ಟ್ರೀಯ ಆರೋಗ್ಯವು ನಿಕೃಷ್ಟಾವಸ್ಥೆಗಿಳಿದಿರುತ್ತದೆ ಕ್ಷಯರೋಗವು ಅಂಟುರೋಗವಾದುದರಿಂದ ಮತ್ತು ಅದು ಮನುಷ್ಯನನ್ನು ಕೆಲಸಮಾಡಗೊಡದೆ ಹಾಸಿಗೆಯಲ್ಲೆ ಒದ್ದಾಡಿಸುವುದರಿಂದ, ಅದನ್ನು ಎಷ್ಟು ತೀವ್ರವಾಗಿ ಪ್ರತಿಬಂಧಿಸಲು ಸಾಧ್ಯವಾಯಿತೋ, ಅಷ್ಟು ಬೇಗ ನಾವು ಸುಖಿಗಳಾಗುತ್ತೇವೆ. ಸರಕಾರದವರು ಧರ್ಮಾರ್ಥವಾಗಿ ಬಿ. ಸಿ. ಜಿ. ದಾಕುಗಳನ್ನು ಆಬಾಲವೃದ್ಧರೆಲ್ಲರಿಗೂ ಹಾಕಿಸುವ ಕಾರ್ಯಕ್ರಮವನ್ನು ಇಟ್ಟುಕೊಂಡುದರಿಂದ, ಕ್ಷಯರೋಗದ ಹಾವಳಿಯನ್ನು ತಡೆಗಟ್ಟುವುದರಲ್ಲಿ ಮೊದಲನೇ ಹೆಜ್ಜೆಯನ್ನಿಟ್ಟಂತಾಗಿರುವುದೆಂದು ಹೇಳಬಹುದು.

ಆದರೆ ಉಡುಪಿ ಮತ್ತು ಮಂಗಳೂರುಗಳಂಥ ನಗರಗಳಿಗೆ ಬಂದವರಿಗೆ ಕ್ಷಯರೋಗದಷ್ಟೇ ಭೀಭತ್ಸಕರವಾದ ಇನ್ನೊಂದು ರೋಗದ ಹಾವಳಿಯೂ ದೃಗ್ಗೋಚರವಾಗದಿರದು. ಅದೆಂದರೆ ಇಂಗ್ಲಿಷಿನಲ್ಲಿ ಫೈಲೇರಿಯಾ ಎಂದು ಕರೆಯಲ್ಪಡುವ "ಆನೆಕಾಲು" ರೋಗ. ನಮ್ಮ ಜಿಲ್ಲೆಯ ಮೇಲಿನೆರಡು ಪ್ರಮುಖ ನಗರಗಳಲ್ಲಿ ಈಚೆಗ ಕೆಲವು ವರ್ಷಗಳಿಂದ ಆನೆಕಾಲು ರೋಗದ ಉಪಟಳವು ವಿಪರೀತವಾಗಿರುವಂತೆ ಕಾಣುತ್ತದೆ. ಹೆಸರೇ ಹೇಳುವಂತೆ ಆನೆಯ ಕಾಲುಗಳಷ್ಟು ದಪ್ಪನಾದ ಕಾಲುಗಳನ್ನು ಹೊತ್ತುಕೊಂಡು ಬಹಳ ಕಷ್ಟದಿಂದ ತಿರುಗಾಡುವ ಗಂಡಸರೂ ಹೆಂಗಸರೂ ನೂರಾರು ಜನ ಪ್ರತಿನಿತ್ಯ ಮಾರ್ಗದಲ್ಲಿ ಕಣ್ಣಿಗೆ ಬೀಳುತ್ತಾರೆ. ಅವರು ಪಡುವ ಯಾತನೆ ಅವರಿಗೆಯೇ ಗೊತ್ತು—ನಿತ್ಯದ ಕೆಲಸ ಮಾಡುವಲ್ಲಿ ಅವರಿಗೆ ಹೆಚ್ಚಿನ ಕಷ್ಟವಾಗುವುದಿಲ್ಲ ಮತ್ತು ಈ ರೋಗದಿಂದ ಸಾಯುವವರೂ ವಿರಳ ಎಂಬುದು ನಿಜ ಆದರೆ, ಈ ರೋಗವು ವ್ಯಕ್ತಿಯ ಮತ್ತು ಸಮಾಜದ ಮೇಲೆ ಮಾಡುವ ದುಷ್ಪರಿಣಾಮದ ಮೊತ್ತದ ಮುಂದೆ ಈ ಸಮಾಧಾನ ಎಷ್ಟಕ್ಕೂ ಸಾಲದು.

ಆದುದರಿಂದ, ಸರಕಾರದವರು ಸದ್ಯದಲ್ಲಿಯೇ ರಾಷ್ಟ್ರೀಯ ಮಟ್ಟದಲ್ಲಿ ಆನೆಕಾಲು ರೋಗದ ನಿಯಂತ್ರಣ ಕ್ರಮವನ್ನು ಕೈಗೊಳ್ಳುವ ಪ್ರಾಸ್ತಾವಿಕ ಸಿದ್ಧತೆ ನಡೆಸಿರುವರು. ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಆನೆಕಾಲು ರೋಗ ಇತ್ತೆಂದು ತಿಳಿದು ಬರುತ್ತದೆ. ಕ್ರಿಸ್ತ ಪೂರ್ವ ಆರನೇ ಶತಮಾನದಲ್ಲಿದ್ದ ಸುಶ್ರುತನು ಈ ರೋಗದ ಲಕ್ಷಣಗಳನ್ನು ವಿವರಿಸಿದ ಪ್ರಥಮ ಭಾರತೀಯನೆಂದು ಅಭಿಪ್ರಾಯ ಪಡಲಾಗುತ್ತದೆ. ಒಂದು ಸಾವಿರ ವರ್ಷಗಳ ಬಳಿಕ ರೋಗ ಲಕ್ಷಣ ಶಾಸ್ತ್ರಜ್ಞನಾದ ಮಾಧವಕರನು ಈ ವಿಷಯದ ಬಗ್ಗೆ ಸಾಕಷ್ಟು ವಿವರಗಳನ್ನು ಬರೆದನು. ಇದಾದ ಮತ್ತೊಂದು ಸಹಸ್ರ ವರ್ಷಗಳ ಬಳಿಕ ಕ್ಲಾರ್ಕ್ ಎಂಬಾತನು ಕೊಚ್ಚಿಯ ತೀರದ ಜನರು ಪಡೆದಿದ್ದ ತೋರನಾದ ಆನೆಕಾಲುಗಳನ್ನು "ಮಲಬಾರಿನ ಕಾಲುಗಳು" ಎಂದು ವರ್ಣಿಸಿದನು. ಇಷ್ಟು ದೀರ್ಘವಾದ ಇತಿಹಾಸವನ್ನು ಆನೆಕಾಲು ರೋಗವು ಹೊಂದಿದ್ದರೂ ರಾಷ್ಟ್ರೀಯ ಮಟ್ಟದಲ್ಲಿ ಸಮೀಕ್ಷೆಗಳನ್ನು ಇಷ್ಟರ ವರೆಗೆ ಯಾರೂ ನಡೆಸಿರಲಿಲ್ಲ. ಸಾವಿನಂಥ ಪ್ರತ್ಯಕ್ಷ ಯಾಗು ಭೀಕರ ಪ್ರತಿಕ್ರಿಯೆಯನ್ನು ಈ ರೋಗ ಅಷ್ಟು ತೋರಿಸದಿದ್ದುದೇ ಇದಕ್ಕೆ ಹೇತು.

ಆನೆಕಾಲು ಮಹಾ ರೋಗ

ಕೊಳಚೆಯ ನಿರ್ಮೂಲವೇ ಹತೋಟಿಯ ಮಾರ್ಗ

ಪಾಶ್ಚಾತ್ಯ ವಿಜ್ಞಾನಿಗಳೇ ಆನೆಕಾಲು ರೋಗದ ಕುರಿತಾಗಿಯೂ ತಮ್ಮ ಕುತೂಹಲಜನಕ ಸಂಶೋಧನೆಗಳನ್ನು ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ನಡೆಸಿದರು. ಉಷ್ಣವಲಯಕ್ಕೆ ಸಂಬಂಧಿಸಿದ ಈ ರೋಗವು ವಿಶ್ವದಲ್ಲಿ ೧೫೦ ಲಕ್ಷ ಜನರನ್ನು ಪೀಡಿಸುತ್ತಿದೆಯಾಗಿ ೧೯೪೭ರಲ್ಲಿ ನಾರ್ಮನ್ ಸ್ಟೋಲ್ ಎಂಬಾತನು ಅಂದಾಜು ಮಾಡಿದನು. ಆತನ ಹೇಳಿಕೆಯಂತೆ ನಮ್ಮ ದೇಶದಲ್ಲಿ ಐದುಕೋಟಿ ಜನರು ಆನೆಕಾಲು ರೋಗಕ್ಕೆ ಬಲಿಬಿದ್ದಿರುವರಲ್ಲದೆ ಇಪ್ಪತ್ತೈದು ಕೋಟಿ ಜನರು ಆನೆಕಾಲು ಹರಡಬಹುದಾದ ಕ್ಷೇತ್ರದಲ್ಲಿ ನೆಲಸಿದ್ದಾರೆ! ಬಂಗಾಳ, ಬಿಹಾರ, ಒರಿಸ್ಸಾ, ಆಂಧ್ರ, ಮದ್ರಾಸು, ತಿರುಕೊಚ್ಚಿ, ವಿಂಧ್ಯ ಪ್ರದೇಶ, ಮಧ್ಯ ಪ್ರದೇಶ, ಅಸ್ಸಾಂ, ಉತ್ತರ ಪ್ರದೇಶದ ಪೂರ್ವ ಜಿಲ್ಲೆಗಳು, ಸೌರಾಷ್ಟ್ರದ ಬಂದರುಗಳು, ಮುಂಬಯಿಯ ಸೂರತ್ ನಗರ ಇಲ್ಲೆಲ್ಲ ಆನೆಕಾಲು ವ್ಯಾಪಕವಾಗಿ ಹಬ್ಬಿರುತ್ತದೆ. ನಿಕೋಬಾರ್ ದ್ವೀಪವು ಸಹ ಈ ರೋಗಕ್ಕೆ ಬಲಿಬಿದ್ದಿದೆ. ಅಂಡಮಾನ್ ದ್ವೀಪ, ದೆಹಲಿ, ಪಂಜಾಬು, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಕೊಡಗು, ಮೈಸೂರು ಮತ್ತು ಮುಂಬಯಿ ರಾಜ್ಯದ ಹಚ್ಚಿನ ಭಾಗಗಳಲ್ಲಿ ಮಾತ್ರ ಆನೆಕಾಲು ರೋಗದ ಹಾವಳಿ ಇಷ್ಟರ ವರೆಗಿಲ್ಲ,

ಹವಾಮಾನವು ಈ ರೋಗದ ಬೆಳವಣಿಗೆ ಮತ್ತು ಪ್ರಸಾರದಲ್ಲಿಯೂ ರೋಗಕಾರಣವಾದ ಪರೋಪಜೀವಿಗಳ ಅಭಿವೃದ್ಧಿಯಲ್ಲಿಯೂ ಮಹತ್ವದ ಪಾತ್ರವನ್ನು ವಹಿಸುತ್ತದೆ. ಕೊಳಕು ನೀರಿನಲ್ಲಿ ಹೆಚ್ಚಾಗಿರುವ ಉಚೇರೆರಿಯಾ ಬಂಕ್ರೋಷ್ಟಿ ಮತ್ತು ಸೊಳ್ಳೆಗಳಿಂದ ಸಾಗಿಸಲ್ಪಡುವ ಉಚೇರೆರಿಯಾ ಮಾಳವಿ ಎಂಬ

(೧೦ನೇ ಪುಟ ನೋಡಿರಿ)

ಇತರ ಯಾವದೇ ಚಹಾಗಿಂತಲೂ ಬ್ರೂಕ್ ಬಾಂಡ್ ಚಹಾವನ್ನೇ ಹೆಚ್ಚು ಜನರು ಕೊಳ್ಳುತ್ತಾರೆ

ಒಂದು ಕಾರಣ – ಹಸನಾಗಿರುವಿಕೆ!

ಫ್ಯಾಕ್ಟರಿಯಿಂದ ಅಂಗಡಿಗೆ ತ್ವರಿತದಿಂದ ತಲುಪಿಸಲ್ಪಡುವುದರಿಂದ ಬ್ರೂಕ್ ಬಾಂಡ್ ಚಹಾ ಅತ್ಯಂತ ಹಸನಾಗಿರುವುದನ್ನು ಖಂಡಿತಮಾಡುತ್ತದೆ.

ಇನ್ನೊಂದು ಕಾರಣ – ಶುದ್ಧತೆ!

ಪೊಟ್ಟಣಗಳ ಸೀಲ್ ಮಾಡುವಿಕೆಯು ಬ್ರೂಕ್ ಬಾಂಡ್ ಚಹಾಗೆ ದೂಳು, ಕೊಳೆ ಸೇರದಂತೆಯೂ, ಬೆರಕೆ ಮಾಡಲಾಗದಂತೆಯೂ ಕಾಪಾಡುವ್ವದು.

ಮೆಲೆಂಕಾಫರ ರಾಜೀನಾಮೆಯ ಹಿಂದಿರುವ ಗೂಢ

ಪಕ್ಷದ ಪ್ರಭೃತಿಗಳಲ್ಲಿ ತೀವ್ರ ಸ್ವರೂಪದ ದ್ವಂದ್ವ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಫ್ರೊಮೋಗಸವ ಸಮಸ್ಯೆ ತನ್ನ ಪ್ರಾಮುಖ್ಯತೆಯನ್ನು ಇನ್ನೂ ಕಳೆದುಕೊಳ್ಳದಿರುವಾಗಲೇ ಎಲ್ಲ ಸುದ್ದಿಗಳನ್ನೂ ಮೆಟ್ಟಿನಿಂತ ವಾರ್ತೆಯಾಗಿ ರಶಿಯದ ಪ್ರಧಾನ ಮಂತ್ರಿ ಮೆಲೆಂಕಾಫರ ರಾಜೀನಾಮೆ ಬಂತು. ಅಮೇರಿಕದ ವಿದೇಶಾಂಗ ಕಾರ್ಯದರ್ಶಿ ಡಲ್ಲೆಸರು ಸದ್ಯದಲ್ಲೇ ರಶಿಯದಲ್ಲೊಂದು ಗೊಂದಲ ನಡೆಯುತ್ತದೆ ಎಂದು ಹೇಳುತ್ತ ಬಂದಿದ್ದರೂ ಆ ಗೊಂದಲದ ಸ್ವರೂಪವೇನೆಂದು ಅವರಿಗೂ ತಿಳಿದಿರಲಿಲ್ಲವೆಂದು ಕಂಡುದರಿಂದ ಮೆಲೆಂಕಾಫರ ರಾಜೀನಾಮೆ ಇಡೀ ಜಗತ್ತನ್ನೆ ಆಶ್ಚರ್ಯಗೊಳಿಸಿತು! ಸ್ಟಾಲಿನ್ನರ ಮರಣಾನಂತರ ರಶ್ಯದ ಪ್ರಥಮ ಮನುಷ್ಯನೆಂದು ಮನ್ನಿಸಲ್ಪಡುತ್ತಿದ್ದ ಮೆಲೆಂಕಾಫರು ತನ್ನ ಅಧಿಕಾರಸ್ಥಾನವನ್ನು ಸ್ವೇಚ್ಛೆಯಿಂದ ಬಿಟ್ಟುಕೊಟ್ಟದ್ದು ಕಮ್ಯೂನಿಸ್ಟ ರಾಷ್ಟ್ರಗಳ ಇತಿಹಾಸದಲ್ಲಿ ಹಿಂದೆಂದೂ ನಡೆದಿರದ ಹೊಸ ರೀತಿಯ ಘಟನೆ. ತಾನು ರಾಜ್ಯದ ಆಡಳಿತವನ್ನು ಚೆನ್ನಾಗಿ ಸಾಗಿಸಿಕೊಂಡು ಹೋಗಲಾರದ ಅನನುಭವಿಕನಾಗಿದ್ದೇನೆ ಮತ್ತು ಇದರಿಂದಾಗಿಯೇ ಕೃಷಿ ವಿಭಾಗದಲ್ಲಿ ಅನೇಕ ತೊಂದರೆಗಳನ್ನು ಮಾಡುವಂತಾಯಿತು ಎಂದು ಪ್ರಾಂಜಲವಾಗಿ ತಪ್ಪನ್ನು ಒಪ್ಪಿಕೊಂಡು ರಾಜೀನಾಮೆಯನ್ನು ಕೊಡುವಷ್ಟು ಪ್ರಾಮಾಣಿಕತೆ ಜಗತ್ತಿನ ಯಾವ ಪ್ರಧಾನಿಯಲ್ಲೂ ಇದ್ದಂತೆ ಕಾಣುವುದಿಲ್ಲ— ಅಧಿಕಾರವೇ ಸರ್ವಸ್ವವಾಗಿರುವ ಕಮ್ಯೂನಿಸ್ಟ ರಾಷ್ಟ್ರಗಳ ನಾಯಕ ಗುಂಪಿನ ಮಟ್ಟಿಗಂತೂ ಇದು ಕನಸಿನಲ್ಲೂ ಎಣಿಸಲಿಕ್ಕಾಗದ ವಿಷಯ. ಹಾಗಿದ್ದರೂ ರಶಿಯದಲ್ಲೊಂದು ಪವಾಡ ನಡೆಯಿತು—ಇದರ ಹಿನ್ನೆಲೆ ಏನಿರಬಹುದು?

ಒಳಗಿನ ಕುಹಕ

ರಶಿಯದ ಆಗು ಹೋಗುಗಳ ಪರಿಚಯ ಸ್ವಲ್ಪ ಮಟ್ಟಿಗಾದರೂ ಇದ್ದವರು ಎರಡು ಪ್ರಾಮುಖ್ಯ ವಿಷಯಗಳನ್ನು ಮೆಲೆಂಕಾಫರ ರಾಜೀನಾಮೆಯ ಹಿನ್ನೆಲೆಯಾಗಿ ಹೇಳುತ್ತಾರೆ – ಅವೆಂದರೆ, ಅಧಿಕಾರಕ್ಕಾಗಿ ರಶಿಯದಲ್ಲಿ ಜಗಳ ಇನ್ನೂ ಮುಗಿದಿಲ್ಲ ಎಂಬುದೊಂದು; ಮೆಲೆಂಕಾಫರ ಧೋರಣೆ ಕಮ್ಯೂನಿಸ್ಟ ಪ್ರಭೃತಿಗಳಿಗೆ ಸರಿಬಂದಿಲ್ಲ ಎಂಬುದಿನ್ನೊಂದು. ಇವೆರಡೂ ವಿಷಯಗಳ ತುಲನಾತ್ಮಕ ವಿಚಾರವನ್ನು ಮಾಡಿದರೆ ರಶಿಯದ ಇಂದಿನ ಪರಿಸ್ಥಿತಿ ಮತ್ತದರ ರಾಜಕೀಯ ಮನೋಭಾವದ ಪರಿಚಯ ಸ್ವಲ್ಪ ಮಟ್ಟಿಗಾದರೂ ಆದೀತು. ಮೆಲೆಂಕಾಫರು ಪ್ರಧಾನಿ ಪಟ್ಟವನ್ನಷ್ಟೇ ಬಿಟ್ಟುಕೊಟ್ಟದ್ದಲ್ಲದೆ, ಅಧಿಕಾರಸ್ಥಾನದಿಂದ ಹೊರಕ್ಕೇನು ಹಾಕಲ್ಪಟ್ಟಿಲ್ಲ. ಅವರನ್ನು ಉಪಪ್ರಧಾನ ಮಂತ್ರಿಗಳಲ್ಲಿ ಒಬ್ಬರೆಂದು ನೇಮಿಸಲಾಗಿದೆ; ಮತ್ತು ವಿದ್ಯುಚ್ಛಕ್ತಿ (ಹಾಗು ಅಣು) ಕೇಂದ್ರಗಳ ವಿಭಾಗವನ್ನು ಅವರ ಕೈಗೆ ಒಪ್ಪಿಸಿಕೊಡಲಾಗಿದೆ. ಮೆಲೆಂಕಾಫರಿಗೆ ಈ ವಿಭಾಗದಲ್ಲಿ ಸಾಕಷ್ಟು ಅನುಭವವಿದೆಯೆಂದು ಇದರ ಅರ್ಥವೆ? ನಮಗೆ ಹೊಳೆದಂತೆ ಹಾಗಿರಲಾರದು— ಅದು ಮೆಲೆಂಕಾಫರಿಂದ ಇನ್ನೊಂದು ಸಲ ತನ್ನಿಂದ ತಪ್ಪಾಯಿತೆಂಬ ಹೇಳಿಕೆಯನ್ನು ಪಡೆಯಲು ಪೂರ್ವಭಾವಿಯಾದ ವ್ಯವಸ್ಥೆಯಾಗಿರಬಹುದೆಂದು ತೋರುತ್ತದೆ. ರಾಷ್ಟ್ರದ ಪ್ರಗತಿ ಮತ್ತು ಸಂರಕ್ಷಣ ವಿಷಯದಲ್ಲಿ ಶಕ್ತಿ ಕೇಂದ್ರಗಳ ಅಭಿವೃದ್ಧಿಯು ಮಹತ್ವದ ಪಾತ್ರವನ್ನು ವಹಿಸುವುದರಿಂದ ಅವುಗಳ ಆಡಳಿತದಲ್ಲಿ ಸ್ವಲ್ಪ ನ್ಯೂನತೆ ಉಂಟಾದರೂ ಸಾಕು— ಅದರ ಹೊಣೆ ಹೊತ್ತವನ ಮೇಲೆ ಗಂಭೀರವಾದ ಆರೋಪವನ್ನು ಹೇರಲು ಕಮ್ಯೂನಿಸ್ಟರು ಹಿಂದೆ ಮುಂದೆ ನೋಡಲಿಕ್ಕಿಲ್ಲ. ಹಾಗೆ ಇನ್ನೊಮ್ಮೆ ಆರೋಪಹೊರಿಸಿ, ಮೆಲೆಂಕಾಫರನ್ನು ಸಂಪೂರ್ಣ ಬಗ್ಗು ಬಡಿಯುವುದಕ್ಕಾಗಿಯೇ ಈಗಿನ ತಂತ್ರ ನಡೆದಿರಬೇಕೆಂಬುದಕ್ಕೆ ಬಲವಾದ ಕಾರಣಗಳು ಕಂಡು ಬರುತ್ತವೆ.

ಮೆಲೆಂಕಾಫರ ನಿಲುಮೆ

ಸ್ಟಾಲಿನ್ನರು ಮರಣಗೊಂಡ ಗಳಿಗೆಯಲ್ಲಿ ಮೆಲೆಂಕಾಫರು ರಶಿಯದ ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿಯಾಗಿದ್ದರು. ರಶಿಯದ ಗುಟ್ಟುಬಲ್ಲವರು ಅಲ್ಲಿ ಸರಕಾರಕ್ಕಿಂತಲೂ ಸರಕಾರವನ್ನು ನಡೆಸುವ ಪಕ್ಷದ ಅಂಗ ಮಹತ್ವದ್ದೆಂದು ಹೇಳುತ್ತಾರೆ– ಪಕ್ಷದ ಪ್ರಧಾನಿಯನ್ನು ತಿರಸ್ಕರಿಸಿ, ರಶಿಯದ ಸರಕಾರ ಕೆಲಸ ಮಾಡಲಾರದೆಂದು ಹೇಳಲಾಗುತ್ತದೆ ಕಮ್ಯೂನಿಸ್ಟ ಪಕ್ಷದ ಎಲ್ಲ ಅಧಿಕಾರವನ್ನೂ ಮೆಲೆಂಕಾಫರು ಪಡೆದಿದ್ದುದರಿಂದಲೇ ತನಗಿಂತ ಹಿರಿಯರಾದ ಅನೇಕ ಪ್ರಮುಖ ರಾಜಕೀಯ ಮುಖಂಡರಿದ್ದಂತೆಯೇ ಮೆಲೆಂಕಾಫರು ಪ್ರಧಾನ ಮಂತ್ರಿಯಾಗಿ, ಸ್ಟಾಲಿನ್ನರ ಉತ್ತರಾಧಿಕಾರಿಯಾಗಿ, ಅಧಿಕಾರಕ್ಕೆ ಬಂದರೆಂದರೆ ತಪ್ಪಲ್ಲ. ರಾಜಕೀಯ ಶಕ್ತಿಯನ್ನಷ್ಟೆ ಪರಿಗಣಿಸುವುದಾಗಿದ್ದಲ್ಲಿ ಗುಪ್ತ ಪೋಲೀಸು ಪಡೆಯ ವರಿಷ್ಠರಾಗಿದ್ದ ಲಾವ್ರೆಂಟಿ ಬೆರಿಯಾರಾಗಲೀ ತಪ್ಪಿದರೆ ಮೊಲೊಟೋಫರಾಗಲೀ ಅಧಿಕಾರಕ್ಕೆ ಬರುತ್ತಿದ್ದರು. ಇವರಿದ್ದಂತೆಯೆ ಮೆಲೆಂಕಾಫರು ಕಮ್ಯೂನಿಸ್ಟ ಪಕ್ಷದ ಮೇಲೆ ಅದುವರೆಗೆ ತಮಗಿದ್ದ ಹಿಡಿತದ ಬಲದಿಂದ ಪ್ರಧಾನ ಮಂತ್ರಿಯಾದರೂ ಅಧಿಕಾರಕ್ಕಾಗಿ ಆಗಲೇ ಜಗಳವಿದ್ದಂತೆ ಕಾಣುತ್ತದೆ. ಏಕೆಂದರೆ ಹಿಂದಿನಿಂದ ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿ ಸ್ಥಾನವನ್ನು ಅವರು ಬಿಟ್ಟುಕೊಡಬೇಕಾಯಿತು. ಆ ಸ್ಥಾನ ನಿಕೀಟಾ ಕ್ರುಶೇವರ ಕೈಗೆ ಹೋಯಿತು. ಪರಿಣಾಮದಲ್ಲಿ, ಮೆಲೆಂಕಾಫರಿಗೆ ಪಕ್ಷದ ಮೇಲಿನ ಹಿಡಿತ ಇಲ್ಲದೆ, ರಾಜಕೀಯ ಸೂತ್ರವಷ್ಟೆ ಬಂತು. ಇದು ರಶಿಯದ ಆಡಳಿತವನ್ನು ನಿರ್ವಹಿಸುವುದಕ್ಕೆ ಅಷ್ಟು ಅನುಕೂಲವಾಗಿರಲಿಲ್ಲ. ಆದರೂ ಮೆಲೆಂಕಾಫರು ರಾಜಕೀಯ ಕ್ಷೇತ್ರದಲ್ಲಿ ಸ್ಟಾಲಿನ್ನರು ಅನುಸರಿಸಿದ್ದ ಬಿಗಿಯಾದ ಧೋರಣೆಯನ್ನು ಸಡಿಲುಗೊಳಿಸಿ, ತನ್ಮೂಲಕ ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನು ಗಳಿಸಿ, ಪಕ್ಷದ ಮೇಲಿನ ಪ್ರತಿಷ್ಠೆ ತಪ್ಪಿಹೋದ ನಷ್ಟವನ್ನು ಭರ್ತಿಮಾಡಲು ಪ್ರಯತ್ನಿಸಿದರು. ಫಲವಾಗಿ, ರಾಜಕೀಯ ಸೆರೆಯಾಳುಗಳಲ್ಲಿ ಹಲವರ ಬಿಡುಗಡೆಯಾಯಿತು. ಕಾರ್ಖಾನೆಗಳನ್ನು ಯುದ್ಧ ಸಿದ್ಧತೆಗಾಗಿ ಅಥವಾ ಸೌಮ್ಯ ಮಾತಿನಲ್ಲಿ ಹೇಳುವುದಾದರೆ ಸೈನಿಕ ಶಕ್ತಿಯ ಅಭಿವೃದ್ಧಿಗಾಗಿ ಉಪಯೋಗಿಸುವ ಬದಲು, ನಿತ್ಯೋಪಯೋಗಕ್ಕೆ ಅಗತ್ಯವೆನಿಸಿದ ಸರಕುಗಳನ್ನು ಉತ್ಪಾದಿಸುವುದಕ್ಕೂ ಜನಗಳ ಆಹಾರವನ್ನೊದಗಿಸುವುದಕ್ಕೂ ಮೆಲೆಂಕಾಫರು ಮುಂದಾದರು.

ಕ್ರುಶೇವರ ತಂತ್ರ

ಮೆಲೆಂಕಾಫರು ಅನುಸರಿಸಿದ ಈ ಉಪಾಯ ಕಮ್ಯೂನಿಸ್ಟ ಪಕ್ಷದ ಪ್ರಭೃತಿ ಕ್ರುಶೇವರ ಮನಸ್ಸಿಗೆ ಸ್ವಲ್ಪವೂ ಹಿಡಿಸಲಿಲ್ಲ— ಅವರು ತಮ್ಮ ನಿರ್ದೇಶನ ಮಂತ್ರಿ ಮಂಡಳದ ಮೇಲೆ ನಡೆಯಬೇಕು ಎಂದು ಬಯಸುತ್ತಿದ್ದರು. ಮಂತ್ರಿ ಮಂಡಳವು ಪಕ್ಷದ ಹಿಡಿತದಿಂದ ಹೊರಗಾಗಬಾರದೆಂದು ಅವರು ಇಚ್ಛಿಸಿದ್ದರು— ಮೆಲೆಂಕಾಫರು ಜನಸಾಮಾನ್ಯರ ಗೌರವಾದರಗಳನ್ನು ಪಕ್ಷದ ಚೌಕಟ್ಟಿನ ಹೊರಗೆ, ಅಂದರೆ ರಾಜಕೀಯ ಕ್ಷೇತ್ರದಲ್ಲಿಯೇ ಸುಧಾರಣೆಗಳನ್ನು ಮಾಡುವ ಮೂಲಕ, ಸಂಪಾದಿಸಲು ಪ್ರಯತ್ನಿಸುವುದನ್ನು ಕಂಡ ಕ್ರುಶೇವರು ಮೆಲೆಂಕಾಫರ ಧೋರಣೆಯನ್ನು ಕಟು ಮಾತಿನಲ್ಲಿ ಟೀಕಿಸ ಹತ್ತಿದರು. ಮೆಲೆಂಕಾಫರು ಹೆಚ್ಚು ಮಾತನಾಡುತ್ತಿರಲಿಲ್ಲ— ಮಿತಭಾಷಿಯಾದ ಅವರ ವ್ಯಕ್ತಿತ್ವಕ್ಕೆ ಭಾಷಣ ಮಾಡದೆ ಮೌನವಾಗಿ ಉಳಿಯುವುದು ಸಹಜ ರೀತಿಯೆಂದೇ ಎಲ್ಲರೂ ಭಾವಿಸಿದರು ಆದರೆ ವಾಚಾಳಿಯಾದ ಕ್ರುಶೇವರು ಮೆಲೆಂಕಾಫರ ನಿಲುಮೆಯನ್ನು ಖಂಡಿಸುತ್ತಲೇ ಹೋದರು— ಅವರು ನಿತ್ಯೋಪಯೋಗದ ವಸ್ತುಗಳನ್ನೊದಗಿಸುವ ಮತ್ತು ಕೃಷಿ ಉತ್ಪನ್ನವನ್ನು ಹೆಚ್ಚಿಸುವ ಪ್ರಯತ್ನಗಳು ರಶಿಯವನ್ನು ಪತನಕ್ಕೊಯ್ಯುತ್ತವೆ ಎಂದು ಎಚ್ಚರಿಸುತ್ತಾ ಸೈನಿಕ ಶಕ್ತಿಯ ಸಂವರ್ಧನ ಮಾಡುವ ಕಾರ್ಖಾನೆಗಳ ಚಟುವಟಿಕೆಯೇ ರಶಿಯದ ಮೇಲ್ಮೆಯ ಮಾರ್ಗ ಎಂದು ಉಪದೇಶಿಸ ತೊಡಗಿದರು. ಹೀಗೆ ಸ್ಟಾಲಿನ್ನರ ನೀತಿಯನ್ನೆ ಮರಳಿ ಅನುಸರಿಸುವ ಆವಶ್ಯಕತೆಯನ್ನು ಅವರು ಒತ್ತಿ ಹೇಳಿದರು. ಇದಕ್ಕೆ ಸರಿಯಾಗಿ ಮೆಲೆಂಕಾಫರು ವಿದೇಶಗಳ ಕುರಿತು ಅನುಸರಿಸಿದ ಸೌಮ್ಯ ಧೋರಣೆಯು ರಶಿಯಕ್ಕೆ ಯಾವ ಪ್ರಯೋಜನವನ್ನೂ ಕೊಡದೆ ಹೋಯಿತು— ಜರ್ಮನಿಯು ಪುನಃ ಶಸ್ತ್ರೀಕರಣಕ್ಕೆ ಒಪ್ಪಿಗೆ ನೀಡುವ ಪ್ಯಾರಿಸ್ ಒಡಂಬಡಿಕೆಗಳ ವಿರುದ್ಧ ಕೊಟ್ಟ ಎಚ್ಚರಿಕೆ ನಿಷ್ಫಲವಾಯಿತು; ಪಾಶ್ಚಾತ್ಯರು ಸೈನಿಕ ಶಕ್ತಿ

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

UDIPI MUNICIPALITY

TENDER NOTICE.

Sealed tenders will be received by the undersigned up to 4-0 p. m. on 23—2—1955 for ordinary Kerosene Petromax street lighting for the year 1955-56. Any particulars as to conditions or contract may be obtained from the Municipal Office during Office hours on working days.

Municipal Office, Udipi.
Dated: 10-2-1955.

K. GOPALA MENON,
Commissioner,
Udipi Municipality, Udipi.

ಹೆಚ್ಚಿಸುವ ತಮ್ಮ ಹವ್ಯಾಸವನ್ನು ಸ್ವಲ್ಪವೂ ಬಿಡಲಿಲ್ಲ. ರಶಿಯದ ಸೌಮ್ಯ ನೀತಿಯನ್ನು ಇದ್ದದಿದ್ದಂತೆ ಒಪ್ಪಿಕೊಳ್ಳಲು ಅವರು ಸಿದ್ಧರಾಗಲಿಲ್ಲ. ಹೀಗಾಗಿ ರಶಿಯವು ತಾನು ಬಡವಾಯಿತಲ್ಲದೆ—ತನ್ನ ತ್ಯಾಗಕ್ಕೆ ಅಥವಾ ಔದಾರ್ಯಕ್ಕೆ ತಕ್ಕ ಪ್ರತಿಫಲವನ್ನು ಪಡೆಯದೆ ಪ್ರತಿಷ್ಠೆಯನ್ನೆ ಕಳೆದು ಕೊಂಡಿತು.

ಸೈನ್ಯದ ಪಾತ್ರ

ಪಾಶ್ಚಾತ್ಯ ರಾಷ್ಟ್ರಗಳು ಮೆಲೆಂಕಾಫರು ತೋರಿಸಿದ ಉದಾರವಾದ ಮನೋಭಾವದ ಪ್ರಾಮಾಣಿಕತೆಯನ್ನು ಶಂಕಿಸುತ್ತಾ ಯುದ್ಧ ಶಕ್ತಿಯನ್ನು ಹೆಚ್ಚಿಸುವ ತಮ್ಮ ಹವ್ಯಾಸವನ್ನು ಮುಂದೊತ್ತಿಕೊಂಡು ಹೋದದ್ದು ರಶಿಯದ ಸೈನಿಕಾಧಿಕಾರಿಗಳ ಅಸೂಯೆಯನ್ನೂ ಅಭಿಮಾನವನ್ನೂ ಕೆರಳಿಸಲು ಬಲವಾದ ಕಾರಣವಾಯಿತು. ರಶಿಯದಲ್ಲಿ ಸೈನಿಕ ಅಧಿಕಾರಿಗಳು ತಮ್ಮ ವರ್ಚಸ್ಸನ್ನು ಸ್ಟ್ಯಾಲಿನ್ನರ ಮರಣಾನಂತರ ಹೆಚ್ಚಿಸುತ್ತಲೇ ಬಂದಿದ್ದರು. ಬೇರಿಯಾದ ಅಧೀನದಲ್ಲಿದ್ದ ಗುಪ್ತ ಪೋಲೀಸು ಪಡೆಯು ಸೈನ್ಯಕ್ಕೆ ಯೋಗ್ಯ ಪ್ರತಿಸ್ಪರ್ಧಿಯಾಗಿದ್ದುಕೊಂಡು ಸೈನ್ಯಾಧಿಕಾರಿಗಳನ್ನು ಕಡೆಗಣಿಸುವಷ್ಟು ಪ್ರಾಬಲ್ಯ ತೋರಿಸಿದುದನ್ನು ಕಂಡು, ಬೇರಿಯರನ್ನೆ ಗುಂಡಿಕ್ಕಿಕೊಲ್ಲಲಾಯಿತು. ಇಪ್ಪತ್ತು ವರ್ಷಗಳ ಹಿಂದೆ ಅವರೇನೊ ಒಳಸಂಚು ನಡೆಸಿದರೆಂಬುದೇ ಖಟ್ಲೆ ಹಾಕಿ ಮರಣ ದಂಡನೆಯನು ವಿಧಿಸಲು ಸೈನಿಕ ನ್ಯಾಯಾಲಯಕ್ಕೆ ಕಾನುಬದ್ಧವಾದ ಕಾರಣವಾಯಿತು! ಅಂದಿನಿಂದ ಗುಪ್ತ ಪೋಲೀಸು ಪಡೆಯ ವರ್ಚಸ್ಸು ತಗ್ಗುತ್ತಾ ಸೈನ್ಯಾಧಿಕಾರಿಗಳ ಪ್ರತಿಷ್ಠೆ ಬೆಳೆಯುತ್ತಾ ಬಂತು. ಪಾಶ್ಚಾತ್ಯ ರಾಷ್ಟ್ರಗಳು ರಶಿಯದ ಸೈನಿಕಶಕ್ತಿಯನ್ನು ಮೂದಲಿಸುತಿದ್ದುದರಿಂದ ಅವರೆಲ್ಲರೂ ಕೆರಳಿನಿಂತು, ಸೌಮ್ಯ ವಿದೇಶ ಧೋರಣೆಯ ಪ್ರವರ್ತಕರಾದ ಮೆಲೆಂಕಾಫರ ವಿರುದ್ಧ ತಿರುಗಿ ಬಿದ್ದರೆಂದು ಹೇಳಿದರೂ ತಪ್ಪಾಗದು. ಇದಕ್ಕೆ ಕ್ರುಶ್ಚೇವರು ಉತ್ತೇಜನೆಯನ್ನಿತ್ತರೆಂದೂ ಊಹಿಸಬಹುದು— ಏಕೆಂದರೆ ಕ್ರುಶ್ಚೇವರು ಈಗ ಪ್ರಧಾನ ಮಂತ್ರಿಯಾಗಿ ಮಾಡಿರುವ ವ್ಯಕ್ತಿ ಸಂರಕ್ಷಣ ಮಂತ್ರಿಯಾಗಿದ್ದ ಹಾಗು ಸೈನಿಕ ರಾಜಕಾರಣಿಯೆಂದು ಹೆಸರಾದ ಮಾರ್ಶಲ್ ನಿಕೋಲಾಯ್ ಬಲ್ಗೇನಿನ್; ಈಗ ಸಂರಕ್ಷಣ ಮಂತ್ರಿಯಾಗಿ ನೇಮಕಗೊಂಡಿರುವವರು ಸಹ ದ್ವಿತೀಯ ಮಹಾಯುದ್ಧದಲ್ಲಿ ರಶಿಯದ ಸೇನೆಗಳ ನಾಯಕತ್ವವಹಿಸಿ ಜಯಸಂಪಾದಿಸಿದ ಪ್ರಚಂಡ ವೀರ ಮಾರ್ಶಲ್ ಜುಕೋವ್. ಇವರಿಬ್ಬರೂ ಕಮ್ಯೂನಿಸ್ಟ್ ಪಕ್ಷದ ಸುಬೇದಾರ ಕ್ರುಶ್ಚೇವರಿಂದ ಸ್ವತಃ ಆರಿಸಲ್ಪಟ್ಟವರು!

ಮುಂದಿನ ನಿಲುವು

ಕ್ರುಶ್ಚೇವರು ಇಂಥದೊಂದು ತಂತ್ರವನ್ನು ನಡೆಸುತ್ತಿದ್ದರೆಂದು ರಶಿಯದ ನಿಕಟ ಪರಿಚಯವಿದ್ದ ವರ್ತುಲಗಳು ಈಚೆಗೆ ಕೆಲ ಸಮಯದಿಂದ ಹೇಳುತ್ತಲೇ ಇದ್ದರೂ ಅವರನ್ನು ಮೆಲೆಂಕಾಫರೇ ಹತ್ತಿಕ್ಕಿಯಾರೆಂದು ಎಲ್ಲರೂ ನಂಬಿದ್ದರು. ಹಾಗೇನೂ ಮಾಡಲಾರದೆ ಕ್ರುಶ್ಚೇವರ ಅಧಿಕಾರ ವಾಣಿಯನ್ನು ಒಪ್ಪಿಕೊಳ್ಳದೆ ಮೆಲೆಂಕಾಫರು ನಡೆಯುವಂತಿಲ್ಲವೆಂದು ಹೆಚ್ಚು ಸ್ಪಷ್ಟವಾಗಿ ಗೊತ್ತಾದದ್ದು ಕಳೆದ ಜನವರಿಯಲ್ಲಿ— ಮೆಲೆಂಕಾಫರು ವರಿಷ್ಠರಾಗಿರುವ ಸರಕಾರದ ಮುಖ ಪತ್ರ ಇಜ್ವೆಸ್ತಿಯ ಜನರಿಗೆ ಹೆಚ್ಚು ಸುಖ ಒದಗಿಸುವ ಧೋರಣೆಯೇ ಸರಿಯೆಂದು ಉಪದೇಶಿಸಿತ್ತು; ತದ್ವಿರುದ್ಧವಾಗಿ ಕ್ರುಶ್ಚೇವರ ಕೈಯಲ್ಲಿನ ಕಮ್ಯೂನಿಸ್ಟ್ ಪಕ್ಷದ ಮುಖ ಪತ್ರ ಪ್ರವಡಾವು ಉಕ್ಕಿನ ಕಾರ್ಖಾನೆಯೇ ಮುಂತಾದ ಭಾರಿ ಉದ್ಯೋಗಗಳನ್ನು ಸ್ಥಾಪಿಸಿ ಸೈನ್ಯ ಶಕ್ತಿಯನ್ನು ಹೆಚ್ಚಿಸಬೇಕೆಂದು ವಾದಿಸುತಿತ್ತು. ಈ ದ್ವಂದ್ವದಲ್ಲಿ ಕ್ರುಶ್ಚೇವರ ಕೈಯೇ ಜೋರಾಗಿ, ಮೆಲೆಂಕಾಫರ ನೀತಿಯ ಪ್ರತೀಕವಾಗಿದ್ದ ವಾಣಿಜ್ಯಮಂತ್ರಿ ಮೈಕೊಯನ್ನರು ರಾಜೀನಾಮೆ ಕೊಡುವುದು ಅನಿವಾರ್ಯವಾಯಿತು. ಅವರ ಸ್ಥಾನವನ್ನು ಕ್ರುಶ್ಚೇವರ ಬಂಟನೊಬ್ಬ ವಹಿಸಿದನು. ಇದಾದ ಕೆಲವೇ ದಿನಗಳಲ್ಲಿ ಮೆಲೆಂಕಾಫರೇ ಉರುಳಿದರು. ಅದರ ಫಲವಾಗಿ ಜರ್ಮನಿಯಿಂದ ಚೀನದ ವರೆಗಿನ ವಿಶಾಲ ಭೂ ಭಾಗದ ರಕ್ಷಣೆ ಮಾಡುವುದಕ್ಕೆ ತಕ್ಕ ಶಕ್ತಿ ಸಂಪಾದಿಸಲು ಭಾರಿ ಉದ್ಯೋಗಗಳನ್ನು ಮರಳಿ ರಶಿಯ ಸ್ಥಾಪಿಸುವುದೆಂದೂ ಸ್ಟ್ಯಾಲಿನ್ನರ ಕಾಲದಲ್ಲಿ ರೂಢವಾಗಿದ್ದ ಬೆಣ್ಣೆ ತಿನ್ನದಿದ್ದರೂ ಚಿಂತಿಲ್ಲ- ಶತ್ರುವನ್ನು ಹಣ್ಣು ಮಾಡಲು ಹಿಂಜರಿಯಬಾರದೆಂಬ ನೀತಿ ಜ್ಯಾರಿಗೆ ಬರುವುದೆಂದೂ ಹೇಳಲಾಗುತ್ತದೆ. ಅಣುಶಸ್ತ್ರಗಳ ಪ್ರಯೋಗದಿಂದ ಎರಡೂ ಗುಂಪುಗಳು ನಾಶವಾಗುತ್ತವೆ ಎಂದು ಮೆಲೆಂಕಾಫರು ಆಡಿದ್ದ ಮಾತಿನ ಸ್ಥಾನದಲ್ಲಿ ಸಾಮ್ರಾಜ್ಯವಾದಿಗಳ ಸರ್ವನಾಶವೇ ಅಂತ್ಯವಾಗುವುದೆಂದು ರೊಚ್ಚಿನ ಮಾತನ್ನು ಈ ಸಲ ಮೊಲೊಟೋಫರು ಆಡಿರುವುದು ಇದಕ್ಕೆ ನಿದರ್ಶನ.

ಮೆನೊನ್ನರ ಮಂತ್ರಿಮಂಡಳ

ತಿರು–ಕೊಚ್ಚಿಯಲ್ಲಿ ಕಾಂಗ್ರೆಸಿನ ಸರಕಾರ

ನಮ್ಮ ದೇಶದ ರಾಜಕೀಯ ಇತಿಹಾಸದಲ್ಲಿಯೆ ಹೊಸ ಪರಂಪರೆಯೊಂದನ್ನು ಹಾಕಿಕೊಟ್ಟು ಅಧಿಕಾರಕ್ಕೆ ಬಂದಿದ್ದ ತಿರು–ಕೊಚ್ಚಿಯ ಪ್ರಜಾ ಸಮಾಜವಾದಿ ಮಂತ್ರಿಮಂಡಳವು ಕಳೆದವಾರ ಅವಿಶ್ವಾಸ ಸೂಚನೆಗೆ ಬಲಿಬಿದ್ದು ರಾಜೀನಾಮೆಯನ್ನು ಕೊಡಬೇಕಾಯಿತು. ಮಂತ್ರಿ ಮಂಡಳದ ಮೇಲೆ ಸ್ವತಂತ್ರ ಹಾಗೂ ತಿರು-ತಮಿಳು ನಾಡು ಕಾಂಗ್ರೆಸಿನ ಸದಸ್ಯರು ಮಂಡಿಸಿದ್ದ ಅವಿಶ್ವಾಸ ಸೂಚನೆಗಳಿಗೆ ಮುಖ್ಯ ಮಂತ್ರಿ ಪಟ್ಟಂ ತಾನು ಪಿಳ್ಳೆಯವರು ಅಷ್ಟಾಗಿ ಮಹತ್ವಕೊಟ್ಟಂತೆ ಕಾಣಲಿಲ್ಲ. ಕಾಂಗ್ರೆಸಿನವರ ಕೈವಾಡ ಇದರಲ್ಲಿ ಉಂಟೆಂಬುದನ್ನು ತೋರಿಸಲು ಅವರು ಹೆಣಗಿದಷ್ಟು ಮಂತ್ರಿ ಮಂಡಳದ ಮೇಲೆ ಕಾಂಗ್ರೆಸೇತರ ಪಕ್ಷಗಳ ವಿಶ್ವಾಸವಾದರೂ ಉಳಿಯುವಂತೆ ಅವರ ಪ್ರಯತ್ನವನ್ನು ಕೈಗೊಳ್ಳಲಿಲ್ಲ. ಇದರಿಂದಾಗಿ ಕಮ್ಯೂನಿಸ್ಟರು ಅವರನ್ನು ಬೆಂಬಲಿಸಬಹುದೆಂದು ಭಾವಿಸಿದವರ ಅಭಿಪ್ರಾಯ ತಪ್ಪೆಂದು ಸಿದ್ಧವಾಯಿತು. ಅವಿಶ್ವಾಸ ಗೊತ್ತುವಳಿಯನ್ನು ಮತಕ್ಕೆ ಹಾಕುವಾಗ ಕಮ್ಯೂನಿಸ್ಟರು ತಾಟಸ್ಥ್ಯವನ್ನು ವಹಿಸಿದರು. ಗೊತ್ತುವಳಿಯು ಪ್ರಚಂಡ ಬಹುಮತದಿಂದ ಅಂಗೀಕೃತವಾಗಿ, ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕಾಯಿತು.

ಪಿಳ್ಳೆಯವರ ಅಭಿಪ್ರಾಯ

ತಮ್ಮ ಮಂತ್ರಿ ಮಂಡಳದ ರಾಜೀನಾಮೆಯನ್ನು ಕೊಡುವ ಕಾಲಕ್ಕೆ ತಾನು ಪಿಳ್ಳೆಯವರು ರಾಜಪ್ರಮುಖರಿಗೆ ಸಲಹೆ ಕೊಡುವ ತಮ್ಮ ಸಂಪ್ರದಾಯಾಧಿಕಾರವನ್ನು ಉಪಯೋಗಿಸಿ, ಈಗಿನ ಶಾಸನ ಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆಗಳನ್ನು ನಡೆಸಬೇಕೆಂದು ಸೂಚಿಸಿದರು. ಈಗಿನ ಶಾಸನ ಸಭೆಯಲ್ಲಿ ಯಾವ ಪಕ್ಷಕ್ಕೂ ನಿಚ್ಚಳ ಬಹುಮತ ಸಿಗುವಷ್ಟು ಸಂಖ್ಯಾಬಲವಿಲ್ಲವಾದುದರಿಂದ, ಹೊಸ ಚುನಾವಣೆಗಳು ಏರ್ಪಡುವುದೇ ಹಿತಕರವೆಂದವರು ಅಭಿಪ್ರಾಯಪಟ್ಟರು. ಆದರೆ ಹೊಸತಾಗಿ ನಡೆಯುವ ಚುನಾವಣೆಗಳಲ್ಲಾದರೂ ವಿಶಿಷ್ಟ ಪಕ್ಷವೊಂದು ಸ್ಪಷ್ಟ ಬಹುಮತ ಪಡೆಯುವ ಭರವಸೆ ಕೊಡುವುದು ಯಾರಿಗಾದರೂ ಸಾಧ್ಯವಿಲ್ಲ— ಅಲ್ಲದೆ ವರ್ಷಕ್ಕೊಮ್ಮೆ ಹೀಗೆ ಚುನಾವಣೆಗಳನ್ನು ನಡೆಸುತ್ತಾ ಹೋಗುವುದೆಂದರೆ ಅದು ವ್ಯಾವಹಾರಿಕವಾದ ಪ್ರಯೋಗವಲ್ಲ.

ಕಾಂಗ್ರೆಸಿನ ಶಕ್ತಿ

ಹೇಳಿಸಂತೆ ಸಾರ್ವಜನಿಕ ಅಭಿಪ್ರಾಯ ವ್ಯಕ್ತಗೊಳ್ಳುತ್ತಿರುವ ನಡುವಿನಲ್ಲಿ ಎಡ ಪಕ್ಷಗಳವರು ಸಂಯುಕ್ತ ರಂಗವನ್ನು ರಚಿಸಿ, ಮಂತ್ರಿ ಮಂಡಳವನ್ನು ರಚಿಸುವುದಕ್ಕೆ ತಮ್ಮನ್ನು ಆಮಂತ್ರಿಸಬೇಕೆಂದು ರಾಜಪ್ರಮುಖರನ್ನು ಒತ್ತಾಯಿಸ ತೊಡಗಿದರು. ಹಾಗೆಯೇ ಕಾಂಗ್ರೆಸು ಪ್ರಧಾನರು ಸಹ ಪರಿಸ್ಥಿತಿಯ ವಿಮರ್ಶೆಯನ್ನು ಮಾಡಿಕೊಂಡು ಮಂತ್ರಿ ಮಂಡಳ ರಚಿಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿದರು. ರಾಜ ಪ್ರಮುಖರು ಕಾಂಗ್ರೆಸಿನ ಧುರೀಣ ಶ್ರೀ. ಪಿ. ಗೋವಿಂದ ಮೆನನ್ನರನ್ನು ಬರಮಾಡಿಕೊಂಡು ಅವರೊಡನೆ ವಿಚಾರ ವಿನಿಮಯ ನಡೆಸಿದರು. ಈ ಭೇಟಿಯ ವಿವರಗಳನ್ನು ತನ್ನ ಅನುಯಾಯಿಗಳ ಸಭೆಯಲ್ಲಿ ಮೆನೊನ್ನರು ತಿಳಿಸಿದಾಗ ಮಂತ್ರಿ ಮಂಡಳ ರಚಿಸಲು ಕಾಂಗ್ರೆಸು ಮುಂದಾಗಬೇಕೆಂದು ಒಮ್ಮತದ ಅಭಿಪ್ರಾಯಕ್ಕೆ ಬರಲಾಯಿತು. ಕಾಂಗ್ರೆಸಿಗೆ ೧೧೭ ಮಂದಿಯ ಶಾಸನ ಸಭೆಯಲ್ಲಿ ೪೭ ಸ್ಥಾನಗಳಿವೆಯಲ್ಲದೆ ೧೭ ಮಂದಿ ತಿರು-ತಮಿಳು ನಾಡು ಕಾಂಗ್ರೆಸಿನ ಸದಸ್ಯರೂ ಪ್ರಜಾ ಸಮಾಜವಾದಿ ಪಕ್ಷಗಳಿಂದ ಹೊರ ಬಂದಿರುವ ಒಬ್ಬ ಸದಸ್ಯರೂ ಹೀಗೆ ಒಟ್ಟು ೬೫ ಸದಸ್ಯರು ಬೆಂಬಲ ಕೊಡುವರು. ಅಲ್ಲದೆ ಮತ್ತೊಬ್ಬರು ಸ್ವತಂತ್ರರ ಸಹಕಾರದ ಭರವಸೆಯೂ ಸಿಕ್ಕಿರುವುದು.

ಮಂತ್ರಿ ಮಂಡಳ

ಕಾಂಗ್ರೆಸೇತರ ಪಕ್ಷಗಳ ಐಕ್ಯರಂಗಕ್ಕಿಂತ ಈ ಸಂಯುಕ್ತ ಸ್ವರೂಪವು ಹೆಚ್ಚು ಸ್ಥಿರವಾದುದರಿಂದ—ಏಕೆಂದರೆ ಕಾಂಗ್ರೆಸಿನಷ್ಟು ಹೆಚ್ಚು ಸಂಖ್ಯಾಬಲವುಳ್ಳ ಪಕ್ಷ ಬೇರಾವುದೂ ಶಾಸನ ಸಭೆಯಲ್ಲಿಲ್ಲ— ರಾಜ ಪ್ರಮುಖರು ಶ್ರೀ ಮೆನೊನ್ನರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿದರು. ತಮ್ಮ ಸಹೋದ್ಯೋಗಿಗಳಾಗಿ ಮೆನೊನ್ನರು ಬೇರೆ ನಾಲ್ಕು ಮಂದಿಯನ್ನು ಮಂತ್ರಿಗಳಾಗಿ ಆರಿಸಿಕೊಂಡರು. ಇವರೆಲ್ಲರ ಪ್ರತಿಜ್ಞಾ ವಿಧಿಯೂ ಮೊನ್ನೆ ಸೋ

(೭ನೇ ಪುಟ ನೋಡಿರಿ)



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

ಮೆಲೆಂಕಾಫರ ರಾಜೀನಾಮೆಯ ಹಿಂದಿರುವ ಗೂಢ

ಪಕ್ಷದ ಪ್ರಭೃತಿಗಳಲ್ಲಿ ತೀವ್ರ ಸ್ವರೂಪದ ದ್ವಂದ್ವ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಫ್ರೊಮೋಸದ ಸಮಸ್ಯೆ ತನ್ನ ಪ್ರಾಮುಖ್ಯತೆಯನ್ನು ಇನ್ನೂ ಕಳೆದುಕೊಳ್ಳದಿರುವಾಗಲೇ ಎಲ್ಲ ಸುದ್ದಿಗಳನ್ನೂ ಮೆಟ್ಟಿನಿಂತ ವಾರ್ತೆಯಾಗಿ ರಶಿಯದ ಪ್ರಧಾನ ಮಂತ್ರಿ ಮೆಲೆಂಕಾಫರ ರಾಜೀನಾಮೆ ಬಂತು. ಅಮೇರಿಕದ ವಿದೇಶಾಂಗ ಕಾರ್ಯದರ್ಶಿ ಡಲ್ಲೆಸರು ಸದ್ಯದಲ್ಲೇ ರಶಿಯದಲ್ಲೊಂದು ಗೊಂದಲ ನಡೆಯುತ್ತದೆ ಎಂದು ಹೇಳುತ್ತ ಬಂದಿದ್ದರೂ ಆ ಗೊಂದಲದ ಸ್ವರೂಪವೇನೆಂದು ಅವರಿಗೂ ತಿಳಿದಿರಲಿಲ್ಲವೆಂದು ಕಂಡುದರಿಂದ ಮೆಲೆಂಕಾಫರ ರಾಜೀನಾಮೆ ಇಡೀ ಜಗತ್ತನ್ನೆ ಆಶ್ಚರ್ಯಗೊಳಿಸಿತು! ಸ್ಟಾಲಿನ್ನರ ಮರಣಾನಂತರ ರಶ್ಯದ ಪ್ರಥಮ ಮನುಷ್ಯನೆಂದು ಮನ್ನಿಸಲ್ಪಡುತ್ತಿದ್ದ ಮೆಲೆಂಕಾಫರು ತನ್ನ ಅಧಿಕಾರಸ್ಥಾನವನ್ನು ಸ್ವೇಚ್ಛೆಯಿಂದ ಬಿಟ್ಟುಗೊಟ್ಟದ್ದು ಕಮ್ಯೂನಿಸ್ಟ ರಾಷ್ಟ್ರಗಳ ಇತಿಹಾಸದಲ್ಲಿ ಹಿಂದೆಂದೂ ನಡೆದಿರದ ಹೊಸ ರೀತಿಯ ಘಟನೆ. ತಾನು ರಾಜ್ಯದ ಆಡಳಿತವನ್ನು ಚೆನ್ನಾಗಿ ಸಾಗಿಸಿಕೊಂಡು ಹೋಗಲಾರದ ಅನನುಭವಿಕನಾಗಿದ್ದೇನೆ ಮತ್ತು ಇದರಿಂದಾಗಿಯೇ ಕೃಷಿ ವಿಭಾಗದಲ್ಲಿ ಅನೇಕ ತೊಂದರೆಗಳನ್ನು ಮಾಡುವಂತಾಯಿತು ಎಂದು ಪ್ರಾಂಜಲವಾಗಿ ತಪ್ಪನ್ನು ಒಪ್ಪಿಕೊಂಡು ರಾಜೀನಾಮೆಯನ್ನು ಕೊಡುವಷ್ಟು ಪ್ರಾಮಾಣಿಕತೆ ಜಗತ್ತಿನ ಯಾವ ಪ್ರಧಾನಿಯಲ್ಲೂ ಇದ್ದಂತೆ ಕಾಣುವುದಿಲ್ಲ— ಅಧಿಕಾರವೇ ಸರ್ವಸ್ವವಾಗಿರುವ ಕಮ್ಯೂನಿಸ್ಟ ರಾಷ್ಟ್ರಗಳ ನಾಯಕ ಗುಂಪಿನ ಮಟ್ಟಿಗಂತೂ ಇದು ಕನಸಿನಲ್ಲೂ ಎಣಿಸಲಿಕ್ಕಾಗದ ವಿಷಯ. ಹಾಗಿದ್ದರೂ ರಶಿಯದಲ್ಲೊಂದು ವಿವಾದ ನಡೆಯಿತು—ಇದರ ಹಿನ್ನೆಲೆ ಏನಿರಬಹುದು?

ಒಳಗಿನ ಕುಹಕ

ರಶಿಯದ ಆಗುಹೋಗುಗಳ ಪರಿಚಯ ಸ್ವಲ್ಪ ಮಟ್ಟಿಗಾದರೂ ಇದ್ದವರು ಎರಡು ಪ್ರಾಮುಖ್ಯ ವಿಷಯಗಳನ್ನು ಮೆಲೆಂಕಾಫರ ರಾಜೀನಾಮೆಯ ಹಿನ್ನೆಲೆಯಾಗಿ ಹೇಳುತ್ತಾರೆ – ಅವೆಂದರೆ, ಅಧಿಕಾರಕ್ಕಾಗಿ ರಶಿಯದಲ್ಲಿ ಜಗಳ ಇನ್ನೂ ಮುಗಿದಿಲ್ಲ ಎಂಬುದೊಂದು; ಮೆಲೆಂಕಾಫರ ಧೋರಣೆ ಕಮ್ಯೂನಿಸ್ಟ್ ಪ್ರಭೃತಿಗಳಿಗೆ ಸರಿಬಂದಿಲ್ಲ ಎಂಬುದಿನ್ನೊಂದು. ಇವೆರಡೂ ವಿಷಯಗಳ ತುಲನಾತ್ಮಕ ವಿಚಾರವನ್ನು ಮಾಡಿದರೆ ರಶಿಯದ ಇಂದಿನ ಪರಿಸ್ಥಿತಿ ಮತ್ತದರ ರಾಜಕೀಯ ಮನೋಭಾವದ ಪರಿಚಯ ಸ್ವಲ್ಪ ಮಟ್ಟಿಗಾದರೂ ಆದೀತು. ಮೆಲೆಂಕಾಫರು ಪ್ರಧಾನಿ ಪಟ್ಟವನ್ನಷ್ಟೇ ಬಿಟ್ಟುಗೊಟ್ಟದ್ದಲ್ಲದೆ, ಅಧಿಕಾರಸ್ಥಾನದಿಂದ ಹೊರಕ್ಕೇನೂ ಹಾಕಲ್ಪಟ್ಟಿಲ್ಲ. ಅವರನ್ನು ಉಪಪ್ರಧಾನ ಮಂತ್ರಿಗಳಲ್ಲಿ ಒಬ್ಬರೆಂದು ನೇಮಿಸಲಾಗಿದೆ; ಮತ್ತು ವಿದ್ಯುಚ್ಛಕ್ತಿ (ಹಾಗು ಅಣು) ಕೇಂದ್ರಗಳ ವಿಭಾಗವನ್ನು ಅವರ ಕೈಗೆ ಒಪ್ಪಿಸಿಕೊಡಲಾಗಿದೆ. ಮೆಲೆಂಕಾಫರಿಗೆ ಈ ವಿಭಾಗದಲ್ಲಿ ಸಾಕಷ್ಟು ಅನುಭವವಿದೆಯೆಂದು ಇದರ ಅರ್ಥವೆ? ನಮಗೆ ಹೊಳೆದಂತೆ ಹಾಗಿರಲಾರದು– ಅದು ಮೆಲೆಂಕಾಫರಿಂದ ಇನ್ನೊಂದು ಸಲ ತನ್ನಿಂದ ತಪ್ಪಾಯಿತೆಂಬ ಹೇಳಿಕೆಯನ್ನು ಪಡೆಯಲು ಪೂರ್ವಭಾವಿಯಾದ ವ್ಯವಸ್ಥೆಯಾಗಿರಬಹುದೆಂದು ತೋರುತ್ತದೆ. ರಾಷ್ಟ್ರದ ಪ್ರಗತಿ ಮತ್ತು ಸಂರಕ್ಷಣ ವಿಷಯದಲ್ಲಿ ಶಕ್ತಿ ಕೇಂದ್ರಗಳ ಅಭಿವೃದ್ಧಿಯು ಮಹತ್ವದ ಪಾತ್ರವನ್ನು ವಹಿಸುವುದರಿಂದ ಅವುಗಳ ಆಡಳಿತದಲ್ಲಿ ಸ್ವಲ್ಪ ನ್ಯೂನತೆ ಉಂಟಾದರೂ ಸಾಕು—ಅದರ ಹೊಣೆ ಹೊತ್ತವನ ಮೇಲೆ ಗಂಭೀರವಾದ ಆರೋಪವನ್ನು ಹೇರಲು ಕಮ್ಯೂನಿಷ್ಟರು ಹಿಂದೆ ಮುಂದೆ ನೋಡಲಿಕ್ಕಿಲ್ಲ. ಹಾಗೆ ಇನ್ನೊಮ್ಮೆ ಆರೋಪಹೊರಿಸಿ, ಮೆಲೆಂಕಾಫರನ್ನು ಸಂಪೂರ್ಣ ಬಗ್ಗು ಬಡೆಯುವುದಕ್ಕಾಗಿಯೇ ಈಗಿನ ತಂತ್ರ ನಡೆದಿರಬೇಕೆಂಬುದಕ್ಕೆ ಬಲವಾದ ಕಾರಣಗಳು ಕಂಡು ಬರುತ್ತವೆ.

ಮೆಲೆಂಕಾಫರ ನಿಲುಮೆ

ಸ್ಟಾಲಿನ್ನರು ಮರಣಗೊಂಡ ಗಳಿಗೆಯಲ್ಲಿ ಮೆಲೆಂಕಾಫರು ರಶಿಯದ ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿಯಾಗಿದ್ದರು. ರಶಿಯದ ಗುಟ್ಟುಬಲ್ಲವರು ಅಲ್ಲಿ ಸರಕಾರಕ್ಕಿಂತಲೂ ಸರಕಾರವನ್ನು ನಡೆಸುವ ಪಕ್ಷದ ಅಂಗ ಮಹತ್ವದ್ದೆಂದು ಹೇಳುತ್ತಾರೆ– ಪಕ್ಷದ ಪ್ರಧಾನಿಯನ್ನು ತಿರಸ್ಕರಿಸಿ, ರಶಿಯದ ಸರಕಾರ ಕೆಲಸ ಮಾಡಲಾರದೆಂದು ಹೇಳಲಾಗುತ್ತದೆ. ಕಮ್ಯೂನಿಸ್ಟ ಪಕ್ಷದ ಎಲ್ಲ ಅಧಿಕಾರವನ್ನೂ ಮೆಲೆಂಕಾಫರು ಪಡೆದಿದ್ದುದರಿಂದಲೇ ತಮಗಿಂತ ಹಿರಿಯರಾದ ಅನೇಕ ಪ್ರಮುಖ ರಾಜಕೀಯ ಮುಖಂಡರಿದ್ದಂತೆಯೇ ಮೆಲೆಂಕಾಫರು ಪ್ರಧಾನ ಮಂತ್ರಿಯಾಗಿ, ಸ್ಟಾಲಿನ್ನರ ಉತ್ತರಾಧಿಕಾರಿಯಾಗಿ, ಅಧಿಕಾರಕ್ಕೆ ಬಂದರೆಂದರೆ ತಪ್ಪಲ್ಲ. ರಾಜಕೀಯ ಶಕ್ತಿಯನ್ನಷ್ಟೆ ಪರಿಗಣಿಸುವುದಾಗಿದ್ದಲ್ಲಿ ಗುಪ್ತ ಪೋಲೀಸು ಪಡೆಯ ವರಿಷ್ಠರಾಗಿದ್ದ ಲಾವ್ರೆಂಟಿ ಬೆರಿಯಾರಾಗಲೀ ತಪ್ಪಿದರೆ ಮೊಲೊಟೋಫರಾಗಲೀ ಅಧಿಕಾರಕ್ಕೆ ಬರುತ್ತಿದ್ದರು. ಇವರಿದ್ದಂತೆಯೇ ಮೆಲೆಂಕಾಫರು ಕಮ್ಯೂನಿಸ್ಟ್ ಪಕ್ಷದ ಮೇಲೆ ಅದುವರೆಗೆ ತಮಗಿದ್ದ ಹಿಡಿತದ ಬಲದಿಂದ ಪ್ರಧಾನ ಮಂತ್ರಿಯಾದರೂ ಅಧಿಕಾರಕ್ಕಾಗಿ ಆಗಲೇ ಜಗಳವಿದ್ದಂತೆ ಕಾಣುತ್ತದೆ. ಏಕೆಂದರೆ ಹಿಂದಿನಿಂದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಸ್ಥಾನವನ್ನು ಅವರು ಬಿಟ್ಟುಕೊಡಬೇಕಾಯಿತು. ಆ ಸ್ಥಾನ ನಿಕೀಟಾ ಕ್ರುಶೇವರ ಕೈಗೆ ಹೋಯಿತು. ಪರಿಣಾಮದಲ್ಲಿ, ಮೆಲೆಂಕಾಫರಿಗೆ ಪಕ್ಷದ ಮೇಲಿನ ಹಿಡಿತ ಇಲ್ಲದೆ, ರಾಜಕೀಯ ಸೂತ್ರವಷ್ಟೆ ಬಂತು. ಇದು ರಶಿಯದ ಆಡಳಿತವನ್ನು ನಿರ್ವಹಿಸುವುದಕ್ಕೆ ಅಷ್ಟು ಅನುಕೂಲವಾಗಿರಲಿಲ್ಲ. ಆದರೂ ಮೆಲೆಂಕಾಫರು ರಾಜಕೀಯ ಕ್ಷೇತ್ರದಲ್ಲಿ ಸ್ಟಾಲಿನ್ನರು ಅನುಸರಿಸಿದ್ದ ಬಿಗಿಯಾದ ಧೋರಣೆಯನ್ನು ಸಡಿಲುಗೊಳಿಸಿ, ತನ್ಮೂಲಕ ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನು ಗಳಿಸಿ, ಪಕ್ಷದ ಮೇಲಿನ ಪ್ರತಿಷ್ಠೆ ತಪ್ಪಿಹೋದ ನಷ್ಟವನ್ನು ಭರ್ತಿಮಾಡಲು ಪ್ರಯತ್ನಿಸಿದರು. ಫಲವಾಗಿ, ರಾಜಕೀಯ ಸೆರೆಯಾಳುಗಳಲ್ಲಿ ಹಲವರ ಬಿಡುಗಡೆಯಾಯಿತು ಕಾರ್ಖಾನೆಗಳನ್ನು ಯುದ್ಧ ಸಿದ್ಧತೆಗಾಗಿ ಅಥವಾ ಸೌಮ್ಯ ಮಾತಿನಲ್ಲಿ ಹೇಳುವುದಾದರೆ ಸೈನಿಕ ಶಕ್ತಿಯ ಅಭಿವೃದ್ಧಿಗಾಗಿ ಉಪಯೋಗಿಸುವ ಬದಲು, ನಿತ್ಯೋಪಯೋಗಕ್ಕೆ ಅಗತ್ಯವೆನಿಸಿದ ಸರಕುಗಳನ್ನು ಉತ್ಪಾದಿಸುವುದಕ್ಕೂ ಪುಷ್ಕಳ ಆಹಾರವನ್ನೊದಗಿಸುವುದಕ್ಕೂ ಮೆಲೆಂಕಾಫರು ಮುಂದಾದರು.

ಕ್ರುಶೇವರ ತಂತ್ರ

ಮೆಲೆಂಕಾಫರು ಅನುಸರಿಸಿದ ಈ ಉಪಾಯ ಕಮ್ಯೂನಿಷ್ಟ ಪಕ್ಷದ ಪ್ರಭೃತಿ ಕ್ರುಶೇವರ ಮನಸ್ಸಿಗೆ ಸ್ವಲ್ಪವೂ ಹಿಡಿಸಲಿಲ್ಲ—ಅವರು ತಮ್ಮ ವರ್ಚಸ್ಸು ಮಂತ್ರಿ ಮಂಡಳದ ಮೇಲೆ ನಡೆಯಬೇಕು ಎಂದು ಬಯಸುತ್ತಿದ್ದರು. ಮಂತ್ರಿ ಮಂಡಳವು ಪಕ್ಷದ ಹಿಡಿತದಿಂದ ಹೊರಗಾಗಬಾರದೆಂದು ಅವರು ಇಚ್ಛಿಸಿದ್ದರು—ಮೆಲೆಂಕಾಫರು ಜನ ಸಾಮಾನ್ಯರ ಗೌರವಾದರಗಳನ್ನು ಪಕ್ಷದ ಚೌಕಟ್ಟಿನ ಹೊರಗೆ, ಅಂದರೆ ರಾಜಕೀಯ ಕ್ಷೇತ್ರದಲ್ಲಿಯೇ ಸುಧಾರಣೆಗಳನ್ನು ಮಾಡುವ ಮೂಲಕ, ಸಂಪಾದಿಸಲು ಪ್ರಯತ್ನಿಸುವುದನ್ನು ಕಂಡ ಕ್ರುಶೇವರು ಮೆಲೆಂಕಾಫರ ಧೋರಣೆಯನ್ನು ಕಟು ಮಾತಿನಲ್ಲಿ ಟೀಕಿಸ ಹತ್ತಿದರು. ಮೆಲೆಂಕಾಫರು ಹೆಚ್ಚು ಮಾತನಾಡುತ್ತಿರಲಿಲ್ಲ—ಮಿತಭಾಷಿಯಾದ ಅವರ ವ್ಯಕ್ತಿತ್ವಕ್ಕೆ ಭಾಷಣ ಮಾಡದೆ ಮೌನವಾಗಿ ಉಳಿಯುವುದು ಸಹಜ ರೀತಿಯೆಂದೇ ಎಲ್ಲರೂ ಭಾವಿಸಿದರು. ಆದರೆ ವಾಚಾಳಿಯಾದ ಕ್ರುಶೇವರು ಮೆಲೆಂಕಾಫರ ನಿಲುಮೆಯನ್ನು ಖಂಡಿಸುತ್ತಲೇ ಹೋದರು— ಅವರು ನಿತ್ಯೋಪಯೋಗದ ವಸ್ತುಗಳನ್ನೊದಗಿಸುವ ಮತ್ತು ಕೃಷಿ ಉತ್ಪನ್ನವನ್ನು ಹೆಚ್ಚಿಸುವ ಪ್ರಯತ್ನಗಳು ರಶಿಯವನ್ನು ಪತನಕ್ಕೊಯ್ಯುತ್ತವೆ ಎಂದು ಎಚ್ಚರಿಸುತ್ತಾ ಸೈನಿಕ ಶಕ್ತಿಯ ಸಂವರ್ಧನ ಮಾಡುವ ಕಾರ್ಖಾನೆಗಳ ಚಟುವಟಿಕೆಯೇ ರಶಿಯದ ಮೇಲ್ಮೆಯ ಮಾರ್ಗ ಎಂದು ಉಪದೇಶಿಸ ತೊಡಗಿದರು. ಹೀಗೆ ಸ್ಟಾಲಿನ್ನರ ನೀತಿಯನ್ನೆ ಮರಳಿ ಅನುಸರಿಸುವ ಆವಶ್ಯಕತೆಯನ್ನು ಅವರು ಒತ್ತಿಹೇಳಿದರು ಇದಕ್ಕೆ ಸರಿಯಾಗಿ ಮೆಲೆಂಕಾಫರು ವಿದೇಶಗಳ ಕುರಿತು ಅನುಸರಿಸಿದ ಸೌಮ್ಯ ಧೋರಣೆಯು ರಶಿಯಕ್ಕೆ ಯಾವ ಪ್ರಯೋಜನವನ್ನೂ ಕೊಡದೆ ಹೋಯಿತು— ಜರ್ಮನಿಯ ಪುನಃ ಶಸ್ತ್ರೀಕರಣಕ್ಕೆ ಒಪ್ಪಿಗೆ ನೀಡುವ ಪ್ಯಾರಿಸ್ ಒಡಂಬಡಿಕೆಗಳ ವಿರುದ್ಧ ಕೊಟ್ಟ ಎಚ್ಚರಿಕೆ ನಿಷ್ಫಲವಾಯಿತು; ಪಾಶ್ಚಾತ್ಯರು ಸೈನಿಕ ಶಕ್ತಿ

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ



ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

UDIPI MUNICIPALITY

TENDER NOTICE.

Sealed tenders will be received by the undersigned up to 4—0 p. m. on 23—2—1955 for ordinary Kerosene Petromax street lighting for the year 1955—56. Any particulars as to conditions or contract may be obtained from the Municipal Office during Office hours on working days.

Municipal Office, Udipi.
Dated: 10-2-1955.

K. GOPALA MENON,
Commissioner,
Udipi Municipality, Udipi.

ಹೆಚ್ಚಿಸುವ ತಮ್ಮ ಹವ್ಯಾಸವನ್ನು ಸ್ವಲ್ಪವೂ ಬಿಡಲಿಲ್ಲ. ರಶಿಯದ ಸೌಮ್ಯ ನೀತಿಯನ್ನು ಇಷ್ಟವಿದ್ದಂತೆ ಒಪ್ಪಿಕೊಳ್ಳಲು ಅವರು ಸಿದ್ಧರಾಗಲಿಲ್ಲ. ಹೀಗಾಗಿ ರಶಿಯವು ಶಾನು ಬಡವಾಯಿತಲ್ಲದೆ— ತನ್ನ ತ್ಯಾಗಕ್ಕೆ ಅಥವಾ ಔದಾರ್ಯಕ್ಕೆ ತಕ್ಕ ಪ್ರತಿಫಲವನ್ನು ಪಡೆಯದೆ ಪ್ರತಿಷ್ಠೆಯನ್ನೆ ಕಳೆದು ಕೊಂಡಿತು.

ಸೈನ್ಯದ ಪಾತ್ರ

ಪಾಶ್ಚಿಮಾತ್ಯ ರಾಷ್ಟ್ರಗಳು ಮೆಲೆಂಕಾಫರು ತೋರಿಸಿದ ಉದಾರವಾದ ಮನೋಭಾವದ ಪ್ರಾಮಾಣಿಕತೆಯನ್ನು ಶಂಕಿಸುತ್ತಾ ಯುದ್ಧ ಶಕ್ತಿಯನ್ನು ಹೆಚ್ಚಿಸುವ ತಮ್ಮ ಹವ್ಯಾಸವನ್ನು ಮುಂದೊತ್ತಿಕೊಂಡು ಹೋದದ್ದು ರಶಿಯದ ಸೈನಿಕಾಧಿಕಾರಿಗಳ ಅಸೂಯೆಯನ್ನೂ ಅಭಿಮಾನವನ್ನೂ ಕೆರಳಿಸಲು ಬಲವಾದ ಕಾರಣವಾಯಿತು. ರಶಿಯದಲ್ಲಿ ಸೈನಿಕ ಅಧಿಕಾರಿಗಳು ತಮ್ಮ ವರ್ಚಸ್ಸನ್ನು ಸ್ಟಾಲಿನ್ನರ ಮರಣಾನಂತರ ಹೆಚ್ಚಿಸುತ್ತಲೇ ಬಂದಿದ್ದರು. ಬೇರಿಯಾದ ಅಧೀನದಲ್ಲಿದ್ದ ಗುಪ್ತ ಪೋಲೀಸು ಪಡೆಯು ಸೈನ್ಯಕ್ಕೆ ಯೋಗ್ಯ ಪ್ರತಿಸ್ಪರ್ಧಿಯಾಗಿದ್ದುಕೊಂಡು ಸೈನ್ಯಾಧಿಕಾರಿಗಳನ್ನು ಕಡೆಗಣಿಸುವಷ್ಟು ಪ್ರಾಬಲ್ಯತೋರಿಸಿದುದನ್ನು ಕಂಡು, ಬೇರಿಯರನ್ನೆ ಗುಂಡಿಕ್ಕಿಕೊಲ್ಲಲಾಯಿತು. ಇಪ್ಪತ್ತು ವರ್ಷಗಳ ಹಿಂದೆ ಅವರೇನೊ ಒಳಸಂಚು ನಡೆಸಿದರೆಂಬುದೇ ಖಟ್ಲೆಹಾಕಿ ಮರಣ ದಂಡನೆಯನು ವಿಧಿಸಲು ಸೈನಿಕ ನ್ಯಾಯಾಲಯಕ್ಕೆ ಕಮಬದ್ಧವಾದ ಕಾರಣವಾಯಿತು! ಅಂದಿನಿಂದ ಗುಪ್ತ ಪೋಲೀಸು ಪಡೆಯ ವರ್ಚಸ್ಸು ತಗ್ಗುತ್ತಾ ಸೈನ್ಯಾಧಿಕಾರಿಗಳ ಪ್ರತಿಷ್ಠೆ ಬೆಳೆಯುತ್ತಾ ಬಂತು. ಪಾಶ್ಚಾತ್ಯ ರಾಷ್ಟ್ರಗಳು ರಶಿಯದ ಸೈನಿಕಶಕ್ತಿಯನ್ನು ಮೂದಲಿಸುತಿದ್ದುದರಿಂದ ಅವರೆಲ್ಲರೂ ಕೆರಳಿನಿಂತು, ಸೌಮ್ಯ ವಿದೇಶ ಧೋರಣೆಯ ಪ್ರವರ್ತಕರಾದ ಮೆಲೆಂಕಾಫರ ವಿರುದ್ಧ ತಿರುಗಿ ಬಿದ್ದರೆಂದು ಹೇಳಿದರೂ ತಪ್ಪಾಗದು. ಇದಕ್ಕೆ ಕ್ರುಶೇವರು ಉತ್ತೇಜನೆಯನ್ನಿತ್ತರೆಂದೂ ಊಹಿಸಬಹುದು— ಏಕೆಂದರೆ ಕ್ರುಶೇವರು ಈಗ ಪ್ರಧಾನ ಮಂತ್ರಿಯಾಗಿ ಮಾಡಿರುವ ವ್ಯಕ್ತಿ ಸಂರಕ್ಷಣ ಮಂತ್ರಿಯಾಗಿದ್ದ ಹಾಗು ಸೈನಿಕ ರಾಜಕಾರಣಿಯೆಂದು ಹೆಸರಾದ ಮಾರ್ಶಲ್ ನಿಕೋಲಾಯ್ ಬಲ್ಗೇನಿನ್; ಈಗ ಸಂರಕ್ಷಣ ಮಂತ್ರಿಯಾಗಿ ನೇಮಕಗೊಂಡಿರುವವರು ಸಹ ದ್ವಿತೀಯ ಮಹಾಯುದ್ಧದಲ್ಲಿ ರಶಿಯದ ಸೇನೆಗಳ ನಾಯಕತ್ವವಹಿಸಿ ಜಯಸಂಪಾದಿಸಿದ ಪ್ರಚಂಡ ವೀರ ಮಾರ್ಶಲ್ ಜುಕೋವ್. ಇವರಿಬ್ಬರೂ ಕಮ್ಯೂನಿಸ್ಟ್ ಪಕ್ಷದ ಸುಪೆದಾರ ಕ್ರುಶೇವರಿಂದ ಸ್ವತಃ ಆರಿಸಲ್ಪಟ್ಟವರು!

ಮುಂದಿನ ನಿಲುವು

ಕ್ರುಶೇವರು ಇಂಥದೊಂದು ತಂತ್ರವನ್ನು ನಡೆಸುತ್ತಿದ್ದರೆಂದು ರಶಿಯದ ನಿಕಟ ಪರಿಚಯವಿದ್ದ ವರ್ತುಲಗಳು ಈಚೆಗೆ ಕೆಲ ಸಮಯದಿಂದ ಹೇಳುತ್ತಲೇ ಇದ್ದರೂ ಅವರನ್ನು ಮೆಲೆಂಕಾಫರೇ ಹತ್ತಿಕ್ಕಿಯಾರೆಂದು ಎಲ್ಲರೂ ನಂಬಿದ್ದರು. ಹಾಗೇನೂ ಮಾಡಲಾರದೆ ಕ್ರುಶೇವರ ಅಧಿಕಾರ ವಾಣಿಯನ್ನು ಒಪ್ಪಿಕೊಳ್ಳದೆ ಮೆಲೆಂಕಾಫರು ನಡೆಯುವಂತಿಲ್ಲವೆಂದು ಹೆಚ್ಚು ಸ್ಪಷ್ಟವಾಗಿ ಗೊತ್ತಾದದ್ದು ಕಳೆದ ಜನವರಿಯಲ್ಲಿ— ಮೆಲೆಂಕಾಫರು ವರಿಷ್ಠರಾಗಿರುವ ಸರಕಾರದ ಮುಖ ಪತ್ರ ಇಜ್ವೆಸ್ಟಿಯವು ಜನರಿಗೆ ಹೆಚ್ಚು ಸುಖವೊದಗಿಸುವ ಧೋರಣೆಯೇ ಸರಿಯೆಂದು ಉಪದೇಶಿಸಿತ್ತು; ತದ್ವಿರುದ್ಧವಾಗಿ ಕ್ರುಶೇವರ ಕೈಯಲ್ಲಿನ ಕಮ್ಯುನಿಸ್ಟ್ ಪಕ್ಷದ ಮುಖ ಪತ್ರ ಪ್ರವಡಾವು ಉಕ್ಕಿನ ಕಾರ್ಖಾನೆಯೇ ಮುಂತಾದ ಭಾರಿ ಉದ್ಯೋಗಗಳನ್ನು ಸ್ಥಾಪಿಸಿ ಸೈನ್ಯ ಶಕ್ತಿಯನ್ನು ಹೆಚ್ಚಿಸಬೇಕೆಂದು ವಾದಿಸುತಿತ್ತು. ಈ ದ್ವಂದ್ವದಲ್ಲಿ ಕ್ರುಶೇವರ ಕೈಯೇ ಮೇಲಾಗಿ, ಮೆಲೆಂಕಾಫರ ನೀತಿಯ ಪ್ರತೀಕವಾಗಿದ್ದ ವಾಣಿಜ್ಯಮಂತ್ರಿ ಮೈಕೊಯನ್ನರು ರಾಜೀನಾಮೆ ಕೊಡುವುದು ಅನಿವಾರ್ಯವಾಯಿತು. ಅವರ ಸ್ಥಾನವನ್ನು ಕ್ರುಶೇವರ ಬಂಟನೊಬ್ಬ ವಹಿಸಿದನು. ಇದಾದ ಕೆಲವೇ ದಿನಗಳಲ್ಲಿ ಮೆಲೆಂಕಾಫರೇ ಉರುಳಿದರು ಅದರ ಫಲವಾಗಿ ಜರ್ಮನಿಯಿಂದ ಚೀನದ ವರೆಗಿನ ವಿಶಾಲ ಭೂ ಭಾಗದ ರಕ್ಷಣೆ ಮಾಡುವುದಕ್ಕೆ ತಕ್ಕ ಶಕ್ತಿ ಸಂಪಾದಿಸಲು ಭಾರಿ ಉದ್ಯೋಗಗಳನ್ನು ಮರಳಿ ರಶಿಯ ಸ್ಥಾಪಿಸುವದೆಂದೂ ಸ್ಟಾಲಿನ್ನರ ಕಾಲದಲ್ಲಿ ರೂಢವಾಗಿದ್ದ ಬೆಣ್ಣೆ ತಿನ್ನದಿದ್ದರೂ ಚಿಂತಿಲ್ಲ- ಶತ್ರುವನ್ನು ಹಣ್ಣುಮಾಡಲು ಹಿಂಜರಿಯಬಾರದೆಂಬ ನೀತಿ ಜಾರಿಗೆ ಬರುವುದೆಂದೂ ಹೇಳಲಾಗುತ್ತದೆ. ಅಣುಶಸ್ತ್ರಗಳ ಪ್ರಯೋಗದಿಂದ ಎರಡೂ ಗುಂಪುಗಳು ನಾಶವಾಗುತ್ತವೆ ಎಂದು ಮೆಲೆಂಕಾಫರು ಆಡಿದ್ದ ಮಾತಿನ ಸ್ಥಾನದಲ್ಲಿ ಸಾಮ್ರಾಜ್ಯವಾದಿಗಳ ಸಮಾಜವೇ ಅಂತ್ಯವಾಗುವುದೆಂದು ರೊಚ್ಚಿನ ಮಾತನ್ನು ಈ ಸಲ ಮೊಲೊಟೋಫರು ಆಡಿರುವುದು ಇದಕ್ಕೆ ನಿದರ್ಶನ.

ಮೆನೊನ್ನರ ಮಂತ್ರಿಮಂಡಳ

ತಿರು-ಕೊಚ್ಚಿಯಲ್ಲಿ ಕಾಂಗ್ರೆಸಿನ ಸರಕಾರ

ನಮ್ಮ ದೇಶದ ರಾಜಕೀಯ ಇತಿಹಾಸದಲ್ಲಿಯೆ ಹೊಸ ಪರಂಪರೆಯೊಂದನ್ನು ಹಾಕಿಕೊಟ್ಟು ಅಧಿಕಾರಕ್ಕೆ ಬಂದಿದ್ದ ತಿರು-ಕೊಚ್ಚಿಯ ಪ್ರಜಾ ಸಮಾಜವಾದಿ ಮಂತ್ರಿಮಂಡಳವು ಕಳೆದವಾರ ಅವಿಶ್ವಾಸ ಸೂಚನೆಗೆ ಬಲಿಬಿದ್ದು ರಾಜಿನಾಮೆಯನ್ನು ಕೊಡಬೇಕಾಯಿತು. ಮಂತ್ರಿ ಮಂಡಳದ ಮೇಲೆ ಸ್ವತಂತ್ರ ಹಾಗೂ ತಿರು-ತಮಿಳು ನಾಡು ಕಾಂಗ್ರೆಸಿನ ಸದಸ್ಯರು ಮಂಡಿಸಿದ್ದ ಅವಿಶ್ವಾಸ ಸೂಚನೆಗಳಿಗೆ ಮುಖ್ಯ ಮಂತ್ರಿ ಪಟ್ಟಂತಾನು ಪಿಳ್ಳೆಯವರು ಅಷ್ಟಾಗಿ ಮಹತ್ವಕೊಟ್ಟಂತೆ ಕಾಣಲಿಲ್ಲ- ಕಾಂಗ್ರೆಸಿನವರ ಕೈವಾಡ ಇದರಲ್ಲಿ ಉಂಟೆಂಬುದನ್ನು ತೋರಿಸಲು ಅವರು ಹೆಣಗಿದಷ್ಟು ಮಂತ್ರಿ ಮಂಡಳದ ಮೇಲೆ ಕಾಂಗ್ರೆಸೇತರ ಪಕ್ಷಗಳ ವಿಶ್ವಾಸವಾದರೂ ಉಳಿಯುವಂತೆ ಅವರ ಪ್ರಯತ್ನವನ್ನು ಕೈಗೊಳ್ಳಲಿಲ್ಲ. ಇದರಿಂದಾಗಿ ಕಮ್ಯುನಿಷ್ಟರು ಅವರನ್ನು ಬೆಂಬಲಿಸಬಹುದೆಂದು ಭಾವಿಸಿದವರ ಅಭಿಪ್ರಾಯ ತಪ್ಪೆಂದುಸಿದ್ಧವಾಯಿತು. ಅವಿಶ್ವಾಸ ಗೊತ್ತುವಳಿಯನ್ನು ಮತಕ್ಕೆ ಹಾಕುವಾಗ ಕಮ್ಯೂನಿಸ್ಟರು ತಾಟಸ್ಥ್ಯವನ್ನು ವಹಿಸಿದರು. ಗೊತ್ತುವಳಿಯು ಪ್ರಚಂಡ ಬಹುಮತದಿಂದ ಅಂಗೀಕೃತವಾಗಿ, ಮಂತ್ರಿ ಮಂಡಲ ರಾಜೀನಾಮೆ ಕೊಡಬೇಕಾಯಿತು.

ಪಿಳ್ಳೆಯವರ ಅಭಿಪ್ರಾಯ

ತಮ್ಮ ಮಂತ್ರಿ ಮಂಡಳದ ರಾಜೀನಾಮೆಯನ್ನು ಕೊಡುವ ಕಾಲಕ್ಕೆ ತಾನು ಪಿಳ್ಳೆಯವರು ರಾಜಪ್ರಮುಖರಿಗೆ ಸಲಹೆ ಕೊಡುವ ತಮ್ಮ ಸಂಪ್ರದಾಯಾಧಿಕಾರವನ್ನು ಉಪಯೋಗಿಸಿ, ಈಗಿನ ಶಾಸನ ಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆಗಳನ್ನು ನಡೆಸಬೇಕೆಂದು ಸೂಚಿಸಿದರು. ಈಗಿನ ಶಾಸನ ಸಭೆಯಲ್ಲಿ ಯಾವ ಪಕ್ಷಕ್ಕೂ ನಿಚ್ಚಳ ಬಹುಮತ ಸಿಗುವಷ್ಟು ಸಂಖ್ಯಾಬಲವಿಲ್ಲವಾದುದರಿಂದ, ಹೊಸ ಚುನಾವಣೆಗಳು ಏರ್ಪಡುವುದೇ ಹಿತಕರವೆಂದವರು ಅಭಿಪ್ರಾಯಪಟ್ಟರು. ಆದರೆ ಹೊಸತಾಗಿ ನಡೆಯುವ ಚುನಾವಣೆಗಳಲ್ಲಾದರೂ ವಿಶಿಷ್ಟ ಪಕ್ಷವೊಂದು ಸ್ಪಷ್ಟ ಬಹುಮತ ಪಡೆಯುವ ಭರವಸೆ ಕೊಡುವುದು ಯಾರಿಗಾದರೂ ಸಾಧ್ಯವಿಲ್ಲ— ಅಲ್ಲದೆ ವರ್ಷಕ್ಕೊಮ್ಮೆ ಮಹಾ ಚುನಾವಣೆಗಳನ್ನು ನಡೆಸುತ್ತಾ ಹೋಗುವುದೆಂದರೆ ಅದು ವ್ಯಾವಹಾರಿಕವಾದ ಪ್ರಯೋಗವಲ್ಲ.

ಕಾಂಗ್ರೆಸಿನ ಶಕ್ತಿ

ಮೇಲಿನಂತೆ ಸಾರ್ವಜನಿಕ ಅಭಿಪ್ರಾಯ ವ್ಯಕ್ತಗೊಳ್ಳುತ್ತಿರುವ ನಡುವಿನಲ್ಲಿ ಎಡ ಪಕ್ಷಗಳವರು ಸಂಯುಕ್ತ ರಂಗವನ್ನು ರಚಿಸಿ, ಮಂತ್ರಿ ಮಂಡಳವನ್ನು ರಚಿಸುವುದಕ್ಕೆ ತಮ್ಮನ್ನು ಆಮಂತ್ರಿಸಬೇಕೆಂದು ರಾಜಪ್ರಮುಖರನ್ನು ಒತ್ತಾಯಿಸ ತೊಡಗಿದರು. ಹಾಗೆಯೇ ಕಾಂಗ್ರೆಸು ಪ್ರಧಾನರು ಸಹ ಪರಿಸ್ಥಿತಿಯ ವಿಮರ್ಶೆಯನ್ನು ಮಾಡಿಕೊಂಡು ಮಂತ್ರಿ ಮಂಡಳ ರಚಿಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿದರು. ರಾಜ ಪ್ರಮುಖರು ಕಾಂಗ್ರೆಸಿನ ಧುರೀಣ ಶ್ರೀ. ಪಿ. ಗೋವಿಂದ ಮೆನನ್ನರನ್ನು ಬರಮಾಡಿಕೊಂಡು ಅವರೊಡನೆ ವಿಚಾರ ವಿನಿಮಯ ನಡೆಸಿದರು. ಈ ಭೇಟಿಯ ವಿವರಗಳನ್ನು ತನ್ನ ಅನುಯಾಯಿಗಳ ಸಭೆಯಲ್ಲಿ ಮೆನೊನ್ನರು ತಿಳಿಸಿದಾಗ ಮಂತ್ರಿ ಮಂಡಳ ರಚಿಸಲು ಕಾಂಗ್ರೆಸು ಮುಂದಾಗಬೇಕೆಂದು ಒಮ್ಮತದ ಅಭಿಪ್ರಾಯಕ್ಕೆ ಬರಲಾಯಿತು. ಕಾಂಗ್ರೆಸಿಗೆ ೧೧೮ ಮಂದಿಯ ಶಾಸನ ಸಭೆಯಲ್ಲಿ ೪೫ ಸ್ಥಾನಗಳವೆಯಲ್ಲದೆ ೧೬ ಮಂದಿ ತಿರು-ತಮಿಳು ನಾಡು ಕಾಂಗ್ರೆಸಿನ ಸದಸ್ಯರೂ ಪ್ರಜಾ ಸಮಾಜವಾದಿ ಪಕ್ಷಗಳಿಂದ ಹೊರ ಬಂದಿರುವ ಒಬ್ಬ ಸದಸ್ಯರೂ ಹೀಗೆ ಒಟ್ಟು ೬೨ ಸದಸ್ಯರು - ಬೆಂಬಲ ಕೊಡುವರು. ಅಲ್ಲದೆ ಮತ್ತೊಬ್ಬರು ಸ್ವತಂತ್ರದ ಸಹಕಾರದ ಭರವಸೆಯೂ ಸಿಕ್ಕಿರುವುದು.

ಮಂತ್ರಿ ಮಂಡಳ

ಕಾಂಗ್ರೆಸೇತರ ಪಕ್ಷಗಳ ಐಕ್ಯರಂಗಕ್ಕಿಂತ ಈ ಸಂಯುಕ್ತ ಸ್ವರೂಪವು ಹೆಚ್ಚು ಸ್ಥಿರವಾದುದರಿಂದ—ಏಕೆಂದರೆ ಕಾಂಗ್ರೆಸಿನಷ್ಟು ಹೆಚ್ಚು ಸಂಖ್ಯಾಬಲವುಳ್ಳ ಪಕ್ಷ ಬೇರಾವುದೂ ಶಾಸನ ಸಭೆಯಲ್ಲಿಲ್ಲ— ರಾಜ ಪ್ರಮುಖರು ಶ್ರೀ ಮೆನೊನ್ನರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿದರು. ತಮ್ಮ ಸಹಕಾರಿಗಳಾಗಿ ಮೆನೊನ್ನರು ಬೇರೆ ನಾಲ್ಕು ಮಂದಿಯನ್ನು ಮಂತ್ರಿಗಳಾಗಿ ಆರಿಸಿಕೊಂಡರು. ಇವರೆಲ್ಲರ ಪ್ರತಿಜ್ಞಾ ವಿಧಿಯೂ ಮೊನ್ನೆ ನೋ

(೭ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

NAVAYUGA

Popular Kannada Weekly

Founder:—

Sri A. B. SHETTY, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೭-೨-'೫೫	೨೪

ಸಾಲ ಸಂದಾಯ ಶಾಸನ

ಮದ್ರಾಸು ಸರಕಾರದವರು ೧೯೫೩ ನೇ ಇಸವಿಯಲ್ಲಿ ತಂದಿದ್ದ ರೈತರ ಸಾಲ ವಸೂಲಿಗೆ ತಡೆ ಹಾಕುವ ಶಾಸನ ಕ್ರಮದ ಸ್ಥಾನದಲ್ಲಿ ಹೊಸತೊಂದು ಕಾಯಿದೆಯನ್ನು ಮಾಡಲು ಉದ್ದೇಶಿಸಿ ಮೊನ್ನೆ ಸೋಮವಾರ ಶಾಸನ ಸಭೆಯ ಮುಂದೆ ಅದನ್ನು ಮಂಡಿಸಿದರು. ಅದರ ಮೇಲೆ ಆವಸರದ ಪ್ರಾಸ್ತಾವಿಕ ಚರ್ಚೆಯೊಂದು ನಡೆದು ಪರಿಶೀಲಕ ಸಮಿತಿಗೆ ಅದನ್ನು ಒಪ್ಪಿಸಿಕೊಡಬೇಕು ಎಂಬ ನಿರ್ಣಯವಾಯಿತು. ಈ ಸಮಿತಿಯು ಬೇಗನೇ ತನ್ನ ಸಿಫಾರಸುಗಳನ್ನು ಮಾಡಲಿರುವುದರಿಂದ, ಮಸೂದೆಯ ವಿಷಯದಲ್ಲಿ ಅದು ಗಮನಿಸಬೇಕಾದ ಕೆಲವು ಪ್ರಾಮುಖ್ಯ ಅಂಶಗಳನ್ನು ಇಲ್ಲಿ ಪ್ರಸ್ತಾಪಿಸಿದರೆ ಅನುಚಿತವಾಗದು. ಇದೇ ಫೆಬ್ರವರಿಯ ಕೊನೆಯಲ್ಲಿ ಅವಧಿ ಮುಗಿಯಲಿರುವ ಈಗಿನ ಶಾಸನಕ್ಕಿಂತ ಹೊಸ ಮಸೂದೆಯು ಕೆಲವು ಸಂಗತಿಗಳಲ್ಲಿ ವ್ಯತ್ಯಾಸವನ್ನು ತೋರಿಸುತ್ತದೆ. ಸರಕಾರದವರು ತಮ್ಮ ಉದ್ದೇಶವನ್ನು ನಿರೂಪಿಸುತ್ತಾ ಉತ್ತಮ ಸ್ಥಿತಿಯಲ್ಲಿರುವ ರೈತರಿಗೆ ಈ ಶಾಸನದ ಬಲದೊರೆಯದಂತೆ ಮಾಡುವುದೂ ನಿಜಕ್ಕೂ ತೊಂದರೆಯಲ್ಲಿ ಬಿದ್ದ ರೈತರಿಗೆ ಸಾಕಷ್ಟು ಕಂತುಗಳಲ್ಲಿ ಸಾಲದ ಮರುಪಾವತಿಗೆ ಅನುಕೂಲತೆಯೊದಗಿಸುವುದೂ ಮಸೂದೆಯ ತಿರುಳೆಂದು ಹೇಳಿದ್ದಾರೆ. ಮಸೂದೆಯನ್ನು ಚೆನ್ನಾಗಿ ಪರಿಶೀಲಿಸಿದರೆ ಇದು ಶಾಸನದಿಂದ ಲಾಭ ಪಡೆಯಬಹುದಾದ ಸಾಗುವಳಿದಾರರ ಪ್ರಮಾಣವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಿದೆಯಲ್ಲದೆ, ಇನ್ನೊಂದು ರೀತಿಯಲ್ಲಿ ಅವರ ಸಂಖ್ಯೆಯನ್ನು ತಗ್ಗಿಸಲೂ ನೋಡಿದೆ. ಅದು ಹೀಗೆ—ಈಗಿನ ಶಾಸನ ಭೂಮಿಯ ಮೇಲೆ ಕ್ರಮಬದ್ಧವಾದ ಆಸ್ತಿಯುಳ್ಳ, ಅದನ್ನು ಅನುಭವಿಸುವ ಅಥವಾ ಅವರ ಗೇಣಿಪಡೆಯುವ ವ್ಯಕ್ತಿಯನ್ನು ಸಾಗುವಳಿದಾರನೆಂದು ಹೇಳುತ್ತದೆ; ಆದರೆ ಹೊಸಮಸೂದೆಯು ಕೃಷಿಭೂಮಿಯಲ್ಲಿ ಆಸ್ತಿಯುಳ್ಳವನೇ ರೈತನೆಂದು ವಿವರಿಸುತ್ತದೆ. ಈ ವ್ಯಾಖ್ಯೆಯು "ರೈತ" ಶಬ್ದದ ವ್ಯಾಪ್ತಿಯನ್ನು ಬಹಳಷ್ಟು ಹೆಚ್ಚಿಸುವುದೆಂಬ ಹೆದರಿಕೆಯಾಗುತ್ತದೆ - ಉದಾಹರಣೆಗೆ ಕೃಷಿಭೂಮಿಯಲ್ಲಿ ಕೂಲಿಮಾಡಿ ಹೊಟ್ಟೆ ತುಂಬಿಸುವವರು ಸಹ "ರೈತ" ಶಬ್ದದ ಕಕ್ಷೆಯಲ್ಲಿ ಬರಬಹುದು. ಅವರಿಗೂ ರಕ್ಷಣೆಯನ್ನು ಕೊಡುವುದು ಸರಕಾರದ ಉದ್ದೇಶವೂ ಏನೆಂದು ತಿಳಿಯದು. ಹಿಂದು ಅವಿಭಕ್ತ ರೈತಕುಟುಂಬದ ಸಂಗತಿಯಲ್ಲಿ ಅದರ ಪ್ರತಿಯೊಬ್ಬ ಸದಸ್ಯನನ್ನೂ ರೈತನೆಂದು ಹೊಸ ಮಸೂದೆ ಕರೆಯುತ್ತದೆ—ಇದು ಸಹ ರೈತ ಶಬ್ದವನ್ನು ವಿಸ್ತಾರವಾಗಿ ಅನ್ವಯಿಸಿ, ಸಾಲಗಾರರ ಸಂಖ್ಯೆಯನ್ನು ಹೆಚ್ಚಿಸುವಂತೆ ಮಾಡುತ್ತದೆ. ಆದರೆ ಎಲ್ಲ ರೈತರೂ ಹೊಸ ಮಸೂದೆಯ ಲಾಭ ಪಡೆಯುವುದಿಲ್ಲ—ಅದು ಹೀಗೆ: ವರ್ಷಕ್ಕೆ ೧೫೦ ರೂಪಾಯಿಗಿಂತ ಹೆಚ್ಚು ಭೂ ಕಂದಾಯ ಕೊಡುವವರು, ಅರ್ಧ ವರ್ಷಕ್ಕೆ ೯೦೦ ರೂಪಾಯಿಗಿಂತ ಹೆಚ್ಚು ಆದಾಯವಿದ್ದ ವೃತ್ತಿ ತೆರಿಗೆ ಕೊಡುವವರು ಮತ್ತು ೫೦ ರೂಪಾಯಿಗಿಂತ ಹೆಚ್ಚು ಆಸ್ತಿ ಅಥವಾ ಮನೆ ತೆರಿಗೆ ಕೊಡುವವರು, ಆದಾಯ ತೆರಿಗೆ ಕೊಡುವವರು, ವರ್ಷಕ್ಕೆ ೨೦೦೦ ರೂಪಾಯಿಗಿಂತ ಹೆಚ್ಚು ವ್ಯವಹಾರ ಮಾಡಿ ಮಾರಾಟ ತೆರಿಗೆ ಕೊಡುವವರು ರೈತರಾಗಿದ್ದರೂ ಹೊಸ ಮಸೂದೆ ಅವರಿಗೆ ಅನ್ವಯಿಸುವುದಿಲ್ಲ: ಇದನ್ನು ಸಾಧುವಾದ ನಿಯಮವೆಂದು ಒಪ್ಪಿಕೊಳ್ಳಬಹುದು. ಏಕೆಂದರೆ ಇವರೆಲ್ಲರೂ "ಅನುಕೂಲವಂತರಾದ" ರೈತರು. ಆದರೆ ಸಾಲದ ಅರ್ಥವಿವರಣೆಯನ್ನು ಮಾಡಿ ಅದಕ್ಕೆ ವಿನಾಯತಿಯನ್ನು ತೋರಿಸುವ ಸಂದರ್ಭದಲ್ಲಿ ಮಸೂದೆಯು ೫೦೦೦ ರೂಪಾಯಿಗಳಿಗಿಂತ ಕಡಿಮೆ ಬೆಲೆಯ ಆಸ್ತಿಯುಳ್ಳಯಾರಿಂದಲೇ ಆಗಲಿ, ರೈತರು ಸಾಲ ಪಡೆದುಕೊಂಡಿದ್ದರೆ, ಅಂಥ ಸಾಲಕ್ಕೆ ರಕ್ಷಣೆಯು ಅನ್ವಯಿಸುವುದಿಲ್ಲ ಎಂದು ಹೇಳಿರುವುದು ಮಾತ್ರ ನಿಜವಾಗಿಯೂ ಕಷ್ಟದಲ್ಲಿರುವ ಸಾವಿರಾರು ರೈತರಿಗೆ ಶಾಸನದ ಲಾಭವನ್ನು ಕೊಡದ ಶರ್ತ. ಸರಕಾರದವರ ದೃಷ್ಟಿಯಲ್ಲಿ ೫೦೦೦ ರೂಪಾಯಿಗಿಂತ ಕಡಿಮೆ ಬೆಲೆಯ ಆಸ್ತಿಯುಳ್ಳವರು ನಿತ್ಯ ಜೀವನದ ಮಟ್ಟಿಗೆ ಕಷ್ಟದಿಂದಲೇ ದಿನಗಳೆಯುವವರೆಂದೂ ಆದುದರಿಂದ ಅವರು ಬಡ್ಡಿಗೆ ಸಾಲಕೊಟ್ಟ ಹಣವನ್ನು ಕೇಳದಂತೆ ನಿರ್ಬಂಧಿಸುವುದು ಇಷ್ಟವಲ್ಲವೆಂದೂ ಇದ್ದಂತೆ ಕಾಣುತ್ತದೆ—ಆದರೆ ನಿಜವಾಗಿ ಈ ಶರ್ತದ ಮರೆಯಿಂದ ಹೊಸ ಮಸೂದೆಯು ಲಾಭ ಪಡೆಯಬಲ್ಲ ರೈತರ ಸಂಖ್ಯೆಯನ್ನು ಮಾತ್ರ ಗಣನೀಯವಾಗಿ ತಗ್ಗಿಸಿದಂತಾಗುತ್ತದೆ. ಮಾತ್ರವಲ್ಲ, ಕೋರ್ಟುಗಳ ಮುಂದೆ ಸಹ ಕೆಲವು ವ್ಯಾವಹಾರಿಕ ಸ್ವರೂಪದ ತೊಂದರೆಗಳನ್ನು ತಂದೊಡ್ಡಿದಂತೆ ಭಾಸವಾಗುತ್ತದೆ—ನಿದರ್ಶನಕ್ಕಾಗಿ ಆಸ್ತಿಯ ಬೆಲೆ ೫೦೦೦ ರೂಪಾಯಿಗಿಂತ ಹೆಚ್ಚೋ ಕಡಿಮೆಯೋ ಎಂದು ನಿರ್ಧರಿಸುವುದು ಅಷ್ಟು ಸುಲಭದ್ದಲ್ಲ. ಅಲ್ಲದೆ ನೂರಿನ್ನೂರು ರೂಪಾಯಿಗಳಷ್ಟು ಸ್ವಲ್ಪ ಪ್ರಮಾಣದ ಸಾಲ ವಸೂಲಿಗಾಗಿ ಮಾಡಲಾದ ದಾವೆಯಲ್ಲಿ ಹೀಗೆ ಆಸ್ತಿಯ ಬೆಲೆ ನಿರ್ಣಯ ಮಾಡುವ ಪ್ರಸಂಗಬಂದದ್ದಾದರೆ, ವ್ಯವಹರಣೆಯ ವೆಚ್ಚ ಮೂಗಿಗಿಂತ ಮೂಗುತಿ ಭಾರ ಎಂಬ ನಾಣ್ಣುಡಿಯ ನೆನಪುಮಾಡಿ ಕೊಡುವಷ್ಟು ಹೆಚ್ಚಬಹುದು. ಹೊಸ ಮಸೂದೆಯು ಇದೇ ಮಾರ್ಚಿ ೧ನೇ ತಾರೀಕಿಗೆ ಜ್ಯಾರಿಗೆ ಬರುವುದೆಂದು ಲೆಕ್ಕಕ್ಕೆ ಹಿಡಿದಿದ್ದು, ಅಂದಿನಿಂದ ಮೂರು ತಿಂಗಳ ಒಳಗೆ ಅಥವಾ ಕ್ರಮಬದ್ಧ ರಿಜಿಸ್ಟ್ರಿ ನೋಟೀಸನ್ನು ಕೊಟ್ಟು ಸಾಲದ ಪಾವತಿ ಮಾಡಬೇಕೆಂದು ಹೇಳದೆ ಕೋರ್ಟಿನಲ್ಲಿ ದಾವೆ ದಾಖಲು ಮಾಡುವಂತಿಲ್ಲ, ಎಂದು ಹೇಳುತ್ತದೆ. ಇಲ್ಲಿ ಮತ್ತು ಮುಂದಿನ ಒಂದೆರಡು ಕಲಮುಗಳಲ್ಲಿ ಅರ್ಥವು ಅಷ್ಟೊಂದು ಸ್ಪಷ್ಟವಾಗಿಲ್ಲ. ನೋಟೀಸು ಕೊಟ್ಟು ಹಣವನ್ನು ಯಾವಾಗ ಕೇಳಬಹುದು ಅಥವಾ ಬಾರದು ಎಂಬುದನ್ನು ಸಂಶಯಕ್ಕೆಡೆಯಿಲ್ಲದಂತೆ ವಿವರಿಸುವುದು ಅಪೇಕ್ಷಣೀಯ. ಜೂನ್ ೧ ನೇ ತಾರೀಕಿನೊಳಗೆ ಸಾಲದ ಬಡ್ಡಿಯನ್ನೂ ಅಸಲಿನ ಎಂಟರಲ್ಲಿ ಒಂದಂಶವನ್ನೂ ತೆರಬಹುದು; ಮತ್ತೆ ಪ್ರತಿವರ್ಷ ಬಡ್ಡಿಯನ್ನೂ ಉಳಿದ ಅಸಲಿನ ಮೂರರಲ್ಲಿ ಒಂದಂಶವನ್ನೂ ತೆರುತ್ತಾ ಹೋಗಬಹುದು ಎಂಬುದೇ ರೈತರ ಪಾಲಿಗೆ ತೋರಿಸಲಾಗಿರುವ ರಿಯಾಯತಿ—ಈ ಮಟ್ಟಿಗೆ ಸಾಲ ಮರುಪಾವತಿಗೆ ಕೊಡಲಾದ ಮೂರು ತಿಂಗಳ ಅವಧಿಯನ್ನು ಹೆಚ್ಚಿಸಬೇಕೆನ್ನುವುದು ರೈತಪಕ್ಷಪಾತಿಗಳ ಅಭಿಪ್ರಾಯ; ಮೊದಲಿನ ಅವಧಿಯಲ್ಲಿ ಕಾಲಂಶವಾದರೂ ಸಿಗಬೇಕು ಎನ್ನುವುದು ಸಾಲ ಕೊಟ್ಟವರ ಪರವಾದ ವಾದ. ಪರಿಶೀಲಕ ಸಮಿತಿ ಇವೆರಡೂ ಅಂಶಗಳನ್ನು ಚೆನ್ನಾಗಿ ಪರ್ಯಾಲೋಚಿಸುವುದು ಯೋಗ್ಯ. ನಮಗೆ ಕಾಣುವಂತೆ, ಹೊಸಮಸೂದೆಯಲ್ಲಿ ಕಾಣುವ ಮುಖ್ಯ ದೋಷವೆಂದರೆ, ರೈತರ ಅರ್ಥವ್ಯಾಪ್ತಿಯನ್ನು ಹೆಚ್ಚಿಸುವ ರೀತಿಯಲ್ಲಿ ಶಿಥಿಲ ಶಬ್ದ ಪ್ರಯೋಗ ಮಾಡಿರುವುದು; (೨) ನಿಜಕ್ಕೂ ಸಾಲ ತೆರಲಾರದ ಸ್ಥಿತಿಯಲ್ಲಿರುವ ಅನೇಕ ರೈತರಿಗೆ ಸಾಲದ ರಕ್ಷಣೆ ದೊರಕದಂತೆ ಮರುಪಾವತಿ ಕೇಳುವ ಅಧಿಕಾರವುಳ್ಳ ಸಾಲ ಕೊಟ್ಟವರ ಹೊಸ ವರ್ಗವೊಂದನ್ನು ನಿರ್ಮಿಸಿದ್ದು; ಮತ್ತು (೩) ಮನೆ ಬಾಡಿಗೆಯೇ ಮುಂತಾದುವನ್ನು ವಸೂಲು ಮಾಡಲು ಮೊದಲಿದ್ದ ಅನುಕೂಲತೆಯನ್ನು ಕಸಿದುಕೊಂಡದ್ದು. ಪರಿಶೀಲಕ ಸಮಿತಿಯಲ್ಲಿ ಮೇಲಿನೆಲ್ಲ ಅಂಶಗಳೂ ವಿವರವಾಗಿ ಚರ್ಚಿಸಲ್ಪಟ್ಟು ಯೋಗ್ಯ ಪರಿಹಾರ ಕ್ರಮಗಳು ರಚಿಸಲ್ಪಡುತ್ತವೆಂದು ನಾವು ಆಶಿಸುತ್ತೇವೆ. ಸಾಧ್ಯವಾದರೆ ಪರಿಶೀಲಕ ಸಮಿತಿಯವರು ಇನ್ನೂರು ರೂಪಾಯಿಗಳಿಗಿಂತ ಹೆಚ್ಚಿನ ಸಾಲಗಳಿಗೆ ಮಾತ್ರ ರಕ್ಷಣೆಕೊಡಲಾಗುವುದೆಂಬ ಹೊಸ ಕಲಮೊಂದನ್ನು ಸಹ ಸೇರಿಸಬಹುದು—ಇದರಿಂದ ಸಣ್ಣ ಮೊತ್ತಕ್ಕಾಗಿ ಕೋರ್ಟಿನಲ್ಲಿ ವ್ಯವಹರಣೆಯನ್ನು ಮಾಡುವ ತೊಂದರೆ ತಪ್ಪುತ್ತದೆ. ಗ್ರಾಮಾಂತರ ಪ್ರದೇಶದ ಆರ್ಥಿಕ ಸಮತೋಲನವನ್ನು ಕಾಯ್ದುಕೊಳ್ಳುವುದಕ್ಕೆ ಮತ್ತು ರೈತರ ನಿತ್ಯ ವ್ಯವಹಾರಕ್ಕೆ ಇದು ಪೋಷಕವಾಗಬಲ್ಲುದು.

ವಾರದ ಮಹಾನುಭಾವ

ಈಜಿಪ್ಟಿನ ಮುತ್ಸದ್ದಿ--ಕರ್ನಲ್ ನಸ್ಸೇರ್

ಈಜಿಪ್ಟಿನಲ್ಲಿ ಇನ್ನೂರ ಇಪ್ಪತ್ತು ಲಕ್ಷ ಪ್ರಜೆಗಳ ಕೈವಾರಿಯಾಗಿ ಒಮ್ಮಿಂದೊಮ್ಮೆ ರಾಜಕೀಯ ದಿಗಂತದಲ್ಲಿ ಶೋಭಿಸಿದ ವ್ಯಕ್ತಿಯೇ ಲೆಫ್ಟಿನೆಂಟ್ ಕರ್ನಲ್ ನಸೇರ್. ಎರಡು ಸಾವಿರ ವರ್ಷಗಳಿಂದ ರೂಢವಾಗಿದ್ದ ಭಂಡವಳಶಾಹಿ ಜಮೀನುಭೂಮಾಲಕರ ಆಡಳಿತೆಯ ಪ್ರತೀಕ ಫರೂಖ ಅರಸರನ್ನು ಜನರಲ್ ನಗೀಬರು ಒಮ್ಮಿಂದೊಮ್ಮೆ ಓಡಿಸಿದಾಗ ಅವರ ಹಿಂದೆ ನಿಂತು ಸೂತ್ರ ಚಾಲನ ಮಾಡುತ್ತಿದ್ದ ವ್ಯಕ್ತಿ ಯಾರೆಂದು ಸ್ಪಷ್ಟವಾಗಿರಲಿಲ್ಲ. ಸುಯೇಜ್ ಕಾಲುವೆಯ ವಿವಾದದ ನೆಪದಲ್ಲಿ ನಗೀಬರ ಮುಖಭಂಗವಾದ ಮೇಲೆಯೇ ಆ ವ್ಯಕ್ತಿ ಬೆಳಕಿಗೆ ಬಂದು ಎಲ್ಲರ ಮುಂದೆ ಕಾಣಿಸಿಕೊಂಡಿತು.

ಆರಡಿ ಎತ್ತರದ, ಸುಂದರ ಮುಖದ, ತುಂಬಿದ ಮೈಕಟ್ಟಿನ, ಇನ್ನೂ ಮೂವತ್ತೇಳು ನಡೆಯುತ್ತಿರುವ ಆ ತರುಣನನ್ನು ಕಂಡವರೆಲ್ಲ ಮೂಗಿಗೆ ಬೆರಳೇರಿಸಿದರು. ಇವನಿಂದೇನಾದೀತು ಎಂದುಕೊಂಡವರೇ ಹೆಚ್ಚು—ಆದರೆ ಅವರೆಲ್ಲರೂ ಇವನಿಂದೇನಾಗದು ಎಂದು ತಮ್ಮ ವಿಚಾರವನ್ನು ತಿದ್ದಿಕೊಳ್ಳುವಂತೆ ಘಟನೆಗಳು ಜರಗಿದವು—ಸುಯೇಜ್ ಕಾಲುವೆಯ ಪ್ರದೇಶದಿಂದ ಸೈನ್ಯ ಹಿಂದೆಗೆದುಕೊಳ್ಳಲು ಬ್ರಿಟಿಷ್ ಸಾಮ್ರಾಜ್ಯದ ಅಚಲ ಭಕ್ತ ಮತ್ತು ಸಂರಕ್ಷಕ ಚರ್ಚಿಲ್ಲರು ಒಪ್ಪುವಂತೆ ಹೊಸ ಪ್ರಧಾನಿ ನಸೇರ್ ನೋಡಿಕೊಂಡರು. ಪ್ರಾರಂಭದ ಈ ಮಹಾ ಸಾಧನೆ ಅವರನ್ನು ಪ್ರಪಂಚದ ಹಿರಿಯ ಮುತ್ಸದ್ದಿಗಳ ಸಾಲಿಗೆ ಸೇರಿಸಿತು.

ಆದುದರಿಂದಲೇ ಎಲ್ಲರೂ ಈಜಿಪ್ಟಿನ ಪ್ರಧಾನಿಯನ್ನು ಕಾಣಲು ಆತುರರಾಗಿ ಬರುತ್ತಾರೆ—ಈ ವಾರ ಲಂಡನಿನಿಂದ ಭಾರತಕ್ಕೆ ಮರಳುವ ಮಾರ್ಗದಲ್ಲಿ ನಮ್ಮ ಪ್ರಧಾನ ಮಂತ್ರಿ ನೆಹರುಗಳು ಕೆಲವು ದಿನಗಳ ಕಾಲ ಕೈರೋದಲ್ಲಿ ಇಳಿದು ನಸೇರರೊಡನೆ ಸಮಾಲೋಚನೆ ನಡೆಸಿದ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 417/54

ವಾದಿ. ವೈ. ಕೃಷ್ಣಪ್ಪ ಸೆಟ್ಟಿಯವರ ಜನರಲ್ ಪವರ್ ಆಫ್ ಎಟರ್ನಿ ಹೋಲ್ಡರ್, ವೈ. ಸೂರ್ಯಣ್ಣ ಸೆಟ್ಟಿ.

ಪ್ರತಿ ವಾದಿರು, ಪುಟ್ಟಮ್ಮ ಸೆಡ್ತಿ ಸಹಾ. ಯಿವರೊಳಗೆ

ಸದ್ರಿ ದಾವೆಯ 4, 8 ರಿಂದ 12 ನೇ ವರೇಗಿನ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದ್ರೆ 4 ನೇ ಪ್ರತಿವಾದಿ. ಹಿರಿಯಣ್ಣ ಸೆಟ್ಟಿ, ಪುಟ್ಟಮ್ಮ ಸೆಡ್ತೀರ ಮಗ.

8 ನೇ ಪ್ರತಿವಾದಿ. ನಾಗಯ್ಯ ಸೆಟ್ಟಿ, 9 ನೇ ಪ್ರತಿವಾದಿ. ನಾರಾಯಣ ಸೆಟ್ಟಿ, 10 ನೇ ಪ್ರತಿವಾದಿ. ಶಿವರಾಮ ಸೆಟ್ಟಿ.

ರುಕ್ಮ ಸೆಡ್ತೀರ ಮಕ್ಕಳು.

11 ನೇ ಪ್ರತಿವಾದಿ. ನಾರಾಯಣ ಸೆಟ್ಟಿ, 12 ನೇ ಪ್ರತಿವಾದಿ. ಮಂಜಯ್ಯ ಸೆಟ್ಟಿ.

ಮಂಜಮ್ಮ ಸೆಡ್ತೀರ ಮಕ್ಕಳು.

ಕುಂದಾಪುರ ತಾಲ್ಲೂಕು ಪಡುವರಿ ಗ್ರಾಮದ ಬಬ್ಬಾಡ ಸಿತ್ಲಲ್ಲಿರುವವರು.

ವಾದಿಯು ಸದ್ರಿ ಪ್ರತಿವಾದಿರು ವಗೈರೆರಿಂದ ಕಳೆದ ವಿಜಯ ಸಂವತ್ಸರ ಬಹಾಮೂಲ ಗೇಣಿ ಗೇಣಿ ಬಾಕಿ ಐವೇಜು ರೂಪ್ಯಾ. 200–10–0 ನ್ನು ಬರ ಮಾಡಿಕೊಳ್ಳುವರೇ ದಾಖಲು ಮಾಡಿದ ಮೇಲಿನ ದಾವೆ ತಾರೀಕು 21–2–55 ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನ್ಖಿಗೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮ ಉದಾಹರಣೆ ಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11 ಕ್ಕೆ ಸದ್ರಿ ಕೋರ್ಟುಮುಂದೆ ಹಾಜರಾಗಿ ತಿಳಿಸ ತಕ್ಕದು.

(Sd) Y. Manjayya, Shetty.
Advocate for Plaintiffs

ಮೊಕ್ಕಾಂ, ಕುಂದಾಪುರ. ತಾ. 13–2–55

ರು; ಬ್ಯಾಂಗ್‌ಕಾಕ್‌ಗೆ ಹೋಗಿ ಬರುವ ಮಾರ್ಗದಲ್ಲಿ ಬ್ರಿಟಿಷ್ ವಿದೇಶ ಮಂತ್ರಿ ಈಡನ್ನರು ಸಹ ಕೈರೋದಲ್ಲಿ ಸ್ವಲ್ಪ ಸಮಯ ಕಳೆಯಲಿದ್ದಾರೆ. ಮಧ್ಯ ಪೂರ್ವದ ರಾಜಕೀಯದಲ್ಲಿ ಈಜಿಪ್ಟಿನ ಮಾತಿಗೆ ಮನ್ನಣೆಯನ್ನು ಕೊಡದಿದ್ದರೆ ನಡೆಯದೆಂಬಂತೆ ಕಾಣುತ್ತಿರುವುದೇ ಈ ಭೇಟಿಯ ಹೇತು. ಈಜಿಪ್ಟಿನೊಡನೆ ಸ್ನೇಹವನ್ನು ಸಾಧಿಸಿ, ಸಮಾಧಾನದಿಂದಿರುವುದೇ ಎಲ್ಲರಿಗೂ ಬೇಕಾಗಿದೆ.

ನಸೇರರ ಕೈಯಲ್ಲಿ ಈಜಿಪ್ಟ ಕೆಲವು ರಾಜಕೀಯ ಧೋರಣೆಗಳನ್ನು ಅನುಸರಿಸುತ್ತಿದೆ-ಇವುಗಳಲ್ಲಿ ಅಂತಃರಾಷ್ಟ್ರೀಯ ಪ್ರಾಮುಖ್ಯತೆ ಪಡೆದ ವಿಷಯವೆಂದರೆ, ಸೈನಿಕ ಒಪ್ಪಂದಗಳ ಕುರಿತಾದ ಅವಿಶ್ವಾಸ. ಇನ್ನೊಂದು ವಾರದಲ್ಲಿ ಇರಾಕ್ ಮತ್ತು ಟರ್ಕಿಗಳೊಳಗೆ ಸೈನಿಕ ಒಪ್ಪಂದವಾಗಲಿದೆ— ಅಮೇರಿಕ ಇದರ ಹಿನ್ನೆಲೆಯಲ್ಲಿದ್ದು ಕಮ್ಯೂನಿಸ್ಟರ ಪ್ರಭಾವವನ್ನು ತಗ್ಗಿಸುವುದಕ್ಕೆ ಇದು ಅತ್ಯವಶ್ಯವಾದ ಕ್ರಮವೆಂದು ಹೇಳುತ್ತದೆ. ಆದರೆ ಈಜಿಪ್ಟಿನ ಪ್ರಧಾನಿ ಇಂಥ ಒಪ್ಪಂದವಾಗುವುದನ್ನು ಖಂಡಿಸಿದ್ದಾರೆ— ಕಮ್ಯೂನಿಸ್ಟರ ಪ್ರಾಬಲ್ಯಕ್ಕೆ ಕಾರಣವಾದದ್ದು ಕೆಂಪು ಸೇನೆಯಲ್ಲ; ಸಾಮ್ರಾಜ್ಯ ಶಾಹಿತ್ವದ ಅಸ್ತಿತ್ವ— ಕಮ್ಯೂನಿಸ್ಟರು ಸಾಮ್ರಾಜ್ಯ ಶಾಹಿತ್ವವನ್ನು ತಮ್ಮ ಪ್ರಚಾರ ಸಾಧನವಾಗಿ ಮಾಡಿಕೊಂಡು ಜನಪ್ರಿಯತೆ ಗಳಿಸುತ್ತಾರೆ. ಆದುದರಿಂದ ಸೈನಿಕ ಒಪ್ಪಂದಕ್ಕಿಂತಲೂ ಸ್ವಾತಂತ್ರ್ಯವನ್ನೆ ಮಧ್ಯಪೂರ್ವದ ರಾಷ್ಟ್ರಗಳಿಗೆ ಕೊಡುವುದು ಯೋಗ್ಯ ಎಂದವರ ಅಭಿಪ್ರಾಯ.

ಇದನ್ನು ಕೇಳಿದವರಿಲ್ಲ – ಪರಿಣಾಮದಲ್ಲಿ ಈಜಿಪ್ಟ ಮತ್ತು ಸೌದಿ ಅರೇಬಿಯಗಳು ಅರಬ ಗುಂಪಿನಿಂದ ಹೊರಟು ಬರುವಂತಾಯಿತು. ಪಾಶ್ಚಾತ್ಯರ ತಂತ್ರ ಈ ಗುಂಪಿನ ಒಗ್ಗಟ್ಟನ್ನು ಮುರಿಯಿತು! ನಸೇರರಿಗೆ ಇದು ಚಿಂತೆಯ ವಿಷಯ ಹೌದು— ಆದರೆ ದೇಶದೊಳಗಿನ ಒಗ್ಗಟ್ಟನ್ನು ಕಾಯ್ದುಕೊಳ್ಳುವುದಕ್ಕೆ ಅವರು ತಪ್ಪಿರುವರೆಂದೇನು ಇದರ ಅರ್ಥವಲ್ಲ ರಾಜಕೀಯ ಪಕ್ಷಗಳ ಪ್ರಾಕ್ಷಾಳನೆಯನ್ನು ಅವರು ಮಾಡಿದ್ದಾರೆ —ಜನತೆಗಾಗಿ ತ್ಯಾಗ ಮಾಡುವ ರಾಜಕೀಯ ಪಕ್ಷಗಳಿದ್ದರೆ ಇರಬಹುದು; ಜನತೆಯ ಶೋಷಣೆ ಮಾಡುವ ಪಕ್ಷಗಳಲ್ಲ ಎಂದವರ ನಿಲುವು. ಆದುದರಿಂದ ಪಾರ್ಲಿಮೆಂಟರಿ ಪ್ರಜಾಸತ್ತೆಯನ್ನು ಒಡನೆಯೇ ಪ್ರಾರಂಭಿಸುವ ವಿಷಯದಲ್ಲಿ ಅವರು ಅಷ್ಟು ಉತ್ಸಾಹ ತೋರಿಸುವುದಿಲ್ಲ— ಪಕ್ಷಗಳ ಪ್ರಾಕ್ಷಾಳನೆ ಮಾಡಿದ್ದರೂ ಅವುಗಳ ಪೂರ್ವಪುನರಾ ಸ್ವರೂಪದ ವಿಷ ಮಾಯವಾಗಿಲ್ಲ. ಅದು ಮಾಯಗೊಂಡ ಬಳಿಕವೇ ಹೊಸ ಮಾದರಿಯ ರಾಜಕೀಯ ರಚನೆ ಸಾಧ್ಯವೆನ್ನುತ್ತಾರೆ ಅವರು.

ಸೈನ್ಯದ ಬರಾಕುಗಳಿಗೆ ತಾಗಿಕೊಂಡ ವಿವಾಹಿತರ ವಸತಿಯಲ್ಲಿ ಇವರು ಶಾಂತ ಹಾಗು ಸರಳ ಜೀವನವನ್ನು ನಡೆಸುತ್ತಾರೆ—ಒಂದು ವರ್ಷದ ಹಿಂದಿರದಿದ್ದ ಅಧಿಕಾರ ಮದ ಇಂದಿಗೂ ಅವರ ನಡತೆಯಲ್ಲಿ ಮೂಡಿಲ್ಲ; ಜೀವನದಲ್ಲಿ ಸಹ ಆಡಂಬರವಿಲ್ಲ. ತೋಟದ ಬಾಗಿಲಲ್ಲಿ ನಾಲ್ಕು ಮಂದಿ ಕಾವಲುಗಾರರು ಹೆಚ್ಚಿರುವರೆಂಬುದಷ್ಟೇ ಅಂದಿಗೂ ಇಂದಿಗೂ ಕಾಣುವ ಭೇದ. ಎಲ್ಲ ರೀತಿಯಲ್ಲೂ ಅವರು ಆತ್ಮ ವಿಶ್ವಾಸವುಳ್ಳ, ಲಘಲವಿಕೆಯ, ಸೈನಿಕ ರಾಜಕಾರಣಿಯೆಂದು ಸಿದ್ಧಗೊಳ್ಳುತ್ತಿದೆ- ಯುದ್ಧದಲ್ಲಿ ಅವರಿಗೆ ವಿಶ್ವಾಸವಿಲ್ಲ, ಪ್ರತಿ ಟ್ಯಾಂಕಿಗೆ ಒಂದು ಲಕ್ಷ ಪವನು ಹಾಗು ಪ್ರತಿ ಸೈನಿಕನಿಗೆ ಇನ್ನೂರು ಪವನುಗಳ ವೆಚ್ಚ ಬರುತ್ತದೆ; ಇದನ್ನು ಉತ್ಪಾದಕ ಕಾರ್ಯಗಳಿಗೆ ವಿನಿಯೋಗಿಸಿದರೆ ಜನರ ಜೀವನ ಸುಖವಾಗದೆ ಎಂದವರ ವಿಚಾರ. ಇದೇ ದಾರಿಯಲ್ಲಿ ಮುನ್ನಡೆದು ಅವರು ಕೈಗಾರಿಕೆಗಿಂತಲೂ ಕೃಷಿಗೆ ಉತ್ತೇಜನ ವಿತ್ತರು—ಗೋಧಿಯ ಆಯಾತವನ್ನು ನಿಲ್ಲಿಸುವಷ್ಟು, ನೇಲಿನ ಈಜಿಪ್ಟಿನಲ್ಲಿ ಒಂದರ ಬದಲು ಎರಡು ಹತ್ತಿ ಬೆಳೆ ಮಾಡುವಷ್ಟು ಅವರು ಕೆಲಸಗೈದರು. ಫರೂಕ್ ಅರಸರಿಂದ ಕಿತ್ತುಕೊಂಡ ಏಳು ಲಕ್ಷ ರೂಪಾಯಿಗಳನ್ನು ಶಾಲೆ, ಗೃಹೋದ್ಯಮ, ಕೃಷಿ ತರಬೇತಿ ಕೇಂದ್ರ ಇತ್ಯಾದಿಗಳಿಗೆ ವಿನಿಯೋಗಿಸಿದರು. ಅವರಲ್ಲಿ ಈಜಿಪ್ಟಿನ ಜನತೆಗೆ ಪೂರ್ಣ ಭರವಸೆಯುಂಟು —ನಾವೂ ಭರವಸೆ ಇಡಬಹುದು.

(೫ನೇ ಪುಟದಿಂದ)

ಮಾರ ಜರಗಿತು. ಬೇರೆ ಮಂತ್ರಿಗಳಲ್ಲಿ ತಿರು-ಕೊಚ್ಚಿಯಲ್ಲಿ ಹಿಂದೊಮ್ಮೆ ಮುಖ್ಯ ಮಂತ್ರಿಯಾಗಿದ್ದ ಶ್ರೀ ಎ. ಜೆ. ಜೋನ್ ಹಾಗು ಶ್ರೀಗಳಾದ ಕೆ. ಕೋಚು ಕುಟ್ಟಿನ್, ಎ. ಎ. ರಹೀಮ್, ಮತ್ತು ಕೆ. ಪಿ. ವೇಲಾಯುಧನ್ ಇದ್ದಾರೆ. ಕಾಂಗ್ರೆಸು ಮಂತ್ರಿ ಮಂಡಳವು ಅಧಿಕಾರಕ್ಕೆ ಬಂದ ಬಳಿಕ ಕೊಟ್ಟ ಹೇಳಿಕೆಯೊಂದರಲ್ಲಿ ಭೂ ಸುಧಾರಣೆಯನ್ನು ಹತ್ತಿಕ್ಕುವುದಕ್ಕಾಗಿಯೇ ಅವಿಶ್ವಾಸ ಸೂಚನೆಗೆ ಕಾಂಗ್ರೆಸು ಬೆಂಬಲ ವಿತ್ತೆಂದು ಮಾಡಲಾದ ಆರೋಪವನ್ನು ಜೋನ್ನರು ಅಲ್ಲಗಳೆದರು. ಸುಧಾರಣೆಯ ಕ್ರಮಗಳನ್ನು ತ್ವರಿತಗತಿಯಿಂದ ಮುಂದೊತ್ತುವುದೇ ನಮ್ಮ ಧ್ಯೇಯ ಎಂದು ಅವರು ಸಾರಿದರು.

ಚುನಾವಣೆಯ ರಭಸ

ಆಂಧ್ರದಲ್ಲಿ ಚುನಾವಣೆಗಳು ಪ್ರಾರಂಭವಾಗಿ ಒಟ್ಟು ೭೦ ಮತದಾರ ಕ್ಷೇತ್ರಗಳಲ್ಲಿ ಶುರುಸಿನ ಮತದಾನ ನಡೆದಿದೆ. ನೂರಕ್ಕೆ ಎಪ್ಪತ್ತೈದರಷ್ಟು ಮತದಾರರು ಉತ್ಸಾಹದಿಂದ ಮತದಾನ ಮಾಡಿರುವರೆಂದು ಹೇಳಲಾಗುತ್ತದೆ. ೧೧ನೇ ತಾರೀಕಿನ ಬಳಿಕ ಎರಡನೆಯ ಘಟ್ಟದಲ್ಲಿ ೧೫ನೇ ತಾರೀಕಿಗೆ ನಡೆದ ಚುನಾವಣೆಗಳಲ್ಲಿ ಶ್ರೀಗಳಾದ ಟಿ. ವಿಶ್ವನಾಥಂ, ಓಬುಲ ರೆಡ್ಡಿ ಮುಂತಾದ ಪ್ರಮುಖರು ಸ್ಪರ್ಧಿಸಿದ್ದಾರೆ. ಮತದಾನದ ವ್ಯವಸ್ಥೆಗಳಲ್ಲಿ ಅಚ್ಚುಕಟ್ಟನ್ನು ಕಾಯ್ದುಕೊಂಡ ಬಗ್ಗೆ ಸಮಾಧಾನ ಹೊಂದಲು ಗವರ್ನರ ತ್ರಿವೇದಿಯವರು ಸ್ವತಃ ಕೆಲವು ಮತದಾನ ಕ್ಷೇತ್ರಗಳನ್ನು ಸಂದರ್ಶಿಸಿದ್ದರು.

ನೀರಾವರಿ ತೆರಿಗೆ

ಮದ್ರಾಸು ಶಾಸನ ಸಭೆಯು ಸಾಲಗಾರ ನಾಗುವಳಿದಾರರಿಗೆ ಪ್ರಯೋಜನ ಮಾಡುವ ಹೊಸ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸುವುದಕ್ಕೆ ಮುಂಚೆ, ೨೫೦೦೦ ರೂಪಾಯಿಗಳಗಿಂತ ಹೆಚ್ಚು ವೆಚ್ಚವನ್ನು ಮಾಡಿ, ನೀರಾವರಿ ಪ್ರಯೋಜನವನ್ನು ಸರಕಾರದವರು ಒದಗಿಸಿದ ಭೂಮಿಯ ಮೇಲೆ ಅಭಿವೃದ್ಧಿ ತೆರಿಗೆಯನ್ನು ಹೊರಿಸುವ ಮಸೂದೆಯನ್ನು ಮಂಜೂರು ಮಾಡಿತು. ಕಮ್ಯೂನಿಸ್ಟರು ಮಸೂದೆಯ ಪ್ರತಿಯೊಂದು ಕಲಮಿಗೂ ತಿದ್ದುಪಡಿಯನ್ನು ಮಂಡಿಸಲು ಪ್ರಯತ್ನಿಸಿ ಅಯಶಸ್ವಿಯಾದರು. ೫ ಎಕ್ರೆ ಸ್ಥಳಕ್ಕಿಂತ ಕಡಿಮೆ ವಿಸ್ತೀರ್ಣದ ಕ್ಷೇತ್ರಕ್ಕೆ ಈ ಶಾಸನ ಅನ್ವಯವಾಗಬಾರದೆಂದು ಅವರು ಅಭಿಪ್ರಾಯಪಟ್ಟರು. ಆದರೆ ಅದಕ್ಕೆ ಬೆಲೆ ಬರಲಿಲ್ಲ.

ಫಾರ್ಮೋಸದ ವಿವಾದ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಫೊರ್ಮೋಸದ ಪ್ರಶ್ನೆಯು ಇದ್ದಲ್ಲಿಯೇ ಉಳಿದುದಲ್ಲದೆ, ಯಾವ ಪ್ರಗತಿಯನ್ನೂ ತೋರಿಸಿಲ್ಲ. ಟಾಚೆನ್ ದ್ವೀಪ ಸಮುದಾಯಗಳಿಂದ ರಾಷ್ಟ್ರೀಯರನ್ನು ಸ್ಥಳಾಂತರಿಸುವ ಕೆಲಸ ಕಮ್ಯೂನಿಸ್ಟರ ಆತಂಕವಿಲ್ಲದೆಯೆ ನೆರವೇರಿತು. ಎಲ್ಲೋ ಒಂದು ವಿಮಾನವನ್ನು ಕಮ್ಯೂನಿಸ್ಟರು ಕೆಡವಿದರು. ಆದರೆ, ಅಮೇರಿಕವು ಅವರ ಮೇಲೆ ಸೇಡು ತೀರಿಸಿಕೊಳ್ಳಲಿಲ್ಲ. ಇತ್ತ ರಶಿಯವು ಭಾರತ, ಬ್ರಿಟನು, ಚೀನ, ಅಮೇರಿಕ, ಪಾಕಿಸ್ತಾನ, ರಶಿಯ ಮುಂತಾದ ಹತ್ತು ರಾಷ್ಟ್ರಗಳ ಪ್ರತಿನಿಧಿಗಳಿಂದ ಕೂಡಿದ ಸಮ್ಮೇಳನವೊಂದನ್ನು ಸಂಯುಕ್ತ ರಾಷ್ಟ್ರ ಸಂಘದ ಹೊರಗಿನ ಮಟ್ಟದಲ್ಲಿ ಕರೆದು ಪ್ರಶ್ನೆಯನ್ನು ಸಮಾಧಾನಕರವಾಗಿ ಬಗೆಹರಿಸಬೇಕೆಂದು ಸೂಚಿಸಿರುತ್ತದೆ ಆದರೆ ರಾಷ್ಟ್ರೀಯ ಚೀನದ ಪ್ರತಿನಿಧಿಗೆ ಸ್ಥಾನವಿಲ್ಲದ ಯಾವ ಸಮ್ಮೇಳನದಲ್ಲೂ ಬ್ರಿಟನು, ಅಮೇರಿಕಗಳಿಗೆ ವಿಶ್ವಾಸ ವಿಲ್ಲ.

ರಕ್ಷಣಾ ಕ್ರಮ

ಸೀಟೋ ಒಡಂಬಡಿಕೆಯ ರಾಷ್ಟ್ರಗಳು ಬ್ಯಾಂಗ್ ಕಾಕ್ ನಲ್ಲಿ ಸೇರಲಿರುವ ಸಮ್ಮೇಳನದ ಕುರಿತು ವಾಶಿಂಗ್‌ಟನ್ನಲ್ಲಿ ಕೆಲವು ಒಮ್ಮತದ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಲಾಯಿತು. ಇದರಂತೆ ದಕ್ಷಿಣ ಚೀನದಲ್ಲಿ ಕಮ್ಯೂನಿಸ್ಟರ ಪ್ರತಿಷ್ಠೆ ಹೆಚ್ಚಿಕೊಂಡು ನೆರೆಯ ಸ್ವತಂತ್ರ ರಾಷ್ಟ್ರಗಳಿಗೆ ಗಂಡಾಂತರವಾಗದಂತೆ ಸಿಂಗಾಪುರದಲ್ಲಿ ೫೦೦ ವಿಮಾನಗಳ ಪ್ರಬಲ ಪಡೆಯೊಂದನ್ನು ಸ್ಥಾಪಿಸಲ್ಪಡುವುದು. ಭಾರತ, ಬರ್ಮ, ಸಿಂಹಳ ಮುಂತಾದ ಏಶಿಯದ ರಾಷ್ಟ್ರಗಳನ್ನು ಸೀಟೋ ಒಡಂಬಡಿಕೆಗೆ ಸೇರಿಸುವ ಕುರಿತಾಗಿ ಸಹ ಪ್ರಬಲ ಒತ್ತಾಯವನ್ನು ಸೀಟೋ ರಾಷ್ಟ್ರಗಳು ಹೇರುತ್ತಿವೆಯೆಂದು ತಿಳಿದುಬರುತ್ತದೆ.

ಉಡುಪಿ

ಸರಕಾರಿ ತರಬೇತಿ ಶಾಲೆಯ—ವರ್ಧಂತ್ಯುತ್ಸವವು ಇದೇ ತಾ. 26ನೆ ಶನಿವಾರ ಸಂಜೆ 5½ ಗಂಟೆಗೂ ಮರುದಿನ ಹಳೆವಿದ್ಯಾರ್ಥಿ ಸಂಘದ ವರ್ಧಂತಿಯೂ ಸಂಘದ ಸದಸ್ಯರ ಮಹಾಸಭೆಯು ಅಪರಾಹ್ನ 3½ ತಾಸಿಗೆ ಜರಗುವುದೆಂದೂ ಈ ಸಮಾರಂಭಗಳಿಗೆ ಶಾಲಾ ಹಳೆ ವಿದ್ಯಾರ್ಥಿಗಳೆಲ್ಲರಿಗೂ ಸ್ವಾಗತವಿದೆ ಎಂದೂ ಮುಖ್ಯೋಪಾಧ್ಯಾಯರು ತಿಳಿಸುತ್ತಾರೆ.

ಪಾರಿತೋಷ ವಿತರಣೆ—ಉಡುಪಿ ಮಹಾತ್ಮಾಗಾಂಧೀ ಮೆಮೋರಿಯಲ್ ಕಾಲೇಜಿನ ವರ್ಷಾವಧಿ ಪಂದ್ಯಾಟ ಮತ್ತು ಪಾರಿತೋಷ ವಿತರಣೆ ಸಮಾರಂಭವು ತಾ. 11ರಲ್ಲಿ ವಕೀಲ್ ಶ್ರೀ ಬಿ. ಸಿ. ರೇಗೋರವರ ಅಧ್ಯಕ್ಷತೆಯಲ್ಲಿ ಜರಗಿತು.

ಬಿ. ಸಿ. ಜಿ. ದಾಕು—ಕ್ಷಯರೋಗ ಪ್ರತಿಬಂಧಕ ಪರೀಕ್ಷೆ ಮತ್ತು ಬಿ. ಸಿ. ಜಿ. ದಾಕು ಹಾಕುವಿಕೆ ಕಾರ್ಯವು ಉಡುಪಿ ೧೪ರ ಕ್ಷೇತ್ರದಲ್ಲಿ ಇದೇ ತಾ. 15ರಲ್ಲಿ ಪ್ರಾರಂಭವಾಗಿದೆ. ತಾ. 19ರಲ್ಲಿ ಕೊನೆಗೊಳ್ಳುವುದು.

ಶ್ರೀ ಜೆ. ಆರ್ ನಾಯಕ್—ಉಡುಪಿ ವಕೀಲ್ ವಿಠಲ ನಾಯ್ಕರ ಸಹೋದರ ಶ್ರೀ ಜಗನ್ನಿವಾಸ ರಾವ ನಾಯಕರು ತಾ. 12ರಂದು ಬೊಂಬಾಯಿಯಿಂದ ಹೊರಟು ವಿದೇಶ ಪ್ರವಾಸ ಕೈಗೊಂಡಿರುವರು. ಶ್ರೀಯುತರು ಲಂಡನ್, ಫ್ರಾನ್ಸ್, ಬೆಲ್ಜಿಯಮ್, ಹೊಲ್ಲೆಂಡ್, ಜರ್ಮನಿ, ಇಟೆಲಿ ಮೊದಲಾದ ದೇಶಗಳನ್ನು ಸಂದರ್ಶಿಸಲಿರುವರು. ಶ್ರೀ ನಾಯ್ಕರು ಮದ್ರಾಸ್ ವಲಯದ ಸೈಕಲ್ ಡೀಲರ್ಸ್ ಸಂಘದ ಕಾರ್ಯದರ್ಶಿಗಳಾಗಿದ್ದರು.

ನಿಮಗೆ ಯಾವುದೇ ತರದ ಉದ್ಯೋಗ ಬೇಕೆಂದಿದ್ದರೆ ಅಥವಾ ವ್ಯಾಪಾರ ನಡೆಸಬೇಕೆಂದಿದ್ದರೆ ಕೂಡಲೇ ಬರೆಯಿರಿ:
ಟಪ್ಪಾಲು ಪೆಟ್ಟಿಗೆ ನಂಬ್ರ 1868
ಬೊಂಬಾಯಿ-- 1

ಶ್ರೀವಳ್ಳಿ ಪ್ರೊಡಕ್ಷನ್ಸ್‌ರವರ
ವೇಲೈಕಾರನ್ ತಮಿಳು
ಚಿತ್ರ
ಎಸ್, ವರಲಕ್ಷ್ಮಿ, ಮಾಧುರಿದೇವಿ, ದ್ರೌಪದಿ, ಮಹಾಲಿಂಗಂ, ಟಿ. ಎಸ್, ಬಾಲಯ್ಯ, ಮೊದಲಾದವರು.
ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ
ತಾ. 16—2—1955ರಿಂದ.
ಬರುವ ಚಿತ್ರ: ಪೆಣ್ (ತಮಿಳು)

ಶಾಲೆ, ಕಾಲೇಜು, ಗ್ರಾಮ ಪಂಚಾಯತು ಮೊದಲಾದ

ಯಾವತ್ತೂ ಲೈಬ್ರೆರಿಗಳಿಗೆ ಉಪಯುಕ್ತವಾದ ಪುಸ್ತಕಗಳು

ವಿವಾಹ, ವರ್ಧಂತಿ ಸಮಾರಂಭಗಳಲ್ಲಿ ಪಾರಿತೋಷಕ ಕೊಡಬಹುದಾದ ಸರಸ ಸಾಹಿತ್ಯ!

ಉತ್ಕಲಾ	ಹರಿಜಾತ	5	0
ಅಶೋಕ ಚಕ್ರ	ಮಿ. ಅಣ್ಣಾರಾಯ	3	8
ಪುನರ್ಮಿಲನ	ವಾಡೇದ	2	8
ಅನ್ನಪೂರ್ಣಾ ಮಂದಿರ	ಮ. ಗ. ಶೆಟ್ಟಿ	2	0
ಧರ್ಮ ಸಂಕಟ	ವಾಡೇದ	2	0
ವೀಣಾನಾದ	ಕೃ. ಹ. ಕುಲಕರ್ಣಿ	0	8
ಮೋಪಾಸನ ಕತೆಗಳು	ಚುಳಕಿ	0	10
ಧರ್ಮ ಚಕ್ರ	ಕುಮಾರ ವೆಂಕಣ್ಣ	1	0
ಮಾರಿಯೌತಣ	ಇಂದಿರಾತನಯ	1	0
ಸಪ್ತರಂಗ	ಎನ್. ಎಸ್. ಗದಗಕರ	0	12
ಕೊನೆಯ ದಿನಗಳು	ಭಾರತೀಸುತ	1	8
ಪಂಜರದ ಹಕ್ಕಿ	ಮಲ್ಲಾರಿ	0	14
ಸುಮತಿ ಅನುರಾಧಾ	ಚುಳಕಿ	1	4
ಹಳ್ಳಿಯ ಬಾವಿ	ಧನ್ವಂತ	1	4
ದೋರಾ ಮತ್ತು ಇತರ ಕತೆಗಳು	ಚುಳಕಿ	1	0
ಪ್ರಣಯ ಸಮಾಧಿ	ಮಿ. ಅಣ್ಣಾರಾಯ	1	4
ಹೊಸ ಬೆಳಕು	ವೆ. ಮು. ಜೋಶಿ	1	8
ಸಂಗಾತಿ	ಕು. ಚಂದ್ರಿಕಾ	1	8
ಸೈಮನ್ನನ ತಂದೆ	ಸಂಕಲನ	1	12
ನಿಸರ್ಗದುಡಿಯಲ್ಲಿ	ನಾಯಕ	1	8
ಚಕಮಕಿ	ಬೇಂದ್ರೆ ಲಕ್ಷ್ಮಣರಾಯ	2	0
ಘಾಟೀ ಮುದುಕ	ದೇವುಡು	1	8
ಸುದರ್ಶನ	ಆನಂದಕಂದ	1	8
ಆಶಾ	ರಾಜ	1	8
ಸ್ವರ್ಣಭೂಮಿ	ವಾಮನ ಮಲ್ಯ	1	8
ದೇವರ ಸಾಮ್ರಾಜ್ಯ	ಶ್ರೀಕಂಠ	2	0
ಹಂದ ಗೆಜ್ಜೆ	ಕುಮಾರ ವೆಂಕಣ್ಣ	1	8
ಬೀಳದ ತೆರೆ	ಸುಶೀಲಾ ಜೋಶಿ	2	0
ಎರಡು ಸೆಳೆತ	ಚಾರುವಂದ್ಯೋಪಾಧ್ಯಾಯ	1	12
ಚಂದ್ರ ತಾರೆ	ವರದರಾಜ ಹುಯಿಲಗೋಳ	1	4
ಚಿನ್ನದ ಪದಕ	ವೆಂ. ಮು. ಜೋಶಿ	1	4
ಆಕಾಶ ದೀಪ	ಎಸ್. ಆರ್. ಚಂದ್ರ	1	0
ವೃಂದ	ವೆಂಕೋಬಾಚಾರ್ಯ	1	8
ಮಗಳಲ್ಲ ಹೆಂಡತಿ	ಯೋಗೀಶ್ವರ ರಾವ್	0	12
ಕಾಲಯಾನ	ಭಾರತೀಸುತ	1	10
ತರಲಾ	ರಾಮಚಂದ್ರ ಜೋಶಿ	1	0
ದೇವರ ಮನೆ	ವೆಂಕಟರಾಮ್	0	10
ಅನುರಾಗಿ	ಧನ್ವಂತ	0	10
ಅನ್ನಪೂರ್ಣ	ನಿರಂಜನ	1	0
ಕಸ್ತೂರಿ	ಶ್ರೀಮತಿ ವಾಣಿ	1	4
ಬಾಳ್ಕೋಟೆಗಳು	ನಾಯಕ	0	6
ಗಡೀಪಾರು	ಚೆನ್ನಬಸಪ್ಪ	1	8
ಉರ್ದೂ ಕಥಾವಳಿ	ಗು. ಜೋಶಿ	0	8
ಭಗತ್ ಸಿಂಗ್	ದೇಶಪಾಂಡೆ	1	0
ಸೆರೆಯಿಂದ ಹೊರಗೆ	ಕಟ್ಟೀಮನಿ	1	4
ಪಂಚಾಮೃತ	ದೇವುಡು	1	0
ತಳಿರು ತೋರಣ	ನಾಯಕ	1	8
ತಾಪತ್ರಯ	ಸಂಕಲನ	0	6
ಡೊಂಕು ಬಾಲ	ನಾ. ಕಸ್ತೂರಿ	1	8
ನಿಷ್ಪಯ ಜ್ಞಾನ	ಮುದ್ದಣ್ಣ ಬಲ್ಲಾಳ	0	8
ಆಗಸ್ಟ್ ವೀರರು	ನಾಡಿಗ ಕೃಷ್ಣಮೂರ್ತಿ	0	8
ಕಾಂಗ್ರೆಸ್ಸಿನ ಇತಿಹಾಸ	ಜೋಶಿ	0	12
ಆಜಾದ ಹಿಂದ	ಮಲ್ಲಾರಿ	1	0
ಸುಭಾಸ ಸೀಮೋಲ್ಲಂಘನ	,,	1	8
ನೇತಾಜಿ	,,	1	8
ಮಗಳಿಗೆ ತಂದೆಯ ಓಲೆಗಳು	ನೆಹರು	1	12
ಎಚ್ಚತ್ತ ಆಗ್ನೇಯ ಏಶಿಯಾ	ಎಂ. ಹರಿದಾಸ	1	8
ಮರೆಯಲಾರದ ಮಡದಿ	ಯೋಗೀಶರಾವ್	2	0
ಬದುಕಿನ ಸುಳಿಯಲ್ಲಿ	ಸೇವನಮಿರಾಜಮಲ್ಲ	2	0
ಜೋರ ಶಿಖಾಮಣಿ	ರಮೇಶ	1	4
ಪಾಶ್ಚಾತ್ಯ ಕಲಾವಿದರು	ಕಮಲದಾಸಿ	3	0

ಹೀಗಿದೆ ಜಗತ್ತು	ಸಂಚಾರಿ	1	0
ಜರ್ಮನಿಯ ಗುಪ್ತ ಹೇರರು	,,	3	0
ಪಾರ್ಕಿನ ಲಚುಮಿ	ಗೋಪಾಲ ಕೃಷ್ಣರಾಯ	1	0
ಕೆಲವು ಉಪನ್ಯಾಸಗಳು	ಹೊ. ಚಿದಂಬರಯ್ಯ	1	0
ಪುನರಾಗಮನ	ಧನ್ವಂತ	0	8
ಹೇಮಾಂಗಿನಿ ಶರತ್	ಕುಪ್ಪಮ್ಮ	0	4
ಮುನ್ನೂ ಮದುವೆ	ವೆಂಕಟೇಶಯ್ಯ	2	0
ಅನುಪಮ ಸುಂದರ	ಧನ್ವಂತ	1	4
ಪ್ರಚಂಡ ಜ್ವಾಲಾಮುಖಿ	ಉ. ವಾ. ನಾಯಕ್	1	8
ಡಾ. ಗಿರೀಶ	ಪತ್ತೇದಾರಿ ರಮೇಶ	0	6
ಬಂಧನದ ಬಾಂಧವ್ಯ	ಸೇವ ನಮಿರಾಜ ಮಲ್ಲ	1	0
ಕಾಶ್ಮೀರ ಪ್ರವಾಸ	ಜೋಶಿ	0	6
ಕನ್ನಡದಲ್ಲಿ ವಿಡಂಬನ ಸಾಹಿತ್ಯ	ಕೃಷ್ಣಸ್ವಾಮಿ	0	6
ಹಿಂದೂ ಕೋಡು ಮಸೂದೆ	ವಿರಣಿ ಶ್ರೀನಿವಾಸ	0	8
ಗುರುಪೀಠಗಳ ಅವನತಿ	ಶಂ. ಜೋಯಿಸ	0	8
ಕ್ರಾಂತಿಯ ನೂರು ವರುಷ	ಮಲ್ಲಾರಿ	0	12
ಕನ್ನಡ ಯಾತ್ರೆ	ಮಾ. ನರಸಿಂಗ ರಾವ್	1	8
ಪತ್ರಿಕಾ ವ್ಯವಸಾಯ	ಧಾರವಾಡ್ಕರ್	0	12
ಕಳಸಾಪುರದ ಹುಡುಗರು	ಮ.ಕೃಷ್ಣಾಮೂರ್ತಿ	1	0
ಕಪಟ ನಾಟಕ	ಭಾರತಿ	0	12
ಕನ್ನಡ ಸಾಹಿತ್ಯ ಮತ್ತು ರಾಜಾಶ್ರಯ	ರಾಮು	0	10
ಸುಗ್ಗಿಯ ಕತೆಗಳು	ಬ. ನ. ಸುಂದರರಾವ್	0	12
ಗಾಂಧೀ ಜೀವನ ಪಾಠಗಳು	,, ,,	1	4
ಎಚ್ಚತ್ತ ಹೆಣ್ಣುಗಳು	ಕಂ. ಶಾಮಣ್ಣ	1	12
ಭಾಗ್ಯ ಲಕ್ಷ್ಮಿ	ಎಂ. ವಿ. ಸೀತಾರಾಮಯ್ಯ	0	12
ಕಾಮನ ಸೋಲು	ಅ. ನ. ಕೃ.	2	0
ದೇಶಾಂತರದ ಕತೆಗಳು	ದೇವುಡು	1	0
ನಾಳೀ ಜಂಘೆ	ಜಿ. ಪಿ. ರಾಜರತ್ನಂ	1	4
ಭಕ್ತಿ ಮೀರಾ	ಕಲ್ಯಾಣಮ್ಮ	1	0
ಸೌಭಾಗ್ಯವತಿ	ಎಂ. ವಿ. ಸೀತಾರಾಮಯ್ಯ	1	12
ಚಂಡಿಯ ಕತೆಗಳು	ಎನ್. ಕೃಷ್ಣಮೂರ್ತಿ	1	4
ರಾಬಿನ್‌ಸನ್ ಕ್ರೂಸೋ		1	4
ಹರುಕು ಮುರುಕು	ನಾ. ಕೃಷ್ಣರಾಯ	1	0
ಬೇಬಿ ಮತ್ತು ಇತರ ಕತೆಗಳು	ಸೂರಪ್ಪ	0	12
ಮನೆಗೆ ಬಂದ ಮಹಾಲಕ್ಷ್ಮಿ	ತ. ರಾ. ಸು.	1	4
ದೇವರಿಲ್ಲಿ	ನಾ. ನಾ. ಸಂಪೇಟ	4	0
ಶಕುಂತಳಾ	ನಾ. ಸೀ. ಫಡಕೆ	2	12
ಸಂಗ್ರಾಮ	ಅ. ನ. ಕೃ.	1	8
ಬೀದಿಯಲ್ಲಿ ಬಿದ್ದವಳು	ಬಸವರಾಜ ಕಟ್ಟೀಮನಿ	2	8
ಆಶಾ ಬಾಳು	ಶ್ರೀಧರ್‌ರಾವ್	1	4
ಅವಳಿ ಜವಳಿ ಸಹೋದರರು	ರಮೇಶ	1	4
ದೇವದಾಸ	ಗು. ಜೋಶಿ	1	8
ಪಾಷಾಣ ಮೂರ್ತಿ	ಉ. ವಾ. ನಾಯಕ್	1	0
ಪತಿವ್ರತೆಯ ಪ್ರಭಾವ	ಬಂಡಾಚಾರ್ಯ	1	4
ಗಂಡು ಹೆಣ್ಣಿನ ಸಮಸ್ಯೆ	ಕುಪ್ಪಮ್ಮ	3	0
ಮುಗಿಲ ಮಲ್ಲಿಗೆ	ಕೃ. ಪುರಾಣಿಕ	3	0
ಮಾಲತೀ ಮಂದಿರ	ಹೊ. ಗುಡ್ಡಪ್ಪ	2	0
ಕಳ್ಳರ ಕೈಚಳಕ (ಪತ್ತೆದಾರಿ)	ರಮೇಶ	1	4
ಕಳ್ಳನಿಗೆ ಕಾಣಿಕೆ ”	ಕುಲಕರ್ಣಿ	1	4
ರಕ್ತಗೋಲ ”	ರಮೇಶ	1	0
ಮಿಸ್. ಅಮೇಲಿಯ ”	”	1	4
ಕರೀ ಬೆಕ್ಕು ”	”	1	4
ಅದೃಶ್ಯ ಮನುಷ್ಯ ”	”	1	0
ಹಂತಕನು ಯಾರು? ,,	ನವಗಿರಿನಂದ	1	4
ಕಾಲಾಬರ್ಯಾರ್ ,,	,,	1	4
ಕೊಂದವರು ಯಾರು?	ಗು. ಜೋಶಿ	1	4
ಪರಾವಲಂಬಿ	ಜ. ಗುರ್ಕಾರ್	2	8
ಬಿರುಗಾಳಿ	ಫಡಕೆ ಭಾಗ ೧	1	8
,,	,, ,, ೨	2	0
ಪೂಜಾಫಲ	ನಿರಂಗ	1	8
ಸಾಮ್ರಾಟ್ ಹರ್ಷವರ್ಧನ	ನಾಗೇಶ	2	0

ನೂರಜಹಾನ	ಕೇಶವ ಶರ್ಮ	1	0
ಭೂಮಾತೆ ಮತ್ತು ಮಂದಿರ	ಕುಪ್ಪಮ್ಮ	1	8
ರಂಗ ವಿಲಾಸಿನಿ	ಮಲ್ಲಾರಿ	3	0
ಕೊಲ್ಲಂಬ	ಹೊ. ಗುಡ್ಡಪ್ಪ	0	14
ಸ್ಮಶಾನ ವೈರಾಗ್ಯ	ಚುಳಕಿ	1	8
ಪರಿವರ್ತನೆ	ಶಿವಾಕಾಂತ	2	8
ಸ್ವಪ್ನಜೀವಿ	ಶ್ರೀವಿಕ್ರಮ	1	8
ಮಾಧವ ಲೀಲೆ	ಎಂ. ಜಿ. ವೆಂಕಟೇಶಯ್ಯ	1	8
ದಲಿತ ಕುಸುಮ	ಹೊ. ಗುಡ್ಡಪ್ಪ	2	0
ಬೆಳವಲದ ಭಾಗ್ಯ ಲಕ್ಷ್ಮಿ	ಕು. ಶೇಷಗಿರಿರಾವ್	2	8
ಸಾವಿನ ಉಡಿಯಲ್ಲಿ	ಎಸ್ಕೆ	3	0
ಮುರುಕು ದಂಬೂಕು	ಹುರುಳಿ ಭೀಮರಾವ್	2	4
ಹೊಸ ಹೆಜ್ಜೆ	ಭಾರ್ಗವ	0	10
ಅವಳ ಋಣ	ಮುರಲೀಧರ	1	8
ನಿರ್ದೋಷಿ	ಆರ್. ಜಿ. ಕುಮಟಾ	2	0
ಅವಳ ಹುಚ್ಚು	ಕಾ. ರ. ಶೆಟ್ಟಿ	0	14
ಧೂಮ ಕೇತುವಿನ ಮದುವೆ	ಬಿ. ಶಂಕರ ಭಟ್ಟ	1	0
ಅಂತರಂಗದ ಕತೆಗಳು	ಸಂಕಲನ	1	4
ಪ್ರೇಮ ಪ್ರವಾಹ	,,	0	8
ಬದುಕು ಬಂಗಾರ	ಕುಮಾರಸ್ವಾಮಿ	1	8
ಏಶಿಯದ ಸಂಪತ್ತು	ಕು. ಶಿ. ಹರಿದಾಸ ಭಟ್	2	0
ಚಿಗುರು	ಸಂಕಲನ	0	10
ನನ್ನ ಕತೆಗಳು	ಕೆ. ವಿ. ಆಚಾರ್ಯ	0	10
ಲೋಪಾ ಮುದ್ರೆ	ರಂಗನಾಥ	1	0
ಬಾಳಿನ ಬೆಡಗು	ಯು. ನಾರಾಯಣ ಭಟ್ಟ	1	4
ಜಮೀನ್ದಾರ	ಹೊ. ಗುಡ್ಡಪ್ಪ	1	8
ಸ್ವರಾಜ್ಯ ವಿಜಯ	ಎಂ. ವಿ. ಹೆಗ್ಡೆ	0	8
ಕದಂಬ	ಸರಸ್ವತಿಬಾಯಿ ರಾಜವಾಡೆ	1	4
ಕವಿತಾ ಕಾಮಿನಿ	ಎಸ್. ವೆಂಕಟರಾಜ	2	0
ಸ್ವಾತಂತ್ರ್ಯವೀರ ಸಾವರಕರ	ಇಂದಿರಾಬಾಯಿ	1	4
ಭಾರತದಲ್ಲಿ ಜಾತಿ ಭೇದ	ಸುಬ್ರಹ್ಮಣ್ಯಂ	1	0
ಅನ್ನದೇವರು ಮತ್ತು ಇತರಕಥೆಗಳು	ಕಯ್ಯಾರ	0	12
ನಗೆ ನೋಟಗಳು	ಕೆ. ವಿಠಲ ಶೆಣೈ	1	4
ಪ್ರಕಾಶ	ಸರಸ್ವತಿಬಾಯಿ ರಾಜವಾಡೆ	2	8
ಭಾರತೀಯ ಕತೆಗಳು	ಕೊರಡ್ಕಲ್	1	12
ರಂಗ ಭೂಮಿ	ಎಸ್. ವೆಂಕಟರಾಜ್	0	10
ಶಿಲ್ಪಿ	ಹು. ಶಾ. ತಿಮ್ಮಪ್ಪ	1	8
ಪ್ರತಿಜ್ಞಾ ಪೂರ್ತಿ	ಸುಬ್ರಾವ್ ಕೃಷ್ಣ ಹೆಗಡೆ	1	0
ನೀತಿ ವಿನೋದ ಕತೆಗಳು	ವೀರಪ್ಪಯುಗಟಿ	0	12
ಪಂಟಮಾರಾ	ಕು. ಶಿ. ಹರಿದಾಸ ಭಟ್ಟ	2	0
ಸ್ವಪ್ನ ಲೋಕ	ಕಾರ್ತಿಕೇಯ	0	8
ಶವಗಳ ಸಾಗಾಟ	ಸುಬ್ರಾವ್ ಕೃಷ್ಣ ಹೆಗಡೆ	0	10
ಪ್ರಜಾಪ್ರಭುತ್ವವನ್ನು ಕುರಿತು	ಕಾಂತ	0	8
ಯುಗ ವಾಣಿ	ಕು. ಶಿ. ಹರಿದಾಸ ಭಟ್ಟ	0	8
ಭಾಗ್ಯ ಲಕ್ಷ್ಮಿ	ಬಿ. ಲಕ್ಷ್ಮಣರಾವ್	1	0
ಕುಲವಿಲ್ಲದ ಹೆಣ್ಣು	ವೆಂಕೋಬಾಚಾರ್ಯ	2	0
ಪ್ರೇಮ ವಿಜಯ	ಕೆ. ಕೆ. ಶೆಟ್ಟಿ	1	0
ದೇಶ ಭಕ್ತ	,,	1	4
ನಂದಾ ದೀಪ	ಕೊ. ಶ್ರೀನಿವಾಸರಾವ್	0	14
ಸನ್ಯಾಸಿಯ ಸೋಗಿನಲ್ಲಿ	ಕೆ. ಕೆ. ಶೆಟ್ಟಿ	0	13
ಮಧುವನ	ಸಂಕಲನ	3	0
ಇರಾನಿನ ವೀರರು	ಭಾರತೀ ಸುತ	1	8
ಹೆಬ್ಬೆರಳು	ಗೋವಿಂದ ಪೈ	0	14
ಗೊಲ್ಗೊಥಾ	,,	0	12
ಉದ್ಘೋಷ	ಕವಿತಾ ಸಂಕಲನ	0	12
ಮುಂಬೆಳಕು	ಅ. ಕೆ. ಸಂಕಪ್ಪ ರೈ	0	12
ಕೆಲಸ ಮೇಲೋಗರ	ಮ. ಅನಂತರಾವ್	0	14
ಪಯಣ	ವಿನಾಯಕ	0	12
ಜೀವನ ಲತೆ	ಪು. ಹ. ಆಚಾರ್ಯ	0	8
ವೀರ ಪಥಿಕ	ಪಿ. ಧೂಲಾ	0	6
ಪರಾಗ (ಕವಿತಾ ಸಂಕಲನ)		0	6
ಪ್ರೇಮ ನಾಟಕಾವಳಿ (ಸಂಕಲನ)		1	0
ದಾಮಾಜಿ ಪಂತ	ಜಿ. ಎನ್. ಲಕ್ಷ್ಮಣ ಪೈ	0	10

ಇನ್ನೂ ಹಲವಾರು ಪುಸ್ತಕಗಳು ದೊರೆಯುತ್ತವೆ

ಕೆಟಲಾಗಿಗೆ ಬರೆಯಿರಿ. ವಿಶೇಷ ಸವಲತ್ತು ಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಮಂಗಳೂರು

ಟ್ರೈನಿಂಗ್ ಶಾಲೆಯ ವಾರ್ಷಿಕೋತ್ಸವ— ಮಂಗಳೂರು ಸರಕಾರೀ ಟ್ರೈನಿಂಗ್ ಕಾಲೇಜಿನ ವಾರ್ಷಿಕೋತ್ಸವವು ತಾ. 10ರಲ್ಲಿ ಡಾ। ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಕಾಲೇಜು ಪ್ರಿನ್ಸಿಪಾಲ್ ಶ್ರೀ ಬಿ. ರಾಘವ ಬಾಳಿಗರು ಕಾಲೇಜಿನ ವರದಿಯನ್ನು, ಶಾಲಾವರದಿಯನ್ನು ಹೆಡ್ಮಾಸ್ತರರೂ ಓದಿದರು. ಶ್ರೀ ಎಸ್. ಎಮ್. ಕೃಷ್ಣನ್, ಅವರು ಸಂದೇಶವಾಚನಮಾಡಿದರು. ಶ್ರೀಗಳಾದ ಸ್ಟೀವನ್ಸನ್ ಮತ್ತು ಸುಬ್ರಾಯ ಭಟ್ಟರು ಕ್ರಮವಾಗಿ ಕಾಲೇಜು ಮತ್ತು ಶಾಲೆಯ ಸ್ವಸ್ತಿವಾಚನ ಮಾಡಿದರು. ಶ್ರೀಗಳಾದ ಎಚ್. ಗಣೇಶ ಮತ್ತು ಎನ್. ಶಂಕರ ಸಂಬಿಯಾರರು ಉತ್ತರವಿತ್ತರು. ಅಧ್ಯಕ್ಷರು ಪಾರಿತೋಷ ವಿತರಣೆ ಮಾಡಿದರು. ಮಕ್ಕಳ ಹಿರಿಯರು ಮಕ್ಕಳ ಕಲಿಯುವಿಕೆ, ಆಟಪಾಟಗಳ ಕುರಿತು ಮತ್ತು ಅವರ ಶಾಲೆಯ ಜೀವನದ ಕುರಿತು ಆಸಕ್ತಿ ವಹಿಸಬೇಕೆಂದು ಅಧ್ಯಕ್ಷರು ಹೇಳಿದರು. ಶಿಕ್ಷಕರು ಕಲಿಸುತ್ತಾರೆಂದು ತಮ್ಮ ಜವಾಬ್ದಾರಿಯನ್ನು ಹಿರಿಯರು ಮರೆಯಬಾರದು. ಅಧ್ಯಾಪಕ ವೃತ್ತಿಯು ವ್ಯಕ್ತಿಯ ಜ್ಞಾನವನ್ನು ವಿಕಾಸಗೊಳಿಸುತ್ತದೆ. ಪ್ರತಿಪದವೀಧರನು ಎರಡು ವರ್ಷವಾದರೂ ಶಿಕ್ಷಕನಾಗಿ ದುಡಿಯಬೇಕು ಎಂದು ಅವರು ನುಡಿದರು. ಶ್ರೀ ಒ. ಎಸ್. ಅಂಜನರು ಧನ್ಯವಾದಗಳನ್ನರ್ಪಿಸಿದರು. ನಂತರ ಮನರಂಜನ ಕಾರ್ಯಗಳಾದುವು. ಅಂದು ಬೆಳಿಗ್ಗೆ ಡಾ। ಎಂ. ಕೇಶವ ಪೈಗಳು ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ ಶೈಕ್ಷಣಿಕ ಪ್ರದರ್ಶನವನ್ನು ಉದ್ಘಾಟಿಸಿದರು.

ಟ್ರಾನ್ಸ್‌ಪೋರ್ಟ್ ಕಮಿಶನರಿಗೆ ಮನವಿ— ಮದ್ರಾಸಿನ ಟ್ರಾನ್ಸ್‌ಪೋರ್ಟ್ ಕಮೀಶನರ್ ಶ್ರೀ. ಕೆ. ಪಿ. ಕೆ. ಮೆನೋನ್‌ರವರು ತಾ. 10ರಂದು ಸಂಜೆ ಕೆನರಾ ಚೇಂಬರ್ ಒಫ್ ಕೋಮರ್ಸಿಗೆ ಸಂದರ್ಶನವಿತ್ತಾಗ ಅವರಿಗೊಂದು ಮನವಿ ಅರ್ಪಿಸಲಾಯಿತು— ಲಾರಿಗಳ ಸಾರಿಗೆಗೆ ಇನ್ನೂ ಹೆಚ್ಚಿನ ರಸ್ತೆಗಳನ್ನು ತೆರೆಯಬೇಕು, ಟೇಕ್ಸ್ ಕಡಿಮೆಮಾಡಬೇಕು, ಕೆಲವು ಕಾನೂನಿನ ತಡೆಗಳನ್ನು ಸಡಲಿಸಬೇಕು ಎಂದು ಮುಂತಾಗಿ ಮನವಿಯಲ್ಲಿ ಸೂಚಿಸಲಾಗಿತ್ತು. ಶ್ರೀ ಮೆನೋನರು ಉತ್ತರವೀಯುತ್ತಾ, ಮೈಲೇಜು ಹೆಚ್ಚು ಮಾಡುವ ಕುರಿತು ಸರಕಾರ ಪರ್ಯಾಲೋಚಿಸುತ್ತಿದೆ, ಆರ್. ಟಿ ಒ. ಅಥವಾ ಆರ್. ಟಿ. ಎ.ಗೆ ಹೆಚ್ಚಿಗೆ ಅಧಿಕಾರಿಗಳನ್ನು ಕೊಟ್ಟು ಕೆಲವು ತೊಡಕುಗಳನ್ನು ಇಲ್ಲಿಯೆ ಪರಿಹಾರವಾಗುವಂತೆ ಮಾಡುವ ಆಲೋಚನೆಯಿದೆ ಎಂದು ಮೊದಲಾಗಿ ಹೇಳಿದರು. ಶ್ರೀ ಕಸ್ತೂರಿ ಲಕ್ಷ್ಮಣ ಪೈಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಯು. ಸುಬ್ರಾಯ ಮಲ್ಯರು ಧನ್ಯವಾದಗಳನ್ನರ್ಪಿಸಿದರು.

ಹಿಂದೀ ದಿನಾಚರಣೆ— ಸ್ಥಳೀಯ ಸರಕಾರೀ ಕಲಾ ಕಾಲೇಜಿನ ಹಿಂದೀ ಸಂಘದ ನೇತೃತ್ವದಲ್ಲಿ ತಾ. 13ರಲ್ಲಿ ಹಿಂದೀ ದಿನಾಚರಣೆಯು ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಆರ್. ನಾಯಕರು ಸ್ವಾಗತಭಾಷಣಮಾಡಿದರು. ಶ್ರೀಗಳಾದ ಶ್ರೀಧರ ಭಟ್, ಶಿವಾನಂದರು ಉಪನ್ಯಾಸ ವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಡ್ಡಾಯವಾಗಿ ಹಿಂದಿಯನ್ನು ಕಲಿಯುವಂತಹ ವಾತಾವರಣವನ್ನು ನಿರ್ಮಿಸಿ, ಆ ಮೂಲಕ ಹಿಂದೀಭಾಷೆಗೆ ಸರಕಾರದಿಂದ ತಕ್ಕ ಪುರಸ್ಕಾರದೊರೆಯುವಂತೆ ಮತ್ತು ಘಟನೆಯಲ್ಲಿ ಹೇಳಲಾದ ಹದಿನೈದು ವರುಷದ ಅವಧಿಯೊಳಗೆ ಹಿಂದಿಯು ರಾಷ್ಟ್ರಭಾಷೆಯಾಗುವಂತೆ ಮಾಡಬೇಕೆಂದು ಸಾರ್ವಜನಿಕರನ್ನು ಕೇಳಿಕೊಂಡರು. ಶ್ರೀ ಪಿ. ವಾಸುದೇವ ಪ್ರಭುಗಳು ಧನ್ಯವಾದಗಳನ್ನರ್ಪಿಸಿದರು.

An OPPORTUNITY

Every one can contribute something, even in a small way, for solving various pressing problems of our Country. Each has genius of his own in some sphere or other.

Why not, therefore, try to suggest the best method to solve the unemployment- **NAUKRI** -problem in the Country?

Suggestions with reasons may be sent to the following address. The suggestions and reasons thereto should not exceed one page (foolscap) and may be in English or Kanarese.

A prize of Rs. 100/- (one hundred) will be awarded for the best suggestion received.

Judges: 1. Sri L. Bharat Sinh, Proprietor, Vidyut Pictures.
2. " R. Ramachandra Sinhji, Jayamahal, Bangalore.
3. Manager, Vidyut Pictures, Bangalore.
(the decision of the judges is final)

Closing date: One week after release of Bimal Roy's **NAUKRI** at Prabhat Talkies, Bangalore.

Result will be announced on or before 10th March, 1955.

(All suggestions received will be forwarded to the Planning Commission, Government of India, New Delhi.)

Send your suggestions to:-
VIDYUT PICTURES, GANDHINAGAR,
BANGALORE-2.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಪಾಯಸ್ ಬಿಲ್ಡಿಂಗ್, ಹಂಪನ್‌ಕಟ್ಟಾ, ಮಂಗಳೂರು.

ಇನ್ಸ್‌ಪೆಕ್ಟರರು, ಒರ್ಗನೈಜರರು ಮತ್ತು ಎಲ್ಲಾ ತರದ ಏಜಂಟರರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.

ಹೊಸತಾಗಿ ಏರ್ಪಡಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಿವೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:—

B. B. SHETTY, B. A., LL. B.
Chairman.

ಪಾರಿತೋಷ ವಿತರಣೆ ಸಮಾರಂಭ ಕೊಯಮುತ್ತೂರು ವಲಯದ ಅಂತರ್ ಜಿಲ್ಲಾ ಸೆಕೆಂಡರೀ ಶಾಲೆಗಳ ಎತ್ಲೆಟಿಕ್ ಎಸೋಸಿಯೇಶನಿನ ವತಿಯಿಂದ ಜರಗಿದ ಕೊಯಮುತ್ತೂರು ವಲಯದ ಅಂತರ್ ಜಿಲ್ಲಾ ಪಂದ್ಯಾಟಗಳಲ್ಲಿ ವಿಜಯಿಗಳಾದವರಿಗೆ ಪಾರಿತೋಷ ವಿತರಣೆ ಮಾಡುವ ಸಮಾರಂಭವು ತಾ. 12ರಲ್ಲಿ ಕೇಂದ್ರ ಮೈದಾನಿನಲ್ಲಿ ಶ್ರೀ ಕೆ. ಎಸ್. ಹೆಗ್ಡೆ, ಎಂ. ಪಿ; ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯು. ಕೇಶವ ರಾಯರಿಂದ ಸ್ವಾಗತ, ಎಸ್. ಕಮಲಾಕ್ಷ ಪೈಗಳಿಂದ ವರದಿವಾಚನವಾಯಿತು. ಶ್ರೀ ಯು. ಶ್ರೀನಿವಾಸ ಶೆಣೈಯರು ಧನ್ಯವಾದವನ್ನಿತ್ತರು. ಕೊಯಮುತ್ತೂರಿನ ಶಾಲಾ ಡಿವಿಜನಲ್ ಇನ್ಸ್‌ಪೆಕ್ಟರ್ ಶ್ರೀ. ವಿ. ಟಿ. ಟೈಟಸರು ಕೃತಜ್ಞತೆಯನ್ನರ್ಪಿಸಿದರು.

ನಿಧನ— ಅತ್ತಾವರದಲ್ಲಿ ವಾಸವಾಗಿದ್ದು ಜನಪ್ರಿಯರಾಗಿದ್ದ ಶ್ರೀ. ಕೆ. ಬಾಬು ಶೆಟ್ಟಿರು ತಾ, 6-2-55ರಲ್ಲಿ ದಿವಂಗತರಾದುದು ವಿಷಾದಕರವಿದೆ.

ಮೈಸೂರು ರೇಡಿಯೊದಿಂದ ತಾ. 5-3-55ನೇ ಶನಿವಾರ ರಾತ್ರಿ 8ರಿಂದ 9 ಗಂಟೆ ತನಕ ಉಡುಪಿಯ "ಅಂತರಂಗ"ದವರು ಪ್ರಕಟಿಸಿದ "ಭಾರತದ ಗುರುಕುಲ" ಪ್ರಸಂಗದ ಮೂರನೆ ಭಾಗವು ಪ್ರಸಾರವಾಗಲಿದೆ. ಶ್ರೀಗಳಾದ ಕವಿ ಭೂಷಣ ಕೆ. ಪಿ. ವೆಂಕಪ್ಪ ಶೆಟ್ಟಿ, ಕೆ. ಮಹಾಬಲ ಭಂಡಾರಿ, ಎಂ. ಎ. ಎಲ್. ಎಲ್. ಬಿ, ಕಯ್ಯಾರ ಕಿಂಞಣ್ಣ ರೈ, ಬಿ. ಎ., ವಿದ್ವಾನ್, ಪಿ. ಐತಪ್ಪ, ಎಂ ಎ., ವಿದ್ವಾನ್, ಬಾಡೂರು ಜಗನ್ನಾಥ ರೈ, ಪೇಜಾವರು ವಿಟ್ಠಲ ಶೆಟ್ಟಿ ಮೊದಲಾದವರು ಪಾತ್ರ ವಹಿಸುವರು.

ಜಿಲ್ಲಾ ಮಜೂರ ಸಮ್ಮೇಳನವು- ಮಂಗಳೂರಲ್ಲಿ ಇದೇ ತಾ. 9 ಮತ್ತು 10ರಲ್ಲಿ ಜರಗಿತು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಎ. ಡಾಂಗೆಯವರು ಬಹಿರಂಗ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎ. ಶಾಂತಾರಾಮ ಪೈಗಳು ಸ್ವಾಗತ ಭಾಷಣ ಮಾಡಿದ ಬಳಿಕ ಶ್ರೀ ಬಿ. ವಿ. ಕಕ್ಕಿಲ್ಲಾಯರು ಸಮ್ಮೇಳನಕ್ಕೆ ಬಂದಿದ್ದ ಶುಭ ಸಂದೇಶಗಳನ್ನು ಓದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತದಲ್ಲಿ 1930ರಿಂದ ಪ್ರಾರಂಭವಾದ ಮಜೂರ ಸಂಘಟನೆಯ ಹೋರಾಟದ ಫಲವಾಗಿ ದಿನಕ್ಕೆ ಎಂಟು ಗಂಟೆ ಕೆಲಸ, ಕೆಲಸಮಾಡುವಾಗ ಯಂತ್ರದ ಅಪಘಾತದಿಂದ ಕೈಕಾಲುಗಳಿಗೆ ಪೆಟ್ಟಾದರೆ ಪರಿಹಾರ, ಹೆರಿಗೆ ಬಾಣಂತಿ ಸೌಕರ್ಯ ಇತ್ಯಾದಿ ಕೇಳಿಕೆಗಳನ್ನು ಪಡೆದಿದೆಯೆಂದೂ, ಈಗ ದೇಶವು ಸ್ವತಂತ್ರವಾದರೂ ಕಿಸಾನ ಮಜೂರರಾಗೂ ಮಧ್ಯಮವರ್ಗದ ಕಾಯಿದೆ ಆಗುವುದಿಲ್ಲವೆಂದೂ ಆದರೂ ಅದು ಜಾರಿಗೆಬರುವಾಗ ಪ್ರಯೋಜನವಾಗುತ್ತದೆಂದೂ ಹೇಳಿದರು. ಅನಂತರ ನಿರ್ಣಯಗಳಾಗಿ ಮನರಂಜನೆಯೊಂದಿಗೆ ಪರಿಷತ್ತು ಮುಗಿಯಿತು.

ಪೆರ್ಡೂರು - ಸ್ಥಳೀಯ ಶ್ರೀ ಅನಂತಪದ್ಮನಾಭ ದೇವಸ್ಥಾನದ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ 5 ರಲ್ಲು ಹಿಂದೂ ರಿಲೀಜಿಯಸ್ ಎಂಡೋಮೆಂಟ್ಸ್ ಬೋರ್ಡಿನ ಅ। ಕಮಿಶನರ್ ಶ್ರೀ ಪಿ. ಯನ್. ಮಾಧವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಮುಖ್ಯೋಪಾಧ್ಯಾಯ ಶ್ರೀ ಬಿ. ಕೃಷ್ಣಯ್ಯ ಸೆಟ್ಟಿರು ವರದಿಯನ್ನೋದಿದರು. ಶಾಲಾ ಹಳೆ ಮತ್ತು ಈಗಿನ ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳಾದುವು.

ಹೆಗ್ಗ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಇದೇ ತಾ 10 ರಲ್ಲು ವಿಜೃಂಭಣೆಯಿಂದ ಜರಗಿದ ರಥೋತ್ಸವ ಕಾಲದಲ್ಲಿ ಶೃಂಗೇರಿಯ ಡಾ। ಎಸ್. ಬಿ. ಎನ್. ಹೆಗ್ಡೆಯವರು ಗಾಂಧೀಜಿ ಮತ್ತು ಸಂಸ್ಕೃತಿ ಎಂಬ ವಿಷಯದಲ್ಲಿ ಭಾಷಣವಿತ್ತರು. ಶ್ರೀ ಅನಂತಪದ್ಮನಾಭ ಉಪಾಧ್ಯಾಯರು ಸಭಾಧ್ಯಕ್ಷತೆ ವಹಿಸಿದ್ದರು.

ಕೆಮ್ಮಣ್ಣು— ಇಲ್ಲಿಯ ಹಿಂದೂ ಹಾ। ಎ। ಶಾಲೆಯ ವಿದ್ಯಾರ್ಥಿಗಳು ತಮ್ಮ ಹೆಡ್ಮಾಸ್ತರ್ ಶ್ರೀ ಬಿ. ವಿ. ಗೋಪಾಲಕೃಷ್ಣರಾಯರ ನಾಯಕತ್ವದಲ್ಲಿ ತಾ 8 ರಲ್ಲು ಬಾರ್ಕೂರಿಗೆ ಶೈಕ್ಷಣಿಕ ಪ್ರವಾಸ ಕೈಕೊಂಡು ಅಲ್ಲಿಯ ಇತಿಹಾಸ ಪ್ರಸಿದ್ಧ ದಾಳಿ ಕೋಟೆ, ಬಸದಿ ಮೊದಲಾದುವನ್ನು ಸಂದರ್ಶಿಸಿದರು.

ಪಡುಬಿದ್ರೆ— ಸ್ಥಳೀಯ ಬೋರ್ಡು ಹಾ। ಎ। ಶಾಲೆಯ ಮಕ್ಕಳ ತಿಂಗಳ ಹಬ್ಬ ಮತ್ತು ರಾಷ್ಟ್ರೀಯ ಉಳಿತಾಯ ಪತ್ರ್ಯಾಚರಣೆಯು ಇದೇ ತಾ 8 ರಲ್ಲು ಕಾಪು ಫಿರ್ಕಾ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಎ. ಭಾಸ್ಕರಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಮ್. ಎಮ್. ಪ್ರಭುಗಳು ಸಮಾರಂಭದ ಉದ್ದೇಶವನ್ನು ವಿವರಿಸಿದರು. ಶ್ರೀ ಪಿ. ಎಲ್. ರಾಘವೇಂದ್ರರಾಯರು ಧನ್ಯವಾದಗಳನ್ನರ್ಪಿಸಿದರು.

ಹಿರಿಯಡಕ— ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನದ ಗರ್ಭಗೃಹದ ಶಂಕು ಸ್ಥಾಪನೆಯು ಇದೇ ತಾ. 11ರಲ್ಲು ಉಡುಪಿ ಪುತ್ತಿಗೆ ಮಠದ ಹಿರಿಯ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳವರಿಂದ ಜರಗಿಸಲ್ಪಟ್ಟಿತು. ಅಧಮಾರು ಮಠದ ಶ್ರೀ ವಿಭುದೇಶತೀರ್ಥ ಸ್ವಾಮಿಗಳವರು ಸಮಾರಂಭಕ್ಕೆ ಚಿತ್ತೈಸಿದ್ದರು. ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರೂ ಹಾಜರಿದ್ದರು. ಶ್ರೀ ಟಿ. ರಮಾನಾಥ ಪೈಗಳು ಮೊಮಾಲಿಕೆಗಳನ್ನರ್ಪಿಸಿದರು. ಶ್ರೀ ಜಗಂಜೀವ ಆಳ್ವರು ಸ್ವಾಗತ ಪತ್ರವನ್ನೋದಿದರು. ಶ್ರೀ. ಬಿ. ಎಸ್. ಆಚಾರ್ಯರು ಸಂದೇಶವಾಚನ ಮಾಡಿದರು. ಶ್ರೀ ರಾಮಕೃಷ್ಣ ತಂತ್ರಿಗಳು ಜೀರ್ಣೋದ್ಧಾರದ ಕುರಿತು ಮಾತನಾಡಿ ಸ್ಥಳ ಪುರಾಣವನ್ನು ಸೂಚಿಸಿದರು. ಡಾ। ಚಂದಯ್ಯ ಹೆಗ್ಡೆಯವರು ವಂದನೆಗಳನ್ನರ್ಪಿಸಿದರು ಫಲಮಂತ್ರಾಕ್ಷತೆ ವಿತರಣೆಯಾಗಿ ಸಮಾರಂಭ ಕೊನೆಗೊಂಡಿತು.

ಶ್ರೀ ಅಂಜಾರು ಮುಂಡೆಟ್ಟು ಮುಂಜಪ್ಪ ಹೆಗ್ಡೆಯವರು ಇದೇ ತಾ. 8ರಲ್ಲು ರಾತ್ರಿ ತಮ್ಮ 64ನೇ ವರ್ಷದಲ್ಲಿ ಪರಲೋಕವಾಸಿಗಳಾದರೆನ್ನಲು ವಿಷಾದವೆನಿಸುತ್ತದೆ. ದಿವಂಗತರು ಬಡಜನ ಹಿತೈಷಿಗಳಾಗಿದ್ದರು.

ಫಲಿಮಾರು— ಸ್ಥಳೀಯ ಬೋ। ಹಾ। ಎ। ಶಾಲೆಯಲ್ಲಿ ತಾ. 4ರಲ್ಲಿ ಫಲಿಮಾರು ಮತ್ತು ನಂದಿಕೂರ್ ಅಭ್ಯುದಯೇಚ್ಛುಗಳು ಸಭೆ ಸೇರಿ ಈ ಶಾಲೆಗೊಂದು ಮಾತ್ರ ದೊಡ್ಡಿಯನ್ನು ಕಟ್ಟಿಸುವರೆ ತಕ್ಕ ಕಾರ್ಯಕ್ರಮ ಕೈಕೊಳ್ಳಲು ಸಮಿತಿಯೊಂದನ್ನು ರಚಿಸಿದರು.

ಇನ್ನಂಜೆ— ಇಲ್ಲಿಯ ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ. 25ನೆ ಶುಕ್ರವಾರ ಸಂಜೆ 5—30ಕ್ಕೆ ಶ್ರೀ ಸೋದೆವಾದಿರಾಜ ಮಠದ ಶ್ರೀ ವಿಶ್ವೋತ್ತಮತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಮರು ದಿನ ಸಂಜೆ ಈ ಶಾಲೆಯ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನಾಂಗಾಳ ಇಗರ್ಜಿಯ ರೆ। ಫಾ। ಆಂಡ್ರ್ಯೂ ಜೆ. ಪಿಂಟೊ, ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಹೇರೂರು - ಉಡುಪಿ ತಾಲೂಕು ಹೇರೂರು ಗ್ರಾಮದ ಬೋರ್ಡುಶಾಲಾ ಅಧ್ಯಾಪಕ ಶ್ರೀ ಯು. ಪೊಮ್ಮಯ್ಯನವರು ಉಪಾಧ್ಯಾಯ ವೃತ್ತಿಯಿಂದ ನಿವೃತ್ತಿಹೊಂದುವವರಿದ್ದು, ಅವರನ್ನು ಬೀಳ್ಕೊಡುವ ಸತ್ಕಾರ ಕೂಟವೊಂದು ಇದೇ ತಾ. 11ರಲ್ಲಿ ಶಾಲಾ ಜೂನಿಯರ್ ಡಿಸ್ಟ್ರಿಕ್ಟ ಇನ್ಸ್‌ಪೆಕ್ಟರ್ ಶ್ರೀ ಕೆ. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಆಲೂರು - ಸ್ಥಳೀಯ ಸರಸ್ವತಿ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ತಾ 5 ರಲ್ಲು ಸಂಜೆ ವಡುಕೋಣೆ ಕೇಂದ್ರದ ಅಧ್ಯಾಪಕರ ಸಂಘದ ವಾರ್ಷಿಕೋತ್ಸವವು ಜಿಲ್ಲಾ ಬೋರ್ಡು ಉಪಾಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಕುಂಬಳೆ - ಇಲ್ಲಿಯ ಸರಕಾರಿ ಮುಸ್ಲಿಂ ಮ್ ಹೈಸ್ಕೂಲಿನ ಶಾಲಾ ದಿನವು ತಾ 11 ರಲ್ಲು ಕೊಯಮುತ್ತೂರು ಡಿವಿಜನಲ್ ಇನ್ಸ್‌ಪೆಕ್ಟರ್ ಶ್ರೀ ಪಿ. ಟಿ. ಟೈಟಸ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿ. ಪಿ ಬಪ್ಪನ್, ಅವರು ವರದಿಯನ್ನೋದಿದರು.

ಆನೆಕಾಲು ಮಹಾ ರೋಗ

(೩ನೇ ಪುಟದಿಂದ)

ರಡು ನಮೂನೆಯ ಪರೋಪಜೀವಿಗಳಿಂದ ಆನೆಕಾಲು ರೋಗದ ಸೋಂಕು ತಗಲುತ್ತದೆ. ಈ ಪರೋಪ ಜೀವಿಗಳ ಬೆಳವಣಿಗೆಗೆ ಹೆಚ್ಚಿನ ಆರ್ದ್ರತೆಯೂ ಉಷ್ಣ ಹವೆಯೂ ಅಗತ್ಯವೆಂದು ಸಂಶೋಧನೆಗಳು ಹೇಳುತ್ತವೆ. ಆದುದರಿಂದ ರೇವುಗಳಲ್ಲಿ, ಗಂಗಾನದಿ ಮುಂತಾದ ಬಯಲು ತೀರಗಳಲ್ಲಿ, ಕರಾವಳಿ ಪ್ರದೇಶಗಳಲ್ಲಿ ರೋಗದ ವ್ಯಾಪ್ತಿ ಹೆಚ್ಚಿರುತ್ತದೆ. ಮೈಸೂರು, ಪಂಜಾಬುಗಳಂಥ ಪ್ರದೇಶಗಳಲ್ಲಿ ಪ್ರತಿಕೂಲ ಹವಾಮಾನವಿರುವುದರಿಂದ ಆನೆಕಾಲು ರೋಗವು ಅಲ್ಲಿ ವಿಸ್ತರಿಸುವುದಕ್ಕೆ ಅವಕಾಶವಾಗಿಲ್ಲ.

ಇತ್ತೀಚಿನ ವರೆಗೆ ಮದ್ದಿಲ್ಲದ ಅಥವಾ ಗುಣವಾಗದ ರೋಗ ಎಂಬುದಾಗಿ ಇದನ್ನು ಕರೆಯುತ್ತಿದ್ದರು. ಆದರೆ ಈಗ ಆ ಭಾವನೆ ಉಳಿದಿಲ್ಲ. ರೋಗಪೀಡಿತರನ್ನು ಗುಣಮುಖರಾಗಿ ಮಾಡಬಹುದೆಂದೂ ರೋಗದ ಪ್ರಸಾರವನ್ನು ನಿಯಂತ್ರಿಸಬಹುದೆಂದೂ ವಿಜ್ಞಾನಿಗಳು ನಡೆಸಿದ ಪ್ರಯೋಗಗಳಿಂದ ತಿಳಿದು ಬರುತ್ತದೆ. ಇದರಲ್ಲಿ ರೋಗ ಪೀಡಿತರ ಶುಶ್ರೂಷೆಗಿಂತಲೂ ರೋಗದ ಹಾವಳಿಯನ್ನು ತಡೆಗಟ್ಟುವ ಕ್ರಮದ ಕಡೆಗೆಯೇ ಹೆಚ್ಚಿನವರ ಲಕ್ಷ್ಯ ಹರಿದಿರುತ್ತದೆ. ಪರಿಣಾಮದಲ್ಲಿ ವಿಶೇಷ ರೀತಿಯ ವೈಜ್ಞಾನಿಕ ರಕ್ಷಣಾ ಕ್ರಮಗಳೊಳಗಾದ ತಡಿಕೆಗಳನ್ನು ಮನೆಗಳಿಗೆ ಉಪಯೋಗಿಸುವ ಮತ್ತು ಸೊಳ್ಳೆ ಪರದೆಗಳನ್ನು ಬಳಸುವ ವಿಧಾನವು ಹೆಚ್ಚು ಹೆಚ್ಚು ಜನಪ್ರಿಯತೆಯನ್ನು ಪಡೆಯುತ್ತಿದೆ. ಇವುಗಳು ಸೊಳ್ಳೆಗಳ ಪ್ರವೇಶವನ್ನು ನಿರ್ಬಂಧಿಸುವುದರಿಂದ, ಆನೆಕಾಲು ರೋಗ ತಗಲುವ ಸಂಭವ ಬಹಳ ಕಡಿಮೆಯಾಗುತ್ತದೆ. ಇದಲ್ಲದೆ ಸೊಳ್ಳೆಗಳ ಮತ್ತು ಪ್ರಾಣಿ ಹಾಗು ಕ್ರಿಮಿ ಕೀಟಗಳ ಆಶ್ರಯವನ್ನು ಪಡೆದ ಪರೋಪ ಜೀವಿಗಳ ಬೆಳವಣಿಗೆಗೆ ಎಡೆಕೊಡದ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳುವುದೂ ಅಪೇಕ್ಷಣೀಯ.

ಉಚೇರೆರಿಯಾ ಮಾಳವಿ ಎಂಬ ಹೆಸರಿನ ಪರೋಪ ಜೀವಿಯನ್ನು ಸಂಘಟಿಸಿದ ಕೀಟನಾಶಕಗಳಿಂದ ನಿರ್ಮೂಲ ಮಾಡಬಹುದು. ಪ್ರಾಯ ಪ್ರಬುದ್ಧ ಸೊಳ್ಳೆಗಳ ನಿರ್ಮೂಲಕ್ಕೆ ಪರಿಪೂರ್ಣ ಕೀಟ ನಾಶಕಗಳನ್ನು ಉಪಯೋಗಿಸಬಹುದು. ಆದರೆ ಉಚೇರೆರಿಯಾ ಬಾಂಕ್ರೋಫ್ಟಿಯೆಂಬ ಇನ್ನೊಂದು ಜಾತಿಯ ವಿಷಯದಲ್ಲಿ ದೀರ್ಘ ಕಾಲದ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದೇ ಶ್ರೇಯಸ್ಕರ. ಉತ್ತಮವಾದ ಚರಂಡಿಯ ವ್ಯವಸ್ಥೆ, ಸ್ವಚ್ಛ ನೀರಿನ ಪೂರೈಕೆ ಮುಂತಾದವುಗಳೂ ಕೀಟಗಳು ಉತ್ಪತ್ತಿಯಾಗುವ ಜವುಗು ಹಾಗು ಕೊಳೆ ನೀರಿನ ಸ್ಥಳಗಳ ಉಚ್ಚಾಟನೆಯೂ ಈ ಬಗ್ಗೆ ಮಾಡಬಹುದಾದ ಕೆಲಸ. ಮಧ್ಯಕಾಲದಲ್ಲಿ ಡಿ. ಡಿ. ಟಿ. ಮುಂತಾದ ರಾಸಾಯನಿಕ ವಸ್ತುಗಳ ಸೇಚನಮಾಡಿ ಸೊಳ್ಳೆಗಳ ಮತ್ತು ಪರೋಪ ಜೀವಿಗಳ ಅಭಿವೃದ್ಧಿ ಮತ್ತು ಪ್ರಸಾರವನ್ನು ಕೆಲಮಟ್ಟಿಗೆ ತಡೆಗಟ್ಟಬಹುದು. ಹೊಸ ಕೀಟನಾಶಕಗಳೂ ಸಂಘಟಿತ ರಾಸಾಯನಿಕ ಪದಾರ್ಥಗಳೂ ರೋಗದ ಹತೋಟಿಗೆ ಸಾಕಷ್ಟು ನೆರವಿತ್ತಿದ್ದು, ಸಾರ್ವಜನಿಕ ಆರೋಗ್ಯ ಸುಧಾರಕರು ಇವುಗಳಿಂದ ಸೇವೆಯ ತಮ್ಮ ಮಾರ್ಗವನ್ನು ಸುಗಮಮಾಡಿಕೊಳ್ಳುವುದು ಸಾಧ್ಯ, ಜನರು ಸಹ ಇವರೊಂದಿಗೆ ಸಹಕರಿಸುವುದು ಹಿತಕರ.

ರೋಗಪೀಡಿತರು ಮಾಡಬೇಕಾದುದೇನು—ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಬರುತ್ತದೆ. ರೋಗವು ಅಂಟಿಕೊಂಡ ವಿಷಯ ಕೂಡಲೇ ಗೊತ್ತಾಗದಿರುವುದರಿಂದಾಗಿಯೇ ರೋಗದ ಶಮನ ಕಾರ್ಯವು ಅಯಶಸ್ವಿಯಾಗುವುದೆಂದು ತಿಳಿದುಬರುತ್ತದೆ. ಸೊಳ್ಳೆಗಳಿಂದಲೂ ಪರೋಪ ಜೀವಿಗಳಿಂದಲೂ ಅಂಟಿಕೊಂಡ ಈ ರೋಗವು ಸಾಕಷ್ಟು ಪ್ರಬಲವಾದ ಬಳಿಕವೇ ಬಾಹ್ಯ ಲಕ್ಷಣಗಳು ಗೋಚರಕ್ಕೆ ಬರುತ್ತವೆ—ಇದು ಈ ರೋಗದ ದೊಡ್ಡ ಅನಾನುಕೂಲತೆ. ಆದಾಗ್ಯೂ ಜನರು ತುಸು ಜಾಗರೂಕರಾಗಿದ್ದರೆ, ರೋಗದ ಅಂಟುವಿಕೆಯ ಚಿಹ್ನೆಗಳನ್ನು ಗುರುತಿಸಬಹುದು— ಒಳಗೊಳಗೆ ಹಾವೋ ಅಥವೋ ಎನ್ನುವಂತೆ ಜ್ವರ, ಮೈ ನೀರು ಇಳಿದು ಜಮೆಗೊಂಡಂತೆ ತೋರುವುದು ಇತ್ಯಾದಿ ಲಕ್ಷಣಗಳಿಂದ ಆನೆಕಾಲು ರೋಗದ ಸೋಂಕುತಗಲಿದೆಯೆಂದು ಊಹಿಸಿದರೆ ತಪ್ಪಲ್ಲ. ಕೂಡಲೇ ವೈದ್ಯಕೀಯ ಚಿಕಿತ್ಸೆನ್ನು ಮಾಡಿದರೆ ಒಳ್ಳೆದು.

ವೈದ್ಯಕೀಯ ಉಪಚಾರದಲ್ಲಿ ರಕ್ತದ ಪರೀಕ್ಷೆಯಿಂದ ತುಂಬ ಪ್ರಯೋಜನ ಸಿಗುವುದೆಂದು ಹೇಳಲಾಗುತ್ತದೆ—ಆನೆಕಾಲು ರೋಗಕ್ಕೆ ಕಾರಣವಾದ ಕೀಟದ ಮೊಟ್ಟೆಗಳು ರಕ್ತದಲ್ಲಿ ಕಾಣಿಸಿಕೊಳ್ಳುತ್ತವೆ. ಇವನ್ನು ನಾಶಪಡಿಸುವುದೇ ವೈದ್ಯಕೀಯ ಉಪಚಾರದ ಉದ್ದೇಶ—ಇಲ್ಲಿ ನಿಶ್ಚಯವಾಗಿಯೂ ಫಲಕೊಡುವ ಯಾವ ಔಷಧವನ್ನೂ ಕಂಡು ಹಿಡಿಯಲಾಗಿಲ್ಲ ಎಂಬುದೇ ಈ ರೋಗದ ಕುರಿತಾದ ಚಿಂತಾಜನಕ ವಿಷಯ. ಆದಾಗ್ಯೂ ವೈದ್ಯಕೀಯ ಚಿಕಿತ್ಸೆ ಚೆನ್ನಾಗಿದ್ದರೆ ಮತ್ತು ರೋಗವು ಪ್ರಾರಂಭಿಕಾವಸ್ಥೆಯಲ್ಲಿದ್ದರೆ ವಾಸಿಯಾಗುವ ಭರವಸೆ ತಾಳಲಡ್ಡಿಯಿಲ್ಲ. ನೋಯಮಿನ್, ಫೌಂಡಿನ್ ಮುಂತಾದ ದ್ರವ್ಯಗಳಿಂದ ವೈದ್ಯಕೀಯ ಉಪಚಾರ ಸಾಮಾನ್ಯವಾಗಿ ಸತ್ಫಲಕೊಡುತ್ತದೆಯೆಂದು ತಜ್ಞರ ಅಭಿಪ್ರಾಯ. ರೋಗಪೀಡಿತ ಭಾಗಕ್ಕೆ ವಿಶ್ರಾಂತಿಯನ್ನು ಕೊಡುವುದೂ ಆ ಭಾಗವನ್ನು ಒತ್ತಿಹಿಡಿಯುವ ಪಟ್ಟಿಗಳನ್ನು ಕಟ್ಟುವುದೂ ಹಿತಕರ. ಸ್ತ್ರೀಪುರುಷರ ಕೈಕಾಲು, ಗಂಡಸರ ಜನನೇಂದ್ರಿಯ, ಮತ್ತು ಹೆಂಗಸರ ಮೊಲೆಗಳಿಗೆ ಈ ರೋಗ ಅಂಟಿಕೊಳ್ಳುತ್ತದೆ. ಇದರಲ್ಲಿ ಜನನೇಂದ್ರಿಯಕ್ಕೆ ಅಂಟಿದ ರೋಗವು ಶಸ್ತ್ರಚಿಕಿತ್ಸೆಯಿಂದ ಸ್ವಲ್ಪಮಟ್ಟಿಗೆ ಗುಣವಾಗುತ್ತದೆ—ಆದರೆ ಕೈಕಾಲುಗಳ ವಿಷಯದಲ್ಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿಲ್ಲ. ರೋಗಪೀಡಿತರು ಶಸ್ತ್ರಚಿಕಿತ್ಸೆಗಿಂತಲೂ ಬೇರೆ ವಿಧಾನಗಳಿಂದಲೇ ಗುಣಮುಖರಾಗಲು ಪ್ರಯತ್ನಿಸುವುದು ವಿಹಿತ. ಪ್ರಾರಂಭಾವಸ್ಥೆಯಲ್ಲಿ ವಿಶೇಷ ದಾಕೊಂದರ ಪ್ರಯೋಗದಿಂದ ಗುಣದೊರಕುತ್ತಿದ್ದು ಅದನ್ನು ಅಗ್ಗ ದರದಲ್ಲಿ ಎಲ್ಲರಿಗೂ ಪ್ರಯೋಗಿಸಲು ಸಾಧ್ಯವಾದರೆ ಎಷ್ಟೋ ಪ್ರಯೋಜನವಾದೀತು.

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ

ಭಾಷಾಂತರ.

ಬೆಲೆ. 0-8-0

ನವಯುಗ ಪ್ರೆಸ್, ಉಡುಪಿ.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

— ಪ್ರಕಟಣೆ —

S. V. H. HIGH SCHOOL.

ಶ್ರೀ ವಿಷ್ಣುಮೂರ್ತಿ ಹಯವದನಸ್ವಾಮಿ ಹೈಸ್ಕೂಲು.

(ವಿಶಾಲ ಕರ್ನಾಟಕದ ಉತ್ತಮ ತರಗತಿಯ ಗುರುಕುಲ ಹೈಸ್ಕೂಲು)

ವಿಶ್ವೇಂದ್ರನಗರ, ಇನ್ನಂಜೆ, ದ. ಕ.

ಸ್ಥಾಪಕರು: ಶ್ರೀ ಸೋದೆ ವಾದಿರಾಜ ಮಠದ ದಿವಂಗತ ಪೂಜ್ಯ ಶ್ರೀ ವಿಶ್ವೇಂದ್ರ ತೀರ್ಥ ಶ್ರೀ ಪಾದಂಗಳವರು.

ಪೋಷಕರು:-ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು.

ಹೊಸ ವರ್ಷದ ಶಾಲಾರಂಭ:- 2—6—1955.

S. S. L. C. ವರೆಗಿನ ಯೋಗ್ಯ ಶಿಕ್ಷಣ-ಉತ್ತಮ ಫಲಿತಾಂಶ—ತರಬೇತಾದ ಉಪಾಧ್ಯಾಯ ವರ್ಗದವರ ಹತ್ತಿರದ ನಿವಾಸ—ಪಾಠೇತರ ಚಟುವಟಿಕೆಗಳಲ್ಲಿ ವಿಶೇಷ ಗಮನ--ಸುವಿಶಾಲ ಆಟದ ಬಯಲು—ತರಬೇತಾದ ಉಪಾಧ್ಯಾಯರ ಕಲಿಸುವಿಕೆ ಮತ್ತು ತಕ್ಕ ಮೇಲ್ವಿಚಾರಗಳಿಂದ ಡ್ರಿಲ್ ಮತ್ತು ಆಟಗಳು—ಇಲಾಖಾಧಿಕಾರಿಗಳಿಂದ ಯೋಗ್ಯ ಅಭಿಪ್ರಾಯ—ಭವ್ಯ ಶಾಲಾ ಮಂದಿರಗಳು-ಹಳ್ಳಿಯ ಆರೋಗ್ಯ ವಾತಾವರಣ.

ಶ್ರೀ ವಾದಿರಾಜ ಗುರುಕುಲ—ಹೋಸ್ಟೆಲು. (ಹೈಸ್ಕೂಲಿನ ನೆರೆಯಲ್ಲಿಯೇ)

ಯೋಗ್ಯ ಮೇಲ್ವಿಚಾರವಿರುವ ಬಾಲಕ ಬಾಲಿಕೆಯರ ಬೇರೆ ಬೇರೆ ಶಾಖೆಗಳು ಬ್ರಾಹ್ಮಣರ ಅಡುಗೆ—ಆರೋಗ್ಯ ಮತ್ತು ರುಚಿಕರ ಸಸ್ಯಾಹಾರ—ಅತಿ ಕಡಿಮೆ ದರ—ಮೂರು ಊಟಗಳು—ಪ್ರತ್ಯೇಕ ಹಣ ತೆತ್ತಲ್ಲಿ ಕಾಫಿ, ತಿಂಡಿ, ಹಾಲು, ಮೊಸರುಗಳ ಉತ್ತಮ ಏರ್ಪಾಡು—ವೈದ್ಯಕೀಯ ಸಹಾಯ—ಉಳಕೊಳ್ಳಲು ಗಾಳಿ ಬೆಳಕು ಹಾಗೂ ಉಪಕರಣಗಳಿಂದ ಸುಸಜ್ಜಿತವಾದ ವಿಶಾಲ ಕೋಣೆಗಳು—ಕರಾವಳಿಯ ಯೋಗ್ಯ ಮನೆ—ಚಿಕ್ಕ ಮಕ್ಕಳ ಆರೈಕೆ ನೋಡಲು ಯೋಗ್ಯ ಏರ್ಪಾಡು.

ಹುಡುಗಿಯರ ಶಾಖೆ ಪ್ರತ್ಯೇಕ.

ವಾರ್ಡನ್, ಮುಖ್ಯೋಪಾಧ್ಯಾಯರು. ವಿಶೇಷ ಮಾಹಿತಿ ಬಗ್ಗೆ ಇವರಿಗೆ ಬರೆಯಿರಿ.

S. V. H Education Society,
Vishwendranagar, Innanje, S.K.
Date 1—2—1955.

F. S. Acharya,
Correspondent & Treasurer.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಆ.			
			ಅಮರನಾಥ ಯಾತ್ರೆ	೧	೦
ಶ್ರೀ ರಾಮಕೃಷ್ಣ ವಚನವೇದ			ಧನ್ಯತೆಗೆ ದಾರಿ	೧	೦
(ಉತ್ತರಾರ್ಧ)	೧೦	೦	ಅನುಷ್ಠಾನ ವೇದಾಂತ	೧	೦
ಕೊಲಂಬೊ ಇಂದ ಆಲ್ಮೋರಕೆ	೫	೦	ವೇದಾಂತ	೦	೧೦
ಸಂವಾದ ತರಂಗಿಣಿ	೫	೦	ವಿದ್ಯಾಭ್ಯಾಸ	೦	೧೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮	ಹಿಂದೂ ಧರ್ಮಸಾರ	೦	೧೦
ಸ್ವಾಮಿ ವಿವೇಕಾನಂದ (ಕುವೆಂಪು)	೪	೮	ವರ್ತಮಾನ ಭಾರತ	೦	೧೦
ಭಗವಾನ್ ಶ್ರೀ ರಾಮಕೃಷ್ಣ	೪	೦	ವಿವೇಕವಾಣಿ	೦	೧೦
ಪತ್ರಮಾಲೆ	೪	೦	ನನ್ನ ಗುರುದೇವ	೦	೮
ಜ್ಞಾನಯೋಗ	೪	೦	ಭಕ್ತಿಮಾರ್ಗ	೦	೮
ಗುರುವಿನೊಡನೆ ದೇವರೆಡೆಗೆ (ಕುವೆಂಪು)	೪	೦	ಚಿಕಾಗೋ ಉಪನ್ಯಾಸ	೦	೬
ರಾಜಯೋಗ	೨	೧೦	ಆರತಿ	೦	೬
ಶ್ರೀ ಶಾರದಾದೇವಿ ಸಂಭಾಷಣೆ	೨	೮	ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ		
ಗೀತಾ ಪತ್ರಗಳು	೨	೮	ತ್ರಿವೇಣಿಯಿಂದ)	೦	೫
ಮಿಂಚುನೋಟಕೆ ಹಿಂದೂಧರ್ಮ	೨	೮	ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ	೨	೦	ಶ್ರೀ ಶಾರದಾದೇವಿ ,, ,,	೦	೫
ಸಾಧಕನ ಕೈದೀವಿಗೆ	೨	೦	ಮುಮುಕ್ಷು ಲಕ್ಷಣ	೦	೪
ಪರಮಾರ್ಥ ಪ್ರಸಂಗ	೨	೦	ನನ್ನ ಜೀವನ ಮತ್ತು ಧ್ಯೇಯ	೦	೪
ಕರ್ಮಯೋಗ	೧	೭	ಈಶ್ವರಾನುರಾಗ	೦	೪
ಬ್ರಹ್ಮಾನಂದ ವಚನ ಸುಧೆ	೧	೪	ನೊಂದ ಜೀವಕ್ಕೆ ಭರವಸೆ	೦	೪
ಶ್ರೀ ರಾಮಕೃಷ್ಣ ಉಪನಿಷತ್	೧	೪	ಭಾರತ ಮಹಿಳೆ	೦	೪
ಪರಿವ್ರಾಜಕ	೧	೪	ಕರ್ಮ ರಹಸ್ಯ	೦	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪	ಸಾಧನ	೦	೪
ಭಕ್ತಿಯೋಗ	೧	೦	ಪವಹಾರಿಬಾಬ	೦	೪
ಭಕ್ತಿ: ಗೌಣೀ ಮತ್ತು ಪರಾ	೧	೦	ದೇವದೂತ ಕ್ರಿಸ್ತ	೦	೪
ದಾರಿಯಲ್ಲಿ ದೀಪಧಾರಿ	೧	೦	ಹೈಮಾಚಲ ಸಾನ್ನಿಧ್ಯದಲ್ಲಿ (ಹರಿದ್ವಾರ		
ಶ್ರೀ ಗುರುದೇವರ ವಚನ	೧	೦	ದಿಂದ ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಒಂದು ವ್ಯಕ್ತಿ ಚಿತ್ರ

ಶ್ರೀ ಶ್ರೀನಿವಾಸ ಮಲ್ಯರ ಹಿರಿಮೆ

ಲೇಖಕರು: ಶ್ರೀ ಜಿ ಆರ್ ಪಾಂಡೇಶ್ವರ್
ಸಹಸಂಪಾದಕ: 'ಜಯಕರ್ನಾಟಕ' ಧಾರವಾಡ

ಕಲವು ದಿನಗಳ ಹಿಂದೆ ಮದ್ರಾಸ್ ಪಟ್ಟಣದ ಒಂದು ಪ್ರಕಟಣ ಸಂಸ್ಥೆಯು ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡರರ ಜೀವನ ಚರಿತ್ರೆಯ ಪುಸ್ತಕವನ್ನು ಸರದಾರ್ ಶ್ರೀ, ಕೆ. ಎಂ ಪಾಣಿಕ್ಕರ್‌ರ ಕೈಯಿಂದ ಉದ್ಘಾಟನೆಗೊಳಿಸಿತು ಶ್ರೀಯುತರು, ಕಾಮರಾಜರು ತಮಿಳ್ನಾಡಿನಲ್ಲಿ ಗಳಿಸಿಕೊಂಡಿರುವ ಅಪ್ರತಿಹತ ವ್ಯಕ್ತಿ ಪ್ರಭಾವಕ್ಕೆ ಕಾರಣ ಕೊಡುತ್ತ, He is so, solely because he is the common man of the common man of Tamilnad" (ಅಂದರೆ ಅವರು ತಮಿಳ್ನಾಡಿನ ಸಾಮಾನ್ಯ ಜನತೆಗೆಲ್ಲ ತಮ್ಮವರೇ ಆದವರಾಗಿರುವುದೇ ಕಾರಣ) ಎಂದರು ಕಾಮರಾಜರು ತಮ್ಮ ಸಮಕಾಲೀನ ಇತರ ಪ್ರಸಿದ್ಧ ರಾಜಕಾರಣಿಗಳಂತೆ ವಕೀಲರಲ್ಲ, ಶಿಕ್ಷಕರಲ್ಲ, ವ್ಯಾಪಾರಿಗಳಲ್ಲ, ವಾಗ್ಮಿಯಲ್ಲ, ಪ್ರಸಿದ್ಧ ತಂದೆಯ ಮಗ ಇಲ್ಲವೆ ಪಾವನ ಆಶ್ರಮವಾಸಿಯಲ್ಲ! ಆದರೂ ಅವರ ತಮಿಳು ಜನಕ್ಕೆಲ್ಲ ದಿನದಿನವೂ ಬೇಕಾದ ಸಜ್ಜನ ಕಾಮರಾಜರು! ಇದೇ ಮಾತನ್ನೆ ಕನ್ನಡ ನಾಡಿನ ದಕ್ಷಿಣ ಕನ್ನಡದ ಶ್ರೀನಿವಾಸ ಮಲ್ಯರ ವ್ಯಕ್ತಿತ್ವಕ್ಕೂ ಅನ್ವಯಿಸಿ ಹೇಳಬಹುದು ಆ ಜಿಲ್ಲೆಯ ಎಲ್ಲ ಜಾತಿಯ, ಎಲ್ಲ ವೃತ್ತಿ ಉದ್ಯೋಗಗಳ, ಅಶಿಕ್ಷಿತ- ಸುಶಿಕ್ಷಿತ, ಸರ್ವ ಜನತೆಗೂ ಶ್ರೀನಿವಾಸ ಮಲ್ಯರು, ಒಬ್ಬ ಸಹೋದರನಂತೆ, ಬೇಕಾದ ಜನವಾಗಿದ್ದಾರೆ ಎಲ್ಲರ ಸುಖ ದುಃಖಗಳನ್ನೂ ಕಿವಿಗೊಟ್ಟು ಕೇಳಿ ದೊಡ್ಡಸ್ತಿಕೆಯ ರೀತಿಯಿಲ್ಲದೆ, ತನ್ನ ಕೈಯಿಂದಾಗುವ ನೆರವು ನೀಡುವ ಹೃದಯವಂತಿಕೆಯ ಹಿರಿತನ ಅವರಲ್ಲಿದೆ ಅದ್ದರಿಂದಲೇ ಅಲ್ಲಿಯ ೧೭ ಲಕ್ಷ ಜನಸಮುದಾಯದಲ್ಲಿ ಅವರು ಎಲ್ಲರಿಗಿಂತಲೂ ಒಂದಂಗುಲ ಎತ್ತರದಲ್ಲಿಯೇ ರಾರಾಜಿಸುತ್ತಿದ್ದಾರೆ

ಅತಿ ಉದ್ದವೂ ಅಲ್ಲ, ಅತಿ ಗಿಡ್ಡವೂ ಅಲ್ಲ; ಅತಿ ದಪ್ಪವೂ ಅಲ್ಲ, ಅತಿ ತೆಳ್ಳಗೂ ಅಲ್ಲ, ಅತಿ ಬಿಳಿಯೂ ಅಲ್ಲ, ಅತಿ ಕಪ್ಪೂ ಅಲ್ಲ, ಅತಿ ರೂಪವಂತನೂ ಅಲ್ಲ, ಅತಿ ರೂಪಹೀನನೂ ಅಲ್ಲ; ಅತಿ ಶ್ರೀಮಂತನೂ ಅಲ್ಲ, ಅತಿ ಬಡವನೂ ಅಲ್ಲ, ಅತಿ ಕೋಪಿಯೂ ಅಲ್ಲ, ಅತಿ ಶಾಂತನೂ ಅಲ್ಲ, ದೀರ್ಘ ದ್ವೇಷವವರೂ ಅಲ್ಲ, ಶೀಘ್ರ ಮೈತ್ರಿಯ ವರೂ ಅಲ್ಲ— ಹೀಗೆ ಸರ್ವತ್ರ ಅತಿ ವರ್ಜಿತರಾದ ಸಮತ್ವಯೋಗದ ರಾಜಕಾರಣದ ಗೃಹಸ್ಥ-ಸನ್ಯಾಸಿಗಳವರು! ಅವರು ಭಾಷಣ ಪಟುಗಳಲ್ಲ, ಆದರೆ, ಸರಸ ಸಂಭಾಷಣಕಾರರು, ಹಾಸ್ಯಕೋವಿದರಲ್ಲ, ಆದರೆ ವಿನೋದ ಪ್ರಿಯರು, ನೂರು ಮಾತುಗಳ ತೆರೆಗಳ ಹೊಡೆತದ ನಡುವೆ ಒಂದೇ ಒಂದು ಮಾತಿನ ದೀಪಸ್ತಂಭವನ್ನು ನೆಟ್ಟು ತೋರುವ ಸಾಹಸಿಗರವರು, ಅರ್ಥಾತ್ ಸ್ವ-ಪರ ಹಿತಕರವಾದಮಿತಭಾಷಿಗಳು

ಸಹಸ್ರಾರು ಪುಸ್ತಕಗಳನೋದಿ, ಅರಗಿಸಿಕೊಂಡ ಪರಿಪಕ್ವ ಬುದ್ಧಿ ಮತ್ತೆ ಅವರಲ್ಲಿದೆ ಅದ್ದರಿಂದಲೇ ಅವರಿಗೊಪ್ಪಿಸಿಕೊಡುವ ಯಾವ ಪಂಚಾಯತಿಕೆಯೂ ವಿಫಲವಾಗುವುದಿಲ್ಲ! ಇಂಗ್ಲಿಷ್, ಕನ್ನಡ, ತಮಿಳು, ಮಲೆಯಾಳಿ, ಮರಾಠಿ, ಗುಜರಾತಿ, ತುಳು, ಕೊಂಕಣಿ, ಹಿಂದೀ, ಉರ್ದು, — ಇಷ್ಟು ಭಾಷೆಗಳಲ್ಲವರು ಸರಸವಾಗಿ ಸಂಭಾಷಿಸಬಲ್ಲರು, ಕೆಲವಲ್ಲಿ, ಬರೆಯಲೂ ಬಲ್ಲರು ಅವರ ಬರೆಹ ನೇರ ನೇರ (Straight and Pointed) ಗುರಿಗೆ ಸರಿಯಾಗಿ ಬಾಣ ಬಿಟ್ಟಂತೆ! ಇಂತಹ ಅಪೂರ್ವ ವ್ಯಕ್ತಿಯ ಕಾಂಗ್ರೆಸ್ ಸೇವಾ-ಜೀವನವು ೧೯೩೦ ರಲ್ಲಿ ಆರಂಭವಾಯಿತು ಕಾಲು ಶತಮಾನಾವಧಿಯಲ್ಲಿ ಅದು ಉತ್ತು ಬಿತ್ತು ಬಳ್ಳಿಯ ಬೆಳೆಯೊಕ್ಕಿದು

೧೯೩೦! ಅದೊಂದು ಪ್ರಚಂಡವಾದ ಉಪ್ಪು —ಅರಣ್ಯದ ಸತ್ಯಾಗ್ರಹ ಚಳವಳಿಯ ಕಾಲ. ೧೯೨೦ ರಿಂದಲೂ ಕಾಂಗ್ರೆಸ್ಸಿನಲ್ಲಿ, ಮಹಾತ್ಮರ ಮುಂದಾಳ್ತನದಲ್ಲಿ ಕೋರ್ಟು-ಕಚೇರಿಗಳ ಬಹಿಷ್ಕಾರ ಮಾಡಿ, ಕಾಂಗ್ರೆಸ್ ಕಾರ್ಯಕೈಯುತ್ತ ಬಂದಿದ್ದ ದಿವಂಗತ ಕಾರ್ನಾಡ್ ಸದಾಶಿವರಾಯರು ಈ ಚಳವಳಿಯ ಪ್ರಥಮ ಬಲಿಯಾಗಿ ಕಾರಾಗೃಹ ಸೇರಿದ್ದರು ಶ್ರೀ ರಾಮಕೃಷ್ಣ ಕಾರಂತರು ತಮ್ಮ ಕಾಂಗೆಸ್ಸ್ "ಎಂ. ಎಲ್ ಸಿ" ಗೆ ರಾಜೀನಾಮೆ ಕೊಟ್ಟಿದ್ದರಾದರೂ, ಉಪ್ಪಿನ ಕಾಯಿದೆಮುರಿಯುವ ಈ ಚಳವಳಿಯಲ್ಲಿ ಒಮ್ಮೆಂದೊಮ್ಮೆಗೇ ಧುಮುಕಲು ತುಸುತಡವರಿಸುತ್ತಿದ್ದಂತೆ, ಅಧಿಕಾರಿ ವರ್ಗ ಅವರನ್ನೂ ಬಂಧಿಸಿತ್ತು! ಮಹಾ ಉತ್ತಿ ನ "ಮೇಧಾವಿತನ'ದ ಹಿರಿಮೆಯುಳ್ಳಿದ್ದ ಅವರಿಗೆ ಕಾಯಿದೇ ಭಂಗದ ಚಳವಳಿಕಾರರು ಕೇವಲ ಅನುಯಾಯಿಗಳಾಗಿರಲಿಕ್ಕೆ ಯೋಗ್ಯರೇ ಹೊರತು ಮುಖಂಡತ್ವ ವಹಿಸಲಿಕ್ಕಲ್ಲ—ಎಂಬೊಂದು ವಿಲಕ್ಷಣಭಾವ ಅವರಲ್ಲಿದ್ದಿತು ಸಾಮಾನ್ಯರ ನಡುವೆ ತಾನೂ ಒಬ್ಬ ಸಾಮಾನ್ಯನಾಗಿ ನಡೆಸುಕೊಳ್ಳುವ ದೈಹಿಕ-ಮಾನಸಿಕ ಚುರುಕುತನ (Nimbleness) ಅವರ ಪ್ರಾಕೃತಿಕ ರಚನೆಗೇ ಒಗ್ಗದಂತಿದ್ದಿತು! ಇಂತಹ ಸನ್ನಿವೇಶದಲ್ಲಿ ಶ್ರೀನಿವಾಸ ಮಲ್ಯರ ಸೂರ್ಯೋದಯವಾಯಿತು!

ಆಗ್ಗೆ, ಶ್ರೀ ಮಲ್ಯರ ಹೆಸರು ಮಂಗಳೂರಿನ "ಬಂದರ'ದ ಹೊರಗೆ, ಬ್ಯಾಂಕುಗಳ ವರ್ತುಲದ ಆಚೆ, ಯಾರಿಗೂ ಗೊತ್ತಿದ್ದಿಲ್ಲವೆಂದು ಧೈರ್ಯವಾಗಿ ಹೇಳಬಹುದು ಮಂಗಳೂರಿನ ಬೀದಿಗಳಲ್ಲಿ, ನಿಷ್ಕರುಣಿಗಳಾದ ಮಲಬಾರ್ ಸ್ಪೆಶಲ್ ಪೋಲೀಸರ ಲಾಠಿ ಪ್ರಹಾರಗಳು ಕಾಲೇಜು ವಿದ್ಯಾರ್ಥಿಗಳನ್ನು "ಗುಜ್ಜು ಗುಜ್ಜು" ಮಾಡಲು, ಶ್ರೀಮಲ್ಯರ ಹೃದಯ ಕರಗಿತ್ತು, ಕರಗಿದ ರಸವೇ ವಜ್ರದಂತೆ ಹೆಪ್ಪುಗಟ್ಟಿ ಕಾಂಗ್ರೆಸ್, ದೀಕ್ಷೆತೊಟ್ಟ ಒಬ್ಬ "ಉಕ್ಕಿನ ಮನುಷ್ಯ"ನನ್ನಾಗಿ ಮಾಡಿತು ಅಂದಿನಿಂದ ಅವರು ಬಡಕಾಂಗ್ರೆಸ್ಸಿಗರಿಗಷ್ಟೇ ಅಲ್ಲದೆ, ಮಂಗಳೂರು ನಗರದ ವ್ಯಾಪಾರಿ ವೃಂದಕ್ಕೂ ಧನಿಕವರ್ಗಕ್ಕೂ ಕಾಂಗ್ರೆಸ್ ಸೇವಾ ಮಾರ್ಗದರ್ಶಕರಾದರು. "ನವಾರಂಗೇಷು ಶಿರಃ ಪ್ರಧಾನ" ಎಂದಂತೆ, ಮುಖ್ಯ ಪಟ್ಟಣವಾದ ಮಂಗಳೂರಿಗೆ ಮುಖಂಡರಾಗುತ್ತ, ಕ್ರಮ ಕ್ರಮೇಣವಾಗಿ ಜಿಲ್ಲೆಯೆಲ್ಲವೂ ಅವರ ಮುಖಂಡತ್ವಕ್ಕೊಳಪಟ್ಟಿತು! ಆ ಜಿಲ್ಲೆಗೆ ಅವರೊಬ್ಬ ಸರದಾರ ಪಟೇಲರಾದರು ಶ್ರೀಯುತರು ವ್ಯಾಪಾರೋದ್ಯಮಗಳಲ್ಲಿ ತೋರಿದ್ದ ಅನುಪಮ ವಿಚಕ್ಷಣೆ ಮತ್ತು ಏಕಾಗ್ರ ನಿಷ್ಠೆಯನ್ನು ಕಾಂಗ್ರೆಸ್ ಬಲ ಸಂವರ್ಧನೆಯಲ್ಲಿಯೂ ತೋರಿದರು ಉಪ್ಪಿನ ಸತ್ಯಾಗ್ರಹದಲ್ಲಿ ಮುಂಬಯಿ ನಗರದಲ್ಲಿ ಹೆಸರುಗಳಿಸಿ, ಕಾಂಗ್ರೆಸ್ ಅಖಿಲ ಭಾರತ ವರ್ಕಿಂಗ್ ಕಮಿಟಿಯಲ್ಲಿ ಸ್ಥಾನವನ್ನೂ ಪಡೆದು, ಸಮಾಜವಾದದ ಬಲವನ್ನು ಎತ್ತಿ ಹಿಡಿದು, ಸ್ವ-ಜಿಲ್ಲೆಯಾದ ಮಂಗಳೂರಿಗೆ ಪುನರಾಗಮನಗೈದ ಶ್ರೀಮತಿ ಕಮಲಾದೇವಿಯವರು ಶ್ರೀ॥ ಮಲ್ಯರ ಗಟ್ಟಿಗತನಕ್ಕೆ ರೆಕ್ಕೆ ಕಟ್ಟಿದಂತೆ ಬಗೆಬಗೆಯ ಉತ್ಸಾಹಸ್ಫೂರ್ತಿಯಾಗಿ ಮೊರೆತರೆನ್ನಬಹುದು. ಅದರ ಫಲವಾಗಿ ಹಗಲು-ರಾತ್ರಿ ಎನ್ನದೆ ಕಾಂಗ್ರೆಸ್ ಸೆಂಬರರನ್ನು ಮಾಡಲು, ಕಾಂಗ್ರೆಸ್ ಕಮಿಟಿಗಳನ್ನು ಸಂಘಟಿಸಲು, ನಿರಲಸರಾಗಿ ಆತ್ಮೋತ್ಸಾಹದಿಂದ ದುಡಿಯತೊಡಗಿದರು ಈ ಕಾರ್ಯದಲ್ಲವರು ದಣವನ್ನು ನೀರಿಗಿಂತ ಕಡೆಯಾಗಿ ಸುರಿದು, ಅಪೂರ್ವವಾದ ತ್ಯಾಗವನ್ನು ತೋರಿದರು ಆಗಿನ ಕಾಲದಲ್ಲಿ ಕಾಂಗ್ರೆಸ್ಸಿನ ಸೆಂಬರನೆಂದು ಹೇಳಿಕೊಳ್ಳಲು ಜನ ಬೆದರುತ್ತಿದ್ದರೆಂಬುದನ್ನು ಸ್ಮರಿಸಿಕೊಳ್ಳಬೇಕು ಶ್ರೀ ಮಲ್ಯರ ನಾಯಕತ್ವದಲ್ಲಿ ಜಿಲ್ಲೆಯ ಎಲ್ಲ ಜಾತಿಯ ಜನ ಜಂಗುಳಿಯಲ್ಲಿ ಧೈರ್ಯದ ನವಜೀವನವೇ ಉಕ್ಕಿ ಹರಿಯತೊಡಗಿತು ಅವರು ಬಡ ಜನರನ್ನು ನಿರ್ಮಲವಾದ ಉದಾರಾಂತಃ ಕರಣದಿಂದ ತಬ್ಬಿಕೊಂಡರು ಸ್ವಜಾತಿಯವರ ಮುಟ್ಟುಗೋಲುಗಳೊಂದಾಗಿದ್ದ ವ್ಯಾಪಾರೀ ಬುದ್ಧಿಯುಳ್ಳವರು ನಿಷ್ಠಾತಹಿರಿಯ ಮುಖಂಡರಾಗಿದ್ದರೂ, ಬಡವರ ದುಃಖ ನಿವಾರಣೆಗಾಗಿ ಅವರು ಆ ಸ್ವಭಾ

ಶ್ರೀ ಶ್ರೀನಿವಾಸ ಮಲ್ಯ, ಎಮ್ ಪಿ

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟಿನ ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು ಬೆಲೆ ರೂ 5/- ಸ್ಪೆಶಲ್ ರೂ 8/- (ವಿ ಪಿ ಪಿ ಪ್ರತ್ಯೇಕ)

Mrs. P. DEVEE, F. Ds. (N J)
CALCUTTA—40

ಸ್ಟಾಕಿಸ್ಟರು ರಹಾಕಂಪೆನಿ, ಮಂಗಳೂರು

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ ಗರ್ಭ ಇದ್ದವರು ಸೇವಿಸ ಬಾರದು, ಸೇವಿಸಿದರೆ ಗರ್ಭಪಾತವಾಗುವದು

ಬೆಲೆ-೧ ಬಾಟ್ಲಿಗೆ — ರೂ. ೫-೮-೦ ... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ವನನ್ನು ಗೆದ್ದು ನಿಂತರು. ಅದುವರೆಗೆ ಕಾಂಗ್ರೆಸ್ಸಿನಿಂದ ದೂರಿರುತ್ತಿದ್ದ ಪ್ರಬಲವಾದ ಬಂಟ ಬಿಲ್ಲವ ಕ್ರಿಶ್ಚನ್ ಮೊದಲಾದ ಸಮಾಜಗಳ ಧುರೀಣರನ್ನು ಕಾಂಗ್ರೆಸ್ ಕಕ್ಷಿಗೆ ಆಕರ್ಶಿಸಿಕೊಳ್ಳುವಂತೆ ನಡೆವಳಿಕೆ ಇಟ್ಟುಕೊಂಡರು. ಮಂಗಳೂರಿಂದ ಬಹು ದೂರದಲ್ಲಿದ್ದ ಧಾರವಾಡ-ಹುಬ್ಬಳ್ಳಿಯ ಪ್ರಾಂತಿಕ ಕಾಂಗ್ರೆಸ್ಸಿನ ಪ್ರತಿಯೊಂದು ಸಭೆಗೂ ಅವರು ತಪ್ಪದೇ ಬರುತ್ತಿದ್ದರು. ದ್ರವ್ಯಾಭಾವದಿಂದಾಗಿ ಬಳಲಾಗದಿದ್ದ ಸಹಕಾರ್ಯಕರ್ತರ ವೆಚ್ಚವನ್ನೂ ತಾವೇ ಹೊತ್ತುಕೊಳ್ಳುವ ಔದಾರ್ಯವನ್ನವರು ಸಂತೋಷದಿಂದ ವಹಿಸಿಕೊಳ್ಳುತ್ತಿದ್ದರು. ತಮ್ಮ ಸ್ವಂತದ ಹಾಗೂ ತಮ್ಮ ಕೈ ನಡೆಯುವ ಎಲ್ಲ ಕಡೆಗಳ ಬೊಕ್ಕಸದಿಂದಲೂ ಅವರು ಅನೇಕಾನೇಕ ಹಿರಿಯ-ಕಿರಿಯ ಕಾಂಗ್ರೆಸ್ ನಿಷ್ಠಾವಂತ ಕರ್ತವ್ಯಗಾರರಿಗೆ ನೆರವು ನೀಡಲು ಹಿಂಜರಿಯುತ್ತಿದ್ದಿಲ್ಲ. ಇವೆಲ್ಲ ಸುಗುಣಗಳ ಪರಿಣಾಮವಾಗಿ ದಕ್ಷಿಣ ಕನ್ನಡ ಜಿಲ್ಲೆಯು ಕಳೆದುಕೊಂಡಿದ್ದ ಕಾರ್ನಾಡು ಸದಾಶಿವರಾಯರನ್ನು, ಕೆಲವಂಗವಲ್ಲಿ, ಪುನಃ ಮಲ್ಯರಲ್ಲಿ ಪಡೆಯಿತು. ಜಿಲ್ಲಾ ಕಾಂಗ್ರೆಸ್ಸಿಗೆ ಪ್ರತಿ ಸಲವೂ ಅವರೇ ಅಧ್ಯಕ್ಷರಾಗಿ ಆಯ್ಕೆಹೊಂದುತ್ತ ಬಂದರು. ಪ್ರಾಂತಿಕ ಕಾಂಗ್ರೆಸ್ ಮುಖಂಡರೊಡನೆ ತಮ್ಮ ಔದಾರ್ಯ ಮತ್ತು ನಿರಲಸತೆಗಳಿಂದಾಗಿ ಮಧುರವೂ ನಿಕಟವೂ ಆದ ಸಂಪರ್ಕ ಉಳ್ಳವರಾದರು. ಅದರ ಫಲಸ್ವರೂಪವಾಗಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯಲ್ಲವರು ಒಂದು ವಿಶಿಷ್ಟ ಶಕ್ತಿಯಾಗಿ ಬೆಳೆದರು; ಅದರ ಉಪಾಧ್ಯಕ್ಷತೆ, ಕಾರ್ಯದರ್ಶಿತ್ವ ಮೊದಲಾದ ಸ್ಥಾನಗಳನ್ನು ಸ್ವಾಭಾವಿಕವಾಗಿಯೇ ಪಡೆದುಕೊಂಡರು ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನೊಳಗಿನ ಪರಿಸ್ಥಿತಿಯ ಪರಿಣಾಮವಾಗಿ ಅವರು ಅದರ ಅಧ್ಯಕ್ಷತೆಗೆ ಬರುವಂತಾಗಲಿಲ್ಲ. ಈ ಮಾತು ಅವರ ಸಹೋದ್ಯೋಗಿಗಳಾಗಿದ್ದ ಶ್ರೀ ಕಾರಂತರಿಗೂ, ಉತ್ತರ ಕನ್ನಡದ ಸುಪ್ರಸಿದ್ಧ ವಕೀಲರೂ, ಕಟ್ಟಾ ಕಾಂಗ್ರೆಸ್ ಸನಾತನಿಗಳೂ ಆದ ಶ್ರೀ ಶಿವರಾವ ಶಾಸ್ತ್ರಿಯವರಿಗೂ ಅನ್ವಯಿಸ ಬರುವುದು. ಕಳೆದ ೩೫ ವರ್ಷಾವಧಿಯಲ್ಲಿ ಅದರ ಅಧ್ಯಕ್ಷತೆಯ ಗೌರವ ಪಡೆದ ಮುಂಬಯಿ ಕರ್ನಾಟಕದ ಹೊರಗಿನ ಮುಖಂಡರೆಂದರೆ ಇಬ್ಬರೇ ಇಬ್ಬರು—ಶ್ರೀ ಕಾರ್ನಾಡು ಸದಾಶಿವರಾಯರು ಮತ್ತು ಶ್ರೀ ನಿಜಲಿಂಗಪ್ಪನವರು.

ಹೀಗೆ ತಮ್ಮ ಔದಾರ್ಯದಿಂದ, ದಯಾರ್ದ್ರ ಹೃದಯದಿಂದ, ಸ್ನೇಹಪರತೆಯಿಂದ, ದೊಡ್ಡಸ್ತಿಕೆಯ ರೀತಿಗೆ ಮಾದರಿಯಾದವರಾಗಿ, ಅವರು ಎಲ್ಲ ಬಗೆಯ ಕಾಂಗ್ರೆಸ್ಸಿಗರಿಗೂ ಬೇಕಾದ ನಂಬಿಗೆಯ ಸಹೋದರರಾದರು! ಕಾಂಗ್ರೆಸ್ಸಿನಿಂದ ಸಿಡಿದು ದೂರನಿಂತ ಶ್ರೀ ಕಾರಂತರೂ ಶ್ರೀ ಜಿನರಾಜ ಹೆಗಡೆಯವರೂ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಇದಿರಿಸಲು, ಶ್ರೀ ಮಲ್ಯರು ಸ್ವತಃ ಹೆಗಡೆಯವರ ಇದಿರಾಳಿಯಾಗಿ ನಿಂತು, ಇಬ್ಬರಿಗೂ ಸೋಲುಂಟು ಮಾಡಿದರು! ಬಹು ಬುದ್ಧಿಶಾಲಿಗಳೆಂದೂ, ಹಿಂದು-ಮುಂದಿನ ವಿಚಾರ ಉಳ್ಳವರೆಂದೂ ಹೊಗಳಿಕೆಗೆ ಗುರಿಯಾದ ಮಂಗಳೂರು ಜಿಲ್ಲೆಯ ಜನತೆಯು ಮಲ್ಯರ ಮುಂದಾಳ್ತನವನ್ನೇ ಎತ್ತಿ ಹಿಡಿಯಿತೆಂಬುದು ಅವರ ವಿಶೇಷ ಲೋಕಪ್ರಿಯತೆಗೆ ಸ್ಪಷ್ಟ ಸಾಕ್ಷಿಯಾಗಿದೆ. ಶ್ರೀಯುತರು ಎಲ್ಲರಿಗೂ ಎಲ್ಲ ಕಾಲಕ್ಕೂ ನೇರವಾಗಿ ನೋಡಸಿಗುವ ಸರಳ ಸ್ವಭಾವದವರು; ಕೈಗೆತ್ತಿಕೊಂಡ ಯಾವ ಕಾರ್ಯವನ್ನೇ ಆಗಲಿ ತ್ರಿಕರಣ ಪೂರ್ವಕವಾದ ಸಾಹಸ—ನಿಷ್ಠೆಗಳಿಂದ ಫಲಪ್ರದಗೊಳಿಸಿ ತೋರಿಸುವ ಕರ್ತೃತ್ವಶಾಲಿಗಳು. ಆದ್ದರಿಂದಲೇ ಪಂಡಿತ ನೆಹ್ರುಗಳು ಅವರನ್ನು ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿತ್ವವೇ ಮುಂತಾದ ಹೊಣೆಗಾರಿಕೆಯ ಸ್ಥಾನಕ್ಕೆ ನೇಮಿಸಿಕೊಂಡರೆನ್ನಬಹುದು.

ಕರ್ನಾಟಕದ ಯಾವ ಜಿಲ್ಲೆಯಿಂದ ಯಾರೇ ಆಗಲಿ, ಯಾವ ಕಾರ್ಯಕ್ಕಾಗಿಯೇ ಆಗಲಿ ಡಿಲ್ಲಿಗೆ ಹೋದರೆ, ಶ್ರೀ ಮಲ್ಯರನ್ನು ಭೆಟ್ಟಿಯಾದರೆ, ಅವರನ್ನೆಲ್ಲ ಅವರು ತನ್ನವರೇ ಎಂಬ ಬಂಧು ಪ್ರೇಮದಿಂದ ಆದರಿಸಿ, ಉಪಚರಿಸಿ, ಬೀಳ್ಕೊಡುವ ಸುಸ್ವಭಾವಿಗಳವರು. ಇಂತಹ ಗುಣಗಳನ್ನುಳ್ಳ ವ್ಯಕ್ತಿ ಸ್ವಾಭಾವಿಕವಾಗಿಯೇ ವಿಚಾರವಂತರ ಭಯ-ಭಕ್ತಿಗಳಿಗೆ ಪಾತ್ರವಾಗುವುದೆಂಬುದು ಸೋಜಿಗವಲ್ಲ! ರಾಜಕಾರಣವೊಂದು ಚದುರಂಗದಾಟವೆಂದು ಬಲ್ಲವರು ಹೇಳುತ್ತಾರೆ. ಭಾರತದ ಒಳಗಿರುವಂತೆ, ಜಾಗತಿಕ ರಾಜಕಾರಣ ರಂಗದಲ್ಲಿಯೂ ಈ ಚದುರಂಗದಾಟ ಇದೆ. ಅದಕ್ಕೆ ಮುತ್ಸದ್ದಿತನ (ಡಿಪ್ಲೊಮಸಿ) ಎನ್ನುತ್ತಾರೆ. ಸ್ವತಃ ಗಾಂಧೀಜಿಯವರಲ್ಲಿಯೂ ಈ ಮುತ್ಸದ್ದಿತನ ವಿದ್ದಿತು. ಸುಭಾಸರು ರಾಜಿನಾಮೆ ಕೊಡುವಂತೆ ಮಾಡಿದ್ದು, ಖರೆ ವಿರುದ್ಧ ಶುಕ್ಲರನ್ನೆತ್ತಿ ಹಿಡಿದದ್ದು, ನರಿಮನರ ವಿರುದ್ಧ ಖೇರರನ್ನು ಕಟ್ಟಿ ನಿಲ್ಲಿಸಿದ್ದೇ ಸಾಕ್ಷಿಗಳೆನ್ನಬಹುದು. ಸತ್ಯ, ವಿನಯ, ದೀನ ಸೇವಾಕಾಂಕ್ಷೆಯೇ ಅವರ ಮುತ್ಸದ್ದಿತನದ ಗೆಲುವಿಗೆ ಕಾರಣವಾಗಿದ್ದುವು. ಅವರ ನಿಕಟಾನುವರ್ತಿಗಳಾದ ಶ್ರೀ ನೆಹ್ರು, ಶ್ರೀ ರಾಜಾಜಿಯವರೂ ಮುತ್ಸದ್ದಿಗಳೇ. ಇಡೀ ಜನಾಂಗದ ಹಿತವನ್ನು ಸಾಧಿಸಿ ಕೊಡುವ ಉದಾತ್ತವಾದ ಧ್ಯೇಯವನ್ನಿಟ್ಟುಕೊಂಡ ಅವರು ಆ ಧ್ಯೇಯಸಾಧನೆಗಾಗಿ, ಹಣವನ್ನು ಹಣದಿಂದ, ಗುಣವನ್ನು ಗುಣದಿಂದ, ಜಾತೀಯನ್ನು ಜಾತ್ಯತೀತತೆಯಿಂದ ಇದಿರಿಸಲು ಕೆಲವೊಂದು "ತಂತ್ರ"ಗಳನ್ನು ಹೂಡಬೇಕಾಗುತ್ತದೆ, ಮಾಡಬೇಕಾಗುತ್ತದೆ. ಹಾಗೆ ಮಾಡಲು ಹಿಂಜರಿಯುವ ಹೇಡಿಗಳು ಶ್ರೀ ಮಲ್ಯರಲ್ಲ. ಕರ್ನಾಟಕ ಏಕೀಕರಣ ಮತ್ತು ಕರ್ನಾಟಕ ಪ್ರಾಂತೀಕರಣ ಅವರಿಗೂ ಬೇಕು; ಬೇಡವೆಂದು ಅವರು ಎಂದೂ, ಎಲ್ಲಿಯೂ ಸಾರ್ವಜನಿಕವಾಗಿ ಹೇಳಿದುದು ಕಂಡುಬರುವುದಿಲ್ಲ. ಅದಕ್ಕಾಗಿ ಸರ್ವಾರ್ಪಣ ಮಾಡುವ ಬುದ್ಧಿಯು, ಸ್ವಾಭಾವಿಕವಾದ ತ್ಯಾಗ—ಸ್ನೇಹಮಯಿ ಬುದ್ಧಿಯು ವರಾದ ಅವರಲ್ಲಿಯೂ ಇದೆ ಎನ್ನಬಹುದು. ಅವರ ಈ ವಿಶಿಷ್ಟವ್ಯಕ್ತಿತ್ವವೇ ಅವರನ್ನಿಂದು ಕರ್ನಾಟಕದ ಕಾಂಗ್ರೆಸ್ ವೃತ್ತದಲ್ಲೊಂದು ಅಜೇಯ ಶಕ್ತಿಯಾಗಿ ಮಾಡಿದೆ. ಕರ್ನಾಟಕ ರಾಜ್ಯ ನಿರ್ಮಾಣವಾಗುತ್ತಲೇ ಕರ್ನಾಟಕದ ಈ 'ಕಾಮರಾಜರೇ' ಮದ್ರಾಸಿನಲ್ಲಿಯಂತೆ ಕರ್ನಾಟಕದ ಮೊತ್ತಮೊದಲಿನ ಮುಖ್ಯಮಂತ್ರಿಯಾಗುವ ಭರವಸೆಗೂ ಆಸ್ಪದವಿದೆ ಎನ್ನಬಹುದು.

(೨ನೇ ಪುಟದಿಂದ)

ಈಡನ್ನರು ತಿಳಿಸಿ ಹೇಳಲು ಪ್ರಯತ್ನಿಸುವರೆಂದು ನಿರೀಕ್ಷಕರು ಊಹಿಸುತ್ತಾರೆ. ನೆಹರುಗಳೊಬ್ಬರನ್ನು ಪಾಶ್ಚಾತ್ಯ ವಿಭಾಗ ಶರಣಿಗೆ ತಿರುಗಿಸಿದರೆ, ಮತ್ತೆ ಏಶಿಯದಲ್ಲಿ ಯಾವ ರಾಜಕ ರಣಿಯೂ ಪಾಶ್ಚಾತ್ಯರ ಇಚ್ಛೆಗೆ ವಿರುದ್ಧ ನಡೆಯಲಾರನೆಂದು ಹೇಳಲಾಗುತ್ತದೆ. ಆದರೆ ನೆಹರುಗಳ ದೃಢ ನಿಶ್ಚಯವನ್ನು ಒಡಲಿಸುವುದರಲ್ಲಿ ಈಡನ್ನರು ಯಶಸ್ವಿಯಾಗಲಾರರೆಂದು ಭಾರತದ ನಿಲುವಿನ ನಿಕಟ ಪರಿಚಯವಿದ್ದವರಿಗೆ ಹೊಳೆಯದಿರದು. ಆದುದರಿಂದ ಈಡನ್ನರು ಸೀಟೋ ರಾಷ್ಟ್ರಗಳ ಒಪ್ಪಂದದಲ್ಲಿರುವ ಇನ್ನೊಂದು ಆಕರ್ಷಕ ವಿಷಯದ ಕುರಿತಾಗಿ ನೆಹರುಗಳ ಮನಸೆಳೆಯಲು ಪ್ರಯತ್ನಿಸಬಹುದು-ಅದೆಂದರೆ ಏಶಿಯದ ಸಾಮಾಜಿಕ ಹಾಗು ಆರ್ಥಿಕ ಪುನಾರಚನೆಗೆ ನೆರವಾಗುವ ಕಾರ್ಯಕ್ರಮ. ಏಶಿಯದಲ್ಲಿ ವಸಾಹತುವಾದವನ್ನು ಸ್ಥಿರಗೊಳಿಸುವುದು ತಮ್ಮ ಇಚ್ಛೆ ಎಷ್ಟಕ್ಕೂ ಅಲ್ಲವೆಂಬುದನ್ನು ತಿಳಿಸಿ ಹೇಳಲಿಕ್ಕೂ ಈಡನ್ನರು ತಪ್ಪಲಿಕ್ಕಿಲ್ಲ-ಕೊಲೊಂಬೋ ಯೋಜನೆಯನ್ನು ಬ್ರಿಟನೇ ಪ್ರವರ್ತಿಸಿತೆಂದು ಅವರು ನೆನಪಿಗೆ ತಂದುಕೊಡಬಹುದು. ಅದರಿಂದ ಹಿಂದೂ ಮಹಾ ಸಾಗರದ ವಲಯದಲ್ಲಿ ನವಜೀವನದ ಅಭ್ಯುದಯವಾಯಿತೆಂಬುದನ್ನು ಉಲ್ಲೇಖಿಸಿ, ಸೀಟೋ ರಾಷ್ಟ್ರಗಳ ಪ್ರಯತ್ನದಿಂದ ಇನ್ನಷ್ಟು ಅಭಿವೃದ್ಧಿಯನ್ನು ಸಾಧಿಸಲಾದೀತೆಂದು ಅವರು ವಾದಿಸಬಹುದು. ಅಂತೂ ಈಡನ್ನರ ಹೊಸ ದೆಹಲಿ ಸಂದರ್ಶನವು ಪಾಶ್ಚಾತ್ಯ ಹಾಗು ಪೌರಸ್ತ್ಯ ವಿಚಾರ ಪ್ರಣಾಳಿಗಳ ವಿನಿಮಯದ ದಾರಿಯನ್ನು ಇನ್ನಷ್ಟು ಅಗಲಗೊಳಿಸುವುದು ನಿಶ್ಚಯ.



-ಕನ್ನಡದಲ್ಲಿ ಹೊಸ ಬಗೆಯ ಗ್ರಂಥ-



(ಬರೆದವರು: ಕುಮಾರಸ್ವಾಮಿ)

- ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ: ಒಂದೂವರೆ ರೂಪಾಯಿ.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

ನವಯುಗ ಪ್ರೆಸ್, ಉಡುಪಿ.

(೧ನೇ ಪುಟದಿಂದ)

ಕ. ನಾವು ಯಾವುದನ್ನು ಮೊದಲು ತಿಳಿದಿರಬೇಕು, ಯಾವುದನ್ನು ತಿಳಿದಿರದಿದ್ದರೂ ತೊಂದರೆಯಿಲ್ಲ ಎಂಬ ವಿವೇಕನಿಯ ಅಭಾವವೇ ಇದಕ್ಕೆ ಹೇತು. ನಮಗೆ ನಮ್ಮ ಪರಿಸರದ, ಪ್ರದೇಶದ, ರಾಜ್ಯದ ಮತ್ತು ರಾಷ್ಟ್ರದ ತಿಳುವಳಿಕೆ ವಿಸ್ತೃತ ರೂಪದಲ್ಲಿರಬೇಕಲ್ಲದೆ—ಹೊರ ದೇಶಗಳ ಇತಿಹಾಸವಲ್ಲ. ನಮ್ಮ ಸಮಸ್ಯೆಗಳ, ನಮ್ಮ ಸಾಧನೆಗಳ, ನಮ್ಮ ಧುರೀಣರ ಮತ್ತು ನಮ್ಮ ಚರಿತ್ರೆಯ ಮಾಹಿತಿ ಇರಬೇಕಾದಷ್ಟು ಪ್ರಮಾಣದಲ್ಲಿ ಬೇರೆ ದೇಶದ ತಿಳುವಳಿಕೆ ಅಗತ್ಯವಿಲ್ಲ. ನೆರೆಮನೆಯ ಶ್ಯಾಮನ ಪರಿಚಯವಿಲ್ಲದೆ, ಅಮೇರಿಕದ ನೈವ ನನ ಪರಿಚಯವಷ್ಟೇ ನಮಗಿದ್ದರೆ—ನಮ್ಮ 'ಆಪತ್ಕಾಲದಲ್ಲಿ ನೆರವಾಗುವವರು ಯಾರು' ಸೈಮನನಂತೂ ಅಲ್ಲಿಂದಿಲ್ಲಿಗೆ ಬರಲಾರ-ಶ್ಯಾಮನನ್ನು ಕೇಳಲು ಸಂಕೋಚಬಿಡದು ಈ ದ್ವಂದ್ವ ನಾವು ಬಿಡಿಸಬೇಕಾದ ಪ್ರಶ್ನೆಗಳಲ್ಲಿ ಮುಖ್ಯವಾದದ್ದು—ನಮಗೆ ಹತ್ತಿರದ ಸಂಗತಿಗಳ ಕುರಿತು ನಮಗೆ ಪೂರ್ಣ ತಿಳುವಳಿಕೆಯಿದೆಯೆಂಬ ಭರವಸೆ ಮೊದಲು ಬೇಕು; ಆ ನಂತರವೇ ಬೇರೆ ಮಾತು.

— ಕಾರ್ತಿಕೇಯ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ,

1929ರಲ್ಲಿ ಸ್ಥಾಪಿತವಾಗಿ 26 ವರುಷಗಳಿಂದ ಊರ ಜನರ ಹಿತಕ್ಕಾಗಿ ಠೇವೋಟಿ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

REGD. NO.
M. 3818

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪
VOL. 34

ಉಡುಪಿ, 24—2—1955

ಸಂಚಿಕೆ ೨೫
NO. 25

ನಮ್ಮ ದೇಶವು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕ ಮುಂತಾದ ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಗತಿಸಾಧಿಸುವ ಪ್ರಯತ್ನದಲ್ಲಿ ತೊಡಗಿದ್ದು ಅದಕ್ಕಾಗಿ ರಾಷ್ಟ್ರದ ಎಲ್ಲ ಸಂಪತ್ತಿನ ಉಪಯೋಗವನ್ನು ಮಾಡಿಕೊಳ್ಳಲು ಸರಕಾರ ಬಯಸುತ್ತದೆ. ಹಳ್ಳಿಯ ಹಾಗು ಪೇಟೆಯ ಜನರು ಬೀಗದೊಳಗೆ ಭದ್ರವಾಗಿ ಇಟ್ಟಿರುವ ಚಿನ್ನಬೆಳ್ಳಿಯ ಸಂಗ್ರಹವು ಹಾಗೆಂದೇ ಕೊಳೆತಿರದೆ, ರಾಷ್ಟ್ರದ ಸಂಪತ್ತನ್ನು ಹೆಚ್ಚಿಸುವ ಉತ್ಪಾದಕ ಕೆಲಸಗಳಲ್ಲಿ ತೊಡಗಿಸಲ್ಪಡುವುದಕ್ಕೆ ಇದು ಪ್ರಶಸ್ತವಾದ ಕಾಲ. ನಮ್ಮ ಸಂಪ್ರದಾಯ ಪ್ರಿಯತೆ ಇದಕ್ಕೆ ಅಡ್ಡಿಯಾಗಬಾರದು

—ಡಾ ಜೀವರಾಜ ಮೆಹತಾ

ಆಭರಣಗಳ ಅವಗುಣ

ಮುಟ್ಟಿದೆಲ್ಲವನ್ನೂ ಚಿನ್ನವಾಗಿ ಮಾಡುವ ಶಕ್ತಿಯನ್ನು ಸಂಪಾದಿಸಿದ ಕತೆಯಲ್ಲಿನ ಮೈಡಾಸರಾಜನ ದುರಾಶೆಯನ್ನು ನಾವು ಯಾರೂ ಮೆಚ್ಚಲಿಕ್ಕಿಲ್ಲ- ಆದರೆ ಚಿನ್ನ ಬೆಳ್ಳಿಗಳ ವಸ್ತುಗಳ ಬಗ್ಗೆ ವ್ಯಾಮೋಹವನ್ನು ತೋರಿದವರೂ ನಾವಾಗಲಿಕ್ಕಿಲ್ಲ. ನಮ್ಮ, ಅಂದರೆ ಭಾರತೀಯರ ಐದುಸಾವಿರ ವರ್ಷಕ್ಕಿಂತಲೂ ಪುರಾತನವಾದ ನಾಗರಿಕತೆಯ ಜಾಯಮಾನಕ್ಕೆ ಚಿನ್ನ ಬೆಳ್ಳಿಗಳ ಮೇಲಿನಪ್ರೀತಿಯನ್ನು ತ್ಯಜಿಸುವುದರಿಂದ ಅನ್ಯಾಯ್ಯವೇ ಆದೀತು. ನಮ್ಮಲ್ಲಿ ವರ್ಷಕ್ಕೆ ನಡೆಯುವ ಇಪ್ಪತ್ತು ಲಕ್ಷ ಮದುವೆಗಳಿಗೆ ಸರಾಸರಿಯಾಗಿ ಪ್ರತಿ ಮದುವೆಗೆ ನೂರು ರೂಪಾಯಿ ಪ್ರಕಾರ ಇಪ್ಪತ್ತು ಕೋಟಿ ರೂಪಾಯಿ ಬೆಲೆಬಾಳುವ ಚಿನ್ನ ಬೆಳ್ಳಿಯ ಆಭರಣಗಳನ್ನು ಉಪಯೋಗಿಸುತ್ತೇವೆ ಅಷ್ಟಲ್ಲದೆ, ಮದುವೆಯಾಗಲಿರುವ ಐದು ಕೋಟಿ ಹುಡುಗಿಯರ ಅಲಂಕಾರದಲ್ಲಿ ನೂರಿಪ್ಪತ್ತೈದು ಕೋಟಿ ರೂಪಾಯಿ ಬೆಲೆಯ ಆಭರಣಗಳನ್ನು ತೊಡಗಿಸಿದ್ದೇವೆ. ಮೇಲಿನ ಹಾಗು ಇತರ ವಿಧಾನದಿಂದ ನಮ್ಮಲ್ಲಿ ಪ್ರತಿ ವರ್ಷ ೬೦೦ ಕೋಟಿ ರೂಪಾಯಿ ಬೆಲೆಯ ವ್ಯಾಪಾರವು ಚಿನ್ನ ಬೆಳ್ಳಿಗಳ ಪೇಟೆಯಲ್ಲಿ ನಡೆಯುತ್ತದೆ. ಇದನ್ನು ವರ್ಷಕ್ಕೆ ೧೦೦ ಕೋಟಿ ರೂಪಾಯಿ ವ್ಯವಹಾರ ನಡೆಯುವ ಹತ್ತಿಯ ಕೃಷಿಯೊಡನೆ ಅಥವಾ ಎಣ್ಣೆ ಕಾಳಿನ ವ್ಯಾಪಾರದೊಡನೆ ಹೋಲಿಸಿದರೆ, ಚಿನ್ನ ಬೆಳ್ಳಿಯ ವಸ್ತುಗಳು ನಮ್ಮ ಜೀವನದಲ್ಲಿ ವಹಿಸಿರುವ ಮಹತ್ವದ ಸ್ಥಾನ ಮನವರಿಕೆಯಾದೀತು ನಮ್ಮ ಆಹಾರ ಧಾನ್ಯಗಳ ಬೆಳೆಯ ಮೊತ್ತ ಸಹ ೩೦೦ ಕೋಟಿ ರೂಪಾಯಿಗಳನ್ನು ಮೀರುವುದಿಲ್ಲವೆಂಬ ಸತ್ಯವನ್ನು ಸ್ಮರಿಸಿದರೆ ನಾವು ಕನಕಾಭರಣಗಳ ದಾಸರಾಗಿದ್ದೇವೆಂಬ ಮಾತು ಸ್ಪಷ್ಟವಾಗುತ್ತದೆ.

ಭಾರತದ ಚಿನ್ನ ಬೆಳ್ಳಿಯ ವ್ಯಾಪಾರ ಕ್ಷೇತ್ರವು ಎರಡು ಲಕ್ಷ ಚಿನಿವಾರ ಕುಟುಂಬಗಳಿಗೆ ಉದ್ಯೋಗವನ್ನೂ ಅನ್ನವನ್ನೂ ಒದಗಿಸುತ್ತದೆ ಆದುದರಿಂದ ತಮ್ಮ ವ್ಯವಹಾರಕ್ಕೆ ಆತಂಕವಾಗುವ ಯಾವ ಕ್ರಮವನ್ನೆ ಆಗಲಿ ವಿರೋಧಿಸಲು ಮತ್ತು ಪರಸ್ಪರ ಹಿತವನ್ನು ಸಾಧಿಸಲು ಈ ಚಿನಿವಾರರೆಲ್ಲ ಒಟ್ಟು ಸೇರುವುದು ಸಹಜವಾದ ವಿಷಯ. ಮುಂಬಯಿ ಮಹಾನಗರದಲ್ಲಿ ಇದೇ ೧೨ ಮತ್ತು ೧೩ನೇ ತಾರೀಕುಗಳಲ್ಲಿ ಸಭೆ ಸೇರಿದ ಅಖಿಲ ಭಾರತ ಚಿನಿವಾರರ ಪರಿಷತ್ತನ್ನು ಈ ದಿಸೆಯಲ್ಲಿಡಲಾದ ಪ್ರಾಮುಖ್ಯ ಹೆಜ್ಜೆಯೆಂದು ಪರಿಗಣಿಸಬಹುದು. ಸುಮಾರು ೫೦೦ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು; ಮತ್ತು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಪರ್ಯಾಲೋಚಿಸಿ ಗೊತ್ತುವಳಿಗಳನ್ನು ಅವರು ಸ್ವೀಕರಿಸಿದರು ಇವುಗಳಲ್ಲಿ ಹೊರಗಿನ ದೇಶಗಳಿಗಿಂತ ಭಾರತದಲ್ಲಿ ಚಿನ್ನದ ಬೆಲೆಯು ಒಂದೂವರೆಪಾಲು ಹೆಚ್ಚಿರುವುದಕ್ಕೆ ೧೯೪೭ನೇ ಮಾರ್ಚಿಯಲ್ಲಿ ಹೇರಲಾದ ಆಯಾತ ನಿರ್ಬಂಧವೇ ಕಾರಣವೆಂದೂ ಇದನ್ನು ಸಡಲಿಸಬೇಕೆಂದೂ ಕೇಳಿಕೊಳ್ಳುವ ಗೊತ್ತುವಳಿ ಉಲ್ಲೇಖನೀಯ. ಸಾವಿರಾರು ವರ್ಷಗಳಿಂದ ಚಿನ್ನ ಬೆಳ್ಳಿಯ ವಸ್ತುಗಳು ಮತ್ತು ಆಭರಣಗಳು ನಮ್ಮ ದೇಶದ ಸಾಮಾಜಿಕ, ಸಾಂಸ್ಕೃತಿಕ ಹಾಗು ಆರ್ಥಿಕ ಜೀವನದ ನೆತ್ತರಿನಲ್ಲಿ ಮಿಶ್ರಗೊಂಡು ಜೀವನದಲ್ಲಿ ಭದ್ರತೆಯನ್ನೂ ವ್ಯವಹಾರದಲ್ಲಿ ವಿಶ್ವಾಸವನ್ನೂ ಹುಟ್ಟಿಸಿವೆಯೆಂದು ಈ ಗೊತ್ತುವಳಿ ವಿವರಿಸುತ್ತದೆ ಆದುದರಿಂದ ಸರಕಾರದ ಆಯಾತ ವ್ಯವಹಾರದಲ್ಲಿ ಒಂದು ಪಾಲನ್ನು ಚಿನ್ನ ಬೆಳ್ಳಿಗಳನ್ನು ಹೊರದೇಶಗಳಿಂದ ತರಿಸುವುದಕ್ಕೆ ಮೀಸಲಿಡಬೇಕೆಂದದು ಹೇಳುತ್ತದೆ.

ಚಿನಿವಾರರು ಹೀಗೆ ಹೇಳುತ್ತಿದ್ದರೂ ಸರಕಾರಕ್ಕೆ ಅವರ ಅಭಿಪ್ರಾಯ ಸಮ್ಮತವಾಗುವುದು ಕಷ್ಟ—ಏಕೆಂದರೆ ಚಿನ್ನ ಬೆಳ್ಳಿಗಳ ಸಂಗ್ರಹದ ಕುರಿತಾದ ಭಾವನೆಯು ಈಗ ಮೊದಲಿನಂತೆ ಉಳಿದಿಲ್ಲ. ಅದರಲ್ಲಿ ತೀವ್ರ ಪರಿವರ್ತನೆಯಾದಂತೆ ಕಂಡುಬರುತ್ತದೆ. ಸಾರ್ವಜನಿಕರಲ್ಲಿ ಉಂಟಾದ ಈ ಬದಲಾವಣೆಯು ಸರಕಾರದ ಧೋರಣೆಯ ಮೇಲೆ ಸಹ ಸಾಕಷ್ಟು ಗಂಭೀರವಾದ ಪರಿಣಾಮವನ್ನು ಮಾಡಿರುತ್ತದೆ. ನಮ್ಮ ಜನರು ಹೆಚ್ಚು ಹೆಚ್ಚು ಸುಶಿಕ್ಷಿತರಾಗುತ್ತ ಬಂದಂತೆಲ್ಲ ಚಿನ್ನ ಬೆಳ್ಳಿಗಳ ಮೇಲಿನ ಆಸೆಯನ್ನು ಬಿಟ್ಟುಕೊಟ್ಟು, ಅವುಗಳಿಗಿಂತ ಲಾಭಕರವಾದ ಕೆಲಸಗಳಿಗೆ ಹಣವಿನಿಯೋಗಿಸುವುದಕ್ಕೆ ಮುಂದಾಗುತ್ತಿರುವರು. ರಾಷ್ಟ್ರದ ಪ್ರಗತಿಯಲ್ಲಿ ಬಚ್ಚಿಟ್ಟ ಚಿನ್ನ ಬೆಳ್ಳಿಗಳ ಸಂಗ್ರಹವಾಗಲೀ ಮೈಮೇಲಿನ ಆಭರಣಗಳಾಗಲೀ ಪ್ರಯೋಜನಕ್ಕೆ ಬರವು, ಬೇಂಕುಗಳಲ್ಲಿಯೂ ಭದ್ರತಾ ಪತ್ರಗಳಲ್ಲಿಯೂ ನಿಕ್ಷೇಪಿಸಿದ ಹಣವೊಂದೇ ಅಭಿವೃದ್ಧಿ ಪ್ರಯತ್ನಗಳಲ್ಲಿ ನೆರವಾಗುತ್ತದೆ ಎಂದವರು ತಿಳಿಯತೊಡಗಿರುವರು. ಹಿಂದೆಯಾದರೆ ರಾಜಕೀಯ ಸ್ಥಿರತೆ ಇರಲಿಲ್ಲ, ಶಾಂತಿ ಮತ್ತು ಸುವ್ಯವಸ್ಥೆ ಇರಲಿಲ್ಲ; ಆಸ್ತಿಗೆ ಭದ್ರತೆ ಇರಲಿಲ್ಲ—ಆಗ ಚಿನ್ನಬೆಳ್ಳಿಗಳ ರೂಪದಲ್ಲಿ ಸಂಪತ್ತನ್ನು ಸಂಗ್ರಹಿಸಿದುವುದು ಒಳ್ಳೆಯ ಉಪಾಯವಾಗಿ ನಮ್ಮ ಪೂರ್ವಜರಿಗೆ ಕಂಡುದು ಸಹಜ. ಆದರೆ ಇಂದು ಪರಿಸ್ಥಿತಿ ತುಂಬ ಸುಧಾರಿಸಿದೆಯಲ್ಲದೆ, ಚಿನ್ನಬೆಳ್ಳಿಗಳ ಮೇಲೆ ವಿಶೇಷ ಪ್ರೀತಿ ತೋರಿಸುವ ಹೆಂಗಸರ ಜೀವನವೂ ಹೊಸಬೆಳಕಿನಿಂದ ಶೋಭಿಸುತ್ತದೆ. ಅವರ ಹಕ್ಕು ಬಾಧ್ಯತೆಗಳಿಗೆ ದೊರಕಿದ ಮನ್ನಣೆಯು ಹಿಂದಿನ ಅಸಹಾಯತೆಯನ್ನು ಕಳೆದು ಸುಖಜೀವನದ ಮಾರ್ಗವನ್ನು ನಿಷ್ಕಂಟಕ ಮಾಡಿರುತ್ತದೆ

ಆದುದರಿಂದ ನಮ್ಮ ಪೂರ್ವಿಕರಷ್ಟು ನಾವು ಚಿನ್ನಬೆಳ್ಳಿಗಳ ಸಂಗ್ರಹ ಪ್ರವೃತ್ತಿಯನ್ನು ವ್ಯಕ್ತಪಡಿಸುವುದು ಇಷ್ಟವಾಗಲಾರದು—ಎರಡು ಲಕ್ಷ ಚಿನಿವಾರ ಕುಟುಂಬಗಳ ಯೋಗಕ್ಷೇಮವನ್ನು ಗಮನಿಸುವುದು ರಾಷ್ಟ್ರದ ಕರ್ತವ್ಯದಲ್ಲಿ ಸೇರುವುದೇನೋ ನಿಜ. ಆದರೆ, ಹಳೆಯ ಮನೋಭಾವಕ್ಕೆಯೇ ಈಗಲೂ ಇನ್ನು ಮುಂದೆಯೂ ಅಂಟಿಕೊಂಡಿರುವುದು ಕಾಲಧರ್ಮಕ್ಕೆ ಹೊಂದಿಸಿದ ವಿಷಯವಾಗದು. ಬೇಂಕುಗಳ ಸೌಕರ್ಯವು ಗ್ರಾಮಾಂತರ ಪ್ರದೇಶಗಳಲ್ಲಿ ಸಹ ವಿಸ್ತರಿಸತೊಡಗಿರುವುದರಿಂದ ಅದರ ಲಾಭವನ್ನು ಜನರು ಮಾಡಿಕೊಳ್ಳಲು ಮುಂದಾಗಬೇಕೇ ಹೊರತು, ಚಿನ್ನ ಬೆಳ್ಳಿಗಳ ಸಂಗ್ರಹವೆಂಬ ಅನುತ್ಪಾದಕ ದೃಷ್ಟಿಗೆ ಅಂಟಿಕೊಳ್ಳಬಾರದು. ನಮ್ಮ ಆಭರಣಗಳು ದೇಹದ ಚೆಲುವನ್ನು ಕೆಲವಷ್ಟಿಗೆ ಹೆಚ್ಚಿಸುತ್ತವೆಂಬುದನ್ನು ಅಲ್ಲಗಳೆದು ಪ್ರಯೋಜನವಿಲ್ಲ — ಆದರೆ ಗುಣ ಶೀಲವೇ ಆಭರಣ—ಅಲಂಕಾರಕ್ಕಿಂತ ಭೂಷಣ ಸ್ವಾಭಾವಿಕ ಅಂಶವೆಂಬುದನ್ನು ನಾವಿಲ್ಲಿ ಮರೆಯಬಾರದು. ಅದರ ಎದುರಲ್ಲಿ ಚಿನ್ನ ಬೆಳ್ಳಿಗಳ ಥಳಕು ಬೆಳಕು ಬೆಲೆ ಇಲ್ಲದ್ದಾಗುತ್ತದೆ ಇದನ್ನು ಮನಗಂಡರೆ ಸ್ವಾಭಾವಿಕವಾಗಿ ಕಾಣಬೇಕೆಂಬ ಚಪಲವಿರುವ ಆಭರಣ ಹಾಕಿಕೊಳ್ಳುವ ಸ್ತ್ರೀ ಮನೋಭಾವನೆಯಲ್ಲಿ ಕ್ರಾಂತಿಕರವಾದ ಪರಿವರ್ತನೆಯಾಗದಿರದು.

(೧೦ನೇ ಪುಟ ನೋಡಿರಿ)

'ಅಮ್ಮ, ನಾನು ಬಂಗಾರದಂತೆ, ಹೌದೇ ಅಮ್ಮ?" ಎಂದು ಪುಟ್ಟು ತಾಯಿಯನ್ನು ಕೇಳಿದ 'ಹೌದು ಮುದ್ದು, ನೀನು ನನ್ನ ಬಂಗಾರ—ನೀನೇ ನನ್ನ ಸರ್ವಸ್ವ' ಎಂದು ತಾಯಿ ಪ್ರೀತಿಯಿಂದ ಚುಂಬಿಸಿದಳು.

"ಆದರೆ ನೀನು ನನಗೆ ಎರಡಾಣೆ ಬೇಕೆಂದರೆ ಮಾತ್ರ ಕೊಡುವುದಿಲ್ಲ— ಈ ಬಂಗಾರಕ್ಕೆ ಅಷ್ಟು ಬೆಲೆಯಿಲ್ಲವೆ, ಅಮ್ಮ" ಎಂದು ಪುಟ್ಟು ಮರುಸವಾಲು ಹಾಕಿದ ಆಗ ತಾಯಿ ನಿರುತ್ತರಳಾದಳು— ತನ್ನ ಬಂಗಾರ ವ್ಯವಹಾರದಲ್ಲಿನ್ನೂ ತೊಡಗಿಲ್ಲವೆಂಬುದನ್ನು ಅವಳು ವರ್ಣಿಸಲಾರದೆ ಹೋದಳು

THE CANARA INDUSTRIAL & BANKING SYNDICATE LTD.
Estd: 1925 H. O. UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಠೇವಣಿಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಯಿಡಲು ನೀವು ಇಚ್ಛಿಸುವಿರಿ ಬೇಂಕಿನಲ್ಲಿ ತೆರೆಯಲಾಗುವ ಚೆಕ್ಕುಗಳ(?) ನಿಮಗೆ ಯಾವ ಕಾಲದಲ್ಲಾದರೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು ೯೨ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಠೇವಣಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ ೬,೫೦,೦೦ ೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ

ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕಲುಗಳು

ಶಾಶ್ವತ ಸ್ವರೂಪದ ವ್ಯಾಪಕ ಶಾಸನಕ್ಕಾಗಿ ಸದಸ್ಯರ ಒತ್ತಾಯ

ಮದ್ರಾಸು ಸರಕಾರದ ಕಂದಾಯ ಮಂತ್ರಿಗಳಾದ ಶ್ರೀ ಮಾಣಿಕ್ಯವೇಲು ನಾಯಕ್ಕರವರು ನಮ್ಮ ಜಿಲ್ಲೆಯನ್ನು ಈ ತಿಂಗಳ ಪ್ರಥಮ ವಾರದಲ್ಲಿ ಸಂದರ್ಶಿಸಿದಾಗ ಇಲ್ಲಿಗೆ ಬರುವುದೆಂದಿದ್ದ ಒಕ್ಕಲು ಹಿತ ಮಸೂದೆಯ ಕುರಿತು ತೀರ ನಿರಾಶಾಜನಕವಾದ ಮಾತುಗಳನ್ನಾಡಿದ್ದರು. ಕಳೆದ ಕೆಲವು ವರ್ಷಗಳಿಂದ ಶಾಸನ ಸಭೆಯ ಅಧಿವೇಶನವು ಪ್ರತಿಸಲ ಪ್ರಾರಂಭವಾಗುವಾಗಲೂ "ಈ ಸಲ ಮಂಡಿಸಲ್ಪಡುವುದು ಖಂಡಿತ" ಎಂದು ಹೇಳುತ್ತಾ ಹಿಂದೂಡಲಾಗಿನ್ನ ಒಕ್ಕಲು ಹಿತ ಮಸೂದೆ ಬೆನಕನ ಮದುವೆಯ ಸುದ್ದಿಯನ್ನು ನೆನಪಿಗೆ ತರುತ್ತಿತ್ತೆಂದರೆ ತಪ್ಪಾಗದು. ಜನರಲ್ಲಿ ಇಂಥ ಭಾವನೆ ರೂಢವಾಗಿದೆ ಎಂಬುದನ್ನು ತಿಳಿದು ಸಹ ಮಾನ್ಯ ಮಂತ್ರಿಗಳು ಇಲ್ಲಿಯ ಪ್ರವಾಸಕ್ಕೈಗೊಂಡಾಗ ಜನರ ಅಪೇಕ್ಷೆಗೆ ವಿರುದ್ಧವಾದ ಭಾಷಣಗಳನ್ನೆ ಬಿಗಿದು ಹೋದರು. ಅವರು ಇಲ್ಲಿಗೆ ಬಂದಾಗ ಭೂಮಾಲಿಕರ ಪ್ರತಿನಿಧಿಗಳೇ ಒಕ್ಕಲುಗಳಿಗಿಂತಲೂ ಹೆಚ್ಚು ಚಟುವಟಿಕೆಯನ್ನು ತೋರಿಸಿದಂತೆ ವ್ಯಕ್ತವಾಯಿತು. ನಮ್ಮ ಜಿಲ್ಲೆಯಲ್ಲಿ ವಿದ್ಯಮಾನವಿರುವ ಅಳಿಯ ಸಂತಾನ ಎಂಬ ವಿಶಿಷ್ಟ ಆನುವಂಶಿಕ ಪದ್ಧತಿಯು ಮುಂದೆ ಭೂಸುಧಾರಣೆಯ ಅವಸರದ ಕ್ರಮಗಳು ಕೆಡುಕನ್ನೆ ತರಬಹುದು ಎಂಬುದಾಗಿ ಮಂತ್ರಿಗಳಿಗೆ ಭೂಮಾಲಿಕರ ಪ್ರತಿನಿಧಿಗಳು ಎಚ್ಚರಿಸಿರುವುದೂ ಶಾಸನಸಭೆಯಲ್ಲಿ ಜಿಲ್ಲೆಯನ್ನು ಪ್ರತಿನಿಧೀಕರಿಸುವ ಸದಸ್ಯರು ರಾಜಕೀಯ ದುರುದ್ದೇಶದಿಂದ ಒಕ್ಕಲು ಹಿತ ಮಸೂದೆಯ ಬಗ್ಗೆ ಪ್ರಚಾರ ಮಾಡುತ್ತಿರುವರಲ್ಲದೆ ನಿಜವಾದ ಧನಿ—ಒಕ್ಕಲುಗಳಲ್ಲಿ ಮನಸ್ತಾಪವೇನೂ ಇಲ್ಲವೆಂಬ ಅಭಿಪ್ರಾಯವನ್ನು ಮಂತ್ರಿಗಳಲ್ಲಿ ಮೂಡಿಸಲು ಭೂಮಾಲಿಕರ ಈ ಪ್ರತಿನಿಧಿಗಳು ಪ್ರಯತ್ನಿಸಿರುವುದೂ ಮೇಲಿನ ಮಾತನ್ನು ಎತ್ತಿ ತೋರುತ್ತವೆ. ಒಕ್ಕಲುಗಳ ಒಕ್ಕೊರಲಿನ ಬೇಡಿಕೆ ನ್ಯಾಯಬದ್ಧವಾದದ್ದೆಂಬ ಬಗ್ಗೆ ಮಂತ್ರಿಗಳಿಗೆ ಸಾಕಷ್ಟು ಹೆಚ್ಚು ಸ್ಪಷ್ಟವಾದ ತಿಳಿವಳಿಕೆಯನ್ನು ಅವರ ಪ್ರವಾಸಕಾಲ ಮಾಡಿಕೊಟ್ಟಂತೆ ಕಾಣಲಿಲ್ಲ—ಆ ಸಂದರ್ಭವನ್ನು ಯಶಸ್ವಿಯಾಗಿ ನಮ್ಮ ಒಕ್ಕಲುಗಳ ಪ್ರತಿನಿಧಿಗಳು ಬಳಸಲಿಲ್ಲವೆಂದರೂ ವಸ್ತುಸ್ಥಿತಿಯ ವಿಪರ್ಯಾಸವಾಗದು.

ಇಲ್ಲಿ ಸರಿಯಾಗಿ ಬಳಸಲಾರದೆ ಹೋದ ಸಂದರ್ಭವನ್ನು ನಮ್ಮ ಒಕ್ಕಲುಗಳ ನಿಜ ಪ್ರತಿನಿಧಿಗಳೆಂದು ಭಾವಿಸಬಹುದಾದ ಶಾಸನಸಭೆಯ ಸದಸ್ಯರು ಮೊನ್ನೆ ದಿನಾಂಕ ೧೫ರಂದು ಮದ್ರಾಸಿನಲ್ಲಿ ಚೆನ್ನಾಗಿಯೇ ! ಉಪಯೋಗಿಸಿಕೊಂಡರು. ಶಾಸನಸಭೆಯಲ್ಲಿ ಅಂದು "ಚಾಲ್ತಿ ವರ್ಷದ ಗೇಣಿಯನ್ನು ಸಂದಾಯಮಾಡಿದರೆ ಹಿಂದಿನ ಗೇಣಿ ಬಾಕಿ ಇದ್ದರೂ ಸಹ ಒಂದು ವರ್ಷದ ವರೆಗೆ ಒಕ್ಕಲನ್ನು ಎಬ್ಬಿಸಬಾರದು" ಎಂದು ಕಳೆದ ವರ್ಷ ಮಾಡಿದ್ದ ಶಾಸನಕ್ಕೆ ಇನ್ನೊಂದು ವರ್ಷ ಜೀವದಾನ ಮಾಡುವ ಸೂಚನೆಯನ್ನು ಚರ್ಚೆಗಾಗಿ ಮಂಡಿಸಿದ್ದರು. ಕಳೆದ ವರ್ಷ ಮಾಡಲಾದ ಶಾಸನದ ಅವಧಿಯು ಇದೇ ಮಾರ್ಚಿ ೨ನೇ ತಾರೀಕಿಗೆ ಮುಗಿಯುವುದೆಂದೂ ಅದನ್ನು ಬರುವ ವರ್ಷದ ಮಾರ್ಚಿ ೨ನೇ ತಾರೀಕಿನ ವರೆಗೆ ಮುಂದರಿಸಿ,ತನ್ಮೂಲಕ ಒಕ್ಕಲುಗಳಿಗೆ ರಕ್ಷಣೆ ಕೊಡುವುದು ಸರಕಾರದ ಉದ್ದೇಶವೆಂದೂ ಕಂದಾಯ ಮಂತ್ರಿಗಳು ಆಗ ತಿಳಿಸಿದರು. ಭೂಮಾಲಿಕರ ಮತ್ತು ಒಕ್ಕಲುಗಳ ನಡುವಣ ಸಂಬಂಧವನ್ನು ಚೆನ್ನಾದ ರೀತಿಯಲ್ಲಿಡಲು ಅನುಕೂಲವಾಗುವ ವ್ಯಾಪಕ ಸ್ವರೂಪದ ಶಾಸನವೊಂದರ ರಚನೆಯು ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದೂ ಅದು ಜ್ಯಾರಿಗೆ ಬರುವ ವರೆಗೆ ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ ಕ್ರಮವನ್ನು ಮುಂದರಿಸುವುದು ಇಷ್ಟವೆಂದು ಸರಕಾರ ಭಾವಿಸಿದೆಯಾಗಿಯೂ ಅವರು ವಿವರಿಸಿದರು. ನಮ್ಮ ಜಿಲ್ಲೆಯ ಶಾಸನ ಸಭಾಸದರು ಈ ಸಂಬಂಧ ನಡೆದ ಚರ್ಚೆಯಲ್ಲಿ ಅತ್ಯುತ್ಸಾಹದಿಂದ ಭಾಗ ವಹಿಸಿ, ಒಕ್ಕಲು ಮತ್ತು ಧನಿಗಳ ಸಂಬಂಧದಲ್ಲಿ ಶಾಸನ ಮಾಡಬೇಕಾದ ಆವಶ್ಯಕತೆಎಷ್ಟು ಹೆಚ್ಚಾಗಿದೆಎಂಬುದನ್ನು ಮಂತ್ರಿಗಳ ಹಾಗು ಸರಕಾರದ ಗಮನಕ್ಕೆ ತರಲು ವಿಚಾರಪಂಪ್ಲುತವಾದ ಭಾಷಣಗಳನ್ನಿತ್ತರು ಇದರಿಂದಭೂಮಾಲಿಕರ ವಾದಕ್ಕಿಂತಲೂ ಒಕ್ಕಲುಗಳ ಒಕ್ಕೊರಲಿನ ಬೇಡಿಕೆಯಲ್ಲಿಯೇ ಹುರುಳಿದೆ ಎಂಬ ಮನೋಭಾವ ಮರಳಿ ಮೂಡುವಂತಾಯಿತು.

ಮಸೂದೆಯ ಪ್ರಥಮ ವಾಚನದ ಸಂದರ್ಭದಲ್ಲಿ ಕುಂದಾಪುರದ ಶ್ರೀ ಯಡ್ತರೆ ಮಂಜಯ್ಯ ಶೆಟ್ಟರು ತಮ್ಮ ಹಕ್ಕುಗಳ ರಕ್ಷಣೆ ಮಾಡುವ ಶಾಸನಕ್ಕಾಗಿ ಜಿಲ್ಲೆಯ ರೈತರು ಬಹು ಸಮಯದಿಂದ ಹೋರಾಡುತ್ತಿದ್ದಾರೆ ಎಂದೂ, ಇದನ್ನು ಶಾಸನಸಭಾಸದರು ಬೆಂಬಲಿಸುತ್ತಿದ್ದಾರೆಂದೂ ಹೇಳಿದರು.ಸರಕಾರದವರು ತೀವ್ರ ಕ್ರಮಗಳನ್ನು ಕೈಗೊಳ್ಳದಿದ್ದರೆ ಈಗಾಗಲೇ ನಾಜೂಕು ಪರಿಸ್ಥಿತಿಯನ್ನು ಮುಟ್ಟಿರುವ ಧನಿ—ಒಕ್ಕಲುಗಳ ಸಂಬಂಧವು ಅಪಾಯಕರವಾದ ರೀತಿಯಲ್ಲಿ ಕೆಡಬಹುದು ಎಂದವರು ಎಚ್ಚರಿಸಿದರು. ಕಾಂಗ್ರೆಸು ಸಮಾಜವಾದಿ ಸ್ವರೂಪದ ಸಮಾಜರಚನೆಯ ಉದ್ದೇಶವನ್ನು ಪ್ರಕಟಿಸಿರುವಾಗ ಶಾಶ್ವತ ಸ್ವರೂಪದ ವ್ಯಾಪಕ ಶಾಸನವನ್ನು ತರಲು ವಿಳಂಬಿಸುವುದು ಮತ್ತು ಒಕ್ಕಲುಗಳಿಗೆ ಕನಿಷ್ಠ ಮಿತಿಯ ರಕ್ಷಣೆಯನ್ನಷ್ಟೇ ಕೊಡುತ್ತಿರುವುದು ಸರಿಯೇ? ಎಂದವರು ಪ್ರಶ್ನಿಸಿದರು. ಮಂಗಳೂರಿನ ಶ್ರೀ ಎಲ್. ಸಿ. ಪ್ಯಾಸರು ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕಲುಗಳು ಮಧ್ಯಂತರ ಸ್ವರೂಪದ ಶಾಸನ ಕ್ರಮವನ್ನು ಬಯಸಿದುದಕ್ಕಿಂತಲೂ ಹೆಚ್ಚು ಶಾಶ್ವತ ಸ್ವರೂಪದ ಶಾಸನದ ನಿರೀಕ್ಷೆ ಮಾಡಿದ್ದರು. ಒಕ್ಕಲುಗಳು ಅತಿ ಹೆಚ್ಚು ರಿಯಾಯತಿಯನ್ನು ಕೇಳುತ್ತಿದ್ದಾರೆ ಮತ್ತು ಧನಿಗಳು ಅವುಗಳನ್ನು ತೀವ್ರವಾಗಿ ವಿರೋಧಿಸುತ್ತಿದ್ದಾರೆ ಎಂಬುದರಿಂದ ಅಂಥದೊಂದು ಮಸೂದೆಯನ್ನು ತರುವುದು ಸುಲಭ ಕೆಲಸವಾಗಿರದಿರಬಹುದು. ಆದರೆ ಧೋರಣೆಯೇ ಮುಂತಾದ ಮುಖ್ಯ ವಿಷಯಗಳ ಕುರಿತಾಗಿಯೇ ಸರಕಾರ ಒಂದು ನಿಶ್ಚಯಕ್ಕೆ ಇನ್ನೂ ಬಂದಿಲ್ಲವೆನ್ನುವುದು ಮಾತ್ರ ಶೋಚನೀಯ. ಕಳೆದ ಎಳೆಂಟು ವರ್ಷಗಳಿಂದ ಪರ್ಯಾಲೋಚಿಸಲ್ಪಡುತ್ತಿರುವ ಈ ವಿಷಯದಲ್ಲಿ ಸರಕಾರ ಇನ್ನೂ ತಡಮಾಡಬಾರದು. ಗೇಣಿಯನ್ನು ಕ್ರಮಪ್ರಕಾರ ಸಂದಾಯಿಸಿಕೊಂಡು ಬಂದ ಒಕ್ಕೆಯ ಒಕ್ಕಲುಗಳಿಗೆ ಭದ್ರತೆ ಕೊಡುವುದು, ನ್ಯಾಯವಾದ ಗೇಣಿ ನಿಶ್ಚಯಿಸುವುದು, ಸ್ವಂತ ಬೇಸಾಯಕ್ಕಾಗಿ ಭೂಮಾಲಿಕರು ಗೇಣಿಗೆ ಕೊಟ್ಟ ಭೂಮಿಯನ್ನು ವಾಪಸು ಪಡೆಯಗೊಡುವುದು,ಹಾಗೆ ಮಾಡುವಾಗ ಕೃಷಿ ಭೂಮಿಯಲ್ಲಿ ಮಾಡಲಾದ ಅಭಿವೃದ್ಧಿ ಕೆಲಸಗಳ ವಿಷಯದಲ್ಲಿ ಒಕ್ಕಲಿಗೆ ಪರಿಹಾರ ನೀಡುವುದು — ಇವು ಪೂರೈಸಲು ಕಷ್ಟವಾದ ಬೇಡಿಕೆಗಳಲ್ಲ ಎಂದು ಸರಕಾರದ ವಿಳಂಬ ಧೋರಣೆಯನ್ನು ನಯವಾಗಿ ಟೀಕಿಸಿದರು.

ಉಡುಪಿಯ ಶ್ರೀ ಟಿ. ಎ. ಪೈಗಳು ಸರಕಾರದ ವಿಳಂಬ ಧೋರಣೆಯಿಂದ ಶಾಸನ ಸಭೆಯ ಕಾಂಗ್ರೆಸು ಸದಸ್ಯರಿಗೆ ಸಹ ತುಂಬ ಅಸಮಾಧಾನವಾಗಿದೆಯೆಂಬ ಸಂಗತಿಯನ್ನು ಸ್ಪಷ್ಟರೀತಿಯಲ್ಲಿ ವ್ಯಕ್ತಪಡಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಒಕ್ಕಲುಗಳ ಪರಿಸ್ಥಿತಿ ಕೆಟ್ಟುದನ್ನು ಮನಗಂಡೇ ಒಕ್ಕಲೆಬ್ಬಿಸುವುದನ್ನು ತಡೆಗಟ್ಟುವ ಕಸಿಷ್ಠಕ್ರಮವನ್ನಾದರೂ ಕೈಗೊಳ್ಳಲಾಯಿತು. ಆ ಶಾಸನವನ್ನು ಮಾಡುವಾಗ, ಒಂದು ವರ್ಷದೊಳಗಾಗಿ ವ್ಯಾಪಕ ಸ್ವರೂಪದ ಹೊಸಕಾಯಿದೆಯನ್ನು ತರಲಾಗುವುದೆಂದು ಸರಕಾರದವರು ಆಶ್ವಾಸನೆ ಕೊಟ್ಟಿದ್ದರು. ಆದರೆ ಈಗ ವ್ಯಾಪಕ ಶಾಸನಕ್ರಮ ಏನನ್ನೂ ಕೈಗೊಳ್ಳದೆ ಹಳೆಯ ಕಾನೂನನ್ನೆ ಒಂದು ವರ್ಷ ವಿಸ್ತರಿಸಲು ಸರಕಾರ ಸಭೆಯ ಅನುಮತಿ ಕೇಳುತ್ತದೆ! ಕಾಂಗ್ರೆಸು ಭೂಸುಧಾರಣೆಗೆ ಬದ್ಧವಾಗಿದೆ ಮತ್ತು ಒಕ್ಕಲುಗಳಿಗೆ ಭದ್ರತೆ ಕೊಡಬೇಕೆಂದು ಹೇಳುತ್ತದೆ. ಆದುದರಿಂದ ಸರಕಾರದ ಆಶ್ವಾಸನೆಗಳು ಜ್ಯಾರಿಗೆ ಬರದಿದ್ದರೆ ಕಾಂಗ್ರೆಸು ಸದಸ್ಯರು ಸಹ ಅಸಂತೋಷಗೊಳ್ಳುವುದು ಸಹಜ.ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗಂತೂ ಇದು ಹೆಚ್ಚು ಅನ್ವಯ ಸುಗುತ್ತದೆ—ಏಕೆಂದರೆ ಅದರ ಉತ್ತರದಲ್ಲಿರುವ ಮುಂಬಯಿ ರಾಜ್ಯದಲ್ಲಿ ಪೂರ್ವದ ಮೈಸೂರು ಸಂಸ್ಥಾನದಲ್ಲಿ ಮತ್ತು ದಕ್ಷಿಣದ ಮಲಬಾರಿನಲ್ಲಿ ಒಕ್ಕಲುಗಳಿಗೆ ರಕ್ಷಣೆ ಕೊಡುವ ಶಾಸನ ರೂಢಿಯಲ್ಲಿರುತ್ತದೆ. ಹೀಗಿರುವಾಗ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲಿಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ವನ್ಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬರಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ದಕ್ಷಿಣ ಕನ್ನಡದ ಒಕ್ಕಲುಗಳು ಯೋಗ್ಯ ಭದ್ರತೆ ಮತ್ತು ರಕ್ಷಣೆ ಕೊಡುವ ಶಾಸನದ ಕುರಿತು ಆಗ್ರಹವನ್ನು ವ್ಯಕ್ತಪಡಿಸುವುದರಲ್ಲಿ ಆಶ್ಚರ್ಯವಿಲ್ಲ ಎಂದರು. ಶ್ರೀಮಂತರಾದ ಭೂಮಾಲಿಕರು ನಡೆಸಿದ ಕುಹಕಗಳ ಮೇಲೂ ಬೆಳಕು ಬೀರಿ, ಸರಕಾರವು ಧನಿ—ಒಕ್ಕಲುಗಳ ಸಂಬಂಧವು ಚೆನ್ನಾಗಿದೆಯೆಂಬ ಭೂಮಾಲಿಕರ ಮಾತುಗಳಿಂದ ಪ್ರಭಾವಿತವಾಗಲಾರದೆಂದು ಆಶಿಸಿದರು. ಸರಕಾರವು ಜನರಿಗೆ ಕೊಟ್ಟ ಮಾತಿನಂತೆ ನಡೆಯಲು ತಪ್ಪಬಾರದು; ಇಲ್ಲಿ ಎಷ್ಟು ಹೆಚ್ಚು ತಡವಾಯಿತೋ ಅಷ್ಟು ಮಟ್ಟಿಗೆ ಪರಿಸ್ಥಿತಿ ಕೆಡುವುದು ಎಂದವರು ಅಭಿಪ್ರಾಯಪಟ್ಟರು.

ತಮ್ಮ ತಿಳುವಳಿಕೆಗೆ ಬಂದ ಕೆಲವು ಅಂಕಿಸಂಖ್ಯೆಗಳನ್ನು ಮಂಡಿಸಿ ದಕ್ಷಿಣ ಕನ್ನಡದಲ್ಲಿ ಭೂಮಾಲಿಕರ ಅಸ್ತಿತ್ವವೇ ಇಲ್ಲದಂತಾಗುವ ಶಾಸನ ಬೇಡವೆಂದು ಸರಕಾರಕ್ಕೆ ತಿಳಿಸಲು ಕಾಸರಗೋಡಿನ ಜನಾಬ್ ಎಂ. ಎಸ್. ಮೊಗ್ರಾಲರು ಚರ್ಚೆಯ ಸಂದರ್ಭವನ್ನು ಉಪಯೋಗಿಸಿಕೊಂಡರೂ ಸಹ ಒಕ್ಕಲುಗಳ ಹಕ್ಕುಬಾಧ್ಯತೆಗಳನ್ನು ಮನ್ನಿಸುವ ಶಾಸನಬದ್ಧ ಕ್ರಮವೊಂದನ್ನು ತರುವುದು ಅಗತ್ಯವೆಂಬುದಕ್ಕೆ ಒಪ್ಪಿಗೆಯನ್ನು ಅವರು ಸೂಚಿಸಿದರು. ಕಳೆದ ವರ್ಷ ಒಕ್ಕಲೆಬ್ಬಿಸುವುದನ್ನು ತಡೆಗಟ್ಟಲು ಕ್ರಮ ತೆಗೆದುಕೊಂಡಾಗ ವ್ಯಾಪಕವಾದ ಶಾಸನಕ್ಕೆ ಪೂರ್ವಭಾವಿಯಾದುದೆಂದದನ್ನು ಜನರು ಭಾವಿಸಿದರು. ಆದರೆ ಒಂದು ವರ್ಷ ಕಳೆದ ಬಳಿಕ ಈಗ ಇನ್ನೊಂದು ವರ್ಷದಲ್ಲಿ ಶಾಶ್ವತ ಸ್ವರೂಪದ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳುವುದು ಯೋಗ್ಯ ಸಮಾಧಾನವಾಗದು. ಇನ್ನಾದರೂ ಸರಕಾರದವರು ಶೀಘ್ರದಲ್ಲಿಯೇ ಭೂಮಾಲಿಕರು ಮತ್ತು ಒಕ್ಕಲುಗಳೆಂಬ ಸಮಾಜದ ವರ್ಗಗಳಲ್ಲಿ ಪರಸ್ಪರ ಸೌಹಾರ್ದಯುತವಾದ ಸಂಬಂಧ ಬೆಳೆದು ಬರುವಂತೆ ಮಾಡುವ ಹಾಗು ಕಲ್ಯಾಣ ರಾಷ್ಟ್ರದ ಧ್ಯೇಯಕ್ಕಾಗಿ ಸಹಕರಿಸಿ ದುಡಿಯುವ ಮನೋಭಾವವನ್ನು ಮೂಡಿಸುವ ಶಾಸನವನ್ನು ತರಲಿ ಎಂದು ಅವರು ಹಾರೈಸಿದರು. ಪುತ್ತೂರಿನ ಹರಿಜನ ಸದಸ್ಯರಾದ ಶ್ರೀ ಕೆ. ಈಶ್ವರರು ಸಹ ಶಾಶ್ವತವಾದ ಒಕ್ಕಲು ಹಿತ ಮಸೂದೆಯನ್ನು ಜನತೆ ಬಯಸುತ್ತದೆಂದು ತಮ್ಮ ಭಾಷಣದಲ್ಲಿ ತಿಳಿಸಿದರು. ಮೇಲ್ಮನೆಯಲ್ಲಿ ದಿನಾಂಕ ೧೭ರಂದು ಈ ಮಸೂದೆ ಮಂಡಿಸಲ್ಪಟ್ಟಾಗ ಅಲ್ಲಿರುವ ನಮ್ಮ ಜಿಲ್ಲೆಯ ಪ್ರತಿನಿಧಿ ಶ್ರೀ ಎಸ್. ನರ್ಸಪ್ಪಯ್ಯನವರು ಸರಕಾರದ ವಿಳಂಬ ಧೋರಣೆಗಾಗಿ ವಿಷಾದವನ್ನು ವ್ಯಕ್ತಪಡಿಸಿಯೂ ಹೆಚ್ಚಿನ ತಡವೇನನ್ನೂ ಮಾಡದೆ ಶಾಶ್ವತ

(೧೦ನೇ ಪುಟ ನೋಡಿರಿ)

ಲೋಕತಾರಕನ ಆರಾಧನೆ

ಮೃತ್ಯುಂಜಯನ ವಿಲಕ್ಷಣ ವ್ಯಕ್ತಿತ್ವ

ಮಹಾಶಿವರಾತ್ರಿಯ ಪರ್ವದಿನವೊಮ್ಮೆ ತಾನೆ ಕಳೆದು ಹೋಯಿತು. ಭಾರತೀಯರಿಗೆ, ಮುಖ್ಯವಾಗಿ ಶೈವ ಸಂಪ್ರದಾಯ ಶರಣರಿಗೆ, ಅದೊಂದು ಪುಣ್ಯಕಾಲ. ನಮ್ಮಲ್ಲಿ ಶಿವಪೂಜೆಯು ಪ್ರಾಚೀನ ಕಾಲದಿಂದ ರೂಢವಾದ ವಿಷಯ. ಶಿವಮಂದಿರವಿಲ್ಲದ ಗ್ರಾಮವೇ ಭಾರತದಲ್ಲಿಲ್ಲವೆಂದರೆ ಅತಿಶಯೋಕ್ತಿಯಾಗದು. ಒಂದೊಮ್ಮೆ ಯಾವದಾದರೊಂದು ಹಳ್ಳಿಯಲ್ಲಿ ಶಿವಮಂದಿರ ಸ್ಥಾಪಿಸಲ್ಪಟ್ಟಿಲ್ಲದಿದ್ದರೆ, ಶಿವಪೂಜೆಗೆ ಬೇರೇನಾದರೂ ವ್ಯವಸ್ಥೆಯನ್ನು ಅಲ್ಲಿಯ ಭಕ್ತರು ಮಾಡಿಕೊಳ್ಳದೆ ಬಿಡುವುದಿಲ್ಲ.

ವೈದಿಕ ನಾಗರಿಕತೆಯು ಭಾರತದಲ್ಲಿ ತನ್ನ ಪ್ರಭಾವವನ್ನು ಬೀರತೊಡಗಿದಂದಿನಿಂದ ಶಿವಪೂಜೆಗೆ ನಮ್ಮ ಜನರು ಮನಸೋತರು. ನಮ್ಮ ಕಲಾವಿದರಿಗಂತೂ ಗೌತಮ ಬುದ್ಧನ ಬಳಿಕ ಶಿವನೇ ತಮ್ಮ ಅಮೋಘ ಕೃತಿಗಳಿಗೆ ಪ್ರೇರಣೆಯನ್ನಿತ್ತನು. ಅತಿ ಸುಂದರವಾದ ಹಾಗು ನಯನಮನೋಹರವಾದ ಶಿವಮೂರ್ತಿಗಳನ್ನು ಪ್ರಾಚೀನ ಕಲಾವಿದರು ಕೆತ್ತಿದ್ದಾರೆ—ಅವುಗಳ ಅನುಪಮ ವೈಖರಿಯು ಪಾಶ್ಚಾತ್ಯ ಹಾಗು ಪೌರಸ್ತ್ಯ ರಸಿಕರನ್ನು ಒಂದೇ ಸಮನೆ ಅಚ್ಚರಿಗೆ ಗುರಿಮಾಡಿರುತ್ತದೆ. ಕ್ರಿಸ್ತಶಕ ಎರಡನೇ ಶತಮಾನದಿಂದ ಈಚೆಗೆ ಮೂರು ಮುಖ ಅಥವಾ ನಾಲ್ಕು ಮುಖಗಳ ಶಿವ ಮೂರ್ತಿಯನ್ನು ಸಹ ನಮ್ಮ ಕಲಾವಿದರು ಕೊರೆಯಹತ್ತಿದರು. ಎಲಿಫೆಂಟಾದ ತ್ರಿಮೂರ್ತಿಯ ಚಿತ್ರವನ್ನು ನಾವು ಮೂರು ಪಾವಾಣೆಯ ಅಂಚೆ ಚೀಟುಗಳಲ್ಲಿ ಮುದ್ರಿಸಿರುವುದನ್ನು ನೋಡಿದ್ದೇವೆ.

ಲಿಂಗ ರೂಪಿಯಾಗಿಯೇ ಪರಮೇಶ್ವರನನ್ನು ಆರಾಧಿಸುವುದು ನಮ್ಮ ಸಂಪ್ರದಾಯ—ಲಿಂಗವು ಭಗವಂತನ ನಿರ್ಗುಣ ಸ್ವರೂಪದ ಪ್ರತೀಕ. ಶಂಕರನು ದಿಗಂಬರನಲ್ಲವೆ?—ಅವನಿಗೆ ಆಕಾರವೆಂಬುದಿಲ್ಲ. ಭಾರತೀಯ ತತ್ವಜ್ಞಾನದ ಉದಾತ್ತವಾದ ವಿಚಾರಗಳನ್ನು ಪ್ರತಿನಿಧೀಕರಿಸುವ ದೇವತೆಯೆಂದರೆ ಶಿವನೊಬ್ಬನೇ ಎಂದು ಪ್ರಾಜ್ಞರ ಅಭಿಪ್ರಾಯ. ಅವನು ಸೃಷ್ಟಿಗೆ ಕಾರಣನಾದಂತೆಯೇ ಸಂಹಾರಕರ್ತನೂ ಹೌದು—ಕ್ಷೀರಸಾಗರ ಮಥನ ಕಾಲದಲ್ಲಿ ವಿಷಪಾನ ಮಾಡಿ, ನೀಲಕಂಠನೆನಿಸಿಕೊಂಡು, ದೊಡ್ಡ ಗಂಡಾಂತರವನ್ನು ದೂರೀಕರಿಸಿ ಭಕ್ತರನ್ನು ಪೊರೆದವನು ಶಿವ; ತಾಂಡವ ನೃತ್ಯದ ಉಗ್ರಲಾಸ್ಯದಿಂದ ಜಗತ್ತನ್ನು ಬೆಚ್ಚಿಸಿದವನೂ ಶಿವ. ಅವನು ಕಾಲರಿಗೆಲ್ಲ ಮಹಾಕಾಲ; ಮೃತ್ಯುವನ್ನು ಜಯಿಸಿದ ಮೃತ್ಯುಂಜಯ; ಆತ್ಮತೇಜಸ್ಸೇ ಸೌಂದರ್ಯವೆಂದು ಮಾರನನ್ನು ಹಣೆಗಣ್ಣಿನಿಂದ ಸುಟ್ಟು ಭಸ್ಮಮಾಡಿದ ಮಹಾದೇವ, ಹರ.

ದಕ್ಷಿಣ ಭಾರತದಲ್ಲಿ ನಟರಾಜನ ಮೋಹಕ ಮೂರ್ತಿಗಳು ಶಿವಾರಾಧನೆಯಲ್ಲಿ ನಮ್ಮ ಪೂರ್ವಿಕರು ತೋರಿಸುತ್ತಿದ್ದ ಆಸ್ಥೆಗೆ ಸಾಕ್ಷಿ ಹೇಳುತ್ತವೆ. ಚಿದಂಬರದ ನಟರಾಜನ ಪ್ರಸಿದ್ಧಿ ಲೋಕಕ್ಕೆಲ್ಲ ವಿಸ್ತರಿಸಿದೆ—ಉನ್ನತ ಗೋಪುರಗಳಿಂದ ಕಂಗೊಳಿಸುವ ಅಸಂಖ್ಯಾತ ಮಂದಿರಗಳು ದೇಶದ ಈ ಭಾಗದಲ್ಲಿದ್ದು, ಸಹಸ್ರಾರು ಯಾತ್ರಿಕರನ್ನು ಬರಮಾಡಿಕೊಳ್ಳುತ್ತವೆ. ಮೈಸೂರಿನ ಹಳೇಬೀಡಿನಲ್ಲಿ, ವಿಜಯ ನಗರದ ರಾಜಧಾನಿಯಾಗಿದ್ದ ಹಂಪೆಯಲ್ಲಿ, ಉತ್ತರ ಕನ್ನಡದ ಗೋಕರ್ಣದಲ್ಲಿ, ಒರಿಸ್ಸದ ಭುವನೇಶ್ವರದಲ್ಲಿ ಪ್ರಸಿದ್ಧವಾದ ಶಿವದೇವಾಲಯಗಳನ್ನು ಕಾಣಬಹುದು. ದಕ್ಷಿಣ ಭಾರತದ ಶಿಲ್ಪಕಲೆಯು ಉತ್ತರದಕ್ಕಿಂತ ಭಿನ್ನವಾಗಿದ್ದು, ಬಹಳ ಚಮತ್ಕೃತಿಯಿಂದ ಕೂಡಿದ ಶಿವಮೂರ್ತಿಗಳನ್ನು ನಮ್ಮ ಜನರ ಮುಂದೆ ಇಟ್ಟಿರುತ್ತದೆ.

ಗುಜರಾತಿನ ಸೋಮನಾಥ ದೇವಾಲಯದ ಕೀರ್ತಿಯನ್ನು ಇತಿಹಾಸದ ಓದುಗರು ಬಲ್ಲರು—ಉತ್ತರ ಭಾರತದಲ್ಲಿ ಇದಕ್ಕೂ ಹೆಚ್ಚು ಖ್ಯಾತನಾಮವಾದ ಶೈವ ಸಂಸ್ಕೃತಿಯ ಕೇಂದ್ರಗಳಿದ್ದು ಕಾಶಿ ಮತ್ತು ಪ್ರಯಾಗಗಳು ಅವುಗಳಲ್ಲಿ ಉಲ್ಲೇಖನೀಯ. ಶ್ರೀರಾಮನಿಂದಲೇ ಸ್ಥಾಪಿಸಲ್ಪಟ್ಟ ಕೋಟಿ ಲಿಂಗಗಳು ಪ್ರಯಾಗದಲ್ಲಿವೆಯೆಂದು ಹೇಳಲಾಗುತ್ತದೆ—ಇದು ನಿಜವಿದ್ದರೆ ದಕ್ಷಿಣದ ರಾಮೇಶ್ವರಕ್ಕಿಂತಲೂ ಪ್ರಯಾಗವೇ ಹೆಚ್ಚು ಆಕರ್ಷಣೆಯ ಪುಣ್ಯಕ್ಷೇತ್ರವಾಗುತ್ತದೆ. ಕಾಶಿಯಲ್ಲಿ ವಿಶ್ವನಾಥನಾಗಿ ಶಿವನು ಕಂಗೊಳಿಸುತ್ತಾನೆ ಹರಿಶ್ಚಂದ್ರನ ಸತ್ಯಕ್ಕೆ ಸಾಕ್ಷಿ ಭೂತನಾದ ಕೀರ್ತಿ ಇವನಿಗುಂಟು. ಜೋಧಪುರ, ಉದಯಪುರ ಮುಂತಾದ ರಾಜಸ್ಥಾನದ ಪಟ್ಟಣಗಳಲ್ಲಿಯೂ ವಿಂಧ್ಯ ಪ್ರದೇಶ ಮುಂತಾದ ಭಾರತದ ನಡುಭಾಗದಲ್ಲಿಯೂ ಪ್ರಾಚೀನ ಕಾಲದಿಂದ ಹೆಸರುವಾಸಿಯಾದ ಅನೇಕ ಶಿವಮಂದಿರಗಳಿದ್ದು, ಇಲ್ಲೆಲ್ಲ ದೊಡ್ಡ ಉತ್ಸವ ನಡೆಯುತ್ತದೆ.

ಕೈಲಾಸವಾಸಿಯಾದ ಶಿವನು ಗುಡ್ಡಗಾಡು ಪ್ರದೇಶದ ಜನರಿಗೆ ಆತ್ಮೀಯನೆಂದರೂ ಸಲ್ಲುತ್ತದೆ. ಉತ್ತರ ಪ್ರದೇಶದಕ್ಕೂ ಹೆಚ್ಚಾಗಿ ಹಿಮಾಚಲ ಪ್ರದೇಶ ಶಿವಾರಾಧಕರಿಂದ ತುಂಬಿತುಳುಕುತ್ತದೆ. ಹರಿದ್ವಾರದಿಂದ ಋಷಿಕೇಶ, ಕೇದಾರನಾಥದ ವರೆಗೆ ಜ್ಯೋತಿರ್ಲಿಂಗ ಕ್ಷೇತ್ರಗಳಿಗೆ ಸಮಾನವಾದ ನೂರಾರು ಮಂದಿರಗಳು ಸಿಗುತ್ತವೆ. ದಕ್ಷ ಪ್ರಜಾಪತಿಯು ಯಜ್ಞಮಾಡಿದ ಈ ಭೂಮಿಯಲ್ಲಿ ಶಿವನ ಮಹಿಮೆಯನ್ನು ಜನರು ಬಹಳ ಹೆಚ್ಚು ಮನವರಿಕೆಮಾಡಿಕೊಂಡಿರುವರೆಂದು ಇದು ತೋರಿಸಿಕೊಡುತ್ತದೆ. ವಿಲಕ್ಷಣ ವ್ಯಕ್ತಿತ್ವವನ್ನು ಪಡೆದ ಶಿವನೇ ಇಲ್ಲಿಯ ಜನರ ಆರಾಧ್ಯದೈವ.

ಲೋಕತಾರಕನಾದ ಪರಶಿವನ ಆರಾಧನೆ ನಮ್ಮ ಜನ್ಮ ಪಾವನ ಮಾಡುವ ಸಾಧನಗಳಲ್ಲಿ ಉತ್ಕೃಷ್ಟವಾದುವೆಂದು ಋಷಿಮುನಿಗಳ ಅಭಿಪ್ರಾಯ. ಮಾರ್ಕಾಂಡೇಯನನ್ನು ಮೃತ್ಯು ಮುಖದಿಂದ ರಕ್ಷಿಸಿದ ಮೃತ್ಯುಂಜಯ ಸ್ತೋತ್ರವು ಎಲ್ಲ ಮನುಷ್ಯರಿಗೂ ದಿವ್ಯ ಸಂದೇಶವಾಗಬಲ್ಲುದು. ಯೋಗ-ಭೋಗಗಳ ಸಮನ್ವಯ ಸಿದ್ಧಾಂತ ಶಿವನಲ್ಲಿ ವ್ಯಕ್ತಗೊಂಡಷ್ಟು ಬೇರಾವ ದೇವತೆಯಲ್ಲೂ ಕಾಣಿಸದು. ಶಿವನು ಅವತಾರ ಪುರುಷನಾಗಲಿಲ್ಲ—ಆದರೆ ಲೋಕ ಕಲ್ಯಾಣಕ್ಕೆ ಅವನು ಮಾಡಿದ ಕೆಲಸ ಕಡಿಮೆಯಲ್ಲವೇ ಅಲ್ಲ. ಶಿವಪುರಾಣ ಮುಂತಾದ ಸದ್ಗ್ರಂಥ ಪಠಣವು ಇದೇ ಭಾವನೆಯನ್ನು ನಮ್ಮಲ್ಲಿ ಉಂಟುಮಾಡುತ್ತದೆ.

ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ
ಭಾಷಾಂತರ.
ಬೆಲೆ. 0-8-0
ನವಯುಗ ಪ್ರೆಸ್, ಉಡುಪಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ನಮ್ಮ ಮೂರನೆ—ಮುಂಬಾಯಿ ಶಾಖೆಯು 61, ಪೈಗೋಣ ರೋಡ್, ಖಿದರ್, ಮುಂಬಾಯಿ-9, ಇಲ್ಲಿ ಈಗಾಗಲೇ ತೆರೆಯಲ್ಪಟ್ಟಿದೆ. ನಮ್ಮ ಎಲ್ಲಾ ಭಾಗೀದಾರರೂ, ಗ್ರಾಹಕರೂ, ಹಿತೈಷಿಗಳೂ ಇದನ್ನು ದಯವಿಟ್ಟು ಲಕ್ಷ್ಯದಲ್ಲಿಟ್ಟು, ಎಂದಿಗಿಂತಲೂ ಹೆಚ್ಚಾಗಿ, ತಮ್ಮ ಪ್ರೋತ್ಸಾಹವನ್ನು ನಮ್ಮ ಈ ಶಾಖೆಗೆ ನೀಡುವರಾಗಿ ನಂಬುತ್ತೇವೆ.
ಡಾ| ಯು. ಸುಂದರ ರಾಮ ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.
ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.
Estd:- 1906] [H. O. UDIPI (S.India).
THE CANARA BANKING CORPORATION LIMITED

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.


ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-
Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40
ಸ್ಟಾಕಿಸ್ಟರು: ಶೆಣೈ ಕಂಪೆನಿ, ಮಂಗಳೂರು

ಅರಬ ಗುಂಪಿನ ಒಡಕು - ಅದರ ಕಾರಣ

ಮಧ್ಯ ಪೂರ್ವದ ದ್ವೇಷ ಭಾರತಕ್ಕೂ ಬಿಸಿ ಹಚ್ಚಬಲ್ಲುದು

ಪ್ರಧಾನ ಮಂತ್ರಿ ನೆಹರೂರವರು ಲಂಡನಿನಿಂದ ಹೊಸದೆಹಲಿಗೆ ಮರಳುವ ಮಾರ್ಗದಲ್ಲಿ ಕಳೆದ ವಾರ ಈಜಿಪ್ಟಿನ ಮುಖ್ಯ ಪಟ್ಟಣವಾದ ಕೈರೋ ನಗರದಲ್ಲಿ ಇಳಿದು, ಅಲ್ಲಿಯ ಪ್ರಧಾನ ಮಂತ್ರಿ ಕರ್ನಲ್ ನಸೇರರೊಡನೆ ಸಮಾಲೋಚನೆಗಳನ್ನು ನಡೆಸಿದರು. ಮಾತುಕತೆಗಳ ಕೊನೆಯಲ್ಲಿ ಪ್ರಧಾನಿದ್ವಯರು ಹೊರಡಿಸಿದ ಪ್ರಕಟಣೆಯು ಸೈನಿಕ ಒಪ್ಪಂದಗಳು ಯಾವ ದೇಶದ ಭದ್ರತೆಯನ್ನೂ ಹೆಚ್ಚಿಸುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿತು. ಯುದ್ಧದಲ್ಲಿ ಪ್ರಯೋಗಿಸಬಹುದಾದ ಶಸ್ತ್ರಗಳ ಅದ್ಭುತ ಬೆಳವಣಿಗೆಯಿಂದಾಗಿ ಇಂದು ಯುದ್ಧವೆಂದರೆ ಮಾನವತೆಯ ನಾಶವೆಂದೇ ಅರ್ಥವಾಗುತ್ತದೆ; ಅದು ಯಾವ ಸಮಸ್ಯೆಯನ್ನೂ ಪರಿಹರಿಸದು ಎಂಬ ಉಭಯ ಪ್ರಧಾನಿಗಳ ಏಕಾಭಿಪ್ರಾಯವನ್ನು ಪ್ರಕಟಣೆ ಒತ್ತಿ ಹೇಳುತ್ತದೆ. ಪ್ರಧಾನಿದ್ವಯರು ಆರ್ಥಿಕ ಮತ್ತು ಸಾಮಾಜಿಕ ಮಹತ್ವದ ಮಾತುಕತೆಗಳನ್ನು ನಡೆಸಿದರೆಂದೂ ಅದು ತಿಳಿಸುತ್ತದೆ—ಆದರೆ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಮೇಲಿನ ವಿಚಾರಕ್ಕೆ ಇದ್ದಷ್ಟು ಮಹತ್ವ ಉಳಿದುವಕ್ಕೆ ಈಗಿನ ಬಿಕ್ಕಟ್ಟಿನ ಕಾಲದಲ್ಲಿ ಪ್ರಾಪ್ತವಾಗಲಾರದು.

ಭಾರತವಿತ್ತ ಸ್ಫೂರ್ತಿ

ಪ್ರಧಾನಿದ್ವಯರ ಮೇಲಿನ ಹೇಳಿಕೆಯು ಮಧ್ಯ ಪೂರ್ವದಲ್ಲಿ ಹಬ್ಬುತ್ತಿರುವ ದ್ವೇಷಮಯ ವಾತಾವರಣಕ್ಕೆ ಸಂಬಂಧಿಸಿದೆಯೆಂಬುದು ಸ್ಪಷ್ಟ: ಈಜಿಪ್ಟ್ ದೇಶವು ಆಂತರಿಕ ಸುಧಾರಣೆಗಳಿಗಾಗಿ ಪ್ರಯತ್ನಶೀಲವಾಗಿದ್ದು, ಸಾಕಷ್ಟು ಅಭಿವೃದ್ಧಿಯನ್ನು ಇಷ್ಟರಲ್ಲಿಯೇ ತೋರಿಸಿರುತ್ತದೆ. ಭಾರತವು ಸ್ವಾತಂತ್ರ್ಯೋತ್ತರದ ಅಲ್ಪಾವಧಿಯಲ್ಲಿ ಹೊಂದಿದ ಪ್ರಗತಿಯಿಂದ ಅದು ಬಹಳ ಪ್ರಭಾವಿತವಾಗಿದ್ದು ಇಲ್ಲಿ ಅನುಸರಿಸಲಾದ ಕ್ರಮಗಳನ್ನು ಮತ್ತು ತಂತ್ರಗಳನ್ನು ಪರಿಶೀಲಿಸಿ, ಎಷ್ಟರ ಮಟ್ಟಿಗೆ ಅದನ್ನು ಈಜಿಪ್ಟಿನ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಅಳವಡಿಸಲು ಸಾಧ್ಯ ಎಂಬುದು ವಿಚಾರ ಮಾಡುತ್ತಿದೆ. ಇದಕ್ಕಾಗಿಯೇ ಉಪ ಪ್ರಧಾನ ಮಂತ್ರಿ ಗಮಾಲ್ ಸಾಲೆಂ ಮರು ಎರಡು ವಾರಗಳ ಭಾರತ ಪ್ರವಾಸವನ್ನು ಕೈಗೊಳ್ಳಲಿದ್ದಾರೆ. ಸುಯೇಜ ಕಾಲುವೆಯ ತಂಟೆಯನ್ನು ಬಗೆಹರಿಸಿಕೊಂಡ ಮೇಲೆ ಈಜಿಪ್ಟಿಗೆ ಆಂತರಿಕ ಸಮಸ್ಯೆಗಳತ್ತ ಹೆಚ್ಚು ಲಕ್ಷ್ಯವನ್ನು ಕೊಡಲು ಸಾಧ್ಯವಾಗಿದೆ. ದೇಶದೊಳಗಿನ ಪ್ರಶ್ನೆಗಳ ಪರಿಹಾರಕ್ಕೆ ವಿನಿಯೋಗಿಸಬೇಕಾದ ಶಕ್ತಿಯನ್ನು ಅಂತಾರಾಷ್ಟ್ರೀಯ ಸಮಸ್ಯೆಗಳ ಉಲ್ಬಣದಿಂದ ಕುಂಠಿತಗೊಳಿಸಬಾರದೆಂದು ಅದು ಅಪೇಕ್ಷಿಸುತ್ತದೆ. ಆದುದರಿಂದಲೇ ದ್ವೇಷ ಹೆಚ್ಚಿಸುವ ಧೋರಣೆಯನ್ನು ನಸೇರರು ಮೊದಲಿಂದಲೂ ಖಂಡಿಸುತ್ತಿದ್ದಾರೆ—ತಮ್ಮ ನಿಲುಮೆಗೆ ನೆಹರೂರ ಬೆಂಬಲ ದೊರಕಿಸಿಕೊಂಡರೆ, ಅದಕ್ಕೆ ತೂಕಬರುವುದೆಂದು ಅವರು ಭಾವಿಸಿದರೆಂತಲೇ, ಸೈನಿಕ ಒಪ್ಪಂದಗಳನ್ನು ಖಂಡಿಸುವ ಹೇಳಿಕೆ ಪ್ರಕಟವಾಯಿತು.

ಅರಬ ಗುಂಪಿನ ಒಡಕು

ಈಜಿಪ್ಟನ್ನು ಕೊರೆಯುತ್ತಿರುವ ಸೈನಿಕ ಒಪ್ಪಂದಗಳಲ್ಲಿ ಅರಬಗುಂಪಿನ ರಾಷ್ಟ್ರಗಳಲ್ಲಿ ಒಂದೆನಿಸಿದ ಇರಾಕು ದೇಶವು ತುರ್ಕಿಯೊಡನೆ ಮಾಡಿಕೊಂಡ ಮೈತ್ರಿಯೇ ಉಲ್ಲೇಖನೀಯ. ಸುಮಾರು ಹತ್ತು ವರ್ಷಗಳ ಹಿಂದೆ, ಅಂದರೆ ೨೨ನೇ ಮಾರ್ಚ್ ೧೯೪೫ರಲ್ಲಿ ಜೋರ್ಡಾನ್, ಲೆಬನಾನ್, ಸಿರಿಯಾ, ಇರಾಕ್, ಸೌದಿಅರೇಬಿಯಾ, ಯೆಮೆನ್ ಮತ್ತು ಈಜಿಪ್ಟ್ ಎಂಬ ಸಪ್ತರಾಷ್ಟ್ರಗಳು ಅರಬಲೀಗನ್ನು ಕಟ್ಟಿಕೊಂಡು ಪರಸ್ಪರ ಸಹಕಾರ ಹೆಚ್ಚುವ ರೀತಿಯಲ್ಲಿ ಧೋರಣೆಗಳನ್ನು ಹೊಂದಿಸಿಕೊಳ್ಳಲು ತೀರ್ಮಾನಿಸಿದವು. ಪರಸ್ಪರ ಭಿನ್ನಾಭಿಪ್ರಾಯಗಳನ್ನು ಸೈನಿಕ ಶಕ್ತಿಯಿಂದ ಪರಿಹರಿಸಲಾಗದೆಂದು ಅವುಗಳಲ್ಲಿ ಒಡಂಬಡಿಕೆಯಾಯಿತಲ್ಲದೆ ಹೊರಗಿನ ಆಕ್ರಮಣದ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮವನ್ನು ನಿರ್ಣಯಿಸಲು ಒಂದು ಮಂಡಳವೂ ರಚಿಸಲ್ಪಟ್ಟಿತು. ಆರ್ಥಿಕ ಹಾಗು ಸಾಮಾಜಿಕ ಪ್ರಗತಿಯ ಉದ್ದೇಶದಿಂದ ಬೇರೆ ಆರು ಸಮಿತಿಗಳನ್ನೂ ರೂಪಿಸಲಾಯಿತು. ಹೀಗೆ ಸಾಕಷ್ಟು ಸೌಹಾರ್ದ ಭಾವನೆಯಿಂದ ಕೆಲಸ ಮಾಡತೊಡಗಿದ ಅರಬ ಲೀಗಿಗೆ ಪ್ರಾರಂಭದಲ್ಲಿಯೇ ಪಾಲಿಸ್ತಾನದ ಜಗಳದಲ್ಲಿ ಸಿಕ್ಕಿ ಬೀಳಬೇಕಾಯಿತು. ಪಾಶ್ಚಾತ್ಯರ ಕುತಂತ್ರದಿಂದ ಇಸ್ರಾಯೇಲ್ ಎಂಬ ಹೊಸ ರಾಜ್ಯವು ಸಂಯುಕ್ತ ರಾಷ್ಟ್ರ ಸಂಘದ ನೇತೃತ್ವದಲ್ಲಿ ಸ್ಥಾಪನೆಗೊಂಡುದರಿಂದ ಅರಬ ಗುಂಪಿನ ಪ್ರತಿಷ್ಠೆ ತಗ್ಗಿತು. ಅಮೇರಿಕವು ಇಲ್ಲಿ ವಹಿಸಿದ ಪಾತ್ರವು ದಿನೇ ದಿನೇ ವಿಸ್ತರಿಸಿಕೊಂಡು, ಈಗಿನ ವಿರಸಕ್ಕೆ ಕಾರಣವಾಗಿದೆಯೆಂದರೆ ತಪ್ಪಾಗದು.

ಬಂದೊದಗಿದ ಪೇಚು

ಮಧ್ಯ ಪೂರ್ವದಲ್ಲಿ ಬ್ರಿಟನು ಮೊದಲನೇ ಮತ್ತು ಎರಡನೇ ಮಹಾ ಯುದ್ಧ ಕಾಲದಲ್ಲಿ ವರ್ಚಸ್ಸನ್ನು ಕೆಡವಿತ್ತಾದರೂ ಈಚೆಗೆ ಸುಯೇಜ ಕಾಲುವೆಯಿಂದ ಸೈನಿಕರನ್ನು ಹಿಂದೆಗೆದು ಕೊಳ್ಳಲು ಅದು ಸಮ್ಮತಿಸಿದುದರಿಂದ ಈ ಪ್ರದೇಶದ ಮೇಲೆ ಸೈನಿಕ ನಿಯಂತ್ರಣವೇ ಪಾಶ್ಚಾತ್ಯ ರಾಷ್ಟ್ರಗಳಿಗೆ ತಪ್ಪಿಹೋಯಿತು. ಏಶಿಯದಲ್ಲಿರುವ ರಶಿಯದ ದೊಡ್ಡ ದೊಡ್ಡ ಔದ್ಯೋಗಿಕ ಕೇಂದ್ರಗಳು ಅರಬ ಗುಂಪಿನ ಒತ್ತಿಗಿರುವುದರಿಂದ, ಕಮ್ಯೂನಿಸ್ಟರ ಪ್ರಭಾವವು ಅರಬ ಗುಂಪಿನಲ್ಲಿ ಕ್ರಮೇಣ ಕಂಡು ಬರಬಹುದು ಎಂದು ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯವಿರುವುದರಿಂದ—ಬ್ರಿಟನಿನ ಸೋಲು ಅಮೇರಿಕಕ್ಕೆ ಮುಖಭಂಗವೇ ಆಯಿತು. ಕಮ್ಯುನಿಸ್ಟರನ್ನು ಬಗ್ಗುಬಡೆಯುವ ಅಮೇರಿಕದ ಉತ್ಸಾಹವು ಅರಬಗುಂಪಿನರಾಷ್ಟ್ರಗಳಲ್ಲಿ ಒಗ್ಗಟ್ಟು ಇಲ್ಲದಂತೆ ಮಾಡಿ, ಒಂದೊಂದೇ ದೇಶವನ್ನು ತನ್ನ ಬಲೆಯೊಳಗೆ ಎಳೆದುಕೊಳ್ಳುವದರಲ್ಲಿ ಪರಿವರ್ತನೆ ಹೊಂದಿತು—ಇದರ ಫಲವೇ ತುರ್ಕಿ ಮತ್ತು ಇರಾಕು ದೇಶಗಳ ಸೈನಿಕ ಒಪ್ಪಂದ. ಅಮೇರಿಕ ಹಿನ್ನೆಲೆಯಲ್ಲಿ ನಿಂತುಕೊಂಡು ಸೂತ್ರ ಚಾಲನ ಮಾಡುತ್ತಿರುವುದರಿಂದಲೇ ಇದರ ಕಾರ್ಯಾಚರಣೆ ಸಾಧ್ಯವಾಯಿತು. ಮೇಲಿನ ಒಪ್ಪಂದದಿಂದಾಗಿ ಇರಾಕು ದೇಶವು ತುರ್ಕಿಯು ಯಾವುದಾದರೊಂದು ಯುದ್ಧದಲ್ಲಿ ಮಗ್ನವಾದರೆ, ಅದಕ್ಕೆ ನೆರವಾಗಬೇಕಾಗುತ್ತದೆ. ತುರ್ಕಿಯು ಉತ್ತರ ಅಟ್ಲಾಂಟಿಕ ಒಪ್ಪಂದದ ರಾಷ್ಟ್ರಗಳಲ್ಲಿ ಒಂದಾಗಿರುವುದರಿಂದ, ಅದು ಎಲ್ಲಿ ಯುದ್ಧವಾದರೂ ಭಾಗಿಯಾಗಬೇಕಾದ ಸಂದರ್ಭವಿರುತ್ತದೆ. ಪರಿಣಾಮದಲ್ಲಿ ಇರಾಕು ಪಾಶ್ಚಾತ್ಯ ರಾಷ್ಟ್ರಗಳ ಎಲ್ಲ ಜಂಜಾಟದಲ್ಲಿಯೂ ಬೀಳಬೇಕಾಗುತ್ತದೆ.

ಆಕ್ಷೇಪದ ಹಿನ್ನೆಲೆ

ಒಪ್ಪಂದದ ಈ ಅಂಶಗಳು ಈಜಿಪ್ಟಿನ ಮನಸ್ಸಿಗೆ ಸ್ವಲ್ಪವೂ ಬಂದಿಲ್ಲ—ತುರ್ಕಿಯೊಡನೆ ಒಪ್ಪಂದಮಾಡಿಕೊಂಡುದರಿಂದ ಅದರಪ್ರತಿಷ್ಠೆ ಗಷ್ಟೇ ಪೆಟ್ಟುಬಿದ್ದುದಲ್ಲ,ಭದ್ರತೆಗೂ ಅಪಾಯ ತಟ್ಟಿದೆ. ಅರಬ ಗುಂಪಿನ ರಾಷ್ಟ್ರಗಳ ನೇತೃತ್ವವನ್ನು ವಹಿಸಿ ಮೆರೆಯಬೇಕೆಂದು ಈಜಿಪ್ಟಿನ ಧುರೀಣರು ಹಂಬಲಿಸಿದ್ದರು—ಆದರೆ ಇರಾಕು ದೇಶವು ಲೀಗಿನ ಬಂಧುಗಳೊಡನೆ ಸಮಾಲೋಚನೆ ನಡೆಸದೆ ಹೊರ ದೇಶಗಳೊಡನೆ ಯಾವ ಒಪ್ಪಂದಕ್ಕೂ ಬರಬಾರದು ಎಂಬ ನಿಯಮವನ್ನು ಧಿಕ್ಕರಿಸಿ, ನಡೆಯಿತು. ಈಜಿಪ್ಟಿನ ಪ್ರಬಲ ಪ್ರತಿಭಟನೆಯನ್ನು ಅದು ಲೆಕ್ಕಿಸಲೇ ಇಲ್ಲ—ನಮ್ಮ ದೇಶದ ರಕ್ಷಣೆಗೆ ನಾವು ಬೇಕಾದುದನ್ನು ಮಾಡಿಕೊಳ್ಳುತ್ತೇವೆ ಎಂಬ ಕಟು ಉತ್ತರಕ್ಕೆಯೇ ಈಜಿಪ್ಟು ಕಿವಿಗೊಡಬೇಕಾಯಿತಲ್ಲದೆ, ಇರಾಕಿನ ಮನವೊಲಿಸುವುದಾಗಲಿಲ್ಲ. ಹೀಗೆ ಮುಖ ಭಂಗವಾದುದರ ಜೊತೆಗೆ, ಪಾಶ್ಚಾತ್ಯ ರಾಷ್ಟ್ರಗಳು ಪುನಃ ಮಧ್ಯ ಪೂರ್ವದಲ್ಲಿ ಕಾಲೂರುವ ಚಮತ್ಕಾರವೂ ಈ ಒಪ್ಪಂದದಿಂದಾಗಿ ನಡೆಯಿತು—ಸುಯೇಜಿನಿಂದ ಬ್ರಿಟನರು ಕಾಲು ಕಿತ್ತರೇನೊ ನಿಜ, ಆದರೆ ಅಮೇರಿಕವು ಇರಾಕಿನಲ್ಲಿ ನೆಲೆಯೂರುವ ದಿನವನ್ನು ಅದು ತಂದುಕೊಟ್ಟಿತು. ಇರಾಕಿನ ಈಗಿನ ನಿಲುವು ಸುಯೇಜಕಾಲುವೆಯಿಂದ ಬ್ರಿಟಿಷರ ನಿರ್ಗಮನದ ಉದ್ದೇಶವನ್ನೆ ಕೆಡಿಸಿಬಿಟ್ಟಿತು. ಇದರಿಂದ ಮನನೊಂದ ಈಜಿಪ್ಟು ಅರಬ ಗುಂಪಿನಿಂದ ಸಿಡಿದು ನಿಂತಿದೆ—ಕಾರಣ, ಅರಬಗುಂಪು ಸಾಯುತ್ತಿದೆ ಎಂದು ರಾಜಕೀಯ ವಲಯದಲ್ಲಿ ಹೇಳಲಾಗುತ್ತದೆ.

ಎಚ್ಚರವಿರುವ ಅಗತ್ಯ

ತಮ್ಮ ಮಾತು ಕೇಳದ, ಪ್ರಭಾವವನ್ನು ಒಪ್ಪದ ಯಾವಕೈಯನ್ನೆ ಆಗಲಿ ತಂತ್ರದಿಂದ ಕಟ್ಟಿಹಾಕಬೇಕೆಂದು ಪಾಶ್ಚಾತ್ಯರ ದೃಢನಿಶ್ಚಯ—ಇದಕ್ಕಾಗಿಯೇ ಅಮೇರಿಕ ಪಾಕಿಸ್ತಾನದೊಡನೆ ಸೈನಿಕ ಒಪ್ಪಂದಮಾಡಿ ಕೊಂಡಿತು; ಮಾತ್ರವಲ್ಲದೆ ತುರ್ಕಿಗೂ ಪಾಕಿಸ್ತಾನಕ್ಕೂ ಸೈನಿಕ ಒಪ್ಪಂದವಾಗುವಂತೆ ಪ್ರೋತ್ಸಾಹ ವಿತ್ತಿತು. ಇವೆರಡು ರಾಷ್ಟ್ರಗಳ ನಡುವೆ ಆಯಕಟ್ಟಿನ ಪ್ರದೇಶದಲ್ಲಿರುವ ಇರಾಕಿನ ಮನವೊಲಿಸಿ, ಅದು ಅರಬರಾಷ್ಟ್ರಗಳ ಇಷ್ಟಕ್ಕೆ ವಿರೋಧವಾಗಿ ನಡೆಯುವಂತೆ ಮಾಡಿತು. ಇರಾಕಿಗೆ ಮತ್ತು ಪಾಕಿಸ್ತಾನಕ್ಕೆ ನಡುವಿರುವ ಇರಾಣದೊಡನೆ ಸೈನಿಕ ಒಪ್ಪಂದದ ಮಾತುಕತೆಗಳೂ ನಡೆಯುತ್ತಿವೆಯಾಗಿ ವರದಿಗಳಿಂದ ತಿಳಿದುಬರುತ್ತದೆ. ಹೀಗೆ ಕಮ್ಯುನಿಸ್ಟರನ್ನು ಪ್ರತಿಭಟಿಸುವ ನೆಪದಲ್ಲಿ ಯುರೋಪಿನ ಪೋರ್ಚುಗಾಲದಿಂದ ತೊಡಗಿದ ವ್ಯೂಹವು ಪಾಕಿಸ್ತಾನದ ವರೆಗೆ ಬಂದಿರುತ್ತದೆ. ತುರ್ಕಿಯ ಅಧ್ಯಕ್ಷ ಸೆಲಾಲ್ ಬಯಾರರು ಈ ವಾರ ಪಾಕಿಸ್ತಾನದ ರಾಜಧಾನಿಗೆ ಆಗಮಿಸಿದ್ದು, ಹತ್ತು ದಿನಗಳ ವರೆಗೆ ಉಳಿದುಕೊಂಡು ಉಭಯ ರಾಷ್ಟ್ರಗಳ ಸೈನಿಕ ಒಪ್ಪಂದದ ಕಾರ್ಯಾಚರಣೆಯನ್ನು ಬಿಗಿ ಮಾಡುವುದರಲ್ಲಿ ಮಗ್ನರಾಗಿದ್ದಾರೆ. ಅಷ್ಟೇ ಅಲ್ಲ, ಅರಬ ಗುಂಪಿನ ಲೆಬನಾನ್, ಜೋರ್ಡಾನ್ ಮತ್ತು ಯೆಮೆನ್‌ಗಳನ್ನೂ ತಮ್ಮ ವ್ಯೂಹಕ್ಕೆಳೆಯಲು ನೋಡುತ್ತಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳ ಸಂರಕ್ಷಣಾ ವ್ಯೂಹಗಳಿಗೆ ಪ್ರತ್ಯಕ್ಷ ಸಂಬಂಧಿಸಿರುವ ಪಾಕಿಸ್ತಾನವು ನಮ್ಮ ನೆರೆ ರಾಷ್ಟ್ರವಾದುದರಿಂದ, ಅದಕ್ಕೆ ತಗಲಿದ ಬಿಸಿ, ನಮಗೆ ಬೇಕಾಗಲೀ, ಬಿಡಲಿ ನಮಗೂ ಹತ್ತುವುದು ನಿಶ್ಚಯ. ಆದುದರಿಂದ ಮಧ್ಯಪೂರ್ವದ ಎಲ್ಲ ಸಂಗತಿಗಳನ್ನೂ ಕಣ್ಣಿಟ್ಟು ನೋಡಬೇಕಾಗುತ್ತದೆ. ನೆಹರೂರವರು ಇದನ್ನು ಮರೆತಿಲ್ಲ; ಮತ್ತು ಸೈನಿಕ ಒಪ್ಪಂದಗಳಿಂದುಂಟಾಗುವ ಅನಾಹುತದ ವರ್ಣನೆ ಮಾಡಿ ತಪ್ಪು ಹೆಜ್ಜೆ ಇಡುತ್ತಿರುವವರನ್ನು ಎಚ್ಚರಿಸಲೂ ತಪ್ಪಿಲ್ಲ ಎಂಬುದೇ ನಮಗಿರುವ ಸಮಾಧಾನ.

ಪ್ರಿಂಟಿಂಗ್- ಬೈಂಡಿಂಗ್- ಕಟ್ಟಿಂಗ್

ಮೊದಲಾದ ಪ್ರೆಸ್ಸಿಗೆ ಸಂಬಂಧಪಟ್ಟ ಯಾವತ್ತೂ ಕೆಲಸಗಳನ್ನು ನಾಜೂಕಾಗಿ ಸಕಾಲದಲ್ಲಿ ಸುಲಭ ದರದಲ್ಲಿ ಮಾಡಿ ಕೊಡಲಾಗುವುದು. ಮದುವೆ ವರ್ಧಂತಿ ಮೊದಲಾದ ಯಾವತ್ತೂ ತರದ ಆಮಂತ್ರಣ ಪತ್ರಿಕೆಗಳನ್ನು ಅತಿ ತ್ವರೆಯದಲ್ಲಿ ಅತಿ ಅಗ್ಗ ದರದಲ್ಲಿ ತಯಾರಿಸಿ ಕೊಡಲಾಗುವುದು.

ಎಕೌಂಟು ಪುಸ್ತಕಗಳು, ಕೋರ್ಟು ಫಾರ್ಮುಗಳು, ವರ್ಗ ಓಲಿಗಳು, ಸೊಸೈಟಿ ರಿಜಿಸ್ಟ್ರಿ ಫಾರ್ಮುಗಳು ಮೊದಲಾದುವು ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಅಣು ಸಮರದ ಭಯವಿರಬಾರದು

ಪಾಶ್ಚಾತ್ಯ ರಾಷ್ಟ್ರಗಳ ಮುಂದೆ ಮಂಡಿಸಲ್ಪಟ್ಟ ಅಭಿಪ್ರಾಯ

ದೇಶದೊಳಗಿನ ಸುದ್ದಿಗಿಂತಲೂ ಈ ವಾರ ವಿದೇಶದ ವಾರ್ತೆಗಳಿಗೆಯೇ ಹೆಚ್ಚು ಮಹತ್ವ ಸಲ್ಲುತ್ತದೆ. ಯುದ್ಧ ಅಥವಾ ಶಾಂತಿ ಎಂಬ ಪ್ರಶ್ನೆಯು ತುತ್ತ ತುದಿಯನ್ನು ಮುಟ್ಟಿದಂತೆ ವಿದ್ಯಮಾನಗಳು ಬೆಳೆದಿರುತ್ತವೆ. ಭಾರತದ ಪ್ರಧಾನ ಮಂತ್ರಿಗಳು ತಮ್ಮ ಪ್ರವಾಸದಿಂದ ಹೊಸ ದೆಹಲಿಗೆ ಮರಳುವ ದೀರ್ಘ ಕಾಲದಲ್ಲಿ ಅವರನ್ನು ಎಲ್ಲರೂ ಅಂತಾರಾಷ್ಟ್ರೀಯ ವಾತಾವರಣದ ಕುರಿತಾಗಿ ಪ್ರಶ್ನಿಸುತ್ತಿದ್ದರು -- "ಯುದ್ಧವಾಗಲಾರದು ಎಂದು ಆಶಿಸುತ್ತೇನೆ' ಎಂಬ ತಮ್ಮ ಮಾತುಗಳಿಂದ ಅವರು ಜನರನ್ನು ಸಮಾಧಾನಪಡಿಸಿದರು. ಭಯದಿಂದ ತತ್ತರಿಸುವ ಜಾಗತಿಕ ಕ್ಷೇತ್ರದಲ್ಲಿ ಇಂಥ ಆಶ್ವಾಸನೆಯನ್ನು ನೆಹರುಗಳೊಬ್ಬರೇ ಪದೇ ಪದೇ ಕೊಡಬೇಕಾಗಿ ಬಂತು.

ಜಗತ್ಪ್ರಳಯದ ಭಯ

ನೆಹರುಗಳ ದೃಷ್ಟಿಯಲ್ಲಿ ಯುದ್ಧವಾದರೆ ಆಗ ಅಣು ಶಸ್ತ್ರಾಸ್ತ್ರಗಳು ಅಗತ್ಯವಾಗಿ ಪ್ರಯೋಗಿಸಲ್ಪಡುತ್ತವೆ. ಅಣು ಶಸ್ತ್ರಗಳ ಪ್ರಯೋಗವಾದರೆ ಜಗತ್ತು ನಾಶಗೊಳ್ಳುತ್ತದೆ. ಸೈನಿಕ ಒಪ್ಪಂದದ ವ್ಯೂಹಕ್ಕೆ ಒಳಗಾಗದ ಕೆಲವು ದೇಶಗಳಾದರೂ ಕಷ್ಟಪಟ್ಟು ಸಂಯಮದಿಂದ ವರ್ತಿಸಿದರೆ ಜಗತ್ತಿನ ಅರ್ಧದಷ್ಟು ಭಾಗ ಉಳಿದೀತು--ಆದರೆ ಉಳಿದರ್ಧವಂತೂ ನಾಶವಾಗುವುದು ನಿಶ್ಚಯ. ನಮಗೆ ಇಂಥ ಯುದ್ಧ ಬೇಕಾಗಿದೆಯೇ? ಇಲ್ಲವೆಂದೇ ನೆಹರುಗಳ ನಿಶ್ಚಿತ ಅಭಿಪ್ರಾಯ. ಇದನ್ನು ಅನುಮೋದಿಸುವ ಜನರು ಹೆಚ್ಚಾಗಿಲ್ಲವೆಂಬುದೇ ಬಂದಿರುವ ಗಂಡಾಂತರ--ಭಾರತೀಯರೆಲ್ಲರೂ ನೆಹರುಗಳ ನಿಲುಮೆಯನ್ನು ಸಮರ್ಥಿಸುತ್ತಾರೆ; ನಿಜ. ಆದರೆ ಲೋಕದ ಇತರ ರಾಷ್ಟ್ರಗಳ ವರಿಷ್ಠರು ನೆಹರುಗಳ ಮಾತಿನ ಮಹತ್ವವನ್ನಿನ್ನೂ ಮನವರಿಕೆ ಮಾಡಿಕೊಂಡಂತಿಲ್ಲ

ನಾಶದ ಅಂದಾಜು

ಜಗತ್ತು ನಾಶವಾಗುವುದೆಂದು ಹೇಳುವ ನೆಹರುಗಳ ಮಾತು ಅತಿಶಯೋಕ್ತಿಯೆಂದು ಯಾರೂ ಭಾವಿಸಲಾಗದು. ಅಮೇರಿಕದ ಅಣು ಶಕ್ತಿ ಮಂಡಳದ ವರಿಷ್ಠರು ಕಳೆದ ವಾರ ಅಧ್ಯಕ್ಷ ಐಸೆನ ಹೋವರರ ಅಪ್ಪಣೆಯನ್ನು ಪಡೆದು ಶಾಂತ ಸಾಗರದಲ್ಲಿ ಕಳೆದ ವರ್ಷ ನಡೆಸಿದ ಪ್ರಾಯೋಗಿಕ ಸ್ವರೂಪದ ಅಣುಶಸ್ತ್ರಗಳ ಸ್ಫೋಟನದ ವಿವರ ಮತ್ತು ಪರಿಣಾಮವನ್ನು ಪ್ರಕಟಿಸಿದರು. ಅದರ ಪ್ರಕಾರ ಏಳು ಸಾವಿರ ಚದರ ಮೈಲು ವಿಸ್ತೀರ್ಣದಲ್ಲಿ ಎಲ್ಲ ಜೀವ ಜಂತುಗಳೂ ಅಣು ವಿಕಿರಣ ಕ್ರಿಯೆಗೆ ಗುರಿಯಾಗಿ ಆಶ್ರಯ ಸ್ಥಾನವನ್ನೇ ಕಳೆದುಕೊಳ್ಳುವಂತಾಯಿತು. ಅಣು ಶಸ್ತ್ರಗಳ ಸ್ಫೋಟವು ಮಾಡುವ ಅನಾಹುತದಿಂದ ರಕ್ಷಣೆಯನ್ನು ಮಾಡಿಕೊಳ್ಳುವ ಜ್ಞಾತ ಉಪಾಯವೂ ತೋರಲಿಲ್ಲ. ಹೀಗಿರುವಾಗ, ಅಣುಶಸ್ತ್ರಗಳನ್ನು ಶಾಂತಿ ರಕ್ಷಣೆಗಾಗಿ ಉಪಯೋಗಿಸುತ್ತೇವೆ ಎಂದು ಹೇಳುವವರ "ಶಾಂತಿ" ಯಾವ ಅರ್ಥವನ್ನು ನಮ್ಮಲ್ಲಿ ಹುಟ್ಟಿಸಬಲ್ಲುದು? ಅದು ವಿಡಂಬನೆಯ ಪರಾಕಾಷ್ಠೆಯಲ್ಲದೆ ಬೇರೇನೂ ಇರಲಾರದು.

ರಾಜಾಜಿಯ ಮತ

ಭಾರತದ ಕೊನೆಯ ಗವರ್ನರ ಜನರಲರೂ ಮದ್ರಾಸಿನ ಹಿಂದಿನ ಮುಖ್ಯ ಮಂತ್ರಿಗಳೂ ಆಗಿರುವ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಅಣು ಶಸ್ತ್ರಗಳು ಶಾಂತಿ ರಕ್ಷಣೆಗಾಗಿಯೇ ಇವೆಯೆಂಬ ವಾದವು ಪೊಳ್ಳೆಂದು ಮರಳಿ ಸಾರಿದ್ದಾರೆ--ಅವರು ಅಮೇರಿಕದ ಅಣು ಮಂಡಳದ ವರಿಷ್ಠರು ಪ್ರಕಟಿಸಿದ ವಿವರಗಳನ್ನೇ ಆಧಾರಕ್ಕಿಟ್ಟುಕೊಂಡು, ಶಾಂತಿ ರಕ್ಷಣೆಗೆ ಅಣು ಶಸ್ತ್ರಗಳ ಉತ್ಪಾದನೆ, ಪ್ರಯೋಗ ಮುಂತಾದವುಗಳು ಎಳ್ಳಷ್ಟೂ ಪ್ರಯೋಜನಕಾರಿಯಲ್ಲವೆಂಬ ಅಭಿಪ್ರಾಯವನ್ನು ಖಂಡತುಂಡ ಮಾತುಗಳಲ್ಲಿ ಪ್ರಕಟಿಸಿದರು. ಹಿಂದೊಮ್ಮೆ ನ್ಯೂಯಾರ್ಕ್ ನಗರದ ಪತ್ರಿಕೆಗೆ ಪತ್ರ ಬರೆದು ಎಲ್ಲ ಅಣುಶಸ್ತ್ರಗಳನ್ನೂ ಸಮುದ್ರಕ್ಕೆ ಬಿಸಾಡಿ ಬಿಡಿರೆಂದ ಮಾತನ್ನೇ ಈಸಲ ಲಂಡನ್ನಿನ "ನ್ಯೂ ಸ್ಟೇಟ್ಸಮನ್ ಎಂಡ್ ನೇಶನ್" ಎಂಬ ಪತ್ರಿಕೆಯಲ್ಲೂ ಬರೆದು ತಿಳಿಸಿದರು. ಅಮೇರಿಕವು "ಶತ್ರು"ವಿನ ಉದ್ದೇಶವನ್ನು ಗಣನೆಗೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ಅಣು ಶಸ್ತ್ರಗಳನ್ನು ದೂರಕ್ಕೆಸೆಯದಿದ್ದರೆ, ಭಯದ ವಾತಾವರಣ ದೂರವಾಗಲಾರದು ಎಂದವರು ಎಚ್ಚರಿಸಿದರು.

ರಶಿಯದ ಸೂಚನೆ

ಇದೇ ಶುಕ್ರವಾರ ದಿನ ಲಂಡನ್ ನಗರದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಶಸ್ತ್ರ ಸನ್ಯಾಸ ಸಮಿತಿಯು ಸೇರಲಿದ್ದು, ಅದರ ಮುಂದೆ ರಶಿಯವು ಮಹತ್ವದ ಸೂಚನೆಯನ್ನು ಮಂಡಿಸಿರುತ್ತದೆ. ಅಣುಶಕ್ತಿಯ ಎಲ್ಲ ಶಸ್ತ್ರಾಸ್ತ್ರಗಳನ್ನೂ ನಾಶ ಮಾಡಿ ಕೇವಲ ಶಾಂತಿ ಕಾಲದ ಉಪಯೋಗಕ್ಕಾಗಿ ಅಣುಶಕ್ತಿಯನ್ನು ಬಳಸುವ ವಿಚಾರ ಮಾಡಬೇಕು ಮತ್ತು ೧೯೫೫ನೇ ಜನವರಿ ೧ನೇ ತಾರೀಕಿನ ಮಟ್ಟಕ್ಕಿಂತ ಸೈನ್ಯದ ವೆಚ್ಚವನ್ನು ಹೆಚ್ಚಿಸಬಾರದು ಎಂದು ರಶಿಯದ ಸೂಚನೆಯ ಸಾರ. ಜನತೆಯನ್ನು ಅಣುಯುದ್ಧದ ಭಯದಿಂದ ಮುಕ್ತಗೊಳಿಸುವುದೇ ಸಂಯುಕ್ತ ರಾಷ್ಟ್ರಸಂಘದ ಮುಂದಿರುವ ಅತಿ ದೊಡ್ಡ ಕೆಲಸ ಎಂದು ಹೇಳುತ್ತಾ ರಶಿಯವು ಅಣು ಶಸ್ತ್ರಾಸ್ತ್ರಗಳ ಪ್ರತಿಬಂಧದ ಕುರಿತು ಅಂತಾರಾಷ್ಟ್ರೀಯ ಒಪ್ಪಂದವಾಗಬೇಕು ಎಂದು ಕರೆ ಕೊಟ್ಟಿತು.

ಪುನಃ ಪ್ರಯೋಗ

ರಶಿಯದ ಯಾವ ಮಾತಿನಲ್ಲೂ ಹುರುಳಿಲ್ಲ; ಅದು ಸ್ವಾರ್ಥ ಹಾಗು ದುರುದ್ದೇಶ ಪೂರಿತವಾದ ಹೇಳಿಕೆಗಳನ್ನೇ ಕೊಡುತ್ತದೆ--ಎಂದು ನಂಬಿರುವ ಪಾಶ್ಚಾತ್ಯ ರಾಷ್ಟ್ರಗಳು ರಶಿಯದ ಸೂಚನೆಗೆ ಮುಂಬರುವ ಸಭೆಯಲ್ಲಿ ಯಾವ ಮಹತ್ವವನ್ನೂ ಕೊಡಲಿಕ್ಕಿಲ್ಲವೆಂಬ ಲಕ್ಷಣಗಳು ಗೋಚರಿಸುತ್ತವೆ. ಅಮೇರಿಕವು ಐದಾರು ಸಲ ಪ್ರತಿಕೂಲ ಹವಾಮಾನದ ದೆಸೆಯಿಂದ ಮುಂದೆ ಹಾಕಿದ ಅಣುಶಸ್ತ್ರ ಸ್ಫೋಟನ ಪ್ರಯೋಗವನ್ನು ಮೊನ್ನೆ ನೆವಾಡದಲ್ಲಿ ಮಾಡಿಯೇ ಮಾಡಿತು. ಇತ್ತ ಬ್ರಿಟನು ಸಹ ಎರಡು ವರ್ಷಗಳ ಪೂರ್ವದಲ್ಲಿ ಮೊಂಟೆ ಬೆಲ್ಲೊದಲ್ಲಿ ನಡೆಸಿದ ಅಣು ಬಾಂಬಿನ ಪ್ರಯೋಗದಿಂದ ಸ್ಫೂರ್ತಿಗೊಂಡು, ಇದೀಗ ಹೆಚ್ಚು ಗಂಡಾಂತರಕಾರಿಯಾದ ಜಲಜನಕ ಬಾಂಬುಗಳ ಸ್ಫೋಟನ ಪ್ರಯೋಗ ನಡೆಸಬೇಕೆಂಬ ನಿಶ್ಚಯಕ್ಕೆ ಬಂದಿರುತ್ತದೆ. ಶತ್ರುವಿನ ಸ್ವಯ ಶಕ್ತಿ ಬಲವಾಗುತ್ತಾ ಹೋಗುವಾಗ ನಾವು ಸುಮ್ಮನೆ ಕುಳಿತಿರುವುದು ನ್ಯಾಯವಲ್ಲ ಎನ್ನುವುದೇ ಪಶ್ಚಿಮದ ಈ ರಾಷ್ಟ್ರಗಳ ಆತುರದ ಹಿನ್ನೆಲೆಯಲ್ಲಿರುವ ತತ್ವ.

ರಾಷ್ಟ್ರಗಳ ಪರಿಷತ್ತು

ಶತ್ರು ಭಾವನೆ ಅಷ್ಟರ ಮಟ್ಟಿಗೂ ಹೆಚ್ಚಿರುವುದೇ ಲೋಕಶಾಂತಿಗೆ ಬಂದಿರುವ ಅಪಾಯ--ಮನಸ್ಸು ಸ್ವಲ್ಪವೂ ತಿಳಿಯಾಗಿಲ್ಲ ಎಂಬ ಕಾರಣಕ್ಕಾಗಿಯೇ ಫೊರ್ಮೋಸದ ವಿಷಯದಲ್ಲಿ ಯಾವ ಪ್ರಗತಿಯನ್ನೂ ಸಾಧಿಸುವುದಾಗಲಿಲ್ಲ. ರಶಿಯವು ಹತ್ತು ರಾಷ್ಟ್ರಗಳ ಪರಿಷತ್ತು ಜರಗಲಿ ಎಂದು ಹೇಳಿತು. ಅಮೇರಿಕವು ರಾಷ್ಟ್ರಸಂಘದ ಹೊರಗೆ ಪ್ರಶ್ನೆಯನ್ನು ತೀರ್ಮಾನಿಸುವ ತತ್ವವೇ ತನಗೆ ಇಷ್ಟವಿಲ್ಲ ಎಂದಿತು. ರಾಷ್ಟ್ರೀಯ ಚೀನದ ಪ್ರತಿನಿಧಿಗೆ ಇದರಲ್ಲಿ ಭಾಗ ವಹಿಸಗೊಡಬಾರದು ಎಂದು ರಶಿಯ ಮತ್ತು ಚೀನಗಳ ಆಗ್ರಹ--ಅದು ಸರಿಯಲ್ಲ, ಸಂಬಂಧಿಸಿದ ಎಲ್ಲರೂ ಪರಿಷತ್ತಿನಲ್ಲಿರಬೇಕು ಎಂದು ಬ್ರಿಟನಿನ ವಾದ. ಬ್ರಿಟನು ತಳೆದ ಈ ನಿಲುಮೆ ನೆಹರುಗಳಿಗೆ ಸಮ್ಮತವಿದೆ--ಎಲ್ಲ ರಾಷ್ಟ್ರಗಳೊಳಗೆ ತಿಳಿವಳಿಕೆಯುಂಟಾದರೆ ಈ ಭಿನ್ನಾಭಿಪ್ರಾಯ ಪರಿಹಾರ ಹೊಂದಬಹುದೆಂದು ನೆಹರುಗಳು ಹೇಳುತ್ತಿದ್ದು ಆದಿಸೆಯಲ್ಲಿ ಅವರ ಪ್ರಯತ್ನ ನಡೆಯುತ್ತಿದೆ.

ಅಮೇರಿಕದ ನಿಲುಮೆ

ಫೊರ್ಮೋಸದ ಪ್ರಶ್ನೆ ಇನ್ನೊಂದು ರೀತಿಯಲ್ಲೂ ಸಂಶಯದ ಸುತ್ತಿನಲ್ಲಿ ತಿರುಗುತ್ತಿದೆ- ಚೀನದ ಮುಖ್ಯನೆಲಕ್ಕೆ ತೀರಸಮೀಪವಾದ ಮತ್ಸು ಮತ್ತು ಕ್ವೆಮೋಯ್ ದ್ವೀಪಗಳ ವಿಷಯದಲ್ಲಿ ಅಮೇರಿಕದ ಜವಾಬ್ದಾರಿ ಎಷ್ಟು ಎಂಬುದೇ ಆ ಸಂಶಯ. ಅಮೇರಿಕವು ಆ ದ್ವೀಪಗಳು ತನ್ನ ರಕ್ಷಣೆಗೆ ಒಳಪಡುತ್ತವೆಯೇ ಇಲ್ಲವೇ ಎನೆಂಬುದನ್ನು ನಿಃಸಂದಿಗ್ಧ ವಾಕ್ಯಗಳಲ್ಲಿ ಇನ್ನೂ ಹೇಳಿಲ್ಲ-- ರಾಷ್ಟ್ರೀಯ ಚೀನವು ಅವನ್ನು ಬಿಟ್ಟುಕೊಡಬಾರದು; ಏಕೆಂದರೆ ಸೈನಿಕ ಮಹತ್ವದ ದ್ವೀಪಗಳವು ಎಂದು ಅಮೇರಿಕ ಹೇಳುತ್ತಿದ್ದು, ಅದಕ್ಕಿಂತ ಹೆಚ್ಚೇನೂ ತಿಳಿಸಿಲ್ಲ. ಕಮ್ಯುನಿಸ್ಟರನ್ನು ಸಂಶಯದಲ್ಲಿಯೇ ಕೆಡವಿ, ಸಮಯ ತೆಗೆಯುವುದು ಅಮೇರಿಕದ ಆಶಯವೆಂದು ಕಾಣುತ್ತದೆ. ಇದು

(೬ನೇ ಪುಟ ನೋಡಿರಿ)

The Canara Mutual Assurance Co., Ltd.

HEAD OFFICE: UDIPI, S INDIA.

NOTICE IS HEREBY GIVEN that the Twentieth Ordinary General Meeting of the Company will be held at the Company's Registered Office at "Canara Mutual Building", Udipi, on Saturday, *the 30th April, 1955 at 3-30 P. M. to transact the following business—*

1 To receive and adopt the annual Report Audited Statement of Accounts and Balance Sheet for the year ending 31st December, 1954

2 To elect a Director in place of Srimathi T Sharada Bai, who retires by rotation and is eligible for re election under Article 37

3 To elect a Director in place of Sri B. V Baliga, who retires by rotation and is eligible for *re-election under Article 37*

4 To elect a Director in place of Sri P P Rao, who retires by rotation and is eligible for re-election under Article 37

5 To appoint an Auditor or Auditors for the year 1955 and to fix the remuneration payable to him or them. The last year's Auditors, Sri A Umanath Rao B. A., B. A. Dip Econ. F. C. A. Mangalore—3 and Sri U Varadaraja Nayak B. A., A. C. A., Car Street, Mangalore, retire and are eligible for re-appointment.

6. To transact any other business which may be brought before the meeting with the permission of the Chairman

N. B — If a member is unable to attend the meeting he may appoint any other member as his proxy and the instrument appointing him must be duly stamped, signed and attested and should be in the prescribed form (vide Article No 32) and should reach the Head Office not less than 72 hours before the time appointed for holding the meeting.

(By order of the Board)

Dated at UDIPI, 27th January, 1955

T. R. A. Pai, MANAGING DIRECTOR.

The Canara Mutual Assurance Co., Ltd.

Head Office UDIPI, (S India)

Summary of Balance Sheet and Revenue Account of the Company in respect of total business

REVENUE ACCOUNT FOR THE YEAR ENDING 31—12—1954

PARTICULARS	Rs	As	Ps	PARTICULARS	Rs	As	Ps
Claims and Surrenders less reinsurances	5,37,171	3	0	Balance of Fund at the beginning of the year	91,80,044	2	4
Expenses of Management including Commission	5,34,820	14	7	Premiums less reinsurances	20,15,646	0	0
Bad Debts	Nil			Interest, dividend and rents less Income-tax	3,56,982	9	4
Other Items	58,917	10	3	Other Income	2,496	15	0
Balance of Fund at the end of the year	1,06,49,229	12	11	Transferred from Investment Reserve Fund	25,000	0	0
Total	1,17,80,169	8	9	Total	1,17,80,169	8	9

BALANCE SHEET AS AT 31-12-1954.

LIABILITIES.	Rs.	As.	Ps	ASSETS.	Rs	As	Ps
Life Insurance Fund	1,06,47,229	12	11	Government Securities	41,35,452	11	0
Investment Reserve Fund	3,54,400	0	0	Other Approved Securities	25,44,814	7	3
Loans & Advances	Nil			Fictitious Items and bad assets	Nil		
Outstanding Claims	2,03,641	4	4	Approved Investments & other assets	43,42,178	3	4
Other Liabilities	2,15,174	4	4				
Total	1,14,22,445	5	7	Total	1,14,22,445	5	7

UDIPI, 26—1—1955

T. R. A. PAI, *Managing Director.*

NAVAYUGA

Popular Kannada Weekly

Founder:—

Sri A. B. SHETTY, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೨೪-೨-'೫೫	೨೫

ಕಾಂಗ್ರೆಸಿನ ಶುದ್ಧೀಕರಣ

ಇದೇ ಮಾರ್ಚಿ ತಿಂಗಳ ಮಧ್ಯದಲ್ಲಿ ಇಂದೂರಿನಲ್ಲಿ ಎಲ್ಲ ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳ ಪರಿಷತ್ತು ಸೇರುವುದೆಂದೂ ಅಲ್ಲಿ ಮಾರ್ಚಿಯ ಮೊದಲನೇ ವಾರ ಸೇರುವ ಕಾಂಗ್ರೆಸು ಕಾರ್ಯಸಮಿತಿಯು ಕಾಂಗ್ರೆಸಿನ ಶುದ್ಧೀಕರಣದ ಕುರಿತು ಮಾಡಿದ ನಿರ್ಣಯವನ್ನು ಜ್ಯಾರಿಗೆ ತರುವ ವಿಧಾನವನ್ನು ಚರ್ಚಿಸಲಾಗುವುದೆಂದೂ ತಿಳಿದು ಬರುತ್ತದೆ. ಕಾಂಗ್ರೆಸಿನಲ್ಲಿ ಕೊಳಚೆಯು ತುಂಬಿದೆಯೆಂಬ ಸಂಗತಿಯನ್ನು ಈಗ ಯಾರೂ ಮುಚ್ಚಿಟ್ಟುಕೊಂಡಿಲ್ಲ; ಹಾಗೆ ಮುಚ್ಚಿಟ್ಟುಕೊಳ್ಳಬೇಕೆಂಬ ಆಶಯವನ್ನು ಅವಡಿಯ ಕಾಂಗ್ರೆಸು ಅಧಿವೇಶನದಲ್ಲಿ ಒಬ್ಬಿಬ್ಬರು ವ್ಯಕ್ತಪಡಿಸಿದಾಗ, ನೆಹರುಗಳು ಅದನ್ನು ತಿರಸ್ಕಾರ ಮಾತಿನಲ್ಲಿ ಖಂಡಿಸಿದರು. ಅಷ್ಟೇ ಅಲ್ಲ- ಚಾರಿತ್ರ್ಯ ಸಂಪನ್ನರಿಂದ ಕೂಡದೆ ಹೋದರೆ ಕಾಂಗ್ರೆಸು ನಾಶದ ದಾರಿ ಹಿಡಿಯುವುದೇ ನಿಶ್ಚಯವೆಂದೂ ಎಚ್ಚರಿಸಿದರು. ಲಕ್ನೋದಲ್ಲಿ ಮೊನ್ನೆ ಕಾಂಗ್ರೆಸಿನ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡಿದ ಹೊಸ ಅಧ್ಯಕ್ಷ ಶ್ರೀ ಢೇಬರರು ಕಾಂಗ್ರೆಸಿನಲ್ಲಿ ಶುದ್ಧೀಕರಣವನ್ನು ಮಾಡುವ ಅಗತ್ಯ ಹೇಳಿ ತೀರದಷ್ಟಿದೆಯೆಂದು ಅಭಿಪ್ರಾಯಪಟ್ಟರು. ಪ್ರಾಥಮಿಕ ಸದಸ್ಯರಿಂದ ಹಿಡಿದು ವರಿಷ್ಠ ಸ್ಥಾನಾಪನ್ನರ ವರೆಗೂ ಎಲ್ಲರೂ ಶುದ್ಧೀಕರಣ ಕ್ರಿಯೆಗೆ ಒಳಗಾಗಬೇಕಾದಪ್ರಮೇಯವೇ ನಮಗೆ ಕಾಣಿಸುತ್ತದೆ - ಶುದ್ಧಚರಿತ್ರರು ಬಹಳ ವಿರಳವಾಗಿಯೇ ಸಿಗುತ್ತಿದ್ದು, ಉಳಿದವರೆಲ್ಲರೂ ಸ್ವಾರ್ಥಪರತೆ ಸಂದರ್ಭಸಾಧಕ ಮನೋಭಾವ ಮತ್ತು ಅಧಿಕಾರ ದಾಹಕ್ಕೆ ಗುರಿಯಾದವರೆಂದೇ ತೋರುತ್ತದೆ. ಕಾಂಗ್ರೆಸಿನ ಧ್ಯೇಯೋದ್ದೇಶಗಳನ್ನು ಜನತೆಗೆ ತಿಳಿಸಿ ಹೇಳುವ ಮತ್ತು ಜನತೆಯ ಆಶೋತ್ತರಗಳನ್ನು ಮನವರಿಕೆ ಮಾಡಿಕೊಂಡು ಅವುಗಳನ್ನು ಪೂರೈಸುವ ಪ್ರಯತ್ನದ ಹೊಣೆಗಾರಿಕೆಯನ್ನು ಕೆಲವೇ ಧುರೀಣರ ಮೇಲೆ ಹೊರಿಸದೆ, ಪ್ರಾಥಮಿಕ ಘಟಕಗಳು ಸಹ ಈ ಮಹಾ ಕಾರ್ಯದಲ್ಲಿ ಭಾಗಿಯಾಗಬೇಕು ಎಂದು ಢೇಬರರ ಅಭಿಪ್ರಾಯ. ಇದು ಸಾಧ್ಯವಾಗಬೇಕಾದರೆ ಕಾಂಗ್ರೆಸು ಸಂಸ್ಥೆಯಲ್ಲಿ ಪ್ರಾಮಾಣಿಕರು ಹೆಚ್ಚು ಹೆಚ್ಚಾಗಿ ಕಂಡುಬರಬೇಕು; ಆಡಳಿತ ಮತ್ತು ಸಂಘಟನೆಯ ಕ್ಷೇತ್ರಗಳಲ್ಲಿ ಯೋಗ್ಯ ಸಹಕಾರವು ಸಿಗುತ್ತಿರಬೇಕು. ಇದಕ್ಕಾಗಿ ಕಾಂಗ್ರೆಸಿನ ಮುಖ್ಯರು ಏನು ಕಾರ್ಯಕ್ರಮ ಕೈಗೊಳ್ಳುವರೆಂದು ಜನತೆ ಕುತೂಹಲದಿಂದ ನಿರೀಕ್ಷಿಸುತ್ತಿದೆಯೆಂದು ಹೇಳಿದರೆ ತಪ್ಪಾಗದು. ಜನತೆಗೆ ಕಾಂಗ್ರೆಸಿನ ಮೇಲೆ ಅಭಿಮಾನ ಕಡಿಮೆಯಾಗುತ್ತಿರುವುದಕ್ಕೆ ಸಂಸ್ಥೆಯ ಧ್ಯೇಯೋದ್ದೇಶಗಳಲ್ಲಿ ವಿಶ್ವಾಸವಿಲ್ಲದಿರುವುದು ಕಾರಣವಲ್ಲ— ಆ ಧ್ಯೇಯಗಳನ್ನು ಉಚ್ಚರಿಸುವ ಮಹಾನುಭಾವರು ನೀತಿಗೇಡಿಗಳಾಗಿ ನಡೆಯುತ್ತಿರುವುದೇ ಜನತೆಯ ಮನಸ್ಸನ್ನು ನೋಯಿಸಿ, ಕಾಂಗ್ರೆಸಿನ ಆಕರ್ಷಣೆಯನ್ನು ತಗ್ಗಿಸಿರುತ್ತದೆ. ಮೌನವಾಗಿ ಸಮಾಜ ಸೇವೆ ಮಾಡುವ ಕೆಲವರು ಈಗಲೂ ಇದ್ದಾರೆ—ಅವರನ್ನು ಜನರು ಆದರಿಸುತ್ತಾರೆ; ಆದರೆ, ಸರಕಾರದ ಮಟ್ಟದಲ್ಲಿ ಮೆರೆಯುವ ಕಾಂಗ್ರೆಸಿಗರಿಂದ ಅವರಿಗೆ ಸಾಕಷ್ಟು ಮುಕ್ತ ಮನಸ್ಸಿನ ಪ್ರೋತ್ಸಾಹ ಸಿಗುತ್ತಿಲ್ಲ. ಸ್ವಲ್ಪ ವರ್ಚಸ್ಸಿದ್ದವರೆಲ್ಲರೂ ಸರಕಾರದಲ್ಲಿ ಸ್ಥಾನ ಪಡೆಯಲು ಆತುರ ತೋರಿಸುತ್ತಾರೆ—ಮಂತ್ರಿ ಮಂಡಳವನ್ನು ಕಾಂಗ್ರೆಸು ಪಕ್ಷವೇ ರಚಿಸಿದ್ದರೂ ಅದರಲ್ಲಿ ಬಿರುಕುಗಳು ಕಾಣಿಸುತ್ತವೆ ಮಂತ್ರಿಯಾದರೆ ಸಾಲದು, ಮುಖ್ಯ ಮಂತ್ರಿಯಾಗಬೇಕು, ಮುಖ್ಯ ಮಂತ್ರಿಯಾದರೆ ಸಾಲದು, ಕೇಂದ್ರದ ಮಂತ್ರಿಯಾಗಬೇಕು ಎಂದು ಮುಂತಾಗಿ ಅವರು ಮಹತ್ವಾಕಾಂಕ್ಷೆಯನ್ನು ಪ್ರದರ್ಶಿಸುತ್ತಾರೆ. ಜನತೆ ಯೋಗ್ಯ ಜನರು ಸರಕಾರದಲ್ಲಿರುವುದನ್ನು ಅಪೇಕ್ಷಿಸುತ್ತದೆ, ನಿಜ; ಆದರೆ ಇದಕ್ಕಾಗಿ ಕಾಂಗ್ರೆಸು ಒಳಜಗಳಗಳಲ್ಲಿ ಮಗ್ನವಾಗಿ, ಸರಕಾರದ ಬಿಗಿಯನ್ನು ಕಡಿಮೆ ಮಾಡಿಕೊಳ್ಳಬೇಕೆಂದೂ ದೈನಂದಿನ ಆಡಳಿತದಲ್ಲಿ ಸಹ ಶೈಥಿಲ್ಯವನ್ನುಂಟುಮಾಡಬೇಕೆಂದೂ ಇಚ್ಛಿಸುವುದಿಲ್ಲ. ವರ್ಷಕ್ಕೊಂದು ಚುನಾವಣೆಯೂ ನಿತ್ಯ ಒಳಜಗಳವೂ ನಡೆಯುತ್ತಿದ್ದರೆ ಜನರಿಗೆ ಯಾವ ಒಳ್ಳೆಯದೂ ಆಗುವುದಿಲ್ಲ; ಪಕ್ಷದ ಪ್ರತಿಷ್ಠೆಯೂ ಹೆಚ್ಚುವುದಿಲ್ಲ. ಹಿಂದೆ ಮಾಡಿದ ಕೆಲಸವನ್ನು ಮುಂದರಿಸಿಕೊಂಡು ಹೋಗುವ ಜನರೇ ಇಲ್ಲದಿದ್ದರೆ, ಮತ್ತೇನಾದೀತು? ತಿರು-ಕೊಚ್ಚಿ, ದಿಲ್ಲಿ, ಪೆಪ್ಸು, ರಾಜಸ್ಥಾನ, ಮಧ್ಯಭಾರತ, ಆಂಧ್ರ ಮುಂತಾದ ರಾಜ್ಯಗಳ ವಿಷಪೂರಿತ ವಾತಾವರಣ ಕಾಂಗ್ರೆಸಿನ ಆರೋಗ್ಯಕ್ಕೆ ಒಳ್ಳೆಯದಲ್ಲ. ಕಾಂಗ್ರೆಸಿನ ಶುದ್ಧೀಕರಣ ಕರ್ಮಕುಶಲರ ಗಮನ ಇತ್ತ ಹರಿಯುವುದೆಂದು ಆಶಿಸುತ್ತೇವೆ.

ಕೊರತೆ ತುಂಬುವ ಬಗೆ

ಇದು ಮುಂಗಡಪತ್ರಗಳನ್ನು ಮಂಡಿಸುವ ಕಾಲ—ರಾಜ್ಯ ಸರಕಾರಗಳೂ ಕೇಂದ್ರ ಸರಕಾರವೂ ಮುಂಗಡ ಪತ್ರದ ಪರಿಶೀಲನೆಗಾಗಿ ಅಧಿವೇಶನದಲ್ಲಿ ಸೇರಿರುತ್ತವೆ. ಈಗಾಗಲೇ ಪಶ್ಚಿಮ ಬಂಗಾಳ, ಬಿಹಾರ, ಉತ್ತರ-ಪ್ರದೇಶ ಮುಂತಾದ ರಾಜ್ಯಸರಕಾರಗಳ ಮುಂಗಡಪತ್ರ ಮಂಡಿಸಲ್ಪಟ್ಟಿರುತ್ತವೆ. ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದ ಮುಂಗಡ ಪತ್ರಗಳು ಇವಾಗುವುದರಿಂದ, ಸಾರ್ವಜನಿಕರಲ್ಲಿ ಈ ಬಗ್ಗೆ ಕುತೂಹಲವಿರುವುದು ಸ್ವಾಭಾವಿಕ. ಹೀಗೆ ವಿಶೇಷ ಆಸಕ್ತಿಯಿಂದ ಮುಂಗಡ ಪತ್ರಗಳತ್ತ ದೃಷ್ಟಿ ಕ್ಷೇಪಿಸಿದರೆ—ಅವೆಲ್ಲವೂ ಕೊರತೆಯನ್ನು ತೋರಿಸುತ್ತವೆ ಎಂಬ ವಿಷಯವೇ ಮೊದಲ ನೋಟಕ್ಕೆ ಸಿಗುತ್ತದೆ. ಕೇಂದ್ರದಿಂದ ಧಾರಾಳ ಸಹಾಯವನ್ನು ಪಡೆಯುತ್ತಿದ್ದರೂ ಕೆಲವು ರಾಜ್ಯ ಸರಕಾರಗಳಿಗೆ ತಮ್ಮ ಕೆಲಸವನ್ನು ಸಾಗಿಸಿಕೊಂಡು ಹೋಗಲು ಸಾಕಷ್ಟು ಅನುಕೂಲವಾಗಲಿಲ್ಲ. ಪಶ್ಚಿಮ ಬಂಗಾಳದ ನಿರ್ವಾಸಿತರ ಪುನರ್ನಿವೇಶನದ ಪ್ರಶ್ನೆಯೂ ಬಿಹಾರದ ನೆರೆಹಾವಳಿಯ ಸಮಸ್ಯೆಯೂ ಹೇರಳ ಹಣವನ್ನು ಬೇಡುತ್ತವೆ. ಇತರ ರಾಜ್ಯಗಳಲ್ಲಿ ಸಹ ನಿರುದ್ಯೋಗದ ನಿರ್ಮೂಲನ ಮತ್ತು ಸಾರ್ವಜನಿಕ ಕಲ್ಯಾಣದ ಕೆಲಸಗಳು ಕೋಟ್ಯಾಂತರ ರೂಪಾಯಿಗಳ ಮೊತ್ತವನ್ನು ಕೇಳುತ್ತವೆ. ಪಂಚವಾರ್ಷಿಕ ಯೋಜನೆಯಂತೆ ನಡೆಯಬೇಕಾದ ಕಾರ್ಯಕ್ರಮಗಳನ್ನು ಪೂರೈಸುವುದಕ್ಕೆ ಈ ವರ್ಷ ಎಲ್ಲ ಸಾಹಸಗಳನ್ನೂ—ಹಿಂದಿನದೇನಾದರೂ ಬಾಕಿ ಬಿದ್ದಿದ್ದರೆ ಅದನ್ನು ಸಹ ಸೇರಿಸಿ—ಮಾಡಬೇಕಾಗಿರುತ್ತದೆ. ಆದುದರಿಂದ ಇವಕ್ಕೆಲ್ಲ ಹಣ ದೊರಕಿಸಿಕೊಳ್ಳುವುದ ಹೇಗೆಂಬುದೇ ಎಲ್ಲ ಅರ್ಥ ಸಚಿವರನ್ನೂ ಕಾಡುತ್ತಿರುವ ವಿಷಯ— ಹೊಸತಾಗಿ ಕರಹೇರಿ ರಾಜ್ಯದ ಆದಾಯವನ್ನು ಹೆಚ್ಚಿಸುವ ಉಪಾಯವೊಂದಿದ್ದರೂ—ಅನೇಕ ಮಾರ್ಗಗಳಲ್ಲಿಯೂ ಈಗಾಗಲೇ ಸಾಕಷ್ಟು ದೂರ ನಡೆದು ಹೋಗಿದ್ದೇವೆ ಎಂದು ಜನತೆ ಹೇಳುತ್ತದೆ. ಅರ್ಥ ಸಚಿವರಿಗೆ ಸಹ ಇದು ಸುಳ್ಳಲ್ಲ ಎಂದು ತೋರಿದ್ದು, ತೆರಿಗೆಯನ್ನು ಹೊಸತಾಗಿ ಹೊರಿಸಬಹುದಾದ ಹೆಚ್ಚಿನ ಕ್ಷೇತ್ರ ಸಿಗುವುದಿಲ್ಲ. ಅವರೆಲ್ಲರೂ ಸಾರ್ವಜನಿಕರಿಂದ ಸಾಲವನ್ನು ಎತ್ತಿಕೊಂಡು, ಕೊರತೆಯನ್ನು ಬಾಯಿ ಗೂಡಿಸಬಹುದೆಂದು ಭಾವಿಸಿರುವಂತೆ ಕಾಣುತ್ತದೆ. ಹೊಸ ತೆರಿಗೆಗಳ ಹೇರುವಿಕೆಯ ಯಾವ ಉಪಾಯವನ್ನೂ ಬಿಟ್ಟುಗೊಡದೆ, ಸಾರ್ವಜನಿಕರಿಂದ ಸಾಲ ವಸೂಲು ಮಾಡುವ ತಂತ್ರವನ್ನೂ ತ್ಯಜಿಸದೆ ಎರಡೂ ಬಗೆಯಿಂದ ಹಣವನ್ನು ಸಂಗ್ರಹಿಸಿ, ಕಲ್ಯಾಣ ಕಾರ್ಯಗಳನ್ನು ಮುನ್ನಡೆಸುವುದು ಅವರ ಉದ್ದೇಶವಿದ್ದಂತೆ ಕಾಣುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಇದನ್ನು ಸಾಧುವಾದ ವಿಚಾರವೆಂದೇ ಹೇಳಬಹುದು—ಏಕೆಂದರೆ, ಅಭಿವೃದ್ಧಿ ಪ್ರಯತ್ನಗಳನ್ನು ಮುಂದೊತ್ತದೆ ನಾವು ನಡುವೆಯೇ ಬಿಟ್ಟುಗೊಡುವಂತಿಲ್ಲ; ಅಥವಾ ಜೀವನಮಟ್ಟ ಎತ್ತರಿಸುವ ಕುರಿತು ಕೆಲಸ ಮಾಡದೆಯೇ ಇರುವುದೂ ಸಾಧ್ಯವಿಲ್ಲ. ಇವೆಲ್ಲವೂ ಉತ್ಪಾದಕ ಕೆಲಸಗಳಾಗಿರುವುದರಿಂದ ಸಾರ್ವಜನಿಕರಿಂದ ಸಾಲವಾಗಿಯೋ ತೆರಿಗೆಯ ರೂಪದಲ್ಲಿಯೋ ಪಡೆದ ಹಣವು ಯೋಗ್ಯ ಪ್ರತಿಫಲವನ್ನು ಕೊಟ್ಟೇ ತೀರುತ್ತದೆ. ಆದುದರಿಂದ ಕೊರತೆಯ ಮುಂಗಡಪತ್ರಗಳು ವಾಸ್ತವದಲ್ಲಿ ನಮ್ಮ ಅಭಿವೃದ್ಧಿ ಪ್ರಯತ್ನದ ಹೆಜ್ಜೆಗಳನ್ನೇ ಸೂಚಿಸುತ್ತವೆ ಎಂದು ತಿಳಿದರೆ ತಪ್ಪಾಗದು - ಜನರು ವಿಷಯದ ಈ ಮುಖವನ್ನು ನೋಡಿ, ಸರಕಾರದೊಡನೆ ಸಹಕರಿಸುವರೆಂದು ಭಾವಿಸುತ್ತೇವೆ.

1955ನೇ ಇಸವಿಯ

ಪೋಕೆಟ್ ಡೈರಿಗಳು!

ದೊಡ್ಡ ಸೈಜು ರೂ-1-4-0ಮಾತ್ರ

ನವಯುಗ ಪ್ರೆಸ್, ಉಡುಪಿ.

“ಕೆನರಾ ಮ್ಯೂಚುವಲ್”

ಪ್ರಗತಿಯ ಇನ್ನೊಂದು ವರ್ಷ

ಉಡುಪಿಯಲ್ಲಿ ಸ್ಥಾಪಿಸಲ್ಪಟ್ಟು ಕಳೆದ ಇಪ್ಪತ್ತು ವರ್ಷಗಳಿಂದ ತನ್ನ ಚಟುವಟಿಕೆಯನ್ನು ನಡೆಸುತ್ತಾ ಬಂದಿರುವ ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್ ಎಂಬ ಜೀವ ವಿಮೆ ಇಳಿಸುವ ಸಂಸ್ಥೆಯ ೧೯೫೪ ನೇ ವರ್ಷದ ಆಡಳಿತ ವರದಿಯು ಸರ್ವತೋಮುಖ ಪ್ರಗತಿಯ ಇನ್ನೊಂದು ವರ್ಷದ ವಿವರಗಳನ್ನು ವ್ಯಕ್ತಪಡಿಸುತ್ತದೆ. ಕಂಪೆನಿಯು ತನ್ನ ಬಹು ದಿನಗಳ ಗುರಿಯಾಗಿದ್ದ ಒಂದು ಕೋಟಿ ರೂಪಾಯಿ ವ್ಯವಹಾರ ಮಾಡುವ ಧ್ಯೇಯವನ್ನು ಸಾಧಿಸಿರುವುದು. ಸ್ಪೃಹಣೀಯವಾದ ವಿಷಯ. ೧೯೫೪ ರಲ್ಲಿ ಕಂಪೆನಿಯು ಮಾಡಿದ ಹೊಸ ವ್ಯವಹಾರವು ಹಿಂದಿನ ವರ್ಷಕ್ಕಿಂತ ನೂರಕ್ಕೆ ಎಪ್ಪತ್ತೈದರಷ್ಟು ಹೆಚ್ಚಾಗಿದ್ದು ಅದು ಹೀಗಿದೆ: ಬಂದ ವಿಮಾ ಅರ್ಜಿಗಳು- ರೂ 1,02,73,700; ಹೊರಡಿಸಲಾದ ವಿಮಾ ಪತ್ರಗಳು- ರೂ. 86,29,450. ಇಷ್ಟು ಹೆಚ್ಚು ವಿಮಾ ವ್ಯವಹಾರ ಮಾಡುವಾಗಲೂ ಖರ್ಚಿನ ಮಟ್ಟವನ್ನು ಮಾತ್ರ ಹೆಚ್ಚಿಸದೆ 12·76% ದಷ್ಟು ಕಡಿಮೆಯಾಗಿಯೇ ಇಟ್ಟಿರುವುದು ಕಂಪೆನಿಯ ವೈಶಿಷ್ಟ್ಯ; ಮಾತ್ರವಲ್ಲದೆ, ಅದು ಸಂಪಾದಿಸಿರುವ ಜನ ಪ್ರಿಯತೆಯ ದ್ಯೋತಕ. ವರದಿ ವರ್ಷದಲ್ಲಿ ಕಂಪೆನಿಯು ತನ್ನ ಐದನೇ ವಿಮಾಗಣನೆಯನ್ನು ನಡೆಸಿ ಅದರ ಪ್ರಕಾರ ಆಜೀವ ವಿಮೆಗೆ ರೂ 18 ಮತ್ತು ಉಂಬಳಿ ವಿಮೆಗೆ ರೂ 15-ಈ ಪ್ರಕಾರ ಪ್ರತಿ ಸಾವಿರಕ್ಕೆ ಪ್ರತಿ ವರ್ಷಕ್ಕೆ ಲಾಭಾಂಶ ಹಂಚಿರುತ್ತದೆ. ಇಷ್ಟು ಹೆಚ್ಚು ಲಾಭಾಂಶ ವಿತರಣೆ ಮಾಡಿರುವ ಕಂಪೆನಿಗಳು ಕೈ ಬೆರಳಿಂದೆಣಿಸುವಷ್ಟು ಕಡಿಮೆ ಸಿಗುತ್ತವೆ. ಉತ್ತಮ, ದಕ್ಷ, ಹಾಗು ಮುನ್ನೋಟದ ಆಡಳಿತವೇ ಈ ಸಾಧನೆಯ ಹಿನ್ನೆಲೆಯಲ್ಲಿರುವ ವಿಷಯವಾಗಿದ್ದು ಇದಕ್ಕೆ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಆರ್. ಎ. ಪೈಗಳನ್ನು ಅಭಿನಂದಿಸುತ್ತೇವೆ. ಕಂಪೆನಿಯ ಸೊತ್ತುಗಳ ಮೊತ್ತವು ೧೧೪ ಲಕ್ಷ ರೂಪಾಯಿಯನ್ನು ಮೀರುತ್ತಿದ್ದು ಅವುಗಳ ಭದ್ರತೆಯ ವಿಷಯದಲ್ಲಿ ಸಂಶಯಕ್ಕೆ ಎಡೆಯಿಲ್ಲದಿರುವುದು ಸಂತೋಷ. ಕಂಪೆನಿಯ ಜೀವನಿಧಿಯು ೧೯೪೪ರಲ್ಲಿ ರೂ. 42,10,975 ಆಗಿದ್ದದ್ದು 1954 ರಲ್ಲಿ 1,06,49,229 ಆಯಿತೆಂಬುದೊಂದೇ ಕಂಪೆನಿಯ ದೃಢವಾದ ಮುನ್ನಡೆಯನ್ನು ಸೂಚಿಸಲು ಯಥೇಷ್ಟವೆನಿಸುತ್ತದೆ. ಕಂಪೆನಿಗೆ ನಮ್ಮ ಶುಭಾಶಯಗಳು!

ಉಡುಪಿ

ಕೌನ್ಸಿಲು ಸಭೆ—ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಭೆಯು ತಾ 21 ರಂದು ಸಂಜೆ ಚೇರ್‌ಮನ್ ಡಾ: ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಪೆಶಲ್ ಟೌನ್ ಪ್ಲಾನಿಂಗ್ ಕಮಿಟಿಗೆ ಶ್ರೀ ಯು. ಎಸ್. ಇಮಾಮ್ ಸಾಹೇಬರನ್ನು ಆರಿಸಲಾಯಿತು. ಆನೆಕಾಲು ಹಾವಳಿಯನ್ನು ತಡೆಗಟ್ಟುವ ಟೀಮು ಬೇಗನೆ ಮಂಗಳೂರಿಗೆ ಬರಲಿರುವುದರಿಂದ ಆ ಟೀಮಿನವರನ್ನು ಉಡುಪಿಗೂ ಕಳುಹಿಸಿ ಇಲ್ಲಿಯೂ ತಲೆದೋರಿರುವ ಆನೆಕಾಲು ರೋಗವನ್ನು ತಡೆಗಟ್ಟುವ ಪರಿಶೀಲನೆ ನಡೆಸುವಂತೆ ಮದ್ರಾಸು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯ ಬಹುಮತದಿಂದ ಪಾಸಾಯಿತು. ಅಂಗರ ಸೆಟ್ಟಿ ಓಣಿ, ಅಥವಾರು ಮಠದ ಓಣಿಗಳಲ್ಲಿ ಇಲೆಕ್ಟ್ರಿಕ್ ದೀಪಗಳ ವ್ಯವಸ್ಥೆಯಾದುದರಿಂದ ಅಲ್ಲಿರುವ ಚಿಮಿಣಿ ಎಣ್ಣೆ ದೀಪಗಳನ್ನು ಆಯಾಯ ಸ್ಥಳದ ದೂರದ ವಠಾರದಲ್ಲಿ ಹಾಕುವ ಕುರಿತು ಕೌನ್ಸಿಲಿನ ಅಭಿಪ್ರಾಯವನ್ನು ಅಪೇಕ್ಷಿಸಿದ ಸಭಾಪತಿಗಳ ಸೂಚನೆ ಕುರಿತು ಸುದೀರ್ಘ ಚರ್ಚೆ, ಮಾತುಕತೆಗಳಾದುವು. ಸಭಾಪತಿಗಳ ಸೂಚನೆಯನ್ನು ಮನ್ನಿಸಬೇಕೆನ್ನುವ ಶ್ರೀ ಪಿ. ವಿ. ಆಚಾರ್ಯರ ಠರಾವು ಕೊನೆಗೆ ಪಾಸಾಯಿತು. ಬಿ. ಸಿ. ಜಿ. ದಾಕು ಹಾಕುವಿಕೆಯ ಕಾರ್ಯಕ್ಕಾಗಿ ರೂಪಾಯಿ 75 ಖರ್ಚನ್ನು ಮಂಜೂರು ಮಾಡಲಾಯಿತು.

ಬಹುಮಾನ ವಿತರಣೆ - ಉಡುಪಿ ಡಿವಿಜನ್ ಇಂಟರ್‌ಸ್ಕೂಲ್ ಎತ್ಲೆಟಿಕ್ ಎಸೋಸಿ

ವಾರದ ಮಹಾನುಭಾವ

ಅಂಧರ ದೇವತೆ—ಮಿಸ್ ಹೆಲೆನ್ ಕೆಲರ್

ಮೂಕನನ್ನು ವಾಚಾಳಿಯಾಗಿಯೂ ಕುಂಟನನ್ನು ನೆಗೆದಾಳುವಾಗಿಯೂ ಮಾಡುವ, ಕುರುಡನಿಗೆ ಕಣ್ಣನ್ನೂ ಕಿವುಡನಿಗೆ ಶ್ರವಣ ಶಕ್ತಿಯನ್ನೂ ಕೊಡುವ ಸಾಮರ್ಥ್ಯವಿರುವುದು ಭಗವಂತನೊಬ್ಬನಿಗೆಯೇ ಎಂದು ನಮ್ಮ ಶಾಸ್ತ್ರ ಗ್ರಂಥಗಳು ವಿವರಿಸುತ್ತವೆ—ಆದರೆ ಈ ವಾರ ಭಾರತಕ್ಕೆ ಬಂದಿರುವ ಅಮೇರಿಕದ ಮಹಿಳೆಯೊಬ್ಬರು ಭಗವಂತನಿಗೆ ಮೀಸಲಾಗಿದ್ದ ಅದ್ಭುತ ಶಕ್ತಿಯನ್ನು ತಮ್ಮ ವ್ಯಕ್ತಿತ್ವದಲ್ಲಿ ಸಮಾವೇಶಗೊಳಿಸಿರುವರೆಂದರೆ ಥಟ್ಟನೆ ನಾವು ನಂಬುವುದು ಕಷ್ಟವಾಗುತ್ತದೆ— ಆ ವ್ಯಕ್ತಿಯ ಜೀವನದ ಕಥೆ ತಿಳಿದವರಿಗೆ ಮಾತ್ರ ಆ ಮಾತಿನಲ್ಲಿ ನಂಬಿಗೆ ನಿಲ್ಲುತ್ತದೆ.

ಎತ್ತರವಾದ ನಿಲುವಿನ, ಆಕರ್ಷಕ ಮುಖದ ತುಂಬಿದ ಮೈಕಟ್ಟಿನ ಆ ಮಹಿಳೆಯ ಹೆಸರು ಮಿಸ್. ಹೆಲೆನ್ ಕೆಲರ್. ಎಪ್ಪತ್ತೈದು ವರ್ಷ ನಡೆಯುತ್ತಿರುವ ಅವರನ್ನು ಎಲ್ಲರೂ ಅಂಧರ ದೇವತೆ ಎಂದು ಗೌರವದಿಂದ ಕರೆಯುತ್ತಾರೆ. ಮಾರ್ಕ್ ಟ್ವೇನ್ ಎಂಬ ಪ್ರಸಿದ್ಧ ಲೇಖಕ ೧೯ನೇ ಶತಮಾನದ ಅದ್ಭುತಗಳಲ್ಲಿ ನೆಪೋಲಿಯನ್ ಮತ್ತು ಹೆಲೆನ್ ಕೆಲರ್ ಇವರನ್ನು ಹೆಸರಿಸಬಹುದೆಂದು ಹೇಳಿದ. ಪುರುಷ ಪ್ರಯತ್ನಕ್ಕೆ ಯಾವುದೂ ಅಸಾಧ್ಯವಲ್ಲ ಎಂಬ ಮಾತನ್ನು ನೆಪೋಲಿಯನನೊಂದು ರೀತಿಯಲ್ಲಿ ಸಿದ್ಧಗೊಳಿಸಿದರೆ, ಹೆಲೆನ್ ಕೆಲರ್ ಇನ್ನೊಂದು ವಿಧದಲ್ಲಿ ಅದನ್ನು ಸತ್ಯಮಾಡಿದಳು.

ಅಮೇರಿಕೆಯ ಯಾದವಿ ಕಲಹದಲ್ಲಿ ಸೈನ್ಯದ ತುಣುಕೊಂದರ ಕ್ಯಾಪ್ಟನ್ ಆಗಿ, ಹಿಂದಿನಿಂದ ಪತ್ರಿಕೆಯೊಂದರ ಸಂಪಾದಕನಾಗಿದ್ದೊಬ್ಬನ ಮಗಳಾಗಿ ಹೆಲೆನ್ ಕೆಲರ್ ಜನಿಸಿದಳು. ಅವಳು ತನ್ನ ಆರನೇ ತಿಂಗಳ ಪ್ರಾಯದಲ್ಲಿಯೇ ಮಾತನಾಡುವ, ಒಂದು ವರ್ಷದಲ್ಲಿಯೇ ನಡೆಯುವ ಚುರುಕು ಹುಡುಗಿಯಾಗಿದ್ದಳು. ಆದರೆ ೧೯ನೇ ತಿಂಗಳ ವಯಸ್ಸಿನಲ್ಲಿ ಅವಳಿಗೊಂದು ತೀವ್ರ ಸ್ವರೂಪದ ಬೇನೆ ಅಂಟಿಕೊಂಡು, ಪರಿಣಾಮದಲ್ಲಿ ಕಣ್ಣು ಮತ್ತು ಕಿವಿ ಎರಡರ ಶಕ್ತಿಯೂ ನಷ್ಟವಾಯಿತು. ಹೀಗೆ ಶ್ರವಣ ಶಕ್ತಿ ನಶಿಸಿದುದರಿಂದ ಮಾತು ಕಲಿಯುವ ಅವಕಾಶವೇ ತಪ್ಪಿ ಹೋಗಿ ಇದ್ದುದಿದ್ದಂತೆಯೇ ಅವಳು ಕುರುಡಿ, ಕಿವುಡಿ ಮತ್ತು ಮೂಕಿಯಾದಳು! ತುಸು ದೊಡ್ಡವಳಾದಂತೆ, ಅವಳಲ್ಲಿ ನಾನಾ ತರದ ಕುಚೇಷ್ಟೆ ಕಂಡು ಬಂತು—ಅವಳೊಂದು ಸಮಸ್ಯಾತ್ಮಕ ಮಗುವಾದಳು.

ಹೆಲೆನ್ ತನ್ನ ಆಯುಸ್ಸನ್ನೆ ಹೀಗೆ ವ್ಯರ್ಥ ಕಳೆಯಬಹುದೆಂದು ಎಲ್ಲರೂ ಅಂಜಿಕೊಂಡಿದ್ದರು. ಇದನ್ನು ತಪ್ಪಿಸಿದ ಶ್ರೇಯಸ್ಸು ಮಿಸ್ ಆನ್ ಸಲಿವಿನ್ ಎಂಬ ಮಹಿಳೆಗೆ ಸೇರುತ್ತದೆ ಅವಳು ಹೆಲೆನ್ ಆರನೇ ವರ್ಷದಲ್ಲಿದ್ದಾಗ ಶಿಕ್ಷಕಿಯಾಗಿ ಬಂದಳ. ಕುರುಡರ ಶಿಕ್ಷಣಕ್ಕಾಗಿಯೇ ಉಪಯೋಗಿಸುವ, ಕೊರೆದ ಅಕ್ಷರಗಳ ಮೇಲೆ ಕೈಯಾಡಿಸಿ ಲಿಪಿ ಗುರುತಿಸುವ "ಬ್ರೈಲ್" ಭಾಷೆಯನ್ನು ಅವಳು ಹೆಲೆನ್‌ಗೆ ತತ್ಪರತೆಯಿಂದ ಕಲಿಸಹತ್ತಿದಳು. ಅವಳ ಪ್ರೀತಿಯ ನಡವಳಿಕೆ ಹೆಲೆನ್ ತೋರಿಸುತ್ತಿದ್ದ ಶುಂಠತನವನ್ನು ಕಡಿಮೆ ಮಾಡಿತು; ಚುರುಕುತನವನ್ನು ಹೆಚ್ಚಿಸಿತು. ತಣ್ಣನೆ ನೀರಿನಲ್ಲಿ ಕೈ ಹಾಕಿ "ನೀರು" ಎಂಬುದೊಂದಿದೆಯೆಂಬುದರ ಅನುಭವದನ್ನು ಭಾಷೆಯ ತಳಹದಿಯಲ್ಲಿ ಹೆಲೆನ್ ಮೊತ್ತಮೊದಲನೇ ಸಲ ಮಾಡಿಕೊಂಡಾಗ ಕುಣಿದಾಡಿದಳು. ಅಂದು ಅಪರಾಹ್ನ ಅವಳು ಕುತೂಹಲದಿಂದ ೩೦ ಶಬ್ದಗಳನ್ನು ಕಲಿತುಬಿಟ್ಟಳು.

ಶಿಕ್ಷಕಿಯು ಹೆಲೆನ್ ಮಾತನಾಡುವಂತೆಯೂ ಪ್ರಯತ್ನಿಸಿದಳು—ಅವಳು ಮಾತನಾಡುವಾಗ ಹೆಲೆನ್ ಆ ತುಟಿಗಳ ಮೇಲೆ ಕೈಯಾಡಿಸಿ ಉಚ್ಚರಿಸಿದ ಶಬ್ದಗಳ ಅಂದಾಜನ್ನು ಮಾಡಿಕೊಳ್ಳುತ್ತಿದ್ದಳು; ಹಿಂದಿನಿಂದ ಹೆಲೆನ್ ಸ್ವತಃ ಹಾಗೆಯೇ ತುಟಿಯಾಡಿಸಿ ಸ್ವರವನ್ನು ಹೊರಡಿಸಲು ಪ್ರಯತ್ನಿಸುತ್ತಿದ್ದಳು. ಹೀಗೆ ಪ್ರಯತ್ನ ನಡೆದಂತೆ ಅವಳಿಗೆ ಮಾತನಾಡುವ ಶಕ್ತಿ ಪ್ರಾಪ್ತವಾಯಿತು. ಇದರಿಂದ ಉತ್ತೇಜಿತಗೊಂಡು ಹೆಲೆನ್ ಶಿಕ್ಷಣವನ್ನು ಮುಂದರಿಸಲು ಉದ್ಯುಕ್ತಳಾದಳು. ಅವಳು ಪದವಿ ಸಂಪಾದಿಸಿದ್ದಲ್ಲದೆ, ಲ್ಯಾಟಿನ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳನ್ನೂ ಕಲಿತಳು. ಅಧ್ಯಾಪಕರು ವಿವರಿಸುತ್ತಿದ್ದ ಪಾಠಗಳನ್ನು ಹೆಲೆನ್‌ಗೆ ಬ್ರೈಲ್ ಸ್ಪರ್ಶಜ್ಞಾನದ ಭಾಷೆಯಲ್ಲಿ ಅವಳ ಶಿಕ್ಷಕಿ ಆನ್ ತಿಳಿಸಿ ಹೇಳುತ್ತಿದ್ದಳು— ಆನ್ ಹೀಗೆ ಹೆಲೆನಳ ಸಂಗಾತಿಯಾಗಿ ಐವತ್ತು ವರ್ಷ ಬಾಳಿದಳು.

ಸ್ತ್ರೀ ಸಹಜವಾದ ರೀತಿಯಲ್ಲಿ ಹೆಲೆನ್ ಒಮ್ಮೆ ಮದುವೆಯಾಗುವ ಸಿದ್ಧತೆಯಲ್ಲೂ ಇದ್ದಳು – ಒಬ್ಬ ತರುಣನು ಅವಳ ಪ್ರೇಮ ಪಾಶಕ್ಕೆ ಬಿದ್ದಿದ್ದನು. ಆದರೆ, ಮದುವೆಯು ಮಾತೃತ್ವದ ಹೊಣೆಗಾರಿಕೆಯನ್ನು ಹೇರುವುದೆಂದು ಅವಳಿಗೆ ಮನವರಿಕೆಯಾದಾಗ ಕುರುಡಿಯೂ ಕಿವುಡಿಯೂ ಆದ ತನಗೆ ಅದು ಸೀಗದ ಕೆಲಸವೆಂದು ತೋರಿತು. ಆದುದರಿಂದ ಅವಳು ಲಗ್ನದ ವಿಚಾರ ಬಿಟ್ಟುಕೊಟ್ಟು ತನ್ನಂತೆ ಇಂದ್ರಿಯ ಶಕ್ತಿ ಕಳೆದುಕೊಂಡ ಭಾಗ್ಯ ಹೀನರ ಉದ್ಧಾರಕ್ಕೆ ಜೀವನವನ್ನು ಮುಡುಪಿಟ್ಟಳು. ಈ ದಿಸೆಯಲ್ಲಿ ಅವಳು ಮಾಡಿದ ಪ್ರಯತ್ನ ಲೋಕದ ಕಣ್ಣನ್ನು ತೆರೆಯಿಸಿತು - "ನಿನಗೆ ಕಣ್ಣಿದ್ದವರಿಗಿಂತ ಹೆಚ್ಚಿಗೆ ಕಾಣಿಸುತ್ತದೆ" ಎಂದು ಎಲ್ಲರೂ ಅವಳನ್ನು ಹೊಗಳುವಂತಾಯಿತು.

ಜಗತ್ತಿನ ಪರ್ಯಟನವನ್ನು ಹೆಲೆನ್ ಐದು ಸಲ ಕೈಗೊಂಡಿದ್ದಾಳೆ. ಕುರುಡರ ಮತ್ತು ಕಿವುಡರ ಶಿಕ್ಷಣಕ್ಕೆ ಎಲ್ಲ ಬಗೆಯ ಪ್ರೋತ್ಸಾಹಗಳನ್ನೀಯಬೇಕೆಂದು ಅವಳು ರಾಜಕೀಯ ಧುರೀಣರ ಮತ್ತು ಸಾಮಾಜಿಕ ಕಾರ್ಯಕರ್ತರ ಮನವೊಲಿಸುತ್ತಾಳೆ. ಅಮೇರಿಕದ ಕಾಂಗ್ರೆಸಿನ ಮುಂದಷ್ಟೇ ಅಲ್ಲ ಎಲ್ಲ ದೇಶಗಳ ಸರಕಾರ ಹಾಗು ಸಂಯುಕ್ತ ರಾಷ್ಟ್ರ ಸಂಘದ ಮೇಲೆ ಸಹ ಇವಳ ಮಾತು ನಡೆಯುತ್ತದೆ. ಹತ್ತು ಗ್ರಂಥಗಳನ್ನೂ ನೂರಾರು ಲೇಖನಗಳನ್ನೂ ಬರೆದು ಜನಜಾಗೃತಿಯನ್ನು ಮಾಡಿರುವ ಹೆಲೆನ್ ಈಗ ೪೦ ಸಾವಿರ ಮೈಲು ಉದ್ದದ ಏಶಿಯದ ಪ್ರವಾಸ ಕೈಗೊಂಡು ಬಂದಿದ್ದಾಳೆ. ಪಾಕಿಸ್ತಾನ, ಬರ್ಮ, ಫಿಲಿಪೀನ ಮತ್ತು ಜಪಾನುಗಳಿಗೆ ಇವಳು ಹೋಗಲಿದ್ದು ಇದರಿಂದ ಇಲ್ಲಿರುವ ಒಂದು ಕೋಟಿ ಕುರುಡರ ಮತ್ತು ಕಿವುಡರ ಕಲ್ಯಾಣ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕುವುದು ನಿಶ್ಚಯ.

ಯೇಶನಿನ ನೇತೃತ್ವದಲ್ಲಿ ನಡೆದ ವಿವಿಧ ಪಂದ್ಯಾಟಗಳಲ್ಲಿ ಜಯಶೀಲರಾದವರಿಗೆ ಬಹುಮಾನವಿತರಣೆಮಾಡುವ ಸಮಾರಂಭವು ತಾ. ೧೯ರಂದು ಸಂಜೆ ಗಾಂಧಿಮೈದಾನದಲ್ಲಿ ಜರಗಿತು. ಎಸೋಸಿಯೇಶನ್ ಅಧ್ಯಕ್ಷ ಶ್ರೀ ಬಿ. ಅನಂತಕೃಷ್ಣ ಸಾಮಗರು ಸ್ವಾಗತಮಾತುಗಳನ್ನಾಡಿದರು. ಕಾರ್ಯದರ್ಶಿ ಶ್ರೀ ಯು. ಗೋಪಾಲಕೃಷ್ಣರಾಯರು ವರದಿಯನ್ನೋದಿದರು.

ಪುಣ್ಯಕ್ಷೇತ್ರಗಳ ಚಿತ್ರಪ್ರದರ್ಶನ:-- ಶ್ರೀ ಬಿ. ವಿ. ಸುಂದರರಾಜ ಅಯ್ಯಂಗಾರರು ಈಚೆಗೆ ಉಡುಪಿಗೆಬಂದಿದ್ದು ಹಿಂದೂಸ್ಥಾನದ ಪ್ರಮುಖ ಯಾತ್ರಾಸ್ಥಳಗಳ ಚಿತ್ರಗಳನ್ನು ಪ್ರದರ್ಶಿಸಿ ಅವುಗಳ ಮಹಾತ್ಮೆಯನ್ನು ಭಾಷಣಮೂಲಕ ವಿವರಿಸಿದರು. ಈ ಕಾರ್ಯಕ್ರಮವು ಶ್ರೀಕೃಷ್ಣಮಠ, ಶ್ರೀ ಅನಂತೇಶ್ವರ ದೇವಸ್ಥಾನ ಶ್ರೀ ವೆಂಕಟ್ರಮಣ ದೇವಸ್ಥಾನ, ಸರಕಾರಿ ಗಂಡುಮಕ್ಕಳ ಮತ್ತು ಹೆಣ್ಣುಮಕ್ಕಳ ಟ್ರೈನಿಂಗ್‌ಶಾಲೆಗಳೇ ಮೊದಲಾದ ಸ್ಥಳಗಳಲ್ಲಿ ನಡೆಯಿತು.

ಬಿ. ಸಿ. ಜಿ. ದಾಕು— ಉಡುಪಿ ನಗರಕ್ಷೇತ್ರದೊಳಗೆ ಕ್ಷಯ ರೋಗ ಪ್ರತಿ ಬಂಧಕ ಪರೀಕ್ಷೆಯು ನಡೆದಾಗ 21,374 ಜನರು ಪರೀಕ್ಷಿಸಲ್ಪಟ್ಟರೆಂದೂ 8191 ಜನರಿಗೆ ಬಿ. ಜಿ. ಸಿ. ದಾಕು ಹಾಕಲಾಗಿರುವುದೆಂದೂ ತಿಳಿದು ಬರುತ್ತದೆ. 1951 ರ ಖಾನೇಸುಮಾರಿಯಂತೆ ಉಡುಪಿಯ ಜನ ಸಂಖ್ಯೆ 20,431. ಒಟ್ಟು ಪರೀಕ್ಷೆಗೊಳಪಟ್ಟವರು 92.6% ಆಗುತ್ತದೆ.

ಸೈಂಟ್ ಸಿಸಿಲೀಸ್ ಕೊನ್ವೆಂಟ್ ಹೈಸ್ಕೂಲಿನ—ವರ್ಧಂತಿಯು ತಾ 22 ನೇ ಸಂಜೆ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್, ಎಂ. ಎ. ಎಲ್. ಟಿ, ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಕು| ರೋಹಿಣಿಬಾಯಿಯವರಿಂದ ವರದಿವಾಚನ, ಪಾರಿತೋಷಕ ವಿತರಣೆ, ವಿವಿಧವಿನೋದಾವಳಿಗಳಾದ ಮೇಲೆ ಅಧ್ಯಕ್ಷರ ಭಾಷಣವಾಗಿ ಸಮಾರಂಭವು ಕೊನೆಗೊಂಡಿತು.

ಸಾಲ ಸಂದಾಯ ಶಾಸನ

ಶಾಸನ ಸಭೆಯು ಮಂಜೂರು ಮಾಡಿತು

ಪರಿಶೀಲಕ ಸಮಿತಿಯ ವರಕ್ಕೆ ಮದ್ರಾಸಿನ ಶಾಸನ ಸಭೆ ವಹಿಸಿಕೊಟ್ಟಿದ್ದ ಮದ್ರಾಸು ರಾಜ್ಯದ ಸಾಗುವಳಿದಾರರ ಸಾಲ ಸಂದಾಯ ಶಾಸನದ ಮಸೂದೆಯು ಕೆಲವು ಸಾಮಾನ್ಯ ತಿದ್ದುಪಡಿಗಳೊಂದಿಗೆ ಮಂಜೂರಾಯಿತು. ಕಂತಿನ ಸಾಲ ಸಂದಾಯಕ್ಕೆ ಮೂಲ ಮಸೂದೆಯಲ್ಲಿ ಕೊಡಲಾದ ಮೂರು ತಿಂಗಳ ಅವಧಿಯನು ನಾಲ್ಕು ತಿಂಗಳಿಗೆ ಏರಿಸುವ ಮತ್ತು ಚಿಟ್ಟುಫಂಡುಗಳಿಗೆ ಈ ಮಸೂದೆ ಅನ್ವಯಿಸುವುದಿಲ್ಲವೆನ್ನುವ ತಿದ್ದುಪಡಿಗಳನ್ನು ಶಾಸನ ಸಭೆ ಸ್ವೀಕರಿಸಿತು.

ಇತರ ವಿಷಯಗಳು

ಮದ್ರಾಸು ಶಾಸನ ಸಭೆಯಲ್ಲಿ ನೀರಾವರಿ ಕೆಲಸಗಳ ಮೇಲೆ ಅಭಿವೃದ್ಧಿ ತೆರಿಗೆಯನ್ನು ಹೊರಿಸುವ ಸಂಬಂಧದ ಮಸೂದೆಯೂ ತೋಟಗಳ ಮೇಲೆ ಆದಾಯ ತೆರಿಗೆ ಹೊರಿಸುವ ಮಸೂದೆಯೂ ಮಂಜೂರು ಮಾಡಲ್ಪಟ್ಟಿತು. ಖಾಸಗಿ ಮಸೂದೆಗಳ ಚರ್ಚೆಯ ದಿನ ಬಂಜರು ಭೂಮಿಯನ್ನು ಹಂಚಬೇಕೆನ್ನುವ ಮಸೂದೆಯ ಕುರಿತು ವಿಚಾರ ವಿನಿಮಯಗಳು ನಡೆದು, ಅದು ಬಿದ್ದು ಹೋಯಿತು. ಭೂಮಿಯನ್ನು ಹಂಚುವ ಸರಕಾರದ ಈಗಿನ ಕಾರ್ಯಕ್ರಮವನ್ನೇ ಮುಂದರಿಸಿಕೊಂಡು ಹೋದರೆ ಉದ್ದೇಶ ನೆರವೇರುತ್ತದೆ ಎಂದು ಸರಕಾರದ ಪರವಾಗಿ ಹೇಳಲಾಯಿತು.

ಸಂಪತ್ತಿನ ಉದ್ಘಾಟನೆ

ಕೇಂದ್ರದಲ್ಲಿ ಸಂಸತ್ತಿನ ಉಭಯ ಮನೆಗಳ ಸಂಯುಕ್ತ ಅಧಿವೇಶನವನ್ನು ದಿನಾಂಕ ೨೧ರಂದು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಉದ್ಘಾಟಿಸಿದರು. ಅವರು ರಾಷ್ಟ್ರೀಯ ಪ್ರಗತಿಯನ್ನೂ ಅಂತಾರಾಷ್ಟ್ರೀಯ ವಿದ್ಯಮಾನಗಳನ್ನೂ ವಿಮರ್ಶಿಸುವ ಭಾಷಣವನ್ನು ಮಾಡುತ್ತಾ ಶಾಂತಿಯನ್ನು ಕಾಪಾಡುವ ಮತ್ತು ಸಮಾಜವಾದದ ಮಾದರಿಯ ಗುರಿಯೆಡೆಗೆ ಭಾರತವನ್ನು ಮುನ್ನಡೆಸುವ ಹೊಣೆಯನ್ನು ಯಶಸ್ವಿಯಾಗಿ ನಾವೀಗ ನಿರ್ವಹಿಸಬೇಕು ಎಂದು ಉಪದೇಶಿಸಿದರು.

(೫ನೇ ಪುಟದಿಂದ)

ಜಾಗತಿಕ ಯುದ್ಧವನ್ನು ತಡೆಗಟ್ಟಲು ನೆಪವಾದಂತೆಯೆ ಯುದ್ಧ ಜ್ವಾಲೆಯನ್ನೆ ಹಬ್ಬಿಸಲೂ ಕಾರಣವಾಗಬಹುದು. ಅದೇನೆ ಆಗಲಿ –ಕರಾವಳಿಯ ಈ ದ್ವೀಪಗಳ ವಿಷಯದಲ್ಲಿ ಅಮೇರಿಕ ಹೊಣೆಹೊರುವುದು ಮಾತ್ರ ಅವರ ಆಪ್ತಮಿತ್ರ ರಾಷ್ಟ್ರವಾದ ಬ್ರಿಟನಿಗೆ ಸ್ವಲ್ಪವೂ ಇಷ್ಟವಿಲ್ಲ—ಈ ದ್ವೀಪಗಳು ಚೀನಕ್ಕೆ ಸೇರಿದವುಗಳೆಂಬ ವಿಷಯದಲ್ಲಿ ಯಾವ ಅನುಮಾನವೂ ಇಲ್ಲ ಎಂದು ಅದು ಹೇಳುತ್ತದೆ. ಇದು ಬ್ರಿಟನ್-ಅಮೇರಿಕಗಳಲ್ಲಿ ತೀವ್ರ ಭಿನ್ನಾಭಿಪ್ರಾಯ ಹುಟ್ಟಿಸಿದೆಯಾಗಿ ಕೇಳುತ್ತೇವೆ.

ಭಾರತದ ಪ್ರಥಮ ಗೇವಾಕಲರ್ ಚಿತ್ರ –
ಲಕ್ಷಾಂತರ ವೆಚ್ಚದಿಂದ ನಿರ್ಮಿಸಲಾಗಿದೆ—
ಶಹನ್ ಶಾ
ಕಾಮಿನಿ ಕೌಶಲ್, ರಂಜನ್, ಆಗಾ— ಮೊದಲಾದ ಸಾವಿರದೈನೂರು ಮಂದಿ.
ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ಮಂಗಳೂರು

ವಾರ್ಷಿಕೋತ್ಸವ:—ಸ್ಯೆಂಟ್ ಎಲೋಸಿಯಸ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ತಾ. 10ರಲ್ಲು ಶ್ರೀ ತ. ರಾ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಗೋಪಾಲಕೃಷ್ಣ ಭಟ್ಟರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಬಿ. ವಿ. ಕೆದಿಲಾಯರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ರಾಜಾರಾಮ ಉಪಾಧ್ಯರು ವರದಿಯನ್ನೋದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಕರ್ನಾಟಕ ಸಂಘಗಳು, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಕಾಶನ ಮತ್ತು ಪ್ರಚಾರಕ್ಕಾಗಿ ದುಡಿಯಬೇಕೆಂದೂ, ಕರ್ನಾಟಕ ಏಕೀಕರಣವಾಗದೆ ಕನ್ನಡದ ಉದ್ಧಾರವಾಗದೆಂದೂ ಹೇಳಿದರು. ಶ್ರೀ ಸೂರ್ಯನಾಥ ಕಾಮತರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಮಂಜುನಾಥ ಕೃಪಾಪೋಷಿತ ನಾಟಕ ಸಭಾ ಇವರು ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕೈಬರಹ ಸ್ಪರ್ಧೆಯನ್ನು ಏರ್ಪಡಿಸಿರುವರು. ಸುಂದರ ಕೈಬರಹಗಳಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ಬಹುಮಾನವಾಗಿ ರೂಪಾಯಿ 15 ಮತ್ತು 10 ಕೊಡುವರು. ಪ್ರವೇಶ ಪತ್ರ, ನಿಯಮಗಳು ಮತ್ತು ವಿವರಣೆಗಳಿಗೆ ನಾಲ್ಕಾಣೆ ಅಂಚೆ ಚೀಟಿನೊಂದಿಗೆ ಯಂ. ಕೆ. ನಾಟಕ ಸಭಾ (ರಿಜಿಸ್ಟರ್ಡ್) ರಥಬೀದಿ, ಮಂಗಳೂರು—ವಿಳಾಸಕ್ಕೆ ಲಿಖಿತ ಮೂಲಕ ಯಾ ಮುಖತಃ ತಿಳಿಯಬಹುದು. ಇದೇ ತಾ. 20–2–55 ರಿಂದ 31—3—1955ರ ವರೆಗೆ ಸ್ಪರ್ಧಿಸಬಹುದು.

ತೋಟಿಗಳ ವಿಚಾರಣಾ ಸಮಿತಿ—ಕೇಂದ್ರಸರಕಾರದಿಂದ ನೇಮಿಸಲ್ಪಟ್ಟ ಈ ಸಮಿತಿಯ ಅಧ್ಯಕ್ಷ ಶ್ರೀ ಪಿ. ಮಾಧವ ಮೆನೊನ್ ಮತ್ತು ಶ್ರೀಗಳಾದ ಕೆ. ಜಿ. ಶಿವಸ್ವಾಮಿ ಹಾಗೂ ಎಮ್. ವಿ. ಮಾಥುರ್, ಅವರು ದಿನಾಂಕ 15ರಲ್ಲಿ ಮಂಗಳೂರಿಗೆ ಆಗಮಿಸಿ ಸ್ಥಳೀಯ ಕೆಲವು ಕಾಫಿ ಕಾರ್ಖಾನೆಗಳನ್ನು ಸಂದರ್ಶಿಸಿದರು. ಮಂಗಳೂರಿನ ಕಾಫಿ ವ್ಯಾಪಾರಿ ಸಂಘದ ಕಡೆಯಿಂದ ಈ ಸಮಿತಿಗೆ ಒಂದು ಮನವಿ ಒಪ್ಪಿಸಿ ಕಾಫಿ ವ್ಯಾಪಾರದಲ್ಲಿರುವ ದೋಷಗಳನ್ನೂ ಕಷ್ಟಗಳನ್ನೂ ತಿಳಿಸಲಾಯಿತು. ಶ್ರೀ ಎಮ್. ಎಲ್. ಗೋಪಾಲ ಸೆಟ್ಟರು ಕೂಡಾ ಮನವಿಯೊಂದನ್ನಿತ್ತು ಕಾಫಿಬೋರ್ಡಿನಲ್ಲಿ ಉತ್ಪಾದಕರಂತೆ ವ್ಯಾಪಾರಸ್ಥರಿಗೂ ಪ್ರಾತಿನಿಧ್ಯವಿರಬೇಕೆಂದರು.

ಉಡುಪಿ ಮಠಾಧಿಪತಿಗಳಿಗೆ ಗೌರವ—ಅಖಿಲಭಾರತ ಮಾಧ್ವಮಹಾಮಂಡಲದ ಅಧ್ಯಕ್ಷರೂ ಹಾಗೂ ಉಡುಪಿ ಪೇಜಾವರ ಮಠದ ಪೀಠಾಧಿಪತಿ ಶ್ರೀ ವಿಶ್ವೇಶತೀರ್ಥಸ್ವಾಮಿಗಳವರಿಗೆ ಮಂಗಳೂರು ನಗರಸಭೆಯ ಚೆರ್ಮೇನ್ ಶ್ರೀ ಕೆ. ಎಸ್. ಅಡಿಗರು ತಾ. 16ರಲ್ಲಿ ಸಂಜೆ ಮಾನಪತ್ರವೊಂದನ್ನರ್ಪಿಸಿ ಗೌರವಿಸಿದರು. ಭಾರತೀಯರಾದ ನಾವೆಲ್ಲ ಒಂದೆಂಬ ಭಾವನೆಯಿಂದ ಮಾಡುವ ಕರ್ತವ್ಯದಲ್ಲೇ ಧಾರ್ಮಿಕ ರಾಷ್ಟ್ರೀಯಭಾವನೆಗಳು ತುಂಬಿಕೊಂಡುನಾವು ಕಾರ್ಯತತ್ಪರರಾಗುವ ಎಂದು ಸ್ವಾಮಿಗಳವರು ಉತ್ತರವಿತ್ತು ಮಂಗಳೂರು ನಾಗರಿಕರಿಗೆ ಶುಭಾಶೀರ್ವಾದವನ್ನಿತ್ತರು.

ಜೇನು ವ್ಯವಸಾಯ ಪರಿಶೀಲನೆ-ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಜೇನು ವ್ಯವಸಾಯ ಶಾಖೆಯ ವ್ಯವಸ್ಥಾಪಕರಾದ ಶ್ರೀ ಎಸ್. ಕೆ. ಕಲ್ಲಾಪುರೆ, ಅವರು ದಕ್ಷಿಣ ಕನ್ನಡದಲ್ಲಿ ತೆರೆಯಲಾದ ಜೇನು ವ್ಯವಸಾಯ ಕೇಂದ್ರಗಳನ್ನು ತಾ. 19ರಿಂದ ಸಂದರ್ಶಿಸ ತೊಡಗಿರುವರು. ಉಡುಪಿ, ಉಜ್ರೆ, ಧರ್ಮಸ್ಥಳ, ಕಳಂಜ, ದೊಡ್ಡತೋಟ, ಸುಬ್ರಹ್ಮಣ್ಯ, ವಿಟ್ಲ, ಪೆರ್ನಾಜೆ, ಮಂಗಳೂರು ಮೊದಲಾದ ಸ್ಥಳಗಳಲ್ಲಿ ಅಲ್ಲಲ್ಲಿಯ ಕಾರ್ಯಕರ್ತರೊಡನೆ ವಿಚಾರವಿನಿಮಯ ನಡೆಸಲಿರುವರು.

ಭಾಷಣ—ಸ್ಥಳೀಯ ಇಂಜಿನಿಯರಿಂಗ್ ಎಸೋಸಿಯೇಶನಿನ ನೇತೃತ್ವದಲ್ಲಿ ತಾ. 16 ರಲ್ಲು ಶ್ರೀ ಸಿ. ಟಿ. ಎನ್. ನಾಯರರು 'ಭಾರತ ರೈಲ್ವೆಯಲ್ಲಿ ರೈಲ್ವೆಗಳ ರಚನೆ' ಎಂಬ ವಿಷಯದಲ್ಲಿ ಭಾಷಣವಿತ್ತರು. ಶ್ರೀ. ವಿ. ಎಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ. ಎಚ್. ಕೃಷ್ಣಮೂರ್ತಿಯವರು ಧನ್ಯವಾದಗಳನ್ನರ್ಪಿಸಿದರು.

ಸತ್ಕಾರ ಕೂಟ—ದ. ಕ. ರಜಕ ಕುಲೋದ್ಧಾರಕ ಸಂಘದ ಅಧಿಕಾರಿ ವರ್ಗದವರು ತಾ. 12ರಲ್ಲು ಮಂಗಳೂರಿನ ಕ್ರಿಕೆಟ್ ಪಂದ್ಯಗಳಲ್ಲಿ ಬಹುಮಾನ ಪಡೆದ ಶ್ರೀ. ಎ. ಬಿ. ನಾರಾಯಣ, ಅವರನ್ನು ಗೌರವಿಸಲು ಸತ್ಕಾರ ಕೂಟವೊಂದನ್ನು ಏರ್ಪಡಿಸಿದರು. ಶ್ರೀ ಕೆ. ದೇಜಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ವಾಮನ, ಪಿ. ಕೆ. ನಾರಾಯಣ, ಎಚ್. ನಾರಾಯಣ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಆನೆಕಾಲು ನಿರೋಧ—ರಾಷ್ಟ್ರೀಯ ಆನೆಕಾಲು ರೋಗ ನಿರೋಧ ಕಾರ್ಯಕ್ರಮದಂತೆ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಕಡೆಯಿಂದ ಮಂಗಳೂರು, ಕಾಸರಗೋಡು ಮತ್ತು ಕೇಂದ್ರಗಳಲ್ಲಿ ಸಾರ್ವತ್ರಿಕವಾಗಿ ಡಿ. ಡಿ. ಟಿ. ಚಿಮುಕಿಸುವುದು, ಕೊಳೆ ಸೇರಿನ ಪ್ರದೇಶಗಳನ್ನು ಶುಚಿಗೊಳಿಸುವುದು ಮತ್ತು ಹೆಟ್ರಾಜನ್ ಮಾತ್ರೆಗಳನ್ನು ವಿತರಣೆ ಮಾಡುವುದು, ಈ ಬಗ್ಗೆ ಒಂದು ಪ್ರತ್ಯೇಕ ದಳವನ್ನು ಸದ್ಯದಲ್ಲೇ ಸ್ಥಾಪಿಸಲಾಗುವುದೆಂದು ತಿಳಿದು ಬರುತ್ತದೆ.

ಬಳ್ಳಾರಿ—ಇದೇ ತಾ. 18ರಂದು ಬಳ್ಳಾರಿಯ ಸುಪ್ರಸಿದ್ಧ ಬೇಂಕರ್ ಮತ್ತು ವಿಧಾಯಕ ಕಾರ್ಯಕರ್ತರಾದ ಡಾ: ಟಿ. ಯಂ. ಎ. ಪೈಗಳವರು ತಾರಾನಾಥ ಆಯುರ್ವೇದ ಕಾಲೇಜಿಗೆ ಸಂದರ್ಶನವಿತ್ತರು. ಅತಿಥಿಗಳನ್ನು ಸಂಸ್ಥೆಯ ಕಾರ್ಯದರ್ಶಿ ಡಾ. ಬಿ. ಕೆ. ಮಾಲ್ಗರು ಸ್ವಾಗತಿಸಿದರು. ನಂತರ ಡಾ. ಪೈಗಳವರು ವಿದ್ಯಾರ್ಥಿಗಳವರನ್ನು ಉದ್ದೇಶಿಸಿ ಮಾತನಾಡುತ್ತಾ ಭಾರತದಲ್ಲಿ ವೈದ್ಯಕೀಯತಗೆ ಇರುವಂತಹ ಸ್ಥಾನ ಮತ್ತು ಸಾಂಘಿಕ ಜೀವನ ಮಹತ್ವದ ಕುರಿತು ಅನುಭವ ಪೂರ್ಣವಾಗಿ ಉಪದೇಶ ನೀಡುತ್ತಾ ಸಂಸ್ಥೆಗೆ ಶುಭವನ್ನು ಕೋರಿದರು. ಕೊನೆಗೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಕೆ. ಆನಂದ ಹೆಗ್ಡೆಯವರು ಧನ್ಯವಾದಾರ್ಪಣೆ ಮಾಡಿದರು.

ಕಾರ್ಕಳ – ಸ್ಥಳೀಯ ಬೋರ್ಡುಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ತಾ. 13 ರಲ್ಲಿ ಸಾಂಗವಾಗಿ ಜರಗಿತು. ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ರಾಘವ ಬಾಳಿಗರು ಸಭಾಧ್ಯಕ್ಷತೆವಹಿಸಿದ್ದರು. ಹೆಡ್ ಮಾಸ್ತರ್ ಶ್ರೀ ಬಿ. ಶಾಮರಾಯ ಸೆಟ್ಟರು ವರದಿಯನ್ನೋದಿದರು. ಶ್ರೀ ಎಸ್. ಡಿ. ಅಧಿಕಾರಿಗಳು ಶಾಲಾಸ್ವಸ್ತಿವಾಚನಮಾಡಿದರು. ಅಧ್ಯಕ್ಷರು ಬಹುಮಾನವಿತರಣೆಮಾಡಿ ಮಾಧ್ಯಮಿಕ ಶಿಕ್ಷಣ ಸುಧಾರಣೆಗಳ ಕುರಿತು ಮಾತನಾಡಿ ಆಬಗ್ಗೆ ಸಿರಿನಂತರ ಸಹಾಯವನ್ನಪೇಕ್ಷಿಸಿದರು. ಮನರಂಜನ ಕಾರ್ಯಕ್ರಮಗಳೊಡನೆ ಸಮಾರಂಭ ಕೊನೆಗೊಂಡಿತು. ಈ ಶಾಲೆಯ ಹಳೆವಿದ್ಯಾರ್ಥಿ ಸಂಘದ ಸಭೆಯು ಶ್ರೀ ಗಣಪತಿ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರ್ ಶ್ರೀ ಬಿ. ಶ್ಯಾಮರಾಯ ಸೆಟ್ಟಿ ಮತ್ತು ಅಧ್ಯಾಪಕ ಶ್ರೀ ಜೋನ್‌ಪಿಂಟೊ ಅವರ ಅಧಿಕಾರಾವಧಿ ಬೆಳೆದುದಕ್ಕಾಗಿ ಅವರನ್ನು ಅಭಿನಂದಿಸುವ ನಿರ್ಣಯವಾಯಿತು.

ಕಟಪಾಡಿ ಸ್ಥಳೀಯ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ ನಡೆದು ಬರುವ ಶಾಂಗಾಳ ವರೆದರಾಯ ನಾಯಕ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ 15 ರಲ್ಲು ಉಡುಪಿ ತಹಶಿಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕರೆಸ್ಪೊಂಡೆಂಟ್ ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತ ಭಾಷಣ ಮಾಡಿದ ಬಳಿಕ ಹೆಡ್ಮಾಸ್ತರ್ ಶ್ರೀ ಕೆ. ರಾಮರಾವ್ ಅಗಳಿ, ಅವರು ಶಾಲಾ ವರದಿಯನ್ನೋದಿದರು. ಸಭಾಧ್ಯಕ್ಷರು ಬಹುಮಾನ ವಿತರಣೆಮಾಡಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಶ್ರೀ ಯು. ಎಸ್. ನಾಯ್ಕರ ವಿದ್ಯಾಪ್ರಚಾರ ಸೇವೆಯನ್ನು ಪ್ರಶಂಸಿಸಿದರು. ಶ್ರೀ ಎ ಹಿರಿಯಣ್ಣ ಸೆಟ್ಟರು ವಂದನೆಗಳನ್ನರ್ಪಿಸಿದರು. ರಾತ್ರಿ ಜನ ಮನರಂಜನ ವಿವಿಧ ಕಾರ್ಯಕ್ರಮಗಳಾದುವು.

ಬೆಳ್ವಾರೆ—ಇದೇ ತಾ. 10ರಲ್ಲು ಶ್ರೀ ಕಳಿಯೂರು ಮಾದಪ್ಪ ಸೆಟ್ಟರ ಪುತ್ರ ಹಾಗೂ ಬೆಳ್ವಾರೆ ಬೋರ್ಡು ಹೈಸ್ಕೂಲಿನ ಸಹಾಯಕ ಉಪಾಧ್ಯಾಯ ಶ್ರೀ ಎನ್. ರಘುನಾಥ ಸೆಟ್ಟಿ, ಬಿ. ಎ. ಎಲ್. ಟಿ, ಅವರು ಶ್ರೀ ಬೆಳ್ಳಿಪ್ಪಾಡಿ ನಾರಾಯಣ ರೈಗಳ ಪ್ರಥಮ ಪುತ್ರಿ ಕುಮಾರಿ ಚಂದ್ರ ಪ್ರಭಾವತಿಯನ್ನು ಪುತ್ತೂರಿನ ಅರುಣಾ ಥಿಯೇಟರಿನಲ್ಲಿ ವಿಜೃಂಭಣೆಯಿಂದ ವಿವಾಹವಾದರು. ನೂತನ ದಂಪತಿಗಳಿಗೆ ಶುಭಾಶಯಗಳು.

ಬಂಟಕಲ್ಲು—ಇಲ್ಲಿ ಇದೇ ತಾ 14ರಲ್ಲು ಉಡುಪಿ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಎನ್. ಕೆ. ಮೆನೋನ್ ಅವರು ಬ್ರಾಂಚ್ ಪೋಸ್ಟಾಫೀಸನ್ನು ತೆರೆಯುವ ಸಮಾರಂಭವನ್ನು ನೆರವೇರಿಸಿದರು.

ಕುಕ್ಕೆಹಳ್ಳಿ:—ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಮಾಮೂಲು ಮೇರೆಗೆ ನಡೆಯುವ ಮಹೋತ್ಸವ ಕಾರ್ಯಕ್ರಮಗಳು ಇದೇ ತಾ. 22ರಲ್ಲು ಪ್ರಾರಂಭವಾಗಿ ತಾ. 26ರ ತನಕ ನಡೆಯಲಿರುವುದೆಂದೂ ಭಕ್ತಾದಿಗಳು ಬಂದು ಶ್ರೀದೇವರ ಗಂಧಪ್ರಸಾದ ಸ್ವೀಕರಿಸಿ, ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಮೊಕ್ತೇಸರ್ ಶ್ರೀ ಕೆ. ಸಂಜೀವ ಹೆಗ್ಡೆಯವರು ಅಪೇಕ್ಷಿಸುತ್ತಾರೆ.

ಮಾಯಿಪ್ಪಾಡಿ—ಸ್ಥಳೀಯ ಸರಕಾರೀ ಬುನಾದಿ ತರಬೇತಿ ವಿದ್ಯಾಲಯದ ವರ್ಧಂತ್ಯುತ್ಸವವು ತಾ. 13ರಲ್ಲು ಕೊಯಮುತ್ತೂರು ವಿಭಾಗದ ಶಾಲೆಗಳ ಡಿವಿಜನಲ್ ಇನ್ಸ್‌ಪೆಕ್ಟರ್ ಶ್ರೀ ವಿ. ಟಿ. ಟೈಟಸ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಉತ್ಸವದ ಅಂಗವಾದ ವಿದ್ಯಾ ಪ್ರದರ್ಶನವನ್ನು ಮಂಗಳೂರು ಸ್ಯೆಂಟ್ ಎಲೋಸಿಯಸ್ ಕಾಲೇಜಿನ ಗಣಿತ ಪ್ರಾಧ್ಯಾಪಕ ಶ್ರೀ ಬಿ ಭುಜಂಗರಾಯರು ಉದ್ಘಾಟಿಸಿದರು ಮುಖ್ಯಾಧ್ಯಾಪಕ ಶ್ರೀ. ಕೆ. ರಾಮಕೃಷ್ಣ ಸೆಟ್ಟರು ವರದಿ ವಾಚನ ಮಾಡಿದರು. ಶ್ರೀ. ಬಿ. ಸಾಂತಪ್ಪ ಸಾಲಿಯಾನರು ಸ್ವಸ್ತಿವಾಚನ ಮಾಡಿದರು. ಶಾಲಾ ಮುಖ್ಯಮಂತ್ರಿ ಶ್ರೀ ಎಚ್. ಭಾಸ್ಕರ್, ಅವರು ಉತ್ತರವಿತ್ತರು. ಪಾರಿತೋಷ ವಿತರಣೆ, ಅಧ್ಯಕ್ಷ ಭಾಷಣ ಆದಬಳಿಕ ನಾಟಕ ಮೊದಲಾದ ವಿವಿಧ ವಿನೋದಾವಳಿಗಳಾದುವು.

ಈ ಶಾಲೆಯ ಹಳೇ ವಿದ್ಯಾರ್ಥಿಗಳಸಂಘದ ವಾರ್ಷಿಕೋತ್ಸವವು ತಾ. 14ರಲ್ಲು ಪೆರಡಾಲ ಮಹಾಜನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಶಾಮ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಕಿನ್ನಿಗೋಳಿ— ಇಲ್ಲಿಯ ಕರ್ನಾಟಕ ಸಂಘದ ಆರನೆಯ ವಾರ್ಷಿಕೋತ್ಸವವು ತಾ. ೧೯–೨೫–೫ರಲ್ಲಿ ಡಾ| ಎಂ. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಲ್ಲಿ ನಡೆಯಿತು. ಸಭಾರಂಭದಲ್ಲಿ ಶ್ರೀ ವಾಸುಕೇರಿಗಾರ ಮತ್ತು ಸಂಗಡಿಗರು ವಾದ್ಯಗೀತೆಯ ಮೂಲಕ ಪ್ರಾರ್ಥನೆಯನ್ನು ನೆರವೇರಿಸಿದರು. ಡಾ| ಐ. ವಿ. ಅಸ್ರಣ್ಣರು ಅಧ್ಯಕ್ಷರ ಆಯ್ಕೆ ಮತ್ತು ಸ್ವಾಗತ ಭಾಷಣಗಳನ್ನು ಮಾಡಿದ ಬಳಿಕ ಶ್ರೀ. ಆ. ಗೌ. ಕಿನ್ನಿಗೋಳಿಯವರು ಅತಿಥಿಗಳ ಪರಿಚಯ ಭಾಷಣವನ್ನು ಮಾಡಿಕೊಟ್ಟರು. ಡಾ| ಎಸ್. ಚಂಪಾರವರ ಸ್ವಸ್ತಿವಾಚನವಾದ ಮೇಲೆ ಶ್ರೀ. ಬಿ. ಗೋವಿಂದರಾವ್ ಎಂ. ಎ ಇವರ ಭಾಷಣವೂ ನಡೆಯಿತು. ಅನಂತರ ಶ್ರೀ. ಬಿ. ಇದಿನಬ್ಬರವರ ಸುಶ್ರಾವ್ಯವಾದ ಕಾವ್ಯವಾಚನದಿಂದ ಸಭಿಕರು ಸಂತೋಷಗೊಂಡರು. ಆ ಮೇಲೆ ಶ್ರೀ ಬಿ. ಶಂಕರ ಭಟ್ಟರು "ಇಂದಿನಕಾದಂಬರಿಗಳು" ಎಂಬ ಕುರಿತು ಉಪನ್ಯಾಸ ವಿತ್ತರು. ಅಧ್ಯಕ್ಷರು "ಸಾಹಿತ್ಯವೂ ಸಮಾಜವೂ" ಎನ್ನುವ ವಿಷಯವನ್ನೆತ್ತಿ ಕಾವ್ಯಮಯ ಶೈಲಿಯಿಂದ ಸರಳಸುಂದರವಾಗಿ ಸಮಾರೋಪ ಭಾಷಣ ಮಾಡಿದರು. ಕೊನೆಯದಾಗಿ ಶ್ರೀ ಶ್ರೀಧರ ಶಾಸ್ತ್ರಿ ಮತ್ತು ಮಾಸ್ಟರ್ ವಿಠಲರ ಶಿಷ್ಯೆಯರ ಸಂಗೀತಗೋಷ್ಠಿ ನಾಟ್ಯಗೋಷ್ಠಿಗಳುಜರಗಿ, ಶ್ರೀ ಕೊಡತ್ತಾರು ಅನಂತಪದ್ಮನಾಭ ಉಡುಪರ ಧನ್ಯವಾದಗಳೊಂದಿಗೆ ಕಾರ್ಯಕ್ರಮಗಳು ಸಮಾಪ್ತಿಗೊಂಡವು.

ಕೈರಬೆಟ್ಟು: ಸ್ಥಳೀಯ ಬೋರ್ಡು ಎಲಿಮೆಂಟರಿ ಶಾಲಾ ಪ್ರಾರಂಭೋತ್ಸವವು ತಾ 10 ರಂದು ನಿಟ್ಟೆ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎನ್. ರಾಘವ ಅಡ್ಯಂತಾಯ ರವರಿಂದ ನೆರವೇರಿಸಲ್ಪಟ್ಟಿತು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಶ್ರೀಪತಿ ಭಟ್ಟರು ಶಾಲೆಯ ಆವಶ್ಯಕತೆ ಕುರಿತು ಮಾತನಾಡಿದರು. ಈ ಶಾಲೆಯ ಸ್ಥಾಪನೆಗೆ ದುಡಿದ ಶ್ರೀ ಕಳ್ಳೆ ನಾರಾಯಣ ರಾಯರು ಶಾಲೆಯ ಅಭಿವೃದ್ಧಿಗಾಗಿ ಊರವರ ಪ್ರೋತ್ಸಾಹವನ್ನು ಅಪೇಕ್ಷಿಸಿದರು. ವಂದನಾರ್ಪಣೆ, ಮಕ್ಕಳಿಗೆ ತಿಂಡಿ ಹಂಚೋಣ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಬಾರಕೂರು: ಇಲ್ಲಿಯ ನೇಶನಲ್ ಹೈಸ್ಕೂಲಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ 17 ರಲ್ಲು ಶ್ರೀ ಬಿ. ಜಗಜ್ಜೀವನದಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ತಾ 18 ರಲ್ಲು ಶಾಲಾ ವರ್ಧಂತ್ಯುತ್ಸವವು ಕುಂದಾಪುರ ಜುಡಿಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಎ. ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೋಟ ವಿವೇಕ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಕೆ. ಲಕ್ಷ್ಮೀನಾರಾಯಣ ಕಾರಂತರು ಗಾಂಧೀಜಿಯವರ ಭಾವ ಚಿತ್ರವನ್ನು ಅನಾವರಣಮಾಡಿದರು. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ 19 ರಲ್ಲು ಕೋಟೇಶ್ವರ ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ ಕೆ. ಸುಬ್ರಾಯ ಉರಾಳರ ಹಿರಿತನದಲ್ಲಿ ಜರಗಿತು.

ರಾಗಿಹಕ್ಲು: ತಾ 14 ರಲ್ಲು ಸ್ಥಳೀಯ ಏಕ ಉಪಾಧ್ಯಾಯ ಶಾಲೆಯೊಂದು ಶ್ರೀ ಆರ್. ಕೆ. ಸಂಜೀವರಾಯರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಚಪ್ರಮಕ್ಕಿ ಅಂತಯ್ಯ ಸೆಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕ ಶ್ರೀ ಕೆ. ಶಂಕರ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಕರ್ಣಾಟಕ ಸಂಘ, ಮದ್ರಾಸು

ತಾ. 10—2—55ರಂದು ಸಂಜೆ 4 ಘಂಟೆಗೆ ಮೈಲಾಪುರದ ಉಡ್ಲೇಂಡ್ಸ್ ಹೋಟೇಲಿನಲ್ಲಿ ಕರ್ಣಾಟಕ ಸಂಘದ ವಾರ್ಷಿಕೋತ್ಸವವು ಮೈಸೂರು ರಾಜಪ್ರಮುಖರಾದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಬಹದೂರ್‌ರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಿತು. ಲಘುಉಪಹಾರದ ಬಳಿಕ ಸಂಘದ ಅಧ್ಯಕ್ಷರು ಮಹಾಪ್ರಭುಗಳನ್ನು ಸ್ವಾಗತಿಸಿದರು. ಸಂಘದ ಸದಸ್ಯರಪರವಾಗಿ ಮಹಾಪ್ರಭುಗಳಿಗೆ ಬೆಳ್ಳಿಯ ಕರಡಿಗೆಯಲ್ಲಿ ಮಾನಪತ್ರವನ್ನು ಅರ್ಪಿಸಲಾಯಿತು. ಕಾರ್ಯದರ್ಶಿಗಳು ಸಂಘವು ನಡೆಸುತ್ತಿರುವ ಬಹುಮುಖವಾದ ಕಾರ್ಯಕಲಾಪಗಳ ವರದಿಯನ್ನೊಪ್ಪಿಸಿದರು. ಮಹಾಪ್ರಭುಗಳು ತಮ್ಮ ಭಾಷಣದಲ್ಲಿ ಮದ್ರಾಸಿನಲ್ಲಿ ನೆಲೆಸಿರುವ ಕನ್ನಡಿಗರು ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ತಮ್ಮ ಸಂತೋಷವನ್ನು ಸೂಚಿಸಿದರು. ಮೈಸೂರು ಸರ್ಕಾರದಿಂದ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆಗಳಿಗೆ ದೊರೆಯುತ್ತಿರುವ ಪ್ರೋತ್ಸಾಹದ ಕುರಿತು ಮಾತನಾಡಿದರು. ಆ ಬಳಿಕ ಶ್ರೀಮತಿ ಲೀಲಾ ಶಿವರಾವ್ ಅವರು, ಶ್ರೀಮತಿ ಸುಮತಿ ರಾಮರಾವ್ ಅವರ ತಬಲಾಹಿಮ್ಮೇಳದೊಂದಿಗೆ ಸುಶ್ರಾವ್ಯವಾಗಿ ಸಿತಾರಾ ಬಾರಿಸಿದರು. ಉಡ್ಲೇಂಡ್ಸ್ ಹೋಟೇಲಿನ ಮ್ಹಾಲಿಕರಾದ ಶ್ರೀ ಕೃಷ್ಣರಾಯರ ಮಕ್ಕಳಿಂದ ನೃತ್ಯ ಪ್ರದರ್ಶನಗಳಾದುವು. ಧನ್ಯವಾದಗಳೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು. ಅಂದಿನ ಸಮಾವೇಶದಲ್ಲಿ ಮದ್ರಾಸಿನ ಎಲ್ಲಾ ಕನ್ನಡಿಗರು ಮಾತ್ರವಲ್ಲದೆ ಹೈಕೋರ್ಟು ನ್ಯಾಯಾಧೀಶರೇ ಮೊದಲಾದ ಅನೇಕ ಅಧಿಕ ಮಹನೀಯರೂ ಆಗಮಿಸಿದ್ದರು.



ಕಥೆ, ಕಾದಂಬರಿ, ನಾಟಕ, ಪ್ರಬಂಧ, ಜೀವನ ಚರಿತ್ರೆ

ಮೊದಲಾದ ನಾನಾ ಬಗೆಯ ಅಮೂಲ್ಯ ಕೃತಿಗಳು!

ಅಗ್ನಿ ವಿದ್ಯೆ	ಶಾಂಡಿಲ್ಯ	0	9
ಕರ್ಣನ ಮೂರು ಚಿತ್ರಗಳು	ಜೋಶಿ	1	4
ಸರೋಜಿನಿ ನಾಯ್ಡು	ನಾ. ಕೃಷ್ಣಮೂರ್ತಿ	0	8
ಕಮಲಾ ನೆಹರು	”	0	8
ಬಾಪೂಜಿ	”	0	8
ಬಾ	”	0	4
ಕಾವ್ಯದ ಕಾರಖಾನೆ	ಎನ್ಕೆ	1	4
ಪಾವನ ಪಾವಕ	ರಂ. ಶ್ರೀ ಮುಗುಳಿ	0	12
ಸನ್ಯಾಸಿನಿ	ಹ. ಪಿ. ಜೋಶಿ	0	10
ಬಾಯ ಬಂಡಾಯ	ಜೇ. ಲಕ್ಷ್ಮಣರಾಯ	1	8
ಮಹಾಶ್ವೇತೆ	ಸ. ರಾಮರಾಯ	0	14
ನಳಪಾಕ	ಶ್ರೀವತ್ಸ	0	12
ಕೈಲಾಜಿ	ಸಂಕಲನ	1	4
ಕೌಮುದೀ	ನಾರಾಯಣ ಕೃಷ್ಣ	1	8
ಗಜರಾ	”	1	0
ಬಿಕ್ಕಾಜಿ (ಶರತ್)	ಮಲ್ಲಾರಿ	1	4
ರೋಹಿಣಿ	ಬಾಲಕವಿ	0	12
ನಮ್ಮ ಬದುಕು	ಆನಂದಕಂದ	0	14
ವಾಗ್ದೇವಿ	ಬೋ. ಬಾಬುರಾವ್	3	0
ಪ್ರೇಮ ಪಥ (ಶರತ್)	ಜೋಶಿ	0	6
ಬ್ರಹ್ಮಚರ್ಯವೇ ಜೀವನ	ಶಿವಾನಂದ ಸ್ವಾಮಿ	3	0
ಮಹಾಸತಿ	ವರದರಾಜರಾವ್	1	4
ನಾಲ್ಕು ಅಧ್ಯಾಯಗಳು	ಧನ್ವಂತ	1	0
ಯಶವಂತರಾಯ	ಪಾ. ರಾ. ಶೆಟ್ಟಿ	0	3
ಜ್ಞಾನ ಪ್ರಭಾ	ಧನ್ವಂತ	1	0
ಹಳ್ಳದಿಂದ ಹಾದಿಗೆ	ಜನಾರ್ಧನ ಗುರ್ಕಾರ್	1	8
ಕವಿತಾಂಕುರ	ದಾಮೋದರ ಬಾಳಿಗ	0	12
ನಿಯತಿ ನಟಿ	ನ. ಯೋಗ	0	6
ಸಮರ್ಪಣೆ	ಕಮಲನಾಭ	1	0
ಜೆಂಗಲವೆ	ಪಾ. ಗಣಪತಿರಾವ್	0	10
ಆಲಾಪನೆ	ಧನ್ವಂತ	0	8
ಸಮಾಜ ದರ್ಶನ	ಇಂದಿರಾತನಯ	1	0
ಭ್ರಾಂತಿಯ ಸುಳಿಯಲ್ಲಿ	ಎಮ್. ಎನ್. ಭಟ್	1	12
ಹೃದಯ ವೀಣೆ	ಮ. ವಿ. ನಾಯಕ್	1	4
ಪುರಸ್ಕಾರ	ಗಣಪತಿ ಮೊಳೆಯಾರ	1	0
ಜೇನಿಯ ಬಾಳ್ವೆ	ರಾ. ಮೊ. ವಿಶ್ವಾಮಿತ್ರ	3	4
ಮೊದ್ದುಮಗು	ನವಗಿರಿನಂದ	0	12
ಭಾವಸಂಧಿ	ರಾಮ ಲಿಂಗಯ್ಯ	0	14
ದ. ಭಾ. ಖನಿಜ ಸಂಪತ್ತು	ಯು. ವಿ. ರಾವ್	2	8
ಪ್ರೌಢಶಾಲಾ ವ್ಯಾಕರಣ	ಕೆ. ಕಾಂತ ಶೈ	1	10
ನಾಡ ಕತೆಗಳು	ಸಂಕಲನ	0	3
ಸ್ವತಂತ್ರ ಜೀವನೋಪಾಯ	ಭಕ್ತ	0	4
ಸಂಶಯ ಪಿಶಾಚಿ	ಕೆ. ಕೆ. ಸೆಟ್ಟಿ	0	10
ಪ್ರೇಮ ಪ್ರವಾಹ	ಸಂಕಲನ	0	8

ಅಪೂರ್ವ ಸಂದರ್ಭ!

ಕಿರಿಯರ ಪ್ರಪಂಚದ ಒಟ್ಟು ರೂ. 36-10-0 ಬೆಲೆಯ 36 ಪುಸ್ತಕಗಳನ್ನು ಒಮ್ಮೆಯೇ ತೆಗೆದುಕೊಳ್ಳುವವರಿಗೆ ಬರೇ ರೂ. 24-0-0 ಕ್ಕೆ ಕೊಡಲಾಗುವುದು.

(ಅಂಚೆವೆಚ್ಚ ಪ್ರತ್ಯೇಕ.)

ದಾಮಾಜಿ ಪಂತ	ಜಿ. ಎಸ್. ಲಕ್ಷ್ಮಣ ಪೈ	0	10
ಅಪ್ ಟು ಡೇಟ್ ಅಮ್ಮಯ್ಯ	ಕೆ. ರಾಚಾರಾವ್	1	0
ರಾಜ ವಲ್ಲಭ	ಹ. ಪಿ. ಜೋಶಿ	0	10
ಶಿಲ್ಪಿ ಚಕ್ರವರ್ತಿ	ಬಾದರಾಯಣ ಮೂರ್ತಿ	0	12
ಕಲ್ಕಿ	ರಮಾಕಾಂತ	0	10
ಕುಶಲವ	ಕೆ. ಕೆ. ಸೆಟ್ಟಿ	0	8
ಹೆಂಡ್ತಿ ಗಂಡನಾದರೆ	,,	0	4
ಪುರುಷ ವಧು	,,	0	4
ವ್ಯಭಿಚಾರಿಣಿ ಯಾರು?	,,	1	0
ಮೂರು ಪ್ರಹಸನಗಳು	ಕೊರಡ್ಕಲ್	1	0
ವಿಷ್ಣುವಿನ ದಶಾಪರಾಧಗಳು		0	12
ಹಿಡಿದ ಹೂ.	ಎಂ. ವಿ. ಸೀತಾರಾಮಯ್ಯ	0	10
ಕೇದಿಗೆವನ	ಶಾ. ರಾ. ಸು.	1	8
ತಬ್ಬಲಿ	ವಿಜಯ ನಾರಸಿಂಹ	0	12
ಶಾಂತೆಯರ ಕನಸು	ಜ. ಗುರ್ಕಾರ್	1	8
ಭಾರತದ ಕರ್ಣ	ಎನ್. ಎಸ್. ಕಿಲ್ಲೆ	0	6
ಮುರಲಿ	ಎನ್. ಎಸ್. ಕಿಲ್ಲೆ	0	12
ಪ್ರಾಚೀನ ತುಳುನಾಡು	ಎನ್. ಎಸ್. ಕಿಲ್ಲೆ	2	0
ಯಮದೂತ. ಪತ್ತೇದಾರಿ.	ಜೀವನ	0	8
ಪ್ರೇಮಾಶ್ರಮ	ಮಲ್ಲಾರಿ	1	8
ಮೃಗಜಲ	ಅ. ಗೊ. ಶೇವಡಿ	1	8
ಕಾಣದಾದ ಹುಡುಗ	ಮಣಿ	0	8
ವಜ್ರಮುಷ್ಟಿ	ಶಾಲಿವಾಹನ	0	8
ಕಾಲೇಜಹುಡಿಗೆ	ಎಂ. ಜೀವನ	0	8
ಗೀತೆಯ ತಿರುಳು	ಚಿದಂಬರಯ್ಯ	0	12
ಅನುಭವಾಮೃತ	ಚಿದಂಬರಯ್ಯ	4	0
ಹಾಸನ ಟೋಪಿ	ಕುರುಳಿ ಭೀಮರಾವ್	1	8
ಡೊನ್ ಕ್ವಿಕ್ಸೋಟ್	ಭಾಷಾಂತರ	1	2
ಪ್ರೇಮಾ	ಭಾ. ಸೂರ್ಯನಾರಾಯಣ	0	10
ಬಾಳಗೀತೆ	ಪ್ರಹ್ಲಾದ	0	8
ಸಮಾಜ ಧರ್ಮದ ಕತೆಗಳು	ನಯೋಗ	1	4
ನ್ಯಾಯಕ್ಷಮೆ	ಟಿ. ಆರ್. ಭಾಗವತ್	0	8
ಐತಿಹಾಸಿಕ ಕಥಾವಳಿ	ಪ. ಮಂಗೇಶರಾವ್	0	10
ಪುತ್ರೋತ್ಸವ	ಚಿದಂಬರ ದೀಕ್ಷಿತ	1	0
ಮುದ್ದಿನ ಕಣಿ	ಚುಳಕಿ	0	12
ವೃಷ್ಟಿಧಾರೆ	ಧನ್ವಂತ	0	12
ವತ್ಸಲಾ	ಮಬ್ಬಾಡಿ ಕಮಲಾಕ್ಷಿ	0	8
ಇವೆತ್	ವೆಂಕೊಬಾಚಾರ್ಯ	1	12
ಕೊತುವಾಲನ ಕಾರಸ್ಥಾನ	ಹೊಸಮನಿ	1	0
ಮುಳ್ಳು ಬೇಲಿ	ಚಾಲುಕ್ಯ	2	0
ಯೌವನ ರಕ್ಷಣೆ	ಹರನಾಮದಾಸ	0	4
ಮಹಾಮಲ್ಲರ ಮುಖ ಭಂಗ		0	4
ಉಡುಗೊರೆ	ಇಂದಿರಾತನಯ	0	12
ಸಾರ್ಥಕವಾದ ಬಾಳು	ನರಸಿಂಹಯ್ಯ	0	4
ಸ್ವದೇಶಿ	ಯು. ಗೋವಿಂದರಾವ್	0	4
ಅಮೃತವಾಹಿನಿ	ಕೌಲಗಿ	0	4
ಪಂಚಾರತಿ–	ವಿವಿಧ ನಾಟಕಕಾರರು	0	8
ನವೀನ ನಾಟಕಗಳು	,,	0	7
ಸುಧಾ	ಬಿ. ಪದ್ಮಾ ಬಾಳಿಗ	0	8
ಜೀವನ ಶಿಕ್ಷಣ	ಕೆ. ಕೆ. ಸೆಟ್ಟಿ	1	2
ಅವಿಲು	ಅಂತರಂಗದಿಂದ ಆಯ್ದ	2	0
ಪಂಚಕಜ್ಜಾಯ	,,	1	8
ಧನದ ಬಿಂದಿಗೆ	,,	1	8
ಗೀತಾ ಗಾಂಭೀರ್ಯ	ಶ್ರೀರಂಗ	3	8
ಗಾಂಧೀ ದರ್ಶನ		1	0
ಶ್ರೀ ರಾಮಕೃಷ್ಣ ಉಪನಿಷತ್	ಚಕ್ರವರ್ತಿ ರಾಜಗೋಪಾಲಾಚಾರಿ	1	4
ಸ್ವಾಮಿ ವಿವೇಕಾನಂದ	ಕುವೆಂಪು	3	8

ಈಪರಿಯ ಸೊಬಗು	ವಿ. ಎಂ. ಇನಾಂದಾರ್	2	0
ಅನಾದಿ	ಶ್ರೀರಂಗ	1	8
ಗೀಜುಗರೆ	ರಾಮಚಂದ್ರ ಕೊಟ್ಟಲಗಿ	1	4
ಹೊಸಿನ ಹುಡುಗಿ	ರಂಗರಾವ್ ದೇಶಮುಖ	1	0
ಅನುರಕ್ತೆ	ವ್ಯಾಸರಾಯ ಬಲ್ಲಾಳ	3	0
ರಕ್ತದ ರೂಪಾಯಿ	ಸೇವ ನಮಿರಾಜಮಲ್ಲ	1	8
ಪರಿಹಾರ	ದತ್ತಾತ್ರೇಯ ಕುಲಕರ್ಣಿ	2	0
ಅದ್ಭುತ ರಮ್ಯ ಕತೆಗಳು	ಶಾ. ಸ. ಮುಳಗಿ	0	12
ಏಳು ಕನ್ನಿಕೆಯರು	ಗೀತಾದೇವಿ ಕುಲಕರ್ಣಿ	0	5
ಬಾಪೂಜಿಯವರ ಸತ್ಸಂಗ	ಕೃ. ನಾ. ಗೋಸಾವಿ	0	10
ಕರುಣ ಕಥೆ	ಅನಂತ ಮಹಿಪತಿ	1	0
ಅದೃಷ್ಟದ ಆಟ	ಬಿ. ಶಂಕರ ಭಟ್ಟ	0	4
ಗ್ರಿಮ್ ಸಹೋದರ ಕತೆಗಳು	,,	0	6
ಗ್ರೀಕ್ ವೀರರು	,,	0	10
ಅತಿಆಸೆ ಗತಿಕೇಡು	,,	0	4
ಜಂತುಗಳ ಜಾಣ್ಮೆ	,,	0	4
ಆಂಡರ್ಸನ್ ಹೇಳಿದ ಕತೆಗಳು	,,	0	6
ಪ್ರಾಣಿಗಳ ಪ್ರತಾಪ	,,	0	4
ಗ್ರೀಸಿನ ಕತೆಗಳು	,,	0	5
ನಳ-ದಮಯಂತಿ	,,	0	8
ಯುರೋಪಿನ ಕತೆಗಳು	,,	0	5
ಪರ್ಶಿಯದ ಕತೆಗಳು	,,	0	5
ಭಾರತ ಜ್ಯೋತಿ ಮಹಾತ್ಮಾ	ದಾಮೋದರ ಬಾಳಿಗ	0	4
ಗೀತೆಯ ಕೈಗನ್ನಡಿ	ಹೊ. ಚಿದಂಬರಯ್ಯ	0	8
ವೈಯಕ್ತಿಕ ಆರೋಗ್ಯ	ಬಾಪಟ	0	2
ಪ್ರತೀಕಾರ	ರಂಗನಾಥ	0	8
ಆದರ್ಶ ಆರೋಗ್ಯಖಾತೆ	ಬಾಪಟ	0	2
ಶಂಬೂಕ ವಧೆ	ಎಸ್. ಎಸ್. ಜೈನಿ	0	2
ಮಣಿಮುತ್ತುಗಳು	ತಿ. ಶೇ. ಗಾಣಿ	2	4
ಒಡಹುಟ್ಟಿದವರು	ಕಾರಂತ	2	8
ದಿವ್ಯ ಜೀವನ	ವರ್ಧಮಾನ ಹೆಗ್ಡೆ	1	8
ಜೀವನ ಗೀತಾಂಜಲಿ	ವರ್ಧಮಾನ ಹೆಗ್ಡೆ	1	8
ಸಂತಸಖ	ಹರಿದಾಸ್	0	4
ಹೆಂಡ್ತಿ ಪೂಜೆ	ಎಸ್. ಎಸ್. ಮೂರ್ತಿ	0	4
ಸೌಂದರ್ಯ ವಿಚಾರ	ಶಂ. ಬಾ. ಜೋಶಿ	0	4
ದ್ರೋಹಿ	ಹರಿದಾಸ್	1	0
ಸ್ಕೂಲ್ ಡೇ	ಹಾ. ಮಾಸ್ತರ	0	6
ಭಾಗವತದ ಕೆಲವು ಕತೆಗಳು	ಚಿದಂಬರಯ್ಯ	1	4
ರಾಮಾಯಣ	,,	1	12
ಕೆಲವು ಉಪನ್ಯಾಸಗಳು	,,	1	0

ಇನ್ನೂ ಹಲವಾರು ಪುಸ್ತಕಗಳು ದೊರೆಯುತ್ತವೆ
ಕೆಟಲಾಗಿಗೆ ಬರೆಯಿರಿ. ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುವರ್ಣ ಸಂಧಿ!

ಅಂತರಂಗ ಕಾರ್ಯಾಲಯದವರು ಪ್ರಕಟಿಸಿದುವ ಒಟ್ಟು ರೂ. 34-8-0 ಬೆಲೆಯ 100 ಪುಸ್ತಕಗಳನ್ನು ಒಮ್ಮೆಯೇ ಕೊಳ್ಳುವವರಿಗೆ ಬರೇ ರೂ. 22-8-0 ಕ್ಕೆ ಕೊಡಲಾಗುವುದು.

(ಅಂಚೆವೆಚ್ಚ ಪ್ರತ್ಯೇಕ)

(೩ನೇ ಪುಟದಿಂದ)

ಸ್ವರೂಪದ ಶಾಸನವನ್ನು ತರುವ ಬಗ್ಗೆ ಆಗ್ರಹ ಪೂರ್ವಕವಾಗಿಯೂ ಮಾತನಾಡಿದರು.

ಮಸೂದೆಯ ಮೇಲಿನ ಚರ್ಚೆಯಲ್ಲಿ ಪ್ರತಿ ಪಕ್ಷದ ಕೆಲವರು ಸದಸ್ಯರೂ ಜಿಲ್ಲೆಯ ಹೊರಗಿನ ಕಾಂಗ್ರೆಸು ಸದಸ್ಯರೂ ಭಾಗ ವಹಿಸಿದ್ದರು. ಜಿಲ್ಲೆಯ ಪ್ರಜಾ ಸಮಾಜವಾದಿ ಸದಸ್ಯರಲ್ಲಿ ಒಬ್ಬರಾದ ಶ್ರೀ ನಾರಾಯಣ ನಂಬಿಯಾರರು ಕಳೆದ ಏಳೂವರೆ ವರ್ಷಗಳಲ್ಲಿ ಶಾಶ್ವತ ಸ್ವರೂಪದ ಮಸೂದೆಯನ್ನು ತರಲು ವಿಳಂಬಿಸಿದ ಸರಕಾರವು ಇನ್ನೊಂದು ವರ್ಷದೊಳಗೆ ಅಂಥ ಕ್ರಮ ತೆಗೆದುಕೊಳ್ಳುವುದೆಂಬ ಭರವಸೆ ಏನು? ಎಂದು ಕೇಳಿದರು. ಮಧ್ಯಂತರ ಕ್ರಮಕ್ಕೆಯೇ ಇನ್ನೊಂದು ವರ್ಷ ಜೀವದಾನ ಮಾಡಿ ಶಾಶ್ವತ ಶಾಸನವನ್ನು ಹಿಂದಕ್ಕೆ ತಳ್ಳುವುದೆಂದರೆ ಒಕ್ಕಲುಗಳ ಕಷ್ಟವನ್ನು ಹೆಚ್ಚಿಸುವುದೆಂದೇ ಅರ್ಥ ಎಂದವರು ಆಕ್ಷೇಪಿಸಿದರು. ಮಂತ್ರಿಗಳು ಜಿಲ್ಲೆಯನ್ನು ಇತ್ತೀಚೆಗೆ ಸಂದರ್ಶಿಸಿದಾಗ ಧನಿ--ಒಕ್ಕಲುಗಳ ಸಂಬಂಧವು ಸೌಹಾರ್ದಯುತವಾಗಿದೆಯೆಂದು ಭೂಮಾಲಿಕರು ಮನವಿ ಒಪ್ಪಿಸಿದ ಸುದ್ದಿ ತಮಗೆ ಆಶ್ಚರ್ಯವನ್ನು ಮಾಡಿದೆಯಾಗಿ ಅವರು ಹೇಳಿದರು. ಸತ್ಯ ಸ್ಥಿತಿಯು ಹೀಗಿಲ್ಲ ಎಂದವರು ಸರಕಾರಕ್ಕೆ ತಿಳಿಸಿದರು. ಮಲಬಾರಿನ ಕಮ್ಯೂನಿಸ್ಟ ಸದಸ್ಯರೊಬ್ಬರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಾಲಿಕರು ಒಕ್ಕಲುಗಳ ಲೂಟಿ ಮಾಡುತ್ತಿದ್ದಾರೆಂದು ಕಠಿಣಶಬ್ದವನ್ನು ಪ್ರಯೋಗಿಸಿ ಸರಕಾರದವರು ತಡಮಾಡುತ್ತಿರುವುದನ್ನು ದೂರಿದರು. ತಿರುಚಿಯ ಕಾಂಗ್ರೆಸು ಸದಸ್ಯರೊಬ್ಬರು ರಾಜ್ಯದ ಎಲ್ಲೆಡೆಯಲ್ಲೂ ಒಕ್ಕಲು ಮತ್ತು ಧನಿಗಳ ಸಂಬಂಧ ಕೆಟ್ಟಿದೆಯೆಂದೂ ಆದುದರಿಂದ ವ್ಯಾಪಕ ಶಾಸನ ಕ್ರಮವನ್ನು ತೆಗೆದುಕೊಳ್ಳುವ ಆಗತ್ಯ ತುಂಬ ಇದೆಯೆಂದೂ ಹೇಳಿದರು. ಮೇಲ್ಮನೆಯಲ್ಲಿ ಪ್ರತಿ ಪಕ್ಷದ ಉಪನಾಯಕರಾದ ಡಾ|ವಿ.ಕೆ.ಜೋನರು ಶಾಶ್ವತ ಸ್ವರೂಪದ ಶಾಸನ ಕ್ರಮವನ್ನು ತೆಗೆದುಕೊಳ್ಳುವ ದಿಸೆಯಲ್ಲಿ ಯಾವದೇ ಹೆಜ್ಜೆಯನ್ನಿಡದೆ ಮಧ್ಯಂತರಕಾಲಕ್ಕಾಗಿ ಮಾಡಿದ ಕಾಯಿದೆಗೆ ಅವಧಿ ಮುಗಿದಹಾಗೆಲ್ಲ ಜೀವದಾನ ಮಾಡುತ್ತಾ ಹೋಗುವುದು ಈ ಸಭೆಗಾಗಲೀ ಸರಕಾರಕ್ಕಾಗಲೀ ಭೂಷಣಪ್ರಾಯವಾದುದಲ್ಲ. ಶಾಶ್ವತ ಸ್ವರೂಪದ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆಯೆಂಬ ವಿಷಯದಲ್ಲಿ ಯೋಗ್ಯ ಮಾಹಿತಿಯನ್ನು ಸರಕಾರ ಕೊಡಬೇಕು ಎಂದರು.

ಸ್ಫೂರ್ತಿದಾಯಕವಾದ ಹಾಗೂ ವಾಸ್ತವಾಂಶಗಳನ್ನು ಪ್ರಕಟಿಸುವ ಮೇಲಿನ ಭಾಷಣಗಳಲ್ಲಿ ವ್ಯಕ್ತಗೊಂಡ ಅಂಶಗಳಿಗೆ ಮಂತ್ರಿಗಳು ಕೊಟ್ಟ ಉತ್ತರ ಮಾತ್ರ ಸಪ್ಪೆಯಾಗಿತ್ತೆಂದರೆಯೇ ಚೆನ್ನ. ವ್ಯಾಪಕವಾದ ಶಾಶ್ವತ ಸ್ವರೂಪದ ಮಸೂದೆಯು ಸರಕಾರದ ಗಜೇಟಿನಲ್ಲಿ ಪ್ರಕಟಿಸಲು ಸಿದ್ಧಗೊಂಡು ನಿಂತಿದ್ದಾಗಲೇ ಏನೋ ತೊಂದರೆಯೊದಗಿತೆಂದು ಅವರು ತಮ್ಮ ಉತ್ತರದಲ್ಲಿ ಹೇಳಿದರೂ — ಆ ತೊಂದರೆ ಅಷ್ಟು ಆಕಸ್ಮಿಕವಾಗಿ ಹೇಗುಂಟಾಯಿತೆಂಬ ಗೂಢವನ್ನು ಅವರು ಹೊರಗೆಡಹಲಿಲ್ಲ. ಅಳಿಯ ಸಂತಾನ ಪದ್ಧತಿಯೆಂಬ ವಿಶಿಷ್ಟ ಆನುವಂಶಿಕ ಕ್ರಮದ ವಿಚಾರವನ್ನೆ ಅವರು ವಿಳಂಬಕ್ಕೆ ನೆಪವಾಗಿ ಕೊಟ್ಟರು— ಆದರೆ ಸರಕಾರಕ್ಕೆ ಅದು ಅಷ್ಟು ತಡವಾಗಿ ತಿಳಿದು ಬಂದ ವಿಷಯವಾಗಿರಲು ಸಾಧ್ಯವಿಲ್ಲ. ಮಲಬಾರಿನಲ್ಲಿ ಮರುಮಕ್ಕತ್ತಾಯಂ ಮತ್ತು ದಕ್ಷಿಣ ಕನ್ನಡದಲ್ಲಿ ಅಳಿಯ ಸಂತಾನ ಪದ್ಧತಿಗಳಿರುವುದನ್ನು ಸರಕಾರಕ್ಕೆ ಸಾರ್ವಜನಿಕರು ಈಗ ತಿಳಿಸಿ ಹೇಳ ಹೋಗುವುದೇನು ಅಗತ್ಯದ್ದಲ್ಲ —ಸರಕಾರಕ್ಕೆ ಅದು ಎಂದೋ ತಿಳಿದಿರಬೇಕಾದ ವಿಷಯ. ಇದೊಂದು ಅಂಶವನ್ನು ಬಿಟ್ಟರೆ ಉಳಿದ ಮಟ್ಟಿಗೆ ಮಂತ್ರಿಗಳು ಶಾಶ್ವತ ಸ್ವರೂಪದ ಕ್ರಮಕ್ಕೆ ಅನುಕೂಲಾಭಿಪ್ರಾಯವನ್ನೆ ಪ್ರಕಟಿಸಿದರು—ಧನಿ–ಒಕ್ಕಲುಗಳ ಸಂಬಂಧ ಚೆನ್ನಾಗಿದೆಯೆಂದೂ ಅವಸರದ ಕ್ರಮಗಳ ಆಗತ್ಯವಿಲ್ಲವೆಂದೂ ಭೂಮಾಲಿಕರು ನನಗೆ ಮನವಿ ಒಪ್ಪಿಸಿದರು. ಆದರೆ ಹಾಗೆ ಮನವಿಯೊಪ್ಪಿಸುವ ಜನರ ಸಂಖ್ಯಾ ಪ್ರಮಾಣದಿಂದಾಗಲೀ ಬರುವ ತಂತಿಗಳಿಂದಾಗಲೀ ಸರಕಾರ ತನ್ನ ನಿಶ್ಚಯವನ್ನು ಬದಲಿಸದು. ಕೃಷಿ ಪದ್ಧತಿಯಲ್ಲಿ ಸುಧಾರಣೆ ಮಾಡಬೇಕೆಂಬ ತತ್ವಕ್ಕೆ ಅದು ಅಂಟಿಕೊಳ್ಳುವುದು ಎಂದವರು ಭರವಸೆಯಿತ್ತರು. ಶಾಶ್ವತ ಶಾಸನ ಕ್ರಮವು ವರ್ಷಗಟ್ಟಳೆಯ ಮಾತಲ್ಲ-- ಕೆಲವೇ ತಿಂಗಳುಗಳಲ್ಲಿ ಬರುವ ವಿಷಯ. ಒಕ್ಕಲುಗಳಿಗೆ ರಕ್ಷಣೆ ಕೊಡಬೇಕೆಂಬ ಕುರಿತು ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದುದರಿಂದ ಮಸೂದೆಗೆ ಒಪ್ಪಿಗೆ ನೀಡಬೇಕು ಎಂದವರು ಕೇಳಿಕೊಂಡರು. ಅಂತೂ ಶಾಸನ ಸಭೆಯ ಎರಡೂ ಮನೆಗಳಲ್ಲಿ ಮಸೂದೆ ಮಂಜೂರಾಯಿತು. ಮುಂದಿನ ಹೆಜ್ಜೆ ಯಾವುದೇ ಆಗಲಿ — ಈಗಿನ ಮಟ್ಟಿಗೆ ಹೂವಿನ ಬದಲು ಅದರ ಎಸಳಷ್ಟೇ ಒಕ್ಕಲುಗಳಿಗೆ ಸಿಕ್ಕಿತು.

(೧ನೇ ಪುಟದಿಂದ)

ಮಹಾತ್ಮಾಗಾಂಧೀಯವರು ಅಂಥ ಪವಾಡವನ್ನು ಮಾಡಿಯೂ ತೋರಿಸಿದ್ದರು. ತುಂಬಿದ ಸಭೆಯಲ್ಲಿ ಅವರು ಹರಿಜನ ಸೇವಕ ನಿಧಿಗೆ ಬಂಗಾರವನ್ನು ಕೇಳುತ್ತಿದ್ದಾಗ ಭಾರತದ ಸಾವಿರಾರು ಮಹಿಳೆಯರು ಕಿವಿಯ ಬೆಂಡೋಲೆ, ಕೈಯ ಬಳೆ, ಕೊರಳಿನ ಹಾರ—ಎಲ್ಲವನ್ನೂ ಎತ್ತಿಕೊಟ್ಟಿದ್ದರು. ಅಷ್ಟೇಕೆ, ಕಳೆದ ವರ್ಷ ಪ್ರವರ್ತಿಸಲಾದ ರಾಷ್ಟ್ರೀಯ ಯೋಜನಾ ಸಾಲಕ್ಕೆ ನೂರಾರು ಮಹಿಳೆಯರು ತಮ್ಮ ಆಭರಣಗಳನ್ನೇ ಚಂದಾವಾಗಿ ತೆತ್ತಿದ್ದರು.

ಜಾಗೃತ ಮನೋಭಾವದ ಸಲ್ಲಕ್ಷಣವೆಂದು ಇದನ್ನು ವರ್ಣಿಸಲು ನಮಗೆ ಸಂತೋಷವಾಗುತ್ತದೆ. ನಾವು ಮಗುವನ್ನು ಬಂಗಾರವೆಂದು ಕರೆದು ಮುದ್ದಿಸುತ್ತೇವೆ — ಆದರೆ ಆ ಮಗು ಉತ್ಪಾದಕ ಕೆಲಸಗಳಲ್ಲಿ ಪ್ರವೃತ್ತವಾಗದಿದ್ದರೆ, ದುಡಿದು ಸಂಪಾದಿಸಲು ಮುಂದಾಗದೆ ಹೋದರೆ, ಮಗುವಿನ ಮೇಲಿನ ಮಮತೆ ಉಳಿಯುವುದಿಲ್ಲ. ಸಂಗ್ರಹಿಸಿಟ್ಟ ಚಿನ್ನ ಬೆಳ್ಳಿಯ ವಸ್ತುಗಳು ನಿರುದ್ಯೋಗಿ ಮನುಷ್ಯನನ್ನೆ ಹೋಲುತ್ತವೆ. ಅವುಗಳಿಂದ ಪ್ರಯೋಜನವೇನೂ ಇಲ್ಲ. ಎಷ್ಟೋ ವೇಳೆ ಹಾನಿಯೇ ಆಗುತ್ತದೆ - ಏಕೆಂದರೆ ಚಿನ್ನ ಬೆಳ್ಳಿಗಳ ಬೆಲೆಯಲ್ಲಿ ಏರಿಳಿತಗಳು ಕ್ಷಿಪ್ರವಾಗಿವೆಯಲ್ಲದೆ, ಅವು ದಿವಾಳಿ ಖೋರತನಕ್ಕೂ ನಮ್ಮನ್ನು ಗುರಿಮಾಡುತ್ತವೆ. ರೈತನೊಬ್ಬ ಪ್ರೀತಿಯಿಂದ ಆಭರಣಗಳಲ್ಲಿ ತನ್ನ ಹಣವನ್ನು ನಿಕ್ಷೇಪಿಸಬಹುದು; ಆದರೆ ಅದನ್ನು ಗರ್ಜಿಗಾಗಿ ಮಾರುವ ಪ್ರಸಂಗ ಬಂದಾಗ ಅದಕ್ಕೆ ಅರ್ಧದಷ್ಟು ಬೆಲೆ ಬರುವುದಿಲ್ಲ! ಆಪತ್ಕಾಲದಲ್ಲಿ ಚಿನ್ನ ಬೆಳ್ಳಿಗಳ ಸಂಗ್ರಹಗಳಿಂದ ನಮಗೆ ನಷ್ಟವೇ ಹೊರತು ಲಾಭವೇನೂ ಆಗುವುದಿಲ್ಲ. ಚಿನ್ನಕ್ಕೆ ಹಾಕಿದ ಹಣವನ್ನೆ ಬೇಂಕಿನಲ್ಲಿಟ್ಟರೆ, ಅಥವಾ ಉಳಿತಾಯ ಪತ್ರಗಳಲ್ಲಿ ನಿಕ್ಷೇಪಿಸಿದರೆ, ರಾಷ್ಟ್ರದ ಅಭಿವೃದ್ಧಿ ಪ್ರಯತ್ನಗಳಿಗೆ ಬೇಕಾದ ಬಂಡವಾಳವು ಸರಕಾರಕ್ಕೆ ಒದಗುತ್ತದೆ; ಹೀಗಾಗಿ ರಾಷ್ಟ್ರದ ಒಟ್ಟು ಸಂಪತ್ತು ಹೆಚ್ಚುತ್ತದೆ; ಪ್ರಜೆಗಳ ಜೀವನ ಮಟ್ಟ ಉನ್ನತವಾಗುತ್ತದೆ. ಜೊತೆಗೆ ಹಣವಿಟ್ಟವನಿಗೆ ಅಸಲಿನೊಡನೆ ಬಡ್ಡಿಯೂ ಸಿಗುತ್ತದೆ. ಮುಂಬಯಿಯ ಹಣಕಾಸಿನ ಸಚಿವ ಡಾ. ಜೀವರಾಜ ಮೆಹತರು ವ್ಯಕ್ತಪಡಿಸಿದ ಮೇಲಿನ ಅಭಿಪ್ರಾಯವು ಚಿನಿವಾರ ಕುಟುಂಬಗಳಿಗೆ ರುಚಿಸಲಿಕ್ಕಿಲ್ಲ—ಆದರೆ ರಾಷ್ಟ್ರದ ಪ್ರಗತಿಯ ದೃಷ್ಟಿಯನ್ನಿಟ್ಟುಕೊಂಡವರಿಗೆ ಅದು ಸಾಧುವಾದುದೆಂದೇ ತೋರುತ್ತದೆ. ಭಾರತದ ಈಗಿನ ಹಾಗು ಮುಂದಿನ ಪೀಳಿಗೆ ಮೆಹತರ ಉಪದೇಶ ವಾಕ್ಯವನ್ನು ನಿತ್ಯಜೀವನದಲ್ಲಿ ರೂಢಿಸಿಕೊಳ್ಳುವದೆಂದು ಆಶಿಸೋಣ!

— ಕಾರ್ತಿಕೇಯ.

ಬೊಂಬಾಯಿಯ ಬೊಂಬಾಯಿ ಸಿಟಿ ಸಿವಿಲ್ ಕೋರ್ಟಿನಲ್ಲಿ

ವ್ಯಾಜ್ಯ ನಂಬ್ರ 307/1952

1. ದಿಗಂಬರ ಶಾಂತಾರಾಮ ನ್ಯಾಕ, ಹಿಂದೂ, ಬೊಂಬಾಯಿ ಫೋರ್ಟಿನ ಹೊರಗಿನ ನ್ಯೂ ಚಿಂಚ್ ಬಂದರ್ ರೋಡಿನ ದತ್ತಾ ಬಿಲ್ಡಿಂಗಿನ 47/C ರಲ್ಲಿ ವಾಸಿಸುವವರು.
2. ವಸಂತ ಶಾಂತಾರಾಮ ನ್ಯಾಕ, ಬೊಂಬಾಯಿ ಫೋರ್ಟಿನ ಹೊರಗಿನ ನ್ಯೂ ಚಿಂಚ್ ಬಂದರ್ ರೋಡಿನ ದತ್ತಾ ಬಿಲ್ಡಿಂಗಿನ 47/Cರಲ್ಲಿ ವಾಸಿಸುವವರು.

} ವಾದಿರು.

ಎದ್ರಿರು

1. ಭೋಜ ಬರೂ ಸೆಟ್ಟಿ.
2. ವಾಸು ಬರೂ ಸೆಟ್ಟಿ, ಬೊಂಬಾಯಿ ಫೋರ್ಟಿನ ಹೊರಗೆ ನ್ಯೂ ಚಿಂಚ್ ಬಂದರ್ ರೋಡಿನ ದೊಸ್ಸಾ ಬಿಲ್ಡಿಂಗಿನ ಸಮರ್ಥ ಬೋರ್ಡಿಂಗ್ ಹೌಸಿನ ರೋಮ್ ನಂಬ್ರ 3 ಮತ್ತು 4ರಲ್ಲಿ ವಾಸಿಸುವವರು.
3. ಬಾಯಿ ಶಂಕರಿ ನಾಗಪ್ಪ ಸೆಟ್ಟಿ—ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ಫಲಿಮಾರು ಪೋಸ್ಟು, ನಂದಿಕೂರು ಗ್ರಾಮದಲ್ಲಿರುವವರು.

} ಪ್ರತಿವಾದಿ

ಮೇಲ್ಕಾಣಿಸಿದ 2ನೇ ಪ್ರತಿವಾದಿ ವಾಸು ಬರೂ ಸೆಟ್ಟರಿಗೆ—

ಮೇಲ್ಕಂಡ ವಾದಿರು ಮೇಲ್ಕಂಡ ಕೋರ್ಟಿನಲ್ಲಿ ನಿಮ್ಮಿಂದ ಬರತಕ್ಕ ರೂಪಾಯಿ 4653—12—0 ಮತ್ತು ಬಡ್ಡಿ ಹಾಗೂ ಕೋರ್ಟು ಖರ್ಚಿನ ಬಗ್ಗೆ ದಾಖಲು ಮಾಡಿದ ವ್ಯಾಜ್ಯವು ಅಖೈರು ತೀರ್ಮಾನಕ್ಕೆ ತಾ, 23—3—1955ರಲ್ಲು ಪೂರ್ವಾಹ್ನ 11 ಗಂಟೆಗೆ ಇಡಲಾಗಿದೆ, ಆದುದರಿಂದ ನೀವು ಯಾ ನಿಮ್ಮಿಂದ ಅಧಿಕಾರ ಹೊಂದಿದ ವಕೀಲರಾಗಲೀ ಸದ್ರಿ ದಿವಸದಲ್ಲಿ ದಾವೆಗೆ ಸಂಬಂಧಿಸಿದ ರಿಕಾರ್ಡು ವ ಸಾಕ್ಷ್ಯಗಳನ್ನು ಹಾಜರುಪಡಿಸಿ ವಾದಿಕಡೆಯ ಪ್ರಶ್ನೆಗಳನ್ನು ಉತ್ತರಿಸಬಹುದು. ಇದಕ್ಕೆ ತಪ್ಪಿದರೆ ಏಕಪಕ್ಷೀಯವಾಗಿ ದಾವಾ ತೀರ್ಮಾನಿಸಲಾಗುವುದೆಂದು ಈ ಮೂಲಕ ನಿಮಗೆ ನೋಟೀಸು ಕೊಡೋಣಾಗಿಯದೆ, ತಿಳಿದಿರಲಿ.

18—12—1954.

(ಸಹಿ) ಎಸ್. ಇ. ಇಂಜಿನಿಯರ್
ರಿಜಿಸ್ಟ್ರಾರ್.

● ಬೊಂಬೆ ಸಿಟಿ ಸಿವಿಲ್ ಕೋರ್ಟು ಮೋಹರು

ಎಫ್. ಆರ್. ಜಿನವಾಲಾ
ಸೀಲರ್.

ಎನ್. ವಿ ಆಥಿಯ
ವಾದಿಪರ ಎಡ್ವೊಕೇಟ್.

18—12—1954.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪಾಯಸ್ ಬಿಲ್ಡಿಂಗ್, ಹಂಪನ್‌ಕಟ್ಟಾ, ಮಂಗಳೂರು.

ಇನ್ಸ್ಪೆಕ್ಟರರು, ಒರ್ಗನೈಜರರು ಮತ್ತು ಎಲ್ಲಾ ತರದ ಏಜಂಟರರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.

ಹೊಸತಾಗಿ ನಿರ್ಧರಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಿವೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:—

B. B. SHETTY, B. A., LL. B.
Chairman.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ, ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಸಂಸ್ಕೃತಿಯ ಸಲ್ಲಕ್ಷಣ

ಅಂತರಂಗ ಪರಿಪಾಕದ ಸಾಧನ

ಬರೆದವರು: ಶ್ರೀ. ಡಿ. ವಿ. ಗುಂಡಪ್ಪ

ಸಂಸ್ಕೃತಿ ಎಂಬುದು ಒಂದು ಹಳೆಯ ಪದಾರ್ಥದ ಹೊಸ ಹೆಸರು. ಬಾಳ್ವೆಯನ್ನು ಹದಪಡಿಸುವುದು ಎಂದು ಅದರ ಅರ್ಥ. ನಾವು ಎಂತಹ ನಯವಿನಯಗಳಿಂದ,— ಎಂತಹ ಸವ್ರರು ನಾಜೂಕುಗಳಿಂದ ಬಾಳ್ವೆಯನ್ನು ನಡೆಸಿದರೆ ಅದರಲ್ಲಿ ಹುಳಿ ಕಹಿಗಳು ಕಡಿಮೆಯಾಗಿ ಸ್ವಾರಸ್ಯ ಹೆಚ್ಚುತ್ತದೋ ಆ ತೆರದ ಮನೋಭಾವವನ್ನೂ ನಡತೆ ನುಡಿಗಳನ್ನೂ ಸಂಪಾದಿಸಿಕೊಳ್ಳುವುದು ಸಂಸ್ಕೃತಿ. ಅದು ಒಂದು ಬಗೆಯ ಆತ್ಮ ಶಿಕ್ಷಣ.

ಈ ಪ್ರಪಂಚದಲ್ಲಿ ಪ್ರತಿಯೊಬ್ಬನೂ ಪ್ರತಿಕ್ಷಣವೂ ಯಾವುದೋ ಒಂದು ಬಗೆಯಲ್ಲಿ ಪ್ರಪಂಚದೊಡನೆ ಸಂಬಂಧ ಬೆಳೆಸಿಕೊಂಡಿರಬೇಕಷ್ಟೇ? ಅವನು ಅದರಿಂದ ತೆಗೆದುಕೊಳ್ಳಬೇಕಾದದ್ದು ಒಂದಷ್ಟು ಯಾವಾಗಲೂ ಇದ್ದೇ ಇರುತ್ತದೆ. ಅದಕ್ಕೆ ಅವನು ಕೊಡತಕ್ಕದ್ದು ಒಂದಷ್ಟು ಇದ್ದೇ ಇರುತ್ತದೆ. ಈ ಪರಸ್ಪರ ವ್ಯಾಪಾರದಲ್ಲಿ ಅವನು ಹೇಗೆ ನಡೆದುಕೊಂಡರೆ ಚೆನ್ನವೋ, ಹೇಗೆ ನಡೆಸುಕೊಂಡರೆ ಸೊಗಸೋ, ಎಂತಹ ನೀತಿಯಿಂದ ಒಳ್ಳೆಯದಾಗುತ್ತದೆಯೋ, ಅದನ್ನು ತಿಳಿದು ಅನುಸರಿಸುವುದು ಸಂಸ್ಕೃತಿ.

ಹಾಗಾದರೆ ಚೆನ್ನ ಅಂದರೆ ಏನು? ಸೊಗಸು ಎಂಬುದು ಯಾವುದು? ಒಳ್ಳೆಯದೆಂಥಾದ್ದು? ಯಾವುದು ನಮಗೆ ಇಷ್ಟವೋ ಅದೇ ಸೊಗಸು; ಅದೇ ಒಳ್ಳೆಯದು ಎಂದು ಹೇಳೋಣವೇ? ಮಗು ಯಾವಾಗಲೂ ಮಿಠಾಯಿ ಬೇಕೆನ್ನುತ್ತದೆ. ಅದು ಒಳ್ಳೆಯದೇ? ನಾವು ರೈಲಿನಲ್ಲಿ ಕೂಡಲು ಹೋದಾಗ ಬಂಡಿಯಲ್ಲಿ ಜನ ಭರ್ತಿಯಿದ್ದರೆ ಅವರಲ್ಲಿ ಒಬ್ಬನನ್ನು ಹೊರಗೆ ತಳ್ಳಿ ಹಾಕಬೇಕೆನ್ನಿಸುತ್ತದೆ. ಅದು ಒಳ್ಳೆಯದೇ? ಬೀದಿಯಲ್ಲಿ ನಡೆಯುತ್ತಿರುವಾಗ ಶ್ಲೇಷ್ಮ ಒತ್ತಿಕೊಂಡು ಬಂದರೆ ಅದನ್ನು ಎಲ್ಲೆಂದರಲ್ಲಿ ಹೊರಗೆಡವಬೇಕೆನ್ನಿಸುತ್ತದೆ. ಅದು ಒಳ್ಳೆಯದೇ? ನಮ್ಮ ನಮ್ಮ ಇಷ್ಟಾನಿಷ್ಟವೇ ಒಳ್ಳೆಯದೆಂಬುದಕ್ಕೆ ಪ್ರಮಾಣವಾಗಲಾರದು. ಏಕೆಂದರೆ ಲೋಕದಲ್ಲಿ ಜನರ ಅಭಿರುಚಿಗಳೂ ರುಚಿಗಳೂ ವಿವಿಧವಾಗಿರುವುದು ಎಲ್ಲರಿಗೂ ಅನುಭವದಲ್ಲಿದೆ. ಒಬ್ಬೊಬ್ಬನ ಮನಸ್ಸು ಒಂದೊಂದು ರೀತಿ. ಆದಕಾರಣ ನಮ್ಮ ವೈಯಕ್ತಿಕವಾದ ತಾತ್ಕಾಲಿಕ ಅನುಭವಗಳನ್ನು ಒಳ್ಳೆಯದರ ಮುಖ್ಯ ಪ್ರಮಾಣವೆನ್ನಲಾಗದು. ನಮಗೆ ಬೇಕಾದ ನೀತಿ ಪ್ರಮಾಣವು ಪದೇ ಪದೇ ಬದಲಾಯಿಸದೆ ದೃಢವಾಗಿ ನಿಲ್ಲಬಲ್ಲ ಒಂದು ತತ್ತ್ವವಾಗಿರಬೇಕು. ಒಳ್ಳೆಯದರ ಪ್ರಮಾಣ ಅದರ ಒಳಗೇ ಇರಬೇಕು. ಹೊರಗಣ ರುಜುವಾತಿನ ಅಪೇಕ್ಷೆ ಇಲ್ಲದೆ ಅದು ನಿಲ್ಲಬಲ್ಲದ್ದಾಗಿರಬೇಕು. ಸಕಲಕಾಲ ಸಕಲ ದೇಶಗಳಲ್ಲಿಯೂ ಸಕಲ ಮಾನವ ವರ್ಗಕ್ಕೂ ಸಮಾನವಾಗಿರುವ ಒಂದು ಸತ್ಯವು ನಮಗೆ ದೊರೆಯುವ ಪಕ್ಷಕ್ಕೆ ಆ ಸತ್ಯದ ಆಧಾರದ ಮೇಲೆ ನಮ್ಮ ಒಳ್ಳೆಯದೆಂಬುದರ ಅಥವಾ ಚೆನ್ನೆಂಬುದರ— ನಮ್ಮ ಹಿತದ, ಅಥವಾ ಶುಭದ,— ಕಲ್ಪನೆಯನ್ನು ನಿಲ್ಲಿಸಲಾದೀತು. ಅಂತಹ ಶಾಶ್ವತ ನಿಶ್ಚಲ ಸತ್ಯಯಾವುದಾದರೂ ಉಂಟೆ? ಇದು ಮೂಲ ಪ್ರಶ್ನೆ. ಇದಕ್ಕೆ ಉತ್ತರ ಸಂಪಾದಿಸಲು ನಾವು ಕೊಂಚ ಅಧ್ಯಾತ್ಮ ಜಿಜ್ಞಾಸೆಗೆ ಕೈಹಾಕಬೇಕಾಗುತ್ತದೆ.

"ನಾನು", "ನಾನು" ಎಂದು ಹೇಳಿಕೊಳ್ಳುವವನಿಗೆ ಆ ತಾನು ಎಂಬುದರ ಇರುವಿಕೆಯ ವಿಷಯದಲ್ಲಿ-ಆತ್ಮಸತ್ತ್ವದ ವಿಷಯದಲ್ಲಿ-ಯಾವ ಸಂದೇಹವೂ ಇರಲಾರದಷ್ಟೆ? ಅಂಥಾ ಮನುಷ್ಯ ವ್ಯಕ್ತಿಗೂ ಅವನು ಕಾಣುವ ಜಗತ್ತಿಗೂ ಬಿನ್ನಳೆಡೆ, ಅವೆಲ್ಲಕ್ಕೂ ಆಧಾರವಾಗಿ, ಅವೆಲ್ಲಕ್ಕೂ ಚೈತನ್ಯಮೂಲವಾಗಿ, ಒಂದು ಮಹಾಶಕ್ತಿ ಇರುತ್ತದೆ. ಅದನ್ನು ಎಷ್ಟೋ ಹಿಂದಿನಿಂದ ಬಹುಜನ ದೇವರೆಂದೂ ಭಗವಂತನೆಂದೂ ಕರೆಯುತ್ತಿದ್ದಾರೆ. ಅದನ್ನೇ ಪರಮಾತ್ಮನೆಂದೂ ಪರಬ್ರಹ್ಮನೆಂದೂ ಕರೆಯುವುದುಂಟು. ಈ ಪ್ರಪಂಚದ ಪ್ರತಿಯೊಂದು ಪ್ರಾಣಿಯಿಂದಲೂ "ನಾನು" "ನಾನು" ಎನ್ನಿಸುತ್ತಿರುವುದೂ ಅದಕ್ಕೆ ಪ್ರಪಂಚಸಂಪರ್ಕವನ್ನುಂಟುಮಾಡಿಸುತ್ತಿರುವುದೂ ಆ ಮಹಾಶಕ್ತಿಯೇ. ಮನಸ್ಸು ಬಯಸುವ ಎಲ್ಲಸುಖಗಳೂ ಪಡುವ ಎಲ್ಲ ಸಂತೋಷಗಳೂ ಆ ಮಹಾಶಕ್ತಿ ಸಮುದ್ರದ ತೆರೆತುಂತುರುಗಳು. ಆ ಅಪಾರ ಶುಭನಿಧಿಯಾದ ದೇವನ ಸಾನ್ನಿಧ್ಯವನ್ನು ಸೇರಬೇಕೆಂಬುದೇ ಮನುಷ್ಯನಿಗೆ ಉತ್ತಮೋತ್ತಮ ಧ್ಯೇಯ. ಜೀವಾತ್ಮ—ಪರಮಾತ್ಮ ಸಾಯುಜ್ಯವೇ ಅತ್ಯಂತ ಮಂಗಳ. ಅದೇ ಪರಮ ಪುರುಷಾರ್ಥ. ಅದಕ್ಕೆ ಯಾವ ಯಾವ ನಡವಳಿಕೆ ಅನುಕೂಲವೋ ಅದು ಅಷ್ಟುಮಟ್ಟಿಗೆ ಒಳ್ಳೆಯದು; ಯಾವ ಯಾವ ವಸ್ತು ಸಾಧಕವೋ ಅದು ಅಷ್ಟುಮಟ್ಟಿಗೆ ಸಾಧು. ಅದೇ ಧರ್ಮ. ಯಾವ ವಸ್ತು ಅಥವಾ ವರ್ತನೆ ಆತ್ಮ ಸಂದರ್ಶನಕ್ಕೆ ಅಡ್ಡವೋ ಅದು ಅಷ್ಟುಮಟ್ಟಿಗೆ ದುಷ್ಟ. ಅದೇ ಅಧರ್ಮ. ಹೀಗೆ ಮನುಷ್ಯನ ಒಂದಾನೊಂದು ಸಂಕಲ್ಪದ ಅಥವಾ ಕ್ರಿಯೆಯ ಅಥವಾ ಸಂಪಾದನೆಯ ಒಳ್ಳೆಯತನವೋ ಕೆಟ್ಟತನವೋ ಇರುವುದು ಅದರ ಭಗವದ್ದರ್ಶನಾನುಕೂಲ, ಪ್ರತಿಕೂಲಗಳಲ್ಲಿ. ಆತ್ಮಸಾಫಲ್ಯದ ದೃಷ್ಟಿಯಿಂದ ಜಗದ್ವಸ್ತು ವ್ಯಾಪಾರಗಳಿಗೆ ಬೆಲೆ ಗೊತ್ತುಮಾಡುವುದೇ ಧರ್ಮ. ಆ ಧರ್ಮದ ಒಂದಾನೊಂದು ರೂಪವೇ ಸಂಸ್ಕೃತಿ. ಸಂಸ್ಕೃತಿಯು ಮನುಷ್ಯನ ಸಮಾಜ ಸಂಪರ್ಕದಲ್ಲಿಯ ಧರ್ಮ.

ಮನುಷ್ಯನು ಪ್ರಕೃತಿಯಿಂದ ಮೇಲಕ್ಕೆದ್ದಾಗ ಸಂಸ್ಕೃತಿ. ಶ್ರವಣ ಬೆಳಗೊಳದ ದೊಡ್ಡ ಬೆಟ್ಟ ಪ್ರಕೃತಿ ಅದರ ಶಿಖರದ ಗೊಮ್ಮಟಮೂರ್ತಿ ಸಂಸ್ಕೃತಿ, ಕಾವೇರಿ ಪ್ರಕೃತಿ, ಅದರ ಇಕ್ಕೆಲದ ಗದ್ದೆ ತೋಟಗಳು ಸಂಸ್ಕೃತಿ. ಭತ್ತದ ಕಾಳು ಪ್ರಕೃತಿ, ಅನ್ನ ಸಂಸ್ಕೃತಿ. ಕೂದಲು ಪ್ರಕೃತಿ, ಹೇಳು ತುರುಬು ಸಂಸ್ಕೃತಿ. ಹತ್ತಿ ಪ್ರಕೃತಿ, ಸೀರೆ ಧೋತ್ರ ಸಂಸ್ಕೃತಿ. ಗಂಟಲ ಕಿರಿಚು ಪ್ರಕೃತಿ, ಸಂಗೀತ ಸಂಸ್ಕೃತಿ. ಕೂಗಾಟ ಪ್ರಕೃತಿ, ಕಾವ್ಯ ಸಂಸ್ಕೃತಿ. ಮಗು ಹಾಸಿಗೆಯಲ್ಲಿ ಜಲವಿಸರ್ಜನೆ ಮಾಡಿದಾಗ ಪ್ರಕೃತಿ, ಅದಕ್ಕಾಗಿ ಹೊರಗೆ ಬಂದರೆ ಸಂಸ್ಕೃತಿ. ಹುಟ್ಟಿದವನು ಹುಟ್ಟಿದಂತೆಯೇ ಇದ್ದು ಬಿಟ್ಟರೆ ಪ್ರಾಕೃತ. ವಿದ್ಯೆ ಶಿಕ್ಷಣಗಳಿಂದ ಅವನು ನಯನಾಗರಿಕತೆಗಳನ್ನು ಕಲಿತರೆ ಸುಸಂಸ್ಕೃತ. ಹೀಗೆ ಪ್ರಕೃತಿಯೊಡನೆ ಪೌರುಷ ವಿವೇಕ ಬೆರೆತಾಗಲೇ ಸಂಸ್ಕೃತಿ.

ನಮ್ಮ ಮಾತುಕತೆಯಲ್ಲಾಗಲಿ ನಡವಳಿಕೆಯಲ್ಲಾಗಲಿ ಯಾವುದಾದರೂ ಲೋಪವೋ ತಪ್ಪೋ ಕಾಣಿಸಿಕೊಂಡಾಗ ಇತರರು ಅದನ್ನು ಸೂಚಿಸಿದರೆ ನಾವು 'ಅಸಮಾಧಾನಗೊಂಡು "ಅದು ನಮ್ಮ ಪ್ರಕೃತಿ; ಅದಕ್ಕೇನು ಮಾಡುವುದು?" ಎಂದು ಉತ್ತರ ಕೊಡುತ್ತೇವೆ. ನಮ್ಮ ಮೈ ಬಣ್ಣವನ್ನೂ ಗಾತ್ರವನ್ನೂ ಬದಲಾಯಿಸುವುದು ಹೇಗೆ ಅಸಾಧ್ಯವೋ ನಮ್ಮ ಮನಸ್ಸಿನ ದುರ್ಬಲತೆಗೆ ಚಿಕಿತ್ಸೆ ಮಾಡುವುದೂ ಹಾಗೆ ಅಸಾಧ್ಯವೆಂಬಂತೆ ವಾದಿಸುತ್ತೇವೆ. ಆ ವಾದವು ವಿಚಾರದಿಂದ ಸ್ಥಿರಪಡಲಾರದು. ದೇಹದ ವ್ಯಾಧಿಗೆ ಔಷಧವಿರುವಂತೆ ಮನೋಬುದ್ಧಿಗಳ ದೋಷಗಳಿಗೂ ಶುದ್ಧಿಕ್ರಮ ಉಂಟು. ಅದೇ ಸಂಸ್ಕೃತಿ. ಅದು ಮನುಷ್ಯ ಪ್ರಯತ್ನದಿಂದ ಸಾಧ್ಯವೆಂಬುದು ಮುಖ್ಯ ಸಂಗತಿ.

ಹಾಗಾದರೆ ಮನುಷ್ಯನು ಪ್ರಕೃತಿಯ ಒಂದು ಭಾಗವೇ ಅಲ್ಲವೇ? ಅವನ ಬುದ್ಧಿ ಅದೇ ಪ್ರಕೃತಿಯ ಒಂದು ಅಂಶ ಮಾತ್ರವಲ್ಲವೇ? ಅಂಥಾ ಬುದ್ಧಿಯನ್ನು ಅವನು ಚೆನ್ನಾಗಿ ಪ್ರಯೋಗಿಸುವುದು ಎಂದರೆ ಏನು? ಮನುಷ್ಯ ಬುದ್ಧಿಯು ಪ್ರಕೃತಿ ದ್ರವ್ಯ ರಾಶಿಯ ಒಂದು ಕಣ ಮಾತ್ರವಾಗಿರುವ ಪಕ್ಷಕ್ಕೆ ಆ ಕಣ ಆ ರಾಶಿಗಿಂತ ಗುಣದಲ್ಲಿ ಉತ್ಕೃಷ್ಟವಾಗಿರುವುದು ಸಾಧ್ಯವೇ? ಸಣ್ಣ ಕಣದಿಂದ ದೊಡ್ಡ ರಾಶಿಯನ್ನು ಮೇಲಕ್ಕೆತ್ತಲಾದೀತೇ? ಈ ಪ್ರಶ್ನೆಗಳನ್ನು ನಾವು ವಿಚಾರ ಮಾಡದಲ್ಲದೆ ಸಂಸ್ಕೃತಿ ಎಂಬುದರ ನಿಜ ಸ್ವರೂಪ ನಮ್ಮ ಮನಸ್ಸುಗಳಿಗೆ ಗೋಚರಿಸಲಾರದು.

ಮನುಷ್ಯನು ಪ್ರಕೃತಿಯ ಶಿಶುವೇ ಹೌದು. ಆದರೆ ಒಂದು ವಿಶೇಷ ಜಾತಿಯ ಶಿಶು. ಮ್ಯಾಥ್ಯು ಆರ್ನಾಲ್ಡ್ ಕವಿ ಹೇಳಿರುವಂತೆ—

ಪ್ರಕೃತಿಯಲ್ಲಿರುವುದೆಲ್ಲ ಮನುಷ್ಯನಲ್ಲಿದೆ— ಆದರ ಜೊತೆಗೆ ಇತರ ಸೃಷ್ಟಿಯಲ್ಲಿ ಕಾಣಬಾರದ ಒಂದು ಹೆಚ್ಚು ಶಕ್ತಿಯೂ ಮನುಷ್ಯನಲ್ಲಿದೆ. ಆ ವಿಶೇಷ ಶಕ್ತಿಯೇ ಅವನ ಶುಭಪ್ರತೀಕ್ಷೆಗೆ ಆಧಾರ. ಪ್ರಕೃತಿಯೂ ಮನುಷ್ಯನೂ ತುಂಬಾ ಸ್ನೇಹಿತರಾಗಿರಲಾಗದು: ಅವನು ಆಕೆಯ ರಾಜ್ಯವನ್ನು ದಾಟಿ ಮುಂದಕ್ಕೆ ಹೋಗದಿದ್ದಲ್ಲಿ ಆಕೆಗೆ ಗುಲಾಮನಾದಾನು.

ಮನುಷ್ಯನ ವೈಶಿಷ್ಟ್ಯ ಅವನ ಸಾತ್ತ್ವಿಕ ಬುದ್ಧಿ. ಜಗತ್ತಿನ ಪ್ರತಿಯೊಂದು ಪ್ರಾಣಿಯಲ್ಲಿಯೂ ಎರಡಂಶಗಳು ಕಾಣಬರುತ್ತವೆಯಷ್ಟೇ? ಒಂದು ದೇಹ, ಇನ್ನೊಂದು ಜೀವ. ದೇಹವೆಂಬುದು ಪ್ರಕೃತಿ. ಜೀವವೆಂಬುದು ಅಂತಶ್ಚೈತನ್ಯ. ಆ ಚೈತನ್ಯದ ಮೂಲ ವಸ್ತು ಪ್ರಕೃತ್ಯತೀತವಾದ ಆತ್ಮ. ಪ್ರಕೃತಿಯು ನಾನಾ ರೂಪಗಳನ್ನು ಧರಿಸಿ ನಾನಾ ವಿಕಾರಗಳನ್ನು ಪಡೆಯುತ್ತಿರುತ್ತದೆ. ಆತ್ಮವು ಆ ವಿಕಾರಗಳಿಗೆ ಒಳಪಡದೆ ಏಕ ರೂಪದಲ್ಲಿ ಶಾಶ್ವತವಾಗಿರುತ್ತದೆ. ಆ ಅಂತರಾತ್ಮವೇ ಜೀವಿಯ ಸಾರಭಾಗ.

ಆ ಅಂತರಾತ್ಮವನ್ನು ಕುರಿತ ಜ್ಞಾನವೇ ಮನುಷ್ಯನೆಂಬ ಸೃಷ್ಟಿ ವಿಶೇಷದ ವೈಶಿಷ್ಟ್ಯ. ಇತರ ಜಂತುಗಳಿಗೆ ಆತ್ಮತತ್ತ್ವದ ಸ್ಮೃತಿಯಿಲ್ಲ. ಮನುಷ್ಯೇತರ ಪ್ರಾಣಿ ವರ್ಗದಲ್ಲಿ ಪ್ರಕೃತಿ ಆತ್ಮ ಪ್ರಸಕ್ತಿಯನ್ನು ಮರೆಯಿಸಿಬಿಟ್ಟಿರುತ್ತಾಳೆ. ಮನುಷ್ಯನಲ್ಲಿ ಸಹ ಆತ್ಮ ಸ್ಮರಣೆಗೆ ಆಕೆ ಅವಕಾಶ ಬಿಟ್ಟಿರುವುದು ಸ್ವಲ್ಪವಾಗಿಯೇ. ಆಕೆ ಮನುಷ್ಯನ ಒಳ ಕಣ್ಣಿಗೂ ವಾರಕ್ಕಾರು ದಿನ ಇಪ್ಪತ್ತಮೂರು ಘಂಟೆ ಮಾಯೆಯ ಪೊರೆಯನ್ನು ತೊಡಿಸಿರುತ್ತಾಳೆ. ಮಿಕ್ಕೊಂದು ಘಂಟೆಯಲ್ಲಾದರೂ ಆತ್ಮ ವಿಚಾರಕ್ಕೆ ತಿರುಗುವವರು ಸಾವಿರಕ್ಕೊಬ್ಬಿಬ್ಬರು ಇರಬಹುದೇನೋ!

ಪ್ರಕೃತಿಯಲ್ಲಿ ಮೂರು ಗುಣಗಳು ಬೆರೆತುಕೊಂಡಿರುತ್ತವೆ. (೧) ಸತ್ತ್ವ (೨) ರಜಸ್ಸು (೩) ತಮಸ್ಸು. ಈ ಮೂರೂ ಪ್ರತಿಯೊಬ್ಬ ಮನುಷ್ಯನ ಸ್ವಭಾವದಲ್ಲಿಯೂ ಸೇರಿಕೊಂಡಿದ್ದರೂ ಅವುಗಳಲ್ಲಿ ಒಂದೊಂದು ಗುಣ ಒ

ಬೊಂಬಾಯಿಯ ಬೊಂಬಾಯಿ ಸಿಟಿ ಸಿವಿಲ್ ಕೋರ್ಟಿನಲ್ಲಿ

ವ್ಯಾಜ್ಯ ನಂಬ್ರ 307/1952

1. ದಿಗಂಬರ ಶಾಂತಾರಾಮ ನ್ಯಾಕ್, ಹಿಂದೂ, ಬೊಂಬಾಯಿ ಫೋರ್ಟಿನ ಹೊರಗಿನ ನ್ಯೂ ಚಿಂಚ್ ಬಂದರ್ ರೋಡಿನ ದತ್ತಾ ಬಿಲ್ಡಿಂಗಿನ 47/C ರಲ್ಲಿ ವಾಸಿಸುವವರು.
2. ವಸಂತ ಶಾಂತಾರಾಮ ನ್ಯಾಕ್, ಹಿಂದೂ, ಬೊಂಬಾಯಿ ಫೋರ್ಟಿನ ಹೊರಗಿನ ನ್ಯೂ ಚಿಂಚ್ ಬಂದರ್ ರೋಡಿನ ದತ್ತಾ ಬಿಲ್ಡಿಂಗಿನ 47/C ರಲ್ಲಿ ವಾಸಿಸುವವರು.

} ವಾದಿರು.

ಎದ್ರಿರು

1. ಭೋಜ ಬರೊ ಸೆಟ್ಟಿ.
2. ವಾಸು ಬರೊ ಸೆಟ್ಟಿ, ಹಿಂದೂ ಬೊಂಬಾಯಿ ಫೋರ್ಟಿನ ಹೊರಗಿನ ನ್ಯೂ ಚಿಂಚ್ ಬಂದರ್ ರೋಡಿನ ದೋಸಾ ಬಿಲ್ಡಿಂಗಿನ ಸಮರ್ಥ ಬೋರ್ಡಿಂಗ್ ಹಾಸಿನ ಕೋಲ್ ನಂಬ್ರ 3—4 ರಲ್ಲಿ ವಾಸಿಸುವವರು.
3. ಬಾಯಿ ಶಂಕರಿ ನಾಗಪ್ಪ ಸೆಟ್ಟಿ—ದಕ್ಷಿಣ ಕನ್ನಡ ಜಿಲ್ಲಾ ಉಡುಪಿ ತಾಲೂಕು ಫಲಿಮಾರು ಪೋಸ್ಟು, ನಂದಿಕೂರು ಗ್ರಾಮದಲ್ಲಿರುವವರು.

} ಪ್ರತಿವಾದಿಗಳು

ಮೇಲ್ಕಂಡ ವ್ಯಾಜ್ಯದಲ್ಲಿ ವಾದಿ ಕಡೆಯಿಂದ ಈ ಕೆಳಗೆ ಕಾಣಿಸಲಾದ ಆರ್ಡರುಗಳ ಬಗ್ಗೆ ಮಾಡಿದ ಅರ್ಜಿಯು ಮೇಲ್ಕಂಡ ಕೋರ್ಟಿನ ಜಡ್ಜರಿಂದ ತನ್ನಿಬಗ್ಗೆ ತಾ. 3-3-1955 ರಲ್ಲು ಪೂರ್ವಾಹ್ನ 11 ಗಂಟೆಗೆ (ಸ್ಟಂಡಾರ್ಡ್ ಸಮಯ) ಇಡೋಣಾಗಿದೆ ಎಂದೂ ತತ್ಸಂಬಂಧ ತಪ್ಪಿ ಕಾಲದಲ್ಲಿ ಸಂಬಂಧಪಟ್ಟವರೆಲ್ಲರೂ ಹಾಜರಿರಬೇಕಾಗಿಯೂ ಈ ಮೂಲಕ ಜಾಹೀರುಮಾಡೋಣಾಗಿಯದೆ.

(a) ಮೂರನೆ ಪ್ರತಿವಾದಿ ಮೃತ ಬಾಯಿ ಶಂಕರಿ ನಾಗಪ್ಪ ಸೆಟ್ಟಿಯು ಮರಣಪಟ್ಟ ತಾರೀಕಿನಿಂದ 90 ದಿವಸಗಳೊಳಗಾಗಿ ಆಕೆಯ ನ್ಯಾಯವಾದ ಪ್ರತಿನಿಧಿಗಳ ಮುಕ್ತು ವಾರೀಸುದಾರರನ್ನು ತಿಳಿಸಲು ವಿಳಂಬವಾದುದನ್ನು ಮಾಫುಮಾಡುವುದು.

(b) ಬಾಯಿ ಶಂಕರಿ ನಾಗಪ್ಪ ಸೆಟ್ಟಿಯ ನ್ಯಾಯವಾದ ವಾರೀಸುದಾರರನ್ನು ದಾಖಲೆ ಮೂಲಕ ತರುವ ಸಮಯವನ್ನು ಈ ಕೋರ್ಟಿನ ಯುಕ್ತಕಂಡ ಅವಧಿ ತನಕ ಮುಂದರಿಸುವಿಕೆಯನ್ನು ಕ್ಷಮಿಸುವುದು.

(c) ಈ ದಾವೆಯಲ್ಲಿ ಮೂರನೆ ಪ್ರತಿವಾದಿಯಾಗಿ ನಾಗಪ್ಪ ಸೆಟ್ಟರ ಪುತ್ರಿ ಬಾಯಿ ಶಿವಮ್ಮಳನ್ನು ಬಾಯಿ ಶಂಕರಿ ನಾಗಪ್ಪ ಸೆಟ್ಟಿಯ ಸ್ಥಾನದಲ್ಲಿ ಆಕೆಯ ವಾರೀಸುದಾರಳಿಗೆ ಪ್ರತಿವಾದಿ ಸ್ಥಾನದಲ್ಲಿ ಸೇರಿಸಿ ಸದ್ರಿ ದಾವೆಯಲ್ಲಿ ಯುಕ್ತ ತಿದ್ದುಪಡಿಗಳನ್ನು ಮಾಡುವ ಸ್ವಾತಂತ್ರವೀಯುವುದು.

(d) ದಾವಾ ಖರ್ಚು ಸೆಂಕ್ಷನ್ ಮಾಡುವುದು.

(e) ದಾವೆಯ ಸ್ವರೂಪದ ಆಧಾರದ ಮೇಲೆ ದೊರೆಯಬೇಕಾದ ಇತರ ಪರಿಹಾರಗಳನ್ನು ಸೆಂಕ್ಷನ್ ಮಾಡುವುದು.

ವಾದಿರ ಕಡೆ ವಕೀಲ್ಸ್ ಮೆಸರ್ಸ್ ಸಾವಂತ್ ಎಂಡ್ ಕೊ

ಅವರು ತಾ. 30—7—1953 ರಲ್ಲು ಈ ಕೋರ್ಟು ಚೇಂಬರ್ ಸಮನ್ಸ್ ಪಡೆದುದಾಗಿದೆ.

1 ಎರಡನೆ ಪ್ರತಿವಾದಿ ವಾಸು ಬರೊ ಸೆಟ್ಟಿ.

2 ಮೂರನೆ ಪ್ರತಿವಾದಿ ಸ್ಥಾನದಲ್ಲಿ ನಾಗಪ್ಪ ಸೆಟ್ಟಿಯ ನ್ಯಾಯವಾದ ವಾರೀಸುದಾರಳು ಬಾಯಿ ಶಿವಮ್ಮ—ಇವರಿಗೆ

ವಿ. ಸೂ:— ತಾ. 15—7—1953 ರಲ್ಲು ಕಂಕೋಕ್ತವಾಗಿ ಶ್ರೀ ಡಿ. ಎಸ್. ನ್ಯಾಕರು ಕೊಟ್ಟ ಅಫಿದಾವತನ್ನು ಅರ್ಜಿಗೆ ಬೆಂಬಲವಾಗಿ ತೆಗೆದುಕೊಳ್ಳುವನು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.



ಬ್ಬೊಬ್ಬನಲ್ಲಿ-ಒಬ್ಬೊಬ್ಬನಲ್ಲಿಯೇ ಒಂದೊಂದು ವೇಳೆ ಒಂದೊಂದು ಗುಣ,—ಎದ್ದು ಕಾಣಿಸಿಕೊಳ್ಳುತ್ತದೆ. ಸ್ವತಃ ಗುಣ ಹಾಗೆಯೇ ಪ್ರಬಲವಾದಾಗ ಮನುಷ್ಯನ ಬುದ್ಧಿ ಅಂತರಾತ್ಮದ ಕಡೆಗೆ ತಿರುಗುತ್ತದೆ. ಅದೇ ಶುಭಗತಿ. ಯಾವ ಮನುಷ್ಯನಲ್ಲಿಯೂ ಸತ್ವದ ಸುಳಿವು ಎಂದಿಗೂ ಆಗದೆಯೂ ಇರದು. ಎಂದೋ ಒಂದು ದಿನ, ಯಾವುದೋ ಒಂದು ಕ್ಷಣ, ಯಾವುದೋ ಒಂದು ಜೀವನದ ಪ್ರಸಂಗದ ಕಾರಣದಿಂದ, ಹೇಗೋ ಒಂದು ಲೌಕಿಕ ಸನ್ನಿವೇಶದ ಪರಿಣಾಮದಿಂದ, ಪ್ರತಿಯೊಬ್ಬ ಮಾನವ—ವ್ಯಕ್ತಿಯಲ್ಲಿಯೂ ಸತ್ವ ಗುಣವು ಆಗಾಗ ಅಷ್ಟೋ ಇಷ್ಟೋ ವಿಕಾಸವಾಗಿಯೇ ಆಗುತ್ತದೆ. ಹಾಗಾದ ಘಳಿಗೆಯೇ ಅವನಿಗೆ ಒಳ್ಳೆಯ ಘಳಿಗೆ ಆಗ ಅವನು ಎಚ್ಚತ್ತುಕೊಂಡರೆ ಶುಭದ ಹಾದಿಯನ್ನು ಅರಿತುಕೊಳ್ಳಲಾಗುತ್ತದೆ. ಆರೀತಿ ಶುಭದಸ್ವರೂಪ ತಿಳಿದ ಬಳಿಕ ಲೋಕವ್ಯವಹಾರಗಳ ತಾರತಮ್ಯವನ್ನು ಕಂಡುಕೊಳ್ಳುವುದು ಅವನಿಗೆ ಸುಲಭವಾಗುತ್ತದೆ ಐಹಿಕ ಸಂಪತ್ತುಗಳ ಯೋಗ್ಯತಾ ಸೋಪಾನವನ್ನು ಕಂಡವನಿಗೆ ನೀತಿಯಾಚರಣೆ ಕಷ್ಟವಾಗದು

ಬುದ್ಧಿಯು ರಾಜಸ ತಾಮಸ ಪರವಾಗದೆ ಕೂಡಿದ ಮಟ್ಟಿಗೂ ಸಾತ್ವಿಕದಲ್ಲಿ ನಿಲ್ಲುವಂತೆ ಮಾಡುವುದು ಪುರುಷಕಾರ್ಯ. ಆ ಸ್ವತಂತ್ರಾಧಿಕಾರ ಮನುಷ್ಯನಿಗಿಲ್ಲವಾದರೆ ಕರ್ಮಾಕರ್ಮಗಳ ಜವಾಬ್ದಾರಿಯೂ ಅವನದಿಗಲ್ಲವೆ ಹೋಗಬೇಕಾಗುತ್ತದೆ ಜೀವನ ಪ್ರಸಂಗಗಳೆಲ್ಲವೂ, ಪ್ರಕೃತ್ಯಧೀನವಾಗಿ ಎಲ್ಲವೂ ಪೂರ್ವನಿಶ್ಚಿತಗಳಾಗಿ, ಮನುಷ್ಯನು ಅಸ್ವತಂತ್ರನಾಗಿ ಅವನ ಯತ್ನಕ್ಕೆಡೆ ಇಲ್ಲದ ಪಕ್ಷದಲ್ಲಿ ಪುಣ್ಯವೆಂಬುದಕ್ಕೂ ಪಾಪವೆಂಬುದಕ್ಕೂ ಅವನು ಭಾಜನನಾಗಲಾರ. ಅಸ್ವತಂತ್ರನಿಗೆ ಕಾರ್ಯಪರಿಣಾಮದ ಭಾರವನ್ನು ಹೇರುವುದು ನ್ಯಾಯವಾಗದು ವಿವೇಕ ಸ್ವಾತಂತ್ರ್ಯವನ್ನು ಪ್ರಕೃತಿಯೇ ಮನುಷ್ಯನಲ್ಲಿರಿಸಿರುತ್ತದೆ. ಆದರಿಂದಲೇ ಅವನಿಗೆ ಕರ್ಮಫಲ ಭೋಗವು ಅನಿವಾರ್ಯ.

ಬುದ್ಧಿ ತನ್ನ ಕಾರ್ಯವನ್ನು ಅಂತರಾತ್ಮದೃಷ್ಟಿಯಿಂದ ನೆರವೇರಿಸಿದಾಗ ಮನುಷ್ಯನ ಲೋಕ ಚರ್ಯೆ ಎರಡುಬಗೆಯಾಗಿ ಪ್ರಾರಬ್ಧವು ಪಡೆಯುತ್ತದೆ. (೧) ಆತ್ಮೌಪಮ್ಯವರ್ತನೆ, (೨) ಅನಾತ್ಮಾವಿಷಯ ತಾರತಮ್ಯ ವಿವೇಚನೆ

(೧) ಅವನು ತನ್ನಲ್ಲಿರುವ ಆತ್ಮವಸ್ತುವೆ ಎಲ್ಲ ಪ್ರಾಣಿಗಳಲ್ಲಿಯೂ ಇರುವ ಅಂತಶ್ಚೈತನ್ಯವೆಂದು ಗ್ರಹಿಸುವಂತಾಗುವುದು

(೨) ಅವನು ಪ್ರಪಂಚದ ಭೋಗ ಭಾಗ್ಯಗಳಲ್ಲಿ ಇದ್ದಾದ್ದು ಮೇಲು, ಇದ್ದಾದ್ದು ಕೀಳು ಎಂದು ತಾರತಮ್ಯ ನೋಡಿ, ತನ್ನ ಉದ್ದೇಶ ಉದ್ಯೋಗಗಳನ್ನು ಆ ವಿವೇಕಾಂಕುರದಿಂದ ತಿದ್ದಿಕೊಳ್ಳುತ್ತಿರುತ್ತಾನೆ. ಅವನ ಪುರುಷಾರ್ಥ ಸಾಧನೆಯಲ್ಲಿ—ಮುಖ್ಯವಾಗಿ ಚತುರ್ವಿಧ ಪುರುಷಾರ್ಥಗಳಿಂದ ಧರ್ಮ, ಅರ್ಥ ಕಾಮ, ಮೋಕ್ಷಗಳೆಂಬುವರ ಪೈಕಿ ಮೊದಲನೆಯ ಮೂರಾದ ತ್ರಿವರ್ಗವೆಂಬುದರಲ್ಲಿ ಒಂದು ಪೂರ್ವೋತ್ತರ ಕ್ರಮವನ್ನು ಗೊತ್ತು ಮಾಡಿಕೊಂಡಿರುತ್ತಾನೆ.

"ಆತ್ಮವತ್ಸರ್ವ ಭೂತೇಷು"—ತನ್ನ ವಿಷಯದಲ್ಲಿ ತಾನು ನಡೆದುಕೊಳ್ಳುತ್ತಿರುವಂತೆಯೇ ಎಲ್ಲರ ವಿಷಯದಲ್ಲಿಯೂ ನಡೆದುಕೊಳ್ಳಬೇಕಾದದ್ದು—ಎಂಬ ಸೂತ್ರವನ್ನು ಅನುಸರಿಸುವವನ ನಿತ್ಯ ಜೀವನದಲ್ಲಿ ಭೂತದಯೆ, ಔದಾರ್ಯ, ಸೋದರ ಭಾವ, ಸಹಾನುಭೂತಿ, ಅಕ್ರೂರತೆ, ಪಿಷ್ಮರ ವರ್ಜನೆ, ಮರ್ಯಾದೆ ಪ್ರಸನ್ನತೆ, ವಿನಯ ಮುಂತಾದ ಗುಣಸ್ವರೂಪ ಘಾತಕರಗಳಾದ ಗುಣಗಳು ಸ್ವತಃ ಏವ ಬೆಳೆದು ಹರಡುತ್ತವೆ. ಇತರರ ನೋವಿನಲ್ಲಿ ತಾನು ನೋವು ಪಡುತ್ತಾನೆ. ಅವರ ಮನಸ್ಸು ಹೇಗಿದ್ದೀತೋ ಎಂಬುದನ್ನು ತಾನೇ ಊಹಿಸಿಕೊಂಡು, ಅವರಿಗೆ ಆಯಾಸ ಉಂಟುಮಾಡಬಹುದಾದ ಮಾತುಕಥೆಗಳನ್ನು ಪ್ರಯತ್ನ ಪೂರ್ವಕವಾಗಿ ದೂರ ಸರಿಸುತ್ತಾನೆ. ಸ್ವೈರಿಯನ್ನೂ ಉಲ್ಲಾಸವನ್ನೂ ತುಂಬುವುದು ಅವನ ಸ್ವಭಾವವಾಗುತ್ತದೆ. ಪ್ರಪಂಚದ ವಸ್ತುಗಳನ್ನು ಉಪಭೋಗ ಸಾಮಗ್ರಿಗಳನ್ನೂ ಆತ್ಮಸಾರತಮ್ಯದ ದೃಷ್ಟಿಯಿಂದ ನೋಡಿ ಅವುಗಳ ಪ್ರಯೋಜನ ಪರಿಮಿತಿಗಳನ್ನೂ ಅರಿತಿರುವವನಿಗೆ ಎಷ್ಟೋ ಲೌಕಿಕ ವಿಷಯಗಳಲ್ಲಿ ಉದಾಸೀನತೆ ಸುಲಭವಾಗುತ್ತದೆ. ದುರಾಶಾ ಪಿಶಾಚಿ ಆತನನ್ನು ಹಿಡಿಯಲಾರದು ಲೋಭಮೋಹಗಳು ಅವನ ಬಳಿ ಸುಳಿಯಲಾರವು ಇತರರೊಡನೆ ಘರ್ಷಣೆಯಾಗುವ ಸಂಭವ ಅವನಿಗೆ ತೀರಾಕಡಿಮೆ ಕೆಲವು ಕಾರಣಾಂತರಗಳಿಂದ ಕಡೆ ಅವನು ಸಂಧಿ ಮಾರ್ಗವನ್ನೇ ಹುಡುಕುತ್ತಾನೆ ಹೇಗೂ ಅವನು ಲೋಕಕ್ಕೆ ಸಮಾಧಾನಕರನೂ ಇಷ್ಟನೂ ಆಗುತ್ತಾನೆ

ಆತ್ಮೌಪಮ್ಯ ನೀತಿಯಿಂದಲೂ ಲೋಕತಾರತಮ್ಯ ವಿವೇಕದಿಂದಲೂ ಫಲಿಸುವ ವರ್ತನೆಯ ಔಚಿತ್ಯವೇ ಸಂಸ್ಕೃತಿ. ಯಾವ ಸಂದರ್ಭದಲ್ಲಿ ಯಾವುದು ನ್ಯಾಯ, ಯಾವುದು ಮರ್ಯಾದೆ, ಯಾರಲ್ಲಿ ಗೌರವ ಸಹುರ್ಗತಿ ಸರಿ, ಯಾರಲ್ಲಿ ಅಸಮಾಧಾನ ಪ್ರದರ್ಶನ ಯುಕ್ತ, ಆ ಪ್ರದರ್ಶನಕ್ಕೆ ಎಲ್ಲಿ ಮಿತಿ, ಎಲ್ಲಿ ಮಾತು ಯುಕ್ತ, ಎಲ್ಲಿ ಮೌನ ಉಚಿತ, ಮಾತನಾಡುವಾಗ ಎಂಥವ ಮಾತು, ಎಂಥವ ಧ್ವನಿತಕ್ಕದ್ದು; ಅಂಗಚಾವ ಹೇಗಿದ್ದರೆ ಸರಿ—ಇಂತಹ ಹತ್ತಾರು ಪ್ರಶ್ನೆಗಳಿಗೆ ಸುಸಂಸ್ಕೃತನು ಉತ್ತರ ಕ್ಷಣದಲ್ಲಿಯೇ ಉಚಿತವಾದ ಉತ್ತರವನ್ನು ಕಂಡುಕೊಳ್ಳುತ್ತಾನೆ. ಔಚಿತ್ಯ ಜ್ಞಾನ ಅವನಿಗೆ—ಮೂಗಿನ ಉಸಿರಿನಂತೆ— ವಿಚಾರ ಪ್ರಯಾಸವಿಲ್ಲದ, ಸ್ವಾಭಾವಿಕವೋ ಎಂಬಂತೆ ಸಿದ್ಧವಾಗಿರುತ್ತದೆ. ಅವನ ಕೈ ಬಾಯಿಗಳೂ ಅವಕ್ಕೆ ಹಿಂದಿರುವ ಮನಸ್ಸು, ಬುದ್ಧಿಗಳೂ ಸರ್ವದಾ ಅವನ ಹಿಡಿತದಲ್ಲಿ ಇರುತ್ತವೆ ಆ ತರದ ಇಂದ್ರಿಯ ನಿಯಂತ್ರಣೆ ಆತ್ಮ ಸಂಯಮ, ಎಂದರೆ ತನ್ನನ್ನು ತಾನೇ ಹದ್ದಿನಲ್ಲಿರಿಸಿಕೊಂಡಿರುವದು. ಯಾರ ಅಂತಃಕರಣ ಯಂತ್ರದೊಳಗಿನ ಕೀಲುಸ್ತಂಭಗಳು ಅವನ ಸ್ವಾಧೀನದಲ್ಲಿರುತ್ತವೆಯೋ ಅವನೇ ಸುಸಂಸ್ಕೃತ. ಆತನ ಔಚಿತ್ಯ ಪರಿಜ್ಞಾನವೇ ಸಂಸ್ಕೃತಿಯ ಲಕ್ಷಣ

ಸಂಸ್ಕೃತಿಯ ಲಕ್ಷಣಗಳಾದ ಈ ನಾನಾ ಗುಣಗಳು ಬೆಳೆದು ದೃಢಪಡಿಸಲು ಬಹುಕಾಲಯ ಪ್ರಯತ್ನವೂ ಅಭ್ಯಾಸವೂ ಬೇಕು. ಹುಟ್ಟಿನಿಂದ ಬಂದಿರುವ ಕೊಳಕುಗಳನ್ನೂ ಕೊಟ್ಟಿಗಳನ್ನೂ ಬಿಟ್ಟ ಕಳಚಿದಂತೆ ಕಿತ್ತೆಸೆಯಲಾದೀತೇ?

ದೀರ್ಘವೂ ಸಂತತವೂ ಆದ ನಿಯಮ ಪಾಲನೆಯಿಂದಲೇ—ತಪಸ್ಸಿನಿಂದಲೇ—ಅದು ಸಾಧ್ಯ ಆ ನಿಯಮ ಸಾಧನೆಯಾದರೋ ಕೇವಲ ಬುದ್ಧಿಯಿಂದ ಸಂಪೂರ್ಣವಾಗಬಲ್ಲದ್ದಲ್ಲ ಅದರ ಜೊತೆಗೆ ಮನಸ್ಸು ಸಹಕರಿಸಬೇಕು ಮನಸ್ಸು ಬುದ್ಧಿಗಿಂತ ಹೆಚ್ಚು ಪರಿಣಾಮಕಾರಿಯಾದ್ದು ಬುದ್ಧಿ ಎಂದೂ ಒಂದು ಸಳಿಗೆ ಕೆಲಸಮಾಡತಕ್ಕದ್ದು. ಆಸೆ, ಅಭಿಮಾನ, ದೋಷ, ದರ್ಪ, ಅಸೂಯೆ, ವ್ಯಸನ ಮೊದಲಾದ ಅಂತರಂಗ ವಿಚಾರಗಳಲ್ಲ ಮನಸ್ಸಿನ ಕಾರ್ಯಗಳು, ಅದ್ದರಿಂದ ಸಂಸ್ಕೃತಿ ನಿಷ್ಪಸು ಮೊದಲು ಹದಗೊಳಿಸಿಕೊಳ್ಳಬೇಕಾದ ಉಪಕರಣ ಮನಸ್ಸು.

ಮನಸ್ಸನ್ನು ಹದಗೊಳಿಸುವ ಸಾಧನಗಳು ಸತ್ಕಲೆ ಸತ್ಸಹವಾಸಗಳು ಅದ್ದರಿಂದಲೇ ಜನರು ಸಾಮಾನ್ಯವಾಗಿ ಸಂಸ್ಕೃತಿಯಿಂದರೆ ಸಂಗೀತ ಸಾಹಿತ್ಯಗಳಿಂದೂ ಪುರಾಣ ಪುಣ್ಯ ಕಥೆಗಳಿಂದೂ ಭಾವಿಸಿಕೊಳ್ಳುತ್ತಾರೆ. ವಾಸ್ತವವಾಗಿ ಕಾವ್ಯ ಗಾನ ನರ್ತನ ಚಿತ್ರಣಗಳು ಸ್ವತಃ ಸಂಸ್ಕೃತಿಯ ಶರೀರವಲ್ಲ. ಅವು ಮಾದಿಸುವ ಅಂತರಂಗ ಪರಿಪಾಕವು. ಸಂಸ್ಕೃತಿಗೆ ಬೇಕಾದ ಪೂರ್ವ ಸಿದ್ಧತೆ. ಕಲಾಕೃತಿಗಳ ಮಹಾ ಪ್ರಭಾವದಿಂದ ಮನುಷ್ಯನ ಮನಸ್ಸು ಪರಿಶುದ್ಧವಾಗುತ್ತದೆ. ಸೌಮ್ಯಗಾಂಭೀರ್ಯಗಳನ್ನು ಪಡೆಯುತ್ತದೆ. ಲೋಕ ಸಹಾನುಭೂತಿಯುಳ್ಳದ್ದಾಗುತ್ತದೆ.

ರಾಮಾಯಣ ಮಹಾಭಾರತಗಳು ನಮಗೆ ಈ ಲೋಕದಲ್ಲಿ ಸಾಮಾನ್ಯವಾಗಿ ದೊರೆಯದ ಜೀವನಾನುಭವಗಳನ್ನು ತಂದೊದಗಿಸುತ್ತವೆ. ಆದರಿಂದ ನಮ್ಮ ಅಂತಃಕರಣ ದೃಷ್ಟಿಯು ಸೂಕ್ಷ್ಮವಾಗುತ್ತದೆ. ನಮ್ಮ ಭಾವನಾಕ್ಷೇತ್ರ ವಿಶಾಲವಾಗುತ್ತದೆ. ಜೀವನದ ಲಕ್ಷ್ಯ ಉದಾತ್ತವಾಗುತ್ತದೆ ಈ ಜೀವನಪ್ರವಾಹದಲ್ಲಿ ಸತ್ಕಾರ್ಯದಿಂದಾಗುವ ಪರಮ ಪ್ರಯೋಜನ ಆದರಂತೆ ಸತ್ಸಂಗವೂ ನಮಗೆ ಮಹಾಮಹಾನುಭಾವಗಳನ್ನೂ ಸೂಕ್ಷ್ಮಾನುಭವಗಳನ್ನೂ ತಂದುಕೊಡುತ್ತದೆ. ಹೀಗೆ ಕಲಾವ್ಯಾಸಂಗದಿಂದ, ಸಜ್ಜನ ಸಂಗತಿಯಿಂದ, ಸಮಾಜ ಸಂಸರ್ಗದಿಂದ ಜನದಾತ್ಮ ಸಂಸ್ಕರಣೆಯಿಂದ ಮನಸ್ಸಿಗೂ ಬುದ್ಧಿಗೂ ಸಂಸ್ಕಾರ ಪಡೆದುಕೊಂಡಿರುವಾತನು ಭಗವದ್ಗೀತೆ ವರ್ಣಿಸಿರುವ ಸಂಸ್ಕೃತಿಗೆ ವ್ಯಾಖ್ಯಾನಕವಾಗುತ್ತಾನೆ

ಯಸ್ಮಾನ್ನೋದ್ವಿಜತೇ ಲೋಕಃ
ಲೋಕಾನ್ನೋದ್ವಿಜತೇ ಚಯಃ।
ಅದ್ವೇಷ್ಟಾ ಸರ್ವ ಭೂತಾನಾಂ
ಮೈತ್ರಃ ಕರುಣ ಏವಚ॥
ಲೋಕವವನಂ ಕೆರಳಿದನು ಲೋಕವನೆ ಕೆರಳ
ದೇಕ ಭಾವವನು ಸರಿಸಿ ಸುಖದೆಲ್ಲ ಜನಕಂ॥



(ಏಷಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಶಂ. ತಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಷಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ನೌಕರಿ ಸ್ವಂತ ಜವಾಬ್ದಾರಿಯ ನೌಕರಿ ದೊರೆಯುತ್ತದೆ. ಸುಲಭ ಕಠಿನ ಮಹುವಾವತಿ. ಇಂಗ್ಲೀಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. O Box No. 3219, BOMBAY 3.

ಓದಲೇಬೇಕಾದ ದಿ! ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು ... ಕಾಗದ, ಆಕರ್ಷಕ ರಕ್ಷಾಪುಟ ಬೆಲೆ 2 0-0.

ಭಾರತದ ಕರ್ಣ

"ಭಾರತದ ಕರ್ಣನು ದಿ ಕಿಲ್ಲೆಯವರಿಗೆ ಒಲಿದಿದ್ದ ... ಆತನ ಕರ್ಣನ ಪಾತ್ರವನ್ನು ನೋಡಿದವರಿಗೆ ಗೊತ್ತು ಆ ದುರಂತ ಕರ್ಣನಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು (ಪ್ರೊ! ಎಂ ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ ಬೆಲೆ 0-6-0

ಮುರಲಿ

ಮೇಲ್ಮಟ್ಟದ ಕವಿತೆಗಳ ಸಂಗ್ರಹ.

ಬೆಲೆ 0-12-0.

(ಮುನ್ನುಡಿಕಾರರು ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ಮೂರೂ ಪುಸ್ತಕಗಳನ್ನೂ ದಿ! ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮಗೆ ಯಾವುದೇ ತರದ ಉದ್ಯೋಗ ಬೇಕೆಂದಿದ್ದರೆ ಅಥವಾ ವ್ಯಾಪಾರ ನಡೆಸಬೇಕೆಂದಿದ್ದರೆ ಕೂಡಲೇ ಬರೆಯಿರಿ:

ಟಪ್ಪಾಲು ಪೆಟ್ಟಿಗೆ ನಂಬ್ರ 1868

ಬೊಂಬಾಯಿ—1

Edited, Printed & Published By K. H. Shetty at the Navayuga Press Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪
VOL. 34

ಉಡುಪಿ, 3—3—1955

ಸಂಚಿಕೆ ೨೬
NO. 26

ಔದ್ಯೋಗಿಕ ಮತ್ತು ವಾಣಿಜ್ಯ ಕ್ಷೇತ್ರದ ಕಂಪೆನಿಗಳ ಡೈರೆಕ್ಟರರೇ ಮುಂತಾದ ಅಧಿಕಾರಿಗಳು ಬಹಳದೊಡ್ಡ ಮೊತ್ತದ ಸಂಬಳ ಮತ್ತಿತರ ಭತ್ತೆ ತೆಗೆದುಕೊಳ್ಳುತ್ತಿದ್ದರೆ, ಅಲ್ಲಿ ಕೆಲಸ ಮಾಡುವ ಸಾಮಾನ್ಯ ಜನರಿಗೆ ಹೊಟ್ಟೆ ತುಂಬಿಸುವಷ್ಟು ವೇತನಸಿಗುವುದಿಲ್ಲ. ಈ ವೈಷಮ್ಯವನ್ನು ತಗ್ಗಿಸಿ, ಸಂಬಳ ಪ್ರಮಾಣವನ್ನು ಶಾಸನದ ಮೂಲಕ ನಿಶ್ಚಿತಗೊಳಿಸುವುದು ಶ್ರೇಯಸ್ಕರ. ಯಾರಿಗೇ ಆಗಲಿ, ದೇಶದಲ್ಲಿ ಅತ್ಯಂತ ಹೊಣೆಗಾರಸ್ಥಾನವೆನಿಸಿದ ಪ್ರಧಾನಮಂತ್ರಿಪದವಿಗೆ ಸಿಗುವ ಸಂಬಳಕ್ಕಿಂತ ಹೆಚ್ಚು ಸಂಬಳವಿರಬಾರದು.

—ಶ್ರೀ ಕೆ. ಪಿ. ತ್ರಿಪಾಠಿ

ಕಂಪೆನಿಯ ಮೆನೇಜರರ ಬಳಿಗೆ ಒಬ್ಬ ಕ್ಲಾರ್ಕನು ಹೋಗಿ ತನಗೆ ಸಿಗುವ ಸಂಬಳದಲ್ಲಿ ಕಾರ್ಬಾರುಗುವುದಿಲ್ಲವೆಂದೂ ಸಂಬಳ ಹೆಚ್ಚಿಸಬೇಕೆಂದೂ ಕೇಳಿಕೊಂಡ. ಅದಕ್ಕೆ ಮೇನೇಜರ "ಅಲ್ಲಪ್ಪೊ, ನೀನಿರುವ ಒಬ್ಬ—ಹೆಂಡತಿ ಇಲ್ಲ, ಮಕ್ಕಳಿಲ್ಲ. ನಿನ್ನಷ್ಟಾಗಿದ್ದಾಗ ನಾನು ಇದೇ ಸಂಸಾರವನ್ನ ಇದಕ್ಕೂ ಕಡಿಮೆ ಸಂಬಳದಲ್ಲಿ ನಡೆಸಿಕೊಂಡು ಹೋಗುತ್ತಿದ್ದೆ, ಗೊತ್ತೇ" ಎಂದ.

"ಇರಬಹುದು— ಆದರೆ ಆಗ ಕಂಪೆನಿಯ ಲೆಕ್ಕಪತ್ರಗಳನ್ನು ಯಾರೂ ಪರಿಶೋಧಿಸುತ್ತಿರಲಿಲ್ಲವಲ್ಲ!" ಮೆನೇಜರರಿಗೆ ಕಹಿಗುಳಿಗೆಯನ್ನು ನುಂಗಿದಂತಾಯಿತು!

ವರಮಾನದ ಪರಿಮಾಣ

ಅವಡಿಯ ಕಾಂಗ್ರೆಸು ಅಧಿವೇಶನದ ಕಾಲದಲ್ಲಿ ಅಷ್ಟಾಗಿ ಬೆಳಕಿಗೆ ಬಂದಿರದಿದ್ದ ಮಹತ್ವದ ವಿಷಯವೊಂದು ಈ ವಾರಾಂತ್ಯದಲ್ಲಿ ಸಭೆಸೇರಲಿರುವ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಪರ್ಯಾಲೋಚನೆಗೊಳಪಡುತ್ತದೆಯಾಗಿ ತಿಳಿದು ಬರುತ್ತದೆ. ಅದೆಂದರೆ, ಅನಾಮಿಃನ ಶ್ರೀ ಕೆ. ಪಿ. ತ್ರಿಪಾಠಿಯವರು ವರಮಾನದ ಪರಿಮಾಣವನ್ನು ಕುರಿತು ಮಂಡಿಸಿರುವ ಗೊತ್ತುವಳಿ. ಸತ್ಯಮೂರ್ತಿ ನಗರದಲ್ಲಿ ಜನವರಿ ೨ನೇ ತಾರೀಕಿನಂದು ಕಾಂಗ್ರೆಸಿನ ವಿಷಯ ನಿಯಾಮಕ ಸಮಿತಿಯ ಸಭೆ ಸೇರಿದ್ದಾಗ ಶ್ರೀ ತ್ರಿಪಾಠಿಯವರು ತಮ್ಮ ಗೊತ್ತುವಳಿಯ ಮೂಲಕ ವಾಣಿಜ್ಯ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ವಿದ್ಯಮಾನವಿರುವ ಸಂಬಳ ಪ್ರಮಾಣದಲ್ಲಿ ಗಣನೀಯವಾದ ವೈಷಮ್ಯವೂ ವೈಪರೀತ್ಯವೂ ಇದೆಯೆಂದು ಎಲ್ಲರ ಗಮನಕ್ಕೆ ತಂದುಕೊಟ್ಟರು. ಸಂಬಳದ ಪರಮಾವಧಿ ಮಿತಿಯನ್ನು ತಗ್ಗಿಸದೆ ಹೋದರೆ ಜನರ ಮುಂದೆ ನಾವು ಯಾವ ಆದರ್ಶವನ್ನೂ ಮಂಡಿಸುವುದು ಸಾಧ್ಯವಿಲ್ಲ ಎಂದವರು ವಾದಿಸಿದರು. ಮೌಲಾನಾ ಅಝಾದರು ಗೊತ್ತುವಳಿಯಲ್ಲಿ ಅಡಕವಾದ ತತ್ವದ ಬಗ್ಗೆ ಯಾರಿಗೂ ಆಕ್ಷೇಪವಿಲ್ಲವೆಂದೂ ಆದರೆ ಪ್ರಶ್ನೆಯನ್ನು ವಿವರವಾಗಿ ಪರಿಶೀಲಿಸುವ ಆಗತ್ಯವಿರುವುದರಿಂದ ಕಾರ್ಯಕಾರಿ ಸಮಿತಿಗೆ ಗೊತ್ತುವಳಿಯನ್ನು ಒಪ್ಪಿಸಿಕೊಡುವುದೇ ಇಷ್ಟವೆಂದೂ ಹೇಳಿದುದರಿಂದ, ಚರ್ಚೆ ಅಲ್ಲಿಗೇ ನಿಂತಿತು. ಈಗ ಕಾರ್ಯಸಮಿತಿ ಅದನ್ನು ಮರಳಿ ಎತ್ತಿಕೊಳ್ಳುತ್ತಿರುವುದು ಸಂತೋಷದಾಯಕವಾದ ವಿಚಾರ.

ದೇಶದಲ್ಲಿ ಸಂಪತ್ತನ್ನು ಹೆಚ್ಚಿಸಬೇಕೆನ್ನುವ ಚಳವಳವು ನಡೆದಿರುವಾಗ ಮತ್ತು ಅದಕ್ಕೆ ಎಲ್ಲ ರೀತಿಯ ಪ್ರೋತ್ಸಾಹವನ್ನೂ ಕೊಡುತ್ತಿರುವಾಗ ಏರಿಕೆಯ ಮಂಡಳಗಳನ್ನು ತಗ್ಗಿಸುವುದು ವಿರೋಧಾಭಾಸವಾಗಿಯೇ ಕೆಲವರಿಗೆ ಕಾಣಿಸಬಹುದು. ಜೀವನ ಮಟ್ಟವನ್ನು ಎತ್ತರಿಸುವುದೆಂದರೆ ಹೆಚ್ಚು ಹೆಚ್ಚು ಸೌಕರ್ಯಗಳನ್ನು ಒದಗಿಸುವುದರ ಮತ್ತು ಅನುಕೂಲತೆಗಳನ್ನು ಕಲ್ಪಿಸಿ ಕೊಡುವುದರ ಹೊರತು ಮತ್ತೇನು? ಹೆಚ್ಚಿನ ಸಂಬಳವು ಅತ್ಯಧಿಕ ಪ್ರಮಾಣದಲ್ಲಿ ಸುಖ ಸೌಕರ್ಯಗಳನ್ನು ಬಳಸಿಕೊಳ್ಳಲು ನೆರವಾಗುತ್ತದೆ ಎಂದು ಹೇಳಿದರೆ ತಪ್ಪಲ್ಲ. ಆದುದರಿಂದ ಈಗ ಸಂಬಳವನ್ನು ಹೆಚ್ಚಿಸುವುದು ಮುಖ್ಯವಾದ ಕೆಲಸವೇ ಹೊರತು, ಸಂಬಳವನ್ನು ತಗ್ಗಿಸುವುದಲ್ಲ. ಆದುದರಿಂದ ಸರಕಾರದವರು ಅಥವಾ ಸಾರ್ವಜನಿಕ ಹಿತಚಿಂತನೆಯ ದೃಷ್ಟಿಯುಳ್ಳ ಸಂಘ ಸಂಸ್ಥೆಗಳು ಮತ್ತು ರಾಜಕೀಯ ಪಕ್ಷ ಪಂಗಡಗಳು ಯಾರದಾದರೂ ಸಂಬಳ ತಗ್ಗಿಸುವ ವಿಚಾರದಲ್ಲಿ ಆಲೋಚನೆ ಮಾಡುವುದೆಂದರೆ ತಾವು ಉರುಹಾಕುತ್ತಿರುವ ನಲ್ಲವಿಗೆವಿರುದ್ಧವಾಗಿನಡೆದು ಕೊಂಡಂತಾಗುತ್ತದೆ—ಎಂಬುದಾಗಿ ಕೆಲವು ಮಹಾನುಭಾವರು ವಾದಿಸಬಹುದು. ಮುಖ್ಯವಾಗಿ ಈಗ ದೊಡ್ಡ ಮೊತ್ತದ ಸಂಬಳ ಮತ್ತು ಭತ್ತೆಗಳನ್ನು ಪಡೆಯುವವರೂ ಅವರ ಜಾತಿಗೆ ಸೇರಿದ ಇತರರೂ ಮೇಲಿನ ತರ್ಕವನ್ನು ಮಂಡಿಸಿ, ಕಡಿಮೆ ಸಂಬಳವಿರುವ ಜನರ ಸಂಬಳ ಹೆಚ್ಚಿಸುವ ಪ್ರಯತ್ನವನ್ನಷ್ಟೇ ನೀವು ಮಾಡಬೇಕೆಂದು ಉಪದೇಶಿಸಿಯಾರು.

ಅವರ ಮಾತನ್ನು ಸಂಪೂರ್ಣ ಅಲ್ಲಗಳೆಯುವುದು ದಾರ್ಷ್ಟ್ಯವೇ ಆದೀತು—ಏಕೆಂದರೆ, ಸತ್ಯದ ತುಣುಕೊಂದು ಅವರ ಮಾತಿನಲ್ಲಿಯೂ ದೃಗ್ಗೋಚರವಾಗುತ್ತದೆ ಆದರೆ, ಅದೇ ಸಮಯ ಸತ್ಯದ ಇನ್ನೊಂದು ಅಂಶವೂ ಕಣ್ಣಮುಂದೆ ಬಂದು ನಿಲ್ಲುತ್ತದೆ. ಬೇಂಕುಗಳ ಏಕಾಧಿನ ಕುರಿತು ಲೋಕಸಭೆಯಲ್ಲಿ ದೀರ್ಘ ಚರ್ಚೆ ನಡೆದಿದ್ದಾಗ ಬಹಿರಂಗಗೊಂಡ ಸಂಗತಿಗಳಲ್ಲಿ ತಿಂಗಳಿಗೆ ಇಪ್ಪತ್ತು ಸಾವಿರ ರೂಪಾಯಿಗೂ ಮಿಕ್ಕಿ ಸಂಬಳವನ್ನೂ ಇದರ ಹೊರತಾಗಿ, ಪ್ರತ್ಯೇಕ ಭತ್ತೆಯನ್ನೂ ಇತರ ಸೌಕರ್ಯವನ್ನೂ ಪಡೆಯುವ ಕೆಲವು ಮಹಾನುಭಾವರಿದ್ದಾರೆಂಬುದೂ ಒಂದು. ಇದನ್ನು ಅಪವಾದವಾಗಿ ಪರಿಗಣಿಸಿದರೂ ಸಹ ತಿಂಗಳಿಗೆ ನಾಲ್ಕು ಸಾವಿರ ರೂಪಾಯಿ ಸಂಬಳದ ಮೆನೇಜಿಂಗ್ ಡೈರೆಕ್ಟರ್ ಇರುವ ಕಂಪೆನಿಯ ಸಾಮಾನ್ಯ ಕ್ಲಾರ್ಕನು ಕೇವಲ ನಲುವತ್ತು ರೂಪಾಯಿಯಿಂದಲೇ ದಿನಗಳೆಯಬೇಕಾದ ಉದಾಹರಣೆ ಎಲ್ಲಿಯೂ ನೋಡಸಿಗುತ್ತದೆ. ಇಬ್ಬರೂ ವ್ಯಕ್ತಿಗಳ ಜೀವನ ನಿರ್ವಹಣದ ಕನಿಷ್ಠ ಆವಶ್ಯಕತೆಗಳಲ್ಲಿ ಬಹಳ ಹತ್ತಿರದ ಸಾಮ್ಯವಿರುವಾಗ ವೇತನ ಪ್ರಮಾಣದಲ್ಲಿ ಮಾತ್ರ ನೂರು ಪಾಲಿನಷ್ಟು ಅಂತರವಿರುವುದು ಮಾನವ ಸಹಜವಾದ ಈರ್ಷ್ಯಾಸೂಯೆಯ ಪ್ರವೃತ್ತಿಯನ್ನೂ ಕಮ್ಯುನಿಸ್ಟರು ಪ್ರತಿಪಾದಿಸುವ ವರ್ಗ ಕಲಹದ ಭಾವನೆಯನ್ನೂ ಪ್ರಚೋದಿಸಲು ಕಾರಣವಾಗುತ್ತದೆ. ಸಾಮಾಜಿಕ ರಂಗದ ಸುಖಜೀವನಕ್ಕೆ ಇದರಿಂದ ಕ್ಷೋಭೆಯಾಗುತ್ತದೆನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ—ಅಂತಲೇ ರಾಜಕೀಯ ಪಕ್ಷಗಳೂ ಸರಕಾರವೂ ಅದನ್ನು ಹೆಚ್ಚು ಸಮಾನತೆಯ ವಾತಾವರಣವನ್ನು ನಿರ್ಮಿಸಲು ಪ್ರಯತ್ನಪಡುತ್ತವೆ.

ತ್ರಿಪಾಠಿಯವರ ಗೊತ್ತುವಳಿಯನ್ನು ಈ ದೃಷ್ಟಿಕೋಣದಿಂದ ನಾವು ವಿಮರ್ಶಿಸಬೇಕು. ನಾವು ವ್ಯಕ್ತಿ ಕೌಶಲ್ಯಕ್ಕೆ ತಕ್ಕ ಗೌರವವನ್ನು ಸಲ್ಲಿಸಬೇಕೆಂಬುದು ನಿಜ— ಉದಾಹರಣೆ ತಂತ್ರಜ್ಞರ ಯೋಗ್ಯತೆ ಸಾಮಾನ್ಯ ಕೂಲಿಯ ಯೋಗ್ಯತೆಗಿಂತ ಹಿರಿದು'. ಹೆಚ್ಚು ಬದಲಾವಣೆ ... ಭಾರತೀಯ ಸಂಸ್ಕೃತಿಯಲ್ಲಿ ... ದ "ತ್ಯಾಗ"ದ ಭಾವನೆಯಿಂದ ... ಹೆಚ್ಚು ಯೋಗ್ಯತೆಯುಳ್ಳ ... ಹೆಚ್ಚಿನ ಸಂಬಳವನ್ನು ... ಅಪೇಕ್ಷೆಯ ತಿಂಗಳ ಸಂಬಳದ ಮೊತ್ತಕ್ಕೆ ನಾಲ್ಕು ಪಟ್ಟು ... ಸಂಖ್ಯಾ ಪ್ರಮಾಣವನ್ನು ... ಘನತೆ ಮತ್ತು ಗೌರವದ ... ವೆಂಬ ಭಾವನೆಗೆ ನಾವು ... ರನು. ಎಲ್ಲಾಕ್ಷೇಮ ಚಿಂತನೆಯ ದೃಷ್ಟಿಯಿರಬೇಕಾದ ನಾವು ಕನಿಷ್ಠ ಮತ್ತು ಗರಿಷ್ಠ ಸಂಬಳದ ಪ್ರಮಾಣವನ್ನು ಹೆಚ್ಚಿಂದರೆ ಹತ್ತು, ಹನ್ನೆರಡರ ಪಟ್ಟಿನ ಪಾಲಿನ ಅಂತರವನ್ನು ನೆಲೆಗೊಳಿಸಬಹುದು. ಇದೂ ನ್ಯಾಯವೆನಿಸದೆ—ಯೋಗ್ಯತೆಗೆ ಪ್ರೋತ್ಸಾಹ ಕೊಡುವ ವ್ಯಾವಹಾರಿಕ ಮಾರ್ಗವೆಂಬುದಾಗಿಯೇ ಈ ಮಿತಿಯನ್ನು ಹಾಕಿ

(ಮುಂದಿನ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿಶಾಲವಾದ ನಿಮ್ಮ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ. ಹಣವನ್ನು ಠೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಬೇಕಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಿರಿಸಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೯೨ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ಕೊಯಿರಾಲ ಸಹೋದರರ ನೇಪಾಳ

ಅಂತಃಕಲಹದಿಂದ ವಿಷಮಿಸಿದ ರಾಜಕೀಯ

ನಮ್ಮ ನೆರೆಯಲ್ಲಿರುವ ಸ್ವತಂತ್ರ ರಾಷ್ಟ್ರ ನೇಪಾಳದಿಂದ ಈಚೆಗೆ ಬಂದಿರುವ ಕೆಲವು ವರದಿಗಳು ಆ ದೇಶದಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿರುವುದನ್ನು ಸ್ಪಷ್ಟಗೊಳಿಸುತ್ತವೆ ಅಲ್ಲಿನ ರಾಜಕೀಯ ರಂಗದಲ್ಲಿ ಉಂಟಾಗಿರುವ ಕ್ಷೋಭೆಯನ್ನು ದೂರ ಮಾಡಿ, ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಯುವರಾಜರಾದ ಶ್ರೀ ಮಹೇಂದ್ರ ವೀರ ವಿಕ್ರಮರು ಸಲಹಾ ಮಂಡಳವನ್ನು ವಿಸರ್ಜಿಸಿ ಬಿಟ್ಟು, ತಾವೇ ರಾಜ್ಯ ಸೂತ್ರವನ್ನು ಕೈಗೆ ತೆಗೆದುಕೊಂಡಿರುವುದಾಗಿ ಹೇಳಿರುವುದೂ ಫ್ರಾನ್ಸಿನಲ್ಲಿ ದೇಹಾಲಸ್ಯದಿಂದ ಬಳಲುತ್ತಿರುವ ನೇಪಾಳದ ಅರಸು ತ್ರಿಭುವನರು ಯುವರಾಜರು ರಾಜ್ಯದ ಹಿತದೃಷ್ಟಿಯಿಂದ ಯಾವುದೇ ಕ್ರಮ ತೆಗೆದುಕೊಳ್ಳಲು ಅಧಿಕಾರ ಹೊಂದಿರುವರೆಂದು ಹೇಳಿ ಮಹತ್ವದ ಈ ಹೆಜ್ಜೆಗೆ ಅನುಮೋದನೆ ಕೊಡುವ ಹಿನ್ನೆಲೆಯ ಘೋಷಣೆ ಹೊರಡಿಸಿರುವುದೂ ನೇಪಾಳದ ಗಂಭೀರ ಪರಿಸ್ಥಿತಿಯನ್ನು ಸೂಚಿಸುತ್ತದೆ.

ಭಾರತೀಯರ ಪಾಲಿಗೆ ನೇಪಾಳದ ಆಗುಹೋಗುಗಳು ಯಾವಾಗಲೂ ಕಣ್ಣಿಟ್ಟಿರಬೇಕಾದ ವಿಷಯಗಳಾಗುತ್ತವೆ. ಏಕೆಂದರೆ, ಹಿಮಾಲಯದ ಅಭೇದ್ಯ ದುರ್ಗವನ್ನು ಭೇದಿಸಿ ಭಾರತಕ್ಕೆ ಬರಬಹುದಾದ ಕಣಿವೆಗಳು ನೇಪಾಳದ ಮೂಲಕ ಹಾದು ಹೋಗುತ್ತವೆ. ಆ ದೇಶದ ಉತ್ತರಕ್ಕಿರುವ ಟಿಬೇಟಿನಲ್ಲಿ ಈಗ ಕಮ್ಯುನಿಸ್ಟ್ ಚೀನದ ಸೈನ್ಯ ಬೀಡು ಬಿಟ್ಟಿರುವುದು—ಚೀನದೊಡನೆ ನಾವು ಸ್ನೇಹವನ್ನೂ ಸೌಹಾರ್ದ ಸಂಬಂಧವನ್ನೂ ಕಾಯ್ದುಕೊಂಡು ಬಂದಿರುವೆವಾದರೂ ರಾಷ್ಟ್ರದ ಸಂರಕ್ಷಣೆಯ ಮಟ್ಟಿಗೆ ಯಾವಾಗಲೂ ಜಾಗರೂಕರಾಗಿಯೇ ಇರಬೇಕಾದದ್ದು ನಮ್ಮ ಧರ್ಮ. ಆದುದರಿಂದ ನೇಪಾಳ, ಭೂತಾನ ಮುಂತಾದ ಗಡಿಪ್ರದೇಶಗಳಲ್ಲಿಯಾವ ತರದ ಆಂತರಿಕ ಗೊಂದಲವೂ ಇಲ್ಲದೆ, ಶಾಂತವಾದ ಸುಖ ಜೀವನ ನಡೆಯುತ್ತಿರುವಂತೆ ನೆರವಾಗುವುದು ಭಾರತ ಸರಕಾರದ ಕರ್ತವ್ಯಗಳಲ್ಲಿ ಸೇರುತ್ತದೆ. ನೇಪಾಳದ ಅಭಿವೃದ್ಧಿ ಪ್ರಯತ್ನಗಳಿಗೆ ಭಾರತವು ಧಾರಾಳವಾದ ನೆರವನ್ನು ನೀಡುತ್ತಿರುವುದರ ಮೂಲದಲ್ಲಿರುವುದು ಇದೇ ಮಾತು.

ಹಿಮಾಲಯದ ತಪ್ಪಲಲ್ಲಿ ೫೩೦ ಮೈಲು ಉದ್ದ ಮತ್ತು ೧೫೫ ಮೈಲು ಅಗಲಕ್ಕೆ ಒಟ್ಟು ೫೪ ಸಾವಿರ ಚದರ ಮೈಲು ವಿಸ್ತೀರ್ಣವನ್ನು ಆವರಿಸಿರುವ ದೇಶ ನೇಪಾಳ. ಇಲ್ಲಿಯ ಜನ ಸಂಖ್ಯೆ ೭೫ ಲಕ್ಷ—ಬುದ್ಧ ದೇವನು ಜನಿಸಿದ ಊರು ನೇಪಾಳದಲ್ಲಿದ್ದರೂ, ಮಗಧದ ಅಶೋಕ ಚಕ್ರವರ್ತಿ ಕಟ್ಟಿಸಿದ ಐದು ಬೌದ್ಧ ಸ್ತೂಪಗಳು ಇಲ್ಲಿದ್ದರೂ, ನೇಪಾಳದ ಜನರೆಲ್ಲರೂ ಹಿಂದುಗಳು. ನೇಪಾಳೀಯರು ಭಾರತದೊಡನೆ ವಿಶೇಷವಾದ ಸಾಂಸ್ಕೃತಿಕ ಬಾಂಧವ್ಯವನ್ನು ಸ್ಥಾಪಿಸಿಕೊಂಡಿದ್ದರೂ ಅವರಲ್ಲಿ ಮಂಗೋಲ ವಂಶಜರ ನೆತ್ತರು ಮೈಯಲ್ಲಿ ಹರಿಯುತ್ತಿರುವವರೇ ಹೆಚ್ಚು; ಮುಖಸಾಮ್ಯವು ಈ ಮಾತನ್ನು ಪುಷ್ಟೀಕರಿಸುತ್ತದೆ. ನೇಪಾಳದ ಮಧ್ಯ ಭಾಗದಲ್ಲಿ ಅತ್ಯಂತ ಸಮರ್ಥ ಸೈನಿಕರ ಜಾತಿಗೆ ಸೇರಿದ ಗುರ್ಖಾ ಜನರೂ ಪೂರ್ವ ಭಾಗದಲ್ಲಿ ಕಿರಾತರೂ ಪಶ್ಚಿಮದಲ್ಲಿ ಮಗಾರ ಮುಂತಾದವರೂ ಉತ್ತರದ ಗುಡ್ಡಗಾಡು ಪ್ರದೇಶದಲ್ಲಿ ಭೂಟಿಯರೂ ನೆಲಸಿದ್ದಾರೆ. ಇಲ್ಲಿಯ ಮುಖ್ಯ ಉತ್ಪನ್ನ ಭತ್ತ ಮತ್ತು ಗೋಧಿ—ಭಾರತಕ್ಕೆ ಹರಿದು ಬರುವ ಕೋಸಿ, ಗಂಡಕಿ ಮುಂತಾದ ಮಹಾನದಿಗಳು ನೇಪಾಳದಲ್ಲಿಯೇ ಹುಟ್ಟುತ್ತವೆ. ಕೋಸಿ ನದಿಗೆ ಅಣೆಕಟ್ಟನ್ನು ಕಟ್ಟಿ, ಪ್ರವಾಹ ನಿಯಂತ್ರಣವನ್ನು ಸಾಧಿಸಿ, ಬಿಹಾರನ್ನು ನೆರೆಹಾವಳಿಯಿಂದ ರಕ್ಷಿಸುವಲ್ಲಿ ಭಾರತಕ್ಕೆ ನೇಪಾಳದ ಸಹಾಯ ಅಗತ್ಯವಾಗಿದ್ದು, ಈ ವಿಷಯದಲ್ಲಿ ಉಭಯ ರಾಷ್ಟ್ರಗಳಲ್ಲಿ ಸಹಕಾರ ಕಂಡು ಬರುತ್ತದೆ.

ಪಶುಪತಿನಾಥ ಮಂದಿರವೆಂಬ ಪ್ರಸಿದ್ಧ ಶಿವಾಲಯವು ನೇಪಾಳದ ಅರಸು ಮನೆತನಕ್ಕೆ ಮಾತ್ರವಲ್ಲ, ಸಮಸ್ತ ನೇಪಾಳೀಯರಿಗೂ ಉತ್ತರ ಭಾರತದ ಆಸ್ತಿಕರಿಗೂ ಯಾತ್ರೆಯ ಕ್ಷೇತ್ರ. ನೇಪಾಳದ ಅರಸರನ್ನು ಮಹಾ ವಿಷ್ಣುವಿನ ಅವತಾರವೆಂದು ಭಾವಿಸಲಾಗುತ್ತದೆ. ಆದುದರಿಂದ ಅವರು ವೈಷ್ಣವ ದೇವಾಲಯಕ್ಕೆ ಹೋಗುವುದಿಲ್ಲ—ಶಿವಾಲಯಕ್ಕೆ ತೆರಳಿ ಪೂಜೆ ಮಾಡುತ್ತಾರೆ. ಪಶುಪತಿನಾಥ ಮಂದಿರದಲ್ಲಿ ಜರಗುವ ಉತ್ಸವಗಳಲ್ಲಿ ಮಹಾಶಿವರಾತ್ರಿಯು ರಾಷ್ಟ್ರೀಯ ಉತ್ಸವವಾಗಿ ಅತ್ಯಂತ ವೈಭವದಿಂದ ಆಚರಿಸಲ್ಪಡುತ್ತದೆ. ೧೪೦೦ ವರ್ಷಗಳ ಹಿಂದೆ ಆದಿ ಶಂಕರಾಚಾರ್ಯರು ಸ್ಥಾಪಿಸಿದರೆಂದು ಹೇಳಲಾದ ಈ ಮಂದಿರಕ್ಕೆ ಮೊನ್ನೆಯ ಮಹಾಶಿವರಾತ್ರಿಯಂದು ಸುಮಾರು ೩೦ ಸಾವಿರ ಯಾತ್ರಿಕರು ಬಂದಿದ್ದರು. ಆಬಾಲವೃದ್ಧರಾದಿಯಾಗಿ, ಶ್ರೀಮಂತ ಹಾಗು ಬಡವನೆಂಬ ತಾರತಮ್ಯವಿಲ್ಲದೆ ಎಲ್ಲರೂ ಸಮೀಪದಲ್ಲಿ ಹರಿಯುವ ಭಾಗಮತೀ ನದಿಯಲ್ಲಿ ಮುಳುಗು ಹಾಕಿ, ಪಶುಪತಿನಾಥನ ದಿವ್ಯ ದರ್ಶನ ಲಾಭವನ್ನು ಹೊಂದಲು ಕಿಕ್ಕಿರಿದು ನೆರೆದಿದ್ದರು. ಶಿವನ ವಾಹನವಾದ ನಂದಿಯು ಪಶ್ಚಿಮದ ಕೇದಾರನಾಥದಲ್ಲಿ ಭೂಗರ್ಭವನ್ನು ಪ್ರವೇಶಿಸಿದ ಬಳಿಕ ಹೊರಗೆ ಬಂದ ಸ್ಥಾನದಲ್ಲಿ ಈ ಪಶುಪತಿನಾಥ ಮಂದಿರವಿದೆಯಾಗಿ ಹೇಳಲಾಗುತ್ತದೆ; ಇನ್ನೊಂದು ಆಖ್ಯಾಯಿಕೆಯಂತೆ ಅರ್ಜುನನು ಶಿವನನ್ನು ತಪಸ್ಸಿನಿಂದ ಒಲಿಸಿ ಪಾಶುಪತಾಸ್ತ್ರವನ್ನು ಪಡೆದ ಸ್ಥಳವೇ ಇದು. ಈ ಮಂದಿರದ ಅರ್ಚಕರು ನರ್ಮದಾ ನದಿಯ ದಕ್ಷಿಣಕ್ಕೆ ಸೇರಿದವರೇ ಆಗಿರಬೇಕೆಂಬ ನಿಯಮವಿದ್ದು, ಈಗಿನವರು ಒಬ್ಬ ಕರ್ನಾಟಕ ಬ್ರಾಹ್ಮಣ.

ಆಧುನಿಕ ವಿಚಾರಧಾರೆಯು ನೋಂಕು ಏನೇನೂ ತಗಲಿರದ ಹಿಂದುಳಿದ ರಾಷ್ಟ್ರಗಳಲ್ಲಿ ಒಂದೆಂದು ನೇಪಾಳವನ್ನು ವರ್ಣಿಸಲಾಗುತ್ತದೆ. ಅಲ್ಲಿ ವಿದ್ಯುಚ್ಛಕ್ತಿ, ಆಸ್ಪತ್ರೆ, ಶಿಕ್ಷಣ ಕೇಂದ್ರ, ಸಂಶೋಧನಾಲಯ ಮುಂತಾದ ಇಪ್ಪತ್ತನೇ ಶತಮಾನದ ಚಟುವಟಿಕೆಗಳು ಕ್ವಚಿತ್ತಾಗಿಯೇ ಕಾಣಿಸುತ್ತವೆ. ನಾಲ್ಕು ವರ್ಷಗಳ ಹಿಂದಿನವರೆಗೆ ಅಲ್ಲಿ ರಾಣಾ ಮನೆತನದವರ ಸರ್ವಾಧಿಕಾರ ನಡೆಯುತಿತ್ತು ಅವರು ತಮ್ಮ ಹಿತಾಸಕ್ತಿಯನ್ನು ಬಲಪಡಿಸಿಕೊಳ್ಳಲು ಕ್ರೌರ್ಯದ ಪರಮಾವಧಿಯನ್ನು ಮುಟ್ಟಿ ಜನಪೀಡಕರೂ ಶೋಷಕರೂ ಆಗಿ ಪರಿಣಮಿಸಿದರು ಹೊರತು, ಯಾವ ತರದ ಅಭಿವೃದ್ಧಿ ಪ್ರಯತ್ನಗಳಿಗೂ ಮನಸ್ಸುಮಾಡಲಿಲ್ಲ. ಫಲವತ್ತಾದ ಭೂಮಿಯಲ್ಲಿ ಮುಕ್ಕಾಲಂಶ ರಾಣಾ ಮನೆತನದವರಿಗೆ ಸೇರಿತ್ತು—ಮತ್ತು ಅಶಿಕ್ಷಿತ ಬೇಸಾಯಗಾರರ ನೆತ್ತರನ್ನು ಅವರು ಮನಸ್ವಿಯಾಗಿ ಹೀರುತ್ತಿದ್ದರು. ಮೊಗಲ ಅರಸರ ಪೀಡನೆಯಿಂದ ರೋಸಿ ಹೋಗಿ ಓಡಿಬಂದ ಬ್ರಾಹ್ಮಣ ಹಾಗು ರಜಪೂತ ವಂಶಜರೇ ಗುರ್ಖರೆಂದೂ ರಾಣಾರೆಂದೂ ಅಭಿಪ್ರಾಯಪಡಲಾಗುತ್ತದೆ. ರಾಣಾ ಮನೆತನದ ಅಡಿಗಲ್ಲನ್ನು ೧೮೪೬ನೇ ಇಸವಿಯಲ್ಲಿ ಜಂಗ್ ಬಹಾದುರ್ ಎಂಬ ವೀರ ಸೈನಿಕನು ಹಾಕಿದನು. ತನ್ನ ಪ್ರತಾಪದ ದೆಸೆಯಿಂದ ಅವನು ಪ್ರಧಾನಮಂತ್ರಿಯಾದನು; ಇಂಗ್ಲೆಂಡಿಗೂ ಅವನು ಪ್ರಯಾಣ ಬೆಳೆಸಿದನು. ಅಂದಿನಿಂದ ರಾಜನ ಶಕ್ತಿ ಕುಂಠಿತವಾಗಿ ರಾಣಾ ಮನೆತನದವರ ಕೈ ಬಲಗೊಳ್ಳುತ್ತಾ ಬಂತು. ಸುಮಾರು ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ಇದಕ್ಕೆ ವ್ಯತ್ಯಯ ಬರಲಿಲ್ಲ.

ನಮ್ಮ ದೇಶದಲ್ಲಿ ಸ್ವಾತಂತ್ರ್ಯದ ಚಳವಳವು ಭರದಿಂದ ಮುಂದೊತ್ತಲ್ಪಟ್ಟಾಗ, ನೆರೆಯ ನೇಪಾಳದಲ್ಲಿಯೂ ಅದರ ಪ್ರತಿಧ್ವನಿ ಕೇಳಿಸಹತ್ತಿತು. ಶತಮಾನ ಕಾಲದ ಶೋಷಣೆಯಿಂದ ಕುಪಿತರೂ ಬೇಸತ್ತವರೂ ಆಗಿ ಪರಿಣಮಿಸಿದ ಪ್ರಜೆಗಳು ರಾಣಾ ಮನೆತನದ ಸರ್ವಾಧಿಕಾರದಿಂದ ವಿಮೋಚನೆಹೊಂದಿ ಪ್ರಜಾಸತ್ತಾತ್ಮಕ ರಾಜ್ಯ ವ್ಯವಸ್ಥೆಯನ್ನು ಸ್ಥಾಪಿಸಲು ಹೋರಾಟ ಹೂಡಿದರು. ನೇಪಾಳದಲ್ಲಿ ಕಾಂಗ್ರೆಸು ಸಂಸ್ಥೆಯ ಜೀವನಾಡಿಯಾಗಿ ಎಂ. ಪಿ. ಮತ್ತು ಬಿ. ಪಿ. ಕೊಯಿರಾಲರೆಂಬ ಸಹೋದರರು ಪರಿಣಮಿಸಿ, ಈ ಹೋರಾಟದ ಮುಂಚೂಣಿಯಲ್ಲಿ ನಿಂತರು. ಈ ಹೋರಾಟವನ್ನು ಹತ್ತಿಕ್ಕಲು ಬಂಧನಸತ್ರಗಳೂ, ಗೋಲೀಬಾರುಗಳೂ, ಗಡೀಪಾರು ಶಿಕ್ಷೆಯ ಕ್ರಮವೂ ರಾಣಾರಿಂದ ಅನುಸರಿಸಲ್ಪಟ್ಟರೂ ಪ್ರಯೋಜನವಾಗಲಿಲ್ಲ.

(೧೧ನೇ ಪುಟ ನೋಡಿರಿ)



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು.

Member: I. S. T. M. A.

ಹೋಳಿ-ಗ್ರಾಮಾಂತರ ಪ್ರದೇಶದ ಮದನೋತ್ಸವ

ರೈತಾಪಿ ಜನರ ಸಂತೋಷದ ಹಬ್ಬ

ನಮ್ಮ ಈ ಸಂಚಿಕೆ ಓದುಗರ ಕೈ ಸೇರುವ ಹೊತ್ತಿಗೆ ಹೋಳಿಯ ಉತ್ಸವದ ಸಿದ್ಧತೆಗಳು ತಮ್ಮ ಊರಿನಲ್ಲಿ ಭರದಿಂದ ನಡೆದಿರುವುದನ್ನ ಅವರು ಕಾಣಬಲ್ಲರು. ಭಾರತೀಯ ಪರಂಪರೆಯಂತೆ ನಡೆಯುವ ಹೋಳಿಯ ಉತ್ಸವವು ವಿನೋದ ಹಾಗು ಆಮೋದ ಪ್ರಮೋದಕ್ಕೆ ಹೆಸರಾದುದೆಂದು ಹೇಳಬಹುದು. ಪ್ರಾಚೀನ ವರ್ಣಾಶ್ರಮ ಧರ್ಮಕ್ಕನುಸಾರವಾಗಿ ಹೋಳಿಯು ಚತುರ್ಥ ವರ್ಣದವರ, ಅಂದರೆ ಶೂದ್ರರ, ಹಬ್ಬ. ಆದರೆ ಇಂದು ಹೋಳಿಯು ಸರ್ವ ಜನಾದರಣೀಯವಾದ ಉತ್ಸವನೆಂದು ತಿಳಿದು ಆಚರಿಸಲ್ಪಡುತ್ತದೆ. ನಮ್ಮ ಸಂಪ್ರದಾಯ ಪ್ರಕಾರ ಹೋಳಿಯ ಹಬ್ಬವು ಸಹ ಆತ್ಮ ವಿಕಾಸ ಮತ್ತು ಸಂತೋಷಕ್ಕೆ ನೆರವಾಗುತ್ತದೆ. ಸ್ಮಶಾನ ಭೂಮಿಯಲ್ಲಿದ್ದರೂ ಶಿವನನ್ನು ಸೌಂದರ್ಯದ ಪ್ರತೀಕನೆಂದು ಭಾವಿಸಿರುವ, ಮಸಣ ಕಾಯುತ್ತಿದ್ದ ಹರಿಶ್ಚಂದ್ರನನ್ನು ಸತ್ಯದ ಪ್ರತಿಪಾದಕನೆಂದು ಕರೆದಿರುವ ಪ್ರಾಚೀನ ಸಂಸ್ಕೃತಿಯು ಹೋಳಿಯನ್ನು ಆನಂದ ಬ್ರಹ್ಮದ ಸಾಕ್ಷಾತ್ಕಾರ ಸಾಧನವಾಗಿ ಪರಿಗಣಿಸಿರುತ್ತದೆ. "ದೇವಾಗಾತುಂ ವಿದೋಗಾತುಂ, ವಿತ್ವಾಗಾತುಮಿತ, ಮನಸ್ಪತ್ ಇಮಮ್ ದೇವಯಜ್ಞಂ, ಸ್ವಾಹಾವಾತೇಧಾ" ಎಂಬುದಾಗಿ ಯಜುರ್ವೇದವು ಗೀತ—ನೃತ್ಯಗಳ ಸರಸ ಮಿಳನವು ಮನಃಶುದ್ಧಿಗೂ ಚಿತ್ತೋದ್ಧಾರಕ್ಕೂ ಸಹಾಯಕವಾಗುವುದೆಂಬ ಸಂಗತಿಯನ್ನು ಬೊಟ್ಟಿತ್ತಿ ತೋರಿಸುತ್ತದೆ. ಉಪನಿಷತ್ತುಗಳಾದರೂ "ಆನಂದೇನ್ನೈವ ಜಾತಾನಿ ಜೀವಂತಿ" ಎನ್ನುತ್ತಾ ಸಂತೋಷವೇ ಜೀವನದ, ಮನುಷ್ಯನ, ಸರ್ವಸ್ವವೆಂದು ತೀರ ಸ್ಪಷ್ಟ ಮಾತುಗಳಲ್ಲಿ ಸಾರುತ್ತವೆ.

ಆದುದರಿಂದ ಹೋಳಿಯನ್ನು ಸಂತೋಷ ಪ್ರಧಾನವಾದ ಉತ್ಸವವಾಗಿ ನಾವು ಪರಿಗಣಿಸುವುದರಲ್ಲಿ ತಪ್ಪೇನೂ ಇರಲಾರದು. ನಮ್ಮ ಗ್ರಾಮಾಂತರ ಪ್ರದೇಶದ ರಸಿಕ ಶಿಖಾಮಣಿಗಳ ಪಾಲಿಗಂತೂ ಅದು ಮದನೋತ್ಸವವೆಂದರೂ ಸಲ್ಲುತ್ತದೆ. ಹೋಳಿಯ ಉತ್ಸವದ ಪ್ರಾರಂಭದಲ್ಲಿ ಕಾಮದಹನದ ಕೆಲಸವೂ ನಡೆಯುತ್ತದೆ. ಇದು ಶಿವನು ತಪಶ್ಚರ್ಯವನ್ನು ಕೈಗೊಂಡು, ವಿರಕ್ತ ಜೀವನವನ್ನು ನಡೆಸುತ್ತಿದ್ದಾಗ ಕಾಮನು ತನ್ನ ಗೆಳೆಯ ವಸಂತನೊಡನೆ ಸೇನೆ ಹಾಗು ಪರಿವಾರ ಸಹಿತನಾಗಿ ಬಂದು ಆಧ್ಯಾತ್ಮಿಕ ಕ್ಷೇತ್ರದಿಂದ ಸಾಂಸಾರಿಕ ಕ್ಷೇತ್ರಕ್ಕೆ ಶಿವನ ಮನಸ್ಸು ತಿರುಗುವಂತೆ ನಡೆಸಲು ಮಾಡಿದ ಪ್ರಯತ್ನಕ್ಕೆ ಸಂಬಂಧಿಸಿದುದಂತೆ ಭಾಸವಾಗುತ್ತದೆ ಆಗ ಶಿವನು ಕಾಮನನ್ನು ತನ್ನ ಕಿಡಿಯುಗುಳುವ ಹಣೆಗಣ್ಣಿನಿಂದ ಸುಟ್ಟು ಬಿಟ್ಟನು-ಆಧ್ಯಾತ್ಮಿಕ ತೇಜಸ್ಸು ಲೌಕಿಕ, ಭೌತಿಕ ಸಾಂಸಾರಿಕ ಮುಂತಾದ ಇತರ ಎಲ್ಲ ರೀತಿಯ ವೈಭವಕ್ಕಿಂತಲೂ ಹೆಚ್ಚಿನದೆಂದೂ ಅಮೂಲ್ಯವಾದುದೆಂದೂ ಶಿವನು ಹೀಗೆ ತೋರಿಸಿ ಕೊಟ್ಟನು. ಜನರಿದನ್ನು ನೆನೆದುಕೊಂಡ, ತಮ್ಮ ಆತ್ಮವೂ ಬೇಗ, ತೇಜೋಪೂರ್ಣವಾಗಲೆಂದು ಕಾಮದಹನದ ನಾಟಕವನ್ನು ನಡೆಸುವ ಸಂಪ್ರದಾಯವನ್ನು ಹಾಕಿ ಕೊಂಡರು. ಆದರೆ, ಇಂದು ಹೋಳಿಯ ಆಚರಣೆಯಲ್ಲಿ ಶುದ್ಧ ಆಧ್ಯಾತ್ಮಿಕ ಭಾವನೆ ಅಷ್ಟಾಗಿ ಉಳಿದಿಲ್ಲ-ಮೊದಲೇ ಹೇಳಿದಂತೆ, ಕಾಮದಹನಕ್ಕೆ ಈ ಉತ್ಸವವು ಸಂಬಂಧಿಸಿದ್ದರೂ ಉನ್ಮತ್ತರ ಯೌವನೋತ್ಸವವಾಗಿಯೇ ಅದು ನಮಗೆ ಆಚರಣೆಯಲ್ಲಿ ಕಂಡು ಬರುತ್ತದೆ.

ಇದಕ್ಕೆ ಕಾರಣವಿಲ್ಲದಿಲ್ಲ- ಹೋಳಿಯ ಉತ್ಸವ ನಡೆಯುವ ಕಾಲದ ಮಹಿಮೆಯೇ ಹಾಗಿದೆಯಲ್ಲವೇ? ಸುಗ್ಗಿಯ ಕೆಲಸ ಮುಗಿದಿರುತ್ತದೆ; ಧಾನ್ಯದ ರಾಶಿ ಬಂದು ಬಿದ್ದಿರುತ್ತದೆ; ಪುಷ್ಕಳವಾದ ಫಸಲು ಕೈಗೆ ಬಂದಿರುವ ಹೊತ್ತಿನಲ್ಲಿ ರೈತಾಪಿ ಗ್ರಾಮೀಣ ಜನರ ಕೈ ಹಿಡಿದು ನಿಲ್ಲಿಸುವವರಾರು? ಅವರು ಆನಂದಾತಿರೇಕದಿಂದ ಕುಣಿದು ನಲಿಯುವುದು ತೀರ ಸಹಜ. ಪ್ರಾಚೀನ ಆರ್ಯ ಸಂಸ್ಕೃತಿಗನುಸಾರವಾಗಿ ಜ್ಯೋತಿಷ್ಟೋಮದ ಮೂಲಕ ಹೊಸತಾಗಿ ಕೈಗೆ ಬಂದ ಧಾನ್ಯವನ್ನು ಅಗ್ನಿದೇವನಿಗೆ ಅರ್ಪಿಸಿ, ಅವನನ್ನು ತಮ್ಮ ಆಹುತಿಯಿಂದ ತೃಪ್ತಿಗೊಳಿಸಿದ ಬಳಿಕ ಜನರು ಉಳಿದುದನ್ನ ತಮ್ಮ ಉಪಯೋಗಕ್ಕೆ ಅಳವಡಿಸಿಕೊಳ್ಳುವರು. ಇಂದು ಅದರ ಸಾಮಾನ್ಯರೂಪವಾಗಿ ಹೋಳಿಯ ಬೆಂಕಿಯನ್ನು ಹೊತ್ತಿಸಿ, ಸಂತೋಷದಿಂದ ಕುಣಿದಾಡುತ್ತಾ, ರಂಗಿನ ಪಿಚಕಾರಿಯಿಂದ ಬಣ್ಣವನ್ನು ತೂರುತ್ತಾ, ವಿನೋದದ ಗೀತೆಗಳನ್ನು ಹಾಡುತ್ತಾ ಅಗ್ನಿದೇವನನ್ನು ಒಲಿಸಿಕೊಳ್ಳಲಾಗುತ್ತದೆ. ಗ್ರಾಮಾಂತರ ಪ್ರದೇಶದ ಜನಸಾಮಾನ್ಯರ ಹಬ್ಬವಾಗಿರುವ ಇಂದಿನ ಹೋಳಿ ಉನ್ನತವಾದ ಆಧ್ಯಾತ್ಮ ತತ್ವಗಳನ್ನು ಅಷ್ಟಾಗಿ ಪ್ರತಿನಿಧೀಕರಿಸದಿದ್ದರೂ ಆನಂದಮಯ ಬ್ರಹ್ಮದ ವಿರಾಟ್ಸ್ವರೂಪದ ಕಲ್ಪನೆಯನ್ನು ಮಾತ್ರ ಅವಶ್ಯವಾಗಿ ಮಾಡಿಕೊಡುತ್ತದೆ.

ಉತ್ತರ ಭಾರತದಲ್ಲಿಯೇ ಹೋಳಿಯ ವೈಭವ ಹೆಚ್ಚು-ಅದರಲ್ಲೂ ಶ್ರೀ ಕೃಷ್ಣನ ಲೀಲಾ ಭೂಮಿಯಾದ ವ್ರಜ ದೇಶದಲ್ಲಿನ ಹೋಳಿಯೇ ನಿಜವಾದ ಹೋಳಿ. ರಾಧಾರಾಣಿಗೂ ಶ್ರೀಕೃಷ್ಣ ಪರಮಾತ್ಮನಿಗೂ ಸಂಬಂಧವನ್ನು ಕಲ್ಪಿಸಿ, ಅವರು ಹೋಳಿಯನ್ನು ಸಂಭ್ರಮದಿಂದ ಮದನೋತ್ಸವವಾಗಿ ಆಡಿದ ಬಗೆಯನ್ನು ವರ್ಣಿಸುವ ಸುಂದರವಾದ ಭಾವಪೂರ್ಣ ಗೀತೆಗಳು ಸಂಸ್ಕೃತದಲ್ಲಿಯೂ ವ್ರಜದೇಶದ ಹಿಂದಿ ಭಾಷೆಯಲ್ಲಿಯೂ ಹೇರಳವಾಗಿದ್ದು, ಆ ಭಾಗದ ಪ್ರತಿಯೊಬ್ಬನ ನಾಲಿಗೆಯಲ್ಲೂ ಈ ಹಾಡುಗಳು ಕುಣಿಯುತ್ತವೆ. ಕೃಷ್ಣನು ತನ್ನ ಸಾಕುತಂದೆಯಾದ ನಂದಗೋಪನ ನಂದಗ್ರಾಮದಲ್ಲಿದ್ದನು, ರಾಧೆಯು ಬರಸಾನದಲ್ಲಿದ್ದಳು. ಹೋಳಿಯ ದಿನ ರಂಗಿನ ಪಿಚಕಾರಿಯನ್ನು ತೆಗೆದುಕೊಂಡು ರಾಧೆಯು ಆಡಲು ಹೊರಟಾಗ ಕೃಷ್ಣನ ಪರಿವಾರ ಅವಳನ್ನೂ ಅವಳ ಗೆಳತಿಯರನ್ನೂ ಸತಾಯಿಸಿತು. ಆಗ ರಾಧೆಯು ಉಪಾಯವಾಗಿ ಶ್ರೀ ಕೃಷ್ಣನನ್ನು ಗೋಪಿಯರ ಮೂಲಕ ಮನೆಗೆ ಬರುವಂತೆ ಮಾಡಿ, ಅವನಿಗೆ ಹುಡುಗಿಯ ವೇಷ ತೊಡಿಸಿ, ಹೊಡೆದು ಬಡಿದು ಗಾಸಿಗೊಳಿಸಿದಳು— ಎಂಬಿರುವ ಹೇಳಿಕೆಯನ್ನೆ ಆಧಾರವಾಗಿಟ್ಟುಕೊಂಡು ಈಗಲೂ ಬರಸಾನದ ಗೋಪಿಯರು ನಂದ ಗ್ರಾಮದ ಗೋಪರಿಗೆ ಹೋಳಿಯ ಉತ್ಸವದಲ್ಲಿ ಭಾಗಿಯಾಗಬೇಕೆಂದು ಆಹ್ವಾನ ಕೊಡುತ್ತಾರೆ. ರಾಧೆಯು ದಳ ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಎದುರಾಗುವುದು. ಅಲ್ಲಿ ಬಿರುಸಾದ ಜಗಳ ನಡೆಯುತ್ತದೆ. ಕೃಷ್ಣನ ಪಾತ್ರಧಾರಿಯು ಕೈಯಲ್ಲಿ ಕೇಸರಿ ಪತಾಕೆಯನ್ನು ಹಿಡಿದುಕೊಂಡು ರಾಧೆಯ ಬಳಿ ಹೋಗಲು ಸಾಹಸ ಮಾಡುತ್ತಾನೆ—ಉಳಿದ ಗೋಪರೂ ಗೋಪಿಯರೊಡನೆ ಮನಬಂದಂತೆ ಆಡುತ್ತಾರೆ. ಇಲ್ಲಿ ಹೆಂಗಸರ ಮೇಲೆ ಗಂಡಸರು ಹೊಡೆಯುವುದಿಲ್ಲ— ಮತ್ತು ಮುದುಕರು ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳುತ್ತಾರೆ. ಹೀಗೆ ಜಗಳ ನಡೆಯುತ್ತಿದ್ದರೂ ಹಾಡು ಮತ್ತು ನರ್ತನ ಸಹ ಸಾಗಿಯೇ ಸಾಗುತ್ತದೆ

ಮೇಲಿನ ಇತಿಹಾಸ ಪ್ರಸಿದ್ಧ ಉತ್ಸವ ನೋಡಲು ಲಕ್ಷಾಂತರ ಯಾತ್ರಿಕರು ನೆರೆದಿರುತ್ತಾರೆ ಆದರೆ ದಕ್ಷಿಣ ಭಾರತದ ನಮಗೆ ಇಲ್ಲಿಯ ಮರಾಟಿಗರು ಕಟ್ಟಿಕೊಂಡು ಬರುವ ಕುಣಿತದ ಮೇಳವೇ ನೋಡಲಿರುವ ಏಕ ಮಾತ್ರ ಆಕರ್ಷಣೆಯಾಗಿದೆ - ಇವರು ಹಾಡುವ ಪದಗಳು ಲಲಿತವಾಗಿವೆ; ನರ್ತನದ ಗತಿ ಮತ್ತು ವೇಗಗಳು ಸಂತೋಷ ಜನಕವಾಗಿವೆ; ವೇಷ ಭೂಷಣಗಳು ಮತ್ತು ವಾದ್ಯಗಳು ಸಂಪ್ರದಾಯಿಕ ಶೈಲಿಯವಾಗಿದ್ದರೂ ಮನಸೆಳೆಯುತ್ತವೆ. ಮರಾಟಿಗರು ಹೀಗೆ ಸಂತೋಷದಿಂದ ಕುಣಿಯುತ್ತಿರುವುದಕ್ಕೆ ವಿಶಿಷ್ಟವಾದ ಕಾರಣವನ್ನು ಹೇಳಬಹುದು: ಮರಾಟ ವಂಶದಲ್ಲಿ ಅತ್ಯಂತ ಪ್ರಖ್ಯಾತನಾದ ಶಿವಾಜಿಗೆ ಜನ್ಮ ಕೊಟ್ಟವರ ಮದುವೆಯನ್ನು ಹೋಳಿಯ ಶುಭ ಮುಹೂರ್ತದಲ್ಲಿ ನಿಶ್ಚಯಿಸಿದ್ದರು. ಜೀಜಾಬಾಯಿಯೂ ಶಾಹಜಿಯೂ ಹೋಳಿಯ ಕ್ರೀಡೆಯಲ್ಲಿ ನಿರತರಾಗಿದ್ದಾಗ 'ಅಹಾ-ಬಲು ಚೆಲುವಾದ ಜೋಡಿ" ಎಂದು ಜೀಜಾ ಬಾಯಿಯ ತಂದೆ ಉದ್ಗಾರವೆತ್ತಿದರು. ಅವನ್ನು ಕೇಳಿದೊಡನೆಯೆ ಶಾಹಜಿಯ ತಂದೆ ಮದುವೆಯನ್ನು ಆ ಕೂಡಲೇ ನಿಶ್ಚಯಿಸಿದರು. ಶಾಹಜಿ ಜೀಜಾಬಾಯಿ ದಂಪತಿಗಳ ವೀರ ಸಂತಾನವೇ ಶಿವಾಜಿ! ಹೋಳಿಯ ಮುಹೂರ್ತ ಫಲವೇ ಇದೆಂದು ಮರಾಟಿಗರು ನಂಬಿ ನಲಿಯುತ್ತಿರುವುದು ಮೂಢ ನಂಬಿಕೆಯಾಗಿರಬಹುದಾದರೂ ನಮ್ಮ ಕಣ್ಣಿಗಂತೂ ಅದೊಂದು ಹಬ್ಬ.

THE CANARA MUTUAL
Assurance Company Limited

Managing Director: T. R. A. PAI

Head Office: UDIPI, S. India] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12 1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

ಮದ್ರಾಸು ಮತ್ತು ಕೇಂದ್ರದ ಮುಂಗಡ ಪತ್ರ

ಕೊರತೆ ತುಂಬಿಸಲು ಹೊಸ ತೆರಿಗೆಗಳ ಸೂಚನೆ

ಮದ್ರಾಸು ಶಾಸನ ಸಭೆಯ ಉಭಯ ಮನೆಗಳ ಮುಂದೆ ಮೊನ್ನೆ ಶನಿವಾರ ೧೯೫೫—೫೬ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಲಾಯಿತು. ಪ್ರಥಮ ಪಂಚ ವಾರ್ಷಿಕ ಯೋಜನೆಯ ಕೊನೆಯ ವರ್ಷವನ್ನೊಳಗೊಳ್ಳುವ ಈ ಅವಧಿಯ ಅಂದಾಜು ಆಯ ವ್ಯಯ ಪಟ್ಟಿಗೆ ಸಹಜವಾಗಿಯೇ ಮಹತ್ವವು ಸಲ್ಲುತ್ತದೆ ನಿರೀಕ್ಷಿಸಿದಂತೆ, ಮುಂಗಡ ಪತ್ರವು ಕೊರತೆಯನ್ನು ತೋರಿಸುತ್ತದೆ—ಅದು ಒಟ್ಟಿನಲ್ಲಿ ೩೩೧ ಲಕ್ಷ ರೂಪಾಯಿಯಷ್ಟು ಆಗುತ್ತದೆ. ಆದರೆ ಇದರಲ್ಲಿ ಸುಮಾರು ಅರೆ ಪಾಲಿಯಷ್ಟನ್ನು, ಅಂದರೆ ೧೬೫ ಲಕ್ಷ ರೂಪಾಯಿಯಷ್ಟು ಮೊತ್ತವನ್ನು ಹೊಸ ತೆರಿಗೆಗಳಿಂದ ತುಂಬಿಕೊಳ್ಳಲಾಗುತ್ತದೆ.

ಆಯವ್ಯಯದ ಅಂದಾಜು

ಅಂದಾಜು ಆಯವ್ಯಯ ಪಟ್ಟಿಯು ಆಯವು ೪೬೭೭ ಲಕ್ಷ ರೂಪಾಯಿಗಳೆಂದೂ ವ್ಯಯವು ೪೯೫೬ ಲಕ್ಷ ರೂಪಾಯಿಗಳೆಂದೂ ಹೇಳುತ್ತದೆ. ಹೊಸ ತೆರಿಗೆಗಳಿಂದ ಬರುವ ೧೬೫ ಲಕ್ಷ ರೂಪಾಯಿಗಳ ಆಯವನ್ನು ಸೇರಿಸಿದರೆ ಆಯವು ೪೮೪೨ ಲಕ್ಷ ರೂಪಾಯಿಗಳಾಗುತ್ತದೆ. ಈ ಪ್ರಮಾಣವು ೧೯೫೪—೧೯೫೫ನೇ ವರ್ಷದ ಪುನರ್ವಿಮರ್ಶಿತ ಆಯಕ್ಕಿಂತ ೨೭೩ ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿರುವುದು ಸಂತೋಷಕರ. ಆದರೆ ವ್ಯಯದ ಪ್ರಮಾಣವು ಸಹ ಪ್ರಸಕ್ತ ವರ್ಷಕ್ಕಿಂತ ೧೯೦ ಲಕ್ಷ ರೂಪಾಯಿಯಷ್ಟು ಹೆಚ್ಚಿರುವುದೆಂಬುದನ್ನು ಮರೆಯಬಾರದು

ಪುಕ್ಕಟೆ ಶಿಕ್ಷಣ

ಮಂತ್ರಿ ಶ್ರೀ ಸುಬ್ರಹ್ಮಣ್ಯಮರು ಮುಂಗಡ ಪತ್ರವನ್ನು ಮಂಡಿಸುತ್ತ ಮಾಡಿದ ಘೋಷಣೆಯಲ್ಲಿ ಎಲ್ಲರೂ ಸ್ವಾಗತಿಸಿಟ ಅಂಶವೆಂದರೆ ಪುಕ್ಕಟೆ ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರ. "ತಿಂಗಳಿಗೆ ನೂರು ರೂಪಾಯಿಗಿಂತ ಕಡಿಮೆ ವರಮಾನವಿರುವ ಹೆತ್ತವರ ಮತ್ತು ರಕ್ಷಕರ ಮಕ್ಕಳಿಗೆ ಮೂರನೇ ಫಾರ್ಮು ವರೆಗಿನ ಮಾಧ್ಯಮಿಕ ಶಿಕ್ಷಣವನ್ನು ಜಾತಿ, ಮತ ಮುಂತಾದ ಭೇದವಿಲ್ಲದೆ ಪುಕ್ಕಟೆಯಾಗಿ ಕೊಡಲಾಗುವುದು. ಇದು ಬರುವ ಶಾಲಾ ವರ್ಷದಿಂದ (ಅಂದರೆ ೧೯೫೫ನೇ ಜೂನಿನಿಂದ) ಜಾರಿಗೆ ಬರುವುದು" ಎಂದವರು ಸಾರಿದರು. ಈ ರಿಯಾಯತಿಯನ್ನು ತೋರಿಸಿದುದರಿಂದ ಶಾಲೆಯ ಆಡಳಿತದಾರರಿಗೆ ಉಂಟಾಗಬಹುದಾದ ನಷ್ಟವನ್ನು ಸರಕಾರ ತುಂಬಿಕೊಡುವುದೆಂದೂ ಇದಕ್ಕೋಸ್ಕರ ೫೦ ಲಕ್ಷ ರೂಪಾಯಿಗಳನ್ನು ತೆಗೆದಿಡಲಾಗಿದೆಯೆಂದೂ ಅವರು ತಿಳಿಸಿದರು.

ಹೊಸ ತೆರಿಗೆ

ನಷ್ಟವನ್ನು ತುಂಬಿ ಕೊಳ್ಳಲು ಹೇರಬೇಕೆಂದಿರುವ ಹೊಸ ತೆರಿಗೆಗಳ ಸೂಚನೆಯನ್ನೂ ಮಂತ್ರಿಗಳು ಕೊಟ್ಟರು—ಅದರಂತೆ ಎಲ್ಲ ನಂಜ, ಪುಂಜ ಮತ್ತು ಬಾಗಾಯತು ಭೂಮಿಯ ಮೇಲೆಯೂ ನೀರಾವರಿ ಉಪಯೋಗದ ಕರದ ಮೇಲೆಯೂ ರೂಪಾಯಿಗೆ ಎರಡಾಣೆಯಂತೆ ಹೆಚ್ಚಿನ ತೆರಿಗೆಯನ್ನು ಹೇರಲಾಗುತ್ತದೆ. ಇದರಿಂದ ೭೫ ಲಕ್ಷ ರೂಪಾಯಿಗಳ ಆದಾಯವಾಗುತ್ತದೆ. ಈ ಹಣದಲ್ಲಿ ೫೦ ಲಕ್ಷ ಜಿಲ್ಲಾ ಬೋರ್ಡುಗಳಿಗೂ ೨೫ ಲಕ್ಷ ಗ್ರಾಮ ಪಂಚಾಯತುಗಳಿಗೂ ಹಳ್ಳಿಗಳಲ್ಲಿ ಸಾರಿಗೆ ಸಂಪರ್ಕದ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದಕ್ಕೋಸ್ಕರ ಕೊಡಲಾಗುತ್ತದೆ. ಹೊಗೆ ಸೊಪ್ಪಿನ ಮೇಲೆ ಸುಂಕವನ್ನು ಹಾಕುವುದರಿಂದ ಮತ್ತು ೩ ಪೈಗಿಂತ ಕಡಿಮೆ ಬೆಲೆಯ ಸಿಗರೇಟಿನ ಮೇಲೆ ತೆರಿಗೆ ಹೊರಿಸುವುದರಿಂದ ೫೦ ಲಕ್ಷ ರೂಪಾಯಿಗಳು ಸಿಗಬಹುದೆಂದು ಮಂತ್ರಿಗಳ ಅಭಿಪ್ರಾಯ. ಇವಲ್ಲದೆ, ಈಗಾಗಲೇ ಸಾರಲಾದ ತೋಟಗಳ ಮೇಲಿ ತೆರಿಗೆ, ಅಭಿವೃದ್ಧಿ ತೆರಿಗೆ ಮತ್ತು ಕೋರ್ಟು ದರವನ್ನು ಹೆಚ್ಚಿಸುವಂತೆ ನಡೆದ ಪುನರ್ವಿಮರ್ಶೆ—ಇವುಗಳಿಂದ ಒಟ್ಟು ೫೦ ಲಕ್ಷ ರೂಪಾಯಿಗಳ ಆದಾಯವಾದೀತು.

ರಿಯಾಯಿತಿಗಳು

ಹೊಸ ವರ್ಷದಲ್ಲಿ ೨೬೧ ಯೋಜನೆಗಳನ್ನು ಕೈಗೊಳ್ಳಲಾಗುವುದೆಂದು ಮುಂಗಡ ಪತ್ರ ಸೂಚಿಸುತ್ತದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಅದರಲ್ಲಿ ಆಶಾದಾಯಕವಾದ ಯೋಜನೆಗಳಿಲ್ಲವೆಂದು ನಮ್ಮ ಪ್ರತಿನಿಧಿಗಳಲ್ಲೊಬ್ಬರಾದ ಶ್ರೀ ಪಾಯಸರು ಅಭಿಪ್ರಾಯಪಟ್ಟರು. ಕಳೆದ ವರ್ಷ ಖೊನು, ಮಾಂಸ ಮುಂತಾದ ಬೇಗನೆ ಕೆಡುವ ಪದಾರ್ಥಗಳನ್ನು ಮಾರಾಟಕರದಿಂದ ಮುಕ್ತಗೊಳಿಸಿದ ಸಂಪ್ರದಾಯವನ್ನು ಅನುಸರಿಸಿ ಈ ಸಲ ನೀರುಳ್ಳಿ, ವೀಳೆಯದೆಲೆ, ಬಟಾಟೆ ಮತ್ತು ಬಾಳೆಯೆಲೆಗಳನ್ನೂ ಮಾರಾಟಕರದಿಂದ ಮುಂಗಡ ಪತ್ರ ವಿನಾಯತಿಗೊಳಿಸುತ್ತದೆ. ತಾಳೆ ಬೆಲ್ಲ, ಆಟದ ಗೊಂಬೆ, ಚಾಪೆ, ಗಡಿಗೆ ಮುಂತಾದುವನ್ನು ತಯಾರಿಸುವವರ ಸಹಕಾರ ಸಂಘಗಳಿಗೆ ಸಹ ಮಾರಾಟಕರ ಅನ್ವಯಿಸುವುದಿಲ್ಲವೆಂದು ಮುಂಗಡ ಪತ್ರ ತಿಳಿಸುತ್ತದೆ.

ಅಭಿವೃದ್ಧಿ ಪ್ರಯತ್ನ

ಸರಕಾರದವರು ಅಭಿವೃದ್ಧಿ ಪ್ರಯತ್ನಗಳನ್ನು ಮುಂದೊತ್ತುವುದರಲ್ಲಿ ಸ್ವಲ್ಪವೂ ಉದಾಸೀನ ಮಾಡುವುದಿಲ್ಲವೆಂಬ ಭರವಸೆಯನ್ನು ಅರ್ಥಸಚಿವರು ನೀಡಿದರು. ತನ್ನ ಪಾಲಿಗೆ ಬಂದ ಕೆಲಸವನ್ನು ಮದ್ರಾಸು ಸರಕಾರವು ಸಂಪೂರ್ಣವಾಗಿ ಪೂರೈಸುವ ನಿಶ್ಚಯವನ್ನು ಅವರು ಪ್ರಕಟಿಸಿದರಲ್ಲದೆ ಎರಡನೆಯ ಪಂಚವಾರ್ಷಿಕ ಯೋಜನೆಯು ಪ್ರತಿಯೊಂದು ಜಿಲ್ಲೆಗೆ ೧೦ರಿಂದ ೧೫ ಕೋಟಿ ರೂಪಾಯಿಗಳ ವೆಚ್ಚ ಬರುವ ಕಾರ್ಯಕ್ರಮಗಳಿಂದ ಕೂಡಬಹುದೆಂದೂ ತಿಳಿಸಿದರು ಯೋಜನೆಯ ಉದ್ದೇಶಗಳಿಗಾಗಿ ಸರಕಾರವು ಈ ವರ್ಷ ಕೇಂದ್ರದಿಂದ ೧೬½ ಕೋಟಿ ರೂಪಾಯಿಗಳನ್ನೂ ಸಾರ್ವಜನಿಕರಿಂದ ೭ ಕೋಟಿ ರೂಪಾಯಿಗಳನ್ನೂ ಸಾಲವಾಗಿ ಪಡೆಯಬಹುದೆಂದೂ ಇದರಿಂದ ಹೊರಗೆ ಸಲ್ಲಲಿರುವ ೪ ಕೋಟಿ ರೂಪಾಯಿಗಳನ್ನು ಮಟ್ಟಿಸಲಾಗುವುದೆಂದೂ ತಿಳಿಸಲಾಯಿತು.

ಕೇಂದ್ರದ ಮುಂಗಡಪತ್ರ

ಕೊರತೆ ತುಂಬಿಕೊಳ್ಳುವುದಕ್ಕೋಸ್ಕರ ಮದ್ರಾಸಿನ ಅರ್ಥಸಚಿವರು ಹೊಸತೆರಿಗೆಗಳನ್ನು ಹೊರಿಸಲು ಮುಂದಾದುದನ್ನು ಕೆಲವರು ಅಷ್ಟಾಗಿ ಮೆಚ್ಚಿಕೊಂಡಿಲ್ಲ. ತೆರಿಗೆ ವಿಚಾರಣಾ ಮಂಡಳದ ಸೂಚನೆಗಳನ್ನು ಕಾಯಬೇಕಾಗಿತ್ತೆಂದು ಅವರ ಆಕ್ಷೇಪ. ಅದು ಕೇಂದ್ರಸರಕಾರದ ಪರ್ಯಾಲೋಚನೆಯಲ್ಲಿದ್ದು ಇಷ್ಟರಲ್ಲಿಯೇ ಪ್ರಕಟವಾಗಲಿದೆಯಾಗಿ ತಿಳಿದು ಬರುತ್ತದೆ. ಈ ನಡುವೆ ಕೇಂದ್ರದ ಅರ್ಥಸಚಿವರಾದ ಶ್ರೀ ದೇಶಮುಖರು ಮೊನ್ನೆ ಸೋಮವಾರ ಮಂಡಿಸಿದ ಕೇಂದ್ರದ ಅಂದಾಜು ಆಯವ್ಯಯಪಟ್ಟಿಯಲ್ಲಿ ಅನೇಕ ಹೊಸ ತೆರಿಗೆಯ ಸೂಚನೆಗಳು ಕಂಡುಬರುತ್ತವೆ ಸರಕಾರಕ್ಕೆ ಅಂಗೀಕಾರ ಯೋಗ್ಯವಾದ ಸೂಚನೆಗಳೇ ಇವಾಗಿವೆಯೆಂದರೆ ತಪ್ಪಲ್ಲ ದೇಶಮುಖರು ೧೯೫೫—೫೬ನೇ ಸಾಲಿಗಾಗಿ ಮಂಡಿಸಿದ ಮುಂಗಡ ಪತ್ರವು ೩೦೧೭ ಲಕ್ಷರೂಪಾಯಿಗಳ ಕೊರತೆಯನ್ನು ಸೂಚಿಸುತ್ತದೆ

ಸುಂಕದ ಆದಾಯ

ದೇಶಮುಖರ ಹೊಸ ತೆರಿಗೆ ಕ್ರಮಗಳು ಸುಂಕ ಹೆಚ್ಚಿಸುವ ಮಾರ್ಗ ಹಿಡಿದುವಾಗುತ್ತವೆ. ಉದಾಹರಣೆಗೆ ಸಕ್ಕರೆಗೆ ಹಂಡ್ರಡ್ ವೈಟಗೆ ರೂ. ೩—೨—೦ ಇದ್ದ ಅಬಕಾರಿ ಸುಂಕವನ್ನು ರೂ. ೫-೧೦-೦ ಮಾಡಲಾಗುವುದು. ಹೀಗೆ ಏರಿಸಿದುದರಿಂದ ೫ ಕೋಟಿ ರೂಪಾಯಿಗಳ ವಾರ್ಷಿಕ ವರಮಾನ ಬರುತ್ತದೆ. ಹತ್ತಿ ಬಟ್ಟೆಯ ಮೇಲಿನ ಅಬಕಾರಿ ಸುಂಕವನ್ನು ಅತ್ಯುತ್ತಮ ವರ್ಗದ ಮೇಲೆ ಗಜಕ್ಕೆ ಎರಡೂವರೆ ಆಣೆಗೆ ಮತ್ತು ಸಾಮಾನ್ಯ ವರ್ಗದ ಮೇಲೆ ಗಜಕ್ಕೆ ಒಂದಾಣೆಗೆ ಏರಿಸಿ ೯ ಕೋಟಿ ರೂಪಾಯಿ ಸಂಪಾದಿಸಲಾಗುತ್ತದೆ. ಉಣ್ಣೆಯ ಬಟ್ಟೆ, ಹೊಲಿಗೆ ಯಂತ್ರ, ವಿದ್ಯುತ್ತಿನ ಬೀಸಣಿಗೆ ಮುಂತಾದವುಗಳ ಮೇಲೆ ನೂರಕ್ಕೆ ಹತ್ತರಷ್ಟು ಮೂಲ್ಯಾಧರಿತ ತೆರಿಗೆಯನ್ನು ಹೊರಿಸಿ ೪ ಕೋಟಿ ರೂಪಾಯಿ ಗಳಿಸಲಾಗುತ್ತದೆ. ಆದಾಯ ತೆರಿಗೆಯ ವಿಧಾನದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡುವ ಮೂಲಕ ೮೫ ಲಕ್ಷ ಸಿಗುತ್ತದೆ ಹೀಗೆ ತೆರಿಗೆ ಹೆಚ್ಚಿಸುವುದಕ್ಕೆ ತೆರಿಗೆ ವಿಚಾರಣಾ ಮಂಡಳದ ಸಿಫಾರಸುಗಳ ಆಧಾರವುಂಟೆಂದು ಹೇಳಲಾಯಿತು.

ಆಶಾದಾಯಕ ವಾತಾವರಣ

ದೇಶಮುಖರು ಮಾಡಿದ ಭಾಷಣವು ನಮ್ಮ ಆರ್ಥಿಕ ಪರಿಸ್ಥಿತಿಯು ಬಹಳ ಆಶಾದಾಯಕವಾಗಿದೆಯೆಂಬುವನ್ನು ಸ್ಪಷ್ಟಗೊಳಿಸಿತು. ಪ್ರಥಮ ಪಂಚವಾರ್ಷಿಕ ಯೋಜನೆಯ ಮುಖ್ಯ ಗುರಿಯಾದ ಆಹಾರ ಸ್ವಾವಲಂಬನವು ಈಗಾಗಲೇ ಸಾಧಿಸಲ್ಪಟ್ಟಿರುವುದನ್ನು ಅವರು ಗಣನೀಯವಾದ ಅಂಶವೆಂದು ಹೇಳಿದರು ಆಹಾರ ಧಾನ್ಯಗಳ ಬೆಲೆಯು ಅಪೇಕ್ಷಿತ

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮಿನಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives. At whatever stage we welcome your association with the POPULAR.

THE POPULAR INSURANCE CO., LTD.
"POPULAR BUILDINGS" MANGALORE-1

ಮಟ್ಟಕ್ಕಿಂತ ಕೆಳಗೆ ಇಳಿಯುವುದನ್ನು ತಡೆಯಲು ಸರಕಾರವು ಆವುಗಳನ್ನು ನಗದಿ ಬೆಲೆಗೆ ಕೊಂಡ ಕೊಳ್ಳುವುದೆಂಬ ರಾಷ್ಟ್ರಾಧ್ಯಕ್ಷರ ಮಾತನ್ನು ಪುನರುಚ್ಚರಿಸಿದರು. ವ್ಯಾಪಾರಕ್ಷೇತ್ರದ ಸಾಂಪತ್ತಿಕ ಸ್ಥಿತಿಯು ತೃಪ್ತಿಕರವಿದ್ದರೂ ರಫ್ತು ವ್ಯಾಪಾರವನ್ನು ಅಧಿಕಗೊಳಿಸುವ ಆವಶ್ಯಕತೆಯನ್ನವರು ಒತ್ತಿ ಹೇಳಿದರು. ಹೊರದೇಶಗಳಿಂದ ನಮಗೆ ಧಾರಾಳ ಸಹಾಯ ದೊರತಿರುವುದನ್ನು ಕೃತಜ್ಞತೆಯಿಂದ ನೆನೆದರಲ್ಲದೆ ಪಾಕಿಸ್ತಾನದಿಂದ ಬರಲಿದ್ದ ೯ ಕೋಟಿ ರೂಪಾಯಿ ಹಣವು ಬೇಗನೇ ಕೈಸೇರುವ ವ್ಯವಸ್ಥೆಯಾದೀತೆಂದು ಅವರು ಹಾರೈಸಿದರು.

ರೈಲ್ವೆಯ ಆಯವ್ಯಯ

ಲೋಕ ಸಭೆಯ ಮುಂದೆ ರೈಲ್ವೆ ಮಂತ್ರಿ ಶ್ರೀ ಲಾಲಬಹಾದುರ ಶಾಸ್ತ್ರಿಗಳು ಮಂಡಿಸಿದ ರೈಲ್ವೆಯ ಆಯವ್ಯಯ ಪಟ್ಟಿ ಮಾತ, ಆಶಾದಾಯಕವಾದ ರೀತಿಯಲ್ಲಿ ಉಳಿಕೆಯನ್ನು ತೋರಿಸಿತು. ರೈಲ್ವೆಗಳ ಸವಕಳಿ ನಿಧಿಗೆ ಯಾವಾಗಲೂ ತೆಗೆದಿಡುತ್ತಿದ್ದ ೩೦ ಕೋಟಿ ರೂಪಾಯಿಗಳ ಬದಲು ೨೫ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದರೂ ಸಹ ಈ ವರ್ಷದ ಪುನರ್ವಿಮರ್ಶಿತ ಉಳಿತಾಯವಾದ ೬೫೭ ಲಕ್ಷ ರೂಪಾಯಿಗಳ ಸ್ಥಾನದಲ್ಲಿ ೧೯೫೫—೫೬ನೇ ಸಾಲಿನ ಅಂದಾಜು ೭೮೪ ಲಕ್ಷ ರೂಪಾಯಿಗಳ ಉಳಿತಾಯವನ್ನು ತೋರಿಸಲು ಸಮರ್ಥವಾಗಿರುವುದು ಸ್ತುತ್ಯ. ರೈಲ್ವೆಯ ಆದಾಯವು ಈಚೆಗೆ ಎರಡು ಮೂರು ವರ್ಷಗಳಿಂದ ಹೆಚ್ಚುತ್ತಿರುವುದನ್ನು ಅಂಕೆ ಸಂಖ್ಯೆಗಳು ನಿರ್ದೇಶಿಸುತ್ತಿದ್ದು, ಇದರ ಪರಿಣಾಮವೇ ಉಳಿತಾಯದ ಮೊತ್ತದಲ್ಲಿ ಕಂಡುಬರುವ ಹೆಚ್ಚಳ ಎಂದು ಹೇಳಬಹುದು. ಆದರೆ ವೆಚ್ಚವೂ ಇದೇ ಪ್ರಮಾಣದಲ್ಲಿ ಏರಿರುವುದೆಂಬುದನ್ನು ಇಲ್ಲಿ ಹೇಳದಿರಲಾಗದು- ಮುಖ್ಯವಾಗಿ ಆಡಳಿತದ ವೆಚ್ಚ ಗಣನೀಯವಾಗಿ ಹೆಚ್ಚಿರುತ್ತದೆ

ಮಿಶ್ರ ಪ್ರತಿ ಕ್ರಿಯೆ

ಕೆಲವು ರಿಯಾಯತಿಗಳನ್ನು ಮಾಡಲು ಹೊರಟ ರೈಲ್ವೆಮಂತ್ರಿಗಳು ಇನ್ನು ಕೆಲವು ವಿಷಯಗಳಲ್ಲಿ ಈಗಿನದಕ್ಕಿಂತಲೂ ಹೆಚ್ಚು ಕಷ್ಟವನ್ನು ಪ್ರಯಾಣಿಕರಿಗೆ ತಂದುದರಿಂದ ಮುಂಗಡಪತ್ರಕ್ಕೆ ಮಿಶ್ರ ಪ್ರತಿಕ್ರಿಯೆ ದೊರಕಿರುತ್ತದೆ. ಯುದ್ಧಾನಂತರ ಇದೀಗ ಮೊದಲನೇ ಸಲ ದಸರಾ ಮತ್ತು ದೀಪಾವಳಿ ಹಬ್ಬದ ಸಮಯಗಳಲ್ಲಿ ರಿಯಾಯತಿ ದರದ ರಿಟರ್ನ್ ಟಿಕೇಟುಗಳನ್ನು ಕೊಡಲು ನಿರ್ಧರಿಸಿರುವುದು; ಪ್ಲಾಟ್ ಫಾರ್ಮ್ ಟಿಕೇಟಿಗೆ ಎರಡಾಣೆ ಇದ್ದುದನ್ನು ಒಂದಾಣೆಗೆ ಇಳಿಸಲಾಗುವುದು; ಪರೀಕ್ಷೆ ಮುಗಿದ ಮೂರು ತಿಂಗಳುಗಳ ನಂತರವೂ ವಿದ್ಯಾರ್ಥಿಗಳನ್ನು ರಿಯಾಯತಿದರದಲ್ಲಿ ಪ್ರಯಾಣ ಮಾಡಗೊಡಲಾಗುವುದು; ಪ್ರಯಾಣಿಸುವವರು ೪೦೦ ವಿದ್ಯಾರ್ಥಿಗಳಿಗಿಂತ ಹೆಚ್ಚಿದ್ದರೆ ವಿಶೇಷ ರೈಲಿಗಾಗಿ ತೆರಬೇಕಾಗಿದ್ದ ಕನಿಷ್ಠ ಹಣವನ್ನು ರದ್ದು ಮಾಡಲಾಗುವುದು; ನಾಲ್ಕು ಮಂದಿಗಿಂತ ಕಡಿಮೆಯಿಲ್ಲದೆ ತಿರುಗಾಡುವ ವಿದ್ಯಾರ್ಥಿಗಳ ಗುಂಪಿಗೆ ನೀಡಿದ ಸೌಲಭ್ಯಗಳನ್ನು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಅಧ್ಯಾಪಕರಿಗೂ ವಿಸ್ತರಿಸಲಾಗುವುದು—ಇವೆಲ್ಲವೂ ಸ್ಪೃಹಣೀಯವಾದ ಮತ್ತು ರೈಲ್ವೆ ಪ್ರವಾಸಕ್ಕೆ ಪ್ರೋತ್ಸಾಹ ನೀಡುವ ಅಂಶಗಳು.

ಪ್ರವಾಸ ದರದಲ್ಲಿ ವ್ಯತ್ಯಾಸ

ಆದರೆ ಬೇರೆ ಕೆಲವು ವಿಷಯಗಳಲ್ಲಿ ಒಂದು ಕೈಯಲ್ಲಿ ಕೊಟ್ಟುದನ್ನು ಇನ್ನೊಂದು ಕೈಯಲ್ಲಿ ತೆಗೆದುಕೊಂಡು ನಷ್ಟ ಭರ್ತಿಮಾಡಿಕೊಳ್ಳಲು ತೀವ್ರ ಹಚ್ಚುವ ಕೆಲಸ ನಡೆದಿದೆಯೆಂದರೆ ಅತಿಶಯೋಕ್ತಿಯಾಗದು. ಇನ್ನುಮುಂದೆ, ಮೂರನೇ ವರ್ಗದಲ್ಲಿ ೩೦೦ ಮೈಲುಗಳಿಗೂ ಹೆಚ್ಚು ಪ್ರಯಾಣ ಮಾಡುವಾಗ ಟಿಕೇಟು ದರ ಕಡಿಮೆ ಬಿದ್ದರೂ ೧೫೦ ಮೈಲುಗಳಿಗಿಂತ ಕಡಿಮೆ ದೂರದ ಪ್ರಯಾಣಿಕರು ಹೆಚ್ಚು ದರವನ್ನು ಕೊಡಬೇಕಾಗುತ್ತದೆ. ೧೫೧ರಿಂದ ೩೦೦ ಮೈಲುಗಳ ವರೆಗಿನ ದರಗಳಲ್ಲೇನೂ ಬದಲಾವಣೆಯಿಲ್ಲ. ಇದರಿಂದ ಆದಾಯದಲ್ಲಿ ಹೆಚ್ಚಳವಾಗದಿದ್ದರೂ ಹೊಸ "ಪ್ರಯೋಗ"ವಾಗಿ ಇದನ್ನು ಜ್ಯಾರಿಗೆ ತರಲಾಗಿದೆಯೆಂದು ಮಂತ್ರಿಗಳು ಹೇಳಿದರು. ಆದರೆ ರೈಲ್ವೆ ಪ್ರಯಾಣಿಕರಲ್ಲಿ ಅಧಿಕಾಂಶ ಜನರಿಗೆ ಇದರಿಂದ ತೊಂದರೆ ತಟ್ಟುವುದೆಂದು ಸಾರ್ವಜನಿಕರ ಅಭಿಪ್ರಾಯ. ಮಂತ್ರಿಗಳು ಸಮಶೀತೋಷ್ಣ ಹವೆಯ ವ್ಯವಸ್ಥೆಯುಳ್ಳ ಕೋಣೆಗಳಲ್ಲಿ ಪ್ರಯಾಣಿಸುವವರು ತೆರಬೇಕಾದ ಟಿಕೇಟಿನ ದರವನ್ನು ಹೆಚ್ಚಿಸಿದ್ದಾರೆ—ಆದರೆ ರಾತ್ರಿ ಮಲಗುವ ವ್ಯವಸ್ಥೆಗೆ ೫ ರೂಪಾಯಿ ಹೆಚ್ಚಿಗೆ ಕೊಡಬೇಕಾದುದನ್ನು ರದ್ದುಪಡಿಸಿರುವರು.

ಹೊಂದಿಕೆಯ ಯೋಜನೆ

ಆಹಾರ ಧಾನ್ಯಗಳ ಮತ್ತು ಗೊಬ್ಬರಗಳ ಸಾರಿಗೆ ದರವನ್ನು ಇಳಿಸಲಾಗಿದ್ದರೂ ೨೦ ರಾತಲಿಗಿಂತಲೂ ಕಡಿಮೆ ತೂಕದ ಎಲ್ಲ "ಚಿಕ್ಕ" ಗಂಟುಗಳ ಮೇಲೆ ನೂರಕ್ಕೆ ಹನ್ನೆರಡೂವರೆಯಷ್ಟು ದರವನ್ನು ಹೆಚ್ಚಿಸುವುದಲ್ಲದೆ ಕನಿಷ್ಠ ದರವನ್ನು ಒಂದು ರೂಪಾಯಿಯಿಂದ ಒಂದೂವರೆ ರೂಪಾಯಿಗೆ ಏರಿಸಲಾಗುವುದು. ಸಾಮಾನ್ಯ ಸರಕುಗಳ ಸಾರಿಗೆ ದರವನ್ನು ೬೦೦ ಮೈಲುಗಳಿಗಿಂತ ಹೆಚ್ಚು ದೂರದ ಸಂದರ್ಭದಲ್ಲಿ ನೂರಕ್ಕೆ ಹದಿನೈದರಷ್ಟು ಇಳಿಸಿದರೂ ೩೦೦ ಮೈಲುಗಳೊಳಗಿನ ದೂರಕ್ಕೆ ನೂರಕ್ಕೆ ಹತ್ತರಷ್ಟು ಹೆಚ್ಚಿಸಲಾಗುವುದು. ಇದೆಲ್ಲ ಅಷ್ಟು ಉತ್ಸಾಹಜನಕವಾದುದಲ್ಲ - ಆದರೆ ರೈಲ್ವೆಗಳ ನೌಕರರಿಗಾಗಿ ವಸತಿ ಕಟ್ಟಿಸಲು ೪ ಕೋಟಿ ರೂಪಾಯಿಗಳನ್ನು, ಪ್ರವಾಸಿಗರ ಸೌಕರ್ಯಕ್ಕಾಗಿ ೩ ಕೋಟಿ ರೂಪಾಯಿಗಳನ್ನು, ಯಂತ್ರ, ಡಬ್ಬಿ ಇತ್ಯಾದಿಗಳಿಗಾಗಿ ೧೫೭ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವುದು ಮಾತ್ರ ತೃಪ್ತಿಕರ.

ಆಗ್ನೇಯ ಏಷ್ಯಾ ಒಪ್ಪಂದ ರಾಷ್ಟ್ರಗಳ ಪರಿಷತ್ತು

ಕಮ್ಯುನಿಸಮ್ಮಿನ ಪ್ರಚಾರವನ್ನು ತಡೆಗಟ್ಟುವ ನಿಶ್ಚಯ

ಪೂರ್ವ ನಿಶ್ಚಿತ ಸೀಟೊ ಪರಿಷತ್ತು ಮೂರು ದಿನಗಳ ವರೆಗೆ ಥ್ಯಾಲೇಂಡಿನ ರಾಜಧಾನಿಯಾದ ಬಾಂಗ್‌ಕಾಕ್ ನಗರದಲ್ಲಿ ಜರಗಿ ಮೊನ್ನೆ ೨೫ನೇ ತಾರೀಕಿಗೆ ಮುಕ್ತಾಯವಾಯಿತು. ಇದರಲ್ಲಿ ಆಸ್ಟ್ರೇಲಿಯ, ಪಾಕಿಸ್ತಾನ, ನ್ಯೂಜೀಲೆಂಡ್, ಫಿಲಿಪೀನ, ಥ್ಯಾಲೇಂಡ್, ಅಮೇರಿಕ ಮತ್ತು ಬ್ರಿಟನುಗಳ ವಿದೇಶ ಮಂತ್ರಿಗಳೂ ಫ್ರಾನ್ಸಿನ ಒಬ್ಬ ಪ್ರತಿನಿಧಿಯೂ ಭಾಗವಹಿಸಿದ್ದರು. ಮನಿಲಾದಲ್ಲಿ ಕಳೆದ ಶರತ್ಕಾಲದಲ್ಲಿ ಸಹಿಹಾಕಲಾದ ಆಗ್ನೇಯ ಏಶ್ಯಾ ರಾಷ್ಟ್ರಗಳ ಸಂರಕ್ಷಣ ಒಪ್ಪಂದಕ್ಕೆ ಸಂಬಂಧಿಸಿದ ಎಂಟೂ ಸರಕಾರಗಳ ಒಪ್ಪಿಗೆಯು ಪರಿಷತ್ತು ಸೇರುವುದಕ್ಕೆ ಮುಂಚಿತವಾಗಿಯೇ ಅಂದರೆ ಫೆಬ್ರುವರಿ ೧೯ರಂದು— ಸಿಕ್ಕಿದ್ದುದರಿಂದ ಮಾತುಕತೆಗೆ ಯಾವ ತೊಂದರೆಯೂ ಉಂಟಾಗಲಿಲ್ಲ.

ತ್ರಿವಿಧ ಕ್ರಮ

ಪರಿಷತ್ತಿನ ಅಂತ್ಯದಲ್ಲಿ ೧೪೦೦ ಶಬ್ದಗಳಷ್ಟು ದೀರ್ಘವಾದ ಹೇಳಿಕೆಯೊಂದನ್ನು ಹೊರಡಿಸಲಾಯಿತು: ಸೀಟೋ ಒಡಂಬಡಿಕೆಯು ಪರಿಣಾಮಕಾರಿಯಾದ ರೀತಿಯಲ್ಲಿ ಕಾರ್ಯಾನ್ವಿತಗೊಳ್ಳುವಂತೆ ನೋಡಿಕೊಳ್ಳಲು ವಹಿಸಿದ ತತ್ಪರತೆಯನ್ನು ಈ ಹೇಳಿಕೆ ವ್ಯಕ್ತಪಡಿಸುತ್ತದೆ. ಕಮ್ಯೂನಿಸಮ್ಮಿನ ಪ್ರಸಾರವನ್ನು ತಡೆಗಟ್ಟುವುದೇ ಸೀಟೋ ರಾಷ್ಟ್ರಗಳ ಮುಖ್ಯ ಧ್ಯೇಯವೆಂದು ಪ್ರಕಟಣೆ ಸಾರುತ್ತದೆ. ಕಮ್ಯೂನಿಸಮ್ಮಿನ ಹೆಸರೆತ್ತುವುದು ಅಷ್ಟು ಇಷ್ಟವಾದುದಲ್ಲವೆಂದು ಬ್ರಿಟನಿನ ಈಡನರು ಮೊದಲಿಗೆ ವಿರೋಧ ತೋರಿಸಿದರೂ ಉಳಿದವರ ಬೋಧನೆ ಅವರನ್ನು ಒಡಂಬಡಿಸಿತು. ಕಮ್ಯೂನಿಸಮ್ಮನ್ನು ಅದರ ಪ್ರತಿಪಾದಕರ ಆಕ್ರಮಣವನ್ನು ತಡೆಗಟ್ಟುವ ಮೂಲಕವೂ ಗುಪ್ತ ರೀತಿಯಲ್ಲಿ ಪ್ರಚಾರ ಮಾಡುವವರನ್ನು ಹತ್ತಿಕ್ಕುವ ಮೂಲಕವೂ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ ಜನರ ಜೀವನ ಮಟ್ಟವನ್ನು ಎತ್ತರಿಸುವ ಮೂಲಕವೂ ಇದಿರಿಸಬೇಕೆಂದು ವಿದೇಶ ಮಂತ್ರಿಗಳು ನಿಶ್ಚಯಿಸಿದರು.

ಸೀಟೋ ಕಾರ್ಯಾಲಯ

ಕೇವಲ ಸೈನಿಕ ಶಕ್ತಿಯ ಬಲವು ಕಮ್ಯೂನಿಸಮ್ಮಿನ ಪ್ರಚಾರವನ್ನು ತಡೆಗಟ್ಟಲು ಸಾಲದೆಂದೂ ಆರ್ಥಿಕ ಅಭಿವೃದ್ಧಿಯ ಪ್ರಯತ್ನಗಳು ಆವಶ್ಯವೆಂದೂ ಪಾಕಿಸ್ತಾನದ ಪ್ರಧಾನ ಮಂತ್ರಿ (ಹಾಗು ವಿದೇಶ ಮಂತ್ರಿ) ಮಹಮದಾಲಿಗಳು ಹೇಳಿದರು. ಅವರು ಸಣ್ಣ ರಾಷ್ಟ್ರಗಳು ಆಕ್ರಮಣವನ್ನು ಯಶಸ್ವಿಯಾಗಿ ಇದಿರಿಸಲಾಗುವಂತೆ ಸೈನಿಕ ಸಹಾಯದ ಆಶ್ವಾಸನೆಯೂ ಧಾರಾಳವಾಗಿ ಸಿಗಬೇಕೆಂದು ಪ್ರತಿಪಾದಿಸಿದರು. ಪರಿಷತ್ತು ಬ್ಯಾಂಗ್‌ಕಾಕ್ ನಗರದಲ್ಲಿ ಸೀಟೋದ ಕಾರ್ಯಾಲಯವನ್ನು ಸ್ಥಾಪಿಸಲು ನಿರ್ಧರಿಸಿತು. ಇಲ್ಲಿ ಪ್ರತಿಯೊಂದೂ ಸೀಟೋ ರಾಷ್ಟ್ರವು ರಾಯಭಾರಿಯನ್ನು ಇಡುವುದಲ್ಲದೆ ಮುಖ್ಯ ಮೂರು ವಿಭಾಗಗಳಿಗೆ ಮೂವರು ಸದಸ್ಯರನ್ನು ನೇಮಿಸುತ್ತದೆ. ಸೈನಿಕ ಮಂಡಳಿಗಳು ಪ್ರತಿಯೊಂದೂ ದೇಶದ ಶಕ್ತಿ ಪರೀಕ್ಷೆಯನ್ನು ಮಾಡಿ ಇಡೀ ವಲಯದ ಸಾಮರ್ಥ್ಯ ರಕ್ಷಣೆಗೆ ಸಾಕಷ್ಟಿದೆಯೇ ಎಂದು ನೋಡಿಕೊಳ್ಳುತ್ತವೆ. ಬ್ಯಾಂಗ್‌ಕಾಕ್ ನಗರದ ಬದಲು ಫಿಲಿಪೀನಿನ ಮನಿಲಾ ಅಥವಾ ಮಲಯದ ಸಿಂಗಾಪುರದಲ್ಲಿ ಕಾರ್ಯಾಲಯ ಸ್ಥಾಪಿಸಬೇಕೆಂಬ ಮಾತು ಪರಿಷತ್ತಿನಲ್ಲಿ ಕೇಳಿ ಬರುತ್ತಿದ್ದರೂ ದಕ್ಷಿಣ ಚೀನದಿಂದ ಉತ್ತರ ಲಾವೋಸ್‌ಗಾಗಿ ಥ್ಯಾಲೇಂಡಿನ ಮೇಲೆ ಕಮ್ಯುನಿಸ್ಟರು ದಾಳಿ ನಡೆಸುವ ಸಂಭವವಿದೆಯೆಂಬ ಸಂಗತಿಯನ್ನು ಮನಗಂಡು ಅವರು ಒಮ್ಮತಕ್ಕೆ ಬಂದರು.

ಬೀಸಿದ ಬಲೆ

ಉತ್ತರ ಅಟ್ಲಾಂಟಿಕ ಒಪ್ಪಂದದಂತೆ ಸೀಟೋ ಸಹ ಯುದ್ಧದ ವಿಷಯದಲ್ಲಿ ಸಂಕೋಲೆಯ ಗೊಣಸಿನಂತೆ ಕೆಲಸ ಮಾಡುವುದೆಂದೂ ಬೇಕಾಗಿರಲಿ ಬೇಡಾಗಲಿ ಸದಸ್ಯ ರಾಷ್ಟ್ರಗಳೆಲ್ಲವೂ ಯುದ್ಧದಲ್ಲಿ ಧುಮುಕಲೇ ಬೇಕಾಗುವುದೆಂದೂ ಭಾರತ ಮುಂತಾದ ರಾಷ್ಟ್ರಗಳ ವರಿಷ್ಠರು ಆಕ್ಷೇಪಿಸಿದ್ದರು. ಇದನ್ನು ನಿವಾರಿಸಲು ಸೀಟೋ ವಿದೇಶ ಮಂತ್ರಿಗಳ ಪರಿಷತ್ತಿನಲ್ಲಿ ಸಂಯುಕ್ತ ಸೈನ್ಯ ರಚನೆಯ ಪ್ರಶ್ನೆಯನ್ನು ಬಿಟ್ಟುಕೊಡಲಾಯಿತು. ಕಮ್ಯುನಿಸ್ಟ ಆಕ್ರಮಣಕ್ಕೆ ತುತ್ತಾದ ರಾಷ್ಟ್ರವು ಮೊದಲು ಸ್ವಸಾಮರ್ಥ್ಯದಿಂದ ಅದನ್ನು

(೭ನೇ ಪುಟ ನೋಡಿರಿ)

5—3—55ರಂದು ರಾತ್ರಿ 8ರಿಂದ 9 ಗಂಟೆ ವರೆಗೆ ಮೈಸೂರು ಆಕಾಶವಾಣಿಯಲ್ಲಿ ಪ್ರಸಾರವಾಗಲಿರುವ ಶ್ರೀ. ಕವಿಭೂಷಣ ವೆಂಕಪ್ಪ ಶೆಟ್ಟಿರಿಂದ ರಚಿತವಾದ, ಉಡುಪಿ ಅಂತರಂಗ ಕಾರ್ಯಾಲಯದಿಂದ ಪ್ರಕಟಿಸಲ್ಪಟ್ಟ 'ಭಾರತದ ಗುರುಕುಲ' ಎಂಬ ಯಕ್ಷಗಾನ ಪ್ರಸಂಗದಲ್ಲಿ ಭಾಗವಹಿಸುವ ಕಲಾವಿದರು.



ಎಡದಿಂದ ಬಲಕ್ಕೆ: ಶ್ರೀಗಳಾದ ಬಾಡೂರು ಜಗನ್ನಾಥ ರೈ; ಪೇರೂರು ವಿಠಲ ಶೆಟ್ಟಿ; ವಿದ್ವಾನ್ ಕೆ. ಕಾಂತ ರೈ; ಪರಿಕ್ಕಳ ಈಶ್ವರಪ್ಪಯ್ಯ; ನೆಕ್ರಾಜೆ ಜಗನ್ನಾಥ ಶೆಟ್ಟಿ; ಕೆಮ್ಮಣ್ಣು ನಾರ್ಣಪ್ಪಯ್ಯ; ಪಿ. ಐತಪ್ಪ, ಎಂ.ಎ; ಕಳ್ಳಿಗೆ ಮಹಾಬಲ ಭಂಡಾರಿ, ಎಡ್ವೊಕೇಟ್; ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ, ಬಿ.ಎ.

ಬಲಗಡೆಯಲ್ಲಿ ಕುರ್ಚಿಯಲ್ಲಿ ಕುಳಿತವರು: ಶ್ರೀ ಕವಿಭೂಷಣ ಕೆ.ಪಿ. ವೆಂಕಪ್ಪ ಶೆಟ್ಟರು. ಶ್ರೀ. ವೆಂಕಪ್ಪ ಶೆಟ್ಟರು 19[illegible] ಕುಮಟಾದಲ್ಲಿ ಸೇರಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಂಗವಾಗಿ ಜರಗಿದ ಯಕ್ಷಗಾನ ಗೋಷ್ಠಿಯ ಅಧ್ಯಕ್ಷರು. ಅವರ 'ಭಾರತದ ಗುರುಕುಲ' ಎಂಬ ಈ ಯಕ್ಷಗಾನಕ್ಕೆ ಮದ್ರಾಸ್ ಸರಕಾರವು 1953ರಂದು ಅತ್ಯುತ್ತಮ ಯಕ್ಷಗಾನ ಕೃತಿಯೆಂದು ಬಹುಮಾನವಿತ್ತಿದೆ.

ಕವಿ ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳು ಈ ರೇಡಿಯೋ ಯಕ್ಷಗಾನವನ್ನು ನಿರ್ದೇಶಿಸುವರು.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೨೪	೩–೩–'೫೫	೨೬

ಪ್ರೇಮ ಪರೀಕ್ಷೆ

ಮೈಸೂರಿನ ಶಾಸನ ಸಭೆಯ ಯಾವುದೇ ಮನೆಯಲ್ಲಿ ಫೆಬ್ರುವರಿ ೨೮ನೇ ತಾರೀಕಿನ ವರೆಗೆ ಶೇಷಾದ್ರಿ ಸಮಿತಿಯ ಚರ್ಚೆ ನಡೆಯಲಿಲ್ಲ. ಈಗ ಕೆಲವು ತಿಂಗಳುಗಳಿಂದ ಶಾಸನ ಸಭಾಸದರ ಮುಂದೆ ಶೇಷಾದ್ರಿ ಸಮಿತಿಯ ವರದಿ ಇದ್ದರೂ ಸಹ ಅದನ್ನು ಚೆನ್ನಾಗಿ ಅಭ್ಯಾಸ ಮಾಡಲು ಇನ್ನೂ ಸಮಯಬೇಕೆಂಬ ಧ್ವನಿಯು ಶಾಸನ ಸಭೆಯಲ್ಲಿ ವ್ಯಕ್ತವಾಯಿತು. ಆದರೆ ಈ ಸಂಚಿಕೆ ಕೈಸೇರುವುದರೊಳಗೆ ಮೈಸೂರಿನಲ್ಲಿ ಚರ್ಚೆ ನಡೆದಿರುವುದು ಸಂಭವನೀಯ— ಅಲ್ಲಿ ಏನು ನಿರ್ಣಯವಾಗುವುದೆಂದು ಎಲ್ಲ ಕನ್ನಡಿಗರೂ ಕಿವಿಯರಳಿಸಿ ಕುಳಿತಿರುವರೆಂದರೆ ಅತಿಶಯೋಕ್ತಿಯಾಗದು. ಮುಂಬಯಿ ಕರ್ನಾಟಕದ ಜನತೆಯ ಪ್ರತಿನಿಧಿಗಳಂತೂ ಮೈಸೂರಿನ ಶಾಸನ ಸಭೆಯ ಮಾನ್ಯ ಸದಸ್ಯರು ಶೇಷಾದ್ರಿ ಸಮಿತಿಯ ವರದಿಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸು ಫಜಲ ಅಲಿ ಆಯೋಗಕ್ಕೆ ಒಪ್ಪಿಸಿಕೊಟ್ಟ ಮನವಿಯ ಬೆಳಕಿನಲ್ಲಿ ಪರಿಶೀಲಿಸುವುದು ಅಗತ್ಯವೆಂದು ಬಿನ್ನವಿಸಿದ್ದಾರೆ. ಇದಕ್ಕೇನು ಕಾರಣ? ಶೇಷಾದ್ರಿ ಸಮಿತಿಯ ವರದಿಯಲ್ಲಿ ಕಾಣಿಸಲಾದ ಎಷ್ಟೋ ಅಂಶಗಳು ಮೈಸೂರನ್ನು ಬಿಟ್ಟುಳಿದ ಕರ್ನಾಟಕ ಪ್ರದೇಶಗಳ ವಾಸ್ತವ ಚಿತ್ರವನ್ನು ಕೊಡುವುದಿಲ್ಲ--ಅಲ್ಲದೆ ಮುಂಬಯಿ ಮತ್ತು ಹೈದರಾಬಾದು ಕರ್ನಾಟಕ ಭಾಗಗಳ ವಿಷಯದಲ್ಲಿ ಶೇಷಾದ್ರಿ ಸಮಿತಿಯು ಒಳ್ಳೆಯ ಅಭಿಪ್ರಾಯವನ್ನು ಪ್ರಕಟಿಸಿಲ್ಲ. ಅವುಗಳನ್ನು ಕೊರತೆಯ ಪ್ರದೇಶವೆಂದು ಅದು ಹೆಸರಿಸಿದೆಯೇ ಹೊರತು ನೈಸರ್ಗಿಕ ಸಂಪತ್ತಿನ ಪ್ರಸ್ತಾಪವನ್ನೂ ಅದರಿಂದ ದೊರಕಬಹುದಾದ ಲಾಭದ ವಿವೇಚನೆಯನ್ನೂ ಅದು ಮಾಡಿಲ್ಲ. ಪ್ರದೇಶ ಕಾಂಗ್ರೆಸಿನ ವಿಸ್ತಾರವಾದ ಮನವಿಯಲ್ಲಿ ಈ ವಿಷಯಗಳ ಉಲ್ಲೇಖವಿರುವುದರಿಂದ ಶೇಷಾದ್ರಿ ಸಮಿತಿಯ ವರದಿಯೊಂದಿಗೆ ಅದನ್ನೂ ತೂಗಿ ನೋಡಬೇಕೆಂದು ಬಿನ್ನವಿಸುವಂತಾಯಿತು. ಮೈಸೂರಿನ ಪ್ರಭೃತಿಗಳು ಈ ವಿನಂತಿಯನ್ನು ಸಹಾನುಭೂತಿ ಪೂರ್ವಕವಾಗಿ ಕಾಣುವರೋ ಹೇಗೆಂದು ಕಾದು ನೋಡಬೇಕಷ್ಟೇ—ಆದರೆ ಶೇಷಾದ್ರಿ ಸಮಿತಿಯು ಯಾವ ಕಾರಣಕ್ಕಾಗಿ ಹೊರಗಿನ ಪ್ರದೇಶಗಳು ಮೈಸೂರಿನಲ್ಲಿ ಸೇರುವುದು ಇಷ್ಟವಲ್ಲವೆಂದು ಹೇಳುತ್ತಿದೆಯೋ ಅಂಥ ದೋಷಗಳು ಸ್ವತಃ ಮೈಸೂರಿನಲ್ಲಿಯೂ ಇಲ್ಲದಿಲ್ಲವೆಂದು ಮೈಸೂರಿನ ಕೆಲವು ಪ್ರಮುಖರು ಹೊರಡಿಸಿದ ಹೇಳಿಕೆಯಿಂದ ಗೊತ್ತಾಗುತ್ತದೆ. ಮೈಸೂರು ರಾಜ್ಯವು ಕೈಗಾರಿಕೆ, ವಿದ್ಯುಚ್ಛಕ್ತಿ ಮುಂತಾದವುಗಳಲ್ಲಿ ಮುಂದರಿದಿರಬಹುದು; ಆದರೆ ವ್ಯವಸಾಯ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅದು ಹಿಂದುಳಿದಿದೆ ಎಂಬುದನ್ನು ಶೇಷಾದ್ರಿ ಸಮಿತಿಯ ವರದಿಯಿಂದಲೇ ಪ್ರಮಾಣ ಪೂರ್ವಕ ಅವರು ಎತ್ತಿ ತೋರಿಸಿರುವರಲ್ಲದೆ ಮೈಸೂರು ಸಹ ಕೊರತೆಯ ರಾಜ್ಯವೆಂದೂ ಏಕೀಕರಣದ ದಾರಿಯನ್ನು ಸುಗಮ ಮಾಡಿಕೊಡುವುದರಲ್ಲಿಯೇ ಅದರ ಶ್ರೇಯಸ್ಸಿದೆಯೆಂದೂ ಪ್ರತಿಪಾದಿಸಿದ್ದಾರೆ. ಮೈಸೂರು ಪ್ರತ್ಯೇಕವಾಗಿ ಉಳಿಯುವಷ್ಟು ಹೆಚ್ಚಿನ "ವೈಶಿಷ್ಟ್ಯ" ಅದಕ್ಕಿದೆಯೆಂದು ಕೆಲವು ಮಹಾನುಭಾವರು ಅಭಿಪ್ರಾಯ ಪಡುತ್ತಿದ್ದರೂ ಈಚೆಗೆ ಮೈಸೂರು ಸಹಿತವಾದ ಕರ್ನಾಟಕ ರಾಜ್ಯ ನಿರ್ಮಾಣವೇ ಯೋಗ್ಯವಾದುದೆಂದು ಸಾಮಾನ್ಯವಾಗಿ ಅಭಿಪ್ರಾಯ ಪಡಲಾಗುತ್ತದೆ. ಒಂದು ಕಾಲದಲ್ಲಿ ಹಾಗಿರಲಿಲ್ಲ—ಬ್ರಿಟಿಷ್ ಇಂಡಿಯದೊಳಗಿನ ಕನ್ನಡ ಭಾಗಗಳು ಒಂದಾಗುವುದೇ ಏಕೀಕರಣದ ಪ್ರಥಮ ಹೆಜ್ಜೆಯಾಗಿ ಭಾವಿಸಿದ್ದರು. ಇಂದೂ ಹಾಗೆ ಮಾಡಬಹುದು—ಆದರೆ ಅದು ಎಷ್ಟರ ಮಟ್ಟಿಗೆ ಪ್ರಯೋಜನಕರವೆಂಬ ಪ್ರಶ್ನೆ ಇಲ್ಲಿ ಉಪಸ್ಥಿತವಾಗುತ್ತದೆ. ಮೈಸೂರಿನವರ ಅಹಂಕಾರವನ್ನು ಹೆಚ್ಚಿಸುವ ಅಂಶವೂ ಇದಾಗುತ್ತದೆ—ತಾವು ಕೂಡಿಕೊಳ್ಳದಿದ್ದರೆ ಕರ್ನಾಟಕ ರಾಜ್ಯದ ಕನಸು ನನಸಾಗದು ಎಂಬುದನ್ನವರೂ ಬಲ್ಲರು. ಅವರಲ್ಲಿ ವಿವೇಕ ಮೂಡಬೇಕು—ಮುನ್ನೋಟದ ಬೆಳಕು ಕಾಣಿಸಬೇಕು. ತಮಗೊಂದು ಕರಾವಳಿ ತೀರಬೇಕು ಎಂಬಷ್ಟು ಜಾಣತನ ಈಗಾಗಲೇ ಅವರಲ್ಲಿ ಕಂಡು ಬರುತ್ತದೆ—ದಕ್ಷಿಣ ಕನ್ನಡದ ವಿಷಯದಲ್ಲಿ ಶೇಷಾದ್ರಿ ಸಮಿತಿಗೆ ಆತಂಕವೇನೂ ಕಾಣಿಸದಿರುವುದಕ್ಕೆ ನಮ್ಮ ಉತ್ತಮ ಪರಿಸ್ಥಿತಿಯಷ್ಟೇಯಲ್ಲದೆ ಕಡಲ ತೀರದ ಮೋಹವೂ ಕಾರಣವಾಗಿರಬಹುದು. ಆದರೆ ಎಲ್ಲ ಕನ್ನಡಿಗರ ಶ್ರೇಯಸ್ಸಿನ ಕಲ್ಪನೆ ಮೈಸೂರಿಗಿರಬೇಕು; ತನ್ನದೊಂದೇ ಸಾಲದು. ಸಾಂಸ್ಕೃತಿಕ ಭಾವನೆಯೇ ಇಂಥ ಪ್ರೇರಣೆಕೊಡಲು ಸಾಧ್ಯ. ಈ ಪ್ರೇಮ ಪರೀಕ್ಷೆಯ ಫಲಿತಾಂಶ ಕನ್ನಡದ ಸಂಸ್ಕೃತಿಗೆ ಅನ್ಯಾಯ ಮಾಡದಿರಲಿ, ಎಂದು ನಾವು ಆಶಿಸುತ್ತೇವೆ.

ನಿಯಂತ್ರಿತ ಸ್ವಾತಂತ್ರ್ಯ

ರಾಷ್ಟ್ರದ ಕೈಗಾರಿಕೆಗಳಲ್ಲಿ ಎಂಟನೇ ಸ್ಥಾನವನ್ನು ಪಡೆದಿರುವ ಚಲಚ್ಚಿತ್ರೋದ್ಯಮದ ಪ್ರಭೃತಿಗಳಿಗೆ ಪ್ರಧಾನ ಮಂತ್ರಿ ನೆಹರುಗಳು ಮೊನ್ನೆ ದಿನಾಂಕ ೨೭ರಂದು ನೀಡಿದ ಸಂಯಮಿತ ಸ್ವಾತಂತ್ರ್ಯದ ಉಪದೇಶವು ಸಕಾಲಿಕವೂ ಬಹಳ ಸಮಂಜಸವೂ ಆಗಿದೆಯೆಂದು ನಮ್ಮ ಅಭಿಪ್ರಾಯ. ಸಂಗೀತ ನಾಟಕ ಅಕಾಡೆಮಿಯ ಆಶ್ರಯದಲ್ಲಿ ಹೊಸದೆಹಲಿಯಲ್ಲಿ ನೆರೆದಿದ್ದ ಚಲಚ್ಚಿತ್ರ ವಿಚಾರ ಗೋಷ್ಠಿಯನ್ನು ಉದ್ಘಾಟಿಸುತ್ತಾ ನೆಹರುಗಳು ತಮ್ಮ ಅಮೂಲ್ಯ ವಿಚಾರಗಳನ್ನು ಪ್ರಕಟಿಸಿದರು. ಅವರು ದೇಶದಲ್ಲಿ ಪುಸ್ತಕಗಳು, ಪತ್ರಿಕೆಗಳು, ರೇಡಿಯೋ ಮತ್ತಿತರ ಶೈಕ್ಷಣಿಕ ಹಾಗು ಜ್ಞಾನ ಪ್ರಸಾರದ ಸಾಧನಗಳೆಲ್ಲವನ್ನೂ ಒಟ್ಟು ಮಾಡಿದರೂ ಚಲಚ್ಚಿತ್ರಗಳೊಂದರಿಂದಲೇ ಆಗುವಷ್ಟು ಪರಿಣಾಮ ಉಂಟಾಗಲಿಕ್ಕಿಲ್ಲ ಎಂದು ಅಭಿಪ್ರಾಯಪಟ್ಟರು. ಇದು ಚಲಚ್ಚಿತ್ರೋದ್ಯಮಕ್ಕೆ ಸೇರಿದವರಲ್ಲಿ ಪುಳಕವೆಬ್ಬಿಸಿದುದನ್ನು ಕಂಡವರೇ "ನಾನು ಚಲಚ್ಚಿತ್ರಗಳ ಯೋಗ್ಯತೆಯನ್ನು ಗಣನೆಗೆ ತೆಗೆದುಕೊಂಡಿಲ್ಲ" ಎಂಬ ಮಾತನ್ನು ಜೋಡಿಸಿದರು. ಇದು ಬಹಳ ಅರ್ಥಪೂರ್ಣವಾದ ಮಾತು—ಚಲಚ್ಚಿತ್ರಗಳು ಅದನ್ನು ನೋಡುವವರ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತವೆಂದು ಎಲ್ಲ ಉತ್ಪಾದಕರೂ ದಿಗ್ದರ್ಶಕರೂ ನಟನಟಿಯರೂ ಒಪ್ಪುವರು. ಅದು ಕ್ಷಣಿಕವಲ್ಲವೆಂದೂ ಶಾಶ್ವತ ಸ್ವರೂಪದ್ದೆಂದೂ ಸಾಮಾಜಿಕ ಕಾರ್ಯಕರ್ತರು ಅಭಿಪ್ರಾಯ ಪಡುವರು. ಆದುದರಿಂದ ಜನರು ನಿತ್ಯಜೀವನಕ್ಕೆ ಬಹಳ ಹತ್ತಿರವಾಗಿ ಚಲಚ್ಚಿತ್ರಗಳು ಬರುತ್ತವೆಂಬ ವಿಷಯವನ್ನು ಎಲ್ಲರೂ ಒಪ್ಪಿದಂತಾಗುತ್ತದೆ. ಆದುದರಿಂದಲೇ ಶ್ರೀ ವಿ. ಶಾಂತಾರಾಮರ ಮಾತಿನಲ್ಲಿ ಚಲಚ್ಚಿತ್ರಗಳ "ಸಾಮಾಜಿಕ ಹೊಣೆಗಾರಿಕೆ" ಹೆಚ್ಚುತ್ತದೆ. ಚಲಚ್ಚಿತ್ರಗಳು ವಾಸ್ತವಾಂಶವನ್ನು ಕಣ್ಣ ಮುಂದಿಡುವ ಹಂಬಲದಲ್ಲಿ ಅಸಹ್ಯ ಹಾಗು ಜುಗುಪ್ಸಾವಹ ಸನ್ನಿವೇಶಗಳನ್ನೂ ಭೀಭತ್ಸ ವ್ಯವಹಾರಗಳನ್ನೂ ಉದ್ದೀಪಕ ಪ್ರಸಂಗಗಳನ್ನೂ ಚಿತ್ರೀಕರಿಸಬಾರದು; ಏಕೆಂದರೆ, ನಾವು ಯಾವುದನ್ನು ಮೆಚ್ಚಬೇಕೆಂದು ಅಪೇಕ್ಷಿಸುತ್ತೇವೋ ಅವನ್ನೇ ಕೆಗೆದು ತೋರಿಸಿದಂತಾಗುತ್ತದೆ ಎಂದವರ ಅಭಿಪ್ರಾಯ. ನಟಿ ನರ್ಗಿಸಳು "ಚಿತ್ರಗಳಲ್ಲಿನ ನಮ್ಮ ವೇಷ ಭೂಷಣಗಳಿಂದ ಸಾಮಾನ್ಯರು ಮೋಹ ಹೋಗಬಾರದು; ಅವುಗಳ ಅನುಕರಣೆ ಮಾಡಬಾರದು" ಎಂದು ಬಯಸುತ್ತಾಳೆ ಆದರೆ ಜನತೆಗೆ ಆ ಶಿಕ್ಷಣ ಕೊಡುವ ಕೆಲಸ ಯಾರದು? ಜನರು ತಪ್ಪು ದಾರಿಯನ್ನು ತುಳಿಯದಂತೆ ನೋಡಿಕೊಳ್ಳಬೇಕಾದವರು ಯಾರು? ಇಲ್ಲಿ ಚಲಚ್ಚಿತ್ರಗಳ ಉತ್ಪಾದಕರ ಮತ್ತು ಸಾಮಾಜಿಕ ಸ್ವಾಸ್ಥ್ಯದ ಸಂರಕ್ಷಕನೆನಿಸಿದ ಸರಕಾರದ ಪಾತ್ರ ಉಲ್ಲೇಖನೀಯ. ಉತ್ಪಾದಕರು ರೋಮಾಂಚಕ ಕತೆಗಳನ್ನು ಹೆಣೆಯುವ ಉತ್ಸಾಹದಲ್ಲಿ ಸಮಾಜ ಘಾತುಕ ಕ್ಷೇತ್ರಕ್ಕೆ ದುಮ್ಮಿಕ್ಕಬಾರದು; ಅವರು ತಪ್ಪಿ ನಡೆಯದಂತೆ ಸರಕಾರ ದಕ್ಷವಾಗಿರಬೇಕು. ಚಲಚ್ಚಿತ್ರವು ಕಲೆ—ಕಲಾಕ್ಷೇತ್ರದಲ್ಲಿ ನಿಯಂತ್ರಣ ಸಲ್ಲದು, ಎನ್ನುವ ಕೆಲವರಿರಬಹುದು. ಆದರೆ ಎಲ್ಲವೂ ವ್ಯಕ್ತಿ—ಸಮಷ್ಟಿಯ ಪರಸ್ಪರ ಶ್ರೇಯಸ್ಸಿಗಾಗಿದೆಯೆಂಬುದನ್ನು ನೆನೆದರೆ ನಿಯಂತ್ರಣ ಮತ್ತು ಸ್ವಚ್ಛಂದ ಪ್ರವೃತ್ತಿಗಳೆರಡೂ ಸಂಯುತ ರೀತಿಯಲ್ಲಿ ನಡೆದುಕೊಳ್ಳಬೇಕಾಗುತ್ತದೆ.

ನಾರದ ಮಹಾನುಭಾವ

ಸೈನಿಕ ವ್ಯೂಹಪ್ರಿಯ—ಡಲ್ಲೇಸ್

ಥೈಲೇಂಡಿನ ರಾಜಧಾನಿಯಾದ ಬಾಂಗ್‌ಕಾಕ್ ನಗರದಲ್ಲಿ ಸೇರಿದ ಸೀಟೋ ಪರಿಷತ್ತಿನ ಮೇಲೆ ಈಡನರ ಪ್ರಭಾವ ಬಹಳವಾಗಿ ಬಿದ್ದಿದ್ದರೂ ಸೈನಿಕ ವ್ಯೂಹವನ್ನು ಕಟ್ಟುವ ಈ ಪ್ರಯತ್ನದ ಸೂತ್ರಚಾಲನ ಮಾಡುತ್ತಿದ್ದವರು ಡಲ್ಲೇಸರೆಂಬುದರಲ್ಲಿ ಸಂದೇಹವಿಲ್ಲ. ಅರುವತ್ತೇಳು ವರ್ಷದ ಡಲ್ಲೇಸರು ನೆಹರುಗಳಂಥ ಮಹಾಮೇಧಾವಿಗಳ ಮಾತಿಗಿಂತಲೂ ಥೈಲೇಂಡಿನ ವಿದೇಶ ಮಂತ್ರಿಯಂಥ ಸೂತ್ರದ ಗೊಂಬೆಗಳ ಅಭಿಪ್ರಾಯವೇ ಆಗ್ನೇಯ ಏಶಿಯದ ಮನೋಭಾವವನ್ನು ಪ್ರತಿನಿಧೀಕರಿಸುತ್ತದೆ ಎಂದು ನಂಬುವಂತೆ, ಅಥವಾ ನಂಬಿಸುವಂತೆ ಕಾಣುತ್ತದೆ.

ಡಲ್ಲೇಸರು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ನುರಿಯಲಿಕ್ಕೆಂದೇರೂಪುಗೊಂಡ ಕೆಲವೇ ಅದ್ಭುತ ವ್ಯಕ್ತಿಗಳಲ್ಲೊಬ್ಬರು. ಫೊರ್ಮೋಸವನ್ನು ಜಪಾನಿಗೆ ಚೀನವು ಬಿಟ್ಟುಕೊಡಬೇಕಾಗಿ ಬಂದ ೧೮೯೫ನೇ ಇಸವಿಯ ಒಪ್ಪಂದ ನಡೆದಿದ್ದಾಗ ಚೀನದ ಸಲಹೆಗಾರರಾಗಿ ಕೆಲಸ ಮಾಡಿದ ಜನರಲ್ ಜಾನ್ ಡಬ್ಲ್ಯು. ಫಾಸ್ಟರ್ ತನ್ನೊಡನೆ ಏಳು ವರ್ಷದ ಮೊಮ್ಮಗ ಡಲ್ಲೇಸರನ್ನು ಸಮುದ್ರದಲ್ಲಿ ಮೀನು ಹಿಡಿಯುವ ಸಂತೋಷ ಯಾತ್ರೆಗಾಗಿ ಕರೆದೊಯ್ದಿದ್ದರು. ಇದೇ ಅಜ್ಜ ಮೊಮ್ಮಗನು ಕಾಲೇಜಿನ ಮೂರನೇ ವರ್ಷದಲ್ಲಿದ್ದಾಗ (೧೯೦೭) ಅವನಿಗೆ ಇನ್ನೂ ೧೯ ವಯಸ್ಸು ಮಾತ್ರವಾಗಿದ್ದರೂ ಹೇಗ್ ನಗರದಲ್ಲಿ ಜಂಗಿದ ಎರಡನೆಯ ಶಾಂತಿ ಪರಿಷತ್ತಿನ ಚೀನೀ ಶಿಷ್ಟ ಮಂಡಳದ ಕಾರ್ಯದರ್ಶಿ ಪದವನ್ನೊಪ್ಪಿಸಿ, ತನ್ನೊಡನೆ ಕರೆದೊಯ್ದರು.

ಒಬ್ಬ ಪಾದ್ರಿಯ ಮಗನಾಗಿ, ಮೂವರು ಸಹೋದರಿಯರನ್ನೂ ಒಬ್ಬ ಸಹೋದರನನ್ನೂ ಪಡೆದು, ಜೀವನದ ಬಾಲ್ಯವನ್ನು ಕಳೆದ ಡಲ್ಲೇಸರು ಅಜ್ಜನ ಅನುಗ್ರಹದ ದೆಸೆಯಿಂದಲೆ ಅತ್ಯುಚ್ಚ ಸ್ಥಾನಕ್ಕೆ ಏರಿದರು. ಚಿಕ್ಕಂದಿನಲ್ಲಿ ಒಂಟೇರಿಯೋ ಸರೋವರದ ದಂಡೆಯ ಮೇಲಿನ ಮನೆಯ ಪ್ರಭಾವದಿಂದ ಎರಡೂವರೆ ಮೈಲುಗಳಷ್ಟು ದೂರ ಈಜಾಡುವುದು, ದೋಣಿ ನಡೆಸುವುದು, ಮೀನು ಹಿಡಿಯುವುದು ಇತ್ಯಾದಿಗಳಲ್ಲಿ ಡಲ್ಲೇಸರಿಗೆ ಬಹಳ ಆಸಕ್ತಿಯಾಯಿತು. ದೊಡ್ಡವರಾದ ಬಳಿಕ ಬೇರೆ ದೇಶಗಳ ಮೇಲೆ ಬಲೆ ಬೀಸಲೂ ಗಾಳ ಹಾಕಲೂ ಅವರು ನೋಡುತ್ತಿರುವುದಕ್ಕೆ ಇದೇ ಕಾರಣವಿರಬಹುದು. ಆದರೆ ಅವರೂ ಕುಟುಂಬ ಜೀವಿ—ಜೇನೆಟ್ ಪೊಮೆರಿ ಅವೆರಿ ಎಂಬವಳನ್ನು ತಾನು ವಕೀಲ ವೃತ್ತಿಯನ್ನು ಪ್ರಾರಂಭಿಸಿದ ಸವಿನೆನಪಿಗಾಗಿ ಮದುವೆಯಾದ ಡಲ್ಲೇಸರಿಗೆ ಒಬ್ಬ ಮಗಳು ಮತ್ತಿಬ್ಬರು ಮಗಂದಿರು ಇದ್ದಾರೆ. ಕೌಟುಂಬಿಕ ಕ್ಷೇಮಕ್ಕೆ ಬೆಲೆ ಇರುವ ಪಕ್ಷದಲ್ಲಿ ರಾಷ್ಟ್ರದ ಸ್ವಾತಂತ್ರ್ಯಕ್ಕೂ ಬೆಲೆ ಇದೆಯೆಂದು ಅವರಿಗೆ ಗೊತ್ತಾಗದಿರಲು ಕಾರಣವಿಲ್ಲ.

ಪ್ರಥಮ ಮಹಾ ಯುದ್ಧದ ಕಾಲದಲ್ಲಿ ಡಲ್ಲೇಸರನ್ನು ಪನಾಮಾ ಕಾಲುವೆಯ ರಕ್ಷಣೆಯ ಅಧಿಕಾರಿಯಾಗಿ ನಿಯೋಜಿಸಲಾಯಿತು. ವರ್ಸೇಲಿಯ ಶಾಂತಿ ಪರಿಷ

ತ್ತಿನಲ್ಲಿ ಅವರು ಅಮೇರಿಕದ ಪ್ರಮುಖ ಸಲಹೆಗಾರರಾಗಿದ್ದರು. ರಾಜಕೀಯದ ನಡುವೆ ಅವರು ಅರ್ಥಶಾಸ್ತ್ರದ ಕುರಿತಾದ ತಿಳಿವಳಿಕೆಯನ್ನೂ ಪ್ರಕಟಿಸಿದರು. ಪೋಲೆಂಡಿನಲ್ಲಿ ಹಣಕಾಸಿನ ಸ್ಥಿಮಿತಯೋಜನೆಯ ಅಡಿಗಲ್ಲನ್ನು ಹಾಕಲು ಅವರು ೧೯೨೭ ಪ್ರಯತ್ನಿಸಿದರು. ಲೀಗ್ ಆಫ್ ನೇಶನ್ಸ್ ಸಭೆಗಳಲ್ಲಿ "ಶಾಂತಿ" ಮಂತ್ರವನ್ನು ಪಠಿಸುತ್ತಿದ್ದರು ಆದರೂ ದ್ವಿತೀಯ ಮಹಾ ಯುದ್ಧವಾಯಿತು— ಅದರ ಕೊನೆಯಲ್ಲಿ ಇನ್ನು ಯುದ್ಧವಾಗ ಬಾರದು ಎಂಬ ಪ್ರತಿಜ್ಞೆಯಿಂದ ಸಾನ್ ಫ್ರಾನ್ಸಿಸ್ಕೊ ಸಮ್ಮೇಳನ ಜರಗಿತು. ಇಲ್ಲಿಯೂ ಡಲ್ಲೇಸರು ಒಬ್ಬ ಪ್ರತಿನಿಧಿಯಾಗಿದ್ದರು. ಅವರು ರಿಪಬ್ಲಿಕನರಿದ್ದರೂ ಡೆಮೊಕ್ರಾಟರಿಗೆ ಸಲಹೆಗಾರರಾದವರು— ರಾಷ್ಟ್ರ ಸಂಘದಲ್ಲಿ ಶ್ರದ್ಧೆಯಿಂದ ದುಡಿದವರು. ಹಿಂದಿನ ಡೆಮೊಕ್ರಾಟ ವಿದೇಶಾಂಗ ಸಚಿವ ಡೀನ್ ಅಚೆಸನರ ಸ್ಥಾನಕ್ಕೆ ಡಲ್ಲೇಸರನ್ನು ಐಕರು ಆರಿಸಿದ್ದು ಆಕಸ್ಮಿಕವಲ್ಲ— ರಿಪಬ್ಲಿಕನ್ನರು ಅಧಿಕಾರಕ್ಕೆ ಬಂದಿರುತ್ತಿದ್ದರೆ ಡಲ್ಲೇಸರು ಈಗಿನ ಸ್ಥಾನವನ್ನು ಎಂದೋ ಪಡೆಯುತ್ತಿದ್ದರು.

ಸಲ್ಲಿವಾನ್ ಎಂಡ್ ಕ್ರಾಮ್‌ವೆಲ್ ಎಂಬ ಪ್ರಸಿದ್ಧ ವಕಾಲತು ಸಂಸ್ಥೆಯ ಪಢಸ್ಯರಾಗಿದ್ದ ಡಲ್ಲೇಸರು ತಮ್ಮ ಚುರುಕು ಬುದ್ಧಿಗೆ ಹೆಸರಾಗಿದ್ದಾರೆ. ಜಪಾನಿನ ಶಾಂತಿ ಒಪ್ಪಂದದ ಕರಡನ್ನು ಸಿದ್ಧಪಡಿಸಲು ಅವರು ೧೯೫೦ರಲ್ಲಿ ಪ್ರಯತ್ನಿಸುತ್ತಿದ್ದಾಗ ರಶಿಯದ ಪ್ರತಿನಿಧಿಗಳು ಕೈರೋ ಘೋಷಣೆಯ ನೆನಪು ಹುಟ್ಟಿಸಿ ಫೊರ್ಮೋಸ ಮತ್ತು ಪೆಸ್ಕಾಡೋರ್ಸ್ ಚೀನಕ್ಕೆ ಸೇರಬೇಕೆಂದು ವಾದಿಸಿದರು ಅದಕ್ಕೆ ಡಲ್ಲೇಸರು. "ಹೌದು, ಚೀನದ ಪ್ರಜಾ ರಾಜ್ಯ'ಕ್ಕೆ— ಚೀನದ 'ಜನತಾ ರಾಜ್ಯ'ಕ್ಕಲ್ಲ ಎಂದರು. ಇವೆಲ್ಲ ಚೀನದ ಪ್ರಜಾ ರಾಜ್ಯಕ್ಕೆ ಸೇರಬೇಕೆಂದು ರಶಿಯದ ಇಚ್ಛೆಯೋ? ಎಂದವರು ವಿನೋದದ ಪ್ರಶ್ನೆಯನ್ನೂ ಹಾಕಿದರು.

ಅಮೇರಿಕದ ಬದಲಾದ ನಿಲುವೆಯನ್ನು ಡಲ್ಲೇಸರ ಮೇಲಿನ ಮಾತುಗಳು ವ್ಯಕ್ತಪಡಿಸುತ್ತಿದ್ದವೆಂಬುದು ಸ್ಪಷ್ಟ. ಸ್ವತಃ ಡಲ್ಲೇಸರೇ ತಮ್ಮ ನಿಲುವು ಬದಲಿಸಿರುವಂತೆ ತೋರುವುದಾಗಿ ನೆಹರುಗಳೊಮ್ಮೆ ಸಂಸತ್ತಿನ ಮುಂದೆ ನುಡಿದಿದ್ದರು. ಡಲ್ಲೇಸರು ಅಮೇರಿಕದ ಹಲವಾರು ಶಾಂತಿ ಪೋಷಕ ಸಂಘಗಳ ಅಧ್ಯಕ್ಷಸ್ಥಾನ ಪಡೆದ ಉತ್ಸಾಹದಲ್ಲಿ "ಯುದ್ಧ, ಶಾಂತಿ ಮತ್ತು ಪರಿವರ್ತನೆ" ಎಂಬ ಪುಸ್ತಕವನ್ನು ೧೯೩೯ರಲ್ಲಿ ಬರೆದು ಪ್ರಕಟಿಸಿದ್ದರು. ಇದರಲ್ಲಿ ಭಯ ನಿವಾರಕ ವಾತಾವರಣವನ್ನುಂಟುಮಾಡದೆ ಶಾಂತಿ ನೆಲಸದು ಎಂದಿದ್ದಾರೆ— ರಾಜಾಜಿ ಅಣು ಬಾಂಬುಗಳನ್ನು ಸಮುದ್ರಕ್ಕೆಸೆದು ಅಂಥ ವಾತಾವರಣ ನಿರ್ಮಿಸಿರೆಂದಾಗ ಮಾತ್ರ ಡಲ್ಲೇಸರು ವಿದೇಶಾಂಗ ಸಚಿವನಾಗಿ ನಗುತ್ತಾರೆ. ಶಾಂತಿಗೆ ಆಧ್ಯಾತ್ಮಿಕ ಹಿನ್ನೆಲೆ ಇರಬೇಕೆಂದು ಲಂಡನಿನ ಚರ್ಚಿನಲ್ಲಿ ೧೯೩೭ರಲ್ಲಿ ಇವರು ಭಾಷಣ ಮಾಡಿದ್ದರು— ಇಂದು ಅಮೇರಿಕದ ವರ್ತನೆಗೆ ಯಾವ ನೈತಿಕ ಅಥವಾ ಆಧ್ಯಾತ್ಮಿಕ ಬೆಂಬಲವೂ ಇದ್ದಂತಿಲ್ಲ. ಡಲ್ಲೇಸರ ಸೈನಿಕ ವ್ಯೂಹ ರಚನೆಯ ಕೌಶಲ್ಯ ಅವನ್ನು ಆಹುತಿ ತೆಗೆದುಕೊಳ್ಳುತ್ತಿವೆ ಎಂಬುದಕ್ಕೆ ತಮ್ಮ ಮಾತನ್ನು ತಾವೇ ನುಂಗಿ ನೀರು ಕುಡಿದು ಸಂಭಾವಿತನಾಗಿ ತೋರಿಸಿಕೊಳ್ಳಬೇಕಾಗಿ ಬಂದುದೇ ನಿದರ್ಶನ.

(೫ನೇ ಪುಟದಿಂದ)

ಎದುರಿಸಿ ಆ ಮೇಲೆ ಸೀಟೋ ಬಂಧುಗಳ ನೆರವನ್ನು ಅಪೇಕ್ಷಿಸಬೇಕೆಂದೂ ಆಗ ಬೇಕಾದವರು ನೆರವಾಗಬಹುದು, ಬೇಡಾದವರು ಬಿಡಬಹುದು ಎಂದೂ ಪರಿಷತ್ತು ತೀರ್ಮಾನಿಸಿತು. ಇದರಿಂದ ಯುದ್ಧದಲ್ಲಿ ಬೀಳಲು ತಯಾರಿಲ್ಲದ ರಾಷ್ಟ್ರಗಳು ಸಹ ಸ್ವಂತ ರಕ್ಷಣೆಯ ಲಾಭಕ್ಕಾಗಿಯಾದರೂ ಸೀಟೋದಲ್ಲಿ ಸೇರಬಹುದಾದ ಪರಿಸ್ಥಿತಿ ಏರ್ಪಡುತ್ತದೆ—ಭಾರತ, ಬರ್ಮಾ, ಇಂಡೋನೇಶಿಯ ಮತ್ತು ಸಿಂಹಳಗಳೆಂಬ ಆಗ್ನೇಯ ಏಶಿಯದ ನಾಲ್ಕು ಪ್ರಮುಖ ರಾಷ್ಟ್ರಗಳು ಇನ್ನೂ ಸೀಟೋದಲ್ಲಿ ಸೇರಿಲ್ಲವೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಈ ರಿಯಾಯತಿ ತೋರಿಸಲಾಗಿದೆಯೆಂದು ನಿರೀಕ್ಷಕರ ಅಭಿಪ್ರಾಯ.

ಒಳಗಿನ ಮಾತು

ತುಸು ನಯವಾದ ವರ್ತನೆಯ ಇನ್ನೊಂದು ದೃಷ್ಟಾಂತವಾಗಿ ಆಫ್ರೇಸ್ಯ ಪರಿಷತ್ತಿಗೆ ಶುಭ ಸಂದೇಶ ಕಳಿಸಲು ಸೀಟೋ ರಾಷ್ಟ್ರಗಳು ನಿರ್ಧರಿಸಿರುವುದನ್ನು ಉಲ್ಲೇಖಿಸಬಹುದು. ಇದನ್ನು ಕೊಲೊಂಬೋ ರಾಷ್ಟ್ರಗಳು ಕರೆದಿವೆಯೆಂಬುದನ್ನು ಮರೆಯಬಾರದು—ಹೀಗೆ ಮನವೊಲಿಸುವ ತಂತ್ರಗಳನ್ನು ಪರಿಷತ್ತಿನಲ್ಲಿ ನಡೆಸಿದ್ದರೂ ಇವಾವುದೂ ಉದ್ದೇಶ ಸಾಧನೆಯಲ್ಲಿ ಸಫಲವಾಗದಿದ್ದರೆ ಬೇರೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಪರಿಷತ್ತು ಒಪ್ಪಿರುವಂತೆ ತೋರುತ್ತದೆ. ಇಂಡೋ ಚೀನದ ಮೂರು ರಾಜ್ಯಗಳ ರಕ್ಷಣೆಯ ಹೊಣೆ ಹೊತ್ತುಕೊಳ್ಳುವ ಸಾಹಸವನ್ನು— ಭಾರತದ ಶ್ರೀ ಕೃಷ್ಣ ಮೆನೊನ್ನರು ರಾಜ್ಯ ಸಭೆಯಲ್ಲಿ ತಾವು ಮಾಡಿದ ಭಾಷಣದಲ್ಲಿ ಉಗ್ರವಾಗಿ ಖಂಡಿಸಿದ್ದರೂ —ಮರಳ ಪ್ರದರ್ಶಿಸಲಾಯಿತು. ಅಲ್ಲದೆ ಈಗ ಬೇಕೆಂದೇ ಸೀಟೋದ ಹೊರಗಡಲಾದ ಫೊರ್ಮೋಸಾ, ಜಪಾನು ಮತ್ತು ದಕ್ಷಿಣ ಕೊರಿಯಗಳನ್ನು ಸೇರಿಸಿಕೊಂಡು ಕಮ್ಯೂನಿಸಮ್ಮಿನ ಶೈಕಾಲು ಕಟ್ಟಿಹಾಕಲಾಗುವುದೆಂಬ ಭಯವನ್ನೂ ತೋರಿಸಲಾಯಿತು. ಇದೆಲ್ಲ ಒಳಗಿನ ಗುಟ್ಟನ್ನು ಹೊರಗೆಡವುತ್ತವೆ.

ಆಂಧ್ರದಲ್ಲಿ ಕಾಂಗ್ರೆಸಿನ ಮುನ್ನಡೆ

ಈಚೆಗೆ ನಡೆದ ಚುನಾವಣೆಯ ಕುರಿತು ತಾ. ೧೧ರಂದು ಪ್ರಕಟಿಸಿದ ೫೦ ಫಲಿತಾಂಶಗಳ ಪೈಕಿ ಸಂಯುಕ್ತ ಕಾಂಗ್ರೆಸಿಗೆ ೩೮, ಕಮ್ಯುನಿಸ್ಟರಿಗೆ ೨ ಪ್ರಜಾ ಸಮಾಜವಾದಿಗಳಿಗೆ ೪ ಮತ್ತು ಸ್ವತಂತ್ರರಿಗೆ ೬ ಸ್ಥಾನಗಳು ದೊರಕಿದ್ದು, ೪೪ ಸ್ಥಾನಗಳಿಗೆ ಹುರಿಯಾಳುಗಳನ್ನು ನಿಲ್ಲಿಸಿ ಕಮ್ಯುನಿಸ್ಟ್ ಪಕ್ಷ ಹೊಂದಿದ ಪರಾಭವ ಉಲ್ಲೇಖನೀಯ. ಮಾಜಿ ಮಂತ್ರಿಗಳಲ್ಲಿ ಶ್ರೀ ಕೋಟಿರೆಡ್ಡಿ ಮತ್ತು ಶ್ರೀ ಪಟ್ಟಾಭಿ ರಾಮಯ್ಯನವರು ಆರಿಸಿ ಬಂದರು. ಪ್ರಸಿದ್ಧ ಕಾಂಗ್ರೆಸಿಗ ಶ್ರೀ ಕಾಳೇಶ್ವರ ರಾಯರೂ ಶ್ರೀಮತಿ ಅಮ್ಮಣ್ಣರಾಜರೂ ಗೆದ್ದರು. ಆದರೆ ಮಂತ್ರಿ ಶ್ರೀ ಟಿ. ವಿಶ್ವನಾಥಂ ಪ್ರಜಾ ಸಮಾಜವಾದಿ ಹುರಿಯಾಳಿನಿಂದ ಸೋಲಿಸಲ್ಪಟ್ಟರು; ಎತ್ತಿ ಹೇಳ ಬಹುದಾದ ಇನ್ನೊಂದು ಸೋಲು ಕಮ್ಯುನಿಸ್ಟ್ ಪಾರ್ಲಿಮೆಂಟ್ ಸದಸ್ಯ ಶ್ರೀ ಬಸವ ಪುನ್ನಯ್ಯ ಎಂಬವರದ್ದು.

ಮದ್ಯಪಾನ ಪ್ರತಿಬಂಧ

ಪಾನನಿರೋಧ ಸಮಿತಿಯು ಶ್ರೀ ಎಸ್. ಎನ್. ಅಗ್ರವಾಲರು ಜೂನು ತಿಂಗಳೊಳಗೆ ಯೋಜನಾ ಆಯೋಗಕ್ಕೆ ತಾವು ವರದಿ ಒಪ್ಪಿಸುವುದಾಗಿ ಹೇಳಿದರು. ಇದರಿಂದ ಮುಂದಿನ ಗಾಂಧೀ ಜಯಂತಿ (ಅಕ್ಟೋಬರ ೨) ಸಮಯಕ್ಕೆ ಸರಿಯಾಗಿ ಯೋಗ್ಯ ಕಾರ್ಯಕ್ರಮ ಕೈಗೊಳ್ಳಲು ಅನುಕೂಲವಾದೀತೆಂದು ಅವರು ಆಶಿಸಿದರು. ಮದ್ಯಪಾನವು ಪ್ರತಿಬಂಧಿಸಲ್ಪಟ್ಟ ಪ್ರದೇಶದಲ್ಲಿ ನೂರಕ್ಕೆ ತೊಂಭತ್ತರಷ್ಟು ಜನರಿಗೆ ಪ್ರಯೋಜನವಾಗಿದೆಯಾಗಿ ಅವರು ಅಭಿಪ್ರಾಯಪಟ್ಟರು

ಚಕ್ರಬಂಧ ಸ್ಪರ್ಧೆಗೆ ಚಕ್ರ

ಮುಂಬಯಿಯ ಶಾಸನ ಸಭೆಯಲ್ಲಿ ಚಕ್ರಬಂಧ ಸ್ಪರ್ಧೆಗಳಿಗೆ ಪ್ರತಿಬಂಧ ಹಾಕಬೇಕೆನ್ನುವ ಗೊತ್ತುವಳಿಯೊಂದನ್ನು ಮಂಡಿಸುತ್ತ ಶ್ರೀ ಪಟವಾರಿಯವರು ಈ ಸ್ಪರ್ಧೆಗಳಿಂದ ಬಡಜನರ ಮತ್ತು ಅಜ್ಞರ ಸುಲಿಗೆಯಾಗುತ್ತದೆ ಎಂದರು. ಮುಖ್ಯ ಮಂತ್ರಿ ಶ್ರೀ ಮೊರಾರಜಿ ದೇಸಾಯಿಯವರು ಉತ್ತರಿಸುತ್ತಾ, ಕೇಂದ್ರ ಸರಕಾರದ ಆಲೋಚನೆಯಲ್ಲಿ ಈ ವಿಷಯವು ಇದೆಯೆಂದೂ ಅನೇಕ ರಾಜ್ಯ ಸರಕಾರಗಳಿಂದ ಪ್ರತಿಬಂಧಕ್ಕೆ ಅನುಕೂಲವಾದ ಉತ್ತರಗಳು ಬಂದಿವೆಯೆಂದು ಕೇಂದ್ರ ಗೃಹಮಂತ್ರಿಗಳಿಂದ ತಮಗೆ ಉತ್ತರ ಬಂದಿದೆಯೆಂದೂ ತಿಳಿಸಿದರು. ಇನ್ನೊಂದು ವರ್ಷದೊಳಗಾಗಿ ಕೇಂದ್ರದ ಶಾಸನ ಜ್ಯಾರಿಗೆ ಬರಬಹುದೆಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಸಂಸತ್ತಿನ ಕಾರ್ಯಕ್ರಮ

ರಾಷ್ಟ್ರಾಧ್ಯಕ್ಷರ ಭಾಷಣಕ್ಕೆ ಕೃತಜ್ಞತೆಯನ್ನು ಸೂಚಿಸುವ ಗೊತ್ತುವಳಿಯ ಮೇಲೆ ಚರ್ಚೆ ನಡೆದು ಅದಕ್ಕೆ ಲೋಕ ಸಭೆಯಲ್ಲಿ ಪ್ರಧಾನ ಮಂತ್ರಿಗಳೂ ರಾಜ್ಯ ಸಭೆಯಲ್ಲಿ ಗೃಹಮಂತ್ರಿ ಪಂತರೂ ಉತ್ತರವಿತ್ತ ಮೇಲೆ ಗೊತ್ತುವಳಿ ಅಂಗೀಕೃತವಾಯಿತು. ಚರ್ಚೆಯಲ್ಲಿ ವಿಶೇಷವೇನೂ ಕಾಣಲಿಲ್ಲ—ಸಮಾಜ ವಾದದ ಗುರಿಯನ್ನು ಸರಕಾರ ಸ್ಪಷ್ಟವಾಗಿ ಅಂಗೀಕರಿಸಿದುದನ್ನು ಅಶೋಕ ಮೆಹತರಂಥ ಪ್ರತಿಪಕ್ಷದ ಧುರೀಣರು ಸ್ವಾಗತಿಸಿದರು; ಆದರೆ ಈ ದಿಸೆಯಲ್ಲಿ ದೃಢವಾದ ಹೆಜ್ಜೆಯನ್ನಿಡಬೇಕೆಂದು ಮಾತ್ರ ಸೂಚಿಸಿದರು. ವಿದೇಶ ಧೋರಣೆಯ ಕುರಿತು ಎಲ್ಲರಿಂದಲೂ ಪ್ರಶಂಸಾ ವಾಕ್ಯಗಳ ಸುರಿಮಳೆಯಾಯಿತು.

5-3-55ಕ್ಕೆ ರೇಡಿಯೋದಲ್ಲಿ ಪ್ರಸಾರವಾಗಲಿರುವ

ಭಾರತದ ಗುರುಕುಲ

(ಕೆ. ಪಿ. ವೆಂಕಪ್ಪ ಶೆಟ್ಟರ ಯಕ್ಷಗಾನ ಪ್ರಸಂಗ)

ಬೆಲೆ: 0—6—0

ನವಭಾರತ ಪುಸ್ತಕ ಭಂಡಾರ ಉಡುಪಿ

ಉಡುಪಿ

ಪೆನ್ನು ಸಿಕ್ಕಿದೆ— ಕಳೆದ ವಾರ ಉಡುಪಿ ಸಿಟಿ ಬಸ್ ಸ್ಟೇಂಡಿನ ಬಳಿ ಸ್ಥಳೀಯ ಬೋರ್ಡ್ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ ಎಸ್. ಕೃಷ್ಣಮೂರ್ತಿ ಉಪಾಧ್ಯಾಯರಿಗೆ ಒಂದು ಫೌಂಟನ್ ಪೆನ್ನು ಸಿಕ್ಕಿರುವುದೆಂದೂ ಸಂಬಂಧಪಟ್ಟವರು ತಕ್ಕ ಪುರಾವೆಗಳನ್ನಿತ್ತು ಉಡುಪಿ ಬೋರ್ಡ್ ಹೈಸ್ಕೂಲು ಮುಖ್ಯೋಪಾಧ್ಯಾಯರಿಂದ ಪಡೆಯಬಹುದೆಂದೂ ಅವರು ತಿಳಿಸುತ್ತಾರೆ.

ಶಾಲಾ ವರ್ಧಂತಿ— ಸ್ಥಳೀಯ ಸರಕಾರಿ ವಿದ್ಯಾರ್ಥಿ ಅಧ್ಯಾಪಕರ ತರಬೇತಿ ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ 20 ರಲ್ಲಿ ಡಾ। ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನಾನಂತರ ಮುಖ್ಯೋಪಾಧ್ಯಾಯರಾದ ಶ್ರೀ ಉಗ್ರಾಣ ಕೃಷ್ಣಮೂರ್ತಿರಾಯರು ವರದಿಯನ್ನೋದಿದರು. ಶ್ರೀ ಎಚ್. ಎಲ್. ಭಟ್ಟರು ಸ್ವಸ್ತಿವಾಚನ ಮಾಡಿದರು. ಶ್ರೀ ಶಿವರಾಯರು ಉತ್ತರ ವಿತ್ತರು. ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ, ವಿದ್ಯಾಕ್ಷೇತ್ರದಲ್ಲಿ ಹೆತ್ತವರ ಮತ್ತು ಅಧ್ಯಾಪಕರ ಹೊಣೆಯೇನಿದೆ ಎಂಬುದನ್ನು ವಿವರಿಸಿ ಭಾಷಣವಿತ್ತರು. ನಂತರ ನಾಟಕ, ಯಕ್ಷಗಾನ ಮೊದಲಾದ ಮನರಂಜನ ಕಾರ್ಯಕ್ರಮಗಳಾದುವು. ಮರು ದಿವಸ ಇದೇ ಶಾಲೆಯ ಹಳೇ ವಿದ್ಯಾರ್ಥಿ ಅಧ್ಯಾಪಕ ಸಂಘದ ಮಹಾಸಭೆ, ವರ್ಧಂತ್ಯುತ್ಸವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು.

ಪಂದ್ಯಾಟ ದಿನಾಚರಣೆ— ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಪಂದ್ಯಾಟದಿನಾಚರಣೆಯು ಕಳೆದ ತಾ. 2ರಲ್ಲಿ ಸಾಹೇಬ್ ಶ್ರೀ ಜಿ. ಸಿ. ರೇಗೋರವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಎಸ್. ಎನ್. ಮಧ್ಯಾಯಸ್ಥರು ಸ್ವಾಗತಮಾತುಗಳನ್ನಾಡಿದರು, ಶ್ರೀ ಕೆ ಗೋಪಾಲ ಶೆಟ್ಟರು ವರದಿಯನ್ನೋದಿದರು. ಅಧ್ಯಕ್ಷರು ಬಹುಮಾನಗಳನ್ನು ಹಂಚಿದ ಬಳಿಕ ಶ್ರೀ ಕುಮಾರನ್ ಮತ್ತು ಕೂಟದವರ ಕುಶಲ ಪ್ರದರ್ಶನಗಳಾದುವು. ಶಾಲಾ ವಿದ್ಯಾರ್ಥಿಗಳು ಕುಸ್ತಿ ಪ್ರದರ್ಶಿಸಿದರು.

ನಗರಸಭೆಯು— ಕಳೆದ ತಾ. ೨೮ರಲ್ಲಿ ಸಂಜೆ ಸಭಾಪತಿ ಡಾ। ಸಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ನೌಕರರ ಪ್ರಾವಿಡೆಂಟ್ ಫಂಡಿಗೆ ಕೊಡುವ ಬಡ್ಡಿದರವನ್ನು ನೇಕಡಾ 3½ಗೆ ತಗ್ಗಿಸಬೇಕೆನ್ನುವ ಲೋಕಲ್ ಫಂಡ್ ಎಕ್ಸಾಮಿನರರ ಪತ್ರವನ್ನು ಓದಲಾಯಿತು. ಈ ಕುರಿತು ಪುನರಾಲೋಚನೆ ಬಗ್ಗೆ ಅವರನ್ನು ಪುನಃ ವಿನಂತಿಸಬೇಕೆಂದು ನಿರ್ಣಯವಾಯಿತು. ನಿತ್ಯದ ಹಾಗೂ ವಾರದ ತರಕಾರಿ ಸಂತೆ ಮಾರ್ಕೆಟುಗಳನ್ನು ಪುನಃ ವಿಲಂಬಮಾಡಬೇಕೆಂದು ನಿರ್ಧಾರವಾಯಿತು. ಅಲ್ಲದೆ ವಾರಕ್ಕೆ ಬುಧವಾರ ಮತ್ತು ಶನಿವಾರ ದಿವಸಗಳಲ್ಲಿ ಸಂತೆ ಜರಗಿಸಬೇಕೆಂದು ತೀರ್ಮಾನಿಸಲಾಯಿತು.

ಮೆಡಿಕಲ್ ಕಾಲೇಜಿನಲ್ಲಿ ಪಂದ್ಯಾಟಗಳು— ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಾರ್ಷಿಕ ಪಂದ್ಯಾಟಗಳು ಕಳೆದ ತಾ. 27ರಲ್ಲಿ ಜರಗಿದವು. ಸಮಾರಂಭದ ಅಧ್ಯಕ್ಷತೆಯನ್ನು ದಿ' ಮುನ್ಸಿಫ್ ಶ್ರೀ ಯು. ವೆಂಕಟ್ರಾಯರು ವಹಿಸಿದ್ದರು ಡಾ (ಮಿಸ್) ಪ್ಲಾಗ್ ಫೀಲ್ಡರ್, ಅವರು ಬಹುಮಾನ ವಿತರಣೆ ಮಾಡಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಸಂಖ್ಯೆ 100ಕ್ಕೆ ಮಿತಿಗೊಳಿಸುವ [illegible] ಕಾರಣದಿಂದ ಕಾಲೇಜನ್ನು ಸ್ಥಳಾಂತರಿಸಬೇಕಾಗಿದೆ ಎಂದೂ ತಿಳಿಯಬರುತ್ತದೆ. [illegible] ವಿದ್ಯಾರ್ಥಿಗಳ [illegible] ಸಂಬಂಧ [illegible] ವಿದ್ಯಾರ್ಥಿಗಳಿಗೂ ಅಧಿಕಾರಿಗಳಿಗೂ ಭಿನ್ನಾಭಿಪ್ರಾಯ ತಲೆದೋರಿದುದೇ [illegible] ಕಾರಣವೆನ್ನಲಾಗಿದೆ.

ಕುಕ್ಕುಂದೂರು— ಉಡುಪಿ ನಗರ ಸಭೆಯ ಸದಸ್ಯೆ ಶ್ರೀಮತಿ ಮನೋರಮಾ ಆಚಾರ್ಯರ ಅಧ್ಯಕ್ಷತೆಯಲ್ಲಿ ಕಳೆದ ತಾ 23 ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಕುಕ್ಕುಂದೂರಿನಲ್ಲಿ ಪ್ರಸೂತಿಕಾ ಕೇಂದ್ರ ಹಾಗೂ ಶಿಶು ಸಂರಕ್ಷಣಾ ಕೇಂದ್ರವನ್ನು ಉದ್ಘಾಟಿಸಿದರು. ಆರಂಭದಲ್ಲಿ ಕುಂಜಾರು ಹಾ! ಎ! ಶಾಲೆಯ ಬಾಲವೀರ ದಳದವರು ಮಾನ್ಯ ಅತಿಥಿಗಳಿಗೆ ಗೌರವ ರಕ್ಷೆಯನ್ನಿತ್ತರು. ಶ್ರೀ ಕುಕ್ಕುಂದೂರು ಗಣಪಯ್ಯ ಸೆಟ್ಟರು ಸ್ವಾಗತ ಭಾಷಣ ಮಾಡುತ್ತಾ ಈ ಭಾಗದ ಗ್ರಾಮಸ್ಥರು ಹಾತೊರೆಯುತ್ತಲಿದ್ದ ಬಯಕೆಯು ಇಂದು ಫಲಕಾರಿಯಾಗಲಾರಂಭವಾದುದಕ್ಕೆ ಸಂತೋಷ ಸೂಚಿಸಿದರು. ಉದ್ಘಾಟಕರು ಮಕ್ಕಳ ಯೋಗಕ್ಷೇಮ ಮತ್ತು ಹೆರಿಗೆಯ ಸೌಕರ್ಯಗಳು ದೊರೆಯುವ ಈ ಕೇಂದ್ರಗಳ ಸದುಪಯೋಗ ಪಡೆಯುವಂತಾಗಬೇಕೆಂದು ಆಶಿಸಿದರು. ರೆ! ಫಾ! ಪಿಂಟೋ, ಶ್ರೀಮತಿ ಬ್ರಿಟೊ ಮತ್ತು ಶ್ರೀಗಳಾದ ಶ್ರೀಪತಿ ಆಚಾರ್ಯ, ಎ. ಜಿ. ಆಳ್ವ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ನಂತರ ಹದಿನಾರು ಮಂದಿ ಸದಸ್ಯರುಳ್ಳ ಕಾರ್ಯಕಾರಿ ಸಮಿತಿ ರಚಿಸಲಾಯಿತು. ಈ ಸಮಿತಿಯಲ್ಲಿ ಶ್ರೀಮತಿಯರು ಸುನಂದಾ ಜಿ. ಬಲ್ಲಾಳ್, ಜಿ. ಶಿರೇರ, ರಾಜೀವಿ. ಬಿ. ಸೆಟ್ಟಿಯವರು ಕ್ರಮವಾಗಿ ಅಧ್ಯಕ್ಷೆ ಉಪಾಧ್ಯಕ್ಷೆ ಮತ್ತು ಕಾರ್ಯದರ್ಶಿ ನಿಯುಕ್ತರಾಗಿರುವರು. ಶ್ರೀಮತಿ ರಾಜೀವಿ ಸೆಟ್ಟಿ ರು ಸಮಿತಿಯ ಪರವಾಗಿಯೂ, ಗಿರಿಜಾ ಹಾ! ಎ! ಶಾಲಾ ಹೆಡ್ಮಾಸ್ತರ್ ಶ್ರೀ ವಾಸು ಸೆಟ್ಟರು ಗ್ರಾಮಸ್ಥರ ಪರವಾಗಿಯೂ ಧನ್ಯವಾದಗಳನ್ನರ್ಪಿಸಿದರು.

ಬೆಳ್ಳೆ— ತಾ 23 ರಲ್ಲಿ ಬೆಳ್ಳೆಯಲ್ಲಿ ಶ್ರೀಮತಿ ಬ್ರಿಟೋರವರು ಪ್ರಸೂತಿಕಾ ಕೇಂದ್ರವನ್ನು ಉದ್ಘಾಟಿಸಿರುವರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್. ಆರ್. ಆಚಾರ್ಯರು ವಹಿಸಿದ್ದರು. ಶ್ರೀ ಟಿ. ಎ. ಪೈಗಳವರು ಕೇಂದ್ರದ ಪ್ರಯೋಜನಗಳನ್ನು ವಿವರಿಸಿ ಭಾಷಣವಿತ್ತರು, ಶ್ರೀಮತಿ ರುಕ್ಮಿಣಿಯಮ್ಮನವರು ಅಧ್ಯಕ್ಷೆಯಾಗಿರುವ ಒಂದು ಸಮಿತಿ ರಚಿಸಲ್ಪಟ್ಟಿತು. ದಾ| ಶೇಷರಾಯರು ಧನ್ಯವಾದಗಳನ್ನರ್ಪಿಸಿದರು.

ನೀಲಾವರ— ಇಲ್ಲಿಯ ಶ್ರೀ ಮಹಿಷಮರ್ದಿನಿ ಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ಕಳೆದ ತಾ 25 ರಲ್ಲಿ ಬೆಳಿಗ್ಗೆ ಉಡುಪಿ ತಹಶೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರು ನೆರವೇರಿಸಿದರು. ಶಾಲಾ ಮೇನೇಜರ್ ಶ್ರೀ ಅಣ್ಣಪ್ಪ ಭಟ್ಟರು ಸ್ವಾಗತ ಭಾಷಣ ಮಾಡಿದರು. ಸಭಿಕರ ಮಾತುಗಳು, ಮಕ್ಕಳಿಗೆ ತಿಂಡಿ ಪಂಚೋಣ, ಮೊದಲಾದ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಪೆರ್ಡೂರು—ಸ್ಥಳೀಯ ಶ್ರೀಅನಂತಪದ್ಮನಾಭ ಸ್ವಾಮಿ ದೇವಸ್ಥಾನದ ಕಾಲಾವಧಿ ಜಾತ್ರೆಯು ಇದೇ ತಾ 12 ರಲ್ಲಿ ಪ್ರಾರಂಭವಾಗಿ ತಾ 16 ರಲ್ಲಿ ಶ್ರೀ ಮನ್ಮಹಾ ರಥೋತ್ಸವ ತಾ 19 ರಲ್ಲಿ ಬ್ರಹ್ಮ ಕುಂಭಾಭಿಷೇಕ ದೊಂದಿಗೆ ಕೊನೆಗೊಳ್ಳಲಿರುವುದು. ಭಕ್ತಾದಿಗಳು ಬಂದು ಶ್ರೀ ಮುಡಿ ಗಂಧ ಪ್ರಸಾದ ಸ್ವೀಕರಿಸಿ ಶ್ರೀ ದೇವತಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಎಕ್ಸಿಕ್ಯೂಟೀವ್ ಆಫೀಸರ್ ಶ್ರೀ ಕೆ. ಭೋಜರಾಜ ಸೆಟ್ಟರ ವಿನಂತಿ ಇದೆ.

ಮುನಿಯಾಲ್— ಬ್ರಹ್ಮಾವರ ಶ್ರೀ ತಿಮ್ಮಪ್ಪಶೆಟ್ಟಿ ಪತ್ನಿ ಶ್ರೀಮತಿ ಉಪ್ಪೂರು ಮುತ್ತಕ್ಕ ಶೆಡ್ತಿಯವರು ತನ್ನ 60ನೇ ವಯಸ್ಸಿನಲ್ಲಿ ಕಳೆದ ತಾ. 27ರಲ್ಲಿ ತನ್ನ ಮಗ ಡಾ| ಯು. ಕೃಷ್ಣನವರ ಮನೆಯಲ್ಲಿ ದೈವಾಧೀನರಾದರೆನ್ನಲು ವಿಷಾದಿಸುತ್ತೇವೆ.

ಪೆರ್ಡಾಲ— ಇಲ್ಲಿಯ ಮಹಾಜನ ಸಂಸ್ಕೃತ ಕಲಾ ಶಾಲೆಯ ವರ್ಧಂತಿಯುತ್ಸವವು ಕಳೆದ ತಾ. 24ರಲ್ಲಿ ಉಡುಪಿಯ ಡಾ! ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಕೃಷ್ಣಯ್ಯನವರ ಸ್ವಾಗತ ಮಾತುಗಳಾದ ಬಳಿಕ, ಪ್ರಿನ್ಸಿಪಾಲ್ ಶ್ರೀ ಬಂಡಿಗೆ ಶ್ಯಾಮ ಭಟ್ಟರು ವರದಿಯನ್ನೋದಿದರು. ಡಾ! ಟಿ. ಎ. ಪೈಗಳವರು ಕಾಲೇಜಿಗೆ ಶುಭವನ್ನು ಕೋರಿ ಮಾತನಾಡಿದರು. ಶ್ರೀ ಎಸ್. ವಿ. ಎಲ್. ಎನ್. ಶರ್ಮರು ಧನ್ಯವಾದಗಳನ್ನರ್ಪಿಸಿದರು. ಈ ಕಾಲೇಜಿನ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಎಚ್. ಬಿ. ಮಂಜುರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ರಂಗನಾರಾಯಣ ಭಟ್ಟರು ವಂದನೆಗಳನ್ನಿತ್ತರು.

ಪೆರ್ಡಾಲ ಬುನಾದಿ ಉಪಾಧ್ಯಾಯರ ಕೇಂದ್ರ ಸಮಾಜದ ವಾರ್ಷಿಕಸಭೆಯು ಕಳೆದ ತಾ 26ರಲ್ಲಿ ಕೊಯಮುತ್ತೂರಿನ ಬೇಸಿಕ್ ವಿದ್ಯಾಧಿಕಾರಿ ಶ್ರೀ ಎಸ್. ರಾಜಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಪರೀಕ್ಷಾಧಿಕಾರಿ ಶ್ರೀ ವಿ. ತಿಮ್ಮಪ್ಪ ಸೆಟ್ಟರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಯು. ಶಂಭು ಭಟ್ಟರು ವರದಿಯನ್ನೋದಿದರು. ಶ್ರೀ ಕಯ್ಯಾರ ಕಿಞ್ಞಣ್ಣರೈಗಳು ಸಾಹಿತ್ಯವಾಚನ ಮಾಡಿದರು. ಶ್ರೀ ಕೆ. ಎಸ್. ಶರ್ಮರು ಭಾಷಣವಿತ್ತರು. ಅಂದು ಬೆಳಿಗ್ಗೆ ಪ್ರಭಾತಫೇರಿ, ಧ್ವಜವಂದನೆ ಇತ್ಯಾದಿ ಕಾರ್ಯಕ್ರಮಗಳಾದುವು.

ಪಡುಬಿದ್ರೆ—ಸ್ಥಳೀಯ ಬೋರ್ಡು ಹಾ! ಎ! ಶಾಲೆಯ ಹಳೆ ವಿದ್ಯಾರ್ಥಿಗಳ ಮಹಾ ಸಭೆಯು ಉಡುಪಿ ಸೌತ್ ರೇಂಜಿನ ಶಾಲೆಗಳ ಡಿಪ್ಯುಟಿ ಇನ್ಸ್ಪೆಕ್ಟರ್ ಶ್ರೀ ಯಚ್. ನೈಕಾ, ಅವರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಎಮ್. ಎಮ್. ಪ್ರಭುಗಳು ಸಭೆಯ ಉದ್ದೇಶವನ್ನು ತಿಳಿಸಿದರು. ನಂತರ ಸಭಿಕರ ಭಾಷಣಗಳಾಗಿ ತಾತ್ಕಾಲಿಕ ಕಮಿಟಿಯೊಂದುರಚಿಸಲಾಯಿತು. ಶ್ರೀ ಪಿ. ಶಿವಣ್ಣ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಶಿರ್ವ— ಸ್ಥಳೀಯ ಹಿಂದೂ ಹಾ! ಎ! ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಪ್ರಥಮ ಮಹಾ ಸಭೆಯು ಇದೇ ತಾ 5 ನೇ ಶನಿವಾರ ಸಂಜೆ 3 ಗಂಟೆಗೆ ಶಾಲಾ ವಠಾರದಲ್ಲಿ ಶ್ರೀಯಸ್. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಹಳೆ ವಿದ್ಯಾರ್ಥಿಗಳೆಲ್ಲರೂ ಬಂದು ಸಹಕರಿಸಬೇಕಾಗಿಯೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಪುತ್ತೂರು— ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಕಳೆದ ತಾ 25 ರಲ್ಲಿ ಶ್ರೀ ಮಂಜೇಶ್ವರ ಗೋವಿಂದ ಪೈಗಳವರು ಕವಿವರ ಮುದ್ದಣನ ವ್ಯಕ್ತಿತ್ವದ ಕುರಿತು ಉಪನ್ಯಾಸವಿತ್ತರು. ತಾ 26 ರಲ್ಲಿ ಶಾಲಾ ವಿದ್ಯಾರ್ಥಿನಿಯರಿಗೆ ಹಿತವಚನಗಳನ್ನಿತ್ತರು.

ದೇವೀಪುರ ತಲಪಾಡಿ— ಅಖಿಲ ಭಾರತ ಮಾಧ್ವ ಮಹಾ ಮಂಡಲದ ಅಧ್ಯಕ್ಷ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಕಳೆದ ತಾ. 24ರಲ್ಲಿ ಬೆಳಿಗ್ಗೆ ತಲಪಾಡಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಚಿತ್ತೈಸಿದಾಗ ಅವರಿಗೆ ಸಂಭ್ರಮದ ಸ್ವಾಗತವೀಯಲಾಯಿತು. ಸಂಜೆ ಸ್ಥಳೀಯ ಹಾ! ಎ! ಶಾಲೆಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ, ಧರ್ಮಪೀಠಾಧಿಪತಿಗಳು ಸಮಾಜ ಸುಧಾರಣೆಯಲ್ಲಿ ಆಸಕ್ತಿ ವಹಿಸಿ ಭಾರತೀಯರ ಕಲ್ಯಾಣಕ್ಕಾಗಿ ದುಡಿಯುವ ವಿಷಯವನ್ನು ಸವರ್ಧಿಸಿ ಸ್ವಾಮಿಗಳವರು ಉಪನ್ಯಾಸವಿತ್ತರು.

ನೆಲ್ಲಿಕಟ್ಟೆ—ಅಂಪಾರು — ಇಲ್ಲಿಯ ಜೈ ಭಾರತ ಎಯಿಡೆಡ್ ಎಲಿಮೆಂಟರಿ ಶಾಲೆಯ ನೂತನ ಕಟ್ಟಡದ ಉದ್ಘಾಟನ ಮತ್ತು ತೃತೀಯ ವಾರ್ಷಿಕೋತ್ಸವ ಸಮಾರಂಭಗಳು ಕಳೆದ ತಾ. 24ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್.ಎಲ್. ಎ. ಮತ್ತು ಶಾಲಾ ಇನ್ಸ್ಪೆಕ್ಟರ್ ಶ್ರೀ ನರಸಿಂಹಯ್ಯನವರು ಭಾಷಣವಿತ್ತರು, ಅಧ್ಯಕ್ಷರು ಶಾಲೆಗೆ ಶುಭವನ್ನು ಕೋರಿ ಮಾತನಾಡಿದರು. ಯಕ್ಷಗಾನ, ನಾಟಕಾದಿ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು. ಅಂದು ಬೆಳಿಗ್ಗೆ ಶ್ರೀ ಕೆ. ಸುಬ್ರಾಯ ಧ್ಯಾನುಭಾಗರು ಧ್ವಜಾರೋಹಣಮಾಡಿದರು.

ಸೂಡ— ಕಟಪಾಡಿ ಶ್ರೀ ಎಸ್. ವಿ. ಎಸ್ ವಿದ್ಯಾವರ್ಧಕ ಸಂಘದ ಆಡಳಿತಕ್ಕೊಳಪಟ್ಟ ಸೂಡ ಶ್ರೀ ಸುಬ್ರಹ್ಮಣ್ಯ ಹಾ! ಎ! ಶಾಲೆಯ ಬಗ್ಗೆ ಸಮಾಜ ವಿಕಾಸ ಯೋಜನೆಯ ನ್ವಯಕಟ್ಟಿಸಲಾಗುವ ನೂತನ ಕಟ್ಟಡದ ಶಂಕುಸ್ಥಾಪನಾ ಕಾರ್ಯವನ್ನು ಕಳೆದ ತಾ 20 ರಲ್ಲಿ ಶ್ರೀ ಬಿ. ಎಸ್. ಭಾಸ್ಕರ ಪೈಗಳವರು ನೆರವೇರಿಸಿದರು. ಶಾಲಾ ಲೇಖಕ ಶ್ರೀ ಪಿ. ರಾಮದಾಸ ನಾಯಕರಿಂದ ಸ್ವಾಗತ ಭಾಷಣ ಮುಖ್ಯೋಪಾಧ್ಯಾಯ ಶ್ರೀ ಎಮ್. ಅನಂತಪ್ಪ ಕಿಣಿಯರಿಂದ ಶಾಲಾ ಸಂಕ್ಷಿಪ್ತ ವರದಿವಾಚನ ಶ್ರೀ ಕೆ. ಆರ್. ಶೆಣೈಯವರ ಧನ್ಯವಾದಗಳಾದುವು. ತಾ 19 ರಂದು ಕೂಡಿದ ಊರವರ ಸಭೆಯಲ್ಲಿ ಶಾಲಾ ಕಟ್ಟಡ ನಿರ್ಮಾಣದ ಬಗ್ಗೆ ಶ್ರೀ ಪಟೇಲ್ ಶೀನಪ್ಪ ಹೆಗ್ಡೆಯವರು ಅಧ್ಯಕ್ಷರಾಗಿರುವ ಒಂದು ಸಮಿತಿಯನ್ನು ರಚಿಸಲಾಯಿತು.

ಪೊಳಲಿ- ಇದೇ ತಾ 14 ನೇ ಸೋಮವಾರ ಶ್ರೀ ರಾಜ ರಾಜೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ಕಾಲಾವಧಿ ಜರಗತಕ್ಕ ಚೆಂಡಿನ ಉತ್ಸವದ ಧ್ವಜಾರೋಹಣವು ಮೀನ ಸಂಕ್ರಮಣ ದಿವಸಕ್ಕೆ ಸರಿಯಾಗಿ ಉತ್ಸವ ಆರಂಭವಾಗುವುದು. ಚೆಂಡಿನ ಉತ್ಸವವು ಧ್ವಜಾರೋಹಣ ನಂತರ ಹಿಂದಿನಿಂದ ಪ್ರಕಟಿಸಲಾಗುವುದು.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4¼% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

THE MOOLKY BANK LTD., MULKI.

NOTICE.

The 25th Ordinary Annual General Body Meeting of the Bank will be held at the Registered Office of the Bank on Friday the 25th March 1955 at 2 P. M.

(The Register of members and Transfer Books of the Bank will remain closed from 15—3—1955 to 30—3—1955, both days inclusive.

(Sd.) M. R. H. Punja.
Manager.

ಜಿ. ಪಿ. ಸಿಪ್ಪಿಯವರ

ಷಹೆನ್ ಷಾ (ಗೇವಾಕಲರ್)

(ಹಿಂದಿ)

ಕಾಮಿನಿ ಕೌಶಲ್— ರಂಜನ್ — ಕೆ. ಎನ್. ಸಿಂಗ್ ಶಕೀಲಾ— ಅಚಲಾಸಚದೇವ್—ಮುಕ್ರಿ—ಕುಕ್ಕು ಮತ್ತು ಆಗಾ.

ದಿಗ್ದರ್ಶಕರು: ಅಮಿಯ ಚಕ್ರವರ್ತಿ.

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ

ತಾ. 1-3-1955 ರಿಂದ.

ಅಪೂರ್ವ ಸಂದರ್ಭ!

ಕಿರಿಯರ ಪ್ರಪಂಚದ ಒಟ್ಟು ರೂ. 36—10—0 ಬೆಲೆಯ 37 ಪುಸ್ತಕಗಳನ್ನು ಒಮ್ಮೆಯೇ ತೆಗೆದುಕೊಳ್ಳುವವರಿಗೆ ಬರೇ ರೂ. 24—0—0 ಕ್ಕೆ ಕೊಡಲಾಗುವುದು.

ಸುವರ್ಣ ಸಂಧಿ!

ಅಂತರಂಗ ಕಾರ್ಯಾಲಯದವರು ಪ್ರಕಟಿಸಿರುವ ಒಟ್ಟು ರೂ. 34—0—0 ಬೆಲೆಯ 100 ಪುಸ್ತಕಗಳನ್ನು ಒಮ್ಮೆಯೇ ಕೊಳ್ಳುವವರಿಗೆ ಬರೇ ರೂ. 22—8—0ಕ್ಕೆ ಕೊಡಲಾಗುವುದು.

ಕೆಟಲಾಗಿಗೆ ಬರೆಯಿರಿ. ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ ಉಡುಪಿ.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್. ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಮಂಗಳೂರು

ನಗರಸಭೆ— ಕಳೆದ ತಾ 26ರಲ್ಲಿ ಸಂಜೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ನಗರಸಭೆಯಲ್ಲಿ, ಮಾಜಿ ಕೌನ್ಸಿಲರ್ ಶ್ರೀ ಯು. ಲಕ್ಷ್ಮಣ ಶೆಣೈಯವರ ನಿಧನ ಬಗ್ಗೆ ಸಂತಾಪಸೂಚಕ ನಿರ್ಣಯವೊಂದು ಎರಡುನಿಮಿಷಗಳ ಮೌನಾಚರಣೆಯೊಂದಿಗೆ ಸ್ವೀಕೃತವಾಯಿತು. ಅಪೀಲು ಅರ್ಜಿಯೊಂದು ಚರ್ಚೆಗೆಬಂದಾಗ ಶ್ರೀ ಕ್ರಿಶ್ಚನ್ ಕಾರ್ಯಪ್ಪರು ನಗರ ಸಭೆಯು ಟೌನ್‌ಪ್ಲಾನಿಂಗ್ ಆಫೀಸರರ ಮೇಲೆ ಕೆಲವು ಆರೋಪಗಳನ್ನು ಹೊರಿಸಿದರು. ಇವನ್ನು ಶ್ರೀ ಮಣೇಲು ಶ್ರೀನಿವಾಸನಾಯ್ಕರು ಆಕ್ಷೇಪಿಸಿ ಆರೋಪದ ಮಾತುಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸೂಚಿಸಿದರು. ಈ ಕುರಿತು ಚರ್ಚೆನಡೆಯಿತು. ಇಷ್ಟರಲ್ಲಿ ಸದಸ್ಯರು ಒಬ್ಬೊಬ್ಬರೇ ಸಭೆಯಿಂದ ಎದ್ದು ಹೊರಟರು. ಆಗ ಸಭೆಯಲ್ಲಿ ಅಧ್ಯಕ್ಷರೂ ಕೂಡಿ ಏಳುಮಂದಿ ಮಾತ್ರ ಉಳಿದಿದ್ದುದರಿಂದ ಕೋರಮಿನ ಅಭಾವ ತಲೆದೋರಿತು. ಐದುನಿಮಿಷಗಳ ನಂತರ ಸಭೆಅಂತ್ಯವಾಯಿತು.

ಮುನಿಸಿಪಲ್ ಕಾಂಗ್ರೆಸ್ ಪಕ್ಷದ ಸಭೆಯು— ಕಳೆದ ತಾ. 25ರಲ್ಲಿ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರ್ಷದ ಅಧಿಕಾರಸ್ಥಾನಗಳಿಗೆ ಡಾ। ಯು. ಪಿ. ಮಲ್ಯ (ಲೀಡರ್), ಶ್ರೀಮತಿ ಕಲ್ಯಾಣಿ ಬಿ. ಸೆಟ್ಟಿ (ಡೆಪ್ಯುಟಿ ಲೀಡರ್), ಡಾ। ಬಿ. ವಿ. ಮತಾಯಸ್ (ಕಾರ್ಯದರ್ಶಿ) ಮತ್ತು ಶ್ರೀಗಳಾದ ಜೆ. ಬಿ. ಡಿ'ಸೋಜ ಹಾಗೂ ಮೋಹನ ಶೆಣೈ (ವ್ಹಿಪ್) ಯವರು ಆರಿಸಲ್ಪಟ್ಟರು.

ನಗರಾಡಳಿತೆ ವಿಮರ್ಶೆ- ಮಂಗಳೂರು ನಗರ ಸಭೆಯ 1953—54 ನೇ ವರ್ಷದ ಆಡಳಿತ ವರದಿಯನ್ನು ಮದ್ರಾಸು ಸರಕಾರವು ವಿಮರ್ಶಿಸಿ ಈ ರೀತಿ ಅಭಿಪ್ರಾಯ ಪಟ್ಟಿರುವುದು 'ನಗರದೊಳಗೆ ಮುನಿಸಿಪಲ್ ಸ್ಥಳಗಳ ಆಕ್ರಮಣಗಳನ್ನು ಪತ್ತೆ ಹಚ್ಚುವ ಮತ್ತು ಅವುಗಳನ್ನು ಇತ್ಯರ್ಥಿಸುವ ಕಾರ್ಯವು ಚೆನ್ನಾಗಿ ನಡೆಯಲಿಲ್ಲ. ನಗರಾಡಳಿತೆಯೊಳಗೆ 21 ಪ್ರಾಥಮಿಕ ಶಾಲೆಗಳಿದ್ದು ವರದಿ ವರ್ಷದಲ್ಲಿ ಶಾಲಾ ಮಕ್ಕಳ ಸಂಖ್ಯೆ ಸ್ವಲ್ಪ ಮಟ್ಟಿಗೆ ಹೆಚ್ಚಿದ್ದರೂ, ಹಾಜರಿಯು ಕಡಿಮೆ. ನಗರಾಡಳಿತೆಗೊಳಪಟ್ಟ ಐದು ಔಷಧಾಲಯಗಳಲ್ಲಿ ಸಹಾಯ ಪಡೆಯುವ ರೋಗಿಗಳ ಸಂಖ್ಯೆಯು ಹೆಚ್ಚಿದೆ. ಹೆಚ್ಚು ಸಂಖ್ಯೆಯಲ್ಲಿ ತರಬೇತಿ ಹೊಂದಿದ ದಾದಿಯರ ಸಹಾಯ ಪಡೆದಿದ್ದಾರೆ.'

ಶಾಲಾ ವರ್ಧಂತಿ ಸಮಾರಂಭಗಳು— ಬೆಸ್ಸಲಿನ ಕಾಸಿಯಾ ಹೈಸ್ಕೂಲ್, ಸೈಂಟ್ ಜೋಸೆಫ್ ಮತ್ತು ಸೈಂಟ್ ರೀಟಾಸ್ ಹಾ। ಎ। ಶಾಲೆಗಳ ವರ್ಧಂತಿ ಸಮಾರಂಭವು ಕಳೆದ ತಾ. 22ರಲ್ಲಿ ಸಂಜೆ ಗವರ್ನ್‌ಮೆಂಟ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ. ರಾಘವ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಗಳ ಮೆನೇಜರ್ ರೆ। ಫಾ। ಎಫ್. ಎಕ್ಸ್. ಫೆರ್ನಾಂಡೀಸರು ವರದಿಯನ್ನೋದಿದರು.

ವಾರ್ಷಿಕೋತ್ಸವ— ಕನ್ನಡ ಮರಾಠಿಯವರ ಸಮಾಜ ಸುಧಾರಕ ಸಂಘದ ವಾರ್ಷಿಕೋತ್ಸವವು ಕಳೆದ ತಾ. 20ರಲ್ಲಿ ಶ್ರೀ ಕುಪ್ಪ ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಯು. ಗುರುವಪ್ಪನವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಕೆ. ಆರ್. ಆಚಾರ್, ಕೆ. ಕೃಷ್ಣರಾವ್ ಮೊದಲಾದವರು ಸಮಯೋಚಿತ ಮಾತುಗಳನ್ನಾಡಿದರು

ಯಕ್ಷಗಾನ— ಉರ್ವ ಕೆನರಾ ಹೈಸ್ಕೂಲಿನಲ್ಲಿ ತರಬೇತಿ ಅಧ್ಯಾಪಕರು ಕಳೆದ ತಾ. 23ರಲ್ಲಿ ಡಾ. ಎಮ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀಕೃಷ್ಣ ಸಂಧಾನವೆಂಬ ಯಕ್ಷಗಾನ ಸಮಾರಂಭವನ್ನು ನೆರವೇರಿಸಿದರು.

ಸಮಾಜ ಸೇವಾ ಸಂಘದ- ವರ್ಷಾವಧಿ ಮಹಾ ಸಭೆಯು ಜಿಲ್ಲಾ ಜಡ್ಜರಾದ ಶ್ರೀ ಎಸ್. ಗಣಪತಿ ಪಿಳ್ಳೆಯವರ ಅಧ್ಯಕ್ಷತೆಯಲ್ಲಿ ಕಳೆದ ತಾ. 25ರಲ್ಲಿ ಜರಗಿತು. ಶ್ರೀ ಭರತನ್ ಅವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಎ ಗಣಪತಿ ಹೊಳ್ಳರು ವರದಿಯನ್ನೋದಿದರು. ಕಾಲೇಜು ಪ್ರಿನ್ಸಿಪಾಲ್ ರೆಕ್ಟರ್ ರೆ। ಫಾ। ಇ. ಟಿ. ಜೇಕ್ಸನ್, ಅವರು ಸೇವಾ ಸಂಘದ ಸದಸ್ಯರನ್ನು ಹರಸಿದರು. ಮುನಿಸಿಪಲ್ ಚೆರ್‌ಮೆನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರೂ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರೂ ಮಾತನಾಡಿದರು. ಪಾರಿತೋಷಕ ವಿತರಣೆ, ಅಧ್ಯಕ್ಷ ಭಾಷಣಗಳಾಗಿ ಶ್ರೀ ಎ. ಸಿ. ಮಥಾಯಿಯವರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ದ. ಕ. ಜಿಲ್ಲಾ ಬೋರ್ಡಿನ ವಿಶೇಷ ಸಭೆಯು— ಕಳೆದ ತಾ 23 ರಂದು ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ. ಕೆ. ಸೆಟ್ಟರು ಜಿಲ್ಲಾ ಲೈಬ್ರೆರಿ ಅಥೋರಿಟಿಗೆ ಬೋರ್ಡಿನ ಪ್ರತಿನಿಧಿಯಾಗಿ ಆರಿಸಲ್ಪಟ್ಟರು. ನಂತರ ಸಾಮಾನ್ಯ ಸಭೆಯು ಜರಗಿತು. ಬೋರ್ಡಿನ ಸದಸ್ಯರಿಗೆ ತಿಂಗಳಿಗೆ ರೂಪಾಯಿ 50 ರಷ್ಟು ಭತ್ತೆ ಕೊಡಬೇಕೆಂಬ ಕಾಸು ಸರ್ಕಲಿನ ಸ್ವತಂತ್ರ ಸದಸ್ಯ ಶ್ರೀ. ಎ. ಪದ್ಮನಾಭ ಸೆಟ್ಟರು ತಂದ ನಿರ್ಣಯವನ್ನು ಕಾಂಗ್ರೆಸಿನ ಶ್ರೀ. ಬಿ. ಎಸ್. ಭಾಸ್ಕರ ರೈಗಳು ಸಮರ್ಥಿಸಿದರು. ನಿರ್ಣಯದ ಕುರಿತು ಚರ್ಚೆ ನಡೆದು 17 ಮತಗಳು ಪರವಾಗಿಯೂ 9 ಮತಗಳು ವಿರೋಧವಾಗಿಯೂ ದೊರೆತು ನಿರ್ಣಯ ಪಾಸಾಯಿತು. 9 ಮಂದಿ ಸದಸ್ಯರು ತಟಸ್ಥರಾಗಿದ್ದರು. ಮೂಡಬಿದ್ರೆಯ ಎಲ್. ಎಫ್. ಆಸ್ಪತ್ರೆಯನ್ನು ಸರಕಾರವೇ ನಡೆಸಿಕೊಂಡು ಬರಬೇಕೆಂಬ ಸಾರ್ವಜನಿಕರ ಅರ್ಜಿಯು ಚರ್ಚೆಗೆ ಬಂದಾಗ, ಡಾ। ಕೆ. ನಾಗಪ್ಪ ಆಳ್ವ ಮತ್ತು ಶ್ರೀಗಳಾದ ಬಿ. ಮುಂಜಯ್ಯ ಹೆಗ್ಡೆ, ಎಸ್. ಧರ್ಮ ಸಾಮ್ರಾಜ್ಯ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ಕೆಲವು ಶರ್ತಗಳಿಗನುಸಾರವಾಗಿ ರಂಜಾಳ, ಕಾಟಿಪ್ಪು, ಮುಂಜಾಲಕಟ್ಟೆ, ಮುಂಡಾಜೆ, ಹೆಜಮಾಡಿ ಬೋರ್ಡು ಪ್ರಾಥಮಿಕ ಶಾಲೆಗಳನ್ನು ಹಾ। ಎ। ಶಾಲೆಗಳನ್ನಾಗಿ ಮಾರ್ಪಡಿಸುವ ನಿರ್ಧಾರವಾಯಿತು. ಬೋರ್ಡಿನ ಹಾ। ಎ। ಶಾಲೆಗಳಲ್ಲಿ ಉತ್ತಮ ಫಲಿತಾಂಶ ಬರುವಂತೆ ಒಂದು ಗುರಾಣಿ ಬಹುಮಾನ ನೀಡಬೇಕೆಂಬ ನಿರ್ಣಯವಾಯಿತು.

ಸಿಟಿಜನ್‌ಶಿಪ್ ಶಿಬಿರದ ಉದ್ಘಾಟನೆ— ಉರ್ವ ಕೆನರಾ ಹೈಸ್ಕೂಲಿನ ತರಬೇತಿಶಾಲೆಯ ಪೌರತನ ಶಿಕ್ಷಣ ಶಿಬಿರವು ಕಳೆದ ತಾ. 26ರಲ್ಲಿ ಪ್ರಾರಂಭವಾಗಿದ್ದು ತಾ. 27ರಲ್ಲಿ ಬೆಳಗ್ಗೆ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಸಮಾರಂಭ ನಡೆಯಿತು. ಶ್ರೀ ಯು. ಕೇಶವರಾಯರು ಸ್ವಾಗತ ಭಾಷಣವಿತ್ತರು. ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರು ಶಿಬಿರದ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಭುಜಂಗ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಮಗ್ಗ ಕೈಗಾರಿಕೆಗೆ ಸರಕಾರದ ಸಹಾಯ— ಭಾರತಸರಕಾರವು ಕೈಮಗ್ಗ, ಗುಡಿಕೈಗಾರಿಕೆ ಮತ್ತು ಸಣ್ಣಉದ್ಯಮಗಳಿಗೆ ಸುಮಾರು ಐದೂವರೆ ಲಕ್ಷರೂಪಾಯಿಗಳ ಗ್ರಾಂಟನ್ನೂ, ಎರಡೂವರೆ ಲಕ್ಷರೂಪಾಯಿಗಳಷ್ಟು ಸಾಲವನ್ನು ಮಂಜೂರುಮಾಡಿರುವುದು. ಈ ಪೈಕಿ ಮೈಸೂರಿಗೆ ಎರಡು ಲಕ್ಷರೂಪಾಯಿ ಸಾಲ ಮತ್ತು ನಾಲ್ವತ್ತೈದು ಸಾವಿರ ರೂಪಾಯಿಗಳ ಗ್ರಾಂಟು ದೊರೆಯುವುದು. ಮಡಿಕೇರಿ, ಮಂಗಳೂರು ಮತ್ತು ಪುಟ್ಟೂರುಗಳ ನೇಕಾರ ಸಹಕಾರಿ ಸಂಘಗಳ ಕಾರ್ಯನಿರ್ವಹಣೆಗಾಗಿ ಧನಸಹಾಯಗಳಾಗಿ ಕೇಂದ್ರ ಸರಕಾರದ ಸಾಲಗಳು ದೊರೆಯಲಿವೆ.

ಶಾಲಾವರ್ಧಂತಿ — ಮಂಗಳೂರಿನ ಬಿ. ಇ. ಎಮ್. ಹೈಸ್ಕೂಲಿನ ವರ್ಧಂತಿಯುತ್ಸವವು ಕಳೆದತಾ. 30ರಲ್ಲಿ ನಗರಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಪೈ ಮೊದಲು ಸ್ವಾಗತ ಬಯಸಿ ವರದಿಯನ್ನು ಓದಿದರು. ಶ್ರೀ ಕೆ. ಗೋಪಾಲ ಪೈಗಳು ಅಧ್ಯಕ್ಷ ಭಾಷಣ ಮಾಡಿದರು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಮಾಲೆ	೪	೦
ಜ್ಞಾನಯೋಗ	೪	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೪	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಿಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಹೈಮಾಚಲ ಸಾನ್ನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ)	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ಜ್ಞಾನ ಮಾರ್ಗ	೦	೮
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಧ್ಯಾನ	೦	೪

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಟೆಂಡರ ನೋಟೀಸು

ತಾ. 1—1—1955ರಿಂದ 31—3—56ರ ವರೇಗೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸು ಮತ್ತು ಇದರ ತಾಬೆಯಲ್ಲಿರುವ ಬೇರೆ ಆಫೀಸುಗಳ ಪ್ರಿಂಟಿಂಗ್, ಬೈಂಡಿಗ್ ಇತ್ಯಾದಿ ಕೆಲಸಾವಳಿಗಳ ಬಗ್ಗೆ ಸೀಲ್ಡು ಟೆಂಡರುಗಳನ್ನು "1955—56ನೇ ವರ್ಷದ ಬಾಬ್ತು ಪ್ರಿಂಟಿಂಗ್, ಬೈಂಡಿಗ್ ವಗೈರೆ ಕೆಲಸಾವಳಿಗಳ ಬಗ್ಗೆ ಬಾಬ್ತು ಟೆಂಡರು" ಎಂತ ಸೀಲುಮಾಡಿದ ಲಕೋಟೆಯ ಮೇಲೆ ಪ್ರೆಸಿಡೆಂಟ್, ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು, ಮಂಗಳೂರು ಎಂತ ವಿಳಾಸ ಬರೆದು 1955ನೇ ಇಸವಿ ಮಾರ್ಚ ತಿಂಗಳ ತಾರೀಕು 16ನೇ ಬುಧವಾರ ದಿವಸ ಅಪರಾಹ್ನ ಘಂಟೆ 3ರ ವಳಗೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸಿಗೆ ತಲಪುವಂತೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳಲಾಗುತ್ತದೆ. ಮೇಲ್ಕಾಣಿಸಿದ ತಾರೀಕಿನ 3 ಘಂಟೆ ನಂತರ ತಲಪುವ ಟೆಂಡರುಗಳನ್ನು ಅಂಗೀಕರಿಸಲಾಗಲಿಕ್ಕಿಲ್ಲ. ಟೆಂಡರುಗಳು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು. ಪ್ರೆಸಿಡೆಂಟರಿಂದ ಅಥವಾ ಅವರಿಂದ ಅಧಿಕಾರ ಹೊಂದಿದವರಿಂದ 1955ನೇ ಇಸವಿ ಮಾರ್ಚ ತಿಂಗಳ ತಾರೀಕು 16ರಲ್ಲಿ ಅಪರಾಹ್ನ ಘಂಟೆ 4—30ಕ್ಕೆ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಆ ಸಮಯ ಹಾಜರಿರುವ ಟೆಂಡರುದಾರರ ಸಮಕ್ಷಮ ತೆರೆಯಲ್ಪಡಲಾಗುವದು.

2) ಪ್ರಿಂಟಿಂಗ್ ಇತ್ಯಾದಿ ಕೆಲಸಾವಳಿಗಳ ಕುರಿತು, ಪ್ರಿಂಟ್ ಮಾಡಿದ ಟೆಂಡರು ಫಾರ್ಮು ಮತ್ತು ಟೆಂಡರು ಕುರಿತಾದ ಕ್ರಮ ನಿಬಂಧನೆಗಳ ಪ್ರತಿಯೊಂದು ಎರಡು ಫಾರ್ಮುಗಳ ಒಂದು ಸೆಟ್ಟಿಗೆ ರೂ(1-0-0)ಒಂದರಂತೆ ಪಾಕತಿ ಮಾಡಿ ಬರೆದ ಮೂಲಕ ಕೇಳಿಕೊಳ್ಳುವಲ್ಲಿ ಒದಗಿಸಿಕೊಡಲಾಗುವುದು.

ದ. ಕ. ಜಿಲ್ಲಾ ಬೋರ್ಡು ಆಫೀಸು,
ಮಂಗಳೂರು, 20—2—1955

K. Sanjiva Shetty,
ಪ್ರೆಸಿಡೆಂಟರ ಬಗ್ಗೆ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40
ಸ್ಟಾಕಿಸ್ಟರು: ಶಹಾ ಕಂಪೆನಿ. ಮಂಗಳೂರು

೩ನೇ ಆವೃತ್ತಿ. ಸಿದ್ಧವಾಗಿದೆ! ಬೆಲೆ: ೨-೮-೦ ಬೇಗ ತರಿಸಿರಿ.

ಶ್ರೀ. ಎನ್. ಕೆ. ಕುಲಕರ್ಣಿಕೃತ

ಕನ್ನಡ ಸಾಹಿತ್ಯವಾಹಿನಿ

M. A., B. A., ವಿದ್ಯಾರ್ಥಿಗಳಿಗೂ ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಇದು Reference ಗ್ರಂಥವಾಗಿದೆ! ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಜಾಣ ಪರೀಕ್ಷೆಗೆ Text Bookವನ್ನಾಗಿ ಮಾಡಿದ್ದಾರೆ!

ಒಂದೇ ಪ್ರತಿ ಬೇಕಾದವರು 3—8—0 M. O. ಕಳಿಸಿರಿ.

ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್.

ಹ್ಯಾಟಿ ಶ್ಯಾಮರಾಯರು

ಸಂಪಾದಕರು: ವಿಜಯ ಗ್ರಂಥಮಾಲೆ, ಬೆಳಗಾಂವಿ

ಒಡೆಯರು: ಕಥಾಕುಂಜ ಗ್ರಂಥ ಭಾಂಡಾರ, ಬೆಳಗಾಂವಿ.

ಸಾಗುವಳಿದಾರರ ಸಾಲ ಸಂದಾಯ ಶಾಸನ

ಬೇಸಾಯಗಾರರು ತಿಳಿದಿರಬೇಕಾದ ವಿಷಯಗಳು

ಮದ್ರಾಸು ರಾಜ್ಯದಲ್ಲಿ ಸಾಗುವಳಿದಾರರಿಂದ ಸಾಲ ವಸೂಲಿಗಾಗಿ ನ್ಯಾಯ ಸ್ಥಾನಗಳಲ್ಲಿ ವ್ಯಾಜ್ಯಗಳನ್ನು ದಾಖಲು ಮಾಡಿ, ಸಾಗುವಳಿದಾರರ ಮೇಲೆ ಸಾಲ ಸಂದಾಯದ ಒತ್ತಾಯವನ್ನು ತರದಂತೆ ನೋಡಿಕೊಳ್ಳುವ ಶಾಸನವನ್ನು ಶ್ರೀ ಸಿ. ರಾಜಗೋಪಾಲಾಚಾರಿಯವರು ತಾವು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ ತಂದಿದ್ದರು. ಅದರ ಅವಧಿಯು ಫೆಬ್ರುವರಿ ಕೊನೆಗೆ ಮುಕ್ತಾಯವಾಯಿತು. ಹೀಗೆ, ಸ್ವೇಚ್ಛೆಯಿಂದಲ್ಲದೆ, ಕಾನೂನಿನಂತೆ ಸಾಲ ಸಂದಾಯ ಮಾಡಬೇಕಾದ ಹೊಣೆಯನ್ನು ತಪ್ಪಿಸಿದ ಪ್ರಯುಕ್ತ ಉಂಟಾದ ವಾತಾವರಣ ಇದೇ ಮಾರ್ಚ ೧ನೇ ತಾರೀಕಿನಿಂದ ಕೆಲವು ಕ್ರಮಗಳು ಅವಶ್ಯಕವೆಂಬ ಭಾವನೆಯನ್ನು ಸರಕಾರದ ಪ್ರಭೃತಿಗಳಲ್ಲಿ ಮೂಡಿಸಿತು. ಮುಖ್ಯವಾಗಿ, ಇದು ವರೆಗೆ ಕಾನೂನಿನಂತೆ ತಡೆ ಹಿಡಿಯಲಾದ ಸಾಲದ ಮರು ಸಂದಾಯವು ಸಾಗುವಳಿದಾರರನ್ನು ಒಮ್ಮಿಂದೊಮ್ಮೆಗೆ ಗೊಂದಲದಲ್ಲಿ ಹಾಕದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಅದು ಹೇರಿತು. ಇದನ್ನು ನಿರ್ವಹಿಸುವ ದೃಷ್ಟಿಯಿಂದ ಸರಕಾರ ಹೊಸ ಮಸೂದೆಯನ್ನು ಶಾಸನ ಸಭೆಗಳಲ್ಲಿ ಮಂಡಿಸಿ, ಅದಕ್ಕೆ ಮಂಜೂರಾತಿಯನ್ನು ದೊರೆಕಿಸಿಕೊಂಡಿತು. ಪರಿಶೀಲಕ ಸಮಿತಿಗೆ ಒಪ್ಪಿಸಿಕೊಡುವುದಕ್ಕೆ ಮುಂಚೆ ಸರಕಾರ ಪ್ರಕಟಿಸಿದ ಮೂಲ ಮಸೂದೆಗೂ ಈಗ ಮಂಜೂರಾಗಿರುವ ಶಾಸನಕ್ಕೂ ವ್ಯತ್ಯಾಸಗಳಿದ್ದು, ಈಗಿನ ಶಾಸನದ ಮುಖ್ಯ ವಿವರಗಳನ್ನು ಸಂಬಂಧಿಸಿದವರ ಮಾಹಿತಿಗಾಗಿ ಕೆಳಗೆ ಕೊಟ್ಟಿದ್ದೇವೆ:—

ಶಾಸನವು ೧-೧೦-೧೯೫೩ ನೇ ತಾರೀಕಿಗೆ ಸಾಗುವಳಿದಾರರಿಗೆ ಇದ್ದ ಸಾಲಕ್ಕೆ (ಅಪವಾದಗಳ ಹೊರತು) ಅನ್ವಯಿಸುತ್ತದೆ. ಮೇಲೆ ಹೇಳಿದ ತಾರೀಕಿಗೆ ನಗದಿಯಿಂದಾಗಲೀ ಬೇರೆ ರೀತಿಯಿಂದಾಗಲೀ ಸಂದಾಯ ಮಾಡಬೇಕಾಗಿದ್ದುದು ಸಾಲವಾಗಿ ಪರಿಗಣಿಸಲ್ಪಡುತ್ತದೆ. ಅಂದಿಗೆ ಬಾಕಿ ಬಿದ್ದಿರಬಹುದಾದ ಗೇಣಿಗೆ ಸಹ ಇದು ಲಗಾವಾಗುವುದೆಂದು ಸರಕಾರದ ಪರವಾಗಿ ಸ್ಪಷ್ಟೀಕರಣ ಕೊಡಲಾಗಿದೆ. ಆದರೆ, (೧) ಕೇಂದ್ರ ಸರಕಾರ, ರಾಜ್ಯ ಸರಕಾರದ, ಇಲ್ಲವೇ ಸ್ಥಳೀಯ ಸಂಸ್ಥೆಗಳಿಗೆ ಸಲ್ಲಬೇಕಾದುದಕ್ಕೂ (೨) ಸಹಕಾರ ಸಂಘ ಸಾಗು ಅಡವಿನ ಬ್ಯಾಂಕುಗಳಿಗೆ ಪಾವತಿಯಾಗಬೇಕಾದುದಕ್ಕೂ (೩) ವಿಶ್ವಾಸ ದ್ರೋಹದ ದೆಸೆಯಿಂದ ಸಂದಾಯ ಮಾಡಬೇಕಾಗಿ ಬಂದುದಕ್ಕೂ (೪) ಜೀವನಾಂಶವಾಗಿ ಸಂದಾಯವಾಗಬೇಕಾದುದಕ್ಕೂ (೫) ಶ್ರಮಕ್ಕೆ ಪ್ರತಿಫಲವಾಗಿ ಕೊಡಬೇಕಾದ ವೇತನ ಅಥವಾ ಸಂಭಾವನೆಗೂ (೬) ಚಿಟ್ ಫಂಡುಗಳಿಗೆ ಸಲ್ಲಬೇಕಾದುದಕ್ಕೂ ಈ ಶಾಸನದಿಂದ ಬಾಧೆಯಾಗದು.

ಕೃಷಿಭೂಮಿಯಲ್ಲಿ ಆಸ್ತಿ ಇರುವವನನ್ನು ಸಾಗುವಳಿದಾರನೆಂದು ಪರಿಗಣಿಸಲಾಗುತ್ತದೆ. ಆದರೆ ಕೂಲಿಗೆ ಕೃಷಿಭೂಮಿಯಲ್ಲಿ ಕೆಲಸ ಮಾಡುವ ಆಳುಗಳು "ಸಾಗುವಳಿದಾರ" ಎಂಬ ಅರ್ಥಕ್ಕೆ ಸೇರುವುದಿಲ್ಲ; ಹಾಗೆಯೇ ಭೂಮಿಯನ್ನು ಅಡವಿಗೆ ಪಡೆದುಕೊಂಡವರೂ ಈ ಶಬ್ದದ ಅರ್ಥವ್ಯಾಪ್ತಿಗೆ ಒಳಪಡುವುದಿಲ್ಲ. ಸರಕಾರದವರು ಸಾಲಸಂದಾಯ ಮಾಡಲು ನಿಜವಾಗಿಯೂ ಕಷ್ಟವೆಂದಾದ ಸಾಗುವಳಿದಾರರಿಗೆ ಮಾತ್ರ ಈಗಿನ ಶಾಸನದ ಪ್ರಯೋಜನ ಸಿಗಬೇಕು ಎಂದು ಅಪೇಕ್ಷಿಸಿ, ಅನುಕೂಲವಂತರಾದ ಸಾಗುವಳಿದಾರರಿಗೆ ಶಾಸನ ಅನ್ವಯಿಸುವುದಿಲ್ಲ ಎಂದು ವಿಧಿಸಿದ್ದಾರೆ. ಅದರಂತೆ ೧೯೫೨-೫೩ನೇ ಇಸವಿಯ ಬಳಿಕ ಎಂದೇ ಆಗಲಿ, (೧) ೧೫೦ ರೂಪಾಯಿಗೆ ಮಿಕ್ಕಿ ವಾರ್ಷಿಕ ಕಂದಾಯ ತೆರಲು ಬದ್ಧರಾದವರು, (೨) ಸಾಗುವಳಿಯಲ್ಲದೆ ಇತರ ವೃತ್ತಿಗಳಿಂದ ೯೦೦ ರೂಪಾಯಿಗಳ ಅರ್ಧ ವಾರ್ಷಿಕೋತ್ಪತ್ತಿಯ ಮೇಲೆ ವೃತ್ತಿ ತೆರಿಗೆ ಕೊಡಲು ಬದ್ಧರಾದವರು, (೩) ಸ್ವಂತ ಮನೆಯನ್ನು ಬಿಟ್ಟು ಉಳಿದ, ಕೃಷಿ ಭೂಮಿಯಲ್ಲದ, ನೆಲ ಅಥವಾ ಕಟ್ಟಡದ ಮೇಲೆ ೬೦೦ ರೂಪಾಯಿಗಳ ವಾರ್ಷಿಕ ಬಾಡಿಗೆ ಪಡೆಯುವರೆಂದು ಪರಿಗಣಿಸಲ್ಪಟ್ಟವರು, (೪) ವರ್ಷಕ್ಕೆ ೨೦,೦೦೦ ರೂಪಾಯಿಗೆ ಮಿಕ್ಕಿದ ವ್ಯವಹಾರಕ್ಕಾಗಿ ಮಾರಾಟ ಕರ ಕೊಡಲು ಬದ್ಧರಾದವರು, (೫) ಆದಾಯ ತೆರಿಗೆ ಕೊಡಲು ಬದ್ಧರಾದವರು, ಮತ್ತು (೬) ಕಾನೂನು ಪ್ರಕಾರ ಹೆಸರು ದಾಖಲು ಮಾಡಿಕೊಂಡಿರುವ ಸಂಘ — ಇಷ್ಟು ವರ್ಗಕ್ಕೆ ಶಾಸನ ರಕ್ಷಣೆ ಕೊಡುವುದಿಲ್ಲ. ಅಲ್ಲದೆ, ಈಗ ಸಾಗುವಳಿದಾರರಾಗಿದ್ದರೂ ೧-೧೦-೧೯೫೩ನೇ ತಾರೀಕಿನಂದು ಸಾಗುವಳಿದಾರರಾಗಿರದವರಿಗೂ ಶಾಸನದ ಲಾಭ ಸಿಗುವುದಿಲ್ಲ.

ಶಾಸನವು ಜ್ಯಾರಿಗೆ ಬಂದ (ಅಂದರೆ ೧-೩-೧೯೫೫ ನೇ ತಾರೀಕಿನಿಂದ) ನಾಲ್ಕು ತಿಂಗಳುಗಳೊಳಗಾಗಿ ಸಾಲಗಾರ ಸಾಗುವಳಿದಾರರ ಮೇಲೆ ದಾವೆಯನ್ನು ಮಾಡಲಾಗದು. ಒಂದು ಸಾಲವನ್ನು ಸಂದಾಯಿಸ ತಕ್ಕವರು ಒಬ್ಬರಿಗಿಂತ ಹೆಚ್ಚು ಮಂದಿ ಇದ್ದು, ಅವರಲ್ಲಿ ಒಬ್ಬ ಅಥವಾ ಕೆಲವರು ಸಾಗುವಳಿದಾರರಾದರೆ, ಉಳಿದವರು ಸಾಗುವಳಿದಾರರಲ್ಲದಿದ್ದರೂ ಸಹ ಮೇಲಿನ ಅವಧಿಯ ಲಾಭ ಅವರೆಲ್ಲರಿಗೆ ಸಿಗುತ್ತದೆ. ಡಿಕ್ರಿಗಾಗಿ ಮಾಡಿಕೊಂಡ ಅರ್ಜಿಯನ್ನು ಸಹ ವ್ಯಾಜ್ಯ ದಾಖಲು ಮಾಡಿಕೊಳ್ಳುವುದೆಂದೇ ಪರಿಗಣಿಸಲಾಗುತ್ತದೆ. ಆದರೆ ಆಸ್ತಿ ಸ್ವಾಧೀನತೆಗಾಗಿ ಮಾಡಿದ ದಾವೆಯು ಮಾತ್ರ, ಶಾಸನದ ಕಕ್ಷೆಗೊಳಪಡುವುದಿಲ್ಲ; ಹಾಗೆಯೇ "ಸಾಲ"ದ ಅಂಶವನ್ನು ಬಿಟ್ಟು, ಉಳಿದ ಡಿಕ್ರಿಯ ಅಂಶಕ್ಕೆ ಶಾಸನ ಅನ್ವಯಿಸುವುದಿಲ್ಲ. ಸಾಲಗಾರರಾದ ಸಾಗುವಳಿದಾರರು ೧-೩-೧೯೫೫ ನೇ ತಾರೀಕಿನೊಳಗಾಗಿ, ಅಂದರೆ ಶಾಸನವು ಜ್ಯಾರಿಗೆ ಬಂದ ನಾಲ್ಕು ತಿಂಗಳುಗಳಲ್ಲಿ, ಯಾವಾಗ ಅನುಕೂಲವಾಯಿತೊ ಆಗ ತಾವು ಸಂದಾಯಮಾಡಲಿಕ್ಕಿರುವ ಸಾಲದ ಮೇಲೆ ೧-೩-೧೯೫೫ ನೇ ತಾರೀಕಿನ ವರೆಗಾಗುವ ಬಡ್ಡಿ ಮತ್ತು ಅಸಲಿನ ಎಂಟರಲ್ಲಿ ಒಂದಂಶ ಅಥವಾ ಅಸಲು ಮತ್ತು ಬಡ್ಡಿಯ ಒಟ್ಟು ಮೊತ್ತದ ಕಾಲಂಶ— ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಪಾವತಿಮಾಡಬಹುದು; ಉಳಿದುದನ್ನು ಮುಂದಿನ ಮೂರು ವರ್ಷಗಳ ಪ್ರತಿ ಜುಲಾಯಿ ೧ನೇ ತಾರೀಕಿನೊಳಗೆ ಸಮಾನವಾದ ಮೂರು ಕಂತುಗಳಲ್ಲಿ ಆಯಾ ತಾರೀಕಿನವರೆಗಾಗುವ ಬಡ್ಡಿಸಮೇತ ಸಂದಾಯಮಾಡಬಹುದು.

ಸಾಲಗಾರ ಸಾಗುವಳಿದಾರರು ಮೇಲಿನ ರೀತಿಯಲ್ಲಿ ಯಾವುದೇ ಕಂತನ್ನು ಕ್ಲುಪ್ತಸಮಯದಲ್ಲಿ ಸಲ್ಲಿಸುವುದಕ್ಕೆ ತಪ್ಪಿ, ವ್ಯಾಜ್ಯ ದಾಖಲ್ಮಾಡಲ್ಪಟ್ಟಾಗ, ಕೋರ್ಟಿನವರು ಬಾಕಿ ಬಿದ್ದ ಕಂತನ್ನು ಕೂಡಲೇ ಪಾವತಿಮಾಡಲು ಡಿಕ್ರಿ ಕೊಡುವರು. ಆದರೆ, ಪರಿಸ್ಥಿತಿಯ ಪೂರ್ವಾಪರ ವಿವೇಚನೆಯ ಮೇಲಿಂದ ಕೋರ್ಟಿನವರು ಈ ಶಾಸನದಲ್ಲಿ ಹೇಳಿದುದಕ್ಕಿಂತಲೂ ಉದಾರವಾದ, ಅಂದರೆ, ಹೆಚ್ಚಿನ ಕಂತುಗಳಲ್ಲಿ ಸಾಲಸಂದಾಯ ಮಾಡುವಂತೆ ಸಾಗುವಳಿದಾರರಿಗೆ ರಿಯಾಯಿತಿ ತೋರಿಸಬಹುದು. ಇಂಥ ವ್ಯಾಜ್ಯಗಳಲ್ಲಿ ಒಂದು ಸಾಲವನ್ನು ಸಂದಾಯಿಸಲಿಕ್ಕಿರುವವರು ಒಂದಕ್ಕಿಂತ ಹೆಚ್ಚು ಮಂದಿ ಇದ್ದು, ಅವರಲ್ಲಿ ಒಬ್ಬ ಅಥವಾ ಕೆಲವರು ಸಾಗುವಳಿದಾರರಾಗಿದ್ದರೆ ಸಾಗುವಳಿದಾರರ ಮಟ್ಟಿಗೆ ಮಾತ್ರ ಈ ಶಾಸನ ಅನ್ವಯಿಸುತ್ತದೆ. ಉಳಿದವರ ವಿಷಯದಲ್ಲಿ ಕೋರ್ಟು ತನಗೆ ಸರಿಕಂಡಂತೆ ತೀರ್ಮಾನವನ್ನು ಹೇಳಬಹುದು. ಸಾಲ ಪಾವತಿ ಮಾಡಲು ಹಿಂದೆ ಸೂಚಿಸಲಾದ ಅವಧಿ ಮುಗಿಯುವುದರೊಳಗೆಯೇ ಅಥವಾ ಕೊಡಬೇಕಾದ ಹಣವನ್ನು ಕೋರ್ಟಿನಲ್ಲಿ ಕಟ್ಟಿದ ಬಳಿಕ ಯಾರಾದರೂ ಸಾಗುವಳಿದಾರರ ಮೇಲೆ ಸಾಲದ ಮರುಪಾವತಿಗಾಗಿ ದಾವೆ ಮಾಡಿದರೆ, ವಾದಿಗೆ ಆದರ ಖರ್ಚನ್ನು ಪ್ರತಿವಾದಿಯಾದ ಸಾಗುವಳಿದಾರರ ಖರ್ಚನ್ನೂ ವಹಿಸಿಕೊಳ್ಳಲು ಕೋರ್ಟು ವಿಧಿಸುತ್ತದೆ. ಆದರೆ ಪ್ರತಿವಾದಿಗಳಲ್ಲಿ ಸಾಗುವಳಿದಾರರಲ್ಲದವರು ಸೇರಿದ್ದರೆ ಅವರ ವಿಷಯದಲ್ಲಿ ಕೋರ್ಟು ತನಗೆ ಸರಿತೋರಿದ ಕ್ರಮ ತೆಗೆದುಕೊಳ್ಳಲಡ್ಡಿಯಿಲ್ಲ.

ಕೋರ್ಟಿಗೆ ಸಾಲಗಾರ ಸಾಗುವಳಿದಾರರು ಕಂತಿನ ಹಣವನ್ನು ಪಾವತಿ ಮಾಡಿ ಅದನ್ನು ಬರೆದಿಟ್ಟುಕೊಳ್ಳುವಂತೆ ಅರ್ಜಿಮಾಡಬಹುದು. ಕೋರ್ಟು ಅರ್ಜಿಯನ್ನು ಪರಿಶೀಲಿಸಿ ನ್ಯೂನತೆಗಳಿಲ್ಲದಿದ್ದರೆ ಅದನ್ನು ಸ್ವೀಕರಿಸುತ್ತದೆ. ಈಗಿನ ಶಾಸನಕ್ಕೆ ಅರ್ಹರಾದ ಸಾಲಗಾರ ಸಾಗುವಳಿದಾರರು ೧—೧೦—೧೯೫೩ ನೇ ತಾರೀಕಿನಲ್ಲಿ ತನ್ನ ಹಕ್ಕಿನಲ್ಲಿದ್ದ ಮತ್ತು ಪ್ರಯೋಜನಕ್ಕೆ ಬಾಧ್ಯರಾಗಿದ್ದ ಯಾವುದೇ ಆಸ್ತಿಯನ್ನು ತನ್ನ ಸಾಲವನ್ನು ಸಂಪೂರ್ಣವಾಗಿ ಪಾವತಿಮಾಡದೆಯೇ ಬೇರೆ ಯಾರಿಗಾದರೂ ಹರಾಧಾರೆಮಾಡಿದಲ್ಲಿ ಅದು ಸಾಲಕೊಟ್ಟವರನ್ನು ಸೋಲಿಸುವ ಅಥವಾ ಬೇಕೆಂದೇ ತಡಮಾಡುವ ಉದ್ದೇಶದಿಂದ ಮಾಡಲಾದುದೆಂದು ಭಾವಿಸಲ್ಪಡುತ್ತದೆ; ಮತ್ತು ಸಾಲಕೊಟ್ಟವರನ್ನು ಸೋಲಿಸುವ ಅಥವಾ ಬೇಕೆಂದೇ ತಡಮಾಡುವ ಉದ್ದೇಶದಿಂದ ಕೋರ್ಟಿನ ಮುಖಾಂತರ ೧—೧೦—೧೯೫೩ನೇ ತಾರೀಕಿನಬಳಿಕ ತಮ್ಮ ಸ್ಥಿರಾಸ್ತಿಯನ್ನು ಯಾರಿಗಾದರೂ ಮಾರಿದ್ದರೆ ಆ ಮಾರಾಟವು, ಸಾಲಕೊಟ್ಟವರು ಇಚ್ಛಿಸಿದರೆ, ರದ್ದಾಗುತ್ತದೆ. ಶಾಸನದ ಮೇಲಿನೆಲ್ಲ ವಿಭಾಗಗಳನ್ನೂ ಚೆನ್ನಾಗಿ ತಿಳಿದುಕೊಂಡು ಅರ್ಹತೆಹೊಂದಿದ ಬೇಸಾಯಗಾರ ಬಂಧುಗಳು, ತಮಗಿರಬಹುದಾದ ಸಾಲದ ಮರುಪಾವತಿಯ ಉಚಿತ ವ್ಯವಸ್ಥೆಯನ್ನು ಕ್ಲುಪ್ತಸಮಯದಲ್ಲಿ ಮಾಡಿ, ಸರಕಾರದವರಿಂದ ದೊರೆತ ರಿಯಾಯಿತಿಯ ಪ್ರಯೋಜನ ಪಡೆಯಬೇಕೆಂದೂ ಹಣಕಾಸಿನ ವಿಷಯದಲ್ಲಿ ಪ್ರಾಮಾಣಿಕ ಭಾವನೆ ನೆಲೆಯೂರುವಂತೆ ಸಹಕರಿಸ ಬೇಕೆಂದೂ ವಿನಂತಿಸುತ್ತೇವೆ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಐದು ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬ್ಯಾಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೊ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಸಾಗರದಲ್ಲಿ ದೀಪಸ್ತಂಭ

ನಮಗೆ ಸಮೀಪದ ಕಾಸು ಎಂಬ ಹಳ್ಳಿಯಲ್ಲಿ ಬಂಡೆಗಳ ಮೇಲೆ ಸಮುದ್ರಕ್ಕೆದುರಾಗಿ ತಲೆ ಎತ್ತಿ ನಿಂತಿರುವ ದೀಪಸ್ತಂಭವನ್ನು ಮಾಬಲಿ ಪುರದಲ್ಲಿ ಎಂಟನೆಯ ಶತಮಾನದ ಸುಮಾರಿಗೆ ಕಟ್ಟಲಾಗಿರುವ ಬೆಳಕು ಮನೆಯೊಡನೆ ಹೋಲಿಸಿದರೆ ಹೇಗಾದೀತು? ವೈಜ್ಞಾನಿಕ ಯುಗವು ಎಷ್ಟು ಮಹತ್ವದ ಸ್ಥಿತ್ಯಂತರಗಳನ್ನು ಮಾಡಿದೆ ಎಂಬ ಆಶ್ಚರ್ಯವೇ ನಮ್ಮ ಪ್ರಥಮ ಪ್ರತಿಕ್ರಿಯೆಯಾಗುತ್ತದೆ ಕಾಪುವಿನ ಬೆಳಕು ಮನೆಯು ಅತ್ಯಾಧುನಿಕ ಮಾದರಿಯದು—ಅದರ ಕಟ್ಟಡದ ಭವ್ಯತೆಯಾಗಲೀ ಪ್ರಕಾಶದ ವೈಖರಿಯಾಗಲೀ ಚೋಳರಾಜರು ಕಟ್ಟಿಸಿದ್ದ ಮಾಬಲಿಪುರದ ದೀಪಸ್ತಂಭದ ರಚಕರು ಕನಸಿನಲ್ಲೂ ನೆನಸಿರದ ವಿಷಯ ಆದರೂ ನಾಲ್ಕು ಸಾವಿರ ಮೈಲು ಗಳಷ್ಟು ಉದ್ದವಾದ ಕರಾವಳಿ ಪ್ರದೇಶವನ್ನು ಪಡೆದಿರುವ ಭಾರತದ ಪರ್ಯಾಯದ್ವೀಪದಲ್ಲಿ ಬೆಳಕು ಮನೆಗಳ ಆವಶ್ಯಕತೆಯನ್ನು ಹಿಂದಿನವರು ಕಂಡುಕೊಂಡು ತಮ್ಮದೇ ರೀತಿಯಲ್ಲಿ ಅದಷ್ಟು ಚೊಕ್ಕ ರೀತಿಯಲ್ಲಿ ಅವುಗಳನ್ನು ಕಟ್ಟಿಸಿದ್ದರು. ಇಟ್ಟಿಗೆ ಮತ್ತು ಗಾರೆಗಳನ್ನು ಅಂದು ಉಪಯೋಗಿಸಲಾಗುತ್ತಿತ್ತೆಂದು ಐತಿಹಾಸಿಕ ಸಂಶೋಧನೆಗಳಿಂದ ತಿಳಿದು ಬರುತ್ತದೆ.

ದೇಶದ ವಿಭಜನೆಗೆ ಮುಂಚೆ ಕೇಂದ್ರಸರಕಾರದ ಅಧಿಕಾರಕ್ಕೊಳಪಟ್ಟ ಕರಾವಳಿಯ ಉದ್ದ ೪೯೪೦ ಮೈಲುಗಳಾಗಿದ್ದವು— ಅದರಲ್ಲಿ ೫೭೦ ಮೈಲುಗಳಷ್ಟು ತೀರವು ಪಾಕಿಸ್ತಾನದ ಅಸ್ತಿತ್ವದೊಡನೆ ಆ ಸರಕಾರಕ್ಕೆ ಸೇರಿ ಹೋಯಿತು ಆದರೆ ಹಿಂದಿನಿಂದ ರಾಜ್ಯಗಳ ಆರ್ಥಿಕ ಸಂಘಟನೆಯು ನಡೆದ ಪರಿಣಾಮವಾಗಿ ೪೪೪೦ ಮೈಲುಗಳಷ್ಟು ಉದ್ದವಾದ ಕರಾವಳಿ ತೀರದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಹೊಣೆ ಕೇಂದ್ರ ಸರಕಾರದ ಪಾಲಿಗೆ ಬಂತು. ಕರಾವಳಿಯಲ್ಲಿ ನಿರ್ವಹಿಸಬೇಕಾದ ಅನೇಕ ಕರ್ತವ್ಯಗಳಲ್ಲಿ ಬೆಳಕು ಮನೆಗಳ ಏರ್ಪಾಡು ಸೇರುತ್ತದೆ ನಾವಿಕರನ್ನು ಸಮುದ್ರ ಮಧ್ಯದಲ್ಲಿರುವ ದೊಡ್ಡ ಬಂಡೆಗಳು—ಮತ್ತು ಬೇರೆ ಅಪಾಯಕರವಾದ ಸ್ಥಳಗಳಿಂದ ರಕ್ಷಿಸಿ ಸುರಕ್ಷಿತವಾಗಿಯೂ ಹಡಗುಗಳು ಬಂದರದೊಳಕ್ಕೆ ಬರುವಂತೆಯೂ ಮುಂದಿನಸಂಚಾರ ಕೈಗೊಳ್ಳುವಂತೆಯೂ ಬೆಳಕು ಮನೆಗಳು ನೆರವಾಗುತ್ತವೆ. ನಮ್ಮ ದೇಶದಲ್ಲಿ ೧೬೫ ಬೆಳಕಿನ ಮನೆಗಳಲ್ಲದೆ ೯ ಸಂಜ್ಞಾ ದೀಪದ ಹಡಗುಗಳು, ೪೫ ದೀಪದ ತೇಲುದೋಣಿಗಳು, ೩೮ ಮಾರ್ಗದರ್ಶಕ ತೇಲು ದೋಣಿಗಳು, ೧೯೦ ಸಂಜ್ಞಾಜ್ಯೋತಿಗಳು ಮತ್ತು ಬೇರೆ ಅನೇಕ ಗುರುತುಗಳು ನೌಕಾ ಪ್ರಯಾಣವನ್ನು ಸುಗಮಗೊಳಿಸುವ ಸಲುವಾಗಿ ಸ್ಥಾಪಿಸಲ್ಪಟ್ಟಿರುತ್ತವೆ. ಇದರಲ್ಲಿ ೧೦೦೦ ಮಂದಿ ಇಂಜಿನಿಯರುಗಳೂ ತಾಂತ್ರಿಕರೂ ಮೇಲ್ವಿಚಾರಕರೂ ಅಹೋರಾತ್ರಿ ಕೆಲಸಮಾಡುತ್ತಿದ್ದಾರೆ

ಆಧುನಿಕ ರೀತಿಯ ಬೆಳಕು ಮನೆಗಳ ಯೋಜನೆಯ ಪ್ರಾರಂಭಿಕ ಹೆಜ್ಜೆಯಾಗಿ ಭಾರತದಲ್ಲಿ ೧೯೨೭ ರಲ್ಲಿ ಬೆಳಕು ಮನೆಗಳ ಶಾಸನವನ್ನು ಮಾಡಲಾಯಿತು ಎರಡು ವರ್ಷಗಳ ತರುವಾಯ ಬೆಳಕು ಮನೆಗಳ ವ್ಯವಸ್ಥೆ ಕೈಗೊಳ್ಳಲ್ಪಟ್ಟಿತು. ಸಾಮಾನ್ಯವಾಗಿ ಬೆಳಕು ಮನೆಗಳಲ್ಲಿ ಕೇಂದ್ರ ಸರಕಾರದ ನೇರವಾದ ಆಳಿಕೆಗೊಳಪಟ್ಟು ಸಾರ್ವತ್ರಿಕ ಸ್ವರೂಪದ ವ್ಯವಸ್ಥೆ ಮತ್ತು ರಾಜ್ಯ ಸರಕಾರಗಳು, ಬಂದರು ಮಂಡಳಿಗಳು ಮತ್ತಿತರ ಸಂಸ್ಥೆಗಳ ವಶಕ್ಕೆ ಕೊಡಲಾಗಿರುವ ಸ್ಥಾನಿಕ ಸ್ವರೂಪದ ವ್ಯವಸ್ಥೆ ಎಂಬೆರಡು ವರ್ಗಗಳಿವೆ ಆದರೆ ಎಲ್ಲ ಬೆಳಕು ಮನೆಗಳ ಮೇಲೆ ನಡೆ ಕೇಂದ್ರಸರಕಾರಕ್ಕೆ ಅಂತಿಮ ಅಧಿಕಾರ ಕೊಡಲಾಗಿರುತ್ತದೆ ಬೆಳಕು ಮನೆಗಳು ಯೋಗ್ಯ ರೀತಿಯಲ್ಲಿ ಕೆಲಸ ನಿರ್ವಹಿಸುವ ಹೊಣೆ ಆಡಳಿತಕ್ಕೆಯೇ ಸೇರಿದೆ. ಕೇಂದ್ರದಲ್ಲಿ ಈ ವಿಚಾರವನ್ನು ಗಮನಿಸಲು ಪ್ರತ್ಯೇಕ ಇಲಾಖೆಯೊಂದಿದ್ದು ಅದು ಸ್ವಯಂಪರಿಣಾಮದ ತಳಹದಿಯ ಮೇಲೆ ಕೆಲಸ ಮಾಡುತ್ತದೆ ಪ್ರಗತಿ ಯೋಜನೆಗಳನ್ನು ಕೈಗೊಳ್ಳುವುದಕ್ಕೂ ಅಭಿವೃದ್ಧಿ ಪ್ರಯತ್ನಗಳನ್ನು ನಡೆಸುವುದಕ್ಕೂ ಅದು ಒಂದು ನಿಧಿಯನ್ನು ಏರ್ಪಡಿಸಿದ್ದು, ಬಂದರುಗಳಿಗೆ ಬರುವ ಹಡಗುಗಳಿಂದ ಪ್ರತಿ ಟನ್ನಿಗೆ ಮೂರಾಣೆಯಂತೆ ವಸೂಲು ಮಾಡಿದ ಹಣ ಶುಲ್ಕವೇ ನಿಧಿ ತುಂಬುವ ಮಾರ್ಗ

ಏಕಾಂತತೆ ಹಾಗು ಕಷ್ಟಗಳನ್ನು ಅನುಭವಿಸುತ್ತಾ ಬೆಳಕು ಮನೆಯಲ್ಲಿ ಜೀವನ ನಡೆಸುವವರ ಕುರಿತು ಸಹಾನುಭೂತಿ ತೋರಿಸ ಬೇಕು ಜನರು ವಿರಳ ಹೊರಗಿನ ಪ್ರಪಂಚಕ್ಕೂ ಬೆಳಕು ಮನೆಯೊಳಗಿನ ಜೀವನಕ್ಕೂ ಸಂಪರ್ಕವೇ ಇರುವುದಿಲ್ಲವೆಂದರೆ ತಪ್ಪಲ್ಲ ಬಿರುಗಾಳಿ ಮತ್ತು ಸಮುದ್ರದ ಆಲ್ಲೋಲ ಕಲ್ಲೋಲಗಳಿಂದ ಬೆಳಕು ಮನೆಯೊಳಗಿನವರು ಉಪವಾಸ ಬಿದ್ದು ದಿನಗಳೆಯ ಬೇಕಾದ ಪರಿಸ್ಥಿತಿ ಬರುವುದುಂಟು — ಮುಖ್ಯವು ಸಮೀಪದ ಸೈಂಟ್ ಮೇರಿ ದ್ವೀಪದಲ್ಲಿರುವ ಬೆಳಕು ಮನೆಯವರಿಗೆ ಮಳೆಗಾಲದ ನಾಲ್ಕು ತಿಂಗಳು ಹೊರ ಜಗತ್ತಿನ ವ್ಯಾಪಾರವೇ ಗೊತ್ತಾಗುವುದಿಲ್ಲ— ಊಟಕ್ಕೆ ಬೇಕಾದ ಸಾಮಾನುಗಳ ವಿಷಯದಲ್ಲಿ ಸಹ ಅವರು ತಮ್ಮ ಹಳೆಯ ಸಂಗ್ರಹವನ್ನೇ ನಂಬಿರಬೇಕಾಗುತ್ತದೆ ಇಂಥ ಕಷ್ಟಗಳನ್ನು ಆದಷ್ಟು ಮಟ್ಟಿಗೆ ಪರಿಹರಿಸಲು ಕೇಂದ್ರ ಸರಕಾರದವರು ಆಲೋಚಿಸುತ್ತಿದ್ದು ಪರಿಹಾರ ರೂಪದ ಕೆಲವು ವ್ಯವಸ್ಥೆಗಳು ಈಗಾಗಲೇ ಜಾರಿಗೆ ತರಲ್ಪಟ್ಟಿರುತ್ತವೆ. ಬೆಳಕು ಮನೆಯಲ್ಲಿ ಕೆಲಸ ಮಾಡುವವರಿಗೆ ವಿಶೇಷ ಭತ್ತೆಯನ್ನು ಕೊಡುವ, ಅವರ ಮಕ್ಕಳಿಗೆ ವಿದ್ಯಾಭ್ಯಾಸದ ಸೌಕರ್ಯವನ್ನೂ ಮನೋರಂಜನೆಯ ವ್ಯವಸ್ಥೆಯನ್ನೂ ಒದಗಿಸುವ ಕುರಿತು ಸರಕಾರ ಅವಶ್ಯಕ ಕ್ರಮಗಳನ್ನು ತೆಗೆದುಕೊಂಡಿರುತ್ತದೆ ಇದಲ್ಲದೆ ಹೊಸ ದೀಪ ಸ್ತಂಭಗಳನ್ನು ಸ್ಥಾಪಿಸುವುದು, ವೈಜ್ಞಾನಿಕ ಅನುಕೂಲತೆಗಳಿಂದ ದೀಪ ಸ್ತಂಭಗಳ ಪುನರುಜ್ಜೀವನ ಮಾಡುವುದು ಇತ್ಯಾದಿ ಕೆಲಸಗಳೂ ನಡೆಯುತ್ತಿವೆ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಬೆಳಕು ಮನೆಗಳಿಗೆ ೧೩೦ ಲಕ್ಷ ರೂಪಾಯಿಗಳನ್ನು ಮೀಸಲಿರಿಸಿದ್ದು, ಮುಂದಿನ ಯೋಜನೆಯಲ್ಲಿ ಇದನ್ನು ಐದು ಕೋಟಿ ರೂಪಾಯಿಗಳಿಗೇರಿಸಲಾಗುವುದು.

ಕೇಬಲು ತಯಾರಿಕೆಯ ಕಾರ್ಖಾನೆ

ನಮ್ಮ ದೇಶದಲ್ಲಿ ಸಾರಿಗೆ ವ್ಯವಸ್ಥೆಯನ್ನು ವಿಸ್ತರಿಸಿದಂತೆಲ್ಲ ಕೇಬಲ್ಲುಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಹೊಂದುವುದು ಅಗತ್ಯವಾಯಿತು ಟೆಲಿಫೋನುಗಳ ಸೌಕರ್ಯವನ್ನೊದಗಿಸುವುದಕ್ಕೆ ಕೇಬಲುಗಳು ಅಗತ್ಯವಾಗಿವೆ ಮೊನ್ನೆ ಸಪ್ಟಂಬರ ತಿಂಗಳಲ್ಲಿ ಭಾರತದ ಮೊದಲನೇ ಕೇಬಲು ತಯಾರಿಕೆಯ ಕಾರ್ಖಾನೆಯು ಕಲ್ಕತ್ತೆಯ ವಾಯುವ್ಯಕ್ಕೆ ೧೪೦ ಮೈಲು ದೂರದಲ್ಲಿರುವ ರೂಪನಾರಾಯಣ ಪುರದಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಿತು. ಈ ಕಾರ್ಖಾನೆಯನ್ನು ೧೩೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿಸಿದ್ದು ವರ್ಷಕ್ಕೆ ಒಂದು ಕೋಟಿ ರೂಪಾಯಿ ಬೆಲೆಯ ಕೇಬಲುಗಳನ್ನು ಇದು ಉತ್ಪಾದಿಸುತ್ತದೆ ಈಗ ಆಯಾತ ಮಾಡಿಕೊಳ್ಳಬೇಕಾದ ಕೇಬಲುಗಳ ಬೇಡಿಕೆಯನ್ನು ಈ ಕಾರ್ಖಾನೆ ಸಂಪೂರ್ಣ ಪೂರೈಸುತ್ತದೆ.

ಕಾರ್ಖಾನೆಯು ಅತ್ಯಾಧುನಿಕ ಯಂತ್ರಗಳಿಂದ ಕೂಡಿದ್ದು ಶ್ರೇಷ್ಠ ತಂತ್ರಗಳನ್ನು ಇಲ್ಲಿ ಅನುಸರಿಸಲಾಗುತ್ತದೆ. ಕೇಬಲುತಯಾರಿಕೆಗೆ ಅಗತ್ಯವೆನಿಸಿದ ಏಳು ಕಚ್ಚಾ ಪದಾರ್ಥಗಳಲ್ಲಿ ಸೀಸ, ಕಾಗದದ ಸೆಲ್ಯುಲೋಸು ಮತ್ತು ಉಕ್ಕಿನ ತಂತುಗಳ ಹೊರತು ಉಳಿದುವನ್ನು ದೇಶದೊಳಗಿಂದಲೇ ಒದಗಿಸಿಕೊಳ್ಳಲಾಗುತ್ತದೆ ಉತ್ಪಾದನೆಯ ಮೊದಲನೇ ವರ್ಷದಲ್ಲಿ ಗುರಿಯ ಮುಕ್ಕಾಲಂಶವನ್ನೂ ಎರಡನೇ ವರ್ಷದಿಂದ ಪೂರ್ಣ ಪ್ರಮಾಣವನ್ನೂ ಮುಟ್ಟಲಾಗುವುದೆಂದು ಭಾವಿಸಲಾಗಿದೆ ಈ ಕಾರ್ಖಾನೆಯ ಯೋಗ ಕ್ಷೇಮದ ಹೊಣೆಯನ್ನು ಭಾರತೀಯ ತಾಂತ್ರಿಕರೇ ಹೊತ್ತಿದ್ದಾರೆ ಅವರು ೧೯೫೨ ನೇ ಇಸವಿಯಲ್ಲಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಅನುಭವ ಗಳಿಸಿ ಬಂದರು

ಸಾಲ

ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ ಸುಲಭ ಕಂತಿನ ಮರುಪಾವತಿ ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು

P o Box No 3219, BOMBAY 3-

(೨ನೇ ಪುಟದಿಂದ)

ರಾಜ್ಯದಲ್ಲಿ ಅಶಾಂತಿ ಹೆಚ್ಚಿಸುವುದಕ್ಕೂ ಕಮ್ಯುನಿಸ್ಟರು ಮೆಲ್ಲನೆ ಪ್ರವೇಶಿಸಿ ಪರಿಸ್ಥಿತಿಯನ್ನು ಸ್ವಪ್ರಯೋಜನಾರ್ಥವಾಗಿ ಬಳಸಿಕೊಳ್ಳುವುದಕ್ಕೂ ಗೊಂದಲದ ಈ ವಾತಾವರಣ ನೆರವಾಯಿತು. ಈ ಗಲಭೆ ಎಲ್ಲಿಯ ವರೆಗ ಮುಂದರಿಯಿತೆಂದರೆ ಅರಸು ತ್ರಿಭುವನರು ೧೯೫೦ನೇ ನವಂಬರದಲ್ಲಿ ಭಾರತೀಯ ರಾಯಭಾರಿ ವರ್ಗದಲ್ಲಿ ಆಶ್ರಯವನ್ನು ಪಡೆಯಬೇಕಾಯಿತು. ರಾಣಾ ಒಂದ ತ್ರಿಭುವನ ಅರಸರನ್ನು ರಾಜಧಾನಿಯಾದ ಕಾಠಮಂಡುವಿಗೆ ಮರಳಿಸುವುದಕ್ಕೆ ಮುಂಚೆ, ಅಲ್ಲಿ ಪ್ರಜಾಸತ್ತಾತ್ಮಕ ರಾಜ್ಯಭಾರದ ಅಸ್ತಿವಾರವನ್ನು ಹಾಕಲು ವ್ಯವಸ್ಥೆ ನಡೆಯಿತು

ಇದರ ಪ್ರಾರಂಭಿಕ ಹೆಜ್ಜೆಯಾಗಿ ರಾಣಾ ಮನೆತನದವರ ಪ್ರತಿನಿಧಿಗಳೂ ಪ್ರಜಾಪ್ರತಿನಿಧಿಗಳೂ ಒಟ್ಟು ಸೇರಿದ ಹತ್ತು ಸದಸ್ಯರ ಸಂಯುಕ್ತ ಮಂತ್ರಿಮಂಡಲವನ್ನು ರಚಿಸಲಾಯಿತು ಇದರಲ್ಲಿ ಶ್ರೀ. ಬಿ. ಪಿ ಕೊಯಿರಾಲರು ಗೃಹಮಂತ್ರಿಯಾಗಿದ್ದರು. ಇವರ ಸಹೋದರರಾದ ಶ್ರೀ ಎಂ. ಪಿ. ಕೊಯಿರಾಲರು ನೇಪಾಳದ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರಾಗಿದ್ದರು ಆದರೆ ಈ ಮಂತ್ರಿಮಂಡಲವು ಜನಹಿತ ಸಾಧನೆಯ ತನ್ನ ಉದ್ದೇಶದಲ್ಲಿ ಸಾಕಷ್ಟು ಯಶಸ್ವಿಯಾಗಲಿಲ್ಲ ಜನತಾ ಧುರೀಣರೊಡನೆ ರಾಣಾ ಮನೆತನದವರು ಸಹಕರಿಸುವ ಉತ್ಸಾಹವನ್ನು ತೋರಿಸಲಿಲ್ಲ— ಗೂರ್ಖಾ ರ ಬೆಂಬಲವನ್ನು ಪಡೆದಿದ್ದ ರಾಣರು ಬಲಿಷ್ಠರಾಗಿಯೇ ಉಳಿದಿರುವಂತೆ ತೋರಿತು. ಕಾರಣ ಪ್ರಜೆಗಳ ಚಳವಳವು ಮತ್ತಷ್ಟು ಜೋರಾಗಿ ೧೯೫೧ನೇ ನವಂಬರದಲ್ಲಿ ಕಾಂಗ್ರೆಸಿನ ಸದಸ್ಯರಿಂದಲೇ ಕೂಡಿದ ಹೊಸ ಮಂತ್ರಿಮಂಡಲ ರಚಿಸಲ್ಪಟ್ಟಿತು. ಶ್ರೀ ಎಂ. ಪಿ. ಕೊಯಿರಾಲರು ಪ್ರಧಾನ ಮಂತ್ರಿಯಾದರು ಅವರು ನೇಪಾಳದ ಹಿತಕ್ಕೋಸ್ಕರ ತತ್ಪರತೆಯಿಂದ ದುಡಿಯುತ್ತ ಬಂದರೇನೋ ನಿಜ—ಆದರೆ ಅವರ ಸಹೋದರ ಶ್ರೀ ಬಿ. ಪಿ ಕೊಯಿರಾಲರೊಡನೆ ಮತಭೇದವುಂಟಾಗಿ ಸರಕಾರದ ಚಟುವಟಿಕೆಗಳು ಆತಂಕವನ್ನೆದುರಿಸಬೇಕಾಯಿತು. ಈಗ ಒಂದೆರಡು ವರ್ಷಗಳಿಂದ ನೇಪಾಳದ ಇವರಿಬ್ಬರು ಜನತಾ ಮುಖಂಡರಲ್ಲಿ ತೀವ್ರ ಸ್ಪರ್ಧೆಯ ಮನೋಭಾವ ಉಂಟಾಗಿದ್ದು ರಾಜ್ಯದ ಹಿತವನ್ನು ದುರ್ಲಕ್ಷಿಸಿ ವ್ಯಕ್ತಿಗಳ, ಅವರನ್ನು ಹೊಂದಿಕೊಂಡ ಪಂಗಡಗಳ ಹೋರಾಟ ನಡೆಯುತ್ತಿದೆ. ಪ್ರಜಾಪರಿಷತ್ತು, ಗೂರ್ಖಾ ಪರಿಷತ್ತು ಮುಂತಾದ ಪ್ರತಿ ಪಕ್ಷಗಳ ಧುರೀಣರೊಡನೆ ಪ್ರಧಾನ ಮಂತ್ರಿ ಶ್ರೀ ಎಂ. ಪಿ ಕೊಯಿರಾಲರಿಗೆ ಭಿನ್ನಾಭಿಪ್ರಾಯ ಬಂದುದಲ್ಲದೆ ವಿಕನೆಯ ಸಲ ಅವರ ಚುನಾಯಿತ ಶಾಸನ ಮಂಡಳದ ವಿಶ್ವಾಸ ಕಳೆದುಕೊಂಡು ಸೋತರು ಪರಿಸ್ಥಿತಿ ಹೀಗಿರುವಾಗ ಯುವರಾಜರೇ ಸರ್ವಾಧಿಕಾರಗಳನ್ನೂ ತಮ್ಮ ಕೈಗೆ ತೆಗೆದುಕೊಳ್ಳಬೇಕಾದ ಪ್ರಸಂಗ ಒದಗಿತು. ಅವರು ರಾಜ್ಯದ ವಾತಾವರಣವನ್ನು ಹೇಗೆ ಸ್ಥಿಮಿತಕ್ಕೆ ತರುವರೋ – ಕಾದು ನೋಡಬೇಕಾದ ವಿಷಯ.



ರೂಪ ನಾರಾಯಣಪುರದ ಕೇಬಲು ಕಾರ್ಖಾನೆಯ ಒಂದು ನೋಟ

ಎಡಗೈ ಪ್ರಧಾನತ್ವದ ಕಾರಣ

ಹೆತ್ತವರು ವಹಿಸಬೇಕಾದ ಮುಂಜಾಗ್ರತೆ

. ಕೆಲಸಮಯದ ಹಿಂದೊಮ್ಮೆ ಅಮೇರಿಕದ ೪೦೦ ವಿದ್ಯಾರ್ಥಿಗಳಿಗೆ ವಿಚಿತ್ರವಾದ ಪರೀಕ್ಷೆಯೊಂದನ್ನು ಏರ್ಪಡಿಸಿದರು. ಸೂಜಿಗೆ ನೂಲು ಹಾಕುವುದು, ಪುಸ್ತಕವೊಂದನ್ನು ತೆರೆಯುವುದು, ಕೋಟನ್ನು ತೂಗಿಸುವುದು, ಪೆನ್ನಿಗೆ ಶಾಯಿ ತುಂಬಿಸುವುದು ಇವುಗಳಲ್ಲಿ ಏನಾದರೊಂದನ್ನು ಮಾಡಿರೆಂದು ಹೇಳಿದಾಗ ಎಲ್ಲ ವಿದ್ಯಾರ್ಥಿಗಳೂ ಬೆಕ್ಕಸ ಬೆರಗಾದರು. ಇದೆಂಥ ಪರೀಕ್ಷೆ?— ಎಂದವರು ತಮ್ಮಲ್ಲೆ ಪ್ರಶ್ನಿಸಿಕೊಂಡರು.

ಸ್ವಲ್ಪ ಹೊತ್ತಿನಲ್ಲಿಯೇ ಅವರ ಸಮಸ್ಯೆ ಪರಿಹಾರವಾಯಿತು. ಅವರಲ್ಲಿ ಪ್ರತಿಯೊಬ್ಬನಿಗೂ ತಾನು ನೈಸರ್ಗಿಕವಾಗಿ ಬಲಗೈ ಉಪಯೋಗಿಸುವವನೋ ಅಥವಾ ಎಡಗೈ ಬಳಸುವವನೋ ಎಂಬುದನ್ನು ಬರೆದ ಕಾರ್ಡು ಸಿಕ್ಕಿತು. ತೋರಿಕೆಗೆ ತೀರ ಸಾಮಾನ್ಯವೆನಿಸಬಹುದಾದ ಮೇಲಿನ ಕೆಲಸಗಳನ್ನು ನೈಸರ್ಗಿಕವಾಗಿ ಎಡಗೈ ಬಳಸುವವರು— ಬರೆಯುವುದು, ಕೈ ಕುಲುಕುವುದು ಇತ್ಯಾದಿ ಕೆಲಸಗಳನ್ನು ಎರಡೂ ಕೈಗಳಿಂದ ಮಾಡಲು ತರಬೇತಿ ಹೊಂದಿದ್ದರೂ ಸಹ— ಎಡಗೈಯಿಂದಲೇ ಮಾಡುವರು ಎಂಬುದೇ ಈ ಪರೀಕ್ಷೆಯಲ್ಲಿ ಅಡಕವಾದ ಸಿದ್ಧಾಂತ!

ಸಾಮಾನ್ಯ ಕೆಲಸಗಳನ್ನು ನಮ್ಮಲ್ಲಿ ಹೆಚ್ಚಿನವರು ಬಲಗೈಯಿಂದಲೇ ಮಾಡುತ್ತೇವೆ. ಆದರೆ ಎಡಗೈಯನ್ನೇ ಅವುಗಳಿಗೆ ಉಪಯೋಗಿಸುವ ಕೆಲವು ಜನರೂ ನಮ್ಮ ನಡುವೆ ಕಾಣಸಿಗುತ್ತಾರೆ. ಅವರು ಏಕಾಗಿ ಎಡಗೈಯನ್ನು ಉಪಯೋಗಿಸುವರು ಎಂಬ ವಿಷಯದಲ್ಲಿ ರತಮಾನಗಳಿಂದ ಜಿಜ್ಞಾಸೆ ಯುಂಟಾಗಿದ್ದರೂ ಅದಕ್ಕೆ ಯೋಗ್ಯ ಸಮಾಧಾನ ಇತ್ತೀಚೆಯವರೆಗೆ ಸಿಗಲಿಲ್ಲ. ಮನೋವಿಜ್ಞಾನಿಯೊಬ್ಬರು ಒಂದು ಲಕ್ಷ ನಾಗರಿಕರ ಅಧ್ಯಯನಮಾಡಿದ ಬಳಿಕ ನಮ್ಮಲ್ಲಿ ಪ್ರತಿ ನಾಲ್ಕು ಮಂದಿಗೆ ಒಬ್ಬನಂತೆ ಜೀವನವನ್ನು ಎಡಗೈ ಉಪಯೋಗಿಸುವ ಮೂಲಕ ಪ್ರಾರಂಭಿಸುವನು ಎಂಬ ನಿರ್ಣಯಕ್ಕೆ ಬಂದರು. ಆದರೆ ವ್ಯಕ್ತಿಯು ಪ್ರಾಯಪ್ರಬುದ್ಧಾವಸ್ಥೆಯನ್ನು ಮುಟ್ಟಿದಾಗ ಇಪ್ಪತ್ತಕ್ಕೆ ಒಬ್ಬ "ಎಡಗೈ ಪ್ರಧಾನ ವ್ಯಕ್ತಿ"ಯಲ್ಲಿ ಈ ಸಂಖ್ಯಾಪ್ರಮಾಣ ಪರ್ಯವಸಾನ ಹೊಂದುತ್ತದೆ.

ವೈದ್ಯಕೀಯ ತಜ್ಞರ ಹೇಳಿಕೆಯಂತೆ ಬಲಗೈ ಅಥವಾ ಎಡಗೈ ಪ್ರಧಾನತ್ವ ಕಾಣಿಸಿಕೊಳ್ಳುವುದಕ್ಕೆ ಮಿದುಳೇ ಕಾರಣ—ಮಿದುಳಿನ ಎಡಭಾಗ ಶಕ್ತಿಸಂಪನ್ನವಾಗಿದ್ದರೆ ಬಲಗೈ ಪ್ರಧಾನತ್ವವೂ ತದ್ವಿರುದ್ಧವಾಗಿ ಬಲಭಾಗ ಶಕ್ತಿಸಂಪನ್ನವಾಗಿದ್ದರೆ ಎಡಗೈ ಪ್ರಧಾನತ್ವವೂ ಪ್ರಾಪ್ತವಾಗುತ್ತವೆ. ಎಡ ಅಥವಾ ಬಲ ಕೈಗಳೆಂದಷ್ಟೇ ಅಲ್ಲ, ಕಣ್ಣು, ಕಾಲು, ಪಾದ -ಇವುಗಳಿಗೂ ಈ ಮಾತು ಅನ್ವಯಿಸುತ್ತದೆ. ಫೂಟ್ ಬಾಲ್ ಆಟದಲ್ಲಿ ಎಡಗೈ ಪ್ರಧಾನತ್ವವಿರುವವನು, ಎಡಗಾಲಿನಿಂದಲೇ ಹೆಚ್ಚಾಗಿ ಚೆಂಡನ್ನು ಒದೆಯುತ್ತಾನೆ; ಹಾಗೆಯೇ ಎಡದಿಂದ ಬಲಕ್ಕೆ ಓದುವ ಬದಲು ಬಲದಿಂದ ಎಡಕ್ಕೆ ಓದುವ ಅಭ್ಯಾಸವನ್ನು ಅವನು ಪ್ರಾರಂಭದಲ್ಲಿಯೇ ತೋರಿಸುತ್ತಾನೆ. ಇಂಗ್ಲಿಷಿನ "b" ಎಂಬ ಅಕ್ಷರವು ಅವನಿಗೆ "d" ಆಗಿ ತೋರುತ್ತದೆ; "ನದಿ" ಶಬ್ದವು "ದಿನ"ವಾಗಿಯೂ, "ಪಿಕ" ಶಬ್ದವು "ಕಪಿ"ಯಾಗಿಯೂ ಅವನಿಗೆ ತೋರುತ್ತದೆ. ಆದರೆ ಮಕ್ಕಳು ತೋರುವ "ಕನ್ನಡಿಯೊಳಗಿನ ಪ್ರತಿ ಬಿಂಬದ ಒಲವು" ಎಂದು ಕರೆಯಬಹುದಾದ ಈ ಪ್ರವೃತ್ತಿಯನ್ನು ಕ್ಲಪ್ತ ಸಮಯದಲ್ಲಿ ಯೋಗ್ಯ ರೀತಿಯಲ್ಲಿ ತಿದ್ದಬಹುದು. ತಂದೆ ತಾಯಿಗಳ ಈ ಪ್ರಯತ್ನ ಏನೇನೂ ಫಲ ಕೊಡದ ಉದಾಹರಣೆ ಬದಲ ಸ್ವಲ್ಪ—ಎಲ್ಲೋ ಐನೂರರಲ್ಲಿ ಒಂದು!

ಆದುದರಿಂದ ಹೆತ್ತವರು ತಮ್ಮ ಮಕ್ಕಳು ಸಲ್ಲದ ಅಭ್ಯಾಸವೊಂದನ್ನು ಬೆಳಸಿಕೊಳ್ಳುತ್ತಿರುವಂತೆ ಕಾಣುವುದಲ್ಲಾ ಎಂದು ವಿಶೇಷ ಚಿಂತೆಗೀಡಾಗುವುದೇನೂ ಬೇಡ. ಚಿಕ್ಕ ಮಕ್ಕಳಲ್ಲಿ ಎಡ ರಿಗಿದ್ದುದನ್ನು ಯಾವ ಕೈಯಿಂದಲೇ ಆಗಲಿ, ತೆಗೆದುಕೊಳ್ಳುವ ಚಪಲವಿರುತ್ತದೆ. ಅವುಗಳ ಎರಡೂ ಕೈಗಳ ಶಕ್ತಿ ಸಮಾನವಿರುತ್ತದೆ. ಆದರೆ ಅದು ಹೆಚ್ಚುಹೆಚ್ಚಾಗಿ ಯಾವ ಕೈಯನ್ನು ಉಪಯೋಗಿಸುತ್ತಾ ಬಂತೋ ಆ ಕೈಯಲ್ಲಿ (ಮತ್ತು ಅದಕ್ಕೆ ಹೊಂದಿಕೊಂಡ ಭಾಗದಲ್ಲಿ) ಶಕ್ತಿ ಹೆಚ್ಚು ಪ್ರಧಾನತ್ವದ ಲಕ್ಷಣ ಮೂಡುತ್ತದೆ. ಆದುದರಿಂದ ಒಂದು ಮಗುವು ಆಟದ ವಸ್ತುವನ್ನು ಎತ್ತಿಕೊಳ್ಳುವಾಗ ತಾಯಿಯು ಬಲಗೈಯನ್ನೆ ಮಗು ಉಪಯೋಗಿಸುವಂತೆ ಜಾಗ್ರತೆ ವಹಿಸಿದರೆ, ಉಣ್ಣಲಿಕ್ಕೆ ಬಲಗೈಯನ್ನೆ ಉಪಯೋಗಿಸುವಂತೆ ನೋಡಿಕೊಂಡರೆ, ಎಡಗೈ ಪ್ರಧಾನತ್ವದ ತೊಂದರೆ ಉಂಟಾಗುವುದಿಲ್ಲ. ಆದರೆ ತಾಯಿಯು ಮಾತನ್ನು ಕೇಳದ ಮಗುವಿಗೆ ಹೊಡೆದರೆ ಮಾತ್ರ ಅದನ್ನು ಹೆಚ್ಚು ಒತ್ತಾಯಿಸುವುದು ಇಷ್ಟವಲ್ಲ. ಏಕೆಂದರೆ, ಮಿದುಳಿನಲ್ಲಿ ಪ್ರಧಾನತ್ವದ ಲಕ್ಷಣಗಳು ಈಗಾಗಲೇ ಬೇರು ಬಿಟ್ಟಿವೆಯೆಂಬುದರ ಚಿಹ್ನೆ ಅದಾಗಿದ್ದು, ಒತ್ತಾಯವು ಮಗುವಿನಲ್ಲಿ ನರವ್ಯಾಧಿ ಮುಂತಾದ ಅಪಾಯಕರ ಪರಿಣಾಮವನ್ನು ತರಬಹುದು.

ಸಾಮಾನ್ಯವಾಗಿ ಬಲಗೈಯನ್ನು ಉಪಯೋಗಿಸುವಂತೆ ಪ್ರೋತ್ಸಾಹಿಸುತ್ತಾ ಹೋದರೆ ಅದನ್ನು ಮಕ್ಕಳು-ಮುಖ್ಯ ಹುಡುಗ-ಯರು ಗಿಯರು ಬಹ ಮೆಚ್ಚಿಕೊಂಡು, ಎಡಗೈ ಉಪಯೋಗಿಸುವ ಅಭ್ಯಾಸವನ್ನು ತೊರೆಯಲು ತಾವಾಗಿಯೇ ಪ್ರಯತ್ನಿಸುತ್ತಾರೆ. ಅಮೇರಿಕದ ಪ್ರಾಧ್ಯಾಪಕರೊಬ್ಬರು ಸಾವಿರ ವಿದ್ಯಾರ್ಥಿಗಳನ್ನು ಪರಿಶೀಲಿಸಿದಲ್ಲಿ ಎಪ್ಪತ್ತೇಳು ಮಂದಿ ಹೀಗೆ ಕೈಬದಲಾಯಿಸಿ ಕೊಂಡುದನ್ನು ಕಂಡರು. ಅವರಲ್ಲಿ ಒಬ್ಬನಲ್ಲಿ ಮಾತ್ರ ದುಷ್ಪರಿಣಾಮವಾದ ಲಕ್ಷಣ ಕಂಡು ಬಂತು. ಇದೇನೂ ಈ ಪ್ರಯೋಗವನ್ನೆ ತ್ಯಜಿಸಿ ಬಿಡುವಷ್ಟು ಹೆಚ್ಚು ಹೆದರಿಕೆ ಹುಟ್ಟಿಸಬೇಕಾದ ದೊಡ್ಡ ಸಂಗತಿಯಲ್ಲ ಎಂದವರ ಅಭಿಪ್ರಾಯ. ಆದರೆ ಎಷ್ಟಕ್ಕೂ ಎಡಗೈ ಪ್ರಧಾನತ್ವದ ಲಕ್ಷಣವನ್ನು ತೊರೆಯಲಾರದವರ ವಿಷಯದಲ್ಲಿ ನಾವು ತಾತ್ಸಾರವನ್ನು ಮಾಡುವಂತಿಲ್ಲ—ಅವರು ಬಲಗೈ ಪ್ರಧಾನ ವ್ಯಕ್ತಿಗಳ ಪ್ರಪಂಚದಲ್ಲಿರುವುದರಿಂದ ಎಷ್ಟೋ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ನಮ್ಮ ಯಾಂತ್ರಿಕ ಸಲಕರಣೆಗಳಲ್ಲಿ ಹೆಚ್ಚಿನವನ್ನು-ಎಲ್ಲವನ್ನು ಎಂದರೂ ತಪ್ಪಲ್ಲ— ಬಲಗೈ ಪ್ರಧಾನ ವ್ಯಕ್ತಿಗಳ ಉಪಯೋಗಕ್ಕೆ ಬರುವ ರೀತಿಯಲ್ಲಿಯೇ ಸಿದ್ಧಪಡಿಸಲಾಗುತ್ತದೆ. ಈ ಕಾಲದಲ್ಲಿ ನಾವು ಸಹಾನುಭೂತಿಪರರಾಗಿರುವುದು ಹಿತಕರ.

ಎಡಗೈ ಪ್ರಧಾನ ವ್ಯಕ್ತಿಗಳು ದಡ್ಡರಾಗುವರೆಂದೂ ಅಥವಾ ವಿಶೇಷ ಬುದ್ಧಿವಂತರಾಗುವರೆಂದೂ ಸಿದ್ಧಾಂತವಾಗಿ ಹೇಳುವಂತಿಲ್ಲ ಎಂಬುದೇ ವಿಜ್ಞಾನಿಗಳ ತೀರ್ಮಾನ. ಎಡಗೈ ಪ್ರಧಾನ ವ್ಯಕ್ತಿಗಳಲ್ಲಿ ಸಹ ಬಲಗೈ ಪ್ರಧಾನ ವ್ಯಕ್ತಿಗಳಲ್ಲಿ ಪ್ರಸಿದ್ಧಿ ಹೊಂದಿದವರಷ್ಟೇ ಕೀರ್ತಿಶಾಲಿಗಳಿದ್ದಾರೆ ಎನ್ನುತ್ತಾ ಪ್ರಸಿದ್ಧ ಚಿತ್ರಕಾರರಾದ ಮೈಕಲ್ ಎಂಜೆಲೊ ಮತ್ತು ರಾಫೇಲ್, ಅಮೇರಿಕದ ಅಧ್ಯಕ್ಷ ಗಾರ್ ಫೀಲ್ಡ್ ಲಿಯೋನಾರ್ಡ್ ದಿ ವಿನ್ಸಿ ಮುಂತಾದವರ ನಿದರ್ಶನವನ್ನವರು ನಮ್ಮ ಮುಂದಿಡುತ್ತಾರೆ. ಆದರಂತೆ ಮನುಷ್ಯವರ್ಗದಲ್ಲಿ ಮಾತ್ರ ಈ ರೀತಿಯ ಪ್ರಧಾನತ್ವ ಕಂಡು ಬರದೆ, ಮೃಗಪಕ್ಷಿಗಳಲ್ಲೂ ಇದು ಗೋಚರವಾಗುತ್ತದೆ ಎಂದೂ ಅವರು ಹೇಳುತ್ತಾರೆ. ವಾಷಿಂಗ್‌ಟನ್ನಿನ ಪಕ್ಷಿ ಸಂಗ್ರಹಾಲಯದಲ್ಲಿದ್ದ ಇಪ್ಪತ್ತು ಗಿಳಿಗಳಲ್ಲಿ ಹದಿನೇಳು ಸಾಮಾನ್ಯವಾಗಿ ಮತ್ತು ಮೂರು ಯಾವಾಗಲೂ ವಾಮಾಂಗ ಪ್ರಧಾನತ್ವವನ್ನು ತೋರಿಸುತ್ತವೆಂದು ಒಬ್ಬರು ಕಂಡುಕೊಂಡರು. ಆನೆಗಳಲ್ಲಿ ಯಾವ ದಾಡೆಯು ಹೆಚ್ಚು ಸವೆದಿದೆಯೋ ಅದಕ್ಕೆ ಸಂಬಂಧಿಸಿದ ಭಾಗ ಪ್ರಧಾನವಾಗಿದೆ ಎಂಬ ನಿರ್ಣಯಕ್ಕೆ ಅವರು ಬಂದರು.

—I. P. S.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಪ್ಯಾರಿಸ್ ಬಿಲ್ಡಿಂಗ್, ಹಂಪನ್‌ಕಟ್ಟಾ, ಮಂಗಳೂರು.

ಇನ್ಸ್‌ಪೆಕ್ಟರರು, ಓರ್ಗನೈಜರರು ಮತ್ತು ಎಲ್ಲಾ ತರದ ಏಜಂಟರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.

ಹೊಸತಾಗಿ ಏರ್ಪಡಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಿವೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:—

B. B. SHETTY, B. A., LL. B.
Chairman.

ಭರ್ತಾ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

(೧ನೇ ಪುಟದಿಂದ)

ಕೊಳ್ಳಬಹುದು. ಶಾಸನದಿಂದ ಈ ಬಗೆಯ ಸತ್ಸಂಪ್ರದಾಯ ರೂಢಿಯಾದೀತೆಂಬ ವಿಶ್ವಾಸ ನಮಗಿಲ್ಲ—ಆದರೆ ಅದು ಒಂದು ರೀತಿಯ ಒತ್ತಾಯ ಹೇರಬಹುದು; ಅದನ್ನು ಜಾರಿಸಿಕೊಳ್ಳಲು ವಾಮ ಮಾರ್ಗಾವಲಂಬನದ ಉಪಾಯ ಯಾವಾಗಲೂ ಈ ಕಾಲದಲ್ಲಿ ತೆರೆದಿರುತ್ತದೆ ಉದಾತ್ತ ಮನೋಭಾವವನ್ನು ಜನರು ರೂಢಿಸಿಕೊಂಡರೆ ಮಾತ್ರ ಶಾಶ್ವತ ಪ್ರಯೋಜನ ಅತ್ತ ಲಕ್ಷ್ಯವನ್ನು ಸೆಳೆಯುವುದೇ ಪತ್ರಿಕಾಕರ್ತರ ಗೊತ್ತುವಳಿಯ ಕೆಲಸ. ಅಷ್ಟು ಮಟ್ಟಿಗೆ ಅವರು ಕೃತಕೃತ್ಯರು—ಅವರ ಉದ್ದೇಶವನ್ನು ಸ್ವಲ್ಪವಾದರೂ ಮೆಚ್ಚಿಕೊಂಡರೆ ನಾವೂ ಧನ್ಯರಾಗುತ್ತೇವೆ.

— ಕಾರ್ತಿಕೇಯ.

ಹೊಸ ಪುಸ್ತಕ!

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ, ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹೆತ್ತು ಪುಸ್ತಕಗಳಿಂದ ಹೆತ್ತು ಪಾಠಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೂಟದ ಮರ್ಮವನ್ನೂ, ನಿಶ್ಚಿತ್ತಿಸಿದ್ದು 25 ಸಾವಿರ ವರದಕ್ಷಿಣೆ, ಸಿಕಿದ್ದು ಬರೇ ವಧುವಕ್ಷಿಣೆ ಇವರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ:ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ :0—10—0

ಕಿರಿಯರ ಪ್ರಪಂಚ, ಉಡುಪಿ. ನವಭಾರತ ಪುಸ್ತಕ ಭಂಡಾರ,ಉಡುಪಿ

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ 1955-'56 ನೇ ವರ್ಷದ ಕಾಪು, ಕಟಪಾಡಿ ಪಂಚಾಯತ ಬೋರ್ಡಿನ ಆಡಳಿತಕ್ಕೆ ಒಳಪಟ್ಟ ಮಾರ್ಕೆಟು, ಇಳಿಯುವಸ್ಥಳ (Jetty), ಮಟ್ಟುಕಡವು, ಇವುಗಳಲ್ಲಿ ವಸೂಲುಮಾಡುವ ಹಕ್ಕನ್ನು ಪಂಚಾಯತ ಬೋರ್ಡಿನ ಪ್ರಸಿಡೆಂಟರು ತಾ. 7-3-1955ನೇ ಸೋಮವಾರ ಅಪರಾಹ್ನ ಗಂಟೆ 3 ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ, ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಪ್ರತ್ಯೆ ಪ್ರತ್ಯೇಕವಾಗಿ, ಬಹಿರಂಗವಾಗಿ ಏಲಂ ಮೂಲಕ ಮಾರಾಟಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಪಂಚಾಯತ ಬೋರ್ಡು ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

P. Venkatraya Nayak B.Sc
President.

Katapadi. 26 2-1955

ನಿಮಗೆ ಯಾವುದೇ ತರದ ಉದ್ಯೋಗ ಬೇಕೆಂದಿದ್ದರೆ ಅಥವಾ ವ್ಯಾಪಾರ ನಡೆಸಬೇಕೆಂದಿದ್ದರೆ ಕೂಡಲೇ ಬರೆಯಿರಿ:.

ಟಪ್ಪಾಲುಪೆಟ್ಟಿಗೆ ನಂಬ್ರ 1868
ಬೊಂಬಾಯಿ— 1

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—3—0; ಮೂರಾಣೆ ಸ್ಟ್ಯಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ | ಸಂಚಿಕೆ ೨೭

VOL. 34 | ಉಡುಪಿ, 10—3—1955 | NO. 27

ಆಂಧ್ರರಾಜ್ಯದ ಚುನಾವಣೆಯಲ್ಲಿ ಕಮ್ಯೂನಿಸ್ಟರಿಗಾದಂತೆ ತೋರುವ ಪ್ರಚಂಡ ಪರಾಭವವನ್ನು ತಂದೊಡ್ಡಿದುದಕ್ಕಾಗಿ ನೆಹರುಗಳಿಗೆ, ಕಾಂಗ್ರೆಸು ಪಕ್ಷಕ್ಕೆ ಮತ್ತು ಸ್ವತಂತ್ರ ಭಾರತಕ್ಕೆ ಧನ್ಯವಾದಗಳು ಇದು ನೆಹರುಗಳ ಸರ್ವಶಕ್ತ ವ್ಯಕ್ತಿತ್ವಕ್ಕೆ ಮತ್ತು ಅವರ ಉತ್ತರಾಧಿಕಾರಿಯಾಗಿ ಕಾಂಗ್ರೆಸಿನ ಅಧ್ಯಕ್ಷ ಸ್ಥಾನಕ್ಕೆ ಬಂದಿರುವ ಢೇಬರರ ಸಂಘಟನಾಶಕ್ತಿಗೆ ದೊರೆತ ಗೌರವ. ಆಂಧ್ರದಲ್ಲಿ ಕಮ್ಯೂನಿಸ್ಟರು ಹೊಂದಿದ ಸೋಲಿನ ಅನುಭವ ಭಾರತದಲ್ಲೆಲ್ಲ ಗೋಚರಿಸದೆಹೋಗದು.

—ವಾಷಿಂಗ್‌ಟನ್ ಪೋಸ್ಟ್.

ಸಂಘಟನೆಯ ಚಾತುರ್ಯ

ಬಣ್ಣ ನೋಡಿ ಮರುಳಾಗಬಾರದು- ಅಂತರ್ಯವನ್ನು ಪರೀಕ್ಷಿಸಿ ತಿಳಿಯುವುದೇ ಜಾಣತನ ಎಂಬ ಮಾತನ್ನು ನಮ್ಮಲ್ಲಿ ಎಲ್ಲರೂ ಕೇಳಿದ್ದೇವೆ. ಆದರೂ ಅಗತ್ಯದ ಪ್ರಸಂಗಗಳಲ್ಲಿ ಆ ಮಾತು ನಮ್ಮ ಮನಸ್ಸಿಗೆ ಅಷ್ಟಾಗಿ ಬರುವುದಿಲ್ಲ- ಬಂದರೂ ಹಾಗೆ ನಡೆದುಕೊಳ್ಳಬೇಕೆಂದು ತೋರುವುದಿಲ್ಲ. ಉದಾಹರಣೆಗಾಗಿ ಆಂಧ್ರ ರಾಜ್ಯದಲ್ಲಿ ನಡೆದ ಚುನಾವಣೆಯ ಫಲಿತಾಂಶವನ್ನು ತೆಗೆದುಕೊಳ್ಳಬಹುದು. ಅಲ್ಲಿ ಸಂಯುಕ್ತ ಕಾಂಗ್ರೆಸು ಪಕ್ಷಕ್ಕೆ ನಿಚ್ಚಳ ಬಹುಮತ ಸಿಕ್ಕಿತು; ಕಮ್ಯೂನಿಸ್ಟರೂ ಪ್ರಜಾ ಸಮಾಜವಾದಿಗಳೂ ಸ್ವತಂತ್ರರೂ ಪ್ರಚಂಡ ಪರಾಭವವನ್ನು ಹೊಂದಿದರು. ಜನ ಸಂಘ ವಂತೂ ಹೇಳ ಹೆಸರಿಲ್ಲದ ಪಕ್ಷವೆನಿಸುವಷ್ಟು ಅಪಮಾನಕ್ಕೆ ಗುರಿಯಾಯಿತು ಅದರ ಆರೂ ಮಂದಿ ಸದಸ್ಯರು ಚುನಾವಣೆಯ ಠೇವಣಾತಿ ಹಣವನ್ನೂ ಕಳೆದುಕೊಂಡರು. ಇದನ್ನು ಪತ್ರಿಕೆಗಳಲ್ಲಿ ಓದುವಾಗ ನಮಗೆ ಸಹಜವಾಗಿಯೇ ಸಂಯುಕ್ತ ಕಾಂಗ್ರೆಸು ಪಕ್ಷದ ಬಗ್ಗೆ ಹೆಗ್ಗಳಿಕೆಯ ಭಾವನೆ ಉಂಟಾಗುತ್ತದೆ; ಅದರಲ್ಲೂ ಕೃಷಿಕರ ಲೋಕ ಪಕ್ಷವನ್ನೂ ಪ್ರಜಾಪಕ್ಷವನ್ನೂ ಬಿಟ್ಟರೂ, ಕೇವಲ ಕಾಂಗ್ರೆಸೊಂದನ್ನೆ ಲೆಕ್ಕಕ್ಕೆ ಹಿಡಿದರೂ, ಅದಕ್ಕೆ ಸ್ಪಷ್ಟ ಬಹುಮತ ದೊರೆಯಿತೆಂದಾಗ ನಮ್ಮ ಸಂತೋಷ ನಿಜಕ್ಕೂ ಉಕ್ಕೇರುತ್ತದೆ.

ಒಂದು ದೃಷ್ಟಿಯಿಂದ ನೋಡಿದರೆ ಕಾಂಗ್ರೆಸಿಗರು ಮತ್ತು ಕಾಂಗ್ರೆಸಿನ ಹಾಗೂ ರಾಷ್ಟ್ರದ ಹಿತೈಷಿಗಳೆಲ್ಲರೂ ಅಭಿಮಾನ ಪಡಬೇಕಾದ ವಿಜಯ ಇದಾಗಿದೆ. ಆಂಧ್ರವನ್ನು ಭಾರತದ ಯೆನಾಂ ರಾಜ್ಯವಾಗಿ ಮಾಡುವ ಹುಮ್ಮಸ್ಸಿನಲ್ಲಿ ಇಲ್ಲಿಯ ಕಮ್ಯೂನಿಸ್ಟರಿದ್ದರು — ಲೋಕದ ಗಮನವನ್ನೆ ಆಂಧ್ರ ರಾಜ್ಯದ ಚುನಾವಣೆ ಸೆಳೆದುಕೊಂಡುದಕ್ಕೆ ಕಮ್ಯೂನಿಸ್ಟರು ಇಲ್ಲಿ ತಮ್ಮ ಸರ್ವಶಕ್ತಿಯನ್ನು ಪ್ರಯೋಗಿಸಲು ಮುಂದಾದದ್ದು ಒಂದು ಕಾರಣ. ಅವರು ಹಿಂದಿನ ೧೪೬ ಮಂದಿ ಸದಸ್ಯರುಳ್ಳ ಶಾಸನ ಸಭೆಯಲ್ಲಿ ೪೦ ಮಂದಿ ಇದ್ದರು. ತೆಲಂಗಾಣದ ಹಿಂಸಾಚಾರವೇ ಮುಂತಾದ ಘೋರ ಕೃತ್ಯಗಳನ್ನು ನಡೆಸಿ, ತೆಲುಗರ ಭಾವನೆಯನ್ನು ಕೆರಳಿಸಿದ್ದ ಕಮ್ಯುನಿಸ್ಟರು ಈ ಸಲವೂ ತಮಗೆ ವಿಜಯ ಕಟ್ಟಿಟ್ಟದ್ದೆಂದು ಹೇಳುತ್ತಿದ್ದರು. ಇವರ ಪ್ರಬಲ ಸಂಘಟನೆಯನ್ನು ಯಶಸ್ವಿಯಾಗಿ ಇದಿರಿಸುವುದಕ್ಕಾಗಿಯೇ ಸರಕಾರದೊಡನೆ ಸಹಕರಿಸಿದ್ದ ಬೇರೆ ಎರಡು ರಾಜಕೀಯ ಪಕ್ಷಗಳೊಡನೆ ಕಾಂಗ್ರೆಸು ಚುನಾವಣೆಯ ಗೆಳೆತನವನ್ನು ಮಾಡಿಕೊಂಡಿತು. ಆದರೂ ಕಮ್ಯುನಿಸ್ಟರಿಗೆ ೫೦—೬೦ ಸ್ಥಾನಗಳು ಸಿಗಬಹುದೆಂದೂ ಅವರು ಪ್ರಮುಖ ಪ್ರತಿಪಕ್ಷವಾಗಿ ಕೆಲಸಮಾಡಬಹುದೆಂದೂ ಕಾಂಗ್ರೆಸಿನ ಪ್ರಭೃತಿಗಳು ಚುನಾವಣೆಯ ಫಲಿತಾಂಶ ಹೊರಬೀಳುವುದಕ್ಕೆ ಮುಂಚೆ ಅಭಿಪ್ರಾಯ ಪಡುತ್ತಿದ್ದರು.

ಚುನಾವಣೆಯ ಪರಿಣಾಮ ಮಾತ್ರ ತೀರ ಆಕಸ್ಮಿಕವಾದ ಮತ್ತು ಅನಿರೀಕ್ಷಿತವಾದ ಸಂಗತಿಗಳನ್ನು ಹೊರಗೆಡವಿತು— ಸಂಯುಕ್ತ ಕಾಂಗ್ರೆಸು ಪಕ್ಷದಿಂದ ಶ್ರೀ ವಿಶ್ವನಾಥಂ ಮುಂತಾದವರೂ ಕಮ್ಯುನಿಸ್ಟ ಪಕ್ಷದಿಂದ ಶ್ರೀ ನಾಗಿರೆಡ್ಡಿ ಮುಂತಾದವರೂ ಆರಿಸಿಬರದೆ ಹೋದದ್ದು ಆಶ್ಚರ್ಯವಲ್ಲ— ಅದು ವ್ಯಕ್ತಿಗಳಿಗೆ ಸಂಬಂಧಪಟ್ಟ ಮಾತಾದುದರಿಂದ ಮಹತ್ವವಿಲ್ಲವೆಂದು ಬಿಟ್ಟುಬಿಡಲೂ ಬಹುದು. ಆದರೆ ಸಂಯುಕ್ತ ಕಾಂಗ್ರೆಸು ಸ್ವಪ್ನದಲ್ಲಿಯೂ ಎಣಿಸಿರದಷ್ಟು ಬಹುಮತವನ್ನು ಪಡೆದಿರುವುದೂ ಕಮ್ಯುನಿಸ್ಟರು ತೀರ ಅನಿರೀಕ್ಷಿತವಾದ ಸೋಲಿಗೆ ಗುರಿಯಾದುದೂ ಆಶ್ಚರ್ಯ ಪಡುವ ವಿಷಯ. ಪ್ರತಿಪಕ್ಷಗಳಿಂದ ನಿಂತವರಲ್ಲಿ ಚುನಾವಣೆಯ ಠೇವಣಾತಿ ಹಣವನ್ನು ಕಳೆದುಕೊಂಡವರಷ್ಟು ಮಂದಿಯೂ ಶಾಸನ ಸಭೆಗೆ ಆರಿಸಿ ಬರಲಿಲ್ಲ ಎಂಬುದು ನಿಜಕ್ಕೂ ನಾಚಿಕೆಗೇಡು! ಕಮ್ಯುನಿಸ್ಟರು ಹೊಂದಿದ ಈ ಪರಾಭವವನ್ನು ಪ್ರಜಾ ಪ್ರಭುತ್ವದ ದಿಗ್ವಿಜಯ ಎಂದು ಅಮೇರಿಕದ ಪತ್ರಿಕೆಗಳು ವರ್ಣಿಸಿ ಇದೀಗ ಬಹಳ ದಿನಗಳ ತರುವಾಯ ಭಾರತವು ಕಮ್ಯುನಿಸಮ್ಮನ್ನು ಮೆಚ್ಚುವುದಿಲ್ಲ ಎಂಬ ಅಭಿಪ್ರಾಯಕ್ಕೆ ಪುಷ್ಟಿಕೊಟ್ಟವು. ಭಾರತೀಯ ಮತದಾರರು ಕಮ್ಯುನಿಸ್ಟರ ಧೋರಣೆಗೆ ಕೊಟ್ಟ ಪ್ರಬಲಾಘಾತ ಹೀಗೆ ಅಮೆರಿಕದ ಪ್ರೀತಿಯನ್ನು ಸಂಪಾದಿಸಿತು.

ಸಂಯುಕ್ತ ಕಾಂಗ್ರೆಸು ಹೊಂದಿದ ಅನಿರೀಕ್ಷಿತ ವಿಜಯದ ಮತ್ತು ಕಮ್ಯೂನಿಸ್ಟರು ಕನಸಿನಲ್ಲೂ ನೆನೆದಿರದ ಪರಾಭವದ ಕಾರಣಗಳೇನು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ — ಹಿಂದೆ ಯಾವ ಮಾತನ್ನೂ ಧೈರ್ಯವಾಗಿ ಆಡಲು ಹಿಂಜರಿದವರೇ ಈಗ ಒಂದೊಂದೇ ಕಾರಣಗಳನ್ನು ಕೇಳುತ್ತಾರೆ. "೧೯೫೨ನೇ ವರ್ಷದ ಪ್ರಥಮ ಚುನಾವಣೆಯ ಕಾಲದಲ್ಲಿ ಮದ್ರಾಸು ರಾಜ್ಯದ ಆಳಿಕೆಯು ತುಂಬ ಕೆಟ್ಟಿತ್ತು; ಜನರ ತೊಂದರೆಗಳಿಗೆ ತುತ್ತಾಗಿದ್ದರು; ಅನ್ನ ಕ್ಷಾಮ, ಬಟ್ಟೆಯ ಕೊರತೆಗಳಿಂದಲೂ ಕಮ್ಯೂನಿಸ್ಟರ ಹಾವಳಿಯಿಂದಲೂ ನುಗ್ಗಾಗಿದ್ದರು; ಅವರ ಯೋಗಕ್ಷೇಮವನ್ನು ಸರಕಾರ ವಿಚಾರಿಸಲಿಲ್ಲ — ಕಾಂಗ್ರೆಸು ಪಕ್ಷ ಒಳಜಗಳದಲ್ಲಿಯೇ ಮಗ್ನವಾಯಿತಲ್ಲದೆ ಜನರೊಡನೆ ಬೆರೆಯಲಿಲ್ಲ. ಈಗ ಪರಿಸ್ಥಿತಿ ತುಂಬ ಸುಧಾರಿಸಿದೆ— ತೆಲುಗರಿಗೆ ಬೇಕಿದ್ದ ಆಂಧ್ರ ರಾಜ್ಯವೂ ದೊರೆತಿದೆ; ಅವರಿಗೀಗ ನೆಮ್ಮದಿಯಿಂದ ಕೆಲಸಮಾಡಬಲ್ಲ ಭದ್ರ ಸರಕಾರ ಬೇಕಾಗಿದೆ— ಆದುದರಿಂದ ಸಂಯುಕ್ತ ಕಾಂಗ್ರೆಸಿಗೆ ಅವರು ಬೆಂಬಲ ಕೊಟ್ಟರು." ಎಂದು ಹೇಳಲಾಗುತ್ತದೆ. ಆವಡಿಯ ಕಾಂಗ್ರೆಸು ಸ್ವೀಕರಿಸಿದ ಸಮಾಜವಾದಿ ಮಾದರಿಯ ಸಮಾಜ ರಚನೆಯ ಗೊತ್ತುವಳಿಯೂ ನೆಹರುಗಳ ವಿದೇಶ ಧೋರಣೆಯ ಬಗ್ಗೆ ರಶಿಯ ಮತ್ತು ಚೀನಗಳು ಮಾಡಿದ ಪ್ರಶಂಸೆಯೂ ಕಮ್ಯೂನಿಸ್ಟರ (ಮತ್ತು ಕೆಲಮಟ್ಟಿಗೆ ಪ್ರಜಾ ಸಮಾಜವಾದಿಗಳ) ಆಕರ್ಷಣೆಯನ್ನು ಕಡಿಮೆ ಮಾಡಿ ಕಾಂಗ್ರೆಸಿನ ಶಕ್ತಿಯನ್ನೆ ಹೆಚ್ಚಿಸುವ ಹುರುಪನ್ನು ಮತದಾರರಲ್ಲಿ ಮೂಡಿಸಿದವೆಂದೂ ಕೆಲವರ ಅಭಿಪ್ರಾಯ.

ತೋರಿಕೆಗೆ ಮೇಲಿನೆಲ್ಲ ಮಾತುಗಳನ್ನು ನಿಜವೆಂದು ನಾವು ಸ್ವೀಕರಿಸಿದರೂ- ಮತದಾರರು ಕೊಟ್ಟಿರುವ ತೀರ್ಮಾನದ ಬುಡದಲ್ಲಿರುವ ಸತ್ಯ ಸಂಗತಿಯೊಂದನ್ನು ಎಷ್ಟಕ್ಕೂ ಮರೆಯ ಬಾರದು. ಸಂಯುಕ್ತ ಕಾಂಗ್ರೆಸು ಶಾಸನ ಸಭೆಯಲ್ಲಿರುವ ಸ್ಥಾನಗಳಲ್ಲಿ ಬಹಳ ಹೆಚ್ಚು ಸ್ಥಾನಗಳನ್ನು ಸಂಪಾದಿಸಿದುದು ಹೌದಾದರೂ ಕೊಳ್ಳ್ಳ; ಆದರೆ ಮತದಾರರಲ್ಲಿ ಸೋತವರು ಕಮ್ಯೂನಿಸ್ಟರಲ್ಲಿ ಸೋತವರಿಗಿಂತ ಕಡಿಮೆ ಎಂಬುದೂ ನಿಜ. ಆದರೆ ಕಮ್ಯೂನಿಸ್ಟರು ಹೆಚ್ಚು ಸಂಖ್ಯೆಯಲ್ಲಿ ಶಾಸನ ಸಭೆಯ

(೧೦ನೇ ಪುಟ ನೋಡಿರಿ)

ಮಧ್ಯಪ್ರದೇಶದ ಶಾಸನಸಭೆಯಲ್ಲಿ ಮುಂಗಡಪತ್ರದ ಭಾಷಣವನ್ನು ಅರ್ಥಸಚಿವರು ಮಾಡುತ್ತಿದ್ದರು. ಅಲ್ಲಿದ್ದ ಪತ್ರಿಕಾಕರ್ತರ ಕೈಯಲ್ಲಿ ಒಂದು ಪ್ರಕಟಣಾ ಪ್ರತಿ ಇತ್ತು. ಅವರ ಹೊದಿಕೆಬಣ್ಣ ನೋಡಿದೊಡನೆಯೇ ಮುಂಗಡಪತ್ರದ ಭಾಷಣದ ಪ್ರತಿ ಅದಾಗಿರಬೇಕೆಂದು ಭಾವಿಸಿ ಪ್ರತಿಪಕ್ಷದ ನಾಯಕರು ವಿಧಿವಿರುದ್ಧವೆನ್ನುತ್ತ ಆಕ್ಷೇಪಿಸಿದರು.

ಸಭಾಧ್ಯಕ್ಷರು ವಿಷಯವನ್ನು ವಿಚಾರಿಸಿ, "ಹಾಗಲ್ಲ, ಅದು ಕಾಮನ್‌ವೆಲ್ತ್ ಸಂಸ್ಥೆಯದೊಂದು ಪ್ರಕಟಣೆ. ಹೊದಿಕೆ ಬಣ್ಣ ಒಂದೇ ಆದುದರಿಂದ ಪ್ರತಿಪಕ್ಷದ ನಾಯಕರು ವಿನೋದಕ್ಕೆ ಬಲಿಯಾದರು" ಎಂದರು.

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ. ಹಣವನ್ನು ಠೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕುವಂತಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಯಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೫೦ ಶಾಖಾ ಕಛೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಛೇರಿ: ಉಡುಪಿ, ದ. ಭಾರತ

ನಮ್ಮ ಚಲಚ್ಚಿತ್ರಗಳ ಪುನರುತ್ಥಾನ

ವಾಣಿಜ್ಯ ಪ್ರವೃತ್ತಿಯೊಡನೆ ಕಲೆಯ ಸಮನ್ವಯ

ಭಾರತದಲ್ಲಿ ಸಂಗೀತ ನಾಟಕ ಎಕಾಡಮಿಯನ್ನು ಉದ್ಘಾಟಿಸಿದಾಗ ಎಕಾಡಮಿಯ ಅಧ್ಯಕ್ಷರೂ ಮದ್ರಾಸಿನ ಹೈಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರೂ ಆದ ಶ್ರೀ ಪಿ. ವಿ. ರಾಜಮನ್ನಾರರು "ಲಲಿತ ಕಲೆಗಳಲ್ಲಿ ಅತ್ಯಾಧುನಿಕ ರೀತಿಯದಾಗಿಯೂ ವೈಶಿಷ್ಟ್ಯ ಪೂರ್ಣವಾದುದಾಗಿಯೂ ಚಲಚ್ಚಿತ್ರವನ್ನು ಪರಿಗಣಿಸಬೇಕೆಂಬುದರಲ್ಲಿ ಸಂದೇಹವಿಲ್ಲ. ಆದುದರಿಂದ ಈ ನೂತನ ಕಲೆಯು ತನ್ನ ವಾಣಿಜ್ಯ ಮಹತ್ವವನ್ನು ಕಳೆದುಕೊಳ್ಳದೆ ಮಟ್ಟವನ್ನು ಎತ್ತರಿಸಿಕೊಳ್ಳುವಂತೆ ಮಾಡುವುದು ಎಕಾಡಮಿಯ ಉದ್ದೇಶಗಳಲ್ಲಿ ಬರುತ್ತದೆ" ಎಂದಿದ್ದರು. ತದನುಸಾರವಾಗಿ, ಚಲಚ್ಚಿತ್ರ ಪ್ರಪಂಚದ ಎಲ್ಲ ವ್ಯವಹಾರಗಳ ವಿಷಯದಲ್ಲಿ ಬಿಚ್ಚು ಮನಸ್ಸಿನ ಚರ್ಚೆ ಮತ್ತು ವಿಚಾರವಿನಿಮಯವನ್ನು ನಡೆಸಬೇಕೆಂಬ ಗುರಿಯನ್ನಿಟ್ಟುಕೊಂಡು ಅವರು ಎಕಾಡಮಿಯ ಆಶ್ರಯದಲ್ಲಿ ಒಂದು ವಿಚಾರ ಗೋಷ್ಠಿಯನ್ನು ಏರ್ಪಡಿಸಿದರು. ಅದು ಕಳೆದ ವಾರ ಯಶಸ್ವಿಯಾಗಿ ಹೊಸದೆಹಲಿಯಲ್ಲಿ ನಡೆಯಿತು. ಚಲಚ್ಚಿತ್ರಗಳ ವಿಷಯವು ಸಾರ್ವಜನಿಕರ ಕುತೂಹಲ ಕೆರಳಿಸುವ ಹಾಗಿರುವುದರಿಂದ, ಇಲ್ಲಿ ನಾಲ್ಕು ಮಾತು ಬರೆದರೆ ಅಪ್ರಸ್ತುತವಾಗಲಾರದು.

ಸಾಮಾನ್ಯ ಚಲಚ್ಚಿತ್ರ ಪ್ರೇಕ್ಷಕರ ಮಟ್ಟಿಗೆ ಚಲಚ್ಚಿತ್ರಗಳು ನಟನಟಿಯರ ಬೆಡಗು ವಿಲಾಸಗಳಿಗೆ ಮಾತ್ರ ಸೀಮಿತವಿರುವಂತೆ ಕಾಣುತ್ತದೆ— "ಎಲ್ಲರಿಗೂ ಗೊತ್ತಿರುವ ಪ್ರಪಂಚ" ಎಂಬುದಾಗಿ ಕರೆಯಲ್ಪಡುವ ಚಲಚ್ಚಿತ್ರ ಪ್ರಪಂಚದ ವಿಷಯದಲ್ಲಿ ನಟ-ನಟಿಯರ ಕೌಶಲ್ಯಕ್ಕೆ ಹಿನ್ನೆಲೆಯಲ್ಲಿರುವ ಸಂಗತಿಗಳನ್ನು ಗಮನಿಸುವವರು ಬಹಳ ವಿರಳ. ಹೊಸದೆಹಲಿಯ ವಿಚಾರ ಗೋಷ್ಠಿಯು ಇತ್ತ ಬೆಳಕು ಬೀರಲು ಪ್ರಯತ್ನಿಸಿತು. ನಮ್ಮ ದೇಶದಲ್ಲಿ ೧೯೧೨ ನೇ ಇಸವಿಯಿಂದ ಕಳೆದ ನಾಲ್ವತ್ತಕ್ಕೂ ಹೆಚ್ಚಿನ ವರ್ಷಗಳಲ್ಲಿ ಚಲಚ್ಚಿತ್ರ ವ್ಯವಸಾಯವು ಪ್ರವರ್ಧಮಾನ ಸ್ಥಿತಿಯನ್ನು ಹೊಂದುತ್ತಾ ಬೆಳವಣಿಗೆಯನ್ನು ಕಂಡಿತು. ಇಂದು ಬಂಡವಾಳ ನಿಕ್ಷೇಪದಲ್ಲಿ ಚಲಚ್ಚಿತ್ರ ಉದ್ಯಮವು ರಾಷ್ಟ್ರದಲ್ಲಿ ಎರಡನೆಯ ಸ್ಥಾನವನ್ನು ಪಡೆಯುತ್ತದೆ; ತೆರುವ ಸಂಬಳದ ಮಟ್ಟಿಗೆ ನಾಲ್ಕನೇ ಸ್ಥಾನವೂ ಕೆಲಸಕ್ಕೆ ಇಟ್ಟುಕೊಂಡಿರುವ ಜನರ ಮಟ್ಟಿಗೆ ಐದನೇ ಸ್ಥಾನವೂ ಚಲಚ್ಚಿತ್ರೋದ್ಯಮಕ್ಕೆ ಸಲ್ಲುತ್ತದೆ. ಇಷ್ಟರ ವರೆಗೆ ಭಾರತದಲ್ಲಿ ಏಳು ಸಾವಿರ ಕಥನ ಚಿತ್ರಗಳನ್ನೂ ಡೆ ನೂರಾರು ಸಾಕ್ಷಿ ಚಿತ್ರಗಳನ್ನೂ ಜಾಹೀರಾತು ಮತ್ತು ಸುದ್ದಿ ಚಿತ್ರಗಳನ್ನೂ ಅದು ಉತ್ಪಾದಿಸಿರುತ್ತದೆ. ಮುಂಬಯಿ, ಮದ್ರಾಸು, ಕಲ್ಕತ್ತ, ಮೈಸೂರುಗಳಂಥ ನಗರಗಳಲ್ಲಿ ಒಟ್ಟು ೭೫ ಚಲಚ್ಚಿತ್ರ ಗ್ರಹಣ ಮಂದಿರಗಳಿವೆಯಲ್ಲದೆ ದೇಶದಲ್ಲಿ ಮೂರು ಸಾವಿರದಷ್ಟು ಪ್ರದರ್ಶನ ಗೃಹಗಳು ನಿತ್ಯವೂ ಪ್ರೇಕ್ಷಕರಿಗೆ ಚಲಚ್ಚಿತ್ರಗಳನ್ನು ತೋರಿಸುತ್ತವೆ.

ಚಲಚ್ಚಿತ್ರಗಳ ವಿಷಯದಲ್ಲಿ ಎದ್ದು ಕಾಣುವ ಒಂದು ವೈಶಿಷ್ಟ್ಯ—ಅದನ್ನು ದ್ವಂದ್ವವೆಂದು ಕರೆದರೂ ತಪ್ಪಾಗದು—ಕಲೆ ಮತ್ತು ವಾಣಿಜ್ಯ ಪ್ರವೃತ್ತಿ ಎಂಬೆರಡು ಪರಸ್ಪರ ವಿರೋಧಾಭಾಸಕರ ಅಂಶಗಳೆಂದು ಅಭಿಪ್ರಾಯಪಡಲಾಗುತ್ತದೆ. ಒಬ್ಬ ಲೇಖಕನಂತೆ, ಶಿಲ್ಪಿಯಂತೆ ಅಥವಾ ಚಿತ್ರಕಾರನಂತೆ ಚಲಚ್ಚಿತ್ರವನ್ನು ಒಬ್ಬನೇ ಮನುಷ್ಯನ ಕಲಾಕೃತಿಯಾಗಿ ಪರಿಗಣಿಸಲು ಸಾಧ್ಯವಿಲ್ಲವೆಂಬುದು ನಿಜ ಅದು ಉತ್ಪಾದಕನ, ದಿಗ್ದರ್ಶಕನ, ನಟ-ನಟಿಯರ, ತಂತ್ರ ಕುಶಲರ, ಸಹಾಯಕರ, ಕೂಲಿಗಳ—ಎಲ್ಲರ ಸಹಕಾರದ ಫಲ. ಉತ್ಪಾದಕ ಮತ್ತು ದಿಗ್ದರ್ಶಕರಿಗೆ ಎದುರಾಗುವ ಪ್ರಥಮ ಸಮಸ್ಯೆಯೆಂದರೆ, ಕಲೆಯ ಅಂಶಕ್ಕೆ ಚ್ಯುತಿ ಬರದಂತೆಯೂ ಹಣ ಸಂಪಾದಿಸುವಷ್ಟು ಜನಪ್ರಿಯವಾಗಿ ಚಲಚ್ಚಿತ್ರವನ್ನು ರೂಪುಗೊಳಿಸುವುದು ಹೇಗೆ ಎಂಬುದು. ಜನಪ್ರಿಯವಾಗದಿದ್ದಲ್ಲಿ ಚಲಚ್ಚಿತ್ರಕ್ಕೆ ಹಾಕಿದ ದುಡ್ಡು ಮತ್ತು ಅದಕ್ಕಾಗಿಪಟ್ಟ ಶ್ರಮ ಎಲ್ಲವೂ ವ್ಯರ್ಥವಾಗುತ್ತದೆ. ಎಂಥ ಸಾಮಾನ್ಯ ಚಿತ್ರವನ್ನಾದರೂ ತೆಗೆಯುವುದಕ್ಕೆ ಕನಿಷ್ಠ ಎರಡು ಲಕ್ಷ ರೂಪಾಯಿಗಳು ಬೇಕಾಗುತ್ತವೆ; ಜೆಮಿನಿಯಂಥವರು ತಮ್ಮ ತಯಾರಿಕೆಗೆ ಇಪ್ಪತ್ತು ಲಕ್ಷ ರೂಪಾಯಿಗಳನ್ನೂ, ವರ್ಣರಂಜಿತ ಚಿತ್ರಪಟಗಳ ತಯಾರಿಕೆಯಲ್ಲಿ ನಲ್ವತ್ತು ಲಕ್ಷ ರೂಪಾಯಿಗಳನ್ನೂ ವ್ಯಯಿಸಿದ್ದುಂಟು. ಚಲಚ್ಚಿತ್ರ ಪ್ರೇಕ್ಷಕರ ಬೆಂಬಲದ ಭರವಸೆಯ ಮೇಲೆಯೇ ಇಷ್ಟು ಹೆಚ್ಚು ಮೊತ್ತವನ್ನು ನಿಕ್ಷೇಪಿಸಲಾಗಿರುವುದರಿಂದ ಪ್ರೇಕ್ಷಕರ ಪ್ರೋತ್ಸಾಹ ಧಾರಾಳವಾಗಿ ಸಿಗುತ್ತಿರುವಂತೆ, ಅವರ ಮನಸ್ಸನ್ನು ಚಿತ್ರವು ಸಂಪೂರ್ಣವಾಗಿ ತನ್ನೆಡೆಗೆ ಸೆಳೆದುಕೊಳ್ಳುವಂತೆ ಏನೇನು ತಂತ್ರಗಳನ್ನು ರಚಿಸಿದರಾಗಬಹುದು ಎಂದು ಉತ್ಪಾದಕರೂ ಅವರ ವಿಚಾರಗಳಿಗೆ ರೂಪುಗೊಡುವ ದಿಗ್ದರ್ಶಕರೂ ಚಿಂತಿಸುವುದು ಸಹಜ.

ಇಲ್ಲಿ "ಕಲೆ" ಎಂಬ ಶ್ರೇಷ್ಠವಾದ ಅಂಶದ ಕೊಲೆಯು ಚಲಚ್ಚಿತ್ರ ಪ್ರಪಂಚದಲ್ಲಿ ನಡೆಯಲು ಆಸ್ಪದವಾಗುತ್ತದೆ. ಸುಂದರವಾದ ವಸ್ತುವನ್ನು ಉದಾತ್ತವಾಗಿ ನಿರೂಪಿಸುವ ಸನ್ಮಾರ್ಗವನ್ನು ಬಿಟ್ಟುಕೊಟ್ಟು ಸಾಮಾನ್ಯ ಪ್ರೇಕ್ಷಕರ ಅಪಕ್ವ ಬುದ್ಧಿಯನ್ನೂ ಪಶುಪ್ರವೃತ್ತಿಯನ್ನೂ ಬೇಗನೇ ಸ್ಪರ್ಶಿಸಿ ಹೊಡೆದೆಬ್ಬಿಸುವ ಬೀಭತ್ಸ ಮತ್ತು ಜುಗುಪ್ಸಾವಹ ಸನ್ನಿವೇಶಗಳ ಚಿತ್ರವೆತ್ತುವುದರಲ್ಲೇ ಪುರುಷಾರ್ಥ ಕಾಣುವ ಉತ್ಪಾದಕರು (ಮತ್ತು ದಿಗ್ದರ್ಶಕರು) ಹೆಚ್ಚು. ತಮಗೆ ಹಣ ಸಂಪಾದನೆಯಾಗಬೇಕೆಂದು ಅವರು ಜನರ ಅಜ್ಞಾನದ ಮತ್ತು ದೌರ್ಬಲ್ಯದ ಕೊಳ್ಳೆ ಹೊಡೆಯಲು ನೋಡುವುದು ಸರಿಯೇ ಎಂಬ ಪ್ರಶ್ನೆ ವಿಚಾರವಂತರಿಂದ ಈಗ ಕೇಳಲ್ಪಡುತ್ತದೆ. ಚಲಚ್ಚಿತ್ರ ಪ್ರಪಂಚದಲ್ಲಿ ಕೆಲವರ ವಿಶ್ವಾಸ ಹಾರಿಹೋಗುವುದಕ್ಕೆ ಸ್ವಾರ್ಥಾಂಧರಾದ ನೀಚ ಕಾಮನೆಯ ಕೆಲವು ಉತ್ಪಾದಕರೂ ಕಾರಣ. ಚಲಚ್ಚಿತ್ರವು ಮನೋರಂಜನೆಯ ಉದ್ದೇಶವಾಗುಳ್ಳ ಕಲೆಯಾಗಿರುವುದರಿಂದ ಅದು ಶಿಕ್ಷಕನ ಕೆಲಸ ಮಾಡಬೇಕೆನ್ನುವುದು ಸರಿಯಲ್ಲವೆಂದು ವಾದಿಸಲಾಗುತ್ತದೆ-ಆದರೆ ಮನೋರಂಜನೆಯು ಸಮಾಜ ಕಂಟಕವಾಗಬಾರದು ಎಂಬುದನ್ನು ಅವರೂ ಒಪ್ಪಬೇಕಾಗುತ್ತದೆ. ಸ್ವಾತಂತ್ರ್ಯವು ನಮಗೆ ಬೇಕಾದ ವ್ಯಾಪಾರವನ್ನು ಮಾಡಗೊಡುವುದಾದರೂ ವೇಶ್ಯಾವಾಟಿಕೆಗಳನ್ನು ನಡೆಸುವ, ಭ್ರಾಮಕ ಔಷಧಗಳನ್ನು ಪ್ರಚಾರ ಮಾಡುವ ಇತ್ಯಾದಿ ಘಾತುಕ ವ್ಯವಹಾರಗಳನ್ನು ವ್ಯಕ್ತಿ ಸ್ವಾತಂತ್ರ್ಯದ ಹದ್ದಿನೊಳಗಿಂದ ಅದು ಹೊರಗಿಡುತ್ತದೆ. ಚಲಚ್ಚಿತ್ರ ಪ್ರಪಂಚಕ್ಕಾದರೂ ಇದೇ ಮಾತನ್ನು ಅನ್ವಯಿಸಬಹುದು.

ಕೆಲಸಮಯದ ಹಿಂದೆ ವರದಿಯೊಪ್ಪಿಸಿದ ಚಲಚ್ಚಿತ್ರ ವಿಚಾರಣಾ ಮಂಡಳದ ಅಭಿಪ್ರಾಯದಂತೆ ಉದ್ಯಮವನ್ನು ಬೆಳೆಯಗೊಟ್ಟಿಲ್ಲವೆಂದೇ ನಮ್ಮ ಚಿತ್ರಗಳ ಮಟ್ಟ ಉತ್ತಮವಾಗಿಲ್ಲ; ಚಿತ್ರಗಳ ಮಟ್ಟ ತೃಪ್ತಿಕರವಿಲ್ಲವೆಂಬುದರಿಂದಲೇ ಉದ್ಯಮ ಅಭಿವೃದ್ಧಿಗೊಳ್ಳಲಿಲ್ಲ ಎಂಬ ವಿಚಿತ್ರ ಪರಿಸ್ಥಿತಿ ಈಗ ಕಂಡುಬರುತ್ತದೆ. ಚಲಚ್ಚಿತ್ರಗಳ ಮಟ್ಟವನ್ನು ಉತ್ತಮಗೊಳಿಸುವಲ್ಲಿ ಕಲಾದೃಷ್ಟಿಗೆ ಲಕ್ಷ್ಮೀ ಕಟಾಕ್ಷಕ್ಕಿಂತಲೂ ಹೆಚ್ಚು ಮಹತ್ವ ಸಲ್ಲಬೇಕೆನ್ನುವುದು ಸ್ವತಃ ಸಿದ್ಧ. ಮಟ್ಟ ಉತ್ತಮಗೊಂಡರೆ, ಪೇಟೆ ವಿಸ್ತಾರವಾಗುತ್ತದೆ; ಸಾಮಾಜಿಕ ಜವಾಬುದಾರಿಯ ಹೊರೆ ಹೊತ್ತ ಸರಕಾರಕ್ಕೂ ಆ ಚಿತ್ರದಲ್ಲಿ ಆಸ್ಥೆ ಹುಟ್ಟುತ್ತದೆ; ಆಗವಿದೇಶಗಳಿಗೆ ಅದು ರವಾನೆಯಾಗಿ, ಅಲ್ಲಿಯ ಪ್ರೇಕ್ಷಕರಿಂದಲೂ ಹಣ ಸಂಪಾದಿಸಿ ಕೊಡಬಹುದು. ಬೇರೆ ದೇಶಗಳವರು ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಗಳ ಪರಿಚಯ ಮಾಡಿಕೊಡುವ, ನಮ್ಮ ಸಮಸ್ಯೆ ಮತ್ತು ಹೋರಾಟದ ತಿಳಿವಳಿಕೆಯನ್ನು ಹುಟ್ಟಿಸುವ ಚಲಚ್ಚಿತ್ರಗಳ ವಿಷಯದಲ್ಲಿ ಆಸ್ಥೆತೋರಿಸುವ ಸಂಭವ ಹೆಚ್ಚು. ಅವರಿಗೆ ನಾವು ಅವರ ಕಥೆ ಮತ್ತು ಚಿತ್ರಗಳಿಂದಲೇ ನಕಲು ತೆಗೆದುದನ್ನು ನೀಡಿದರೆ ಹೇಗಾದೀತು? ಆದರೆ ನಿಜ ಹೇಳಬೇಕೆಂದರೆ ಈಗ ಚಿತ್ರಪಟಗಳ ನಿರ್ಮಾಣವಾಗುವುದೇ ಹಾಗೆ— ಅಬ್ಬಾಸರ ಮಾತಿನಲ್ಲಿ ಪಾಶ್ಚಾತ್ಯ ಕಾದಂಬರಿಗಳು, ಚಿತ್ರಗಳು ಅಥವಾ ಹಿಂದೊಮ್ಮೆ ಯಶಸ್ವಿಯಾದ ಭಾರತೀಯ ಮಾಲಿಕೆಗಳು ನಮ್ಮ ಇಂದಿನ ಚಲಚ್ಚಿತ್ರಗಳಿಗೆ ವಸ್ತುವಾಗುತ್ತವೆ. ಅವುಗಳಿಗಾಗಿ ಭಾರತೀಯ ಸಾಹಿತ್ಯದ ಕೃತಿಗಳನ್ನು ಅಳವಡಿಸಿಕೊಳ್ಳುವ ಉತ್ಸಾಹ ಉತ್ಪಾದಕರಿಗಿಲ್ಲ.

ತೀರ ಶೋಚನೀಯವಾದ ಈ ಪರಿಸ್ಥಿತಿ ಎಷ್ಟು ಬೇಗ ಸುಧಾರಿಸಿ, ನಾವು ಎಷ್ಟು ಬಗೆಯಾಗಿ ಹೊಸ ಸಾಹಿತ್ಯವನ್ನೂ ವಸ್ತುವನ್ನೂ ಪ್ರಕಾರವನ್ನೂ ಚಲಚ್ಚಿತ್ರಕ್ಕೆ ಬಳಸಿಕೊಂಡೆವೋ ಅಷ್ಟು ಮಟ್ಟಿಗೆ ಚಲಚ್ಚಿತ್ರೋದ್ಯಮದ ಪ್ರಗತಿಯಾಗುತ್ತದೆ. ಸಂಗೀತ ನಾಟಕಗಳ ಮಾದರಿಯ ಚಲಚ್ಚಿತ್ರಗಳಿಂದಲೇ ಭಾರತೀಯ ರಸಿಕರ ಮನತಣಿಸುವ ದಿನ ಹೆಚ್ಚು ವಿಳಂಬವಿಲ್ಲದೆ ಅಂತ್ಯವಾಗುವುದು ನಿಶ್ಚಯ. ಹಾಗೆಯೇ ಸನ್ಯಾಸಿನವರ ಕುತ್ತದಿಂದ ಪಾರಾಗುವುದಕ್ಕಾಗಿಯೋ "ಭವ್ಯ"ವಾದ "ಸಂಸ್ಕೃತಿ"ಗೆ ಕನ್ನಡಿ ಹಿಡಿಯುವುದಕ್ಕೆಂದೋ ಪೌರಾಣಿಕ ಕಥೆಗಳನ್ನು ಹೆಣೆದು ರಾಮಾಯಣವನ್ನು ಹನುಮಾಯಣ ಮಾಡಿ ಜನಪ್ರಿಯತೆಗಳಿಸುವ ತಂತ್ರವೂ ಹಳೆಯದೆನಿಸುವ ಸಮಯ ಬೇಗನೇ ಬರುತ್ತದೆ. ಇದರ ಜೊತೆಗೆ ಇನ್ನೊಂದು ವಿಷಯ ನೆನಪಿಟ್ಟುಕೊಳ್ಳಬೇಕು—ಅದು ತಂತ್ರ ಕೌಶಲ್ಯಕ್ಕೆ ಸಂಬಂಧಿಸಿದ ವಿಚಾರ. ನಾವು ನಲ್ವತ್ತು ವರ್ಷಗಳ ಹಿಂದಿನ ಪರಿಸ್ಥಿತಿಗಿಂತ ಈಗ ತುಂಬ ಉತ್ತಮ ಸೌಲಭ್ಯಗಳನ್ನು ಹೊಂದಿದ್ದೇವೆ; ಮತ್ತು ತಾಂತ್ರಿಕ ಪ್ರಗತಿಯನ್ನೂ ಗಣನೀಯವಾಗಿ ಸಾಧಿಸಿದ್ದೇವೆ. ಚಲಚ್ಚಿತ್ರಗಳ 'ಮಟ್ಟ'ದ ಕುರಿತು ಮಾತನಾಡುವಾಗ ತಾಂತ್ರಿಕ ಕೌಶಲ್ಯ ತೃಪ್ತಿಕರವಿದೆಯಾಗಿಯೇ ಎಲ್ಲ ಟೀಕಾಕಾರರೂ ಅಭಿಪ್ರಾಯಪಟ್ಟು ವಸ್ತು ಮತ್ತು ಅದರ ನಿರೂಪಣೆ, ಮತ್ತು ಅಭಿನಯಗಳ ಕುರಿತಷ್ಟೇ ಅತೃಪ್ತಿ ಪ್ರಕಟಿಸುವುದು ಹೆಚ್ಚು. ನಮ್ಮ ತಂತ್ರ ಕುಶಲರು ಸ್ವಂತ ಬುದ್ಧಿಯಿಂದಲೇ ಈಗಿನ ಸಿದ್ಧಿ ಪಡೆದುಕೊಂಡರು- ಅವರಿಗೆ ಕಲಿಸುವವರು ಯಾರೂ ಇರಲಿಲ್ಲ, ಮಾಡಿದ ತಪ್ಪಿಗೆ ಪಟ್ಟ ಪ್ರಾಯಶ್ಚಿತ್ತವೇ ಅವರಿಗೆ ಶಿಕ್ಷಣವಾಯಿತು. ಎಲ್ಲ ನಿಜ—

(೧೨ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಿಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು.

Member: I. S. T. M. A.

ಕಂಬೋಡಿಯದ ರಾಜಕೀಯ ಗೊಂದಲ

ಪ್ರಾಚೀನ ಭಾರತದ ವೈಭವ ಬೀರಿದ ಸ್ಥಾನ

ಕಂಬೋಡಿಯವು ಇಂಡೋಚೀನದ ಮೂರು ತುಂಡು ರಾಜ್ಯಗಳಲ್ಲಿ ಒಂದು. ಅಲ್ಲಿ ರಾಜ್ಯವನ್ನು ಆಳುತ್ತಿದ್ದ ೩೪ ವರ್ಷ ಪ್ರಾಯದ ಯೋಧ ರಾಜಕಾರಣಿ ನರೋದಂ ಸಿಹನೌಕ ವರ್ಮರು ಇದೇ ಮಾರ್ಚಿ ೧೬ನೇ ತಾರೀಕಿಗೆ ಭಾರತಕ್ಕೆ ಸಂದರ್ಶನದ ಮೇಲೆ ಬರುವರೆಂದು ಫೆಬ್ರುವರಿ ಪ್ರಥಮ ವಾರದಲ್ಲಿ ಬಂದ ವರದಿಗಳು ತಿಳಿಸಿದ್ದವು. ಇದರಿಂದ ಉಭಯ ರಾಷ್ಟ್ರಗಳ ನಡುವೆ ಶತಮಾನಗಳ ಹಿಂದಿನಿಂದಿದ್ದ ಸಾಂಸ್ಕೃತಿಕ ಬಾಂಧವ್ಯದ ಪುನರುಜ್ಜೀವನವಾಗುವುದೆಂದೂ ಕಂಬೋಡಿಯದ ಪ್ರತಿಷ್ಠೆ ಹೆಚ್ಚುವುದಕ್ಕೆ ಭಾರತದೊಡನೆ ಅದರ ಗೆಳೆತನ ನೆರವಾಗುವುದೆಂದೂ ನಿರೀಕ್ಷಕರು ಅಭಿಪ್ರಾಯಪಟ್ಟಿದ್ದರು. ನಲ್ವತ್ತು ರಾಷ್ಟ್ರಗಳಿಂದ ಮನ್ನಣೆ ಪಡೆದಿದ್ದರೂ ಕೇವಲ ನಾಲ್ಕು ರಾಷ್ಟ್ರಗಳೊಡನೆ ಮಾತ್ರ ರಾಯಭಾರ ಸಂಬಂಧವನ್ನಿಟ್ಟುಕೊಂಡಿರುವ ಕಂಬೋಡಿಯವು ಜಾಗತಿಕ ರಾಜಕೀಯದಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸುವುದಕ್ಕೆ ಇದು ಸಹಾಯಕವಾದೀತೆಂದು ಸಾಮಾನ್ಯವಾಗಿ ಎಲ್ಲರೂ ಊಹಿಸಿದ್ದರು. ಆದರೆ ಕಂಬೋಡಿಯದಿಂದ ಈ ವಾರ ಬಂದಿರುವ ವಾರ್ತೆಗಳು ಅಲ್ಲಿ ದೊಡ್ಡದೊಂದು ವಿಪ್ಲವ ನಡೆದ ಸಂಗತಿಯನ್ನು ಪ್ರಕಟಿಸುತ್ತವೆ; ಅರಸು ಸಿಹನೌಕರು ತಮ್ಮ ಸಿಂಹಾಸನ ಬಿಟ್ಟುಕೊಟ್ಟರೆಂಬುದೇ ಅದರ ಸಾರಾಂಶ.

ನಲ್ವತ್ತು ಲಕ್ಷ ಪ್ರಜೆಗಳಿರುವ ಕಂಬೋಡಿಯದಲ್ಲಿ ಅರಸನ ಮೇಲೆ ನಿಷ್ಠೆ ಉಳ್ಳವರೇ ಹೆಚ್ಚು. ಕಂಬೋಡಿಯದ ನಾಗರಿಕರು ಸುಂದರರೆಂತೋ, ಸದ್ಗುಣಕ್ಕೂ ಸಾತ್ವಿಕತೆಗೂ ಹಾಗೆಯೇ ಹೆಸರಾದವರು. ಅವರು ರಾಜನ ವಿರುದ್ಧ ಹೋಗುವ ಇಚ್ಛೆಯುಳ್ಳವರಲ್ಲ—ಈಚೆಗೆ ಅರಸು ಸಿಹನೌಕರು ತನ್ನಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುವ ಬಗ್ಗೆ ಜನಾಭಿಪ್ರಾಯವನ್ನು ಸಂಗ್ರಹಿಸಿದಾಗ ೯೯% ನಾಗರಿಕರು ಅರಸನಲ್ಲಿ ವಿಶ್ವಾಸವನ್ನು ಪ್ರದರ್ಶಿಸಿದರು; ಕೇವಲ ೧೮೦ ಮಂದಿ ವಿರುದ್ಧ ಮತವಿತ್ತರು. ಮತಾಧಿಕಾರ ಹೊಂದಿದ ಎಲ್ಲ ಗಂಡಸರೂ ತಮ್ಮ ಅಧಿಕಾರವನ್ನು ಚಲಾಯಿಸಲು ಮುಂಬಂದಿದ್ದರು. ಆದರೂ ಸಿಹನೌಕರು ಸಿಂಹಾಸನವನ್ನು ತ್ಯಜಿಸಿ, ತನ್ನ ತಂದೆಗೆ ಅದನ್ನು ಬಿಟ್ಟು ಕೊಡಲು ನಿರ್ಣಯಿಸಿರುವುದರ ಗೂಢ ಬೇಗನೆ ಮನವರಿಕೆಯಾಗುವುದಿಲ್ಲ. ದೇಶಬಾಂಧವರಿಗೆ ನೀಡಿದ ಕೊನೆಯ ಸಂದೇಶದಲ್ಲಿ ಕೆಲವು ರಾಜಕೀಯ ಪಕ್ಷಗಳು ತಾನು ತರಬೇಕೆಂದಿದ್ದ ಘಟನಾತ್ಮಕ ಸುಧಾರಣೆಗೆ ಅಡ್ಡ ಮಾಡಿದವೆಂದು ಸಿಹನೌಕರು ಹೇಳಿದರು. ಜಿನೇವಾ ಒಪ್ಪಂದದಂತೆ ಅಲ್ಲಿ ಕೆಲಸ ಮಾಡುತ್ತಿರುವ ಅಂತಾರಾಷ್ಟ್ರೀಯ ಮಂಡಳದ ಮುಂದೆ ಈ ರಾಜಕೀಯ ಪಕ್ಷಗಳು ದೂರನ್ನೊಯ್ದಿವೆಯೆಂದೂ ಆದುದರಿಂದ ತನ್ನ ಉದ್ದೇಶವನ್ನು ಸಾಧಿಸಲಾಗದೆ ಸಿಂಹಾಸನದಲ್ಲಿ ಕುಳಿತಿರುವುದಕ್ಕಿಂತ ಅದನ್ನು ಬಿಟ್ಟುಕೊಡುವುದೇ ಲೇಸೆಂಬ ತೀರ್ಮಾನಕ್ಕೆ ಬಂದಿರುವುದಾಗಿಯೂ ಸಿಹನೌಕ ಸ್ಪಷ್ಟೀಕರಣವನ್ನು ಕೊಟ್ಟರು.

ಸಿಹನೌಕರು ಕಂಬೋಡಿಯದ ಸಿಂಹಾಸನವನ್ನು ೧೯ನೇ ವರ್ಷ ಪ್ರಾಯದಲ್ಲಿ ೧೯೪೧ನೇ ಇಸವಿಯಲ್ಲಿ ತನ್ನ ಅಜ್ಜನ ಬಳಿಕ ಏರಿದರು. ಕಂಬೋಡಿಯದಲ್ಲಿ ಆನುವಂಶಿಕವಾಗಿಯೆ ಪಟ್ಟದ ಮೇಲೆ ಕೂಡುವ ಅಧಿಕಾರ ಹೋಗುವುದೆಂದಿಲ್ಲ. ಹಿಂದಿನ ಅರಸನ ಮತ್ತು ಅರಸು ಮನೆತನದ ಮಂಡಳದ ಇಚ್ಛೆಯೇ ಉತ್ತರಾಧಿಕಾರಿಯನ್ನು ನಿರ್ಣಯಿಸುತ್ತದೆ. ಫ್ರೆಂಚರ ಆಶ್ರಿತ ರಾಜ್ಯವಾಗಿದ್ದ ಕಂಬೋಡಿಯದಲ್ಲಿ ಅವರು ಹೇಳಿದಂತೆ ಕುಣಿಯುವ ಕೈಗೊಂಬೆಯೇ ಸಿಂಹಾಸನವನ್ನು ಏರುತ್ತಿದ್ದನು. ನ್ಯಾಯವಾದ ಉತ್ತರಾಧಿಕಾರಿ ಎಂದು ಹೇಳಬಹುದಾಗಿದ್ದ ಇನ್ನೊಬ್ಬನ ಹಕ್ಕನ್ನು ಅಲ್ಲಗಳೆದು ಅಧಿಕಾರಕ್ಕೆ ಬಂದ ಸಿಹನೌಕರು ಕೆಲವು ವರ್ಷಗಳ ಕಾಲ ಫ್ರೆಂಚರ ನಿರೀಕ್ಷೆಯಂತೆಯೇ ನಡೆದರು. ಇನ್ನೂ ಹುಡುಗ ಪ್ರಾಯದ ಅವರು ಕುದುರೆ ಸಾಕುವುದು, ತಾನು ಅಭಿನಯಿಸಿದ ಚಲಚ್ಚಿತ್ರಗಳನ್ನು ಎತ್ತುವುದು, ಗೀತೆಗಳನ್ನು ಕಟ್ಟುವುದು, ಸರೋವರದಲ್ಲಿ ಆಟದ ಯುದ್ಧ ಹಡಗುಗಳಿಂದಲೂ ಉದ್ಯಾನದಲ್ಲಿ ಆಟದ ಟ್ಯಾಂಕುಗಳಿಂದಲೂ ಹೊಗೆ ಹಾರಿಸುವುದು, ರಾತ್ರಿಯನ್ನು ನೃತ್ಯಾಗಾರದಲ್ಲಿಯೂ ವಿಲಾಸಿನಿಯರೊಡನೆ ಭೋಗದಲ್ಲಿಯೂ ಕಳೆಯುವುದು ಮುಂತಾದ ವ್ಯಸನಗಳಲ್ಲಿಯೇ ನಿರತರಾಗಿರುತ್ತಿದ್ದರು. ಮದುವೆಯಾಗದ ವಿಲಾಸಿನಿಯರಿಂದ ಹುಟ್ಟಿದ ಅನೇಕ ಮಕ್ಕಳಿಗೆ ತಂದೆ ಎನಿಸಿಕೊಂಡು, ಅವರೊಡನೆ ಮುದ್ದು ಮಾತುಗಳನ್ನಾಡುತ್ತಾ ಸಮಯ ಕಳೆಯುವ ಸಿಹನೌಕರನ್ನು ಕಂಡು ಫ್ರೆಂಚರು ತೀರ ಸಂತುಷ್ಟರಾಗಿದ್ದರು. ಜಪಾನೀಯರು ಕಂಬೋಡಿಯವನ್ನು ಆಕ್ರಮಿಸಿದಾಗ, ಈ ಅರಸು ಬಂಧನದಲ್ಲಿ ಕೊಳೆಯಬೇಕಾಗಿದ್ದರೂ ಅನಂತರ ಯಾವ ತಾಪತ್ರಯವೂ ಆಗಲಿಲ್ಲ.

ಜಪಾನೀಯರ ಆಳ್ವಿಕೆಯು ಅಲ್ಪಾವಧಿಯದಾಗಿದ್ದರೂ ಕಂಬೋಡಿಯದ ಕೆಲವು ಪುರೋಗಾಮಿಗಳಲ್ಲಿ ಪ್ರಜಾಸತ್ತಾತ್ಮಕ ರಾಜ್ಯಭಾರ ಕ್ರಮದ ತೃಷೆಯನ್ನು ಹುಟ್ಟಿಸಿತೆಂಬುದು ಸುಳ್ಳಲ್ಲ. ಜಪಾನೀಯರು ಪ್ರಧಾನ ಮಂತ್ರಿಯಾಗಿ ಮಾಡಿದ್ದ ಸೊನ್ ನಗೋಕ್ ಥಾನ್ ಎಂಬವರು ಆಥವರ ಧುರೀಣರಾಗಿ ಸಿಹನೌಕರ ಮೇಲೆ ತಮ್ಮ ಪ್ರಭಾವವನ್ನು ಬೀರಲು ಪ್ರಯತ್ನಿಸಿದರು. ೧೯೫೧ರಲ್ಲಿ ಆರಿಸಲಾದ ರಾಷ್ಟ್ರೀಯ ಸಭೆಯಲ್ಲಿ ಈ ಧುರೀಣರ ಪ್ರಭಾವ ಸ್ಪಷ್ಟವಾಗಿಯೇ ಕಂಡುಬಂತು. ಆದುದರಿಂದ ರಾಷ್ಟ್ರೀಯ ಸಭೆಯು ರಾಜಕೀಯ ಸ್ವಾರ್ಥಸಾಧಕರ ಕೈಯಲ್ಲಿ ಬೀಳುವುದೆಂಬ ಕಾರಣವನ್ನು ತೋರಿಸಿ ೧೯೫೩ರಲ್ಲಿ ಅರಸು ಸಿಹನೌಕರು ಅದನ್ನು ರದ್ದು ಮಾಡಿದರು; ಮಾತ್ರವಲ್ಲ ನಗೋಕ್ ಥಾನರನ್ನು ಓಡಿಸಿ ಕೊಂಡೂ ಹೋದರು. ಥ್ಯಾಲೇಂಡಿನ ಗಡಿಯಲ್ಲಿ ಈ ಧುರೀಣ ತಲೆ ಮರೆಸಿಕೊಳ್ಳಬೇಕಾಯಿತು. ಫ್ರೆಂಚರು ಅರಸನ ಈ ಕ್ರಮಗಳನ್ನೆಲ್ಲ ಬೆಂಬಲಿಸುತ್ತಿದ್ದರು — ಆದರೆ ಸ್ವಲ್ಪ ಸಮಯದಲ್ಲಿಯೇ ಅರಸನು ಫ್ರೆಂಚರ ಮತ್ತು ಇಂಡೋಚೀನದಲ್ಲಿ ತುಂಬ ಹಿತಾಸಕ್ತಿಯನ್ನು ಪಡೆದಿದ್ದ ಅಮೇರಿಕನ್ನರ—ಮನಸ್ಸನ್ನೋಯಿಸುವ ರೀತಿಯಲ್ಲಿ ವರ್ತಿಸತೊಡಗಿದನು. ತನ್ನ ಪ್ರೀತಿಯನ್ನು ಬಹಳ ಹೆಚ್ಚು ಸಂಪಾದಿಸಿದ್ದ ವಿಲಾಸಿನಿಯೊಬ್ಬಳ ಮಗುವೊಂದು ೧೯೫೨ರಲ್ಲಿ ತೀರಿಹೋದಾಗ ಅರಸು ಬಹಳ ದುಃಖಿತನಾದನು. ಆಗ ಅವನಿಗೆ ಸಮಾಧಾನ ಹೇಳಲು ಬಂದ ಬೌದ್ಧ ಭಿಕ್ಷುಗಳು ಫ್ರೆಂಚರ ಕೈಗೊಂಬೆಯಾದುದಕ್ಕೆ ದೇವರಿತ್ತ ಶಿಕ್ಷೆ ಇದೆಂದು ಹೇಳಿದರು. ಒಡನೆಯೇ ಈ ಧರ್ಮಭೀರು ಅರಸನ ನೀತಿಯು ಫ್ರೆಂಚರ ವಿರುದ್ಧವಾಗಿ ಪರಿವರ್ತನೆ ಹೊಂದಿತು.

ಥೈಲೆಂಡಿಗೆ ಓಡಿ ಹೋಗಿ ಸಿಂಹಾಸನದ ಚಿಂತೆಯನ್ನು ಬಿಡುವಂತೆ ಸಿಹನೌಕರನ್ನು ಈ ಘಟನೆ ಪ್ರೇರಿಸಿತೆಂದರೆ ಅತಿಶಯೋಕ್ತಿಯಾಗದು. ಪರಾಧೀನತೆಗಿಂತ ಮರಣವೇ ಲೇಸು ಎಂಬ ಪಲ್ಲವಿಯನ್ನು ಹಾಡ ಹತ್ತಿದ ಅರಸನನ್ನು ಬಹಳ ಮನವೊಲಿಸುವಿಕೆಯ ತರುವಾಯ ರಾಜಧಾನಿಯಾದ ಪನೋಂಪೆನಿಗೆ ಕರೆದು ತರಲಾಯಿತು. ಫ್ರೆಂಚರು ರಾಜ್ಯಕ್ಕೆ ಸ್ವಾತಂತ್ರ್ಯವನ್ನು ಕೊಟ್ಟರು; ಸೈನ್ಯದ ಮೇಲೆ ಅರಸನಿಗೆ ಅಧಿಕಾರವನ್ನು ಕೊಟ್ಟರು. ಹೀಗೆ "ಕಾಂಬ" ಜನಗಳ ಈ ಅರಸನನ್ನು ಸಮಾಧಾನಪಡಿಸಿದರು. ಇಂಡೋಚೀನದ ಕಾಳಗ ವಿಷಮಿಸುತ್ತಿದ್ದ ಆ ಗಳಿಗೆಯಲ್ಲಿ ಅರಾಜಕತೆಯನ್ನು ತಂದೊಡ್ಡುವುದೂ ಕ್ರಾಂತಿ ಅಥವಾ ವಿಪ್ಲವಕ್ಕೆ ದಾರಿಮಾಡಿಕೊಡುವುದೂ ಅವರಿಗೆ ಒಪ್ಪಿಗೆಯಿಸಲಿಲ್ಲ. ಆದುದರಿಂದ ಅವರು ಸಿಹನೌಕರ ತರುಣ ಮನಸ್ಸಿನಂತೆಯೇ ನಡೆಯುವನ್ನು ಔದಾರ್ಯದಿಂದ ವರ್ತಿಸಿದರು. ಇದರಿಂದ ಒಳ್ಳೆಯ ಪರಿಣಾಮವೇ ಆಯಿತು; ಏಕೆಂದರೆ ಹೋಚಿಮಿನರ ಸೇನೆಯು ಕಂಬೋಡಿಯದ ಸೀಮೆಯನ್ನು ಪ್ರವೇಶಿಸುವ ಸಿದ್ಧತೆ ನಡೆಸಿದಾಗ ಸಿಹನೌಕರ ತಮ್ಮ ಪ್ರಜೆಗಳಲ್ಲಿ ರಾಷ್ಟ್ರಪ್ರೇಮವನ್ನು ಉಕ್ಕೇರಿಸಿ ದಾಳಿಯನ್ನು ತಡೆಯಲು ಪ್ರಯತ್ನಿಸಿದರು. ವೀಟಮಿನರೊಡನೆ ಹೋರಾಡುವ ನಿರ್ಧಾರದಿಂದ ಕಾರ್ಯಕ್ರಮಗಳನ್ನು ಕೈಗೊಂಡರು. ಅಂತೂ ಕೊನೆಗೊಮ್ಮೆ ಎಲ್ಲ ಹೋರಾಟವೂ ಜಿನೇವಾ ಒಪ್ಪಂದದಲ್ಲಿ ಮುಗಿಯಿತು— ಇದರಂತೆ ಈ ವರ್ಷ ಕಂಬೋಡಿಯದಲ್ಲಿ ಚುನಾವಣೆ ನಡೆಯಬೇಕು. ಹಾಗೆ ಅರಸನ ಮೇಲೆ ತಪ್ಪಿಹೋದ ನಿಯಂತ್ರಣ ಹೇರಬೇಕು ಎಂದು ಫ್ರೆಂಚರ ಅಭಿಪ್ರಾಯ. ಸಿಹನೌಕರ ಅಸಂತೋಷಕ್ಕೆ ಇದೇ ಕಾರಣ.

ಭಾರತೀಯರ ಕುತೂಹಲವನ್ನು ಕೆರಳಿಸುವ ವಿಷಯಗಳು ಕಂಬೋಡಿಯದಲ್ಲಿವೆ—ಎಂಬುದನ್ನು ಹೇಳಲು ಇನ್ನು ದೊಡ್ಡ ಪೀಠಿಕೆ ಹಾಕಬೇಕಾಯಿತು. ಅರಸು ಸಿಹನೌಕರು ಮತ್ತು ಇತರ ನಾಗರಿಕರು

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೊಟ್ಟೆಗೆ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ — ಬೆಂಗಳೂರು 2.
(2) ಷಾ ಕಂಪೆನಿ — ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್ — ಚಿಂತಾಮಣಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಮ್ಮ ಸಾಂತ್ವ—ಮುಂಬಾಯಿ ಶಾಖೆಯು 51, ಕ್ವೀನ್ಸ್ ರೋಡ್, ಒಪೆರಾ, ಮುಂಬಾಯಿ-9, ಇಲ್ಲಿ ಈಗಾಗಲೇ ತೆರೆಯಲ್ಪಟ್ಟಿದೆ. ನಮ್ಮ ಎಲ್ಲಾ ಭಾಗೀದಾರರೂ, ಗ್ರಾಹಕರೂ, ಹಿತೈಷಿಗಳೂ ಇದನ್ನು ದಯವಿಟ್ಟು ಲಕ್ಷ್ಯದಲ್ಲಿಟ್ಟು, ಎಂದಿಗಿಂತಲೂ ಹೆಚ್ಚಾಗಿ, ತಮ್ಮ ಪ್ರೋತ್ಸಾಹವನ್ನು ನಮ್ಮ ಈ ಶಾಖೆಗೆ ನೀಡಬೇಕಾಗಿ ಕೇಳುತ್ತೇವೆ.

ಡಾ| ಯು. ಸುಂದರ ರಾವ್ ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ವಿ. ಆರ್. ಕಾಮತ್, ಬಿ. ಎ. ಎಲ್‌ಎಲ್. ಬಿ., ಜನರಲ್ ಮೆನೇಜರ್.

Estd:- 1906] [H. O. UDIPI (S.India).

THE CANARA BANKING CORPORATION LIMITED

ಬೌದ್ಧರು. ಧರ್ಮದಲ್ಲಿ ತುಂಬ ನಿಷ್ಠೆಯುಳ್ಳವರು. ಭಾರತದಿಂದಲೇ ಬೌದ್ಧ ಧರ್ಮವು ಅಲ್ಲಿ ಪ್ರಸಾರವಾಯಿತು. ಆ ರಾಜ್ಯದಲ್ಲಿ ಹಿಂದೂ ಮತದ ಅಲೌಕಿಕ ಸಂಸ್ಕೃತಿಯ ಕುರುಹುಗಳು ಸಹ ಕಂಡು ಬರುತ್ತವೆ. ರಾಜಧಾನಿಯಾದ ಪನೋಂಪೆನದಿಂದ ವಾಯು ಮಾರ್ಗವಾಗಿಯಾಗಲೀ ಜಲ ಮಾರ್ಗವಾಗಿಯಾಗಲೀ ಸೀಮ್ ರೀಪ್ ಎಂಬಲ್ಲಿಗೆ ಹೋದರೆ ಅನತಿ ದೂರದಲ್ಲಿಯೇ ಅಂಕೋರ್ ವಾಟ್ ಎಂಬ ಪ್ರಖ್ಯಾತ ದೇವಾಲಯಗಳ ನಗರ ಕಾಣ ಸಿಗುತ್ತದೆ. ಪ್ರಾಚೀನ ಭಾರತೀಯ ಶಿಲ್ಪ ವೈಭವದಲ್ಲಿ ಜಿಜ್ಞಾಸೆಯುಳ್ಳವರಿಗಿದೊಂದು ಯಾತ್ರಾಕ್ಷೇತ್ರ. ಸುಮಾರು ಕ್ರಿಸ್ತಶಕ ೮೦೦ರಿಂದ ೧೩೦೦ ವರ್ಷಗಳ ವರೆಗೆ ರಾಜ್ಯವನ್ನಾಳುತ್ತಿದ್ದ ಖಮೇರು ವಂಶದ ಅರಸರ ರಾಜಧಾನಿ ಅಂಕೋರ್ ಟಾಮ್ ಇದಕ್ಕೆ ಹತ್ತಿರದಲ್ಲಿಯೇ ನೋಡ ಸಿಗುತ್ತದೆ. ಅಂಕೋರ್ ವಾಟ್ ಮಂದಿರಗಳನ್ನು ನಿರ್ಮಿಸಿದ ಶಿಲ್ಪಿ ಯಾರೋ ಗೊತ್ತಿಲ್ಲ — ಆದರೆ ಅದನ್ನು ಕ್ರಿಸ್ತಶಕ ೧೧೧೩ರಿಂದ ೧೧೪೩ ವರ್ಷಗಳ ವರೆಗೆ ಆಳಿದ ಎರಡನೇ ಸೂರ್ಯ ವಿಕ್ರಮವರ್ಮನ ಕಾಲದಲ್ಲಿ ಕಟ್ಟಲಾಯಿತೆಂದು ಮಾತ್ರ ಶಾಸನಗಳಿಂದ ತಿಳಿದು ಬರುತ್ತದೆ. ಅಂಕೋರ್ ಟಾಮ್ ಎಂಬುದು ಸಹ ಚೆಲುವಾದ ದೇವಾಲಯಗಳಿಂದ ಶೋಭಿಸುತ್ತದೆ. ಹೊಯಿಗೆಯ ಮೇಲೆ ಜೀಪಿನಲ್ಲಿ ಇನ್ನಷ್ಟು ದೂರ ಹೋಗಬಲ್ಲೆವಾದರೆ ಬಾಂಟಿ ಸ್ರೀ ಎಂಬಲ್ಲಿ ಅರಸ ರಾಜೇಂದ್ರ ವರ್ಮನು ಕಟ್ಟಿಸಿದ ನಯನ ಮನೋಹರ ದೇಗುಲವನ್ನು ಕಾಣಬಹುದು.

ಪ್ರೇಕ್ಷಕನು ಅಂಕೋರ್‌ವಾಟ್ ಮಂದಿರಗಳ ಶೋಭೆಯನ್ನು ಹೀಗೆಂದು ವರ್ಣಿಸಿ ಹೇಳಲಾರ–ಏಕೆಂದರೆ ವರ್ಣನಾತೀತವಾದ ಸೊಬಗು ಅಲ್ಲಿಯದು. ಚಿತ್ರಗಳಿಂದಲೂ ಅಲ್ಲಿಯ ವಾಸ್ತವ ಸೌಂದರ್ಯವನ್ನು ಪ್ರತಿನಿಧೀಕರಿಸುವುದು ಸಾಧ್ಯವಿಲ್ಲ. ಮುಖ್ಯ ದೇವಾಲಯದ ಹೊರ ಪೌಳಿಯ ಸುತ್ತಳತೆಯೇ ಎರಡೂವರೆ ಮೈಲುಗಳಷ್ಟಾಗುತ್ತದೆ; ಈ ಪೌಳಿಯೊಳಗೆ ನೂರಾರು ಕೆತ್ತನೆ ಕೆಲಸಗಳ ಪೃಷ್ಠಭೂಮಿಯಲ್ಲಿ ಮುಖ್ಯ ಮಂದಿರ ಕಂಗೊಳಿಸುತ್ತದೆ. ಪೌಳಿಯ ಹೊರಗೆ ವಿಶಾಲವಾದ ನೀರುತುಂಬಿದ ಕಂದಕಗಳಿದ್ದು ಅವುಗಳಲ್ಲಿ ಕಮಲ ಪುಷ್ಪಗಳು ಶೋಭಿಸುತ್ತವೆ. ಕಂದಕವನ್ನು ದಾಟಿ ಹೋಗಲು ಸೇತುವೆಗಳಿವೆ–ಎತ್ತರವಾದ ಶಿಖರಗಳಿಂದಲೂ ಮೂಲೆಯ ಮಿನಾರುಗಳಿಂದಲೂ ಒಂದು ಅಂಗುಲದಷ್ಟೂ ಜಾಗವನ್ನು ಉಳಿಯಗೊಡದೆ ಕೆತ್ತಿದ ಶಿಲ್ಪ ವೈಭವದಿಂದಲೂ ಮಂದಿರವನ್ನು ನೋಡಿದಷ್ಟೂ ಸಾಲದೆನಿಸುತ್ತದೆ. ಕಲ್ಪನಾದೃಷ್ಟಿ, ಸೌಂದರ್ಯದ ಪಾಕ ಮತ್ತು ಹಸ್ತ ಕೌಶಲ್ಯದ ಪ್ರತೀಕವಾಗಿ ಈ ಕೆತ್ತನೆ ಕೆಲಸವನ್ನು ಚುಟುಕಿನಲ್ಲಿ ವರ್ಣಿಸಬಹುದು. ಗರ್ಭಗುಡಿಯಲ್ಲಿ ಹಿಂದೊಮ್ಮೆ ವಿಷ್ಣುವಿನ ಮೂರ್ತಿಯಿತ್ತು—ಆದರೆ ಈಗ ತಥಾಗತ ಭಗವಾನನ ಪ್ರತಿಮೆ ಮಿಣಮಿಣನೆ ಉರಿಯುವ ನಂದಾದೀಪದೆದುರು ಕಾಣಿಸುತ್ತದೆ. ರಾಮಾಯಣ, ಮಹಾಭಾರತಗಳಾದಿಯಾಗಿ ನಮ್ಮ ದೇಶದ ಎಲ್ಲ ಸಾಹಿತ್ಯದ ಕೃತಿಯೊಂದೂ ದೃಶ್ಯವು ಕಲ್ಲಿನಲ್ಲಿ ಕೊರೆದಿರುತ್ತದೆ. ಬಟ್ಟೆಯಲ್ಲಿ ಕಸೂತಿಯನ್ನು ನೇಯ್ದಷ್ಟೇ ಸೂಕ್ಷ್ಮತೆಯಿಂದ ಇವುಗಳನ್ನು ಮಾಡಿರುವುದನ್ನು ಕಂಡು ಮನಸ್ಸು ಆಶ್ಚರ್ಯಪಡುತ್ತದೆ. ಇದರ ಜೊತೆಗೆ ಆಗಿನ ಜನರ ಜೀವನದ ಚಿತ್ರಗಳೂ ಅಲ್ಲಲ್ಲಿ ತೋರುತ್ತವೆ— ಆಗಿನ ಬೆಸ್ತರ ಜೀವನ ಕ್ರಮ, ಬೇಸಾಯಗಾರರು ಭತ್ತ ಕುಟ್ಟುವ ರೀತಿ ಇಂದಿಗೂ ಹಾಗೆಯೇ ಉಳಿದಿರುವುದಲ್ಲಾ ಎಂದು ನಾವು ಮೂಗಿಗೆ ಬೆರಳೇರಿಸುತ್ತೇವೆ. ಅಂದಿಗೂ ಇಂದಿಗೂ ಕಾಣಿಸುವ ಒಂದೇ ವ್ಯತ್ಯಾಸವೆಂದರೆ, ರಾಜಕೀಯ ಗೊಂದಲ ಅದೇ ಜನ— ಆದರೆ ಅಧಿಕಾರ ನಡೆಸಲು ತವಕ ಪಡುವ ರಾಜಕಾರಣಿಗಳ ತಂಡ ಮಾತ್ರ ಬೇರೆ, ಎಂಬುದು ಇಂದಿನ ವೈಶಿಷ್ಟ್ಯ.

ರೈಲ್ವೆ ಮುಂಗಡಪತ್ರದ ಚರ್ಚೆಗೆ ಉತ್ತರ

ಪ್ರಯಾಣಿಕರಿಗೆ ತೋರಿಸಲಾದ ಸವಲತ್ತು

ಸಂಸತ್ತಿನ ಉಭಯ ಸಭೆಗಳಲ್ಲಿಯೂ ಕಳೆದ ವಾರ ರೈಲ್ವೆ ಮುಂಗಡ ಪತ್ರದ ಮೇಲೆ ಚರ್ಚೆಯು ನಡೆಯಿತು. ಟಿಕೇಟುಗಳ ದರವನ್ನು ಏರಿಸುವುದಕ್ಕೆ ಮಂತ್ರಿಗಳು ಮುಂದಾದುದನ್ನು ಹೆಚ್ಚಿನ ಸದಸ್ಯರು ಖಂಡಿಸಿ ಮಾತನಾಡಿದರು. ಹೊಸ ರೈಲು ಮಾರ್ಗಗಳನ್ನು ಹಾಕ ಬೇಕಾದ ಆವಶ್ಯಕತೆಯನ್ನು—ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ರೈಲ್ವೆಗಳ ವಿಸ್ತರಣೆ ನಡೆಯ ಬೇಕಾದುದನ್ನು—ಅನೇಕ ಸದಸ್ಯರು ಒತ್ತಿ ಹೇಳಿದರು. ರೈಲ್ವೆಗಳಲ್ಲಿ ಭೋಜನ ಮತ್ತಿತರ ಸೌಕರ್ಯಗಳ ಮಟ್ಟವನ್ನು ಎತ್ತರಿಸಬೇಕೆಂದೂ ಕಾರ್ಯಕ್ಷಮತೆಯನ್ನು ಅಧಿಕಗೊಳಿಸಬೇಕೆಂದೂ ಬೇರೆ ಕೆಲವರು ಸೂಚಿಸಿದರು.

ರಿಯಾಯತಿಗಳು

ಸದಸ್ಯರ ಟೀಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಮುಂಗಡ ಪತ್ರದಲ್ಲಿ ಹೆಚ್ಚಿಸಬೇಕೆಂದಿದ್ದ ದರಗಳನ್ನು ೫೦ ಮೈಲು ದೂರದೊಳಗೆ ಮೈಲ್ ಮತ್ತು ಎಕ್ಸ್‌ಪ್ರೆಸ್ ಗಾಡಿಗಳಲ್ಲಿಯಲ್ಲದೆ ಬೇರೆ ಸಾಮಾನ್ಯ ರೈಲುಗಳಲ್ಲಿ ಸಂಚರಿಸುವ ಮೂರನೇ ವರ್ಗದ ಪ್ರವಾಸಿಕರ ವಿಷಯದಲ್ಲಿ ಟಿಕೇಟಿನ ದರಗಳನ್ನು ಈಗಿದ್ದಂತೆಯೆ ಇಡಲಾವುದೆಂಬ ರಿಯಾಯತಿಯನ್ನು ರೈಲ್ವೆ ಮಂತ್ರಿಗಳು ತಮ್ಮ ಉತ್ತರದಲ್ಲಿ ಸಾರಿದರು. ಇದರಿಂದ ರೈಲುಗಳ ಪ್ರಯಾಣಿಕರಲ್ಲಿ ನೂರಕ್ಕೆ ತೊಂಭತ್ತರಷ್ಟು ಮಂದಿಗೆ ಪ್ರಯೋಜನ ಸಿಗುವುದೆಂದೂ ಸರಕಾರಕ್ಕೆ ಮಾತ್ರ ಒಂದು ಕೋಟಿ ರೂಪಾಯಿಗಳಷ್ಟು ನಷ್ಟವಾಗುವುದೆಂದೂ ತಿಳಿದು ಬರುತ್ತದೆ. ರೈಲ್ವೆ ಮಂತ್ರಿಗಳು ಸಾರಿದ ಇನ್ನೊಂದು ರಿಯಾಯತಿಯಂತೆ ೨೦ ಮಣಕ್ಕಿಂತ ಕಡಿಮೆಯ ಗಂಟುಗಳ ಮೇಲೆ ನೂರಕ್ಕೆ ಹನ್ನೆರಡೂವರೆಯಷ್ಟೆಂದಿದ್ದ ಸರ್ಚಾರ್ಜನ್ನು ಆರೂಕಾಲಕ್ಕೂ ಅದರ ಕನಿಷ್ಠ ಮೊತ್ತವನ್ನು ಒಂದೂವರೆ ರೂಪಾಯಿಗಿಂತ ಒಂದು ರೂಪಾಯಿಗೂ ಇಳಿಸಲಾಗುತ್ತದೆ.

ಸ್ವಾವಲಂಬನದ ಸಂಕಲ್ಪ

ಬೇರೆ ವಿಷಯಗಳ ಕುರಿತು ಸರಕಾರದ ಪರವಾಗಿ ಹೀಗೆ ಉತ್ತರಿಸಲಾಯಿತು– ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ರೈಲ್ವೆಗಳನ್ನು ಈಗಿನದರ ಒಂದೂವರೆ ಪಾಲಿನಷ್ಟು ವಿಸ್ತರಿಸಬೇಕೆಂದು ಸರಕಾರ ಬಯಸುತ್ತದೆ. ಸುಮಾರು ೪೦೦೦ ಮೈಲುಗಳಷ್ಟು ಹೊಸ ದಾರಿಗಳನ್ನು ಹಾಕುವುದು ಅದರ ಉದ್ದೇಶ. ಆಗ ಸದಸ್ಯರ ಸೂಚನೆಗಳನ್ನು ಗಮನದಲ್ಲಿಡಲಾಗುವುದೆಂದೂ ಅಲ್ಲಿಯ ವರೆಗೆ ತಾಳ್ಮೆಯಿಂದಿರಬೇಕೆಂದೂ ಸರಕಾರ ವಿನಂತಿಸುತ್ತದೆ. ರೈಲ್ವೆ ಪ್ರಯಾಣಿಕರಿಗೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡುವ ಪ್ರಯತ್ನಗಳನ್ನು ಭರದಿಂದ ಮುಂದೊತ್ತಲಾಗುವುದು; ಟಿಕೇಟಿಲ್ಲದೆ ಪ್ರಯಾಣಿಸುವುದನ್ನು ತಡೆಗಟ್ಟಲೂ ಸಾಕಷ್ಟು ಜಾಗ್ರತೆ ವಹಿಸಲಾಗುವುದು; ರೈಲ್ವೆಗಳ ಆಡಳಿತ ವೆಚ್ಚ ಏರಿದೆಯೆಂದು ಕಂಡು ಬಂದರೂ ಟಿಕೇಟಿನ ದರಗಳನ್ನು ಜಗತ್ತಿನಲ್ಲಿಯೇ ಅತಿ ಕನಿಷ್ಠ ಮಟ್ಟದಲ್ಲಿರಿಸಿ, ಲಾಭಗಳಿಸಲಾಗುತ್ತದೆಯಾದುದರಿಂದ ಆ ಬಗ್ಗೆ ವಿಮರ್ಶನೆಗೆಡೆಯಿಲ್ಲ; ಸ್ವಾವಲಂಬನದ ದಿಸೆಯಲ್ಲಿ ಚಿತ್ತರಂಜನದ ಕಾರ್ಖಾನೆಯೇ ಮುಂತಾದವುಗಳು ದೃಢವಾದ ಹೆಜ್ಜೆಗಳಾಗಿರುತ್ತವೆ.

ಮದ್ರಾಸು ಶಾಸನ ಸಭೆಯಲ್ಲಿ

ಅರ್ಥಸಚಿವ ಸುಬ್ರಹ್ಮಣ್ಯಮರು ಮಂಡಿಸಿದ ಮುಂಗಡ ಪತ್ರದ ಮೇಲಿನ ಚರ್ಚೆಯು ಮದ್ರಾಸು ಶಾಸನಾಂಗದ ಉಭಯ ಸಭೆಗಳಲ್ಲಿಯೂ ಕಳೆದ ವಾರ ನಡೆಯಿತು. ಕೊರತೆ ತುಂಬಿಸಿಕೊಳ್ಳಲು ಮಾಡಲಾದ ಹೊಸ ತೆರಿಗೆಯ ಸೂಚನೆಗಳನ್ನು ಸದಸ್ಯರು ಟೀಕಿಸಿದರು. ಆಹಾರ ಧಾನ್ಯಗಳ ಬೆಲೆಯು ಇಳಿಮುಖವಾಗುತ್ತಾ ಹೋಗುತ್ತಿರುವಾಗ ರೈತರಿಂದ ಹೆಚ್ಚು ಕಂದಾಯ ಬೇಡುವುದು ಇಷ್ಟವಾದದಲ್ಲ ಎಂದವರು ಸರಕಾರದ ಸೂಚನೆಗಳನ್ನು ಖಂಡಿಸಿದರು. ಮಾಧ್ಯಮಿಕ ಮಟ್ಟದ ವರೆಗೆ ಪುಕ್ಕಟೆ ಶಿಕ್ಷಣ ಕೊಡುವ ನಿಶ್ಚಯವನ್ನು ಸದಸ್ಯರು ಸ್ವಾಗತಿಸಿದರೂ ಶಿಕ್ಷಣ ರಂಗದ ಅನಿಶ್ಚಿತತೆಯನ್ನು ಆಕ್ಷೇಪಿಸಿದರು.

ಮಂತ್ರಿಗಳ ಉತ್ತರ

ಚರ್ಚೆಗೆ ಉತ್ತರಿಸುತ್ತಾ ಮಂತ್ರಿಗಳು "ಭೂಕಂದಾಯವು ಕಳೆದ ಕೆಲವು ದಶಕಗಳಿಂದ ಏರಿಸಲ್ಪಡದೆ ಹಿಂದಿನ ದರದಲ್ಲಿಯೇ ವಸೂಲಾಗುತ್ತದೆ— ಆದರೆ ಭೂಮಿಯ ಮೇಲಿನ ಉತ್ಪಾದನೆಯ ಬೆಲೆ ಮಾತ್ರ ಈಚೆಗೆ ನಾಲ್ಕೈದು ಪಾಲು ಹೆಚ್ಚಿರುತ್ತದೆ ಹೀಗಿರುವಾಗ ತಮಗಾಗುತ್ತಿರುವ ಲಾಭದಲ್ಲಿ ಒಂದಿಷ್ಟನ್ನು ಸರಕಾರದ ಕಲ್ಯಾಣಕಾರ್ಯಗಳಿಗೆಕೊಡಿರೆಂದು ರೈತರನ್ನು ಕೇಳುವುದು ಅನ್ಯಾಯವಲ್ಲ" ಎಂದು ಕಂದಾಯದಲ್ಲಿ ರೂಪಾಯಿಗೆ ಎರಡಾಣೆಯಂತೆ ಏರಿಸುವ ಸೂಚನೆಯನ್ನು ಸಮರ್ಥಿಸಿಕೊಂಡರು. ಆಹಾರ ಧಾನ್ಯಗಳ ಬೆಲೆ ಇಳಿಮುಖವಾಗುತ್ತಾ ಬರುತ್ತಿರುವುದರಿಂದ ಗಾಬರಿಗೆಡೆಯಿಲ್ಲ. ಶಿಕ್ಷಣಕ್ಕೆ ಆದಾಯದ ಕಾಲಂಶವನ್ನು ತೆಗೆದಿಟ್ಟಿರುತ್ತದೆ; ಪ್ರಾಥಮಿಕ ಶಾಲೆಗಳ ಅಧ್ಯಾಪಕರ ಸ್ಥಿತಿಯನ್ನು ಸುಧಾರಿಸಲು ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆ; ಆದರೆ ಅವರು ತಾಳ್ಮೆ ತೋರಿಸಬೇಕು. ಸಾರ್ವಜನಿಕ ಆರೋಗ್ಯ ಮತ್ತು ಇತರ ಲೋಕೋಪಯೋಗಿ ಕ್ಷೇತ್ರದ ಕೆಲಸಗಳು ತೃಪ್ತಿಕರವಾದ ರೀತಿಯಲ್ಲಿ ಫಲಿತಾಂಶಗಳನ್ನು ಕೊಡುತ್ತಿದ್ದು, ಇದರಿಂದ ಕಲ್ಯಾಣ ರಾಷ್ಟ್ರದ ಉದ್ದೇಶವನ್ನು ಸಾಧಿಸುವ ಆತ್ಮವಿಶ್ವಾಸ ಮೂಡಿರುತ್ತದೆ ಎಂದರು.

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ

ಭಾಷಾಂತರ.

ಬೆಲೆ. 0-8-0

ನವಯುಗ ಪ್ರೆಸ್ ಉಡುಪಿ.

ಧನಾಢ್ಯರ ದುರಹಂಕಾರ--ದುರ್ವ್ಯಯ— ದುಸ್ಸಾಧನೆ—
ಮೊದಲಾದುವುಗಳನ್ನು ಚಿತ್ರಿಸುವ —
ಬಡವರ ಭೀಕರ ಪರಿಸ್ಥಿತಿಯನ್ನು—ಕನಿಕರಾವಸ್ಥೆಯನ್ನು—
ಹೃದ್ರಾವಕವಾಗಿ ಪ್ರತಿಬಿಂಬಿಸುವ—

ನವೀನ ಸಾಮಾಜಿಕ ಕಾದಂಬರಿ—

ಜಮೀನ್ದಾರ

ಹಿಂದಿಯ ಮೂಲ ಲೇಖಕರು:- ಪ್ರೊಫೆಸರ್ ಇಂದ್ರ, ವಿದ್ಯಾ ವಾಚಸ್ಪತಿ.

ಅನುವಾದಕರು: ವಿದ್ವಾನ್ ಹೊಸಮನೆ ಗುಡ್ಡಪ್ಪ,
ರಾ. ಭಾ. ವಿಶಾರದ (ಮದ್ರಾಸ್), ಎಚ್. ಟಿ. ಸಿ. (ಮುಂಬಯಿ).

ಧನಿಕರೆನ್ನದೆ, ಬಡವರೆನ್ನದೆ ಓದಲೇಬೇಕಾದ ಜನತಾಸಾಹಿತ್ಯ.

ಬೆಲೆ:- ೧—೮—೦. (ಟ. ಖರ್ಚು ಬೇರೆ.)

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ
ನವಭಾರತ ಪುಸ್ತಕ ಭಂಡಾರ, ಉಡುಪಿ– ಇವರಿಗೆ ಬರೆಯಿರಿ.

ನೆಹರು - ಈಡನರೊಳಗೆ ಮಾತುಕತೆ

ಫೋರ್ಮೋಸಾ ಸಮಸ್ಯೆಯ ಪರಿಹಾರ ಯೋಜನೆ

ಬ್ರಿಟನಿನ ವಿದೇಶ ಮಂತ್ರಿ ಸರ್ ಅಂಥೋನಿ ಈಡನ್ನರು ಬ್ಯಾಂಗ್‌ಕಾಕ್‌ನಿಂದ ಲಂಡನಿಗೆ ಮರಳುವ ದಾರಿಯಲ್ಲಿ ಹೊಸ ದೆಹಲಿಯಲ್ಲಿಳಿದರು. ಪ್ರಧಾನ ಮಂತ್ರಿ ನೆಹರುಗಳು ಅವರ ಸನ್ಮಾನಾರ್ಥವಾಗಿ ಒಂದು ಭೋಜನ ಸಮಾರಂಭವನ್ನು ಏರ್ಪಡಿಸಿದರು. ಇಲ್ಲಿ ಈಡನರನ್ನು ಸ್ವಾಗತಿಸುತ್ತಾ ನೆಹರುಗಳು ಜಗತ್ತಿನಲ್ಲಿ ಸುಗ್ಗಾಟವೂ ಜಗ್ಗಾಟವೂ ಈಗ ಹೆಚ್ಚುತ್ತಿರುವಂತೆ ಕಂಡು ಬರುತ್ತದೆ; ಆದುದರಿಂದ ಭಿನ್ನಾಭಿಪ್ರಾಯಗಳನ್ನು ಸಹಿಸಿಕೊಂಡು ನೆಮ್ಮದಿಯಿಂದ ಬಾಳುವ ಅಗತ್ಯ ಎದ್ದು ತೋರುತ್ತದೆ ಎಂದರು.

ಈಡನ್ನರ ಉತ್ತರ

ತಮ್ಮ ಉತ್ತರದಲ್ಲಿ ಈಡನ್ನರು ಭಿನ್ನಾಭಿಪ್ರಾಯಗಳು ಎಷ್ಟೇ ತೀವ್ರವಾಗಿದ್ದರೂ ಅವುಗಳನ್ನು ಸಹನಶೀಲತೆಯಿಂದಲೂ ಪ್ರಾಮಾಣಿಕ ಪ್ರಯತ್ನದಿಂದಲೂ ಬಗೆಹರಿಸಿಕೊಂಡು ಸಮಸ್ಯೆಗಳನ್ನು—ಅವು ಪ್ರಾರಂಭದಲ್ಲಿ ಅತಿ ಜಟಿಲವಾಗಿ ಕಂಡು ಬಂದರೂ—ಸಮಾಧಾನಕರವಾಗಿ ಪರಿಹರಿಸುವುದು ಸಾಧ್ಯವೆಂದು ಸಾರಿದರು. ಇದಕ್ಕೆ ತನ್ನ ಅನುಭವದ ಬೆಂಬಲವಿದೆಯೆಂದೂ ಹೇಳಿದರು. ಈಡನರು ನೆಹರುಗಳೊಡನೆ ಫೋರ್ಮೋಸದ ವಿಷಯವಾಗಿ ಗುಪ್ತ ಸಮಾಲೋಚನೆಗಳನ್ನು ನಡೆಸಿ, ಡಲ್ಲೇಸರೊಡನೆ ತಾವು ನಡೆಸಿದ ಮಾತುಕತೆಗಳ ವಿವರವನ್ನು ತಿಳಿಸಿದರೆಂದು ವರದಿಗಳು ಹೇಳುತ್ತವೆ.

ಚಿಯಾಂಗರ ಭೇಟಿ

ಇತ್ತ ಡಲ್ಲೇಸರು ಬ್ಯಾಂಗ್‌ಕಾಕ್ ನಗರದಿಂದ ಅಮೇರಿಕಕ್ಕೆ ಮರಳುವ ದಾರಿಯಲ್ಲಿ ತೈಪೆಗೆ ಹೋದರು. ಮತ್ತು ಅಲ್ಲಿ ಚಿಯಾಂಗರನ್ನು ಕಂಡು ಫೋರ್ಮೋಸದ ವಿಷಯ ಮಾತನಾಡಿದರು. ಚೀನದ ಕರಾವಳಿಗೆ ಬಹಳ ಹತ್ತಿರದಲ್ಲಿರುವ ಕ್ವೆಮೋಯ್ ಮತ್ತು ಮತ್ಸು ಎಂಬೆರಡು ದ್ವೀಪಗಳಿಂದ ರಾಷ್ಟ್ರೀಯ ಚೀಣರನ್ನು ದೂರಸಾಗಿಸುವುದೇ ಲೇಸೆಂದು ಅವರು ಚಿಯಾಂಗರಿಗೆ ಬೋಧಿಸಿದರಾಗಿ ತಿಳಿಯುತ್ತದೆ. ಆದರೆ ಚಿಯಾಂಗರು ಚೀನದ ಮುಖ್ಯ ಭೂಮಿಯಹೊರಗಿರುವ ಲಕ್ಷಾಂತರ ಚೀಣರ ಆತ್ಮ ವಿಶ್ವಾಸಕ್ಕೆ ಧಕ್ಕೆ ತಗಲುವ ಕೆಲಸವಿದೆಂದು ಹೇಳಿ ನಿರಾಕರಿಸಿದ್ದಾಗಿ ಹೇಳಲಾಗುತ್ತದೆ.

ಐಕರ ಅಭಿಮತ

ಚಿಯಾಂಗರು ಅಮೇರಿಕದ ಟೆಲಿವಿಜನ್ ಸಂದರ್ಶನವೊಂದರಲ್ಲಿ ಚೀನದ ಮುಖ್ಯ ಭೂಮಿಯ ಮೇಲೆ ದಾಳಿ ನಡೆಸುವ ತಮ್ಮ ಇಚ್ಛೆಯನ್ನು ಪ್ರಕಟಪಡಿಸುತ್ತಾ ಇದಕ್ಕೆ ಅಮೇರಿಕದ ನೈತಿಕ ಹಾಗು ಕ್ರಿಯಾತ್ಮಕ ಬೆಂಬಲವನ್ನು ಕೋರಿದ್ದರು. ಅಮೇರಿಕದ ನೆಲಸೇನೆಯ ಅಗತ್ಯವಿಲ್ಲ—ಆದರೆ ಬೇರೆ ಎಲ್ಲ ಬಗೆಯ ಸಹಾಯವನ್ನೂ ನಿರೀಕ್ಷಿಸುತ್ತೇವೆ ಎಂದವರು ಹೇಳಿದ್ದರು. ಇದರ ವಿಷಯದಲ್ಲಿ ಅಧ್ಯಕ್ಷ ಐಸೆನ್ ಹೋವರರ ಅಭಿಪ್ರಾಯ ಕೇಳಿದಾಗ, ಚೀನದ ಮುಖ್ಯ ನೆಲದ ಮೇಲೆ ದಾಳಿನಡೆಸುವ ಕ್ರಮವನ್ನು ಅಮೇರಿಕ ಬೆಂಬಲಿಸುವುದಿಲ್ಲ ಎಂಬ ಉತ್ತರ ದೊರೆಯಿತು. ಇದರಿಂದ, ನಾನಾತರದ ಊಹೆಗಳೆದ್ದಿದ್ದು, ಕಮ್ಯೂನಿಸ್ಟ್ ಚೀನದ ಅಸ್ತಿತ್ವವನ್ನು ಅಮೇರಿಕೆ ಮನ್ನಿಸಿದಂತಾಯಿತೆಂದು ರಾಜಕೀಯ ನಿರೀಕ್ಷಕರ ಸ್ಪಷ್ಟವಾದ ಅಭಿಪ್ರಾಯ.

ಗಾಝಾದ ಘರ್ಷಣೆ

ಐಕರ ಅಭಿಪ್ರಾಯ ತುಸು ಸಮಾಧಾನ ಹುಟ್ಟಿಸುವಂತಿದ್ದರೆ, ಈಜಿಪ್ಟ ಮತ್ತು ಇಸ್ರೇಲಗಳೊಳಗೆ ನಡೆದ ಕಿಕ್ಕಾಟದ ಘಟನೆಯೊಂದು ಸಂಯುಕ್ತ ರಾಷ್ಟ್ರಸಂಘದ ಭದ್ರತಾಮಂಡಳಕ್ಕೆ ಈಗ ಚಿಂತೆಯನ್ನು ತಂದಿರುತ್ತದೆ. ಕಳೆದವಾರ ಇಸ್ರೇಲಿನ ಯೋಧರು ಗಡಿಯನ್ನು ಗಾಝಾದ ಬಳಿ ದಾಟಿಬಂದು ಈಜಿಪ್ತಿನೊಳಗೆ ನುಗ್ಗಿ ೪೨ಮಂದಿ ಸೈನಿಕರನ್ನು ಕೊಂದರೆಂದೂ ಈ ಘರ್ಷಣೆಯಲ್ಲಿ ೮ಮಂದಿ ಇಸ್ರೇಲಿಗಳೂ ಮಡಿದರೆಂದೂ ತಿಳಿದುಬರುತ್ತದೆ. ಈಜಿಪ್ಟು ಮತ್ತಿತರ ಅರಬ ಗುಂಪಿನ ರಾಷ್ಟ್ರಗಳು ಇಸ್ರೇಲದ ಅಸ್ತಿತ್ವವನ್ನೇ ಒಪ್ಪದೆ ವಿಷಕಾರುತ್ತವೆ. ಸದ್ಯದ ಘಟನೆಯಂತೂ ಉಗ್ರಸ್ವರೂಪದ್ದಾದುದರಿಂದ ಒಡನೆಯೇ ಈಜಿಪ್ಟು ಭದ್ರತಾಮಂಡಳಕ್ಕೆ ದೂರಿಟ್ಟಿತು. ಭದ್ರತಾಮಂಡಳವು ಉಭಯಪಕ್ಷಗಳಿಗೂ ಶಾಂತಿಯ ಉಪದೇಶ ಮಾಡಿ, ಗಡಿ ವಲಯದ ಮಿಶ್ರತಟಸ್ಥ ಮಂಡಳದ ವರದಿ ಬರುವವರೆಗೆ ಚರ್ಚೆಯನ್ನು ಮುಂದೂಡಿರುತ್ತದೆ.

ಪಾಕಿಸ್ತಾನದಲ್ಲಿ ಘಟನಾತ್ಮಕ ಬಿಕ್ಕಟ್ಟು

ಪಾಕಿಸ್ತಾನದಲ್ಲಿ ಗವರ್ನರ್ ಜನರಲರಾದ ಗುಲಾಮಮಹಮ್ಮದರು ಘಟನಾಸಮಿತಿಯನ್ನು ವಿಸರ್ಜಿಸಿ, ಎಲ್ಲಅಧಿಕಾರವನ್ನೂ ತನ್ನ ಕೈಗೆ ತೆಗೆದುಕೊಂಡ ಘೋಷಣೆಯನ್ನು ಕಳೆದ ಅಕ್ಟೋಬರದಲ್ಲಿ ಸಾರಿದ್ದರಷ್ಟೇ! ಅದರ ವಿರುದ್ಧವಾಗಿ ಘಟನಾಸಮಿತಿಯ ಅಧ್ಯಕ್ಷರಾದ ತಾಮಿಜುದ್ದೀನರು ಸಿಂಧಿನ ನ್ಯಾಯಾಲಯಕ್ಕೆ ದೂರನ್ನೊಯ್ಯಲು ಆ ನ್ಯಾಯಾಲಯವು ಗವರ್ನರ್ ಜನರಲರವರ್ತನೆ ಕ್ರಮಬದ್ಧವಲ್ಲವೆಂದು ಹೇಳಿತು. ಸರಕಾರ ಇದರವಿರುದ್ಧ ಪಾಕಿಸ್ತಾನದ ಶ್ರೇಷ್ಠ ನ್ಯಾಯಾಲಯಕ್ಕೆ ಅಪೀಲುಮಾಡಿದಾಗ ಅಲ್ಲಿಯ ಮುಖ್ಯ ನ್ಯಾಯಾಧೀಶರು ರಾಜಕೀಯ ಮಹತ್ವದ ಈ ಪ್ರಶ್ನೆಯನ್ನು ಕೋರ್ಟಿನ ಹೊರಗೆ ಬಿಡಿಸುವುದೇ ಶ್ರೇಯಸ್ಕರವೆಂದೂ ಘಟನಾಸಮಿತಿ ತನ್ನಿಂದ ತಾನೆ ವಿಸರ್ಜನೆಹೊಂದುವಂತೆ ಬೇಗನೇ ಚುನಾವಣೆಗಳನ್ನು ನಡೆಸುವುದು ಇಷ್ಟವೆಂದೂ ಸೂಚಿಸಿದರು. ಇದನ್ನು ಮನ್ನಿಸಿ, ಪಾಕಿಸ್ತಾನದ ಮಂತ್ರಿಗಳು ತಾಮಿಜುದ್ದೀನರೊಡನೆ ಮಾತುಕತೆಯ ಮೂಲಕ ಘಟನಾತ್ಮಕ ಬಿಕ್ಕಟ್ಟನ್ನು ನಿವಾರಿಸಲು ನೋಡುತ್ತಿದ್ದಾರೆ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಮಥಾಯಿ ಮಂಡಳದ ಸಿಫಾರಸು

ಸುತ್ತಲೂ ಕರ ಏರಿಸುವ ತತ್ವ

ಕೇಂದ್ರದ ಹಣಕಾಸಿನ ಸಚಿವರಾದ ಶ್ರೀ ದೇಶಮುಖರು ಎರಡು ವರ್ಷಗಳ ಪೂರ್ವದಲ್ಲಿ ದೇಶದಲ್ಲಿ ವಿದ್ಯಮಾನವಿರುವ ಕರಭಾರ ಪದ್ಧತಿಯನ್ನು ವಿಮರ್ಶಿಸಿ, ಯೋಗ್ಯ ಸಿಫಾರಸುಗಳನ್ನು ಮಾಡಲು ನೇಮಿಸಿದ್ದ ಮಥಾಯಿ ಮಂಡಳದ ವರದಿಯ ಸಾರಾಂಶವನ್ನು ಕಳೆದವಾರ ಪ್ರಕಟಿಸಿದರು. ವರದಿಯು ಮೂಲದಲ್ಲಿ ೧೪೦೦ ಪುಟಗಳಷ್ಟು ದೀರ್ಘವಾದ ಮೂರು ಸಂಪುಟಗಳಿಂದ ಕೂಡಿದ ಉದ್ಗ್ರಂಥವಾಗಿದೆಯೆಂದು ಅವರು ಹೇಳಿದರು. ಮಥಾಯಿ ಮಂಡಳವು ಪ್ರಜೆಗಳ ಮೇಲೆ ಈಗಾಗಲೇ ಬಿದ್ದಿರುವ ಕರಭಾರವು ಸಹನೆಯ ಮಿತಿಯೊಳಗಿದೆಯೇ ಇಲ್ಲವೇ ಎಂಬ ಪ್ರಾಮುಖ್ಯ ಅಂಶದ ವಿವೇಚನೆಯನ್ನು ಮಾಡಿದಂತೆ ಕಂಡು ಬರುತ್ತಿಲ್ಲವಾದರೂ ಸುತ್ತಲೂ ಕರಏರಿಸುವುದಕ್ಕೆ ಉತ್ತೇಜನ ಕೊಡುವ ರೀತಿಯಲ್ಲಿ ಅದು ತನ್ನ ಸಿಫಾರಸುಗಳನ್ನು ಮಾಡಿರುವುದರಿಂದ, ತೆರಿಗೆಗಳಲ್ಲಿ-ಹೆಚ್ಚಳಕ್ಕೆ ಎಡೆಯಿದೆಯೆಂದು ಭಾವಿಸಬೇಕಾಗುತ್ತದೆ.

ಕೊರತೆ ಧನ ವಿನಿಯೋಗ

ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕೆ ಹಣವು ಅಗತ್ಯವಾಗಿದ್ದರೂ ಅದನ್ನು ಕೊರತೆ ಧನವಿನಿಯೋಗದ ವಿಧಾನವನ್ನು ಅನುಸರಿಸಿ ಪೂರೈಸಿಕೊಳ್ಳುವ ಪ್ರವೃತ್ತಿಯನ್ನು ಮಥಾಯಿ ಮಂಡಳ ಅಷ್ಟಾಗಿ ಪುರಸ್ಕರಿಸುವುದಿಲ್ಲ. ಅದರ ಬದಲಿಗೆ, ಹೆಚ್ಚಿನ ತೆರಿಗೆಗಳನ್ನು ಹೊರಿಸುವುದು ಮತ್ತು ಸಾರ್ವಜನಿಕರಿಂದ ಸಾಲ ಎತ್ತುವುದು ಶ್ರೇಯಸ್ಕರವೆಂದು ಮಂಡಳ ಹೇಳುತ್ತದೆ. ಜನರಲ್ಲಿ ವಸ್ತುಗಳ ಬಳಕೆಯು ಕಡಿಮೆಯಾಗುವಂತೆ ಸರಕಾರದ ತೆರಿಗೆ ಧೋರಣೆಯಿರಬೇಕೆಂದೂ ಅಧಿಕ ಸಂಪಾದನೆಯುಳ್ಳ ವರ್ಗಗಳು ಬಳಕೆಯ ವಸ್ತುಗಳಲ್ಲಿ ಹಣವನ್ನು ನಿಕ್ಷೇಪಿಸದಂತೆ ದಕ್ಷತೆಯನ್ನು ವಹಿಸಬೇಕೆಂದೂ ಮಂಡಳ ಅಭಿಪ್ರಾಯಪಡುತ್ತದೆ. ತೆರಿಗೆಯ ಹಣವು ಯಾವ ರೀತಿಯಲ್ಲಿ ಉಪಯೋಗವಾಗುತ್ತಿದೆ ಎಂಬ ತತ್ವವೇ ತೆರಿಗೆಯ ಔಚಿತ್ಯ ನಿರ್ಣಯದ ತಳಹದಿಯಾಗಬೇಕೆಂದು ಅದು ಸೂಚಿಸುತ್ತದೆ.

ತೆರಿಗೆಗಳ ಪುನರ್ವಿಮರ್ಶೆ

ಆದಾಯಕರ, ಆಸ್ತಿಕರ ವಸ್ತುಕರ ಮುಂತಾದ ಕೇಂದ್ರ ಸರಕಾರದ ಆದಾಯದ ಬಾಬುಗಳ ತಳಹದಿಯಲ್ಲಿ ಮಂಡಳವು ಗಮನಾರ್ಹವಾದ ಬದಲಾವಣೆಗಳನ್ನು ಸೂಚಿಸಿರುತ್ತದೆ. ಉತ್ಪಾದಕ ಯೋಜನೆಗಳನ್ನು ಕೈಗೊಳ್ಳುವವರಿಗೆ ಪ್ರೋತ್ಸಾಹ ಕೊಡುವ ವ್ಯವಸ್ಥೆಯನ್ನು ಯಾವ ಪ್ರಕಾರ ಮಾಡಿದರಾಗಬಹುದೆಂದೂ ಅದು ತಿಳಿಸುತ್ತದೆ. ರಾಜ್ಯಗಳ ಆದಾಯದ ಮುಖ್ಯ ಸ್ರೋತವಾಗಿರುವ ಮಾರಾಟಕರದ ವಿಷಯದಲ್ಲಿ ಕೇಂದ್ರೀಕರಣಕ್ಕೆ ಅವಕಾಶವಿಲ್ಲವೆಂದು ಮಂಡಳ ಅಭಿಪ್ರಾಯಪಡುತ್ತದೆ. ಅಂತರ್ ರಾಜ್ಯ ವ್ಯವಹಾರವನ್ನು ಸಗಮಗೊಳಿಸುವ ಮಟ್ಟಿಗೆ ಕೆಲವು ಸೂಚನೆಗಳನ್ನು ಅದು ಮುಂದಿಟ್ಟಿರುತ್ತದೆ. ಕೃಷಿಯ ಉತ್ಪನ್ನಗಳ ಮೇಲೆ ತೆರಿಗೆಯನ್ನು ಹೊರಿಸಬೇಕೆಂದೂ ಭೂಕಂದಾಯವನ್ನು ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಪುನರ್ವಿಮರ್ಶಿಸಬೇಕೆಂದೂ ಮಂಡಳವು ರಾಜ್ಯ ಸರಕಾರಗಳಿಗೆ ಹೇಳುತ್ತದೆ. ಅಭಿವೃದ್ಧಿ ತೆರಿಗೆ, ನೀರಿನ ತೆರಿಗೆ ಇವನ್ನು ಮಂಡಳ ಮನ್ನಿಸಿರುತ್ತದೆ.

ಮದ್ಯಪಾನ ಪ್ರತಿಬಂಧ

ಸ್ಥಾನಿಕ ಸಂಸ್ಥೆಗಳಿಗೆ ತೆರಿಗೆ ವಸೂಲಿಯೇ ಮುಂತಾದ ಹೆಚ್ಚಿನ ಅಧಿಕಾರಗಳನ್ನು ಕೊಡುವಾಗ ಜಾಗರೂಕತೆಯನ್ನು ವಹಿಸಬೇಕೆಂದು ಮಂಡಳದ ಅಭಿಪ್ರಾಯ. ಭೂಕಂದಾಯ ಮುಂತಾದ ಕೆಲವು ರೀತಿಯ ತೆರಿಗೆಗಳಲ್ಲಿ ಗ್ರಾಮ ಪಂಚಾಯತುಗಳೇ ಮೊದಲಾದ ಸ್ಥಾನಿಕ ಸಂಸ್ಥೆಗಳಿಗೆ ಪಾಲು ಕೊಡಬಹುದಾದರೂ ಬೇರೆ ಕೆಲವು ತೆರಿಗೆಗಳ ವಿಷಯದಲ್ಲಿ ಸಹಾಯಧನ ಕೊಡುವ ರೀತಿಯೇ ಯೋಗ್ಯ. ಮಥಾಯಿ ಮಂಡಳವು ಉಪ್ಪಿನ ಮೇಲೆ ತೆರಿಗೆ ಹೇರಿಸುವ ತತ್ವವನ್ನು ಮಾನ್ಯ ಮಾಡಿಲ್ಲ. ಆದರೆ ಪಾನ ನಿರೋಧ ಧೋರಣೆಯ ವಿಷಯದಲ್ಲಿ ಮಂಡಳದಲ್ಲಿಯೇ ಎರಡು ಅಭಿಪ್ರಾಯದ ಸಮ ಸಂಖ್ಯೆಯ ಸದಸ್ಯರಿದ್ದುದರಿಂದ ಸಿಫಾರಸುಗಳೇನೂ ಮಾಡಲಾಗಲಿಲ್ಲ. ಒಟ್ಟಿನಲ್ಲಿ, ಹೊಸ ತೆರಿಗೆಯ ಕ್ಷೇತ್ರಗಳನ್ನು ಮಂಡಳವು ಗುರುತಿಸಿರದಿದ್ದರೂ ಕರಭಾರದ ವಿಧಾನವನ್ನು ಪುನರ್ಘಟಿಸುವ ಮೂಲಕ ಅದು ಹೆಚ್ಚು ಆದಾಯದ ದಾರಿಯನ್ನು ಮಾಡಿಕೊಟ್ಟಿರುವುದೆಂದು ಮಾತ್ರ ಹೇಳಬಹುದು.

1955ನೇ ಇಸವಿಯ
ಪೋಕೆಟ್ ಡೈರಿಗಳು!
ದೊಡ್ಡ ಸೈಜು ರೂ-1-4-0ಮಾತ್ರ
ನವಯುಗ ಪ್ರೆಸ್, ಉಡುಪಿ

ಓದಲೇಬೇಕಾದ ದಿ| ಕಿಲ್ಲೆಯವರ
ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು
(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
೧೫೧ ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ
"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು. (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯುಳ್ಳ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ.
ಬೆಲೆ 0-12-0.
(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)
ಮೂರೂ ಪುಸ್ತಕಗಳನ್ನೂ ದಿ| ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA

Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೦-೩-'೫೫	೨೬

ಆಕರ್ಷಕ ವಿಚಾರ

ಪ್ರಥಮ ಪಂಚವಾರ್ಷಿಕ ಯೋಜನೆಯು ಇಷ್ಟರ ವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸಿದ ಅಭಿವೃದ್ಧಿ ಕೆಲಸಗಳಿಂದ ಜನರ ಕುತೂಹಲವು ಸಾಕಷ್ಟು ಕೆರಳಿರಬೇಕೆಂದು ನಂಬಲು ಬಲವಾದ ಆಧಾರಗಳು ಕಾಣುತ್ತವೆ. ಮುಖ್ಯವಾಗಿ ಸಮಾಜ ವಿಕಾಸ ಯೋಜನೆಯಂತೆಯೂ ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ರಮದಂತೆಯೂ ಕೈಗೊಳ್ಳಲಾದ ಕೆಲಸಗಳು ಹಳ್ಳಿಯ ಜನರಲ್ಲಿ ಉತ್ಸಾಹವನ್ನು ಮೂಡಿಸಿರುವಂತೆ ಭಾಸವಾಗುತ್ತದೆ. ಅವರಲ್ಲಿ ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕೆಂಬ ತೀವ್ರವಾದ ಇಚ್ಛೆಯೂ ಜಾಗೃತಿಯೂ ಉಂಟಾಗಿದ್ದು, ಇನ್ನೂ ಅನೇಕ ಬಗೆಯ ಅಭಿವೃದ್ಧಿ ಕೆಲಸಗಳಲ್ಲಿ ಸರಕಾರದ ನೆರವು ತಮಗೆ ಸಿಗಬೇಕೆಂದು ಅವರು ನಿತ್ಯವೂ ವಿನಂತಿಸುತ್ತಿದ್ದಾರೆಂದರೆ ಅತಿಶಯೋಕ್ತಿಯಾಗದು. ತಾವು ಸ್ವಯಂಸ್ಫೂರ್ತಿಯಿಂದಲೂ ಪರಸ್ಪರ ಸಹಕಾರದಿಂದಲೂ ಸರಕಾರದ ನೆರವಿನಿಂದಲೂ ನಿರ್ಮಿಸಿದ ಶಾಲೆಗಳು, ಸೇತುವೆಗಳು, ಮಾರ್ಗಗಳು ಮುಂತಾದುವುಗಳ ಉದ್ಘಾಟನೆಗೆ ಸರಕಾರದ ಹೊಣೆಗಾರ ಸ್ಥಾನದಲ್ಲಿರುವ ಮಂತ್ರಿಗಳನ್ನು ಬರಮಾಡಿಕೊಂಡು ಆ ಸಂದರ್ಭದಲ್ಲಿ ತಮ್ಮ ಉಳಿದ ಆವಶ್ಯಕತೆಗಳನ್ನು ಬಿಂಬಿಸಲು ಗ್ರಾಮಾಂತರ ಪ್ರದೇಶದ ಜನರು ಪ್ರಯತ್ನಿಸುತ್ತಿದ್ದದ್ದು ಅನುಭವಕ್ಕೆ ಬಂದ ವಿಷಯ. ಇದೆಲ್ಲವುಗಳ ಮೇಲಿಂದ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳವರು ನಗರದ ನಾಗರಿಕರಿಗಿಂತಲೂ ಹೆಚ್ಚು ತತ್ಪರತೆಯಿಂದ ಅಭಿವೃದ್ಧಿ ಪ್ರಯತ್ನಗಳಲ್ಲಿ ಸಹಕರಿಸುವ ಮನೋಭಾವವನ್ನು ವ್ಯಕ್ತಪಡಿಸುವರೆಂದು ತಿಳಿಯಬಹುದು. ಇದು ಕೇವಲ ನಮ್ಮ ಜಿಲ್ಲೆಯ ಮಟ್ಟಿಗಷ್ಟೇ ಅನ್ವಯಿಸುವ ಮಾತಲ್ಲ—ಭಾರತಕ್ಕೆಲ್ಲ ಇದು ಹೊಂದಿಕೊಳ್ಳುತ್ತದೆ ಎಂಬುದಕ್ಕೆ ಯೋಜನಾ ಆಯೋಗಕ್ಕೆ ಈ ವರೆಗಾದ ಅನುಭವನೇ ನಿದರ್ಶನ. ಆದುದರಿಂದ ಹಳ್ಳಿಗಳಲ್ಲಿ ಕಂಡುಬರುವ ಉತ್ಸಾಹಪ್ರದವಾದ ನವಜಾಗೃತಿಯ ವಾತಾವರಣವನ್ನು ರಾಷ್ಟ್ರದ ಪ್ರಗತಿಗೋಸ್ಕರ ಲಾಭದಾಯಕವಾಗಿ ಬಳಸಿಕೊಳ್ಳಲು ಯೋಜನಾ ಆಯೋಗವು ನಿರ್ಧರಿಸಿ ಇದೀಗ ರಾಜ್ಯ ಸರಕಾರಗಳಿಗೆ ಒಂದು ಪರಿಪತ್ರವನ್ನು ಕಳಿಸಿದೆಯೆಂಬ ಬಂದಿರುವ ವರದಿಯು ಸ್ವಾಗತಾರ್ಹವಾದುದೆಂದು ಹೇಳಲೇ ಬೇಕು. ಪರಿಪತ್ರವು ಗ್ರಾಮಾಂತರ ಪ್ರದೇಶಗಳ ಜನರ ಮುಂದೆ ಮುಂದಿನ ಹತ್ತು ವರ್ಷಗಳಲ್ಲಿ ಇಮ್ಮಡಿ ಉತ್ಪಾದನೆಯ ಧ್ಯೇಯವನ್ನು ಮಂಡಿಸಬೇಕು ಎಂಬುದಾಗಿ ಹೇಳುತ್ತದೆ. ಇಮ್ಮಡಿ ಉತ್ಪಾದನೆ ಎಂಬ ಶಬ್ದಗಳು ನಮಗೆ ಉತ್ಪ್ರೇಕ್ಷೆಯಾಗಿ ಬಳಸಲ್ಪಟ್ಟಂತೆ ಮೊದಲಿಗೆ ಕಾಣಬಹುದು—ಆದರೆ ಹಳ್ಳಿಗಳ ಜನತೆಯ ಉತ್ಸಾಹಕ್ಕೆ ಅದು ಮೀರಿದ ಮಾತಲ್ಲ ಎಂಬುದನ್ನು ಮರೆಯಬಾರದು. ಈ ಗುರಿಯನ್ನು ಮುಟ್ಟುವುದಕ್ಕೋಸ್ಕರ ಸರಕಾರದ ಮಟ್ಟದಲ್ಲಿಯೂ ಇತರ ರೀತಿಯಲ್ಲಿಯೂ ಯೋಜನಾ ಬದ್ಧವಾದ, ಸುವ್ಯವಸ್ಥಿತವಾದ ಕೆಲಸ ನಡೆಯಬೇಕಾದದ್ದು ಅಗತ್ಯ—ಇದಕ್ಕಾಗಿ ಸಂಘಟಿತ ಪ್ರಯತ್ನದ ಸ್ವರೂಪದರ್ಶನವನ್ನೂ ಪರಿಪತ್ರ ಮಾಡಿಕೊಡುತ್ತದೆ. ಮುಖ್ಯವಾಗಿ (೧) ನೀರಾವರಿ ಕೆಲಸಗಳು, ಬೀಳು ಭೂಮಿಯ ಸಾಗುವಳಿ, ಮರಗಳನ್ನು ನೆಟ್ಟು ಅರಣ್ಯಗಳನ್ನು ಪೋಷಿಸುವುದು, ಜಾನುವಾರುಗಳ ಪೋಷಣೆ ಮತ್ತು ಹುಲ್ಲುಗಾವಲುಗಳ ವಿಸ್ತರಣೆ, ಜೇನುಗೂಡು, ಕೋಳಿ ಸಾಕಣೆ ಮುಂತಾದ ಉಪವೃತ್ತಿಗಳಿಂದ ಕೃಷಿಕರ ಪರಿಸ್ಥಿತಿಯನ್ನು ಸುಧಾರಿಸುವುದು; (೨) ಸುಧಾರಿತ ಬೀಜ, ಉತ್ತಮ ಗೊಬ್ಬರ, ಹಸುರೆಲೆಯ ಉಪಯೋಗ, ಹೊಸ ಬಗೆಯ ಸಲಕರಣೆ ಮತ್ತು ಇತರ ರೀತಿಯಿಂದ ಕೃಷಿ ಪದ್ಧತಿಯಲ್ಲಿ ನವೀನ ತಂತ್ರವನ್ನು ಅಳವಡಿಸಿಕೊಳ್ಳುವುದು; ಮತ್ತು (೩) ಮಾರ್ಗ ಮತ್ತಿತರ ಸಂಪರ್ಕ ಸಾಧನೆಗಳನ್ನು ನಿರ್ಮಿಸುವುದು, ಕುಡಿಯುವ ನೀರಿನ ಬಾವಿಗಳನ್ನು ತೋಡುವುದು ಮುಂತಾದ ಸ್ಥಳೀಯ ಅಭಿವೃದ್ಧಿ ಕೆಲಸಗಳು—ಇವುಗಳ ಮೂಲಕ ಹಳ್ಳಿಗಳ ಪುನರುಜ್ಜೀವನ ಕಾರ್ಯವನ್ನು ಸಾಂಗಗೊಳಿಸಬಹುದೆಂದೂ ಉತ್ಪಾದನೆಯನ್ನು ಇಮ್ಮಡಿಗೊಳಿಸಬಹುದೆಂದೂ ಯೋಜನಾ ಆಯೋಗ ಅಭಿಪ್ರಾಯಪಡುತ್ತದೆ. ಮೇಲಿನ ಕೆಲಸಗಳೆಲ್ಲಾ ನಿರಂತರವಾಗಿ ನಡೆಯುವಂತಾದರೆ, ಫಲವೂ ತಾನಾಗಿಯೇ ಕೈಗೆ ಬರುವುದರಲ್ಲಿ ಸಂಶಯವಿರಲಾರದು. ಆದರೆ ಇದಕ್ಕೆಲ್ಲಾ ಧಾರಾಳ ಹಣದ ಅಗತ್ಯವಿಲ್ಲದಿಲ್ಲ—ಇದನ್ನು ಇಷ್ಟರ ವರೆಗೆ ಮಾಡಿದಂತೆ ಜನರೂ ಸರಕಾರವೂ ಸರಿಯಾಗಿ ಹಂಚಿಕೊಳ್ಳಬೇಕೆಂದು ಪರಿಪತ್ರ ಸೂಚಿಸುತ್ತದೆ. ಈ ವಿಷಯದಲ್ಲಿ ಜನರು ಮುಂದೆಯೂ ಧಾರಾಳವಾಗಿ ತಮಗೆ ತಾವೇ ಸಹಾಯ ಮಾಡಿಕೊಳ್ಳಲು ಮುಂದಾಗಬೇಕೆಂದು ನಾವು ನಮ್ರವಾಗಿ ವಿನಂತಿಸುತ್ತೇವೆ; ಅದೇ ಸಮಯದಲ್ಲಿ ಸರಕಾರದೊಡನೆಯೂ ನಮ್ಮ ವಿನಂತಿಯೊಂದುಂಟು; ಅದೆಂದರೆ, ಹಳ್ಳಿಗರ ಉತ್ಸಾಹಕ್ಕೆ ಸರಿಯಾದ ರೀತಿಯಲ್ಲಿ ಸರಕಾರದ ಯಂತ್ರವೂ ಕೆಲಸ ಮಾಡಬೇಕು. ಇಲ್ಲದಿದ್ದರೆ, ಪ್ರಚಾರವು ಜುಗುಪ್ಸೆಯನ್ನು ತರಬಹುದು; ಉತ್ಸಾಹವು ನಿರಾಶೆಯಲ್ಲಿ ಪರ್ಯವಸಾನಹೊಂದಬಹುದು. ಸುಧಾರಿತ ರೀತಿಗಳ ಮಾಹಿತಿಯನ್ನೊದಗಿಸುವ ಕೆಲಸವನ್ನೂ ಉತ್ತಮ ಬೀಜಗೊಬ್ಬರಗಳ ಪೂರೈಕೆಯನ್ನೂ ತಾಂತ್ರಿಕ ಸಹಾಯವನ್ನೂ ಕ್ಲಪ್ತ ಸಮಯಕ್ಕೆ ಸರಕಾರ ಒದಗಿಸಲು ತಕ್ಕ ವ್ಯವಸ್ಥೆಯನ್ನು ಮಾಡಲು ಎಷ್ಟಕ್ಕೂ ತಪ್ಪಬಾರದು. ಸರಕಾರದ ಸಿದ್ಧತೆಗಳು ಅಚ್ಚುಕಟ್ಟಾಗಿದ್ದರೆ, ಹಳ್ಳಿಯ ಕುಟುಂಬದ ಅಭಿವೃದ್ಧಿಯ ಬಗ್ಗೆ ನಿಶ್ಚಿತ ಕಾರ್ಯಕ್ರಮವೊಂದನ್ನು ಮುಂದಿಟ್ಟ ಯೋಜನಾ ಆಯೋಗದ ಕೆಲಸ ಸಾರ್ಥಕವಾಗುತ್ತದೆ—ಒಂದು ರೀತಿಯಲ್ಲಿ, ಎಲ್ಲಕ್ಕಿಂತ ಹೆಚ್ಚು ಆಕರ್ಷಕವಾದ ವಿಷಯವೆಂದರೆ, ಪರಿಪತ್ರವು ವೈಯಕ್ತಿಕ ಅಭಿವೃದ್ಧಿಗೆ ಕೊಟ್ಟಿರುವ ಮಹತ್ವ. "ತನಗೆ ಸಿಗಬಹುದಾದ ಸಹಾಯವನ್ನು ಸಂಪೂರ್ಣ ಪಡೆದುಕೊಂಡು ಪ್ರತಿಯೊಂದು ಕುಟುಂಬವೂ ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯಕ್ರಮವೊಂದನ್ನು ಸಿದ್ಧಪಡಿಸಿ ಅದರಂತೆ ನಡೆಯಬೇಕು; ಪ್ರತಿಯೊಂದು ಕುಟುಂಬವೂ ಸಹಕಾರ ಸಂಘದ ಸದಸ್ಯತ್ವವನ್ನು ಸಂಪಾದಿಸಿ ಎಲ್ಲ ಬಗೆಯ ಲಾಭವನ್ನೂ ಪಡೆಯಬೇಕು" ಎಂಬುದಾಗಿ ಪರಿಪತ್ರವು ಕೌಟುಂಬಿಕ ಶ್ರೇಯಸ್ಸು ಹಳ್ಳಿಗಳ ಅಭಿವೃದ್ಧಿಯ ಮೂಲವೆಂದು ಸಾರುತ್ತದೆ. ಇದೇ ಬಹಳ ಆಕರ್ಷಣೀಯವಾದ ವಿಚಾರವಾಗಿದ್ದು ಹಳ್ಳಿಯ ಪ್ರತಿಯೊಂದು ಕುಟುಂಬವೂ ಉಚಿತ ರೀತಿಯಲ್ಲಿ ನಡೆದುಕೊಳ್ಳುವುದೆಂದು ಆಶಿಸಬಹುದು. ಹಾಗೆಯೇ ಪ್ರತಿಯೊಂದು ಕುಟುಂಬವೂ ವಾರದಲ್ಲಿ ಕೆಲವು ಗಂಟೆಗಳನ್ನಾದರೂ ಸಮಾಜ ಹಿತದ ಕಾರ್ಯಗಳಿಗೆ ಪ್ರತ್ಯೇಕ ಮೀಸಲಿಡುವುದೆಂದೂ ಹಾರೈಸಬಹುದು—ಹೀಗಾದರೆ ಪರಿಪತ್ರದ ಉದ್ದೇಶ ಫಲಿಸುತ್ತದೆ.

ಪೂರಕ ಕಾರ್ಯ

ಭಾರತದ ವಾಣಿಜ್ಯ ಮಂಡಳದ ಇಪ್ಪತ್ತೆಂಟನೆಯ ಅಧಿವೇಶನವು ಹೊಸದೆಹಲಿಯಲ್ಲಿ ಮೊನ್ನೆ ಜರಗಿದಾಗ ಶ್ರೀ ಬಿರ್ಲಾರು ಮಾಡಿದ ಅಧ್ಯಕ್ಷ ಭಾಷಣದಲ್ಲಿ ಕೆಲವು ಮನನೀಯವಾದ ವಿಚಾರಗಳಿದ್ದವೆಂದು ಹೇಳಬಹುದು. ವಾಣಿಜ್ಯ ಮತ್ತು ಕೈಗಾರಿಕೋದ್ಯಮಗಳು ಸರಕಾರದ ಕೈಯಲ್ಲಿರಬೇಕೋ ಖಾಸಗಿ ಕ್ಷೇತ್ರಕ್ಕೆ ಮೀಸಲಾಗಿರಬೇಕೋ ಎಂಬ ಜಿಜ್ಞಾಸೆ ಈಗ ಒಂದು ಹಂತವನ್ನು ಮುಟ್ಟಿರುತ್ತದೆ—ನಮ್ಮ ಸಮಾಜವಾದಿ ಮಾದರಿಯ ಸಮಾಜ ರಚನೆಯ ಧ್ಯೇಯದ ಪ್ರಕಾರ ಸರಕಾರದ ನಿಯಂತ್ರಣದಲ್ಲಿ ಖಾಸಗಿ ವಲಯಕ್ಕೂ ಕೆಲವು ಮುಖ್ಯ ಉದ್ದಿಮೆಗಳ ಹೊರತಾಗಿ ಉಳಿದವುಗಳ ಮಟ್ಟಿಗೆ ಚಟುವಟಿಕೆಗಳನ್ನು ನಡೆಸಲು ಬಿಡಲಾಗುತ್ತದೆ. ಸಮಾಜವಾದದ ಗುರಿಯನ್ನು ಕಾಲಾಂತರದಲ್ಲಿ ಯಾದರೂ ಸೇರುವುದಕ್ಕೆ ಮತ್ತು ರಾಷ್ಟ್ರದ ಪ್ರಗತಿಯು ಸುಸಂಬದ್ಧ ರೀತಿಯಲ್ಲಿ ಸುವ್ಯವಸ್ಥಿತವಾಗಿ ನಡೆಯುವುದಕ್ಕೆ ಸರಕಾರದ ಮೇಲ್ವಿಚಾರಣೆ ಅಗತ್ಯವೆಂಬ ತತ್ವವನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತದೆ. ಆದರೆ, ಖಾಸಗಿ ಕ್ಷೇತ್ರದ ಪ್ರಗತಿಯಲ್ಲಿ ಸಂಘಟಿತವೂ ಯೋಜನಾಬದ್ಧವೂ ಆದ ವ್ಯವಸ್ಥೆ ಇರಬೇಕೆಂದು ಬೇಡುವ ಸರಕಾರ ತನ್ನ ಯೋಜನೆಗಳ ಮಟ್ಟಿಗೆ ಆ ತತ್ವವನ್ನು ಬಿಟ್ಟು ಕೊಟ್ಟರೆ ಹೇಗಾದೀತು? ಉದಾಹರಣೆಗೆ ಉಕ್ಕಿನ ಉತ್ಪಾದನೆಯನ್ನು ತೆಗೆದುಕೊಳ್ಳಬಹುದು. ಮುಂದಿನ ಐದು ವರ್ಷಗಳಲ್ಲಿ ನಮ್ಮ ಕಬ್ಬಿಣ ಮತ್ತು ಉಕ್ಕಿನ ಉತ್ಪಾದನೆಯು ೪೫ ಲಕ್ಷ ಟನ್ನುಗಳಷ್ಟು ಹೆಚ್ಚುತ್ತದೆ ಎಂಬುದಾಗಿ ಕಟ್ಟಲಿರುವ ಹೊಸ ಕಾರ್ಖಾನೆಗಳ ಅಂದಾಜುಗಳಿಂದ ಅಭಿಪ್ರಾಯ ಪಡಲಾಗುತ್ತದೆ. ಆದರೆ ಕೇವಲ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ ತೆರೆದಷ್ಟಕ್ಕೆ ಪ್ರಗತಿಯನ್ನು ಸಾಧಿಸಿದ ಹಾಗಾಗುತ್ತೇ ಎಂಬ ಪ್ರಶ್ನೆ ಇಲ್ಲಿ ಬರುತ್ತದೆ—ಅದು ನಮ್ಮ ನಿತ್ಯ ವ್ಯವಹಾರದಲ್ಲಿ ಬಳಸಲ್ಪಡುವ ವಸ್ತುವಾಗಿ ಮಾರ್ಪಡಬೇಕಾದರೆ ಬೇರೆ ಕೆಲವು ಯಂತ್ರೋದ್ಯಮಗಳನ್ನು ಸ್ಥಾಪಿಸುವುದೂ ಅಗತ್ಯ. ಇವಕ್ಕೆ ಬಂಡವಾಳ ಬೇಕು—ಮತ್ತು ಉಕ್ಕಿನ ಕಾರ್ಖಾನೆಗೆ ಬಂಡವಾಳ ಹಾಕುವಾಗಲೇ ಇದಕ್ಕೂ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಹೆಚ್ಚಿದ ಉಕ್ಕು ಮತ್ತು ಕಬ್ಬಿಣದ ಉತ್ಪಾದನೆಯಿಂದ ಪ್ರಯೋಜನ ಸಿಗಲಾರದು—ಹೀಗೆ ಕಾರ್ಖಾನೆಗಳನ್ನು ಹೊಸತಾಗಿ ಸ್ಥಾಪಿಸುವಾಗ ಅಲ್ಲಿ ಚೆನ್ನಾಗಿ ಕೆಲಸ ಮಾಡಬಲ್ಲ ತಂತ್ರಕುಶಲರೂ ಹೆಚ್ಚು ಸಂಖ್ಯೆಯಲ್ಲಿ ಬೇಕಾಗುತ್ತಾರೆ. ಅವರನ್ನು ನಾವು ಸಿದ್ಧಪಡಿಸುವುದಕ್ಕೆ ಮುಂದಾಗದಿದ್ದರೆ, ಕಾರ್ಖಾನೆಗಳು ಕೆಲಸವನ್ನು ಪ್ರಾರಂಭಿಸುವಂತಿಲ್ಲ. ಇದಕ್ಕೆ ಯಾವ ಏರ್ಪಾಡುಗಳಾಗಿವೆ? ಬೇರೆ ದೇಶಗಳಲ್ಲಿಯಾದರೆ ತಂತ್ರಕುಶಲರಾಗಿ ಹೊರಬೀಳುವ ಹತ್ತೈವತ್ತು ಸಾವಿರ ಮಂದಿ ವಿದ್ಯಾರ್ಥಿಗಳನ್ನು ಪ್ರತಿವರ್ಷ ಕಾಣಬಹುದು. ಭಾರತದಲ್ಲಿ ಪುಸ್ತಕೀಯ ಜ್ಞಾನದ ಭಾರದಿಂದ ತತ್ತರಿಸಿದ ಪದವೀಧರರೆಷ್ಟೋ ಸಿಗುತ್ತಾರೆ—ಆದರೆ ಇಂಜಿನಿಯರುಗಳ ಅಭಾವ ಬಹಳವಾಗಿ ಕಂಡುಬರುತ್ತದೆ ಇದನ್ನು ಹೋಗಲಾಡಿಸುವುದಕ್ಕೂ ಈಗಿಂದೀಗ ಕಾರ್ಯಕ್ರಮ ಕೈಗೊಳ್ಳಲ್ಪಡಬೇಕು. ಒಂದು ಹೊಸ ಉದ್ಯಮ ಅಥವಾ ಹೊಸ ಕಾರ್ಖಾನೆಯ ಬೆನ್ನಿಗೆ ಬೇರೆ ಹಲವಾರು ಹೊಸ ಕೈಗಾರಿಕೆಗಳೂ ಯಂತ್ರ ಶಾಲೆಗಳೂ ಸ್ಥಾಪಿಸಲ್ಪಡಬೇಕಾಗುತ್ತವೆಂಬುದನ್ನೂ ವೃತ್ತಿ ನೈಪುಣ್ಯ ಪಡೆದ ಉತ್ಸಾಹಿಗಳು ಅಗತ್ಯ ಬೀಳುವರೆಂಬುದನ್ನೂ ಸರಕಾರ-ಹಾಗು ಖಾಸಗಿವಲಯ—ಸದಾ ಜ್ಞಾಪಕದಲ್ಲಿರಿಸಬೇಕು; ಮತ್ತು ಆ ಗುರುತರವಾದ ಹೊಣೆಯನ್ನು ನಿರ್ವಹಿಸುವುದಕ್ಕೆ ಯಶಸ್ವಿ ಕಾರ್ಯಕ್ರಮಗಳನ್ನು ಕ್ಲಪ್ತ ಸಮಯದಲ್ಲಿ ಜ್ಯಾರಿಗೆ ತರಬೇಕು.

ಉಡುಪಿ

ಪ್ರಕಟಣೆ— ಇದೇ ಬರುವ ಎಪ್ರಿಲ್ ತಿಂಗಳಾರಂಭದಿಂದ ಉಡುಪಿ ದಿನಚರ್ಯ ವಹಸ್ತೆವಾರು ಮಾರ್ಕೇಟಿನಲ್ಲಿ ಪ್ರತಿವಾರವೂ ಬುಧವಾರ ಮತ್ತು ಶನಿವಾರಗಳಲ್ಲಿ ಸಂತೆ ಜರಗುವುದೆಂದು ಮುನಿಸಿಪಲ್ ಕಮೀಶನರರ ಜಾಹೀರು ಪ್ರಕಟಣೆ ಹೊರಟಿದೆ.

ಮೊಡರ್ನ್ ಸ್ಕೂಲ್ ಒಫ್ ಕೊಮರ್ಸ್— ಉಡುಪಿ, ಇದರ ವಾರ್ಷಿಕೋತ್ಸವವು ಇದೇ ತಾ 6 ರಲ್ಲು ಡಿ। ಮುನ್ಸಿಫ್ ಶ್ರೀಯು. ಹಮ್ಮಬ್ಬ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಟ. ಎ. ವಾಸುದೇವನ್, ಅವರು ವರದಿಯನ್ನೋದಿದರು. ಮಿ। ಎಸ್. ಜೆ. ಫೆರ್ನಾಂಡೀಸರು ಸ್ವಸ್ತಿವಾಚನ ಮಾಡಿದರು. ಶ್ರೀ ಗೋಪಾಲಕೃಷ್ಣಶ್ಯಾನುಭಾಗರು ಉತ್ತರಿಸಿದರು. ಟೈಪ್‌ರೈಟಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಶ್ರೀ ಕೆ. ರಾಮಚಂದ್ರ ಉಪಾಧ್ಯಾಯ ಹಾಗೂ ಇತರ ಸ್ಪರ್ಧೆಗಳಲ್ಲಿ ಜಯ ಶೀಲರಾದವರಿಗೆ ಅಧ್ಯಕ್ಷರು ಬಹುಮಾನ ಹಂಚಿದರು. ಶ್ರೀಗಳಾದ ಬಿ. ಜೆ. ಕಾಮತ್, ರಾಜಗೋಪಾಲ್ ಪುತ್ರಾಯ ಮತ್ತು ಕುಮಾರಿ ಸೀತಾ ಕಾಮತರ ಸಂಗೀತ ಕೂಟ ನಡೆಯಿತು. ಶಾಲಾ ಹೆಡ್ಮಾ

ವಾರದ ಮಹಾನುಭಾವ

ನೆಹರುಗಳ ಬಂಟ—ಶ್ರೀ ಕೃಷ್ಣ ಮೆನನ್

"ಚಲಚ್ಚಿತ್ರ ಪ್ರಪಂಚದ ನೀವು ಏಕಾಂತವಾಸ ಪ್ರಿಯರಾಗಬಾರದು— ನಿಮ್ಮ ದಂತದ ಗೋಪುರಗಳನ್ನು ತ್ಯಜಿಸಿ ನಾಡಿನ ಜೀವನದೊಡನೆ ಬೆರೆತು ಬಾಳಬೇಕಾದದ್ದು ನಿಮ್ಮ ಧರ್ಮ"— ಹೊಸ ದೆಹಲಿಯಲ್ಲಿ ನೆರೆದಿದ್ದ ಚಲಚ್ಚಿತ್ರ ವಿಚಾರ ಗೋಷ್ಠಿಯನ್ನು ಉದ್ದೇಶಿಸಿ, ಮೇಲಿನಂತೆ ಭಾಷಣ ಮಾಡಿದವರು ಯಾರು? ರಾಷ್ಟ್ರಾಧ್ಯಕ್ಷರಲ್ಲ, ಡಾ| ರಾಧಾಕೃಷ್ಣನ್ನರಲ್ಲ. ನೆಹರುಗಳಲ್ಲ— ನೆಹರುಗಳ ಹೃದಯದ ಮಿಡಿತವನ್ನು ಪ್ರತಿಧ್ವನಿಸುವ ಶ್ರೀ ವಿ. ಕೆ. ಕೃಷ್ಣ ಮೆನನ್ ಮೇಲಿನಂತೆ ಹೇಳಿದರು. ಚಲಚ್ಚಿತ್ರಗಳ ಉತ್ಪಾದಕರು ಪಂಚವಾರ್ಷಿಕ ಯೋಜನೆ ಮತ್ತು ವಿಕಾಸ ಕಾರ್ಯಗಳ ವಸ್ತುವನ್ನು ಆರಿಸಿಕೊಳ್ಳಬೇಕೆಂದು ಅವರು ಸೂಚಿಸಿದರು. ಗೋಷ್ಠಿಯನ್ನು ನೆರೆಯಿಸಿದ್ದ ಶ್ರೀ ರಾಜಮನ್ನಾರರು ನೆಹರುಗಳ ಕುರಿತು "ಅಖಿಲಭಾರತದ ಪ್ರಗತಿ ಎಂಬ ಚಲಚ್ಚಿತ್ರದ ಮಹಾದಿಗ್ದರ್ಶಕರು ನೀವಾಗಿದ್ದೀರಿ— ಭಾರತದ ಉಳಿದೆಲ್ಲ ಚಟುವಟಿಕೆಗಳವರೂ ನಿಮ್ಮ ಮೇಲ್ಪಂಕ್ತಿಯನ್ನು ಅನುಕರಿಸುವವರು" ಎಂದಿದ್ದರು. ಮೆನನ್ನರು ಇದೇ ಮಾತನ್ನು ಸ್ಪಷ್ಟಗೊಳಿಸುತ್ತಾ "ಕಲೆ ಸಂಸ್ಕೃತಿ ಇವೆಲ್ಲವೂ ಹೊಟ್ಟೆಯ ಪ್ರಶ್ನೆ ಬಿಡಿಸಲ್ಪಟ್ಟ ಬಳಿಕ ಬರುತ್ತವೆ—ಆದುದರಿಂದ ಭಾರತದ ಅಭಿವೃದ್ಧಿಯೇ ಎಲ್ಲರ ಧ್ಯೇಯವಾಗಬೇಕಾದದ್ದು ಕರ್ತವ್ಯ. ಚಲಚ್ಚಿತ್ರೋದ್ಯಮವೂ ಇದಕ್ಕೆ ಅಪವಾದವಲ್ಲ" ಎಂದು ಉಪದೇಶಿಸಿದರು.

ಕಳೆದ ಮೂವತ್ತು ವರ್ಷಗಳಿಂದಲೂ ಸಮಾಜವಾದದ ತತ್ವಗಳಲ್ಲಿ ಅಚಲ ವಿಶ್ವಾಸವನ್ನಿಟ್ಟುಕೊಂಡು ಅವುಗಳನ್ನು ಪ್ರತಿಪಾದಿಸುತ್ತಿರುವ ಮತ್ತು ಭಾರತದ ಅಭ್ಯುದಯಕಾಂಕ್ಷಿಯಾಗಿ ಅದಕ್ಕಾಗಿ ಅಹೋರಾತ್ರಿ ದುಡಿಯುತ್ತಿರುವ ಮೆನನ್ನರು ಚಲಚ್ಚಿತ್ರೋದ್ಯಮದ ತಾರೆಗಳನ್ನು ಸಾಮಾನ್ಯ ನಾಗರಿಕರಾಗಿ ಕಂಡುದರಲ್ಲಿ ಆಶ್ಚರ್ಯ ಪಡುವಂಥದೇನೂ ಇಲ್ಲ; ಅವರು ಸದಭಿರುಚಿಪ್ರಿಯರು. ವಿಲಾಸದ ಮೋಹ ಅವರಿಗಿಲ್ಲ. ಹರಟೆ ಮತ್ತು ಭೋಜನಗಳಲ್ಲೂ ಅವರು ಸಮಯ ತೆಗೆಯುವುದಿಲ್ಲ. ಆದುದರಿಂದ ಚಲಚ್ಚಿತ್ರ ವಿಚಾರ ಗೋಷ್ಠಿಯಲ್ಲೂ ಅವರು ವಿಷಯದ ಮೂಲಕ್ಕೆ ಹೋದರು. ಹೊಟ್ಟೆಯ ಪ್ರಶ್ನೆ ಎಲ್ಲಕ್ಕಿಂತ ದೊಡ್ಡದಾದುದೆಂದು ಸಾರಿದರು. ಅವರ ಬಡಕಲು ದೇಹ ಕಂಡವರು ಮೆನನ್ನರ ಶಕ್ತಿ ಸಾಮರ್ಥ್ಯದಲ್ಲಿ ತುಸು ಸಂಶಯ ಪಡಬಹುದು. ಆದರೆ, ಅವರ ಚಪಲ ಚುಟಿಗಳು ಮತ್ತು ಅವುಗಳ ಚಲನೆಗೆ ಸರಿಯಾಗಿ ತೂಗಾಡುವ ಕೈಗಳು ಎಲ್ಲ ಸಂಶಯವನ್ನೂ ನಿವಾರಿಸುತ್ತವೆ. ಅವರ ಬಿಳಿಯಾದ ಗುಂಗುರು ಕೂದಲು ಮತ್ತು ಗಿಳಿ ಮೂಗು ಮುಖ ಸೌಂದರ್ಯಕ್ಕೆ ವಿಶೇಷವಾದ ಕಳೆಯನ್ನು ಕೊಡುತ್ತವೆ.

ಮೆನನ್ನರು ಮಲಬಾರಿನ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದರು. ಹೆತ್ತವರು ಈ ಮಗನು ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದ ರಾಜಕಾರಣಿಯಾಗುವನೆಂದು ಎಣಿಸಿಯೇ ಇರಲಿಲ್ಲ. ಥಿಯಾಸಫಿಕಲ್ ಸೊಸೈಟಿಯ ಪ್ರವರ್ತಕರಾದ ಆ್ಯನಿಬೆಸೆಂಟರ ಸಂಪರ್ಕ ಮೆನನ್ನರು ಲಂಡನಿನ ಸ್ಕೂಲ್ ಆಫ್ ಇಕಾನಮಿಕ್ಸ್ ಸೇರುವಂತೆ ಮಾಡಿತು. ಮೆನನ್ನರು ಲಂಡನಿನಲ್ಲಿ ತಮ್ಮೊಬ್ಬರ ವೈಯಕ್ತಿಕ ಶಕ್ತಿಯ ಬಲವನ್ನೇ ಉಪಯೋಗಿಸಿ ಹೆಣಗಾಡುತ್ತ ಉತ್ಕರ್ಷದ ಒಂದೊಂದೇ ಮೆಟ್ಟಿಲನ್ನು ಹತ್ತಿದರು. ಅರ್ಥಶಾಸ್ತ್ರದ ಪರಿಚಯ ಅವರನ್ನು ಸಮಾಜವಾದಿಯಾಗಿ ಮಾಡಿತು. ಅವರು ಮಾರ್ಕ್ಸ್‌ವಾದವನ್ನೆಷ್ಟೋ ಅಷ್ಟೇ ಗಾಂಧೀವಾದವನ್ನೂ ಮನವರಿಕೆ ಮಾಡಿಕೊಂಡರು. ಮೆನನ್ನರು ಲಂಡನನ್ನೇ ತಮ್ಮ ಮನೆಯಾಗಿಸಿಕೊಂಡರೆಂದರೂ ತಪ್ಪಲ್ಲ—ಆದರೆ ಅದು ಭಾರತದ ಸ್ವಾತಂತ್ರ್ಯಕ್ಕೆ ನೆರವಾಗಲಿ ಎಂಬ ಆಶೆಯಿಂದ ಭಾರತೀಯರ ಮನೋಭಾವವನ್ನು ಆಗಿನ ಆಳರಸರ ದೇಶದ ಜನತೆಗೆ ತಿಳಿಸಿ ಹೇಳುವ ಭಾಷಣಗಳನ್ನು ಅವರು ಬಿಡದೆ ಮಾಡುತ್ತಿದ್ದರು. ಗಾಂಧೀಜಿ ರೌಂಡ್ ಟೇಬಲ್ ಕಾನ್ಫರೆನ್ಸಿಗೆ ಹೋಗಿದ್ದಾಗ ಮೆನನ್ನರು ಅವರಿಗೆ ಸಾಕಷ್ಟು ಅನುಕೂಲತೆಯನ್ನು ಒದಗಿಸಲು ಪ್ರಯತ್ನಿಸಿದ್ದರು.

ಇಂಗ್ಲೆಂಡಿನಲ್ಲಿ ಹೀಗೆ ವರ್ಷಗಟ್ಟಳೆ ವಾಸಿಸಿದ ಮೆನನ್ನರು ಅಲ್ಲಿಯ ನಾಗರಿಕರಾಗಿಯೂ ಮೆರೆದರು. ಸೈಂಟ್ ಪಂಕ್ರಾಸ್ ಬರೋದಲ್ಲಿ ಅವರು ಕೂಲಿಕಾರ ಪಕ್ಷದ ಎಡಗುಂಪಿನ ನಾಯಕರಾಗಿ ತುಂಬ ಕೆಲಸಮಾಡಿದರು. ೧೯೩೪ರಿಂದ ೧೯೪೭ರಲ್ಲಿ ಲಂಡನಿನಲ್ಲಿ ಭಾರತದ ಹೈ ಕಮಿಷನರೆಂದು ನೇಮಕವಾಗುವವರೆಗೂ ಮೆನನ್ನರು ಇಂಗ್ಲೆಂಡಿನ ಸಾರ್ವಜನಿಕ ಜೀವನದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ತೆಗೆದುಕೊಂಡಷ್ಟೇ ಆಸ್ಥೆಯನ್ನು ತೆಗೆದುಕೊಂಡರು. ಸೈಂಟ್ ಪಂಕ್ರಾಸ್ ಬರೋದ ಪುಸ್ತಕಾಲಯದ ಅಭಿವೃದ್ಧಿ ಮತ್ತು ಶಿಕ್ಷಣ ಕ್ಷೇತ್ರದ ಪ್ರಗತಿಗಾಗಿ ಅವರು ತೆಗೆದುಕೊಂಡ ಶ್ರಮಕ್ಕೆ ಗೌರವ ಸೂಚಿಸಲು ಕಳೆದ ತಿಂಗಳು ಆ ನಗರ ಸಭೆ ಅವರಿಗೆ ಸನ್ಮಾನ ಮಾಡಿತು. ಮೆನನ್ನರು ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯತ್ವಕ್ಕೂ ಉಮೇದ್ವಾರರಾಗಿದ್ದರು ಒಮ್ಮೆ. ಕೇವಲ ಒಂದು ಮತದಿಂದ ಅವರ ಹೆಸರು ಬಿದ್ದು ಹೋಯಿತು—ಇನ್ನೊಮ್ಮೆ ಭಾರತದ ಕುರಿತು ಡೈಲಿ ವರ್ಕರ್ ಎಂಬ ಕಮ್ಯೂನಿಸ್ಟ್ ಪತ್ರಿಕೆಯವರು ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದುದರಿಂದ ಕೂಲಿಕಾರ ಪಕ್ಷಕ್ಕೆ ಇದರಲ್ಲಿ ವಿಶ್ವಾಸವಿಲ್ಲದಂತಾಗಿ, ಅದು ತನ್ನ ಶಿಫಾರಸನ್ನು ಹಿಂದೆಗೆಯಿತು.

ಎಷ್ಟೇ ಸ್ನೇಹದಿಂದಿದ್ದರೂ ಮೆನನ್ನರು ಕಮ್ಯೂನಿಸ್ಟರಲ್ಲ— ಸಮಾಜವಾದಿಗಳು ಎಂದೀಗ ಇಂಗ್ಲೆಂಡಿನ ಕೂಲಿಕಾರ ಪಕ್ಷಕ್ಕೆ ಮನವರಿಕೆಯಾಗಿರಲು ಸಾಕು. ಮೆನನ್ನರು ಹಾಗೆಲ್ಲ ಮರುಳಾಗುವವರೇ ಅಲ್ಲ— ಅವರು ಇಂಗ್ಲೀಷರೊಡನೆ ಸುದೀರ್ಘಕಾಲ ಬಳಕೆಯನ್ನಿಟ್ಟುಕೊಂಡರೂ ನಿಷ್ಠಾವಂತ ಸಸ್ಯಾಹಾರಿಗಳಾಗಿಯೇ ಉಳಿದಿದ್ದಾರೆ; ಮಾದಕಪೇಯಗಳ ಮತ್ತು ಹೊಗೆಬತ್ತಿಯ ಸೇವನೆಯಿಂದ ಅವರು ದೂರವಿದ್ದಾರೆ. ಮಲಬಾರಿನ ಖಾರಮೆಣಸಿನ ಅಡಿಗೆಯೇ ಅವರಿಗೆ ಲಂಡನಿನಲ್ಲೂ ಆಗಬೇಕು—ಅದೇ ಸೆಕೆಯ ಅನುಭವವಾಗಬೇಕೆಂದು ಅವರು ಕೋಣೆಯ ಎಲ್ಲ ಕಿಟಕಿ ಬಾಗಿಲುಗಳನ್ನೂ ಮುಚ್ಚಿ ಕುಳಿತುಕೊಳ್ಳುತ್ತಾರೆ. ಭೋಜನ ಸಮಾರಂಭ ಮುಂತಾದವುಗಳಲ್ಲಿ ಅವರು ಭಾಷಣಮಾಡುವ ಸಂದರ್ಭ ಬಂದಾಗ ಅವರ ಮುಖಕ್ಕೆ ಎಲ್ಲಿಲ್ಲದ ಮೆರುಗು ಬರುತ್ತದೆ. ಅವರ ಒಂದು ಕಾಲು ತುಸು ನೋವಿನಿಂದ ತೊಂದರೆ ಕೊಡುತ್ತದೆ— ಆದರೆ ನಡೆಯುವಾಗ ಹೊರತು ಬೇರೆ ಸಮಯ ಅದು ಗೊತ್ತಾಗುವುದಿಲ್ಲ. ಅವರಿಂದು ತಿರುಗದ ದೇಶವಿಲ್ಲ—ಮಾತನಾಡಿಸದ ಮುತ್ಸದ್ದಿಯಿಲ್ಲ. ಈ ವಾರದ ಮೊದಲಿಗೆ ಹೊಸ ದೆಹಲಿಯಲ್ಲಿದ್ದರು—ವಾರಾಂತ್ಯದಲ್ಲಿ ರಾಷ್ಟ್ರಸಂಘದ ವಿಶೇಷ ಸಮಿತಿಯಲ್ಲಿ ಭಾಗ ವಹಿಸಲು ನ್ಯೂಯಾರ್ಕಿಗೆ ಹಾರಿದರು. ಅವರು ಭಾರತದ ಸಂಚಾರಿರಾಯಭಾರಿ-ನೆಹರುಗಳ ವಿದೇಶ ನೀತಿಯ ಪಡಿಯಚ್ಚು.

ಆಂಧ್ರದಲ್ಲಿ ಕಾಂಗ್ರೆಸಿನ ದಿಗ್ವಿಜಯ

ಎಲ್ಲರ ಕುತೂಹಲವನ್ನು ಪರಮಾವಧಿ ಕೆರಳಿಸಿದ್ದ ಆಂಧ್ರದ ಚುನಾವಣೆಯ ಫಲಿತಾಂಶ ಇದೀಗ ಸಂಪೂರ್ಣ ಪ್ರಕಟವಾಯಿತು. ಇದನ್ನು ನೋಡಿದರೆ ಆಂಧ್ರದಲ್ಲಿ ಕಾಂಗ್ರೆಸು ಪಕ್ಷವು ದಿಗ್ವಿಜಯ ಮಾಡಿತೆಂದೇ ಹೇಳಬೇಕಾಗುತ್ತದೆ. ಕಾಂಗ್ರೆಸು ಪಕ್ಷವು ಕೃಷಿಕರ ಲೋಕ ಪಕ್ಷ ಮತ್ತು ಪ್ರಜಾ ಪಕ್ಷಗಳೊಡನೆ ಕೂಡಿ ರಚಿಸಿದ ಸಂಯುಕ್ತ ರಂಗಕ್ಕೆ ೧೪೬ ಸ್ಥಾನಗಳೂ ಕಮ್ಯೂನಿಸ್ಟರಿಗೆ ೧೫ ಸ್ಥಾನಗಳೂ ಪ್ರಜಾಸಮಾಜವಾದಿಗಳಿಗೆ ೧೩ ಸ್ಥಾನಗಳೂ ಸ್ವತಂತ್ರರಿಗೆ ೨೨ ಸ್ಥಾನಗಳೂ ಸಿಕ್ಕಿದ್ದು, ಜನಸಂಘದ ಉಮೇದ್ವಾರರೆಲ್ಲರೂ ಠೇವಣಾತಿ ಕಳೆದುಕೊಂಡರು.

ಕಮ್ಯುನಿಸ್ಟರಿಗೆ ವಜ್ರಾಘಾತ

ಚುನಾವಣೆಯ ಫಲಿತಾಂಶ ಪ್ರಕಾರ, ಕಮ್ಯುನಿಸ್ಟರ ಶ್ರೇಷ್ಠ ನಾಯಕರಲ್ಲಿ ಅನೇಕರು ಪರಾಭವಕ್ಕೆ ಗುರಿಯಾದರು. ಕಳೆದ ಶಾಸನ ಸಭೆಯಲ್ಲಿ ಕಮ್ಯೂನಿಸ್ಟರ ಧುರೀಣರಾಗಿದ್ದ ಶ್ರೀ ನಾಗಿರೆಡ್ಡಿ, ಉಪಧುರೀಣ ಶ್ರೀ ಹನುಮಂತರಾಯ, ರಾಜ್ಯಸಭೆಯ ಸದಸ್ಯ ಶ್ರೀ ವಲ್ಲಭದ್ರಡೆ ಪೊಲಿಟ್‌ಬ್ಯೂರೋದ ಸದಸ್ಯರಾದಿಯಾಗಿ ಬೇರೆ ಕೆಲವು ಪ್ರಮುಖರು ಸೋತರು. ಕಮ್ಯುನಿಸ್ಟರಿಗೆ ತುಸುವಾದರೂ ಸಮಾಧಾನ ಕೊಟ್ಟ ಸಂಗತಿಯೆಂದರೆ ರಾಜ್ಯ ಸಭೆಯಲ್ಲಿ ಕಮ್ಯುನಿಸ್ಟರ ನಾಯಕರಾದ ಶ್ರೀ ಪಿ. ಸುಂದರಯ್ಯನವರು ಪಡೆದ ವಿಜಯ. ಶಾಸನ ಸಭೆಯಲ್ಲಿ ಚಟುವಟಿಕೆಯ ಸದಸ್ಯರಾಗಿದ್ದ ಸುಬ್ಬರಾಯರು ಮತ್ತು ಕಮ್ಯುನಿಸ್ಟರ ಶಾಸನ ಸಭಾ ಪಕ್ಷದ ಕಾರ್ಯದರ್ಶಿಯಾಗಿದ್ದ ಶ್ರೀ ವೆಂಕಟೇಶ್ವರರು ಗೆದ್ದು ಬಂದುದಕ್ಕೂ ಅವರು ಸಂತೋಷಿಸಬಹುದು.

ಸ್ತರರ ಕಾರ್ಯದಕ್ಷತೆಯನ್ನು ಪ್ರಶಂಸಿಸಿ, ಔದ್ಯೋಗಿಕ ಶಿಕ್ಷಣದ ಆವಶ್ಯಕತೆ ಇತ್ಯಾದಿ ವಿಷಯಗಳಲ್ಲಿ ಅಧ್ಯಕ್ಷರು ಭಾಷಣ ಮಾಡಿದರು. ಬಳಿಕ ಶ್ರೀ ಕೆ. ಕೇಶವ ಪೈಗಳಿಂದ ಹರಿಕಥಾ ಕಾಲಕ್ಷೇಪ ನಡೆಯಿತು. ಶ್ರೀ ಕೆ. ಪದ್ಮನಾಭ ರಾಯರು ಧನ್ಯವಾದಗಳನರ್ಪಿಸಿದ ನಂತರ ಸಮಾರಂಭ ಕೊನೆಗೊಂಡಿತು.

ಕೋರ್ಟು ಧಾರಣೆ— ಕಜೆ ಅಕ್ಕಿ ಮುಡಿ ರೂ 13/ ತೊಳ್ಸಲು ರೂ 13-8-0; ಅವ್ವಲ್ ತೊಳ್ಸಲು ರೂ 14/ ಮುಸ್ಕತಿ ರೂ-14-8-0: ಬೆಳ್ತಿಗ ರೂ 15/ ಅವ್ವಲ್ ಬೆಳ್ತಿಗೆ ರೂ 16/ ಉಪ್ಪು ಮುಡಿ ರೂ 12-8-0; ತೆಂಗು 100 ಕ್ಕೆ ರೂ 14/ ತೆಂಗಿನೆಣ್ಣೆ ಮಣ ರೂ 24/ ಈ ರೀತಿಯಾಗಿ ಡಿ। ಮುನ್ಸಿಫರು ದರ ಮಂಜೂರು ಮಾಡಿರುವರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು- ತಾ 1 ರಂದು ಒಂದು ದಿನ ಮಾತ್ರ ಕಾಲೇಜಿಗೆ ಬರಲಿಲ್ಲವೆಂದೂ ಆ ನಂತರ ಅವರು ತಮ್ಮ ಕೃತಿಗಾಗಿ ಬೇಸರಗೊಂಡು ಮರುದಿನದಿಂದಲೇ ಕ್ರಮವಾಗಿ ಬರುತ್ತಿರುವರೆಂದೂ ಶಿಸ್ತು ಪಾಲನೆಗಾಗಿ ಡೀನ್ ಕೆಪ್ಪನ್ ಮಂಗೇಶರಾಯರು ಅನುಸರಿಸಿದ ಪ್ರಸಂಗಾವಧಾನತೆ ಮತ್ತು ಧೈರ್ಯದ ಹೆಜ್ಜೆ ಅಭಿವಂದನೀಯವೆಂದೂ ತಿಳಿದುಬರುತ್ತದೆ.

ಕಸ್ತೂರ್ಬಾ ಮೆಡಿಕಲ್ ಕಾಲೇಜು— ಮಂಗಳೂರು ಕ್ಲಿನಿಕಲ್ ಸೆಕ್ಷನಿಗೆ ಬೇಕಾಗಬಹುದಾದ ಸಲಕರಣೆಗಳ ವೆಚ್ಚ ಸುಮಾರು ಎರಡು ಲಕ್ಷ ರೂಪಾಯಿಗಳಲ್ಲಿ ಅರ್ಧಾಂಶದಷ್ಟನ್ನಾದರೂ ಮದರಾಸು ಸರಕಾರದಿಂದ ದೊರಕಿಸಿಕೊಳ್ಳುವ ಪ್ರಯತ್ನದ ಬಗ್ಗೆ ಏಕಡೆಮಿಯ ರಿಜಿಸ್ಟ್ರಾರ್, ಡಾ| ಟಿ. ಎಂ. ಎ. ಪೈಗಳೂ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲೊಬ್ಬರಾದ ಡಾ| ಎಸ್. ಆರ್. ಪೈಗಳೂ ಕಳೆದ ವಾರದಲ್ಲಿ ಮದ್ರಾಸಿಗೆ ತೆರಳಿ ಸಂಬಂಧಪಟ್ಟವರೊಡನೆ ಮನವಿಮಾಡಿಕೊಂಡಿರುವರೆಂದೂ ಕಾಲೇಜಿಗೆ ಮಂಗಳೂರು ಸರಕಾರಿ ಆಸ್ಪತ್ರೆಯ ಸೌಲಭ್ಯವನ್ನೀಯಲು ಸರಕಾರವು ಮುಂದೊಡ್ಡಿರುವ ಶರ್ತಗಳನ್ನು ಸಡಿಲಿಸಬೇಕೆಂದೂ ಕೇಳಿಕೊಂಡಿರುವರೆಂದೂ ತಿಳಿದುಬರುತ್ತದೆ. ಇನ್ನೂ ಪ್ರಾರಂಭ ದೆಸೆಯಲ್ಲಿರುವ ಈ ಮೆಡಿಕಲ್ ಕಾಲೇಜಿಗೆ, ಖಾಸಗಿಯ ಸಾಹಸೋದ್ಯಮಕ್ಕೆ ಮದರಾಸು ಸರಕಾರವು ಸರ್ವ ಸಹಕಾರ, ಸಹಾಯವನ್ನೀಯಬಹುದೆಂದು ನಂಬಲಾಗಿದೆ.

ಕಾಲೇಜಿಗೆ ಅಖಿಲ ಭಾರತ ಸ್ಥಾಯಿರೂಪವನ್ನೀಯುವ ಕುರಿತು ಕೇಂದ್ರ ಸರಕಾರದೊಡನೆ ಮಾತು ಕತೆ ನಡೆಸಲು ಡಾ| ಪೈಗಳು ಇದೇ ತಾ 14 ಕ್ಕೆ ದೆಲ್ಲಿಗೆ ತೆರಳಲಿರುವರೆಂದೂ ಗೊತ್ತಾಗಿದೆ.

ಡಾಕ್ಟರರುಗಳ ಮನವಿ— ಆನೆಕಾಲುರೋಗ ನಿರೋಧಕದಳವು ಮಂಗಳೂರು, ಕಾಸರಗೋಡಿಗೆ ಬರುವಾಗ ಅದನ್ನು ಇಲ್ಲಿಗೂ ಕಳುಹಿಸಬೇಕೆಂದೂ ಇಲ್ಲಿಯೂ ಆ ರೋಗವು ತುಂಬ ಪ್ರಕಟವಾಗಿ ಹರಡುವುದೆಂದೂ ಸ್ಥಳೀಯ ಡಾಕ್ಟರರುಗಳು ಮನವಿಯೊಂದನ್ನು ಮದರಾಸು ಸರಕಾರದ ಆರೋಗ್ಯ ಮಂತ್ರಿಗಳಿಗೆ ಕಳುಹಿಸಿರುವರೆಂದು ಗೊತ್ತಾಗಿದೆ.

ಎ. ವಿ. ಎಂ. ರವರ
ಒಂದು ರಾತ್ರಿ (ತಮಿಳು)
ಲಲಿತ, ಬಿ. ಎಸ್. ಸರೋಜ, ಶಣ್ಮುಗಂ, ಬಾಲಯ್ಯ, ಮುಕ್ತ
ನಾಗೇಶ್ವರ ರಾವ್ ಮೊದಲಾದವರು.
ನೃತ್ಯ: ಲಲಿತಾ, ಪದ್ಮಿನಿ, ಕುಮಾರಿ ಕಮಲಾ, ಲಕ್ಷ್ಮೀಕಾಂತ.
ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ
ತಾ. 9—3—1955 ರಿಂದ

ಕಟಪಾಡಿ-ಸ್ಥಳೀಯ ಎಸ್. ವಿ. ಎಸ್. ಹಾ| ಎ| ಶಾಲೆ ಮತ್ತು ಎಸ್. ಎಮ್. ಎಸ್. ಶಾಲೆ, ಚೊಕ್ಕಾಡಿ, ಇವುಗಳ ಸಂಯುಕ್ತ ವರ್ಧಂತ್ಯುತ್ಸವವು ತಾ. ೬ರಲ್ಲು ದಕ್ಷಿಣ ಶ್ರೇಣಿಯ ಶಾಲೆಗಳ ಪರೀಕ್ಷಾಧಿಕಾರಿ ಶ್ರೀ ರ್ಷರ್ಷ ವ್ಯೆಕಾ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕರೆಸ್ಪೊಂಡೆಂಟ್ ಶ್ರೀ ಪಿ. ರಾಮದಾಸ ನಾಯಕರು ಸ್ವಾಗತ ಭಾಷಣ ಮಾಡಿದರು ಮುಖ್ಯೋಪಾಧ್ಯಾಯರುಗಳು ವರದಿಗಳನ್ನೋದಿದರು. ಶ್ರೀ ಎಮ್. ಗೋಪಾಲಕೃಷ್ಣ ಶೆಣೈಯವರು ಶಾಲಾ ಸ್ವಸ್ತಿವಾಚನ ಮಾಡಿದರು, ಬಹುಮಾನ ವಿತರಣೆ, ಅಧ್ಯಕ್ಷ ಭಾಷಣಗಳಾಗಿ ವಿವಿಧ ವಿನೋದ ಕಾಲಕ್ಷೇಪಗಳಾದುವು.

ಹಿರಿಯಡಕ— ಈ ಕೇಂದ್ರದ ಅಧ್ಯಾಪಕ ಸಂಘದ ಮಕ್ಕಳ ಆಟದ ಹಬ್ಬವು ಹಿರಿಯಡಕ ಬೋರ್ಡು ಹಾ| ಎ| ಶಾಲಾ ವಠಾರದಲ್ಲಿ ಉಡುಪಿ ಉತ್ತರ ಶ್ರೇಣಿಯ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್ ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ವಿವಿಧ ಚಟುವಟಿಕೆಗಳು ಪ್ರದರ್ಶಿಸಲ್ಪಟ್ಟ ಬಳಿಕ ಶ್ರೀ ಬಿ. ಮಹಾಬಲ ಸೆಟ್ಟರು ಮಕ್ಕಳ ಆಟದ ಹಬ್ಬದ ಮಹತ್ವದ ಕುರಿತು ಮಾತನಾಡಿದರು. ಅಧ್ಯಕ್ಷ ಭಾಷಣಾನಂತರ ಸಂಘದ ಕಾರ್ಯದರ್ಶಿನಿ ಶ್ರೀಮತಿ ಯು. ರುಕ್ಮಿಣಿಯಮ್ಮನವರು ಧನ್ಯವಾದಗಳನ್ನಿತ್ತರು.

ಪಡುಬಿದ್ರಿ—ಇಲ್ಲಿಯ ಬೋರ್ಡು ಹಾ| ಎ| ಶಾಲೆಯನ್ನು ಜಿಲ್ಲಾ ಬೋರ್ಡು ಉಪಾಧ್ಯಕ್ಷ ಶ್ರೀ ಬಿ. ಆರ್. ಕರ್ಕೇರರು ಈಚೆಗೆ ಸಂದರ್ಶಿಸಿ ಶಾಲೆಯ ಬಗ್ಗೆ ಸದಭಿಪ್ರಾಯವನ್ನಿತ್ತಿರುವರು.

ಈ ಕೇಂದ್ರದ ಉಪಾಧ್ಯಾಯರ ಸಂಘದ ಸಭೆಯು ಶ್ರೀ ಪಿ ಶಿವಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಸ್. ಮುಕುಂದರಾಯರು ಇಂಗ್ಲಿಷಿನ ಹೊಸ ಪಾಠಪಟ್ಟಿಯ ಬೋಧನಾಕ್ರಮದ ಕುರಿತು ಭಾಷಣವಿತ್ತರು.

ಮಣಿಪಾಲ-ಇಲ್ಲಿಯ ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 2ರಲ್ಲು ಸಂಜೆ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪುಂಡಲೀಕ ಶೆಣೈಯವರು ವರದಿಯನ್ನೋದಿದರು. ಶ್ರೀ ರಾಮಕೃಷ್ಣ ಕೆದ್ಲಾಯರು ಸ್ವಸ್ತಿವಾಚನ ಮಾಡಿದರು. ವಿವಿಧ ಮನರಂಜನ ಕಾರ್ಯಗಳಿಂದ ಸಮಾರಂಭ ಕೊನೆಗೊಂಡಿತು.

ಸುರತ್ಕಲ್-ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲಿನ ವಿದ್ಯಾರ್ಥಿ ಸಾಹಿತ್ಯ ಸಂಘದ ವಾರ್ಷಿಕ ಸಮಾರಂಭವು ತಾ. 2ರಲ್ಲು ಶ್ರೀ ಯು. ಸೀತಾರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ನಿಂಜೂರು ಶ್ರೀ ರಾಮಾ ಹಾ| ಎ| ಶಾಲಾ ಕಟ್ಟೋಣದ ಸಹಾಯಾರ್ಥವಾಗಿ ಆ ಶಾಲೆಯ ಮೆನೇಜರ್ ಶ್ರೀ ಎಸ್, ಸಂಜೀವ ಸೆಟ್ಟರು ಬೊಂಬಾಯಿಗೆ ಹೋದಲ್ಲಿ ಅಲ್ಲಿ ವಾಸ್ತವ್ಯ ಮಾಡಿಕೊಂಡಿರುವ ನಿಂಜೂರಿನವರು ಹಣ ಸಂಗ್ರಹಿಸಿ ರೂ 2167—4—0 ಕೊಟ್ಟಿರುತ್ತಾರೆ. ಶ್ರೀ ಸೆಟ್ಟರು ಅವರೆಲ್ಲರಿಗೂ ಧನ್ಯವಾದಗಳನ್ನರ್ಪಿಸುತ್ತಾರೆ.

ಇನ್ನಂಜೆ — ಶ್ರೀವಿಷ್ಣುಮೂರ್ತಿ ಹಯವದನಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ಕಳದ ತಾ. 25ರಲ್ಲಿ ಉಡುಪಿ ಶ್ರೀ ಸೋದೆವಾದಿರಾಜ ಮಠದ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಐ. ಶ್ರೀನಿವಾಸ ಮಿತ್ತಂತಾಯರು ಸ್ವಾಗತಭಾಷಣ ಮಾಡಿದರು. ಹೆಡ್ಮಾಸ್ತರ್ ಶ್ರೀ ಎ. ಶ್ಯಾಮರಾಯರು ವರದಿಯನ್ನೋದಿದರು. ಶ್ರೀ ಪಿ. ಪ್ರಭಾಕರಪ್ರ ಸೆಟ್ಟರು ಸ್ವಸ್ತಿವಾಚನಮಾಡಿದರು, ಸೈಂಟ್ ಜೋನ್ಸ್ ಇಗರ್ಜಿಯ ರೆ| ಫಾ| ಅಂಡ್ರ್ಯೂ ಜೆ. ಪಿ. ಟೋರವರು ಪಾರಿತೋಷವಿತರಣೆಮಾಡಿದರು. ತಾ. 26ರಲ್ಲಿ ಈ ಶಾಲೆಯ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಪಾಂಗಾಳ ಸೈಂಟ್ ಜೋನ್ಸ್ ಇಗರ್ಜಿಯ ರೆ| ಫಾ| ಎ. ಜೆ ಪಿ. ಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಐ. ಎಸ್. ಮಿತ್ತಂತಾಯರಿಂದ ಸ್ವಾಗತ, ಶ್ರೀ ಎಸ್. ಗೋಪಾಲ ಸೆಟ್ಟರಿಂದ ವರದಿವಾಚನಗಳಾದುವು. ಶ್ರೀ ಯು. ಶ್ರೀನಿವಾಸ ಉಪಾಧ್ಯಾಯರು ಸ್ವಸ್ತಿವಾಚನಮಾಡಿದಕ್ಕೆ ಶ್ರೀ ಎ. ಶ್ಯಾಮರಾಯರು ಉತ್ತರವಿತ್ತರು.

ಅದಮಾರು— ಅದಮಾರು ಬೋರ್ಡು ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 6ರಲ್ಲಿ ಸಂಜೆ ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಸ್ಥಾಪಕರಾದ ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರು ಉಪಸ್ಥಿತರಿದ್ದರು. ಪ್ರಾರ್ಥನಾ ನಂತರ ಶಾಲಾ ಹೆಡ್ಮಾಸ್ತರ್ ಶ್ರೀ ಎಸ್. ಆರ್. ಆಚಾರ್ಯರು ವರದಿಯನ್ನೋದಿದರು. ಶ್ರೀ ವೆಂಕಟ್ರಮಣಯ್ಯನವರು ಸ್ವಸ್ತಿವಾಚನ ಮಾಡಿದರು. ಜಿಲ್ಲಾ ಕಲೆಕ್ಟರ್ ಶ್ರೀ ಕೆ. ಅನಮ್ತಾಚಾರರವರು ಬಹುಮಾನ ವಿತರಣೆಮಾಡಿದರು. ಸ್ವಾಮಿಗಳವರು ಆಶೀರ್ವಚನಗಳನ್ನಿತ್ತರು. ಅಧ್ಯಕ್ಷ ಭಾಷಣವಾಗಿ ವಂದನಾರ್ಪಣ ಕಾರ್ಯಕ್ರಮವಾಯಿತು. ಬಳಿಕ ಯಕ್ಷಗಾನ, ನಾಟಕ ಮೊದಲಾದ ಮನರಂಜನ ಪ್ರದರ್ಶನಗಳಾದುವು.

ಕುಂಬಳೆ — ಬೆಂದಡ್ಕ ಸಿರಿಯಾ ಈ ಗ್ರಾಮಗಳಿಗೆ ಇದೇ ತಿಂಗಳಲ್ಲಿ ಪಂಚಾಯತ್ ನಿಯಮವನ್ನು ಜಾರಿ ಮಾಡುವರೆ ಸರಕಾರದಿಂದ ಹುಕುಮಾಗಿರುತ್ತದೆಯೆಂದು ತಿಳಿದಿರುತ್ತದೆ

ತಾ ೬ರಂದು ರಾತ್ರಿ ಇಲ್ಲಿನ ಶ್ರೀ ನಿತ್ಯಾನಂದ ಸ್ವಾಮಿ ಸ್ಮಾರಕ ಭಜನಾ ಮಂದಿರದಲ್ಲಿ ಕರುಣಾಗಪ್ಪಳ್ಳಿಯ ಶ್ರೀ ಟಿ ಕೆ. ಕುಂಞಿಕೃಷ್ಣನ್ ಭಾಗವತರು ಶ್ರೀ ಬಾಬು ರೈಯರ ಮೃದಂಗ, ಶ್ರೀ ಮಾಯಿಪಾಡಿ ಮಹಾಲಿಂಗ ಭಟ್ಟರ ಫಿಟಲಿನೊಂದಿಗೆ ಸಂಗೀತ ಕಚೇರಿಯನ್ನು ನಡೆಸಿದರು.

ಮಾಯಿಪಾಡಿ ಬುನಾದಿ ಶಾಲಾ ಶ್ರೇಣಿಗೆ ಒಳಪಟ್ಟ ಶಾಲಾಧ್ಯಾಪಕರ ತ್ರೈಮಾಸಿಕ ಸಭೆಯು ತಾ. ೬ರಂದು ಮಾಯಿಪಾಡಿ ತರಬೇತು ಶಾಲೆಯಲ್ಲಿ ಜರಗಿಸಿ, ಕಳೆದ ಸಭಾನಂತರವಾದ ವೃತ್ತಿಪರ ಶಿಕ್ಷಣದ ಮತ್ತು ಸಮನ್ವಯ ಪಾಠಗಳ ಪುರೋಗತಿ ಕುರಿತು ಚರ್ಚಿಸಿದಲ್ಲದೆ ಬರುವ ಸಭೆಯ ವರೇಗಿನ ಚಟುವಟಿಕೆ ಪಾಠಗಳ ಮತ್ತು ಸಮನ್ವಯ ಪಾಠಗಳ ನಿಶ್ಚಯ ಕೂಡಾ ಮಾಡಲಾಯ್ತು. ಸಭೆಯಲ್ಲಿ ಶಾಲಾ ಪರೀಕ್ಷಾಧಿಕಾರಿ ಶ್ರೀ ವಿ. ತಿಮ್ಮಪ್ಪ ಶೆಟ್ಟಿ ತರಬೇತು ಶಾಲಾ ಮುಖ್ಯೋಧ್ಯಾಪಕ ಶ್ರೀ ಕೆ. ರಾಮಕೃಷ್ಣ ಶೆಟ್ಟಿ ಇವರ ಭಾಷಣ ಕೂಡಾ ನಡೆಯಿತು.

ನಿಂಜೂರು—ಶ್ರೀ ವಿವೇಕಾನಂದ ಸೇವಾ ಸಂಘದ ಸಭೆಯು ತಾ 27-2-55 ರಲ್ಲು ಶ್ರೀನಿವಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು, ಸಮಾಜ ವಿಕಾಸ ಯೋಜನೆಯಿಂದ ಹಣ ಸಹಾಯ ಪಡೆದು ಕೂಡಲೇ ಸಂಘಕ್ಕೆ ಸ್ವಂತ ಕಟ್ಟಡ ರಚಿಸ ಬೇಕೆಂದಾಯಿತು. ಮಾರ್ಚಿ ಆಖೇರಿಗೆ ಕಟ್ಟಡದ ಬಗ್ಗೆ ಪರ ಊರಿಗೆ ಹಣ ಸಂಗ್ರಹಕ್ಕೆ ಹೊರಡುವುದೆಂದಾಯಿತು. ಸಭೆಯಲ್ಲಿ ಹಾಜರಿದ್ದ ಊರ ಮನೀಯರಲ್ಲಿ 16 ಜನರು ರೂಪ್ಯಾ 20 ರಂತೆ ಹಣ ಒಪ್ಪಿಸುವ ವಾಗ್ದಾನ ಮಾಡಿರುತ್ತಾರೆ.

ಪೆರಡಾಲ — ಸ್ಥಳೀಯ ಬೋರ್ಡು ಹಿರಿಯ ಬುನಾದಿ ಶಾಲೆಯ ಹೊಸ ಕಟ್ಟಡದ ಶಂಕು ಸ್ಥಾಪನಾ ಕಾರ್ಯವನ್ನು ಇದೇ ತಾ. 11ರಂದು ಸಂಜೆ 5½ ತಾಸಿಗೆ ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರು ನೆರವೇರಿಸಲಿರುವರು.

ವಿಟ್ಲ - ಕಳದ ತಾ. 28ರಲ್ಲು ಸ್ಥಳೀಯ ಬೋರ್ಡು ಹಾ| ಎ| ಶಾಲೆಯ ವರ್ಧಂತಿ ಸಮಾರಂಭವು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಸಂಜೀವರಾಯರು ವರದಿವಾಚನ ಮಾಡಿದರು. ಶ್ರೀ ತಿರುಮಲ್ಲೇಶ್ವರ ಭಟ್ಟರು ಶಾಲಾ ಸ್ವಸ್ತಿವಾಚನ ಮಾಡಿದರು. ಶ್ರೀ ಎಮ್. ರಾಮಕೃಷ್ಣ ಭಟ್ಟರು ಬಹುಮಾನ ವಿತರಣೆ ಮಾಡಿದರು. ಈ ಶಾಲೆಯ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕೂಡಾ ಅದೇ ದಿವಸ ಜಿಲ್ಲಾ ಬೋರ್ಡು ಮೆಂಬರ್ ಶ್ರೀ ಎ. ಭೀಮಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಕೆ. ನಾರಾಯಣ ಭೈಗಳು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಎಮ್. ರಘುವೀರ ನಾಯ್ಕರು ವರದಿಯನ್ನೋದಿದರು.

ಕಾರ್ಕಳ—ಸ್ಥಳೀಯ ಶ್ರೀಮತ್ ಭುವನೇಂದ್ರ ಸಂಸ್ಕೃತ ಮಹಾವಿದ್ಯಾಲಯದ ವಿದ್ಯಾರ್ಥಿ ಸಂಘದ ಮಹಾ ಅಧಿವೇಶನವು ತಾ. ೬ರಲ್ಲು ಸಂಜೆ ಶ್ರೀ ಕೆ. ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ರಾಜಗೋಪಾಲಾಚಾರ್ಯ ಮತ್ತು ಕೆ. ಅನಂತ ಪದ್ಮನಾಭ ಉಡುಪರು ಅನುಕ್ರಮವಾಗಿ ಕಾವ್ಯ ವಾಚನ ಮತ್ತು ಉಪನ್ಯಾಸ ಮಾಡಿದರು. ಶ್ರೀ ವಾಮನ ಪ್ರಭುಗಳು ಸ್ವಸ್ತಿವಾಚನ ಮಾಡಿದರು. ಶ್ರೀ ಆರ್. ವೈಕುಂಠ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಹೆಡ್ ಪೋಸ್ಟಾಫೀಸಿನಲ್ಲಿ ಹಂಗಾಮಿ ಹೆಡ್ ಪೋಸ್ಟು ಮಾಸ್ತರರಾಗಿದ್ದು ರಜೆಯಮೇಲೆ ಹೋಗಿದ್ದ ಶ್ರೀ ಎಮ್. ನರಹರಿರಾಯರು ಕಾರ್ಕಳ ಪೋಸ್ಟುಮಾಸ್ತರರಾಗಿ ನೇಮಕಗೊಂಡು ಈಗ ತಾನೆ ಚಾರ್ಜ ವಹಿಸಿರುವರು. ಕಾರ್ಕಳದಲ್ಲಿ ಪೋಸ್ಟುಮಾಸ್ತರಾಗಿದ್ದ ಶ್ರೀ ಜಿ. ಲಕ್ಷ್ಮಯ್ಯನವರು ಮಂಗಳೂರು ಹೆಡ್ಡಾಫೀಸಿನಲ್ಲಿ ಸುಪರ್‌ವೈಜರಾಗಿ ವರ್ಗಾಯಿಸಲ್ಪಟ್ಟಿರುವರು.

ಬೆಳ್ಮಣ್ಣು ಕೊಳ್ತಿಗೆ ಗ್ರಾಮದ ಪೆರ್ಲಂಪಾಡಿ ಶಾಲಾ ಉಪಾಧ್ಯಾಯಿನಿ ಕೆ ಸೋಮಕ್ಕೆ ಇವರ ಪಿತೃಶ್ರೀಯವರು ತನ್ನ 75 ನೇ ವರ್ಷದಲ್ಲಿ ದಿವಂಗತರಾದದು ವಿಷಾದಕರವು.

ಎರ್ನಾಕುಲಮ್— ಎರ್ನಾಕುಲಂ, ಕೊಚ್ಚಿ ಮತ್ತು ವೆಲ್ಲಿಂಗ್ಟನ್ ದ್ವೀಪ ಇಲ್ಲಿಯ ಕನ್ನಡಿಗರು ಹಾಗೂ ಕನ್ನಡ ಭಾಷೆ-ಸಂಸ್ಕೃತಿಗಳ ಅಭಿಮಾನಿಗಳು ಒಂದಾಗಿ "ಕರ್ನಾಟಕ ಸಾಹಿತ್ಯ ಸಂಘ ವನ್ನು ಸ್ಥಾಪಿಸಿರುವರು. ಕಾರ್ಯಕಾರಿ ಸಮಿತಿಗೆ ಶ್ರೀ. ಎಸ್. ಸುಬ್ಬರಾವ್ (ಅಧ್ಯಕ್ಷ), ಡಾ| ರುಕ್ಮಿಣಿ ಅಮ್ಮ (ಉಪಾಧ್ಯಕ್ಷೆ), ಶ್ರೀ. ಎಂ. ಪಿ. ಕಾಮತ್ (ಕಾರ್ಯದರ್ಶಿ) ಶ್ರೀ. ಮಹಮ್ಮದ್ ಹುಸ್ಸೇನ್ (ಖಜಾಂಚಿ) ಮತ್ತು ಇತರ ಏಳು ಜನ ಸದಸ್ಯರು ಆರಿಸಲ್ಪಟ್ಟರು.

ಶ್ರೀ ಎ ತಿಮ್ಮಪ್ಪ ಪೂಂಜರ ನಿಧನ— ನಿವೃತ್ತ ಡಿಪ್ಯುಟಿ ಕಲೆಕ್ಟರ್ ಶ್ರೀ ಎ. ತಿಮ್ಮಪ್ಪ ಪೂಂಜ ಬಿ ಎ., ಅವರು ತನ್ನ 75 ನೆ ವಯಸ್ಸಿನಲ್ಲಿ ದಿನಾಂಕ 1 ರಂದು ಪೂರ್ವಾಹ್ನ ತನ್ನ ಅತ್ತಾವರ ನಿವಾಸದಲ್ಲಿ ನಿಧನರಾದರೆನ್ನಲು ವಿಷಾದಿಸುತ್ತೇವೆ. ಇವರ ಮರಣದ ವಾರ್ತೆ ಕೇಳಿದೊಡನೆ ಸಂಬಂಧಿಕರೂ ಸ್ನೇಹಿತರೂ ಬಹುಸಂಖ್ಯೆಯಲ್ಲಿ ಬಂದು ತಮ್ಮ ಅಂತಿಮ ಶ್ರದ್ಧಾಂಜಲಿಯನ್ನರ್ಪಿಸಿದರು.

ಶ್ರೀ ಪೂಂಜರು ಧನ, ಮಾನ ಹಾಗೂ ಹಲವು ಸರಕಾರಿನೌಕರರಿಂದ ಕೂಡಿದ ಕುಟುಂಬಕ್ಕೆ ಸೇರಿದವರು. ಅವರ ತಂದೆ ಶ್ರೀ ಎ. ವೆಂಕಪ್ಪ ಪೂಂಜರು ಪಜೀರು ಶಿರಸ್ತೇದಾರರಾಗಿದ್ದರು. ದಿವಂಗತರ ಮಾವಂದಿರಾದ ಶ್ರೀ ಎ. ರಾಮಯ್ಯ ಪೂಂಜರು ಜಿಲ್ಲಾ ಜಡ್ಜರೂ ಶ್ರೀ ದೇವಪ್ಪ ಪೂಂಜರು ತಹಶಿಲ್ದಾರರೂ ಆಗಿದ್ದರು. ದಿವಂಗತರು ಕರುಣಾಳುಗಳಿದ್ದು ಸರ್ವರ ಪ್ರೀತಿ ವಿಶ್ವಾಸಗಳಿಸಿದ್ದರು. ಶ್ರೀ ಪೂಂಜರ ನಿಧನದಿಂದ ಅವರ ಧರ್ಮಪತ್ನಿ, ಐದು ಗಂಡು ಮಕ್ಕಳು ಮತ್ತು ಓರ್ವ ಮಗಳಿಗೂ ಹಾಗೂ ಇತರರಿಗೆ ಉಂಟಾದ ಶೋಕದಲ್ಲಿ ಸಹಸಂತಾಪವನ್ನು ಸೂಚಿಸುವೆವು.

ಪ್ರಿಂಟಿಂಗ್- ಬೈಂಡಿಂಗ್- ಕಟ್ಟಿಂಗ್

ಮೊದಲಾದ ಪ್ರೆಸ್ಸಿಗೆ ಸಂಬಂಧಪಟ್ಟ ಯಾವತ್ತೂ ಕೆಲಸಗಳನ್ನು ನಾಜೂಕಾಗಿ ಸಕಾಲದಲ್ಲಿ ಸುಲಭ ದರದಲ್ಲಿ ಮಾಡಿ ಕೊಡಲಾಗುವುದು. ಮದುವೆ ವರ್ಧಂತಿ ಮೊದಲಾದ ಯಾವತ್ತೂ ತರದ ಆಮಂತ್ರಣ ಪತ್ರಿಕೆಗಳನ್ನು ಅತಿ ತ್ವರ್ಯದಲ್ಲಿ ಅತಿ ಅಗ್ಗ ದರದಲ್ಲಿ ತಯಾರಿಸಿ ಕೊಡಲಾಗುವುದು.

ಎಕೌಂಟು ಪುಸ್ತಕಗಳು, ಕೋರ್ಟು ಫಾರ್ಮುಗಳು, ವರ್ಗ ಊಳಿಗಗಳು, ಸೊಸೈಟಿ ರಿಜಿಸ್ಟ್ರಿ ಫಾರ್ಮುಗಳು ಮೊದಲಾದುವು ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಅಪೂರ್ವ ಸಂದರ್ಭ!

ಕಿರಿಯರ ಪ್ರಪಂಚದ ಒಟ್ಟು ರೂ. 36—10—0 ಬೆಲೆಯ 37 ಪುಸ್ತಕಗಳನ್ನು ಒಮ್ಮೆಯೇ ತೆಗೆದುಕೊಳ್ಳುವವರಿಗೆ ಬರೇ ರೂ. 24—0—0 ಕ್ಕೆ ಕೊಡಲಾಗುವುದು.

ಸುವರ್ಣ ಸಂಧಿ!

ಅಂತರಂಗ ಕಾರ್ಯಾಲಯದವರು ಪ್ರಕಟಿಸಿರುವ ಒಟ್ಟು ರೂ. 34—0—0 ಬೆಲೆಯ 100 ಪುಸ್ತಕಗಳನ್ನು ಒಮ್ಮೆಯೇ ಕೊಳ್ಳುವವರಿಗೆ ಬರೇ ರೂ. 22—8—0ಕ್ಕೆ ಕೊಡಲಾಗುವುದು.

ಕೆಟಲಾಗಿಗೆ ಬರೆಯಿರಿ. ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ ಉಡುಪಿ.



ಮಂಗಳೂರು

ರಜತೋತ್ಸವ— ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘದ ರಜತೋತ್ಸವವು ತಾ. ೬ರಲ್ಲಿ ಮಣಿಪಾಲದ ಎಕೆಡಮಿ ಒಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಅಧ್ಯಕ್ಷರಿಂದ ರಾಷ್ಟ್ರಧ್ವಜಾರೋಹಣವಾದಬಳಿಕ ಸಂಘದ ಅಧ್ಯಕ್ಷೆ ಶ್ರೀಮತಿ ರತ್ನಾಬಾಯಿ ಸುಜಿರ್‌ರವರು ಸ್ವಾಗತಮಾತುಗಳನ್ನಾಡಿದರು. ರಜತೋತ್ಸವ ಸಮಿತಿ ಅಧ್ಯಕ್ಷರಾದ ಡಾ| ಎಮ್. ಕೇಶವಪೈಗಳು ಸಂದೇಶಗಳನ್ನು ಓದಿದರು. ನಂತರ ಆಶ್ರಮದ ಮಕ್ಕಳಿಗೆ ಬಟ್ಟೆ ವಿತರಣೆ ನಡೆಯಿತು. ಸಂಜೆ ದಿವಂಗತ ಸರ್ ಬೆನಗಲ್ ನರಸಿಂಹರಾಯರ ಭಾವಚಿತ್ರವನ್ನು ಅಧ್ಯಕ್ಷರು ಅನಾವರಣ ಮಾಡಿದರು. ಬಳಿಕ ಶ್ರೀ ಎನ್. ರಾಮರಾಯರು ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘದ ೨೫ ವರ್ಷಗಳ ಕಾರ್ಯಗಳ ಕುರಿತೂ, ಶ್ರೀಮತಿ ಶಾಂತೇರಿ ಪ್ರಭುಗಳು ಸೇವಾಶ್ರಮ ಸಂಘದ ಕಾರ್ಯಗಳ ಕುರಿತೂ ವಿವರಿಸಿದರು. ಶ್ರೀಮತಿ ಮಹಾಲಕ್ಷ್ಮಿ, ಕುಮಾರಿ ಬಿ. ವಿಮಲಾ ಮತ್ತು ಕುಮಾರಿ ಮೀನಾಕ್ಷಿ ಯವರು ಆಶ್ರಮ ಜೀವನದ ಕುರಿತು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈಶ್ವರಾನಂದ ಮಹಿಳಾ ಸೇವಾಶ್ರಮ ಸಂಘದ ಕಾರ್ಯಕಲಾಪಗಳನ್ನು ಪ್ರಶಂಸಿಸಿದರು. ಸಿರಿವಂತರು, ಉತ್ತಮ ಸ್ಥಿತಿಯಲ್ಲಿರುವವರು ಇಂತಹ ಸೇವಾಸಂಘಗಳಿಗೆ ಸಹಾಯನೀಡಬೇಕೆಂದು ಕೇಳಿಕೊಂಡರು. ಬಳಿಕ ಜನಮನರಂಜನ ಕಾರ್ಯಕ್ರಮಗಳಾದುವು.

ಜಿಲ್ಲೆಯ ಅಭಿವೃದ್ಧಿ ಯೋಜನೆಗಳು— ದ. ಕ. ಜಿಲ್ಲಾ ಕಲೆಕ್ಟರರು ತಾ 1 ರಲ್ಲಿ ಪತ್ರಿಕಾಪ್ರತಿನಿಧಿಗಳ ಗೋಷ್ಠಿಯನ್ನು ಜರಗಿಸಿ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಕುರಿತು ವಿವರಣೆ ಯಿತ್ತರು. ಅದರ ಸಾರಾಂಶ ಹೀಗಿದೆ:– ಜಿಲ್ಲೆಯಲ್ಲೀಗ ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಸ್ಥಳೀಯ ಅಭಿವೃದ್ಧಿ ಯೋಜನೆಗಳೆಂಬ ಮೂರು ವಿಧದಲ್ಲಿ ಕಾರ್ಯಗಳಾಗುತ್ತಿವೆ. ಸಮಾಜ ವಿಕಾಸ ಯೋಜನೆಯಲ್ಲಿ ಈ ವರೆಗೆ ರೂ 10,49,000 ಖರ್ಚಾಗಿರುವುದು. ರಾಷ್ಟ್ರೀಯ ಯೋಜನೆಯ ಕ್ಷೇತ್ರಗಳಾದ ಮಂಜೇಶ್ವರದಲ್ಲಿ ರೂ 1,8',600, ಸುಳ್ಯದಲ್ಲಿ ರೂ 1,77,000 ಮತ್ತು ಈ ವರ್ಷವೇ ಕೆಲಸ ಪ್ರಾರಂಭವಾದ ಬೈಂದೂರಲ್ಲಿ ರೂ 3000 ಖರ್ಚಾಗಿದೆ. ಇವುಗಳಲ್ಲಿ ಪ್ರತಿಯೊಂದು ಕ್ಷೇತ್ರಕ್ಕಾಗಿಯೂ ಸರಕಾರವು ರೂ 7,50,000 ಮಂಜೂರುಮಾಡಿದೆ.

ಸ್ಥಳೀಯಾಭಿವೃದ್ಧಿ ಕಾರ್ಯಗಳಲ್ಲಿ ಬಾವಿಗಳಿಗಾಗಿ ರೂ 1½ ಲಕ್ಷವನ್ನೂ ಇತರ ಕೆಲಸಗಳಿಗಾಗಿ ರೂ 2½ ಲಕ್ಷವನ್ನೂ ಸರಕಾರವು ಮಂಜೂರು ಮಾಡಿತು. ಆದರೆ, ಈ ಯೋಜನೆಯಂತೆ ಅರ್ಧವೆಚ್ಚ ಕೊಟ್ಟು ಕೆಲಸ ಮಾಡಲು ಮುಂದೆ ಬರುವ ಸ್ಥಳೀಯರ ಅಭಾವದಿಂದಾಗಿ ಈ ನಾಲ್ಕು ಲಕ್ಷದಲ್ಲಿ ರೂ 2,80,000 ಹಿಂದೆ ಕೊಡಬೇಕಾಯಿತೆಂದು ತಿಳಿಸಿದರು.

ಕಟಪಾಡಿ (ರೂ 20,000) ಕಾಪು (ರೂ–15,000) ಅಲೆವೂರು (ರೂ 16,000) ಮಣಿಪಾಲ (ರೂ 19,000) ಕೇಂದ್ರಗಳಲ್ಲಿ ಹೆರಿಗೆ ಕೇಂದ್ರ ತೆರೆಯಲು ಮಂಜೂರಾಗಿದೆ. ಮಣಿಪಾಲ ಪ್ರಾಥಮಿಕ ಶಾಲೆ (ರೂ 17,000) ಹಿರೆಬೆಟ್ಟು ಪ್ರಾಥಮಿಕ ಶಾಲೆ (ರೂ 18,000) ಕಳಾವರ ಪ್ರಾಥಮಿಕ ಶಾಲೆ (ರೂ 13,000) ಮತ್ತು ಸುಳ್ಯಪಾಡಿ ಹಾ| ಎ| ಶಾಲೆ (ರೂ 4500) ಈ ರೀತಿಯಲ್ಲಿ ಹಣ ಮಂಜೂರಾಗಿ ಕೆಲಸವಾಗುತ್ತಿವೆ. ಇವುಗಳೆಲ್ಲ ಖಾಸಗಿ ಕೆಲಸಗಳು. ರಸ್ತೆಗಳ ಕೆಲಸಗಳು ಹೀಗಿವೆ: ಮಣಿಪಾಲ–ಅಂಬಾಡಿಯಾರು, ಆನೆಗಲ್ಲಿ, ಬಸ್ರೂರು, ಕುಂದಾಪುರ, ಹಂಗ್ಲೂರು, ಅರಸಿನ ಮಕ್ಕಿ, ಬಿಸಿಲೆ, ಕಬಕ, ಕುಕ್ಕುಜೆ, ಪುತ್ತೂರು, ಬಲ್ನಾಡು, ತೆಕ್ಕಿಲ್, ಕೊಳತ್ತೂರು, ನೆಕ್ರಾಜೆ, ಕಾರಡ್ಕ ಮುಂತಾದ ರಸ್ತೆಗಳಲ್ಲದೆ ಉಡುಪಿ ತಾಲೂಕಿನಲ್ಲಿ ಆರು ಪಂಚಾಯತ ರಸ್ತೆಗಳ ದುರಸ್ತಿಯೂ ಆಗಿರುತ್ತದೆ.

ಡೆಮೊಕ್ರೆಟಿಕ್ ಯುತ್ ಲೀಗ್— ತಾ. 3ರಲ್ಲಿ ಬೋಳಾರದಲ್ಲಿ ರಚಿಸಲ್ಪಟ್ಟಿತು. ಶ್ರೀಗಳಾದ ಬಿ. ಜಿ. ಸೋಮಪ್ಪ ಕುಂದರ್ (ಅಧ್ಯಕ್ಷ), ಎಚ್. ಉಮಾನಾಥ ನಾಯಕ್ (ಉಪಾಧ್ಯಕ್ಷ), ಎ. ನಾರಾಯಣ ರೈ (ಕಾರ್ಯದರ್ಶಿ), ಬಿ. ಆರ್. ರಾಧಾಕೃಷ್ಣ (ಜತೆ ಕಾರ್ಯದರ್ಶಿ)ರು ಕಾರ್ಯಕಾರೀಸಮಿತಿಯ ಅಧಿಕಾರಿಗಳಾಗಿ ಆರಿಸಲ್ಪಟ್ಟರು.

ರೋಟರಿ ಕ್ಲಬ್ಬಿನ ಸಭೆಯು— ತಾ. 3ರಲ್ಲಿ ರಾತ್ರಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನಗಳಾದ ನಂತರ ಶ್ರೀ ಎಚ್. ದೇವದಾಸ ಅವರು ಕ್ಷಯರೋಗದ ಸಮಸ್ಯೆ ಮತ್ತು ಚಿಕಿತ್ಸೆಯ ಕುರಿತು ಭಾಷಣವೀಯುತ್ತಾ ಬಿ. ಸಿ. ಜಿ. ದಾಕು ಕ್ಷಯರೋಗವನ್ನು ತಡೆಗಟ್ಟುವ ಉತ್ತಮ ವಿಧಾನವೆಂದರು. ಬಳಿಕ ನಡೆದ ಚರ್ಚೆಯಲ್ಲಿ ಡಾ| ಎ. ಎ. ಬೈಲೂರ್, ಶ್ರೀಗಳಾದ ವಿ. ಎಸ್. ಕುಡ್ವ, ಸಿ. ಆರ್. ಆರ್. ಪೂಂಜ ಮೊದಲಾದವರು ಭಾಗವಹಿಸಿದರು. ಶ್ರೀ ಕೆ. ವಿಶ್ವನಾಥ ಕಾಮತರು ಧನ್ಯವಾದಗಳನ್ನರ್ಪಿಸಿದರು.

ಶಹರಿನಲ್ಲಿ ಮೂರು ಸಲ ಟಪ್ಪಾಲು ಬಟ್ವಾಡೆ— ವಿಮಾನ ಮೂಲಕ ಮತ್ತು ಕೊಯಮುತ್ತೂರಿನಿಂದ ಜನತಾ ಎಕ್ಸ್‌ಪ್ರೆಸ್ಸಿನಲ್ಲಿ ಬರುವ ಟಪ್ಪಾಲುಗಳ ಬಟ್ವಾಡೆಗಾ ಅಪರಾಹ್ನದಲ್ಲಿಯೂ ಒಮ್ಮೆ ಬಟವಾಡೆಯಾಗಿ ವ್ಯವಸ್ಥೆಯನ್ನು ಇದೇ ತಾ 1 ರಿಂದ ಮಾಡಲಾಗಿದೆ. ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ಈ ರೀತಿ ದಿನಕ್ಕೆ ಮೂರು ಸಲ ಟಪ್ಪಾಲು ಬಟ್ವಾಡೆಯಾಗುತ್ತದೆ.

ಶತಮಾನೋತ್ಸವ ಸ್ಮಾರಕ ಸ್ಪರ್ಧೆ— ಶ್ರೀ ಶಾರದಾ ಮಣಿದೇವಿ ಶತಮಾನೋತ್ಸವ ಸಂದರ್ಭದಲ್ಲಿ ಮಂಗಳೂರು ಶ್ರೀ ರಾಮ ಕೃಷ್ಣ ಮಠದ ಕಡೆಯಿಂದ ಹ್ಯಾಸ್ಕೂಲು ವಿದ್ಯಾರ್ಥಿನಿಯರಿಗಾಗಿ ಏರ್ಪಡಿಸಿದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ರೂಪಾಯಿ 30 ಸಾಸ್ತಾನ ಶಾಲಾ ವಿದ್ಯಾರ್ಥಿ ಕುಮಾರಿ ಕೆ. ಕೆ. ಪಾರ್ವತಿ ಮತ್ತು ದ್ವಿತೀಯ ಬಹುಮಾನ ರೂ 20 ಮಂಗಳೂರು ಬೆಸೆಂಟ್ ಬಾಲಿಕಾ ಪಾಠ ಶಾಲೆಯ ವಿದ್ಯಾರ್ಥಿನಿ ಕುಮಾರಿ ಎಮ್. ವತ್ಸಲಾ ಇವರಿಗೂ ದೊರೆತಿರುವುದೆಂದು ತಿಳಿದು ಬರುತ್ತದೆ.

ಕೊಕ್ಕರ್ಣೆ ಕೊಲೆ ಮೊಕದ್ದಮೆ– ಉಡುಪಿ ತಾಲೂಕಿನ ಕೊಕ್ಕರ್ಣೆಯಲ್ಲಿ ಕಳೆದ ತಾ 16—6—54 ರಲ್ಲು ಸಂಜೆ ರಾಮ ಮರಕಾಲ ಎಂಬವನು ಕೊಕರ್ಣೆ ಸಂತೆ ಸ್ಥಳದಲ್ಲಿ ಕೊಲೆ ಮಾಡಿದ ಮೊಕದ್ದಮೆಯು ವಿಚಾರಣೆ ದ. ಕ. ಜಿಲ್ಲಾ ಮತ್ತು ಸೈಶನ್ಸ್ ಜಡ್ಜರಾದ ಶ್ರೀ ಎಸ್. ಗಣಪತಿ ಪಿಳ್ಳೆಯವರ ಮುಂದೆ ನಡೆದ ನ್ಯಾಯಾಧೀಶರು ಕೆಳಮನೆ ತುಕ್ರ ಮತ್ತು ಇತರ ಆರು ಮಂದಿ ಅಪಾದಿತರಿಗೆ 5 ವರ್ಷಗಳ ಕಠಿಣ ಸಜೆ ವಿಧಿಸಿದರು. ಐ. ಪಿ. ಸಿ ೧೪೩ ರ ಮೇರೆಗೆ ಅಪಾದಿತರಿಗೆ ತಲಾ ಆರು ತಿಂಗಳ ಕಠಿನ ಸಜೆ ವಿಧಿಸಲ್ಪಟ್ಟಿದೆ.

ಒಕ್ಕಲು ಹಿತರಕ್ಷಣಾ ಮಸೂದೆಗೆ ರಾಷ್ಟ್ರಾಧ್ಯಕ್ಷರ ಸಮ್ಮತಿ- ದ. ಕ. ಜಿಲ್ಲೆಯ ಸಾಗುವಳಿದಾರ ಒಕ್ಕಲು ಹಿತ ರಕ್ಷಣಾ (ತಿದ್ದುಪಡಿ) ಮಸೂದೆ (1955) ಗೆ ನವದೆಹಲಿಯ ರಾಷ್ಟ್ರಾಧ್ಯಕ್ಷರು ತಮ್ಮ ಸಮ್ಮತಿಯನ್ನಿತ್ತರು ಈ ಮಸೂದೆಯ ಅವಧಿಯು 1956 ನೆ ಇಸವಿ ಮಾರ್ಚಿ ತಾ. 2ರ ತನಕ ಇರುವುದು.

ಕೊಯಮುತ್ತೂರು— ಕಳೆದ ತಾ. 27ರಲ್ಲು ಸಂಜೆ ಉಡ್ಲೆಂಡ್ಸ್ ಗಾರ್ಡನಿನಲ್ಲಿ ಸ್ಥಳೀಯ ಕರ್ನಾಟಕ ಸಂಘದ ತ್ರೈಮಾಸಿಕ ಸಭೆಯು ಶ್ರೀ ಬಿ. ಎಸ್. ಭಾಸ್ಕರ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸ್ಪೆಶಲ್ ಡಿಪ್ಯುಟಿ ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಸಟ್ಟಿರ ಭಾಷಣ, ಕುಮಾರಿಗೀತಾ ಸೆಟ್ಟಿಯವರ ನೃತ್ಯ, ಕುಮಾರಿ ಹೇಮ ಪ್ರಭೆಯ ಸಂಗೀತ ಸರಕಾರೀ ಕೈಗಾರಿಕಾ ಶಾಲಾ ಮಕ್ಕಳ ನಾಟಕ ಇತ್ಯಾದಿ ಮನರಂಜನ ಕಾರ್ಯಕ್ರಮಗಳಾದವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮೈಸೂರು, ನೀಲಗಿರಿ, ಕೊಳ್ಳೆಗಾಲ, ಕೊಡಗುಗಳನ್ನೊಳಗೊಂಡ ಅಖಿಲ ಕರ್ನಾಟಕ ಪ್ರಾಂತವು ರಚನೆಯಾಗಬೇಕೆಂತ ಹೇಳಿದರು. ಕೊಯಮುತ್ತೂರಲ್ಲಿ ಕನ್ನಡ ಶಾಲೆಯೊಂದನ್ನು ಸ್ಥಾಪಿಸುವ ಆವಶ್ಯಕತೆಯನ್ನು ತಿಳಿಸಿ, ದ. ಕ. ಜಿಲ್ಲೆಯಿಂದ ಆ ಬಗ್ಗೆ ಸಹಾಯಸಿಕ್ಕುವಂತೆ ತಾನು ಪ್ರಯತ್ನಿಸುವುದಾಗಿಯೂ ಅಧ್ಯಕ್ಷರು ಭರವಸೆಯಿತ್ತರು. ಜತೆಕಾರ್ಯದರ್ಶಿಗಳು ಧನ್ಯವಾದಗಳನ್ನೀಯುತ್ತಾ ಕೊಯಮುತ್ತೂರಿನ ಕನ್ನಡಿಗರೆಲ್ಲರೂ ಈ ಸಂಘಕ್ಕೆ ಸದಸ್ಯರಾಗಿ ಸೇರಬೇಕೆಂದು ಕೇಳಿಕೊಂಡರು. ರಾಷ್ಟ್ರ ಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಕಥೆ, ಕಾದಂಬರಿ, ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	10
13	ದೇಶಭಕ್ತ	1	4
11	ಪ್ರೇಮ ವಿಜಯ	1	4
15	ರಂಗಭೂಮಿ	0	10
16	ಸೇವಾಪಥ	0	0
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	4
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತು ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾವತಾರ ಅರ್ಥಾತ್ ದಶಾವತಾರ	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
20	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿನ್ದಾರ	1	8
33	ಬಾಳಿನ ಬೆಡಗು	1	4
34	ಟೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.

ಕಿರಿಯರ ಪ್ರಪಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ. ಬರೆದಿರುವ—
ಡಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:– ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:–1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

೩ನೇ ಆವೃತ್ತಿ. ಸಿದ್ಧವಾಗಿದೆ! ಬೆಲೆ: ೨-೮-೦ ಬೇಗ ತರಿಸಿರಿ.

ಶ್ರೀ. ಎನ್. ಕೆ. ಕುಲಕರ್ಣಿಕೃತ

ಕನ್ನಡ ಸಾಹಿತ್ಯವಾಹಿನಿ

M. A., B. A., ವಿದ್ಯಾರ್ಥಿಗಳಿಗೂ ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಇದು Reference ಗ್ರಂಥವಾಗಿದೆ! ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಜಾಣ ಪರೀಕ್ಷೆಗೆ Text Bookವನ್ನಾಗಿ ಮಾಡಿದ್ದಾರೆ!

ಒಂದೇ ಪ್ರತಿ ಬೇಕಾದವರು 3—8—0 M. O. ಕಳಿಸಿರಿ.
ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್ನು.

ಪ್ಯಾಕೆಟ್ ಶ್ಯಾಮರಾಯರು
ಸಂಪಾದಕರು: ವಿಜಯ ಗ್ರಂಥಮಾಲೆ, ಬೆಳಗಾಂವಿ.
ಒಡೆಯರು: ಕಥಾಕುಂಜ ಗ್ರಂಥ ಭಾಂಡಾಗ, ಬೆಳಗಾಂವಿ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

‘ನವಯುಗ’ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ ‘ನವಯುಗ’ ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟಿಯವರ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ ‘ನವಯುಗ’ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

ಆವಶ್ಯಕತೆಯ ಅರಸುತನ

ಲೇಖಕ: ಏರ್ಯ ಲಕ್ಷ್ಮೀನಾರಾಯಣ ಆಳ್ವ, ಬಂಟ್ವಾಳ.

"ನಿಮ್ಮನ್ನೇ ನೀವು ಕೊಟ್ಟುಕೊಳ್ಳುತ್ತಿರುವಾಗ ನೀವು ಒಳ್ಳೆಯವರಾಗಿರುತ್ತೀರಿ,
ಆದರೆ ನಿಮಗಾಗಿ ಲಾಭಪಡೆಯುತ್ತಿರುವಾಗಲೂ ನೀವು ಕೆಟ್ಟವರಾಗಿರುವುದಿಲ್ಲ"

—ಖಲೀಲ್ ಗಿಬ್ರಾನ್.

ನೀತಿಯ ನೆಲೆಗಟ್ಟಿನ ಮೇಲೆ ನೆಲೆನಿಂತಿರದ ಇಂದಿನ ಸಮಾಜದಲ್ಲಿ ಆವಶ್ಯಕತೆಯದೇ ಅರಸುತನ. ಈ ದರ್ಬಾರದಲ್ಲಿ ಅಧರ್ಮವೇ ಧರ್ಮದ ಮಂತ್ರಿಸ್ಥಾನದಲ್ಲಿ. ಅನ್ಯಾಯವೇ ನ್ಯಾಯದ ದಂಡನಾಯಕ ಗದ್ದುಗೆಯಲ್ಲಿ. ಭೋಗವೇ ತ್ಯಾಗದ ಪುರೋಹಿತ ಪೀಠದಲ್ಲಿ. ಕುಟಿಲವೇ ಆಪ್ತಾಲೋಚಕ. ಕಾಮ, ಕ್ರೋಧ, ಮದ, ಮತ್ಸರಗಳೇ ಚತುರಂಗಬಲ. ಅಸತ್ಯ, ಅಸಂಸ್ಕಾರಗಳೇ ಮಂದಿಮಾಗಧರು. ಸ್ವಾರ್ಥದ ಯಜ್ಞಮಂಟಪದಲ್ಲಿ ಸತ್ಯ, ಪ್ರೇಮ, ನ್ಯಾಯ, ಧರ್ಮಗಳ ನಿತ್ಯಾಹುತಿ ಅಲ್ಲಿ.

ಅಲ್ಲೊಬ್ಬ ಇಲ್ಲೊಬ್ಬರನ್ನು ಬಿಟ್ಟು ಸಾಮೂಹಿಕ ನೈತಿಕ ಅಧಃಪತನದ ಈ ದಿನಗಳಲ್ಲೂ ಮನುಷ್ಯ ಪೂರ್ಣ ಮೃಗವಾಗಿಲ್ಲ. ಆತನಲ್ಲಿ ಇನ್ನೂ ಅರಿವಿನ ಬೆಳಕು ಆರಿಲ್ಲ. ಎಂದೇ ನ್ಯಾಯಾನ್ಯಾಯ, ಧರ್ಮಾಧರ್ಮಗಳ ತುಲನೆ ಆತನ ಅಂತರಂಗದಲ್ಲಿ ನಡೆಯುತ್ತದೆ. ನ್ಯಾಯ ಧರ್ಮಗಳ ತಕ್ಕಡಿ ಕೆಳಗೆ ತೂಗಿಯೂ ತೂಗುತ್ತದೆ. ಆದರೆ ಆವಶ್ಯಕತೆ ಮಾತ್ರ ಆತನ ಹೃದಯ ಬೇಡ ಬೇಡವೆಂದರೂ ಅಧಿರಾಜನಂತೆ ಅತಿಕ್ರಮಿಸುತ್ತದೆ. ಅನ್ಯಾಯ, ಅಧರ್ಮಗಳ ತಕ್ಕಡಿಯಲ್ಲಿ ತನ್ನ ಕಲ್ಲನ್ನಿಟ್ಟು ಆ ಕಡೆ ಜಗ್ಗುತ್ತದೆ. ಭಾರ ಆ ಕಡೆ ಹೆಚ್ಚಾದಂತೆ ತೋರಿಸಿ—ಭ್ರಮಿಸಿ ಆತನನ್ನು ಅಕೃತ್ಯಕ್ಕೆ ಇಳಿಯುವಂತೆ ಪ್ರೇರಿಸುತ್ತದೆ. ನಿಸ್ಸಹಾಯನಂತೆ ಆತ ಅನ್ಯಾಯ, ಅಧರ್ಮಗಳ ಹಾದಿ ಹಿಡಿಯಲೆಳಸಿದಾಗ ಹೃದಯದ ಮೂಲೆ ಆತ್ಮನಾದ ಧರ್ಮರಾಯನ ಕೊನೆಯ ಮಾತು ಪಾಂಚಜನ್ಯದ ನಾದದಲ್ಲಿ ಅಡಗಿಹೋದಂತೆ ಆವಶ್ಯಕತೆಯ ಅರಸುತನದ ಗುಲ್ಲುಗೊಂದಲಗಳಲ್ಲಿ ಕೇಳಿಸದಾಗುತ್ತದೆ. ಆ ಬೊಬ್ಬೆಯಲ್ಲಿ ಚಿಂತನೆಗೆ ಅವಕಾಶವೆಲ್ಲಿ? ಆಗಲೇ ಸತ್ಯ ದ್ರೋಣನ ವಧೆಯಾಗುತ್ತದೆ. ಹೀಗೆ ಅರಿವಿನ ಕಿರುಬೆಳಕೂ ಇರವಿಗೆ ಇಳಿಯುವುದಿಲ್ಲ. ಆವಶ್ಯಕತೆಯ ಬಿರುಗಾಳಿ ಅರೆಹಾದಿಯಲ್ಲೇ ಅದನ್ನು ಆರಿಸಿಬಿಡುತ್ತದೆ. ಇರವಿನಲ್ಲಿ ಕತ್ತಲೆಯೇ ಮೆರೆಯುತ್ತದೆ.

ಇರವಿನ ಈ ಕತ್ತಲನ್ನೇ ಬೆಳಕು ಎಂದು ನಂಬಿ ನಡೆಯುವವರು ಇಲ್ಲವೆಂದಲ್ಲ. ಆದರೂ 'ಇದು ಸಲ್ಲದು, ಬೆಳಕು ನಮ್ಮ ಹಾದಿಯನ್ನು ಬೆಳಗಬೇಕು' ಎಂದು ಆಶಿಸುವವರೂ ಕಡಿಮೆಯಿಲ್ಲ. ಅಂತರಂಗದ ಬೆಳಕನ್ನು ಬಹಿರಂಗಕ್ಕೆ ಇಳಿಸಲು ಆಗುತ್ತಿಲ್ಲವಲ್ಲಾ ಎಂದು ತಮ್ಮ ದೌರ್ಬಲ್ಯಕ್ಕೆ ತಾವೇ ಮರುಗುತ್ತಿರುತ್ತಾರೆ ಇವರು. ವಿಷಮಚಕ್ರದ ಸುಳಿಯೊಂದರಲ್ಲಿ ಸಿಲುಕಿ, ಮೇಲೆದ್ದು ಬರಬೇಕೆಂದರೂ ಆಗದಿರುವ ತಮ್ಮ ಸ್ಥಿತಿಗಾಗಿ ಕಳವಳಿಸುತ್ತಿರುತ್ತಾರೆ. ಈ ಹಲುಬು, ಹಂಬಲಗಳೊಡನೆ ಆವಶ್ಯಕತೆಯ ಅರಸುತನದ ವಿರುದ್ಧ ದಂಗೆ ಏಳಲು ಕಾತರಿಸುತ್ತಿರುತ್ತಾರೆ. ನೆರವಿಗಾಗಿ ಕಾದಿರುತ್ತಾರೆ.

ಇಂತಹರಿಗೆ ಸದ್ಭಾವದ ಸಹೃದಯ ನೆರವು ಸಿಕ್ಕಿತೋ ಒಮ್ಮೆ ಈ ಜನವೂ ಸಾಕಷ್ಟು ಎತ್ತರ ನೆಗೆಯಲು ಹಿಂದುಮುಂದು ನೋಡುವುದಿಲ್ಲ. ಏಕೆಂದರೆ ಇವರು ಭಾವನಾ ಜೀವಿಗಳು. ಬುದ್ಧಿಗಿಂತ ಹೃದಯದ ಪ್ರಭಾವ ಇವರ ಮೇಲೆ ಹೆಚ್ಚು. ಎಂದೇ ಪ್ರೇಮದ ನೆರವು ಸಿಕ್ಕಿದಾಗಲೊಮ್ಮೆ ಧೀಮಂತರಾಗಿ ಗೋಮಟನಂತೆ ಆವಶ್ಯಕತೆಯ ಬಿರುಗಾಳಿಯ ಮುಂದೆ ಅಚಲರಾಗಿ ನಿಂತುಬಿಡುತ್ತಾರೆ. ಅವಲಂಬನೆ ಸಿಕ್ಕಿದಷ್ಟೂ ಹೊತ್ತು ಇವರ ನಿಲುವು ಭದ್ರ. ಆಗಲೆಲ್ಲ ಎದೆಯ ರಾಜ್ಯದಲ್ಲಿ ಆವಶ್ಯಕತೆಯ ಅಸುರೀ ಅರಸುತನ ಅಳಿದು ದೇವತೆಗಳ ರಾಜ್ಯ ನಡೆಯುತ್ತಿರುತ್ತದೆ.

ಆದರೆ ಹೊರಗಿನ ನೆರವು ತಪ್ಪಿತೋ ಈ ಭಾವನ ಜೀವಿಗಳಲ್ಲಿ ಹೆಚ್ಚಿನವರು ಅಸಕ್ತಿನ ಆದಿಯಾಳುಗಳು— ಆವಶ್ಯಕತೆಯ ಅರಸುತನಕ್ಕೆ ತಲೆಬಾಗಲು ತಡವಾಗುವುದಿಲ್ಲ. ಇವರು ಸ್ವಭಾವತಃ ದುರ್ಬಲರು. ಪ್ರವಾಹಪತಿತರು. ಸುತ್ತಣ ಸಮಾಜ ಇವರ ಹಾದಿಯನ್ನು ಹೀಗಳೆದು ತನ್ನದನ್ನು ಸಮರ್ಥಿಸಿಕೊಂಡಾಗ "ಅದೂ ಹೌದೇನೋ? ನಾನೇ ಮೂರ್ಖನೋ ಏನೋ!" ಎಂದು ಭಾವಿಸುತ್ತಾರೆ; ಭ್ರಮಿಸುತ್ತಾರೆ. ಎಂದೇ ಇವರು ಪುನಃ ಪ್ರವಾಹಪತಿತರಾಗಲು ತಡವಾಗುವುದಿಲ್ಲ. ಹೀಗೆ ಅತ್ತೊಮ್ಮೆ ಇತ್ತೊಮ್ಮೆ ತೂಗುತ್ತಾ ನಡೆದಿದೆ ಸಾಮಾನ್ಯ ವ್ಯಕ್ತಿಯ ಬಾಳು

ಆದರೆ ಅರಿವಿನಿಂದ ಇರವಿಗೆ ಅರೆಕ್ಷಣಕ್ಕಾದರೂ ಇಳಿದ ಬೆಳಕು ವ್ಯರ್ಥವಲ್ಲ. ಅರೆಕ್ಷಣದ ಬಾಳು ಎಂದ ಕೂಡಲೇ ಅದು ಸುಳ್ಳೂ ಅಲ್ಲ. ನಾವೆಷ್ಟು ಹೇಳಿದರೂ ಅಸತ್ಯಕ್ಕಿಂತ ಸತ್ಯದ ಬಲ ಹೆಚ್ಚು, ಕತ್ತಲೆಗಿಂತ ಬೆಳಗಿನ ಶಕ್ತಿ ಹೆಚ್ಚು. ಯುಗಯುಗಾಂತರಗಳಿಂದ ಗವಿಯನ್ನು ತುಂಬಿದ್ದ ಕತ್ತಲೆಯನ್ನು ಬೆಳಕು ಕ್ಷಣ ಮಾತ್ರದಲ್ಲಿ ತುತ್ತುಗೊಳ್ಳಬಲ್ಲುದು. ಹಲವು ಕಾಲದಿಂದ ಬೆಳೆದು ಬಂದ ಅಸತ್ಯ ಸತ್ಯದ ಒಂದು ತುಳಿತಕ್ಕೇ ಕಾಲು ಕೀಳಲು ತಡವಾಗುವುದಿಲ್ಲ. ವಾಲ್ಮೀಕಿ, ಪುರಂದರರ ಕತೆ ನಮಗೆ ಹೊಸತಲ್ಲ. ಗಾಂಧೀ, ವಿನೋಬಾರ ಪವಾಡಗಳು ಹಳತಲ್ಲ. ಆ ಅರೆಕ್ಷಣದ ಬೆಳಕಿನಲ್ಲೇ ವ್ಯಕ್ತಿಗೆ ಆತ್ಮದರ್ಶನದ ಅಲ್ಪಾನುಭವವಾಗುತ್ತದೆ; ಆತ್ಮಾನಂದದ ಸವಿ ತಿಳಿಯುತ್ತದೆ. ಆತ್ಮಾನಂದದ ಮುಂದೆ ಲೌಕಿಕ ವಸ್ತುಗಳನ್ನು ಹೊಂದಿ—ಅದೂ ಅನ್ಯಾಯದಿಂದ ಹೊಂದಿ ಆಗುವ ಆನಂದದ ಅಲ್ಪತನದ ಅರಿವಾಗುತ್ತದೆ. ಈ ಮಟ್ಟದಲ್ಲಿ ಆವಶ್ಯಕತೆಯ ಅರಸುತನದ ವಿರುದ್ಧ ಹೃದಯದ ಕೂಗು ಬಲಗೊಳ್ಳುತ್ತದೆ. ಈ ಕೂಗು ಮೃದು; ಮಧುರ. ಆದರೂ ಇದರ ಮುಂದೆ ಆ ಅಸುರೀ ಅರಸುತನವೇ ಅದುರುತ್ತದೆ—ಸೀತೆಯ ಮೂಕ ಕ್ರಂದನದ ಮುಂದೆ ರಾವಣನ ರಾಜ್ಯಶ್ರೀಯೇ ನಡುಗಿದಂತೆ!

ಓ ಜೀವವೇ! ಅಸುರೀ ಪ್ರವೃತ್ತಿಗಳ ಬಂಧನದಲ್ಲಿರುವ ನಿನ್ನ ಹೃದಯದಿಂದ ಇಂತಹ ಕೂಗು ಕೇಳಿಸಿದಾಗ ಎಚ್ಚರನಾಗಿ ಎದ್ದು ನಿಲ್ಲು. ಮಹಾಮಂಥನಕ್ಕೆ ಸಿದ್ಧನಾಗು. ಮೊದಲಲ್ಲಿ ವಿಷವೇ ಹುಟ್ಟಿ ಬಂದೀತು. ಆದರೆ ವಿಷವನ್ನು ತಂದ ಮಂಥನವೇ ಅಮೃತವನ್ನೂ ತಂದಿತ್ತು ಎಂಬುದನ್ನು ಮರೆಯಬೇಡ. ಮಹಾಸಂಗ್ರಾಮಕ್ಕೆ ಸನ್ನದ್ಧನಾಗು. ಮೊದಲೇ ವಿಜಯದ ಕನಸನ್ನು ಕಟ್ಟಬೇಡ. ಪ್ರಾರಂಭದಲ್ಲಿ ರಾಮಲಕ್ಷ್ಮಣರಿಗೇ ಸ್ಮೃತಿತಪ್ಪಿತು. ಬೆಚ್ಚದಿರು-ನೀನು ಕುರಿಯಲ್ಲ ಪುರುಷಸಿಂಹ. ಬೆದರದಿರು. ಮೋಹಪರವಶನಾಗಿ ರೋಧಿಸಿ ಸುಮ್ಮನೇ ಕುಳ್ಳಿರಬೇಡ. ಮುಂದರಿ. ಸಂಜೀವನವು ಬಂದೀತು. 'ಸತ್' ಚೇತರಿಸಿ ಎದ್ದು ನಿಂತೀತು. ಮುಂದಿನ ಹೋರಾಟದ ರುದ್ರ ರಮಣೀಯತೆಯನ್ನು ಕಾಣು: ಅದೋ ರಾಮ ರಾವಣರ ಯುದ್ಧ ನಡೆದಿದೆ! ನೋಡು ಆವಶ್ಯಕತೆಯ ಹತ್ತು ತಲೆಯ ರಾವಣ ಸೂರ್ಯವಂಶಜ ರಾಮನ ಬಾಣಕ್ಕೆ ಆಹುತಿಯಾಗುತ್ತಿದ್ದಾನೆ! ಅತನ ಆಳ್ವಿಕೆ ಅಳಿಯುತ್ತಿದೆ. ಓ! ರಾಮನಾಳ್ವಿಕೆ ಆರಂಭವಾಗಿದೆ. 'ಸೂರ್ಯವಂಶದ' ಆತನ ಆಳ್ವಿಕೆಯಲ್ಲಿ ಉನ್ಮೀಲಿತ ಆತ್ಮವು ಉನ್ಮುಖವಾಗಿ ದಿವ್ಯಾನಂದೋನ್ಮತ್ತತೆಯಲ್ಲಿ ತಲೆದೂಗುತ್ತಿದೆ. ಭದ್ರಂ! ಶುಭಂ! ಮಂಗಳಂ!

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. ನಂಬ್ರ 23/1955

ಹರಿಶ್ಚಂದ್ರ ಶಾನುಭಾಗ. ವಾದಿ

ಮತ್ತು

ನರಸಿಸೆಟ್ಟಿ ಕೂಡಾ, ಪ್ರತಿವಾದಿರು

ಇವರೊಳಗೆ.

4. ಪೊನ್ನಯ್ಯ ಸೆಟ್ಟಿ 5. ರಾಜು ಸೆಟ್ಟಿ 6. ತಿಂಮ ಸೆಟ್ಟಿ ಪಿಲ್ಲುಸೆಡ್ತಿ ಮಕ್ಕಳು.

8. ಕಾಳಿ ಸೆಡ್ತಿ 9. ಕಾಳುಸೆಟ್ಟಿ ಬಿಜಿಲು ಸೆಡ್ತಿ ಮಕ್ಕಳು.

10. ಚಂದು ಸೆಟ್ಟಿ 11. ಶಿಂಧು ಸೆಡ್ತಿ 12. ತುಕ್ಕು ಸೆಡ್ತಿ. ಕೂಸು ಸೆಡ್ತಿ ಮಕ್ಕಳು. ಉಡುಪಿ ತಾಲ್ಲೂಕು ಯೆಂನಂಜೆ ಗ್ರಾಮದ ಮಂಡ್ಯಾಡಿಯಲ್ಲಿರುವವರು.

ಇವರಿಗೆ.

ವಾದಿಗೆ ಪ್ರತಿವಾದಿರ ಕುಟುಂಬಾರ್ಥದಿಂದ ಬರತಕ್ಕ ವಿಜಯ ಸಂ|| ರದ ಮೂಲಗೇಣಿ ಗೇಣಿ ವ ಬಡ್ಡಿ ಕೂಡಾ ರೂಪಾಯಿ 141-12-6 ಕ್ಕೆ ವಾದಿಯು ಮಾಡಿರುವ ಈ ದಾವೆಯು ತಾರೀಕು 21-3-1955ಕ್ಕೆ 4ರಿಂದ 6 ಮತ್ತು 8ರಿಂದ 12ನೇ ವರೇಗಿನ ಪ್ರತಿವಾದಿರಿಗೆ ನೋಟೀಸು ಬಗ್ಗೆ ಯಿಟ್ಟಿರುತ್ತದೆ. ಸದ್ರಿ 4ರಿಂದ 6 ಮತ್ತು 8ರಿಂದ 12ನೇ ವರೆಗಿನ ಪ್ರತಿವಾದಿರು ಸ್ವತಹಾ ವ ವಕೀಲರ ಮುಖಾಂತ್ರ ಸದ್ರಿ ತಾರೀಕು 21—3—1955ಕ್ಕೆ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸಲಿಕ್ಕೆ ತಪ್ಪಿದ್ರೆ ಈ ದಾವೆಯಂನು ಸದ್ರಿಯವರ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವುದು.

V. R. Kidyur.
Advocate For Plaintiff

ಉಡುಪಿ: ತಾರೀಕು 4 ಮಾರ್ಚ 1955.

ನೋಟೀಸು.

ಪಡುಬಿದ್ರೆ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ. ಕೆ. ಗೋಪಾಲ ಹೆಗ್ಡೆ ಪ್ರಕಟಪಡಿಸುವುದೇನೆಂದರೆ ನಮ್ಮ ಪಂಚಾಯತ ಬೋರ್ಡು ಶಾಖೆಯಲ್ಲಿರುವ ಹಪ್ತೆವಾರು ಮಾರ್ಕೆಟು ಮತ್ತು ದಿನವಹಿ ಮಾರ್ಕೆಟು ಕೂಡಾ 1955-56 ನೇ ಇಸವಿ ಬಾಬ್ತು ತಾ. 1-4-55ರಿಂದ ತಾ. 31-3-1956ರ ವರೆಗಿನ ವರಿವಾ ಸುಂಕ ವಸೂಲುಮಾಡುವ ಸ್ವತಂತ್ರವನ್ನು ಇದೇ ತಿಂಗಳ ತಾರೀಕು 16-3-55ನೇ ಬುಧವಾರ ಅಪರಾಹ್ನ ಗಂಟೆ 3 30ಕ್ಕೆ ಸರಿಯಾಗಿ ಪಂಚಾಯತ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಶರ್ತ ವಗೈರೆ ಅಗತ್ಯವಿದ್ದಲ್ಲಿ ಆಫೀಸಿಗೆಬಂದು ತಿಳಿದುಕೊಳ್ಳಬಹುದು.

K. Gopala Hegde.
President,
Panchayat Board Padubidri. S. K.
Padubidri 2—3—1955

ನೋಡಿದರೆ ಸಾಕು, ಓದದೆ ಬಿಡಲಾರಿರಿ!

ಮುಗಿದಾಗ ಮುಗಿದು ಹೋಯಿತಲ್ಲಾ ಎಂದು – ತೊಡಗಿದಾಗ ಹೇಗೆ ಮುಗಿವುದಿದು ಎಂದು ಕೌತುಕಪಡಿಸುವ ಹದಿಮೂರು ಚಿಕ್ಕ ಚೊಕ್ಕ ಕತೆಗಳ ಸಂಗ್ರಹ.

ಅಂತರಂಗದ ಕತೆಗಳು

ಸೊಗಸಾದ ದ್ವಿತೀಯ ಮುದ್ರಣ. ಅಂದವಾದ ಹೊರಹೊದಿಕೆ.

ಅಂತರಂಗವನ್ನು ಬೆಳಗಿಸಿ, ಬಹಿರಂಗವನ್ನು ಹೊಳೆಸಿ ಹರಿವ ಮಾತು.

ಇಷ್ಟಾದರೂ ಬೆಲೆ ೧-೪-೦ (ಟ. ಖರ್ಚು ಬೇರೆ)

ಪ್ರತಿಗಳು ಎಲ್ಲಾ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ಸಿಗುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ ಕಂಪೆನಿ ಲಿಮಿಟೆಡ್.

ಪಾಯಸ್ ಬಿಲ್ಡಿಂಗ್, ಹಂಪನ್‌ಕಟ್ಟಾ, ಮಂಗಳೂರು.

ಇನ್ಸ್‌ಪೆಕ್ಟರರು, ಒರ್ಗನೈಜರರು ಮತ್ತು ಎಲ್ಲಾ ತರದ ಏಜಂಟರರು ಎಲ್ಲಾ ಕಡೆಗಳಲ್ಲೂ ಬೇಕಾಗಿದ್ದಾರೆ.

ಹೊಸತಾಗಿ ಏರ್ಪಡಿಸಿದ ಪ್ರೀಮಿಯಂ ದರಗಳು ಎಲ್ಲರಿಗೂ ಅನುಕೂಲ ಮತ್ತು ಆಕರ್ಷಣೀಯವಿವೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ.—

S. S. SHETTY, B. A., LL. B.
Chairman.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ನಿಮಗೆ ಯಾವುದೇ ತರದ ಉದ್ಯೋಗ ಬೇಕೆಂದಿದ್ದರೆ ಅಥವಾ ವ್ಯಾಪಾರ ನಡೆಸಬೇಕೆಂದಿದ್ದರೆ ಕೂಡಲೇ ಬರೆಯಿರಿ:

ಟಪ್ಪಾಲುಪೆಟ್ಟಿಗೆ ನಂಬ್ರ 1868.

ಬೊಂಬಾಯಿ— 1

ಭಾರತೀಯ ಸಾಹಿತ್ಯದ ಇತಿಹಾಸ

ಭಾರತೀಯ ಸಾಹಿತ್ಯದ ಪರಂಪರೆ ಮತ್ತು ಪ್ರಾದೇಶಿಕ ವೈವಿಧ್ಯತೆಗಳ ಸಂಪತ್ತನ್ನು ಅಖಿಲ ಭಾರತ ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಏರ್ಪಡಿಸಲಾದ ಭಾಷಣ ಮಾಲಿಯೊಂದು ಸಮೀಕ್ಷಿಸುತ್ತದೆ. ಈ ಮಾಲೆಯಲ್ಲಿ ಏರ್ಪಡಿಸಿದ ಪ್ರಥಮ ಭಾಷಣವನ್ನು ಡಾ ಸುನೀತಿ ಕುಮಾರ್ ಚಟರ್ಜಿಯವರು ಬಿತ್ತರಿಸಿದರು. ಅವರ ಅಭಿಪ್ರಾಯದಂತೆ, ನಮ್ಮ ಸಾಹಿತ್ಯವು ತನ್ನ ವೈಶಾಲ್ಯ, ವೈವಿಧ್ಯ ಮತ್ತು ಸಾಹಿತ್ಯ ಸಂಪತ್ತುಗಳಿಂದಲೂ ತನ್ನ ಕೆಲವು ಶ್ರೇಷ್ಠ ಕೃತಿಗಳಲ್ಲಿ ವ್ಯಕ್ತವಾದ ಕಲಾವಂತಿಕೆಯಿಂದಲೂ ಎಲ್ಲಭಾರತೀಯರಿಗೂ ಅಭಿಮಾನದ ಸಂಗತಿಯಾಗಿರುವುದರ ಜೊತೆಗೆ ಮಾನವ ವರ್ಗದ ಆಸಕ್ತಿಯನ್ನು ಕುದುರಿಸುವ ಭವ್ಯ ಪರಂಪರೆಗಳಲ್ಲಿ ಸಹ ಒಂದೆನಿಸುತ್ತದೆ.

ಈಗ ದೊರೆತಿರುವ ದಾಖಲೆಗಳ ಪ್ರಕಾರ, ಭಾರತೀಯ ಸಾಹಿತ್ಯ ವೇದಗಳ ಕಾಲದಲ್ಲಿ ಉಗಮವಾಯಿತೆಂದು ಹೇಳಬಹುದು. ಸಂಶೋಧಕರ ಅಭಿಪ್ರಾಯದಂತೆ ಕ್ರಿಸ್ತಪೂರ್ವಹತ್ತನೇ ಶತಮಾನದಲ್ಲಿ ವೇದಗಳ ರಚನೆಯಾಯಿತು. ಯುರೋಪ್ಯ ಸಾಹಿತ್ಯ ಚರಿತ್ರೆಯ ಆದಿಪುರುಷನ ಸ್ಥಾನ ಸಲ್ಲುವ ಹೋಮರನಕಾಲಕ್ಕಿಂತಲೂ ಇದು ಕೊಂಚ ಹಳೆಯದಾಗುತ್ತದೆ. ಹೀಗೆ ಸುಮಾರು ಮೂರು ಸಾವಿರ ವರ್ಷಗಳಿಂದ ನಿರಂತರವಾಗಿ ಹರಿದು ಬರುತ್ತಿರುವ ಭಾರತೀಯ ಸಾಹಿತ್ಯ ಪರಂಪರೆಗೆ ಹೋಲಿಸ ಬಹುದಾದ ಉದಾಹರಣೆಗಳು ಜಗತ್ತಿನಲ್ಲಿ ಚೀನಿ, ಯಹೂದಿ ಮತ್ತು ಯೂನಾನಿ ಎಂಬ ಮೂರು ಜನಾಂಗಗಳಲ್ಲಿ ಮಾತ್ರ ಸಿಗುತ್ತವೆ.

ವೇದ ಮತ್ತು ಶಾಸ್ತ್ರೀಯ ಸಂಸ್ಕೃತ, ಪಾಳಿ ಮತ್ತಿತರ ಪ್ರಾಕೃತ ಭಾಷೆಗಳು- ಇವುಗಳ ಮೂಲಕ ಮೊದಲಿಗೆ ಭಾರತೀಯ ಸಾಹಿತ್ಯ ಹೊರಹೊಮ್ಮಿತು. ಮಾನವ ಜಾತಿಗೆ ಸರ್ವಕಾಲಿಕ ಮಹಾ ಗ್ರಂಥಗಳೆನಿಸಿದ ಹಲವು ಕೃತಿಗಳ ಉಗಮ ಈ ಕಾಲಕ್ಕೆ ಸಲ್ಲುತ್ತದೆ. ಚತುರ್ವೇದಗಳು, ಉಪನಿಷತ್ತುಗಳು, ರಾಮಾಯಣ ಮತ್ತು ಮಹಾ ಭಾರತ, ಅಷ್ಟಾದಶ ಪುರಾಣ ಇತ್ಯಾದಿಗಳನ್ನು ಇಲ್ಲಿ ಹೆಸರಿಸ ಬಹುದು. ಬ್ರಾಹ್ಮಣ, ಜೈನ ಮತ್ತು ಬೌದ್ಧಮತಗಳನ್ನು ಪ್ರತಿಪಾದಿಸುವ ಸಂಸ್ಕೃತ, ಪಾಳಿ ಮತ್ತು ಪ್ರಾಕೃತ ಭಾಷಾ ಗ್ರಂಥಗಳನ್ನೂ ಇಲ್ಲಿ ಸೂಚಿಸಬಹುದು ಆರ್ಯರಿಂದ ಪ್ರಭಾವಿತವಾದ ಭಾಷೆಗಳಲ್ಲದೆ ದಕ್ಷಿಣದಲ್ಲಿ ತಮಿಳು ಮತ್ತು ತೆಲುಗುಗಳು ಸಹ ಎರಡು ಸಹಸ್ರ ವರ್ಷ ಪೂರ್ವದಲ್ಲಿಯೇ ಸಾಹಿತ್ಯ ಸೃಷ್ಟಿಯಲ್ಲಿ ನಿರತವಾಗಿದ್ದವೆಂಬುದು ಸಂಸ್ಮರಣೀಯವಾದ ವಿಷಯ.

ಮತೀಯ ಮತ್ತು ನೀತಿಬೋಧೆಯ ಗಡಿಯ ಹೊರಗೆ ಚಾಣಕ್ಯನ ಅರ್ಥಶಾಸ್ತ್ರ, ವಾತ್ಸ್ಯಾಯನನ ಕಾಮಶಾಸ್ತ್ರ, ಕಾಳಿದಾಸನ ಶಾಕುಂತಲ ಮುಂತಾದ ಕೃತಿರತ್ನಗಳು ಹೊರಬಿದ್ದದ್ದು ಆಕಸ್ಮಿಕವಲ್ಲವಾದರೆ, ಉತ್ತರ ಭಾರತದ ಆರ್ಯರ ಭಾಷೆಗಳು ಮೊದಲಿನ ತಮ್ಮ ಅಪಭ್ರಂಶ ಮತ್ತು ಪ್ರಾಕೃತ ಸ್ವರೂಪಗಳನ್ನು ಬಿಟ್ಟುಗೊಟ್ಟು ಈಗಿನ ಹೊಸ ರೂಪವನ್ನು ತೆಗೆದುಕೊಂಡದ್ದೂ ಸಹಜ. ಭಾರತದ ಭಾಷಾ ಶಾಸ್ತ್ರದಲ್ಲಿ ಇದು ಎರಡನೆಯ ಘಟ್ಟವನ್ನು ಸೂಚಿಸುತ್ತದೆ. ಬಂಗಾಳಿ, ಅಸಾಮಿ, ಉರಿಯ, ಮರಾಠಿ, ಗುಜರಾಥಿ, ಕೊಂಕಣಿ, ಪಂಜಾಬಿ, ಸಿಂಧಿ, ಕಾಶ್ಮೀರಿ, ರಾಜಸ್ಥಾನಿಗಳಲ್ಲದೆ ಮೈಥಿಲಿ, ಮಾಗಧಿ, ಕೋಸಲಿ, ಭೋಜ್ಪುರಿ, ವ್ರಜಭಾಷಾ ಮುಂತಾದ ಹಿಂದಿಯೂ ಮಹಡಿಯೋ ಮುಂತಾದ ಗುಡ್ಡಗಾಡು ಜನರ ಭಾಷೆಗಳೂ ಕ್ರಿಸ್ತಶಕ ಹತ್ತನೆಯ ಶತಕದ ಹೊತ್ತಿಗೆ ಒಂದು ರೂಪಿಗೆ ಬಂದು ನಿಂತಂತೆ ತೋರಿತು. ದಕ್ಷಿಣದಲ್ಲಿ ಕನ್ನಡ, ಮಲಯಾಳಾದಿ ಭಾಷೆಗಳ ಪ್ರಾದುರ್ಭಾವವಾದರೂ ಇದೇ ಕಾಲಕ್ಕೆ ಪ್ರಾರಂಭವಾಯಿತು.

ಆಧುನಿಕ ಭಾರತೀಯ ಸಾಹಿತ್ಯದ ಹುಟ್ಟು ಗೀತೆ ಅಥವಾ ಕಥನ ಕೃತಿಗಳಿಂದಲೇ ಶೋಭಿಸಿತು. ಮೊದಲನೆಯದು ಪ್ರೇಮ, ರಸಭಾವಾವೇಗಗಳು ಅಥವಾ ಭಕ್ತಿರಸ ಪ್ರಧಾನ ವಿಷಯಗಳನ್ನು ಕೂಡಿರುತ್ತಿದ್ದರೆ, ಎರಡನೆಯವುಗಳಿಗೆ ಪೌರಾಣಿಕ ಕಥೆಗಳೇ ಆಧಾರ. ಸಂಸ್ಕೃತಕಾವ್ಯಗಳನ್ನೂ ಪುರಾಣಗಳನ್ನೂ ಆಗತಾನೆ ಮಹಮ್ಮದೀಯ ಸಂಸ್ಕೃತಿಯ ಪ್ರಭಾವದಿಂದ ಪ್ರಚಲಿತಗೊಂಡ ಪರ್ಶಿಯ ಮತ್ತು ಅರೇಬಿಯದ ಕತೆಗಳನ್ನೂ ಹಿನ್ನೆಲೆಯಾಗಿ ಬಳಸುತ್ತಿದ್ದರು. ಮುಂದೆ ವೀರಪೂಜೆಯ ಯುಗ ತೊಡಗಿತು— ಸಾಹಿತ್ಯ ವೀರ ಕಥೆಗಳ ವರ್ಣನೆಮಾಡುವ ಸಾಧನವಾಯಿತು. ಕನ್ನಡವೂ ಇದಕ್ಕೆ ಅಪವಾದವಲ್ಲ. ಏಕೆಂದರೆ ನಮ್ಮ ಎಷ್ಟೋ ಕವಿಗಳು ತಮ್ಮ ಅರಸನ ದಿಗ್ವಿಜಯವನ್ನ ಪುರಾಣ ವಸ್ತುವಿಗೆ ಹೋಲಿಸಿ ಹೊಗಳಲು ನಾಚಲಿಲ್ಲ. ಕನ್ನಡದಂತೆ ಉರಿಯ, ಕೋಸಲಿ, ಪಂಜಾಬಿ ಮತ್ತು ರಾಜಸ್ಥಾನಿ ಭಾಷೆಗಳ ಸಾಹಿತ್ಯವೂ ಈ ಮಾತನ್ನು ಸ್ಪಷ್ಟಪಡಿಸುತ್ತದೆ.

ಕತೆ ಮತ್ತು ಗೀತೆಗಳೊಡನೆ ಮತೀಯ ವಿಚಾರದ ಪ್ರಸ್ತಾಪವೂ ಸಾಹಿತ್ಯದಲ್ಲಿ ಆಗದಿರುತ್ತಿರಲಿಲ್ಲ—ಉತ್ತರ ಭಾರತದಲ್ಲಿ ಇಸ್ಲಾಂ ಸಂಪ್ರದಾಯವನ್ನು ಜನಪ್ರಿಯಗೊಳಿಸುವುದಕ್ಕೆ ಏಷ್ಟಪಟ್ಟೋ ಲೇಖಕರು ಶಕ್ತಿಯನ್ನೂ ಬಳಸುವ ಪ್ರಯತ್ನ ನಡೆಯಿತು. ಸೂಫಿಯ ತತ್ವಜ್ಞಾನ, ಪರ್ಶಿಯದ ನಾಗರಿಕತೆ ಭಾರತವನ್ನು ಪ್ರವೇಶಿಸಿತು. ದಕ್ಷಿಣದಲ್ಲಿ ಹರಿದಾಸರೂ ಆಳ್ವಾರರೂ ಆಚಾರ್ಯರೂ ಸಂಗೀತ ಸಾಹಿತ್ಯಗಳ ಪುನರುತ್ಥಾನಕ್ಕೆ ಕಾರಣವಾದರು. ಆಗ ಗದ್ಯರೂಪದಲ್ಲಿ ಸಾಹಿತ್ಯವನ್ನು ಜನರ ಮುಂದಿಡುತ್ತಿದ್ದದ್ದು ಬಹಳ ಅಪರೂಪ—ಪತ್ರಗಳು, ಕಾನೂನಿನ ಮಹತ್ವದ ವಿಷಯಗಳು ಇತ್ಯಾದಿಗಳಿಗಷ್ಟೇ ಗದ್ಯವನ್ನು ಸಾಹಿತ್ಯಪ್ರಿಯರು ಉಪಯೋಗಿಸುತ್ತಿದ್ದರು. ಶಬ್ದ ನಿಘಂಟು, ವೈದ್ಯಕೀಯ ಗ್ರಂಥ, ಜ್ಯೋತಿಷಶಾಸ್ತ್ರ, ಗಣಿತ, ಕಲೆ ಮುಂತಾದ ಎಲ್ಲ ವಿಷಯಗಳನ್ನು ಕಹ ಸುಲಭದಲ್ಲಿ ಬಾಯಿಪಾಠ ಮಾಡಬಹುದಾದ ಪದ್ಯ ರೂಪದ ಸೂತ್ರಗಳಲ್ಲಿಯೇ ಬರೆಯುತ್ತಿದ್ದರು

ಯುರೋಪ್ಯ ಸಂಸ್ಕೃತಿಯ ಸಂಪರ್ಕದಿಂದ ಭಾರತೀಯ ಸಾಹಿತ್ಯ "ಪುನರುತ್ಥಾನ" ಹೊಂದುವಂತಾಯಿತೆಂದು ವಿದ್ವಾಂಸರ ಅಭಿಪ್ರಾಯ. ಆಧುನಿಕ ಯುರೋಪ್ಯ ಸಾಹಿತ್ಯ ಶ್ರೇಣಿಯೊಂದಿಗೆ ಹೋಲಿಸಿದರೆ ಭಾರತೀಯ ಸಾಹಿತ್ಯ ಬಹಳ ಚಿಕ್ಕದಾಗಿ ಕಾಣಿಸುತ್ತದೆ—ಆದರೆ ಯುರೋಪ್ಯ ಸಾಹಿತ್ಯದೊಡನೆ ಹೊಂದಿದ ಸಂಪರ್ಕದ ದೆಸೆಯಿಂದ ಅದು ಬೆಳೆಯುತ್ತಲೇ ಬಂದಿರುದೆಂಬುದರಲ್ಲಿಯಂತೂ ಸಂದೇಹವಿಲ್ಲ. ಅದು ನಾನಾ ಪ್ರಕಾರವಾಗಿ ಬೆಳವಣಿಗೆಯನ್ನು ಹೊಂದುತ್ತಾ ವ್ಯಾಪಕವಾದ ಕ್ಷೇತ್ರವನ್ನು ಆವರಿಸುತ್ತಾ ತನ್ನ ಉಪಯುಕ್ತತೆಯನ್ನು ಹೆಚ್ಚಿಸಿಕೊಳ್ಳುತ್ತಾ ಇದೆಯೆಂಬುದೂ ನಿರ್ವಿವಾದವಾದ ಅಂಶ. ಪಂಜಾಬಿ, ಗುಜರಾತಿ ಮುಂತಾದ ಭಾಷೆಗಳಲ್ಲಿ ಪ್ರವರ್ತಿಸಿದ ಗದ್ಯ ಶೈಲಿಯನ್ನು ಯುರೋಪ್ಯ ಸಾಹಿತ್ಯದ ಸಂಪರ್ಕ ಬಹಳ ಜನಪ್ರಿಯವಾಗಿ ಮಾಡಿತು—ಜನ ಸಾಮಾನ್ಯರ ನಿತ್ಯ ಜೀವನವನ್ನು ಸ್ಪರ್ಶಿಸುವಷ್ಟು ಪ್ರಭಾವಯುತವಾಗಿಯೂ ಅದು ಪರಿಣಮಿಸಿತು. ನಾಟಕಗಳು ಹಿಂದೆ ಅಷ್ಟು ಅಭಿವೃದ್ಧಿ ಹೊಂದಿರಲಿಲ್ಲ— ಈಗ ಅವುಗಳನ್ನು ರಂಗ ಭೂಮಿಯ ಮೇಲೆ ಆಡುವುದಕ್ಕೋಸ್ಕರವಾಗಿಯಾದರೂ ಸಾಹಿತ್ಯ ಪ್ರಕಾರವಾಗಿ ಪರಿಗಣಿಸಲಾಯಿತು. ಪ್ರಾಚೀನ ಸಂಸ್ಕೃತ ಲಕ್ಷಣಕಾರರ ಅನುಸರಣೆಗಿಂತಲೂ ನವೀನ ಯುರೋಪ್ಯ ಸಂಪ್ರದಾಯವನ್ನು ಹಿಂಬಾಲಿಸುವುದೇ ಹಿತವೆಂದು ತೋರ ತೊಡಗಿರುವುದು ಪುನರುತ್ಥಾನದ ಹೆಗ್ಗುರುತು.

ನಾಟಕಗಳಷ್ಟೇ ಅಲ್ಲ— ಈಗ ಕಾದಂಬರಿಗಳೆಂದು ಕರೆಯಲ್ಪಡುವ ಸಾಹಿತ್ಯಪ್ರಕಾರವೂ ನೂರು ವರ್ಷದ ಹಿಂದೆ ಭಾರತೀಯ ಭಾಷೆಗಳಲ್ಲಿ ಬೆಳೆದು ಬಂದಿರಲಿಲ್ಲ ಯುರೋಪ್ಯ ಸಂಸ್ಕೃತಿಯ ಸಂಪರ್ಕದಿಂದಲೇ ನಮ್ಮಲ್ಲಿ ಕ್ರಾಂತಿಯ ನವೋದಯವಾಯಿತು. ಭಾರತೀಯರು ಇದರಲ್ಲಿ ಪಡೆದ ಸಿದ್ಧಿಯ ಸಂಕೇತವಾಗಿ ೧೯೧೩ರಲ್ಲಿ ಕವೀಂದ್ರರ ವೀಂದ್ರರಿಗೆ ಅಂತಾರಾಷ್ಟ್ರೀಯ ಖ್ಯಾತಿಯ ಪಾರಿತೋಷಕ ಸಿಕ್ಕಿತು. ಅದನ್ನು ದೊರಕಿಸಿದ "ಗೀತಾಂಜಲಿ"ಯ ಹಾಡುಗಳು ಮಾತ್ರ ಯುರೋಪ್ಯ ಸಂಸ್ಕೃತಿಗಿಂತಲೂ ಪ್ರಾಚೀನಭಾರತದ ಋಷಿಮುನಿಗಳ ವಾಣಿಯಾದ ಸತ್ಯಂ ಶಿವಂ ಸುಂದರಂ ಎಂಬ ತತ್ವವನ್ನು ಚೆನ್ನಾಗಿ ಪ್ರತಿಪಾದಿಸುತ್ತವೆ; ಮತ್ತು ಬಿಂಬಿಸುತವೆ. ಋಷಿಮುನಿಗಳ ಅಮರ ಸಂದೇಶವನ್ನೊಳಗೊಂಡ ಸಂಸ್ಕೃತಗ್ರಂಥಗಳು ಭಾರತೀಯರು ಎಂದೆಂದಿಗೂ ಕಳೆದುಕೊಳ್ಳಲಾಗದ ಪ್ರಾಚೀನ ಸಂಪತ್ತು. ಯುರೋಪ್ಯ ಸಾಹಿತ್ಯದ ಪರಿಚಯವು ನಮ್ಮ ಜ್ಞಾನವನ್ನು ಹೆಚ್ಚಿಸುವುದಕ್ಕೂ ಕಾರ್ಯಕ್ಷೇತ್ರವನ್ನು ವಿಶಾಲವಾಗಿಸುವುದಕ್ಕೂ ಸಾಹಿತ್ಯವೈಭವವನ್ನು ಮೆರೆಸುವುದಕ್ಕೂ ನೆರವಾಗುವ ಪೂರಕವಸ್ತು. ಸಂಸ್ಕೃತ ಸಾಹಿತ್ಯದ ಅಭ್ಯಾಸವನ್ನು ಮಾಡಿದ ಮತ್ತು ಮಾಡುತ್ತಿರುವ ಪಾಶ್ಚಾತ್ಯರನ್ನು ಕಂಡಾದರೂ ನಮಗೆ ಈ ಅರಿವಾಯಾಗಲಿ; ಹಾಗೆ ಭಾರತೀಯ ಸಾಹಿತ್ಯದ ಪರಂಪರೆ ಉಜ್ವಲವಾಗಲಿ!



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) CALCUTTA—40 (ವಿ.ಪಿ.ಪಿ. ಪ್ರತ್ಯೇಕ) ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ನಾಲಿ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. O. Box No. 3219, BOMBAY 3-

ಚೇತಕ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ. ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—: ವಿಳಾಸ :—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಗಣರಾಜ್ಯದ ಸಂಕೇತವೇನು?

(ಆಚಾರ್ಯ ವಿನೋಬಾಭಾವೆ)

ಇಂದು ಸ್ವರಾಜ್ಯದ ಪ್ರತಿಜ್ಞಾ ದಿನವು. ನಾವೀಗ ಆ ಪ್ರತಿಜ್ಞೆಯ ಚಿಕ್ಕ ಅಂಶವನ್ನು ಮಾತ್ರ ಪೂರೈಸಿದ್ದೇವೆ. ನಾವಿನ್ನು ಪೂರ್ಣಗೊಳಿಸಬೇಕಿರುವ ಅಂಶವು ಬಹಳ ಹೆಚ್ಚಿನದಾಗಿದೆ. ಅತ್ಯಾಚಾರವನ್ನು ನಾವು ಸಹಿಸಲಾರೆವು ಎಂಬುದು ಒಂದಂಶ: ನಾವು ಯಾರಿಗೂ ಅನ್ಯಾಯ, ಅತ್ಯಾಚಾರಗಳನ್ನು ಮಾಡಲಿಕ್ಕಿಲ್ಲವೆಂಬುದು ಸ್ವರಾಜ್ಯದ ಇನ್ನೊಂದಂಶವು; 'ಈ ದೇಶದಲ್ಲಿ ಯಾವ ರೀತಿಯ ಗುಲಾಮಗಿರಿಯನ್ನೂ ನಾವು ಇರಗೊಡಿಸಲಿಕ್ಕಿಲ್ಲ' ಎಂಬ ಈ ಪ್ರತಿಜ್ಞೆಯನ್ನು ನಾವೀಗ ಪುನಃ ಘೋಷಿಸತಕ್ಕದ್ದು. ಅಸ್ಪೃಶ್ಯತೆಯ ರೂಪದಲ್ಲಿರುವ ಸಾಮಾಜಿಕ ಗುಲಾಮಗಿರಿಯನ್ನೂ, ಭೂಮಿರಹಿತ ಕೃಷಿಕರ ಮತ್ತು ಪಟ್ಟಣಗಳಲ್ಲಿ ಮಜೂರಿ ಕೆಲಸಗಾರರ ರೂಪದಲ್ಲಿರುವ ಆರ್ಥಿಕ ಗುಲಾಮಗಿರಿಯನ್ನೂ ನಾವು ದೂರಗೊಳಿಸಬೇಕು. ಈಗ ನಮ್ಮ ದೇಶದಲ್ಲಿ ಸ್ತ್ರೀಪುರುಷರೊಳಗಿರುವ ಅನೇಕ ಅಸಮಾನತೆಗಳನ್ನು ನಿರ್ಮೂಲನಮಾಡಿ, ಸ್ತ್ರೀಯರಿಗೂ ಸ್ವತಂತ್ರತೆಯನ್ನು ಕೊಡತಕ್ಕದ್ದು. ಆದಿವಾಸಿಗಳು ಇತ್ಯಾದಿ ಹಿಂದುಳಿದ ಜನರನ್ನು ಕೂಡಾ ನಮ್ಮಂತೆಯೇ, ಮೇಲಕ್ಕೆತ್ತಬೇಕು.

ಈ ರೀತಿಯಲ್ಲಿ ಇಂಥಾ ಅನೇಕ ಪ್ರಕಾರದ ಗುಲಾಮಗಿರಿಗಳನ್ನು ನಿವಾರಿಸಬೇಕು. ಭೂದಾನ ಯಜ್ಞವು ಅದರ ಒಂದು ಪ್ರತೀಕದಂತಿದೆ, ಇನ್ನೂ ಗಂಭೀರವಾಗಿ ಹೇಳುವುದಾದರೆ ನಮ್ಮ ಇಂದ್ರಿಯಗಳೂ ಮನಸ್ಸೂ ನಮ್ಮ ವಶದಲ್ಲಿರಬೇಕಲ್ಲದೆ ನಾವು ಅವುಗಳ ಗುಲಾಮರಾಗ ಬಾರದು. ಈ ರೀತಿಯಲ್ಲಿ ಯಥಾರ್ಥವಾದ ಆತ್ಮಜ್ಞಾನದ ವ್ಯಾಪಕ ಪ್ರಚಾರವನ್ನು ನಾವು ಮಾಡಿದರೆ, ಭಾರತವರ್ಷವೆಲ್ಲ ಈ ಚಳವಳವನ್ನು ಶಿರೋಧಾರ್ಯವನ್ನಾಗಿ ಒಪ್ಪಿಕೊಳ್ಳುವುದು.

ನಮ್ಮ ದೇಶದಲ್ಲಿ ಸಾವಿರಾರು ಪರಿವ್ರಾಜಕರು ಹೊರಟು, ಹಳ್ಳಿಹಳ್ಳಿಗಳಲ್ಲಿ ಪ್ರವಾಸ ಮಾಡಿ ಆತ್ಮಜ್ಞಾನದ ಈ ಸಂದೇಶವನ್ನು ಸಕ್ರಿಯರೂಪದಲ್ಲಿ ಸರ್ವಕಡೆಗಳಲ್ಲೂ ತಲ್ಪಿಸಬೇಕೆಂದು ನಾನು ಬಯಸುತ್ತೇನೆ. ಅಂಥಾ ನಮ್ಮ ಬಾಂಧವರು ಮೂರು ನಾಲ್ಕು ತಿಂಗಳುಗಳ ತನಕ ಗ್ರಾಮಗ್ರಾಮಗಳಲ್ಲಿ ತಿರುಗಾಡಬೇಕು. "ತನ್ನ ಆತ್ಮನಲ್ಲಿ ಎಲ್ಲರನ್ನು ಕಾಣುವ ಹಾಗೂ ಎಲ್ಲರ ಆತ್ಮಗಳಲ್ಲಿ ತನ್ನನ್ನು ಕಾಣುವ" ಸಂದೇಶವನ್ನು ಎಲ್ಲರಿಗೂ ತಿಳಿಸಬೇಕು ಇಡೀ ಊರೇ ಒಂದು ಪರಿವಾರವೆಂದು ತಿಳಿಯುವ ದೀಕ್ಷೆಯನ್ನು ಮನೆ ಮನೆಗೂ ತಲ್ಪಿಸಬೇಕು.

ಇನ್ನು ಮುಂದಿನ ಕೆಲಸವೆಂದರೆ ಭೂಮಿಕ್ರಾಂತಿಯದ್ದು. ಭೂಮಿರಹಿತರಿಗೆ ಭೂಮಿ ದೊರೆಯುವುದೊಂದೇ ಸಾಲದು; ಜಮೀನಿನ ವ್ಯಕ್ತಿಗತ ಸ್ವಾಮಿತ್ವವನ್ನೂ ನಾಶಗೊಳಿಸಬೇಕು. ಈ ವಿಚಾರವನ್ನು ಜನರು ಕಾರ್ಯರೂಪಗೊಳಿಸಿದ್ದಲ್ಲಿ ಭೂದಾನಯಜ್ಞದ ಪೂರ್ಣತೆಯಾಗುತ್ತದೆ. ಆ ನಂತರದ ಕರ್ತವ್ಯವು ಸಮೀಪವಾಗಿದೆ.

'ಸಂಗಮ'ವೆಂಬುದು ಬಹಳ ಪವಿತ್ರವೆಂದೆನಿಸಲ್ಪಡುತ್ತದೆ. ಎಲ್ಲ ಕಾರ್ಯಕರ್ತರ ಹೃದಯ ಸಂಗಮವಾಗಬೇಕೆಂಬುದೇ ನನ್ನ ಅಭಿಲಾಷೆಯು. ಕಾರ್ಯಕರ್ತರ ಹೃದಯ ಶುದ್ಧಿಯೇ ಈ ಚಳವಳದ ಮಹಾಶಕ್ತಿಯು; ಆ ಹೃದಯ ಶುದ್ಧಿಯು ಹೃದಯ ಸಂಗಮವನ್ನೇ ಅವಲಂಬಿಸಿಕೊಂಡಿದೆ.

(ಹಿಂದೀ "ಸರ್ವೋದಯ" ಅನುವಾದ)

--ಎಸ್. ಯು. ರಾಮಚಂದ್ರ ರಾವ್,
ಎಂ. ಎ.

(೧ನೇ ಪುಟದಿಂದ)

ಸ್ಥಾನಗಳನ್ನು ಸೋತರೂ ಜನರಿಂದ ಪಡೆದ ಮತಗಳನ್ನು ಲೆಕ್ಕಹಾಕಿದರೆ, ಅವರು ಶಕ್ತಿ ಸಂಪನ್ನರಿದ್ದಾರೆಂಬ ಸಂಗತಿ ಸ್ವಯಂ ವ್ಯಕ್ತವಾಗುತ್ತದೆ. ಇದನ್ನೇ "ಸೋತರೂ ಸೋಲಲ್ಲ" ಎಂಬ ಮಾತಿಗಾಗಿ ಅವರು ಬಳಸಲು ಹಿಂಜರಿಯಲಾರರು— ಸಂಯುಕ್ತ ಕಾಂಗ್ರೆಸು ಪಕ್ಷವು ಹೆಚ್ಚು ಕಡಿಮೆ ಅರೆವಾಸಿಯಷ್ಟು ಮಾತ್ರ ಜನರ ಮತಗಳನ್ನು ಸಂಪಾದಿಸಿತು; ಉಳಿದ ಮತ ಪ್ರತಿಪಕ್ಷಗಳಲ್ಲಿ ಹಂಚಿಹೋಯಿತು. ಇದು ತೃಪ್ತಿಕರವಾದ ವಿಷಯವಲ್ಲ. ತಾವು ಜನಪ್ರಿಯವಾಗಿದ್ದೇವೆಂದು ಹೆಗ್ಗಳಿಕೆ ಪಡುವುದಕ್ಕೆ ಇದು ಸಮಾಧಾನಕರವಾದ ವಿಷಯವಾಗದು—ಸಾವಿರ, ಎರಡು ಸಾವಿರ ಮತಗಳ ವ್ಯತ್ಯಾಸದಲ್ಲಿ ಮೂರು ಅಥವಾ ಅದಕ್ಕೂ ಹೆಚ್ಚು ಹುಂಯಾಳುಗಳ ಸ್ಪರ್ಧೆಯಲ್ಲಿ ಗೆದ್ದು ಬರುವುದೇ ದೊಡ್ಡ ಭೂಷಣವಾಗದು. ಶಾಸನ ಸಭೆಯಲ್ಲಿ ಕಮ್ಯೂನಿಸ್ಟರ ಉಪಟಳ ಇನ್ನು ಮುಂದೆ ಇಲ್ಲವೆಂದು ಸುಮ್ಮನೆ ಕಾಂಗ್ರೆಸಿಗರು ಕುಳಿತರೋ - ಕೆಲಸ ಪೂರಾ ಕೆಟ್ಟಿತೆಂದು ಅರ್ಥ. ಏಕೆಂದರೆ, ಜನತೆಯ ಸಂಪರ್ಕವನ್ನು ಕಮ್ಯೂನಿಸ್ಟರು ಇಲ್ಲಿಗೆಯೇ ಕಡಿದುಕೊಳ್ಳುವುದಿಲ್ಲ. ಆದುದರಿಂದ ಗೆದ್ದು ಬಂದ ಕಾಂಗ್ರೆಸು ವೀರರು ಕಾಲಹರಣ ಮಾಡದೆ, ಸಂಘಟನೆಯ ಚಾತುರ್ಯವನ್ನೂ ತೋರಿಸಲಿ; ಶಾಸನ ಸಭೆಯ ಸಂಖ್ಯಾ ಪ್ರಮಾಣವಲ್ಲ; ಮತದಾನದ ವಿವರ ಸಂಸ್ಥೆಯ ಭವಿಷ್ಯ ನಿರ್ಧರಿಸುವುದೆಂದೂ ರಾಷ್ಟ್ರದ ಪ್ರಗತಿಯನ್ನು ಸುಗಮಗೊಳಿಸುವುದೆಂದೂ ನೆನಪಿಡಲಿ!

— ಕಾರ್ತಿಕೇಯ.

(೩ನೇ ಪುಟದಿಂದ)

ಇದು ಹೀಗೆಯೇ ಮುಂದುವರಿಯಗೊಡುವುದು ಇಷ್ಟವಾದುದಲ್ಲ. ಅವರಿಗೆ ಯೋಗ್ಯ ಶಿಕ್ಷಣಕೊಡುವ ಕೇಂದ್ರಗಳ ಸ್ಥಾಪನೆ ಹೆಚ್ಚಾಗಿ ಆಗ ತಕ್ಕದ್ದು ಅಪೇಕ್ಷಣೀಯ.

ತಾಂತ್ರಿಕ ಕ್ಷೇತ್ರದಲ್ಲಿ ಭಾರತದ ಚಲಚ್ಚಿತ್ರೋದ್ಯಮ ಸ್ವಾವಲಂಬಿಯಾಗುವುದು ಸಹ ಇಷ್ಟವಾದ ವಿಷಯ. ನಮ್ಮ ತಂತ್ರಕುಶಲರ ಹಸ್ತಕೌಶಲ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದರೂ ದೇಶದಲ್ಲಿ ಅವರು ಬಳಸುವ ಉಪಕರಣಗಳ ಸಿದ್ಧತೆಯಾಗುತ್ತಿಲ್ಲವೆಂಬುದು ಶೋಚನೀಯವಾದ ವಿಚಾರ. ಛಾಯಾಗ್ರಾಹಿ ಯಂತ್ರದಿಂದ ಹಿಡಿದು, ಚಿತ್ರ ಎತ್ತುವ ಫಿಟಲ ಮತ್ತು ಶುದ್ಧೀಕರಣ ದ್ರವ್ಯಗಳ ವರೆಗೆ ಎಲ್ಲ ಸರಕುಗಳನ್ನೂ ನಾವು ಈಗ ಹೊರ ದೇಶಗಳಿಂದಲೇ ತರಿಸಿಕೊಳ್ಳುತ್ತಿದ್ದೇವೆ. ನಮ್ಮ ದೇಶದಲ್ಲಿ ಹೊರ ದೇಶಗಳಲ್ಲಿಯಷ್ಟು ಉತ್ಕೃಷ್ಟ ಮಾದರಿಯ ಯಂತ್ರೋಪಕರಣಗಳನ್ನು ಕೂಡಲೇ ತಯಾರಿಸುವುದಕ್ಕೆ ತೊಂದರೆ ಇರಬಹುದು—ಆದರೆ, ಈ ದಿಸೆಯಲ್ಲಿ ಪ್ರಯತ್ನವನ್ನು ಮುಂದೂಡುವುದು ಒಳ್ಳೆಯದಲ್ಲ. ಇದರಂತೆ, ಚಲಚ್ಚಿತ್ರೋದ್ಯಮಕ್ಕೆ ಬೇಕಾದ ಬಂಡವಾಳದ ಪೂರೈಕೆಯ ವ್ಯವಸ್ಥೆಯನ್ನು ಸಹ ಯೋಗ್ಯ ರೀತಿಯಲ್ಲಿ ಮಾಡಿಕೊಳ್ಳಬೇಕಾದ ಆಗತ್ಯ ಕಾಣುತ್ತದೆ. ನ್ಯೂ ಥಿಯೇಟರ್ಸ್‌ನಂಥ ಚಲಚ್ಚಿತ್ರ ಉತ್ಪಾದಕ ಸಂಸ್ಥೆಯು ಹಣದ ಕೊರತೆಯಿಂದ ತೀವ್ರವಾಗಿ ಬಳಲುತ್ತಿರುವುದನ್ನು ಕಂಡು ಸುಮ್ಮನೆ ನಾವು ಕುಳಿತುಕೊಳ್ಳುವುದರಲ್ಲಿ ಚಲಚ್ಚಿತ್ರಗಳ ಮನರುಸ್ಥಾನದ ಮಾತನ್ನಾಡಿ ಪ್ರಯೋಜನವಾಗದು. ಕೇವಲ ಹಣದಾಸೆಯ ಪೂರವಾದಿಗಳ ಮುಖವನ್ನೇ ಬಂಡವಾಳಕ್ಕಾಗಿ ಚಲಚ್ಚಿತ್ರೋದ್ಯಮದ ಕಲಾವಿದರು ನೋಡುವ ಪರಿಸ್ಥಿತಿಯನ್ನು ಮುಂದರಿಯಗೊಡಬಾರದು. ಕಲೆಯ ಅಂಶದ ಘೋಷಣೆಯಾಗುವುದಕ್ಕೆ ಇದು ಅಗತ್ಯವಾದ ಕ್ರಮ. ನಮ್ಮ ನಟನಟಿಯರಿಗೆ ಲಕ್ಷಾಂತರ ರೂಪಾಯಿಗಳ ವೇತನ ಕೊಡುವ ಸಂಪ್ರದಾಯವನ್ನು ಬಿಟ್ಟುಗೊಟ್ಟು ಕೆಲವೇ ಸಾವಿರ ರೂಪಾಯಿಗಳೊಳಗೆ ಅವರನ್ನು ತೃಪ್ತಿ ಪಡಿಸುವಂತಾದರೆ, ಆಯಾ ಭಾಷೆಯ ಚಿತ್ರ ಆಯಾ ಪ್ರದೇಶದಲ್ಲಿಯೇ ಸುತ್ತಾಡಿ ಯಶಸ್ಸನ್ನೂ-ಹಣದ ದೃಷ್ಟಿಯಲ್ಲಿ ಸಹಾ- ಸಂಪಾದಿಸಲು ಸಾಧ್ಯವಾಗೀತು

ನೋಟೀಸು.

ಶಿರ್ವಾ ಪಂಚ್ಯಾತ್ ಬೋರ್ಡು ಪ್ರೆಸಿಡೆಂಟರಿಂದ:—

ಶಿರ್ವಾ ಪಂಚ್ಯಾತ್ ಬೋರ್ಡಿಗೆ ಒಳಪಟ್ಟ ಮಂಚಕಲ್ ವಾರಸಂತೆ ಮಾರ್ಕೆಟಿನಲ್ಲಿ, ದಿನಚರಿ ಮಾರ್ಕೆಟಿನಲ್ಲಿ ಮತ್ತು ಪಂಜಿಮಾರು ಬಾರಿಯಲ್ಲಿ ತಾರೀಕು 1—4—55 ರಿಂದ, 31—3—1956 ರ ವರೇಗಿನ ಒಂದು ವರ್ಷದಲ್ಲಿ ಕರ ವಸೂಲು ಮಾಡುವ ಸ್ವತಂತ್ರವನ್ನು 1955 ನೇ ಮಾರ್ಚ ತಿಂಗಳ ತಾರೀಖು 23 ರಲ್ಲು ಸಾಯಂಕಾಲ ಘಂಟೆ 4 ಕ್ಕೆ ಪಂಚ್ಯಾತ್ ಬೋರ್ಡು ಆಫೀಸಿನ ಬಳಿ ಪ್ರೆಸಿಡೆಂಟರಿಂದ ಅಥವಾ ಅವರಿಂದ ಅಧಿಕಾರ ಹೊಂದಿದವರಿಂದ ಬಹಿರಂಗವಾಗಿ ಏಲಂ ಮಾಡೋಣಾಗುವುದು. ಏಲಂ ಶರ್ತ ಇತ್ಯಾದಿ ವಿವರಗಳನ್ನು ಆಫೀಸಿನ ನೋಟೀಸು ಬೋರ್ಡಿನಲ್ಲಿ ಯಾ-ಆಫೀಸಿನಲ್ಲಿ ತಿಳಿದುಕೊಳ್ಳಬಹುದು. ಎಂಬ ಸಂಗ್ತಿ ಎಲ್ಲರಿಗೂ ಈ ಮೂಲಕ ತಿಳಿಸೋಣಾಗುತ್ತದೆ.

(Sd) S. Annayya Hegde.
President,
Panchayat Board Shirva.

Shirva, 10-2-1955

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ತಾ 5-3-55ರಂದು ಮೈಸೂರು ರೇಡಿಯೋದಲ್ಲಿ ಪ್ರಸಾರವಾದ

ಭಾರತದ ಗುರುಕುಲ

(ಕೆ. ಪಿ. ವೆಂಕಪ್ಪ ಶೆಟ್ಟರ ಯಕ್ಷಗಾನ ಪ್ರಸಂಗ)

ಬೆಲೆ: 0—6—0

ನವಭಾರತ ಪುಸ್ತಕ ಭಂಡಾರ ಉಡುಪಿ

NAVAYUGA WEEKLY

AVERTISEMENT RATES

Display Advertisements:— Rs. 2/-8 per column inch for contracts of 50" or more and Rs.3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,
'NAVAYUGA'
Post Box No. 22, UDIPI, S. K.



(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

ನವಯುಗ ಪ್ರೆಸ್, ಉಡುಪಿ, ದ. ಕ.

Edited, Printed & Published By K. H. Shetty at the Navayuga Press, Udipi, S. India

REGD. NO. M. 3818

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ | ಉಡುಪಿ, 17—3—1955 | ಸಂಚಿಕೆ ೨೮
VOL. 34 | NO. 28

ಅಜ್ಞಾನಿಗಳು, ಮೂರ್ಖರು, ಅಗಸುಚ್ಚರು, ಸೈನಿಕರು, ಸರದಾರರು, ಸೇನಾಪತಿಗಳು, ಅಣುಬಾಂಬಿನ ಸಂಶೋಧಕರು ಇವರೆಲ್ಲ ಹಿಂಸೆಯ ಪ್ರೇಮಿಗಳು ಎಂಬುದರಲ್ಲೇನೂ ಆಶ್ಚರ್ಯವಿಲ್ಲ ಅವರು ತಾವು ಯಾವುದಕ್ಕೆಲ್ಲ ಅಂಜುವರೋ, ಯಾವುದನ್ನೆಲ್ಲ ದ್ವೇಷಿಸುವರೋ, ಯಾರನ್ನು ತಮ್ಮ ವಿರುದ್ಧ ಬಂಡೆದ್ದವರೆಂದು ಭಾವಿಸುವರೋ- ಎಲ್ಲವನ್ನೂ ಅವರು ಸುಲಭದಲ್ಲಿ ಮುಗಿಸಿಬಿಡಬಹುದು ಹಿಂಸಾಚಾರಿಗಳಾದ ಅವರ ಈ ಕಿಡಿಗೇಡಿತನ ಎಷ್ಟೇ ಕಾಲ ಮುಂದರಿದರೂ ಅದು ವಿವೇಕದ ಧ್ವನಿಯ ಮಹತ್ವವನ್ನೆ ಸತ್ಯವೆಂದು ಕಾಲಾಂತರದಲ್ಲಾದರೂ ಸಿದ್ಧಪಡಿಸದಿರದು

—ಪರ್ಲ್ ಎಸ್. ಬಕ್

ಮೂರ್ಖರ ಹಿಂಸಾಚಾರ

ಫೆಬ್ರವರಿ ತಿಂಗಳ ಕೊನೆಯಲ್ಲಿ ಪ್ರಕಟವಾದ ಅಂತಾರಾಷ್ಟ್ರೀಯ ಮಹತ್ವದ ವರದಿಯೊಂದು ಭಾರತದಲ್ಲಿ ಜಗತ್ತಿನ ಮುಂದುವರಿದ ದೇಶಗಳಾದ ಅಮೇರಿಕ, ಬ್ರಿಟನ್, ಫ್ರಾನ್ಸ್, ಜಪಾನ್, ಜರ್ಮನಿ ಇತ್ಯಾದಿಗಳಲ್ಲಿನದಕ್ಕಿಂತ ಕಡಿಮೆ ಅಪರಾಧಗಳು ನಡೆಯುತ್ತವೆ ಎಂದು ಹೇಳಿತು. ನಮ್ಮ ಜನರ ಆಧ್ಯಾತ್ಮಿಕ ಮಹತ್ವದ ಮತ್ತು ನೈತಿಕ ನಿಷ್ಠೆಯ ಮನೋಭಾವ ಹಿಂಸಾಚಾರಗಳ ವಿಷಯದಲ್ಲಿ ಜುಗುಪ್ಸೆಯನ್ನು ಹುಟ್ಟಿಸಿದೆ ಎಂಬುದಕ್ಕೆ ಇದೊಂದು ರುಜುವಾತಾಯಿತು. ಅಂಕೆಸಂಖ್ಯೆಗಳು ವ್ಯಕ್ತಪಡಿಸುವ ಸಂಗತಿಯನ್ನು ಸತ್ಯವೆಂದು ನಂಬಬಹುದಾದರೆ, ಭಾರತದಲ್ಲಿ ೧೯೫೪ನೇ ಇಸವಿಯಲ್ಲಿ ಘಟಿಸಿದ ಅಪರಾಧಗಳಿಗಿಂತ ೧೯೫೩ರಲ್ಲಿ ಸಂಭವಿಸಿದವುಗಳು ನೂರಕ್ಕೆ ಎಂಟರಷ್ಟು ಕಡಿಮೆಯಾಗಿದ್ದವು. ಮಹಾತ್ಮಾಗಾಂಧೀಯವರು ಅಹಿಂಸೆಯ ತತ್ವವನ್ನು ಪ್ರತಿಪಾದಿಸಿರುವ ಈ ಪುಣ್ಯಭೂಮಿಯಲ್ಲಿ ೧೦೦೦೦ ಜನರಿಗೆ ೬ ಮಂದಿಯಂತೆ ಮಾತ್ರ ಅಪರಾಧಿಗಳಿರುವುದು ತೃಪ್ತಿಕರವಾದ ವಿಷಯ ಎಂಬ ಪ್ರಶಂಸಾವಾಕ್ಯಕ್ಕೆ ನಾವು ಮನಸೋತು ತಲೆತೂಗಬಹುದು. ಆದರೆ—

—ವರದಿ ಪ್ರಕಟವಾದ ಎರಡೇ ವಾರಗಳಲ್ಲಿ ನಾಗಪುರದಿಂದ ಪ್ರಸಾರವಾದ ವಾರ್ತೆಯೊಂದು “ತೃಪ್ತಿಕರ” ಎಂಬುದಾಗಿ ನಾವು ಪರಿಸ್ಥಿತಿಯನ್ನು ಭಾವಿಸಬಹುದೇ ಎಂಬ ಸಂದೇಹವನ್ನು ಹುಟ್ಟಿಸುತ್ತದೆ. ಮೊನ್ನೆ ಶನಿವಾರ ನಡೆದ ಈ ಘಟನೆ ಒಬ್ಬ ಹುಚ್ಚನ, ಮೂರ್ಖನ, ಅಜ್ಞಾನಿಯ ಉದ್ವೇಗದ ಪರಿಣಾಮವಾಗಿದ್ದರೂ ಸಹ, ನಮ್ಮ ಜನಪ್ರಿಯ ಪ್ರಧಾನ ಮಂತ್ರಿಗಳಾದ ಜವಾಹರಲಾಲರನ್ನು ಬಲಿ ತೆಗೆದುಕೊಳ್ಳುವುದರಲ್ಲಿ ಸಂತೋಷ ಕಾಣುವ ಹಿಂಸಾಚಾರಿಗಳೂ ಇರುವರೆಂಬುದನ್ನು ತೋರಿಸಿಕೊಟ್ಟಿತು. ರಾಷ್ಟ್ರದ ಮತ್ತು ಜಗತ್ತಿನ ಸುದೈವದಿಂದ ನಮ್ಮ ಪ್ರಧಾನ ಮಂತ್ರಿಗಳು ಗಂಭೀರ ಸ್ವರೂಪದ ಆ ಅಪಾಯಕರ ಪರಿಸ್ಥಿತಿಯಿಂದ ಮುಕ್ತರಾದರು— ಇದಕ್ಕಾಗಿ ನಾವು ಭಗವಂತನ ಕರುಣೆಗೆ ಕೃತಜ್ಞತೆಯನ್ನು ಹೃತ್ಪೂರ್ವಕ ವ್ಯಕ್ತಪಡಿಸೋಣ! ಆದರೆ, ಅತ್ಯಾಚಾರ ಮಾಡುವ ಉದ್ವೇಗ ತೋರಿಸಿದ ಬಾಬುರಾಯನನ್ನು—ಮತ್ತು ಅವನ ಮಾದರಿಯ ಇತರ ಜನರನ್ನು—ಹೀಗೆಯೇ ಬಿಡುವುದು ಮಾತ್ರ ಬೇಡ. ಗಾಂಧೀಜಿಯವರು ಹುತಾತ್ಮರಾದ ಸನ್ನಿವೇಶ ನಮ್ಮ ಕಣ್ಣಿನಿಂದ ಇನ್ನೂ ಮರೆಯಾಗಿಲ್ಲ ಅವರ ನೆನಪು ಅಳಿಯುವುದರೊಳಗೆ ಇನ್ನೊಂದು ದುರಂತ ಕೃತ್ಯದ ಸುದ್ದಿ ಕೇಳುವುದಕ್ಕೆ ನಾವೆಂತು ಸಿದ್ಧರಾಗೋಣ?

ಅಪರಾಧ ಪ್ರವೃತ್ತಿಯನ್ನು ಅಹಿಂಸೆಯಿಂದ ಗೆದ್ದ ಪರಂಪರೆ ನಮ್ಮ ದೇಶದ್ದೆಂಬುದು ನಿಜವಾದ ಮಾತು— ಸತ್ಯಕ್ಕೆ ತಪ್ಪಿ ನಡೆಯೆನೆಂದು ಹುಲಿಯ ಮುಂದೆ ಬಂದುನಿಂತ ಪುಣ್ಯಕೋಟಿ, ಆ ಕ್ರೂರ ವ್ಯಾಘ್ರನ ಮನಃ ಪರಿವರ್ತನೆಯ ಪವಾಡವನ್ನು ಸಾಧಿಸಿತು! ಕೊಲ್ಲಬಂದ ಕಿರಾತನನ್ನು ಕೊಂದೇನು ಮಾಡಿದಂತಾಯಿತು ಎಂಬ ಮಾತಿನಿಂದ ಸಾಧು ಸಂತನಾಗಿ ಬದಲಾಯಿಸಲು ಬುದ್ಧದೇವನು ಸಮರ್ಥನಾದನು! ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಹೋರಾಟದ ಪ್ರಾರಂಭದ ದಿನಗಳಲ್ಲಿ ವಾಯುವ್ಯ ಸರಹದ್ದು ಪ್ರಾಂತ್ಯದ ಶೂರ ಯೋಧರಾದ ಪಠಾಣರನ್ನು ಸಹ ಸತ್ಯಾಗ್ರಹದ ಸೈನಿಕರಾಗಿ ರೂಪಿಸಿದರು! —ಇದೆಲ್ಲ ಅಹಿಂಸೆಯ, ಸತ್ಯದ, ವಿವೇಕದ ಫಲ ಎಂದು ನಾವು ಒಪ್ಪುವುದರಲ್ಲಿ ತಪ್ಪೇನೂ ಇಲ್ಲ. ಗಾಂಧೀಜಿಯವರು ಅಣುಬಾಂಬನ್ನು ಸಹ ಅಹಿಂಸೆಯಿಂದಲೇ ಎದುರಿಸುವೆನೆಂದು ಹೇಳಿದ್ದರು— “ನಾನೇನೂ ತಿರೆಯುವುದಿಗೆ ಹೋಗುವುದಿಲ್ಲ, ಅಣುಬಾಂಬು ಹಾಕುವವನಿಗೆ ಕೇಡನ್ನೂ ಬಗೆಯುವುದಿಲ್ಲ ನಮ್ಮ ಶತ್ರುವಿನ ಬಗೆಗೆ ಸಹ ಕೆಡುಕುಮಾಡಬಾರದೆಂಬ ನಮ್ಮ ಹೃದಯಾಂತರಾಳದ ಶುಭೇಚ್ಛೆಯು ಆ ಹಿಂಸಾಚಾರಿಯ ವಕ್ಷಸ್ಥಳವನ್ನು ಸ್ಪರ್ಶಿಸಿ, ಹಾಗೆ ಅವನ ಕಣ್ಣನ್ನು ತೆರೆಯಿಸುವುದು ನಿಶ್ಚಯ” ಎಂದು ಗಾಂಧೀಜಿ ತಮ್ಮ ನಿಲುವೆಯನ್ನು ವಿವರಿಸಿದ್ದರು.

ನಾವು ಅಪರಾಧ ಮಾಡುವವರನ್ನು ಪ್ರೇಮಿಸುವ ಭಾವನೆಯಿಂದಲೇ ಕಾಣುವುದು ನಮ್ಮ ಉದಾತ್ತ ಪರಂಪರೆಗೆ ಮತ್ತು ಅಹಿಂಸೆಯ ಶ್ರೇಷ್ಠ ಧ್ಯೇಯಕ್ಕೆ ಅನುಗುಣವಾಗಿರಬಹುದು ಆದರೆ ಕೇವಲ ಆಧ್ಯಾತ್ಮಿಕ ತತ್ವಜ್ಞಾನದಿಂದಲೇ ಕೆಲಸವಾಗುವುದೆಂದು ಹೇಗೆ ನಂಬೋಣ? ವ್ಯಾವಹಾರಿಕ ಜ್ಞಾನದೊಡನೆ ಅಳವಡಿಸಿಕೊಳ್ಳದಿದ್ದರೆ ನಮ್ಮ ಯಾವ ತತ್ವಜ್ಞಾನವೂ ಪ್ರಯೋಜನಕ್ಕೆ ಬಾರದೆಂದೇ ತೋರುತ್ತದೆ ಆಧ್ಯಾತ್ಮಿಕ ಶ್ರೇಯಸ್ಸನ್ನು ಸಾಧಿಸಬೇಕಾದವನು ಸಹ, ಶರೀರದ ಆರೋಗ್ಯವನ್ನು ಕಡೆಗಣಿಸಲಾರನು ಎಂಬ ಮಾತು, ಮತ್ತು “ನೀನು ವಿಷದಹಲ್ಲುಗಳಿಂದ ಕಚ್ಚಬೇಡ, ಆದರೆ ಹೆಡೆಯುರಳಿಸಿ ಬುಸುಗುಟ್ಟುವುದನ್ನು ಮಾತ್ರ ಬಿಡಬೇಡ” ಎಂದು ನಾಗರ ಹಾವಿಗೆ ಅಹಿಂಸೆಯನ್ನು ಬೋಧಿಸಿದ ಶ್ರೀ ರಾಮಕೃಷ್ಣ ಪರಮಹಂಸರ ಉಪಾಖ್ಯಾನ – ಅಪರಾಧಿಗಳ ವಿಷಯದಲ್ಲಿ ನಾವು ತುಸು ಜಾಗರೂಕರಾಗಿರಬೇಕಾದುದನ್ನೆ ಸ್ಪಷ್ಟಗೊಳಿಸುತ್ತವೆ. ಏಕೆಂದರೆ ನಾವು ಬಹು ಸುಲಭವಾಗಿ ಅಪಾಯಕ್ಕೆ ಗುರಿಯಾಗಬಹುದು— ಸಾಯಲೂಬಹುದು. ಹಿರಿದ ಚೂರಿಯ ಒಂದೇ ಒಂದು ಇರಿತದಿಂದ, ಬಂದೂಕಿನ ಗುಂಡಿಯನ್ನೊಮ್ಮೆ ಒತ್ತಿ ಬಿಡುವುದರಿಂದ ಒಂದೇ ಒಂದು ಸ್ಫೋಟದಿಂದ – ಒಬ್ಬನನ್ನು ಕೊಲ್ಲಬಹುದ, ಮತ್ತು ಒಬ್ಬನನ್ನು ಕೊಂದಷ್ಟೇ ಸುಲಭದಲ್ಲಿ ಸಾವಿರಾರು ಜನರನ್ನೂ ಮುಗಿಸಿಬಿಡಬಹುದು.

ಆದುದರಿಂದ ಹಿಂಸಾಚಾರಿಗಳ ಮೂರ್ಖತನದ ಕುರಿತು ನಾವು ಚೆನ್ನಾಗಿ ಯೋಚಿಸಬೇಕಾಗುತ್ತದೆ. “ನಮಗಾಗದವರು” ಎಂಬ ಜಾತಿಗೆ ಸೇರಿಸಬಹುದಾದ ಜನರಲ್ಲಿ ನಮ್ಮಲ್ಲಿ ಪ್ರತಿಯೊಬ್ಬನೂ ಸೇರಿಸಲ್ಪಡಬಹುದು—ಏಕೆಂದರೆ ನಮ್ಮಲ್ಲಿ ಒಬ್ಬನನ್ನು ನೋಡಿದರೆ ಇನ್ನೊಬ್ಬನಿಗಾಗಲಿಕ್ಕಿಲ್ಲ. ಅವರೆ ಇದರಿಂದ ಭ್ರಮಿಷ್ಟರಾಗಿ ಆಗದವರನ್ನು ತೀರಿಸಿಯೇ ಬಿಡುವೆನೆಂದ ಕೋಪ ಮತ್ತು ಹಿಂಸೆಗೆ ಉದ್ಯುಕ್ತರಾದರೆ, ಜಗತ್ತೇ ನಾಶವಾದೀತು. ನಮಗಾಗದವರಿದ್ದರೂ ನಾವು ಸುಖ ಜೀವನ ನಡೆಸುವುದು ಸಾಧ್ಯ ಎಂಬ ತತ್ವವನ್ನು ಮನ್ನಿಸಿದರೆ ಮಾತ್ರ ವೇದಾಂತಿಗಳ ಈ ಕ್ಷಣಿಕ ಸಂಸಾರದ ಬಂಧನವಲ್ಲದವರೂ ನಾಲ್ಕುದಿನ ಬಾಳಿದಂತಾಗಿರಬಹುದು. ಇದನ್ನು ಸರಕಾರ ಬಯಸುತ್ತದೆ, ಜಗತ್ತು ಬಯಸುತ್ತದೆ ಶಾಂತಿ ರಕ್ಷಣೆಯ ಸೋಲಿಸು ಪಡೆ ರಾಷ್ಟ್ರರಕ್ಷಣೆಯ ಸೈನ್ಯ ಪಡೆ ಇತ್ಯಾದಿಗಳಿರುವುದರ ಹಿನ್ನೆಲೆಯಲ್ಲಿ ಎಲ್ಲ

(೧೦ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD
Estd: 1925 H O UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಅವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಠೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವು ನಿಮಗೆ ಯಾವ ಕಾಲದಲ್ಲಿಯೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು ೬೨ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ

ಚಲಾವಣೆ ಭಂಡವಾಳ ರೂ ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ ಉಡುಪಿ, ದ. ಭಾರತ.

ರಾಯರು ಊರ ಹೊರಗಿನ ನಿರ್ಜನ ರಸ್ತೆಯಲ್ಲಿ ನಡೆದು ಬರುತ್ತಿದ್ದರು ಅವರ ಎದುರಿಗೆ ಬಂದೊಬ್ಬ ಆಗಂತುಕನು “ಸ್ವಾಮಿ, ಇಲ್ಲಿಂದ ಕೂಗಿಕೊಂಡರೆ ಊರಿನೊಳಗೆ ಕೇಳಿಸುತ್ತದೆಯೋ?” ಎಂದು ವಿಚಾರಿಸಿದ.

“ಹೀಗೇಕೆ ಕೇಳುತ್ತಿದ್ದೀರಿ? ಇಲ್ಲಿಂದ ಕೂಗಿಕೊಂಡರೆ ಊರಿನೊಳಗೆ ಹೇಗೆ ಕೇಳಿಸೀತು ?” ಎಂದು ರಾಯರು ಆಶ್ಚರ್ಯದಿಂದ ಮರುನುಡಿದರು

‘ಹಾಗಾದರೆ ಚೆನ್ನಾಯಿತು— ಮೊದಲು ನಿಮ್ಮ ಕೈಯೊಳಗಿನ ಉಂಗುರ, ಗಡಿಯಾರ, ಮತ್ತು ಕಿಸೆಯ ಪಾಕೀಟನ್ನು ತೆಗೆದುಕೊಡಿ— ಇಲ್ಲವಾದರೆ ’ ಎಂದು ಅವನು ಚೂರಿ ಹಿರಿದ!

ಅಣುಶಕ್ತಿಯ ಉಪಯೋಗದ ದ್ವಂದ್ವ

ಲೋಕದ ರಾಜಕೀಯ ಧುರೀಣರ ಹೊಣೆಗಾರಿಕೆ

ಇಂದಿನ ಜಗತ್ತಿನ ಶ್ರೇಷ್ಠ ಪ್ರತಿಭಾವಂತರಲ್ಲಿ ಹೆಸರಾದ ಶ್ರೀ ರಾಜಗೋಪಾಲಾಚಾರಿಯವರು ಆವಡಿಯ ಅಧಿವೇಶನ ಕಾಲದಲ್ಲಿ ಮುಳಿಹುಲ್ಲನ್ನು ಹೊದೆಯಿಸಿರುವ ವಿಶ್ವಗೃಹದ ಮೇಲೆ ಕೋತಿಗಳೆರಡು ತಮ್ಮ ಕೈಯಲ್ಲಿ ಕೊಳ್ಳಿ ಹಿಡಿದುಕೊಂಡು ಕುಣಿದಾಡುತ್ತಾ ಒಂದಿನ್ನೊಂದರ ಮೇಲೆ ಕೈಮಾಡುವ ಅತಿರೇಕ ಹುಮ್ಮಸ್ಸನ್ನು ತೋರಿಸುತ್ತಿವೆಯಾಗಿ ಹೇಳಿದ್ದರು. ಶಸ್ತ್ರ ಸಂಗ್ರಹದ ಸ್ಪರ್ಧೆ—ಅದಕ್ಕೂ ಹೆಚ್ಚಾಗಿ ಭೀಷಣ ಹಾಗು ಭೀಕರ ಪರಿಣಾಮ ಮಾಡುವ ಬಾಂಬುಗಳ ಉತ್ಪಾದನೆಯ ಹುಚ್ಚು—ಜಗತ್ತಿನ ಪ್ರಬಲ ರಾಷ್ಟ್ರಗಳ ವಿವೇಕವನ್ನೆ ಕೆಡಿಸಿ ಬಿಟ್ಟಿದೆ ಎಂದವರು ಮೇಲೆ ಉಲ್ಲೇಖಿಸಿದ ತಮ್ಮ ವಿನೋದ ಕತೆಯ ಮೂಲಕ ಸ್ಪಷ್ಟಗೊಳಿಸಿದರು. ಸುದೈವದಿಂದ ಪ್ರತ್ಯಕ್ಷ ಯುದ್ಧದಗಳಿಗೆ ಇನ್ನೂ ಹತ್ತಿರ ಬಂದಿಲ್ಲ—ಆದರೆ, ಆ ಅನಿಷ್ಟ ಪ್ರದಕ್ಷಿಣವು ಸಮೀಪಿಸಿದಾಗ, ಉರಿಯು ಭಗ್ಗನೆ ಹತ್ತಿಕೊಂಡು ಭುಗಿಲ್ಲೆನ್ನುವುದಕ್ಕೆ ತಕ್ಕುದಾದ ವಿಷಪೂರಿತ ವಾತಾವರಣದ ರಚನೆ ಮಾತ್ರ ನಡೆದಿದೆ ಎಂಬುದಕ್ಕೆ ಪ್ರಚ್ಛನ್ನ ಯುದ್ಧದ ವ್ಯವಹಾರಗಳೇ ನಿದರ್ಶನ. ಪ್ರಬಲ ರಾಷ್ಟ್ರಗಳು ಪರಸ್ಪರ ಉದ್ದೇಶಗಳಲ್ಲಿ ಸಂಶಯವನ್ನು ಆರೋಪಿಸಿ, ದ್ವೇಷ ಮೂಲವಾದ ಭಯವನ್ನು ಸೃಷ್ಟಿಸಿ, ತನ್ಮೂಲಕ ವಿನಾಶದ ದಾರಿಯನ್ನು ಕ್ರಮಿಸ ತೊಡಗಿವೆ ಎಂದು ಸಾಮಾನ್ಯ ನಿರೀಕ್ಷಕರಿಗೆ ತೋರುತ್ತದೆ. ಸೈನ್ಯಗಳನ್ನು ಕಟ್ಟಿಕೊಳ್ಳುವ ವೆಚ್ಚವು ಪ್ರತಿವರ್ಷ ಹೆಚ್ಚುತ್ತಿರುವುದೂ ಸೈನಿಕ ಒಪ್ಪಂದಗಳ ಮೂಲಕ ವ್ಯೂಹ ರಚನೆಯ ಪ್ರಯತ್ನದಲ್ಲಿ ಬಿದ್ದಿರುವುದೂ ಇದನ್ನೆ ಎತ್ತಿಹೇಳುತ್ತದೆ. ಒಂದು ಆಟಂ ಬಾಂಬನ್ನು ಉತ್ಪಾದಿಸಲು ೧೦ ಕೋಟಿ ಡಾಲರುಗಳು ಬೇಕಾಗುತ್ತವೆಂದೂ ಅಣು ಶಸ್ತ್ರದ ತಯಾರಿಕೆ ೨೦೦ ಕೋಟಿ ಡಾಲರುಗಳ ವೆಚ್ಚ ತರುವುದೆಂದೂ ಲೆಕ್ಕ ಹಾಕಿದ್ದು ಈ ಹಣದ ಬಡ್ಡಿಯಷ್ಟೇ ಸಿಕ್ಕಿದರೆ, ಸಂಯುಕ್ತ ರಾಷ್ಟ್ರ ಸಂಘದ ವಾರ್ಷಿಕ ವೆಚ್ಚವನ್ನು ನೋಡಿಕೊಳ್ಳಬಹುದು. ಹಾಗಾಗದೆ ಎಲ್ಲ ಹಣವೂ ಸೈನಿಕ ಶಕ್ತಿಯ ಹೆಚ್ಚಳಕ್ಕಾಗಿ ವಿನಿಯೋಗವಾಗುತ್ತಿದೆ ಎಂಬುದು ನಿಜಕ್ಕೂ ಶೋಚನೀಯ.

ಹಣದ ಕೊಬ್ಬು ಹೆಚ್ಚಿದವರು ಅದನ್ನು ಬಾಂಬುಗಳ ಸಂಗ್ರಹದಲ್ಲಿ ವಿನಿಯೋಗಿಸಲಿ, ನಮಗೆದರಿಂದ ಏನು—ಎಂದು ಕೆಲವರು ಪ್ರಶ್ನಿಸಬಹುದು. ರಾಜಕೀಯ ದ್ವೇಷ ಇತ್ಯಾದಿಗಳು ಜಗತ್ತಿನಲ್ಲಿ ಹಿಂದಿನಿಂದಲೂ ನಡೆದು ಬಂದದ್ದೇ—ಒಂದು ರಾಷ್ಟ್ರ ಇನ್ನೊಂದರ ಮೇಲೆ ಯುದ್ಧ ಮಾಡುವುದೇ ಇತಿಹಾಸದ ಸಂಪ್ರದಾಯ ಎಂಬ ರುಕ್ಷ ಸಮಾಧಾನವನ್ನೂ ಕೆಲವರು ಕೊಡಬಹುದು. ಆದರೆ, ಹಿಂದಿನ ಕಾಲದ ಯುದ್ಧಕ್ಕಿಂತ ಈಗಿನ ಯುದ್ಧ ಭಿನ್ನ ಪ್ರಕಾರವಾಗಿದೆಯೆಂದೂ ಆಗ ಯುದ್ಧಾಸಕ್ತ ರಾಷ್ಟ್ರಗಳ ಮಟ್ಟಿಗಷ್ಟೇ ಅದರ ಬಿಸಿ ಹತ್ತುತ್ತಿದ್ದರೆ ಇಂದು ಯುದ್ಧನಿರತವಲ್ಲದ ರಾಷ್ಟ್ರಗಳೂ ಕೇಡಿಗೆ ಬಲಿಯಾಗುತ್ತವೆಂದೂ ಹೇಳಲೇ ಬೇಕಾಗುತ್ತದೆ. ಆದುದರಿಂದ ಪ್ರಬಲ ರಾಷ್ಟ್ರಗಳಾಗಲಿ, ಯಾವ ದೇಶವೇ ಆಗಲಿ, ಸೈನಿಕ ಚಟುವಟಿಕೆಗಳನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ನಡೆಸಿದರೆ ಅದರ ಔಚಿತ್ಯವನ್ನು ಪ್ರಶ್ನಿಸುವ ಅಧಿಕಾರ ಉಳಿದ ರಾಷ್ಟ್ರಗಳಿಗೆ ಬಂದೇ ಬರುತ್ತದೆ. ತಟಸ್ಥ ರಾಷ್ಟ್ರಗಳಿಗಂತೂ ಸವಾಲು ಹಾಕುವ ಅಧಿಕಾರ ಉಂಟೇ ಉಂಟೆಂದು ಪಾಶ್ಚಾತ್ಯ ತತ್ವಜ್ಞಾನಿ ಬರ್ಟ್ರೆಂಡ್ ರಸೆಲ್ಲರ ಸ್ಪಷ್ಟ ಅಭಿಪ್ರಾಯ. ಆದುದರಿಂದ, ಜಗತ್ತಿನ ಪ್ರಬಲ ರಾಷ್ಟ್ರಗಳಿಗೆ ಬಾಂಬುಗಳ ದೆಸೆಯಿಂದ ಯಾವ ಸಮರವೂ ಜಯ ನೀಡದೆಂಬ ಸತ್ಯವನ್ನು ಮನವರಿಕೆ ಮಾಡಿಕೊಡಲು ಭಾರತದಂಥ ತಟಸ್ಥ ರಾಷ್ಟ್ರದ ಮನವೊಲಿಸುವುದಕ್ಕೆ ಅವರು ಮುಂದಾದರು, ಲಂಡನಿನಲ್ಲಿ ನೆಹರುಗಳಿಗೆ ಈ ಕುರಿತು ತಮ್ಮದೊಂದು ಯೋಜನೆ ಸಲ್ಲಿಸುವ ಉತ್ಸುಕತೆಯನ್ನು ತೋರಿಸಿದರು. ಕಮ್ಯೂನಿಸ್ಟರೊಡನೆ ಪ್ರಜಾಪ್ರಭುತ್ವವಾದಿಗಳೊಡನೆಯೂ ಲಭ್ಯವಿರುವ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ಅವುಗಳ ವಿಶ್ಲೇಷಣೆಯನ್ನು ಮಾಡಿ, ಹೈಡ್ರೋಜನ್, ನೈಟ್ರೋಜನ್ ಮುಂತಾದ ಬಾಂಬುಗಳ ದೆಸೆಯಿಂದ ವೈರಿಗಳಷ್ಟೇ ನಾಶವಾಗುವುದಲ್ಲ—ಬಾಂಬು ಹಾಕಿದವರ ಗತಿಯೂ ಮುಗಿಯುತ್ತದೆ ಎಂಬುದನ್ನು ತಿಳಿಸಿ ಹೇಳುವುದು ಉಪಯುಕ್ತ ಎಂದವರು ತಮ್ಮ ನಿಲುವನ್ನು ಸ್ಪಷ್ಟೀಕರಿಸಿದರು. ತನ್ನ ನಾಶವನ್ನು ತಾನೇ ಮಾಡಿಕೊಳ್ಳಲು ಯಾರೂ ಮುಂದಾಗಲಿಕ್ಕಿಲ್ಲ ಎಂಬ ಸಿದ್ಧಾಂತದ ಮೇಲೆ ಮತ್ತು ಒಂದು ಪಕ್ಷ ಎಷ್ಟೇ ಬಾಂಬುಗಳನ್ನು ತಯಾರಿಸದೆ ಕುಳಿತರೆ ಇನ್ನೊಂದು ಪಕ್ಷಕ್ಕೆ ರಾಜಕೀಯ ಲಾಭ ಮಾಡಿಕೊಟ್ಟಂತಾದೀತೆಂಬ ತತ್ವದ ಮೇಲೆ ಅವರು ತಮ್ಮ ಸೂಚನೆಯನ್ನು ಮಂಡಿಸಿದರು.

ಭಾರತವು ಹೀಗೆ ತಜ್ಞರ ಮಂಡಳಿಯನ್ನು ನೇಮಿಸುವ ಅಗತ್ಯ ಇದ್ದಂತೆ ನಮಗೇನೂ ಕಾಣುವುದಿಲ್ಲ—ಈಗ ತೆಗೆದುಕೊಳ್ಳಬೇಕಾದದ್ದು ರಾಜಾಜಿ ಹೇಳಿದಂತೆ ಅಣುಬಾಂಬುಗಳನ್ನೆಲ್ಲ ಏಕಪಕ್ಷೀಯವಾಗಿ ಸಮುದ್ರಕ್ಕೆ ಬಿಸಾಡಿ ಬಿಡುವ ಕ್ರಮ. ನಮಗೆ ಶತ್ರುಗಳಿಲ್ಲ ಎಂಬುದನ್ನು ಒಪ್ಪಿಕೊಳ್ಳುವ ಮನೋಭಾವದಿಂದಲೇ ಪ್ರತಿಪಕ್ಷದ ಹೃದಯವನ್ನು ಗೆದ್ದುಕೊಳ್ಳಬೇಕೆಂಬುದು ಈ ಸೂಚನೆಯ ತಿರುಳು. ಅಷ್ಟು ಉದಾತ್ತ ಬುದ್ಧಿ ಪಾಶ್ಚಾತ್ಯರಲ್ಲಿಲ್ಲ—ಕಮ್ಯುನಿಸ್ಟರಲ್ಲಿಯೂ ಇಲ್ಲ ಎಂದು ಒಪ್ಪಿಕೊಂಡರೂ ರಸೆಲ್ಲರು ಭಾರತಕ್ಕೆ ಒಪ್ಪಿಸಿಕೊಡಬೇಕೆಂದಿರುವ ಕೆಲಸ ಹೊಸತೆನಿಸದು. ಭೀಕರ ಬಾಂಬುಗಳ ಅನಾಹುತವನ್ನು ಭಾರತವು ಈಗ ವರ್ಣಿಸಬೇಕಾದ ಅಗತ್ಯವೇನೂ ಇಲ್ಲ—ಕೆಲವೇ ದಿನಗಳ ಹಿಂದೆ ಅಮೇರಿಕದ ಅಧ್ಯಕ್ಷ ಐಸನಹೋವರರಿಗೆ ಅಣುಶಕ್ತಿ ಮಂಡಳಿ ಒಪ್ಪಿಸಿದ ವರದಿಯೇ ಬಾಂಬುಗಳ ದುರಂತ ಕತೆಯನ್ನು ನಿರೂಪಿಸುತ್ತದೆ. ಏಳು ಸಾವಿರ ಮೈಲು ಸುತ್ತಳತೆಯ ಪ್ರದೇಶವನ್ನು ಬಿಕಿನಿಯಲ್ಲಿ ಕಳೆದ ವರ್ಷದ ಮಾರ್ಚಿಯಲ್ಲಿ ನಡೆಸಿದ ಸ್ಫೋಟನ ಪ್ರಯೋಗ ದೂಷಿತಗೊಳಿಸಿತೆಂದು ಆ ವರದಿ ತಿಳಿಸುತ್ತದೆ. ವಿಕಿರಣಶೀಲ ತರಂಗಗಳ ದೆಸೆಯಿಂದ ಉಂಟಾಗುವ ಮೋಡವು ಗಾಳಿಯೊಡನೆ ಚಲಿಸುತ್ತಾ ಪ್ರಾಣಿ ಹಾಗು ಸಸ್ಯಜೀವನಕ್ಕೆ ಗಂಡಾಂತರ ಪ್ರಾಯವಾದ ವಿಷಯುಕ್ತ ಧೂಳು ಮತ್ತು ಮಳೆಯ ರೂಪದಲ್ಲಿ ಹಾನಿಮಾಡುತ್ತದೆ ಎಂದು ಅಮೇರಿಕದ ವಿಜ್ಞಾನಿಗಳೇ ಹೇಳುತ್ತಿದ್ದು ಈ ಮೋಡಗಳನ್ನು ಚಲಿಸದ ಹಾಗೆ ಪ್ರತಿಬಂಧಿಸುವುದು ಅಸಾಧ್ಯವಾದ ಮಾತು. ಒಂದರ ಹಿಂದೊಂದೆಂಬಂತೆ ಸ್ಫೋಟನ ಪ್ರಯೋಗಗಳನ್ನು ನಡೆಸುತ್ತಾ ಹೋದರೂ ಸಾಕು—ಜಗತ್ಪ್ರಳಯದ ಕಲ್ಪನೆಯಿಂದ ಮೈನಡುಗುವ ದಿನ ಬಹಳ ಹತ್ತಿರದಲ್ಲಿದ್ದಂತೆ ಅನುಭವವಾಗುತ್ತದೆ.

ರಶಿಯದಲ್ಲಿ ನಡೆಸಲ್ಪಡುವ ಪ್ರಯೋಗದ ವಿವರಗಳು ನಮಗಿನ್ನೂ ತಿಳಿದಿಲ್ಲ. ಆದರೆ ಅಮೇರಿಕದ ಮಾದರಿಯ ಸ್ಫೋಟಗಳೇ ಅಲ್ಲಿ, ಸೈಬೀರಿಯದ ನೆಲದಲ್ಲಿ ನಡೆಯುತ್ತಿವೆ ಎಂಬುದಕ್ಕೆ ಸಾಕಷ್ಟು ಬಲವಾದ ಆಧಾರಗಳು ಸಿಕ್ಕಿರುತ್ತವೆ. ಅಮೇ

(೧೧ನೇ ಪುಟ ನೋಡಿರಿ)

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. 2—0 0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಬ್ರಿಟನಿನ ರಾಜಕುಮಾರಿಯ ಪ್ರಣಯ ಪ್ರಕರಣ

ತನ್ನ ಭವಿಷ್ಯ ನಿಶ್ಚಯಿಸಲು ಅವರು ಕೈಗೊಂಡ ಪ್ರವಾಸದ ಪ್ರದೇಶ

ಕೆಲವು ವರದಿಗಳನ್ನು ನಂಬುವುದಾದರೆ, ಬ್ರಿಟಿಷ್ ರಾಜಕುಮಾರಿ ಮಾರ್ಗರೇಟರು ಗುಪ್ತ ಪ್ರಣಯ ವ್ಯವಹಾರದ ಮಡುವಿನಲ್ಲೀಗ ಬಿದ್ದಿದ್ದಾರೆ. ಯುರೋಪು ಮತ್ತು ಅಮೇರಿಕದ ಜನತೆ ಇದರ ಕೊನೆ ಹೇಗಾದೀತೆಂಬ ವಿಷಯದಲ್ಲಿ ತುಂಬ ಕುತೂಹಲವನ್ನು ತೋರಿಸುತ್ತಿರುವಂತೆ ಕಾಣುತ್ತವೆ. ಬ್ರಿಟಿಷ್ ರಾಜ ಮನೆತನದೊಳಗಿನ ಘಟನೆಯೊಂದು ಲೋಕದ ಜನರ ಕುತೂಹಲ ಕೆರಳಿಸಿರುವುದಕ್ಕೆ ಈ ಪ್ರಣಯ ವ್ಯವಹಾರ ಸ್ವಾಭಾವಿಕ ರೀತಿಯದಲ್ಲವೆಂಬುದೇ ಕಾರಣ. ೨೪ ವರ್ಷಪ್ರಾಯದ ಮಾರ್ಗರೇಟರು ಪ್ರೇಮಿಸಿರುವರೆಂದು ಹೇಳಲಾದ ವ್ಯಕ್ತಿ ೪೦ ವರ್ಷ ಪ್ರಾಯದ ಸುಂದರ ವೈಮಾನಿಕ ಗ್ರೂಪ್ ಕೇಪ್ಟನ್ ಪೀಟರ್ ವೂಲ್‌ರಿಜ್ ಟೌನ್ಸೆಂಡ್ ಎಂಬವರು. ಇವರಿಗೆ ಈಗಾಗಲೇ ಮದುವೆಯೊಂದು ಆಗಿದ್ದು, ಎರಡು ಮಕ್ಕಳೂ ಹೆಂಡತಿಯೂ ಇದ್ದಾರೆ, ಆದರೆ ಆ ಹೆಂಡತಿಯಿಂದ ಇವರು ವಿಚ್ಛೇದನೆ ಪಡೆದಿದ್ದಾರೆ. ರಾಜಮಾತೆಯ ಅರಮನೆಯಲ್ಲೊಂದು ಕೆಲಸಕ್ಕಿರುವಾಗ ರಾಜಕುಮಾರಿಯೊಡನೆ ಅವರ ಪರಿಚಯವಾಯಿತು— ಅದು ಪ್ರೇಮದಲ್ಲಿ ಪರ್ಯವಸಾನ ಹೊಂದಿತೆಂದು ಹೇಳಲಾಗುತ್ತದೆ. ಇದನ್ನು ತಿಳಿದ ಬಳಿಕ, ಅವರನ್ನು ಬ್ರುಸೆಲ್ಸ್ ರಾಯಭಾರಿ ಕಚೇರಿಗೆ ವರ್ಗಾಯಿಸಲಾಯಿತು— ರಾಜಕುಮಾರಿಗೆ ತನ್ನ ಪ್ರಣಯ ವ್ಯವಹಾರ ಭೀಕರ ಪರಿಣಾಮಗಳನ್ನು ತಂದೊಡ್ಡಬಹುದೆಂಬ ಎಚ್ಚರಿಕೆಯನ್ನೂ ಕೊಡಲಾಯಿತು

ಭೀಕರ ಪರಿಣಾಮವೆಂದರೆ ಮತ್ತೇನಲ್ಲ—ವಿಚ್ಛೇದನೆ ಪಡೆದ ಹೆಂಡತಿ ಇನ್ನೂ ಜೀವಂತಳಿರುವಾಗ ರಾಜಕುಮಾರಿ ಮಾರ್ಗರೇಟಳು ಕೇಪ್ಟನ್ ಟೌನ್ಸೆಂಡರನ್ನು ಮದುವೆಯಾಗುವುದು ಬ್ರಿಟಿಷ್ ಅರಸುಮನೆತನದ ಧರ್ಮಗುರುಗಳಾದ ಕೆಂಟರ್‌ಬರಿಯ ಆರ್ಚ್ ಬಿಷಪರಿಗೆ ಸರಿಬರಲಾರದು ಅಲ್ಲದೆ, ಈ ವೈಮಾನಿಕ ರಾಜಮನೆತನಕ್ಕೆ ಸೇರಿದ ವ್ಯಕ್ತಿಯಲ್ಲ—ಆದುದರಿಂದ ರಾಜಕುಮಾರಿ ಆತನನ್ನು ಮದುವೆಯಾದರೆ, ತನ್ನ ವಾರೀಸು ಹಕ್ಕನ್ನು ಸಂತಾನ ಪಾರಂಪರ್ಯವಾಗಿ ಬಿಟ್ಟುಕೊಡಬೇಕಾಗುತ್ತದೆ. ಪ್ರೇಮೋನ್ಮತ್ತಳಾಗಿ ಅಷ್ಟು ದೊಡ್ಡ ತ್ಯಾಗಮಾಡುವುದು ಉಚಿತವೇ ಎಂಬ ಪ್ರಶ್ನೆಯನ್ನು ರಾಜಕುಮಾರಿಗೆ ಸಂಬಂಧಪಟ್ಟವರು ಹಾಕುತ್ತಿದ್ದಾರೆಂದು ತಿಳಿದು ಬರುತ್ತದೆ. ಬ್ರಿಟಿಷ್ ರಾಜ ಮನೆತನದಲ್ಲಿ ಎಂಟನೇ ಎಡ್ವರ್ಡ್ ದೊರೆಗಳ ಮುಂದೆಯೂ ಇದೇ ಪ್ರಶ್ನೆಯನ್ನು ಮುಂಡಿಸಿದ್ದರು—ಆಗ ಪ್ರೇಮ ಗೆದ್ದಿತು. ಎಡ್ವರ್ಡರು ಮಿಸೆಸ್ ಸಿಂಪ್ಸನಳಿಗಾಗಿ ಸಿಂಹಾಸನವನ್ನು ತ್ಯಜಿಸಿಬಿಟ್ಟರು. ತನ್ನ ದೊಡ್ಡಪ್ಪನ ಉದಾಹರಣೆಯನ್ನು ಮಾರ್ಗರೇಟರು ಅನುಸರಿಸುವರೋ ಏನೆಂದು ಜಗತ್ತು ಮುಂದಿನ ಬೆಳವಣಿಗೆಯ ಮೇಲೆ ಕಣ್ಣಿಟ್ಟಿರುತ್ತದೆ.

ಮಾರ್ಗರೇಟರಿಗೆ ತಮ್ಮ ಭವಿಷ್ಯದ ವಿಷಯ ಪರ್ಯಾಲೋಚಿಸಿಕೊಳ್ಳಲು ಅನುಕೂಲವಾಗಲಿ - ಅದಕ್ಕೆ ಶಾಂತವಾದ ವಾತಾವರಣ ದೊರೆಯಲಿ ಎಂಬುದಕ್ಕಾಗಿ ಈಚೆಗೆ ಅವರನ್ನು ಕೆರಿಬಿಯನ್ ಸಮುದ್ರ ತೀರದ ವೆಸ್ಟ್ ಇಂಡೀಸ್ ದ್ವೀಪಗಳ ಬ್ರಿಟಿಷ್ ವಸಾಹತುಗಳಿಗೆ ಯಾತ್ರೆಯ ಮೇಲೆ ಕಳಿಸಿಕೊಟ್ಟರು. ಆಗ "ವಸಾಹತುಗಳಿಗೆ ರಾಜಕುಮಾರಿಯ ಸೌಹಾರ್ದ ಸಂದರ್ಶನ" ಎಂಬುದಾಗಿಯೇ ಸರಕಾರದ ಮತ್ತು ರಾಜಮನೆತನದವರ ಪರವಾಗಿ ವಿವರಣೆಯನ್ನು ಕೊಡಲಾಯಿತು. ಅಲ್ಲದೆ, ಬ್ರಿಟಿಷ್ ಸರಕಾರವು ವಿಂಡ್‌ವರ್ಡ್ ಮತ್ತು ಲೀವರ್ಡ್ ಎಂಬೆರಡು ದ್ವೀಪ ಸಮುದಾಯಗಳಿಗೆ ಕೆಲವು ಘಟನಾತ್ಮಕ ಸುಧಾರಣೆಗಳನ್ನು ಅನ್ವಯಿಸುವ ಘೋಷಣೆಯನ್ನೂ ಈ ಸಂದರ್ಭದಲ್ಲಿ ಹೊರಡಿಸಿತು. ಈಗ ಈ ಪ್ರವಾಸ ಮುಕ್ತಾಯವಾಗಿ ರಾಜಕುಮಾರಿ ಲಂಡನ್ನಿಗೆ ಹಿಂತಿರುಗಿದ್ದಾರೆ—ಆದರೆ ಅವರ ಮನಸ್ಸು ಏನನ್ನು ನಿಶ್ಚಯಿಸಿತೆಂದು ಮಾತ್ರ ಗೊತ್ತಿಲ್ಲ ಇನ್ನೂ. ಈ ವಿಷಯ ಎಷ್ಟು ರಹಸ್ಯವಾಗಿದೆಯೆಂದರೆ, ರಾಜಕುಮಾರಿ ತನ್ನ ಪ್ರಣಯ ವ್ಯವಹಾರದ ಮಟ್ಟಿಗೆ ಸಾರ್ವಜನಿಕವಾಗಿ ತುಟಿತೆರೆದಿಲ್ಲ; ಅಧಿಕಾರಿಗಳಿಂದ ಬರುವುದು ಊಹಾಪೋಹೆಗಳನ್ನು ನಂಬಬಾರದು ಎಂಬ ಎಚ್ಚರ ಪ್ರಣಯವ್ಯವಹಾರ ಸುಳ್ಳೋ ಸತ್ಯವೋ ಎಂಬುದನ್ನು ಹೇಳಲಿಕ್ಕೆ ಯಾರೂ ಸಿದ್ಧರಿದ್ದಂತೆ ತೋರುವುದಿಲ್ಲ.

ವೆಸ್ಟ್ ಇಂಡೀಸ್ ಪ್ರದೇಶದ ಕೆಲವು ದ್ವೀಪಗಳಿಗೆ ಕೊಟ್ಟ ಭೇಟಿ ರಾಜಕುಮಾರಿಯ ಭವಿಷ್ಯ ನಿರ್ಣಯಕ್ಕೆ ಸಹಕಾರಿಯಾಗಲಿ ಬಿಡಲಿ, ಆ ದೇಶದ ಜನತೆಗೆ ಇದು ಅಪೂರ್ವವಾದ ಗೌರವದ ವಿಷಯವಾಯಿತು. ಸುಪ್ರಸಿದ್ಧವಾದ ಪನಾಮಾ ಕಾಲುವೆಯನ್ನು ಕೇಂದ್ರವಾಗಿಟ್ಟುಕೊಂಡರೆ ಸಂಯುಕ್ತರಾಜ್ಯ ಅಮೇರಿಕದ ಫ್ಲೋರಿಡದ ಭೂಶಿರದಿಂದ ಡಾ. ಜಗನರ ಜನ್ಮಭೂಮಿಯಾದ ಬ್ರಿಟಿಷ್ ಗಯಾನಕ್ಕೆ ತಾಗಿರುವ ಟ್ರಿನಿಡಾಡ್ ವರೆಗೆ ಒಂದು ಕಂಸದ ರೂಪದಲ್ಲಿ ವೆಸ್ಟ್ ಇಂಡೀಸ್ ದ್ವೀಪಗಳು ಉದ್ದಕ್ಕೆ ಚಾಚಿರುವುದನ್ನು ಭೂಪಟದಲ್ಲಿ ಗುರುತಿಸಬಹುದು. ಈ ದ್ವೀಪಗಳಿಗೆ "ಇಂಡೀಸ್" ಎಂಬ ಹೆಸರು ಬರಲು ಕೊಲಂಬಸನ ತಪ್ಪು ಭ್ರಮೆಯೇ ಕಾರಣ. ೧೬ನೇ ಶತಮಾನ

(೧೨ನೇ ಪುಟ ನೋಡಿರಿ)

ಪ್ರತಿನಿತ್ಯವೂ ಜನರು 24,90,496 ಬ್ರೂಕ್ ಬಾಂಡ್ ಚಹಾ ಪೊಟ್ಟಣಗಳನ್ನು ಕೊಳ್ಳುತ್ತಾರೆ!

ಅದೂ ಕೂಡ ಬಹು ಒಳ್ಳೆಯ ಕಾರಣಗಳಿಗಾಗಿ . . .

ಆಂಧ್ರದಲ್ಲಿ ಹೊಸ ಮಂತ್ರಿಮಂಡಳ ರಚನೆಯ ಉತ್ಸಾಹ

ಕಾಂಗ್ರೆಸಿನೊಡನೆ ಕೃಷಿಕರ ಲೋಕ ಪಕ್ಷದ ಐಕ್ಯ

ಆಂಧ್ರದಲ್ಲಿ ಪ್ರಕಾಶಮ್‌ರ ಪ್ರಥಮ ಮಂತ್ರಿಮಂಡಳದ ಮೇಲೆ ಅವಿಶ್ವಾಸವನ್ನು ಸೂಚಿಸುವ ಗೊತ್ತುವಳಿಯನ್ನು ಮಂಡಿಸುವಾಗ ಪ್ರತಿಪಕ್ಷಗಳವರು ಮದ್ಯಪಾನ ಪ್ರತಿಬಂಧದ ಧೋರಣೆಯ "ಅಸಮಂಜಸತೆ"ಯನ್ನು ಕಣ್ಣ ಮುಂದಿಟ್ಟುಕೊಂಡುದಕ್ಕಿಂತಲೂ ಹೆಚ್ಚಾಗಿ, ಮಂತ್ರಿಮಂಡಳ ಸೋಲಿಸಲ್ಪಟ್ಟರೆ, ತಮಗೆ ಅಧಿಕಾರಸ್ಥಾನವನ್ನು ಏರಲು ದೊರೆಯಬಹುದಾದ ಸಂಧಿಯನ್ನೇ ಸಾಧಿಸುತ್ತಿದ್ದರು. ಆದರೆ, ಆಂಧ್ರ ರಾಜ್ಯದಲ್ಲಿ ಇದೀಗ ಮುಕ್ತಾಯವಾಗಿರುವ ಚುನಾವಣೆಗಳು ಪ್ರತಿಪಕ್ಷಗಳವರ, ಮುಖ್ಯವಾಗಿ ಕಮ್ಯೂನಿಸ್ಟರ, ಭ್ರಮ ನಿರಸನಗೊಳಿಸಿವೆ ಎಂದು ಸ್ಪಷ್ಟವಾಗುತ್ತದೆ. ಕಮ್ಯುನಿಸ್ಟರು ತಮಗಾದ ಪ್ರಚಂಡ ಪರಾಭವದಿಂದ ವಜ್ರಾಘಾತಕ್ಕೆ ಗುರಿಯಾಗಿದ್ದು, ಇದರ ಕಾರಣಗಳೇನು ಎಂಬುದನ್ನು ವಿಚಾರಿಸಲು ಅಜಯಘೋಷರೇ ಮುಂತಾದ ಕಮ್ಯುನಿಸ್ಟ ಪ್ರಭೃತಿಗಳು ವಿಜಯವಾಡದಲ್ಲಿ ಇತರ ಕಾರ್ಯಕರ್ತರೊಡನೆ ವಿಚಾರ ವಿನಿಮಯ ನಡೆಸುವುದಕ್ಕೋಸ್ಕರ ಬಂದರು. ಅದಕ್ಕೆ ಮುಂಚೆಯೇ ಕಮ್ಯುನಿಸ್ಟರು ಸಂಯುಕ್ತ ಕಾಂಗ್ರೆಸು ಪಕ್ಷವು ಮಧ್ಯಮ ವರ್ಗದವರಲ್ಲಿಯೂ ಬುದ್ಧಿಜೀವಿಗಳಲ್ಲಿಯೂ ಕಮ್ಯುನಿಸ್ಟರ ಕುರಿತು ನಿರಾಧಾರ ಭಯವನ್ನು ತುಂಬಿಸಿದುದರಿಂದಲೇ ಸೋಲು ಸಂಭವಿಸಿತೆಂದು ಆರೋಪಿಸಿದ್ದರು; ಆದರೂ ತಮಗೆ ಒಟ್ಟು ಮತದಾನದ ನೂರಕ್ಕೆ ೩೧·೫ ಮತಗಳು ಬಿದ್ದಿವೆ ಎಂದವರು ಸಮಾಧಾನ ಪಟ್ಟುಕೊಂಡರು.

ಕಮ್ಯೂನಿಸ್ಟರಿಗೆ ಪೆಟ್ಟು

ಇದು ಹೆಮ್ಮೆ ಪಡಬಹುದಾದ ಸಮಾಧಾನವೇನೂ ಅಲ್ಲ—ಏಕೆಂದರೆ ಈ ಸಲ ಅವರು ೧೬೯ ಸ್ಥಳಗಳಿಗೆ ಸ್ಪರ್ಧಿಸಿದ್ದರು. ಕಳೆದ ಚುನಾವಣೆಯಲ್ಲಿ ೬೨ ಸ್ಥಾನಗಳಿಗೆ ಮಾತ್ರ ಹೋರಾಡಿದ್ದಾಗ ನೂರಕ್ಕೆ ೨೦ ಮತಗಳನ್ನು ಗಳಿಸಿದ್ದರು. ಆದುದರಿಂದ ಈ ಸಲ ಅವರಿಗೆ ದೊರೆತ ಮತಗಳು ಹಿಂದಿನ ಮಾನದಿಂದ ತೀರ ಕಡಿಮೆಯಾಗುತ್ತವೆ. ಆದಲ್ಲದೆ ಪೂರ್ವ ಮತ್ತು ಪಶ್ಚಿಮ ಗೋದಾವರಿ, ಕೃಷ್ಣ, ಗುಂಟೂರು ಮತ್ತು ನೆಲ್ಲೂರುಗಳೆಂಬ ಜಿಲ್ಲೆಗಳನ್ನು ತಮ್ಮ ಭದ್ರ ಕೋಟೆಗಳೆಂದು ಕರೆಯುತ್ತಿದ್ದ ಕಮ್ಯುನಿಸ್ಟರು ಇಲ್ಲಿ ಒಟ್ಟು ೧೮ ಲಕ್ಷ ಮತಗಳನ್ನು ಮಾತ್ರ ಪಡೆದರು; ಸಂಯುಕ್ತ ಕಾಂಗ್ರೆಸು ೨೫ ಲಕ್ಷ ಮತಗಳನ್ನು ಗಳಿಸಿತು. ಈ ಐದು ಜಿಲ್ಲೆಗಳಲ್ಲಿ ಸಹ ಪಶ್ಚಿಮ ಗೋದಾವರಿಯಲ್ಲಿ ಒಂದು ಸ್ಥಾನವೂ ಕಮ್ಯುನಿಸ್ಟರಿಗೆ ಸಿಗಲಿಲ್ಲ—ಬಾಕಿ ನಾಲ್ಕು ಜಿಲ್ಲೆಗಳಲ್ಲಿ ಅವರಿಗೆ ೧೫ ಸ್ಥಾನಗಳು ದೊರಕಿದವೆಂಬುದು ನಿಜ. ಹಿಂದೆಯಾದರೆ ಅವರು ಈ ಜಿಲ್ಲೆಗಳಿಂದ ೩೧ ಸ್ಥಾನಗಳನ್ನು ಪಡೆದಿದ್ದರು. ಅಷ್ಟು ಮಾತ್ರವಲ್ಲ ರಾಯಲ ಸೀಮೆ ಮುಂತಾದಲ್ಲಿ ಸಹ ತಮ್ಮ ವರ್ಚಸ್ಸನ್ನು ಬೀರಿದ್ದರು—ಆದರೆ ಈ ಸಲ ಆಂಧ್ರದ ಏಳು ಜಿಲ್ಲೆಗಳಲ್ಲಿ ಅವರು ಸಂಪೂರ್ಣ ಸೋತರು. ಇದಕ್ಕೆ ತಮ್ಮ ಚುನಾವಣೆಯ ಘೋಷಣೆಯಲ್ಲಿ ಒಡೆತನದ ಪರಮಾವಧಿ ಮಿತಿಯನ್ನು ೨೦ ಎಕ್ರೆಯಾಗಿ ನಿಶ್ಚಯಿಸಲಾಗುವುದೆಂದು ಹೇಳಿದುದೇ ಕಾರಣವಿರಬಹುದೆಂದೂ 'ಶ್ರೀಮಂತ ರೈತರು" ಇದನ್ನು ಮೆಚ್ಚದೆ ತಮಗೆ ವಿರುದ್ಧ ಮತ ಕೊಟ್ಟಿರಬೇಕೆಂದೂ ಕಮ್ಯೂನಿಸ್ಟರ ಪರವಾಗಿ ವಿವರಣೆ ಕೊಡಲಾಗುತ್ತದೆ. ಹಾಗೆಂದು, ಸಂಯುಕ್ತ ಕಾಂಗ್ರೆಸಿನ ಅಭಿಪ್ರಾಯದಲ್ಲಿ, ಕಮ್ಯೂನಿಸ್ಟರು ಇಷ್ಟಾದರೂ ಮತಗಳನ್ನು ಪಡೆದಿರುವುದಕ್ಕೆ ಕೃಷಿಕರಿಗೆಲ್ಲ ಐದೈದು ಎಕ್ರೆ ಭೂಮಿಯನ್ನು ಹಂಚಿಕೊಡಲಾಗುವುದೆಂದು ಅವರು ತಮ್ಮ ಚುನಾವಣೆಯ ಘೋಷಣೆಯಲ್ಲಿ ಹೇಳಿರುವುದೇ ಕಾರಣ.

ಕಾಂಗ್ರೆಸಿನ ಶಕ್ತಿ ಹೆಚ್ಚಿತು

ಒಟ್ಟು ಮತದಾರರಲ್ಲಿ ೬೨·೨೫% ಜನರು ಮತದಾನ ಮಾಡಿದ್ದರು; ಅವರಲ್ಲಿ ಸಂಯುಕ್ತ ಕಾಂಗ್ರೆಸು ಪಕ್ಷಕ್ಕೆ ಮತವಿತ್ತವರು ೪೯·೮%; ಕಮ್ಯುನಿಸ್ಟರಿಗೆ ೩೧·೫%; ಪ್ರಜಾ ಸಮಾಜವಾದಿಗಳಿಗೆ ೫·೧೫%, ಉಳಿದ ಮತ ಸ್ವತಂತ್ರರಿಗೆ ಸಿಕ್ಕಿತು. ಆದುದರಿಂದ ಸಂಯುಕ್ತ ಕಾಂಗ್ರೆಸು ಪಕ್ಷದ ಮೇಲೆ ಆರೆವಾಸಿ ಜನರಿಗೆ ವಿಶ್ವಾಸವಿದೆಯೆಂದು ವ್ಯಕ್ತವಾಯಿತು. ಕಾಂಗ್ರೆಸಿನ ಬಲ ಸಂವರ್ಧನೆಗೆ ಇಷ್ಟು ಬೆಂಬಲ ಸಾಲದು; ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಜನರ ಪ್ರೋತ್ಸಾಹ ಸಿಗಬೇಕು ಎಂಬುದರಲ್ಲಿ ಯಾರದೂ ಪ್ರತಿಮಾತಿಲ್ಲ. ಅಲ್ಲದೆ ಈ ಸಲ ಕಾಂಗ್ರೆಸು ಪಕ್ಷವು ಮಂತ್ರಿಮಂಡಳದಲ್ಲಿ ತನ್ನೊಡನೆ ಸಹಕರಿಸಿದ ಕೃಷಿಕರ ಲೋಕಪಕ್ಷವನ್ನೂ ಪ್ರಜಾಪಕ್ಷವನ್ನೂ ಕೂಡಿಕೊಂಡು ಸಂಯುಕ್ತ ರಂಗವನ್ನು ರಚಿಸಿದುದರಿಂದ ನಿಚ್ಚಳ ಬಹುಮತವನ್ನು ಪಡೆಯುವುದು ಸಾಧ್ಯವಾಯಿತೆಂಬುದೂ ಸುಳ್ಳಲ್ಲ. ಆದುದರಿಂದ ಕಾಂಗ್ರೆಸು ಪ್ರಜಾಸತ್ತಾತ್ಮಕ ಸಿದ್ಧಾಂತಕ್ಕೆ ಅನುಸಾರವಾಗಿ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಕಾರ್ಯಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳತಕ್ಕದ್ದು ಧರ್ಮ. ಮುಖ್ಯವಾಗಿ, ಕಾಂಗ್ರೆಸಿನ ಸಂಯುಕ್ತ ರಂಗದ ಚುನಾವಣೆಯ ಘೋಷಣೆಯಲ್ಲಿ ಸೂಚಿಸಲಾದ ಕೆಲವು ವ್ಯಾವಹಾರಿಕ ಸುಧಾರಣೆಯ ಕ್ರಮಗಳನ್ನು ಜನರಿಗೆ ತೃಪ್ತಿಕರವಾದ ರೀತಿಯಲ್ಲಿ ವಿಳಂಬವಿಲ್ಲದೆ ಜಾರಿಗೆ ತರುವುದು ಅಪೇಕ್ಷಣೀಯ. ಇದರಲ್ಲಿ ಕಾಂಗ್ರೆಸು ಯಶಸ್ಸುಗಳಿಸವಿರದೆಂದು ಹೇಳಬಹುದು—ಏಕೆಂದರೆ ಅದರೊಡನೆ ಕೃಷಿಕರ ಲೋಕಪಕ್ಷವು ಈಗ ಯಾವುದೇ ಶರ್ತಗಳಿಲ್ಲದೆ ಸೇರ್ಪಡೆಹೊಂದಲು ನಿರ್ಧರಿಸಿರುತ್ತದೆ; ಪ್ರಜಾಪಕ್ಷವು ಸಹ ಪ್ರತ್ಯೇಕವಾಗಿ ಉಳಿಯದೆ ಕಾಂಗ್ರೆಸಿನೊಡನೆ ಮಿಲನವಾಗುವ ದಿನ ಬಹಳ ದೂರವಿಲ್ಲೆಂದು ಹೇಳಲಾಗುತ್ತದೆ.

ಧೇಬರರ ಸಮಾಲೋಚನೆ

ಕೃಷಿಕರ ಲೋಕಪಕ್ಷವನ್ನು ಕಾಂಗ್ರೆಸಿನ ಧೋರಣೆಯಲ್ಲಿ ತುಸು ಮತಭೇದ ಉಂಟಾದುದರಿಂದ ಆಂಧ್ರದ ಪ್ರಮುಖ ರಾಜಕಾರಣಿಯಾದ ಶ್ರೀ ಎನ್. ಜಿ. ರಂಗರು ಕಟ್ಟಿದ್ದರು. ಈಗ ತಮಗೆ ಕಾಂಗ್ರೆಸಿನೊಡನೆ ಭಿನ್ನಾಭಿಪ್ರಾಯಗಳಿಗೇನೂ ಕಾರಣ ಉಳಿದಿಲ್ಲವೆಂದು ಹೇಳಿ, ಅವರು ಆಂಧ್ರದಲ್ಲಿಯಷ್ಟೇ ಅಲ್ಲ, ಅಖಿಲ ಭಾರತ ಸ್ವರೂಪದಲ್ಲಿ ಕಾಂಗ್ರೆಸಿನೊಡನೆ ತಮ್ಮ ಪಕ್ಷದ ಐಕ್ಯವನ್ನು ಸಾರಿದರು. ಇದರಿಂದ ಆಂಧ್ರದಲ್ಲಿ ಮಂತ್ರಿಮಂಡಳ ರಚನೆಯ ಕೆಲಸ ಸುಗಮವಾಗುವಂತಾಗಿದೆಯಲ್ಲದೆ, ಭದ್ರವಾದ ಸರಕಾರವೂ ಆಂಧ್ರದಲ್ಲಿ ನೆಲೆಯೂರುವಂತಾಗಿದೆ; ಅಷ್ಟೇ ಅಲ್ಲ, ಕಾಂಗ್ರೆಸಿನ ಶಕ್ತಿಯು ಹೆಚ್ಚಿಕೊಂಡಿದೆ. ಈಗ ಬಾಕಿ ಉಳಿದಿರುವುದು—ಮಂತ್ರಿಮಂಡಳದ ಧುರೀಣತ್ವವನ್ನು ಯಾರು ಹೊರಬೇಕು ಎಂಬ ಪ್ರಶ್ನೆ ಮಾತ್ರ. ಇದಕ್ಕಾಗಿ ಕಳೆದ ವಾರ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಧೇಬರರು ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಮಾಧವ ಮೆನನ್, ಇತರ ವರಿಷ್ಠರಾದ ಶ್ರೀನಿವಾಸ ಮಲ್ಯ, ಎಸ್. ಕೆ. ಪಾಟೀಲ ಮುಂತಾದವರೊಡನೆ ವಿಜಯವಾಡಕ್ಕೆ ಆಗಮಿಸಿ, ಇನ್ನೂರಕ್ಕೂ ಹೆಚ್ಚು ವ್ಯಕ್ತಿಗಳೊಡನೆ ಸಮಾಲೋಚನೆ ನಡೆಸಿದರು. ಕೃಷಿಕರ ಲೋಕ ಪಕ್ಷದ ವರಿಷ್ಠರಾಗಿದ್ದ ಶ್ರೀ ರಂಗರೊಡನೆಯೂ ಪ್ರಜಾಪಕ್ಷದ ನಾಯಕ ಶ್ರೀ ವಿಶ್ವನಾಥಮರೊಡನೆಯೂ ಅವರು ವಿಚಾರವಿನಿಮಯ ಗೈದರು.

ಧುರೀಣರು ಯಾರು?

ಇದರ ಪರಿಣಾಮವಾಗಿ ಆಂಧ್ರ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿರುವ (ಮತ್ತು ಹಿಂದೆ ಮದ್ರಾಸಿನಲ್ಲಿ ಮಂತ್ರಿಗಳಾಗಿದ್ದ) ಶ್ರೀ ಬಿ. ಗೋಪಾಲ ರೆಡ್ಡಿಯವರನ್ನು ಸಂಯುಕ್ತ ಕಾಂಗ್ರೆಸು ಪಕ್ಷವು ಶಾಸನ ಸಭೆಯಲ್ಲಿ ತನ್ನ ಧುರೀಣರಾಗಿ ಆರಿಸುವುದು ವಿಹಿತವೆಂದು ಕಾಂಗ್ರೆಸಾಧ್ಯಕ್ಷರಿಂದ ಸಲಹೆ ದೊರೆಯಿತು. ಇದು ಕೊನೆಯ ನಿರ್ಣಯವೆಂದು ಹೇಳಲಿಕ್ಕಾಗದು—ಏಕೆಂದರೆ ತಾನು ಸರ್ವಾಧಿಕಾರಿಯಂತೆ ವರ್ತಿಸುವುದಿಲ್ಲ; ಆರಿಸಿ ಬಂದಿರುವ ಸದಸ್ಯರಿಗೆ ಸಲಹೆಯನ್ನು ಮಾತ್ರ ಕೊಡುತ್ತಿದ್ದೇನೆ ಎಂದು ಧೇಬರರು ಹೇಳಿದ್ದಾರೆ. ಸದಸ್ಯರಲ್ಲಿ ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಟಿ. ಪ್ರಕಾಶಮರನ್ನು ಪುನಃ ಮುಖ್ಯಮಂತ್ರಿಯಾಗಿ

ನೋಟೀಸು

ಪೆರ್ಡೂರು ಮುಕ್ತೇಸರ್ ಬಾರ್ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಬಾಬ್ತು ತೊಳ್ಸಲು ಅಕ್ಕಿ ಮತ್ತು ಬತ್ತ ಕೂಡಾ ಮುಡಿ ನೂರ ಕ್ಕೂ ನೇಲ್ಪಟ್ಟು ಖರೀದಿಗೆ ಕೊಡುವುದಿದೆ. ಆ ಬಗ್ಗೆ ಇದೇ ತಾರೀಕು 25-3-1955 ನೇ ಶುಕ್ರವಾರ ಸಾಯಂಕಾಲ ಗಂಟೆ 4 ಕ್ಕೆ ಭಂಡಾರದ ಶರ್ತಕ್ಕೆ ಒಳಪಟ್ಟು ದೇವಸ್ಥಾನದ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಪೇಕ್ಷೆಯುಳ್ಳವರು ಬಂದು ಏಲಮಿನಲ್ಲಿ ಭಾಗವಹಿಸಬಹುದು.

Sri Anantha Padmanabha Temple, Perdur

K. B. Shetty
Executive Officer.

ಪೆರ್ಡೂರು ತಾ. 11—3—55.

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policyholders and Representatives. At whatever stage we welcome your associataion with the POPULAR.

THE POPULAR INSURANCE CO., LTD.

"POPULAR BUILDINGS" MANGALORE-1

ಮಾಡಬೇಕೆಂದು ಕೆಲವರೂ ಉಪ ಮುಖ್ಯಮಂತ್ರಿಯಾಗಿದ್ದ ಶ್ರೀ ಎನ್. ಸಂಜೀವ ರೆಡ್ಡಿಗಳು ಈಗ ಮುಖ್ಯ ಮಂತ್ರಿಯಾಗಬೇಕೆಂದು ಬೇರೆ ಕೆಲವರೂ ಅಭಿಪ್ರಾಯ ಪಡುವರೆಂದು ವರದಿಗಳಿಂದ ತಿಳಿಯುತ್ತದೆ. ಆದರೆ ಕಾಂಗ್ರೆಸಾಧ್ಯಕ್ಷರ ಸೂಚನೆಯಂತೆಯೇ ಧುರೀಣರ ಆಯ್ಕೆ ನಡೆಯುವ ಸಂಭವ ಹೆಚ್ಚೆಂದು ಕಾಣುತ್ತದೆ. ಇದೇ ೨೦ನೇ ತಾರೀಕಿನೊಳಗೆ ಈ ಕೆಲಸ ಮುಗಿಯಬಹುದೆಂದೂ ಧುರೀಣನಾರೆಂದು ನಿರ್ಧರವಾದ ಬಳಿಕ ಗವರ್ನರರು ಆತನನ್ನು ಕರೆದು ಮಂತ್ರಿ ಮಂಡಳ ರಚಿಸಲು ಕೇಳಿ ಕೊಳ್ಳುವರೆಂದೂ ಹೊಸ ಮಂತ್ರಿ ಮಂಡಳವು ತೆಲುಗು ಹೊಸ ವರ್ಷದಂದು, ಅಂದರೆ ಮಾರ್ಚ ೨೪ನೇ ತಾರೀಕಿಗೆ, ಅಧಿಕಾರ ಗ್ರಹಣ ಮಾಡಬಹುದೆಂದೂ ತಿಳಿದು ಬರುತ್ತದೆ.

ಹೊಸ ಮಂತ್ರಿ ಮಂಡಳ

ಎಲ್ಲವೂ ಸುಸೂತ್ರವಾಗಿ ಮೇಲಿನಂತೆ ನಡೆದರೆ, ಆಂಧ್ರದ ಹೊಸ ಮಂತ್ರಿ ಮಂಡಳದಲ್ಲಿ ಶ್ರೀ ಸಂಜೀವ ರೆಡ್ಡಿಯವರಲ್ಲದೆ, ಮದ್ರಾಸಿನಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಕೆ. ಚಂದ್ರಮೌಳಿ ಮತ್ತು ಶ್ರೀ ಕಲಾ ವೆಂಕಟರಾಯರು ಇರಬಹುದೆಂದೂ ಶ್ರೀ. ಜಿ. ಲಚ್ಚಣ್ಣನವರನ್ನೂ ಸೇರಿಸಿಕೊಳ್ಳಬಹುದೆಂದೂ ಅಂದಾಜು. ಇವರಲ್ಲದೆ ಅಲ್ಪಸಂಖ್ಯಾಕರಾದ ಮುಸ್ಲಿಮರ ಮತ್ತು ಹರಿಜನರ ಪ್ರತಿನಿಧಿಯಾಗಿ ಮಂತ್ರಿಮಂಡಳದಲ್ಲಿ ಇಬ್ಬರು ಸೇರಿಸಲ್ಪಡಬಹುದು. ಈ ಸಲ ಮಂತ್ರಿಮಂಡಳವನ್ನು ವಿಸ್ತರಿಸಿ ೧೨ ಮಂತ್ರಿಗಳನ್ನೂ ೬ ಅಥವಾ ೮ ಉಪಮಂತ್ರಿಗಳನ್ನೂ ಸೇರಿಸಲಾಗುವುದೆಂಬ ಸುದ್ದಿಯೂ ಉಂಟು. ಇದಕ್ಕೆ ಕಾಂಗ್ರೆಸು ವರಿಷ್ಠರು ಒಪ್ಪುತ್ತಾರೋ ಏನೆಂದು ಗೊತ್ತಿಲ್ಲ. ಹೊಸ ದೆಹಲಿಗೆ ಆಂಧ್ರ ಕಾಂಗ್ರೆಸಿನ ನಾಯಕರೆಲ್ಲರೂ ಹಾರಿದ್ದು, ಅಲ್ಲಿ ಮಂತ್ರಿ ಮಂಡಳದ ರಚನೆಯ ಪ್ರಶ್ನೆ ಇಷ್ಟರಲ್ಲೇ ಇತ್ಯರ್ಥವಾಗುತ್ತದೆ. ಪ್ರದೇಶ ಕಾಂಗ್ರೆಸಿಗೆಹೊಸಅಧ್ಯಕ್ಷನಾಗಿಯಾರನ್ನು ಆರಿಸಬೇಕೆಂಬ ವಿಷಯವೂ ಅಲ್ಲಿ ತೀರ್ಮಾನವಾದೀತು — ಈಗಿನ ಸುದ್ದಿಯಂತೆ ಶ್ರೀ ರಂಗರು ತೋರಿಸಿದ ಔದಾರ್ಯಕ್ಕೆ ಕೃತಜ್ಞತೆಯ ರೂಪದಲ್ಲಿ ಆಂಧ್ರ ಕಾಂಗ್ರೆಸಿನ ವರಿಷ್ಠ ಸ್ಥಾನ ಅವರ ಕೈಗೆ ಒಪ್ಪಿಸಿ ಕೊಡಲ್ಪಡಬಹುದು. ೮೭ ವರ್ಷದ ವೃದ್ಧ "ಆಂಧ್ರ ಕೇಸರಿ" ಪ್ರಕಾಶಮರಿಗೆ ಈ ಸಲ ತೀರ ಹೊಸತಾದ ಹುದ್ದೆಯನ್ನು ಶ್ರೀ ಢೇಬರರು ಕೊಡಮಾಡಿದರು—ದೈನಂದಿನ ಆಡಳಿತದ ಹೊರೆಗೆ ಹೆಗಲು ಕೊಡುವಂತೆ ಈ ಮುದುಕನನ್ನು ಒತ್ತಾಯಿಸಬಾರದು; ಆದರೆ ಅವರ ಪರಿಪಕ್ವ ಅನುಭವದ ಲಾಭ ಆಂಧ್ರದ ಜನತೆಗೆ ಸರಕಾರಕ್ಕೆ, ಮತ್ತು ಕಾಂಗ್ರೆಸಿಗೆ ಸಿಗುತ್ತಿರಬೇಕು ಎಂಬ ಉದ್ದೇಶದಿಂದ ಅವರನ್ನು ಆಂಧ್ರ ಪಾರ್ಲಿಮೆಂಟರಿ ಬೋರ್ಡಿಗೆ ಅಧ್ಯಕ್ಷರಾಗಿ ಮಾಡಲಾಗುತ್ತದೆ. ಇದರಲ್ಲಿ ಮುಖ್ಯ ಮಂತ್ರಿ ಮತ್ತು ಉಪಮುಖ್ಯ ಮಂತ್ರಿಗಳು ಸರಕಾರದ ಪರವಾಗಿಯೂ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಕಾಂಗ್ರೆಸಿನ ಪರವಾಗಿಯೂ ಇದ್ದು, ಸರಕಾರದ ಧೋರಣೆಯು ಕಾಂಗ್ರೆಸಿನ ತತ್ವಕ್ಕೆ ಹೊಂದಿಕೊಳ್ಳುವ ಉಪಾಯವನ್ನು ಈ ಮಂಡಳ ಗೊತ್ತು ಹಚ್ಚುತ್ತದೆ.

ನೆಹರುಗಳ ಉಪದೇಶ

ಏನಾಗುವುದೋ ಏನೋ—ಎಂದೆಲ್ಲರನ್ನೂ ಕಳವಳಕ್ಕೆ ಗುರಿಮಾಡಿದ್ದ ಆಂಧ್ರದ ಪ್ರಕರಣವು ತುಂಬ ತೃಪ್ತಿಕರವಾದ ರೀತಿಯಲ್ಲಿ ಮುಕ್ತಾಯವಾಗಿರುವುದಕ್ಕೆ ಶ್ರೀ ಜವಾಹರಲಾಲ ನೆಹರುಗಳಾದಿಯಾಗಿ ಎಲ್ಲ ವರಿಷ್ಠರೂ ಸಮಾಧಾನ ಪಟ್ಟರು. ನೆಹರುಗಳು ತಾವು ಕಾಂಗ್ರೆಸಿನ ಅಧ್ಯಕ್ಷರಾಗಿಲ್ಲದಿದ್ದರೂ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರುಗಳಿಗೆ ಪತ್ರಮುಖೇನ ಮಾರ್ಗದರ್ಶನ ಮಾಡುವಸಂಪ್ರದಾಯವನ್ನು ಬಿಟ್ಟುಗೊಡದೆ ಹೋಳಿಯ ಸಂದರ್ಭದಲ್ಲಿ ಕಳುಹಿಸಿದ ಸಂದೇಶವು ಆಂಧ್ರದ ಬಗ್ಗೆ ಅವರಲ್ಲಿ ಮೂಡಿರುವ ಸಮಾಧಾನದ ಭಾವನೆಗಳನ್ನು ವ್ಯಕ್ತ ಪಡಿಸುತ್ತದೆ—"ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಹತ್ವದ ಪರಿಣಾಮಗಳನ್ನು ಆಂಧ್ರದ ಚುನಾವಣೆಯು ವ್ಯಕ್ತಪಡಿಸುತ್ತವೆ. ಅಲ್ಲಿ ಕಾಂಗ್ರೆಸು ಬಲಹೀನವಾಗಿ ಚೆನ್ನಾಗಿ ಕೆಲಸ ಮಾಡುತ್ತಿರಲಿಲ್ಲ. ಆದರೆ ಜನರಿಗೆ ಕಾಂಗ್ರೆಸಿನ ಮೇಲೆ ಪ್ರೀತಿ ಮಾಯವಾಗದೆ' ಅವರು ಕಾಂಗ್ರೆಸನ್ನು ಬೆಂಬಲಿಸಿದರು. ಈ ಪ್ರೀತಿ ಭಾವನೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಆಂಧ್ರದಲ್ಲಿ ಅಧಿಕಾರಕ್ಕೆ ಬರುವ ಮಂತ್ರಿ ಮಂಡಳದ ಮತ್ತು ಆಂಧ್ರ ಪ್ರದೇಶ ಕಾಂಗ್ರೆಸಿನ ಕಾರ್ಯಕರ್ತರ ಕರ್ತವ್ಯ" ಎಂದು ನೆಹರು ಹೇಳಿದರು. ಆಂಧ್ರದ ಚುನಾವಣೆಯನ್ನು ತೀರ ನಿಷ್ಪಕ್ಷಪಾತವಾದ ರೀತಿಯಲ್ಲಿ ಗವರ್ನರರಾದ ಶ್ರೀ ತ್ರಿವೇದಿಯವರು ನಡೆಸಿದ್ದರೆಂಬುದನ್ನು ಸಂಸತ್ತಿನಲ್ಲಿ ೨೯೭ ಲಕ್ಷ ರೂಪಾಯಿಗಳ ಕೊರತೆಯ ಮುಂಗಡ ಪತ್ರದ ಚರ್ಚೆ ನಡೆದಾಗ ಪ್ರತಿಪಕ್ಷದ ಸದಸ್ಯರು ಸಹ ಒಪ್ಪಿಕೊಂಡರು. ಗೃಹ ಮಂತ್ರಿಗಳಾದ ಪಂಡಿತ ಪಂತರು ಇದರಿಂದ ಹರ್ಷಪಟ್ಟುಕೊಂಡು, ಗವರ್ನರರ ನ್ಯಾಯಬುದ್ಧಿಯನ್ನು ಪ್ರಶಂಸಿಸಿದರು. ಈ ಮುಂಗಡ ಪತ್ರ ತಾತ್ಕಾಲಿಕ ಸ್ವರೂಪದ್ದಿದ್ದು ಹೊಸ ಮಂತ್ರಿ ಮಂಡಳವು ಅವಶ್ಯವಿದ್ದ ಮುಂದಿನ ಕ್ರಮಗಳನ್ನು ತೆಗೆದು ಕೊಳ್ಳುತ್ತದೆ.

ನೆಹರುಗಳನ್ನು ತಿವಿಯುವ ಪ್ರಯತ್ನ

ಆದರೆ ಅವರು ಪಾರಾದರು

ಕಳೆದ ವಾರದ ವಿಶೇಷ ವರ್ತಮಾನಗಳಲ್ಲಿ ಭಾರತೀಯರೆಲ್ಲರ ರೋಮನಿಗುರಿಸುವ ಸುದ್ದಿಯೊಂದು ನಾಗಪುರದಿಂದ ಬಂತು — ಭಾರತದ ಕಣ್ಮಣಿ ಮತ್ತು ಜನನಾಯಕ ಶ್ರೀ ಜವಾಹರಲಾಲ ನೆಹರುಗಳು ಭಾರತ ಸೇವಕ ಸಮಾಜದ ಪರಿಷತ್ತಿನಲ್ಲಿ ಭಾಗ ವಹಿಸುವುದಕ್ಕೆಂದು ೧೨ನೇ ತಾರೀಕಿನಂದು ಪೂರ್ವಾಹ್ನ ಹೊಸ ದೆಹಲಿಯಿಂದ ನಾಗಪುರದ ಸೋನೆಗಾಂವ್ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಅಲ್ಲಿಂದ ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳ ಮನೆಗೆ ತೆರೆದ ಕಾರಿನಲ್ಲಿ ಹೊರಟಿದ್ದರು. ಅವರು ಕಾರಿನಲ್ಲಿ ನಿಂತಿದ್ದರು; ರಸ್ತೆಯ ತಿರುಗೊಂದರಲ್ಲಿ ಕಾರಿನ ಮುಂದೆ ರಿಕ್ಷಾಗಾಡಿಯೊಂದು ಬಂದು ನಿಂತಿತು. ಅದನ್ನು ಎಳೆಯುತ್ತಿದ್ದವನು ಕಾರಿನ ಫೂಟ್ ಗಾರ್ಡಿನ ಮೇಲೆ ಹಾರಲು ಉದ್ಯುಕ್ತನಾದನು-ಅವನು ಕೈಯಲ್ಲಿ ಚೂರಿಯೊಂದನ್ನು ಹಿಡಿದು ನೆಗೆದಿದ್ದನು. ಅಷ್ಟರಲ್ಲಿಯೇ ಅವನನ್ನು ತಡೆದು, ಬಂಧಿಸಲಾಯಿತು.

ತಲೆತಿರುಕನ ಕೆಲಸ

ನೆಹರುಗಳು 'ಈ ಘಟನೆಗೆ ಅಷ್ಟೇನೂ ಮಹತ್ವಕೊಡಬಾರದು — ಅದು ಆರೆ ಹುಚ್ಚನೊಬ್ಬನವೈಯಕ್ತಿಕಕೆಲಸ' ಎಂದುಹೇಳಿದರು. ಚೂರಿ ಹಿಡಿದು ನೆಗೆದಾತನ ಹೆಸರು ಬಾಬುರಾವ್. ಆತನ ಪ್ರಾಯ ೩೭ ವರ್ಷ. ಪ್ರಧಾನ ಮಂತ್ರಿಗಳೊಡನೆ ತನ್ನ ಕಷ್ಟಗಳನ್ನು ಹೇಳಲು ಬಂದನೆಂದೂ ಕೈಯಲ್ಲಿ ಬಿಚ್ಚಿದ ಚೂರಿ ಇದ್ದದ್ದು ಕೇವಲ ಆಕಸ್ಮಿಕವೆಂದೂ ಆವನು ಪೋಲೀಸರಿಗೆ ಹೇಳಿದನು. ಅವನು ಮುಂಬಯಿ ರಾಜ್ಯದ ಸೂರತ್ ಜಿಲ್ಲೆಯಲ್ಲಿಯೂ ಇತರ ಅನೇಕ ಸ್ಥಳಗಳಲ್ಲಿಯೂ ತಿರುಗಿದ್ದನೆಂದು ತಿಳಿದು ಬರುತ್ತದೆ. ಪೋಲೀಸರು ಅವನ ಸಂಪೂರ್ಣ ವಿವರಗಳಿಗಾಗಿ ತನಿಖೆ ನಡೆಸುತ್ತಿದ್ದು, ಯಾವುದಾದರೂ ರಾಜಕೀಯ ಗುಂಪಿಗೆ ಅವನು ಸೇರಿರುವನೋ ಎಂಬುದನ್ನು ಸಹ ಅವರು ಗೊತ್ತುಹಚ್ಚಬಹುದು. ಪ್ರಕೃತ ಆತನನ್ನು ರಿಮಾಂಡಿನ ಮೇಲೆ ಮೆಜಿಸ್ಟ್ರೇಟರು ಬಿಟ್ಟರು. ಅದೇನೇ ಆಗಲಿ — ಪ್ರಧಾನಿ ನೆಹರುಗಳು ಗಂಡಾಂತರದಿಂದ ಪಾರಾದುದಕ್ಕೆ ದೇಶದಾದ್ಯಂತ ದೇವರ ಆಭಾರ ಸೂಚಿಸಲಾಯಿತು; ವಿದೇಶಗಳಲ್ಲೂ ಸಂತೋಷ ವ್ಯಕ್ತವಾಯಿತು.



BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

೩ನೇ ಆವೃತ್ತಿ. ಸಿದ್ಧವಾಗಿದೆ! ಬೆಲೆ: ೨ ೮-೦ ಬೇಗ ತರಿಸಿರಿ.
ಶ್ರೀ. ಎಸ್. ಕೆ. ಕುಲಕರ್ಣಿಕೃತ
ಕನ್ನಡ ಸಾಹಿತ್ಯವಾಹಿನಿ
M. A.. B. A., ವಿದ್ಯಾರ್ಥಿಗಳಿಗೂ ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಇದು Reference ಗ್ರಂಥವಾಗಿದೆ! ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಜಾಣ ಪರೀಕ್ಷೆಗೆ Text Book ವನ್ನಾಗಿ ಮಾಡಿದ್ದಾರೆ!
ಒಂದೇ ಪ್ರತಿ ಬೇಕಾದವರು 3—8—0 M. O. ಕಳಿಸಿರಿ.
ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್.
ಶ್ಯಾಟಿ ಶ್ಯಾಮರಾಯರು
ಸಂಪಾದಕರು: ವಿಜಯ ಗ್ರಂಥಮಾಲೆ, ಬೆಳಗಾಂವಿ.
ಒಡೆಯರು: ಕರ್ನಾಟಕ ಗ್ರಂಥ ಭಂಡಾರ, ಬೆಳಗಾಂವಿ.

ನಿಮ್ಮ ಸೇವೆಗಾಗಿ—
ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳು ಎಷ್ಟೇ ಮಹತ್ವದ್ದಿರಲಿ, ಎಷ್ಟೇ ಕಠಿಣವಿರಲಿ, ನಾವು ನಿಮಗೆ ನಿರ್ದಿಷ್ಟ, ಸಮರ್ಥ ಸೇವೆಯನ್ನು ಸಲ್ಲಿಸಲು ಯಾವಾಗಲೂ ಸಿದ್ಧರಿರುವೆವು.
ನಮ್ಮ ಹಲವಾರು ವರ್ಷಗಳ ಅನುಭವವು ಮತ್ತು ಎಲ್ಲಾ ತರದ ವ್ಯವಹಾರ ಸೌಕರ್ಯಗಳು ನಿಮಗೆ ದೊರಕಲಾಗಿವೆ.
ನಮ್ಮ ಯಾವದೇ ಶಾಖೆಯಲ್ಲಿ ವಿಚಾರಿಸಿರಿ.
ಕೆನರಾ ಬ್ಯಾಂಕ್, ಲಿಮಿಟೆಡ್.
CANARA BANK, LTD.
ESTD. 1906.
ಪ್ರಧಾನ ಕಚೇರಿ— ಮಂಗಳೂರು. ಆಡಳಿತ ಕಚೇರಿ— ಬೆಂಗಳೂರು. ಜನರಲ್ ಮೆನೇಜರರ ಕಚೇರಿ ಮತ್ತು ವಿದೇಶಿ ಇಲಾಖೆ— ಬೊಂಬಾಯಿ.

ಆಂಧ್ರದಲ್ಲಿ ಹೊಸ ಮಂತ್ರಿಮಂಡಳ ರಚನೆಯ ಉತ್ಸಾಹ

ಕಾಂಗ್ರೆಸಿನೊಡನೆ ಕೃಷಿಕರ ಲೋಕ ಪಕ್ಷದ ಐಕ್ಯ

ಆಂಧ್ರದಲ್ಲಿ ಪ್ರಕಾಶಮರ ಪ್ರಥಮ ಮಂತ್ರಿಮಂಡಳದ ಮೇಲೆ ಅವಿಶ್ವಾಸವನ್ನು ಸೂಚಿಸುವ ಗೊತ್ತುವಳಿಯನ್ನು ಮಂಡಿಸುವಾಗ ಪ್ರತಿಪಕ್ಷಗಳವರು ಮದ್ಯಪಾನ ಪ್ರತಿಬಂಧದ ಧೋರಣೆಯ "ಅಸಮಂಜಸತೆ"ಯನ್ನು ಕಣ್ಣ ಮುಂದಿಟ್ಟುಕೊಂಡುದಕ್ಕಿಂತಲೂ ಹೆಚ್ಚಾಗಿ, ಮಂತ್ರಿ ಮಂಡಳ ಸೋಲಿಸಲ್ಪಟ್ಟರೆ, ತಮಗೆ ಅಧಿಕಾರ ಸ್ಥಾನವನ್ನು ಏರಲು ದೊರೆಯಬಹುದಾದ ಸಂಧಿಯನ್ನೆ ಸಾಧಿಸುತ್ತಿದ್ದರು. ಆದರೆ, ಆಂಧ್ರ ರಾಜ್ಯದಲ್ಲಿ ಇದೀಗ ಮುಕ್ತಾಯವಾಗಿರುವ ಚುನಾವಣೆಗಳು ಪ್ರತಿಪಕ್ಷಗಳವರ, ಮುಖ್ಯವಾಗಿ ಕಮ್ಯೂನಿಸ್ಟರ, ಭ್ರಮ ನಿರಸನಗೊಳಿಸಿವೆ ಎಂದು ಸ್ಪಷ್ಟವಾಗುತ್ತವೆ. ಕಮ್ಯೂನಿಸ್ಟರು ತಮಗಾದ ಪ್ರಚಂಡ ಪರಾಭವದಿಂದ ವಜ್ರಾಘಾತಕ್ಕೆ ಗುರಿಯಾಗಿದ್ದು, ಇದರ ಕಾರಣಗಳೇನು ಎಂಬುದನ್ನು ವಿಚಾರಿಸಲು ಅಜಯ ಘೋಷರೇ ಮುಂತಾದ ಕಮ್ಯೂನಿಸ್ಟ ಪ್ರಭೃತಿಗಳು ವಿಜಯವಾಡದಲ್ಲಿ ಇತರ ಕಾರ್ಯಕರ್ತರೊಡನೆ ವಿಚಾರ ವಿನಿಮಯ ನಡೆಸುವುದಕ್ಕೋಸ್ಕರ ಬಂದರು. ಅದಕ್ಕೆ ಮುಂಚೆಯೇ ಕಮ್ಯೂನಿಸ್ಟರು ಸಂಯುಕ್ತ ಕಾಂಗ್ರೆಸು ಪಕ್ಷವು ಮಧ್ಯಮ ವರ್ಗದವರಲ್ಲಿಯೂ ಬುದ್ಧಿ ಜೀವಿಗಳಲ್ಲಿಯೂ ಕಮ್ಯೂನಿಸ್ಟರ ಕುರಿತು ನಿರಾಧಾರ ಭಯವನ್ನು ತುಂಬಿಸಿದುದರಿಂದಲೇ ಸೋಲು ಸಂಭವಿಸಿತೆಂದು ಆರೋಪಿಸಿದ್ದರು; ಆದರೂ ತಮಗೆ ಒಟ್ಟು ಮತದಾನದ ನೂರಕ್ಕೆ ೩೧.೫ ಮತಗಳು ಬಿದ್ದಿವೆ ಎಂದವರು ಸಮಾಧಾನ ಪಟ್ಟುಕೊಂಡರು.

ಕಮ್ಯೂನಿಸ್ಟರಿಗೆ ಪೆಟ್ಟು

ಇದು ಹೆಮ್ಮೆ ಪಡಬಹುದಾದ ಸಮಾಧಾನವೇನೂ ಅಲ್ಲ—ಏಕೆಂದರೆ ಈ ಸಲ ಅವರು ೧೯೯ ಸ್ಥಳಗಳಿಗೆ ಸ್ಪರ್ಧಿಸಿದ್ದರು. ಕಳೆದ ಚುನಾವಣೆಯಲ್ಲಿ ೭೭ ಸ್ಥಾನಗಳಿಗೆ ಮಾತ್ರ ಹೋರಾಡಿದ್ದಾಗ ನೂರಕ್ಕೆ ೨೦ ಮತಗಳನ್ನು ಗಳಿಸಿದ್ದರು. ಆದುದರಿಂದ ಈ ಸಲ ಅವರಿಗೆ ದೊರೆತ ಮತಗಳು ಹಿಂದಿನ ಪ್ರಮಾಣದಿಂದ ತೀರ ಕಡಿಮೆಯಾಗುತ್ತವೆ. ಅದಲ್ಲದೆ ಪೂರ್ವ ಮತ್ತು ಪಶ್ಚಿಮ ಗೋದಾವರಿ, ಕೃಷ್ಣ, ಗುಂಟೂರು ಮತ್ತು ನೆಲ್ಲೂರುಗಳೆಂಬ ಜಿಲ್ಲೆಗಳನ್ನು ತಮ್ಮ ಭದ್ರ ಕೋಟೆಗಳೆಂದು ಕರೆಯುತ್ತಿದ್ದ ಕಮ್ಯೂನಿಸ್ಟರು ಇಲ್ಲಿ ಒಟ್ಟು ೧೮ ಲಕ್ಷ ಮತಗಳನ್ನು ಮಾತ್ರ ಪಡೆದರು; ಸಂಯುಕ್ತ ಕಾಂಗ್ರೆಸು ೨೫ ಲಕ್ಷ ಮತಗಳನ್ನು ಗಳಿಸಿತು. ಈ ಐದು ಜಿಲ್ಲೆಗಳಲ್ಲಿ ಸಹ ಪಶ್ಚಿಮ ಗೋದಾವರಿಯಲ್ಲಿ ಒಂದು ಸ್ಥಾನವೂ ಕಮ್ಯೂನಿಸ್ಟರಿಗೆ ಸಿಗಲಿಲ್ಲ—ಬಾಕಿ ನಾಲ್ಕು ಜಿಲ್ಲೆಗಳಲ್ಲಿ ಅವರಿಗೆ ೧೫ ಸ್ಥಾನಗಳು ದೊರಕಿದವೆಂಬುದು ನಿಜ. ಹಿಂದೆಯಾದರೆ ಅವರು ಈ ಜಿಲ್ಲೆಗಳಿಂದ ೩೧ ಸ್ಥಾನಗಳನ್ನು ಪಡೆದಿದ್ದರು. ಅಷ್ಟು ಮಾತ್ರವಲ್ಲ ರಾಯಲ ಸೀಮೆ ಮುಂತಾದಲ್ಲಿ ಸಹ ತಮ್ಮ ವರ್ಚಸ್ಸನ್ನು ಬೀರಿದ್ದರು—ಆದರೆ ಈ ಸಲ ಆಂಧ್ರದ ಏಳು ಜಿಲ್ಲೆಗಳಲ್ಲಿ ಅವರು ಸಂಪೂರ್ಣ ಸೋತರು. ಇದಕ್ಕೆ ತಮ್ಮ ಚುನಾವಣೆಯ ಘೋಷಣೆಯಲ್ಲಿ ಹಿಡುವಳಿಯ ಪರಮಾವಧಿ ಮಿತಿಯನ್ನು ೨೦ ಎಕ್ರೆಯಾಗಿ ನಿಶ್ಚಯಿಸಲಾಗುವುದೆಂದು ಹೇಳಿದುದೇ ಕಾರಣವಿರಬಹುದೆಂದೂ "ಶ್ರೀಮಂತ ರೈತರು" ಇದನ್ನು ಮೆಚ್ಚದೆ ತಮಗೆ ವಿರುದ್ಧ ಮತ ಕೊಟ್ಟರಬೇಕೆಂದೂ ಕಮ್ಯೂನಿಸ್ಟರ ಪರವಾಗಿ ವಿವರಣೆ ಕೊಡಲಾಗುತ್ತದೆ. ಹಾಗೆಂದು, ಸಂಯುಕ್ತ ಕಾಂಗ್ರೆಸಿನ ಅಭಿಪ್ರಾಯದಲ್ಲಿ, ಕಮ್ಯೂನಿಸ್ಟರು ಇಷ್ಟಾದರೂ ಮತಗಳನ್ನು ಪಡೆದಿರುವುದಕ್ಕೆ ಕೃಷಿಕರಿಗೆಲ್ಲ ಐದೈದು ಎಕ್ರೆ ಭೂಮಿಯನ್ನು ಹಂಚಿಕೊಡಲಾಗುವುದೆಂದು ಅವರು ತಮ್ಮ ಚುನಾವಣೆಯ ಘೋಷಣೆಯಲ್ಲಿ ಹೇಳಿರುವುದೇ ಕಾರಣ.

ಕಾಂಗ್ರೆಸಿನ ಶಕ್ತಿ ಹೆಚ್ಚಿತು

ಒಟ್ಟು ಮತದಾರರಲ್ಲಿ ೭೨.೫೫% ಜನರು ಮತದಾನ ಮಾಡಿದ್ದರು; ಅವರಲ್ಲಿ ಸಂಯುಕ್ತ ಕಾಂಗ್ರೆಸು ಪಕ್ಷಕ್ಕೆ ಮತವಿತ್ತವರು ೪೯.೮%; ಕಮ್ಯೂನಿಸ್ಟರಿಗೆ ೩೧.೫%; ಪ್ರಜಾ ಸಮಾಜವಾದಿಗಳಿಗೆ ೫.೧೫%, ಉಳಿದ ಮತ ಸ್ವತಂತ್ರರಿಗೆ ಸಿಕ್ಕಿತು. ಆದುದರಿಂದ ಸಂಯುಕ್ತ ಕಾಂಗ್ರೆಸು ಪಕ್ಷದ ಮೇಲೆ ಆಂಧ್ರ ಜನರಿಗೆ ವಿಶ್ವಾಸವಿದೆಯೆಂದು ವ್ಯಕ್ತವಾಯಿತು. ಕಾಂಗ್ರೆಸಿನ ಬಲ ಸಂವರ್ಧನೆಗೆ ಇಷ್ಟು ಬೆಂಬಲ ಸಾಲದು, ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಜನರ ಪ್ರೋತ್ಸಾಹ ಸಿಗಬೇಕು ಎಂಬುದರಲ್ಲಿ ಯಾರದೂ ಪ್ರತಿಮಾತಿಲ್ಲ. ಅಲ್ಲದೆ ಈ ಸಲ ಕಾಂಗ್ರೆಸು ಪಕ್ಷವು ಮಂತ್ರಿಮಂಡಳದಲ್ಲಿ ತನ್ನೊಡನೆ ಸಹಕರಿಸಿದ ಕೃಷಿಕರ ಲೋಕಪಕ್ಷವನ್ನೂ ಪ್ರಜಾಪಕ್ಷವನ್ನೂ ಕೂಡಿಕೊಂಡು ಸಂಯುಕ್ತ ರಂಗವನ್ನು ರಚಿಸಿದುದರಿಂದ ನಿಚ್ಚಳ ಬಹುಮತವನ್ನು ಪಡೆಯುವುದು ಸಾಧ್ಯವಾಯಿತೆಂಬುದೂ ಸುಳ್ಳಲ್ಲ. ಆದುದರಿಂದ ಕಾಂಗ್ರೆಸು ಪ್ರಜಾಸತ್ತಾತ್ಮಕ ಸಿದ್ಧಾಂತಕ್ಕೆ ಅನುಸಾರವಾಗಿ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಕಾರ್ಯಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳತಕ್ಕದ್ದು ಧರ್ಮ. ಮುಖ್ಯವಾಗಿ, ಕಾಂಗ್ರೆಸಿನ ಸಂಯುಕ್ತ ರಂಗದ ಚುನಾವಣೆಯ ಘೋಷಣೆಯಲ್ಲಿ ಸೂಚಿಸಲಾದ ಕೆಲವು ವ್ಯಾವಹಾರಿಕ ಸುಧಾರಣೆಯ ಕ್ರಮಗಳನ್ನು ಜನರಿಗೆ ತೃಪ್ತಿಕರವಾದ ರೀತಿಯಲ್ಲಿ ವಿಳಂಬವಿಲ್ಲದೆ ಜಾರಿಗೆ ತರುವುದು ಅಪೇಕ್ಷಣೀಯ. ಇದರಲ್ಲಿ ಕಾಂಗ್ರೆಸು ಯಶಸ್ಸುಗಳಿಸವಿರವೆಂದು ಹೇಳಬಹುದು—ಏಕೆಂದರೆ ಅದರೊಡನೆ ಕೃಷಿಕರ ಲೋಕಪಕ್ಷವು ಈಗ ಯಾವುದೇ ಶರ್ತಗಳಿಲ್ಲದೆ ಸೇರ್ಪಡೆಯೊಂದಲು ನಿರ್ಧರಿಸಿರುತ್ತದೆ; ಪ್ರಜಾಪಕ್ಷವು ಸಹ ಪ್ರತ್ಯೇಕವಾಗಿ ಉಳಿಯದೆ ಕಾಂಗ್ರೆಸಿನೊಡನೆ ಮಿಲನವಾಗುವ ದಿನ ಬಹಳ ದೂರವಿಲ್ಲೆಂದು ಹೇಳಲಾಗುತ್ತದೆ.

ಢೇಬರರ ಸಮಾಲೋಚನೆ

ಕೃಷಿಕರ ಲೋಕಪಕ್ಷವನ್ನು ಕಾಂಗ್ರೆಸಿನ ಧೋರಣೆಯಲ್ಲಿ ತುಸು ಮತಭೇದ ಉಂಟಾದುದರಿಂದ ಆಂಧ್ರದ ಪ್ರಮುಖ ರಾಜಕಾರಣಿಯಾದ ಶ್ರೀ ಎನ್. ಜಿ. ರಂಗರು ಕಟ್ಟಿದ್ದರು. ಈಗ ತಮಗೆ ಕಾಂಗ್ರೆಸಿನೊಡನೆ ಭಿನ್ನಾಭಿಪ್ರಾಯಗಳೇನೂ ಕಾರಣ ಉಳಿದಿಲ್ಲವೆಂದು ಹೇಳಿ, ಅವರು ಆಂಧ್ರದಲ್ಲಿಯಷ್ಟೇ ಅಲ್ಲ, ಅಖಿಲ ಭಾರತ ಸ್ವರೂಪದಲ್ಲಿ ಕಾಂಗ್ರೆಸಿನೊಡನೆ ತಮ್ಮ ಪಕ್ಷದ ಐಕ್ಯವನ್ನು ಸಾರಿದರು. ಇದರಿಂದ ಆಂಧ್ರದಲ್ಲಿ ಮಂತ್ರಿಮಂಡಳ ರಚನೆಯ ಕೆಲಸ ಸುಗಮವಾಗುವಂತಾಗಿದೆಯಲ್ಲದೆ, ಭದ್ರವಾದ ಸರಕಾರವೂ ಆಂಧ್ರದಲ್ಲಿ ನೆಲೆಯೂರುವಂತಾಗಿದೆ; ಅಷ್ಟೇ ಅಲ್ಲ, ಕಾಂಗ್ರೆಸಿನ ಶಕ್ತಿಯು ಹೆಚ್ಚಿಕೊಂಡಿದೆ. ಈಗ ಬಾಕಿ ಉಳಿದಿರುವುದು—ಮಂತ್ರಿ ಮಂಡಳದ ಧುರೀಣತ್ವವನ್ನು ಯಾರು ಹೊರಬೇಕು ಎಂಬ ಪ್ರಶ್ನೆ ಮಾತ್ರ. ಇದಕ್ಕಾಗಿ ಕಳೆದ ವಾರ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಢೇಬರರು ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಮಾಧವ ಮೆನನ್, ಇತರ ವರಿಷ್ಠರಾದ ಶ್ರೀನಿವಾಸ ಮಲ್ಯ, ಎಸ್. ಕೆ. ಪಾಟೀಲ ಮುಂತಾದವರೊಡನೆ ವಿಜಯವಾಡಕ್ಕೆ ಆಗಮಿಸಿ, ಇನ್ನೂರಕ್ಕೂ ಹೆಚ್ಚು ವ್ಯಕ್ತಿಗಳೊಡನೆ ಸಮಾಲೋಚನೆ ನಡೆಸಿದರು. ಕೃಷಿಕರ ಲೋಕ ಪಕ್ಷದ ವರಿಷ್ಠರಾಗಿದ್ದ ಶ್ರೀ ರಂಗರೊಡನೆಯೂ ಪ್ರಜಾಪಕ್ಷದ ನಾಯಕ ಶ್ರೀ ವಿಶ್ವನಾಥಮರೊಡನೆಯೂ ಅವರು ವಿಚಾರವಿನಿಮಯಗೈದರು.

ಧುರೀಣರು ಯಾರು?

ಇದರ ಪರಿಣಾಮವಾಗಿ ಆಂಧ್ರ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾಗಿರುವ (ಮತ್ತು ಹಿಂದೆ ಮದ್ರಾಸಿನಲ್ಲಿ ಮಂತ್ರಿಗಳಾಗಿದ್ದ) ಶ್ರೀ ಬಿ. ಗೋಪಾಲ ರೆಡ್ಡಿಯವರನ್ನು ಸಂಯುಕ್ತ ಕಾಂಗ್ರೆಸು ಪಕ್ಷವು ಶಾಸನ ಸಭೆಯಲ್ಲಿ ತನ್ನ ಧುರೀಣರಾಗಿ ಆರಿಸುವುದು ವಿಹಿತವೆಂದು ಕಾಂಗ್ರೆಸಾಧ್ಯಕ್ಷರಿಂದ ಸಲಹೆ ದೊರೆಯಿತು. ಇದು ಕೊನೆಯ ನಿರ್ಣಯವೆಂದು ಹೇಳಲಿಕ್ಕಾಗದು—ಏಕೆಂದರೆ ತಾನು ಸರ್ವಾಧಿಕಾರಿಯಂತೆ ವರ್ತಿಸುವುದಿಲ್ಲ; ಆರಿಸಿ ಬಂದಿರುವ ಸದಸ್ಯರಿಗೆ ಸಲಹೆಯನ್ನು ಮಾತ್ರ ಕೊಡುತ್ತಿದ್ದೇನೆ ಎಂದು ಢೇಬರರು ಹೇಳಿದ್ದಾರೆ. ಸದಸ್ಯರಲ್ಲಿ ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಟಿ. ಪ್ರಕಾಶಮರನ್ನು ಪುನಃ ಮುಖ್ಯ ಮಂತ್ರಿಯಾಗಿ

ನೋಟೀಸು

ಪೆರ್ಡೂರು ಮುಕ್ತೇಸರ್ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಬಾಬ್ತು ತೊಳ್ಳಲು ಅಕ್ಕಿ ಮತ್ತು ಬತ್ತ ಕೂಡಾ ಮುಡಿ ನೂರರಷ್ಟು ಮೇಲ್ಪಟ್ಟು ಖರೀದಿಗೆ ಕೊಡುವುದಿದೆ. ಆ ಬಗ್ಗೆ ಇದೇ ತಾರೀಕು 25-3-1955 ನೇ ಶುಕ್ರವಾರ ಸಾಯಂಕಾಲ ಗಂಟೆ ೪ ಕ್ಕೆ ಭಂಡಾರದ ಶರ್ತಕ್ಕೆ ಒಳಪಟ್ಟು ದೇವಸ್ಥಾನದ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಪೇಕ್ಷೆಯುಳ್ಳವರು ಬಂದು ಏಲಮಿನಲ್ಲಿ ಭಾಗವಹಿಸಬಹುದು.

Sri Anantha Padmanabha Temple, Perdur

K. B. Shetty
Executive Officer.

ಪೆರ್ಡೂರು ತಾ. 11—3—55.

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR

THE POPULAR INSURANCE CO., LTD.

"POPULAR BUILDINGS" MANGALORE-1

ಮಾಡಬೇಕೆಂದು ಕೆಲವರೂ ಉಪ ಮುಖ್ಯಮಂತ್ರಿಯಾಗಿದ್ದ ಶ್ರೀ ಎನ್. ಸಂಜೀವ ರೆಡ್ಡಿಗಳು ಈಗ ಮುಖ್ಯ ಮಂತ್ರಿಯಾಗಬೇಕೆಂದು ಬೇರೆ ಕೆಲವರೂ ಅಭಿಪ್ರಾಯ ಪಡುವರೆಂದು ವರದಿಗಳಿಂದ ತಿಳಿಯುತ್ತದೆ. ಆದರೆ ಕಾಂಗ್ರೆಸಾಧ್ಯಕ್ಷರ ಸೂಚನೆಯಂತೆಯೇ ಧುರೀಣರ ಆಯ್ಕೆ ನಡೆಯುವ ಸಂಭವ ಹೆಚ್ಚೆಂದು ಕಾಣುತ್ತದೆ. ಇದೇ ೨೦ನೇ ತಾರೀಕಿನೊಳಗೆ ಈ ಕೆಲಸ ಮುಗಿಯಬಹುದೆಂದೂ ಧುರೀಣನಾರೆಂದು ನಿರ್ಧರವಾದ ಬೆನ್ನಿಗೆ ಗವರ್ನರರು ಆತನನ್ನು ಕರೆದು ಮಂತ್ರಿ ಮಂಡಳ ರಚಿಸಲು ಕೇಳಿ ಕೊಳ್ಳುವರೆಂದೂ ಹೊಸ ಮಂತ್ರಿ ಮಂಡಳವು ತೆಲುಗು ಹೊಸ ವರ್ಷದಂದು, ಅಂದರೆ ಮಾರ್ಚ್ ೨೪ನೇ ತಾರೀಕಿಗೆ, ಅಧಿಕಾರ ಗ್ರಹಣ ಮಾಡಬಹುದೆಂದೂ ತಿಳಿದು ಬರುತ್ತದೆ.

ಹೊಸ ಮಂತ್ರಿ ಮಂಡಳ

ಎಲ್ಲವೂ ಸುಸೂತ್ರವಾಗಿ ಮೇಲಿನಂತೆ ನಡೆದರೆ, ಆಂಧ್ರದ ಹೊಸ ಮಂತ್ರಿ ಮಂಡಳದಲ್ಲಿ ಶ್ರೀ ಸಂಜೀವ ರೆಡ್ಡಿಯವರಲ್ಲದೆ, ಮದ್ರಾಸಿನಲ್ಲಿ ಹಿಂದೆ ಮಂತ್ರಿಗಳಾಗಿದ್ದ ಶ್ರೀ ಕೆ. ಚಂದ್ರಮೌಳಿ ಮತ್ತು ಶ್ರೀ ಕಲಾ ವೆಂಕಟರಾಯರು ಇರಬಹುದೆಂದೂ ಶ್ರೀ. ಜಿ. ಲಚ್ಚಣ್ಣನವರನ್ನೂ ಸೇರಿಸಿಕೊಳ್ಳಬಹುದೆಂದೂ ಅಂದಾಜು. ಇವರಲ್ಲದೆ ಅಲ್ಪಸಂಖ್ಯಾಕರಾದ ಮುಸ್ಲಿಮರ ಮತ್ತು ಹರಿಜನರ ಪ್ರತಿನಿಧಿಯಾಗಿ ಮಂತ್ರಿಮಂಡಳದಲ್ಲಿ ಇಬ್ಬರು ಸೇರಿಸಲ್ಪಡಬಹುದು. ಈ ಸಲ ಮಂತ್ರಿಮಂಡಳವನ್ನು ವಿಸ್ತರಿಸಿ ೧೨ ಮಂತ್ರಿಗಳನ್ನೂ ೬ ಅಥವಾ ೮ ಉಪಮಂತ್ರಿಗಳನ್ನೂ ಸೇರಿಸಲಾಗುವುದೆಂಬ ಸುದ್ದಿಯೂ ಉಂಟು. ಇದಕ್ಕೆ ಕಾಂಗ್ರೆಸು ವರಿಷ್ಠರು ಒಪ್ಪುತ್ತಾರೋ ಏನೆಂದು ಗೊತ್ತಿಲ್ಲ. ಹೊಸ ದಹಲಿಗೆ ಆಂಧ್ರ ಕಾಂಗ್ರೆಸಿನ ನಾಯಕರೆಲ್ಲರೂ ಹಾರಿದ್ದು, ಅಲ್ಲಿ ಮಂತ್ರಿ ಮಂಡಳದ ರಚನೆಯ ಪ್ರಶ್ನೆ ಇಷ್ಟರಲ್ಲೇ ಇತ್ಯರ್ಥವಾಗುತ್ತದೆ. ಪ್ರದೇಶ ಕಾಂಗ್ರೆಸಿಗೆ ಹೊಸ ಅಧ್ಯಕ್ಷನಾಗಿ ಯಾರನ್ನು ಆರಿಸಬೇಕೆಂಬ ವಿಷಯವೂ ಅಲ್ಲಿ ತೀರ್ಮಾನವಾದೀತು — ಈಗಿನ ಸುದ್ದಿಯಂತೆ ಶ್ರೀ ರಂಗರು ತೋರಿಸಿದ ಔದಾರ್ಯಕ್ಕೆ ಕೃತಜ್ಞತೆಯ ರೂಪದಲ್ಲಿ ಆಂಧ್ರ ಕಾಂಗ್ರೆಸಿನ ವರಿಷ್ಠ ಸ್ಥಾನ ಅವರ ಕೈಗೆ ಒಪ್ಪಿಸಿ ಕೊಡಲ್ಪಡಬಹುದು. ೮೭ ವರ್ಷದ ವೃದ್ಧ "ಆಂಧ್ರ ಕೇಸರಿ" ಪ್ರಕಾಶಮ್‌ರಿಗೆ ಈ ಸಲ ತೀರ ಹೊಸತಾದ ಹುದ್ದೆಯನ್ನು ಶ್ರೀ ಢೇಬರರು ಕೊಡಮಾಡಿದರು — ದೈನಂದಿನ ಆಡಳಿತದ ಹೊರೆಗೆ ಹೆಗಲು ಕೊಡುವಂತೆ ಈ ಮುದುಕನನ್ನು ಒತ್ತಾಯಿಸಬಾರದು; ಆದರೆ ಅವರ ಪರಿಪಕ್ವ ಅನುಭವದ ಲಾಭ ಆಂಧ್ರದ ಜನತೆಗೆ ಸರಕಾರಕ್ಕೆ, ಮತ್ತು ಕಾಂಗ್ರೆಸಿಗೆ ಸಿಗುತ್ತಿರಬೇಕು ಎಂಬ ಉದ್ದೇಶದಿಂದ ಅವರನ್ನು ಆಂಧ್ರ ಪಾರ್ಲಿಮೆಂಟರಿ ಬೋರ್ಡಿಗೆ ಅಧ್ಯಕ್ಷರಾಗಿ ಮಾಡಲಾಗುತ್ತದೆ. ಇದರಲ್ಲಿ ಮುಖ್ಯ ಮಂತ್ರಿ ಮತ್ತು ಉಪಮುಖ್ಯ ಮಂತ್ರಿಗಳು ಸರಕಾರದ ಪರವಾಗಿಯೂ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ಕಾಂಗ್ರೆಸಿನ ಪರವಾಗಿಯೂ ಇದ್ದು, ಸರಕಾರದ ಧೋರಣೆಯು ಕಾಂಗ್ರೆಸಿನ ತತ್ವಕ್ಕೆ ಹೊಂದಿಕೊಳ್ಳುವ ಉಪಾಯವನ್ನು ಈ ಮಂಡಳ ಗೊತ್ತು ಹಚ್ಚುತ್ತದೆ.

ನೆಹರುಗಳ ಉಪದೇಶ

ಏನಾಗುವುದೋ ಏನೋ-ಎಂದೆಲ್ಲರನ್ನೂ ಕಳವಳಕ್ಕೆ ಗುರಿಮಾಡಿದ್ದ ಆಂಧ್ರದ ಪ್ರಕರಣವು ತುಂಬ ತೃಪ್ತಿಕರವಾದ ರೀತಿಯಲ್ಲಿ ಮುಕ್ತಾಯವಾಗಿಸುವುದಕ್ಕೆ ಶ್ರೀ ಜವಾಹರಲಾಲ ನೆಹರುಗಳಾದಿಯಾಗಿ ಎಲ್ಲ ವರಿಷ್ಠರೂ ಸಮಾಧಾನ ಪಟ್ಟರು. ನೆಹರುಗಳು ತಾವು ಕಾಂಗ್ರೆಸಿನ ಅಧ್ಯಕ್ಷರಾಗಿಲ್ಲದಿದ್ದರೂ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರುಗಳಿಗೆ ಪತ್ರಮುಖೇನ ಮಾರ್ಗದರ್ಶನ ಮಾಡುವಸಂಪ್ರದಾಯವನ್ನು ಬಿಟ್ಟುಗೊಡದೆ ಹೋಳಿಯ ಸಂದರ್ಭದಲ್ಲಿ ಕಳುಹಿಸಿದ ಸಂದೇಶವು ಆಂಧ್ರದ ಬಗ್ಗೆ ಅವರಲ್ಲಿ ಮೂಡಿರುವ ಸಮಾಧಾನದ ಭಾವನೆಗಳನ್ನು ವ್ಯಕ್ತ ಪಡಿಸುತ್ತದೆ—"ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಹತ್ವದ ಪರಿಣಾಮಗಳನ್ನು ಆಂಧ್ರದ ಚುನಾವಣೆಯು ವ್ಯಕ್ತಪಡಿಸುತ್ತವೆ. ಅಲ್ಲಿ ಕಾಂಗ್ರೆಸು ಬಲಹೀನವಾಗಿ ಚೆನ್ನಾಗಿ ಕೆಲಸ ಮಾಡುತ್ತಿರಲಿಲ್ಲ. ಆದರೆ ಜನರಿಗೆ ಕಾಂಗ್ರೆಸಿನ ಮೇಲೆ ಪ್ರೀತಿ ಮಾಯವಾಗದೆ' ಅವರು ಕಾಂಗ್ರೆಸನ್ನು ಬೆಂಬಲಿಸಿದರು. ಈ ಪ್ರೀತಿ ಭಾವನೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಆಂಧ್ರದಲ್ಲಿ ಅಧಿಕಾರಕ್ಕೆ ಬರುವ ಮಂತ್ರಿ ಮಂಡಳದ ಮತ್ತು ಆಂಧ್ರ ಪ್ರದೇಶ ಕಾಂಗ್ರೆಸಿನ ಕಾರ್ಯಕರ್ತರ ಕರ್ತವ್ಯ" ಎಂದು ನೆಹರು ಹೇಳಿದರು. ಆಂಧ್ರದ ಚುನಾವಣೆಯನ್ನು ತೀರ ನಿಷ್ಪಕ್ಷಪಾತವಾದ ರೀತಿಯಲ್ಲಿ ಗವರ್ನರರಾದ ಶ್ರೀ ತ್ರಿವೇದಿಯವರು ನಡೆಸಿದ್ದರೆಂಬುದನ್ನು ಸಂಸತ್ತಿನಲ್ಲಿ ೫೭ ಲಕ್ಷ ರೂಪಾಯಿಗಳ ಕೊರತೆಯ ಮುಂಗಡ ಪತ್ರದ ಚರ್ಚೆ ನಡೆದಾಗ ಪ್ರತಿಪಕ್ಷದ ಸದಸ್ಯರು ಸಹ ಒಪ್ಪಿಕೊಂಡರು. ಗೃಹ ಮಂತ್ರಿಗಳಾದ ಪಂಡಿತ ಪಂತರು ಇದರಿಂದ ಹರ್ಷಪಟ್ಟುಕೊಂಡು, ಗವರ್ನರರ ನ್ಯಾಯಮನವಾರೆ ಶ್ಲಾಘಿಸಿದರು. ಈ ಮುಂಗಡ ಪತ್ರ ತಾತ್ಕಾಲಿಕ ಸ್ವರೂಪದ್ದಿದ್ದು ಹೊಸ ಮಂತ್ರಿ ಮಂಡಳವು ಅವಶ್ಯವಿದ್ದ ಮುಂದಿನ ಕ್ರಮಗಳನ್ನು ತೆಗೆದು ಕೊಳ್ಳುತ್ತದೆ.

ನೆಹರುಗಳನ್ನು ತಿವಿಯುವ ಪ್ರಯತ್ನ

ಆದರೆ ಅವರು ಪಾರಾದರು

ಕಳೆದ ವಾರದ ವಿಶೇಷ ವರ್ತಮಾನಗಳಲ್ಲಿ ಭಾರತೀಯರೆಲ್ಲರ ರೋಮನಿಗುರಿಸುವ ಸುದ್ದಿಯೊಂದು ನಾಗಪುರದಿಂದ ಬಂತು — ಭಾರತದ ಕಣ್ಮಣಿ ಮತ್ತು ಜನನಾಯಕ ಶ್ರೀ ಜವಾಹರಲಾಲ ನೆಹರುಗಳು ಭಾರತ ಸೇವಕ ಸಮಾಜದ ಪರಿಷತ್ತಿನಲ್ಲಿ ಭಾಗ ವಹಿಸುವುದಕ್ಕೆಂದು ೧೨ನೇ ತಾರೀಕಿನಂದು ಪೂರ್ವಾಹ್ನ ಹೊಸ ದೆಹಲಿಯಿಂದ ನಾಗಪುರದ ಸೋನೆಗಾಂವ್ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಅಲ್ಲಿಂದ ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳ ಮನೆಗೆ ತೆರೆದ ಕಾರಿನಲ್ಲಿ ಹೊರಟಿದ್ದರು. ಅವರು ಕಾರಿನಲ್ಲಿ ನಿಂತಿದ್ದರು. ರಸ್ತೆಯ ತಿರುಗೊಂದರಲ್ಲಿ ಕಾರಿನ ಮುಂದೆ ರಿಕ್ಷಾಗಾಡಿಯೊಂದು ಬಂದು ನಿಂತಿತು. ಅದನ್ನು ಎಳೆಯುತ್ತಿದ್ದವನು ಕಾರಿನ ಫೂಟ್ ಗಾರ್ಡಿನ ಮೇಲೆ ಹಾರಲು ಉದ್ಯುಕ್ತನಾದನು-ಅವನು ಕೈಯಲ್ಲಿ ಚೂರಿಯೊಂದನ್ನು ಹಿಡಿದು ನೆಗೆದಿದ್ದನು. ಅಷ್ಟರಲ್ಲಿಯೇ ಅವನನ್ನು ತಡೆದು, ಬಂಧಿಸಲಾಯಿತು.

ತಲೆತಿರುಕನ ಕೆಲಸ

ನೆಹರುಗಳು 'ಈ ಘಟನೆಗೆ ಅಷ್ಟೇನೂ ಮಹತ್ವಕೊಡಬಾರದು — ಅದು ತಲೆ ಹುಚ್ಚನೊಬ್ಬನ ವೈಯಕ್ತಿಕ ಕೆಲಸ' ಎಂದುಹೇಳಿದರು. ಚೂರಿ ಹಿಡಿದು ನೆಗೆದಾತನ ಹೆಸರು ಬಾಬುರಾವ್. ಅವನ ಪ್ರಾಯ ೨೬ ವರ್ಷ. ಪ್ರಧಾನ ಮಂತ್ರಿಗಳೊಡನೆ ತನ್ನ ಕಷ್ಟಗಳನ್ನು ಹೇಳಲು ಬಂದೆನೆಂದೂ ಕೈಯಲ್ಲಿ ಬಿಚ್ಚಿದ ಚೂರಿ ಇದ್ದದ್ದು ಕೇವಲ ಆಕಸ್ಮಿಕವೆಂದೂ ಅವನು ಪೋಲೀಸರಿಗೆ ಹೇಳಿದನು. ಅವನು ಮುಂಬಯಿ ರಾಜ್ಯದ ಸೂರತ್ ಜಿಲ್ಲೆಯಲ್ಲಿಯೂ ಇತರ ಅನೇಕ ಸ್ಥಳಗಳಲ್ಲಿಯೂ ತಿರುಗಿದ್ದನೆಂದು ತಿಳಿದು ಬರುತ್ತದೆ. ಪೋಲೀಸರು ಅವನ ಸಂಪೂರ್ಣ ವಿವರಗಳಿಗಾಗಿ ತನಿಖೆ ನಡೆಸುತ್ತಿದ್ದು, ಯಾವುದಾದರೂ ರಾಜಕೀಯ ಗುಂಪಿಗೆ ಅವನು ಸೇರಿರುವನೋ ಎಂಬುದನ್ನು ಸಹ ಅವರು ಗೊತ್ತುಹಚ್ಚಬಹುದು. ಪ್ರಕೃತ ಅವನನ್ನು ರಿಮಾಂಡಿನ ಮೇಲೆ ಮೆಜಿಸ್ಟ್ರೇಟರು ಬಿಟ್ಟರು. ಅದೇನೇ ಆಗಲಿ — ಪ್ರಧಾನಿ ನೆಹರುಗಳು ಗಂಡಾಂತರದಿಂದ ಪಾರಾದುದಕ್ಕೆ ದೇಶದಾದ್ಯಂತ ದೇವರ ಆಭಾರ ಸೂಚಿಸಲಾಯಿತು; ವಿದೇಶಗಳಲ್ಲೂ ಸಂತೋಷ ವ್ಯಕ್ತವಾಯಿತು.

ಅಮೃತಾಂಜನ
ಎಲ್ಲಾತರದ ಸಿದಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್

ನಿಮ್ಮ ಸೇವೆಗಾಗಿ—

ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳು ಎಷ್ಟೇ ಮಹತ್ವದ್ದಿರಲಿ, ಎಷ್ಟೇ ಕಠಿಣವಿರಲಿ, ನಾವು ನಿಮಗೆ ನಿರ್ದಿಷ್ಟ, ಸಮರ್ಥ ಸೇವೆಯನ್ನು ಸಲ್ಲಿಸಲು ಯಾವಾಗಲೂ ಸಿದ್ಧರಿರುವೆವು.

ನಮ್ಮ ಹಲವಾರು ವರ್ಷಗಳ ಅನುಭವವು ಮತ್ತು ಎಲ್ಲಾ ತರದ ವ್ಯವಹಾರ ಸೌಕರ್ಯಗಳು ನಿಮಗೆ ದೊರಕಲಾಗಿವೆ.

ನಮ್ಮ ಯಾವದೇ ಶಾಖೆಯಲ್ಲಿ ವಿಚಾರಿಸಿರಿ.

ಕೆನರಾ ಬ್ಯಾಂಕ್, ಲಿಮಿಟೆಡ್.

CANARA BANK, LTD.

ESTD: 1906.

ಪ್ರಧಾನ ಕಚೇರಿ—	ಆಡಳಿತೆ ಕಚೇರಿ—	ಜನರಲ್ ಮೆನೇಜರರ ಕಚೇರಿ ಮತ್ತು ಸಿವೇರಿ ಇಲಾಖೆ—
ಮಂಗಳೂರು.	ಬೆಂಗಳೂರು.	ಬೊಂಬಾಯಿ.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

೩ನೇ ಆವೃತ್ತಿ. ಸಿದ್ಧವಾಗಿದೆ! ಬೆಲೆ: ೨-೮-೦ ಬೇಗ ತರಿಸಿರಿ.
ಶ್ರೀ. ಎನ್. ಕೆ. ಕುಲಕರ್ಣಿಕೃತ
ಕನ್ನಡ ಸಾಹಿತ್ಯವಾಹಿನಿ
M. A., B. A., ವಿದ್ಯಾರ್ಥಿಗಳಿಗೂ ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಇದು Reference ಗ್ರಂಥವಾಗಿದೆ! ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಜಾಣ ಪರೀಕ್ಷೆಗೆ Text Book ವನ್ನಾಗಿ ಮಾಡಿದ್ದಾರೆ!
ಒಂದೇ ಪ್ರತಿ ಬೇಕಾದವರು 3—8—0 M. O. ಕಳಿಸಿ.
ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್ನು.
ಪ್ಯಾಟಿ ಶ್ಯಾಮರಾಯರು
ಸಂಪಾದಕರು: ವಿಜಯ ಗ್ರಂಥಮಾಲೆ, ಬೆಳಗಾಂವಿ.
ಒಡೆಯರು: ಕಥಾಕುಂಜ ಗ್ರಂಥ ಭಂಡಾರ, ಬೆಳಗಾಂವಿ.

NAVAYUGA

Popular Kannada Weekly

Founder:—

Sri **A. B. SHETTY,** *M.L.A.,*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೭-೩-'೫೫	೨೮

ಭಾರತ ಸೇವಕ ಸಮಾಜ

ನಾಗಪುರದಲ್ಲಿ ಮೂರು ದಿನಗಳ ವರೆಗೆ ಜರಗಿದ ಭಾರತ ಸೇವಕ ಸಮಾಜದ ಪರಿಷತ್ತು ಬಹಳ ಮಹತ್ವದ ಮತ್ತು ರಾಷ್ಟ್ರದ ಪುನಾರಚನೆಯ ಮೇಲೆ ಉತ್ತಮವಾದ ಪರಿಣಾಮವನ್ನು ಮಾಡಬಲ್ಲ ಕೆಲವು ಗೊತ್ತುವಳಿಗಳನ್ನು ಸ್ವೀಕರಿಸಿರುವುದು ಅಭಿನಂದನೀಯ. ಕೇವಲ ಗೊತ್ತುವಳಿಗಳ ಸ್ವೀಕಾರದಿಂದಲೇ ತೃಪ್ತಿ ದೊರಕುವುದಿಲ್ಲ; ಅವುಗಳು ಕಾರ್ಯಾನ್ವಿತಗೊಳ್ಳುವ ಬಗೆಯೇ ಸಮಾಧಾನಪಡಬಹುದೋ ಏನೆಂಬುದನ್ನು ಹೇಳುತ್ತದೆ, ಎಂಬ ಮಾತು ನಿಜ. ಆದರೆ ಗೊತ್ತುವಳಿಗಳು ಪ್ರಗತಿ ಮತ್ತು ಉತ್ಕರ್ಷದ ಹಂಬಲವಿಟ್ಟುಕೊಂಡವರು ಯಾವ ಕಾರ್ಯಕ್ರಮಗಳನ್ನು ಸ್ವೀಕರಿಸಬೇಕು, ಹೇಗೆ ಮುನ್ನಡೆಯಬೇಕು ಎಂಬಿತ್ಯಾದಿ ವಿಷಯಗಳಲ್ಲಿ ಸಲಹೆಗಳನ್ನು ಕೊಡುತ್ತವೆ, ಎಂಬ ವಿಷಯವನ್ನು ಮರೆಯಬಾರದು. ಒಂದು ದೃಷ್ಟಿಯಿಂದ ನಮ್ಮ ಗೊತ್ತುವಳಿಗಳು ನಮ್ಮ ಪ್ರತಿಜ್ಞೆಗಳೆಂದರೂ ಸಲ್ಲುತ್ತದೆ. ಆದುದರಿಂದ, ಗೊತ್ತುವಳಿಗಳು ಸಾಧುವಾಗಿದ್ದರೆ ಅವುಗಳನ್ನು ಸ್ವಾಗತಿಸಿ, ಅನುಷ್ಠಾನದಲ್ಲಿ ಅವು ಬರುವಂತೆ ಪ್ರೋತ್ಸಾಹಿಸುವುದು ಅಪೇಕ್ಷಣೀಯ. ಭಾರತ ಸೇವಕ ಸಮಾಜವು ಎಲ್ಲರೂ ತಿಳಿದಿರುವಂತೆ ರಾಷ್ಟ್ರದ ಅಭಿವೃದ್ಧಿ ಪ್ರಯತ್ನಗಳಲ್ಲಿ ಜನರ ಸಂಪೂರ್ಣ ಸಹಕಾರವನ್ನು ಪಡೆಯಲು ಉದ್ದೇಶಿಸಿರುವ ಸಂಸ್ಥೆಯಾಗಿದೆ. ತನ್ನ ಎರಡು ವರ್ಷಗಳ ಆಯುಷ್ಯಕಾಲದಲ್ಲಿ ಅದು ರಚನಾತ್ಮಕ ಕ್ಷೇತ್ರದಲ್ಲಿ ಅನೇಕ ಕೆಲಸಗಳನ್ನು ಸಾಧಿಸಿದ್ದರೂ ಆ ಬಗ್ಗೆ ಆಗಬೇಕಾಗಿದ್ದಷ್ಟು ಪ್ರಚಾರ ನಡೆಯಲಿಲ್ಲ. ಸ್ವಯಂಪ್ರೇರಿತ ವಿಧಾಯಕ ಕಾರ್ಯಗಳಲ್ಲಿ ಜನರು ಮಗ್ನರಾಗುವಂತೆ ಅವರಿಗೆ ಯೋಗ್ಯ ತರಬೇತಿಯನ್ನು ಸಂಸ್ಥೆಯು ಯುವಕರ, ಮಹಿಳೆಯರ, ವಿದ್ಯಾರ್ಥಿಗಳ ಶಿಬಿರಗಳ ಮೂಲಕ ಕೊಡುತ್ತದೆ. ಇಲ್ಲಿ ತರಬೇತಿಯನ್ನು ಪಡೆದವರು ಗ್ರಾಮಾಂತರ ಪ್ರದೇಶದಲ್ಲಿ ಸಂಚರಿಸಿ, ಸ್ಥಳೀಯ ಅಭಿವೃದ್ಧಿ ಯೋಜನೆಗಳಲ್ಲಿ ನೆರವಾಗುತ್ತಾರೆ; ಅನಾರೋಗ್ಯಕರವಾದ ಸ್ಥಳಗಳನ್ನು ಶುಚಿಮಾಡುವುದು, ಹಳ್ಳಿಗಳ ನಡುವೆ ಮಾರ್ಗಗಳನ್ನು ನಿರ್ಮಿಸುವುದು, ವಸತಿಗೆ ಅನುಕೂಲತೆ ಕಲ್ಪಿಸುವುದು, ಭಾವಿ ತೋಡಿ ನೀರನ್ನೊದಗಿಸುವುದು, ಇತ್ಯಾದಿ ಕೆಲಸಗಳಲ್ಲಿ ಭಾರತ ಸೇವಕ ಸಮಾಜದ ಸದಸ್ಯರ ಸಮಯ ಹೋಗುತ್ತದೆ. ದಿನಕ್ಕೆ ನಾಲ್ಕು ತಾಸುಗಳಾದರೂ ಶಾರೀರಿಕ ಶ್ರಮವನ್ನು ಮಾಡುವುದಕ್ಕೆ ಸಂಘಟಕರಿಂದ ಸದಸ್ಯರಿಗೆ ಉತ್ತೇಜನ ದೊರೆಯುತ್ತದೆ. ಹಳ್ಳಿಯ ಜನರೊಡನೆ ಸಂಪರ್ಕ ಸಾಧಿಸಲು ಒಂದೆರಡು ತಾಸುಗಳನ್ನೂ ಅಭ್ಯಾಸ, ವಿಚಾರ ವಿನಿಮಯಗಳಿಗಾಗಿ ಎರಡು ಮೂರು ತಾಸುಗಳನ್ನೂ ಈ ಶಿಬಿರಗಳಲ್ಲಿ ವ್ಯಯಿಸಲಾಗುತ್ತದೆ. ಶಾರೀರಿಕ ಶ್ರಮವು ಹೇಯವೆಂಬ ಭಾವನೆಯನ್ನು ದೂರಗೊಳಿಸುವುದು ಮತ್ತು ಶರೀರ ಶ್ರಮ ಮಾಡುವ ಜನರನ್ನು ಗೌರವಿಸುವುದು ಭಾರತ ಸೇವಕ ಸಮಾಜದ ಉದ್ದೇಶಗಳಲ್ಲಿ ಒಂದಾಗಿದ್ದು, ಮೊನ್ನೆಯ ಪರಿಷತ್ತಿನಲ್ಲಿ ಈ ಬಗ್ಗೆ ಘಟನೆಯಲ್ಲಿ ಸೂಕ್ತ ತಿದ್ದುಪಡಿಯನ್ನು ಮಾಡಲಾಯಿತು. ಉತ್ತರ ಭಾರತದಲ್ಲಿ ಈ ಸಂಸ್ಥೆಯ ಚಟುವಟಿಕೆಗಳು ಹೆಚ್ಚಾಗಿ ಕಂಡುಬರುತ್ತವೆ. ಬಿಹಾರಿನ ನೆರೆಯ ಸಮಯಕ್ಕೆ ಭಾರತ ಸೇವಕ ಸಮಾಜದ ಕಾರ್ಯಕರ್ತರು ಪೀಡಿತ ಬಾಂಧವರಿಗೆ ಬಹಳವಾಗಿ ನೆರವಾದರು. ಈಗ ಕೋಸಿ ನದಿಗೆ ದಂಡೆಯನ್ನು ಏರಿಸಿ ನೆರೆಯಿಂದ ಬಿಹಾರನ್ನು ರಕ್ಷಿಸುವ ಕಲ್ಯಾಣ ಕಾರ್ಯದಲ್ಲಿ ಸಾವಿರಾರು ಕಾರ್ಯಕರ್ತರಿಂದ ಸ್ಪೃಹಣೀಯ ಸೇವೆ ಸಲ್ಲುತ್ತಿದೆ. ಜನರು ಹೆಚ್ಚು ಹೆಚ್ಚಾದ ಸಂಖ್ಯೆಯಲ್ಲಿ ಈ ಸಂಸ್ಥೆಯ ಸದಸ್ಯರಾಗಿ ಸೇರಿಕೊಂಡು ತಮ್ಮ ಅಭಿವೃದ್ಧಿಯನ್ನು ಶೀಘ್ರವಾಗಿ ಸಾಧಿಸಿಕೊಳ್ಳಲಾಗುವಂತೆ ಸರಕಾರದ ಅಧಿಕಾರಿ ವರ್ಗಗಳಿಂದ ಯೋಗ್ಯ ಪ್ರೋತ್ಸಾಹ ಮತ್ತು ಸಹಕಾರ ಸಿಗುತ್ತಿರಬೇಕೆಂದು ಪರಿಷತ್ತು ಹೇಳಿದ್ದು ಇದರಿಂದ ಹಳ್ಳಿಗರ ಉತ್ಸಾಹವನ್ನು ಕುತ್ಸಿತ ದೃಷ್ಟಿಯಿಂದ ಕಾಣಬಾರದೆಂಬ ವಿವೇಕ ಸರಕಾರದವರಲ್ಲಿ ಮೂಡುವುದೆಂದು ಆಶಿಸುತ್ತೇವೆ. ಜನರು ಯೋಜನಾಬದ್ಧ ರೀತಿಯಲ್ಲಿ ಕೆಲಸ ಮಾಡಲು ತಿಳಿದವರಾಗಿರಲಿಕ್ಕಿಲ್ಲ— ಆದರೆ ಅವರ ಶಕ್ತಿ ಸಾಮರ್ಥ್ಯಗಳ ಮತ್ತು ಉಕ್ಕೇರುವ ಉತ್ಸಾಹದ ಪ್ರಯೋಜನವನ್ನು ಪಡೆಯದಿರುವುದಕ್ಕೆ ಕಾರಣವೇನೂ ಕಾಣುವುದಿಲ್ಲ. ಅಧಿಕಾರಿಗಳಲ್ಲಿ ಸಹನೆ ಮತ್ತು ಸೌಜನ್ಯವಿದ್ದರೆ ಹಳ್ಳಿಗರ ವಿಶ್ವಾಸವನ್ನು ಅವರು ಸುಲಭದಲ್ಲಿ ಪಡೆಯಬಲ್ಲರು. ಭಾರತ ಸೇವಕ ಸಮಾಜವು ಶರೀರ ಶ್ರಮ ಮಾಡಬಲ್ಲ ಉತ್ಸಾಹಿಗಳ ತಂಡವಾಗಿಯೇ ಉಳಿಯಬೇಕೆಂದೇನಿಲ್ಲ- ಯಾವ ಯೋಜನೆಗಾದರೂ ಕೆಲವು ತಂತ್ರಕುಶಲರ ಆವಶ್ಯಕತೆ ಕಾಣಿಸುತ್ತದೆ. ನಿವೃತ್ತ ಇಂಜನಿಯರುಗಳು, ಹಳ್ಳಿಯ ಮೇಸ್ತ್ರಿಗಳು—ಇವರೆಲ್ಲ ಜನರಿಗೆ ತಾಂತ್ರಿಕ ವಿಷಯಗಳಲ್ಲಿ ತಮ್ಮ ಅನುಭವವನ್ನು ಕೊಡಬಲ್ಲರು. ಇದನ್ನು ಭಾರತ ಸೇವಕ ಸಮಾಜ ಸ್ವಾಗತಿಸುತ್ತದೆ. ಭಾರತ ಸೇವಕ ಸಮಾಜವು ಹೀಗೆ ಎಲ್ಲ ರೀತಿಯಲ್ಲೂ ಸಂಪೂರ್ಣವಾಗಿ ಸಜ್ಜುಗೊಳಿಸಲ್ಪಟ್ಟದ್ದರೆ, ಸರಕಾರದ ನೆರವಿಲ್ಲದೆಯೂ— ಉದಾರಿಗಳಾದ ಜನರ ಸಹಕಾರವನ್ನು ಪಡೆದು—ಅದು ಸ್ವಂತ ಯೋಜನೆಗಳನ್ನು ಕೈಗೊಳ್ಳುವುದು ಸಾಧ್ಯವಾದೀತು. ಹೆಚ್ಚು ಯೋಜನೆಗಳು ಕಾರ್ಯರೂಪಕ್ಕಿಳಿದರೆ ಕೆಲಸದ ಅವಕಾಶ ಹೆಚ್ಚುತ್ತದೆ ಎನ್ನುವುದು ಸುಳ್ಳಲ್ಲ. ಕೈಮಗ್ಗ, ಭತ್ತ ಕುಟ್ಟುವಿಕೆ ಇತ್ಯಾದಿಗಳ ವಿಷಯದಲ್ಲಿ ಸದಭಿಪ್ರಾಯ ಹುಟ್ಟಿಸುವ ಮೂಲಕವೂ ಸಮಾಜ ಉದ್ಯೋಗ ಹೆಚ್ಚಿಸಲು ನೆರವಾದೀತು.

ವಸಾಹತು ವಾದ

ಸಂಯುಕ್ತ ರಾಷ್ಟ್ರ ಸಂಘದ ನಿಶ್ವಕ್ತ ಸಮಿತಿಯ ಮುಂದೆ ಇರುವ ಕೆಲವು ವಿಷಯಗಳು ಸಾಮ್ರಾಜ್ಯ ಶಾಹಿತ್ವದ ಭಾವನೆ ಇನ್ನೂ ಬಲವಾಗಿ ಬೇರೂರಿರುವುದನ್ನು ತೋರಿಸಿ ಕೊಡುತ್ತವೆ. ಜಗತ್ತು ಜಾಗೃತವಾಗಿದೆ, ಅದರೊಡನೆ ಏಶಿಯ ಮತ್ತು ಆಫ್ರಿಕದ ಜನಾಂಗಗಳೂ ಎಚ್ಚರಗೊಂಡಿವೆ—ಎಂಬ ಮಹತ್ವನ್ನು ಒಪ್ಪಿಕೊಳ್ಳಲಿಕ್ಕೆ ಪಶ್ಚಿಮದ ಕೆಲವು ಸಾಮ್ರಾಜ್ಯ ಶಾಹಿ ರಾಷ್ಟ್ರಗಳು ಇನ್ನೂ ಸಿದ್ಧವಾಗಿಲ್ಲ. ಬ್ರಿಟನ್ ಮುಂತಾದ ಪ್ರಜಾ ಪ್ರಭುತ್ವ ಸಿದ್ಧಾಂತದಲ್ಲಿ ವಿಶ್ವಾಸವನ್ನು ಪ್ರಕಟಿಸುವ ರಾಷ್ಟ್ರಗಳೇ ಸ್ವಂತ ಸರಕಾರವನ್ನು ರಚಿಸಿಕೊಂಡು ಜನರು ಸಂತೋಷದಿಂದ ಬಾಳಬಲ್ಲರೆಂಬ ತತ್ವವನ್ನು ಒಪ್ಪದವರಂತೆ ನಡೆದುಕೊಳ್ಳುವುದು ತುಂಬ ಶೋಚನೀಯ. ಆಫ್ರಿಕದ ಟಂಗನಿಯಾಕಕ್ಕೆ ಸ್ವಂತ ಸರಕಾರವನ್ನು ಇನ್ನು ಇಪ್ಪತ್ತು ವರ್ಷಗಳ ಅವಧಿಯಲ್ಲಿ ಬ್ರಿಟನು ಕೊಡತಕ್ಕದ್ದೆಂದು, ಭಾರತ ಮುಂತಾದ ನಾಲ್ವರು ಸದಸ್ಯರುಳ್ಳ ಉಪಸಮಿತಿಯೊಂದು ಬಹುಮತದಿಂದ ಸೂಚಿಸಿತು—ಸಮಿತಿಯ ಅಧ್ಯಕ್ಷಸ್ಥಾನದಲ್ಲಿದ್ದ ನ್ಯೂಜೀಲೆಂಡು ಮಾತ್ರ ಈ ಅಭಿಪ್ರಾಯವನ್ನು ತಿರಸ್ಕರಿಸಿತು. ನ್ಯೂಜೀಲೆಂಡು ಬ್ರಿಟನಿನ ವಸಾಹತುಗಳಲ್ಲೊಂದೆಂಬುದನ್ನು ನೆನೆದರೆ, ಅದು ಒಪ್ಪದಿರುವುದರಲ್ಲೇನೂ ಆಶ್ಚರ್ಯ ಕಾಣುವುದಿಲ್ಲ. ಬ್ರಿಟನಿನ ಅಭಿಪ್ರಾಯದಂತೆ, ಸ್ವಂತ ಸರಕಾರವನ್ನು ರಚಿಸಿಕೊಳ್ಳಲು ಟಂಗನಿಯಾಕಕ್ಕೆ ತನ್ನದೇ ಅವಧಿ ಬೇಕು; ಹೊರಗಿನವರು ಯಾರಾದರೂ ಆ ಸಮಯ ಎಷ್ಟಿರಬೇಕೆಂದು ತೀರ್ಮಾನಿಸಬಾರದು. ಇದರ ಅರ್ಥವೆಂದರೆ, ಬ್ರಿಟನು ತಾನಾಗಿ ಕ್ರಮ ತೆಗೆದುಕೊಳ್ಳುವವರೆಗೆ ಯಾರೂ—ರಾಷ್ಟ್ರ ಸಂಘ ಸಹ— ಈ ವಿಷಯ ತುಟಿಯೆತ್ತಕೂಡದು. ಬ್ರಿಟನು ಆಫ್ರಿಕದ ಇನ್ನೊಂದು ವಸಾಹತುವಾದ ಟೊಗೋಲೇಂಡಿಗೆ ಸ್ವಂತ ಸರಕಾರವನ್ನು ನೀಡಲು ತಾನಾಗಿಯೇ ಒಪ್ಪಿದೆ—ಇದೇ ರೀತಿ ಟಂಗನಿಯಾಕ ರಾಜ್ಯಕ್ಕೂ ಸ್ವೇಚ್ಛೆಯಿಂದ ಸ್ವಂತ ಸರಕಾರವನ್ನು ಬ್ರಿಟನು ಕೊಡಬಹುದು, ಎಂಬ ಮಾತು ನಿಜ. ಬಹುಶಃ ತಾನಾಗಿಯೇ ಕೊಡಮಾಡಿದರೆ ಸಿಗುವ ಗೌರವವು ರಾಷ್ಟ್ರಸಂಘದ ಆದೇಶಕ್ಕೆ ಮನ್ನಣೆ ಕೊಟ್ಟರೆ ಸಿಗಲಾರದೆಂದು ಬ್ರಿಟನು ನೆನಸಿರುವುದೇ ಸಮಿತಿಯ ಸೂಚನೆಯನ್ನದು— ಮತ್ತು ಅಮೇರಿಕ ಇತ್ಯಾದಿ ಅದರ "ಮಿತ್ರ ರಾಷ್ಟ್ರ"ಗಳು—ವಿರೋಧಿಸಿದುದರ ಹೇತುವೆಂದು ಕಾಣುತ್ತದೆ. ಪ್ರತಿಷ್ಠೆಯ ಈ ಪ್ರಶ್ನೆಯನ್ನು ಬಿಟ್ಟುಗೊಟ್ಟು ಪ್ರತಿಯೊಂದು ರಾಷ್ಟ್ರವೂ ಸ್ವಂತ ಸರಕಾರವನ್ನು ಪಡೆದು ಅಭಿವೃದ್ಧಿಯನ್ನು ಹೊಂದಬಲ್ಲುದು ಎಂಬ ತತ್ವಕ್ಕೆ ಮನ್ನಣೆ ಸಿಗಬೇಕೆಂಬುದೇ ಭಾರತದ ಧೋರಣೆ—ತಮ್ಮನ್ನು ತಾವೇ ಆಳಿಕೊಳ್ಳಲು ತಿಳಿದಿರದ ಜನಾಂಗ ಈಗ ಜಗತ್ತಿನಲ್ಲಿ ಉಳಿದಿಲ್ಲ; ಯಾರ ರಕ್ಷಣೆಯ ಜವಾಬ್ದಾರಿಯನ್ನೂ ಸಾಮ್ರಾಜ್ಯ ಶಾಹಿ ರಾಷ್ಟ್ರಗಳು ಹೊರಬೇಕಾಗಿಲ್ಲ ಎಂಬುದನ್ನು ಬ್ರಿಟನು ಮತ್ತು ಅದರ ಧೋರಣೆಗೆ ಬೆಂಬಲ ಕೊಡುವವರು ತಿಳಿದಿರುವುದು ಶ್ರೇಯಸ್ಕರ. ಇನ್ನೊಬ್ಬರನ್ನು ಮೂರ್ಖರೆಂದು ಕರೆದು ತಾವಷ್ಟೇ ಬುದ್ಧಿವಂತರಾಗಿ ಉಳಿಯುವ ತಂತ್ರ ಇನ್ನೂ ಫಲ ಕೊಡಲಾರದು.

ಉಡುಪಿ

ನಗರ ಸಭೆಯ ಉಪಚುನಾವಣೆ ತೆಂಕಪೇಟೆ ಮತ್ತು ಅಂಬಲಪಾಡಿ ವಾರ್ಡುಗಳ ಉಪಚುನಾವಣೆಯು ತಾ 10 ರಲ್ಲಿ ಜರಗಿ ಅಂದೇ ಮತಗಣನೆಯಾಗಿ ಶ್ರೀಗಳಾದ ರಾಘವೇಂದ್ರ ಭಟ್ ಮತ್ತು ವೆಂಕಟರಮಣ ರಾಯರು ಅನುಕ್ರಮವಾಗಿ ಆರಿಸಲ್ಪಟ್ಟರು ಫಲಿತಾಂಶ ಹೀಗಿದೆ: **ತೆಂಕಪೇಟೆ ವಾರ್ಡ್**- ಶ್ರೀ ರಾಘವೇಂದ್ರ ಭಟ್ (ಕಾ) 274, ಶ್ರೀ ಎ. ವಿಠಲ ಶೆಣೈ (ಜನಸಂಘ) 155 ಶ್ರೀ ಎಸ್. ಸಂಜೀವ ಪೈ (ಸ್ವತಂತ್ರ) 63. **ಅಂಬಲಪಾಡಿ ವಾರ್ಡ್**- ಶ್ರೀ ವೆಂಕಟರಮಣ ರಾವ್ (ಕಾ) 328. ಶ್ರೀ ಪಿ. ಶೀನ ನಾಯಕ್ (ಕಮ್ಯೂ) 209.

ಮುನಿಸಿಪಲ್ ಕೌನ್ಸಿಲ್ ಸಭೆಯು ತಾ 12 ರಲ್ಲಿ ಚೇರ್‌ಮೆನ್ ಡಾ। ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು, ಆರಂಭದಲ್ಲಿ ಶ್ರೀಗಳಾದ ರಾಘವೇಂದ್ರ ಭಟ್ ಮತ್ತು ವೆಂಕಟರಮಣ ರಾಯರು ಪ್ರತಿಜ್ಞೆ ಸ್ವೀಕಾರ ಮಾಡಿದರು. ಇಪ್ಪತ್ತೈದು ಕ್ಯೂಬಿಕ್ ಫೀಟ್ ಕಂಪೋಸ್ಟು ಗೊಬ್ಬರಕ್ಕೆ ರೂ 1—4—0 ಯ ದರವನ್ನು ನಿಶ್ಚಯಿಸಲಾಯಿತು. ಸೊಳ್ಳೆ ಕಾಟ ನಿವಾರಣೆಗಾಗಿ ಬೇಕಾಗುವ ಶಿಬಂಧಿಯನ್ನು ಮಂಜೂರುಮಾಡಲಾಯಿತು. ಅದಲ್ಲದೆ ಅಲ್ಲಿಗೆ ತಗಲುವ ಖರ್ಚಿನಲ್ಲಿ ಅರ್ಧಾಂಶ ಹಣ ಸರಕಾರದ ಸಹಾಯ ಧನವಾಗಿ ಕೊಡುವಂತೆ ಕೇಳಿಕೊಳ್ಳಬೇಕೆನ್ನುವ ನಿರ್ಣಯವಾಯಿತು. ಕೊನೆಯಲ್ಲಿ ಹೊಸ ಸದಸ್ಯರು ಸಭಾ ಸತ್ಕಾರ ವಿತ್ತರು. ಸರ್ವರೂ ಐಕ್ಯತೆಯಿಂದ ನಗರದ ಕ್ಷೇಮ ಚಿಂತನೆ ಮಾಡಬೇಕೆಂದು ನಿಶ್ಚಯಿಸಲಾಯಿತು.

ರೂರಲ್ ಕೋಪರೇಟಿವ್ ಬೇಂಕ್ ಉಡುಪಿ ಶಹರಿನ ಅಕ್ಕಪಕ್ಕದಲ್ಲಿರುವ 14 ಗ್ರಾಮಗಳ ಸೌಕರ್ಯಕ್ಕಾಗಿ ಅಂಬಲಪಾಡಿಯಲ್ಲಿ ಕಾರ್ಯಾಲಯವಿದ್ದು ಕೆಲಸ ನಡೆಸಲು 'ನಿಡಂಬೂರು ರೂರಲ್ ಕೋಪರೇಟಿವ್ ಬೇಂಕ್' ಸ್ಥಾಪಿಸಲು ಈಚೆಗೆ ಶ್ರೀ ಶಂಕರರಾಯರ ಅಧ್ಯಕ್ಷತೆಯಲ್ಲಿ ರೈತರ ಸಭೆಯು ಅಂಬಲಪಾಡಿ ದೇವಸ್ಥಾನದಲ್ಲಿ ಜರಗಿತು. ಸಹಕಾರಿ ಸಂಘಗಳ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ ಎಸ್. ರಮಾನಾಥರಾಯರು ಗ್ರಾಮಾಂತರ ಸಹಕಾರಿ ಬೇಂಕಿನ ಸೌಲಭ್ಯಗಳ ಕುರಿತು ಮಾತನಾಡಿದರು. ಹನ್ನೊಂದು ಮಂದಿಯುಳ್ಳ ಕಾರ್ಯಸಮಿತಿ ರಚನೆಯಾಯಿತು. ಸಭೆಯಲ್ಲಿ ಸಾಧಾರಣ ಆರುಸಾವಿರ ರೂಪಾಯಿಗಳ ಶೇರು ಭಂಡವಳ ತೆರುವ ಆಶ್ವಾಸನೆ ದೊರೆಯಿತು. ಉಪನಿಬಂಧನೆಗಳು ರಿಜಿಸ್ಟರಾಗಿ ಬಂದೊಡನೆ ಬೇಂಕಿನ ಕಾರ್ಯಪ್ರಾರಂಭವಾಗುವುದು.

ವರ್ಗ:— ಉಡುಪಿ ಡಿ। ಮುನ್ಸಿಫ್ ಶ್ರೀಯು. ಹಮ್ಮಬ್ಬನವರು ಮಂಗಳೂರಿನ ಸಬ್‌ಜಡ್ಜರಾಗಿ ವರ್ಗಾಯಿಸಲ್ಪಟ್ಟಿರುವರು. ತಾ 9 ರಂದು ಬಾರ್ ಎಸೋಸಿಯೇಶನಿನವರು ಶ್ರೀ ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಅವರಿಗೆ ಚಹ ಸತ್ಕಾರವಿತ್ತು ಗೌರವಿಸಿ ಬೀಳ್ಕೊಟ್ಟರು. ಇಲ್ಲಿಗೆ ಈವರೆಗೂ ಹೊಸ ಮುನ್ಸಿಫರ ನೇಮಕವಾಗಿಲ್ಲ.

ಎಯಿಡೆಡ್ ಶಾಲಾ ಟೀಚರ್ಸ್ ಯೂನಿಯನ್— ಉಡುಪಿ ತಾಲೂಕು ಖಾಸಗಿ ಶಾಲೆಗಳ ಅಧ್ಯಾಪಕರ ಯೂನಿಯನ್ನಿನ ಕಾರ್ಯಕಾರಿ ಮಂಡಳಿಯ ಸಭೆಯು ತಾ. 13ರಂದು ಮೋಡರ್ನ್ ಹಾ। ಎ। ಶಾಲೆಯಲ್ಲಿ ಶ್ರೀ ಎಸ್. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರದ III ಫಾರ್ಮಿನವರೆಗೆ ಮಾಸಿಕ ರೂಪಾಯಿ 120ಕ್ಕಿಂತ ಕಡಿಮೆ ಉತ್ಪತ್ತಿಯ ಕುಟುಂಬದ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಶಿಕ್ಷಣ ಕೊಡುವ ಕ್ರಮವನ್ನು ಶ್ಲಾಘಿಸಲಾಯಿತಲ್ಲದೆ ಈ ವಿನಾಯಿತಿಯು ಎಲ್ಲಾ ವಿದ್ಯಾರ್ಥಿಗಳಿಗೂ ದೊರಕುವಂತೆ ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳಾದುವು.

ಕಡಿಯಾಳಿ— ಸ್ಥಳೀಯ ಹಾ। ಪ್ರಾ। ಶಾಲೆ ಮತ್ತು ಗುಂಡಿಬೈಲು ಎಲಿಮೆಂಟರೀ ಶಾಲೆಗಳ ಸಂಯುಕ್ತ ವಾರ್ಷಿಕೋತ್ಸವವು ತಾ. ೧ರಲ್ಲಿ ಎಮ್. ಜಿ. ಎಮ್. ಕಾಲೇಜ್ ಲೆಕ್ಚರರ್ ಶ್ರೀ ಕೆ. ಬಿ. ರಾಮಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಉಭಯ ಶಾಲಾ ಹೆಡ್ಮಾಸ್ತರರು ವರದಿವಾಚನ ಮಾಡಿದರು. ಶ್ರೀ ಕೆ ಸರ್ವೋತ್ತಮ ಶೆಟ್ಟರು ಶಾಲಾ ಸ್ವಸ್ತಿವಾಚನಮಾಡಿದರು. ಜನಮನರಂಜನ ಕಾರ್ಯಕ್ರಮಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ವಾರದ ಮಹಾನುಭಾವ

ಪೆನ್ಸಿಲಿನ್ ಸಂಶೋಧಕ--ಸರ್ ಫ್ಲೆಮಿಂಗ್

ಹೆಚ್ಚಿನ ವೈಜ್ಞಾನಿಕ ಸಂಶೋಧನೆಗಳು ತೀರ ಆಕಸ್ಮಿಕವಾಗಿಯೇ ನಡೆಯುತ್ತವೆ. ಇಲ್ಲಿ ಪ್ರಾಮುಖ್ಯವಾದುದೆಂದರೆ ಸಾಮಾನ್ಯರು ಕಸವೆಂದು ಬಿಸಾಡಿ ಬಿಡಬಹುದಾದ ವಸ್ತುಗಳಲ್ಲಿಯೂ ರಸವನ್ನು ಕಾಣ ಹೋಗುವ ವಿಜ್ಞಾನಿಗಳ ಕುತೂಹಲ ಮಾತ್ರ. ಎಲ್ಲರೂ ಉಪೇಕ್ಷಿಸಿ ಬಿಡಬಹುದಾದ ವಿಷಯಗಳಿಗೆ ವಿಜ್ಞಾನಿಗಳಷ್ಟೇ ಮಹತ್ವ ಕೊಡುತ್ತಾರೆ—ಅವರ ಈ "ಅತಿರೇಕ" ಕುತೂಹಲದ ಫಲವಾಗಿ ಮಾನವತೆಯ ಕಲ್ಯಾಣದ ಅನೇಕ ಸಾಧನಗಳು ಲಭ್ಯವಾಗಿವೆ; ಸುಖ ಜೀವನಕ್ಕೆ ನೆರವು ದೊರೆತಿದೆ.

ಮೊನ್ನೆ ೧೧ನೇ ತಾರೀಕಿನಂದು ಲಂಡನಿನ ತನ್ನ ಮನೆಯಲ್ಲಿ ನಿಧನ ಹೊಂದಿದ ಸರ್ ಅಲೆಕ್ಸಾಂಡರ್ ಫ್ಲೆಮಿಂಗರು ಮಾನವ ಜಾತಿಯು ನಿತ್ಯವೂ ಸ್ಮರಿಸುತ್ತಿರುವ ಕೆಲವೇ ವಿಜ್ಞಾನಿಗಳಲ್ಲಿ ಒಬ್ಬರು. ಆಧುನಿಕ ಸಂಜೀವನ ಔಷಧವೆನಿಸಿದ ಪೆನ್ಸಿಲಿನಿನ ಸಂಶೋಧನೆಯ ಕೀರ್ತಿ ಇವರಿಗೆ ಸಲ್ಲುತ್ತದೆ. ಫ್ಲೆಮಿಂಗರು ರೋಗಾಣುಗಳ ಸಂಶೋಧನೆಯಲ್ಲಿ ಮಗ್ನರಾಗಿದ್ದಾಗ ಕೋಣೆಯ ಕಿಟಿಕಿಯೊಳಗಿಂದ ಸಸ್ಯದ ತುಣುಕೊಂದು ಹಾರಿಬಂದು ನೆಲದ ಮೇಲೆ ಬಿದ್ದಿತು, ಅಲ್ಲಿಂದ ಗಾಳಿಯೊಡನೆ ನೆಗೆದು ಅದು ರೋಗಾಣುಗಳ ತಟ್ಟೆಯಲ್ಲಿ ಬಿದ್ದಿತು. ಬೇರೆ ಯಾರಾದರಾಗಿದ್ದರೆ ಈ ಕಸವನ್ನು ಬಿಸಾಡಿ ಬಿಡುತ್ತಿದ್ದರು. ಫ್ಲೆಮಿಂಗರು ಮಾತ್ರ ಸೂಕ್ಷ್ಮ ದರ್ಶಕ ಯಂತ್ರದಿಂದ ಇದನ್ನೂ ಪರೀಕ್ಷಿಸ ಹತ್ತಿದರು. ಅವರಿಗೆ ಆಶ್ಚರ್ಯ ಹುಟ್ಟಿಸುವ ರೀತಿಯಲ್ಲಿ ಸಸ್ಯದ ತುಣುಕಿನ ಸಂಪರ್ಕಕ್ಕೆ ಬಂದ ರೋಗಾಣುಗಳು ಸಾಯುವುದು ಗೋಚರಿಸಿತು.

ಸಸ್ಯದ ತುಣುಕಿನ ಈ ವಿಶಿಷ್ಟ ರೋಗನಿವಾರಕ ಗುಣದ ಹೆಚ್ಚಿನ ಸಂಶೋಧನೆ ಪೆನ್ಸಿಲಿನ್ ಎಂಬ ಈಗಿನ ಜೀವನ ದಾನ ಮಾಡುವ ಔಷಧವನ್ನು ಜಗತ್ತಿಗೆ ನೀಡಿತು. ಅಲ್ಲಿಯ ವರೆಗೆ ಹೆಚ್ಚಾಗಿ ಕೇಳಿಬರುತ್ತಿದ್ದ ಫ್ಲೆಮಿಂಗರ ಹೆಸರು ಈಗ ಜಗತ್ತಿನ ಮೂಲೆ ಮೂಲೆಯಲ್ಲೂ ಪ್ರತಿಧ್ವನಿಸಿತು. ಗೌರವದೊಡನೆ ಬಹುಮಾನಗಳೂ ದೊರೆತವು—೧೯೪೫ರಲ್ಲಿ ನೀಡಿದ ನೋಬೆಲ್ ಪಾರಿತೋಷಕವು ಫ್ಲೆಮಿಂಗರ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿತು. ಬ್ರಿಟಿಷ್ ಸರಕಾರವು ಅವರಿಗೆ "ಸರ್" ಎಂಬ ಪ್ರಶಸ್ತಿಯನ್ನು ಕೊಟ್ಟುದಲ್ಲದೆ ಅನೇಕ ವಿಶ್ವವಿದ್ಯಾಲಯಗಳಿಂದ ಪದವಿಯು ಸಿಕ್ಕಿತು. ಜಾಗತಿಕ ಆರೋಗ್ಯ ಸಂಸ್ಥೆಯೂ ಇವರ ಸೇವೆಯನ್ನು ಪಡೆಯಲು ಮುಂದಾಯಿತು. ಎರಡು ವರ್ಷಗಳ ಪೂರ್ವದಲ್ಲಿ ಈ ಸಂಸ್ಥೆಯ ಸಲುವಾಗಿ ಫ್ಲೆಮಿಂಗರು ಮುಂಬಯಿ ಮತ್ತು ಮದ್ರಾಸಿನ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕೆಲವು ಪಾಠಗಳನ್ನು ಹೇಳಲು ಭಾರತಕ್ಕೆ ಬಂದು ಹೋಗಿದ್ದರು. ಅದಕ್ಕೆ ಮುಂಚೆ ಭಾರತೀಯ ವಿಜ್ಞಾನಿಗಳ ಪರಿಷತ್ತಿನಲ್ಲಿ ಭಾಗವಹಿಸಿದ್ದರು.

ತನ್ನ ೭೩ನೆಯ ಪ್ರಾಯದಲ್ಲೂ ಅವರು ಗಟ್ಟಿಮುಟ್ಟಾಗಿದ್ದರು—ಮದ್ರಾಸಿನಲ್ಲಿದ್ದಾಗ ಅವರು ಮುದುಕರ ನಡೆಯುವ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು ಎಲ್ಲರನ್ನು ಬೆರಗುಗೊಳಿಸಿದ್ದರು. ಸೆಂಟ್ ಮೇರೀಸ್ ಮೆಡಿಕಲ್ ಸ್ಕೂಲಿನಲ್ಲಿ ಅವರ ಶಿಕ್ಷಣ ನಡೆಯಿತು. ತೀಕ್ಷ್ಣಗ್ರಹಣ ಬುದ್ಧಿ, ಸೂಕ್ಷ್ಮಾವಲೋಕನ ಶಕ್ತಿ ಇತ್ಯಾದಿ ಪ್ರತಿಭಾನ್ವಿತಗುಣಗಳಿಂದ ಅವರು ಆಗಲೇ ಎಲ್ಲರನ್ನೂ ಆಕರ್ಷಿಸಿಕೊಂಡಿದ್ದರು. ಶಿಕ್ಷಣದ ತರುವಾಯ ತಾವು ಕಲಿತ ಶಾಲೆಯಲ್ಲಿಯೂ ಲಂಡನಿನ ವಿಶ್ವವಿದ್ಯಾಲಯದಲ್ಲೂ ಅಧ್ಯಾಪಕರಾಗಿದ್ದರು; ಅಲ್ಲದೆ ಸಂಶೋಧನೆಯನ್ನೂ ನಡೆಸುತ್ತಿದ್ದರು. ಪ್ರಥಮ ಮಹಾಯುದ್ಧ ಕಾಲದಲ್ಲಿ ಸೈನ್ಯದ ವೈದ್ಯಕೀಯ ವಿಭಾಗದಲ್ಲೂ ಕೆಲಸ ಮಾಡಿದ್ದರು. ಅವರಿಗೆ ಸಾಹಿತ್ಯ ಮತ್ತು ಕಲೆಗಳಲ್ಲಿ ಆಸಕ್ತಿ ಹೆಚ್ಚು - ಕ್ರಿಮಿಕೀಟಗಳ ಜಗತ್ತಿನ ಕುರಿತಾಗಿ ಅವರು ಅನೇಕ ಪುಸ್ತಕಗಳನ್ನು ಬರೆದರು. ಗುರಿ ನೋಡಿ ಹೊಡೆಯುವುದರಲ್ಲಿ ನಿಪುಣರು. ಪೆನ್ಸಿಲಿನಿನ ಕುರಿತು ತಯಾರಿಸಲಾದ ಚಲಚ್ಚಿತ್ರವೊಂದರಲ್ಲಿ ನಾಯಕನಾಗಿಯೂ ಅವರು ಶೋಭಿಸಿದರು.

ಸರ್ ಫ್ಲೆಮಿಂಗರು ಮೊದಲನೆಯ ಮದುವೆಯಿಂದ ಒಂದು ಮಗನನ್ನು ಪಡೆದರು; ಆದರೆ ಆ ಹೆಂಡತಿ ೧೯೪೯ರಲ್ಲಿ ಮರಣವಾದಳು. ಮುಂದೆ ೧೯೫೩ರಲ್ಲಿ ಅವರು ಯುದ್ಧಕಾಲದ ಗ್ರೀಕಿನಲ್ಲಿ ಹೆಸರು ಪಡೆದಿದ್ದ ಅಮೇಲಿಯಾ ಎಂಬವಳನ್ನು ಎರಡನೆಯ ಮದುವೆಯಾದರು. ಅವರ ಮರಣವನ್ನು ಪೆನ್ಸಿಲಿನಿನ ಸಂಶೋಧನೆಯಷ್ಟೇ ಆಕಸ್ಮಿಕವೆಂದು ಹೇಳಬಹುದು - ಎಂದಿನಂತೆ ಅವರು ಹಾಸಿಗೆಯಲ್ಲಿ ಉಪಾಹಾರ ಸ್ವೀಕರಿಸಿದ್ದರು; ಪತ್ರಿಕೆಗಳನ್ನು ಓದಿ, ತಮಗೆ ಬಂದ ಟಪ್ಪಾಲನ್ನು ಒಡೆಯುವುದರಲ್ಲಿದ್ದರು. ಆಗ ದೇಹದಲ್ಲಿ ಅಲಕ್ಷ್ಯವಾದಂತೆ ತೋರಿತು. ತಾನೇ ದೇಹೋಷ್ಣವನ್ನು ಪರೀಕ್ಷಿಸಿಕೊಂಡರು. ಡಾಕ್ಟರರಿಗೆ ಜನಹೋಯಿತು- ಆದರೆ ಅವರು ಬರುವುದರೊಳಗೆ ಫ್ಲೆಮಿಂಗರ ಪ್ರಾಣಪಕ್ಷಿ ಹಾರಿತು. ಫ್ಲೆಮಿಂಗರು ಸತ್ತರು—ಹಾಗಿದ್ದರೂ ಮಾನವತೆಯು ಮೆಡೇಮ್ ಕ್ಯೂರಿ ಮತ್ತು ಲೂಯಿ ಪ್ಯಾಶ್ಚರರ ಸಾಲಿನಲ್ಲಿ ನಿಲ್ಲಿಸಿ ಅವರನ್ನು ಕೊಂಡಾಡುತ್ತದೆ.

ರಾಜ್ಯಾಂಗ ಘಟನೆಯ ಪರಿಷ್ಕಾರ

ನೆಹರುಗಳಿಂದ ಸಮರ್ಥನೆ

ಭಾರತದ ರಾಜ್ಯಾಂಗ ಘಟನೆಯ ೩೧ ಮತ್ತು ೩೧-ಎ ಸೂತ್ರಗಳಿಗೆ ಸಂಬಂಧಿಸಿದ ನಾಲ್ಕನೆಯ ತಿದ್ದುಪಡಿ ಮಸೂದೆಯನ್ನು ಸಮರ್ಥಿಸಿ ಲೋಕಸಭೆಯಲ್ಲಿ ಪ್ರಧಾನ ಮಂತ್ರಿ ನೆಹರುಗಳು ತಾರೀಕು ೧೪ರಂದು ಉಜ್ವಲ ಭಾಷಣವನ್ನು ಮಾಡಿದರು. ಯಾವುದೇ ರಾಜಕೀಯ, ಸಾಮಾಜಿಕ ಅಥವಾ ಆರ್ಥಿಕ ಶಾಸನದ ಸ್ವರೂಪ ನಿರ್ಣಯವು ಸಂಸತ್ತಿನ ಅಧಿಕಾರಕ್ಕೊಳಪಡಬೇಕಲ್ಲದೆ ನ್ಯಾಯಾಲಯಗಳು ಅದನ್ನು ಮಾಡಬಾರದು. ಈ ದೃಷ್ಟಿಯಿಂದ ಘಟನೆಯ ಮೂಲಭೂತ ಹಕ್ಕುಗಳ ಸೂತ್ರಕ್ಕೂ ಸರಕಾರಕ್ಕೆ ಆದೇಶ ಕೊಡುವ ಧೋರಣೆಗೆ ಸಂಬಂಧಿಸಿದ ಸೂತ್ರಕ್ಕೂ ಇರುವ ಪರಸ್ಪರ ವಿರೋಧವನ್ನು ತೆಗೆದು ಹಾಕುವುದು ಅಗತ್ಯವೆಂದು ಅನುಭವದಿಂದ ಕಂಡು ಬಂದಿದೆ— ಇದೇ ಮಸೂದೆ ತರುವುದರ ಉದ್ದೇಶ ಎಂದವರು ಹೇಳಿದರು. ಮುಂದುವರಿದು ಆಸ್ತಿಯನ್ನು ವಶಪಡಿಸಿ ಕೊಳ್ಳುವಾಗ ಪರಿಹಾರ ಕೊಡುವುದಿಲ್ಲವೆಂದು ಇದರ ಅರ್ಥವಲ್ಲ— ಆದರೆ ಶ್ರೀಮಂತರನ್ನು ಇನ್ನೂ ಶ್ರೀಮಂತರಾಗಿಯೇ ಉಳಿಯಗೊಡುವುದು ಮುಂತಾದ ರೀತಿಯಲ್ಲಿ ಪರಿಹಾರ ಕೊಡಲಾಗುವುದಿಲ್ಲ ಎಂದರು.

ಮುಂಗಡ ಪತ್ರದ ಚರ್ಚೆ

ಕೇಂದ್ರ ಸರಕಾರದ ಮುಂಗಡ ಪತ್ರದ ಚರ್ಚೆ ರಾಜ್ಯ ಸಭೆಯಲ್ಲಿ ನಡೆದಾಗ ಅನೇಕ ಸದಸ್ಯರು ಹೊಸ ತೆರಿಗೆಗಳ ವಿಷಯದಲ್ಲಿ ಅತೃಪ್ತಿಯನ್ನು ಪ್ರಕಟಿಸಿ ಭಾಷಣ ಮಾಡಿದರು. ಆದಾಯ ತೆರಿಗೆ ಮತ್ತು ಅಬಕಾರಿ ಸುಂಕದ ಹೆಚ್ಚಳದಿಂದ ಸಾಮಾನ್ಯ ಜನರಿಗೆ ತೊಂದರೆಯಾದೀತೆಂದು ಅವರು ಎಚ್ಚರಿಸಿದರು. ಮಧ್ಯಮ ಮಂಡಳವು ಪ್ರಜೆಗಳಿಗೆ ಇನ್ನೂ ತೆರಿಗೆ ಕೊಡುವ ಶಕ್ತಿ ಇದೆಯೇ ಇಲ್ಲವೇ ಎಂಬ ಮುಖ್ಯ ವಿಷಯವನ್ನು ಪರಿಶೀಲಿಸಲಿಲ್ಲ ಎಂದೂ ಹೇಳಲಾಯಿತು. ಸಮಾಜವಾದಿ ಸ್ವರೂಪದ ಸಮಾಜ ರಚನೆಗೆ ಮುಂಗಡ ಪತ್ರ ಸಹಕಾರಿಯಾಗಿಲ್ಲವೆಂದೂ ಕೆಲವರು ಆಕ್ಷೇಪಿಸಿದರು. ಶ್ರೀ ದೇಶಮುಖರು ಚರ್ಚೆಗೆ ಉತ್ತರ ಕೊಡುತ್ತಾ ಮುಂಗಡ ಪತ್ರದಲ್ಲಿ ಸಮಾಜ ಪರಿವರ್ತನೆಯ ಪವಾಡ ನೋಡಬಾರದು—ಯೋಜನೆಯ ಸ್ವರೂಪದ ಮೇಲಿಂದ ಅದನ್ನು ಪರ್ಯಾಲೋಚಿಸಬೇಕು ಎಂದರಲ್ಲದೆ ಪ್ರಮುಖ ಉದ್ಯಮಗಳ ಮೇಲೆ ನಿಯಂತ್ರಣ, ಶ್ರೀಮಂತರ ಮೇಲೆ ಹೆಚ್ಚಿನ ಕರಭಾರ, ಸಾಮಾಜಿಕ ಸೇವೆಯ ಕ್ಷೇತ್ರದ ವಿಸ್ತರಣೆ ಮತ್ತು ಕಲ್ಯಾಣಪ್ರದ ಯೋಜನೆಗಳ ಅನುಷ್ಠಾನ — ಇತ್ಯಾದಿ ಕಾರ್ಯಕ್ರಮಗಳಿಂದ ಸರಕಾರ ಜನರ ಒಳಿತಿಗಾಗಿ ಕೆಲಸ ಮಾಡುತ್ತಿದೆ ಎಂದು ವಿವರಿಸಿದರು.

ಮದ್ರಾಸಿನ ಶಾಸನಸಭೆಯಲ್ಲಿ

ರಾಜ್ಯದ ಶಾಸನ ಸಭೆಯಲ್ಲಿ ಬೇರೆಬೇರೆ ಇಲಾಖೆಗಳಿಗೆ ಹಣವು ಮಂಜೂರಾಯಿತು. ಸಹಕಾರ ಖಾತೆಯ ಬೇಡಿಕೆಯ ಕುರಿತು ಮಾತನಾಡುವಾಗ ಮಾನ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರು ಸಾಗುವಳಿದಾರರ ಅನುಕೂಲತೆಗೋಸ್ಕರ ಕಂತಿನಲ್ಲಿ ಮರುಪಾವತಿ ಮಾಡುವ ಶರ್ತದ ಮೇಲೆ ಸಾಲ ಕೊಡುವ ಮತ್ತು ಹಳ್ಳಿಗರಿಂದ ಠೇವಣಾತಿಗಳನ್ನು ಪಡೆಯುವ ೨೫ ಗ್ರಾಮಾಂತರ ಪ್ರದೇಶದ ಬೇಂಕುಗಳನ್ನು ತೆರೆಯಲಾಗುವುದೆಂದು ಸಾರಿದರು.

ಶಿಕ್ಷಣಖಾತೆಯ ಬೇಡಿಕೆಯ ಕುರಿತು ಮಾತನಾಡಿದ ಮಂತ್ರಿ ಶ್ರೀ ಸುಬ್ರಹ್ಮಣ್ಯರು ಇದೇ ಎಪ್ರಿಲು ೧ನೇ ತಾರೀಕಿನಿಂದ ನಿವೃತ್ತರಾಗುವ ಪ್ರಾಥಮಿಕ ಶಾಲೆಗಳ ಅಧ್ಯಾಪಕರಿಗೆ ನಾಲ್ಕನೇ ಒಂದಂಶದಷ್ಟು ವಿರಾಮ ವೇತನ (ಪೆನ್ಶನ್) ಕೊಡಲಾಗುವುದೆಂದು ಘೋಷಿಸಿದರು. ಅಲ್ಲದೆ ಹಳ್ಳಿಯ ಪ್ರತಿಯೊಂದು ಪ್ರಾಥಮಿಕ ಶಾಲೆಗೂ ಬೇಸಾಯದ ಒಂದೊಂದು ತುಣುಕನ್ನು ಸೇರಿಸುವ ಚಳವಳಿ ಸೌರಮಾನ ಯುಗಾದಿಯ ಶುಭ ಮುಹೂರ್ತದಲ್ಲಿ ತೊಡಗುವುದೆಂದೂ ತಿಳಿಸಿದರು. ಮೂವತ್ತು ವರ್ಷ ಪ್ರಾಯದ ಮತ್ತು ಕನಿಷ್ಠ ೫ ವರ್ಷಗಳ ಕೆಲಸ ಮಾಡಿದ ಪ್ರಾಥಮಿಕ ಶಾಲಾಧ್ಯಾಪಕರಿಗೆ ಕಡ್ಡಾಯ ವಿಮೆಯ ಯೋಜನೆಯನ್ನು ಅನ್ವಯಿಸುವ ವಿಚಾರವಿದೆಯೆಂದೂ ಅವರು ಹೇಳಿದರು

The Canara Industrial & Banking Syndicate, Ltd
UDIPI.
NOTICE

Notice is hereby given that the following shares of this Bank will be sold by public auction on wednesday the 23rd day of March, 1955 at 11 A. M. at the Registered Office, Udipi, in exercise of the Bank's lien thereon for the liabilities of the shareholders:-

50 fully paid 5% Cumulative Preference shares No. PC 109743 to PC 109792 of Rs. 10/- each.
15 5% Cumulative Preference shares No. PC 4452 to PC 4466 of Rs. 10/- each Re. 1/- paid.

UDIPI, 14th March, 1955
(Sd) T. M. A. PAI,
Managing Director.

ರಾಜ್ ಕಪೂರರ—
ಬೂಟ್ ಪಾಲಿಶ್ (ಹಿಂದಿ)
ಬೇಬಿ ನಾಜ್, ರತನ್ ಕುಮಾರ್, ಡೇವಿಡ್
ಉಡುಪಿ, ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ
ತಾರೀಕು 16—3—1955 ರಿಂದ

ಪಡುಬಿದ್ರಿ—ಸ್ಥಳೀಯ ಬೋರ್ಡು ಹಾ| ಪ| ಶಾಲೆಯ ತಿಂಗಳ ಹಬ್ಬ ಮತ್ತು ತಾಯಂದಿರ ದಿನವು ದ. ಕ. ಜಿಲ್ಲಾ ಕೌನ್ಸಿಲರೂ ಕೆಲಸಗಾರರಾದ ಶ್ರೀಮತಿ ಶೀಲಾ ಬಾಯಿ ಪಿ ಕಾಂಬಳೆ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಮ್. ಎಮ್. ಪ್ರಭುಗಳು ಸಭೆಯ ಉದ್ದೇಶಗಳನ್ನು ವಿಶದಿಸಿದರು. ಶ್ರೀಗಳಾದ ಪಿ. ಜೆ. ಆಳ್ವ, ಸೀನ ಸೆಟ್ಟಿ ಮತ್ತು ಶ್ರೀಮತಿ ಪ್ರೇಮಾ ಅನಂತ ಪೈಗಳು ಭಾಷಣವಿತ್ತರು. ಅಧ್ಯಕ್ಷೆಯರು ಮಹಿಳೋದ್ಧಾರ ಕೇಂದ್ರದ ಆವಶ್ಯಕತೆಯ ಕುರಿತು ಭಾಷಣಮಾಡಿದ ಬಳಿಕ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಅಧಮಾರು—ಇಲ್ಲಿಯ ಹಿಂದೂ ಎಲಿಮೆಂಟರಿ ಶಾಲೆಯ ವರ್ಷಾಂತ್ಯೋತ್ಸವವು ತಾ. 12ರಲ್ಲು ಸಂಜೆ ಉಡುಪಿ ತಹಶಿಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀಪಾದಂಗಳವರು ಶುಭಾಶೀರ್ವಾದಗಳನ್ನಿತ್ತರು. ಶಾಲಾ ಬಾಲಕಿಯರ ಹಾಗೂ ಹಳೆವಿದ್ಯಾರ್ಥಿಗಳಿಂದ ವಿವಿಧ ವಿನೋದ ಕಾರ್ಯಕ್ರಮಗಳಾದುವು

ಪೆರಡಾಲ—ಸ್ಥಳೀಯ ಬೋರ್ಡ್ ಹಿರಿಯ ಬುನಾದಿ ಶಾಲೆಯ ಹೊಸ ಕಟ್ಟಡದ ಶಂಕು ಸ್ಥಾಪನೆಯನ್ನು ತಾ 11 ರಲ್ಲು ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರು ನೆರವೇರಿಸಿದರು. ಶ್ರೀ ಬಿ. ಕಮಲಾಕ್ಷ ಪೈಗಳು ಸ್ವಾಗತ ಮಾತುಗಳನ್ನಾಡಿದರು. ಬುನಾದಿ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎ. ತಿಮ್ಮಪ್ಪ ಸೆಟ್ಟಿ ಶ್ರೀಗಳಾದ ಎಮ್. ಉಮೇಶ ರಾವ್, ಕೆ. ಕೆ. ಸೆಟ್ಟಿ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಕಾರ್ಕಳ— ಶ್ರೀ ಅನಂತ ಪದ್ಮನಾಭ ಸ್ವಾಮಿಯವರ ದೇವಸ್ಥಾನವು ಬಹಳ ಹೀನಾವಸ್ಥೆಯಲ್ಲಿರುವುದರಿಂದ ಅದರ ಜೀರ್ಣೋದ್ಧಾರದ ಬಗ್ಗೆ ಧನ ಸಂಗ್ರಹಿಸಲು ಶ್ರೀಗಳಾದ ಕೆ. ರಾಮ ಭಟ್ಟ (ಅಧ್ಯಕ್ಷ), ಎ. ಎನ್. ಸೀತಾರಾಮಾಚಾರ್ಯ ಮತ್ತು ಪಿ. ರಾಮಚಂದ್ರ ರಾವ್ (ಉಪಾಧ್ಯಕ್ಷರು), ಡಾ। ಪಿ. ಗೋಪಾಲ ಭಟ್ (ಕಾರ್ಯದರ್ಶಿ), ಎಮ್. ಎಸ್. ಅಧಿಕಾರಿ ಮತ್ತು ಬಿ ಕೃಷ್ಣ ತಂತ್ರಿ (ಜತೆ ಕಾರ್ಯದರ್ಶಿಗಳು) ಮತ್ತು ಇದ್ಯ ಕೃಷ್ಣಮೂರ್ತಿ (ಕೋಶಾಧಿಕಾರಿ) ಮೊದಲಾದ ಕಾರ್ಯ ನಿರ್ವಾಹಕರಿರುವ ಸಂಘವೊಂದು ಸ್ಥಾಪಿಸಲಾಗಿದೆ. ಉದಾರ ಮನಸ್ಸಿನಿಂದ ಸಹಾಯ ಸಲ್ಲಿಸಲಪೇಕ್ಷಿಸುವವರು ಸಂಘದ ಕಾರ್ಯದರ್ಶಿಗಳ ಹೆಸರಿಗೆ ಕಳುಹಿಸಬಹುದು.

ಹಿರಿಯಡಕ— ಶ್ರೀ ವೀರಭದ್ರ ದೇವಾಲಯದ ಜೀರ್ಣೋದ್ಧಾರ ಕಾರ್ಯವು ಬಹು ರಭಸದಿಂದ ನಡೆಯುತಲಿದ್ದು ಕೆಲವೇದಿವಸಗಳೊಳಗೆ ಕೆಲಸ ಸಂಪೂರ್ಣವಾಗಿ ತಾ. 8–1–55ರಲ್ಲಿ ಪ್ರತಿಷ್ಠೆ, ಬ್ರಹ್ಮಕಲಶಾದಿ ಶುಭಕಾರ್ಯಗಳು ಜರಗಲಿರುವವು ಜೀರ್ಣೋದ್ಧಾರ ಸಮಿತಿಯ ವಿನಂತಿಯನ್ನು ಮನ್ನಿಸಿ ಶ್ರೀಗಳಾದ ಪಟೇಲ್ ಶೇಖರ ಹೆಗ್ಡೆ, ಎಚ್. ಸದಾಶಿವ ಹೆಗ್ಡೆ, ಕೆ. ಅಪ್ಪು ಪೂಜಾರಿ ಎಮ್. ಕೆ. ಸುಂಜಪ್ಪ, ಕೆ. ಪದ್ಮರಾಜ, ಕೆ. ಕೃಷ್ಣಯ್ಯ ಸೆಟ್ಟಿ, ಕೆ. ರಾಮಪ್ಪ, ಕೆ. ಬಾಬು ಪೂಜಾರಿ, ಮೊದಲಾದವರು ಸಹಸ್ರ ಸಂಖ್ಯೆಯಲ್ಲಿ ಹೊರೆಗಳನ್ನು ಕಳುಹಿಸುವುದಾಗಿ ಆಶ್ವಾಸನೆ ಕೊಟ್ಟಿರುವುದು ಸಂತೋಷಕರವೆನ್ನಲಾಗಿದೆ.

ಚಾಂತಾರು— ಕಲ್ಯಾಣ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವ ಮಹಾಸಭೆಯು ಇದೇ ತಾ. 8ರಲ್ಲಿ ಉಡುಪಿ ಉತ್ತರ ಶ್ರೇಣಿಯ ಶಾಲಾ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಶ್ರೀಪತಿರಾವ್ ಫಲಿಮಾರ್ ಶಾರ್ ಮೊದಲಾದವರು ಭಾಷಣವಿತ್ತರು. ಡಾ। ಕೆ. ಕೆ. ಕಲ್ಕೂರರು ಸ್ವಾಗತಮಾತುಗಳನ್ನಾಡಿದರು. ಮೈಸೂರಿನ ಕುಮಾರಿಯರು ಸುಭದ್ರೆ ಮತ್ತು ರುಕ್ಮಿಣಿಯವರಿಂದ ಹರಿಕಥೆ ಜರಗಿತು. ಶ್ರೀ ಎ. ಪದ್ಮನಾಭ ಮಯ್ಯರವರು ಧನ್ಯವಾದಗಳನ್ನರ್ಪಿಸಿದರು.

ಶಿರ್ವ— ಹಿಂದೂ ಹಾ। ಪ। ಶಾಲೆಯ ಹಳೆಯ ವಿದ್ಯಾರ್ಥಿಗಳ ಪ್ರಥಮ ಅಧಿವೇಶನವು ತಾ 5 ರಲ್ಲು ಶ್ರೀ ಎಸ್. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಜಗನ್ನಾಥ ಸೆಟ್ಟರ ಸ್ವಾಗತ ಭಾಷಣಾ ನಂತರ ಶ್ರೀಗಳಾದ ಶಿವಣ್ಣ ಸೆಟ್ಟಿ, ಬಿ. ಬಾಲಕೃಷ್ಣ ಸೆಟ್ಟಿ ಮೊದಲಾದವರು ಸಭೆಯ ಉದ್ದೇಶಗಳನ್ನು ವಿವರಿಸಿ ಮಾತನಾಡಿದರು. ನಂತರ ಹಳೇ ವಿದ್ಯಾರ್ಥಿ ಸಂಘಕ್ಕೆ ಹೊಸ ವರ್ಷದ ಅಧಿಕಾರಿಗಳ ಚುನಾವಣೆ ನಡೆಯಿತು. ಕಾರ್ಯಕಾರೀ ಮಂಡಲಿಯಲ್ಲಿ ಶ್ರೀಗಳಾದ ಜಗನ್ನಾಥ ಸೆಟ್ಟರು ಅಧ್ಯಕ್ಷರಾಗಿಯೂ ಎಸ್. ಸಂಜೀವ ಸೆಟ್ಟಿ ಮತ್ತು ಹರಿಶ್ಚಂದ್ರ ಆಚಾರಿಯವರು ಜತೆಕಾರ್ಯದರ್ಶಿಗಳಾಗಿಯೂ ರಘುರಾಮ ಹೆಗ್ಡೆಯವರು ವಿಚಾರ್ಣಿಗಳಾಗಿಯೂ ಇರುವರು.

ಬ್ರಹ್ಮಾವರ ತಾ 10 ರಲ್ಲು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಕುಂಞಮ್ಮದ್ ರವರು ಬ್ರಹ್ಮಾವರದಲ್ಲಿ ಹೊಸದಾಗಿ ಸರಕಾರದ ಧನ ಸಹಾಯದಿಂದ ಕಟ್ಟಿಸಲ್ಪಡುವ ವಿವಿಧೋದ್ದೇಶಗಳ ಕೊಪರೇಟಿವ್ ಸೊಸೈಟಿಯ ಕಟ್ಟೋಣದ ರಚನೆಯನ್ನು ಪರಿಶೀಲಿಸಿದರು. ಸಂಘದ ಅಧ್ಯಕ್ಷ ಶ್ರೀ ಬಿ. ವಿ. ಮಾಧವರಾವ್ ಮತ್ತು ಕಾರ್ಯದರ್ಶಿ ಶ್ರೀ ಎಮ್. ರಾಮಕೃಷ್ಣ ಭಟ್ಟರು ಕಲೆಕ್ಟರರನ್ನು ಸ್ವಾಗತಿಸಿದರು. ಕಲೆಕ್ಟರರ ಸಲಹೆ ಮೇರೆಗೆ ಬ್ರಹ್ಮಾವರದಲ್ಲಿ ಗ್ರಾಮೋದ್ಧಾರ ಸಂಘವನ್ನು ರಚಿಸಲಾಯಿತು. ಶ್ರೀಗಳಾದ ಕೆ. ವರದರಾಜ ಪೈ (ಅಧ್ಯಕ್ಷ), ಬಿ. ವಿ. ಮಾಧವರಾವ್ (ಉಪಾಧ್ಯಕ್ಷ), ಎಮ್. ಮಂಜುನಾಥ ಭಟ್ (ಕಾರ್ಯದರ್ಶಿ), ಎಮ್. ಎಲ್. ಕಲ್ಕೂರ್ (ಜತೆಕಾರ್ಯದರ್ಶಿ) ಬಿ. ಪದ್ಮನಾಭಪೈ, ಟಿ. ಗೋಪಾಲಕೃಷ್ಣಪೈ, ಬಿ. ಮೋನಪ್ಪ ಸೆಟ್ಟಿ, ಬಿ. ಶ್ರೀನಿವಾಸ ಉಪಾಧ್ಯ, ಮೋನಪ್ಪ ಸೆಟ್ಟಿ, ವೆಂಕಟ್ರಾವ್, ಶ್ರೀನಿವಾಸಾಚಾರ್ಯ, ಸೀನಪ್ಪಸೆಟ್ಟಿ, ಬಿ. ಗುಂಡ್ರಾವ್, ಇನಾಸ್ ಲೂವಿಸ್, ಎಚ್. ಸುಬ್ರಾಯ ಭಟ್, ಬಿ. ನಾಗೇಶ ನಾಯ್ಕ, ಎಮ್. ರಾಮಕೃಷ್ಣ ಭಟ್, ಬಿ. ಚಂದು ಪೂಜಾರಿಗಳು ಕಾರ್ಯಕಾರೀ ಸಮಿತಿಗೆ ಆರಿಸಲ್ಪಟ್ಟರು.

ನಿಮಗೆ ಯಾವುದೇ ತರದ ಉದ್ಯೋಗ ಬೇಕೆಂದಿದ್ದರೆ ಅಥವಾ ವ್ಯಾಪಾರ ನಡೆಸಬೇಕೆಂದಿದ್ದರೆ ಕೂಡಲೇ ಬರೆಯಿರಿ:

ಟಪ್ಪಾಲುಪೆಟ್ಟಿಗೆ ನಂಬ್ರ 1868
ಬೊಂಬಾಯಿ— 1

ಕೃತಜ್ಞತೆ

ನಗರಸಭೆಯ ಉಪಚುನಾವಣೆಯಲ್ಲಿ ತೆಂಕಪೇಟೆ ವಾರ್ಡಿನಲ್ಲಿ ನಾನು ಕಾಂಗ್ರೆಸ್ ಹುರಿಯಾಳಾಗಿ ಸ್ಪರ್ಧಿಸಿದಾಗ ನನಗೆ ಹಲವಾರು ವಿಧದಲ್ಲಿ ಸಹಾಯ, ಸಹಕಾರವಿತ್ತು ಬೆಂಬಲಿಸಿದ ಮಹಾಜನರಿಗೆಲ್ಲರಿಗೂ ಮತ್ತು ನಾನು ಜಯಹೊಂದಿದುದಕ್ಕಾಗಿ ಅಭಿನಂದಿಸಿದ ನನ್ನ ಸನ್ಮಿತ್ರರಿಗೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಯು. ರಾಘವೇಂದ್ರ ಕೃಷ್ಣ ಭಟ್ಟ
ಉಡುಪಿ.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಸಿದವರು ಸದ್ರಿ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ, ಅವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸು ಜ್ಯಾರಿಯಾಗದೆ ವಾಪಾಸು ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಿಂಗಳ ತಾರೀಕು 21–3–1955ನೇ ಸೋಮವಾರ ಮಧ್ಯಾಹ್ನ ಗಂಟೆ 3ಕ್ಕೆ ಯಾ ಅನಂತರ ಬೇಂಕಿನವರಿಗೆ ಯುಕ್ತ ಕಂಡ ತಾರೀಕಿಗೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡಲಾಗುವುದು, ತಿಳಿದಿರುವುದು.

ಲೋನಿನ ನಂಬ್ರ	ಆಸಾಮಿಗಳ ಹೆಸರು ಮತ್ತು ವಿಳಾಸ	ತಾ. 31–12–54ರ ವರೆಗೆ ಬೇಂಕಿಗೆ ಬರತಕ್ಕ ಮೊಬಲಗು		
1917/51	ಶ್ರೀ. ಕೃಷ್ಣಪ್ಪ ಪೂಜಾರಿ, ಅಂತಪ್ಪ ಪೂಜಾರಿಯವರ ಅಳಿಯ, ಕಲ್ಕುದುರು, ಕೊಳಕೆ ಯರ್ಮತ್ತೂರು ಗ್ರಾಮ, ಪೋಸ್ಟು ಕಾರ್ಕಳ.	155	5	0
242/52	ಶ್ರೀ. ಸೋಮಯ್ಯ ಶೇರಿಗಾರ, ಕೃಷ್ಣಯ್ಯ ಶೇರಿಗಾರರ ಮಗ, ಹೊಸಬೆಟ್ಟು, ಕಾಡೂರು ಗ್ರಾಮ, ಪೋಸ್ಟು ಬೈಲೂರು.	90	13	0
100/52	ಶ್ರೀ. ಶ್ರೀಧರ ಮಹಾಬಲ ಹೆಗ್ಡೆ, ಮಹಾಬಲ ಹೆಗ್ಡೆಯವರ ಮಗ, ದೇವರಮನೆ, ಕಣಂಜಾರು ಗ್ರಾಮ, ಪೋಸ್ಟು ಕಣಂಜಾರು.	121	3	0
406/53	ಶ್ರೀ. ಕೃಷ್ಣಯ್ಯ ಆಚಾರ್ಯ, ನಾಗಪ್ಪ ಆಚಾರ್ಯರ ಮಗ, ಚೆಕ್ಕಿಂಗ್ ಇನ್ಸ್ಪೆಕ್ಟರ್ ಸಿ. ಬಿ. ಎ. ಕಾರ್ಕಳ.	43	9	0
541/53	ಶ್ರೀ. ಸೀನ ಶೆಟ್ಟಿ, ಲೋಕಯ್ಯ ಶೆಟ್ರ ಅಳಿಯ, ಲೋರಿ ಡ್ರೈವರ್, ಪುಲ್ಕೇರಿ, ಕಾರ್ಕಳ.	58	0	0
563/53	—do— —do—	101	8	0
643/53	—do— —do—	85	12	0

Karkala, 10-3-1955.

K. Gopalkrishna Shetty, Agent.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ಸಾಲ ಸ್ವಂತ ಜವಾಬ್ದಾರಿಯ ಮೇರೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.

P. o. Box No. 3219, BOMBAY 3-

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಮಾಲೆ	೪	೦
ಜ್ಞಾನಯೋಗ	೪	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೪	೦
ರಾಜಯೋಗ	೩	೧೦
ಶ್ರೀ ಶಾರದಾದೇವಿ ಸಂಭಾಷಣೆ	೩	೮
ಗೀತಾ ಪತ್ರಗಳು	೩	೮
ಮಿಂಚುನೋಟಕೆ ಹಿಂದೂಧರ್ಮ	೩	೮
ಶ್ರೀ ಶಾರದಾದೇವಿ	೩	೦
ಸಾಧಕನ ಕೈದೀವಿಗೆ	೩	೦
ಪರಮಾರ್ಥ ಪ್ರಸಂಗ	೩	೦
ಹಿಮಾಚಲ ಸಾನ್ನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ)	೩	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ಜ್ಞಾನ ಮಾರ್ಗ	೦	೮
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಧ್ಯಾನ	೦	೪

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಮಂಗಳೂರು

ಭಾಷಣ:— ದ. ಕ. ಸೆಂಟ್ರಲ್ ಕೋಓಪರೇಟಿವ್ ಬೇಂಕಿನ ಮಹಡಿಯಲ್ಲಿ ತಾ 13 ರಂದು ಸಂಜೆ ಜರಗಿದ ಸಭೆಯಲ್ಲಿ ಶ್ರೀ ಆರ್. ಕೆ. ಪ್ರಭುಗಳು 'ಉತ್ತರ ಧ್ರುವಕ್ಕೊಂದು ಪ್ರವಾಸ' ಎಂಬ ವಿಷಯವನ್ನೆತ್ತಿ ಭಾಷಣವಿತ್ತರು. ಡಾ| ಎಮ್. ಉಪೇಂದ್ರರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಡಾ| ಎಮ್. ಎಸ್. ಶಾಸ್ತ್ರಿಗಳು ಧನ್ಯವಾದಗಳನ್ನರ್ಪಿಸಿದರು.

ನಗರಸಭೆಯು—ತಾ. 12ರಂದು ಸಂಜೆ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಬಾವಟೆ ಗುಡ್ಡೆಯ ವಿಹಾರ ಉದ್ಯಾನದಲ್ಲಿರುವ ಬಾವಟೆಕಂಬದ ಕಟ್ಟಡದಲ್ಲಿ ಮಕ್ಕಳಿಗಾಗಿ ಮಾತ್ರವೇ ಒಂದು ವಾಚನಾಲಯವನ್ನು ತೆರೆಯಬೇಕೆಂಬ ಶ್ರೀ ಎಸ್. ಗೋಪಾಲ ಸಾಲೆನ್ಸರ ನಿರ್ಣಯವು ಬಹುಮತದಿಂದ ಪಾಸಾಯಿತು. ರಾಷ್ಟ್ರೀಯ ಆನೆಕಾಲು ನಿರೋಧ ಕಾರ್ಯಕ್ರಮವನ್ನು ಮಂಗಳೂರಲ್ಲೂ ನಡೆಸುವ ಬಗ್ಗೆ ಸರಕಾರವನ್ನು ಅಭಿನಂದಿಸಲಾಯಿತು ಅಲ್ಲದೆ ಮಳೆಗಾಲ ಪ್ರಾರಂಭವಾಗುವ ಮೊದಲೇ ನಿರೋಧದಳವು ಕಾರ್ಯಕ್ರಮ ಆರಂಭಿಸುವಂತೆಯೂ, ದಳದ ಕೇಂದ್ರವು ಮಂಗಳೂರಲ್ಲೇ ಸ್ಥಾಪಿಸಲ್ಪಡಬೇಕೆಂದೂ ಕೇಳಿಕೊಳ್ಳಬೇಕೆಂದಾಯಿತು. ನಿಯಮಿತ ಸಭೆಗಳಿಗೆ ಗೈರಹಾಜರಾದ ಶ್ರೀ ಎಮ್. ಎಸ್. ದಯಾಕರರ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು.

ಸಾರ್ವಜನಿಕ ವಾಚನಾಲಯ— ಮಂಗಳೂರು ನಗರ ಸಭೆಯ ಕಡೆಯಿಂದ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಕಂಕನಾಡಿ ಪೇಟೆಯಲ್ಲಿ ಒಂದು ಸಾರ್ವಜನಿಕ ವಾಚನಾಲಯವನ್ನು ತೆರೆದಿರುವರು.

ವಿಕ್ಟೋರಿಯಾ ಜುಬಿಲಿ ವಿದ್ಯಾರ್ಥಿ ವೇತನ— ಈ ನಾಮಧೇಯದಿಂದ ನೂರು ವಿದ್ಯಾರ್ಥಿ ವೇತನಗಳಿಗೆ ಅರ್ಜಿಗಳನ್ನು, ಈ ವಿದ್ಯಾರ್ಥಿವೇತನ ನಿಧಿಯ ಅಧ್ಯಕ್ಷರಾದ ಜಿಲ್ಲಾ ಜಡ್ಜರು ತಾ 6-6-55 ತನಕ ಸ್ವೀಕರಿಸುವರು. ಈ ವಿದ್ಯಾರ್ಥಿವೇತನವು ಓರ್ವ ಬ್ರಾಹ್ಮಣ, ಓರ್ವ ಕ್ರೈಸ್ತ ಹಾಗೂ ಓರ್ವ ನಿಮ್ನ ವರ್ಗದ ವಿದ್ಯಾರ್ಥಿ ಹೀಗೆ ದ. ಕ. ಜಿಲ್ಲೆಯ ವಿದ್ಯಾರ್ಥಿಗಳಿಗೆ ಕೊಡಲಾಗುವುದು.

ಉಪಾಧ್ಯಾಯರು ಬೇಕಾಗಿದ್ದಾರೆ.

ಕುಂದಾಪುರ ತಾಲೂಕು ಬೆಳ್ಳಾಲ ಗ್ರಾಮದ ಶ್ರೀ ಶಾರದಾ ಎಯಿಡೆಡ್ ಶಾಲೆಗೆ ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯರು ಬೇಕಾಗಿದ್ದಾರೆ. ಇಷ್ಟವುಳ್ಳವರು ತಾ. 25-3-55 ರೊಳಗೆ ಕೆಳಗಿನವರಿಗೆ ಅರ್ಜಿಗಳನ್ನು ಕಳುಹಿಸಬಹುದು.

ಕೆ. ನರಸಿಂಹ ಶೆಟ್ಟಿ, ಟೀಚರ್
ಮೆನೇಜರ್,
ಶ್ರೀ ಶಾರದಾ ಎಯಿಡೆಡ್ ಎಲಿಮೆಂಟರಿ ಶಾಲೆ, ಮೂಡಮುಂಡು, ಕುಂದಾಪುರ ತಾಲ್ಲೂಕು. ಕರ್ಕುಂಜೆ ಪೋಸ್ಟು, ದ. ಕ.

ನರೆತ ಕೂದಲಿನಿಂದ ಪಾರಾಗಿರಿ

ತಾತ್ಕಾಲಿಕ ಉಪಶಮನವನ್ನು ಕೊಡುವ ರಂಗುಗಳಿಗೆ ಮರುಳಾಗಬೇಡಿರಿ. ಆಯುರ್ವೇದ ರೀತ್ಯಾ ದೇಶೀಯ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ 'ವಿಶ್ವಕಲ್ಯಾಣ ಹೇರ್ ಆಯಿಲ್' ಅಕಾಲಿಕ ನರೆತ ಕೂದಲನ್ನು ವಿಸ್ಮಯಕರ ರೀತಿಯಲ್ಲಿ ಸ್ವಾಭಾವಿಕ ಕಪ್ಪು ಬಣ್ಣಕ್ಕೆ ತರುವುದಲ್ಲದೆ 60 ವರ್ಷ ಪ್ರಾಯದ ತನಕ ಕರ್ರಗಾಗಿಯೇ ಉಳಿಸುವುದು. ತಲೆನೋವು, ಮಾನಸಿಕ ದುರ್ಬಲತೆ, ದೃಷ್ಟಿ ದೋಷ ಮೊದಲಾದುವುಗಳಿಗೂ ಈ ತೈಲವು ಅತ್ಯುಪಯುಕ್ತವಾದುದು.

ಕೆಲವೇ ನರೆತ ಕೂದಲುಗಳಿಗಾದರೆ ರೂ. 3-8-0 ಬೆಲೆಯ ಒಂದು ಸೀಸೆಯನ್ನು ಕೊಂಡುಕೊಳ್ಳಿರಿ. 3 ಸೀಸೆಗೆ ರೂ. 9/-. ಉತ್ತಮ ತರದ್ದಕ್ಕೆ ಸೀಸೆಗೆ ರೂ. 5/-. 3 ಸೀಸೆಗಳಾದರೆ ರೂ. 12/-.

P. D. GUPTA & CO.,
(No. 5) P. O. Begu Sarai
(Monghyr)

ಈ ಬಗ್ಗೆ ಸ್ಪರ್ಧಾ ಪರೀಕ್ಷೆಯೊಂದು ಜೂನ್ ತಿಂಗಳ ತಾ 27 ಮತ್ತು 28 ರಲ್ಲಿ ಗವರ್ನಮೆಂಟ್ ಕಾಲೇಜಿನಲ್ಲಿ ಜರಗಲಿರುವುದು.

ಎಲ್ಲಾ ಮಿಲ್ ಬಟ್ಟೆಯ ಲೈಸೆನ್ಸುದಾರರೂ— ತಾವು 1955-56 ರಲ್ಲಿ ವ್ಯಾಪಾರ ಮಾಡಲು ಇಚ್ಛಿಸುವುದಾದರೆ ಇದೇ ಮಾರ್ಚ ತಿಂಗಳ ತಾ 31 ರೊಳಗೆ ತಂತಮ್ಮ ಲೈಸನ್ಸುಗಳನ್ನು ರಿನ್ಯೂ ಮಾಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಎಪ್ರಿಲ್ ತಿಂಗಳ ತಾ 1 ರಿಂದ ಲೈಸನ್ಸುಗಳು ರದ್ದಾಗುತ್ತವೆ. 1955-56 ನೇ ವರ್ಷಕ್ಕೆ ರಿನ್ಯೂವಲ್ ಅರ್ಜಿ ಮಾಡುವವರು 25 ರೂಪಾಯಿ ಫೀಸನ್ನು ಖಜಾನೆಗೆ ಕಟ್ಟಿ ಚಲನ್ ನೊಂದಿಗೆ ಹಿಂದಿನ ಲೈಸನ್ಸನ್ನು ಜಿಲ್ಲಾ ಕಲೆಕ್ಟರರ ಆಫೀಸಿಗೆ ಕಳುಹಿಸಬೇಕು ಎಂದು ಕಲೆಕ್ಟರರ ಆಫೀಸು ಪ್ರಕಟಣೆ ಹೊರಟಿದೆ.

ಡೈರೆಕ್ಟರ್ ಆಫ್ ಟೆಲಿಗ್ರಾಫ್ಸ್ ಆಗಮನ — ಮದ್ರಾಸು ಸರ್ಕಲಿನ ಡೈರೆಕ್ಟರ್ ಆಫ್ ಟೆಲಿಗ್ರಾಫ್ಸ್ ಶ್ರೀ ಕೆ. ವಿ. ರಂಗನಾಥನ್, ಅವರು ತಾ. 12ರಲ್ಲಿ ಮಂಗಳೂರಿಗೆ ಆಗಮಿಸಿ ಕೆನರಾ ಚೇಂಬರ್ ಆಫ್ ಕಾಮರ್ಸನವರು ಒಪ್ಪಿಸಿದ ಮನವಿಯನ್ನು ಸ್ವೀಕರಿಸಿದರು. ಶ್ರೀ ಗಜಾನನರಾವ್ ಪಂಡಿತರು ಸಭಾಧ್ಯಕ್ಷತೆವಹಿಸಿದ್ದರು. ಮನವಿಗೆ ಉತ್ತರ ಕೊಡುತ್ತಾ ಡೈರೆಕ್ಟರರು ಹೀಗೆಂದರು, 'ಮುತ್ತೂರಿನಲ್ಲಿ ಒಂದು ಟೆಲಿಫೋನ್ ಎಕ್ಸ್‌ಚೇಂಜ್; ಮೂಡಬಿದ್ರಿ, ಸುರತ್ಕಲ್, ಪಾಣೆಮಂಗಳೂರು, ಮಂಜೇಶ್ವರ, ಕೋಟೇಶ್ವರ, ಹಂಗಾರಕಟ್ಟೆ, ಕಂಕನಾಡಿ, ಪೆಂಟ್ಲಾಂಡ್‌ಪೇಟೆ, ಉದ್ಯಾವರ ಮೊದಲಾದ ಕಡೆಗಳಲ್ಲಿ ಟೆಲಿಫೋನ್ ಪಬ್ಲಿಕ್ ಕಾಲ್ ಆಫೀಸುಗಳು; ಕೋಟೇಶ್ವರ, ಶಿರ್ವ, ಕುಲಶೇಖರ, ಗಂಗೊಳ್ಳಿ, ಬಂದರ, ಪೆಂಟ್ಲಾಂಡ್‌ಪೇಟೆ, ಉದ್ಯಾವರ, ಹಿರಿಯಡಕ, ಮಂಗಳೂರು ರಥಬೀದಿ ಮೊದಲಾದ ಸ್ಥಳಗಳಲ್ಲಿ ಟೆಲಿಗ್ರಾಫ್ ಆಫೀಸುಗಳು; ಮೊದಲಾದ ತಂತಿ ಟೆಲಿಫೋನ್ ಅಭಿವೃದ್ಧಿ ಯೋಜನೆಗಳನ್ನು ಆದಷ್ಟು ಬೇಗನೆ ಕೈಕೊಳ್ಳಲಾಗುವುದು. ಮುಂದಿನ ವರ್ಷದಲ್ಲಿ ಮಂಗಳೂರು ಪೋಸ್ಟ್ ಎಂಡ್ ಟೆಲಿಗ್ರಾಫ್ ಆಫೀಸಿಗೊಂದು ಹೊಸ ಕಟ್ಟಡವನ್ನು ಈಗಿನ ಟೆಲಿಫೋನ್ ಎಕ್ಸ್‌ಚೇಂಜಿನ ಬಳಿಯ ಸ್ಥಳದಲ್ಲಿ ಕಟ್ಟಿಸುವ ಯೋಜನೆಯಿದೆ. ಮಂಗಳೂರು-ಬೊಂಬಾಯಿ ಮತ್ತು ಮಂಗಳೂರು-ದಿಲ್ಲಿ ಕೋಟೆಗಳ ನಡುವೆ ತಂತಿ ವಾರ್ತೆಗಳನ್ನು ಟೆಲಿ ಪ್ರಿಂಟರ್ ಮೂಲಕ ಕಳುಹಿಸುವ ವ್ಯವಸ್ಥೆ ಮಾಡುವ ಯೋಜನೆಯು ಆದಷ್ಟು ಬೇಗನೆ ಕಾರ್ಯಗತಗೊಳಿಸುವ ಯೋಜನೆಯಿದೆ. ಕೋಟೆಕಾರು, ಉಳ್ಳಾಳ, ಕುಲಶೇಖರಗಳಲ್ಲಿ ಟೆಲಿಫೋನ್ ಪಬ್ಲಿಕ್ ಕಾಲ್ ಆಫೀಸುಗಳನ್ನು ಮಾಡುವ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಕಿನ್ನಿಗೋಳಿಯಲ್ಲೊಂದು ಟೆಲಿಗ್ರಾಫ್ ಆಫೀಸು ತೆರೆಯುವ ಯೋಜನೆಯನ್ನು ಪರಿಶೀಲಿಸಲಾಗುತ್ತದೆ. ಟೆಲಿಫೋನ್ ದರಗಳನ್ನು ಹೆಚ್ಚು ಕಡಮೆ ಮಾಡುವುದು ಇಲಾಖೆಯ ಕೈಯಲ್ಲಿಲ್ಲ. ಅದು ಸರಕಾರದ ಕಾನೂನಿನ ಮೇರೆಗೆ ಹೊರಿಸಿದ ದರದ ಮೇಲೆ ಹೊಂದಿಕೊಂಡಿದೆ. ಈ ದರಗಳ ಕುರಿತು ಸರಕಾರ ಪರ್ಯಾಲೋಚಿಸುತ್ತಿದೆ. ಶ್ರೀ ಕೆ. ಉಪೇಂದ್ರಪೈಗಳು ಧನ್ಯವಾದಗಳನ್ನಿತ್ತರು.

ಪೌರತನ ತರಬೇತಿ ಶಿಬಿರ ಸ್ಪೊಂಡು ಉರ್ವ ಕೆನರಾ ಹೈಸ್ಕೂಲಿನ ಹಿರಿಯ ಮತ್ತು ವಿಶಿಷ್ಟ ತರಬೇತಿ ವಿದ್ಯಾರ್ಥಿಗಳಿಗಾಗಿ ತಾ 26—2—55 ರಿಂದ 7—3—55 ರ ವರೆಗೆ ಶ್ರೀ ಬಿ. ವಿ ರಮಣ, ಎಂ. ಎ. ಎಲ್ ಟಿ ಅವರ ನೇತೃತ್ವದಲ್ಲಿ ನಡೆಯಿತು. ತಾ 6 ರಂದು ಶ್ರೀ ರಾಮಚಂದ್ರ ಪೈಗಳ ಅಧ್ಯಕ್ಷತೆಯಲ್ಲಿ ಡಾ| ಎಂ. ನರಸಿಂಹ ಪೈ ಮೊದಲಾದವರ ಭಾಷಣಗಳಿಂದ ಸಮಾರೋಪಸಮಾರಂಭ ಜರಗಿತು.

ಶ್ರೀ. ಪುತ್ತು ವೈಕುಂಠ ಶೇಟರ ನಿಧನ - ಬೀಡಿ ವ್ಯಾಪಾರದಲ್ಲಿ ಪ್ರಸಿದ್ಧಿಯನ್ನು ಪಡೆದ ಹಾಗೂ ಆ ವೈಗಾರಿಕೆಯಲ್ಲೇ ಉನ್ನತಿಯನ್ನು ಗಳಿಸಿದ ಪೈ ಸಮಾಜದ ಮುಖಂಡರಲ್ಲೊಬ್ಬರಾದ ಶ್ರೀ ಪುತ್ತು ವೈಕುಂಠ ಶೇಟರು ತಾ 10 ರಂದು 72 ನೇ ಪ್ರಾಯದಲ್ಲಿ ನಿಧನಹೊಂದುದು ವಿಷಾದಕರವಿದೆ. ಇವರು ದೈವ ಭಕ್ತರೂ ಸಮಾಜ ಸೇವಕರೂ ಪರೋಪಕಾರಿಯೂ ಆಗಿದ್ದರು.

ವರ್ಧಂತಿ— ಕಂಕನಾಡಿ ಎಲಿಮೆಂಟರಿ ಶಾಲೆಯ ವರ್ಧಂತಿಯು ತಾ. 13ರಂದು ಜಿ. ಬೋರ್ಡಿನ ಉಪಾಧ್ಯಕ್ಷ ಶ್ರೀ. ಬಿ. ಆರ್. ಶೆಣೈರರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 351/1954

ವಾದಿ — ನರಸಿಂಹ ಕೊಡ್ಗ.

ಪ್ರತಿವಾದಿರು 1 ದೇವರಾಯ ಕೊಡ್ಗ. 2 ಪದ್ಮಾವತಿ ಸೆಡ್ತಿ. 3. ಬುಜಂಗಸೆಟ್ಟಿ. 4 ಮಿನಾಕ್ಷಿಸೆಡ್ತಿ. 5 ಅಂತಯ್ಯ ಸೆಟ್ಟಿ. 6 ಶಂಕರ ಸೆಟ್ಟಿ. 7 ವೈಸರ ಬಾಬಿಸೆಡ್ತಿ.

4—5ನೆ ಪ್ರತಿವಾದಿರಿಗೆ ಯಾ ಮೂಲಕ ತಿಳಿಸುವದೇನೆಂದರೆ

4ನೆ ಪ್ರ. ಮಿನಾಕ್ಷಿ ಸೆಡ್ತಿ. 5ನೆ ಪ್ರ. ಅಂತಯ್ಯ ಸೆಟ್ಟಿ. ಕೊಳ್ಕೆಬೈಲು ಗಿರಿಯಂಣ ಸೆಟ್ರ ಮಕ್ಕಳು. ಗುಳುವಾಡಿಗ್ರಾಮದ ನಾಡೂರಲ್ಲಿ ರುವವರು.

ಮೇಲ್ಕಂಡ ವಾದಿಯು ನಿಮ್ಮ ಮೇಲೆ ದಾಕಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 1-4-1955ಕ್ಕೆ ಮೇಲ್ಕಂಡ ಕೋರ್ಟನಲ್ಲಿ ತಕ್ಕೆಗೆಯಿಟ್ಟಿರುತ್ತದೆ. ಸದ್ರಿದಾವೆಯ ವಿಷಯ ನಿಂಮ ಉದಾಹರಣೆ ದಾಕಲು ಮಾಡುವದುಯಿದ್ದ ಪಕ್ಷಕ್ಕೆ ಸದ್ರಿ ತಾರೀಕಿನ ದಿವಸ ಹಗಲು 11 ಘಂಟೆಗೆ ಸದ್ರಿಕೋರ್ಟನಲ್ಲಿ ನೀವೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಸದ್ರಿ ತಾರೀಕಿನಲ್ಲಿ ನೀವು ಹಾಜರು ಆಗದೆಯಿದ್ದರೆ ನಿಂಮ ಗೈರುಹಾಜರಿಯಲ್ಲಿ ವ್ಯಾಜ್ಯವು ತೈಸಲು ಮಾಡೋಣಾದೀತೆಂತ್ತ ನೀವು ತಿಳಿಯತಕ್ಕದ್ದು.

M. Ananthaya.
Advocate For Plaintiff

ತಾರೀಕು. 12-1-55 ಮೊಕ್ಕಾಂ ಕುಂದಾಪುರ

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸಲು ಬಡ್ಡಿ, ಯಾವುದನ್ನು ಈತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ಮಾರ್ಚ ತಿಂಗಳ ತಾರೀಕು 23 ನೇ ಬುಧವಾರ, ಅಪರಾಹ್ನ ಘಂಟೆ 2.0 ಕ್ಕೆ-ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿವಸಗಳಲ್ಲಿ ಪುನ ನೋಟೀಸು ಕೊಡದೇನೆ, ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು, ತಿಳಿದಿರಲಿ.

ಸಾಲದ ಪಂಜಿಸ್ತ್ರಿ ನಂಬರು	ಹೆಸರು ಮತ್ತು ವಿಳಾಸ	ಹೊಬಲಗು ರೂ.	ಆ.
214/49	ಶ್ರೀ ಎಸ್. ಅಬೂಬಕರ್ ಸಾಹೇಬ, ಮುಗ್ದುಮ್ ಸಾಹೇಬರ ಮಗ, ಕೇರಿ, ಬೈಂದೂರು.	31	12
43/53	,, ಯು. ಗೋವಿಂದ್ರಾಯ ಶೇಟ್, ಸುಬ್ರಾಯ ಶೇಟರ ಮಗ, ಉಪ್ಪುಂದ.	23	4
361/53	ಶ್ರೀಮತಿ ನಂದು, ಮಂಜಿಯ ಮಗಳು, ಸುಬ್ಬರಹಿತ್ಲು, ಉಪ್ಪುಂದ.	36	13
606/53	ಶ್ರೀ ಕೋಟಿ ಸುಬ್ರಾಯ ಸೇರುಗಾರ,ದಾಸ ಸೇರುಗಾರರ ಮಗ, ಪಡುವರಿ.	11	14
622/53	,, ರಾಜಾನ್ ಸಾಹೇಬ್, ಕಾದಿರ್ ಸಾಹೇಬರ ಮಗ, ನಾವುಂದ.	86	5
718/53	,, ಮಹಮ್ಮದ್ ಮಿರಾ ಸಾಹೇಬ್, ಮೌಲಾನಾ ಹಸನ್ ಸಾಹೇಬರ ಮಗ, ಕಂಬದಕೋಣೆ.	38	8
55/54	,, ಶಿವರಾಮ ಸೇರುಗಾರ, ಬೇಲೆಮನೆ ಶೇಷಯ್ಯ ಸೇರುಗಾರರ ಮಗ, ಪಡುವರಿ.	16	11
179/54	,, ಮಹಮ್ಮದ್ ಮಿರಾ ಸಾಹೇಬ್, ಹಸನ್ ಸಾಹೇಬರ ಮಗ, ವ್ಯಾಪಾರಿ, ನಾಗೂರು, ಕಿರಿಮಂಜೇಶ್ವರ.	43	9
188/54	M. ವಾಸುದೇವ ಸೇರುಗಾರ, ಕೃಷ್ಣಪ್ಪ ಸೇರುಗಾರರ ಮಗ, ವ್ಯಾಪಾರಿ, ಬೈಂದೂರು.	27	2
215/54	,, ವೆಂಕಟ್ರಮಣ ಸೇರುಗಾರ, ಪೇಟೆ [illegible] ಮಗ. ಮಯ್ಯಾಡಿ.	105	8
239/54	,, D. K. ರಾಮಯ್ಯ ನಾಯ್ಕ. ನಾಗಪ್ಪ ನಾಯ್ಕರ ಮಗ. ಪಡುವರಿ	37	15
250/54	,, ಜಾನಯ್ಯನ ವೆಂಕಟ್ರಮಣ ಸೇರುಗಾರ. ಜಾನಯ್ಯ ಸೇರುಗಾರರ ಮಗ. ಬಿಜೂರು ಗ್ರಾಮ. ಬಿಜೂರು.	82	12
309/54	,, ಮಾಚಕಾರ್ವಿ. ಗಣಪನ ಮಗ. ಪೂಜಾರಿ ಗಣಪನ ಮನೆ. ಕರ್ಕಿಕಳಿ ಉಪ್ಪುಂದ.	17	4
316/54	,, ಕಂಬುಳಿ ಶಿವರಾಮ ಸೇರುಗಾರ. ಮಲ್ಕಯ್ಯ ಸೇರುಗಾರರ ಮಗ. ಬೀಜಮಾರ; ಬೈಂದೂರು.	37	12
325/54	ಯು. ಗೋಪಾಲ ನಾಯ್ಕ. ನಾರಾಯಣ ನಾಯ್ಕರ ಮಗ. ಬೈಂದೂರು.	9	14
332/54	,, ಜಾನಯ್ಯನ ವೆಂಕಟ್ರಮಣ ಸೇರುಗಾರ ಜಾನಯ್ಯ ಸೇರುಗಾರರ ಮಗ. ಬಿಜೂರುಗ್ರಾಮ, ಬಿಜೂರು.	61	4
335/54	,, ಅಮೀರ್ ಬಾಷಾ. ಗೋಳಿಕಟ್ಟೆ ಖಾಸಿಮಸಾಹೇಬರ ಮಗ. ಬೈಂದೂರು.	113	12
338/54	,, D K. ಸುಬ್ರಾಯ ನಾಯ್ಕ. ರಾಮಯ್ಯ ನಾಯ್ಕರ ಮಗ. ಪಡುವರಿ.	55	14
341/54	,, D. K. ರಾಮಯ್ಯ ನಾಯ್ಕ. ನಾಗಪ್ಪ ನಾಯ್ಕರ ಮಗ. ಪಡುವರಿ.	61	3
363/54	,, ಪಂದು ಶೇಟ್, ನಾಗಪ್ಪ ಶೇಟರ ಮಗ. ಮಯ್ಯಾಡಿ	16	2
[illegible]/54	,, M. P. ವೆಂಕಟರಮಣ ಸೇರುಗಾರ. ಗಣಪಯ್ಯ ಸೇರುಗಾರರ ಮಗ. ಮಯ್ಯಾಡಿ.	63	6
[illegible]/54	,, ನಾರಾಯಣ ಬಿಲ್ಲವ. ಅಣ್ಣಪ್ಪ ಬಿಲ್ಲವನ ಆಳಿಯ ಚೋದ್ರಿ ಮನೆ, ಯಡ್ತರೆಗ್ರಾಮ, ಬೈಂದೂರು.	16	2
386/54	,, K. G. ಶಿವರಾಮ ಸೇರುಗಾರ. ವೆಂಕಟ್ರಮಣ ಸೇರುಗಾರರ ಮಗ. ಪಡುವರಿ.	61	1

ಬೈಂದೂರು,
11-3-1955.

ಎಚ್. ರಾಜೀವ ಶೆಟ್ಟಿ,
ಏಜಂಟ್.

ಒಂದೇ ಭಾಷೆಯ ಆಂದೋಲನ

ಜಗತ್ತಿನಲ್ಲಿ ಇಂದು ಒಗ್ಗಟ್ಟು ಇಲ್ಲದೆ ಭಿನ್ನಭಾವವೇ ತಾಂಡವವಾಡುತ್ತಿದೆ ಎಂಬುದಾಗಿ ಆಕ್ಷೇಪವೆತ್ತುವವರು ಬಹಳ. ಭಾಷೆ, ಜನಾಂಗ, ಮತ, ಜಾತಿ, ವರ್ಣ ಮತ್ತು ಸಂಸ್ಕೃತಿಗಳ ಹೆಸರಿನಲ್ಲಿ ಪ್ರತ್ಯೇಕತೆಯನ್ನೇ ಎತ್ತಿ ಹಿಡಿಯಲಾಗುತ್ತದೆ ಎಂದು ಅವರ ಆರೋಪ. ನಮ್ಮ ದೇಶದಲ್ಲಿ ಭಾಷಾನುಗುಣವಾಗಿ ರಾಜ್ಯಗಳ ಪುನರ್ಘಟನೆಯಾಗಬೇಕೆಂದು ಹೇಳ ಹೊರಟರೆ, ಇದರಿಂದ ರಾಷ್ಟ್ರದ ಐಕ್ಯಕ್ಕೆ ಗಂಡಾಂತರವಾದೀತೆಂಬ ಎಚ್ಚರಿಕೆಯ ಮಾತು ಧುರೀಣರಿಂದ ಬರುತ್ತದೆ. ಒಗ್ಗಟ್ಟನ್ನು ಕಾಯ್ದುಕೊಳ್ಳುವ ಆತುರದಲ್ಲಿ ನಮ್ಮೆಲ್ಲ ವೈವಿಧ್ಯಗಳನ್ನು ಮರೆಯಬೇಕು ಎನ್ನಲಾಗುತ್ತದೆ. ರಾಷ್ಟ್ರಗಳೆಲ್ಲವೂ ಜಾಗತಿಕ ಸರಕಾರದ ಸೂತ್ರಕ್ಕೆ ಬಂಧಿಸಲ್ಪಡುವ ಕನಸೂ ಕೆಲವರಿಗೆ ಬೀಳುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಅಸ್ತಿತ್ವ ತಮ್ಮ ಕನಸು ಒಂದಲ್ಲ ಒಂದು ದಿನ ವಾಸ್ತವದಲ್ಲಿ ಪರಿವರ್ತನೆ ಹೊಂದಬಹುದು ಎಂದು ಕನಸು ಕಂಡವರು ತಮಗೆ ತಾವೇ ಸಮಾಧಾನ ಹೇಳಿಕೊಳ್ಳುತ್ತಾರೆ. ಅಂಥ ಜಾಗತಿಕ ಸರಕಾರದ ಅನುವರ್ತಿಗಳಾಗಬೇಕಾಗಿ ಬರುವ ದಿನವನ್ನು ದೃಷ್ಟಿಯಲ್ಲಿಟ್ಟುಕೊಂಡರೆ, ಈಗಿನ "ರಾಷ್ಟ್ರಭಾಷೆ" ಎಂಬುದರ ಸ್ಥಾನದಲ್ಲಿ ಜಾಗತಿಕ ಭಾಷೆಯೊಂದು ಪ್ರತಿಕ್ಷೇಪಿಸಲ್ಪಡುವುದು ಅತ್ಯಗತ್ಯವಾಗುತ್ತದೆ. ಆಗ ನಾವು-ಅಂದರೆ ದಾಕ್ಷಿಣಾತ್ಯರು—ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯಲು ಇಂದು ತೋರಿಸುತ್ತಿರುವ ಆತುರವನ್ನು ಜಾಗತಿಕ ಭಾಷೆಯ ವಿಷಯದಲ್ಲಿ ಎಲ್ಲರೂ ತೋರಿಸುವಂತಾದೀತು.

ಆದರೆ ಜಾಗತಿಕ ಸರಕಾರದ ರಚನೆಯು ಎಷ್ಟು ಜಟಿಲವಾಗುಳ್ಳದೋ ಜಾಗತಿಕ ಭಾಷೆಯ ಪ್ರಶ್ನೆಯೂ ಅಷ್ಟೇ ಕಠಿಣ ಸ್ವರೂಪದ್ದೆಂದು ಹೇಳಿದರೆ ತಪ್ಪಾಗದು. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವವನ್ನು ಪಡೆದಿರದ ಜಗತ್ತಿನ ಹಲವು ರಾಷ್ಟ್ರಗಳಿವೆಯಷ್ಟೇ – ಅವೆಲ್ಲವುಗಳನ್ನು ಏಕಸೂತ್ರದಲ್ಲಿ ಬಂಧಿಸುವುದು ಸಾಧ್ಯವಾದರೆ ಮಾತ್ರ ಜಾಗತಿಕ ಸರಕಾರದ ಕನಸಿಗೊಂದು ನಿವರಣಾತ್ಮಕ ರೂಪವನ್ನು ಕೊಡಬಹುದು. ಸುಮಾರು ಅರುವತ್ತು ಕೋಟಿ ಜನರುಳ್ಳ- ಪ್ರಪಂಚದ ಐವರಲ್ಲಿ ಒಬ್ಬ ನಾಗರಿಕನನ್ನು ಪಡೆದ- ಜನತಾ ಚೀನದ ಸರಕಾರವನ್ನು ಮನ್ನಿಸದೆ ಸಂಯುಕ್ತ ರಾಷ್ಟ್ರ ಸಂಘ ಯಾವ ಹೆಜ್ಜೆಯನ್ನು ಮುಂದಿಟ್ಟರೂ ಯಶಸ್ಸು ಸಿಗಲಾರದು. ಇದರ ಹೊರತಾಗಿ ಜಗತ್ತಿನ ಎಷ್ಟೋ ಪ್ರದೇಶಗಳಲ್ಲಿ ತೀರಾ ಅನಾಗರಿಕರೆಂದು ನಾವು ಹೇಳುವ ಪ್ರಾಚೀನ ಮನುಷ್ಯಕುಲಗಳು ನೆಲಸಿ, ತಮ್ಮನ್ನು ತಾವೇ ಆಳಿಕೊಳ್ಳುವ ಸಂಭ್ರಮದಲ್ಲಿರುತ್ತವೆ. ಅವುಗಳ ಮೇಲೆ ರಾಷ್ಟ್ರಸಂಘಕ್ಕೇನಾದರೂ ನಿಯಂತ್ರಣ-ಕನಿಷ್ಠ ಪಕ್ಷಕ್ಕೆ ಸಂಪರ್ಕದ ಲಾಭ-ದೊರೆತ ಮೇಲೆಯೇ ಜಗತ್ತಿನ ಸರಕಾರದ ಕುರಿತು ಆಲೋಚಿಸಲು ಸಾಧ್ಯ. ಸುದೈವದಿಂದ ರಾಜಕೀಯ ಮಟ್ಟದ ಈ ಸಮಸ್ಯೆಯನ್ನು ಬಗೆಹರಿಸಲು ಶಕ್ತರಾದರೆ, ಆಗ ಜಾಗತಿಕ ಭಾಷೆಯ ವಿಷಯವನ್ನು ವಿಚಾರಿಸಲು ಎಡೆ ಸಿಗುತ್ತದೆ. ಈಗ ಸಂಯುಕ್ತ ರಾಷ್ಟ್ರ ಸಂಘವು ಬಳಸುತ್ತಿರುವ ಇಂಗ್ಲಿಷ್, ರಶ್ಯನ್, ಫ್ರೆಂಚ್, ಸ್ಪೇನಿಶ್ ಮತ್ತು ಚೈನೀಸ್ ಎಂಬ ಪಂಚ "ಮಹಾ" ಭಾಷೆಗಳ ಬದಲು ಒಂದೇ ಭಾಷೆಯನ್ನು ಉಪಯೋಗಿಸಿದರಾಗದೆ ಎಂಬ ಮಾತಿಗೆ ಆಗ ಬೆಲೆ ಬರುತ್ತದೆ.

ಆದುದರಿಂದ ಜಾಗತಿಕ ಸರಕಾರದ ವಿಷಯದಲ್ಲಿ ಆಸ್ಥೆಯುಳ್ಳವರು ಜಾಗತಿಕ ಭಾಷೆಯ ಮಟ್ಟಿಗೂ ಸಾಕಷ್ಟು ಉತ್ಸಾಹದಿಂದ ಕೆಲಸ ಮಾಡುವುದು ಅಪೇಕ್ಷಣೀಯ. ಒಂದೇ ಭಾಷೆಯನ್ನು ಜಗತ್ತಿನ ಎಲ್ಲರೂ ಬಳಸುವುದರಿಂದ ಮನುಷ್ಯನನ್ನು ಬಹಳ ಹತ್ತಿರದಿಂದಲೂ ಚೆನ್ನಾಗಿಯೂ ತಿಳಿದುಕೊಳ್ಳಬಹುದೆಂದು ತಜ್ಞರ ಅಭಿಪ್ರಾಯ. ಈಗ ರಾಜಕೀಯ ಧುರೀಣರ ನಡುವೆ ನಡೆಯುವ ಮಾತುಕತೆಗಳಲ್ಲಿ ಹೆಚ್ಚಾಗಿ ದುಭಾಷಿಗಳ ಸಹಾಯ ಆವಶ್ಯವೆನಿಸುತ್ತದೆ. ಭಾರತಕ್ಕೆ ಚೀನದ ಪ್ರಧಾನ ಮಂತ್ರಿ ಚೌ ಎನ್ ಲೈ ಆಗಮಿಸಿದಾಗ, ದುಭಾಷಿಗಳ ಸಹಾಯದಿಂದಲೇ ನೆಹರುಗಳು ಅವರೊಡನೆ ಮಾತುಕತೆಯಾಡಿದರು. ಅಂತಾರಾಷ್ಟ್ರೀಯ ಗೋಷ್ಠಿಗಳಲ್ಲಿ ಸಾಮಾನ್ಯವಾಗಿ ಹೀಗೆಯೇ ಆಗುತ್ತದೆ. ನಮ್ಮ ಶಾಸನ ಸಭೆಗಳಲ್ಲಿಯೂ ಸಂಸತ್ತಿನಲ್ಲಿಯೂ ಒಮ್ಮೊಮ್ಮೆ ನಡೆಯುತ್ತಿರುವ ಭಾಷಣದ ಹೊಲಬರಿಯದೆ ಸದಸ್ಯರೂ ಮಂತ್ರಿಗಳೂ ಪೇಚಾಟಪಡಬೇಕಾಗುತ್ತದೆ—ದುಭಾಷಿಗಳು ಅಲ್ಲಿಲ್ಲ ಎಂಬುದೇ ಕಷ್ಟ. ಇವೆಲ್ಲ ದೂರಾಗಬೇಕಾದರೆ "ಒಂದೇ ಭಾಷೆ" ರೂಢಿಯಾಗಬೇಕೆಂಬ ಸಾಮಾನ್ಯ ತಿಳಿವಳಿಕೆ ಇದ್ದಂತೆ ತೋರುತ್ತದೆ. ಆದರೆ ಒಂದೇ ಭಾಷೆಯನ್ನು ರೂಢಿಗೆ ತರುವುದು ಅಷ್ಟು ಸುಲಭವೇ? ನಮ್ಮ ದೇಶದಲ್ಲಿಯೇ ನೋಡಿದರೆ, ರಾಜ್ಯಾಂಗ ಘಟನೆಯು ಮನ್ನಿಸಿದ ೧೪ ಪ್ರಮುಖ ಭಾಷೆಗಳಲ್ಲದೆ ಐನೂರಕ್ಕೂ ಹೆಚ್ಚು ಆಡು ಭಾಷೆಗಳು ರೂಢಿಯಲ್ಲಿದ್ದಂತೆ ಇತ್ತೀಚಿನ ಜನಗಣನೆಯ ವರದಿಯಿಂದ ತಿಳಿದು ಬರುತ್ತದೆ. ಜಗತ್ತಿನ ಮಟ್ಟಿಗೆ ಹೇಳುವುದಾದರೆ ಸುಮಾರು ಮೂರು ಸಾವಿರ ಭಾಷೆಗಳಲ್ಲಿ ಜನರು ಮಾತನಾಡಿಕೊಳ್ಳುತ್ತಾರೆ. ಇವುಗಳಲ್ಲಿ ಎರಡೂವರೆ ಸಾವಿರವನ್ನು "ಕಾಡು" ಜನರ ಭಾಷೆಯೆಂದೂ ಅವರ ಸಂಖ್ಯಾಪ್ರಮಾಣ ಹೆಚ್ಚಿಲ್ಲವೆಂದೂ ಬಿಟ್ಟುಗೊಡಬಹುದು. ಆದಾಗ್ಯೂ ಬೇರೆ ಅನೇಕ ಭಾಷೆಗಳು ಕಡೆಗಣಿಸಲಾರದಷ್ಟು ಪ್ರಾಮುಖ್ಯತೆ ಪಡೆಯುತ್ತವೆ.

ಜಗತ್ತಿನಲ್ಲಿ ಅತಿಹೆಚ್ಚು ಜನರು ಆಡುವ ಭಾಷೆ ಚೈನೀಸ್ ಎಂದು ಅಂಕೆ ಸಂಖ್ಯೆಗಳು ವ್ಯಕ್ತಪಡಿಸುತ್ತವೆ. ಸುಮಾರು ೪೫ ಕೋಟಿ ಜನರಲ್ಲಿ ಆ ಭಾಷೆ ಬಳಸಲ್ಪಡುತ್ತದೆ. ಈ ಚೈನೀಸ್ ಭಾಷೆಯಲ್ಲಿ ಉಪಭೇದಗಳಿವೆ- ಕೂಯು ಎಂಬ ಜಾತಿಯ ಚೈನೀಸ್ ಭಾಷೆ ೩೮ ಕೋಟಿ ಜನರಲ್ಲೂ ಅಂಟೋನೀಸ್ ಜಾತಿಯದು ೨೪ ಕೋಟಿ ಜನರಲ್ಲೂ ರೂಢಿಯಾಗಿದೆ. ಅನಂತರ ೨೦ ಕೋಟಿ ಜನರ ಮಾತೃಭಾಷೆಯಾದ ಇಂಗ್ಲಿಷ್ ಬರುತ್ತದೆ. ಇಂಗ್ಲಿಷ್ ಭಾಷೆ ಮತ್ತೆ ೩೦ ಕೋಟಿ ಜನರ ವ್ಯವಹಾರದಲ್ಲಿಯಾದರೂ ಬಳಕೆಯಲ್ಲಿದ್ದಂತೆ ತೋರುತ್ತದೆ. ರಶ್ಯನ್ ಭಾಷೆ ತೃತೀಯ ಸ್ಥಾನದಲ್ಲಿದ್ದಂತೆ ಕಾಣುತ್ತದೆ- ಮೊದಲು ೧೦ ಕೋಟಿ ರಶ್ಯನರ ಭಾಷೆಯಾಗಿದ್ದದ್ದು ಈಗ ೧೭ ಕೋಟಿ ಜನರ ಆಳುವ ಭಾಷೆಯಾಗಿ ಬದಲಾವಣೆ ಹೊಂದಿರುತ್ತದೆ. ಭಾರತದಲ್ಲಿ ಹಿಂದೀಭಾಷೆ ಇದೇ ರೀತಿಯಲ್ಲಿ ಕ್ಷೇತ್ರವಿಸ್ತಾರವನ್ನೂ ಆಡುವವರ ಸಂಖ್ಯೆಯಲ್ಲಿ ಹೆಚ್ಚಳವನ್ನೂ ತೋರಿಸುವ ದಿನ ಬಹಳ ದೂರವಿರಲಾರದು— ಈಗಾಗಲೇ ೧೨ ಕೋಟಿ ಜನರ ಆಡು ಭಾಷೆಯಾದ ಹಿಂದಿಯು ರಾಷ್ಟ್ರಭಾಷೆಯ ಹೆಸರಿನಲ್ಲಿ ಉಳಿದ ಭಾರತೀಯರ ಪ್ರೀತಿಯನ್ನೂ ಸಂಪಾದಿಸುವುದು ನಿಶ್ಚಯ. ಫ್ರೆಂಚ್ ಭಾಷೆಯು ೬ ಕೋಟಿ ಜನರ ಮಾತೃಭಾಷೆಯಾಗಿದ್ದದ್ದು ಬೇರೆ ೫ ಕೋಟಿ ಜನರ ವ್ಯವಹಾರದ ಭಾಷೆಯಾಗಿಯೂ ಪರಿಗಣಿಸಲ್ಪಡುತ್ತದೆ. ವಸಾಹತುವಾದದ ಫಲವೆಂದು ಮೇಲಿನ ಹೆಚ್ಚಳವನ್ನು ಕರೆದರೆ ಅತಿಶಯೋಕ್ತಿಯಾಗದು. ಸ್ಪೇನಿಶ್ ಭಾಷೆ ಬೆಳೆದದ್ದು ಹಾಗೆಯೇ— ಅದಕ್ಕೆ ೧೦ ಕೋಟಿ ಜನರ ಬೆಂಬಲವುಂಟು. ಉಳಿದ ಭಾಷೆಗಳು ಹೆಚ್ಚು ಪ್ರಭಾವಶಾಲಿಯಾಗಿಲ್ಲದಿದ್ದರೂ ಆಯಾ ಪ್ರದೇಶಗಳಲ್ಲಿ ಅಸ್ತಿತ್ವವನ್ನು ಕಳೆದುಕೊಳ್ಳಲಾರವಷ್ಟೇ—ಆದುದರಿಂದ ಪೋರ್ಚುಗೀಸ್ (೬ ಕೋಟಿ), ಇಟಾಲಿಯನ್ (೪॥ ಕೋಟಿ), ಜರ್ಮನ್ (೮ ಕೋಟಿ), ಮಲಯ (೮ ಕೋಟಿ), ಇಂಡೋನೇಶಿಯನ್ (೬ ಕೋಟಿ), ಅರಬಿ (೮ ಕೋಟಿ), ಪರ್ಶಿಯನ್ (೧॥ ಕೋಟಿ) ಇತ್ಯಾದಿ ಭಾಷೆಗಳು ಉಳಿದೇ ಉಳಿಯುತ್ತವೆ.

ಇಷ್ಟು ಭಿನ್ನ ಭಾಷೆಗಳಿದ್ದರೂ ಒಂದೇ ಭಾಷೆಯಾಡುವ ಜನರಿರಬೇಕೆಂಬ ಭಾವನೆಯನ್ನು ಬಹಳ ಹಿಂದಿನಿಂದಲೂ ಕೆಲವು ಪ್ರತಿಭಾವಂತರು ಇಟ್ಟುಕೊಂಡಿದ್ದರು. ರಾಜಕೀಯ ಪ್ರತಾಪ ಮತ್ತು ಸಾಹಸವು ಅವರ ಆಲೋಚನೆಗೊಂದು ರೂಪುಗೊಡಲು ಅನೇಕವೇಳೆ ನೆರವಾಯಿತು. ಇಂಗ್ಲಿಷರು ತಮ್ಮ ಪ್ರಭುತ್ವ ಪ್ರಭಾವದಿಂದ ಭಾರತದಲ್ಲಿ ತಮ್ಮ ಭಾಷೆಯ ಬೇರನ್ನು ಇಳಿಸಿ ಬಿಟ್ಟಿದ್ದಾರೆಂಬ ನಮ್ಮ ಈಗಿನ ಅನುಭವವೊಂದೇ ಈ ಮಾತಿನ ಸ್ಪಷ್ಟೀಕರಣಕ್ಕೆ ಸಾಕು. ಇಂಗ್ಲಿಷರಿಗೆ ಹಿಂದೆಯೂ ಅಂಥ ಕೆಲಸ ನಡೆದಿತ್ತು— ನಮ್ಮಲ್ಲಿ ಆರ್ಯರಿಂದ ಪ್ರಚಾರಗೊಂಡ ಸಂಸ್ಕೃತದ ವರ್ಚಸ್ಸು ವಿದಿತವಿದ್ದಂತೆ ರೋಮನರ ಕಾಲದಲ್ಲಿ ಯುರೋಪಿನಲ್ಲೆಲ್ಲ ದಿಗ್ವಿಜಯಮಾಡಿದ ಲ್ಯಾಟಿನು ಯುರೋಪ್ಯ ಭಾಷೆಗಳ ಮೇಲೆ ತನ್ನ ಮುದ್ರೆಯೊತ್ತಿರುತ್ತದೆ. ಮಧ್ಯಯುಗದಿಂದೀಚೆಗೆ ವ್ಯವಹಾರದ ಮಟ್ಟಿಗೆ ಕೆಲವು ಭಾಷೆಗಳು ಪ್ರಬಲಗೊಂಡಂತೆ ಕಾಣುತ್ತದೆ — ವಾಣಿಜ್ಯ ಮತ್ತು ವ್ಯಾಪಾರ ಕ್ಷೇತ್ರದಲ್ಲಿ ಇಂಗ್ಲಿಷ್ ಭಾಷೆಯೂ ಸಾಂಸ್ಕೃತಿಕ ಮತ್ತು ರಾಜಕೀಯವಲಯದಲ್ಲಿ ಫ್ರೆಂಚ್ ಭಾಷೆಯೂ ರೂಢಿಯಲ್ಲಿಳಿದಂತೆ ಭಾಸವಾಗುತ್ತವೆ. ಆದರೆ ಇದರಿಂದ ಪ್ರತಿಭಾವಂತರಿಗೆ ಮಾತ್ರ ತೃಪ್ತಿಯಾಗಲಿಲ್ಲ— ಎಲ್ಲ ಜನರೂ ಬಳಸಲ್ಪಡಬಹುದಾದ ಅಂತಾರಾಷ್ಟ್ರೀಯ ಸ್ವರೂಪದ ಕೃತಕ ಭಾಷೆಯೊಂದನ್ನು ಸೃಷ್ಟಿಸಲೇಬೇಕೆಂದು ಅವರು ಶಪಥತೊಟ್ಟಂತೆ ತೋರಿತು. ಕಳೆದ ಶತಮಾನದ ಕೊನೆಯಲ್ಲಿ ಸುಮಾರು ಇನ್ನೂರು ಯೋಜನೆಗಳನ್ನು ಈ ಬಗ್ಗೆ ತಯಾರಿಸಿದ್ದರೆಂದು ಹೇಳಲಾಗುತ್ತದೆ. ಎಲ್ಲರೂ ತಂತಮ್ಮ ಮಾತೃಭಾಷೆಯನ್ನು ಆಯಾ ಭಾಷೆಗಳವರ ಮಟ್ಟಿಗೆ ಉಪಯೋಗಿಸಬಹುದು —. ಆದರೆ ಬೇರೆ ಭಾಷೆಗಳವರೊಡನೆ ವ್ಯವಹರಿಸುವಾಗ ಮಾತ್ರ ಅಂತಾರಾಷ್ಟ್ರೀಯ ಸ್ವರೂಪದ ಈ ಹೊಸ ಭಾಷೆಯನ್ನೇ ಉಪಯೋಗಿಸಬೇಕು— ಎಂಬುದು ಈ ಪ್ರಯತ್ನದ ತಿರುಳು.

ಜರ್ಮನಿಯ ಪಾದ್ರಿಯೊಬ್ಬರು ೧೮೭೯ನೇ ಇಸವಿಯಲ್ಲಿ ಈ ದಿಸೆಯಲ್ಲಿ ಯಶಸ್ವಿಯಾದ ಹೆಜ್ಜೆಯೊಂದನ್ನಿಟ್ಟರು. "ವೊಲಾಪುಕ್" ಎಂದು ನಾಮಕರಣ ಮಾಡಿದ ಹೊಸಭಾಷೆಯೊಂದನ್ನು ಅವರು ಸೃಷ್ಟಿಸಿದರು. ಇದರಲ್ಲಿ ೨೮ ಅಕ್ಷರಗಳಿದ್ದುವಲ್ಲದೆ ಇಂಗ್ಲಿಷ್, ಜರ್ಮನ್, ಫ್ರೆಂಚ್ ಮತ್ತು ಲ್ಯಾಟಿನ್ ಭಾಷೆಗಳಿಂದ ಆರಿಸಿದ ೧೩೦೦ ಧಾತುಗಳನ್ನು ಅಳವಡಿಸಲಾಯಿತು. ಒಟ್ಟು ೧೪೦೦೦ ಶಬ್ದಗಳನ್ನು ರೂಪಿಸಿದುದಲ್ಲದೆ ಕೆಲವು ಪುಸ್ತಕಗಳನ್ನು ಆ ಭಾಷೆಯಲ್ಲಿ ಬರೆದು ಪ್ರಚಾರಪಡಿಸಿದರು. ಸುಮಾರು ಹತ್ತು ಲಕ್ಷ ಜನರ ಬೆಂಬಲವೂ ಈ ಚಳವಳಿಕ್ಕೆ ದೊರೆಯಿತು. ಆದರೆ ಹತ್ತೇ ವರ್ಷಗಳಲ್ಲಿ ಈ ಚಳವಳಿ ಯಾವ ಮುನ್ನಡೆಯನ್ನೂ ಹೊಂದದೆ ಶಾಂತವಾಗಿ ಹೋಯಿತು. ಆ ಬಳಿಕ ನಡೆದ ಪ್ರಯತ್ನಗಳಲ್ಲಿ "ಎಸ್ಪೆರಾಂಟೊ" ಚಳವಳಿ ಉಲ್ಲೇಖನೀಯ. ಇಂದಿಗೂ ಬದುಕಿ ಉಳಿದಿರುವುದರಿಂದ ಈ ಕುರಿತು ಅಭಿಮಾನವನ್ನೂ ತಾಳಬಹುದು. ೧೮೮೭ರಲ್ಲಿ ಇದನ್ನು ಮೊದಲಿಗೆ ಪ್ರಚಾರ ಮಾಡಲಾಯಿತು. ರಶಿಯನರಿಗೂ, ನಾರ್ವೆಯನರಿಗೂ, ಫ್ರೆಂಚರಿಗೂ ಇದು ಪ್ರಿಯವಾದ ಚಳವಳಿಯಾಗಿ ಪರಿಣಮಿಸಿತು. ಫ್ರೆಂಚರು ತೆಗೆದುಕೊಂಡ ಉತ್ಸಾಹವು ಇಂಗ್ಲೆಂಡು ಮತ್ತು ಸ್ವಿಜರ್‌ಲೆಂಡುಗಳಲ್ಲಿಯೂ ಎಸ್ಪೆರಾಂಟೊ ಚಳವಳಿಕ್ಕೆ ಉತ್ತೇಜನಕೊಟ್ಟಿತು. ಈ ಭಾಷೆಯಲ್ಲಿ ಧ್ವನಿಗನುಸಾರವಾದ ಉಚ್ಚಾರವಿದೆಯಲ್ಲದೆ ಯಾವ ಅಪವಾದವೂ ಇಲ್ಲದ ಸೂತ್ರಗಳಿರುವ ಬಹಳ ಸುಲಭವಾದ ವ್ಯಾಕರಣ ಕಂಡು ಬರುತ್ತದೆ. ಟಾಲ್‌ಸ್ಟಾಯ್‌ರಿಗೆ ಒಂದೇ ಗಂಟೆಯೊಳಗೆ ಈ ವ್ಯಾಕರಣ ಮನವರಿಕೆಯಾಯಿತೆಂದು ಚಳವಳಿಯ ಪುರಸ್ಕರ್ತರ ಅಂಬೋಣ. ಮಹಾಯುದ್ಧಕ್ಕೆ ಮುಂಚೆ ೨೦೦ ಪತ್ರಿಕೆಗಳನ್ನು ಈ ಭಾಷೆಯಲ್ಲಿ ಪ್ರಕಟಿಸುತ್ತಿದ್ದರು; ೯೦೦೦ ಪುಸ್ತಕಗಳನ್ನು ಜಗತ್ತಿನ ಬೇರೆ ಬೇರೆ ಭಾಷೆಗಳಿಂದ ಅನುವಾದಿಸಿದರು. ಟೈಪರೈಟರ್, ಶೋರ್ಟ್ ಹ್ಯಾಂಡ್ ತಂತ್ರಕ್ಕೂ ಈ ಭಾಷೆಯನ್ನು ಅಳವಡಿಸಲಾಯಿತು. ಲ್ಯುಸೇರ್ನ್ ನಗರದಲ್ಲಿ ಅಂತಾರಾಷ್ಟ್ರೀಯ ಶಾಂತಿ ಪರಿಷತ್ತು ಜರಗಿದಾಗ ಈ ಭಾಷೆಯಲ್ಲಿ ಅಧ್ಯಕ್ಷ ಭಾಷಣ ನಡೆಯಿತು. ಬೋಲೋನ್ ಸಮ್ಮೇಳನದಲ್ಲಿ ಯುರೋಪಿನ ಬೇರೆ ಬೇರೆ ದೇಶಗಳಿಂದ ೧೨೦೦ ಪ್ರತಿನಿಧಿಗಳು ಈ ಭಾಷೆಯಲ್ಲಿ ಸಮಾಲೋಚನೆ ನಡೆಸಿದರು. ಈಗ ೮೦ ಲಕ್ಷ ಜನರಿಗೆ ಈ ಭಾಷೆ ಬರುತ್ತದೆ. ಪೇರಿಸಿನ ವಿಶ್ವವಿದ್ಯಾಲಯ ಮತ್ತು ಲಂಡನಿನ ಕೌಂಟಿ ಕೌನ್ಸಿಲಿನಲ್ಲಿ ಈ ಭಾಷೆಯಲ್ಲಿ ಪರೀಕ್ಷೆ ನಡೆಯುತ್ತದೆ.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋವ್ಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತ್ರಾಣ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ಅಣುಶಕ್ತಿಯ ಉಪಯೋಗದ ದ್ವಂದ್ವ

(೨ನೇ ಪುಟದಿಂದ)

ರಿಕ ಬಿಕಿನಿಯಲ್ಲಿ ನಡೆಸಿದ ಪ್ರಯೋಗಗಳ ದೆಸೆಯಿಂದ ಜಪಾನಿನ ೨೩ ಬೆಸ್ತರು ಕಳೆದ ವರ್ಷ ಮರಣಾಂತಿಕ ಅಪಾಯಕ್ಕೆ ಬಲಿಬಿದ್ದುದೂ ಅಲ್ಲಿಯ ಮತ್ಸ್ಯ ವ್ಯವಸಾಯ ಆಘಾತಕ್ಕೆ ಗುರಿಯಾದುದೂ ಏಶಿಯದ ಜನರಲ್ಲಿ ಹಾಹಾಕಾರವನ್ನೆಬ್ಬಿಸಿತು. ಭಾರತದ ಪ್ರಧಾನ ಮಂತ್ರಿಗಳು ಲೋಕಸಭೆಯಲ್ಲಿ ಕಳೆದ ಎಪ್ರೀಲು ತಿಂಗಳ ೨ನೇ ತಾರೀಕಿನಂದು 'ಹಿಂದೆಂದೂ ಕಂಡು ಕೇಳರಿಯದ ಮೃತ್ಯುವಿನ ತಾಂಡವ ನೃತ್ಯದ ನೆನಪು ಹುಟ್ಟಿಸುವ, ಅಸಾಧಾರಣವಾದ ಅದ್ಭುತ ಶಸ್ತ್ರ ಪ್ರಯೋಗ"ವೆಂದಿದನ್ನು ವರ್ಣಿಸಿದ್ದಲ್ಲದೆ, ಈ ಮಾದರಿಯ ರುದ್ರ ಪ್ರಯೋಗಕ್ಕೆ ಪ್ರತಿಬಂಧ ಹಾಕಬೇಕೆಂದು ಅಭಿಪ್ರಾಯಪಟ್ಟರು. ಇದಕ್ಕೆ ಜಗತ್ತಿನಾದ್ಯಂತ "ಚಿಕ್ಕ" ರಾಷ್ಟ್ರಗಳ ಬೆಂಬಲ ಸಿಕ್ಕಿರುವುದಾದರೂ ಪ್ರಬಲ ರಾಷ್ಟ್ರಗಳು ನೆಹರುಗಳ ಮಾತನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಬ್ರಿಟನಿನಂಥ "ವಿವೇಕಶೀಲ" ರಾಷ್ಟ್ರವೂ ಹೈಡ್ರೋಜನ್ ಬಾಂಬಿನ ತಯಾರಿಕೆಯಲ್ಲಿ ನಿರತವಾಗಿ ಶತ್ರುವಿನ ಎದೆಯನ್ನು ತತ್ತರಿಸುವಂತೆ ಮಾಡುವ ಮಹಾ ಸಾಹಸದಲ್ಲಿ ತೊಡಗಿದ ಸಂಗತಿ ಕಳೆದವಾರ ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದಿಂದ ಗೊತ್ತಾಗುತ್ತದೆ. ಇವರಿಂದ ಸಾಮಾನ್ಯ ಜನರಲ್ಲ ಯುಗೊಸ್ಲಾವಿಯದ ಅಧ್ಯಕ್ಷರು ಮೊನ್ನೆತಾನೆ ಹೇಳಿದಂತೆ 'ಮನುಷ್ಯನ ಮೆದುಳು ಕಂಡುಹಿಡಿದ ಅಣುಶಕ್ತಿಯ ಆವಿಷ್ಕಾರವು ಸಂತೋಷತರುವ ಬದಲು, ಮಾನವತೆಯ ನಾಶದ ಭಯವನ್ನೆ ಹುಟ್ಟಿಸುತ್ತದೆ." ಈ ಭಯ ನಿರಾಧಾರವಾದುದಲ್ಲ—ಅದನ್ನು ನಿವಾರಿಸುವ ಕೆಲಸ ನಡೆಯಬೇಕು ಎಂಬುದನ್ನು ಅಮೇರಿಕದ ವಿಜ್ಞಾನಿಗಳೂ ಒಪ್ಪಿರುವಂತೆ ಮೊನ್ನೆತಾನೆ ಅವರು ಸಂಯುಕ್ತ ರಾಷ್ಟ್ರಸಂಘದಲ್ಲಿರುವ ಅಮೇರಿಕದ ಪ್ರತಿನಿಧಿಗೂ ಅಮೇರಿಕದ ವಿದೇಶಾಂಗ ಕಾರ್ಯಾಲಯಕ್ಕೂ ಕಳಿಸಿದ ಮನವಿಯಿಂದ ತಿಳಿದುಬರುತ್ತದೆ.

ಅಣು ಬಾಂಬಿನ ಪ್ರಥಮ ಉತ್ಪಾದಕ ಡಾ. ರಾಬರ್ಟ್ ಓಪೆನ್ ಹೈಮರ್, ಯೇಲ್ ವಿಶ್ವವಿದ್ಯಾಲಯದ ಪ್ರೊ. ಏರ್ನೆಸ್ಟ್ ಪೊಲಾರ್ಡ್, ಮೆಸ್ಸಾಚುಸೆಟ್ಸ್ ತಾಂತ್ರಿಕ ವಿಜ್ಞಾನ ಸಂಘದ ಪ್ರೊ. ಸ್ಟಾನ್ಲಿ ಲಿವಿಂಗ್‌ಸ್ಟನ್, ನ್ಯೂಯಾರ್ಕಿನ ಕೂಪರ್ ಯೂನಿಯನಿನ ಡಾ. ವೂಲ್ಫ್ ಮುಂತಾದ ಸುಮಾರು ಎರಡು ಸಾವಿರ ವಿಜ್ಞಾನಿಗಳನ್ನು ಪ್ರತಿನಿಧೀಕರಿಸುವ ಅಮೇರಿಕದ ವೈಜ್ಞಾನಿಕ ಮಹಾಮಂಡಳ—ಸ್ವತಃ ಒಪ್ಪಿಕೊಂಡಂತೆ ತುಸು ತತಂಶಿಯ ಮನೋಭಾವದಿಂದಲೇ—ಸ್ಫೋಟನ ಪ್ರಯೋಗಗಳ ಪರಿಣಾಮ ಜೀವರಾಶಿಯ ಅಸ್ತಿತ್ವವನ್ನೆ ಅಲ್ಲಗಳೆಯುತ್ತದೆಂದು ಬಿಂಬಿಸಲು ಈ ಸಾಹಸ ಮಾಡಿತು. ರಾಜಕೀಯ ಭಯ ಮತ್ತು ದ್ವೇಷಗಳು ಮಾನವ ಜಾತಿಯ ಸಹಕಾರ ಭಾವನೆಗೆ ಆತಂಕವಾಗಲಾರದೆಂದು ಅದು ಭಾವಿಸಿ, ಸ್ಫೋಟನ ಪ್ರಯೋಗಗಳ ಪ್ರತಿಬಂಧವಲ್ಲದಿದ್ದರೂ, ನಿಯಂತ್ರಣ ಅಗತ್ಯವೆಂದು ಒತ್ತಾಯಿಸಿತು. ನಿಜವಾದ ಪರಿಸ್ಥಿತಿ ಹೀಗಿರುವುದರಿಂದ ಕೇವಲ ರಾಜಕೀಯ ದುರಾತ್ಮರೇ ಭಯಂಕರ ಶಸ್ತ್ರಗಳ ಸ್ಪರ್ಧೆಯಲ್ಲಿ ಧುಮುಕಿರುವರೆಂಬುದು ಇನ್ನಷ್ಟು ಸ್ಪಷ್ಟವಾಗುತ್ತದೆ. ರಾಜಕೀಯ ಧುರೀಣರ ಅಮಲು ಇಳಿದರೆ, ಆಗ ವಿಜ್ಞಾನಿಗಳು ಶಾಂತಿ ಕಾಲದ ಪ್ರಯೋಜನಕ್ಕಾಗಿ ಅಣುಶಕ್ತಿಯನ್ನು ಬಳಸುವ ಕೆಲಸದ ಕಡೆಗೆ ಗಮನಕೊಡಲು ಅನುಕೂಲವಾಗುತ್ತದೆ. ಸ್ವತಃ ಅಮೇರಿಕ, ರಶಿಯ ಮತ್ತಿತರ ಪಾಶ್ಚಾತ್ಯ ದೇಶಗಳಲ್ಲಿ ಅಣುಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಮತ್ತು ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸುವುದಕ್ಕೂ ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವುದಕ್ಕೂ ಸಂಪನ್ನ ಜೀವನವನ್ನು ನಡೆಸುವುದಕ್ಕೂ ಸಾಧ್ಯವಾಗುವ ಹಾಗೆ ಅಣುಶಕ್ತಿಯನ್ನು ಕೆಲಮಟ್ಟಿಗೆ ಬಳಸಲಾಗುತ್ತದೆ. ಶಾಂತಿಗಾಗಿ ಅಣುಶಕ್ತಿಯನ್ನು ಉಪಯೋಗಿಸುವ ಕುರಿತು ರಶಿಯವು ತನ್ನಲ್ಲಿರುವ ಮಾಹಿತಿ ಕೊಡುವಷ್ಟು ಮುಂಬಂದು ಔದಾರ್ಯ ತೋರಿಸಿದ್ದರೆ, ಅಮೇರಿಕ ಭಾರತದಂಥ ದೇಶಗಳಿಗೆ ಭಾರಜಲ ಮತ್ತು ಬೇರೆ ರೀತಿಯ ತಾಂತ್ರಿಕ ಸಹಾಯ ಕೊಡಲು ಮುಂಬಂದಿರುತ್ತದೆ. ಇದೇ ಭಾವನೆ ಬೆಳೆಯಬೇಕೆಂದು ಹಾರೈಸುವ ನಮಗೆ ಬಾಂಬು ಸ್ಫೋಟನದ ಸ್ವಪ್ನ ಕೂಡಾ ಬೇಡಾದ ನಮಗೆ—ಭಾರತದಲ್ಲಿಯೂ ಸಾಕಷ್ಟು ತತ್ಪರತೆಯಿಂದ ಶಾಂತಿ ಕಾಲದ ಉಪಯೋಗಕ್ಕೆ ಅಣುಶಕ್ತಿ ಬಳಸುವ ಕೆಲಸ ನಡೆಯುತ್ತಿದೆ ಎಂಬ ಮಾತಿನಿಂದ ತುಂಬ ಸಂತೋಷವಾದೀತು.

ಮೊನ್ನೆ ಗುರುವಾರ ದಿನ ಹೊಸದೆಹಲಿಯಲ್ಲಿ ಈ ಬಗ್ಗೆ ಒಂದು ಪ್ರದರ್ಶನವನ್ನು ಅಮೇರಿಕದ ಸೌಜನ್ಯದಿಂದ ಏರ್ಪಡಿಸಿದ್ದರು. ಇದು ಶಾಂತಿ ಕಾಲದ ಉಪಯೋಗವು ಅಣುಶಕ್ತಿಯ ಬಗ್ಗೆ ಎಷ್ಟು ಪೂಜ್ಯಭಾವನೆಯನ್ನು ಹುಟ್ಟಿಸುವುದೆಂದು ವ್ಯಕ್ತಪಡಿಸಿತು. ಬಾಂಬುಗಳ ಭೀಕರ ಕೋಲಾಹಲದ ಸದ್ದಡಗಿ, ನಾಡನ್ನು ಸುಭಿಕ್ಷಗೊಳಿಸುವ ಈ ತಂತ್ರಗಳನ್ನೆ ವಿಜ್ಞಾನಿಗಳು ಕಂಡುಹಿಡಿದು ರಾಜಕೀಯ ಧುರೀಣರ ಮನ್ನಣೆ ಗಳಿಸಬಾರದೆ ಎಂಬ ಭಾವನೆಯನ್ನು ಬರಿಸುವಂತಿತ್ತು ಆ ಅಮೋಘ ಪ್ರದರ್ಶನ. ಇನ್ನೆರಡು ವರ್ಷಗಳ ಅವಧಿಯಲ್ಲಿ ಈ ಪ್ರದರ್ಶನವನ್ನು ಭಾರತದ ಬೇರೆ ಬೇರೆ ಪ್ರಮುಖ ನಗರಗಳಿಗೂ ವಿಶ್ವವಿದ್ಯಾಲಯಗಳಿಗೂ ಕಳುಹಿಸಲಾಗುತ್ತದೆ. ಇವುಗಳನ್ನು ಸಂದರ್ಶಿಸುವುದರಿಂದ ನಮ್ಮ ತರುಣ ವಿಜ್ಞಾನಿಗಳಿಗೆ ಮತ್ತು ಸಾಮಾನ್ಯ ಪ್ರಜೆಗಳಿಗೆ ಸಹ ಅಣುಶಕ್ತಿಯ ಅದ್ಭುತದ ಇನ್ನೊಂದು ಬದಿ ಗೋಚರವಾಗುತ್ತದೆ. ಭಾರತದಲ್ಲಿ ಈಗಾಗಲೇ ಬೇರೆ ಬೇರೆ ಪ್ರಯೋಗ ಶಾಲೆಗಳಲ್ಲಿ ೪೦೦ ಮಂದಿ ವಿಜ್ಞಾನಿಗಳು ಅಣುಶಕ್ತಿಗೆ ಸಂಬಂಧಿಸಿದ ಸಂಶೋಧನೆಗಳಲ್ಲಿ ನಿರತರಾಗಿದ್ದು, ಭಾರತದ ಅಣುಶಕ್ತಿ ಮಂಡಳಿ ಎಲ್ಲ ರೀತಿಯ ಪ್ರೋತ್ಸಾಹವನ್ನೂ ಮಾರ್ಗದರ್ಶನವನ್ನೂ ಇವರಿಗೆ ಕೊಡುತ್ತದೆ. ಭಾರತೀಯ ಅಣುಶಕ್ತಿ ಮಂಡಳದ ಅಧ್ಯಕ್ಷರಾಗಿರುವ ಡಾ. ಹೋಮಿ ಭಾಭಾ ಜಗತ್ತಿನಲ್ಲಿಯೇ ಉಚ್ಚ ಕೋಟಿಯ ವಿಜ್ಞಾನಿಗಳಲ್ಲಿ ಒಬ್ಬರೆಂಬುದನ್ನು ಬರುವ ಆಗೋಸ್ತಿನಲ್ಲಿ ಜಿನೇವಾದಲ್ಲಿ ಸೇರಲಿರುವ ಅಂತಾರಾಷ್ಟ್ರೀಯ ಅಣು ವಿಜ್ಞಾನಿಗಳ ಪರಿಷತ್ತಿನ ಅಧ್ಯಕ್ಷರಾಗಿ ಅವರ ಆಯ್ಕೆಯಾಗಿರುವ ಸುದ್ದಿ ಪುಷ್ಟೀಕರಿಸುತ್ತದೆ.

ಅಣುಶಕ್ತಿಯ ಉತ್ಪಾದನೆಯಲ್ಲಿ ಯುರೇನಿಯಂ ಧಾತುವಿನ ಅಗತ್ಯವಿದ್ದು ಇದರ ನಿಕ್ಷೇಪವನ್ನು ಹುಡುಕಿ ಕೊಡುವವರಿಗೆ ೧೦೦೦೦ ರೂಪಾಯಿಗಳ ಬಹುಮಾನ ನೀಡುವುದಾಗಿ ಭಾರತ ಸರಕಾರ ಈಚೆಗೆ ಸಾರಿರುತ್ತದೆ. ಆಂಧ್ರ ವಿಶ್ವವಿದ್ಯಾಲಯದ ತರುಣ ವಿದ್ಯಾರ್ಥಿಯೊಬ್ಬನು ಬೇರಿಲ್ ಎಂಬ ಜಾತಿಯ ಅದುರನ್ನು ಕಂಡುಹಿಡಿದು ಅಣುಶಕ್ತಿ ಮಂಡಳಕ್ಕೆ ತಿಳಿಸಿ ೪೦೦ ರೂಪಾಯಿಗಳ ಬಹುಮಾನವನ್ನು ಈಚೆಗೆ ಪಡೆದನು. ಹೀಗೆ ನಮ್ಮ ದೇಶದಲ್ಲಿ 'ಮೊದಲು ಭೂಗರ್ಭ ಶಾಸ್ತ್ರಜ್ಞರು ಮಾತ್ರ ಆಸಕ್ತಿ ವಹಿಸುತ್ತಿದ್ದ ವಿಷಯವೊಂದು ಸಾಮಾನ್ಯ ವಿಜ್ಞಾನಿಗಳನ್ನೂ ಕೆರಳಿಸಿರುತ್ತದೆ. ಯುರೇನಿಯಂ ಧಾತುವಿನ ಪ್ರಥಮ ನಿಕ್ಷೇಪ ಬಿಹಾರದಲ್ಲಿ ೧೯೫೧ನೇ ಇಸವಿಯಷ್ಟು ಹಿಂದೆಯೇ ಸಿಕ್ಕಿದ್ದರೂ ಈಚೆಗೆ ಜೋಧಪುರ, ಅಜಮೀರ, ಬರೋಡ ಮುಂತಾದೆಡೆಯೂ ದಕ್ಷಿಣ ಭಾರತದ ನೆಲ್ಲೂರು ಇತ್ಯಾದಿ ಪ್ರದೇಶಗಳಲ್ಲಿಯೂ ದೊರೆತ ಅದುರುಗಳಲ್ಲಿ ಯುರೇನಿಯಂ ಇರುವುದು ಗೊತ್ತಾಯಿತು. ಥೋರಿಯಂ ಎಂಬ ಇನ್ನೊಂದು ಬಗೆಯ ಧಾತು ತಿರು.ಕೊಚ್ಚಿಯ ಕರಾವಳಿಯ ಮರಳಿನಲ್ಲಿ ಮತ್ತು ಆಂಧ್ರದ ತೀರದಲ್ಲಿ ಸಿಗುತ್ತದೆ. ಹೊಸ ನಿಕ್ಷೇಪಗಳನ್ನು ಗುರುತಿಸುವ ಸುಲಭ ತಂತ್ರಗಳೂ ಬಳಕೆಗೆ ಬಂದಿರುತ್ತವೆ. ಯುರೇನಿಯಂ ಧಾತು ಚಿನ್ನ ಬೆಳ್ಳಿಗಳಂತೆ ಪ್ರತ್ಯೇಕವಾಗಿ ಸಿಗುವುದಿಲ್ಲ – ಅದನ್ನು ಬೇರೆ ದ್ರವ್ಯಗಳಿಂದ ಬೇರ್ಪಡಿಸುವ ಮೂಲಕವೇ ತೆಗೆಯಬೇಕಾಗುತ್ತದೆ. ಅದುದರಿಂದ ಯಾವ ಅದುರಿನಲ್ಲಿ ಯುರೇನಿಯಂ ಇದೆ ಎಂದು ಥಟ್ಟನೆ ತಿಳಿಯುವುದು ಕಷ್ಟ. ಆದರೆ ಯುರೇನಿಯಂ, ಥೋರಿಯಂ ಇವುಗಳಿಂದ ಪ್ರಭಾ ಕಿರಣಗಳು ಹೊರಡುತ್ತಲೇ ಇರುವುದರಿಂದ ಅವುಗಳ ಇರವನ್ನು ವಿಶೇಷ ಯಂತ್ರದ ಮೂಲಕ ಪತ್ತೆಹಚ್ಚುವುದು ಸಾಧ್ಯ. ಧಾತುಗಳ ರಾಸಾಯನಿಕ ವಿಶ್ಲೇಷಣೆಯ ಕ್ರಮವನ್ನೂ ಬಹಳ ಮಟ್ಟಿಗೆ ನಮ್ಮ ವಿಜ್ಞಾನಿಗಳು ಪರಿಷ್ಕರಿಸಿದ್ದು, ಇದರಿಂದ ಅಮೂಲ್ಯವಾದ ಸಮಯದ ಉಳಿತಾಯವಾಗುತ್ತದೆ. ನಮ್ಮ ಕಲ್ಪನೆಯಂತೆ ಜಗತ್ತಿನಲ್ಲಿ ಸಹ, ಶಾಂತಿಗಾಗಿಯೇ ಅಣುಶಕ್ತಿಯನ್ನು ಉಪಯೋಗಿಸುವಂತಾಗಿ, ಭಯಂಕರ ಬಾಂಬುಗಳ ಉತ್ಪಾದನೆ ನಿಂತು ಹೋದರೆ ಆಗ ನಮ್ಮ ಮನಸ್ಸು ಪೂರ್ಣ ಸಮಾಧಾನಗೊಂಡು ನಾವೆಲ್ಲ ಸುಖಿಗಳಾಗುತ್ತೇವೆ.

ಚತುರ್ ವಾರ್ಷಿಕ ಯೋಜನೆ.
!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!
! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !
"ರಿಕರಿಂಗ್" ಠೇವಣಾತಿ.
ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ $4\frac{1}{4}$%.
ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.
ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ
ದಿ ವಿಜಯ ಬೇಂಕ್ ಲಿಮಿಟೆಡ್.



(೪ನೇ ಪುಟದಿಂದ)

ದಲ್ಲಿ ಭಾರತಕ್ಕೆ ಜಲಮಾರ್ಗವೊಂದನ್ನು ಕಂಡುಹಿಡಿಯಲು ಸ್ಪೈಯಿನ್ ದೇಶದಿಂದ ಹೊರಟ ಈ ಮಹಾನುಭಾವನು ಪಶ್ಚಿಮ ಸಮುದ್ರದ ಈ ದ್ವೀಪಗಳನ್ನು ಅರಬಿ ಸಮುದ್ರದ ದ್ವೀಪಗಳಾಗಿಯೇ ಭಾವಿಸಿದನು. ಆದರೆ ಹಿಂದಿನಿಂದ ತಾನೊಂದು ಹೊಸ ಭೂಖಂಡವನ್ನೆ ಹುಡುಕಿರುವುದಾಗಿ ಗೊತ್ತಾಯಿತು. ಅದೇನೇ ಇರಲಿ, ಅಂದಿನಿಂದ ಐರೋಪ್ಯ ಜನಾಂಗಗಳು ಈ ದ್ವೀಪಗಳಿಗೂ ದ್ವೀಪಗಳಾಚೆಯ ಭೂಖಂಡಕ್ಕೂ ವಲಸೆ ಬರಹತ್ತಿದವು; ಮತ್ತು ನೆಲದ ಮಕ್ಕಳನ್ನು ತಮ್ಮ ಶೌರ್ಯ ಪರಾಕ್ರಮಗಳಿಂದ ಸೋಲಿಸಿ, ಕಾಡಿನ ಮೂಲೆಗಳಿಗೆ ಓಡಿಸಿದವು. ಹೀಗಾಗಿ ವೆಸ್ಟ್ ಇಂಡೀಸ್ ದ್ವೀಪಗಳಲ್ಲಿ ಕೆಲವು ಬ್ರಿಟನಿಗೆ, ಕೆಲವು ಸ್ಪೈಯಿನಿಗೆ, ಕೆಲವು ಅಮೇರಿಕಕ್ಕೆ ಹೀಗೆ ಹಂಚಿಹೋಯಿತು.

ಲೀವಾರ್ಡ್ ಮತ್ತು ವಿಂಡ್‌ವಾರ್ಡ್ ದ್ವೀಪ ಸಮುದಾಯಗಳ ಚರಿತ್ರೆ ಪುರಾತನವಾದದ್ದು. ೧೬೨೩ನೇ ಇಸವಿಯಲ್ಲಿ ಇಲ್ಲಿ ಪ್ರಥಮವಾಗಿ ಬ್ರಿಟಿಷ್ ವಲಸೆಗಾರರು ಬಂದಿಳಿದರು. ಮೂಲ ನಿವಾಸಿಗಳಾಗಿ, ಹತ್ತಿರದ ಸಮುದ್ರಕ್ಕೆ ತಮ್ಮ ಹೆಸರನ್ನೆ ಕೊಟ್ಟಿರುವ, ಕರೆಬಿಯರನ್ನು ಅಟ್ಟುತ್ತಾ ಅವರು ಹೋದರು. ಈಗ ಡೊಮಿನಿಕಾ ಮತ್ತು ಸೆಂಟ್ ವಿನ್ಸೆಂಟ್ ದ್ವೀಪಗಳಲ್ಲಿಯಷ್ಟೇ ಈ ಮೂಲದ ಕುಟುಂಬಗಳು ನೋಡಸಿಗುತ್ತವೆ. ಈ ದ್ವೀಪಗಳ ವಶೀಕರಣಕ್ಕಾಗಿ ಐರೋಪ್ಯ ಜನಾಂಗಗಳಲ್ಲಿ ಹೊಯ್ದಾಟವೂ ನಡೆಯಿತು— ಅಮೇರಿಕವೊದಗೆ ಐರೋಪ್ಯ ದೇಶಗಳ ಘರ್ಷಣೆ ನಡೆದಾಗಲೆಲ್ಲ ವೆಸ್ಟ್ ಇಂಡೀಸ್ ದ್ವೀಪಗಳು ಪದಗು ರಾಣ್ಯಾಗಳಾಗಿ ಪರಿವರ್ತನೆಹೊಂದಿ ಜನಾಂಗಗಳ ಸೋಲು ಗೆಲವನ್ನು ನಿರ್ಧರಿಸಿದವೆಂದು ಇತಿಹಾಸ ಹೇಳುತ್ತದೆ. ಬ್ರಿಟಿಷ್ ಆಡ್ಮಿರಲ್ ಹೊರೇಶಿಯೊ ನೆಲ್ಸನ್ ಎಂಬವನ ಪಟ್ಟಿಗೆ ಲೀವಾರ್ಡಿನ ಅಂಟಿಗುವಾ ದ್ವೀಪ ಮಾವನ ಮನೆಯೂ ಆಯಿತು- ಅವನು ೧೭೮೦ ರಂದು ಇಲ್ಲಿ ನೌಕಾಧಿಪತಿಯಾಗಿದ್ದದ್ದಲ್ಲದೆ ಏಳು ವರ್ಷಗಳ ಬಳಿಕ ಸ್ಥಳೀಯ ಶಾಸನಾಧಿಕಾರಿಯೊಬ್ಬನ ಮಗಳನ್ನು ಮದುವೆಯಾದನು. ಜಮೈಕಾ, ಟ್ರಿನಿಡಾಡ್, ಬೊರ್ಬೊಡೋಸ್ ಮುಂತಾದ ದೊಡ್ಡ ದ್ವೀಪಗಳ ಮುಂದೆ ಲೀವಾರ್ಡ್ ಮತ್ತು ವಿಂಡ್‌ವಾರ್ಡ್ ದ್ವೀಪಗಳು ಬಹಳ ಚಿಕ್ಕದಾಗಿ ಕಾಣಿಸುತ್ತವೆ. ಆದರೆ ಮೂರ್ತಿ ಸಣ್ಣದಾದರೂ ಕೀರ್ತಿದೊಡ್ಡದು.

ಘಟನಾತ್ಮಕ ಸುಧಾರಣೆಗಳನ್ನು ಈಗ ಸಾರಲಾಗಿರುವುದರಿಂದ ವೆಸ್ಟ್ ಇಂಡೀಸ್ ಫೆಡರೇಶನ್ ಸ್ಥಾಪಿಸುವ ಬ್ರಿಟಿಷ್ ಸರಕಾರದ ಹೆಜ್ಜೆ ಮುಂದಿಟ್ಟಂತಾಗಿದೆ— ೪ ಲಕ್ಷ ಪ್ರಜೆಗಳಿರುವ ಲೀವಾರ್ಡ್ ಮತ್ತು ವಿಂಡ್‌ವಾರ್ಡ್ ದ್ವೀಪ ಸಮುದಾಯ ಈ ಫೆಡರೇಶನಿಗೆ ಸೇರಿದರೆ ಇಲ್ಲಿಯ ವಸಾಹತು ೩೨ ಲಕ್ಷ ಪ್ರಜೆಗಳ ಒಕ್ಕೂಟವಾಗುತ್ತದೆ. ಇಲ್ಲಿ ಕೈಗಾರಿಕೆಗಳಿಗಿಂತಲೂ ಕೃಷಿಯೇ ಪ್ರಧಾನ— ಈಶಾನ್ಯ ಪವನಗಳಿಂದ ಮಳೆ ಬೀಳುವ ಉಷ್ಣವಲಯದ ಈ ಪ್ರದೇಶದಲ್ಲಿ ಕಬ್ಬು ಮತ್ತು ನೇಂದ್ರಬಾಳೆ ಧಾರಳವಾಗಿ ಬೆಳೆಯುತ್ತದೆ. ಸಕ್ಕರೆಯ ಉದ್ಯಮವೂ ನೇಂದ್ರಬಾಳೆಯ ರಫ್ತು ವ್ಯಾಪಾರವೂ ಚೆನ್ನಾಗಿ ನಡೆಯುತ್ತದೆ. ಬ್ರಿಟಿಷ್ ಸರಕಾರ ಈ ದ್ವೀಪಗಳ ಅಭಿವೃದ್ಧಿಗಾಗಿ ಯುದ್ಧೋತ್ತರದಲ್ಲಿ ೫೦ ಲಕ್ಷ ಪವನಗಳಷ್ಟು ವೆಚ್ಚ ಮಾಡಿತು. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿಯೂ ಗಣನೀಯ ಪ್ರಗತಿಯನ್ನು ಸಾಧಿಸಲಾಯಿತು. ಟ್ರಿನಿಡಾಡ್ ವಸಾಹತಿನಲ್ಲಿರುವ ಕೃಷಿ ವಿಜ್ಞಾನ ಸಂಘದ ಪ್ರಯೋಜನವನ್ನು ಹತ್ತಿರದ ಈ ದ್ವೀಪಗಳೂ ಪಡೆಯುವುದಕ್ಕೆ ಅನುಕೂಲತೆ ಕಲ್ಪಿಸಲಾಯಿತು. ಇದೆಲ್ಲ ವಸಾಹತುಗಳ ಶೋಷಣೆಗಾಗಿಯೇ ನಡೆಸಿದ ತಂತ್ರವೆಂದು ನಾವು— ಭಾರತೀಯರು— ಭಾವಿಸಬಹುದು. ನಮ್ಮ ಮಟ್ಟಿಗೆ ರಾಜಕುಮಾರಿ ಮಾರ್ಗರೇಟರು ಆ ದ್ವೀಪಗಳಿಗಿತ್ತ ಸಂದರ್ಶನವೂ ಮಹತ್ವದ್ದಾಗಲಿಕ್ಕಿಲ್ಲ. ಆದರೆ, ವೆಸ್ಟ್ ಇಂಡೀಸ್ ದ್ವೀಪಗಳಿಗೆ ಕ್ರಿಕೆಟ್ ಆಡಲು ಭಾರತೀಯ ತಂಡ ಹೋಗಿದ್ದ ಮತ್ತು ಹೋಗಲಿರುವ ಸುದ್ದಿಯಲ್ಲಿ ಸಹಜವಾಗಿಯೇ ನಮ್ಮ ಆಸ್ಥೆ ಉಂಟಾಗುವುದರಿಂದ, ಆ ಭಾಗದ ಪರಿಚಯ ಲಾಭವನ್ನೆ ತಂದೀತು—ಎಂಬುದು ನಮ್ಮ ವಿಶ್ವಾಸ.

(೧ನೇ ಪುಟದಿಂದ)

ದೂ ಬದುಕಲೆಂಬ ಭಾವನೆಯೇ ಗೋಚರಿಸುತ್ತದೆ. ಆದುದರಿಂದ ನಮಗೆ ಪೋಲೀಸರೂ ಬೇಕು, ಸೇನೆಯೂ ಬೇಕು; ಆದರೆ ಅವುಗಳ ದುರುಪಯೋಗ ಮಾತ್ರ ಕೂಡದು. ನಾಗಪುರದ ಘಟನೆಯನ್ನೇ ತೆಗೆದುಕೊಂಡರೆ, ಅಲ್ಲಿ ಪೋಲೀಸರು ಮತ್ತು ಗವರ್ನರರ ಸೈನಿಕ ಕಾರ್ಯದರ್ಶಿ ತಕ್ಷಣ ಚೂರಿ ಹಿಡಿದು ನಿಂತಿದ್ದ ಬಾಬುರಾಯನನ್ನು ತಡೆದು ನಿಲ್ಲಿಸಿದುದರಿಂದ ಗಂಡಾಂತರತಪ್ಪಿತು. "ಸರಕಾರಕ್ಕೆಗೂಂಡ ಶಾಂತಿರಕ್ಷಣೆಯ ವ್ಯವಸ್ಥೆ ಪರಿಣಾಮಕಾರಿಯಾಗಿದ್ದುದನ್ನಿದು ತೋರಿಸುತ್ತದೆ ಕೆಲವೊಮ್ಮೆ ಈ ವ್ಯವಸ್ಥೆ ವಿಶೇಷ ಆಡಂಬರದಿಂದ ಕೂಡುವುದುಂಟು— ಅದನ್ನು ಮಾತ್ರ ನಾನು ಮೆಚ್ಚುವುದಿಲ್ಲ" ಎಂಬ ನೆಹರುಗಳ ಮಾತಿನ ಮರ್ಮವನ್ನರಿತರೆ ಇದು ಮನವರಿಕೆಯಾಗುತ್ತದೆ.

ಮುಂಜಾಗರೂಕತೆಯ ಕ್ರಮಗಳು ಎರಡು ರೀತಿಯಲ್ಲಿ ನಡೆಯಬೇಕು— ಒಂದನೆಯದು ಜನರು ಕಾಯಿದೆಯನ್ನು ತಮ್ಮ ಕೈಗೆ ತೆಗೆದುಕೊಳ್ಳದೆ, ಅವುಗಳನ್ನು ಮನ್ನಿಸುವಂತೆ ನೋಡುವುದು; ಇನ್ನೊಂದು, ಇದಕ್ಕೆ ಅನುಕೂಲಿಸುವ ಹಾಗೆ ಜನತೆಗೆ ಶಿಕ್ಷಣ ಕೊಡುವುದು. ಭಿನ್ನಾಭಿಪ್ರಾಯಗಳು ಬಂದೊಡನೆಯೇ ತಲೆಯೊಡೆಯುವುದು, ಚೂರಿಯಿಂದ ತಿವಿಯುವುದು, ಗುಂಡು ಹಾರಿಸುವುದು ಮುಂತಾದವುಗಳಿಂದ ತೊಡಗಿ ಮನೆಗೆ ಬೆಂಕಿ ಕೊಡುವುದು, ಅಂಗಡಿ ಲೂಟಿಮಾಡುವುದು, ಸತ್ಯಾಗ್ರಹದ ಹೆಸರಿನಲ್ಲಿ ಅತ್ಯಾಚಾರ ನಡೆಸುವುದು ಇತ್ಯಾದಿಗಳ ವರೆಗೆ ಯಾವುದೂ ಸಂಭವಿಸದಂತೆ ಎಚ್ಚರ ವಹಿಸಬೇಕು; ಪೋಲೀಸರೂ ನಾಗರಿಕರೂ ಇಲ್ಲಿ ಪರಸ್ಪರ ಸಹಕರಿಸಬೇಕು. ಈ ಸಹಕಾರದ ಮಾದರಿಯನ್ನು ನೆಹರುಗಳ ಮಾತಿನಲ್ಲಿಯೇ ಹೀಗೆ ವರ್ಣಿಸಬಹುದು— "ನಾನೇ ಆತನ ಕೈಯಲ್ಲಿದ್ದ ಚೂರಿಯನ್ನು ಸೆಳೆದುಕೊಳ್ಳುತ್ತಿದ್ದೆ- ಆದರೆ ಅಷ್ಟರೊಳಗೆ ಪೋಲೀಸರೂ ಸೈನಿಕ ಕಾರ್ಯದರ್ಶಿಯೂ ಅವನನ್ನು ಹಿಡಿದುದರಿಂದ ಸುಮ್ಮನುಳಿದೆ." ಪ್ರಜಾಸತ್ತಾತ್ಮಕ ರೀತಿಯನ್ನು ಮೆಚ್ಚುವವರು ತಮ್ಮ ತೊಂದರೆಗಳ ನಿವಾರಣೆಗೆ ಪ್ರಜಾಸತ್ತಾತ್ಮಕ ವಿಧಾನವನ್ನೆ ಅನುಸರಿಸಬೇಕಲ್ಲದೆ ಗೂಂಡಾಗಿರಿಯನ್ನು ಅವಲಂಬಿಸಬಾರದು. ಜನತೆಗೆ ಕೊಡಬೇಕಾದ ಶಿಕ್ಷಣಕ್ಕೆ ಈ ಮಾತಿನ ತಳಹದಿ ಇರುವುದು ಅಪೇಕ್ಷಣೀಯ.

ಭಿನ್ನಾಭಿಪ್ರಾಯಗಳನ್ನು ನಿವಾರಿಸಿಕೊಳ್ಳುವುದಕ್ಕೆ ನಾವು ಗೂಂಡಾಗಿರಿಯನ್ನು ಅವಲಂಬಿಸಿದರೆ, ನಾಗರಿಕತೆಯು ನಾಶವಾಗುತ್ತದೆ. ಅಪರಾಧ ಮಾಡುವವರು ತಲೆತಿರುಕರಾಗಿದ್ದರೂ ಸಹ— ಅವರ ಕೃತ್ಯದ ಪರಿಣಾಮ ಬಹಳ ಭೀಕರವಾಗುತ್ತದೆ. ಒಬ್ಬನಿಗೆ ಬೇಡಾದವನು ಅವನ ಕುಟುಂಬದ ಹತ್ತಿಪ್ಪತ್ತು ಮಂದಿಗೆ, ಸಮಾಜದ ನೂರಾರು ಜನರಿಗೆ, ರಾಷ್ಟ್ರದ ಕೋಟ್ಯಾಂತರ ಪ್ರಜೆಗಳಿಗೆ ಬೇಕಾಗಿರಬಹುದು; ಆದುದರಿಂದ "ಹೋದರೆ ಒಂದು ಕಲ್ಲು, ಬಿದ್ದರೆ ಹಣ್ಣು" ಎನ್ನಬಹುದಾದ ಹಿಂಸಾಚಾರಿಯ ವರ್ತನೆ ಉಳಿದವರ ಪಾಲಿಗೆ ತದ್ವಿರುದ್ಧ ಪರಿಣಾಮವನ್ನೆ ಮಾಡಬಹುದು. ಸಮಾಜಾಧಿಷ್ಠಿತವಾದ ರಾಷ್ಟ್ರವು ಇದನ್ನು ಎಷ್ಟಕ್ಕೂ ಸಹಿಸಿ ಕುಳಿತಿರಲಾರದು— ಏಕೆಂದರೆ ಸಹಿಸಿದರೆ ಅದು ದಿವಾಳಿಯಾಗುವುದು ನಿಶ್ಚಯ. ಆದುದರಿಂದ ಶಿಸ್ತಿನ ಶಿಕ್ಷಣ, ಸಹಜೀವನದ ಶಿಕ್ಷಣ, ಪ್ರಜಾಪ್ರಭುತ್ವದ ಸಿದ್ಧಾಂತದಲ್ಲಿ ವಿಶ್ವಾಸವನ್ನು ಹುಟ್ಟಿಸುವ ಪರಿಣಾಮಕಾರಿಯಾದ ಕ್ರಮಗಳನ್ನು ಬಿಗಿಯಾಗಿ ಅನುಷ್ಠಾನಕ್ಕೆ ತರುವುದೂ ದೊಡ್ಡ ಜೀವಗಳ ರಕ್ಷಣೆಯ ಬಗ್ಗೆ ವಿಶೇಷವಾದ ಮುತುವರ್ಜಿಯನ್ನು ವಹಿಸುವುದೂ ಇಷ್ಟವಾದ ವಿಷಯ. ವಿವೇಕದ ಧ್ವನಿಯನ್ನು ಅಪರಾಧದ ಗೊಂದಲ ಶಾಶ್ವತವಾಗಿ ಹಿನ್ನೆಲೆಗೆ ಸರಿಸಲಾರದೆಂಬುದು ನಿಜವಾದರೂ ಆ ಗೊಂದಲಕ್ಕೂ ಎಡೆಸಿಗದಂತೆ ಮಾಡಿದರೆ ಹೆಚ್ಚಿನ ಜಾಣತನದಿಂದ ವರ್ತಿಸಿದಂತಾಗುತ್ತದೆ. ಮುಂಜಾಗರೂಕತೆ-ಕಳ್ಳರಿಗೆ ಅವರ ಕೆಲಸದಲ್ಲಿ ಎಷ್ಟು ಸಹಾಯಕವೋ ಸಭ್ಯರಿಗೂ ಅಷ್ಟೇ ಅಗತ್ಯದ ವಿಷಯ; ಅವರವರ ಉದ್ದೇಶದಲ್ಲಿಯಷ್ಟೇ ಭೇದ ಕಾಣುತ್ತದೆ. ಹಿಂಸಾಚಾರಿಗಳ ಮೂರ್ಖತನದ ವಿರುದ್ಧ ಹೋರಾಡುವ ನಾಗರಿಕರ ಮತ್ತು ರಾಷ್ಟ್ರದ ಮುಂದೆ ಸದುದ್ದೇಶವಿರುತ್ತದೆ—ಆದುದರಿಂದಲೇ ಜಗತ್ತು ಬದುಕಿ ಉಳಿದಿರುತ್ತದೆ.

— ಕಾರ್ತಿಕೇಯ.

ಭರ್ತ್ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ ಗರ್ಭ ಇದ್ದವರು ಸೇವಿಸ ಬಾರದು, ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—: ವಿಳಾಸ —

ಹಾಲಪ್ಪಾ ಹಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ. ರೂ. 5/- ಸ್ಪೆಶಲ್ ರೂ. 8/-

Mrs. **P. DEVEE,** F. Ds (N J) (ವಿ ಪಿ ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರೆಯುವ ಸ್ಥಳಗಳು. 1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ. ಕ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licensed to Post without Prepayment

ನವಯುಗ

ಸಂಪುಟ ೩೪ | ಉಡುಪಿ, 24—3—1955 | ಸಂಚಿಕೆ ೨೯

VOL. 34 | NO. 29

ಹಿತನುಡಿ

ಮಾದಕ ಪೇಯಗಳ ಸೇವನೆಯಿಂದ ಪಾಚಕಾಂಗಗಳ ಶಕ್ತಿ ಕುಂದುತ್ತದೆ. ಹೊಟ್ಟೆಯ ಸೂಕ್ಷ್ಮ ತಂತುಗಳನ್ನು ಮದ್ಯವು ಮರವುಗೊಳಿಸುತ್ತದೆ. ಹಸಿವು ಇಲ್ಲದಂತೆ ಅಗ್ನಿಮಾಂದ್ಯವಾಗುವುದಕ್ಕೆ ಇದೇ ಕಾರಣ. ಇದೇ ರೀತಿ ಮದ್ಯವು ಮಿದುಳಿಗೆ ಏರಿ ರಕ್ತದ ಮೇಲಿರುವ ನಿಯಂತ್ರಣವನ್ನು ತಪ್ಪಿಸುತ್ತದೆ. ವಿವೇಕ ಮತ್ತು ನ್ಯಾಯಬುದ್ಧಿಯು ಕುಂಠಿತವಾಗುತ್ತದೆ. ಕುಡುಕನು ತನ್ನ ನಿಜ ಸ್ವರೂಪವನ್ನರಿಯಲು ಅಸಮರ್ಥನಾಗುತ್ತಾನೆ. ರಕ್ತವನ್ನು ಮದ್ಯವು ದೇಹದ ಮೇಲ್ಭಾಗಕ್ಕೆ ತಳ್ಳಿ ನರಗಳನ್ನು ದುರ್ಬಲಗೊಳಿಸುತ್ತದೆ. ಇದರಿಂದ ಉತ್ಸಾಹ ಮೂಡಿದಂತೆ ಕಂಡರೂ ಅದು ಕ್ಷಣಿಕವಾಗಿದ್ದು, ಕೂಡಲೇ ಸ್ವಚ್ಛಂದವಾಗಿ ಹೊರಬಿದ್ದು ನಾಶವಾಗುತ್ತದೆ.

—ರಾಜಾಜಿ

ಹೊಸ ಪೀಳಿಗೆಯ ರಚನೆ

ಮದ್ಯಪಾನವನ್ನು ಪ್ರತಿಬಂಧಿಸಬೇಕೆಂಬ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವು ಅನುಕೂಲವಾಗಿದೆ ಎಂದು ಯೋಜನಾ ಆಯೋಗವು ನೇಮಿಸಿರುವ ವಿಚಾರಣಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಸ್. ಎಸ್. ವರದಾಚಾರಿಯವರು ಅಹಮದಾಬಾದಿನಲ್ಲಿ ಮೊನ್ನೆ ಹೇಳಿದರು. ಇದರ ಮೇಲಿಂದ ಇನ್ನು ಮೂರು ಅಥವಾ ನಾಲ್ಕು ತಿಂಗಳುಗಳಲ್ಲಿ ಒಪ್ಪಿಸಲಿರುವ ಸಮಿತಿಯ ವರದಿಯು ಮದ್ಯಪಾನವನ್ನು ಪ್ರತಿಬಂಧಿಸುವುದಕ್ಕೆ ಯೋಗ್ಯ ಕ್ರಮಗಳನ್ನು ಸಿಫಾರಸು ಮಾಡುವುದೆಂದು ನಾವು ನಂಬಬಹುದು. ಭಾರತದ ರಾಜ್ಯಾಂಗ ಘಟನೆಯ ನಿರ್ದೇಶಕ ತತ್ವಗಳಲ್ಲಿ ಪಾನ ನಿರೋಧ ಧೋರಣೆಯನ್ನು ಅನುಷ್ಠಾನಕ್ಕೆ ತರಬೇಕೆಂಬುದೂ ಒಂದಾಗಿದೆ. ಈ ದಿಸೆಯಲ್ಲಿ ಮದ್ರಾಸು, ಮುಂಬಯಿ, ಆಂಧ್ರ ಮತ್ತು ಸೌರಾಷ್ಟ್ರಗಳು ಹೆಜ್ಜೆಯನ್ನು ಮುಂದಿಟ್ಟು ಸಂಪೂರ್ಣ ಪಾನನಿರೋಧವನ್ನು ಜ್ಯಾರಿಗೆ ತಂದಿವೆ. ಮಧ್ಯ ಭಾರತದ ಮೂರರಲ್ಲಿ ಒಂದಂಶ, ಉತ್ತರ ಪ್ರದೇಶದ ಕೆಲವು ಜಿಲ್ಲೆಗಳು, ಮೈಸೂರು ಮತ್ತು ತಿರು-ಕೊಚ್ಚಿಯ ಕೆಲವು ತಾಲೂಕುಗಳಲ್ಲಿಯೂ ಪಾನನಿರೋಧ ಶಾಸನವು ಜ್ಯಾರಿಯಲ್ಲಿದೆ. ಪಶ್ಚಿಮ ಕರಾವಳಿಯಲ್ಲಿರುವ ಕಚ್ಛದ ಸರಕಾರವು ಆ ರಾಜ್ಯದಲ್ಲಿದ್ದ ೩೫ ಮದ್ಯದಂಗಡಿಗಳಲ್ಲಿ ೭ನ್ನು ಮುಚ್ಚಿರುತ್ತದೆ.

—ಇಷ್ಟನ್ನು ಭಾರತದ ಮದ್ಯಪಾನ ಪ್ರತಿಬಂಧದ ವಿಷಯದಲ್ಲಿ ಸಾಧಿಸಿದ ಪ್ರಗತಿಎಂಬುದಾಗಿ ಭಾವಿಸಬಹುದು. ಆದರೆ ಈ ಪ್ರಗತಿಗಾಗಿ ಬಹಳ ಭಾರವಾದ ಬೆಲೆಯನ್ನು ಕೊಡಬೇಕಾಯಿತು. ಪಾನ ನಿರೋಧ ಶಾಸನದ ದೆಸೆಯಿಂದ ಮದ್ರಾಸು ಮತ್ತು ಮುಂಬಯಿ ರಾಜ್ಯಗಳಿಗೆ ಅನುಕ್ರಮವಾಗಿ ೩೫ ಮತ್ತು ೫೦ ಕೋಟಿ ರೂಪಾಯಿಗಳ ಒಟ್ಟು ವಾರ್ಷಿಕ ಆದಾಯದಲ್ಲಿ ೧೭ ಮತ್ತು ೮ ಕೋಟಿ ರೂಪಾಯಿಗಳ ಕೊರತೆ ಕಾಣಿಸಿತು. ಅಬಕಾರಿ ಸುಂಕದ ಆದಾಯ ತಪ್ಪಿಹೋದುದೇ ಇದಕ್ಕೆ ಕಾರಣ. ಆದರೆ ಮಾರಾಟಕರವೇ ಮುಂತಾದ ಹೊಸ ತೆರಿಗೆಗಳ ಮೂಲಕ ಈ ನಷ್ಟವನ್ನು ತುಂಬಿಸಿಕೊಂಡು ಅವು ತಮ್ಮ ನಿತ್ಯದ ಚಟುವಟಿಕೆಗಳನ್ನು ನಡೆಸುತ್ತಿರುವುದನ್ನು ಕಂಡರೆ ಆರ್ಥಿಕ ದುಷ್ಪರಿಣಾಮವಾದೀತೆಂದು ಸರಕಾರಗಳು ಮದ್ಯಪಾನ ಪ್ರತಿಬಂಧವನ್ನು ಜ್ಯಾರಿಗೆ ತಂದಿರುವುದರಲ್ಲಿ ಅರ್ಥವಿಲ್ಲ ಎಂದು ಹೇಳಬೇಕಾಗುತ್ತದೆ. ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳು ಆರ್ಥಿಕ ಅಡಚಣೆಗೆ ಗುರಿಯಾಗುವ ಭಯದಿಂದ ಮದ್ಯಪಾನ ಪ್ರತಿಬಂಧವನ್ನು ತರುವ ವಿಷಯದಲ್ಲಿ ಹಿಂದೆ ಮುಂದೆ ನೋಡುತ್ತಿವೆಯಾದರೂ ಅವುಗಳಿಗೆ ಮದ್ರಾಸು ಮತ್ತಿತರ ಮೂರು ರಾಜ್ಯಗಳು ಮಾರ್ಗದರ್ಶನ ಮಾಡಬಲ್ಲವು. ಇಲ್ಲಿ ಅನುಸರಿಸಿದ ಉಪಾಯಗಳನ್ನು ಬೇರೆ ರಾಜ್ಯಗಳೂ ಯಶಸ್ವಿಯಾಗಿ ಪ್ರಯೋಗಿಸಿ ಹಣಕಾಸಿನ ತಾಪತ್ರಯವನ್ನು ದೂರಗೊಳಿಸಿ, ಮದ್ಯ ಪಾನದ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು.

ನಮ್ಮ ದೇಶದಲ್ಲಿ ಮದ್ಯಪಾನ ಪ್ರತಿಬಂಧ ಕ್ರಮವನ್ನು ಜ್ಯಾರಿಗೆ ತರುವುದು ಕಷ್ಟಕರವಾಗಲಾರದು. ಏಕೆಂದರೆ ಬೇರೆ ದೇಶಗಳೊಡನೆ ಹೋಲಿಸಿದರೆ ನಮ್ಮಲ್ಲಿ ಕುಡುಕರ ಸಂಖ್ಯೆಯು ಬಹಳ ಕಡಿಮೆಯಾಗಿದೆ. ಅಮೇರಿಕ, ಬ್ರಿಟನು ಫ್ರಾನ್ಸು ಮುಂತಾದ ಪಾಶ್ಚಾತ್ಯ ರಾಷ್ಟ್ರಗಳ ಜನರಲ್ಲಿ ಪ್ರತಿ ನೂರಕ್ಕೆ ೭೦ ರಿಂದ ೮೦ ಮಂದಿ ಕುಡುಕರಿದ್ದರೆ, ಭಾರತದಲ್ಲಿ ೧೦ ಮಂದಿಯಷ್ಟೇ ಕಂಡುಬರುತ್ತಾರೆ. ನಮ್ಮ ಸಂಸ್ಕೃತಿ, ಸಂಪ್ರದಾಯ ಮತ್ತು ವಾತಾವರಣಗಳು ಮಾದಕಪೇಯ ಸೇವನೆಯನ್ನು ತಿರಸ್ಕಾರ ಭಾವನೆಯಿಂದಲೇ ನೋಡಿವೆ. ಜನರಲ್ಲಿ ಹೆಚ್ಚಿನವರು ಕುಡುಕರನ್ನು ಜರಿಯುತ್ತಾರೆ. ಅವರಿಗೆ ಯಾವ ತರದ ಗೌರವಾದರಗಳೂ ಸಮಾಜದಲ್ಲಿ ದೊರೆಯುವುದಿಲ್ಲ. ಆದುದರಿಂದ ಕುಡುಕರು ಬಹಿರಂಗವಾಗಿ ಕುಡಿದು ತಮ್ಮ ಮರ್ಯಾದೆ ಕೆಡಿಸಿಕೊಳ್ಳಲು ಇಚ್ಛಿಸುವುದಿಲ್ಲ. ಪಾನ ನಿರೋಧ ಧೋರಣೆ ಜ್ಯಾರಿಯಲ್ಲಿ ಬರುವುದಕ್ಕೆ ಮುಂಚೆ ಮದ್ಯದಂಗಡಿಗಳು ಬಹಿರಂಗ ಸ್ಥಳಗಳಲ್ಲಿದ್ದುದರಿಂದ ನಿರುಪಾಯರಾಗಿ ಕುಡುಕರು ಅಲ್ಲಿಗೆ ಹೋಗುತ್ತಿದ್ದರು. ಎಲ್ಲರ ಮುಂದೆ ಮರ್ಯಾದೆ ಹೋಗುವುದೆಂಬ ಭಯಕ್ಕಿಂತಲೂ ಕುಡಿಯುವ ಚಟದ ಪ್ರೇರಣೆಯೇ ಅವರಿಂದ ಈ ಕೆಲಸಮಾಡಿಸುತ್ತಿತ್ತೆಂದರೆ ತಪ್ಪಲ್ಲ.

ಪಾನ ನಿರೋಧ ಶಾಸನವನ್ನು ಜ್ಯಾರಿಗೆ ತಂದ ಬಳಿಕ ಕುಡುಕರೆಲ್ಲರೂ ಸಭ್ಯ ಮನುಷ್ಯರಾದರೆಂದು ಹೇಳಲಿಕ್ಕಾಗದು. ಮೊದಲಿಗೆ ಅವರಲ್ಲಿ ಹೆಚ್ಚಿನವರು ಸಭ್ಯತನದ ಲಕ್ಷಣಗಳನ್ನು ತೋರಿಸಿದರು. ಮದ್ಯದಂಗಡಿಯ ಬಾಗಿಲು ಮುಚ್ಚಿದುದರಿಂದ ಒಳ್ಳೆಯದೇ ಆಯಿತೆಂದು ಅವರು ಬಾಯಿ ಬಿಟ್ಟು ಹರಸಿದರು—ಆದರೆ ಈ ಪ್ರಾರಂಭಿಕ ಉತ್ಸಾಹವು ಚಟವಾಗಿ ಪರಿಣಮಿಸಿದ ಕುಡುಕತನವನ್ನು ಶಾಶ್ವತವಾಗಿ ದೂರ ಮಾಡಲು ಅಸಮರ್ಥವಾಯಿತು. ಹೆಚ್ಚಿನವರು ತಮ್ಮ ತೃಷೆಯನ್ನು ತೀರಿಸಿಕೊಳ್ಳಲು ವಾಮಮಾರ್ಗವನ್ನವಲಂಬಿಸಿದರು. ಇವರನ್ನು ಅಕೃತ್ಯಗಳಿಂದ ತಡೆಯುವ ಸಲುವಾಗಿ ಸರಕಾರವು ವಿಶೇಷ ಪಡೆಯನ್ನು ನೇಮಿಸಿ, ಪಾನ ನಿರೋಧ ಶಾಸನವನ್ನು ಬಿಗಿಯಾಗಿ ಜ್ಯಾರಿಗೆ ತರುವುದಕ್ಕೆ ಪ್ರಯತ್ನಿಸಿದರೂ ಅದು ಸಂಪೂರ್ಣ ಯಶಸ್ಸನ್ನು ಪಡೆಯಲಿಲ್ಲ. ಮದ್ರಾಸು ರಾಜ್ಯದ ಸರಕಾರವು ಶಾಸನಸಭೆಯ ಮುಂದೆ ಮೊನ್ನೆ ಮಂಡಿಸಿದ ಹೇಳಿಕೆ ಇದನ್ನೆ ವ್ಯಕ್ತಪಡಿಸುತ್ತದೆ. ಅದರಂತೆ ೧೯೫೦ನೇ ಇಸವಿಯಲ್ಲಿ ೭೭೩೦ ಅಪರಾಧಗಳು ಸಂಭವಿಸಿದ್ದರೆ ೧೯೫೩ರಲ್ಲಿ ೧೩೫೭೦ ಅಪರಾಧಗಳು ಘಟಿಸಿದವು. ಶಾಸನವನ್ನು ಮೀರಿದವರ ಸಂಖ್ಯಾ ಪ್ರಮಾಣವು ಮೊದಲಿನವರ ಇಮ್ಮಡಿಯಾಗಿರುವುದಕ್ಕೆ ಪೋಲೀಸರ ದಕ್ಷತೆ ಹೆಚ್ಚಿರುವುದೊಂದೇ ಕಾರಣವೆಂದು ಭಾವಿಸುವುದು ಸರಿಯಾಗಲಿಕ್ಕಿಲ್ಲ—ಕುಡುಕರ ಹಾವಳಿ ಮಿತಿಮೀರಿರುವುದನ್ನೂ ಒಂದು ಕಾರಣವಾಗಿ ಭಾವಿಸಬೇಕಾಗುತ್ತದೆ.

ಮದ್ರಾಸು ಸರಕಾರದ ಅಭಿಪ್ರಾಯದಂತೆ, ಕಳ್ಳಭಟ್ಟಿಯಲ್ಲಿ ಸಾರಾಯಿಯ ಭಟ್ಟಿ ಇಳಿಸುವುದಕ್ಕೆ ಕೆಲವರು ಉದ್ಯುಕ್ತರಾಗುವುದು ಪಾನನಿರೋಧ ಧೋರಣೆಯ ಯಶಸ್ಸಿಗಿರುವ ಮುಖ್ಯ ಆತಂಕ. ಕೆಲವು ವರ್ತಕರು, ಧುರೀಣರು, ಹಣವನ್ನು ಹಾಕಿ, ಕೆಲಸಕ್ಕೆ ಜನರನ್ನು ನೇಮಿಸಿಕೊಂಡು, ಮಾದಕಪೇಯಗಳನ್ನು ತಯಾರಿಸಿ, ಅದನ್ನು ಮಾರುವ ವ್ಯಾಪಾರದಲ್ಲಿ ತೊಡಗಿದ್ದಾರೆ. ಇದು ಲಾಭದಾಯಕವಾದ 'ಗುಡಿ ಕೈಗಾರಿಕೆ'ಯಲ್ಲಿ ಪರ್ಯವಸಾನ ಹೊಂದಿರುತ್ತದೆ. ನದಿಯದಂಡೆ, ದಟ್ಟವಾದ ಅರಣ್ಯ, ಗುಡ್ಡಬೆಟ್ಟ

(೧೦ನೇ ಪುಟ ನೋಡಿರಿ)

ವಿನೋದ

ಮದ್ಯಪಾನ ಮಾಡಿದ ಆರೋಪದ ಮೇಲೆ ಅವನ ವಿಚಾರಣೆ ನಡೆಯುತ್ತಿದ್ದಾಗ "ಸ್ವಾಮಿ, ಇನ್ನೊಬ್ಬ ಪೋಲೀಸನ ಸಾಕ್ಷಿಯನ್ನು ಕೇಳಿಕೊಳ್ಳಿರಲ್ಲ!" ಎಂದು ಅವನು ನ್ಯಾಯಾಧೀಶರನ್ನು ವಿನಂತಿಸಿದ.

'ಆದರೆ ನಿನ್ನನ್ನು ಸೆರೆಹಿಡಿದಾಗ ಇನ್ನೊಬ್ಬನಿರಲಿಲ್ಲವಲ್ಲ!' ಎಂದರು ನ್ಯಾಯಾಧೀಶ.

"ಅದು ಹೇಗಾದೀತು? ಇಬ್ಬರಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ!"

"ಓ—ಸರಿ, ಸರಿ, ಅದಕ್ಕಾಗಿಯೇ ನಿನ್ನಲ್ಲಿಗೆ ವಿಚಾರಣೆಯ ಮಾತೆ ಬಂದದ್ದು. ಇನ್ನು ಬೇರೆಸಾಕ್ಷಿ ಬೇಡ!"

THE CANARA INDUSTRIAL & BANKING SYNDICATE LTD.

Estd: 1925 H. O. UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಅವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ. ಹಣವನ್ನು ಠೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಕೂಡಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೯೩ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದ್ದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೭,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ಮಧ್ಯಪ್ರದೇಶದ ರಮ್ಯ ಪ್ರವಾಸ

ಗಿರಿಜನರೆಂದು ಕರೆಯಲಾಗುವ ಆದಿವಾಸಿಗಳ ನೆಲೆವೀಡು

ಈಚೆಗೆ ಕೆಲವು ದಿನಗಳಿಂದ ವಾರ್ತಾಲೋಕದಲ್ಲಿ ಮಧ್ಯ ಪ್ರದೇಶದ ಹೆಸರು ಮರಳಿ ಮರಳಿ ಉಲ್ಲೇಖಿಸಲ್ಪಡುತ್ತಿದೆ. ಹೆಸರೇ ಸೂಚಿಸುವಂತೆ ಭಾರತದ ಹೃದಯ ಭಾಗದಲ್ಲಿರುವ ಈ ರಾಜ್ಯದಲ್ಲಿ ಗಾಂಧೀಜಿಯವರ ಸೇವಾ ಗ್ರಾಮವಿರುವುದರಿಂದ ಭಾರತದ ಸ್ವಾತಂತ್ರ್ಯ ಸಮರದಲ್ಲಿ ಆಸಕ್ತಿಯುಳ್ಳವರಿಗೂ ಗಾಂಧೀವಾದದ ಬಗೆಗೆ ಶ್ರದ್ಧೆಯುಳ್ಳವರೆಲ್ಲರಿಗೂ ಇದು ಯಾತ್ರಾಸ್ಥಾನವಾಗುತ್ತದೆ. ಹಾಗೆ ಯಾತ್ರೆಗೆಂದು ದೇಶದ ಮೂಲೆ ಮೂಲೆಯಿಂದಲೂ ಬರುವವರ ರೈಲುಗಳೂ ವಿಮಾನಗಳೂ ಈ ರಾಜ್ಯದ ಮುಖ್ಯ ಪಟ್ಟಣವಾದ ನಾಗಪುರದಲ್ಲಿ ಒಟ್ಟಾಗುತ್ತವೆ. ನಾಗಪುರದ ಹತ್ತಿರದ ಸೋನೆಗಾಂವ್ ವಿಮಾನ ನಿಲ್ದಾಣವಂತೂ ಅಪಘಾತಗಳಿಗೆ ಕುಪ್ರಸಿದ್ಧವಾಗಿದೆ. ಕಳೆದ ವಾರ ನಾಗಪುರದ ಹೆಸರಿಗೆ ಮಸಿ ಹಚ್ಚುವ ಇನ್ನೊಂದು ಘಟನೆಯೂ ನಡೆಯಿತು—ಅದೆಂದರೆ ಜವಾಹರಲಾಲ ನೆಹರುಗಳ ಕಾರಿನ ಮೇಲೆ ಚೂರಿ ಹಿಡಿದು ಹಾರಿದ ಬಾಬುರಾಯನ ಸಾಹಸ! ಆದರೆ ನೆಹರುಗಳು ಗಂಡಾಂತರದಿಂದ ಪಾರಾದರು ಮತ್ತು ಮಧ್ಯ ಪ್ರದೇಶದ ಜಗದಾಳಪುರದಲ್ಲಿ ಜರಗಿದ ಆದಿವಾಸಿಗಳ ಮೂರನೆಯ ಪರಿಷತ್ತಿನಲ್ಲಿ ಭಾಗವಹಿಸಿದರು. ಈ ಪರಿಷತ್ತಿನ ದಿನಯಿಂದಲೂ ಭಿಲಾಯಿ ಎಂಬಲ್ಲಿ ರಶಿಯದ ನೆರವಿನಿಂದ ಭಾರತ ಸರಕಾರವು ಇನ್ನೊಂದು ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವುದೆಂದು ಈಗ ತಾನೆ ಬಂದಿರುವ ಸುದ್ದಿಯಿಂದಲೂ ಮಧ್ಯ ಪ್ರದೇಶದ ಕುರಿತು ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳುವ ಲವಲವಿಕೆ ನಮಗಾಗುತ್ತದೆ.

ರಾಮಾಯಣ ಮತ್ತು ಮಹಾಭಾರತಗಳನ್ನು ಓದಿದವರಿಗೆ ಮಧ್ಯಪ್ರದೇಶದ ಇತಿಹಾಸ ಬಹಳ ಪ್ರಾಚೀನವಾದುದೆಂಬ ವಿಷಯ ಹೊಳೆಯುತ್ತದೆ. ಘನವಾದ ಅರಣ್ಯಗಳಿಂದ ತುಂಬಿದ ದಂಡಕವನವು ಮಧ್ಯ ಪ್ರದೇಶದಲ್ಲಿ ವ್ಯಾಪಿಸಿದ್ದಿತು. ರಾವಣನ ಲಂಕೆಗೆ ರಾಮನು ಇದೇ ಮಾರ್ಗವಾಗಿ ಹೋದನು; ಮತ್ತು ಶಬರಿಯ ಎಂಜಲು ಹಣ್ಣುಗಳ ಆತಿಥ್ಯವನ್ನು ಇಲ್ಲಿಯೇ ಸ್ವೀಕರಿಸಿದನು. ಇಲ್ಲಿಯ ಗೋದಾವರಿ ಮತ್ತು ನರ್ಮದೆಯ ಪುಣ್ಯ ಪ್ರವಾಹದಲ್ಲಿ ಮಿಂದು ಸೀತಾರಾಮರು ವನವಾಸದ ನೋವನ್ನು ಕಳೆದಿದ್ದರು. ಒಂದು ಕಾಲದಲ್ಲಿ ಪಾಂಡವರು ವಾಸವಾಗಿದ್ದರೆಂದು ಹೇಳಲಾಗುವ ಗುಹೆಗಳು ಈಗಲೂ ಪಚಮರ್ಹಿಯಲ್ಲಿ ನೋಡ ಸಿಗುತ್ತವೆ. ಕಾಳಿದಾಸನ ಕಾವ್ಯವೊಂದರ ನಾಯಕನಾದ ಅಗ್ನಿಮಿತ್ರನ ಮಾಳವ ದೇಶವೂ ನಳನ ಹೆಂಡತಿ ದಮಯಂತಿಯ ತವರೂರಾದ ವಿದರ್ಭವೂ ಮಧ್ಯಪ್ರದೇಶ ರಾಜ್ಯದಲ್ಲಿಯೇ ಸಮಾವೇಶವಾಗುತ್ತವೆ. ಸಾವಿರ ವರ್ಷಗಳ ಹಿಂದೆ ಚಾಲುಕ್ಯರು, ರಾಷ್ಟ್ರಕೂಟರು, ಕ್ಷತ್ರಪರು, ಯಾದವರು ಹೈಹೆಯರು, ಕಳಚೂರ್ಯರು, ಪರಮಾರರು ಇತ್ಯಾದಿ ವಂಶಗಳ ಅರಸರು ಇಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದರು. ಅಲ್ಲಾವುದ್ದೀನ ಖಿಲ್ಜಿಯ ಕಾಲದಲ್ಲಿ ಮೊಗಲರು ದೇವಗಿರಿಯ ಯಾದವರನ್ನು ಸೋಲಿಸಿ, ಇಲ್ಲಿ ತಳವೂರಿದರು. ಮುಂದೆ ಮೊಗಲರೂ ಮರಾಠರೂ ಇತಿಹಾಸದ ಪುಟಗಳನ್ನು ಇಲ್ಲಿ ಒರೆದರು. ಇಲ್ಲಿಯ ಕೆಲವು ಭಾಗದಲ್ಲಿ ನಾಲ್ಕು ಶತಮಾನಗಳ ವರೆಗೆ ಗೊಂಡರು ಸಹ ಮೆರೆದರು. ರಾಣಿ ದುರ್ಗಾವತಿಯ ಪ್ರಾಣ ತ್ಯಾಗದಲ್ಲಿ ಅವರ ಕೀರ್ತಿಯ ದಿನ ಕೊನೆಗೊಂಡಿತು.

ಈಗಿನ ಮಧ್ಯ ಪ್ರದೇಶವು ಬ್ರಿಟಿಷರ ಕಾಲದಲ್ಲಿದ್ದ ೧೪ ಸಂಸ್ಥಾನಗಳ ಸಂಯುಕ್ತ ರಾಜ್ಯ. ೧೩೦೦೦೦ ಚದರ ಮೈಲು ವಿಸ್ತೀರ್ಣದ ಈ ರಾಜ್ಯದಲ್ಲಿ ಐದರಲ್ಲಿ ಎರಡು ಪಾಲಿನಷ್ಟು ಅರಣ್ಯಗಳೇ ತುಂಬಿವೆ. ಈ ಅರಣ್ಯಗಳು ಬಹಳ ಉಪಯುಕ್ತವಾದ ವಸ್ತುಗಳನ್ನು ಕೊಡುತ್ತವೆ. ಅರಗು, ಬಿದಿರು, ಪೈಂಟು ಇತ್ಯಾದಿ ವಸ್ತುಗಳೂ ಬೀಡಿಯೆಲೆಯ ಮರಗಳೂ ಇಲ್ಲಿಯ ಸಂಪತ್ತು. ರಾಜ್ಯ ಸರಕಾರವು ನೇಪಾದಲ್ಲಿ ವೃತ್ತ ಪತ್ರಿಕೆಗಳ ಉಪಯೋಗಕ್ಕೆ ಬರುವ ಕಾಗದವನ್ನು ಉತ್ಪಾದಿಸುವ ಕಾರ್ಖಾನೆಯನ್ನು ತೆರೆದಿದೆಯಲ್ಲದೆ ಬಲ್ಲಾಂಪುರದಲ್ಲಿ ಇನ್ನೊಂದು ಕಾಗದದ ಕಾರ್ಖಾನೆಯೂ ಕೆಲಸಮಾಡುತ್ತದೆ. ಈ ಅರಣ್ಯಗಳಲ್ಲಿ ಆದಿವಾಸಿಗಳು ವಾಸಿಸುತ್ತಾರೆ—ರಾಜ್ಯದಲ್ಲಿ ಒಟ್ಟು ೩೭೭ ಆಡು ಭಾಷೆಗಳಿವೆಯೆಂದು ಹೇಳಲಾಗುತ್ತಿದ್ದು ಆದಿವಾಸಿಗಳ ಜನಾಂಗ ಒಂದೊಂದೂ ಒಂದೊಂದು ಭಾಷೆ ಮಾತಾಡುತ್ತಿರುವುದೇ ಇಷ್ಟು ಹೆಚ್ಚಿನ ಭಾಷಾಸಮೃದ್ಧಿಗೆ ಕಾರಣ. ಸರಕಾರವು ಗಿರಿಜನರೆಂದು ಕಾಕಾ ಸಾಹೇಬ ಕಾಲೇಲಕರರು ಪ್ರೀತಿಯಿಂದ ಕರೆದಿರುವ ಆದಿವಾಸಿಗಳ ಅಭ್ಯುದಯದ ವಿಷಯದಲ್ಲಿ ತುಂಬ ಕೆಲಸಗಳನ್ನು ಪ್ರತ್ಯೇಕ ಸಚಿವ ಶಾಖೆಯೊಂದರ ಮೂಲಕ ಮಾಡುತ್ತದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೧೭೦ ಲಕ್ಷ ರೂಪಾಯಿಗಳ ವೆಚ್ಚ ಬರುವ ಕಾರ್ಯಕ್ರಮಗಳನ್ನು ಅದು ರೂಪಿಸಿರುತ್ತದೆ. ಇದರ ಪರಿಣಾಮವಾಗಿ ಮೊದಲು ೩೦೦ ರಾತಲು ಬೆಳೆ ಬರುತ್ತಿದ್ದ ಪ್ರದೇಶದಲ್ಲಿ ೧೦೦೦ ರಾತಲು ಧಾನ್ಯವನ್ನು ಬೆಳೆಸುವುದು ಸಾಧ್ಯವಾಯಿತು. ಅನೇಕ ಮಾರ್ಗಗಳೂ ಆಸ್ಪತ್ರೆಗಳೂ ರಚಿಸಲ್ಪಟ್ಟು ಮಲೇರಿಯಾ ಮತ್ತಿತರ ರೋಗಗಳ ನಿಯಂತ್ರಣ ಕಾರ್ಯದಲ್ಲಿ ಯಶಸ್ಸನ್ನು ಸಂಪಾದಿಸಲಾಯಿತು.

ಬಸ್ತರದಲ್ಲಿ ಆದಿವಾಸಿಗಳದೇ ಕಾರುಬಾರೆಂದರೂ ಅತಿಶಯೋಕ್ತಿಯಾಗದು. ಇಲ್ಲಿ ಗಿರಿಜನರು ತಮ್ಮ ತಲೆಗೆ ಕೋಣದ ಕೊಂಬುಗಳ ಕಿರೀಟವನ್ನಿಟ್ಟುಕೊಂಡು ನೃತ್ಯ ಮತ್ತಿತರ ಸಂತೋಷ ಸಮಾರಂಭಗಳನ್ನು ನಡೆಸುವಾಗ ನೋಡಲು ಬಹಳ ಸಂತೋಷವಾಗುತ್ತದೆ. ಬೇಟೆಯಾಡುವುದು ಆದಿವಾಸಿಗಳ ಹುಟ್ಟುಕಸುಬಾಗಿದ್ದು ನೆಹರುಗಳಿಗೆ ಮೊನ್ನೆ ಇವರು ಒಂದು ತಿಂಗಳು ಪ್ರಾಯದ ಮೂರು ಹುಲಿಮರಿಗಳನ್ನೂ ತಮ್ಮ ಬಿಲ್ಲು ಬಾಣಗಳನ್ನೂ ಕೊಡಲಿಯನ್ನೂ ಉಡುಗೊರೆಯಾಗಿ ನೀಡಿದರು. ಮಧ್ಯಪ್ರದೇಶದ ಪೂರ್ವದಲ್ಲಿ ತೇವಭರಿತವಾದ ಮತ್ತು ಚೆನ್ನಾಗಿ ಬಿಸಿಲು ಮಳೆಗಳು ಬೀಳುವ ಭತ್ತದ ಗದ್ದೆಗಳು ಕಂಗೊಳಿಸುತ್ತವೆ. ಭಾರತದಲ್ಲೆಲ್ಲ ಕ್ಷಾಮಪೀಡೆ ತಲೆದೋರಿದ ವಿಷಮ ಸಂದರ್ಭದಲ್ಲೂ ಇಲ್ಲಿಯ ಭತ್ತದ ಗದ್ದೆಗಳು ಹಾನಿಯನ್ನು ಹೊಂದದೆ ಊಟವನ್ನು ನೀಡುತ್ತಾ ಮಧ್ಯಪ್ರದೇಶದ ಕೀರ್ತಿಯನ್ನು ಹೆಚ್ಚಿಸಿದವೆಂಬುದನ್ನು ನಾವು ಸ್ಮರಿಸಬಹುದು. ಉತ್ತರದ ನರ್ಮದೆ ಮತ್ತು ತಪತಿಯ ತೀರದಲ್ಲೂ ಆಹಾರ ಧಾನ್ಯಗಳು ಸಮೃದ್ಧವಾಗಿ ಬೆಳೆಯುತ್ತವೆ. ದಕ್ಷಿಣದ ಬರಾರಿನಲ್ಲಿ ಹತ್ತಿಯು ಹೇರಳವಾಗಿ ಬೆಳೆಯುತ್ತಿದ್ದು ಮುಂಬಯಿಯ ಗಿರಣಿಗಳಿಗೆ ಅದನ್ನು ಪೂರೈಸಲಾಗುತ್ತದೆ. ಉಳಿದ ಭಾಗಗಳಲ್ಲಿ ಹಣ್ಣುಹಂಪಲುಗಳ ತೋಟಗಳು ಕಂಗೊಳಿಸುತ್ತವೆ. ಹೀರ ಭೂಮಿ ಪ್ರದೇಶದಲ್ಲಿ ಭಾರತದಲ್ಲಿಯೇ ಅತ್ಯಂತ ಸಮೃದ್ಧವಾದ ಖನಿಜಗಳು ಸಿಗುತ್ತವೆ. ಕಬ್ಬಿಣದ ಅದಿರಿನ ಗುಡ್ಡಗಳೇ ಇಲ್ಲಿವೆಯಲ್ಲದೆ ನರ್ಮದೆಯ ದಂಡೆಯ ಗುಂಟ ಚಂದ್ರಕಾಂತ ಶಿಲೆಯ ದೊಡ್ಡ ಸಾಲೊಂದು ಇಲ್ಲಿ ನೋಡುವವರ ಕಣ್ಣನ್ನು ಹುಣ್ಣಿಮೆ ಚಂದ್ರನ ಬೆಳಕಿನಲ್ಲಿ ಕುಕ್ಕುತ್ತದೆ. ಪ್ರವಾಸಪ್ರಿಯರಿಗೆ ಜಬ್ಬಲ ಪುರದ ಬಳಿಯ ಈ ನೋಟ ಮರೆಯಲಾರದ ಕನಸು! ಮ್ಯಾಂಗನೀಸೆಂಬ ಖನಿಜದ ಉತ್ಪಾದನೆಗೆ ಮಧ್ಯ ಪ್ರದೇಶದ ಗಣಿಗಳು ತುಂಬ ಪ್ರಸಿದ್ಧ. ಇದಲ್ಲದೆ ಗಾಜು, ಸಾಬೂನು, ಎಣ್ಣೆ, ಬಟ್ಟೆಬರೆ

(೧೩ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3¼%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T M. A.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಶ್ರೇಯಂಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಿವಾರಿಸುವುದು ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಸೀಸೆ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

ಕೈಮಗ್ಗದ ಬಟ್ಟೆಯ ಉದ್ಯೋಗಕ್ಕೆ ಪ್ರೋತ್ಸಾಹ

ದ್ವಿತೀಯ ಸಪ್ತಾಹದ ಉಜ್ವಲ ಕಾರ್ಯಕ್ರಮ

ಮೊನ್ನೆ ೨೦ನೇ ತಾರೀಕಿನಿಂದ ಒಂದು ವಾರದ ವರೆಗೆ ಆಚರಿಸಲಾಗುತ್ತಿರುವ ಕೈಮಗ್ಗದ ಸಪ್ತಾಹವು ಭಾರತದಾದ್ಯಂತ ಜನರಲ್ಲಿ ಜಾಗೃತಿಯನ್ನು ಹುಟ್ಟಿಸುವ ಚಳವಳಿವಾಗಿ ಪರಿಣಮಿಸದಿರದು. ಕೈಮಗ್ಗದ ಉದ್ಯೋಗವು ರಾಷ್ಟ್ರದ ಜೀವನದಲ್ಲಿ ಪ್ರಾಮುಖ್ಯ ಸ್ಥಾನವನ್ನು ಪಡೆಯುತ್ತದೆನ್ನುವ ಮಾತನ್ನು ರಾಷ್ಟ್ರಾಧ್ಯಕ್ಷರೂ, ಉಪರಾಷ್ಟ್ರಾಧ್ಯಕ್ಷರೂ ಪ್ರಧಾನ ಮಂತ್ರಿಗಳೂ ಸಪ್ತಾಹದ ಆಚರಣೆಯ ಶುಭ ಸಂದರ್ಭದಲ್ಲಿ ತಮ್ಮ ಸಂದೇಶಗಳ ಮೂಲಕ ಮನವರಿಕೆ ಮಾಡಿಕೊಟ್ಟಿದ್ದಾರೆ. ರಾಜ್ಯಸರಕಾರಗಳೂ ಅಖಿಲ ಭಾರತ ಕೈಮಗ್ಗದ ಮಂಡಳಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮುಂತಾದ ಸಂಸ್ಥೆಗಳೂ ಕೈಮಗ್ಗದ ಬಟ್ಟೆಯ ವಿಕ್ರಯ ಮತ್ತು ಪ್ರಚಾರದ ಸಲುವಾಗಿ ವಿಶೇಷ ಆಸಕ್ತಿಯನ್ನು ತೋರಿಸುತ್ತಾ ಜನರಿಗೆ ಶಿಕ್ಷಣವನ್ನು ಕೊಡುತ್ತವೆ. ಅವುಗಳ ಮೇಲಿಂದ ಹೇಳುವುದಾದರೆ, ಭಾರತದಲ್ಲಿ ಕೈಮಗ್ಗದ ಬಟ್ಟೆಗಳಿಗೆ ಇನ್ನೂ ನೂರಾರು ವರ್ಷಗಳ ವರೆಗೆ ಭದ್ರವಾದ ಸ್ಥಾನವಿದ್ದು ಯಾವುದೇ ಆರ್ಥಿಕ ಪದ್ಧತಿಯೂ ಕೈಮಗ್ಗದ ಉದ್ಯೋಗವನ್ನು ಅಲಕ್ಷಿಸಲಾರದು.

ಕೃಷಿ ನಿರತರಾಗಿರುವ ಜನರನ್ನು ಬಿಟ್ಟರೆ ಕೈಮಗ್ಗದ ಉದ್ಯೋಗವೇ ಅತಿ ಹೆಚ್ಚು ಜನರಿಗೆ ಕೆಲಸವನ್ನೂ ಹೊಟ್ಟೆಗೆ ಹಿಟ್ಟನ್ನೂ ನಮ್ಮ ದೇಶದಲ್ಲಿ ಒದಗಿಸುತ್ತದೆ. ನಮ್ಮಲ್ಲಿ ಒಟ್ಟು ೨೮ ಲಕ್ಷ ಕೈಮಗ್ಗಗಳಿವೆಯೆಂದೂ ಅವುಗಳನ್ನು ಜೀವನಾಧಾರವಾಗಿಟ್ಟುಕೊಂಡ ಎರಡು ಕೋಟಿ ಜನರಿರುವರೆಂದೂ ಅಂಕೆ ಸಂಖ್ಯೆಗಳು ಹೇಳುತ್ತವೆ. ಕರ್ನಾಟಕದಲ್ಲಿ ಸುಮಾರು ಎರಡು ಲಕ್ಷ ಕೈಮಗ್ಗಗಳು ಕೆಲಸಮಾಡುತ್ತವೆಂದು ಅಂದಾಜು. ಕರ್ನಾಟಕದ ೧೩೦ ಲಕ್ಷ ಜನರಲ್ಲಿ ೨೦ ಲಕ್ಷ ಜನರಿಗೆ ಕೈಮಗ್ಗದ ಉದ್ಯೋಗವೇ ಏಕಮಾತ್ರ ಅವಲಂಬನವೆಂದು ಹೇಳಬಹುದು. ಭಾರತದಲ್ಲಿ ಕೈಮಗ್ಗಗಳು ೧೪೦ಕೋಟಿ ಗಜ ಬಟ್ಟೆ ಉತ್ಪಾದಿಸುತ್ತವೆ. ಇವುಗಳಲ್ಲಿ ಧೋತರಗಳು, ಉಪ್ಪರಣೆ, ಅಂಗವಸ್ತ್ರ, ದುಪ್ಪಟೆ ರುಮಾಲು ಮುಂತಾದವುಗಳಲ್ಲದೆ ಭಾರತದ ಎಲ್ಲ ಮಹಿಳೆಯರಿಗೆ ಬೇಕಾಗುವ ಸೀರೆಗಳನ್ನೂ ರವಕೆಯ ಕಣಗಳನ್ನೂ ಕೈಮಗ್ಗಗಳಲ್ಲಿಯೇ ನೇಯಲಾಗುತ್ತದೆ. ನಮ್ಮ ಕೈಮಗ್ಗದ ಬಟ್ಟೆಗಳಲ್ಲಿ ಕಲಾವಂತಿಕೆಯು ವಿಶೇಷವಾಗಿ ವ್ಯಕ್ತವಾಗುವುದನ್ನು ಕಂಡ ವಿದೇಶೀಯರು ಈಗೀಗ ಇವುಗಳನ್ನು ಕೊಂಡುಕೊಳ್ಳುವ ಉತ್ಸಾಹವನ್ನು ತೋರಿಸುತ್ತಿದ್ದು ರಫ್ತು ವ್ಯಾಪಾರವನ್ನು ಹೆಚ್ಚಿಸುವುದಕ್ಕೆ ಇದರಿಂದ ನೆರವು ಸಿಕ್ಕಿರುತ್ತದೆ. ಸಾಮಾನ್ಯ ಮಟ್ಟದಲ್ಲಿ ನಮ್ಮ ಕೈಮಗ್ಗದ ಬಟ್ಟೆಗಳು ಆಫ್ರಿಕ, ಆಗ್ನೇಯ ಏಶ್ಯ ಮತ್ತು ಸಿಂಹಳಗಳಲ್ಲಿ ವರ್ಷಕ್ಕೆ ೬೦ ಲಕ್ಷ ಗಜಕ್ಕಿಂತಲೂ ಹೆಚ್ಚು ಮಾರಾಟವಾಗುತ್ತವೆ.

ಗಿರಣಿಗಳಲ್ಲಿ ತಯಾರಾದ ಬಟ್ಟೆಯ ಪ್ರಚಾರವೇ ಬಹಳವಾಗಿರುವ ಈ ಕಾಲದಲ್ಲಿ ಕೈಮಗ್ಗದಲ್ಲಿ ತಯಾರಾದ ಬಟ್ಟೆಯ ಬಗ್ಗೆ ಹೊಸ ಆಕರ್ಷಣೆಗಳನ್ನು ಹುಟ್ಟಿಸಬೇಕಾಗುತ್ತದೆ. ಮೊದಲನೋಟಕ್ಕೆ ಕೈಮಗ್ಗದ ಬಟ್ಟೆಗಳಲ್ಲಿ ಕುಶಲವಾದ, ಕಲಾತ್ಮಕವಾದ ಕೆಲಸಕ್ಕೆ ತುಂಬ ಅವಕಾಶವಿರುವುದರಿಂದ ಮತ್ತು ಗಿರಣಿಯ ಬಟ್ಟೆಗಳಲ್ಲಿ ಮನೋಹರವಾದ ಕಸೂತಿಯ ಕೆಲಸಗಳನ್ನು ಮಾಡಲು ಬರುವುದಿಲ್ಲವಾದುದರಿಂದ ಕೈಮಗ್ಗಗಳನ್ನು ಯಾಂತ್ರಿಕ ಸ್ಪರ್ಧೆ ಅಳಿಸಿಬಿಡಲಾರದು ಎಂಬ ಭಾವನೆ ಉಳಿಯುತ್ತದೆ. ಆದರೆ, ಕೈಮಗ್ಗದ ಬಟ್ಟೆಗಳು ಸುಂದರವೂ ಕಲಾಪೂರ್ಣವೂ ಆಗಿದ್ದಂತೆ ತುಟ್ಟಿಯಾಗಿಯೇ ಮಾರಲ್ಪಡುತ್ತವೆ ಎಂಬ ವಿಷಯವು ಜನಪ್ರಿಯತೆಯ ದೃಷ್ಟಿಯಿಂದ ದುಷ್ಪರಿಣಾಮವನ್ನು ಮಾಡುತ್ತದೆ. ಸಾಮಾನ್ಯವಾಗಿ ಗಿರಣಿಯ ಬಟ್ಟೆಗಳ ಒಂದೂಕಾಲು ಪಾಲಿನಷ್ಟು ಬೆಲೆಯನ್ನು ಕೈಮಗ್ಗದ ವಸ್ತ್ರಕ್ಕೆ ಕೊಡಬೇಕಾಗುತ್ತದೆ. ಬಡತನದಿಂದ ಬಳಲುವ ಭಾರತೀಯರು ಇದಕ್ಕೆ ಇಷ್ಟಪಡದೆ, ಗಿರಣಿಗಳ ಬಟ್ಟೆಯನ್ನೆ ಬಳಸುವುದಕ್ಕೆ ಮನಸ್ಸು ಮಾಡಿದರೆ ಅದನ್ನು ತಪ್ಪೆಂದು ಹೇಳಲಿಕ್ಕಾಗದು. ಆದರೆ, ತುಟ್ಟಿಯ ಕಾರಣವೊಂದನ್ನೆ ತೋರಿಸಿ ಜನರು ಕೈಮಗ್ಗಗಳ ಉತ್ಪಾದನೆಯನ್ನು ಮೆಚ್ಚದೆ ಮತ್ತು ಪ್ರೋತ್ಸಾಹಿಸದೆ ಹೋದರೆ, ದೇಶದಲ್ಲಿ ನೇಕಾರರ ಪರಿಸ್ಥಿತಿಯು ಹದಗೆಟ್ಟು ಹೋಗಬಹುದು. ಇದನ್ನು ತಡೆದು, ಜನರ ಅನುಕೂಲತೆಗೆ ಕೈಮಗ್ಗದ ಬಟ್ಟೆ ಹೊಂದಿಕೊಳ್ಳುವಂತೆ ಮಾಡುವುದೇ ಈಗಿನ ಕೆಲಸ.

ಕೈಮಗ್ಗದ ಬಟ್ಟೆಗಳು ತುಸು ತುಟ್ಟಿಯಾಗಿ ಕಂಡುಬಂದರೂ ಬಾಳಿಕೆಯಲ್ಲಿಯೂ ಅಂದಚಂದದಲ್ಲಿಯೂ ಅವುಗಳು ಗಿರಣಿಯ ಬಟ್ಟೆಗಳಿಗಿಂತ ಮೇಲೆಂಬುದನ್ನು ಅನುಭವವು ತಿಳಿಸಿ ಹೇಳುತ್ತದೆ. ಆದುದರಿಂದ ತುಸು ಹೆಚ್ಚು ಬೆಲೆಯನ್ನು ಕೊಡಬೇಕಾಗಿ ಬಂದರೂ ಪ್ರಯೋಜನವೂ ಅಷ್ಟು ಮಟ್ಟಿಗೆ ಹೆಚ್ಚಾಗಿಯೇ ಸಿಗುತ್ತದೆ. ಆದರೂ ಸರಕಾರದವರು ಮನಸ್ಸು ಮಾಡಿದಲ್ಲಿ ಕೈಮಗ್ಗದ ಬಟ್ಟೆಯ ಬೆಲೆ ಕಡಿಮೆಯಾಗುವಂತೆ ನೋಡಿಕೊಳ್ಳಬಹುದು. ಉದಾಹರಣೆಗಾಗಿ, ಈಗ ನೇಕಾರರಿಗೆ ನೂಲನ್ನು ಮಾರುವ ದಲಾಲಿಗಳು ಹೊಡೆಯುವ ಲಾಭವನ್ನು ನಿಲ್ಲಿಸಿಬಿಟ್ಟರೆ, ಉತ್ಪಾದನೆಯ ವೆಚ್ಚವು ಗಣನೀಯವಾಗಿ ತಗ್ಗಬಲ್ಲುದು. ಸಹಕಾರ ಸಂಘಗಳನ್ನು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸಂಘಟಿಸಿ, ಎಲ್ಲ ನೇಕಾರರಿಗೂ ಗಿರಣಿಯಿಂದ ಮಾರಾಟವಾದ ದರದಲ್ಲಿಯೇ ನೂಲು ಸಿಗುವಂತೆ ಮಾಡಬೇಕೆಂಬುದು ಇದರ ಆಶಯ. ಇದರ ಜೊತೆಗೆ, ನೇಕಾರರು ಹೊಸಹೊಸ ನಮೂನೆಯನ್ನು ತಂತ್ರಗಳನ್ನು ಬಳಸಿ ಗಿರಾಕಿಗಳ ಮನಸ್ಸನ್ನು ಆಕರ್ಷಿಸುವುದಕ್ಕೆ ಸಮರ್ಥರಾಗುವುದೂ ಕೈಮಗ್ಗದ ಉತ್ಪಾದನೆಯ ಮಟ್ಟವನ್ನು ಎತ್ತರಿಸುವುದೂ ಅಪೇಕ್ಷಣೀಯ. ಉತ್ಪಾದನೆಯ ಮಟ್ಟವು ಬೆಲೆಯನ್ನು ತಗ್ಗಿಸುವುದಕ್ಕೂ ಆಕರ್ಷಣೆಯನ್ನು ಹೆಚ್ಚಿಸುವುದಕ್ಕೂ ಸಹಾಯಕವಾದರೆ ಗಿರಣಿಯ ಬಟ್ಟೆಗಳ ಬಗ್ಗೆ ಮೋಹವು ಕಡಿಮೆಯಾಗದಿರದು. ಕೈಮಗ್ಗದ ಬಟ್ಟೆಗಳನ್ನು ಪ್ರೋತ್ಸಾಹಿಸುವುದು ರಾಷ್ಟ್ರದ ಭಕ್ತಿಯನ್ನು ಹೊರಹೊಮ್ಮುವ ವಿಧಾನಗಳಲ್ಲೊಂದೆಂಬ ಭಾವನೆಯನ್ನು ಪ್ರಚಾರದ ಮೂಲಕ ಜನರಲ್ಲಿ ಬಿಂಬಿಸಿದರೆ, ತುಂಬ ಲಾಭವಾದೀತು; ಕೈಮಗ್ಗದ ಸಪ್ತಾಹದ ಉದ್ದೇಶವೇ ಇದು.

ಸರಕಾರದವರು ಕೈಮಗ್ಗಗಳನ್ನು ಅವಲಂಬಿಸಿದ ಜನರು ತೊಂದರೆಗೀಡಾಗಬಾರದೆಂದು ಸಾಲಗಳನ್ನೂ ಸಹಾಯಧನವನ್ನೂ ಕೊಡಿಸುವ ಮೂಲಕ ನೆರವಾಗುತ್ತಿದ್ದಾರೆ; ಅಲ್ಲದೆ ಗಿರಣಿಗಳ ಉತ್ಪಾದನೆಯ ಮೇಲೆ ನಿಯಂತ್ರಣವನ್ನೂ ಗಿರಣಿಗಳಲ್ಲಿ ತಯಾರಾದ ಬಟ್ಟೆಯ ಮೇಲೆ ವಿಶೇಷ ಸುಂಕವನ್ನೂ ಹೇರಿ, ಕೈಮಗ್ಗದ ಉದ್ಯೋಗಕ್ಕೆ ರಕ್ಷಣೆಕೊಡುತ್ತಿದ್ದಾರೆ. ಇಂದಿನ ಯಾಂತ್ರಿಕ ಯುಗದಲ್ಲಿ ಕೈಮಗ್ಗಗಳನ್ನು ಕಡೆಗಣಿಸಿಬಿಟ್ಟರೆ ಬಟ್ಟೆಯ ಮಟ್ಟಿಗೆ ನಾವು ಬನ್ನಪಡಬೇಕಾಗಿ ಬರದಿರಬಹುದಾದರೂ ಎರಡು ಕೋಟಿ ಜನರ ಹೊಟ್ಟೆಯ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಸಮರ್ಥವಾದ ಬೇರೆ ಉದ್ಯೋಗವನ್ನು ಒದಗಿಸಿಕೊಡುವ ಭೀಕರ ಸಮಸ್ಯೆಯನ್ನು ಯಾವ ಅರ್ಥಶಾಸ್ತ್ರಿಯೂ ಪರಿಹರಿಸಲಾರನೆಂಬ ವಿಷಯ ಸರಕಾರದ ದೃಷ್ಟಿಯಿಂದ ದೂರವಾಗಿಲ್ಲ. ಜನರ ಮಟ್ಟಿಗೆ, ರೂಪಾಯಿಗೆ ಒಂದೂವರೆ ಆಣೆಯಿಂದ ಎರಡಾಣೆಯಷ್ಟು ವಿನಾಯತಿಯನ್ನು ಕೈಮಗ್ಗದ ಬಟ್ಟೆಯ ಮೇಲೆ ಕೊಡಲಾಗುವುದರಿಂದ, ಗಿರಣಿ ಬಟ್ಟೆಗಳಿಗಿಂತ ಎಲ್ಲೋ ಸ್ವಲ್ಪ ಹೆಚ್ಚು ಕ್ರಯವನ್ನು ತೆತ್ತರೆ ನೇಕಾರರನ್ನು ಉಳಿಸಿದ ಪುಣ್ಯ ಬರುತ್ತದೆ.

ಪುರಾತನ ಕಾಲದಲ್ಲಿ, ಅದೇಕೆ, ಬ್ರಿಟಿಷರು ಭಾರತದಲ್ಲಿ ಸಾಮ್ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿದ ಇನ್ನೂರು ವರ್ಷಗಳ ಪೂರ್ವದಲ್ಲಿ, ಭಾರತದ ಕೈಮಗ್ಗಗಳು ಅತ್ಯಂತ ಪ್ರಸಿದ್ಧವಾದ ಬಟ್ಟೆಗಳನ್ನು ತಯಾರಿಸುತ್ತಿದ್ದವೆಂದು ಚರಿತ್ರೆ ಹೇಳುತ್ತದೆ. ಬ್ರಿಟನಿನ ಬಟ್ಟೆಯ ಉದ್ಯೋಗವು ಭಾರತದ ಕೈಮಗ್ಗಗಳ ಸ್ಪರ್ಧೆಯಿಂದ ಉಳಿಯುವುದೇ ಕಷ್ಟವೆಂದು ತೋರಿದಾಗ, ಬ್ರಿಟನು ನಮ್ಮ ಕೈಮಗ್ಗದ ಬಟ್ಟೆಗಳ ಉಪಯೋಗಕ್ಕೆ ಆ ದೇಶದಲ್ಲಿ ಆತಂಕವನ್ನೊಡ್ಡಿತು. ಆದರೂ ನಮ್ಮ ಹೆಂಗಸರು ಮತ್ತು ಹಳ್ಳಿಗರು ಕೊಡುತ್ತಿದ್ದ ಪ್ರೋತ್ಸಾಹದ ಬಲದಿಂದ ಕೈಮಗ್ಗದ ಉದ್ಯೋಗವು ಪೇಟೆಯನ್ನು ಕಳೆದುಕೊಳ್ಳದೆ ದೇಶದಲ್ಲಿ ಉಳಿಯಿತು. ಮಹಾಯುದ್ಧದ ಅವಧಿಯಲ್ಲಿ ಹೊರಗಿನ ಬಟ್ಟೆಗಳ ಆಮದು ನಿಂತಾಗ, ಕೈಮಗ್ಗಗಳಿಗೆ ತಮ್ಮ ಚಟುವಟಿಕೆಯನ್ನು ಹೆಚ್ಚಿಸಲು ಅವಕಾಶವಾಯಿತು. ಹೊಸತಾಗಿ ಗಿರಣಿಗಳನ್ನು ತೆರೆಯುವುದಕ್ಕೆ ಅನುಮತಿ ಕೊಡದಿರುವುದರ ಮೂಲಕವೂ ಕಾನುಂಗೊ ಸಮಿತಿಯ ಸಿಫಾರಸು ಮಾಡಿರುವಂತೆ ದೇಶದಲ್ಲಿ ಹೆಚ್ಚುತ್ತಿರುವ ಬಟ್ಟೆಯ ಬೇಡಿಕೆಯನ್ನು ಕೈಮಗ್ಗಗಳ ಉತ್ಪಾದನೆಯಿಂದಲೇ ಪೂರೈಸುವುದಕ್ಕೆ ಪ್ರಯತ್ನಿಸುವುದರಿಂದಲೂ ಕೈಮಗ್ಗದ ಉದ್ಯೋಗಕ್ಕೆ ಭದ್ರವಾದ ಅಸ್ತಿವಾರವನ್ನು ಹಾಕಬಹುದು. ಸರಕಾರವು ಈ ವಿಷಯದ ಕುರಿತಾಗಿಯೂ ನೇಕಾರರು ಗಿರಾಕಿಗಳ ಮನವೊಲಿಸುವ ಕುರಿತಾಗಿಯೂ ಜನರು ನೇಕಾರಬಂಧುಗಳಿಗೆ ಬಂದಿರುವ ತೊಂದರೆಯ ಕುರಿತಾಗಿಯೂ ಸಹಾನುಭೂತಿಪರವಾದ ಗಮನವನ್ನಿತ್ತರೆ ದ್ವಿತೀಯ ಕೈಮಗ್ಗದ ಸಪ್ತಾಹ ಯಶಸ್ವಿಯಾಯಿತೆಂದು ಭಾವಿಸಬಹುದು.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳುವುದು.
P. o. Box No. 3219, BOMBAY 3-

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ನಮ್ಮ ಮಾಂಡ್ವಿ—ಮುಂಬಾಯಿ ಶಾಖೆಯು 51, ಪೈಧೋನಿ ರೋಡ್, ಖಡಕ್, ಮುಂಬಾಯಿ-9, ಇಲ್ಲಿ ಈಗಾಗಲೇ ತೆರೆಯಲ್ಪಟ್ಟಿದೆ. ನಮ್ಮ ಎಲ್ಲಾ ಭಾಗೀದಾರರೂ, ಗ್ರಾಹಕರೂ, ಹಿತೈಷಿಗಳೂ ಇದನ್ನು ದಯವಿಟ್ಟು ಲಕ್ಷದಲ್ಲಿಟ್ಟು, ಎಂದಿಗಿಂತಲೂ ಹೆಚ್ಚಾಗಿ, ತಮ್ಮ ಪ್ರೋತ್ಸಾಹವನ್ನು ನಮ್ಮ ಈ ಶಾಖೆಗೆ ನೀಡುವರಾಗಿ ನಂಬುತ್ತೇವೆ.
ಡಾ। ಯು. ಸುಂದರ ರಾಮ ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.
ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.
Estd:- 1906] [H. O. UDIPI (S.India).
THE CANARA BANKING CORPORATION LIMITED

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಸಂವಿಧಾನ ತಿದ್ದುಪಡಿ ಮಸೂದೆಯ ಆಶಯ

ಸಂಸತ್ತಿನಲ್ಲಿ ಅತ್ಯಧಿಕ ಸದಸ್ಯರ ಬೆಂಬಲ

ಸಂಸತ್ತಿನ ಉಭಯ ಸಭೆಗಳಲ್ಲೂ ಮಂಡಿಸಲಾದ ಸಂವಿಧಾನದ ನಾಲ್ಕನೇ ತಿದ್ದುಪಡಿ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸಿಕೊಡಲು ಹಿಂದೆಂದೂ ಕಂಡು ಬರದಷ್ಟು ಬಹುಮತ ದೊರೆಯಿತು. ಲೋಕಸಭೆಯಲ್ಲಿ ಸರಕಾರದ ಸೂಚನೆಯು ೩೨೨ ವಿರುದ್ಧ ೯ ಮತಗಳಿಂದ ಸ್ವೀಕೃತವಾಯಿತು. ಜನಸಂಘ ಮತ್ತು ಹಿಂದು ಮಹಾಸಭೆಯ ಸದಸ್ಯರು ಮಾತ್ರ ವಿರುದ್ಧ ಮತವಿತ್ತರು. ಕಮ್ಯೂನಿಸ್ಟರೂ ಪ್ರಜಾ ಸಮಾಜವಾದಿಗಳೂ ಇತರ ಪ್ರಗತಿಪ್ರಿಯರೂ ಸರಕಾರವನ್ನು ಬೆಂಬಲಿಸಿದರು. ರಾಜ್ಯ ಸಭೆಯಲ್ಲಿ ಯಾರೊಬ್ಬರೂ ವಿರುದ್ಧ ಮತಕೊಡಲಿಲ್ಲ—ಆದರೆ ಡೆಮೊಕ್ರಾಟಿಕ್ ಪಕ್ಷದ ಆರು ಸದಸ್ಯರು ಮಾತ್ರ ತಟಸ್ಥರಾಗಿ ಉಳಿದರು. ಮತದಾನದ ಈ ವಿವರವನ್ನು ನೋಡಿದರೆ, ರಾಷ್ಟ್ರದ ಅಭಿವೃದ್ಧಿ ಮತ್ತು ಹೆಚ್ಚಿನ ಪ್ರಜೆಗಳ ಕಲ್ಯಾಣದ ದೃಷ್ಟಿಯಿಂದ ಸಂವಿಧಾನಕ್ಕೆ ಈಗ ಮಂಡಿಸಲಾಗಿರುವ ತಿದ್ದುಪಡಿಯು ಎಷ್ಟು ಆವಶ್ಯಕವಾದುದೆಂದು ಮನವರಿಕೆಯಾಗುತ್ತದೆ.

ನಾಲ್ಕನೇ ತಿದ್ದುಪಡಿ

ಸಂವಿಧಾನವು ಜ್ಯಾರಿಗೆ ಬಂದ ಐದು ವರ್ಷಗಳಲ್ಲಿ ಈಗ ಮಾಡ ಹೋಗುವುದು ನಾಲ್ಕನೇ ತಿದ್ದುಪಡಿ. ಸರಕಾರವಾಗಲೀ ರಾಜಕೀಯ ಪಕ್ಷಗಳಾಗಲೀ ಇಷ್ಟು ಶೀಘ್ರವಾಗಿ ತಿದ್ದುಪಡಿಗಳನ್ನು ಸಂವಿಧಾನಕ್ಕೆ ಮಾಡಬಯಸಿದರೆ ಅದರ "ಪಾವಿತ್ರ್ಯ" ಉಳಿಯಲಾರದೆಂದು ವಾದಿಸುವವರು ನಮ್ಮಲ್ಲಿ ಕೆಲವರು ಇದ್ದಾರೆ. ಆದರೆ ಸಂವಿಧಾನವು ಶಾಶ್ವತ ಸ್ವರೂಪವನ್ನು ಹೊಂದಿರಬೇಕೆಂದು ಅದನ್ನು ರಚಿಸಿದ ಜನತಾ ಧುರೀಣರು ಬಯಸಿರಲಿಲ್ಲ, ಕಾಲದ ಆವಶ್ಯಕತೆಗೆ ಮತ್ತು ಜನರ ಹಿತಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಅದು ಬದಲಾವಣೆಗೊಳಪಡಬಹುದೆಂಬುದೇ ಅವರ ಆಶಯವಾಗಿದ್ದಿತು—ಎಂಬ ಸಂಗತಿಯು ನಿರ್ದಿಷ್ಟ ಬಹುಮತದಿಂದ ಸಂವಿಧಾನಕ್ಕೆ ತಿದ್ದುಪಡಿಯನ್ನು ಮಂಡಿಸಬಹುದೆಂದು ಸಂವಿಧಾನದಲ್ಲಿ ಹೇಳಿರುವುದರಿಂದಲೇ ವ್ಯಕ್ತವಾಗುತ್ತದೆ. ಈಗ ಮಂಡಿಸಿರುವ ನಾಲ್ಕನೇ ತಿದ್ದುಪಡಿಯಂತೂ ಸಂವಿಧಾನದ ರಚಕರ ಮನಸ್ಸಿನಲ್ಲಿದ್ದ ಭಾವನೆಯನ್ನು ಸ್ಪಷ್ಟವಾಗಿ ಪುನರುಚ್ಚರಿಸುವ ಪ್ರಯತ್ನವೇ ಹೊರತು, ಹೊಸ ವಿಷಯದ ಪ್ರತಿಪಾದನೆಯಲ್ಲ ಎಂಬುದನ್ನು ನೆನೆದರೆ ತಿದ್ದುಪಡಿ ತಂದುದರಲ್ಲಿ ಅಪವಿತ್ರವಾದುದೇನೂ ಇಲ್ಲವೆಂದು ಮನವರಿಕೆಯಾಗುತ್ತದೆ. ನ್ಯಾಯಸ್ಥಾನಗಳು ಕಾಯಿದೆಯ ಜಗುಟುತನಕ್ಕೆ ವಿಶೇಷವಾಗಿ ಅಂಟಿಕೊಂಡುದರಿಂದ, ಸಂವಿಧಾನದ ರಚಕರ ಮನಸ್ಸಿನಲ್ಲಿದ್ದ ಆಶಯವನ್ನು ಅರ್ಥಮಾಡಿಕೊಳ್ಳಲು ತಪ್ಪಿದುದರಿಂದ, ಈಗ ಸ್ಪಷ್ಟವಾದ ಮಾತುಗಳಲ್ಲಿ ತಮ್ಮ ಅಭಿಪ್ರಾಯವನ್ನು ಮಂಡಿಸಲು ಸಂವಿಧಾನದ ಸ್ವರೂಪ ನಿರ್ಣಯಿಸುವ ಅಧಿಕಾರ ಪಡೆದ ಜನತಾ ಪ್ರತಿನಿಧಿಗಳು ಮುಂದಾದರು.

ನೆಹರುಗಳ ಹೇಳಿಕೆ

ತಿದ್ದುಪಡಿ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿ ಪ್ರಧಾನ ಮಂತ್ರಿ ನೆಹರುಗಳು ಮಾಡಿದ ಭಾಷಣವನ್ನು "ಉಜ್ವಲ" ಎಂಬುದಾಗಿ ವರ್ಣಿಸಬಹುದು. "ಸಂವಿಧಾನದ ಪಾವಿತ್ರ್ಯದ ಹೆಸರಿನಲ್ಲಿ ತಿದ್ದುಪಡಿಯನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲ, ತಿದ್ದುಪಡಿಯ ಯೋಗ್ಯತೆಯನ್ನು ಮಾತ್ರ ಒರೆಗಲ್ಲಿಗೆ ಹಚ್ಚಬೇಕು. ಜನರ ಅಭಿಪ್ರಾಯ ಏನೆಂಬುದನ್ನು ತಿಳಿಯದೆ ಈಗ ಮಂಡಿಸಲಾಗಿರುವ ತಿದ್ದುಪಡಿಯಂಥ ಮಹತ್ವದ ಕ್ರಮವನ್ನು ತೆಗೆದುಕೊಳ್ಳಬೇಕೆಂದೂ ನಾನು ಹೇಳುವುದಿಲ್ಲ. ಸಾರ್ವಜನಿಕರಿಗೆ ಸಂವಿಧಾನಕ್ಕೆ ತರಬೇಕೆಂದಿರುವ ಈಗಿನ ತಿದ್ದುಪಡಿಯ ವಿಷಯ ಆಲೋಚಿಸಿ ತಮ್ಮ ಪ್ರತಿಕ್ರಿಯೆಯನ್ನು ತಿಳಿಸಲು ಸಾಕಷ್ಟು ಅವಕಾಶ ಕೊಟ್ಟಿದ್ದೇವೆ. ರಾಜ್ಯ ಸರಕಾರಗಳೊಡನೆ ವಿಚಾರವಿನಿಮಯ ನಡೆಸಿದ್ದಲ್ಲದೆ ಸರಕಾರಿ ವಲಯದ ಹೊರಗಿನ ಪ್ರತಿಕ್ರಿಯೆಗಳನ್ನು ನಾವು ಗಮನಕ್ಕೆ ತೆಗೆದುಕೊಂಡಿದ್ದೇವೆ" ಎಂದವರು ಸದಸ್ಯರಿಗೆ ತಿಳಿಸಿದರು. ನ್ಯಾಯಸ್ಥಾನಗಳ ಗೌರವದ ಪ್ರಶ್ನೆಯ ಕುರಿತು 'ಮಾತನಾಡುತ್ತ 'ನ್ಯಾಯಸ್ಥಾನಗಳ ವಿಷಯದಲ್ಲಿ ನಮಗೆ ಪೂಜ್ಯಭಾವನೆ ಇದೆ; ಮತ್ತು ಅವುಗಳ ತೀರ್ಪನ್ನು ನಾವು ಒಪ್ಪಿಕೊಂಡಿದ್ದೇವೆ; ಇನ್ನಾದರೂ ಒಪ್ಪಿಕೊಳ್ಳುತ್ತೇವೆ. ಆದರೆ ನ್ಯಾಯಸ್ಥಾನಗಳು ಕಾಯಿದೆಯ ಜಗುಟುತನಕ್ಕೆ ಅಂಟಿಕೊಂಡು ಸಂವಿಧಾನದ ಕೆಲವು ಸೂತ್ರಗಳಿಗೆ ಅದರ ರಚಕರು ಹಚ್ಚಿದ್ದ ಅರ್ಥದ ಬದಲು ಬೇರೆಯೇ ಅರ್ಥವನ್ನು ಹೇಳಿ ರಾಷ್ಟ್ರದ ಪ್ರಗತಿಯನ್ನು ಕುಂಠಿಸಲು ಕಾರಣವಾದಾಗ, ಈ ತಪ್ಪನ್ನು ತಿದ್ದುವುದಕ್ಕೆ ಸಂವಿಧಾನದ ರಚಕರು ಮುಂದಾಗುವುದು ಅನುಚಿತವಲ್ಲ" ಎಂದವರು ಸಾರಿದರು.

ಸಂಸತ್ತಿನ ಅಧಿಕಾರ

ಪರಿಹಾರ ಧನ ಕೊಡುವ ವಿಷಯದಲ್ಲಿ ಸಂಸತ್ತಿಗೆ ಪೂರ್ಣ ಅಧಿಕಾರವಿದೆಯೆಂದೂ ಅದನ್ನು ಯಾರೂ ಪ್ರಶ್ನಿಸಲಿಕ್ಕಿಲ್ಲವೆಂದೂ ಸಂವಿಧಾನದ ರಚನೆಯ ಕಾಲದಲ್ಲಿ ಭಾವಿಸಲಾಗಿದ್ದಿತು. ಆದರೆ ನ್ಯಾಯಸ್ಥಾನಗಳು ಕೆಲವು ಶಬ್ದಗಳ ಕಟ್ಟಿಗೊಳಪಟ್ಟು ಒಬ್ಬನಿಂದ ಆಸ್ತಿಯನ್ನು ವಶಪಡಿಸಿಕೊಂಡ ಪ್ರತಿಯೊಂದು ಸಂದರ್ಭದಲ್ಲಿಯೂ—ಹಾಗೆ ವಶಪಡಿಸಿಕೊಂಡುದರ ಹಿನ್ನೆಲೆಯ ಉದ್ದೇಶಗಳನ್ನು ಗಮನಿಸದೆ—"ಪೂರ್ಣ" ಪರಿಹಾರ ಕೊಡಬೇಕೆಂದು ವಿಧಿಸಿದ ದೆಂದ, ಭೂ ಸುಧಾರಣೆಯಂಥ ಪ್ರಗತಿಪರ ಕ್ರಮಗಳನ್ನು ಕೈಗೊಳ್ಳುವುದಕ್ಕೂ ಕೈಗಾರಿಕೆ ಮುಂತಾದ ಕ್ಷೇತ್ರಗಳ ಅವ್ಯವಸ್ಥೆಯನ್ನು ಸರಿಪಡಿಸುವುದಕ್ಕೂ ಆತಂಕವಾಯಿತು. ಕೈಗಾರಿಕೆಯ ಕಂಪನಿ ಮಾಡಿದ ತಪ್ಪನ್ನು ಸರಿಪಡಿಸುವುದಕ್ಕೆ ಸರಕಾರವು ಆ ಕಂಪೆನಿಯನ್ನು ತನ್ನ ವಶ ತೆಗೆದುಕೊಂಡಾಗಲೂ ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸುವ ಬದಲು ಪರಿಹಾರಧನ ಕೊಡಬೇಕೆಂದು ನ್ಯಾಯಸ್ಥಾನವು ಅಪೇಕ್ಷಿಸಿತು ಎಂದು ಮುಂತಾಗಿ ನೆಹರುಗಳು ತಿದ್ದುಪಡಿಯ ಹಿನ್ನೆಲೆಯನ್ನು ವಿವರಿಸಿದರು. ಈಗಿನ ತಿದ್ದುಪಡಿಯು ಪರಿಹಾರಧನ ಕೊಡಲೇ ಬಾರದೆಂದು ಹೇಳುವುದಿಲ್ಲ — ಪರಿಹಾರ ಧನದ ಪ್ರಸ್ತಾಪವನ್ನೆ ಮಾಡುವುದಿಲ್ಲ. ಪರಿಹಾರ ಧನವನ್ನು ಕೊಡಬೇಕೋ ಬೇಡವೊ, ಕೊಡುವುದಾದರೆ ಎಷ್ಟು ಎಂದು ನಿರ್ಧರಿಸಲು ಸಂಸತ್ತಿಗೆ ಅದು ಅಧಿಕಾರ ಕೊಡುತ್ತದೆ. ಸಾಮಾನ್ಯವಾಗಿ ಹೇಳಬೇಕಾದರೆ ವ್ಯಕ್ತಿಯ ಜೀವನ ಧಾರವಾದ ಆಸ್ತಿಯನ್ನೆ ವಶಪಡಿಸಿಕೊಂಡಾಗ ಮತ್ತು ಸಾಮಾನ್ಯ ಉದ್ದೇಶಗಳಿಗಾಗಿ ಹಾಗೆ ಮಾಡಿದಾಗ ಪೂರ್ಣ ಪರಿಹಾರ ಕೊಡಲಾಗುತ್ತದೆ. ಆದರೆ ಸಾಮಾಜಿಕ ಸುಧಾರಣೆಯ ಅಸಾಧಾರಣ ಯೋಜನೆಗಳ ಸಂದರ್ಭದಲ್ಲಿ ಪರಿಹಾರ ಧನದ ಮೊತ್ತ ಸಹಜವಾಗಿಯೇ ಕಡಿಮೆಯಾಗುತ್ತದೆ.

ಪರಿಹಾರ ಧನದ ವಿವಾದ

ಉದಾಹರಣೆಗೆ ಟಪ್ಪಾಲು ಕಟ್ಟೆಯನ್ನು ನಡೆಸುವುದಕ್ಕೆ ಸರಕಾರ ಒಂದು ಮನೆಯನ್ನು ವಶಪಡಿಸಿಕೊಂಡರೆ ಆಗ ಪೂರ್ಣ ಪರಿಹಾರ ಕೊಡಲಾಗುತ್ತದೆ. ಏಕೆಂದರೆ ಇದು ದೈನಂದಿನ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯ. ಆದರೆ ಭೂಸುಧಾರಣೆಗಾಗಿ ನೂರು ಎಕ್ರೆ ಭೂಮಿ ಇದ್ದವನಿಂದ ಐವತ್ತು ಎಕ್ರೆ ಭೂಮಿಯನ್ನು ಅಥವಾ ನಗರಗಳ ಮಧ್ಯದಲ್ಲಿರುವ ಕೊಳಕು ವಸತಿಯ ಪ್ರದೇಶಗಳಿಲ್ಲವನ್ನು ವಶಪಡಿಸಿಕೊಂಡರೆ ಆಗ ನಿಜವಾದ ಬೆಲೆಯ ಅರೆವಾಸಿಯೋ ಕಾಲಾಂಶವೋ ರೂಪಾಯಿಗೆ ಒಂದಾಣೆಯೊ ಸಂಸತ್ತು ಮತ್ತು ರಾಜ್ಯಗಳ ಶಾಸನ ಸಭೆಗಳು ಉಚಿತವೆಂದು ನಿರ್ಣಯಿಸಿದ ಪರಿಹಾರವನ್ನಷ್ಟೇ ಕೊಡಲಾಗುತ್ತದೆ. ಸಾರ್ವಜನಿಕ ಉದ್ದೇಶಗಳಿಗಾಗಿ ಆಸ್ತಿಪಾಸ್ತಿಯನ್ನು ವಶಪಡಿಸಿಕೊಳ್ಳುವಾಗ ಪೂರ್ತಿ ಪರಿಹಾರ ಕೊಡುವುದೆಂದರೆ ಶ್ರೀಮಂತರನ್ನು ಮತ್ತೂ ಶ್ರೀಮಂತರಾಗಿ. ಬಡವರನ್ನು ಇ

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ
ಶ್ರೀ. ಎ.ಎಸ್.-ಪಂಚಪಕೇಶ ಐಯ್ಯರ್, ಎಂ. ಎ, ಐ. ಸಿ. ಎಸ್, ಬಾರ್ ಎಟ್ ಲಾ.
ಎ. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೊಡ್ಯಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಸೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು ಅಂತೂ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯಕವಾಗಿ ಓದತಕ್ಕ ಅಪೂರ್ವ ಗ್ರಂಥ

1೦1 ಕತೆಗಳು — ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ

ನಿಮ್ಮ ಎಲ್ಲಾ ಜೋತಿಷ್ಯ ಕೆಲಸಗಳಿಗಾಗಿ

ಇಂದೇ ಬರೆಯಿರಿ. ಪತ್ರವ್ಯವಹಾರ ಕನ್ನಡದಲ್ಲಿ.

ಪಂಡಿತ್ ಕೆ. ಎನ್. ಶಾಸ್ತ್ರಿ

B A (Hons), M A'logy,

ASTROLOGICAL RESEARCH CENTRE,

DEVLALI, Dist NASIK.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ **'ನವಯುಗ'** ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ ಬಿ. ಶೆಟ್ಟಿರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,

ವಾರ್ಷಿಕ ಚಂದಾ ರೂ. 5-12-0 ಮಾತ್ರ. — ನವಯುಗ, ಉಡುಪಿ.

ನ್ನು ಬಡವರಾಗಿ ಉಳಿಸುವ ಕ್ರಮವಾಗುವುದಲ್ಲದೆ, ಸಾಮಾಜಿಕ ಸುಧಾರಣೆಯ ಪ್ರಯತ್ನಗಳನ್ನೆಲ್ಲ ಬರಿದು ಅರ್ಥಶೂನ್ಯವಾಗಿಸುತ್ತದೆ. ರಾಷ್ಟ್ರದ ಪ್ರಗತಿಯನ್ನು ಬಯಸುವ ಸರಕಾರ ಮತ್ತು ಜನತಾ ಪ್ರತಿನಿಧಿ ಸಭೆಗಳು ಇದನ್ನು ಎಷ್ಟಕ್ಕೂ ಅಪೇಕ್ಷಿಸುವುದಿಲ್ಲ. 'ಪೂರ್ಣ' ಪರಿಹಾರ ಕೊಡದೆ ಆಸ್ತಿಯನ್ನು ವಶಪಡಿಸಿಕೊಳ್ಳುವುದರಿಂದ ಆಸ್ತಿಯನ್ನು ಭೋಗಿಸುವ ಮೂಲ ಭೂತ ಹಕ್ಕನ್ನು ಅಲ್ಲಗಳೆದಂತಾಗುತ್ತದೆ ಎಂಬ ಟೀಕೆಯಲ್ಲಿ ಹುರುಳಿಲ್ಲ -ಏಕೆಂದರೆ ಸಂವಿಧಾನವು ಕೇವಲಮೂಲಭೂತ ಹಕ್ಕುಗಳ ರಕ್ಷಣೆಗಾಗಿಯಷ್ಟೇ ರಚಿಸಲ್ಪಟ್ಟಿಲ್ಲ; ಅದರಲ್ಲಿ ಸಂವಿಧಾನದ ಉದ್ದೇಶವೇನೆಂಬುದನ್ನು ವಿವರಿಸುವ ಅಂಶವೂ ಈ ಉದ್ದೇಶದ ಸಾಧನೆಗಾಗಿ ಸರಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ನಿರ್ದೇಶನವೂ ಇರುತ್ತದೆ. ಆದುದರಿಂದ ಮೂಲಭೂತ ಹಕ್ಕುಗಳು ಉಳಿದ ಸೂತ್ರಗಳಿಗಿಂತ ಹೆಚ್ಚು ಮಹತ್ವದವುಗಳಲ್ಲ ಎಂದಾಗುತ್ತದೆ. ಯಾವುದು ಹೆಚ್ಚು ಪ್ರಾಮುಖ್ಯವಾದದ್ದು ಎಂಬ ವಿಷಯದಲ್ಲಿ ಉಂಟಾದ ಬಿಕ್ಕಟ್ಟನ್ನು ಪರಿಹರಿಸುವುದೇ ಈ ತಿದ್ದುಪಡಿಯನ್ನು ತಂದುದರ ಗುಟ್ಟು.

ನ್ಯಾಯಾಂಗಕ್ಕೆ ವಿರೋಧವಿಲ್ಲ

ಹಿಂದು ಮಹಾ ಸಭೆಯ ಸದಸ್ಯರಾದ ಶ್ರೀ. ಎನ್. ಸಿ. ಚಟರ್ಜಿಯವರೂ ಶ್ರೀ. ವಿ. ಜಿ. ದೇಶಪಾಂಡೆಯವರೂ ಜನ ಸಂಘದ ಶ್ರೀ. ಯು.ಎಂ. ತ್ರಿವೇದಿಯವರೂ ತಿದ್ದುಪಡಿಯನ್ನು ವಿರೋಧಿಸುತ್ತಾ ಮೂಲಭೂತ ಹಕ್ಕುಗಳಿಗೆ ಗದಾಪ್ರಹಾರ ಮಾಡುವ ಮತ್ತು ನ್ಯಾಯಾಲಯದ ಅಧಿಕಾರಗಳನ್ನು ಮಿತಗೊಳಿಸುವ ಈ ತಿದ್ದುಪಡಿಯನ್ನು ಜನರ ಅವಗಾಹನೆಗಾಗಿ ಕಳಿಸಬೇಕು ಎಂದರು. ಕಮ್ಯುನಿಸ್ಟ ಪಕ್ಷದ ಧುರೀಣ ಶ್ರೀ ಹಿರೇನ್ ಮುಕರ್ಜಿಯವರು ಸಣ್ಣ ಪ್ರಮಾಣದಲ್ಲಿ ಆಸ್ತಿಯನ್ನು, ಹೊಂದಿದವರಿಗೆ ಪೂರ್ಣ ಪರಿಹಾರ ಕೊಡಬೇಕೆಂದೂ ಆದರೆ ದೊಡ್ಡ ಪ್ರಮಾಣದ ಬಂಡವಳ ಶಾಹಿಗಳ ಆಸ್ತಿಗೆ ಹಾಗೆ ಮಾಡುವುದು ಅಗತ್ಯವಿಲ್ಲವೆಂದೂ ಹೇಳಿದರು. ಪ್ರಜಾಸಮಾಜವಾದಿ ಧುರೀಣ ಶ್ರೀ ಅಶೋಕ ಮೆಹತಾರು ಸರಕಾರವು ಮಿತವಾದ ಉದ್ದೇಶಗಳಿಗಾಗಿ ಸಂವಿಧಾನಕ್ಕೆ ತಿದ್ದುಪಡಿಯನ್ನು ತರುವ ಬದಲು ಸಂವಿಧಾನಕ್ಕೆ ಅದರ ಇದುವರೆಗಿನ ಕಾರ್ಯಾಚರಣೆಯನ್ನು ಪರಿಶೀಲಿಸಿ ಆಮೂಲಾಗ್ರ ತಿದ್ದುಪಡಿ ಮಾಡಲು ಮುಂದಾಗಬೇಕು ಎಂದರು; ಮತ್ತು ಕಾಯಿದೆ ಪಂಡಿತರು ರಾಷ್ಟ್ರದ ಉದ್ದೇಶವನ್ನು ಕಡೆಗಣಿಸಿ ವ್ಯಕ್ತಿಗಳಿಗೆ ಲಾಭ ಮಾಡಿ ಕೊಡುವುದಕ್ಕೋಸ್ಕರ ಏನಾದರೂ ಕೊರತೆಗಳನ್ನು ಕಂಡುಕೊಳ್ಳುವ ರೀತಿಯಲ್ಲಿ ತಿದ್ದುಪಡಿಯ ಶಬ್ದಗಳನ್ನು ಹೆಣೆಯಬೇಕೆಂದೂ ಅದರ ಆಶಯವನ್ನು ಇನ್ನಷ್ಟು ಸ್ಪಷ್ಟೀಕರಿಸಬೇಕೆಂದೂ ಹೇಳಿದರು. ಅನೇಕ ಕಾಂಗ್ರೆಸು ಸದಸ್ಯರು ತಿದ್ದುಪಡಿಗೆ ಬೆಂಬಲವಿತ್ತರಲ್ಲದೆ ಸರಕಾರದ ಪರವಾಗಿ ಶ್ರೀ ಕೃಷ್ಣಮಾಚಾರಿ ಮತ್ತು ಶ್ರೀ. ಪಾಟಸ್ಕರರು ಚರ್ಚೆಯಲ್ಲಿ ಭಾಗ ವಹಿಸಿ ನ್ಯಾಯಸ್ಥಾನಗಳಿಗೂ ಸರಕಾರಕ್ಕೂ ಘರ್ಷಣೆ ಉಂಟಾಗಿಲ್ಲ; ಸಂಸತ್ತಿನ ಮುಂದೆ ತಂದಿರುವ ತಿದ್ದುಪಡಿ ಸ್ವತಂತ್ರ ಅಸ್ತಿತ್ವವುಳ್ಳದ್ದು ಎಂದು ವಾದಿಸಿದರು.

ರಾಜ್ಯ ಸಭೆಯಲ್ಲಿ

ಗೃಹ ಮಂತ್ರಿ ಪಂಡಿತ ಪಂತರು ರಾಜ್ಯ ಸಭೆಯಲ್ಲಿ ಈ ಮಸೂದೆಯನ್ನು ಮಂಡಿಸಿದರು. ಅವರು ನ್ಯಾಯ ಸ್ಥಾನಗಳ ಮುಂದಿದ್ದ, ಮೂಲಭೂತ ಹಕ್ಕಿನ ನೆಪದಲ್ಲಿ ಪರಿಹಾರ ಸಿಗಬೇಕೆಂದು ಬೇಡುವ ಹಾಗು,ಪರಿಹಾರ ಕೊಡದಿರುವುದು ಅಕ್ರಮವೆಂದು ಸಾರಬೇಕೆನ್ನುವ ವಿವಾದಗಳಲ್ಲಿ ಹೆಚ್ಚಿನವುಗಳ ಚರಿತ್ರೆಯನ್ನು ವಿವರಿಸಿ ಈಗಿನ ತಿದ್ದುಪಡಿಯು ಏಕೆ ಅಗತ್ಯವಾಯಿತೆಂಬುದನ್ನು ಸ್ಪಷ್ಟ ಪಡಿಸಿದರು. "ರಾಷ್ಟ್ರದ ಪ್ರತಿಯೊಂದು ಅಂಗವೂ ಪರಸ್ಪರ ಹೊಂದಿಕೊಂಡು ಸಮರಸಭಾವದಿಂದ ಕೆಲಸಮಾಡಬೇಕಾದದ್ದು ಧರ್ಮ. ಬಿಕ್ಕಟ್ಟುಗಳು ಉಂಟಾದರೆ ಅವನ್ನು ನಿವಾರಿಸಿಕೊಳ್ಳುವುದು ಅಪೇಕ್ಷಣೀಯ. ಈ ತಿದ್ದುಪಡಿ ಮಸೂದೆ ಇದಕ್ಕೆ ನೆರವಾಗುತ್ತದೆ" ಎಂದರು. ಇಲ್ಲಿ ನಡೆದ ಚರ್ಚೆಯಲ್ಲಿ ಘಟನೆಯ ಕರಡು ತಯಾರಿಸಿದ ಸಮಿತಿಯ ಅಧ್ಯಕ್ಷರೂ ಕೇಂದ್ರ ಸರಕಾರದ ಹಿಂದಿನ ಕಾಯಿದೆ ಮಂತ್ರಿಗಳೂ ಆಗಿದ್ದ ಶ್ರೀ ಬಿ. ಆರ್. ಅಂಬೇಡ್ಕರರು ಭಾಗವಹಿಸಿ, ತಿದ್ದುಪಡಿಯನ್ನು ಸ್ವಾಗತಿಸಿದರು. ಸಾಮಾಜಿಕ ಸುಧಾರಣೆಯ ಕ್ರಮಗಳನ್ನು ಜ್ಯಾರಿಗೆ ತರುವಾಗ ಪೂರ್ಣ ಪರಿಹಾರ ಕೊಡುವುದು ಅಸಾಧ್ಯವೆಂದವರು ಒಪ್ಪಿದರು. ಆದರೆ ವ್ಯಕ್ತಿಯ ಜೀವನಾಧಾರವನ್ನು ತಪ್ಪಿಸಿದ ಪ್ರಸಂಗಗಳಲ್ಲಿ ಪರಿಹಾರದ ಅಗತ್ಯವಿದೆ ಎಂದರು.

ಅತ್ಯಗತ್ಯದ ಕ್ರಮ

ಉಭಯ ಸಭೆಗಳಲ್ಲಿಯೂ ವ್ಯಕ್ತವಾದ ಅಭಿಪ್ರಾಯಗಳಲ್ಲಿ "ಸಾರ್ವಜನಿಕ ಉದ್ದೇಶಗಳು" ಯಾವುವೆಂಬುದನ್ನು ನಿರ್ದಿಷ್ಟಪಡಿಸಬೇಕೆಂಬುದೂ ಯಾವ ಪ್ರಸಂಗದಲ್ಲಿ ಪರಿಹಾರ ಸಿಗುತ್ತದೆ, ಎಲ್ಲಿ ಸಿಗುವುದಿಲ್ಲ ಎಂಬುದನ್ನು ಖಚಿತವಾಗಿ ಹೇಳಬೇಕೆಂಬುದೂ ಉಲ್ಲೇಖನೀಯ. ಹೀಗೆ ಮಾಡದಿದ್ದರೆ ಕಾಯಿದೆ ಪಂಡಿತರ ಜಾಲದಲ್ಲಿ ಸಾಮಾಜಿಕ ಸುಧಾರಣೆಯ ಕ್ರಮಗಳು ಸಿಕ್ಕಿಬೀಳಬಹುದೆಂದೂ ವ್ಯಕ್ತಿಯ ಜೀವನಕ್ಕೆ ಭದ್ರವಾದ ಅಸ್ತಿವಾರ ಇಲ್ಲದೆ ಹೋದೀತೆಂದೂ ಸದಸ್ಯರು ಹೆದರಿಕೆಯನ್ನು ಪ್ರಕಟಿಸಿದರು. ಪರಿಹಾರ ಧನದ ಪ್ರಮಾಣ ನಿರ್ಣಯದಲ್ಲಿ ಸರಕಾರದ ಅಧಿಕಾರಿಗಳಿಂದ ತಪ್ಪು ನಡೆಯದಂತೆ ನೋಡಿಕೊಳ್ಳಬೇಕೆಂದು ಎಚ್ಚರಿಕೆಯನ್ನು ಕೊಡಲಾಯಿತು. ಪರಿಶೀಲಕ ಸಮಿತಿಯು ಇದನ್ನೆಲ್ಲ ಪರ್ಯಾಲೋಚಿಸುವುದೆಂದು ನಂಬಬಹುದು. ಆದರೆ ಸರಕಾರದವರು ಯಾವುದನ್ನೂ ನಿರ್ದಿಷ್ಟ ಮಾತಿನಲ್ಲಿ ಹೇಳದಿರುವುದೇ ಯೋಗ್ಯವೆಂದು ತಿಳಿದಿರುವಂತೆ ಭಾಸವಾಗುತ್ತದೆ; ಏಕೆಂದರೆ ನಿಶ್ಚಿತ ಮಾತಿನಲ್ಲಿ ಹೇಳ ಹೊರಟರೆ ನಾಳೆಯ ವಿಶಿಷ್ಟ ಸನ್ನಿವೇಶಕ್ಕೆ ಇಂದಿನ ವಿವರಣೆ ಸರಿ ಹೋಗದಿರಬಹುದು. ಆದರೆ ಕೇವಲ ಆಸ್ತಿಯ ಮಟ್ಟಿಗೆ ಮತ್ತು ಕೆಲವು ಕಂಪೆನಿಗಳ ಮಟ್ಟಿಗೆ ಮಾತ್ರ ಈ ತಿದ್ದುಪಡಿಯ ವ್ಯಾಪ್ತಿಯನ್ನು ಪರಿಮಿತಗೊಳಿಸುವುದು ಯೋಗ್ಯವಲ್ಲ—ಅದನ್ನು ಔದ್ಯಮಿಕ ಕ್ಷೇತ್ರಕ್ಕೂ ಅನ್ವಯಿಸುವುದು ಅಪೇಕ್ಷಣೀಯ. ಇಲ್ಲದಿದ್ದರೆ ಇನ್ನೊಮ್ಮೆ ಇದೇ ಮಾದರಿಯ ಮಸೂದೆಯನ್ನು ಮಂಡಿಸಬೇಕಾಗಿ ಬರಬಹುದು. ಅದೇನೇ ಇರಲಿ-ನೆಹರುಗಳು ಹೇಳಿದಂತೆ ಈಗ ತಂದ ತಿದ್ದುಪಡಿಯನ್ನು ಯಾರೂ ವಿರೋಧಿಸಬಾರದು. ಏಕೆಂದರೆ ಈಗ ಈ ತಿದ್ದುಪಡಿಯನ್ನು ಮಾಡದಿದ್ದರೆ ಜನರು ಘಾತಕವಾದ ಕ್ರಮಗಳನ್ನು ಅನುಸರಿಸುವಂತೆ ಪ್ರೇರಣೆ ಕೊಟ್ಟಂತಾಗುತ್ತದೆ. ಎಲ್ಲ ರಾಜಕೀಯ ಬಿರುಗಾಳಿಗೂ ಎಡೆಕೊಟ್ಟಂತಾಗುತ್ತದೆ; ವಿಪ್ಲವದ ದಿನವನ್ನು ಹತ್ತಿರ ತಂದು ಕೊಂಡಂತಾಗುತ್ತದೆ.

ಸಂಯುಕ್ತ ಕಾಂಗ್ರೆಸಿನ ಧುರೀಣತ್ವ

ಶ್ರೀ ಗೋಪಾಲ ರೆಡ್ಡಿಗಳ ಒಮ್ಮತದ ಆಯ್ಕೆ

ವಿಜಯವಾಡದಲ್ಲಿ ಸಭೆ ಸೇರಿದ್ದ ಆಂಧ್ರ ಕಮ್ಯೂನಿಸ್ಟ್ ಪಕ್ಷದ ಪ್ರಭೃತಿಗಳು ಮತದಾರರು ತಮಗೆ ಮೋಸ ಮಾಡಿದರೆಂದು ಆರೋಪಿಸುವ ಪ್ರಕಟಣೆಯನ್ನು ಮೊನ್ನೆ ಹೊರಡಿಸಿದರು. ಕಮ್ಯೂನಿಸ್ಟರಿಗೆಯೇ ಮತ ಕೊಡುವುದಾಗಿ ಆಶ್ವಾಸನೆ ಕೊಟ್ಟ ಜನರು ಹಿಂದಿನಿಂದ ಸಂಯುಕ್ತ ಕಾಂಗ್ರೆಸುಪಕ್ಷದ ಹುರಿಯಾಳುಗಳಿಗೆ ಬೆಂಬಲ ನೀಡಿದರು. ಸಮಾಜದಲ್ಲಿ ಇನಾಮುದಾರರೇ ಮೊದಲಾದ ವರ್ಗಗಳ ವರ್ಚಸ್ಸು ಇನ್ನೂ ಉಳಿದಿರುವುದೇ ಇದರ ಕಾರಣ. ಕಾಂಗ್ರೆಸು ಪಕ್ಷವು ತಪ್ಪು ಹೆಜ್ಜೆಯನ್ನಿಡದಂತೆ ಚೆನ್ನಾಗಿ ನೋಡಿ ಕೊಳ್ಳುವ ಪ್ರತಿಪಕ್ಷವೊಂದು ಅಗತ್ಯವಿದ್ದರೂ ಕಮ್ಯೂನಿಸ್ಟರಿಗೆ ಆ ಕೆಲಸ ಒಪ್ಪಿಸಿಕೊಡುವು ಅಂಥದ್ದ ಸುಶಿಕ್ಷಿತ ಹಾಗು ಮಧ್ಯಮ ವರ್ಗದ ಜನರ ಮನಸ್ಸಿಗೆ ಬಂದಿಲ್ಲವೆಂದು ತೋರುತ್ತದೆ—ಎಂದು ಅವರ ಪ್ರಕಟಣೆ ಹೇಳುತ್ತದೆ.

ಪಾಟೀಲರ ಹೊಗಳಿಕೆ

ಆಂಧ್ರದಲ್ಲಿ ಕಮ್ಯೂನಿಸ್ಟರಿಗೆ ಮತ ಕೊಡುತ್ತೇವೆಂದು ಹೇಳುತ್ತ ಆ ಪಕ್ಷದ ಸ್ವಯಂ ಸೇವಕರೊಡನೆ ಬಂದವರಲ್ಲಿ ಕೆಲವರು ತಮ್ಮ ನಿಶ್ಚಯ ಬದಲಾಯಿಸಿ ಕಾಂಗ್ರೆಸಿನ ಹುರಿಯಾಳುಗಳಿಗೆ ಪ್ರೋತ್ಸಾಹವಿತ್ತರೆಂಬುದನ್ನು ಕಾಂಗ್ರೆಸಿನ ಚುನಾವಣಾ ಪ್ರಚಾರದ ಸೂತ್ರಧಾರರಾಗಿದ್ದ ಶ್ರೀ ಎಸ್. ಕೆ. ಪಾಟೀಲರು ಒಪ್ಪಿದ್ದಾರೆ. ಮಹಾತ್ಮಾ ಗಾಂಧಿ ಮತ್ತು ಜವಾಹರಲಾಲ ನೆಹರುಗಳಲ್ಲಿ ಆಂಧ್ರದ ಜನರಿಗಿರುವ ವಿಶ್ವಾಸವೂ ಕಾಂಗ್ರೆಸಿನ ಧ್ಯೇಯದ ಕುರಿತ ನಂಬಿಕೆಯೂ ಜನರ ಮನಸ್ಸನ್ನು ಬದಲಾಯಿಸಿತು. ಅದಲ್ಲದೆ ಈ ಸಲ ಕಾಂಗ್ರೆಸಿನ ಪ್ರಚಾರವು ಅತ್ಯಂತ ಪರಿಣಾಮಕಾರಿಯಾಗಿತ್ತು. ಪ್ರಜಾಪ್ರಭುತ್ವ ಪದ್ಧತಿಯ ಶಾಂತ ರೀತಿಯ ಕ್ರಾಂತಿ ಬೇಕೋ ಕಮ್ಯೂನಿಸ್ಟರ ಸರ್ವಾಧಿಕಾರ ಕ್ರಮದ ಆಡಳಿತ ಬೇಕೋ ಎಂಬ ಸಾಮಾನ್ಯ, ಆದರೆ ಮಹತ್ವದ, ಪ್ರಶ್ನೆಯನ್ನು ಜನರು ಸಮರ್ಪಕ ರೀತಿಯಲ್ಲಿ ಉತ್ತರಿಸಿದರೆಂದು ಪಾಟೀಲರು ಅಭಿಪ್ರಾಯಪಟ್ಟರು.

ಹೊಸ ಧುರೀಣ

ಭದ್ರ ಸರಕಾರದ ರಚನೆಯಲ್ಲಿ ಆಂಧ್ರದ ಸಂಯುಕ್ತ ಕಾಂಗ್ರೆಸು ಪಕ್ಷಕ್ಕೆ ಕಾಂಗ್ರೆಸಾಧ್ಯಕ್ಷ ಶ್ರೀ ಧೇಬರರೂ ಹೈಕಮಾಂಡಿನ ಬೇರೆ ಕೆಲವು ಧುರೀಣರೂ ನೆರವಾಗಿ, ಶ್ರೀ ಗೋಪಾಲ ರೆಡ್ಡಿಗಳನ್ನು ಆರಿಸುವ ಸಲಹೆಯನ್ನು ನೀಡಿದರು. ಆದರೆ ಪ್ರಕಾಶಮರ ಮನಸ್ಸಿಗೆ ಈ ಕ್ರಮ ಸರಿ ಬಂದಂತೆ ಕಾಣಲಿಲ್ಲ. ತನಗೆ ಮುಖ್ಯ ಮಂತ್ರಿಸ್ಥಾನವೇಕೆನ್ನುವುದಕ್ಕಿಂತಲೂ ತನ್ನನ್ನು ಯಾರೊಬ್ಬರೂ ವಿಚಾರಿಸಲಿಲ್ಲ; ಮುಂದೇನೆಂದು ಸಲಹೆ ಕೇಳಲಿಲ್ಲ ಎಂದವರು ಕರ್ನೂಲಿನ ಸಾರ್ವಜನಿಕ ಸಭೆಯೊಂದರಲ್ಲಿ ದೂರಿದರು. ಕಾಂಗ್ರೆಸು ಚುನಾವಣೆಯಲ್ಲಿ ಗೆದ್ದು ಬಂದುದಕ್ಕೆ ತಾನು [illegible]ಯಾಗಿದ್ದ ಶ್ರೀ ಎನ್. ಸಂಜೀವ ರೆಡ್ಡಿಗಳು ಉಪ ಮುಖ್ಯ ಮಂತ್ರಿಯಾಗಿದ್ದ ಆಂಧ್ರ ರಾಜ್ಯದ ಪ್ರಥಮ ಮಂತ್ರಿಮಂಡಲದ ಕಾರ್ಯಕಲಾಪವೇ ಕಾರಣವೆಂದೂ ಕಾಂಗ್ರೆಸಿನ ಹೆಸರಿಗೆ ಮಸಿಹಚ್ಚಿದ ವ್ಯಕ್ತಿಗಳಿಗೆ ಮಣೆ ಒಪ್ಪಿಸುವುದು ಸರಿಯಲ್ಲವೆಂದೂ ಪ್ರಕಾಶಮರು ಸಾರಿದರು. ಅವರ ಮನಸ್ಸಿನಲ್ಲಿ ಸಂಜೀವ ರೆಡ್ಡಿಗಳ ಉಮೇದ್ವಾರಿಕೆ ಇದ್ದಂತೆ ಕಂಡುಬರುತ್ತದೆ; ಗೋಪಾಲ ರೆಡ್ಡಿಗಳು ಮದ್ರಾಸಿನ ಮಂತ್ರಿಯಾಗಿದ್ದಾಗ ಅವರ ಹಾಗು ಇತರ ಕೆಲವರ ಮೇಲೆ ಲಂಚ ಮುಂತಾದ ಆಪಾದನೆಗಳ ಆರೋಪವನ್ನು ಇದೇ ಪ್ರಕಾಶಮರು ಹೊರಿಸಿದ್ದರು ಆದ ಕಾರಣದಿಂದ ಗೋಪಾಲ ರೆಡ್ಡಿಗಳ ಧುರೀಣತ್ವ ಅವರಿಗೆ ಇಷ್ಟವಿಲ್ಲ. ಆದರೆ, ಸಂಯುಕ್ತ ಕಾಂಗ್ರೆಸ ಪಕ್ಷದ ಸಭೆ ೬ಂನೇ ತಾರೀಕಿನಂದು ಜರುಗಿದಾಗ ಆಂಧ್ರದ ಪ್ರಗತಿ ಮತ್ತು ಕಾಂಗ್ರೆಸಿನ ಐಕ್ಯದ ನೆಪದಲ್ಲಿ ಪ್ರಕಾಶಮರು ಯಾವ ವಿರೋಧವನ್ನೂ ತೋರಿಸಲಿಲ್ಲ. ಹೀಗೆ ಗೋಪಾಲ ರೆಡ್ಡಿಗಳು ಒಮ್ಮತದಿಂದ ಸಂಯುಕ್ತ ಕಾಂಗ್ರೆಸಿನ ಧುರೀಣರಾಗಿ ಆರಿಸಲ್ಪಟ್ಟರು. ನಾಯಕನ ಸ್ಥಾನಕ್ಕೆ ಇನ್ನೊಂದು ಹೆಸರೇ ಮುಂದೆ ಬರಲಿಲ್ಲ.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು ಶುಭ್ರ ಮಾಡುವ ಸಾಧಕ

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣ ಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ; ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದು.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

"ಮೆಂಬರ್ ಐ. ಎಸ್. ಟಿ. ಎಮ್. ಎ."

NAVAYUGA

Popular Kannada Weekly

Founder.—

Sri A. B. SHETTY, M.L.A.

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೨೪	ಉಡುಪಿ ೨೪-೩-೫೫	ಸಂಚಿಕೆ ೨೯

ಮೂಲ ಶಿಕ್ಷಣದ ಕುರಿತು

ಮದ್ರಾಸಿನ ಶಿಕ್ಷಣ ಮಂತ್ರಿಗಳಾದ ಶ್ರೀ ಸಿ. ಸುಬ್ರಹ್ಮಣ್ಯಮರು ತಮ್ಮ ಖಾತೆಯ ಹಣಕಾಸಿನ ಬೇಡಿಕೆಯ ಮೇಲೆ ನಡೆದ ಚರ್ಚೆಯನ್ನು ಕಳೆದ ವಾರ ಉತ್ತರಿಸುವಾಗ ಹಳ್ಳಿಯ ಪ್ರತಿಯೊಂದು ಶಾಲೆಗೂ ಐದು ಎಕ್ರೆಯಷ್ಟು ಹೊಲವನ್ನು ಸೇರಿಸಿ, ಮೂಲ ಶಿಕ್ಷಣದ ಏರ್ಪಾಡು ಮಾಡುವ ವಿಚಾರವನ್ನು ವ್ಯಕ್ತಪಡಿಸಿದರು. ಸರಕಾರದ ಮುಂದೆ ಶಿಕ್ಷಣ ಪದ್ಧತಿಯನ್ನು ಸುಧಾರಿಸುವ ಪ್ರಶ್ನೆ ಇದ್ದು, ತಜ್ಞರ ಸಮಿತಿಯೊಂದು ಸುಧಾರಣೆಯ ವಿಷಯವನ್ನೀಗ ಪರ್ಯಾಲೋಚಿಸುತ್ತಿದೆ. ಮೂಲಶಿಕ್ಷಣದ ಕುರಿತಾಗಿ ಸಹ ಅದು ತನ್ನ ಸಲಹೆಯನ್ನು ಕೊಡುತ್ತದೆ. ಆದುದರಿಂದ, ಆ ಸಮಿತಿಯ ವರದಿ ಬರುವುದಕ್ಕೆ ಮುಂಚೆ ಸರಕಾರ ನಿಶ್ಚಿತವಾದ ಹೆಜ್ಜೆಯೊಂದನ್ನಿಡುವುದು ಸಮಂಜಸವೋ ಹೇಗೆ ಎಂಬ ಸಂಶಯವೇಳುತ್ತದೆ. ಆದರೆ, ಪ್ರಚಲಿತ ಅಭಿಪ್ರಾಯಕ್ಕೆ ಅನುಸಾರವಾಗಿ ಮೂಲ ಶಿಕ್ಷಣಪದ್ಧತಿಯ ಅನುಸರಣೆಯೇ ಭಾರತದಲ್ಲಿ ಶೈಕ್ಷಣಿಕ ಕ್ಷೇತ್ರದ ಪುನರ್ಘಟನೆಯ ಏಕಮೇವ ಉಪಾಯ. ಭಾರತ ಸರಕಾರವೂ ರಾಜ್ಯ ಸರಕಾರಗಳೂ ಮೂಲ ಶಿಕ್ಷಣವನ್ನೆ ಪ್ರತಿಪಾದಿಸುತ್ತವೆ. ಆದುದರಿಂದ ತಜ್ಞರ ಸಮಿತಿಯೂ ಸಾರ್ವತ್ರಿಕವಾದ ಈ ಭಾವನೆಯನ್ನೆ ಪುಷ್ಟೀಕರಿಸಬಹುದು. ಆ ಸಮಿತಿಯ ವರದಿ ಜೂನು ತಿಂಗಳ ಸುಮಾರಿಗೆ ಸಿಗಬಹುದೆಂದು ಹೇಳಲಾಗುತ್ತದೆ. ಅದು ಕೈ ಸೇರುವುದಕ್ಕೆ ಮೊದಲೇ, ಸೌರಮಾನ ಯುಗಾದಿಯ ಶುಭ ಸಂದರ್ಭದಲ್ಲಿ, ಪ್ರತಿಯೊಂದು ಶಾಲೆಗೂ ಹೊಲವನ್ನು ಜೋಡಿಸುವ ಸಲುವಾಗಿ ಭೂದಾನ ಚಳವಳವನ್ನು ನಡೆಸಲು ಸರಕಾರ ನಿರ್ಧರಿಸಿರುತ್ತದೆ. ಮಹಾ ಜನರು ಉದಾರ ಮನೋಭಾವದಿಂದ ದಾನವಾಗಿ ಹೊಲಗಳನ್ನು ಕೊಡುವರೆಂದು ಸರಕಾರ ನಂಬಿರುತ್ತದೆ. ಸ್ವತಃ ಶಿಕ್ಷಣ ಮಂತ್ರಿಗಳು ಜನರ ಮುಂದೆ ಈ ಆದರ್ಶವನ್ನು ಮುಂದಿಸಿ, ತಾವು ಕಲಿತ ಹಳ್ಳಿಯ ಶಾಲೆಗೆ ತಮ್ಮ ಆಸ್ತಿಯ ತುಂಡೊಂದನ್ನು ಬಿಟ್ಟು ಕೊಡುವುದಾಗಿ ಸಾರಿದ್ದಾರೆ. ಅವರ ಉದಾಹರಣೆಯನ್ನು ಇತರ ಜನರೂ ಅನುಸರಿಸುವುದರಿಂದ ಶಿಕ್ಷಣದ ಪುನರ್ಘಟನೆಗೆ ತುಂಬ ಪ್ರಯೋಜನ ಸಿಗುತ್ತದೆ ಎಂದು ನಮ್ಮ ಅಭಿಪ್ರಾಯ. ಈ ಬಗ್ಗೆ ನಾವು ಜನರ ಸಹಕಾರಕ್ಕಾಗಿ ಆಗ್ರಹದ ವಿನಂತಿ ಮಾಡುತ್ತೇವೆ. ಮೂಲ ಶಿಕ್ಷಣವನ್ನು ಕೊಡುವುದಕ್ಕೆ ಹೊಲಗಳೇಕೆ ಬೇಕು? ಎಂದು ಕೆಲವರಿಂದ ಪ್ರಶ್ನೆ ಬರಬಹುದು. ಇಂದಿನ ವಾತಾವರಣದಲ್ಲಿ ಈ ಪ್ರಶ್ನೆ ಬರುವುದೂ ಸಹಜ--ಏಕೆಂದರೆ ಮಕ್ಕಳಿಗೆ ಕೈಗಾರಿಕೆಯ ಮೂಲಕ ಬೌದ್ಧಿಕ ಹಾಗು ಮಾನಸಿಕ ಶಿಕ್ಷಣ ಕೊಡಬೇಕೆಂಬ ಮೂಲ ಶಿಕ್ಷಣದ ಉದ್ದೇಶವನ್ನು ನೂಲಲು ಮತ್ತು ನೇಯಲು ಕಲಿಸುವುದರಿಂದ ಸಾಧಿಸುವ ಮನೋಭಾವವೇ ಎದ್ದು ಕಾಣುತ್ತದೆ. ಆದರೆ ನೂಲುವುದು ಮತ್ತು ನೇಯುವುದು ಮಾತ್ರ ಮೂಲ ಶಿಕ್ಷಣ ಕೊಡುವ ವಿಧಾನವಲ್ಲ— ಹಾಗೆ ಮಾಡುವುದು ಯೋಗ್ಯವೂ ಅಲ್ಲ. ಮಂತ್ರಿಗಳು ಹೇಳಿದಂತೆ ನಮ್ಮ ಶಾಲೆಗಳಲ್ಲಿ ಇಪ್ಪತ್ತಕ್ಕೆ ಒಂದರಲ್ಲಿ ನೂಲುವ ಮತ್ತು ನೇಯುವ ಶಿಕ್ಷಣಕ್ಕೆ ಮಹತ್ವ ಕೊಟ್ಟರೆ ಸಾಕು— ಅಲ್ಲಿ ಉತ್ಪಾದಿತವಾದ ಬಟ್ಟೆಗೆ ಗಿರಾಕಿ ಹುಡುಕುವುದು ಕಷ್ಟ. ಹುಡುಗರು ಸ್ವಂತ ಉಪಯೋಗಕ್ಕಾಗಿಯೂ ಮನೆಯವರ ಪ್ರಯೋಜನಕ್ಕಾಗಿಯೂ ಇದನ್ನು ಬಳಸಿ ಕರ್ಚು ಮಾಡಿದರೂ ಮತ್ತೂ ಒಂದಷ್ಟು ಉಳಿಯುವುದು ನಿಶ್ಚಯ. ಅಲ್ಲದೆ ಹುಡುಗರ ತಯಾರಿಕೆ ಅಷ್ಟು ಚೆನ್ನಾಗಿಲ್ಲದಿರುವುದರಿಂದ ಅದನ್ನು ಮೆಚ್ಚುವವರು ವಿರಳ. ಆದಕಾರಣ ರಾಜ್ಯದ ೮೦ ಲಕ್ಷ ಪ್ರಾಥಮಿಕ ವಿದ್ಯಾರ್ಥಿಗಳು ನೂಲುವ ಮತ್ತು ನೇಯುವ ಶಿಕ್ಷಣ ಪಡೆಯಲಿ ಎಂದು ಹೇಳುವುದು ಹುಚ್ಚುತನ. ಹಾಗೆ ಮಾಡಿದರೆ ಗಿರಣಿಗಳ ಉತ್ಪಾದನೆಯನ್ನೆ ಪ್ರತಿಬಂಧಿಸಬೇಕಾದೀತು; ಈಗಿನ ನೇಕಾರ ಬಂಧುಗಳ ಸಮಸ್ಯೆಯೊಡನೆ ಹೊಸ ಸಮಸ್ಯೆ ಸಹ ತಲೆದೋರೀತು. ಆದುದರಿಂದ ಶಿಕ್ಷಣದ ಉದ್ದೇಶ ಸಾಧನೆಗಾಗಿ ಕೃಷಿಗೆಲಸಕ್ಕೆ ವಿದ್ಯಾರ್ಥಿಗಳನ್ನು ತರಬೇತಿ ಮಾಡಲು ಹೊಲಗಳಲ್ಲಿ ದುಡಿಸುವುದೇ ಶ್ರೇಯಸ್ಕರ ಎಂದು ಮಂತ್ರಿಗಳ ಅಭಿಪ್ರಾಯ. ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಅನುಸರಿಸಬೇಕಾದ ವೈಜ್ಞಾನಿಕ ಕ್ರಮಗಳು, ಆ ಕೃಷಿಯ ವ್ಯವಸಾಯ ಪದ್ಧತಿಯ ಪರಿಜ್ಞಾನ, ಶಾರೀರಿಕ ಶ್ರಮದ ಕುರಿತು ಪೂಜ್ಯ ಮನೋಭಾವ ಮುಂತಾದುವನ್ನು ಮೂಡಿಸುವುದಕ್ಕೆ ಹೊಲಗಳಲ್ಲಿ ಕೆಲಸ ಮಾಡಿಸುವುದು ಇಷ್ಟವೆಂದು ಹೇಳಲಾಗುತ್ತದೆ. ಆದರೆ ಈ ಹೊಲಗಳು ಶಾಲೆಗೆ ತೀರ ಹತ್ತಿರದಲ್ಲಿರಬೇಕು; ಮತ್ತು ಅವುಗಳಲ್ಲಿ ವಿದ್ಯಾರ್ಥಿಗಳಿಂದ ಕೆಲಸ ಮಾಡಿಸುವ ಶಿಕ್ಷಕರು ಹೆಚ್ಚಿನ ಅನುಭವಿಗಳೂ ಶಿಕ್ಷಣದ ಸುಧಾರಣೆಯ ಉದ್ದೇಶದಲ್ಲಿ ವಿಶ್ವಾಸವಿಟ್ಟವರೂ ಆಗಿರಬೇಕು. ಹೊಲಗಳನ್ನು ಪಡೆಯುವ ಚಳವಳವು ಯಶಸ್ಸನ್ನು ಗಳಿಸುವುದು ಅಷ್ಟು ಕಷ್ಟವಾದುದಲ್ಲ —ಮೂಲ ಶಿಕ್ಷಣದ ಧ್ಯೇಯಕ್ಕೆ ಸರಿಯಾಗಿ ವರ್ತಿಸುವ ಶಿಕ್ಷಕವೃಂದವನ್ನು ಸಿದ್ಧಗೊಳಿಸುವುದೇ ಪ್ರಯಾಸಕರ. ರಾಜಾಜಿಯವರು ಮುಖ್ಯ ಮಂತ್ರಿಯಾಗಿದ್ದಾಗ ತಂದ ಬದಲಾವಣೆಯನ್ನು ಸ್ವಲ್ಪ ಮಾತ್ರವೂ ಮೆಚ್ಚದ ಮತ್ತು ಒಪ್ಪದ ಅಧ್ಯಾಪಕರನ್ನು ಮೂಲ ಶಿಕ್ಷಣದ ಪ್ರಚಾರದಲ್ಲಿ ಸಹಕರಿಸುವಂತೆ ಮಾಡುವುದಕ್ಕೆ, ಅವರ ಮನ ಒಲಿಸಿಕೊಳ್ಳುವುದಕ್ಕೆ, ಅಲ್ಲಾವುದ್ದೀನನ ವಿಚಿತ್ರದೀಪವೇ ಬೇಕಾದೀತು. ಸರಕಾರದವರು ಶಿಕ್ಷಕರ ತರಬೇತಿ ಮತ್ತು ಸಹಕಾರಗಳ ವಿಷಯದಲ್ಲಿ ಭಾವನೆಯನ್ನು ಮೊದಲಾಗಿ ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸಬೇಕೆಂದೂ ಭೂದಾನ ಚಳವಳವನ್ನು ತೊಡಗುವುದಕ್ಕಿಂತಲೂ ಹೆಚ್ಚಾಗಿ ಇದೇ ಆಗತ್ಯದ ವಿಷಯವೆಂದೂ ನಾವು ಸೂಚಿಸಲಿಚ್ಛಿಸುತ್ತೇವೆ.

ಯಾಲ್ಟಾ ಪರಿಷತ್ತಿನ ಗೋಪ್ಯ ಸ್ಫೋಟ

ಚರ್ಚಿಲ್ಲರಿಗೆ ತಿಳಿಯದಂತೆ ನಡೆದ ಕಾರಸ್ಥಾನ

ದ್ವಿತೀಯ ಮಹಾಯುದ್ಧ ನಡೆಯುತ್ತಿದ್ದಾಗ "ಮಿತ್ರ ರಾಷ್ಟ್ರ"ಗಳಾಗಿದ್ದ ಅಮೇರಿಕ, ಬ್ರಿಟನು ಮತ್ತು ರಶಿಯದ ವರಿಷ್ಠರು ಯಾಲ್ಟಾದಲ್ಲಿ ಗುಪ್ತ ಸಮಾಲೋಚನೆಗಳನ್ನು ನಡೆಸಿ, ಯುದ್ಧದಲ್ಲಿ ಗೆಲುವ ಉಪಾಯಗಳನ್ನೂ ಯುದ್ಧೋತ್ತರದಲ್ಲಿ ನಡೆಯಬೇಕಾದ ಏರ್ಪಾಡುಗಳನ್ನೂ ನಿಶ್ಚಯಿಸಲು ಪ್ರಯತ್ನಿಸಿದ್ದರು. ೧೯೪೫ನೇ ಫೆಬ್ರವರಿ ತಿಂಗಳಲ್ಲಿ ನಡೆದಿದ್ದ ಈ ಸಭೆಯ ವಿವರಗಳನ್ನು ಕನಿಷ್ಠ ಐವತ್ತು ವರ್ಷಗಳ ವರೆಗಾದರೂ ಗೋಪ್ಯವಾಗಿಡತಕ್ಕದ್ದೆಂದು ಆಗ ಎಲ್ಲರೂ ಒಪ್ಪಿದ್ದರು.

ರಿಪಬ್ಲಿಕನ್ನರ ಒತ್ತಾಯ

ಆದರೆ, ಅಮೇರಿಕದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದಲೂ ಆಡಳಿತದ ಸೂತ್ರವನ್ನು ವಹಿಸಿಕೊಂಡು ಬಂದಿದ್ದ ಡೆಮೊಕ್ರಾಟರು ಯಾಲ್ಟಾದಲ್ಲಿ ಯಾವ ರಹಸ್ಯ ನಡೆಸಿದ್ದರೆಂದು ತಿಳಿಯುವ ಕುತೂಹಲ ರಿಪಬ್ಲಿಕನ್ನರಲ್ಲಿ ವಿಶೇಷವಾಗಿದ್ದಿತು. ಐಸೆನಹೋವರರಿಗೆ ಗೆಲವನ್ನು ತಂದು ಕೊಟ್ಟ ಚುನಾವಣೆಯಲ್ಲಿ ರಿಪಬ್ಲಿಕನ್ನರಿಗೆ ಯಾಲ್ಟಾದ ಗುಟ್ಟನ್ನು ಒದಗಿಸಿಕೊಡುವ ಮಾತು ಕೊಡಲ್ಪಟ್ಟಿದ್ದಿತು. ಆದರೆ ಬ್ರಿಟನು ಗೋಪ್ಯ ಸ್ಫೋಟಕ್ಕೆ ವಿರೋಧ ಸೂಚಿಸಿದುದರಿಂದ ಇಷ್ಟು ಸಮಯ ವಿಳಂಬಿಸಲಾಯಿತು. ಮೊನ್ನೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ಹೇಗೋ ಈ ಗುಪ್ತ ಕಾಗದ ಪತ್ರಗಳ ಪ್ರತಿಯನ್ನು ಪಡೆದುಕೊಂಡು ಪ್ರಕಟಣೆಯ ತಯಾರಿ ನಡೆಸುತ್ತಿದೆ ಎಂಬ ಸುದ್ದಿ ಬಂತು. ಇದನ್ನು ಕೇಳಿದ ವಿದೇಶಾಂಗ ಶಾಖೆಯು ಐಕರನ್ನೂ ವಿಚಾರಿಸದೆ, ಬ್ರಿಟನಿನ ವಿರೋಧವನ್ನೂ ಲೆಕ್ಕಿಸದೆ, ತಾನೆ ೫೦೦೦೦೦ ಶಬ್ದಗಳುಳ್ಳ ಟಿಪ್ಪಣಿ ಪತ್ರಗಳನ್ನು ಪ್ರಕಟಿಸಿತು.

ರೂಜವೆಲ್ಟರ ಕಾರಸ್ಥಾನ

ಕಾಗದ ಪತ್ರಗಳು ಡೆಮೊಕ್ರಾಟರ ಪ್ರತಿನಿಧಿಯಾಗಿ ಅಮೇರಿಕದಲ್ಲಿ ನಾಲ್ಕು ಬಾರಿ ಅಧ್ಯಕ್ಷ ಸ್ಥಾನವನ್ನು ಬಿಡದೆ ಅಲಂಕರಿಸಿದ್ದ ದಿವಂಗತ ರೂಜ್‌ವೆಲ್ಟರು ಬ್ರಿಟನಿನ ಪ್ರಧಾನ ಮಂತ್ರಿ ಚರ್ಚಿಲ್ಲರಿಗೆ ತಿಳಿಯದಂತೆ ರಶಿಯದ ಪ್ರಧಾನಿಯಾಗಿದ್ದ ದಿವಂಗತ ಸ್ಟಾಲಿನ್ನರಿಗೆ ಅನೇಕ ಸವಲತ್ತುಗಳನ್ನು ಕೊಡಮಾಡಿದ್ದರೆಂದು ವ್ಯಕ್ತಪಡಿಸುತ್ತವೆ. ಬ್ರಿಟಿಷರ ಕೈಯಲ್ಲಿರುವ ಚೀನದ ಕರಾವಳಿಗೆ ಹತ್ತಿರದ, ಹೊಂಗ್ ಕೊಂಗ್ ಚೀನಕ್ಕೆ ಸೇರತಕ್ಕದೆಂದೂ ಕೊರಿಯದಲ್ಲಿ ಬ್ರಿಟನಿನ ಪ್ರತಿನಿಧಿಗೆ ಸದಸ್ಯತ್ವವಿಲ್ಲದ ವಿಶ್ವಸ್ತ ಸಮಿತಿಯ ಆಡಳಿತ ನಡೆಯಬೇಕೆಂದೂ ರೂಜ್‌ವೆಲ್ಟರು ಸೂಚಿಸಿದ್ದರು. ಅಲ್ಲದೆ ಜಪಾನನ್ನು ಸೋಲಿಸುವಲ್ಲಿ ರಶಿಯದ ನೆರವು ಸಿಗುವುದಕ್ಕೋಸ್ಕರ ಜಪಾನಿನ ವಶದಲ್ಲಿದ್ದ ಕೆಲವು ದ್ವೀಪಗಳನ್ನು ರಶಿಯಕ್ಕೆ ಕೊಡುವುದಕ್ಕೂ ಅವರು ಮುಂದಾಗಿದ್ದರು.

ಚರ್ಚಿಲ್ಲರ ಮನಃಕ್ಲೇಶ

ಹತ್ತು ವರ್ಷಗಳ ಹಿಂದಿನ ಸಮಾಲೋಚನೆಗಳಿಗೆ ಈಗ ಅಷ್ಟೇನೂ ಮಹತ್ವವಿಲ್ಲದಿದ್ದರೂ—ಅಮೇರಿಕದ ಮಟ್ಟಿಗಂತೂ ಡೆಮೊಕ್ರಾಟರ ಬದಲು ರಿಪಬ್ಲಿಕನ್ನರ ಕೈಮೇಲಾಗಿದ್ದು, ರೂಜ್‌ವೆಲ್ಟರ ಧೋರಣೆಗೆ ಐಕರು ಬದ್ಧರಾಗಬೇಕಿಲ್ಲವಾದರೂ—ಅಂತರಾಷ್ಟ್ರೀಯ ಮಹತ್ವವನ್ನು ಒಂದು ಕಾಲದಲ್ಲಿ ಪಡೆದಿದ್ದ ಯಾಲ್ಟಾಪರಿಷತ್ತಿನ ಗುಟ್ಟನ್ನು ಹೊರಗೆಡವಿದ್ದರಿಂದ ಇನ್ನುಮುಂದೆ ಬಿಚ್ಚು ಮನಸ್ಸಿನಿಂದ ಮುತ್ಸದ್ದಿಗಳು ಮಾತನಾಡುವುದನ್ನು ನಿರುತ್ಸಾಹಗೊಳಿಸಿದಂತಾಗಿರುತ್ತದೆ. ಬ್ರಿಟನಿನ ಚರ್ಚಿಲ್ಲರಂತೂ ಹೀಗೆಯೇ ಅಭಿಪ್ರಾಯಪಟ್ಟರು. ಅವರ ಹಿಂದೆ ರೂಜ್‌ವೆಲ್ಟರು ಕಾರಸ್ಥಾನ ನಡೆಸಿದರೆಂಬ ಸಂಗತಿಯೊಂದೇ ಅಲ್ಲ— ಫ್ರಾನ್ಸು ೨೦ ಲಕ್ಷ ಸೈನಿಕರ ಪಡೆಯನ್ನು ಸಿದ್ಧಪಡಿಸುವ ವರೆಗೆ ಅದಕ್ಕೆ ಮಹಾರಾಷ್ಟ್ರದ ಸ್ಥಾನಮಾನವನ್ನು ಕೊಡಬೇಕಿಲ್ಲವೆಂದೂ ಜರ್ಮನಿಯ ಒಗ್ಗಟ್ಟು ಮುರಿಯುವಂತೆ ಪ್ರಾದೇಶಿಕವಾಗಿ ಅದನ್ನು ಹಂಚಿಕೊಳ್ಳಬೇಕೆಂದೂ ಚರ್ಚಿಲ್ಲರು ಪ್ರತಿಪಾದಿಸಿರುವಂತೆ ಗುಪ್ತಪತ್ರಗಳು ಹೇಳುವುದರಿಂದ ಆ ದೇಶಗಳ ಅಪ್ರೀತಿಯನ್ನು ಬ್ರಿಟನು ಮತ್ತು ಚರ್ಚಿಲ್ಲರು ಕೂಡಿಯೇ ಗಳಿಸಿದಂತಾಗಿರುತ್ತದೆ

"ಅಧಿಕೃತ ಪತ್ರವಲ್ಲ"

ಪರಿಣಾಮವಾಗಿ ಚರ್ಚಿಲ್ಲರ ಜನಪ್ರಿಯತೆಗೆ ಪೆಟ್ಟು ಬಿದ್ದಿದೆಯಲ್ಲದೆ, ಅದು ಸಂಬಂಧಿಸಿದವರಲ್ಲಿ ಮನಃಕ್ಲೇಶವನ್ನೂ ಹುಟ್ಟಿಸಿರುತ್ತದೆ. ಚರ್ಚಿಲ್ಲರು ಪಾರ್ಲಿಮೆಂಟಿನಲ್ಲಿ ಅಮೇರಿಕದ ಪ್ರಕಟಣೆಯು ಸಂಬಂಧಿಸಿದ ರಾಷ್ಟ್ರಗಳ ಅಧಿಕೃತ ಸಮ್ಮತಿಯ ಪತ್ರಗಳೇನೂ ಅಲ್ಲವೆಂದೂ

ಪ್ರಕಟಣೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ:—

ಕರ್ಕಳ ಪಂಚ್ಯಾತ ಬೋರ್ಡಿನ ಆಧೀನಕ್ಕೆ ಒಳಪಟ್ಟ ದಿನವಹಿ ಮೀನು ಮಾರ್ಕೆಟು ಮತ್ತು ವಾರ ಸಂತೆಗಳಲ್ಲಿ 1955 ನೇ ಇಸವಿ ಎಪ್ರೀಲ್ ತಾರೀಕು 1 ರಿಂದ 1956 ನೇ ಇಸವಿಯ ಮಾರ್ಚ ತಾರೀಕು 31 ರ ವರೇಗೆ ಪೂರ್ತಿ ಒಂದು ವರ್ಷದಲ್ಲಿ ಸುಂಕ ವಸೂಲು ಮಾಡುವ ಹಕ್ಕನ್ನು ಟೆಂಡರುಹಾಕಿರುವ ಮೇರೆಗೆ ಇದೇ ಮಾರ್ಚ ತಿಂಗಳ ತಾರೀಕು 31 ನೇ ಗುರುವಾರ ದಿನ ಅಪರಾಹ್ನ ಘಂಟೆ 2 ಕ್ಕೆ ಸರಿಯಾಗಿ ಬೋರ್ಡು ಆಫೀಸಿನಲ್ಲಿ ಪ್ರತ್ಯೆ ಪ್ರತ್ಯೇಕವಾಗಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಆದ ಕಾರಣ ದಿನವಹಿ ಮೀನು ಮಾರ್ಕೆಟನ್ನು ಟೆಂಡರು ರೂಪಾಯಿ 915—0—0ಕ್ಕೆ ಮೇಲ್ಪಟ್ಟು ವಾರಸಂತೆಯನ್ನು ರೂ. 195/-ಕ್ಕೆ ಮೇಲ್ಪಟ್ಟು ವಹಿಸಿಕೊಳ್ಳಲು ಆಪೇಕ್ಷಿಪಡುವವರು ಕ್ಲಪ್ತ ಸಮಯಕ್ಕೆ ಹಾಜರಾಗಿ ವಹಿಸಿಕೊಳ್ಳಬಹುದಾಗಿ ತಿಳಿಸಲಾಗುತ್ತದೆ.

ಏಲಂನ ಎಲ್ಲಾ ಶರ್ತು—ವ—ನಿಬಂಧನೆಗಳು ಬೋರ್ಡಿನ ತಾರೀಕು 10—3—1955 ರ ಪ್ರಕಟಣೆಯಂತೆಯೇ ಎಥಾ ಪ್ರಕಾರ ಲಗಾವಾಗಿರುತ್ತದೆ.

ಸದ್ರಿ ದಿನ ತದನಂತರ ಬೋರ್ಡಿನ ಗಾಡಿಚಾಕದಲ್ಲಿ 1955—56 ನೇ ವರ್ಷದಲ್ಲಿ ಸುಂಕ ವಸೂಲು ಪಡೆಯುವ ಹಕ್ಕನ್ನೂ ಬೋರ್ಡಿನ ಕಸಕಡ್ಡಿಗಳ ಕಂಪೋಸ್ಟು ಗೊಬ್ಬರವನ್ನು ಸಹ ಏಲಂ ಮಾಡಲಾಗುವುದು.

H. ಸದಾಶಿವ ಹೆಗ್ಡೆ.
ಪ್ರೆಸಿಡೆಂಟ್.

ಪಂಚ್ಯಾತು ಬೋರ್ಡು ಆಫೀಸು,
ಕರ್ಕಳ— ತಾರೀಕು 22-3-1955

ಅಮೇರಿಕದ ಅಧಿಕಾರಿಯೊಬ್ಬರು ಬರೆದಿಟ್ಟುಕೊಂಡ ಟಿಪ್ಪಣಿ ಮಾತ್ರವೆಂದೂ ಹೇಳಿದರಲ್ಲದೆ, ಪ್ರಕಟಿಸಲ್ಪಾದ ಪತ್ರಗಳಲ್ಲಿ ಸಹ ತಪ್ಪು ಕಲ್ಪನೆಯನ್ನು ಹುಟ್ಟಿಸುವ ಪ್ರಮಾದಗಳಿವೆ ಎಂದರು. ಕಾಗದ ಪತ್ರಗಳನ್ನು ಅಮೇರಿಕ ಇದ್ದುದಿದ್ದಂತೆ ಪ್ರಕಟಿಸದೆ ಕೆಲವು ಅಂಶಗಳನ್ನು ಬಿಟ್ಟುಗೊಟ್ಟಿದೆ ಎಂಬುದೇ ಈ ಮಾತಿನ ತಿರುಳು. ಇದನ್ನು ಅಮೇರಿಕ ಒಪ್ಪಿಕೊಂಡಿದೆ. ರಿಪಬ್ಲಿಕನರನ್ನು ತೃಪ್ತಿಪಡಿಸಲು ಸಾಕಾದಷ್ಟನ್ನೆ ಅದು ಪ್ರಕಟಿಸಿದೆ; ಮಾತ್ರವಲ್ಲ, ರಿಪಬ್ಲಿಕನ್ನರ ತೃಪ್ತಿಗಾಗಿ ಕೈರೋ ಒಪ್ಪಂದ, ಪೋಟ್ಸ್‌ಡ್ಯಾಮ್ ಒಪ್ಪಂದ ಮುಂತಾದ ಎಲ್ಲ ಪರಿಷತ್ತುಗಳ ಕಾಗದಪತ್ರಗಳನ್ನೂ ಬೇಗನೆ ಪ್ರಕಟಿಸುವುದಾಗಿ ಅದು ಹೇಳುತ್ತದೆ. ಅಮೇರಿಕದ ಈ ನಿಲುವಿಗೆ ಬ್ರಿಟನು ಮಾತ್ರ ಒಪ್ಪುತ್ತಿಲ್ಲ.

ಮೆಲೆಂಕಾಫರೊಡನೆ ಭೇಟಿ

ಚರ್ಚಿಲ್ಲರ ಮುಖಭಂಗ ಮಾಡುವುದೂ ಅಮೇರಿಕದ ಉದ್ದೇಶಗಳಲ್ಲಿ ಒಂದಾಗಿತ್ತೊ ಏನೆಂದು ಗೊತ್ತಾಗುವುದಿಲ್ಲ — ಆದರೆ, ಈ ವಾರ ಚರ್ಚಿಲ್ಲರ ಗ್ರಹಚಾರ ಕೆಟ್ಟಿರುವಂತೆ ಕಾಣುತ್ತದೆ. ತ್ರಿರಾಷ್ಟ್ರಗಳ ಪರಿಷ್ಕರ (ರಶಿಯ—ಬ್ರಿಟನು—ಅಮೇರಿಕ) ಪರಿಷತ್ತನ್ನು ಸೇರಿಸಲು ತಾನು ಪ್ರಯತ್ನಿಸುವುದಾಗಿ ಅವರು ಒಂದು ವರ್ಷದ ಹಿಂದೆ ಸಾರಿದ್ದರು. ಆದರೆ ಪಾರ್ಲಿಮೆಂಟಿನಲ್ಲಿ ಮೊನ್ನೆ ಮಾತನಾಡಿದಾಗ ಕಾಲವೇನೂ ಅದಕ್ಕೆ ಪಕ್ವವಾಗಿಲ್ಲ ಎಂದರು. ಮೊಸ್ಕೋದಲ್ಲಿ ರಶಿಯದ ಸರಕಾರವು ಹಿಂದಿನ ಪ್ರಧಾನ ಮಂತ್ರಿ ಮೆಲೆಂಕಾಫರೊಡನೆ ಭೇಟಿಯನ್ನು ಬಯಸಿ ಚರ್ಚಿಲ್ಲರು ನಡೆಸಿದ ಪತ್ರ ವ್ಯವಹಾರಗಳನ್ನು ಚರ್ಚಿಲ್ಲರ ಹೇಳಿಕೆಗೆ ಸ್ಪಷ್ಟೀಕರಣದ ರೂಪದಲ್ಲಿ ಮೊನ್ನೆ ಪ್ರಕಟಿಸಿತು. ಅದನ್ನು ನೋಡಿದರೆ, ಚರ್ಚಿಲ್ಲರು ತಾವಾಗಿ ಬಯಸಿದ ಮೆಲೆಂಕಾಫರ ಭೇಟಿಯ ವಿಚಾರವನ್ನು ರಶಿಯವು ೧೯೫೪ನೇ ಜುಲಾಯಿಯಲ್ಲಿ ಐರೋಪ್ಯ ರಾಷ್ಟ್ರಗಳ ಪರಿಷತ್ತನ್ನು ಸೇರಿಸಬೇಕೆಂದಿದ್ದ ವಿಚಾರ ತಿಳಿದೊಡನೆಯೇ ತಾವಾಗಿ ಬಿಟ್ಟುಕೊಟ್ಟರೆಂದು ಗೊತ್ತಾಗುತ್ತದೆ.

ಕೂಲಿಕಾರ ಪಕ್ಷದಲ್ಲಿ ಒಡಕು

ಇದೆಲ್ಲದರ ಮೇಲಿಂದ ಚರ್ಚಿಲ್ಲರು "ಬೇಗನೆ" ಪ್ರಧಾನ ಮಂತ್ರಿ ಪದವನ್ನು ಬಿಟ್ಟು ಕೊಡಲು ಉದ್ಯುಕ್ತರಾಗಿರುವರೆಂದು ಹೇಳಲಾಗುತ್ತದೆ. ಕೆಲವು ವರದಿಗಳ ಪ್ರಕಾರ ಮುಂದಿನ ತಿಂಗಳಲ್ಲಿ ಈಸ್ಟರ್ ಹಬ್ಬದ ಹೊತ್ತಿಗೆ ಅವರು ಪ್ರಧಾನ ಮಂತ್ರಿ ಸ್ಥಾನವನ್ನು ವಿದೇಶಾಂಗ ಕಾರ್ಯದರ್ಶಿಯಾಗಿರುವ ಅಂಥೋನಿ ಈಡನರಿಗೆ ಬಿಟ್ಟುಕೊಡಬಹುದು. ಇದೇ ವರ್ಷದ ಅಕ್ಟೋಬರದ ಹೊತ್ತಿಗೆ ಪಾರ್ಲಿಮೆಂಟಿಗೆ ಚುನಾವಣೆಗಳು ನಡೆಯಬಹುದೆಂದೂ ಆಗ ಕನ್‌ಸರ್‌ವೇಟಿವ್ ಪಕ್ಷದ ಜನಪ್ರಿಯತೆ ಕುಗ್ಗದಂತೆ ನೋಡಿಕೊಳ್ಳುವುದಕ್ಕಾಗಿಯೇ ೮೦ ವರ್ಷ ಪ್ರಾಯದ ಚರ್ಚಿಲ್ಲರು ನಿವೃತ್ತಿಹೊಂದುವರೆಂದೂ ತಿಳಿದು ಬರುತ್ತದೆ. ಆದರೆ ಈ ಸಲದ ಚುನಾವಣೆಯಲ್ಲಿ ಲೇಬರ್‌ಪಕ್ಷದ ಕೈ ಅಷ್ಟು ಗಟ್ಟಿಯಾಗಿರುವಂತೆ ತೋರುವುದಿಲ್ಲ. ಆ್ಯಟ್ಲೀಯವರು ಧುರೀಣರಾಗಿರುವ ಆ ಪಕ್ಷದಲ್ಲಿ ಎಡಗುಂಪೊಂದಿದ್ದು ಬೇವಾನರು ಅದರ ಧುರೀಣ. ಇಚೆಗೆ ಕೆಲ ಸಮಯದಿಂದ ಬೇವಾನರ ಗುಂಪಿಗೂ ಆ್ಯಟ್ಲೀಯವರದಕ್ಕೂ ತಿಕ್ಕಾಟ ಸಂಭವಿಸುತ್ತಿದ್ದು, ಬೇವಾನರು ಪಕ್ಷದ ನಾಯಕನ ಆದೇಶವನ್ನು ಮೀರಿ ನಡೆಯುತ್ತಿದ್ದರು. ಹೈಡ್ರೋಜನ್ ಬಾಂಬಿನ ಕುರಿತಾದ ಚರ್ಚೆ ಮೊನ್ನೆ ಪಾರ್ಲಿಮೆಂಟಿನಲ್ಲಿ ನಡೆದಾಗ ಈ ಭಿನ್ನಾಭಿಪ್ರಾಯ ತೀವ್ರವಾದ ದೆಸೆಯಿಂದ ಲೇಬರ್ ಪಕ್ಷದ ಪ್ರತಿನಿಧಿಗಳು ಸಭೆಸೇರಿ ಅತ್ಯಲ್ಪ ಬಹುಮತದಿಂದ ಬೇವಾನರನ್ನು ತಮ್ಮ ಪಕ್ಷದ ಸಕ್ರಿಯ ಸದಸ್ಯರಲ್ಲವೆಂದು ಸಾರಿದರು; ಮತ್ತು ಸಚೇತಕ ಹುದ್ದೆಯನ್ನು ಕಸಿದುಕೊಂಡರು. ಶಿಸ್ತು ಜ್ಯಾರಿಯ ಈ ಕ್ರಮದಿಂದ ಪಕ್ಷದ ಒಗ್ಗಟ್ಟು ಮತ್ತು ಶಕ್ತಿ ಎರಡೂ ಮುರಿಯುವ ಸಂಭವ ಹೆಚ್ಚು.

ಪಾಕಿಸ್ತಾನದ ಸರಕಾರ

ಕಳೆದ ಅಕ್ಟೋಬರದಲ್ಲಿ ಪಾಕಿಸ್ತಾನದ ಗವರ್ನರ ಜನರಲರು ಘಟನಾ ಸಮಿತಿಯನ್ನು ವಿಸರ್ಜಿಸಿದ್ದು ಅಕ್ರಮವೆಂದು ಸಿಂಧಿನ ಚೀಫ್ ಕೋರ್ಟು ಕೊಟ್ಟ ತೀರ್ಪನ್ನು ಫೆಡೆರಲ್ ಕೋರ್ಟು ತಳ್ಳಿ ಹಾಕಿತು. ಸಿಂಧ್ ಚೀಫ್ ಕೋರ್ಟಿನ ಅಧಿಕಾರಕ್ಕೆ ಒಳಪಟ್ಟ ಪ್ರಕರಣ ಇದಲ್ಲ ಎಂಬ ಕಾರಣವನ್ನು ಫೆಡರಲ್ ಕೋರ್ಟು ಕೊಟ್ಟಿದ್ದು, ಘಟನಾತ್ಮಕ ಪ್ರಶ್ನೆಯನ್ನು ಉದ್ದೇಶಪೂರ್ವಕವಾಗಿಯೇ ತಾನು ವಿಚಾರಿಸಿಲ್ಲವೆಂದು ಅದು ಹೇಳಿತು.

ಪೂರ್ವ ಬಂಗಾಲ

ಫಜಲುಲ್ ಹಕ್ಕರ ಪದಚ್ಯುತಿಯ ಬಳಿಕ ಈಗ ಹತ್ತು ತಿಂಗಳಿಂದ ಪೂರ್ವಬಂಗಾಲದಲ್ಲಿ ನಡೆಯುತ್ತಿರುವ ಗವರ್ನರರ ಆಳಿಕೆಯನ್ನು ಅಂತ್ಯಗೊಳಿಸಿ, ಮರಳಿ ಪ್ರಜಾಪ್ರಭುತ್ವ ಪದ್ಧತಿಯ ಸರಕಾರ ಸ್ಥಾಪಿಸುವ ಪ್ರಶ್ನೆ ವಿಚಾರಿಸಲು ಪ್ರಧಾನ ಮಂತ್ರಿ ಮಹಮ್ಮದ ಆಲಿಯವರು ಢಾಕಾಕ್ಕೆ ಹೋಗಿದ್ದರು. ಆದರೆ ಹಾಗೆ ಮಾಡಲು ಪರಿಸ್ಥಿತಿ ಅನುಕೂಲವಾಗಿಲ್ಲ ಎಂಬ ಭಾವನೆಯೊಡನೆ ಅವರು ಮರಳಿದರು.

ಸಿಂಧಿನಲ್ಲಿ ಗೊಂದಲ

ಪಾಕಿಸ್ತಾನದ ಸಿಂಧ್ ರಾಜ್ಯದಲ್ಲಿ ಸರಕಾರವನ್ನು ಉರುಳಿಸಲು ಹಿಂದಿನ ಮಂತ್ರಿಗಳೂ ಜಮೀನುದಾರರೂ ಒಳಸಂಚು ನಡೆಸಿರುವರೆಂದು ಖುಹ್ರೋರ ಮಂತ್ರಿಮಂಡಳ ಹೇಳಿದ್ದು, ಶಾಸನ ಸಭೆಯ ಅಧ್ಯಕ್ಷರೂ ಹಿಂದಿನ ಮುಖ್ಯ ಮಂತ್ರಿಗಳೂ ಬೇರೆ ಕೆಲವರೂ ಬಂಧಿಸಲ್ಪಟ್ಟರು. ತಮ್ಮ ಮಂತ್ರಿ ಮಂಡಳವನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಒಳಸಂಚಿನ ಆರೋಪವನ್ನು ತಮ್ಮ ವಿರೋಧಿಗಳ ಮೇಲೆ ಖುಹ್ರೋ ಹೊರಿಸಿರುವರೆಂದು ಹೇಳಲಾಗುತ್ತದೆ.

ಭಾರತದ ಬಜೆಟು

ಕೇಂದ್ರ ಸರಕಾರದ ಅರ್ಥ ಸಚಿವರಾದ ಶ್ರೀ ದೇಶಮುಖರು ಲೋಕ ಸಭೆಯಲ್ಲಿ ನಡೆದ ಮುಂಗಡ ಪತ್ರದ ಚರ್ಚೆಗೆ ಉತ್ತರ ಕೊಡುವಾಗ ಮಧ್ಯಮ ವರ್ಗದ ಮತ್ತು ಬಡತನದಿಂದ ಬಳಲುವ ಜನರ ಪ್ರಯೋಜನಕ್ಕಾಗಿ ಮಧ್ಯಮ ಹಾಗು ಒರಟು ಬಟ್ಟೆಗಳ ಮೇಲಿನ ಸುಂಕವನ್ನು ಒಂದಾಣೆಯಿಂದ ಅರ್ಧಾಣೆಗೆ ಇಳಿಸುವ ನಿರ್ಧಾರವನ್ನು ಪ್ರಕಟಿಸಿದರು; ಹಾಗೆಯೇ ಹೊಲಿಗೆ ಯಂತ್ರ ಮತ್ತದರ ಬಿಡಿಭಾಗಗಳ ಮೇಲಿನ ಅಬಕಾರಿ ಸುಂಕ ರದ್ದತಿಯ ನಿರ್ಣಯವನ್ನು ಸಾರಿದರು.

ಕಾಂಗ್ರೆಸಿನ ಶುದ್ಧೀಕರಣ

ಹೊಸ ದೆಹಲಿಯಲ್ಲಿ ಕಳೆದ ವಾರ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳ ಸಭೆಯೊಂದು ಜರಗಿತು. ನೆಹರುಗಳು ಸೇವಾ ಮನೋಭಾವನೆಯನ್ನು ಕಾಂಗ್ರೆಸಿಗರು ರೂಢಿಸಿಕೊಳ್ಳಬೇಕಾದ ಆಗತ್ಯವನ್ನು ಪ್ರತಿಪಾದಿಸಿ ಭಾಷಣವಿತ್ತರು. ಕಾಂಗ್ರೆಸಾಧ್ಯಕ್ಷರು ಶಿಸ್ತು ಮತ್ತು ತ್ಯಾಗದ ಆವಶ್ಯಕತೆಯನ್ನು ಎತ್ತಿಹೇಳಿದರು. ಸಮಾಜವಾದದ ಸಂದೇಶವನ್ನು ಮನೆಮನೆಗೆ ಮುಟ್ಟಿಸುವ ಮತ್ತು ಸಂಸ್ಥೆಯ ಶುದ್ಧೀಕರಣಕ್ಕಾಗಿ ಪ್ರಯತ್ನಿಸುವ ಕುರಿತು ಉತ್ಸಾಹದ ವಿನಂತಿಯನ್ನು ಅವರು ಮಾಡಿದರು.

ಅರಸು ತ್ರಿಭುವನರ ಮರಣ

ನೇಪಾಳದ ಅರಸು ತ್ರಿಭುವನರು ತಾವು ಕೆಲಸಮಯದಿಂದೀಚೆಗೆ ಬಳಲುತ್ತಿದ್ದ ಕಾಯಿಲೆಯ ಪರಿಣಾಮವಾಗಿ ಜ್ಯೂರಿಚ್ ನಗರದಲ್ಲಿ ನಿಧನಹೊಂದಿದರು. ಅವರು ನೇಪಾಳದಲ್ಲಿ ಪ್ರಜಾಪ್ರಭುತ್ವ ಪದ್ಧತಿಯ ಸರಕಾರವನ್ನು ಸ್ಥಾಪಿಸಿದ್ದರು. ಜನಾನುರಾಗಿಗಳಾಗಿದ್ದ ಈ ಅರಸರ ನಿಧನದ ಸಲುವಾಗಿ ಭಾರತ ಸರಕಾರವು ಶೋಕ ಸೂಚಿಸಿರುತ್ತದೆ. ನೇಪಾಳದಲ್ಲಿ ಯುವ ರಾಜ ಮಹೇಂದ್ರರನ್ನು ಪಟ್ಟಕ್ಕೆ ಏರಿಸಲಾಗಿರುತ್ತದೆ.

ಆಂಧ್ರದ ಮಂತ್ರಿಮಂಡಳ

ಹೊಸತಾಗಿ ರಚಿಸಲ್ಪಡಲಿರುವ ಆಂಧ್ರದ ಮಂತ್ರಿಮಂಡಳವು ಮಾರ್ಚಿ ೨೮ನೇ ತಾರೀಕಿನ ಹೊತ್ತಿಗೆ ಅಧಿಕಾರವನ್ನು ಸ್ವೀಕರಿಸಬಹುದು. ಮಂತ್ರಿಮಂಡಳ ರಚನೆಯ ವಿಷಯದಲ್ಲಿ ಶ್ರೀ ಗೋಪಾಲ ರೆಡ್ಡಿಗಳಿಗೂ ಶ್ರೀ ಸಂಜೀವ ರೆಡ್ಡಿಗಳಿಗೂ ಸಮಾಲೋಚನೆ ನಡೆಯುತ್ತಿದ್ದು, ಕೃಷಿಕರ ಲೋಕ ಪಕ್ಷಕ್ಕೆ ಎರಡು, ಪ್ರಜಾ ಪಕ್ಷಕ್ಕೆ ಒಂದು ಸ್ಥಾನಗಳು ಅದರಲ್ಲಿ ಸಿಗುತ್ತವೆಂದು ತಿಳಿದು ಬರುತ್ತದೆ.

ಉಡುಪಿ

ಕೈಮಗ್ಗ ಸಪ್ತಾಹ—ಉಡುಪಿ ನೇಕಾರ ಸಹಕಾರಿ ಸಂಘದ ಕಾರ್ಯಾಲಯದಲ್ಲಿ ತಾ 20 ರಲ್ಲು ದ್ವಿತೀಯ ಕೈಮಗ್ಗ ಸಪ್ತಾಹವನ್ನು ಮುನಿಸಿಪಲ್ ಕಮಿಶನರ್ ಶ್ರೀ ಗೋಪಾಲ ಮೆನೊನ್ನರು, ಉದ್ಘಾಟಿಸಿದರು. ಶ್ರೀ ಎ. ಜೆ. ಆಳ್ವೆಯವರು ಸಭಾಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಶ್ರೀ ಯು. ರಾಮರಾಯರು ಸ್ವಾಗತ ಮಾತುಗಳನ್ನಾಡಿದರು. ಶ್ರೀಗಳಾದ ಹನುಮಂತ ಸೆಟ್ಟಿಗಾರರ ಮತ್ತು ಶಿವರಾಯ ಬಾಳಿಗರು ಕಾಲೋಚಿತ ಮಾತುಗಳನ್ನಾಡಿದರು.

ಜಾನುವಾರು ಪ್ರದರ್ಶನ— ತೇರು ಬೀದಿಯಲ್ಲಿ ಪರ್ಯಾಯ ಫಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥ ಸ್ವಾಮಿಗಳವರು ಜಾನವಾರು ಪ್ರದರ್ಶನವನ್ನು ತಾ 20 ರಲ್ಲಿ ಮಧ್ಯಾಹ್ನ ಉದ್ಘಾಟಿಸಿದರು. ನಂತರ ಬಹುಮಾನ ವಿತರಣೆ ಸಭೆಯು ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರಾಮಚಂದ್ರ ಭಟ್ಟರು ಸ್ವಾಗತ ಮಾತುಗಳನ್ನಾಡಿ ಪ್ರದರ್ಶನಕ್ಕೆ ಧನದಾನವಿತ್ತವರ ಉಪಕಾರ ಸ್ಮರಣೆ ಮಾಡಿದರು. ಮುನಿಸಿಪಲ್ ಚೇರ್‌ಮೆನ್ ಡಾ! ಪಿ. ವಿ. ವ್ಯಾಸರಾಯರು ಉತ್ತಮ ಜಾನುವಾರುಗಳನ್ನು ಪ್ರದರ್ಶಿಸಿದವರಿಗೆ ಬಹುಮಾನ ವಿತರಣೆ ಮಾಡಿದರು. ಶ್ರೀಗಳಾದ ಎ. ಜೆ. ಆಳ್ವೆ ಮತ್ತು ಟ್ರೈನಿಂಗ್ ಶಾಲೆಯ ಹೆಡ್ಮಾಸ್ತರ್ ಶ್ರೀ ಯು. ಕೃಷ್ಣರಾಯರು ಭಾಷಣವಿತ್ತರು.

ಬಹುಮಾನ— ಸಿದ್ದಾಪುರದಲ್ಲಿ ಕರ್ನಾಟಕ ಸಂಘದವರ ಆಶ್ರಯದಲ್ಲಿ ನಡೆದ ಉತ್ತರ ಕನ್ನಡ ಜಿಲ್ಲಾ ಒಕ್ಕಲುತನ ಗ್ರಾಮೋದ್ಯೋಗ ಹಾಗೂ ಅಂಕೋಲೆಯಲ್ಲಿ ಸರ್ವೋದಯದವರು ಏರ್ಪಡಿಸಿದ ಶೈಕ್ಷಣಿಕ ಒಕ್ಕಲುತನ ಹಾಗೂ ಗ್ರಾಮೋದ್ಯೋಗ ಪ್ರದರ್ಶನಗಳೆರಡರಲ್ಲೂ ಉಡುಪಿಯ ಹಸ್ತಲಿಖಿತ 'ಚರಕಾ' ಪತ್ರಿಕೆಗೆ ಪ್ರಥಮ ಬಹುಮಾನ ದೊರೆತಿರುವುದಾಗಿ ತಿಳಿದು ಬರುತ್ತದೆ.

ಮಣಿಪಾಲ— ತಾ 11 ರಲ್ಲಿ ಮಣಿಪಾಲದಲ್ಲಿ ಕುಂದಾಪುರ ಸಬ್ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಉಡುಪಿ ಮುನಿಸಿಪಲ್ ಕೌನ್ಸಿಲ್ ಸದಸ್ಯೆ ಶ್ರೀಮತಿ ಮನೋರಮಾ ಎಸ್. ಆಚಾರ್ಯರು ಶಿಶು ಸಂಗೋಪನಾ ಕೇಂದ್ರವೊಂದನ್ನು ಉದ್ಘಾಟಿಸಿದರು. ಶ್ರೀಮತಿ ಪ್ರೇಮಾ ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಡಾ! ಟಿ. ಮಾಧವ ಪೈ, ಶ್ರೀಗಳಾದ ಟಿ. ರಮೇಶ ಪೈ, ಎ. ಜೆ. ಆಳ್ವೆ ಲಿಂಗಪ್ಪಯ್ಯ ಹೊವಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣಾ ನಂತರ ಸಮಾರಂಭ ಕೊನೆಗೊಂಡಿತು.

ಕುರುಕಾಲು— ಈ ಕೇಂದ್ರದ ಮಹಿಳೋದ್ಧಾರ ವ ಶಿಶುಸಂಗೋಪನಾ ಕಮಿಟಿಯ ದ್ವಿತೀಯ ಸಭೆಯು ತಾ 19 ರಲ್ಲು ಶ್ರೀಮತಿ ಸುನಂದ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿನಿ ಶ್ರೀಮತಿ ರಾಜೀವಿ ಸೆಟ್ಟಿರು ಗತ ಸಭೆಯವರದಿಯನ್ನೋದಿದರು. ಕಮಿಟಿಗೆ ಸಾರ್ವಜನಿಕರಿಂದ ಶಕ್ಯವಿದ್ದಷ್ಟು ಹಣ ಸಂಗ್ರಹಿಸಬೇಕೆಂದು ನಿರ್ಣಯವಾಯಿತು. ಈ ಸಮಿತಿಗೆ ಕುರುಕಾಲು, ಬೆಳ್ಳೆ, ಮತ್ತು ಇನ್ನಂಜೆ ಪಂಚಾಯತ ಬೋರ್ಡುಗಳು ರೂಪಾಯಿ 200 ಕ್ಕೆ ಮೇಲ್ಪಟ್ಟು ಇದೇ ಮಾರ್ಚಿಯೊಳಗೆ ಧನಸಹಾಯ ಕೊಡುವಂತೆ ತಿರುಗೊಮ್ಮೆ ವಿನಂತಿಸಲಾಯಿತು. ರೂ 25 ಧನ ಸಹಾಯವಿತ್ತ ಬೆಳ್ಳೆ ಕೆಳಮನೆ ಶ್ರೀಮತಿ ದೇವಕಿ ಅಮ್ಮನವರನ್ನು ಅಭಿನಂದಿಸಲಾಯಿತು. ಶಂಕರಪುರದಿಂದ 1¾ ಮೈಲು ದೂರಕ್ಕೆ ಪೂರ್ವಾಭಿಮುಖವಾಗಿ ನೀಡಿಕೊಂಡಿದ್ದು ಜಿಲ್ಲಾ ಬೋರ್ಡಿಗೊಳಪಟ್ಟ ಬೆಳ್ಳೆ, ಪಾಜಕಾ ಕ್ಷೇತ್ರ ರಸ್ತೆಯ ಬಳಿಯಲ್ಲಿ ಇರುವ ಕುಂಜಾರು ಗಿರಿ ದೇವಸ್ಥಾನ ಮಧ್ವಾಚಾರ್ಯರ ಪಾಜಕಾ ಕ್ಷೇತ್ರ ಇವುಗಳು ಪವಿತ್ರ ಸ್ಥಳಗಳಾಗಿದ್ದು ನೂರಾರು ಯಾತ್ರಿಕರೂ, ಸಾರ್ವಜನಿಕರೂ, ತಿರುಗಾಡುತ್ತಿರುವ ಮುಖ್ಯ ರಸ್ತೆಯಾಗಿರುವುದರಿಂದಲೂ, ರಸ್ತೆಯು ಬಸ್ಸು ಚಲಾವಣೆಗೆ ಉತ್ತಮ ರೀತಿಯಲ್ಲಿರುವುದರಿಂದಲೂ, ಉಡುಪಿ ಉದ್ಯಾವರದಿಂದ ಮಂಚಕಲ್ ವ ಕಾರ್ಕಳಕ್ಕೆ ದಿನಂಪ್ರತಿ ಹೋಗಿ ಬರುವ ಎಲ್ಲಾ ಬಸ್ಸುಗಳೂ ಬೆಳ್ಳೆ ಪಾಜಕಾ ಕ್ಷೇತ್ರ ಮಠದ ವರೆಗೆ ಬಂದು ಹೋಗುವಂತೆ [illegible] ನಿರ್ಣಯವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆಕೊಳ್ಳಬೇಕೆಂದಾಯಿತು.

ಪ್ರಾಚೀನ ತುಳುನಾಡು

(ಎಸ್. ಎಸ್. ಶೆಟ್ಟಿ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮುಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2–0–0.

ಭಾರತದ ಕರ್ಣ

"ಭಾರತದ ಕರ್ಣನು ದಿ! ಕಿಲ್ಲೆಯವರಿಗೆ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ! ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ...–6–0

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0–12–0.

(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ: ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಾರ್ಕಳ— ಸಮಾಜಕಲ್ಯಾಣ ಯೋಜನೆ ನಿಧಿಯಿಂದ ಸಹಾಯ ಪಡೆದು ಬಡಾವಣೆ ಹೊಂದಿದ ಸ್ಥಳೀಯ ಪಶು ಸ್ಪತ್ರೆಯನ್ನು ತಾ 1೯ ರಲ್ಲು ಬೆಳಗ್ಗೆ ಜಿಲ್ಲಾ ವೆಟರ್ನರಿ ಆಫೀಸರ್ ಡಾ। ಸ್ಯಾಮುವೇಲ್, ಅವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಪಿ ಮುಕುಂದ ಪ್ರಭುಗಳು ವಹಿಸಿದ್ದರು. ಶ್ರೀಗಳಾದ ಆರ್ ಹರಿ ಶೆಟ್ಟಿ ಮತ್ತು ಕೆ. ಗೋಪಾಲಕೃಷ್ಣ ಕಾಮತರು ಸಮಯೋಚಿತ ಮಾತುಗಳನ್ನಾಡಿದರು ಡಾ। ಮಂಗಲಾನಾಥರು ಧನ್ಯವಾದಗಳನ್ನಿತ್ತರು

ಕುಂಬಳೆ— ರಾಷ್ಟ್ರೀಯ ವಿಸ್ತರಣಾ ಸಹಕಾರಿ ಅಧಿಕಾರಿಯವರ ಪರಿಶ್ರಮದಿಂದಾಗಿ ಕಡಂಬಾರೆ ಎಂಬಲ್ಲಿ ಸಹಕಾರಿ ಸಂಘವೊಂದು ರೂಪು ಗೊಂಡಿತು.

ತೋಕೂರು ಜೋಗಟ್ಟೆ— ಇಲ್ಲಿಯ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡ ಪ್ರವೇಶ ಸಮಾರಂಭವು ತಾ 11 ರಲ್ಲು ಶ್ರೀ ಮಹಾಬಲ ಚೌಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವರ್ಧಂತ್ಯುತ್ಸವವು ಮಂಗಳೂರು ಶ್ರೇಣಿಯ ಇನ್ಸ್‌ಪೆಕ್ಟರ್ ಶ್ರೀಮತಿ ಎಮ್. ಫೆರ್ನಾಂಡೀಸ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು.

ಮಂಟ್ಪ— ಈ ಗ್ರಾಮದ ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನದ ಕಟ್ಟೋಣಗಳು ಮತ್ತು ಕೆರೆಯು ಬಹಳ ಜೀರ್ಣಾವಸ್ಥೆಯಲ್ಲಿದ್ದು ಅವುಗಳ ದುರುಸ್ತಿಯ ಬಗ್ಗೆ ಕನಿಷ್ಠ ರೂ 50, 000 ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಧರ್ಮಾಭಿಮಾನಿಗಳು ಯಥಾನು ಶಕ್ತಿ ಸಹಾಯಮಾಡಿ ಶ್ರೀ ಮಹಾವಿಷ್ಣುಮೂರ್ತಿ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಸದ್ರಿ ದೇವಸ್ಥಾನ ಆಡಳಿತೆ ಬೋರ್ಡಿನ ಅಧ್ಯಕ್ಷ ಶ್ರೀ ಎಮ್. ಎಸ್. ಅಧಿಕಾರಿಗಳ ವಿನಂತಿಯಿದೆ.

ಸುಳ್ಯ— ಸ್ಥಳೀಯ ಬೋರ್ಡು ಹಾ। ಎ। ಶಾಲೆಯ ವರ್ಧಂತ್ಯುತ್ಸವವು ತಾ 20ರಲ್ಲು ಶ್ರೀ ಎನ್. ಎನ್. ಸುವರ್ಣ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಗಿತು

ಮೂಲ್ಕಿ— ಮೂಲ್ಕಿ ಬೇಂಕಿನ ರಜತ ಮಹೋತ್ಸವವು ಇದೇ ತಾ. 25 ರಲ್ಲು ಸಂಜೆ ಮಂಗಳೂರಿನ ವಕೀಲ್ ಶ್ರೀ ಜಿ. ಸೋಮ ಶೇಖರ ರಾಯರ ಅಧ್ಯಕ್ಷತೆಯಲ್ಲಿ ಬೇಂಕಿನ ಕಾರ್ಯಾಲಯದಲ್ಲಿ ಜರಗಲಿರುವುದು

ಚಿತ್ರಾಪುರ— ನೀರೆ ಬೈಲೂರು ಹ್ಯಾಸ್ಕೂಲು ಕಟ್ಟಡದ ಸಹಾಯಾರ್ಥವಾಗಿ ಕಳೆದ ತಾ 26 ರಲ್ಲು ರಾತ್ರಿ ಬೈಲೂರು ಪೇಟೆಯಲ್ಲಿ 'ಕರ್ಣ ಪರ್ವ' ಎಂಬ ಯಕ್ಷಗಾನ ತಾಳ ಮದ್ದಳೆ ಕೂಟವು ಜಿಲ್ಲೆಯ ಪ್ರತಿಭಾವಂತ ಅರ್ಥ ದಾರಿಗಳ ಕೂಡುವಿಕೆಯಿಂದ ಜರಗಿತು. ಸಮಾರಂಭದ ಅಧ್ಯಕ್ಷತೆಯನ್ನು ಮಂಗಳೂರು ಮುನಿಸಿಪಲ್ ಚೆರ್‌ಮೆನ್ ಶ್ರೀ ಕೆ. ಸೂರ್ಯ ನಾರಾಯಣ ಅಡಿಗರು ವಹಿಸಿದ್ದರು. ಶ್ರೀಗಳಾದ ಕೆ ಮಹಾಬಲ ಸೋಂದ, ಎರಿಕಳ ಈಶ್ವರಪ್ಪ, ಎಡ್ವೊಕೇಟ್ ಕೆ. ಬಾಲಕೃಷ್ಣ, ರಾವ್, ಟಿ ಗೋಪಾಲಕೃಷ್ಣ ಭಟ್, ಡಿ. ಸೀತಾರಾಮಯ್ಯ, ಎಸ್ ಶ್ರೀನಿವಾಸ ಪಂಡಿತ, ಪಿ ಶಂಕರನಾರಾಯಣ ಶಾಸ್ತ್ರಿ, ಶಂಕರ ನಾರಾಯಣ ಸಾಮಕ, ಕೃಷ್ಣ ಮಲ್ಲಿ, ಎಸ್. ಗಣಪಯ್ಯ ಸೆಟ್ಟಿ ಮೊದಲಾದವರು ಪ್ರಮುಖ ಭಾಗವಹಿಸಿದ್ದರು.

ಹಿಲಿಯಾಣ— ಹಾಲಾಡಿ ಬೋರ್ಡು ಮತ್ತು ಕಕ್ಕುಂಜೆ ಬೋರ್ಡು ಎಲಿಮೆಂಟರಿ ಶಾಲಾ ಮಕ್ಕಳ ಆಟದ ಹಬ್ಬವು ತಾ 19 ರಲ್ಲು ಹಿಲಿಯಾಣ ಬೋರ್ಡು ಎಲಿಮೆಂಟರಿ ಶಾಲಾ ವಠಾರದಲ್ಲಿ ಶ್ರೀ ಎಚ್ ನಾರಾಯಣ ಸೂದರ ಅಧ್ಯಕ್ಷತೆಯಲ್ಲಿ ಜರಗಿತು

ಬೆಳ್ಳೂರು— ಕಾಸರಗೋಡು ತಾಲೂಕಿನ ಬೆಳ್ಳೂರು ಬೋರ್ಡು ಹಾ। ಎ। ಶಾಲೆಯ ಎಂಟನೇ ತರಗತಿಯ ಪ್ರಥಮ ವರ್ಷದ ವಿದ್ಯಾರ್ಥಿಗಳ ವಿಧಾಯ ಸಭೆಯು ತಾ 17ರಲ್ಲು ಶ್ರೀ ಎಮ್. ಎಸ್. ಕಡಂಬಳಿತ್ತಾಯರ ಅಧ್ಯಕ್ಷತೆಯಲ್ಲಿ ಜರಗಿತು

ಹೊಸಾಡು— ಕುಂದಾಪುರ ತಾಲೂಕು ಹೊಸಾಡು ಕೇಂದ್ರದಲ್ಲಿ ತಾ 14 ರಲ್ಲು ಹೊಸದಾಗಿ ಪಂಚಾಯತ ಬೋರ್ಡು ಸ್ಥಾಪಿತವಾಗಿ ಶ್ರೀ ಕೆ. ನಂದಪ್ಪ ಸೆಟ್ಟರು ಅಧ್ಯಕ್ಷರಾಗಿ ಆರಿಸಲ್ಪಟ್ಟರು ಶ್ರೀಗಳಾದ ಎಚ್ ಕಾಳಪ್ಪ ಸೆಟ್ಟಿ, ಕೊಸ್ಸರಿಗೆ ನಂದಪ್ಪಸೆಟ್ಟಿ, ಜೆ. ಕೃಷ್ಣ, ಉಪ್ಪಾರ ಮಂಜ, ಕೆ. ಸುಬ್ಬಯ್ಯ ಸೆಟ್ಟಿ, ಕೆ ನಾರಾಯಣ ಮತ್ತು ಆಸ್ನಾಲಿ ಅನಂತ, ಇವರುಗಳು ಮೆಂಬರರಾಗಿ ಅವಿರೋಧ ಆಯ್ಕೆ ಹೊಂದಿದರು.

ಬಂಟಕಲ್ಲು ಶಿರ್ವ— ಸ್ಥಳೀಯ ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ ವರ್ಷಾವಧಿ ನಡೆಯುವ ಉತ್ಸವವು ಎಪ್ರಿಲ್ ತಿಂಗಳ ತಾ 2 ನೇ ಶನಿವಾರ ಜರಗುವುದೆಂದೂ ಭಕ್ತ ವೃಂದದವರು ಬಂದು ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದೂ ಸಂಬಂಧಪಟ್ಟವರ ವಿನಂತಿ ಇದೆ.

ಫಲಿಮಾರು— ಸ್ಥಳೀಯ ಬೋರ್ಡು ಹಾ। ಎ। ಶಾಲೆಯಲ್ಲಿ ತಾ 12ರಂದು ಶ್ರೀ ಮಂಜುನಾಥಯ್ಯನವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಶ್ರೀ ಪ್ರಭಾಕರನವರು ಗಾಂಧೀಜಿಯವರ ತತ್ವೋಪದೇಶ ಮಾಡಿದರಲ್ಲದೆ ನೂಲುವ ಕ್ರಮವನ್ನೂ ಪ್ರದರ್ಶಿಸಿದರು. ಅಂದು ಸಂಜೆ ಸಾರ್ವಜನಿಕ ಸಭೆಯಲ್ಲಿಯೂ ಶ್ರೀ ಪ್ರಭಾಕರನವರು ಭೂಧಾನಯಜ್ಞ ಮೊದಲಾದ ವಿಷಯಗಳಲ್ಲಿ ಉಪನ್ಯಾಸ ವಿತ್ತರು.

ಬಾರಕೂರು— ಈ ಕೇಂದ್ರದ ಅಧ್ಯಾಪಕರ ಸಂಘದ ವಾರ್ಷಿಕ ದಿನಾಚರಣೆಯು ತಾ. 12ರಲ್ಲಿ ಉಡುಪಿ ಉತ್ತರ ಶ್ರೇಣಿಯ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ವಿವಿಧ ವಿನೋದಗಳಾಗಿ ಶ್ರೀ ಎನ್. ಲಕ್ಷ್ಮೀನಾರಾಯಣ ಹೆಬ್ಬಾರರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಶಂಕರನಾರಾಯಣ ಈ ಕೇಂದ್ರದ ಅಧ್ಯಾಪಕರ ಸಂಘದ ವರ್ಧಂತ್ಯುತ್ಸವವು ತಾ 12ರಲ್ಲು ಜಿಲ್ಲಾ ಬೋರ್ಡು ಸದಸ್ಯ ಶ್ರೀ ವೈ. ತೇಜಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕುಂದಾಪುರ ಸರ್ಕಲಿನ ಸೀನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಯು. ನರಸಿಂಹಯ್ಯನವರು ಸ್ವಾಗತ ಭಾಷಣ ಮಾಡಿದರು. ಜಿಲ್ಲಾ ಬೋರ್ಡು ಮೆಂಬರ್ ಶ್ರೀ ಎಮ್. ಮುತ್ಯಯ್ಯ ಹೆಗ್ಡೆ ಮೊದಲಾದವರು ಮಾತನಾಡಿದರು. ನಾಟಕ ಮೊದಲಾದ ಕಾರ್ಯಕ್ರಮಗಳಾದ ಬಳಿಕ ಶ್ರೀ ಎ. ರಾಜೀವ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಕೈಕಾರ— ಇಲ್ಲಿಯ ಬೋರ್ಡು ಶಾಲೆಯಲ್ಲಿ ಉಪಾಧ್ಯಾಯರ ಹಾಗೂ ಊರವರ ಪ್ರೋತ್ಸಾಹದಿಂದ ತೋಡಿದ ಬಾವಿಯ ಉಪಯೋಗವನ್ನು ತಾ 19ರಲ್ಲು ಪ್ರಾರಂಭಿಸುವ ನಿಮಿತ್ತ ಶಾರದಾ ಪೂಜೆಯು ಶ್ರೀ ಕೈಕಾರ ಪಕೀರಪ್ಪ ರೈಗಳ ನೇತೃತ್ವದಲ್ಲಿ ಜರಗಿತು. ಸಭಿಕರ ಭಾಷಣಾನಂತರ ಶಾಲಾ ಹೆಡ್ಮಾಸ್ತರ್ ಶ್ರೀ ಕೆ. ಬಾಬು ಪೂಜಾರಿಗಳು ಧನ್ಯವಾದಗಳನರ್ಪಿಸಿದರು.

ಪೆರ್ಡಾಲ— ಸ್ಥಳೀಯ ಮಹಾಜನ ಸಂಸ್ಕೃತ ಕಾಲೇಜಿನ ವಠಾರದಲ್ಲಿ ತಾ 16 ರಲ್ಲು ಡಾ। ಪಿ ಎನ್. ಭಟ್ಟರು ಜಾನುವಾರು ಪ್ರದರ್ಶನವನ್ನು ಉದ್ಘಾಟಿಸಿದರು.

ಮಂಗಲಪಾಡಿ— ಇಲ್ಲಿಯ ಸಹಕಾರಿ ಸ್ಟೋರ್ಸಿನ ವಠಾರದಲ್ಲಿ ತಾ 20 ರಲ್ಲು ಅಖಿಲ ಭಾರತ ಕೈಮಗ್ಗ ಸಪ್ತಾಹ ಸಂಬಂಧವಾದ ಸಭೆಯು ಡಾ। ಬಿ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಕೆ. ಪಿ. ನಾರಾಯಣ ರಾವ್, ಎಮ್ ಗೋಪಿಚಂದ ಕಾಮತ್, ಪಿ ಶಿವರಾವ್, ಎಮ್. ಕೆ. ಹಂದಾಸ್, ಅಬ್ದುಲ್ ರಹಿಮಾನ್, ನಾರಾಯಣ ರೈ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಕುಂಬಳೆ— ಕಾಸರಗೋಡು ತಾಲೂಕು ಬೋರ್ಡು ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ವಾರ್ಷಿಕ ಸಮ್ಮೇಲನವು ತಾ13 ರಲ್ಲು ಶ್ರೀ ಸಿ. ಸಿ. ನಾಯರರ ಅಧ್ಯಕ್ಷತೆಯಲ್ಲಿ ಹೊಸ ದುರ್ಗದಲ್ಲಿ ಸೇರಿತು. ಶ್ರೀ ಎ. ಸಿ. ಕಣ್ಣನ್ ನಾಯರರು ಸ್ವಾಗತ ಭಾಷಣ ಮಾಡಿದರು. ಶ್ರೀ ಸಿ ಆರ್. ಕುಂಞಿರಾಮನ್ ನಂಬಿಯಾರರು ಉದ್ಘಾಟಿಸಿದರು. ಶ್ರೀಗಳಾದ ಎಸ್. ರಾಧಾಕೃಷ್ಣನ್, ಸುಂದರ ವಡಿವೇಲು, ಕೆ ಎಸ್. ಎನ್ ಅಡಿಗ, ಡಾ। ಕೆ. ಕೆ. ಹೆಗ್ಡೆ ಮೊದಲಾದವರು ಕಳುಹಿಸಿದ ಸಂದೇಶಗಳು ಓದಲಾದುವು ಶ್ರೀ ಕೆ. ರಾಮನ್, ಅವರು ವರದಿಯನ್ನೋದಿದರು. ಶ್ರೀಗಳಾದ ಎಮ್. ರಾಮಪ್ಪ, ಕೆ. ರಾಘವನ್, ವೆಂಕಟಕೃಷ್ಣರಾವ್ ಮೊದಲಾದವರು ಭಾಷಣವಿತ್ತ ಬಳಿಕ ಹಲವು ಕೇಳಿಕೆಗಳನ್ನೊಳಗೊಂಡ ನಿರ್ಣಯಗಳಾದುವು.

ಬಳಿಕ ಸಂಘದ ಹೊಸ ವರ್ಷದ ಅಧಿಕಾರಿಗಳಾಗಿ ಶ್ರೀಗಳಾದ ಪಿ. ಶಿವರಾಮ ರಾವ್ (ಅಧ್ಯಕ್ಷ), ಕೆ ದೇವಪ್ಪಯ್ಯ (ಉಪಾಧ್ಯಕ್ಷ) ಎನ್. ಅಬ್ದುಲ್ಲಾ (ಪ್ರಧಾನಕಾರ್ಯದರ್ಶಿ) ರವರು ಆರಿಸಲ್ಪಟ್ಟರು ಶ್ರೀ ಪಿ. ಚಂದನರು ಧನ್ಯವಾದಗಳನ್ನರ್ಪಿಸಿದರು.

ಭಾರತದ ಗುರುಕುಲ

(ಕೆ. ಪಿ ವೆಂಕಪ್ಪ ಶೆಟ್ಟರ ಯಕ್ಷಗಾನ ಪ್ರಸಂಗ)

ಬೆಲೆ. ೦—೬—೦

ನವಭಾರತ ಪುಸ್ತಕ ಭಂಡಾರ ಉಡುಪಿ

ಪ್ರಜಾರಾಜ್ಯ ದಿನದ ಪ್ರಶಸ್ತಿ

ಈಚೆಗೆ ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರು ಸಾರ್ವಜನಿಕ ಸೇವಕರು, ಶಿಕ್ಷಣತಜ್ಞರು, ವಿಜ್ಞಾನಿಗಳು, ಕಲಾವಿದರು, ತತ್ವವೇತ್ತರು, ತಂತ್ರಕುಶಲರು ಮುಂತಾದವರಿಗೆ ಪ್ರಶಸ್ತಿಯನ್ನು ಕೊಡುವ ಸಮಾರಂಭವನ್ನು ಹೊಸದಿಲ್ಲಿಯಲ್ಲಿ ಜರಗಿಸಿದ್ದರು. ಪ್ರಥಮ ವರ್ಗದ ಪದ್ಮ ವಿಭೂಷಣ ಪ್ರಶಸ್ತಿಯನ್ನು ಡಾ। ಸತ್ಯೇಂದ್ರನಾಥ ಬೋಸರು ಪಡೆಯುತ್ತಿರುವುದನ್ನು ಮೇಲಿನ ಚಿತ್ರ ತೋರಿಸುತ್ತದೆ. ಡಾ. ಬೋಸರು ಭೌತವಿಜ್ಞಾನ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಿದ್ದು ಸಂಖ್ಯಾ ವಿಜ್ಞಾನದಲ್ಲಿ ಬೋಸ್-ಐನ್‌ಸ್ಟೀನ್ ತತ್ವದ ಮೂಲಪುರುಷರೆಂದು ಜಗತ್ತಿನಾದ್ಯಂತ ಅವರನ್ನು ಕೊಂಡಾಡಲಾಗುತ್ತದೆ.

ಕನ್ನಡ ಚಿತ್ರ

ಕನ್ಯಾದಾನ (ಕನ್ನಡ)

ಹರಿಣಿ, ಇಂದುಶೇಖರ್, ರೇವತಿ, ಬಾಲಕೃಷ್ಣ ಮೊದಲಾದವರು.

ತಾ. 24—3—55ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಮಿಟೆಡ್, ಉಡುಪಿ.

-ಕನ್ನಡದಲ್ಲಿ ಹೊಸ ಬಗೆಯ ಗ್ರಂಥ-

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಬೆಲೆ. ಒಂದೂವರೆ ರೂಪಾಯಿ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ವಿವಾಹ ಸಮಾರಂಭ– ಶಿವಮೊಗ್ಗಾದ ಮಂಡಿ ಸಾಹುಕಾರ್ ಹೊಸೂರಿ ಶ್ರೀ ರಾಮಾ ಶಾಸ್ತ್ರಿಗಳ ತೃತೀಯ ಪುತ್ರ ಶ್ರೀ ಎಚ್. ಆರ್. ಗೋಪಾಲ ಕೃಷ್ಣ ಶಾಸ್ತ್ರಿಗಳು ಮಂಗಳೂರಿನ ಮಣ್ಣಗುಡ್ಡೆ ಶ್ರೀ ಕೆ. ಯು. ವೆಂಕಟ್ರಾಯರ ಪುತ್ರಿ ಸೌ| ಶಕುಂತಲಾ ದೇವಿಯನ್ನು ಇದೇ ತಾ 7 ರಲ್ಲು ವಿವಾಹವಾದರು. ವಧುವಿನ ಗೃಹದಲ್ಲಿ ವಿಜೃಂಭಣೆಯಿಂದ ಜರಗಿದ ಈ ಶುಭ ಸಮಾರಂಭಕ್ಕೆ ಶಿವಮೊಗ್ಗಾ ಹಾಗೂ ಮಂಗಳೂರಿನ ನಾಗರೀಕರನೇಕರು ಬಂದಿದ್ದರು. ನೂತನ ದಂಪತಿಗಳಿಗೆ ಶುಭಾಶಯಗಳು.

ಆರೋಗ್ಯ ಸಹಕಾರಿ ಸಂಘ— ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬೇಂಕಿನ ಉಪ್ಪರಿಗೆಯಲ್ಲಿ ತಾ. 20ರಲ್ಲಿ ಸಂಜೆ ಮಂಗಳೂರಿನ ಪ್ರಮುಖ ನಾಗರಿಕರ ಮತ್ತು ಡಾಕ್ಟರುಗಳ ಸಭೆಯು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ ಮಂಗಳೂರು ಆರೋಗ್ಯ ಸಹಕಾರೀ ಸಂಘವೊಂದನ್ನು ಸ್ಥಾಪಿಸಬೇಕೆನ್ನುವ ನಿರ್ಧಾರವಾಯಿತು. ಸಂಘದ ಅಧಿಕೃತ ಬಂಡವಾಳವು ಪ್ರಕೃತ ಒಂದು ಲಕ್ಷ ರೂಪಾಯಿಯಾಗಿದ್ದು ಪತ್ತು ರೂಪಾಯಿ ಹತ್ತು ಸಾವಿರ ಪಾಲುಗಳಾಗಿ ವಿಂಗಡಿಸಲಾಗಿದೆ. ಸಂಘದ ಕರಡು ನಿಯಮನಿಬಂಧನೆಗಳನ್ನು ತಯಾರಿಸಿ ರಿಜಿಸ್ಟ್ರ್ ಮಾಡುವ ಕಾರ್ಯ ಸಿದ್ಧತೆಗೊಳಿಸಲು 21ಮಂದಿ ಇರುವ ಕಮಿಟಿಯೊಂದು ರಚಿಸಲ್ಪಟ್ಟಿತು.

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಕೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ಸಂಧ್ಯಾದೀಪ	1	0
13	ದೇಶಭಕ್ತ	1	4
14	ಪ್ರೇಮ ವಿಜಯ	1	4
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	4
20	ನೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜವಿಾನ್ದಾರ	1	8
33	ಬಾಳಿನ ಬೆಡಗು	1	4
34	ಟೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.

ಕಿರಿಯರ ಪ್ರಪಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಕೈಮಗ್ಗ ವಾರ ಪ್ರಾರಂಭ– ಮಂಗಳೂರಲ್ಲಿ ಕೈಮಗ್ಗ ವಾರವನ್ನು ತಾ. 20ರಂದು ಬೆಳಿಗ್ಗೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಕುಂ. ಇಾನ್ಮುದಾರವರು ಉದ್ಘಾಟಿಸಿದರು. ಮುನಿಸಿಪಲ್ ಚೇರ್ಮೇನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಭಾಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಸರ್ಕಲಿನ ಡೆಪ್ಯುಟಿ ರಿಜಿಸ್ಟ್ರಾರ್ ಶ್ರೀ ಎಮ್. ಕೃಷ್ಣಯ್ಯ ಸೆಟ್ಟರು ಸ್ವಾಗತಭಾಷಣ ಮಾಡುತ್ತಾ ಸಪ್ತಾಹ ಆಚರಣೆಯಲ್ಲಿ ಸರಕಾರದ ಧ್ಯೇಯಗಳೇನಿವೆ ಎಂಬುದನ್ನು ತಿಳಿಸಿದರು. ಶ್ರೀಗಳಾದ ಕೆ. ಕೆ. ಸೆಟ್ಟಿ, ಪಿ. ಆರ್. ರಂಗನಾಥ ಪೂಂಜ, ಎಚ್. ಬಾಸ್ಕರರಾವ್, ಜೆ. ಬಿ. ಡಿ'ಸೋಜ ಮೊದಲಾದವರು ಮಾತನಾಡಿದರು. ಕೈಮಗ್ಗ ಬಟ್ಟೆಗಳ ಪ್ರದರ್ಶನವನ್ನು ಜಿಲ್ಲಾ ಕಲೆಕ್ಟರರು ಉದ್ಘಾಟಿಸಿದರು.

ಭಾಷಣ— ಮಂಗಳೂರು ಇಂಜಿನಿಯರಿಂಗ್ ಎಸೋಸಿಯೇಶನಿನ ಆಶ್ರಯದಲ್ಲಿ ತಾ 19 ರಲ್ಲು ಸಂಜೆ ಹಾಸನ ಮಂಗಳೂರು ರೈಲ್ವೆ ಸರ್ವೇಯ ಇಂಜಿನಿಯರ್ ಶ್ರೀ ಭಾಸ್ಕರನ್ ನಾಯರರು 'ವಿಮಾನ ಸರ್ವೆ' ಎಂಬ ವಿಷಯದಲ್ಲಿ ಭಾಷಣವಿತ್ತರು. ಶ್ರೀ ವಿ. ಎಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದ್ದರು. 'ನನ್ನ ರೈಲ್ವೆ' ಎಂಬ ಚಲ ಚಿತ್ರ ಪ್ರದರ್ಶನ ಜರಗಿದ ಬಳಿಕ ಸಭಾಂತ್ಯವಾಯಿತು.

ಭಾವ ಚಿತ್ರಗಳ ಅನಾವರಣ–ಬೇಂಕ್ ಒಫ್ ಮಂಗಳೂರು ಲಿಮಿಟೆಡ್ ಇದರ ಬೋರ್ಡಿನ ಅಧ್ಯಕ್ಷರುಗಳಾಗಿದ್ದ ದಿವಂಗತ ನಗರ್ ವಾಸುದೇವ ಶೆಣೈ, ದಿವಂಗತ ಕಸ್ತೂರಿ ವಾಸುದೇವ ಪೈ ಮತ್ತು ದಿವಂಗತ ಡಾ| ಕೆ. ಆರ್. ಕಿಣಿಯರ ಭಾವಚಿತ್ರಗಳ ಅನಾವರಣ ಸಮಾರಂಭವನ್ನು ತಾ 20 ರಲ್ಲಿ ವಿಜಯ ಬೇಂಕಿನ ಸುಪರಿಂಟೆಂಡೆಂಟರಾದ ಶ್ರೀ ಓ. ಜಯರಾಮ ಸೆಟ್ಟರು ನೆರವೇರಿಸಿದರು. ಡಾ| ಎಸ್. ಉಪೇಂದ್ರ ಪೈಗಳು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಲಕ್ಷ್ಮೀನಾರಾಯಣ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಮಜೂರರ ಸಭೆಯು ತಾ 13 ರಲ್ಲು ಕೇಂದ್ರ ಮೈದಾನಿನಲ್ಲಿ ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಮೋನಪ್ಪ ಸೆಟ್ಟರು ಮುನಿಸಿಪಲ್ ಮಜೂರರ ಸ್ಥಿತಿಗತಿಗಳ ಕುರಿತು ಮಾತನಾಡಿದರು. ಕೆಲಸಗಾರರಿಗೆ ಹಲವು ತಿಂಗಳುಗಳಿಂದೀಚೆಗೆ ಕೊಡದ ಸಾಬೂನನ್ನು ಕೂಡಲೇ ಕೊಡುವಂತಾಗಬೇಕು ಮೊದಲಾದ ನಿರ್ಣಯಗಳಾದುವು.

ಜಿಲ್ಲಾ ಲೇಖಕರ ಸಹಕಾರಿ ಸಂಘ ಸ್ಥಾಪನೆಯ ಯೋಜನೆಯು. ತಾ 12 ರಲ್ಲು ಶ್ರೀ ಆರ್. ಕೆ. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾಹಿತಿ ಹಾಗೂ ಪತ್ರಿಕೋದ್ಯೋಗಿಗಳ ಸಭೆಯಲ್ಲಿ ಮಾನ್ಯವಾಯಿತು. ಸಂಘದ ನಿಬಂಧನೆಗಳ ಕರಡಿನ ಕುರಿತು ಚರ್ಚೆ ನಡೆಯಿತು. ಪಾಲು ಭಂಡವಳದ ಕನಿಷ್ಠ ಮಿತಿಯು ರೂಪಾಯಿ ಹತ್ತು ಇರತಕ್ಕದ್ದು ಎಂದು ನಿರ್ಬಂಧನೆಯಲ್ಲಿ ಸೂಚಿಸಲಾಯಿತು. ಒಂದು ಪಾಲು ಪಡೆದ ಸದಸ್ಯರು ಸಂಘದ ಡೈರೆಕ್ಟರನಾಗಲೂ ಅರ್ಹತೆಯುಳ್ಳವನಾಗುವನು.

ತೆರಿಗೆದಾರರ ಸಭೆ— ಮಂಗಳೂರು ಪುರಜನರ ಸಂಘದ ಆಶ್ರಯದಲ್ಲಿ ತಾ 13 ರಲ್ಲು ಕಂಕನಾಡಿಯಲ್ಲಿ ಶ್ರೀ ಎಸ್. ಎಸ್. ಸುವರ್ಣ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ತೆರಿಗೆದಾರರ ಸಂಕಷ್ಟಗಳ ನಿವಾರಣಾ ಕುರಿತು ವಿಚಾರ ವಿನಿಮಯ ಸಭೆ ಜರಗಿತು. ಶ್ರೀಗಳಾದ ಬಿ. ಮೋಹನ ರಾವ್, ಕೆ. ಆರ್ ಆಚಾರ್, ಎ. ಕೆ. ಸೇವಕ್, ಸಿ. ಎಲ್. ಬೋಚೆ ಮೊದಲಾದವರು ಮಾತನಾಡಿದ ಬಳಿಕ ನಿರ್ಣಯಗಳಾದುವು.

ಅಣುಬಾಂಬು ನಿಷೇಧ ಸಭೆ— ಮಂಗಳೂರು ಶಾಂತಿ ಸಮಿತಿಯ ಅಧ್ಯಕ್ಷ ಶ್ರೀ ಜೆ. ಸೋಮ ಶೇಖರ ರಾಯರ ಅಧ್ಯಕ್ಷತೆಯಲ್ಲಿ ತಾ. 20ರಲ್ಲಿ ಸಂಜೆ ಸಾರ್ವಜನಿಕ ಸಭೆಯೊಂದು ಜರಗಿ ಅಣು ಸಾತ್ವಿಕ ಹೈಡ್ರೊಜನ್ ಬಾಂಬುಗಳ ಯುದ್ಧ ತಯಾರಿಯನ್ನು ವಿರೋಧಿಸುವ ಭಾಷಣಗಳಾದುವು. ಡಾ| ಎಮ್. ಎಸ್. ಶಾಸ್ತ್ರಿಗಳು ಸ್ವಾಗತಮಾತುಗಳನ್ನಾಡಿದರು. ಶ್ರೀ ಸಿ. ಎಮ್. ಎಸ್. ಮೂರ್ತಿಯವರು ಧನ್ಯವಾದಗಳನ್ನರ್ಪಿಸಿದರು.

ಮದ್ರಾಸು ಸರಕಾರದ ಗ್ರಂಥ ಸ್ಪರ್ಧೆಯ ಫಲಿತಾಂಶ

1953—54ನೆ ವರ್ಷದ ಸ್ಪರ್ಧೆಯಲ್ಲಿ ಈ ಕೆಳಗಿನ ಪುಸ್ತಕಗಳಿಗೆ ಬಹುಮಾನ ಕೊಡಬಹುದೆಂದು ಮದ್ರಾಸಿನ ಕರ್ನಾಟಕ ಸಂಘವು ಮಾಡಿದ ತೀರ್ಮಾನವನ್ನು ಮದ್ರಾಸು ಸರಕಾರ ಒಪ್ಪಿಕೊಂಡಿದೆ.

1 ಸಣ್ಣ ಕಥೆಗಳು: "ಹುಚ್ಚುಮುನಸೀಫ್ ಮತ್ತು ಇತರ ಕತೆಗಳು ಶ್ರೀ ಬಾಗ್ಲೋಡಿ ದೇವರಾಯ್ ಕಿನ್ನಿಕಂಬಳ, ದ. ಕ. ಬಹುಮಾನ ರೂಪಾಯಿ 500.

2 ಶಿಶುಸಾಹಿತ್ಯ; "ಮಕ್ಕಳ ಮುದ್ದು" "ಕಿರಿಯರ ಕಿನ್ನರಿ" "ಚಿಣ್ಣರ ಹಾಡುಗಳು" ಶ್ರೀ ಪಿ. ಸೀತಾರಾಮ ಭಟ್ಟ ಮಿತ್ತಬೈಲು, ದ. ಕ. ಬಹುಮಾನ–ರೂಪಾಯಿ 500

3 ನಾಟಕ: (ಅ) " ದಶಕವಿಜಯ " (ಕೈಬರಹ) ಶ್ರೀ ಎಮ್. ಶಂಕರನಾರಾಯಣ ಭಟ್ಟ ನಂದಿಗುಡ್ಡೆರಸ್ತೆ, ಅತ್ತಾವರ ಮಂಗಳೂರು ಬಹುಮಾನ ರೂಪಾಯಿ 250

(ಬ) " ಮಹಾತ್ಯಾಗಿ ಪುರಂದರದಾಸ " (ಕೈಬರಹ) ಶ್ರೀ ಪಿ. ಕೆ. ನಾರಾಯಣ ವಿದ್ವಾನ್ ಮಂಗಳೂರು. ಬಹುಮಾನ ರೂಪಾಯಿ 250

ಕರ್ನಾಟಕ ಫ್ರೀ ನೈಟ್ ಹೈಸ್ಕೂಲ್

ಬೊಂಬಾಯಿ – ಬಂಟರಯಾನೆ ನಾಡವರ ಸಂಘದ ಆಶ್ರಯದಲ್ಲಿ ನಡೆವ ಬರುವ ಕರ್ನಾಟಕ ಫ್ರೀನೈಟ್ ಹೈಸ್ಕೂಲಿನ 31ನೆ ವಾರ್ಷಿಕೋತ್ಸವವು ಇದೇ ತಾ. 27ರಲ್ಲಿ ಡಾ| ಎ. ವಿ ಬಾಳಿಗರ ಅಧ್ಯಕ್ಷತೆಯಲ್ಲಿ ಶ್ರೀ ಕವಾಸ್ಜಿ ಜಹಾಂಗೀರ್ ಪಬ್ಲಿಕ್ ಹಾಲಿನಲ್ಲಿ ಜರಗಲಿರುವುದೆಂದೂ ಸರ್ವರೂ ಬಂದು ಪ್ರೋತ್ಸಾಹಿಸಬೇಕೆಂದೂ [illegible] ಶ್ರೀ ಆರ್. ಎಂ. ಶೆಟ್ಟರು ವಿನಂತಿಸುತ್ತಾರೆ.

ನರೆತ ಕೂದಲಿನಿಂದ ಪಾರಾಗಿರಿ

ತಾತ್ಕಾಲಿಕ ಉಪಶಮನವನ್ನು ಕೊಡುವ ರಂಗುಗಳಿಗೆ ಮರುಳಾಗಬೇಡಿರಿ. ಆಯುರ್ವೇದ ರೀತ್ಯಾ ದೇಶೀಯ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ 'ವಿಶ್ವ ಕಲ್ಯಾಣ ಹೇರ್ ಆಯಿಲ್' ಅಕಾಲಿಕ ನರೆತ ಕೂದಲನ್ನು ವಿಸ್ಮಯಕರ ರೀತಿಯಲ್ಲಿ ಸ್ವಾಭಾವಿಕ ಕಪ್ಪು ಬಣ್ಣಕ್ಕೆ ತರುವುದಲ್ಲದೆ 60 ವರ್ಷ ಪ್ರಾಯದ ತನಕ ಕಪ್ಪಾಗಿಯೇ ಉಳಿಸುವುದು. ತಲೆನೋವು, ಮಾನಸಿಕ ದುರ್ಬಲತೆ, ದೃಷ್ಟಿ ದೋಷ ಮೊದಲಾದುವುಗಳಿಗೂ ಈ ತೈಲವು ಅತ್ಯುಪಯುಕ್ತವಾದುದು.

ಕೆಲವೇ ನರೆತ ಕೂದಲುಗಳಿಗಾದರೆ ರೂ. 3–8–0 ಬೆಲೆಯ ಒಂದು ಸೀಸೆಯನ್ನು ಕೊಂಡುಕೊಳ್ಳಿರಿ. 3 ಸೀಸೆಗೆ ರೂ. 9/–. ಉತ್ತಮ ತರದ್ದಕ್ಕೆ ಸೀಸೆಗೆ ರೂ. 5/–. 3 ಸೀಸೆಗಳಿಗಾದರೆ ರೂ. 12/–.

P. D. GUPTA & CO.,
(No. 5) P. O. Begu Sarai
(Monghyr)

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

THE VIJAYA BANK Ltd. COONDAPOOR.
ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮಗುಪಾವತಿ ಮಾಡುವರೆ ರಿಜಿಸ್ಟ್ರ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸ್ಲು, ವ, ಬಡ್ಡಿಯನ್ನು ಈ ತನಕವೂ ಕೊಡದೆ ಬಾಕಿಮಾಡಿ ಕೊಂಡಿರುವುದರಿಂದಲೂ ಇನ್ನು ಕೆಲವರಿಗೆ ಬಿಟ್ಟ ರಿಜಿಸ್ತ್ರ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ಮಾರ್ಚ್ ತಿಂಗಳ ತಾರೀಕು 30ನೇ ಬುಧವಾರ ಅಪರಾಹ್ನ ಘಂಟೆ 2ಕ್ಕೆ, ಯಾ ಬೇಂಕಿಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ನಡಿಸಲಾದೀತು ಎಂಬುವನ್ನು ಈ ಮೂಲಕ ಸರ್ವರಿಗೂ ತಿಳಿಯಪಡಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 31–12–54ರ ವರೆಗೆ ಬೇಂಕಿಗೆ ಬರತಕ್ಕ ಮೊಬಲಗು.
784/52	ಕೆ. ನಾರಾಯಣ ಹೆಬ್ಬಾರ, ನಾಗಪ್ಪ ಹೆಬ್ಬಾರರ ಮಗ, ನಾಡಾ ಗ್ರಾಮದ ಕರುವಿನ ಹಿತ್ಲು, ಪೋಸ್ಟ್ ಗುಡ್ಡೆಯಂಗಡಿ. ದ. ಕ.	42—11—0
110/53	ವಾಣಿಬೈಲು ಶೀನಪ್ಪ ಶೆಟ್ಟಿ ಸೂದಯ್ಯ ಸೆಟ್ಟರ ಅಳಿಯ ಕರ್ಕುಂಜೆಗ್ರಾಮ. ಪೋಸ್ಟ್ ಕರ್ಕುಂಜ ದ.ಕ.	148—12—0
220/53	ಆತ್ರಾಡಿ ಶೀನಪ್ಪ ಶೆಟ್ಟಿ. ಚೆನ್ನಯ್ಯ ಶೆಟ್ಟರ ಅಳಿಯ, ವಂಡ್ಸೆ ಗ್ರಾಮ, ವಂಡ್ಸೆ ದ. ಕ.	203—7—0
225/53	ವಿಠಲ ಶೆಟ್ಟಿ, ಮಂಜಯ್ಯ ಶೆಟ್ಟರ ಅಳಿಯ, ಹಾಲಾಡಿ ಮನೆ ಕೆರಾಡಿ ಗ್ರಾಮ, ಪೋಸ್ಟ್ ಕೊಲ್ಲೂರು ದ.ಕ.	28—1—0
358/53	ಶೀನಪ್ಪ ಶೆಟ್ಟಿ ಅಣ್ಣಪ್ಪ ಶೆಟ್ರ ಅಳಿಯ, ಕಾವ್ರಾಡಿಮನೆ, ವಂಡ್ಸೆ ಗ್ರಾಮ, ಪೋಸ್ಟ್ ವಂಡ್ಸೆ ದ. ಕ.	174—4—0
374/53	ಎಚ್ ಸದಾಶಿವ ಶೆಟ್ಟಿ. ಹಿಲಿಯಾಣ ದೊಡ್ಡಮನೆ ರಾಮಣ್ಣ ಸೆಟ್ಟರ ಅಳಿಯ, ಪೋಸ್ಟ್ ಹಾಲಾಡಿ. ದ ಕ.	323—2—0
447/53	ಎ. ನಾರಾಯಣ ಶೆಟ್ಟಿ, ನಂದ್ಯಪ್ಪ ಶೆಟ್ಟರ ಮಗ, ವಕೀಲರ ಗುಮಾಸ್ತರು, ಕುಂದಾಪುರ ದ. ಕ.	58—13—0
551/53	ಶೀನಪ್ಪ ಶೆಟ್ಟಿ, ನಂದ್ಯಪ್ಪ ಶೆಟ್ಟರ ಅಳಿಯ, ಆನಗಳ್ಳಿ ಗ್ರಾಮದ ಬೆಡ್ಡೆಕುದ್ರು, ಪೋಸ್ಟ್ ಆನಗಳ್ಳಿ. ದ. ಕ.	42—6—0
691/53	ಫಿಲಿಪ್ ಡಿ' ಸೋಜ, ಬೆಸ್ಟಿಯನ್ ಡಿ' ಸೋಜರ ಮಗ, ಎಟೆಂಡರ್, ಕೆಥೊಲಿಕ್ ಬೇಂಕ್ ಲಿ. ಕುಂದಾಪುರ, ದ. ಕ.	74—11—0
741/53	ಮಹಾಬಲ ಶೆಟ್ಟಿ, ಬೈಲ್‌ಮನೆ ತೇಜಪ್ಪ ಶೆಟ್ಟರ ಮಗ, ದನ್ನಾಡಿಮನೆ, ಬೇಳೂರು ಗ್ರಾಮ, ಪೋಸ್ಟ್ ಕೋಟ ದ ಕ.	72—0—0
665/53	ಬಿ. ಹಿರಿಯಣ್ಣ ಶೆಟ್ಟಿ, ರಾಮಣ್ಣ ಶೆಟ್ಟರ ಅಳಿಯ, ದೇವಲ್ಕುಂದ ಗ್ರಾಮ, ಪೋಸ್ಟ್ ಹಕ್ಲಾಡಿ. ದ. ಕ.	56—14—0

Office of the Bank
Coondapoor.
18—3—1955.

B. R. Adyanthaya.
Agent, Coondapur.

ಇನ್ನೊಂದು ತೈಲ ಶುದ್ಧೀಕರಣ ಗೃಹ

ಟ್ರಾಂಬೆಯಲ್ಲಿ ರಾಷ್ಟ್ರದ ಪ್ರಗತಿಯ ಮತ್ತೊಂದು ಹೆಜ್ಜೆ

ಮುಂಬಯಿಯ ಹತ್ತು ಮೈಲು ಈಶಾನ್ಯದಲ್ಲಿರುವ ಟ್ರಾಂಬೇಯನ್ನು ಭಾರತದ ಪ್ರಗತಿಯ ಮೈಲುಗಲ್ಲುಗಳಲ್ಲಿ ಒಂದಾಗಿ ಪರಿಗಣಿಸಬಹುದು. ಸಿಂದ್ರಿ, ಚಿತ್ತರಂಜನ, ಭಾಕ್ರಾನಾಂಗಲ ಯೋಜನೆಗಳಂತೆ ಟ್ರಾಂಬೆಯಲ್ಲಿ ತೈಲ ಶುದ್ಧೀಕರಣ ಗೃಹಗಳನ್ನು ಸ್ಥಾಪಿಸುವ ಯೋಜನೆಯೂ ನಮ್ಮ ಮುನ್ನಡೆಯ ಪ್ರತೀಕ. ಟ್ರಾಂಬೆಯಲ್ಲಿ ಸ್ಟಾಂಡರ್ಡ್ ವಾಕ್ಯೂಮ್ ಕಂಪೆನಿಯ ತೈಲ ಶುದ್ಧೀಕರಣ ಗೃಹ ಈಗ ಕೆಲವು ತಿಂಗಳುಗಳಿಂದ ಕೆಲಸಮಾಡುತ್ತಿದೆ; ಮೊನ್ನೆ ೧೭ ನೇ ತಾರೀಕಿನಂದು ಬರ್ಮಾಶೆಲ್ ಕಂಪೆನಿಯವರ ತೈಲ ಶುದ್ಧೀಕರಣ ಗೃಹದ ಔಪಚಾರಿಕ ಉದ್ಘಾಟನೆಯೂ ನಡೆಯಿತು. ಇದೇ ಜನವರಿಯಿಂದ ಉತ್ಪಾದನೆ ಪ್ರಾರಂಭಿಸಿರುವ ಬರ್ಮಾಶೆಲ್ಲಿನ ಶುದ್ಧೀಕರಣ ಗೃಹವು ಭಾರತದಲ್ಲಿಯೇ ದೊಡ್ಡದಿದ್ದು, ವರ್ಷಕ್ಕೆ ೨೦ ಲಕ್ಷ ಟನ್ನುಗಳಷ್ಟು ಎಣ್ಣೆಯನ್ನು ಬಳಸಿಕೊಳ್ಳುತ್ತದೆ.

ಮೊನ್ನೆ ಮೊನ್ನೆಯವರೆಗೆ ನಮ್ಮ ದೇಶದ ಎಣ್ಣೆಯ ಅವಶ್ಯಕತೆಯಲ್ಲಿ ನೂರಕ್ಕೆ ತೊಂಭತ್ತಕ್ಕಿಂತಲೂ ಹೆಚ್ಚನ್ನು ಹೊರಗಿನಿಂದ ತರಿಸಿ ಪೂರೈಸುತ್ತಿದ್ದರು. ಈಗಲೂ ನಮ್ಮಲ್ಲಿ ಎಣ್ಣೆಯನ್ನು ಉತ್ಪಾದಿಸುವ ಕೇಂದ್ರವಿರುವುದು ಒಂದು ಮಾತ್ರ– ಅಸ್ಸಾಮಿನ ದಿಗ್ಬೋಯಿಯಲ್ಲಿ ನೆಲೆಸಿರುವ ಈ ಕೇಂದ್ರ ನಮಗೆ ಬೇಕಾದುದರಲ್ಲಿ 7% ಉತ್ಪಾದಿಸುತ್ತದೆ. ಹೊರಗಿನಿಂದ ಶುದ್ಧಮಾಡಿದ ಎಣ್ಣೆಯನ್ನೇ ತರಿಸುವ ಬದಲು, ಕಚ್ಚಾ ಎಣ್ಣೆಯನ್ನು ತರಿಸಿ, ಇಲ್ಲಿಯೇ ಶುದ್ಧೀಕರಿಸಿ, ವಿತರಿಸಿದರೆ ಹಲವು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಅಧಿಕ ಲಾಭವಾದೀತೆಂದು ಸರಕಾರಕ್ಕೆ ತೋರಿದುದರಿಂದ ೧೯೫೧ರಲ್ಲಿ ಅದು ಭಾರತದಲ್ಲಿ ಶುದ್ಧೀಕರಣ ಗೃಹಗಳನ್ನು ಸ್ಥಾಪಿಸುವುದಕ್ಕೆ ವಿದೇಶಗಳ ಕಂಪೆನಿಗಳನ್ನು ಆಹ್ವಾನಿಸಿತು. ಇದರ ಫಲವಾಗಿ ಟ್ರಾಂಬೆಯಲ್ಲಿ ಎರಡು ಕಂಪೆನಿಗಳು ಈಗಾಗಲೇ ತಲೆ ಎತ್ತಿವೆಯಲ್ಲದೆ ಇಷ್ಟರಲ್ಲಿಯೇ ವಿಶಾಖಪಟ್ಟಣದಲ್ಲಿ ಕಾಲ್ಟೆಕ್ಸ್ ಕಂಪೆನಿಯ ಕಾರ್ಖಾನೆಯೂ ತೆರೆಯಲ್ಪಡುತ್ತದೆ. ಇವುಗಳಿಂದ ಐದರಲ್ಲಿ ನಾಲ್ಕಂಶದಷ್ಟು ಎಣ್ಣೆಯ ಪೂರೈಕೆಯಾಗುವುದೆಂಬೂ ತತ್ಪರಿಣಾಮವಾಗಿ ಅತ್ತಕಡೆ ಒಂಭತ್ತರಷ್ಟು ನಾವು ಎಣ್ಣೆಯ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುವೆವೆಂದೂ ತಿಳಿದು ಬರುತ್ತದೆ.

ಬರ್ಮಾ ಶೆಲ್ಲಿನವರ ಕಾರ್ಖಾನೆಯನ್ನು ಕಟ್ಟುವುದಕ್ಕೆ ೩೦ ಕೋಟಿ ರೂಪಾಯಿ ವೆಚ್ಚವಾಯಿತು; ೪೫೦ ಎಕ್ರೆ ವಿಸ್ತೀರ್ಣದ ಜಾಗದಲ್ಲಿ ಒಂದೇ ಸಲಕ್ಕೆ ೧೪೦೦೦ ಜನರ ವರೆಗೂ ಕೆಲಸಮಾಡಿ ನಿಶ್ಚಿತ ವೇಳೆಗಿಂತ ಒಂದು ವರ್ಷ ಮುಂಚಿತವಾಗಿಯೇ ಶುದ್ಧೀಕರಣ ಗೃಹವನ್ನೂ ಪ್ರಯೋಗಾಲಯವನ್ನೂ ಕಾರ್ಯಾಲಯವನ್ನೂ ಆಸ್ಪತ್ರೆಯನ್ನೂ ವಸತಿ ಗೃಹಗಳನ್ನೂ ಕಟ್ಟಲಾಯಿತು. ೬೧೦೦೦ ಟನ್ನುಗಳಷ್ಟು ಉಕ್ಕು, ೪೦೦೦೦ ಘನ ಗಜ ಕಾಂಕ್ರೀಟು, ೧೬೦ ಮೈಲುಗಳ ಉದ್ದದ ಗಳಿಗಳು, ೨೦೦ ಮೈಲು ಉದ್ದದ ಕೇಬಲುಗಳು– ಇವನ್ನು ಕಟ್ಟಡದ ರಚನೆಯಲ್ಲಿ ಉಪಯೋಗಿಸಲಾಯಿತು. ಚಿಮಿಣಿಎಣ್ಣೆ, ಮೋಟಾರೆಣ್ಣೆ, ಡೀಸೆಲೆಣ್ಣೆ, ಕುಲುಮೆ ಎಣ್ಣೆಯನ್ನಲ್ಲದೆ ಬಿಟುಮೆನನ್ನೂ ಇಲ್ಲಿ ಉತ್ಪಾದಿಸಲಾಗುತ್ತದೆ. ಇರಾನಿನಿಂದ ಕಚ್ಚಾ ಎಣ್ಣೆಯನ್ನು ಇಲ್ಲಿಗೆ ತರಲಾಗುತ್ತಿದ್ದು ಬುಚರ್ ಐಲೆಂಡಿನಲ್ಲಿ ಎಣ್ಣೆ ತುಂಬಿದ ಟ್ಯಾಂಕರುಗಳು ನಿಲ್ಲುವುದಕ್ಕೆ ಯೋಗ್ಯ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ.

ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ। ರಾಧಾಕೃಷ್ಣನ್ನರು ಶುದ್ಧೀಕರಣ ಗೃಹವನ್ನು ವಿದ್ಯುಚ್ಛಕ್ತಿಯ ಗುಂಡಿಯನ್ನೊತ್ತಿ ಬೆಳಗಿಸುವ ಮೂಲಕ ಉದ್ಘಾಟಿಸುತ್ತಾ "ರಾಷ್ಟ್ರದ ಕೈಗಾರಿಕೆಯ ಕ್ಷೇತ್ರದ ಮುನ್ನಡೆಯ ಸೂಚಕ" ಎಂಬುದಾಗಿ ಈ ಉದ್ಯಮವನ್ನು ಪ್ರಶಂಸಿಸಿದರು. ಸರಕಾರವು ರಾಷ್ಟ್ರದಲ್ಲಿ ಸಂಪತ್ತು ಹೆಚ್ಚ ಬೇಕು; ಉದ್ಯೋಗದ ಅವಕಾಶಗಳು ಹೆಚ್ಚಬೇಕು, ಜನರ ಸುಖ ಸೌಕರ್ಯಗಳು ಹೆಚ್ಚಬೇಕು ಎಂಬ ದೃಷ್ಟಿಯಿಂದ ಕೆಲಸ ಮಾಡುತ್ತಿರುವಾಗ ಬರ್ಮಾ ಶೆಲ್ಲಿನ ಶುದ್ಧೀಕರಣ ಗೃಹದಂಥ ಉದ್ಯಮವು ಅದಕ್ಕೆ ನೆರವಾಗುತ್ತಿರುವುದು ಸಂತೋಷ ಎಂದವರು ಹೇಳಿದರು. ಉದ್ದೇಶದಲ್ಲಿ ಪ್ರಾಮಾಣಿಕತೆಯನ್ನು, ಸಾಮಾಜಿಕ ನ್ಯಾಯದ ದೃಷ್ಟಿಯನ್ನೂ ಸಾಮಾನ್ಯ ಪ್ರಜೆಯ ಕ್ಷೇಮವನ್ನೂ ಇಟ್ಟುಕೊಂಡು ಕೆಲಸಮಾಡುವ ಖಾಸಗಿ ಉದ್ಯಮಗಳಿಗೆ ಸರಕಾರ ಪ್ರೋತ್ಸಾಹ ಕೊಡುತ್ತಲೇ ಹೋಗುತ್ತದೆ ಎಂದವರು ಸಾರಿದರು.

ನಿಮಗೆ ಯಾವುದೇ ತರದ ಉದ್ಯೋಗ ಬೇಕೆಂದಿದ್ದರೆ ಅಥವಾ ವ್ಯಾಪಾರ ನಡೆಸಬೇಕೆಂದಿದ್ದರೆ ಕೂಡಲೇ ಬರೆಯಿರಿ:

ಟಪ್ಪಾಲುಪೆಟ್ಟಿಗೆ ನಂಬ್ರ 1868
ಬೊಂಬಾಯಿ—1

ಅಧ್ಯಾಪಕರಿಗೆ ನಿವೃತ್ತಿ ವೇತನ

ಯೋಜನೆಯಂತೆ ಲಾಭ ಹೊಂದುವವರ ಅರ್ಹತೆ

ಮದ್ರಾಸು ಸರಕಾರವು ಶಿಕ್ಷಣದ ವಿಷಯದಲ್ಲಿ ಬಹಳ ಉದಾರವಾಗಿ ಈ ವರ್ಷ ವರ್ತಿಸಿದೆ ಎಂದರೆ ಅತಿಶಯೋಕ್ತಿಯಾಗದು. ಮುಂಗಡಪತ್ರವನ್ನು ಮುಂಡಿಸುವ ಕಾಲಕ್ಕೆ ಅರ್ಥಸಚಿವರೂ ಶಿಕ್ಷಣ ಮಂತ್ರಿಗಳೂ ಆದ ಶ್ರೀ ಸಿ. ಸುಬ್ರಹ್ಮಣ್ಯಮರು ತಿಂಗಳಿಗೆ ೧೦೦ ರೂಪಾಯಿಗಿಂತ ಕಡಿಮೆ ವರಮಾನದ ಎಲ್ಲ ನಾಗರಿಕರ ಮಕ್ಕಳ ಮಾಧ್ಯಮಿಕ ಶಿಕ್ಷಣದ ವರೆಗಿನ ವೆಚ್ಚವನ್ನು ಸರಕಾರ ಹೊರುವುದಾಗಿ ಸಾರಿದರು. ಆಳಿದವಾರ ಶಿಕ್ಷಣ ಖಾತೆಯ ಬೇಡಿಕೆಯನ್ನು ಮುಂಡಿಸಿ, ನಡೆದ ಚರ್ಚೆಗೆ ಉತ್ತರ ಕೊಡುವಾಗ, ಪ್ರಾಥಮಿಕ ಶಾಲೆಯ ಅಧ್ಯಾಪಕರಿಗೂ ಅವರಷ್ಟೇ ತೊಂದರೆಯಿಂದಿರುವ ಬೇರೆ ಕೆಲವು ವರ್ಗದ ಉಪಾಧ್ಯಾಯರಿಗೂ ವೇತನದ ಕಾಲಂಶವನ್ನು ಪೆನ್ಶನಾಗಿ ಕೊಡುವ ನಿಶ್ಚಯವನ್ನು ಪ್ರಕಟಿಸಿದರು.

ಮೊದಲೇ ಹೇಳಿದಂತೆ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದು ಇದೇ ಎಪ್ರೀಲು ತಿಂಗಳ ೧ ನೇ ತಾರೀಕಿನಿಂದ ನಿವೃತ್ತಿಹೊಂದುವ ಎಲ್ಲ ಅಧ್ಯಾಪಕರಿಗೂ ಈ ಯೋಜನೆ ಅನ್ವಯಿಸುತ್ತದೆ; ಅಲ್ಲದೆ ಮಾಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡುವ ದ್ವಿತೀಯ ಶ್ರೇಣಿಯ ಪಂಡಿತರು, ಸಂಗೀತ ಶಿಕ್ಷಕರು, ಚಿತ್ರ ಕಲೆಯ ಅಧ್ಯಾಪಕರು, ವೃತ್ತಿ ಶಿಕ್ಷಕರು, ಮತ್ತು ದ್ವಿತೀಯ ಶ್ರೇಣಿಯ ವ್ಯಾಯಾಮ ಶಿಕ್ಷಕರುಗಳಿಗೆ ಸಹ ಇದು ಅನ್ವಯವಾಗುತ್ತದೆ. ಪ್ರಾಥಮಿಕ ಶಾಲೆಗಳಲ್ಲಿರುವ ಮಾಧ್ಯಮಿಕ ಶ್ರೇಣಿಯ ಅಧ್ಯಾಪಕರೂ ಯೋಜನೆಯ ಪ್ರಯೋಜನ ಪಡೆಯುವರು. ಸರಕಾರದಿಂದ ಸಹಾಯ ಧನ ಪಡೆಯುವ ಶಾಲೆಗಳು, ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲೆಗಳು ಎಂಬಿತ್ಯಾದಿಯಾದ ಯಾವ ಭೇದವೂ ಇಲ್ಲದೆ ಯೋಜನೆಯ ಲಾಭವನ್ನು ಮುಟ್ಟಿಸಲಾಗುತ್ತದೆ.

ಸರಕಾರದವರು ಈಗ ಕೊಡಲಾಗುತ್ತಿರುವ ಕ್ಷೇಮನಿಧಿಯ ಪ್ರಯೋಜನದ ಬದಲು ವಿರಾಮ ವೇತನವನ್ನು ಕೊಡಬಹುದೆಂದು ಮೊದಲು ಆಲೋಚಿಸಿದ್ದರು. ಆದರೆ ಹಾಗೆ ಮಾಡುವುದರಿಂದ ಕ್ಷೇಮನಿಧಿಯ ವ್ಯವಸ್ಥೆಯ ಪ್ರಕಾರ ಸರಕಾರದಿಂದ ದೊರೆಯುವ ಸುಮಾರು ೫೦೦ ರೂಪಾಯಿಗಳ ಬದಲು ಬಹಳ ಕಡಿಮೆ ಪ್ರಯೋಜನ ಅಧ್ಯಾಪಕರಿಗೆ ಲಭಿಸುವುದೆಂದು ವ್ಯಕ್ತವಾದುದರಿಂದ ವಿರಾಮ ವೇತನವನ್ನು ಹೆಚ್ಚಿಗೆ ಪ್ರಯೋಜನದ ರೂಪದಲ್ಲಿಯೇ ಕೊಡುವುದು ಲೇಸೆಂದೂ ಇದರಿಂದ ಅಧ್ಯಾಪಕ ವರ್ಗದಲ್ಲಿ ಹೆಚ್ಚಿನ ತೃಪ್ತಿಯಾದೀತೆಂದೂ ಸರಕಾರ ಭಾವಿಸಿತು. ಸಾಮಾನ್ಯವಾಗಿ ಸ್ಥಳೀಯ ಸಂಸ್ಥೆಗಳ ಶಾಲೆಗಳಲ್ಲಿ ೫೫ನೇ ವರ್ಷಪ್ರಾಯಕ್ಕೆ ಮತ್ತು ಸರಕಾರದಿಂದ ಸಹಾಯಧನ ಪಡೆಯುವ ಬೇರೆ ರೀತಿಯ ಶಾಲೆಗಳಲ್ಲಿ ೬೦ನೇ ವರ್ಷಪ್ರಾಯಕ್ಕೆ ಅಧ್ಯಾಪಕರ ನಿವೃತ್ತಿಯಾಗುತ್ತದೆ. ಪ್ರತಿವರ್ಷ ನೂರರಲ್ಲಿ ಒಬ್ಬ ಅಧ್ಯಾಪಕನು ನಿವೃತ್ತಿಯಾಗುವನೆಂದೂ ಸಾಮಾನ್ಯವಾಗಿ ಅಧ್ಯಾಪಕನೊಬ್ಬನು ೬೩ನೇ ವರ್ಷಪ್ರಾಯದ ವರೆಗೆ ಬದುಕುವನೆಂದೂ ಲೆಕ್ಕಕ್ಕೆ ಹಿಡಿದಿದ್ದು ಇದರಂತೆ ೧೯೫೫-೫೬ನೇ ವರ್ಷಕ್ಕೆ ೧,೧೮,೩೫೦ ರೂಪಾಯಿಗಳ ವೆಚ್ಚವೂ ಇಪ್ಪತ್ತು ವರ್ಷಗಳ ಬಳಿಕ ವರ್ಷಕ್ಕೆ ೪೫೬೩೫೦ ರೂಪಾಯಿಗಳ ವೆಚ್ಚವೂ ಪೆನ್ಶನಿಗಾಗಿ ಬರಬಹುದೆಂದು ಸರಕಾರದ ಅಂದಾಜು.

ಇದಲ್ಲದೆ ಸರಕಾರವು ಐದು ವರ್ಷಗಳ ವರೆಗೆ ಕೆಲಸ ಮಾಡಿದ ೩೦ ವರ್ಷ ಪ್ರಾಯದ ಮಿತಿಯೊಳಗಿನ ಎಲ್ಲ ಅಧ್ಯಾಪಕರಿಗೂ ಕಡ್ಡಾಯವಾಗಿ ವಿಮೆ ಇಳಿಸುವ ಯೋಜನೆಯೊಂದರ ಆಲೋಚನೆಯನ್ನು ಈಗ ಮಾಡುತ್ತದೆ. ಅಧ್ಯಾಪಕರು ತಮ್ಮ ಕ್ಷೇಮ ನಿಧಿಯಿಂದ ವಿಮೆಯ ಕಂತುಗಳ ಹಣವನ್ನು ಕಟ್ಟಬಹುದೆಂದು ನಿಯಮವಿದ್ದರೂ ಹಾಗೆ ಮಾಡಿದರೆ, ತಮ್ಮ ಆಪತ್ಕಾಲದಲ್ಲಿ ದೊರಕಬಹುದಾದ ಹಣವೇ ಇಲ್ಲದಂತಾದೀತೆಂಬ ಭಯದಿಂದ ಇದರ ಪ್ರಯೋಜನವನ್ನು ಯಾರೂ ಪಡೆದುಕೊಳ್ಳುವಂತೆ ಕಾಣುವುದಿಲ್ಲ. ಅದಲ್ಲದೆ ತಾತ್ಕಾಲಿಕವಾಗಿ ಕೆಲಸವಿಲ್ಲದೆ ದಿನಗಳೆಯಬೇಕಾಗಿ ಬಂದ ಸಂದರ್ಭದಲ್ಲಿ ವಿಮೆಯ ಕಂತಿನ ಹಣವನ್ನು ಕಟ್ಟಲಿಕ್ಕೆ ಕ್ಷೇಮ ನಿಧಿಯಲ್ಲಿ ಏನೂ ಉಳಿಯಲಾರದೆಂದೂ ಆಗ ವಿಮೆಯು ನಿಷ್ಫಲವಾಗುವ ಸಂಭವವಿದೆಯೆಂದೂ ಅಧ್ಯಾಪಕರು ಹೆದರಿರುವಂತೆ ತೋರುತ್ತದೆ.

ಆದರೆ ವಿಮೆ ಇಳಿಸುವುದರಿಂದ ಆಕಸ್ಮಿಕ ಮರಣದ ಪ್ರಸಂಗಗಳಲ್ಲಿ ಕುಟುಂಬದವರಿಗೆ ವಿಶೇಷ ನೆರವಾದಂತಾಗುವುದೆಂಬುದನ್ನೂ ಐದು ವರ್ಷಗಳ ವರೆಗೆ ಕೆಲಸವನ್ನು ಮಾಡಿ ಸಾಕಷ್ಟು ಹಣವನ್ನು ಕ್ಷೇಮ ನಿಧಿಯಲ್ಲಿ ಕಾಯ್ದಿಟ್ಟರೆ ಒಮ್ಮೆ ಕೆಲವು ತಿಂಗಳು ಕೆಲಸವಿಲ್ಲದೆ ಹೋದರೂ ವಿಮೆಯ ಕಂತನ್ನು ಕಟ್ಟಲು ಕಷ್ಟವಾಗದೆಂಬುದನ್ನೂ ಮನಗಂಡರೆ ಸರಕಾರ ಈ ದಿಸೆಯಲ್ಲಿ ಕೈಗೊಳ್ಳಬಹುದಾದ ಕಡ್ಡಾಯಕ್ರಮ ಪ್ರಯೋಜನಕಾರಿಯಾದುದೆಂದು ಹೊಳೆಯುತ್ತದೆ.

೩ನೇ ಆವೃತ್ತಿ. ಸಿದ್ಧವಾಗಿದೆ! ಬೆಲೆ: ೨ ೮-೦ ಬೇಗ ತರಿಸಿರಿ!

ಶ್ರೀ. ಎನ್. ಕೆ. ಕುಲಕರ್ಣಿಕೃತ

ಕನ್ನಡ ಸಾಹಿತ್ಯವಾಹಿನಿ

M. A., B. A., ವಿದ್ಯಾರ್ಥಿಗಳಿಗೂ ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಇದು Reference ಗ್ರಂಥವಾಗಿದೆ! ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಜಾಣ ಪರೀಕ್ಷೆಗೆ Text Bookವನ್ನಾಗಿ ಮಾಡಿದ್ದಾರೆ!

ಒಂದೇ ಪ್ರತಿ ಬೇಕಾದವರು 3—8—0 M. O. ಕಳಿಸಿರಿ.

ವ್ಯಾಪಾರಿಗಳಿಗೆ ಯೋಗ್ಯ ಕಮೀಶನ್ನು.

ಪ್ಯಾಟಿ ಶ್ಯಾಮರಾಯರು

ಸಂಪಾದಕರು: ವಿಜಯ ಗ್ರಂಥಮಾಲೆ, ಬೆಳಗಾಂವಿ.

ಒಡೆಯರು: ಕಥಾಕುಂಜ ಗ್ರಂಥ ಭಾಂಡಾರ, ಬೆಳಗಾಂವಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಹೊಸ ಪುಸ್ತಕ

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಸಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಆಕ್ಷೇಪಣೆ ಮನೆಯವರ ಕಾಟ ಕೊಟ್ಟದ ಮರ್ಮವನ್ನೂ, ನಿಶ್ಚಿತಿಸಿದ್ದ 25 ಸಾವಿರ ವರದಕ್ಷಿಣೆ, ಸಿಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ :0—10—0

ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಪ್ರೆಸ್, ಉಡುಪಿ.

ಮಂಗಳೂರು

ವಿವಾಹ ಸಮಾರಂಭ— ಶಿವಮೊಗ್ಗಾದ ಮಂಡಿ ಸಾಹುಕಾರ್ ಹೊಸೂರಿ ಶ್ರೀ ರಾಮಾ ಶಾಸ್ತ್ರಿಗಳ ತೃತೀಯ ಪುತ್ರ ಶ್ರೀ ಎಚ್. ಆರ್. ಗೋಪಾಲ ಕೃಷ್ಣ ಶಾಸ್ತ್ರಿಗಳು ಮಂಗಳೂರಿನ ಮಣ್ಣಗುಡ್ಡೆ ಶ್ರೀ ಕೆ ಯು. ವೆಂಕಟ್ರಾಯರ ಪುತ್ರಿ ಸೌ। ಶಕುಂತಲಾ ದೇವಿಯನ್ನು ಇದೇ ತಾ 7 ರಲ್ಲು ವಿವಾಹವಾದರು. ವಧುವಿನ ಗೃಹದಲ್ಲಿ ವಿಜೃಂಭಣೆಯಿಂದ ಜರಗಿದ ಈ ಶುಭ ಸಮಾರಂಭಕ್ಕೆ ಶಿವಮೊಗ್ಗಾ ಹಾಗೂ ಮಂಗಳೂರಿನ ನಾಗರಿಕರನೇಕರು ಬಂದಿದ್ದರು. ನೂತನ ದಂಪತಿಗಳಿಗೆ ಶುಭಾಶಯಗಳು.

ಆರೋಗ್ಯ ಸಹಕಾರಿ ಸಂಘ— ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬೇಂಕಿನ ಉಪ್ಪರಿಗೆಯಲ್ಲಿ ತಾ. 20ರಲ್ಲಿ ಸಂಜೆ ಮಂಗಳೂರಿನ ಪ್ರಮುಖ ನಾಗರಿಕರ ಮತ್ತು ಡಾಕ್ಟರುಗಳ ಸಭೆಯು ಶ್ರೀ ಬಿ. ವೈಕುಂಠ ಬಾಳಿಗ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ ಮಂಗಳೂರು ಆರೋಗ್ಯ ಸಹಕಾರೀ ಸಂಘವೊಂದನ್ನು ಸ್ಥಾಪಿಸಬೇಕೆನ್ನುವ ನಿರ್ಧಾರವಾಯಿತು. ಸಂಘದ ಅಧಿಕೃತ ಬಂಡವಾಳವು ಪ್ರಕೃತ ಒಂದು ಲಕ್ಷ ರೂಪಾಯಿಯಾಗಿದ್ದು ಹತ್ತು ರೂಪಾಯಿ ಹತ್ತು ಸಾವಿರ ಪಾಲುಗಳಾಗಿ ವಿಂಗಡಿಸಲಾಗಿದೆ. ಸಂಘದ ಕರಡು ನಿಯಮನಿಬಂಧನೆಗಳನ್ನು ತಯಾರಿಸಿ ರಿಜಿಸ್ಟ್ರು ಮಾಡುವ ಕಾರ್ಯ ಸಿದ್ಧತೆಗೊಳಿಸಲು 21 ಮಂದಿ ಇರುವ ಕಮಿಟಿಯೊಂದು ರಚಿಸಲ್ಪಟ್ಟಿತು.

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾದ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	1	0
13	ದೇಶಭಕ್ತ	1	4
14	ಪ್ರೇಮ ವಿಜಯ	1	4
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	4
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜವಿವಾಸ್ವಾರೆ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ಸಣ್ಣ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.

ಕಿರಿಯರ ಪ್ರಪಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಕೈಮಗ್ಗ ವಾರ ಪ್ರಾರಂಭ— ಮಂಗಳೂರಲ್ಲಿ ಕೈಮಗ್ಗ ವಾರವನ್ನು ತಾ. 20ರಂದು ಬೆಳಿಗ್ಗೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಕುಂಜನ್ನ್ನಾಯರವರು ಉದ್ಘಾಟಿಸಿದರು. ಮುನಿಸಿಪಲ್ ಚೇರ್‌ಮೇನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಭಾಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ಸರ್ಕಲಿನ ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ ಎಮ್. ಕೃಷ್ಣಯ್ಯ ಸೆಟ್ಟರು ಸ್ವಾಗತಭಾಷಣ ಮಾಡುತ್ತಾ ಸಪ್ತಾಹ ಆಚರಣೆಯಲ್ಲಿ ಸರಕಾರದ ಧ್ಯೇಯಗಳೇನಿವೆ ಎಂಬುದನ್ನು ತಿಳಿಸಿದರು. ಶ್ರೀಗಳಾದ ಕೆ. ಕೆ. ಸೆಟ್ಟಿ, ಪಿ. ಆರ್. ರಂಗನಾಥ ಪೂಂಜ, ಎಚ್. ಬಾಸ್ಕರರಾವ್, ಜೆ. ಬಿ. ಡಿ'ಸೋಜ ಮೊದಲಾದವರು ಮಾತನಾಡಿದರು. ಕೈಮಗ್ಗ ಬಟ್ಟೆಗಳ ಪ್ರದರ್ಶನವನ್ನು ಜಿಲ್ಲಾ ಕಲೆಕ್ಟರರು ಉದ್ಘಾಟಿಸಿದರು.

ಭಾಷಣ— ಮಂಗಳೂರು ಇಂಜಿನಿಯರಿಂಗ್ ಎಸೋಸಿಯೇಶನಿನ ಆಶ್ರಯದಲ್ಲಿ ತಾ 19 ರಲ್ಲು ಸಂಜೆ ಹಾಸನ ಮಂಗಳೂರು ರೈಲ್ವೆ ಸರ್ವೆಯ ಇಂಜಿನಿಯರ್ ಶ್ರೀ ಭಾಸ್ಕರನ್ ನಾಯರರು 'ವಿಮಾನ ಸರ್ವೆ' ಎಂಬ ವಿಷಯದಲ್ಲಿ ಭಾಷಣವಿತ್ತರು. ಶ್ರೀ ವಿ. ಎಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದ್ದರು. 'ನನ್ನ ರೈಲ್ವೆ' ಎಂಬ ಚಲ ಚಿತ್ರ ಪ್ರದರ್ಶನ ಜರಗಿದ ಬಳಿಕ ಸಭಾಂತ್ಯವಾಯಿತು.

ಭಾವ ಚಿತ್ರಗಳ ಅನಾವರಣ— ಬೇಂಕ್ ಒಫ್ ಮಂಗಳೂರು ಲಿಮಿಟೆಡ್ ಇದರ ಬೋರ್ಡಿನ ಅಧ್ಯಕ್ಷರುಗಳಾಗಿದ್ದ ದಿವಂಗತ ನಗರ್ ವಾಸುದೇವ ಶೆಣೈ, ದಿವಂಗತ ಕಸ್ತೂರಿ ವಾಸುದೇವ ಪೈ ಮತ್ತು ದಿವಂಗತ ಡಾ। ಕೆ. ಆರ್. ಕಿಣಿಯರ ಭಾವಚಿತ್ರಗಳ ಅನಾವರಣ ಸಮಾರಂಭವನ್ನು ತಾ 20 ರಲ್ಲಿ ವಿಜಯ ಬೇಂಕಿನ ಸುಪರಿಂಟೆಂಡೆಂಟರಾದ ಶ್ರೀ ಪಿ. ಜಯರಾಮ ಸೆಟ್ಟರು ನೆರವೇರಿಸಿದರು. ಡಾ। ಎಚ್. ಉಪೇಂದ್ರ ಪೈಗಳು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಲಕ್ಷ್ಮೀನಾರಾಯಣ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಮಜೂರರ ಸಭೆಯು ತಾ 13 ರಲ್ಲು ಕೇಂದ್ರ ಮೈದಾನಿನಲ್ಲಿ ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವೋಸಪ್ಪ ಸೆಟ್ಟರು ಮುನಿಸಿಪಲ್ ಮಜೂರರ ಸ್ಥಿತಿಗತಿಗಳ ಕುರಿತು ಮಾತನಾಡಿದರು. ಕೆಲಸಗಾರರಿಗೆ ಹಲವು ತಿಂಗಳುಗಳಿಂದೀಚೆಗೆ ಕೊಡದ ಸಾಬೂನನ್ನು ಕೂಡಲೇ ಕೊಡುವಂತಾಗಬೇಕು ಮೊದಲಾದ ನಿರ್ಣಯಗಳಾದುವು.

ಜಿಲ್ಲಾ ಲೇಖಕರ ಸಹಕಾರಿ ಸಂಘ ಸ್ಥಾಪನೆಯ ಯೋಜನೆಯು— ತಾ 12 ರಲ್ಲಿ ಶ್ರೀ ಆರ್. ಕೆ. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾಹಿತಿ ಹಾಗೂ ಪತ್ರಿಕೋದ್ಯೋಗಿಗಳ ಸಭೆಯಲ್ಲಿ ಮಾನ್ಯವಾಯಿತು. ಸಂಘದ ನಿಬಂಧನೆಗಳ ಕರಡಿನ ಕುರಿತು ಚರ್ಚೆ ನಡೆಯಿತು. ಪಾಲು ಭಂಡವಳದ ಕನಿಷ್ಠ ಮಿತಿಯು ರೂಪಾಯಿ ಹತ್ತು ಇರತಕ್ಕದ್ದು ಎಂದು ನಿರ್ಬಂಧನೆಯಲ್ಲಿ ಸೂಚಿಸಲಾಯಿತು. ಒಂದು ಪಾಲು ಪಡೆದ ಸದಸ್ಯರು ಸಂಘದ ಡೈರೆಕ್ಟರನಾಗಲೂ ಅರ್ಹತೆಯುಳ್ಳವನಾಗುವನು.

ತೆರಿಗೆದಾರರ ಸಭೆ— ಮಂಗಳೂರು ಪುರಜನರ ಸಂಘದ ಆಶ್ರಯದಲ್ಲಿ ತಾ 13 ರಲ್ಲು ಕಂಕನಾಡಿಯಲ್ಲಿ ಶ್ರೀ ಎಸ್. ಎಸ್. ಸುವರ್ಣ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ತೆರಿಗೆದಾರರ ಸಂಕಷ್ಟಗಳ ನಿವಾರಣಾ ಕುರಿತು ವಿಚಾರ ವಿನಿಮಯ ಸಭೆ ಜರಗಿತು. ಶ್ರೀಗಳಾದ ಡಿ. ಮೋಹನ ರಾವ್, ಕೆ. ಆರ್ ಆಚಾರ್, ಎ. ಕೆ. ಸೇನಕ್, ಸಿ. ಎಲ್. ಲೋಬೊ ಮೊದಲಾದವರು ಮಾತನಾಡಿದ ಬಳಿಕ ನಿರ್ಣಯಗಳಾದುವು.

ಅಣುಬಾಂಬು ನಿಷೇಧ ಸಭೆ— ಮಂಗಳೂರು ಶಾಂತಿ ಸಮಿತಿಯ ಅಧ್ಯಕ್ಷ ಶ್ರೀ ಟಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ತಾ. 20ರಲ್ಲಿ ಸಂಜೆ ಸಾರ್ವಜನಿಕ ಸಭೆಯೊಂದು ಜರಗಿ ಅಣು ಮತ್ತು ಹೈಡ್ರೊಜನ್ ಬಾಂಬುಗಳ ಯುದ್ಧ ತಯಾರಿಯನ್ನು ನಿಷೇಧಿಸುವ ಭಾಷಣಗಳಾದುವು. ಡಾ। ಎಮ್. ಎಸ್. ಶಾಸ್ತ್ರಿಗಳು ಸ್ವಾಗತಮಾತುಗಳನ್ನಾಡಿದರು. ಶ್ರೀ ಪಿ. ಎಮ್. ಎಸ್. ಮೂರ್ತಿಯವರು ಧನ್ಯವಾದಗಳನ್ನರ್ಪಿಸಿದರು.

THE VIJAYA BANK Ltd. COONDAPOOR.
ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರು ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸ್ಲು, ವ, ಬಡ್ಡಿಯನ್ನು ಈ ತನಕವೂ ಕೊಡದೆ ಬಾಕಿಮಾಡಿ ಕೊಂಡಿರುವುದರಿಂದಲೂ ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರು ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ಮಾರ್ಚ್ ತಿಂಗಳ ತಾರೀಕು 30ನೇ ಬುಧವಾರ ಅಪರಾಹ್ನ ಘಂಟೆ 2ಕ್ಕೆ, ಯಾ ಬೇಂಕಿಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬುದನ್ನು ಈ ಮೂಲಕ ಸರ್ವರಿಗೂ ತಿಳಿಯಪಡಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 31-12-54ರ ವರೆಗೆ ಬೇಂಕಿಗೆ ಬರತಕ್ಕ ಮೊಬಲಗು.
734/52	ಕೆ. ನಾರಾಯಣ ಹೆಬ್ಬಾರ, ನಾಗಪ್ಪ ಹೆಬ್ಬಾರರ ಮಗ, ನಾಡಾ ಗ್ರಾಮದ ಕರುವಿನ ಹಿತ್ಲು, ಪೋಸ್ಟ್ ಗುಡ್ಡೆಯಂಗಡಿ. ದ. ಕ.	42—11—0
140/53	ಮಾಣಿಬೈಲು ಶೀನಪ್ಪ ಶೆಟ್ಟಿ ಮಾದಯ್ಯ ಸೆಟ್ಟರ ಅಳಿಯ ಕರ್ಕುಂಜೆಗ್ರಾಮ. ಪೋಸ್ಟ್ ಕರ್ಕುಂಜೆ ದ.ಕ.	148—12—0
220/53	ಆತ್ರಾಡಿ ಶೀನಪ್ಪ ಶೆಟ್ಟಿ. ಚೆನ್ನಯ್ಯ ಶೆಟ್ಟರ ಅಳಿಯ, ವಂಡ್ಸೆ ಗ್ರಾಮ, ವಂಡ್ಸೆ ದ. ಕ.	263—7—0
225/53	ವಿಠಲ ಶೆಟ್ಟಿ, ಮಂಜಯ್ಯ ಶೆಟ್ಟರ ಅಳಿಯ, ಹಾಲಾಡಿ ಮನೆ ಕೇರಾಡಿ ಗ್ರಾಮ, ಪೋಸ್ಟ್ ಕೊಲ್ಲೂರು ದ.ಕ.	28—1—0
358/53	ಶೀನಪ್ಪ ಶೆಟ್ಟಿ ಅಣ್ಣಪ್ಪ ಶೆಟ್ರ ಅಳಿಯ, ಕಾವ್ರಾಡಿಮನೆ, ನಂಡ್ಸೆ ಗ್ರಾಮ, ಪೋಸ್ಟ್ ವಂಡ್ಸೆ ದ. ಕ.	174—4—0
374/53	ಎಚ್ ಸದಾಶಿವ ಶೆಟ್ಟಿ. ಹಿಲಿಯಾಣ ದೊಡ್ಡಮನೆ ರಾಮಣ್ಣ ಸೆಟ್ಟರ ಅಳಿಯ, ಪೋಸ್ಟ್ ಹಾಲಾಡಿ. ದ. ಕ.	323—2—0
447/53	ಎ. ನಾರಾಯಣ ಶೆಟ್ಟಿ, ನಂಜಪ್ಪ ಶೆಟ್ಟರ ಮಗ, ವಕೀಲರ ಗುಮಾಸ್ತರು, ಕುಂದಾಪುರ ದ. ಕ.	58—13—0
551/53	ಶೀನಪ್ಪ ಶೆಟ್ಟಿ, ನಾಗಪ್ಪ ಶೆಟ್ಟರ ಅಳಿಯ, ಆನಗಳ್ಳಿ ಗ್ರಾಮದ ಬೆಣ್ಣೆಕುದ್ರು, ಪೋಸ್ಟ್ ಆನಗಳ್ಳಿ. ದ. ಕ.	42—6—0
691/53	ಪಿಲಿಫ್ ಡಿ' ಸೋಜ, ಬೆನ್ನಿಯನ್ ಡಿ' ಸೋಜರ ಮಗ, ಎಟೆಂಡರ್, ಕೆಥೊಲಿಕ್ ಬೇಂಕ್ ಲಿ. ಕುಂದಾಪುರ. ದ. ಕ.	74—11—0
741/53	ಮಹಾಬಲ ಶೆಟ್ಟಿ, ಬೈಲ್‌ಮನೆ ತೇಜಪ್ಪ ಶೆಟ್ಟರ ಮಗ, ದಮ್ಮಾಡಿಮನೆ, ಬೇಳೂರು ಗ್ರಾಮ, ಪೋಸ್ಟ್ ಕೋಟ ದ. ಕ.	72—0—0
865/53	ಬಿ. ಹಿರಿಯಣ್ಣ ಶೆಟ್ಟಿ, ರಾಮಣ್ಣ ಶೆಟ್ಟರ ಅಳಿಯ, ದೇವಲ್ಕುಂದ ಗ್ರಾಮ, ಪೋಸ್ಟ್ ಹಕ್ಲಾಡಿ. ದ. ಕ.	56—14—0

Office of the Bank
Coondapoor.
18—3—1955.

B. R. Adyanthaya.
Agent, Coondapur.

ಮದ್ರಾಸು ಸರಕಾರದ ಗ್ರಂಥ ಸ್ಪರ್ಧೆಯ ಫಲಿತಾಂಶ

1953—54ನೆ ವರ್ಷದ ಸ್ಪರ್ಧೆಯಲ್ಲಿ ಈ ಕೆಳಗಿನ ಪುಸ್ತಕಗಳಿಗೆ ಬಹುಮಾನ ಕೊಡಬಹುದೆಂದು ಮದ್ರಾಸಿನ ಕರ್ನಾಟಕ ಸಂಘವು ಮಾಡಿದ ತೀರ್ಮಾನವನ್ನು ಮದ್ರಾಸು ಸರಕಾರ ಒಪ್ಪಿಕೊಂಡಿದೆ.

1 ಸಣ್ಣ ಕಥೆಗಳು: "ಮುಚ್ಚುಮನೆಸೀಕ್ರೆಟ್ ಮತ್ತು ಇತರ ಕತೆಗಳು ಶ್ರೀ ಬಾಗ್ಲೋಡಿ ದೇವರಾವ್ ಕಿನ್ನಿಕಂಬಳ, ದ. ಕ. ಬಹುಮಾನ ರೂಪಾಯಿ 500.

2 ಶಿಶುಸಾಹಿತ್ಯ; "ಮಕ್ಕಳ ಮುದ್ದು" "ಕಿರಿಯರ ಕಿನ್ನರಿ" "ಚಿಣ್ಣರ ಹಾಡುಗಳು" ಶ್ರೀ ಸಿ. ಸೀತಾರಾಮ ಭಟ್ಟ ಮಿತ್ತಬೈಲು, ದ. ಕ, ಬಹುಮಾನ-ರೂಪಾಯಿ 500

3 ನಾಟಕ: (ಅ) "ದರ್ಪಕವಿಜಯ" (ಕೈಬರಹ) ಶ್ರೀ ಎಮ್. ಶಂಕರನಾರಾಯಣ ಭಟ್ಟ ನಂದಿಗುಡ್ಡೆ ರಸ್ತೆ, ಅತ್ತಾವರ ಮಂಗಳೂರು ಬಹುಮಾನ ರೂಪಾಯಿ 250

(ಬ) "ಮಹಾತ್ಯಾಗಿ ಪುರಂದರದಾಸ" (ಕೈಬರಹ) ಶ್ರೀ ಸಿ. ಕೆ. ನಾರಾಯಣ ವಿದ್ವಾನ್ ಮಂಗಳೂರು. ಬಹುಮಾನ ರೂಪಾಯಿ 250

ಕರ್ನಾಟಕ ಫ್ರೀ ನೈಟ್ ಹೈಸ್ಕೂಲ್

ಬೊಂಬಾಯಿ — ಬಂಟರ ಯಾನೆ ನಾಡವರ ಸಂಘದ ಆಶ್ರಯದಲ್ಲಿ ನಡೆವ ಬರುವ ಕರ್ನಾಟಕ ಫ್ರೀನೈಟ್ ಹೈಸ್ಕೂಲಿನ 31ನೆ ವಾರ್ಷಿಕೋತ್ಸವವು ಇದೇ ತಾ. 27ರಲ್ಲಿ ಡಾ। ಎ. ವಿ ಬಾಳಿಗರ ಅಧ್ಯಕ್ಷತೆಯಲ್ಲಿ ಶ್ರೀ ಸವಾಸ್ಟಿ ಜಹಂಗೀರ್ ಪಬ್ಲಿಕ್ ಹಾಲಿನಲ್ಲಿ ಜರಗಲಿರುವುದೆಂದೂ ಸರ್ವರೂ ಬಂದು ಪ್ರೋತ್ಸಾಹಿಸಬೇಕೆಂದೂ ಗೌ। ಕಾರ್ಯದರ್ಶಿ ಶ್ರೀ ಆರ್. ಎಂ. ಶೆಟ್ಟರು ವಿನಂತಿಸುತ್ತಾರೆ.

ನರೆತ ಕೂದಲಿನಿಂದ ಪಾರಾಗಿರಿ

ತಾತ್ಕಾಲಿಕ ಉಪಶಮನವನ್ನು ಕೊಡುವ ರಂಗುಗಳಿಗೆ ಮರುಳಾಗಬೇಡಿರಿ. ಆಯುರ್ವೇದ ರೀತ್ಯಾ ದೇಶೀಯ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ 'ವಿಶ್ವಕಲ್ಯಾಣ ಹೇರ್ ಆಯಿಲ್' ಅಕಾಲಿಕ ನರೆತ ಕೂದಲನ್ನು ವಿಸ್ಮಯಕರ ರೀತಿಯಲ್ಲಿ ಸ್ವಾಭಾವಿಕ ಕಪ್ಪು ಬಣ್ಣಕ್ಕೆ ತರುವುದಲ್ಲದೆ 60 ವರ್ಷ ಪ್ರಾಯದ ತನಕ ಕಪ್ಪಗಾಗಿಯೇ ಉಳಿಸುವುದು. ತಲೆನೋವು, ಮಾನಸಿಕ ದುರ್ಬಲತೆ, ದೃಷ್ಟಿ ದೋಷ ಮೊದಲಾದುವುಗಳಿಗೂ ಈ ತೈಲವು ಅತ್ಯುಪಯುಕ್ತವಾದುದು.

ಕೆಲವೇ ನರೆತ ಕೂದಲುಗಳಿಗಾದರೆ ರೂ. 3-8-0 ಬೆಲೆಯ ಒಂದು ಸೀಸೆಯನ್ನು ಕೊಂಡುಕೊಳ್ಳಿರಿ. 3 ಸೀಸೆಗೆ ರೂ. 9/-. ಉತ್ತಮ ತರದ್ದಕ್ಕೆ ಸೀಸೆಗೆ ರೂ. 5/-. 3 ಸೀಸೆಗಳಿಗಾದರೆ ರೂ. 13/-.

P. D. GUPTA & CO.,
(No. 5) P. O. Begu Sarai
(Monghyr)

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಇನ್ನೊಂದು ತೈಲ ಶುದ್ಧೀಕರಣ ಗೃಹ

ಟ್ರಾಂಬೆಯಲ್ಲಿ ರಾಷ್ಟ್ರದ ಪ್ರಗತಿಯ ಮತ್ತೊಂದು ಹೆಜ್ಜೆ

ಮುಂಬಯಿಯ ಪಶ್ಚಿಮಕ್ಕೆ ೯ ಮೈಲು ಈಶಾನ್ಯದಲ್ಲಿರುವ ಟ್ರಾಂಬೇಯನ್ನು ಶೀಘ್ರದ ಪ್ರಗತಿಯ ಮೈಲುಗಲ್ಲುಗಳಲ್ಲಿ ಒಂದಾಗಿ ಪರಿಗಣಿಸಬಹುದು. ಶಿಂಧ್ರಿ, ಚಿತ್ತರಂಜನ, ಭಾಕ್ರಾನಂಗಲ ಯೋಜನೆಗಳಂತೆ ಟ್ರಾಂಬೆಯಲ್ಲಿ ತೈಲ ಶುದ್ಧೀಕರಣ ಗೃಹಗಳನ್ನು ಸ್ಥಾಪಿಸುವ ಯೋಜನೆಯೂ ನಮ್ಮ ಮುನ್ನಡೆಯ ಪ್ರತೀಕ. ಟ್ರಾಂಬೆಯಲ್ಲಿ ಸ್ಟ್ಯಾನ್ ವ್ಯಾಕ್ ಕಂಪೆನಿಯ ತೈಲ ಶುದ್ಧೀಕರಣ ಗೃಹ ಈಗ ಕೆಲವು ತಿಂಗಳುಗಳಿಂದ ಕೆಲಸಮಾಡುತ್ತಿದೆ. ಮೊನ್ನೆ ೧೭ ನೇ ತಾರೀಕಿನಂದು ಬರ್ಮಾಶೆಲ್ ಕಂಪೆನಿಯವರ ತೈಲ ಶುದ್ಧೀಕರಣ ಗೃಹದ ಔಪಚಾರಿಕ ಉದ್ಘಾಟನೆಯೂ ನಡೆಯಿತು. ಇದೇ ಜನವರಿಯಿಂದ ಉತ್ಪಾದನೆ ಪ್ರಾರಂಭಿಸಿರುವ ಬರ್ಮಾ ಶೆಲ್ಲಿನ ಶುದ್ಧೀಕರಣ ಗೃಹವು ಭಾರತದಲ್ಲಿಯೇ ದೊಡ್ಡದಿದ್ದು, ವರ್ಷಕ್ಕೆ ೨೦ ಲಕ್ಷ ಟನ್ನುಗಳಷ್ಟು ಎಣ್ಣೆಯನ್ನು ಬಳಸಿಕೊಳ್ಳುತ್ತದೆ.

ಮೊನ್ನೆ ಮೊನ್ನೆಯವರೆಗೆ ನಮ್ಮ ದೇಶದ ಎಣ್ಣೆಯ ಅವಶ್ಯಕತೆಯಲ್ಲಿ ನೂರಕ್ಕೆ ತೊಂಭತ್ತಕ್ಕಿಂತಲೂ ಹೆಚ್ಚನ್ನು ಹೊರಗಿನಿಂದ ತರಿಸಿ ಪೂರೈಸುತ್ತಿದ್ದರು. ಈಗಲೂ ನಮ್ಮಲ್ಲಿ ಎಣ್ಣೆಯನ್ನು ಉತ್ಪಾದಿಸುವ ಕೇಂದ್ರವಿರುವುದು ಒಂದು ಮಾತ್ರ— ಅಸ್ಸಾಮಿನ ದಿಗ್ಬೊಯಿಯಲ್ಲಿ ನೆಲಸಿರುವ ಈ ಕೇಂದ್ರ ನಮಗೆ ಬೇಕಾದುದರಲ್ಲಿ 7% ಉತ್ಪಾದಿಸುತ್ತದೆ. ಹೊರಗಿನಿಂದ ಶುದ್ಧಮಾಡಿದ ಎಣ್ಣೆಯನ್ನೇ ತರಿಸುವ ಬದಲು, ಕಚ್ಚಾ ಎಣ್ಣೆಯನ್ನು ತರಿಸಿ, ಇಲ್ಲಿಯೇ ಶುದ್ಧೀಕರಿಸಿ, ವಿತರಿಸಿದರೆ ಹಲವು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಆರ್ಥಿಕ ಲಾಭವಾದೀತೆಂದು ಸರಕಾರಕ್ಕೆ ತೋರಿದುದರಿಂದ ೧೯೫೧ರಲ್ಲಿ ಅದು ಭಾರತದಲ್ಲಿ ಶುದ್ಧೀಕರಣ ಗೃಹಗಳನ್ನು ಸ್ಥಾಪಿಸುವುದಕ್ಕೆ ವಿದೇಶಗಳ ಕಂಪೆನಿಗಳನ್ನು ಆಹ್ವಾನಿಸಿತು. ಇದರ ಫಲವಾಗಿ ಟ್ರಾಂಬೆಯಲ್ಲಿ ಎರಡು ಕಂಪೆನಿಗಳು ಈಗಾಗಲೇ ತಲೆ ಎತ್ತಿವೆ. ಇಷ್ಟರಲ್ಲಿಯೇ ವಿಶಾಖಪಟ್ಟಣದಲ್ಲಿ ಕಾಲ್ಟೆಕ್ಸ್ ಕಂಪೆನಿಯ ಕಾರ್ಖಾನೆಯೂ ತೆರೆಯಲ್ಪಡುತ್ತದೆ. ಅವುಗಳಿಂದ ಐದರಲ್ಲಿ ನಾಲ್ಕಂಶದಷ್ಟು ಎಣ್ಣೆಯ ಪೂರೈಕೆಯಾಗುವುದೆಂದೂ ತತ್ಪರಿಣಾಮವಾಗಿ ಹತ್ತಕ್ಕೆ ಒಂಭತ್ತರಷ್ಟು ನಾವು ಎಣ್ಣೆಯ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುವೆವೆಂದೂ ತಿಳಿದು ಬರುತ್ತದೆ.

ಬರ್ಮಾ ಶೆಲ್ಲಿನವರ ಕಾರ್ಖಾನೆಯನ್ನು ಕಟ್ಟುವುದಕ್ಕೆ ೩೦ ಕೋಟಿ ರೂಪಾಯಿ ವೆಚ್ಚವಾಯಿತು; ೪೫೦ ಎಕ್ರೆ ವಿಸ್ತೀರ್ಣದ ಜಾಗದಲ್ಲಿ ಒಂದೇ ಸಲಕ್ಕೆ ೧೪೦೦೦ ಜನರ ವರೆಗೂ ಕೆಲಸಮಾಡಿ ನಿಶ್ಚಿತ ವೇಳೆಗಿಂತ ಒಂದು ವರ್ಷ ಮುಂಚಿತವಾಗಿಯೇ ಶುದ್ಧೀಕರಣ ಗೃಹವನ್ನೂ ಪ್ರಯೋಗಾಲಯವನ್ನೂ ಕಾರ್ಯಾಲಯವನ್ನೂ ಆಸ್ಪತ್ರೆಯನ್ನೂ ವಸತಿ ಗೃಹಗಳನ್ನೂ ಕಟ್ಟಲಾಯಿತು. ೬೦೦೦೦ ಟನ್ನುಗಳಷ್ಟು ಉಕ್ಕು, ೪೦೦೦೦ ಘನ ಗಜ ಕಾಂಕ್ರೀಟು, ೧೬೦ ಮೈಲುಗಳ ಉದ್ದದ ಗಳಗಳು, ೨೦೦ ಮೈಲು ಉದ್ದದ ಕೇಬಲುಗಳು- ಇವನ್ನು ಕಟ್ಟಡದ ರಚನೆಯಲ್ಲಿ ಉಪಯೋಗಿಸಲಾಯಿತು. ಚಿಮಿಣಿಎಣ್ಣೆ, ಮೋಟಾರೆಣ್ಣೆ, ಡೀಸೆಲೆಣ್ಣೆ, ಕುಲುಮೆ ಎಣ್ಣೆಯನ್ನಲ್ಲದೆ ಬಿಟುಮೆನನ್ನೂ ಇಲ್ಲಿ ಉತ್ಪಾದಿಸಲಾಗುತ್ತದೆ. ಇರಾನಿನಿಂದ ಕಚ್ಚಾ ಎಣ್ಣೆಯನ್ನು ಇಲ್ಲಿಗೆ ತರಲಾಗುತ್ತಿದ್ದು ಬುಚರ್ ಐಲೇಂಡಿನಲ್ಲಿ ಎಣ್ಣೆ ತುಂಬಿದ ಟ್ಯಾಂಕರುಗಳು ನಿಲ್ಲುವುದಕ್ಕೆ ಯೋಗ್ಯ ವ್ಯವಸ್ಥೆ ಮಾಡಲ್ಪಟ್ಟಿರುತ್ತದೆ.

ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ! ರಾಧಾಕೃಷ್ಣನ್ನರು ಶುದ್ಧೀಕರಣ ಗೃಹವನ್ನು ವಿದ್ಯುಚ್ಛಕ್ತಿಯ ಗುಂಡಿಯನ್ನೊತ್ತಿ ಬೆಳಗಿಸುವ ಮೂಲಕ ಉದ್ಘಾಟಿಸುತ್ತಾ "ರಾಷ್ಟ್ರದ ಕೈಗಾರಿಕೆಯ ಕ್ಷೇತ್ರದ ಮುನ್ನಡೆಯ ಸೂಚಕ" ಎಂಬುದಾಗಿ ಈ ಉದ್ಯಮವನ್ನು ಪ್ರಶಂಸಿಸಿದರು. ಸರಕಾರವು ರಾಷ್ಟ್ರದಲ್ಲಿ ಸಂಪತ್ತು ಹೆಚ್ಚಬೇಕು; ಉದ್ಯೋಗದ ಅವಕಾಶಗಳು ಹೆಚ್ಚಬೇಕು, ಜನರ ಸುಖ ಸೌಕರ್ಯಗಳು ಹೆಚ್ಚಬೇಕು ಎಂಬ ದೃಷ್ಟಿಯಿಂದ ಕೆಲಸ ಮಾಡುತ್ತಿರುವಾಗ ಬರ್ಮಾ ಶೆಲ್ಲಿನ ಶುದ್ಧೀಕರಣ ಗೃಹದಂಥ ಉದ್ಯಮವು ಅದಕ್ಕೆ ನೆರವಾಗುತ್ತಿರುವುದು ಸಂತೋಷ ಎಂದವರು ಹೇಳಿದರು. ಉದ್ದೇಶದಲ್ಲಿ ಪ್ರಾಮಾಣಿಕತೆಯನ್ನೂ ಸಾಮಾಜಿಕ ನ್ಯಾಯದ ದೃಷ್ಟಿಯನ್ನೂ ಸಾಮಾನ್ಯ ಪ್ರಜೆಯ ಕ್ಷೇಮವನ್ನೂ ಇಟ್ಟುಕೊಂಡು ಕೆಲಸಮಾಡುವ ಖಾಸಗಿ ಉದ್ಯಮಗಳಿಗೆ ಸರಕಾರ ಪ್ರೋತ್ಸಾಹ ಕೊಡುತ್ತಲೇ ಹೋಗುತ್ತದೆ ಎಂದವರು ಸಾರಿದರು.



ನಿಮಗೆ ಯಾವುದೇ ತರದ ಉದ್ಯೋಗ ಬೇಕೆಂದಿದ್ದರೆ ಅಥವಾ ವ್ಯಾಪಾರ ನಡೆಸಬೇಕೆಂದಿದ್ದರೆ ಕೂಡಲೇ ಬರೆಯಿರಿ:

ಟಪ್ಪಾಲುಪೆಟ್ಟಿಗೆ ನಂಬ್ರ 1868
ಬೊಂಬಾಯಿ— 1

ಅಧ್ಯಾಪಕರಿಗೆ ನಿವೃತ್ತಿ ವೇತನ

ಯೋಜನೆಯಂತೆ ಲಾಭ ಹೊಂದುವವರ ಅರ್ಹತೆ

ಮದ್ರಾಸು ಸರಕಾರವು ಶಿಕ್ಷಣದ ವಿಷಯದಲ್ಲಿ ಬಹಳ ಉದಾರವಾಗಿ ಈ ವರ್ಷ ವರ್ತಿಸಿದೆ ಎಂದರೆ ಅತಿಶಯೋಕ್ತಿಯಾಗದು. ಮುಂಗಡಪತ್ರವನ್ನು ಮಂಡಿಸುವ ಕಾಲಕ್ಕೆ ಅರ್ಥಸಚಿವರೂ ಶಿಕ್ಷಣ ಮಂತ್ರಿಗಳೂ ಆದ ಶ್ರೀ ಸಿ. ಸುಬ್ರಹ್ಮಣ್ಯಮರು ತಿಂಗಳಿಗೆ ೧೦೦ ರೂಪಾಯಿಗಿಂತ ಕಡಿಮೆ ವರಮಾನದ ಎಲ್ಲ ನಾಗರಿಕರ ಮಕ್ಕಳ ಮಾಧ್ಯಮಿಕ ಶಿಕ್ಷಣದ ವರೆಗಿನ ವೆಚ್ಚವನ್ನು ಸರಕಾರ ಭರಿಸುವುದಾಗಿ ಸಾರಿದರು. ಕಳೆದ ವಾರ ಶಿಕ್ಷಣ ಖಾತೆಯ ಬೇಡಿಕೆಯನ್ನು ಮಂಡಿಸಿ, ನಡೆದ ಚರ್ಚೆಗೆ ಉತ್ತರ ಕೊಡುವಾಗ, ಪ್ರಾಥಮಿಕ ಶಾಲೆಯ ಅಧ್ಯಾಪಕರಿಗೂ ಅವರಷ್ಟೇ ತೊಂದರೆಯಿಂದಿರುವ ಬೇರೆ ಕೆಲವು ವರ್ಗದ ಉಪಾಧ್ಯಾಯರಿಗೂ ವೇತನದ ಕಾಲಂಶವನ್ನು ಪೆನ್ಶನಾಗಿ ಕೊಡುವ ನಿಶ್ಚಯವನ್ನು ಪ್ರಕಟಿಸಿದರು.

ಮೊದಲೇ ಹೇಳಿದಂತೆ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದು ಇದೇ ಎಪ್ರೀಲು ತಿಂಗಳ ೧ ನೇ ತಾರೀಕಿನಿಂದ ನಿವೃತ್ತಿಹೊಂದುವ ಎಲ್ಲ ಅಧ್ಯಾಪಕರಿಗೂ ಈ ಯೋಜನೆ ಅನ್ವಯಿಸುತ್ತದೆ; ಅಲ್ಲದೆ ಮಾಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡುವ ದ್ವಿತೀಯ ಶ್ರೇಣಿಯ ಪಂಡಿತರು, ಸಂಗೀತ ಶಿಕ್ಷಕರು, ಚಿತ್ರ ಕಲೆಯ ಅಧ್ಯಾಪಕರು, ವೃತ್ತಿ ಶಿಕ್ಷಕರು, ಮತ್ತು ದ್ವಿತೀಯ ಶ್ರೇಣಿಯ ವ್ಯಾಯಾಮ ಶಿಕ್ಷಕರುಗಳಿಗೆ ಸಹ ಇದು ಅನ್ವಯವಾಗುತ್ತದೆ. ಪ್ರಾಥಮಿಕ ಶಾಲೆಗಳಲ್ಲಿರುವ ಮಾಧ್ಯಮಿಕ ಶ್ರೇಣಿಯ ಅಧ್ಯಾಪಕರೂ ಯೋಜನೆಯ ಪ್ರಯೋಜನ ಪಡೆಯುವರು. ಸರಕಾರದಿಂದ ಸಹಾಯ ಧನ ಪಡೆಯುವ ಶಾಲೆಗಳು, ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲೆಗಳು ಎಂಬಿತ್ಯಾದಿಯಾದ ಯಾವ ಭೇದವೂ ಇಲ್ಲದೆ ಯೋಜನೆಯ ಲಾಭವನ್ನು ಮುಟ್ಟಿಸಲಾಗುತ್ತದೆ.

ಸರಕಾರದವರು ಈಗ ಕೊಡಲಾಗುತ್ತಿರುವ ಕ್ಷೇಮನಿಧಿಯ ಪ್ರಯೋಜನದ ಬದಲು ವಿರಾಮ ವೇತನವನ್ನು ಕೊಡಬಹುದೆಂದು ಮಾಡಲು ಆಲೋಚಿಸಿದ್ದರು. ಆದರೆ ಹಾಗೆಮಾಡುವುದರಿಂದ ಕ್ಷೇಮನಿಧಿಯ ವ್ಯವಸ್ಥೆಯ ಪ್ರಕಾರ ಸರಕಾರದಿಂದ ದೊರೆಯುವ ಸುಮಾರು ೫೦೦ ರೂಪಾಯಿಗಳ ಬದಲು ಬಹಳ ಕಡಿಮೆ ಪ್ರಯೋಜನ ಅಧ್ಯಾಪಕರಿಗೆ ಲಭಿಸುವುದೆಂದು ವ್ಯಕ್ತವಾದುದರಿಂದ ವಿರಾಮ ವೇತನವನ್ನು ಹೆಚ್ಚಿಗೆ ಪ್ರಯೋಜನದ ರೂಪದಲ್ಲಿಯೇ ಕೊಡುವುದು ಬೇಕೆಂದೂ ಇದರಿಂದ ಅಧ್ಯಾಪಕ ವರ್ಗದಲ್ಲಿ ಹೆಚ್ಚಿನ ತೃಪ್ತಿಯಾದೀತೆಂದೂ ಸರಕಾರ ಭಾವಿಸಿತು. ಸಾಮಾನ್ಯವಾಗಿ ಸ್ಥಳೀಯ ಸಂಸ್ಥೆಗಳ ಶಾಲೆಗಳಲ್ಲಿ ೫೫ನೇ ವರ್ಷಪ್ರಾಯಕ್ಕೆ ಮತ್ತು ಸರಕಾರದಿಂದ ಸಹಾಯಧನ ಪಡೆಯುವ ಬೇರೆ ರೀತಿಯ ಶಾಲೆಗಳಲ್ಲಿ ೬೦ನೇ ವರ್ಷಪ್ರಾಯಕ್ಕೆ ಅಧ್ಯಾಪಕರ ನಿವೃತ್ತಿಯಾಗುತ್ತದೆ. ಪ್ರತಿವರ್ಷ ನೂರರಲ್ಲಿ ಒಬ್ಬ ಅಧ್ಯಾಪಕನು ನಿವೃತ್ತಿಯಾಗುವನೆಂದೂ ಸಾಮಾನ್ಯವಾಗಿ ಅಧ್ಯಾಪಕನೊಬ್ಬನು ೬೩ನೇ ವರ್ಷಪ್ರಾಯದ ವರೆಗೆ ಬದುಕುವನೆಂದೂ ಲೆಕ್ಕಕ್ಕೆ ಹಿಡಿದಿದ್ದು ಇದರಂತೆ ೧೯೫೫-೫೬ನೇ ವರ್ಷಕ್ಕೆ ೧,೧೮,೪೭೦ ರೂಪಾಯಿಗಳ ವೆಚ್ಚವೂ ಇಪ್ಪತ್ತು ವರ್ಷಗಳ ಬಳಿಕ ವರ್ಷಕ್ಕೆ ೮೫೬೫೦ ರೂಪಾಯಿಗಳ ವೆಚ್ಚವೂ ಪೆನ್ಶನಿಗಾಗಿ ಬರಬಹುದೆಂದು ಸರಕಾರದ ಅಂದಾಜು.

ಇದಲ್ಲದೆ ಸರಕಾರವು ಐದು ವರ್ಷಗಳ ವರೆಗೆ ಕೆಲಸ ಮಾಡಿದ ೪೦ ವರ್ಷ ಪ್ರಾಯದ ಮಿತಿಯೊಳಗಿನ ಎಲ್ಲ ಅಧ್ಯಾಪಕರಿಗೂ ಕಡ್ಡಾಯವಾಗಿ ವಿಮೆ ಇಳಿಸುವ ಯೋಜನೆಯೊಂದರ ಆಲೋಚನೆಯನ್ನು ಈಗ ಮಾಡುತ್ತದೆ. ಅಧ್ಯಾಪಕರು ತಮ್ಮ ಕ್ಷೇಮ ನಿಧಿಯಿಂದ ವಿಮೆಯ ಕಂತುಗಳ ಹಣವನ್ನು ಕಟ್ಟಬಹುದೆಂದು ನಿಯಮವಿದ್ದರೂ ಹಾಗೆ ಮಾಡಿದರೆ, ತಮ್ಮ ಆಪತ್ಕಾಲದಲ್ಲಿ ದೊರಕಬಹುದಾದ ಹಣವೇ ಇಲ್ಲದಂತಾದೀತೆಂಬ ಭಯದಿಂದ ಇದರ ಪ್ರಯೋಜನವನ್ನು ಯಾರೂ ಪಡೆದುಕೊಳ್ಳುವಂತೆ ಕಾಣುವುದಿಲ್ಲ. ಅದಲ್ಲದೆ ತಾತ್ಕಾಲಿಕವಾಗಿ ಕೆಲಸವಿಲ್ಲದ ದಿನಗಳಿಯ ಬೇಕಾಗಿ ಬಂದ ಸಂದರ್ಭದಲ್ಲಿ ವಿಮೆಯ ಕಂತಿನ ಹಣವನ್ನು ಕಟ್ಟಲಿಕ್ಕೆ ಕ್ಷೇಮ ನಿಧಿಯಲ್ಲಿ ಏನೂ ಉಳಿಯಲಾರದೆಂದೂ ಆಗ ವಿಮೆಯು ನಿಷ್ಫಲವಾಗುವ ಸಂಭವವಿದೆಯೆಂದೂ ಅಧ್ಯಾಪಕರು ಹೆದರಿರುವಂತೆ ತೋರುತ್ತದೆ.

ಆದರೆ ವಿಮೆ ಇಳಿಸುವುದರಿಂದ ಆಕಸ್ಮಿಕ ಮರಣದ ಪ್ರಸಂಗಗಳಲ್ಲಿ ಕುಟುಂಬದವರಿಗೆ ವಿಶೇಷ ನೆರವಾದಂತಾಗುವುದೆಂಬುದನ್ನೂ ಐದು ವರ್ಷಗಳ ವರೆಗೆ ಕೆಲಸಮಾಡಿ ಸಾಕಷ್ಟು ಹಣವನ್ನು ಕ್ಷೇಮ ನಿಧಿಯಲ್ಲಿ ಕಾದಿಟ್ಟರೆ ಪಕ್ಕನೆ ಕೆಲವು ತಿಂಗಳು ಕೆಲಸವಿಲ್ಲದೆ ಹೋದರೂ ವಿಮೆಯ ಕಂತನ್ನು ಕಟ್ಟಲು ಕಷ್ಟವಾಗದೆಂಬುದನ್ನೂ ಮನಗಂಡರೆ ಸರಕಾರ ಈ ದಿಸೆಯಲ್ಲಿ ಕೈಗೊಳ್ಳಬಹುದಾದ ಕಡ್ಡಾಯಕ್ರಮ ಪ್ರಯೋಜನಕಾರಿಯಾದುದೆಂದು ಹೊಳೆಯುತ್ತದೆ.

--- - -

೩ನೇ ಆವೃತ್ತಿ. ಸಿದ್ಧವಾಗಿದೆ! ಬೆಲೆ: ೨ ೮ ೦ ಬೇಗ ತರಿಸಿರಿ!

ಶ್ರೀ. ಎನ್. ಕೆ. ಕುಲಕರ್ಣಿಕೃತ

ಕನ್ನಡ ಸಾಹಿತ್ಯವಾಹಿನಿ

M. A., B. A., ವಿದ್ಯಾರ್ಥಿಗಳಿಗೂ ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಇದು Reference ಗ್ರಂಥವಾಗಿದೆ! ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಜಾಣ ಪರೀಕ್ಷೆಗೆ Text Bookವನ್ನಾಗಿ ಮಾಡಿದ್ದಾರೆ!

ಒಂದೇ ಪ್ರತಿ ಬೇಕಾದವರು ೩—8 0 M. O. ಕಳಿಸಿರಿ.

ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್ನು.

ನ್ಯಾಟಿ ಶ್ಯಾಮರಾಯರು

ಸಂಪಾದಕರು: ವಿಜಯ ಗ್ರಂಥಮಾಲೆ, ಬೆಳಗಾಂವಿ.

ಏಜೆಂಟರು: ಕಥಾಕುಂಜ ಗ್ರಂಥ ಭಾಂಡಾರ, ಬೆಳಗಾಂವಿ.

ಭರ್ತ ಕಂಟ್ರೋಲ

[ಮಕ್ಕಳನ್ನ ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ ಖರ್ಚು ರೂ. ೦-೧೪-೦

—:ವಿಳಾಸ:—

ಬಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಹೊಸ ಪುಸ್ತಕ

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಹಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೂಟದ ಮರ್ಮವನ್ನೂ, ನಿಶ್ಚೈಸಿದ್ದ 25 ಸಾವಿರ ವರದಕ್ಷಿಣೆ, ಸಿಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ :0—13—0

ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಪ್ರೆಸ್, ಉಡುಪಿ.

ಬಂಗಾಳಿ ಸಾಹಿತ್ಯದ ಬಾಲ್ಯಕಾಲ

ಬಂಗಾಳಿ ಸಾಹಿತ್ಯ, ಇಂದಿನ ತನ್ನ ರೂಪವನ್ನು ದೀರ್ಘವಾದ ಮತ್ತು ಭಿನ್ನವಾದ ಹಲವು ಪರಿವರ್ತನೆಗಳ ಮೂಲಕ ಪಡೆದಿದೆಯಾದರೂ ಒಂದೇ ಹೆಜ್ಜೆಯಲ್ಲಿ ಪೂರ್ಣವಿಕಾಸವನ್ನು ಪಡೆದ ಕೀರ್ತಿಯೂ ಅದಕ್ಕೆ ಸಲ್ಲುತ್ತದೆ. ಈಗ ದೊರೆತಿರುವ ಬಂಗಾಳಿ ಹಸ್ತಪ್ರತಿಗಳಲ್ಲಿ 'ಚಾರೆಯ್ಯಪದಗಳು' ಅತಿ ಪುರಾತನವಾದುದೆಂದೂ ಕ್ರಿ. ಶ. 10ನೆಯ ಶತಮಾನದಲ್ಲಿ ಅವು ರಚಿಸಲ್ಪಟ್ಟವೆಂದೂ ಹೇಳಲಾಗುತ್ತದೆ. ಇವು ಮತೀಯ ವಿಚಾರ ಮತ್ತು ಚಿಂತನವನ್ನು ಪ್ರಧಾನವಾಗಿ ವ್ಯಕ್ತಪಡಿಸಿದರೂ ಅವರಲ್ಲಿನ ಭಾವನೆಯಾಗಲಿ ವಿಷಯಪ್ರತಿಪಾದನೆಯು ಅಸ್ಪಷ್ಟವೆನಿಸುವ ರೀತಿಯಲ್ಲಿ ಪರಿಪೂರ್ಣವಾಗಿದೆ. ಪ್ರಸಿದ್ಧ ಮತಪಂಥಕ್ಕೆ ಸೇರಿದವನಾದ ಕವಿಯು ಬ್ರಹ್ಮಾನಂದದ ಮನೋಗತಿಯನ್ನೂ ಆಧ್ಯಾತ್ಮಿಕ ಪರವಶತೆಯನ್ನೂ ಬಣ್ಣಿಸಿರುವನು. ಆತನು ಈ ಕೃತಿಯಲ್ಲಿ ಲೌಕಿಕ ಪ್ರಪಂಚದ ಅನ್ಯೋಜಕತೆಯನ್ನು, ಅನಂತ ಕನಿಕರದ ಭಾವನೆಯೊಂದಿಗೆ ಸಂಮಿಶ್ರಗೊಳಿಸಿರುವನು. ವಿಧಿಗೊಳಿಸಲಾಗಿರುವ ಎಲ್ಲಾ ಪೂಜಾಪದ್ಧತಿಗಳನ್ನೂ, ಮುಕ್ತಿಮಾರ್ಗವನ್ನೂ ಸೂಚಿಸುವ ಎಲ್ಲಾ ಕಂದಾಚಾರಗಳನ್ನೂ ಕವಿಯು ಒಪ್ಪುವುದಿಲ್ಲ. ಮಹೋನ್ನತಕಾವ್ಯದ ಮಟ್ಟಕ್ಕೇರಿರುವ ಇದರ ಗಂಭೀರಶೈಲಿಯು ಕವಿಗೆ ಭಾವನೆಯು ಮೇಳವಿಸಿದ್ದ ಒದಿತವನ್ನೂ ಕಾವ್ಯವಸ್ತುವು ಕವಿಗೆ ಮತತತ್ವಗಳ ಬಗೆಗೆ ಇದ್ದ ಆಳವಾದ ಅಭ್ಯಾಸ–ಅನುಭವಗಳನ್ನೂ ಸೂಚಿಸುತ್ತವೆ. ನಿಜ ಜೀವನದಿಂದ ಆರಿಸಿಕೊಂಡ ಉಪಮಾನ ಉಪಮೇಯಗಳನ್ನು ಈ ಕಾವ್ಯದಲ್ಲಿ ಬಳಸಿರುವುದು ಅವರ ಶೋಭೆಯನ್ನು ಮತ್ತಷ್ಟು ಹೆಚ್ಚಿಸಿದೆ. ಕವಿತೆ ಹಾಗೂ ಮತಕ್ಕೆ ಇರುವ ನಿಕಟ ಸೌಹಾರ್ದವನ್ನು 'ಚಾರೆಯ್ಯ ಪದಗಳು' ವ್ಯಕ್ತಪಡಿಸುತ್ತವೆ. ಇದನ್ನು ಬಂಗಾಳಿ ಸಾಹಿತ್ಯದಲ್ಲಿ ಪದೇ ಪದೇ ಕಂಡುಬರುವ ಒಂದು ಶಾಶ್ವತ ಲಕ್ಷಣವೆನ್ನಬಹುದು.

ವೈಷ್ಣವ ಸಾಹಿತ್ಯ

ಉಜ್ವಲ ಭವಿಷ್ಯತ್ತನ್ನು ತೋರುವ ಆರಂಭವನ್ನು ಬಂಗಾಳಿ ಸಾಹಿತ್ಯ ಹೊಂದಿದ್ದರೂ ಮುಂದಿನ ಮೂರು ಶತಮಾನಗಳಲ್ಲಿ ಬಂಗಾಳಿ ಸಾಹಿತ್ಯದಲ್ಲಿ ಯಾವ ಹೊಸ ಸೃಷ್ಟಿಯೂ ಆಗಲಿಲ್ಲ. ಮುಸ್ಲಿಮರು ಬಂಗಾಳವನ್ನು ಆಕ್ರಮಿಸಿದ್ದು ಇದಕ್ಕೆ ಕಾರಣ. ಹಿಂಸಾತ್ಮಕತೆಯಾದನೆ ಹಳೆಯ ಭಾವನಾಜಾಲವನ್ನು ಛಿದ್ರವಿಛಿದ್ರಗೊಳಿಸಿ ಪ್ರಾಚೀನ ಸ್ಫೂರ್ತಿ ಚಿಲುಮೆಯನ್ನೇ ಬತ್ತಿಸಿ ಬಿಟ್ಟಿತೆನ್ನಬಹುದು. ಈ ದೀರ್ಘಮೌನದ ಕಾಲಾವಧಿಯಲ್ಲಿ ಸೃಷ್ಟಿ ಚೇತನವು ಪರಿವರ್ತಿತ ಪರಿಸ್ಥಿತಿಯೊಂದಿಗೆ ಹೊಂದಿಕೊಂಡಿದ್ದು ಅನಂತರ ನವವಿಧಾನಗಳಲ್ಲಿ ಹೊರಹೊಮ್ಮಿತು. ಈ ಮೌನದ ಅವಧಿಯಲ್ಲಿ 12ನೆಯ ಶತಮಾನದ ಆರಂಭದಲ್ಲಿ ಜಯದೇವ ಕವಿಯ ಗೀತ ಗೋವಿಂದ ಸಂಸ್ಕೃತದಲ್ಲಿ ಬೆಳಕಿಗೆ ಬಂದಿತು. ಅದರ ನವವಿಧಾನ, ಭಾಷಾಮಾಧುರ್ಯ ಮಾನವನ ಮನಸ್ಸನ್ನು ಮುದಗೊಳಿಸುವ ಉತ್ತಮ ಸಾಹಿತ್ಯದ ಲಕ್ಷಣವನ್ನು ಪ್ರಕಟಿಸುತ್ತದೆ. ಮುಂದೆ ನೂರು ಶತಮಾನಗಳ ಮೌನದ ಬಳಿಕ ಬಂಗಾಳಿ ಸಾಹಿತ್ಯವು ಮುಖ್ಯವಾಗಿ ಮೂರು ವಿಧಾನಗಳಲ್ಲಿ ಹರಿಯಿತು. ಮೊದಲನೆಯದು, ವೈಷ್ಣವ ಗೀತೆಗಳೆಂದು ಕರೆಯಲ್ಪಡುವ ಚೈತನ್ಯರ ಜೀವನಚರಿತ್ರೆಯ ಆಧಾರದ ಮೇಲೆ ಬರೆದ ಪದಗಳು. ಎರಡನೆಯದು: ರಾಮಾಯಣ, ಮಹಭಾರತ ಮತ್ತು ಭಾಗವತ ಕಾವ್ಯಗಳನ್ನು ಬಂಗಾಳದಲ್ಲಿ ರಚಿಸಿದ್ದು. ಮೂರನೆಯದು: ಮಂಗಳ ಕಾವ್ಯಗಳು ಇವುಗಳಲ್ಲಿ ವೈಷ್ಣವ ಗೀತೆಗಳನ್ನು ಜಯದೇವ ಕವಿಯು 'ಗೀತಗೋವಿಂದ'ದ ತರುವಾಯ ವಿದ್ಯಾಪತಿ ಮತ್ತು ಬಡು ಚಂಡೀದಾಸರು ಮುಂದುವರಿಸಿದರು. ವಿದ್ಯಾಪತಿಯು ವಿಧಿಯ ಉಪಾಸಕವಿ. ಆಸ್ಥಾನಪಂಡಿತ. ಆವರ ಅನಂತರದ ಲೇಖಕರು ಅವರ ವಿಧಾನವನ್ನೇ ಬಳಸಿದಂತೆ ಕಂಡುಬರುತ್ತದೆ. 14ನೆಯ ಶತಮಾನದಲ್ಲಿ ಬಡು ಚಂಡೀದಾಸರು ರಚಿಸಿದ ವೈಷ್ಣವ ಕವಿತೆಗಳಲ್ಲಿ ಸಂಕುಚಿತ ದೃಷ್ಟಿ ಕೆಲಮಟ್ಟಿಗೆ ಇದ್ದರೂ ಅವುಗಳಲ್ಲಿ ಉದಾತ್ತ ಕವಿತಾಶಕ್ತಿ ಮಿಂಚುವುದು ಗೋಚರಿಸುತ್ತದೆ.

ಶ್ರೀ ಚೈತನ್ಯ

ಕ್ರಿ. ಶ. 1486ರಲ್ಲಿ ಶ್ರೀ ಚೈತನ್ಯರು ಅವತರಿಸಿದ್ದು ಬಂಗಾಳಿ ಜೀವನ ಮತ್ತು ಸಾಹಿತ್ಯದ ಮಧ್ಯಯುಗಕ್ಕೆ ಸಂಬಂಧಿಸಿದ ಕೇಂದ್ರ ಘಟನೆಯೆನ್ನಬಹುದು. ಬಂಗಾಳದ ಸಮಾಜ ಮತ್ತು ಭಾವಜೀವನದ ಮೇಲೆ ಶ್ರೀ ಚೈತನ್ಯರಷ್ಟು ಪ್ರಭಾವವನ್ನು ಬೀರಿದವರು ಬಹುಶಃ ಮತ್ತಾರು ಇರಲಾರರು. ಇಂದು ಬಂಗಾಳಿಗಳಲ್ಲಿ ಕಂಡುಬರುವ ಮನೋಭಾವವು ಮುಖ್ಯವಾಗಿ ಶ್ರೀ ಚೈತನ್ಯ ಮತ್ತು ಅವರ ಸಂಗಡಿಗರ ಪ್ರಭಾವವನ್ನು ಪಡೆದಿರುವುದನ್ನ ವ್ಯಕ್ತಗೊಳ್ಳುತ್ತದೆ. ಶ್ರೀ ಚೈತನ್ಯರ ಅನಂತರ ವೈಷ್ಣವ ಗೀತಗಳಿಗೆ 'ಪದಾವಳಿ'ಗಳೆಂದು ಹೆಸರಾಯಿತು. ಅಲ್ಲಿಂದ ಮುಂದೆ ಎರಡು ಶತಮಾನಗಳ ಕಾಲ 'ಪದಾವಳಿ'ಗಳ ರಚನೆಯು ಮುಂದುವರಿಯಿತು. ಬಂಗಾಳಿ ಪದ್ಯಪ್ರಪಂಚದಲ್ಲಿ ಇದೇ ಪರಿಪೂರ್ಣವಾದ ಸಾಧನೆಯೆನ್ನಬಹುದು. ಚಂಡಿದಾಸ, ಜ್ಞಾನದಾಸ ಮತ್ತು ಗೋವಿಂದದಾಸ ಇವರು ತಮ್ಮ ಭಕ್ತಿಭಾವಗಳನ್ನು ಪದ್ಯಗಳ ಮೂಲಕ ಹರಿಸಿದರು. ಅವರ ಕವಿತೆಗಳಲ್ಲಿ ಜ್ಞಾನ ಮತ್ತು ಆತ್ಮ ಐಕ್ಯಗೊಂಡಿವೆ. ಬಂಗಾಳಿಜನರ ಲೌಕಿಕ, ಆಧ್ಯಾತ್ಮಿಕ ವಿಚಾರ; ಸೌಂದರ್ಯ ಮತ್ತು ಪ್ರೇಮ ರಸಭಾವ, ಮತ್ತು ಮಹತ್ವಾಕಾಂಕ್ಷೆಯ ಧ್ಯೇಯ ಇವುಗಳ ಮಧುರ ಸಮ್ಮಿಲನವನ್ನು ಈ ಸಾಹಿತ್ಯದಲ್ಲಿ ಕಾಣಬಹುದು. ಶ್ರೀ ಚೈತನ್ಯರ ಜೀವನವನ್ನು ಆಧರಿಸಿದ ಸಾಹಿತ್ಯವೂ ಸೃಷ್ಟಿಸಲ್ಪಟ್ಟಿತು. ಇದರ ಜೊತೆಗೆ ಸಂಸ್ಕೃತಮಹಾ ಕಾವ್ಯ ಮತ್ತು ಮತಗ್ರಂಥಗಳನ್ನು ಬಂಗಾಳಿ ಭಾಷೆಗೆ ಭಾಷಾಂತರಿಸುವ ಪ್ರಯತ್ನವೂ ನಡೆಯಿತು. 19ನೆಯ ಶತಮಾನದ ವರೆಗೂ ಇದು ಮುಂದುವರಿಯಿತು. ಅವುಗಳಲ್ಲಿ ಕೃತ್ತಿವಾಸನ 'ರಾಮಾಯಣ' ಮತ್ತು ಕಾಶೀರಾಮನ 'ಮಹಾಭಾರತ' ಪ್ರಸಿದ್ಧವಾಗಿವೆ. ಅವು ಮೂಲಕೃತಿಗಳ ಅಕ್ಷರಶಃ ಭಾಷಾಂತರವಲ್ಲ; ಮೂಲಕೃತಿಯನ್ನನುಸರಿಸಿದ ಸ್ವತಂತ್ರ ರಚನೆಗಳು. ಈ ಬಂಗಾಳಿ ಕೃತಿಗಳಲ್ಲಿ ವ್ಯಕ್ತವಾದ ಭಾವನೆ ಭಿನ್ನವಾಗಿದೆ; ಸನ್ನಿವೇಶಗಳಿಗೆ ಹೊಸ ಬಣ್ಣವನ್ನೀಯಲಾಗಿದೆ; ಘಟನೆಗಳಿಗೆ ನವವಾತಾವರಣವನ್ನು ಕಲ್ಪಿಸಲಾಗಿದೆ; ಮಾನವ ಪ್ರತಿಕ್ರಿಯೆಗಳಲ್ಲಿ ಆಧ್ಯಾತ್ಮಿಕ ಭಾವ ಮತ್ತು ಜೀವನಾದರ್ಶಗಳು ಕಂಡುಬರುತ್ತವೆ; ಇಡೀ ಪಾತ್ರರಚನೆಯಲ್ಲಿಯೇ ನಾವೀನ್ಯ ಕಂಡುಬರುತ್ತದೆ; ಒಟ್ಟಿನಲ್ಲಿ ಹೇಳುವುದಾದರೆ ಕೃತ್ತಿವಾಸ ಮತ್ತು ಕಾಶೀರಾಮ ಬಂಗಾಳಿ ಜೀವನದ ರೂಪವನ್ನೇ ಕಲಾತ್ಮಕವಾಗಿ ಹೊಸತು ಮಾಡಿದರು.

ಮಂಗಳ ಕಾವ್ಯಗಳು

'ಮಂಗಳ ಕಾವ್ಯಗಳು' ಬಂಗಾಳಿ ಸಾಹಿತ್ಯದ ಮತ್ತೊಂದು ಪ್ರಕಾರ. ಬಂಗಾಳದ ಜನರು ವಿವಿಧ ವಂಶೀಯರಿಂದ ಕೂಡಿರುವುದರಿಂದ ಅವರ ಸಾಹಿತ್ಯದಲ್ಲಿಯೂ ವೈವಿಧ್ಯತೆ ಕಂಡು ಬರುತ್ತದೆ. ಮಂಗಳ ಕಾವ್ಯಗಳಲ್ಲಿ ಮೂರು ವಿಧ: "ಧರ್ಮ ಮಂಗಳ'—ಹಿಂದು—ಮತ್ತು ಬೌದ್ಧಮತ ತತ್ವಗಳ ಸಮನ್ವಯವನ್ನು ಇದು ಪ್ರತಿಪಾದಿಸುತ್ತದೆ. 'ಮಾನಸ ಮಂಗಳ"—ನಾಗ ದೇವತೆಯ ಪೂಜೆಯನ್ನು ಕುರಿತಾದ ಕವಿತೆ. ಮೂರನೆಯದು: 'ಚಂಡಿ ಮಂಗಳ'—ಚಂಡಿಯ ಪೂಜೆಗೆ ಸಂಬಂಧಿಸಿದ ಕಾವ್ಯ. 'ಮಂಗಳ ಕಾವ್ಯಗಳು' ಬಂಗಾಳಿ ಭಾಷೆಯ ಪ್ರಧಾನ ಕವಿತಾ ಪ್ರಯತ್ನಗಳನ್ನು ವ್ಯಕ್ತಪಡಿಸುತ್ತವೆ. ಮಧ್ಯಮ ಯುಗದಲ್ಲಿನ ಸಾಮಾಜಿಕ ಪರಿಸ್ಥಿತಿ ಹಾಗೂ ಜನಜೀವನದ ಸ್ವಜ ಚಿತ್ರಗಳನ್ನು ಇವು ಕೊಡುತ್ತವೆ. ಇವುಗಳಲ್ಲಿ 'ಚಾರೆಯ್ಯಪದ'ಗಳಲ್ಲಿರುವ ತಾತ್ವಿಕ ಜಿಜ್ಞಾಸೆ ಇಲ್ಲ; ಮತ್ತು ವೈಷ್ಣವ ಗೀತೆಗಳಲ್ಲಿರುವ ಆಧ್ಯಾತ್ಮಿಕ ಪರವಶತೆಯೂ ಇರುವುದಿಲ್ಲ. ಅನುದಿನದ ಪ್ರಾರ್ಥನೆಗಳೆಂದೂ ಇವನ್ನು ಕರೆಯಬಹುದು.

ಇತರ ಪ್ರವಾಹಗಳು

ಗೋಪಿಚಂದರ "ಮಾನ್ಯವತಿ" 'ಶಿವಾಯಣ' ಮತ್ತು 'ಮೈಮನ್ ಸಿಂಹನ ಗೀತೆ'ಗಳಂತಹ ಇತರ ರೀತಿಯ ಕವಿತೆಗಳೂ ಇದೇ ಸಮಯ ಬೆಳಕಿಗೆ ಬಂದವು. ಅವುಗಳಲ್ಲಿ ಮೊದಲನೆಯದು ಯೋಗಾಭ್ಯಾಸದ ವಿಷಯವನ್ನೂ, ಎರಡನೆಯದು ಶಿವಭಕ್ತಿಯನ್ನೂ ಮೂರನೆಯದು ಜನಪದ ಜೀವನ—ಗೀತೆಗಳನ್ನೂ ಬಣ್ಣಿಸುತ್ತವೆ. 18ನೆಯ ಶತಮಾನದ ಮಧ್ಯಭಾಗದಲ್ಲಿ ಆಧುನಿಕ ಸಾಹಿತ್ಯಯುಗ ಆರಂಭವಾಯಿತೆನ್ನಬಹುದು. ದಾಕ್ ಮತ್ತು ಖಾನ್ ಎಂಬ ಗೀತೆಗಳು ಬೇಸಾಯ ಸಮಾಜದ ಬುದ್ಧಿವಂತಿಕೆ ಮತ್ತು ಅನುಭವಗಳನ್ನು ಪ್ರತಿಪಾದಿಸುತ್ತವೆ. 'ಸಹಜಿಯಾ'ಗಳು ವೈಷ್ಣವ ಗೀತೆಗಳ ನಕಲೆನ್ನಬಹುದು. ಕವಿತಾ ಸಾಹಿತ್ಯವು 'ಶಕ್ತ ಕಥಾವಳಿ'ಗಳ ಮೂಲಕವೂ ಹೊರಹೊಮ್ಮಿದೆ. ಅವುಗಳನ್ನು ವೈಷ್ಣವ ಪದ್ಯಾವಳಿಗಳ ರೀತಿಯಲ್ಲಿಯೇ ರಚಿಸಲಾಗಿವೆ. ಮಹಾಕಾಳಿ ಮತ್ತು ಮಹಾಮಾತೆಯ ಮಹಿಮೆಯನ್ನು ಅವುಗಳಲ್ಲಿ ವಿವರಿಸಲಾಗಿದೆ. ಹೀಗೆ ಬೆಳೆದುಬಂದ ಬಂಗಾಳಿ ಸಾಹಿತ್ಯದ ಮಧ್ಯಯುಗವು ಭರತ ಚಂದ್ರನೊಂದಿಗೆ ಕೊನೆಗೊಳ್ಳುತ್ತದೆ. ಭರತಚಂದ್ರರು 'ಚಂಡಿ ಮಂಗಳ'ದ ಧಾಟಿಯನ್ನೇ ಅನುಸರಿಸಿ 'ಅನ್ನದ ಮಂಗಳ'ವನ್ನು ರಚಿಸಿದರು. ಅದರಲ್ಲಿ ಸಮಕಾಲಿಕ ಜೀವನದ ವಿಡಂಬನ ಮತ್ತು ಟೀಕೆಗಳನ್ನು ನಾವು ಕಾಣಬಹುದು. ಅವರ ಶೈಲಿ ಹದವಾದುದು, ಕಲಾತ್ಮಕವಾದುದು. ಅವರ ಅನುಭವ ಆಳವಾದುದು; ಅಪಾರವಾದುದು. ಅವರು ಹಳೆಯ ವಸ್ತುವಿನಿಂದ ಹೊಸದಾಗಿ, ಕಲಾತ್ಮಕವಾಗಿ ಸಾಹಿತ್ಯವನ್ನು ರಚಿಸಿರುವ ಪ್ರತಿಭಾಶಾಲಿ ಆದ್ದರಿಂದ ಬ್ರಿಟಿಷರ ಆಳ್ವಿಕೆ ಮೊದಲಾಗುವ ಮುನ್ನ, ಭರತ ಚಂದ್ರರು ಪ್ರಾಚೀನ ಅರ್ವಾಚೀನ ಕಾಲಗಳ ನಡುವೆ ತಂತುವಿನಂತಿರುವರು. ನವ ಸಾಹಿತ್ಯದ ಅಂಕುರಕ್ಕೆ ಭರತ ಚಂದ್ರರೇ ಸಾಹಿತ್ಯಭೂಮಿಯನ್ನು ಹದಗೊಳಿಸಿದರೆಂದರೆ ಅತಿಶಯೋಕ್ತಿಯಾಗದು. ಇತರ ಕೃತಿಗಳಲ್ಲಿ ಸಾಮಾನ್ಯವಾಗಿ ೧೮ನೆಯ ಶತಮಾನದ ಭಾರತೀಯ ಸಾಹಿತ್ಯದಲ್ಲಿ—ವೀರ ರಸ ಪ್ರತಿಪಾದನೆಯೂ ಕಾವ್ಯಶೈಲಿ ಮತ್ತು ವಸ್ತುವಿನಲ್ಲಿ ಒಂದು ರೀತಿಯ ಸಾಮ್ಯವೂ ಕಂಡು ಬರುತ್ತದೆ; ಮತ್ತು ಅಖಿಲ ಭಾರತ ಪರಿವರ್ತನೆಯನ್ನು ತಕ್ಷಣ ಗೋಚರಿಸುತ್ತದೆ. ೧೯ನೆಯ ಶತಮಾನದಲ್ಲಿ ಬೆಳಗಿದ ಕವಿಗಳ ಕೃತಿಗಳು ಭಾರತ ಚಂದ್ರರ ಕೃತಿಗಳಿಂದ ಸ್ಫೂರ್ತಿ ಪಡೆದಂತೆ ಕಾಣುತ್ತವೆ. ರಾಧಾ ಕೃಷ್ಣರ ಪ್ರೇಮವನ್ನು ಕುರಿತ ಗೀತೆಗಳು ಅವಾವರೂ ಅವುಗಳ ಪರಿಶುದ್ಧ ವಿಚಾರ ಹಾಗು ಸರಳ ಆಕರ್ಷಣೆ ನಮ್ಮನ್ನು ಮುದಗೊಳಿಸುತ್ತದೆ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-
Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಫಹಿಂ ಕಂಪೆನಿ, ಮಂಗಳೂರು



ಚತುರ್ ವಾರ್ಷಿಕ ಯೋಜನೆ.
!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!
! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !
"ರಿಕರಿಂಗ್" ಠೇವಣಾತಿ.
ಒಂದೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.
ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.
ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ
ದಿ ವಿಜಯ ಬೇಂಕ್ ಲಿಮಿಟೆಡ್.

ಮುತ್ತು - ಸಮುದ್ರ ರಾಜನ ಸಂಪತ್ತು

ಮನ್ನಾರಿನ ಕೊಲ್ಲಿಯಲ್ಲಿ ಚಿಪ್ಪು ಹೆಕ್ಕುವ ಉಪಕ್ರಮ

ಮದ್ರಾಸಿನ ಕೃಷಿ ಮತ್ತು ಕೈಗಾರಿಕೆಯ ಮಂತ್ರಿ ಶ್ರೀ ಎಂ. ಭಕ್ತವತ್ಸಲಮರು ಕಳೆದ ವಾರ ಸ್ವತಂತ್ರ ಭಾರತದಲ್ಲಿ ಮೊದಲನೆಯ ಸಲ ಪ್ರಾರಂಭಿಸಿದ ಮುತ್ತು ಹೆಕ್ಕುವ ಕಾರ್ಯಕ್ರಮವನ್ನು ಬಂಗಾಳಾಖಾತದ ದಕ್ಷಿಣ ತೀರದ ತೂತುಕುಡಿಯಲ್ಲಿ ಉದ್ಘಾಟಿಸಿದರು. ಮದ್ರಾಸು ರಾಜ್ಯಕ್ಕೆ ನಿಸರ್ಗವು ಕೊಟ್ಟ ಐಶ್ವರ್ಯಗಳಲ್ಲಿ ಸಮುದ್ರದ ಸಂಪತ್ತು ಉಲ್ಲೇಖನೀಯವಾದುದೆಂದು ಅವರು ಈ ಸಂದರ್ಭದಲ್ಲಿ ಹೇಳಿದರು. ಒಳನಾಡಿನ ಮೀನುಗಾರಿಕೆಯಲ್ಲದೆ ಸಾಗರದಲ್ಲಿ ಮತ್ಸ್ಯ ವ್ಯವಸಾಯ ನಡೆಸುವುದಕ್ಕೂ ರಾಜ್ಯವು ಹೆಸರಾಗಿದೆ; ಅಲ್ಲದೆ ಶಂಖ ಮತ್ತು ಮುತ್ತುಗಳ ಚಿಪ್ಪನ್ನು ಸಂಗ್ರಹಿಸುವುದರಲ್ಲಿ ಮದ್ರಾಸು ರಾಜ್ಯವು ಭಾರತದಲ್ಲಿಯಷ್ಟೆ ಅಲ್ಲ—ಜಗತ್ತಿನಲ್ಲಿಯೇ ಪ್ರಸಿದ್ಧಿ ಪಡೆದಿದೆ ಎಂದು ಮಂತ್ರಿಗಳು ತಿಳಿಸಿದರು. ಶಂಖದ ಸಂಗ್ರಹ ಕಾರ್ಯವು ಪ್ರತಿ ವರ್ಷ ಕ್ರಮಬದ್ಧವಾಗಿ ನಡೆಯುತ್ತದೆ; ಹೆಚ್ಚಿನವುಗಳನ್ನು ಪಶ್ಚಿಮ ಬಂಗಾಳಕ್ಕೆ ರಫ್ತುಮಾಡಲಾಗುತ್ತದೆ. ಅಲ್ಲಿರುವ ಕುಶಲ ಕಲಾವಿದರು ಬಂಗಾಳದ ರಮಣಿಯರ ಸೌಂದರ್ಯ ಹೆಚ್ಚಿಸುವ ಅನೇಕ ಆಭರಣಗಳನ್ನು ಶಂಖದಿಂದ ತಯಾರಿಸಿ ಜೀವನಸಾಗಿಸುತ್ತಾರೆ. ಸುಮಾರು ಹತ್ತು ಸಾವಿರ ಕುಟುಂಬಗಳಿಗೆ ಈ ಉದ್ಯೋಗ ಅನ್ನ ಕೊಡುತ್ತದೆ. ಆದರೆ ಮುತ್ತು ಹೆಕ್ಕುವ ಕಾರ್ಯಕ್ರಮವು ಕೆಲವು ದಶಕಗಳಿಗೊಮ್ಮೆ ಮಾತ್ರ ನಡೆಯುತ್ತದೆ. ಈಚೆಗೆ ನಡೆದುದೆಂದರೆ ೨೬ ವರ್ಷಗಳ ಹಿಂದೆ, ೧೯೨೬-೨೭ನೇ ವರ್ಷಗಳಲ್ಲಿ- ಭಾರತವು ವಸಾಹತುವಾಗಿದ್ದಾಗ. ಭಾರತ ಸ್ವಾತಂತ್ರ್ಯ ಪಡೆದ ಮೇಲೆ ಇದೀಗ ಮೊದಲನೆಯ ಸಲ ರಾಷ್ಟ್ರೀಯ ಮಹತ್ವದ ಪರಂಪರೆಯನ್ನೊಳಗೊಂಡ ಮುತ್ತು ಹೆಕ್ಕುವ ಕಾರ್ಯಕ್ರಮವನ್ನು ತೊಡಗಿದ್ದು, ಇನ್ನು ಆರೇಳು ವಾರಗಳ ವರೆಗೆ ಇದು ಬಿಡದೆ ನಡೆಯುತ್ತದೆ.

ಸಾಹಿತ್ಯ ಕೃತಿಗಳಲ್ಲಿಯೂ ಮಾತಿನಲ್ಲಿಯೂ ಮುತ್ತಿನ ಉಲ್ಲೇಖವನ್ನು ನಾವೆಲ್ಲರೂ ಪದೇ ಪದೇ ಮಾಡುತ್ತಿರುತ್ತೇವೆ. ಮುತ್ತಿನಂಥ ಮನುಷ್ಯ, ಮುತ್ತಿನಂಥ ಮಾತು, ಮುತ್ತಿನಂಥ ಅಕ್ಷರ ಎಂಬುದಾಗಿ ನಾವು ಉಪಮೆ ಕೊಡುತ್ತೇವೆ. ನಮ್ಮ ದೇಶವನ್ನು ಮುತ್ತು ರತ್ನಗಳ ಭಂಡಾರವೆಂದು ಪ್ರಾಚೀನ ಕಾಲದಿಂದಲೂ ಭಾವಿಸಲಾಗುತ್ತದೆ. ಸಂಪತ್ಸಮೃದ್ಧವಾದ ನೆಲಜಲಗಳಿರುವ ಕಾರಣದಿಂದಲೇ ಭಾರತಕ್ಕೆ ಅನೇಕ ದೇಶದ ನೂರಾರು ವಂಶದ ಜನರು ಪ್ರವಾಸಿಗರಾಗಿ ಬಂದರು; ಇಲ್ಲಿ ನೆಲೆಸಿಂತು ಸಂಪತ್ತನ್ನು ಉಪಭೋಗಿಸುವುದಕ್ಕೊ ಅಥವಾ ಅದನ್ನು ಸೂರೆಮಾಡಿ ಕೊರಸಿಸುವುದಕ್ಕೊ ಅವರು ಮನಸ್ಸು ಮಾಡಿದರು. "ಮಬ್ಬುಗತ್ತಲೆಯ ನಿಲುಕದಾಳದೊಳು ಶುಭ್ರಕಿರಣಗಳ ರಾಶಿ ಹರಳುಗಳು" ಎಂಬುದಾಗಿ ಆಂಗ್ಲ ಕವಿಯು ಹದಿನೆಂಟನೇ ಶತಮಾನದಲ್ಲಿ ಕವನ ಕಟ್ಟಿ ಕನಸು ಕಾಣುವುದಕ್ಕೆ ಎಷ್ಟೋ ಶತಮಾನಗಳ ಮೊದಲೇ ಭಾರತೀಯರು ಸಾಗರದೊಳಗಿನ ಹೊಳೆಯುವ ಹರಳುಗಳನ್ನು ಗುರುತಿಸಿದ್ದರು. ಪ್ರಾಚೀನ ಸಂಸ್ಕೃತ ಹಾಗು ತಮಿಳು ಸಾಹಿತ್ಯ ಕೃತಿಗಳಲ್ಲಿಯೂ ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಮುತ್ತಿನ ಹೆಸರು ಬಂದಿರುವುದನ್ನು ನೋಡಿದರೆ ಇದು ಮನವರಿಕೆಯಾಗುತ್ತದೆ. ಕೇವಲ ಅಲಂಕಾರ ಸಾಧನವಾಗಿಯಷ್ಟೇ ಮುತ್ತನ್ನು ಭಾರತೀಯರು ಬಳಸುತ್ತಿರಲಿಲ್ಲ; ವಜ್ರವನ್ನು ಆಪತ್ಕಾಲದಲ್ಲಿ ಆತ್ಮಹತ್ಯೆಗಾಗಿ ನಮ್ಮ ಶ್ರೀಮಂತರು ಉಂಗುರದಲ್ಲಿ ಸುರಕ್ಷಿತವಾಗಿಟ್ಟು ಕೊಳ್ಳುತ್ತಿದ್ದಂತೆ, ಆಯುರ್ವೇದ ಔಷಧಗಳಲ್ಲಿ ಪ್ರಾಣದಾನ ಮಾಡುವ ದ್ರವ್ಯ ವಿಶೇಷವಾಗಿ ಮುತ್ತನ್ನು ನಮ್ಮ ಪಂಡಿತರು ಬೆರಸುತ್ತಿದ್ದರು.

ಮುತ್ತನ್ನು ನಮ್ಮ ದೇಶದಲ್ಲಿ ಯಾವಾಗ ಮೊತ್ತಮೊದಲು ಹೆಕ್ಕಿದರು ಮತ್ತು ಅದರ ಮಹತ್ವವನ್ನು ಯಾರು ಬೆಳಕಿಗೆ ತಂದರು ಎಂಬ ವಿಷಯದಲ್ಲಿ ಐತಿಹಾಸಿಕ ದಾಖಲೆಗಳೇನೂ ಸಿಗುವುದಿಲ್ಲ. ಆದರೆ ಪುರಾತನ ನಾಗರಿಕತೆಯ ಕೇಂದ್ರವಾಗಿದ್ದ ಚೀನದಿಂದ ಯುರೋಪು ವರೆಗಿನ ಭೂ ಭಾಗದಲ್ಲಿ ಭಾರತದ ಮುತ್ತುಗಳು ತಮ್ಮ ಸೌಂದರ್ಯಕ್ಕಾಗಿಯೂ ಗಾತ್ರಕ್ಕಾಗಿಯೂ ಖ್ಯಾತಿ ಪಡೆದಿದ್ದವೆಂಬುದನ್ನು ಅನೇಕ ಬರೆಹಗಳು ಪುಷ್ಟೀಕರಿಸುತ್ತವೆ. ವ್ಯಾಪಾರಕ್ಕೆಂದು ಭಾರತಕ್ಕೆ ಬಂದ ಗ್ರೀಕರು, ಐಗುಪ್ತರು, ಅರಬರು ಮುಂತಾಗಿ ಪ್ರತಿಯೊಂದು ಜನಾಂಗದವರು ಭಾರತದ ಮುತ್ತುಗಳನ್ನು ಬಹಳವಾಗಿ ಹೊಗಳಿದ್ದರು. ಮೌರ್ಯರ ಅರಸು ಚಂದ್ರಗುಪ್ತನ ಆಸ್ಥಾನದಲ್ಲಿ ಗ್ರೀಕರ ರಾಯಭಾರಿಯಾಗಿದ್ದ ಮೆಗಾಸ್ತನೀಜನು (ಕ್ರಿಸ್ತ ಪೂರ್ವ ೩ನೇ ಶತಮಾನ) ಮುತ್ತುಗಳ ಕುರಿತು ಅಗಾಧವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದನು. ಮನ್ನಾರಿನ ಕೊಲ್ಲಿಯ ಮುತ್ತುಗಳು ರೋಮಿನಲ್ಲಿ ಮೆರೆದಾಡುತ್ತಿದ್ದುದನ್ನು ಪ್ಲಿನಿಯ ವರ್ಣನೆಯು ಹೇಳುತ್ತದೆ. ಯೋಧಾಗ್ರೇಸರನಾಗಿದ್ದ ಸೀಸರನು ಸೌಂದರ್ಯರಾಣಿ ಎಂಬ ಬಿರುದಾಂಕಿತಳಾದ ಕ್ಲಿಯೋಪಾತ್ರಳಿಗೆ ಉಡುಗೊರೆಯಾಗಿ ಕಳಿಸಿದ ಎರಡು ಮುತ್ತುಗಳು ಭಾರತದಿಂದ ಕೊಂಡವುಗಳೆಂದು ಹೇಳಲಾಗುತ್ತದೆ. ಇದು ನಿಜವಿದ್ದರೆ ಕ್ಲಿಯೋಪಾತ್ರಳ ಲಾವಣ್ಯವನ್ನು ಹೆಚ್ಚಿಸುವುದರಲ್ಲಿ ಈ ಮುತ್ತುಗಳಿಂದ ನೆರವು ದೊರಕಿದುದರ ಶ್ರೇಯಸ್ಸು ಭಾರತಕ್ಕೆ ಸಲ್ಲುತ್ತದೆ. ಬೈಬಲಿನ ಕತೆಯೊಂದನ್ನು ನಂಬಿದರೆ ಪ್ಯಾಲಿಸ್ತಾನದ ಅರಸ ಸೊಲೊಮನನಿದ್ದಲ್ಲಿಗೆ ಶೆಬಾದ ರಾಣಿಯು ಭಾರತದ ಮುತ್ತುಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಹೋಗಿದ್ದಳು. ಟೋಲೆಮಿಯು ಕ್ರಿ. ಶ. ಎರಡನೇ ಶತಮಾನದಲ್ಲಿ ಉಲ್ಲೇಖಿಸಿದ್ದ ಮುತ್ತು ಸಂಗ್ರಹ ಕೇಂದ್ರವು ಈಗಿನ ತೂತುಕುಡಿಯಾಗಿರಬೇಕೆಂದು ವಿದ್ವಾಂಸರ ಅಭಿಪ್ರಾಯ.

ತಮಿಳರ ಇತಿಹಾಸದಲ್ಲಿ ಸಂಗಮ ಯುಗವೆಂದು ಕರೆಯಲ್ಪಡುವ ಕ್ರಿಸ್ತಶಕಾರಂಭದ ಮೊದಲಿನ ಮೂರು ಶತಕಗಳಲ್ಲಿ ಆಗಿಹೋದ ಕವಿಗಳ ಬರೆಹದಿಂದ ಕೊರ್ಕೈ ನಗರದಲ್ಲಿ ಪರವರು ಮುತ್ತು ಹೆಕ್ಕುವ ಉದ್ಯೋಗ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ನಾಲ್ಕನೇ ಶತಮಾನದ ಕೊನೆಯಲ್ಲಿದ್ದ ವರಾಹ ಮಿಹಿರನ ಸಂಹಿತೆಯಲ್ಲಿ ಪಾಂಡ್ಯ ರಾಜರ ಮುತ್ತು ಮುತ್ತು ಹೆಕ್ಕುವ ಉದ್ಯೋಗದ ಉಲ್ಲೇಖ ಕಾಣುತ್ತದೆ. ತಾಮ್ರ ಪರ್ಣಿ ಹೊಳೆಯಿಂದ ದೊರೆತ ಮುತ್ತುಗಳನ್ನು ತಾಮ್ರ ವರ್ಣಿಕೆಗಳೆಂದು ಅವನು ಕರೆದಿದ್ದನು. ಪಾಂಡ್ಯರ ಕಾಲದಲ್ಲಿ ಕೊರ್ಕೈ ಮತ್ತು ಕೊಟ್ಟಾಯಂ, ಚೋಳರ ಕಾಲದಲ್ಲಿ ಕಾವೇರಿ ಪಟ್ಟಣ, ಚೇರರ ಕಾಲದಲ್ಲಿ ಗ್ರಾಂಗನೂರು ಇವು ಬಂದರಗಳಾಗಿಯೂ ಮುತ್ತು ಹೆಕ್ಕುವ ಕೇಂದ್ರ ಹಾಗೂ ವ್ಯಾಪಾರ ಸ್ಥಾನಗಳಾಗಿಯೂ ಮೆರೆದಿದ್ದವೆಂದು ಬೇರೆ ಕೆಲವು ಮಾಹಿತಿಗಳಿಂದ ಗೊತ್ತಾಗುತ್ತದೆ. ಮೊದಲಿಗೆ ಸಾಹಸಿಗಳು ಮಾತ್ರ ನಡೆಸುತ್ತಿದ್ದ ಮುತ್ತು ಹೆಕ್ಕುವ ಉದ್ಯೋಗವು ಮುಂದೆ ಆಯಾ ರಾಜ್ಯದ ಬೊಕ್ಕಸ ತುಂಬುವ ಆದಾಯದ ಸ್ರೋತವಾಗಿ ಪರಿಣಮಿಸಿತು. ಪ್ರಾಚೀನ ತಮಿಳು ರಾಜರು ಮರಣಾಂತಿಕ ಶಿಕ್ಷೆಗೆ ಗುರಿಯಾದ ಅಪರಾಧಿಗಳನ್ನು ಸಮುದ್ರದಲ್ಲಿ ಮುಳುಗಿ ಮುತ್ತುಹೆಕ್ಕುವ ಕೆಲಸಕ್ಕೆ ಉಪಯೋಗಿಸುತ್ತಿದ್ದರೆನ್ನಲಾಗುತ್ತದೆ. ಚೋಳರು ಉತ್ಕಲದಿಂದ ಕನ್ಯಾಕುಮಾರಿ ಭೂಶಿರದವರೆಗಿನ ಕಡಲ ತೀರದಲ್ಲಿ ಮುತ್ತು ಸಂಗ್ರಹಿಸುವ ಅಧಿಕಾರವನ್ನು ೩೦೦ ವರ್ಷಗಳ ವರೆಗೆ ಇಟ್ಟುಕೊಂಡಿದ್ದರು; ಮುಂದೆ ಮುಸ್ಲಿಂ ಅರಸರ ಕೈಗೂ ಅವರಿಂದ ವಿಜಯ ನಗರದ ಅರಸರಿಗೂ ಈ ಅಧಿಕಾರ ಹೋಯಿತು.

ದಕ್ಷಿಣಭಾರತದ ಮಧುರೆ, ತಿರುನೆಲ್ವೇಲಿ ಮತ್ತು ರಾಮನಾಥಪುರ ಜಿಲ್ಲೆಗಳ ಕಡಲತೀರಗಳಲ್ಲಿಯೇ ಮುತ್ತು ಹೆಕ್ಕುವುದು ಹೆಚ್ಚು. ಹದಿಮೂರನೇ ಶತಮಾನದಲ್ಲಿ ಜಗತ್ತಿನ ಸಂಚಾರಮಾಡಿಬಂದ ಮಾರ್ಕೊಪೋಲೋನಿಂದ ಮುತ್ತಿನ ಚಿಪ್ಪುಗಳನ್ನೊಳಗೊಂಡು ಭಾರತದ ಅಮೂಲ್ಯ ದ್ರವ್ಯಗಳ ಕೀರ್ತಿ ಐರೋಪ್ಯ ರಾಷ್ಟ್ರಗಳಲ್ಲಿ ಮತ್ತಷ್ಟು ಪ್ರ[illegible]ಗಿ ವಿಸ್ತೀರ್ಣಗೀ

(೧೧ನೇ ಪುಟ ನೋಡಿರಿ)

೩ನೇ ಆವೃತ್ತಿ. ಸಿದ್ಧವಾಗಿದೆ! ಬೆಲೆ: ೨ ೮-೦ ಬೇಗ ತರಿಸಿರಿ!

ಶ್ರೀ. ಎನ್. ಕೆ. ಕುಲಕರ್ಣಿಕೃತ

ಕನ್ನಡ ಸಾಹಿತ್ಯವಾಹಿನಿ

M. A., B. A., ವಿದ್ಯಾರ್ಥಿಗಳಿಗೂ ಕನ್ನಡ ಸಾಹಿತ್ಯಾಭಿಮಾನಿಗಳಿಗೂ ಇದು Reference ಗ್ರಂಥವಾಗಿದೆ! ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಜಾಣ ಪರೀಕ್ಷೆಗೆ Text Book ವನ್ನಾಗಿ ಮಾಡಿದ್ದಾರೆ!

ಒಂದೇ ಪ್ರತಿ ಬೇಕಾದವರು 3—8—0 M. O. ಕಳಿಸಿರಿ.

ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್ನು.

ಪ್ಯಾಟಿ ಶ್ಯಾಮರಾಯರು

ಸಂಪಾದಕರು: ವಿಜಯ ಗ್ರಂಥಮಾಲೆ, ಬೆಳಗಾಂವಿ.

ಒಡೆಯರು: ಕಥಾಕುಂಜ ಗ್ರಂಥ ಭಾಂಡಾರ, ಬೆಳಗಾಂವಿ.

—ಕನ್ನಡದಲ್ಲಿ ಹೊಸ ಬಗೆಯ ಗ್ರಂಥ—

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಬೆಲೆ: ಒಂದೂವರೆ ರೂಪಾಯಿ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತುಗಳಿಗೂ ಕೆಟಲಾಗಿಗೂ ಬರೆಯಿರಿ—

ನವಯುಗ ಪ್ರೆಸ್, ಉಡುಪಿ.

ನಿಮ್ಮ ಎಲ್ಲಾ ಜೋತಿಷ್ಯ ಕೆಲಸಗಳಿಗಾಗಿ

ಇಂದೇ ಬರೆಯಿರಿ. ಪತ್ರವ್ಯವಹಾರ ಕನ್ನಡದಲ್ಲಿ.

ಪಂಡಿತ್ ಕೆ. ಎನ್. ಶಾಸ್ತ್ರಿ

B. A (Hons), M. A'logy,

ASTROLOGICAL RESEARCH CENTRE,

DEVLALI, Dist. NASIK.

ಮೇರೆ ಮೀರಿ ಹರಿವ ನದಿಗಳಿಗೆ ಅಂಕುಶ

ಪ್ರವಾಹ ನಿಯಂತ್ರಣಕ್ಕೋಸ್ಕರ ಕೈಗೊಂಡ ಕಾರ್ಯಕ್ರಮ

ಮೊನ್ನೆ ಮಂಗಳವಾರ ಮತ್ತು ಬುಧವಾರಗಳಲ್ಲಿ ರಾಷ್ಟ್ರಾಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಬಿಹಾರಿನಲ್ಲಿ ಹರಿಯುವ ಕೋಸಿ ನದಿಗೆ ಪಶ್ಚಿಮ ದಂಡೆಯ ಮೇಲೆ ಒಡ್ಡು ಹಾಕುವ ಕೆಲಸವನ್ನು ೧೬ ಮೈಲುಗಳ ವರೆಗೆ ಸಂಚರಿಸಿ ನೋಡಿದರೆಂದೂ ಜನರು ಇಲ್ಲಿ ತೋರಿಸುತ್ತಿರುವ ಉತ್ಸಾಹವನ್ನು ಪ್ರಶಂಸಿಸಿದರೆಂದೂ ವರದಿಗಳು ಹೇಳುತ್ತವೆ "ವಿದೇಶಗಳ ದೊಡ್ಡ ಯಂತ್ರಗಳನ್ನು ಉಪಯೋಗಿಸುತ್ತಿದ್ದರೆ ಈ ಕೆಲಸ ಕ್ಷಿಪ್ರದಲ್ಲಿ ಮುಗಿಯುವುದು ಸಾಧ್ಯವಿದ್ದರೂ ಜನರಲ್ಲಿ ತಾವು ಈ ಪ್ರವಾಹ ನಿಯಂತ್ರಣದ ಮಹಾ ಕಾರ್ಯದಲ್ಲಿ ನೆರವಾಗಿದ್ದೇವೆ ಎಂಬ ಭಾವನೆಯನ್ನು ಅದು ಮೂಡಿಸುತ್ತಿರಲಿಲ್ಲ. ಸರಕಾರ ಕೈಗೊಂಡಿರುವ ಅಭಿವೃದ್ಧಿ ಯೋಜನೆಗಳಲ್ಲಿ ಜನರು ಹೃತ್ಪೂರ್ವಕ ಸಹಕರಿಸುವುದಕ್ಕೆ ಅನುವನ್ನು ಕಲ್ಪಿಸಿ ಕೊಟ್ಟರೆ ಮಾತ್ರ ಯೋಜನೆಗಳು ಯಶಸ್ಸು ಸಂಪಾದಿಸಿದಂತಾಗುತ್ತವೆ. ಬಿಹಾರಿನಲ್ಲಿ ಭಾರತ ಸೇವಕ ಸಮಾಜ ಸಂಘಟಿಸಿರುವ ಜನತಾ ಸಹಕಾರದ ವಿಧಾನವು ರಾಷ್ಟ್ರದಲ್ಲಿ ನೂತನ ಪ್ರಯೋಗ" ಎಂದು ರಾಷ್ಟ್ರಾಧ್ಯಕ್ಷರು ಹೇಳಿದರೆಂದು ತಿಳಿಯುತ್ತದೆ.

ಭಾರತದಲ್ಲಿ ನೈಋತ್ಯ ಮಳೆಗಾಳಿಗಳು ಬೀಸುವ ನಾಲ್ಕಾರು ತಿಂಗಳುಗಳಲ್ಲಿ ಪ್ರವಾಹ ನಿಯಂತ್ರಣವು ದೊಡ್ಡ ಸಮಸ್ಯೆಯಾಗಿ ಜನರನ್ನೂ ಸರಕಾರವನ್ನೂ ಕೂಡಿಯೇ ದಿಗಿಲುಗೊಳಿಸುತ್ತದೆ. ದಕ್ಷಿಣ ಭಾರತದಲ್ಲಿ ಏರುತಗ್ಗುಗಳು ವಿಪರೀತವಿದ್ದು ನೆರೆಯ ನೀರು ಉಕ್ಕಿ ಹರಿಯದಂತೆಯೂ, ಹಾಗೆ ಹರಿದರೂ ಕ್ಷಿಪ್ರದಲ್ಲಿ ಇಳಿದು ಹೋಗುವಂತೆಯೂ ಮಾಡುತ್ತವೆ; ನೈಋತ್ಯ ಮಳೆಗಾಳಿ ಬೀಸುವ ಪ್ರದೇಶದಲ್ಲಿ ನದಿಗಳು ಸಣ್ಣದಾಗಿರುವುದೂ ಸಮುದ್ರ ಬಹಳ ಹತ್ತಿರದಲ್ಲಿರುವುದೂ ಪ್ರವಾಹದಿಂದ ಅನಾಹುತವಾಗದಿರುವುದಕ್ಕೆ ಇನ್ನೊಂದು ಕಾರಣ. ಆದರೆ ಉತ್ತರ ಭಾರತದಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿರುತ್ತದೆ. ಅಲ್ಲಿ ನದಿಗಳು ಬಹಳ ಉದ್ದವಾಗಿವೆಯಲ್ಲದೆ ವಿಶಾಲ ಪ್ರದೇಶಗಳ ಮೇಲಿಂದಲೇ ಹರಿಯುತ್ತವೆ. ಹಸುರು ವೃಕ್ಷಗಳಿಂದ ತುಂಬಿದ ಅರಣ್ಯಗಳಿಲ್ಲದೆ, ಭೂಮಿಯು ಮಿದುವಾಗಿ ಮಳೆ ನೀರಿನೊಡನೆ ಕೊಚ್ಚಿ ಹೋಗಿ, ಹತ್ತಿರದ ನದಿಯ ತಳವನ್ನು ತುಂಬುತ್ತದೆ ಇದರಿಂದ ನದಿಯ ನೀರಿಗೆ ಹರಿಯಲು ಜಾಗ ಸಾಲದೆ ಅದು ದಂಡೆಯ ಮೇಲೇರಿ ಹೋಗುತ್ತದೆ; ಅಥವಾ ಭೂಮಿ ತೀರ ಮಿದುವಾದ ಜಾಗದಲ್ಲಿ ಮುನ್ನುಗ್ಗಿ ತೀರ ಹೊಸ ಮಾರ್ಗವಲ್ಲಿ ಹರಿಯ ತೊಡಗುತ್ತದೆ ಇವೆರಡೂ ಗಂಡಾಂತರದ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತವೆ.

ನದಿಗಳ ಸ್ವೇಚ್ಛಾ ಪ್ರವಾಸವನ್ನು ತಡೆಗಟ್ಟುವುದು ಮತ್ತು ಮಣ್ಣು ಸವೆದು ಹೋಗದಂತೆ ನೋಡಿಕೊಳ್ಳುವುದು ಪ್ರವಾಹ ನಿಯಂತ್ರಣ ಯೋಜನೆಗಳ ತಿರುಳು; ಹರಿಯುವ ನೀರಿನ ತೀವ್ರತೆಯನ್ನು ಕಡಿಮೆ ಮಾಡುವುದಾ ನೀರು ಅತ್ಯಲ್ಪ ಕಾಲದಲ್ಲಿ ಹರಿದು ಹೋಗುವಂತೆ ಏರ್ಪಡಿಸುವುದೂ ಕಾರ್ಯಕ್ರಮದ ಮುಖ್ಯಾಂಗ. ಜಲಾಶಯಗಳ ನಿರ್ಮಾಣ, ಮತ್ತು ಕಾಲುವೆಗಳ ರಚನೆಯು ಇದಕ್ಕೆ ನೆರವಾಗುತ್ತದೆ. ದಾಮೋದರ, ಮಹಾನದಿ ಮತ್ತು ಕೋಸಿ ಯೋಜನೆಗಳು ವಿವಿಧೋದ್ದೇಶಗಳಿಂದ ಕೂಡಿದ್ದರೂ ಪ್ರವಾಹ ನಿಯಂತ್ರಣಕ್ಕೂ ಅವು ನೆರವಾಗುತ್ತವೆ. ಸಟ್ಲೆಜ್ ನದಿಗೆ ಹಾಕಿದ ಬಕ್ರಾ ಅಣೆಕಟ್ಟು, ಬೆಟ್ವಾ ನದಿಗೆ ಕಟ್ಟಿದ ಮಟಾಟಿಲ ಅಣೆಕಟ್ಟು, ಶೋಣದ ಶಾಖಾನದಿಯಾದ ರಿಹಾಂಡಕ್ಕೆ ಕಟ್ಟಿದ ಅಣೆಕಟ್ಟು ಇವೆಲ್ಲ ಆ ಕ್ಷೇತ್ರಗಳಿಗೆ ಪ್ರವಾಹದಿಂದ ರಕ್ಷಣೆಯನ್ನೂ ಕೊಡುತ್ತವೆ. ದಕ್ಷಿಣ ಭಾಗದ ಕೃಷ್ಣಾ ನದಿಯೂ ಗೋದಾವರಿಯೂ ಒಮ್ಮೊಮ್ಮೆ ನೆರೆಹಾವಳಿಯನ್ನುಂಟು ಮಾಡುತ್ತಿದ್ದು ಇದನ್ನು ತಡೆಗಟ್ಟುವ ವಿಚಾರವೂ ನರ್ಮದೆ ಮತ್ತು ತಪತಿಗಳಿಗೆ ಅಣೆಕಟ್ಟು ಹಾಕುವ ಸೂಚನೆಯೂ ಈಗ ಸರಕಾರದ ಗಮನದಲ್ಲಿದೆ. ಕಾಶ್ಮೀರದ ಕಣಿವೆಯಲ್ಲಿ ಪ್ರವಾಹ ನಿಯಂತ್ರಿಸುವುದನ್ನೂ ಸರಕಾರ ಬಯಸುತ್ತದೆ.

ಜಲಾಶಯಗಳ ನಿರ್ಮಾಣವಾಗುವುದಕ್ಕೆ ತುಂಬ ಸಮಯ ಬೇಕಾಗುವುದರಿಂದ ಆವಶ್ಯಕವಾದ ತೀವ್ರ ಕ್ರಮಗಳನ್ನು ಕೈಗೊಂಡು ಆದಷ್ಟು ಬೇಗ ವಿನಾಶದ ಪ್ರಮಾಣವನ್ನು ಕಡಿಮೆ ಮಾಡಬೇಕೆಂದೂ ಅದಕ್ಕಾಗಿ ಕೆಲವು ಆರಿಸಿದ ಕ್ಷೇತ್ರಗಳಲ್ಲಿ ಒಡ್ಡು ಹಾಕುವ ಕೆಲಸಕ್ಕೆ ಪ್ರಾಶಸ್ತ್ಯ ಕೊಡಬೇಕೆಂದೂ ಸರಕಾರ ನಿರ್ಧರಿಸಿರುತ್ತದೆ ಮೊದಲಿನೆರಡು ವರ್ಷಗಳಲ್ಲಿ ಪ್ರಾರಂಭದ ಈ ಕಾರ್ಯಕ್ರಮದೊಡನೆ ಯೋಜನೆಗಳ ಯಶಸ್ವಿಯಾದ ಕಾರ್ಯಾಚರಣೆಗೆ ಅಗತ್ಯವೆನಿಸಿದ ದತ್ತಾಂಶಗಳ ಸಂಗ್ರಹಣೆಗೂ ಸಮೀಕ್ಷೆಗೂ ವ್ಯವಸ್ಥೆ ಮಾಡಲಾಗಿರುತ್ತದೆ. ದಿಬ್ರುಗಢ್ ಮತ್ತು ಪಲಾಸ್ ಬರಿ ಕ್ಷೇತ್ರಗಳ ಛಾಯಾ ಚಿತ್ರಗಳನ್ನು ವಿಮಾನ ಮೂಲಕ ತೆಗೆದಿವೆಯಲ್ಲದೆ ಪುಣೆ ಮತ್ತು ಕಲ್ಕತ್ತೆಯಲ್ಲಿ ಪ್ರವಾಹ ನಿಯಂತ್ರಣ ವ್ಯವಸ್ಥೆಯ ಬಗ್ಗೆ ಪ್ರಯೋಗಗಳನ್ನೂ ನಡೆಸಲಾಗುತ್ತದೆ. ಆರೇಳು ವರ್ಷಗಳ ವರೆಗೆ ಹೋಗಬಹುದಾದ ದ್ವಿತೀಯ ಘಟ್ಟದಲ್ಲಿ ದಂಡೆಯನ್ನು ಏರಿಸುವುದು, ಕಾಲುವೆಗಳನ್ನು ತೋಡುವುದು ಇತ್ಯಾದಿಗಳನ್ನು ವಿಸ್ತಾರವಾದ ಪ್ರಮಾಣದಲ್ಲಿ ಕೈಗೊಂಡು ಮುಗಿಸಲಾಗುತ್ತದೆ ತೃತೀಯ ಘಟ್ಟವು ನಾಲ್ಕೈದು ವರ್ಷಗಳ ಅವಧಿಯಲ್ಲಿ ಜಲಾಶಯಗಳ ನಿರ್ಮಾಣ ಇತ್ಯಾದಿ ಕೆಲಸಗಳಿಗೆ ಸಂಬಂಧಿಸಿರುತ್ತದೆ. ಇವೆಲ್ಲದಕ್ಕೆ ಬೇಕಾದ ಹವಾಮಾನ, ಭೂಗರ್ಭ ಶಾಸ್ತ್ರ ಮತ್ತು ಜಲ ವಿಜ್ಞಾನ ವಿಷಯಕ ದತ್ತಾಂಶಗಳ ಕೊರತೆ ತೀವ್ರವಾಗಿ ಅನುಭವಕ್ಕೆ ಬರುತ್ತಿದ್ದು, ತಜ್ಞರ ಅಭಾವವೂ ಸಮಸ್ಯೆಯನ್ನು ಜಿಗುಟಾಗಿಸುತ್ತದೆ.

ಸಮೀಕ್ಷಾ ಕಾರ್ಯಕ್ರಮವನ್ನು ಕ್ಷಿಪ್ರದಲ್ಲಿ ಅನುಷ್ಠಾನಕ್ಕೆ ತರಲು ಹೆಚ್ಚಿನ ಪ್ರಯತ್ನ ನಡೆದಿದೆಯಲ್ಲದೆ ಕೆಲಸಕ್ಕೆ ಬೇಕಾದ ಜನರನ್ನು ತರಬೇತಿಯ ಮೂಲಕ ಸಿದ್ಧಗೊಳಿಸುವ ವ್ಯವಸ್ಥೆಯೂ ಭರದಿಂದ ಈಗ ನಡೆಯುತ್ತದೆ. ರಾಜ್ಯ ಸರಕಾರಗಳಿಗೆ ಜಲವಿಜ್ಞಾನದ ದಿಗ್ದರ್ಶಕರು ಯೋಗ್ಯ ಸಹಕಾರ ನೀಡುತ್ತಿದ್ದಾರೆ, ಅಲ್ಲದೆ ಜಲ ವಿಜ್ಞಾನಕ್ಕೆ ಸಂಬಂಧಿಸಿದ ವಿಶೇಷ ಮಾಹಿತಿಗಳನ್ನು ಪಡೆಯುವುದಕ್ಕಾಗಿ ನೇಪಾಳ, ಭೂತಾನ, ಸಿಕ್ಕಿಂ, ಟಿಬೇಟು ಮುಂತಾದ ದೇಶದ ಹೊರಗಿನ ಪ್ರದೇಶಗಳಲ್ಲಿಯೂ ದೇಶದ ಒಳಗೆಯೂ ಒಟ್ಟು ೭೭ ಕೇಂದ್ರಗಳನ್ನು ನೆಲೆಗೊಳಿಸಲಾಗುತ್ತದೆ. ಆಸ್ಸಾಂ, ಬಿಹಾರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಪ್ರವಾಹದಿಂದ ರಕ್ಷಣೆ ಕೊಡುವ ಯೋಜನೆಗಳನ್ನು ಸಿದ್ಧಪಡಿಸಿದ್ದು ಈಗಾಗಲೇ ಕೆಲಸ ತೊಡಗಿರುತ್ತದೆ. ಕೇಂದ್ರ ಪ್ರವಾಹ ನಿಯಂತ್ರಣ ಮಂಡಳವೂ ಗಂಗಾ-ಬ್ರಹ್ಮಪುತ್ರ ಪ್ರವಾಹ ನಿಯಂತ್ರಣ ಮಂಡಳವೂ ಈಗಾಗಲೇ ರಚಿಸಲ್ಪಟ್ಟಿದ್ದು ಬಿಹಾರ, ಆಸ್ಸಾಂ, ಪೆಪ್ಸು, ಪಂಜಾಬು, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಜಮ್ಮು ಕಾಶ್ಮೀರಗಳಲ್ಲಿ ಬೇರೆ ಬೇರೆ ಯೋಜನೆಗಳನ್ನು ಪರಿಶೀಲಿಸಿ ಪ್ರಾಶಸ್ತ್ಯಾನುಕ್ರಮವನ್ನು ನಿರ್ಧರಿಸುವ ಮತ್ತು ಮಾರ್ಗದರ್ಶನ ಮಾಡುವ ಕೆಲಸ ನಡೆದಿರುತ್ತದೆ. ಗಂಡಕ ನದಿಯ ಅವಾಂತರವನ್ನು ಕಡಿಮೆ ಮಾಡುವುದಕ್ಕೂ ದಿಬ್ರೂಘರದ ರಕ್ಷಣೆಗೂ ಸಿಲಿಗುರಿ, ಜಲಪೈಗುರಿ ಮುಂತಾದವುಗಳ ಭದ್ರತೆಗೂ ಕೆಲವು ಕೋಟಿ ರೂಪಾಯಿಗಳ ವೆಚ್ಚ ಬರುವ ಕಾರ್ಯಕ್ರಮ ನಡೆಸಲಾಗುತ್ತದೆ.

ಸಾರ್ವಜನಿಕ ಸಹಕಾರವು ಪ್ರವಾಹ ನಿಯಂತ್ರಣ ಕಾರ್ಯದಲ್ಲಿ ಅತ್ಯಗತ್ಯವೆಂದು ಭಾವಿಸಲ್ಪಡುತ್ತದೆ. ರಾಷ್ಟ್ರಾಧ್ಯಕ್ಷರು ಹೇಳಿದಂತೆ, ಜನರು ಸರಕಾರದ ಯೋಜನೆಗಳೊಡನೆ ಸಹಕರಿಸಿ, ಸಮರಸರಾದರೆ ಮಾತ್ರ ರಾಷ್ಟ್ರಾಭಿವೃದ್ಧಿಯ ಪ್ರಯತ್ನಗಳಿಗೆ ದೃಢವಾದ ತಳಹದಿ ಸಿಗುತ್ತದೆ. ಆಸ್ಸಾಮಿನಲ್ಲಿ ಮಣ್ಣಿನ ಕೆಲಸ ಮಾಡಲಿಕ್ಕೆ ಜನರಿಂದ ನೆರವು ದೊರಕುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಈ ಸಹಾಯ ಧರ್ಮಾರ್ಥವಾಗಿ ಸಿಗುತ್ತದೆ. ಉತ್ತರ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕರ ಸಹಕಾರ ದೊರಕುತ್ತಿದ್ದು ಶ್ರಮದಾನದ ಚಳವಳಿಯು ಪ್ರಾಮುಖ್ಯತೆ ಪಡೆದಿರುತ್ತದೆ. ಸಾಮಾಜಿಕ ಕಾರ್ಯಕರ್ತರು, ಮಧ್ಯಮ ವರ್ಗದ ರೈತರು ಮತ್ತು ವಿದ್ಯಾರ್ಥಿಗಳು ಕೂಲಿಕಾರರೊಡನೆ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಲು ಮುಂಬಂದಿರುವುದು ನವಜಾಗೃತಿಯ ದ್ಯೋತಕವೆಂದರೆ ತಪ್ಪಲ್ಲ. ಬಿಹಾರಿನ ಕೋಸಿ ನದಿಗೆ ಒಡ್ಡು ಹಾಕುವ ಯೋಜನೆಯಲ್ಲಿ ಭಾರತ ಸೇವಕ ಸಮಾಜವು ೧೬ ಸಾವಿರ ಜನರ ನೆರವು ಕೊಡುತ್ತಿದ್ದು ಗ್ರಾಮ ಸಮಿತಿಗಳನ್ನೂ ಕೂಲಿಕಾರರ ಸಹಕಾರ ಸಂಘಗಳನ್ನೂ ಸಮಾಜವು ಸಂಘಟಿಸುತ್ತದೆ. ಶ್ರಮದಾನ ಮಾಡಲಾರದೆ ಹೊಟ್ಟೆಯ ಪ್ರಶ್ನೆಯೆ ದೊಡ್ಡದಾಗಿರುವ ಕೂಲಿಕಾರರಿಗೆ ಸಮಾಜವೇ ಮಜೂರಿಯನ್ನು ಕೊಡುತ್ತದೆ. ಜನರು ಹೀಗೆ ಉತ್ಸಾಹದಿಂದ ಸಹಕಾರ ಕೊಡುತ್ತಿರುವಾಗ ಪ್ರವಾಹ ನಿಯಂತ್ರಣ ಯೋಜನೆಗಳ ಮಂಜೂರಾತಿಯಲ್ಲಿ ಅಧಿಕಾರಿಗಳು ವಿಳಂಬ ತೋರಿಸದಂತೆ ಸರಕಾರವೂ ಮುಂಜಾಗ್ರತೆ ವಹಿಸಿರುತ್ತದೆ. ಇದರಿಂದ ಆರ್ಥಿಕ ಹಾಗು ತಾಂತ್ರಿಕ ಅಡಚಣೆಯು ನಿವಾರಿಸಲ್ಪಟ್ಟು ಯೋಜನೆಗಳ ಶೀಘ್ರ ಕಾರ್ಯಾಚರಣೆಗೆ ಸಹಾಯವಾಗುತ್ತದೆ.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:–
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೋ:– (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಚತುರ್ ವಾರ್ಷಿಕ ಯೋಜನೆ.
!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ
ನೀವೂ ಭಾಗಿಗಳಾಗಿರಿ !!!
! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !
"ರಿಕರಿಂಗ್" ಠೇವಣಾತಿ.
ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ
ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ $4\frac{1}{4}$%.
ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ
! ಅನುಕೂಲವಾದ ಯೋಜನೆ.
ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ
ದಿ ವಿಜಯ ಬೇಂಕ್ ಲಿಮಿಟೆಡ್.

ಆಂಧ್ರ ರಾಜ್ಯದಲ್ಲಿ ದ್ವಿತೀಯ ಮಂತ್ರಿಮಂಡಳ

ರಾಷ್ಟ್ರಾಧ್ಯಕ್ಷರ ಆಳ್ವಿಕೆಗೆ ಕಳೆದ ನವೆಂಬರ ೧೫ನೇ ತಾರೀಕಿನಿಂದ ಒಳಪಟ್ಟಿದ್ದ ಆಂಧ್ರ ರಾಜ್ಯವಲ್ಲಿ ಮೊನ್ನೆ ಸೋಮವಾರ ೨೮ನೇ ತಾರೀಕಿನಂದು ಶ್ರೀ ಬಿ. ಗೋಪಾಲ ರೆಡ್ಡಿಗಳು ಮುಖ್ಯ ಮಂತ್ರಿಯಾಗಿರುವ ದ್ವಿತೀಯ ಮಂತ್ರಿ ಮಂಡಳ ಅಧಿಕಾರವನ್ನು ಸ್ವೀಕರಿಸಿತು. ಅಂದು ಎಂಟು ಮಂದಿಯ ಸಚಿವ ಸಂಪುಟವು ಪೂರ್ವಾಹ್ನ ೧೧ ಗಂಟೆಗೆ ರಾಜಭವನದಲ್ಲಿ ಗವರ್ನರರಾದ ಶ್ರೀ ಸಿ. ಎಂ. ತ್ರಿವೇದಿಯವರ ಸಮ್ಮುಖದಲ್ಲಿ ಪ್ರತಿಜ್ಞಾಬದ್ಧವಾಯಿತು.

ಎಂಟು ಜನರ ಸಂಪುಟ

ಮಂತ್ರಿ ಮಂಡಳದಲ್ಲಿ ಶ್ರೀಗಳಾದ ಬಿ. ಗೋಪಾಲ ರೆಡ್ಡಿ (ಮುಖ್ಯ ಮಂತ್ರಿ) ಎನ್ ಸಂಜೀವ ರೆಡ್ಡಿ (ಉಪ ಮುಖ್ಯ ಮಂತ್ರಿ), ಕಳಾ ವೆಂಕಟರಾವ್, ಕೆ. ಚಂದ್ರ ಮೌಳಿ, ಜಿ. ಲಚ್ಚಣ್ಣ, ಎನ್. ವಿ. ರಾಮ ರಾವ್ ಮತ್ತು ಎ. ಬಿ. ನಾಗೇಶ್ವರ ರಾವ್ ಇದ್ದಾರೆ. ಇವರಲ್ಲಿ ಮೊದಲಿನ ಐವರು ಕಾಂಗ್ರೆಸಿಗರು; ಬಳಿಕದ ಇಬ್ಬರು ಕೃಷಿಕರ ಲೋಕ ಪಕ್ಷದವರು; ಕೊನೆಯವರು ಪ್ರಜಾ ಪಕ್ಷದ ಸದಸ್ಯ. ಮಂತ್ರಿಮಂಡಳದ ಎಂಟು ಮಂದಿಯಲ್ಲಿ ಆರು ಜನರು ಹಿಂದೆ ಮಂತ್ರಿ ಪದವನ್ನು ಏರಿ ಕೆಲಸಗಳನ್ನು ನಿರ್ವಹಿಸಿದ ಅನುಭವಿಗಳು.

ಹಿಂದು ಉತ್ತರಾಧಿಕಾರ ವಿಧೇಯಕಕ್ಕೆ ರಾಜ್ಯಸಭೆಯ ಬೆಂಬಲ

ವಾರೀಸು ಅಧಿಕಾರ

ರಾಜ್ಯ ಸಭೆಯಲ್ಲಿ ಮಂತ್ರಿ ಪಾಟಸ್ಕರರು ಹಿಂದು ಉತ್ತರಾಧಿಕಾರ ವಿಧೇಯಕವನ್ನು ಕಳೆದ ವಾರ ಮಂಡಿಸುತ್ತಾ ಅದನ್ನು ಸಂಸತ್ತಿನ ಉಭಯ ಸಭೆಗಳ ಪರಿಶೀಲಕ ಸಮಿತಿಗೆ ಒಪ್ಪಿಸಿ ಕೊಡಬೇಕೆಂದು ಸೂಚಿಸಿದರು. ಈ ವಿಧೇಯಕವು ಮಗಳಿಗೆ ತಂದೆಯ ಆಸ್ತಿಪಾಸ್ತಿಯಲ್ಲಿ ಮಗನಿಗೆ ಸಲ್ಲುವ ಪಾಲಿನ ಅರೆವಾಸಿಯಷ್ಟು ಸಿಗಬೇಕೆಂದು ವಿಧಿಸುತ್ತದೆ. ಆದರೆ, ಅವಿಭಕ್ತ ಕುಟುಂಬಕ್ಕೂ ಮರುಮಕ್ಕತ್ತಾಯಂ ಮತ್ತು ಅಳಿಯ ಸಂತಾನ ಪದ್ಧತಿಗೂ ವಿಧೇಯಕವು ಅನ್ವಯಿಸುವುದಿಲ್ಲ.

ಕಾಯಿದೆಯ ಪರಿವರ್ತನೆ

ವಿಧೇಯಕವನ್ನು ಮಂಡಿಸುತ್ತಾ ಮಂತ್ರಿಗಳು ಹಿಂದು ಕಾಯಿದೆಗಳು ಮನುವಿನ ಕಾಲದಿಂದ ಈಗಿನ ಕಾಲದ ವರೆಗೆ ಸಮಯಕ್ಕೆ ಹೊಂದಿಕೊಂಡು ಅನೇಕ ಬದಲಾವಣೆಗಳಿಗೆ ಒಳಪಟ್ಟಿವೆ ಎಂದರು. ಮನುವಿನ ಸೂತ್ರಗಳನ್ನು ಆರು ಶತಮಾನಗಳ ಬಳಿಕ ಯಾಜ್ಞವಲ್ಕ್ಯನು ತಿದ್ದುಪಡಿ ಮಾಡಿದನೆಂಬುದನ್ನು ನೆನಪಿಗೆ ತಂದುಕೊಡುತ್ತಾ ಹಿಂದು ಕಾಯಿದೆಗಳ ಕ್ರೋಢೀಕರಣದ ಪ್ರಯತ್ನವನ್ನು ಯಾರೂ ದೂಷಿಸಲಾಗದು ಎಂದು ತಿಳಿಸಿದರು. ಬ್ರಿಟಿಷರ ಕಾಲದಲ್ಲಿಯೇ ೧೯೧೫ರಿಂದ ಮೂವತ್ತೈದು ವರ್ಷಗಳೊಳಗೆ ೧೯ ಸಲ ಹಿಂದು ಕಾಯಿದೆಯನ್ನು ತಿದ್ದುಪಡಿಗೊಳಪಡಿಸಲಾಯಿತು ಎನ್ನುತ್ತಾ ಏಕರೂಪವಾದ ಕಾಯಿದೆಗಳಿಂದ ಪ್ರಯೋಜನವಾಗುವುದೆಂದು ಅಭಿಪ್ರಾಯಪಟ್ಟರು.

ಅಭಿಪ್ರಾಯ ಸಂಗ್ರಹ

ಮಂತ್ರಿಗಳು ರಾಜ್ಯ ಸರಕಾರಗಳ ಮತ್ತು ಸಾರ್ವಜನಿಕ ಮಹತ್ವದ ಸಂಘ ಸಂಸ್ಥೆಗಳ ಅಭಿಪ್ರಾಯನ್ನು ಸಂಗ್ರಹಿಸುವ ಪ್ರಯತ್ನವನ್ನು ಕೇಂದ್ರ ಸರಕಾರ ಮಾಡಿದ್ದಾಗಿ ಪ್ರಕಟಿಸಿದರು. ಆದರೆ ಭಾರತದ ೨೭ ರಾಜ್ಯ ಸರಕಾರಗಳಲ್ಲಿ ೧೪ ವಿಧೇಯಕದ ತತ್ವವನ್ನು ಒಪ್ಪಿದ್ದವು; ಉಳಿದವರಲ್ಲಿ ಕೆಲವು ವಿಧೇಯಕಕ್ಕೆ ಅರ್ಧಸಮ್ಮತಿಯನ್ನಿತ್ತು ತಮ್ಮದೇ ಸೂಚನೆಗಳನ್ನು ಮಾಡಿದ್ದವು; ೧೦ ರಾಜ್ಯ ಸರಕಾರಗಳು ಮಾತ್ರ ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ ಎಂದು ಮಂತ್ರಿಗಳು ವಿವರಿಸಿದರು. ಕೇಂದ್ರ ಸಾಮಾಜಿಕ ಕಲ್ಯಾಣ ಮಂಡಳವು ವಿಧೇಯಕವನ್ನು ಪ್ರಗತಿಪರ ಹೆಜ್ಜೆಯಾಗಿ ಭಾವಿಸಿತೆಂದೂ ಸಾಮಾನ್ಯವಾಗಿ ಸನಾತನಿಗಳನ್ನೂ ಸಂಪ್ರದಾಯಪ್ರಿಯರನ್ನೂ ಹೊರತುಪಡಿಸಿದರೆ ಉಳಿದೆಲ್ಲರೂ ವಿಧೇಯಕಕ್ಕೆ ಬೆಂಬಲವಿತ್ತಿರುವರೆಂದೂ ಮಂತ್ರಿಗಳು ಸಾರಿದರು.

ಸದಸ್ಯರ ಒತ್ತಾಯ

ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ವಿಧೇಯಕದ ತತ್ವವನ್ನು ಒಪ್ಪಿದರು. ಆದರೆ, ಅದು ಸಾಕಷ್ಟು ಪ್ರಗತಿಪರವಾಗಿಲ್ಲ ಎಂದು ವಾದಿಸಿದರು. ಅವಿಭಕ್ತ ಕುಟುಂಬಗಳಿಗೆ ವಿಧೇಯಕವು ಅನ್ವಯಿಸುವುದಿಲ್ಲವೆಂದು ಸಾರಿರುವುದರಿಂದ ಹಿಂದುಗಳಲ್ಲಿ ಹೆಚ್ಚಿನವರಿಗೆ ವಿಧೇಯಕದ ಪ್ರಯೋಜನ ಸಿಗುವುದು ಕಷ್ಟ ಎಂದು ಕೆಲವರು ಟೀಕಿಸಿದರು. ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳ ಅರೆವಾಸಿಯಷ್ಟೇ ಪಾಲನ್ನು ಕೊಡುವುದು ಸರಿಯಲ್ಲ; ಮಗನಿಗೆ ಸಿಕ್ಕಿದಷ್ಟೇ ಮಗಳಿಗೂ ಸಲ್ಲಬೇಕು ಎಂದು ಬೇರೆ ಕೆಲವರು ಒತ್ತಾಯ ಪೂರ್ವಕ ಹೇಳಿದರು ಸೀತಿಗೆಟ್ಟ ಹೆಂಡತಿಗೆ ಗಂಡನ ಆಸ್ತಿಪಾಸ್ತಿಯಲ್ಲಿ ಪಾಲುಸಿಗದಂಬ ನಿಯಮವನ್ನು ಕಿತ್ತುಹಾಕಬೇಕೆಂದು ಕೆಲವರು ಆಗ್ರಹಪಟ್ಟರು. ಒಬ್ಬಿಬ್ಬರು ಸದಸ್ಯರು ಹೆಂಡತಿಗೆ ಗಂಡನ ಆಸ್ತಿಪಾಸ್ತಿಯಲ್ಲಿ ಪಾಲು ಸಿಗುವುದಾದರೆ, ಗಂಡನಿಗೆ ಹೆಂಡತಿಯ ಸೊತ್ತಿನಲ್ಲೂ ಅಧಿಕಾರವಿರಬೇಕು ಎಂದರು.

ಮಹಿಳೆಯರ ಬೆಂಬಲ

ಪ್ರಧಾನ ಮಂತ್ರಿಗಳ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮಿ ಮೆನೊನ್ನರು ಆವೇಶಭರಿತ ಭಾಷಣವನ್ನು ಮಾಡುತ್ತಾ ಹೆಂಗಸಿಗೆ ಆಸ್ತಿಪಾಸ್ತಿಗಳನ್ನು ನೋಡಿಕೊಂಡು ಹೋಗುವ ಶಕ್ತಿ ಇಲ್ಲವೆಂಬ ಸನಾತನಿಗಳ ಅಭಿಪ್ರಾಯವನ್ನು ಖಂಡಿಸಿದರು. ಮೋಸದ ಅನೇಕ ಪ್ರಕರಣಗಳಲ್ಲಿ ಗಂಡಸರು ಸಹ ಸಿಲುಕಿರುವರೆಂದೂ ಆದರೆ ಇದು ಗಂಡಸರಿಗೆ ಆಸ್ತಿಯ ಮೇಲಿನ ಅಧಿಕಾರವಿಲ್ಲದಂತೆ ಮಾಡದಾದರೆ, ಹೆಂಗಸರಿಗೆ ಮಾತ್ರ ನಿರ್ಬಂಧವೇಕೆಂದೂ ಅವರು ಪ್ರಶ್ನಿಸಿದರು. ಹೆಂಗಸರಿಗೆ ಯೋಗ್ಯ ಶಿಕ್ಷಣವನ್ನು ಕೊಡುವ ಮೂಲಕ ತಿಳವಳಿಕೆಯನ್ನು ಹೆಚ್ಚಿಸಲು ಪ್ರಯತ್ನಿಸುವುದು ಅವಶ್ಯವೆಂದು ಅವರು ಸಾರಿದರು. ಹೆಂಗಸಿಗೆ ಪಾಲು ಕೊಡುವುದರಿಂದ ಭೂಮಿ ಹರಿದು ಹಂಚಿ ಹೋದೀತೆಂಬ ಆಕ್ಷೇಪದಲ್ಲಿ ಹುರುಳಿಲ್ಲವೆನ್ನುತ್ತಾ ಗಂಡಸರಿಗೆ ಪಾಲು ಕೊಟ್ಟರೆ ಆಸ್ತಿ ತುಂಡಾಗದೆ ಉಳಿಯುತ್ತದೆಯೆ ಎಂದು ಕೇಳಿದರು. ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಷ್ಟೆ ಪಾಲು ಸಿಗಬೇಕೆಂದು ಅವರು ಒತ್ತಾಯಿಸಿದರಲ್ಲದೆ, ಘಟನೆಯು ವ್ಯಕ್ತಿಯನ್ನು ಮಾತ್ರ ಮನ್ನಿಸುತ್ತದೆಂದೂ ಆದುದರಿಂದ ಅವಿಭಕ್ತ ಕುಟುಂಬಗಳನ್ನು ಈ ವಿಧೇಯಕದ ಕಕ್ಷೆಯಿಂದ ಹೊರತುಪಡಿಸಲಾಗದೆಂದೂ ವಿನಂತಿಸಿದರು.

ಮಂತ್ರಿಗಳ ಮನಸ್ಸು

ಶ್ರೀ ಪಾಟಸ್ಕರರು ಚರ್ಚೆಗೆ ಉತ್ತರ ಕೊಡುತ್ತಾ ಸದಸ್ಯರ ಯಾವ ಅಭಿಪ್ರಾಯಕ್ಕೂ ತಮ್ಮ ವಿರೋಧವಿಲ್ಲವೆಂದು ಧ್ವನಿಸಿದರು. ಇಲ್ಲಿ ನಡೆದ ಚರ್ಚೆಯನ್ನು ಪರಿಶೀಲಕ ಸಮಿತಿಯು ಪರ್ಯಾಲೋಚಿಸಿ ತನಗೆ ಸೂಕ್ತ ಕಂಡ ರೀತಿಯಲ್ಲಿ ಬದಲಾವಣೆಗಳನ್ನು ಮಾಡಬಹುದೆಂದು ಅವರು ಹೇಳಿದರು. ಅಳಿಯ ಸಂತಾನ ಮತ್ತು ಮರುಮಕ್ಕತ್ತಾಯಂ ಪದ್ಧತಿಯ ಜನರೂ ಈ ವಿಧೇಯಕವನ್ನು ಸ್ವೀಕರಿಸುವುದಾದರೆ ಸಂತೋಷ ಎಂದರು. ಹೆಣ್ಣು ಮಕ್ಕಳಿಗೆ ಪಾಲು ಕೊಡುವುದರಿಂದ ಆಸ್ತಿಯು ಹಂಚಿಹಂಚಾಗುವುದೆಂದು ಹೇಳುವವರು ತಮ್ಮ ವಿರೋಧಕ್ಕೊಂದು ನೇಪಮುಂದೊಡ್ಡುತ್ತಿದ್ದಾರೆಯೇ ಹೊರತು ಅದರಲ್ಲಿ ತಿರುಳಿಲ್ಲ ಎಂದು ಆ ಆಕ್ಷೇಪವನ್ನು ತಳ್ಳಿಹಾಕಿದರು. ಪರಿಶೀಲಕ ಸಮಿತಿಗೆ ವಿಧೇಯಕವನ್ನು ಒಪ್ಪಿಸಿಕೊಡುವ ಸೂಚನೆಯು ಯಾವ ವಿರೋಧವೂ ಇಲ್ಲದೆ ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು.

ಸಂರಕ್ಷಣೆಯ ಭಾರ

ಲೋಕಸಭೆಯಲ್ಲಿ ಸಂರಕ್ಷಣ ಶಾಖೆಯ ಬೇಡಿಕೆಗಳ ಮೇಲೆ ಚರ್ಚೆ ನಡೆದಾಗ ಅನೇಕ ಸದಸ್ಯರು ಸಂರಕ್ಷಣ ಮಂತ್ರಿಗಳ ದಕ್ಷತೆಯನ್ನೂ ಆ ಶಾಖೆಯಲ್ಲಿ ಸಾಧಿಸಲಾದ ಮಿತವ್ಯಯವನ್ನೂ ಕೊಂಡಾಡಿದರು. ಬೇರೆ ಕೆಲವರು ಹಳೆಯ ಮಾದರಿಯ ಹಡಗುಗಳೇ ಮುಂತಾದ ಸಲಕರಣೆಗಳನ್ನು ಕೊಂಡುಕೊಳ್ಳುವುದರಿಂದ ಅಷ್ಟೇನೂ ಪ್ರಯೋಜನವಿಲ್ಲ ಎಂದರು. ನೆಹರುಗಳು ಭಾಷಣ ಮಾಡುತ್ತಾ ಸಂರಕ್ಷಣ ಶಾಖೆಯ ಕಾರ್ಯಕ್ಷಮತೆಯನ್ನೂ ಪ್ರಗತಿಯನ್ನೂ ಮುಕ್ತಕಂಠದಿಂದ ಪ್ರಶಂಸಿಸಿದರು. ಸಂರಕ್ಷಣ ವ್ಯವಸ್ಥೆಗೆ ಹಣವನ್ನು ವೆಚ್ಚಮಾಡುವಾಗ ಭಾರತವು ಯುದ್ಧದ ಆಲೋಚನೆಯನ್ನು ಮಾಡುವುದಿಲ್ಲ; ನಮಗೆ ಸಾವಿರಾರು ಮೈಲು ದೂರದ ವರೆಗೆ ಗುರಿಹೊಡೆಯಬಹುದಾದ ಶಸ್ತ್ರಗಳೇನು ಬೇಡ; ದೇಶವನ್ನು ಅಪಾಯದಿಂದ ರಕ್ಷಿಸುವುದಕ್ಕೆ ಸೈನ್ಯಗಳು ಸಮರ್ಥವಿದ್ದರೆ ಸಾಕು ಎಂದರು ಹಳೆಯ ಹಡಗುಗಳನ್ನು ತರಬೇತಿಗಾಗಿ ಕೊಂಡುಕೊಳ್ಳಲಾಗಿದೆಯೆಂದೂ ಹೊಸ ಹಡಗುಗಳಿಗೆ ಹಣ ಹಾಕುವುದಕ್ಕಿಂತ ಇದು ಲೇಸೆಂದು ಸರಕಾರದ ಅಭಿಪ್ರಾಯವಿರುವುದಾಗಿಯೂ ಅವರು ಸ್ಪಷ್ಟೀಕರಿಸಿದರು.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOBMAY 3-

ತಾ. 31ರಿಂದ ಜನಪ್ರಿಯ 2ನೇ ವಾರ.

ಹೆಣ್ಣಿನ ಜೀವನದ ಒಂದು ಸಜೀವ ಚಿತ್ರ ಬಹುರಮ್ಯವಾಗಿ ಚಿತ್ರಿತವಾಗಿರುವದರಿಂದಲೇ ನಾಡಿಗರೆಲ್ಲರ ಪ್ರಶಂಸೆಗಳಿಸಿತು.

ಕನ್ಯಾದಾನ (ಕನ್ನಡ)

ವರ್ಷದ ಬಹುಮಾನ ಪಡೆದ ಚಿತ್ರ—

ಪಂಢರಿ, ಬಾಲಕೃಷ್ಣ, ಇಂದು ಶೇಖರ್.

ಮುಂದಿನ ಚಿತ್ರ: ಹಾಡು, ನೃತ್ಯಗಳಿಲ್ಲದೆ ನಿಮಿಷ ನಿಮಿಷಕ್ಕೂ ನಿಮ್ಮ ಕುತೂಹಲ ಕೆರಳಿಸುವ ಅದ್ಭುತ ಪತ್ತೆದಾರಿ.

ಎ. ವಿ. ಎಂ. ರವರ **ಅಂದನಾಳ್** (ತಮಿಳು)

ಶಿವಾಜಿಗಣೇಶನ್, ಪಂಢರಿಬಾಯಿ,

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. **10-** } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. **12-8** } ರೂ. **1000**ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.

ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೩೧-೩-'೫೫	೩೦

ಜಗತ್ಕಲ್ಯಾಣ ಮತ್ತು ವಿಜ್ಞಾನ

ಮದ್ರಾಸು ವಿಶ್ವವಿದ್ಯಾಲಯದ ಆಶ್ರಯದಲ್ಲಿ ರುತರ್‌ಫೋರ್ಡ್ ಸ್ಮಾರಕ ಉಪನ್ಯಾಸವನ್ನು ಮಾಡಿದ ಆಸ್ಟ್ರೇಲಿಯದ ಅಣು ವಿಜ್ಞಾನಿ ಪ್ರೊ. ಎಂ. ಎಲ್. ಇ. ಒಲಿಫೆಂಟರು ಇಂದಿನ ವಾತಾವರಣದಲ್ಲಿ ವಿಜ್ಞಾನಿಯ ಸಾಮಾಜಿಕ ಹೊಣೆಗಾರಿಕೆ ಹೆಚ್ಚಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದು ಸಮಯೋಚಿತವಾದ ಸಲಹೆ ಎಂದು ನಮ್ಮ ಅಭಿಪ್ರಾಯ. ವಿಜ್ಞಾನದ ಉಪಯೋಗವು ಈಗ ದೊಡ್ಡ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸುತ್ತಿದೆ ಎಂಬ ಅವರ ಹೇಳಿಕೆಯು ಅಣುಶಸ್ತ್ರಗಳ ಪ್ರಾಯೋಗಿಕ ಸ್ಫೋಟನವೇ ಮುಂತಾದ ಭೀಕರ ಪರಿಣಾಮ ಮಾಡುವ ಕ್ರಿಯೆಗಳಿಂದ ಪುಷ್ಟೀಕೃತವಾಗುತ್ತದೆ. ಅಣುಶಸ್ತ್ರಗಳನ್ನು ಯುದ್ಧದಲ್ಲಿಯಲ್ಲ-ಅವುಗಳ ಪರಿಣಾಮ ಏನಾದೀತು ಎಂದು ಊಹಿಸುವುದಕ್ಕೋಸ್ಕರ ಪ್ರಯೋಗಗಳಲ್ಲಿ ಉಪಯೋಗಿಸುವುದರಿಂದಲೇ ಮನುಷ್ಯ ಸಂತತಿಗೆ ಅಪಾರ ಹಾನಿಯಾಗುವುದೆಂದು ಹೇಳಲಾಗುತ್ತದೆ. ಮೊನ್ನೆ ಬ್ರಿಟನಿನ ಪಾರ್ಲಿಮೆಂಟಿನಲ್ಲಿ ಕೂಲಿಕಾರ ಪಕ್ಷದ ಆರು ಮಹಿಳಾ ಸದಸ್ಯರು ಮಾನವ ಜನಾಂಗದ ಮೇಲೆ ಅಣುಶಸ್ತ್ರಗಳ ಸ್ಫೋಟನ ಪ್ರಯೋಗಗಳು ಮಾಡುವ ಅನಾಹುತದ ಅಂದಾಜನ್ನು ಸಂಗ್ರಹಿಸಬೇಕೆಂದೂ ಇದಕ್ಕೋಸ್ಕರ ಅಂತಾರಾಷ್ಟ್ರೀಯ ಸ್ವರೂಪದ ವೈಜ್ಞಾನಿಕ ಪರಿಷತ್ತೊಂದನ್ನು ನೆರೆಯಿಸಬೇಕೆಂದೂ ಗೊತ್ತುವಳಿಯನ್ನು ತಂದರು. ಡಾ. ಎಡಿತ್ ಸಮ್ಮರ್‌ಸ್ಕೆಲ್ ಎಂಬ ಎರಡು ಮಕ್ಕಳ ತಾಯಿಯು ಸ್ತ್ರೀಯ ಪ್ರಜೋತ್ಪಾದನಾಶಕ್ತಿಯನ್ನು ಅಣುಶಕ್ತಿಯ ಸ್ಫೋಟನ ಪ್ರಯೋಗಗಳ ಪರಿಣಾಮವು ಹ್ರಾಸಗೊಳಿಸುವುದೆಂದು ಸಾರಿದರು. ಅಷ್ಟೇ ಅಲ್ಲದೆ, ಕ್ಯಾನ್ಸರ್ ರೋಗಕ್ಕೂ ಇದು ಕಾರಣವಾಗುವುದೆಂದು ತಿಳಿಸಿದರು. ಇಷ್ಟರ ವರೆಗೆ ಅಮೇರಿಕವು ೫೦, ರಶಿಯವು ೧೨ ಮತ್ತು ಬ್ರಿಟನು ೩ ಅಣು ಶಸ್ತ್ರಗಳನ್ನು ಸ್ಫೋಟನ ಮಾಡಿದೆಯೆಂದೂ ಇವರ ದುಷ್ಪರಿಣಾಮಗಳು ಈಗಾಗಲೇ ಸ್ಪಷ್ಟವಾಗಿ ಕಂಡು ಬಂದಿವೆಯೆಂದೂ ಅವರು ಹೇಳಿದರು. ಬ್ರಿಟನಿನ ಆರೋಗ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸಾಮಾನ್ಯವಾಗಿ ಜನರು ಹೆದರಿಕೊಂಡಿರುವಷ್ಟು ಅನಾಹುತವು ಅಣುಶಸ್ತ್ರಗಳ ಸ್ಫೋಟನ ಪ್ರಯೋಗದಿಂದ ಆಗುತ್ತಿಲ್ಲ; ವಿಕಿರಣಶೀಲ ಪ್ರತಿಕ್ರಿಯೆಯು ತುಸು ಕಂಡು ಬರುತ್ತಿದ್ದರೂ ಅದರಿಂದ ಯಾರೂ ಹೈರಾಣಗೆಡಬೇಕಿಲ್ಲ ಎಂದು ಸಮಾಧಾನದ ಮಾತನ್ನಾಡಿ, ಸರಕಾರಕ್ಕೆ ಜಯ ತಂದು ಕೊಟ್ಟು, ಕೂಲಿಕಾರರ ಗೊತ್ತುವಳಿಯನ್ನು ಪರಾಭವಗೊಳಿಸಿದರು. ಆದರೆ ಇದರಿಂದ ಯಾರೂ ಸಂತುಷ್ಟರಾದಂತಿಲ್ಲ—ಬ್ರಿಟನಿನ ವಿಜ್ಞಾನಿಗಳಲ್ಲಿ ಪ್ರಮುಖರಾದವರೇ ಆರೋಗ್ಯ ಮಂತ್ರಿಯಾಗಿದ್ದಂತೆ ರಾಜಕಾರಣಿಯೂ ಆಗಿರುವ ಮೇಕ್ ಲಿಯೋಡರ ಹೇಳಿಕೆಯನ್ನು ಒಪ್ಪುವುದಿಲ್ಲ. ಪ್ರೊ. ಜೋಸೆಫ್ ರೊಜ್‌ಬ್ಲಾಟ್ ಎಂಬ ಬ್ರಿಟನಿನ ಪ್ರಖ್ಯಾತ ಅಣು ವಿಜ್ಞಾನಿಗಳು ಅಣುಶಸ್ತ್ರಗಳ ಪ್ರಯೋಗದಿಂದ ಕೂಡಿದ ಯುದ್ಧ ಮತ್ತಿತರ ಉಪಕ್ರಮಗಳು ತಾತ್ಕಾಲಿಕ ಸ್ವರೂಪದ ಉಗ್ರಪರಿಣಾಮಗಳ ದೃಷ್ಟಿಯಿಂದಷ್ಟೇಯಲ್ಲ—ದೀರ್ಘ ಕಾಲದ ವರೆಗೆ ಮಾನವ ಜನಾಂಗದ ಮೇಲೆ ಮಾಡುವ ದುಷ್ಪರಿಣಾಮದ ದೆಸೆಯಿಂದಲೂ ಬಹಿಷ್ಕಾರಯೋಗ್ಯವಾದವುಗಳೆಂದು ಅಣು ವಿಜ್ಞಾನಿಗಳ ಪತ್ರಿಕೆಯಲ್ಲಿ ಬರೆದಿರುವರು. ಈಗ ಅಲ್ಪ ಪ್ರಮಾಣದಲ್ಲಿಯಷ್ಟೇ ಕಂಡು ಬರುವ ಅನಾಹುತವು ನೂರು ವರ್ಷಗಳ ಬಳಿಕ ಮಾನವ ಸಂತತಿಯು ನಾಶದಲ್ಲಿಯೇ ಮುಗಿಯಬಹುದು ಎಂದವರು ಹೇಳುತ್ತಾ ಇದನ್ನು ತಡೆಗಟ್ಟುವುದಕ್ಕಾಗಿ ಈಗಿಂದೀಗ ಜಾಗರೂಕತೆ ವಹಿಸಬೇಕು ಎಂದಿದ್ದಾರೆ. ಅಣು ವಿಸ್ತರಣ ಕ್ರಿಯೆಯ ಗಂಭೀರ ಪರಿಣಾಮಗಳಿಂದ ರಕ್ಷಿಸಿಕೊಳ್ಳುವ ಯಾವ ಉಪಾಯವೂ ಇಲ್ಲವೆನ್ನುತ್ತಾ ಯುದ್ಧಾಸಕ್ತ ರಾಷ್ಟ್ರಗಳಲ್ಲದೆ ತಟಸ್ಥರಾಷ್ಟ್ರಗಳೂ, ಒಂದೇ ಮಾತಿನಲ್ಲಿ ಹೇಳುವುದಾದರೆ ಸಮಸ್ತ ಜಗತ್ತೂ, ಅಣುಶಸ್ತ್ರಗಳ ಸ್ಫೋಟನದ ಕಹಿಫಲವನ್ನು ಉಣ್ಣಬೇಕಾಗುವುದೆಂದು ಅವರು ಆಧಾರ ಸಹಿತವಾಗಿ ಅಭಿಪ್ರಾಯಪಟ್ಟಿದ್ದಾರೆ. ಇವರ ಹೇಳಿಕೆಯನ್ನು ಬ್ರಿಟನಿನ ಬೇರೆ ಕೆಲವು ವಿಜ್ಞಾನಿಗಳ ಹೇಳಿಕೆಗಳೂ ಸಮರ್ಥಿಸುತ್ತವೆ. ಎಡಿನ್‌ಬರೋ ವಿಶ್ವವಿದ್ಯಾಲಯದ ಪ್ರೊ. ವಾಡಿಂಗ್‌ಟನ್ನರು ಆರೋಗ್ಯ ಮಂತ್ರಿಗಳ ಭರವಸೆಯ ಮಾತನ್ನು ನಂಬುವುದರಿಂದ ಕೆಲಸಸಾಗದು – ಪ್ರಾಣಿವರ್ಗಗಳ ಮೇಲಾಗುವ ದುಷ್ಪರಿಣಾಮಗಳ ಸ್ಪಷ್ಟ ಕಲ್ಪನೆಯನ್ನು ಇಟ್ಟುಕೊಳ್ಳಬೇಕು ಎಂದು ಒತ್ತಿ ಹೇಳಿದರೆ ಬ್ರಿಟನಿನ ವೈದ್ಯಕೀಯ ಸಂಶೋಧನಾ ಸಂಸ್ಥೆಯು ಪ್ರಶ್ನೆಯನ್ನು ಲಘುವಾಗಿ ಕಾಣಬಾರದೆರಿದು ಎಚ್ಚರಿಸಿತು. ಬ್ರಿಟನಿನ ವಿಜ್ಞಾನಿಗಳು ಮಾತ್ರವಲ್ಲ. ಸ್ವತಃ ಅಮೇರಿಕದ ವಿಜ್ಞಾನಿಗಳೂ ಅಣುಶಸ್ತ್ರಗಳ ಸ್ಫೋಟನವು ಯಾವ ಉದ್ದೇಶದಿಂದಲೇ ಆಗಲಿ, ಮಾನವ ಜಾತಿಯ ಅಳಿವನ್ನು ತರುವುದೆಂದು ಸ್ಪಷ್ಟವಾಗಿ ಹೇಳುತ್ತಾರೆ ಶತ್ರು ನಾಶವು ನಮ್ಮ ಉದ್ದೇಶವಾಗಿದ್ದರೂ ನಾವು ಸಹ ನಾಶವಾಗುತ್ತೇವೆಂದೂ, ಜೊತೆಗೆ ಯಾವ ಸುದ್ದಿಗೂ ಹೋಗದ ಜನಾಂಗಗಳ ನಾಶಕ್ಕೂ ಕಾರಣವಾಗುತ್ತೇವೆ-ದೂ ಈ ಕಾರಣದಿಂದ ಅಣುಶಸ್ತ್ರಗಳ ಸ್ಫೋಟನವನ್ನೆ ಬಿಟ್ಟುಕೊಡಬೇಕೆಂದೂ ಎಲ್ಲ ವಿವೇಕಿಗಳೂ ಆಗ್ರಹದಿಂದ ಪ್ರತಿಪಾದಿಸುತ್ತಾರೆ. ಆದರೆ ಜಗತ್ತಿನ ಭವಿಷ್ಯ ನಿರ್ಣಾಯಕರೆಂದೆನಿಸಿಕೊಳ್ಳುವ ರಾಜಕೀಯ ಪಟುಗಳು ಇದಕ್ಕೆ ಕಿವಿಗೊಡುವುದಿಲ್ಲ— ಅವರು ವಿಜ್ಞಾನಿಗಳಿಗಿಂತಲೂ ತಮಗೆಯೇ ಹೆಚ್ಚು ತಿಳಿದಿರುವಂತೆ ವರ್ತಿಸುತ್ತಾರೆ; ವಿಜ್ಞಾನಿಗಳನ್ನು ತಮ್ಮದಾಸರನ್ನಾಗಿ ಮಾಡಿಕೊಂಡಿದ್ದಾರೆಂದರೂ ತಪ್ಪಲ್ಲ. ಕೆಲವು ಪ್ರಾಮಾಣಿಕ ಬುದ್ಧಿಯ ವಿಜ್ಞಾನಿಗಳು ಮಾನವನ ನಾಶಕ್ಕೆ ಕಾರಣವಾಗುವ ಶಸ್ತ್ರಾಸ್ತ್ರಗಳ ಸಂಶೋಧನೆಗೆ ಹೇಸಿ, ವಿಧಾಯಕ ಮಾರ್ಗದಲ್ಲಿ ಮುಂದರಿಯುವ ಅಪೇಕ್ಷೆಯನ್ನು ವ್ಯಕ್ತಪಡಿಸಬಹುದು. ಡಾ. ಓಪೆನ್‌ಹೈಮರಂಥವರು ಅಣು ಬಾಂಬನ್ನು ಜಲಜನಕ ಬಾಂಬಿನ ರೂಪದಲ್ಲಿ ಅಭಿವೃದ್ಧಿಗೊಳಿಸಲು ಮೊದಲು ಉದಾಸೀನ ತೋರಿಸಿದ್ದರು. ಆದರೆ, ರಾಜಕಾರಣಿಗಳ ಒತ್ತಾಯ ಜಲಜನಕ ಬಾಂಬನ್ನು ಸೃಷ್ಟಿಸುವಂತೆ ಮಾಡಿತು; ಮತ್ತೀಗ ಕೊಬಾಲ್ಟ್ ಬಾಂಬಿನ ರಚನೆಯ ಸುದ್ದಿ ಕೇಳಿ ಬರುತ್ತದೆ; ನ್ಯೆಟ್ರೋಜನ್ ಬಾಂಬಿನ ಸೃಷ್ಟಿಯ ದಿನವೂ ಬಹಳ ದೂರವಿಲ್ಲವೆನ್ನಲಾಗುತ್ತದೆ. ಇವೆಲ್ಲ ವಿಜ್ಞಾನಿಗಳು ರಾಜಕಾರಣಿಗಳಿಗೆ ಮಣಿಯುವುದರಿಂದಲೇ ಸಾಧ್ಯವಾಗುವ ವಿಷಯಗಳೆಂಬುದರಲ್ಲಿ ಅನುಮಾನವಿಲ್ಲ. ವಿಜ್ಞಾನಿಗಳು ಹೀಗೆ ಸಂಕುಚಿತ ಬುದ್ಧಿಯ ರಾಜಕಾರಣಿಗಳ ದಾಸ್ಯವನ್ನು ಸ್ವೀಕರಿಸಿ, ಮಾನವ ಜನಾಂಗದ ನಾಶದ ದಿನವನ್ನು ಹತ್ತಿರ ತರಬಹುದೇ ಎಂಬುದು ನೀತಿಯ ಬೆಲೆಯರಿತವರು ಉತ್ತರಿಸಬೇಕಾದ ವಿಷಯ. ಪ್ರೊ. ಒಲಿಫೆಂಟರು ಇದೇ ಪ್ರಶ್ನೆಯನ್ನು ಹಾಕಿದರು. ವಿಜ್ಞಾನಿಗಳು ತಮಗೆ ಸಂಶೋಧನೆಯ ಸ್ವಾತಂತ್ರ್ಯವಿದೆಯೆಂದು ವಿಧ್ವಂಸಕ ಶಸ್ತ್ರಾಸ್ತ್ರಗಳ ಸೃಷ್ಟಿಯಲ್ಲಿಯೇ ಮನಸ್ಸು ಹಾಕುವುದಕ್ಕೆ ನೋಡಬಾರದು; ಅದಕ್ಕೆ ಯಾರೂ ಅಸ್ಪದ ಕಲ್ಪಿಸಿ ಕೊಡಕೂಡದು; ಈ ಮಟ್ಟಿಗೆ ವಿಜ್ಞಾನಿಗಳ ಸ್ವಾತಂತ್ರ್ಯಕ್ಕೆ ನೀತಿಯ ನಿರ್ಬಂಧವನ್ನು ಹೇರಬೇಕು ಎಂದು ಪ್ರೊ. ಒಲಿಫೆಂಟರು ಸಾರಿದರು. ಸಮಾಜಾಭ್ಯುದಯದ ಸಾಮಾನ್ಯಸೂತ್ರಗಳಿಗೆ ವಿಜ್ಞಾನಿಗಳು ಸಹ ಬದ್ಧರಾಗಿರಬೇಕೆಂದೂ ಎಲ್ಲ ವೈಜ್ಞಾನಿಕ ಸಂಶೋಧನೆಗಳೂ ಮಾನವನ ಸುಖಸಾಧನೆಯನ್ನೆ ಹೇತುವಾಗಿಟ್ಟುಕೊಳ್ಳಬೇಕಲ್ಲದೆ ನಾಶದ ದಾರಿಯನ್ನು ರೂಪಿಸುವ ಘಾತುಕ ಧೋರಣೆಯನ್ನು ಅನುಸರಿಸಲಾಗದೆಂದೂ ಅವರು ಎಚ್ಚರಿಸಿದರು. ಈ ವಿಷಯದಲ್ಲಿ ವಿಜ್ಞಾನಿಗಳ ಹೊಣೆಗಾರಿಕೆಯಂತೆ ರಾಜಕೀಯ ಪಟುಗಳ ಜವಾಬುದಾರಿಯೂ ಹೆಚ್ಚಿರುತ್ತದೆ. ಸಮಾಜದ ಕುರಿತು ತಾವು ನಿರ್ವಹಿಸಬೇಕಾದ ಧರ್ಮದ ಮತ್ತು ಕರ್ತವ್ಯದ ಪರಿಜ್ಞಾನವು ವಿಜ್ಞಾನಿಗಳಲ್ಲಿ ಮತ್ತು ರಾಜಕೀಯ ಧುರೀಣರಲ್ಲಿ ಜಾಗೃತವಾದರೆ ಮಾತ್ರ ಮಾನವ ಕಲ್ಯಾಣದ ಮತ್ತು ಸಮೃದ್ಧ ಜಗತ್ತಿನ ಧ್ಯೇಯ ಸಾಧಿಸಲ್ಪಟ್ಟು ಸುಖ ಜೀವನ ನಡೆಸುವುದು ಸಾಧ್ಯ. ಹಾಗಾಗಬೇಕೆಂಬುದೇ ನಮ್ಮೆಲ್ಲರ ಬಯಕೆ—ಎಂಬುದನ್ನು ಕಂಠೋಕ್ತವಾಗಿ ಸಾರುತ್ತೇವೆ.

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ

ಭಾಷಾಂತರ.

ಬೆಲೆ. 0-8-0

ನವಯುಗ ಪ್ರೆಸ್ ಉಡುಪಿ.

ಪಾಕಿಸ್ತಾನದಲ್ಲಿ ವಿಷಮ ಪರಿಸ್ಥಿತಿ

ಪಾಕಿಸ್ತಾನದಲ್ಲಿ ಗವರ್ನರ್ ಜನರಲರು ವಿಷಮಪರಿಸ್ಥಿತಿಯನ್ನು ಸಾರಿ, ಸರ್ವಾಧಿಕಾರವನ್ನೂ ತಮ್ಮ ಕೈಗೆ ತೆಗೆದುಕೊಂಡಿದ್ದಾರೆ. ಘಟನಾ ಸಮಿತಿಯು ವಿಸರ್ಜನೆಯಾಗಿರುವ ದೆಸೆಯಿಂದ ಮುಂಗಡ ಪತ್ರಕ್ಕೂ ಅವರೇ ಸಮ್ಮತಿಯ ಮುದ್ರೆಯೊತ್ತುವರು ಎಂದು ತಿಳಿದು ಬರುತ್ತದೆ.

ಮಹಾರಾಷ್ಟ್ರಗಳ ಸಮ್ಮೇಳನ

ಅಧ್ಯಕ್ಷ ಐಸೆನ ಹೋವರು ಮಹಾರಾಷ್ಟ್ರಗಳ ವರಿಷ್ಠರು ಸಮ್ಮೇಳನದಲ್ಲಿಸೇರಿ ಮಾತು ಕತೆಯಾಡುವ ಸೂಚನೆಯೊಂದನ್ನು ಕಳೆದ ವಾರ ಮುಂದಿಟ್ಟರು. ಇದನ್ನು ರಶಿಯದ ನೂತನ ಪ್ರಧಾನಿ ಬಲ್ಗೇನಿನ್ನರು ಕೂಡಲೇ ಸ್ವಾಗತಿಸಿ, ಜಾಗತಿಕ ತ್ವೇಶ ನಿವಾರಣೆಗೆ ಇದರಿಂದ ನೆರವು ದೊರೆತರೆ ತಾನು ಈ ಮಾದರಿಯ ಸಮ್ಮೇಳನದಲ್ಲಿ ಭಾಗವಹಿಸಲು ಸಂತೋಷಿಸುವೆನೆಂದರು.

ಯುನೂರ ಸಂದರ್ಶನೆ

ಬರ್ಮಾದ ಪ್ರಧಾನ ಮಂತ್ರಿ ಯುನೂ ಹೊಸ ದೆಹಲಿಗೆ ಆಗಮಿಸಿ ಇಂಡೋನೇಶಿಯದ ಬಾಂಡುಂಗದಲ್ಲಿ ಮುಂದಿನ ತಿಂಗಳು ಸೇರಲಿರುವ ಆಫ್ರೋಸ್ಯರಾಷ್ಟ್ರಗಳ ಪ್ರಧಾನ ಮಂತ್ರಿಗಳ ಪರಿಷತ್ತಿನ ಕುರಿತು ನೆಹರುಗಳೊಡನೆ ಸಮಾಲೋಚನೆ ನಡೆಸಿದರು. ಈ ಪರಿಷತ್ತು ಯಾವುದೇ ಬಣದ ವಿರುದ್ಧ ಭಾವನೆಯನ್ನು ಪ್ರಚೋದಿಸುವ ಉದ್ದೇಶ ಪಡೆದಿಲ್ಲವೆಂದೂ ಪರಸ್ಪರ ಸಹಕಾರ ಭಾವನೆಯನ್ನು ಸಂವರ್ಧಿಸುವುದೇ ಇದರ ಗುರಿಯೆಂದೂ ನೆಹರುಗಳಂತೆ ಯುನೂ ಸಹ ಹೇಳಿದರು.

ಬೇವಾನರ ಮನವೊಲಿಸುವಿಕೆ

ಬ್ರಿಟನಿನ ಕೂಲಿಕಾರ ಪಕ್ಷವು ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬೇವಾನರ ಸಂಪೂರ್ಣ ಹೊರದುಬ್ಬುವ ಕ್ರಮ ಅಷ್ಟು ಇಷ್ಟವಾದುದಲ್ಲವೆಂದು ಅಭಿಪ್ರಾಯ ಪಡುತ್ತಿರುವಂತೆ ಕಾಣುತ್ತದೆ. ಅವರೊಡನೆ ಸಂಧಾನ ನಡೆಸಲು ಉಪ ಸಮಿತಿಯೊಂದು ನೇಮಕವಾಗಿದ್ದು, ಆಟ್ಲಿಗಳಷ್ಟೇ ಶಕ್ತಿ ಸಂಪನ್ನರಿರುವ ಬೇವಾನರ ಮನವೊಲಿಸುವುದರಲ್ಲಿ ಸಮಿತಿಗೆ ಯಶಸ್ಸು ಸಿಗಬಹುದೆಂದು ಹೇಳಲಾಗುತ್ತದೆ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

(INCORPORATED IN

BALANCE SHEET AS

CAPITAL & LIABILITIES	Rs. As. Ps.	Rs. As.
1. Capital:		
AUTHORISED CAPITAL: 8,000 shares of Rs. 25/- each	2,00,000 0 0	
ISSUED CAPITAL: 4,000 shares of Rs 25/- each	1,00,000 0 0	
SUBSCRIBED CAPITAL: 3,194 shares of Rs. 25 - each	79,850 0 0	
CALLED AND PAID UP CAPITAL: at Rs. 15/- per share	47,910 0 0	
Add: Calls in advance	1,200 0 0	
	49,110 0 0	
Forfeited shares	Nil	49,110
2. Reserve Fund and other Reserves:		9,000
3. Deposits and other Accounts:		
Fixed & Time Deposits	1,25,151 5 6	
Savings Bank Deposits	13,036 10 2	
Current Accounts, Contingency Accounts, etc.	15,537 14 11	1,53,725
4. Borrowings from other Banking Companies, Agents, etc:		Nil
5. Bills Payable:		Nil
6. Bills for collection being Bills Receivable, as per contra:		Nil
7. Other Liabilities:		
For expenses	347 0 0	
Unclaimed Dividends	948 1 6	
Interest accrued on Deposits	3,962 15 0	5,258
8. Acceptances, Endorsements and other obligations, as per contra:		Nil
9. Profit & Loss Account:		
Profit as per last Balance Sheet	4,923 9 10	
Less Appropriations: Reserve Fund, Dividends and other Reserves	4,704 4 10	
	219 5 0	
Add: Profit for the year brought from Profit & Loss A/c	4,570 10 8	
	4,789 15 8	
Less: Appropriated to Statutory Reserve Fund and other Reserves	2,159 4 0	2,630
10. Contingent Liability:		Nil
Total ...		2,19,724 10

OFFICE OF THE BANK, MULKI. Date 12—2—1955.

(Sd.) M. R. M. PUNJA.
" A. DODDANNA SHETTY.
" KRISHNA M SALIAN.

(Sd) P. SANJIVA HEGDE.
" M. SHANKERA SHETTY.
" K. SANJIVA SHETTY.

DIREC

Dr.

PROFIT AND LOSS ACCOUNT FOR

EXPENDITURE	Rs. As.
1. Interest paid on Deposits Borrowings, etc..	5,150
2. Salaries and Allowances and Provident Fund (Including salary of Rs. 1,500/- paid to Manager)	3,106
3. Directors and Local Committee Members' fees and allowances	48
4. Rent, Taxes, Insurance, Lighting etc.	269
5. Law Charges	Nil
6. Postage, Telegrams and Stamps	106
7. Auditor's Fees	100
8. Depreciation on and repairs to the Banking Cos., property	34
9. Stationery, Printing, Advertisement, etc., ...	343
10. Loss from sale of or dealing with non-Banking Assets	Nil
11. Other expenditure	468
12. Balance of Profit	4,570
Total ...	14,197

OFFICE OF THE BANK, MULKI, Date 12—2—1955.

(Sd.) M. R. M. PUNJA.
„ A. DODDANNA SHETTY.
„ KRISHNA M. SALIAN.

(Sd.) P. SANJIVA HEGDE,
„ M. SHANKERA SHETTY.
„ K. SANJIVA SHETTY.

DIRECTO

AUDITOR

I have audited the fore-going Balance Sheet of the Moolky Bank, Limited, Mulki, (South Kanara). as at 31st December 1954 and also the Pro *(a)* I hav[illegible]ied all the informations and explanations I have required and have found them satisfactory; *(b)* the transactions of the Bank conformity with Law; *(d)* Such Profit and Loss account show a true balance of Profit for the year; *(e)* Such Balance Sheet exhibits a true and corr *(f)* in my opinion, the books of Accounts have been kept by the Bank as required by Section 130 of the Indian Companies Act 1913.

Mangalore,
13—2 1955.

LIMITED, MULKI.

(LIMITED LIABILITY)

ST DECEMBER 1954.

PROPERTY & ASSETS	Rs. As. Ps.	Rs. As. Ps.
ash:		
In hand		26,589 10 3
alances with other Banks:		
(i) In India:		
On Fixed Deposits	30,000 0 0	
On Current Accounts	11,266 6 11	
(ii) Outside India	Nil	41,266 6 11
oney at call and short notice:		Nil
nvestments:		
(i) Securities of the Central and State Governments of the face value of Rs. 35,500/-, at cost ...	35,353 2 0	
(ii) Shares	Nil	
(iii) Debentures and Bonds	Nil	
(iv) Other Investments	Nil	
(v) Gold	Nil	35,353 2 0
dvances:		
I. Loans, Cash Credits, Over Drafts, etc.		
(i) In India	1,13,598 11 7	
(ii) Outside India	Nil	
I. Bills Discounted and purchased		
(i) Payable in India	Nil	
(ii) Payable outside India	Nil	1,13,598 11 7
articulars of Advances:		
(i) Debts considered good in respect of which the Banking Company is fully secured	98 874 0 1	
(ii) Debts considered good for which the Banking Company holds no other security than the Debtors' personal security	Nil	
(iii) Debts considered good secured by the personal liabilities of one or more parties in addition to the personal security of the Debtors	14 724 11 6	
(iv) Debts considered doubtful or bad, not provided for	Nil	
Total ...	1,13,598 11 7	
(v) Debts due by Directors or Officers of the Banking Company or any of them either severally or jointly with other persons	8213 0 1	
(vi) Debts due by Companies or Firms in which the Directors of the Banking Company are interested as Directors, Partners or Managing Agents, or, in the case of Private Companies, as Members	Nil	
(vii) Maximum total amount of advances, including temporary advances made at any time during the year to Directors or Managers or Officers of the Banking Company or any of them either severally or jointly with any other persons	8333 3 10	
(viii) Maximum total amount of advances, including temporary advances granted during the year to the Companies or Firms in which the Directors of the Banking Company are interested as Directors, Partners or Managing Agents, or, in the case of Private Companies, as Members	Nil	
(ix) Due from the Banking Companies	Nil	
Bills Receivable being Bills For Collection, as per contra		Nil
Constituents' Liabilities For Acceptances, Endorsements and Other Obligations, as per contra		Nil
Premises; less depreciation:		Nil
Furniture and Fixtures:		
At Cost	1,088 9 1	
Additions in the year	72 0 0	
	1,160 9 1	
Less: Depreciation to date	773 9 1	387 0 0
Other Assets:		
Interest accrued or due on Investments	1,530 11 0	
Tax provisionally deposited	909 1 0	2,529 12 0
Non-Banking Assets Acquired in Satisfaction of claims:		Nil
Total ...		2,19,724 10 9

(Sd.) N. M. ADYANTHAYA,
President.

(Sd.) M. R. H. PUNJA,
Manager.

YEAR ENDED 31st DECEMBER 1954. *Cr.*

INCOME	Rs. As. Ps.
terest and Discount	12,913 2 5
ommission, Exchange and Brokerage	1,278 15 0
ents	Nil
et Profit on sale of Investments, etc.	Nil
et Profit on revaluation of Investments, etc.	Nil
come from Banking Assets and profit from sale or dealing with such Assets	Nil
ther receipts	5 8 0
Total ...	14,197 9 5

(Sd.) N. M. ADYANTHAYA,
President.

(Sd.) M. R. H. PUNJA,
Manager.

FICATE.

ccount for the year ended upon that date and report that:

me to my notice have been within the powers of the Bank; *(c)* in my opinion, the above Balance Sheet, and Profit and Loss Account are drawn up in

e state of affairs of the Bank according to the best of my information and the explanations given to me and as shown by the books of the Bank; and

(Sd.) **M. S. Krishna Rau**, *F. C. A.*,
Chartered Accountant.

ಉಡುಪಿ

ಕಸ್ತೂರ್ಬಾ ಮೆಡಿಕಲ್ ಕಾಲೇಜು— ಬಗ್ಗೆ ಕೇಂದ್ರ ಸರಕಾರದ ಸಹಾಯವನ್ನಪೇಕ್ಷಿಸಿ ಡಾ| ಟಿ. ಎಮ್. ಎ. ಪೈಗಳು ಈಚೆಗೆ ದಿಲ್ಲಿಗೆ ಹೋಗಿ ಕೇಂದ್ರದ ಆರೋಗ್ಯ ಮಂತ್ರಿ ಮತ್ತು ಉಚ್ಚ ಅಧಿಕಾರಿಗಳನ್ನು ಭೇಟಿಯಾಗಿರುವರೆಂದೂ ಅವರೆಲ್ಲರೂ ಈ ಕಾಲೇಜಿನ ಭಾವೀ ಬೆಳವಣಿಗೆಯ ಬಗ್ಗೆ ಸಹಾನುಭೂತಿಯನ್ನು ಪ್ರದರ್ಶಿಸಿರುವರಾಗಿಯೂ ತಿಳಿದು ಬರುತ್ತದೆ. ಈ ಕಾಲೇಜಿನಲ್ಲಿ ಆಸ್ಪತ್ರೆ ಸೌಕರ್ಯಗಳನ್ನು ಮಣಿಪಾಲದಲ್ಲೇ ಒದಗಿಸಬೇಕೆಂದೂ ಅದನ್ನು ನಡೆಸುವ ಖರ್ಚು ಪ್ರಾಂತೀಯ ಸರಕಾರ ವಹಿಸಿಕೊಳ್ಳುವಲ್ಲಿ ಕಟ್ಟಡ ಸಲಕರಣೆಯ ಸಂಪೂರ್ಣ ಖರ್ಚನ್ನು ಕೇಂದ್ರಸರಕಾರವು ವಹಿಸಿಕೊಳ್ಳಲು ಸಿದ್ಧವಿದೆ ಎಂದು ಶ್ರೀಮತಿ ರಾಜಕುಮಾರಿ ಅಮೃತಕೌರರು ಹೇಳಿರುವುದಾಗಿ ತಿಳಿದು ಬರುತ್ತದೆ. ತಾತ್ಕಾಲಿಕವಾಗಿ ಕಾಲೇಜಿಗೆ ಬೇಕಾಗುವ ತಾಂತ್ರಿಕ ಸಹಾಯ-ಸಲಕರಣೆಗಳನ್ನು ಕೇಂದ್ರ ಸರಕಾರವು ಕೊಡುವ ಭರವಸೆಯೂ ದೊರೆತಿದೆಎನ್ನಲಾಗುತ್ತದೆ.

ಡಾ| ಪೈಗಳು ದಿಲ್ಲಿಯಿಂದ ಹಿಂತಿರುಗುವಾಗ ಮಧ್ಯಪ್ರದೇಶದ ಗವರ್ನರ್ ಶ್ರೀ ಪಟ್ಟಾಭಿ ಸೀತಾರಾಮಯ್ಯನವರ ಆತಿಥ್ಯವನ್ನು ಪಡೆದರು. ನಾಗಪುರದಲ್ಲಿ ಮಣಿಪಾಲ ಕಾಲೇಜಿನ ಮಾದರಿಯಲ್ಲಿ ಮೆಡಿಕಲ್ ಕಾಲೇಜನ್ನು ಸ್ಥಾಪಿಸಲು ಮುಂದಾದವರ ಸಭೆಯಲ್ಲಿ ಭಾಗವಹಿಸಿ ಅವರಿಗೆ ಸ್ವಾನುಭವವನ್ನಿತ್ತರು. ಸಭಾಧ್ಯಕ್ಷತೆ ವಹಿಸಿದ್ದ ಮಾನ್ಯ ಪಟ್ಟಾಭಿಯವರು ಡಾ| ಪೈಗಳ ಯೋಜನೆಯನ್ನು ಸಮರ್ಥಿಸಿ ಮಾತನಾಡಿದರು.

ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಸಮಿತಿ ಸಭೆಯು ತಾ 26 ರಲ್ಲು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕುಡುಕರ ಹಾವಳಿಯು ಈಚೆಗೆ ಹಗಲು ಹೊತ್ತಿನಲ್ಲೂ ಅಲ್ಲಲ್ಲಿ ತೋರಿ ಬರುವುದರಿಂದ ಅವುಗಳ ಕಡೆಗೆ ಹೆಚ್ಚು ನಿಗಾಕೊಡುವಂತೆ ಪ್ರೊಹಿಬಿಶನ್ ಅಧಿಕಾರಿಗಳ ಗಮನಕ್ಕೆ ತರುವ ನಿರ್ಣಯವಾಯಿತು. ಜಿಲ್ಲಾ ಬೋರ್ಡು ಸದಸ್ಯರು ಮಾಸಾಶನ ರೂಪ್ಯಾ 50/- ಪಡೆಯುವ ನಿರ್ಣಯವನ್ನು ವಿರೋಧಿಸಿ, ಅದು ಕಾರ್ಯರೂಪಕ್ಕೆ ಬಾರದಂತೆ ಬೋರ್ಡಿನ ಕಾಂಗ್ರೆಸ್ ಪಕ್ಷದವರು ಕಾರ್ಯಕ್ರಮ ಕೈಕೊಳ್ಳಬೇಕೆಂದು ವಿನಂತಿಸಿ ನಿರ್ಧಾರವಾಯಿತು. ಪ್ರಧಾನ ಮಂತ್ರಿ ಪಂಡಿತನೆಹರೂರವರು ಈಚೆಗೆ ಅಪಘಾತದಿಂದ ಪಾರಾದ ಬಗ್ಗೆ ದೇವರನ್ನು ಪ್ರಾರ್ಥಿಸುವ ಮತ್ತು ಎಪ್ರಿಲ್ ತಿಂಗಳಲ್ಲಿ ಸತ್ಯಾಗ್ರಹವಾರವನ್ನು ಆಚರಿಸುವ ನಿರ್ಣಯಗಳಾದುವು. ಉಡುಪಿ ನಗರ ಸಭೆಯ ಉಪ ಚುನಾವಣೆಯಲ್ಲಿ ಕಾಂಗ್ರೆಸು ಹುರಿಯಾಳುಗಳಿಗೆ ಮತವಿತ್ತು ಪ್ರೋತ್ಸಾಹಿಸಿದ ಮತದಾರರನ್ನು ಅಭಿನಂದಿಸಲಾಯಿತು.

ನಗರ ಸಭೆಯು— ತಾ 26 ರಲ್ಲು ಸಂಜೆ ಚೆಯರ್ ಮೆನ್ ಡಾ| ಸಿ. ವಿ ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪಿಂಟ್‌ಲೆಂಡ್ ಬಂಗ್ಲೆ ಮತ್ತು ಅದರ ಸಹರೆಯವರ ಬಿಡಾರವನ್ನು ನಗರ ಸಭೆಗೆ ಬಿಟ್ಟು ಕೊಡುವಂತೆ ದ. ಕ. ಜಿಲ್ಲಾ ಬೋರ್ಡನ್ನು ವಿನಂತಿಸಲಾಯಿತು. ಶಿವಳ್ಳಿ ಗ್ರಾಮದ ಸರ್ವೆ ನಂಬ್ರ 100/6ರ ಕೆಲವಂಶವನ್ನು ಪಣಿಯಾಡಿ ರಸ್ತೆ ಪೂರ್ಣತೆಗಾಗಿ ಪಡಕೊಳ್ಳಬೇಕೆಂದು ನಿರ್ಣಯವಾಯಿತು. ಮುನಿಸಿಪಲ್ ಪ್ರಯಾಣಿಕರ ಬಂಗ್ಲೆಯನ್ನು ವಿಸ್ತರಿಸುವ ಮತ್ತು ಕಡಿಯಾಳಿ, ಮೂಡನಿಡಂಬೂರು, ಕಾಡಬೆಟ್ಟು, ಅಂಬಲಪಾಡಿ ವಾರ್ಡುಗಳಲ್ಲಿ ಕೆಲವು ರಸ್ತೆಗಳನ್ನು ಮಾಡಬೇಕೆಂದಿರುವ ಯೋಜನೆಯನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಸೇರಿಸುವಂತೆ ಜಿಲ್ಲಾ ಕಲೆಕ್ಟರರನ್ನು ಕೇಳಿಕೊಳ್ಳಬೇಕೆನ್ನುವ ಕಮಿಶನರರ ನೋಟನ್ನು ಸ್ವೀಕರಿಸಬಹುದೆಂದು ಶ್ರೀ. ಟಿ. ವಿ. ಆಚಾರ್ಯರು ಗೊತ್ತುವಳಿಯನ್ನು ತಂದರು. ರಸ್ತೆ ನಿರ್ಮಾಣ ಯೋಜನೆಯಲ್ಲಿ ಗುಂಡಿಬೈಲು ವಾರ್ಡನ್ನು ಸಹ ಸೇರಿಸಬೇಕೆಂದು ಶ್ರೀ. ಯು. ಎಸ್. ನಾಯ್ಕರು ತಿದ್ದುಪಡಿಯನ್ನು ತಂದರು. ನಿರ್ಣಯ — — ತಿದ್ದುಪಡಿ ಕುರಿತು ಚರ್ಚೆಯಾಗಿ ಭಿನ್ನಾಭಿಪ್ರಾಯ ತಲೆದೋರಿದವಲ್ಲದೆ ಕೊನೆಗೆ ಅನಪೇಕ್ಷಿತ ಮಾತುಗಳು ಕೂಡಾ ಇಬ್ಬರು ಸಭಾಸದರೊಳಗೆ ನಡೆದವು.

ಸದಸ್ಯರೊಬ್ಬರು ಉಪಯೋಗಿಸಿದ 'ಸುಳ್ಳು' ಎಂಬ ಶಬ್ದದ ವಿರೋಧವಾಗಿ ಕೆಲವು ಸದಸ್ಯರು ಸಭೆಬಿಟ್ಟು ಹೊರಟುಹೋದರು. ಬಳಿಕ ಮೂಲನಿರ್ಣಯವು ಬಹುಮತದಿಂದ ಪಾಸಾಯಿತು.

ಶ್ರೀ ಕೆ. ವಿಟ್ಠಲ ಶೆಣೈ— ಬಿ. ಎ, ಎಲ್. ಟಿ. ಯವರು ಅಮೇರಿಕಾ ಮತ್ತು ಪಾಶ್ಚಿಮಾತ್ಯ ದೇಶಗಳ ಪ್ರವಾಸವನ್ನು ಮುಗಿಸಿಕೊಂಡು ಇದೇ ತಾ 21 ರಂದು ಹಿಂದಿರುಗಿ ಬಂದಿರುವರು. ಇವರು ತಾ 26 ನೇ ಬೆಳಿಗ್ಗೆ ಸ್ಥಳೀಯ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣವಿತ್ತರು. ಸಂಜೆ ಹೈಸ್ಕೂಲ್ ಅಧ್ಯಾಪಕ ವೃಂದದವರಿಗೆ ಅಮೇರಿಕದ ಪ್ರೌಢ ಶಿಕ್ಷಣದ ಕುರಿತು ಸ್ಲೈಡು ಪ್ರದರ್ಶನದೊಂದಿಗೆ ಉಪನ್ಯಾಸವಿತ್ತರಲ್ಲದೆ ಅಧ್ಯಾಪಕರ ಪ್ರಶ್ನೆಗಳಿಗುತ್ತರವಿತ್ತರು. ಮರುದಿನ ಹಿಂದೀ ಶಿಕ್ಷಣ ಶಿಬಿರದ ವಾರ್ಷಿಕ ಸಭೆಯಲ್ಲಿ ಪಾಶ್ಚಿಮಾತ್ಯದೇಶಗಳಲ್ಲಿ ಮನೋರಂಜನೆಯ ಕುರಿತು ಮಾತನಾಡಿದರು ತಾ. 29ರಲ್ಲಿ ಕ್ರಿಶ್ಚಿಯನ್ ಹೈಸ್ಕೂಲ್ ಮತ್ತು ಸರಕಾರಿ ತರಬೇತಿ ಶಾಲೆಗಳಲ್ಲೂ ಪ್ರವಾಸಾನುಭವಗಳನ್ನು ವಿವರಿಸಿದರು.

ನಂದಳಿಕೆ— ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವ ಉತ್ಸವವು ತಾ 7—4 55 ರಲ್ಲು ಜರಗಲಿರುವುದೆಂದೂ, ಭಕ್ತಾದಿಗಳು ಬಂದು ಶ್ರೀ ದೇವರ ಗಂಧ ಪ್ರಸಾದ ಸ್ವೀಕರಿಸಬೇಕಾಗಿ ಆಡಳ್ತೆ ಮೊಕ್ತೇಸರರ ವಿನಂತಿ ಯಿದೆ.

ಕಟಪಾಡಿ— ಸ್ಥಳೀಯ ಪಂಚಾಯತ ಬೋರ್ಡಿಗೆ ಒಳಪಟ್ಟ ಯೇಣಗುಡ್ಡೆ, ಮೂಡಬೆಟ್ಟು, ಕೋಟೆ, ಮಟ್ಟು ಮತ್ತು ಪೇಟೆ- ಈ ಗ್ರಾಮಗಳ ಅಭಿವೃದ್ಧಿ ಮಾಡುವ ಉದ್ದೇಶದಿಂದ ಆಯಾಯ ಗ್ರಾಮಗಳ ನಿವಾಸಿಕರಿಂದೊಡಗೂಡಿದ ಗ್ರಾಮೋದ್ಧಾರ ಸಂಘಗಳನ್ನು ಸ್ಥಾಪಿಸುವ ಸಲುವಾಗಿ ಎಲ್ಲಾ ಗ್ರಾಮಗಳ ನಿವಾಸಿಕರು ತಾ 3-4-55 ನೇ ಆದಿತ್ಯವಾರ ಸಾಯಂಕಾಲ 3 ಗಂಟೆಗೆ ಸದರಿ ಪಂಚಾಯತ ಬೋರ್ಡು ಆಫೀಸಿನಲ್ಲಿ ಸಭೆ ಸೇರಬೇಕಾಗಿ ಬೋರ್ಡಿನ ಅಧ್ಯಕ್ಷ ಶ್ರೀ ಪಿ. ವೆಂಕಟ್ರಾಯ ನಾಯಕ್, ಬಿ. ಎಸ್. ಸಿ. ಅವರು ತಿಳಿಸುತ್ತಾರೆ.

ಪಕ್ಕಳ— ಸ್ಥಳೀಯ ಬಾಸೆಲ್ ಮಿಶನ್ ಹಾ| ಪ್ರಾ| ಶಾಲೆಯ ವಾರ್ಷಿಕೋತ್ಸವವು ತಾ 28 ರಲ್ಲು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ರಾಜೀವ ಕೋಟ್ಯಾನ್‌ನರು ವರದಿವಾಚನ ಮಾಡಿದರು. ಶ್ರೀ ನಾಗಪ್ಪ ಶ್ಯಾನುಭಾಗರು ಸ್ವಸ್ತಿ ವಾಚನಮಾಡಿದರು. ಅಧ್ಯಕ್ಷರ ಭಾಷಣಾ ನಂತರ ವಿದ್ಯಾರ್ಥಿಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಬೈಕಾಡಿ— ತಾ 20 ರಲ್ಲು ಸಂಜೆ ಭದ್ರಗಿರಿ ಮೇಲಿನ ಪೇಟೆಯಲ್ಲಿ ಪಾನ ನಿರೋಧ ಇಲಾಖೆಯವರಿಂದ ಚಲಚಿತ್ರ ಪ್ರದರ್ಶಿಸಲ್ಪಟ್ಟಿತು. ಶ್ರೀ ಬಿ. ಶೀನಪ್ಪ ಸೆಟ್ಟರು ಈ ಸಂದರ್ಭದಲ್ಲಿ ಮಾತನಾಡುತ್ತಾ ಸರಕಾರವು ಕೈಕೊಂಡಿರುವ ಜನಹಿತ ಕಾರ್ಯಗಳನ್ನು ವಿವರಿಸಿದರು.

THE VIJAYA BANK LTD. UDIPI. S. K.

ದಿ. ವಿಜಯಾ ಬೇಂಕ್ ಲಿಮಿಟೆಡ್, ಉಡುಪಿ. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈ ದಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸಲು ವ, ಬಡ್ಡಿಯನ್ನು ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ಎಪ್ರಿಲ್ ತಿಂಗಳ ತಾ 9ನೇ ಶನಿವಾರ ಅಪರಾಹ್ನ ಘಂಟೆ 2ಕ್ಕೆ, ಯಾ ಬೇಂಕಿಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು ಎಂಬುವುದನ್ನು ಈ ಮೂಲಕ ಸರ್ವರಿಗೂ ತಿಳಿಯ ಪಡಿಸಲಾಗಿದೆ.

ಸಾಲದ ನಂಬ್ರ ಮತ್ತು ತಾರೀಕು		ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು ರೂ.	ಆ	ಪೈ
17/53	14-2-53	B. Sheik Imam, P. C. 581, Udipi Police Station, Udipi	30	12	0
151/53	17-6-53	K. Jagannatha Shetty, Land holder & Contractor, Hiriadka	88	8	0
193/53	8-7-53	H. D. Mendon, Accountant, The New Karnataka Prov. Insce. Co., Ltd., Udipi	82	4	0
225/53	1-8-53	B. Dejappa Shetty, S/o Chandaya Shetty, Budnar, P. O Udipi	38	1	0
278/53	3-9-53	Sadashiva Shetty, N/o Venkappa Shetty, Havanje Village, Irmady Ranaje Bail, P. O. Kolalgiri	69	13	0
297/53	14-9-53	Vittala Shetty, S/o Annaya Shetty, Doddamane, P. O. Korangrapady	35	6	0
307/53	19-9-53	Challaya Naik, S/o Koraga Naik, Kelaharkalbettu, P. O. Badanidiyoor	92	0	0
34 54	27-1-54	B. K. Sunder Shetty, Potail, Bommarbettu Village, Hiriadka	82	14	0
47/54	3-2-54	R. M. Andrade, S/o Sabistine Andrade, Church Road, P. O. Udipi	136	14	0
93/54	19-3-54	I. Bhaskara Hegde, N/o I. Narnyana Shetty, Irmady house of Havanje Village, P. O. Kolalgiri	215	13	0
94/54	19-3-54	— Do —	247	14	0
185/54	1-5-54	K. Jagannatha Shetty, Landholder & Contractor, P. O. Hiriadka	85	14	0

Office of the Bank
UDIPI
28—3—1955.

(Sd.) B. S. S. Hegde,
Agent, Udipi.

ಮೂಲ್ಕಿ ಬೇಂಕಿನ ರಜತಮಹೋತ್ಸವವು— ತಾ. 25ರಲ್ಲಿ ಸಂಜೆ ಮಂಗಳೂರಿನ ವಕೀಲ್ ಶ್ರೀ ಜಿ. ಸೋಮಶೇಖರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬೇಂಕಿನ ಅಧ್ಯಕ್ಷ ಶ್ರೀ ಎನ್. ಎಮ್. ಅಡ್ಯಂತಾಯರು ಸ್ವಾಗತಭಾಷಣಮಾಡಿದರು. ಈ ಬೇಂಕು ಜನ್ಮತಳೆದು 25 ವರ್ಷಗಳಾದುವು. ಈ ಅವಧಿಯಲ್ಲಿ ಅದು ಎದುರು ತೊಡರುಗಳನ್ನೂ ಏರಿಳಿತಗಳನ್ನೂ ಅನುಭವಿಸಿ ಪ್ರಗತಿಪಥದಲ್ಲಿ ಮುನ್ನಡೆಯುತ್ತ ಬಂತು. ಬೇಂಕಿನ ಸರ್ವತೋಮುಖ ಅಭಿವೃದ್ಧಿಯ ಕೀರ್ತಿಯು ದಿವಂಗತ ಶ್ರೀ ಎಮ್. ಆರ್. ಪೂಂಜರಿಗೆ ಸಲ್ಲುವುದು. ಆ ಸಂಬಂಧವಾಗಿ ಅವರ ಭಾವಚಿತ್ರವು ಮುಂದೆಯೂ ಕೆಲಸಗಾರರಿಗೆ ನವಸ್ಫೂರ್ತಿ ಕೊಡುವಂತೆ 1951ನೇ ಇಸವಿಯಲ್ಲಿ ಬೇಂಕಿನಲ್ಲಿಅನಾವರಣ ಮಾಡಲ್ಪಟ್ಟಿತು. ಒಂದು ವರ್ಷಕಾಲ ಶ್ರೀ ಎಮ್. ಸುಂದರರಾಯರೂ ಅಧ್ಯಕ್ಷ ಹಾಗೂ ಮೆನೇಜರರಾಗಿ ಸೇವೆಸಲ್ಲಿಸಿದರು. ಮೂಲ್ಕಿ ಕ್ಷೇತ್ರದ ಗ್ರಾಮನಿವಾಸಿಗಳಿಗೆ ಆರ್ಥಿಕ ಸೌಕರ್ಯಗಳನ್ನು ಕಳೆದ 25ವರ್ಷಗಳಿಂದ ಒದಗಿಸಿ ಕೊಡಲಾಗಿತ್ತು. ಇದು ಒಂದು ಗಣನೀಯ ಮಾತಾಗಿರುತ್ತದೆ. ಕೊನೆಯದಾಗಿ ಈ ತನಕ ಸಹಕರಿಸಿದ ಮತ್ತು ಮುಂದೆಯೂ ಬೇಂಕಿನ ಶ್ರೇಯಸ್ಸಿಗೆ ಹೆಣಗಾಡುವ ಸರ್ವರನ್ನೂ ಅಭಿನಂದಿಸುತ್ತೇನೆ ಎಂದು ಹೇಳಿದರು. ಬಳಿಕ ಬೇಂಕಿನ ಮೆನೇಜರ್ ಶ್ರೀ ಎಮ್. ಆರ್. ಎಚ್. ಪೂಂಜರು ಸಮಾರಂಭಕ್ಕೆ ಮದ್ರಾಸ್ ಮಂತ್ರಿ ಶ್ರೀ ಎ. ಬಿ. ಸೆಟ್ಟಿ, ಮದ್ರಾಸ್ ಶೆರೀಫ್, ಶ್ರೀ ಡಿ. ಸಿ. ಕೋಠಾರಿ, ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆ, ಶ್ರೀಗಳಾದ ಬಿ. ಪಿ. ಬಾಳಿಗ, ಎಮ್. ಎಲ್. ಎ; ಡೆನಿಸ್ ಪಿಂಟೊ, ಬಿ. ಆರ್. ಕರ್ಕೇರ, ಕೆ. ಪಿ. ಮುಕುಂದ ಪ್ರಭು ಮೊದಲಾದವರು ಕಳುಹಿಸಿದ ಸಂದೇಶಗಳನ್ನು ಓದಿದರು. ಶ್ರೀಗಳಾದ ಕೆ. ಗಣೇಶ ಸುಂದರರಾವ್, ಎ. ಸದಾನಂದ ಮತ್ತು ಕೆ. ಎಸ್. ಹೆಗ್ಡೆ, ಯಂ. ಪಿ. ಯವರು ಭಾಷಣವಿತ್ತರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ 'ಮೂಲ್ಕಿ ಬೇಂಕು ಸ್ಥಾಪಿತವಾಗಿ 25ವರ್ಷಗಳಾದುವು. ಈ ಅವಧಿಯಲ್ಲಿ ಹಳ್ಳಿಗರ ಹಾಳಾದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ನೆರವಾಗಿ ಅವರ ಜೀವನ ಮಟ್ಟವನ್ನೂ ಉತ್ತಮ ಸ್ಥಿತಿಗೆ ತರಲು ಈ ಬೇಂಕು ಪ್ರಯತ್ನಿಸುತ್ತಿರುವುದು ಸಂತೋಷಕರ. ರೈತರಿಗೆ ಈ ತನಕ ಸಹಾಯ ಒದಗಿಸಿದಂತೆ ಇನ್ನು ಮುಂದೆ ಕೈಗಾರಿಕೆ ಅಭಿವೃದ್ಧಿಗೂ ಸಹಾಯ ನೀಡಬೇಕಾದ ಸಂದರ್ಭವೀಗ ಒದಗಿದೆ. ಈ ಬೇಂಕು ಮೂಲ್ಕಿ ಮತ್ತು ಆಸುಪಾಸಿನ ಜನತೆಗೆ ಇನ್ನಷ್ಟು ಉಪಯೋಗಕಾರಿಯಾಗಿ ಪರಿಣಮಿಸಲಿ' ಎಂದು ಹಾರಯಿಸಿದರು. ಸರಕಾರದವರು ಈಗತಾನೇ ಹಳ್ಳಿಯ ಅಭಿವೃದ್ಧಿಯ ಬಗ್ಗೆ ಯೋಜನೆ ಮಾಡುತ್ತಿದ್ದರೂ ಈಬೇಂಕಿನ ಸ್ಥಾಪಕರಾದ ಶ್ರೀ ಎಮ್. ಆರ್. ಪೂಂಜರು 25 ವರ್ಷಗಳ ಹಿಂದೆಯೇ ಈ ಕುರಿತು ಆಲೋಚಿಸಿ ಕಾರ್ಯರೂಪದಲ್ಲಿ ತೋರಿಸಿ ಕೊಟ್ಟಿರುವರು. ಅಂತೆಯೇ ನನ್ನ ಮಿತ್ರರಾದ ದಿವಂಗತ ಶ್ರೀ ರಾಮಕೃಷ್ಣ ಪೂಂಜರ ಸ್ಮರಣೆ ಯನ್ನೀಗ ಮಾಡುವುದು ತನ್ನ ಕರ್ತವ್ಯ ವೆಂಬುದಾಗಿ ಕೊನೆಯಲ್ಲಿ ಹೇಳಿದರು.

ಬಳ್ಕೂರಿ— ಸ್ಥಳೀಯ ತಾರಾನಾಥ ಆಯುರ್ವೇದ ವಿದ್ಯಾಪೀಠದ ವಾರ್ಷಿಕ ವರ್ಧಂತ್ಯುತ್ಸವವು ತಾ. 19ರಲ್ಲಿ ಶ್ರೀ ನುಚ್ಚಿನ ಸೋಮಪ್ಪ, 'ಪದ್ಮವಿಭೂಷಣ' ಅವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾಪೀಠದ ಕಾರ್ಯದರ್ಶಿ ಡಾ| ಬಿ. ಕೆ. ಮಾಲ್ಗರವರು ಸಂಸ್ಥೆಯ ಅಧ್ಯಕ್ಷ ಸೋಮಪ್ಪನವರಿಗೆ 'ಪದ್ಮವಿಭೂಷಣ' ಬಿರುದು ದೊರಕಿದುದಕ್ಕಾಗಿ ಸಂತೋಷವ್ಯಕ್ತಗೊಳಿಸುತ್ತಾ ಸ್ವಾಗತ ಭಾಷಣ ಮಾಡಿದರು. ಶ್ರೀ ಪಾರ್ಥ ನಾರಾಯಣ ಪಂಡಿತರು ಸ್ವಸ್ತಿವಾಚನಮಾಡಿದರು. ಪ್ರಿನ್ಸಿಪಾಲ್ ಡಾ| ಅಚ್ಚಯ್ಯನವರು ವರದಿಯನ್ನೋದಿದರು. ವಿದ್ಯಾರ್ಥಿ ಸಂಘದ ವರದಿಯನ್ನು ಶ್ರೀ ಕೆ. ಆನಂದ ಹೆಗ್ಡೆಯವರು ಒಪ್ಪಿಸಿದರು. ಡಾ| ಎಸ್. ಆರ್. ಗೋರೂರ್‌ರವರು ಪಾರಿತೋಷಕವಿತರಣೆ ಮಾಡಿದರು. ಅಂದು ಬೆಳಿಗ್ಗೆ ಶ್ರೀ ಡಿ. ವೇಣು ಗೋಪಾಲಾಚಾರ್ಯರು ಧ್ವಜಾರೋಹಣ ಮಾಡಿದ ಬಳಿಕ ಹಳೆವಿದ್ಯಾರ್ಥಿಗಳ ಸಭೆಜರಗಿತು. ಡಾ| ವೆಂಕಟ್ರಮಣ ಮತ್ತು ಡಾ| ಅನಂತಾಚಾರ್ಯರು ಕ್ರಮವಾಗಿ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಮಂಗಳೂರು

ತಡೆಯಾಜ್ಞೆ— ಪಂಚವಾರ್ಷಿಕ ತೆರಿಗೆ ವಿಮರ್ಶೆಯಂತೆ ಏರಿಸಲಾದ ತೆರಿಗೆ ವಿಚಾರದಲ್ಲಿ, ಕಮೀಶನರ ಪುನರ್ವಿಮರ್ಶೆಯಂತೆ ಸುರುವಿನ ಆರು ತಿಂಗಳ ಬಗ್ಗೆ ನಿರ್ಧಾರವಾದ ತೆರಿಗೆಯನ್ನು ಕಡಿಮೆ ಮಾಡುವ ಬಗ್ಗೆ ಅಪೀಲು ಮಾಡಿದ್ದರೂ ಎರಡನೆ ಅರ್ಧ ವರ್ಷದ ತೆರಿಗೆಯನ್ನೂ ಕೊಡಲೇ ಬೇಕಾಗುವುದು ಎಂಬರ್ಥದ ನಗರ ಸಭಾಪತಿಗಳ ಸೂಚನೆಯ ವಿರೋಧವಾಗಿ, ಮಂಗಳೂರು ನಾಗರಿಕರ ಸಂಘದ ಆಶ್ರಯದಲ್ಲಿ ಸರಕಾರಕ್ಕೆ ಮಾಡಿಕೊಳ್ಳಲಾದ ಮನವಿಯಂತೆ ಅರ್ಜಿಗಳನ್ನು ಪರಿಶೀಲಿಸಿ ನಿರ್ಣಯಿಸುವ ವರೆಗೆ ತೆರಿಗೆ ವಸೂಲಿಯನ್ನು ತಡೆಹಿಡಿಯುವಂತೆ ಸರಕಾರದ ಆಜ್ಞೆ ಬಂದಿದೆಯಾಗಿ ತಿಳಿದು ಬರುತ್ತದೆ.

ಖಂಡನ ಸಭೆ— ಸ್ಥಳೀಯ ಭಾರತೀಯ ಜನಸಂಘದ ಕಾರ್ಯಕರ್ತರ ಸಭೆಯು ಈಚೆಗೆ ಜರಗಿ ಜಿಲ್ಲಾ ಬೋರ್ಡು ಸದಸ್ಯರಿಗೆ ತಿಂಗಳ ವೇತನ ಸಿಗಬೇಕೆಂದು ಬೋರ್ಡು ಮಾಡಿದ ನಿರ್ಣಯವನ್ನು ಖಂಡಿಸಲಾಯಿತು. ನಗರದೊಳಗಿನ ವಿದೇಶೀ ಹೆಸರಿನ ಸ್ಥಳಗಳಿಗೆ ಸ್ವದೇಶೀ ಹೆಸರನ್ನಿಡುವ ತತ್ವವನ್ನೊಪ್ಪಿ ಆ ಕುರಿತು ಸಮಿತಿ ರಚನೆ ಮಾಡಿದ್ದನ್ನು ಸ್ವಾಗತಿಸಲಾಯಿತು.

ಧರ್ಮಾರ್ಥ ವೈದ್ಯಕೀಯ ಸಹಾಯ— ಡಾ. ಕೆ. ಗಿರಿಧರ ರಾಯರು ತಮ್ಮ ಶ್ರೀ ರಾಧಾಕೃಷ್ಣ ನರ್ಸಿಂಗ್ ಹೋಮಿನಲ್ಲಿ ಬಡ ರೋಗಿಗಳಿಗೆ ಶಸ್ತ್ರ ಚಿಕಿತ್ಸೆ, ವೈದ್ಯಕೀಯ ಮತ್ತು ಹೆರಿಗೆಯ ಸಹಾಯವನ್ನು ಆದಷ್ಟು ಕಡಿಮೆ ಖರ್ಚಿನಲ್ಲಿಯೂ, ಧರ್ಮಾರ್ಥವಾಗಿಯೂ ಕೊಡುವ ಒಂದು ಯೋಜನೆಯನ್ನು ಮಾಡಿರುವರು ಎಂಬ ವಿಷಯವನ್ನು ತಾ 25 ರಲ್ಲು ಸಂಜೆ ಉಳ್ಳಾಳ ರಘುನಾಥಯ್ಯ ಸ್ಮಾರಕ ಭವನದಲ್ಲಿ ಸೇರಿದ ಸಭೆಯೊಂದರಲ್ಲಿ ಜಾಹೀರು ಮಾಡಲಾಯಿತು. ಶ್ರೀ ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ, ಅವರು ಅಧ್ಯಕ್ಷತೆ ವಹಿಸಿದ್ದರು. ಡಾ| ದೇವಧರ್, ಡಾ| ಕುಮಾರಿ ಎಲ್. ಕುಲಾಸೊ ರವರು ಈ ಯೋಜನೆಯಲ್ಲಿ ಸಹಕರಿಸಿ ಶ್ರೀ ರಾಧಾ ನರ್ಸಿಂಗ್ ಹೋಮಿನಲ್ಲಿ ಬಡವರಿಗೆ ಶಸ್ತ್ರ ಕ್ರಿಯೆ ಮತ್ತು ಹೆರಿಗೆಗಳಲ್ಲಿ ಸಹಾಯ ಒದಗಿಸಲು ಒಪ್ಪಿರುವರು. ಸಭಾಧ್ಯಕ್ಷರೇ ಮೊದಲಾದವರು ಹೊಸ ಯೋಜನೆಯನ್ನು ಸ್ವಾಗತೀಕರಿಸಿದರು.

ನರೆತ ಕೂದಲಿನಿಂದ ಪಾರಾಗಿರಿ

ತಾತ್ಕಾಲಿಕ ಉಪಶಮನವನ್ನು ಕೊಡುವ ರಂಗುಗಳಿಗೆ ಮರುಳಾಗಬೇಡಿರಿ. ಆಯುರ್ವೇದ ರೀತ್ಯಾ ದೇಶೀಯ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ 'ವಿಶ್ವ ಕಲ್ಯಾಣ ಹೇರ್ ಆಯಿಲ್' ಅಕಾಲಿಕ ನರೆತ ಕೂದಲನ್ನು ವಿಸ್ಮಯಕರ ರೀತಿಯಲ್ಲಿ ಸ್ವಾಭಾವಿಕ ಕಪ್ಪು ಬಣ್ಣಕ್ಕೆ ತರುವುದಲ್ಲದೆ 60 ವರ್ಷ ಪ್ರಾಯದ ತನಕ ಕಪ್ಪಗಾಗಿಯೇ ಉಳಿಸುವುದು. ತಲೆನೋವು, ಮಾನಸಿಕ ದುರ್ಬಲತೆ, ದೃಷ್ಟಿ ದೋಷ ಮೊದಲಾದುವುಗಳಿಗೂ ಈ ತೈಲವು ಅತ್ಯುಪಯುಕ್ತವಾದುದು.

ಕೆಲವೇ ನರೆತ ಕೂದಲುಗಳಿಗಾದರೆ ರೂ. 3-8-0 ಬೆಲೆಯ ಒಂದು ಸೀಸೆಯನ್ನು ಕೊಂಡುಕೊಳ್ಳಿರಿ. 3 ಸೀಸೆಗೆ ರೂ. 9/-. ಉತ್ತಮ ತರದ್ದಕ್ಕೆ ಸೀಸೆಗೆ ರೂ. 5/-. 3 ಸೀಸೆಗಳಿಗಾದರೆ ರೂ. 12/-.

P. D. GUPTA & CO.,
(No. 5) P. O. Begu Sarai
(Monghyr)

ಯುಗ ಸಾಧನೆ— ಶ್ರೀ ರಾಮ ಕೃಷ್ಣ ಸಂಘದ ಶ್ರೀ ಸ್ವಾಮಿ ಪ್ರಣವೇಶಾನಂದಜೀಯವರು ತಾ 27 ರಲ್ಲು ಸಂಜೆ ಬೋಳಾರದ ಶ್ರೀ ರಾಮ ಕೃಷ್ಣಾಶ್ರಮದಲ್ಲಿ 'ಯುಗಸಾಧನೆ' ಕುರಿತು ಭಾಷಣವೀಯುತ್ತಾ "ವಿಚಾರಯುಕ್ತ ಭಕ್ತಿಯೇ ಈ ಕಲಿಯುಗಕ್ಕೆ ಯೋಗ್ಯವಾದ ಸಾಧನೆ ಮಾರ್ಗ" ಎಂದರು. ಸಭಾರಂಭದಲ್ಲಿ ಶ್ರೀ ಆದಿ ದೇವಾನಂದಜೀಯವರು ಅತಿಥಿಗಳ ಪರಿಚಯ ಮಾಡಿ ಕೊಟ್ಟರು.

ಯುಗಾದಿ ಆಚರಣೆ— ಉರ್ವ ಕೆನರಾ ಹೈಸ್ಕೂಲಿನಲ್ಲಿ ತಾ 25 ರಲ್ಲಿ ಸಂಜೆ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಯುಗಾದಿ ಹಬ್ಬ ಆಚರಿಸಲಾಯಿತು. ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ, ಬಿ. ಎಸ್. ಭಾಸ್ಕರ ರೈ, ಎಂ. ಶ್ರೀನಿವಾಸ ನಾಯಕ್ ಮೊದಲಾದವರು ಭಾಷಣವಿತ್ತರು.

ವಾರ್ಷಿಕೋತ್ಸವ— ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂಡಳಿ, ಮಂಗಳೂರು, ಇದರ 9 ನೇ ವಾರ್ಷಿಕೋತ್ಸವವು ತಾ 3—4—55 ನೇ ಆದಿತ್ಯವಾರ ಸಂಜೆ 4½ ತಾಸಿಗೆ ಡಿ. ಮುನ್ಸಿಫ್ ಶ್ರೀ ಕೆ. ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಸಮಿತಿ ಸಭೆಯು:- ತಾ. 19ರಲ್ಲು ಸೇರಿತು. ಜಿಲ್ಲಾ ಬೋರ್ಡು ಸದಸ್ಯರಿಗೆ ರೂಪಾಯಿ 50/- ರಂತೆ ಮಾಸಾಶನ ಕೊಡಬೇಕೆಂದು ಮಾಡಿದ ನಿರ್ಣಯಕ್ಕೆ ಅಸಮ್ಮತಿ ಸೂಚಿಸಿ, ಈ ನಿರ್ಣಯಕ್ಕೆ ಸಮ್ಮತಿ ಕೊಡಬಾರದೆಂದು ಸರಕಾರವನ್ನು ವಿನಂತಿಸಲಾಯಿತು. ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷವು ಈ ಮಾಸಾಶನ ನಿರ್ಣಯವನ್ನು ಹಿಂತೆಗೆಯಲು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ತೀರ್ಮಾನವಾಯಿತು. ಜಿಲ್ಲಾ ರಾಜಕೀಯ ಪರಿಷತ್ತನ್ನು ಪುತ್ತೂರಲ್ಲಿ ಜರಗಿಸಬೇಕೆನ್ನುವ ಪುತ್ತೂರು ಕಾಂಗ್ರೆಸ್ ಕಮಿಟಿಯ ಬಯಕೆಯನ್ನು ಸ್ವಾಗತೀಕರಿಸಲಾಯಿತು. ಪ್ರಾಂತೀಯ ಸರ್ವೋದಯ ಪರಿಷತ್ತನ್ನು ದ. ಕ. ಜಿಲ್ಲೆಯಲ್ಲಿ ಕರೆಯಬೇಕೆನ್ನುವ ಸರ್ವ ಸೇವಾ ಸಂಘದ ಜಿಲ್ಲಾ ಸಂಚಾಲಕರಿಗೆ ಬೆಂಬಲವೀಯಬೇಕೆಂದು ತೀರ್ಮಾನಿಸಲಾಯಿತು.

THE VIJAYA BANK LTD., BRAHMAVAR.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸಲನ್ನ, ಬಡ್ಡಿಯನ್ನು ಈತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 13-4-55ನೇ ಬುಧವಾರ ಅಪರಾಹ್ನ ಘಂಟೆ 3 ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 31—12—54ರ ವರೇಗೆ	
426/52	ಪಾಲು ಬೆನಡಿಕ್ ಲೂವಿಸ್, ಕ್ಲಮೆಂಟ್ ಲೂವಿಸರ ಮಗ, ಹಂದಾಡಿ ಗ್ರಾಮ ಪೋಸ್ಟು ಬ್ರಹ್ಮಾವರ.	49	13
514/52	ಶೇಕ್ ಹೈದರ್ ಸಹೇಬ, ಶೇಕ್ ಹಯಾತ್ ಸಹೇಬರ ಮಗ, ವಾರಂಬಳ್ಳಿ ಗ್ರಾಮ, ಪೋಸ್ಟು ಬ್ರಹ್ಮಾವರ.	31	5
70/53	ಗ್ರೆಗೋರಿ ರೊಬೊ, ಅಲೆಕ್ಸಾಲೋಬರ ಮಗ, ಬೈಕಾಡಿಗ್ರಾಮ, ಪೋಸ್ಟು ಬ್ರಹ್ಮಾವರ.	134	7
307/ ,,	ಫ್ರಾನ್ಸಿಸ್ ಲೂವಿಸ್, ಜೋನ್ ಫಿಲಿಪ್ ಲೂವಿಸರ ಮಗ, ಹೇರೂರು ಗ್ರಾಮ ಪೋಸ್ಟು ಬ್ರಹ್ಮಾವರ.	118	11
434/ ,,	ಬಿ. ಮಹಾಬಲ ಶೆಟ್ಟಿ, ರಾಮಣ್ಣ ಶೆಟ್ಟರ ಅಳಿಯ, ಯಡ್ತಾಡಿ ಗ್ರಾಮ, ಪೋಸ್ಟು ಸ್ಯಾಬರಕಟ್ಟೆ.	262	7
560/ ,,	ಮಿಸ್ರ ಪೂಜಾರಿ, ಬೀರಪೂಜಾರಿ ಅಳಿಯ, ಬೈಕಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ.	42	9
796/ ,,	ಬಿ. ಮಹಾಬಲ ಶೆಟ್ಟಿ, ಯಚ್. ಟಿ. ರಾಮಣ್ಣ ಶೆಟ್ರ ಅಳಿಯ, ಯಡ್ತಾಡಿ ಗ್ರಾಮ, ಪೋಸ್ಟು ಸ್ಯಾಬರಕಟ್ಟೆ.	168	6
825/ ,,	ಸದಾಶಿವ ಸೆಟ್ಟಿ, ಸಂಕಪ್ಪ ಸೆಟ್ರ ಅಳಿಯ, ಇರ್ಮಾಡಿ, ಹಾವಂಜೆ ಗ್ರಾಮ, ಪೋಸ್ಟು ಕೊಳಲಗಿರಿ.	38	4
829/ ,,	ಯಮ್. ಸಂಜೀವ ಸೆಟ್ಟಿ, ತಿಮ್ಮಪ್ಪ ಸೆಟ್ರ ಅಳಿಯ, ನುಟ್ಪಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ.	43	6
979/ ,,	Do	21	6
117/54	Do	256	10
275/54	Do	32	14
902/53	ಮಂಜುನಾಥ, ಕೊರಗ ಗಾಣಿಗನ ಅಳಿಯ, ಕುಕ್ಕುಡೆ, ಹಾರಾಡಿ ಗ್ರಾಮ, ಪೋಸ್ಟು ಸಾಲಿಕೇರಿ.	75	15
904/ ,,	ಶೇಷ ಸೆಟ್ಟಿ, ತಿಮ್ಮಪ್ಪ ಸೆಟ್ರ ಅಳಿಯ, ತೋಟ ಮನೆ, ಬೈಕಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ.	24	2
936/53	ಆನಂದ ಸೆಟ್ಟಿ, ಗಣಪಯ್ಯ ಸೆಟ್ರ ಅಳಿಯ, ಹಂದಾಡಿ ಮಬುರ್ ಪೋಸ್ಟು ಬ್ರಹ್ಮಾವರ.	54	6
73/54	ಯಚ್. ಶಂಕರ ಹೆಗ್ಡೆ, ಅಂತಯ್ಯ ಹೆಗ್ಡೆಯರ ಅಳಿಯ, ಹಂದಾಡಿ, ಪಳ್ಳಮನೆ, ಪೋಸ್ಟು ಬ್ರಹ್ಮಾವರ.	41	8
80/ ,,	do	7	15
93/ ,,	ಬಿ. ಜನನ್ನಾಥ ಹೆಗ್ಡೆ, ಬೇಳಂಜೆ ಅಂತಯ್ಯ ಸೆಟ್ರ ಅಳಿಯ, ಪಡುಮುಂಗೂರು ಗ್ರಾಮ, ಪೋಸ್ಟು ಕೊಕ್ಕರ್ಣೆ.	184	1
339/54	ಕೆ. ಶಂಕ್ರಯ್ಯ ಆಚಾರಿ, ಕೃಷ್ಣಯ್ಯ ಆಚಾರಿ ಮಗ ಕುಂಜಾಲು, ಪೋಸ್ಟು ಕುಂಜಾಲು.	66	0
412/ ,,	ಮಹಮ್ಮದ್ ಹುಸೇನ್, ಅಲ್ಲಿ ಸಹೇಬರ ಮಗ, ಉಪ್ಪಿನ ಕೋಟೆ, ವಾರಂಬಳ್ಳಿ ಗ್ರಾಮ. ಪೋಸ್ಟು ಬ್ರಹ್ಮಾವರ.	21	8
445/ ,,	ಚಿಕ್ಕಿ ಪೂಜಾರ್ತಿ, ಲಿಂಗಿ ಪೂಜಾರ್ತಿ ಮಗಳು, ಹಂದಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ.	21	7

Brahmavar
26—3—55.

(Sd) ಬಿ. ಭಾಸ್ಕರ ಸೆಟ್ಟಿ.
Agent

ಸುರತ್ಕಲ್ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಸಂಘ, ಬೊಂಬಾಯಿ: ಇದರ ವಾರ್ಷಿಕ ಮಹಾ ಸಭೆಯು ಕಳೆದ ತಾ. 20ರಲ್ಲು ಕೋಟೆಯೊಳಗಣ ಕಾಂಡ್ವಾಲಾ ಚೋಟಲಾಲ್ ಸೊಲಿಸಿಟರ್ ಆಫೀಸಿನ ವಠಾರದಲ್ಲಿ ಶ್ರೀ ನಾರಾಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸುರತ್ಕಲ್ ಮುನಿಸಿಪಾಲಿಟಿಯ ಆಡಳಿತದಲ್ಲಿರುವ ಶಿವ ಮಂದಿರವನ್ನು ಈ ಸಂಸ್ಥೆಯು ಮುಖೇನ ಬೇಗನೇ ಜೀರ್ಣೋದ್ಧಾರ ಮಾಡಿಸುವುದಾಗಿ ನಿರ್ಣಯವಾಯಿತು. ಅತೀ ಪುರಾತನವಾದ ಈ ದೇವಸ್ಥಾನದ ಜೀರ್ಣೋದ್ಧಾರದ ಜರೂರಾತಿಯನ್ನು ವಿವರಿಸಿ ಶ್ರೀಗಳಾದ ಆರ್. ಕೆ. ಸೆಟ್ಟಿ ಮತ್ತು ಸುಬ್ಬಯ್ಯ ಸೆಟ್ಟರು ಭಾಷಣವಿತ್ತರು. ಸಭಾಧ್ಯಕ್ಷರು ಸಂಘದ ಕಾರ್ಯಕಲಾಪಗಳನ್ನು ಕೊಂಡಾಡಿ ದೇವಸ್ಥಾನ ಜೀರ್ಣೋದ್ಧಾರ ನಿಧಿಗೆ ರೂಪಾಯಿ 255 ವಂತಿಗೆ ಕೊಟ್ಟರು. ಸಾರ್ವಜನಿಕರಿಂದ ಹಣ ಸಂಗ್ರಹಿಸುವರೆಯೂ ಮುಂದಿನ ಕಾರ್ಯಗಳನ್ನು ನಡೆಸುವರೆಯೂ ಶ್ರೀಗಳಾದ ಆರ್. ಕೆ. ಸೆಟ್ಟಿ (ಅಧ್ಯಕ್ಷ), ಸುಬ್ಬಯ ಬಿ. ಸೆಟ್ಟಿ ಮತ್ತು ರಾಮಣ್ಣ ಸೆಟ್ಟಿ (ಜತೆಕಾರ್ಯದರ್ಶಿಗಳು), ದೊಡ್ಡಯ್ಯ ಸೆಟ್ಟಿ ಮತ್ತು ಸುಬ್ಬಯ ಸೆಟ್ಟಿ (ಜತೆ ಕೋಶಾಧಿಕಾರಿ), ಮೋಹನ ಸೆಟ್ಟಿ, ನಾರಾಯಣ ಸೆಟ್ಟಿ, ಶೀನ ಸೆಟ್ಟಿ ಮತ್ತು ರುಕ್ಮಯ ಸೆಟ್ಟರಿರುವ ಕಾರ್ಯಕಾರೀ ಸಮಿತಿ ರಚಿಸಲಾಯಿತು.

ಮೂಲ್ಕಿ:— ಸ್ಥಳೀಯ ಯೂನಿಯನ್ ಕ್ಲಬ್ಬಿನಲ್ಲಿ ಶ್ರೀ ಕೆ. ಸದಾನಂದ ಹೆಗ್ಡೆ, ಯಂ. ಪಿ. ಅವರು ತಮ್ಮ ಅಮೇರಿಕಾ ಪ್ರವಾಸದ ಅನುಭವದ ಕುರಿತು ಭಾಷಣವಿತ್ತರು. ಮೂಲ್ಕಿ ಸರಕಾರೀ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಎಚ್. ರಾಮರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ಎಮ್. ಆರ್. ಎಚ್. ಪೂಂಜರು ಸ್ವಾಗತ ಭಾಷಣ ಮಾಡಿದರು, ಡಾ| ಎಮ್. ರಾಯಪ್ಪ ಕಾಮತರು ಅತಿಥಿಗಳ ಪರಿಚಯ ಮಾಡಿದರು. ಶ್ರೀ ಜಿ. ಎಸ್. ಮೂಲ್ಕಿಯವರು ಧನ್ಯವಾದಗಳನ್ನರ್ಪಿಸಿದರು.

ಪೊಳಲಿ:— ಇಲ್ಲಿಯ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಸ್ಥಾನದ ಕಾಲಾವಧಿ ಚೆಂಡಾಟವು ಇದೇ ತಾ 6ರಲ್ಲು ಆರಂಭವಾಗಿ ಕೊನೆಯ ಜಗತ್ಪ್ರಸಿದ್ಧ ಕಡೇಚೆಂಡಾಟವು ತಾ. 9ರಲ್ಲು ಜರಗಿ ಮರುದಿವಸ ತಾ. 10ರಲ್ಲು ಮಹಾರಥೋತ್ಸವ ತಾ. 11ರಲ್ಲು ಅವಭೃತ ಮಂಗಳ ಸ್ನಾನಾದಿ ಕಾರ್ಯಕ್ರಮಗಳಿಂದ ಸಾಂಗವಾಗಲಿರುವುದು. ಭಕ್ತಾದಿಗಳು ಬಂದು ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಮೊಕ್ತೇಸರರ ವಿನಂತಿಯಿದೆ.

ಹಳ್ಳಿಹೊಳೆ:— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾ. 20ರಲ್ಲು ಮಕ್ಕಳ ತಿಂಗಳ ಹಬ್ಬದ ದಿನಾಚರಣೆಯು ಶ್ರೀ ಪಿ. ಆನಂದ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಿ. ಕೆ. ಶ್ರೀನಿವಾಸರಾವ್, ವಿ. ಕುಶಲ ಸೆಟ್ಟಿ ಮೊದಲಾದವರು ಮಕ್ಕಳ ಹಬ್ಬ ದಿನಾಚರಣೆಯ ಕುರಿತು ಮಾತನಾಡಿದರು. ಮಕ್ಕಳ ವಿನೋದಾವಳಿಗಳಾದ ಬಳಿಕ ಮುಖ್ಯೋಪಾಧ್ಯಾಯ ಶ್ರೀ ಎಸ್. ಕುಶಲ ಸೆಟ್ಟರು ಧನ್ಯವಾದಗನ್ನರ್ಪಿಸಿದರು.

ನೋಟೀಸು

ಪೆರ್ಡೂರು ಮುಕ್ತೇಸರ್ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಬಾಬ್ತು ತೊಳ್ಸಲು ಅಕ್ಕಿ ಮತ್ತು ಬತ್ತ ಕೂಡಾ ಮುಡಿ ನೂರಕ್ಕೂ ಮೇಲ್ಪಟ್ಟು ಏಲಂ ದಿನ ಕೊಡುವುದಿದೆ. ಆ ಬಗ್ಗೆ ಇದೇ ತಾರೀಕು 3—4—55 ನೇ ಆದಿತ್ಯವಾರ ಸಾಯಂಕಾಲ ಘಂಟೆ 4 ಕ್ಕೆ ಭಂಡಾರದ ಶರ್ತಕ್ಕೆ ಒಳಪಟ್ಟು ದೇವಸ್ಥಾನದ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಆಪೇಕ್ಷೆ ಉಳ್ಳವರು ಬಂದು ಏಲಂನಲ್ಲಿ ಭಾಗವಹಿಸಬಹುದು

Sri Anantha Padmanabha
Temple, Perdur
K. B. Shetty
Executive Officer.

ಪೆರ್ಡೂರು. ತಾ. 25—3—55.

ಆಧುನಿಕ ಬಂಗಾಳಿ ಸಾಹಿತ್ಯದ ದರ್ಶನ

ಬಂಗಾಳದ ಕವಿ ಭಗೆತ ಚಂದ್ರರ ಕಾಲದಲ್ಲಾದ ವ್ಯಾಸಿಕದನತ್ರ ಭಾರತದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಬದಲಾಯಿಸಿತು. ಈಸ್ಟ್ ಇಂಡಿಯಾ ಕಂಪನಿಯ ಅಧಿಕಾರಿಗಳಿಗೆ ತಮ್ಮ ಆಡಳಿತ ಸೌಕರ್ಯಕ್ಕಾಗಿ ಭಾರತೀಯ ಭಾಷೆಗಳನ್ನು ಕಲಿತು ಕೊಳ್ಳುವುದು ಅಗತ್ಯವೆನಿಸಿತು. ಭಾರತಕ್ಕೆ ಬಂದ ತರುಣ ಅಧಿಕಾರಿಗಳಿಗೆ ಭಾರತದ ಕಾನೂನು, ಭಾಷೆ ಮತ್ತು ಸಮಾಜಪದ್ಧತಿಗಳನ್ನು ತಿಳಿದುಕೊಂಡು ತರಬೇತಿ ಪಡೆಯುವುದು ಅಗತ್ಯವೆನಿಸಿತು. 1800ರಲ್ಲಿ ಫೋರ್ಟ್ ವಿಲಿಯಂ ಕಾಲೇಜಿನ ಸ್ಥಾಪನೆಗೆ ಇದು ಕಾರಣವಾಯಿತು. ಡಾ॥ ಗಿಲ್ ಕ್ರಿಸ್ಟ್‌ರವರು ಈ ಕಾಲೇಜಿನ ಮೊದಲನೆಯ ಪ್ರಿನ್ಸಿಪಾಲರು. ಅವರು ಹಿಂದಿಯನ್ನು ಕಲಿಯುವುದಕ್ಕಾಗಿ ಪದಗಿನಲ್ಲಿ ತಮ್ಮ ವೈದ್ಯ ವೃತ್ತಿಗೆ ತಿಲಾಂಜಲಿಯನ್ನಿತ್ತಂಥವರು. ಫೋರ್ಟ್ ವಿಲಿಯಂ ಕಾಲೇಜಿನಲ್ಲಿ ಬಂಗಾಳಿ, ಹಿಂದಿ, ಹಿಂದೂಸ್ಥಾನಿ, ಪಂಜಾಬಿ, ಓರಿಯಾ ಮತ್ತು ಇತರ ಭಾಷೆಗಳಲ್ಲಿನ ವ್ಯಾಕರಣ ಮತ್ತು ಶಬ್ದ ಕೋಶಗಳನ್ನು ಇಂಗ್ಲಿಷ್ ವಿದ್ವಾಂಸರುಗಳು ಭಾರತೀಯ ಪಂಡಿತರು ಮತ್ತು ಮುನಷಿಗಳ ಸಹಾಯದಿಂದ ಅಭ್ಯಾಸ ಮಾಡ ತೊಡಗಿದರು. ಅವರ ಪ್ರಯೋಜನಾರ್ಥವಾಗಿ ಅನೇಕ ಪಠ್ಯ ಪುಸ್ತಕಗಳನ್ನು ರಚಿಸಲಾಯಿತು. ಈ ಕ್ಷೇತ್ರದಲ್ಲಿ ಡಾ॥ ಕಾಶೀಯವರು ಸಲ್ಲಿಸಿರುವ ಭಾಷಾಸೇವೆ ಉಲ್ಲೇಖನೀಯ.

ನವಚೇತನ

ಈ ಮಧ್ಯೆ, ರಾಮ ಮೋಹನರಾಯ್‌ರವರು ತತ್ವಶಾಸ್ತ್ರ ವಿಷಯಗಳ ಬಗೆಗೆ ಬಂಗಾಳಿ ಭಾಷೆಯಲ್ಲಿ ವ್ಯಾಖ್ಯಾನಗಳನ್ನು ಬರೆದು ಸಾಹಿತ್ಯ ಪ್ರಪಂಚದಲ್ಲಿ ಬೆಳಕಿಗೆ ಬಂದರು. ಅವರು ತಮ್ಮ ಸತ್ಯಾನ್ವೇಷಣೆ, ಕಂದಾಚಾರ ಮತ್ತು ಮೂಢ ನಂಬಿಕೆಗಳ ನಿರ್ಮೂಲನ ಪ್ರಯತ್ನ, ಏಕಮತ ಭಾವ ಇವುಗಳಿಂದ ಆಧುನಿಕ ಭಾರತದ ನಿರ್ಮಾಣಕ್ಕನೆಂದು ಹೆಸರಾದರು. ತತ್ವಶಾಸ್ತ್ರ ಮಥನಕ್ಕಾಗಿ ಅವರು ಬಂಗಾಳಿ ಗದ್ಯಶೈಲಿಯನ್ನು ಬಳಸಿದರು. ಅವರ ಕಾಲದಲ್ಲಿಯೇ ಪರಸ್ಪರ ವಿರುದ್ಧಾಭಿಪ್ರಾಯದ ಸಾಹಿತ್ಯ ಪ್ರಕಾರಕ್ಕೆ ಬಂದಿತು. ಯಶಸ್ವಿಯಾದ ವಿಚಾರ ಮಥನಕ್ಕಾಗಿ ಅವರು ಪತ್ರಿಕೆಗಳನ್ನೂ ನಡೆಸುತ್ತಿದ್ದರು.

19ನೆಯ ಶತಮಾನದ ಮೊದಲನೆಯ 40 ವರ್ಷಗಳಲ್ಲಿ ಸೆರಾಂಪೂರ್‌ನಲ್ಲಿ ಮಿಷನರಿಗಳು ಪತ್ರಿಕೋದ್ಯೋಗವನ್ನಾರಂಭಿಸಿದ್ದರು. ತಮ್ಮ ಆಡಳಿತ ವ್ಯವಸ್ಥೆಗೆ ಧಕ್ಕೆ ತರುವಂತಹ ಯಾವುದೇ ಕಾರ್ಯಕ್ರಮಕ್ಕೆ ಉತ್ತೇಜನ ನೀಯಲು ಈಸ್ಟ್ ಇಂಡಿಯಾ ಕಂಪೆನಿಯು ಸಿದ್ಧವಿರಲಿಲ್ಲ. ತಮ್ಮ ಆಡಳಿತ ವ್ಯವಹಾರಕ್ಕೆ ತೊಡರು ಬರುವ ಕವನಗಳಲ್ಲಿ ತಮ್ಮ ಮತ ಪ್ರಚಾರಕ್ಕೂ ಅವರು ಮೊದಲು ಅಸಮ್ಮತಿಯನ್ನು ತೋರಿಸಿದರು. ಆದುದರಿಂದಲೇ ಮಿಷನರಿಗಳು ಡಾನಿಷ್ ರಕ್ಷಣೆಯಲ್ಲಿದ್ದ ಸೆರಾಂಪೂರ್‌ನಲ್ಲಿ ಕೇಂದ್ರಿತರಾದರು. ಅವರು 'ದಿಗ್ದರ್ಶನ'ವೆಂಬ ಬಂಗಾಳಿ ಪತ್ರಿಕೆಯನ್ನಾರಂಭಿಸಿದರು. ಹೀಗೆ ಬಂಗಾಳಿ ಪತ್ರಿಕೋದ್ಯಮ ಹುಟ್ಟಿ ತೀವ್ರ ಪ್ರಗತಿ ಹೊಂದ ತೊಡಗಿತು.

ಸುಮಾರು 1830ನೇ ಇಸವಿಯ ಹೊತ್ತಿಗೆ ಈಶ್ವರಗುಪ್ತರು ಬೆಳಕಿಗೆ ಬಂದರು. ತಮ್ಮ ಗದ್ಯ ಮತ್ತು ಪದ್ಯಗಳಲ್ಲಿ ಶ್ಲೇಷೋಕ್ತಿ, ಪ್ರಾಸಾನುಪ್ರಾಸ ಇವುಗಳಲ್ಲಿ ಅವರು ಚತುರರಾಗಿದ್ದರು. ಬಂಗಾಳಿ ಹೊಸ ವರ್ಷದ ದಿನದಂದು ಕವಿಸಮ್ಮೇಳನವನ್ನು ಕೂಡಿಸುವ ಪದ್ಧತಿಯನ್ನು ಅವರು ತೊಡಗಿದರು. ಬಂಗಾಳದಲ್ಲಿ ಸಾಹಿತ್ಯ ಸಂಘವನ್ನು ಸ್ಥಾಪಿಸಿದ ಆದ್ಯಪುರುಷನೆಂಬ ಕೀರ್ತಿಯೂ ಅವರಿಗೆ ಸಲ್ಲುತ್ತದೆ. ಇಂಗ್ಲೀಷ್ ಕವಿತೆಗಳನ್ನು ಮೂಲದ ಛಂದಸ್ಸಿಗೆ ಅನುಗುಣವಾದ ಬಂಗಾಳಿ ಛಂದಸ್ಸಿನಲ್ಲಿ ಭಾಷಾಂತರಿಸುವುದೆಂದರೆ ಅವರಿಗೆ ಬಹಳ ಇಷ್ಟ. ತಮ್ಮ ಪತ್ರಿಕೆಗಳಲ್ಲಿ ಅವುಗಳನ್ನು ಪ್ರಕಟಿಸಿ ಅವುಗಳಿಗೆ ಬಹುಮಾನಗಳನ್ನು ಕೊಟ್ಟು ಅವರು ಪ್ರೋತ್ಸಾಹಿಸಿದರು.

ಅನಂತರ ಮಹರ್ಷಿ ದೇವೇಂದ್ರನಾಥ ಟಾಗೋರರು "ತತ್ವಬೋಧಿನಿ ಸಭಾ"ಎಂಬ ಸಂಸ್ಥೆಯನ್ನು ಸ್ಥಾಪಿಸಿ ಈ ಸಂಸ್ಥೆಯ ಅಂಗ ಪತ್ರಿಕೆಯನ್ನಾಗಿ 'ತತ್ವ ಬೋಧಿನಿ ಪತ್ರಿಕೆ'ಯನ್ನು ನಡೆಸ ತೊಡಗಿದರು. ಅಕ್ಷಯ ಕುಮಾರ ದತ್ತ ಮತ್ತು ಈಶ್ವರ ಚಂದ್ರ ವಿದ್ಯಾಸಾಗರರವರು ಈ ಪತ್ರಿಕೆಯೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು. ತತ್ವಬೋಧಿನಿಯ ಮೂಲಕ ಬಂಗಾಳಿ ಗದ್ಯಕ್ಕೆ ಮಹತ್ತರವಾದ ಬೆಂಬಲದೊರೆಯಿತು. ಅಕ್ಷಯ ಕುಮಾರರು ಐರೋಪ್ಯ ವಿಜ್ಞಾನ ಮತ್ತು ಚಾರ್ವಾಕ ಮತವನ್ನು ಭಾರತೀಕರಿಸಿದರು. ಈಶ್ವರ ಚಂದ್ರ ವಿದ್ಯಾಸಾಗರರು ಹಿಂದಿಯ 'ಬೇತಾಳಪಂಚ ವಿಂಶತಿ'ಯನ್ನೂ ಶೇಕ್ಸ್‌ಪಿಯರನ 'ಭ್ರಾಂತಿ-ವಿಲಾಸ'ವನ್ನೂ ಸಂಸ್ಕೃತದ 'ಶಾಕುಂತಲಾ' ಮತ್ತು 'ಸೀತಾ ವನವಾಸ'ವನ್ನೂ ಬಂಗಾಳಿಯಲ್ಲಿ ರಚಿಸಿ ಬಂಗಾಳಿ ಸಾಹಿತ್ಯ ಭಂಡಾರವನ್ನು ಹೆಚ್ಚಿಸಿದರು. ತೀವ್ರವಾದ ಸಮಾಜ ಸುಧಾರಣೆ, ಶಿಕ್ಷಣ ಪ್ರಸಾರ, ಇತ್ಯಾದಿಗಳು. ಅವರ ವೇಳೆಯ ಬಹುಭಾಗವನ್ನು ತೆಗೆದುಕೊಂಡು ಬಿಡುತ್ತಿದ್ದರೂ ಅವರು ಆತ್ಮ ಚರಿತ್ರೆಯೊಂದನ್ನು ಬರೆಯಲು ಪ್ರಯತ್ನಿಸಿದರು. ತಮ್ಮ ಪ್ರತಿಭೆಯನ್ನು ಸುಸ್ಪಷ್ಟವಾಗಿ ತೋರಿಸುವ ಶೋಕರಸ ಪ್ರಧಾನ ಗದ್ಯಪ್ರಬಂಧನ್ನೂ ಅವರು ರಚಿಸಿರುವರು.

ಪಾಶ್ಚಾತ್ಯ ಸಾಹಿತ್ಯ ಪ್ರಕಾರ

1850 ರಲ್ಲಿ ಭಾಷಾಂತರ ಕಾರ್ಯವು ಬಹಳ ಬಿರುಸಾಗಿ ನಡೆಯಿತು. ಬೇರೆ ಭಾಷೆಗಳ ಸಾಹಿತ್ಯಸಂಸ್ಥೆಯು ವಿವಿಧ ವಿಷಯಗಳ ಮೇಲಿನ ಮೂಲ ಹಾಗೂ ಅನುವಾದ ಕೃತಿಗಳನ್ನು ಪ್ರಕಟಿಸುವುದಕ್ಕೂ ಕಡಿಮೆ ಬೆಲೆಯಲ್ಲಿ ಅವುಗಳನ್ನು ಮಾರಾಟಮಾಡುವುದಕ್ಕೂ ಸಹಾಯ ಮಾಡಿತು. 1950 ರ ಮಧ್ಯ ಕಾಲದಲ್ಲಿ ಮೈಖೇಲ್ ಮಧುಸೂದನ ದತ್ತರು ಬಂಗಾಳದಲ್ಲಿ "ಸರಳ ರಗಳೆ" ಯನ್ನು ಆರಂಭಿಸಿ ಯಶಸ್ವಿಯಾದರು. ಅವರು ಮೇಘನಾದನ ಸಾವನ್ನು ಐರೋಪ್ಯರ ಶೈಲಿಯಲ್ಲಿ ಬರೆದರು. ತಮ್ಮ 'ವೀರಾಂಗಣ' ದಲ್ಲಿ ಓವಿಡ್ಡನನ್ನು ಯಶಸ್ವಿಯಾಗಿ ಅವರು ಅನುಕರಿಸಿದರು. ರಾಧಾಕೃಷ್ಣರ ಪದ್ಯವನ್ನು ಬಳಸಿಕೊಂಡು 'ಪ್ರಜಾಂಗಣ'ವನ್ನು ರಚಿಸಿದರು 'ಸಾಹಿತ್ಯದರ್ಪಣ'ದ ಕವಿನಿಯಮ ನಿಬಂಧನೆಗಳನ್ನು ಉಲ್ಲಂಘಿಸಿ ನಾಟಕಗಳನ್ನು ಬರೆದರು. ಬಂಗಾಳಿಯಲ್ಲಿ ಚತುರ್ದಶ ಪಂಗ್ತಿಗಳ ಕವನಗಳನ್ನು ರಚಿಸುವಲ್ಲಿ ಇವರೇ ಮೊದಲಿಗರು. ಐತಿಹಾಸಿಕ ನಾಟಕ, ದುರಂತ ನಾಟಕ, ಪ್ರಹಸನ ಮತ್ತು ವೀರರಸಪ್ರಧಾನ ಸುಖಾಂತ ನಾಟಕಗಳು- ಈ ಸಾಹಿತ್ಯ ಪ್ರಕಾರಗಳಲ್ಲೆಲ್ಲಾ ಅವರು ಪ್ರಯೋಗ ನಡೆಸಿದರು. ಅವರೊಬ್ಬರೇ ಈ ಎಲ್ಲಾ ಪ್ರಕಾರಗಳಲ್ಲಿಯೂ ಕೆಲಸ ಮಾಡಿರುವುದು ಮಹತ್ತರವಾದ ಸಾಧನೆಯೇ ನಿಜ. ಅವರ ಕೃತಿಗಳನ್ನು, ಶ್ರೇಷ್ಠ ಸಾಹಿತ್ಯ, ಮಹಾಕಾವ್ಯ ಅಥವಾ ಬೇರಾವುದೇ ಹೆಸರಿನಿಂದ ಬೇಕಾದರೆ ಕರೆಯಬಹುದು. ಆದರೆ ಅವರು ಮಾತ್ರ ಈ ತಮ್ಮ ಕೃತಿಗಳೆಲ್ಲ ಪ್ರಯೋಗಗಳೆಂದೂ ತಮ್ಮ ಮಹತ್ತರವಾದ ಮತ್ತು ಸಹಜವಾದ ವಿಷಯಗಳ ಮೇಲಿನ ಕೃತಿ ಇನ್ನೂ ಬರಲಿದೆಯೆಂದೂ ಹೇಳುತ್ತಿದ್ದರು.

ಮಧುಸೂದನರಿಗೆ ಮೊದಲು ರಾಮನಾರಾಯಣ ಎಂಬವರು ಸಮಾಜದ ಹಳೆಯನಿಯಮಗಳ ವಿರುದ್ಧ ಬಂಡಾಯವೆದ್ದಿದ್ದರು. ನೀಲಿಯ ತೋಟಗಾರರ ವಿರುದ್ಧ ನಿಂತಿದ್ದ ದೀನ ಬಂಧುಗಳು ಇವರ ಸಮಕಾಲೀನರಾಗಿದ್ದರು. ಕವಿ ಮನೋಭಾವದಲ್ಲಿ ವ್ಯಕ್ತವಾದ ಈ ಬದಲಾವಣೆಯು ರಂಗಲಾಲ್‌ರ 'ಪದ್ಮಿನಿಉಪಾಖ್ಯಾನ'ದೊಂದಿಗೆ ಆರಂಭವಾಗಿತ್ತು. ದೇಶಪ್ರೇಮಿಗಳಾದ ಕವಿಗಳು ಸ್ವಭಾವವಾಗಿ ಟಾಡನ್ ರಾಜಾಸ್ಥಾನದ ಇತಿಹಾಸದಿಂದ ವಸ್ತುಗಳನ್ನು ಆರಿಸತೊಡಗಿದರು. ಈ ಇತಿಹಾಸದಲ್ಲಿ ರಜಪೂತರು ಆಕ್ರಮಣಶೀಲ ಜನದೊಂದಿಗೆ ನಡೆಸಿದ ಹೋರಾಟಗಳು ವೀರರಸಪ್ರಧಾನ ಕವಿತೆಗಳಿಗೆ ಒಳ್ಳೆಯ ಸಾಹಿತ್ಯ ಸಾಮಾಗ್ರಿಗಳಾಗಿದ್ದವು. ಹಿಂದಿನಿಂದ ಹೇಮ ಚಂದ್ರ, ನವೀನ ಚಂದ್ರ ಮತ್ತಿತರರು ಮಧುಸೂದನರನ್ನು ಅನುಸರಿಸಿದರು.

ಮಧುಸೂದನರ ಮರಣಾನಂತರ, ನಾಟಕ ಕಂಪೆನಿಗಳು ಹೊಸನಾಟಕಗಳಿಗಾಗಿ ತೊಂದರೆಪಟ್ಟವು. ಗಿರೀಶ ಚಂದ್ರ ಘೋಷರು 1872 ರಿಂದ 1912ರ ವರೆಗೆ ನಾಟಕಗಳನ್ನು ರಚಿಸಿದರು. ಅವರು ನಾಟಕಕಂಪೆನಿಗಳನ್ನು ಸ್ಥಾಪಿಸಿ ನಟನಟಿಯರಿಗೆ ತರಬೇತಿಯನ್ನು ಕೊಟ್ಟರು. ಅವರ ನಾಟಕಗಳು ವಿಭಿನ್ನರೀತಿಯಲ್ಲಿದ್ದುವು. ಅವರು ನಾಟಕಗಳಲ್ಲಿ ಸಂಗೀತವನ್ನು ಕಡಿಮೆ ಮಾಡಿ ರಂಗ ಭೂಮಿಯ ಕೌಶಲ್ಯ ಹಾಗೂ ದೃಶ್ಯಸಂಯೋಜನೆ, ವಾದ್ಯಗೋಷ್ಠಿ, ಇತ್ಯಾದಿಗಳ ಉಪಯೋಗವನ್ನು ಹೆಚ್ಚು ಮಾಡಿದರು. ಬೇರೆಕೆಲವರು ನಾಟಕಗಳಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದರು. ಜ್ಯೋತೀಂದ್ರ ನಾಥರ ನಾಟಕಗಳು ಗ್ರೀಕ್ ನಾಟಕಗಳ ಮಟ್ಟಕ್ಕೆ ಏರಿವೆ. ಕ್ಷಿರೋಧ ಪ್ರಸಾದರ ಪ್ರಭಾವಶಾಲಿ ನಾಟಕಗಳೂ ದ್ವಿಜೇಂದ್ರಲಾಲ್ ರಾಯ್‌ರವರ ಐತಿಹಾಸಿಕ ನಾಟಕಗಳೂ ಅವರ ದೇಶಪ್ರೇಮ, ಗೀತೆ ಮತ್ತು ಸಂಭಾಷಣೆಗಳಿಗೆ ಪ್ರಸಿದ್ಧಿಯಾಗಿದ್ದುವು.

ಕಾದಂಬರಿ ಯುಗ

ಬಂಕಿಂ ಚಂದ್ರ ಚಟರ್ಜಿಯವರಿಗೆ ಬಂಗಾಳಿ ಸಾಹಿತ್ಯದಲ್ಲಿ ವಿಶೇಷವಾದ ಸ್ಥಾನಮಾನ ಸಲ್ಲುತ್ತದೆ. "ದುರ್ಗೇಶನಂದಿನಿ' ಎಂಬ ಅವರ ಕೃತಿ ಕಾದಂಬರಿ ರಚನೆಗೆ ಉತ್ತಮ ಆರಂಭವನ್ನಿತ್ತಿತು. ಅವರು ಅನೇಕ ಐತಿಹಾಸಿಕ ಕಾದಂಬರಿಗಳನ್ನು ಬರೆದರು. ಸಾಮಾಜಿಕ ಮತ್ತು ದಾರ್ಶನಿಕ ಕಾದಂಬರಿಗಳೂ ಇವರ ಲೇಖನಿಯಿಂದ ಮೂಡಿ ಬಂದಿವೆ. ಆನಂದಮಠ, ದೇವಿಚೌಧುರಾಣಿ, ಸೀತಾರಾಂ ಇವುಗಳನ್ನು ಇಲ್ಲಿ ಉದಾಹರಿಸಬಹುದು. ಸಮಾಜ ಸುಧಾರಕರು ಮತ್ತು ಮುಖಂಡರನ್ನು ಅಪಹಾಸ್ಯಕ್ಕೀಡುಮಾಡಿದಾಗಲೂ ಅವರು ಸಮಾಜ ಸುಧಾರಕರಾಗಿದ್ದರು; ಆದರೆ ವಿಷಯಗಳ ಕಲಬೆರಕೆ ಮಾಡುತ್ತಿರಲಿಲ್ಲ. ತಮ್ಮ ದಾರ್ಶನಿಕ ಕಾದಂಬರಿಗಳಲ್ಲಿ ಅವರು ನಿಸ್ವಾರ್ಥ ಸೇವೆಯಿಂದ ಫಲ ಹೇಗೆ ದೊರೆಯುವುದೆಂದೂ, ಫಲಾಪೇಕ್ಷೆಯಿಂದ ಮಾಡಿದ ಕೆಲಸ ಹೇಗೆ ಅವನತಿಗೆ ದಾರಿಯಾಗುವುದೆಂದೂ ನಿರೂಪಿಸಿದ್ದಾರೆ. ಅವರ ಕಾದಂಬರಿಗಳು ಕನ್ನಡಕ್ಕೂ ಬೇರೆ ಹಲವು ಭಾರತೀಯ ಭಾಷೆಗಳಿಗೂ ಅನುವಾದಿಸಲ್ಪಟ್ಟವು ಇದರಿಂದ ಬಂಗಾಳಿ ಭಾಷೆಯ ಸಾಹಿತಿಗಳಲ್ಲದೆ ಇತರರಿಗೂ ನೂತನ ಗದ್ಯ ಶೈಲಿಯ ಬಗ್ಗೆ ಸ್ಫೂರ್ತಿ ದೊರಕಿತು. ತಮ್ಮ ಮಾಸಪತ್ರಿಕೆಯಾದ 'ವಂಗ ದರ್ಶನ'ದಲ್ಲಿ ಓದುಗರನ್ನು ಅವರು ಅಧೀನವಲ್ಲಿಟ್ಟು ಕೊಂಡಿದ್ದರು. ತಮ್ಮ ಓದುಗರು ಭಾರತೀಯ ಸಂಸ್ಕೃತಿಗಳ ಕಡೆಗೆ ತಿರುಗಬೇಕೆಂಬ ಉದ್ದೇಶದಿಂದ ಅವರ 'ಅನುಶೀಲನ' ಎಂಬ ಕೃತಿಯನ್ನು ರಚಿಸಿದರು. ಪರಿಪೂರ್ಣ ಸಂಸ್ಕೃತಿಯ ಪ್ರತೀಕವಾಗಿ ಶ್ರೀ ಕೃಷ್ಣನನ್ನು, ಅನುಶೀಲನಕ್ಕೆ ಮಾದರಿಯಾಗಿ ಎತ್ತಿ ಹಿಡಿದರು

ತಮ್ಮ ಆರಂಭ ದಿನಗಳಲ್ಲಿ ಬಿಹಾರಿಲಾಲರ ಪ್ರಭಾವಕ್ಕೊಳಗಾಗಿ ರವೀಂದ್ರನಾಥ ಟಾಗೋರರು ಬಂಗಾಳಿ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನವನ್ನು ಗಳಿಸಿಕೊಂಡರು. 'ಕಮಲಾಕಾಂತನ ಕಡತ'ದ ಪ್ರಭಾವವನ್ನು ಅವರ ಮೊದ ಮೊದಲಿನ ಗದ್ಯ ಕೃತಿಗಳಲ್ಲಿ ಕಾಣಬಹುದು. ಹಿಂದಿನಿಂದ ಟಾಗೋರರು ತಮ್ಮ ಕಾದಂಬರಿಗಳನ್ನು ಮತ್ತೊಂದು ದಿಸೆಗೆ ತಿರುಗಿಸಿಕೊಂಡರು. ಹಾಗೆ ಗತಿ ಬದಲಾಯಿಸಿಕೊಂಡು ಬರೆದ ಅವರ ಕಾದಂಬರಿಗಳಲ್ಲಿ ಮನೋಸ್ಥಿತಿಯ ವ್ಯಾಪಾರವೇ ಪ್ರಧಾನವಾಗಿರುತ್ತದೆ ಅವರು ಛಂದಸ್ಸಿನ ಮೇಲೆ ಹಲವು ಪ್ರಯೋಗಗಳನ್ನು ನಡೆಸಿದರು. ಶ್ರೇಷ್ಠ ದರ್ಜೆಯ ಸಣ್ಣ ಕತೆಗಳನ್ನು ಬರೆದರು, ಅವುಗಳಲ್ಲಿ ದುಃಖದೊಂದಿಗೆ ನಗುವನ್ನೂ ವಿನೋದದೊಂದಿಗೆ ಶೋಕವನ್ನೂ ಬೆರಸಿದರು. ಗದ್ಯ, ವಿಮರ್ಶೆ, ಶಿಕ್ಷಣ, ಇತ್ಯಾದಿ ಎಲ್ಲಾ ರೀತಿಯ ಪುಸ್ತಕಗಳನ್ನು ಬರೆದರು. ಪ್ರತಿಯೊಂದರಲ್ಲೂ ಅವರ ನೈಪುಣ್ಯ ಎದ್ದು ಕಾಣುತ್ತಿದ್ದು, ಶ್ರೇಷ್ಠ ಕೃತಿಯ ಲಕ್ಷಣಗಳನ್ನು ಅವು ಸೂಸುತ್ತವೆ.

ಶರಚ್ಚಂದ್ರರ ಕ್ರಾಂತಿ ದೃಷ್ಟಿ

ಶರಚ್ಚಂದ್ರ ಚಟರ್ಜಿಯವರು ಮತ್ತೊಬ್ಬ ಪ್ರತಿಭಾಶಾಲಿಯಾದ ಕಾದಂಬರಿಗಾರರು. ಅವರು ತಮ್ಮ ಕೃತಿಗಳ ಮೂಲಕ ಮಾನವನ ಆತ್ಮ ಸೌಂದರ್ಯ ಮತ್ತು ಉನ್ನತ ಗೌರವದ ಕಡೆಗೆ ಸಮಾಜದ ಗಮನವನ್ನು ಸೆಳೆದರು. ಪ್ರಚಲಿತ ಸಾಮಾಜಿಕ ವ್ಯವಸ್ಥೆಯ ಯೋಗ್ಯತೆಯನ್ನು ಪ್ರಶ್ನಿಸಿ ಸಾಮಾಜಿಕ ಮುಖಂಡರು ಈ ಸಮಸ್ಯೆಗಳ ಬಗೆಗೆ ಉದ್ರೇಕಗೊಂಡು ತಲೆ ಕೆರೆದುಕೊಳ್ಳುವಂತೆ ಕೃತಿಗಳನ್ನೂ ರಚಿಸಿದರು. ಶರಚ್ಚಂದ್ರರ ಉದಾತ್ತ ದೃಷ್ಟಿಕೋಣದ ಕಾದಂಬರಿಗಳು ಕನ್ನಡ ಹಿಂದಿ ಮತ್ತಿತರ ಭಾರತೀಯ ಹಾಗೂ ವಿದೇಶಿ ಭಾಷೆಗಳ ಓದುಗರನ್ನು ಸೆರೆಹಿಡಿದುವು. ಪ್ರಮಥ ಚೌಧರಿಯವರು ತಮ್ಮ ಸಂಸ್ಕೃತ ಹಾಗೂ ಫ್ರೆಂಚ್ ಭಾಷಾ ಪಾಂಡಿತ್ಯದಿಂದ ಅನೇಕ ಸಣ್ಣ ಕತೆಗಳನ್ನೂ ವಿಮರ್ಶಾತ್ಮಕ ಪ್ರಬಂಧಗಳನ್ನೂ ರಚಿಸಿ ಬಂಗಾಳಿ ಸಾಹಿತ್ಯಕ್ಕೆ ಅಮೋಘ ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ 'ಪಥೇರ್ ಪಾಂಚಾಲಿ'ಯ ಲೇಖಕರಾದ ವಿಭೂತಿ ಭೂಷಣರನ್ನೂ ಅವರ ಸೇವೆಗಾಗಿ ಸ್ಮರಿಸಬಹುದು.

ಬಂಗಾಳಿ ಸಾಹಿತ್ಯವು ಇತರ ಭಾರತೀಯ ಭಾಷೆಗಳಂತೆ ಇತ್ತೀಚಿಗೆ ಹೆಚ್ಚು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಭೂದೇವ್ ದ್ವಿಜೇಂದ್ರನಾಥ್, ರಮೇಂದ್ರ ಸುಂದರ್ ಮುಂತಾದವರು ಬಂಗಾಳಿ ಗದ್ಯ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಗಳನ್ನಿತ್ತರು. ಈಗ ಬಂಗಾಳಿ ಲೇಖಕರಲ್ಲಿ ಪ್ರತಿಭೆಯ ಅಭಾವವೇನಿಲ್ಲ. ಸಣ್ಣಕತೆ, ಉನ್ನತ ಮಟ್ಟದ ಸಾಹಿತ್ಯ ಇತ್ಯಾದಿ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಬಂಗಾಳಿ ಸಾಹಿತ್ಯವು ವಿಶಿಷ್ಟ ಸ್ಥಾನವನ್ನು ಗಳಿಸಿದೆ. ರಾಜಕೀಯ ಸ್ವಾತಂತ್ರ್ಯವು ಲಭಿಸಿರುವುದು, ಬಂಗಾಳಿ ಸಾಹಿತ್ಯದ ಭವಿಷ್ಯದ ಬಗೆಗೆ ನಮಗೆ ಇನ್ನೂ ಹೆಚ್ಚಿನ ನಂಬಿಕೆಯನ್ನಿತ್ತಿದೆ. ಇತರ ಸಾಹಿತ್ಯ ಕ್ಷೇತ್ರಗಳಿಂದ ಉತ್ತಮ ಕೃತಿಗಳನ್ನು ಸ್ವೀಕರಿಸಿರುವುದರ ಜೊತೆಗೆ ತನ್ನ ಉತ್ತಮ ಕೃತಿಗಳನ್ನು ಇತರ ಸಾಹಿತ್ಯಕ್ಕೂ ಬಂಗಾಳಿ ಸಾಹಿತ್ಯ ನೀಡಿದೆ. ಆಧುನಿಕ ಬಂಗಾಳಿ ಸಾಹಿತ್ಯ ಶಾಖೋಪ ಶಾಖೆಗಳಿಂದ ಕಂಗೊಳಿಸುವ ವಿಶಾಲವಾದ ವೃಕ್ಷವನ್ನು ಹೋಲುತ್ತದೆ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ಶಬಾಕಂಪೆನಿ, ಮಂಗಳೂರು

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

(೨ನೇ ಪುಟದಿಂದ)

ಪರೂ ಡಚ್ಚರೂ ಬ್ರಿಟಿಶರೂ ಇಲ್ಲಿಗೆಬಂದು ಮುತ್ತು ಹೆಕ್ಕುವಗುತ್ತಿಗೆಯನ್ನು ವಶಪಡಿಸಿಕೊಂಡರು. ಬ್ರಿಟಿಷರು ಭಾರತವನ್ನು ತ್ಯಜಿಸಿದ ಗಳಿಗೆಯಿಂದ ಭಾರತೀಯರಿಗೆ ಅದರ ಮೇಲೆ ಸ್ವಾಮ್ಯದೊರಕಿತು. ಆದರೆ ಮುತ್ತು ಹೆಕ್ಕುವುದನ್ನು ಮೀನು ಹಿಡಿಯುವಂತೆ ನಾಗರಿಕರ ಅಧಿಕಾರಕ್ಕೊಳಪಟ್ಟ ವಿಷಯವಾಗಿ ಸರಕಾರ ಮಾಡಿಲ್ಲ. ರಾಜ್ಯ ಸರಕಾರಕ್ಕೆ ಸೇರಿದಗುತ್ತಿಗೆ ಅದು. ಮುತ್ತಿನ ಚಿಪ್ಪಿಗಳನ್ನು ಕಳ್ಳತನದಿಂದ ಯಾರೂ ಸಂಗ್ರಹಿಸಿ, ಪಾರದಂತೆ ಬಲವಾದ ಕಾವಲನ್ನು ಸರಕಾರ ಇಡುತ್ತದಲ್ಲದೆ, ಕೆಲವು ಸಮಯದ ವರೆಗೆ ಮುತ್ತಿನ ಚಿಪ್ಪಿರುವ ಸಮುದ್ರ ಪ್ರದೇಶದಲ್ಲಿ ಮೀನು ಹಿಡಿಯುವುದನ್ನೂ ಸರಕಾರ ಪ್ರತಿಬಂಧಿಸುತ್ತದೆ. ೧೯೫೩ ಮತ್ತು ೧೯೫೪ನೇ ವರ್ಷಗಳಲ್ಲಿ ಮದ್ರಾಸು ಸರಕಾರ ನಡೆಸಿದ ಪರಿಶೀಲನೆಗಳಿಂದ ಈ ವರ್ಷದ ವಸಂತ ಋತುವಿನಲ್ಲಿ ಮುತ್ತಿನ ಚಿಪ್ಪನ್ನು ಸಂಗ್ರಹಿಸಬಹುದೆಂದು ಗೊತ್ತಾದೊಡನೆಯೇ ಕಾವಲು ಪಡೆಯನ್ನು ನೇಮಿಸಿದ್ದಲ್ಲದೆ ಮೀನುಗಾರಿಕೆಯನ್ನು ತಿರುನೆಲ್ವೇಲಿ ಜಿಲ್ಲೆಯ ಕರಾವಳಿ ತೀರದ ಕೆಲವೆಡೆ ನಿಷೇಧಿಸಲಾಯಿತು.

ಜಗತ್ತಿನಲ್ಲಿ ಆಸ್ಟ್ರೇಲಿಯ, ಕೆಲಿಫೋರ್ನಿಯ, ಮೆಕ್ಸಿಕೊ, ವೆನೆಜುಯೆಲಾ ಮುಂತಾದೆಡೆ ಮುತ್ತುಗಳು ಸಿಗುತ್ತಿದ್ದರೂ ಪರ್ಶಿಯದ ಕೊಲ್ಲಿಯಲ್ಲಿಯೂ ಬಂಗಾಳಖಾತದಲ್ಲಿಯೂ ಸಿಗುವ ಮುತ್ತುಗಳೇ ಅಮೂಲ್ಯವಾದುವೆಂದು ಭಾವಿಸಲ್ಪಡುತ್ತವೆ. ಬೇರೆ ಕಡೆಯ ಮುತ್ತಿನ ಚಿಪ್ಪುಗಳನ್ನು ಚೂರಿಯ ಹಿಡಿಗಳು, ಅಂಗಿಯ ಗುಂಡಿಗಳು ಇತ್ಯಾದಿಗಳಿಗೆ ಬಳಸಲಾಗುತ್ತದೆಯೇ ಹೊರತು ಅಲಂಕಾರಕ್ಕೋಸ್ಕರ ಬಳಸುವುದು ವಿರಳ. ಜಪಾನು ದೇಶದಲ್ಲಿ ೧೯೧೫ ನೇ ಇಸವಿಯ ಸುಮಾರಿಗೆ ಮಿಕಿ ಮೋಟೋ ಎಂಬವರು ಮುತ್ತು ನಿರ್ಮಾಣದ ಕ್ಷೇತ್ರದಲ್ಲಿ ಅದ್ಭುತ ಪ್ರಯೋಗವನ್ನು ನಡೆಸಿ ಯಶಸ್ಸನ್ನು ಸಂಪಾದಿಸಿದಂದಿನಿಂದ ಕೃತಕ ರೀತಿಯಲ್ಲಿ ಮುತ್ತಿನ ಚಿಪ್ಪುಗಳ ರಚನೆ ಮಾಡುವ ಕುರಿತು ಹೆಚ್ಚು ಆಸಕ್ತಿಯನ್ನು ತೋರಿಸಲಾಗುತ್ತದೆ. ಕೃಸಡಾಯಿ ಪ್ರಾಣಿ ಶಾಸ್ತ್ರ ಸಂಶೋಧನೆಯ ಕೇಂದ್ರದಲ್ಲಿ ಮುತ್ತಿನ ಚಿಪ್ಪುಗಳ ಬೆಳವಣಿಗೆ ಮತ್ತು ಅವುಗಳು ಪಕ್ವವಾಗುವ ವಿಧಾನದ ಕುರಿತು ವಿಶೇಷ ಸಂಶೋಧನೆಗಳನ್ನು ನಡೆಸಿದುದರಿಂದ ಅನೇಕ ವಿಷಯಗಳನ್ನು ತಿಳಿಯಲಾಯಿತು. ಮುಖ್ಯವಾಗಿ ಐದುವರ್ಷಗಳ ಪ್ರೌಢ ವಯಸ್ಸಿನವರೆಗೂ ಮುತ್ತಿನ ಚಿಪ್ಪುಗಳನ್ನು ಜೀವಂತವಾಗಿಡ ಬಹುದೆಂಬುದು ಮನವರಿಕೆಯಾಯಿತು. ೧೯೪೭ರಲ್ಲಿ ತೂತುಕುಡಿಯಲ್ಲಿ ಇನ್ನೊಂದು ಸಂಶೋಧನ ಕೇಂದ್ರವನ್ನು ಸ್ಥಾಪಿಸಿದ ಪರಿಣಾಮವಾಗಿ, ಈ ಸಲ ಮುತ್ತಿನ ಚಿಪ್ಪನ್ನು ಹೆಕ್ಕುವ ಕಾರ್ಯಕ್ರಮವನ್ನು ಇಟ್ಟುಕೊಳ್ಳುವುದು ಸಾಧ್ಯವಾಯಿತು.

ಭಾರತೀಯ ಮುತ್ತುಗಳನ್ನು ಬಹಳ ವಿರಳವಾಗಿಯೇ ಸಂಗ್ರಹಿಸಲಾಗುತ್ತದೆ. ೧೮೯೦ರಿಂದ ೧೯೩೭ವರೆಗೆ ಮೂರುಸಲ ಮಾತ್ರ ಚಿಪ್ಪು ಸಂಗ್ರಹಿಸಲ್ಪಟ್ಟಿತು. ಅದರಲ್ಲಿ ೧೯೧೦ನೇ ಇಸವಿಯ ಸುಮಾರಿಗೆ ನಡೆಸಿದ ಕಾರ್ಯಕ್ರಮವು ಕೇವಲ ೩೦೦೦೦ರೂಪಾಯಿಗಳ ನಿವ್ವಳಲಾಭವನ್ನು ತಂದುಕೊಟ್ಟಿತು. ೧೯೩೮ರಿಂದ ಎರಡು ವರ್ಷಗಳತನಕ ನಡೆಸಿದ ಕಾರ್ಯಾಚರಣೆಯಿಂದ ೯ಲಕ್ಷರೂಪಾಯಿ ನಿವ್ವಳ ಲಾಭ ಸರಕಾರಕ್ಕೆ ದೊರಕಿತು. ಈ ಸಲ ಸೈತೊಂಭತು ಮತ್ತು ತೊಲಯಿರಂ ದ್ವೀಪಗಳ ಒತ್ತಿನಲ್ಲಿ ಸುಮಾರು ೩೦ ಲಕ್ಷ ಮುತ್ತಿನ ಚಿಪ್ಪುಗಳು ಬಿದ್ದಿವೆಯೆಂದು ಅಂದಾಜು. ಇವನ್ನು ಹೆಕ್ಕುವುದಕ್ಕೆ ಒಂದು ಸಾವಿರ ಕೆಲಸಗಾರರು ಈ ಸಲ ಇಳಿದಿದ್ದು, ಅವರಿಗೆ ಹೆಕ್ಕಿದ ಮುತ್ತಿನ ಚಿಪ್ಪುಗಳಲ್ಲಿ ಮೂರರಲ್ಲಿ ಒಂದಂಶವನ್ನು ಕೊಡಲಾಗುತ್ತದೆ. ಇವರು ಪ್ರತಿಯೊಂದು ಸಲ ಮುಳುಗುವಾಗ ಕೆಲವು ನಿಮಿಷ ನೀರೊಳಗಿರುವರೆಂದೂ ತಮ್ಮ ಬೆನ್ನಿಗೊ ಬಿಗಲಿಗೋ ಸಿಕ್ಕಿಸಿಕೊಂಡ ಚೀಲದಲ್ಲಿ ಮುತ್ತಿನ ಚಿಪ್ಪನ್ನು ತುಂಬಿಸಿಟ್ಟು ಹೊರ ಬರುವರೆಂದೂ ಇದನ್ನು ನೋಡಲು ಮತ್ತು ಮುತ್ತಿನ ಚಿಪ್ಪುಗಳನ್ನು ಕೊಂಡು ಕೊಳ್ಳಲು ಸಾವಿರಾರು ಜನರೂ ನೂರಾರು ವ್ಯಾಪಾರಿಗಳೂ ಬಂದಿರುವರೆಂದೂ ವರದಿಗಳಿಂದ ತಿಳಿಯುತ್ತದೆ. ಹೆಕ್ಕಿ ತಂದ ಮುತ್ತಿನ ಚಿಪ್ಪುಗಳಲ್ಲಿ ಅರೆವಾಸಿಯಷ್ಟು ಉಪಯೋಗಕ್ಕೆ ಬೀಳುತ್ತವೆ. ಉಪಯೋಗಿಯಾದ ಚಿಪ್ಪುಗಳು ಒಂದರಿಂದ ಎರಡು ರೂಪಾಯಿ ಬೆಲೆಗೆ ಮಾರಲ್ಪಡುತ್ತವೆ. ಹೀಗೆ ಸರಕಾರಕ್ಕೆ ಈ ಸಲ ಮೂರರಿಂದ ನಾಲ್ಕು ಲಕ್ಷ ರೂಪಾಯಿಗಳ ನಿವ್ವಳ ಲಾಭಬಂದೀತೆಂದು ಮಂತ್ರಿಗಳ ಹೇಳಿಕೆಯಿಂದ ತಿಳಿದು ಬರುತ್ತದೆ.

ಮುತ್ತಿನ ಚಿಪ್ಪುಗಳ ಬೆಳವಣಿಗೆ ವಿರಳವಾಗಿರುವುದರ ಕಾರಣವೇನೆಂದು ಇತ್ತೀಚೆಯ ವರೆಗೆ ಯಾರೂ ಪರಿಶೀಲಿಸಿರಲಿಲ್ಲ. ಮಿ. ಜೇಮ್ಸ್ ಹೊರ್ನೆಲ್ ಎಂಬವರು ಮಾತ್ರ ಈ ಸಮಸ್ಯೆಯ ಕುರಿತು ವಿಶೇಷ ಪರಿಶೀಲನೆಗಳನ್ನು ನಡೆಸಿದರು. ಇದರಿಂದ ಮುತ್ತಿನ ಚಿಪ್ಪುಗಳು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗ ಕೆಲವು ಜಾತಿಯ ಮೀನುಗಳು ಹಿಂಡು ಹಿಂಡಾಗಿ ನುಗ್ಗಿ ಬಂದು ಈ ಎಳೆಯ ಚಿಪ್ಪುಗಳನ್ನು ಧ್ವಂಸಪಡಿಸುತ್ತವೆಂದು ತಿಳಿದು ಬಂತು. ದಾಳಿಗಾರ ಮೀನುಗಳ ಮಾದರಿಯಲ್ಲಿ ಕೆಲವು ಕಳ್ಳ ವ್ಯಾಪಾರಸ್ಥರೂ ಸ್ವಾರ್ಥಿಗಳೂ ಸರಕಾರದ ಕಣ್ಣು ತಪ್ಪಿಸಿ, ಮುತ್ತಿನ ಚಿಪ್ಪುಗಳ ಪ್ರದೇಶದಲ್ಲಿ ಮುಳುಗಿ, ಎಳೆಯ ಚಿಪ್ಪುಗಳ ರಚನೆಯನ್ನು ತಮ್ಮ ಅತಿರೇಕ ಲಾಲಸೆಯಿಂದ ಕೆಡಿಸುವರೆಂದೂ ನಿರಾತಂಕ ಬೆಳವಣಿಗೆಗೆ ಆತಂಕಮಾಡುವರೆಂದೂ ಕಂಡು ಬರುತ್ತದೆ. ಚಿಪ್ಪಿಗಳು ಎಳೆಯವಿರುವಾಗ ಹೀಗೆ ತೊಂದರೆ ಕೊಡುವುದರಿಂದ ಕಳ್ಳತನ ಮಾಡುವವರಿಗೇನೂ ಲಾಭ ಸಿಗುವುದಿಲ್ಲ—ಆದರೂ ನೂರು ಚಿಪ್ಪಿನಲ್ಲಿ ಒಂದಾದರೂ ಬೆಳೆದದ್ದು ಸಿಗಬಹುದೆಂಬ ಚಪಲ ಅವರದು. ಇದು ರಾಷ್ಟ್ರದ ಸಂಪತ್ತನ್ನು ಹಾಳುಮಾಡುವ ಪ್ರಯತ್ನ ಎಂದವರು ತಿಳಿಯುವುದಿಲ್ಲ. ಕೆಲವೊಮ್ಮೆ ಮುತ್ತಿನ ಚಿಪ್ಪುಗಳ ಸಂಗ್ರಹವು ಸಮುದ್ರದೊಳಗಿನ ಪ್ರವಾಹದ ದೆಸೆಯಿಂದಲೂ ಹಾಳಾಗುತ್ತದೆ; ಅಪರೂಪವಾಗಿ ಸಂಗ್ರಹಕ್ಕೆ ಸಂಗ್ರಹವೇ ಬೇರೊಂದೆಡೆಗೆ ತೇಲಿ ಹೋಗುವುದೂ ಉಂಟು. ಹಾಗೆ ತೇಲಿ ಹೋದ ಸಂಗ್ರಹ ಸಿಂಹಳ ದ್ವೀಪದ ಕರಾವಳಿಯಲ್ಲಿ ತಡೆದು ನಿಂತು ತಂಗುತ್ತದೆ. ಸಿಂಹಳ ತೀರದಲ್ಲಿ ಪ್ರವಾಹ ತೀವ್ರವಾಗಿದ್ದರೆ ಭಾರತದ ಕರಾವಳಿಯಲ್ಲಿ ಮುತ್ತಿನ ಚಿಪ್ಪು ಸಂಗ್ರಹವಾಗುತ್ತದೆ. ಹವಾಮಾನದ ಬದಲಾವಣೆಯೂ ಚಿಪ್ಪುಗಳ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಸರಕಾರದ ತಜ್ಞರು ಇವೆಲ್ಲವನ್ನೂ ಪರಿಶೀಲಿಸಿ, ಭಾರತವು ತನ್ನ ಮುತ್ತಿನ ಉದ್ಯಮದ ಅಗ್ರಸ್ಥಾನವನ್ನು ಕಾಯ್ದುಕೊಂಡು ಹೋಗುವ ಸರ್ವ ಪ್ರಯತ್ನಗಳನ್ನೂ ಮಾಡುವರೆಂದು ನಂಬೋಣ!



ನಿಮಗೆ ಯಾವುದೇ ತರದ ಉದ್ಯೋಗ ಬೇಕೆಂದಿದ್ದರೆ ಅಥವಾ ವ್ಯಾಪಾರ ನಡೆಸಬೇಕೆಂದಿದ್ದರೆ ಕೂಡಲೇ ಬರೆಯಿರಿ:
ಟಪ್ಪಾಲುಪೆಟ್ಟಿಗೆ ನಂಬ್ರ 1868
ಬೊಂಬಾಯಿ— 1

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ. ಮೆನೇಜರ್,

ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

ಹೊಸ ಪುಸ್ತಕ

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಹಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೊಟ್ಟ ಮರ್ಮವನ್ನೂ, ನಿಶ್ಚೈಸಿದ್ದ 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೇ ವಧುದಕ್ಷಿಣೆ ಇವರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ :0—10—0

ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಪ್ರೆಸ್, ಉಡುಪಿ

ಭಾರತದ ರಾಜ್ಯಸಭೆಯಲ್ಲಿ ಮಾನವನ ಸಂಸ್ಕೃತಿಗೆ ಸಂಬಂಧಪಟ್ಟ ವಿಷಯಗಳೂ ಒಮ್ಮೊಮ್ಮೆ ಚರ್ಚೆಗೆ ಬರುತ್ತವೆ. ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವಿಷಯಗಳ ಚರ್ಚೆ ಒಣಹರಟೆಯಂತೆ ಬೇಸರಗೊಳಿಸುವಾಗ ಸಾಂಸ್ಕೃತಿಕ ಮಹತ್ವದ ಕೆಲವು ಪ್ರಶ್ನೆಗಳು ಸದಸ್ಯರಲ್ಲಿ ಉಲ್ಲಾಸವನ್ನು ಹುಟ್ಟಿಸುತ್ತವೆ. ಮಹಾಕವಿ ಕಾಳಿದಾಸನಿಗೆ ಉಜ್ಜಯಿನಿ ನಗರದಲ್ಲಿ ಒಂದು ಸ್ಮಾರಕ ರಚಿಸಬೇಕೆಂದೂ ಪ್ರತಿವರ್ಷ ಕಾರ್ತಿಕ ಶುಕ್ಲ ಏಕಾದಶಿಯನ್ನು ಕಾಳಿದಾಸನ ದಿನವಾಗಿ ಆಚರಿಸಲಾಗುವಂತೆ ಸಾರ್ವಜನಿಕ ರಜೆಕೊಡಬೇಕೆಂದೂ ಖಾಸಗಿ ಗೊತ್ತುವಳಿಯೊಂದರ ಚರ್ಚೆ ಮೊನ್ನೆ ರಾಜ್ಯಸಭೆಯಲ್ಲಿ ನಡೆಯಿತು. ಹೆಚ್ಚಿನ ಖಾಸಗಿ ಗೊತ್ತುವಳಿಗಳಂತೆ ಇದು ಸಹಾ ಯಾವ ಫಲವನ್ನೂ ಕೊಡದಿದ್ದರೂ ಕೆಲವು ಗಂಟೆಗಳ ವರೆಗೆ ಪಂಡಿತರು ಕಾಳಿದಾಸನ ಗುಣಗಾನ ಮಾಡುತ್ತಾ ಸಂಸ್ಕೃತ ಶ್ಲೋಕಗಳ ಮೂಲಕ ತಮ್ಮ ಪ್ರಭುತ್ವವನ್ನು ಪ್ರದರ್ಶಿಸುತ್ತಾ ಮೆರೆದಾಡಲು ಇದು ನೆರವಾಯಿತು. ಶಿಕ್ಷಣ ಶಾಖೆಯ ಕಾರ್ಯದರ್ಶಿಗಳು ಕಲಾವಿದರೂ ಸಾಹಿತ್ಯ ಪ್ರಿಯರೂ ಕಾಳಿದಾಸನ ಸ್ಮಾರಕ ರಚನೆಯ ಕುರಿತಾದ ಚಟುವಟಿಕೆಯನ್ನು ತೆಂಡಗಲಿ, ಸರಕಾರ ಸಾಧ್ಯವಿದ್ದ ಸಹಾಯ ಮಾಡುತ್ತದೆ ಎನ್ನುತ್ತಾ ಡಾ. ರಾಧಾಕೃಷ್ಣನ್ನರ ಮುಖ್ಯ ಸಂಪಾದಕತ್ವದಲ್ಲಿ ಕಾಳಿದಾಸನ ಕೃತಿಗಳ ವಿಮರ್ಶಾತ್ಮಕ ಸಂಕಲನವನ್ನು ಸಾಹಿತ್ಯ ಎಕಾಡಮಿ ನಡೆಸುತ್ತಿದೆ ಎಂದು ಪ್ರಕಟಿಸಿದರು.

ಮಹಾಕವಿ ಕಾಳಿದಾಸನ ಪ್ರೌಢಿಮೆ ಮತ್ತು ವಿದ್ವತ್ತಿನ ವಿಷಯದಲ್ಲಿ ಯಾರೊಬ್ಬರೂ ಸಂಶಯವನ್ನು ವ್ಯಕ್ತಪಡಿಸಲಿಲ್ಲ. ಡಾ. ರಘುವೀರರು ಸಿಂಹಳ ಮತ್ತು ಇಂಡೋನೇಶಿಯದ ಸಾಹಿತ್ಯದ ಮೇಲೆ ಕಾಳಿದಾಸನ ಪ್ರಭಾವ ಬಿದ್ದಿದೆ ಎಂದು ಸಾರಿದರು. ಬೇರೆ ಕೆಲವರು ಕಾಳಿದಾಸನ ಸಂಸ್ಕೃತ ಕೃತಿಗಳನ್ನು ದೇಶಭಾಷೆಗಳಿಗೆ ತರ್ಜುಮೆ ಮಾಡಿ, ಅವನ ನಾಟಕಗಳನ್ನು ಅಭಿನಯಿಸಬೇಕು ಎಂದರು. ಮತ್ತೆ ಕೆಲವರು ಸಂಸ್ಕೃತದ ಅಧ್ಯಯನಕ್ಕೆ ಪ್ರೋತ್ಸಾಹ ಕೊಟ್ಟರೆ ಕಾಳಿದಾಸನ ಕಾವ್ಯಗಳ ಪರಿಚಯಕ್ಕೆ ನೆರವಾಗುತ್ತದೆ ಎಂದರು. ಗೊತ್ತುವಳಿಯನ್ನು ಮಂಡಿಸಿದ ಶ್ರೀ ವಿಜಯವರ್ಗೀಯರು ಸ್ಮಾರಕರಚನೆಯ ದೃಷ್ಟಿಯಿಂದ

ಕಾಳಿದಾಸನ ನೆನಪು ಮಾಡಿಸುವ ನಗರ

ಉಜ್ಜಯಿನಿಯ ಪ್ರಾಚೀನ ವೈಭವ

ಈಗಾಗಲೇ ಸಣ್ಣ ನಿಧಿಯೊಂದನ್ನ ಸಂಗ್ರಹಿಸಿ ಮಧ್ಯ ಭಾರತ ಸರಕಾರದ ವಶಕೊಡಲಾಗಿದೆ ಎಂದು ತಿಳಿಸಿದರು. ಅದರ ವಿನಿಯೋಗ ಹೇಗಾಗುವುದೋ ತಿಳಿದಿಲ್ಲ-ಅದರೆ, ಏನೊಂದೂ ಪಾಂಡಿತ್ಯವಿಲ್ಲದಿದ್ದ ಮನುಷ್ಯನೊಬ್ಬನು ಕಲಿತು ಬಲ್ಲವನಾಗಬೇಕೆಂಬ ಪ್ರೇರಣೆಯ ಬಲದಿಂದ ಸರಸ್ವತಿಯ ಭಂಡಾರದ ಮುದ್ರೆಯನ್ನೊಡೆದನೆಂಬುದನ್ನು ನೆನೆದರೆ, ಆ ಹಣವನ್ನು ವಿದ್ಯಾರ್ಥಿ ವೇತನದ ರೂಪದಲ್ಲಿ ಯೋಗ್ಯರಿಗೆ ಕೊಡ ಮಾಡುವುದೇ ಲೇಸೆಂದು ಕಾಣುತ್ತದೆ. ಕಾಳಿದಾಸನು "ಉಷ್ಟ್ರ" ಎಂಬುದನ್ನು "ಉಟ್ರ" ಎಂಬುದಾಗಿ ಉಚ್ಚರಿಸುವ ದಡ್ಡನಾಗಿದ್ದನು. ಅವನ ಹೆಂಡತಿಯೂ ಮಹಾವಿದುಷಿಯೂ ಆದ ವಿದ್ಯೋತ್ತಮೆಯು ಇದರಿಂದ ಬೇಸರಗೊಂಡುದು ವ್ಯಕ್ತವಾದಾಗ ಆತನು ಹೊರಗೆ ವಿದ್ಯಾರ್ಥಿಯಾಗಿ ನಡೆದು "ದೇವಿದ್ವಾರಂದೇಹಿ" ಎಂದು ಶುದ್ಧ ಸಂಸ್ಕೃತದಲ್ಲಿ ಮಾತನಾಡುವ ಪ್ರಾವೀಣ್ಯ ಪಡೆದೇ ಮರಳಿದನು. "ಅಸ್ತಿ ಕಿಂಚಿತ್‌ವಾಗ್ವಿಶೇಷಃ" ಎಂಬ ಮೂರು ಶಬ್ದಗಳ ಮರುಪ್ರಶ್ನೆ ಬರಲು ಆತನು ರಘುವಂಶ, ಮೇಘದೂತ ಮತ್ತು ಶಾಕುಂತಲಗಳೆಂಬ ಮೂರು ಮಹಾಕಾವ್ಯಗಳನ್ನು ಮೇಲಿನ ಒಂದೊಂದೇ ಶಬ್ದಗಳಿಂದ ಮೊದಲು ಮಾಡಿ ಬರೆದು, ಬೆರಗುಗೊಳಿಸಿದನು.

ಉಜ್ಜಯಿನಿಯು ಕಾಳಿದಾಸನ ಜೀವನದೊಡನೆ ತುಂಬ ಸೇರಿಹೋದ ನಗರ. ಅವನ ಮೇಘದೂತವನ್ನು ಓದಿದ ಯಾರಿಗೇ ಆಗಲಿ, ಪತ್ನಿ ವಿದ್ಯೋತ್ತಮೆಯ ಮರಣದಿಂದ ಮಹಾಕವಿಯು ಎಷ್ಟು ನೊಂದಿದ್ದನೆಂದೂ ಉಜ್ಜಯಿನಿ ಮತ್ತು ವಿಂಧ್ಯಪರ್ವತ ಪ್ರದೇಶಗಳು ಎಷ್ಟು ಸೊಗಸಾಗಿದ್ದವೆಂದೂ ಹೊಳೆಯದಿರದು. ಇಂದು ಮಧ್ಯಭಾರತದ ಒಂದು ಜಿಲ್ಲೆಯಾಗಿರುವ ಉಜ್ಜಯಿನಿಯು ವಿಕ್ರಮಶಕೆಯನ್ನು ಪ್ರಾರಂಭಿಸಿದ ಶಕಾರಿ ವಿಕ್ರಮಾದಿತ್ಯನ ರಾಜಧಾನಿಯಾಗಿ ಕ್ರಿಸ್ತಪೂರ್ವ ಒಂದನೇ ಶತಮಾನದಲ್ಲಿ ಮೆರೆದಿತ್ತಲ್ಲದೆ, ಅದಕ್ಕೆ ಮುಂಚೆ ಮಹಾಕವಿ ಭರ್ತೃಹರಿಯು ಮಹಾರಾಜನಾಗಿ ಅದನ್ನು ಆಳುತ್ತಿದ್ದನು. ಹೆಂಡತಿಯ ಅನೈತಿಕ ವ್ಯವಹಾರ ಮತ್ತು ಅಸ್ಥಿರ ಪ್ರೇಮದಿಂದ ವೈರಾಗ್ಯ ಹೊಂದಿ ಮೂರು ನೀತಿ ಶತಕಗಳನ್ನು ರಚಿಸಿದ ಈ ಕವಿಯು ವಾಸಿಸುತ್ತಿದ್ದನೆಂದು ಹೇಳಲಾದ ಗುಹೆ ಉಜ್ಜಯಿನಿಗೆ ಎರಡು ಮೈಲು ದೂರದಲ್ಲಿ ಈಗಲೂ ನೋಡಸಿಗುತ್ತದೆ. ಇಲ್ಲಿ ಮಚ್ಛೇಂದ್ರನಾಥನೂ ಇರುತ್ತಿದ್ದನೆಂದು ಜನರ ಅಂಬೋಣ. ವಿಕ್ರಮಾದಿತ್ಯನ ಭದ್ರ ಕೋಟೆಯ ಕಾವಲು ಸ್ಥಾನವೆಂದು ಹೇಳಲಾಗುವಲ್ಲಿ ಈಗ ಇಪ್ಪತ್ತನಾಲ್ಕು ಸ್ತಂಭವೆಂಬ ಹೆಬ್ಬಾಗಿಲು ನೋಡಸಿಗುತ್ತದೆ. ಇಲ್ಲಿ ಎರಡು ಪ್ರತಿಮೆಗಳಿದ್ದು ಅವುಗಳ ಮೇಲೆ ಸಿಂಧೂರ ಚೆಲ್ಲಲ್ಪಟ್ಟಿರುತ್ತದೆ. ಪ್ರಾಚೀನ ನಗರ ರಕ್ಷಕರ ಸ್ಮಾರಕವಾಗಿ ನೆಡಲಾದ ದೇವಮೂರ್ತಿಗಳೆಂದು ಇವುಗಳನ್ನು ಭಾವಿಸಲಾಗುತ್ತದೆ.

ಪ್ರಾಚೀನ ಸಾಹಿತ್ಯ ಮತ್ತು ಪುರಾಣಗಳನ್ನು ನೋಡಿದರೆ ಉಜ್ಜಯಿನಿಗೆ ಅವಂತಿ, ಅಮರಾವತಿ ಎಂದು ಮುಂತಾಗಿ ಬೇರೆ ಕೆಲವು ಹೆಸರುಗಳಿದ್ದಂತೆ ವ್ಯಕ್ತವಾಗುತ್ತದೆ. ಮಹಾಭಾರತ ಕಾಲದಲ್ಲಿ ದುರ್ಯೋಧನನ ಸೇನೆಯಲ್ಲಿ ಸೇರಿಕೊಂಡು ಉಜ್ಜಯಿನಿಯ ಅರಸರು ಪಾಂಡವರೊಡನೆ ಹೋರಾಡಿದರೆಂಬ ಉಲ್ಲೇಖ ಕಾಣುತ್ತದೆ. ಸುಧನ್ವನೆಂಬ ಜೈನನು ನಗರಕ್ಕೆ ಉಜ್ಜಯಿನಿಯ ಹೆಸರನ್ನಿಟ್ಟನು. ಬೌದ್ಧ ಕಾಲದಲ್ಲಿ ಇದು ಪ್ರಬಲ ಶಕ್ತಿ ಸಂಪನ್ನ ಸಾಮ್ರಾಜ್ಯಗಳಲ್ಲಿ ಒಂದಾಗಿದ್ದು, ಇಲ್ಲಿಯ ರಾಜ ಪುತ್ರಿ ವಾಸವದತ್ತೆಯನ್ನು ಕೌಶಾಂಬಿಯ ರಾಜನಾದ ಉದಯನನು ವಿವಾಹ ಮಾಡಿಕೊಂಡನು. ಇದು ದೊಡ್ಡ ಕತೆಯ ರೂಪದಲ್ಲಿ ಇಂದಿಗೂ ಸ್ಮರಿಸಲ್ಪಡುತ್ತದೆ. ಮೌರ್ಯರ ಕಾಲದಲ್ಲಿ ಅಶೋಕನು ತನ್ನ ತಂದೆಯಿಂದ ಇಲ್ಲಿಯ ವರಿಷ್ಠನಾಗಿ ನೇಮಿಸಲ್ಪಟ್ಟಿದ್ದನು. ವಾಣಿಜ್ಯ, ಶಿಲ್ಪ ಮತ್ತಿತರ ಕ್ಷೇತ್ರಗಳಲ್ಲಿ ಆಗ ತುಂಬ ಅಭ್ಯುದಯವಾಯಿತು. ವಿಕ್ರಮಾದಿತ್ಯನ ಕಾಲದಲ್ಲಿ ದಿಗ್ದೇಶಗಳಿಗೆ ಈ ರಾಜ್ಯದ ಕೀರ್ತಿ ಪಸರಿಸಿತು. ಏಳನೆಯ ಶತಮಾನದಲ್ಲಿ ಕನೋಜದ ಮಹಾರಾಜ ಹರ್ಷವರ್ಧನನೂ ಅನಂತರ ಧಾರದ ಭೋಜರಾಜನೂ ರಾಜ್ಯವನ್ನು ಉಚ್ಛ್ರಾಯಾವಸ್ಥೆಗೆ ತರಲು ಪ್ರಯತ್ನಿಸಿ, ಜಯಶೀಲರಾದರು. ಇದು ಉಜ್ಜಯಿನಿಯ ಸ್ವರ್ಣಯುಗದ ಇತಿಹಾಸ.

೧೩೧೦ರಲ್ಲಿ ಅಲ್ಲಾವುದ್ದೀನ ಖಿಲ್ಜಿಯ ಆಕ್ರಮಣದ ಬಳಿಕ ಉಜ್ಜಯಿನಿಯ ಸೌಂದರ್ಯ ಮತ್ತು ಆಕರ್ಷಣೆ ನಷ್ಟವಾಗತೊಡಗಿತು. ಆದರೂ ಮೊಗಲ ಬಾದಶಾಹರು ನಷ್ಟಗೊಂಡ ರಾಜಧಾನಿಯನ್ನು ಮರಳಿ ಕಟ್ಟಲು ಪ್ರಯತ್ನಿಸಿದರು. ಇಲ್ಲಿಯ ಕಾಲಿಯಾದ ಹದಹವೆಂದು ಹೇಳಲಾಗುವ ವಿಹಾರ ಸ್ಥಾನದಲ್ಲಿ ಮೊಗಲ ಬಾದಶಾಹರು ಕೆಲವು ದಿನಗಳನ್ನು ಕಳೆಯುತ್ತಿದ್ದರೆಂದೂ ಜಹಾಂಗೀರನು ಇಲ್ಲಿ ಹರಿಯುವ ನದಿಯ ಮೇಲೆ ನೌಕಾ ಪ್ರಯಾಣ ಮಾಡುತ್ತಾ ಹತ್ತಿರದ ಅರಣ್ಯದಲ್ಲಿದ್ದ ಜಯರೂಪನೆಂಬ ಯೋಗಿಯೊಡನೆ ಜ್ಞಾನ ಚರ್ಚೆಯನ್ನು ನಡೆಸಲು ಹೋಗುತ್ತಿದ್ದನೆಂದೂ ಪ್ರತೀತಿ. ೧೭೫೫ರಲ್ಲಿ ಮರಾಠರ ಅಭ್ಯುದಯವಾದಾಗ ಯಶವಂತರಾವ್ ಹೋಳ್ಕರರ ಕೈಗೆ ಇದು ಸಿಕ್ಕಿತು. ಹಿಂದಿನಿಂದ ಇದು ಸಿಂಧಿಯರ ವಶವಾಯಿತು. ಅವರು ಭಾರತಕ್ಕೆ ಸ್ವಾತಂತ್ರ್ಯ ಸಿಗುವ ವರೆಗೂ ಉಜ್ಜಯಿನಿಯನ್ನು ರಕ್ಷಿಸಿಕೊಂಡು ಬಂದರಲ್ಲದೆ ವಿಹಾರ ಸ್ಥಾನಗಳನ್ನೂ ಪ್ರೇಕ್ಷಣೀಯ ಸ್ಥಳಗಳನ್ನೂ ಊರ್ಜಿತವಾಗಿ ಇಟ್ಟರು.

ಕ್ಷಿಪ್ರಾ ಎಂಬ ನದಿಯು ಉಜ್ಜಯಿನಿಯ ಮೂಲಕ ಹರಿದು ಚಂಬಲನ್ನು ಸೇರುತ್ತದೆ. ಈ ನದಿಯ ದಂಡೆಯ ಮೇಲೆ ವಿಕ್ರಮಾದಿತ್ಯನ ಕುಲದೇವತೆಯಾದ ಪಾರ್ವತಿಯ ಮಂದಿರ ನೋಡಸಿಗುತ್ತದೆ. ಇದು ಎತ್ತರವಾದ ಸ್ಥಳದ ಮೇಲೆ ಶುದ್ಧ ವಾಯು ಮಂಡಳದಲ್ಲಿ ನೆಲಸಿರುತ್ತದೆ. ಎದುರಿಗೆ ರುದ್ರ ಪ್ರಯಾಗವೆಂಬ ಕೆರೆ ಕಾಣಿಸುತ್ತದೆ. ಇಲ್ಲಿಯ ದೇವಿಯನ್ನು ನವದುರ್ಗೆಗಳಲ್ಲಿ ಒಬ್ಬಳೆಂದು ಹೊಗಳಲಾಗುತ್ತದೆ. ಕ್ಷಿಪ್ರಾ ನದಿಯಲ್ಲಿ ರಾಮಘಟ್ಟವು ಪ್ರಸಿದ್ಧವಾಗಿದ್ದು, ವಿಕ್ರಮಾದಿತ್ಯನು ಇಲ್ಲಿ ಮಿಂದು, ಮಡಿಯುಟ್ಟು ಮಹಾಕಾಲನ ದರ್ಶನಕ್ಕಾಗಿ ಮಂದಿರಕ್ಕೆ ಹೋಗುತ್ತಿದ್ದನೆಂದು ಜನರ ವಿಶ್ವಾಸ. ಮಹಾಕಾಲನ ಮಂದಿರವು ಐದು ಅಂತಸ್ತುಗಳಿಂದ ಕೂಡಿದ್ದು ಶೋಭಾಯಮಾನವಾಗಿ ಕಂಗೊಳಿಸುತ್ತದೆ. ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಇದು ಭಾವಿಸಲ್ಪಡುತ್ತದೆ. ಶಿವ ಪುರಾಣದಲ್ಲಿ ಇಲ್ಲಿಯ ಲಿಂಗದ ಮಹಿಮೆಯನ್ನು ಕೊಂಡಾಡುವ ಶ್ಲೋಕಗಳು ನೋಡಸಿಗುತ್ತವೆ. ಮಹಾ ಶಿವರಾತ್ರಿ ಮತ್ತಿತರ ವಿಶೇಷ ದಿನಗಳಲ್ಲಿ ಜನ ಸಮ್ಮರ್ದ ಹೆಚ್ಚಿದಾಗ, ಮಂದಿರದಲ್ಲಿ ಇಕ್ಕಟ್ಟಿನ ಅನುಭವವಾಗುತ್ತದೆ. ಉಜ್ಜಯಿನಿಯಲ್ಲಿ ಶ್ರೀಕೃಷ್ಣ ಮತ್ತು ಸುದಾಮರು ಒಟ್ಟಿಗೆ ವಿದ್ಯೆ ಕಲಿತ ಸಾಂದೀಪ ಮುನಿಯ ಆಶ್ರಮವೂ ಇತರ ಅನೇಕ ಪ್ರೇಕ್ಷಣೀಯ ಸ್ಥಳಗಳೂ ಇದ್ದು, ಅವು ಹಿಂದಿನ ವೈಭವವನ್ನು ಸಾರಿ ಹೇಳುತ್ತವೆ. ಚರಿತ್ರೆಯ ಪುಟಗಳಲ್ಲಿಯಷ್ಟೇ ಅಲ್ಲ, ಗ್ರಾಮೀಣ ಮಹಿಳೆಯರ ಗೀತೆಗಳು ವಿರಹ ಭಾವವನ್ನು ವ್ಯಕ್ತಪಡಿಸುವಾಗಲೆಲ್ಲ ಉಜ್ಜಯಿನಿಯ ವೈಭವ ಯುಗದ ನೆನಪುಮಾಡಿ ಕೊಡುತ್ತವೆ.

(೧ನೇ ಪುಟದಿಂದ)

ಸಾಕು – ಅದೇ ಅವನ ಒಳ್ಳೆಯ ತನಕ್ಕೆ ನಿದರ್ಶನ ಎಂದು ನಮ್ಮ ಶಾಸ್ತ್ರಗ್ರಂಥಗಳು ಹೇಳುತ್ತವೆ. ಮನುಷ್ಯನು ಎಷ್ಟು ಪಾಪಗಳನ್ನು ಮಾಡಿದ್ದರೂ ಭಗವನ್ನಾಮ ಸ್ಮರಣೆಗೆ ಮನಸ್ಸು ಕೊಟ್ಟರೆ ಸಾಕು, ನಿಧಾನವಾಗಿ ಅವನ ಬಂಧನಗಳೆಲ್ಲ ಕಳಚಿ ಹೋಗುತ್ತವೆ ಎಂದು ಗೀತೆ ಸಾರುತ್ತದೆ. ಆದುದರಿಂದ ಹೊರ ನೋಟಕ್ಕೆ "ಮ್ಲೇಂಛ"ರಾಗಿ ತೋರಿದರೂ ನಿಜವಾಗಿ ಭಾರತದ ಬಗೆಗೆ, ಭಾರತೀಯರ ಬಗೆಗೆ, ಭಾರತೀಯ ಧರ್ಮದ ಬಗೆಗೆ ಶ್ರದ್ಧೆ ಇರುವವರನ್ನು ಹೊರಗಿಡಲಾಗದು. ಹಿಂದೂಮತವು ಕೃತ ಯುಗದಿಂದ ಕಲಿಯುಗಕ್ಕಾಗುವಾಗ ಎಷ್ಟೋ ಪರಿವರ್ತನೆಗಳನ್ನು ಕಂಡಿದೆ; ಯಜ್ಞ, ಕರ್ಮ ಮತ್ತು ಜೀವನದ ಕುರಿತಾದ ಭಾವನೆಗಳು ಅನೇಕ ಬದಲಾವಣೆಗಳಿಗೆ ಗುರಿಯಾಗಿ, ಪರಮ ಸಹಿಷ್ಣುತೆಯನ್ನು ವ್ಯಕ್ತಪಡಿಸಿರುತ್ತವೆ. ಕಾರಣರಸಕ್ರೋಸ್ಕರ ಜಗಳಾಡಬೇಕಲ್ಲದೆ ಕಸಿಕ್ಕಾಗಿಯಲ್ಲ. ತಿರುಳಿಗಿರುವ ಮಹತ್ವ ತೊಗಟೆಗಿಲ್ಲ. ಇದನ್ನು ಮನವರಿಕೆ ಮಾಡಿಕೊಳ್ಳದೆ ಹೋದರೆ, ನಮ್ಮದೇ ಸಂಕುಚಿತ ವ್ಯಾಖ್ಯೆಯಿಂದ ತೃಪ್ತಿಪಟ್ಟುಕೊಂಡರೆ, ಯುಗ ಧರ್ಮದೊಡನೆ ಹೆಜ್ಜೆ ಹಾಕುವುದು ಕಷ್ಟವಾದೀತು.

— ಕಾರ್ತಿಕೇಯ.

NAVAYUGA WEEKLY

AVERTISEMENT RATES

Display Advertisements:— Rs. 2/-8 per column inch for contracts of 50" or more and Rs.3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No 22, UDIPI, S. K.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ

ಶ್ರೀ. ಎ.ಎಸ್.ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್. ಬಾರ್.ಎಟ್ ಲಾ. ಎ. ಎಸ್.ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾರವೇ ಈ ಭಾರತೀಯ ಕತೆಗಳು.

151 ಕತೆಗಳು ಬೆಲೆ ರೂ. 1-12-0

ದೊರಕುವ ಸ್ಥಳಗಳು.-1) ನವಭಾರತ ಪುಸ್ತಕ ಭಂಡಾರ, ಉಡುಪಿ

2) ನವಯುಗ ಪ್ರೆಸ್, ಉಡುಪಿ, ದ. ಕ.

ಪ್ರಕಟಣೆ

ಕುಂದಾಪುರ ತಾಲೂಕು ನಾಡಾ ಗ್ರಾಮದ ಸೇನಾಪುರ ಕಜನಿನ ಬಾಗ್ಲು ಸಾಮಿ ನಾಯ್ಕನ ಅಳಿಯ ರಾಮ ನಾಯ್ಕನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ- ನಾನು ಈ ಮುಂಚೆ ದಸ್ಕತು ತಿಳಿಯದವನಾಗಿದ್ದು ನನ್ನ ಹೆಬ್ಬೆಟ್ಟಿನ ಮೊಹರನ್ನು ಎಲ್ಲಾ ರಿಕಾರ್ಡುಗಳಿಗೂ ಉಪಯೋಗಿಸುತ್ತಿದ್ದೆ. ಆದರೆ ಇದೇ ಕಳೆದ 1951 ನೇ ಇಸ್ವಿ ಮೇ ತಿಂಗಳಿಂದ ನಾನು ನನ್ನ ದಸ್ಕತ್ತು ಮಾಡಲೂ ಕಲಿತಿರುವುದರಿಂದ ಮುಂದಿನ ಎಲ್ಲಾ ರಿಕಾರ್ಡುಗಳಿಗೆ ನನ್ನ ದಸ್ಕತ್ತು ಮಾಡುತ್ತಿದ್ದು ಅವು ಮಾತ್ರ ಸಿಂಧುವಾಗ ತಕ್ಕವುಗಳಾಗಿವೆ.

ರಾಮ ನಾಯ್ಕ.

M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ VOL. 34 — ಉಡುಪಿ, 7—4—1955 — ಸಂಚಿಕೆ ೩೧ NO. 31

ಸರಕಾರವು ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಕಾಯ್ದುಕೊಂಡರೆ ಸಾಕೆಂದು ಹೇಳುವ ಕಾಲವೂ ಇದ್ದಿತು. ಆದರೆ ಈಗ ಜನರು ಸರಕಾರವು ಕಲ್ಯಾಣ ರಾಷ್ಟ್ರವಾಗಿ ತಮ್ಮನ್ನು ಉತ್ತಮ ರೀತಿಯಿಂದ ಆಳಬೇಕೆಂದು ಬಯಸುತ್ತಾರೆ. ಜನತೆಯ ಈ ಆಕಾಂಕ್ಷೆ ಈಡೇರಬೇಕಾದರೆ ಉತ್ತಮ ಶಾಸನಕರ್ತರು ಬೇಕು. ಪ್ರಜಾಪ್ರಭುತ್ವದಲ್ಲಿ ಕಾನೂನುಗಳನ್ನು ರಚಿಸಿ, ಕಲ್ಯಾಣ ರಾಷ್ಟ್ರದತ್ತ ದೇಶದ ಆಡಳಿತವನ್ನು ನಡೆಸಿಕೊಂಡು ಹೋಗುವ ಹೊಣೆಯು ಶಾಸನ ನಿರ್ಮಾತೃಗಳ ಮೇಲೆ ಬೀಳುತ್ತದೆ.

—ಢೇಬರ ಭಾಯಿ

ಶಾಸನಕರ್ತರ ನಿರ್ಮಾಣ

ಪರೋಪದೇಶದಷ್ಟು ಅಗ್ಗವಾಗಿ ಮತ್ತು ಸುಲಭದಲ್ಲಿ ಬೇರೇನೂ ಸಿಗುವುದಿಲ್ಲವೆಂದು ಮೂದಲಿಸಲಾಗುತ್ತದೆ. ನಮ್ಮಲ್ಲಿ ಹಿರಿಯರಾದವರು, ಧುರೀಣರೆನಿಸಿದವರು ಮತ್ತು ಬುದ್ಧಿವಂತರು ಹೇಳುವ ಮಾತೆಲ್ಲವೂ ತಮಗಲ್ಲ, ಇನ್ನೊಬ್ಬರಿಗೆ ಇರುತ್ತವೆಂದು ಸಾಮಾನ್ಯವಾಗಿ ದೂರಲಾಗುತ್ತದೆ. ಇದು ಸುಳ್ಳೆಂದೇನೂ ಹೇಳುವಂತಿಲ್ಲ—ತಿಂಗಳಿಗೆ ೫೦೦ ರೂಪಾಯಿಗಳಿಗಿಂತ ಹೆಚ್ಚು ಸಂಬಳ ತಿನ್ನುವ ನಾಗರಿಕನು ಸ್ವತಂತ್ರ ಭಾರತದಲ್ಲಿ ಇರಬಾರದೆಂದು ಒಂದಾನೊಂದು ಕಾಲದಲ್ಲಿ ಗಾಂಧೀಜಿಯೇ ಮುಂತಾದವರು ಹೇಳಿದ್ದರು. ನಮ್ಮ ಮಂತ್ರಿಗಳಿಗೂ ಸರಕಾರದ ಉನ್ನತ ಅಧಿಕಾರಿಗಳಿಗೂ ಕೊಡಲಾಗುವ ಸಂಬಳ ಇದರ ನಾಲ್ಕಾರು ಪಾಲಿನಷ್ಟು ಹೆಚ್ಚಾಗಿರುತ್ತದೆ. ಮೊನ್ನೆ ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ತಿಂಗಳಿಗೆ ೫೦೦ ರೂಪಾಯಿಗಿಂತ ಹೆಚ್ಚು ವೆಚ್ಚ ಮಾಡುವವನು ಇನ್ನೊಬ್ಬನ ಪಾಲಿನದನ್ನು ಅನುಭೋಗಿಸುವನೆಂದು ನುಡಿದರು. ಆದರೆ ಮುಂಬಯಿಯ ಸಭೆಯೊಂದರಲ್ಲಿ ತನ್ನ ನಿತ್ಯದ ವೆಚ್ಚವನ್ನು ಈ ಮಿತಿಯೊಳಗೆ ತರುವುದು ತುಂಬ ಕಷ್ಟದಾಯಕವಾಗಿದೆ ಎಂದು ಅವರೇ ಒಪ್ಪಿಕೊಂಡರು. ಇವೆಲ್ಲದರ ಮೇಲಿಂದ ಹೇಳುವುದು ಶಾಸ್ತ್ರ, ಇಕ್ಕುವುದು ಗಾಳ ಎಂಬ ನಾಣ್ನುಡಿಯೇ ನಿಜವೆಂಬ ನಿರ್ಣಯಕ್ಕೆ ನಾವು ಬರುವುದು ಸಹಜ.

ಆದರೆ ಶ್ರೀ ಢೇಬರ ಭಾಯಿಗಳೇ ವಿವರಣಾತ್ಮಕ ರೂಪದಲ್ಲಿ ಅಪ್ಪಣೆ ಕೊಡಿಸಿದ ಮಾತೊಂದನ್ನು ಈ ಸಂದರ್ಭದಲ್ಲಿ ಮರೆಯಲಾಗದು. ತಾನು ಜನರ ಮುಂದೆ ಒಂದು "ಆದರ್ಶ"ವನ್ನು ಮಂಡಿಸುತ್ತಿದ್ದೆನೆಂದೂ ಅದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ತನ್ನನ್ನು ಸರಿ ತಿದ್ದಿಕೊಳ್ಳುವ ತೀವ್ರ ಪ್ರಯತ್ನದಲ್ಲಿ ನಿರತನಾಗಿದ್ದೇನೆಂದೂ ಅವರು ತಿಳಿಸಿದರು. ಎಲ್ಲ ಉಪದೇಶವಾಕ್ಯಗಳ ಬೆಲೆಯನ್ನೂ ಈ ಆದರ್ಶದ ಮಾನದಂಡದಿಂದಲೇ ಜನರು ಅಳೆಯಬೇಕು—ಆದರ್ಶವು ಜನಹಿತಕ್ಕೆ, ಸಮಾಜ ಕಲ್ಯಾಣಕ್ಕೆ ಎಷ್ಟರ ಮಟ್ಟಿಗೆ ಪ್ರೇರಣೆಯನ್ನೊದಗಿಸುತ್ತದೆ, ಮತ್ತು ಎಷ್ಟರ ಮಟ್ಟಿಗೆ ವ್ಯಾವಹಾರಿಕ ಮಹತ್ವವನ್ನು ಪಡೆದಿರುತ್ತದೆ ಎಂಬುದರ ಮೇಲೆ ಉಪದೇಶದ ಸಾರ್ಥಕತೆ ನಿಂತಿರುತ್ತದೆ. ಉಪದೇಶದಲ್ಲಿ ಕೆಟ್ಟದೇನೂ ಇಲ್ಲ—ಹಾಗೆ ಭಾವಿಸುವುದೇ ತಪ್ಪು. ಆದರೆ ಉಪದೇಶಕ್ಕೆ ನಿಜವಾದ ಮನ್ನಣೆ ಬರುವುದು ಅದು ನಿತ್ಯ ಜೀವನದಲ್ಲಿ ಪಡೆಯಬಹುದಾದ ಮನ್ನಣೆಯ ಮೇಲಿಂದಲೇ ಎಂಬುದು ಇಲ್ಲಿನ ತಾತ್ಪರ್ಯ.

ಹೀಗಿರುವುದರಿಂದ ಉಪದೇಶಗಳ ವಿಷಯದಲ್ಲಿ ನಾವು ಸಂಪೂರ್ಣ ತಾತ್ಸಾರವನ್ನು ತೋರಿಸಬಾರದು. ಸಾಧ್ಯವಾದಷ್ಟು ಒಳ್ಳೆಯ ರೀತಿಯಲ್ಲಿ ಜೀವನವನ್ನು ನಡೆಸಲಾಗುವಂತೆ ನಮಗೆ ಒತ್ತಾಸೆ ಕೊಡುವ ಉಪದೇಶಗಳನ್ನು ಗೌರವಿಸುವುದು ಶ್ರೇಯಸ್ಕರ. ಉಪದೇಶಕರೂ ಸಮಾಜವೂ ಧುರೀಣರೂ ಇದನ್ನೆ ಬಯಸುತ್ತಾರೆಂದರೆ ತಪ್ಪಲ್ಲ. ಇದರಿಂದಲೇ ಕಲ್ಯಾಣವಾಗಿದೆ; ಮತ್ತು ಮುಂದಾದರೂ ಆಗುತ್ತದೆ. ಆದುದರಿಂದ ಢೇಬರ ಭಾಯಿಗಳು ತಮ್ಮ ಉಪದೇಶವಾಕ್ಯವನ್ನು ತಮಗೆಯೇ ಅನ್ವಯಿಸಿಕೊಳ್ಳಲಿ ಎಂದು ಉಪೇಕ್ಷಿಸುವುದಕ್ಕಿಂತ, ಆ ಮಾತನ್ನು ಎಷ್ಟರ ಮಟ್ಟಿಗೆ ನಾವು ಅನುಷ್ಠಾನಕ್ಕೆ ತರಬಹುದೆಂದು ನೋಡಿಕೊಳ್ಳುವುದು ಅಪೇಕ್ಷಣೀಯ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಅವರು ಶಾಸನ ಕರ್ತರ ಹೊಣೆಗಾರಿಕೆಯ ಕುರಿತು ಹೇಳಿದ ಮಾತುಗಳು ತುಂಬ ಮನನೀಯವಿರುತ್ತವೆ. ಶಾಸನ ಕರ್ತರೇ ರಾಷ್ಟ್ರದ ಪ್ರಗತಿಯ ಸೂತ್ರವನ್ನು ಹಿಡಿದುಕೊಂಡಿದ್ದು, ಜನರ ಅಭ್ಯುದಯದ ರೀತಿಯನ್ನು ಚಿತ್ರಿಸುವ ಮಹಾನುಭಾವರೆಂದು ಅವರನ್ನು ಭಾವಿಸಲಾಗುತ್ತದೆ. ಇದರ ಪ್ರತಿಯೊಂದೂ ಕೃತಿಯಲ್ಲಿ ಮನೋಭಾವ ಮತ್ತು ನಡತೆಯಲ್ಲಿ ನಾಡಿನ ಹಿತದ ಕಲ್ಪನೆ ಮಿಡಿಯುತ್ತಾ ಸ್ಫುಟವಾಗಿ ಮಿನುಗುತ್ತಾ ಇದ್ದರೆ ಮಾತ್ರ ರಾಷ್ಟ್ರದ ಸರ್ವಾಂಗಿಕ ಏಳಿಗೆಯು ಸಾಧ್ಯ ಎಂಬ ವಿಷಯದಲ್ಲಿ ಯಾರದೂ ಭಿನ್ನಾಭಿಪ್ರಾಯವಿರಲಾರದು.

ಶಾಸನ ಕರ್ತರ ಹೊಣೆಗಾರಿಕೆಯು ಬಹಳ ವಿಶಾಲ ಸ್ವರೂಪದ್ದಿರುವುದರಿಂದ ಅದಕ್ಕೆ ತಕ್ಕ ತರಬೇತಿ ಅಗತ್ಯವೆನಿಸುತ್ತದೆ. ಇದನ್ನು ಸ್ಥಳೀಯ ಸಂಸ್ಥೆಗಳ ಮೂಲಕ ಒದಗಿಸಿಕೊಡಬಹುದೆಂದು ಢೇಬರರ ಅಭಿಪ್ರಾಯ. ಅವರ ಮಾತಿಗೆ ಅನುಭವದ ಬಲವಿರುವುದಾದರೂ, ತಿಳಿಗೇಡಿಗಳ ಕೈಯಲ್ಲಿ ಸ್ಥಳೀಯ ಸಂಸ್ಥೆಗಳೂ ಶಾಸನ ಸಭೆಗಳೂ ಹೊಲಸು ವರ್ತನೆಯ ಕ್ಷೇತ್ರಗಳಾಗಿ ಪರಿಣಮಿಸುತ್ತವೆಂದು ಹೇಳಬೇಕಾಗುತ್ತದೆ. ಅಶಿಕ್ಷಿತ ವರ್ಗದ ಜೀವನದಲ್ಲಿ ಕಂಡುಬರುವ ಬೈಗಳ ಮಾತು, ಹಟಮಾರಿತನ ಮುಂತಾದುವಕ್ಕೆ ಪಂಚಾಯಿತ ಸಭೆಗಳ ಸದಸ್ಯರೂ ಸಹ ಅಪವಾದವಲ್ಲವೆಂಬುದನ್ನು ಉಡುಪಿಯ ನಗರ ಸಭೆಯ ಈಚಿನ ಸಭೆಯೊಂದರ ಮತ್ತು ಮೊನ್ನೆ ಪಂಜಾಬಿನ ಶಾಸನ ಸಭೆಯಲ್ಲಿ ನಡೆದ ಗೊಂದಲವೊಂದರ ಮೇಲಿನಿಂದ ಮನಗಾಣಬಹುದು. ಆದುದರಿಂದ ಇಲ್ಲಿ ತರಬೇತಿಗಾಗಿ ಆರಿಸಿ ಕಳುಹಿಸಲ್ಪಡುವ ಜನರ ವಿಷಯದಲ್ಲಿ ಸಹ ಸಾಮಾಜಿಕರು ಪ್ರಜ್ಞಾವಂತರಾಗಿ ವರ್ತಿಸಬೇಕು; ಮತದಾರರು ತುಂಬ ಜಾಗರೂಕತೆಯನ್ನು ತೋರಿಸಬೇಕು. ಚುನಾಯಿಸಲ್ಪಟ್ಟ ಜನರು ವ್ಯಕ್ತಿಗತ ದ್ವೇಷಾಸೂಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಯ್ಯಿಗೆ ಮುಯ್ಯಿ ತೀರಿಸುವವರಾಗದೆ ಜನರ ಶ್ರೇಯಸ್ಸಿಗಾಗಿ ದುಡಿಯುವ ಉದಾರಚರಿತರಾಗಬೇಕು. ಇದಕ್ಕೆ ಅರ್ಹರಾದವರನ್ನೆ ತರಬೇತಿಯ ರಂಗಕ್ಕೆ ಅಥವಾ ಮಹತ್ವದ ಸ್ಥಾನಕ್ಕೆ ಕಳಿಸಲು ಮತದಾರರು ಪ್ರಯತ್ನಿಸಬೇಕು.

ಇನ್ನು ಕೆಲವು ಶಾಸನಕರ್ತರು ಸ್ಥಾನ ಮತ್ತು ಮಾನಗಳ ಹೇತುವಿನಿಂದವೂ ಮತ್ತು ಸ್ವಂತದ ಲಾಭಕ್ಕೋಸ್ಕರ ಉದಾರಚರಿತರ ಸೋಗು ಹಾಕಿಕೊಳ್ಳಬಹುದು. ಸಾರ್ವಜನಿಕ ಜೀವನದಲ್ಲಿ ಉತ್ಸಾಹದ ಚಟುವಟಿಕೆಗಳನ್ನು ತೋರಿಸುತ್ತಿದ್ದರೂ ಹಣಕಾಸಿನ ವಿಷಯಗಳಲ್ಲಿ ಅಪ್ರಾಮಾಣಿಕರಾಗಿಯೂ ತಮ್ಮ ಸ್ವಂತ ಬಂಧುಬಾಂಧವರ ಮತ್ತು ಇಷ್ಟಮಿತ್ರರ ವಿಷಯದಲ್ಲಿ ಪಕ್ಷಪಾತಿಗಳಾಗಿಯೂ ಕೆಲಸ ಮಾಡಬಹುದು. ಇವು ಜನಬಲವನ್ನು ಪಡೆಯಲಿಚ್ಛಿಸುತ್ತಿದ್ದಂತೆಯೇ ದ್ರೋಹ ಬಗೆಯುವ ಕೆಡುಕಿನ ಮಾರ್ಗ. ಶಾಸನ ಸಭೆಯಲ್ಲಿ ರಸ್ತೆಗಾಗಿ ಒತ್ತಾಯಿಸುತ್ತ ಆ ರಸ್ತೆಯ ನಿರ್ಮಾಣದ ಕೆಲಸವನ್ನು ತನ್ನವರಲ್ಲಿ ಒಬ್ಬನಿಗೆ ಒಪ್ಪಿಸಿ ಕೊಡುವಂತೆ ಆಗ್ರಹವನ್ನು ಹಿಂದಿನಿಂದ ಹೇರುತ್ತಾ ಒಬ್ಬನು ಮೆರೆದಾಡುವನಾದರೆ ಅವನು ತೋರಿಸುವ ಸಾರ್ವಜನಿಕ ಸೇವೆಯ ಮನೋಭಾವದ ಬೆಲೆ ತೀರ ಕೆಳಮಟ್ಟಕ್ಕೆ ಇಳಿಯುತ್ತದೆ. ಹೀಗೆ ವಂಚಿಸಬಹುದಾದವರು ಸಮಾಜಕ್ಕೆ ಒಳ್ಳೆಯ ಲಾಭ ತರುವವರಂತೆ ಮೇಲು ನೋಟಕ್ಕೆ ಕಂಡುಬಂದರೂ ನೈತಿಕ ನೆಲಗಟ್ಟನ್ನು ಸಡಲಿಸುವ ದುರ್ವರ್ತನವನ್ನು ಮಾಡುವವರಾಗುವುದರಿಂದ ನಿಂದಾರ್ಹರು. ಶಾಸನಕರ್ತರ ನಿರ್ಮಾಣದ ಘನವಾದ ಹೊಣೆಗಾರಿಕೆಯನ್ನು ಹೊತ್ತ ಮತದಾರರು ಈ ವಿಷಯವನ್ನು ಲಕ್ಷಿಸಬೇಕು.

— ಕಾರ್ತಿಕೇಯ.

ಐದಂಕದ ನಾಟಕವನ್ನು ಹೊಸತಾಗಿ ಅಭಿನಯಿಸುತ್ತಿದ್ದರು. ಆಗ ನಾಟಕಕಾರನಿದ್ದಲ್ಲಿಗೆ ಒಬ್ಬ ಸದ್ಗೃಹಸ್ಥನು ಬಂದು "ಬನ್ನಿ, ಸ್ವಲ್ಪ ಕಾಫಿ ಕುಡಿಯೋಣ" ಎಂದು ಕರೆದನು.

"ಆಯಿತು—ಆದರೆ ನಾಟಕ ನಿಮಗೆ ಹೇಗೆನಿಸುತ್ತದೆ?" ಎಂದು ನಾಟಕಕಾರನು ಉಬ್ಬಿನಿಂದ ಕೇಳಿದನು.

'ಚೆನ್ನಾಗಿದೆ— ನಿಮ್ಮ ನಾಟಕದಲ್ಲಿ ನಾಲ್ಕುಸಲ ವಿಶ್ರಾಂತಿ ಕೊಡಲಾಗುತ್ತದೆ .. ನನ್ನ ಹೋಟೇಲು ಇಲ್ಲಿಯೇ ಆಚೆ ಮಗ್ಗುಲಿನಲ್ಲಿಂಟು."

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ. ಹಣವನ್ನು ಠೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕುವಂತಾಗಬಹುದೆಂಬ ಆಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಕೇಂದ್ರೀಕರಿಸಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೧೦೨ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ ೬೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ ಉಡುಪಿ, ದ. ಭಾರತ.

ವ್ಯವಸಾಯ ಸಂಶೋಧನ ಕೇಂದ್ರದ ಸುವರ್ಣೋತ್ಸವ

ಪೂಸಾದ ನಿಲಯದಿಂದ ಲಭಿಸಿದ ಲಾಭ

ಪೂಸಾ ಇನ್‌ಸ್ಟಿಟ್ಯೂಟ್ ಎಂದು ಪ್ರಸಿದ್ಧವಾಗಿರುವ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯು (ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್) ೧೯೦೫ರಲ್ಲಿ ಉತ್ತರ ಬಿಹಾರಿನ ಪೂಸಾದಲ್ಲಿ ಸ್ಥಾಪಿತವಾಯಿತು.

ಭಾರತೀಯ ವ್ಯವಸಾಯಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಸಂಘಟಿತ ವಿಧಾನದಲ್ಲಿ ಪರಿಹರಿಸುವ ಬಗ್ಗೆ ಭಾರತದಲ್ಲಿ ಯಾವ ಸಂಶೋಧನಾ ಸಂಸ್ಥೆಯೂ ಇಲ್ಲದ ಕಾಲದಲ್ಲಿ ಪೂಸಾದಲ್ಲಿ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಸ್ಥಾಪನೆಗೆ ದಿವಂಗತ ಲಾರ್ಡ್ ಕರ್ಜನ್‌ರವರೂ ಮತ್ತು ಅಮೇರಿಕಾದ ಶ್ರೀ ಹೆನ್ರಿಫಿಪ್ಸ್‌ರವರ ಉದಾರ ದಾನವೂ ಕಾರಣವಾಯಿತು. ಈ ವಾರ ಸುವರ್ಣ ಮಹೋತ್ಸವವನ್ನು ಆಚರಿಸುವ ಈ ಸಂಸ್ಥೆಯು ತನ್ನ ೫೦ ವರ್ಷಗಳ ಉಪಯುಕ್ತ ಸೇವೆಯಲ್ಲಿ ಗಮನಾರ್ಹವಾದ ಮಹತ್ಸಾಧನೆಗಳನ್ನು ಮಾಡಿದೆ.

೧೯೩೪ರಲ್ಲಿ ಬಿಹಾರಿನಲ್ಲಾದ ಭೂಕಂಪಗಳ ದುರಂತದ ಪರಿಣಾಮವಾಗಿ ಇದನ್ನು ೧೯೩೬ರಲ್ಲಿ ನವದೆಹಲಿಗೆ ವರ್ಗಾಯಿಸಲಾಯಿತು. ಅತ್ಯಂತ ಸುಸಜ್ಜಿತ ಗೊಳಿಸಿದ ಪ್ರಯೋಗ ಶಾಲೆಗಳನ್ನೂ, ನಿಷ್ಣಾತರಾದ ವೈಜ್ಞಾನಿಕ ಸಿಬ್ಬಂದಿಯವರನ್ನೂ ಗ್ರಂಥ ಭಂಡಾರದ ಸೌಲಭ್ಯಗಳನ್ನೂ ಹೊಂದಿರುವ ಈ ಸಂಸ್ಥೆಯು ವಿಶ್ವದ ಪ್ರಖ್ಯಾತ ಕೇಂದ್ರಗಳಲ್ಲಿ ಒಂದಾಗಿದೆ.

ಪೂಸಾದಲ್ಲಿ ಸಂಸ್ಥೆಯನ್ನು ಸ್ಥಾಪಿಸಿದ ಕೇವಲ ಕೆಲವು ವರ್ಷಗಳಲ್ಲಿ ಮಾರ್ಗದರ್ಶಕ ಕಾರ್ಯವನ್ನು ಮಾಡಿದ ಪರಿಣಾಮವಾಗಿ ಸಂಸ್ಥೆಯು ಸತ್‌ಸಂಪ್ರದಾಯವನ್ನು ಬೆಳೆಸಿತು. ಸಂಸ್ಥೆಯ ಸಿಬ್ಬಂದಿಯಲ್ಲಿ ವೈಜ್ಞಾನಿಕ ನಿಷ್ಣಾತರಿದ್ದರು. ಮೈಕಾಲಜಿ ವಿಭಾಗದಲ್ಲಿ ಬಟ್ಲರ್, ಸಸ್ಯತಳಿ ಶಾಸ್ತ್ರದಲ್ಲಿ ಹೋವಾರ್ಡ್, ಕೀಟಶಾಸ್ತ್ರ ವಿಭಾಗದಲ್ಲಿ ಮ್ಯಾಕ್ಸ್‌ವೆಲ್-ಲೆಫ್ರಾಯ್ ಮತ್ತು ಫ್ಲೆಚರ್, ಮಣ್ಣಿನ ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರದಲ್ಲಿ ಹಚಿನ್‌ಸನ್ ಮತ್ತು ವಾರ್ತ್ ಇವರೆಲ್ಲ ತಮ್ಮ ವಿಭಾಗಗಳಲ್ಲಿ ಅದ್ಭುತಕಾರ್ಯಸಾಧನೆ ಮಾಡಿದ್ದರಲ್ಲದೆ ಇವರು ಪ್ರಕಟಿಸಿದ ಗ್ರಂಥಗಳೂ ಪ್ರಬಂಧಗಳೂ ಈಗಲೂ ಕೂಡ ಪ್ರಮಾಣ ಕೃತಿಗಳಾಗಿವೆ.

ಪೂಸಾದಲ್ಲಿ ಸ್ಥಾಪಿತವಾದ ಸಂಸ್ಥೆಯ ಆಶ್ರಯದಲ್ಲಿ ಮೊದಲಿಗೆ ಪೂಸ ೪, ೧೨, ೫೨ ಮತ್ತು ೧೬೫ ಎಂಬ ಪ್ರಖ್ಯಾತ ಪೂಸಾ ಗೋಧಿಗಳನ್ನು ಸುಧಾರಿಸಿ ಬೆಳೆಯಲಾಯಿತು. ಇವು ಸ್ವದೇಶದಲ್ಲಿಯೂ, ವಿದೇಶದಲ್ಲಿಯೂ ಒಳ್ಳೆಯ ಹೆಸರನ್ನು ಪಡೆದವು. ಪೂಸಾ ೪ ಜಾತಿಯ ಗೋಧಿಯು ವಿದೇಶಗಳಲ್ಲಿ ನಡೆದ ಧಾನ್ಯಗಳ ಪ್ರದರ್ಶನಗಳಲ್ಲಿ ಹಲವಾರು ಪ್ರಥಮ ಬಹುಮಾನಗಳನ್ನು ಗಳಿಸಿತು.

ಗೋಧಿಯಂತೆ, ಬಾರ್ಲಿ, ಓಟ್, ಭತ್ತ, ಕಡಲೆ, ಅಹಾರ್ಕ, ಅಗಸೇ ಬೀಜ ಸಾಸಿವೆ, ಹೊಗೆ ಸೊಪ್ಪು, ಮೆಣಸಿನ ಕಾಯಿ ಮತ್ತಿತರ ಬೆಳೆಗಳಲ್ಲಿಯೂ ಸುಧಾರಿಸಿದ ಮಾದರಿಗಳನ್ನು ಬೆಳೆಸಲಾಯಿತು. ಈ ಸಂಸ್ಥೆಯಲ್ಲಿ ಸಿಗರೇಟ್‌ಗಳಲ್ಲಿ ಉಪಯೋಗಿಸುವ ಹೊಗೆಸೊಪ್ಪಿನ ಬಗ್ಗೆ ಸಂಶೋಧನೆಯನ್ನು ಮಾಡಿದ ಫಲಿತಾಂಶವಾಗಿ ಭಾರತದ ಸಿಗರೇಟ್‌ಗಳಲ್ಲಿ ಉಪಯೋಗಿಸುವ ಹೊಗೆಸೊಪ್ಪಿನ ಕೈಗಾರಿಕೆಯ ಅಭಿವೃದ್ಧಿಗೆ ಅವಕಾಶವುಂಟಾಯಿತು. ರಾಷ್ಟ್ರದ ಸಕ್ಕರೆ ಕೈಗಾರಿಕೆಯಲ್ಲಿಯೇ ಕ್ರಾಂತಿಯನ್ನುಂಟು ಮಾಡಲು ಸಾಧ್ಯವಾದ ವಿವಿಧ ಜಾತಿಯ ಕಬ್ಬನ್ನು ಕೊಯಮುತ್ತೂರು ಕಬ್ಬಿನ ಸಂಶೋಧನೆಯ ಉಪನಿಲಯದಲ್ಲಿ ಬೆಳೆಯಲಾಯಿತು.

ಎಂಟಮಾಲಜಿ ವಿಭಾಗದಲ್ಲಿ ದೇಶದಲ್ಲಿ ದೊರೆಯುವ ವಿವಿಧ ಕೀಟಗಳ ಬಗ್ಗೆ ಗ್ರಾಹ್ಯವಾಗಿ ತನಿಖೆ ನಡೆಸಿ ಬೆಳೆಗಳಿಗೆ ಉಪದ್ರವವಾಗಿರುವ ಹಲವಾರು ಕೀಟಗಳನ್ನು ನಿಯಂತ್ರಿಸುವ ಬಗ್ಗೆ ಯಶಸ್ವಿಯಾದ ಕ್ರಮಗಳನ್ನು ಕಂಡು ಹಿಡಿಯಲಾಯಿತು. ಅದೇ ರೀತಿಯಲ್ಲಿ ರಾಷ್ಟ್ರದಲ್ಲೆಲ್ಲಾ ದೊರಕುವ ಬುಗುಟನ್ನು ಮೈಕಾಲಜಿ ವಿಭಾಗದಲ್ಲಿ ಶೇಖರಿಸಿಡಲಾಯಿತು. ಈ ವಿಭಾಗದಲ್ಲಿಯೇ ಭಾರತದಲ್ಲಿ ಮೈಕಾಲಜಿಯ ಬಗ್ಗೆ ಬುನಾದಿಯನ್ನು ಹಾಕಲಾಯಿತು. ಸಹಿವಾಲ್ ಜಾತಿಯ ಹಾಲು ಕೊಡುವ ಗೋವುಗಳ ಬಗ್ಗೆ ಪರಿಶೀಲನೆ ನಡೆಸಿದ ಪರಿಣಾಮವಾಗಿ ಪ್ರತಿನಿತ್ಯವೂ ಗೋವು ಸರಾಸರಿ ೫ ಪೌಂಡುಗಳ ಹಾಲನ್ನು ಕೊಡುತ್ತಿದ್ದುದನ್ನು ೨೧ ಪೌಂಡುಗಳಿಗೆ ಏರಿಸಲಾಯಿತು.

ನವದೆಹಲಿಗೆ ವರ್ಗಾಯಿಸಲ್ಪಟ್ಟ ಮೇಲೆ ಸಂಸ್ಥೆಯ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಸಂಶೋಧನಾ ಕಾರ್ಯದಲ್ಲಿ ನಿರತರಾದ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಹಾಗೂ ಸಂಶೋಧನೆಯ ವಿಭಾಗದಲ್ಲಿ ಹೊಸ ಮಾರ್ಗಗಳನ್ನು ಸೇರಿಸಲಾಯಿತು. ವಿವಿಧ ವಿಭಾಗಗಳನ್ನು ಪಕ್ಕಾ ವಿಭಾಗಗಳನ್ನಾಗಿ ಅಭಿವೃದ್ಧಿ ಮಾಡಲಾಯಿತು. ಸಂಸ್ಥೆಯಲ್ಲಿ ಈಗ ಕೃಷಿ ವಾತಾವರಣ ಶಾಸ್ತ್ರ, ಸಸ್ಯಶಾಸ್ತ್ರ, ಸಸ್ಯರೋಗ ಲಕ್ಷಣ ಶಾಸ್ತ್ರ, ಮೈಕಾಲಜಿ, ಭೂವಿಜ್ಞಾನ ಮತ್ತು ವ್ಯಾವಸಾಯಿಕ ರಸಾಯನ ಶಾಸ್ತ್ರ, ಮತ್ತು ವ್ಯಾವಸಾಯಿಕ ಎಂಜಿನಿಯರಿಂಗ್‌ಗಳೆಂದು ಆರು ವಿಭಾಗಗಳಿವೆ. ಸಂಸ್ಥೆಯ ಲಿನ್‌ಲಿತ್‌ಗೋ ಪುಸ್ತಕ ಭಂಡಾರವು ಸಹಸ್ರಾರು ವೈಜ್ಞಾನಿಕ ಪತ್ರಿಕೆಗಳನ್ನು ಪಡೆಯುತ್ತದೆ ಹಾಗೂ ಪೂರ್ವದಲ್ಲೆಲ್ಲಾ ಅತ್ಯುತ್ತಮವಾದ ಕೃಷಿಸಂಬಂಧ ಪುಸ್ತಕ ಭಂಡಾರವಾಗಿದೆ.

ಸಸ್ಯಗಳನ್ನು ಬೆಳೆಸುವ ಕೆಲಸದಲ್ಲಿ ರೋಗ ನಿರೋಧಕ ಬೆಳೆಗಳನ್ನು ಬೆಳೆಯುವ ಬಗೆಯ ಮೂಲಭೂತ ಸಮಸ್ಯೆಗಳ ವಿಷಯದಲ್ಲಿ ಮಹತ್ವವನ್ನು ಕೊಡಲಾಗಿದೆ.

ಎನ್. ಪಿ ೭೧೦, ೭೧೮, ೭೬೧, ೭೭೦ ಮತ್ತು ೮೦೯ ಗಳೆಂಬ ನೂತನ ಸುಧಾರಿಸಿದ ಗೋಧಿ ಜಾತಿಗಳನ್ನು ಭಾರತದ ಗುಡ್ಡಗಾಡು ಪ್ರದೇಶಗಳಲ್ಲಿಯೂ, ಮೈದಾನುಗಳಲ್ಲಿಯೂ ಹಲವಾರು ಇತರ ಕೇಂದ್ರಗಳಲ್ಲಿಯೂ ಬೆಳೆಯಲಾಗಿದೆ ಸುಧಾರಿಸಿದ ಟೊಮಾಟೋ, ಆಲೂಗಡ್ಡೆ, ಅಗಸೆ ಬೀಜ ಮೊದಲಾದವನ್ನು ಈ ಸಂಸ್ಥೆಯಲ್ಲಿ ಬೆಳೆಯಲಾಗಿದೆ.

ಮೈಕಾಲಜಿ ಮತ್ತು ಪ್ಲಾಂಟ್ ಪೆಥಾಲಜಿ ವಿಭಾಗವು ಸಂಶೋಧನಾ ಕಾರ್ಯದಲ್ಲಿ ಚುರುಕಿನಿಂದ ಕೆಲಸ ಮಾಡುತ್ತಿದ್ದು ಬುಗುಟು ಕಾಡಿಗೆ ರೋಗ ಮೊದಲಾದ ಗೋಧಿ ಬೆಳೆಯ ರೋಗಗಳ ಮತ್ತು ಅಗಸೆ ಬೆಳೆಗೆ ಹಿಡಿಯುವ ಬುಗುಟಿನ ರೋಗ ಮೊದಲಾದ ರೋಗಗಳ ಬಗ್ಗೆ ಸಂಶೋಧನಾ ಕಾರ್ಯ ನಡೆಸಿ ಉತ್ತಮ ಫಲಿತಾಂಶಗಳನ್ನು ನೀಡಿದೆ. ಈ ವಿಭಾಗದಲ್ಲಿರುವ ಸಸ್ಯ ಸಂಗ್ರಹಾಲಯ ಮತ್ತು ರಾಷ್ಟ್ರೀಯ ಕೀಟ ಸಂಗ್ರಹಾಲಯವು ಪೌರಸ್ತ್ಯ ದೇಶಗಳಲ್ಲೆಲ್ಲಾ ಅತ್ಯುತ್ತಮವಾದುದೆಂದು ಹೆಸರಾಗಿವೆ.

ಅಮೇರಿಕಾದ ತಾಂತ್ರಿಕ ಸಹಕಾರದೊಂದಿಗೆ ಈ ಸಂಸ್ಥೆಯು ಕೃತಕ ಗೊಬ್ಬ

(೧೧ನೇ ಪುಟ ನೋಡಿರಿ)

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.


ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು
ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-
Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು.

ಭಾರತೀಯ ವಿಮಾನ ದಳದ ಕಾರ್ಯಕಲಾಪ

ಇಪ್ಪತ್ತೆರಡು ವರ್ಷಗಳ ತಾರುಣ್ಯ

ನಮ್ಮ ರಾಷ್ಟ್ರದ ಸಶಸ್ತ್ರ ಪಡೆಗಳು ನಮ್ಮ ಸ್ವಾತಂತ್ರ್ಯದ ಕೋಟೆ ಕೊತ್ತಲದಂತಿವೆ. ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಯುವಕರು ಈ ದಳಗಳನ್ನು ಸೇರಿ ಅವುಗಳನ್ನು ಸಾಕಷ್ಟು ಶಕ್ತಿಯುತವನ್ನಾಗಿ ಮಾಡುವುದು ಅವಶ್ಯಕವಾಗಿದೆ. ಪ್ರಚಲಿತ ವೈಜ್ಞಾನಿಕ ಅಭಿವೃದ್ಧಿಗಳು ಸಮರಕ್ಕೆ ಸಂಬಂಧಿಸಿದ ಸಾಂಪ್ರದಾಯಿಕ ವಿಧಾನಗಳನ್ನೂ ಸಶಸ್ತ್ರ ಪಡೆಗಳಿಗೆ ಈಗಿರುವ ಪ್ರಯೋಗ ರೀತಿಗಳನ್ನೂ ತಳ್ಳಿಹಾಕಿವೆ. ಆಧುನಿಕ ಯುದ್ಧವು ವಹನಶಕ್ತಿ ಮತ್ತು ಬುದ್ಧಿವಂತಿಕೆಯ ಬಗ್ಗೆ ನಿಜವಾದ ಪರೀಕ್ಷೆಯಾಗಿದೆ. ಕಾಲಾಳುಗಳ ಸ್ಥಾನವನ್ನು ಯಂತ್ರಗಳನ್ನು ಹೊಂದಿರುವ ಸೇನಾದಳದವರು ಆಕ್ರಮಿಸಿದ್ದಾರೆ. ಟ್ಯಾಂಕುಗಳು, ರ್‍ಯಾಕೆಟ್ ಪ್ರೊಜೆಕ್ಟೈಲ್‌ಗಳು ಮೊದಲಾದವು ಹಾಡಿಕೆಯ ಫಿರಂಗಿದಳ (ಆರ್ಟಿಲರಿ-ಗೋಲಂದಾಜರು) ಸ್ಥಾನವನ್ನು ಆಕ್ರಮಿಸಿವೆ. ಪರಮಾಣು ಬಾಂಬುಗಳು ಟಿ. ಎನ್. ಟಿ. ಸ್ಫೋಟಕಗಳ ಸ್ಥಾನವನ್ನು ಆಕ್ರಮಿಸಿವೆ. ಹಾಗೆಯೇ ರೇಡಾರ್, ಇನ್‌ಫ್ರಾರೆಡ್ ಕಿರಣದ ಉಪಕರಣಗಳು, ರೇಡಿಯೋ ಟೆಲಗ್ರಫಿ ಮತ್ತು ಟೆಲಿಫೋನುಗಳು ಸಾಂಪ್ರದಾಯಿಕ ಉಪಕರಣಗಳ ಸ್ಥಾನವನ್ನು ಆಕ್ರಮಿಸಿವೆ. ರಾಷ್ಟ್ರದ ಸಂರಕ್ಷಣೆಯನ್ನು ನಿರ್ವಹಿಸಲು ಆ ಮಾದರಿಯ ಸೇವೆಗಳಿಗೆ ಯೋಗ್ಯರಾದ ಯುವಕರನ್ನು ಚುನಾಯಿಸಬೇಕಾದದ್ದು ಅವಶ್ಯಕವಾಗಿದೆ. ವಿಮಾನ ಚಾಲನೆಯ ಬಗ್ಗೆ ಮತ್ತು ತಾಂತ್ರಿಕ ಕೌಶಲದ ಬಗ್ಗೆ ಅಭಿರುಚಿಯುಳ್ಳ ಅಂತಹ ಯುವಕರು ನಮ್ಮ ರಾಷ್ಟ್ರಕ್ಕೆ ಅಗತ್ಯವಾಗಿ ಬೇಕಾಗಿದ್ದಾರೆ. ಒಂದು ರಾಷ್ಟ್ರದ ಉಳಿಕೆಗೆ ವೈಮಾನಿಕ ಶಕ್ತಿಯು ಆಧುನಿಕ 'ಕೀಲಿ'ಯಾಗಿದೆ. ರಾಷ್ಟ್ರದ ವೈಮಾನಿಕ ಬಲವನ್ನು ಹೆಚ್ಚು ಶಕ್ತಿಯುತವನ್ನಾಗಿ ಮಾಡುವುದು ಅತ್ಯಂತ ಮುಖ್ಯವಾದ ವಿಷಯವಾಗಿದೆ.

ರಾಷ್ಟ್ರದ ವೈಮಾನಿಕ ಕಲೆಯ ಪ್ರತಿಭೆಯನ್ನು ಹೆಚ್ಚಿಸುವ ವಿಷಯದಲ್ಲಿ ಭಾರತೀಯ ವಿಮಾನ ದಳದ ಪ್ರಯತ್ನಗಳು ಪ್ರಶಂಸನೀಯವಾದದು. ನಮ್ಮ ರಾಷ್ಟ್ರದ ವಾಯುಯಾನ ವಿಜ್ಞಾನದ ಬಲವನ್ನು ಹೆಚ್ಚಿಸುವ ಬಗ್ಗೆ ಕೈಗೊಂಡ ಸ್ಪಷ್ಟವಾದ ಹಂತಗಳಲ್ಲಿ, ವರ್ಷ ವರ್ಷಕ್ಕೂ ಜವಾಬ್ದಾರಿಯುತರಾದ ವೈಮಾನಿಕರನ್ನೂ, ತಂತ್ರಜ್ಞರನ್ನೂ ಆಡಳಿತಗಾರರನ್ನೂ ಅತ್ಯಾಧುನಿಕವಾದ ವಿಮಾನ ದಳದ ಸಂಸ್ಥೆಗಳಿಂದಲೂ ಮತ್ತಿತರ ತರಬೇತಿ ಕೇಂದ್ರಗಳಿಂದಲೂ ಹೊರ ತರುತ್ತಿರುವುದು, ವಾಯು ದಳದ ಹೊಸಲು ದಳಗಳು, ಎನ್. ಸಿ. ಸಿ.ಯ ವಿಮಾನ ದಳಗಳ ರಚನೆ ಇವುಗಳು ಉಲ್ಲೇಖನೀಯ.

ಇಡೀ ವಿಮಾನ ದಳವೇ ಪೂರ್ತಿಯಾಗಿ ತಾಂತ್ರಿಕ ಸ್ವರೂಪವನ್ನು ಹೊಂದಿದೆ. ಹರಕು ಮುರುಕು ಕೆಲಸಗಳನ್ನು ಇಲ್ಲಿ ಸಹಿಸಲಾಗುವುದಿಲ್ಲ. ಭಾರತೀಯ ವಿಮಾನ ದಳವು ನೀಡುವ ವಿಮಾನ ಯಾನದ ಎಂಜಿನಿಯರಿಂಗ್ ಸದವಕಾಶಗಳನ್ನು ಉಪಯೋಗಿಸಿಕೊಳ್ಳುವುದು ನಮ್ಮ ವಿದ್ಯಾವಂತ ಯುವಕರ ಕರ್ತವ್ಯವಾಗಿದೆ. ವಿಮಾನಯುಗದಲ್ಲಿ, ವೈಮಾನಿಕ ಬಲದಲ್ಲಿನ ಅಪಾಯಗಳನ್ನು ಗಮನಿಸಿ ವಿಮಾನದಳವನ್ನು ಸೇರಲು ಮುಂದೆ ಬರಲು ಅವರು ಶಂಕಿಸಬಹುದು. ವಿಮಾನಯಾನ ಕಲೆಯ ಕ್ಷೇತ್ರದಲ್ಲಿನ ತ್ವರಿತ ಮುನ್ನಡೆಯಿಂದ ಅಂತಹ ಅಪಾಯಗಳು ಪ್ರಾಚೀನವಾಗಿ ಬಿಟ್ಟಿವೆ. ಯಶಸ್ವಿಯಾದ ವೈಮಾನಿಕ ವೃತ್ತಿಗೆ ಸಮತೂಕದ ಶರೀರ ರಚನೆ, ಸಾಮಾನ್ಯ ಜಾಣ ಚಕ್ಯತೆ, ಉನ್ನತ ಶಿಕ್ಷಣ ಮತ್ತು ವಿಮಾನ ಚಾಲನೆಯಲ್ಲಿ ಅಭಿರುಚಿ ಇವು ಅತ್ಯಾವಶ್ಯಕವಾಗಿ ಬೇಕೆಂಬುದು ಮಾತ್ರ ನಿಜ

ಭಾರತದ ದಳಗಳಲ್ಲಿ ಅತ್ಯಂತ ಕಿರಿಯದಾದ ಮತ್ತು ಹೋರಾಡುವ ದಳವೆನಿಸಿದ ವಿಮಾನಬಲವು ಈಗ ೨೨ನೇ ವಾರ್ಷಿಕ ದಿನವನ್ನು ಆಚರಿಸುತ್ತದೆ. ನಮ್ಮ ದೇಶಕ್ಕೆ ಅಗತ್ಯವಾದ ಸಂರಕ್ಷಣೆಯನ್ನೊದಗಿಸುವ ರೀತಿಯಲ್ಲಿ ಈ ದಳವನ್ನು ರಚಿಸಲಾಗಿದೆ. ಒಂದು ದೇಶದ ಸಮಗ್ರ ಸಂರಕ್ಷಣೆಯ ನೀತಿಗನುಸಾರವಾಗಿ ಆ ದೇಶದ ವಿಮಾನ ಬಲದ ರಚನೆ ಹಾಗೂ ಪ್ರಮಾಣವಿರುತ್ತದೆ. ಒಂದು ದೇಶದ ಸಮಗ್ರ ಸಂರಕ್ಷಣೆಯ ನೀತಿಯು ಹಲವು ಅಂಶಗಳನ್ನವಲಂಬಿಸಿರುವುದು. ಅವುಗಳಲ್ಲಿ ಆ ದೇಶದ ವಿದೇಶ ವ್ಯವಹಾರ ನೀತಿ ಮತ್ತು ಆರ್ಥಿಕ ಸಂಪತ್ತು ಅತಿಮುಖ್ಯವಾದ ಅಂಶಗಳೆನಿಸುವುವು. ನಮ್ಮ ದೇಶವು ಯಾವ ಶಕ್ತಿಕೂಟಗಳೊಡನೆಯೂ ಸೇರುವುದಿಲ್ಲ; ಯಾವುದೇ ದೇಶದ ಅಂತರಿಕ ಆಡಳಿತದಲ್ಲಿ ಕೈ ಹಾಕುವುದಿಲ್ಲ, ಇದೇ ನಮ್ಮ ವಿದೇಶ ವ್ಯವಹಾರ ನೀತಿಯೆಂದು ಪ್ರಧಾನ ಮಂತ್ರಿಗಳು ಪದೇ ಪದೇ ಹೇಳುತ್ತಲೂ ಕಾರ್ಯತಃ ನಡೆಸುತ್ತಲೂ ಇರುವರು. ಆದರೂ, ಒಂದು ವೇಳೆ ನಮ್ಮ ದೇಶದ ಗಡಿ ಪ್ರದೇಶಗಳಲ್ಲಿ ಸಿಡಿಮದ್ದುಸ್ಫೋಟನವಾದರೆ ಅದನ್ನು ಎದುರಿಸುವುದಕ್ಕೆ ಒಂದು ದಳವು ಸಿದ್ಧವಾಗಿರಬೇಕು. ಇದಕ್ಕೆ ಸಂರಕ್ಷಣೆಯ ವ್ಯವಸ್ಥೆ ಬೇಕಾಗುತ್ತದೆ. ಇಂಥ ಬಲವು ಕೇಂದ್ರ ವ್ಯೂಹಕ್ಕೆ ಅಧೀನವಾಗಿರುವುದು. ನಮಗೆ ಅಪಾಯ ಸಂಭವಿಸಬಹುದಾದ ಕ್ಷೇತ್ರ, ಆಪಾದದ ಪ್ರಮಾಣ, ಅದಕ್ಕೆ ಅಗತ್ಯವಾದ ಸಂರಕ್ಷಣೆ ಇತ್ಯಾದಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ವ್ಯೂಹವನ್ನು ನಿರ್ಮಿಸಬೇಕಾಗುತ್ತದೆ

ನಮ್ಮ ದೇಶವು ಅನೇಕ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದರಿಂದ ಸಂರಕ್ಷಣೆಗೆ ಹೆಚ್ಚು ವೆಚ್ಚ ಮಾಡಲು ಸಾಧ್ಯವಾಗುವುದಿಲ್ಲ ಈ ವೆಚ್ಚದಲ್ಲೂ ವಿಮಾನ ಬಲಕ್ಕೆ ಸಲ್ಲುವ ಭಾಗ ಇಲ್ಲಿ ಭೌಗೋಲಿಕಸ್ಥಿತಿ, ಶತ್ರುಪಕ್ಷದವರ ಯುದ್ಧ ತಂತ್ರ ಮನ್ನವಲಂಬಿಸಿರುವುದು. ಆಧುನಿಕ ಸಮರ ಭೂಮಿಯಲ್ಲಿ ವಿಮಾನ ಬಲವೇ ನಿರ್ಧಾರಕ ಪಾತ್ರವನ್ನು ವಹಿಸುವುದು. ಆದುದರಿಂದ ವಿಮಾನ ಬಲದ ಮಹತ್ವವನ್ನು ಮತ್ತೆ ಮತ್ತೆ ಒತ್ತಿಹೇಳಬೇಕಾಗಿಲ್ಲ.

ವಿಮಾನ ಬಲದ ರಚನೆ ತುಂಬಾ ಸುವ್ಯವಸ್ಥಿತವಾಗಿರಬೇಕಾದುದು ಅಗತ್ಯ. ದೇಶದ ಸಂರಕ್ಷಣೆಯ ಸಮಗ್ರ ಅಗತ್ಯವನ್ನೂ ಅದು ಗಮನದಲ್ಲಿಟ್ಟುಕೊಂಡಿರಬೇಕು. ಸಂರಕ್ಷಣಾ ಬಲವು ಬರೀ ಯುದ್ಧ ವಿಮಾನಗಳನ್ನು ಪಡೆದಿದ್ದರೆ ಸಾಲದು. ಅವುಗಳ ಜೊತೆಗೆ ಪೂರಕವಾದ ಇತರ ಮಾದರಿಯ ವಿಮಾನಗಳು, ಸಹಾಯಕ ಸಾಮಾಗ್ರಿಗಳನ್ನೊದಗಿಸುವ ಕೈಗಾರಿಕೆಗಳು — ಇವುಗಳನ್ನು ಹೊಂದಿರಬೇಕಾಗುತ್ತದೆ.

ಭಾರತೀಯ ವಿಮಾನ ದಳವು ಶಾಂತಿ ಹಾಗೂ ಸಮರ ಸಮಯಗಳಲ್ಲಿ ಅಮೂಲ್ಯ ಸೇವೆ ಸಲ್ಲಿಸಿದೆ. ಕಾಶ್ಮೀರ ಹೋರಾಟದಲ್ಲಿ ಭಾರತ ವಿಮಾನ ದಳವು ವಹಿಸಿದ ಪಾತ್ರವನ್ನು ಇದಕ್ಕೆ ಉದಾಹರಣೆಯನ್ನಾಗಿ ತೆಗೆದುಕೊಳ್ಳಬಹುದು. ಭಾರತೀಯ ವಿಮಾನ ದಳವು ಯುದ್ಧದಲ್ಲಿ ವಿಜಯಗಳಿಸುವುದರ ಜೊತೆಗೆ ಶತ್ರು ಘೇರಿಗೊಳಗಾಗಿದ್ದ ಲಕ್ಷಾಂತರ ನಿರಾಶ್ರಿತರನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸಿತು. ಶತ್ರು ವ್ಯೂಹಕ್ಕೆ ಸಿಕ್ಕಿದ್ದ ಜನರಿಗೆ ಆಹಾರಾದಿಗಳನ್ನು ಒದಗಿಸಿತು ಇದು ಕಷ್ಟಕರವಾದ ಕೆಲಸವಾಗಿದ್ದರೂ ಭಾರತೀಯ ವಿಮಾನ ಬಲವು ಯಶಸ್ವಿಯಾಗಿಯೇ ಅದನ್ನು ನಿರ್ವಹಿಸಿತು.

ಯುದ್ಧ ಒದಗಿ ಬಂದಾಗ ವಿಮಾನ ದಳವನ್ನು ಕೂಡಿಸಿ ತರಬೇತಿ ಕೊಡಲು ಸಾಧ್ಯವಿಲ್ಲ. ವಿಮಾನ ದಳವನ್ನು ಮೊದಲೇ ಕೂಡಿಸಿ ತರಬೇತಿಯಿತ್ತು ಸಜ್ಜುಗೊಳಿಸಬೇಕಾದುದು ಅಗತ್ಯ. ಅಂದರೆ, ಶಾಂತಿ ಸಮಯದಲ್ಲಿ ಉನ್ನತ ಮಟ್ಟದ ತರಬೇತಿ ಕೊಡಬೇಕಾಗುತ್ತದೆ. ವಿಮಾನ ದಳವನ್ನು ಸದಾ ಸಮರಸನ್ನದ್ಧವಾಗಿರುವಂತೆ ನೋಡಿಕೊಳ್ಳುವುದೇ ಪೂರ್ಣ ಕಾಲಾವಧಿಯ ಕೆಲಸವಾಗುತ್ತದೆ. ತರ

(೧೦ನೇ ಪುಟ ನೋಡಿರಿ)

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)

ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—

ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮಿಗೆ ಅತ್ಯಂತ ಪರಿಣಾಮಕಾರಿ.

ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 3—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಹಣಕ್ಕೆ ಅತ್ಯಂತ ಸುರಕ್ಷಿತತೆ ಮತ್ತು ಭದ್ರತೆ; ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅತ್ಯಂತ ತ್ವರಿತ ಹಾಗೂ ತೃಪ್ತಿಕರ ಸೇವೆ; ಮತ್ತು ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳಲ್ಲಿ ಯೋಗ್ಯ ಸಲಹೆ; ಬೇಕಿದ್ದರೆ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಡಾ| ಯು. ಸುಂದರ ರಾವ್ ಪೈ,
ಎಮ್. ಬಿ., ಬಿ. ಎಸ್.,
ಅಧ್ಯಕ್ಷ.

ವಿ. ಆರ್. ಕಾಮತ್,
ಬಿ. ಎ., ಎಲ್‌ಎಲ್. ಬಿ.,
ಜನರಲ್ ಮೆನೇಜರ್.

Estd:- 1906] [H. O. UDIPI (S.India).

THE CANARA BANKING CORPORATION LIMITED

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your associataion with the POPULAR.

THE POPULAR INSURANCE CO., LTD.
"POPULAR BUILDINGS" MANGALORE-1

ಗೋವಧೆ ನಿರೋಧ ಮಸೂದೆಗೆ ನೆಹರುಗಳ ವಿರೋಧ

ರಾಜ್ಯ ಘಟನೆಯ ತಿದ್ದುಪಡಿಯ ಬಗ್ಗೆ ಪರಿಶೀಲಕ ಸಮಿತಿಯ ಅಭಿಪ್ರಾಯ

ಲೋಕ ಸಭೆಯಲ್ಲಿ ಗೋವಧೆಯನ್ನು ನಿರೋಧಿಸಬೇಕೆಂದು ಕೇಳುವ ಖಾಸಗಿ ಗೊತ್ತುವಳಿಯನ್ನು ಮಧ್ಯ ಪ್ರದೇಶದ ಕಾಂಗ್ರೆಸು ಸದಸ್ಯ ಸೇಠ್ ಗೋವಿಂದ ದಾಸರು ಮೊನ್ನೆ ಶನಿವಾರ ತಂದರು ೧೯೫೦ನೇ ಇಸವಿಯಿಂದಲೂ ಈ ವಿಷಯವು ಒಂದಿಲ್ಲೊಂದು ರೂಪದಲ್ಲಿ ಸರಕಾರದ ಮುಂದೆ ಮಂಡಿಸಲ್ಪಡುತ್ತಿದ್ದರೂ ಇಷ್ಟರ ವರೆಗೆ ಯಾವ ಕ್ರಮವೂ ಕೈಗೊಳ್ಳಲ್ಪಡಲಿಲ್ಲ ಎನ್ನುತ್ತ ಹಾಲು ಕರೆಯುವ ದನಗಳ ವಧೆಯಾಗುವುದನ್ನು ತಡೆಯಬೇಕು, ದನಕರುಗಳ ಚರ್ಮವನ್ನು ರಫ್ತು ಮಾಡಗೊಡಬಾರದು, ವನಸ್ಪತಿ ತುಪ್ಪದ ಉತ್ಪಾದನೆಯನ್ನು ನಿಲ್ಲಿಸಬೇಕು, ತಪ್ಪಿದರೆ ಅದಕ್ಕೆ ಬಣ್ಣವನ್ನಾದರೂ ಹಾಕಬೇಕು ಎಂದು ಮುಂತಾಗಿ ಪ್ರತಿಪಾದಿಸಿದರು. ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಪಶುಗಳ ವಂಶಾಭಿವೃದ್ಧಿಯ ಬಗ್ಗೆ ಮತ್ತು ಗೋವಧೆಯನ್ನು ಪ್ರತಿಬಂಧಿಸುವ ಕುರಿತು ಸರಕಾರವು ಯೋಗ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿರುವುದನ್ನು ನೆನಪಿಗೆ ತಂದುಕೊಟ್ಟು ಕೇಂದ್ರ ಸರಕಾರಕ್ಕೆ ಶಾಸನ ಮಾಡುವ ಅಧಿಕಾರ ಇದೆಯಾಗಿ ತಿಳಿಸಿದರು ಸಾರ್ವಜನಿಕ ಅಭಿಪ್ರಾಯವು ಗೋವಧೆಯ ನಿರೋಧಕ್ಕೆ ಅನುಕೂಲವಾಗಿರುವುದೆಂದೂ ಇದು ಯಾವುದೇ ರಾಜಕೀಯ ಪಕ್ಷದ ಪ್ರತಿಷ್ಠೆಯ ವಿಷಯವಾಗಿರದೆ ಜನತೆಯ ಮನೋಭಾವದ ಪ್ರತೀಕವಾಗಿದೆಯೆಂದೂ ಹಿಂದು ಮಹಾಸಭೆಯ ಧುರೀಣ ಶ್ರೀ ಚಟರ್ಜಿ ಅಭಿಪ್ರಾಯಪಟ್ಟರು.

ನೆಹರುಗಳ ವಿರೋಧ

ಸರಕಾರದ ಪರವಾಗಿ ಪ್ರಧಾನ ಮಂತ್ರಿ ನೆಹರುಗಳು ಗೊತ್ತುವಳಿಯನ್ನು ಬಲವಾಗಿ ವಿರೋಧಿಸಿದರು. ಅವರು ಮೂರು ಕಾರಣಗಳನ್ನು ಕೊಟ್ಟರು—ಒಂದನೆಯದು ಈ ಬಗ್ಗೆ ಶಾಸನ ರಚಿಸಲು ಕೇಂದ್ರ ಸರಕಾರಕ್ಕೆ ಅಧಿಕಾರವಿಲ್ಲ ಎಂಬ ಸರಕಾರದ ಕಾನೂನು ಸಲಹೆಗಾರರ ಮಾತು; ಎರಡನೆಯದು ಈ ಮಸೂದೆಯಿಂದ ಉದ್ದೇಶ ಈಡೇರಲಾರದು ಎಂಬ ಅಭಿಪ್ರಾಯ. ಮೂರನೆಯದು ರಾಜ್ಯ ಸರಕಾರಗಳೇ ಏನಾದರೂ ವಿಧಾಯಕ ಕ್ರಮ ತೆಗೆದುಕೊಳ್ಳಬೇಕಲ್ಲದೆ ಕೇಂದ್ರ ಸರಕಾರವಲ್ಲ ಎಂಬ ನಿಶ್ಚಯ. ನೆಹರುಗಳು ಈ ಮಾತನ್ನು ಹೇಳುತ್ತಿದ್ದಾಗ ರಾಮರಾಜ್ಯ ಪರಿಷತ್ತಿನ ಶ್ರೀ ನಂದಲಾಲ ಶರ್ಮರು "ನಾಚಿಕೆಗೇಡು" ಎಂದು ಬೊಬ್ಬಿರಿದರು; ಹಿಂದು ಮಹಾಸಭೆಯ ಶ್ರೀ ವಿ. ಜಿ. ದೇಶಪಾಂಡೆಯವರು "ಹಾಗಿದ್ದರೆ ಯೋಗ್ಯ ಉಪಾಯ ಯಾವುದು?" ಎಂದು ಪ್ರಶ್ನಿಸಿದರು; ಚಟರ್ಜಿಯವರು "ಉತ್ತರ ಪ್ರದೇಶದ ಸರಕಾರ ಗೋವಧೆಯನ್ನು ನಿರೋಧಿಸಲು ತಂದಿರುವ ಶಾಸನ ತಪ್ಪೆಂದು ಹೇಳುತ್ತೀರಾ?" ಎಂದು ಕೇಳಿದರು. ಇವೆಲ್ಲವನ್ನು ಉತ್ತರಿಸುತ್ತಾ "ಸರಕಾರದ ದೃಷ್ಟಿಯಲ್ಲಿ ಈ ಗೊತ್ತುವಳಿಯು ಗೋವುಗಳ ಸಂರಕ್ಷಣೆಯ ಉದ್ದೇಶವನ್ನು ಸಾಧಿಸುವುದಕ್ಕೆ ಯೋಗ್ಯವಾದ ರೀತಿಯಲ್ಲಿಲ್ಲ. ನಾವು ಕೃಷಿ ವಿಷಯಕ ಅರ್ಥ ಶಾಸ್ತ್ರವನ್ನು ಅಭ್ಯಸಿಸಿ ಗೋವಧೆ ನಿರೋಧದ ಬಗ್ಗೆ ಸೂಕ್ತ ನಿಲುವಿಗೆ ಬರಬೇಕಲ್ಲದೆ ಆಂದೋಲನಗಳ ಬೆನ್ನು ಹಿಡಿಯಬಾರದು. ಈ ಮಟ್ಟಿಗೆ ಬೇಕಾದರೆ ನಾನು ಪ್ರಧಾನ ಮಂತ್ರಿ ಸ್ಥಾನಕ್ಕೆ ರಾಜಿನಾಮೆ ಕೊಡುವುದಕ್ಕೂ ಸಿದ್ಧನಿದ್ದೇನೆ. ಉತ್ತರ ಪ್ರದೇಶ ಸರಕಾರದವರು ತಪ್ಪು ಹೆಜ್ಜೆ ಇಟ್ಟಿರುವರೆಂದು ನನ್ನ ಅಭಿಪ್ರಾಯ. ಕೇಂದ್ರದಲ್ಲಿ ನನ್ನ ಸರಕಾರವಿರುವ ವರೆಗೆ ಈ ಮಸೂದೆಯನ್ನು ಸ್ವೀಕರಿಸುವುದಿಲ್ಲ" ಎಂದರು ಮತದಾನದಲ್ಲಿ ಕಾಂಗ್ರೆಸಿನ ಪಂಡಿತ ಠಾಕೂರದಾಸ್ ಭಾರ್ಗವರೂ ಪುರುಷೋತ್ತಮದಾಸ ಟಂಡನ್ನರೂ ಗೊತ್ತುವಳಿಗೆ ಬೆಂಬಲವಿತ್ತರು; ಕಮ್ಯೂನಿಸ್ಟರು ತಟಸ್ಥರಾಗಿದ್ದರು; ಪರಿಣಾಮದಲ್ಲಿ ಗೊತ್ತುವಳಿಯನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಸೂಚನೆಯು ೧೨ ವಿರುದ್ಧ ೯೫ ಮತಗಳಿಂದ ಬಿದ್ದುಹೋಯಿತು.

ಹಿಂದು ಅಲ್ಪ ವಯಸ್ಕರು

ರಾಜ್ಯ ಸಭೆಯಲ್ಲಿ ಹಿಂದು ಅಲ್ಪ ವಯಸ್ಕರ ಮತ್ತು ಸಂರಕ್ಷಕರ ಮಸೂದೆಯನ್ನು ಪರಿಶೀಲಕ ಸಮಿತಿಯು ತಿದ್ದಿದ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಕಾನೂನು ಮಂತ್ರಿ ಶ್ರೀ ಪಾಟಸ್ಕರರು ಕಳೆದ ವಾರ ಮಂಡಿಸಿದರು. ಇದು ಅಲ್ಪ ವಯಸ್ಕರಾದ ಮಕ್ಕಳನ್ನು ಐದು ವರ್ಷ ಪ್ರಾಯದ ವರೆಗೆ ತಾಯಿಯ ಸಂರಕ್ಷಣೆಯಲ್ಲಿಡಬೇಕೆಂದೂ ತಂದೆಯು ತನ್ನ ಮರಣ ಕಾಲದಲ್ಲಿ ಯಾರಾದರೊಬ್ಬ ಸಂರಕ್ಷಕನನ್ನು ನೇಮಿಸಬಹುದಾದರೂ ತಾಯಿಯು ಜೀವಂತಳಿರುವವರೆಗೆ ಅಲ್ಪ ವಯಸ್ಕರಾದ ಮಕ್ಕಳ ಸಂರಕ್ಷಣೆಯ ಅಧಿಕಾರ ಅವಳಿಗೆಯೇ ಸೇರಬೇಕೆಂದೂ ಹೇಳುತ್ತದೆ, ಅಲ್ಲದೆ ಸಂರಕ್ಷಕರಾಗಿ ನೇಮಿಸಲ್ಪಡಬಹುದಾದ ಸಂಬಂಧಿಗಳು ಯಾರೆಂದೂ ವಿವರಿಸುತ್ತದೆ. ಅಲ್ಪ ವಯಸ್ಕ ಮಕ್ಕಳು ಔರಸ ಸಂತಾನವಾದರೆ ತಮ್ಮ ಜನನದ ಕಾಲದಲ್ಲಿ ತಂದೆಯ ಮತಕ್ಕನುಸಾರವಾಗಿಯೂ ಅನೌರಸ ಸಂತಾನವಾಗಿದ್ದರೆ ತಾಯಿಯ ಮತಕ್ಕನುಸಾರವಾಗಿಯೂ ಪಾಲಿಸಲ್ಪಡಬೇಕೆಂಬೂ ಇದು ವಿಧಿಸುತ್ತದೆ. ಚರ್ಚೆಯಲ್ಲಿ ಭಾಗವಹಿಸಿದ ಯಾವ ಸದಸ್ಯರೂ ಇದನ್ನು ವಿರೋಧಿಸಲಿಲ್ಲ. ಆದರೆ ವಿಧೇಯಕವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಬೇಕೆಂದು ಹಲವು ಸೂಚನೆಗಳನ್ನು ಮಾತ್ರ ಮುಂದಿಡಲಾಯಿತು ತಾಯಿಗೆ ಅಲ್ಪ ವಯಸ್ಕ ಮಕ್ಕಳ ಮೇಲಿರುವ ಸಂರಕ್ಷಣೆಯ ಅಧಿಕಾರಕ್ಕೆ ವಯೋಮಿತಿಯನ್ನು ಹಾಕಬಾರದೆಂದು ಅನೇಕರು ಅಭಿಪ್ರಾಯಪಟ್ಟರು. ಮಕ್ಕಳನ್ನು ಪಾಲಿಸಬೇಕಾದ ಮತದ ವಿಷಯದಲ್ಲೂ ಕಿರುಕುಳ ಪ್ರಸಂಗಗಳುಂಟಾಗಬಹುದೆಂದು ಹೇಳಲಾಯಿತು. ಮಂತ್ರಿಗಳು ಹಿಂದುಕೋಡಿಗೆ ಸಂಬಂಧಿಸಿದ ಎಲ್ಲ ಭಾಗಗಳೂ ಮಂಜೂರಾದ ಬಳಿಕ ಅವೆಲ್ಲವನ್ನೂ ಒಂದೇ ಶಾಸನದ ರೂಪದಲ್ಲಿ ಕ್ರೋಢೀಕರಿಸುವ ಉದ್ದೇಶವನ್ನು ವ್ಯಕ್ತಪಡಿಸಿದರು.

ಪರಿಶೀಲಕ ಸಮಿತಿಯ ವರದಿ

ಸಂವಿಧಾನಕ್ಕೆ ತಿದ್ದುಪಡಿ ಮಾಡುವ ವಿಷಯವನ್ನು ಪರಿಶೀಲಿಸಿದ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿರುತ್ತದೆ. ಸಮಿತಿಯು ಮೂಲದ ಕರಡಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ್ದು, ಕೃಷಿ ಮತ್ತು ಔದ್ಯೋಗಿಕ ಆಸ್ತಿಪಾಸ್ತಿಗಳಲ್ಲಿ ಭೇದವನ್ನು ಕಲ್ಪಿಸಬಾರದೆಂದು ತೀರ್ಮಾನಿಸಿರುವುದು ಉಲ್ಲೇಖನೀಯ. ಹಿಂದೆಯಾದರೆ ಔದ್ಯೋಗಿಕ ಕ್ಷೇತ್ರದ ಆಸ್ತಿಪಾಸ್ತಿಗಳನ್ನು ಸಂಪೂರ್ಣ ಪರಿಹಾರ ಕೊಡದೆ ವಶಪಡಿಸಿಕೊಳ್ಳಲಿಕ್ಕಿರಲಿಲ್ಲ ಕೃಷಿ ಕ್ಷೇತ್ರಕ್ಕೆ ಸಂಪೂರ್ಣ ಪರಿಹಾರ ಕೊಡಬೇಕಾಗಿರಲಿಲ್ಲ; ಪರಿಹಾರ ಧನವನ್ನು ಕೊಡದೆಯೇ ವಶಪಡಿಸಿ ಕೊಳ್ಳಲೂ ಬಹುದಿತ್ತು. ಈಗ ಕೈಗಾರಿಕೆಯ ವಲಯವು ಕೃಷಿ ಕ್ಷೇತ್ರದ ಮಟ್ಟಕ್ಕೆ ತರಲ್ಪಟ್ಟಿರುತ್ತದೆ. ಪರಿಹಾರ ಧನವು ಎಷ್ಟಿರಬೇಕೆಂಬುದನ್ನು (ಅದು ಶೂನ್ಯವಾಗಿದ್ದರೂ ಸರಿಯೆ) ಶಾಸನ ಸಭೆಗಳೇ ನಿರ್ಣಯಿಸಬೇಕೆಂದೂ ಅವುಗಳ ತೀರ್ಮಾನವು ಪರಿಹಾರ ಧನ ಸಾಕಷ್ಟು ಪ್ರಮಾಣದಲ್ಲಿಲ್ಲವೆಂಬ ಕಾರಣಕ್ಕಾಗಿ ನ್ಯಾಯ ಸ್ಥಾನದಲ್ಲಿ ಆಹ್ವಾನಿಸಲ್ಪಡುವಂತಿಲ್ಲವೆಂದೂ ಸಮಿತಿ ಒಪ್ಪಿರುತ್ತದೆ. ಆದರೆ ಆಸ್ತಿಪಾಸ್ತಿಯನ್ನು ವಶಪಡಿಸಿಕೊಳ್ಳುವ ಶಾಸನದಂತೆಯೇ ಎಲ್ಲವೂ ಕ್ರಮಬದ್ಧವಾಗಿ ನಡೆದಿದೆಯೇ ಎನೆಂದು ನ್ಯಾಯ ಸ್ಥಾನಗಳು ವಿಚಾರಿಸಬಹುದು. ಸಮಿತಿಯ ವರದಿಗೆ ಹಿಂದು ಮಹಾ ಸಭೆಯ ಚಟರ್ಜಿ ಕಮ್ಯೂನಿಸ್ಟ ಪಕ್ಷದ ಮೂವರು ಸದಸ್ಯರು ಮುಂತಾಗಿ ಕೆಲವರು ಭಿನ್ನಾಭಿಪ್ರಾಯದ ಟಿಪ್ಪಣಿಯ

(೯ನೇ ಪುಟ ನೋಡಿರಿ)

ದಿ ಜುಪಿಟರ್ ಜನರಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬ್ಬಾಯಿ-1.

ಒಟ್ಟು ನಿಧಿ ರೂಪಾಯಿ 3 ಕೋಟಿ 50 ಲಕ್ಷಕ್ಕೆ ಮಿಕ್ಕಿ ಇದೆ.

ಪೋಲಿಸಿದಾರರಿಗೆ ಆಗಾಗ್ಗೆ ಸಲಹೆಯನ್ನಿತ್ತು ಸಹಕರಿಸುವುದೇ ನಮ್ಮ ಧ್ಯೇಯ.

ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ, ಪಾಕಿಸ್ತಾನ, ಬರ್ಮಾ, ಸಿಲೋನ್, ಬ್ರಿಟಿಷ್ ಆಫ್ರಿಕಾ, ಲಂಡನ್ ಇತ್ಯಾದಿ ಕಡೆಗಳಲ್ಲಿ ಶಾಖಾ ಆಫೀಸುಗಳೂ ಏಜನ್ಸಿ ಆಫೀಸುಗಳೂ ಇವೆ.

ಪ್ರಾತಿನಿಧ್ಯಕ್ಕೆ ವ ಇತರ ವಿವರಗಳಿಗೆ ಈ ಕೆಳಗಿನವರಿಗೆ ಬರೆಯಿರಿ:

ಯಸ್. ಎ. ಹೆಗ್ಡೆ,

ಸುಪರಿಂಟೆಂಡೆಂಟ್, ಆಫ್ ಏಜನ್ಸೀಸ್,

ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಪೋಸ್ಟ್ ಶಿರ್ವ, ದ. ಕ.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ. ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ಸಿಥದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು-1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ

ಮುಂದಿನ ಕೆಲಸದ ಕುರಿತು ಢೇಬರರ ಮಾರ್ಗದರ್ಶನ

ಸಮಾಜವಾದಿ ಮಾದರಿಯ ಭಾರತದ ವಿವರ

ಕಾಂಗ್ರೆಸಾಧ್ಯಕ್ಷರಾದ ಶ್ರೀ ಢೇಬರರು ಆವಡಿಯು ಅಧಿವೇಶನದಲ್ಲಿ ಸ್ವೀಕರಿಸಲಾದ ಸಮಾಜವಾದಿ ಸ್ವರೂಪದ ಸಮಾಜ ರಚನೆ ಎಂದರೇನೆಂಬುದನ್ನು ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರಿಗೆ ಬರೆದ ಪರಿಪತ್ರವೊಂದರಲ್ಲಿ ಕಳೆದ ವಾರ ನಿರೂಪಿಸಿದರು. ಉತ್ಪಾದನೆಯ ಸಾಧನಗಳು ಸಮಾಜದ ಒಡೆತನದಲ್ಲಿ ಅಥವಾ ನಿಯಂತ್ರಣದಲ್ಲಿರಬೇಕೇ ಹೊರತು ವ್ಯಕ್ತಿಯ ಅಥವಾ ಯಾವುದಾದರೊಂದು ಗುಂಪಿನ ಹಿಡಿತದಲ್ಲಿ ಅಥವಾ ಹಿತಕ್ಕಾಗಿ ಇರಬಾರದು ಎಂಬುದೇ ಸಮಾಜವಾದಿ 'ಮಾದರಿಯ ಸಮಾಜದ ತಿರುಳು ಎಂದವರು ಪರಿಪತ್ರದಲ್ಲಿ ಸ್ಪಷ್ಟಗೊಳಿಸಿದರು. ವ್ಯಕ್ತಿ ಮತ್ತು ಸಮಾಜದ ನಡುವೆ ಘರ್ಷಣೆ ತಲೆದೋರಿದಾಗ ಸಮಾಜದ ಬೇಡಿಕೆಗೆಯೇ ಮನ್ನಣೆ ಸಿಗುವಂತೆ ನೋಡುವುದೇ ನಮ್ಮ ಧ್ಯೇಯವಾಗಬೇಕು ಎಂದವರು ಸಾರಿದರು.

ಸಾರ್ವಜನಿಕ ಸಹಕಾರ

ಅವರು ಮುಂದುವರಿದು ದೇಶದ ಸಂಪತ್ತು ಮತ್ತು ಆದಾಯಗಳ ಹಂಚುವಿಕೆಯು ಸಮನಾಗಿ ನಡೆಯಬೇಕೆಂದೂ ಸಮಾಜದ ಸಕಲ ವರ್ಗಗಳವರಿಗೂ ಉತ್ಕರ್ಷದ ಸಮಾನಾವಕಾಶವಿರಬೇಕೆಂದೂ ಸಾರಿದರು. ಆವಡಿಯ ಕಾಂಗ್ರೆಸಿನ ಗೊತ್ತುವಳಿಯ ಉದ್ದೇಶವನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವನ್ನು ಮಾಡಲಾಗದೆಂದು ಅವರು ಎಚ್ಚರಿಸಿದರು. ಕಾಂಗ್ರೆಸಿಗರು ಹೊಸ ಸಮಾಜ ರಚನೆಯ ಗುರಿಯನ್ನು ಸಾಧಿಸುವುದಕ್ಕೆ ಪ್ರಯತ್ನಿಸುವಾಗ ವೈಯಕ್ತಿಕ ಸ್ವಾರ್ಥ ಮತ್ತು ಸಂಗ್ರಹ ಪ್ರವೃತ್ತಿಗಳೊಡನೆ ಸೆಣಸಾಡಿಗೆಲ್ಲಬೇಕೆಂದೂ ಪ್ರಾಂತೀಯತೆ, ಜಾತೀಯತೆ ಮುಂತಾದ ಭಾವನೆಗಳಿಂದ ಮುಕ್ತರಾಗಿರಬೇಕೆಂದೂ ಅವರು ಉಪದೇಶಿಸಿದರು. ಕಾಂಗ್ರೆಸಿಗರು ಸಂಸ್ಥೆಯ ಒಳಗೂ ಹೊರಗೂ ಸಾರ್ವಜನಿಕರಿಗೆ ಶಿಕ್ಷಣವನ್ನು ಕೊಡುವ ಮೂಲಕ ಅವರ ಅಭಿಪ್ರಾಯವನ್ನು ಸಂಘಟಿಸಬೇಕೆಂದು ಆಶಿಸಿದರು.

ಮಹಿಳೆಯರಿಗೆ ಕರೆ

ಸಮಾಜ ಪುನಾರಚನೆಯ ವಿಷಯದಲ್ಲಿ ಆಸಕ್ತಿಯುಳ್ಳವರು ಗ್ರಾಮಾಂತರ ಪ್ರದೇಶದ ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡುವ ಆವಶ್ಯಕತೆಯನ್ನು ಸಾರಿದ್ದುಂಟು — ಕಳೆದ ವಾರ ಹೊಸ ದೆಹಲಿಯಲ್ಲಿ ಗ್ರಾಮಾಂತರ ಮಹಿಳೆಯರ ರಾಷ್ಟ್ರೀಯ ಪಂಚಾಯತೊಂದು ಜರಗಿತು. ಶ್ರೀಮತಿ ಇಂದಿರಾ ಗಾಂಧಿಯವರು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಮಹಿಳೆಯರು ಸಾಮಾಜಿಕ ಪ್ರಗತಿಯ ಮಾರ್ಗದಲ್ಲಿರುವ ಸಾಂಪ್ರದಾಯಿಕ ಬಂಧನಗಳ ತೊಡಕನ್ನು ಹರಿದೊಗೆಯಬೇಕೆಂದು ಅಪೇಕ್ಷಿಸಿದರು. ರಾಷ್ಟ್ರನಿರ್ಮಾಣದ ಕೆಲಸ ನಡೆದಿರುವಾಗ ಮಹಿಳೆಯರು ಅದರಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಬೇಕೆಂದು ಅವರು ಕರೆಕೊಟ್ಟರು. ಭಾರತದ ಪ್ರಜೆಗಳಲ್ಲಿ ಅರೆವಾಸಿಯಷ್ಟಿರುವ ಮಹಿಳೆಯರು ಹೊಸ ಭಾರತದ ರಚನೆಗೆ ನೆರವಾಗಬೇಕೆನ್ನುತ್ತಾ ಶಾಸನಗಳ ಪುನಾರಚನೆಯಿಂದ ದೊರೆತ ಮತದಾನದ ಅಧಿಕಾರವೇ ಮುಂತಾದುವನ್ನು ಉಪಯೋಗಿಸಿಕೊಳ್ಳಲು ಮಹಿಳೆಯರು ಸಂಕೋಚಪಡಬಾರದು ಎಂದರು. ಕಳೆದ ಚುನಾವಣೆಯ ಸಮಯ ಅನೇಕ ಹೆಂಗಸರು ನಾಚಿಕೆ ಅಥವಾ ಸಂಕೋಚದ ದೆಸೆಯಿಂದ ಮತದಾರರ ಯಾದಿಯಲ್ಲಿ ತಮ್ಮ ಹೆಸರು ದಾಖಲು ಮಾಡಿಸಿಕೊಳ್ಳದುದಕ್ಕೆ ಅವರು ವಿಷಾದಿಸಿದರು. ಪರಿಷತ್ತಿನ ಅಧ್ಯಕ್ಷತೆಯನ್ನು ಶ್ರೀಮತಿ ಹರ್‌ನಾಂಕೌರ್ ಎಂಬ ಪಂಜಾಬಿನ ರೈತ ಮಹಿಳೆ ವಹಿಸಿದ್ದರು.

ಸ್ತ್ರೀಯರ ಉದ್ಧಾರ

ಸ್ತ್ರೀಯರ ಸಹಕಾರವನ್ನು ಅತ್ಯಧಿಕ ಪಡೆಯಬಾಶಿಸುವವರ ಮತ್ತು ಕಲ್ಯಾಣಕಾರ್ಯದಲ್ಲಿ ಆಸ್ಥೆವಹಿಸುವವರ ಮನಸ್ಸು ಸಹಜವಾಗಿಯೇ ಪತಿತರ ಉದ್ಧಾರ ಕಾರ್ಯದತ್ತ ಹೋಗುತ್ತದೆ. ಕಳೆದವಾರ ರಾಷ್ಟ್ರೀಯ ಯೋಜನಾ ಆಯೋಗದ ಆಶ್ರಯದಲ್ಲಿ ಕೆಲಸಮಾಡುವ ಸಮಾಜ ಕಲ್ಯಾಣ ಮಂಡಳಿಯ ಸದಸ್ಯೆ ಶ್ರೀಮತಿ ಧನವಂತಿ ರಾಮರಾಯರು ಹುಬ್ಬಳ್ಳಿ ಮತ್ತಿತರ ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಸಂಚಾರ ಕೈಗೊಂಡು ಪತಿತ ಸ್ತ್ರೀಯರ ಪುನರುದ್ಧಾರದ ಸಮಸ್ಯೆಯನ್ನು ಅಭ್ಯಸಿಸಿದರು. ಅವರು ವೇಶ್ಯಾವಾಟಿಕೆಗಳ ಉಚ್ಚಾಟನೆಯ ಬಗ್ಗೆ ಗಂಭೀರವಾದ ಸಂಗತಿಗಳನ್ನು ಹೊರಗೆಡವಿದರು. ವೇಶ್ಯಾ ವೃತ್ತಿಯನ್ನು ಪ್ರತಿಬಂಧಿಸಲು ಸರಕಾರಗಳು ಶಾಸನ ಕ್ರಮವನ್ನು ಕೈಗೊಂಡಿದ್ದರೂ ಅವುಗಳು ಕಾರ್ಯಾಚರಣೆಯಲ್ಲಿ ನಿರುಪಯುಕ್ತವೆಂದು ಸಿದ್ಧಗೊಂಡಿವೆಯಾಗಿ ಅವರು ಅಭಿಪ್ರಾಯಪಟ್ಟರು. ಸ್ತ್ರೀಯರ ಮತ್ತು ಮಕ್ಕಳ ಅನೈತಿಕ ವ್ಯಾಪಾರ ಬೆಳೆಯುತ್ತಿರುವುದಕ್ಕೆ ಕಾರಣಗಳನ್ನು ಅವರು ಕೊಡುತ್ತಾ ಮನಃಪೂರ್ವಕ ಪತಿತರಾದವರಿಗಿಂತ ಒತ್ತಾಯಕ್ಕಾಗಿ ಪತಿತ ಜೀವನವನ್ನು ಅವಲಂಬಿಸಿದವರೇ ಹೆಚ್ಚೆಂದು ತಿಳಿಸಿದರು. ತಾರುಣ್ಯಾವಸ್ಥೆಗೆ ಕಾಲಿಡುವಾಗ ಯೋಗ್ಯ ಲೈಂಗಿಕ ಶಿಕ್ಷಣವನ್ನು ಕೊಡುವ ಮತ್ತು ಜಾಗೃತಿಯನ್ನು ಹುಟ್ಟಿಸುವ ಮೂಲಕ ಸಾಮಾಜಿಕರು ಸಮಸ್ಯೆಯ ನಿವಾರಣೆಯಲ್ಲಿ ಉಗ್ರ ಕಾಯಿದೆ ಕ್ರಮಗಳಿಗಿಂತಲೂ ಹೆಚ್ಚಾಗಿ ನೆರವಾಗಬಹುದೆಂದು ಅವರು ಹೇಳಿದರು.

ಪಂಚತತ್ವಗಳ ಒರೆಗಲ್ಲು

ಮನುಷ್ಯನ ಸುಖಸಮೃದ್ಧಿಗೆ ರಾಷ್ಟ್ರಗಳ ರಾಜಕೀಯ ಆರೋಗ್ಯವು ಅಗತ್ಯವಾಗಿದೆ ಎಂಬುದು ಅನುಭವಸಿದ್ಧವಾದ ವಿಷಯ. ಎರಡು ಅಥವಾ ಹೆಚ್ಚು ರಾಷ್ಟ್ರಗಳು ಯುದ್ಧಾಸಕ್ತವಾಗಿದ್ದರೆ ಅದರ ಝಳ ಹತ್ತಿರದ ರಾಷ್ಟ್ರಗಳಿಗಂತೂ ಸರಿಯೇ, ಜಗತ್ತಿನ ಇತರ ರಾಷ್ಟ್ರಗಳಿಗೂ ಹತ್ತುತ್ತದೆ; ಮತ್ತು ಜೀವನ ನಿರ್ವಹಣೆಯಲ್ಲಿ ಆತಂಕ ಒದಗುತ್ತದೆ ಎಂಬುದನ್ನು ನೆಹರುಗಳು ಲೋಕಸಭೆಯಲ್ಲಿ ವಿದೇಶಾಂಗ ಧೋರಣೆಯ ಸಿಂಹಾವಲೋಕನ ಮಾಡುತ್ತಾ ಕಳೆದ ವಾರ ಸ್ಪಷ್ಟೀಕರಿಸಿದರು. ಭಾರತವು ಯಾವ ಯುದ್ಧದಲ್ಲಿಯೂ ಭಾಗವಹಿಸುವುದಿಲ್ಲ ಎಂದು ಸಾರುವಾಗ ಅವರು ಜಗತ್ತಿನಲ್ಲಿ ಎಲ್ಲಿಯೇ ಆಗಲಿ ಯುದ್ಧವಾದರೆ ಅದರ ಝಳ ನಮಗೆ ಹತ್ತದೆ ಉಳಿಯದೆಂದೂ ಆದುದರಿಂದ ಪಂಚ ತತ್ವಗಳನ್ನು ಮನ್ನಿಸುವುದೇ ಇಂದಿನ ಆವಶ್ಯಕತೆಯೆಂದೂ ನೆಹರುಗಳು ಸಾರಿದರು. ಭಾರತ ಮತ್ತು ಚೀನಗಳು ಮೊದಲಾಗಿ ಪ್ರವರ್ತಿಸಿದ ಪಂಚ ತತ್ವಗಳು ಈಗ ಹತ್ತು ರಾಷ್ಟ್ರಗಳ ಒಪ್ಪಿಗೆ ಪಡೆದಿವೆಯೆಂದು ತಿಳಿದುಬರುತ್ತದೆ. ಯುದ್ಧವು ಆಕ್ರಮಣದ ಇಚ್ಛೆಯಿಂದ ಹುಟ್ಟುವುದರಿಂದ ಪಂಚ ತತ್ವಗಳಲ್ಲೊಂದಾದ ಅನಾಕ್ರಮಣ ಧೋರಣೆಗೆ ಅಂಟಿಕೊಂಡರೆ ಯುದ್ಧದ ಭಯವುಳಿಯದು ಎಂದು ನೆಹರುಗಳ ಅಭಿಪ್ರಾಯ.

ವರ್ಣದ್ವೇಷದ ಖಂಡನೆ

ಪಂಚ ತತ್ವಗಳನ್ನು ರಾಷ್ಟ್ರಗಳು ಮಾನ್ಯಮಾಡಿದಲ್ಲಿ ಜಗತ್ತಿನ ಸಮಸ್ಯೆಗಳಲ್ಲಿ ನೂರಕ್ಕೆ ತೊಂಭತ್ತು ಪರಿಹಾರ ಹೊಂದುತ್ತವೆಂದೂ ನೆಹರುಗಳು ಸಾರಿದರು. ಉತ್ತರ ಅಟ್ಲಾಂಟಿಕ ಒಡಂಬಡಿಕೆಯು ಗೋವೆಯ ಪ್ರಶ್ನೆಯ ಮೇಲೆಯೂ ಪರಿಣಾಮ ಮಾಡುತ್ತಿರುವುದನ್ನು ಅವರು ಪ್ರಸ್ತಾಪಿಸಿ, ವಸಾಹತುವಾದಕ್ಕೆ ರಕ್ಷಣೆ ಕೊಡುವ ರೀತಿಯಲ್ಲಿ "ಸಂರಕ್ಷಣ" ಒಪ್ಪಂದ ಮತ್ತು ಸೈನಿಕ ವ್ಯೂಹಗಳು ಪರಿವರ್ತನೆ ಹೊಂದುವ ಬಗೆಯನ್ನು ಟೀಕಿಸಿದರು. ವಸಾಹತುಗಳ ಸ್ವಾತಂತ್ರ್ಯ ಆಂದೋಲನವನ್ನು ದಮನಿಸುವುದು ಸರಿಯಲ್ಲವೆಂಬ ಭಾರತದ ನಿಲುವೆಯನ್ನು ಅವರು ಪುನಃ ಎಚ್ಚರಿಸಿದರಲ್ಲದೆ, ದಕ್ಷಿಣ ಆಫ್ರಿಕದಲ್ಲಿನ ವರ್ಣದ್ವೇಷ ಧೋರಣೆಯು ಭೀಕರವಾದ ಮತ್ತು ಭೀಭತ್ಸಕರವಾದ ರೀತಿಯಲ್ಲಿ ಬೆಳವಣಿಗೆ ಹೊಂದುತ್ತಿರುವುದನ್ನು ಖಂಡಿಸಿದರು. ನಾವಿರಾರು ಜನರನ್ನು ಮನೆಮಾರುಗಳಿಂದ ದಕ್ಷಿಣ ಆಫ್ರಿಕದ ಸರಕಾರ ಹೊರ ದೂಡುತ್ತಿರುವಾಗ ಸುಮ್ಮನುಳಿಯ ನೋಡುವ "ಸ್ವಾತಂತ್ರ್ಯ ಪ್ರಿಯ"ರ ಬಗ್ಗೆ ನೆಹರುಗಳು ಆಶ್ಚರ್ಯವನ್ನು ವ್ಯಕ್ತಪಡಿಸಿದರು.

ಪ್ರಗತಿಯಿಂದ ಪ್ರಗತಿಗೆ.......

30 - 12 - 1954ರ ಅಂಕೆಗಳು. (ಸಾವಿರದ ಸಂಖ್ಯಾರ ಅಂಕೆಗಳಲ್ಲಿ)

ಅಧಿಕೃತ ಮೂಲಧನ	....	....	ರೂ.	50,00,000
ಚಂದಾ ಅರ್ಪಿಸಲ್ಪಟ್ಟ ಮತ್ತು ತೆತ್ತ ಮೂಲಧನ....			ರೂ.	29,00,000
ಕ್ಷೇಮನಿಧಿ ...	...	...	ರೂ.	26,00,000
ಠೇವುಗಳು ...	...	...	ರೂ.	8,91,80,000
ನಿವ್ವಳ ಲಾಭ ...	...	...	ರೂ.	9,20,000

ಪ್ರಗತಿಯನ್ನು ಸೂಚಿಸುವ ಮೇಲಿನ ಅಂಕೆಸಂಖ್ಯೆಗಳು, ನೀವು ಬ್ಯಾಂಕಿನಲ್ಲಿ ಇಟ್ಟ ಆದರ, ಪ್ರೀತಿ ವಿಶ್ವಾಸಗಳ ಸಾಂಕೇತಿಕ ಚಿಹ್ನೆ. ನಿಮ್ಮ ಆಶ್ರಯವು ಬ್ಯಾಂಕಿನ ಮಹೋನ್ನತ ಪ್ರಗತಿಯ ಮೂಲಕಾರಣ.

ಕೆನರಾ ಬ್ಯಾಂಕ್, ಲಿಮಿಟೆಡ್.

CANARA BANK, LTD.

ESTD: 1906.

ಪ್ರಧಾನ ಕಚೇರಿ —	ಆಡಳಿತೆ ಕಚೇರಿ—	ಜನರಲ್ ಮೆನೇಜರರ ಕಚೇರಿ ಮತ್ತು ವಿದೇಶಿ ಇಲಾಖೆ—
ಮಂಗಳೂರು.	ಬೆಂಗಳೂರು.	ಬೊಂಬಾಯಿ.

ಮನ್ಮಥ ಸಂ|ರದ 1955—1956

ಉಡುಪಿ ಪಂಚಾಂಗಂ

ಧರ್ಮಸ್ಯ ವಿಜಯೋ ಭೂಯಾತ್ ಅಧರ್ಮಸ್ಯ ಪರಾಭವಃ
ಸದ್ಭಾವನಾಂ ಪ್ರಾಣಭೃತಾಂ ಭೂಯಾತ್ ವಿಶ್ವಸ್ಯ ಮಂಗಲಂ||

ಆದಿತ್ಯಾದಿ ನವಗ್ರಹರು, ಶ್ರೀ ಕೃಷ್ಣ ಪರಮಾತ್ಮನು ನಮ್ಮ ಉಡುಪಿ ಪಂಚಾಂಗಾನುವರ್ತಿಗಳಾದ ಧರ್ಮಾಭಿಮಾನಿಗಳಿಗೆ ನೂತನ ಮನ್ಮಥ ಸಂ|ದಲ್ಲಿ ಸುಖಸಂತೋಷ ವಾಂಛಿತಾಭೀಷ್ಟಸಿದ್ಧಿಯನ್ನು ಅನುಗ್ರಹಿಸಲೆಂದು ಸದಾ ಪ್ರಾರ್ಥಿಸುವೆವು.

ಇತಿ ಸುಜನ ವಿಧೇಯ,

ಅತ್ತೂರು ವಾಸುದೇವ ಉಡುಪ,
ಸಂಪಾದಕ, ಉಡುಪಿ ಪಂಚಾಂಗಂ.

ಪುಸ್ತಕ ಪಾಕೆಟ್ ಪಂಚಾಂಗವು, ವಿಸ್ತಾರವಾದ ರಾಶಿ ಭವಿಷ್ಯದ ಫಲವು, ಅನೇಕ ಉಪಯುಕ್ತ ಜ್ಯೋತಿಷ ವಿಷಯಗಳು ಪ್ರತ್ಯೇಕವಾಗಿ ಸೇರಿಸಿಯದೆ.

ಬೆಲೆ: ಕನ್ನಡ 0—೨—೦. ತಮಿಳ ಪ್ರತಿ 0 9—0.

ಬೊಂಬಾಯಿ: ದಿ ಪೋಪ್ಯುಲಾರ್ ಬುಕ್ ಡಿಪ್ಪೋ, ಲೆಮಿಂಟನ್ ರೋಡು.

ಶ್ರೀ ಪಿ. ಯಸ್. ಕತಿರೇಶನ್ ನ್ಯೂಸ್ ಏಜಂಟ್,
ಮಾತುಂಗ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೨೪	೭–೪–'೫೫	೩೦

ಸಂಶೋಧನೆಯ ಲಾಭ

ಪೂಸಾದಲ್ಲಿರುವ ರಾಷ್ಟ್ರೀಯ ಕೃಷಿ ಸಂಶೋಧನ ಸಂಸ್ಥೆಯು ತನ್ನ ಐವತ್ತು ವರ್ಷಗಳ ಅಸ್ತಿತ್ವ ಕಾಲದಲ್ಲಿ ಉಪಯುಕ್ತ ಸೇವೆ ಸಲ್ಲಿಸಿರುವುದನ್ನು ಕಂಡು ನಮಗೆ ಅಭಿಮಾನವಾಗುತ್ತದೆ. ದೇಶದಲ್ಲಿ ವೈಜ್ಞಾನಿಕ ಅಭಿವೃದ್ಧಿ ಏನೇನೂ ಸಾಧಿಸಲ್ಪಟ್ಟಿರದಿದ್ದಾಗ ಬ್ರಿಟಿಷರು ಅಮೇರಿಕದ ಮಹಾನುಭಾವರೊಬ್ಬರ ಔದಾರ್ಯದಿಂದ ಉತ್ತೇಜಿತರಾಗಿ ಈ ಸಂಸ್ಥೆಯನ್ನು ಸ್ಥಾಪಿಸಿದ್ದರು. ಇಂದು ಸಂಸ್ಥೆಯ ಸ್ಥಾಪಕರು ನಮ್ಮ ನಡುವೆ ಇಲ್ಲವಾದರೂ ಅದರ ಕಾರ್ಯ ಕಲಾಪಗಳಿಂದ ಲಾಭವನ್ನು ಹೊಂದಿದ ಜನರು ನಾವಾಗಿರುವುದರಿಂದ ಸುವರ್ಣೋತ್ಸವದಲ್ಲಿ ನಮ್ಮ—ಮುಖ್ಯವಾಗಿ ಭಾರತೀಯ ರೈತರ- ಪಾತ್ರವೇ ಮಹತ್ವದ್ದೆಂದು ಹೇಳಬಹುದು. ಹೊಸ ದೆಹಲಿಯಲ್ಲಿ ಪೂಸಾದ ಸಂಶೋಧನ ಕೇಂದ್ರದ ಸಂದೇಶವನ್ನು ಭಾರತದ ಮೂಲೆ ಮೂಲೆಗೂ ಮುಟ್ಟಿಸಬೇಕೆಂಬ ಉದ್ದೇಶದಿಂದ ದೇಶದ ಮೂಲೆ ಮೂಲೆಯಿಂದ ಬಂದಿರುವ ಮುನ್ನೂರು ರೈತ ಪ್ರತಿನಿಧಿಗಳ ಸಮ್ಮೇಳನ ಜರಗಿಸಿರುವುದನ್ನು ಅನುಕರಣೀಯ ಹೆಜ್ಜೆಯಾಗಿ ಭಾವಿಸಬಹುದು: ಇಲ್ಲಿ ರೈತರಲ್ಲಿ ನವೋತ್ಸಾಹವನ್ನು ತುಂಬುತ್ತಾ ಪ್ರಧಾನ ಮಂತ್ರಿಗಳು ಮಾಡಿದ ಭಾಷಣವೂ ಸಂಶೋಧನಕೇಂದ್ರದಸುವರ್ಣೋತ್ಸವದ ಅಧ್ಯಕ್ಷ ಸ್ಥಾನದಿಂದ ಉಪರಾಷ್ಟ್ರಾಧ್ಯಕ್ಷರು ಎಚ್ಚರಿಕೆಯನ್ನು ಕೊಟ್ಟು ಜಾಗೃತಿಯನ್ನು ಹುಟ್ಟಿಸುವಂತೆ ಮಾಡಿದ ಭಾಷಣವೂ ರಾಷ್ಟ್ರದ ಸಮಸ್ಯೆಗಳಲ್ಲಿ ಗಂಭೀರ ವಾದೊಂದರ ವಿವೇಚನೆಯನ್ನು ಮಾಡುತ್ತವೆ. ಕೃಷಿ ಸಂಶೋಧನ ಕೇಂದ್ರದ ಫಲವಾಗಿ ಗೋಧಿ, ಬಟಾಟೆ ಮುಂತಾದವುಗಳ ಬೆಳೆಯನ್ನು ಬಹಳವಾಗಿ ಹೆಚ್ಚಿಸಲು ಸಾಧ್ಯವಾಗಿರುತ್ತದೆ; ಬೇರೆ ಬೇರೆ ಜಾತಿಯ ಮಣ್ಣಿನ ಗುಣಕ್ಕೆ ಹೇಳಿಸಿದ ಉತ್ತಮ ವರ್ಗದ ಬೀಜಗಳನ್ನು ಈ ಕೇಂದ್ರವು ರೈತರಿಗೆ ಕೊಟ್ಟಿರುತ್ತದೆ. ಉತ್ಪಾದನೆಯನ್ನು ಹಲವು ಪಟ್ಟು (೫೦ ರಿಂದ ೫೦೦ ಪಾಲಿನ ವರೆಗೂ) ಹೆಚ್ಚಿಸುವುದಕ್ಕೆ ಈ ಸಂಶೋಧನೆಗಳು ನೆರವಾಗುತ್ತವೆಂದು ಕೃಷಿ ಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ. ಸಾಮಾನ್ಯ ದೃಷ್ಟಿಯಲ್ಲಿ ಫಲವತ್ತಾಗಿರದ ಭೂಮಿಯಲ್ಲಿ ಸಹ ಬಿತ್ತಿದರೆ ಯೋಗ್ಯ ಫಲ ಕೊಡುವ ಬೀಜಗಳನ್ನು ಈ ಕೇಂದ್ರ ತಯಾರಿಸಿದೆಯೆಂದು ತಿಳಿದು ಬರುತ್ತದೆ. ಇವೆಲ್ಲ ಬೀಜಗಳ ಮತ್ತು ಕೃಷಿ ಸಲಕರ[illegible] ಇತರ ಕ್ಷೇತ್ರಗಳಲ್ಲಿ ಸಾಧಿಸಿದ ಸುಧಾರಣೆಗಳ ಜತೆಯಿಂದ ದೇಶದ ರೈತರಿಗೆ ಹೆಚ್ಚಿನ ಬಲವೂ ಸಹಾಯವೂ ಸಿಕ್ಕಿರುವುದೆಂಬುದರಲ್ಲಿ ಸಂದೇಹವಿಲ್ಲ ಮುಖ್ಯವಾಗಿ ಉತ್ತರ ಭಾರತದ ರೈತರಿಗೆ ಈ ಸಂಸ್ಥೆಯಿಂದ ಬಹಳವಾಗಿ ಪ್ರಯೋಜನ ಸಿಕ್ಕಿರುತ್ತದೆ. ತತ್ಫಲವಾಗಿ ನಾವು ಆಹಾರ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಸಮರ್ಥರಾಗಿದ್ದೇವೆ. ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಅನುಕೂಲತೆಗಳೊಡನೆ ಕೃಷಿ ಸಂಶೋಧನೆಗಳ ಲಾಭವೂ ಸೇರಿಕೊಂಡು ನಾಲ್ಕಾರು ವರ್ಷಗಳ ಪೂರ್ವದಲ್ಲಿ ನಮ್ಮನ್ನು ಬಹಳಷ್ಟು ಕಂಗೆಡಿಸಿದ್ದ ಉಗ್ರಸಮಸ್ಯೆಯನ್ನು ತೃಪ್ತಿಕರವಾಗಿ ಬಗೆಹರಿಸುವುದಕ್ಕೆ ಸಮರ್ಥವಾಗಿ ಮಾಡಿತೆಂಬುದು ಸ್ಮರಣೀಯವಾದ ವಿಷಯ. ರಾಷ್ಟ್ರದ ಮುಂದೆ ಈಗ ಆಹಾರದ ಕೊರತೆಯ ಸಮಸ್ಯೆ ಇದ್ದಂತಿಲ್ಲ--ಆದರೆ ಇಷ್ಟರಿಂದಲೇ ನಾವು ತೃಪ್ತರಾಗುವುದು ಯೋಗ್ಯವಾಗಲಾರದು. ಏಕೆಂದರೆ ನಮ್ಮ ಜನ ಸಂಖ್ಯೆ ಪ್ರತಿನಿತ್ಯ ಹೆಚ್ಚುತ್ತಿದೆ; ಮಾತ್ರವಲ್ಲದೆ,ನಾವೀಗ ಹೊಟ್ಟೆತುಂಬ ಉಣ್ಣುತ್ತಿದ್ದೇವೆ ಎಂದೇನೂ ಅಲ್ಲ. ಹೊಟ್ಟೆಯನ್ನು ತುಂಬಿಸಿಕೊಳ್ಳುವ ಪ್ರಶ್ನೆ ಸಮಾಧಾನಕರವಾಗಿ ಬಿಡಿಸಲ್ಪಟ್ಟಿದೆ ಎಂಬುದನ್ನು— ಸಮೃದ್ಧ ಆಹಾರ ಪೂರೈಕೆಯ ವ್ಯಾಖ್ಯೆಯನ್ನು ಬೇರೆ ಕೆಲವು ಸಂಗತಿಗಳ ಒರೆಗಲ್ಲಿಗೂ ಹಚ್ಚಬೇಕಾಗುತ್ತದೆ. ಮುಖ್ಯವಾಗಿ ನಮ್ಮದು ಸಮತೂಕದ ಆಹಾರವಾಗಿದೆಯೆ? ಆಹಾರದಲ್ಲಿ ಪೋಷಕಾಂಶಗಳು ಹೇರಳವಾಗಿವೆಯೆ? ಅವರವರ ಪ್ರಾಯ ಮತ್ತು ವೃತ್ತಿಗನುಗುಣವಾದ ಆಹಾರವನ್ನೆ ಭಾರತೀಯರು ಸೇವಿಸುತ್ತಿದ್ದಾರೆಯೆ? ಎಂಬಿತ್ಯಾದಿ ಪ್ರಶ್ನೆಗಳನ್ನು ಹೌದೆಂದು ಉತ್ತರಿಸಲು ಶಕ್ಯರಾದರೆ ಮಾತ್ರ ಆಹಾರ ಕ್ಷೇತ್ರದಲ್ಲಿ ಸಂಪೂರ್ಣ ಸಮೃದ್ಧಿಯನ್ನು ಸಾಧಿಸಿರುವೆವೆಂದು ಸಮಾಧಾನಪಟ್ಟುಕೊಳ್ಳಬಹುದು. ಅಲ್ಲಿಯ ವರೆಗೆ ನಮ್ಮ ಪ್ರಯತ್ನಗಳು ಮುಂದುವರಿಯಬೇಕು—ಸಂಶೋಧನೆ ಮತ್ತು ಪ್ರಯೋಗಗಳನ್ನು ಆತಂಕಿಸಲಾಗದು. ಉತ್ಪಾದನೆಯನ್ನು ಹೆಚ್ಚಿಸುವುದೂ ಆಹಾರಾಭ್ಯಾಸದಲ್ಲಿ ಸುಧಾರಣೆಯನ್ನು ರೂಢಿಸುವುದೂ ಸಂಶೋಧನ ಕೇಂದ್ರದ ಧ್ಯೇಯವಾಗಿ ಅದು ಇನ್ನೂ ನೂರಾರು ವರ್ಷಗಳ ವರೆಗೆ ಕೆಲಸಮಾಡುತ್ತಿರಬೇಕೆಂಬ ಸತ್ಯ ಇದರಿಂದ ವೇದ್ಯವಾಗುತ್ತದೆ ಹೀಗೆ ಕೆಲಸಮಾಡುವಾಗ ಇನ್ನೊಂದೂ ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅಪೇಕ್ಷಣೀಯ–ನಾವೇನೋ ಇಂದು ಸಂಶೋಧನೆ ಮತ್ತು ಸುಧಾರಣೆಗಳ ವಿಷಯದಲ್ಲಿ ಅಭಿಮಾನದ ಮಾತುಗಳನ್ನಾಡುತ್ತೇವೆ. ಕೆಲವು ಮಾದರಿ ಪ್ರಯೋಗ ಕ್ಷೇತ್ರಗಳಲ್ಲಿ ವ್ಯಕ್ತವಾದ ಯಶಸ್ಸಿಗೋಸ್ಕರ ಸಂತೋಷಿಸುತ್ತೇವೆ. ಹಲವಾರು ರೈತರು ಸಾಕಷ್ಟು ಲಾಭ ಪಡೆದಿರುವರೆಂಬುದೂ ಸುಳ್ಳಲ್ಲ. ಆದರೆ ಭಾರತದಲ್ಲಿ ಮೂವತ್ತು ಕೋಟಿಯಷ್ಟು ಪ್ರಜೆಗಳು ರೈತರಾಗಿದ್ದಾರೆಂದೂ ಅವರೆಲ್ಲರಿಗೂ ಕೃಷಿ ಸಂಶೋಧನೆಯ ಪ್ರಯೋಜನಗಳನ್ನು ತಿಳಿಸಿ ಹೇಳುವ ಕೆಲಸ ನಡೆಯದಿದ್ದರೆ ತೃಪ್ತಿಗೇನೂ ಕಾರಣವಿಲ್ಲವೆಂದೂ ಸರಕಾರ ಮತ್ತು ಸಂಶೋಧನ ಕೇಂದ್ರಗಳು ಮರೆಯಲಾಗದು. ಕೃಷಿ ವಿಜ್ಞಾನದಲ್ಲಿ ಶಿಕ್ಷಣವನ್ನು ಪಡೆದ ಅನೇಕಪದವೀಧರರೂ ವಿದೇಶಗಳಲ್ಲಿ ಸಂಚರಿಸಿ ಬಂದ ತಜ್ಞರೂ ನಮ್ಮ ಹಳ್ಳಿಗರಿಗೆ ಅರ್ಥವಾಗುವ ರೀತಿಯಲ್ಲಿ, ವಿನಯ ಮತ್ತು ಸೇವೆಯ ಮನೋಭಾವದೊಂದಿಗೆ ಹೊಸ ಸಂಶೋಧನೆಗಳ ಉಪಯುಕ್ತತೆಯನ್ನು ತಿಳಿಸಿ ಹೇಳಿರುವರೇ, ನಮ್ಮಲ್ಲಿಯ ಆರ್ಥಿಕ ಹಾಗು ಸಾಮಾಜಿಕ ಪರಿಸ್ಥಿತಿಗೆ ಒಗ್ಗುವಂತೆ ಕೃಷಿ ಸಲಕರಣೆಗಳಲ್ಲಿ ಸುಧಾರಣೆ ಮಾಡಿ ಅದನ್ನು ಉಪಯೋಗಿಸುವಂತೆ ರೈತರಿಗೆ ಅವರ ಮನೆಯ ತನಕ ಹೋಗಿ ಉಪದೇಶಿಸಿರುವರೇ ಎಂಬುದನ್ನು ಕೃಷಿ ಸಂಶೋಧನಕೇಂದ್ರದ ಉಪಯುಕ್ತತೆ ಅವಲಂಬಿಸಿರುತ್ತದೆ. ಇತ್ತ ಗಮನವಿತ್ತರೆ ನಮ್ಮ ಕೃಷಿ ತಜ್ಞರಲ್ಲಿ ಅಧಿಕ ಸಂಖ್ಯಾತರು ರೈತರನ್ನು ತಿರಸ್ಕಾರ ಬುದ್ಧಿಯಿಂದ ನೋಡುವರೆಂದೂ ಗ್ರಾಮೀಣ ಪ್ರದೇಶಗಳೊಡನೆ ಅವರ ಸಂಪರ್ಕ ಹೇಳಿಕೊಳ್ಳುವಷ್ಟು ಹೆಚ್ಚಿಲ್ಲವೆಂದೂ ಮನವರಿಕೆಯಾಗುತ್ತದೆ. ಇದು ಹೀಗೆಯೇ ಮುಂದರಿದರೆ, ಸಂಶೋಧನೆಗಳು ಪ್ರಯೋಗಶಾಲೆಯಲ್ಲಿ ನಿರತರಾದವರ ಮಟ್ಟಿಗೆ ಹೊಸ ದಾಖಲೆಯ ವಿಷಯಗಳಾಗಿ ಉಳಿಯಬಹುದಲ್ಲದೆ, ರಾಷ್ಟ್ರಕ್ಕೆ ಅವುಗಳಿಂದ ನಿಜವಾದ ಉಪಯೋಗ ದೊರೆಯದು. ಸಂಶೋಧನೆಯು ವ್ಯವಹಾರದಲ್ಲಿ ಅಳವಡಿಸಿಕೊಳ್ಳಲ್ಪಟ್ಟಾಗಲೇ ಸಾರ್ಥಕವಾಗುತ್ತದೆ. ಇದನ್ನು ಸರಕಾರ ಲಕ್ಷಿಸಬೇಕೆಂದೂ ನಮ್ಮ ರೈತ ಬಾಂಧವರು ಅವುಗಳ ಪ್ರಯೋಜನ ಪಡೆಯುವ ಮಟ್ಟಿಗೆ ಸಂಪ್ರದಾಯ ಪ್ರಿಯತೆಯನ್ನು ಬಿಟ್ಟುಗೊಟ್ಟು ಧೈರ್ಯ ಹಾಗು ಪ್ರಗತಿಯ ಹೆಜ್ಜೆಯನ್ನಿಡಲು ಮುಂದಾಗಬೇಕೆಂದೂ ಅಪೇಕ್ಷಿಸುತ್ತೇವೆ.

ದಕ್ಷಿಣ ಆಫ್ರಿಕದಲ್ಲಿ

ಇಂಡೋನೇಶಿಯದ ಬಾಂಡುಂಗಿನಲ್ಲಿ ಇನ್ನು ಕೆಲವೇ ದಿನಗಳಲ್ಲಿ ಪರಿಷತ್ತಿನಲ್ಲಿ ಸೇರಲಿರುವ ಆಫ್ರೋಏಸ್ಯ ರಾಷ್ಟ್ರಗಳ ಪ್ರಧಾನಿಗಳ ಮುಂದೆ ದಕ್ಷಿಣ ಆಫ್ರಿಕದ ಪ್ರಜೆಗಳ ಪರಿಸ್ಥಿತಿ ಎಷ್ಟು ಶೋಚನೀಯವಾಗಿದೆ ಎಂಬುದನ್ನು ವಿವರಿಸಲು ಹೊರಟಿರುವ ಆಫ್ರಿಕನ್ನರ ಧುರೀಣರೊಬ್ಬರು ಹೊಸ ದೆಹಲಿಯಲ್ಲಿ ಕರುಣಾಜನಕವಾದ ಕೆಲವು ಮಾತುಗಳನ್ನಾಡಿದರು. ವರ್ಣಭೇದ ನೀತಿಯ ಕರಾಳ ಶಾಸನವು ಜಾರಿಯಲ್ಲಿರುವ ದಕ್ಷಿಣ ಆಫ್ರಿಕದಲ್ಲಿ ಬಿಳಿ ತೊಗಲಿನವರ ಹಿತ ರಕ್ಷಿಸುವ ನೆಪದಲ್ಲಿ ಸ್ಥಳೀಯರನ್ನು ಅಮಾನುಷ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತದೆಎಂದುಇದರಿಂದತಿಳಿದುಬರುತ್ತದೆ.ಆಫ್ರಿಕನ್ನರುನೂರಕ್ಕೆ೬೮ಮಂದಿಯಷ್ಟಿದ್ದರೂ ಅವರ ಉಪಯೋಗಕ್ಕೆ ಬಿಡಲಾಗಿರುವ ಭೂಮಿ ನೂರಕ್ಕೆ ೧೩ ಮಾತ್ರ; ಬಿಳಿ ತೊಗಲಿನವರಿರುವುದು ನೂರಕ್ಕೆ ೨೧ ರಷ್ಟೇಯಾದರೂ ಭೂಮಿಯಲ್ಲಿ ಉಳಿದೆಲ್ಲ (೮೭%) ಪಾಲು ಅವರದು! ಇಷ್ಟು ಮಾತ್ರವಲ್ಲದೆ, ಆಫ್ರಿಕನ್ನರಿಗೆ ಮತದಾನದ ಅಧಿಕಾರವಾಗಲೀ ಸಭೆ ಸೇರುವ, ಸಂಘಗಳನ್ನು ಸ್ಥಾಪಿಸಿ ನಡೆಸಿಕೊಂಡು ಹೋಗುವ, ಅಭಿಪ್ರಾಯವನ್ನು ಪ್ರಕಟಿಸುವ ಮುಂತಾದ ಇತರನಾಗರಿಕ ಹಕ್ಕುಗಳಾಗಲೀ ಇರುವುದಿಲ್ಲ. ಆಫ್ರಿಕನರು ಯುರೋಪ್ಯರ ಅಧಿಕಾರಕ್ಕೊಳಪಟ್ಟ ಶಾಲೆಗಳಲ್ಲಿ ತಮ್ಮ ಯಜಮಾನರ ಸೇವೆಗೆ ಅವಶ್ಯವಿದ್ದಷ್ಟು ಮಾತ್ರ ಶಿಕ್ಷಣ ಹೊಂದಬಹುದು; ಆದರೆ ಅವರ ಜೀವನವೆಲ್ಲಾ ಬಿಳಿ ತೊಗಲಿನವರಿಗಾಗಿ ದುಡಿಯುವುದರಲ್ಲಿಯೇ ಸವೆದು ಹೋಗುತ್ತದೆ. ಅತಿ ಕಡಿಮೆ ಕೂಲಿಯನ್ನು ಅವರಿಗೆ ಕೊಡಲಾಗುತ್ತದೆ; ಅವಿವಾಹಿತರಾಗಿಯೇ ಉಳಿಯುವ ಪ್ರಸಂಗಗಳನ್ನು ಹೇರಲಾಗುತ್ತದೆ; ತಮಗಾಗಿ ಪ್ರತ್ಯೇಕಿಸಿಟ್ಟ ಸ್ಥಳಗಳಲ್ಲಿಯೇ ಅವರು ನೆಲಸಬೇಕಲ್ಲದೆ ಹೊರಗೆ ಹೊರಡುವುದಕ್ಕೆ ಮುಂಚೆ ಅನುಮತಿ ಪಡೆದಿರಬೇಕಾಗುತ್ತದೆ. ಇವೆಲ್ಲವುಗಳು ಆಫ್ರಿಕನ್ನರ ಜೀವನ ಎಷ್ಟು ದಾರುಣವಾಗಿದೆಯೆಂದೂ ಅಲ್ಲಿ ಮಾನವ ನಾಗರಿಕತೆಯ ಮತ್ತು ಸಹೋದರ ಮನೋಭಾವದ ಪರಿಹಾಸ ಹೇಗೆ ನಡೆಯುತ್ತದೆಯೆಂದೂ ತೋರಿಸಿ ಕೊಡುತ್ತವೆ. ಸಾವಿರಾರು ಕುಟುಂಬಗಳನ್ನು ಅವರ ಇದು ವರೆಗಿನ ನೆಲಸುವಿಕೆಯ ಕ್ಷೇತ್ರಗಳಿಂದ ಹತ್ತಿಪ್ಪತ್ತು ಮೈಲು ದೂರದ ಪ್ರತ್ಯೇಕ ಕ್ಷೇತ್ರಗಳಿಗೆ ಪೋಲೀಸರ ಚಾಟಿ ಮತ್ತು ಗುಂಡಿನ ಬಲದಿಂದ ಸ್ಥಾನಾಂತರಿಸುವ ಉಗ್ರ ಕ್ರಮಗಳನ್ನೂ ಸ್ಟ್ರೈಜೋಮರ ಈಗಿನ ಸರಕಾರ ಕೈಗೊಂಡಿರುತ್ತದೆ. ಆಫ್ರಿಕನ್ನರಂತೆ ಹಿಂದೀಯರೂ ಅಲ್ಲಿ ಪೀಡೆಗೊಳಗಾಗಿದ್ದು ತಮ್ಮ ದೈನಂದಿನ ವ್ಯವಹಾರವನ್ನು ನಡೆಸಲಾಗದೆ, ಆಸ್ತಿ ಸೊತ್ತುಗಳನ್ನು ಅನುಭೋಗಿಸಲಾಗದೆ, ಕೂಲಿಗಳಾಗಿ ಜೀವಿಸುವ ಪಾಡು ಅವರಿಗೂ ಬಂದಿರುತ್ತದೆ. ದಕ್ಷಿಣ ಆಫ್ರಿಕದ ಸರಕಾರದ ಈ ಕ್ರೂರ ನೀತಿಯನ್ನು ಸ್ವತಂತ್ರ ರಾಷ್ಟ್ರಗಳ ಸಂರಕ್ಷಕರೆಂದು ಹೆಮ್ಮೆ ಕೊಚ್ಚಿಕೊಳ್ಳುವ ಮತ್ತು ಮಾನವ ಕಲ್ಯಾಣ ಮತ್ತು ಭ್ರಾತೃತ್ವದ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುವ ಅಮೇರಿಕ, ಬ್ರಿಟನು ಮುಂತಾದ ಪಾಶ್ಚಾತ್ಯ ರಾಷ್ಟ್ರಗಳ ವರಿಷ್ಠರು ಕಂಠೋಕ್ತವಾಗಿ ಖಂಡಿಸದಿರುವುದು ಆಶ್ಚರ್ಯವಾಗಿ ತೋರುತ್ತದೆ. ಸಂಯುಕ್ತ ರಾಷ್ಟ್ರಸಂಘವೂ ನಿಷ್ಕ್ರಿಯ ಗೊತ್ತುವಳಿಗಳನ್ನು ಸ್ವೀಕರಿಸುವುದರಿಂದಲೇ ತೃಪ್ತಿಗೊಂಡಿರುವಂತೆ ಭಾಸವಾಗುತ್ತದೆ. ಇದು ಸರಿಯಲ್ಲ – ಕಾರಣ ಜಗತ್ತಿನ ಮುತ್ಸದ್ದಿಗಳು ದಕ್ಷಿಣ ಆಫ್ರಿಕದ ಘಟನೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಸಾರಬೇಕು ಎಂಬ ನೆಹರುಗಳ ಹೇಳಿಕೆಯನ್ನು ಎಲ್ಲ ಸಭ್ಯರೂ ಬೆಂಬಲಿಸಬೇಕೆಂದು ಒತ್ತಾಯಿಸುತ್ತೇವೆ.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದನ್ನು ಮನಿಯಾರ್ಡರ್ ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇವೆ.

ಚರ್ಚಿಲರ ರಾಜೀನಾಮೆ

ಈಡನ್ನರು ಬ್ರಿಟನಿನ ಹೊಸ ಪ್ರಧಾನಿ

ಸುಮಾರು ಐವತ್ತು ವರ್ಷಗಳಿಗಿಂತಲೂ ಹೆಚ್ಚು ಸಮಯ ಬ್ರಿಟನಿನ ರಾಜಕೀಯ ವಲಯದಲ್ಲಿ ರಾರಾಜಿಸುತ್ತಿದ್ದ ಎಂಭತ್ತು ವರ್ಷ ಪ್ರಾಯದ ಸರ್ ವಿನ್‌ಸ್ಟನ್ ಚರ್ಚಿಲ್ಲರು ಮಂಗಳವಾರ ದಿನ ರಾಣಿ ಎಲಿಜಬೆತರಿಗೆ ತಮ್ಮ ರಾಜೀನಾಮೆಯನ್ನೊಪ್ಪಿಸಿದರು. ರಾಣಿಯವರು ಚರ್ಚಿಲ್ಲರ ಮಂತ್ರಿ ಮಂಡಳದಲ್ಲಿ ವಿದೇಶ ಸಚಿವರಾಗಿದ್ದ ಈಡನ್ನರಿಗೆ ಹೊಸ ಮಂತ್ರಿ ಮಂಡಳ ರಚಿಸಲು ವಿನಂತಿಸಿಕೊಂಡರು.

ಯುದ್ಧಪ್ರಿಯರ ಉದ್ರೇಕ

ಅಮೇರಿಕದಲ್ಲಿ ಯುದ್ಧಪ್ರಿಯರು ಅಧ್ಯಕ್ಷ ಐಸೆನ ಹೋವರರನ್ನು ಉರಿದೆಬ್ಬಿಸಿ ಅವರು ಕೆಂಪು ಚೀನದ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವಂತೆ ಮಾಡಬೇಕೆಂಬ ಆಸೆಯಿಂದಲೋ ಏನೋ—ಚೀನದ ಕರಾವಳಿಯಲ್ಲಿ ದೊಡ್ಡ ಸೈನ್ಯ ಸಂಗ್ರಹವಾಗುತ್ತಿದೆಯೆಂದೂ ಮತ್ಸು ಮತ್ತು ಕ್ಯುಮ್ವೊ ದ್ವೀಪಗಳ ಮೇಲೆ ಆಕ್ರಮಣ ನಡೆಸಲು ಸರ್ವ ಸಿದ್ಧತೆಗಳನ್ನು ಚೀನ ನಡೆಸಿದೆಯೆಂದೂ ಆಕ್ರೋಶವೆಬ್ಬಿಸಿದ್ದಾರೆ.

ಐಸರ ಅಭಿಮತ

ಅಧ್ಯಕ್ಷ ಐಸೆನ ಹೋವರರು ಮಾತ್ರ ಅಷ್ಟು ದೊಡ್ಡ ಸಾಹಸಕ್ಕೆ ಚೀನೀಯರು ಇಳಿಯಲಿಕ್ಕಿಲ್ಲ ಎಂದು ಯುದ್ಧ ಪ್ರಿಯರ ಉತ್ಸಾಹಕ್ಕೆ ತಣ್ಣೀರನ್ನೆರಚಿದರು. ಮತ್ಸು ಮತ್ತು ಕ್ಯುಮ್ವೊ ದ್ವೀಪಗಳ ಮೇಲೆ ಧಾಳಿ ನಡೆದರೆ ಅಮೇರಿಕ ಏನು ಮಾಡುವುದೆಂಬ ವಿಷಯವನ್ನು ಅವರು ಗೂಢವಾಗಿಯೇ ಇಟ್ಟರೂ ಕರಾವಳಿ ತೀರದ ಆ ಎರಡು ದ್ವೀಪಗಳು ಚೀನದ ಕಮ್ಯುನಿಸ್ಟರಿಗೆಯೇ ಸೇರಿದವುಗಳೆಂಬ ಜಾಗತಿಕ ಅಭಿಪ್ರಾಯವನ್ನು ಅವರು ಗಮನಿಸಿರುವಂತೆ ಕಾಣುತ್ತದೆ.

ದಕ್ಷಿಣ ವೀಟನಾಮಿನಲ್ಲಿ

ಅಮೇರಿಕದ ಗಮನವನ್ನು ಈ ವಾರ ದಕ್ಷಿಣ ವೀಟನಾಮದ ಘಟನೆಯೇ ಹೆಚ್ಚಾಗಿ ಸೆಳೆಯಿತು. ಜಿನೇವದಲ್ಲಿ ಇಂಡೋಚೀನದ ಯುದ್ಧ ವಿರಾಮ ಒಪ್ಪಂದ ಮಾಡಿಕೊಳ್ಳುವ ಕಾಲದಲ್ಲಿ ದಕ್ಷಿಣ ವೀಟನಾಮಿನಲ್ಲಿ ೧೯೫೬ನೇ ವರ್ಷದಲ್ಲಿ ಚುನಾವಣೆಗಳನ್ನು ನಡೆಸಬೇಕೆಂದು ಒಪ್ಪಿದ್ದರು. ಅದಕ್ಕೆ ಸಿದ್ಧತೆಯನ್ನು ನಡೆಸುತ್ತಿದ್ದಂತೆಯೇ ಆ ದೇಶದಲ್ಲಿ ಅಂತಃಕಲಹದ ಕಿಚ್ಚು ಉರಿದೆದ್ದಿತು. ಅಮೇರಿಕ ಬೆಂಬಲಿಸುತ್ತಿದ್ದ ಪ್ರಧಾನ ಮಂತ್ರಿ ದೀಮರನ್ನು ಪದಚ್ಯುತಗೊಳಿಸಲು ಸ್ಥಳೀಯ ಗುಂಪುಗಳು ಸೈನ್ಯ ಬಲವನ್ನು ಉಪಯೋಗಿಸುತ್ತಿರುವ ವರದಿಗಳನ್ನು ಈಗ ಕೇಳುತ್ತಿದ್ದೇವೆ.

ಯಾದವಿ ಕಲಹ

ದೀಮರು ಕ್ರೈಸ್ತರು; ಅವರ ಮಂತ್ರಿ ಮಂಡಳದಲ್ಲಿ ಸ್ಥಳೀಯ ಪ್ರತಿನಿಧಿಗಳಿರುವರೇನೊ ನಿಜ. ಆದರೆ ಫ್ರೆಂಚರು ಬೌದ್ಧ ಮತ್ತಿತರ ಗುಂಪುಗಳ ಒಲವು ಸಂಪಾದಿಸುವುದಕ್ಕೋಸ್ಕರ ಸ್ಥಳೀಯ ಗುಂಪುಗಳಲ್ಲಿ ಕೆಲವಕ್ಕೆ ಮನ್ನಣೆಕೊಟ್ಟು, ಅವುಗಳ ವಶವಿದ್ದ ಪ್ರದೇಶದಲ್ಲಿ ಕಂದಾಯವನ್ನು ವಸೂಲು ಮಾಡುವ ಮತ್ತು ಖಾಸಗಿ ಸೈನ್ಯಗಳನ್ನು ಇಡುವ ಅಧಿಕಾರ ವಿತ್ತಿದ್ದರು. ಈಗ ತಮಗಿತ್ತ ಅಧಿಕಾರ ಸಾಲದೆಂದು ಸರಕಾರದ ಮೇಲೆ ಈ ಗುಂಪುಗಳು ತಿರುಗಿ ಬಿದ್ದ ದೀಮರ ಅಲ್ಪಸಂಖ್ಯಾಕ ಸೈನ್ಯವನ್ನು ತಮ್ಮ ದೊಡ್ಡ ಸೇನೆಗಳಿಂದ ಚೆದರಿಸುತ್ತವೆ. ರಾಜಧಾನಿ ಸೈಗಾನನ್ನು ಅವು ಮುತ್ತಿಗೆ ಹಾಕಿದ್ದು ಈ ಸಂಬಂಧದ ಹೋರಾಟದಲ್ಲಿ ನೂರಾರು ಮಂದಿ ಸತ್ತರು.

ಇಸ್ರಾಯೇಲದ ಭರ್ತ್ಸನೆ

ಈಜಿಪ್ಟಿಗೂ ಇಸ್ರಾಯೇಲಿಗೂ ಗಡಿಯಲ್ಲಿರುವ ಗಾಝಾದಲ್ಲಿ ಕೆಲವು ದಿನಗಳ ಹಿಂದೆ ನಡೆದ ಘರ್ಷಣೆಯ ಕುರಿತು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳ ಸ್ವೀಕರಿಸಿದ ಗೊತ್ತುವಳಿಯಲ್ಲಿ ಇಸ್ರಾಯೇಲವೇ ದುಡುಕಿತ್ತೆಂದು ಹೇಳಿದ್ದು, ಅದಕ್ಕಾಗಿ ಆ ದೇಶದ ಭರ್ತ್ಸನೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ರಶಿಯದ ಪ್ರತಿನಿಧಿ ಸೊಬೊಲೋವರು ಮಾತನಾಡುತ್ತಾ ಪಾಶ್ಚಾತ್ಯ ರಾಷ್ಟ್ರಗಳ ತಂತ್ರಗಳೇ ಮಧ್ಯ ಪೂರ್ವದ ಶಾಂತಿಯನ್ನು ಕೆಡಿಸುವ ಕಾರಣಗಳಾಗುತ್ತವೆಂದು ಅಭಿಪ್ರಾಯಪಟ್ಟರು.

ಸಿರಿಯದ ಮೇಲೆ ಬಲೆ

ಇದಕ್ಕೆ ಪುಷ್ಟಿಕೊಡುವ ರೀತಿಯಲ್ಲಿ ಸಿರಿಯಾ ದೇಶದ ಪ್ರತಿನಿಧಿ ಮಂಡಳವು ಒಡನೆಯೇ ಪತ್ರಿಕಾ ಪರಿಷತ್ತೊಂದನ್ನು ನೆರೆಯಿಸಿ, ತುರ್ಕಿಯು ಇರಾಕಿನೊಡನೆ ಮಾಡಿಕೊಂಡಿರುವ ಸೈನಿಕ ಒಪ್ಪಂದದ ವ್ಯೂಹದಲ್ಲಿ ಸಿರಿಯಾ ಸೇರಬೇಕೆಂದು ಆಗ್ರಹ ಪೂರ್ವಕ ಹೇಳುತ್ತಿದೆಯಾಗಿ ಪ್ರಕಟಿಸಿತು. ಆದರೆ ಸಿರಿಯಾ ಇದಕ್ಕೆ ಒಪ್ಪಿಲ್ಲವೆಂದೂ ಅರಬ ಗುಂಪಿನಲ್ಲಿ ಅದು ಉಳಿಯುವುದೆಂದೂ ನೆಹರುಗಳು ಅರಬ ಗುಂಪಿನ ಬಗ್ಗೆ ಲೋಕ ಸಭೆಯಲ್ಲಿ ವ್ಯಕ್ತಪಡಿಸಿದ ಸದಭಿಪ್ರಾಯದಿಂದ ತಮಗೆ ಭರವಸೆಯಾಗಿದೆಯೆಂದೂ ಅದು ಹೇಳಿತು.

ಸೈನಿಕವ್ಯೂಹದ ವಿಸ್ತಾರ

ತುರ್ಕಿ ಮತ್ತು ಇರಾಕುಗಳ ಸೈನಿಕ ಒಪ್ಪಂದದಲ್ಲಿ ಪಾಕಿಸ್ಥಾನವೂ ಸೇರಬೇಕೆಂಬ ಕುರಿತು ತುರ್ಕಿಯು ಆಮಂತ್ರಣ ವಿತ್ತಿದೆಯಾಗಿ ತಿಳಿದು ಬರುತ್ತದೆ. ಇದರಿಂದ ಹೊಸ ದೆಹಲಿಯ ರಾಜಕೀಯ ವಲಯಗಳು ಭಾರತವು ಜಾಗರೂಕವಾಗಿರ ಬೇಕೆಂದು ಹೇಳುತ್ತವೆ. ಪಾಕಿಸ್ಥಾನವು ಆಂತರಿಕ ಗೊಂದಲದಲ್ಲಿ ಮುಳುಗೇಳುತ್ತಿದ್ದರೂ ಸೈನಿಕ ಒಪ್ಪಂದದ ವ್ಯಾಮೋಹವನ್ನು ಮಾತ್ರ ಬಿಟ್ಟುಗೊಡುವುದು ಸಂಶಯಾಸ್ಪದ. ಏಕೆಂದರೆ ತುರ್ಕಿಯ ಹೇಳಿಕೆಯ ಹಿಂದಿರುವುದು ಪಾಶ್ಚಾತ್ಯ ಗುಂಪಿನ, ಮುಖ್ಯವಾಗಿ ಅಮೇರಿಕದ, ಕೈವಾಡ ಎಂಬುವುದು ಸ್ಪಷ್ಟ. ನಯವಾಗಿ ಮುಂದೊತ್ತುವ ಕೌಶಲ್ಯದಲ್ಲಿ ತುರ್ಕಿಪಳಗಿಲ್ಲವೆಂಬುದಷ್ಟೇ ಪಾಶ್ಚಾತ್ಯ ರಾಷ್ಟ್ರಗಳಿಗೆ ಬೇಸರ ಬರಿಸುತ್ತವೆ.

ಏಕಘಟಕದ ವಿಚಾರ

ಪಾಕಿಸ್ತಾನದಲ್ಲಿ ಪಶ್ಚಿಮ ಭಾಗಗಳನ್ನೆಲ್ಲ ಏಕಘಟಕವಾಗಿ ರೂಪಿಸಲಾಗುವುದೆಂದೂ ಇದರ ಮುಖ್ಯಮಂತ್ರಿಯಾಗಿ ಈಗ ಸಂಪರ್ಕ ಮಂತ್ರಿ ಆಗಿರುವ ಡಾ. ಖಾನ್ ಸಾಹೇಬರನ್ನು ನೇಮಿಸಲಾಗಿದೆಯೆಂದೂ ಗವರ್ನರ ಜನರಲರ ಹೇಳಿಕೆಯೊಂದು ತಿಳಿಸುತ್ತದೆ. ಮುಂದಿನ ಮೇ ತಿಂಗಳಲ್ಲಿ ಏಕಘಟಕದ ಕೆಲಸ ಮುಗಿದೀತೆಂದು ಹೇಳಲಾಗುತ್ತದೆ. ಜನರ ಅಭಿಪ್ರಾಯವನ್ನು ಕೇಳಿಕೊಳ್ಳಿರೆಂಬ ಗಫರ ಖಾನರ (ಗಡಿನಾಡಿನ ಗಾಂಧಿ) ಮಾತು ಅರಣ್ಯರೋದನವಾಯಿತು.

ಕಾಬೂಲಿನಲ್ಲಿ ಘರ್ಷಣೆ

ಇದರಿಂದ ಅಫಘಾನಿಸ್ತಾನವು ಕುಪಿತಗೊಂಡು ತನ್ನ ಪ್ರತಿಭಟನೆಯನ್ನು ಸೂಚಿಸಿತು. ಪಠಾಣರು ಫಕ್ತುನಿಸ್ತಾನವನ್ನು ಕೇಳುವುದು ನ್ಯಾಯವೆನ್ನುವ ಅಫಘಾನಿಸ್ತಾನವು ಏಕ ಘಟಕದ ವಿಚಾರವನ್ನು ಖಂಡಿಸಿತು. ಈ ವಿರೋಧ ಎಷ್ಟು ಬಲವಾಗಿತ್ತೆಂದರೆ ಕಾಬೂಲಿನಲ್ಲಿ ಪಾಕಿಸ್ತಾನದ ರಾಯಭಾರಿ ಕಚೇರಿಯ ಮುಂದೆ ಸಾರ್ವಜನಿಕರು ಮತ ಪ್ರದರ್ಶನ ನಡೆಸಿದರಲ್ಲದೆ, ಪಾಕಿಸ್ತಾನದ ಧ್ವಜದ ಅವಮಾನವನ್ನು ಮಾಡಿದರು. ಸರಕಾರದ ಕಡೆಯಿಂದ ಗಲಭೆ ಶಾಂತಗೊಳಿಸುವ ಪ್ರಯತ್ನಗಳು ಶೀಘ್ರ ಫಲ ಕೊಡಲಿಲ್ಲ.

ಮುಹಮ್ಮದಾಲಿಗಳ ತಿರಸ್ಕಾರ

ಕಾಬೂಲಿನ ಈ ಘಟನೆಯು ಪಾಕಿಸ್ತಾನದ ಗೌರವದ ಪ್ರಶ್ನೆಯಾಗಿದ್ದು, ಅಫಘಾನದ ರಾಜಕೀಯ ಧುರೀಣರ ಕೈವಾಡ ಇದರಲ್ಲಿದ್ದೆಯೆಂದೂ ಅಪಮಾನದ ವಿಧ್ಯುಕ್ತ ಪರಿಮಾರ್ಜನೆಯಾಗದೆ ಸುಮ್ಮನಿರುವುದು ಅಸಾಧ್ಯವೆಂದೂ ಪಾಕಿಸ್ತಾನದ ಪ್ರಧಾನಿ ಮುಹಮ್ಮದಾಲಿ ಸಾರಿದರು. ಅಫಘಾನದ ಸರಕಾರ ಒಪ್ಪಿಸಿದ ವಿಷಾದ ಪತ್ರವನ್ನು ಅವರು ತಿರಸ್ಕರಿಸಿದರು; ಏಕಘಟಕದ ರಚನೆ ಪಾಕಿಸ್ತಾನದ ಆಂತರಿಕ ಪ್ರಶ್ನೆ ಎನ್ನುತ್ತಾ ಈ ಕುರಿತಾದ ಆಕ್ಷೇಪವನ್ನು ತಳ್ಳಿಹಾಕಿದರು. ಕೇಂದ್ರ ಸಭೆಗೆ ಚುನಾವಣೆಗಳನ್ನು ಯೋಗ್ಯ ಹಾಗು ನಿಷ್ಪಕ್ಷಪಾತ ರೀತಿಯಲ್ಲಿ ನಡೆಸಲು ಆಯೋಗ ನೇಮಿಸುವ ವಿಚಾರವನ್ನು ಅವರು ಪ್ರಕಟಪಡಿಸಿದರು.

ಉಡುಪಿ

ನಗರ ಸಭೆಯು— ಕಳೆದ ತಾ 29 ರಲ್ಲು ವೈಸ್‌ಪ್ರೆಸಿಡೆಂಟ್ ಮೌಲ್ಸ್ ಶ್ರೀ ಯು. ಎಸ್. ಇನಾಮ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ತಾ 26 ರಂದು ಜರಗಿದ ಸಭೆಯ ಪರಿಸ್ಥಿತಿ ಕುರಿತು ಚರ್ಚಿಸಲು ಅವಕಾಶವೀಯಬೇಕೆಂದು ಶ್ರೀ ಎ. ಮಂಜುನಾಥ ರಾಯರು ಕೇಳಿಕೊಂಡುದುದನ್ನು ಸಭಾಪತಿಗಳು ಮಾನ್ಯ ಮಾಡಲಿಲ್ಲ. ಓರ್ವ ತೆರಿಗೆದಾರರಿಂದ ಬರತಕ್ಕದೆಂದು ಕಾಣಿಸಿದ ಪ್ರಾಪರ್ಟಿ ಟೇಕ್ಸನ್ನು ಲೆಕ್ಕದಿಂದ ವಜಾ ಬರೆಯಬೇಕೆನ್ನುವ ಆಫೀಸು ನೋಟು ತೀರ್ಮಾನದಲ್ಲಿ ಚರ್ಚೆ ನಡೆದು ಕಾಂಗ್ರೆಸು ಪಕ್ಷದ ಸದಸ್ಯರು ಹಾಗು ತಾನೂ ಭಾಗವಹಿಸುವುದಿಲ್ಲವಾಗಿ ಚೆರ್ಮೆನರು ಹೇಳಿದರು. ಬಳಿಕ ಕೆಲವು ವಿಧಿಬಿಂದುಗಳ ಪ್ರಕರಣಗಳಾದುವು. ಅಷ್ಟರಲ್ಲಿ ಕಾಂಗ್ರೆಸಸದಸ್ಯರೊಬ್ಬರು ಸಭೆಯನ್ನು ಮುಂದರಿಸಬೇಕೆಂದು ಸೂಚನೆ ತಂದರು. ಅರ್ಧ ಚರ್ಚೆಯಲ್ಲಿರುವ ವಿಷಯ ತೀರ್ಮಾನವಾಗದೆ ಸಭೆಯನ್ನು ಮುಂದರಿಸುವುದು ಹೇಗೆ ಸಾಧ್ಯವೆಂದು ಸ್ವತಂತ್ರ ಪಕ್ಷದವರ ಪ್ರಶ್ನೆಗಳಾದುವು. ಸಭಾಪತಿಗಳು ಕೊಟ್ಟ ಉತ್ತರಕ್ಕೆ ನಿಷೇಧ ಸೂಚಿಸಿ ಸ್ವತಂತ್ರ ಪಕ್ಷದವರು ಸಭೆ ಬಿಟ್ಟು ಹೊರ ನಡೆದರು. ಕಮ್ಯೂನಿಸ್ಟ್ ಪಕ್ಷದ ಸದಸ್ಯರೂ ಹೊರಗೆ ಹೊರಟು ಹೋದರು. ಬಳಿಕ ಕಾಂಗ್ರೆಸ್ ಪಕ್ಷದ ಕಡೆಯಿಂದ ಬಂದ ನಿರ್ಣಯವು ಅವಿರೋಧವಾಗಿ ಪಾಸಾಗಿ ಸಭೆಯು ಮುಂದರಿಸಲ್ಪಟ್ಟಿತು.

ಶ್ರೀ ರಾಮ ನವಮಿ ಮಹೋತ್ಸವವು—ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯ ಫಲಿಮಾರು ಸ್ವಾಮಿಗಳವರ ನೇತೃತ್ವದಲ್ಲೂ, ಶೀರೂರಿನಲ್ಲಿ ಶೀರೂರು ಮಠದ ಸ್ವಾಮಿಗಳವರ ಹಿರಿತನದಲ್ಲೂ ಈ ಕಳೆದ 25 ರಿಂದ ಒಂದುವಾರ ಪರ್ಯಂತ ಪುರಾಣ ವಾಚನ, ಹರಿಕಥಾ ಕಾಲಕ್ಷೇಪ, ಅನ್ನದಾನ, ರಥೋತ್ಸವಾದಿ ಕಾರ್ಯಕ್ರಮಗಳಿಂದ ಜರಗಿತು. ಶ್ರೀ ಅನಂತೇಶ್ವರ ದೇವಸ್ಥಾನದಲ್ಲೂ ಬಾಳ್ಯ ಸಹೋದರರ ನೇತೃತ್ವದಲ್ಲಿ ಸಾಂಗವಾಗಿ ನಡೆಯಿತು.

ಡಿ| ಮುನ್ಸಿಫರು- ಜನಾಬ್ ಯು. ಪಮ್ಮಬ್ಬನವರು ಸಬ್ ಜಡ್ಜರಾಗಿ ಮಂಗಳೂರಿಗೆ ವರ್ಗಾಯಿಸಲ್ಪಟ್ಟು ಕೆಲ ದಿನ ತೆರವಾಗಿದ್ದ ಸ್ಥಾನದಲ್ಲಿ ಶ್ರೀ ಎಂ. ಗೋಪಾಲಕೃಷ್ಣನವರು ನೇಮಕ ಹೊಂದಿ ಕಳೆದ ವಾರದಲ್ಲಿ ಚಾರ್ಜ ವಹಿಸಿರುವರು.

ಶ್ರೀಮತಿ ಮನೋರಮಾ ದೇವಿಯವರು ತನ್ನ ನಗರ ಸಭಾ ಸದಸ್ಯತನವನ್ನು ಊರ್ಜಿತದಲ್ಲಿಟ್ಟು ತಾನು ಸದಸ್ಯೆಯಾಗಿರಲು ಅರ್ಹತೆಯಿದೆ ಎಂಬುದನ್ನು ದೃಢಪಡಿಸಲು ಜಿಲ್ಲಾನ್ಯಾಯಧೀಶರಲ್ಲಿ ಮಾಡಿದ ದಾವೆಯು 'ಡಿಸ್ ಮಿಸ್' ಆಗಿ ನಗರ ಸಭೆಗೆ ಖರ್ಚು ಕೊಡಬೇಕಾಗಿರುವುದೆಂದು ತಿಳಿದು ಬರುತ್ತದೆ.

ರಾಜಾಪುರ ಸಾರಸ್ವತ ಸಂಘ, ಮುಂಬಾಯಿ.

ಇದರ ಐದನೇ ವಾರ್ಷಿಕ ಮಹಾಸಭೆಯು ತಾ. 1—4—55ರಲ್ಲು ಶ್ರೀಯುತ ಬಿ. ಅಣ್ಣಯ ನಾಯಕ್ ರವರ ಅಧ್ಯಕ್ಷತೆಯಲ್ಲಿ ಜರಗಿತು. ಗತವಾರ್ಷಿಕ ವರದಿಯನ್ನು ಸಂಘದ ಗೌರವ ಕಾರ್ಯದರ್ಶಿಗಳವರಾದ ಶ್ರೀ ಡಿ. ಡಿ. ಪ್ರಭುಗಳವರು ಓದಿಹೇಳಿದ ಬಳಿಕ ವರದಿಯ ವರ್ಷದ ಜಮಾ ಖರ್ಚುಗಳ ಲೆಕ್ಕಪತ್ರಗಳನ್ನು ಪರಿಶೋಧನೆ ಮಾಡಲಾಗಿ ವರದಿಯು ಸರ್ವಾನು ಮತದಿಂದ ಮಂಜೂರುಮಾಡಿ ಆಡಳಿತೆ ಸಮಿತಿಗೆ ಬೇಕಾದ ಸದಸ್ಯರುಗಳನ್ನು ಕ್ರಮವಂತೆ ಆರಿಸಿ ಲೆಖ್ಖ ಪರಿಶೋಧಕರನ್ನು ಸರ್ವಾನು ಮತದಿಂದ ನೇಮಿಸಲಾಯಿತು. ನಂತರ ಸಭಿಕರಲ್ಲಿ ಕೆಲವರು ಸಂಘದ ಕಾರ್ಯಕಲಾಪ ಮತ್ತು ಸಂಘಾಭಿವೃದ್ಧಿಯ ಕುರಿತು ಯಥೋಚಿತ ಭಾಷಣವಿತ್ತರು. ಬಳಿಕ ರಾಜಾಪುರ ಸಾರಸ್ವತ ಸಮಾಜದ ಆರನೇ ತರಗತಿ (1ಫೋರ್ಮ್) ಮೇಲ್ಪಟ್ಟು ಕಲಿಯುತ್ತಿರುವ ಅತೀ ಬಡವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಧರ್ಮಾರ್ಥ ವಿದ್ಯಾರ್ಥಿ ವೇತನವನ್ನು ಕೊಡುವುದಾಗಿಯೂ ಅಂತಹ ವಿದ್ಯಾರ್ಥಿ ವಿದ್ಯಾರ್ಥಿನಿಯರು ತಾ. 15-6-55ರ ಒಳಗೆ ಸಂಘದ ಆಫೀಸಿಗೆ ತಲಪುವಂತೆ ನಿವಾಸದ ಮತ್ತು ಶಾಲೆಯ ವಿಳಾಸವನ್ನು ಬರೆದು ಮುಖ್ಯಾಧ್ಯಾಪಕರ ಸರ್ಟಿಫಿಕೇಟ್ ನೊಂದಿಗೆ ಅರ್ಜಿಮಾಡತಕ್ಕದ್ದೆಂದೂ ಸರ್ವಾನು ಮತದಿಂದ ಮಂಜೂರಾಯಿತು. ನಂತರ ಅಧ್ಯಕ್ಷರು ಸಂಘಾಭಿವೃದ್ಧಿಯ ಬಗ್ಗೆ ಯೋಗ್ಯ ಸಲಹೆಗಳನ್ನು ಕೊಟ್ಟು ತಮ್ಮ ವಿಚಾರಪೂರ್ಣಭಾಷಣವನ್ನು ಮುಗಿಸಿದ ಬಳಿಕ ಕಾರ್ಯದರ್ಶಿಯವರಿಂದ ವಂದನಾದಿಗಳೊಂದಿಗೆ ಸಭೆಯು ಸಮಾಪ್ತಿಗೊಂಡಿತು.

ಸಂಘದ ವಿಳಾಸ:— ರಾಜಾಪುರ ಸಾರಸ್ವತ ಸಂಘ, ಪಟೇಲ್ವಾಡಿ, 2ನೇ ಮಾಳಿಗೆ, ರೂಮ್ ನಂ. 51 ಪರೇಲ್ ಟೇಂಕ್ ರೋಡ್. ಮುಂಬ್ಬಾ ನಂ·12

ಪಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ ಲೈಬ್ರೆರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ

ನವಭಾರತ ಪುಸ್ತಕ ಭಂಡಾರ ಉಡುಪಿ

ಅಂಪಾರು— ಈ ಗ್ರಾಮದ ಪಂಚಾಯತ್ ಬೋರ್ಡು ಚುನಾವಣೆಯು ಕಳೆದ ತಾ 28 ರಂದು ಜರಗಿ ಶ್ರೀ ಅಂಪಾರು ಸುಬ್ರಾಯ ಭಟ್ಟರು ಬಹು ಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀಗಳಾದ ಎಮ್. ಕೆ. ಕೃಷ್ಣಪ್ಪ ಸೆಟ್ಟಿ, ಟಿ. ಶೀನಪ್ಪ ಸೆಟ್ಟಿ, ಕೆ. ನಾರಾಯಣ ಸೆಟ್ಟಿ, ಎಸ್. ಮಹಾಬಲ ಸೆಟ್ಟಿ, ಮತ್ತು ಹರಿಜನ ಎಸ್. ತಿಮ್ಮನವರು ಸದಸ್ಯರಾಗಿ ಅವಿರೋಧ ಆಯ್ಕೆ ಹೊಂದಿದರು.

ಕುಂಬಳೆ — ಇಲ್ಲಿಯ ಸಬ್ ಪೋಸ್ಟಾಫೀಸು ಕ್ಲಾರ್ಕ್ ಶ್ರೀ ಪಿ. ರಮಾನಾಥ ನಾಯಕರು ತಂತಿ ತರಬೇತಿಗಾಗಿ ಹೋಗುವ ನಿಮಿತ್ತ, ಕಳೆದ ತಾ. 31ರಲ್ಲಿ ಅವರಿಗೆ ವಿದಾಯ ಸತ್ಕಾರ ಕೂಟವೊಂದು ಏರ್ಪಡಿಸಲಾಗಿತ್ತು. ಪಂಚಾಯತ್ ಬೋರ್ಡು ಅಧ್ಯಕ್ಷ ಶ್ರೀ ಕೆ. ಕಣ್ಣಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂರಯ ಪಿಶಾಚಿ	0	10
3	ನಾದ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	1	0
13	ವೀರಭಕ್ತ	1	4
14	ಪ್ರೇಮ ವಿಜಯ	1	4
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾರ	2	4
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮೀನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.

ಕಿರಿಯರ ಪ್ರಪಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.



ಹೆಮ್ಮಾಡಿ—ಸ್ಥಳೀಯ ಗ್ರಾಮದ ಪಂಚಾಯತ ಬೋರ್ಡು ಚುನಾವಣೆಯು ಕಳೆದ ತಾ- 26 ರಲ್ಲು ನಡೆದು ಶ್ರೀ ಕನ್ನಡ ಕುಪ್ಪ ಅಂತೋಣಿ ಕಾಂಗ್ರೆಸ್ಸರು ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಹೊಂದಿದರು. ಶ್ರೀಗಳಾದ ಲೋರೆನ್ಸ್ ಬ್ರಗಾಂಜ, ಆತ್ಮಾರಾಮ, ಮಾಸ್ತಿ, ಹೇರಿಯ, ಹರಿಜನ ಬ್ಯಾರಿ ಮತ್ತು ಅಬ್ಬು, ಅವರು ಕೂಡಾ ಮೆಂಬರರಾಗಿ ಅವಿರೋಧ ಆಯ್ಕೆ ಹೊಂದಿದರು.

ಕೋಣ್ಕಿ—ಕುಂದಾಪುರ ತಾಲೂಕು ನಾಡ ಗ್ರಾಮದ ಕೋಣ್ಕಿಯಲ್ಲಿ ಕಳೆದ ತಾ 31 ರಲ್ಲು ಪೂರ್ವಾಹ್ನ ಶ್ರೀ ನ್ಯಾಲಾಡಿ ಸೂರಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಶಾಲಾ ಉದ್ಘಾಟನಾ ಸಮಾರಂಭವೊಂದು ಸಾಂಗವಾಗಿ ಜರಗಿತು.

ನಾಡ—ಕಳೆದ ತಾ 27 ರಲ್ಲು ನಾಡಗ್ರಾಮದ ಇಗರ್ಜಿ ಗುಡ್ಡೆಯ ಮೈದಾನಿನಲ್ಲಿ ಶ್ರೀ ಸುಂದರ ಶೆಟ್ಟಿ ಮತ್ತು ಶ್ರೀ ಮಾರಣಕಟ್ಟೆ ಮೇಳದವರ ಜೋಡಾಟ ವಿಜೃಂಭಣೆಯಿಂದ ಜರಗಿತು.

ಬ್ರಹ್ಮಾವರ— ಸ್ಥಳೀಯ ಶ್ರೀ ರಾಮ ಮಹಿಮಾ ಜ್ಯೋತಿ: ಸಮಾಜ ಸೇವಾ ಕಲಾ ವೃಂದದವರು ಕಳೆದ ತಾ. 26ರಿಂದ ಇದೇ ತಾ. 2ರ ತನಕ ಅಖಂಡ ಭಜನೆಯನ್ನು ಶ್ರೀ ರಾಮ ಪಟ್ಟಾಭಿಷೇಕೋತ್ಸವವನ್ನು ವೈಭವದಿಂದ ಜರಗಿಸಿ ಮಂಗಲಾಚರಣೆ ಗೈದರು.

ಶಿರ್ವ— ಈ ಪಂಚಾಯತ ಬೋರ್ಡಿನ ಸಭೆಯು ಕಳೆದ ತಾ. 29ರಲ್ಲಿ ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶಿರ್ವಕ್ಕೊಂದು ಟೌನ್‌ಹಾಲ್ ನಿರ್ಮಿಸುವ, ಮಾರುಮಾರ್ಕೆಟು ಕಟ್ಟೋಣವನ್ನು ವಿಸ್ತರಿಸಲು ರೂಪಾಯಿ 500/- ಸಂಕ್ಷನ್ ಮಾಡುವ ಹಾಗೂ ಬಂಟಕಲ್ಲು—ಬೆಳ್ಳೆ ರಸ್ತೆ ಕೂಡುವಲ್ಲಿ ಒಂದು ದೀಪದಕಂಬವನ್ನು ಹಾಕುವ ಇತ್ಯಾದಿ ನಿರ್ಣಯಗಳಾದುವು.

ಪಾಂಗಾಳ— ಪಾಂಗಾಳ ಗುಡ್ಡೆ ಗರಡಿಯ ಜೀರ್ಣೋದ್ಧಾರ ಕೆಲಸವು ಪೂರ್ಣವಾಗಿದ್ದು ತಾ 2 ರಲ್ಲು ಉಗ್ರಾಣ ಮುಹೂರ್ತವಾಗಿ ತಾ 16 ತನಕ ವಿವಿಧ ಧಾರ್ಮಿಕ ಕಾರ್ಯಗಳು ರಗುವುವು. ತಾ 17ರಂದು ಸಂಪ್ರೋಕ್ಷಣೆ, ಮಹಾ ಮಂತ್ರಾಕ್ಷತೆಯಾದಿ ಕಾರ್ಯಕ್ರಮಗಳೊಡನೆ ಒಕ್ಕಲು, ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ, ಅಗೆಲು, ನೇಮ ಕೋಲಾದಿಗಳೊಡನೆ 'ಬೈದರ್ಕಳ ಗರಡಿಯ ಪ್ರವೇಶೋತ್ಸವವು' ಜರಗಲಿರುವುದು. ಈ ಸಮಾರಂಭದಲ್ಲಿ ಆಸ್ತಿಕ ಮಹಾಶಯರು ಭಾಗವಹಿಸಬೇಕಾಗಿ ಶ್ರಿ ಗುರುವ ಅಮೀನರು ವಿನಂತಿಸುತ್ತಾರೆ.

ತಲ್ಲೂರು:- ಸ್ಥಳೀಯ ಬೋರ್ಡು ಹಾ|| ಎ| ಶಾಲೆಯ ವಾರ್ಷಿಕೋತ್ಸವವು ತಾ. 13 ರಲ್ಲು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಎಸ್. ಗೋಪಾಲರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವರದಿ ವಾಚನವಾದ ಬಳಿಕ ಶ್ರೀಗಳಾದ ವೈ. ರಘುರಾಮ ಸೆಟ್ಟಿ, ಎಸ್. ಎನ್. ಸುಬ್ಬಣ್ಣ ಗುಪ್ತ, ಪಿ. ನರಸಿಂಹಯ್ಯ ಮೊದಲಾದವರು ಮಾತನಾಡಿದರು. ಶ್ರೀ ಎಸ್. ಶೀನಪ್ಪ ಸೆಟ್ಟರು ಸ್ವಸ್ತಿ ವಾಚನ ಮಾಡಿದರು. ಮಕ್ಕಳ ವಿನೋದಾವಳಿಗಳಾದ ಬಳಿಕ ಹೆಡ್ಮಾಸ್ಟರ್ ಶ್ರೀ ರಾಘಾ ಕೃಷ್ಣರಾಯರು ಧನ್ಯವಾದಗಳನ್ನರ್ಪಿಸಿದರು.

ಕೃಷ್ಣರಾಜ ನಗರ— ಇಲ್ಲಿಂದ ಪ್ರಕಟವಾಗುತ್ತಿರುವ 'ಹಂಸ' ಲಿಖಿತ ಪತ್ರಿಕೆಯ ತೃತೀಯ ವಾರ್ಷಿಕೋತ್ಸವವು ಕಳೆದ ತಾ.27 ರಂದು ಪುರ ಸಭಾಂಗಣದಲ್ಲಿ ಶ್ರೀಮತಿ ಎಚ್. ಆರ್. ವಿಮಲಮ್ಮ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಗೀತಾದಿ ಕಾರ್ಯಕ್ರಮಗಳಾದ ಬಳಿಕ ಶ್ರೀ ಎಮ್. ಗೋಪಾಲಕೃಷ್ಣ ಅಡಿಗರು 'ಹಂಸ' ವಿಶೇಷ ಸಂಚಿಕೆಯನ್ನು ಉದ್ಘಾಟಿಸಿದರು. ಅಧ್ಯಕ್ಷಿಣಿಯರ ಭಾಷಣವಾಗಿ, ಸಂಪಾದಕರು ಧನ್ಯವಾದಗಳನ್ನರ್ಪಿಸಿದರು.

ELIXIR ASWAGANDH

The best nervine tonic, the pride of Ayurveda, quickly gives radiant health, removes constipation, relieves hip and back pain. Start taking "Elixir Aswagandh" and feel years younger. 1 lb. Rs. 10/- Postage extra.

Sri P. E. Subrahmanyam, M. A., Retd. Professor, Srirangam writes: It is indeed very creditable that Dr. Jayarama Sastry could have evolved a real Elixir with a delightful blend of efficacious drugs. I congratulate him. His Elixir Aswagandh has all the virtues claimed for it

Rao Saheb Sri R. Narayana Iyengar, Dy. Supdt. of Police (Retd.) Srirangam writes: I have been using your Elixir Aswagandh since some days and I find it is a marvellous tonic and a quick pick up. I am recommending the same to my friends

Ayurveda Vaidhya T. V. Jayarama Sastri,
Veera Raghava Vaidhyasala, SRIRANGAM P. O., (SOUTH INDIA).

ನೋಡಿದರೆ ಸಾಕು, ಓದದೆ ಬಿಡಲಾರಿರಿ!

ಮುಗಿದಾಗ ಮುಗಿದು ಹೋಯಿತಲ್ಲಾ ಎಂದು— ತೊಡಗಿದಾಗ ಹೇಗೆ ಮುಗಿವುದಿದು ಎಂದು ಕೌತುಕಪಡಿಸುವ ಹದಿಮೂರು ಚಿಕ್ಕ ಚೊಕ್ಕ ಕತೆಗಳ ಸಂಗ್ರಹ.

ಅಂತರಂಗದ ಕತೆಗಳು

ಸೊಗಸಾದ ದ್ವಿತೀಯ ಮುದ್ರಣ. ಅಂದವಾದ ಹೊರಹೊದಿಕೆ.

ಅಂತರಂಗವನ್ನು ಬೆಳಗಿಸಿ, ಬಹಿರಂಗವನ್ನು ಹೊಳೆಸಿ ಹರಿವ ಮಾತು.

ಇಷ್ಟಾದರೂ ಬೆಲೆ ೧-೪-೦ (ಟ. ಖರ್ಚು ಬೇರೆ)

ಪ್ರತಿಗಳು ಎಲ್ಲಾ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ಸಿಗುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಣ್ಣೆದುರು ಕಾಣುವ ಸುಂದರಿಗಿಂತಲೂ ಕನಸಿನಲ್ಲಿ ಕನವರಿಸುವ ಸ್ವಪ್ನ ಸುಂದರಿಯೇ ಮೇಲು.
ಆದ್ದರಿಂದ ಕುಂಟು ಜವ್ವನದ ಅಂಜಲಿಯೊಂದಿಗೆ ಜಂಬವಿಲ್ಲದ ನಾಗೇಶ್ವರರಾವು ಯಾವ ಸ್ವಪ್ನ ಕಾಣುವನೆಂದು ನೋಡಲು

ಸ್ವಪ್ನಸುಂದರಿ

ಶ್ರೀ ರಾಮಕೃಷ್ಣ ಥಿಯೇಟರ್ ಉಡುಪಿ

ತಾ. 5—4—55ರಿಂದ
ಬರುವ ಚಿತ್ರ: ಮಯೂರ ಪಂಖ್.

ಉಚ್ಚಿಲ— ಕಳೆದ ತಾ 25 ರಲ್ಲು ಸ್ಥಳೀಯ ಸರಸ್ವತಿ ಮಂದಿರ ಹಾ| ಎ| ಶಾಲೆಯಲ್ಲಿ ಎಂಟನೇ ತರಗತಿಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ಉಡುಪಿ ದಕ್ಷಿಣ ಶ್ರೇಣಿಯ ಶಾಲಾ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ಪರ್ಪ ಸೈಕಾರವರ ಅಧ್ಯಕ್ಷತೆಯಲ್ಲಿ ಜರಗಿತು. ಮರುದಿವಸ ಶಾಲಾ ಮಕ್ಕಳ ಹಬ್ಬವು ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಬಂಟಕಲ್ಲು, ಶಿರ್ವ— ಬಾಲಾವಲಿಕಾರ್ ಸಾರಸ್ವತ ಸಮಾಜದ ಬಂಟಕಲ್ಲು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಮಹೋತ್ಸವವು ಇದೇ ತಾ 2 ರಲ್ಲು ಬಹು ವಿಜೃಂಭಣೆಯಿಂದ ಜರಗಿತು. ಈ ಸಮಾರಂಭಕ್ಕೆ ಅಧಮಾರು ಮಠದ ಸ್ವಾಮಿಗಳವರು ಬಂದಿದ್ದು ಇಲ್ಲಿಯ ಕಾರ್ಯಕಲಾಪಗಳನ್ನು ಕಂಡು ಹರ್ಷಚಿತ್ತರಾಗಿ ಭಾವೀ ಶ್ರೇಯಸ್ಸನ್ನು ಕೋರಿ ಅನುಕೂಲ್ಯ ಸೂಚನೆಯನ್ನಿತ್ತರು. ಶ್ರೀಗಳಾದ ಯು. ಎಸ್. ನಾಯಕ್, ಸಂಯುಕ್ತ ಸಾರಸ್ವತ ಸಂಘದ ಉಪಾಧ್ಯಕ್ಷ ಎನ್. ಎಂ. ಪಿ. ಕಾಮತ್, ಬಾಲಾವಲಿಕಾರ್ ಸಾರಸ್ವತ ಸಂಘದ ಅಧ್ಯಕ್ಷ ಶ್ರೀ ಕೆ. ನಾರಾಯಣ ನಾಯಕ್ ಮೊದಲಾದ ಆಧ್ವರು ಆಗಮಿಸಿದ್ದರು. ಉತ್ಸವದ ಅಂಗವಾಗಿ ಜರಗಿದ ಸಭೆಯಲ್ಲಿ ಶ್ರೀ ಕಾಮತರು ಸಮಾಜ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಸಾರಸ್ವತ ವಿವಿಧ ಶಾಖೆಗಳ ಏಕೀಕರಣದ ಕುರಿತು ಮಾತನಾಡಿದರು. ಶ್ರೀಗಳಾದ ಪಿ. ರಾಮಚಂದ್ರ ನಾಯಕ್ ಮತ್ತು ಆಲೆವೂರು ವಾಸುದೇವ ಪ್ರಭುಗಳು ಸಮಾಜದ ಏಳಿಗೆಯ ಬಗ್ಗೆ ಹಿತಸೂಚನೆಗಳನ್ನಿತ್ತರು. ಉತ್ಸವದ ನಿಮಿತ್ತ ಸಾಧಾರಣ 5000 ಜನರಿಗೆ ಸಂತರ್ಪಣೆ ನಡೆಯಿತು.

ಸಂಪಾದಕರಿಗೆ ಪತ್ರ:

ಮಜೂರ ಹಿತರಕ್ಷಣೆ

ಅಯ್ಯಾ,

ನಮ್ಮ ಜಿಲ್ಲೆಯ ಕಾಂಗ್ರೆಸ್ ಧುರೀಣರು ಇಷ್ಟರ ತನಕವೂ ಟ್ರೇಡ್ ಯೂನಿಯನ್ ಚಳವಳಿವನ್ನು ಕಡೆಗಣಿಸುತ್ತಾ ಬಂದಿರುವರು; ಮತ್ತು, ಅದರ ಪರಿಣಾಮವಾಗಿ, ಸ್ವಲ್ಪ ಮಟ್ಟಿಗೆ ಮಜೂರ ಬೆಂಬಲವನ್ನು ಕಳಕೊಂಡಿರುವರು. ಇಲ್ಲಿಯ ಹಲವಾರು ಮಜೂರ ಸಂಘಗಳಲ್ಲಿ ಒಂದಾದರೂ ಇಂಡಿಯನ್ ನ್ಯಾಶನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನೊಡನೆ ಸಂಬಂಧವಿಟ್ಟು ಕೊಂಡಿದೆಯೇ? ನನಗೆ ತಿಳಿಯದು. ಐ. ಎನ್. ಟಿ. ಯು ಸಿ. ಮುಂದಾಳುಗಳು ಕೂಡಾ ಔದ್ಯಮಿಕವಾಗಿ ಬೆಳೆಯುತ್ತಿರುವ ನಮ್ಮ ಜಿಲ್ಲೆಯನ್ನು ಸಂದರ್ಶಿಸಿದ ನಿದರ್ಶನಗಳು ಇಲ್ಲವೆನ್ನುವಷ್ಟು ಅಪರೂಪವಾಗಿವೆ

ಇಂಥ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನಿಂದ ಯೋಗ್ಯ ಮಾರ್ಗದರ್ಶನ ದೊರಕಿಸಿಕೊಳ್ಳಲಾರದ ಮಜೂರರು ಸ್ವಾಭಾವಿಕವಾಗಿ ಇತರ ಪಕ್ಷಗಳ, ಮುಖ್ಯವಾಗಿ ಕಮ್ಯೂನಿಸ್ಟರ, ಪ್ರಭಾವಕ್ಕೆ ಒಳಗಾಗಿರುವುದು ಆಶ್ಚರ್ಯವಲ್ಲ. ಟ್ರೇಡ್ ಯೂನಿಯನ್ ಚಳವಳವು ಔದ್ಯಮಿಕ ಜಗತ್ತಿನ ಅನಿವಾರ್ಯ ಸಂಸ್ಥೆಗಳಲ್ಲಿ ಒಂದಾಗಿದೆ ಎಂಬುದನ್ನು ಈಗ ಎಲ್ಲರೂ ಮನಗಂಡಿದ್ದಾರೆ. ಮತ್ತು ಕಾಂಗ್ರೆಸ್ ಪಕ್ಷವು ಸಮಾಜವಾದಿ ಮಾದರಿಯ ಧ್ಯೇಯವನ್ನು ಸ್ಪಷ್ಟವಾಗಿ ಸ್ವೀಕರಿಸಿದೆ.

ಇನ್ನಾದರೂ ಬಡ ಕೂಲಿಕಾರರ ಹಿತರಕ್ಷಣೆಯನ್ನು ಸ್ವೀಕರಿಸಲು ನಮ್ಮ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಮುಂದೆ ಬರುವರೆಂದು ಆಶಿಸಬಹುದೇ?

ಎಸ್. ಆರ್. ಭಕ್ತ

ನಿಮ್ಮ ಎಲ್ಲಾ ಜೋತಿಷ್ಯ ವಿಷಯಗಳಿಗೆ ಇಂದೇ ಬರೆಯಿರಿ—
ಪಂಡಿತ ಕೆ. ಎಸ್. ಶಾಸ್ತ್ರಿ,
ಜ್ಯೋತಿ ವಿದ್ಯಾ ಸಂಶೋಧನಾ ಕೇಂದ್ರ,
ಪಂಚವಟಿ, ನಾಶಿಕ.

ಮಂಗಳೂರು

ವಾರ್ಷಿಕೋತ್ಸವ— ಮಂಗಳೂರು ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಮಂಡಳಿಯ ವಾರ್ಷಿಕೋತ್ಸವವು ತಾ 3 ರಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಕೆ. ಚಂದ್ರ ಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಜತೆಕಾರ್ಯದರ್ಶಿಗಳಾದ ಶ್ರೀ ಪಿ. ಲಕ್ಷ್ಮೀನಾರಾಯಣ ಉಪಾಧ್ಯಾಯರು ಸ್ವಾಗತ ಭಾಷಣಮಾಡಿ ಹಲವರಿಂದ ಬಂದ ಸಂದೇಶಗಳನ್ನು ಓದಿದರು. ಜತೆಕಾರ್ಯದರ್ಶಿ ಶ್ರೀ ಪಿ. ಎಸ್. ನಾರಾಯಣ ರಾಯರು ವರದಿವಾಚನಮಾಡಿದರು. ಬಳಿಕ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ 'ಸುಭದ್ರಾ ಕಲ್ಯಾಣ'ವೆಂಬ ಯಕ್ಷಗಾನಕೂಟ ಜರಗಿತು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ, ಜಿಲ್ಲೆಯ ವಿಶಿಷ್ಟ ಜಾನಪದ ಕಲೆಯಾದ ಯಕ್ಷಗಾನಕ್ಕೆ ಹೆಚ್ಚಿನ ಪ್ರೋತ್ಸಾಹವೀಯಬೇಕೆಂದರು.

ಜಿಲ್ಲಾ ಕಲೆಕ್ಟರರ ಪ್ರಕಟಣೆ— ಖಾಸಗಿ ಫೇರ್ ಪ್ರೈಸ್ ಶೋಪು ಡೀಲರರಿಗೆ ಜ್ಯಾರಿಗೆ ತಂದ ರಿಬೇಟು ಸ್ಕೀಮು ಕಳೆದ ತಿಂಗಳ ತಾ 31 ರ ವರೆಗೆ ಜ್ಯಾರಿಯಲ್ಲಿದ್ದುದನ್ನು ಸರಕಾರವು ಇನ್ನು ಒಂದು ತಿಂಗಳ ತನಕ ಊರ್ಜಿತದಲ್ಲಿಟ್ಟಿರುತ್ತದೆ. ಆದುದರಿಂದ ಫೇರ್ ಪ್ರೈಸ್ ಡೀಲರರು ಈ ಎಪ್ರಿಲ್ ತಿಂಗಳಲ್ಲಿ ಯಥಾ ಪ್ರಕಾರ ಒಂದು ರೂಪಾಯಿಗೆ ಒಂದಾಣೆಯಂತೆ ಕೈ ಮಗ್ಗ ವಸ್ತ್ರದ ರೂಪಾಯಿ 5/-ಕ್ಕೆ ಮೇಲ್ಪಟ್ಟು ರೂಪಾಯಿ 10/-ರ ವರೆಗಿನ ವಿಕ್ರಿತದ ಮೇಲೆ ರಿಬೇಟು ಕೊಟ್ಟು ಎಪ್ರಿಲ್ ತಿಂಗಳ ಮುಟ್ಟಿಗೆ ಮಾತ್ರ ನಡೆಸತಕ್ಕದ್ದು.

ಆವಡಿಕಾಂಗ್ರೆಸ್ ನಿರ್ಣಯಗಳು- ಮತ್ತು ಆಂಧ್ರ ಚುನಾವಣೆಯ ವಿಜಯ ಮೊದಲಾದ ವಿಷಯಗಳಲ್ಲಿ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಎ. ಶಂಕರಾಳ್ವ, ಕೆ. ಆರ್. ಆಚಾರ್, ಬಿ. ಆರ್. ಕರ್ಕೇರ, ಎಸ್. ಎನ್. ಹೊಳ್ಳ ಮತ್ತು ಸಾ। ಕಾದಂಬರಿ ಹೊಳ್ಳರು ಕಳೆದ ತಾ. 27ರಲ್ಲಿ ಕೇಂದ್ರಮೈದಾನಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು. ಸಭೆಯು ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಲೋಕಯ್ಯ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರಿಗೆ ಚರಂಡಿ ಯೋಜನೆಯನ್ನು— ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಸಾಧ್ಯವಾಗುವಂತೆ ಮಂಗಳೂರು ನಗರಕ್ಕೆ ಸಮಗ್ರವಾದ ಯೋಜನೆಯೊಂದನ್ನು ತಯಾರಿಸಿ ಕಳುಹಿಸಬೇಕೆಂದೂ, ನೀರಿನ ಸರಬರಾಯಿ ತೀವ್ರಗತಿಯಿಂದಾಗುವಂತೆ ಒಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಇಬ್ಬರು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರರ ನೇಮಕ ಮಾಡಿದೆಯೆಂದೂ ತಿಳಿಸುವ ಮದ್ರಾಸ ಸರಕಾರದ ಆರೋಗ್ಯ ಮಂತ್ರಿಗಳ ಹುಕುಮನ್ನು, ನಗರ ಸಭೆಯಲ್ಲಿ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ತಿಳಿಸಿದರು. ಬಸ್ ಸ್ಟೇಂಡಿಗೆ ಬರುವ ರಸ್ತೆಗಳನ್ನು ಅಗಲ ಮಾಡುವುದಕ್ಕಾಗಿ ಸ್ಥಳ ಪಡೆಯಲು ರೂ. 15,400, ಬಾವುಟಗುಡ್ಡೆಯ ತೋಟದ ಆವರಣಕ್ಕಾಗಿ ರೂ.5150. ಇತ್ಯಾದಿಕೆಲಸಗಳಿಗೆ ಹಣ ಮಂಜೂರುಮಾಡಲಾಯಿತು. ಮಣ್ಣಗುಡ್ಡೆ ಶಾಲಾ ಕಟ್ಟಡಕ್ಕಾಗಿ ಶ್ರೀ ಮಣೇಲ್ ಶ್ರೀನಿವಾಸ ನಾಯಕ್ಕರು ದಾನಮಾಡಿದ ರೂ. 1000 ವನ್ನು ಕೃತಜ್ಞತಾ ಪೂರ್ವಕ ಸ್ವೀಕರಿಸಲಾಯಿತು. ತಾ. 31—3—1954ರ ನಂತರ ಕೊಟ್ಟ ನೋಟೀಸಿನ ಮೇಲೆ ತೆಗೆದಾದರು ರಿವಿಜನ್ ಅರ್ಜಿ ಅಥವಾ ಅಪೀಲುಗಳ ವಿಚಾರಣೆಯಾಗದಿದ್ದಲ್ಲಿ ವಸೂಲಿಯ ಕ್ರಮ ಕೈಕೊಳ್ಳಬಾರದು ಎನ್ನುವ ಆಜ್ಞೆಯನ್ನು ಸರಕಾರವು ಕೂಡಲೇ ಮಾಡಬೇಕೆಂದು ಕೇಳಿಕೊಳ್ಳುವ ಶ್ರೀ ಜೆ. ಡಿ.ಡಿ. ಸೋಜರು ತಂದ ನಿರ್ಣಯವು ಅಂಗೀಕರಿಸಲಾಯಿತು.

ಸಮಾಜ ಹಿತರಕ್ಷಣಾ ಬೋರ್ಡಿನ— ಸಲಹಾ ಸಮಿತಿ ಸದಸ್ಯ ಶ್ರೀಮತಿ ಮೇರಿ ಕ್ಲಬ್ ವಾಲಾ ಜಾಧವರು ಕಳೆದ ತಾ 25ರಲ್ಲಿ ಮಂಗಳೂರಿಗೆಬಂದು ಅಂದೇ ಕಂಕನಾಡಿಯ ಮಹಿಳಾ ಸೇವಾಶ್ರಮವನ್ನು ಸಂದರ್ಶಿಸಿದರು. ಮರುದಿನ ಮಹಿಳಾ ಸಭೆಯಲ್ಲಿ ಸೇರಿದ ಸೇವಾ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಾ ಸಮಾಜಸೇವಾ ಕಾರ್ಯದಲ್ಲಿ ಮದ್ರಾಸು ಪ್ರಥಮಸ್ಥಾನವನ್ನು ಬೊಂಬಾಯಿಯು ದ್ವಿತೀಯ ಸ್ಥಾನವನ್ನು ಪಡೆದಿವೆ ಎಂದರು. ಅನಂತರ ಸಮಾಜಸೇವಾ ಕಾರ್ಯದ ಕುರಿತು ವಿಚಾರ ವಿನಿಮಯ ನಡೆಯಿತು.

ಸತ್ಕಾರ ಕೂಟ — ದ. ಕ. ಪತ್ರಿಕೋದ್ಯೋಗಿ ಸಂಘದ ಕಡೆಯಿಂದ ಕಳೆದ ತಾ— 31 ರಲ್ಲಿ ಸಂಜೆ, ಮದ್ರಾಸು ಸರಕಾರದಿಂದ ನಾಟಕಗಳಿಗಾಗಿ ಬಹುಮಾನಪಡೆದ ಶ್ರೀಗಳಾದ ಎಮ್. ಶಂಕರನಾರಾಯಣ ಭಟ್ ಮತ್ತು ಪಿ. ಕೆ. ನಾರಾಯಣರವರನ್ನು ಅಭಿನಂದಿಸಿ ಸತ್ಕರಿಸುವ ಸಭೆಯು ಶ್ರೀ ಡಿ. ಪುಟ್ಟು ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕ್ಲಬ್ ವಾರ್ಷಿಕೋತ್ತವ— ಅತ್ತಾವರ ಫ್ರೆಂಡ್ಸ್ ಯುನೈಟೆಡ್ ಕ್ಲಬ್ಬಿನ ವಾರ್ಷಿಕೋತ್ಸವವು ಕಳೆದ ತಾ 27 ರಲ್ಲಿ ಶ್ರೀ ಬಿ. ಗಂಗಾಧರ್ ದಾಸರ ಅಧ್ಯಕ್ಷತೆಯಲ್ಲಿ ಅತ್ತಾವರ ಶ್ರೀ ಅರಸು ಮುಂಡತ್ತಾಯ ದೇವಸ್ಥಾನದ ವಠಾರದಲ್ಲಿ ಜರಗಿತು.

ಹೆಂಡತಿಯ ಕೊಲೆ — ಸುಮಾರು 25 ವರ್ಷಪ್ರಾಯದ ಪಿಟ್ಟಮ್ಮ ಎಂಬವಳನ್ನು ಆವಳ ಕುಷ್ಠರೋಗಿ ಗಂಡ ಯೆಯ್ಯಾಡಿ ಪದವಿನ ವೊಂಕ್ರ ಪೂಜಾರಿಯು ತಾ 2 ರಲ್ಲಿ ರಾತ್ರಿ ಸಾಧಾರಣ ೧೧ ಗಂಟೆ ಸಮಯಕ್ಕೆ ಕಡ್ರಿಯ ಮೈದಾನದಲ್ಲಿ ಚೂರಿಯಿಂದ ಇರಿದನೆಂದೂ ಅದರ ಪರಿಣಾಮವಾಗಿ ಆವಳು ಕೂಡಲೆ ಮೃತಪಟ್ಟಳೆಂದೂ ವರದಿಯಾಗಿದೆ. ವೊಂಕ್ರಪೂಜಾರಿಯನ್ನು ಕೈದುಮಾಡಲಾಗಿದೆ ಸಬ್.

(೧ನೇ ಪುಟದಿಂದ)

ನ್ನು ಘೋಷಿಸಿರುವರು. ಆಸ್ತಿಪಾಸ್ತಿಯನ್ನು ಅನುಭವಿಸುವುದು ಮೂಲಭೂತ ಹಕ್ಕು ಎಂಬ ಧಾಟಿಯಲ್ಲಿ ಚಟರ್ಜಿಯವರು ವಾದಿಸಿದ್ದಾರೆ. ಕಮ್ಯುನಿಸ್ಟರು ಇನ್ನೊಬ್ಬರ ಶೋಷಣೆಗೆ ಉಪಯೋಗಿಸಲಾರದಷ್ಟು ಕಡಿಮೆ ಪ್ರಮಾಣದ ಆಸ್ತಿಪಾಸ್ತಿಯನ್ನು ಹೊಂದಿರುವವರಿಗೆ ಅದನ್ನು ಅನುಭೋಗಿಸುವ ಮೂಲಭೂತ ಅಧಿಕಾರವಿರಬೇಕೆಂದು. ಮೇಳ "ಆದಾಗ್ಯೂ ಪರಿಹಾರ ಧನದ ವಿಷಯದಲ್ಲಿ ನ್ಯಾಯ ಸ್ಥಾನವು ಆತಂಕಿಸಲಾರದೆಂಬುದನ್ನು ಸ್ವಾಗತಿಸುತ್ತೇವೆ" ಎಂದಿರುವರು.

ಮದ್ರಾಸಿನ ಶಾಸನ ಸಭೆಯಲ್ಲಿ

ಇದೇ ಫೆಬ್ರವರಿ ೭ನೇ ತಾರೀಕಿನಿಂದ ಸೇರಿದ್ದ ಮದ್ರಾಸಿನ ಶಾಸನ ಸಭಾಧಿವೇಶನವು ಎಪ್ರೀಲಿನ ೨ನೇ ತಾರೀಕಿಗೆ ಅನಿಶ್ಚಿತವಾಗಿ ಮುಂದುವರಿಸಲ್ಪಟ್ಟಿತು. ಮುಂಗಡ ಪತ್ರದ ಪರಿಶೀಲನೆ ಮತ್ತು ಬೇರೆ ಬೇರೆ ಇಲಾಖೆಗಳಿಗೆ ಹಣದ ಮಂಜೂರಾತಿಯ ಬಗ್ಗೆ ಸೇರಿದ್ದ ಈ ಅಧಿವೇಶನದಲ್ಲಿ ಬೇರೆ ಕೆಲವು ಮಸೂದೆಗಳನ್ನೂ ಚರ್ಚಿಸಲಾಯಿತು. ತೋಟಗಳ ಮೇಲೆ ತೆರಿಗೆ ಹಾಕುವ, ನೀರಾವರಿ ಅಭಿವೃದ್ಧಿ ಕೆಲಸಗಳ ಮೇಲೆ ಕರ ಹೇರುವ ಕೋರ್ಟು ಫೀ ದರವನ್ನು ಹೆಚ್ಚಿಸುವ, ಚಲಚ್ಚಿತ್ರ ಗೃಹಗಳಲ್ಲಿ ಸರಕಾರದ ಅನುಮತಿ ಪಡೆದ ಸಾಕ್ಷಿ ಹಾಗು ಸುದ್ದಿ ಚಿತ್ರಗಳನ್ನು ಪ್ರದರ್ಶಿಸುವಂತೆ ಒತ್ತಾಯಿಸುವ ಮಸೂದೆಗಳು ಉಲ್ಲೇಖನೀಯ. ಚಲಚ್ಚಿತ್ರದ ಪ್ರದರ್ಶನದ ಕುರಿತು ನಡೆದ ಚರ್ಚೆಯಲ್ಲಿ ಪ್ರತಿಪಕ್ಷದವರು ಸಾಕ್ಷಿ ಮತ್ತು ಸದ್ದಿ ಚಿತ್ರಗಳ ಉಪಯುಕ್ತತೆಯನ್ನೆ ಪ್ರಶ್ನಿಸಿದರು. ಶ್ರೀ ಸುಬ್ರಹ್ಮಣ್ಯಮರು ಕಾನೂನು ಮಂತ್ರಿಯಾಗಿ ಉತ್ತರಿಸುತ್ತಾ ಚಲಚ್ಚಿತ್ರವು ಜನತೆಗೆ ಶಿಕ್ಷಣ ಕೊಡುವ ಅತ್ಯುತ್ತಮ ಸಾಧನವಾಗಿದೆಯೆಂದೂ ಅಕ್ಷರ ಜ್ಞಾನವು ವಿರಳವಾಗಿರುವ ಜನರಿಗೆ ನಾಗರಿಕ ಶರಬೇತಿಯನ್ನೊದಗಿಸಲು ಅವರ ಸಾಮಾನ್ಯ ತಿಳುವಳಿಕೆಯನ್ನು ಹೆಚ್ಚಿಸಲು, ರಾಷ್ಟ್ರಕಲ್ಯಾಣ ಕಾರ್ಯದ ಮಹಾಕೃತಿಯನ್ನೊದಗಿಸಲು ಸುದ್ದಿ ಮತ್ತು ಸಾಕ್ಷಿ ಚಿತ್ರಗಳ ಪ್ರದರ್ಶನ ಪ್ರಯೋಜನಕಾರಿಯೆಂದೂ ತಿಳಿಸಿದರು.

ಇನ್ಸ್‌ಪೆಕ್ಟರ್ ಶ್ರೀ ಎಂ. ಚಂದ್ರ ಶೇಖರ ಭಂಡಾರಿಯವರು ತನಿಖೆ ನಡೆಸುತ್ತಿದ್ದಾರೆ.

ಮೆನೇಜ್‌ಮೆಂಟ್ ಎಸೋಸಿಯೇಶನ್— ತಾ 8 ರಲ್ಲಿ ಸಂಜೆ ವ್ಯಾಪಾರ ಮತ್ತು ಕೈಗಾರಿಕೆಗಳ ಸಂಸ್ಥೆಗಳ ಆಡಳಿತೆಯಲ್ಲಿ ರುವವರು ಮತ್ತು ಅದರ ಕುರಿತು ಆಸಕ್ತಿಯುಳ್ಳವರ ಸಭೆಯೊಂದು ಶ್ರೀ ಕೆ. ಪಿ. ಜನಾರ್ಧನ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿ, ಮಂಗಳೂರಲ್ಲಿ "ಮೆನೇಜ್‌ಮೆಂಟ್ ಎಸೋಸಿಯೇಶನ್" ಸಂಘವೊಂದನ್ನು ಸ್ಥಾಪಿಸುವ ನಿರ್ಧಾರವಾಯಿತು. ಆ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುವರೇ ಶ್ರೀಗಳಾದ ಕೆ. ಪಿ ಜನಾರ್ಧನ ಪ್ರಭು, ಡಾ। ಕೆ. ಬಾಲಪ್ಪ ಸೆಟ್ಟಿ, ಬಿ. ಬಿ. ಸೆಟ್ಟಿ, ಕೆ. ಎಸ್. ಅನಂತರಾಮನ್ ಮತ್ತು ಕೆ. ವಿಶ್ವನಾಥ ಕಾಮತ್(ಕನ್ವೀನರ್) ಇವರನ್ನೊಳಗೊಂಡ ಕಮಿಟಿಯು ರಚಿಸಲ್ಪಟ್ಟಿತು.

ಜವಾಹರಲಾಲ್ ಶೀಲ್ಡು— 1952 ರಲ್ಲಿ ನಡೆಸಲಾದ ವನಮಹೋತ್ಸವ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದ ದ. ಕ ಜಿಲ್ಲೆಯ ಉಳ್ಳಾಲಗ್ರಾಮಕ್ಕೆ ಅಖಿಲಭಾರತ ಜವಾಹರ್‌ಲಾಲ್ ಶೀಲ್ಡನ್ನು ಕೊಡಲಾಗಿದೆ. ಕಳೆದ ತಾ. 31ರಲ್ಲಿ ದೇವಪ್ರಶಾಂತನ ಫಾರೆಸ್ಟ್ ಕಾಲೇಜಿನಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಈ ಬಹುಮಾನವನ್ನು ಮದ್ರಾಸು ಸರಕಾರದ ಪ್ರತಿನಿಧಿಗಳು ಸ್ವೀಕರಿಸಿದರು. ವನಮಹೋತ್ಸವ ಸಮಯ ಅತ್ಯಧಿಕ ಸಸಿಗಳನ್ನು ನಟ್ಟು ಅತ್ಯಧಿಕ ಸಸಿಗಳನ್ನು ರಕ್ಷಿಸಿಕೊಂಡು ಬಂದ ಗ್ರಾಮವೇ ಉಳ್ಳಾಲವಾಗಿರುತ್ತದೆ.

ಗಡಿಗೆ ಮಡಿಕೆ ಕೈಗಾರಿಕೆಗಳ ಕೇಂದ್ರ— ಮದ್ರಾಸು ಸರಕಾರವು ದಕ್ಷಿಣ ಕನ್ನಡ ಜಿಲ್ಲೆಯ ಆಲಂಕಾರ್ ಎಂಬಲ್ಲಿ ಗಡಿಗೆ ಮಡಿಕೆ ಕೆಲಸದಲ್ಲಿ ತರಬೇತಿಕೊಡುವ ಬಗ್ಗೆ ಒಂದು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಒಂದು ಯೋಜನೆಯನ್ನು ಮಂಜೂರುಮಾಡಿರುವುದು. ಈ ಸಂಬಂಧವಾಗಿ ರಿಕರಿಂಗ್ ಬಾಬುಗಳ ಬಗ್ಗೆ ರೂಪಾಯಿ 4000 -ಕ್ಕೆ ಮಿಾರದ ಮತ್ತು ನಾನ್ ರಿಕರಿಂಗ್ ಬಾಬುಗಳ ಬಗ್ಗೆ ರೂಪಾಯಿ 3000/-ಕ್ಕೆ ಮಿಾರದ ಖರ್ಚುಕೂಡಾ ಮಂಜೂರುಮಾಡಿರುವುದು. ಈ ಯೋಜನೆಯ ಉದ್ದೇಶವು ಸ್ಥಳೀಯ ಕೆಲಸಗಾರರನ್ನು ಉತ್ತಮ ರೀತಿಯ ಗಡಿಗೆ ಮತ್ತು ಮಡಿಕೆ ಕೆಲಸದಲ್ಲಿ ತರಬೇತಿ ಮಾಡುವುದು ಮತ್ತು ಮಲೆನಾಡು ಪ್ರದೇಶದಲ್ಲಿ ಈ ಕೈಗಾರಿಕೆಯನ್ನು ಗುಡಿಕೈಗಾರಿಕೆಯನ್ನಾಗಿ ಮಾಡುವುದಾಗಿದೆ. ತರಬೇತಿ ಕೊಡಲಾಗುವ ನಾಲ್ವರಿಗೆ ತಿಂಗಳೊಂದರ ರೂಪಾಯಿ 25/- ರಂತೆ ಒಂದು ವರ್ಷದ ತನಕ ಸ್ಟೈಪೆಂಡ್ ಕೊಡಲಾಗುವುದು. ತರಬೇತು ಪಡೆಯುವವರಿಗೆ ಅನೇಕ ಕುಂಬಾರ ಚಕ್ರಗಳ ಕಲ್ಪನೆ ಮತ್ತು ಮಣ್ಣಿನ ಸ್ವಭಾವಗಳ ಪರಿಚಯಮಾಡಿಕೊಡಲಾಗುವುದು.

ಸತ್ಕಾರ :— ನ್ಯಾಯ ವ್ಯಾಸಂಗಕ್ಕಾಗಿ ಮದ್ರಾಸಿಗೆ ಹೋಗಲಿರುವ ಶ್ರೀ. ಕೆ. ಸದಾನಂದ ಹೆಗ್ಡೆ, ಎಂ. ಪಿ. ಅವರಿಗೆ ಶ್ರೀ. ಕೆ. ಸುಂದರರಾಮ ಶೆಟ್ಟರು ಕಳೆದವಾರದಲ್ಲಿ ಮೋಹಿನಿ ವಿಲಾಸದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದರು.

ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಶ್ರೀ ಕೊಡವಟಿಗಂಟಿ ಕುಟುಂಬ ರಾವ್, ಎಂ. ಎಸ್. ಸಿ. ಇವರ 'ಕುಲಂಲೇನಿ ಮನಿಷಿ' ತೆಲುಗು ಕಾದಂಬರಿಯ ಅನುಕರಣ.

ಬರೆದವರು: ಪಿ. ವೆಂಕೋಬಾಚಾರ್ಯ, ಬಿ. ಎ., ಬಿ. ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

ಕುಸುಮಳು ವೇಶ್ಯಾ ಪುತ್ರಿಯಾದರೂ ಆವಳು ವೇಶ್ಯೆಯಲ್ಲ!

ಆವಳ ಕಥೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ

ದಪ್ಪ ಪುಸ್ತಕ. ಬೆಲೆ 2-0-0

ಪ್ರತಿಗಳು ಅಂತರಂಗ ಕಾರ್ಯಾಲಯ, ಉಡುಪಿ, ಯಾ ನವಯುಗ ಪ್ರೆಸ್, ಉಡುಪಿ ಇಲ್ಲಿ ದೊರೆಯುತ್ತವೆ.

NAVAYUGA WEEKLY

ADVERTISEMENT RATES

Display Advertisements:— Rs. 2/-8 per column inch for contracts of 50" or more and Rs.3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No 22, UDIPI, S. K.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ. 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ವಿಶ್ವದ ಆರೋಗ್ಯ ಸಮಸ್ಯೆ

ಶುದ್ಧ ನೀರಿನ ಪೂರೈಕೆಯ ಉದ್ದೇಶ

1948ರ ಎಪ್ರಿಲ್ 7ರಂದು ವಿಶ್ವ ಆರೋಗ್ಯ ಸಂಸ್ಥೆಯು ಘಟನೆಯು ಅಧಿಕೃತವಾಗಿ ಜಾರಿಗೆ ಬಂದಿತು. ಈ ಐತಿಹಾಸಿಕ ದಿನಾಂಕದ ವಾರ್ಷಿಕೋತ್ಸವವನ್ನು ವಿಶ್ವ ಆರೋಗ್ಯ ದಿನಾಚರಣೆಯೆಂದು ಪ್ರತಿವರ್ಷವೂ ಸುಮಾರು 80 ಸದಸ್ಯ ರಾಷ್ಟ್ರಗಳು ಆಚರಿಸುತ್ತವೆ.

ರಾಷ್ಟ್ರೀಯ ಮತ್ತು ಸ್ಥಳೀಯ ಆರೋಗ್ಯ ಆಡಳಿತ ವರ್ಗದವರು ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಗಳಲ್ಲಿ ತೊಡಗಿರುವ ಇತರ ಸಂಸ್ಥೆಗಳೊಂದಿಗೆ ಸಹಕರಿಸಿ ಆರೋಗ್ಯದ ಅಗತ್ಯಗಳ ಬಗ್ಗೆ ಎಲ್ಲೆಡೆಗಳಲ್ಲಿಯೂ ಜನತೆಯಲ್ಲಿ ಆಸಕ್ತಿಯನ್ನುಂಟುಮಾಡುವರು.

ಹಲವಾರು ರೋಗಗಳನ್ನು ತಡೆಗಟ್ಟುವ ಪರಿಶುದ್ಧವಾದ ನೀರಿನ ಪೂರೈಕೆಯ ಪ್ರಾಮುಖ್ಯತೆಯ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆಯು ಗಮನಕೊಟ್ಟಿದೆ. ಈ ವರ್ಷದ ವಿಶ್ವ ಆರೋಗ್ಯ ದಿನಾಚರಣೆಯ ಮುಖ್ಯ ವಿಷಯವು "ಪರಿಶುದ್ಧವಾದ ನೀರು ಆರೋಗ್ಯ ಪಾಲನೆಗೆ ಅಗತ್ಯ" ಎಂಬುದೇ ಆಗಿದೆ. ಆಗ್ನೇಯ ಏಷ್ಯಾದ ರಾಷ್ಟ್ರಗಳಲ್ಲಿ ಈ ವಿಷಯವು ಅತ್ಯಂತ ಹೆಚ್ಚಿನ ಮಹತ್ವವುಳ್ಳದ್ದಾಗಿದೆ.

ವಿಶ್ವದ ಈ ಭಾಗದಲ್ಲಿ ವಾಂತಿಭೇದಿ, ವಿಷಮಶೀತಜ್ವರ, ಆಮಶಂಕೆ, ಅತಿಸಾರ ಮೊದಲಾದ ನೀರಿನಿಂದ ಬರತಕ್ಕ ರೋಗಗಳಿಂದ ಪ್ರತಿವರ್ಷವೂ ಲಕ್ಷಾಂತರ ಜನರು ಸಾಯುತ್ತಿದ್ದಾರೆ. ಇದರ ಫಲಿತಾಂಶವಾಗಿ, ಕೈಗಾರಿಕೆಗಳ ಮತ್ತು ವ್ಯವಸಾಯದ ಅಭಿವೃದ್ಧಿಗೆ ಬಲವಾದ ಆತಂಕ ಉಂಟಾಗಿರುತ್ತದೆ. ಯೋಗ್ಯ ಮುಂಜಾಗ್ರತೆಯ ಕ್ರಮಗಳಿಂದ ನಾವು ಈ ಭೀಕರ ರೋಗಗಳನ್ನು ಬಹುಮಟ್ಟಿಗೆ ತಡೆಯಬಹುದು. ಪಟ್ಟಣಗಳು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪರಿಶುದ್ಧವಾದ ನೀರನ್ನು ಸರಬರಾಯಿ ಮಾಡುತ್ತಿರುವ ರಾಷ್ಟ್ರಗಳಲ್ಲೆಲ್ಲಾ ಈ ರೋಗಗಳಲ್ಲಿ ಅನೇಕವು ಅದೃಶ್ಯವಾಗಿವೆ.

ಬಟ್ಟೆಗಳಿಲ್ಲದೆ ಮನುಷ್ಯ ಬದುಕಿರಬಹುದು, ನೆರಳಿಲ್ಲದೆ ಇರಬಹುದು, ಕೆಲವು ಕಾಲ ಆಹಾರವಿಲ್ಲದೆಯೂ ಇರಬಹುದು. ಆದರೆ ನೀರಿಲ್ಲದೆ ಜೀವಿಸಲಾರ. ಆದುದರಿಂದ ಮನುಷ್ಯನು ಮೊದಲಿನಿಂದಲೂ ನೀರು ದೊರೆಯುತ್ತಿದ್ದ ಸ್ಥಳಗಳಲ್ಲಿಯೇ ವಸತಿಯನ್ನು ನಿರ್ಮಿಸಿಕೊಳ್ಳುತ್ತಿದ್ದನು.

ಕಾಲವು ಮುಂದುವರಿದಂತೆ ಪರಿಶುದ್ಧವಾದ ನೀರಿನ ಅರಿಕೆಯೂ ಮಹತ್ತ್ವಗಳಿಸತೊಡಗಿತು. ಶತಮಾನಗಳುರುಳಿದಂತೆ ಪರಿಶುದ್ಧ ನೀರಿನ ವ್ಯಾಖ್ಯಾನವೂ ಬದಲಾಯಿಸುತ್ತ ಹೋಯಿತು.

ಕಳೆದ ಶತಮಾನದಲ್ಲಿ ಹಲವು ದೇಶಗಳಲ್ಲಿ ಪರಿಶುದ್ಧ ನೀರಿನ ಅನ್ವೇಷಣೆ ನಡೆಯಿತು. ಅದರಲ್ಲಿ ಅವು ಫಲವನ್ನು ಪಡೆದವು. 19ನೆಯ ಶತಮಾನದ ಆದಿಯಲ್ಲಿ ಇಂಗ್ಲೆಂಡಿನಲ್ಲಿ ಪರಿಶುದ್ಧ ನೀರು ತುಂಬ ಜನಪ್ರಿಯವಾಗಿದ್ದಿತು. ನೀರಿನ ಗಾಡಿಗಳಲ್ಲಿ ಪರಿಶುದ್ಧ ನೀರನ್ನು ಆಗ ಮಾರಾಟ ಮಾಡುತ್ತಿದ್ದರು.

"ತಾಮ್ರದ ಪಾತ್ರೆಯಲ್ಲಿ ನೀರನ್ನು ತುಂಬಿ ಅದನ್ನು ಬಿಸಿಲಿನಲ್ಲಿಟ್ಟದ್ದ ನಂತರ ಇದ್ದಲಿನ ಮೂಲಕ ಸೋಸುವುದು ಒಳ್ಳೆಯದು"— ಈ ಮಾತುಗಳನ್ನು 1954ರ ಎಂಜಿನಿಯರುಗಳ ವರದಿಯಲ್ಲಿಲ್ಲ, ಕ್ರಿಸ್ತಪೂರ್ವ ೪೦೦೦ ವರ್ಷಗಳ ಹಿಂದಿನದೆಂದು ಹೇಳಲಾದ ಸಂಸ್ಕೃತ ವೈದ್ಯ ಗ್ರಂಥಗಳ ಸಂಗ್ರಹದಲ್ಲಿ ಕಂಡುಬರುತ್ತವೆ. ಅದೇ ಕಾಲದ್ದೆಂದು ಹೇಳಬಹುದಾದ ಇನ್ನೊಂದು ಸಂಸ್ಕೃತ ಗ್ರಂಥದಲ್ಲಿ ನೀರನ್ನು ಶುದ್ಧೀಕರಿಸುವ ವಿಧಾನ ಕುರಿತು ಮತ್ತೊಂದು ವಿವರವಿದೆ: ಪರಿಶುದ್ಧವಲ್ಲದ ನೀರನ್ನು ಬೆಂಕಿಯಲ್ಲಿ ಅಥವಾ ಬಿಸಿಲಿನಲ್ಲಿ ಕಾಯಿಸಿ, ಅಥವಾ ಕಾದ ಕಬ್ಬಿಣವನ್ನು ಅದರಲ್ಲಿ ಅದ್ದಿ, ಅಥವಾ ಮರಳು ಮತ್ತು ಜಲ್ಲಿಗಳ ಮೂಲಕ ಶೋಧಿಸಿ ಆರಿಸಬೇಕೆಂದು ಅದು ತಿಳಿಸುತ್ತದೆ.

ಹಿಂದಿನಿಂದಲೂ ನೀರಿನ ಗುಣಾಂಶವನ್ನು ಹೆಚ್ಚಿಸುವ ಬಗೆಗೆ ಪ್ರಯತ್ನಗಳಾಗುತ್ತಿದ್ದುದು ಈಜಿಪ್ಟ್, ಗ್ರೀಕ್, ರೋಮ್, ಅರೇಬಿಯಾ, ಮತ್ತು ಪರ್ಷಿಯಾಗಳ ಸಾಹಿತ್ಯ ಇತಿಹಾಸಗಳಲ್ಲಿ ಕಂಡುಬರುತ್ತದೆ. ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡಿನಲ್ಲಿ 1791ರಲ್ಲಿ ಜೇಮ್ಸ್ ಪೀಕಾಕ್ ವಿಶೇಷ ರೀತಿಯ ಶೋಧಕ ಯಂತ್ರವನ್ನು ತಯಾರಿಸಿದರು. 1829ರಲ್ಲಿ ಜೇಮ್ಸ್ ಸಿಂಪ್ಸನ್ ಮರಳಿನ ಶೋಧಕ ಯಂತ್ರವನ್ನು ಕಂಡುಹಿಡಿದರು. ಪರ್ಸಿವಲ್ ಫ್ರಾಂಕ್‌ಲ್ಯಾಂಡ್‌ರವರೇ ಮೊದಲಾಗಿ ನೀರನ್ನು ಶೋಧಿಸುವಲ್ಲಿ ಬ್ಯಾಕ್ಟೀರಿಯಾವನ್ನು ತೆಗೆಯುವುದರ ಮಹತ್ವವನ್ನು ವಿವರಿಸಿದರು. ಸರ್ ಅಲೆಕ್ಸಾಂಡರ್ ಹೌಸ್ಟನ್ ನೀರಿನ ಶುದ್ಧೀಕರಣದ ಬಗೆಗೆ ಅನೇಕ ಪರಿಶೋಧನೆಗಳನ್ನು ನಡೆಸಿದರು.

ಅಮೆರಿಕಾದಲ್ಲಿ 1880ರಿಂದ 1900ರವರೆಗೆ ನೀರಿನ ಶುದ್ಧೀಕರಣದ ಬಗೆಗೆ ಪ್ರಯೋಗಗಳು ನಡೆದವು. ೨೦ನೆಯ ಶತಮಾನದ ಆರಂಭದಲ್ಲಿ ಕ್ಲೋರಿನ್ ಸಹಾಯದಿಂದ ನೀರನ್ನು ಶುದ್ಧೀಕರಿಸುವುದನ್ನೂ ಕಂಡುಹಿಡಿದರು. ಈ ಕಾರ್ಯದಲ್ಲಿ ದುಡಿದವರೆಲ್ಲರಲ್ಲಿ ಸಿ. ಆರ್. ಡಾರ್ನಾಲ್ (1910)ರವರು ನೀರಿಗೆ ಕ್ಲೋರಿನ್ ಹಾಯಿಸಿ ಶುದ್ಧೀಕರಿಸುವುದನ್ನು ಯಶಸ್ವಿಗೊಳಿಸಿದರು. ಪಶ್ಚಿಮರಾಷ್ಟ್ರಗಳು ನೀರಿನ ಗುಣಾಂಶವು ಉತ್ತಮ ಪಟ್ಟಿರುವುದಕ್ಕೆ ಹೆಚ್ಚಿನ ಗಮನ ಕೊಟ್ಟಿರುತ್ತವೆ.

ಏಷ್ಯಾದ ಅನೇಕ ರಾಷ್ಟ್ರಗಳಲ್ಲಿನ ಸರ್ಕಾರಗಳು ಈ ಸಮಸ್ಯೆಯ ಬಗ್ಗೆ ಎಚ್ಚರಿಕೆಯಿಂದಿದ್ದು ಇದರ ನಿವಾರಣೆಗಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳತೊಡಗಿರುತ್ತವೆ. ಆದರೆ ಈ ಕ್ರಮಗಳಿಗೆ ಜನತೆಯ ಬೆಂಬಲವಿಲ್ಲದಿದ್ದರೆ, ಅವುಗಳ ಮಹತ್ವವನ್ನು ಜನತೆಯು ಅರಿಯದಿದ್ದರೆ, ಯಾವರೀತಿಯಲ್ಲಿಯೂ ಸರ್ಕಾರದ ಪ್ರಯತ್ನಗಳು ಜಯಪ್ರದವಾಗುವಂತಿಲ್ಲ.

ಆರೋಗ್ಯ ಸಮಸ್ಯೆಗಳೊಂದಿಗೆ ನೇರವಾಗಿ ಸಂಬಂಧಿಸಿರದಿದ್ದರೂ ಸಾರ್ವಜನಿಕ ಸೇವಾ ಮನೋಭಾವವಿರುವ ವ್ಯಕ್ತಿಗಳೂ ಸಂಸ್ಥೆಗಳೂ ಸ್ಥಳೀಯ, ಪ್ರಾಂತೀಯ ಮತ್ತು ರಾಷ್ಟ್ರೀಯ ಆರೋಗ್ಯ ಆಡಳಿತ ವರ್ಗದೊಂದಿಗೆ ಸಹಕರಿಸಿ 1955ರ ವಿಶ್ವ ಆರೋಗ್ಯ ದಿನಾಚರಣೆಯನ್ನು ಆಚರಿಸಲು ಸೂಕ್ತ ವ್ಯವಸ್ಥೆ ಮಾಡುವುದು ಮತ್ತು ಸಾರ್ವಜನಿಕರ ತಿಳಿವಳಿಕೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸುವುದು ತುಂಬ ಅಪೇಕ್ಷಣೀಯ.

(೩ನೇ ಪುಟದಿಂದ)

ಬೇತಿಯನ್ನು ಸಂಪೂರ್ಣವಾಗಿ ಮುಗಿಸಿದೆ ಎನ್ನುವ ಹಾಗಿಲ್ಲ. ದಿನ ದಿನಕ್ಕೂ ಹೊಸ ಹೊಸ ಯುದ್ಧ ತಂತ್ರ ಮತ್ತು ಕೌಶಲ್ಯಗಳು ಕಂಡು ಬಂದು ಹಳೆಯವು ಹಿಂದೆ ಬೀಳುತ್ತವೆ. ಈ ತಾಂತ್ರಿಕ ಪ್ರಗತಿಯನ್ನು ವಿಮಾನ ದಳವು ಎಡಬಿಡದೆ ಅನುಸರಿಸಬೇಕು.

ವಿಮಾನ ದಳದ ಎಲ್ಲಾ ವಿಭಾಗಗಳಿಗೂ ತರಬೇತಿಯ ಜೊತೆಗೆ ವಿಶಿಷ್ಟ ಕೆಲಸಗಳೂ ಇರುತ್ತವೆ. ಸ್ವಾತಂತ್ರ್ಯಾನಂತರದ ಯುಗದಲ್ಲಿ ಭಾರತೀಯ ವಿಮಾನ ದಳವು, ನೈಸರ್ಗಿಕ ವಿಪತ್ತಿಗೊಳಗಾದವರ ಸಹಾಯಕ್ಕಾಗಿ ಮುಂದೆ ಬಂದಿತು. ಅಸ್ಸಾಂ ಮತ್ತು ಬಿಹಾರಿನಲ್ಲಿ ಪ್ರವಾಹ ಪೀಡಿತರಿಗೆ ಆಹಾರಾದಿಗಳನ್ನು ಕೊಂಡೊಯ್ದು ಒದಗಿಸಿತು. 1953ರಲ್ಲಿ ಮದರಾಸ್ ತೀರ ಪ್ರದೇಶದಲ್ಲಿ ಬೆಸ್ತರು ಸಮುದ್ರದಲ್ಲಿ ಕೊಚ್ಚಿ ಹೋದಾಗ ಭಾರತ ವಿಮಾನ ದಳವು ಅವರನ್ನು ಹುಡುಕಿ ತರುವ ಕೆಲಸ ವಹಿಸಿಕೊಂಡಿತು. ಭಾರತದ ಭೂ ಪಟರಚನೆ, ನದಿಕಣಿವೆ ಯೋಜನೆ ಇತ್ಯಾದಿಗಳಿಗೆ ಅಗತ್ಯವಾದ ಪೂರ್ವ ಭಾವಿ ಸಮೀಕ್ಷೆ ಇತ್ಯಾದಿ ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿಯೂ ಭಾರತೀಯ ವಿಮಾನ ದಳವು ಪ್ರಧಾನ ಪಾತ್ರ ವಹಿಸಿರುತ್ತದೆ

ಸೇಲ್ ಸ್ವಂತ ಜವಾಬ್ದಾರಿಯ ನೌಕರಿ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOBMAY 3-



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:– ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ.
ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜನಾದರಣೀಯವಾದ ಪುಸ್ತಕಗಳು
ಕೆಲವೇ ಪ್ರತಿಗಳಿವೆ! ಈಗಲೇ ತರಿಸಿಕೊಳ್ಳಿ!
—ಹಿಂದಿನಿಂದ ನಿರಾಶರಾಗಬೇಡಿ!—
ವಾಚನಾಲಯದವರಿಗೆ ಯೋಗ್ಯ ಕಮೀಶನ್!
ವ್ಹಿ. ಪಿ. ಇಲ್ಲ! ಮುಂಗಡ ಹಣ ಕಳಿಸಬೇಕು!!
೨ ಕಾದಂಬರಿ! ೨ ನಾಟಕ! ೩ ಕಥೆಗಳು! ೧ ಪ್ರಬಂಧ!

೧ ತೆರೆದ ಕಣ್ಣು (ಕಾ.)	೩-೦-೦	೫ ಆರು ಕಥೆಗಳು	೧-೪-೦
೨ ಪ್ರಾಣಾಹುತಿ (ಕಾ.)	೩-೮-೦	೬ ಪ್ರತಿಫಲ ಇ. ಕಥೆಗಳು	೧-೪-೦
೩ ಸಂಗೊಳ್ಳಿರಾಯಣ್ಣ (ನಾ.)	೧-೮-೦	೭ ನೀರಾಗ್ರಣೆ ವಿಜ್ಞಾನ	೦-೫-೦
೪ ವಿಜಯಸಾಮ್ರಾಜ್ಯ (ನಾ.)	೧-೨-೦	೮ ಕನ್ನಡ ಸಾಹಿತ್ಯವಾಹಿನಿ	೨-೮-೦

ಮೇಲಿನ ೮ ಪುಸ್ತಕಗಳನ್ನು ಒಮ್ಮೆಲೆ ೧೪-೧೨-೦ ರೂ. M. O. ಕಳಿಸಿದವರಿಗೆ ಅಂಚೆ ವೆಚ್ಚ ನಾವೇ ವಹಿಸಿಕೊಂಡು ಪುಕ್ಕಟೆಯಾಗಿ ಕಳಿಸುವೆವು.
—ಯಾವ ಪುಸ್ತಕಗಳು ಬೇಕಾದರೂ ಬರೆಯಿರಿ —
ಕಥಾಕುಂಜ ಪ್ರಕಟನಾಲಯ ಗಣಪತಿ ಬೀದಿ- ಬೆಳಗಾಂವಿ

(೨ನೇ ಪುಟದಿಂದ)

ರದ ಉಪಯೋಗದ ಬಗ್ಗೆ ಭಾರತದ ೪೦ ವಿವಿಧ ಕೇಂದ್ರಗಳಲ್ಲಿ ತನಿಖೆ ನಡೆಸಿದೆ, ಭಾರತದ ಭೂ ಸಂಬಂಧದ ಭೂಪಟವೊಂದನ್ನು ಸಿದ್ಧಪಡಿಸಲಾಗಿದೆ. ಈ ಸಂಸ್ಥೆಯಲ್ಲಿ ಸ್ನಾತಕೋತ್ತರ ತರಬೇತಿ ವ್ಯವಸ್ಥೆಯನ್ನು ಮಾಡಲಾಗಿದೆ. ಈ ವ್ಯವಸ್ಥೆಯು ಸಂಸ್ಥೆಯ ಅತ್ಯಂತ ಮುಖ್ಯವಾದ ಚಟುವಟಿಕೆಗಳಲ್ಲಿ ಒಂದಾಗಿದೆ. ಸಂಶೋಧನೆಯಲ್ಲಿ ಸತ್ ಸಂಪ್ರದಾಯಗಳನ್ನು ಬೆಳೆಸುವುದಕ್ಕಾಗಿ ಮತ್ತು ಭವಿಷ್ಯದಲ್ಲಿ ಅವನ್ನು ಮುಂದುವರಿಸಿಕೊಂಡು ಹೋಗುವುದಕ್ಕಾಗಿ ನಾಳಿನ ವಿಜ್ಞಾನಿಗೆ ಗಳಿಸಿದ ಜ್ಞಾನವನ್ನು ವಿನಿಯೋಗಿಸುವುದು ಅವಶ್ಯಕ. ಈ ಸಂಸ್ಥೆಗೆ ಭಾರತದ ಎಲ್ಲಾ ಕಡೆಗಳಿಂದಲೂ ವಿದ್ಯಾರ್ಥಿಗಳು ಬರುವರಲ್ಲದೆ ಭಾರತದ ಸುತ್ತಮುತ್ತಲ ರಾಷ್ಟ್ರಗಳಿಂದಲೂ ಬರುವರು. ಈ ಸಂಸ್ಥೆಯಲ್ಲಿ ಈಗ ೧೦೦ ಮಂದಿ ವಿದ್ಯಾರ್ಥಿಗಳಿದ್ದು ಮುಂದೆ ಈ ಸಂಖ್ಯೆಯು ಸದ್ಯದಲ್ಲಿಯೇ ದ್ವಿಗುಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಸ್ನಾತಕೋತ್ತರ ಶಿಕ್ಷಣದಲ್ಲಿ ಈ ಸಂಸ್ಥೆಯಲ್ಲಿ ಎರಡು ವರ್ಷದ ೨೦ ವಿವಿಧ ವ್ಯಾಸಂಗಕ್ರಮಗಳಿವೆ. ಈ ಸಂಸ್ಥೆಯ ಶ್ರಮದ ಫಲಿತಾಂಶದಿಂದ ಭಾರತೀಯ ಕೃಷಿಕನು ಪ್ರಯೋಜನ ಪಡೆದಿದ್ದಾನೆ. ದೆಹಲಿ ರಾಜ್ಯದ ೧೯ ಗ್ರಾಮಗಳ ಒಂದು ಕ್ಷೇತ್ರದಲ್ಲಿ ಭೂಮಿಯ ಪರಿವರ್ತನೆಯ ಬಗ್ಗೆ ಸಂಸ್ಥೆಯು ಕೆಲಸ ಮಾಡುತ್ತಿದೆ. ಭೂಸೇನಾ ಕೇಂದ್ರಗಳಿಂದ ನೆರವನ್ನು ಪಡೆಯುತ್ತಿದೆ.

ಭಾರತದಲ್ಲಿ ಬೆಳೆಗಳಿಂದ ದೊರೆಯುವ ಉತ್ಪನ್ನದ ಪ್ರಮಾಣವು ಇತರ ದೇಶಗಳಲ್ಲಿನ ಪ್ರಮಾಣಕ್ಕಿಂತ ಕಡಿಮೆ. ಬೆಳೆಯ ಉತ್ಪನ್ನ ಪ್ರಮಾಣ ಬುಗುಟು ಹಾಗೂ ಇತರ ಸಸ್ಯರೋಗಗಳಿಂದ ಇನ್ನಷ್ಟು ಕಡಿಮೆಯಾಗುವುದು. ಈ ಸಸ್ಯ ರೋಗಗಳನ್ನು ನಿರೋಧಿಸಿದರೆ ಉತ್ಪನ್ನ ನೂರಕ್ಕೆ ೧೦ರಷ್ಟು ಹೆಚ್ಚ ಬಹುದು. ಬುಗುಟು ನಮ್ಮ ದೇಶದ ಬೆಳೆಗಳಲ್ಲಿ ಬಹುಭಾಗವನ್ನು ನಾಶಮಾಡುತ್ತದೆ. ಇವೆಲ್ಲ ಸಸ್ಯ ರೋಗಗಳು ವಿಶ್ವದ ಎಲ್ಲಾ ಕಡೆಗಳಲ್ಲಿಯೂ ಇರುವುದರಿಂದ ಈ ಹಾದಿಯಲ್ಲಿ ಪ್ರಯೋಗ–ಪ್ರಯತ್ನ ನಡೆಸುವುದು ಅಗತ್ಯವೆನಿಸಿದೆ.

ಮಣ್ಣಿನಲ್ಲಿ ರೋಗಕಾರಕ ಕ್ರಿಮಿಗಳಿರುವುದೇ ಅಪಾಯಕರವಾದುದು. ಸುಲಭವಾಗಿ ಈಡಾಗಬಲ್ಲ ಸಸ್ಯಗಳೂ ಅನುಕೂಲ ಸನ್ನಿವೇಶವೂ ದೊರೆತಲ್ಲಿ ಈ ಸಸ್ಯ ರೋಗಗಳು ಹೊರಹೊಮ್ಮುತ್ತವೆ. ಆದರೆ ಇಂತಹ ಪ್ರಸಂಗಗಳಲ್ಲಿ ಮಣ್ಣಿನ ಅಂಶ ಹೊರತು ಮಿಕ್ಕ ಯಾವುದಕ್ಕೂ ಪ್ರಾಮುಖ್ಯತೆ ಬರುವುದಿಲ್ಲ. ಮಣ್ಣಿನ ಅಂಗಗಳಲ್ಲಿ ಕ್ರಿಮಿಗಳ ಪರಾವಲಂಬಿ ಚಟುವಟಿಕೆ, ಉಷ್ಣಾಂಶ, ಮಣ್ಣಿನ ತೇವ, ಕ್ರಿಮಿಗಳಿಗೆ ಸಿಗುವ ಆಹಾರದ ಅಂಶಗಳು ಇವು ಮುಖ್ಯವಾದುದು. ಇದರ ಜೊತೆಗೆ ಮಣ್ಣಿನ 'ಮೈಕ್ರೊಫ್ಲೋರಾ'ದ ಪ್ರಭಾವವೂ ರೋಗಾಭಿವೃದ್ಧಿಯ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡುವುದೆಂಬ ಅಂಶ ಕಳೆದ ನಾಲ್ಕುದಶಕಗಳಿಂದ ಮಹತ್ವಗಳಿಸಿದೆ. ಇನ್ನು ಮುಂದಿನ ಸಂಶೋಧನೆಯು ಪ್ರಯೋಗಗಳಲ್ಲಿ ಸಂಯೋಜನೆ ಹಾಗೂ ವಿಭಜನೆ ವಿಧಾನಗಳೆರಡನ್ನೂ ಅನುಸರಿಸಬೇಕು. ಪರತಂತ್ರ ಕ್ರಿಮಿಗಳಿಗೂ 'ಮೈಕೊ ಫ್ಲೋರಾ'ಗಳಿಗೂ ಇರುವ ಆಂತರಿಕ ಸಂಬಂಧದ ಪೂರ್ಣ ಚಿತ್ರವನ್ನು ತಿಳಿದಿರಬೇಕು ಎಂಬುದನ್ನು ವ್ಯಕ್ತಪಡಿಸುತ್ತವೆ.

ಪೈರಿನ ಬೇರನ್ನು ನಾಶಮಾಡುವ ಪರಾವಲಂಬಿ ಕೀಟಗಳನ್ನು ಹತೋಟಿಗೆ ತರಲು ಅವುಗಳ ಬಗೆಗೆ ಪೂರ್ಣ ವಿವರಗಳನ್ನು ತಿಳಿಯಬೇಕು. ಇದಕ್ಕೆ ತೀವ್ರವಾದ ಸಂಶೋಧನೆ ನಡೆಸಬೇಕಾಗುವುದು. ಆಯಾಯ ಮಣ್ಣಿನಲ್ಲಿ ಬೆಳೆಯುವ ಸಸ್ಯಗಳಿಗನುಗುಣವಾಗಿ ಪರತಂತ್ರ ಜೀವಿಗಳಿರುತ್ತವೆ. ಬಹುಕಾಲ, ಆಶ್ರಯಕೊಡುವ ಸಸ್ಯದ ಅಭಾವವಿದ್ದರೆ ಅನ್ಯಾವಲಂಬಿ ಕೀಟಗಳು ಕ್ಷೀಣಿಸುತ್ತವೆ. ಈ ರೋಗಗಳ ಹತೋಟಿಗೆ ಮಣ್ಣಿನ ಗುಣಾವಗುಣಗಳ ಕೂಲಂಕಷ ಪರಿಶೀಲನೆಯಾಗಬೇಕು. ಇತ್ತೀಚೆಗೆ ಈ ಹಾದಿಯಲ್ಲಿ ಕೆಲವು ನಿರೋಧ ಕ್ರಮಗಳನ್ನು ಕಂಡು ಹಿಡಿಯಲಾಗಿದೆ. ಬಡತನ ಪ್ರಧಾನವಾಗಿರುವ ನಮ್ಮ ದೇಶದಲ್ಲಿ ರೋಗ ನಿರೋಧ ಬೀಜಗಳ ಹಂಚಿಕೆಗಿಂತ ಅತ್ಯುತ್ತಮವಾದ ನಿರೋಧ ಕಾರ್ಯ ಇನ್ನೊಂದಿಲ್ಲ.

ಸಸ್ಯ ರೋಗಕಾರಕ ಕ್ರಿಮಿಗಳಲ್ಲಿ ಹಲವು ಜಾತಿಗಳಿವೆ. ಈ ಕ್ರಿಮಿಗಳು ತಾವು ಅವಲಂಬಿಸುವ ಆಶ್ರಯ ಸಸ್ಯದ ಮೇಲೆ ಎಷ್ಟರಮಟ್ಟಿನ ಪರಿಣಾಮವನ್ನುಂಟುಮಾಡುತ್ತವೆಯೋ ಅದರ ಮೇಲೆ ಈ ಪರತಂತ್ರ ಕೀಟದ ಜಾತಿಯನ್ನು ನಿರ್ಧರಿಸಬಹುದು. ವ್ಯವಸಾಯ ಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದಲ್ಲಿ (ಉದಾಹರಣೆಗೆ ಬೆಳೆಯ ಬದಲಾವಣೆ, ಮಿಶ್ರ ಬೆಳೆ ಇತ್ಯಾದಿ) ನಿರೋಧಕಕಾರ್ಯ ಪರಿಣಾಮಕಾರಿಯಾದುದು ತಿಳಿದು ಬಂದಿದೆ. ಮಣ್ಣಿನಲ್ಲಿನ ಅಂಶಗಳನ್ನು ನೋಡಿಕೊಂಡು ಅವುಗಳನ್ನು ಅನುಗೊಳಿಸುವುದರಿಂದ ಈ ರೋಗಗಳ ನಿರೋಧಕಾರ್ಯದಲ್ಲಿ ಸಮರ್ಪಕವಾದ ಫಲಿತಾಂಶಗಳು ಕಂಡು ಬಂದಿವೆ.

ಜೀವಶಾಸ್ತ್ರ ವಿಧಾನಗಳಿಂದಲೂ ಸಸ್ಯಕೀಟಗಳನ್ನು ನಾಶಗೊಳಿಸಬಹುದು. ಆದರೆ ಈ ಹಾದಿಯಲ್ಲಿಯೂ ವಿಸ್ತೃತವಾದ ಪ್ರಯೋಗ ಸಂಶೋಧನೆಗಳು ನಡೆಯಬೇಕಾಗಿವೆ. ಗಾಳಿಯಲ್ಲಿನ ಬ್ಯಾಕ್ಟೀರಿಯಾಗಳು ಬೆಳೆಗಳನ್ನು ನಾಶಮಾಡುವುವು. ಅವುಗಳನ್ನು ಹತೋಟಿಗೆ ತರಲು 'ಆಂಟಿಬರಿಗೂರಿಂಗ್ಸ್'ಗಳನ್ನು ಉಪಯೋಗಿಸಬೇಕು.

ಬೆಳೆಯನ್ನು ನಾಶಮಾಡುವ ಕೆಲವು ರೋಗಾಣುಗಳನ್ನು ನಿರೋಧಿಸುವುದು ತುಂಬಾ ಕಷ್ಟ. ಅವುಗಳಿಗಾಗಿ ವಿಶೇಷ ತಂತ್ರ ಮತ್ತು ಪ್ರಾಯೋಗಿಕ ವಿಧಾನಗಳನ್ನು ಅಭಿವೃದ್ಧಿಪಡಿಸಬೇಕಾಗುವುದು. ಈ ವರೆಗೆ ನಡೆಸಿದ ಸಂಶೋಧನೆಗಳು ಹೊಸ ಸಮಸ್ಯೆಗಳನ್ನು ತಂದಿವೆ. ಈ ಕ್ಷೇತ್ರದಲ್ಲಿ ವಿಶೇಷ ರೀತಿಯ ಸಂಶೋಧನೆಯಾಗಬೇಕಾದುದರ ಅಗತ್ಯವನ್ನು ಅವು ತೋರಿಸಿವೆ. ಪೂಸಾದ ಕೇಂದ್ರ ಈ ದಿಸೆಯಲ್ಲಿ ಯೋಗ್ಯ ಹೆಜ್ಜೆಯನ್ನು ಮುಂದಿಡುತ್ತಿರುವುದು ಸ್ಮರಣೀಯ.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಮಾಲೆ	೪	೦
ಜ್ಞಾನಯೋಗ	೪	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೪	೦
ರಾಜಯೋಗ	೩	೧೦
ಶ್ರೀ ಶಾರದಾದೇವಿ ಸಂಭಾಷಣೆ	೩	೮
ಗೀತಾ ಪತ್ರಗಳು	೩	೮
ಮಿಂಚುನೋಟಕೆ ಹಿಂದೂಧರ್ಮ	೩	೮
ಶ್ರೀ ಶಾರದಾದೇವಿ	೩	೦
ಸಾಧಕನ ಕೈದೀವಿಗೆ	೩	೦
ಪರಮಾರ್ಥ ಪ್ರಸಂಗ	೩	೦
ಹೈಮಾಚಲ ಸಾನ್ನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ)	೩	೨
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ಜ್ಞಾನ ಮಾರ್ಗ	೦	೮
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ	೦	೫
ತ್ರಿವೇಣಿಯಿಂದ)	೬	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಧ್ಯಾನ	೦	೪

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ $4\frac{1}{4}$%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವನು.

ಬೆಲೆ-೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟು ಖರ್ಚು ರೂ. ೦–೧೪–೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

OS 316/1954

ಕೇಪ್ಪನ್ A ತಿಮ್ಮಪ್ಪಯ್ಯನವರು—ವಾದಿಯು
ಸಾಂಕು ಪೂಜಾರಿಯವರು——— ಪ್ರತಿವಾದಿಯು

ಈ ವ್ಯಾಜ್ಯದ 4ನೇ ಪ್ರತಿವಾದಿ ಚೆನ್ನಮ್ಮ ಗುಡ್ಡೆಮನೆ ಅಂಗರ ಪೂಜಾರಿ ಸೊಸೆ– ಭಾಗದ, ಯಜಮಾನ್ತಿ—

5ನೇ ಪ್ರತಿವಾದಿ ಮಂಜುನಾಥ ಪೂಜಾರಿ–

6ನೇ ಪ್ರತಿವಾದಿ ಚೆನ್ನಮ್ಮನ ಮಗ— ಪುತ್ತೂರು ತಾಲ್ಲೂಕು ಸರ್ವೆಗ್ರಾಮದ ಸೊರಕೆಯಲ್ಲಿರುವವರು. ಇವರಿಗೆ ಈ ಮೂಲಕ ಕೋರ್ಟು ಹುಕುಂಪ್ರಕಾರ ತಿಳಿಯಪಡಿಸುವದೇನೆಂದರೆ:–

ಕಳೆದ 1342ನೇ ಇಸ್ವಿ ಚೈತ್ರ ಶುದ್ಧ 8ರಲ್ಲಿ ವೆಂಕಪ್ಪ ಆಚಾರ್ಯ ಯೆಂಬವರಿಂದ ಬಲ್ಲರಾಮ ಮೂಲಗೇಣಿಗೆ ಪಡೆದ ಆಸ್ತಿಯಲ್ಲಿ ನಿಮ್ಮ ಭಾಗಕ್ಕೆ ವಿಂಗಡಿಸಿದ ಕೈಪೆತ್ತಿನ A ಸೆಡ್ಯೂಲಿನ ಆಸ್ತಿ ಬಾಬ್ತು ವಾದಿಗೆ ಬರತಕ್ಕ ಗೇಣಿ ಬಾಕಿ, ಆಸ್ತಿ ಸ್ವಾಧೀನತೆ ಮಿಗ್ತೆ ವಗೈರೆ ನಿವೃತ್ತಿ ಗೇಣಿ ಕುರಿತು ರೂ 1213—4—0 ಕ್ಕೆ ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ದಾವೆಯು ತಾ 9–4–1955ಕ್ಕೆ ತನ್ನಿಗೆ ಇಟ್ಟಿರುತ್ತದೆ– ಆ ಕುರಿತು ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ, ಸದ್ರಿ ಪ್ಯಾದೆ ದಿನ ಪೂರ್ವಾಹ್ನ ಗಂಟೆ 11 ಕ್ಕೆ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು— ತಪ್ಪಿದ್ರೆ ನಿಮ್ಮನ್ನು ಶಿವ್ಯಾಪಾದಿ ಯುಕ್ತ ಕಂಡರೀತಿಯಲ್ಲಿ ತೀರ್ಮಾನಿಸಲಾಗುವುದು—

M. Sadashiva Rao
Pleader For Plfs.
ಪುತ್ತೂರು ತಾ. 30—3—55

ಉಪಾಧ್ಯಾಯರು ಬೇಕಾಗಿದ್ದಾರೆ.

ಉಡುಪಿ ತಾಲೂಕು ಪೆರ್ಡೂರು ಮುಜತೋಬಾರ್ ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಎಲಿಮೆಂಟರಿ ಶಾಲೆಗೆ ಹಯರ್ ಎಲಿಮೆಂಟರಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ಅನುಭವವುಳ್ಳ, ಸೆಕೆಂಡ್ರಿ ಗ್ರೇಡ್ ತರಬೇತಾದ ಉಪಾಧ್ಯಾಯರು ಬೇಕಾಗಿದ್ದಾರೆ. ಇಷ್ಟವುಳ್ಳವರು ತಾ. 31–5–1955 ರೊಳಗೆ ಈ ಕೆಳಗೆ ಸಹಿ ಮಾಡಿದ ಶಾಲಾ ಮೆನೇಜರವರಿಗೆ ಅರ್ಜಿಯನ್ನು ಕಳುಹಿಸಬಹುದು.

ಕೆ ಬಿ ಶೆಟ್ಟಿ,
ಮೆನೇಜರ್.

ಶ್ರೀ ಅನಂತಪದ್ಮನಾಭ ದೇವಸ್ಥಾನ ಎ. ಶಾಲೆ.
ಪೆರ್ಡೂರು, ತಾ. 29–3–1955.

ಮಾರ್ಗ ಹಾಗು ನೀರಾವರಿಯ ಸೌಕರ್ಯ

ಜಿಲ್ಲೆಯ ಪ್ರತಿನಿಧಿಗಳ ಒತ್ತಾಯ

ಮದ್ರಾಸು ಶಾಸನ ಸಭೆಯಲ್ಲಿ ಪೂರಕ ಬೇಡಿಕೆಯ ಕುರಿತು ತಾ. 21-3-55 ರಂದು ಚರ್ಚೆ ನಡೆದಾಗ ನಮ್ಮ ಜಿಲ್ಲೆಯ ಕುಂದಾಪುರದ ಕಾಂಗ್ರೆಸ್ ಸದಸ್ಯ ಶ್ರೀ ವೈ. ಮಂಜಯ್ಯ ಶೆಟ್ಟಿ ಮತ್ತು ಬ್ರಹ್ಮಾವರದ ಪ್ರಜಾಸಮಾಜವಾದಿ ಸದಸ್ಯ ಶ್ರೀ ಎಸ್. ಎಸ್ ಕೊಳ್ಕೆಬೈಲರು ಶಿಕ್ಷಣ, ಮಾರ್ಗ ಮತ್ತು ನೀರಾವರಿಯ ಅನುಕೂಲತೆಗಳನ್ನು ಹೆಚ್ಚಿಸುವ ಕುರಿತು ಒತ್ತಾಯಿಸುವ ಭಾಷಣವನ್ನು ಮಾಡಿದರು. ಅದರ ಸಾರಾಂಶವನ್ನು ಕೆಳಗೆ ಮತದಾರರ ಅವಗಾಹನೆಗೋಸ್ಕರ ಪ್ರಕಟಿಸಿದ್ದೇವೆ.

ಶ್ರೀ ವೈ. ಮಂಜಯ್ಯ ಶೆಟ್ಟಿ

ಸರಕಾರದವರು ತೆರೆದಿರುವ ಒಬ್ಬ ಅಧ್ಯಾಪಕನಷ್ಟೇ ಇರುವ ಪ್ರಾಥಮಿಕ ಶಾಲೆಗಳ ಕುರಿತು ಟೀಕಿಸಲಾಗುತ್ತದೆ. ಆದರೆ ನನ್ನ ಮತದಾರ ಕ್ಷೇತ್ರದಲ್ಲಿ ಪಡೆದಿರುವ ಅನುಭವದ ಬಲದಿಂದ ಅವುಗಳು ಚೆನ್ನಾಗಿ, ದಕ್ಷತೆಯಿಂದ ಕೆಲಸಮಾಡುತ್ತವೆ ಎಂಬ ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ. ಹೆಚ್ಚಿನ ಹಳ್ಳಿಗಳಲ್ಲಿ ಗ್ರಾಮಸ್ಥರು ತಾವಾಗಿಯೇ ಅಗತ್ಯದ ಕಟ್ಟಡಗಳನ್ನೂ ಸಲಕರಣೆಗಳನ್ನು ಒದಗಿಸಲು ಮುಂದೆ ಬರುತ್ತಿದ್ದಾರೆ. ಹೆಚ್ಚಿನ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಅಧಿಕವಾದ ಪರಿಣಾಮವಾಗಿ ಅಧ್ಯಾಪಕರು ಹೊಸತಾಗಿ ಬೇಕಾಗಬಹುದೆಂದೂ ಹೇಳಬಹುದು. ಜಿಲ್ಲಾ ಬೋರ್ಡಿನ ಅಧ್ಯಕ್ಷರುಗಳಿಗೆ ಅಗತ್ಯವಿದ್ದೆಡೆಯಲ್ಲೆಲ್ಲ ಹೊಸ ಅಧ್ಯಾಪಕರನ್ನು ನೇಮಿಸುವಂತೆ ಸರಕಾರದವರು ನಿರ್ದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಮಾನ್ಯ ಶಿಕ್ಷಣ ಮಂತ್ರಿಗಳು ಸಾರಿರುವ ನಿವೃತ್ತಿ ವೇತನದ ಯೋಜನೆಯನ್ನು ಸೆಕೆಂಡರಿ ಮತ್ತು ಎಲ್. ಟಿ. ಶ್ರೇಣಿಯ ಅಧ್ಯಾಪಕರಿಗೂ ಅನ್ವಯಿಸಬೇಕೆಂದು ಸೂಚಿಸುತ್ತೇನೆ. ಇದು ಸರಕಾರದ ಬೊಕ್ಕಸದ ಮೇಲೆ ವಿಶೇಷವಾದ ಭಾರವಾಗಲಾರದು.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧಾರಾಳ ಮಳೆ ಬೀಳುತ್ತಿದ್ದರೂ ಹೆಚ್ಚಿನ ಮಳೆ ನೀರು ಯಾವ ಉಪಯೋಗಕ್ಕೂ ಬಾರದೆ ಅರಬಿ ಸಮುದ್ರವನ್ನು ಸೇರುತ್ತದೆ. ಯೋಗ್ಯ ನೀರಾವರಿಯ ಅನುಕೂಲತೆಗಳಿಲ್ಲದಿರುವುದೇ ಇದರ ಕಾರಣ. ಸರಕಾರದವರು ಈಚೆಗೆ ಕಟ್ಟಿನ ಹೊಳೆ, ಬಿಜೂರು ಮತ್ತು ಹಾಲಾಡಿ ನೀರಾವರಿ ಯೋಜನೆಗಳ ಪರಿಶೀಲನೆಗಾಗಿ ಅಪ್ಪಣೆ ಕೊಟ್ಟಿರುವುದನ್ನು ಕೇಳಿ ನನಗೆ ಸಂತೋಷವಾಗುತ್ತದೆ. ಕಟ್ಟಿನ ಹೊಳೆ ಯೋಜನೆಯ ಕುರಿತು ಅಂದಾಜನ್ನು ಈಗಾಗಲೇ ಸರಕಾರಕ್ಕೆ ಒಪ್ಪಿಸಲಾಗಿದೆಯೆಂದೂ ಬಿಜೂರಿನ ಅಂದಾಜು ಇಷ್ಟರಲ್ಲೇ ಒಪ್ಪಿಸಲ್ಪಡುವುದೆಂಬೂ ತಿಳಿದು ಬರುತ್ತದೆ. ಕಟ್ಟಿನ ಹೊಳೆ ಯೋಜನೆಯು ಕೇವಲ ೧೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೧೫೦೦ ಎಕ್ರೆ ಭೂಮಿಗೂ ಬಿಜೂರಿನ ಯೋಜನೆಯು ೮೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೩೦೦೦ ಎಕ್ರೆ ಭೂಮಿಗೂ ನೀರುಣಿಸುತ್ತವೆ. ಈ ಯೋಜನೆಗಳ ಕಾರ್ಯಾಚರಣೆಯನ್ನು ೧೯೫೫-೫೬ ನೇ ವರ್ಷದಲ್ಲಿ ತೆಗೆದುಕೊಳ್ಳಬೇಕೆಂದು ನಾನು ಸರಕಾರವನ್ನು ವಿನಂತಿಸುತ್ತೇನೆ. ಹಾಲಾಡಿಯ ಯೋಜನೆಯ ಪರಿಶೀಲನೆಗಾಗಿ ಸರಕಾರದವರು ವಿಶೇಷ ಸಿಬಂಧಿಯನ್ನು ನೇಮಿಸಿರುವುದು ಸಂತೋಷ. ಈ ಯೋಜನೆಯಿಂದ ೧೦೦೦೦ ಎಕ್ರೆ ಭೂಮಿಯಲ್ಲಿ ಎರಡನೇ ಬೆಳೆಯೂ ೫೦೦೦ ಎಕ್ರೆ ಭೂಮಿಯಲ್ಲಿ ಮೂರನೇ ಬೆಳೆಯೂ ಬರುತ್ತದೆ. ಇದನ್ನು ಬೇರೆ ಅನೇಕ ಯೋಜನೆಗಳಿಗಿಂತ ಅಗ್ಗದಲ್ಲಿ ಪೂರೈಸಬಹುದು. ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಜಿಲ್ಲೆಗಳ ಮಟ್ಟದಲ್ಲಿ ತಯಾರಿಸಬೇಕೆಂದಿರುವ ನಮ್ಮ ಸರಕಾರವು ಹಾಲಾಡಿ ಯೋಜನೆಯನ್ನು ಅದರಲ್ಲಿ ತೆಗೆದು ಕೊಳ್ಳುವಂತೆ ಶಿಫಾರಸು ಮಾಡಬೇಕೆಂದು ವಿನಂತಿಸುತ್ತೇನೆ. ಇನ್ನೊಂದು ಚುನಾವಣೆಯ ಬಳಿಕ ನಾವು ಮದ್ರಾಸಿನಲ್ಲಿರುವುದು ಸಂಶಯ; ಮೈಸೂರಿನೊಂದಿಗೆ ಸೇರಿದಾಗ ಮದ್ರಾಸು ಸರಕಾರ ಶಿಫಾರಸು ಮಾಡದೆ ಹಾಲಾಡಿ ಯೋಜನೆ ಕಾರ್ಯಗತವಾಗದುಳಿಯಿತೆಂದು ದೂರುವುದಕ್ಕೆ ಅವಕಾಶವಿರಕೂಡದು.

ಸಂಕವಿಲ್ಲದ ಅನೇಕ ನದಿಗಳ ದೆಸೆಯಿಂದ ದಕ್ಷಿಣ ಕನ್ನಡದಲ್ಲಿ ಸಾರಿಗೆ ಮತ್ತು ಸಂಪರ್ಕವು ದೊಡ್ಡ ಸಮಸ್ಯೆಯಾಗಿರುತ್ತದೆ. ಇದು ಮಾನ್ಯ ಅರ್ಥಸಚಿವರು ಒಪ್ಪಿರುವ ವಿಷಯ. ಉಡುಪಿಯಿಂದ ಕುಂದಾಪುರಕ್ಕೆ ಇರುವ ೨೨ ಮೈಲುಗಳ ದೂರವನ್ನು ಕ್ರಮಿಸಲು ಮೂರು ತಾಸುಗಳು ಹಿಡಿದ ಅನುಭವ ಅವರಿಗಿದ್ದುದರಿಂದ ಸಮಸ್ಯೆಯನ್ನು ಅವರು ಮನಗಂಡರು. ಲೋಕೋಪಯೋಗಿ ಶಾಖೆಯ ಮಂತ್ರಿಗಳಿಗೂ ಅವರು ಜಿಲ್ಲೆಯ ಸಂಚಾರ ಕೈಗೊಂಡರೆ, ಈ ಮಾತು ಅನುಭವಕ್ಕೆ ಬರುತ್ತದೆ. ಕಲ್ಯಾಣಪುರ ಮತ್ತು ಮಾಬುಕಳದ ಹೊಳೆಗಳಿಗೆ ಸಂಕವಿಲ್ಲದುದರಿಂದ ಹೀಗೆ ತೊಂದರೆಯಾಗುತ್ತದೆ. ಕೇಂದ್ರ ಸರಕಾರದವರು ಮುಂಬಯಿಯಿಂದ ಕನ್ಯಾಕುಮಾರಿ ವರೆಗೆ ಕರಾವಳಿ ತೀರದ ರಸ್ತೆಯ ಸಂಪೂರ್ಣ ಹೊಣೆಯನ್ನು ಹೊರಲು ಈಗ ಸಿದ್ಧರಾಗಿದ್ದಾರೆ ಇದರಿಂದ ರಾಜ್ಯ ಸರಕಾರಕ್ಕೆ ಉಳಿತಾಯವಾಗುವ ಹಣವನ್ನು ಮಾಬುಕಳ, ಕಲ್ಯಾಣಪುರ, ಗಂಗೊಳ್ಳಿ, ಉಪ್ಪುಂದಗಳಲ್ಲಿ ಸಂಕ ಕಟ್ಟಿಸುವುದಕ್ಕೆ ವಿನಿಯೋಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೇಂದ್ರ ಮಾರ್ಗ ನಿಧಿಯಿಂದ ಮಂಗಳೂರು ತಾಲೂಕಿನ ಸಂಕಲಕರಿಯಲ್ಲೂ ಉಡುಪಿ ತಾಲೂಕಿನ ಅಲೆವೂರಿನಲ್ಲೂ ಕಾರ್ಕಳ ತಾಲೂಕಿನ ಶಿರ್ತಾಡಿಯಲ್ಲೂ ಕಾಸರಗೋಡು ತಾಲೂಕಿನ ಮೊಗ್ರಾಲದಲ್ಲೂ ಕುಂದಾಪುರದ ಉಪ್ಪುಂದದಲ್ಲೂ ಸಂಕ ಕಟ್ಟಿಸಲು ಹಣ ವಿನಿಯೋಗಿಸಬೇಕೆಂದೂ ವಿನಂತಿಸುತ್ತೇನೆ. ಈ ಮಾತುಗಳೊಂದಿಗೆ ನಾನು ಪೂರಕ ಬೇಡಿಕೆಗೆ ಬೆಂಬಲ ವ್ಯಕ್ತಪಡಿಸುತ್ತೇನೆ.

ಶ್ರೀ ಎಸ್. ಎಸ್. ಕೊಳ್ಕೆಬೈಲ್

ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯವಾಗಿ ಒಳವಲಯದಲ್ಲಿ, ಸಾರಿಗೆ ಮತ್ತು ಸಂಪರ್ಕದ ಅನುಕೂಲತೆಯ ಕುರಿತು ಕೆಲವು ಮಾತನ್ನಾಡಲು ನಾನು ಬಯಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ವಿಸ್ತೀರ್ಣ ೪೦೦೦ ಚದರ ಮೈಲು; ಇಲ್ಲಿ ಕೇವಲ ೨೦೦ ಮೈಲುಗಳ ಪ್ರಬುದ್ಧ ಮಾರ್ಗ ಮಾತ್ರ ಇದ್ದು ಅದರಲ್ಲಿ ೧೧೫ ಮೈಲು ರಸ್ತೆಗಳಿಗಷ್ಟೇ ತಾರು ಹಾಕಲಾಗಿದೆ. ರಾಜ್ಯದಲ್ಲಿ ಒಂದು ಇಂಚಿನಷ್ಟು ಸಿಮೆಂಟು ಕಾಂಕ್ರೀಟಿನ ರಸ್ತೆಯನ್ನು ಪಡೆದಿರದ ಜಿಲ್ಲೆಯೆಂದರೆ ದಕ್ಷಿಣ ಕನ್ನಡ ಮಾತ್ರ. ಅಲ್ಲದೆ ಧಾರಾಳವಾಗಿ ಮಳೆ ಬೀಳುತ್ತಿದ್ದರೂ ಸರಕಾರದವರು ಇಲ್ಲಿ ಸರ್ವ ಋತುವಿನಲ್ಲೂ ಪ್ರಯಾಣ ಯೋಗ್ಯವಾದ ಒಂದೇ ಒಂದು ಮೈಲು ರಸ್ತೆಯನ್ನು ರಚಿಸಿಲ್ಲ. ಪರಿಣಾಮವಾಗಿ ಮಳೆಗಾಲದಲ್ಲಿ ರಸ್ತೆಯ ಪ್ರಯಾಣ ಕೆಸರು ಚೆಲ್ಲುತ್ತಿದ್ದರೆ, ಬೇಸಿಗೆಯಲ್ಲಿ ದೂಳು ತಿನ್ನಿಸುತ್ತದೆ. ರಾಜ್ಯದಲ್ಲಿ ಸರ್ವ ಋತು ಪ್ರಯಾಣ ಯೋಗ್ಯವಾದ ರಸ್ತೆಯ ಅಗತ್ಯವಿದ್ದರೆ ಅದು ನಮ್ಮ ಜಿಲ್ಲೆಗೆ ಅನ್ವಯಿಸುತ್ತದೆ. ನಮ್ಮ ಜಿಲ್ಲೆಯ ೭೬೩ ಹಳ್ಳಿಗಳ ವಿಷಯವನ್ನು ತೆಗೆದುಕೊಂಡರೆ, ಅವುಗಳಲ್ಲಿ ೨೭೬ ಮಲೆನಾಡು ಪ್ರದೇಶದಲ್ಲಿದ್ದು, ಯಾವ ಮಾರ್ಗ ಸೌಕರ್ಯವನ್ನೂ ಪಡೆಯದೆ ಅವು ಏಕಾಂತ ಜೀವನವನ್ನು ನಡೆಸುತ್ತವೆ. ಅವುಗಳಲ್ಲಿ ಕೆಲವನ್ನು ಹಾದು ಹೋಗುವ ಚಿಕ್ಕ ರಸ್ತೆಗಳನ್ನು ಜಿಲ್ಲಾ ಬೋರ್ಡಿನವರು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಪರಿಣಾಮವಾಗಿ ಮಳೆಗಾಲದಲ್ಲಿ ಈ ರಸ್ತೆಗಳ ಮೂಲಕ ಹಾದು ಹೋಗುವುದೇ ದುಸ್ತರವಾಗುತ್ತದೆ. ಮಲೇರಿಯ ಮುಂತಾದ ರೋಗಗಳ ಹಾವಳಿ ವಿಪರೀತವಿರುವ ಈ ಪ್ರದೇಶದಲ್ಲಿ ರಸ್ತೆ ಸರಿಯಾಗಿಲ್ಲದೆ ಹತ್ತಿರದ ಪೇಟೆಗೆ ಹೋಗಿ ಔಷಧ ತರುವುದು ಕಷ್ಟವಾಗುತ್ತದೆ. ಹಳ್ಳಿಗಳನ್ನು ಹೀಗೆ ಅಲಕ್ಷಿಸಿದರೆ ಯಾವ ರಾಜ್ಯವೂ ಉತ್ಕರ್ಷ ಹೊಂದಲಾರದು.

ಅರಬಿ ಸಮುದ್ರದ ತೀರದಲ್ಲಿ ನಮ್ಮ ಬೇರೆ ೧೧೩ ಹಳ್ಳಿಗಳಿವೆ. ಇಲ್ಲಿ ಜನ ಸಾಂದ್ರತೆ ವಿಪರೀತವಿದ್ದರೂ ಮಾರ್ಗ ಸೌಕರ್ಯವೇನೂ ಇಲ್ಲ. ಇಲ್ಲಿ ಮೀನಿನ ಕೈಗಾರಿಕೆ ವಿಶೇಷವಾಗಿದ್ದರೂ ಮಾರ್ಗಗಳ ಸೌಕರ್ಯವಿಲ್ಲದ ದೆಸೆಯಿಂದ ಅದರ ಅಭಿವೃದ್ಧಿಗೆ ತಡೆಯಾಗಿರುತ್ತದೆ. ಹೊಗೆಯಿಂದ ತುಂಬಿರುವ ಈ ಪ್ರದೇಶದಲ್ಲಿ ತಲೆಯ ಮೇಲೆ ಮೀನಿನ ಬುಟ್ಟಿಯನ್ನಿಟ್ಟುಕೊಂಡು ಸಂಚರಿಸುವುದು ತುಂಬ ಪ್ರಯಾಸಕರವಾದ ಕೆಲಸ. ಮೀನುಗಾರಿಕೆಯ ಮಾಜಿ ಮಂತ್ರಿಗಳಾದ ಡಾ. ನಾಗನಗೌಡರು ಈ ಕಷ್ಟವನ್ನು ಸ್ವತಃ ನೋಡಿದ್ದರು. 10-1-1953 ರಲ್ಲಿ ಅವರು ಉಡುಪಿ ತಾಲೂಕಿನ ಮಣೂರಿಗೆ ಬಂದಿದ್ದಾಗ ಮಣೂರು, ಕೋಟತಟ್ಟು, ಪಾರಂಪಳ್ಳಿ ಮುಂತಾದ ಹಳ್ಳಿಯ ಜನರು ಅವರಿಗೊಂದು ಮನವಿಯನ್ನರ್ಪಿಸಿ ಮಣೂರನ್ನು ಮಂಗಳೂರು—ಬೈಂದೂರು ರಸ್ತೆಗೆ ಕೋಟದಲ್ಲಿ ಜೋಡಿಸುವ ರಸ್ತೆಯಾಗಬೇಕೆಂದು ಕೇಳಿಕೊಂಡರು. ಮಂತ್ರಿಗಳು ತಾವು ಅಗತ್ಯವಿದ್ದುದನ್ನು ಮಾಡುವೆನೆಂದರು. ಮುಖ್ಯ ಇಂಜಿನಿಯರವರಿಗೆ ಇದಕ್ಕೆ ಅತೀವ ಪ್ರಾಶಸ್ತ್ಯ ಕೊಡಲು ತಿಳಿಸಲಾಗಿದೆಯೆಂದೂ ಉತ್ತರ ಬಂತು. ಆದರೆ ಎರಡು ಮೈಲು ಉದ್ದದ ಈ ರಸ್ತೆಯ ನಿರ್ಮಾಣದ ವಿಷಯದಲ್ಲಿ ಇಷ್ಟರ ವರೆಗೆ ಏನೂ ಕೆಲಸ ತೊಡಗಿಲ್ಲ. ಬಡತನದಿಂದ ಬಳಲುತ್ತಿದ್ದರೂ ಆ ಹಳ್ಳಿಗಳ ಜನರೇ ಈ ರಸ್ತೆಯನ್ನು ನಿರ್ಮಿಸುತ್ತಿದ್ದರು; ಆದರೆ, ಅವರಿಗೆ ಹೊಗೆಯಲ್ಲಿ ರಸ್ತೆ ನಿರ್ಮಿಸುವ ಕುರಿತು ತಾಂತ್ರಿಕ ಸಲಹೆ ಬೇಕಾಗಿದೆ, ಅಲ್ಲದೆ ಒಂದು ಸಣ್ಣ ಸಂಕವನ್ನೂ ಹಾಕಬೇಕಾಗಿದೆ ಸರಕಾರದ ಕಾರ್ಯ ನಿರ್ವಾಹಕ ಅಂಗವು ಈ ರೀತಿ ಎಳಂಬ ಧೋರಣೆ ಅನುಸರಿಸುವುದು ಇಷ್ಟವಾದುದಲ್ಲ; ಹಳ್ಳಿಗಳನ್ನು ಕಡೆಗಣಿಸುವುದು ಸರಿಯಲ್ಲ.

ಜಿಲ್ಲೆಯ ನಡುಭಾಗದಲ್ಲಿರುವ ಬೇರೆ ೧೫೦ ಹಳ್ಳಿಗಳಲ್ಲೂ ಮಾರ್ಗ ಸೌಕರ್ಯ ಇರುವುದಿಲ್ಲ. ಇಲ್ಲಿರುವ ಕೆಲವು ರಸ್ತೆಗಳನ್ನು ಜಿಲ್ಲಾ ಬೋರ್ಡು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ. ಬೋರ್ಡಿನ ಆರ್ಥಿಕ ಪರಿಸ್ಥಿತಿ ಏನೇನೂ ಚೆನ್ನಾಗಿಲ್ಲ ಅದು ಈಚೆಗ ಕೈಗೊಂಡ ಗೊತ್ತುವಳಿಯೇ ವಸ್ತುಸ್ಥಿತಿಯನ್ನು ವಿವರಿಸುತ್ತದೆ ಆದುದರಿಂದ ಜಿಲ್ಲಾ ಬೋರ್ಡಿನ ಆರ್ಥಿಕ ಸಂಕಟ ನಿವಾರಣೆಗಾಗಿ ಪಿ. ಡಬ್ಲ್ಯು. ಆರ್. ಡಿ. ಗ್ರ್ಯಾಂಟನ್ನಾಗಲೀ ಕೇಂದ್ರ ಮಾರ್ಗ ನಿಧಿ ಅಥವಾ ಸ್ಥಳೀಯ ಅಭಿವೃದ್ಧಿ ಯೋಜನೆಗಳ ನಿಧಿಯಿಂದಾಗಲೀ ಅಥವಾ ಸಾಲವನ್ನಾಗಲೀ ಕೊಡಬೇಕೆಂದು ವಿನಂತಿಸುತ್ತೇನೆ. ನನ್ನ ಮತದಾರ ಕ್ಷೇತ್ರದಲ್ಲಿರುವ ೭೬ ಹಳ್ಳಿಗಳಲ್ಲಿರುವ ರಸ್ತೆ ವಾಹನಸಂಚಾರಕ್ಕೆ ತೀರ ಅಯೋಗ್ಯವಾಗಿದೆ. ಕೋಟ ಗೋಳಿಯಂಗಡಿ, ಬ್ರಹ್ಮಾವರ-ಜನ್ನಾಡಿ, ಕಳತೂರು— ಕೊಕ್ಕರ್ಣೆ, ಪೆಡ್ರೂರು— ಉಪ್ಪೂರು, ಕಲ್ಯಾಣಪುರ— ಕೆಮ್ಮಣ್ಣು, ಪೆರ್ಡೂರು-ಬಜೆ ಇವೆಲ್ಲ ರಸ್ತೆಗಳು ಜಿಲ್ಲಾಬೋರ್ಡಿನ ಅಧೀನದಲ್ಲಿವೆ ೬೧ ಗ್ರಾಮಗಳ ಒಂದು ಲಕ್ಷಕ್ಕೂ ಹೆಚ್ಚಿನ ಜನರಿಗೆ ಇವುಗಳಿಂದ ಉಪಯೋಗವಾಗುತ್ತದೆ ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸಿದರೆ ಸರಕಾರಕ್ಕೆ ನೋಟಾರು ತೆರಿಗೆಯ ರೂಪದಲ್ಲಿ ಆದಾಯ ಸಿಗುತ್ತದೆ, ಜನರಿಗೂ ಪ್ರಯೋಜನವಾಗುತ್ತದೆ.

ಇನ್ನು ನೀರಾವರಿಯ ವಿಚಾರ- ಕಾಂಗ್ರೆಸಿನ ಪ್ರದರ್ಶನಾಲಯದ ಕೃಷಿ ವಿಭಾಗದಲ್ಲಿ ಜಿಲ್ಲಾವಾರಾಗಿ ನೀರಾವರಿ ಅನುಕೂಲತೆಯೊದಗಿಸಿದ ಒಂದು ನಕ್ಷೆಯನ್ನಿಟ್ಟಿದ್ದರು. ಅದರಲ್ಲಿ ದಕ್ಷಿಣಕನ್ನಡದ ಹೆಸರಿನ ಮುಂದೆ "ಏನೂ ಇಲ್ಲ" ಎಂದು ಬರೆದಿದ್ದರು! ಎಷ್ಟೋ ಯೋಜನೆಗಳನ್ನು ಮಾಡಿದ್ದುಂಟು, ಅಂದಾಜನ್ನು ಒಪ್ಪಿಸಿದ್ದುಂಟು; ಆದರೆ ಇವೆಲ್ಲವನ್ನೂ ಮುಂದೆ ಹಾಕಲಾಯಿತು ಕೇಳಿದರೆ ಹಣಕಾಸಿನ ಅಡಚಣೆ ಎಂಬ ಉತ್ತರ ಬರುತ್ತದೆ ಆದರೆ ಬೇರೆ ಜಿಲ್ಲೆಗಳಿಗೆ ಇದು ಅನ್ವಯಿಸುವುದಿಲ್ಲವೆ? ಅಲ್ಲಿ ಈಗಲೂ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಾಗುತ್ತಿವೆಯಲ್ಲ? ನಮ್ಮ ಜಿಲ್ಲೆಯಲ್ಲಿ ಬಹಳ ಹಿಂದಿನ ಕಾಲದಿಂದಲೂ ಗ್ರಾಮದ ಜನರು ಒಟ್ಟಾಗಿ ಪರಸ್ಪರ ಸಹಕಾರದ ತಳಹದಿಯ ಮೇಲೆ ಅಕ್ಟೋಬರ ತಿಂಗಳ ಸುಮಾರಿಗೆ ಹೊಳೆಗಳಿಗೆ ಕಟ್ಟಗಳನ್ನು ಕಟ್ಟುತ್ತಿದ್ದರು. ಮಣ್ಣನ್ನೂ ಕೊಂಬೆ ರೆಂಬೆಗಳನ್ನೂ ಅಡರುಗಳನ್ನೂ ಇದಕ್ಕೆ ಉಪಯೋಗಿಸಲಾಗುತ್ತದೆ. ಈ ಕಟ್ಟಗಳು ಮಳೆಗಾಲದ ಮೊದಲನೇ ನೆರೆಯ ಹೊಡೆತಕ್ಕೆ ಕೊಚ್ಚಿ ಹೋಗುತ್ತವೆ. ಈಚೆಗೆ ಪರಸ್ಪರ ವೈಷಮ್ಯದ ದೆಸೆಯಿಂದ ಕಟ್ಟಗಳನ್ನು ಕಟ್ಟುವುದು ನಿಂತು ಹೋಗಿ ಬಡರೈತರು ಬಳಲಬೇಕಾಗಿರುವುದಲ್ಲದೆ, ಉತ್ಪಾದನೆಯೂ ಕಡಿಮೆಯಾಗಿರುತ್ತದೆ. ಎರಡನೇ ಮತ್ತು ಮೂರನೇ ಬೆಳೆ ಆಗುತ್ತಿಲ್ಲ. ಆದುದರಿಂದ ಸರಕಾರದವರು ಈಗಿನ ಕಟ್ಟಗಳ ಸ್ಥಳದಲ್ಲಿ ನದಿಗೆ ಕಲ್ಲಿನ ಬುನಾದಿಯನ್ನು ಹಾಕಿ ಸುಲಭದಲ್ಲಿ ಮಣ್ಣಿನ ಕಟ್ಟವನ್ನೇರಿಸಲು ಅನುಕೂಲತೆ ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ, ಜನರಿಗೆ ಇದರಿಂದ ಲಭಿಸುವ ಪ್ರಯೋಜನದ ಮುಂದೆ ವೆಚ್ಚವು ಹೆಚ್ಚಾಗಲಾರದು. ಹೀಗೆ ಮಾಡಿದರೆ ಮುಂದಿನ ಕೆಲಸವನ್ನು ರೈತರು ಸ್ವೇಚ್ಛೆಯ ಸೇವೆಯ ಮೂಲಕ ನೆರವೇರಿಸಿಕೊಳ್ಳುವರೆಂದು ನಾನು ಭರವಸೆ ಕೊಡುತ್ತೇನೆ. ದೊಡ್ಡ ನೀರಾವರಿ ಯೋಜನೆಗಳನ್ನಲ್ಲದಿದ್ದರೂ ಸಣ್ಣ ನೀರಾವರಿ ಕೆಲಸಗಳಿಂದಾದರೂ ದಕ್ಷಿಣ ಕನ್ನಡದ ರೈತರಿಗೆ ಪ್ರಯೋಜನವನ್ನೊದಗಿಸಿ ಕೊಡಬೇಕೆಂದು ಹೇಳಿ ನಾನು ಆಸನಾಸೀನನಾಗುತ್ತೇನೆ.

–ಕನ್ನಡದಲ್ಲಿ ಹೊಸ ಬಗೆಯ ಗ್ರಂಥ–

ಬಾಳುಬಂಗಾರ

(ಬರೆದವರು: ಕುಮಾರಸ್ವಾಮಿ)

ಬೆಲೆ: ಒಂದೂವರೆ ರೂಪಾಯಿ.

● ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.

● ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ದೊರೆಯುವ ಸ್ಥಳಗಳು.-1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ. ಕ.

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ

ಭಾಷಾಂತರ.

ಬೆಲೆ 0-8-0

ನವಯುಗ ಪ್ರೆಸ್ ಉಡುಪಿ.

Edited, Printed & Published By K. H. Shetty at the Navayuga Press, Udipi, S. India

ನವಯುಗ

ಸಂಪುಟ ೩೪ VOL. 34 — ಉಡುಪಿ, 14—4—1955 — ಸಂಚಿಕೆ ೩೨ NO. 32

ನಮ್ಮ ರಾಷ್ಟ್ರೀಯ ಶಕ್ತಿ ಮತ್ತು ಉತ್ಪಾದನೆಯನ್ನು ಶೋಷಿಸುವ ಸಂಗತಿ ಯಾವುದಾದರೂ ಇದ್ದರೆ ಅದು ಶೀಲದ ಅಭಾವ ನಮ್ಮಲ್ಲಿ ಬುದ್ಧಿವಂತರಾದ ಸ್ತ್ರೀ ಪುರುಷರಿದ್ದಾರೆ, ವಿಪುಲ ನೈಸರ್ಗಿಕಸಂಪತ್ತೂ ಕಂಡುಬರುತ್ತದೆ ಇವುಗಳೆಲ್ಲವ ಉಪಯೋಗವಾಗಬೇಕಾದರೆ ಶಿಸ್ತು, ಕಾಯಿದೆಗೆ ವಿಧೇಯತೆ, ಸಂಘಟಿತಕಾರ್ಯ. ಸ್ವಾರ್ಥಕ್ಕಿಂತ ರಾಷ್ಟ್ರದ ಉದ್ದೇಶಕ್ಕೆ ಪ್ರಾಶಸ್ತ್ಯ ಇತ್ಯಾದಿ ಮನೋಭಾವಗಳು ಮೂಡಿಬರಬೇಕು ನಿಷ್ಠೆಯಿಂದ ಮೇಲಿನ ನಿಯಮಗಳನ್ನು ವ್ರತದಂತೆ ಪಾಲಿಸುವುದರಿಂದಲೇ ಮಹಾರಾಷ್ಟ್ರವೊಂದನ್ನು ರಚಿಸಲು ನಾವು ಸಮರ್ಥರಾಗುತ್ತೇವೆ

—ಡಾ ರಾಧಾಕೃಷ್ಣನ್ನರು.

ಕಾಯಿದೆಗೆ ವಿಧೇಯತೆ

ಬ್ರಿಟನ್ನಿನ ಪ್ರಧಾನ ಮಂತ್ರಿ ಸ್ಥಾನದಿಂದ ಕಳೆದ ವಾರ ನಿವೃತ್ತಿ ಹೊಂದಿದ ಸರ್ ವಿನ್‌ಸ್ಟನ್ ಚರ್ಚಿಲ್ಲರ ಸಂಬಂಧದಲ್ಲಿ ಒಂದು ಘಟನೆಯನ್ನು ಉಲ್ಲೇಖಿಸಲಾಗುತ್ತದೆ ಅವರೊಂದುದಿನ ಮಾಳಿಗೆಯಮೇಲೆ ನಿಂತಿದ್ದಾಗ ಕೆಳಗ ರಸ್ತೆಯಲ್ಲಿ ಯಾರೋ ಹುಡುಗನೊಬ್ಬ ಸಿಳ್ಳು ಹಾಕುತ್ತಾ ಹೋಗುತ್ತಿದ್ದ ಚರ್ಚಿಲ್ಲರಿಗೆ ಸಿಳ್ಳನ್ನು ಕೇಳುವುದೆಂದರೆ ಆಗದು ಆದುದರಿಂದ "ಏ ಬಾಯಿ ಮುಚ್ಚು" ಎಂದು ಕೂಗಿದರು ಹುಡುಗ ಮೇಲೆ ನೋಡಿ "ಮುಚ್ಚುವುದಿಲ್ಲ" ಎಂದು ಹೇಳಿದ. ಚರ್ಚಿಲ್ಲರಿಗೆ ಸಿಟ್ಟು ನೆತ್ತಿಗೇರಿತು. "ನನಗದನ್ನು ಕೇಳಿದರೆ ಆಗದು" ಎಂದರು "ಕೇಳಲಾಗದಿದ್ದರೆ ಕಿವಿ ಮುಚ್ಚಿ ಕೊಳ್ಳಿ" ಎಂದು ಹುಡುಗ ಇದಕ್ಕೆ ಉತ್ತರವಿತ್ತು, ಮೊದಲಿನಂತೆ ಸಿಳ್ಳು ಹಾಕುತ್ತಾ ಹೊರಟು ಹೋದ ಆಗ ಚರ್ಚಿಲ್ಲರು ತಮಗೆಯೇ ಸಮಾಧಾನ ಹೇಳಿಕೊಂಡರು—"ಎಷ್ಟಾದರೂ ಬ್ರಿಟನ್ನಿನಲ್ಲಿರುವುದು ಪ್ರಜಾಪ್ರಭುತ್ವವಲ್ಲವೆ? ಪಾಪ, ಆ ಹುಡುಗನೂ ತುಸು ಸ್ವಾತಂತ್ರ್ಯವನ್ನು ಅನುಭವಿಸಲಿ. ನನ್ನದೇ ಅಧಿಕಾರ ನಡೆಸಿದರೆ ಅಷ್ಟು ಸರಿಯಾಗಲಿಕ್ಕಿಲ್ಲ'

ಪ್ರಿಯಾ ಸ್ವಾತಂತ್ರ್ಯವು ಪ್ರಜಾಪ್ರಭುತ್ವದಲ್ಲಿ ಮನ್ನಣೆಯನ್ನು ಗಳಿಸಿರುವ ಅಧಿಕಾರ. ಅದನ್ನು ಸರಕಾರ ರಾಷ್ಟ್ರಕ್ಕೆ ಅಪಾಯ ಆದವಾ ಗಂಡಾಂತರ ಉಂಟಾಗುವ ಸಂಭವವಿಲ್ಲದಷ್ಟು ಮಟ್ಟಿಗೆ ಮನ್ನಿಸುತ್ತದ ಶಾಸನಗಳು ಅದನ್ನು ತಡೆಯುವುದಿಲ್ಲ—ಶಾಸನಗಳನ್ನು ಎಲ್ಲರೂ ಮನ್ನಿಸಿಯೇ ನಡೆಯುತ್ತಾರೆ; ಚರ್ಚಿಲರು ಪ್ರಧಾನ ಮಂತ್ರಿಯಾಗಿದ್ದರೂ ಹುಡುಗನನ್ನು ಸುಮ್ಮನಾಗಿಸಲು ತಮ್ಮ ಶಕ್ತಿಯನ್ನಾಗಲೀ ವರ್ಚಸ್ಸನ್ನಾಗಲೀ ಉಪಯೋಗಿಸದೆ ತಮಗೆ ತಾವೇ ಸಮಾಧಾನ ಹೇಳಿಕೊಳ್ಳುತ್ತಾರೆ ದಂಡ ಬಲವನ್ನು ಉಪಯೋಗಿಸಲು ಮನಸ್ಸು ಮಾಡದೆ ಕಾಯಿದೆಗೆ ವಿಧೇಯತೆ ತೋರಿಸುವ ಸತ್ಸಂಪ್ರದಾಯವು ಪ್ರಜಾಪ್ರಭುತ್ವದ ವೈಶಿಷ್ಟ್ಯಗಳಲ್ಲೆಲ್ಲ ಉಲ್ಲೇಖನೀಯ ವ್ಯಕ್ತಿಗಿಂತ ರಾಷ್ಟ್ರದ ಸ್ಥಾನಮಾನ ಹೆಚ್ಚಿನದೆಂಬುದನ್ನು ಎತ್ತಿತೋರಿಸುವುದಕ್ಕೆ ನೆರವಾಗಲು ಪ್ರತಿಯೊಬ್ಬ ಹೊಣೆಗಾರ ವ್ಯಕ್ತಿಯೂ ಪ್ರಯತ್ನಿಸುತ್ತಾನೆ. ಬ್ರಿಟನ್ನಿನ ಈಗಿನ ರಾಣಿ ಎರಡನೆಯ ಎಲಿಜಬೆತರು ಎರಡು ವರ್ಷಗಳ ಹಿಂದೆ ಕರಾವಳಿ ತೀರದಲ್ಲಿ ಸಮುದ್ರ ಉಕ್ಕೇರಿ ಬಂದು ಪೀಡೆಗೊಳಗಾದ ಸಂತ್ರಸ್ತರನ್ನು ನೋಡಲು ಹೋಗಿದ್ದರು ಆಗ ಅವರನ್ನು ಕರಾವಳಿಯ ಕಾವಲುಗಾರ ತಡೆದು ಹಿಡಿದು ಮುಂದೆ ಬರಬಾರದೆಂದು ಸರಕಾರ ಆಜ್ಞಾಪಿಸಿರುವುದಾಗಿ ತಿಳಿಸಿದ ಸ್ವತಃ ರಾಣಿಯನ್ನೂ ಅವನು ಲೆಕ್ಕಿಸಲಿಲ್ಲ — ರಾಣಿ ಅವನ ಹೇಳಿಕೆಯಂತೆಯೇ ನಡೆದಳು, ಅಂದರೆ, ಮುಂದೆಹೋಗದೆ ಅಲ್ಲಿಂದಲೇ ಹಿಂದಿರುಗಿದಳು

ದೊಡ್ಡ ಮನಸ್ಯರ ಯೋಗ್ಯತೆಯ ಪರೀಕ್ಷೆಯಾಗುವುದು ಇಂಥ ಸಂದರ್ಭಗಳಲ್ಲಿಯೇ ಎಂದರೆ ತಪ್ಪಾಗಲಾರದು ತಾವು ರಚಿಸಿದ ನಿಯಮಗಳನ್ನು ಅವರು ತಮಗೆ ಅನ್ವಯಿಸಿಕೊಳ್ಳುವರೇ, ಅಥವಾ ಆ ನಿಯಮಗಳು ತಮ್ಮನ್ನು ಬಾಧಿಸಲಾರವೆಂದೂ ಅವುಗಳಿಗೆ ತಾವು ಮಿಗಿಲಾದವರೆಂದೂ ತಿಳಿದು ಜನ ಸಾಮಾನ್ಯರು ಮಾತ್ರ ನಿಯಮ ಮೀರಿದರೆ ದಂಡಿಸುವರೇ ಎಂಬುದು ವಿಚಾರಣೀಯವಾದ ಅಂಶ ಒಂದು ಕಾಯಿದೆಯನ್ನು ಮಾಡಿದ ಬಳಿಕ ಅದಕ್ಕೆ ರಾಷ್ಟ್ರದ ಎಲ್ಲರೂ ಬದ್ಧರಾಗಲೇಬೇಕು, [illegible] ಎಲ್ಲರಿಗೂ ಸಮನಾಗಿ ಅನ್ವಯಿಸಬೇಕು. ವ್ಯಕ್ತಿಯ ದೊಡ್ಡಸ್ತಿಕೆ, ಪ್ರತಿಷ್ಠೆಗಳು ಆ ಕಾಯಿದೆಯ ಶಕ್ತಿಯನ್ನು ಹೆಚ್ಚಿಸಬೇಕಲ್ಲದೆ ಶಿಥಿಲಗೊಳಿಸಲು ಹೋಗಬಾರದು ಇಂಗ್ಲೆಂಡಿನದೇ ಇನ್ನೊಂದು ಉದಾಹರಣೆಯನ್ನು ತೆಗೆದು ಕೊಳ್ಳುವುದಾದರೆ ಪ್ರಥಮ ಮಹಾ ಯುದ್ಧ ಕಾಲದಲ್ಲಿ ಮುಖ್ಯ ಮಂತ್ರಿಯಾಗಿದ್ದ ಲ್ಯಾಯ್ಡ್ ಜಾರ್ಜರು ಒಮ್ಮೆ ಆಸ್ಪತ್ರೆಯಲ್ಲಿದ್ದ ತಮ್ಮ ಸ್ನೇಹಿತರೊಬ್ಬರನ್ನು ನೋಡಲು ಹೊರಟರು. ಆದರೆ ಹಾಗೆ ಆಸ್ಪತ್ರೆಯನ್ನು ಪ್ರವೇಶಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಅಧಿಕಾರಿಗಳಿಂದ ಮೊದಲಾಗಿ ಅಪ್ಪಣೆಯನ್ನು ಪಡೆಯಬೇಕಿದ್ದಿತು ಲ್ಯಾಯ್ಡ್ ಜಾರ್ಜರು ಹಾಗೆ ಮಾಡಿರಲಿಲ್ಲ. ಆಸ್ಪತ್ರೆಯ ಕಾವಲುಗಾರನು ಅವರನ್ನು ಒಳಗೆ ಬಿಡಲಿಲ್ಲ. ನಾನು ಲ್ಯಾಯ್ಡ್ ಜಾರ್ಜ ಇಲ್ಲಿರುವ ಸ್ನೇಹಿತನೊಬ್ಬನನ್ನು ನೋಡಲು ಬಂದಿದ್ದೇನೆ" ಎಂದವರು ಅವನ ಮೇಲೆ ತನ್ನ ವರ್ಚಸ್ಸನ್ನು ಉಪಯೋಗಿಸಲು ನೋಡಿದರು. "ಯಾವ ಜಾರ್ಜ?" ಎಂದು ಆ ಕಾವಲಿನವ ಕೇಳಿದನೇ ಹೊರತು, ಆ ಪ್ರಧಾನ ಮಂತ್ರಿಯನ್ನು ಪ್ರವೇಶಿಸಗೊಡಲಿಲ್ಲ. ಬ್ರಿಟನ್ನಿನಲ್ಲಿ ಪ್ರಧಾನ ಮಂತ್ರಿಯ ಹೆಸರು ಗೊತ್ತಿಲ್ಲದ ಜನರೂ ಇರುವರೆಂಬ ಪರಿಚಯ ಲ್ಯಾಯ್ಡ್ ಜಾರ್ಜರಿಗೆ ಅಂದು ಆಯಿತು; ಅದಕ್ಕಿಂತ ಹೆಚ್ಚಾಗಿ ಕಾಯಿದಗ ತೋರಿಸಲಾಗುವ ವಿಧೇಯತೆ ಅವರ ಗಮನ ಸೆಳೆಯಿತು. ಅವರು ಬಂದ ದಾರಿಯಲ್ಲೇ ಮರಳಿದರು

ಮೊನ್ನೆ ನಮ್ಮ ಪ್ರಧಾನ ಮಂತ್ರಿ ನೆಹರುಗಳು ಚಿತ್ತೂರು ಗಡದ ವಲಯದಲ್ಲಿ ಸಂಚರಿಸುತ್ತಿದ್ದಾಗಲೂ ಇಂತಹದೇ ಘಟನೆಯೊಂದು ಸಂಭವಿಸಿತು. ನೆಹರುಗಳು ಉದಯಪುರದ ಮಹಾ ರಾಜರ ಅರಮನೆಗೆ ಕಾರಿನಲ್ಲಿ ಹೋಗುತ್ತಿದ್ದರು ಅರಮನೆಗೆ ನೂರು ಗಜ ದೂರದಲ್ಲಿದ್ದ ರೈಲ್ವೆ ಮಾರ್ಗವನ್ನು ದಾಟಿ ಈ ರಸ್ತೆಯಲ್ಲಿ ಹೋಗಬೇಕಾಗಿದ್ದಿತು ಆದರೆ, ಹಾಗೆ ದಾಟುವಲ್ಲಿದ್ದ ಮುಚ್ಚಿದ ಬಾಗಿಲನ್ನು ಕಾವಲುಗಾರನು ತೆರೆಯಲಿಲ್ಲ ಪೋಲೀಸರು ಬಂದು "ಪ್ರಧಾನ ಮಂತ್ರಿಗಳ ಕಾರು ಅಲ್ಲಿ ಕಾಯುತ್ತಿರವಾಗ ನಿನ್ನದೇನು ಹಠ? ಬೇಗ ಬಾಗಿಲ ತೆಗೆದು ಕಾರನ್ನು ಹೋಗಗೊಡು" ಎಂದು ಬೆದರಿಸಿದರು. ಆದರೆ ಕಾವಲುಗಾರ "ಸಾಧ್ಯವಿಲ್ಲ, ರೈಲು ತಾನು ಬರುವ ಸೂಚನೆಯನ್ನು ಕೊಟ್ಟಿರುವುದರಿಂದ ನಿಯಮ ಪ್ರಕಾರ ಬಾಗಿಲನ್ನು ಮುಚ್ಚಿದ್ದೇನೆ. ರೈಲು ದಾಟಿ ಹೋದ ಮೇಲೆಯೇ ಬಾಗಿಲು ತೆರೆಯುತ್ತೇನೆ" ಎಂದು ದೃಢವಾದ ಸ್ವರದಲ್ಲಿ ಉತ್ತರವಿತ್ತ ಇದನ್ನೆಲ್ಲ ನೋಡುತ್ತಿದ್ದ ಪ್ರಧಾನ ಮಂತ್ರಿಗಳು ಕಾರಿನಿಂದಿಳಿದು ಆ ಕಾವಲುಗಾರನಿದ್ದಲ್ಲಿಗೆ ಬಂದರು. ತನ್ನನ್ನು ಹಿಡಿದು ಶಿಕ್ಷಿಸುವುದಕ್ಕಾಗಿಯೇ ನೆಹರುಗಳು ಬರುತ್ತಿರುವರೆಂಬ ಭಯದಿಂದ ಕಾವಲುಗಾರನು ಓಡಲು ನೋಡಿದ—ಆಗ ನೆಹರುಗಳು ಶಾಂತ ಭಾವದಿಂದ ಆತನನ್ನು ಹಿಂದಕ್ಕೆ ಕರೆದು, ಬೆನ್ನನ್ನು ತಟ್ಟಿ "ನೀನು ನಿನಗೊಪ್ಪಿಸಿರುವ ಕೆಲಸವನ್ನು ಇಷ್ಟು ಯೋಗ್ಯ ರೀತಿಯಲ್ಲಿ ದಕ್ಷತೆಯಿಂದ ನಿಯಮ ತಪ್ಪದಂತೆ ನಿರ್ವಹಿಸುತ್ತಿರುವುದನ್ನು ಕಂಡು ನನಗೆ ಸಂತೋಷವಾಯಿತು" ಎಂದರು, ಮತ್ತು ಅರಮನೆಗೆ ನಡೆದುಕೊಂಡೇ ಹೋದರು.

ಮೇಲಿನೆಲ್ಲ ಪ್ರಸಂಗಗಳು ಒಂದು ವಿಷಯವನ್ನು ಮುಖ್ಯವಾಗಿ ಮನವರಿಕೆ ಮಾಡಿಕೊಡುತ್ತವೆ. ಅದೆಂದರೆ ನಾವು ಕಾರ್ಯಕ್ಷಮತೆಯಿಂದ ಕೂಡಿರಬೇಕು; ನಿಯಮ ತಪ್ಪಬಾರದು; ಕಾಯಿದೆಗೆ ಸದಾಕಾಲ ವಿಧೇಯತೆ ತೋರಿಸಬೇಕು.

(೧೨ನೇ ಪುಟ ನೋಡಿರಿ)

ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಮಧ್ಯ ಆಫ್ರಿಕದಲ್ಲಿದ್ದ ಆಂಗ್ಲ ಸೇನಾಧಿಕಾರಿಗೆ "ನಿನ್ನ ಅಧಿಕಾರ ವಲಯದಲ್ಲಿರುವ ಎಲ್ಲ ಶತ್ರುಗಳನ್ನೂ ಸೆರೆ ಹಿಡಿ, ಅವರ ಮೇಲೆ ಯುದ್ಧ ಸಾರಿದ್ದೇವೆ" ಎಂಬ ತಂತಿಯು ಸೈನ್ಯದ ವರಿಷ್ಠರಿಂದ ಬಂತು.

ಸೇನಾಧಿಕಾರಿಯು ತಕ್ಕ ಕ್ರಮಗಳನ್ನು ತೆಗೆದುಕೊಂಡು ಹೀಗೆ ತಿಳಿಸಿದ— 'ಇಲ್ಲಿರುವ ನಾಲ್ವರು ಜರ್ಮನರು ಇಬ್ಬರು ಬೆಲ್ಜಿಯನರು, ಐವರು, ಫ್ರೆಂಚರು, ಮೂವರು ಇಟಾಲಿಯನರು— ಇವರೆಲ್ಲರನ್ನೂ ಸೆರೆ ಹಿಡಿದಿದ್ದೇನೆ ಈಗ ದಯಮಾಡಿ ಯಾವ ವಿಶಿಷ್ಟ ರಾಷ್ಟ್ರದ ಮೇಲೆ ಯುದ್ಧ ಸಾರಲಾಗಿದೆ ಎಂಬುದನ್ನು ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ "

THE CANARA INDUSTRIAL & BANKING SYNDICATE LTD

Estd: 1925 H O UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲು ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಶೇಖರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕುವಂತಾಗಬೇಕೆಂಬ ಅಪೇಕ್ಷೆ ನಿಮಗಿದೆ ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವು ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು [illegible] ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ನಡೆಸಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ

ಚಲಾವಣೆ ಭಂಡವಾಳ ರೂ ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ. ಉಡುಪಿ, ದ ಭಾರತ.

ಹೊಸ ವರ್ಷದ ದಿನದಂದು ನೂತನ ಆಂದೋಲನ

ಹಾಲನ್ನು ಹೆಚ್ಚಾಗಿ ಉಪಯೋಗಿಸುವ ಬಗ್ಗೆ ಪ್ರಚಾರ

ಮದ್ರಾಸು ರಾಜ್ಯದಲ್ಲಿ ಸೌರಮಾನ ಯುಗಾದಿಯ ದಿನವನ್ನು ಈ ವರ್ಷ ಹೊಸತೊಂದು ಆಂದೋಲನದ ಮೂಲಕವೂ ಆಚರಿಸಲಾಯಿತು. "ಅಧಿಕ ಹಾಲಿನ ದಿನ" ಎಂಬುದಾಗಿ ಯುಗಾದಿಯಂದು ನೂತನ ಚಳವಳವನ್ನು ರಾಜ್ಯದಾದ್ಯಂತ ನಡೆಸಲಾಯಿತು. ಮಕ್ಕಳಿಗೆ ಹೆಚ್ಚು ಹಾಲನ್ನು ಕುಡಿಯಗೊಡುವಂತೆ ಒತ್ತಾಸೆ ನೀಡುವುದೂ ಗ್ರಾಮಾಂತರ ಪ್ರದೇಶದಲ್ಲಿರುವ ರೈತರು ತಮ್ಮ ಇತರ ಆಹಾರದೊಂದಿಗೆ ಅಧಿಕ ಹಾಲು ಸೇವಿಸುವಂತೆ ಬೋಧಿಸುವುದೂ ಈ ಆಂದೋಲನದ ಉದ್ದೇಶ. ಇದಕ್ಕೋಸ್ಕರ ಹಳ್ಳಿ ಮತ್ತು ಪಟ್ಟಣಗಳಲ್ಲಿ ಹಾಲನ್ನು ಸಂಗ್ರಹಿಸಿ ಚಿಕ್ಕ ಮಕ್ಕಳಿಗೆ ವಿತರಿಸುವ, ಹೆಚ್ಚು ಹಾಲನ್ನು ಕರೆಯುವ ದನಗಳ ಸ್ಪರ್ಧೆಯನ್ನು ಏರ್ಪಡಿಸಿ, ಬಹುಮಾನ ನೀಡುವ, ಸಭೆ, ಮೆರವಣಿಗೆ ಘೋಷಣೆ ಮುಂತಾದವುಗಳ ಮೂಲಕ ಜನ ಜಾಗೃತಿಯನ್ನು ಮಾಡುವ ವಿಧಾನಗಳನ್ನು ಅನುಸರಿಸಲಾಯಿತು.

ರಾಜ್ಯದ ಕೃಷಿ ಮಂತ್ರಿಗಳಾದ ಶ್ರೀ. ಎಂ. ಭಕ್ತವತ್ಸಲಮರು ಈ ಚಳವಳವನ್ನು ಸಾರ್ವಜನಿಕರೆಲ್ಲರೂ ಸಹಕರಿಸಿ ಯಶಸ್ವಿಗೊಳಿಸಬೇಕೆನ್ನುತ್ತಾ ಈ ಕೆಳಗಿನ ಆಗ್ರಹದ ವಿನಂತಿಯನ್ನು ಮಾಡಿದರು:— "ಗ್ರಾಮಾಂತರ ಪ್ರದೇಶದಲ್ಲಿ ಬಹಳ ಹೆಚ್ಚು ಜಾನುವಾರುಗಳೇನೋ ಇವೆ ಆದರೆ ರೈತರ ಕುಟುಂಬಗಳು ಹಾಲನ್ನು ಉತ್ಪಾದಿಸುವ ಮತ್ತು ಸೇವಿಸುವ ವಿಷಯದಲ್ಲಿ ದಿನ ಹೋದಂತೆ ಕಡಿಮೆ ಆಸಕ್ತಿಯನ್ನು ತೋರಿಸುವುದು ಮಾತ್ರ ಶೋಚನೀಯ. ಇದಕ್ಕೆ ಅನೇಕ ಕಾರಣಗಳನ್ನು ಕೊಡಬಹುದು ದನದ ತಳಿಗಳನ್ನು ಪೋಷಿಸುವುದರಲ್ಲಿ ಉದಾಸೀನತೆಯನ್ನು ತೋರಿಸುವುದು, ಹಾಲಿನ ಪೋಷಕ ಅಂಶಗಳ ಪ್ರಯೋಜನದ ಕುರಿತು ತಿಳುವಳಿಕೆ ಇಲ್ಲದಿರುವುದು ಇವುಗಳನ್ನು ಮುಖ್ಯವಾದ ಕಾರಣಗಳಾಗಿ ಉಲ್ಲೇಖಿಸಬಹುದು ನಾವು ಪ್ರತಿಯೊಂದು ರೈತ ಕುಟುಂಬವೂ ಹಾಲು ಕೊಡುವ ಒಂದು ದನವನ್ನಾದರೂ ಸಾಕುವಂತೆ ಮತ್ತು ಅದರ ಹಾಲನ್ನು ಸ್ವಂತದ ಉಪಯೋಗಕ್ಕಾಗಿ ಬಳಸುವಂತೆ ನೋಡಿಕೊಳ್ಳುವುದು ಅಪೇಕ್ಷಣೀಯ ಈಗ ರೈತರಲ್ಲಿ ಹಾಲನ್ನು ಕರೆಯುವ ದನಗಳಿದ್ದರೂ ಎಲ್ಲ ಹಾಲನ್ನು ಹತ್ತಿರದ ಪೇಟೆಯಲ್ಲಿ ಮಾರಲಾಗುತ್ತದೆ. ರೈತ ಕುಟುಂಬದ ಆರೋಗ್ಯ ರಕ್ಷಣೆಗಾಗಿಯೂ ಭವಿಷ್ಯದಲ್ಲಿ ದೃಢಕಾಯರಾದ ರೈತ ಕುಟುಂಬಗಳನ್ನು ಉಳಿಸಿಕೊಳ್ಳುವುದಕ್ಕಾಗಿಯೂ ಹೆಚ್ಚು ಹಾಲನ್ನು ಸೇವಿಸುವ ಚಳವಳವನ್ನು ಸರಕಾರ ತೊಡಗಿರುತ್ತದೆ. ಮಕ್ಕಳಿಗೆ ಹಾಲಿನ ಮಹತ್ವವು ತಿಳಿದು ಅವರು ದೊಡ್ಡವರಾದ ಬಳಿಕ ಹೆಚ್ಚು ಹಾಲನ್ನು ಉತ್ಪಾದಿಸುವುದರಲ್ಲಿ ಕ್ರಿಯಾತ್ಮಕ ಪಾತ್ರವನ್ನು ನಿರ್ವಹಿಸುವಂತೆ ಮಾಡಲು ಅವರಿಗೆ ಹಾಲನ್ನು ಕುಡಿಸುವ ಕಾರ್ಯಕ್ರಮವನ್ನೂ ಸರಕಾರ ಪ್ರೋತ್ಸಾಹಿಸುತ್ತದೆ"

ಸರಕಾರವು ಚಳವಳವನ್ನು ತೊಡಗಿದುದರಿಂದ ಸಾರ್ವಜನಿಕರ ಚಿತ್ತವನ್ನು ಉಪಯುಕ್ತ ವಿಷಯವೊಂದರ ಕಡೆಗೆ ಸೆಳೆಯಲು ಸಾಧ್ಯವಾಯಿತೆಂಬುದು ನಿಜ ಆದರೆ ವರ್ಷಕ್ಕೊಮ್ಮೆ ಆಂದೋಲನದ ದಿನಾಚರಣೆ ನಡೆಸುವಾಗ ಮಾತ್ರ ನಮ್ಮ ಜನರು ಎಚ್ಚತ್ತರೆ ಸಾಲದು. ಹಾಲನ್ನು ನಿತ್ಯೋಪಯೋಗದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಭಾರತೀಯರೆಲ್ಲರೂ ಉಪಯೋಗಿಸುವ ಸಂಪ್ರದಾಯವು ಬಲಗೊಳ್ಳಬೇಕು; ವಿಸ್ತಾರವಾಗಿ ಅದು ಬಳಕೆಯಲ್ಲಿ ಬರಬೇಕು. ಜೀವಂತ ಪ್ರಾಣಿಯಿಂದ ನೇರಾಗಿ ಬರುವ ಆಹಾರಗಳಲ್ಲೆಲ್ಲ ಹಾಲು ಸರ್ವೋತ್ಕೃಷ್ಟವಾದದ್ದೆಂದು ಭಾರತದ ಪ್ರಾಚೀನ ಋಷಿ ಮುನಿಗಳಷ್ಟೇ ಯಲ್ಲ, ಆಧುನಿಕ ವಿಜ್ಞಾನಿಗಳೂ ಅಭಿಪ್ರಾಯ ಪಡುತ್ತಾರೆ. ಮೊಟ್ಟೆಯು ಉತ್ತಮ ಪೋಷಕಾಂಶಗಳಿಂದ ಕೂಡಿದ್ದು ಆಹಾರವಾಗಿ ಸೇವಿಸಲು ಯೋಗ್ಯವೆಂದು ಭಾವಿಸಲ್ಪಡುತ್ತದೆ ಆದರೆ ಅದನ್ನು ನಿಸರ್ಗವು ಸಂತಾನೋತ್ಪಾದನೆಯ ಕಾರ್ಯಕ್ಕಾಗಿ ಸೃಷ್ಟಿಸಿರುತ್ತದೆ ಹೊರತು ಮನುಷ್ಯನ ಸೇವನೆಗಾಗಿ ಅಲ್ಲ — ಮಾತ್ರವಲ್ಲ, ಅದು ಹಾಲಿನಷ್ಟು ಸುಲಭದಲ್ಲಿ ಜೀರ್ಣವಾಗುವ ವಸ್ತುವೂ ಅಲ್ಲ ಈ ದೃಷ್ಟಿಯಿಂದ ಹಾಲಿನ ಉಪಯೋಗ ಪ್ರಯೋಜನದಾಯಕ.

ಎಲ್ಲ ಕೊಬ್ಬುಗಳಿಗಿಂತಲೂ ಹಾಲಿನ ಕೊಬ್ಬು ಸುಲಭದಲ್ಲಿ ಜೀರ್ಣವಾಗುವುದೆಂಬುದೇ ಮಕ್ಕಳು ಆಹಾರವಾಗಿ ಹಾಲನ್ನು ಬಳಸುವುದು ಯೋಗ್ಯವೆನ್ನುವುದರ ಗುಟ್ಟು. ಕೊಬ್ಬಿನ ಜೊತೆಗೆ ಸಕ್ಕರೆ, ಸಸಾರ ಜನಕ, ಎ, ಬಿ ೧, ಬಿ ೨, ಸಿ ಮತ್ತು ಡಿ ಜೀವಾತುಗಳು ಹಾಗು ಕ್ಯಾಲ್ಸಿಯಂ ಮತ್ತಿತರ ಲವಣಗಳು ಹಾಲಿನಲ್ಲಿರುವುದರಿಂದ ಸಮತೂಕದ ಆಹಾರಕ್ಕೆ ಬೇಕಾದುದೆಲ್ಲವೂ ಹೆಚ್ಚಿನ ಮಟ್ಟಿಗೆ ಹಾಲಿನ ಸೇವನೆಯಿಂದ ದೊರಕುತ್ತದೆ. ನಾವು ಬ್ರೆಡ್ಡನ್ನು ತಿಂದರೆ ಹೊಟ್ಟೆಯೊಳಗಿಂದ ಜೀರ್ಣವಾಗಿ ಹೋಗುವುದಕ್ಕೆ ಎರಡೂವರೆ ತಾಸು ಹಿಡಿಯುತ್ತದೆ; ಮಾಂಸ ತಿಂದರೆ ಮೂರೂವರೆ ತಾಸು ಸಮಯ ಜೀರ್ಣವಾಗುವುದರಲ್ಲಿ ಹೋಗುತ್ತದೆ; ಆದರೆ ಒಂದು ಲೋಟ ಹಾಲು ಕುಡಿದರೆ ಒಂದೇ ತಾಸಿನಲ್ಲಿ ಅದು ಜೀರ್ಣಿಸಲ್ಪಡುತ್ತದೆ. ಇದರಿಂದ ನಮಗೆ ಬೇಗನೆ ಹಸಿವಾದಂತೆ ತೋರುವುದೆಂಬುದೇನೊ ನಿಜ ಹಾಗೆಯೇ ಎಲ್ಲರ ಆರೋಗ್ಯಕ್ಕೂ ಹಾಲು ಹಿಡಿಸುವುದಿಲ್ಲವೆಂಬುದೂ ಸುಳ್ಳಲ್ಲ — ಪ್ರತಿ ಐದರಲ್ಲಿ ಒಬ್ಬನಿಗೆ ಹಾಲನ್ನು ಜೀರ್ಣಿಸುವುದು ಕಷ್ಟವಾಗುತ್ತದೆ; ಪ್ರತಿ ಹದಿನೈದರಲ್ಲಿ ಒಬ್ಬನ ಪಾಲಿಗೆ ಅದು ವಿಷದಂತೆಯೇ ಅಯೋಗ್ಯವೆನಿಸುತ್ತದೆ ಆದರೆ ಇದರ ಕಾರಣಗಳು ಬೇರೆಯಾಗಿರುವುದರಿಂದ ಹಾಲಿನಲ್ಲಿ ಅವಗುಣವಿದೆ ಎಂದು ಭಾವಿಸಲಾಗದು

ನಿಧಾನವಾಗಿ ಹಾಲನ್ನು ಕುಡಿಯುವ ಅಭ್ಯಾಸ ಕೆಲವರಿಗುಂಟು – ಇದು ಅಷ್ಟು ಒಳ್ಳೆಯದಲ್ಲ ಏಕೆಂದರೆ, ಹಾಲು ಹೊಟ್ಟೆಯಲ್ಲಿಳಿದ ಬಳಿಕ ಒಡನೆಯೇ ಪ್ರಾರಂಭವಾಗುವ ಪಚನ ಕ್ರಿಯೆಯಿಂದ ಹೆಪ್ಪುಗಟ್ಟಲು ತೊಡಗಿ ಕೊನೆಯ ಗುಟುಕಿನೊಂದಿಗೆ ಸಮ ರಸವಾಗಲು ಕಷ್ಟವಾಗುತ್ತದೆ. ಆದುದರಿಂದ ಒಂದು ಲೋಟ ಹಾಲನ್ನು ಒಮ್ಮೆಗೆಯೇ ಕುಡಿದುಬಿಡುವುದು ಇಷ್ಟವೆಂದು ತಿಳಿದವರ ಅಭಿಪ್ರಾಯ ಪ್ರಾಣಿ ಜನ್ಯ ಹಾಲುಗಳಲ್ಲಿ ಅತ್ಯುತ್ಕೃಷ್ಟವಾದುದೆಂದರೆ ಮಾನವ ಜಾತಿಗೆ ಸೇರಿದ ತಾಯಿಯ ಮೊಲೆ ಹಾಲು. ಇದರಲ್ಲಿ ಜೀವ ಕೋಶಗಳಲ್ಲಿ ಕಂಡುಬರುವ ನೈಟ್ರೋಜನಿನ ಅಂಶವನ್ನೊಳಗೊಂಡ ಕೊಬ್ಬು ಸೇರಿರುತ್ತದೆ. ಈ ವಿಶಿಷ್ಟ ಗುಣದ ದೆಸೆಯಿಂದ ಮಾನವ ಶಿಶುವಿನ ಮೆದುಳಿನ ಬೆಳವಣಿಗೆಯನ್ನು ಹೊಂದುವುದಕ್ಕೆ ತುಂಬ ನೆರವು ಸಿಗುತ್ತದೆ ಮನುಷ್ಯನಿಗೆ ಬುದ್ಧಿ ಬರುವುದೇ ತಾಯಿಯ ಮೊಲೆ ಹಾಲಿನ ಈ ಪ್ರಭಾವದಿಂದ ಎಂದರೆ ತಪ್ಪಾಗಲಾರದು.

ಇಷ್ಟರ ವರೆಗೆ ಸುಮಾರು ಎಂಭತ್ತಕ್ಕೂ ಹೆಚ್ಚು ಪ್ರಾಣಿಗಳ ಮೊಲೆ ಹಾಲನ್ನು ಪರೀಕ್ಷಿಸಿದ್ದಾರೆ. ಅವುಗಳಲ್ಲಿ ದನದ ಹಾಲು ಎಲ್ಲ ದೃಷ್ಟಿಯಿಂದಲೂ ಉಪಯುಕ್ತವೆಂದು ನಿರ್ಣಯವಾಗಿದೆ ಇದರಲ್ಲಿ ಕೊಬ್ಬಿನ ಅಂಶ ಹೆಚ್ಚಾಗಿರುವುದೆಂಬುದು ಶ್ರೇಷ್ಠತೆಯ ಈ ಮಟ್ಟಕ್ಕೆ ಕಾರಣವಲ್ಲ—ಎಲ್ಲ ಪೋಷಕಾಂಶಗಳೂ ಸಾಕಷ್ಟು ಪ್ರಮಾಣದಲ್ಲಿವೆ ಎಂಬುದೇ ಹಾಗೆ ಮನ್ನಿಸಿರುವುದರ ಹೇತು. ನೂರಕ್ಕೆ ನಾಲ್ಕೈದರಷ್ಟಿರುವ ಕೊಬ್ಬಿನ ಅಂಶವು ದನದ ಹಾಲನ್ನು ಮನುಷ್ಯ ಸೇವನೆಗೆ ಯೋಗ್ಯವಾಗಿ ಮಾಡುತ್ತದೆ ಎಮ್ಮೆಯ ಹಾಲಿನಲ್ಲಿ ಇದರ ಒಂದೂವರೆ, ಕೆಲವೊಮ್ಮೆ ಎರಡು, ಪಾಲಿನಷ್ಟು ಕೊಬ್ಬು ಕಂಡು ಬರುತ್ತದೆ ಆದರೆ ಅದು ಸುಲಭದಲ್ಲಿ ಜೀರ್ಣಿಸಲ್ಪಡುವುದಿಲ್ಲ. ಆಡಿನ ಹಾಲು ಕೊಬ್ಬಿನ ಮಟ್ಟಿಗೆ ಅತ್ಯುತ್ಕೃಷ್ಟವಾಗಿದೆ. ದನದ ಹಾಲಿಗಿಂತ ಇಮ್ಮಡಿಯಷ್ಟು ಕೊಬ್ಬು ಇದರಲ್ಲಿದೆಯಲ್ಲದೆ ಸುಲಭವಾಗಿ ಜೀರ್ಣವಾಗುವ ವಿಶೇಷ ಗುಣವನ್ನೂ ಹೊಂದಿದೆ ಅಷ್ಟೇಯಲ್ಲ— ಬೇರೆಲ್ಲ ಹಾಲುಗಳಲ್ಲಿ ಕ್ಷಯ ರೋಗದ ಕೀಟಾಣುಗಳ ವಾಹಕವಾಗುವ ಸಾಧ್ಯತೆ ಕಂಡು ಬರುವಾಗ ಆಡಿನ ಹಾಲೊಂದೇ ಅದಕ್ಕೆ ಅಪವಾದ ಸಾಮಾನ್ಯ ದನವೊಂದನ್ನು ಸಾಕುವ ಖರ್ಚಿನಲ್ಲಿ ಮೂರು ಆಡುಗಳನ್ನು ಸಾಕಬಹುದೆಂದು ಹೇಳಲಾಗುತ್ತದೆ. ಆದರೆ ಆಡಿನ ಹಾಲಿಗೆ ಏನೋ ಅಷ್ಟ ವಾಸನೆ ಇದೆ ಎಂಬುದರಿಂದ ಸಾಮಾನ್ಯರಿಗೆ ಅದರಲ್ಲಿ ತಿರಸ್ಕಾರ. ಇದು ಆಡನ್ನು ಶುಚಿಯಾಗಿಡದುದರಿಂದ ಉಂಟಾಗುತ್ತದೆ ಶುಚಿಯಾಗಿ ಆಡನ್ನು ಸಾಕಿದರೆ ಹಾಲು ಸೇವನೆ ತುಂಬ ರುಚಿಕರವಾಗಿರುವುದೆನ್ನುವುದಕ್ಕೆ ಮಹಾತ್ಮಾ ಗಾಂಧೀಜಿಯವರು ಆಡಿನ ಹಾಲನ್ನು ಸದಾ ಕಾಲ ಕುಡಿಯುತ್ತಿದ್ದುದೇ ನಿದರ್ಶನ.

ಪಾಶ್ಚಾತ್ಯ ದೇಶಗಳಲ್ಲಿ ಕುರಿಯ ಹಾಲನ್ನೂ ಸೇವಿಸುತ್ತಾರೆ. ಇದರಲ್ಲಿ ಆಡಿನ ಹಾಲಿಗಿಂತಲೂ ಹೆಚ್ಚು ಕೊಬ್ಬು

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೨—೮—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಚಿತ್ತೂರಿನ ಕೋಟೆಯೊಳಗೆ ಲೋಹಾರರ ಪ್ರವೇಶ

ರಾಜಸ್ಥಾನದ ಚರಿತ್ರೆಯ ಅವಿಸ್ಮೃತ ರಮ್ಯ ಅಧ್ಯಾಯ

ಐತಿಹಾಸಿಕ ಪ್ರಸಿದ್ಧಿಯ ಚಿತ್ತೂರಿನಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕ ಇನ್ನೊಂದು ಘಟನೆಯು ಮೊನ್ನೆ ೭ನೇ ದಿನಾಂಕ ನಡೆಯಿತು. ಭಾರತದ ಪ್ರಧಾನಿ ನೆಹರುಗಳು ಅಂದು "ನಮ್ಮ ದೇಶವು ಸ್ವತಂತ್ರವಾಗಿದೆ; ನೀವೀಗ ನನ್ನೊಡನೆ ಈ ನದಿಯನ್ನು ದಾಟಿ ಚಿತ್ತೂರಿನ ಕೋಟೆಯನ್ನು ಪ್ರವೇಶಿಸ ಬಲ್ಲಿರಿ" ಎಂಬ ಮಾತುಗಳಿಂದ ೪೦೦೦ ಮಂದಿ ಲೋಹಾರರನ್ನು ಸ್ವಾಗತಿಸಿ, ಕೋಟೆಯೊಳಗೊಯ್ದರು. ಕಹಳೆಗಳನ್ನು ಮೊಳಗಿಸುತ್ತಾ ತಮಟೆಗಳನ್ನು ಬಾರಿಸುತ್ತಾ ತಮ್ಮ ಗಾಡಿಯ ಮೇಲಿಂದ ಜಯಘೋಷಮಾಡುತ್ತಾ ಕೋಟೆಯನ್ನೇರುತ್ತಿದ್ದ ಈ ಲೋಹಾರರ ಮುಖದಲ್ಲಿ ತಮ್ಮ ಹಿರಿಯರು ೪೦೦ ವರ್ಷಗಳ ಪೂರ್ವದಲ್ಲಿ ಕೈಗೊಂಡಿದ್ದ ಪ್ರತಿಜ್ಞೆ ಪೂರೈಸಲ್ಪಟ್ಟ ಸಂತೋಷ ಲಾಸ್ಯವಾಡುತ್ತಿದ್ದಿತು. ಆಗ ದೆಹಲಿಯ ಮುಗಲ ಬಾದಶಾಹನಾಗಿದ್ದ ಅಕ್ಬರನು ಹಳದಿಯ ಘಾಟಿನ ಯುದ್ಧದಲ್ಲಿ ಚಿತ್ತೂರಿನ ಅರಸು ರಾಣಾ ಪ್ರತಾಪ ಸಿಂಹನನ್ನು ಸೋಲಿಸಿ, ಅವನ ರಾಜ್ಯವನ್ನು ವಶಪಡಿಸಿಕೊಂಡಿದ್ದನು. ರಾಜ್ಯ ಭ್ರಷ್ಟನಾದ ರಾಣಾ ಪ್ರತಾಪನು ಭಿಲ್ಲರ, ಲೋಹಾರರ ಮತ್ತು ಇತರ ಪ್ರಜೆಗಳ ನೆರವಿನಿಂದ ಅಕ್ಬರನ ಸೇನೆಯನ್ನೆದುರಿಸಿ, ಚಿತ್ತೂರಿನ ಕೋಟೆಯನ್ನು ಸ್ವತಂತ್ರಗೊಳಿಸಲು ಪ್ರಯತ್ನಿಸಿದರೂ ಸಾಧ್ಯವಾಗದೆ ಹೋಯಿತು. ಈ ಸಂದರ್ಭದಲ್ಲಿ ಆತನು ಚಿತ್ತೂರು ಸ್ವತಂತ್ರವಾಗುವ ವರೆಗೆ ಮಣ್ಣಿನ ಪಾತ್ರೆಯಲ್ಲಿಯೇ ಉಣ್ಣುವ, ಹಾಸಿಗೆಯಲ್ಲೆಂದೂ ಮಲಗದಿರುವ, ಸಂಚಾರಿ ಜೀವನವನ್ನೆ ಕೈಗೊಳ್ಳುವ ಮುಂತಾದ ಪ್ರತಿಜ್ಞೆಗಳೊಂದಿಗೆ, "ಚಿತ್ತೂರಿನ ಕೋಟೆಯನ್ನೂ ಪ್ರವೇಶಿಸದಿರುವ ಭೀಷ್ಮ ಪ್ರತಿಜ್ಞೆಯನ್ನು ಕೈಗೊಂಡಿದ್ದನು; ಮತ್ತು ತನ್ನ ಅನುಚರರಿಂದಲೂ ಈ ಪ್ರತಿಜ್ಞೆ ಮಾಡಿಸಿದ್ದನು. ಸ್ವಾಮಿನಿಷ್ಠರಾದ ಲೋಹಾರ ವಂಶಜರು ಅಂದಿನಿಂದ ಇಂದಿನ ತನಕವೂ ರಾಣಾ ಪ್ರತಾಪನಿಗೆ ಕೊಟ್ಟ ಮಾತನ್ನು ಮರೆಯದೆ, ಸಂಚಾರಿ ಜೀವನದ ಕಷ್ಟಗಳನ್ನನುಭವಿಸುತ್ತಾ ಚಿತ್ತೂರಿನ ಕೋಟೆಯನ್ನೆಂದೂ ಪ್ರವೇಶಿಸದೆ ಹೊರಗೆಯೇ ದಿನಗಳೆಯುತ್ತಾ ಬಂದಿದ್ದರು.

ಉಜ್ವಲವಾದ ನಿಷ್ಠೆಯನ್ನು ವ್ಯಕ್ತಪಡಿಸಿದ ಲೋಹಾರರ ಉದಾಹರಣೆ ಎಲ್ಲ ಭಾರತೀಯರಿಗೂ ಅನುಕರಣೀಯವಾದುದೆಂಬುದರಲ್ಲಿ ಅನುಮಾನವಿರಲಾರದು. ನೆಹರುಗಳು ಈ ಬಂಧುಗಳನ್ನು ಸ್ವಾಗತಿಸುತ್ತಾ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಇಡೀ ಭಾರತವು ಸ್ವತಂತ್ರವಾದ ಕತೆಯನ್ನು ವಿವರಿಸಿದರಲ್ಲದೆ ರಾಣಾ ಪ್ರತಾಪನ ಕಾಲದ ಬಳಿಕ ಕಳೆದು ಹೋದ ಈ ನಾಲ್ನೂರು ವರ್ಷಗಳಲ್ಲಿ ಉಂಟಾಗಿರುವ ಸಾಮಾಜಿಕ ರಾಜಕೀಯ ಹಾಗು ಆರ್ಥಿಕ ಸ್ಥಿತ್ಯಂತರಗಳನ್ನೂ ಪ್ರಸ್ತಾಪಿಸಿದರು. ಈಗ ಹಿಂದು, ಮುಸಲ್ಮಾನ ಮುಂತಾದ ಜಾತಿಮತಗಳ ಭೇದಕ್ಕೆ ಎಡೆಯಿಲ್ಲವೆಂದೂ ಭಾರತವು ಎಲ್ಲ ಮತ ಧರ್ಮಗಳ ಸಂಗಮ ಭೂಮಿಯೆಂದೂ ಅವರು ವಿವರಿಸಿದರು. ಇಲ್ಲೀಗ ರಾಣಾರ ಅಥವಾ ರಾಜರ ಅಧಿಕಾರ ನಡೆಯದೆ, ಪ್ರಜಾಪ್ರಭುತ್ವ ಪದ್ಧತಿ ಆಚರಣೆಯಲ್ಲಿದೆಯೆಂದೂ ಶ್ರೇಷ್ಠ ಹಾಗು ಕನಿಷ್ಠ ಭಾವನೆಯ ಸ್ಥಾನವನ್ನು ಸಮಾನತೆ ಆಕ್ರಮಿಸಿದೆಯೆಂದೂ ಪ್ರಬುದ್ಧ ಗಂಡಸು ಮತ್ತು ಹೆಂಗಸು ಇಬ್ಬರಿಗೂ ಮತದಾನದ ಅಧಿಕಾರ ದೊರೆತಿದೆಯೆಂದೂ ಹೇಳಿ, ನೆಹರುಗಳು ರಾಷ್ಟ್ರದ ಪುನರುದ್ಧಾರ ಕಾರ್ಯದಲ್ಲಿ ಅತ್ಯುತ್ಸಾಹದಿಂದ ಕೆಲಸ ಮಾಡುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ರಾಣಾ ಪ್ರತಾಪನಂಥ ನೂರಾರು, ಸಾವಿರಾರು ರಾಷ್ಟ್ರನಿಷ್ಠ ಧುರೀಣರ, ಮಹಾತ್ಮರನ್ನು ಅನುಸರಿಸುವ ನಾಗರಿಕರು ಇದ್ದರೆ ಇದೇನೂ ಅಸಾಧ್ಯವಾದುದಲ್ಲ. ಲೋಹಾರರು ಈ ಕುರಿತು ನಮಗೊಂದು ಆದರ್ಶ ಹಾಕಿ ಕೊಟ್ಟಿದ್ದಾರೆ; ಮತ್ತು ಲೋಹಾರರ ಪುನರ್ನಿವೇಶನಕ್ಕೆ ಮನಸ್ಸು ಮಾಡಿ ಸರಕಾರದವರು ಕಲ್ಯಾಣ ರಾಷ್ಟ್ರದ ನಿರ್ಮಾಣವೇ ತಮ್ಮ ಧ್ಯೇಯವೆಂಬುದನ್ನು ಸ್ಪಷ್ಟಗೊಳಿಸಿದ್ದಾರೆ.

ರಾಣಾ ಕುಂಭನು ಆನೆಗಳ ಕಾದಾಟವನ್ನು ನೋಡಲೆಂದು ಕಟ್ಟಿಸಿದ್ದ ಭವ್ಯ ಮಂಟಪದ ಮೇಲಿಂದ ನಿಂತು ನೆಹರುಗಳು ಭಾಷಣವಿತ್ತರೆಂದು ವರದಿಗಳು ಹೇಳುತ್ತವೆ. ರಾಜಸ್ಥಾನವು ಭಾರತದ ಮಧ್ಯ ಕಾಲದ ಇತಿಹಾಸದಲ್ಲಿ ಅನೇಕ ವೈಭವದ ಪುಟಗಳನ್ನು ಬರೆಯಿತು. ಇಲ್ಲಿ ಅನೇಕ ರಜಪೂತ ವಂಶಜರು ಆಳಿದರು; ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ಹಿಡಿದರು; ಆದರೆ ನಡುವೆ ತಮ್ಮ ನಡುವೆಯೇ ಹೊಡೆದುಕೊಂಡು ಅಥವಾ ವಿದೇಶೀಯರ ಆಕ್ರಮಣವನ್ನೆದುರಿಸಿ ವೀರ ಸ್ವರ್ಗವನ್ನೂ ಸೇರಿದರು. ರಜಪೂತರಲ್ಲಿದ್ದ ಪರಸ್ಪರ ವೈಮನಸ್ಯವೇ ಭಾರತವನ್ನು ಪರಕೀಯರ ಧಾಳಿಗೆ ಸುಲಭವಾಗಿ ಗುರಿಮಾಡಿತೆಂದು ಹೇಳಲಾಗುತ್ತದೆ; ಇದರಿಂದ ಭಾರತದ ಸ್ವಾತಂತ್ರ್ಯ ನಷ್ಟವಾಯಿತು. ಆದರೆ ಅಂತಃಕಲಹದಿಂದ ಭಾರತ ದೂರವಿರಬೇಕೆಂಬ ಪಾಠ ಮಾತ್ರ ಸಿಕ್ಕಿತು. ರಜಪೂತ ವಂಶಜರು ಶೂರ ಯೋಧರಾಗಿದ್ದರು; ಕೇಸರಿ ವರ್ಣದ ಉಡುಗೆಯನ್ನುಟ್ಟು ಬೆನ್ನಿಗೆ ಗುರಾಣಿ ತೊಟ್ಟು, ಕೈಯಲ್ಲಿ ಖಡ್ಗವನ್ನು ಝಳಪಿಸುತ್ತಾ ಅವರು ಕಲಿತನದಿಂದ ಹೋರಾಡುತ್ತಿದ್ದರು: ಆದರೆ ಘೋರಿಯ ಮಹಮ್ಮದನ ಸೇನೆ ಪೃಥ್ವೀರಾಜನನ್ನೂ ಅಲ್ಲಾವುದ್ದೀನನ ಸೇನೆ ಚಿತ್ತೂರಿನ ಕೋಟೆಯನ್ನೂ ಬಾಬರನ ದಳವು ರಾಣಾ ಸಿಂಗನನ್ನೂ ಅಕ್ಬರನು ರಾಣಾ ಪ್ರತಾಪನನ್ನೂ ಸೋಲಿಸಿದ ಶಕ್ತಿಯ ಗೂಢವನ್ನರಿಯಲು ಅವರು ಪ್ರಯತ್ನಿಸಲಿಲ್ಲ. ಒಗ್ಗಟ್ಟನ್ನು ಬಿಟ್ಟುಗೊಟ್ಟರು; ತೋಪು ಮುಂತಾದ ಹೊಸ ಆಯುಧಗಳನ್ನು ಉಪಯೋಗಿಸುವುದಕ್ಕೆ ಪ್ರಯತ್ನಿಸದೆ, ಖಡ್ಗ ಮತ್ತು ಭರ್ಜಿಗಳಿಂದಲೇ ತೃಪ್ತಿ ಹೊಂದಿದರು. ಇದರಿಂದಾಗಿ ಸಾವಿರಾರು ರಜಪೂತ ರಮಣಿಯರು ಮ್ಲೇಂಛರ ಮುಖ ನೋಡಲಾರೆವೆಂದು ಸ್ವೇಚ್ಛೆಯಿಂದ ಚಿತೆಯನ್ನೇರುವ ನೋಟವೂ ಬಿರುಕು ಬಿದ್ದ ಕೋಟೆಗಳ ದೃಶ್ಯವೂ ಆಗ ರಾಜಸ್ಥಾನದ ಪ್ರತಿಯೊಂದು ಯುದ್ಧದ ಅಂತ್ಯದಲ್ಲೂ ಸಾಮಾನ್ಯವಾಗಿ ಕಂಡು ಬರುತ್ತಿದ್ದಿತು.

ರಜಪೂತರ ಇತಿಹಾಸದಲ್ಲಿ ರೋಮಾಂಚಕವಾದ ಅನೇಕ ಪ್ರಕರಣಗಳಿವೆ—ಪದ್ಮಿನಿಯನ್ನು ಅಲ್ಲಾವುದ್ದೀನ ಬಯಸಿದ ಕತೆ ದೊಡ್ಡ ಯುದ್ಧಕ್ಕೆ ಕಾರಣವಾಯಿತು; ಕೃಷ್ಣಾ ಕುಮಾರಿಯ ಸೌಂದರ್ಯ ರಜಪೂತ ಯುವಕರಲ್ಲಿ ಅಸೂಯೆ ಹುಟ್ಟಿಸಲು ಅವಳ ತಂದೆಯೇ ಮಗಳಿಗೆ ವಿಷವನ್ನುಣಗೊಟ್ಟು, ಸ್ಪರ್ಧೆಯನ್ನು ನಿಲ್ಲಿಸಲೆತ್ನಿಸಿದನು; ಪನ್ನಾ ದಾಸಿಯು ತನ್ನ ಮಗನನ್ನೆ ವನವೀರನ ಖಡ್ಗಕ್ಕೆ ಆಹುತಿಯಾಗಿತ್ತು, ಉದಯ ಸಿಂಹನನ್ನು ಉಳಿಸಿ, ಮೇವಾಡ ವಂಶವನ್ನು ಉದ್ಧರಿಸಿದಳು; ಮಗುವಿನ ಕೈಯಲ್ಲಿದ್ದ ರೊಟ್ಟಿಯನ್ನು ಕಾಡು ಬೆಕ್ಕು ಅಪಹರಿಸಿಕೊಂಡು ಓಡಿದಾಗ, ಇನ್ನೊಂದು ತುಣುಕನ್ನಿತ್ತು ಮಗುವನ್ನು ಸಂತೈಸಲಾರದೆ ಬಡತನದಿಂದ ರಾಣಾ ಪ್ರತಾಪನು ಬನ್ನಬಟ್ಟನು; ಸಂಯುಕ್ತೆಯ ಪ್ರಣಯ-ಪ್ರಸಂಗದಿಂದ ಪೃಥ್ವೀರಾಜನು ಬಹಳವಾದ ಕೇಡನ್ನು ತಂದು ಕೊಂಡನು; ತನ್ನ ಕೃಷ್ಣಭಕ್ತಿಯ ಕಾರಣದಿಂದ ಮೀರಾಬಾಯಿಯು ಪತಿಯ ಕೈಯಿಂದಲೇ ವಿಷವನ್ನು ಸ್ವೀಕರಿಸಿ, ಭಜಕರ ಕೈವಾರಿಯಾದಳು; ಮುಗಲನಾಗಿದ್ದರೂ ಹುಮಾಯೂನನನ್ನು ರಕ್ಷಾ ಬಂಧನದ ಸೂತ್ರದಿಂದ ಸಹೋದರನಾಗಿ ಮಾಡಿಕೊಂಡ ಕರ್ಣದೇವಿಯು ಹೊಸ ಸಂಪ್ರದಾಯವನ್ನೆ ಹಾಕಿ ಕೊಟ್ಟಳು — ಈ ಬಗೆಯ ನೂರಾರು ಅದ್ಭುತರಮ್ಯ ಚಿತ್ರಗಳನ್ನು ರಾಜಸ್ಥಾನದ ಚರಿತ್ರೆ ನಮ್ಮ ಕಣ್ಣ ಮುಂದೆ ದೀಪಿಸುತ್ತದೆ; ಉತ್ಥಾನ ಮತ್ತು ಪತನವೆರಡನ್ನೂ ಕಂಡ ಮಹಾ ರಾಜ್ಯವಾಗಿ ಅದು ನಮಗೆ ಗೋಚರಿಸುತ್ತದೆ.

ಅಬೂ ಪರ್ವತದಲ್ಲಿ ಮೊದಲನೆಯ ರಜಪೂತನು ಜನಿಸಿದನೆಂದು ಹೇಳಲಾಗುತ್ತದೆ. ಈ ಪರ್ವತ ಇಂದಿನ ರಾಜಸ್ಥಾನದ ಬೆಟ್ಟ ಪ್ರದೇಶ. ಇದರ ತುದಿಯಲ್ಲಿ ಐದು ಜೈನ ದೇವಾಲಯಗಳಿದ್ದು, ಅವುಗಳ ಸ್ತಂಭ ರಾಜಿಯಲ್ಲಿಯೂ ಮುಚ್ಚಿಗೆಯಲ್ಲಿಯೂ ಮಂಡಲಾಕಾರದ ಕೆತ್ತನೆಯಲ್ಲಿಯೂ ಬಹಳ ಸೂಕ್ಷ್ಮವಾದ ವಾಸ್ತು ಶಿಲ್ಪ ಕಂಗೊಳಿಸುತ್ತವೆ; ನೋಡಿದಷ್ಟು ಸಾಲದೆನಿಸಿ, ಮನಸ್ಸು ಮತ್ತೆ ಅಲ್ಲಿಗೋಡುತ್ತದೆ. ರಾಜಸ್ಥಾನದಲ್ಲಿ ಮಳೆ ಬಹಳ ಕಡಿಮೆ ಬೀಳುವುದರಿಂದ ಒಂದು ಬಗೆಯ ಹುಲ್ಲು ಮತ್ತು ಕುರಿಚಲು ಪೊದೆಗಳು ಕಲ್ಲು ಬೆಟ್ಟಗಳನ್ನು ಮುಚ್ಚುತ್ತವೆ; ಇಲ್ಲಿ ಸಿಂಹಗಳಿವೆಯೆಂಬುದನ್ನು ನಂಬುವುದು ಕಷ್ಟವಾದರೂ ನವಿಲು ಮತ್ತು ಮುಸುವಗಳು ನಮಗೆ ಎದುರಾಗುತ್ತವೆ. ರಾಜಸ್ಥಾನದ ಉಸುಬಿನಲ್ಲಿ ಕಂಡು ಬರುವ ಇನ್ನೊಂದು ಪ್ರಾಣಿಯೆಂದರೆ ಒಂಟೆ. ಅಜ್ಮೀರದಲ್ಲಿ ಪುಷ್ಕರ ಸರಸ್ಸು ನಾಲ್ಕು ಸುತ್ತಲಿನ ಬೆಟ್ಟಗಳ ನಡುವೆ ನಮ್ಮನ್ನು ಸೆಳೆದು ಕೊಳ್ಳುತ್ತದೆ. ಜಯಪುರದ ವಿಶಾಲವಾದ ಬೀದಿಯ ಚೌಕಗಳು, ರಾಜ ಮಹಾರಾಜರುಗಳ ಶಾಲೆ, ಆಧುನಿಕತೆಯನ್ನು ವ್ಯಕ್ತಪಡಿಸುತ್ತವೆ. ಕೆಂಪು ಶಿಲೆಯಿಂದಲೂ ಹಾಲುಗಲ್ಲಿನಿಂದಲೂ ರಚಿಸಿದ ವಾಸ್ತು ರಾಜಸ್ಥಾನದ ಯಾವ ಮೂಲೆಯಲ್ಲೂ ದೃಗ್ಗೋಚರವಾಗುತ್ತದೆ. ಚಿಕ್ಕ ಪುಷ್ಕರಣಿಗಳು, ಪ್ರಾಸಾದಗಳು, ಉಪವನಗಳಿಗೆ ಲೆಕ್ಕವೇ ಇಲ್ಲ—ಇಲ್ಲಿ ಹಿಂದೆ ರಾಜ ಮಹಾರಾಜರುಗಳೂ ರಾಣಾ ಮತ್ತು ಠಾಕೂರರೂ ಮಾತ್ರ ವಿಹರಿಸುತ್ತಿದ್ದರೆ ಈಗ ಸರದಾರ ಪಟೇಲರ ಬುದ್ಧಿವಂತಿಕೆಯ ಫಲವಾಗಿ ಸಾಮಾನ್ಯ ಜನರೂ ಈ ವೈಭವದ ಅನುಭವ ಪಡೆಯಬಲ್ಲರು. ರಾಜಸ್ಥಾನ ರಂಗಿನ ತವರೂರು—ಅಲ್ಲಿನ ಸ್ತ್ರೀಯರು ಕೆಂಪು, ಕಿತ್ತಳೆ, ಹಳದಿ ಮುಂತಾದ ಬಣ್ಣ ಬಣ್ಣದ ಉಡುಗೆಯನ್ನುಟ್ಟು, ತಲೆಯ ಮೇಲೆ ಕೊಡಗಳನ್ನಿಟ್ಟುಕೊಂಡು, ಬಾಯಲ್ಲಿ ನಗಿನ ಹಾಡು ಕಟ್ಟಿಕೊಂಡು, ನಾಚಿ, ಸಾಗುತ್ತಾರೆ. ಗಂಡಸರ ಮೂವತ್ತು ಮೊಳದ ಮುಂಡಾಸಿನಲ್ಲಿ ಮುನ್ನೂರು ಬಣ್ಣ ಮಿಂಚುತ್ತವೆ! ಇವರ ಚಿಕ್ಕ ಗವಿಗಳಲ್ಲಿ ಸೊಬಗನ್ನು ಬೆಳೆಯಲಾಗುತ್ತದೆ. ಕೋಟೆಕೊತ್ತಲಗಳ ಅವಶೇಷಗಳ ಮೇಲಿಂದ ಸುತ್ತಲೂ ದೃಷ್ಟಿಕ್ಷೇಪಿಸಿದಾಗ, ಪಡುವಣ ಬಾನಿನ ಹೊಂಬಣ್ಣದಲ್ಲಿ ಪ್ರಕೃತಿಯನ್ನೀಕ್ಷಿಸಿದಾಗ, ಆನಂದಾತಿರೇಕದಿಂದ ಹೃದಯ ಹೊಯ್ದಾಡುತ್ತದೆ.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ನಿಮ್ಮ ಎಲ್ಲಾ ಜೋತಿಷ್ಯ ವಿಷಯಗಳಿಗೆ ಇಂದೇ ಬರೆಯಿರಿ—

ಪಂಡಿತ ಕೆ. ಎಸ್. ಶಾಸ್ತ್ರಿ,
ಜ್ಯೋತಿರ್ವಿದ್ಯಾ ಸಂಶೋಧನಾ ಕೇಂದ್ರ,
ಪಂಚವಟಿ, ನಾಸಿಕ.

ಏಶಿಯದ ಮೂಕ ಜನತೆಯ ಮನದಾಸೆ

ಹೊಸ ದೆಹಲಿಯ ಪರಿಷತ್ತಿನ ಕಾರ್ಯಕಲಾಪ

ಏಶಿಯದ ಜನರ ಆಶೋತ್ತರಗಳೇನೆಂಬುದನ್ನು ಜಗತ್ತಿನ ಎಲ್ಲರಿಗೂ ತಿಳಿಯಪಡಿಸುವ ಏಶ್ಯದ ರಾಷ್ಟ್ರಗಳ ಸರಕಾರೇತರ ಮಟ್ಟದ ಪರಿಷತ್ತೊಂದು ಹೊಸ ದೆಹಲಿಯಲ್ಲಿ ಕಳೆದ ವಾರ ಜರಗಿತು. ಜಗತ್ತಿನ ಅರೆವಾಸಿಯಷ್ಟು ಜನರನ್ನು ಪ್ರತಿನಿಧೀಕರಿಸುವ ಏಶಿಯದ ಜನತೆ ಇನ್ನು ಮುಂದೆ ಬಾಯಿಬಾರದ ಮೂಕನಂತೆ ಕುಳಿತಿರಲಾರದು; ತನಗೆ ಯಾವುದು ಹಿತ, ಯಾವುದು ಬೇಡ ಎಂಬ ವಿಷಯದಲ್ಲಿ ಅದು ಸರಕಾರಗಳ ಮೂಲಕವಷ್ಟೇ ಯಲ್ಲ ಸರಕಾರೇತರ ಧುರೀಣರ ಮೂಲಕ ಸಹ ಅಭಿಪ್ರಾಯವನ್ನು ಪ್ರಕಟಿಸಲು ನೋಡುವುದು ಎಂಬುದಕ್ಕೆ ಈ ಪರಿಷತ್ತು ಉದಾಹರಣೆಯಾಯಿತು.

ಭಾಗವಹಿಸಿದ ದೇಶಗಳು

೧೯೫೪ರಲ್ಲಿ ಸ್ಟಾಕ್‌ಹೋಮಿನಲ್ಲಿ ಜಾಗತಿಕ ದ್ವೇಷನಿವಾರಣೆಯ ಉದ್ದೇಶದಿಂದ ಸೇರಿದ್ದ ಪರಿಷತ್ತಿನ ಅಂಗವಾಗಿ ಇದನ್ನು ಭಾರತದ ಶ್ರೀಮತಿ ರಾಮೇಶ್ವರಿ ನೆಹರು ಮುಂತಾದ ಪ್ರಭೃತಿಗಳು ಏರ್ಪಡಿಸಿದ್ದರು. ಆದುದರಿಂದ ಈ ಪರಿಷತ್ತು ಕಮ್ಯೂನಿಸ್ಟರಿಂದ ಪ್ರಚೋದಿಸಲ್ಪಟ್ಟದೆಂದು ಪಾಶ್ಚಾತ್ಯರಾಷ್ಟ್ರಗಳು ತಪ್ಪಾಗಿ ತಿಳಿದುಕೊಳ್ಳುವ ಭಯವಿದ್ದಿತೆಂದು ಹೇಳಬಹುದು. ಇದಕ್ಕೋಸ್ಕರವೇ ಪ್ರಧಾನಿ ನೆಹರುಗಳು ಪಾರ್ಲಿಮೆಂಟಿನ ಕಾಂಗ್ರೆಸು ಪ್ರತಿನಿಧಿಗಳ ಮುಂದೆ ಮಾತನಾಡುವಾಗ ಈ ಪರಿಷತ್ತು ಹೊಸ ತೊಂದರೆಯಾಗಿ ಪರಿಣಮಿಸಿದೆ ಎಂದರು.

ಪರಿಷತ್ತಿನಲ್ಲಿ ಭಾಗವಹಿಸಲು ಏಶಿಯದ ೨೫ ರಾಷ್ಟ್ರಗಳಿಗೆ ಆಮಂತ್ರಣವನ್ನು ಕೊಟ್ಟಿದ್ದರೂ ಅವುಗಳಲ್ಲಿ ೧೮ ಮಾತ್ರ ಇದನ್ನು ಸ್ವೀಕರಿಸಿದ್ದವು, ಇವುಗಳಲ್ಲಿ ಪರಿಷತ್ತಿಗೆ ಪ್ರತಿನಿಧಿ ಮಂಡಳ ಕಳಿಸಿದ ರಾಷ್ಟ್ರಗಳು ೧೪ ಮಾತ್ರ. ಪರಿಷತ್ತಿಗೆ ಬಂದ ಪ್ರತಿನಿಧಿಗಳಲ್ಲಿ ಆ ದೇಶದ ರಾಜಕೀಯ ಪಕ್ಷಗಳ ಧುರೀಣರೂ ಆರ್ಥಿಕ, ಶೈಕ್ಷಣಿಕ, ವೈಜ್ಞಾನಿಕ, ವೈದ್ಯಕೀಯ ಮುಂತಾದ ಕ್ಷೇತ್ರಗಳ ತಜ್ಞರೂ ಇದ್ದರು. ಭಾರತದ ಶ್ರೀಮತಿ ರಾಮೇಶ್ವರಿ ನೆಹರುಗಳನ್ನು ಪರಿಷತ್ತು ಅಧ್ಯಕ್ಷರಾಗಿ ಚುನಾಯಿಸಿ, ಅನೇಕ ವಿಷಯಗಳಲ್ಲಿ ವಿಚಾರ ವಿನಿಮಯವನ್ನು ನಡೆಸಿ, ಗೊತ್ತುವಳಿಗಳನು ಸ್ವೀಕರಿಸಿತು.

ಪಂಚ ಸೂತ್ರಗಳಿಗೆ ಬೆಂಬಲ

ಪರಿಷತ್ತಿನ ಕಾರ್ಯಕಲಾಪಗಳನ್ನು ನಿರೀಕ್ಷಿಸಿದರೆ, ಭಾರತದ ಪ್ರತಿಷ್ಠೆಗೆ ಮತ್ತು ಸರಕಾರದ ನಿಲುಮೆಗೆ ಕುಂದಾಗುವ ನಿರ್ಣಯಗಳೇನೂ ಆಗಿಲ್ಲವೆಂದು ಗೊತ್ತಾಗುತ್ತದೆ. ಏಶಿಯದ ಮೂಕ ಜನರ ಮಾತೆಯಾಗಿ ಕೆಲಸ ಮಾಡಿದ ಈ ಪರಿಷತ್ತು ಭಾರತ ಮತ್ತು ಚೀನಗಳು ಮಾತ್ರ ಮೊದಲಾಗಿ ಪ್ರವರ್ತಿಸಿದ ಪಂಚ ಸೂತ್ರಗಳನ್ನು ಶಾಂತಿಗೆ ಪೋಷಕವೆಂದು ಹೇಳುತ್ತಾ ಸ್ವಾಗತಿಸಿತು. ಇವುಗಳನ್ನು ಮನ್ನಿಸುವುದರಿಂದ ಅಂತಾರಾಷ್ಟ್ರೀಯ ದ್ವೇಷ ಶಮನದಲ್ಲಿ ಮಹತ್ವದ ಹೆಜ್ಜೆಯನ್ನು ಇಟ್ಟಂತಾಗುವುದೆಂದು ಪರಿಷತ್ತಿನಲ್ಲಿ ಭಾಗವಹಿಸಿದ ಪ್ರತಿನಿಧಿಗಳು ಅಭಿಪ್ರಾಯಪಟ್ಟರು. "ಇದು ಜಗತ್ತಿನ ರಾಷ್ಟ್ರಗಳಿಗೆ ಕೊಟ್ಟ ಆಹ್ವಾನ; ಪ್ರತಿಯೊಂದು ರಾಷ್ಟ್ರವೂ ಇದಕ್ಕೆ ನೇರಾದ ಉತ್ತರಕೊಡಬೇಕಾಗುತ್ತದೆ" ಎಂದು ಪಂಚ ಸೂತ್ರಗಳ ವಿಷಯದಲ್ಲಿ ನೆಹರುಗಳು ಹೇಳಿದ್ದ ಮಾತನ್ನು ಅನುಮೋದಿಸುತ್ತಾ ಏಶಿಯದ ಶಾಂತಿ ಮತ್ತು ಆಂತರಿಕ ಸಂಘಟನೆಗಾಗಿ ಘೋಷಿಸಿದ ಅಪ್ರತಿಮ ಸಿದ್ಧಾಂತವಿದೆಂದು ಪರಿಷತ್ತು ಸಾರಿತು.

ವಸಾಹತು ವಾದವನ್ನು ಪರಿಷತ್ತು ಸ್ಪಷ್ಟವಾಗಿ ಖಂಡಿಸಿತು. ಏಶಿಯದಲ್ಲಿ ಪರಕೀಯರ ಹಸ್ತಕ್ಷೇಪವು ಇಷ್ಟವಾದುದಲ್ಲ; ಅದು ಕೂಡಲೇ ನಿಲ್ಲಬೇಕು ಎಂದು ಹೇಳಲಾಯಿತು. ಮಲಯ, ಗೋವೆ ಮುಂತಾದ ಪರಕೀಯ ರಾಷ್ಟ್ರಗಳ ವಶದಲ್ಲಿರುವ ಏಶಿಯದ ಪ್ರದೇಶಗಳು ಬೇಗನೆ ಸ್ವತಂತ್ರಗೊಳ್ಳಬೇಕೆಂದು ಪರಿಷತ್ತು ಅಭಿಪ್ರಾಯಪಟ್ಟಿತು. ಗೋವೆಯ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿಸಿದ ಪರಿಷತ್ತು ಭಾಷೆ, ಸಂಸ್ಕೃತಿ, ಆರ್ಥಿಕಾವಲಂಬನ ಮತ್ತು ಭೌಗೋಲಿಕ ಸ್ಥಾನಮಾನಗಳ ದೃಷ್ಟಿಯಿಂದ ಭಾರತದ ಅಂಗವಾಗಿರುವ ಗೋವೆ ಮತ್ತಿತರ ಮಹಲುಗಳನ್ನು ಶಾಂತ ರೀತಿಯಿಂದ ಹಸ್ತಾಂತರಿಸುವ ಬಗ್ಗೆ ಪೋರ್ಚುಗಾಲವು ಭಾರತದೊಡನೆ ಮಾತುಕತೆಯನ್ನು ಪ್ರಾರಂಭಿಸಬೇಕೆಂದು ಕರೆಯಿತ್ತಿತು.

ಅಣು ಶಸ್ತ್ರಗಳ ಅನಾಹುತ.

ನಿರೀಕ್ಷಿಸಿದಂತೆ ವರ್ಣದ್ವೇಷವನ್ನೂ ಪರಿಷತ್ತು ಖಂಡಿಸಿತು. ವರ್ಣಭೇದ ಧೋರಣೆಯನ್ನು ಅನುಸರಿಸುವ ರಾಷ್ಟ್ರಗಳು ಅದನ್ನು ಬಿಟ್ಟುಕೊಡುವಂತೆ ಜಗತ್ತಿನ ಬೇರೆಲ್ಲ ರಾಷ್ಟ್ರಗಳು ತಮ್ಮ ವರ್ಚಸ್ಸನ್ನು ಉಪಯೋಗಿಸಬೇಕೆಂದು ಅದು ಅಭಿಪ್ರಾಯಪಟ್ಟಿತು. ಅಣು ಶಸ್ತ್ರಗಳಿಂದಾಗುವ ಅನಾಹುತವನ್ನು ಪರಿಷತ್ತು ಗಂಭೀರವಾಗಿ ಪರ್ಯಾಲೋಚಿಸಿ ಅಣು ಶಸ್ತ್ರಗಳನ್ನು ನಿರ್ಬಂಧಿಸುವ ಆವಶ್ಯಕತೆಯನ್ನು ಪರಿಷತ್ತು ಒತ್ತಿ ಹೇಳಿತು. ಎಲ್ಲ ಜನರೂ ಈ ಕುರಿತು ಕೈಗೊಳ್ಳುವ ಆಂದೋಲನದಲ್ಲಿ ಭಾಗವಹಿಸಿ, ಜಾಗತಿಕ ಅಭಿಪ್ರಾಯವನ್ನು ಬಲಗೊಳಿಸಬೇಕೆಂದು ಪ್ರತಿನಿಧಿಗಳು ವಿನಂತಿಸಿದರು.

ಸೈನಿಕ ರಕ್ಷಣೆಯ ಒಪ್ಪಂದ ಮತ್ತು ವ್ಯೂಹಗಳ ರಚನೆಯ ವಿಷಯವನ್ನೂ ಪರಿಷತ್ತು ಚರ್ಚಿಸಿತು ಏಶಿಯದ ಜನತೆಯನ್ನು ಶಾಶ್ವತವಾಗಿ ಪರಾವಲಂಬಿಯಾಗಿ ಮಾಡುವ ಎರಡು ಸಂಗತಿಗಳೇ ಸೈನಿಕ ಒಪ್ಪಂದ ಮತ್ತು ಆರ್ಥಿಕ ಸಹಾಯಗಳೆಂದು ಪರಿಷತ್ತಿನಲ್ಲಿ ಹೇಳಲಾಯಿತು. ಅಮೇರಿಕವು ಫೊರ್ಮೋಸಾ ದ್ವೀಪವನ್ನು ಆಕ್ರಮಿಸಿ ಸೈನಿಕ ಠಾಣ್ಯವನ್ನಾಗಿ ಮಾಡಿದೆಯೆಂದು ಚೀನಾದ ಪ್ರತಿನಿಧಿಗಳು ಆರೋಪಿಸಿದರು. ಜಪಾನಿನ ಪ್ರತಿನಿಧಿಗಳು ತಮ್ಮ ದೇಶದಲ್ಲಿ ಅಮೇರಿಕವು ಏಳು ನೂರಕ್ಕಿಂತಲೂ ಹೆಚ್ಚು ಸೈನಿಕ ಕೇಂದ್ರಗಳನ್ನು ಕಟ್ಟಿಕೊಂಡಿದೆಯಾಗಿ ಹೇಳಿ, ಇವೆಲ್ಲವನ್ನೂ ಬಿಟ್ಟುಕೊಟ್ಟು ವಿದೇಶೀಯರು ಹಿಂದಿರುಗಬೇಕೆಂದು ಒತ್ತಾಯಿಸಿದರು. ಅರಬ ರಾಷ್ಟ್ರಗಳ ಅನೇಕ ಪ್ರತಿನಿಧಿಗಳು ಮಾತನಾಡುತ್ತಾ ಇರಾಕು ಮತ್ತು ತುರ್ಕಿಗಳ ನಡುವೆ ನಡೆದಿರುವ ಸೈನಿಕ ಒಪ್ಪಂದ ಮತ್ತು ಸಿರಿಯ-ಲೆಬನಾನುಗಳ ಮೇಲೆ ಬೀಸಲಾಗಿರುವ ಬಲೆಯು ಅರಬ ಗುಂಪಿನ ಶಕ್ತಿಯನ್ನು ಪರಕೀಯರ ಹಿಡಿತದಲ್ಲಿಟ್ಟುಕೊಳ್ಳುವ ಉಪಕ್ರಮವೆಂದು ಆರೋಪಿಸಿದರು.

ಫೊರ್ಮೋಸದ ವಿವಾದ

ಏಶಿಯದ ಜನತೆ ತನ್ನಲ್ಲಿಯೇ ಜಗಳವಾಡುತ್ತಾ ಹೊಡೆದಾಡಿಕೊಳ್ಳಲಾರದು ಎನ್ನುತ್ತಾ ಪರಸ್ಪರ ಸಹಕಾರವನ್ನು ಪರಿಷತ್ತು ಆಗತ್ಯವೆಂದು ಭಾವಿಸಿತು. ಆದು ಫೊರ್ಮೋಸದ ಗಡುಚಾದ ಸಮಸ್ಯೆಯನ್ನು ಬಿಡಿಸಲು ಹತ್ತು ರಾಷ್ಟ್ರಗಳ ಸಮ್ಮೇಳನವನ್ನು ನೆರೆಯಿಸಬೇಕೆಂದು ಸೂಚಿಸಿತು. ಕೊರಿಯದ ಪ್ರಶ್ನೆಯನ್ನೂ ಅದು ವಿಚಾರಿಸಿತು—ಆದರೆ ಈ ಕುರಿತು ಯಾವ ಸಮ್ಮೇಳನದ ಉಲ್ಲೇಖವನ್ನೂ ಮಾಡಲಿಲ್ಲ. ಪರಕೀಯ ಸೈನ್ಯಗಳು ಉತ್ತರ ಮತ್ತು ದಕ್ಷಿಣ ಕೊರಿಯಗಳಿಂದ ಹೊರಗೆ ನಡೆಯಬೇಕು ಮತ್ತು ಕೊರಿಯದ ಪುನರೇಕೀಕರಣಕ್ಕೋಸ್ಕರ ಶಾಂತಿಯುತ ಪ್ರಯತ್ನವಾಗಬೇಕು ಎಂದಷ್ಟೇ ಅದು ತಿಳಿಸಿತು.

ಸಂಯುಕ್ತ ರಾಷ್ಟ್ರಸಂಘದಲ್ಲಿ ಕೆಂಪು ಚೀನಕ್ಕೆ ಪ್ರವೇಶವನ್ನು ಕೊಡಬೇಕೆಂದು ಪರಿಷತ್ತು ಕೇಳಿಕೊಂಡಿತು ಚೀನದ ಮೇಲೆ ಹಾಕಿರುವ ವ್ಯಾಪಾರ ನಿರ್ಬಂಧಗಳನ್ನು ತೆಗೆದು ಹಾಕಬೇಕೆಂದೂ ಅದು ವಿನಂತಿಸಿತು. ಜಪಾನಿಗೆ ಸಹ ಸಂಯುಕ್ತ ರಾಷ್ಟ್ರಸಂಘದಲ್ಲಿ ಸ್ಥಾನವಿರಬೇಕೆಂದು ಹೇಳಲಾಯಿತು. ಇಂಡೋಚೀನದಲ್ಲಿ ಶಾಂತಿಯನ್ನು ಶಾಶ್ವತವಾಗಿ ನೆಲೆಗೊಳಿಸುವುದಕ್ಕೆ ಜಿನೇವಾ ಒಡಂಬಡಿಕೆಯ ಪ್ರಾಮಾಣಿಕ ಕಾರ್ಯಾಚರಣೆ ನಡೆಯಬೇಕೆಂದೂ ಅದನ್ನು ಯಾರೊಬ್ಬರೂ ಉಲ್ಲಂಘಿಸಲಾಗದೆಂದೂ ಪರಿಷತ್ತು ಗೊತ್ತುವಳಿಯೊಂದರಮೂಲಕ ಸ್ಪಷ್ಟಗೊಳಿಸಿತು.

ಆರ್ಥಿಕ ಕ್ಷೇತ್ರದ ತೊಂದರೆ

ಏಶಿಯದ ಆರ್ಥಿಕ ಸಮಸ್ಯೆಯನ್ನೂ ಪರಿಷತ್ತು ವಿಚಾರಿಸಿತು. ಜಪಾನಿನ ಅರ್ಥ ಶಾಸ್ತ್ರಿಗಳೊಬ್ಬರು ಪರಿಷತ್ತಿಗೊಂದು ವರದಿಯನ್ನು ಒಪ್ಪಿಸುತ್ತಾ ಏಶಿಯದ ರಾಷ್ಟ್ರಗಳು ನೆರೆಹೊರೆಯ ರಾಷ್ಟ್ರಗಳೊಡನೆ ವಿಶೇಷವಾದ ವ್ಯಾಪಾರ ವ್ಯವಹಾರಗಳನ್ನು ಕೈಗೊಂಡು ವಾಣಿಜ್ಯ ಕ್ಷೇತ್ರದಲ್ಲಿ ಮುನ್ನಡೆಯಬೇಕೆಂದೂ ಔದ್ಯೋಗಿಕ ಪ್ರಗತಿಗಾಗಿ ಪಾಶ್ಚಾತ್ಯ ರಾಷ್ಟ್ರಗಳ ನೆರವು ಪಡೆಯುವ ಹವ್ಯಾಸವನ್ನು ನಿಲ್ಲಿಸಬೇಕೆಂದೂ ಹೇಳಿದರು. ಏಶಿಯದ ರಾಷ್ಟ್ರಗಳು ಆರ್ಥಿಕ ಹಾಗು ರಾಜಕೀಯ ದಾಸ್ಯವನ್ನು ಅನುಭವಿಸಲಿ, ಮತ್ತು ತಮ್ಮನ್ನೇ ಅವಲಂಬಿಸಲಿ ಎಂಬ ಉದ್ದೇಶದಿಂದಲೇ ಅಮೇರಿಕ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳು ಸಹಾಯ ಧನದ ಆಮಿಷವನ್ನು ಮುಂದಿಡುತ್ತವೆ ಎಂದವರು ಆಕ್ಷೇಪಿಸಿದರು. ದೇಶದ ಪೇಟೆಯನ್ನು ಬೆಳೆಸಿಕೊಂಡರೆ ಏಶಿಯದ ರಾಷ್ಟ್ರಗಳ ಸ್ಥಾನ ಭದ್ರವಾಗುವುದೆಂದು ಅವರು ಅಭಿಪ್ರಾಯಪಟ್ಟರು. ಪರಿಷತ್ತು ಇದಕ್ಕೆ ಬೆಂಬಲವಿತ್ತು ಏಶಿಯದ ರಾಷ್ಟ್ರಗಳಲ್ಲಿ ಪರಸ್ಪರ ವಿಚಾರ ವಿನಿಮಯದಿಂದ ವ್ಯಾಪಾರ, ವಿಜ್ಞಾನ ಮತ್ತು ಕೈಗಾರಿಕೆಗಳ ಕ್ಷೇತ್ರದಲ್ಲಿ ಅಭಿವೃದ್ಧಿ ಪ್ರಯತ್ನವನ್ನು ನಡೆಸಬೇಕೆಂದು ಅಪೇಕ್ಷಿಸಿತು.

ಹದಿನಾಲ್ಕು ರಾಷ್ಟ್ರಗಳಿಂದ ಬಂದಿರುವ ಶಿಷ್ಟ ಮಂಡಳಿಗಳಿಗೆ ಹೊಸ ದೆಹಲಿಯಲ್ಲಿ ಪೌರ ಸತ್ಕಾರವನ್ನು ನೀಡಲಾಯಿತು. ಪಾರ್ಲಿಮೆಂಟಿನ ಸದಸ್ಯರ ಪರವಾಗಿಯೂ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಪ್ರತಿನಿಧಿಗಳಲ್ಲಿ ಹಲವರಿಗೆ ನೆಹರು ಮತ್ತು ರಾಜೇಂದ್ರ ಪ್ರಸಾದರು ಸಂದರ್ಶನವಿತ್ತರು ತಂತಮ್ಮ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಸಾರ್ವಜನಿಕ ಅಭಿಪ್ರಾಯದ ಪ್ರತಿನಿಧಿಗಳೇ ತಾವೆಂದು ಈ ಶಿಷ್ಟ ಮಂಡಳಿಗಳು ಹೇಳಿರುವುದರಿಂದ, ಏಶಿಯದ ಜನತೆಯ ಆಸೆ—ಆಕಾಂಕ್ಷೆಗಳನ್ನು ಪರಿಷತ್ತು ಇದ್ದುದಿದ್ದಂತೆ, ಅಡಪ್ಪು ಸ್ಪಷ್ಟವಾಗಿ ವ್ಯಕ್ತಪಡಿಸಿತೆಂದು ಹೇಳಬಹುದು. ಹಿಂದೊಮ್ಮೆ ಮಹಾತ್ಮಾ ಗಾಂಧೀಜಿಯವರು ಜೀವಂತರಿದ್ದಾಗ, ಪ್ರಧಾನಿ ನೆಹರುಗಳು ಹೊಸ ದೆಹಲಿಯಲ್ಲಿ ಸರಕಾರದ ಅಂತಸ್ತಿನಲ್ಲಿ ಕರೆದಿದ್ದ ಏಶ್ಯದ ರಾಷ್ಟ್ರಗಳ ಸಮ್ಮೇಳನದ ಬಳಿಕ ಈ ಮಾದರಿಯ ಪರಿಷತ್ತು—ಸರಕಾರೇತರ ರೂಪದಲ್ಲಿಯೇ ಆಗಲಿ—ನೆರೆದದ್ದು ಇದೊಂದೇ ಎಂಬುದು ಪರಿಷತ್ತಿನ ಐತಿಹಾಸಿಕ ಮಹತ್ವವನ್ನು ಸಾರಿ ಹೇಳುತ್ತದೆ.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. ೫/- ಸ್ಪೆಶಲ್ ರೂ.೮/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಅಧಿವೇಶನ

ಪೋರ್ಚುಗೀಜ ಅಧಿಕಾರಿಗಳಿಂದ ಹಲವು ಧುರೀಣರ ಸೆರೆ

ಸ್ವಾತಂತ್ರ್ಯಕ್ಕಾಗಿ ಗೋವೆಯ ಜನರು ಕೈಗೊಂಡಿರುವ ಆಂದೋಲನವು ಕಳೆದ ವಾರ ಇನ್ನೊಂದು ಯಶಸ್ವಿಯಾದ ಅಧ್ಯಾಯವನ್ನು ಮುಗಿಸಿತು. ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಅಧಿವೇಶನವನ್ನು ಮಾಪ್ಸಾದಲ್ಲಿ ಪೂರ್ವ ನಿಶ್ಚಿತ ಕಾರ್ಯಕ್ರಮದಂತೆಯೇ ನೆರೆಯಿಸಲಾಯಿತು. ಈ ಅಧಿವೇಶನವು ಸೇರಬಾರದೆಂದೂ ಸೇರಿದರೂ ಅದನ್ನು ವಿಫಲಗೊಳಿಸಬೇಕೆಂದೂ ಹಲವು ತಂತ್ರಗಳನ್ನು ಗೋವೆಯ ಅಧಿಕಾರಿಗಳು ನಡೆಸಿದ್ದರು. ಆದರೆ ಅವಾವುದೂ ಫಲಪ್ರದವಾಗಲಿಲ್ಲ.

ಗುಪ್ತ ಪ್ರಯಾಣ

ರಾಷ್ಟ್ರೀಯ ಕಾಂಗ್ರೆಸಿನ ಈ ಒಂಭತ್ತನೇ ಅಧಿವೇಶನದ ಅಧ್ಯಕ್ಷತೆಯನ್ನು ಶ್ರೀಮತಿ ಸುಧಾ ಜೋಶಿ ಎಂಬ ಮಹಿಳೆ ವಹಿಸಿದ್ದರು. ಮೊದಲೇ ಅಧ್ಯಕ್ಷ ಸ್ಥಾನಕ್ಕೆ ನಿಯೋಜಿತರಾಗಿದ್ದ ಇವರು ಇತರ ಕೆಲವರೊಡನೆ ತಮ್ಮನ್ನು ಬಂಧಿಸಲೆಂದು ಗಸ್ತು ತಿರುಗುತ್ತಿದ್ದ ಪೋಲೀಸರ ಮತ್ತು ಸೈನಿಕರ ಕಣ್ಣು ತಪ್ಪಿಸಿ ಕೊಂಡು ಅಧಿವೇಶನದ ಸ್ಥಾನಕ್ಕೆ ತಕ್ಕ ಸಮಯದಲ್ಲಿ ತಲಪಿದ್ದರು. ಗೋವೆಯ ಇತರೆಡೆಗಳಿಂದ ಬಂದ ಅನೇಕ ಪ್ರತಿನಿಧಿಗಳು ಅಧಿವೇಶನದಲ್ಲಿ ಹಾಜರಿದ್ದರು ತಮ್ಮನ್ನು ಪೋಲೀಸರು ಬಂಧಿಸಬಹುದೆಂದು ಊಹಿಸಿದ್ದ ಶ್ರೀಮತಿ ಜೋಶಿಯವರು ತಾವು ಮಾಡಲಿದ್ದ ಭಾಷಣದ ಹಸ್ತಪ್ರತಿಗಳನ್ನು ಪತ್ರಿಕಾಕರ್ತರಿಗೂ ಗೋವೆಯ ನಿವಾಸಿಗಳಿಗೂ ಮುಟ್ಟಿಸಲು ಎಚ್ಚರಿಕೆಯನ್ನು ವಹಿಸಿದ್ದರು.

ಅಧ್ಯಕ್ಷರ ಭಾಷಣ

ಶ್ರೀಮತಿ ಜೋಶಿಯವರು ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತಾ ಪೋರ್ಚುಗೀಜರಿಗೆ ಅವರನ್ನು ಅರವತ್ತು ವರ್ಷಗಳ ವರೆಗೆ ಸ್ಪೇನಿಶರು ಆಳಿದ್ದ ಕಟುದಿನಗಳ ನೆನಪನ್ನು ತಂದು ಕೊಟ್ಟು, ದಾಸ್ಯದಲ್ಲಿರುವ ರಾಷ್ಟ್ರವು ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಸಹಜ ಧರ್ಮವೆಂದು ತಿಳಿಸಿದರು. ಪೋರ್ಚುಗಾಲವು ಎಲ್ಲಿಡೆಯಲ್ಲೂ ವಸಾಹತು ವಾದವನ್ನು ಅನುಸರಿಸುತ್ತಿಲ್ಲ—ಉದಾಹರಣೆಗೆ ದಕ್ಷಿಣ ಅಮೇರಿಕದ ಬ್ರೆಜಿಲಿಗೆ ಅದು ಸ್ವಾತಂತ್ರ್ಯವನ್ನು ಕೊಟ್ಟಿದೆ. ಅದರಂತೆ ಗೋವೆ ಮತ್ತಿತರ ಭಾರತದಲ್ಲಿರುವ ತನ್ನ ವಸಾಹತುಗಳಿಗೂ ಸ್ವಾತಂತ್ರ್ಯವನ್ನು ನೀಡಬೇಕು ಎಂದವರು ವಿನಯ ಪೂರ್ವಕ ಉಪದೇಶಿಸಿದರು.

ವಿಮೋಚನೆಯ ಹೋರಾಟ

ವಸಾಹತುವಾದದ ನೊಗದಿಂದ ಗೋವೆಯನ್ನು ವಿಮೋಚಿಸುವ ಗೋವಾಂತಕರ ನಿರ್ಧಾರವು ಅಚಲ ಮತ್ತು ದೃಢವಾದುದೆಂದು ಅವರು ಪುನರುಚ್ಚರಿಸಿದರು. ಪೋರ್ಚುಗಾಲಕ್ಕೆ ಗೋವಾಂತಕರ ಆಶೋತ್ತರವನ್ನು ಮನ್ನಿಸುವುದು ಪ್ರತಿಷ್ಠೆಯ ಪ್ರಶ್ನೆಯಾಗಬಾರದು ಎಂದು ಹೇಳುತ್ತಾ ಭಾರತೀಯರೂ ಭಾರತ ಸರಕಾರವೂ ಗೋವೆಯ ವಿಮೋಚನೆಯ ಕುರಿತು ಸಕ್ರಿಯ ಸಹಕಾರದ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಸಲಹೆ ಮಾಡಿದರು. ಎರಡು ಸಾವಿರಕ್ಕಿಂತಲೂ ಹೆಚ್ಚು ಜನರು ಬಂಧನದಲ್ಲಿರುವರೆಂದೂ ಆದರೆ ರಾಷ್ಟ್ರೀಯರ ಉತ್ಸಾಹ ಕುಂದಿಲ್ಲವೆಂದೂ ಅವರು ಸಾರಿದರಲ್ಲದೆ ಭಾರತದೊಡನೆ ಸೇರ್ಪಡೆ ಹೊಂದುವುದರಿಂದ ಗೋವೆಯ ಜನರಿಗೆ ಹೇಗೆ ಲಾಭವಾಗುವುದೆಂದೂ ವಿವರಿಸಿದರು.

ಸ್ವೀಕೃತ ಗೊತ್ತುವಳಿ

ಅಧಿವೇಶನವು ಎರಡು ಗೊತ್ತುವಳಿಗಳನ್ನು ಸ್ವೀಕರಿಸಿತು. ಮೊದಲನೆಯದು ಗೋವೆಯ ಜನತೆಯ ಚಳವಳಿವು ನ್ಯಾಯಕ್ಕಾಗಿ ನಡೆಯುತ್ತಿದೆಯೆಂದೂ ಅಹಿಂಸಾತ್ಮಕವಾದುದೆಂದೂ ಹೇಳಿ ರಾಜಕೀಯ ಕೈದಿಗಳನ್ನು ಅಮಾನುಷ ರೀತಿಯಲ್ಲಿ ಹಿಂಸೆಗೆ ಗುರಿ ಮಾಡುತ್ತಿರುವುದು ಖಂಡನೀಯವೆಂದೂ ಗೋವೆಯನ್ನು ತೆರವು ಮಾಡಿ ಪೋರ್ಚುಗೀಜರು ಮರಳಿ ಹೋಗುವುದು ಅನಿವಾರ್ಯವೆಂದೂ ಹೇಳುತ್ತದೆ. ಎರಡನೆಯದು, ರಾಷ್ಟ್ರೀಯ ಕಾಂಗ್ರೆಸಿನ ಆಹ್ವಾನವನ್ನು ಮನ್ನಿಸಿ, ಸ್ವಾತಂತ್ರ್ಯದ ಹೋರಾಟದಲ್ಲಿ ಉತ್ಸಾಹದಿಂದ ಭಾಗ ವಹಿಸಲು ಮುಂಬಂದ ಮತ್ತು ಚಳವಳವನ್ನು ಯಶಸ್ವಿಯಾಗಿ ಮುಂದರಿಸಿಕೊಂಡು ಹೋಗುವ ಸ್ವಯಂ ಸೇವಕರನ್ನು ಅಭಿನಂದಿಸುತ್ತದೆ

ಹುತಾತ್ಮ ರಾಷ್ಟ್ರೀಯ

ಪ್ರತಿನಿಧಿಗಳು ಅಧಿವೇಶನವನ್ನು ಮುಗಿಸುವಷ್ಟರಲ್ಲಿಯೇ ಪೋಲೀಸರು ಅವರನ್ನು ಮುತ್ತಿದರು. ಜೈ ಗೋವಾಂತಕವೆಂದು ಪ್ರತಿನಿಧಿಗಳು ಬೊಬ್ಬಿಡುತ್ತಿದ್ದಂತೆಯೇ ಬೆತ್ತದಪ್ರಯೋಗ ಗೈದರು; ಮತ್ತು ಧುರೀಣರನ್ನೂ ಸ್ವಯಂ ಸೇವಕರನ್ನೂ ಸೆರೆ ಹಿಡಿದರು. ಅವರೆಲ್ಲರೂ ಹಿಂದಿನಿಂದ ಚೆನ್ನಾಗಿ ಥಳಿಸಲ್ಪಟ್ಟರಲ್ಲದೆ ಕ್ರೂರ ರೀತಿಯಲ್ಲಿ ನಡೆಸಲ್ಪಟ್ಟರು. ಇದಲ್ಲದೆ ಗೋವೆಯ ಬೇರೆಡೆಯಲ್ಲಿನ ಜನರು ರಾಷ್ಟ್ರೀಯ ಕಾಂಗ್ರೆಸಿನೊಡನೆ ಸಂಪರ್ಕವಿಟ್ಟುಕೊಳ್ಳದಂತೆ ಪೋಲೀಸರೂ ಸೈನಿಕರೂ ದಬ್ಬಾಳಿಕೆ ನಡೆಸಿದರೆಂದೂ ವರದಿಗಳು ಹೇಳುತ್ತವೆ. ಗ್ರಾಮದ ಪಟೇಲನೊಬ್ಬನು ಗೋವೆಯ ರಾಷ್ಟ್ರೀಯ ಕಾರ್ಯಕರ್ತನೋರ್ವನನ್ನು ಗುಂಡು ಹೊಡೆದು ಕೊಂದನೆಂದೂ ಜನರು ತನ್ನ ಮೈಮೇಲೇರಿ ಬರುವುದನ್ನು ತಪ್ಪಿಸಲು ಆತನೀಗ ಸರಕಾರದ ಆಶ್ರಯದಲ್ಲಿರುವನೆಂದೂ ತಿಳಿದು ಬರುತ್ತದೆ.

ನೆರವಿನ ಯೋಚನೆ

ಪರಿಸ್ಥಿತಿಯು ಇಷ್ಟು ಭೀಕರವಾಗಿರುವಾಗ ಭಾರತ ಸರಕಾರವು ಸುಮ್ಮನೆ ಕುಳಿತು ನೋಡುವ ಕೆಲಸವನ್ನಷ್ಟೇ ಮಾಡಬಾರದೆಂದೂ ಸಕ್ರಿಯ ರೀತಿಯಲ್ಲಿ ಆಂದೋಲನವನ್ನು ಬಲಪಡಿಸಬೇಕೆಂದೂ ಗೋವಾಂತಕರ ಮತ್ತು ಅವರೊಡನೆ ಸಹಾನುಭೂತಿಯನ್ನು ಪ್ರಕಟಪಡಿಸುವವರ ಪರವಾಗಿ ಕೇಳಿಕೊಳ್ಳಲಾಗುತ್ತದೆ. ಆದರೆ ಭಾರತ ಸರಕಾರವು ಗೋವಾಂತಕರ ಚಳವಳಿವೇ ತೀವ್ರವಾಗಬೇಕೆಂದು ಅಪೇಕ್ಷಿಸುತ್ತದೆ; ಮತ್ತು ವಿಲಕ್ಷಣವಾಗಿ ಪರಿಸ್ಥಿತಿ ಹದಗೆಟ್ಟು ಹೋಗದಂತೆ ಮಾತ್ರ ಎಚ್ಚರ ವಹಿಸುತ್ತದೆ. ಲೋಕ ಸಭೆಯಲ್ಲಿ ಗೋವೆಯ ಕುರಿತು ಒಂದು ನಿಲುವಳಿ ಸೂಚನೆಯನ್ನು ತಂದಾಗ, ಸಭಾಧ್ಯಕ್ಷರು ಅದು ಭಾರತದ ಹೊರಗಿನ ಘಟನೆಗೆ ಸಂಬಂಧಿಸಿದೆಯೆಂದು ಹೇಳಿ ಕಿತ್ತು ಹಾಕಿದರು; ಆದರೆ ಭಾರತೀಯರ ಮನಸ್ಸು ಏನು ಹೇಳುತ್ತಿದೆ ಎಂಬುದನ್ನರಿಯಲು ಸರಕಾರಕ್ಕೆ ಇದರಿಂದ ನೆರವಾಯಿತು.

ರಾಜ್ಯಾಂಗದ ತಿದ್ದುಪಡಿ

ಲೋಕಸಭೆಯ ಮುಂದೆ ಭಾರತದ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಮಸೂದೆಯನ್ನು ಪರಿಶೀಲಕ ಸಮಿತಿಯು ವರದಿ ಮಾಡಿದ ರೀತಿಯಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಸೋಮವಾರ (ದಿನಾಂಕ ೧೧) ಪ್ರಧಾನ ಮಂತ್ರಿಗಳು ಸೂಚನೆಯನ್ನು ಮಂಡಿಸಿದರು. ಪರಿಶೀಲಕ ಸಮಿತಿಯು ತಿದ್ದುಪಡಿಯನ್ನು ಸರಳ ಮಾಡಿದೆಯೆಂದೂ ಅದು ಸಂವಿಧಾನದ ಕರ್ತರು ಏನನ್ನು ಉದ್ದೇಶಿಸಿದ್ದರೊ ಅದನ್ನು ಸರಿಯಾಗಿ ವ್ಯಕ್ತಪಡಿಸುತ್ತದೆಂದೂ ನೆಹರುಗಳು ಹೇಳಿದರು. ಆಸ್ತಿಯನ್ನು ಕಿತ್ತುಕೊಳ್ಳುವ ಉದ್ದೇಶ ಸರಕಾರಕ್ಕಿಲ್ಲ; ಆದರೆ ದೇಶದ ಪುನಾರಚನೆಯ ಕಾರ್ಯದಲ್ಲಿ ಆತಂಕವಾಗುವುದು ಮಾತ್ರ ಅದಕ್ಕೆ ಬೇಡ. ಆದುದರಿಂದ ಯೋಗ್ಯ ಸಂದರ್ಭಗಳಲ್ಲೆಲ್ಲ ಸಾಕಷ್ಟು ಪರಿಹಾರವನ್ನು ಕೊಡಬೇಕೆಂದೂ ಅದರ ಪ್ರಮಾಣವನ್ನು ಪ್ರಚಲಿತ ಸ್ಥಿತಿಗತಿಯ ಸಂಪೂರ್ಣ ತಿಳಿವಳಿಕೆಯುಳ್ಳ ಮತ್ತು ಪ್ರಜಾಪ್ರಭುತ್ವ ಪದ್ಧತಿಯ ಕೇಂದ್ರ ಸ್ಥಾನದಂತಿರುವ ಶಾಸನಾಂಗ ನಿರ್ಧರಿಸಬೇಕೆಂದೂ ನಾವು ಬಯಸುತ್ತೇವೆ ಎಂದು ನೆಹರುಗಳು ತಿಳಿಸಿದರು.

ನೆಹರುಗಳ ಭರವಸೆ

ಪರಿಹಾರ ಧನವನ್ನು ಕೊಡದೆಯೇ ಆಸ್ತಿಯನ್ನು ವಶಪಡಿಸಿಕೊಳ್ಳಲಾಗುವುದೆಂಬ ಟೀಕೆ ಸತ್ಯಕ್ಕೆ ವಿರುದ್ಧವಾದುದೆಂದು ನೆಹರುಗಳು ಸಾರಿದರು. ಆಸ್ತಿ ಮತ್ತು ಸೊತ್ತುಗಳ ವಿಷಯದಲ್ಲಿರುವ ಪವಿತ್ರ ಭಾವನೆಯನ್ನು ಅವರು ತುಸು ಟೀಕಿಸಿದರು. ಆಸ್ತಿಪಾಸ್ತಿಗಳ ಭದ್ರತೆಗಿಂತಲೂ ಪ್ರಜೆಗಳ ಕಲ್ಯಾಣವೇ ಪ್ರಾಮುಖ್ಯವಾದುದೆಂಬ ಸಂಗತಿಯನ್ನವರು ಪ್ರಸ್ತಾಪಿಸಿ, ತಿದ್ದುಪಡಿಯನ್ನು ಸಮರ್ಥಿಸಿಕೊಂಡರು. ಪರದೇಶಗಳು ನಮ್ಮ ದೇಶದಲ್ಲಿ ನಿಕ್ಷೇಪಿಸಿದ ಭಂಡವಾಳಕ್ಕೆ ಪರಿಹಾರ ಧನಕೊಡಬಾರದೆನ್ನುವ ವಾದವನ್ನವರು ಖಂಡಿಸುತ್ತಾ ಯುದ್ಧ, ಆಂತರಿಕಗೊಂದಲ ಮತ್ತು ಕ್ಷೋಭೆಯ ಕಾಲದಲ್ಲಿಯಷ್ಟೇ ಹಾಗೆ ಮಾಡಿದ್ದಿರಬಹುದಲ್ಲದೆ ಸಾಮಾನ್ಯ ಕಾಲದಲ್ಲಿ ಪರಿಹಾರ ಕೊಡದಿರುವುದು ಭೂಷಣವಲ್ಲ ಎಂದು ಅಭಿಪ್ರಾಯ ಪಟ್ಟರು.

ಅಲ್ಪ ವಯಸ್ಕರ ಹಿತ

ರಾಜ್ಯ ಸಭೆಯಲ್ಲಿ ಹಿಂದು ಅಲ್ಪ ವಯಸ್ಕರ ಮಸೂದೆಯ ಕುರಿತು ಚರ್ಚೆ ನಡೆಯಿತು. ಪಕ್ಷ ಪಂಗಡಗಳ ಭೇದವಿಲ್ಲದೆ ಬಿಚ್ಚು ಮನಸ್ಸಿನ ವಿಚಾರ ವಿನಿಮಯ ನಡೆಯಿತು. ಮೂಲ ಮಸೂದೆಗೆ ಮಂಡಿಸಿದ ಹಲವಾರು ತಿದ್ದುಪಡಿಗಳು ಇದಕ್ಕೆ ನೆರವಾದುವೆಂದರೂ ತಪ್ಪಲ್ಲ. ತಾಯಿಯ ವಶದಲ್ಲಿ ಮಕ್ಕಳಿರುವ ವಯಸ್ಸನ್ನು ಹೆಚ್ಚಿಸಬೇಕೆಂದೂ ನೈಸರ್ಗಿಕ ರಕ್ಷಕರ ಪಟ್ಟಿಯನ್ನು ತಾಯಿ ಮತ್ತು ತಂದೆಗಳಿಗಷ್ಟೇ ಮಿತವಾಗಿಡದೆ ಅಜ್ಜ,ಅಜ್ಜಿ, ಮಾವ, ಅಣ್ಣ ಮುಂತಾದವರಿಗೆ ವಿಸ್ತರಿಸಬೇಕೆಂದೂ ಪಾಲಕನಿಗೆ ಅಲ್ಪ ವಯಸ್ಕನ ಆಸ್ತಿಯನ್ನು ಆತನ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ಯೋಗ್ಯ ರೀತಿಯಲ್ಲಿ ವ್ಯವಸ್ಥಿತಗೊಳಿಸಲು ಕೋರ್ಟಿನ ಅನುಮತಿಯಿಲ್ಲದೆಯೇ ಅಧಿಕಾರವೀಯಬೇಕೆಂದೂ ತಿದ್ದುಪಡಿಗಳು ಸೂಚಿಸಿದವು.

ಕೆಲವು ಬದಲಾವಣೆಗಳು

ಆದರೆ ಇವುಗಳಲ್ಲಿ ಕೆಲವನ್ನು ಬಿಟ್ಟರೆ ಉಳಿದೆಲ್ಲವೂ ತಿರಸ್ಕರಿಸಲ್ಪಟ್ಟವು. ಅಲ್ಪ ವಯಸ್ಕನ ಆಸ್ತಿಯನ್ನು ಐದು ವರ್ಷಗಳಿಗಿಂತ ಅಥವಾ ಆತನು ಪ್ರಾಯಕ್ಕೆ ಬಂದ ಬಳಿಕದ ಒಂದು ವರ್ಷಕ್ಕಿಂತ ಹೆಚ್ಚು ಅವಧಿಗೆ ಗೇಣಿಯ ಮೇಲೆ ಕೊಡಬಾರದೆಂಬ ತಿದ್ದುಪಡಿಯು ಅಂಗೀಕರಿಸಲ್ಪಟ್ಟಿತು. ಅಲ್ಪ ವಯಸ್ಕನನ್ನು ಅವನ ತಂದೆಯ ಅಥವಾ ತಾಯಿಯ (ಅವಾ ಸಂದರ್ಭಕ್ಕೆ ಸರಿಯಾಗಿ) ಮತದಲ್ಲಿಯೇ ಪೋಷಿಸಬೇಕೆಂಬ ನಿರ್ಬಂಧವನ್ನು ದೀರ್ಘ ಚರ್ಚೆಯ ಬಳಿಕ ಬಿಟ್ಟುಕೊಡಲಾಯಿತು. ಈ ವಿಷಯದಲ್ಲಿ ಕೋರ್ಟುಗಳ ತೀರ್ಮಾನವೇ ಒದ್ದಾಗಲಿ ಎಂಬ ಕಾನೂನು ಮಂತ್ರಿಗಳ ಸೂಚನೆಗೆ ಸಮ್ಮತ ಒಪ್ಪಿಗೆಯು ದೊರೆಯಿತು. ಮಸೂದೆಯ ಮೂರನೇ ವಾಚನದ ಕಾಲದಲ್ಲಿ ಮಂತ್ರಿ ಪಾಟಸ್ಕರರು ಈಗಿನ ಸಂಸತ್ತಿನ ಅಧಿಕಾರಾವಧಿಯು ಮುಗಿಯುವುದಕ್ಕೆ ಮುಂಚೆ ಉಭಯ ಸಭೆಗಳೂ ಹಿಂದು ಧರ್ಮ ಶಾಸ್ತ್ರ ಕ್ರೋಢೀಕರಣದ ಕೆಲಸವನ್ನು ಮುಗಿಸುವ ಆಸೆಯನ್ನು ವಿದಿತ ಪಡಿಸಿದರು.

ಪ್ರಿಂಟಿಂಗ್- ಬೈಂಡಿಂಗ್- ಕಟ್ಟಿಂಗ್

ಮೊದಲಾದ ಪ್ರೆಸ್ಸಿಗೆ ಸಂಬಂಧಪಟ್ಟ ಯಾವತ್ತೂ ಕೆಲಸಗಳನ್ನು ನಾಜೂಕಾಗಿ ಸಕಾಲದಲ್ಲಿ ಸುಲಭ ದರದಲ್ಲಿ ಮಾಡಿ ಕೊಡಲಾಗುವುದು. ಮದುವೆ, ವರ್ಧಂತಿ ಮೊದಲಾದ ಸಮಾರಂಭಗಳ ಆಮಂತ್ರಣ ಪತ್ರಿಕೆಗಳನ್ನು ಅತಿ ತ್ವರ್ಯದಲ್ಲಿ ಅತಿ ಅಗ್ಗ ದರದಲ್ಲಿ ತಯಾರಿಸಿ ಕೊಡಲಾಗುವುದು

ಎಕೌಂಟು ಪುಸ್ತಗಳು, ಕೋರ್ಟು ಫಾರ್ಮುಗಳು, ವರ್ಗ ಊಳಿಗಗಳು, ಸೊಸೈಟಿ ರಿಜಿಸ್ಟ್ರಿ, ಫಾರ್ಮುಗಳು ಮೊದಲಾದುವು ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೪-೪-'೫೫	೩೨

ಗಮನಿಸಲಿರುವ ವಿಷಯ

ಗ್ರಾಮಗಳ ಮಟ್ಟದಲ್ಲಿಯೇ ರಾಷ್ಟ್ರ ಪುನಾರಚನೆಯ ಯೋಜನೆಗಳನ್ನು ನಿರ್ಮಿಸಬೇಕು ಎಂದು ಹೇಳಲಾಗುವ ಆದ್ಯರ ಮಾತುಗಳನ್ನು ಯೋಜನಾ ಆಯೋಗವು ಎರಡನೆಯ ಪಂಚವಾರ್ಷಿಕ ಯೋಜನೆಯ ಸಂಗತಿಯಲ್ಲಿ ನೆನಪಿಟ್ಟುಕೊಂಡಿದೆಯೆಂದೂ ತದನುಸಾರವಾಗಿ ಯೋಗ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ರಾಜ್ಯ ಸರಕಾರಗಳಿಗೆ ಆದೇಶವಿತ್ತಿದೆಯೆಂದೂ ಮದ್ರಾಸು ಸರಕಾರದಿಂದ ಮೊನ್ನೆ ಹೊರಡಿಸಲಾಗಿರುವ ಪತ್ರಿಕಾ ಪ್ರಕಟಣೆಯ ಮೇಲಿಂದ ತೀರ್ಮಾನಿಸಬಹುದು. ಈ ಸಂಚಿಕೆಯ ಬೇರೆಡೆ ಪ್ರಕಟವಾಗಿರುವ ಸರಕಾರದ ಹೇಳಿಕೆಯ ಸಾರಾಂಶವನ್ನು ಗಮನಿಸಿದರೆ ಮುಂದಿನ ಯೋಜನೆಯು ಈಗ ಕಾರ್ಯಗತಗೊಳ್ಳುತ್ತಿರುವ ಮೊದಲನೆ ಪಂಚವಾರ್ಷಿಕ ಯೋಜನೆಗಿಂತ ತೀರ ಭಿನ್ನವಾದ ತಳಹದಿಯ ಮೇಲೆ ಸಂಘಟಿಸಲ್ಪಡುವುದೆಂಬ ಸಂಗತಿ ವ್ಯಕ್ತವಾಗುತ್ತದೆ. ಈಗಿನ ಯೋಜನೆಯನ್ನು ಮೇಲಿನವರು ಹೇರಿದ ರೂಪ ಮತ್ತು ರೀತಿಯಲ್ಲಿ ಜನತೆ ಸ್ವೀಕರಿಸಿ, ಯಶಸ್ವಿಗೊಳಿಸಬೇಕಾದ ಪ್ರಮೇಯವಿರುತ್ತದೆ. ಈ ಯೋಜನೆಗಳನ್ನು ತಯಾರಿಸುವಾಗ ಜನರ ಅಭಿಮತವೇನೆಂಬುದನ್ನು ಯಾರೂ ಕೇಳಲಿಲ್ಲ. ಇದನ್ನೆ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಧಿಕಾರಿಗಳು ದೇಶಕ್ಕೆ ಯಾವ ಯೋಜನೆಗಳು ಬೇಕೆಂದು ತಿಳಿದು ಯುದ್ಧೋತ್ತರದಲ್ಲಿ—ಬ್ರಿಟಿಷರು ಇನ್ನೂ ಭಾರತವನ್ನು ಆಳುತ್ತಿದ್ದಾಗಲೇ—ಯಾವ್ಯಾವ ಯೋಜನೆಗಳ ರೂಪರೇಖೆಯನ್ನು ಹಾಕಿದ್ದರೋ ಅವುಗಳನ್ನೆ ರಾಷ್ಟ್ರೀಯ ಮಟ್ಟದಲ್ಲಿ ಮುಂದರಿಸಿಕೊಂಡು ಹೋಗುವ ಕೆಲಸವನ್ನಷ್ಟೇ ಯೋಜನಾ ಆಯೋಗ ಮಾಡಿತು. ಯೋಜನೆಗಳನ್ನು ಜ್ಯಾರಿಗೆ ತರಲು ಅವಶ್ಯವಿರುವ ಹಣದ ಮಟ್ಟಿಗೆ ಅದು ಮಹತ್ವವನ್ನಿತ್ತಿತಲ್ಲದೆ, ಶಿಕ್ಷಣ, ಆರೋಗ್ಯ, ಸಮಾಜವಿಕಾಸ ಯೋಜನೆ ಇತ್ಯಾದಿ ವಿಷಯಗಳನ್ನು ಯೋಜನೆಯಲ್ಲಿ ಸೇರಿಸಿಕೊಂಡು ಬ್ರಿಟಿಷರು ಕೈಗೊಳ್ಳಬೇಕೆಂದಿದ್ದ ಕೆಲಸಗಳಿಗೆ ಹೊರ ಅಲಂಕಾರವನ್ನು ಯೋಜನಾ ಆಯೋಗ ಮಾಡಿತು. ಆದುದರಿಂದ ಪ್ರಜಾಪ್ರಭುತ್ವ ಪದ್ಧತಿಗೆ ಹೇಳಿಸಿದ ಯೋಜನೆ ಇದಾಗಿಲ್ಲವೆಂದು ಮುಂತಾದ ಆಕ್ಷೇಪಗಳನ್ನು ಸರಕಾರ ಕೇಳಬೇಕಾಯಿತು. ಮುಂದಿನ ಯೋಜನೆ ಇದಕ್ಕೆ ಗುರಿಯಾಗಬಾರದೆಂದೂ ಅದಕ್ಕೆ ಜನತೆಯ ಅತ್ಯಧಿಕ ಸಹಕಾರ ದೊರಕಿ, ದೇಶದ ಸ್ವರೂಪವನ್ನು ಹತ್ತೇ ವರ್ಷಗಳಲ್ಲಿ ಬದಲಿಸಿ ಬಿಡುವಷ್ಟು ಪ್ರಭಾವಿಯಾಗಬೇಕೆಂದೂ ಬಯಸಿ, ಹಳ್ಳಿಯ ಜನರನ್ನೆ ಯೋಜನೆಯ ನಿಜವಾದ ಕರ್ತರನ್ನಾಗಿ ಮಾಡಲು ಯೋಜನಾ ಆಯೋಗ ಸೂಚಿಸಿರುತ್ತದೆ. ಪ್ರತಿಯೊಂದು ಊರಿನಲ್ಲೂ ಗ್ರಾಮಾಭಿವೃದ್ಧಿ ಸಮಿತಿಯೊಂದನ್ನು ರಚಿಸಬೇಕೆಂದೂ ಆಯಾ ಗ್ರಾಮಕ್ಕೆ ಸಂಬಂಧಿಸಿದಂತೆ ಅದು ಯೋಜನೆಗಳ ಕಾರ್ಯಕ್ರಮವನ್ನು ಗೊತ್ತುಪಡಿಸಬೇಕೆಂದೂ ಸರಕಾರದ ಪ್ರಕಟಣೆ ತಿಳಿಸುತ್ತದೆ. ಆಯಾ ಪ್ರದೇಶದ ವಿಶಿಷ್ಟ ಪರಿಸ್ಥಿತಿಯನ್ನು ಅಭ್ಯಸಿಸಿ, ಅಲ್ಲಿಯ ಆವಶ್ಯಕತೆಗಳನ್ನು ಗಮನಿಸಿ, ಯೋಜನೆಯನ್ನು ಕೈಗೊಳ್ಳುವುದಕ್ಕೂ ಯೋಜನೆ ತಮ್ಮ ಮನೆಯ ಕೆಲಸವೇ ಎಂಬ ಭಾವನೆ ಜನತೆಯ ಮನಸ್ಸಿನಲ್ಲಿ ನೆಲೆ ನಿಲ್ಲುವುದಕ್ಕೂ ಇದರಿಂದ ನೆರವಾಗುವುದು ನಿಶ್ಚಯ. ಗ್ರಾಮಾಭಿವೃದ್ಧಿ ಸಮಿತಿಗಳ ಯೋಜನೆಯನ್ನು ಜಿಲ್ಲಾ ಯೋಜನೆಯ ಕಾರ್ಯಕ್ರಮಕ್ಕೆ ಹೊಂದಿಸಿಕೊಳ್ಳಲಾಗುವುದಲ್ಲದೆ, ರಾಜ್ಯ ಮತ್ತು ಕೇಂದ್ರ ಸರಕಾರಗಳ ಮಟ್ಟದಲ್ಲಿ ದೊಡ್ಡ ರೀತಿಯ ಬೇರೆ ಅಭಿವೃದ್ಧಿ ಕೆಲಸಗಳನ್ನೂ ತೊಡಗಲಾಗುವುದು. ಶಿಕ್ಷಣ, ಆರೋಗ್ಯ, ಕೃಷಿ ಮುಂತಾದ ವಿಷಯಗಳನ್ನು ಗ್ರಾಮಾಭಿವೃದ್ಧಿ ಸಮಿತಿಗಳಿಗೆ ಬಿಟ್ಟುಕೊಟ್ಟಿರುವಾಗ ಸರಕಾರವು ವಿವಿಧೋದ್ದೇಶವನ್ನೊಳಗೊಂಡ ಬೃಹತ್ಸ್ವರೂಪದ ಅಣೆಕಟ್ಟುಗಳ ರಚನೆ, ಬಂದರು ನಿರ್ಮಾಣ, ರೈಲ್ವೆಯ ವಿಸ್ತರಣೆ, ಹೊಸ ಕಾರ್ಖಾನೆಗಳ ತೆರೆಯುವಿಕೆ ಮುಂತಾದುವನ್ನು ತನ್ನ ವಶದಲ್ಲಿಯೇ ಇಟ್ಟಿರುತ್ತದೆ. ದೊಡ್ಡ ಮಟ್ಟದ ಈ ಕೆಲಸಗಳನ್ನು ಸಾಮಾನ್ಯ ಜನರ ಪಾಲಿಗೆ ಬಿಡುವುದರಲ್ಲಿ ಹುರುಳಿಲ್ಲನೆಂಬುದು ನಿಜ. ಆದರೆ ಈಗ ಜನರಿಗೊಪ್ಪಿಸಿದ ಕೆಲಸವು ನಾವು ಯೋಜನೆಯನ್ನು ಕೈಗೊಳ್ಳುವುದರ ಮುಖ್ಯ ಉದ್ದೇಶವನ್ನು ನೆರವೇರಿಸುತ್ತದೆಯೇ ಎಂಬುದು ಮಾತ್ರ ವಿಚಾರಾರ್ಹವಾಗಿದೆ—ಗ್ರಾಮಾಭಿವೃದ್ಧಿ ಸಮಿತಿಗಳ ಮುಂದೆ ಈಗ ಮಂಡಿಸಲಾಗಿರುವ ಯೋಜನೆಯ ರೂಪರೇಖೆಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಹತ್ತು ವರ್ಷಗಳಲ್ಲಿ ಇಮ್ಮಡಿ ಉತ್ಪಾದನೆಯನ್ನು ಕೈಗೂಡಿಸುವ ಧ್ಯೇಯವೊಂದು ಎದ್ದು ಕಾಣುತ್ತದೆ. ಆದರೆ ಬೇರೆ ಸಂಗತಿಗಳ ವಿಷಯದಲ್ಲಿ ಯಾವ ಗುರಿಯನ್ನೂ ಅದು ತೋರಿಸಿಲ್ಲ; ಮಾತ್ರವಲ್ಲ ಗೃಹೋದ್ಯಮಗಳ ಪಾತ್ರ ಮತ್ತು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಪ್ರಮುಖ ವಿಷಯಗಳನ್ನದು ಸ್ಪರ್ಶಿಸುವುದೇ ಇಲ್ಲ! ಈ ಸಂಚಿಕೆಯ ಕೊನೆಯ ಪುಟದಲ್ಲಿ ಕೊಡಲಾದ ಲೇಖನವು ಭಾರತದ ಯೋಜನೆಯು—ಕಾಂಗ್ರೆಸಿನ ದೃಷ್ಟಿಯಲ್ಲಿ ಗೃಹೋದ್ಯಮಗಳಿಗೆ ಪ್ರೋತ್ಸಾಹವಿತ್ತು ವಿಕೇಂದ್ರೀಕರಣದ ತತ್ವದ ಮೇಲೆ ಔದ್ಯೋಗಿಕ ವಲಯವನ್ನು ಪುನರ್ಘಟಿಸುವ ಉದ್ದೇಶವನ್ನೊಳಗೊಳ್ಳುವುದು ಅವಶ್ಯವೆಂದೂ ಇದರಿಂದಲೇ ಹತ್ತು ವರ್ಷಗಳಲ್ಲಿ ೧೨೦ ಲಕ್ಷ ಉದ್ಯೋಗದ ಅವಕಾಶಗಳನ್ನು ಹೊಸತಾಗಿ ಸೃಷ್ಟಿಸುವ ಸರಕಾರದ ಧ್ಯೇಯ ಸಾಧಿಸಲ್ಪಡಬಹುದೆಂದೂ ವಿವರಿಸುತ್ತದೆ. ಇದನ್ನು ಸರಕಾರ ಏಕೆ ಮರೆತಿದೆಯೋ ಕಾಣುವುದಿಲ್ಲ. ತಾನು ತಲಾವೊಂದರ ಎರಡು ರೂಪಾಯಿಯಂತೆ ಪ್ರತಿವರ್ಷ ವ್ಯಯಿಸುತ್ತಾ ಅಷ್ಟೇ ಮೊತ್ತದಲ್ಲಿ ಹಳ್ಳಿಗರ ನೆರವನ್ನು ಪಡೆಯಲೆತ್ನಿಸಿ ಜನತಾಸಹಕಾರದ ವಿಷಯದಲ್ಲಿ ತೃಪ್ತಿ ಪಡೆಯಲಿಕ್ಕಷ್ಟೇ ಸರಕಾರ ನೋಡಿದರೆ ಸಾಲದು—ನಿರುದ್ಯೋಗದ ಸಮಸ್ಯೆಯನ್ನು ನಿವಾರಿಸುವ ಸಾಮರ್ಥ್ಯ ಯೋಜನೆಗೆ ಹೇಗೆ ಬರುವುದೆಂಬುದನ್ನು ಅದು ವಿಚಾರಿಸಬೇಕು. ಗೃಹೋದ್ಯಮಗಳ ಪಾತ್ರವನ್ನು ಅಲಕ್ಷಿಸಿದರೆ, ವರ್ಷಕ್ಕೆ ನೂರಿಪ್ಪತ್ತು ರೂಪಾಯಿಯಷ್ಟು ಕಡಿಮೆ ವರಮಾನವಿರುವ ಹಳ್ಳಿಯ ವ್ಯಕ್ತಿಯ ದೃಷ್ಟಿಗೆ ಸಹ ಸರಕಾರ ವ್ಯಯಿಸುವ ಎರಡು ರೂಪಾಯಿಗಳು ಆಕರ್ಷಕವಾಗಿ ತೋರಲಿಕ್ಕಿಲ್ಲ; ಅವನ ಹೃದಯವನ್ನು ಗೆದ್ದು, ನಾವು ಹೊಸ ಸಮಾಜ ರಚನೆ ಮಾಡುತ್ತಿದ್ದೇವೆಂಬ ಭರವಸೆಯನ್ನು ಮೂಡಿಸಲಿಕ್ಕಿಲ್ಲ. ಕೈಗಾರಿಕೆಗಳಿಗೆ ಎರಡನೆಯ ಯೋಜನೆಯಲ್ಲಿ ಪ್ರಾಶಸ್ತ್ಯ ಕೊಡಲಾಗುವುದೆಂದು ಸರಕಾರದ ಮಟ್ಟದಲ್ಲಿ ಹೇಳುತ್ತಿದ್ದುದನ್ನು ಈಗ ಹಳ್ಳಿಗಳ ಮಟ್ಟದಲ್ಲಿ ಕಾರ್ಯಾಚರಣೆಗೆ ತರಬೇಕಾಗಿದೆ ಎಂದು ನಾವು ವಿನಯದಿಂದ ಸೂಚಿಸುತ್ತೇವೆ. ಗ್ರಾಮಸ್ಥರು, ತಮ್ಮ ಮಾತನ್ನು ಸರಕಾರ ಕೇಳ ತೊಡಗಿದೆಯೆಂಬ ಮತ್ತು ಅದಕ್ಕೆ ಮನ್ನಣೆಯನ್ನೀಯುತ್ತಿದೆಯೆಂಬ ವಿಷಯದಿಂದ ಸಂತುಷ್ಟರಾಗುವಾಗಲೇ ಕೈಗಾರಿಕೆಗಳ ವಿಸ್ತರಣೆ ಮತ್ತು ನಿರುದ್ಯೋಗದ ಸಮಸ್ಯೆಯ ಮಟ್ಟಿಗೆ ಸರಕಾರ ಈಗ ಹಾಕಿ ಕೊಟ್ಟ ಕಾರ್ಯಕ್ರಮ ಅಷ್ಟು ಪರಿಣಾಮಕಾರಿಯಾದುದಲ್ಲ ಎಂಬುದನ್ನು ಸಕಾಲದಲ್ಲಿ—ಅಂದರೆ ಈ ಕೂಡಲೇ—ಸೂಚಿಸಬೇಕೆಂದೂ ಧುರೀಣರು ಇದನ್ನು ಗಮನಿಸಬೇಕೆಂದೂ ಅಪೇಕ್ಷಿಸುತ್ತೇವೆ.

ಆಫ್ರೇಸ್ಯ ರಾಷ್ಟ್ರಗಳ ಸಮ್ಮೇಳನ

ಬಾಂಡುಂಗಿನ ಮಾತುಕತೆಗಳ ಅಂತರ್ಯ

ಮುಂದಿನ ಸೋಮವಾರ (ದಿನಾಂಕ ೧೮) ಇಂಡೋನೇಶಿಯದ ಬೆಟ್ಟ ಪ್ರದೇಶವಾದ ಬಾಂಡುಂಗಿನಲ್ಲಿ ಏಶಿಯ ಮತ್ತು ಆಫ್ರಿಕದ ೨೯ ರಾಷ್ಟ್ರಗಳ ಪ್ರಧಾನ ಮಂತ್ರಿಗಳು ತಮ್ಮ ಸಹಾಯಕರ ಸಹಿತವಾಗಿ ಪರಿಷತ್ತಿನಲ್ಲಿ ಸೇರಿ, ಪರಸ್ಪರ ವಿಚಾರ ವಿನಿಮಯವನ್ನು ನಡೆಸಲಿರುವರು. ಪ್ರಗತಿಶೀಲ ಪಾಶ್ಚಾತ್ಯ ರಾಷ್ಟ್ರಗಳ ದೃಷ್ಟಿಯಂತೆ ಇನ್ನೂ ಕಗ್ಗತ್ತಲೆಯಲ್ಲಿ, ಅಜ್ಞಾನದಲ್ಲಿ, ದಾರಿದ್ರ್ಯದಲ್ಲಿ, ಬಿದ್ದಿರುವ ಇವೆರಡು ಖಂಡಗಳಲ್ಲಿ ಜಗತ್ತಿನ ಜನಸಂಖ್ಯೆಯ ನೂರರಲ್ಲಿ ಎರಡು ಪಾಲಿರುತ್ತದೆ ಎಂಬುದನ್ನು ಗಮನಿಸಿದರೆ ಈ ಪರಿಷತ್ತಿನ ಮಹತ್ವ ಸ್ಪಷ್ಟವಾಗುತ್ತದೆ. ಇಲ್ಲಿ ಕೈಗೊಳ್ಳಲಾಗುವ ನಿರ್ಣಯಗಳನ್ನೂ ವ್ಯಕ್ತವಾದ ಅಭಿಪ್ರಾಯಗಳನ್ನೂ ಯಾವ ಮಹಾರಾಷ್ಟ್ರವೂ ಉಪೇಕ್ಷಿಸುವಂತಿಲ್ಲವೆಂದರೆ ಅತಿಶಯೋಕ್ತಿಯಾಗದು. ಸ್ವತಃ ಸಂಯುಕ್ತ ರಾಷ್ಟ್ರ ಸಂಘವೂ ಪರಿಷತ್ತಿನ ಕಾರ್ಯಕಲಾಪಗಳನ್ನು ಗಮನಿಸದೆ ಕುಳಿತಿರಲಾರದು.

ರಾಷ್ಟ್ರ ಸಂಘದ ವಲಯದಲ್ಲಿ

ನಿಜ ಹೇಳಬೇಕೆಂದರೆ, ಬಾಂಡುಂಗಿನಲ್ಲಿ ಸೇರುವ ಈ ಪರಿಷತ್ತು ಪಾಶ್ಚಾತ್ಯ ರಾಷ್ಟ್ರಗಳ ಧೋರಣೆಗೆ ಆಹ್ವಾನವೀಯುವ ರೀತಿಯಲ್ಲಿದೆ ಎಂಬ ಭಯವನ್ನು ಸಂಯುಕ್ತ ರಾಷ್ಟ್ರಸಂಘದ ವಲಯದಲ್ಲಿ ವ್ಯಕ್ತಪಡಿಸಲಾಗುತ್ತದೆ. ಬಿಳಿಜನರು ಏಶಿಯ ಮತ್ತು ಆಫ್ರಿಕದ ಜನತೆಯನ್ನು ತಿರಸ್ಕಾರ ದೃಷ್ಟಿಯಿಂದ ಈಗಲೂ ನೋಡುತ್ತಿರುವುದು ಇವೆರಡು ಖಂಡಗಳ ರಾಷ್ಟ್ರೀಯ ಮನೋಭಾವದ ವ್ಯಕ್ತಿಗಳ ಮನನೋಯಿಸಿದೆ ಎಂದು ಆ ವಲಯಗಳು ಅಭಿಪ್ರಾಯ ಪಡುತ್ತವೆ. ಸಂಯುಕ್ತ ರಾಷ್ಟ್ರಸಂಘವು ಪಾಶ್ಚಾತ್ಯರ ಭದ್ರಮುಷ್ಟಿಯ ಹಿಡಿತದಿಂದ ತನ್ನನ್ನು ಬಿಡಿಸಿಕೊಂಡು ಏಶಿಯದ ಮತ್ತು ಆಫ್ರಿಕದ ಜನರ ಹಿತಸಾಧಿಸಲು ಅಸಮರ್ಥವಾಗಿದೆ ಎಂಬುದರ ಸಂಕೇತವೇ ಬಾಂಡುಂಗಿನ ಪರಿಷತ್ತೆಂದು ಕೆಲವರ ಅಭಿಪ್ರಾಯ. ವರ್ಣಭೇದ ಧೋರಣೆ, ವಸಾಹತುವಾದ, ಆರ್ಥಿಕ ಶೋಷಣೆ, ಸೈನಿಕ ಒಪ್ಪಂದ, ಅಣುಶಸ್ತ್ರಗಳ ಉತ್ಪಾದನೆ ಮುಂತಾದುವೆಲ್ಲ ಏಶಿಯ ಮತ್ತು ಆಫ್ರಿಕದ ಜನರಿಗೆ ಇಷ್ಟವಿಲ್ಲದಿರುವಾಗ ಪಾಶ್ಚಾತ್ಯ ರಾಷ್ಟ್ರಗಳನ್ನೂ ಅವರ ಹಿಡಿತದಲ್ಲಿರುವ ಸಂಯುಕ್ತ ರಾಷ್ಟ್ರಸಂಘವನ್ನೂ ಆಶ್ರಯಿಸಿ ಪ್ರಯೋಜನವಿಲ್ಲವೆಂದೂ ತಾವೇ ತಮ್ಮ ಸಮಸ್ಯೆಗಳ ಪರಿಹಾರವನ್ನು ಹುಡುಕಬೇಕೆಂದೂ ಇವೆರಡು ಖಂಡಗಳ ಜನರು ತೀರ್ಮಾನಿಸಿರುವಂತೆ ಈ ವರ್ತುಲಗಳಿಗೆ ಕಾಣುತ್ತದೆ.

ಪ್ರಚಲಿತ ಅಭಿಪ್ರಾಯ

ಭಾರತದ ಸುಪ್ರಸಿದ್ಧ ಚರಿತ್ರೆಕಾರರಾದ ಸರ್ದಾರ ಪಣಿಕ್ಕರರೂ ಆಸ್ಟ್ರೇಲಿಯದ ವಿಶ್ವವಿದ್ಯಾಲಯವೊಂದರಲ್ಲಿ ದೂರ ಪ್ರಾಚ್ಯದ ಬಗ್ಗೆ ಉಪನ್ಯಾಸ ಮಾಡುವ ಇನ್ನೊಬ್ಬ ತಜ್ಞರೂ ಅಮೇರಿಕದ ಪತ್ರಿಕೆಯೊಂದರಲ್ಲಿ ಪ್ರಕಟಿಸಿರುವ ಲೇಖನಗಳು ಮೇಲೆ ಹೇಳಿದ ವಿಷಯಗಳಲ್ಲಿ ಹೆಚ್ಚಿನವನ್ನು ಪ್ರಸ್ತಾಪಿಸಿ, ಏಶಿಯ ಮತ್ತು ಆಫ್ರಿಕಗಳ ಜನತೆ ಎಚ್ಚತ್ತಿದೆ ಎಂಬ ಸಾಮಾನ್ಯ ತೀರ್ಮಾನಕ್ಕೆ ಬಂದಿರುವವು. ಆದರೆ ಬಾಂಡುಂಗಿನ ಪರಿಷತ್ತು ತೃತೀಯ ಬಣವನ್ನು ಕಟ್ಟುವ ಉದ್ದೇಶದಿಂದ ಕೂಡಿಲ್ಲವೆಂದೂ ಸಮಾನ ಸಮಸ್ಯೆಗಳಿರುವ ಜನರ ಅಭಿಪ್ರಾಯ ವಿನಿಮಯಕ್ಕೂ ನಿಕಟ ಸಂಪರ್ಕ ಸ್ಥಾಪನೆಗೂ ಮಾಡಿದ ಹೊಸ ಬಗೆಯ ಪ್ರಯತ್ನವೆಂದೇ ಅದನ್ನು ಭಾವಿಸಬೇಕೆಂದೂ ಪಣಿಕ್ಕರರ ಅಭಿಪ್ರಾಯ. ಶಕ್ತಿಕೂಟಗಳನ್ನಾಗಲಿ ಸಂಯುಕ್ತ ರಾಷ್ಟ್ರಸಂಘವನ್ನಾಗಲೀ ಪ್ರತಿಭಟಿಸುವುದಕ್ಕೆ ಬಾಂಡುಂಗಿನ ಪರಿಷತ್ತು ಹೋಗುವುದಿಲ್ಲ. ಅಲ್ಲದೆ ಕಮ್ಯುನಿಸಮ್ಮಿನತ್ತ ಈ ರಾಷ್ಟ್ರಗಳು ಒಲಿಯುವುದೂ ಇಲ್ಲ—ಕಮ್ಯುನಿಸಮ್ಮಿನ ಗಂಡಾಂತರವು ವಸಾಹತುವಾದ ಮುಂತಾದ ಪಾಶ್ಚಾತ್ಯರ ಧೋರಣೆಯ ಅನಾಹುತಕ್ಕಿಂತ ಯಾವ ರೀತಿಯಲ್ಲೂ ಕಡಿಮೆಯಲ್ಲವೆಂಬುದೇ ಹೆಚ್ಚಿನ ಆಫ್ರೇಸ್ಯ ರಾಷ್ಟ್ರಗಳ ಅಭಿಮತ. ಆದುದರಿಂದ ಆದಷ್ಟು ಮಟ್ಟಿಗೆ ಶಾಂತಿಯನ್ನು ಕಾಯ್ದುಕೊಂಡು ಸಹಜೀವನದ ಸಿದ್ಧಾಂತವನ್ನು ಅನುಷ್ಠಾನಕ್ಕೆ ತರು

ರಶಿಯದ ವಿರೋಧದ ಹೊಸ ರೂಪ

ಬ್ರಿಟನು-ಫ್ರಾನ್ಸುಗಳೊಡನೆ ಮೈತ್ರಿ ಒಪ್ಪಂದ ರದ್ದು

ಪೇರಿಸು ಒಡಂಬಡಿಕೆಗೆ ತನ್ನ ವಿರೋಧವನ್ನು ಮೊದಲಿಂದಲೂ ಸೂಚಿಸುತ್ತ ಬಂದ ರಶಿಯವು ಕಳೆದ ದಶಂಬರದಲ್ಲೂ ಇದೇ ಫೆಬ್ರುವರಿಯಲ್ಲೂ ಎಚ್ಚರಿಕೆ ಕೊಟ್ಟಂತೆ ಬ್ರಿಟನು ಮತ್ತು ಫ್ರಾನ್ಸುಗಳೊಡನೆ ಮಾಡಿಕೊಂಡ ಮೈತ್ರಿಯ ಒಪ್ಪಂದಗಳನ್ನು ರದ್ದು ಮಾಡಲು ನಿಶ್ಚಯಿಸಿದೆ. ಸುಪ್ರೀಂ ಸೋವಿಯೇಟಿಗೆ ಮಂತ್ರಿ ಮಂಡಳವು ಈ ಸಿಫಾರಸು ಮಾಡಿದೆಯೆಂದೂ ಸಿಫಾರಸು ಮನ್ನಿಸಲ್ಪಡುವುದು ನಿಶ್ಚಯವೆಂದೂ ನಿರೀಕ್ಷಕರ ಅಭಿಪ್ರಾಯ.

ರಶಿಯದ ದುಡುಕು

ಮೈತ್ರಿಯ ಒಪ್ಪಂದಗಳ ಕರಾರನ್ನು ಪೇರಿಸು ಒಡಂಬಡಿಕೆಯನ್ನು ಮನ್ನಿಸುವ ಮೂಲಕ ಬ್ರಿಟನು ಮತ್ತು ಫ್ರಾನ್ಸುಗಳು ಮುರಿದಂತಾಯಿತೆಂದು ರಶಿಯ ಹೇಳುತ್ತದೆ. ಜರ್ಮನಿಯ ಪುನಃಶಸ್ತ್ರೀಕರಣಕ್ಕೆ ಸಂಬಂಧಪಟ್ಟ ಪೇರಿಸು ಒಡಂಬಡಿಕೆಯು ಮೈತ್ರಿಯ ಒಪ್ಪಂದಗಳ ಕರಾರನ್ನೇನೂ ಉಲ್ಲಂಘಿಸುವುದಿಲ್ಲ ಎಂದು ಬ್ರಿಟನು ಮತ್ತು ಫ್ರಾನ್ಸುಗಳು ಹೇಳಿ,ಉಗ್ರಕ್ರಮ ಕೈಗೊಂಡುದಕ್ಕೆ ರಶಿಯವನ್ನೇ ದೂರುತ್ತವೆ. ಇದೇನಿದ್ದರೂ, ರಶಿಯದ ಬೆದರಿಕೆಗೆ ಬಲಿಯಾಗಿ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಸೈನಿಕ ಚಟುವಟಿಕೆಯನ್ನು ನಿಲ್ಲಿಸುವುದಿಲ್ಲ ಎಂದು ಮಾತ್ರ ಖಚಿತವಾಗಿ ತಿಳಿದು ಬರುತ್ತದೆ.

ಈಡನರ ಸಹಾಯಕರು

ಬ್ರಿಟನಿನಲ್ಲೀಗ ಈಡನರು ಹೊಸ ಪ್ರಧಾನಿಯಾಗಿದ್ದು, ಅವರು ನಿರೀಕ್ಷಿಸಿದುದಕ್ಕಿಂತ ಹೆಚ್ಚು ವಿಸ್ತಾರವಾದ ಬದಲಾವಣೆಗಳ ಮೂಲಕ ಮಂತ್ರಿ ಮಂಡಳದ ಪುನರ್ಘಟನೆ ಮಾಡಿದರು. ವಿದೇಶ ಖಾತೆಯನ್ನು ಹೆರೊಲ್ಡ್ ಮ್ಯಾಕ್ ಮಿಲನರಿಗೂ ರಕ್ಷಣಾ ಖಾತೆಯನ್ನು ಸೆಲ್ವಿನ್ ಲ್ಯಾಡರಿಗೂ ಅವರು ಒಪ್ಪಿಸಿದರು. ಬ್ರಿಟನಿನ ದೃಷ್ಟಿಯಲ್ಲಿ ಚರ್ಚಿಲ್ಲರ ಕಾಲದಲ್ಲಿ ಮಂತ್ರಿಮಂಡಳದ ಸದಸ್ಯರ ಸರಾಸರಿ ಪ್ರಾಯ ೫೮ ವರ್ಷ ೬ ತಿಂಗಳು ಇದ್ದುದನ್ನು ಈಡನ್ನರು ೫೫ ವರ್ಷ ೮ ತಿಂಗಳಿಗೆ ಇಳಿಸಿರುವುದೂ ಮಹತ್ವದ ಕ್ರಮ.

ಚುನಾವಣೆ ಎಂದು?

ಇದನ್ನು ಹಾಗು ಮಂತ್ರಿ ಮಂಡಳದಲ್ಲಿ ಹೆಚ್ಚಿನ ಬದಲಾವಣೆ ಮಾಡಿರುವುದನ್ನು ಕಂಡರೆ, ಮೇ ೨೬ ನೇ ತಾರೀಕಿಗೆ ನಡೆಯುವುದೆಂದಿದ್ದ ಹೊಸ ಚುನಾವಣೆಯು ಅಕ್ಟೋಬರಕ್ಕೆ ಮುಂದೂಡಲ್ಪಡುವುದೇ ಎಂಬ ಸಂಶಯವೇಳುತ್ತದೆ. ಈಡನ್ನರು ತಮ್ಮ ಪಕ್ಷಕ್ಕೆ ನಿಶ್ಚಯವಾದ ವಿಜಯ ಸಿಗುವ ರೀತಿಯಲ್ಲಿ ಚುನಾವಣೆಯ ದಿನಗಳನ್ನು ನಿರ್ಧರಿಸಬೇಕಾಗಿದ್ದು, ಅವರ ಸಮಯ ಮತ್ತು ಬುದ್ಧಿವಂತಿಕೆಯನ್ನು ಈಗ ಇದೇ ವಿಷಯ ತಿನ್ನುತ್ತದೆ.

ನೀತಿಯಲ್ಲಿ ಪರಿವರ್ತನೆ

ಫೊರ್ಮೋಸದ ವಿಷಯದಲ್ಲಿ ಅಮೇರಿಕದ ಧೋರಣೆ ತುಸು ಬದಲಾಗಿರುವಂತೆ ತೋರುತ್ತದೆ. ಯುದ್ಧ ಪ್ರಚೋದಕರ ಬೊಬ್ಬೆಯನ್ನು ಐಸೆನ ಹೋವರರು ಗಮನಿಸಲಿಲ್ಲವೆಂದೂ ಕ್ವಿಮ್ಯೊ ಮತ್ತು ಮತ್ಸುದ್ವೀಪಗಳ ರಕ್ಷಣೆ ಮಾಡುವ ವ್ಯಾಮೋಹವನ್ನು ಅವರೀಗ ತೊರೆದಿರುವರೆಂದೂ ಫೋರ್ಮೋಸದ ಮೇಲಾಗುವ ಚೀನೀಯರ ದಾಳಿಯನ್ನು ಸಹ ರಾಷ್ಟ್ರೀಯರೇ ಮೊದಲಾಗಿ ಎದುರಿಸಬೇಕಾದೀತೆಂದೂ ಅನಿವಾರ್ಯ ಪ್ರಸಂಗದಲ್ಲಿಯೇ ಅಮೇರಿಕ ಕೈಹಾಕ ಬಹುದೆಂದೂ ಈಗ ಸಾಮಾನ್ಯವಾಗಿ ಅಮೇರಿಕದ ವರ್ತುಲಗಳು ಹೇಳುತ್ತವೆ.

ಸುಡಾನಿನ ನಿರ್ಣಯ

ನಗೀಬರು ಈಜಿಪ್ತಿನ ಪ್ರಧಾನಿಯಾಗಿರುವವರೆಗೆ ಈಜಿಪ್ತಿನೊಡನೆಯೇ ಸೇರಿಕೊಂಡು ತಮ್ಮ ಅಭಿವೃದ್ಧಿ ಸಾಧಿಸಬೇಕೆಂದಿದ್ದ ಸುಡಾನಿನ ಜನರು ಈಗ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದ ಪ್ರಜಾಪ್ರಭುತ್ವ ರಾಷ್ಟ್ರವಾಗಲು ತೀರ್ಮಾನಿಸಿರುವರೆಂದು ವರದಿಗಳು ಹೇಳುತ್ತವೆ. ಈಜಿಪ್ತು ನೈಲಿನ ನೀರಿನ ಬಗ್ಗೆಯಾದರೂ ಸುಡಾನಿನೊಡನೆ ಸ್ನೇಹದಿಂದಿರಬೇಕಾಗುತ್ತದೆ. ಹೀಗಿರುವಾಗ ಅದಕ್ಕಿರುವ ಸಮಾಧಾನವೆಂದರೆ ಅರಬ ಗುಂಪನ್ನು ಬೆಂಬಲಿಸುವೆನೆಂದೂ ಈಜಿಪ್ತಿನೊಂದಿಗೆ ಅಗತ್ಯದ ವಿಷಯಗಳಲ್ಲಿ (ಉದಾ: ಸೈನ್ಯ) ಸಹಕರಿಸುವೆನೆಂದೂ ಅದು ಕೊಟ್ಟ ಭರವಸೆ ಮಾತ್ರ.

ಆರನೆಯ ಪ್ರಬುದ್ಧ ಬಂದರ

ಭಾರತವು ಸ್ವತಂತ್ರವಾದ ಬಳಿಕ ಕಾಂಡ್ಲಾದಲ್ಲಿ ಇದೀಗ ಆರನೆಯ ಪ್ರಬುದ್ಧ ಬಂದರದ ಪ್ರಥಮ ಘಟ್ಟ ಉದ್ಘಾಟಿಸಲ್ಪಟ್ಟಿತು. ಪಶ್ಚಿಮ ಪಾಕಿಸ್ತಾನದ ೨೭೫೦೦೦ ಚದರ ಮೈಲು ವಿಸ್ತೀರ್ಣದ ೪೫೦ ಲಕ್ಷ ಜನರಿಗೆ ಪ್ರಯೋಜನ ದೊರಕಿಸಿಕೊಡುವ ಈ ಬಂದರದ ರಚನೆಗೆ ೧೪ ಕೋಟಿ ರೂಪಾಯಿಯಷ್ಟು ವೆಚ್ಚತಗಲುತ್ತದೆ.

ರೈಲ್ವೆಯ ವಿಸ್ತರಣೆ

ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ೫೦೦೦ ಮೈಲು ಉದ್ದದ ಹೊಸ್ತ ರೈಲು ಮಾರ್ಗಗಳನ್ನು ಹಾಕಲಾಗುವುದೆಂದೂ ಇದಕ್ಕೆ ೧೫೦ ಕೋಟಿ ರೂಪಾಯಿಗಳ ವೆಚ್ಚ ಬರುವುದೆಂದೂ ಮಂತ್ರಿಗಳ ಹೇಳಿಕೆಯೊಂದು ತಿಳಿಸುತ್ತದೆ. ರೈಲ್ವೆ ಪ್ರಯಾಣಿಕರಿಗೆ ಹೆಚ್ಚೆಚ್ಚು ಅನುಕೂಲತೆಯನ್ನು ಒದಗಿಸುವ ವಿಷಯದಲ್ಲಿ ತೆಗೆದುಕೊಂಡ ಕ್ರಮಗಳನ್ನು ಅವರು ವಿವರಿಸಿದ್ದು ಮಲಗುವ, ಸ್ನಾನಮಾಡುವ ಮುಂತಾದ ಸೌಕರ್ಯಗಳು ಉಲ್ಲೇಖನೀಯ.

ವಿವಿಧೋದ್ದೇಶದ ಶಿಕ್ಷಣ

ಹೊಸ ದೆಹಲಿಯಲ್ಲಿ ಸೇರಿದ ಶಿಕ್ಷಣ ತಜ್ಞರ ಪರಿಷತ್ತೊಂದು ೮೦ ಕೋಟಿ ರೂಪಾಯಿಗಳ ವೆಚ್ಚದ ಕಾರ್ಯಕ್ರಮವನ್ನು ಮುಂದಿನ ಯೋಜನೆಗಾಗಿ ಅಣಿಗೊಳಿಸಿತು. ಇದರಲ್ಲಿ ಮಾಧ್ಯಮಿಕ ಶಿಕ್ಷಣಕ್ಕಾಗಿ ೩೦ ಕೋಟಿ ರೂಪಾಯಿಗಳು ಮೀಸಲಿಡಲಾಗಿವೆಯಲ್ಲದೆ, ೧೯೬೧ ನೇ ಇಸವಿಯ ಹೊತ್ತಿಗೆ ಈಗಿನ ೨೫೦೦ ಶಾಲೆಗಳನ್ನು ವಿವಿಧೋದ್ದೇಶ ಶಾಲೆಗಳಾಗಿ ಪರಿವರ್ತಿಸುವ ಗುರಿ ಕಂಡುಬರುತ್ತದೆ.

ಪ್ರಾದೇಶಿಕ ಭಾಷೆಗೆ ಸ್ಥಾನ

ಮದ್ರಾಸು ಸರಕಾರವು ಸರಕಾರಿ ಕೆಲಸಗಳಿಗೆ ನಡೆಯುವ ಪರೀಕ್ಷೆಯು ಪ್ರಾದೇಶಿಕ ಭಾಷೆಗಳಲ್ಲಿ ಸಹ ನಡೆಯಬೇಕೆಂದೂ ಹಿಂದಿಯಲ್ಲಿ ಅದು ಕಡ್ಡಾಯವಾಗಿ ನಡೆಯಬಾರದೆಂದೂ ತಿಳಿಸಿದ್ದು ಇದನ್ನು ಧೈರ್ಯದ ಹೆಜ್ಜೆಯಾಗಿಕೊಂಡಾಡಲಾಗುತ್ತದೆ.

ಶಿಕ್ಷಣ ಮಾಧ್ಯಮ

ಮುಂಬಯಿ ಸರಕಾರವು ಒಂದು ಆಜ್ಞೆಯನ್ನು ಹೊರಡಿಸಿ, ರಾಜ್ಯದ ಶಾಲೆಗಳಲ್ಲಿ ಇಂಗ್ಲಿಷನ್ನೊಳಗೊಂಡು ಯಾವ ಭಾಷೆಯನ್ನೂ ಶಿಕ್ಷಣ ಮಾಧ್ಯಮವಾಗಿ ಬಳಸಬಹುದೆಂದೂ ಆದರೆ ಇಂಗ್ಲಿಷನ್ನು ಮಾಧ್ಯಮವಾಗಿಸುವ ಶಾಲೆಗಳು ಕೆಲವು ನಿಯಮಗಳ ಕುರಿತು ಶಿಕ್ಷಣ ಶಾಖೆಯನ್ನು ತೃಪ್ತಿಗೊಳಿಸಬೇಕೆಂದೂ ಸೂಚಿಸಿ, ಕಳೆದ ವರ್ಷ ವರಿಷ್ಠ ನ್ಯಾಯಾಲಯವಿತ್ತ ತೀರ್ಪಿನಿಂದ ತಾನು ಬಂದ ನಿರ್ಣಯವನ್ನು ಸಾರಿತು.

ವುದು, ಆರ್ಥಿಕ ಪುನಾರಚನೆಗೆ ನೆರವಾಗುವುದು, ಸೈನಿಕ ವ್ಯೂಹಗಳ ವ್ಯಾಮೋಹವನ್ನುತೊರೆದು ತಟಸ್ಥ ವಲಯದ ವಿಸ್ತಾರವನ್ನು ಹೆಚ್ಚಿಸಲು ದೃಢ ಪ್ರತಿಜ್ಞರಾಗುವುದು, ರಾಷ್ಟ್ರಗಳ ಸ್ವಾತಂತ್ರ್ಯದಮಂತ್ರೋಚ್ಚಾರಗೈಯುವುದು -ಇಷ್ಟರಿಂದ ಬಾಂಡುಂಗಿನ ಪರಿಷತ್ತಿಗೆ ಬಂದ ಪರಿಷ್ಯರು ತೃಪ್ತರಾಗುವ ಸಂಭವ ಹೆಚ್ಚು. ಅವರ ಉಳಿದ ನಿರ್ಣಯಗಳು (ಉದಾ: ಫೊರ್ಮೋಸ ಮತ್ತು ಇಂಡೋಚೀನದ ಗೊಂದಲ) ತಾತ್ಕಾಲಿಕ ಮಹತ್ವದ್ದಾಗುತ್ತವೆ.

ನೆನಪಿಗಾಗಿ

ಈ ವರೆಗೂ ಚಂದಾಹಣ ಕಳುಹಿಸದವರು ಈಗಲಾದರೂ ಕಳುಹಿಸುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ವಿ. ಪಿ. ಪಿ. ಮಾಡುವುದರಿಂದ ಪತ್ತಾಣೆ ಹೆಚ್ಚಿಗೆ ಬೀಳುವುದೆಂಬುದನ್ನು ತಿಳಿದು ಎಲ್ಲರೂ ಚಂದಾಹಣವನ್ನು ಕೂಡಲೇ ಮನಿಯಾರ್ಡರುಮಾಡಿ ಸಹಕರಿಸುವಂತೆ ವಿನಂತಿಸುತ್ತೇನೆ.

ಮೆನೇಜರ್.

ಒಂದಲ್ಲ—ಎರಡಲ್ಲ—ಮೂರುಬಾರಿ ನೋಡಿದರೂ ಮತ್ತೂ
ನೋಡಬೇಕೆನಿಸುವ ಚಿತ್ರವೇ
ಏಕ್-ದೋ-ತೀನ್ (ಹಿಂದಿ)
ಮೀನಾ — ಮೋತಿಲಾಲ್,
ಬರುತ್ತವೆ.- ಮಾಂಗಲ್ಯಂ, ಮಯೂರಪಂಖ್ [ಕಲರ್]

ಸ್ವೀಕೃತ ತಿದ್ದುಪಡಿ

ಲೋಕ ಸಭೆಯು, ಸಂವಿಧಾನಕ್ಕೆ ಮಾಡಬೇಕೆಂದಿರುವ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುವ ಮತ್ತು ಪರಿಹಾರ ಧನನೀಡುವ ಸೂತ್ರಕ್ಕೆ ಸಂಬಂಧಿಸಿದ ತಿದ್ದುಪಡಿಯನ್ನು, ಅತ್ಯಧಿಕ ಬಹುಮತದಿಂದ (೩೯೦ ವಿರುದ್ಧ ೫) ಸ್ವೀಕರಿಸಿತು.

ಉಡುಪಿ

ಗುರಾಣೆ ಪಾರಿತೋಷ- ಮಂಗಳೂರಲ್ಲಿ ಈಚೆಗೆ ಜರಗಿದ ಪೋಲೀಸ್ ವರ್ಷಾವಧಿ ಪಂದ್ಯಾಟದಲ್ಲಿ ಉಡುಪಿಯ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಸಿ. ಕೆ. ಪಾಹಿನ್, ಅವರ ಶಿಸ್ತು, ಸುವ್ಯವಸ್ಥಿತ ಆಡಳಿತಗಳಿಗಾಗಿ ಗುರಾಣೆ ಪಾರಿತೋಷವೊಂದನ್ನು ಕೊಯಮುತ್ತೂರುದಿವಿಜನಿನ ಡಿ. ಐ. ಜಿ. ಶ್ರೀ ನಾರಾಯಣೈರ್ಯಗಳವರು ವಿತರಣೆಮಾಡಿರುವರು.

ಮಂತ್ರಿಗಳ ಆಗಮನ- ಮದರಾಸು ಸರಕಾರದ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟರು ಮತ್ತು ಕೃಷಿ ಮಂತ್ರಿ ಶ್ರೀ ಎಮ್. ಭಕ್ತವತ್ಸಲಂ, ಅವರು ಈ ತಿಂಗಳ ಸುಮಾರು 24 ನೇ ತಾರೀಕಿಗೆ ಮಂಗಳೂರಿಗೆ ಆಗಮಿಸಿ ಜಿಲ್ಲಾ ಸಂಚಾರ ಕೈಕೊಳ್ಳಲಿದ್ದು ತಾ 27 ಕ್ಕೆ ಉಡುಪಿ ಮತ್ತು ಕುಂದಾಪುರಕ್ಕೆ ಸಂದರ್ಶನ ನೀಡುವರೆಂದು ತಿಳಿದುಬರುತ್ತದೆ. ಮುಖ್ಯಮಂತ್ರಿ ಶ್ರೀ ಕಾಮರಾಜನಾಡರು ತಾ. 27ಕ್ಕೆ ಉಡುಪಿಗೆ ಬರುವರು.

ಹೊಸ ಡಿ. ಮುನ್ಸಿಫರು- ಹೊಸದಾಗಿ ಎಡಿಶನಲ್ ಮುನ್ಸಿಫ್ ಕೋರ್ಟು ಮುಚ್ಚಲ್ಪಟ್ಟಿದ್ದು ಇಲ್ಲಿಯ ಡಿ। ಮುನ್ಸಿಫ್ ಶ್ರೀ ರೇಗೋರವರು ಇಲ್ಲಿಗೆ ವರ್ಗಾಯಿಸಲ್ಪಟ್ಟು ಇದೀಗ ತಾತ್ಕಾಲಿಕ ಮುನ್ಸಿಫರಾಗಿದ್ದ ಶ್ರೀ ಗೋಪಾಲಕೃಷ್ಣನವರಿಂದ ಚಾರ್ಜು ವಹಿಸಿರುತ್ತಾರೆ.

ಹಾಲು ಸರಬರಾಯಿ ಸಹಕಾರಿ ಸಂಘದ- ಮಹಾ ಸಭೆಯು ತಾ. 6ರಲ್ಲಿ ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಡೈರೆಕ್ಟರರ ಚುನಾವಣೆ ನಡೆದು ಡಾ। ಟಿ. ಎಮ್. ಎ. ಪೈ, ಡಾ। ಎಸ್. ಆರ್. ಪೈ ಮತ್ತು ಎಮ್. ವಾಮನ ಭಟ್ಟರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಯರಾಗಿ ಆರಿಸಲ್ಪಟ್ಟರು.

ಕರ್ನಾಟಕ ಸಂಘ-- ಇದರ ಆಶ್ರಯದಲ್ಲಿ ತಾ. 6ರಂದು ಸಂಜೆ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ದ. ಕ. ಜಿಲ್ಲಾ ಲೇಖಕರ ಸಹಕಾರಿ ಸಂಘದ ಪ್ರವರ್ತಕರಾದ ಶ್ರೀ ಆರ್. ಕೆ. ಪ್ರಭು ಮತ್ತು ಶ್ರೀ ಏಕಾಂಬರ ರಾಯರು ಆ ಸಂಘದ ಧ್ಯೇಯ ಧೋರಣೆಗಳನ್ನು ವಿವರಿಸಿ ಇಲ್ಲಿಯವರ ಸಹಕಾರ ಕೋರಿದರು. ಶ್ರೀ ಕು. ಶಿ. ಹರಿದಾಸ ಭಟ್ಟರು ಸ್ವಾಗತ ಮಾತುಗಳನ್ನಾಡಿದರು. ಸಭಿಕರ ಕಡೆಯಿಂದ ಡಾ. ಟಿ. ಎಮ್. ಎ. ಪೈಗಳು ಹಲವು ಸೂಕ್ತ ಸಲಹೆಗಳನ್ನಿತ್ತರು. ಈ ಸಂಘವು ಲೇಖಕ ವರ್ಗಕ್ಕೆ ಹೆಚ್ಚು ಪ್ರಯೋಜನಕಾರಿಯಾಗುವಂತಾಗಲೆಂದು ಅಧ್ಯಕ್ಷರು ಹಾರೈಸಿ ಭಾಷಣಮಾಡಿದರು

ಬ್ರಹ್ಮೋಪದೇಶ – ಸಾರ್ವಜನಿಕ ಕಾರ್ಯಕರ್ತರಲ್ಲೊಬ್ಬರೂ ನಗರ ಸಭಾಸದಸ್ಯರೂ ಆದ ಶ್ರೀ ಕೆ. ಕೆ. ಪೈಗಳ ಪುತ್ರ ಚಿ। ಅರವಿಂದನ ಬ್ರಹ್ಮೋಪದೇಶ ಸಮಾರಂಭವು ತಾ.11 ರಂದು ಕುಂಜಿಬೆಟ್ಟಿನಲ್ಲಿ ವಿಜೃಂಭಣೆಯಿಂದ ನೆರವೇರಿತು.

ವಿವಾಹ ಸಮಾರಂಭ— ಶ್ರೀ ಕೆ. ಎಸ್. ಶೆಣೈಯವರ ಪುತ್ರಿ ಕುಮಾರಿ ಸರೋಜ ಮತ್ತು ದಿ। ಡಿ. ಶ್ರೀಪತಿರಾಯರ ಪುತ್ರ ಶ್ರೀ ನಾಗರಾಜರಾವ್ ಇವರ ವಿವಾಹವು ತಾ. 13 ರಂದು ಕೋರ್ಟುರೋಡಿನಲ್ಲಿರುವ ವಧುವಿನ ಗೃಹದಲ್ಲಿ ವಿಜೃಂಭಣೆಯಿಂದ ಜರಗಿತು.

ನಿಡಂಬೂರು ಬೀಡು ದಿ। ಶ್ರೀನಿವಾಸ ಬಲ್ಲಾಳರ ಪುತ್ರ ಶ್ರೀ ಶ್ರೀಶ ಬಲ್ಲಾಳ ಮತ್ತು ಕಾರ್ಕಳ ಕೃಷ್ಣ ಭಟ್ರ ಪುತ್ರಿ ಚಿ. ಯಮುನಾ ಇವರ ವಿವಾಹವು ಕಾರ್ಕಳದಲ್ಲಿ ವಧುವಿನ ಗೃಹದಲ್ಲಿ ವೈಭವದಿಂದ ಜರಗಿತು.

ಮಾಯಿಪ್ಪಾಡಿ— ಇಲ್ಲಿಯ ಬುನಾದಿ ಕೇಂದ್ರ ಅಧ್ಯಾಪಕರ ಸಭೆಯು ತಾ 2 ರಲ್ಲು ಶ್ರೀ ವಿ. ತಿಮ್ಮಪ್ಪ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀಗಳಾದ ವಿ. ಶಂಕರ ಭಟ್ಟರು ಕಾರ್ಯದರ್ಶಿಗಳಾಗಿಯೂ, ಪರಮೇಶ್ವರ ಭಟ್ಟರು ಉಪಕಾರ್ಯದರ್ಶಿಗಳಾಗಿಯೂ ಎಚ್. ಶ್ರೀನಿವಾಸರಾಯರು ಪ್ರೆಸ್ಸ ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು

ಕಾಸರಗೋಡು— ಸ್ಥಳೀಯ ಬೋರ್ಡು ಹಾ| ಎ| ಶಾಲೆಯ ವಾರ್ಷಿಕ ಸಭೆಯು ತಾ 6 ರಲ್ಲು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ| ಕೆ. ಕೆ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ. ಮಹಾಬಲ ಭಂಡಾರಿಗಳ ಸ್ವಾಗತ ಮಾತುಗಳಾದ ಬಳಿಕ ಶ್ರೀ ಕೆ ಶಿವರಾಮ ಸೆಟ್ಟರು ಶುಭಾಶಂಸಾ ಭಾಷಣಮಾಡಿದರು ಶ್ರೀಮತಿ ಟಿ ಸುಮಿತ್ರಾ ಬಾಯಿಯವರು ವರದಿಯನ್ನೋದಿದರು. ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಕೆ ಎನ್. ಬಾಬು ಸೆಟ್ಟರು ಕಾಲೋಚಿತಮಾತುಗಳನ್ನಾಡಿದರು

ಬೋಳ— ಹರಿಜನ ವೆಲ್‌ಫೇರ್ ಶಾಲೆಯ ವಾರ್ಷಿಕೋತ್ಸವವು ತಾ 8 ರಲ್ಲು ಶ್ರೀ ವಿ ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಸ್ ಪುಂಡಲೀಕ ಮಲ್ಯರು ಸ್ವಾಗತ ಭಾಷಣಮಾಡಿದರು ಶ್ರೀ ಕೆ ಸೂರ್ಯನವರು ವರದಿಯನ್ನೋದಿದರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣ, ನಾಟಕಾದಿ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು

ಹಿರಿಯಡಕ— ಸ್ಥಳೀಯ ಶ್ರೀ ವೀರಭದ್ರ ದೇವಾಲಯದ ಪ್ರತಿಷ್ಠಾ ಕಾರ್ಯಗಳು ಇದೇ ತಾ 20ರಲ್ಲಿ ಆರಂಭವಾಗಲಿರುವುದು. ತತ್ಸಂಬಂಧ ಜರಗಲಿರುವ ಮಹಾಜನ ಸಂತರ್ಪಣೆ ಖರ್ಚಿನಲ್ಲಿ ಶ್ರಿ ಸಾಣೂರು ಮುದ್ದಣ್ಣ ಸೆಟ್ಟರು 2500, ಮರ್ಣೆ ಶ್ರೀ ಸೀನಸೆಟ್ರು 500, ಮತ್ತು ಮರ್ಣೆ ಶ್ರೀ ಗೊಮ್ಮಯ್ಯ ಸೆಟ್ರು 500, ಜನರ ಸಂತರ್ಪಣೆಯ ಸಾಹಿತ್ಯಗಳನ್ನು ಕಳುಹಿಕುಪ್ರದಾಗಿ ಒಪ್ಪಿರುವುದು ಅಭಿನಂದನೀಯವಿದೆ.

ಕಟ್ಟೆ ಬೈಲೂರು— ಇಲ್ಲಿಯ ಪಂಚಾಯತ ಬೋರ್ಡಿನ ಚುನಾವಣೆಯು ತಾ 2ರಲ್ಲು ನಡೆದು ಶ್ರೀ ಎ ಶ್ರೀಧರರಾಯರು ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಆರಿಸಲ್ಪಟ್ಟರು ಶ್ರೀಗಳಾದ ಎಸ್ ಗಣಪಯ್ಯ, ಸಂಜೀವ ಸೆಟ್ಟಿ,ಜೆ. ಮಂಜುನಾಥಪ್ರಭು,ದೇವಪೂಜಾರಿ, ಎಚ್ ಅಣ್ಣಪ್ಪ ಮತ್ತು ಚಿಕ್ಕ ರೆಟ್ಟಿಯವರು ಕೂಡಾ ಎದುರಾಳಿಗಳಿಲ್ಲದೆ ಮೆಂಬರರಾಗಿ ಆಯ್ಕೆ ಹೊಂದಿದರು,

ನಡೂರು— ಸ್ಥಳೀಯ ಶ್ರೀ ಮಹಾಲಿಂಗೇಶ್ವರ ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಮಹಾ ಸಭೆಯು ಶ್ರೀ ವಿ, ನಾರಾಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ, ವಾಚನಾಲಯ, ಪುಸ್ತಕಾಲಯ ಮತ್ತು ವ್ಯಾಯಾಮ ಮಂದಿರವನ್ನು ಸಂಘದ ಸ್ವಾಕೃತ್ವದಲ್ಲಿ ತೆರೆಯಬೇಕೆಂದು ನಿರ್ಧಾರವಾಯಿತು. 'ಗ್ರಾಮಾಭ್ಯುದಯ' ವೆಂಬ ಹಸ್ತ ಲಿಖಿತವಾರ್ಷಿಕ ಪತ್ರಿಕೆಯನ್ನು ಪುನರುಜ್ಜೀವನಗೊಳಿಸಬೇಕೆಂದೂ ತೀರ್ಮಾನಿಸಲಾಯಿತು ಬಳಿಕ ಕಾರ್ಯಕಾರೀ ಸಮಿತಿಗೆ ಸದಸ್ಯರ ಚುನಾವಣೆ ನಡೆದು ಶ್ರೀಗಳಾದ ವಿ ಎನ್. ಸೆಟ್ಟಿ (ಅಧ್ಯಕ್ಷ), ಎಸ್ ಶೇಕರ ಸೆಟ್ಟಿ ಮತ್ತು ಎಸ್ ಸುಂದರ ಸೆಟ್ಟರು ಜತೆಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು

ಶಿವಪುರ— ಚೋನಾಳಿ ಹರ್ಷ ಪ್ರಾಥಮಿಕ ಶಾಲೆಯ ವರ್ಧಂತಿಯುತ್ಸವವು ತಾ 6 ರಲ್ಲು ಜಿಲ್ಲಾ ಬೋರ್ಡು ಸದಸ್ಯ ಶ್ರೀ ಎಮ್. ಎಮ್ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಮೆನೇಜರ್ ಶ್ರೀ ಎ. ರಾಜೀವ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಬಹ್ಮಾವರ— ಸ್ಥಳೀಯ ತಾಳೆ ಬೆಲ್ಲ ವ್ಯವಸಾಯದ ಸಹಕಾರಿ ಸಂಘದ ಕಾರ್ಯಾಲಯಗಳನ್ನು ತಾ 1 ರಲ್ಲು ಶ್ರೀ ಮಟ್ಪಾಡಿ ಮಂಜುನಾಥ ಭಟ್ಟರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಯಿತು. ಸಂಘದ ಪರವಾಗಿ ಶ್ರೀ ಎಂ. ಗಿರಿಯಪ್ಪನವರು ಧನ್ಯವಾದಗಳನ್ನರ್ಪಿಸಿದರು

ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿಯ ಕಾಲಾವಧಿ ರಥೋತ್ಸವಾದಿ ಕಾರ್ಯಕ್ರಮಗಳು ತಾ 7 ರಲ್ಲು ಪ್ರಾರಂಭವಾಗಿದ್ದು ತಾ 11 ರಂದು ಅವಭೃತ ಮಂಗಲ ಸ್ನಾನವೊಂದಿಗೆ ಮುಕ್ತಾಯವಾಗುವುದು

ಮಲ್ಪೆ— ಸ್ಥಳೀಯ ಗವರ್ನಮೆಂಟ್ ಫಿಶರೀಸ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ 5 ರಲ್ಲು ಸಂಜೆ ಉಡುಪಿ ಎಮ್ ಜಿ ಎಮ್ ಕಾಲೇಜಿನ ಪ್ರಿನ್ಸಿಪಾಲ್ ಶ್ರಿ. ಎಚ್ ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ ಎಸ್ ಅಮೀನರು ವರದಿಯನ್ನೋದಿದರು. ಶಾಲೆಗೆ ಹಳೆಯ ವಿದ್ಯಾರ್ಥಿ ಸಂಘದಿಂದ ಉದಾರವಾಗಿ ಕೊಡಲ್ಪಟ್ಟಿರುವ ವಿದ್ಯುದ್ದೀಪಗಳನ್ನು ಸಭಾಧ್ಯಕ್ಷರು ಬೆಳಗಿಸಿದರು ಬಹುಮಾನ ವಿತರಣೆ, ಅಧ್ಯಕ್ಷ ಭಾಷಣ ಸಂತರ ವಿವಿಧ ಮನರಂಜನ ಕಾರ್ಯಕ್ರಮಗಳಾದುವು. ಶ್ರೀ ಎ. ಸುಬ್ರಾಯ ಅಳ್ವೆಯವರು ಧನ್ಯವಾದಗಳನ್ನಿತ್ತರು.

ಬಡಾನಿಡಿಯೂರು— ಇಲ್ಲಿ ಹೊಸತಾಗಿ ರಚಿಸಲ್ಪಟ್ಟ ಗ್ರಾಮ ಪಂಚಾಯತ ಬೋರ್ಡಿನ ಪ್ರಥಮ ಸಭೆಯು ತಾ. 1ರಲ್ಲಿ ಜರಗಿತು, ಶ್ರೀಗಳಾದ ಟಿ ಶಂಕರ ಸೆಟ್ಟಿ (ಅಧ್ಯಕ್ಷ), ರಾಮ ಮರಕಾಲ, ಬಸವ ಪೂಜಾರಿ, ಮಂಜುನಾಥರಾವ್, ಕುಡ್ವ, ತಮ್ಮಯ್ಯ ಸೆಟ್ಟಿ ಮತ್ತು ವೆಂಕಟದಾಸ ಉಪಾಧ್ಯಾಯರು ಮೆಂಬರರಾಗಿ ಆರಿಸಲ್ಪಟ್ಟರು.

ಕೃಷ್ಣಾಪುರ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥಸ್ವಾಮಿಗಳವರು ತಾ 6ರಲ್ಲಿ ಸುರತ್ಕಲ್ ಆದಿ ಕೃಷ್ಣಾಪುರ ಮಠವಲ್ಲಿ ವೀರ ಆಂಜನೇಯ ಸ್ವಾಮಿಸನ್ನಿಧಿಯಲ್ಲಿ ತಮ್ಮ ಗುರುಗಳ ಆರಾಧನೆಯನ್ನು ಅತ್ಯಂತ ವೈಭವದಿಂದ ಅನ್ನ ಸಂತರ್ಪಣೆ ಮೊದಲಾದ ಕಾರ್ಯಕ್ರಮಗಳಿಂದ ಸಾಂಗವಾಗಿ ನೆರವೇರಿಸಿದರು

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ
ಭಗವದ್ಗೀತೆಯ ಸಮೂಲ
ಭಾಷಾಂತರ.
ನವಯುಗ ಪ್ರೆಸ್ ಉಡುಪಿ

ಬ್ರೂಕ್ ಬಾಂಡ್ ಇಂಡಿಯಾ ಲಿಮಿಟೆಡ್,

ಇದರ ಚೇರ್‌ಮೆನ್ ಮಿ| ಡಬ್ಲ್ಯು. ಜಿ ಹೆನ್ವಿಲ್‌ವುಡರು ನಿವೃತ್ತರಾದರು ಅವರ ಸ್ಥಾನದಲ್ಲಿ ಮಿ| ಜಿ ವಿ. ಕೆ. ಮೂರ್ತಿಯವರು ಚೇರ್‌ಮೆನರಾದರು.

ಮೇಲ್ಕಂಡ ಕಂಪೆನಿಯಲ್ಲಿ 29 ವರ್ಷಗಳ ಸೇವೆಯನ್ನು ಸಲ್ಲಿಸಿ ಇದೇ ತಿಂಗಳ ತಾ. 1ರಲ್ಲು ಮಿ| ಡಬ್ಲ್ಯು. ಜಿ ಹೆನ್ವಿಲ್‌ವುಡ್

ರವರು ಅಧ್ಯಕ್ಷಪದದಿಂದ ನಿವೃತ್ತರಾದರು ಅವರು 1926ರಲ್ಲು ಹಿಂದೂದೇಶಕ್ಕೆ ಬಂದರು ಕಲ್ಕತ್ತಾ ಶಾಖೆಯಲ್ಲಿ ಮೆನೇಜರರಾಗಿ ನೇಮಕಹೊಂದಿದರು ಬಳಿಕ ಗ್ರೂಪ್ ಮೆನೇಜರ್, ಫೆಕ್ಟರಿ ಮೆನೇಜರರಾಗಿ ಜಯಶೀಲ ಸೇವೆ ಸಲ್ಲಿಸಿದರು, ಆ ಮೇಲೆ ಅವರು 1945 ರಲ್ಲು ಡ್ಯಾರೆಕ್ಟರ್ ಮತ್ತು ಸೇಲ್ಸ್ ಮೆನೇಜರರಾಗಿ ನೇಮಕಹೊಂದಿದರು 1947ರಲ್ಲು ಬ್ರೂಕ್ ಬಾಂಡ್ ಇಂಡಿಯಾ ಲಿಮಿಟೆಡ್ ಇದರ ಚೆರ್‌ಮೆನ್‌ರಾದರು. ಆ ಹುದ್ದೆಯಲ್ಲಿ ರುವಾಗಲೇ ಬ್ರೂಕ್ ಬಂಡ್ ಎಸ್ಟೇಟ್ಸ್ ಇಂಡಿಯಾ ಲಿಮಿಟೆಡ್-ಇದರ ಚೆರ್‌ಮೆನ್ ರಾಗಿಯೂ 1954ರ ತನಕ ಸೇವೆಮಾಡಿದರು

ಕಂಪೆನಿಯು ಇವರ ಅಧ್ಯಕ್ಷತನದಲ್ಲಿ ಪ್ರಶಂಸನೀಯ ಪ್ರಗತಿ ಪಡೆಯಿತು ಶಾಖೆಗಳು 20ಕ್ಕೆ ಏರಿದವು. ಅಲ್ಲದೆ ಫೆಕ್ಟರಿಗಳ ಸಂಖ್ಯೆಯು 3 ಇದ್ದುದು 6ಕ್ಕೇರಿತು ಈ ಕಂಪೆನಿಯ ಕಾರ್ಯನಿರ್ವಾಹಕ ಶಿಬಂದಿಯಲ್ಲಿ ಹೆಚ್ಚಿನ ಹಿಂದೀಯರೇ ಇರುವಂತಾಗಲು ಮಿ| ಹೆನ್ವಿಲ್ ವುಡ್ಡರೇ ಕಾರಣರು ಆ ದೃಷ್ಟಿಯಿಂದ ಪ್ರಥಮ ಹಿಂದೀಯನಾದ ಮಿ| ಜಿ. ವಿ. ಕೆ. ಮೂರ್ತಿಯವರು ಕಂಪೆನಿಯ ಚೆರ್‌ಮೆನರಾಗಿ ನೇಮಕಗೊಂಡುದು ಸಮಯೋಚಿತವಿದೆ.

ಮಿ| ಮೂರ್ತಿಯವರು ಕಂಪೆನಿಯ ಸೇವೆಯಲ್ಲಿ ಪ್ರಥಮ ಮೆಟ್ಟಲಿನಿಂದ, ಮುಖ್ಯವಾಗಿ ತಮ್ಮ ಯೋಗ್ಯತೆಯಿಂದಲೇ ಮೇಲೇರಿ ಬಂದು ಇದೀಗ ಉಚ್ಚ ಸ್ಥಾನಾಪನ್ನರಾಗಿರುವರು ಇವರು 1939ರಲ್ಲು ಕಂಪೆನಿಯ ಕೊಯಮುತ್ತೂರು ಶಾಖೆಯಲ್ಲಿ ಸೇಲ್ಸ್‌ಮೇನ್ ಆಗಿ ಸೇರಿದರು ಕ್ರಮೇಣ ಶಾಖಾ ಮೆನೇಜರ್, ಗ್ರೂಪ್ ಮೆನೇಜರ್ ಆಗಿ 1948ರಲ್ಲಿ ಡ್ಯಾರೆಕ್ಟರರಾಗಿ ನೇಮಕಹೊಂದಿದರು 1951ರಲ್ಲು ಜಾಯಿಂಟ್ ಸೇಲ್ಸ್ ಮೆನೇಜರರಾದರು ಬಳಿಕ 1953ರಲ್ಲು ಡಿಪ್ಯುಟಿ ಚೆರ್‌ಮೆನ್‌ರಾದರು. ಇದೀಗ ಮಿ| ಮೂರ್ತಿಯವರು 15 ವರ್ಷ ಪ್ರಾಯದವರಿದ್ದು ಇದೇ ತಾ. 1ರಲ್ಲು ಬ್ರೂಕ್ ಬಾಂಡ್ ಇಂಡಿಯಾ ಲಿಮಿಟೆಡಿನ ಚೆರ್‌ಮೆನ್ ರಾಗಿ ಅಧಿಕಾರ ವಹಿಸಿದ್ದಾರೆ

ದ. ಕ ಜಿಲ್ಲೆಯ ಉತ್ತರ ಭಾಗದ ಸಾರಿಗೆ ಸೌಕರ್ಯಗಳು—

ಶ್ರೀ ಎಚ್ ಎಸ್. ಕೊಳ್ಳೆಬೈಲ್, M L A. ಅವರು ಇದೇ ತಾ 2 ರಲ್ಲು ಮದ್ರಾಸಿನಲ್ಲಿ ಮುಖ್ಯಮಂತ್ರಿ ಶ್ರೀ ಕೆ ಕಾಮರಾಜನಾಡರರನ್ನು ಪ್ರತ್ಯಕ್ಷ ಭೆಟ್ಟಿಯಾಗಿ ಒಪ್ಪಿಸಿದ ಮನವಿಯೊಂದರ ಸಾರಾಂಶವನ್ನು ಈ ಕೆಳಗ ಕೊಡಲಾಗಿದೆ

"1953ನೆ ಇಸವಿಲಾಗಾಯಿತು ದಕ್ಷಿಣ ಕನ್ನಡ ಜಿಲ್ಲೆಯ ಅದರಲ್ಲೂ ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿಯ ಸಾರಿಗೆ ಸೌಕರ್ಯಗಳ ಸುಧಾರಣೆಯಾಗಬೇಕೆಂದು ಅನೇಕ ಮನವಿಗಳನ್ನು ಪತ್ರ ವ್ಯವಹಾರವನ್ನಾ ಮಾಡಿದ್ದೆನು ಸರ್ವಸಾಧಾರಣ ಈ ವಿಭಾಗದ ರಸ್ತೆಗಳು ವಾಹನ ಸಂಚಾರಕ್ಕೆ ಅಷ್ಟೊಂದು ಸುಖಕರವಾಗಿಲ್ಲ ರಸ್ತೆಗಳ ಮಧ್ಯದಲ್ಲಿ ಹಾದು ಹೋಗುವ ಚಿಕ್ಕ ಹುಟ್ಟ ತೋಡುಗಳಿಗೆ ಹಾಕಲ್ಪಟ್ಟ ಸೇತುವೆಗಳು ಕೂಡಾ ದುರಸ್ತಿಯಲ್ಲಿಲ್ಲ ಉದಾಹರಣಾರ್ಥವಾಗಿ ಕೋಟ- ಗೋಳಿಯಂಗಡಿ, ಬ್ರಹ್ಮಾವರ-ಜನ್ನಾಡಿ, ಕಳ್ತೂರು-ಕೊಕ್ಕರ್ಣೆ, ಪೇತ್ರಿ ಬಜ್ಪೆ, ಪೆರ್ಡೂರು ಕಲ್ಯಾಣಪುರ ಮತ್ತು ಕಲ್ಯಾಣಪುರ-ಕೆಮ್ಮಣ್ಣು ರಸ್ತೆಗಳ ವಿಚಾರದಲ್ಲಿ ಸಂಬಂಧ ಪಟ್ಟ ಇಲಾಖೆ ಇಂಜಿನಿಯರಿಂದ ಮುಖ್ಯಮಂತ್ರಿಗಳು ರಿಪೋರ್ಟು ತರಿಸಿಕೊಂಡಲ್ಲಿ ಯಥಾರೀತಿ ವೇದ್ಯವಾಗುವುದು ಈ ಎಲ್ಲಾ ರಸ್ತೆಗಳು ಆರ್ಥಿಕ ತೊಂದರೆಯಲ್ಲಿರುವ ದ ಕ. ಜಿಲ್ಲಾ ಬೋರ್ಡಿನ ಅಧೀನದಲ್ಲಿವೆ ಇವುಗಳ ರಿಪೇರಿ ಮಾಡುವ ಕಂಟ್ರಾಕ್ಟರರಿಗೆ ಬೋರ್ಡಿನಿಂದ ಕೊಡಲಾಗುವ ಚೆಕ್ಕುಗಳು ಕೆಲವು ವೇಳೆ ಬ್ಯಾಂಕಿನಲ್ಲಿ ಕ್ಯಾಶ್ ಕೂಡಾ ಆಗುವುದಿಲ್ಲವೆಂದು ನಾನುತಿಳಿಯುತ್ತೇನೆ ಮೇಲೆ ಹೇಳಿದ ರಸ್ತೆಗಳು 250 ಚದರ ಮೈಲು ವಿಸ್ತೀರ್ಣವುಳ್ಳ ಸಾಧಾರಣ 61 ಗ್ರಾಮಗಳನ್ನು ಆವರಿಸಿರುತ್ತವೆ ಈ ಎಲ್ಲಾ ರಸ್ತೆಗಳ ಉದ್ದವು ಸಾಧಾರಣ 15 ಮೈಲುಗಳಷ್ಟು ಇದ್ದು ಅವುಗಳ ಮೇಲಿಂದ ಬಸ್ ಓಡಾಡಲು ಅನುಕೂಲವಾಗುವಂತೆ ಮಾಡಲು ಸಾಧಾರಣ ಐದು ಲಕ್ಷರೂಪಾಯಿ ವೆಚ್ಚಮಾಡಬೇಕಾಗಬಹುದು ರಾಷ್ಟ್ರೀಯ ಹೆದ್ದಾರಿಯು ಈ ಗ್ರಾಮಗಳ ಮೂಲಕ ಹಾದುಹೋಗುವುದಿಲ್ಲವಾದುದರಿಂದ ಆ ಹಳ್ಳಿಗಳ ನಿವಾಸಿಕರ ಸಂಕಷ್ಟ ಏನೆಂದು ಹೇಳಲಿ. ದ ಕ, ಜಿಲ್ಲೆಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗೆ ಕೊಡಲಾಗುವ ಕೇಂದ್ರ ಸರಕಾರದ ಹಣದ ಕೆಲವಂಶವನ್ನು ಈ ಗ್ರಾಮಗಳ ನಾದುರುಸ್ತಿ ರಸ್ತೆಗಳ ಸುಧಾರಣೆ ಬಗ್ಗೆ ವಿಂಗಡಿಸುವಂತೆ ಮದ್ರಾಸು ಸರಕಾರವು ಮನಸ್ಸುಮಾಡಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕಾಗಿದೆ ದ ಕ ಜಿಲ್ಲೆಯ ಜನರು ಬಡವರಿದ್ದುದರಿಂದ ಲೋಕಲ್ ಡೆವಲಪ್‌ಮೆಂಟ್‌ಯೋಜನೆಯ ಸೌಕರ್ಯಗಳನ್ನು ಪಡೆಯಲಾಗಲಿಲ್ಲ ಆದುದರಿಂದ ಮೇಲೆ ಹೇಳಿದ ಎಲ್ಲಾ ರಸ್ತೆಗಳನ್ನು ಹೈವೆ ಇಲಾಖೆಗೆ ವರ್ಗಾಯಿಸಬೇಕಾಗಿ ಆಗ್ರಹ ಪೂರ್ವಕ ಕೇಳಿಕೊಳ್ಳುತ್ತೇನೆ ಉಡುಪಿ ತಾಲೂಕಿನ ಭೂಪಟವನ್ನೊಮ್ಮೆ ಅವಲೋಕಿಸಿದರೆ ಎಲ್ಲವೂ ಖಚಿತವಾಗುವುದಲ್ಲದೆ ಮೇಲೆ ಹೇಳಿದ ಆವಶ್ಯಕ ಬೇಡಿಕೆಗಳಿಗೆ ಮುಖ್ಯಮಂತ್ರಿಗಳು ಹಣವನ್ನು ಮಂಜೂರು ಮಾಡುವರೆಂದು ನನಗೆ ನಂಬಿಕೆಯಿದೆ ಮೇಲೆ ಸೂಚಿಸಿದ ರಸ್ತೆಗಳ ಕುರಿತು ಈ ಭಾಗದ ಪ್ರತಿನಿಧಿಯಾಗಿ 1946 ರಿಂದ 1951ರ ಕೆಲಸ ಮಾಡಿದ ಮಾನ್ಯಮಂತ್ರಿ ಶ್ರೀ ಎ ಬಿ ಸೆಟ್ಟರನ್ನು ವಿಚಾರಿಸಿದ್ದಲ್ಲಿ ಮನವಿಯ ಯಥಾರ್ಥತೆ ವೇದ್ಯವಾಗುವುದು ಮಾನ್ಯ ಮುಖ್ಯಮಂತ್ರಿಗಳು ಸಾವಧಾನ ಚಿತ್ತರಾಗಿ ಮನವಿಯನ್ನು ಆಲಿಸಿ, ತಮ್ಮಿಂದ ಸಾಧ್ಯವಿದ್ದುದನ್ನು ಪೂರೈಸುವುದಾಗಿ ಶ್ರೀ ಕೊಳ್ಳೆಬೈಲ್‌ರವರಿಗೆ ಆಶ್ವಾಸನೆಯಿತ್ತರು

ಪ್ರಾಚೀನ ತುಳುನಾಡು

(ಎಸ್. ಎಸ್ ಕಿಲ್ಲೆ ಮತ್ತು ಎಸ್ ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ (ಶ್ರೀ ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು ಬಿಳಿ ಕಾಗದ,
ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ

"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು. (ಪ್ರೊ| ಎಂ ಆರ್ ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ ಬೆಲೆ 0-6-0

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ
ಬೆಲೆ 0-12-0.
(ಮುನ್ನುಡಿಕಾರರು ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ

ಮಂಗಳೂರು

ಕೃಷಿ ಇಲಾಖೆಯ— ಡೈರೆಕ್ಟರ್ ಶ್ರೀ ಎಮ್. ಎಸ್. ಶಿವರಾಮನ್, ಅವರು ತಾ 6 ರಲ್ಲಿ ಕಂಕನಾಡಿ ಭತ್ತ ಸಂಶೋಧನಾ ಕೇಂದ್ರ, ಅಳಪೆಯ ಹಣ್ಣುಗಳ ತೋಟಗಳನ್ನು ನೋಡಿಕೊಂಡು, ಮೂಡಬಿದ್ರೆ, ಕೆಂಬ್ರಾಲ್, ಹೆಜ್ಮಾಡಿ ಮೊದಲಾದ ಕಡೆಗಳ ಕೆಲಸವನ್ನು ಪರಿಶೀಲಿಸಿ, ಜಿಲ್ಲಾಧಿಕಾರಿಗಳೊಡನೆ ವಿಚಾರವಿನಿಮಯ ನಡೆಸಿ ಮರುದಿವಸ ಹಿಂತೆರಳಿದರು.

ಜಿಲ್ಲಾ ರೈತ ಸಂಘದ— ಮಹಾ ಸಮಿತಿ ಸಭೆಯೊಂದು ತಾ 6 ರಲ್ಲಿ ಶ್ರೀ ಎ. ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಒಕ್ಕಲು ಹಿತ ಮಸೂದೆಯು ಪ್ರಕಟವಾಗದಿದ್ದಲ್ಲಿ ಆಗೋಸ್ತು ತಿಂಗಳಲ್ಲಿ ತೀವ್ರ ಚಳವಳಿ ಪ್ರಾರಂಭಿಸಬೇಕೆಂಬ ನಿರ್ಣಯವಾಯಿತು.

ಜಿಲ್ಲಾ ಬೋರ್ಡಿನ ಸಭೆಯು- ತಾ. 16ನೆ ಶನಿವಾರ ಮಧ್ಯಾಹ್ನ 11 ಗಂಟೆಗೆ ಸರಿಯಾಗಿ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಜರಗುವುದು.

ಟೆಲಿಗ್ರಾಮ್ ಮತ್ತು ಎಕ್ಸ್‌ಪ್ರೆಸ್ ಡೆಲಿವರಿ— ಕಾಗದಗಳನ್ನು ಬೇಗನೆ ಬಟವಾಡೆ ಮಾಡಲನುಕೂಲವಾಗುವಂತೆ ಇದೇ ತಾ. 11ರಿಂದ ಕೊಡಿಯಾಲ ಬೈಲ್ (ಮಂಗಳೂರು 3) ಮತ್ತು ಕಂಕನಾಡಿ (ಮಂಗಳೂರು 2) ಶಾಖೆಗಳನ್ನು ಟೆಲಿಗ್ರಾಮ್ ಡೆಲಿವರಿ ಪರಿವರ್ತಿಸಲಾಗಿದೆ. ಬಿಜೈ (ಮಂಗಳೂರು 4) ಯ ತಂತಿ, ಎಕ್ಸ್‌ಪ್ರೆಸ್ ಕಾಗದಗಳನ್ನೂ ಕೊಡಿಯಾಲ ಬೈಲಿನಿಂದ ಡೆಲಿವರಿ ಮಾಡಲಾಗುವುದು.

ಹೋಮಿಯೋ ಪೆಥಿಕ್ ವೈದ್ಯರ ಮತ್ತು ಈ ವೈದ್ಯಶಾಸ್ತ್ರದ ಅಭಿಮಾನಿಗಳ ಸಭೆಯು ತಾ. 10ರಲ್ಲಿ ಡಾ. ಜೆ. ಜಕರಿಯವರ ಸ್ಟೆಂಟ್ ಜಾರ್ಜರ ಹೋಮಿಯೋ ಪೆಥಿಕ್ ಫಾರ್ಮಸಿಯಲ್ಲಿ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಜಕರಿಯವರು ಸ್ವಾಗತ ಭಾಷಣ ಮಾಡುತ್ತಾ ಹೋಮಿಯೋ ಪೆಥಿಕ್ ವೈದ್ಯರ ಹಾಗೂ ಅಭಿಮಾನಿಗಳ ಸಂಘಸ್ಥಾಪನೆಯ ಆವಶ್ಯಕತೆಯನ್ನು ಎತ್ತಿ ತೋರಿಸಿದರು. ಈ ವೈದ್ಯ ಶಾಸ್ತ್ರದ ಮೂಲಪುರುಷರಾದ ಡಾ। ಸಾಮುವೆಲ್ ಹನೆಮನ್ನರ ಭಾವಚಿತ್ರಕ್ಕೆ ಅಧ್ಯಕ್ಷರು ಹಾರಸಮರ್ಪಿಸಿದರು.

ವಸಂತೋತ್ಸವ- ಬೆಸೆಂಟ್ ಬಾಲಿಕಾ ಪಾಠ ಶಾಲೆಯ ವಸಂತೋತ್ಸವವು ತಾ 9 ರಲ್ಲಿ ವಸಂತರಾಣಿಯಾಗಿ ಆರಿಸಲ್ಪಟ್ಟ ಕುಮಾರಿ ಎಮ್. ಚಂದ್ರಮತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲೆಯ ಉಪನಾಯಕಿ ಕುಮಾರಿ ಪಿ. ಕೆ. ತಾರಿದಾರರು ಸ್ವಾಗತಮಾತುಗಳನ್ನಾಡಿದರು. ದಳ ನಾಯಕಿಯರು ವಸಂತರಾಣಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಡಾ। ಬಿ. ಜೆ. ಪ್ರಭುಗಳು ಸಂದೇಶಗಳನ್ನೋದಿದರು. ವಸಂತರಾಣಿಯು ಪಾರಿತೋಷ ವಿತರಣೆಮಾಡಿ ವಿದ್ಯಾರ್ಥಿನಿಯರು ಉತ್ತಮ ಪ್ರಜೆಗಳಾಗುವಂತೆ ಈ ಶಾಲೆಯಲ್ಲಿ ಮಾರ್ಗದರ್ಶನ ಮಾಡುತ್ತಿರುವರೆಂದು ಹೇಳಿದರು. ಬಳಿಕ ಆದೃಷ್ಟ ಆಟಗಳ ಉದ್ಘಾಟನೆ ನಡೆಯಿತು.

ನಂತರ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಕ್ಲಿನಿಕಲ್ ವಿಭಾಗದ ಪ್ರಿನ್ಸಿಪಾಲ್ ಡಾ। ಎಮ್. ವಿ. ರಮಣ ಮೂರ್ತಿಯವರು ದಿವಂಗತ ಬೆನಗಲ್ ನರಸಿಂಗರಾಯರ ಭಾವಚಿತ್ರದ ಅನಾವರಣವನ್ನೂ ವೆಂಕಟೇಶ ಪೈ ಸ್ಮಾರಕ ಕಲಾಮಂಟಪದ ಉದ್ಘಾಟನೆಯನ್ನೂ ನೆರವೇರಿಸಿದರು. ಡಾ। ಎಮ್. ಕೇಶವ ಪೈಗಳು ಸ್ವಾಗತ ಭಾಷಣಮಾಡುತ್ತಾ, ಈ ಕಲಾಮಂಟಪಕ್ಕೆ ದಾನವಿತ್ತವರ ಉಪಕಾರಸ್ಮರಣೆ ಮಾಡಿದರು.

ಸತ್ಕಾರ ಕೂಟ— ಆಲ್ ಇಂಡಿಯಾ ಫೆಡರೇಶನ್ ಒಫ್ ಮಾಸ್ಟರ್ ಪ್ರಿಂಟರ್ಸ್'ನ ಅಧ್ಯಕ್ಷ ಶ್ರೀ ಎಸ್. ವಿಶ್ವನಾಥನ್, ಅವರ ಗೌರವಾರ್ಥವಾಗಿ ತಾ 9 ರಲ್ಲಿ ಸಂಜೆ ಸೌತ್ ಕೆನರಾ ಮಾಸ್ಟರ್ ಪ್ರಿಂಟರ್ಸ್ ಅಸೋಸಿಯೇಶನಿನವರು ಸತ್ಕಾರ ಕೂಟವೊಂದನ್ನೇರ್ಪಡಿಸಿದರು. ಶ್ರೀ ವಿ. ಎಸ್ ಕುಡ್ವರು ಸ್ವಾಗತ ಭಾಷಣಮಾಡಿದರು. ಶ್ರೀ ಬಿ. ಪಿ. ಕೊಳೂಕರ್ರರು ಧನ್ಯವಾದಗಳನ್ನಿತ್ತರು

ಕೈ ಮಗ್ಗ ವಸ್ತ್ರ ವಿಕ್ರಯದ ರಿಬೇಟು ಸ್ಕೀಮು- ತಾರೀಕು 30-8-1955ರ ವರೆಗೆ ಜ್ಯಾರಿಯಲ್ಲಿರುವುದು ಎಂದು ಸರಕಾರದ ಪ್ರಕಟಣೆ ಹೊರಟಿರುತ್ತದೆ. ಈ ಪ್ರಕಟಣೆಯ ಆಧಾರದಮೇಲೆ ಎಲ್ಲಾ ಫೇರ್‌ಪ್ರೈಸ್ ಅಂಗಡಿಯವರು ಕೈ ಮಗ್ಗ ವಸ್ತ್ರ ರೂಪಾಯಿ ೧-೦ ದಕ್ಕೆ ಒಂದಾಣೆಯಂತೆ ರಿಬೇಟು ಕೊಟ್ಟು 30-8-1955 ರ ತನಕ ನಡೆಸಬಹುದು. ಇಷ್ಟರವರೆಗೆ ರೂಪಾಯಿ ಐದು ಯಾ ಮೇಲಿನ ವ್ಯಾಪಾರಕ್ಕೆ ಮಾತ್ರ ರಿಬೇಟು ಕೊಡೋಣಾಗುತಿತ್ತು. ಈಗಿನ ಹೊಸ ಹುಕುಂ ಪ್ರಕಾರ ಒಂದು ದಿವಸದಲ್ಲಿ ಒಬ್ಬ ಗಿರಾಕಿಗೆ ರೂಪಾಯಿ ಎರಡರ ಮೇಲ್ಪಟ್ಟು ರೂಪಾಯಿ ಐವತ್ತರ ವರೆಗೆ ರೂಪಾಯಿಯಲ್ಲಿ ಒಂದಾಣೆಯಂತೆ ರಿಬೇಟು ಈ ಹುಕುಂ ಸಿಕ್ಕಿದಂದಿನಿಂದ ಕೊಡಬಹುದು.

ಕರ್ನಾಟಕ ಪೊಲಿಟೆಕ್ನಿಕ್ ವಿದ್ಯಾರ್ಥಿ ಯೂನಿಯನ್—ವಾರ್ಷಿಕೋತ್ಸವವು ತಾ. 4ರಲ್ಲಿ ಸಂಜೆ ಜಿಲ್ಲಾ ನ್ಯಾಯಾಧೀಶ ಶ್ರೀ ಎಸ್. ಗಣಪತಿ ಶಿಕ್ಕೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಕಾರ್ಯದರ್ಶಿ ಶ್ರೀ ಬಿ. ಎಲ್. ಪೇರರು ಯೂನಿಯನ್ ವರದಿಯನ್ನೋದಿದರು. ಪ್ರಿನ್ಸಿಪಾಲ್ ಶ್ರೀ ಎಸ್. ಕೃಷ್ಣಸ್ವಾಮಿ ರಾಯರು ವಾರ್ಷಿಕ ವರದಿಯನ್ನೊಪ್ಪಿಸಿದರು. ಶ್ರೀ ವಿಠಲ ರಾಯರು ಪೊಲಿಟೆಕ್ನಿಕಿನ ಪ್ರಶಸ್ತಿ ಭಾಷಣವನ್ನು ಮಾಡಿದರು. ಶ್ರೀ ವಿನ್ಸೆಂಟ್ ಲೋಬೋರವರು ಅದಕ್ಕೆ ಉತ್ತರವಿತ್ತರು. ಸ್ಟೆಂಟ್ ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲ್ ರೆ। ಫಾ। ಇ। ಜೆ. ಜೇಕ್ಸರು ಯೂನಿಯನ್ನಿನ ಸಮಾರೋಪ ಭಾಷಣಮಾಡುತ್ತಾ, ತಾಂತ್ರಿಕ ಕೆಲಸಗಾರರು ರಾಷ್ಟ್ರದ ಉನ್ನತಿ ಹಾಗೂ ಅಭಿವೃದ್ಧಿಗಾಗಿ ಸೇವೆಸಲ್ಲಿಸ ಬೇಕೆಂದರು. ಸಭಾಧ್ಯಕ್ಷರು ಬಹುಮಾನವಿತರಣೆಮಾಡಿ ವಿದ್ಯಾರ್ಥಿಗಳು ತಾವು ಹಿಡಿದ ಕಾರ್ಯಗಳನ್ನು ತಾಳ್ಮೆಯಿಂದ ಕೊನೆಮುಟ್ಟಿಸುವ ಮನೋವೃತ್ತಿಯುಳ್ಳವರಾಗಬೇಕೆಂದರು. ಶ್ರೀ ಪಿ. ಚಿತ್ತರಂಜನ ದಾಸರು ಧನ್ಯವಾದಗಳನ್ನರ್ಪಿಸಿದರು.

ಆಕ್ಷೇಪ ಸಭೆ— ಈಗತಾನೆ ಹೊಸತಾಗಿ ನಗರ ಸಭೆಗೆ ಸೇರಿಸಲ್ಪಟ್ಟ ಬೋಳೂರಿನ ಬಡಗು ಭಾಗದಲ್ಲಿರುವ ನಿವಾಸಿಕರ ಸಭೆಯು ತಾ. 1ರಲ್ಲಿ ಬೆಳಿಗ್ಗೆ ದೇರೆಬೈಲು ಗಾಂಧಿ ಶಾಲೆಯಲ್ಲಿ ಸ್ವಾಮಿ ಶ್ರೀ ಗಣೇಶಾನಂದ ಭಾರತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ನಗರಾಧಿಕಾರಿಗಳು ಹೊರಿಸಿದ ತೆರಿಗೆ ರೀತಿನೀತಿಗಳನ್ನು ಆಕ್ಷೇಪಿಸಿ ಭಾಷಣಗಳಾದುವು.

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	3
4	ಕುರಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	1	0
13	ದೇಶಭಕ್ತ	1	4
14	ಪ್ರೇಮ ವಿಜಯ	1	4
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	4
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾವತಾರಗಳು .ಅಥವಾ ದಶಾವತಾರಗಳು	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿನ್ದಾರ	1	8
33	ಬಾಳಿನ ಬೆಡಗು	1	4
34	ಬೋಳಾಮುದ್ರೆ	1	0
35	ಬಿಗುಡು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಏಜೆಂಟರಿಯೂ ಸ್ವೀಕರಿಸ್ಸಲು ಬೇಕಾಗಿದ್ದಾರೆ.
ಕಿರಿಯರ ಪ್ರಪಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ- ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು $4\frac{1}{2}\%$ ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	$3\frac{3}{4}\%$
6	,,	$3\frac{1}{2}\%$
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು $\frac{1}{2}\%$

THE MOOLKY BANK LTD., MULKI.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—2—0; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಶ್ರೀ ಕೊಡವಟಿಗಂಟಿ ಕುಟುಂಬ ರಾವ್, ಎಂ. ಎಸ್. ಸಿ. ಇವರ 'ಕುಲಂಲೇನಿ ಮನಿಷಿ' ತೆಲುಗು ಕಾದಂಬರಿಯ ಅನುಕರಣ.

ಬರೆದವರು: ಪಿ. ವೆಂಕೋಬಾಚಾರ್ಯ, ಬಿ. ಎ., ಬಿ. ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.

ಕುಸುಮಳು ವೇಶ್ಯಾ ಪುತ್ರಿಯಾದರೂ ಅವಳು ವೇಶ್ಯೆಯಲ್ಲ!

ಅವಳ ಕಥೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ

ದಪ್ಪ ಪುಸ್ತಕ. ಬೆಲೆ 2-0-0

ಪ್ರತಿಗಳು ಅಂತರಂಗ ಕಾರ್ಯಾಲಯ, ಉಡುಪಿ, ಯಾ ನವಯುಗ ಪ್ರೆಸ್, ಉಡುಪಿ ಇಲ್ಲಿ ದೊರೆಯುತ್ತವೆ.

ಜನಾದರಣೀಯವಾದ ಪುಸ್ತಕಗಳು

ಕೆಲವೇ ಪ್ರತಿಗಳಿವೆ! ಈಗಲೇ ತರಿಸಿಕೊಳ್ಳಿ!

—ಒಂದಿನಿಂದ ನಿರಾಶರಾಗಬೇಡಿ' —

ವಾಚನಾಲಯದವರಿಗೆ ಯೋಗ್ಯಕಮೀಶನು !

ವ್ಹಿ. ಪಿ. ಇಲ್ಲ! ಮುಂಗಡ ಹಣ ಕಳಿಸಬೇಕು!!

೨ ಕಾದಂಬರಿ! ೨ ನಾಟಕ! ೪ ಕಥೆಗಳು! ೧ ಪ್ರಬಂಧ!

೧ ತೆರೆದ ಕಣ್ಣು (ಕಾ.)	೩.೦.೦	೫ ಆರು ಕಥೆಗಳು	೧.೪.೦
೨ ಪ್ರಾಣಮೂರ್ತಿ (ಕಾ.)	೩.೮.೦	೬ ಪ್ರತಿಫಲ ಇ. ಕಥೆಗಳು	೧.೪.೦
೩ ಸಂಗೊಳ್ಳಿರಾಯಣ್ಣ (ನಾ.)	೧.೮.೦	೭ ವೀರಾಷ್ಟ್ರದ ಎಷ್ಟೆನು	೦.೫.೦
೪ ವಿಜಯಸಾಮ್ರಾಜ್ಯ (ನಾ.)	೧.೮.೦	೮ ಕನ್ನಡ ಸಾಹಿತ್ಯವಾಹಿನಿ	೦.೮.೦

ಮೇಲಿನ ೮ ಪುಸ್ತಕಗಳನ್ನು ಒಮ್ಮೆಲೆ ೧೫-೧೪-೦ ರೂ M. O. ಕಳಿಸಿದವರಿಗೆ ಅಂಚೆ ವೆಚ್ಚ ನಾವೇ ವಹಿಸಿಕೊಂಡು ಪ್ರತ್ಯೇಕವಾಗಿ ಕಳಿಸುವೆವು.

...ಯಾವ ಪುಸ್ತಕಗಳು ಬೇಕಾದರೂ ಬರೆಯಿರಿ...

ಕಥಾಕುಂಜ ಪ್ರಕಟನಾಲಯ ಗಣಪತಿ ಬೀದಿ- ಬೆಳಗಾಂವಿ

ಪಂಚಾಯತ ಬೋರ್ಡು, ಹೈಸ್ಕೂಲ್ ಮೊದಲಾದ ಲೈಬ್ರರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ

ನವಭಾರತ ಪುಸ್ತಕ ಭಂಡಾರ ಉಡ್ಪಿ

BE YOUNG

Take "Elixir Aswaghandh" the pride of Ayurveda best nervine tonic quickly gives Radiant Health, removes constipation, relieves hip and back pain, Rheumatism, Vatharoga, Asthma, Bleeding Piles cured. Most popular and leading Vajikarana and Rasayana. 1 lb Rs. 10/-. Postage Extra. AYURVEDA VAIDYA T. V. JAYARAMA SASTRI, Veera Ragava Vaidyasala, Srirangam, (S.) India.

ಸಾಂಸ್ಕೃತಿಕ ಕ್ಷೇತ್ರದ ಅಷ್ಟ ದಿಗ್ಗಜರು

ರಾಷ್ಟ್ರಾಧ್ಯಕ್ಷರಿಂದ ಕಲಾವಿದರಿಗೆ ಪ್ರಶಸ್ತಿ ಪತ್ರ

ಹೊಸ ದಿಲ್ಲಿಯಲ್ಲಿ ಮಾರ್ಚ ೨೭ ನೇ ದಿನಾಂಕ ಜರಗಿದೊಂದು ಸಮಾರಂಭದಲ್ಲಿ ನಾಲ್ವರು ಸಂಗೀತಗಾರರಿಗೆ, ಇಬ್ಬರು ನರ್ತಕರಿಗೆ ಮತ್ತಿಬ್ಬರು ನಟರಿಗೆ ಈ ವರ್ಷದ ಕಲಾವಿದರೆಂಬ ಗೌರವದ ಸಂಕೇತವಾದ ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು. ಸಂಗೀತ ನಾಟಕ ಅಕಾಡೆಮಿಯವರು ಆರಿಸಿದ ಈ ಕಲಾವಿದರಿಗೆ ಉಪರಾಷ್ಟ್ರಾಧ್ಯಕ್ಷ ಡಾ। ರಾಧಾಕೃಷ್ಣನ್ನರು ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರ ಗೈರುಹಾಜರಿಯಲ್ಲಿ ಇದನ್ನು ಕೊಟ್ಟರು.

ಡಾ. ರಾಧಾಕೃಷ್ಣನ್ನರು ಈ ಸಂದರ್ಭದಲ್ಲಿ ಮಾತನಾಡುತ್ತಾ ರಾಜಕಾರಣಿ ಮತ್ತು ಸಾಮಾಜಿಕ ಕಾರ್ಯಕರ್ತರಂತೆ ಕಲಾವಿದರು ಸಹ ರಾಷ್ಟ್ರದ ಪ್ರಗತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುವರೆಂದೂ ಉದಾತ್ತಧ್ಯೇಯಗಳನ್ನು ಪ್ರಚೋದಿಸುವರೆಂದೂ ಹೇಳಿದರು. ಮನುಷ್ಯನ ಸಾಂಸ್ಕೃತಿಕ ಭಾವನೆಗಳನ್ನು ಪೋಷಿಸಿ, ಸುಂದರವಾಗಿದುವ ಮಹತ್ಕಾರ್ಯದಲ್ಲಿ ಕಲಾವಿದರು ನಿರತರಾಗಿರುವರೆಂದು ಸಾರುತ್ತಾ "ಪ್ರೀತ್ಯರ್ಹವಾದ ದನ್ನು ಪ್ರೀತಿಸಲೂ ತಿರಸ್ಕಾರಾರ್ಹವಾದುದನ್ನು ತಿರಸ್ಕರಿಸಲೂ ಕಲಾವಿದರಿಂದ ನೆರವುಸಿಗುತ್ತದೆ" ಎಂದು ಅಭಿಪ್ರಾಯಪಟ್ಟರು.

ಬಹುಮಾನಿತ ಕಲಾವಿದರು

ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪಡೆದವರು ಯಾರೆಂದರೆ—

ಹಿಂದೂಸ್ತಾನಿ ಸಂಗೀತದ ಬಾಯಿ ಹಾಡುಗಾರಿಕೆಯ ಪ್ರವೀಣ ಶ್ರೀ ಅನಂತ ಮನೋಹರ ಜೋಶಿ, ಪಕ್ಕ ವಾದ್ಯದ ನಿಪುಣ ಶ್ರೀ ಗೋವಿಂದರಾವ್ ಬರ್ ಹಾಂಪುರ್‌ಕರ್; ಕರ್ನಾಟಕ ಸಂಗೀತದ ಬಾಯಿ ಹಾಡುಗಾರಿಕೆಯ ಪ್ರವೀಣ ಶ್ರೀ ಮಹಾರಾಜಪುರಂ ವಿಶ್ವನಾಥ ಐಯ್ಯರ್, ನಾಗಸ್ವರ ವಾದಕ ಶ್ರೀ ಟಿ. ಎನ್. ರಾಜರತ್ನಂ ಪಿಳ್ಳೆ; ಭರತನಾಟ್ಯ ಪ್ರವೀಣೆ ಶ್ರೀಮತಿ ಟಿ. ಬಾಲಸರಸ್ವತಿ, ಕಥಕ್ ನೃತ್ಯಪಟು ಶ್ರೀ ಶಂಭು ಮಹಾರಾಜ. ನಟಶ್ರೇಷ್ಠರಾದ ಶ್ರೀ ಗುಬ್ಬಿ ವೀರಣ್ಣ ಮತ್ತು ಬಾಲ ಗಂಧರ್ವರೆಂದು ಸಾಮಾನ್ಯವಾಗಿ ಕರೆಯಲ್ಪಡುವ ಶ್ರೀ ನಾರಾಯಣ ರಾವ್ ರಾಜಹಂಸ.

ಮೇಲಿನವರಲ್ಲಿ ಸಂಗೀತಗಾರರಿಗೆ ಪ್ರತಿಯೊಬ್ಬರಿಗೂ ಒಂದೊಂದು ಕಾಶ್ಮೀರದಶಾಲು, ಒಂದು ಬಂಗಾರದ ಕಡಗ ಮತ್ತು ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪತ್ರವನ್ನು ನೀಡಲಾಯಿತು. ನರ್ತಕರಿಗೆ ಪ್ರತಿಯೊಬ್ಬರಿಗೆ ಒಂದೊಂದು ಅಂಗ ವಸ್ತ್ರವನ್ನೂ ಚಿನ್ನದಸರವನ್ನೂ ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪತ್ರವನ್ನೂ ಕೊಡಲಾಯಿತು, ನಟರಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಅಂಗವಸ್ತ್ರ, ಸುವರ್ಣ ಕಮಲ ಪುಷ್ಪ ಮತ್ತು ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪತ್ರವನ್ನೀಯಲಾಯಿತು. ಜನತೆಯ ಗೌರವಾದರಗಳನ್ನು ಎಂದೋ ಪಡೆದಿರುವ ಈ ಕಲಾವಿದರನ್ನು ರಾಷ್ಟ್ರೀಯ ಮಟ್ಟದಲ್ಲಿ ಹೀಗೆ ಗೌರವಿಸಿದುದರಿಂದ ಸಾಂಸ್ಕೃತಿಕ ಮುನ್ನಡೆಗೆ ಬಹಳಷ್ಟು ನೆರವಾಗದಿರದು.

ಸಂಗೀತ ಪಟುಗಳು

ಹಿಂದುಸ್ತಾನಿ ಬಾಯಿ ಹಾಡುಗಾರಿಕೆಯ ಶ್ರೀ ಅನಂತ ಮನೋಹರ ಜೋಶಿಯವರನ್ನು ಗ್ವಾಲಿಯರ್ ಶೈಲಿಯ ಅನುಪಮ ವಿಸ್ತಾರಕರೆಂದು ಪ್ರಶಸ್ತಿ ಪತ್ರವು ಕೊಂಡಾಡುತ್ತದೆ. ಅವರ ಗಾನಗಳು ವೈವಿಧ್ಯಕ್ಕಾಗಿಯೂ ಮಾಧುರ್ಯಕ್ಕಾಗಿಯೂ ಸೊಗಸಿಗಾಗಿಯೂ ಹೆಸರಾಗಿವೆಎಂದು ಉಲ್ಲೇಖಿಸುತ್ತದೆ. ಈ ಮುದಿ ಪ್ರಾಯದಲ್ಲೂ ಅವರಿಗೆ ಸಂಗೀತದ ಕೆಲವು ವಿಶಿಷ್ಟ ಪದ್ಧತಿಗಳ ಮೇಲೆ ಪ್ರಭುತ್ವವಿದೆ ಎಂದು ಪ್ರಶಸ್ತಿ ಪತ್ರ ಪ್ರಶಂಸಿಸುತ್ತದೆ.

ಪಕ್ಕವಾದ್ಯವನ್ನು ನುಡಿಸುವವರಲ್ಲಿ ಶ್ರೀ ಬರ್‌ಹಾಂಪುರ್‌ಕರರ ನೈಪುಣ್ಯವನ್ನು ಪ್ರಸ್ತಾಪಿಸುತ್ತಾ ಅದು ಪಳಗಿದ ಕೈಯೆಂದು ಪ್ರಶಸ್ತಿಪತ್ರ ವರ್ಣಿಸುತ್ತದೆ. ಎಲ್ಲತ್ತು ವರ್ಷಗಳನ್ನು ದಾಟಿರುವ ಈ ಕಲಾವಿದರು ಬಹಳ ಅಪರೂಪವಾಗಿ ಕಂಡುಬರುವ ವಿಚಕ್ಷಣತೆಯನ್ನೂ ಗಾಂಭೀರ್ಯವನ್ನೂ ವ್ಯಕ್ತಪಡಿಸುತ್ತಾರೆ. ಅವರಿಗೆ ದೊಡ್ಡ ಶಿಷ್ಯವೃಂದವಿದೆಯಲ್ಲದೆ, ತಮ್ಮ ವಿಶಿಷ್ಟ ವ್ಯವಸಾಯದ ಕುರಿತು ಅನೇಕ ಗ್ರಂಥಗಳನ್ನೂ ಬರೆದಿದ್ದಾರೆ ಎಂದು ಅದು ವಿವರಿಸುತ್ತದೆ.

ಸುಪ್ರಸಿದ್ಧ ತ್ಯಾಗರಾಜರ ಶಿಷ್ಯಪರಂಪರೆಗೆ ಸೇರಿದ ಶ್ರೀ ಮಹಾರಾಜಪುರಂ ವಿಶ್ವನಾಥ ಅಯ್ಯರರು ರಾಗದುದ್ಧತಿಯನ್ನು ತಮಗಾಗಿ ಕೊಂಡಂತೆಯೇ ಸ್ವಂತ ಚಮತ್ಕಾರವನ್ನು ತೋರಿಸಬಲ್ಲ ಅದ್ಭುತ ಪ್ರಾವೀಣ್ಯ ಪಡೆದವರೆಂದು ಪ್ರಶಸ್ತಿಪತ್ರ ಸಾರುತ್ತದೆ. ಅವರ ಆಲಾಪನೆಗಳೂ ಕಲ್ಪನಾಸ್ವರಗಳೂ ಸವಿಯಾದುವೆಂದದು ಹೊಗಳುತ್ತದೆ.

ನಾದಸ್ವರವಾದಕರಾದ ಶ್ರೀ ಟಿ. ಎನ್. ರಾಜರತ್ನಂಪಿಳ್ಳೆಯವರ ಕೌಶಲವನ್ನು ಪ್ರಸ್ತಾಪಿಸುತ್ತಾ ಯಾವುದೇ ಆಲಾಪನೆ ಅಥವಾ ರಾಗವನ್ನು ಅನೇಕ ಪ್ರದೀರ್ಘಸಮಯದ ವರೆಗೆ ನುಡಿಸಲು ಅವರಿಗೆ ಬರುತ್ತದೆಂದೂ ಅವರ ಶೈಲಿ ಶುದ್ಧವಾಗಿದೆಯೆಂದು ಸ್ವರವು ಇಂಪಾಗಿದೆಯೆಂದೂ ಪ್ರಶಸ್ತಿಪತ್ರ ವರ್ಣಿಸುತ್ತದೆ.

ನಾಟ್ಯ ಹಾಗು ನಟನಾ ಪ್ರವೀಣರು

ಶ್ರೀಮತಿ ಬಾಲಸರಸ್ವತಿಯವರ ಭರತನಾಟ್ಯಕಲಾ ಕೌಶಲವನ್ನು ವರ್ಣಿಸುತ್ತಾ ಪ್ರಶಸ್ತಿ ಪತ್ರವು ಅವರು ಅಭಿನಯದಲ್ಲಿ, ಮುಖ್ಯವಾಗಿ ಭಾವ ಪ್ರದರ್ಶನದಲ್ಲಿ ಅದ್ವಿತೀಯ ಸ್ಥಾನಪಡೆದಿರುವರೆಂದೂ ಕ್ರಿಯಾತ್ಮಕ ದೃಷ್ಟಿಕೋಣದ ಕಲಾವಿದೆ ಅವರೆಂದೂ ಬಹಳ ಅಪರೂಪವಾದ ನೃತ್ಯವಿಧಾನಗಳಲ್ಲಿಯೂ ಅವರು ಪಳಗಿರುವರೆಂದೂ ಪ್ರಕಟಿಸುತ್ತದೆ.

ಕಥಕ್ ಶೈಲಿಯ ನೃತ್ಯದಲ್ಲಿ ವರಣ ಮುಂತಾದ ಜಟಿಲ ಕಲಾವಿಧಿಯಲ್ಲಿ ಸಿದ್ಧಿ ಪಡೆದಿರುವರಲ್ಲದೆ ತಮ್ಮ ನಯವಾದ ನಡೆ ಮತ್ತು ಬಹು ರೂಪಿ ಅಭಿನಯ ಕೌತುಕದಿಂದ ಶ್ರೀ ಶಂಭು ಮಹಾರಾಜರು ಶ್ರೇಷ್ಠಸ್ಥಾನ ಪಡೆದಿರುವರೆಂದು ಪ್ರಶಸ್ತಿಪತ್ರ ತಿಳಿಸುತ್ತದೆ.

ಕರ್ನಾಟಕದ ಶ್ರೀ ಗುಬ್ಬಿ ವೀರಣ್ಣನವರು ತಮ್ಮ ೭೫ ನೇ ವಯಸ್ಸಿನಲ್ಲಿಯೂ ಅತ್ಯುತ್ತಮ ಹಾಸ್ಯನಟರಾಗಿ ಉಳಿದಿರುವರೆಂದೂ ಅವರ ನಟನಾಕೌಶಲವು ಇಂದಿಗೂ ಜನರನ್ನು ಬಹಳವಾಗಿ ಆಕರ್ಷಿಸುತ್ತದೆಂದೂ ಪ್ರಶಸ್ತಿಪತ್ರ ಉಲ್ಲೇಖಿಸುತ್ತದೆ. ಶ್ರೀ ವೀರಣ್ಣನವರು ೧೯೦೧ ನೇ ಇಸವಿಯಷ್ಟು ಹಿಂದಿನಿಂದ ನಾಟಕ ಕ್ಷೇತ್ರದಲ್ಲಿ ಸಕ್ರಿಯರಾಗಿ ದುಡಿಯುತ್ತಿದ್ದಾರೆಂದೂ ಮೊದಲದಿನಗಳಲ್ಲಿಯೇ ಅವರ ಕಲೆಯು ಜನಪ್ರೀತಿಪಾತ್ರವಾಯಿತೆಂದೂ ಪ್ರಶಸ್ತಿ ಪತ್ರ ಸಾರುತ್ತದೆ.

೧೯೦೫ ರಲ್ಲಿ ನಾಟಕರಂಗವನ್ನು ಪ್ರವೇಶಿಸಿದ ಬಾಲ ಗಂಧರ್ವರು ಇಂದಿನವರೆಗೂ ತಮ್ಮ ಅತ್ಯುನ್ನತ ಸ್ಥಾನವನ್ನು ಕಾಯ್ದುಕೊಂಡು ಬಂದಿರುವರೆಂದೂ ಅವರ ಜನಪ್ರಿಯತೆ ಸ್ವಲ್ಪವೂ ಕುಂದಿಲ್ಲವೆಂದೂ ಪ್ರಶಸ್ತಿ ಪತ್ರ ಪ್ರಶಂಸಿಸುತ್ತದೆ.

(೨ನೇ ಪುಟದಿಂದ)

ಕಂಡು ಬರುತ್ತದೆ ಕತ್ತೆಯ ಹಾಲನ್ನು ಕುಡಿಯುವ ಜನರೂ ಕಡಿಮೆಯಿಲ್ಲ—ಆದರೆ ಈ ಹಾಲಿನಲ್ಲಿ ಕೊಬ್ಬಿನ ಅಂಶ ಬಹಳ ಕಡಿಮೆ, ಅಂದರೆ ನೂರಕ್ಕೆ ಎರಡರಷ್ಟು ಮಾತ್ರ, ಇದೆ. ಹುಲಿಯ ಹಾಲನ್ನು ಬೇಕಾದರೆ ತಂದುಕೊಡುತ್ತೇನೆ- ಎಂಬುದಾಗಿ ನಮ್ಮಲ್ಲಿ ಸಾಹಸಪ್ರಿಯರು ಹೇಳುವುದುಂಟು. ಹಾಗೆ ಮಾಡಿದವರಿಲ್ಲ ಆದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತಿಮಿಂಗಿಲದ ಹಾಲನ್ನು ಸಂಪಾದಿಸಿ, ಆದರ ಯೋಗ್ಯತೆ ತಿಳಿದ ಮಹಾನುಭಾವರನ್ನು ಕಾಣುತ್ತೇವೆ. ತಿಮಿಂಗಿಲದ ಹಾಲಿನಲ್ಲಿ ಸಕ್ಕರೆಯ ಅಂಶವಿಲ್ಲದಿದ್ದರೂ ದನದಹಾಲಿನ ಮೂರರಷ್ಟು ಸಾರಜನಕವೂ ಐದರಷ್ಟು ಕೊಬ್ಬಿನ ಅಂಶವೂ ಇದೆಯೆಂದು ತಿಳಿದು ಬರುತ್ತದೆ. ಇದರ ಪೆಸೆಯಿಂದ ಹಾಲಿನಲ್ಲಿ ಎಣ್ಣೆಯ ಜಿಗುಟು ಕಾಣಿಸಿ ಕೊಳ್ಳುತ್ತದೆ ಮತ್ತು ನೀರಿನಲ್ಲಿ ಬಿದ್ದರೂ ಹಾಲು ಪ್ರತ್ಯೇಕವಾಗಿ ಉಳಿದು, ಕೆಡುವುದಿಲ್ಲ. ತಿಮಿಂಗಿಲವು ನೀರಿನಲ್ಲಿ ಬದುಕುವ ಪ್ರಾಣಿ ಎಂಬುದನ್ನು ಇಲ್ಲಿ ಸ್ಮರಿಸುವುದೊಳಿತು.

ತನ್ನ ಸ್ವಭಾವದ ದೆಸೆಯಿಂದ ಈ ಹಾಲು ಅನೇಕ ಬಗೆಯ ಜೀವಾಣುಗಳನ್ನು ಆಕರ್ಷಿಸಿ ಕೊಳ್ಳುತ್ತದೆ. ಹಾಲು ಕರೆಯೊಡನೆಯೇ ಬಿಸಿಯಾಗಿರುತ್ತದೆ. ಅಲ್ಲದೆ ಅದರಲ್ಲಿ ಸಕ್ಕರೆಯ ಅಂಶವು ಹೆಚ್ಚು ಆದುದರಿಂದ ಹಾಗೆಯೇ ಹಾಲನ್ನು ಒಂದು ಗಳಿಗೆಯ ವರೆಗೆ ಇಟ್ಟರೆ ಅದರಲ್ಲಿ ಕೀಟಾಣುಗಳು ಸೇರಿಕೊಂಡು ರುಚಿಯನ್ನೂ ಹಾಲಿನ ಗುಣವನ್ನೂ ಕೆಡಿಸುತ್ತವೆ. ಆದುದರಿಂದ ಹಾಲನ್ನು ಕಾಯಿಸಿಡುವುದು ಶ್ರೇಯಸ್ಕರ. ಹೀಗೆ ಮಾಡುವಾಗ ಹಾಲಿನಲ್ಲಿರುವ ಜೀವಾತುಗಳು ನಾಶವಾಗಿ ಹೋಗದಂತೆ ಜಾಗರೂಕತೆ ವಹಿಸುವುದು ಇಷ್ಟವಾಗಿದೆ. ಪ್ಯಾಶ್ಚರೈಜೇಶನ್ನೆಂದು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರೂಢಿಯಾಗಿರುವ (೧೪೫° ಫೆರೆನ್ಹಾಟ್ ಉಷ್ಣದಲ್ಲಿ ಅರ್ಧ ಗಂಟೆಯ ವರೆಗೆ ಹಾಲನ್ನು ಬಿಸಿಯಾಗಿಡುವುದು) ಕ್ರಮದಲ್ಲಿ ಜೀವಾತುಗಳ ನಷ್ಟವು ಅತಿ ಕಡಿಮೆಯಾಗಿರುತ್ತದೆಂದು ತಿಳಿದು ಬರುತ್ತದೆ. ಅಂದರೆ ಹಾಲಿನ ಬಿ ಜೀವಾತು ೧೦% ಮತ್ತು ಸಿ ಜೀವಾತು ೨೦% ಮಾತ್ರ ನಾಶವಾಗುತ್ತದೆ ಬೇಸಿಗೆ ಕಾಲದಲ್ಲಿ ಹಾಲಿನ ಡಿ ಜೀವಾತುವಿನ ಅಂಶ ನಾಲ್ಕು ಪಟ್ಟು ಹೆಚ್ಚಿಕೊಳ್ಳುತ್ತದೆ! ಅಲ್ಲದೆ, ಉಷ್ಣ ಪ್ರದೇಶದ ಹಾಲಿನಲ್ಲಿ ಶೀತ ವಲಯದ ಹಾಲಿಗಿಂತ ಹೆಚ್ಚು ಕೊಬ್ಬಿರುತ್ತದೆ. ಹಾಲಿನ ಇಷ್ಟೆಲ್ಲಾ ಒಳ್ಳೆಯ ಗುಣದ ದೆಸೆಯಿಂದಲೇ ವೈದಿಕರು ಇದನ್ನು ಅಮೃತವೆಂದು ಕರೆದರು. ನಾವು ಈ ಅಮೃತವನ್ನು ಕುಡಿದು ಆರೋಗ್ಯವಂತರೂ ದೃಢಕಾಯರೂ ಬುದ್ಧಿವಂತರೂ ಉತ್ಸಾಹಿಗಳೂ ಆಗಿ ಬಾಳೋಣ!

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾತರದ ಸಿದಿತ ಮತ್ತು ನೋವುಗಳಿಗೆ
೫೦ ವರ್ಷ ಪ್ರಾಯದ
ಹಾಕೋಣ ಹಾಕೋಣ
ಅಮೃತಾಂಜನ ಲಿಮಿಟೆಡ್, ಮದ್ರಾಸ್

ಭಾರತದ ಗುರುಕುಲ

(ಕೆ. ಪಿ. ವೆಂಕಪ್ಪ ಶೆಟ್ಟರ ಯಕ್ಷಗಾನ ಪ್ರಸಂಗ)

ಬೆಲೆ. ೦—೬—೦

ನವಭಾರತ ಪುಸ್ತಕ ಭಂಡಾರ ಉಡುಪಿ

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

ಹೊಸ ಪುಸ್ತಕ

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ, ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಪಾಠಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೊಟದ ಮರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರದಕ್ಷಿಣೆ, ಸಿಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ. 0—10—0

ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಪ್ರೆಸ್, ಉಡುಪಿ

ಎರಡನೆಯ ಪಂಚ ವಾರ್ಷಿಕ ಯೋಜನೆ

ರಾಜ್ಯದಾದ್ಯಂತ ಹಳ್ಳಿಗಳ ಮಟ್ಟದಲ್ಲಿ ಕಾರ್ಯಕ್ರಮ

ಭಾರತ ಸರಕಾರದವರು ಮತ್ತು ಯೋಜನಾ ಆಯೋಗದವರು, ದ್ವಿತೀಯ ಪಂಚವಾರ್ಷಿಕ ಯೋಜನೆಯು ಸಾರ್ವಜನಿಕರ ಯೋಜನೆಯಾಗಿರಬೇಕೆಂದು ಮತ್ತು ಅದನ್ನು ಗ್ರಾಮಗಳಿಂದ ಮೊದಲುಗೊಂಡು ತಯಾರಿಸತಕ್ಕದ್ದೆಂದು ಅಪೇಕ್ಷಿಸಿದ್ದಾರೆ. ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವ ಬಗ್ಗೆ, ಆದಷ್ಟು ಹೆಚ್ಚಾಗಿ ಸ್ಥಳೀಕರ ಸಹಕಾರ ಸಂಪತ್ತನ್ನು ದೊರಕಿಸಿಕೊಂಡು ಯೋಜನೆಗಳನ್ನು ತಯಾರಿಸುವ ಕೆಲಸದಲ್ಲಿ ಸ್ಥಳೀಕರು ಮುಂದೆ ಬರುವಂತೆ ಮಾಡುವುದು ಅತ್ಯವಶ್ಯವಾದುದಾಗಿದೆ. ಆದುದರಿಂದಾಗಿ ಮದ್ರಾಸು ಸರಕಾರದವರು ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ತಯಾರಿಸುವಾಗ ಸಾರ್ವಜನಿಕರ ಆವಶ್ಯಕತೆಗಳಾವುವು ಮತ್ತು ಅವರ ಆಕಾಂಕ್ಷೆಗಳೇನು ಮತ್ತು ಎಷ್ಟರ ಮಟ್ಟಿಗೆ ಅವರು ಧನ ಮತ್ತು ಶ್ರಮ ಸಹಿತವಾಗಿ ಸಹಕರಿಸುವರೆಂಬುದನ್ನು ಗೊತ್ತುಮಾಡಿಕೊಳ್ಳಲು ನಿರ್ಧಯಿಸಿರುತ್ತಾರೆ.

ಗ್ರಾಮಗಳಲ್ಲಿಯ ಜನರ ಅಭಿಪ್ರಾಯವನ್ನು ಪಡೆದು ಪ್ರತಿ ಜಿಲ್ಲೆಯ ಬಗ್ಗೆ ಯೋಜನೆಯನ್ನು ತಯಾರಿಸಲಾಗುವುದು ಮತ್ತು ರಾಜ್ಯದ ಇಡಿ ಯೋಜನೆಯನ್ನು ಆ ತರುವಾಯ ತಯಾರಿಸಲಾಗುವುದು. ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸ, ಕುಡಿಯುವ ನೀರು ಸರಬರಾಜು, ಗ್ರಾಮಾಂತರ ಪ್ರದೇಶಗಳ ಶುಚಿತ್ವ, ನ್ಯಾಯದ ಸವಲತ್ತುಗಳು, ಸಾರಿಗೆ ಸೌಕರ್ಯ, ವೈದ್ಯಕೀಯ ಸಹಾಯ ಮತ್ತು ಗ್ರಾಮ ಸಹಕಾರಿ ಸಂಘಗಳು– ಇತ್ಯಾದಿ ವಿಷಯಗಳಲ್ಲಿ ಸಾಧ್ಯವಾಗುವಷ್ಟು ಮಟ್ಟಿಗೆ ಒಳ್ಳೆಯ ಏರ್ಪಾಡುಗಳನ್ನು ಮಾಡಲು ಯೋಜನೆಯು ಉದ್ದೇಶಿಸುತ್ತದೆ. ರಾಜ್ಯದ ಮಟ್ಟದಲ್ಲಿ ಯೋಜನೆ ಮಾಡಲ್ಪಟ್ಟ ದೊಡ್ಡ ಅಭಿವೃದ್ಧಿ ಕಾಮಗಾರಿಗಳು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಲ್ಪಟ್ಟು ಸಂಬಂಧಪಟ್ಟ ಜಿಲ್ಲೆಯ ಮಟ್ಟದ ಯೋಜನೆಗಳೊಡನೆ ಸೇರಿಸಲ್ಪಡುವುವು. ಹೀಗೆ ಜಿಲ್ಲೆಯ ಬಗ್ಗಿನ ಸಂಪೂರ್ಣಯೋಜನೆಯು ರೂಪುಗೊಳ್ಳುವುದು.

ಯೋಜನೆಯನ್ನು ಗ್ರಾಮದ ಮಟ್ಟದಲ್ಲಿ ತಯಾರಿಸುವ ಕೆಲಸದ ಮೊದಲನೆಯ ಹೆಜ್ಜೆಯೇ ಗ್ರಾಮಾಭಿವೃದ್ಧಿ ಸಮಿತಿ ಎಂದು ಕರೆಯಲ್ಪಡುವ ಒಂದು ಸಂಸ್ಥೆಯನ್ನು ಸ್ಥಾಪಿಸುವುದಾಗಿದೆ. ಈ ಸಮಿತಿಯು ಏರ್ಪಡಿಸಲ್ಪಟ್ಟ ಪ್ರದೇಶದ ಬಗ್ಗೆ ಅದು ಒಂದು ಯೋಜನಾ ಸಮಿತಿಯಾಗಿ ಕಾರ್ಯನಿರ್ವಹಿಸುವುದು ಮತ್ತು ಗ್ರಾಮಸ್ಥರ ಸಹಕಾರವನ್ನು ಪಡೆದು ಯೋಜನೆಗಳನ್ನು ಅದು ಕಾರ್ಯಗತಗೊಳಿಸುವುದು. ಬೇಸಾಯದ ಪ್ರಾಮುಖ್ಯತೆಯನ್ನು ಲಕ್ಷಿಸಿ, ಈ ಗ್ರಾಮಾಭಿವೃದ್ಧಿ ಸಮಿತಿಗೆ, ಗ್ರಾಮದಲ್ಲಿ ನಿಪುಣನೆಂದೆನಿಸಿಕೊಂಡ ಒಬ್ಬ ಬೇಸಾಯಗಾರನನ್ನೂ ಸದಸ್ಯನನ್ನಾಗಿ ಸೇರಿಸಿಕೊಳ್ಳಬೇಕು ಮತ್ತು ಆತನು ಸುಧಾರಿತ ರೀತಿಯ ಬೇಸಾಯಕ್ಕೆ ಸಂಬಂಧಪಟ್ಟ ಸಲಹೆ ಮತ್ತು ಸಹಕಾರವನ್ನು ಗ್ರಾಮಸ್ಥರಿಗೆ ಕೊಡಬೇಕು. ಗ್ರಾಮಕಾಮಗಾರಿಗಳ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವ ಬಗ್ಗೆ ಸಮಿತಿಯು ಸ್ಥಳೀಕ ಪ್ರದೇಶದಲ್ಲಿ ವಂತಿಗೆಗಳನ್ನು ಎತ್ತಬೇಕು. ಹಾಗೆ ಪಡೆದ ವಂತಿಗೆಗಳ ಹಣದ ಲೆಕ್ಕವನ್ನು ತಕ್ಕ ರೀತಿಯಲ್ಲಿಟ್ಟುಕೊಂಡು ಬಂದು, ಅದನ್ನು ಅತ್ಯುತ್ತಮ ರೀತಿಯಲ್ಲಿ ಉಪಯೋಗಿಸುವುದೆಂಬ ಭರವಸೆಯನ್ನು ಜನಗಳಲ್ಲಿ ಹುಟ್ಟಿಸಬಹುದಾದ ವಿಶ್ವಾಸ ಪಾತ್ರರನ್ನೆ ಗ್ರಾಮಾಭಿವೃದ್ಧಿ ಸಮಿತಿಯ ಸದಸ್ಯರನ್ನಾಗಿ ಆರಿಸುವುದು ಅಪೇಕ್ಷಣೀಯ.

ಹಳ್ಳಿಯ ಪ್ರತಿ ಕುಟುಂಬದ ಸಹಕಾರವು ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಅಗತ್ಯವಾಗಿರುವುದರಿಂದ, ಸಮಿತಿಯು ಸಮಸ್ತ ತರಗತಿಯ ಜನಗಳ ಪ್ರತಿನಿಧಿಯಾಗಿರಬೇಕು. ವ್ಯವಸಾಯ ವೃತ್ತಿಯ ವಿನಾ ಇತರ ರೀತಿಯ ಉದ್ಯೋಗವನ್ನು ಮಾಡಿ ಜೀವಿಸುವವರ ಪ್ರತಿನಿಧಿ ಮುಂದಕವಾಗಿಯೂ ಸಮಿತಿ ಕೆಲಸ ಮಾಡುವಂತೆ ನೋಡಿಕೊಳ್ಳತಕ್ಕದ್ದು. ಕಾನೂನು ಪ್ರಕಾರ ಏರ್ಪಡಾದ ಪಂಚಾಯತುಗಳಿರುವ ಗ್ರಾಮಗಳಲ್ಲಿ, ಅವುಗಳನ್ನು ಯೋಜನೆಯ ಉದ್ದೇಶಗಳ ಬಗ್ಗೆ ಸಾಧ್ಯವಾದಷ್ಟು ಮಟ್ಟಿಗೆ ಉಪಯೋಗಿಸಿಕೊಳ್ಳಬೇಕೆಂದು ಮತ್ತು ಯೋಜನಾಸಮಿತಿಯ ಕೇಂದ್ರವಾಗಿ ಅವುಗಳನ್ನು ಮಾಡಿಕೊಳ್ಳಬೇಕೆಂದು ಸರಕಾರದವರು ಅಪೇಕ್ಷಿಸುತ್ತಾರೆ. ಇತರ ಪ್ರದೇಶಗಳಲ್ಲಿ, ಅಂದರೆ ಕಾನೂನು ಪ್ರಕಾರ ಏರ್ಪಡಿಸಲಾದ ಪಂಚಾಯತುಗಳಿಲ್ಲದಿರುವಲ್ಲಿ, ಗ್ರಾಮಸ್ಥರು ಗ್ರಾಮಾಭಿವೃದ್ಧಿ ಸಮಿತಿಗೆ ಸದಸ್ಯರನ್ನು ಅವರೊಳಗಿಂದ ಚುನಾಯಿಸಿ ಗ್ರಾಮಯೋಜನೆಯನ್ನು ತಯಾರಿಸಲು ಮತ್ತು ಅದನ್ನು ಕಾರ್ಯಗತಗೊಳಿಸಲು ತಕ್ಕ ಅಧಿಕಾರವನ್ನು ಆ ಸಮಿತಿಯವರಿಗೆ ಕೊಡತಕ್ಕದ್ದು ಮತ್ತು ಆ ಸಮಿತಿಯು ಗ್ರಾಮಸ್ಥರ ಪ್ರತಿನಿಧಿಯಾಗಿರತಕ್ಕದ್ದು. ಶ್ಯಾನುಭೋಗ ಮತ್ತು ಪಟೇಲ ಇವರು ಗ್ರಾಮಾಭಿವೃದ್ಧಿ ಸಮಿತಿಯ ಸದಸ್ಯರಾಗಿರತಕ್ಕದ್ದು. ಶ್ಯಾನುಭೋಗನು ಅದರ ಕಾರ್ಯದರ್ಶಿಯಾಗಿಯೂ ಕೆಲಸಮಾಡುವನು.

ಪ್ರತಿಜಿಲ್ಲಾ ಯೋಜನೆಯ ಐದುವರ್ಷದ ಖರ್ಚು ಸುಮಾರು 2 ಕೋಟಿಯಿಂದ 3 ಕೋಟಿಯ ವರೆಗೆ ಆಗುವುದೆಂದು ನಿರೀಕ್ಷಿಸಲಾಗಿದೆ. ಇದರ ಮೇರೆಗೆ ಸರಕಾರದವರು ಪ್ರತಿಯೊಬ್ಬನಿಗೆ ವರ್ಷಕ್ಕೆ ರೂ. 2 ರಂತೆ ಖರ್ಚುಮಾಡುವರೆಂದಾಯಿತು. ಇದಕ್ಕೆ ಗ್ರಾಮಸ್ಥರ ವಂತಿಗೆಯನ್ನು ಸಹ ಸೇರಿಸಿ, ಹಾಗೆ ಸಂಗ್ರಹವಾದ ಒಟ್ಟು ಹಣದ ಪ್ರಮಾಣಕ್ಕನುಸಾರವಾಗಿ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಇದಕ್ಕೋಸ್ಕರ ಪ್ರತಿಜಿಲ್ಲೆಯನ್ನು ಅನುಕೂಲವಾದ ರೀತಿಯಲ್ಲಿ ಯೋಜನಾ ಪ್ರದೇಶಗಳನ್ನಾಗಿ ವಿಭಾಗಿಸಬೇಕೆಂದು ಯೋಜನಾ ಆಯೋಗದವರು ಅಭಿಪ್ರಾಯಪಡುತ್ತಾರೆ. ಅಂಥ ಯೋಜನಾಪ್ರದೇಶಗಳು ತಾಲೂಕುಗಳ ಗಡಿಗಳನ್ನು ಅಡ್ಡಲಾಗಿ ಕತ್ತರಿಸಿಕೊಂಡು ಹೋಗತಕ್ಕದ್ದಲ್ಲ ಮತ್ತು ಆಯಾ ಪ್ರದೇಶಗಳಲ್ಲಿ ಅಭಿವೃದ್ಧಿಯ ಬಗ್ಗಿನ ಸವಲತ್ತುಗಳ ವಿಶೇಷತೆಗೆ ಅನುಸಾರವಾಗಿರ ತಕ್ಕದ್ದು. ಪರಿಸ್ಥಿತಿಗಳು ಸಾಮಾನ್ಯವಾಗಿ ಒಂದೇ ರೀತಿಯಲ್ಲಿರುವ ಒಂದು ತಾಲೂಕನ್ನು ಒಂದು ಅಥವಾ ಒಂದಕ್ಕಿಂತ ಅಧಿಕ ಯೋಜನಾ ಪ್ರದೇಶಗಳನ್ನಾಗಿ ಜನಸಂಖ್ಯೆಯ ಆಧಾರದ ಮೇಲೆ ವಿಂಗಡಿಸಿಕೊಳ್ಳಬಹುದು.

ಆಯಾ ಯೋಜನಾ ಪ್ರದೇಶದ ಬಗ್ಗೆ ಈ ಕೆಳಗಿನವರನ್ನೊಳಗೊಂಡ ಒಂದು ಅಭಿವೃದ್ಧಿ ಸಮಿತಿಯನ್ನು ಏರ್ಪಡಿಸತಕ್ಕದ್ದೆಂದು ಸರಕಾರದ ಅಭಿಪ್ರಾಯ:—

ರೆವಿನ್ಯೂ ಡಿವಿಜನಲ್ ಆಫೀಸರ್ (ಅಧ್ಯಕ್ಷ), ಸದರಿ ಪ್ರದೇಶದಲ್ಲಿಯ ಸಮಸ್ತ ಪಂಚಾಯತುಗಳ ಅಧ್ಯಕ್ಷರು, ಸದರಿ ಪ್ರದೇಶವನ್ನು ಪ್ರತಿನಿಧಿಸುವ ರಾಜ್ಯದ ಶಾಸನ ಸಭೆಗಳ ಸದಸ್ಯರು, ಬೇಸಾಯಗಾರರನ್ನು, ವಿಶೇಷ ರೀತಿಯ ಕಾರ್ಮಿಕರನ್ನು ಮತ್ತು ಇತರ ವಿಶೇಷ ರೀತಿಯ ಹಿತಸಂಬಂಧಗಳನ್ನು ಪ್ರತಿನಿಧಿಸುವ ಮತ್ತು ಕಲೆಕ್ಟರರಿಂದ ನಾಮನಿರ್ದೇಶ ಮಾಡಲ್ಪಟ್ಟ ಎರಡು ಅಥವಾ ಮೂರು ಮಹನೀಯರು, ತಹಶೀಲ್ದಾರ್, ಪಬ್ಲಿಕ್ ವರ್ಕ್ಸ್ ಅಥವಾ ಹೈವೇ ವಿಭಾಗದ ಅತ್ಯಂತ ಸಮೀಪದ ಗಜೆಟೆಡ್ ಆಫೀಸರು, ಅಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರ್, ಅತ್ಯಂತ ಸಮೀಪದ ವೆಟರಿನರಿ ಅಸಿಸ್ಟೆಂಟ್ ಸರ್ಜನ್, ಅತ್ಯಂತ ಸಮೀಪದ ಶಾಲೆಗಳ ಡೆಪ್ಯುಟಿ ಇನ್‌ಸ್ಪೆಕ್ಟರ್, ಅತ್ಯಂತ ಸಮೀಪದ ಕೊ-ಆಪರೇಟಿವ್ ಸಬ್ ರಿಜಿಸ್ಟ್ರಾರರು. ಇಷ್ಟು ಮಂದಿಯಲ್ಲದೆ, ಇತರ ವಿಭಾಗಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ಪರ್ಯಾಲೋಚನೆಗೆ ತೆಗೆದುಕೊಂಡಾಗ ಸಂಬಂಧಪಟ್ಟ ಇಲಾಖೆಗಳ ಆಫೀಸರುಗಳನ್ನು ಸೇರಿಸಿಕೊಳ್ಳಬಹುದು. ಗ್ರಾಮ ಯೋಜನೆಗಳನ್ನು ಚೆನ್ನಾಗಿ ಪರಿಶೀಲಿಸಿ, ಸದರಿ ಪ್ರದೇಶದ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ತಯಾರಿಸುವುದು ಮತ್ತು ಅಲ್ಲಿ ದೊರೆಯುವ ಕಚ್ಚಾಪದಾರ್ಥಗಳಿಗನುಸಾರವಾಗಿ, ವಿಶೇಷರೀತಿಯ ಅಭಿವೃದ್ಧಿಯ ಬಗ್ಗಿನ ಕಾರ್ಯಕ್ರಮವನ್ನು ಯೋಜನೆಯಲ್ಲಿ ಸೇರಿಸಿಕೊಳ್ಳುವುದು—ಇವೇ ಮೊದಲಾದವುಗಳು ಸಮಿತಿಯ ಕರ್ತವ್ಯಗಳಾಗುತ್ತವೆ.

ಯೋಜನಾ ಸಮಿತಿಯವರು, ಮೊದಲ ಹಂತದಲ್ಲಿ ಅನುಭವವನ್ನು ಪಡೆಯುವ ಸಲುವಾಗಿ 3 ಅಥವಾ 4 ಚುನಾಯಿಸಲ್ಪಟ್ಟ ಜಿಲ್ಲೆಯಲ್ಲಿ ಯೋಜನೆಗಳನ್ನು ಕಾರ್ಯಗತಮಾಡಬೇಕೆಂದು ಶಿಫಾರಸನ್ನು ಮಾಡಿರುತ್ತಾರೆ. ಕಾರಣ, ಸರಕಾರದವರು ಪ್ರಥಮತಃ ಕೊಯಂಬುತ್ತೂರು, ರಾಮನಾಥಪುರಂ ಮತ್ತು ಚೆಂಗಲ್‌ಪೇಟೆ ಜಿಲ್ಲೆಗಳಲ್ಲಿ ತಪಶೀಲಾದ ಜಿಲ್ಲಾ ಯೋಜನೆಗಳನ್ನು ತಯಾರಿಸಿ ಕಾರ್ಯಗತಗೊಳಿಸುವರು. ಸಮಾಜ ವಿಕಾಸಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಕಾರ್ಯದ ಪ್ರದೇಶಗಳ ಹೊರತು, ಮೇಲಿನ ಉದ್ದೇಶದ ಬಗ್ಗೆ ಪ್ರತ್ಯೇಕ ಸಿಬಂದಿ ಇರುವುದಿಲ್ಲ. ಆದುದರಿಂದ ಸರಕಾರದವರು ಮೊದಲ 3 ತಿಂಗಳ ಬಗ್ಗೆ ಮೇಲಿನ ಮೂರು ಜಿಲ್ಲೆಗಳಲ್ಲಿ, ಈ ಯೋಜನೆಯ ಬಗ್ಗೆ, ವಿಶೇಷ ಸಿಬಂದಿಯನ್ನು ನೇಮಕಮಾಡಿದ್ದಾರೆ. ಈ ಸಿಬ್ಬಂದಿಯಲ್ಲಿ ಒಬ್ಬ ಡೆಪ್ಯುಟಿ ಕಲೆಕ್ಟರು ಮತ್ತು ಅನೇಕ ಡೆಪ್ಯುಟಿ ತಹಶೀಲ್ದಾರರು ಮತ್ತು ರೆವಿನ್ಯೂ ಇನ್‌ಸ್ಪೆಕ್ಟರರು ಇರುತ್ತಾರೆ.

ಸಮಾಜ ವಿಕಾಸಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾಕಾರ್ಯ ಪ್ರದೇಶಗಳ ಬಗ್ಗೆ ಮಂಜೂರು ಮಾಡಲ್ಪಟ್ಟ ಗ್ರಾಮಾಭಿವೃದ್ಧಿ ಕೆಲಸಗಾರರ ಸಿಬಂದಿಯು ಕೂಡಲೇ ಯೋಜನೆಗಳನ್ನು ತಯಾರಿಸಿದ ಗ್ರಾಮಗಳ ಬಗ್ಗೆ, ಗ್ರಾಮಾಭಿವೃದ್ಧಿ ಸಮಿತಿಗಳ ಸ್ಥಾಪನೆ ಮತ್ತು ಯೋಜನೆಗಳ ತಯಾರಿಕೆಗೆ ಸಂಬಂಧಪಟ್ಟ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದೂ ಸರಕಾರದವರು ಆಜ್ಞಾಪಿಸಿರುತ್ತಾರೆ.

ಯೋಜನಾ ಆಯೋಗದವರು ಪ್ರತಿ ಪಟ್ಟಣವು ತನ್ನದೇ ಆದ ಮತ್ತು ಜಿಲ್ಲಾ ಯೋಜನೆಗಳ ಅಂಗವಾದ ಒಂದು ಯೋಜನೆಯುಳ್ಳದ್ದಾಗಿರಬೇಕೆಂದು ಶಿಫಾರಸು ಮಾಡಿರುತ್ತಾರೆ. ಆದುದರಿಂದ ಪ್ರತಿ ನಗರ ಸಭೆ ಮತ್ತು ಪ್ರಬುದ್ಧ ಪಂಚಾಯತು ಒಂದು ಸಮಗ್ರವಾದ ಮತ್ತು ಮುಂದೆ ಜಿಲ್ಲಾ ಯೋಜನೆಯಲ್ಲಿ ಮತ್ತು ರಾಜ್ಯದ ಯೋಜನೆಯಲ್ಲಿ ಸೇರಿಸಲ್ಪಡಬಹುದಾದ ತನ್ನದೇ ಆದ ಒಂದು ಯೋಜನೆಯನ್ನು ತಯಾರಿಸಲು ಕಾರ್ಯಕ್ರಮವನ್ನು ಈ ಕೂಡಲೇ ಕೈಕೊಳ್ಳಬೇಕು. ಯೋಜನೆಯನ್ನು ತಯಾರಿಸುವ ಉದ್ದೇಶದ ಬಗ್ಗೆ ಪ್ರತಿ ನಗರ ಸಭೆ ಮತ್ತು ಪ್ರಬುದ್ಧ ಪಂಚಾಯತು ಆಯಾ ಪ್ರದೇಶದ ಯೋಜನಾ ಸಮಿತಿಯಾಗಿ ವರ್ತಿಸತಕ್ಕದ್ದು. ಯೋಜನೆಯ ಕಾರ್ಯಕ್ರಮವನ್ನು ಈ ಕೆಳಗಿನಂತೆ ನಿರೂಪಿಸಬಹುದು:—

(೧) ನೀರು ಸರಬರಾಜು, (೨) ನೀರು ಪಾರಿ (೩) ವೈದ್ಯಕೀಯ ಸವಲತ್ತುಗಳು (೪) ವಿದ್ಯಾಭ್ಯಾಸ, (೫) ರಸ್ತೆಗಳು, (೬) ಪಟ್ಟಣ ಯೋಜನೆ ಮತ್ತು ಗಲೀಜು ಗಲ್ಲಿ ಪ್ರದೇಶಗಳನ್ನು ಉತ್ತಮಗೊಳಿಸುವುದು, (೭) ನಗರ ಸಭೆಗಳ ಅಥವಾ ಪಂಚಾಯತುಗಳ ಆರ್ಥಿಕ ಸ್ಥಿತಿಯ ಸುಧಾರಣೆ ಇತ್ಯಾದಿ.

ಕೊಯಂಬುತ್ತೂರು, ರಾಮನಾಥಪುರಂ ಮತ್ತು ಚೆಂಗಲ್ಪೇಟೆ ಜಿಲ್ಲೆಗಳ ಬಗ್ಗೆ ಮಂಜೂರಾದ ವಿಶೇಷ ಸಿಬಂದಿಯವರು ಕೂಡಲೇ ಕಾರ್ಯಕ್ರಮವನ್ನು ಪ್ರಾರಂಭಿಸಬೇಕೆಂದು ವಿಧಿಸಿದ್ದು 3 ತಿಂಗಳಲ್ಲಿ ಗ್ರಾಮ ಯೋಜನೆಗಳು ತಯಾರಿಸಲ್ಪಡುವುವೆಂದು ನಿರೀಕ್ಷಿಸಲಾಗಿದೆ. ಗ್ರಾಮ ಯೋಜನೆಗಳು ತಯಾರಾದ ಮೇಲೆ ಕಲೆಕ್ಟರು ಒಂದು ತಿಂಗಳೊಳಗೆ ಜಿಲ್ಲಾ ಯೋಜನೆಯನ್ನು ಪೂರ್ತಿಗೊಳಿಸಿ 1955ನೇ ಇಸವಿ ಆಗೋಸ್ತು ತಿಂಗಳ ಮಧ್ಯದಲ್ಲಿ ಸರಕಾರಕ್ಕೆ ಸಲ್ಲಿಸಬೇಕೆಂದು ಅನುಜ್ಞೆಯನ್ನು ಕೊಡಲಾಗಿದೆ. ಮೇಲಿನ ಮೂರು ಜಿಲ್ಲೆಗಳ ವಿನಾ ಇತರ ಜಿಲ್ಲೆಗಳಲ್ಲಿ ಗ್ರಾಮಾಭಿವೃದ್ಧಿ ಸಮಿತಿಗಳನ್ನು ಏರ್ಪಡಿಸುವ ಮತ್ತು ಸಾಮಾನ್ಯ ರೆವಿನ್ಯೂ ಸಿಬಂದಿಯವರ ಮೂಲಕ ಆಯಾ ಜಿಲ್ಲೆಗಳಲ್ಲಿ ಯೋಜನಾ ಪ್ರದೇಶಗಳ ಬಗ್ಗೆ ಸಮಿತಿಗಳನ್ನು ಏರ್ಪಡಿಸುವ ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಕೂಡಲೇ ಕೈಕೊಂಡು ಆ ಕೆಲಸಗಳನ್ನು 3 ತಿಂಗಳ ಅವಧಿಯೊಳಗೆ ಸಂಪೂರ್ಣಗೊಳಿಸಬೇಕಾಗಿ ಕಲೆಕ್ಟರುಗಳಿಗೆ ಆಜ್ಞಾಪಿಸಲಾಗಿದೆ.

ಜಿಲ್ಲಾ ಯೋಜನೆಗಳು ಸಮಸ್ತ ಗ್ರಾಮಸ್ಥರ ಹಿತವನ್ನು ಗಮನದಲ್ಲಿಟ್ಟುಕೊಂಡು ಅಧಿಕೋತ್ಪನ್ನ ಮತ್ತು ಕ್ಷೇಮಾಭಿವೃದ್ಧಿ ಸಾಧಿಸಲೆಳಸುತ್ತವೆ. 10 ವರ್ಷದ ಅವಧಿಯಲ್ಲಿ ಉತ್ಪನ್ನವು ಇಮ್ಮಡಿಯಾಗಬೇಕೆಂಬ ಗುರಿಯನ್ನು ಇಟ್ಟುಕೊಂಡು ಬೇಸಾಯದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದಕ್ಕೆ ಬೇಕಾದ ಧನ ಮತ್ತು ಇತರ ಸಹಾಯವನ್ನು ರಾಜ್ಯದ ಸರಕಾರ ಕೊಡಬೇಕಾಗುವುದೇನೋ ನಿಜ. ಉದಾಹರಣೆಗಾಗಿ, ಬೇಸಾಯಗಾರರಿಗೆ ಸಾಲ ಪಡೆಯಲು ಸವಲತ್ತುಗಳು, ಒಳ್ಳೆಯ ಫಲವರ್ಧಕಗಳು, ಬೀಜಗಳು, ಗೊಬ್ಬರಗಳು ಇತ್ಯಾದಿಗಳನ್ನು ಅದು ಒದಗಿಸಬೇಕಾಗುತ್ತದೆ. ಇದಲ್ಲದೆ ಕುಡಿಯುವ ನೀರಿನ ಸರಬರಾಜು, ರಸ್ತೆಗಳ ಏರ್ಪಾಡು ಇತ್ಯಾದಿಗಳ ಬಗ್ಗೆ ಸಹ ಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯಗತಗೊಳಿಸುವಲ್ಲಿ ತಾಂತ್ರಿಕ ಸಲಹೆಯನ್ನೂ ಕೊಡಬೇಕಾಗುತ್ತದೆ. ಇದಕ್ಕೆ ಸರಕಾರ ಯೋಗ್ಯ ವ್ಯವಸ್ಥೆ ಮಾಡಲಿರುವುದು. ಇದರೊಂದಿಗೆ ಸಾರ್ವಜನಿಕರು ತಮ್ಮ ಸಹಕಾರವನ್ನೂ ಅತ್ಯಧಿಕ ಪ್ರಮಾಣದಲ್ಲಿ ನೀಡಬೇಕೆಂದು ಸರಕಾರ ಅಪೇಕ್ಷಿಸುತ್ತದೆ.

(೧೨ನೇ ಪುಟ ನೋಡಿರಿ)



ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 219, BOBMAY 3-

ಕಾಂಗ್ರೆಸು ಮತ್ತು ಔದ್ಯೋಗೀಕರಣ

ಹತ್ತು ವರ್ಷಗಳಲ್ಲಿ ಎಲ್ಲರಿಗೂ ಉದ್ಯೋಗ

ಆವಡಿಯ ಅಧಿವೇಶನದಲ್ಲಿ ಸಮಾಜವಾದಿ ಸ್ವರೂಪದ ಸಮಾಜ ರಚನೆಯ ಗೊತ್ತುವಳಿಯನ್ನು ಕಾಂಗ್ರೆಸು ಸ್ವೀಕರಿಸಿರುವುದರಿಂದ ಮುಂದಿನ ಕೆಲವು ವರ್ಷಗಳಲ್ಲಿ ಭಾರತದ ಔದ್ಯೋಗೀಕರಣದ ಬಗೆಯನ್ನು ತಿಳಿದುಕೊಳ್ಳುವುದು ಇಷ್ಟವೆನಿಸುತ್ತದೆ. ನಮ್ಮ ಆರ್ಥಿಕ ಧೋರಣೆಯ ಗೊತ್ತುವಳಿಯು ಹತ್ತು ವರ್ಷಗಳಲ್ಲಿ ಸಂಪೂರ್ಣ ಉದ್ಯೋಗದ ಧ್ಯೇಯವನ್ನು ಇಟ್ಟುಕೊಂಡಿದೆ. ಈ ಗುರಿಯನ್ನು ಮುಟ್ಟಬೇಕಾಗಿದ್ದರೆ, ಸಮಾಜವಾದಿ ಸ್ವರೂಪದ ಸಮಾಜರಚನೆಯನ್ನು ಸ್ಥಾಪಿಸುವ ನಮ್ಮ ಪ್ರಯತ್ನದಲ್ಲಿ ಔದ್ಯೋಗಿಕ ಸಂಸ್ಥೆಗಳ ಪಾತ್ರವೇನೆಂಬುದರ ಸ್ಪಷ್ಟ ಚಿತ್ರವನ್ನು ಕಣ್ಣಮುಂದಿಟ್ಟುಕೊಳ್ಳುವುದು ಆಗತ್ಯವಾಗುತ್ತದೆ.

ಇಷ್ಟರ ವರೆಗೆ ನಮ್ಮ ಆರ್ಥಿಕ ಧೋರಣೆಯು ಸ್ಪಷ್ಟವೂ ನಿರ್ದಿಷ್ಟವೂ ಆಗಿರಲಿಲ್ಲ. ಮೊದಲನೆಯ ಪಂಚವಾರ್ಷಿಕ ಯೋಜನೆಯ ಕುರಿತು ಯೋಜನಾ ಆಯೋಗ ಮಾಡಿದ ಸೂಚನೆಗಳಲ್ಲಿಯೇ ಹಲವು ಕಾರ್ಯಗತವಾಗಿಲ್ಲ. ಔದ್ಯೋಗಿಕ ಕ್ಷೇತ್ರದಲ್ಲೇನೋ ಕೆಲವು ಕೈಗಾರಿಕೆಗಳು ಯೋಜನಾ ಆಯೋಗ ನಿರ್ದಿಷ್ಟಪಡಿಸಿದ ಗುರಿಯನ್ನು ಮುಟ್ಟಿವೆ; ಮತ್ತು ಮೀರಿದ್ದೂ ಉಂಟು. ಆದರೆ ಇದರಿಂದ ನಿರುದ್ಯೋಗವೇನೂ ಕಡಿಮೆಯಾಗಲಿಲ್ಲ. ಅದು ಹೆಚ್ಚುತ್ತಿರುವಂತೆ ಕಂಡು ಬರುತ್ತದೆ.

ಸರಕಾರದವರು ೧೯೪೮ರಲ್ಲಿ ನಿರೂಪಿಸಿದ ಆರ್ಥಿಕ ಧೋರಣೆ, ರಾಷ್ಟ್ರೀಯ ಪುನರುದ್ಧಾರದ ಕುರಿತು ಕಾಂಗ್ರೆಸು ಸ್ವೀಕರಿಸಿದ ಗೊತ್ತುವಳಿಗಳು ಮತ್ತು ಪಂಚವಾರ್ಷಿಕ ಯೋಜನೆ ಇವನ್ನು ದೃಷ್ಟಿಯಲ್ಲಿಟ್ಟುಕೊಂಡರೆ ನಮ್ಮ ಮುಂದಿನ ಕೆಲವು ವರ್ಷಗಳ ನೀತಿಯು ಈ ಕೆಳಗಿನಂತಿರುವುದು ಅವಶ್ಯವೆಂದು ಮುಂದಿಟ್ಟಾಗುತ್ತದೆ:- ಮೊದಲನೆಯದಾಗಿ, ನಮ್ಮ ಔದ್ಯೋಗೀಕರಣದ ಮೂಲತತ್ವವು ಅತ್ಯಧಿಕ ಉತ್ಪಾದನೆ, ಸಂಪೂರ್ಣ ಉದ್ಯೋಗ ಮತ್ತು ಸಾಮಾಜಿಕ ಹಾಗು ಆರ್ಥಿಕ ನ್ಯಾಯ ಎಂಬ ಮೂರಂಶಗಳನ್ನು ಒಳಗೊಳ್ಳುತ್ತದೆ.

ಕಬ್ಬಿಣ ಮತ್ತು ಉಕ್ಕು, ಯಾಂತ್ರಿಕ ಸಲಕರಣೆಗಳು, ವಿದ್ಯುಚ್ಛಕ್ತಿ, ಸಾರಿಗೆ ಮತ್ತು ಸಂಪರ್ಕ ಮುಂತಾದ ಮೂಲೋದ್ಯೋಗಗಳನ್ನು ಬೇಗನೇ ಕಟ್ಟಿಕೊಳ್ಳಬೇಕು. ಇವುಗಳನ್ನು ಸರಕಾರದ ಆಡಳಿತದಲ್ಲಿ ಮತ್ತು ಅಧಿಕಾರದಲ್ಲಿ ನಡೆಗೊಳಿಸಬೇಕು. ಬಂಡವಾಳದ ಕೊರತೆಯಿಂದ ಈಗ ಖಾಸಗಿ ಜನರ ಕೈಯಲ್ಲಿರುವ ಕೆಲವು ಮೂಲೋದ್ಯೋಗಗಳ ರಾಷ್ಟ್ರಸ್ವಾಯತ್ತೀಕರಣವನ್ನು ಸಾಧಿಸುವುದಾಗದಿದ್ದರೆ, ಅವುಗಳ ಮೇಲೆ ಪರಿಣಾಮಕಾರಿಯಾದ ನಿಯಂತ್ರಣವನ್ನಿಡಬೇಕು. ಅತ್ಯಾಧುನಿಕ ತಂತ್ರ ಮತ್ತು ವಿಧಾನಗಳನ್ನು ಬಳಸುವ ಔದ್ಯೋಗಿಕ ನಿಲಯಗಳ ರಚನೆಗಾಗಿಯೇ ರಾಷ್ಟ್ರದ ಶಕ್ತಿ ಮತ್ತು ಸಂಪತ್ತಿನ ಸ್ರೋತವನ್ನು ವಿನಿಯೋಗಿಸಬೇಕು.

ಗ್ರಾಹಕರಿಗೆ ನಿತ್ಯೋಪಯೋಗಕ್ಕಾಗಿ ಬಟ್ಟೆಬರೆ, ಸಕ್ಕರೆ, ಕಾಗದ, ಎಣ್ಣೆ, ಅಕ್ಕಿ ಮುಂತಾದುವನ್ನೊದಗಿಸುವ ಕೈಗಾರಿಕೆಗಳನ್ನೆಲ್ಲ ವಿಕೇಂದ್ರೀಕೃತಗೊಳಿಸಿ, ಸಹಕಾರ ತತ್ವದ ಮೇಲೆ ಸಂಘಟನೆಗೊಳಪಡಿಸಬೇಕು. ಒಮ್ಮೆಗೆಯೇ ಇವೆಲ್ಲವನ್ನೂ ಮುಚ್ಚಿಬಿಡಲಾಗದು. ಆದರೆ ದೊಡ್ಡ, ಸಣ್ಣ ಹಾಗು ಗುಡಿಕೈಗಾರಿಕೆಗಳು ಕೆಲಸಮಾಡುವ ಕ್ಷೇತ್ರವನ್ನು ನಿರ್ದಿಷ್ಟಪಡಿಸುವುದು ಹಿತಕರ. ರಾಷ್ಟ್ರೀಯ ಆರ್ಥಿಕ ಅಭಿವೃದ್ಧಿಯೋಜನೆಯ ಕಕ್ಷೆಯಲ್ಲಿ ಹೊಂದಿಕೊಳ್ಳುವಂತೆ ಖಾಸಗಿವಲಯದ ಚಟುವಟಿಕೆ ಇಲ್ಲಿ ನಡೆಯಬಹುದು.

ಯೋಜನಾ ಆಯೋಗದ ಶಿಫಾರಸಿನಂತೆ ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಉದ್ಯೋಗವನ್ನೊದಗಿಸಿಕೊಡುವ ಜಂಟಿ ಉದ್ದೇಶಗಳನ್ನು ನಾವು ಒಮ್ಮೆಗೆಯೇ ಸಾಧಿಸಬೇಕು. ಉದಾಹರಣೆಗೆ, ಬಟ್ಟೆಯ ಕ್ಷೇತ್ರದಲ್ಲಿ ಕೆಲವು ಮಾದರಿಯವುಗಳನ್ನು ಕೈಮಗ್ಗ ಮತ್ತು ಖಾದಿಗಳಿಗೆ ಮೀಸಲಿಡಬೇಕು. ನಾವು ಆಹಾರದಲ್ಲಿ ಬಳಸುವ ಎಣ್ಣೆಯನ್ನೆಲ್ಲ ಹಳ್ಳಿಯ ಗಾಣಗಳಲ್ಲಿ ಉತ್ಪಾದಿಸಗೊಡಬೇಕು. ಕೈಯಿಂದ ಭತ್ತವನ್ನು ಕುಟ್ಟಿ, ಅಕ್ಕಿಯ ಗಿರಣಿಗಳನ್ನು ನಿರುತ್ಸಾಹಗೊಳಿಸುವುದೂ ನಿಷೇಧಿಸುವುದೂ ನಮ್ಮ ಧ್ಯೇಯವಾಗಬೇಕು. ಕಾಗದದ ಮಟ್ಟಿಗೆ ಕಾರ್ಯಾಲಯಗಳ ನಿತ್ಯೋಪಯೋಗಕ್ಕೆ ಬೇಕಾಗುವುದನ್ನು ಕೈಯಿಂದ ತಯಾರಿಸಲ್ಪಟ್ಟುದರಿಂದ ಲೇಖದಗಿಸಿಕೊಳ್ಳಬೇಕು. ಚರ್ಮದ ಕೈಗಾರಿಕೆಯಲ್ಲಿ ಸಾಮಾನ್ಯ ಪೆಟ್ಟಿಗೆಗಳನ್ನು ಬಾಟಾದವರಂತಹ ಮುಂತಾದ ಕಾರ್ಖಾನೆಗಳು ತಯಾರಿಸದೆ, ಊರಿನ ಸಮಗಾರರಿಗೆ ಆ ಕೆಲಸ ಒಪ್ಪಿಸಬೇಕು.

ಹೀಗೆ ನಾವು ಮಹೋದ್ಯಮಗಳ ಸ್ಪರ್ಧೆಯನ್ನು ತಪ್ಪಿಸುವುದಕ್ಕೆ ನಿಯಂತ್ರಣ ಮತ್ತು ನಿರ್ಬಂಧವನ್ನು ಹೇರದಿದ್ದರೆ ನಿರುದ್ಯೋಗವನ್ನು ನಿವಾರಿಸುವುದು ಸಾಧ್ಯವಾಗಲಾರದು. ಭಾರತ ಸರಕಾರದವರು ಮುಂದಿನ ಹತ್ತು ವರ್ಷಗಳಲ್ಲಿ ೧೨೦ ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದಕ್ಕೋಸ್ಕರ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಐದಾರು ಸಾವಿರ ಕೋಟಿ ರೂಪಾಯಿಗಳನ್ನು ವ್ಯಯಿಸಲಿರುವರೆಂಬುದೇನೊ ನಿಜ. ಆದರೆ ಗುಡಿಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ವ್ಯವಸ್ಥೆ ಮಾಡದಿದ್ದರೆ ಅಷ್ಟು ಹಣವನ್ನು ಸುರಿದರೂ ಉದ್ಯೋಗದ ಅವಕಾಶ ಸಾಕಷ್ಟು ಹೆಚ್ಚಲಾರದು.

ಸಾಮಾಜಿಕ ನ್ಯಾಯ ಮತ್ತು ಸಮತೆಯ ದೃಷ್ಟಿಯಿಂದ ಖಾಸಗಿ ವಲಯದಲ್ಲಿ ವಿದ್ಯಮಾನವಿರುವ ಆಡಳಿತ ಪದ್ಧತಿಯಲ್ಲಿ ಕ್ರಾಂತಿಕಾರ ಪರಿವರ್ತನೆಯನ್ನು ಸಾಧಿಸಬೇಕು. ಭೂ ಸುಧಾರಣೆಗೋಸ್ಕರ ಮಧ್ಯಸ್ಥರನ್ನು ನಿವಾರಿಸುವ ಶಾಸನ ಮಾಡಿದಂತೆ ಕೈಗಾರಿಕೆಯಲ್ಲೂ ಸುಧಾರಣೆಯಾಗಿ ಆದಾಯದ ಅಂತರ ಹಳ್ಳಿ ಮತ್ತು ಪೇಟೆಗಳ ನಡುವೆ ಕಡಿಮೆಯಾಗಬೇಕು.

ಪ್ರಾಮುಖ್ಯವಾದ ಉತ್ಪಾದನೆಯ ಸಾಧನಗಳೆಲ್ಲವೂ ಸಮಾಜವಾದಿ ಸ್ವರೂಪದ ಸಮಾಜದಲ್ಲಿ ಸಾಮಾಜಿಕ ಒಡೆತನದಲ್ಲಿರುತ್ತವೆ. ಆದುದರಿಂದ ಮೂಲೋದ್ಯೋಗಗಳಲ್ಲಿ ಸರಕಾರದ ಅಂಗವೇ ಕಂಡುಬರುತ್ತದೆ. ಆದರೆ ಖಾಸಗಿ ರಂಗವು ರಾಷ್ಟ್ರೀಯ ಧೋರಣೆಗೆ ಹೊಂದಿಕೊಂಡಿರುವಷ್ಟರವರೆಗೆ ಅದಕ್ಕೆ ಸಾಕಷ್ಟು ಸ್ವಾತಂತ್ರ್ಯ ಕೊಡಲ್ಪಡುತ್ತದೆ; ರಾಷ್ಟ್ರದ ಹಿತಾಸಕ್ತಿಯ ದೃಷ್ಟಿಯಿಂದ ಕೇವಲ ಆಯಕಟ್ಟಿನ ನಿಯಂತ್ರಣವಷ್ಟೇ ಅವುಗಳ ಮೇಲೆ ಹೇರಲ್ಪಡುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಸಮಾಜವಾದವು ಕೇಂದ್ರೀಕೃತ ಪದ್ಧತಿಯನ್ನನುಸರಿಸುತ್ತದೆ. ಆದರೆ ಭಾರತದಲ್ಲಿ ಶಾಂತರೀತಿಯಿಂದ ಕ್ರಾಂತಿಸಾಧಿಸಲಿರುವ ನಾವು ಧ್ಯೇಯದ ವಿಕೇಂದ್ರೀಕೃತ ಹೆಜ್ಜೆಯನ್ನಿಟ್ಟು ಔದ್ಯೋಗಿಕ ಕ್ಷೇತ್ರದ ಪುನರ್ಘಟನೆ ಮಾಡತಕ್ಕದ್ದು.

ಇದಲ್ಲದೆ, ರಾಷ್ಟ್ರದ ಸಂಪತ್ತಿನ ಮೇಲೆಯೇ ಪುನಾರಚನೆಯ ಭವನ ನಿರ್ಮಾಣವಾಗಬೇಕು. ಹೊರ ಪೇಟೆಗಳ ಮತ್ತು ಹೊರಗಿನವರ ಸಹಾಯದ ಅವಲಂಬನ ಯೋಗ್ಯವಲ್ಲ. ನಮ್ಮ ದೇಶದೊಳಗಿನ ಪೇಟೆಯನ್ನು ವಿಸ್ತರಿಸುವ ಮತ್ತು ಸಾಧನ ಸಂಪತ್ತಿನ ಎಲ್ಲ ಸ್ರೋತಗಳನ್ನು ಉಪಯೋಗಿಸುವ ಮನಸ್ಸು ಮಾಡಬೇಕು. ಸ್ವದೇಶಿಯ ವ್ರತ ಈ ದಿಸೆಯಲ್ಲಿ ನಮಗೆ ಮಾರ್ಗ ದರ್ಶನ ಮಾಡಬಲ್ಲುದು. ಒಟ್ಟಾರೆ, ಎರಡನೆಯ ಪಂಚವಾರ್ಷಿಕ ಯೋಜನೆಯ ತಯಾರಿಕೆ ನಡೆಸುವುದರಲ್ಲೀಗ ಮಗ್ನರಾಗಿರುವ ಎಲ್ಲರೂ ಮೇಲಿನ ಸೂತ್ರಗಳನ್ನು ಗಮನಿಸಬೇಕು. ಇದರಿಂದ ಅನಾವಶ್ಯಕವಾದ ಗೊಂದಲ ಮತ್ತು ಸಂದೇಹಗಳು ದೂರವಾಗುತ್ತವೆಯಲ್ಲದೆ ಹತ್ತು ವರ್ಷಗಳಲ್ಲಿ ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸುವ ಪ್ರತಿಜ್ಞೆಯೂ ಈಡೇರುತ್ತದೆ.

--ಶ್ರೀಮನ್ನಾರಾಯಣ ಅಗ್ರವಾಲ.

NAVAYUGA WEEKLY

ADVERTISEMENT RATES

Display Advertisements:— Rs. 2/-8 per column inch for contracts of 50" or more and Rs 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ.

ಉತ್ತಮ ಪ್ರತಿ- ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು.-1) ನವಭಾರತ ಪುಸ್ತಕ ಭಂಡಾರ್, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ. ಕ

(೧೧ನೇ ಪುಟದಿಂದ)

ರಾಜ್ಯ ಸರಕಾರದವರು ಯೋಜನೆಯನ್ನು ತಯಾರಿಸುವವರು ಯೋಜನೆಯ ಉದ್ದೇಶಗಳನ್ನು ಗ್ರಾಮಸ್ಥರ ತಿಳಿವಳಿಕೆಗೆ ತರಬೇಕೆಂದು ತಮ್ಮ ಸಿಬಂದಿಗೆ ಆಜ್ಞಾಪಿಸಿರುತ್ತಾರೆ. ಅಷ್ಟೆಯಲ್ಲದೆ, ಯೋಜನೆಯ ಪ್ರತಿ ಹಂತದಲ್ಲಿಯೂ ಸರಕಾರೇತರ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ನಿಕಟವಾದ ಸಂಬಂಧವನ್ನಿಟ್ಟುಕೊಳ್ಳಬೇಕೆಂದು ಸರಕಾರದವರು ಇಷ್ಟಪಡುತ್ತಾರೆ. ಆನುದರಿಂದ ಗ್ರಾಮಾಭಿವೃದ್ಧಿಯೋಜನೆಗಳನ್ನು ತಯಾರಿಸುವಾಗ ಸರಕಾರೇತರ ಕಾರ್ಯಕರ್ತರ ಸಲಹೆ ಸಹಕಾರಗಳನ್ನು ಮುಖ್ಯವಾಗಿ ಪಡೆಯಲಾಗುತ್ತದೆ. ಗ್ರಾಮಾಭಿವೃದ್ಧಿ ಸಮಿತಿಗಳು ಯೋಜನೆಯನ್ನು ಮಾಡುವ ಮುಂಚೆ, ಪ್ರತಿತಾಲೂಕಿನಲ್ಲಿ ಕನಿಷ್ಠಪಕ್ಷ ಮೂರು ಅಥವಾ ನಾಲ್ಕು ಕೇಂದ್ರಗಳಲ್ಲಿ ಗ್ರಾಮಸ್ಥರ ಸಾರ್ವಜನಿಕ ಸಭೆಗಳು ನೆರೆಯಿಸಲ್ಪಡುತ್ತವೆ. ಕೇಂದ್ರ ಮತ್ತು ರಾಜ್ಯದ ಶಾಸನ ಸಭೆಗಳ ಸದಸ್ಯರು, ಸಮಾಜ ಸೇವಕರು, ಸ್ಥಳೀಯ ಮುಖಂಡರು ಮತ್ತಿತರ ಪ್ರಾಮುಖ್ಯ ಸರಕಾರೇತರ ಮಹನೀಯರು ಈ ಸಭೆಗಳಿಗೆ ಬಂದು ಜನರಿಗೆ ಮುಂದಿನ ಯೋಜನೆಯ ಆದರ್ಶವನ್ನು ವಿವರಿಸಬೇಕು. ಇದರಿಂದಾಗಿ ಯೋಜನೆಯನ್ನು ಕಾರ್ಯಗತಗೊಳಿಸಲು ಅವಶ್ಯವಾಗಿ ಬೇಕಾದ ಸಾರ್ವಜನಿಕರ ಸಹಕಾರ, ಆತ್ಮಾವಲಂಬನೆಯ ಸ್ಫೂರ್ತಿ ಇತ್ಯಾದಿ ಅಂಶಗಳು ಧಾರಾಳವಾಗಿ ದೊರೆಯುವುದಲ್ಲದೆ ಸರ್ವರೂ ಯೋಜನೆಯು ಯಶಸ್ವಿಯಾಗುವಂತೆ ದುಡಿಯುವ ಪ್ರತಿಜ್ಞೆ ಕೈಗೊಂಡು ಮುನ್ನಡೆಯುವುದು ನಿಶ್ಚಯ.

(೧ನೇ ಪುಟದಿಂದ)

ನಿಯಮಾವಳಿಗಳೂ ಶಾಸನಗಳೂ ಎಲ್ಲರಿಗಾಗಿ, ಸಮಗ್ರ ರಾಷ್ಟ್ರಕ್ಕಾಗಿ, ಇರುತ್ತವೆ; ಅವುಗಳನ್ನು ಉಲ್ಲಂಘಿಸುವ ದುಡುಕನ್ನು ತೋರಿಸದೆ, ಕೆಲಮಟ್ಟಿಗೆ ನಮಗೆ ಅನಾನುಕೂಲತೆಯಾದಂತೆ ಕಂಡು ಬಂದರೂ ಸಹನಾಶೀಲರಾಗಿ ವರ್ತಿಸಬೇಕು. ಏಕೆಂದರೆ ನಾವು ದುಡುಕಿದರೆ, ಎಲ್ಲರೂ ದುಡುಕುವಂತೆ, ಕಾಯಿದೆಯನ್ನು ಮುರಿಯುವಂತೆ, ಪ್ರೇರಣೆ ಕೊಟ್ಟ ಹಾಗಾಗುತ್ತದೆ. ಆಗ ಬೇಲಿಯೇ ಹೊಲ ಮೇಯುವ ಗಾದೆಯಾಗಿ ಕಾಯಿದೆ ಪರಿಣಮಿಸುವುದೇ ಹೊರತು, ಅದು ರೂಢಿಯಲ್ಲಿ ಪ್ರಯೋಜನಕರವಾಗಿ ಉಳಿಯಲಾರದು. ಎಲ್ಲರಿಗೆಂದು ಮಾಡುವ ಶಾಸನಗಳಿಂದ ಕೆಲವು ಜನರಿಗೆ ತೊಂದರೆಯಾಗುವುದಿಲ್ಲವೆಂದಲ್ಲ-ಆದರೆ ಬಹುಜನರಿಗೆ ಕಲ್ಯಾಣವಾಗುವುದನ್ನು ಕಂಡು ಅವರು ಸಂತಸಪಡಬೇಕು; ತಮ್ಮ ತೊಂದರೆಯನ್ನು ಕ್ರೀಡಾ ಮನೋವೃತ್ತಿಯಿಂದ ನಸುನಗುತ್ತಾ ಕಡೆಗಣಿಸಿಬಿಡಬೇಕು. ಕಲ್ಯಾಣ ರಾಷ್ಟ್ರದ ಶಾಸನ ಕಟ್ಟುವ ಉದ್ದೇಶದಿಂದ ರಚಿಸಲಾಗುವ ಶಾಸನಗಳೆಲ್ಲದಕ್ಕೂ ಈ ಮಾತು ಅನ್ವಯಿಸುತ್ತದೆ. ಶಿಸ್ತು ಮತ್ತು ವಿಧೇಯತೆ ಇಂಥ ಪಾರ ಎಷ್ಟು ದೊರಕಿದರೂ ಪ್ರಜಾಪ್ರಭುತ್ವದಲ್ಲಿ ಕಡಿಮೆಯಾಗುತ್ತದೆ. ಶಿಸ್ತು ತಪ್ಪಿ, ಕುಳಿತುಕೊಳ್ಳಿರೆಂದರೂ ಕೇಳದೆ ನಿಂತುಕೊಂಡಿದ್ದ ಕೆಲ ಸಭಿಕರನ್ನು ಕಂಡು, ವಿನೋಬಾಜಿ ಮೊನ್ನೆ ತಮ್ಮ ಪ್ರಾರ್ಥನೋತ್ತರ ಭಾಷಣ ಮಾಡದೆಯೇ ಮರಳಿದರು. ಇದರಿಂದ ನೆರೆದಿದ್ದ ಸಾವಿರಾರು ಜನರಿಗೆ ವಿನೋಬಾರ ಮಾತನ್ನು ಕೇಳುವ ಅವಕಾಶ ತಪ್ಪಿ ಹೋಯಿತು. ಇಂಥ ಕಿರುಕುಳ ಕೊಡಬಾರದೆಂದೂ ಎಲ್ಲರೂ ಸಾರ್ವಜನಿಕ ಹಿತದೃಷ್ಟಿಯಿಂದ ಯೋಗ್ಯ ನಿಯಮ-ಶಾಸನಗಳನ್ನು ಮನ್ನಿಸಿ ನಡೆಯಬೇಕೆಂದೂ ನಮಗೆ ಇನ್ನೊಬ್ಬರು ಹೇಳಿಕೊಡುವ ಪರಿಸ್ಥಿತಿ ಬರಬಾರದು. ನಮ್ಮ ನಡವಳಿಕೆ ಅಷ್ಟು ಉತ್ತಮವಿರುವುದು ಅಪೇಕ್ಷಣೀಯ.

—ಕಾರ್ತಿಕೇಯ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ ಸಂಚಿಕೆ ೩೩

VOL. 34 ಉಡುಪಿ, 21—4—1955 NO. 33

ಈಗ ಪಾಶ್ಚಾತ್ಯ ವಿಚಾರಕರು ಸಮ ಸಾಮಾಜಿಕ ಹಿತದ ದೃಷ್ಟಿಯಿಂದ ವ್ಯಕ್ತಿಯ ಹಕ್ಕು ಬಾಧ್ಯತೆಗಳಿಗೊಂದು ಮಿತಿ ಹಾಕುವ ಮತ್ತು ಸಮಾಜದಲ್ಲಿ ವ್ಯಕ್ತಿಯು ಸುಲಭದಲ್ಲಿ ಸೇರಿ ಹೋಗುವ ಭಾರತದ ದೃಷ್ಟಿಕೋಣದ ಮಹತ್ವವನ್ನು ಮನ್ನಿಸುವಂತೆ ಕಾಣುತ್ತದೆ. ಆದುದರಿಂದ ನಾವು ಈ ಬಗೆಯ ಮನೋಭಾವವನ್ನು ಬಿಟ್ಟುಕೊಡುವುದು ಅಜ್ಞಾನವಾದೀತು. ಏಕೆಂದರೆ ಅದು ನಮ್ಮ ಪ್ರಾಚೀನ ಸಂಪ್ರದಾಯದ ಪ್ರಾಮುಖ್ಯತೆಯನ್ನು ಪಡೆದಿರುವುದಷ್ಟೇ ಅಲ್ಲ, ನಮ್ಮ ಹಾಗೂ ಜಗತ್ತಿನ ಭವಿಷ್ಯಕ್ಕೆ ಸಹ ಕೈದೀವಿಗೆಯ ರೂಪದಲ್ಲಿರುತ್ತದೆ.

—ಹುಮಾಯೂನ ಕಬೀರ

ಯುವಕರ ಅಸಮಾಧಾನ

ಹೈದರಾಬಾದಿನಲ್ಲಿ ಕಳೆದ ವಾರ ವಿಡೀ ವಿದ್ಯಾರ್ಥಿಲೋಕಕ್ಕೆ ಸಂಬಂಧಿಸಿದ--- ಒಂದು ರೀತಿಯಲ್ಲಿ ಉತ್ಸಾಹಿ ಯುವಕ ವೃಂದಕ್ಕೆ ಅನ್ವಯಿಸುವ- ವಿಚಾರ ಗೋಷ್ಠಿಯೊಂದು ಜರಗಿತು. ಸಂಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕಮಂಡಳದ ಭಾರತೀಯ ಶಾಖೆಯವರು ಇದನ್ನು ಏರ್ಪಡಿಸಿದ್ದರು. ಇಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿ ವರ್ಗದ ಪ್ರತಿನಿಧಿಗಳು ಪರಸ್ಪರ ಸಮಾಲೋಚನೆಗಳನ್ನು ನಡೆಸಿ, ಯುವಕರಲ್ಲಿ ಶಿಸ್ತು ಮತ್ತು ತೃಪ್ತಿಗಳನ್ನು ನೆಲೆಗೊಳಿಸುವ ವಿಧಾನಗಳನ್ನು ವಿಮರ್ಶಿಸಿದರು. ಇಂಥ ಚಟುವಟಿಕೆಗಳು ಎಷ್ಟು ಮಟ್ಟಿಗೆ ಪ್ರಯೋಜನಕಾರಿಯಾಗಿವೆ ಎಂಬುದನ್ನು ಚಿಕಿತ್ಸಕ ಬುದ್ಧಿಯ ಪರೀಕ್ಷಕರೇ ಕಾಲಾಂತರದಲ್ಲಿ ನಿರ್ಣಯಿಸಬೇಕಲ್ಲದೆ, ಈಗಲೇ ಏನನ್ನಾದರೂ ಹೇಳ ಹೊರಟರೆ ತಪ್ಪಾದೀತು. ಆದರೆ ತರುಣ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಹಾಗೂ ಸಾಮಾಜಿಕ ವಾತಾವರಣದೊಡನೆ ಹೊಂದಿಕೊಳ್ಳದೆ ಅನೇಕ ಸಮಸ್ಯೆಗಳನ್ನು ಹುಟ್ಟಿಸುವ ವಿಷಯದಲ್ಲಿ ಎಲ್ಲರಿಗೂ ಏನಾದರೊಂದು ಹೇಳಲಿಕ್ಕೆ ಇದ್ದೇ ಇರುವಂತೆ ಮಾತ್ರ ಭಾಸವಾಗುತ್ತದೆ.

ವಿದ್ಯಾರ್ಥಿಗಳ ವಿರುದ್ಧ ಬಹಳ ಹೆಚ್ಚು ಹೇಳಲಿಕ್ಕಿರುವುದು ಶಿಕ್ಷಕ ವೃಂದಕ್ಕೆಂದರೆ ಅತಿಶಯೋಕ್ತಿಯಾಗದು. ಹಾಗೆ ಹೇಳುವ ಅಧಿಕಾರ ಸಾಮಾನ್ಯ ನಾಗರಿಕರಿಗಿಂತ, ಅದೇಕೆ, ಹೆತ್ತವರಿಗಿಂತ ಸಹ, ಅವರಿಗೆ ಹೆಚ್ಚಿದೆಯೆಂಬುದು ಸುಳ್ಳಲ್ಲ. ಜಾರ್ಜ್ ಬರ್ನಾರ್ಡ್‌ಶಾರವರು "ಮಾಡಬಲ್ಲವನು ಮಾಡುತ್ತಾನೆ; ಮಾಡಲಾರದವನು ಕಲಿಸಲು ಹೋಗುತ್ತಾನೆ" ಎಂದು ಶಿಕ್ಷಕರ ಕರ್ತವ್ಯದ ಕುರಿತು ವ್ಯಂಗ್ಯ ಮಾತನ್ನಾಡಿದ್ದರೂ ಗುರುವಿಗೆ ತಾಯಿ ತಂದೆಗಳಷ್ಟೇ ಮನ್ನಣೆಯನ್ನು ಭಾರತೀಯ ಸಂಪ್ರದಾಯ ಕೊಟ್ಟಿರುತ್ತದೆ; ಪಾಶ್ಚಾತ್ಯ ಲೋಕವೂ ಇದಕ್ಕೆ ಅಪವಾದವಲ್ಲ.

ಶಿಕ್ಷಕನು ವಿದ್ಯಾರ್ಥಿಗಳ ಗುಣ ಶೀಲಗಳನ್ನು ತಿದ್ದುವಲ್ಲಿ, ಅವರ ಜ್ಞಾನ ಸಂಪತ್ತನ್ನು ಹೆಚ್ಚಿಸುವಲ್ಲಿ, ಅವರನ್ನು "ಪೂರ್ಣ ಮಾನವ"ರಾಗಿ ಮಾಡುವಲ್ಲಿ ಮಹತ್ವದ ಪಾತ್ರವಹಿಸುವನೆಂಬುದನ್ನು ಇಡೀ ಲೋಕವೇ ಒಪ್ಪುತ್ತದೆ. ಹೊರಗೆ ನೋಡಲು ಶಿಕ್ಷಕನು ಪೆದ್ದುವಿನಂತೆ ಕಂಡು ಬಂದಾನು—ಆದರೆ ಆತನು ಚಂಚಲ ಬುದ್ಧಿಯ ಹತ್ತೈವತ್ತು ಹುಡುಗರನ್ನು ಒತ್ತಾಯದಿಂದ, ಬೆದರಿಕೆಯಿಂದ, ಹೊಗಳಿಕೆಯಿಂದ, ಸ್ಫೂರ್ತಿಯಿಂದ, ಸಂತೋಷದಿಂದ ಮತ್ತು ಸಹನೆಯಿಂದ ಅಂಕೆಯಲ್ಲಿಟ್ಟುಕೊಂಡು ಅವರಿಗೆ ಕಲಿಸಲು, ಅವರ ಮನೋರಂಜನೆಯೊಡನೆ ವಿಕಾಸವನ್ನು ಸಾಧಿಸಲು ನೆರವಾಗುವ ಬಗೆ ನಿಜಕ್ಕೂ ಅದ್ಭುತ.

ಚಿಕ್ಕ ಮಕ್ಕಳು ಸಾಮಾನ್ಯವಾಗಿ ಬೆದರಿಕೆಗೆ ಬಗ್ಗುತ್ತವೆ—ಮಕ್ಕಳನ್ನು ಹೊಡೆಯಬಾರದು, ಗದರಿಸಬಾರದು ಎನ್ನುವವರು ಪ್ರೀತಿಯ ಮಾಯೆಯಿಂದಲೇ ಮಕ್ಕಳನ್ನು ಅಂಕೆಯಲ್ಲಿಟ್ಟುಕೊಳ್ಳಬಹುದೆಂದು ಉಪದೇಶಿಸುತ್ತಾರೆ. ಈ ಪ್ರೇಮ ಮಾರ್ಗವನ್ನನುಸರಿಸಿ ವಿದ್ಯಾರ್ಥಿಗಳನ್ನು ಗೆಲ್ಲುವ ಶಿಕ್ಷಕರೂ ಕೆಲವರಿರಬಹುದು. ಆದರೆ ಶಾಲೆ ಅಥವಾ ತರಗತಿಯು ಕೇವಲ ಕಟ್ಟಡವಲ್ಲ; ಅಥವಾ ಬೊಂಬೆಗಳ ಉಗ್ರಾಣವಲ್ಲ. ಅಲ್ಲಿರುವುದು ಮಕ್ಕಳು; ಅಥವಾ ಬೆಳೆದು ನಾಳೆಯ ನಾಗರಿಕರಾಗುವ ವಿದ್ಯಾರ್ಥಿಗಳು. ಆದುದರಿಂದ ಅವರಲ್ಲಿ ಮನುಷ್ಯ ಸಹಜವಾದ ದ್ವೇಷಾಸೂಯೆಗಳೂ ಜೊತೆ ಸಂತೋಷಗಳೂ ಕಿರುಕುಳಕೊಡುವ, ಆಟವಾಡುವ ಪ್ರವೃತ್ತಿಗಳೂ ಇದ್ದೇ ಇರುತ್ತವೆ. ಅವುಗಳನ್ನು ಅಲಕ್ಷಿಸಿದರೆ ನಡೆಯದು—ಶಿಕ್ಷಕರೊಡನೆ ಎಲ್ಲರೂ ಹೊಂದಿಕೊಳ್ಳುವುದಿಲ್ಲ. ಗಟ್ಟಿ ಓದು ಎಂದರೆ, ನನ್ನ ಸ್ವರವೇ ಹೀಗೆ ಎನ್ನುತ್ತಾರೆ; ಅಕ್ಷರ ಚೆನ್ನಾಗಿರಲಿ ಎಂದರೆ ಸೊಟ್ಟ ಅಕ್ಷರ ಬರೆವೇ ಅಭ್ಯಾಸ ಎನ್ನುತ್ತಾರೆ. ಒಬ್ಬರಿಗೆ ಗದರಿಸಿದರೆ ಸಾಕು, ತರಗತಿಗೆ ತರಗತಿಯೇ ಮೋಜಿನಿಂದ ನಗುತ್ತದೆ. ತಮ್ಮಲ್ಲಿಯೇ ಮಾತಾಡಿಕೊಳ್ಳುತ್ತಿದ್ದರೂ ಶಿಕ್ಷಕರ ಮಾತು ಚೆನ್ನಾಗಿ ಕೇಳಿಸುತ್ತಿದೆ ಎಂದು ಸಾಧಿಸುತ್ತಾರೆ. ಹೊರ ನಡೆ ಎಂದು ಶಿಕ್ಷಕ ಅಬ್ಬರಿಸಿದರೆ ಮನೆಗೆಹೋಗಿ ಹಿರಿಯರನ್ನು ಕರೆದುಕೊಂಡು ಬಂದು ಅವರಿಂದ ವಿದ್ಯಾರ್ಥಿಗಳು ಬೈಸುತ್ತಾರೆ. ಇದೆಲ್ಲ ನಿತ್ಯ ನಡೆಯುವ ಪ್ರಸಂಗ.

ಎಲ್ಲ ವಿದ್ಯಾರ್ಥಿಗಳೂ ಹೀಗಿರುವರೆಂದಲ್ಲ—ಶಿಕ್ಷಕರನ್ನು ಗೌರವದಿಂದ ನೋಡುವವರೂ ಇಲ್ಲದಿಲ್ಲ ಆದರೆ ಹೆಚ್ಚಿನವರ ದೃಷ್ಟಿಯಲ್ಲಿ ಶಿಕ್ಷಕರು ಅಸಡ್ಡೆಯ ಪ್ರಾಣಿ. ಅವರಿಗೇನೂ ಗೊತ್ತಿಲ್ಲ, ಗೊತ್ತಿದ್ದರೂ ತಮ್ಮ ಇಷ್ಟು ಮಂದಿಯ ಬುದ್ಧಿವಂತಿಕೆಯ ಮುಂದೆ ಅವರದು ಪ್ರಯೋಜನವಿಲ್ಲವೆಂಬ ದುರಹಂಕಾರ ವಿದ್ಯಾರ್ಥಿಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಹೆತ್ತವರು ಕೆಲ ಮಟ್ಟಿಗೆ ಹೊಣೆಯಾಗುತ್ತಾರೆ— ತಮ್ಮ ಮಕ್ಕಳ ಭಾಷೆಯಲ್ಲಿಯೇ ಅವರೂ ಶಿಕ್ಷಕರ ಅವಹೇಳನೆ ಮಾಡುತ್ತಾರೆ. ಮಕ್ಕಳ ಎದುರಿನಲ್ಲೇ ಹಾಗೆ ನಿಂದಿಸಲೂ ಅವರು ಹೇಸುವುದಿಲ್ಲ. ಇದರಿಂದ ಸಹಜವಾಗಿ ಶಿಕ್ಷಕರ ಶಕ್ತಿ ಕುಂದುತ್ತದೆ. ಅವರ ಪಕ್ಷವಹಿಸಿ ಮಾತಾಡುವವರು ಅವರೊಬ್ಬರೇ ಆಗುತ್ತಾರೆ—ಇದಿರಾಳಿಯ ಪಕ್ಷಬಲವಾಗಿ, ತಪ್ಪು ತಮ್ಮದೆಂದು ಶಿಕ್ಷಕರು ಅಪಕ್ವ ಬುದ್ಧಿಯ ಹುಡುಗನ ಮುಂದೆ ಒಪ್ಪಿಕೊಳ್ಳಬೇಕಾಗುತ್ತದೆ. ಒಂದು ವೇಳೆ ತಂದೆ ತನ್ನ ಪಕ್ಷವನ್ನು ವಹಿಸಿ ಮಾತನಾಡದಿದ್ದರೆ, ಹುಡುಗ ಗುರುವಿನಂತೆ ತಂದೆಯ ಮಾತನ್ನು ಕೇಳುವುದಿಲ್ಲ! ಅವಿಭಕ್ತ ಕುಟುಂಬಗಳು ಒಡೆದು ಪಾಲಾಗುತ್ತಾ ಹೋಗುತ್ತಿರುವ ಈ ಕಾಲದಲ್ಲಿ ಹುಡುಗನನ್ನು ತಮ್ಮ ಜೀವನಾನುಭವ, ಪ್ರೀತಿ ಮತ್ತು ಸಲಹೆಗಳಿಂದ ತಿದ್ದುವ ಅಜ್ಜ ಅಜ್ಜಿಯರೂ ಇತರ ಬಂಧುಗಳೂ ಬಳಿಯಲ್ಲಿ ಸಿಗದೆ, ಹುಡುಗ ಉಡಾಳನಾಗಿಯೇ ರೂಪುಗೊಳ್ಳುವಂತಾಗುತ್ತದೆ.

ವಿದ್ರೋಹ ಭಾವನೆಯೇ ತಪ್ಪು, ತೂಕ ತಪ್ಪುವುದೇ ತಪ್ಪು ಎಂಬ ಸಿದ್ಧಾಂತವನ್ನು ಅನುಮೋದಿಸಬೇಕೆಂದು ಇದರ ಅರ್ಥವಲ್ಲ. ಪ್ರಗತಿ ಶೀಲತೆಯನ್ನು ವ್ಯಕ್ತಪಡಿಸುವ ಯಾವುದೇ ರಾಷ್ಟ್ರ ಅಥವಾ ಪ್ರಜೆ ಎಲ್ಲ ಅಚ್ಚುಗಳೊಡನೆ ತಾನೂ ಒಂದು ಅಚ್ಚಿನಂತಾಗಲಾರದೆಂಬುದು ನಿಜ. ಒಬ್ಬನ ವಿಚಾರಕ್ಕಿಂತ ಭಿನ್ನವಾದ ವಿಚಾರವನ್ನು ವ್ಯಕ್ತಪಡಿಸುವುದೇ ಅಪರಾಧವಲ್ಲ. ಅಭಿಪ್ರಾಯಗಳ ಮಥನಕ್ಕೂ ಅದರಿಂದ ಬರುವ ಒಳ್ಳೆಯ ತೀರ್ಮಾನಕ್ಕೂ ಬಗ್ಗಿ ನಡೆಯದಿರುವುದೇ ವಿದ್ಯಾರ್ಥಿಗಳಲ್ಲಿ ವ್ಯಕ್ತವಾದ ದೌರ್ಬಲ್ಯ. ಯಾವ ಅಭಿಪ್ರಾಯಕ್ಕೆ ಎಷ್ಟು ಮನ್ನಣೆ ಕೊಡಬೇಕೆಂಬ ಮೂಲಭೂತ ವಿಷಯದ ಪರಿಜ್ಞಾನ ಸಾಕಷ್ಟಿಲ್ಲದೆ, ನಿಶ್ಚಿತ ತೀರ್ಪಿನ ಅನುಮೋದಕರ ಸಂಖ್ಯಾ ಪ್ರಮಾಣವೇ ನ್ಯಾಯವೆಂದು ಪಟ್ಟು ಹಿಡಿಯುವುದೇ ವಿದ್ಯಾರ್ಥಿಗಳ ದೋಷ. ಇದಲ್ಲದೆ ನಾಗರಿಕತೆಯ ವಿಶಾಲವಾದ ಬೆಳವಣಿಗೆಯನ್ನು ಹೊಂದಿದಂತೆಲ್ಲ ಅನುಭವ ಸಾಲದ ಯುವಕರ ಮನಸ್ಸು ದ್ವಂದ್ವಸ್ವರೂಪದ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ; ಆಗ ಅವರಿಗೆ ಬಳಲಿಕೆ

(೭ನೇ ಪುಟನೋಡಿ)

ಕಾಲೇಜಿನಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿ ತಂದೆಗೆ ಹೆಚ್ಚು ಹಣಬೇಕೆಂದು ಪತ್ರಬರೆದು ಅದನ್ನು ಹೀಗೆ ಕೊನೆಗೊಳಿಸಿದ— "ನಿಮಗೆ ಹಣಕ್ಕಾಗಿ ತೊಂದರೆಕೊಡಲು ನನಗೆ ತುಂಬ ದುಃಖವಾಗುತ್ತದೆ. ಈ ಕಾಗದವನ್ನು ಪೋಸ್ಟಿಗೆ ಹಾಕಿದ ನಂತರ ಅದನ್ನು ಹಿಂದೆಪಡೆಯಲು ಸಾಧ್ಯವಿದ್ದಿದ್ದರೆ ಹಾಗೆಯೇ ಮಾಡುತ್ತಿದ್ದೆ. ಈಗ ನಿಮ್ಮ ಮನನೋಯಿಸುವ ಪ್ರಮೇಯವಿರದಿಲ್ಲವೆಂದು ಸಾವಿರಬಾರಿ ನೆನೆಯುತ್ತಿದ್ದೇನೆ."

ತಂದೆಯಿಂದ ಕೂಡಲೇ ಉತ್ತರ ಬಂತು "ನೀನು ನಿನ್ನ ಮನಸ್ಸಿಗೆ ವಿರುದ್ಧವಾಗಿ ನನ್ನ ಮನನೋಯಿಸುವಂತೆ ಹೆಚ್ಚು ಹಣ ಬೇಡಿ ಬರೆದ ಕಾಗದ, ನನಗೆ ಸಿಕ್ಕಲೇ ಇಲ್ಲವೆಂದು ತಿಳಿದು ನನಗೆ ತುಂಬ ಸಂತೋಷವಾದೀತು!"

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S. India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ. ಹಣವನ್ನು ತೊಡಗಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೯೨ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ. ಆದುದರಿಂದ ನಮ್ಮಲ್ಲಿ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ಅರ್ಬುದ ರೋಗದ ಪರಿಹಾರ

ಸಮಯ ಮೀರಿತೆಂಬ ದೂರಿಗೆ ರೋಗಿಗಳು ಎಡೆ ಕೊಡಲಾಗದು

ಈ ಏಪ್ರೀಲಿನ ೧೦ನೇ ತಾರೀಕನ್ನು ಜಗತ್ತಿನ ರಾಷ್ಟ್ರಗಳೆಲ್ಲ ಅರ್ಬುದ (ಇಂಗ್ಲಿಷಿನಲ್ಲಿ ಕ್ಯಾನ್ಸರ್) ರೋಗ ನಿವಾರಣೆಯ ದಿನವಾಗಿ ಆಚರಿಸಿದವು. ತತ್ಸಂಬಂಧವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಂತೆ ಕೇಂದ್ರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರರು ಹೊಸ ದೆಹಲಿಯ ಆಕಾಶವಾಣಿ ನಿಲಯದಿಂದ ರಾಷ್ಟ್ರವನ್ನು ಉದ್ದೇಶಿಸಿ ಭಾಷಣಮಾಡಿದರು. ಅರ್ಬುದ ರೋಗದ ಕುರಿತಾದ ಚಿಂತಾಜನಕ ವಿಷಯವೆಂದರೆ ಹೆಚ್ಚಿನ ರೋಗಿಗಳು ಯಾವುದೇ ತೃಪ್ತಿಕರವಾದ ಚಿಕಿತ್ಸೆಯ ಕ್ರಮವನ್ನನುಸರಿಸುವುದಕ್ಕೆ ಸಾಧ್ಯವಿಲ್ಲದಷ್ಟು ತಡವಾಗಿ ವೈದ್ಯರ ಬಳಿಗೆ ಬರುವುದಾಗಿದೆ ಎಂದು ಅವರು ತಿಳಿಸಿದರು. ರೋಗದ ಕುರಿತು ಜ್ಞಾನವಿಲ್ಲದವರು ಮಾಡುವ ತಪ್ಪುಗಳಿಂದಲೇ ಕೆಟ್ಟದಾಗುತ್ತದೆ; ಹೀಗಿರುವಾಗ ಬೇಕೆಂತಲೇ ಚಿಕಿತ್ಸೆಯನ್ನು ಮುಂದೂಡುವ ಮತ್ತು ಹೀಗೆ ವಿಳಂಬಕ್ಕೆ ಎಡೆಕೊಡುವ ವೈದ್ಯರ ಪ್ರವೃತ್ತಿ ಅಕ್ಷಮ್ಯವಾಗುತ್ತದೆ ಎಂದವರು ಸಾರಿದರು. "ಸಮಯ ಮೀರಿತು" ಎಂಬೆರಡು ಶಬ್ದಗಳು ವೈದ್ಯರ ಬಾಯಿಂದ ಬಾರದಂತೆ ಮುಂಜಾಗ್ರತೆಯನ್ನು ವಹಿಸಿದರೆ ಅರ್ಬುದ ರೋಗದಿಂದ ಬಳಲುವವರು ತಮ್ಮ ನೋವು ಬೇನೆಗಳಿಂದಲೂ ಮರಣ ಭಯದಿಂದಲೂ ಪಾರಾಗಬಹುದೆಂದು ಅವರು ಹೇಳಿದರು. ಇದು ಸಾಧ್ಯವಾಗ ಬೇಕಾದರೆ ಅರ್ಬುದ ರೋಗದ ಲಕ್ಷಣಗಳನ್ನು ಪ್ರಾರಂಭದಲ್ಲಿಯೇ ಕಂಡುಕೊಳ್ಳುವಷ್ಟು ಸಾರ್ವಜನಿಕರು ಬುದ್ಧಿವಂತರಿರಬೇಕಾದುದು ಆಗತ್ಯವೆಂದು ಅವರು ಅಭಿಪ್ರಾಯಪಟ್ಟರು. ತಮ್ಮ ಬಳಿಗೆ ಅರ್ಬುದ ರೋಗದ ಸಂಶಯದಿಂದ ಬರುವ ರೋಗಿಗಳನ್ನು ವೈದ್ಯರು ಅವರು ಆ ರೋಗದಿಂದ ಬಳಲುತ್ತಿಲ್ಲವೆಂದು ಸಂಪೂರ್ಣವಾಗಿ ಖಚಿತವಾಗುವವರೆಗೆ ಚೆನ್ನಾಗಿ ಪರೀಕ್ಷಿಸದೆ ಬಿಡಬಾರದು ಎಂದವರು ವೈದ್ಯರಲ್ಲಿ ವಿನಂತಿ ಮಾಡಿಕೊಂಡರು.

ಅರ್ಬುದ ರೋಗವೆಂದರೇನು? ಸಾಮಾನ್ಯಮಾತಿನಲ್ಲಿ ಹೇಳುವುದಾದರೆ, ಅಪಾಯಕರವಾದ ರೀತಿಯಲ್ಲಿ ಜೀವಕಣಗಳು ಬೆಳೆದು, ಅತ್ಯುಗ್ರವಾದ ಗಡ್ಡೆಗಳನ್ನು ಉಂಟುಮಾಡುವುದೇ ಅರ್ಬುದ ರೋಗ. ಈ ಬೆಳವಣಿಗೆಯನ್ನು ಸಕಾಲದಲ್ಲಿ ತಡೆಯದಿದ್ದರೆ, ಅದು ಸುತ್ತಲೂ ವ್ಯಾಪಿಸಿ ದೇಹದ ಕೆಲಸಗಳಲ್ಲಿ ಕೆಲವಕ್ಕೆ ತಡೆಯನ್ನು ತರುತ್ತದೆ; ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಮರಣವನ್ನೂ ಉಂಟು ಮಾಡುತ್ತದೆ. ಅತ್ಯುಗ್ರ ಗಡ್ಡೆಗಳ ಸ್ಪಷ್ಟ ಜ್ಞಾನವನ್ನು ಮಾಡಿಕೊಳ್ಳುವುದಕ್ಕೆ ನಮ್ಮ ದೇಹದಲ್ಲಿರುವ ಜೀವಕಣಗಳ ರಚನೆಯ ಬಗೆಯನ್ನು ತಿಳಿದಿರುವುದು ಅಪೇಕ್ಷಣೀಯ. ಸೂಕ್ಷ್ಮದರ್ಶಕ ಯಂತ್ರವು ಸೃಷ್ಟಿಸಲ್ಪಟ್ಟ ಬಳಿಕ, ನಮ್ಮ ಶರೀರವು ಅನೇಕಾನೇಕ ಜೀವಕೋಶಗಳ ಸಂಘಟನೆಯಿಂದ ರೂಪುಗೊಂಡಿದೆ ಎಂಬುದರಲ್ಲಿ ಯಾರಿಗೂ ಯಾವ ಸಂದೇಹವೂ ಉಳಿದಿಲ್ಲ. ಪಿತ್ತಕೋಶ, ಹೃತ್ಕಮಲ, ಪುಪ್ಪುಸ, ಹೊಟ್ಟೆ ಮುಂತಾದ ದೇಹದ ಎಲ್ಲ ಭಾಗಗಳೂ ಜೀವಕೋಶಗಳಿಂದಲೇ ರೂಪಿಸಲ್ಪಟ್ಟಿವೆ—ಆದರೆ ಒಂದೊಂದು ಅಂಗಕ್ಕೆ ಸಂಬಂಧಿಸಿದ ಜೀವಕೋಶಗಳ ಗುಣ ಮತ್ತು ಅವು ವ್ಯವಸ್ಥೆಗೊಳಪಟ್ಟ ಕ್ರಮಗಳಲ್ಲಿ ಮಾತ್ರ ತುಸು ವ್ಯತ್ಯಾಸವಿರುತ್ತದೆ. ಹೀಗಿದ್ದರೂ ಎಲ್ಲ ಬಗೆಯ ಜೀವಕೋಶಗಳಲ್ಲೂ ಕೆಲವು ಸಾಮಾನ್ಯ ಹೋಲಿಕೆಗಳು ಕಂಡುಬರುತ್ತವೆ. ಅವುಗಳಲ್ಲಿ ಮೂಲಭೂತವಾದುದೆಂದರೆ, ತಮ್ಮನ್ನು ತಾವೇ ಸೃಷ್ಟಿಸಿಕೊಳ್ಳುವ ಚಮತ್ಕಾರ. ಅಂದರೆ, ಪ್ರತಿಯೊಂದೂ ಜೀವಕೋಶವು ಬೆಳೆದಂತೆ, ತನ್ನಷ್ಟಕ್ಕೆ ಎರಡು ಪ್ರತ್ಯೇಕ ಜೀವಕೋಶವಾಗಿ ವಿಂಗಡವಾಗುತ್ತದೆ. ಇವೆರಡು ಜೀವ ಕೋಶಗಳು ಹಾಗೆಯೇ ಸ್ವತಂತ್ರವಾಗಿ ಬೆಳೆದು ನಾಲ್ಕಾಗುತ್ತವೆ; ಇದೇ ರೀತಿ ಜೀವ ಕೋಶಗಳ ಸಂಖ್ಯಾ ಪ್ರಮಾಣ ವೃದ್ಧಿಯಾಗುತ್ತದೆ.

ದೇಹದ ಬೆಳವಣಿಗೆಯಾಗಿರುವಂತೆ ಕಾಣುವುದಕ್ಕೆ ಅದನ್ನು ರೂಪಿಸುವ ಜೀವಕೋಶಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿರುವುದೇ ಕಾರಣ. ನಮ್ಮ ಕೈಗೊಂದು ಚೂರಿಯ ಗಾಯವಾದರೆ, ಅಷ್ಟು ಭಾಗದಿಂದ ನಾಶವಾದ ಜೀವ ಕೋಶಗಳನ್ನು ತುಂಬಿಸಿ, ಮೊದಲಿನಂತೆಯೇ ಬೆರಳನ್ನು ಮಾಡುವುದಕ್ಕೆ ವಿಶೇಷ ಶ್ರಮವಹಿಸಿ ಪ್ರತ್ಯುತ್ಪಾದನೆಯ ಕಾರ್ಯವನ್ನು ಹತ್ತಿರದ ಜೀವ ಕೋಶಗಳು ನಡೆಸುತ್ತವೆ. ಕೈಯೊಂದಷ್ಟೇಯಲ್ಲ – ದೇಹದ ಎಲ್ಲ ಭಾಗದಲ್ಲೂ ಈ ಬಗೆಯ ಕೆಲಸ ನಡೆಯುತ್ತದೆ. ಆದರೆ ಕೆಲವೊಮ್ಮೆ ಅದ್ಭುತ ಚಮತ್ಕಾರದಿಂದ ನಡೆಯುವ ಈ ಕೆಲಸದ ಕ್ರಮ ತಪ್ಪಿಹೋಗುತ್ತದೆ. ದೇಹದ ಬೆಳವಣಿಗೆಗಾಗಲೀ ಮಾಂಸ ಮತ್ತು ಮೂಳೆಯ ಸಾಮಾನ್ಯ ಸ್ಥಿತಿಗಾಗಲೀ ಅವಶ್ಯವಿರುವುದಕ್ಕಿಂತ ಹೆಚ್ಚು ಜೀವ ಕೋಶಗಳು ಉಂಟಾಗುತ್ತವೆ; ಮತ್ತು ದೇಹಕ್ಕೆ ಪ್ರಯೋಜನಕಾರಿಯಾದ ಜೀವಕೋಶಗಳಿಗಿಂತಲೂ ತೀವ್ರ ಗತಿಯಲ್ಲಿ ಅವು ಪ್ರತ್ಯುತ್ಪಾದನೆಯ ಕೆಲಸವನ್ನು ತೊಡಗುತ್ತವೆ. ಹೀಗೆ ದೇಹಕ್ಕೆ ಬೇಕಿಲ್ಲದ ಜೀವಕಣಗಳ ರಾಶಿಯೊಂದು ಗಡ್ಡೆಯ ರೂಪದಲ್ಲಿ ಉಂಟಾಗುತ್ತದೆ. ಈ ಬಗೆಯ ಗಡ್ಡೆಗಳು ಕೆಲವೊಮ್ಮೆ ತಾವು ಉಂಟಾದ ಸ್ಥಳಗಳಲ್ಲಿಯೇ ಹತ್ತಿರದ ಭಾಗಗಳನ್ನು ಒತ್ತುತ್ತ ನಿಲ್ಲುತ್ತವೆ. ಆಗ ಹೆಚ್ಚು ಅಪಾಯವಿರುವುದಿಲ್ಲ. ಅವುಗಳ ಮೇಲೊಂದು ರಕ್ಷಕ ಹೊದಿಕೆ ಇರುವುದರಿಂದ ನೋವಿನ ಅನುಭವ ಅಷ್ಟಾಗಿ ಆಗುವುದಿಲ್ಲ. ಆದರೆ ಬೇರೆ ಕೆಲವು ಸಂದರ್ಭಗಳಲ್ಲಿ ಈ ಗಡ್ಡೆಗಳು ಸುಮ್ಮನೆ ಕುಳಿತಿರುವುದಿಲ್ಲ—ತಾವು ಹುಟ್ಟಿದ ಶರೀರದ ಭಾಗವನ್ನಷ್ಟೇ ಹಾಳುಮಾಡುವುದಲ್ಲದೆ ಹತ್ತಿರದ ಇತರೆಡೆಗಳಿಗೂ ಹಬ್ಬುತ್ತವೆ. ಯೋಗ್ಯ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿರುವ ಜೀವಕೋಶಗಳನ್ನು ಹಾಳು ಮಾಡಲು ಈ ಅಪಾಯಕರ ಹಾಗು ನಿರುಪಯುಕ್ತ ಜೀವಕೋಶಗಳು ತೊಡಗುವುದೇ ಅರ್ಬುದ ರೋಗವೆಂದು ಕರೆಯಲ್ಪಡುತ್ತದೆ.

ತೀವ್ರವಾದ ಸಂಶೋಧನೆಗಳನ್ನು ನಡೆಸುತ್ತಿದ್ದರೂ ವೈದ್ಯಕೀಯ ವಿಜ್ಞಾನಿಗಳಿಗೆ ಈ ರೋಗ ಏಕಾಗಿ ಬರುತ್ತದೆನ್ನುವುದರ ಗೂಢ ಇನ್ನೂ ಕರಗತವಾಗಿಲ್ಲ. ಆದರೆ, ಈ ರೋಗದ ಕುರಿತಾದ ಅನೇಕ ತಪ್ಪು ತಿಳವಳಿಕೆಗಳನ್ನು ಮಾತ್ರ ಸಂಶೋಧನೆಯ ಫಲಿತಾಂಶಗಳು ದೂರ ಮಾಡಿವೆ; ರೋಗದ ಮೂಲ ಇನ್ನೂ ಚೆನ್ನಾಗಿ ತಿಳಿದಿರದಿದ್ದರೂ ಅದರ ಅಪಾಯವನ್ನು ಕಡಿಮೆಮಾಡಿ ಜನರನ್ನು ರಕ್ಷಿಸುವ ಕ್ರಮಗಳನ್ನು ಸಾಕಷ್ಟು ಯಶಸ್ವಿಯಾಗಿ ಮುಂದೊತ್ತಲು ಸಾಧ್ಯವಾಗಿದೆ. ಪ್ರಾಚೀನಕಾಲದಲ್ಲಿ ಕುಷ್ಠರೋಗದಂತೆಯೇ ಅರ್ಬುದ ರೋಗವನ್ನು ಪರಿಗಣಿಸುತ್ತಿದ್ದರು; ಮತ್ತು ಒಬ್ಬನಿಂದ ಇನ್ನೊಬ್ಬನಿಗೆ ಇದು ಹಬ್ಬುವುದೆಂದೂ ಹೇಳುತ್ತಿದ್ದರು. ಕಳೆದ ಶತಮಾನದಲ್ಲಿ ಲೂಯಿ ಪ್ಯಾಶ್ಚರನ ಸಂಶೋಧನೆಗಳ ಕೌತುಕವನ್ನು ಕಂಡವರು ಅರ್ಬುದ ರೋಗಕ್ಕೆ ಕಾರಣವಾದ ಅಣುಜೀವಿಯ ಅನ್ವೇಷಣೆಯಾಗಬಹುದೆಂದು ಭಾವಿಸಿದ್ದರು. ೧೯೨೫ರಲ್ಲಿ ಗೈ ಮತ್ತು ಬರ್ನಾರ್ಡರು ಅರ್ಬುದ ರೋಗವನ್ನುಂಟು ಮಾಡುವುದೆನ್ನಲಾದ ಅಣುಜೀವಿಯ ಚಿತ್ರವನ್ನು ತೆಗೆದರು. ಆದರೆ ಈ ಕುರಿತು ನಡೆಸಿದ ಹೆಚ್ಚಿನ ಪ್ರಯೋಗಗಳು ಆ ಬಗೆಯ ರೋಗಕಾರಕ ಅಣುಜೀವಿ ಇದೆಯೆಂಬ ಅಭಿಪ್ರಾಯವನ್ನು ಇಷ್ಟರವರೆಗೂ ಪುಷ್ಟೀಕರಿಸಿಲ್ಲ. ಸಸ್ಯಾದಿಗಳ ಜೀವನಾಶಮಾಡುವ ಪರೋಪಜೀವಿಗಳಿಂದ ಈ ರೋಗವಾಗುವುದೆಂಬ ಸಂಶಯಕ್ಕೂ ಆಧಾರ ಸಿಕ್ಕಿಲ್ಲ. ಅರ್ಬು

ಉಡುಪಿ ಮಧ್ವಾಚಾರ್ಯರ ಪೂರ್ವ ಶಾಸ್ತ್ರ-ಸಂಪ್ರದಾಯಿಗಳಿಗೆ
ಸಮರ್ಪಕವಾದ ಏಕಮಾತ್ರ
ಮನ್ಮಥ ಸಂ|ರದ 1955–1956
ಉಡುಪಿ ಪಂಚಾಂಗಂ



ಧರ್ಮಸ್ಯ ವಿಜಯೋ ಭೂಯಾತ್ ಅಧರ್ಮಸ್ಯ ಪರಾಭವಃ
ಸದ್ಭಾವನಾಂ ಪ್ರಾಣಭೃತಾಂ ಭೂಯಾತ್ ವಿಶ್ವಸ್ಯ ಮಂಗಲಂ||

ಆದಿತ್ಯಾದಿ ನವಗ್ರಹರು, ಶ್ರೀ ಕೃಷ್ಣ ಪರಮಾತ್ಮನು ನಮ್ಮ ಉಡುಪಿಪಂಚಾಂಗಾನುವರ್ತಿಗಳಾದ ಧರ್ಮಾಭಿಮಾನಿಗಳಿಗೆ ನೂತನ ಮನ್ಮಥ ಸಂ|ದಲ್ಲಿ ಸುಖಸಂತೋಷ ವಾಂಛಿತಾಭೀಷ್ಟಸಿದ್ಧಿಯನ್ನು ಅನುಗ್ರಹಿಸಲೆಂದು ಸದಾ ಪ್ರಾರ್ಥಿಸುವೆವು.

ಇತಿ ಸುಜನ ವಿಧೇಯ,
ಅತ್ತೂರು ವಾಸುದೇವ ಉಡುಪ,
ಸಂಪಾದಕ, ಉಡುಪಿ ಪಂಚಾಂಗಂ.

ಶುದ್ಧ ದೃಕ್ ಪಂಚಾಂಗವು, ವಿಸ್ತಾರವಾದ ರಾಶಿಭವಿಷ್ಯತ್ ಫಲವು, ಅನೇಕ ಉಪಯುಕ್ತ ಜ್ಯೋತಿಷ ವಿಷಯಗಳು ಪ್ರತ್ಯೇಕವಾಗಿ ಸೇರಿಸಿಯದೆ.

ಬೊಂಬಾಯಿ: ದಿ ಪೋಪುಲಾರ್ ಬುಕ್ ಡಿಪೋ, ಲೆಮಿಂಟನ್ ರೋಡು.
ಶ್ರೀ ಪಿ. ಯಸ್. ಕತಿರೇಶನ್ ನ್ಯೂಸ್ ಏಜಂಟ್, ಮಾತುಂಗ.

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೇಜ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮಿನಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ದ ರೋಗವು ಸಾಂಕ್ರಾಮಿಕವಲ್ಲ; ಆನುವಂಶಿಕವೂ ಅಲ್ಲ. ಒಬ್ಬರಿಂದ ಇನ್ನೊಬ್ಬರಿಗೆ ಅದು ತಗಲುವುದೆಂಬ ಮಾತಿನಲ್ಲಿ ಹುರುಳಿಲ್ಲ. ಸಾಮಾನ್ಯವಾಗಿ ಈ ರೋಗವು ಮಧ್ಯವಯಸ್ಸಿನ ಬಳಿಕ ಬರುತ್ತದೆ. ಅಪರೂಪವಾಗಿ ಚಿಕ್ಕ ವಯಸ್ಸಿನವರಿಗೆ ಈ ರೋಗ ಬಂದಾಗ ಮಾತ್ರ ಅದರ ತೀವ್ರತೆ ಹೆಚ್ಚಿರುತ್ತದೆ. ಪ್ರಾಯ ಸಂದವರಲ್ಲಿ ರೋಗ ತಗಲಿದಬಳಿಕವೂ ಕೆಲಸಮಯ ಅಪಾಯವಿಲ್ಲದೆ ಹೋದೀತು–ಚಿಕ್ಕವರ ಸಂಗತಿಯಲ್ಲಿ ಹಾಗಲ್ಲ.

ಇದುವರೆಗಿನ ಅನುಭವದಿಂದ ತಿಳಿದಿರುವಂತೆ, ದೇಹದೊಳಗೆ ರಾಸಾಯನಿಕ ಚಟುವಟಿಕೆಗಳು ಅತಿಹೆಚ್ಚು ನಡೆಯುವ ಸ್ಥಳಗಳಲ್ಲಿ ಈ ರೋಗ ಕಾಣಿಸಿಕೊಳ್ಳುತ್ತದೆ. ಘರ್ಷಣೆ ಮತ್ತು ಯಾಂತ್ರಿಕ ಕ್ರಿಯೆಗಳು ಸಹ ರೋಗಕ್ಕೆ ಕಾರಣವಾಗುತ್ತವೆ. ಕೆಲವೊಮ್ಮೆ ತಾರು, ಖನಿಜ ತೈಲದ ತುಂತುರು, ತೀಕ್ಷ್ಣವಾದ ಕಿರಣ, ಅಣು ಶಕ್ತಿಯ ವಿಕಿರಣ ಪ್ರತಾಪ ಇತ್ಯಾದಿಗಳಿಂದಲೂ ರೋಗ ಕಾಣಿಸಿಕೊಳ್ಳುತ್ತದೆ. ಇಂಥದೆಲ್ಲ ಸಂದರ್ಭದಲ್ಲಿ ರೋಗಿಗಳು ರೋಗ ಲಕ್ಷಣವನ್ನು ತ್ವರಿತದಲ್ಲಿಯೇ ಗಮನಿಸಿ, ಸಂಶಯ ಬಂದೊಡನೆಯೇ ವೈದ್ಯರಿಂದ ಪರೀಕ್ಷೆ ಮಾಡಿಸಿಕೊಳ್ಳಬೇಕು. ಮಧ್ಯ ವಯಸ್ಸನ್ನು ಮೀರಿದವರು ರೋಗದ ಸಂಶಯ ತಗಲಿರದಿದ್ದರೂ ವರ್ಷಕ್ಕೊಮ್ಮೆ ಅಥವಾ ಎರಡುಸಲ ವೈದ್ಯರಿಂದ ಪರೀಕ್ಷಿಸಿಕೊಳ್ಳುವುದು ಹಿತಕರ. ಇದರಿಂದ, ರೋಗವಿರುವವರ ಸಂಗತಿಯಲ್ಲಿ ರೋಗವು ಇನ್ನೂ ಪ್ರಾರಂಭಾವಸ್ಥೆಯಲ್ಲಿದ್ದಾಗ ಯಶಸ್ವಿಯಾಗಿ ಚಿಕಿತ್ಸೆಯನ್ನು ನಡೆಸಲು ಅನುಕೂಲವಾಗುತ್ತದೆ. ಅರ್ಬುದ ರೋಗ ನಿವಾರಣೆಯಲ್ಲಿ ಶಸ್ತ್ರಕ್ರಿಯೆಯಿಂದ ತುಂಬ ನೆರವು ಸಿಗುತ್ತದೆ. ರೋಗ ಪೀಡಿತ ಭಾಗವನ್ನು ಕತ್ತರಿಸಿ ತೆಗೆಯುವುದೇ ಇದರ ಗುಟ್ಟು. ಕೆಲವು ಪ್ರಸಂಗಗಳಲ್ಲಿ ಕ್ಷ-ಕಿರಣ ಮತ್ತಿತರ ರೀತಿಯ ಪ್ರಕಾಶ ಚಿಕಿತ್ಸೆಯಿಂದಲೂ ಲಾಭವಾಗುತ್ತದೆ. ಆದರೆ ಶಸ್ತ್ರ ಚಿಕಿತ್ಸೆಯಷ್ಟು ಉತ್ತಮ ಫಲಿತಾಂಶವನ್ನಿದು ಎಲ್ಲ ಸಂದರ್ಭಗಳಲ್ಲಿ ಕೊಡುವುದಿಲ್ಲವೆನ್ನಲಾಗುತ್ತದೆ. ಯಾವ ಚಿಕಿತ್ಸೆಯನ್ನು ಕೈಗೊಳ್ಳಬೇಕೆಂಬುದು ವೈದ್ಯರಿಗೆ ಸೇರಿದ ವಿಚಾರ—ರೋಗಿಗಳ ಮಟ್ಟಿಗೆ, ಅವರು ರೋಗವನ್ನು ಮುಚ್ಚಿಟ್ಟುಕೊಳ್ಳಲು ಹವಣಿಸಬಾರದು; ನಾಚಿಕೆ, ಭಯ, ಸಂಕೋಚಾದಿಗಳು ವೈದ್ಯರನ್ನು ಕಾಣುವಲ್ಲಿ ವಿಳಂಬಕ್ಕೆ ನೆಪವಾಗ ಕೂಡದು. ಹಣದ ಅಡಚಣೆಯಿಂದ ಹೆಚ್ಚಿನವರಿಗೆ ವೈದ್ಯರ ಚಿಕಿತ್ಸಾ ಕ್ರಮಕೈಕೊಳ್ಳಪಡುವುದು ಕಷ್ಟವಾದೀತು—ಆದರೆ ಜೀವ ರಕ್ಷಣೆಗಿಂತ ದೊಡ್ಡ ಯಜ್ಞವಿಲ್ಲವೆಂಬುದನ್ನು ಯಾರೂ ಮರೆಯಲಾಗದು.

ಈಗ, ಜನರ ತಿಳಿವಳಿಕೆಗಾಗಿ, ಅರ್ಬುದ ರೋಗವು ಇನ್ನೂ ಪ್ರಾರಂಭಾವಸ್ಥೆಯಲ್ಲಿರುವಾಗಲೇ ಅದನ್ನು ಪತ್ತೆ ಹಚ್ಚುವ ಬಗೆಯನ್ನು ವಿಚಾರಿಸೋಣ—ವಿವೇಚನೆಯ ಅನುಕೂಲಕ್ಕೆಂದು ಅರ್ಬುದ ರೋಗವನ್ನು (೧) ಚರ್ಮ, (೨) ಬಾಯಿ ಮತ್ತು ಶ್ವಾಸಾಂಗ (೩) ಪಾಚಕಾಂಗ, (೪) ಮೂತ್ರಾಶಯ ಮತ್ತು ಜನನೇಂದ್ರಿಯ, (೫) ಮಹಿಳೆಯರ ಗರ್ಭಾಶಯ ಮತ್ತು ಮೊಲೆ— ಇವುಗಳಿಗೆ ಸಂಬಂಧಿಸಿದ ರೀತಿಯಲ್ಲಿ ವಿಭಾಗಿಸಬಹುದು. ಇವುಗಳಲ್ಲಿ ಚರ್ಮಕ್ಕೆ ಸಂಬಂಧಿಸಿದ ರೋಗವು ಸುಲಭದಲ್ಲಿ ಪತ್ತೆಯಾಗುತ್ತದೆ; ಮತ್ತು ೯೫% ಸಂದರ್ಭಗಳಲ್ಲಿ ಪೂರ್ಣಗುಣವಾಗುತ್ತದೆ. ಬಿಳಿಚರ್ಮದವರು ಹೆಚ್ಚಾಗಿ ಬಿಸಿಲಿನಲ್ಲಿದ್ದರೆ ಅವರಿಗೂ ಮುದಿ ರೈತರಿಗೂ ನಾವಿಕರಿಗೂ ತಾರು, ಮೇಣ ಮುಂತಾದವುಗಳೊಡನೆ ಸಂಪರ್ಕವಿಟ್ಟುಕೊಂಡವರಿಗೂ ಇದು ಬರುತ್ತದೆ. ಚರ್ಮದಲ್ಲಿ ಕಲೆಯಂತೆ ಕಾಣಿಸಿಕೊಳ್ಳುವುದು. ಆದರ ಸುತ್ತಲೂ ವರ್ತುಲವೊಂದು ಹುಟ್ಟುವುದು, ಅಲ್ಲಿ ಚರ್ಮದ ಬಣ್ಣಗೆಡುವುದು ಅಥವಾ ಕೆಂಪೇರುವುದು, ಇದೆಲ್ಲ ರೋಗದ ಲಕ್ಷಣ. ಕೆಸ್ಕಿ, ಮೂಗು, ಹಣೆ, ಮುಂಗೈ, ಕುತ್ತಿಗೆ ಇಲ್ಲೆಲ್ಲ ಇದು ಕಾಣಿಸಿಕೊಳ್ಳುತ್ತದೆ. ಸಾಮಾನ್ಯ ಚರ್ಮದ ಮಟ್ಟಕ್ಕಿಂತ ಎದ್ದು ನಿಂತ ಕಲೆ ಮುಂತಾದುವುಗಳ ವಿಷಯದಲ್ಲಿ ಜಾಗರೂಕತೆ ವಹಿಸುವುದು ಶ್ರೇಯಸ್ಕರ. ಬಾಯಿ ಮತ್ತು ಶ್ವಾಸಾಂಗಗಳ ವಿಷಯದಲ್ಲಿ ಮತ್ತಷ್ಟು ಜಾಗರೂಕತೆ ತೆಗೆದುಕೊಳ್ಳಬೇಕಾಗುತ್ತದೆ— ನಮ್ಮ ಹೊರದೇಹದ ಚರ್ಮದಲ್ಲಿರುವ ಜೀವಕಣಗಳ ಇಪ್ಪತ್ತೈದು ಪಾಲಿನಷ್ಟು ಚರ್ಮದ ರಚನೆಯನ್ನೆ ಹೋಲುವ ಜೀವಕಣಗಳು ಶ್ವಾಸಾಂಗದಲ್ಲಿವೆ ಎಂಬುದನ್ನು ಮರೆಯಲಾಗದು. ಅಲ್ಲದೆ, ಇಲ್ಲಿ ವ್ರಣವಾದರೆ ಅದನ್ನು ಕಣ್ಣಿಂದ ನೋಡಿ, ಗುರುತಿಸಲು ರೋಗಗ್ರಸ್ತನಿಗೆ ಸಾಧ್ಯವಿಲ್ಲ. ೪೦ ವರ್ಷ ಪ್ರಾಯದ ಬಳಿಕ ಎಲ್ಲರೂ ತಮ್ಮ ತುಟಿ, ಬಾಯಿ, ನಾಲಗೆ, ಗಂಟಲು ನಾಳ, ನಾದ ಸಂಪುಟ ಮತ್ತು ಶ್ವಾಸಕೋಶಗಳ ಬಗ್ಗೆ ಗಮನವೀಯಬೇಕು. ಗಂಡಸರಿಗೆ ಇದು ಹೆಚ್ಚಾಗಿ ಅನ್ವಯಿಸುತ್ತದೆ. ಉದಾಹರಣೆಗೆ ಸಿಗರೇಟು ಎಳೆಯುವವರಿಗೆ ಬೇಗನೆ ಗುಣವಾಗದ ಗಾಯ(ಅದು ಒಮ್ಮೊಮ್ಮೆ ಬಾತುಕೊಳ್ಳಬಹುದು, ಇಲ್ಲವೆ ರಕ್ತ ಬರಲೂಬಹುದು) ಕೆಳತುಟಿಯಲ್ಲಿ ಕಾಣಿಸಿಕೊಳ್ಳುತ್ತದೆ. ಅದೇ ವ್ರಣವಾಗಿ ಪರಿಣಮಿಸುತ್ತದೆ. ಹಲ್ಲು ಚೆನ್ನಾಗಿರದವರಿಗೆ ವಸಡಿನಲ್ಲಿಯೂ ವೀಳ್ಯದೆಲೆ, ತಂಬಾಕು ಇತ್ಯಾದಿ ಏನಾದರೂ ಜಗಿಯುತ್ತಿರುವವರಿಗೆ ಬಾಯಿ ಅಥವಾ ನಾಲಗೆಯಲ್ಲಿಯೂ ರೋಗ ಹುಟ್ಟಬಹುದು. ತುಟಿಯಂತೆಯೆ ಇಲ್ಲೂ ಹೊರ ಲಕ್ಷಣವಿರುತ್ತದೆ.

ನಾದ ಸಂಪುಟದಲ್ಲೇನಾದರೂ ತೊಂದರೆಯಾದರೆ, ಸ್ವರ ಬದಲಾವಣೆಯಾಗಿದ್ದರೆ, ಬಿಟ್ಟೂ ಬಿಡದೆ ಕೆಮ್ಮು ಬರುತ್ತಿದ್ದರೆ, ಉಗುಳಬೇಕೆನ್ನುವ ಚಟ ಹುಟ್ಟಿದರೆ, ಅರ್ಬುದ ರೋಗದ ಗಡ್ಡೆ ಶ್ವಾಸ ಸಂಚಾರಕ್ಕೆ ತಡೆ ಮಾಡುತ್ತಿದೆ ಎಂದು ಊಹಿಸಬಹುದು. ಉಣ್ಣುವಾಗ ಮತ್ತು ಕುಡಿಯುವಾಗ ಗಂಟಲಿನ ನಾಳದಲ್ಲಿ ನೋವಾಗುತ್ತಿದ್ದರೆ ಅರ್ಬುದ ರೋಗದ ವ್ರಣ ಅಲ್ಲಿ ನಿಂತು ತಡೆಯುತ್ತಿರುವುದೆಂದು ಭಾವಿಸಬಹುದು. ಎದೆಯಲ್ಲಿ ನೋವು, ರಾತ್ರಿಯಲ್ಲಿ ಮೈ ಬೆವರುವುದು, ಏನೆಂದು ವಿವರಿಸಲಾಗದ ಜ್ವರ ಇತ್ಯಾದಿಯನ್ನು ಶ್ವಾಸ ಕೋಶದಲ್ಲಿ ವ್ರಣಹುಟ್ಟಿರುವುದರ ಸೂಚಕವಾಗಿ ಪರಿಗಣಿಸಬಹುದು. ಇದೆಲ್ಲ ಸಂದರ್ಭಗಳಲ್ಲಿಯೂ ವೈದ್ಯರ ಸಲಹೆಯನ್ನು ಕೂಡಲೇ ಕೇಳಬೇಕು; ತಡಮಾಡಬಾರದು. ಇದಕ್ಕಿಂತ ಭೀಕರವಾಗಿದ್ದು ರೋಗ ಪೀಡಿತರಲ್ಲಿ ಅರಿವಾಸಿಯಷ್ಟು ಮಂದಿಯನ್ನು ಆಹುತಿ ತೆಗೆದುಕೊಳ್ಳುವುದು ಪಾಚಕಾಂಗಗಳಿಗೆ ಸಂಬಂಧಿಸಿದ ಅರ್ಬುದ ರೋಗ. ಇಲ್ಲಿ ಸಹ ಗಂಡಸರಿಗೆ ಹೆಚ್ಚು ಅಪಾಯ. ಮುಖ್ಯವಾಗಿ ಮಸಾಲೆಯ ಜಿನಸು ಹೆಚ್ಚಾಗುಳ್ಳ ಆಹಾರದ ಸೇವನೆ,ಅಜೀರ್ಣ ಮತ್ತು ಮಲಾಶಯದ ದೋಷಗಳು ರೋಗಕ್ಕೆ ಕಾರಣವಾಗುತ್ತವೆ ತೀವ್ರಾವಸ್ಥೆಯನ್ನು ಹೊಂದದ ಹೊರತು ಅರ್ಬುದ ರೋಗವು ನೋವನ್ನುಂಟುಮಾಡುವುದು ಕಡಿಮೆ

(೧೦ನೇ ಪುಟ ನೋಡಿರಿ)

ಬಾಂಡುಂಗಿನ ಆಕರ್ಷಕ ವಾತಾವರಣ

ಆಫ್ರಿಕ ಮತ್ತು ಏಶ್ಯದ ರಾಷ್ಟ್ರಗಳ ಪರಿಷತ್ತಿನ ರಂಗಸ್ಥಳ

ಉಡುಪಿಯ ಪರ್ಯಾಯದ ವರ್ಣನೆಯನ್ನು ಕೇಳಿದವರಿಗೆ ಈ ಊರು ಹೇಗಿದೆಯೆಂದು ತಿಳಿದುಕೊಳ್ಳುವ ಮನಸ್ಸಾಗುವುದು ಸಹಜ. ಅದರಂತೆ ಆಫ್ರಿಕ ಮತ್ತು ಏಶ್ಯದ ರಾಷ್ಟ್ರಗಳ ಪ್ರಧಾನಿಗಳ ಪರಿಷತ್ತಿನ ಸುದ್ದಿಯನ್ನು ಕೇಳುತ್ತಿರುವ ನಮಗೆ ಪರಿಷತ್ತಿನ ರಂಗಭೂಮಿಯಾದ ಬಾಂಡುಂಗ್ ನಗರದ ವರ್ಣನೆ ಕೇಳುವ ಮನಸ್ಸಾಗುವುದು ಸ್ವಾಭಾವಿಕ. ಶ್ರೀ ಮನ್ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದ ಕೇಂದ್ರ ಉಡುಪಿ ಎಂಬುದರಿಂದ ಇಲ್ಲಿಯ ಪರ್ಯಾಯದ ಮಹತ್ವ ಹೇಗೆ ಹೆಚ್ಚುತ್ತದೋ ಇಂಡೋನೇಶಿಯದ ರಾಷ್ಟ್ರೀಯ ಪಕ್ಷ ಸ್ಥಾಪನೆಗೊಂಡ ನಗರ ಬಾಂಡುಂಗಾದುದರಿಂದ ಅಲ್ಲಿ ನಡೆಯುವ ಅಂತಾರಾಷ್ಟ್ರೀಯ ಚರ್ಚೆಯ ಪ್ರಾಮುಖ್ಯತೆ ಅಧಿಕವಾಗುತ್ತದೆ. ವಿಕ್ರಮಾದಿತ್ಯನ ಸಿಂಹಾಸನದ ಮೇಲೆ ಕುಳಿತ ಮೊದ್ದು ವಿನಲ್ಲೂ ನ್ಯಾಯಬುದ್ಧಿ ತೀವ್ರವಾದ ಕತೆಯನ್ನು ನಾವು ಕೇಳಿದ್ದೇವೆ. ಒಬ್ಬ ನ್ಯಾಯಾಧೀಶನೇ ಆ ಸಿಂಹಾಸನವನ್ನೇರಿ ತೀರ್ಪಿತ್ತರೆ ಹೇಗಾದೀತು? ಆಫ್ರಿಕ ಮತ್ತು ಏಶ್ಯದ ಪ್ರಧಾನ ಮಂತ್ರಿಗಳ ಪರಿಷತ್ತಿನ ರಂಗಭೂಮಿಯಾದ ಬಾಂಡುಂಗನ್ನು ವಿಕ್ರಮಾದಿತ್ಯನ ಸಿಂಹಾಸನಕ್ಕೆ ಹೋಲಿಸಬಹುದು ಅದರ ಗತ ಇತಿಹಾಸದ ಮಹಿಮೆಯಿಂದಲೂ ಅಲ್ಲಿ ಸೇರುವ ಪ್ರಧಾನರ ಉದಾತ್ತ ಧ್ಯೇಯಾದರ್ಶಗಳಿಂದಲೂ ಪರಿಷತ್ತು ಭಾರತದ ಪ್ರಧಾನ ಮಂತ್ರಿ ನೆಹರುಗಳು ಬಣ್ಣಿಸಿದಂತೆ 'ವಿಶ್ವದ ಇತಿಹಾಸದಲ್ಲಿಯೇ ಅದ್ವಿತೀಯ' ಎಂದಾದೀತು.

ಬಾಂಡುಂಗನ್ನು ಪರಿಷತ್ತಿನ ರಂಗಸ್ಥಳವಾಗಿ ಆರಿಸಿರುವುದು ಇಂಡೋನೇಶಿಯದ ಅಧ್ಯಕ್ಷ ಡಾ| ಸುಕರ್ಣರ ಮುನ್ನೋಟವನ್ನು ಸೂಚಿಸಿದಂತೆ ರಾಷ್ಟ್ರಾಭಿಮಾನವನ್ನೂ ಅದು ವ್ಯಕ್ತಪಡಿಸುತ್ತದೆ. ಈ ನಗರದಲ್ಲಿಯೇ ಅವರು ೨೫ ವರ್ಷಗಳ ಮೊದಲು ಡಚ್ಚರ ಸಾಮ್ರಾಜ್ಯವಾದದ ವಿರುದ್ಧ ಧ್ವನಿ ಎತ್ತಿದ್ದರು. ಆಗಿನ್ನೂ ತರುಣರಾಗಿದ್ದ ಸುಕರ್ಣರ ಕಹಳೆ ಪಶ್ಚಿಮ ಜಾವಾದ ಈ ನಗರದಿಂದ ಇಡೀ ದ್ವೀಪಕ್ಕಷ್ಟೇ ಅಲ್ಲ--- ಇಂಡೋನೇಶಿಯದ ಎರಡು ಸಾವಿರಕ್ಕೂ ಮಿಕ್ಕಿದ ದ್ವೀಪ ಸಮುದಾಯಕ್ಕೆ ನವೋದಯದ ಸಂದೇಶವನ್ನು ಮುಟ್ಟಿಸಿತು. ಏಕ ರಾಷ್ಟ್ರ, ಏಕ ಧ್ವಜ ಮತ್ತು ಏಕ ಭಾಷೆಯ ತತ್ವದ ಮೇಲೆ ನಡೆದ ಆಂದೋಲನದ ಕೇಂದ್ರವೆಂದು ಇಂಡೋನೇಶಿಯದ ಸ್ವತಂತ್ರ ನಾಗರಿಕರು ಬಾಂಡುಂಗನ್ನು ಈಗಲೂ ಭವಿಷ್ಯದಲ್ಲೂ ನೆನೆಯದಿರರು. ರಾಷ್ಟ್ರೀಯ ಸ್ವಾತಂತ್ರ್ಯದ ನೇತೃತ್ವ ವಹಿಸಿದರೆಂಬ ಆರೋಪವನ್ನು ಹೊರಿಸಿ ಡಾ. ಸುಕರ್ಣರನ್ನು ೨೫ ವರ್ಷಗಳ ಪೂರ್ವದಲ್ಲಿ ಆಗಿನ ಪರಕೀಯ ಸರಕಾರದ ಪೋಲೀಸರು ಇಲ್ಲಿಯ ಸೆರೆಮನೆಯೊಂದರಲ್ಲಿ ತಳ್ಳಿದ್ದರು. ಆದರೆ ಇಂದು, ಆ ಮಹನೀಯನು ಇಂಡೋನೇಶಿಯದ ಅಧ್ಯಕ್ಷನಾಗಿ, ಜಗತ್ತಿನ ೧೫೦ ಕೋಟಿ ಜನರನ್ನು ಪ್ರತಿನಿಧಿಸುವ ೨೯ ರಾಷ್ಟ್ರಗಳ ನಾಯಕರನ್ನು ವಿಚಾರ ವಿನಿಮಯಕ್ಕಾಗಿ ನೆರೆಯಿಸಿ, ಸ್ವಾಗತಿಸುತ್ತಿದ್ದಾನೆ! ರಾಷ್ಟ್ರೀಯ ಜಾಗೃತಿಯ ಶಂಖನಾದವನ್ನು ಜಗತ್ತಿನಾದ್ಯಂತ ಮೊಳಗಿಸಲು ಕಟಿಬದ್ಧನಾಗಿದ್ದಾನೆ — ಅದನ್ನು ಸಹಿಸದಿರುವ ಕೆಲವರಿದ್ದರೂ ಈ ಮಹನೀಯನ ಉಪಕ್ರಮಕ್ಕೆ ಜಗತ್ತಿನ ಮೂರರಲ್ಲಿ ಎರಡಂಶ ಜನರ ಬೆಂಬಲವಿದೆ ಎಂಬುದು ಉಲ್ಲೇಖನೀಯ.

ಜಾವಾದ ನಂದನವನ ಎಂದು ಕರೆಯಲ್ಪಡುವ ಬಾಂಡುಂಗಿನಲ್ಲಿ ಎತ್ತ ಕತ್ತು ತಿರುಗಿಸಿದರೂ ಸೌಂದರ್ಯದ ನೋಟಗಳೇ ಕಾಣಿಸುತ್ತವೆ. ಫ್ರಾನ್ಸಿನ ಪೇರಿಸಿನಂತೆ ಈ ನಗರವು ವಿಲಾಸಕ್ಕೆ ಸಹ ಹೆಸರಾಗಿದೆ. ವಿಶಾಲವಾದ ಉಪವನಗಳು, ದೇಶದ ಬೇರೆ ನಗರಗಳೊಡನೆ ಸಂಪರ್ಕ ಪಡೆದ ಮಾರ್ಗಗಳು, ಅವುಗಳ ಇಕ್ಕಡೆಯುಲ್ಲಿರುವ ಸಾಲುಮರಗಳು ಮುಂತಾದವುಗಳಿಂದ ನಗರವು ಶೋಭಿಸುತ್ತದೆ. ಇಂಡೋನೇಶಿಯದ ರಾಜಧಾನಿ ಜಕಾರ್ತದೊಡನೆ ನಗರವು ವಾಯು ಸಂಪರ್ಕವನ್ನು ಹೊಂದಿದೆ. ಇಲ್ಲಿ ರೈಲು ಮತ್ತು ವಿಮಾನ ನಿಲ್ದಾಣವಿರುವುದರಿಂದ ಪ್ರವಾಸಿಕರಿಗೆ ಕಷ್ಟವಾಗುವುದಿಲ್ಲ. ಇಲ್ಲಿಗೆ ಯಾರೇ ಬರಲಿ, ಅವರನ್ನು ನಗುಮುಖದೊಡನೆ ಸ್ವಾಗತಿಸಲಾಗುತ್ತದೆ. ಗೃಹಿಣಿಯರು ಹರ್ಷಚಿತ್ತರಾಗಿ ಅತಿಥಿಯೊಡನೆ ವರ್ತಿಸುತ್ತಾರೆ—ಅವರ ಉಡುಪು ತೊಡುಪುಗಳು ಮನಸ್ಸಿನ ನೈರ್ಮಲ್ಯದ ಅಂದವನ್ನು ಹೆಚ್ಚಿಸಿ ಕುಂದಣಕ್ಕೆ ನವರತ್ನವಿಟ್ಟಂತೆ ಅವರ ವ್ಯಕ್ತಿತ್ವದ ಪ್ರಭಾವನ್ನು ಹೆಚ್ಚಿಸುತ್ತವೆ. ಸೊಂಟದವರೆಗಷ್ಟೇ ಬರುವ ಬಣ್ಣಬಣ್ಣದ ಸೀರೆಯನ್ನುಟ್ಟು ಎದೆಯಮೇಲೆ ಕೆಂಪು ಅಥವಾ ಬೇರಾವುದೇ ಹೊಳೆಯುವ ಬಣ್ಣದ, ಹೂಗಳ ಚಿತ್ರದ ರವಕೆ ತೊಟ್ಟು, ತಲೆಕೂದಲನ್ನು ಸಿರಿಮುಡಿಯಾಗಿ ಎತ್ತರದಲ್ಲಿ ಕಟ್ಟಿದ ಇಲ್ಲಿಯ ಮಹಿಳೆಯರು ನಕ್ಕು ನುಡಿಸಿದಾಗ ಮುತ್ತು ಚೆಲ್ಲಿದಂತಾಗುತ್ತದೆ. ಅವರು ಕಾಲಿನ ಬೆರಳುಗಳು ಹೊರಕಾಣಿಸುವಂತೆ ಮುಂದುಗಡೆ ತೂತಿರುವ, ಮೇಲೆ ಬಣ್ಣದ ಚಿತ್ರ ಬಿಡಿಸಿರುವ, ವಿಶೇಷ ಬಗೆಯ ಪಾದರಕ್ಷೆಗಳನ್ನು ಉಪಯೋಗಿಸುತ್ತಾರೆ- ಇದರ ಕೀರ್ತಿ ಎಷ್ಟು ಪ್ರಸಿದ್ಧವಾಗಿದೆಯೆಂದರೆ ಪಾಶ್ಚಾತ್ಯ ರಮಣಿಯರಲ್ಲೂ ಅವುಗಳನ್ನು ಧರಿಸಿ ಮೆರೆಯುವ ಚಪಲ ಈಗೀಗ ಕಾಣಿಸುತ್ತದೆ

ಬಾಂಡುಂಗನ್ನು ಬೆಟ್ಟ ಪ್ರದೇಶವೆಂದು ಕರೆದರೆ ತಪ್ಪಾಗಲಾರದು ೩೪೦೦ ಅಡಿ ಎತ್ತರದ ಪರ್ವತಗಳಿದ್ದರೂ ಸಾಮಾನ್ಯವಾಗಿ ೨೦೦೦ ಅಡಿ ಎತ್ತರದಲ್ಲಿ ನಗರ ನೆಲಸಿದ್ದು ಉತ್ತಮ ಹವಾಗುಣದಿಂದ ಕೂಡಿದೆ. ಇಲ್ಲಿಯೊಂದು ನದಿ ಹರಿಯುತ್ತದೆ. ಅದರ ಇಕ್ಕೆಲಗಳಲ್ಲಿ ನೀಲಿ ತೋಟಗಳನ್ನು ಬೆಳೆಸಲಾಗುತ್ತದೆ. ನಗರದ ಉತ್ತರಕ್ಕೆ ಜ್ವಾಲಾಮುಖಿ ಪರ್ವತವೊಂದು ಎದ್ದು ನಿಂತಿದೆ. ಅದರ ಹೆಸರಿನ ಅರ್ಥ "ಬುಡ ಮೇಲಾದ ದೋಣಿ" ಎಂದು— ಜನರ ಹೇಳಿಕೆಯಂತೆ, ಹಲವಾರು ವರ್ಷಗಳ ಹಿಂದೆ ನದಿಯ ಮೇಲೆ ದೋಣಿಯಲ್ಲಿ ಮೂರ್ಖನೆಂದು ಬಯ್ಯಲ್ಪಡುತ್ತಿದ್ದ ತರುಣನೊಬ್ಬ ಹಣದ ರಾಶಿಯೊಡನೆ ಮನೆಗೆ ತನ್ನ ತಾಯಿಯ ಬಳಿಗೆ ಮರಳುತ್ತಿದ್ದ. ತಾನು ಸಂಪಾದಿಸಿ ತಂದ ದುಡ್ಡನ್ನು ತಾಯಿಯ ಮುಂದಿಟ್ಟು ಶಹಭಾಸನ್ನು ಪಡೆಯಲು ಅವನು ಕಾತರನಾಗಿದ್ದ. ದೋಣಿ ಊರು ತಲಪುವುದಕ್ಕೆ ಮುಂಚೆಯೇ ಕತ್ತಲಾಯಿತು. ಕತ್ತಲಲ್ಲಿ ಅಪ್ಸರೆಯೊಬ್ಬಳು ಅಲ್ಲಿ ಕಾಣಿಸಿಕೊಂಡಳು ತನ್ನೊಡನೆ ಬಾರೆಂದು ಅವಳು ಈ ತರುಣನನ್ನು ಪ್ರಾರ್ಥಿಸಿದಳು. ಅವನು ನಿರಾಕರಿಸಲು ಅಪ್ಸರೆ ತುಂಬ ಒತ್ತಾಯ ಮಾಡಿದಳು; ಆಗ ಸಿಟ್ಟಿನಿಂದ ಅಪ್ಸರೆಯು ತರುಣನೂ ಹಣದ ರಾಶಿಯೂ ಇದ್ದಂತೆಯೇ ದೋಣಿಯನ್ನು ಬುಡ ಮೇಲು ಮಾಡಿ, ಮುಳುಗಿಸಿದಳು. ಹಾಗೆ ಮುಳುಗಿದ ದೋಣಿಯೇ ಕಾಲಾಂತರದಲ್ಲಿ ಪರ್ವತವಾಗಿ ಎದ್ದು ನಿಂತಿತು. ಈ ಪರ್ವತ ಬುಸು ಗುಟ್ಟುವಾಗ, ಜ್ವಾಲಾಮುಖಿಯ

(೯ನೇ ಪುಟ ನೋಡಿರಿ)

THE CANARA MUTUAL
Assurance Company Limited

Managing Director: T. R. A. PAI

Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18	ರೂ. 15
ಹೋಲ್ ಲೈಫ್ ಎಶ್ಯೂರೆನ್ಸಿಗೆ	ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12 1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O S. no. 34/1955.

ರಾಧಮ್ಮ ಶೆಡ್ತಿ — ವಾದಿಳು

ಮತ್ತು

ಮಹಾಲಿಂಗ ಶೆಟ್ಟಿ, ಸಿದ್ದು ಶೆಟ್ರ ಅಳಿಯ, ಮಂಗಳೂರು ತಾಲ್ಕು ಮಂಗಳೂರು ಶ್ಯಾಪರದ ಜಪ್ಪು ಮೋರ್ಗನ ಗೇಟಿನ ಬಳಿಇರುವವ ಪ್ರತಿವಾದಿ.

ಈ ಮೂಲಕ ಸದ್ರಿ ಪ್ರತಿವಾದಿಗೆ ತಿಳಿಸುವದೇನಂದ್ರೆ,

ಇವರವಳಿಗೆ

ವಾದಿಳು ನಿಮ್ಮ ಮೇಲೆ ಮಾಡಿದ ಮೋಕ್ಕಂದ ದಾವಾ ನಿಮ್ಮ ಹಾಜರಾತಿ ಬಗ್ಗೆ ತಾರೀಕು 29-4-55ಕ್ಕಿಟ್ಟಿದೆ. ಸದ್ರಿ ದಿನ ಬೆಳಗ್ಗೆ 11 ಗಂಟೆಗೆ ನೀವು ಸ್ವತಃ ಯಾ ವಕೀಲ ದ್ವಾರಾ ಮೋಕ್ಕಂಡ ಕೋರ್ಟಿನಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷ್ಯಮಾಡಿ ಮೋಕ್ಕಂಡ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾದೀತು.

N. Mohandas Adyanthaya
Advocate For Plaintiff

By Order of the Court,

Dated 13—4—55 |
Comp :—Karkala |

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 591/53.

ವಾದಿ— ವೆಂಕಪ್ಪ ಶೆಟ್ಟಿ —

ಪ್ರತಿವಾದಿರು— ಸೂರಮ್ಮ ಶೆಡ್ತಿ ಕೂಡಾ.

ಸದ್ರಿದಾವೆಯ 3ನೇ ಪ್ರತಿವಾದಿ ಅಂತ್ಯಯ್ಯ ಶೆಟ್ಟಿ, 5ನೇ ಪ್ರತಿವಾದಿ ಸೂರ ಶೆಟ್ಟಿ. ಸುಬ್ಬಿ ಶೆಡ್ತಿರ ಮಕ್ಕಳು— 11ನೇ ಪ್ರತಿವಾದಿ ಮೆಂಕು ಶೆಡ್ತಿ. ಮೂಕಮ್ಮ ಶೆಡ್ತಿ ಮಗಳು. 3-5ನೇ ಪ್ರತಿವಾದಿರು ಕುಂದಾಪುರ ತಾಲ್ಕು ಕಾಳ್ತೋಡು ಗ್ರಾಮದಲ್ಲಿಯೂ, 11ನೇ ಪ್ರತಿವಾದಿಳು ಕುಂದಾಪುರ ತಾಲ್ಕು ಸಾವುಂದ ಗ್ರಾಮದಲ್ಲಿಯೂ ಇರುತ್ತಾರೆ. ಇವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ—

ಈ ದಾವೆಯ ಪ್ರತಿವಾದಿರಿಂದ ಬರ ಮೂಲಗೇಣಿ ಗೇಣಿಬಾಕಿಯನ್ನು ಬರಮಾಡಿಕೊಳ್ಳುವರೆ ವಾದಿಯು ದಾಕ್ಲುಮಾಡಿದ ಮೇಲಿನ ದಾವೆಯು ತಾರೀಕು 22-4-55ಕ್ಕೆ ತನ್ನಿಖೆಗೆ ಯಿಡೋಣಾಗಿಯದೆ. ಸದ್ರಿದಾವೆಯ ಕುರಿತು ಏನಾದರೂ ಆಕ್ಷೇಪ ಹೇಳತಕ್ಕದ್ದಿದ್ದರೆ ಸದ್ರಿದಿನ್ನ 11 ಗಂಟೆಗೆ ಮೋಕ್ಕಾಣಿಸಿದ ಕೋರ್ಟಿನಲ್ಲಿ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕ್ಕುಂ ಪ್ರಕಾರ ತಿಳುಹಿಸಿಯದೆ.—.

V. Srinivasa Saetty
Advocate For Plaintiff.

ತಾರೀಕು 11-4-55. ಕುಂದಾಪುರ.

ಸರಕಾರಿ ಬೇಂಕಿನ ರಚನೆಯ ವಿಧೇಯಕ

ಹಳ್ಳಿಗಳಿಗೆ ಹಣ ಪೂರೈಸಲು ಕೈಗೊಂಡ ಕ್ರಮ

ಲೋಕ ಸಭೆಯಲ್ಲಿ ಮೊನ್ನೆ ಶನಿವಾರ ಅರ್ಥ ಸಚಿವರಾದ ಶ್ರೀ ದೇಶಮುಖರು "ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ" ವನ್ನು ಸ್ಥಾಪಿಸುವ ಮತ್ತು ಅದಕ್ಕೆ "ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯ" ವನ್ನು ವರ್ಗಾಯಿಸುವ ವಿಧೇಯಕವನ್ನು ಮಂಡಿಸಿದರು. ಇದರ ಪ್ರಕಾರ ಸರಕಾರದವರು ನಿಶ್ಚಯಿಸಿದ ತಾರೀಕಿನಿಂದ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯದ ಎಲ್ಲ ಸಾಲನ್ಯೂನಗಳನ್ನೂ ಹಕ್ಕು ಬಾಧ್ಯತೆಗಳನ್ನೂ ಅಧಿಕಾರ ಮತ್ತು ಹಿತಾಸಕ್ತಿಗಳನ್ನೂ ಸರಕಾರ ತನ್ನ ವಶಕ್ಕೆ ತೆಗೆದು ಕೊಳ್ಳುತ್ತದೆ. ಮೆನೇಜಿಂಗ್ ಡೈರೆಕ್ಟರ್, ಡೆಪ್ಯುಟಿ ಮೆನೇಜಿಂಗ್ ಡೈರೆಕ್ಟರ್‌ಗಳು ಮತ್ತಿತರ ಡೈರೆಕ್ಟರರನ್ನು ಬಿಟ್ಟು ಉಳಿದೆಲ್ಲ ಸಿಬಂಧಿಯೂ ತನ್ನ ಎಂದಿನ ಸ್ಥಾನದಲ್ಲಿಯೇ ಮುಂದೆಯೂ ಕೆಲಸ ಮಾಡುತ್ತದೆ. ಆದರೆ ಅವರ ಸಂಬಳ ಮತ್ತಿತರ ಸೌಕರ್ಯಗಳುಬದಲಾಯಿಸಲ್ಪಡಬಹುದು. ಎಲ್ಲ ಪಾಲುಗಳೂ ರಿಜರ್ವ್ ಬೇಂಕ್ ಆಫ್ ಇಂಡಿಯಕ್ಕೆ ವರ್ಗವಾಗುವುದಲ್ಲದೆ ನಿಶ್ಚಿತ ಸೂತ್ರಕ್ಕನುಸಾರವಾದ "ಪೂರ್ಣ ಪರಿಹಾರ"ವನ್ನು ಪಾಲುದಾರರಿಗೆ ಈ ಸಂಬಂಧದಲ್ಲಿ ಕೊಡಲಾಗುತ್ತದೆ. ಇದು ೨೦—೧೨—೧೯೫೪ನೇ ತಾರೀಕಿಗೆ ಮುಂಚಿನ ಹನ್ನೆರಡು ತಿಂಗಳಲ್ಲಿದ್ದ ಪೇಟೆಯ ದರದ ತಳಹದಿಯ ಮೇಲೆ ನಿರ್ಧರಿಸಲ್ಪಟ್ಟದ್ದು. ಪಾಲುದಾರರು ಇಚ್ಛಿಸಿದರೆ ೧೦೦೦೦ ರೂಪಾಯಿ ವರೆಗೆ ಪರಿಹಾರವು ನಗದಿಯಲ್ಲಿ ಸಿಗುತ್ತದೆ. ಸರಕಾರಕ್ಕೆ ೫೫% ಪಾಲಿರುವ ಸ್ಟೇಟ್ ಬ್ಯಾಂಕ್ ಪ್ರತ್ಯೇಕ ಡೈರೆಕ್ಟರ ಮಂಡಳವನ್ನು ಹೊಂದಿ, ಕೆಲಸ ಮಾಡುತ್ತದೆ.

ಉದ್ದೇಶ ನಿರೂಪಣೆ

ವಿಧೇಯಕದ ಉದ್ದೇಶವನ್ನು ವಿವರಿಸುವ ಪಂಕ್ತಿಯು ಹೀಗೆ ಹೇಳುತ್ತದೆ— "೧೯೫೦ರಲ್ಲಿ ರಿಜರ್ವ್ ಬೇಂಕ್ ಆಫ್ ಇಂಡಿಯದವರು ಭಾರತದ ಗ್ರಾಮಾಂತರ ಪ್ರದೇಶಗಳಿಗೆ ಹಣವನ್ನು ಪೂರೈಸುವ ವಿಚಾರದಲ್ಲಿ ಒಂದು ಸಮಿತಿಯನ್ನು ನೇಮಿಸಿದರು. ಸಮಿತಿಯ ವರದಿಯು ಅನೇಕ ವಿಸ್ತೃತ ಸ್ವರೂಪದ ಸೂಚನೆಗಳನ್ನು ಮಾಡಿರುತ್ತದೆ. ಅವುಗಳಲ್ಲಿ ಒಂದು ನಿಶ್ಚಿತ ವ್ಯಾಪಾರ ಸೂತ್ರವನ್ನು ಕಡೆಗಣಿಸದೆ ವ್ಯವಹಾರವನ್ನು ಸಾಗಿಸಿಕೊಂಡು, ಹೋಗುವ, ಭಾರತದ ಎಲ್ಲೆಡೆಯಲ್ಲೂ ಶಾಖೆಗಳ ಮೂಲಕ ಕೆಲಸ ಮಾಡುವ, ರಾಷ್ಟ್ರೀಯ ಧೋರಣೆಗನುಸಾರವಾಗಿ ವರ್ತಿಸುವ, ಗ್ರಾಮಾಂತರ ಪ್ರದೇಶಗಳಲ್ಲಿ ಹಣಕಾಸಿನ ಸೌಕರ್ಯ ಸಿಗುವಂತೆ ಮಾಡುವ ಸರಕಾರದ ಪಾಲುಳ್ಳ ಬೇಂಕಿನ ನಿರ್ಮಾಣವಾಗಬೇಕೆಂದು ಹೇಳುತ್ತದೆ. ಇದು ಅತ್ಯಂತ ಪ್ರಾಮುಖ್ಯವಾದ ಸೂಚನೆಯಾಗಿದೆ; ಮತ್ತು ಸರಕಾರದವರು ಇದನ್ನು ಅಂಗೀಕರಿಸಿ ಕಳೆದ ದಶಂಬರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಸ್ಥಾಪನೆ ಮಾಡುವ ತಮ್ಮ ವಿಚಾರವನ್ನು ಪ್ರಕಟಿಸಿದರು. ಈ ದಿಸೆಯಲ್ಲಿ ಮೊದಲ ಹೆಜ್ಜೆಯಾಗಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳುವ ನಿರ್ಧಾರವನ್ನೂ ಸರಕಾರ ಸಾರಿತು. ಇದಕ್ಕೆ ಅನ್ವಯಿಸಿ ಈ ವಿಧೇಯಕವನ್ನು ತರಲಾಗಿರುತ್ತದೆ."

ವಿರೋಧಕರ ಹೇಳಿಕೆ

ಸರಕಾರವು ತನ್ನ ವಶಕ್ಕೆ ಇಂಪೀರಿಯಲ್ ಬೇಂಕ್ ಆಫ್ ಇಂಡಿಯವನ್ನು ತೆಗೆದುಕೊಂಡು ಗ್ರಾಮಾಂತರ ಪ್ರದೇಶಗಳಿಗೆ ಹಣವನ್ನೊದಗಿಸುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಸ್ಥಾಪನೆ ಮಾಡುವ ವಿಚಾರದ ಪ್ರಮುಖ ವಾಣಿಜ್ಯ ಸಂಸ್ಥೆಗಳು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತವೆ. ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯವನ್ನು ವಶಪಡಿಸಿಕೊಳ್ಳದೆಯೇ ಸರಕಾರ ತನ್ನ ಉದ್ದೇಶವನ್ನು ಸಾಧಿಸಬಹುದೆಂದು ಅವು ಹೇಳುತ್ತವೆ. ಆ ಬ್ಯಾಂಕು ದೇಶದ ಧೋರಣೆಗಳಿಗೆ ತನ್ನನ್ನು ಹೊಂದಿಸಿಕೊಳ್ಳಲು ಈಚೆಗೆ ಕೆಲವು ವರ್ಷಗಳಿಂದ ಪ್ರಯತ್ನ ನಡೆಸಿತ್ತೆಂಬುದನ್ನು ಈ ವರ್ತುಲಗಳು ಸರಕಾರದ ಸ್ಮರಣೆಗೆ ತಂದು ಕೊಡುತ್ತವೆ. ನಿಯಂತ್ರಣಗಳನ್ನು ತುಸು ಹೆಚ್ಚಿಸಿದರೂ ತೊಂದರೆಯಿಲ್ಲ—ಬ್ಯಾಂಕಿನ ರಾಷ್ಟ್ರೀಕರಣದಂಥ ಕ್ರಮವನ್ನು ತೆಗೆದು ಕೊಳ್ಳುವುದು ಉಳಿದ ಬ್ಯಾಂಕುಗಳ ಬೆಳವಣಿಗೆಯ ದೃಷ್ಟಿಯಿಂದ ಇಷ್ಟವಾದುದಲ್ಲ ಎಂದವು ಸಾರುತ್ತವೆ. ಆದರೆ ಗ್ರಾಮಾಂತರ ಪ್ರದೇಶಗಳಿಗೆ ಹಣದ ಪೂರೈಕೆಯಾಗಬೇಕೆಂಬ ವಿಷಯವನ್ನು ಮಾತ್ರ ವಿರೋಧಕರು ಖಂಡಿಸುವುದಿಲ್ಲ. ಇಂಪೀರಿಯಲ್ ಬ್ಯಾಂಕನ್ನು "ಬಿ" ವರ್ಗದ ರಾಜ್ಯ ಸರಕಾರಗಳ ವಶದಲ್ಲಿರುವ ಇತರ ಕೆಲವು ಬ್ಯಾಂಕುಗಳೊಡನೆ ಸ್ಟೇಟ್ ಬ್ಯಾಂಕ್ ಆಗಿ ಪರಿವರ್ತಿಸುವುದರಿಂದ ಲಾಭವಾಗದು ಎನ್ನುವುದೇ ವಿರೋಧಕರ ಹಾಡಿನ ಪಲ್ಲವಿ.

ಸರಳೋಪಾಯ

ಇದನ್ನು ಸರಕಾರ ಲೆಕ್ಕಿಸಿದಂತೇನೂ ತೋರುವುದಿಲ್ಲ. ಮುಂದಿನ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬೇಕೆಂಬ ದೃಢ ಸಂಕಲ್ಪವನ್ನಿಟ್ಟುಕೊಂಡ ಸರಕಾರವು ತನ್ನ ಉದ್ದೇಶಗಳಿಗನುಸಾರವಾಗಿ ಕೆಲಸ ಮಾಡುವ ಸ್ಟೇಟ್ ಬ್ಯಾಂಕನ್ನು ಸಂಪೂರ್ಣವಾಗಿ ಹೊಸ ಭಂಡವಾಳದಿಂದಲೇ ರಚಿಸಲು ಮತ್ತು ಯಶಸ್ವಿಯಾದ ಸ್ಪರ್ಧೆಯನ್ನಿತ್ತು ದೇಶ ವ್ಯಾಪಿಯಾದ ಚಟುವಟಿಕೆಗಳನ್ನು ತೊಡಗಲು ಅವಕಾಶ ಸಾಲದೆಂದು ಭಾವಿಸಿದಂತೆ ಕಾಣುತ್ತದೆ. ಇದು ವ್ಯಾವಹಾರಿಕರಿಗೆ ಸಮ್ಮತವಾದ ಮಾತು. ಹಾಗೆಯೇ ಹೆಚ್ಚಿನ ನಿಯಂತ್ರಣಗಳ ಮೂಲಕ ಇಂಪೀರಿಯಲ್ ಬ್ಯಾಂಕಿನ ಮೇಲೆ ಹೆಚ್ಚಿನ ಅಧಿಕಾರವನ್ನು ಪಡೆಯಬಹುದೆಂದು ಹೇಳುವವರ ಅಭಿಪ್ರಾಯ ಸರಕಾರದ ಮನಸ್ಸಿಗೆ ಬಂದಿಲ್ಲವೆಂದೂ ತೋರುತ್ತದೆ; ಏಕೆಂದರೆ ಬ್ಯಾಂಕಿನ ಪಾಲುಗಳಲ್ಲಿ ನಿಶ್ಚಿತ ಬಹುಮತವನ್ನು ಹೊಂದಿರದಿದ್ದರೆ, ಅದರ ಧೋರಣೆಯನ್ನು ತನ್ನ ಇಚ್ಛೆಗಳಿಗನುಸಾರವಾಗಿ ರೂಪಿಸಲು ಸರಕಾರಕ್ಕೆ ಸಾಧ್ಯವಾಗಲಾರದು. ಖಾಸಗಿ ಒಡೆತನದಲ್ಲಿರುವ ಬ್ಯಾಂಕೊಂದು ಗ್ರಾಮಾಂತರ ಪ್ರದೇಶಗಳಿಗೆ ಹಣವನ್ನೊದಗಿಸುವ ಸರಕಾರದ ಇಚ್ಛೆಯನ್ನು ಕಾರ್ಯರೂಪದಲ್ಲಿಳಿಸಿ ಲಾಭವನ್ನು ಕಡಿಮೆ ಮಾಡಿಕೊಳ್ಳಲು ಎಷ್ಟಕ್ಕೂ ಇಷ್ಟಪಡಲಾರದೆಂದು ಅನುಭವ ತಿಳಿಸಿ ಹೇಳುತ್ತದೆ. ಇವೆಲ್ಲ ಸಂಗತಿಗಳನ್ನು ದೃಷ್ಟಿಯಲ್ಲಿಟ್ಟು ಕೊಂಡೇ ಸರಕಾರ ಈ ವಿಧೇಯಕವನ್ನು ತಂದಿತು.

ಹಳ್ಳಿಗಳಿಗೆ ಪ್ರಯೋಜನ

ನಮ್ಮ ದೇಶದಲ್ಲಿ ಬ್ಯಾಂಕುಗಳಿಂದ ಮತ್ತು ಸಹಕಾರ ಸಂಸ್ಥೆಗಳಿಂದ ಹಳ್ಳಿಯ ರೈತರಿಗೆ ಸಿಗುವ ಸಾಲ ಮತ್ತು ಹಣದ ಪ್ರಮಾಣ ನೂರಕ್ಕೆ ಎಂಟರಷ್ಟೂ ಇಲ್ಲ; ಹಳ್ಳಿಗರು ತಮ್ಮ ಊರಿನ ಮಧ್ಯಸ್ಥರಿಂದಲೋ ಇಲ್ಲವೆ ಬೇರೆ ಹೆಚ್ಚು ಬಡ್ಡಿಗೆ ಹಣವನ್ನು ತಂದು ಸಾಲದ ಹೊರೆಯಲ್ಲಿ ಮುಳುಗಿರುತ್ತಾರೆ. ಅವರಿಗೆ ಉದಾರವಾದ ಶರ್ತದ ಮೇಲೆ ಸಾಲ ಕೊಡುವ ಮತ್ತು ಅವರು ಉತ್ಪಾದಿಸಿದ ಸರಕುಗಳು ಯೋಗ್ಯ ಬೆಲೆಯಲ್ಲಿ ಮಾರಲ್ಪಟ್ಟು, ಸಾಲ ಮರಳಿಸುವುದಕ್ಕೆ ಸುಲಭವಾಗುವ ಸಾಧನಗಳು ಏನೇನೂ ಇಲ್ಲ. ಸ್ಟೇಟ್ ಬ್ಯಾಂಕ್ ಸ್ಥಾಪಿಸಲ್ಪಟ್ಟ ಬಳಿಕ ಪರಿಸ್ಥಿತಿ ಒಮ್ಮೆಯೇ ಸುಧಾರಿಸೀತೆಂದು ಹೇಳುವುದು ಅತಿಶಯೋಕ್ತಿಯಾದೀತು. ಆದರೆ, ಇದರಿಂದ ಲಾಭವಾಗುವುದೆಂಬ ಸಂಗತಿ ಮಾತ್ರ ನಿಜ. ಇಂಪೀರಿಯಲ್ ಬ್ಯಾಂಕು ಈಗ ೪೨೨ ಶಾಖೆಗಳ ಮೂಲಕ ಕೆಲಸ ಮಾಡುತ್ತದೆ; ಸ್ಟೇಟ್ ಬ್ಯಾಂಕ್ ರಚನೆ ಪೂರ್ಣವಾದ ಬಳಿಕ "ಬಿ" ವರ್ಗದ ರಾಜ್ಯಗಳ ಕೈಯಲ್ಲೀಗ ಇರುವ ಬೇಂಕುಗಳ ೩೩೧ ಶಾಖೆಗಳು ಅದರೊಡನೆ ಸಹಕರಿಸುತ್ತವೆ. ಒಂದೇ ಕಡೆಯಲ್ಲಿ ಒಂದಕ್ಕಿಂತ ಹೆಚ್ಚು ಶಾಖೆಗಳು ಕೆಲಸ ಮಾಡುವುದನ್ನು ತಪ್ಪಿಸುವ ಮೂಲಕವೂ ಸಂಯುಕ್ತ ಬಂಡವಾಳದ ಬಲದಿಂದ ನೂರಾರು ಹೊಸ ಶಾಖೆಗಳನ್ನು ಶೀಘ್ರದಲ್ಲಿ ತೆರೆಯುವ ಮೂಲಕವೂ ಸ್ಟೇಟ್ ಬ್ಯಾಂಕ್ ತನ್ನ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಬಲ್ಲುದು. ಗ್ರಾಮಾಂತರ ಪ್ರದೇಶದ ಕನಿಷ್ಠ ಆವಶ್ಯಕತೆಯನ್ನು ಪೂರೈಸುವುದಕ್ಕಾಗಿ ನಾಲ್ನೂರಕ್ಕಿಂತಲೂ ಹೆಚ್ಚು ಹೊಸ ಶಾಖೆಗಳನ್ನು ತೆರೆಯಬೇಕಾದೀತೆಂದು ತಿಳಿದು ಬರುತ್ತದೆ. ಇಂಪೀರಿಯಲ್ ಬ್ಯಾಂಕ್ ಈ ವರೆಗೆ ಪಡೆದಿರುವ ಅಳವಾದ ಅನುಭವ ಸ್ಟೇಟ್ ಬ್ಯಾಂಕ್ ತನ್ನ ಚಟುವಟಿಕೆ ವಿಸ್ತರಿಸಿಕೊಳ್ಳಲು ನೆರವಾಗದಿರದು.

BE YOUNG

Take "Elixir Aswaghandhi" the pride of Ayurveda best nervine tonic quickly gives Radiant Health, removes constipation, relieves hip and back pain, Rheumatism, Vatharoga, Asthma, Bleeding Piles cured. Most popular and leading Vajikarana and Rasayana. 1 lb Rs 10-. Postage Extra. AYURVEDA VAIDYA T. V. JAYARAMA SASTRI, Veera Ragava Vaidyasala, Srirangam, S. India.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿ ಹಾಕಿಕೊಳ್ಳುವುದು.

P. o. Box No. 3219, BOMBAY 3-

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನ ನಾಶಮಾಡುತ್ತೆ. ೧೫ ದಿನಗಳಿಗೆ ಬರುವ ೮ ಔನ್ಸ್ ಸೀಸೆಗಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಹಣಕ್ಕೆ ಅತ್ಯಂತ ಸುರಕ್ಷಿತತೆ ಮತ್ತು ಭದ್ರತೆ, ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅತ್ಯಂತ ತ್ವರಿತ ಹಾಗೂ ತೃಪ್ತಿಕರ ಸೇವೆ; ಮತ್ತು ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳಲ್ಲಿ ಯೋಗ್ಯ ಸಲಹೆ; ಬೇಕಿದ್ದರೆ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಡಾ| ಯು. ಸುಂದರ ರಾವ್ ಪೈ, ಎಮ್. ಬಿ., ಬಿ. ಎಸ್., ಅಧ್ಯಕ್ಷ.

ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ., ಜನರಲ್ ಮೆನೇಜರ್.

Estd.- 1906] [H. O. UDIPI (S.India).

THE CANARA BANKING CORPORATION LIMITED

ಮೇ ತಿಂಗಳಿಗೆ ಬ್ರಿಟನಿನಲ್ಲಿ ಹೊಸ ಚುನಾವಣೆ

ಬ್ರಿಟನಿನಲ್ಲಿ ಚರ್ಚಿಲ್ಲರ ನಿರ್ಗಮನದ ಬಳಿಕ ಪ್ರಧಾನ ಮಂತ್ರಿ ಸ್ಥಾನವನ್ನು ಏರಿರುವ ಈಡನ್ನರು ಹೊಸ ಚುನಾವಣೆಗಳ ದಿನವನ್ನಾಗಿ ಮೇ ತಿಂಗಳ ೨೬ನೇ ತಾರೀಕನ್ನು ಗೊತ್ತುಪಡಿಸಿದ್ದಾರೆ. ಅವರು ಇದಕ್ಕೆ ಮುಂಚೆ ಹಣಕಾಸಿನ ಖಾತೆಯ ಬಟ್ಲರರೊಡನೆ ಗಹನವಾದ ಸಮಾಲೋಚನೆಗಳನ್ನು ನಡೆಸಿದರು. ಹೊಸ ಚುನಾವಣೆಗಳಲ್ಲಿ ನಿಶ್ಚಿತ ಜಯ ಸಂಪಾದಿಸಲಾಗುವಂತೆ, ಪ್ರಜೆಗಳಿಗೆ ನೇರಾದ ಕರಭಾರದಲ್ಲಿ ಕೆಲವು ಪರಿಹಾರಗಳ ನ್ನೊದಗಿಸಬೇಕೆಂದು ಅವರು ಹವಣಿಸಿರುವುದಾಗಿ ಹೇಳಲಾಗುತ್ತದೆ.

ಅನುಕೂಲ ಸಂಗತಿಗಳು

ಟೋರಿಗಳು ಹೀಗೆ ನೇರಾಗಿ ನಾಗರಿಕರ ಮೇಲೆ ಬಲೆ ಬೀಸುವುದಲ್ಲದೆ, ಇತರ ಕೆಲವು ಅನುಕೂಲತೆಗಳ ಲಾಭವನ್ನು ಪಡೆಯಲೂ ಹೊರಟಿರುವಂತೆ ಕಾಣುತ್ತದೆ. ಪ್ರತಿಪಕ್ಷದವರಾದ ಕೂಲಿಕಾರರಲ್ಲಿ ಬೇವಾನರ ಪ್ರಕರಣ ಬಿಕ್ಕಟ್ಟನ್ನೂ ಭಿನ್ನಾಭಿಪ್ರಾಯವನ್ನು ಉಂಟುಮಾಡಿರುವುದು ಟೋರಿಗಳಿಗೆ ಕಾಣುವ ಲಾಭ. ಈಚೆಗೆ ಕೌಂಟಿಗಳಿಗೆ ಚುನಾವಣೆ ನಡೆದಾಗ ಟೋರಿಗಳು ಬಹುಮತ ಪಡೆದಿರುವುದೂ ಈಡನ್ನರ ಭರವಸೆಯನ್ನು ಹೆಚ್ಚಿಸಿರುತ್ತದೆ ಎಲ್ಲರಿಗೂ ಪೂರ್ಣ ಕೆಲಸವನ್ನು ಒದಗಿಸಲು ಟೋರಿಗಳ ಇದು ವರೆಗಿನ ಆಳಿಕೆ ಸಮರ್ಥವಾಗಿರುವುದೂ ಆರ್ಥಿಕ ವಾತಾವರಣ ಸ್ಥಿಮಿತದಲ್ಲಿರುವುದೂ ಟೋರಿಗಳ ವಿಜಯಕ್ಕೆ ಅನುಕೂಲವಾದ ವಿಷಯವಾಗುತ್ತದೆ

ಕೂಲಿಕಾರರ ಆಶಾವಾದ

ಇದರಿಂದ ಕೂಲಿಕಾರ ಪಕ್ಷಕ್ಕೆ ಜಯ ಲಭಿಸುವ ಆಶೆಯೇ ಇಲ್ಲವೆಂದಲ್ಲ. ಈಗಿನ ಪಾರ್ಲಿಮೆಂಟಿನಲ್ಲಿ ಟೋರಿಗಳಿಗಿರುವ ಬಹುಮತ ಅತ್ಯಲ್ಪ. ಅಲ್ಲದೆ, ಆರ್ಥಿಕ ವಾತಾವರಣವು ಒಟ್ಟಿನಲ್ಲಿ ಅಷ್ಟು ತೃಪ್ತಿಕರವಾಗಿ ಕಾಣುವುದಿಲ್ಲ—ಏಕೆಂದರೆ, ವಿದೇಶಗಳೊಡನೆ ವ್ಯಾಪಾರ ಇಳಿ ಮುಖವಾಗುತ್ತಾ ಹೋಗುತ್ತಿದೆ, ಹೊರಗೆ ಕೊಡುವ ಹಣವೇ ಹೆಚ್ಚಾಗಿರುತ್ತದೆ. ಬೇವಾನರೊಡನೆ ವಿರಸ ಪ್ರಸಂಗ ಘಟಿಸಿದ್ದರೂ ಅವರನ್ನು ಪಕ್ಷದಿಂದ ಹೊರ ತಳ್ಳುವ ಅಧಿಕ ಪ್ರಸಂಗಕ್ಕೆ ಪಕ್ಷದ ಕಾರ್ಯಕಾರಿ ಸಮಿತಿ ಹೋಗಲಿಲ್ಲ. ಅಷ್ಟೇಯಲ್ಲ—ಕೂಲಿಕಾರ ಮಂತ್ರಿ ಮಂಡಳ ರಚಿಸಲ್ಪಟ್ಟರೆ, ಬೇವಾನರಿಗೊಂದು ಸ್ಥಾನವನ್ನು ಅದರಲ್ಲಿ ಕೊಡುವ ಆಶ್ವಾಸನೆಯನ್ನು ಆಟ್ಲೀ ಕೊಟ್ಟಿದ್ದಾರೆ. ರಾಷ್ಟ್ರೀಕರಣದ ಪಲ್ಲವಿಯನ್ನು ಅವರಿನ್ನೂ ಬಿಟ್ಟಿರುವುದಿಲ್ಲ. ಇದರಿಂದ ಮತ್ತು ಈಗಾಗಲೇ ಪಾರ್ಲಿಮೆಂಟಿನಲ್ಲಿ ಪಡೆದಿರುವ ಸ್ಥಾನಬಲದಿಂದ ಅವರು ನಿಕರದ ಹೋರಾಟ ಕೊಡುವುದು ಖಂಡಿತ.

ಪಾಕಿಸ್ತಾನಕ್ಕೆ ಘಟನೆ ರೂಪಿಸುವ ಪರಿಷತ್ತು

ಘಟನಾತ್ಮಕ ಬಿಕ್ಕಟ್ಟು

ನಮ್ಮ ನೆರೆ ರಾಷ್ಟ್ರವಾದ ಪಾಕಿಸ್ತಾನದಲ್ಲಿ ಘಟನಾತ್ಮಕವಾದ ಬಿಕ್ಕಟ್ಟು ತಲೆದೋರಿರುತ್ತದೆ. ಗವರ್ನರ ಜನರಲರು ಘಟನಾ ಸಮಿತಿಯನ್ನು ಕಳೆದ ಆಕ್ಟೋಬರದಲ್ಲಿ ವಿಸರ್ಜಿಸಿದರು. ಇದರಿಂದ ನೊಂದ ಘಟನಾ ಸಮಿತಿಯ ಅಧ್ಯಕ್ಷರು ಸಿಂಧಿನ ನ್ಯಾಯಸ್ಥಾನದಲ್ಲಿ ವ್ಯಾಜ್ಯ ಹೂಡಿ, ಗೆದ್ದರು. ಆದರೆ ಸರಕಾರ ಶ್ರೇಷ್ಠ ನ್ಯಾಯಸ್ಥಾನಕ್ಕೆ ಅಪೀಲು ಮಾಡಿದಾಗ, ಕೆಳ ಕೋರ್ಟಿಗೆ ಈ ಪ್ರಕರಣವನ್ನು ವಿಚಾರಿಸಲು ಘಟನಾ ಸಮಿತಿ ಮಾಡಿದ ಶಾಸನಕ್ಕೆ ಗವರ್ನರ ಜನರಲರು ಸಹಿ ಹಾಕಿಲ್ಲವೆಂಬ ಕಾರಣದಿಂದ ಆ ತೀರ್ಪನ್ನು ರದ್ದುಗೊಳಿಸಿತು. ಇದರಿಂದ ಸರಕಾರಕ್ಕೆ ಗೆಲುವಾದಂತೆ ಕಂಡರೂ ಘಟನಾ ಸಮಿತಿಯು ಮಾಡಿದ್ದ ನಲ್ವತ್ತೈದಕ್ಕಿಂತಲೂ ಹೆಚ್ಚು ಶಾಸನಗಳಲ್ಲಿ ಒಂದಕ್ಕೂ ಗವರ್ನರ ಜನರಲರು ಸಹಿ ಹಾಕಿಂದಿಲ್ಲವಾದುದರಿಂದ, ಎಲ್ಲವು ನಿಷ್ಫಲವೆಂದಾಯಿತು.

ಕುಸಿದು ಬಿದ್ದ ಆಡಳಿತ

ಇದನ್ನು ತಪ್ಪಿಸಲು ಗವರ್ನರ ಜನರಲರು ಮಾರ್ಚಿಯಲ್ಲಿ ಸುಮಾರು ೩೫ ಶಾಸನಗಳಿಗೆ ತಮ್ಮ ಅನುಮತಿಯನ್ನು ಕೊಟ್ಟು ಅವೆಲ್ಲವನ್ನೂ ಊರ್ಜಿತದಲ್ಲಿರಿಸಲು ಸುಗ್ರೀವಾಜ್ಞೆ ಹೊರಡಿಸಿದರು. ಇದರ ಕ್ರಮಬದ್ಧತೆ ಮೊನ್ನೆ ಪುನಃ ಶ್ರೇಷ್ಠ ನ್ಯಾಯಸ್ಥಾನದಲ್ಲಿ ಎತ್ತಲ್ಪಟ್ಟಿತು. ನ್ಯಾಯಸ್ಥಾನವು ಘಟನಾತ್ಮಕವಾದ ವಿಷಯಗಳನ್ನು ಪರಿಶೀಲಿಸಿ, ಗವರ್ನರ ಜನರಲರು ಹೊರಡಿಸಿದ ಸುಗ್ರೀವಾಜ್ಞೆ ಅಕ್ರಮವೆಂದು ಸಾರಿತು. ಇದರಿಂದ ಕೋಲಾಹಲವೇ ಕೋಲಾಹಲವುಂಟಾಯಿತು. ಪಾಕಿಸ್ತಾನದಲ್ಲಿ ಯಾವ ಕಾಯಿದೆಯೂ ಇಲ್ಲದಂತಾಗುವ, ಅಲ್ಲಿಯ ನಾಣ್ಯ ವ್ಯವಹಾರಕ್ಕೆ ಭದ್ರತೆಯೇ ಇಲ್ಲದೆ ಹೋಗುವ, ಆಡಳಿತ ಯಂತ್ರವೇ ಕುಸಿದು ಬೀಳುವ ಲಕ್ಷಣ ಗೋಚರಿಸಿತು

ಮಂತ್ರಿಮಂಡಳದ ನಿಶ್ಚಯ

ಇದೀಗ ಮಂತ್ರಿಮಂಡಳದೊಡನೆ ಪೂರ್ಣ ಪರಾಮರ್ಶೆಯನ್ನು ನಡೆಸಿದ ಬಳಿಕ, ಗವರ್ನರ ಜನರಲರು ಹಿಂದಿನ ಶಾಸನಗಳನ್ನೆಲ್ಲ ಹೇಗೆ ಊರ್ಜಿತದಲ್ಲಿರಿಸಬಹುದೆಂಬ ವಿಷಯದ ಕುರಿತು ಶ್ರೇಷ್ಠ ನ್ಯಾಯಸ್ಥಾನದ ಸಲಹೆ ಕೇಳಿರುವರೆಂದೂ ಅದು ದೊರಕುವ ವರೆಗೆ ಎಂದಿನಂತೆ 'ಸರಕಾರ'ದ ಯಂತ್ರ ಕೆಲಸ ಮಾಡುವುದೆಂದೂ ತಿಳಿದುಬರುತ್ತದೆ. ಇದಲ್ಲದೆ, ಹಿಂದಿನ ಘಟನಾಸಮಿತಿಯ ವಿಸರ್ಜನೆಯ ಕ್ರಮಬದ್ಧತೆಯು ಇನ್ನೂ ವಿವಾದಾತ್ಮಕವಾಗಿರುವಾಗಲೇ— ಏಕೆಂದರೆ ಶ್ರೇಷ್ಠ ನ್ಯಾಯಸ್ಥಾನ ಈ ವಿಷಯದಲ್ಲಿ ಯಾವ ಅಭಿಪ್ರಾಯವನ್ನೂ ಪ್ರಕಟಿಸಿಲ್ಲ—ರಾಷ್ಟ್ರಕ್ಕೆ ಘಟನೆಯೊಂದನ್ನು ರಚಿಸಲು ಇದೇ ಮೇ ೧೦ರಲ್ಲಿ ಪರಿಷತ್ತೊಂದನ್ನು ಸೇರಿಸಬೇಕೆಂದು ಸರಕಾರ ನಿಶ್ಚಯಿಸಿರುತ್ತದೆ.

ಪ್ರತಿನಿಧಿತ್ವ

ಗವರ್ನರ ಜನರಲರು ಈ ಕುರಿತು ಹೊರಡಿಸಿದ ಸುಗ್ರೀವಾಜ್ಞೆಯು ಪಂಜಾಬಿನ ಮೂರಿಯಲ್ಲಿ ಇದರ ಮೊದಲನೆಯ ಸಭೆ ಜರಗಬೇಕೆಂದೂ ಒಟ್ಟು ೮೦ ಸದಸ್ಯರು ಇದರಲ್ಲಿ ಭಾಗ ವಹಿಸಬೇಕೆಂದೂ ಹೇಳುತ್ತದೆ. ಈ ಸದಸ್ಯರನ್ನು ಈಗಿನ ಶಾಸನ ಸಭೆಗಳು ಆರಿಸುತ್ತವೆ. ಸದಸ್ಯರಲ್ಲಿ ಏಳು ಮಂದಿಯನ್ನು ಪೂರ್ವ ಬಂಗಾಲದ ಮುಸ್ಲಿಮೇತರ ಸದಸ್ಯರಿಂದ ಆರಿಸಲಾಗುತ್ತದೆ; ಆ ರಾಜ್ಯಕ್ಕೆ ಒಟ್ಟು ೪೦, ಪಂಜಾಬಿಗೆ ೨೧, ವಾಯುವ್ಯ ಸರಹದ್ದಿಗೆ ೪ ಮತ್ತು ಸಿಂಧಿಗೆ ೫ ಸ್ಥಾನಗಳೂ, ಶಾಸನ ಸಭೆಗಳಿಲ್ಲದ ಬಲೂಚಿಸ್ತಾನ, ಬಹವಾಲಪುರ ಮುಂತಾದ ಪ್ರದೇಶಗಳಿಗೆ ಗವರ್ನರ ಜನರಲರಿಂದ ನೇಮಕಗೊಂಡ ಸದಸ್ಯರುಳ್ಳ ೭ ಸ್ಥಾನಗಳೂ ಸುಗ್ರೀವಾಜ್ಞೆಯಂತೆ ಸಿಗುತ್ತವೆ ಘಟನಾ ಪರಿಷತ್ತು ಆರು ತಿಂಗಳೊಳಗೆ ತನಗೊಪ್ಪಿಸಿದ ಕೆಲಸ ಮುಗಿಸಬೇಕೆಂದೂ ಸುಗ್ರೀವಾಜ್ಞೆ ವಿಧಿಸುತ್ತದೆ.

ಘಟನೆಯ ಕರಡು

ಪಾಕಿಸ್ತಾನದ ಸರಕಾರವು ಘಟನೆಯ ಕರಡನ್ನು ಈಗಾಗಲೇ ತಯಾರಿಸಿದೆಯೆಂದೂ ಅದನ್ನು ಈ ಪರಿಷತ್ತಿನ ಮುಂದೆ ಮಂಡಿಸಲಾಗುವುದೆಂದೂ ವರದಿಗಳು ಹೇಳುತ್ತವೆ. ಇದರನ್ವಯ ಪಾಕಿಸ್ತಾನಕ್ಕೆ ಒಬ್ಬ ಚುನಾಯಿತ ಅಧ್ಯಕ್ಷನಿದ್ದು, ಅವನ ಕಾರ್ಯಾವಧಿ ೪ ವರ್ಷ ಅವನು ತನ್ನ ಮನಸ್ಸಿಗೆ ಬಂದ ಮಂತ್ರಿಗಳನ್ನು ನೇಮಿಸಿಕೊಂಡು ಆಳುತ್ತಾನೆ – ಆದು ಶಾಸನ ಸಭೆಗೆ ಹೊಣೆಗಾರವಿರುವುದಿಲ್ಲ. ಮುಖ್ಯ ಮಂತ್ರಿಯು ಕೇವಲ ಶಾಸನ ಸಭೆಯ ಸದಸ್ಯನಾಗಿದ್ದು, ಉಪಾಧ್ಯಕ್ಷನೆಂದು ಸಾರಲ್ಪಡುವ ವ್ಯಕ್ತಿಯಿಂದ ನಿರ್ವಹಿಸಲ್ಪಡುತ್ತವೆ. ಹಣಕಾಸಿನ ವಿಧೇಯಕಗಳ ವಿಷಯದಲ್ಲಿ ತಮ್ಮ ಸ್ವರವೆತ್ತುವ ಮೂಲಕ ಶಾಸನಾಂಗವು ಅಧ್ಯಕ್ಷನ ಮೇಲೆ ನಿಯಂತ್ರಣ ಇಡಬಲ್ಲುದು ಹೀಗಿರುವ ಕರಡನ್ನು ಘಟನಾ ಪರಿಷತ್ತು ಬೇಕಾದಂತೆ ತಿದ್ದಬಹುದು.

ನ್ಯಾಯ ನಿರ್ಣಯ ಕಷ್ಟ

ಇದರಿಂದ ಸದ್ಯದ ಮಟ್ಟಿಗೆ ಪಶ್ಚಿಮ ಪಾಕಿಸ್ತಾನವನ್ನು ಏಕಘಟಕವಾಗಿ ರೂಪಿಸುವ ಕೆಲಸ ನಿಂತಂತೆ ಕಾಣುತ್ತದೆ. ಆದರೆ ಸರಕಾರ ರಚಿಸಿರುವ 'ಘಟನೆಯ ಕರಡಿನಲ್ಲಿ ಪೂರ್ವ ಬಂಗಾಲಕ್ಕೆ ನ್ಯಾಯವಾಗಿ ಸಲ್ಲಬೇಕಿರುವ ಹೆಚ್ಚಿನ ಸ್ಥಾನಗಳ ಬದಲು ಪಶ್ಚಿಮ ಪಾಕಿಸ್ತಾನದಷ್ಟೇ ಸ್ಥಾನಗಳನ್ನು ಕೊಡ ಮಾಡಿರುವುದನ್ನು ನೋಡಿದರೆ ಪಾಕಿಸ್ತಾನದ ಸರಕಾರ ಪ್ರಾಮಾಣಿಕತೆಯಿಂದ ವರ್ತಿಸುವುದಿಲ್ಲವೆಂದು ಹೇಳಬೇಕಾಗುತ್ತದೆ. ಗವರ್ನರ ಜನರಲರ ಕುರಿತು ಅಮೇರಿಕದ ಪತ್ರಿಕೆಯೊಂದು ಅವರು ದಕ್ಷ ಆಡಳಿತಗಾರರೆಂಬುದರಲ್ಲಿ ಅನುಮಾನವಿಲ್ಲ—ಆದರೆ ಅವರ ಆಜ್ಞೆಗಳು ನ್ಯಾಯಸಮ್ಮತವೆಂದೂ ಪ್ರಜಾಸತ್ತಾತ್ಮಕ ಕ್ರಮಗಳಿಗೆ ಯೋಗ್ಯವೆಂದೂ ಹೇಳುವುದು ಮಾತ್ರ ಕಷ್ಟ ಎಂದಿರುವುದನ್ನು ಇಲ್ಲಿ ಗಮನಿಸುವುದೊಳಿತು.

ಉಡ್ಪಿ. ಡಿ. ಮು. ಕೋರ್ಟಿನಲ್ಲಿ.

O. S. No. 60/1955.

ಮೂಡಬೆಟ್ಟು ಮಹಾಬಲ ಹೆಗ್ಡೆ—ವಾದಿ,

ಮತ್ತು—

1) ವಿ. ಸದಾಶಿವ ಹೆಗ್ಡೆ, ರಾಮಯ್ಯ ಹೆಗ್ಡೆರ ಮಗ, ಉಡ್ಪಿ ತಾಲೂಕು ಅಂಜಾರು ಗ್ರಾಮದ ಹೇರಂತಿಬೆಟ್ಟು. residing at 17 Rundall's Road, Vepery P.O. Madras— 2) The Industrial & Commercial Syndicate, Madras, represented by the 1 st: defendant, as its sole proprictor at 17 Rundall's Road, Vepery P.O. Madras. ಪ್ರತಿವಾದಿರು—

ಇವರೊಳಗೆ:—

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಸುವುದೇನಂದ್ರೆ—

1ನೇ ಪ್ರತಿವಾದಿಯು 2ನೇ ಪ್ರತಿವಾದಿ ಕಂಪೆನಿಯ ಸೋಲ್ ಪ್ರೊಪ್ರೈಟರನಾಗಿ ನಡಿಸಿಕೊಂಡು ಬರುವ ಬಿಸ್‌ನೆಸ್‌ನ ಗರ್ಜಿನ ಬಗ್ಗೆ ವಾದಿಯಿಂದ ತಾ. 12–3–1952 ರಲ್ಲು ಪಡೆದ ಸಾಲ ರೂಪ್ಯಾ 3000/–ರದ ಬಾಬ್ತು ವಾದಿಗೆ ಕೈಪೇಟಿನಲ್ಲಿ ಕಾಣ್ಸಿದಂತೆ ವಸೂಲಾದ ಆ್ಯಪೇಜು ಹೋಗುತ್ತಾ ಬಾಕಿ ಅಸಲುಬಡ್ಡಿವ ರಿಜಿಸ್ತ್ರಿ ನೋಟೀಸು ಖರ್ಚು ಕೂಡಾ ರೂ. 2387—1—0ಕ್ಕೆ ವಾದಿಯು ದಾಖ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವು ತಾ. 7–6–55ಕ್ಕೆ ಯಿಡೋಣಾಗಿದೆ— ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿರಿಗೆ ಉದಾಪಂಣೆ ಕೊಟ್ಟು ವ್ಯವಹರಿಸುವುದಿದ್ದಲ್ಲಿ ಮೇಲ್ಕಂಡ ತಾ. 7—6—55 ನೇ ದಿವ್ಸ ಬೆಳಿಗ್ಗೆ 10ಘಂಟೆಗೆ ಈ ಕೋರ್ಟಿನಲ್ಲಿ ಸ್ವತಹ ವ ವಕೀಲ ದ್ವಾರಾ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ವ್ಯಾಜ್ಯವು ಪೈಸಲು ಮಾಡಲ್ಪಡುವುದೆಂತ ನಿಮಗೆ ಈ ಮೂಲಕ ತಿಳಿಸೋಣಾಗಿದೆ.

P. V. Acharya.
Vakil For Plaintiff.

ಉಡುಪಿ. ತಾ. 13—1—55

ನಿಮ್ಮ ಎಲ್ಲಾ ಜೋತಿಷ್ಯ ವಿಷಯಗಳಿಗೆ ಇಂದೇ ಬರೆಯಿರಿ—

ಪಂಡಿತ ಕೆ. ಎಸ್. ಶಾಸ್ತ್ರಿ,

ಜ್ಯೋತಿರ್ವಿದ್ಯಾ ಸಂಶೋಧನಾ ಕೇಂದ್ರ

ಪಂಚವಟಿ, ನಾಶಿಕ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service, sound investment and a personal touch with its Policy-holders and Representatives. At whatever stage we welcome your associataion with the POPULAR.

THE POPULAR INSURANCE CO., LTD.

"POPULAR BUILDINGS" MANGALORE-1

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ **ಭುವನೇಂದ್ರ** ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೨೧--೪-'೫೫	೩೩

ಆಸ್ತಿ ಪಾಸ್ತಿಯ ಹಕ್ಕು

ಕಳೆದ ವಾರ ಲೋಕ ಸಭೆಯು ಐದು ಮಂದಿ ಸದಸ್ಯರು ವಿರುದ್ಧ ಮತವಿತ್ತರೂ ೩೬೨ ಮಂದಿಯ ಪ್ರಚಂಡಬಹುಮತದಿಂದ ಸ್ವೀಕರಿಸಿದ ಸಂವಿಧಾನ ತಿದ್ದುಪಡಿ ವಿಧೇಯಕವು ರಾಜ್ಯ ಸಭೆಯಲ್ಲಿ ಇದೇ ಮಂಗಳವಾರ ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿದ್ದು ಇಲ್ಲಿಯೂ ಅತ್ಯಧಿಕ ಬಹುಮತದಿಂದ ಸ್ವೀಕರಿಸಲ್ಪಡುವ ಲಕ್ಷಣ ಗೋಚರಿಸುತ್ತದೆ. ಇದರಿಂದ, ನೆಹರೂರವರು ಹೇಳಿದಂತೆ, ಎಲ್ಲ ಪಕ್ಷದವರಿಗೂ ತಿದ್ದುಪಡಿಯ ಆವಶ್ಯಕತೆ ಮತ್ತು ಅದರಿಂದ ಸಿಗುವ ಪ್ರಯೋಜನ ಮನವರಿಕೆಯಾಗಿದೆ ಎಂದು ಭಾವಿಸಲು ಅಡ್ಡಿಯಿಲ್ಲ. ಲೋಕಸಭೆಯಲ್ಲಿ ಕಾಂಗ್ರೆಸಿಗೆ ಸಾಕಷ್ಟು ಹೆಚ್ಚು ಬಹುಮತದ ಬಲವಿರುವುದರಿಂದ, ಅದು ಪಕ್ಷದ ಶಿಸ್ತಿನ ಕ್ರಮವನ್ನು ಜ್ಯಾರಿಗೆ ತಂದು, ಉಳಿದ ಪಕ್ಷಗಳ ಪ್ರತಿಭಟನೆಯನ್ನೂ ಲೆಕ್ಕಿಸದೆ, ಸಂವಿಧಾನ ತಿದ್ದುಪಡಿಯಂಥ ಕ್ರಮ ಸ್ವೀಕರಿಸಲ್ಪಡುವಂತೆ ಮಾಡಬಲ್ಲುದಾಗಿದ್ದರೂ ಈ ಸಲ ಅದಕ್ಕೆ ಎಲ್ಲರ ಬೆಂಬಲ ದೊರಕಿರುವುದೆಂಬುದು ಸ್ಮರಣೀಯವಾದ ವಿಷಯ. ಪ್ರತಿಪಕ್ಷಗಳು ತಿದ್ದುಪಡಿಯ ವ್ಯಾಪ್ತಿ ಮತ್ತು ಅದರ ಪರಿಣಾಮಗಳ ವಿಷಯದಲ್ಲಿ ಸರಕಾರ ಹೊಂದಿದ ಅಭಿಪ್ರಾಯಕ್ಕಿಂತ ತುಸು ಭಿನ್ನವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಟೀಕೆ ಮಾಡಿದ್ದುಂಟು; ಸ್ವತಃ ಕಾಂಗ್ರೆಸು ಸದಸ್ಯರಲ್ಲಿಯೇ ಕೆಲವರು ಸರಕಾರದ ನಿಲುವಿನ ಸ್ಪಷ್ಟೀಕರಣದ ವಿಷಯದಲ್ಲಿ ಗಂಭೀರವಾದ ಎಚ್ಚರಿಕೆಯ ಮಾತನ್ನು ಹೇಳಿದ್ದುಂಟು. ಆದರೆ, ಸಾಮಾನ್ಯವಾಗಿ ಎಲ್ಲ ಸದಸ್ಯರೂ ಈ ತಿದ್ದುಪಡಿಯನ್ನು ಮುಕ್ತ ಹೃದಯದಿಂದ ಸ್ವಾಗತಿಸಿದರೆಂಬ ಸಂಗತಿ, ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ತಿದ್ದುಪಡಿ ಎಷ್ಟು ಅನಿವಾರ್ಯವಾಗಿತ್ತೆನ್ನುವುದನ್ನು ತೋರಿಸುತ್ತದೆ. ಆದುದರಿಂದ ಪಕ್ಷದ ಶಿಸ್ತಿನ ಚಾಟಿಯೇಟಿನ ಬಲದಿಂದ ಕಾಂಗ್ರೆಸು ತಿದ್ದುಪಡಿಯನ್ನು ಪಾಸು ಮಾಡಿಕೊಂಡಿತೆಂದು ಯಾರೂ ದೂರುವುದಕ್ಕೆ ಅವಕಾಶವಿಲ್ಲ—ಎಲ್ಲರ ಒಪ್ಪಿಗೆಯಂತೆ, ಜನರು ಚುನಾಯಿಸಿದ ಪ್ರತಿನಿಧಿಗಳ ಸಮ್ಮತಿಯಂತೆ, ಕೈಗೊಂಡ ಕ್ರಮವಿದೆಂಬ ಸಮಾಧಾನವನ್ನೇ ಹೊಂದಬೇಕಾಗುತ್ತದೆ. ತಿದ್ದುಪಡಿಯ ಯೋಗ್ಯತೆಯ ಕುರಿತು ಇಷ್ಟು ಹೇಳಿದ ಬಳಿಕ, ಅದರ ಕಾರ್ಯಾಚರಣೆಯ ವಿಷಯದಲ್ಲಿ, ಸದಸ್ಯರು ಟೀಕಿಸಿದ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಕೆಲವು ಮಾತುಗಳನ್ನು ವಿವೇಚಿಸಿದರೆ ಅಪ್ರಸ್ತುತವೆನಿಸಲಾರದು. ಉದಾಹರಣೆಗೆ, ಆಸ್ತಿಪಾಸ್ತಿಯ ಹಕ್ಕುಗಳ ವಿಷಯದಲ್ಲಿ ನೆಹರೂರವರು ವ್ಯಕ್ತಪಡಿಸಿದ ಅಭಿಪ್ರಾಯವು, ಅವರೇ ಒಪ್ಪಿಕೊಂಡಂತೆ, ಎಲ್ಲ ಪ್ರಜೆಗಳಿಗೆ ಸಮ್ಮತವಾಗಲಿಕ್ಕಿಲ್ಲ. ರಾಷ್ಟ್ರವು ಸಮಾಜವಾದಿ ಮಾದರಿಯ ಸಮಾಜ ರಚನೆಯ ಧ್ಯೇಯವನ್ನಿಟ್ಟುಕೊಂಡಿದ್ದರೂ ವ್ಯಕ್ತಿಗತವಾಗಿ, ತಮಗೆ ಹಿರಿಯರಿಂದ ಬಂದ ಹಾಗು ತಾವು ಸಂಪಾದಿಸಿದ ಎಲ್ಲ ಬಗೆಯ ಆಸ್ತಿಪಾಸ್ತಿಗಳ ಹಕ್ಕುಬಾಧ್ಯತೆಯನ್ನೂ ಆಜೀವನ ಪರ್ಯಂತ ಅನುಭೋಗಿಸಬೇಕೆಂಬ ಹಂಬಲವಿಟ್ಟುಕೊಂಡ ಅನೇಕರು ನೋಡ ಸಿಗುತ್ತಾರೆ. ಅವರಿಗೆ ಭೂಮಿ ಹಾಗು ಹಣಕಾಸು ಅತ್ಯಂತ ಪವಿತ್ರವೆನಿಸುತ್ತದೆ; ಸಮಾಜದ ಹಿತಕ್ಕಾಗಿ ಅದರ ಕೆಲವಂಶವನ್ನು ತ್ಯಜಿಸಬೇಕೆಂಬ ಸರಕಾರದ ವಾದ ಅವರಿಗೆ ರುಚಿಸುವುದಿಲ್ಲ. ನಮ್ಮ ನಡುವಿರುವ ಈ ವರ್ಗದ ಜನರ ಮನನೋಯಿಸದಂತೆ ಹೇಗೆ ನಡೆದುಕೊಳ್ಳಬೇಕೆಂಬುದು ಸಮಸ್ಯೆಯಾಗಿದೆ. ಅವರ ಕಿವಿಯಲ್ಲಿ ಕಲ್ಯಾಣ ರಾಷ್ಟ್ರದ ತತ್ವಗಳನ್ನು ಊದಿ, ಹೃದಯ ಪರಿವರ್ತನೆಯಾಗುವಂತೆ ಕಾಂಗ್ರೆಸಿಗರೂ ಉಳಿದ ಪಕ್ಷದವರೂ ನಾಕಷ್ಟು ಪ್ರಯತ್ನವನ್ನು ಹಿಂದಿಗಿಂತಲೂ ಹೆಚ್ಚು ಭರದಿಂದ ನಡೆಸಬೇಕೆಂದು ನಾವು ಸೂಚಿಸುತ್ತೇವೆ. ಇದರಿಂದ ಶಾಸನವನ್ನು ಜ್ಯಾರಿಗೆ ತಂದಾಗ, ಹಿಂದೆ ಶಾಸನದ ವಿರುದ್ಧ ಗೊಣಗುತ್ತಿದ್ದವರೇ ಸ್ವೇಚ್ಛೆಯಿಂದ ಅದನ್ನು ಸ್ವೀಕರಿಸುವುದಕ್ಕೆ ಸಹಾಯವಾಗುತ್ತದೆ. ಅಹಿಂಸಾತ್ಮಕ ಕ್ರಾಂತಿಯ ಪವಾಡವನ್ನು ಸಾಧಿಸಿದ ಹಾಗಾಗುತ್ತದೆ. ಸರಕಾರದವರು ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ಹೇಳಲ್ಲದಿದ್ದರೂ, ಸಾಮಾನ್ಯ ಸಂದರ್ಭಗಳಲ್ಲೆಲ್ಲ—ಅದೇ ಹೆಚ್ಚಿನದು—ವಶಪಡಿಸಿಕೊಂಡ ಆಸ್ತಿಪಾಸ್ತಿಗೆ ಸಂಬಂಧಿಸಿದ ಎಲ್ಲ ಸಂಗತಿಗಳ ಪರ್ಯಾಲೋಚನೆಯ ಬಳಿಕ ಶಾಸನಾಂಗ ನಿರ್ಧರಿಸಿದಂತೆ ಪರಿಹಾರ ಧನ ಕೊಡಲಾಗುವುದೆಂದು ಹೇಳಿದ್ದಾರೆ. ತಿದ್ದುಪಡಿಯಿಂದ "ನಷ್ಟ"ಕ್ಕೆ ಗುರಿಯಾಗುವವರಿಗೆ, ನ್ಯಾಯಸ್ಥಾನವಲ್ಲ, ಸರಕಾರದ ಆಶ್ವಾಸನೆಯೇ ಈಗ ಉಳಿದಿರುವ ಆಶಾತಂತು. ಆದುದರಿಂದ ಸದ್ಯ ಅಸ್ತಿತ್ವದಲ್ಲಿರುವ ಕೇಂದ್ರ ಸರಕಾರ ಕೊಟ್ಟಿರುವ ಭರವಸೆಯ ಮಾತನ್ನು ಈಗ ಭಾರತದಲ್ಲಿರುವ ರಾಜ್ಯ ಸರಕಾರಗಳಷ್ಟೇ ಅಲ್ಲ, ಮುಂದಿನ ಚುನಾವಣೆಗಳ ಬಳಿಕ ಅಧಿಕಾರಕ್ಕೆ ಬರುವ ಸರಕಾರಗಳೂ ಮರೆಯಲಾಗದು. ಮರೆತ ಪಕ್ಷದಲ್ಲಿ ಸಂವಿಧಾನ ರಚನೆಯ ಕಾಲದಲ್ಲಿ ಸದಸ್ಯರು ಮಾಡಿದ್ದ ಭಾಷಣಗಳ ಅಭಿಪ್ರಾಯವನ್ನು ಗಮನಿಸದೆ ನ್ಯಾಯಸ್ಥಾನಗಳು ತೀರ್ಪು ಕೊಟ್ಟು ಕಲ್ಯಾಣ ರಾಷ್ಟ್ರ ನಿರ್ಮಾಣದ ದಾರಿಯಲ್ಲಿ ಆತಂಕ ಮಾಡಿದವೆಂದು ಈಗಿನ ಸರಕಾರ ದೂರಿದಂತೆ, ಆಸ್ತಿಪಾಸ್ತಿಯುಳ್ಳ ನಾಗರಿಕರು ಹಿಂದಿನ ಸರಕಾರದ ಮಾತು ಮುರಿದರೆಂದು ನಾಳೆಯ ಸರಕಾರವನ್ನು ಟೀಕಿಸಲು ಎಡೆಯಾದೀತು. ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನೂ ಪ್ರಸ್ತಾಪಿಸುವುದೊಳಿತು—ಅದೆಂದರೆ ಕಾರ್ಯಾಂಗದ ಹೊಣೆಗಾರಿಕೆ: ಶಾಸನಾಂಗವು ಪರಿಹಾರ ಧನದ ಮೊತ್ತ ನಿರ್ಧರಿಸುವುದಕ್ಕೂ ಈ ಮೊತ್ತವು ಆಸ್ತಿಪಾಸ್ತಿಯ ವಿಷಯದಲ್ಲಿ "ನಷ್ಟ"ಕ್ಕೆ ಗುರಿಯಾದ ವ್ಯಕ್ತಿಗೆ ಶೀಘ್ರದಲ್ಲಿ ಸಿಗುವುದಕ್ಕೂ ಕಾರ್ಯಾಂಗದ ತತ್ಪರತೆಯೇ ಜವಾಬ್ದಾರಿಯಾಗಿರುತ್ತದೆ. ಕಾರ್ಯಾಂಗವು ವಿಳಂಬ ಧೋರಣೆಯನ್ನು ವಹಿಸಿದರೆ, ತಪ್ಪು ಹೆಜ್ಜೆಯನ್ನಿಟ್ಟರೆ, ಉದಾಸೀನತೆಯನ್ನು ತೋರಿಸಿದರೆ, ಶಾಸನಾಂಗದ ನಿರ್ಣಯ ಮತ್ತು ಅದರ ಕಾರ್ಯಾಚರಣೆಯಲ್ಲಿ ವ್ಯತ್ಯಯವಾಗಿ ನಾಗರಿಕರಿಗೆ ತೊಂದರೆಯಾಗುವ ಸಂಭವ ಹೆಚ್ಚುತ್ತದೆ. ಲೋಕ ಸಭೆಯಲ್ಲಿ ಮೊನ್ನೆ ಮಾತನಾಡಿದ ಕೆಲವರು ಸದಸ್ಯರು ಪಂಜಾಬು ಮತ್ತು ದಾಮೋದರ ನದಿವಲಯದಲ್ಲಿ ವಶಪಡಿಸಿಕೊಂಡ ಆಸ್ತಿಗೆ ಪರಿಹಾರವನ್ನು ಕ್ಲಪ್ತ ಸಮಯದಲ್ಲಿ ಕೊಡದೆ, ಅಷ್ಟೇನೂ ಅನುಕೂಲವಂತರಲ್ಲದ ಸಾಮಾನ್ಯ ಪ್ರಜೆಗಳ ಉದರ ನಿರ್ವಾಹಕ್ಕೆ ಸರಕಾರ ಅಡಚಣೆಯುಂಟು ಮಾಡಿದೆಯಾಗಿ ದೂರಿದರು. ಕಾರ್ಯಾಂಗದ ಮೇಲೆ ಬಿದ್ದ ಭಾರವು ಹೆಚ್ಚುತ್ತಾ ಹೋದಂತೆ ಅಲ್ಲಿ ಜಡತ್ವವೂ ಲೋಪದೋಷಗಳೂ ಎಲ್ಲಕ್ಕಿಂತ ಹೆಚ್ಚಾಗಿ ವಿಳಂಬವೂ ಕಾಣಿಸಿಕೊಳ್ಳದಿರದೆಂದು ನಮ್ಮ ಅನುಭವವು ಹೇಳುತ್ತದೆ. ಇದು ನಾಗರಿಕರ ನಿತ್ಯ ಜೀವನದಲ್ಲಿ ಕಿರುಕುಳವನ್ನುಂಟು ಮಾಡುವುದರಿಂದ ಅಧಿಕ ಜಾಗರೂಕತೆಯನ್ನು ವಹಿಸುವುದು ಇಷ್ಟವಾಗಿದೆ. ಸರಕಾರದವರು ಇವನ್ನು ಗಮನಿಸುವರೆಂದು ನಾವು ನಂಬುತ್ತೇವೆ, ಮತ್ತು ಶಾಸನಾಂಗದಲ್ಲಿ ಜನರನ್ನು ಪ್ರತಿನಿಧಿಸುವ ಸದಸ್ಯರು ಸರಕಾರದಿಂದ ಇಂಥ ಅಪ್ರಿಯ ಪ್ರಸಂಗಗಳು ಘಟಿಸದಂತೆ ಪರಿಸ್ಥಿತಿಯನ್ನು ನಿರೀಕ್ಷಿಸುತ್ತಿರಬೇಕೆಂದೂ ಆಶಿಸುತ್ತೇವೆ.

ಪೊಪ್ಯುಲರಿನ ಪ್ರಗತಿ

ಮಂಗಳೂರಿನ "ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್" ಎಂಬ ಜೀವವಿಮಾ ಸಂಸ್ಥೆಯ ೧೯೫೪ನೇ ವರ್ಷದ ಆಯವ್ಯಯ ಮುತ್ತಿತರ ಲೆಕ್ಕ ಪತ್ರಗಳ ವರದಿಯು ಆಶಾದಾಯಕವಾದ ಅಂಶಗಳನ್ನು ಹೊರಗೆಡವುತ್ತದೆಂದು ತಿಳಿಸಲು ನಮಗೆ ತುಂಬ ಸಂತೋಷವಾಗುತ್ತದೆ. ೨೫ ವರ್ಷಗಳ ಸೇವೆಯನ್ನು ಸಾರ್ವಜನಿಕರಿಗೆ ಸಲ್ಲಿಸಿದ ಈ ಸಂಸ್ಥೆಯು ವರದಿ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತಲೂ ಹೆಚ್ಚು, ಅಂದರೆ ೩೬೦೦೦೦೦ರೂಪಾಯಿಯ ಹೊಸ ವ್ಯವಹಾರವನ್ನು ಮಾಡಿತು. ಬಡ್ಡಿ ಮುತ್ತಿತರ ರೀತಿಯ ಆದಾಯವೂ ಗಣನೀಯವಾಗಿ ಹೆಚ್ಚಿಕೊಂಡಿತು. ಇದರಿಂದ ಕಂಪೆನಿಯು ವೆಚ್ಚದ ಪ್ರತಿಶತ ಪ್ರಮಾಣವನ್ನು ಹಿಂದಿನ ವರ್ಷಕ್ಕಿಂತ ಇಳಿಸಲು ಶಕ್ಯವಾಯಿತು. ಸಂಸ್ಥೆಯ ಆದಾಯ ಸ್ರೋತವಾದ ಆಸ್ತಿ ಮೂಲಗಳನ್ನೆಲ್ಲ ಭದ್ರವಾಗಿ ನಿಕ್ಷೇಪಿಸಿದ್ದು, ಪ್ರಸ್ತುತ ಪೇಟೆಯ ದರದ ದೃಷ್ಟಿಯಿಂದ ಅವುಗಳ ಬೆಲೆ ಮುರಿ ಇಳಿದಿರುವಂತೆ ಕಂಡುಬಂದರೂ ಸಾಕಷ್ಟು ಕಾಪ್ಪು ನಿಧಿಯನ್ನಿಡಗಿಸಿರುವುದರಿಂದ ಸಂಸ್ಥೆಯಕ್ಕೇನೇನೂ ಅವಕಾಶವಿದುದ್ದಿಲ್ಲ. ಕಂಪೆನಿಯ ಜೀವವಿಮೆಗೆ ಈ ವರ್ಷ ಸುಮಾರು ೫ ಲಕ್ಷ ರೂಪಾಯಿಗಳು ಸೇರಿಸಲ್ಪಟ್ಟಿದ್ದು, ಒಟ್ಟು ಮೊತ್ತವು ೪೩ ಲಕ್ಷ ರೂಪಾಯಿಯನ್ನು ಮೀರುತ್ತದೆ. ಹಿಂದಿನ ವರ್ಷಕ್ಕಿಂತ ಆದಾಯದ ಪ್ರಮಾಣ ಹೆಚ್ಚಿರುವುದೂ ವೆಚ್ಚದ ಪ್ರಮಾಣ ಇಳಿಮುಖವಾಗಿರುವುದೂ ಕಂಪೆನಿಗೆ ಈಗ ಸಾಧ್ಯವಾಗುತ್ತಿರುವ ಆರನೇ ವಿಮಾಗಣನೆಯಲ್ಲಿ ಸಾಕಷ್ಟು ತೃಪ್ತಿಕರವಾದ ಬೋನಸನ್ನು ಸಾರಲು ಅನುಕೂಲವಾಗಿಕೊಡದಿರದು. ಕಂಪೆನಿಯ ದಕ್ಷತೆಯನ್ನು ಕಾಯ್ದುಕೊಂಡು ಬರುತ್ತಿರುವ ಆಡಳಿತ ವರ್ಗದ ಕಾರ್ಯಕಲಾಪವೂ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಬಿ. ವಿಠಲ ರಾಯರ ಮುನ್ನೋಟವೂ ಪ್ರಶಂಸನೀಯವಾಗಿದೆ.

ಉಡುಪಿ

ಅಧಿಕ ಕ್ಷೀರ ದಿನಾಚರಣೆಯು— ಸಹಕಾರಿ ಹಾಲು ಸರಬರಾಯಿ ಸಂಘದ ಆಶ್ರಯದಲ್ಲಿ ಡಾ! ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಸಮಾರಂಭವನ್ನು ಉದ್ಘಾಟಿಸಿದರು. ತಹಶೀಲ್ದಾರ್ ಶ್ರೀ ಲಿಂಗಪ್ಪಯ್ಯ ಮತ್ತು ಶ್ರೀ ಎ. ಜಿ. ಆಳ್ವೆಯವರು ಸಾಂದರ್ಭೋಚಿತ ಮಾತುಗಳನ್ನಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಎಮ್. ವಾಮನ ಭಟ್ಟರು ಧನ್ಯವಾದಗಳನ್ನಿತ್ತರು. ನಂತರ ಧರ್ಮಾರ್ಥ ಹಾಲು ವಿತರಣೆಯಾಯಿತು.

ಯೂನಿಯನ್ ಸ್ಟೈಟ್ ಸ್ಕೂಲಿನ ವಾರ್ಷಿಕೋತ್ಸವವು— ತಾ 19 ರಲ್ಲು ಮೋಡರ್ನ್ ಹಾ! ಎ! ದಾಳೆಯಲ್ಲಿ ಶ್ರೀ ಟಿ ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಶ್ರೀ ಕೆ. ಜಿ. ನಾಯಕರು ವರದಿಯನ್ನೋದಿದರು. ಶಾಲಾ ಸಮಿತಿ ಉಪಾಧ್ಯಕ್ಷ ಶ್ರೀ ಎ. ಜಿ. ಆಳ್ವೆಯವರು ಸ್ವಾಗತ ಭಾಷಣ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣ, 'ಅಪಾಯ ಡೇಂಜರ್ ಅಮ್ಮಯ್ಯ' ಕನ್ನಡ ನಾಟಕ ಮೊದಲಾದ ಕಾರ್ಯಕ್ರಮಗಳಾಗಿ ಉತ್ಸವವು ಕೊನೆಗೊಂಡಿತು.

ಶಾಲಾ ಉದ್ಘಾಟನೆ— ಮಲೆಯಾಳಿ ಮಾಧ್ಯಮದ ಶಾಲೆಯ ಉದ್ಘಾಟನೆಯು ತಾ 16 ರಲ್ಲು ಶ್ರೀ ಪಿ. ರಾಘವನ್, ಅವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಕೆ. ಕುಮಾರನ್, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಆಡಳಿತ ಮಂಡಳಿಗೆ ಶ್ರೀಗಳಾದ ಕುಂಞರಾಮನ್, ಕೆ. ಅಪ್ಪು, ಎಮ್. ಪಿ. ಆನಂದನ್, ಅವರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಶ್ರೀ ರಾಘವನ್‌ರವರು ಧನ್ಯವಾದಗಳನ್ನರ್ಪಿಸಿದರು.

ಡಾ! ಅಳಗಪ್ಪ ಚೆಟ್ಟಿಯಾರರಿಗೆ ಸತ್ಕಾರ— ಮಂಗಳೂರಿಗೆ ಆಗಮಿಸಿದ್ದ ಡಾ! ಆರ್. ಎಂ. ಅಳಗಪ್ಪ ಚೆಟ್ಟಿಯಾರವರು ಅಧ್ಯಕ್ಷರಾಗಿರುವ ಪ್ರಾಥಮಿಕ ಶಿಕ್ಷಣ ವಿಚಾರಣಾ ಸಮಿತಿಯವರು ತಾ. 18ನೇ ಮಧ್ಯಾಹ್ನ ಉಡುಪಿಗೆ ಭೇಟಿಯಿತ್ತರು. ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನವರು ಏರ್ಪಡಿಸಿದ ಭೋಜನ ಸತ್ಕಾರ ಸಮಾರಂಭದಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರು ಅತಿಥಿಗಳ ಪರಿಚಯ ಭಾಷಣ ಮಾಡಿ, ಚೆಟ್ಟಿಯಾರರ ಜನಸೇವೆಯನ್ನು ಪ್ರಸ್ತಾಪಿಸಿದರು. ಬಳಿಕ ಸಮಿತಿಯವರು ಸಂಸ್ಕೃತ ಕಾಲೇಜು, ಎಂ. ಜಿ. ಎಂ. ಕಾಲೇಜು, ಕಸ್ತೂರ್ಬಾ ಮೆಡಿಕಲ್ ಕಾಲೇಜುಗಳನ್ನು ಸಂದರ್ಶಿಸಿ ಮಂಗಳೂರಿಗೆ ಹಿಂತೆರಳಿದರು.

ಸಹಾಯಾರ್ಥ ನಾಟಕಗಳು— ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದ ಕಟ್ಟಡದ ಸಹಾಯಾರ್ಥವಾಗಿ ತಾ. 16ನೇ ರಾತ್ರಿ ಅಕ್ಷಯಾಂಬರ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ನಾಟಕಾಂತ್ಯದಲ್ಲಿ ಡಾ: ಎಸ್. ಆರ್. ಪೈಗಳು ಕಲಾಮಂಡಳಿಯವರನ್ನು ಪ್ರಶಂಸಿಸಿ ಮಾತನಾಡಿದರು.

ಕಟಪಾಡಿ ಪ್ರಕಾಶಿಕಾ ಹಾಗೂ ಹಿರಿಯ ಸಂಗೀತಾರು ಕೇಂದ್ರದ ಸಹಾಯಾರ್ಥವಾಗಿ ಯೂ ಕಟಪಾಡಿಯಲ್ಲಿ ತಾ. 16ರಂದು ಡಾ! ಕುಂದರ ರಾಮಪ್ಪಗಳ ಅಧ್ಯಕ್ಷತೆಯಲ್ಲಿ ನಾಟಕವೊಂದು ಜಯಶೀಲವಾಗಿ ಅಭಿನಯಿಸಲ್ಪಟ್ಟಿತು.

ಮಂತ್ರಿಗಳಿಗೆ ಮಾನಪತ್ರ— ಉಡುಪಿ ನಗರ ಸಭೆಯು ತಾ 15 ರಲ್ಲು ವೈಸ್ ಚೆಯರ್‌ಮೆನ್ ಶ್ರೀ ಯು ಎಸ್. ಇನಾಮ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ ಇದೇ ತಾ 27 ರಲ್ಲು ಉಡುಪಿಗೆ ಬರಲಿರುವ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜನಾದರರಿಗೆ ಮಾನ ಪತ್ರ ನೀಡಬೇಕೆಂದು ನಿರ್ಧಾರವಾಯಿತು.

ಮುನ್ಸಿಪಲ ಹೆಲ್ತ್ ಆಫೀಸರ್— ಡಾ! ಕಾನಾಡ ರಾಮಚಂದ್ರ ರಾಯರು ಇದೇ ತಾ. 9 ರಲ್ಲು ಕೆಲಸದಿಂದ ನಿವೃತ್ತರಾದರು. ಇವರು ಐದು ವರ್ಷ ಕಾಲ ಇಲ್ಲಿಯ ಹೆಲ್ತ್ ಆಫೀಸರರಾಗಿದ್ದುಕೊಂಡು ನಗರದ ಆರೋಗ್ಯದಾನದೆಯಲ್ಲಿ ತುಂಬಾ ಆಸಕ್ತಿ ವಹಿಸಿದ್ದರು.

ಆಫ್ರೇಸ್ಯ ರಾಷ್ಟ್ರಗಳ ಒಗ್ಗಟ್ಟು

ಪರಿಷತ್ತಿನಲ್ಲಿ ಪ್ರತಿನಿಧಿಗಳ ಭಾಷಣ

ಇಂಡೋನೇಶಿಯದ ಬಾಂಡುಂಗಿನಲ್ಲಿ ನೊನ್ನೆ ಸೋಮವಾರದಿಂದ ನಡೆಯುತ್ತಿರುವ ಆಫ್ರಿಕ ಮತ್ತು ಏಶ್ಯದ ಪ್ರಧಾನಿಗಳ ಪರಿಷತ್ತು ಜಗತ್ತಿನ ಐದರಲ್ಲಿ ಮೂರಂಶ, ಅಂದರೆ ೨೯ ರಾಷ್ಟ್ರಗಳ ೧೪೦ ಕೋಟಿ ಜನರ ಆಶೋತ್ತರಗಳ ಪ್ರತೀಕವಾಗಿದೆ. ಈ ರಾಷ್ಟ್ರಗಳು ಆವರಿಸಿದ ಭೂಭಾಗವು ೧೧೦ ಲಕ್ಷ ಚದರ ಮೈಲುಗಳಷ್ಟು ಅಂದರೆ ಜಗತ್ತಿನ ನೆಲದ ಕಾಲಂಶದಷ್ಟು ಆಗುತ್ತದೆ ಭಾಗವಹಿಸುವ ರಾಷ್ಟ್ರಗಳಲ್ಲಿ ೧೮ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಾನ ಪಡೆದಿವೆ; ೧೨ ರಾಷ್ಟ್ರಗಳು ಕೊಲೊಂಬೋ ಯೋಜನೆಯಲ್ಲಿ ಪ್ರಯೋಜನಗಳನ್ನು ಹೊಂದಿವೆ.

ಆರ್ಥಿಕ ಅವನತಿ

ರಾಜಕೀಯ ಶೋಷಣೆಯನ್ನು ಶತಮಾನಗಳಿಂದ ಅನುಭವಿಸುತ್ತಾ ಬಂದ ಈ ರಾಷ್ಟ್ರಗಳಿಗೆ ಬಹಳ ಮಿತವಾದ ಆದಾಯವಿರುತ್ತದೆ ಜಗತ್ತಿನ ವಾರ್ಷಿಕ ಆದಾಯದ ಎಂಟರಲ್ಲಿ ಒಂದು ಪಾಲಿನಷ್ಟು ಅಂದರೆ ೭೫೦ ಕೋಟಿ ಡಾಲರು, ಮಾತ್ರ ಆದಾಯ ಪ್ರಮಾಣವಿದ್ದು, ಇದು ಸಾಮಾನ್ಯ ಪ್ರಜೆಯೊಬ್ಬನಿಗೆ ವರ್ಷಕ್ಕೆ ೫೭ ಡಾಲರುಗಳಾಗುತ್ತದೆ. ಈ ಪ್ರಮಾಣ ಅಮೇರಿಕದಲ್ಲಿ ೧೮೨೨, ಕೆನಡದಲ್ಲಿ ೧೨೫೭ ಬ್ರಿಟನಿನಲ್ಲಿ ೭೭೪ ಮತ್ತು ಆಸ್ಟ್ರೇಲಿಯದಲ್ಲಿ ೯೧೨ ಡಾಲರುಗಳಾಗಿವೆ ಎಂಬುದನ್ನು ನೆನೆದರೆ ಆರ್ಥಿಕ ಅವನತಿಯು ಅರಿವಾಗುತ್ತದೆ.

ಅಭಿವೃದ್ಧಿಯ ಹಂಬಲ

ಹೀಗೆ ಅಭಿವೃದ್ಧಿಯನ್ನು ಹೊಂದದೆ ತೀರ ಹಿಂದುಳಿದಿರುವ ಏಶ್ಯ ಮತ್ತು ಆಫ್ರಿಕದ ಈ ರಾಷ್ಟ್ರಗಳು ತಮ್ಮ ಉನ್ನತಿಯ ಸ್ವಾರ್ಥ ದೃಷ್ಟಿಯಿಂದಲೇ ಜಾಗತಿಕ ಶಾಂತಿಯನ್ನು ಬಯಸುತ್ತವೆ ಎಂದರೂ ತಪ್ಪಲ್ಲ. ಅದರ ಜೊತೆಗೆ, ಆರ್ಥಿಕ ಶೋಷಣೆಗೆ ಇಂಬು ಕೊಡುವ ವಸಾಹತುವಾದ ಮುಂತಾದ ರಾಜಕೀಯ ಧೋರಣೆಯನ್ನು ಖಂಡಿಸುವುದೇ ಹಿತವೆಂದು ಅವು ಅಭಿಪ್ರಾಯಪಡುತ್ತವೆ. ಬಾಂಡುಂಗಿನ ಪರಿಷತ್ತು ಇದನ್ನು ಸ್ಪಷ್ಟವಾಗಿ ಸೂಚಿಸುವ ಲಕ್ಷಣವನ್ನು ಪ್ರಾರಂಭದ ಎರಡು ದಿನಗಳ ಕಾರ್ಯಕಲಾಪದಿಂದ ವ್ಯಕ್ತಪಡಿಸಿತು.

ಒಕ್ಕಟ್ಟಿನ ಮಂತ್ರ

ಪರಿಷತ್ತಿನ ಉದ್ಘಾಟನೆಯನ್ನು ಇಂಡೋನೇಶಿಯದ ಅಧ್ಯಕ್ಷ ಡಾ| ಸುಕರ್ಣರು ನೆರವೇರಿಸಿದರು. ಅವರು ತೀರ ಹಿಂದುಳಿದಿರುವ ಏಶ್ಯ ಮತ್ತು ಆಫ್ರಿಕದ ಪರಿಸ್ಥಿತಿಯನ್ನು ಊರ್ಜಿತ ಪಡಿಸಲು ಈ ರಾಷ್ಟ್ರಗಳು ಒಗ್ಗಟ್ಟಾಗಿರಬೇಕೆಂದು ಸಾರಿದರು. ದ್ವೇಷ ಬುದ್ಧಿಯನ್ನು ತ್ಯಜಿಸಿ ಸಹಕಾರದ ಮನೋಭಾವವನ್ನು ವ್ಯಕ್ತಪಡಿಸಬೇಕೆಂದು ಅವರು ವಿನಂತಿಸಿದರು. ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟ ಪವಿತ್ರವಾದುದೆಂದು ಹೇಳುತ್ತಾ ಅವರು ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಹಾನುಭೂತಿಪರ ವರ್ತನೆ ಕಂಡು ಬರಬೇಕೆಂದು ಉಪದೇಶಿಸಿದರು.

ರಾಷ್ಟ್ರ ಸಂಘದ ತಾಮ್ರಪಟ

ಸಂಗೀತ ಮೊದಲಾದ ಸಂತೋಷದ ಕಾರ್ಯಕ್ರಮಗಳಿಂದ ಕೂಡಿದ ಈ ಪರಿಷತ್ತಿಗೆ ಇಂಡೋನೇಶಿಯದ ಪ್ರಧಾನಿ ಜೋಜೊ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಹೊಂದಿದರು. ಅವರು ತಮ್ಮ ಭಾಷಣದಲ್ಲಿ ಸುಕರ್ಣರ ಅಭಿಪ್ರಾಯಗಳನ್ನೆ ವಿಸ್ತರಿಸಿ ಹೇಳಿದರಲ್ಲದೆ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವವು ಎಲ್ಲ ಸಾರ್ವಭೌಮ ರಾಷ್ಟ್ರಗಳಿಗೆ ಮುಕ್ತವಾಗಿರಬೇಕೆಂದೂ ಭದ್ರತಾ ಮಂಡಳದ ಸದಸ್ಯ ರಾಷ್ಟ್ರಗಳನ್ನು ಸಾಮಾನ್ಯ ಸಭೆಯೇ ಆರಿಸಬೇಕೆಂದೂ ಸೂಚಿಸಿದರು. ರಾಷ್ಟ್ರ ಸಂಘದ ತಾಮ್ರಪಟದಲ್ಲಿ ಈ ಬದಲಾವಣೆ ಮಾಡಬೇಕೆಂದು ಅವರು ಒತ್ತಾಯಿಸಿದರು.

ಚೀನೀ ಪ್ರಧಾನರ ಭಾಷಣ

ಚೀನದ ಪ್ರಧಾನಿ ಚೌ-ಎನ್-ಲಾಯರು ಪರಿಷತ್ತನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಇಲ್ಲಿ ನೆರೆದ ರಾಷ್ಟ್ರಗಳು ಭಿನ್ನಾಭಿಪ್ರಾಯವಿರುವ ಪ್ರಶ್ನೆಗಳ ವಿಷಯವನ್ನು ಚರ್ಚಿಸುವುದಕ್ಕಿಂತ ಸಾಮಾನ್ಯವಾಗಿ ಒಮ್ಮತ ಕಂಡು ಬರುವ ವಿಷಯಗಳನ್ನೆ ವಿಚಾರಿಸುವುದು ಇಷ್ಟವೆಂದು ಹೇಳಿದರು. ಸಿಂಹಳದ ಕೋಟಿಲವಾಲರು ಕಮ್ಯುನಿಸ್ಟರ ಸದಿಚ್ಛೆಯನ್ನು ಸಂದೇಹದಿಂದ ನೋಡಿದುದನ್ನು ಗಮನಿಸಿಯೋ ಏನೋ—ತಮ್ಮ ನೆರೆಯ ರಾಷ್ಟ್ರಗಳನ್ನು ಬುಡಮೇಲು ಮಾಡುವ ಇಚ್ಛೆ ಚೀನದ ಜನತಾ ಸರಕಾರಕ್ಕೆ ಇಲ್ಲವೆಂದು ಅವರು ಘೋಷಿಸಿದರು.

ಆತ್ಮ ರಕ್ಷಣೆಯ ಹಕ್ಕು

ಕೋಟಿಲವಾಲರಂತೆ ಪಾಕಿಸ್ತಾನದ ಪ್ರಧಾನ ಮಂತ್ರಿಗಳಿಂದಲೂ ಪಾಶ್ಚಾತ್ಯ ರಾಷ್ಟ್ರಗಳಿಗೆ ಪ್ರಿಯವಾದ ಮಾತು ಬಂದೀತೆಂದು ಸಾಮಾನ್ಯವಾಗಿ ಎಲ್ಲರೂ ಊಹಿಸಿದ್ದರು. ಆದರೆ ಹಾಗೆ ಆಗಲಿಲ್ಲವೆಂದೇ ಹೇಳಬಹುದು—ಅವರು ಪಂಚ ಶೀಲಗಳು ಕಮ್ಯೂನಿಸ್ಟರಿಂದ ಪ್ರವರ್ತಿಸಲ್ಪಟ್ಟವುಗಳೆಂಬುದರಿಂದ ತಮ್ಮ ಸಪ್ತಸೂತ್ರಗಳ ಕಂತೆಯನ್ನು ಬಿಚ್ಚಿದರು. ಅದರಲ್ಲಿ ರಾಷ್ಟ್ರಗಳಿಗೆಲ್ಲ ಏಕಾಂಗಿಯಾಗಿಯಾಗಲಿ, "ಸಾಮೂಹಿಕ" ವಾಗಿಯಾಗಲಿ ಆತ್ಮ ರಕ್ಷಣೆಯ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವಿರಬೇಕೆಂಬುದೊಂದೇ ವಿಶೇಷ.

ಯಶಸ್ಸು ಸ್ವತಃ ಸಿದ್ಧ

ನೆಹರುಗಳು ಪರಿಷತ್ತಿನಲ್ಲಿ ಏನು ಹೇಳಿದರೆಂಬುದು ಇದನ್ನು ಬರೆಯುವ ಸಮಯಕ್ಕೆ ತಿಳಿದು ಬಂದಿಲ್ಲ—ಒಂದೊಂದೇ ರಾಷ್ಟ್ರದ ಪ್ರತಿನಿಧಿಗಳು ತಮ್ಮ ದೇಶದ ಅಭಿಪ್ರಾಯವನ್ನು ಮಂಡಿಸುತ್ತಾ ಹೋಗುವ ಈ ಕ್ರಮದಲ್ಲಿ ನೆಹರುಗಳ ಸರತಿ ಕೊನೆಗೆ ಬರುವಂತೆ ಕಾಣುತ್ತದೆ. ಒಟ್ಟಾರೆ ಮೇಲೆ, ಕೆಲವು ನಿರ್ದಿಷ್ಟ ವಿಷಯಗಳ ಬಗ್ಗೆ ಆಯಾ ದೇಶಗಳ ನಿಲುಮೆಯಲ್ಲಿ ಬದಲಾವಣೆಯಿರುವುದು ಕಂಡುಬಂದರೂ ವ್ಯಾಪಕ ಸಮ್ಮತಿಯು ಕೆಲವು ಮಹತ್ವದ ವಿಷಯಗಳಿದ್ದುದೂ ಗೋಚರಿಸಿರುವುದರಿಂದ ಆಫ್ರೇಸ್ಯ ಪರಿಷತ್ತು ಯಶಸ್ವಿಯಾಗುವ ಪ್ರಶ್ನೆಯನ್ನು ಜೋಯಿಸರ ತೀರ್ಮಾನಕ್ಕೆ ಬಿಡಬೇಕಾಗಿಲ್ಲ.

ಡಾ. ಐನ್‌ಸ್ಟೀನರ ಮರಣ

ಅಣು ವಿಜ್ಞಾನಕ್ಕೆ ಆಧಾರ ಭೂತವಾದ ಸಾಪೇಕ್ಷ ಸಿದ್ಧಾಂತವನ್ನೂ ಗಣಿತ ಸೂತ್ರಗಳನ್ನೂ ಕಂಡು ಹಿಡಿದ ಡಾ. ಆಲ್ಬರ್ಟ್ ಐನ್‌ಸ್ಟೀನರು ತಮ್ಮ ೭೬ನೇ ವರ್ಷದಲ್ಲಿ ಇದೇ ೧೮ನೇ ದಿನಾಂಕ ಅಮೆರಿಕದ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಅವರು ನಿಜವಾದ ಅರ್ಥದಲ್ಲಿ ಸತ್ಯಶೋಧಕರೆಂದು ನೆಹರುಗಳೂ ಶಾಂತಿಗಾಗಿ ಹಾತೊರೆಯುತ್ತಿದ್ದ ಮಾನವನೆಂದು ಕೃಷ್ಣಮೆನೊನರೂ ಕಂಬನಿಸುರಿಸಿದರು. ವೈದ್ಯಕೀಯ ಸಂಶೋಧನೆಗಾಗಿ ತಮ್ಮ ಮಿದುಳು ಮತ್ತು ದೇಹದ ಬೇರೆ ಭಾಗಗಳನ್ನು ತೆಗೆದಿರಿಸಬಹುದೆಂದು ಐನ್‌ಸ್ಟೀನರು ಹೇಳಿದ್ದುದರಿಂದ, ಅಂತ್ಯ ಕ್ರಿಯೆಯು ಪೂರ್ವದಲ್ಲಿ ಆ ಭಾಗಗಳನ್ನು ತೆಗೆದಿಡಲಾಯಿತು.

ಹೊಸ ಸಂಶೋಧನೆ

ಅಮೇರಿಕದ ಡಾಕ್ಟರರೊಬ್ಬರು ಮಕ್ಕಳಪಾರ್ಶ್ವವಾಯು ರೋಗವನ್ನು ನೂರಕ್ಕೆ ತೊಂಭತ್ತರಷ್ಟು ಪರಿಣಾಮಕಾರಿಯಾಗಿ ತಡೆಗಟ್ಟುವ ದಾಕಿನ ಸಂಶೋಧನೆ ಮಾಡಿರುವರೆಂದು ೧೨ನೇ ತಾರೀಕು ಸಾರಲಾಯಿತು. ಜಗತ್ತಿನ ಉಳಿದ ಭಾಗದಲ್ಲೆಲ್ಲ ಒಟ್ಟು ಎಷ್ಟು ಮಕ್ಕಳು ಈ ರೋಗದಿಂದ ಬಳಲುವರೋ ಅಷ್ಟು ಹೆಚ್ಚು ಮಕ್ಕಳು ಅಮೇರಿಕ ಒಂದರಲ್ಲಿಯೇ ಈ ರೋಗದಿಂದ ನರಳುತ್ತಿದ್ದಾರೆ. ಇದರಿಂದ ಆ ದೇಶದ ಆರೋಗ್ಯ ಕ್ಷೇತ್ರದಲ್ಲಿ ಈ ಸಂಶೋಧನೆ ಮಾಡಿರುವ ಕ್ರಾಂತಿಯನ್ನು ಊಹಿಸಬಹುದು. ದಾಕು ತಯಾರಿಕೆಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ಸಂಯುಕ್ತ ರಾಷ್ಟ್ರಸಂಘದೊಡನೆ ಸಂಪರ್ಕವಿರುವ ಜಗತ್ತಿನ ೭೫ ರಾಷ್ಟ್ರಗಳಿಗೆ ಪೂರೈಸುವುದಕ್ಕೂ ಅಧ್ಯಕ್ಷ ಐಸೆನಹೋವರರು ಆಜ್ಞಾಪಿಸಿದ್ದಾರೆ.

ಜಮೀನುದಾರಿಯ ನಿರ್ಮೂಲನ

ಬಂಗಾಳದಲ್ಲಿ ಕಂಪೆನಿ ಸರಕಾರವು ಆಡಳಿತ ನಡೆಸುತ್ತಿದ್ದಾಗ (೧೭೯೩) ಕಾರ್ನವಾಲೀಸನು ಅನುಸರಿಸಿದ ನೀತಿಯೊಂದರಿಂದ ನಿರ್ಮಾಣಗೊಂಡ ಜಮೀನುದಾರಿ ಪದ್ಧತಿಯನ್ನು ಇದೀಗ ನಿರ್ಮೂಲಿಸಲಾಯಿತು. ೧೫ನೇ ತಾರೀಕಿನಂದು ನಿರಾಜುದ್ದೌಲನ ಅರಮನೆಯಲ್ಲಿ ಈ ಸಂಬಂಧದ ಘೋಷಣೆಯನ್ನು ಮಂತ್ರಿಗಳು ಮಾಡಿದರಲ್ಲದೆ, ಜಿಲ್ಲೆಯ ಮುಖ್ಯ ಪಟ್ಟಣಗಳಲ್ಲಿ ಕಲೆಕ್ಟರರು ಪ್ರಕಟಣೆಯನ್ನು ಓದಿ ಹೇಳಿದರು. ಇದರಿಂದ ೨೫ ಸಾವಿರ ಜಮೀನುದಾರರನ್ನೂ ೧೩ ಲಕ್ಷ ಮಧ್ಯಸ್ಥರನ್ನೂ ಕಿತ್ತುಹಾಕಿ ೭೩ ಲಕ್ಷ ರೈತರೊಡನೆ ಸರಕಾರ ನೇರಾದ ಸಂಬಂಧವಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಜನಾದರಣೀಯವಾದ ಪುಸ್ತಕಗಳು

ಕೆಲವೇ ಪ್ರತಿಗಳಿವೆ! ಈಗಲೇ ತರಿಸಿಕೊಳ್ಳಿ!

—ಹಿಂದಿನಿಂದ ನಿರಾಶರಾಗಬೇಡಿ!—

ವಾಚನಾಲಯದವರಿಗೆ ಯೋಗ್ಯ ಕಮೀಶನ್ನು!

ವ್ಹಿ. ಪಿ. ಇಲ್ಲ! ಮುಂಗಡ ಹಣ ಕಳಿಸಬೇಕು!!

೨ ಕಾದಂಬರಿ! ೨ ನಾಟಕ! ೩ ಕಥೆಗಳು! ೧ ಪ್ರಬಂಧ!

೧ ತೆರೆದ ಕಣ್ಣು (ಕಾ.)	೩-೦-೦	೫ ಆರು ಕಥೆಗಳು	೧-೪-೦
೨ ಪ್ರಾಣಾಹುತಿ (ಕಾ.)	೩-೮-೦	೬ ಪ್ರತಿಫಲ ೩. ಕಥೆಗಳು	೧-೪-೦
೩ ಸಂಗೊಳ್ಳಿರಾಯಣ್ಣ (ನಾ.)	೧-೮-೦	೭ ವೀರಾಗ್ರಣಿ ಎಚ್ಚಮ	೦-೫-೦
೪ ವಿಜಯಸಾಮ್ರಾಜ್ಯ (ನಾ.)	೧-೮-೦	೮ ಕನ್ನಡ ಸಾಹಿತ್ಯವಾಹಿನಿ	೨-೮-೦

ಮೇಲಿನ ೮ ಪುಸ್ತಕಗಳನ್ನು ಒಮ್ಮೆಲೆ ೧೪-೧೩-೦ ರೂ. M. O. ಕಳಿಸಿದವರಿಗೆ ಅಂಚೆ ವೆಚ್ಚ ನಾವೇ ವಹಿಸಿಕೊಂಡು ಪುಕ್ಕಟೆಯಾಗಿ ಕಳಿಸುವೆವು.

—ಯಾವ ಪುಸ್ತಕಗಳು ಬೇಕಾದರೂ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA WEEKLY

ADVERTISEMENT RATES

Display Advertisements:— Rs. 2/-8 per column inch for contracts of 50" or more and Rs.3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ ಭಗವದ್ಗೀತೆಯ ಸಮೂಲ ಭಾಷಾಂತರ.

ನವಯುಗ ಪ್ರೆಸ್ ಉಡುಪಿ.

ನೆನಪಿಗಾಗಿ

ಈ ವರೆಗೂ ಚಂದಾಹಣ ಕಳುಹಿಸದವರು ಈಗಲಾದರೂ ಕಳುಹಿಸುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇನೆ. ವಿ. ಪಿ. ಪಿ. ಮಾಡುವುದರಿಂದ ಪತ್ರಾಣೆ ವೆಚ್ಚಿಗೆ ಬೀಳುವುದೆಂಬುದನ್ನು ತಿಳಿದು ಎಲ್ಲರೂ ಚಂದಾಹಣವನ್ನು ಕೂಡಲೇ ಮನಿಆರ್ಡರುಮಾಡಿ ಸಹಕರಿಸುವಂತೆ ವಿನಂತಿಸುತ್ತೇನೆ.

ಮೆನೇಜರ್.

ನಡೂರು— ನೇಶನಲ್ ಕ್ಲಬ್ಬಿನ ಪ್ರಾರಂಭೋತ್ಸವವು ತಾ 14-4-55 ರಂದು ಶ್ರೀ ನಡೂರು ಪಟೇಲ್ ಅಂತಯ್ಯ ಸೆಟ್ರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಗಳಾದ ಶ್ರೀನಿವಾಸ ಉಡುಪರು ವಾಚನಾಲಯವನ್ನೂ, ಕಾಡೂರು ಪಟೇಲ್ ಜಗನ್ನಾಥ ಸೆಟ್ಟರು 'ಗ್ರಾಮಾಭ್ಯುದಯ' ಹಸ್ತ ಲಿಖಿತ ಪತ್ರಿಕೆಯನ್ನೂ, ಎನ್. ರಾಮಣ್ಣ ಸೆಟ್ಟರು ಪುಸ್ತಕ ಭಂಡಾರವನ್ನೂ, ಎಸ್. ಜಗನ್ನಾಥ ಹೆಗ್ಡೆಯರು ವ್ಯಾಯಾಮ ಸಂಘವನ್ನೂ ಉದ್ಘಾಟಿಸಿದರು. ಶ್ರೀ ನಡೂರು ಪಟೇಲ್ ಅಂತ್ಯ ಸೆಟ್ರ ಧರ್ಮ ಸಹಾಯದಿಂದ ಶಾಲಾ ಮಕ್ಕಳಿಗೆ ಹಾಲು ಹಂಚೋಣವೂ, ನಡೂರು ಶ್ರೀ ಮಹಲಿಂಗೇಶ್ವರ ಶಾಲಾ ಹಳೆ ವಿದ್ಯಾರ್ಥಿ ಸಂಘದವರಿಂದ ಸಿಹಿ ತಿಂಡಿ ಹಂಚೋಣವೂ ಜರಗಿತು. ಶ್ರೀ ವಿ. ಎಸ್. ಸೆಟ್ಟಿ, ವಿ. ವೆಂಕಪ್ಪ ಸೆಟ್ಟಿ, ಎಸ್. ಸುಬ್ಬಣ್ಣ ಹೆಗ್ಡೆ, ಮುಂತಾದವರ ಭಾಷಣಗಳಾಗಿ ಎನ್. ಸುಂದರ ಸೆಟ್ಟಿಯಿಂದ ಧನ್ಯವಾದ ಸಮರ್ಪಿಸಲ್ಪಟ್ಟು "ಜನ ಗಣ ಮನ"ದೊಂದಿಗೆ ಅಂದಿನ ಸಮಾರಂಭವು ಮುಕ್ತಾಯಗೊಂಡಿತು

ಕಟೀಲು— ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ಕಾಲಾವಧಿ ಜಾತ್ರೆಯು ತಾ 13 ರಲ್ಲಿ ಪ್ರಾರಂಭವಾಗಿದೆ.

(೧ನೇ ಪುಟದಿಂದ)

ಯಾಗುತ್ತವೆ; ಪರಿಣಾಮದಲ್ಲಿ ರೋಷ, ಅಸಹನೆ ಉಕ್ಕೇರುತ್ತದೆ ಎನ್ನುವುದು ಮನಃ ಶಾಸ್ತ್ರಿಗಳಿಗೆ ಸಹ ಒಪ್ಪಿತವಾದ ಮಾತು.

ಪಾಶ್ಚಾತ್ಯರ ನಿತ್ಯ ಜೀವನದಲ್ಲಿ ಮನ್ನಿಸಲ್ಪಟ್ಟ ಕೆಲವು ರೀತಿ ನೀತಿಗಳನ್ನು ಕಂಡು ಯುವಕರು ತಾವು ಅದರಂತೆ ಮಾಡಹೋದಾಗ ಭಾರತೀಯ ಸಂಪ್ರದಾಯ ಅದಕ್ಕೆ ಅಡ್ಡ ಬರುವುದನ್ನು ಕಂಡು ರೇಗಿ ಬೀಳುತ್ತಾರೆ; ನೀತಿ ನಿಯಮಗಳ ಕಟ್ಟು ಪಾಡು ನಮಗೆ ಬೇಡವೆಂದು ನೆಗೆದು ಹಾರುವ ಮನಸ್ಸು ಅವರಿಗಾಗುತ್ತದೆ. ಭಾರತೀಯ ಸಂಪ್ರದಾಯದ ಶಕ್ತಿವೂ ಪಾಶ್ಚಾತ್ಯ ಸಂಪ್ರದಾಯದ ಆಕರ್ಷಣೆಯಷ್ಟೇ ಶಕ್ತಿ ಪೂರ್ಣವಾಗಿರುವಾಗ ಅಲ್ಲಿ ತಿಕ್ಕಾಟವಾಗುತ್ತದೆ; ಘರ್ಷಣೆ ಏಳುತ್ತದೆ; ಕಿಡಿ ಸುತ್ತಲೂ ಚೆಲ್ಲ ತೊಡಗುತ್ತದೆ. ವಿದ್ಯಾರ್ಥಿಗಳ ಮನೋಭಾವ ಹಸನಾಗಿ ರೂಪುಗೊಳ್ಳುವಂತೆಯೂ ದ್ವಂದ್ವ ಹಾಗು ವಿರೋಧಾಭಾಸದ ಮಡುವಿನಲ್ಲಿ ಸಿಕ್ಕಿ ತೊಳಲದಂತೆಯೂ ನೋಡಿಕೊಳ್ಳುವುದೇ ಇಂದಿನ ಅಗತ್ಯವಾಗಿದೆ. ಕೆಲವೊಂದು ಪ್ರಸಂಗಗಳಲ್ಲಿ ವಿದ್ಯಾರ್ಥಿಗಳು ತಾವು ಮಾತ್ರ ದಾರಿ ತಪ್ಪುವುದಲ್ಲ; ಮನೆಯವರನ್ನೂ ಹಿಂಸಿಸುತ್ತಾರೆ; ನಾಗರಿಕರ ಸುಗಮ ಜೀವನಕ್ಕೆ ಸಹ ಭಂಗ ತರುತ್ತಾರೆ. ಮನೆಯಲ್ಲಿ ಶೋಕಿಗಾಗಿ ಕಳ್ಳತನ ಮಾಡುವುದರಿಂದ ಹಿಡಿದು ಅಂಗಡಿ ಲೂಟಿಮಾಡಿ ಬೆಂಕಿಇಡುವವರೆಗೂ ವಿದ್ಯಾರ್ಥಿಗಳಿಂದ ಗಲಭೆಯಾಗುತ್ತದೆ. ತರುಣರ ಉತ್ಸಾಹ, ಸ್ಫೂರ್ತಿಗಳು ಹೀಗೆ ವಿಧ್ವಂಸಕ ದಾರಿಯನ್ನು ಹಿಡಿಯುತ್ತವೆ. ಇದನ್ನು ರಚನಾತ್ಮಕ ಮಾರ್ಗದೆಡೆಗೆ ತಿರುಗಿಸಿ ಕೊಂಡರೆ, ದೇಶಕ್ಕೆ ತುಂಬ ಲಾಭವಾಗುತ್ತದೆ. ಉದಾಹರಣೆಗೆ ರಜೆಯ ಸಮಯ ಗ್ರಾಮಾಂತರ ಪ್ರದೇಶಗಳಲ್ಲಿ ಸಂಚರಿಸಿ ಪ್ರೌಢ ವಿದ್ಯಾರ್ಥಿಗಳು ನವಭಾರತ ನಿರ್ಮಾಣದ ಕುರಿತು ಜನರಲ್ಲಿ ತಿಳುವಳಿಕೆ ಹುಟ್ಟಿಸಬಲ್ಲರು. ಹಾಗೆ ಅವರು ಒಳ್ಳೆಯ ಕಾರ್ಯದಲ್ಲಿ ಪ್ರವೃತ್ತರಾಗುವಂತೆ ಮಾಡುವ ಬಗೆ ಏನೆಂಬುದನ್ನು ಎಲ್ಲ ಹಿರಿಯರೂ ಸುಧಾರಕರೂ ಆಳವಾಗಿ ವಿಚಾರಿಸುವುದು ಅಪೇಕ್ಷಣೀಯ.

—ಕಾರ್ತಿಕೇಯ.

ಈ ಸಂದರ್ಭದಲ್ಲಿ ಶ್ರೀ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಕಡೆಯಿಂದ ವ್ಯವಸ್ಥೆ ಮಾಡಲಾದ 'ವಿದ್ಯುದ್ದೀಪಗಳನ್ನು ಬೆಳಗಿಸುವ ಸಮಾರಂಭವನ್ನು ಶ್ರೀ ಎಮ್. ಶಂಭು ಭಟ್ಟರು ಆಸ್ತಿಕ ಭಕ್ತ ಸಮುದಾಯದ ಮುಂದೆ ನೆರವೇರಿಸಿದರು.

ಬೈಂದೂರು— ಯಡ್ತರೆ ಸಹಕಾರಿ ಸಂಘದ ಹೊಸಕಟ್ಟಡವನ್ನು ತಾ. 11ರಲ್ಲು ಶ್ರೀ ಮೊಳಹಳ್ಳಿ ಶಿವರಾಯರು ಉದ್ಘಾಟಿಸಿದರು. ಶ್ರೀ ಯಡ್ತರೆ ಕೃಷ್ಣಪ್ಪ ಸೆಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಸ್. ನರ್ಸಪ್ಪಯ್ಯ, ಎಮ್ ಎಲ್. ಸಿ.; ಬಿ.ಸುಬ್ಬಣ್ಣ ಸೆಟ್ಟಿ, ಗಣಪತಿ ಕೆದಿಲಾಯ, ಬಿ. ಆರ್. ಕಂಬಳೆ ಮೊದಲಾದವರು ಭಾಷಣವಿತ್ತರು

ಹೊಸದುರ್ಗ— ಇಲ್ಲಿಯ ಕಿಸಾನ್ ಪಂಚಾಯತಿನ ಪ್ರಥಮ ಸಮ್ಮೇಳನವು ತಾ. 12ರಲ್ಲಿ ಮಡಿಕ್ಕೈಯಲ್ಲಿ ಶ್ರೀ ಸಿ. ಎಮ್. ಪದ್ಮನಾಭನ್ ನಾಯರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಚಂದ್ರಶೇಖರನ್, ಅವರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀಗಳಾದ ಎಮ್. ನಾರಾಯಣನ್ ನಂಬಿಯಾರ್, ಎಮ್. ಎಲ್. ಎ, ಶ್ರೀಧರನ್ ಎನ್. ಕೆ. ಬಾಲಕೃಷ್ಣನ್, ಎನ್. ಕೆ. ನಂಬಿಯಾರ್, ಮೊದಲಾದವರ ಭಾಷಣಗಳಾದುವು.

ಹಿರಿಯಡಕ— ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಟಿ. ರಮಾನಾಥ ಪೈಗಳು ಹಿರಿಯಡಕ ಮಹಾಪ್ರಕಾಶಮಿಲ್ಲಿನ ಸಮೀಪ ಕಟ್ಟಿಸಿದ ನೂತನ ಗೃಹಪ್ರವೇಶ ಸಮಾರಂಭವನ್ನು ಇದೇ ತಾ. 7 ಮತ್ತು 8ರಲ್ಲಿ ವೈಭವದಿಂದ ನೆರವೇರಿಸಿದರು.

ಕುತ್ಪಾಡಿ-ಕಡೆಕಾರು- ಸ್ಥಳೀಯ ಶ್ರೀ ಕೃಷ್ಣ ಮಾರುತಿ ವ್ಯಾಯಾಮ ಮಂದಿರದ ವಾರ್ಷಿಕೋತ್ಸವವು ಇದೇ ತಾ 25 ರಲ್ಲು ಸಂಜೆ 6 ತಾಸಿಗೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಬಾಳಿಕುದ್ರು— ದ. ಕ. ಜಿಲ್ಲಾ ಬಾಳೀಕುದುರು ಮಠದ ಶ್ರೀ ಆನಂದಾಶ್ರಮ ಸ್ವಾಮಿಗಳವರಿಂದ ಸ್ಥಾಪಿತವಾದ ಶ್ರೀ ಶಂಕರ ಜಯಂತೀ ಸಭಾ ಕಾರ್ಯಕಲಾಪಗಳು ಈ ವರ್ಷ ಶಿವಮೊಗ್ಗಾ ದೊಡ್ಡ ಬ್ರಾಹ್ಮಣರ ಬೀದಿ ಶ್ರೀಲಕ್ಷ್ಮೀನಾರಾಯಣಸ್ವಾಮಿದೇವರ ಸನ್ನಿಧಿಯಲ್ಲಿ ಶಿವಮೊಗ್ಗಾ ಶ್ರೀ ಶಂಕರ ಜಯಂತೀ ಸಭೆಯವರು ಮಾಮೂಲಾಗಿ ನಡೆಸುತ್ತಿರುವ ಕಾರ್ಯಕ್ರಮಗಳೊಂದಿಗೆ ಇದೇ ತಾ 23 ರಿಂದ 28 ರ ತನಕ ನಡೆಸುವ ಏರ್ಪಾಡು ಆಗಿರುತ್ತದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಬ್ರಹ್ಮಾವರ— ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ನಡೆಯತಕ್ಕ ಕಾಲಾವಧಿ ರಥೋತ್ಸವವು ಇದೇ ತಾ 7 ರಿಂದ 13 ರ ತನಕ ವಿವಿಧ ಕಾರ್ಯಕ್ರಮಗಳಿಂದ ಬಹು ವಿಜೃಂಭಣೆಯಿಂದ ಜರಗಿತು. ಶ್ರೀ ಮಹಾಲಿಂಗೇಶ್ವರ ಭಜನಾ ಮಂಡಳಿಯವರು ವಿಶೇಷ ಭಜನೆ ನಡೆಸಿದರು.

ಕುಂಬಳೆ— ಅಧಿಕ ಹಾಲು ದಿನಾಚರಣೆಯು ತಾ. 14ರಲ್ಲಿ ಪಂಚಾಯತ ಬೋರ್ಡು ಪ್ರಸಿಡೆಂಟ್ ಶ್ರೀ ಕೆ. ಕಣ್ಣಪ್ಪ ನವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾಸರಗೋಡು— ಇಲ್ಲಿ ಅಧಿಕ ಹಾಲು ದಿನಾಚರಣೆಯು ತಾ. 14ರಲ್ಲಿ ಶ್ರೀ ಎಮ್. ಎಸ್. ಮೊಗ್ರಾಲ್, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಉಮೇಶ ರಾವ್ ಮೊದಲಾದವರು ಮಾತನಾಡಿದರು.

ಮುಂಡ್ಕೂರು— ಬೊಂಬಾಯಿಯ ಜನಾಪರಲಾಲ್ ಶ್ರೀ ನ್ಯಾಟ್ ಹ್ಯಾಸ್ಕೂಲಿನ ಗೌರವ ಪ್ರಿನ್ಸಿಪಾಲ್ ಶ್ರೀ ಎಮ್. ಎಸ್. ರಾಯರ ಸೊಸೆ ಕುಮಾರಿ ಜಲಜ ಮತ್ತು ಬೊಂಬಾಯಿಯ ಕುಮಾರ ಶ್ರೀ ಕೆ. ಎಮ್. ಬಂಗೇರಿ ಇವರ ವಿವಾಹ ಮಹೋತ್ಸವವು ತಾ 6ರಲ್ಲು ಮಧ್ಯಾಹ್ನ ಮುಂಡ್ಕೂರಿನ ಮಹಾಮನ ಬೂಡು ಗೃಹದಲ್ಲಿ ವೈಭವದಿಂದ ಜರಗಿತು. ಸಮಾರಂಭಕ್ಕೆ ಪ್ರಿನ್ಸಿಪಾಲ್ ಶ್ರೀ ಎಮ್. ಎಸ್. ರಾವ್, ಗ್ರಾಮ ಉದ್ಯೋಗಸ್ಥರು ಮೊದಲಾದ ಮಹನೀಯರು ಬಂದಿದ್ದರು.

ಕಾರ್ಕಳ— ತಾ. 14ರಲ್ಲಿ ಬೆಳಿಗ್ಗೆ ಶ್ರೀ ಕೆ. ವೆಂಕಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಅಧಿಕ ಹಾಲು ದಿನಾಚರಣೆ ಜರಗಿತು ಶ್ರೀಗಳಾದ ಬಿ. ವಾಸುರಾಯ ಸೆಟ್ಟಿ, ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು.

ಕಿದಿಯೂರು— ಸ್ಥಳೀಯ ಶಾಲೆಯ ಹಳೆವಿದ್ಯಾರ್ಥಿ ಸಂಘದ ವತಿಯಿಂದ ಹಳೆವಿದ್ಯಾರ್ಥಿಗಳಾದ ಡಾ| ರಾಮಕೃಷ್ಣ ಭಾಗವತ, ಶ್ರೀ ಕೆ. ಪದ್ಮನಾಭ ಭಟ್ ಮತ್ತು ಶ್ರೀ ಕೆ. ಚಂದ್ರಶೇಖರ ರಾವ್-ಇವರು ತಮ್ಮ ಪದವೀಧರ ವಿದ್ಯಾಭ್ಯಾಸವನ್ನು ಮುಗಿಸಿ ಮರಳಿದ ಸಂತೋಷಾರ್ಥವಾಗಿ ತಾ. 16ರಲ್ಲಿ ಸತ್ಕಾರಕೂಟವೊಂದು ಜರಗಿತು. ಶ್ರೀಗಳಾದ ಕೆ. ವೆಂಕಟ್ರಾವ್, ಎ. ಎಸ್. ಕಿದಿಯೂರ್, ಕೆ. ನರಸಿಂಹ ಭಟ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ವಂದನಾರ್ಪಣೆ, ಜನಗಣಮನ ಗೀತೆಯೊಂದಿಗೆ ಸಭಾಂತ್ಯವಾಯಿತು.

ಪಡುಬಿದ್ರೆ— ಸ್ಥಳೀಯ ಬೋರ್ಡು ಹಾ| ಎ| ಶಾಲೆಯಲ್ಲಿ ಅಧಿಕ ಕ್ಷೀರ ದಿನಾಚರಣೆಯು ತಾ. 14ರಲ್ಲಿ ಶ್ರೀ ಸಿ. ಶಿವಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಸುಬ್ಬರಾಯರು ರಾಷ್ಟ್ರಧ್ವಜಾರೋಹಣ ಮಾಡಿದರು. ನಂತರ ಮೆರವಣಿಗೆ, ಶ್ರೀಗಳಾದ ಎಮ್. ಎಮ್. ಪ್ರಭು, ಸಿ ನಾಗಣ್ಣ ಸೆಟ್ಟಿ ಮೊದಲಾದವರ ಭಾಷಣ, ಮತ್ತು ಹಾಲು ಹಂಚೋಣ ಕಾರ್ಯಕ್ರಮಗಳಾದುವು.

ಮಾನ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟರ ಭಾವಚಿತ್ರ ಅನಾವರಣ- ದ. ಕ. ಜಿಲ್ಲೆಯ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಡಾ| ಕೆ. ಗಿರಿಧರರಾಯರು ದಾನವಾಗಿ ಕೊಟ್ಟ ಜಿಲ್ಲೆಯ ಪ್ರಥಮ ಜಿಲ್ಲಾ ಕಮಿಶನರಾಗಿದ್ದ ಮದ್ರಾಸು ಆರೋಗ್ಯಮಂತ್ರಿ ಮಾನ್ಯ ಶ್ರೀ ಎ. ಬಿ. ಸೆಟ್ಟರ ಭಾವಚಿತ್ರವನ್ನು ತಾ 18 ರಂದು ಸಂಜೆ ಗಣಪತಿ ಹೈಸ್ಕೂಲಿನ ಶಾರದಾ ಭವನದಲ್ಲಿ ಡಾ' ಆರ್. ಎಂ. ಅಲಗಪ್ಪ ಚೆಟ್ಟಿಯಾರರು ಅನಾವರಣಮಾಡಿದರು. ಶ್ರೀ ಕೆ. ದೇವದಾಸ ನಾಯಕರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಎಮ್.- ಎನ್. ಕಿಣಿಯರು ಶ್ರೀ ಎ. ಬಿ. ಸೆಟ್ಟರ ಸೇವೆಯನ್ನು ಪ್ರಶಂಸಿಸಿದರು. ಶ್ರೀ ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ, ಇವರು ಭಾವಚಿತ್ರವನ್ನು ಜಿಲ್ಲಾ ಸಂಸ್ಥೆಯ ಪರವಾಗಿ ಸ್ವೀಕರಿಸಿದರು.

ಡಾ| ಚೆಟ್ಟಿಯಾರರು ತಮ್ಮ ಭಾಷಣದಲ್ಲಿ ಶ್ರೀ ಎ. ಬಿ. ಸೆಟ್ಟರು ಎಲ್ಲರ ಮೆಚ್ಚುಗೆಯನ್ನು ಪಡೆದು ಎಲ್ಲಾ ಮಂತ್ರಿಮಂಡಳಗಳಲ್ಲೂ ಆಧಾರ ಸ್ತಂಭದಂತಿರುವರೆಂದೂ ಜನಸೇವೆಗಾಗಿ ಅವರು ಪ್ರಾಂತದಲ್ಲಿ ಹಲವು ಸ್ವಯಂಸೇವಕ ಸಂಸ್ಥೆಗಳನ್ನು ಸ್ಥಾಪಿಸಿರುವರೆ ಸಹಾಯಮಾಡಿರುವರೆಂದೂ ಹೇಳಿದರು. ಪ್ರಾಂತೀಯ ಸ್ಕೌಟ್ ಕಮಿಶನರ್ ಹಾಗೂ ಮದ್ರಾಸಿನ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಪೆಕ್ಷನ್ ಶ್ರೀ ಎಸ್. ಡಿ. ಸುಂದರ ವಡಿವೇಲುರವರು ಶ್ರೀ ಎಮ್. ಶಿವರಾಮ ಆಚಾರ್ಯರಿಗೆ ಸ್ಕೌಟು ವುಡ್ ಬೇಜನ್ನು ವಿತರಣೆಮಾಡಿದರು. ಸ್ಕೌಟು ಚಳವಳದ ಮುನ್ನಡೆಗೆ ಸಹಾಯವಾಗುವಂತೆ ಪ್ರಾಂತೀಯ ಸರಕಾರವು ಈ ವರ್ಷ ರೂಪಾಯಿ 20,000 ಪ್ರತ್ಯೇಕವಾಗಿರಿಸಿದೆ ಎಂದರು. ಶಾಲೆಗಳಲ್ಲಿ ಸ್ಕೌಟುಮಾಸ್ತರರಿಗೆ ಒಂದು ಸ್ಕೌಟು ಸಮವಸ್ತ್ರವನ್ನು ಒದಗಿಸುವಂತೆ ಪ್ರಾಂತೀಯ ಸರಕಾರವು ಈಗ ಅಜ್ಞೆ ಕೊಟ್ಟಿರುವುದು ಎಂದು ಕೂಡ ತಿಳಿಸಿದರು. ವಂದನಾರ್ಪಣೆ, ನೃತ್ಯ ಮೊದಲಾದ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. no. 72/1655.

1 ಗೋಪಿಸೆಟ್ಟಿ, ಮಂಜಯ ಹೆಗಡೆಯವರ ವಿಧವೆ 2 ಅಕ್ಕಮ್ಮ ಹೆಗಡ್ತಿ, ಮಂಜಯ ಹೆಗಡೆಯವರ ತಾಯಿ 1ನೆ ಯವರು ವಾಂಗಾಳ ಗ್ರಾಮ 2ನೆ ಯವರು ಚೇರ್ಕಾಡಿ ಗ್ರಾಮ— ಅರ್ಜಿದಾರಳು

1ನೆ ಅರ್ಜಿದಾರಳ ಗಂಡ 2ನೆ ಅರ್ಜಿದಾರಳ ಮಗ ಚೇರ್ಕಾಡಿ ಗ್ರಾಮದಲ್ಲಿ ತಾರೀಕು 11-1-1955ಲ್ಲಿ ಮೃತಪಟ್ಟ ಮಂಜಯ ಹೆಗಡೆ ಬಾಬ್ತು ಬ್ರಹ್ಮಾವರ ಬ್ರಾಂಚ್, ವಿಜಯ ಬ್ಯಾಂಕಿನ ಯುಸ್. ಬಿ. ಎಕೌಂಟ್ ನಂಬ್ರ 263ನೆನೆ ಡಿಪೋಜಿಟ್‌ಯಿರುವ ರೂಪಾಯಿ 174—13—0 ವ ಬ್ರಹ್ಮಾವರ ಬ್ರಾಂಚ್, ವಿಜಯ ಬ್ಯಾಂಕಿನ F. D. ನಂಬ್ರ 30/1954ನೆನೆ ಡಿಪೋಜಿಟ್‌ಯಿರುವ ರೂಪಾಯಿ 820—7—0 ಮತ್ತು ಬ್ರಹ್ಮಾವರ ಬ್ರಾಂಚ್, ವಿಜಯ ಬ್ಯಾಂಕಿನ F. D. ನಂಬ್ರ 673/1953ನೆನೆ ರೂಪಾಯಿ 51-12-0 ಕ್ಕೆ ಬಡ್ಡಿಸಹಿತ ರೂಪಾಯಿ 100 ಮೌಲ್ಯದ 1¼ ಪವನು ಚಿನ್ನದ ಕೊಪ್ಪುಮತ್ತು ಸರಪಣಿ ಚತಿ ಕೂಡಾ ಪಡೆಯುವದಾಗಿ 1ನೇ ಅರ್ಜಿದಾರಳ ಹೆಸರಿಗೆ ಸಾಕ್ಸೆಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಪತ್ಯೆ ದಾಖಲ್ಲು ಮಾಡಿದ ಮೇಲ್ಕಂಡ ಅರ್ಜಿಯು 26—4—1955ಕ್ಕೆ ತನಿಖಿ ಇಟ್ಟಿದೆ. ಆಕ್ಷೇಪವುಳ್ಳವರು ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟಿನಲ್ಲಿ ಹಾಜರಾಗಿ ತಕರಾರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸುವದಾಗಿದೆ.

K. Laxminarayana Aithal,
Vakil for Petitioner.

ಉಡುಪಿ. ತಾರೀಕು 19-4-1955.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—1—0; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಮಂಗಲಕರವಾದ ಮಾಂಗಲ್ಯವು ವಿಕ್ರಿತವಾಗುತ್ತಿರುವ ದಿವಸಗಳಲ್ಲಿ—ಅದೊಂದು ಪವಿತ್ರವಾದ ಘಟನೆ—ಎಂಬುವನ್ನು ಬಲುಚೆನ್ನಾಗಿ ನಿರೂಪಿಸಿದ ಸುಂದರ ಚಿತ್ರವೇ

ಮಾಂಗಲ್ಯಂ (ತಮಿಳ)

ರಾಜ ಸುಲೋಚನಾ, ಬಿ. ಎಸ್. ಸರೋಜ ಎಸ್. ಮೋಹನಾ, ನಾಲ್ವರ್ ನಾಗರಾಜನ್ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್, ಲಿ., ಉಡುಪಿ.

ತಾ. 19—4—1955 ರಿಂದ.

ಮಂಗಳೂರು

ಪ್ರಾಥಮಿಕ ಶಿಕ್ಷಣ ವಿಚಾರಣಾ ಸಮಿತಿ— ಮದ್ರಾಸು ಸರಕಾರದ ಕಡೆಯಿಂದ ನೇಮಿಸಲಾದ ಪ್ರಾಥಮಿಕ ಶಿಕ್ಷಣ ವಿಚಾರಣಾ ಸಮಿತಿಯ ಅಧ್ಯಕ್ಷ ಡಾ ಆರ್. ಎಮ್. ಅಲಗಪ್ಪ ಚೆಟ್ಟಿಯಾರ್ ಶ್ರೀಗಳಾದ ಎನ್. ಡಿ. ಸುಂದರ ವಡಿವೇಲು (ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್) ಎಸ್. ಮೀನಾಕ್ಷಿ ಸುಂದರ ಮುದಲಿಯಾರ್, ವಿ. ಎಸ್. ಗೋಪಾಲಕೃಷ್ಣ ಐಯ್ಯರ್, ಎಸ್. ಅರುಣಾಚಲಂ ಮತ್ತು ಶ್ರೀಮತಿ ಒ. ಶ್ರೀನಿವಾಸನ್ (ನಿವೃತ್ತ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್) ಮತ್ತು ಎಸ್. ವಡಿವೇಲು (ಕಾರ್ಯದರ್ಶಿ) ಇವರು ತಾ. 17ರಲ್ಲಿ ಬೆಳಿಗ್ಗೆ ಕಣ್ಣಾನೂರಿನಿಂದ ಮಂಗಳೂರಿಗೆ ಆಗಮಿಸಿದರು.

ಮಧ್ಯಾಹ್ನ ಕಮಿಟಿಯವರು ಗಣಪತಿ ಹೈಸ್ಕೂಲಿನಲ್ಲಿ ಜಿಲ್ಲೆಯ ಶಾಸನಸಭಾ ಸದಸ್ಯರ, ವಿದ್ಯಾಸಂಸ್ಥೆಗಳ ಪ್ರತಿನಿಧಿಗಳ, ಶಿಕ್ಷಕ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಮತ್ತು ಜಿಲ್ಲಾ ಬೋರ್ಡು ಅಧ್ಯಕ್ಷರ ಮತ್ತಿತರ ಸಾರ್ವಜನಿಕ ಪ್ರಮುಖರ ಅಭಿಪ್ರಾಯಗಳನ್ನು ಪಡೆದರು

ಡಾ| ಅಲಗಪ್ಪ ಚೆಟ್ಟಿಯಾರರಿಗೆ ಸತ್ಕಾರ— ರಾತ್ರಿ ಸಮಿತಿ ಅಧ್ಯಕ್ಷ ಡಾ| ಚೆಟ್ಟಿಯಾರರಿಗೆ ಸ್ಥಳೀಯ ಪ್ರಮುಖರ ಕಡೆಯಿಂದ ಭೋಜನ ಸತ್ಕಾರ ಕೂಟವೊಂದು ಸೆಂಟ್ರಲ್ ಕಾಫಿ ಹೌಸಿನ ಮಹಡಿಯಲ್ಲಿ ಜರಗಿತು.

ಆರಂಭದಲ್ಲಿ ಶ್ರೀ ಎಮ್. ಆರ್. ಚಂದರರು 'ಭಾರತ ಮಾತೆ' ಯ ಪ್ರಶಸ್ತಿಯನ್ನು ಮಾಡಿದರು. ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ, ಅವರು ಮುಖ್ಯ ಅತಿಥಿಯ ಗುಣಗಾನಮಾಡಿ ಅವರ ಔದಾರ್ಯವನ್ನು ಕೊಂಡಾಡಿದರು. ಶ್ರೀ ಚೆಟ್ಟಿಯಾರರು ಉತ್ತರಿಸುತ್ತಾ ಸಮಾಜಸೇವೆಯಲ್ಲಿಯೇ ಆತ್ಮತೃಪ್ತಿಯಿದೆಎಂದರು. ದಕ್ಷಿಣ ಭಾರತದಲ್ಲಿ ಹೆಚ್ಚು ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುವುದಕ್ಕಾಗಿ ಕೇಂದ್ರ ಸರಕಾರವು ಸಹಾಯಕೊಡಲೊಪ್ಪಿದುದು ಸ್ವಾಗತಾರ್ಹವೆಂದೂ, ಕಲ್ಯಾಕುಡಿಯಲ್ಲಿ ತಾನು ಬೇಗನೆ ಮೆಡಿಕಲ್ ಕಾಲೇಜೊಂದನ್ನು ಸ್ಥಾಪಿಸಲಿರುವೆನೆಂದೂ, ದಕ್ಷಿಣ ಕನ್ನಡ ಜಿಲ್ಲೆಯ ಮೆಡಿಕಲ್ ಕಾಲೇಜು ಭದ್ರತಳಹದಿಯಲ್ಲಿರುವಂತೆ ಸರಕಾರವು ಸಹಾಯ ನೀಡುವಂತಾಗಲೆಂದು ಹೇಳಿದರು. ಶ್ರೀ ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ, ಅವರು ಅತಿಥಿಗಳ ಪ್ರಶಸ್ತಿಯನ್ನು ಮಾಡಿದರು ಶ್ರೀ ಟಿ. ಕೆ. ಲಕ್ಷ್ಮಣರಾವರು ಆದಕ್ಕೆ ಉತ್ತರವಿತ್ತರು.

ರಾಷ್ಟ್ರೀಯ ಸಪ್ತಾಹ— ಮಂಗಳೂರು ಸರ್ಕಲ್ ಕಾಂಗ್ರೆಸಿನ ನೇತೃತ್ವದಲ್ಲಿ ರಾಷ್ಟ್ರೀಯ ಸಪ್ತಾಹದ ಅಂಗವಾಗಿ ಸಾರ್ವಜನಿಕ ಸಭೆಯೊಂದು ತಾ. 14ರಲ್ಲಿ ಶ್ರೀ ಕೆ. ಕೆ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಬಿ. ಸೆಟ್ಟಿ, ಕೆ. ಆರ್. ಆಚಾರ್, ಎಸ್. ಶಂಕರ ಆಳ್ವ, ಬಿ. ಇದಿನಬ್ಬ ಮೊದಲಾದವರ ಭಾಷಣಗಳಾದುವು. ಶ್ರೀ ಎಮ್. ಲೋಕಯ್ಯ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ಬೋರ್ಡು ಸಭೆಯು— ತಾ. 16ರಲ್ಲು ಅಧ್ಯಕ್ಷ ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಜೇಶ್ವರ, ಸುಳ್ಯ ಮತ್ತು ಬೈಂದೂರುಗಳಲ್ಲಿ ಈಗ ಇರುವ ಲೋಕಲ್ ಫಂಡ್ ಆಸ್ಪತ್ರೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿ ಬದಲಾವಣೆ ಮಾಡಬೇಕೆಂಬ ಮಂಜೇಶ್ವರ, ಸುಳ್ಯ ಮತ್ತು ಬೈಂದೂರು ಬ್ಲೋಕುಗಳ ಅಭಿವೃದ್ಧಿ ಅಧಿಕಾರಿಗಳ ಸೂಚನೆಗಳು ಮಾನ್ಯವಾದುವು. ಕಾಸರಗೋಡು ತಾಲೂಕಿನ ಮಲಯಾಳಿ ಗ್ರಾಮಗಳನ್ನು ಮಲಬಾರು ಜಿಲ್ಲೆಗೆ ಸೇರಿಸುವಂತೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಪ್ರಾಂತಸರಕಾರಕ್ಕೆ ಶಿಫಾರಸುಮಾಡಬೇಕೆಂಬ ಶ್ರೀ ಎನ್. ಜಿ. ಕಾಮತರ ನಿರ್ಣಯವು ಬಿದ್ದುಹೋಯಿತು. ಪಣತ್ತಡಿ ಗ್ರಾಮದ ಪಾಣತ್ತೂರು ಗ್ರಾಮದಲ್ಲಿ ಒಂದು ವಾರ್ಷಿಕ ಜಾನುವಾರು ಜಾತ್ರೆಯನ್ನು ನಡೆಸಬೇಕೆಂಬ ಶ್ರೀ ಎನ್. ಜಿ. ಕಾಮತರ ಸೂಚನೆಯು ಪಾಸಾಯಿತು.

ಕಾರ್ಕಳ— ಬೋರ್ಡುಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಬಿ. ರಾಮರಾಯ ಶೆಟ್ಟರ ಭಾವಚಿತ್ರವನ್ನು ತಯಾರಿಸಿ, ಅವರನ್ನು ಹೈಸ್ಕೂಲಿನ ಆಫೀಸುಕೋಣೆಯಲ್ಲಿಡಲು ಅನುಮತಿ ಕೊಡಬೇಕೆಂದು ಆ ಶಾಲೆಯ ವಿದ್ಯಾರ್ಥಿಗಳು ಮಾಡಿದಅರ್ಜಿಗೆ ಒಪ್ಪಿಗೆಕೊಡಲಾಯಿತು. ಉಡುಪಿ ಬೋರ್ಡುಹೈಸ್ಕೂಲಿನ ವಿದ್ಯಾರ್ಥಿಗಳು ತಮ್ಮ ಶಾಲೆಯ ವಿದ್ಯಾರ್ಥಿಯಾಗಿದ್ದು ಅಕಾಲ ಮೃತ್ಯುವಿಗೆ ತುತ್ತಾದ ಶ್ರೀ ರಾಮಚಂದ್ರ ಮಲ್ಯರ ಸ್ಮಾರಕಾರ್ಥವಾಗಿ ವರ್ಷಂಪ್ರತಿಯೂ ಬಹುಮಾನವೊಂದನ್ನು ಕೊಡಲೋಸುಗ ಕೊಟ್ಟ ರೂ. 120/ನ್ನು ಕೃತಜ್ಞತಾಪೂರ್ವಕ ಸ್ವೀಕರಿಸಲಾಯಿತು.

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡರರು ಈ ತಿಂಗಳಾಂತ್ಯದಲ್ಲಿ ಮಂಗಳೂರಿಗೆ ಬರುವಾಗ ಅವರಿಗೊಂದು ಮಾನಪತ್ರವನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆ, ಇವೆರಡರ ಪೈಕಿ ಯಾವ ಭಾಷೆಯಲ್ಲಿ ಕೊಡಬೇಕು ಎಂಬ ವಿಷಯ ತುಂಬಾ ಚರ್ಚೆನಡೆದು ಕೊನೆಗೆ ಕನ್ನಡದಲ್ಲಿ ಕೊಡಬೇಕೆಂದೂ ಅದರ ಇಂಗ್ಲಿಷ್ ಪ್ರತಿಯನ್ನು ತಯಾರಿಸಿ ಮಂತ್ರಿಗಳಿಗೆ ಒಪ್ಪಿಸಬೇಕೆಂದೂ ಬಹುಮತದ ತೀರ್ಮಾನವಾಯಿತು.

ಹೆಚ್ಚು ಹಾಲು ಕುಡಿಯಿರಿ— ಹಾಗೂ ಆರ್ಥಿಕ ಕ್ಷೀರ ದಿನಾಚರಣೆಯು ತಾ. 11ರಲ್ಲಿ ತಾಲೂಕು ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಪಿ. ಕುಂಞಮ್ಮದ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಎಮ್. ಎಸ್. ಎ. ಶರ್ಮ, ಡಾ| ಸಾಮುವೆಲ್, ಶ್ರೀ ಬಿ ವಿ. ಬಾಳಿಗ, ಎಮ್. ಎಲ್. ಎ, ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.



ನಗರ ಸಭೆ— ನಳ್ಳಿ ನೀರಿನ ಯೋಜನೆ ಬಗ್ಗೆ ಕಳೆದ ತಾ 23 ರಂದು ಸರಕಾರವಿತ್ತ ರೂಪಾಯಿ 6,41,600 ರ ಸಾಲವನ್ನು ಮದ್ರಾಸು ಸರಕಾರವು ಈ ಯೋಜನೆಯ ಬಗ್ಗೆ ಕೇಂದ್ರದಿಂದ ಪಡೆಯುವ ಗ್ರಾಂಟಿನಿಂದ ವಜಾಮಾಡಿಕೊಳ್ಳಬೇಕೆಂದು ಸರಕಾರಕ್ಕೆ ಬರೆಕೊಳ್ಳಲು ನಿರ್ಧರಿಸಲಾಯಿತು.

ಶಂಕು ಸ್ಥಾಪನೆ— ಬಿಜೈ ಕಾಫಿಕಾಡು ಹಾ| ಎ| ಶಾಲೆಗೆ ಹೊಸ ಕಟ್ಟಡದ ಶಂಕುಸ್ಥಾಪನೆ ಜಿಲ್ಲಾ ಕಲೆಕ್ಟರರಿಂದ ಜರಗಿಸಲಾಯಿತು. ಶ್ರೀ ಎಲ್. ಸಿ. ಪೈಸ್, ಎಮ್. ಎಲ್. ಎ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಪ್ಪು ಭಾರತ ಮೈದಾನಿನಲ್ಲಿ ಹಂಚು ಕಾರ್ಖಾನೆಯ ಶ್ರೀ ಮೋನಪ್ಪನವರು ದಾನವಾಗಿತ್ತ ಸುಮಾರುರೂಪಾಯಿ 3000/- ವೆಚ್ಚದಿಂದ ರಚಿಸಲಿರುವ ರೇಡಿಯೋ ಪೆವಿಲಿಯನಿನ ಶಂಕುಸ್ಥಾಪನೆಯೂ ಜಿಲ್ಲಾ ಕಲೆಕ್ಟರರಿಂದ ನೆರವೇರಿಸಲ್ಪಟ್ಟಿತು.

ಕೃಷಿಮಂತ್ರಿ ಶ್ರೀ ಭಕ್ತವತ್ಸಲಂರವರ ಕಾರ್ಯಕ್ರಮ— ಮದ್ರಾಸು ಕೃಷಿಮಂತ್ರಿ ಶ್ರೀ ಭಕ್ತವತ್ಸಲಂರವರು ಇದೇ ತಾ 19 ರ ಸಂಜೆ ಕುಂಬಳೆಗೆಬಂದು 20 ರ ಬೆಳಿಗ್ಗೆ ಸುಳ್ಯಕ್ಕೆ ಹೋಗಿ 21 ರಂದು ಸುಳ್ಯದಿಂದ ಹೊರಟು ಗುತ್ತಿಗಾರು, ಪಂಜ, ಕಡಬ, ಸುಳ್ಯ ಸಂದರ್ಶಿಸಿ, ಪುತ್ತೂರಿಗೆಬಂದು ಸಂಜೆ 3 ಗಂಟೆಗೆ ಕೊಯಿಲಾದಲ್ಲಿಯ ಜಿಲ್ಲಾ ಪಶು ಕ್ಷೇತ್ರದ ಸಿಬಂಧಿ ಬಿಡಾರಗಳ ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸುವರು. ತಾ 22 ರಂದು ಬೆಳಿಗ್ಗೆ ಪುತ್ತೂರಿನಿಂದ ಹೊರಟು ವಿಟ್ಲ ಅಡಿಕೆ ಕ್ಷೇತ್ರನೋಡಿ ಬಂಟ್ವಾಳಕ್ಕಾಗಿ ಧರ್ಮಸ್ಥಳ, ಬೆಳ್ತಂಗಡಿ, ವೇಣೂರು ಸಂದರ್ಶಿಸಿ ಸಂಜೆ ಕುಂದಾಪುರಕ್ಕೆ. 23 ರಂದು ಕುಂದಾಪುರ ತಾಲೂಕು. 24 ರಂದು ಕುಂದಾಪುರದಿಂದ ಮಂಗಳೂರಿಗೆ ಬಂದು ಮಧ್ಯಾಹ್ನ 3 ಗಂಟೆಗೆ ಜಾನುವಾರು ಕೃತಕ ಗರ್ಭಧಾರಣಾ ಕೇಂದ್ರದ ಉದ್ಘಾಟನೆ ಮಾಡುವರು. ಈ ಸಮಾರಂಭದಲ್ಲಿ ವನಮಹೋತ್ಸವದಲ್ಲಿ ಉಳ್ಳಾಲಗ್ರಾಮಕ್ಕೆ ಸಿಕ್ಕಿದ ಅಖಿಲಭಾರತ ಜವಾಹರ ಶೀಲ್ಡನ್ನು ಮಂತ್ರಿಗಳು ವಿತರಣೆಮಾಡುವರು. ತಾ 24 ರ ಸಂಜೆ 6.10 ಕ್ಕೆ ಮಂತ್ರಿಗಳು ಮಂಗಳೂರಿನಿಂದ ಕೊಯಮುತ್ತೂರಿಗೆ ಪ್ರಯಾಣ ಬೆಳೆಸುವರು.

ಹಂಚಿನ ಮಜೂರರ— ಕಾರ್ಯಕಾರಿಸಮಿತಿಯ ಮತ್ತು ಪ್ರತಿನಿಧಿಗಳಸಭೆಯು ತಾ 15ರಂದು ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ, ಹಂಚಿನ ಮಜೂರರ ಕನಿಷ್ಠವೇತನ ನಿರ್ಣಯವನ್ನು ಬೇಗನೆ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ, ಮಳೆಗಾಲದಲ್ಲಿ ಕಾರ್ಖಾನೆ ಮುಚ್ಚಬಾರದೆನ್ನುವ ಇತ್ಯಾದಿ ನಿರ್ಣಯಗಳಾದುವು.

ಶುಭಾಶಯಗಳು— ಸ್ಥಳೀಯ ರೋಟರಿ ಕ್ಲಬ್ಬಿನ ಸಭೆಯು ತಾ. 14ರಂದು ಕ್ಲಬ್ಬಿನ ಉಪಾಧ್ಯಕ್ಷ ಶ್ರೀ ಪಿ. ಆರ್. ರಂಗನಾಥ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ, ಅವರ ಷಷ್ಠ್ಯಬ್ದಿ ಪೂರ್ತಿಯ ಬಗ್ಗೆ ಅಧ್ಯಕ್ಷರು ಅವರಿಗೆ ಶುಭಾಶಯಗಳನ್ನು ಸಲ್ಲಿಸಿ ಅವರು ಇನ್ನೂ ಹೆಚ್ಚಿನ ಜನಸೇವೆ ಸಲ್ಲಿಸುವಂತಾಗಲೆಂದು ಹಾರಯಿಸಿದರು.

ಭಾರತದಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆಗಳು— 1956ರ ಅಂತ್ಯದಲ್ಲಿ ಮತ್ತು 1957ರ ಆರಂಭದಲ್ಲಿ ಜರಗಲಿರುವುವು. ಈ ಬಗ್ಗೆ ಏರ್ಪಾಡುಗಳನ್ನು ಮಾಡಲು ಈಗಾಗಲೇ ಆರಂಭವಾಗುತ್ತಿದೆ.

ಜಿಲ್ಲಾ ದೇವಡಿಗ ಸಮಾಜ ಸುಧಾರಕ ಸಂಘ:— ಇದರ ವಾರ್ಷಿಕ ಮಹಾಸಭೆಯು ತಾ. 17ರಂದು ಡಾ| ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಗಣಪತಿ ಹೈಸ್ಕೂಲಿನ ಶಾರದಾ ಸದನದಲ್ಲಿ ನೆರವೇರಿತು. ಕಾರ್ಯದರ್ಶಿ ಶ್ರೀ ಯಂ. ಬಿ. ಸರ್ಕಪ್ಪನವರು ವರದಿಯನ್ನೋದಿದರು. ಶ್ರೀಗಳಾದ ಪಿ. ಕೆ. ನಾರಾಯಣ, ಎಂ. ಜಯಾನಂದ, ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಕಾರ್ಯ ಕಾರ್ಯ ಸಮಿತಿಯ ರಚನೆ ನಡೆಯಿತು. ಮಧ್ಯಾಹ್ನದ ಮೇಲೆ ಶ್ರೀ ಯನ್. ಯನ್. ಸುವರ್ಣ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಅಧಿವೇಶನವು ಸಂದೇಶವಾಚನ ಸಭಿಕರ ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

ಮಂತ್ರಿ ಶ್ರೀ ಕೆ. ಮಲ್ಲಪ್ಪನವರು:— ಕೊಡಗಿನ ಗೃಹಮಂತ್ರಿಗಳಾದ ಶ್ರೀ ಕೆ. ಮಲ್ಲಪ್ಪನವರು ತಾ. 18ರಂದು ಮುಂಬೈಯಿಂದ ಮಂಗಳೂರಿಗೆ ಬಂದು ಕೆನರಾ ವರ್ಕ್‌ಶೋಪಿಗೆ ಭೇಟಿಯಿತ್ತರು

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು . ½%

THE MOOLKY BANK LTD., MULKI.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ
! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಬಾಂಡುಂಗಿನ ಆಕರ್ಷಕ ವಾತಾವರಣ

(೪ನೇ ಪುಟದಿಂದ)

...ಕ್ಷಿ ಹೊರ ಹೊಮ್ಮುವಾಗ ತರುಣನ ...ಕ್ರಂದನದಂತೆ ಕೇಳಿಸುತ್ತದೆ. ಈಚೆಗೆ ...ದು ಸ್ಫೋಟಗೊಂಡಾಗ ಸಾವಿರಾರು ನಾಗರಿಕರಿಗೆ ಹಾನಿಯಾಯಿತು.

ಮೇಲಿನ ಕತೆಯಂತೆಯೇ ದುರಂತ ಪ್ರಕರಣವನ್ನು ವಿವರಿಸುವ ಶೋಕಗೀತೆ ...ಯೊಂದು ಬಾಂಡುಂಗಿನ ಜನರಲ್ಲಿ ಪ್ರಚಾ...ದಲ್ಲಿದೆ; ಮತ್ತು ಬಹಳ ಜನ ಪ್ರಿಯತೆ ...ಯನ್ನೂ ಪಡೆದಿದೆ. ಒಬ್ಬ ರಾಜಕುಮಾ...ಯೊಡನೆ ಬೇರೊಂದೆಡೆಯ ರಾಜಕುಮಾ... ಅನುರಕ್ತನಾದ, ಆದರೆ ಅವನೊಡನೆ ...ಮದುವೆಯಾಗಿ ಬಾಳಲು ತೊಂದರೆಗಳುಂ...ದುವು. ಇದನ್ನು ಕಂಡು ರಾಜಕುಮಾರಿಯ ದೇಶವನ್ನೆ ಗೆದ್ದು ಅವಳನ್ನು ...ವಶಪಡಿಸಿಕೊಳ್ಳಲು ಅವನು ಯುದ್ಧ ಹೂಡಿದ. ಆ ರಾಜ್ಯ ನಷ್ಟವಾಯಿತು — ...ದರೆ ಅವರೊಂದಿಗೆ ರಾಜಕುಮಾರಿಯೂ ...ತ್ತು ಹೋದಳು. ಇದನ್ನು ಕಂಡ ರಾಜಕುಮಾರ ವಿರಹ ವ್ಯಾಕುಲತೆಯಿಂದ ತನ್ನ ಪ್ರೇಯಸಿಗಾಗಿ ಹಂಬಲಿಸಿ ಹಲುಬುತ್ತಾ...ನೆ. ಹೀಗೆ ಬಾಂಡುಂಗಿನ ಜನರಲ್ಲಿ ಪ್ರಚ...ಲಿತವಿರುವ ಜಾನಪದ ಗೀತೆಗಳಲ್ಲಿ ಶೋಕ ...ಮತ್ತು ವಿರಹಗಳ ಭಾವವೇ ಪ್ರಧಾನವಾ... ಎದ್ದು ಕಾಣುತ್ತದೆ. ತ್ಯಾಗ, ಪ್ರೇಮ, ...ಮತ್ತು ಸೌಂದರ್ಯದ ರಸದೊಡನೆ ಇದು ...ಮಿಳಿತವಾಗಿದ್ದು ಅಪೂರ್ವ ಲಾಸ್ಯವ...ನ್ನು ಹೊರಗೆಡವುತ್ತದೆ. ತಮ್ಮ ಜೀವನದಲ್ಲಿ ಮಾರ್ದವತೆಯನ್ನೂ ಸಂಸ್ಕಾ...ರವನ್ನೂ ತಂದುಕೊಂಡ ಇಲ್ಲಿಯ ನಿವಾಸಿ...ಗಳು, ದೇಶದ ಅಭಿವೃದ್ಧಿಗೆ ಸಹ ಮನ...ಮುಟ್ಟಿ ಕೆಲಸ ಮಾಡುತ್ತಾರೆ. ಹಿಂದೊ...ಮ್ಮೆ ಇಲ್ಲೆಲ್ಲ ಕಾಡುಗಳೇ ತುಂಬಿದ್ದವು. ಈಗ ಅವುಗಳು ಕಡಿಯಲ್ಪಟ್ಟಿದ್ದು ವ್ಯವ...ಸಾಯ ಕ್ಷೇತ್ರವಾಗಿ ಭೂಮಿಯನ್ನು ರೂ...ಪಿಸಲಾಗಿದೆ. ಅಲ್ಲಿ ಚಹಾ ತೋಟಗಳೂ ...ಂಕೋನ ಮರಗಳೂ ಕಂಗೊಳಿಸುತ್ತವೆ. ...ಶೀತಲ ಜಲ ವಾಯು, ಬಣ್ಣ ಬಣ್ಣದ ಪುಷ್ಪಗಳು, ಫಲಭಾರದಿಂದ ತೂಗುವ ಮರಗಳು, ಅರಳುತ್ತಿರುವ ಮೊಗ್ಗುಗಳು— ಇವೆಲ್ಲವೂ, ಮನಸ್ಸನ್ನು ಸೆರೆ ಹಿಡಿದು ಪ್ರಕೃತಿಯೊಡನೆ ನಾವು ತಲ್ಲೀನರಾಗುವಂತೆ ಮಾಡುತ್ತವೆ.

ಪಶ್ಚಿಮ ಜಾವಾದ ರಾಜಧಾನಿಯಾದ ಈ ನಗರ ಔದ್ಯೋಗಿಕ ದೃಷ್ಟಿಯಿಂದಲೂ ಪ್ರಾಮುಖ್ಯತೆ ಹೊಂದಿದೆ. ರೈಲ್ವೆ ಮತ್ತು ರಬ್ಬರಿನ ಕಾರ್ಖಾನೆಗಳು ಇಲ್ಲಿವೆ ಯಲ್ಲದೆ ಕಳೆದ ಮಹಾ ಯುದ್ಧದ ಬಳಿಕ ಕ್ವಿನೀನಿನ ತಯಾರಿಕೆಯಲ್ಲೂ ಈ ನಗರ ಅಡಿಯಿಟ್ಟಿದೆ. ಬಟ್ಟೆಯ ಕೈಗಾರಿಕೆ ಸಹಾ ಸಮೃದ್ಧ ಸ್ಥಿತಿಯಲ್ಲಿದೆ. ಇಲ್ಲಿಯ ಪಾಶ್ಚರ್ ಇನ್ ಸ್ಟಿಟ್ಯೂಟ್ ಇಡೀ ರಾಷ್ಟ್ರಕ್ಕೆ ಸಿರಂಪೂರೈಸುತ್ತದೆ. ಶೈಕ್ಷಣಿಕ ಕೇಂದ್ರವಾಗಿಯೂ ಈ ನಗರವನ್ನು ಪರಿಗಣಿಸಬಹುದು — ಇಂಡೋನೇಶಿಯಾ ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗ ಇಲ್ಲಿದೆ. ಡಾ. ಸುಕರ್ಣರು ರಾಷ್ಟ್ರೀಯ ಚಳವಳದಲ್ಲಿ ಧುಮುಕುವುದಕ್ಕೆ ಮುಂಚೆ ಇಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅಂತಾರಾಷ್ಟ್ರೀಯ ಮಟ್ಟದ ವಿಚಾರ ವಿನಿಮಯ ಕೇಂದ್ರವಾಗಿಯೂ ಬಾಂಡುಂಗಿಗೆ ಸಾಕಷ್ಟು ಅನುಭವವಿದೆ. ಇಲ್ಲಿರುವ ಕಂಗಾರ್ಡಿಯನ್ ಮತ್ತು ಫೆನ್ಸನ್ ಫಂಡ್ ಭವನಗಳಲ್ಲಿ ಅಂತಾರಾಷ್ಟ್ರೀಯ ಕೂಲಿಕಾರ ಮಂಡಳ, ದೂರ ಪ್ರಾಚ್ಯದ ಆರ್ಥಿಕ ಮಂಡಳ, ಆಹಾರ ಮತ್ತು ಕೃಷಿ ಮಂಡಳ, ಜಾಗತಿಕ ಆರೋಗ್ಯ ಮಂಡಳ, ಮುಂತಾದ ಸಂಘಗಳ ಎಷ್ಟೋ ಸಭೆಗಳು ಜರಗಿವೆ. ಆಫ್ರೋ ಏಷ್ಯ ಪರಿಷತ್ತಿನ ಪ್ರಾರಂಭಿಕ ಹಾಗು ಬಹಿರಂಗ ಅಧಿವೇಶನಕ್ಕೆ ಮೊದಲನೆಯ ಭವನವೊದಗಿಸಲಾಗಿದೆ; ಎರಡನೆಯದನ್ನು ಪರಿಷತ್ತಿನ ಆಯೋಜಕ ರಾಷ್ಟ್ರಗಳ ಮತ್ತು ಭಾಗವಹಿಸುವ ರಾಷ್ಟ್ರಗಳ ಕಾರ್ಯಾಲಯವಾಗಿಯೂ ಉಪ ಸಮಿತಿಗಳ ಸಭಾ ಭವನವಾಗಿಯೂ ಬಳಸಲಾಗುತ್ತದೆ. ಒಟ್ಟಾರೆ ಹೇಳುವುದಾದರೆ, ಪರಿಷತ್ತಿನ ದೆಸೆಯಿಂದ ಬಾಂಡುಂಗಿನಲ್ಲೀಗ ಸಂಭ್ರಮವೇ ಸಂಭ್ರಮ!

ಕಣ್ಣಿನ ಆರೋಗ್ಯ ನಿಯಮಗಳು

(ಡಾ. ಎಮ್. ಸಿ. ಮೋದಿ)

೧) ಕಣ್ಣುಗಳನ್ನು ಧೂಳಿನಿಂದ, ನೊಣದಿಂದ ಪ್ರಖರವಾದ ಪ್ರಕಾಶದಿಂದ ಮತ್ತು ಸೂರ್ಯ ಕಿರಣಗಳಿಂದ ರಕ್ಷಿಸಿಕೊಳ್ಳಬೇಕು.

೨) ಪ್ರತಿ ದಿನದ ಆಹಾರದಲ್ಲಿ ಮುಂದೆಕಾಣಿಸಿದ ಪದಾರ್ಥಗಳಿರಬೇಕು. (೧) ಬೆಣ್ಣೆ, (೨) ಹಾಲು, (೩) ಕಾಯಿಪಲ್ಲೆ (ತರಕಾರಿ) (೪) ಹಣ್ಣು.

೩) ಕೈಗಳನ್ನು ಮತ್ತು ಮುಖವನ್ನು ಪ್ರತಿದಿನ ಎರಡು ಸಾರೆ ಸಾಬೂನದಿಂದ ಮತ್ತು ಸ್ವಚ್ಛವಾದ ನೀರಿನಿಂದ ತೊಳೆದು ಕೊಳ್ಳಬೇಕು. ಮತ್ತು ಕೈ ಉಗುರುಗಳನ್ನು ಯಾವಾಗಲೂ ಸ್ವಚ್ಛವಾಗಿಟ್ಟುಕೊಳ್ಳಬೇಕು.

೪) ಹಲ್ಲುಗಳು ಸ್ವಚ್ಛವಾಗಿಯೂ ಘಟ್ಟಿಯಾಗಿಯೂ ಇರಬೇಕು.

೫) ಪ್ರತಿಯೊಬ್ಬರೂ ಮೈಲಿ ಚುಚ್ಚಿಸಿಕೊಳ್ಳಬೇಕು. ಅಲ್ಲದೆ ಪ್ರತಿ ೫ ವರ್ಷಕ್ಕೊಮ್ಮೆ ಮೈಲಿ ಚುಚ್ಚಿಸಿಕೊಳ್ಳುತ್ತಿರಬೇಕು. ಮತ್ತು ಮೈಲಿ ಬೇನೆ ಪಸರಿಸಿದಾಗ ಆ ಭಾಗದ ಜನರು ಮೈಲಿ ಚುಚ್ಚಿಸಿಕೊಳ್ಳಬೇಕು.

೬) ಓದುವಾಗ ಮತ್ತು ಬರೆಯುವಾಗ ಬೆಳಕು ಎಡದ ಭುಜದ ಹಿಂಭಾಗದಿಂದ ಬಂದು ಪುಸ್ತಕದ ಮೇಲೆ ಬೀಳುತ್ತಿರಬೇಕು. ಬೆಳಕು ಸಾಕಷ್ಟಿರಬೇಕು.

೭) ಧೂಳಿನಿಂದ ಮತ್ತು ಸೂರ್ಯಕಿರಣಗಳಿಂದ ಕಣ್ಣುಗಳನ್ನು ರಕ್ಷಿಸುವದರ ಸಲುವಾಗಿಯೂ, ಮನರಂಜನೆಯ ಕಾರ್ಯಕ್ರಮಗಳಲ್ಲಿ ಮತ್ತು ವ್ಯವಹಾರದಲ್ಲಿ ಸಂಭವಿಸುವ ಅಪಾಯಗಳನ್ನು ತಡೆಯುವದರ ಸಲುವಾಗಿಯೂ ತಂಪಿನ ಕನ್ನಡಕವನ್ನು (Goggles) ಉಪಯೋಗಿಸಬೇಕು.

೮) ಕಣ್ಣುಗಳು ಕೆಂಪಾಗಿ ಪಿಚ್ಚು ಬರುತ್ತಿದ್ದರೆ ಬೋರಿಕ್ ಪುಡಿ ಕಲಿಸಿದ ನೀರಿನಿಂದಾಗಲೀ, ಸ್ವಚ್ಛವಾದ ನೀರಿನಿಂದಾಗಲೀ ಕಣ್ಣುಗಳನ್ನು ತೊಳೆದು ಪರಳೆಣ್ಣೆಯನ್ನು (ಔಡಲೆಣ್ಣೆ) ಹಾಕಬೇಕು.

೯) ಕೆಳಗೆ ವಿವರಿಸಿದ ಚಿಹ್ನಗಳು ಕಣ್ಣನಲ್ಲಿದ್ದರೆ ಕೂಡಲೇ ಕಣ್ಣಿನ ಡಾಕ್ಟರಿಗೆ ತೋರಿಸಿ ಉಪಚಾರ ಮಾಡಿಸಿಕೊಳ್ಳಬೇಕು.

ತಲೆನೋವು, ಕಣ್ಣನಲ್ಲಿ ನೀರು ಬರುವದು, ಕಣ್ಣು ಭಾರವಾಗಿ ನೋಯುವದು, ಕಣ್ಣು ಕೆಂಪಾಗುವದು, ರೆಪ್ಪೆ ಬಾಯುವದು, ದೀಪದ ಸುತ್ತಲೂ ಬಣ್ಣ ಬಣ್ಣದ ವರ್ತುಳಗಳು ಕಾಣಿಸುವದು, ಕಣ್ಣನೆದುರಿಗೆ ಸಣ್ಣ ಚುಕ್ಕೆಗಳು ಹರಿದಾಡಿದಂತೆನಿಸುವದು.

೧೦) ಮೇಲಿಂದ ಮೇಲೆ ಕಣ್ಣುಗಳನ್ನು ಕಣ್ಣಿನ ಡಾಕ್ಟರ ಕಡೆಯಿಂದ ಪರೀಕ್ಷೆಮಾಡಿಸಬೇಕು.

೧೧) ಸರ್ವಾಂಗಗಳನ್ನೂ (ಇಡೀ ದೇಹವನ್ನು) ಡಾಕ್ಟರರ ಕಡೆಯಿಂದ ಪರೀಕ್ಷೆ ಮಾಡಿಸಬೇಕು.

೧೨) ಮೇಹ ರೋಗವಿದ್ದವರು ಪದವೀಧರ ಡಾಕ್ಟರ ಒಪ್ಪಿಗೆಯ ವಿನಾ ಮದುವೆಯಾಗಬಾರದು.

೧೩) ಕೂಸಿನ ಜನನವಾದಕೂಡಲೇ ಕಣ್ಣನಲ್ಲಿ ಪೆನ್ಸಿಲಿನ್ ಮುಲಾಮು ಇಲ್ಲವೇ ಪರಳೆಣ್ಣೆಯ ಹನಿಗಳನ್ನು ಹಾಕಬೇಕು.

೧೪ ಸಂತತಿ ನಿಯಮನವನ್ನು ಆಚರಿಸಬೇಕು.

೧೫) ಮೆಳ್ಳೆಗಣ್ಣು, ತಿರಸುಗಣ್ಣು ಅಥವಾ ಹಿರಿಗಣ್ಣುಗಳನ್ನು ಸರಿ ಮಾಡಿಸಿಕೊಳ್ಳಬೇಕು.

ಮಂಗಳೂರು ಯಕ್ಷಗಾನ ಮಂಡಳಿ ಹಾಗೂ ವಕೀಲ ಕೂಟದವರ ಮೈಸೂರು — ಕೊಡಗುಗಳಲ್ಲಿಯ ಕಾರ್ಯಕ್ರಮ:—

ಮಂಗಳೂರಿನ ಯಕ್ಷಗಾನ ಸಾಂಸ್ಕೃತಿಕ ಕೂಟದ ಶ್ರೀಗಳಾದ ಎಡ್ವೊಕೇಟ್ ಕೆ ಬಾಲಕೃಷ್ಣ ರಾವ್, ಪೊಳಲಿ ಶಂಕರ ನಾರಾಯಣ ಶಾಸ್ತ್ರಿ, ಟಿ. ಗೋಪಾಲ ಕೃಷ್ಣ ಭಟ್, ನೇರಳೆ ಸೀತಾರಾಮಯ್ಯ, ಶೆಡ್ಡೆ ಕೃಷ್ಣ ಮಯ್ಯ, ಕೆ. ಮಹಾಬಲ ನೋಂಡ (ಭಾಗವತರು) ಪಡಿಕ್ಕಳ ಈಶ್ವರಯ್ಯ (ಮೃದಂಗ ವಾದಕರು) ಹಾಗೂ ವಕೀಲ ಕೂಟದ ಶ್ರೀಗಳಾದ ಕೆ. ಸೂರ್ಯನಾರಾಯಣ ಅಡಿಗ (ನಗರ ಸಭಾಪತಿ), ಎ. ಶಂಕರ ಆಳ್ವ, ಬಿ ಗಂಗಾಧರ ದಾಸ್, ಎಸ್. ಶ್ರೀನಿವಾಸರಾವ್, ಕೆ ಮಾಧವರಾವ್ ಟಿ. ವಾಸುದೇವ ರಾವ್, ಎ. ದೇವಳಿತ್ತ ಯು. ರಘುನಾಥ ಶೆಣೈ, ಕೆ. ಸಂಜೀವ, ಬಿ. ವಿಶ್ವನಾಥ ಬಾಳಿಗ, ಬಿ ವಿಠಲಪ್ಪ ಮತ್ತು ಕೆ. ನಾರಾಯಣ ರೈ (ಎಡಿಶನಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಗಳವರು ಇದೇ ತಾ 16ರಿಂದ 26 ರತನಕ ಮೈಸೂರು ಮತ್ತು ಕೊಡಗು ರಾಜ್ಯಗಳಲ್ಲಿ ಸಂಚರಿಸಲಿರುವರು. ತಾ 16ರಲ್ಲು ಸಂಜೆ ಮೂಡಿಗೆರೆಯಲ್ಲಿಯೂ 17ರಲ್ಲು ಶೃಂಗೇರಿಯಲ್ಲೂ 18ರಂದು ಭದ್ರಾವತಿಯಲ್ಲೂ 19ರಲ್ಲು ಚಿಕ್ಕಮಂಗಳೂರಲ್ಲೂ 20ರಲ್ಲು ಹಾಸನದಲ್ಲೂ 21 ಮ 22ರಂದು ಬೆಂಗಳೂರಲ್ಲೂ ಬಿಡಾರಮಾಡಿ ಪ್ರತಿದಿನ ಸಂಜೆ6ರಿಂದ 9ರತನಕ ಯಕ್ಷಗಾನ ತಾಳ ಮದ್ದಲೆ ಕಾಲಕ್ಷೇಪಗಳನ್ನು ಜರಗಿಸುವರು. ತಾ23ರಲ್ಲು ಮೈಸೂರಿಗೂ 25ರಂದು ಮಡಿಕೇರಿ ಮತ್ತು 29ರಲ್ಲು ಭಾಗಮಂಡಲಕ್ಕೂ ಬೇಟಿ ಕೊಡಲಿರುವರು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಾವಳಿ	೪	೦
ಜ್ಞಾನಯೋಗ	೪	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೪	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಹಿಮಾಚಲ ಸಾನ್ನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ)	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ಹಾದಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ಜ್ಞಾನ ಮಾರ್ಗ	೦	೮
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ಶ್ರೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಧ್ಯಾನ	೦	೪

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

(೩ನೇ ಪುಟದಿಂದ)

ಯಾದುದರಿಂದ, ಹೊಟ್ಟೆಯೊಳಗಿನ ಸ್ಥಿತಿಯನ್ನು ತಿಳಿಯುವುದು ವೈದ್ಯರಿಗೂ ಕಷ್ಟ. ರೋಗಿಯ ಮುಟ್ಟಿಗಂತೂ ಅದು ಕಠಿಣವೇ ಸರಿ. ಆದುದರಿಂದ ಎಲ್ಲ ಸಂಶೋಧಕರ ದೃಷ್ಟಿಯೂ ಇಲ್ಲಿ ಕೇಂದ್ರೀಕೃತವಾಗಿದೆ. ತಿನ್ನುವಾಗ ಕಷ್ಟವಾಗುವುದು, ಏನೋ ಸಿಕ್ಕಿಕೊಂಡಂತಾಗುವುದು, ಅನ್ನ ಮೆಚ್ಚದೆ ಅಜೀರ್ಣದ ಅನುಭವವಾಗುವುದು, ಇವೆಲ್ಲ ಅನ್ನಕೋಶಗಳೊಳಗಿನ ರೋಗದ ಲಕ್ಷಣ. ಕರುಳಿನಲ್ಲಿ ವ್ರಣ ಕಾಣಿಸಿಕೊಳ್ಳುವುದರಿಂದಲೂ ಇಷ್ಟೇ ಕೆಡುಕಾಗುತ್ತದೆ. ಹೊಟ್ಟೆತುಂಬಿದಂತೆ ತೋರುವುದು, ಮಲವಿಸರ್ಜನೆಯ ಸಮಯ ತಪ್ಪಿಹೋಗುವುದು ಮಲದ್ವಾರದಲ್ಲಿ ನೆತ್ತರು ಒಸರುವುದು, ಅಲ್ಲಿ ನೋವೆನಿಸುವುದು ಇತ್ಯಾದಿ ಲಕ್ಷಣಗಳಿಂದ ಅರ್ಬುದರೋಗ ತಗಲಿದೆ ಎಂದು ಹೇಳಬಹುದು.

ಗಂಡಸಿನ ಶುಕ್ರಾಣುವು ಈಸಿಕೊಂಡು ಬರುವ ಗ್ರಂಥಿಗೆ ಅರ್ಬುದ ರೋಗ ತಗಲುವುದುಂಟು— ಪ್ರಾಯಸಂದವರಲ್ಲಿ ಇದು ಅಧಿಕ. ಅವರಿಗೆ ಮೂತ್ರ ವಿಸರ್ಜನೆ ಸುಸೂತ್ರ ನಡೆಯುವುದಿಲ್ಲ; ತಡೆದು ಹಿಡಿದಂತಾಗಬಹುದು; ಅಥವಾ ಆಗೊಮ್ಮೆ ಈಗೊಮ್ಮೆ ಸಮಯದ ಲೆಕ್ಕವಿಲ್ಲದೆ ವಿಸರ್ಜನೆ ಮಾಡಬೇಕೆಂದೂ ತೋರೀತು. ಮೂತ್ರಾಶಯಕ್ಕೆ ರೋಗ ತಗಲಿದ್ದರೆ, ಆಗ ಮೂತ್ರದಲ್ಲಿ ನೆತ್ತರು ಹರಿಯತೊಡಗುತ್ತದೆ. ನೆತ್ತರು ಕೆಂಪಗಿರಬೇಕೆಂದಿಲ್ಲ— ಮೂತ್ರದ ಬಣ್ಣ ನೇರಳೆ ಕೆಂಪಗೆ ತಿರುಗಿದ್ದರೆ ವೈದ್ಯರ ಸಲಹೆ ಕೇಳುವುದುತ್ತಮ. ಮೂತ್ರಪಿಂಡಕ್ಕೆ ತಗಲುವ ರೋಗ ಮಾತ್ರ ಮುದುಕರಂತೆ ಮಕ್ಕಳಲ್ಲೂ ಕಾಣಿಸುತ್ತದೆ; ಮಕ್ಕಳ ಹೊಟ್ಟೆ ಬಾತಿದ್ದರೆ, ಮುದುಕರಿಗೆ ಹೊಟ್ಟೆ ಊದಿಕೊಂಡಂತೆ ಕಂಡರೆ ಅದನ್ನು ಅಲಕ್ಷಿಸಬಾರದು. ಗಂಡಸರ ಅಂಡಾಶಯ ಬಾತುಕೊಳ್ಳುವುದೂ ಜನನೇಂದ್ರಿಯದ ಮುಂದೊಗಲಿನಲ್ಲಿ ಹುಣ್ಣೇಳುವುದೂ ಅಪಾಯಕರ. ಹೆಂಗಸರ ವಿಷಯದಲ್ಲಿ, ಮುಟ್ಟಾಗಿಲ್ಲದಿರುವಾಗಲೂ ಮುಟ್ಟು ನಿಂತು ಮುದುಕಿಯರಾಗಿದ್ದಾಗಲೂ ರಕ್ತಸ್ರಾವವಾಗುತ್ತಿದ್ದರೆ ಗರ್ಭಾಶಯ ಸರಿಯಿಲ್ಲವೆಂದೂ ಅಲ್ಲಿ ಅರ್ಬುದ ರೋಗದ ಬೀಜಾರೋಪಣವಾಗಿದೆಯೆಂದೂ ತಿಳಿದುಕೊಳ್ಳಬಹುದು. ಗರ್ಭಾಶಯ ದ್ವಾರದಲ್ಲಿ ರೋಗ ತೀವ್ರವಾಗಿದ್ದರೆ ಹೊಟ್ಟೆಯ ಕೆಳಭಾಗದಲ್ಲಿ ಏನೋ ಒತ್ತಿದಂತೆ, ಬೆನ್ನು ನೋಯುತ್ತಿರುವಂತೆ ಆದೀತು. ಆಯಾಸವೂ ಆಗುತ್ತದೆ ಗರ್ಭಕೋಶದೊಳಗೆ ವ್ರಣ ಹುಟ್ಟಿದ್ದರೆ ರಕ್ತಸ್ರಾವ ಬಹಳ ತೀವ್ರವಾಗುತ್ತದೆ. ಹೆಂಗಸರ ಮುಟ್ಟಿಗೆ ಸುಲಭದಲ್ಲಿ ಗುರುತಿಸಬಹುದಾದುದೆಂದರೆ ಮೊಲೆಗೆ ಸಂಬಂಧಿಸಿದ ಅರ್ಬುದ ರೋಗ. ಇದು ಹಾಲನ್ನು ಉತ್ಪಾದಿಸುವ ಮೊಲೆಯ ಭಾಗದ ಶಕ್ತಿಯನ್ನು ಕುಂದಿಸುವುದರಿಂದ, ಮೊಲೆ ಮುದುಡಿಕೊಳ್ಳುತ್ತದೆ. ಮೊಲೆ ತೊಟ್ಟು ಒಳಗೆ ಸೇದಿಕೊಳ್ಳುತ್ತದೆ. ಹಾಲು ಬರುವ ದಾರಿಯಲ್ಲಿ ವ್ರಣವಿದ್ದರೆ, ಏನೋ ದ್ರವವನ್ನು ಮೊಲೆ ತೊಟ್ಟು ಹೊರಗೆಡವುತ್ತದೆ. ಇಲ್ಲಿ ಚರ್ಮ ಸಂಬಂಧದ ಅರ್ಬುದ ರೋಗವೂ ಕಾಣಿಸಬಹುದು. ಮೇಲಿನ ಲಕ್ಷಣಗಳು ಇತರ ಕೆಲವು ರೋಗಗಳಿಗೂ ಸಾಮಾನ್ಯವಾಗಿರಬಹುದು. ಆದರೆ ಯಾವ ಸಂದರ್ಭದಲ್ಲೂ ನಾವೂ ಸ್ವಂತ ಚಿಕಿತ್ಸೆಗೆ ಕೈ ಹಾಕಕೂಡದು. ವೈದ್ಯಕೀಯ ಪರೀಕ್ಷೆಗೆಯೇ ಮುಂದಾಗಿ ಅರ್ಬುದ ರೋಗದ ಅಸ್ತಿತ್ವವಿದೆಯೋ ಏನೆಂದು ತಿಳಿದು, ಅವರ ಸಲಹೆಯಂತೆ ನಡೆಯಬೇಕು. ನೈರ್ಮಲ್ಯಕ್ಕೂ ಪೆಟ್ಟು, ತಿಕ್ಕಾಟಗಳಾಗದಿರುವುದಕ್ಕೂ ಮಹತ್ವವಿತ್ತು ಆರೋಗ್ಯದ ಸಾಮಾನ್ಯ ಸೂತ್ರಗಳನ್ನು ಅನುಸರಿಸುವುದರಿಂದ ಈ ರೋಗ ಬಾರದಂತೆ ನೋಡಿಕೊಳ್ಳಬಹುದು; ರೋಗ ಗ್ರಸ್ತರಾದವರು ಸಹ ಸಕಾಲದಲ್ಲಿ ಚಿಕಿತ್ಸೆಗೊಳಗಾದರೆ, ಅಪಾಯ ರಹಿತರಾಗಿ ದಿನಗಳೆಯಬಲ್ಲರು. —ಕು.

In the Court of the Subordinate Judge of South Kanara.

O. S. No. 236 of 1951.

Between:-

Chandra Bhagi Amma .. Plaintiff.

and

Seetharama and others .. Defendants.

Sale Proclamation.

In pursuance of the orders of the Court dated 5—4—1955, 7—4—1955 and 9—4—1955, the Administrator appointed in the above suit will sell by public auction, (1) the right of collecting the amount of principal and interest due on the pro-notes mentioned in Schedule A hereunder and executed in favour of the late Sarvathody Chennamma by the respective executants subject to the terms mentioned below and (2) the right of collecting the amount due under the decrees mentioned in Schedule B hereunder subject to the terms mentioned below at the Office of the Administrator in Canara Hostel Road Kodialbail, Mangalore 3, at 2 P. M. on 1—5—1955 and on the adjourned days and hours.

Conditions of Sale

1. The right, title, and interest of late Sarvathody Chennamma in the said pronotes and decrees and the right to recover the amounts due under the said pronotes and decrees will be sold by the Administrator and the purchaser should take the assignment subject to all risks, flaws and defects, if any. Neither the administrator nor the estate of the late Chennamma will be liable for any loss on failure of the recovery of the amounts due under the said pronotes, and decrees.

2. The administrator may reduce the upset price fixed for any of the lots, on the day of the sale, if there are no bidders forth-coming to bid for a price above the upset price orginally fixed. The administrator reserves the right to reject the highest bid without assigning reasons therefor or may adjourn the sale to another day.

3. Each lot will be ordinarily knocked down to the highest bidder and he shall pay forthwith the full purchase money to the administrator and obtain a receipt. If the highest bidder fails to pay the full purchase money immediately, his bid will be rejected and the lot will be resold at once.

4. The sale shall become absolute immediately on payment of the full purchase money on the day of the sale itself.

5. No bidder or purchaser shall have any remedy against the estate of the aforesaid Sarvathody Chennamma, or against the parties in O S. No. 236/1951 Sub Court, Mangalore, or against the administrator for any of the representations made or to be made or for any act done or to be done in relation to the aforesaid sale, and the aforesaid pronotes and decrees.

6. The purchaser of any of the lots will be entitled to get from the administrator as representing the estate of the late Sarvathody Chennamma, an assignment in his favour in respect of lots purchased by him. All the expenses of such documents, i. e. stamp fee, registration fee, document writing fee, postal charges, etc. if any, shall be borne by the purchaser himself.

7. From the date of such sale, and assignment, the purchaser shall be entitled to recover the amount due under the lot purchased by him or institute legal proceedings for the purpose.

(By order of the Court)

Mangalore, 11—4—1955.

K. Devadas Nayak, B. A. B. L.
Administrator in O. S. No. 236/1951,
Sub Court, Mangalore.

Schedule A.

Particulars of the pronote debts due to the estate of the late Sarvathody Chennamma to be sold by the Administrator.

Lot No.	Date of Pronote	Name and address of the executant	Principal amount Rs. As. Ps.	Upset Price Rs. As. Ps.	Remarks
1	1—3—1950	Nettanige Hosamane Ramakrishna Kekunnaya s/o Keshav Kekunnaya Hosamane, Nettanige Village, Kasaragod Taluk	300 0 0	75 0 0	The executant has paid Rs. 30/- towards principal and interest on 23-2-1953 and has endorsed the said payment on the back of the pronote under his signature. The balance Principal and interest is due.
2	17—12—1950	Iswaramangel Andunhi Beary, s/o Pera Mammade Beary, Iswaramangal, Mudnoor Village, Puttur Taluk	300 0 0	75 0 0	Principal and interest is due.
3	27—1—1951	P. Hasanare Beary, son of Palangodu Badav Kunhi Beary, Pallangodu, Adhur Village No. 1, Kasaragod Taluk	600 0 0	125 0 0	Principal and interest is due.
4	14—2—1951	N. Kunhi Kanna Maniyani n/o Pilipude Mahalinga alias Appayya Maniyani, Nidiyadka Nettanige Village, Kasaragod Taluk ...	1200 0 0	300 0 0	Principal and interest is due.

N. B. The claims under the aforesaid pronotes do not appear to be time-barred, in view of the fact that the Madras Ordinance, 1953 and the Madras Act IV of 1954 were in force till 28—2—1955 and the Madras Act I of 1955 is now in force. The claims under Lot No. 1 is also not time-barred by reason of the endorsement of payment dated 23—2—1953.

Schedule B

Particulars of the decree-debts due to the estate of the late Sarvathody Chennamma, to be sold by the Administrator.

Lot No.	Date of Decree	Name and address of Plaintiff	Name and address of the Defendant	Number of the suit in the Court of the District Munsif of Puttur	Amount decreed Rs. As. Ps.	Upset Price Rs. As. Ps.
1	28-11-1952	Sri M. N. Chouta, receiver in O. S. 236/51 Sub Court, Mangalore.	Pakrunhi Beary, s/o Moidy Kutty Beary, Adhur Post	S. C. S. No. 268/52	166 12 3 interest & costs	55 0 0
2	17-12-1952	do	Abdul Aziz Beary, s/o Zinnaddin Beary, Adhur Post	„ 269/52	116 0 0 interest & costs	35 0 0
3	29-9-1952	do	Moose Beary, s/o Abdul Kadri Beary, Adhur Post	„ 218/52	65 9 3 interest & costs	20 0 0
4	29-6-1953	do	Ramanna Gowda, s/o Choma Gowda, Adhur Post	„ 107/53	171 2 0 interest & costs	55 0 0
5	14-4-1953	do	Hammad Kunhi Beary, s/o Moidu Kunhi Beary, Adhur	„ 41/53	188 1 8 interest & costs	65 0 0
6	30-1-1953	do	Pakira Belchappada, n/o Rama Kunhi Belchappada	„ 265/52	121 8 0 interest & costs	40 0 0
7	1-4-1953	do	Iswara Ballyaya, s/o Shambhu Ballyaya, Adhur Post	„ 44/53	116 6 9 interest & costs	35 0 0
8	5-2-1953	do	Veeroji Rao, s/o Kaloji Rao, Adhur Post	„ 10/53	121 3 0 interest & costs	40 0 0
9	11-6-1953	do	Maila Naik, s/o Krishna Naik, Adhur Post	„ 77/53	214 11 0 interest & costs	70 0 0
10	17-6-1953	do	Subbakke Hengsu, n/o Santhappa Bunta, Adhur Post	„ 97/53	210 4 0 interest & costs	70 0 0
11	17-6-1953	do	Kunha Naik, s/o Teelu Naik, Adhur Post	„ 96/53	210 6 0 interest & costs	70 0 0
12	25-6-1953	do	Abdul Beary, s/o Badava Beary, Adhur Post	„ 103/53	52 0 0 interest & costs	15 0 0
13	25-6-1953	do	Hibrayine Beary, s/o Seedi Beary, Adhur Post	„ 104/53	183 10 0 interest & costs	60 0 0
14	24-6-1953	do	Muthappa Rai, n/o Kunhanna Banta, Adhur Post	„ 98/53	203 8 0 interest & costs	70 0 0
15	24-6-1953	do	1. Nandappa Rai, s/o Chomu Hengsu. 2. Santhappa Rai, s/o Deyakku, Adhur Post	„ 99/53	234 4 0 interest & costs	75 0 0
16	16-7-1953	do	Abdul Rahiman Beary, s/o Moidu Kunhi Beary, Adhur Post	„ 146/53	69 13 4 interest & costs	25 0 0
17	29-7-1953	do	Annu Naik, s/o Muthu Naik, Adhur Post	„ 100/53	93 7 0 interest & costs	35 0 0
18	3-8-1953	do	Subba, n/o Subba Ganiga, Adhur Post	„ 170/53	174 10 0 interest & costs	60 0 0
19	3-8-1953	do	Narayana Rai, n/o Pakirappa Rai, Adhur Post	„ 169/53	58 4 0 interest & costs	20 0 0
20	5-8-1953	do	1 Manhamma Bhata, s/o Mahalinga Bhata 2. Rama, s/o of No. (1), Adhur Post	„ 102/53	198 4 0 interest & costs	65 0 0
21	29-8-1953	do	1. Beeraine Beary 2. Mammunhi Beary, Adhur Post	„ 101/53	290 8 0 interest & costs	100 0 0
22	26-9-1953	do	1. Santhappa Rai 2. Pammu Hengsu, Adhur Post	„ 105/53	167 6 0 interest & costs	55 0 0
23	30-9-1953	do	Poovappa Rai, n/o Mahalinga Shetty, Adhur Post	„ 218/53	233 0 0 interest & costs	75 0 0
24	20-10-1953	do	1. Appu Hengsu 2 Subbanna Rai, Adhur Post	„ 228/53	116 7 3 interest & costs	35 0 0
25	21-10-1953	do	Andunhi Beary, s/o Abbas Beary. Adhur Post	„ 213/53	161 15 2 interest & costs	55 0 0
26	25-9-1953	do	1. Shivanna Kalluraya 2. Gopalakrishna Kalluraya 3. Venkatachalla Kalluraya 4. Iswara Kalluraya, Adhur Post	„ 214/53	232 13 0 interest & costs	75 0 0
27	30-11-1953	do	1. Mahalinga Maniyani 2. Kunhi Maniyani Adhur Post	„ 229/53	203 14 0 interest & costs	65 0 0
28	25-9-1953	do	Thyampanna Rai, n/o Batyappa Rai, Adhur Post	„ 212/53	86 10 0 interest & costs	25 0 0
29	30-9-1953	do	Ganesh Rai, n/o Sankappa Rai, Puttur Post	„ 172/53	233 0 0 interest & costs	75 0 0
30	26-9-1953	do	Kunhanna Rai, n/o Koragappa Rai, Adhur Post	„ 217/53	75 13 0 interest & costs	25 0 0
31	8-10-1953	do	Thimma Naik, s/o Kunha Naik, Adhur Post	„ 171/53	226 12 0 interest & costs	75 0 0
32	26-9-1953	do	1. Santhappa Rai 2. Pammu Hengsu, Adhur Post	„ 106/53	283 12 0 interest & costs	100 0 0
33	27-10-1953	do	Abdulla Beary, s/o Mahammad Beary, Adhur post	„ 216/53	23 2 0 interest & costs	5 0 0
34	23-7-1953	do	1. Narayan Rai 2. Muthappa Rai, Adhur Post	O. S. No 242/54	640 0 0 interest & costs	200 0 0
35	do	do	Pakirappa Rai, n/o Arabi Bunta. Adhur Post	„ 126/53	378 10 0 interest & costs	125 0 0
36	do	do	Ramayya Rai. n/o Guddappa Rai, Adhur Post	„ 128/53	587 8 0 interest & costs	200 0 0
37	7-7-1953	do	Thimmappa Rai. grand nephew of Annoji alias Thimmappa Bunta, Adhur Post	„ 168/53	381 8 9 interest & costs	125 0 0
38	do	do	Kunhanna Rai, n/o Koragappa Rai, Adhur Post	„ 170/53	487 4 7 interest & costs	175 0 0
39	29-6-1953	do	Pergade Bunta. n/o Subbanna Bunta, Adhur Post	„ 166/53	381 1 10 interest & costs	125 0 0
40	do	do	Kunhanna Rai, n/o Koragappa Rai, Adhur Post	„ 125/53	365 12 0 interest & costs	120 0 0
41	do	do	Kunhammade Beary, n/o Baduva Beary, Adhur Post	„ 161/53	425 5 4 interest & costs	150 0 0
42	29-6-1953	do	Koragapppa Rai, n/o Ammu Banta, Adhur Post	„ 163/53	877 2 0 interest & costs	300 0 0
43	14-8-1953	do	Thimmanna Rai, n/o Batiappa Rai, Adhur Post	„ 127/53	475 2 0 interest & costs	155 0 0
44	29-7-1953	do	1. Mammunhi Beary 2. Abdul Rahiman Beary, Adhur Post	„ 91/53	378 7 6 interest & costs	125 0 0

(Continued to the next page)

Lot No.	Date of Decree	Name and address of Plaintiff	Name and address of the Defendant	Number of the suit in the Court of the District Munsif of Puttur	Amount decreed Rs. As. Ps.	Upset Price Rs. As. Ps.
45	4-8-1953	Sri M. N. Chouta, Receiver in O. S. 236/51 Sub Court, Mangalore	1. Mammade Beary 2. Ibrayine Beary, Adhur Post	„ 240/53	426 2 0 interest & costs	150 0 0
46	28-8-1953	do	Thyampanna Rai, n/o Subbanna Banta, Adhur Post	„ 171/53	362 13 9 interest & costs	120 0 0
47	29-8-1953	do	1. Appayya Rai 2. Aithappa Rai, Cultivator, Adhur	„ 165/53	637 9 4 interest & costs	215 0 0
48	30-11-1953	do	Mutha Naik K. s/o Mailla Naik, Adhur Post	„ 107/53	335 8 5 interest & costs	115 0 0
49	3-10-1953	do	Setiappa Rai, n/o Kunhanna Bunta, Adhur Post	„ 400/53	354 0 3 interest & costs	120 0 0
50	30-11-1953	do	Koragappa Rai, n/o Batiappa Rai, Adhur Post	„ 398/53	698 8 0 interest & costs	350 0 0
51	21-10-1953	do	1. Mammade Beary, s/o Badava Beary 2. Moidin Kunhi Beary) sons of 3. Hibrayine Beary) No 1 Adhur Post	„ 399/53	378 10 0 interest & costs	125 0 0
52	30-10-1953	do	1. Choma Poojary 2. Subbappu Poojary, n/o Pakira Poojary, Adhur Post	„ 169/53	780 0 0 interest & costs	255 0 0
53	29-8-1953	do	Ammanna Rai, n/o Beeranna Bunta, Adhur Post	„ 167/53	894 0 0 interest & costs	300 0 0
54	29-2-1952	Sri H. Dasanna Alva- receiver in O. S. 236/51 Sub Court, Mangalore.	Andhunni alias Abdulla Beary, s/o Mammade Beary, Adhur Post	S. C. S. No. 24/52	263 10 0 interest & costs	75 0 0
55	6-2-1952	do	Lingappa Rai, n/o Thyampanna Alva, Adhur Post	„ 8/52	116 8 0 interest & costs	40 0 0
56	7-6-1952	do	Pakira Belchappada, n/o Ramakunhi Belchappadu, Adhur Post	„ 23/52	74 15 0 interest & costs	15 0 0
57	11-6-1952	do	Pokkala Belchappada, n/o Ambadi Belchappada, Adhur Post	„ 90/52	97 0 6 interest & costs	35 0 0
58	29-9-1952	do	Mera Aitha, s/o Mera Koraga, Adhur Post	„ 110/52	73 12 0 interest & costs	25 0 0
59	do	do	Mera Guruva, s/o Mera Choma, Iswaramangal Post	„ 111/52	23 6 0 interest & costs	5 0 0
60	26-5-1952	do	Mammunhi Beary, s/o Abdul Beary, Adhur Post	„ 341/52	215 8 3 interest & costs	75 0 0
61	18-3-1952	do	Abbokore Beary, s/o Maikunhi Beary, Adhur Post	„ 28/52	354 8 0 interest & costs	120 0 0
62	30-1-1952	1. Chandrabhagi Amma d/o Sarvathody Chennamma, Puttur 2. Sri H. Dasanna Alva- receiver in O. S. 236/51 Sub Court. Mangalore.	1. Kotta Belchappada) Adhur 2. Padmavathi Amma) Post 3. Seethamma, Kadri Post 4. Saraswathi Amma Puttur Post 5. Balakrishna Rai, Adhur Post Nos. 2 to 5 are children of Sarvathody Chennamma.	„ 274/51	135 7 8 interest & costs	45 0 0
63	do	do	1. Venkatramana Sheregara, s/o Mahalinga Sheregara, Adhur 2. Padmavathiamma, Adhur Post 3. Seethamma, Kadri Post 4. Saraswathi Amma, Puttur Post 5. Balakrishna Rai, Adhur Post No. 2 to 5 are children of Sarvathody Chennamma	„ 273/51	173 14 9 interest & costs	55 0 0
64	do	do	1 Appayya Maniyani, grand nephew of Kunhappa Maniyani, Adhur 2 Padmavathiamma, Adhur Post 3 Seethamma, Kadri Post 4 Saraswathi Amma, Puttur 5 Balakrishna Rai, Adhur Post No. 2 to 5 are the children of Sarvathody Chennamma	„ 275/51	161 15 6 interest & costs	55 0 0
65	21-2-1952	do	1 Shama Bhatta, s/o Subraya Bhat, Adhur Post 2 Padmavathiamma, Adhur Post 3 Seethamma, Kadri Post 4 Saraswathi Amma, Puttur 5 Balakrishna Rai, Adhur Post Nos. 2 to 5 are the children of Sarvathody Chennamma	„ 281/51	134 5 0 interest & costs	45 0 0
66	27-7-1951	Chandrabaghi Amma d/o Sarvathody Chennamma, Puttur	1 Abdul Kadri Beary, s/o Mammade Beary, Adhur Post 2 Padmavathi Amma, Adhur Post 3 Seethamma, Kadri Post 4 Saraswathi Amma, Puttur 5 Balakrishna Rai, Adhur Post Nos. 2 to 5 are children of Sarvathody Chennamma	O. S. No. 239/51	675 11 3 interest & costs	225 0 0
67	6-2-1953	1 Chandrabhagi Amma, d/o Sarvathody Chennamma, Puttur 2 Sri M. N. Chouta, receiver in O. S. 236/51 Sub Court, Mangalore	1 Koragappa Gowda, s/o Tukra Gowda Adhur Post 2 Muthappa Gowda, Adhur Post, s/o No. 1 3 Padmavathi Amma, Adhur Post 4 Seethamma, Kadri Post 5 Saraswathi Amma, Puttur 6 Balakrishna Rai, Adhur Post (No. 3 to 6 are children of Sarvathody Chennamma)	„ 411/51	483 8 6 interest & costs	150 0 0
68	26-7-1949 (Sub court decree and 18-2-1954 High Court decree)	1 Sarvathody Chennamma (Since dead) 2 Padmavathi Bai 3 Chandrabaghi Amma 4 Seethamma 5 Saraswathi Bai 6 Balakrishna Rai	Cherakanda Ramachandrayya	„ 92/48 Sub Court, Mangalore. & A. S. 212/50 High Court, Madras	4898 0 0 interest & costs	2000 0 0

N. B. The claims under the lots No. 54, 55, 61 to 66 do not appear to have become time-barred, in view of the fact, that the Madras Ordinance 1953, and the Madras Act V of 1954 were in force till 28—2—1955 and the Madras Act I of 1955 is now in force.

(By order of the Court)

Mangalore, 11—4—1955.

K. Devadas Nayak, *B. A., B. L,*
Administrator in O. S. 236/51 Sub Court, Mangalore.

No. 3618

Licensed to Post without Prepayment

ನವಯುಗ

ಸಂಪುಟ ೩೪ ಉಡುಪಿ, 28—4—1955 ಸಂಚಿಕೆ ೩೪

VOL. 34 NO. 34

ಒಂದು ನಿರ್ದಿಷ್ಟ ಭಾಷೆಯನ್ನಾಡುವ ಜನರು ಬೇರೆ ಭಾಷೆಯಾಡುವ ಜನರ ಮೇಲೆ ತಮ್ಮ ಭಾಷೆಯನ್ನು ಕಲಿಯಲೇ ಬೇಕೆಂಬ ಒತ್ತಾಯವನ್ನು ಹೇರಿದರೆ ಅದು ಪ್ರೇಮ ಮಾರ್ಗಕ್ಕೆ ವಿರುದ್ಧವಾಗಿ ಹೋದಂತಾಗುತ್ತದೆ, ಅದೆಂದೂ ಯಶಸ್ಸು ಗಳಿಸಲಾರದು. ಒಂದು ಸರಕಾರವು ಜನರನ್ನು ಹೊಸ ತರಿಗೆ ಕೊಡುವಂತೆ ಕೇಳಬಹುದು, ಈ ಹೊಸ ತೆರಿಗೆ ಕೊಡಲು ಇಚ್ಛಿಸದವರಿಂದ ಒತ್ತಾಯವಾಗಿ ಅದನ್ನು ವಸೂಲುಮಾಡಲೂಬಹುದು. ಆದರೆ ಹೊಸತೊಂದು ಭಾಷೆಯ ಹೆಸರಿನಲ್ಲಿ ನಿರ್ಬಂಧ ಹೇರುವುದರಿಂದ ದ್ವೇಷ ಮತ್ತು ಸಿಟ್ಟಿನಿರುವ ಪ್ರವೃತ್ತಿಯನ್ನು ಉಂಟುಮಾಡಿದಂತಾಗುತ್ತದೆ. ಹಿಂದೀಭಾಷೆಯ ಪ್ರತಿಪಾದಕರು ಇದನ್ನು ಗಮನಿಸುವರೆಂದು ನಂಬುತ್ತೇನೆ.

— ರಾಜಾಜಿ.

ಭಾಷೆಗಾಗಿ ಸರಕಾರವೇ?

ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ಮುಂಬಯಿಯಲ್ಲಿ ಈಚೆಗೆ ಮಾತನಾಡುತ್ತಿದ್ದಾಗ "ಇದು ವರೆಗೆ ಸರಕಾರವು ಕಾಂಗ್ರೆಸಿಗೆ ಮಾರ್ಗದರ್ಶನ ಮಾಡಿಸುತ್ತಿದ್ದರೆ ಇನ್ನು ಮುಂದೆ ಸರಕಾರವೇ ಕಾಂಗ್ರೆಸಿನ ಆಜ್ಞಾಧಾರಕನಾಗ ಬೇಕಾಗುವುದು" ಎಂದು ಸಾರಿದ್ದರು. "ಕಾಂಗ್ರೆಸು ಜನತೆಯ ಆಶೆ ಆಕಾಂಕ್ಷೆಗಳ ಪ್ರತಿನಿಧಿಯಾಗಿರುವುದರಿಂದ ಸರಕಾರಕ್ಕೆ ಆಜ್ಞೆಗಳನ್ನಿತ್ತು ಜನತೆಯ ಮನದಿಚ್ಛೆಯಂತೆ ಸರಕಾರ ತನ್ನ ಕಾರ್ಯಕಲಾಪಗಳನ್ನು ನಡೆಸುವಂತೆ ನೋಡಲು ಅಧಿಕಾರ ಪಡೆದಿದೆ" ಎಂದವರು ಅಭಿಪ್ರಾಯಪಟ್ಟರು. ಆದರೆ, ಅಖಿಲ ಭಾರತ ಸಾರ್ವಜನಿಕ ಆಡಳಿತ ಮಂಡಳದ ಪರೀಕ್ಷೆಗಳ ಮಾಧ್ಯಮವಾಗಿ ಹಿಂದಿಯನ್ನು ಬಳಸುವ ಕುರಿತು ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೂ ವಿಶ್ವ ವಿದ್ಯಾನಿಲಯಗಳಿಗೂ ಕಳಿಸಿರುವುದೆನ್ನಲಾದ ಪರಿಪತ್ರವನ್ನು ನೋಡಿದರೆ, ಕಾಂಗ್ರೆಸಿನ ಇಚ್ಛೆಯನ್ನು ಸರಕಾರ ಮನ್ನಿಸುತ್ತಿಲ್ಲ ಎಂದು ಹೇಳ ಬೇಕಾಗುತ್ತದೆ. ಏಕೆಂದರೆ, ಮದ್ರಾಸಿನ ಮಂತ್ರಿ ಶ್ರೀ. ಸುಬ್ರಹ್ಮಣ್ಯಮರು ಹೇಳಿದಂತೆ ಈ ಪರಿಪತ್ರದಲ್ಲಿರುವ ನಿರ್ಬಂಧವು "ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಗೊತ್ತುವಳಿಯಲ್ಲಿ ಹೇಳಿದ ಧೋರಣೆಗೆ ವಿರುದ್ಧವಾಗಿದೆ."

ಕಳೆದ ವರ್ಷದ ಏಪ್ರಿಲು ಐದನೇ ದಿನಾಂಕ ಹೊಸದಿಲ್ಲಿಯಲ್ಲಿ ಸಭೆ ಜರಗಿಸಿದ್ದ ಕಾಂಗ್ರೆಸಿನ ಕಾರ್ಯಕಾರಿಸಮಿತಿಯು ಅಖಿಲ ಭಾರತ ಸಾರ್ವಜನಿಕ ಆಡಳಿತ ಮಂಡಳದ ಪರೀಕ್ಷೆಗಳಲ್ಲಿ ಮಾಧ್ಯಮವಾಗಿ ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳನ್ನು ಬಳಸಬೇಕೆಂದು ಸೂಚಿಸಿತ್ತು ಉಮೇದುವಾರರಿಗೆ ಇವುಗಳಲ್ಲಿ ಬೇಕಾದ ಒಂದು ಭಾಷೆಯನ್ನು ಆಯ್ದುಕೊಂಡು ಪ್ರಶ್ನಾ ಪತ್ರಗಳನ್ನು ಉತ್ತರಿಸುವ ಸ್ವಾತಂತ್ರ್ಯವಿರಬೇಕೆಂದು ಅದು ಹೇಳಿದ್ದಿತು. ಹಿಂದೀಯೇತರಭಾಷೆಗಳಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವವರು ಹಿಂದೀ ಭಾಷೆಯಲ್ಲಿ ಸಾಕಷ್ಟು ಜ್ಞಾನ ಪಡೆದಿರುವರೆಂಬುದನ್ನು ಸಿದ್ಧಪಡಿಸುವುದಕ್ಕೋಸ್ಕರ ಪ್ರತ್ಯೇಕ ಪರೀಕ್ಷೆಯೊಂದರಲ್ಲಿ ಉತ್ತೀರ್ಣರಾಗಬೇಕೆಂದೂ ಅದು ನಿರ್ಣಯಿಸಿದ್ದಿತು. ಆದರೆ ಕೇಂದ್ರ ಸರಕಾರದವರು ಇದನ್ನು ಕಡೆಗಣಿಸಿ, "ರಾಷ್ಟ್ರಭಾಷೆ"ಯಾದ ಹಿಂದಿಯಲ್ಲಿಯೇ ಎಲ್ಲ ಪ್ರಶ್ನಾಪತ್ರಗಳನ್ನೂ ಸಿದ್ಧಪಡಿಸುವ ಮತ್ತು ಎಲ್ಲ ಉಮೇದುವಾರರೂ ಹಿಂದಿಯಲ್ಲಿಯೇ ಅವುಗಳನ್ನು ಉತ್ತರಿಸಬೇಕೆನ್ನುವ ಸೂಚನೆಯನ್ನು ವಿಚಾರಿಸುತ್ತಿರುವರೆಂದು ತಿಳಿದು ಬರುತ್ತದೆ. ಇದು ಸರಿಯಾದುದಲ್ಲ ಎಂಬುದಾಗಿ ಈಚೆಗೆ ದಕ್ಷಿಣದ ಕೆಲವರು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಇವರಲ್ಲಿ ಮದ್ರಾಸು ಸರಕಾರದ ಮಂತ್ರಿ ಶ್ರೀ ಸುಬ್ರಹ್ಮಣ್ಯಮರಂತೆ ಭಾರತದ ಮಾಜಿ ಗವರ್ನರ ಜನರಲರಾದ ಶ್ರೀ ರಾಜಗೋಪಾಲಾಚಾರಿಯವರ ಹೆಸರೂ ಉಲ್ಲೇಖನೀಯ.

ಇವರಲ್ಲಿ ಯಾರೂ ಹಿಂದೀ ಭಾಷೆಯ ಕುರಿತು ದ್ವೇಷ ತಳೆದಿಲ್ಲ—ಆ ಭಾಷೆಯನ್ನು ಭಾರತೀಯರು ಕಲಿಯುವುದು ಅಪೇಕ್ಷಣೀಯವೆಂದೇ ಅವರ ಅಭಿಪ್ರಾಯ ಆದರೆ ಪ್ರಾದೇಶಿಕ ಭಾಷೆಗಳನ್ನು ಕಡೆಗಣಿಸಿ, ರಾಷ್ಟ್ರಭಾಷೆಯ ಹೆಸರಿನಲ್ಲಿ ಹಿಂದಿಯನ್ನು ಒತ್ತಾಯದಿಂದ ಹೇರುವುದನ್ನು ಮಾತ್ರ ಅವರು ವಿರೋಧಿಸುತ್ತಾರೆ. ಆ ಭಾಷೆ ದಕ್ಷಿಣದವರ ಮಟ್ಟಿಗೆ ಇಂಗ್ಲೀಷಿನಷ್ಟೇ "ಪರಕೀಯ" ಭಾಷೆಯಾಗಿದೆ, ಇಂಗ್ಲೀಷು ಪರಕೀಯ ಭಾಷೆಯಾದುದರಿಂದ ನಮಗೆ ಅದನ್ನು ರಾಷ್ಟ್ರ ಭಾಷೆಯಾಗಿ ಬಳಸುವುದು ಶೋಭಿಸದಾದರೆ, ತಮಿಳು, ಕನ್ನಡ, ತೆಲುಗು, ಮಲೆಯಾಳ ಮುಂತಾದ ಭಾಷೆಗಳನ್ನಾಡುವವರು ಹಿಂದಿಗೇಕೆ ರಾಷ್ಟ್ರಭಾಷೆಯ ಪಟ್ಟವನ್ನು ಕೊಡಬೇಕು? ಎಂಬ ವಾದವನ್ನು ಹಿಂದಿನಿಂದಲೂ ದಕ್ಷಿಣ ಭಾರತದವರು ಮಂಡಿಸುತ್ತಿದ್ದರು. ಹಿಂದೀ ಭಾಷೆಯನ್ನು ಪ್ರೇಮ ಮಾರ್ಗಕ್ಕೆ ವಿರುದ್ಧವಾದ ಒತ್ತಾಯದ ಕ್ರಮಗಳಿಂದ ಹೇರುವ ಪ್ರಯತ್ನ ನಡೆದ ಹಾಗೆಲ್ಲ ಈ ಪ್ರತಿಭಟನೆ ಜೋರಾಗಿ ಪ್ರಕಟವಾಗಿ ಪರಿಣಮಿಸುತ್ತಾ ಬಂದಿದೆ ಎಂದರೂ ತಪ್ಪಲ್ಲ. ಎಷ್ಟರ ವರೆಗೆ ಈ ಪ್ರತಿಭಟನೆ ಬೆಳೆದಿದೆ ಎಂದರೆ ರಾಜಾಜಿಯಂಥವರು ಸಹ "ಸರಕಾರದ ಅಧಿಕೃತ ಭಾಷೆಯಾಗಿ ಹಿಂದಿಯನ್ನು ಅಳವಡಿಸಿಕೊಳ್ಳಲು ರಾಜ್ಯಾಂಗ ಘಟನೆಯಲ್ಲಿ ನಾವು ದಿನವೊಂದನ್ನು ಗೊತ್ತು ಪಡಿಸಿರುವುದು ನಿಜ. ಆದರೆ ಈಗಿನ ಅವಸರದಲ್ಲಿ ನಾವು ಜನರನ್ನು ಬೆದರಿಸುವುದು ಅಪ್ರಯೋಜಕ. ನಾವು ಯಾವುದನ್ನಾದರೂ ಬದಲಿಸಬೇಕಿದ್ದರೆ ಘಟನೆಯಲ್ಲಿ ಸೂಚಿಸಿದ ಅವಧಿಯನ್ನು ಬದಲಾಯಿಸುವುದೇ ಕ್ಷೇಮ" ಎಂದು ಹೇಳಿದ್ದಾರೆ.

ರಾಷ್ಟ್ರ ಭಾಷೆಯಾಗಿ ಹಿಂದಿಯನ್ನು ಸ್ವೀಕರಿಸಿರುವ ಭಾರತೀಯರು ಆ ಭಾಷೆಯ ಕುರಿತು ಹೀಗೆಲ್ಲ ಮಾತನಾಡುವುದು ಸರಿಯೆ ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಅದಕ್ಕೆ ರಾಜಾಜಿಯವರೊಡನೆ ಸಮರ್ಪಕವಾದ ಉತ್ತರವಿದೆ—ಹಿಂದೀ ಭಾಷೆಯನ್ನು ಕಲಿಯುವುದು ಕಷ್ಟ ಎಂದವರು ಹೇಳುವುದಿಲ್ಲ. ಇಂಗ್ಲೀಷನ್ನು ಸಹ ಚೆನ್ನಾಗಿ ಕಲಿತುಕೊಂಡು, ಆ ಭಾಷೆಯಲ್ಲಿ ತಮ್ಮ ಭಾವನೆಗಳನ್ನು ಸಮರ್ಪಕವಾಗಿ ವ್ಯಕ್ತಪಡಿಸಲು ಸುಶಿಕ್ಷಿತ ಭಾರತೀಯರು ಸಮರ್ಥರಾಗಿರುವಾಗ, ಹಿಂದಿಯನ್ನು ಕಲಿಯಲು ಅವರಿಗೆ ಕಷ್ಟವೆಂಬ ಪ್ರಶ್ನೆಯೇ ಏಳುವುದಿಲ್ಲ. "ಆದರೆ ಹಿಂದೀ ಭಾಷೆಯ ಯೋಗ್ಯತೆಯ ಕುರಿತಾಗಿಯೇ ನಮ್ಮೆಲ್ಲರ ಸಂಶಯ—ಏಕೆಂದರೆ ಅದಿನ್ನೂ ಬಾಲ್ಯಾವಸ್ಥೆಯನ್ನು ಮೀರಿಲ್ಲ. ಅದು ಏನೇನೂ [illegible] ವೃದ್ಧಿಯನ್ನು ಹೊಂದಿಲ್ಲ. ಆದುದರಿಂದ ಅದು ಇಂಗ್ಲೀಷಿಗೆ ಸಮಾನವಾಗಿಲ್ಲ—ತಮಿಳು, ಬಂಗಾಳಿ, ಮರಾಠಿಗಳಷ್ಟು ಹಿಂದಿಯು ಸಮೃದ್ಧವಾಗಿಲ್ಲ" ಆದುದರಿಂದ [illegible] ದರಿಕೆ ಮತ್ತು ನಿರ್ಬಂಧದ ಮೂಲಕ ಅಖಿಲ ಭಾರತ ಸಾರ್ವಜನಿಕ ಆಡಳಿತ ಮಂಡಳದ ಪರೀಕ್ಷೆಗಳನ್ನು ಆ ಭಾಷೆಯಲ್ಲಿ ನಡೆಸಿದರೆ, ಪ್ರಾದೇಶಿಕ ಭಾಷೆಗಳ ಉಮೇದ್ವಾರರ ಕೂಸಕ್ಕೆ ಸಹಜವಾಗಿಯೇ [illegible] ತಾಗುತ್ತದೆ. [illegible] ಉತ್ತರ [illegible] ಗಿ [illegible] ಆದುದರಿಂದ [illegible] ವತ್ತದೆ. [illegible] ಭಾಷೆಯಲ್ಲಿ [illegible] ಪರೀಕ್ಷೆಗಳಲ್ಲಿ [illegible] [illegible] ಭಾಷಿ [illegible] ಸಿಯಾಗಬೇಕು [illegible] ಸೇಪನೆ [illegible] ಗವೆ" ಎಂದು ಹೇಳುತ್ತಾರೆ ರಾಜಾಜಿ. ಹಿಂದೀಭಾಷೆಯ ಜ್ಞಾನವೇ ಅನಗತ್ಯ

(೯ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.

Estd: 1925 H. O UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಆಪೇಕ್ಷಿಸುವಿರಿ ಹಣವನ್ನು ಠೇವಣಿಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಶೇಖರಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲಾದರೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೯೨ ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಢೀಕರಿಸಲಾಗಿದೆ ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅಮೂಲ್ಯ ಸಮಯವನ್ನು ಉಳಿಸಿಕೊಳ್ಳಿರಿ

ತೆಲಾವಣೆ ಭಂಡವಾಳ ರೂ ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ: ಉಡುಪಿ, ದ ಭಾರತ.

ವಾರ್ಷಿಕ ಚಂದಾ: NAVAYUGA WEEKLY, UDIPI. ಬಿಡಿ ಸಂಚಿಕೆ ಎರಡಾಣೆ

ಆಲ್ಬರ್ಟ್ ಐನ್‌ಸ್ಟೀನ್

ಸಾಪೇಕ್ಷವಾದದ ಪ್ರವರ್ತಕ

ಗುಡ್ಡಕ್ಕೆ ಗುಡ್ಡ ಅಡ್ಡವಿರುವುದು ಜಗತ್ತಿನ ಸಾಮಾನ್ಯ ನಿಯಮವಾಗಿದ್ದರೂ ಹೆಚ್ಚಿನ ಸಂದರ್ಭಗಳಲ್ಲಿ ಜಗತ್ಪ್ರಸಿದ್ಧಿಯನ್ನು ಪಡೆದವರು ಸಮಕಾಲೀನರಾದ ಇನ್ನೊಬ್ಬ ವ್ಯಕ್ತಿಯನ್ನು ಮಹಾಪುರುಷನೆಂದು ಕರೆದು ಮನ್ನಿಸುವುದು ವಿರಳ. ಜನರ ತೂಕ ಅಳೆದು ಅವರ ಯೋಗ್ಯತೆ ನಿರ್ಣಯಿಸುವುದರಲ್ಲಿ ಬಹಳ ನಿಪುಣರೆಂದು ಹೆಸರಾದ ಸುವಿಖ್ಯಾತ ನಾಟಕಕಾರ ಜಾರ್ಜ್ ಬರ್ನಾರ್ಡ್ ಶಾರವರು ಜಗತ್ತಿನಲ್ಲಿ ನಾಗರಿಕತೆ ಹುಟ್ಟಿದಂದಿನಿಂದ ಇಂದಿನ ವರೆಗಿನ ದೀರ್ಘ ಕಾಲಾವಧಿಯಲ್ಲಿ ಕೇವಲ ಎಂಟು ಮಂದಿಯನ್ನಷ್ಟೇ ಮಹಾಪುರುಷರಾಗಿ ಪರಿಗಣಿಸಿರುವುದನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು. ಬೌದ್ಧಿಕ ಕ್ಷೇತ್ರದ ಅಷ್ಟದಿಗ್ಗಜರೆಂದು ಶಾ ಕರೆದ ಈ ಮಹಾನುಭಾವರ ಪಂಕ್ತಿಯಲ್ಲಿ ಪೈಥಾಗೊರಸ್, ಅರಿಸ್ಟಾಟಲ್, ಟಾಲೆಮಿ, ಕೊಪರ್ನಿಕಸ್, ಗೆಲಿಲಿಯೊ, ಕೆಪ್ಲರ್ ಮತ್ತು ನ್ಯೂಟನ್ನರ ಬಳಿಕ ಕೊನೆಗೆ ಬರುವವರೇ ಡಾ| ಆಲ್ಬರ್ಟ್ ಐನ್‌ಸ್ಟೀನ್. ಇದರ ಮೇಲಿಂದ ನಾವು ಮೊನ್ನೆ ೧೮ನೇ ದಿನಾಂಕ ಅಮೇರಿಕದ ನ್ಯೂಜೆರ್ಸಿ ರಾಜ್ಯದಲ್ಲಿರುವ ಪ್ರಿನ್ಸ್‌ಟನ್ ನಗರದ ಆಸ್ಪತ್ರೆಯೊಂದರಲ್ಲಿ ನಿಧನ ಹೊಂದಿದ ಎಪ್ಪತ್ತಾರು ವರ್ಷ ಪ್ರಾಯದ ವಿಜ್ಞಾನಿಯ ಯೋಗ್ಯತೆಯ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಳ್ಳಬಹುದು.

ಐನ್‌ಸ್ಟೀನರು ಆಸ್ಪತ್ರೆಯಲ್ಲಿ ಮೃತ್ಯುವನ್ನು ಶಾಂತವಾಗಿ ಅಪ್ಪಿಕೊಂಡರು. ಅಲ್ಲಿ ಯಾವ ಉದ್ವೇಗ ಜನಕವಾದ ವಾತಾವರಣವೂ ಇರಲಿಲ್ಲ; ಅವರ ಬಳಿ ಬಂಧು ಬಳಗದವರ, ಇಷ್ಟ ಮಿತ್ರರ ಕೂಟವಿರಲಿಲ್ಲ. ನಿಜ ಹೇಳಬೇಕೆಂದರೆ, ಅವರು ರೋಗೋಪಶಮನಕ್ಕೋಸ್ಕರ ಆಸ್ಪತ್ರೆ ಸೇರಿರುವರೆಂಬ ವಿಷಯ ಯಾರಿಗೂ ತಿಳಿದಿರಲಿಲ್ಲ. ಅವರೊಡನಿರುತ್ತಿದ್ದ ಮಗಳು ಅದೇ ಆಸ್ಪತ್ರೆಯ ಇನ್ನೊಂದು ಹಾಸಿಗೆಯ ಮೇಲೆ ನರಳುತ್ತಾ ಬಿದ್ದಿದ್ದು, ಚಿಕಿತ್ಸೆ ಪಡೆಯುತ್ತಿದ್ದಳು. ತಂದೆಯ ಮರಣ ಕಾಲದಲ್ಲಿ ಅವಳಿಗೂ ಹತ್ತಿರ ಇರಲಾಗಲಿಲ್ಲ. ಈ ವಿಜ್ಞಾನಿಯ ಸಾವಿಗೆ ಸಾಕ್ಷಿಯಾಗಿ ಪರಿಚಾರಿಕೆಯೊಬ್ಬಳು ಮಾತ್ರ ಬಳಿಯಲ್ಲಿ ನಿಂತಿದ್ದಳು. ಹೀಗೆ ತೀರ ಶಾಂತವಾಗಿ ಮರಣಗೊಂಡ ಐನ್‌ಸ್ಟೀನರು ತಮ್ಮ ಬದುಕಿನ ದಿನಗಳನ್ನು ಸಹ ಇಷ್ಟೇ ಶಾಂತ ರೀತಿಯಲ್ಲಿ, ಸರಳತನದಲ್ಲಿ ಕಳೆದಿದ್ದರು. ಅವರು ಏಕಾಂತ ಜೀವನವನ್ನು ನಡೆಸುವುದರಲ್ಲಿ ತೃಪ್ತಿ ಕಂಡುಕೊಂಡಿದ್ದರು. ಆದರೂ ಮೆರ್‌ಸರ್ ಸ್ಟ್ರೀಟಿನ, ಹಸಿರು ಕಿಟಿಕಿಗಳಿಂದ ಕೂಡಿದ್ದ ಅವರ ಗುಡಿಸಲು ಯಾತ್ರಾಸ್ಥಳವಾಗಿತ್ತೆಂದರೆ ತಪ್ಪಲ್ಲ. ಜನರು ತನ್ನ ಬಳಿಬರುವುದನ್ನು ಅವರು ಇಚ್ಛಿಸುತ್ತಿರಲಿಲ್ಲ; ಆದರೆ ತಮ್ಮ ದರ್ಶನಾಪೇಕ್ಷೆಯಿಂದ ಬಂದ ದೇಶ-ವಿದೇಶಗಳ ಕುತೂಹಲವಶ ಜನರ ಮನನೋಯಿಸುವುದೂ ಅವರಿಗೆ ಸೇರುತ್ತಿರಲಿಲ್ಲ. ಆದುದರಿಂದ ಅವರು ಅನಿವಾರ್ಯವಾದ ಭೇಟಿಗಳನ್ನು ಸಂತೋಷದಿಂದಲೇ ಕೊಡುತ್ತಿದ್ದರು.

ಜರ್ಮನಿಯ ಉಲ್ಮ್ ಎಂಬಲ್ಲಿ ೧೮೭೯ನೇ ಮಾರ್ಚಿ ತಿಂಗಳಲ್ಲಿ ಯೆಹೂದಿ ದಂಪತಿಗಳಿಗೆ ಐನ್‌ಸ್ಟೀನರು ಹುಟ್ಟಿದರು. ಅವರ ಪ್ರತಿಭೆ ಬಾಲ್ಯದಲ್ಲಿಯೇ ವ್ಯಕ್ತವಾಯಿತು–ಶಾಲೆಯ ಕಟ್ಟುನಿಟ್ಟುಗಳು ಅವರಿಗೆ ಒಗ್ಗುತ್ತಿರಲಿಲ್ಲ; ಸ್ವತಂತ್ರ ವಾತಾವರಣವನ್ನು ಬಯಸುತ್ತಿದ್ದ ಅವರು ಉಪಾಧ್ಯಾಯರ ದೃಷ್ಟಿಯಲ್ಲಿ ದಡ್ಡನಾಗಿದ್ದರು. ಆದರೆ, ಈ ದಡ್ಡ ಹುಡುಗನು ಕೆಲವೊಮ್ಮೆ ಹಾಕುತ್ತಿದ್ದ ಪ್ರಶ್ನೆಗಳನ್ನು ಕೇಳಿ ಮಾತ್ರ ಉಪಾಧ್ಯಾಯರು ಉತ್ತರಿಸಲಾಗದೆ, ತಬ್ಬಿಬ್ಬಾಗುತ್ತಿದ್ದರು. ಹುಡುಗತನದಲ್ಲಿ ಐನ್‌ಸ್ಟೀನರನ್ನು ವಿಚಾರ ಮಾಡಲು ಹಚ್ಚಿದ ಸಂಗತಿಗಳಲ್ಲಿ ಎರಡನ್ನು ಉಲ್ಲೇಖಿಸಬಹುದು— ಮೊದಲನೆಯದು, ಅವರ ದೃಷ್ಟಿಗೆ ಬಿದ್ದ ದಿಕ್ಸೂಚಿ: ಎಷ್ಟು ಚಂಚಲಗೊಂಡರೂ ಕೊನೆಯಲ್ಲಿ ಉತ್ತರ ಮುಖಿಯಾಗಿಯೇ ನಿಲ್ಲುವ ದಿಕ್ಸೂಚಿಯ ಮುಳ್ಳು ಅವರಲ್ಲಿ ವಿಶ್ವವ್ಯಾಪಾರವು ತರ್ಕಾತೀತವಾದ ನಿಯಮಗಳ ಮೇಲೆ ನಿಂತಿದೆ ಎಂಬ ಅಭಿಪ್ರಾಯವನ್ನು ಮೂಡಿಸಿತು. ಇದರಿಂದ ಭೌತ ವಿಜ್ಞಾನದಲ್ಲಿ ಅವರಿಗೆ ಆಸಕ್ತಿಯುಂಟಾಯಿತು. ಪೈಥಾಗೊರಸನ ಸಿದ್ಧಾಂತವು ಅವರಲ್ಲಿ ಗಣಿತದ ಕುರಿತು ಪ್ರೀತಿಯನ್ನು ಹುಟ್ಟಿಸಿತು. ಸಮಕೋಣವನ್ನುಂಟುಮಾಡುವ ಎರಡು ಭುಜಗಳ ಮೇಲಿನ ಚೌಕದ ಒಟ್ಟು ಮೊತ್ತವು ಕರ್ಣದ ಮೇಲಿನ ಚೌಕದ ಮೊತ್ತಕ್ಕೆ ಸಮವಾಗಿದೆ ಎಂಬ ಈ ಸಿದ್ಧಾಂತ ಯಾವ ಸಂದರ್ಭದಲ್ಲೂ ಬದಲಾಗದುದನ್ನು ಕಂಡು ಅವರ ಕುತೂಹಲ ಕೆರಳಿ ನಿಂತಿತು.

ಬಾಲ್ಯದಲ್ಲಿಯೇ ಐನ್‌ಸ್ಟೀನರು ಜರ್ಮನಿಯನ್ನು ತ್ಯಜಿಸಿ, ಸ್ವಿಜರ್‌ಲೇಂಡಿಗೆ ಹೋದರು. ಜ್ಯೂರಿಚ್ ನಗರದಲ್ಲಿ ತಾಂತ್ರಿಕ ಶಿಕ್ಷಣವನ್ನು ಮುಗಿಸಿದ ಬಳಿಕ, ಅವರು ಬರ್ನ್ ನಗರದಲ್ಲಿ ವಸ್ತುಗಳ ತಯಾರಿಕೆಯ ಗುತ್ತಿಗೆಯನ್ನು ಕೇಳುತ್ತಿದ್ದವರ ವಸ್ತುಗಳ ಯೋಗ್ಯತೆಯನ್ನು ಪರೀಕ್ಷಿಸುವ ಕೆಲಸಕ್ಕೆ ಸೇರಿಕೊಂಡರು. ಇಲ್ಲಿ ಅವರ ಪರಿಶ್ರಮವೂ ಬುದ್ಧಿಬಲವೂ ಜಗತ್ತಿನ ವೈಜ್ಞಾನಿಕ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸಿತು— ಅವರು "ಸಾಪೇಕ್ಷ ಸಿದ್ಧಾಂತ" ಎಂಬುದಾಗಿ ಲೋಕದಲ್ಲೆಲ್ಲ ಹೆಸರು ಹೊಂದಿದ ಹೊಸ ವಿಚಾರವನ್ನು ತಮ್ಮ ಸಂಶೋಧನೆಯ ಫಲವಾಗಿ ೧೯೦೫ರಲ್ಲಿ ಪ್ರಕಟಿಸಿದರು. ಜ್ಯೂರಿಚ್ ವಿಶ್ವ ವಿದ್ಯಾಲಯವು ಐನ್‌ಸ್ಟೀನರಿಗೆ ಡಾಕ್ಟರೇಟನ್ನು ಕೊಟ್ಟುದಲ್ಲದೆ ತಾತ್ವಿಕ ಭೌತ ಶಾಸ್ತ್ರದಲ್ಲಿ ಉಪನ್ಯಾಸಕನ ಸ್ಥಾನವನ್ನೂ ಕೊಡಮಾಡಿತು. ೧೯೦೮ ರಲ್ಲಿ ಆಸ್ಟ್ರಿಯದ ಡಾಲ್ಸ್‌ಬರ್ಗ್‌ನಲ್ಲಿ ವಿಜ್ಞಾನಿಗಳ ಅಧಿಕೃತ ಪರಿಷತ್ತೊಂದರಲ್ಲಿ ಅವರು ಭಾಷಣಮಾಡಿದ ಬಳಿಕ, ಜರ್ಮನಿಯ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಕರಾಗಿ ಕೆಲಸಮಾಡಲು ಆಹ್ವಾನ ಬಂತು. ೧೯೦೯ನೇ ವರ್ಷದ ಹೊತ್ತಿಗೆ ಬರ್ಲಿನ್ ವಿಜ್ಞಾನಿಗಳ ಸಂಸ್ಥೆಯಲ್ಲಿ ಅವರು ಪ್ರಾಧ್ಯಾಪಕ ವೃತ್ತಿಯನ್ನು ಕೈಗೊಂಡರು. ೧೯೧೬ ರಲ್ಲಿ ಐನ್‌ಸ್ಟೀನರು ತಮ್ಮ ಪೂರ್ವ ಸಂಶೋಧನೆಯನ್ನೆ ವಿಸ್ತರಿಸಿ ಹೇಳಿದಾಗ, ಭೌತ ಶಾಸ್ತ್ರ ಪ್ರಪಂಚದಲ್ಲಿ ಕ್ರಾಂತಿಯ ನವೋದಯವಾಯಿತು ಬರ್ಟ್ರೆಂಡ್ ರಸೆಲ್ಲರು ಹೇಳಿದಂತೆ ಮನುಷ್ಯನು ೨೦೦೦ ವರ್ಷಗಳಿಂದ ಮಾಡುತ್ತಿದ್ದ ಸಂಶೋಧನೆಯ ಸಾರವನ್ನದು ಭಟ್ಟಿ ಇಳಿಸಿತು.

೧೯೧೯ರಲ್ಲಿ ವಿಶ್ವದ ಖಗೋಳ ವಿಜ್ಞಾನಿಗಳು ಸೂರ್ಯ ಗ್ರಹಣದ ಕಾಲದಲ್ಲಿ, ನಕ್ಷತ್ರಗಳಿಂದ ಹೊರಡುವ ಕಿರಣಗಳ ಗತಿಯನ್ನು ಪರಿಶೀಲಿಸಿ, ಐನ್‌ಸ್ಟೀನರ ಸಿದ್ಧಾಂತದ ಸತ್ಯವನ್ನು ಮನಗಂಡರು. ಇದರಿಂದ ಜಗತ್ತಿನ ಗೌರವ ಸಂಕೇತಗಳಲ್ಲೆಲ್ಲ ಹಿರಿದೆನಿಸಿದ ನೋಬೆಲ್ ಪಾರಿತೋಷಕವು ೧೯೨೧ರಲ್ಲಿ ಅವರಿಗೆ ಸಿಕ್ಕಿತು.

ಸಾಪೇಕ್ಷ ಸಿದ್ಧಾಂತವೆಂದರೇನು ಎಂಬ ಪ್ರಶ್ನೆಯನ್ನು ಐನ್‌ಸ್ಟೀನರಿಗೆ ಸುಂದರಿ ಹುಡುಗಿಯೊಬ್ಬಳು ಹಾಕಿದಾಗ "ನೋಡು, ಈಗ ನಿನ್ನ ಹತ್ತಿರ ಎರಡು ತಾಸು ಹರಟೆ ಹೊಡೆದರೂ, ಎರಡೇ ನಿಮಿಷದಂತೆ ಅನುಭವವಾಗುತ್ತದೆ; ಆದರೆ ಅದೇ ಒಬ್ಬ ಪಂಡಿತನೊಡನೆ ಮಾತನಾಡುವಾಗ ಎರಡು ನಿಮಿಷವೇ ಎರಡು ತಾಸಿನಷ್ಟು ದೀರ್ಘವಾದಂತೆ ತೋರುತ್ತದೆ– ಇದೇ ನನ್ನ ನೂತನ ಸಿದ್ಧಾಂತದ ತಿರುಳು" ಎಂದವರು ಉತ್ತರಿಸಿದರು. ಇದರ ತಾತ್ಪರ್ಯವೇನೆಂದರೆ, ಕಾಲಕ್ಕೆ ಸಹ ನಾವು ಮನ್ನಣೆಯನ್ನು ಕೊಡಬೇಕು; ಕೇವಲ ಉದ್ದ, ಅಗಲ ಮತ್ತು ಎತ್ತರಗಳಿಂದಲೇ ಭೌತ ವಿಶ್ವದ ಅಳತೆ ಮಾಡ ಹೋಗುವುದು ದಡ್ಡತನ. ಹೀಗೆನ್ನುವ ಸಿದ್ಧಾಂತದ ಮೂಲವು ಮೂರೇ ಮೂರು ಅಕ್ಷರಗಳುಳ್ಳ ಮತ್ತು ಗಣಿತ ಶಾಸ್ತ್ರವು "$E = MC^2$" ಎಂದು ಸೂಚಿಸುವ ಒಂದು ಸಮೀಕರಣದಲ್ಲಿದೆ – ಇಲ್ಲಿ E ಎಂಬ ಸಂಕೇತವು ಶಕ್ತಿಯನ್ನೂ M ಪದಾರ್ಥವನ್ನೂ C^2 ಬೆಳಕಿನ ವೇಗದ ಘನವನ್ನೂ ವ್ಯಕ್ತಪಡಿಸುತ್ತದೆ. ತದನುಸಾರವಾಗಿ, ಶಕ್ತಿ ಮತ್ತು ಪದಾರ್ಥಗಳು ಪ್ರತ್ಯೇಕ ಅಸ್ತಿತ್ವ ಪಡೆದಿಲ್ಲವೆಂದೂ ಅವು ಕಾಲದೊಡನೆ ಸಂಬಂಧವಿಟ್ಟುಕೊಂಡ ಸಾಪೇಕ್ಷ ವಸ್ತುಗಳೆಂದೂ ಹೇಳಬೇಕಾಗುತ್ತದೆ. ಇದರಿಂದ ಪದಾರ್ಥಗಳಲ್ಲಿ ಶಕ್ತಿಯು ನಿಕ್ಷೇಪವಿರುವುದೆಂಬ ಅಂಶವೂ ವ್ಯಕ್ತವಾಗುತ್ತದೆ- ಸಂಶೋಧನೆಯ ಈ ಅಂಶವು ಅಣುಶಕ್ತಿಯ ಉಪಯೋಗದ ಪ್ರಯತ್ನಗಳಿಗೆ ತಳಹದಿ ಹಾಕಿತು.

ತಮ್ಮ ಹೊಸ ಸಂಶೋಧನೆಯಿಂದ ಗಣಿತ ಶಾಸ್ತ್ರ ಮತ್ತು ಭೌತ ಶಾಸ್ತ್ರಗಳ ಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಿದ, ಮತ್ತು ನ್ಯೂಟನ್ನನು ೩೦೦ ವರ್ಷಗಳ ಹಿಂದೆ ಪ್ರತಿಪಾದಿಸಿದ ಗುರುತ್ವಾಕರ್ಷಣ ಸಿದ್ಧಾಂತದ ಸತ್ಯದ ಕುರಿತು ಸಂಶಯ ಹುಟ್ಟಿಸಿದ ಈ ವಿಜ್ಞಾನಿಗೆ ಜರ್ಮನಿಯಲ್ಲಿ ಹೆಚ್ಚು ಸಮಯ ಕಳೆಯುವುದಾಗಲಿಲ್ಲ. ವೀಮಾರ್ ಗಣರಾಜ್ಯದ ಕಾಲದಲ್ಲಿ ದೊರೆತ ಪ್ರಸಿದ್ಧಿಯ ಸ್ಥಾನವನ್ನು ನಾಜೀವಾದದ ಕಟ್ಟಾಳಾದ ಹಿಟ್ಲರನು ಅಧಿಕಾರಕ್ಕೆ ಬಂದೊಡನೆಯೇ ಅಪಮಾನವೂ ಪೀಡನೆಯೂ ಆಕ್ರಮಿಸಿ ಐನ್‌ಸ್ಟೀನರು ಜರ್ಮನಿಯಿಂದ ಹೊರಗೋಡಬೇಕಾಯಿತು. ಯೆಹೂದ್ಯರೆಂಬ ವರ್ಣ ತಾತ್ಸಾರವು ಹೊಸ ಬೆಳಕಿನ ಪಂಜು ಹಿಡಿದು ನಿಂತಿದ್ದ ಈ ವಿಜ್ಞಾನಿಯನ್ನು ಫ್ರಾನ್ಸ್, ಬೆಲ್ಜಿಯಂ, ಇಂಗ್ಲೆಂಡ್ ಮುಂತಾಗಿ ದೇಶಾಂತರ ವಾಸಿಯಾಗುವಂತೆ ಮಾಡಿತು. ೧೯೩೩ರಲ್ಲಿ ಕೊನೆಗೊಮ್ಮೆ ಅವರು ಅಮೇರಿಕೆಗೆ ತೆರಳಿ, ಪ್ರಿನ್ಸ್‌ಟನ್ ಸಂಶೋಧನಾಲಯದಲ್ಲಿ ನೆಲೆಯೂರಿದರು. ಮರಣ ಕಾಲದ ವರೆಗೂ ಅವರು ಈ ಸಂಶೋಧನಾಲಯದಲ್ಲಿ ತಮ್ಮ ಕೆಲಸವನ್ನು ನಡೆಸುತ್ತಿದ್ದರು. ೧೯೪೦ರಲ್ಲಿ ಅಮೇರಿಕದ ನಾಗರಿಕರಾದರು. ಜರ್ಮನಿಯಿಂದ ಹೊರಗೋಡಬೇಕಾಗಿ ಬಂದಾಗ ಅವರಿಗೆ ಭಾರತದಲ್ಲಿ ದಿನಗಳೆಯಬೇಕೆಂದು ತೋರಿತ್ತೆಂದೂ ಆದರೆ ದಾಸ್ಯದಲ್ಲಿದ್ದ ಭಾರತ ಅವರಿಗೆ ಪ್ರಿಯವಾಗಲಿಲ್ಲವೆಂದೂ ಹೇಳಲಾಗುತ್ತದೆ. "ನನಗೆ ಆರಿಸಿಕೊಳ್ಳಲು ಸಾಧ್ಯವಿರುವಷ್ಟರ ವರೆಗೆ ರಾಜಕೀಯ ಸ್ವಾತಂತ್ರ್ಯಕ್ಕೆ ಸಹಿಷ್ಣುತೆಗೂ ಸ್ಥಾನವಿರುವ ಮತ್ತು ಶಾಸನದ ದೃಷ್ಟಿಯಲ್ಲಿ ಎಲ್ಲ ನಾಗರಿಕರೂ ಸಮಾನರಾಗಿರುವ ದೇಶದಲ್ಲೇ

(೧೩ನೇ ಪುಟ ನೋಡಿರಿ)



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅರ್ಧಾಂಗವಾಯುವಿನ ಉಪಶಮನ

ರೋಗ ನಿರೋಧಕ ದಾಕಿನ ಸಂಶೋಧನೆ

ಮೊದಲಿಗೆ ಪಾಶ್ಚಾತ್ಯ ಜಗತ್ತಿನಲ್ಲಿ ಕಂಡುಕೊಳ್ಳಲ್ಪಟ್ಟು, ಇಂದು ಎಲ್ಲ ದೇಶಗಳಲ್ಲೂ ಹಾವಳಿ ನಡೆಸುತ್ತಿದೆ ಎಂಬ ಅರಿವನ್ನುಂಟು ಮಾಡಿದ ಅರ್ಧಾಂಗ ವಾಯು ರೋಗ (ಇಂಗ್ಲೀಷಿನಲ್ಲಿ, ಪೋಲಿಯೊ) ಕೊನೆಗೊಮ್ಮೆ ವಿಜ್ಞಾನಿಗಳ ಭದ್ರ ಮುಷ್ಟಿಯ ನಿಯಂತ್ರಣಕ್ಕೆ ಸೆರೆ ಸಿಕ್ಕಿತೆಂಬ ವಾರ್ತೆಯನ್ನು ಇದೀಗ ಅಮೇರಿಕದಿಂದ ಕೇಳುತ್ತಿದ್ದೇವೆ. ಮಿಚಿಗನಿನ ಆನ್ ಆರ್ಬರ್‌ನಲ್ಲಿ ಸಭೆ ಸೇರಿದ್ದ ೪೦೦ ಪ್ರಸಿದ್ಧ ವಿಜ್ಞಾನಿಗಳ ಮುಂದೆ ಅಮೇರಿಕದ ಪ್ರಖ್ಯಾತ ಸಾಂಕ್ರಾಮಿಕ ರೋಗ ತಜ್ಞರಾದ ಡಾ| ಥಾಮಸ್ ಫ್ರಾನ್ಸಿಸರು ಇದೇ ೧೨ನೇ ತಾರೀಕಿನಂದು "ದಾಕಿನ ಪ್ರಯೋಗ ಸಫಲವಾಗಿದೆ" ಎಂಬ ಮೂರು ಶಬ್ದಗಳ ಮಹತ್ವದ ಘೋಷಣೆಯನ್ನು ಮಾಡಿದರು. ವೈದ್ಯಕೀಯ ಇತಿಹಾಸದ ಪ್ರಗತಿಪರ ಹೆಜ್ಜೆಯೊಂದನ್ನು ಸೂಚಿಸುವ ಈ ಘೋಷಣೆಯು ಪಿಟ್ಸ್‌ಬರ್ಗ್ ವಿಶ್ವವಿದ್ಯಾನಿಲಯದ ೪೦ ವರ್ಷ ಪ್ರಾಯದ ಡಾ| ಜೋನಾಸ್ ಇ. ಸಾಲ್ಕರು ಅಭಿವೃದ್ಧಿಗೊಳಿಸಿರುವ ಅರ್ಧಾಂಗ ವಾಯು ನಿರೋಧಕ ದಾಕಿನ ಉಪಯುಕ್ತತೆಯನ್ನು ವ್ಯಕ್ತಪಡಿಸುತ್ತದೆ. ಸಂಶೋಧಕರ ಹೆಸರಮೇಲಿಂದ "ಸಾಲ್ಕ್ ವ್ಯಾಕ್ಸೀನ್" ಎಂದು ಕರೆಯಲ್ಪಡುವ ಈ ರೋಗ ನಿರೋಧಕ ದಾಕಿಗೆ ಎಷ್ಟು ಬೇಡಿಕೆಯು ಘೋಷಣೆಯ ಬೆನ್ನಿಗೆ ಬಂತೆಂದರೆ, ಸರಕಾರದವರು ಅದರ ನಿರ್ಯಾತ ವ್ಯಾಪಾರದ ಮೇಲೆ ನಿರ್ಬಂಧವನ್ನು ಹೇರುವ ಶಾಸನವನ್ನು ಕೂಡಲೇ ಜ್ಯಾರಿಗೆ ತಂದರು.

"ಪೋಲಿಯೋ ಮೈಲಿಟಿಸ್" ಎಂದು ವೈದ್ಯರು ಕರೆಯುವ ಅರ್ಧಾಂಗ ವಾಯು ರೋಗದ ಕುರಿತು ಈಚೆಗೆ ಜಾಗತಿಕ ಆರೋಗ್ಯ ಮಂಡಲದವರು ೪೦೦ ಪುಟಗಳಿಗಿಂತಲೂ ದೊಡ್ಡದಾದ ಗ್ರಂಥವೊಂದನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಏಳು ರಾಷ್ಟ್ರಗಳ ಹದಿನೇಳು ಪ್ರಖ್ಯಾತ ವಿಜ್ಞಾನಿ-ಡಾಕ್ಟರರು ರೋಗದ ಕುರಿತು ಬಹಳ ವಿವರವಾದ ಮಾಹಿತಿಗಳನ್ನು ಒದಗಿಸಿದ್ದಾರೆ. ಈ ರೋಗವು ಸಾಂಕ್ರಾಮಿಕ ರೂಪದಲ್ಲಿ ಮೊತ್ತ ಮೊದಲಿಗೆ ೧೮ ನೇ ಶತಮಾನದ ಕೊನೆ ಹಾಗು ೧೯ನೇ ಶತಮಾನದ ಮೊದಲಿಗೆ ಗೋಚರಿಸಿತು. ಮಕ್ಕಳು ಇದಕ್ಕೆ ಹೆಚ್ಚಾಗಿ ಬಲಿಯಾಗುತ್ತಿದ್ದರು. ಸ್ವೆಂಟ್ ಹೆಲೆನಾ ದ್ವೀಪದಲ್ಲಿ ರೋಗದ ಹಾವಳಿ ೧೮೩೬ರಲ್ಲಿ ಮೊದಲ ಬಾರಿಗೆ ತೋರಿತು. ಮುಂದೆ ೧೮೬೮ರಲ್ಲಿ ನಾರ್ವೆಯಲ್ಲಿಯೂ ೧೮೮೧ರಲ್ಲಿ ಫ್ರಾನ್ಸ್ ಮತ್ತು ಸ್ವೀಡನುಗಳಲ್ಲಿಯೂ ೧೮೯೪ರಲ್ಲಿ ಈಶಾನ್ಯ ಅಮೇರಿಕದಲ್ಲಿಯೂ ೧೯೧೬ರಲ್ಲಿ ಆಗ್ನೇಯ ಅಮೇರಿಕದಲ್ಲಿಯೂ ಕಾಣಿಸಿತು. ಕಳೆದ ಇಪ್ಪತ್ತು ವರ್ಷಗಳಲ್ಲಿ ಉಷ್ಣ ಹಾಗು ಸಮಶೀತೋಷ್ಣ ವಲಯದ ಅನೇಕ ದೇಶಗಳಲ್ಲಿ ಸಾಂಕ್ರಾಮಿಕ ರೂಪದಲ್ಲಿ ಈ ರೋಗ ವ್ಯಾಪಿಸಿದ ವರದಿ ಬಂತು. ಈಗ ಸಾಂಕ್ರಾಮಿಕ ರೂಪದಲ್ಲಾಗಲೀ ಅದಕ್ಕೆ ಪೂರ್ವ ಭಾವಿಯಾದ ಮಟ್ಟದಲ್ಲಾಗಲೀ ಈ ರೋಗದ ಹಾವಳಿಗೀಡಾಗದ ದೇಶವೇ ಇಲ್ಲವೆಂದು ತಿಳಿದು ಬರುತ್ತದೆ.

ನಮ್ಮ ದೇಶದಲ್ಲಿ ಕಳೆದ ವರ್ಷ ಮದ್ರಾಸ್, ಮುಂಬಯಿಗಳಲ್ಲಿ ನೂರಾರು ಮಕ್ಕಳು ಈ ರೋಗಕ್ಕೆ ಬಲಿಯಾಗಿದ್ದರು. ಈಚೆಗೆ ಧಾರವಾಡ ಪ್ರದೇಶದಲ್ಲಿ ಅದು ಹಾವಳಿ ನಡೆಸಿತೆಂದು ಗೊತ್ತಾಗುತ್ತದೆ. ಸಾಮಾನ್ಯವಾಗಿ ಪ್ರತಿಯೊಬ್ಬ ಮನುಷ್ಯನೂ ಬೇಗನೆಯಾಗಲಿ, ತಡವಾಗಿಯೇ ಆಗಲಿ, ಈ ರೋಗಕ್ಕೆ ಬಲಿಬಿದ್ದೇ ತೀರುವನೆಂದು ಸಂಶೋಧಕರ ಅಭಿಪ್ರಾಯ. ಮೂರು ಬಗೆಯಲ್ಲಿ ಪ್ರಕಟವಾಗುವ ಈ ರೋಗದ ಮೂಲದಲ್ಲಿರುವುದು ಬಹಳ ಸೂಕ್ಷ್ಮವಾದೊಂದು ಜಂತು—ಅದರ ಗಾತ್ರ ಒಂದು ಮಿಲಿಮೀಟರಿನ ೧ ರಿಂದ ೩ ಕೋಟಿ ಅಂಶದಲ್ಲಿ ಒಂದು ಪಾಲಿನಷ್ಟು ಮಾತ್ರ! ಈ ರೋಗ ತಗಲಿದಾಗ ಸಾಮಾನ್ಯವಾಗಿ ಗೊತ್ತಾಗುವುದೇ ಇಲ್ಲ. ಅರ್ಧಾಂಗ ವಾಯುವಿನ ಉಪಟಳ ಕಾಣಿಸುವುದು ನಿಯಮವೆಂಬುದಕ್ಕಿಂತಲೂ ಅಪವಾದವೆಂದೇ ಹೇಳಬಹುದು—ಆದರೆ ಈ ಅಪವಾದವೇ ಬಹಳ ಮಂದಿಯನ್ನು ಆಹುತಿ ತೆಗೆದುಕೊಳ್ಳುವುದರಿಂದ ಎಲ್ಲರಿಗೂ ಭಯ. ರೋಗದ ಜಂತು ನಮ್ಮ ಶರೀರವನ್ನು ಆಕ್ರಮಿಸಿದ ಪ್ರಥಮದಲ್ಲಿ ದೇಹದಲ್ಲಿ ರೋಗ ನಿರೋಧಕ ಶಕ್ತಿಯನ್ನುಂಟು ಮಾಡುತ್ತದೆ. ಸಾಮಾನ್ಯವಾಗಿ ಅಭಿವೃದ್ಧಿಯನ್ನು ಹೊಂದಿರದ, ಜೀವನ ಮಟ್ಟ ತೀರ ತಗ್ಗಿರುವ ದೇಶಗಳಲ್ಲಿ ಈ ರೋಗದ ಆಕ್ರಮಣ ಜನರಲ್ಲಿ ನಿರೋಧಕ ಶಕ್ತಿಯನ್ನು ಹುಟ್ಟಿಸುವುದೇ ಹೆಚ್ಚು! ಇದು ನಿಜಕ್ಕೂ ಚೋದ್ಯದ ವಿಷಯ—ಉತ್ತಮ ವಸತಿ ಹಾಗು ಸೀರಿನ ಪೂರೈಕೆಯಿರುವ ಮತ್ತು ಆರೋಗ್ಯದ ನಿಯಮಗಳ ಗೊಳಪಟ್ಟು ಜೀವನ ನಡೆಸುವ ದೇಶಗಳಲ್ಲಿ ರೋಗದ ಹಾವಳಿ ಮಿತಿಮೀರಿರುವಂತೆ ಕಂಡುಬರುತ್ತದೆ.

ಇದರ ಕಾರಣವೇನು? ರೋಗ ಜಂತುವು ಮಕ್ಕಳನ್ನೇ ಆಕ್ರಮಿಸುತ್ತದೆ. ಆಗ ಹೆಚ್ಚಿನ ಸಂದರ್ಭಗಳಲ್ಲಿ ಅದು ನಿರೋಧಕ ಶಕ್ತಿಯನ್ನು ಹುಟ್ಟಿಸುತ್ತದೆ. ಹಾಗೆ ಮಾಡದಿದ್ದರೆ, ಅರ್ಧಾಂಗ ವಾಯುಪೀಡೆಗೆ ಮಕ್ಕಳು ಗುರಿಯಾಗುತ್ತಾರೆ. ಆದರೆ ಉತ್ತಮ ಆರೋಗ್ಯ ಸೂತ್ರಗಳಿಗೊಳಪಟ್ಟು ಜೀವನ ನಡೆಸುವ ಪ್ರದೇಶದಲ್ಲಿ ಮಕ್ಕಳು ರೋಗಕಾರಕ ಜಂತುವಿನ ಆಕ್ರಮಣಕ್ಕೆ ಬಲಿಯಾಗದೆ ದೊಡ್ಡವರೇ ಆಹುತಿಯಾಗುತ್ತಾರೆ—ದೊಡ್ಡವರಲ್ಲಿ ರೋಗ ನಿರೋಧಕ ಶಕ್ತಿಯನ್ನು ರೋಗಕಾರಕ ಜಂತುವಿನ ಆಕ್ರಮಣ ಅಷ್ಟಾಗಿ ಹುಟ್ಟಿಸುವುದಿಲ್ಲ. ಇದರಿಂದ ಅವರಿಗೆ ಮುಂದುವರಿದ ರಾಷ್ಟ್ರಗಳಲ್ಲಿ ಅಪಾಯ ಅಧಿಕ. ಸಾಂಕ್ರಾಮಿಕ ಸ್ವರೂಪದಲ್ಲಿ ಈ ರೋಗ ಅಮೇರಿಕದಲ್ಲಿ ಹಬ್ಬಿದಾಗ ೧೫ ವರ್ಷ ಪ್ರಾಯಕ್ಕಿಂತ ಕಡಿಮೆ ವಯಸ್ಸಿನವರನ್ನು ಆಹುತಿತೆಗೆದುಕೊಳ್ಳುತ್ತಿದ್ದ ಮೊದಲಿನ ದಾಖಲೆ ಮುಂದೆ ೫—೬, ೭—೧೫, ೧೫—೩೨ ವರ್ಷಗಳಿಗೇರಿತಲ್ಲದೆ ಈಗ ೩೦ ವರ್ಷಕ್ಕಿಂತ ಮಿಕ್ಕಿದವರಿಗೆ ಹೆಚ್ಚಾಗಿ ತಗಲುವ ಸಂಭವವನ್ನು ವ್ಯಕ್ತಗೊಳಿಸುತ್ತದೆ. ಸಾಮಾನ್ಯವಾಗಿ ರೋಗವು ಮಕ್ಕಳಲ್ಲಾಗಲೀ ದೊಡ್ಡವರಲ್ಲಾಗಲೀ ಕಾಣಿಸಿಕೊಳ್ಳುವಾಗ ಸುಮಾರು ಹತ್ತು ದಿನಗಳ ಅವಧಿಯಲ್ಲಿ ದೇಹೋಷ್ಣ ಹೆಚ್ಚುವುದು, ಗಂಟಲು ಒಣಗುವುದು, ವಾಂತಿ ಯಾಗುವುದು, ಹೊಟ್ಟೆಯಲ್ಲಿ ನೋವಾಗುವುದು, ಅಜೀರ್ಣವೆನಿಸುವುದು, ತುಂಬ ಆಯಾಸ ಇತ್ಯಾದಿ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಮುಂದಿನ ನಾಲ್ಕಾರು ದಿನಗಳಲ್ಲಿ ಮೈ ಬಿಗಿಕೊಂಡು, ತಲೆಸಿಡಿತ, ಕಾಲು ಮತ್ತು ಬೆನ್ನು ನೋವು ಉಂಟಾಗುತ್ತದೆ. ಬಳಿಕ ನೂರು ದಿನಗಳೊಳಗಾಗಿ ದೇಹದ ಪಾರ್ಶ್ವವನಿಷ್ಕ್ರಿಯಾವಸ್ಥೆಯನ್ನುಂಟುಮಾಡುತ್ತದೆ. ಆದರ ಮೇಲೆ ಮನಸ್ಸಿನ ಇಚ್ಛೆ ನಡೆಯುವುದಿಲ್ಲ!

ಇದು ಸಾಂಕ್ರಾಮಿಕ ರೋಗವಾಗಿ ಹಬ್ಬಿದ ಸಂದರ್ಭಗಳಲ್ಲಿ ಅದನ್ನು ಹುಟ್ಟಿಗೆ ರೋಗಿಗಳ ಸಂಸರ್ಗವನ್ನು ದೂರೀಕರಿಸುವುದು, ಕೈಕಾಲುಗಳನ್ನು ಚೆನ್ನಾಗಿ ತೊಳೆದುಕೊಳ್ಳುವುದು, ಆಹಾರದಲ್ಲಿ ನೊಣ ಇತ್ಯಾದಿಗಳು ಬೀಳದಂತೆ ಜಾಗ್ರತೆ ವಹಿಸುವುದು, ಎಲ್ಲ ಬಗೆಯ ಜ್ವರಗಳಿಗೂ ಕೂಡಲೇ ಚಿಕಿತ್ಸೆ ನಡೆಸುವುದು, ಮುಂತಾದವುಗಳನ್ನು ರೋಗ ನಿರೋಧದ ಸಾಮಾನ್ಯ ಕ್ರಮವಾಗಿ ಇಷ್ಟರ ವರೆಗೆ ವೈದ್ಯರು ಹೇಳುತ್ತಿದ್ದರು. ಆದರೆ ಡಾ. ಸಾಲ್ಕರು ಈಗ ಸಂಶೋಧಿಸಿರುವ ದಾಕು ಹಾಕಿಸಿ ಕೊಂಡರೆ ರೋಗ ತಗಲುವುದೇ ಇಲ್ಲ. ದಾಕುಹಾಕಲಾದ ಎಷ್ಟು ಸಮಯದ ವರೆಗೆ ನಿರೋಧಶಕ್ತಿ ಪಡೆಯುವುದೆಂಬ ವಿಷಯ ಇನ್ನೂ ಸ್ಪಷ್ಟವಾಗಿ ತಿಳಿದು ಬಾರದಿದ್ದರೂ ಸಾಮಾನ್ಯವಾಗಿ ಆಜೀವನಪರ್ಯಂತ ಈ ಶಕ್ತಿ ಉಳಿಯುವುದೆಂದು ಸಾಲ್ಕರ ಅಭಿಪ್ರಾಯ. ಈ ದಾಕನ್ನು ಸಾಂಕ್ರಾಮಿಕ ರೋಗ ಹಬ್ಬಿರುವಾಗ ಸಹ ಜನರಿಗೆಪ್ರಯೋಗಿಸಬಹುದೆಂಬುದು ದಾಕಿನ ವಿಶೇಷಗುಣವನ್ನು ತೋರಿಸುತ್ತದೆ. ಸಾಮಾನ್ಯವಾಗಿ ಮೂರು ಘಟ್ಟಗಳಲ್ಲಿ ಈ ದಾಕನ್ನು ಪ್ರಯೋಗಿಸಲಾಗುತ್ತದೆ. ಮೊದಲಿನೆರಡು ಘಟ್ಟಗಳ ನಡುವೆ ೩-೪ ತಿಂಗಳ ಅಂತರವಿರುತ್ತದೆ. ಮೂರನೆಯದು ಆ ಮೇಲೆ ಏಳು ತಿಂಗಳಲ್ಲಿ ಬರುತ್ತದೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಮೊದಲಿನೆರಡು ಘಟ್ಟಗಳಲ್ಲಿಯೇ ರೋಗ ನಿರೋಧಶಕ್ತಿಯು ನೈಸರ್ಗಿಕವಾಗಿಹುಟ್ಟಿಕೊಳ್ಳುವುದೆಂದೂ ಮೂರನೆಯ ಪ್ರಯೋಗದ ಅವಶ್ಯಕತೆ ಹೆಚ್ಚಿನ ಸಂದರ್ಭಗಳಲ್ಲಿ ಬೀಳಲಿಕ್ಕಿಲ್ಲವೆಂದೂ ಹೇಳಲಾಗುತ್ತದೆ. ಅದೇನೇ ಇರಲಿ—ಮೂರೂ ಘಟ್ಟಗಳಿಗೆ ಒಟ್ಟಿಗೆ ತಗಲುವ ವೆಚ್ಚ ಕೇವಲ ೩೦ ರೂಪಾಯಿಯಾದುದರಿಂದ ಈ ದಾಕನ್ನು ವರದಾನವೆಂದರೆ ಅತಿಶಯೋಕ್ತಿಯಾಗದು.

ರೋಗ ನಿರೋಧ ಶಕ್ತಿಯನ್ನು ಉಂಟು ಮಾಡುವುದಕ್ಕೆ ಬೇಕಾಗುವ ದಾಕಿನ ಮದ್ದನ್ನು ತಯಾರಿಸಲು ಮಂಗಗಳ ಅವಶ್ಯಕತೆ ಇದೆ. ಡಾ. ಸಾಲ್ಕರು ತಮ್ಮ ಆರು ವರ್ಷಗಳ ಪ್ರಯೋಗ ಕಾಲದಲ್ಲಿ ಒಟ್ಟು ೧೫ ಸಾವಿರ ಮಂಗಗಳನ್ನು ಉಪಯೋಗಿಸಿದರು. ಮಂಗದ ಮೂತ್ರ [illegible] ರೋಗಕಾರಕ ಜಂತುವನ್ನು ಪೋಷಿಸಲಾಗುತ್ತದೆ; ಈ ಜಂತುವಿನ ರೋಗಕಾರಕ ಶಕ್ತಿಯನ್ನು ನಿವಾರಿಸಿ, ಮನುಷ್ಯರಲ್ಲಿ ನಿರೋಧ ಶಕ್ತಿಯನ್ನುಂಟು ಮಾಡುವ [illegible] ಜಂತುವಿನ [illegible] ಶಕ್ತಿ [illegible] ಉಳಿಸಲ್ಪಡುತ್ತದೆ. ಸಾಮಾನ್ಯವಾಗಿ

(೧೩ನೇ ಪುಟ ನೋಡಿರಿ)

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಭಾರತ್

ಹಣ್ಣಿನ ಶರಬತ್ತು ಮತ್ತು [illegible]

[illegible] ದಾಗ, ಉಲ್ಲಾಸ ಮತ್ತು ಆರೋಗ್ಯ [illegible] ಅದರದ ಪ್ರದರು [illegible] ಅನುಕೂಲ. [illegible]

ಪ್ರತಿ [illegible] ಶರಬತ್ತು ಮತ್ತು [illegible]

Bharath Industrial & Canning Co., Ltd., Kaup, S. K.

ನಾಣ್ಯ, ತೂಕ, ಅಳತೆ ಪದ್ಧತಿಗಳ ಪರಿಷ್ಕಾರ

ದೇಶದ ಎಲ್ಲ ಭಾಗಕ್ಕೂ ಸಮಾನವಾಗಿ ಅನ್ವಯಿಸುವ ನಿರ್ದಿಷ್ಟ ಸ್ವರೂಪದ ಅಳತೆ ಮತ್ತು ತೂಕದ ಪದ್ಧತಿಯನ್ನು ಜ್ಯಾರಿಗೆತರಬೇಕೆಂದೂಹೀಗೆ ನಿಶ್ಚಯಿಸಿದ ಅಳತೆ ಮತ್ತು ತೂಕದ ಪದ್ಧತಿಗಿಂತ ಭಿನ್ನವಾದುದನ್ನು ಅನುಸರಿಸುವುದನ್ನು ಅಪರಾಧವಾಗಿ ಪರಿಗಣಿಸಬೇಕೆಂದೂ ಹೇಳುವ ಖಾಸಗಿ ಗೊತ್ತುವಳಿಯೊಂದು ಲೋಕಸಭೆಯಲ್ಲಿ ಕಳೆದವಾರ ಚರ್ಚಿಸಲ್ಪಟ್ಟಿತು. ಶ್ರೀ ಕೆ. ಟಿ. ಅಚ್ಯುತನರು ಇದನ್ನು ಮಂಡಿಸಿ ಮಾತನಾಡುತ್ತಾ "ಸಮಾನ ಅಳತೆ ಮತ್ತು ತೂಕದ ಪದ್ಧತಿಯನ್ನು ದೇಶದಲ್ಲೆಲ್ಲ ಅನುಸರಿಸುವಂತೆ ಮಾಡಲು ಸ್ವಲ್ಪ ಸಮಯ ಹೋದೀತೆಂಬುದು ನಿಜ. ಪತ್ರಿಕೆ ಮತ್ತು ಆಕಾಶವಾಣಿಗಳ ಮೂಲಕ ಕೆಲವು ವರ್ಷಗಳ ವರೆಗೆ ಜನತೆಗೆ ಪ್ರಚಾರ ಮತ್ತು ಶಿಕ್ಷಣವನ್ನು ಕೊಡಬೇಕಾದೀತು. ಆದರೆ ಇದರಿಂದ ಬಹಳ ಪ್ರಯೋಜನವಿದೆ. ಮೆಟ್ರಿಕ್ ಪದ್ಧತಿಯ ಅನುಸರಣೆಯಿಂದ ಲೆಕ್ಕ ಮಾಡುವ ಸಮಯದಲ್ಲಿ ನೂರಕ್ಕೆ ಇಪ್ಪತ್ತೈದರಷ್ಟು ಸಮಯ ಉಳಿಯುತ್ತದೆ" ಎಂದು ಮುಂತಾಗಿ ಹೇಳಿದರು.

ನಾಣ್ಯ ಪದ್ಧತಿ

ವಾಣಿಜ್ಯ ಮತ್ತು ಔದ್ಯೋಗಿಕ ಮಂತ್ರಿಗಳಾದ ಶ್ರೀ ಕೃಷ್ಣಮಾಚಾರಿಯವರು ಈ ಬದಲಾವಣೆಯು ಸ್ವಾಗತಾರ್ಹವೆಂದು ಒಪ್ಪಿಕೊಂಡರು. ಯೋಜನಾ ಆಯೋಗವು ತೂಕ ಮತ್ತು ಅಳತೆಗಳಲ್ಲಿ ಮೆಟ್ರಿಕ್ ಪದ್ಧತಿಯನ್ನೂ ನಾಣ್ಯಗಳಲ್ಲಿ ಡೆಸಿಮಲ್ (ಅಂದರೆ ದಶಮಾಂಶ) ಪದ್ಧತಿಯನ್ನೂ ಜ್ಯಾರಿಗೆ ತರುವುದನ್ನು ಮೆಚ್ಚಿಕೊಂಡಿದೆ ಎಂದವರು ತಿಳಿಸಿದರು. ಅರ್ಥಸಚಿವರು ನಾಣ್ಯಗಳ ಚಲಾವಣೆಗೆ ಸಂಬಂಧಿಸಿದ ಈ ಸುಧಾರಣೆಯನ್ನು ಜ್ಯಾರಿಗೆ ತರಲು ಬೇಗನೇ ವಿಧೇಯಕವನ್ನು ಮಂಡಿಸುವರೆಂದೂ ಇದರ ಬೆನ್ನಿಗೆ ತೂಕ ಮತ್ತು ಅಳತೆಗಳ ಪದ್ಧತಿಯಲ್ಲಿ ಸುಧಾರಣೆ ಮಾಡುವ ಕ್ರಮ ತೆಗೆದುಕೊಳ್ಳಲ್ಪಡುವುದೆಂದೂ ಅವರು ಸಾರಿದರು. ಈ ಬಗೆಯ ಸುಧಾರಣೆಯನ್ನು ತರಲು [illegible] ಪಂಚವಾರ್ಷಿಕ ಯೋಜನೆಯ ಕಾಲಾವಧಿಯು ಪ್ರಶಸ್ತವೆಂದು ಸರಕಾರ ಭಾವಿಸಿರುವುದಾಗಿ ಅವರು ಹೇಳಿದರು. ಸುಧಾರಣೆಯ ಈ ನಿರ್ಧಾರವನ್ನು ಜ್ಯಾರಿಗೆ ತರುವಲ್ಲಿ ರಾಜ್ಯ ಸರಕಾರಗಳ ಸಹಕಾರವನ್ನು ಅವರು ಕೋರಿದರು.

ರಾಷ್ಟ್ರೀಕರಣದ ಹೆಜ್ಜೆ

ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯವನ್ನು ರಾಷ್ಟ್ರೀಕರಿಸಿ, ಸ್ಟೇಟ್

ರಾಜ್ಯಾಂಗ ತಿದ್ದುಪಡಿಯ ಕುರಿತು ಸಂತರ ಸ್ಪಷ್ಟೀಕರಣ

ಬ್ಯಾಂಕ್ ಆಫ್ ಇಂಡಿಯವೆಂಬ ಸರಕಾರದ ಒಡೆತನದಲ್ಲಿರುವ ಹೊಸ ಬ್ಯಾಂಕನ್ನು ಸ್ಥಾಪಿಸುವ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಸೂಚನೆಯನ್ನು ಅಂಗೀಕರಿಸಲಾಯಿತಲ್ಲದೆ, ವಿಧೇಯಕಕ್ಕೆ ಲೋಕಸಭೆಯು ಸಮ್ಮತಿಯನ್ನೂ ಕೊಟ್ಟಿತು. ಮಂತ್ರಿ ಶ್ರೀ ಎ. ಸಿ. ಗುಹಾರು ಈ ಸಂದರ್ಭದಲ್ಲಿ ಮಾತನಾಡುತ್ತಾ "ಗ್ರಾಮಾಂತರ ಪ್ರದೇಶಗಳಿಗೆ ವರ್ಷಕ್ಕೆ ೭೫೦ ಕೋಟಿ ರೂಪಾಯಿಯಷ್ಟು ಹಣವು ಅಗತ್ಯ ಬೀಳುತ್ತದೆ. ಇದರಲ್ಲಿ ಸಾವಿರಕ್ಕೆ ೩೧ ರಷ್ಟು ಸಹಕಾರಿ ಬ್ಯಾಂಕುಗಳಿಂದಲೂ ೧೦ ರಷ್ಟು ವಾಣಿಜ್ಯ ವ್ಯವಹಾರದ ಬ್ಯಾಂಕುಗಳಿಂದಲೂ ಪೂರೈಸಲ್ಪಡುತ್ತವೆ. ಉಳಿದ ೯೬% ಹಣವು ಖಾಸಗಿ ವ್ಯಕ್ತಿಗಳಿಂದ ಸಿಗುತ್ತದೆ. ಇವರಲ್ಲಿ ಹೆಚ್ಚಿನವರು ಮಾರ್ವಾಡಿ ವ್ಯಾಪಾರಮಾಡಿ ರೈತರನ್ನು ಸುಲಿಯುವರು. ಇದನ್ನು ತಪ್ಪಿಸಲು ಮತ್ತು ಜಮೀನುದಾರಿ ಪದ್ಧತಿ ಮುಂತಾದವುಗಳ ರದ್ದತಿಯ ಪೂರ್ಣ ಪ್ರಯೋಜನ ರೈತರಿಗೆ ಸಿಗುವಂತಾಗಲು ಇಂಪೀರಿಯಲ್ ಬ್ಯಾಂಕಿನ ರಾಷ್ಟ್ರೀಕರಣ ಮಾಡಲಾಗುತ್ತಿದೆ. ೪೦೦ ಶಾಖೆಗಳನ್ನು ಸರಕಾರ ತೆರೆಯಲಿದ್ದು ಸಹಕಾರಿ ಸಂಘಗಳೊಡನೆ ಹೊಂದಿಕೊಂಡು ಇವು ಕೆಲಸಮಾಡುತ್ತವೆ" ಎಂದರು.

ಪರಿಹಾರ ಧನದ ವಿವಾದ

ಚರ್ಚೆಯ ಕಾಲದಲ್ಲಿ ಪರಿಹಾರ ಧನದ ಪ್ರಶ್ನೆಯ ಬಗ್ಗೆ ವಿಶೇಷವಾದ ಭಿನ್ನಾಭಿಪ್ರಾಯವು ವ್ಯಕ್ತಗೊಳಿಸಲ್ಪಟ್ಟಿತು. ಕಮ್ಯೂನಿಸ್ಟರು ಪಾಲುದಾರರಿಗೆ ಅವರವರ ಪಾಲಿನ ಮುಖಬೆಲೆಯನ್ನು ಮಾತ್ರ ಕೊಡಬೇಕೆಂದು ಹೇಳಿದರು. ವಿಧೇಯಕದಲ್ಲಿ ಪ್ರತಿ ಐನೂರು ರೂಪಾಯಿಯ ಪಾಲಿಗೆ ರೂ. ೧೭೬೫-೧೦-೦ ಪರಿಹಾರವಾಗಿ ಕೊಡಲ್ಪಡುವುದೆಂದು ಹೇಳಲಾಗಿರುತ್ತದೆ. ಕಮ್ಯೂನಿಸ್ಟರ ವಾದವನ್ನು ತಿರಸ್ಕರಿಸಿದ ಬೇರೆ ಕೆಲವು ಸದಸ್ಯರು ಸರಕಾರ ತೀರ್ಮಾನಿಸಿರುವ ಪರಿಹಾರದ ಪ್ರಮಾಣವು ನ್ಯಾಯವಾಗಿಲ್ಲವೆಂದೂ ೧೯೪೮ರಲ್ಲೇ ಇದನ್ನಿಯಲ್ಲಿ ಆಗ ಅರ್ಥ ಸಚಿವರಾಗಿದ್ದ ಶ್ರೀ ಷಣ್ಮುಖಂ ಚೆಟ್ಟಿಯಾರರು ಇಂಪೀರಿಯಲ್ ಬ್ಯಾಂಕಿನ ರಾಷ್ಟ್ರೀಕರಣ ಪ್ರಥಮ ಸೂಚನೆಯನ್ನು ಕೊಟ್ಟಾಗ ಇದ್ದ ಪೇಟೆಯ ಬೆಲೆಯನ್ನು ಪಾಲುದಾರರಿಗೆ ಕೊಡಬೇಕೆಂದೂ ಪ್ರತಿಪಾದಿಸಿದರು. ಆದರೆ ಚೆಟ್ಟಿಯವರು ಸರಕಾರಕ್ಕೆ ಬೆಂಬಲವಿತ್ತರು. ಚರ್ಚೆಗೆ ಉತ್ತರ ಕೊಟ್ಟ ಮಂತ್ರಿಗಳು "ಪಾಲುದಾರರಲ್ಲಿ ಹೆಚ್ಚಿನವರು ಮಧ್ಯಮ ವರ್ಗಕ್ಕೆ ಸೇರಿರುವುದರಿಂದ ಅವರ ಹಿತಕ್ಕೆ ಧಕ್ಕೆಯುಂಟಾಗದಂತೆ, ರಿಜರ್ವ್ ಬ್ಯಾಂಕನ್ನು ಸ್ಥಾಪಿಸುವ ಕಾಲಕ್ಕೆ ಅನುಸರಿಸಿದ ತತ್ವದಂತೆಯೆ ಈಗ ಸಹ ಪರಿಹಾರದ ಮೊತ್ತ ನಿಗದಿಯಾಗಿದೆ" ಎಂದು ವಿಧೇಯಕವನ್ನು ಸಮರ್ಥಿಸಿಕೊಂಡರು.

"ಸರಕಾರವೇ ಆಸ್ತಿಯ ಜನಕ"

ರಾಜ್ಯ ಸಭೆಯಲ್ಲಿ ಘಟನೆಗೆ ತಿದ್ದುಪಡಿ ಮಾಡುವ ಮಸೂದೆಯು ಒಂದೇ ಒಂದು ವಿರೋಧ ಮತವಿಲ್ಲದೆ ಸ್ವೀಕರಿಸಲ್ಪಟ್ಟಿತು. ಸರ್ವಾನುಮತದ ಈ ಅಪೂರ್ವ ನಿದರ್ಶನವನ್ನು ಗೃಹ ಮಂತ್ರಿ ಪಂಡಿತ ಪಂತರು ಮೆಚ್ಚಿ ಮಾತನಾಡಿ ಮುಂದೆಯೂ ವಿಧಾಯಕ ಕ್ರಮಗಳಲ್ಲಿ ಇದೇ ಬಗೆಯ ಸಹಕಾರ ವ್ಯಕ್ತವಾಗಲೆಂದು ಹಾರೈಸಿದರು. ಘಟನೆಯನ್ನು ಅದರ ನಿರ್ಮಾಪಕರ ಉದ್ದೇಶಕ್ಕನುಸಾರವಾಗಿ ಈ ತಿದ್ದುಪಡಿಯು ನಿರೂಪಿಸುತ್ತದೆಂದೂ ಭಾವೀ ಯತೊಡಕು ಸುಧಾರಣೆಗಳಿಗೆ ಇನ್ನು ಮುಂದೆ ಆತಂಕವಾಗಲಾರದೆಂದೂ ಅವರು ಸಾರಿದರು. ಆಸ್ತಿಯ ಕಲ್ಪನೆಯು ಸ್ಥಿರವಾದುದಲ್ಲ—ಏಕೆಂದರೆ ಹಿಂದಿನ ಕಾಲದಲ್ಲಿ ಗುಲಾಮರನ್ನೂ ಹೆಂಗಸರನ್ನೂ ಆಸ್ತಿಯಾಗಿಯೇ ಪರಿಗಣಿಸುತ್ತಿದ್ದರು. ಅಮೂಲ್ಯ ಲೋಹಗಳ ಸಂಗ್ರಹವು ಹಣರೂಪದ ಆಸ್ತಿಯಾಗಿರುವ ದಿನಗಳು ಕಳೆದು ಸರಕಾರದ ಮನ್ನಣೆ ಪಡೆದ ಕಾಗದದ ನೋಟುಗಳು ಅವನ್ನು ಆಕ್ರಮಿಸಿವೆ ಎಂಬುದನ್ನು ಅವರು ಆಸ್ತಿಯ ಹಕ್ಕು ಪವಿತ್ರವಾದುದೆಂದು ಹೇಳುವವರ ನೆನಪಿಗೆ ತಂದುಕೊಟ್ಟರು. ಆದುದರಿಂದ ಸರಕಾರವೇ ಖಾಸಗಿ ಆಸ್ತಿಪಾಸ್ತಿಗಳ ಜನಕನೆಂದು ಅವರು ಸಾರಿದರು.

ಶಾಸನಾಂಗದ ಪರಮಾಧಿಕಾರ

ನ್ಯಾಯಸ್ಥಾನದ ಅಧಿಕಾರವನ್ನು ಈ ತಿದ್ದುಪಡಿ ಕುಗ್ಗಿಸಿದೆ ಎಂಬ ವಾದವನ್ನು ಅಲ್ಲಗಳೆಯುತ್ತಾ ಘಟನೆಯ ನಿರ್ಮಾಪಕರು ನ್ಯಾಯಸ್ಥಾನಗಳಿಗೆಷ್ಟು ಅಧಿಕಾರವಿರಬೇಕೆಂದು ಭಾವಿಸಿದ್ದರೋ ಅಷ್ಟು ಅಧಿಕಾರ ಈಗಲೂ ಇದೆ; ಯಾವ ವಿಷಯದಲ್ಲಿ ಅಧಿಕಾರವಿಲ್ಲವೆಂದು ಕೊಂಡಿದ್ದರೊ ಅದನ್ನಷ್ಟೇ ಈಗ ಇಲ್ಲದಂತೆ ಮಾಡಿದ್ದೇವೆ ಎಂದು ಆತ್ಮ ವಿಶ್ವಾಸ ಪೂರ್ವಕ ನುಡಿದರು. ಮುಂದುವರಿದು "ನಾವು ಡೊಂಕುದಾರಿಯಲ್ಲಿ ಹೋಗಲು ಬಯಸುವುದಿಲ್ಲ — ಏನುಮಾಡಬೇಕೆಂದಿರುವೆವೊ ಅದನ್ನು ನೇರಾದ ವಿಧಾನಗಳಿಂದಲೇ ಮಾಡುತ್ತೇವೆ. ಆಸ್ತಿಯನ್ನು ವಶಪಡಿಸಿಕೊಳ್ಳುವಾಗ "ಪೂರ್ಣ" ಪರಿಹಾರಕೊಡಲೇ ಬೇಕೆಂದು ಹೇಳಲಾಗುತ್ತದೆ. ನಮಗೆ ಅದು ಮನಸ್ಸಿಲ್ಲದಿದ್ದರೆ, ಬೇರೆ ಶಾಸನಗಳ ಬಲದಿಂದ ಈ "ಪೂರ್ಣ" ಪರಿಹಾರದ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಲು ಬರುವುದಿಲ್ಲವೆ? ಕೃಷಿ ಭೂಮಿಯ ಮೇಲೆ ಆದಾಯ ತೆರಿಗೆ ಹಾಕುವ ಶಾಸನದಿಂದ ಈಗಾಗಲೇ ಜಮೀನುದಾರರ ಆದಾಯ ಅರೆವಾಸಿಗೆ ಇಳಿದಿದೆ; ಸರಕಾರವು ತೆರಿಗೆಯ ಪ್ರಮಾಣವನ್ನು ನೂರಕ್ಕೆ ೯೦ ಅಥವಾ ೯೫ ಮಾಡಿದರೆ, ಆಗ ಆಸ್ತಿವಂತರಿಗೆ ಏನು ಸಿಗುತ್ತದೆ?" ಎಂದವರು ಪ್ರಶ್ನಿಸಿದರು. ಆದುದರಿಂದ ಶಾಸನ ಸಭೆಗಳಲ್ಲಿಯೂ ಸಂಸತ್ತಿನಲ್ಲಿಯೂ ವಿಶ್ವಾಸವಿಡುವುದೇ ಶ್ರೇಯಸ್ಕರ ಎಂದರು. ತಿದ್ದುಪಡಿಯ ಕಾರ್ಯಾಚರಣೆಗೆ ಸಂಬಂಧಿಸಿದ ನಿಯಮ ರಚಿಸುವಾಗ ನ್ಯಾಯ, ಸಮಾನತೆ, ಆತ್ಮ ಶುದ್ಧಿಯ ಸೂತ್ರಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗುವುದೆಂದು ಅವರು ಭರವಸೆ ನೀಡಿದರು.

ಕರಭಾರದಲ್ಲಿ ಕಡಿತ

ಅರ್ಥಸಚಿವ ದೇಶಮುಖರು ಮುಂಗಡ ಪತ್ರವನ್ನು ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಮಂಡಿಸುವಾಗ ಮಾಡಿದ್ದ ಹೊಸ ತೆರಿಗೆಗಳ ಸೂಚನೆಯಲ್ಲಿ ಹಲವಕ್ಕೆ ಸಂಬಂಧಿಸಿ ಕಡಿತದ ನಿಶ್ಚಯವನ್ನು ಕಳೆದ ವಾರ ಪ್ರಕಟಿಸಿದರು. ಮುಂಗಡ ಪತ್ರದ ಚರ್ಚೆಯ ಕಾಲದಲ್ಲಿ ಸದಸ್ಯರ ಒತ್ತಾಯಗಳಿಗೆ ಬಗ್ಗಿದವರಂತೆ ಕಂಡು ಬಂದ ಅರ್ಥಸಚಿವರು ಸರಕಾರಕ್ಕೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಒಟ್ಟು ವೆಚ್ಚಕ್ಕೆ ಅನುಮತಿ ಕೇಳುವ ವಿಧೇಯಕವನ್ನು ಮಂಡಿಸುತ್ತಾ ಹೊಸ ತೆರಿಗೆಗಳ ಕುರಿತು ತಮ್ಮ ಪರಿವರ್ತಿತ ನಿಲುವೆಯನ್ನು ಪ್ರಕಟಿಸಿದರು. ಇದು ಆದಾಯ ತೆರಿಗೆ ಮುಂತಾಗಿ ವ್ಯಕ್ತಿಗಳಿಗೆ ಬಾಧಕವಾಗುವ ಅಂಶಗಳಿಗೆ ಬಾಧಕವಿರದಿದ್ದರೂ ಬಟ್ಟೆಬರೆ, ವಿದ್ಯುಚ್ಛಕ್ತಿಯ ಸಾಮಗ್ರಿ ಮುಂತಾದ ಅನೇಕ ಕೈಗಾರಿಕೆಗಳ ವಿಷಯದಲ್ಲಿ ವಿಶೇಷವಾದ ಕರಭಾರದ ಹೆದರಿಕೆಯನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡುತ್ತದೆ. ಪರಿಣಾಮದಲ್ಲಿ ೮೫ ಲಕ್ಷ ರೂಪಾಯಿಗಳ ಅಂದಾಜು ಕೊರತೆಯು ೧೬೫೫ ಲಕ್ಷ ರೂಪಾಯಿಗೆ ಏರುತ್ತದೆ. ಇದನ್ನು ಹಾಗೆಯೇ ಇರಗೊಡುವುದಾಗಿ ಅರ್ಥ ಸಚಿವರು ಹೇಳಿದರು. ಹೊಸ ತೆರಿಗೆಗಳ ವಿಷಯದಲ್ಲಿ ಮೃದು ಧೋರಣೆ ವಹಿಸಿರುವುದಕ್ಕೆ ಕೆಲವು ವರ್ತುಲಗಳಿಂದ ಬಂದ ಒತ್ತಾಯ ಕಾರಣವೆಂದು ಹೇಳಿ ಮಂತ್ರಿಗಳ ಪ್ರಾಮಾಣಿಕತೆಯನ್ನು ಕೆಲವು ಸದಸ್ಯರು ಸಂದೇಹಿಸಿದರೂ ಕಡಿತದ ಸೂಚನೆಗಳನ್ನು ಸಾಮಾನ್ಯವಾಗಿ ಸ್ವಾಗತಿಸಲಾಯಿತು. ಲೋಕ ಸಭೆಯಂತೆ ರಾಜ್ಯ ಸಭೆಯಲ್ಲೂ ಇದಕ್ಕೆ ಒಪ್ಪಿಗೆ ವ್ಯಕ್ತವಾಯಿತು.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು

ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು

ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಕರ್ನಾಟಕ ಏಕೀಕರಣದ ಕನಸು

ಮೈಸೂರಿನ ಪ್ರಭೃತಿಗಳ ಅಪಸ್ವರ

ಮೈಸೂರಿನ ಶಾಸನ ಸಭೆಯಲ್ಲಿ ಶೇಷಾದ್ರಿ ಸಮಿತಿಯ ವರದಿಯ ಕುರಿತು ಇದೀಗ ವಿವರವಾದ ಚರ್ಚೆ ನಡೆದ ವರದಿ ಬಂದಿರುತ್ತದೆ. ಅಧಿವೇಶನದ ಮೊದಲೊಮ್ಮೆ ತೊಡಗಿದ್ದ ಚರ್ಚೆಯನ್ನು ಮುಂಗಡ ಪತ್ರದ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೋಸ್ಕರ ಮುಂದೂಡಿದ್ದರು. ಆ ನಂತರ ಈಗ ಚರ್ಚೆ ಮುಂದರಿಯುವ ಸಂದರ್ಭದಲ್ಲಿ ಮೈಸೂರಿನ ಪ್ರಭೃತಿಗಳ ಮೇಲೆ ಪ್ರಭಾವವನ್ನು ಬೀರಿ, ಏಕೀಕರಣದ ಕನಸನ್ನು ನನಸಾಗಿ ಮಾಡುವ ಹಂಬಲದಿಂದ ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರು ಒಂದು ಶಿಷ್ಟ ಮಂಡಳವನ್ನು ಬೆಂಗಳೂರಿಗೆ ತೆಗೆದುಕೊಂಡು ಹೋದರು.

ಶಿಷ್ಟ ಮಂಡಳದ ಪ್ರಯಾಣ

ಶಿಷ್ಟ ಮಂಡಳದಲ್ಲಿ ಮುಂಬಯಿ ಕರ್ನಾಟಕದ ಶಾಸನ ಸಭೆಯ ಪ್ರಮುಖ ಸದಸ್ಯರೂ ಇದ್ದರು. ಇವರೆಲ್ಲ ತಮ್ಮ ಸತ್ಕಾರಾರ್ಥವಾಗಿ ಮುಖ್ಯ ಮಂತ್ರಿ ಹನುಮಂತಯ್ಯ, ಮಂತ್ರಿ ಡಾ. ನಾಗನಗೌಡ ಮುಂತಾದವರು ಏರ್ಪಡಿಸಿದ್ದ ನಾಲ್ಕಾರು ಸಮಾರಂಭಗಳಲ್ಲಿ ಪರಸ್ಪರ ವಿಚಾರ ವಿನಿಮಯವನ್ನು ನಡೆಸಿ, ಮೈಸೂರಿನವರ ಮನೋಗತವನ್ನು ತಿಳಿಯಲು ಪ್ರಯತ್ನಿಸಿದರು. ಉದಕ ಮಂಡಳದಲ್ಲಿ ಬೀಡು ಬಿಟ್ಟಿದ್ದ ರಾಜಪ್ರಮುಖರನ್ನು ಸಹ ಕಂಡು ಏಕೀಕರಣದ ಕುರಿತು ಮಾತುಕತೆ ನಡೆಸಿ, ಹುಬ್ಬಳ್ಳಿಗೆ ಹಿಂತಿರುಗಿದರು.

ಏಕೀಕರಣಕ್ಕೆ ಬೆಂಬಲ

ಬೆಂಗಳೂರಿನ ಈ ಯಾತ್ರೆ ಬಾಯಾರುವ ಕಾಲದಲ್ಲಿ ಬಾವಿತೋಡಲು ಉಪಕ್ರಮಿಸಿದಂತೆ ಹೊರ ನೋಟಕ್ಕೆ ತೋರಿದರೂ ಸಹ—ಮನೋವೈಜ್ಞಾನಿಕ ಪರಿಣಾಮವನ್ನುಂಟು ಮಾಡುವಷ್ಟು ಮಹತ್ವದಿಂದ ಕೂಡಿತ್ತೆಂದು ಹೇಳಲಾಗುತ್ತದೆ. ಏಕೀಕರಣದ ಕುರಿತು ಮೈಸೂರಿನ ಹೊರಗಿನವರು–ಮುಖ್ಯವಾಗಿ ಉತ್ತರಕರ್ನಾಟಕದವರು – ಎಷ್ಟು ಆತುರರಾಗಿದ್ದಾರೆಂಬುದು ಶಿಷ್ಟ ಮಂಡಳದ ಪ್ರಯಾಣದಿಂದ ವ್ಯಕ್ತವಾಯಿತು. ಇದರಿಂದ ಮೈಸೂರಿನವರ ಮೇಲೆ ಸಾಕಷ್ಟು ಪ್ರಭಾವಬಿದ್ದಿದೆಯೆಂದೂ ಅವರು ಸಾಮಾನ್ಯವಾಗಿ ಏಕೀಕರಣಕ್ಕೆ ಬೆಂಬಲಕೊಡುವುದು ನಿಶ್ಚಯವೆಂಬೂ ಶಿಷ್ಟ ಮಂಡಳದ ಅಭಿಪ್ರಾಯ.

ಅಪಸ್ವರ ಇಲ್ಲದಿಲ್ಲ

ಇಲ್ಲಿ "ಆದರೆ—" ಎಂಬುದೊಂದು ಪ್ರಶ್ನೆ ಎದ್ದು ಕಾಣುತ್ತದೆ — ಶಿಷ್ಟ ಮಂಡಳದೊಡನೆ ಸೌಹಾರ್ದ ಪೂರ್ಣವಾಗಿ ಮಾತುಕತೆ ನಡೆಸಿದವರಲ್ಲಿ ಹೆಚ್ಚಿನವರು ಏಕೀಕರಣಕ್ಕೆ ಬೆಂಬಲವಿತ್ತಿರಬಹುದು. ಆದರೆ, ಫಜಲ ಅಲಿ ಆಯೋಗಕ್ಕೆ ಮೈಸೂರು ಸರಕಾರದ ಅಭಿಪ್ರಾಯದ ರೂಪದಲ್ಲಿ ಯಾವ ಮನವಿಯನ್ನೂ ಒಪ್ಪಿಸತಕ್ಕದ್ದಲ್ಲವೆಂದು ಶಾಸನ ಸಭೆಯ ಬಹುಮತದ ಪಕ್ಷವೊಂದು ಶಾಸನ ಸಭೆಯ ಹೊರಗೆ ನಿರ್ಧರಿಸಿರುವುದಾಗಿ ತಿಳಿದು ಬರುತ್ತದೆ. ಆಯೋಗದ ವರ ಮಾಹಿತಿಗಾಗಿ ಶಾಸನ ಸಭೆಯಲ್ಲಿ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳುಳ್ಳ ಭಾಷಣದ ಪೂರ್ತಿ ಪಾಠವನ್ನು ಒದಗಿಸಿಕೊಟ್ಟರೆ ಅದೇ ಹೆಚ್ಚು.

"ಎರಡು ಕರ್ನಾಟಕ"

ಇದಲ್ಲದೆ ಮೈಸೂರು ಪ್ರದೇಶ ಕಾಂಗ್ರೆಸಿನ ಹಿಂದಿನ ಅಧ್ಯಕ್ಷ ಶ್ರೀ ವೀರಣ್ಣ ಗೌಡರೂ ಮತ್ತೆ ಕೆಲವು ಪ್ರಮುಖರೂ ಏಕೀಕರಣವನ್ನು ವಿರೋಧಿಸಿ, ತಮಗೆ ಬೇಕಿದ್ದರೆ, ಮೈಸೂರಿನ ಹೊರಗಿನ ಕನ್ನಡಿಗರು ಪ್ರತ್ಯೇಕ ರಾಜ್ಯ ನಿರ್ಮಾಣಕ್ಕೆ ಪ್ರಯತ್ನಿಸಲಿ; ಮೈಸೂರಿನೊಡನೆ ಈಗಲೇ ಹೊರಗಿನ ಕನ್ನಡ ಪ್ರದೇಶಗಳು ಸೇರುವುದು ಬೇಡ; ಕಾಲ ಅನುಕೂಲವಾದಾಗ ಹಾಗೆ ಮಾಡೋಣ ಎಂದು ಹೇಳುತ್ತಿರುವ ವರದಿಗಳು ಬರುತ್ತವೆ. ಇದೇ ಜೂನಿನೊಳಗೆ ಫಜಲ ಅಲಿ ಆಯೋಗವು ತನ್ನ ವರದಿ ಒಪ್ಪಿಸಲಿಕ್ಕಿರುವಾಗ, ಮೈಸೂರು ಇನ್ನೂ ಹೊಯ್ದಾಟದ ಮನೋಭಾವ ತೋರಿಸುತ್ತದೆ.

ವಿದ್ಯುತ್ಸಲಕರಣೆಗಳ ಕೇಂದ್ರ

ಮದ್ರಾಸು ಸರಕಾರದವರು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ೫೦ ಕೋಟಿ ರೂಪಾಯಿ ವೆಚ್ಚವನ್ನು ತರುವ ವಿದ್ಯುಚ್ಛಕ್ತಿಯ ಸಾಮಾಗ್ರಿಗಳ ಉತ್ಪಾದನೆಯ ಕೇಂದ್ರವನ್ನು ಈ ರಾಜ್ಯದಲ್ಲಿ ನೆಲೆಗೊಳಿಸಬೇಕೆಂದು ಯೋಜನಾ ಆಯೋಗಕ್ಕೆ ಸೂಚಿಸಿರುವರೆಂದು ತಿಳಿದು ಬರುತ್ತದೆ. ಇದರಿಂದ ದಕ್ಷಿಣ ಭಾರತವು ಔದ್ಯೋಗಿಕ ಕೇಂದ್ರಗಳಿಲ್ಲದೆ ಹಿಂದುಳಿದಿದೆ ಎಂಬ ದೂರು ತಪ್ಪುತ್ತದೆ; ಅಲ್ಲದೆ, ಮದ್ರಾಸು ರಾಜ್ಯವು ಭಾರತದಲ್ಲಿಯೇ ವಿದ್ಯುಚ್ಛಕ್ತಿಯ ಪೂರೈಕೆಗೆ ಹೆಸರಾಗಿರುವುದರಿಂದ ಈ ಕಾರ್ಖಾನೆಯನ್ನು ಇಲ್ಲಿಯೇ ಕಟ್ಟುವುದು ಯೋಗ್ಯ ಎಂದು ಸರಕಾರ ಹೇಳಿರುತ್ತದೆ.

ಆಂಧ್ರ ರಾಜ್ಯದಲ್ಲಿ

ಆಂಧ್ರದ ಹೊಸ ಶಾಸನ ಸಭೆಯು ಕಳೆದ ವಾರ ಅಧಿವೇಶನದಲ್ಲಿ ಸೇರಿತು. ಸಭಾಧ್ಯಕ್ಷರ ಸ್ಥಾನಕ್ಕೆ ಶ್ರೀ ಎ. ಲಕ್ಷ್ಮಿನರಸಿಂಹಂ ದೊರೆಯವರು ಸರ್ವಾನುಮತದಿಂದ ಆಯ್ಕೆ ಹೊಂದಿದರು. ಗವರ್ನರರಾದ ಶ್ರೀ ತ್ರಿವೇದಿಯವರು ಶಾಸನ ಸಭೆಯನ್ನು ಉದ್ದೇಶಿಸಿ ಭಾಷಣಮಾಡುತ್ತಾ, ಕಳೆದ ಎಂಟು ತಿಂಗಳ ತಮ್ಮ ಆಡಳಿತದಲ್ಲಿ ಹೊಂದಿದ ಪ್ರಗತಿಯ ಸಿಂಹಾವಲೋಕನಗೈದರಲ್ಲದೆ, ವಿವಿಧ ಯೋಜನೆಗಳ ಮುಂದಿನ ಘಟ್ಟದ ಸಂಕ್ಷಿಪ್ತ ವಿವರವನ್ನೂ ಮುಂದಿಟ್ಟರು. ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕೋಸ್ಕರ ಅಭಿವೃದ್ಧಿ ತೆರಿಗೆಯನ್ನು ಹೊರಿಸಿ ಆದಾಯ ಹೆಚ್ಚಿಸಿಕೊಳ್ಳಲಾಗುವುದೆಂದು ಅವರು ತಿಳಿಸಿದ್ದಲ್ಲದೆ, ವರ್ಷಕ್ಕೆ ೧೦ ರುಪಾಯಿಗಿಂತ ಕಡಿಮೆ ಕಂದಾಯಕೊಡುವ ಪಟ್ಟಾದಾರರಿಗೆ ಪ್ರಕಾಶಂ ಮಂತ್ರಿ ಮಂಡಲ ತೋರಿಸಿದ್ದ ರಿಯಾಯತಿಯನ್ನು ನಿಲ್ಲಿಸಿ ಬಿಡಲಾಗುವುದೆಂದೂ ಸಾರಿದರು.

ಟ್ಯುನೀಸಿಯಕ್ಕೆ ಸ್ವರಾಜ್ಯ

ಭಾರತದಲ್ಲಿ ಫ್ರೆಂಚರು ತಾವು ಪಡೆದಿದ್ದ ವಸಾಹತುಗಳನ್ನು ಸ್ವತಂತ್ರಗೊಳಿಸಿ, ಭಾರತಕ್ಕೆ ಹಸ್ತಾಂತರಗೈಯಲು ಮುಂಬಂದಂತೆ, ಉತ್ತರ ಆಫ್ರಿಕದಲ್ಲಿರುವ ಟ್ಯುನೀಶಿಯವೆಂಬ ವಸಾಹತಿಗೆ ಫ್ರಾನ್ಸ್ "ಸ್ವರಾಜ್ಯ"ವನ್ನು ಕೊಡಲು ಒಪ್ಪಿದ ವರದಿ ಕಳೆದ ವಾರ ಬಂದಿತು. ಫ್ರೆಂಚರ ಹೊಸ ಪ್ರಧಾನಿಗಳೊಡನೆ ಟ್ಯುನೀಶಿಯದ ಪ್ರತಿನಿಧಿಗಳು ಮಾತುಕತೆ ನಡೆಸಿದ ಬಳಿಕ ಸ್ವರಾಜ್ಯವನ್ನು ನೀಡುವ ಕುರಿತು ಒಂದು ಒಪ್ಪಂದಕ್ಕೆ ಬರಲಾಯಿತು. ಮುಂದಿನ ತಿಂಗಳಲ್ಲಿ ಇದಕ್ಕೆ ಕೊನೆಯ ರೂಪವನ್ನು ಕೊಡಲಾಗುತ್ತದೆ. ಅದೇನೇ ಇರಲಿ, ಅಲ್ಪ ಸಂಖ್ಯಾಕರಾದ ಫ್ರೆಂಚರ ಆಡಳಿತದ ಬದಲು ಟ್ಯುನೀಸಿಯದ ಜನತೆಯ ಅಧಿಕಾರ ಕೆಲಮಟ್ಟಿಗಾದರೂ ನಡೆಯಲು ಅವಕಾಶಕೊಟ್ಟದ್ದು ಅಭಿನಂದನೀಯ.

ಬ್ರಿಟನಿನ ಮುಂಗಡ ಪತ್ರ

ಬ್ರಿಟನಿನ ಅರ್ಥ ಸಚಿವರಾದ ಬಟ್ಲರರು ನಿರೀಕ್ಷಿಸಿದಂತೆ, ತಮ್ಮ ಮುಂಗಡ ಪತ್ರದಲ್ಲಿ ತೆರಿಗೆಗಳಲ್ಲಿ ಕಡಿತ ಮಾಡುವ ಸೂಚನೆಗಳನ್ನು ಕಳೆದವಾರ ಮಂಡಿಸಿದರು. ಹೆಚ್ಚಿನ ಆದಾಯವಿರುವವರಿಗೆ ಪೌಂಡಿನಲ್ಲಿ ೯ ಶಿಲಿಂಗಿನಷ್ಟಿದ್ದ ತೆರಿಗೆಯನ್ನು ೬ ಪೆನ್ನಿಗಳಷ್ಟು ಇಳಿಸಿದ್ದಲ್ಲದೆ, ಕಡಿಮೆ ಆದಾಯವಿರುವವರ ಸಂಗತಿಯಲ್ಲಿ ಅದರ ಅರ್ಧದಷ್ಟು ತಗ್ಗಿಸಿದರು. ಅನೇಕ ವಸ್ತ್ರಗಳ ಮೇಲಿನ ತೆರಿಗೆಯನ್ನು ರದ್ದುಗೊಳಿಸಿ, ಮುಗ್ಗಟ್ಟಿನಿಂದ ತತ್ತರಿಸುತ್ತಿರುವ ಗಿರಣಿಗಳಿಗೆ ಆಶೆ ಹುಟ್ಟಿಸಿದರು. ಇದೆಲ್ಲ ಗತ್ತುಗಾರಿಕೆಯು ಮೇ ೨೬ರಲ್ಲಿ ನಡೆಯುವ ಚುನಾವಣೆಗಾಗಿ ಎಂಬುದನ್ನು ಮರೆಯಲಾಗದು.

ಪೂರ್ವ ಬಂಗಾಲದ ವಿರೋಧ

ಪಾಕಿಸ್ತಾನದ ಗವರ್ನರ ಜನರಲರು ಘಟನಾ ಪರಿಷತ್ತೊಂದನ್ನು ಕರೆಯಬೇಕೆಂದು ಹೊರಡಿಸಿರುವ ಸುಗ್ರೀವಾಜ್ಞೆಯು ಪೂರ್ವ ಬಂಗಾಳದ ಧುರೀಣರಲ್ಲಿ ವಿರೋಧವನ್ನುಂಟು ಮಾಡಿದೆ. ಅಲ್ಲಿಯ ಹಿಂದಿನ ಮುಖ್ಯ ಮಂತ್ರಿ ಫಜಲುಲ್ ಹಕ್ಕರು ಗವರ್ನರ ಜನರಲರ ಆಜ್ಞೆಯನ್ನು ಸಾರ್ವಜನಿಕವಾಗಿ ಖಂಡಿಸಿದ್ದಾರೆ. ಕೇಂದ್ರ ಸರಕಾರದ ಮಂತ್ರಿಗಳಾದ ಮಿರ್ಜಾರೂ ಸುಹ್ರವರ್ದಿಗಳೂ ಪೂರ್ವ ಬಂಗಾಲದಲ್ಲಿ ಸಂಚಾರ ಕೈಗೊಂಡು, ದಂಡಿನ ಆಳಿಕೆ ಮುಂತಾದ ಕಠಿಣ ಕ್ರಮಗಳಿಗೆ ರಾಷ್ಟ್ರವನ್ನು ಗುರಿಪಡಿಸಬಾರದೆಂದಿದ್ದರೆ ಗವರ್ನರ ಜನರಲರ ಆಜ್ಞೆ ಮನ್ನಿಸಬೇಕು ಎಂದು ಬೆದರಿಸಿದರು. ಆದರೆ ಇದು ಪ್ರಯೋಜನಕಾರಿಯಾದಂತೆ ಕಾಣುವುದಿಲ್ಲ.

ಶ್ರೇಷ್ಠ ನ್ಯಾಯಸ್ಥಾನದಲ್ಲಿ

ರಾಜಕೀಯ ವರ್ತುಲದಲ್ಲಿ ಹೀಗೆ ಮತಭೇದ ಮತ್ತು ಬಿರುಗಾಳಿ ಏಳುತ್ತಿದ್ದಂತೆಯೆ ನ್ಯಾಯಸ್ಥಾನದಲ್ಲಿ ಸಹ ಗವರ್ನರ ಜನರಲರು ಸೇರಿಸಬೇಕೆಂದಿರುವ ಘಟನಾ ಪರಿಷತ್ತು ಕ್ರಮಬದ್ಧವಾಗುವುದೊ ಎಂಬ ಪ್ರಶ್ನೆಯನ್ನು ಇದೇ ಸೋಮವಾರದಿಂದ ವಿಚಾರಿಸಲಾಗುತ್ತದೆ. ಗವರ್ನರ ಜನರಲರು ಇದನ್ನು ನ್ಯಾಯಾಲಯ ತೀರ್ಮಾನಿಸಬೇಕೆಂದೇನೂ ಬಯಸಿರಲಿಲ್ಲ. ಆದರೆ ಅವರು ಶ್ರೇಷ್ಠನ್ಯಾಯಸ್ಥಾನಕ್ಕೆ ಅಭಿಪ್ರಾಯಕ್ಕೋಸ್ಕರ ಕಳಿಸಿದ್ದ ಎರಡು ವಿಷಯಗಳಲ್ಲಿ ಏನನ್ನಾದರೂ ಹೇಳುವುದಕ್ಕೆ ಮುಂಚೆ ಅಕ್ಟೋಬರದಲ್ಲಿ ಘಟನಾ ಸಮಿತಿಯನ್ನು ವಿಸರ್ಜಿಸಿದ್ದು ಕ್ರಮಬದ್ಧವೇ ಎಂಬ ಪ್ರಶ್ನೆಯನ್ನು ಇತ್ಯರ್ಥಗೊಳಿಸಲೇಬೇಕೆಂದು ಕೋರ್ಟು ಅಭಿಪ್ರಾಯಪಟ್ಟ ದೆಸೆಯಿಂದ ಇದಕ್ಕೆ ಅವರು ಸಮ್ಮತಿಸಬೇಕಾಯಿತು.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI

BE YOUNG

Take "Elixir Aswaghandh" the pride of Ayurveda best nervine tonic quickly gives Radiant Health, removes constipation, relieves hip and back pain, Rheumatism, Vatharoga, Asthma, Bleeding Piles cured. Most popular and leading Vajikarana and Rasayana. 1 lb Rs. 10/-. Postage Extra. AYURVEDA VAIDYA T. V. JAYARAMA SASTRI, Veera Ragava Vaidyasala, Srirangam India.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹವೆತಪ್ಪಿದ ಮತ್ತು ನಿಂತುಹೋದ ಮುಟ್ಟಿನ ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ. ಪಿ. ಪಿ. ಪ್ರತ್ಯೇಕ)

Mrs. P. DEVEE, F. Ds. (N. J.) CALCUTTA—40

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

NAVAYUGA

Popular Kannada Weekly

Founder:—

Sri **A. B. SHETTY,** *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೨೮-೪-'೫೫	ಸಂಚಿಕೆ ೩೪

ತೆರಿಗೆ ಹಣದ ದುರುಪಯೋಗ

ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಉದ್ದೇಶದಿಂದ ಮತ್ತು ದೈನಂದಿನ ಆಡಳಿತೆಯನ್ನು ನಾಗಿಸಿಕೊಂಡು ಹೋಗುವುದಕ್ಕೋಸ್ಕರ ಸರಕಾರವು ಕೋಟ್ಯಂತರ ರೂಪಾಯಿಗಳನ್ನು ಪ್ರತಿ ವರ್ಷ ತೆಂಗೆಯ ಮೂಲಕ ಸಂಗ್ರಹಿಸಿ, ವ್ಯಯಿಸುತ್ತಿರುವಾಗ ಆ ಹಣದ ದುರುಪಯೋಗವೇನಾದರೂ ಆಗುತ್ತದೆಯೆ ಎಂದು ತಿಳಿಯುವ ಅಧಿಕಾರ ತೆರಿಗೆದಾರರಾದ ನಾಗರಿಕರಿಗೆ ಇದ್ದೇ ಇರುತ್ತದೆ. ನಾಗರಿಕರನ್ನು ಈ ವಿಷಯದಲ್ಲಿ ತೃಪ್ತಿಪಡಿಸುವುದಕ್ಕೂ ಹಣದ ವ್ಯವಹಾರದಲ್ಲಿ ಪ್ರಾಮಾಣಿಕತೆಯನ್ನು ಕಾಯ್ದುಕೊಳ್ಳುವುದಕ್ಕೂ ಲೆಕ್ಕಪತ್ರಗಳ ಪರಿಶೋಧನೆ ನೆರವಾಗುತ್ತದೆ. ಹೀಗೆ ನಡೆಸುವ ಪರಿಶೋಧನೆ ಎಷ್ಟು ಬೇಗ ಜರಗಿತೋ ಅಷ್ಟರ ಮಟ್ಟಿಗೆ, ತಪ್ಪಿನ ಪುನರಾವರ್ತನೆಯಾಗುವುದನ್ನು ನಿಲ್ಲಿಸಲು ಸಾಧ್ಯವಾಗುವುದಲ್ಲದೆ, ಹಣದ ದುರುಪಯೋಗಕ್ಕೆ ಹೊಣೆಯಾದವರನ್ನು ಎಚ್ಚರಿಸಲೂ ಆಗತ್ಯದ ಪ್ರಸಂಗಗಳಲ್ಲಿ ದಂಡಿಸಲೂ ಸಹಾಯವಾಗುತ್ತದೆ. ಆದುದರಿಂದ ಇಂಥ ಲೆಕ್ಕಪತ್ರ ಪರಿಶೋಧನೆಯ ವರದಿಯನ್ನು ಹಿಂದಿನ ವರ್ಷ ಮುಗಿದೊಡನೆಯೇ ಸಿದ್ಧಪಡಿಸುವುದಕ್ಕೆ ಪ್ರಯತ್ನಿಸುವುದು ತುಂಬ ಅಪೇಕ್ಷಣೀಯ. ಸಾಮಾನ್ಯವಾಗಿ ಖಾಸಗಿ ಸಂಸ್ಥೆಗಳ ಸಂಗತಿಯಲ್ಲಿ ಇದೇ ಕ್ರಮ ಅನುಸರಿಸಲ್ಪಡುತ್ತಿದ್ದರೂ ಕೇಂದ್ರ ಸರಕಾರದ ಲೆಕ್ಕ ಪತ್ರ ಪರಿಶೋಧಕರ ವರದಿಯು ಎರಡು ವರ್ಷಗಳಷ್ಟು ತಡವಾಗುತ್ತಿರುವುದು ಶೋಚನೀಯ. ಉದಾಹರಣೆಗೆ ೧೯೫೨-೫೩ನೇ ಇಸವಿಗೆ ಸಂಬಂಧಿಸಿದ ವರದಿಯು ಮೊನ್ನೆ ೧೮ನೇ ಏಪ್ರಿ[illegible] ಲೋಕ ಸಭೆಯಲ್ಲಿ ಮಂಡಿಸಲ್ಪಟ್ಟಿತು. ಇಷ್ಟು ದೀರ್ಘ ಕಾಲ ವಿಳಂಬಿಸುವುದರ ಔಚಿತ್ಯ ನಾಗರಿಕರಿಗೆ ಮನವರಿಕೆಯಾಗುವುದಿಲ್ಲ—ಸಿಬ್ಬಂದಿಯ ಕೊರತೆಗಿಂತಲೂ ಲೆಕ್ಕಪತ್ರಗಳನ್ನು ಸರಿಯಾಗಿಡದೆ, ಅಥವಾ ಸರಿಯಾಗಿಡುವುದಕ್ಕೆ ತಡಮಾಡಿ ತೊಂದರೆ ಕೊಡುವುದು ವಿಳಂಬಕ್ಕೆ ಕಾರಣವಾಗಿದ್ದರೆ ಅದು ಪೊಳ್ಳು ನೆಪವಾಗುತ್ತದೆ. ಅದೇನೇ ಇರಲಿ— ವರದಿಯಲ್ಲಿ ಮುಂದಿನ ವರ್ಷದಿಂದ ಲೆಕ್ಕಪತ್ರಗಳನ್ನು ಬೇಗನೆ ಪರಿಶೋಧಿಸಿ, ಹಿಂದಿನ ವರ್ಷಕ್ಕೆ ಸಂಬಂಧಿಸಿದ ವರದಿಯನ್ನು ಅದರ ಮುಂದಿನ ವರ್ಷವೇ ಕೊಡಲು ಪ್ರಯತ್ನಿಸಲಾಗುವುದೆಂದು ಹೇಳಿರುವುದು ತೃಪ್ತಿಕರ. ಆದರೆ, ವರದಿಯು ಅನೇಕ ಇಲಾಖೆಗಳ ವಿಷಯದಲ್ಲಿ ಹೊರಗೆಡವಿದ ಹಣದ ಅಪವ್ಯಯದ ಉದಾಹರಣೆಗಳು ಮಾತ್ರ ನಮ್ಮನ್ನು ಕಳವಳಕ್ಕೆ ಗುರಿಮಾಡುತ್ತವೆ. ರಕ್ಷಣಾ ಖಾತೆಯು ದೇಶಕ್ಕೆ ಎಷ್ಟು ದೊಡ್ಡ ಮೊತ್ತದ ನಷ್ಟದ ವ್ಯವಹಾರಕ್ಕೆ ಕಾರಣವಾಯಿತೆಂಬುದರ ನೆನಪು ನಮಗಿನ್ನೂ ಮರೆತಿರದಾಗ, ಬೇರೆ ಇಲಾಖೆಗಳಲ್ಲಿ ಸಹ ಅನೇಕ ಬಗೆಯಾಗಿ ಸಾರ್ವಜನಿಕರ ತೆರಿಗೆ ಹಣದ ದುರುಪಯೋಗವಾಗುತ್ತಿರುವುದನ್ನು ಕಂಡು ವಿಷಾದವೆನಿಸುತ್ತದೆ. ವಾಣಿಜ್ಯ ಖಾತೆಯಲ್ಲಿ ನಡೆದ ಎರಡು ತಪ್ಪಿನ ಪ್ರಕರಣಗಳ ಮೇಲೆ ಪರಿಶೋಧಕರ ವರದಿಯು ಬೆಳಕನ್ನು ಚೆಲ್ಲಿದ್ದು, ಈ ತಪ್ಪುಗಳ ದೆಸೆಯಿಂದ ಒಂದು ಪ್ರಸಂಗದಲ್ಲಿ ಗ್ರಾಹಕರಿಗೆ ಲಾಭವಾಗಬೇಕೆಂಬ ಸರಕಾರದ ಉದ್ದೇಶ ವಿಫಲವಾಗಿ, ಗಿರಣಿಯೊಡೆಯರ ಮತ್ತಿತರ ಮಧ್ಯಸ್ಥರ ಬೊಕ್ಕಸವೇ ತುಂಬಿಕೊಂಡಿತು; ಇನ್ನೊಂದು ಪ್ರಸಂಗದಲ್ಲಿ ಕೈಮಗ್ಗಗಳಿಗೆ ಪ್ರಯೋಜನ ಸಿಗುವ ಬದಲು ಗಿರಣಿಗಳಿಗೆ ಲಾಭವಾಯಿತು. ಆಹಾರ ಮತ್ತು ಕೃಷಿ ವಿಭಾಗದಲ್ಲಿ ಸುಮಾರು ೧೩ ಲಕ್ಷ ರೂಪಾಯಿ ಬೆಲೆ ಬಾಳುವ ಯಂತ್ರೋಪಕರಣಗಳನ್ನು ಹೆಚ್ಚಾಗಿ ಕೊಂಡುಕೊಂಡ ತಪ್ಪು ನಡೆಯಿತು. ಯಾವ ಪ್ರಯೋಜನಕ್ಕೂ ಉಪಯೋಗಿಸಲ್ಪಡದ ಈ ಸರಕುಗಳು ರಾಶಿರಾಶಿಯಾಗಿ ಸಂಗ್ರಹದಲ್ಲಿ ಬಿದ್ದಿರುವುದಕ್ಕೆ ಆವಶ್ಯಕತೆಯ ಸ್ಪಷ್ಟ ಕಲ್ಪನೆಯನ್ನು ಸಾಕಷ್ಟು ಮುಂಜಾಗ್ರತೆ ಮತ್ತು ವಿವೇಚನೆಯ ಮೂಲಕ ನಿಶ್ಚಯಿಸದಿರುವುದೇ ಹೇತು. ಯೋಜನಾಬದ್ಧವಾಗಿ ಕೆಲಸಗಳನ್ನೆಲ್ಲ ನಡೆಸಿಕೊಂಡು ಹೋಗಬೇಕಾದ ಆವಶ್ಯಕತೆ ಬಹಳ ಹೆಚ್ಚಿರುವ ಈ ಕಾಲದಲ್ಲಿ ಮೇಲಿನ ನಮೂನೆಯ ತಪ್ಪು ಸಂಭವಿಸುವುದು ನಿಜಕ್ಕೂ ಆಶ್ಚರ್ಯ ಜನಕವಾದ ವಿಷಯ. ಉತ್ಪಾದನೆಯ ಇಲಾಖೆಯ ನಿಯಂತ್ರಣದಲ್ಲಿ ಕೆಲಸ ಮಾಡುವ ಗೃಹನಿರ್ಮಾಣ ಕೇಂದ್ರವು ಸಂಗ್ರಹದಲ್ಲಿದ್ದ ಸಾಮಾಗ್ರಿಗಳ ಸಂಗತಿಯಲ್ಲಿ ಸಂಭವಿಸಿದ ನಷ್ಟದ ಹೊರತಾಗಿ ೧೦ ಲಕ್ಷ ರೂಪಾಯಿಗಿಂತಲೂ ಹೆಚ್ಚು ಬೇರೆ ನಷ್ಟವನ್ನು ತೋರಿಸಿತೆಂದು ವರದಿ ಹೇಳುತ್ತದೆ; ಅಷ್ಟೇಯಲ್ಲದೆ, ಲೆಕ್ಕ ಪತ್ರಗಳು ಅಪೂರ್ಣವಿರುವುದರಿಂದ ನಷ್ಟದ ಪೂರ್ಣ ವಿವರವನ್ನು ಗೊತ್ತುಮಾಡುವುದಕ್ಕೆ ಸಾಧ್ಯವಾಗಿಲ್ಲವೆಂದೂ ಅದು ತಿಳಿಸುತ್ತದೆ. ಲೆಕ್ಕ ಪತ್ರಗಳನ್ನು ಸರಿಯಾಗಿಡದಿರುವುದರ ಜೊತೆಗೆ, ಅನೇಕ ಕೆಲಸಗಳ ಕುರಿತು ವೆಚ್ಚವಾಯಿತೆಂದು ತೋರಿಸಲಾದ ಮೊತ್ತಗಳಿಗೆ ಸಂಬಂಧಿಸಿದ ಮೂಲ ಕಾಗದಗಳು 'ಈಗ ಸಿಗುವುದಿಲ್ಲ; ಕಳೆದು ಹೋಗಿವೆ'' ಎಂಬುದಾಗಿ ಅಧಿಕಾರಿಗಳು ಪರಿಶೋಧಕರ ಮುಂದೆ ಹೇಳಿದ ನಿದರ್ಶನಗಳೂ ಅನೇಕ ಮೂಲದ ಕಾಗದ ಪತ್ರಗಳು 'ಕಳೆದು ಹೋಗಿವೆ' ಎಂಬ ಮಾತು ನಿಜವಾಗಿರ ಬಹುದಾದರೂ ಸುಮ್ಮನೆ ವೆಚ್ಚ ಬರೆದಿದ್ದಾರೆಂದು ನಾಗರಿಕರೂ ಪರಿಶೋಧಕರೂ ಶಂಕಿಸುವುದಕ್ಕೆ ಇದು ಎಡೆ ಮಾಡಿಕೊಡುತ್ತದೆ. ಕಾಗದ ಪತ್ರಗಳನ್ನು ಅತಿ ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕಾದ ಆವಶ್ಯಕತೆಯನ್ನು ಸರಕಾರದ ಪ್ರಭೃತಿಗಳ ಗಮನಕ್ಕೆ ನಾಗರಿಕರು ತರಬೇಕಾಗಿದ್ದರೆ—ಆ ಅಧಿಕಾರಿಗಳ ಯೋಗ್ಯತೆ ಪ್ರಶ್ನಾತೀತವಾದ ವಿಷಯವಾಗಲಾರದು. ಸರಕಾರದವರು ಇವೆಲ್ಲ ಸಂಗತಿಗಳನ್ನೂ ಗಮನಿಸಿ, ತೆರಿಗೆ ಹಣದ ದುರುಪಯೋಗವಾಗದಂತೆ ಮತ್ತು ತಪ್ಪುಗಳಾಗುವುದನ್ನು ಸಕಾಲದಲ್ಲಿ ತಡೆಯುವುದಕ್ಕೆ ಹೆಚ್ಚು ದಕ್ಷತೆಯ ಕ್ರಮಗಳನ್ನು ತಗೆದು ಕೊಳ್ಳಬೇಕೆಂದು ಒತ್ತಾಯಿಸುತ್ತೇವೆ.

ಆಫ್ರೇಸ್ಯ ಪರಿಷತ್ತಿನ ಯಶಸ್ವಿ ಮುಕ್ತಾಯ

ಬಾಂಡುಂಗಿನ ನಿರ್ಣಯಗಳ ಸಿಂಹಾವಲೋಕನ

ಇತಿಹಾಸವನ್ನು ರಚಿಸುವುದು ನಿಶ್ಚಯವೆಂದು ಎಲ್ಲರೂ ಭಾವಿಸಿದ್ದ ಆಫ್ರೇಸ್ಯ ಪರಿಷತ್ತು ಈ ಅಭಿಪ್ರಾಯವನ್ನು ಹುಸಿಗೊಳಿಸಲಿಲ್ಲವೆಂಬುದು ತುಂಬ ತೃಪ್ತಿಕರವಾದ ವಿಷಯ. ಪರಿಷತ್ತಿನ ಕೊನೆಯಲ್ಲಿ ಪ್ರಕಟಿಸಲ್ಪಟ್ಟ ವರದಿಯನ್ನು ನೋಡಿದರೆ, ಭಾಗವಹಿಸಿದ ೨೯ ರಾಷ್ಟ್ರಗಳು ಪರಸ್ಪರ ಸಂಬಂಧಿಸಿದ ಪ್ರಮುಖ ವಿಷಯಗಳಲ್ಲಿ ಬಹುಮಟ್ಟಿಗೆ ಒಮ್ಮತಕ್ಕೆ ಬಂದಿವೆಯೆಂದೂ ಈ ರಾಷ್ಟ್ರಗಳು ಸಹಜೀವನ ಮತ್ತು ಸ್ವಾತಂತ್ರ್ಯದ ತಳಹದಿಯ ಮೇಲೆ ಕೆಲಸ ಮಾಡುವುದಕ್ಕೆ ಸಿದ್ಧವಿವೆಯೆಂದೂ ವ್ಯಕ್ತವಾಗುತ್ತದೆ.

ಯಶಸ್ಸಿನ ಗುಟ್ಟು

ಪರಿಷತ್ತಿನ ಯಶಸ್ಸಿನ ಬಗ್ಗೆ ಅನೇಕ ವರ್ತುಲಗಳಲ್ಲಿ ಸಂದೇಹವನ್ನು ವ್ಯಕ್ತಪಡಿಸಲಾಗುತ್ತಿತ್ತು. ಮುಖ್ಯವಾಗಿ ಇಲ್ಲಿ ಭಾಗವಹಿಸಿದ ರಾಷ್ಟ್ರಗಳ ರಾಜಕೀಯ ಭಿನ್ನಾಭಿಪ್ರಾಯವು ಬಿಕ್ಕಟ್ಟಿಗೆ ಕಾರಣವಾದೀತೆಂದು ಹೇಳಲಾಗುತ್ತಿತ್ತು. ಏಕೆಂದರೆ ಅನೇಕ ಬಣಗಳಾಗಿ ಈ ರಾಷ್ಟ್ರಗಳು ಜಾಗತಿಕ ಕ್ಷೇತ್ರದಲ್ಲಿ ವಿಭಾಗವಾಗಿದ್ದವು. ಭಾರತ, ಬರ್ಮ ಮತ್ತು ಇಂಡೋನೇಶಿಯಗಳು ಯಾವ ಬಣಕ್ಕೂ ಸೇರದ ಧೋರಣೆಯನ್ನು ಅನುಸರಿಸುತ್ತಿದ್ದರೆ, ಪಾಕಿಸ್ತಾನ, ತುರ್ಕಿ, ಇರಾಕ್, ಲೆಬನಾನ್, ಫಿಲಿಪೈನ್, ಥೈಲೆಂಡ್ ಮುಂತಾದ ರಾಷ್ಟ್ರಗಳು ಸೈನಿಕ ಒಪ್ಪಂದದ ಮೂಲಕ ಅಮೇರಿಕ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳೊಡನೆ ಸಂಬಂಧವಿರಿಸಿಕೊಂಡಿದ್ದವು. ಇದಕ್ಕೆ ವಿರುದ್ಧವಾಗಿ ಚೀನವು ಕಮ್ಯೂನಿಸ್ಟ್ ಪಂಥವನ್ನು ಅಂಗೀಕರಿಸಿ, ಪಾಶ್ಚಾತ್ಯ ರಾಷ್ಟ್ರಗಳಿಗೆ ಆಹ್ವಾನರೂಪದಲ್ಲಿತ್ತು. ಆಫ್ರಿಕದಲ್ಲಿ ವ್ಯಕ್ತವಾದ ವಸಾಹತು ಧೋರಣೆಯು ಪ್ರಿಯವೆನಿಸದಿದ್ದರೂ ರಶಿಯವು ಪೂರ್ವ ಯುರೋಪಿನ ರಾಷ್ಟ್ರಗಳನ್ನು ದಾಸ್ಯಕೂಟದಲ್ಲಿ ತಳ್ಳಿದೆ ಎಂಬ ನೆಪದಿಂದ ಕಮ್ಯೂನಿಸಮ್ಮನ್ನು ತಿರಸ್ಕರಿಸುವ ಸಿಂಹಳದ ಪಾತ್ರವೂ ಬಿಕ್ಕಟ್ಟನ್ನು ಹೆಚ್ಚಿಸುವುದಕ್ಕೆ ಕಾರಣ ಭೂತವೆನಿಸಿತು. ಇಷ್ಟು ಬಿಕ್ಕಟ್ಟುಗಳ ನಡುವೆಯೂ ಯಶಸ್ಸನ್ನು ಪರಿಷತ್ತು ಸಂಪಾದಿಸಿದ್ದರೆ, ಅದಕ್ಕೆ ಸಾಮಾನ್ಯ ಸಮಸ್ಯೆಗಳಿಗಿದ್ದ ಮಹತ್ವವೇ ಕಾರಣ.

ಚೀನೀ ಪ್ರಧಾನರ ವಿವೇಕ

ಸಿಂಹಳದ ಪ್ರಧಾನ ಮಂತ್ರಿಗಳೂ ಸೈನಿಕ ಒಪ್ಪಂದದ ಪ್ರತಿಪಾದಕರೂ ಮಾಡಬಹುದಾಗಿದ್ದ ಅನಾಹುತವನ್ನು ಬಹುಮಟ್ಟಿಗೆ ತಗ್ಗಿಸುವ ಪಾತ್ರವನ್ನು ನೆಹರು, ನು ಮತ್ತು ಚೋಜೊ ಬಹಳವಾಗಿ ಶ್ರಮಪಟ್ಟು ಸಮರ್ಥವಾಗಿ ನಿರ್ವಹಿಸಿದರು. ಪರಿಷತ್ತಿನಲ್ಲಿ ಎದ್ದು ಕಂಡ ಇನ್ನೊಬ್ಬ ಮಹಾ ವ್ಯಕ್ತಿಯೆಂದರೆ ಚೀನದ ಪ್ರಧಾನ ಮಂತ್ರಿ—ಇವರು ಪರಿಷತ್ತನ್ನು ಅಮೇರಿಕದ ವಿರುದ್ಧ ಬೊಬ್ಬಿಡುವ ರಂಗಸ್ಥಳವಾಗಿ ಮಾಡಬಹುದೆಂದು ಮೊದಲು ಎಲ್ಲರೂ ಊಹಿಸಿದ್ದರು. ಆದರೆ ಚೀನೀ ಪ್ರಧಾನಿಗಳು ತೋರಿಸಿದ ಸಹನೆ, ಸಮ್ಮತಿ ಮತ್ತು ವಿವೇಕಗಳು ಎಲ್ಲ ಊಹೆಗಳನ್ನೂ ಬುಡಮೇಲುಮಾಡಿದಲ್ಲದೆ ರಾಜಕೀಯಚಾಣಾಕ್ಷತನವನ್ನೂ ಮುನ್ನೋಟವನ್ನೂ ವ್ಯಕ್ತಪಡಿಸಿ ಉಳಿದವರಿಗೆ ಅನುಕರಣೀಯರಾಗಿ ಅವರು ರಾರಾಜಿಸಿದರು. ನಿಜ ಹೇಳಬೇಕೆಂದರೆ, ೨೯ ರಾಷ್ಟ್ರಗಳ ಈ ಪರಿಷತ್ತಿನಿಂದ ಅತಿ ಹೆಚ್ಚು ಲಾಭ ಸಂಪಾದಿಸಿದ ರಾಷ್ಟ್ರವೆಂದರೆ ಚೀನ. ಇಲ್ಲಿ ಚೀನದ ಪ್ರಧಾನ ಮಂತ್ರಿಗಳು ವರ್ತಿಸಿದ ಸೌಮ್ಯ ರೀತಿ ಮತ್ತು ತೋರಿಸಿದ ಸ್ನೇಹದ ಪರಿಣಾಮವಾಗಿ ಆ ರಾಷ್ಟ್ರವನ್ನು ಮನ್ನಿಸಿರದ ಅರಬ ಗುಂಪು ಮುಂತಾದ ಇತರ ರಾಷ್ಟ್ರಗಳು ಈಗ ಮನ್ನಣೆಕೊಡಲು ಮುಂದಾಗಬಹುದೆಂದು ವರದಿಗಳು ತಿಳಿಸುತ್ತವೆ.

ಮದ್ರಾಸು ಹೈಕೋರ್ಟಿನಲ್ಲಿ

ಸಾಮಾನ್ಯ ಮೂಲ ಸಿವಿಲ್ ಕ್ಷೇತ್ರಕ್ಕೊಳಪಟ್ಟ

ಒ. ಪಿ. ನಂಬ್ರ 4/1955

1913ನೆಯ ಇಂಡಿಯನ್ ಕಂಪೆನೀಸ್ ಆಕ್ಟ್

ಇದರ ವಿಚಾರದಲ್ಲಿ

ಮತ್ತು

ದಿ ಮಹಾರಾಷ್ಟ್ರ ಎಪೆಕ್ಸ್ ಬೇಂಕ್ ಲಿಮಿಟೆಡ್, ಉಡುಪಿ.

ಇವರ ವಿಚಾರದಲ್ಲಿ

ದಿ ಮಹಾರಾಷ್ಟ್ರ ಎಪೆಕ್ಸ್ ಬೇಂಕ್ ಲಿಮಿಟೆಡ್........ಅರ್ಜಿದಾರರು.

ಈ ಮೂಲಕ ತಿಳಿಯ ಪಡಿಸುವುದೇನೆಂದರೆ ತಾ. 30—11—1954 ರಂದು ಬ್ಯಾಂಕಿನ ವಿಶೇಷ ಸಾಮಾನ್ಯ ಸಭೆಯಲ್ಲಿ ಬ್ಯಾಂಕಿನ ಪಾಲು ಭಂಡವಾಳವನ್ನು ಕಡಿಮೆ ಮಾಡುವ ಕುರಿತು ಸ್ವೀಕರಿಸಿದ ನಿರ್ಣಯವನ್ನು ದೃಢಪಡಿಸುತ್ತಾ ಮೇಲ್ಕಾಣಿಸಿದ ಅರ್ಜಿಯ ಸಂಬಂಧದಲ್ಲಿ ತಾ. 2—3—1955ರಂದು ಕೋರ್ಟು ಕೊಟ್ಟ ಆಜ್ಞೆಯ ದೃಢಪಡಿಸಿದ ಪ್ರತಿಯನ್ನೂ ಕೋರ್ಟು ಮಂಜೂರು ಮಾಡಿದ ಇಳಿತಾಯದ ಅಧಿಕೃತ ಪತ್ರದ ದೃಢಪಡಿಸಿದ ಪ್ರತಿಯನ್ನೂ ಮದ್ರಾಸಿನ ಜ್ವಾಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರಲ್ಲಿ ತಾರೀಕು 22—4—1955ರಂದು ದಾಖಲು ಮಾಡಿಸುತ್ತದೆ.

1—ಎ. ಥೋಮಸ್ ರೋಡು,
ಟಿ. ನಗರ,
ಮದ್ರಾಸು—17.
ತಾ. 23—4—1955.

ಎ. ನಾರಾಯಣ ಶೈ
ಅರ್ಜಿದಾರರ ಕಡೆ ಎಡ್ವಕೇಟ್.

ಭವ್ಯ ಪರಿಷತ್ತು

ಎಲ್ಲ ದೃಷ್ಟಿಯಿಂದಲೂ ಬಾಂಡುಂಗಿನ ಪರಿಷತ್ತು ಭವ್ಯವಾಗಿತ್ತು—ಅದು ಏಶ್ಯದ ಮತ್ತು ಆಫ್ರಿಕದ ರಾಷ್ಟ್ರಗಳಲ್ಲಿ ಉದಯವಾಗಿರುವ ನವಜಾಗೃತಿಯ ಸಂಕೇತವೇ ಆಗಿತ್ತು. ಪಾಶ್ಚಾತ್ಯ ರಾಷ್ಟ್ರಗಳ ಗುಂಪಿನ ವಿರುದ್ಧ ನಿಲ್ಲುವುದು ಈ ಪರಿಷತ್ತಿನ ಉದ್ದೇಶವಾಗಿರಲಿಲ್ಲವಾದರೂ ಆ ದೇಶಗಳ ಹಂಗು, ದಾಕ್ಷಿಣ್ಯ ಮತ್ತು ದಾಸ್ಯಗಳನ್ನು ಸ್ವೀಕರಿಸುವುದಕ್ಕೆ ಪರಿಷತ್ತು ಸಿದ್ಧವಿರಲಿಲ್ಲ. ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವದ ತಳಹದಿಯ ಮೇಲೆ ಏಶಿಯ ಮತ್ತು ಆಫ್ರಿಕದ ರಾಷ್ಟ್ರಗಳ ಪುನಾರಚನೆ ಮತ್ತು ಅಭಿವೃದ್ಧಿಯನ್ನು ಸಾಧಿಸುವುದಕ್ಕೂ ಪರಸ್ಪರರ ಸಮಸ್ಯೆಗಳನ್ನೂ ಸಾಂಸ್ಕೃತಿಕ ಬಾಂಧವ್ಯವನ್ನೂ ಪರಿಶೀಲಿಸಿ ಸಹಕಾರಕ್ಕೆ ಪ್ರೋತ್ಸಾಹವಿರುವ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೂ ಈ ಪರಿಷತ್ತು ಮಹತ್ವವಿತ್ತಿತು. ಮಾನವ ನಾಗರಿಕತೆಯ ಮೂಲಭೂತ ತತ್ವಗಳನ್ನು ಈ ಪರಿಷತ್ತು ಎತ್ತಿ ಹಿಡಿಯಿತಲ್ಲದೆ, ಈ ನಾಗರಿಕತೆಯ ವಿನಾಶ ಮಾಡುವ ಪ್ರಯತ್ನಗಳನ್ನು ಬಲವಾಗಿ ಖಂಡಿಸಿತು. ಇವೆಲ್ಲ ವಿಷಯಗಳನ್ನು ಒಟ್ಟಿಗೆ ನೋಡಿದ ಪಕ್ಷದಲ್ಲಿ, ಸಂಯುಕ್ತರಾಷ್ಟ್ರ ಸಂಘವು ಜಗತ್ತಿನ ಆಗುಹೋಗುಗಳ ವಿಚಾರದಲ್ಲಿ ಹೇಗೆ ಪ್ರಧಾನ ಪಾತ್ರ ವಹಿಸುತ್ತದೋ, ಆಫ್ರೋಏಶ್ಯ ಪರಿಷತ್ತಿನ ಸ್ಥಾಯಿಸಮಿತಿಯು ಅದೇ ಕಾರ್ಯವನ್ನು ಸಂಬಂಧಿಸಿದ ಎರಡು ಮಹಾ ಭೂಖಂಡಗಳ ವಿಷಯದಲ್ಲಿ ಮಾಡದಿರದೆಂದು ಹೊಳೆಯುತ್ತದೆ.

ಕಾರ್ಯ ಕಲಾಪದ ವಿವರ

ಸುಮಾರು ೫೦೦೦ ಶಬ್ದಗಳ ಪ್ರಕಟಣೆಯನ್ನು ಪರಿಷತ್ತಿನ ಕೊನೆಯಲ್ಲಿ ಹೊರಡಿಸಿದ್ದು, ಅದು ಮೇಲಿನೆಲ್ಲ ಸಂಗತಿಗಳ ಮೇಲೆ ವಿಶೇಷವಾದ ಬೆಳಕನ್ನು ಚೆಲ್ಲುತ್ತದೆ. ಭಿನ್ನಾಭಿಪ್ರಾಯದ ಸಂಗತಿಗಳಿದ್ದರೂ ಅದನ್ನು ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಮಿತಿಗಳಲ್ಲಿ ವಿಚಾರ ವಿನಿಮಯದ ಮೂಲಕ ಬಗೆಹರಿಸಿ, ಅಂತಿಮವಾಗಿ ಬಂದ ನಿರ್ಣಯಗಳನ್ನು ಈ ಪ್ರಕಟಣೆ ತಿಳಿಸುತ್ತದೆ. ಇದರಲ್ಲಿ ಆರ್ಥಿಕ ಸಹಕಾರಕ್ಕೆ ಅತ್ಯಧಿಕ ಪ್ರಾಮುಖ್ಯತೆಯನ್ನು ಕೊಟ್ಟಂತೆ ತೋರುತ್ತದೆ. ಏಕೆಂದರೆ ಅಭಿವೃದ್ಧಿಯ ಮೂಲೋದ್ದೇಶವನ್ನಿಟ್ಟುಕೊಂಡಿರುವ ರಾಷ್ಟ್ರಗಳೇ ಇವಾಗಿವೆ. ಬೇರೆ ರಾಷ್ಟ್ರಗಳ ಸಹಾಯವನ್ನು ಆರ್ಥಿಕಾಭಿವೃದ್ಧಿಗೆ ಪಡೆಯಬಹುದೆಂದು ಪರಿಷತ್ತು ನಿರ್ಧರಿಸಿದೆಯಲ್ಲದೆ ಭಾಗವಹಿಸಿದ ರಾಷ್ಟ್ರಗಳಲ್ಲಿ ತಾಂತ್ರಿಕ ಸಹಾಯ ಕೊಡಬಲ್ಲವುಗಳು ಅದನ್ನು ನೀಡಲು ಮುಂಬರಬೇಕೆಂದು ಪರಿಷತ್ತು ಅಪೇಕ್ಷಿಸಿದೆ. ಜಾಗತಿಕ ಬ್ಯಾಂಕು ಮತ್ತಿತರ ಅನೇಕ ವಿಶ್ವವ್ಯಾಪಿ ಚಟುವಟಿಕೆಯ ಅಭಿವೃದ್ಧಿ ಮಂಡಳಿಗಳು ಹಿಂದುಳಿದ ಏಶ್ಯ-ಆಫ್ರಿಕ ಖಂಡಗಳಿಗೆ ವಿಶೇಷ ಸಹಾಯ ಕೊಡಬೇಕೆಂದು ಪರಿಷತ್ತು ವಿನಂತಿಸಿದೆ. ಇದಲ್ಲದೆ, ಭಾಗವಹಿಸಿದ ರಾಷ್ಟ್ರಗಳು ತಂತಮ್ಮಲ್ಲಿಯೇ ಹಡಗು ಸಾರಿಗೆ, ಬೆಲೆಯಲ್ಲಿ ಸ್ಥಿಮಿತ, ಸರಕುಗಳಿಗೆ ಪೇಟೆ ಸಂಪಾದಿಸುವುದು ಮುಂತಾದ ವಿಷಯಗಳಲ್ಲಿ ಅತಿ ಹೆಚ್ಚು ಸಹಕಾರವನ್ನು ತೋರಿಸಬೇಕೆಂದೂ ಪರಿಷತ್ತಿನಲ್ಲಿ ತೀರ್ಮಾನವಾಗಿದೆ.

ಸಾಂಸ್ಕೃತಿಕ ಬಾಂಧವ್ಯ

ಏಶಿಯ ಮತ್ತು ಆಫ್ರಿಕದ ರಾಷ್ಟ್ರಗಳ ಸಮಸ್ಯೆ ಏಕರೀತಿಯಾಗಿರುವುದಕ್ಕೆ ಅವುಗಳಲ್ಲಿರುವ ಅತಿ ನಿಕಟವಾದ ಸಾಂಸ್ಕೃತಿಕ ಸ್ನೇಹ ಬಾಂಧವ್ಯವೇ ಕಾರಣವೆಂಬುದನ್ನು ಪರಿಷತ್ತು ಗಮನಿಸಿದೆ. ಸಾಂಸ್ಕೃತಿಕ ಬಾಂಧವ್ಯದ ಹಿನ್ನೆಲೆಯನ್ನು ಅವಲೋಕಿಸಿದರೆ, ಶೈಕ್ಷಣಿಕ ಸೌಲಭ್ಯಗಳನ್ನೊದಗಿಸುವುದರಿಂದಲೂ ಸೌಹಾರ್ದ ಸಂಚಾರಕ್ಕೋಸ್ಕರ ಶಿಷ್ಟ ಮಂಡಲಗಳ ಆದಾನ ಪ್ರದಾನ ಮಾಡುವುದರಿಂದಲೂ ಪರಸ್ಪರರಲ್ಲಿ ತಿಳಿವಳಿಕೆಯನ್ನು ಹೆಚ್ಚಿಸಲು ಸಾಧ್ಯವಾಗುವುದೆಂದು ಪರಿಷತ್ತು ಅಭಿಪ್ರಾಯಪಟ್ಟಿದೆ. ಶಿಕ್ಷಣ ಮುಂತಾದ ವಿಷಯಗಳಲ್ಲಿ ಆಫ್ರಿಕದಲ್ಲಿ ಬಿಳಿ ಜನರು ಆಫ್ರಿಕನ್ನರಿಗೆ ಯೋಗ್ಯ ಸೌಕರ್ಯಗಳನ್ನು ಕೊಡುತ್ತಿಲ್ಲ ಎಂಬುದನ್ನು ಪರಿಷತ್ತು ವಿಷಾದಪೂರ್ವಕ ಗಮನಿಸಿದೆಯಲ್ಲದೆ, ಈ ದಿಸೆಯಲ್ಲಿ ಸುಧಾರಣೆಯಾಗಲೇ ಬೇಕೆಂದು ಒತ್ತಾಯಿಸಿದೆ. ವರ್ಣಭೇದ ಧೋರಣೆಯು ದೆಸೆಯಿಂದ ಸಾಂಸ್ಕೃತಿಕ ಬಾಂಧವ್ಯವನ್ನು ದೃಢಗೊಳಿಸಲು ಆತಂಕವಾಗುವುದೆಂದು ಪರಿಷತ್ತು ತೀರ್ಮಾನಿಸಿದೆಯಲ್ಲದೆ ಪವಿತ್ರವಾದ ಮಾನವಾಧಿಕಾರಗಳಿಗೂ ಇದು ಅಸಂಗತವಾಗಿದೆ ಎಂದು ಸಾರಿದೆ. ಸಂಯುಕ್ತ ರಾಷ್ಟ್ರ ಸಂಘದ ತಾಮ್ರಪಟದಲ್ಲಿ ಉಲ್ಲೇಖಿಸಿದ ಮೂಲಭೂತ ಅಧಿಕಾರಗಳನ್ನು ನಿರಾಕರಿಸುವುದು ಮಹಾಪರಾಧವೆಂದು ಪರಿಷತ್ತು ಭಾವಿಸುತ್ತದೆ.

ಶಾಂತಿ ಮತ್ತು ಸಹಕಾರ

ಜಾಗತಿಕ ಶಾಂತಿ ಮತ್ತು ಸಹಕಾರದ ವಿಷಯವೂ ಮಹತ್ವವಾದದ್ದೂ ಪರಿಷತ್ತಿನಲ್ಲಿ ಭಿನ್ನಾಭಿಪ್ರಾಯಕ್ಕೆ ಪುಟವಿತ್ತಿತು. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಏಶಿಯ ಮತ್ತು ಆಫ್ರಿಕದ ಅರ್ಹತೆ ಪಡೆದ ಒಂಭತ್ತು ರಾಷ್ಟ್ರಗಳಿಗೆ ಪ್ರವೇಶಸಿಗಬೇಕೆಂದು ಪರಿಷತ್ತು ಸೂಚಿಸಿದೆ—ಆದರೆ ಚೀನದ ಪ್ರಜಾರಾಜ್ಯದ ಸುದ್ದಿಯನ್ನು ಇಲ್ಲಿ ಎತ್ತಿಲ್ಲ. ಭದ್ರತಾಮಂಡಳಿಯಲ್ಲಿ ಏಶ್ಯ ಆಫ್ರಿಕ ರಾಷ್ಟ್ರಗಳ ಜನಸಂಖ್ಯೆಗನುಸಾರವಾದ ಪ್ರಾತಿನಿಧ್ಯ ಸಿಗಬೇಕೆಂದು ಪರಿಷತ್ತು ಹೇಳಿದೆ. ಶಾಂತಿ ರಕ್ಷಣೆಗೋಸ್ಕರ ಅಣುಶಸ್ತ್ರಾಸ್ತ್ರಗಳ ಉತ್ಪಾದನೆ, ಮತ್ತು ಪ್ರಾಯೋಗಿಕ ಪರೀಕ್ಷೆಗಳನ್ನು ನಿರ್ಬಂಧಿಸಬೇಕೆಂದು ಪರಿಷತ್ತು ಕೇಳಿದೆಯಲ್ಲದೆ ನಿಶ್ಶಸ್ತ್ರೀಕರಣಕ್ಕೆ ಮಹತ್ವವಿತ್ತಿದೆ. ಸೈನಿಕ ಒಪ್ಪಂದಗಳನ್ನು ಮಾಡಿಕೊಳ್ಳುವ ಕುರಿತು ಭಾರತ ಮುಂತಾದ ಕೆಲವು ರಾಷ್ಟ್ರಗಳು ತೀರ ವಿರೋಧವಾಗಿದ್ದರೂ ಪಾಶ್ಚಾತ್ಯ ರಾಷ್ಟ್ರಗಳ ಪ್ರತಿನಿಧಿಯಂತಿರುವ ತುರ್ಕಿ ಮತ್ತು ಪಾಕಿಸ್ತಾನಗಳ ಒತ್ತಾಯದಿಂದೆಂಬಂತೆ ಸಂಯುಕ್ತ ರಾಷ್ಟ್ರ ಸಂಘದ ತಾಮ್ರಪಟಕ್ಕೆ ಒಳಪಟ್ಟು ರಾಷ್ಟ್ರೀಯ ಹಾಗು ಪ್ರಾದೇಶಿಕ ಸಂರಕ್ಷಣೆಯ ಕ್ರಮಗಳನ್ನು ಕೈಗೊಳ್ಳಬಹುದೆಂದು ಪರಿಷತ್ತಿನಲ್ಲಿ ಒಪ್ಪಲಾಯಿತು. ಆದರೆ ಈ ಕ್ರಮಗಳು ದೊಡ್ಡ ರಾಷ್ಟ್ರಗಳ ತಂತ್ರ ನಡೆಯುವುದಕ್ಕೂ ನೆರೆಯ ರಾಷ್ಟ್ರಗಳ ಸ್ವತಂತ್ರ ಅಸ್ತಿತ್ವಕ್ಕೆ ಭಯವುಂಟು ಮಾಡುವುದಕ್ಕೂ ಅವಕಾಶ ಕೊಡತಕ್ಕದ್ದಲ್ಲವೆಂದು ಸ್ಪಷ್ಟೀಕರಿಸಲಾಯಿತು.

ಉಡುಪಿಯಲ್ಲಿ ಶ್ರೀ ಕಾಮರಾಜ ನಾಡರರು—ಮದರಾಸಿನ ಮುಖ್ಯ ಮಂತ್ರಿಗಳಾದ ಶ್ರೀ ಕಾಮರಾಜನಾಡರರೂ, ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟಿ, ಮತ್ತು ಶ್ರೀ ಯು. ಯಸ್. ಮಲ್ಯ ಇವರೂ ತಾ 27ನೇ ಬೆಳಿಗ್ಗೆ ಮಂಗಳೂರಿನಿಂದ ಮಣಿಪಾಲಕ್ಕೆ ಆಗಮಿಸುತ್ತಲೇ ಸಂಭ್ರಮದಿಂದ ಸ್ವಾಗತ ಪಡೆದು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಬೇರೆ ಬೇರೆ ವಿಭಾಗಗಳನ್ನು ಪರಿಶೀಲಿಸಿದರು. ಅನಂತರ ಎರಡನೆಯ ಹೊಸ ಹೋಸ್ಟೆಲ್ ಕಟ್ಟಡದ ಪ್ರಾರಂಭೋತ್ಸವ ಸಮಾರಂಭವು ಜರಗಿತು. ಎಕಡೆಮಿ ಆಫ್ ಜನರಲ್ ಎಜ್ಯುಕೇಶನಿನ ಮತ್ತು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಿಬಂದಿ ಹಾಗೂ ವಿದ್ಯಾರ್ಥಿಗಳ ಪರವಾಗಿ ಡಾ। ಟಿ. ಎಂ. ಎ. ಪೈಗಳು ಸ್ವಾಗತಭಾಷಣಮಾಡುತ್ತಾ ಜನತೆ ಮತ್ತು ವಿದ್ಯಾರ್ಥಿಗಳ ಹೆತ್ತವರ ಸಹಕಾರ ಸಹಾಯಗಳಿಂದ ಅಖಿಲ ಭಾರತ ದೃಷ್ಟಿಯಿಂದಸ್ಥಾಪಿತವಾದ ಈ ಕಾಲೇಜಿನ ಅಪೂರ್ವತೆ ಮತ್ತು ವಿಶಿಷ್ಟತೆಯನ್ನು ವಿವರಿಸಿ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿ ನಡೆಸುವುದು ಎಷ್ಟೊಂದು ಕಷ್ಟಸಾಧ್ಯವೆಂಬುದನ್ನು ನಿವೇದಿಸಿ ಈ ಕಾಲೇಜು ಸಂಪೂರ್ಣತೆಯನ್ನು ಹೊಂದಬೇಕಾದರೆ ಮಣಿಪಾಲದಲ್ಲಿಯೇ ಕನಿಷ್ಠ 500 ಬೆಡ್ಡುಗಳ ಆಸ್ಪತ್ರೆಯೊಂದನ್ನು ಆದಷ್ಟು ಬೇಗನೆ ನಿರ್ಮಿಸಬೇಕಾಗಿರುವುದೆಂದೂ ಈ ವಿಚಾರದಲ್ಲಿ ಮದ್ರಾಸು ಸರಕಾರವು ಸಹೃದಯತೆಯಿಂದ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಆಸ್ಪತ್ರೆಯ ಯೋಜನೆಯನ್ನು ಸೇರಿಸಬೇಕೆಂದೂ ಕೇಳಿಕೊಂಡರು. ಅನಂತರ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಏರ್ಪಟ್ಟ ಎರಡನೇ ಹೊಸ ಹೋಸ್ಟೆಲ್ ಬ್ಲಾಕನ್ನು ತೆರೆಯುವಂತೆ ಮಂತ್ರಿಗಳನ್ನು ಕೇಳಿಕೊಂಡರು.

ಮುಖ್ಯ ಮಂತ್ರಿಗಳು ಹರ್ಷಚಿತ್ತದಿಂದ ತಮ್ಮ ಭಾಷಣದಲ್ಲಿ ಬಹು ಸಮಯದಿಂದ ಈ ಕಾಲೇಜನ್ನು ನೋಡುವ ಆತುರವಿದ್ದಿತೆಂದೂ ಅದನ್ನಿಂದು ಕಂಡು ಅತ್ಯಾನಂದವಾಯಿತೆಂದೂ ಹೇಳಿದರು. ಇಂಥ ಖಾಸಗಿ ಪ್ರಯತ್ನಗಳಿಂದ ಕಟ್ಟಡ ಮನ್ನೈರೆ ಕೆಲಸಗಳು ಶೀಘ್ರವಾಗಿಯೂ ಕಡಿಮೆ ವೆಚ್ಚದಲ್ಲಿಯೂ ಸಾಗುತ್ತವೆ. ಸರಕಾರಕ್ಕೆ ಹೆಚ್ಚಿನ ಕಾಲ ಮತ್ತು ವೆಚ್ಚ ಬರುತ್ತದೆ. ಆದುದರಿಂದ ಈ ಖಾಸಗಿ ಪ್ರಯತ್ನವನ್ನು ನಾನು ಸ್ವಾಗತಿಸುತ್ತೇನೆ. ಮತ್ತು ಅದು ಇಡೀ ದೇಶಕ್ಕೆ ಸ್ಫೂರ್ತಿದಾಯಿಯಾಗಿ ಅನುಕರಣೀಯವಾಗಿದೆ. ಒಂದಿಷ್ಟು ಹಣ ವ್ಯಯಿಸಿ ಹಳ್ಳಿಗಳಲ್ಲಿ ಆಸ್ಪತ್ರೆಯನ್ನು ನಿರ್ಮಿಸಬಹುದು. ಔಷಧವನ್ನೂ ವಿತರಿಸಬಹುದು, ಆದರೆ ಡಾಕ್ಟರರನ್ನು ಪಡೆಯುವುದು ತೀರ ಅಸಾಧ್ಯವಾಗಿದೆ. ಆದ್ದರಿಂದ ದೇಶಕ್ಕೆ ವೈದ್ಯಕೀಯ ಕಾಲೇಜುಗಳ ಅವಶ್ಯಕತೆ ತುಂಬಾ ಇದೆ. ಈ ದೃಷ್ಟಿಯಿಂದ ಈ ಕಾಲೇಜಿಗೆ ಹೃತ್ಪೂರ್ವಕ ಯಶಸ್ಸನ್ನು ಹಾರೈಸುತ್ತೇನೆ. ಮತ್ತು ಆಸ್ಪತ್ರೆ ನಿರ್ಮಾಣದ ಕುರಿತು ಸಾಧ್ಯವಾದಷ್ಟು ಪ್ರಯತ್ನಿಸುತ್ತೇನೆ ಎಂದರು. ಶ್ರೀ ಟಿ. ರಮೇಶ ಪೈಗಳು ಕೇಂದ್ರದ ಆರೋಗ್ಯ ಮಂತ್ರಿ ಅಮೃತಕೌರರು, ಆಂಧ್ರದ ಪ್ರಧಾನ ಮಂತ್ರಿ ಗೋಪಾಲ ರೆಡ್ಡಿ ಮುಂತಾದವರಿಂದ ಬಂದ ಸಂದೇಶಗಳನ್ನು ಓದಿದರು ಶ್ರೀ ಬಿ. ವೈಕುಂಠ ಬಾಳಿಗ ಎಂ. ಎಲ್. ಎ. ರವರು ಧನ್ಯವಾದಗಳನ್ನಿತ್ತರು. ಬಳಿಕ ಮುಖ್ಯಮಂತ್ರಿಗಳು ಹಾಸ್ಟೆಲನ್ನು ತೆರೆದು ಉಡುಪಿಗೆ ಆಗಮಿಸಿ ನಗರಸಭೆಯ ಮಾನಪತ್ರವನ್ನು ಸ್ವೀಕರಿಸಿ ಕಾಂಗ್ರೆಸ್ ಕೆಲಸಗಾರರಿಗೆ ಹಿತೋಪದೇಶಗಳನ್ನಿತ್ತು ಶ್ರೀ ಟಿ. ಎ. ಪೈ. ಎಂ. ಎಲ್. ಎ ಅವರು ಏರ್ಪಡಿಸಿದ ಭೋಜನ ಸತ್ಕಾರ ಪಡೆದು ಬ್ರಹ್ಮಾವರ ಕುಂದಾಪುರದತ್ತ ತೆರಳಿದರು.

ಪ್ರಮಾಣಪತ್ರ ವಿತರಣೋತ್ಸವ—ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯ ವತಿಯಿಂದ ಹಿಂದೀ ಪರೀಕ್ಷಾರ್ಥಿಗಳ ಪ್ರಮಾಣಪತ್ರಗಳನ್ನು ಕೊಡುವ ಸಮಾರಂಭವು ತಾ. 29ರಲ್ಲಿ ಶ್ರೀ ಉಗ್ರಾಣ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಮೋಡರ್ನ್ ಹಾ. ಎ. ಶಾಲಾವಠಾರದಲ್ಲಿ ನೆರವೇರಿತು ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರಿಂದ ಸ್ವಾಗತ, ಕಾರ್ಯದರ್ಶಿ ಶ್ರೀ ಮಹಾಬಲ ನಾಯಕರಿಂದ ವರದಿ ಶ್ರೀ ಉ. ಲ. ಕಿಣಿಯವರಿಂದ ಸಂದೇಶವಾಚನವಾದ ಮೇಲೆ ಶ್ರೀ ಉ. ರತ್ನಾಕರ ಕಿಣಿಯವರಿಂದ ಭಾಷಣವಾಯಿತು. ಡಾ। ಪಿ. ವಿ. ವ್ಯಾಸರಾಯರು ಪ್ರಮಾಣಪತ್ರ ಮತ್ತು ಬಹುಮಾನ ವಿತರಣೆ ಮಾಡಿದ ಮೇಲೆ ಹಿಂದಿ ಮತ್ತು ಕನ್ನಡ ನಾಟಕಗಳಾದುವು. ಶ್ರೀ ಎ. ಜೆ. ಆಳ್ವೆಯವರು ಧನ್ಯವಾದಗಳನ್ನಿತ್ತರು.

ಹಿರಿಯಡ್ಕ—ಮಹಾಜನರ ಸಹಾಯ ಸಹಕಾರಗಳಿಂದ ಶ್ರೀ ವೀರಭದ್ರ ದೇವಾಲಯದ ಜೀರ್ಣೋದ್ಧಾರ ಕಾರ್ಯವು ಪೂರ್ತಿಯಾಗಿದ್ದು ತತ್ಸಂಬಂಧ ತಾ. 20-4-55 ರಿಂದ 27-5-55ರ ವರೆಗೆ ದೇವರ ಪ್ರತಿಷ್ಠೆ, ಸಾಹಿತ್ಯ ಮತ್ತು ಧರ್ಮ ಸಮ್ಮೇಲನಗಳು ಮಾಮೂಲು ಮೇರೆಗೆ ನಡೆಯುವ ರಥೋತ್ಸವಾದಿ ಕಾರ್ಯಕ್ರಮಗಳು ಜರಗಲಿವೆ. ಇದೇ ತಾ. 21ರಲ್ಲಿ ಸಾಹಿತ್ಯ ಸಮ್ಮೇಲನವನ್ನು ಶ್ರೀ ಕೋಟ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರು ಉದ್ಘಾಟಿಸಿದರು, ಶ್ರೀ ಕೆ. ಕಿಞ್ಞಣ್ಣ ರೈ ಮೊದಲಾದವರ ಭಾಷಣಗಳಾದುವು. ಮರುದಿನದ ಸಭೆಯ ಮತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಎ. ಲಕ್ಷ್ಮೀನಾರಾಯಣ ಆಳ್ವ, ಶಾಂತ ರೈ ಮೊದಲಾದವರ ಉಪನ್ಯಾಸಗಳಾದುವು, ಶ್ರೀ ಪಿ. ಎಂ. ಇಡಿಸಬ್ಬ ನವರು ಕವಿತಾವಾಚನ ಮಾಡಿದರು. ತಾ. 23 ರಲ್ಲಿ ಧರ್ಮ ಸಮ್ಮೇಲನವನ್ನು ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಉದ್ಘಾಟಿಸಿದರು. ಶ್ರೀಗಳಾದ ಕೆ. ಭುಜಬಲ ಶಾಸ್ತ್ರಿ, ಪೇಜಾವರ ಸೀತಾರಾಮಾಚಾರ್ಯ ಮೊದಲಾದವರ ಭಾಷಣಗಳಾದುವು. ಮರುದಿನ ಅಥಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಕು. ಶಿ. ಹರಿದಾಸ ಭಟ್, ಆದಿ ದೇವಾನಂದಜೀ ಮೊದಲಾದವರ ಭಾಷಣಗಳಾದುವು. ಅಂತೂ ನಾಲ್ಕು ದಿನಗಳ ಕಾರ್ಯಕ್ರಮಗಳು ಸರ್ವೋತ್ಸಾಹದಿಂದ ಯಶಸ್ವಿಯಾಗಿ ನೆರವೇರಿದವು.

ಬನ್ನಾಡಿ— ಸ್ಥಳೀಯ ಪಂಚಾಯತ ಬೋರ್ಡು ಮತ್ತು ಶಾಲೆಗಳ ನೆರವಿನಿಂದ ಪರಮಹಂಸ ಹೈಯರ್ ಪ್ರಾಥಮಿಕ ಶಾಲಾ ವಠಾರದಲ್ಲಿ ಕ್ಷೀರಾಧಿಕ ದಿನಾಚರಣೆಯು ಶ್ರೀ ಸಂಜೀವ ಶೆಟ್ಟರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ ಸುಬ್ಬಣ್ಣ ಹೆಗ್ಡೆಯವರು ಭಾಷಣವಿತ್ತರು.

೧೨ ವರ್ಷಗಳಿಂದ ಪರಮಹಂಸ ಹೈಯರ್ ಪ್ರಾಥಮಿಕ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ಇದೇ ತಾ. ೧೫ರಂದು ನಿವೃತ್ತರಾದ ಶ್ರೀ ಕೇಶವ ನಾವಡರನ್ನು ಸತ್ಕರಿಸುವ ಸಮಾರಂಭವು ಪಟೇಲ್ ಶಿವಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು.

ಸುಬ್ರಹ್ಮಣ್ಯ—ಶ್ರೀ ನರಸಿಂಹ ಜಯಂತಿ ಮಹೋತ್ಸವವು ತಾ 3-5-55 ರಿಂದ ತಾ 7 ರ ವರೆಗೆ ಜರಗಲಿದೆ.

ನಿಂಜೂರು— ಶ್ರೀ ವಿವೇಕಾನಂದ ಸೇವಾ ಸಂಘವನ್ನು ತಾ. 9-4-55ರಲ್ಲಿ ರಿಜಿಸ್ಟ್ರ ಮಾಡಿರುತ್ತವೆಂದು ಕಾರ್ಯದರ್ಶಿ ಶ್ರೀ ಯನ್. ಹಿರಿಯಣ್ಣ ಶೆಟ್ಟರು ತಿಳಿಸುತ್ತಾರೆ.

ಸ್ವರ್ಗ ವಾಸಲು

ಜೆಮಿನಿ ಗಣೇಶನ್, ಪದ್ಮಿನಿ

ತಾ 27-4-55 ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಂಗಳೂರು

ಶ್ರೀ ಕಾಮರಾಜ ನಾಡರರ ಆಗಮನ:— ಮದ್ರಾಸು ಪ್ರಾಂತದ ಮುಖ್ಯಮಂತ್ರಿಗಳಾದ ಶ್ರೀ ಕಾಮರಾಜನಾಡರರು ತಾ. 26 ನೇ ಪೂರ್ವಾಹ್ನ ಮಲಬಾರಿನ ಪ್ರವಾಸವನ್ನು ಮುಗಿಸಿ ಮಂಗಳೂರಿಗೆ ರೈಲಿನಲ್ಲಿ ಆಗಮಿಸಿ ಸ್ವಾಗತಿಸಲ್ಪಟ್ಟರು. ಇವರು ಮೇ 1ರ ವರೆಗೆ ಜಿಲ್ಲಾ ಸಂಚಾರನಡಸಲಿದ್ದು ಎಲ್ಲೆಡೆಗಳಲ್ಲಿಯೂ ಸಂಭ್ರಮದ ಸ್ವಾಗತ ಸಿದ್ಧತೆಗಳಾಗಿವೆ. ಬಂದ ದಿನವೇ ಪೌರ ಸ್ವಾಗತಪಡೆದು ಸಂಜೆ ಕಾರ್ಕಳ, ಮರುದಿನ ಉಡುಪಿ ಬ್ರಹ್ಮಾವರದಳ ಕಾರ್ಯಕ್ರಮ ಮುಗಿಸಿ ಕುಂದಾಪುರಕ್ಕೆ ತೆರಳಿದರು. ತಾ. 28ರಂದು ಹಾಲಾಡಿ, ಕಿನ್ನಿಗೋಳಿಗಾಗಿ ಮೂಲ್ಕಿ ಪಾವಂಜೆ ಕಾರ್ಯಕ್ರಮ ಮುಗಿಸಿ ಸಂಜೆ ಮಂಗಳೂರಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು. ತಾ. 29ರಂದು ಮೂಡುಶೆಡ್ಡೆ ಕ್ಷಯರೋಗಾಸ್ಪತ್ರೆಯನ್ನು ಉದ್ಘಾಟಿಸಿ ಮಂಗಳೂರಿನಲ್ಲೇ ಕಾರ್ಯಕ್ರಮಗಳು. ತಾ. 30ರಂದು ಪುತ್ತೂರು ತಾ. 1ರಂದು ಕಾಸರಗೋಡು ಪ್ರವಾಸ ಕೈಗೊಳ್ಳುವರು

ಆಗಮನ— ಆರೋಗ್ಯ ಸಚಿವರಾದ ಶ್ರೀ ಎ. ಬಿ. ಶೆಟ್ಟರು ಶ್ರೀ ಕಾಮರಾಜ ನಾಡರರೊಡನೆ ಜಿಲ್ಲಾ ಸಂಚಾರ ಕೈಗೊಳ್ಳಲು ತಾ. 24ನೇ ಸಂಜೆ ಮಂಗಳೂರಿಗೆ ಬಂದಿರುವರು. ಶ್ರೀ ಶ್ರೀನಿವಾಸ ಮಲ್ಯ ಎಂ. ಪಿ. ಇವರೂ ಶ್ರೀ ನಾಡರರನ್ನು ಸ್ವಾಗತಿಸುವುದಕ್ಕಾಗಿಯೇ ತಾ. 26ನೇ ಬೆಳಿಗ್ಗೆ ಬಂದಿರುವರೆಂದು ತಿಳಿದುಬರುತ್ತದೆ.

ಸಾಹಿತ್ಯ ಮತ್ತು ಕಲೋತ್ಸವ— ಸಹೋದರ ಕಲಾವೃಂದದ ಆಶ್ರಯದಲ್ಲಿ ತಾ. 24ನೇ ಸಂಜೆ ಮಿಶನ್ ಹೈಸ್ಕೂಲಿನ ಕಲಾ ಮಂಟಪದಲ್ಲಿ ಜರಗಿತು.

ಯಕ್ಷಗಾನ— ಇದೇ ಮೇ ತಿಂಗಳ 1ನೇ ತಾರೀಕು ರವಿವಾರ ಬೆಳಿಗ್ಗೆ 8-15ರಿಂದ 8—45ರ ವರೆಗೆ ಮದ್ರಾಸ್ ಬಾನುಲಿಯಿಂದ 'ವಾಲಿ ಸಂಹಾರ' ಎಂಬ ಯಕ್ಷಗಾನವು ಪ್ರಸಾರವಾಗಲಿರುವದು. ನಮ್ಮ ಜಿಲ್ಲೆಯ ಯಕ್ಷಗಾನ ಕಲಾವಿದರಾದ ಪ್ರೊ. ಎಂ. ಆರ್. ಶಾಸ್ತ್ರಿಗಳೇ ಮೊದಲಾದವರು ಇದರಲ್ಲಿ ಭಾಗವಹಿಸಲಿರುವರು.

ವಿವಾಹ ಸಮಾರಂಭ— ವಿಜಯಾ ಬ್ಯಾಂಕಿನ ಚೇರ್ ಮೇನ್ ವಕೀಲ್ ಕೆ. ಸುಂದರರಾಮ ಶೆಟ್ಟರ ಪುತ್ರಿ ಕುಮಾರಿ ಮೃಣಾಲಿನಿ ಮತ್ತು, ಉಡುಪಿ ಹನುಮಾನ್ ಟ್ರಾನ್ಸ್‌ಪೋರ್ಟಿನ ಡೈರೆಕ್ಟರ್ ಶ್ರೀ ಕೆ. ಅನಂತ ಶೆಟ್ಟರ ಪುತ್ರ ಡಾ| ಪಿ. ಬಾಲಕೃಷ್ಣ ಹೆಗ್ಡೆ, ಇವರ ವಿವಾಹ ಸಮಾರಂಭವು ತಾ. 25ರಂದು ಜ್ಯೋತಿ ಟಾಕೀಸಿನಲ್ಲಿ ವಿಜೃಂಭಣೆಯಿಂದ ನೆರವೇರಿತು. ಸ್ಥಳೀಯ ನಾಗರಿಕಲ್ಲದೆ ಇದೇ ಜಿಲ್ಲೆಯಿಂದಲೂ ಹೊರನಾಡಿನಿಂದಲೂ ಪ್ರತಿಷ್ಠಿತರನೇಕರು ಬಂದು ಈ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.

ಮಂತ್ರಿ ಭಕ್ತವತ್ಸಲಂರವರ ಜಿಲ್ಲಾ ಸಂಚಾರ— ಮದ್ರಾಸು ಸರಕಾರದ ಕೃಷಿ ಹಾಗೂ ಅಭಿವೃದ್ಧಿ ಖಾತೆಯ ಮಂತ್ರಿ ಶ್ರೀ ಎಂ. ಭಕ್ತವತ್ಸಲಂ ರವರು ತಾ. 19 ರಿಂದ 6 ದಿನಗಳವರೆಗೆ ಜಿಲ್ಲಾ ಸಂಚಾರವನ್ನು ಕೈಗೊಂಡರು. ತಾ. 19ನೇ ಸಂಜೆ ಕುಂಬಳೆಗೆ ಬಂದೊಡನೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಕುಞ್ಞಮ್ಮದ್, ಶ್ರೀ ಎಂ. ಎಸ್. ಮೊಗ್ರಾಲ್ ಮೊದಲಾದವರು ಸ್ವಾಗತಿಸಿದರು. ಅನಂತರ ಮೊಗ್ರಾಲಿಗೆ ತೆರಳಿ ಮೊಗ್ರಾಲ್, ಪೆರಾಲ್ ರಸ್ತೆಯ ಉದ್ಘಾಟನೆಯನ್ನು ನೆರವೇರಿಸುತ್ತಾ ಸರಕಾರ ಕೈಗೊಳ್ಳುವ ಅಭಿವೃದ್ಧಿ ಕೆಲಸಗಳಿಗೆ ಊರವರು ಸಹಕಾರ ನೀಡಬೇಕೆಂದೂ ನಿರುದ್ಯೋಗಿಗಳೆಲ್ಲರಿಗೂ ಭೂಮಿಯೊಂದೇ ಉದ್ಯೋಗ ಒದಗಿಸಿ ಕೊಡಲಾರದೆಂದೂ ಗ್ರಾಮ ಹಾಗೂ ಗುಡಿಕೈಗಾರಿಕೆಗಳನ್ನು ಬೆಳೆಸುವುದು ಅತ್ಯಗತ್ಯವೆಂದೂ ಇತ್ಯಾದಿಯಾಗಿ ಹೇಳಿದರು. ಬಳಿಕ ಸಾರ್ವಜನಿಕರ ಪರವಾಗಿ ದನಸಂಘನ್ನಾದಿಗಳ ಕ್ರಮ ಇಳಿಯುವ ಕುರಿತು ಭಯಸೂಚಿಸುವ ಮೊದಲಾದ ಕುರಿತು ಮನವಿ ಅರ್ಪಿಸಲ್ಪಟ್ಟಿತು. ಕುಂಬಳೆಯಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಮಂತ್ರಿಗಳು ಭಾಷಣವಾಡಿ ಪೆರಡಾಲಗ್ರಾಮ ಆರೋಗ್ಯಸಮಿತಿಯ ಮನವಿಯನ್ನು ಸ್ವೀಕರಿಸಿದರು.

ತಾ 21 ರಲ್ಲು ಮಂತ್ರಿಗಳು ಸುಳ್ಯ- ಪನತ್ತಡಿ ರಸ್ತೆಯಲ್ಲಿ ಹಾಕಬೇಕಾಗಿರುವ ಒಂಭತ್ತು ಮೋರಿಗಳಪೈಕಿ ಒಂದರ ಶಂಕುಸ್ಥಾಪನೆಯನ್ನು ನೆರವೇರಿಸಿದರು,

ಸುಳ್ಯ ಬ್ಲಾಕ್ ಅಭಿವೃದ್ಧಿ ಅಫಿಸರ್ ಶ್ರೀ ಕೆ. ಎಸ್. ಬಾಬು ಶೆಟ್ಟಿ, ಶ್ರೀ ಕೆ. ವೆಂಕಟ್ರಮಣ ಗೌಡ, ಎಮ್. ಎಲ್. ಎ, ಮೊದಲಾದವರು ಮಂತ್ರಿಗಳನ್ನು ಸ್ವಾಗತಿಸಿದರು. ಆಲೆಟ್ಟಿ ಪಂಚಾಯತ ಬೋರ್ಡಿನ ಪರವಾಗಿ ಅದರ ಅಧ್ಯಕ್ಷ ಶ್ರೀ ಯಸ್. ಎನ್. ವಾಸಪ್ಪ ಗೌಡರು, ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ವಯ ಕೈಕೊಳ್ಳಲಿರುವ ಕಾರ್ಯಗಳ ಕುರಿತು ಗ್ರಾಮ ಸೇವಾ ಸಂಘದ ಕಾರ್ಯದರ್ಶಿ ಶ್ರೀ ಸತ್ಯನಾರಾಯಣ ಸಗ್ರಿತ್ತಾಯರು ಅನುಕ್ರಮವಾಗಿ ಮನವಿ ಮತ್ತು ವರದಿಯನ್ನು ಒಪ್ಪಿಸಿದರು. ಮಾನ್ಯ ಮಂತ್ರಿಗಳು ಉತ್ತರಿಸುತ್ತಾ, ಗ್ರಾಮಸ್ಥರು ರಾಷ್ಟ್ರೀಯ ವಿಸ್ತರಣಾ ಯೋಜನೆಯ ವಿಷಯದಲ್ಲಿ ತೋರಿಸಿದ ಆಸಕ್ತಿಯನ್ನು ಪ್ರಶಂಸಿಸಿದರು. ಜಿಲ್ಲೆಯ ಒಳನಾಡು ಪ್ರದೇಶಗಳಲ್ಲಿ ರಸ್ತೆಗಳ ಕೊರತೆಯಿಂದಾಗಿ ಜನತೆಗಾಗುವ ಸಂಕಷ್ಟ ಸರಕಾರದ ಗಮನಕ್ಕೆ ಬಂದಿದೆ. ಆ ಕಾರಣ ರಸ್ತೆ ಸೇತುವೆ ನಿರ್ಮಾಣ ಕಾರ್ಯಗಳಿಗೆ ಹೆಚ್ಚು ಹಣ ಸರಕಾರ ಮಂಜೂರುಮಾಡಿರುವುದಾಗಿ ತಿಳಿಸಿದರು.

ಮಾನ್ಯ ಮಂತ್ರಿಗಳಿಗೆ ಪುತ್ತೂರು ತಾಲೂಕಿನ ಅಮರ-ಸುಳ್ಯ ಮಾಗಣೆಗಳ ಸುಮಾರು 21 ಹಳ್ಳಿಗಳಿಂದ ಮನವಿಗಳು ಅರ್ಪಿಸಲ್ಪಟ್ಟವು. ಅವುಗಳಲ್ಲಿ ಸುಳ್ಯವು ಕೊಡಗಿನ ಭಾಗವಾಗಿದ್ದಾಗ ಅದಕ್ಕೆ ಕೆಲವು ಸವಲತ್ತುಗಳಿದ್ದುವೆಂದೂ ಆ ಭಾಗವನ್ನು ದ. ಕ. ಜಿಲ್ಲೆಗೆ ಸೇರಿಸಿದಮೇಲೂ ಈ ಭಾಗಗಳ ಜನರು ಅವುಗಳನ್ನು ಉಪಯೋಗಿಸುತ್ತಿದ್ದರೆಂದೂ ಆದರೆ ಸರಕಾರ ತನ್ನ ಧೋರಣೆ ಬದಲಾಯಿಸಿದುದರಿಂದ ರೈತರಿಗೆ ತುಂಬಾ ಕಷ್ಟವಾಗಿದೆಯೆಂದೂ ಸರಕಾರಿ ಕಾಡುಗಳಲ್ಲಿ ಅಡಿಕೆ ವ್ಯವಸಾಯ ಮಾಡಲು ಸ್ಥಳಕೊಡುವ ಕ್ರಮವನ್ನು ಪುನಃ ಕಾರ್ಯರೂಪಕ್ಕೆ ತರಬೇಕೆಂದೂ ಕೇಳಿಕೊಳ್ಳಲಾಗಿತ್ತು. ಮಾನ್ಯ ಮಂತ್ರಿಗಳು ಉತ್ತರಕೊಡುತ್ತಾ ಕೆಲವು ನಿಯಮಗಳನ್ನು ಜನರ ಅನುಕೂಲತೆಗಾಗಿ ಸಡಿಸಲಾಗುವುದೆಂದೂ, ಬಾನೆ ಮತ್ತು ಕಾಣಭೂಮಿಯಲ್ಲಿ ಜನರು ಹೊಂದಿದ್ದ ಹಕ್ಕುಗಳನ್ನು ಪರಿಶೀಲಿಸಿ ಯೋಗ್ಯ ತೀರ್ಮಾನಕ್ಕೆ ಬರುವುದಾಗಿಯೂ ಹೇಳಿದರು. ಹಸುರೆಲೆ, ಹುಲ್ಲು, ಮನೆವಾರ್ತೆಗೆ ಬೇಕಾದ ಕಟ್ಟಿಗೆಗಳನ್ನೂ ಕಾಡುಗಳಿಂದ ಕೊಂಡುಹೋಗಲು ಅನುಮತಿಕೊಡಲನುಕೂಲವಾಗುವಂತೆ ಶಾಸನವನ್ನು ಸಡಿಲಿಸಬಹುದೆಂದರು. ಜಿಲ್ಲಾ ಫಾರೆಸ್ಟ್ ಅಧಿಕಾರಿ ಶ್ರೀ ಜಿ. ಎಸ್. ಎ. ಕೆರ್ಶಿ, ಅವರು ತಮ್ಮ ಇಲಾಖೆಯ ಕಷ್ಟಗಳನ್ನು ವಿವರಿಸಿದರು.

ಮಂತ್ರಿಗಳು ಅದೇ ಸಂಜೆ ಕೊಯ್ಲದ ಜಿಲ್ಲಾ ಪಶು ಕ್ಷೇತ್ರದ ಶಿಬಂಧಿಯವರ 96,000 ರೂ. ವೆಚ್ಚದಲ್ಲಿ ಕಟ್ಟುವ ಕಟ್ಟಡಗಳ ಅಡಿಗಲ್ಲನ್ನಿಟ್ಟರು. ಸಭಾರಂಭದಲ್ಲಿ ಜಿಲ್ಲಾ ಜಾನುವಾರು ಅಭಿವೃದ್ಧಿ ಸಂಘದ ಕಾರ್ಯದರ್ಶಿ ಡಾ| ಕೆ. ಬಾಲಪ್ಪ ಶೆಟ್ಟರು ಮನವಿಯೊಂದನ್ನು ಅರ್ಪಿಸಿದರು. ಕೇಂದ್ರದ ಪರಿಶೀಲಕರಾದ ಡಾ| ಶಣ್ಮುಗಂ ಸುಂದರಂ ಅವರು ಕೇಂದ್ರದ ಮಾಹಿತಿಯನ್ನಿತ್ತರು. ಶ್ರೀ ಪಿ. ಆರ್. ಆರ್. ಪೂಂಜರು ಧನ್ಯವಾದಗಳನ್ನರ್ಪಿಸಿದರು. ತಾ. 22ರಲ್ಲಿ ಮಂತ್ರಿಗಳು ಪುತ್ತೂರಿಂದ ವಿಟ್ಲದ ಅಡಿಕೆ ಸಂಶೋಧನಾ ಸಂಘಕ್ಕೆ ಭೇಟಿಕೊಟ್ಟರು. ವಿಟ್ಲ ಪಂಚಾಯತ ಬೋರ್ಡು, ಗ್ರಾಮ ಸೇವಾ ಸಂಘದವರ ಮಾನಪತ್ರ ಮನವಿಗಳನ್ನು ಸ್ವೀಕರಿಸಿ ಧರ್ಮಸ್ಥಳಕ್ಕೆ ತೆರಳಿದಾಗ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಸರ್ವ ಬಿರುದಾವಳಿಗಳಿಂದ ಮಂತ್ರಿಗಳನ್ನು ಸ್ವಾಗತಿಸಿದರು ಮಂಜುನಾಥ ದೇವರ ದರ್ಶನಮಾಡಿ ಉಜಿರೆಗೆ ತೆರಳಿ ಕರ್ನಾಟಕ ವಿದ್ಯಾಲಯ ಹೈಸ್ಕೂಲಿನ ಹೊಸಕಟ್ಟೋಣ ಒಂದರ ಆರಂಭೋತ್ಸವನ್ನು ನೆರವೇರಿಸಿದರು. ಶ್ರೀ ಧರ್ಮಸ್ಥಳ ಮಂಜಯ ಹೆಗ್ಗಡೆಯವರ ವಿದ್ಯಾ ಪ್ರೇಮ ಧರ್ಮ ಬುದ್ಧಿಯನ್ನು ಪ್ರಶಂಸಿಸಿ ಭಾಷಣಮಾಡಿದರು. ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರು ಧನ್ಯವಾದಗಳನ್ನಿತ್ತರು. ಬಳಿಕ ಮಂತ್ರಿಗಳು ಬೆಳ್ತಂಗಡಿಯಲ್ಲಿ ವೆಟರ್ನರಿ ಆಸ್ಪತ್ರೆಯೊಂದನ್ನು ಉದ್ಘಾಟಿಸಿ ವೇಣೂರಿಗೆ ಬಂದು ಅಲ್ಲಿ ಸಾರ್ವಜನಿಕ ಸಭಾಸದನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಬಳಿಕ ಮಂತ್ರಿಗಳು ಕುಂದಾಪುರಕ್ಕೆ ತೆರಳಿದರು.

ಮರುದಿನ ಬೆಳಿಗ್ಗೆ ಗಂಗೊಳ್ಳಿಗೆ ತೆರಳಿ, ಗಂಗೊಳ್ಳಿ ಹೈಸ್ಕೂಲಿನ ನೇಯ್ಗೆ ಕಟ್ಟಡದ ಶಂಕು ಸ್ಥಾಪನೆಯನ್ನು ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶಾಲಾ ಮೆನೇಜರ್ ಶ್ರೀ ಸುರೇಂದ್ರ ನಾಯ್ಕರೂ ಗಂಗೊಳ್ಳಿ ಪಂಚಾಯತ್ ಮತ್ತು ಗ್ರಾಮ ಸೇವಾಸಂಘಗಳ ಪರವಾಗಿ ಶ್ರೀ ಎಂ. ಜಿ. ಮಂಜುನಾಥ ನಾಯ್ಕರೂ ಬೇರೆ ಬೇರೆ ಮಾನಪತ್ರಗಳನ್ನು ಒಪ್ಪಿಸಿ ಕೆಲವೊಂದು ಅವಶ್ಯಕತೆಗಳನ್ನು ಮನಗಾಣಿಸಿದರು. ಬಳಿಕ ಮಂತ್ರಿಗಳು ಕಂಬದಕೋಣೆಗೆ ಬಂದು ಸಂಭ್ರಮದ ಸ್ವಾಗತ ಪಡೆದು ಶಾಲಾ ವಿಸ್ತರಣ ಕಟ್ಟಡದ ಅಸ್ತಿವಾರ ಹಾಕಿದರು. ಅಲ್ಲಿಯ ಪಂಚಾಯತ ಬೋರ್ಡಿನ ಅಧ್ಯಕ್ಷ ಆರ್. ಕೆ. ಸಂಜೀವ ರಾಯರು ಮಾನಪತ್ರವನ್ನು ಅರ್ಪಿಸಿದರು. ತರುವಾಯ ಮಂತ್ರಿಗಳು ಈಗಾಗಲೇ ಪ್ರಾರಂಭಿಸಲ್ಪಟ್ಟ ಬೈಂದೂರು ಕೊಲ್ಲೂರು ರಸ್ತೆಯನ್ನು ಉದ್ಘಾಟಿಸಿದರು. ಉಪ್ಪುಂದದಲ್ಲಿ ಮನವಿ ಸ್ವೀಕರಿಸಿ ಬೈಂದೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಸಾರ್ವಜನಿಕ ಭಾಷಣಮಾಡಿದರು.

ಕುಂದಾಪುರದಲ್ಲಿ ತಾ 23 ನೇ ಮಧ್ಯಾಹ್ನ ಸ್ಥಳೀಯ ವಕೀಲ ಕೂಟದವರು ಸತ್ಕಾರ ಸಮಾರಂಭವನ್ನೇರ್ಪಡಿಸಿ ಅಲ್ಲಿ ಸಬ್ ಕೋರ್ಟೊಂದನ್ನು ಸ್ಥಾಪಿಸಬೇಕಾಗಬೇಕೆಂದು ಕೇಳಿಕೊಂಡರು. ತದನಂತರ ಮಂತ್ರಿಗಳು ಕೋಟಕ್ಕೆ ಬಂದು ಗಾಂಧಿ ಸ್ಮಾರಕ ಮಂದಿರದ ಶಂಕು ಸ್ಥಾಪನೆಮಾಡಿದರು. ಕೋಟ ವಿದ್ಯಾ ಸಂಘದ ಮತ್ತು ಮತ್ಸ್ಯವ್ಯವಸಾಯಿಗಳ ಮನವಿಗಳನ್ನು ಸ್ವೀಕರಿಸಿ ಕುಂದಾಪುರ ಮಾರ್ಗವಾಗಿ ಮಂಗಳೂರಿಗೆ ತೆರಳಿದರು.

ಮಂಗಳೂರಲ್ಲಿ ತಾ 24 ನೇ ಸಂಜೆ ವೆಟರಿನರಿ ಆಸ್ಪತ್ರೆಯ ವಠಾರದಲ್ಲಿ ಜಾನುವಾರು ಕೃತಕ ಸಂತಾನ ಕೇಂದ್ರದ ಉದ್ಘಾಟನೆಯನ್ನೂ ನಮ್ಮ ಜಿಲ್ಲೆಗೆ ದೊರೆತ ಅಖಿಲ ಭಾರತ ಜವಾಹರ ಶೀಲ್ಡಿನ ಬಹುಮಾನ ವಿತರಣೆ ಮಾಡಿದರು. ಶ್ರೀ ವೈಕುಂಠಬಾಳಿಗ ಎಂ. ಎಲ್. ಎ. ಯವರು ಅಧ್ಯಕ್ಷತೆ ವಹಿಸಿದ್ದರು ಜಿಲ್ಲಾ ಕಲೆಕ್ಟರ್ ಎ. ಕುಞ್ಞಮ್ಮದರು ಸ್ವಾಗತಿಸಿದರು.

ದೇವಾಡಿಗ ಸುಧಾರಕ ಸಂಘ, ಮುಂಬಯಿ— ಇವರು, 9-4-56 ರಂದು ಸಂಘದ ವಿದ್ಯಾನಿಧಿಯ ಬಡಾವಣೆಯ ಪರವಾಗಿ ಸರ್ ಕಾವಾಸ್ಜೀ ಜಹಾಂಗೀರ್ ಸಭಾ ಸದನದಲ್ಲಿ ''ಸಮಾಜ' ವೆಂಬ ತುಳು ನಾಟಕವನ್ನು ಅಭಿನಯಿಸಿದರು. ಶ್ರೀಮತಿ ಸುಮಿತ್ರಾ ಯನ್ ರಾವ್, ಇವರು ಅಂದಿನ ಮುಖ್ಯ ಅತಿಥಿಯಾಗಿದ್ದು ಸಂಘದ ಅಭಿವೃದ್ಧಿ—ಹಿತವನ್ನರಿತು, ರೂ. 201/-ನ್ನು ಉದಾರದಾನವಾಗಿತ್ತರು.



ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

(೧ನೇ ಪುಟದಿಂದ)

ಎಂದು ಅವರು ಭಾವಿಸುವುದಿಲ್ಲ— ಆ ಭಾಷೆಯ ಪರಿಚಯ ಸಾಕಷ್ಟಿದೆ ಎಂಬುದನ್ನು ಪ್ರತ್ಯೇಕ ಪ್ರಶ್ನಪತ್ರಕ್ಕೆ ಉತ್ತರಿಸುವ ಮೂಲಕ ಸಿದ್ಧಗೊಳಿಸುವುದಕ್ಕೆ ಅವರದು ಆಕ್ಷೇಪವಿಲ್ಲ. ಆದರೆ ಪ್ರಾದೇಶಿಕ ಭಾಷೆಗಳ ಅವಹೇಳನೆ ಮತ್ತು ಈಗಲೇ ಇಂಗ್ಲಿಷಿನ ಖಂಡನೆ ಅವರಿಗೆ ಒಪ್ಪಿತವಿಲ್ಲ.

ಇದನ್ನು ದಕ್ಷಿಣದವರೆಂದಷ್ಟೇಯಲ್ಲ-- ಬಂಗಾಳಿ, ಮರಾಠಿ ಮುಂತಾದ ಭಾಷೆಯಾಡುವ ಬೇರೆಪ್ರದೇಶಗಳ ಜನರೂ ಅನುಮೋದಿಸುವರೆಂದು ನಮ್ಮ ವಿಶ್ವಾಸ. ಪ್ರಾದೇಶಿಕ ಭಾಷೆಯಲ್ಲಿ ಅಭಿಮಾನವುಳ್ಳ ಯಾರೇ ಆಗಲಿ, ಹಿಂದಿಯನ್ನು ಒತ್ತಾಯದಿಂದ ಹೇರುವ ಕ್ರಮಗಳನ್ನು ವಿರೋಧಿಸದಿರುವುದು ಅಸಾಧ್ಯ. ಹಿಂದಿಯನ್ನು ಪ್ರೀತಿಯಿಂದ ಕಲಿಯೋಣ-ಚಿತ್ರದ ಪ್ರಯೋಗವನ್ನು ಇಲ್ಲಿ ನಡೆಸಿದರೆ ಮಾತ್ರ ಅದನ್ನು ಖಂಡಿಸೋಣ! ಏಕೆಂದರೆ, ಹಿಂದಿಯಲ್ಲಿ ಎಲ್ಲ ಪರೀಕ್ಷೆಗಳನ್ನು ಉತ್ತರಿಸುವಂತೆ ಸರಕಾರ ಉಮೇದುವಾರರಿಗೆ ಅನುಕೂಲತೆಯನ್ನು ಇಷ್ಟರ ವರೆಗೂ ಒದಗಿಸಿಲ್ಲ — ಅಖಿಲ ಭಾರತ ಸಾರ್ವಜನಿಕ ಆಡಳಿತ ಮಂಡಳದ ಪರೀಕ್ಷೆಗೆ ಪದವೀಧರ ಉಮೇದ್ವಾರರು ನಿಲ್ಲುತ್ತಾರೆ, ಅವರು ಕಾಲೇಜಿನಲ್ಲಿ ಬಳಸಿದ ಭಾಷೆ ಇಂಗ್ಲೀಷು; ಕೆಳತರಗತಿಗಳಲ್ಲಿ ಉಪಯೋಗಿಸಿದ್ದು ಪ್ರಾದೇಶಿಕ ಭಾಷೆಯನ್ನು. ಹೀಗೆ ಹಿಂದಿಯಲ್ಲಿ ಅಭ್ಯಾಸ ನಡೆಸಲು ಯಾವ ವ್ಯವಸ್ಥೆಯನ್ನೂ ಮಾಡದೆ, ಎಲ್ಲ ಪ್ರಶ್ನಾಪತ್ರಗಳನ್ನೂ ಹಿಂದಿಯಲ್ಲಿಯೇ ಸಿದ್ಧಪಡಿಸುವುದು ಮತ್ತು ಅವೆಲ್ಲಕ್ಕೂ ಹಿಂದಿಯಲ್ಲಿಯೇ ಉತ್ತರ ಬರೆಯುವಂತೆ ನಿರ್ಬಂಧಿಸುವುದು ಯಾವ ನ್ಯಾಯ? ೧೯೬೫ನೇ ಇಸವಿಯೊಳಗಾಗಿ ಹಿಂದಿಯನ್ನು ಸರಕಾರಿ ಭಾಷೆಯಾಗಿಸುವ ಉತ್ಸಾಹಿಗಳು, ಅವಸರದ ಕ್ರಮಗಳನ್ನು ಕೈಗೊಂಡರೆ, ಉತ್ತರ ಭಾರತೀಯರಷ್ಟೇ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ ಇಷ್ಟರ ವರೆಗೆ. ಕನ್ನಡಿಗರಿರಲಿ, ಬಂಗಾಳಿಗಳಿರಲಿ, ಮರಾಠಿಗಳಿರಲಿ ಎಲ್ಲ ಬುದ್ಧಿವಂತರಿಗೂ ಕೆಲಸ ಕೊಟ್ಟಿರುವಾಗ ಮತ್ತು ಈಗಲೂ ಭಾರತೀಯ ಭಾಷೆಗಳೊಂದನ್ನೂ ತಿಳಿಯದ ವಿದೇಶಗಳ ತಜ್ಞರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿರುವಾಗ ಹೀಗೆ ಪಕ್ಷಪಾತವಾಗುವ ರೀತಿಯಲ್ಲಿ ನಡೆದುಕೊಳ್ಳಬಾರದು. ರಾಷ್ಟ್ರ ಭಾಷೆಯಾಗುವುದಕ್ಕೆ ಹಿಂದಿಯ ಬಾಲ್ಯಾರಿಷ್ಟವಿನ್ನೂ ಕಳೆದಿಲ್ಲ. ಅದಕ್ಕೆ ಕಳೆದ ಐದು ವರ್ಷಗಳಂತೆ ಇನ್ನು ಹತ್ತು ವರ್ಷಗಳ ಅವಧಿಯೂ ಕಡಿಮೆಯಾದೀತು. ಆದುದರಿಂದ ಭಾಷೆಗಾಗಿ ಸರಕಾರವಿರುವುದಲ್ಲ—ಸರಕಾರಕ್ಕಾಗಿ ಭಾಷೆ ಇದೆ ಎಂದು ನೆನಪಿಡುವುದೊಳಿತು!

—ಕಾರ್ತಿಕೇಯ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.
P. o. Box No 3219, BOBMAY 3-

ನಿಮ್ಮ ಎಲ್ಲಾ ಜೋತಿಷ್ಯ ವಿಷಯಗಳಿಗೆ ಇಂದೇ ಬರೆಯಿರಿ—
ಪಂಡಿತ ಕೆ. ಎಸ್. ಶಾಸ್ತ್ರಿ,
ಜ್ಯೋತಿರ್ವಿದ್ಯಾ ಸಂಶೋಧನಾ ಕೇಂದ್ರ
ಪಂಚವಟಿ, ನಾಶಿಕ.

In the Court of the Subordinate Judge of South Kanara.

O. S. No. 236 of 1951.

Between:-

Chandra Bhagi Amma .. Plaintiff.

and

Seetharama and others .. Defendants.

Sale Proclamation.

In pursuance of the orders of the Court dated 5—4—1955, 7—4—1955 and 9—4—1955, the Administrator appointed in the above suit will sell by public auction, (1) the right of collecting the amount of principal and interest due on the pro-notes mentioned in Schedule A hereunder and executed in favour of the late Sarvathody Chennamma by the respective executants subject to the terms mentioned below and (2) the right of collecting the amount due under the decrees mentioned in Schedule B hereunder subject to the terms mentioned below at the Office of the Administrator in Canara Hostel Road Kodialbail, Mangalore 3, at 2 P. M on 1—5—1955 and on the adjourned days and hours.

Conditions of Sale

1. The right, title, and interest of late Sarvathody Chennamma in the said pronotes and decrees and the right to recover the amounts due under the said pronotes and decrees will be sold by the Administrator and the purchaser should take the assignment subject to all risks, flaws and defects, if any. Neither the administrator nor the estate of the late Chennamma will be liable for any loss on failure of the recovery of the amounts due under the said pronotes, and decrees.

2. The administrator may reduce the upset price fixed for any of the lots, on the day of the sale, if there are no bidders forth-coming to bid for a price above the upset price originally fixed. The administrator reserves the right to reject the highest bid without assigning reasons therefor or may adjourn the sale to another day.

3. Each lot will be ordinarily knocked down to the highest bidder and he shall pay forthwith the full purchase money to the administrator and obtain a receipt. If the highest bidder fails to pay the full purchase money immediately, his bid will be rejected and the lot will be resold at once.

4. The sale shall become absolute immediately on payment of the full purchase money on the day of the sale itself

5. No bidder or purchaser shall have any remedy against the estate of the aforesaid Sarvathody Chennamma, or against the parties in O S. No 236/1951 Sub Court, Mangalore, or against the administrator for any of the representations made or to be made or for any act done or to be done in relation to the aforesaid sale, and the aforesaid pronotes and decrees.

6. The purchaser of any of the lots will be entitled to get from the administrator as representing the estate of the late Sarvathody Chennamma, an assignment in his favour in respect of lots purchased by him. All the expenses of such documents, i. e stamp fee, registration fee, document writing fee, postal charges, etc. if any, shall be borne by the purchaser himself.

7 From the date of such sale, and assignment, the purchaser shall be entitled to recover the amount due under the lot purchased by him or institute legal proceedings for the purpose.

(By order of the Court)

Mangalore,
11—4—1955.

K. Devadas Nayak, B. A. B. L.
Administrator in O. S. No. 236/1951,
Sub Court, Mangalore.

Schedule A.

Particulars of the pronote debts due to the estate of the late Sarvathody Chennamma to be sold by the Administrator.

Lot No.	Date of Pronote	Name and address of the executant	Principal amount Rs. As. Ps.	Upset Price Rs As. Ps.	Remarks
1	1—3—1950	Nettanige Hosamane Ramakrishna Kekunnaya s/o Keshav Kekunnaya Hosamane, Nettan ge Village, Kasaragod Taluk	500 0 0	75 0 0	The executant has paid Rs 30/- towards principal and interest on 23-2-1953 and has endorsed the said payment on the back of the pronote under his signature. The balance Principal and interest is due.
2	17—12—1950	Iswaramangel Andunhi Beary, s/o Pera Mammade Beary, Iswaramangal, Mudnoor Village, Puttur Taluk	300 0 0	75 0 0	Principal and interest is due.
3	27—1—1951	P Hasanare Beary son of Palangodu Beary Kunhi Beary. Pallangodu, Adhur Village No 1, Kasaragod Taluk	600 0 0	125 0 0	Principal and interest is due.
4	14—2-1951	N. Kunhi Kanna Maniyani s/o Pilipude Mahalinga alias Appayya Maniyani, Nidiyadka Nettanige Village, Kasaragod Taluk ...	1200 0 0	300 0 0	Principal and interest is due.

N. B. The claims under the aforesaid pronotes do not appear to be time-barred, in view of the fact that the Madras Ordinance, 1953 and the Madras Act V of 1954 were in force till 28—2—1955 and the Madras Act I of 1955 is now in force. The claims under Lot No. 1 is also not time-barred by reason of the endorsement of payment dated 23—2—1953.

(Continued to the next page)

Schedule B

Particulars of the decree-debts due to the estate of the late Sarvathody Chennamma, to be sold by the Administrator.

Lot No.	Date of Decree	Name and address of Plaintiff	Name and address of the Defendant	Number of the suit in the Court of the District Munsif of Puttur	Amount decreed Rs. As. Ps.	Upset Price Rs. As. Ps.
1	28-11-1952	Sri M. N. Chouta, receiver in O. S. 236/51 Sub Court, Mangalore.	Pakrunhi Beary, s/o Moidy Kutty Beary, Adhur Post	S. C. S. No. 268/52	166 12 8 interest & costs	55 0 0
2	17-12-1952	do	Abdul Aziz Beary, s/o Zinnaddin Beary, Adhur Post	" 269/52	116 0 0 interest & costs	35 0 0
3	29-9-1952	do	Moose Beary, s/o Abdul Kadri Beary, Adhur Post	" 218/52	65 9 3 interest & costs	20 0 0
4	29-6-1953	do	Ramanna Gowda, s/o Choma Gowda, Adhur Post	" 107/53	171 2 0 interest & costs	55 0 0
5	14-4-1953	do	Hammad Kunhi Beary, s/o Moidu Kunhi Beary, Adhur	" 41/53	188 1 8 interest & costs	65 0 0
6	30-1-1953	do	Pakira Belchappada, n/o Rama Kunhi Belchappada	" 265/52	121 8 0 interest & costs	40 0 0
7	1-4-1953	do	Iswara Ballyaya, s/o Shambhu Ballyaya, Adhur Post	" 44/53	116 6 9 interest & costs	35 0 0
8	5-2-1953	do	Veeroji Rao, s/o Kaloji Rao, Adhur Post	" 10/53	121 3 0 interest & costs	40 0 0
9	11-6-1953	do	Maila Naik, s/o Krishna Naik, Adhur Post	" 77/53	214 11 0 interest & costs	70 0 0
10	17-6-1953	do	Subbakke Hengsu, n/o Santhappa Bunta, Adhur Post	" 97/53	210 4 0 interest & costs	70 0 0
11	17-6-1953	do	Kunha Naik, s/o Teelu Naik, Adhur Post	" 96/53	210 6 0 interest & costs	70 0 0
12	25-6-1953	do	Abdul Beary, s/o Badava Beary, Adhur Post	" 103/53	52 0 0 interest & costs	15 0 0
13	25-6-1953	do	Hibrayine Beary, s/o Seedi Beary, Adhur Post	" 104/53	183 10 0 interest & costs	60 0 0
14	24-6-1953	do	Muthappa Rai, n/o Kunhanna Banta, Adhur Post	" 98/53	203 8 0 interest & costs	70 0 0
15	24-6-1953	do	1. Nandappa Rai, s/o Chomu Hengsu. 2. Santhappa Rai, s/o Deyakku, Adhur Post	" 99/53	234 4 0 interest & costs	75 0 0
16	16-7-1953	do	Abdul Rahiman Beary, s/o Moidu Kunhi Beary, Adhur Post	" 146/53	69 13 4 interest & costs	25 0 0
17	29-7-1953	do	Annu Naik, s/o Muthu Naik, Adhur Post	" 100/53	93 7 0 interest & costs	35 0 0
18	3-8-1953	do	Subba, n/o Subba Ganiga, Adhur Post	" 170/53	174 10 0 interest & costs	60 0 0
19	3-8-1953	do	Narayana Rai, n/o Pakirappa Rai, Adhur Post	" 169/53	58 4 0 interest & costs	20 0 0
20	5-8-1953	do	1. Manhamma Bhata, s/o Mahalinga Bhata 2. Rama, s/o of No. (1), Adhur Post	" 102/53	198 4 0 interest & costs	65 0 0
21	29-8-1953	do	1. Beeraine Beary 2. Mammunhi Beary, Adhur Post	" 101/53	290 8 0 interest & costs	100 0 0
22	26-9-1953	do	1. Santhappa Rai 2. Pammu Hengsu, Adhur Post	" 105/53	167 6 0 interest & costs	55 0 0
23	30-9-1953	do	Poovappa Rai, n/o Mahalinga Shetty, Adhur Post	" 218/53	233 0 0 interest & costs	75 0 0
24	20-10-1953	do	1. Appu Hengsu 2. Subbanna Rai, Adhur Post	" 228/53	116 7 3 interest & costs	35 0 0
25	21-10-1953	do	Andunhi Beary, s/o Abbas Beary. Adhur Post	" 213/53	161 15 2 interest & costs	55 0 0
26	25-9-1953	do	1. Shivanna Kalluraya 2. Gopalakrishna Kalluraya 3. Venkatachalia Kalluraya 4. Iswara Kalluraya, Adhur Post	" 214/53	232 13 0 interest & costs	75 0 0
27	30-11-1953	do	1. Mahalinga Maniyani 2. Kunhi Maniyani, Adhur Post	" 229/53	203 14 0 interest & costs	65 0 0
28	25-9-1953	do	Thyampanna Rai, n/o Batyappa Rai, Adhur Post	" 212/53	86 10 0 interest & costs	25 0 0
29	30-9-1953	do	Ganesh Rai, n/o Sankappa Rai, Puttur Post	" 172/53	233 0 0 interest & costs	75 0 0
30	26-9-1953	do	Kunhanna Rai, n/o Koragappa Rai, Adhur Post	" 217/53	75 13 0 interest & costs	25 0 0
31	8-10-1953	do	Thimma Naik, s/o Kunha Naik, Adhur Post	" 171/53	226 12 0 interest & costs	75 0 0
32	26-9-1953	do	1. Santhappa Rai 2. Pammu Hengsu, Adhur Post	" 106/53	283 12 0 interest & costs	100 0 0
33	27-10-1953	do	Abdulla Beary, s/o Mahammad Beary, Adhur post	" 216/53	23 2 0 interest & costs	5 0 0
34	23-7-1953	do	1. Narayan Rai 2. Muthappa Rai, Adhur Post	O. S. No. 242/54	640 0 0 interest & costs	200 0 0
35	do	do	Pakirappa Rai, n/o Arai Bunta, Adhur Post	" 126/53	378 10 0 interest & costs	125 0 0
36	do	do	Ramayya Rai, n/o Guddappa Rai, Adhur Post	" 128/53	587 8 0 interest & costs	200 0 0
37	7-7-1953	do	Thimmappa Rai, grand nephew of Annoji alias Thimmappa Bunta, Adhur Post	" 168/53	381 8 9 interest & costs	125 0 0
38	do	do	Kunhanna Rai, n/o Koragappa Rai, Adhur Post	" 170/53	487 4 7 interest & costs	175 0 0
39	29-6-1953	do	Pergade Bunta, n/o Subbanna Bunta, Adhur Post	" 166/53	381 1 10 interest & costs	125 0 0
40	do	do	Kunhanna Rai, n/o Koragappa Rai, Adhur Post	" 125/53	365 12 0 interest & costs	120 0 0
41	do	do	Kunhammade Beary, n/o Baduva Beary, Adhur Post	" 164/53	425 5 4 interest & costs	150 0 0
42	29-6-1953	do	Koragapppa Rai, n/o Ammu Banta, Adhur Post	" 163/53	877 2 0 interest & costs	300 0 0
43	14-8-1953	do	Thimmanna Rai, n/o Batiappa Rai, Adhur Post	" 127/53	475 2 0 interest & costs	155 0 0
44	29-7-1953	do	1. Mammunhi Beary 2. Abdul Rahiman Beary, Adhur Post	" 91/53	378 7 6 interest & costs	125 0 0

(Continued to the next page)

Lot No.	Date of Decree	Name and address of Plaintiff	Name and address of the Defendant	Number of the suit in the Court of the District Munsif of Puttur	Amount decreed Rs. As. Ps.	Upset Price Rs. As. Ps.
45	4-8-1953	Sri M. N. Chouta, Receiver in O. S. 236/51 Sub Court, Mangalore	1. Mammade Beary 2. Ibrayine Beary, Adhur Post	„ 240/53	426 2 0 interest & costs	150 0 0
46	28-8-1953	do	Thyampanna Rai, n/o Subbanna Banta, Adhur Post	„ 171/53	362 13 9 interest & costs	120 0 0
47	29-8-1953	do	1. Appayya Rai 2. Aithappa Rai, Cultivator, Adhur	„ 165/53	637 9 4 interest & costs	215 0 0
48	30-11-1953	do	Mutha Naik K s/o Mailla Naik, Adhur Post	„ 107/53	335 8 5 interest & costs	115 0 0
49	3-10-1953	do	Setiappa Rai, n/o Kunhanna Bunta, Adhur Post	„ 400/53	354 0 3 interest & costs	120 0 0
50	30-11-1953	do	Koragappa Rai, n/o Batiappa Rai, Adhur Post	„ 398/53	698 8 0 interest & costs	350 0 0
51	21-10-1953	do	1. Mammade Beary, s/o Badava Beary 2. Moidin Kunhi Beary) sons of 3 Hibrayine Beary) No 1 Adhur Post	„ 399/53	378 10 0 interest & costs	125 0 0
52	30-10-1953	do	1. Choma Poojary 2. Subbappu Poojary, n/o Pakira Poojary, Adhur Post	„ 169/53	780 0 0 interest & costs	255 0 0
53	29-8-1953	do	Ammanna Rai, n/o Beeranna Bunta, Adhur Post	„ 167/53	894 0 0 interest & costs	300 0 0
54	29-2-1952	Sri H. Dasanna Alva- receiver in O. S. 236/51 Sub Court, Mangalore.	Andhunni alias Abdulla Beary, s/o Mammade Beary, Adhur Post	S. C. S. No. 24/52	263 10 0 interest & costs	75 0 0
55	6-2-1952	do	Lingappa Rai, n/o Thyampanna Alva, Adhur Post	„ 8/52	116 8 0 interest & costs	40 0 0
56	7-6-1952	do	Pakira Belchappada, n/o Ramakunhi Belchappadu, Adhur Post	„ 23/52	74 15 0 interest & costs	15 0 0
57	11-6-1952	do	Pokkala Belchappada, n/o Ambadi Belchappada, Adhur Post	„ 90/52	97 0 6 interest & costs	35 0 0
58	29-9-1952	do	Mera Aitha, s/o Mera Koraga, Adhur Post	„ 110/52	73 12 0 interest & costs	25 0 0
59	do	do	Mera Guruva, s/o Mera Choma, Iswaramangal Post	„ 111/52	23 6 0 interest & costs	5 0 0
60	26-5-1952	do	Mammunhi Beary, s/o Abdul Beary, Adhur Post	„ 341/52	215 8 3 interest & costs	75 0 0
61	18-3-1952	do	Abbokore Beary, s/o Maikunhi Beary, Adhur Post	„ 28/52	354 8 0 interest & costs	120 0 0
62	30-1-1952	1. Chandrabhagi Amma d/o Sarvathody Chennamma, Puttur 2. Sri H. Dasanna Alva-receiver in O. S. 236/51 Sub Court, Mangalore.	1. Kotta Belchappada) Adhur 2. Padmavathi Amma) Post 3. Seethamma, Kadri Post 4. Saraswathi Amma Puttur Post 5. Balakrishna Rai, Adhur Post Nos. 2 to 5 are children of Sarvathody Chennamma,	„ 274/51	135 7 8 interest & costs	45 0 0
63	do	do	1. Venkatramana Sheregara, s/o Mahalinga Sheregara, Adhur 2 Padmavathiamma, Adhur Post 3. Seethamma, Kadri Post 4. Saraswathi Amma, Puttur Post 5. Balakrishna Rai, Adhur Post No. 2 to 5 are children of Sarvathody Chennamma	„ 273/51	173 14 9 interest & costs	50 0 0
64	do	do	1 Appayya Maniyani, grand nephew of Kunhappa Maniyani, Adhur 2 Padmavathiamma, Adhur Post 3 Seethamma, Kadri Post 4 Saraswathi Amma, Puttur 5 Balakrishna Rai, Adhur Post No. 2 to 5 are the children of Sarvathody Chennamma	„ 275/51	161 15 6 interest & costs	55 0 0
65	21-2-1952	do	1 Shama Bhatta, s/o Subraya Bhat, Adhur Post 2 Padmavathiamma, Adhur Post 3 Seethamma, Kadri Post 4 Saraswathi Amma, Puttur 5 Balakrishna Rai, Adhur Post Nos 2 to 5 are the children of Sarvathody Chennamma	„ 281/51	134 5 0 interest & costs	45 0 0
66	27-7-1951	Chandrabaghi Amma d/o Sarvathody Chennamma, Puttur	1 Abdul Kadri Beary, s/o Mammade Beary, Adhur Post 2 Padmavathi Amma, Adhur Post 3 Seethamma, Kadri Post 4 Saraswathi Amma, Puttur 5 Balakrishna Rai, Adhur Post Nos. 2 to 5 are children of Sarvathody Chennamma	O. S. No. 239/51	675 11 3 interest & costs	225 0 0
67	6-2-1953	1 Chandrabhagi Amma, d/o Sarvathody Chennamma, Puttur 2 Sri M. N. Chouta, receiver in O. S. 236/51 Sub Court, Mangalore	1 Koragappa Gowda, s/o Tukra Gowda Adhur Post 2 Muthappa Gowda, Adhur Post, s/o No. 1 3 Padmavathi Amma, Adhur Post 4 Seethamma, Kadri Post 5 Saraswathi Amma, Puttur 6 Balakrishna Rai, Adhur Post (No 3 to 6 are children of Sarvathody Chennamma)	„ 411/51	483 8 6 interest & costs	150 0 0
68	26-7-1949 (Sub court decree and 18-2-1954 High Court decree)	1 Sarvathody Chennamma (Since dead) 2 Padmavathi Bai 3 Chandrabaghi Amma 4 Seethamma 5 Saraswathi Bai 6 Balakrishna Rai	Cherakanda Ramachandrayya	„ 92/48 Sub Court, Mangalore, & A S [illegible] High Court, Madras	4898 0 0 interest & costs	2000 0 0

N. B. The claims under the lots No. 54, 55, 61 to 66 do not appear to have become time-barred, in view of the fact, that the Madras Ordinance 1953, and the Madras Act V of 1954 were in force till 28—2—1955 and the Madras Act I of 1955 is now in force

(By order of the Court)

K. Devadas Nayak, *B. A., B. L.*,
Administrator in O. S. 236/51 Sub Court, Mangalore

Mangalore, 11—4—1955.

(೩ನೇ ಪುಟದಿಂದ)

ನಿಲ್ಲುತ್ತೇನೆ" ಎಂಬ ಅವರ ಮಾತು ಅಮೇರಿಕದಲ್ಲಿ ಶಾಶ್ವತವಾಗಿ ಅವರು ವಾಸಿಸಿದುದರ ಗುಟ್ಟನ್ನು ಹೊರಗೆಡವುತ್ತದೆ.

ಸಹಪಾಠಿಯಾಗಿದ್ದ ಯುಗೋಸ್ಲಾವ್ ಮಹಿಳೆಯೊಬ್ಬಳನ್ನು ಐನ್‌ಸ್ಟೀನರು ಪ್ರೀತಿಸಿ ಮದುವೆಯಾಗಿ, ಇಬ್ಬರು ಗಂಡು ಮಕ್ಕಳನ್ನು ಪಡೆದರು. ಮುಂದೆ ಈ ದಾಂಪತ್ಯ ಮುಂದು ಹೋಗಲು ತಮ್ಮ ಸಂಬಂಧಿಕರಲ್ಲಿಯೇ ಒಬ್ಬಳನ್ನು ಮದುವೆಯಾದರು —ಈ ಹೆಂಡತಿ ಇಬ್ಬರು ಹೆಣ್ಣು ಮಕ್ಕಳನ್ನು ಹೆತ್ತಳು. ಆದರೆ ಐನ್‌ಸ್ಟೀನರು ಮಕ್ಕಳನ್ನು ಹೇಗೆ ನೋಡಿಕೊಳ್ಳುತ್ತಿದ್ದರೋ—ಆಶ್ಚರ್ಯದ ವಿಷಯ. ಹಾಸ್ಯದ ಪದಗಳನ್ನು ಬರೆಯುವುದರಲ್ಲಿ, ಪಿಯಾನೊ ಬಾರಿಸುವುದರಲ್ಲಿ, ಪ್ಯೊಲಿನನ್ನು ನುಡಿಸುವುದರಲ್ಲಿ, ಜಲಯಾನದಲ್ಲಿ ಸಮಯ ಕಳೆಯಲು ಅವರು ಸಂತೋಷದಿಂದ ಒಪ್ಪುತ್ತಿದ್ದರು. ಆದರೆ ಅವರ ತಲೆಗೆ ಹಿಡಿದ ಸಂಶೋಧನೆಯ ಚಿಂತೆ ಇವುಗಳಿಂದಲೂ ಮಕ್ಕಳ ಸಾಮಿಪ್ಯದಿಂದಲೂ ದೂರಾಗುತ್ತಿರಲಿಲ್ಲವೆಂದೇ ಜನರ ಅಂಬೋಣ. ಅವರಿಗೆ ಸಂಶೋಧನೆಗಳನ್ನು ನಡೆಸಲು, ಜಗತ್ತಿನ ಸೂಕ್ಷ್ಮ ವ್ಯಾಪಾರಗಳನ್ನು ನಿರೀಕ್ಷಿಸಲು, ದೊಡ್ಡ ಪ್ರಯೋಗಾಲಯವೇನೂ ಬೇಕಿರಲಿಲ್ಲ. ಅವರ ಹೆಂಡತಿಯ ಮಾತಿನಲ್ಲಿ "ದೂರದರ್ಶಕ ಯಂತ್ರದಿಂದ ಜಗತ್ತನ್ನು ನೋಡುವ ನಿಮಗೂ ನನ್ನ ಗಂಡನಿಗೂ ಎಷ್ಟು ವ್ಯತ್ಯಾಸ— ನನ್ನ ಗಂಡ ಮನೆಯಲ್ಲಿ ಹರಿದ ಲಕೋಟೆ, ಮತ್ತು ಹಾಳು ಕಾಗದಗಳ ಮೇಲೆಯೇ ಜಗತ್ತಿನ ಚಿತ್ರ ಬರೆದು, ಅದರ ಭವಿಷ್ಯವನ್ನು ರೇಖಿಸಬಲ್ಲರು!"

ಜಗತ್ತಿನ ವ್ಯಾಪಾರವನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದ ಐನ್‌ಸ್ಟೀನರು ೧೯೩೯ನೇ ಆಗೋಸ್ತಿನಲ್ಲಿ ಅಧ್ಯಕ್ಷ ರೂಜ್‌ವೆಲ್ಟರಿಗೆ ಒಂದು ಪತ್ರ ಬರೆದು ತಾನು ಪ್ರತಿಪಾದಿಸಿದ ಮೂಲ ಸಿದ್ಧಾಂತದ ಬಲದಿಂದ ಜರ್ಮನರು ಅಣು ಬಾಂಬನ್ನು ತಯಾರಿಸುವುದು ನಿಶ್ಚಯ ಎಂಬ ಸೂಚನೆಯನ್ನಿತ್ತರು. ಇದು ಅಮೇರಿಕವು ಯುದ್ಧ ಕಾಲದ ಶತ್ರು ನಾಶಕ್ಕೋಸ್ಕರ ಅಣು ಬಾಂಬನ್ನು ತಯಾರಿಸುವುದಕ್ಕೆ ನೆರವಾಯಿತು. ಅಣುಶಕ್ತಿಯನ್ನು ವಿಧ್ವಂಸಕ ಕೃತ್ಯಗಳಿಗೆ ಉಪಯೋಗಿಸುವುದನ್ನು ಎಳ್ಳಷ್ಟು ಮಾತ್ರಕ್ಕೂ ಮೆಚ್ಚದ ಈ ವಿಜ್ಞಾನಿಗೆ ತನ್ನ ಸೂಚನೆ ಅಪಾಯಕಾರಿಯಾದ ಪರಿಣಾಮವನ್ನುಂಟು ಮಾಡಿದುದನ್ನು ಕಂಡು ತುಂಬ ಸಂತಾಪವಾಯಿತು. ಜಗತ್ತಿನಲ್ಲಿ ಪ್ರಳಯಕಾರಿಯಾದ ಅಸ್ತ್ರಗಳ ಉತ್ಪಾದನೆಯಾಗುವುದಕ್ಕೆ ತಾನೇ ಕಾರಣಭೂತನಾದೆನಲ್ಲ ಎಂದವರು ಪರಿತಪಿಸಿದ ಗಳಿಗೆಗಳು ಅನೇಕ. ತನ್ನ ಅನ್ವೇಷಣೆ ಅನರ್ಥ ಪರಂಪರೆಗಳನ್ನು ತಂದೊಡ್ಡುವುದು ನಿಶ್ಚಯವೆಂದು ಹೊಳೆದಾಗ ಅವರು ಮಾನವತೆಯ ಕೈವಾರಿಯಾಗಿಯೂ ಶಾಂತಿಯ ಪ್ರವಾದಿಯಾಗಿಯೂ ಅಣುಶಸ್ತ್ರಗಳ ಉತ್ಪಾದನೆಯನ್ನು ಖಂಡಿಸಿದರು. ನೆಹರುಗಳಿಗೆ ಮೊನ್ನೆ ತಾನೆ ಅವರು ಬರೆದಿದ್ದೊಂದು ಕಾಗದದಲ್ಲಿ ಲೋಕ ಶಾಂತಿಗೆ ಭಾರತ ಕೈಗೊಂಡ ಪ್ರಯತ್ನವನ್ನು ಪ್ರಶಂಸಿಸಿದ್ದರಲ್ಲದೆ, ಅಣು ಶಕ್ತಿಯ ಗಂಡಾಂತರದಿಂದ ಜಗತ್ತನ್ನು ಉಳಿಸಲು ರಾಜಕೀಯ ಮಟ್ಟದಲ್ಲಿ ಹೆಣಗಬೇಕೆಂದೂ ವಿನಂತಿಸಿದ್ದರು. ಅವರೊಡನೆ ಒಮ್ಮೆ ಈ ಪ್ರಶ್ನೆ ಕೇಳಲ್ಪಟ್ಟಿತು— "ಪ್ರಥಮ ಮಹಾ ಯುದ್ಧದಲ್ಲಿ ವಿಷವಾಯು ಪ್ರಯೋಗವಾಯಿತು; ದ್ವಿತೀಯ ಮಹಾ ಯುದ್ಧದಲ್ಲಿ ಅಣು ಬಾಂಬು ಒಗೆಯಲ್ಪಟ್ಟಿತು; ತೃತೀಯ ಮಹಾ ಯುದ್ಧದಲ್ಲಿ ಜಲಜನಕ ಬಾಂಬಿನ ಪ್ರಯೋಗವಾಗುವುದು ನಿಶ್ಚಯ. ಅನಂತರದ ಯುದ್ಧದಲ್ಲಿ ಏನಾದೀತು?" ಐನ್‌ಸ್ಟೀನರಿಂದ ಮಾರ್ಮಿಕವಾದ ಉತ್ತರ ಬಂತು-"ಬಿಲ್ಲು ಮತ್ತು ಬಾಣಗಳ ಪ್ರಯೋಗ". ತೃತೀಯ ಮಹಾ ಯುದ್ಧ ಮಾನವ ನಾಗರಿಕತೆಯ ವಿನಾಶವನ್ನೆ ತರುತ್ತದೆಂದೂ ಮುಂದೆ ಹೊಸ ಸೃಷ್ಟಿಯಾಗ ಬೇಕಾದೀತೆಂದೂ ಇವರ ಅರ್ಥ.

ಒಮ್ಮೆ ಅವರನ್ನು ಜೀವನದಲ್ಲಿ ಯಶಸ್ಸು ಸಂಪಾದಿಸುವ ರಹಸ್ಯವೇನೆಂದು ಕೇಳಲಾಯಿತು. "ಅದು ಬಹಳ ಸುಲಭ. A = X + Y + Z ಎಂಬ ಸೂತ್ರವನ್ನು ಅನುಸರಿಸಿದರೆ ಸರಿ. ಇಲ್ಲಿ A ಯಶಸ್ಸಿನ ಸಂಕೇತ; X ಎಂದರೆ ಕೆಲಸ, Y ಎಂದರೆ ಆಟ ಮತ್ತು Z ಎಂದರೆ ಮೌನ!" ಎಂದು ಐನ್‌ಸ್ಟೀನರು ಉತ್ತರಿಸಿದರು. ಹೀಗೆ ಹಾಸ್ಯದ ಹೊನಲು ಉಕ್ಕಿಬರುವ ಮಾತುಗಳನ್ನಾಡುತ್ತಿದ್ದಂತೆ ಅವರು ಗಂಭೀರ ವಾಕ್ಯಗಳನ್ನೂ ಮಾತಿನಲ್ಲಿ ಉಪಯೋಗಿಸುತ್ತಿದ್ದರು. ದೇವರ ವಿಷಯದಲ್ಲಿ ಅವರು ಸಂಕುಚಿತ ದೃಷ್ಟಿಯವರಂತೆ ನಡೆದುಕೊಳ್ಳುತ್ತಿರಲಿಲ್ಲ. "ಮಾನವನ ವ್ಯವಹಾರ ಮತ್ತು ಅದೃಷ್ಟದ ವಿಷಯದಲ್ಲಿ ಚಿಂತೆಯನ್ನುಂಟು ಮಾಡುವ ದೇವರನ್ನಲ್ಲ— ಎಲ್ಲ ಜನರಲ್ಲಿಯೂ ಸಮರಸಭಾವದಿಂದ ವ್ಯಕ್ತವಾಗುವ ದೇವರನ್ನು ನಾನು ನಂಬುತ್ತೇನೆ" ಎಂಬ ಅವರ ಮಾತು ಇದಕ್ಕೆ ನಿದರ್ಶನ. ಯಾರೋ ಅವರನ್ನು ಭೌತಿಕ ದೃಷ್ಟಿಯುಳ್ಳ ಲೌಕಿಕನೆಂದು ಟೀಕಿಸಿದಾಗ ಅವರು ಅದನ್ನು ಖಂಡಿಸಿದರು. "ನಿಜವಾದ ವಿಜ್ಞಾನ ಸುಂದರವಾದ ಭಾವನೆಗಳ ತರಂಗವನ್ನೆಬ್ಬಿಸುತ್ತದೆ. ವಿಶ್ವ ಕುಟುಂಬತ್ವದ ಅನುಭವವೇ ಉದಾತ್ತವಾದ ವೈಜ್ಞಾನಿಕ ಸಂಶೋಧನೆಯ ಬೆನ್ನೆಲುಬು. ನನ್ನ ಧರ್ಮವು ನಮ್ಮ ಸಾಮಾನ್ಯ ಬುದ್ಧಿಯು ಕಂಡುಕೊಳ್ಳುವ ಕೆಲವು ವಿವರಗಳಲ್ಲಿ ವ್ಯಕ್ತವಾದ ಪರಮ ಚೈತನ್ಯದ ಕೈವಾಡವನ್ನು ಕಂಡು ಮುಗ್ಧವಾಗಬೇಕೆಂದು ಬೋಧಿಸುತ್ತದೆ" — ಎಂಬ ಮಾತಿನಿಂದ ಅವರು ತಮ್ಮ ಹೃದಯವನ್ನು ತೆರೆದಿಟ್ಟರು.

"ಮಾನವತೆಯ ಹಿತಸಾಧನೆಯ ಉದ್ದೇಶವು ನಿಮ್ಮ ಸಮೀಕರಣ ಮತ್ತು ರೇಖಾಚಿತ್ರಗಳ ಗೊಂದಲದಲ್ಲಿ ಮರೆಯಾಗ ಕೂಡದು"-ಎಂದು ಸಹೋದ್ಯೋಗಿಗಳಿಗೆ ಉಪದೇಶಿಸಿದ್ದರೂ ಐನ್‌ಸ್ಟೀನರು ವಿನಯಕ್ಕೂ ದಾಕ್ಷಿಣ್ಯಕ್ಕೂ ಹೆಸರಾಗಿದ್ದರು. ಇದೇ ವಿನಯದ ಬಲದಿಂದ ಅವರು ಪ್ಯಾಲಿಸ್ತಾನದ ಅಧ್ಯಕ್ಷ ಸ್ಥಾನವನ್ನು ಸೌಮ್ಯ ಮಾತಿನಲ್ಲಿ ನಿರಾಕರಿಸಿದರು. ಮೂರ್ಖನೊಬ್ಬನು ತನ್ನನ್ನು ಮಾತಾಡಿಸ ಬಂದರೂ ಸಹ ಅವರು ಅವನ ಮನನೋಯಿಸುವಂತೆ ನಡೆದುಕೊಳ್ಳುತ್ತಿರಲಿಲ್ಲ – ತನಗೂ ಅವನಿಗೂ ಬುದ್ಧಿ ಶಕ್ತಿಯಲ್ಲಿರುವ ಅಂತರವನ್ನು ಅವರು ಗೊತ್ತಾಗಗೊಡುತ್ತಿರಲಿಲ್ಲ. ಅಷ್ಟರ ಮಟ್ಟಿನ ಮೃದು ಹೃದಯ ಅವರದು — ಒಮ್ಮೆ ಹೋಟೆಲೊಂದರಲ್ಲಿ ಅವರು ಕುಳಿತಾಗ, ಮಾಣಿ ತಿನಿಸಿನ ಪಟ್ಟಿ ಹಿಡಿದು ತಂದನಂತೆ—"ನೀವೇ ಓದಿಹೇಳಿ" ಎಂದು ಐನ್‌ಸ್ಟೀನರು ಹೇಳಿದಾಗ "ನನಗಿಲ್ಲಿ ಓದಲಿಕ್ಕೆ ಬರುತ್ತದೆ; ನಾನು ಸಹ ನಿಮ್ಮ ಹಾಗೆಯೇ ನಿರಕ್ಷರ ಕುಕ್ಷಿ" ಎಂದನಂತೆ ಮಾಣಿ! ಇದನ್ನು ಕೇಳಿಯೂ ಅವರು ಬೇಸರಿಸಲಿಲ್ಲ— ನಕ್ಕರು. ಈ ನಸುನಗು ಅವರ ಮರೆಕುಳಿತನಕ್ಕೂ ಮುದ್ರೆಯಾಗುತ್ತದೆ— ಒಮ್ಮೆ ಅವರಿಗೆ ತತ್ತಿ ಬೇಯಲು ಎಷ್ಟು ಸಮಯ ಹಿಡಿಯುತ್ತದೆಂದು ನೋಡುವ ಮನಸ್ಸಾಯಿತು. ಗೆಳೆಯನೊಬ್ಬ ಹೊರಗೆ ಇವರಿಗಾಗಿ ಕಾದು ಕಾದು, ಅಡುಗೆ ಮನೆಯನ್ನೆ ಪ್ರವೇಶಿಸಿದನಂತೆ-ಆಗ ನೋಡುವುದೇನು? ಐನ್‌ಸ್ಟೀನರು ತತ್ತಿಯನ್ನು ಕೈಯಲ್ಲಿ ಹಿಡಿದುಕೊಂಡು ನೋಡುತ್ತಿದ್ದರು; ಅಕ್ಷರಬೇಕಿದ್ದ ಗಡಿಯಾರ ಒಲೆಯ ಮೇಲಿಟ್ಟಿದ್ದ ನೀರಿನಪಾತ್ರೆಯಲ್ಲಿ ಬೇಯುತ್ತಿದ್ದಿತು! ಅರುವತ್ತು ದಾಟಿದ ಬಳಿಕ ಉಂಟಾಗುವ ಅರೆಮರುಳುತನ ಇದರ ಕಾರಣವಲ್ಲ-ಗಾಢವಾದ ಮನನ, ಧ್ಯಾನಗಳಿಂದಲೇ ಹೀಗಾಯಿತು. ಅವರ ನರೆತ ಕೂದಲ ರಾಶಿ, ಆಳವಾದ ಕಣ್ಣುಗಳು, ಮೂಗಿನ ಮೇಲೆ ಇಳಿದ-ನಿಂತ ಕನ್ನಡಕ, ಕೈಯಲ್ಲಿ ಹಿಡಿದುಕೊಂಡ ಪೈಪು— ಇವುಗಳ ನೆನಪು ನಮ್ಮ ಹಾಗು ಮುಂದಿನ ಅನೇಕ ಪೀಳಿಗೆಯ ಜನರ ದೃಷ್ಟಿಯಲ್ಲಿ ಐನ್ ಸ್ಟೀನರನ್ನು ಅಮರರಾಗಿ ಮಾಡದಿರದು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಕುಲವಿಲ್ಲದ ಹೆಣ್ಣು

(ಸರಸ ಸಾಮಾಜಿಕ ಕಾದಂಬರಿ)

ಶ್ರೀ ಕೊಡವಟಿಗಂಟಿ ಕುಟುಂಬ ರಾವ್, ಎಂ. ಎಸ್. ಸಿ.
ಇವರ ಕುಲಂಲೇನಿ ಮನಿಷಿ' ತೆಲುಗು ಕಾದಂಬರಿಯ ಅನುಕರಣ.

ಬರೆದವರು: ಪಿ. ವೆಂಕೋಬಾಚಾರ್ಯ, ಬಿ. ಎ., ಬಿ. ಟಿ.

ದೇವದಾಸಿ ಕುಲದ ಉದ್ಧಾರವೇ ಮುಖ್ಯ ಕಥಾವಸ್ತು.
ಕುಸುಮಳು ವೇಶ್ಯಾ ಪುತ್ರಿಯಾದರೂ ಅವಳು ವೇಶ್ಯೆಯಲ್ಲ!
ಅವಳ ಕಥೆ ಹೇಗೆ ಸಾಗಿದೆ ಎಂದು ಓದಿಯೇ ತಿಳಿಯಿರಿ

ದಪ್ಪ ಪುಸ್ತಕ. ಬೆಲೆ 2-0-0

ದೊರಕುವ ಸ್ಥಳಗಳು -1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ. ಕ.

(೩ನೇ ಪುಟದಿಂದ)

ಒಂದು ಮಂಗದ ವೃಕ್ಕದಿಂದ ದೊರಕುವ ದ್ರಾಕಿನ ಔಷಧಿಯು ೨೦೦೦ ಜನರಿಗೆ ಮೂರೂ ಘಟ್ಟಗಳ ಪೂರ್ಣ ಪ್ರಯೋಗಕ್ಕೆ ಸಾಕಾಗುವಷ್ಟಿರುತ್ತದೆ. ಅಮೇರಿಕದ ಈ ಪ್ರಯೋಗ ಯಶಸ್ವಿಯಾಗುವುದಕ್ಕೆ ಭಾರತದಿಂದ ಮಂಗಗಳ ನಿರ್ಯಾತವಾಗಿರುವುದು ಒಂದು ಕಾರಣವಾಗಿದ್ದರೂ ಸಹ— ನಿಜವಾಗಿ ಅದರ ಶ್ರೇಯಸ್ಸು, ರಾಷ್ಟ್ರೀಯ ಸಂಸ್ಥೆಯೊಂದನ್ನು ೧೭ ವರ್ಷಗಳ ಹಿಂದೆ ಸ್ಥಾಪಿಸಿದ ಅಧ್ಯಕ್ಷ ರೂಜ್‌ವೆಲ್ಟರಿಗೂ ಈ ಸಂಸ್ಥೆಯ ಪ್ರಯೋಗಗಳಿಗಾಗಿ ೬೬ಕೋಟಿ ಡಾಲರುಗಳ ವೆಚ್ಚವನ್ನು ಸಂತೋಷದಿಂದ ಒದಗಿಸಿಕೊಟ್ಟ ಸಾರ್ವಜನಿಕರಿಗೂ ಸಲ್ಲುತ್ತದೆ. ಅಧ್ಯಕ್ಷ ರೂಜ್‌ವೆಲ್ಟರು ಸ್ವತಃ ಈ ರೋಗದಿಂದ ನರಳಿ, ಆ ಜೀವನಪರ್ಯಂತ ಗಾಲಿಯುಳ್ಳ ಕುರ್ಚಿಯಲ್ಲಿ ಚಲಿಸಬೇಕಾಯಿತು. ಪಾಕಿಸ್ಥಾನದ ಗವರ್ನರ ಜನರಲರಾದ ಗುಲಾಂಮುಹಮ್ಮದರು ಮೊನ್ನೆ ಪ್ರಜಾರಾಜ್ಯದಿನಕ್ಕೆಂದು ದೆಹಲಿಗೆ ಬಂದಿದ್ದಾಗ ಈ ರೋಗದಿಂದ ಯಾತನೆ ಪಡುತ್ತಿದ್ದರು. ಆದರೆ ಅನೇಕ ಸಂದರ್ಭಗಳಲ್ಲಿ ರೋಗದಿಂದ ಗುಣಮುಖರಾದ ಜನರೂ ನೋಡಸಿಗುತ್ತಾರೆ - ಉದಾಹರಣೆಗಾಗಿ ಈಗ ಬೆಟ್ಟವನ್ನು ಹತ್ತುವ, ಸ್ಕೈಯಿಂಗಿನಲ್ಲಿ ಸಂತೋಷ ಅನುಭವಿಸುವ ಅಮೇರಿಕದ ಸುಪ್ರೀಂ ಕೋರ್ಟಿನ ನ್ಯಾಯಾಧೀಶ ಡೊಗ್ಲಾಸರನ್ನು ತೋರಿಸಬಹುದು.

Edited, Printed & Published By K. H. Shetty at the Navayuga Press, Udipi, S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪
VOL. 34

ಉಡುಪಿ, 5—5—1955

ಸಂಚಿಕೆ ೩೫
NO. 35

ನಗೆಹನಿ

ಅವರು ರಸ್ತೆಯನ್ನು ದುರಸ್ತಿ ಮಾಡುವ ಕೆಲಸದಲ್ಲಿ ತಲ್ಲೀನರಾಗಿದ್ದರು. ಮಾರ್ಗದಲ್ಲಿ ಕಂಡು ಬಂದ ಹೊಂಡಗಳನ್ನೆಲ್ಲ ಮುಚ್ಚಲು ಹತ್ತಿರದ ಸ್ಥಳದಲ್ಲಿ ಕಲ್ಲು ಶೇಖರಿಸಿದ್ದರು, ಮತ್ತು ಮಣ್ಣನ್ನೂ ಅಗೆದಿದ್ದರು

ಹೊಂಡಗಳನ್ನೆಲ್ಲ ಮುಚ್ಚಿದ ಬಳಿಕವೂ ಕಲ್ಲು ಮತ್ತು ಮಣ್ಣಿನ ದೊಡ್ಡ ರಾಶಿ ಉಳಿದದನ್ನು ಕಂಡು ಅವರೆಲ್ಲೊಬ್ಬ ಮುಖ್ಯಸ್ಥನನ್ನು ಕುರಿತು "ಇದನ್ನೆಲ್ಲ ಏನು ಮಾಡೋಣ?" ಎಂದು ಕೇಳಿದ ಅದಕ್ಕಾತ "ನಿಮಗೆ ಏನೇನೂ ತಲೆಯಿಲ್ಲ—ಇನ್ನೊಂದು ಹೊಂಡ ತೋಡಿ ಅದನ್ನು ಈ ಕಲ್ಲು-ಮಣ್ಣುಗಳಿಂದ ಮುಚ್ಚಿದರಾಯಿತು" ಎಂದು ಸಲಹೆ ನೀಡಿದ!

ತರುಣ ಸುಧಾರಕರು

ಭಾರತದ ಅನೇಕ ಕಾಲೇಜು ಮತ್ತು ಹೈಸ್ಕೂಲುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಮಟ್ಟಿಗೆ ಸೆಕೆ ಗಾಲದ ದೀರ್ಘ ರಜೆಯು ದೊಡ್ಡ ವರದಾನ—ಏಕೆಂದರೆ, ಅವರು ತಮ್ಮ ದಪ್ಪ ದಪ್ಪ ಪುಸ್ತಕಗಳ ಪ್ರಪಂಚದಿಂದ ಹೊರಗಿನದನ್ನು ಕುರಿತು ಆಲೋಚಿಸಲು ರಜೆಯು ಸಮಯ ಅವಕಾಶ ಮಾಡಿಕೊಡುತ್ತದೆ ಅವರು ಮನನ, ಧ್ಯಾನಗಳ ಕಟ್ಟು ನಿಟ್ಟಿನಿಂದ ಮುಕ್ತಿ ಪಡೆದು, ಸುಖಾನುಭವವನ್ನು ತರಬಲ್ಲ ಸಂಗತಿಗಳಲ್ಲಿ ಮನಸ್ಸನ್ನು ತೇಲಿ ಬಿಡಬಲ್ಲರು; ಪ್ರವಾಸಗಳನ್ನು ಕೈಗೊಂಡು ಮನಸ್ಸಿಗೆ ಸಂತೋಷ ತಂದುಕೊಳ್ಳಬಲ್ಲರು ಹೀಗೆ ಸುಖವಾಗಿ ಸಕೆಗಾಲದ ರಜೆಯನ್ನು ದೂಡುವುದರಿಂದ, ಮುಂದಿನ ವರ್ಷದ ಜಂಜಡವನ್ನು ಎದುರಿಸಲು ಮನಸ್ಸು ಸಿದ್ಧಗೊಂಡು ನಿಲ್ಲಲು ಸಾಧ್ಯವಾಗುತ್ತದೆ ಎಂಬುದು ನಿಜ. ಆದರೆ, ಈಚೆಗೆ ಕೆಲವು ದಿನಗಳಲ್ಲಿ ಭಾರತದ ಬೇರೆ ಬೇರೆ ಕಡೆಗಳಿಂದ ಬರುತ್ತಿರುವ ವರದಿಗಳು ಕುತೂಹಲದಾಯಕವಾದ ಒಂದು ವಿಷಯವನ್ನು ಹೊರಗೆಡಹುತ್ತವೆ —ವಿದ್ಯಾರ್ಥಿಗಳು ಸುಖಾನುಭವದ ಲಾಲಸೆಯನ್ನು ತೊರೆದು ದೈಹಿಕ ಪರಿಶ್ರಮದ ದೀಕ್ಷೆ ಕೈಗೊಂಡು, ಗ್ರಾಮಾಭಿವೃದ್ಧಿಗೋಸ್ಕರ ಶಿಬಿರಗಳನ್ನು ಕಟ್ಟಿ, ನಡೆಸುತ್ತಿರುವ ವಿಷಯವೇ ಅದು.

ಮೊನ್ನೆ ಮುಸಿರಾಬಾದಿನಲ್ಲಿ ಒಂದು ಸಾವಿರ ವಿದ್ಯಾರ್ಥಿಗಳಿರುವ ಒಂದು ಶಿಬಿರವನ್ನು ಹೈದರಾಬಾದಿನ ಮುಖ್ಯ ಮಂತ್ರಿಗಳು ಉದ್ಘಾಟಿಸಿದರು. ಈ ವಿದ್ಯಾರ್ಥಿಗಳು ನಾಲ್ಕು ವಾರಗಳ ವರೆಗೆ ಈ ಶಿಬಿರದಲ್ಲಿದ್ದು, ಹಳ್ಳಿಗರೊಡನೆ ಬೆರೆತು, ಸೀರಾವರಿಗೆ ನೆರವಾಗುವಂತೆ ಕಾಲುವೆ ರಚಿಸುವ ಕಾರ್ಯದಲ್ಲಿ ಮಗ್ನರಾಗುವರೆಂದು ತಿಳಿದು ಬರುತ್ತದೆ. ಮದ್ರಾಸಿನ ವಿದ್ಯಾರ್ಥಿಗಳು ಸಂಘಟಿತರಾಗಿ ಹತ್ತಿರದ ಸ್ಥಳಗಳಿಗೆ ಹೋಗಿ, ಅಲ್ಲಿ ಮನೆಯನ್ನು ಸ್ವಚ್ಛವಾಗಿಡುವದು, ಮನೆಗೆ ಮಾಡು ಹೊದೆಯಿಸುವುದು ಮುಂತಾದ ಕೆಲಸಗಳಲ್ಲಿ ನೆರವಾಗುತ್ತಿರುವರೆಂದು ವರದಿಗಳು ಹೇಳುತ್ತವೆ. ನಮ್ಮ ಜಿಲ್ಲೆಯ ಕಾಲೇಜುಗಳ ವಿದ್ಯಾರ್ಥಿ ದಳವೊಂದು ಸಮಾಜ ವಿಕಾಸ ಯೋಜನೆಯ ಕ್ಷೇತ್ರದಲ್ಲಿ ದೈಹಿಕ ಪರಿಶ್ರಮದ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಿತೆಂಬ ವಿಷಯ ನಮಗೆ ಮರೆತು ಹೋಗಿಲ್ಲ. ಈ ವಿದ್ಯಾರ್ಥಿಗಳೆಲ್ಲ ತಾವು ಗಾಂಧೀಯುಗದಲ್ಲಿ ಹುಟ್ಟಿದವರೆಂಬುದನ್ನು ಸ್ಮರಿಸಿಕೊಂಡಿರುವುದು ಮತ್ತು ಈ ಯುಗದ ಸಂದೇಶಕ್ಕೆ ಕಿವಿಗೊಟ್ಟು ಸ್ವೇಚ್ಛೆಯಿಂದ ಸೇವಾಕಾರ್ಯಕ್ಕೆ ಧುಮುಕಿರುವುದು ಅಭಿನಂದನೀಯ, ಮತ್ತಿದು ಎಲ್ಲ ತರುಣ-ತರುಣಿಯರಿಗೂ ಅನುಕರಣೀಯವಾದ ವಿಷಯವೂ ಹೌದು ಓದಿಯೋದಿ ಬೇಸರಗೊಂಡವರ ಪಾಲಿಗೆ ಶಿಬಿರ ವಾಸದ ಚಟುವಟಿಕೆ ಮನಸ್ಸಿನಲ್ಲಿ ಲವಲವಿಕೆಯನ್ನು ನೆಲೆಗೊಳಿಸುವ, ಉತ್ಸಾಹವನ್ನು ಹುಟ್ಟಿಸುವ, ಚೈತನ್ಯವನ್ನು ತುಂಬುವ ಬದಲಾವಣೆಯಾಗಿ ಪರಿಣಮಿಸುತ್ತದೆ ಎಂಬುದು ನಿಶ್ಚಯ

ಶ್ರಮದಾನದಲ್ಲಿ ವಿದ್ಯಾರ್ಥಿಗಳ ಆಸಕ್ತಿಯನ್ನು ಅಭಿವೃದ್ಧಿಗೊಳಿಸುವುದು ಸೆಕೆಗಾಲದ ಶಿಬಿರಗಳ ಮುಖ್ಯೋದ್ದೇಶಗಳಲ್ಲಿ ಒಂದಾಗಿದೆ—ಹಾಗೆಯೇ ಸುಶಿಕ್ಷಿತ ಜನರು ಹಳ್ಳಿಗರಿಗೆ ಉನ್ನತ ಜೀವನ ಮಟ್ಟದ ಸೂತ್ರಗಳನ್ನು ತಿಳಿಸಿ ಹೇಳುವುದಕ್ಕೂ ಈ ಶಿಬಿರಗಳು ಅವಕಾಶ ಕಲ್ಪಿಸಿ ಕೊಡುತ್ತವೆ. ತಿಳಿಯದವರಿಗೆ ತಿಳಿದವರು ಹೇಳಿದರೆ ಮಾತ್ರ ಒಂದುವಿಷಯದ ಪ್ರಚಾರವಾದೀತು; ಪ್ರಚಾರದ ಪ್ರಭಾವದಿಂದ ಅದು ಆಚರಣೆಯಲ್ಲಿ ಇಳಿದೀತು. ಆದುದರಿಂದ ವಿದ್ಯಾರ್ಥಿಗಳು ಹಳ್ಳಿಗರಿಗೆ ಆರೋಗ್ಯ, ವಸತಿ ಆಹಾರ ಮುಂತಾದುವುಗಳ ಕುರಿತು ಆಧುನಿಕ ವಿಚಾರಗಳನ್ನು ಮನ ಮುಟ್ಟುವಂತೆ ವಿವರಿಸಲು ಈ ಅವಕಾಶವನ್ನು ಉಪಯೋಗಿಸಬಲ್ಲರು. ಆದರೆ ಹೀಗೆ ಮಾಡುವಾಗ, ಹಳ್ಳಿಗರಿಗಿಂತ ತಾವು ಶ್ರೇಷ್ಠರು, ಅಧಿಕಾರ ಬಲದಿಂದ ತಾವು ಅವರಿಗೆ ಉಪದೇಶ ಮಾಡುತ್ತಿದ್ದೇವೆ ಎಂಬ ಅಹಂಕಾರದ ಭಾವನೆಗೆ ವಿದ್ಯಾರ್ಥಿಗಳು ಎಡೆಕೊಡಲಾಗದು. ತಮಗಿಂತ ಭಿನ್ನರಾದವರೊಡನೆ ಹಳ್ಳಿಗರು ಹೊಂದಿಕೊಳ್ಳಲು ಬಯಸುವುದಿಲ್ಲ—ವಿದ್ಯಾರ್ಥಿಗಳು ಬೇರೆಯೇ ವರ್ಗದವರಂತೆ ನಡೆದುಕೊಂಡರೆ, ಅವರು ಎಷ್ಟೇ ಉತ್ಸಾಹವನ್ನು ತೋರಿಸಲಿ, ಹಳ್ಳಿಗರು "ಏನೋ ಹುಡುಗ-ಹುಡುಗಿಯರ ತಮಾಷೆ ನಡೆದಿದೆ" ಎಂಬ ಭಾವನೆಯಿಂದ ತೆಪ್ಪಗೆ ಉಳಿಯುತ್ತಾರೆ ವಿದ್ಯಾರ್ಥಿಗಳು ಏಕೆ ಬಂದರು, ಏನು ಮಾಡಿದರು, ಅದರಿಂದ ಹಳ್ಳಿಗೆ ದೊರೆಯುವ ಅಥವಾ ದೊರೆತ ಪ್ರಯೋಜನವೇನು, ಮುಂತಾದ ಯಾವುದೇ ನವಜಾಗೃತಿಯ ವಿಚಾರಗಳು ಹಳ್ಳಿಗರಿಗೆ ಹೊಳೆಯದೆ ಹೋಗಬಹುದು.

ಸೆಕೆಗಾಲದ ಈ ಶಿಬಿರಗಳು ಸಾರ್ಥಕವಾಗಬೇಕಾದರೆ, ಅವುಗಳು ಯೋಜನಾಬದ್ಧವಾದ ರೀತಿಯಲ್ಲಿ ಚಟುವಟಿಕೆಯನ್ನು ನಡೆಸಬೇಕು ವಿದ್ಯಾರ್ಥಿಗಳು ತಮ್ಮ ಪ್ರಾಮಾಣಿಕತೆಯಿಂದಲೂ ವಿನೋದ ಭಾವದಿಂದಲೂ ಹಳ್ಳಿಗರನ್ನು ತಮ್ಮೆಡೆಗೆ ಒಲಿಸಿಕೊಳ್ಳಲು ಸಮರ್ಥರಾಗಬೇಕು; ಹಳ್ಳಿಗರ ಅಭಿಮಾನಕ್ಕೆ ಧಕ್ಕೆ ಬಾರದಂತೆ

THE CANARA INDUSTRIAL & BANKING SYNDICATE LTD.
Estd: 1925 H. O. UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಅವಶ್ಯಕತೆ ಬೀಳುತ್ತದೆ ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಠೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಸಿಡಲು ನೀವು ಇಚ್ಛಿಸುವಿರಿ ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲಿಯೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. [illegible] ನಮ್ಮ ಬ್ಯಾಂಕು ಶೀಘ್ರ ಸೇವಾದೇಣಿ ಸೌಲಭ್ಯಗಳನ್ನು ಒದಗಿಸುವುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು [illegible] ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ನಡೆಸಿ [illegible]

ಚಲಾವಣೆ ಗಂಡವಾಳ ರೂ [illegible]

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ, ದ ಭಾರತ.

ಸಾಮಾನ್ಯವಾಗಿ ಮೂರು ನಾಲ್ಕು ವರ್ಷಗಳವರೆಗೆ ಕಾಲೇಜುಗಳಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ದೈಹಿಕ ಪರಿಶ್ರಮದಿಂದ ತಮ್ಮ ಕೈ ಕೆಸರು ಮಾಡಿಕೊಳ್ಳಲು ಇಚ್ಛಿಸುವುದಿಲ್ಲ ಆದರೆ ಉತ್ಸಾಹವನ್ನು ಬೆಚ್ಚಿಸಿಯೇ ಸ್ವತಂತ್ರ ಭಾರತದ ಸಾಮಾಜಿಕ ಪ್ರಗತಿಯನ್ನು ನಾವು ಸಾಧಿಸಬೇಕಾಗಿರುವುದರಿಂದ ಸುಶಿಕ್ಷಿತರನ್ನೊಳಗೊಂಡು ಪ್ರತಿಯೊಬ್ಬರೂ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ತೊಡಗಬೇಕೆಂಬುದು ಸ್ಪಷ್ಟ

—ಜಿ ಎಸ್. ಮೋಹನ್ಶೆಟ್ಟಿ.

ಅವರಿಗೆ ಸಧಾರಣೆಯ ರೀತಿಗಳನ್ನು ತಿಳಿಸಿ ಕೇಳಿ, ನೆರವಾಗಬೇಕು. ವೈದ್ಯಕೀಯ ವಿದ್ಯಾರ್ಥಿಗಳು ಹಳ್ಳಿಯ ಮಕ್ಕಳ ಆರೋಗ್ಯದ ವಿಷಯದಲ್ಲಿ ಆಸಕ್ತಿಯನ್ನು ವಹಿಸಬಹುದು, ಶ್ರಮದಾನದ ಉತ್ಸಾಹಿಗಳು, ಹಳ್ಳಿಗೆ ಬಾವಿಯನ್ನು ತೋಡಬಹುದು ಅಥವಾ ಕೊಳೆನೀರು ಹರಿದು ಹೋಗುವುದಕ್ಕೆ ಚರಂಡಿಯನ್ನು ಅಗೆಯಬಹುದು; ಬೇರೆ ಕೆಲವರು ಮನೆಗೆ ಹುಲ್ಲು ಹೊದೆಯಿಸುವುದರಲ್ಲಿ ನೆರವಾಗಬಹುದು—ಹೀಗೆ ಅನೇಕ ರೀತಿಯ ಚಟುವಟಿಕೆಗಳನ್ನು ನಡೆಸುವಾಗ, ಹಳ್ಳಿಗರು ತಮ್ಮೊಂದಿಗೆ ಬೆರೆತು ಕೆಲಸ ಮಾಡುವುದಕ್ಕೆ ಅವರು ಉತ್ತೇಜನೆ ಕೊಡಬೇಕು. ಅಲ್ಲದೆ, ಆ ಹಳ್ಳಿಯ ಜನರ ದೃಷ್ಟಿಯಿಂದ ಉಪಯುಕ್ತವಾದ ವಿಧಾಯಕ ಕಾರ್ಯವನ್ನೇ ಮೊದಲು ಕೈಗೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ತಾವು ಮಾಡಬೇಕೆಂದಿರುವ ಕೆಲಸದಲ್ಲಿ ನುರಿತವರಾಗಿರಲಿಕ್ಕಿಲ್ಲ, ಅವರಿಗೇನೇನೂ ವ್ಯಾವಹಾರಿಕ ಜ್ಞಾನ ಅಥವಾ ಅನುಭವವಿಲ್ಲ ಎಂಬ ದೂರಿಗೆ ಇಲ್ಲಿ ಎಡೆಯುಂಟು, ನಿಜ. ಉದಾಹರಣೆಗೆ ಮಾಡಿಗೆ ಹುಲ್ಲು ಹೊದೆಯಿಸುವುದಕ್ಕೆ ತುಸು ನೈಪುಣ್ಯಬೇಕು—ಆದರೆ, ಹಳ್ಳಿಯ ನಿಪುಣನೊಬ್ಬನನ್ನು ಮಾಡಿನ ಮೇಲೆ ಕುಳ್ಳಿರಿಸಿ, ವಿದ್ಯಾರ್ಥಿಗಳು ಕೆಳಗೆ ನಿಂತೇ ಹುಲ್ಲಿನ ಸೂಡಿಗಳನ್ನು ಮೇಲೆಸೆಯುವ ಕೆಲಸ ಮಾಡಬಲ್ಲರು. ಕಾಲುವೆ ಅಗೆಯುವುದು, ಮನೆ ಕಟ್ಟುವುದು ಮುಂತಾದ ವಿಷಯಗಳಲ್ಲಿ ತಜ್ಞರ ಸಲಹೆ ಅಗತ್ಯ, [illegible] ಮಾಡಲು ಸಾಧ್ಯವಾದ ಕೆಲಸವೂ [illegible] ತ್ತದೆ

[illegible] ವಿದ್ಯಾರ್ಥಿಗಳಲ್ಲಿ ಮತ್ತು ನಮ್ಮ [illegible] ಜನಾಂಗದಲ್ಲಿ ಮೂಡಿರುವ [illegible] ಮನೋಭಾವವನ್ನು [illegible] ಆಸಕ್ತಿ ಇರುವ ಪತ್ರಿಕೆಯವರ ಪರವಾಗಿ ಸ್ವಾಗತಿಸಲು

(೧೦ನೇ ಪುಟ ನೋಡಿರಿ)

ವಿಶ್ವ ಶಾಂತಿಯ ದಿಸೆಯಲ್ಲಿ

ರಾಷ್ಟ್ರಸಂಘದ ಸ್ಥಾಪನೆಯ ಹಿನ್ನೆಲೆ ಮತ್ತು ವಿಸ್ತಾರ

ಎಪ್ರೀಲಿನ ೨೫ನೇ ತಾರೀಕನ್ನು ಜಗತ್ತಿನ ಶಾಂತಿ ಪ್ರಿಯ ರಾಷ್ಟ್ರಗಳು ಬಹಳ ಆದರದಿಂದ ಕಾಣುತ್ತವೆ. ಏಕೆಂದರೆ, ದ್ವಿತೀಯ ಮಹಾಯುದ್ಧ ತೊಡಗುವುದಕ್ಕೆ ಕೆಲವು ವರ್ಷಗಳ ಪೂರ್ವದಲ್ಲಿಯೇ ಮೃತಾವಸ್ಥೆಯನ್ನು ಹೊಂದಿದ್ದ "ಜನಾಂಗ ಮಂಡಳ" (ಲೀಗ್ ಆಫ್ ನೇಶನ್ಸ್)ದ ಸ್ಥಾನದಲ್ಲಿ ಪುನಃಪ್ರತಿಕ್ಷೇಪಣೆಯಾದ ಸಂಯುಕ್ತ ರಾಷ್ಟ್ರ ಸಂಘ (ಯುನೈಟೆಡ್ ನೇಶನ್ಸ್ ಆರ್ಗಾನಿಜೇಶನ್)ದ ಅಸ್ತಿತ್ವಕ್ಕೆ ಕಾರಣ ಭೂತವಾದ, ಹತ್ತು ವರ್ಷಗಳ ಹಿಂದೆ ಸಾನ್ ಫ್ರಾನ್ಸಿಸ್ಕೊದಲ್ಲಿ ಜರಗಿದ, ಅಂತಾರಾಷ್ಟ್ರೀಯ ಪರಿಷತ್ತಿನ ನೆನಪನ್ನು ಈ ದಿನ ಮಾಡಿಕೊಡುತ್ತದೆ.

ಜನಾಂಗ ಮಂಡಳದ ಅವನತಿಯಿಂದ ಅಂತಾರಾಷ್ಟ್ರೀಯ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದು ಕೊಳ್ಳುವುದು ಕಷ್ಟವೆಂದು ಭಾವಿಸಿದ ಸ್ವತಂತ್ರ ಜನತೆಯ ಧುರೀಣರು ಸಂಯುಕ್ತ ರಾಷ್ಟ್ರಸಂಘದ ಕಲ್ಪನೆಯ ಪ್ರಥಮ ಘೋಷಣೆಯನ್ನು ಮಾಡಿದರು. ಆಗ ದ್ವಿತೀಯ ಮಹಾಯುದ್ಧ ತೊಡಗಿ ೨೨ ತಿಂಗಳಾಗಿದ್ದವು; ಅವ್ಯಾಹತವಾಗಿ ಜರ್ಮನಿಯೊಡನೆ ನಡೆಯುತ್ತಿದ್ದ ಯುದ್ಧದಲ್ಲಿ ಜಯ ಪಡೆಯುವ, ಮತ್ತು ಹಾಗೆ ವಿಜಯಿಗಳಾದ ಬಳಿಕ ವಿಶ್ವ ಶಾಂತಿಯನ್ನು ಕಾಯ್ದುಕೊಳ್ಳುವ ದೂರ ದೃಷ್ಟಿಯಿಂದ ಅವರು ಹೀಗೆ ಸಾರಿದರು:—

"ಚಿರಶಾಂತಿಗೆ ಸ್ವತಂತ್ರ ಜನತೆಯ ಹೃತ್ಪೂರ್ವಕ ಸಹಕಾರವೊಂದೇ ನಿಜವಾದ ಬುನಾದಿ. ಇದರಿಂದ ದುರಾಕ್ರಮಣದ ಭೀತಿ ತೊಲಗಿ ಸರ್ವರಿಗೂ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಲಭಿಸುವುದು. ಈ ಹಾದಿಯಲ್ಲಿ ನಾವೆಲ್ಲ ಇತರ ಸ್ವತಂತ್ರ ರಾಷ್ಟ್ರಗಳೊಂದಿಗೆ ಒಂದುಗೂಡಿ ಕೆಲಸ ಮಾಡುವುದು ನಮ್ಮ ಬಯಕೆ." ೧೯೪೧ನೇ ಜೂನ್ ೧೨ ನೇ ತಾರೀಕಿನ ಈ ನಿರ್ಣಯ ಜಾಗತಿಕ ಶಾಂತಿಯ ಸಂಕೇತವೆನಿಸಿತು.

ಮೂರು ತಿಂಗಳ ನಂತರ ಮಧ್ಯ ಅಟ್ಲಾಂಟಿಕ್ ಸಾಗರದಲ್ಲಿ ನಿಂತ ಒಂದು ಯುದ್ಧ ಹಡಗದಲ್ಲಿ ವಿಶ್ವ ವಿಖ್ಯಾತ ರಾಜಕಾರಣಿಗಳಿಬ್ಬರು ಈ ಹಾದಿಯಲ್ಲಿ ಮತ್ತೊಂದು ಹೆಜ್ಜೆಯನ್ನಿಟ್ಟರು. ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟ್ ಮತ್ತು ಬ್ರಿಟನಿನ ಪ್ರಧಾನಿ ಚರ್ಚಿಲ್ಲರು ಒಂದು ಸಂಯುಕ್ತ ಘೋಷಣೆಯನ್ನು ಹೊರಡಿಸಿದರು. ಅದೇ ಅಟ್ಲಾಂಟಿಕ್ ಒಪ್ಪಂದವೆಂಬ ಹೆಸರು ಪಡೆಯಿತು. ಅದು "ಎರಡು ರಾಷ್ಟ್ರಗಳ ನಡುವಿನ ಕೌಲೂ ಅಲ್ಲ; ಶಾಂತಿಯ ಗುರಿಪಡೆದ ಅಂತಿಮ ಮಾತೂ ಅಲ್ಲ, ಸಂಬಂಧಪಟ್ಟ ಎರಡು ರಾಷ್ಟ್ರಗಳ ರಾಷ್ಟ್ರನೀತಿಯ ಕೆಲವು ಸಮತತ್ವಗಳ ನಿರ್ಧಾರ ಸೂತ್ರ" ಎಂಬುದಾಗಿ ಹೇಳಲ್ಪಡುತ್ತಿದ್ದರೂ ಅದರಲ್ಲಿ ಅಡಕವಾದ ಎಂಟು ಅಂಶಗಳಲ್ಲಿ ೨ ನೇರವಾಗಿ ವಿಶ್ವಸಂಸ್ಥೆಯನ್ನೇ ಕುರಿತದ್ದಾಗಿದ್ದುವು. ಒಪ್ಪಂದದ ಎಂಟನೇ ಅನುಬಂಧವನ್ನು ನೋಡಿದರೆ ಈ ಮಾತು ಮನವರಿಕೆಯಾಗುತ್ತದೆ.

"ವಿಶ್ವದ ಎಲ್ಲ ರಾಷ್ಟ್ರಗಳೂ ನೈಜ ಹಾಗು ಆಧ್ಯಾತ್ಮಿಕ ಕಾರಣಗಳಿಗಾಗಿ ಬಲ ಪ್ರಯೋಗವನ್ನು ನಿರ್ಮೂಲಗೊಳಿಸುವ ಅಭಿಪ್ರಾಯವನ್ನು ಹೊಂದಿವೆ. ಭೂ, ಜಲ ಅಥವಾ ವಾಯು ಯಾವುದೇ ಯುದ್ಧ ಭೀತಿಯಿದ್ದರೆ ಎಂದಿಗೂ ಶಾಂತಿ ನೆಲೆಗೊಳ್ಳಲಾರದು. ಸಾರ್ವಜನಿಕ ಭದ್ರತೆಗಾಗಿ ವಿಸ್ತೃತವಾದ ಮತ್ತು ಶಾಶ್ವತವಾದ ವಿಧಾನವನ್ನು ಕಂಡು ಹಿಡಿಯಬೇಕು. ಅದಕ್ಕಾಗಿ ಸಂಸ್ಥೆಯೊಂದನ್ನು ಸ್ಥಾಪಿಸಬೇಕು. ಅದು ವರೆಗೂ ಆಕ್ರಮಣ ಶೀಲ ರಾಷ್ಟ್ರಗಳ ನಿಶ್ಶಸ್ತ್ರೀಕರಣವಾಗಬೇಕೆಂದು ನಾವು ಅಭಿಪ್ರಾಯ ಪಡುತ್ತೇವೆ" ಇಬ್ಬರು ಪ್ರಭೃತಿಗಳ ನಿಶ್ಚಯವನ್ನು ಈ ಅನುಬಂಧ ವಿವರಿಸುತ್ತದೆ. ಅಟ್ಲಾಂಟಿಕ್ ಒಪ್ಪಂದಕ್ಕೆ ೧೯೪೧ರ ಸೆಪ್ಟೆಂಬರ್ ೧೪ ರಂದು ಸೋವಿಯೆಟ್ ರಶಿಯ ಮತ್ತು ಆಕ್ರಮಣಕ್ಕೊಳಗಾಗಿದ್ದ ಇತರ ದೇಶಗಳ ಪರವಾಗಿಯೂ ಸಹಿ ಹಾಕಲಾಯಿತು.

ಇದಾದ ಮೂರು ತಿಂಗಳಲ್ಲಿ ಮತ್ತೊಂದು ಘೋಷಣೆಯು ಹೊರಟಿತು. ಅದೇ ವಿಶ್ವಸಂಸ್ಥೆಯ ಘೋಷಣೆ. ಅದಕ್ಕೆ ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟ್‌ರು, ಬ್ರಿಟನಿನ ಪ್ರಧಾನಿ ಚರ್ಚಿಲ್ಲರು, ರಷ್ಯಾದ ಮಾಕ್ಸಿಂ ಲಿಟ್ವಿನೋವ್, ಚೀಣಾದ ಟಿ. ವಿ. ಸೂಂಗ್ ಇವರ ಸಹಿಯು ೧೯೪೨ರ ಹೊಸ ವರ್ಷದ ದಿನ ಬಿದ್ದಿತು. ಮಾರನೆ ದಿನ ೨೨ ಇತರ ರಾಷ್ಟ್ರಗಳು ಸಹಿ ಹಾಕಿದುವು. ಅಂತೆಯೇ ಅಟ್ಲಾಂಟಿಕ್ ಪ್ರಣಾಳಿಕೆಯ ತತ್ವದ ಬೆಳಕಿನಲ್ಲಿ ವಿಶ್ವ ಶಾಂತಿಗೆ ಬುನಾದಿ ಹಾಕಲಾಯಿತು. ೧೯೪೩ರ ಅಕ್ಟೋಬರಿನಲ್ಲಿ ಬ್ರಿಟನ್, ಅಮೇರಿಕ ಮತ್ತು ಸೋವಿಯೆಟ್ ರಶಿಯದ ವಿದೇಶಾಂಗ ಸಚಿವರ ಸಮಾವೇಶದಲ್ಲಿ ವಿಶ್ವಶಾಂತಿಗೆ ನಿರ್ದಿಷ್ಟ ನಿರೂಪಣೆಯನ್ನು ಕೊಡಲಾಯಿತು. ಸಾಧ್ಯವಾದಷ್ಟು ಬೇಗ ಸಾರ್ವತ್ರಿಕ ವ್ಯಾಪ್ತಿಯ ಅಂತಾರಾಷ್ಟ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯಕ್ಕೆ ಅವರು ಬಂದರು.

ಎರಡು ತಿಂಗಳ ನಂತರ ರೂಸ್‌ವೆಲ್ಟ್, ಸ್ಟಾಲಿನ್ ಮತ್ತು ಚರ್ಚಿಲ್ಲರು ಪ್ರಥಮತಃ ಟೆಹರಾನಿನಲ್ಲಿ ಸಮಾವೇಶಗೊಂಡು ಶಾಂತಿಗಾಗಿ ಪ್ರಾಸ್ತಾವಿಕ ನಕ್ಷೆಯೊಂದನ್ನು ತಯಾರಿಸಿದರು. ಶಾಂತಿ ಸಂಸ್ಥೆಯ ರಚನೆ ಯಾವ ರೀತಿ ಇರಬೇಕೆಂಬ ವಿಷಯವನ್ನು ಕುರಿತು ಸಮಾಲೋಚನೆ ನಡೆಸಲು ವಾಷಿಂಗ್‌ಟನ್ನಿನ ಡಂಬಾರ್‌ಟನ್ ಓಕ್ಸ್‌ನಲ್ಲಿ ಇನ್ನೊಂದು ಪರಿಷತ್ತು ನಡೆಯಿತು. ಅದರಲ್ಲಿ ಚೀಣಾ, ಬ್ರಿಟನ್ ಮತ್ತು ಸೋವಿಯೆಟ್ ರಷ್ಯಾದ ಪ್ರತಿನಿಧಿಗಳು ಇದ್ದರು. ಡಂಬಾರ್ ಟನ್ ಓಕ್ಸ್ ವಿಶ್ವಸಂಸ್ಥೆಯೊಳಗೇ ನಾಲ್ಕು ಪ್ರಮುಖ ವಿಭಾಗವಿರಬೇಕೆಂಬ ಸಲಹೆಯನ್ನಿತ್ತರು. ಅವು (೧) ಸರ್ವ ಸದಸ್ಯರ ಸಭೆ (೨) ೧೧ ಸದಸ್ಯರ ಭದ್ರತಾ ಸಮಿತಿ (ಅದರಲ್ಲಿ ೫ ಖಾಯಂ ಸದಸ್ಯರು, ಉಳಿದವರು ಸಾಧಾರಣ ಸಭೆಯಿಂದ ಆರಿಸಿ ಬಂದವರು); (೩) ಆರ್ಥಿಕ ಹಾಗೂ ಸಾಮಾಜಿಕ ಮಂಡಳ, ಮತ್ತು (೪) ಅಂತಾರಾಷ್ಟ್ರೀಯ ನ್ಯಾಯಸ್ಥಾನ. ವಿಶ್ವಸಂಸ್ಥೆಗೆ ಒಂದು ಕಾರ್ಯನಿರ್ವಾಹಕ ಕಛೇರಿಯನ್ನು ಸ್ಥಾಪಿಸುವ ಅವಕಾಶವನ್ನು ಕೊಡಲಾಯಿತು. ಭವಿಷ್ಯದಲ್ಲಿ ಯುದ್ಧಗಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಭದ್ರತಾ ಸಮಿತಿಗೆ ವಹಿಸಿಕೊಡಲಾಯಿತು. ಅಂತಾರಾಷ್ಟ್ರೀಯ ಸಹಕಾರವನ್ನು ಪ್ರಚೋದಿಸುವ ವಿಷಯದಲ್ಲಿ ಪರಸ್ಪರ ಹಿತಾಸಕ್ತಿಗೆ ಧಕ್ಕೆ ಬಾರದಂತೆ ಪರಿಸ್ಥಿತಿಯನ್ನು ಅಳವಡಿಸುವ ಕುರಿತು ಸಲಹೆ ನೀಡುವ ಕರ್ತವ್ಯ ಸಾಧಾರಣ ಸಭೆಯ ಪಾಲಿಗೆ ಬಂತು. ರಾಷ್ಟ್ರಗಳೊಳಗೆ ನಡೆಯಬಹುದಾದ ಕಾನೂನಿಗೆ ಸಂಬಂಧಿಸಿದ ವಿವಾದಗಳ ಬಗ್ಗೆ ನಿರ್ಧಾರಗಳನ್ನು ಕೊಡುವುದು ಅಂತಾರಾಷ್ಟ್ರೀಯ ನ್ಯಾಯಸ್ಥಾನದ ಕೆಲಸ

೧೯೪೫ನೇ ಫೆಬ್ರವರಿಯಲ್ಲಿ ಚರ್ಚಿಲ್ ರೂಸ್‌ವೆಲ್ಟ್ ಮತ್ತು ಸ್ಟಾಲಿನ್ ಇವರು ಸಮಾವೇಶಗೊಂಡು ಸಾನ್ ಫ್ರಾನ್ಸಿಸ್ಕೊ ಪರಿಷತ್ತನ್ನು ಕರೆದು ತಮ್ಮ ವಿಚಾರಗಳನ್ನು ಮಂಡಿಸಲು ತೀರ್ಮಾನಿಸಿದರು. ಈ ಪ್ರಕಾರ ೧೯೪೫ನೇ ಎಪ್ರಿಲ್ ೨೫ ರಂದು ಜರಗಿದ ಈ ಪರಿಷತ್ತಿಗೆ ೫೦ ರಾಷ್ಟ್ರಗಳ ಸದಸ್ಯರು ಬಂದಿದ್ದರು. ವಿಶ್ವದ ಜನಸಂಖ್ಯೆಯಲ್ಲಿ ನೂರಕ್ಕೆ ೮೦ ರಷ್ಟು ಜನರ ಪ್ರತಿನಿಧಿಗಳು ಈ ಪರಿಷತ್ತಿನಲ್ಲಿ ಭಾಗವಹಿಸಿದರು.

ಸಾನ್ ಫ್ರಾನ್ಸಿಸ್ಕೋ ಪರಿಷತ್ತು ತನ್ನ ಅದ್ಭುತ ಕೆಲಸಗಳನ್ನು ಎರಡು ತಿಂಗಳ ಕಾಲದಲ್ಲಿ ನಡೆಸಿತು. ವಿಶ್ವಸಂಸ್ಥೆಯ ಪ್ರಣಾಳಿಕೆಯ ಪ್ರತಿಯೊಂದು ಭಾಗವನ್ನೂ ಮೂರರಲ್ಲಿ ಎರಡರಷ್ಟು ಸದಸ್ಯರು ಅನುಮತಿ

(೧೧ನೇ ಪುಟ ನೋಡಿರಿ)

ZANDU'S THREE GEMS of AYURVEDIC MEDICINES

ಝಾಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತ್ರಾಣ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 3—0—0

ಝಾಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಾಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮಿನಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಾಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.
ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.
ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.
ನಮ್ಮ ಬಡ್ಡಿ ದರಗಳು.
ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKI BANK LTD., MULKI.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-
Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ದಯಾಕಂಪೆನಿ, ಮಂಗಳೂರು

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—:ವಿಳಾಸ:—
ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಆಫ್ರೇಸ್ಯ ವಲಯದ ಆರ್ಥಿಕ ಅಭಿವೃದ್ಧಿ

ತಾಂತ್ರಿಕ ಸಹಕಾರದಲ್ಲಿ ಭಾರತ ಮತ್ತು ಜಪಾನುಗಳ ಪಾತ್ರ

ಇತ್ತೀಚೆಗೆ ಬಾಂಡುಂಗಿನಲ್ಲಿ ಸಭೆ ಸೇರಿದ ಆಫ್ರಿಕ ಮತ್ತು ಏಶ್ಯದ ರಾಷ್ಟ್ರಗಳಲ್ಲಿ ಆರ್ಥಿಕ ಸಹಕಾರಕ್ಕೆ ಬಹಳ ಅವಕಾಶವಿದೆ ಎಂಬುದರಲ್ಲಿ ಯಾರಿಗೂ ಸಂಶಯವಿರಲಾರದು. ಪರಿಷತ್ತು ತನ್ನ ಅಂತಿಮ ಪ್ರಕಟಣೆಯಲ್ಲಿ ಭಾಗವಹಿಸಿದ ರಾಷ್ಟ್ರಗಳಲ್ಲಿ ಯಾವ ಬಗೆಯ ಆರ್ಥಿಕ ಸಹಕಾರಕ್ಕೆ ಎಡೆಯುಂಟೆಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿತು.

ಆರ್ಥಿಕ ಸಹಕಾರದ ವಿಸ್ತಾರವನ್ನು ಪರಿಶೀಲಿಸುವುದಕ್ಕೆ ಮುಂಚೆ, ಜಗತ್ತಿನ ನಾಲ್ಕರಲ್ಲಿ ಒಂದು ಪಾಲಿನಷ್ಟು, ಅಂದರೆ ೧೨೦ ಲಕ್ಷ ಚದರ ಮೈಲುಗಳಷ್ಟು ಪ್ರದೇಶವನ್ನು ವ್ಯಾಪಿಸಿರುವ ಈ ಇಪ್ಪತ್ತೊಂಭತ್ತು ರಾಷ್ಟ್ರಗಳ ಪ್ರಧಾನ ಆರ್ಥಿಕ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುವುದು ಅಪೇಕ್ಷಣೀಯ. ಸುಮಾರು ೧೪೦ ಕೋಟಿ ಜನ ಸಂಖ್ಯೆಯನ್ನುಳ್ಳ ಆಫ್ರೇಸ್ಯ ರಾಷ್ಟ್ರಗಳಲ್ಲಿ ಏನೇನೂ ಅಭಿವೃದ್ಧಿಯನ್ನು ಹೊಂದಿರದ ಆಫ್ರಿಕದ ಗೋಲ್ಡ್‌ಕೋಸ್ಟ್ ಮತ್ತು ಲೈಬೀರಿಯಗಳೂ ಹಾಗೆಯೇ ಔದ್ಯೋಗಿಕ ಪ್ರಗತಿಯ ದೃಷ್ಟಿಯಿಂದ ಉನ್ನತ ಸ್ಥಾನವನ್ನು ಹೊಂದಿದ ಜಪಾನು ಮತ್ತು ಭಾರತಗಳೂ ಸೇರಿರುವುದರಿಂದ ಆರ್ಥಿಕ ಪರಿಸ್ಥಿತಿಯ ವಿಶ್ಲೇಷಣೆ ಅವಶ್ಯವೆನಿಸುತ್ತದೆ.

ತಮ್ಮ ಉತ್ಪಾದನೆಯ ರೀತಿಯಲ್ಲಿ ಮತ್ತು ಆರ್ಥಿಕ ಸಂಘಟನೆಯ ವಿಧಾನದಲ್ಲಿ ಕೆಲ ಮಟ್ಟಿಗೆ ಆಫ್ರೇಸ್ಯ ರಾಷ್ಟ್ರಗಳಲ್ಲಿ ಪ್ರತಿಯೊಂದೂ ಇನ್ನೊಂದು ರಾಷ್ಟ್ರದಿಂದ ಭಿನ್ನವಿರಬಹುದು; ಆದರೆ, ತಮ್ಮ ಆರ್ಥಿಕ ಸಮಸ್ಯೆಗಳ ವಿಷಯದಲ್ಲಿ ಅವುಗಳಲ್ಲೆಲ್ಲ ಸಾಮಾನ್ಯ ಸೂತ್ರಗಳಿರುವುದು ಗೋಚರಿಸುತ್ತದೆ. ಜಪಾನೊಂದನ್ನು ಬಿಟ್ಟರೆ, ಭಾರತವನ್ನೊಳಗೊಂಡು ಎಲ್ಲ ೨೮ ರಾಷ್ಟ್ರಗಳೂ ಕೃಷಿ ಪ್ರಧಾನವಾಗಿವೆ; ಮತ್ತು ಕೈಗಾರಿಕೆಯಲ್ಲಿ ಹಿಂದುಳಿದಿರುವಂತೆ ಕೃಷಿಯ ಉತ್ಪನ್ನದಲ್ಲಿಯೂ ನಿಕೃಷ್ಟಾವಸ್ಥೆಯಲ್ಲಿವೆ. ಇಲ್ಲಿಯ ಜೀವನ ಮಟ್ಟ ಅತ್ಯಂತ ಕೆಳ ತರಗತಿಯದಿದ್ದು ಕೋಟ್ಯಾಂತರ ಪ್ರಜೆಗಳಿಗೆ ಹೊಟ್ಟೆ ತುಂಬ ಉಂಡೇ ಗೊತ್ತಿಲ್ಲ.

ಆಫ್ರೇಸ್ಯ ರಾಷ್ಟ್ರಗಳ ವಲಯು ನೈಸರ್ಗಿಕ ಸಂಪತ್ತಿನಲ್ಲಿ ಸಮೃದ್ಧವಾಗಿದ್ದರೂ ಅದರ ನೈಜ ಪರಿಸ್ಥಿತಿ ಹೀಗಿರುವುದು ಶೋಚನೀಯ. ಅನೇಕ ಅಮೂಲ್ಯ ವಸ್ತುಗಳ ಉತ್ಪಾದನೆಯಲ್ಲಿ ಈ ಪ್ರದೇಶ ಜಗತ್ತಿನ ಗುತ್ತಿಗೆಯನ್ನು ಪಡೆದಿದೆ ಎಂದು ಅಂಕೆ ಸಂಖ್ಯೆಗಳು ತೋರಿಸಿಕೊಡುತ್ತವೆ ಉದಾಹರಣೆಗೆ — ಜಗತ್ತಿನ ರಬ್ಬರು ಉತ್ಪಾದನೆಯಲ್ಲಿ ೯೫%. ಕಚ್ಚಾ ಸಣಬಿನಲ್ಲಿ ೯೭%. ಚಾ ಸೊಪ್ಪಿನಲ್ಲಿ ೯೯%. ಕರಿಮೆಣಸಿನಲ್ಲಿ ೯೪%, ಈ ಪ್ರದೇಶದಿಂದ ಬರುತ್ತದೆ. ಅಲ್ಲದೆ ನೆಲಗಡಲೆ, ಬಾರ್ಲಿ, ಗೋಧಿ, ಹೊಗೆಸೊಪ್ಪು, ಕಬ್ಬಿನ ಸಕ್ಕರೆ, ಹತ್ತಿಯ ಬೀಜ, ಕಚ್ಚಾಹತ್ತಿ, ಟಂಗ್‌ಸ್ಟನ್, ಅಭ್ರಕ, ಲೋಹ, ಮಂಡೂರ, ತವರ, ಕ್ರೋಮ್ ಮುಂತಾದ ಅದುರು ಇತ್ಯಾದಿಗಳು ಇಲ್ಲಿ ವಿಪುಲ ಪ್ರಮಾಣದಲ್ಲಿಸಿಗುತ್ತವೆ.

ಜಗತ್ತಿನಲ್ಲಿ ನೆಲೆಗೊಳಿಸಬಹುದಾದ ವಿದ್ಯುದಾಗರಗಳ ಒಟ್ಟು ಶಕ್ತಿಯ ಐದರಲ್ಲಿ ಒಂದಂಶದಷ್ಟನ್ನು ಆಫ್ರೇಸ್ಯ ರಾಷ್ಟ್ರಗಳಲ್ಲಿ ಸ್ಥಾಪಿಸುವುದು ಸಾಧ್ಯವೆಂದು ಹೇಳಲಾಗುತ್ತದೆ. ಜಗತ್ತಿನ ಚೊಕ್ಕ ಕಲ್ಲಿದ್ದಲು ಮತ್ತು ಕಂದು ಕಲ್ಲಿದ್ದಲಿನ ಉತ್ಪಾದನೆಯಲ್ಲಿ ಐದರಲ್ಲಿ ಒಂದಂಶ, ಅಂದರೆ ಸುಮಾರು ೭೩೪೦೦೦ ಕೋಟಿ ಟನ್ನುಗಳಷ್ಟು ಇಲ್ಲಿ ಸಿಗುವುದೆಂದು ಅಂದಾಜು. ಆದರೆ ಇವೆಲ್ಲವನ್ನು ಅಭಿವೃದ್ಧಿಗೋಸ್ಕರ ಬಳಸಿಕೊಳ್ಳಬೇಕಾದರೆ ಬಂಡವಾಳವೂ ಕೋಟಿಗಟ್ಟಲೆ ಪ್ರಮಾಣದಲ್ಲಿ ಆಗತ್ಯವೆನಿಸುತ್ತದೆ. ಆದರೆ ಜಪಾನನ್ನು ಬಿಟ್ಟರೆ ಹಣ ಕಾಸಿನ ವ್ಯವಹಾರದಲ್ಲಿ ಬೇರಾವ ರಾಷ್ಟ್ರಗಳೂ ಪರಿಪೂರ್ಣ ಅಭಿವೃದ್ಧಿಯನ್ನು ಹೊಂದಿಲ್ಲ. ಅಸಮಾದ ರೂಪದಲ್ಲಿ ಕೆಲವು ರಾಷ್ಟ್ರಗಳನ್ನು ಹೊರತು ಪಡಿಸಿದರೆ, ಬ್ಯಾಂಕಿಂಗಿನ ಸೌಲಭ್ಯಗಳನ್ನೊದಗಿಸಿ ಕೊಡುವ ಸಂಸ್ಥೆಗಳೂ ಹೆಚ್ಚಿನ ದೇಶಗಳಲ್ಲಿ ನೋಡ ಸಿಗುವುದಿಲ್ಲ.

ಆರ್ಥಿಕ ಕ್ಷೇತ್ರದಲ್ಲಿ ಪರಿಣತರ ಅಭಿಪ್ರಾಯವನ್ನು ಗಮನಿಸುವುದಾದರೆ ಈ ದೇಶಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಕೃಷಿ ಪದ್ಧತಿಯಲ್ಲಿ ಸುಧಾರಣೆಯನ್ನು ಮಾಡಲು ಹಾಗು ಅವರ ದೈನಂದಿನ ಕಷ್ಟಗಳನ್ನು ಪರಿಹರಿಸಲು ಸಾಕಷ್ಟು ಭಂಡವಾಳದ ಪೂರೈಕೆಯಾಗಬೇಕೆಂದು ತಿಳಿಯುತ್ತದೆ. ಈ ರಾಷ್ಟ್ರಗಳಲ್ಲಿ ರೈತರು ಏನು ಆಹಾರ ಧಾನ್ಯಗಳನ್ನು ಉತ್ಪಾದಿಸುವರೋ, ಅವೆಲ್ಲ ಇಲ್ಲಿಯೇ ತಿಂದು ಮುಗಿಯುತ್ತದೆ. ನಿರ್ಯಾತಕ್ಕೆ ಸಿಗುವುದಿಲ್ಲ— ಈಚೆಗೆ ಆಯಾತಮಾಡಿಕೊಳ್ಳಬೇಕಾದ ಪ್ರಸಂಗವೇ ಬಂದು ಬಿಟ್ಟಿದೆ. ರಬ್ಬರು, ಚಾಸೊಪ್ಪು, ಕೊಬ್ಬರಿ ಮುಂತಾದ ತೋಟಗಳ ಕೃಷ್ಯುತ್ಪನ್ನ ಮತ್ತು ಲೋಹದ ಅದುರು, ಪೆಟ್ರೋಲಿಯಂ ಇತ್ಯಾದಿ ಖನಿಜ ದ್ರವ್ಯಗಳು ಮಾತ್ರ ನಿರ್ಯಾತ ಮಾಡಲ್ಪಡುತ್ತವೆ. ಕೈಗಾರಿಕೆಯು ಇಲ್ಲಿ ಬೆಳೆದ ಪಕ್ಷದಲ್ಲಿ ಆಂತರಿಕ ವ್ಯಾಪಾರ ವ್ಯವಹಾರವು ಅಭಿವೃದ್ಧಿಯನ್ನು ಹೊಂದಬಹುದೆಂದು ತಜ್ಞರ ಅಭಿಪ್ರಾಯ. ಈಗ ಜಪಾನು ದೇಶ ಮತ್ತು ಕೆಲಮಟ್ಟಿಗೆ ಸಿಂಹಳ, ಬರ್ಮಗಳು ಮಾತ್ರ, ಕೈಗಾರಿಕೆಯಲ್ಲಿ ಉಪಯೋಗಿಸಬಹುದಾದ ಕಚ್ಚಾ ಸರಕುಗಳ ಗ್ರಾಹಕ ವರ್ಗದಲ್ಲಿ ಕಾಣಿಸುತ್ತವೆ.

ಯುದ್ಧ ಪೂರ್ವದಲ್ಲಿ ದೂರಪೂರ್ವದ ಜಪಾನಿನೊಡನೆ ಆಗ್ನೇಯದ ಪರಿಗೆ ಹಾಚಿದ್ದ ಚೀನದ ವ್ಯಾಪಾರ ಬಹಳವಾಗಿ ಬೆಳೆದಿದ್ದಿತು. ಸಾಮಾನ್ಯವಾಗಿ ಆಗ್ನೇಯ ಏಶ್ಯದ ರಾಷ್ಟ್ರಗಳು ಈಗಲೂ ಸಕಲ ಮಧ್ಯ ಏಶ್ಯ ಮತ್ತು ಆಫ್ರಿಕದ ರಾಷ್ಟ್ರಗಳೊಡನೆ ನಿಕಟ ಸಂಬಂಧವನ್ನು ಇಟ್ಟುಕೊಂಡಿಲ್ಲ. ಮಧ್ಯ ಏಶ್ಯಕ್ಕೂ ಆಫ್ರಿಕಕ್ಕೂ ಬೇಕಾದ ಸರಕುಗಳನ್ನು ಅಮೇರಿಕ ಮತ್ತು ಬ್ರಿಟನುಗಳೇ ಈಗಲೂ ಪೂರೈಸುತ್ತವೆ. ಏಶ್ಯದ ಬೇರೆ ಭಾಗಗಳವರು ಆ ಪೇಟೆಯನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಲು ಪ್ರಯತ್ನವನ್ನೇ ನಡೆಸಿಲ್ಲ.

ನಿರ್ಯಾತ ವ್ಯಾಪಾರದಲ್ಲಿ ಜಗತ್ತಿನಲ್ಲಿ ನೂರಕ್ಕೆ ೧೩-೧೪ ಅಂಶದಷ್ಟು ಆಫ್ರೇಸ್ಯ ರಾಷ್ಟ್ರಗಳಿಗೆ ಸೇರುತ್ತದೆ. ಇದರಲ್ಲಿ ತಂತಮ್ಮಲ್ಲಿಯೇ ಅವುಗಳು ವ್ಯಾಪಾರಮಾಡುವ ಸರಕಿನ ಪ್ರಮಾಣ ೪೦% ಆಗುತ್ತದೆ. ಆಯಾತ ವ್ಯಾಪಾರದಲ್ಲಿ ಮಧ್ಯ ಪೂರ್ವದಿಂದ ತರಿಸುವ ಸರಕುಗಳ ಪ್ರಮಾಣ ಒಟ್ಟು ಪ್ರಮಾಣದ ೭೦%; ಮತ್ತು ತಂತಮ್ಮಲ್ಲಂದಲೇ ತರಿಸಿಕೊಳ್ಳುವ ಸರಕುಗಳ ಪ್ರಮಾಣ ಕೇವಲ ೧೦%; ಆಫ್ರಿಕದ ದೇಶಗಳು ೧೦% ಸಹ ಪರಿಷತ್ತಿನ ರಾಷ್ಟ್ರಗಳಿಂದ ತರಿಸಿಕೊಳ್ಳುವುದಿಲ್ಲ; ಆದರೆ ಚೀನ, ಜಪಾನು ಮತ್ತು ಭಾರತಗಳು ಆಯಾತದಲ್ಲಿ ೫೦% ಪರಿಷತ್ತಿನ ರಾಷ್ಟ್ರಗಳಿಂದಲೇ ತರಿಸಿಕೊಳ್ಳುತ್ತವೆ; ಇದರಲ್ಲಿ ಮುಕ್ಕಾಲಂಶ ದೂರ ಪೂರ್ವದಿಂದಲೇ ಬರುತ್ತದೆ. ಚೀನ, ಜಪಾನು ಮತ್ತು ಭಾರತಗಳನ್ನು ಬಿಟ್ಟರೆ ಉಳಿದ ದೂರ ಪೂರ್ವದ ರಾಷ್ಟ್ರಗಳು ತಮ್ಮ ಅವಶ್ಯಕತೆಯಲ್ಲಿ ೭೫% ಪ್ರಮಾಣವನ್ನು ಆಫ್ರೇಸ್ಯ ರಾಷ್ಟ್ರಗಳಿಂದಲೇ ತರಿಸಿಕೊಳ್ಳುತ್ತವೆ.

ಇದರಿಂದ ನಿರ್ಯಾತ ವ್ಯಾಪಾರವು ಈ ಪ್ರದೇಶದ ಹೊರಗಿನ ದೇಶಗಳೊಡನೆಯೇ ಹೆಚ್ಚಾಗಿ ನಡೆಯುತ್ತದೆಂದು ವ್ಯಕ್ತವಾಗುತ್ತದೆ. ಈ ರಾಷ್ಟ್ರಗಳು ಅಮೇರಿಕ ಬ್ರಿಟನು ಮತ್ತಿತರ ಐರೋಪ್ಯರಾಷ್ಟ್ರಗಳ ಮೇಲೆ ಯಾಂತ್ರಿಕ ಸಲಕರಣೆ ಇತ್ಯಾದಿಗಳ ವಿಷಯದಲ್ಲಿ ಅವಲಂಬಿತವಾಗಿರುವುದೂ ಉಲ್ಲೇಖನೀಯ. ಸಾಮಾನ್ಯವಾಗಿ ಬ್ರಿಟನು ಮತ್ತಿತರ ಯುರೋಪಿನ ಪೇಟೆಯು ಭಾರತ, ಸಿಂಹಳ, ಈಜಿಪ್ಟ್ ದಿ ಗೋಲ್ಡ್ ಕೋಸ್ಟ್, ಇರಾನ್, ಇರಾಕ್, ಪಾಕಿಸ್ತಾನ್, ಸುಡಾನ್, ಸಿರಿಯಾ, ತುರ್ಕಿ ಮತ್ತು ಇಂಡೋ ಚೀನಾ ದೇಶಗಳಿಗೂ ಅಮೇರಿಕವು ಇಂಡೋನೇಶಿಯಾ, ಜಪಾನು, ದಿ ಗೋಲ್ಡ್ ಕೋಸ್ಟ್ ಮತ್ತು ಫಿಲಿಪ್ಪೈನುಗಳಿಗೂ ಪೇಟೆಯನ್ನೊದಗಿಸುತ್ತವೆ.

(೧೦ನೇ ಪುಟ ನೋಡಿ)

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು-1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your asscciataion with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ಬರೆಯಿರಿ:

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ.ಕ.
ಡಿಪೋ.. (1) ಉಡುಪಿ (2) ನವಾಬ ಗಲ್ಲಿ, ಹುಬ್ಬಳ್ಳಿ.

ಚುನಾವಣೆ ಸರಳಗೊಳಿಸಲು ಸೂಚನೆ

ಅಸ್ಪೃಶ್ಯತೆಯನ್ನು ಆಚರಿಸಿದರೆ ಶಿಕ್ಷೆ

ಲೋಕ ಸಭೆಯ ಮುಂದೆ ಕಳೆದ ವಾರ ೧೯೫೧—೫೨ನೇ ವರ್ಷದಲ್ಲಿ ನಡೆಸಿದ ಮಹಾ ಚುನಾವಣೆಗಳ ವಿಷಯದಲ್ಲಿ ಚುನಾವಣೆಯ ಕಮಿಶನರರಾದ ಶ್ರೀ ಸ ಕುಮಾರ ಸೇನರು ಸಿದ್ಧಪಡಿಸಿದ ವರದಿಯನ್ನು ಸಾದರಪಡಿಸಿದರು ಈ ವರದಿಯು ಮುಂದಿನ ಚುನಾವಣೆಗಳ ವಿಷಯದಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಆದಷ್ಟು ಹೆಚ್ಚು ಸರಳಗೊಳಿಸಬೇಕೆಂಬ ಉದ್ದೇಶದಿಂದ ಅನೇಕ ಸೂಚನೆಗಳನ್ನು ಮಾಡಿದೆ

ಏಕ ಕಾಲದ ಚುನಾವಣೆ

ಚುನಾವಣೆಯ ಪ್ರಕಟನೆಯಿಂದ ಫಲಿತಾಂಶವನ್ನು ಸಾರುವ ವರೆಗಿನ ಅವಧಿಯು ಹೆಚ್ಚೆಂದರೆ ೬೦ ದಿನಗಳಿರಬೇಕೆಂದು ಅದು ಹೇಳುತ್ತದೆ ಆಂಧ್ರ, ತಿರು-ಕೊಚ್ಚಿ ಮತ್ತು ಪೆಪ್ಸುಗಳನ್ನುಳಿದು ಇತರ ರಾಜ್ಯಗಳ ಶಾಸನ ಸಭೆಗಳಿಗೂ ಕೇಂದ್ರದ ಸಂಸತ್ತಿಗೂ ಏಕ ಕಾಲದಲ್ಲಿ ಹೊಸ ಚುನಾವಣೆಗಳನ್ನು ಮುಂದಿನ ಸಲ ನಡೆಸಬೇಕೆಂದು ಅದರ ಅಭಿಪ್ರಾಯ

ಚುನಾವಣೆಯ ಸಮಯ

ರಾಜ್ಯಗಳಲ್ಲಿಯೂ ಕೇಂದ್ರಗಳಲ್ಲಿಯೂ ಮೇಲ್ಮನೆಗೆ ನಡೆಯುವ ಚುನಾವಣೆಗಳ ಸಂಬಂಧದಲ್ಲಿ ಠೇವಣಾತಿ ಹಣವು ರದ್ದಾಗತಕ್ಕದ್ದಲ್ಲ; ಆದಷ್ಟು ಮಟ್ಟಿಗೆ ಜನವರಿ-ಫೆಬ್ರವರಿ ತಿಂಗಳನ್ನು ಚುನಾವಣೆ ನಡೆಸಲು ಆರಿಸಬೇಕು, ಹುರಿಯಾಳುವಿನ ಹೆಸರು ಮತದಾರರ ಯಾದಿಯಲ್ಲಿರಲೇಬೇಕೆಂದು ನಿರ್ಬಂಧಪಡಿಸದೆ, ಮತದಾನದ ಹಕ್ಕು ಅವನಿಗಿದ್ದರೆ ಸ್ಪರ್ಧಿಸಲು ಬಿಡಬೇಕು, ಮತದಾನದ ಕ್ಷೇತ್ರಗಳಲ್ಲಿ ಒಂದೊಂದೇ ಮತಪೆಟ್ಟಿ ಇರಬೇಕು ಎಂದೂ ವರದಿಯು ಸೂಚಿಸುತ್ತದೆ.

ದೂರೊಯ್ಯುವ ಹಕ್ಕು

ಕಾನೂನಿನಂತೆ ಚುನಾವಣೆಯಲ್ಲಿ ವ್ಯಯಿಸಬಹುದಾದ ಹಣದ ಮಿತಿಯು ಬಹಳ ಕಡಿಮೆ ಇರುವುದರಿಂದ ಹುರಿಯಾಳುಗಳು ಸುಳ್ಳು ಲೆಕ್ಕವನ್ನು ಒಪ್ಪಿಸುತ್ತಾರೆ, ಹೀಗಾಗದಿರಬೇಕಾದರೆ ವೆಚ್ಚದ ಗರಿಷ್ಠ ಮಿತಿಯನ್ನು ಹೆಚ್ಚಿಸಬೇಕು ಎಂದೂ ಚುನಾವಣೆಗೆ ನೇರಾಗಿ ಸಂಬಂಧಿಸಿರದಿದ್ದರೂ ಸರಕಾರದ ಅಧಿಕಾರಿಗಳು ತಮ್ಮ ನಡತೆಯಿಂದ ಚುನಾವಣೆಯಲ್ಲಿ ಹಸ್ತಕ್ಷೇಪ ನಡೆಸಬಲ್ಲರಾದುದರಿಂದ ಅವರ ತಪ್ಪು ವರ್ತನೆಗೂ ಸಹ ಶಿಕ್ಷೆ ವಿಧಿಸಬೇಕೆಂದೂ ಚುನಾವಣೆಯ ನ್ಯಾಯ ಮಂಡಳದ ನಿರ್ಣಯದ ವಿರುದ್ಧ ದೂರೊಯ್ಯುವ ಅವಕಾಶವಿರಬೇಕೆಂದೂ ವರದಿಯಲ್ಲಿದೆ.

ಅಸ್ಪೃಶ್ಯತೆಯ ಉಚ್ಚಾಟನೆ

ಲೋಕ ಸಭೆಯ ಮುಂದೆ ಮಂಡಿಸಲ್ಪಟ್ಟ ವಿಧೇಯಕಗಳಲ್ಲಿ ಅಸ್ಪೃಶ್ಯತೆಯ ಆಚರಣೆಯನ್ನು ಅಪರಾಧವಾಗಿ ಪರಿಗಣಿಸಿ ಶಿಕ್ಷಿಸುವ ಶಾಸನ ಉಲ್ಲೇಖನೀಯ ಇದನ್ನು ಮಂಡಿಸಿದ ಮಂತ್ರಿಗಳು ರಾಜ್ಯಾಂಗದ ಆಶಯಕ್ಕನುಗುಣವಾಗಿ ಈ ಶಾಸನ ತಲೆಎತ್ತಿದೆ ಎಂದರು. ದಲಿತ ವರ್ಗದವರಿಗೆ ಸಿಗುತ್ತಿರುವ ಸೌಲಭ್ಯಗಳನ್ನು ಕಡಿಮೆ ಮಾಡುವುದು ಇದರ ಉದ್ದೇಶವಲ್ಲವೆಂದೂ ಅಸ್ಪೃಶ್ಯತೆಯ ಆಚರಣೆಯನ್ನು ಆದಷ್ಟು ಬೇಗ ನಿರ್ಮೂಲಗೊಳಿಸುವುದೇ ಇದರ ಹೇತುವೆಂದೂ ಅವರು ಹೇಳಿದರು

ಕಡ್ಡಾಯದ ಸೆರೆಮನೆ ಶಿಕ್ಷೆ

ಪರಿಶೀಲಕ ಸಮಿತಿಯ ಕೈಗೆ ಹೋಗಿ ಬಂದಿರುವ ಈ ವಿಧೇಯಕವನ್ನು ಅತ್ಯಂತ ಉತ್ಸಾಹದಿಂದ ಸದಸ್ಯರು ಸ್ವಾಗತಿಸಿದರು ಮೊದಲು ಉದ್ದೇಶಿಸಿದುದಕ್ಕಿಂತಲೂ ಈಗ ಶಿಕ್ಷೆಯನ್ನು ಉಗ್ರಗೊಳಿಸಿರುವರಲ್ಲದೆ, ಒಬ್ಬನೇ ವ್ಯಕ್ತಿಯು ಎರಡನೆಯ ಸಲ ಅಸ್ಪೃಶ್ಯತೆಯ ಅಪರಾಧ ಮಾಡಿದರೆ ಅವನನ್ನು ಕಡ್ಡಾಯವಾಗಿ ಸೆರೆಮನೆಗೆ ಕಳಿಸಲಾಗುತ್ತದೆ. ಆರೋಪಿಯು ತನ್ನ ನಿರಪರಾಧಿತ್ವವನ್ನು ತಾನೇ ಸಿದ್ಧಪಡಿಸಬೇಕೆಂದೂ ವಿಧೇಯಕ ಹೇಳುತ್ತದೆ.

ಮಠಗಳು ಅಬಾಧಿತ

ಚರ್ಚೆಯ ಕಾಲದಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳು ವೀರಶೈವ ಮಹಾಪುರುಷರು ಅಸ್ಪೃಶ್ಯತೆಯ ನಿರ್ಮೂಲಕ್ಕೆ ಪ್ರಯತ್ನಿಸಿದುದನ್ನೂ ಆದರೆ ಈಚೆಗೆ ಅನೇಕ ಮಠ ಮತ್ತು ಸಾರ್ವಜನಿಕ ಉಪದೇಶದ ಸ್ಥಳಗಳಲ್ಲಿ ಅಸ್ಪೃಶ್ಯತೆಯು ಆಚರಣೆಯಲ್ಲಿರುವುದನ್ನೂ ಪ್ರಸ್ತಾಪಿಸಿದರು. ಗೃಹ ಮಂತ್ರಿಗಳು ಇದಕ್ಕೆ ಉತ್ತರಿಸುತ್ತಾ ಗುರುಮಠಗಳನ್ನೂ ಹಿಂದೂ ಧಾರ್ಮಿಕ ಸಂಸ್ಥೆಗಳನ್ನೂ ಈ ವಿಧೇಯಕದ ಕಕ್ಷೆಯಲ್ಲಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲವೆಂದು ಸಾರಿದರು

ಪವಿತ್ರ ಸಂಸ್ಕಾರ

ರಾಜ್ಯ ಸಭೆಯು ಈಗಾಗಲೇ ಅಂಗೀಕರಿಸಿರುವ ಹಿಂದು ವಿವಾಹ ವಿಧೇಯಕವನ್ನೂ ಲೋಕಸಭೆಯು ಚರ್ಚಿಸಿ ಮನ್ನಣೆ ಕೊಟ್ಟಿತು ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಲ್ಲಿ ಹಿಂದು ಮಹಾಸಭೆಯ ಚಟರ್ಜಿ, ದೇಶಪಾಂಡೆ ಮುಂತಾದವರು ಜಾತ್ಯತೀತ ರಾಷ್ಟ್ರವೆಂಬ ಘಟನೆಯ ಆಶಯಕ್ಕೆ ಈ ವಿಧೇಯಕ ವಿರುದ್ಧವಾಗಿದೆ ಎಂದು ಸಾರಿದರು ಹಿಂದುಗಳ ದೃಷ್ಟಿಯಲ್ಲಿ ವಿವಾಹವು ಪವಿತ್ರ ಸಂಸ್ಕಾರವೆಂದು ಸಾರುತ್ತಾ ವಿವಾಹ ವಿಚ್ಛೇದಕ್ಕೆ ಕೊಡಲಾದ ಅಸ್ಪದವನ್ನು ಅವರು ಟೀಕಿಸಿದರು

ಆಕ್ಷೇಪಕ್ಕೆ ಉತ್ತರ

ಮಂತ್ರಿಗಳು ಟೀಕೆಗಳಿಗೆ ಉತ್ತರಿಸುತ್ತಾ ವೈವಾಹಿಕ ಬಂಧನವು ಆದಷ್ಟು ಹೆಚ್ಚು ಕಾಲ ಬಾಳಬೇಕೆಂಬುದೇ ಸರಕಾರದ ಉದ್ದೇಶ, ಆದುದರಿಂದ ವಿಚ್ಛೇದನಕ್ಕೆ ಅನೇಕ ನಿರ್ಬಂಧಗಳನ್ನು ಹೇರಿದ್ದು ಸಾಮಾಜಿಕ ಸುಧಾರಣೆಯ ದೃಷ್ಟಿಯಿಂದ ಈ ನಿಯಂತ್ರಿತ ಸ್ವಾತಂತ್ರ್ಯ ಆಗತ್ಯವೆನಿಸುತ್ತದೆ ಎಂದರು ವಿಧೇಯಕವು ವಿವಾಹವು ಕ್ರಮಬದ್ಧವೆನಿಸಲು ಜಾತಿಯ ಉಲ್ಲೇಖ ಅಗತ್ಯವಿಲ್ಲವೆನ್ನುತ್ತದೆ, ಏಕಪತ್ನೀವ್ರತವನ್ನು ಜ್ಯಾರಿಗೆ ತರುತ್ತದೆ ಎಂದು ಅವರು ನಿವರಿಸಿದರು

ಹಳ್ಳಿಗೆ ಸಂಪತ್ತು

ಗ್ರಾಮಾಂತರ ಪ್ರದೇಶಗಳಿಗೆ ಹಣವನ್ನು ಪೂರೈಸಲು ಅವಕಾಶ ಕಲ್ಪಿಸಿ ಕೊಡುವುದಕ್ಕೋಸ್ಕರ ರಿಜರ್ವ್ ಬೇಂಕಿನ ಕಾಯಿದೆಗೆ ತಿದ್ದುಪಡಿ ಮಾಡಿ ಎರಡು ಪ್ರತ್ಯೇಕ ನಿಧಿಗಳನ್ನು ರೂಪಿಸುವ ಶಾಸನಕ್ಕೆ ಮನ್ನಣೆಯು ಕಳೆದ ವಾರ ಸಿಕ್ಕಿತು ಅಲ್ಲದೆ ಇಂಪೀರಿಯಲ್ ಬ್ಯಾಂಕಿನ ರಾಷ್ಟ್ರೀಕರಣದ ತತ್ವಕ್ಕೂ ಬೆಂಬಲ ವ್ಯಕ್ತಪಟ್ಟಿತು. ಸದಸ್ಯರಲ್ಲಿ ಹಲವರು ರಾಷ್ಟ್ರೀಕರಣದ ನೆಪದಲ್ಲಿ ಬ್ಯಾಂಕಿನ ಪಾಲುದಾರರಿಗೆ ಕೊಡುವ ಹಣವು ಅತಿ ಹೆಚ್ಚಾಗಿದೆಯೆಂದೂ ಘಟನೆಗೆ ಮೊನ್ನೆ ತಾನೆ ಮಾಡಿದ ತಿದ್ದುಪಡಿಯ ದೃಷ್ಟಿಯಿಂದ ಇದು ಹೊರಲಾಗದ ಭಾರವೆಂದೂ ಟೀಕಿಸಿದರು ಅರ್ಥ ಸಚಿವರು ಇನ್ನು ಮುಂದೆ ಈ ಸಲದ ಕ್ರಮವನ್ನು ಅನುಸರಿಸುವುದಿಲ್ಲ ಎಂದು ಭರವಸೆ ಕೊಟ್ಟರು

ಅವಡಿಯ ಸಂದೇಶ

ಒರಿಸ್ಸದ ಬರ್ಹಾಂಪುರದಲ್ಲಿ ಬೇಗನೇ ಸೇರಲಿರುವ ಕಾಂಗ್ರೆಸಿನ ಸಭೆಯಲ್ಲಿ ವಿಚಾರ ವಿನಿಮಯಕ್ಕೆ ಅನುಕೂಲವಾಗಲೆಂಬ ಉದ್ದೇಶದಿಂದ ಪ್ರದೇಶ ಕಾಂಗ್ರೆಸುಗಳು ಅವಡಿಯ ಕಾಂಗ್ರೆಸು ಅಧಿವೇಶನದಲ್ಲಿ ಸ್ವೀಕರಿಸಿದ ಗೊತ್ತುವಳಿಗಳ ಆಶಯವನ್ನು ಜನತೆಗೆ ಎಷ್ಟರ ಮಟ್ಟಿಗೆ ತಿಳಿಸಿವೆ ಎಂಬ ಕುರಿತು ವರದಿಯನ್ನು ಕಾಂಗ್ರೆಸಾಧ್ಯಕ್ಷ ಢೇಬರರು ಕೇಳಿದ್ದಾರೆ ಎಷ್ಟು ಸಾರ್ವಜನಿಕ ಸಭೆಗಳನ್ನು ನಡೆಸಲಾಯಿತು, ಯಾವ್ಯಾವ ಪ್ರಕಟಣೆಗಳ ಮೂಲಕ ಜನರಲ್ಲಿ ಜಾಗೃತಿ ಹುಟ್ಟಿಸಲಾಯಿತು ಎಂಬ ಮುಂತಾಗಿ ಅವರು ವಿವರಗಳನ್ನು ಅಪೇಕ್ಷಿಸಿದ್ದಾರೆ.

ಅಮೇರಿಕದ ನೂತನ ರಾಯಭಾರಿ

ಭಾರತದಲ್ಲಿ ಅಮೇರಿಕದ ಹೊಸ ರಾಯಭಾರಿಯಾಗಿ ನೇಮಕಗೊಂಡ ಮಿ ಜಾನ್ ಶರ್ಮನ್ ಕೂಪರ್ ಅವರು ರಾಷ್ಟ್ರಪತಿ ಭವನದಲ್ಲಿ ಡಾ ರಾಜೇಂದ್ರ ಪ್ರಸಾದರಿಗೆ ತಮ್ಮ ಅಧಿಕಾರ ಪತ್ರವನ್ನು ಒಂದು ಸಮಾರಂಭದಲ್ಲಿ ಅರ್ಪಿಸಿದರು.

ಉಡುಪಿ ಡಿ ಮು ಕೋರ್ಟಿನಲ್ಲಿ

ಕ್ರಮ ನಂಬ್ರ 17/1955

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಕಡೆಯಿಂದ ರಿಕವರಿ ಆಫೀಸರ್, ಎಂ ಎಸ್. ಭಂಡಾರಿ— ವಾದಿ.

ಮತ್ತು

1 ಅಬ್ದುಲ್ ಮಜೀದ್ ಉಮ್ಮರ್ ಬಾಪು ಸಾಹೇಬ-ಉಮ್ಮರ್ ಬಾಪು ಸಾಹೇಬರ ಮಗ
2 ಹಲಿಮಾ ಬ್ಯಾ— 1ನೇ ಪ್ರತಿವಾದಿಯ ಹೆಂಡ್ತಿ— ಪ್ರತಿವಾದಿರು

ಉಡುಪಿ ಕಸಬೆಯಲ್ಲಿರುವವರು

ಪ್ರತಿವಾದಿರು—ದಿ ಮಹಾರಾಷ್ಟ್ರ ಎಪೆಕ್ಸ್ ಬೇಂಕ್ ಲಿಮಿಟೆಡ್ ಉಪ್ಪಿಗೆ ತಾರೀಕು 22—8—1953ರಲ್ಲಿ ರೂಪಾಯಿ 700/ ಕ್ಕೆ ಬರೆಕೊಟ್ಟ ಪ್ರೊಮಿಸರಿ ನೋಟಿನ ಹಕ್ಕನ್ನು ವಾದಿ ಬೇಂಕಿಗೆ ಎಂಡೋರ್ಸ್ ಮಾಡಿಕೊಟ್ಟ ಮೇರೆಗೆ ಸದರಿ ನೋಟಿನ ಬಾಬ್ತು ಪ್ರತಿವಾದಿರಿಂದ ವಾದಿಗೆ ಬಹ ಅಸಲು, ಬಡ್ಡಿ, ನೋಟೀಸು ಖರ್ಚುಕೂಡಾ ರುಪ್ಯಾ 809—7 -0 ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿದಾವೆಯು ತಾರೀಕು 16—6—1955ಕ್ಕೆ ಪ್ರಥಮ ತನಿಖೆಗೆ ಇಡಲಾಗಿಯದೆ. ಸದರಿ ದಿನ್ನ ಪ್ರತಿವಾದಿರು ಸ್ವತಹ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉಜರು ಹಾಜರ್ ಪಡಿಸದಿದ್ದಲ್ಲಿ ಸದರಿಯವರ ಗೈರ್ ಹಾಜರಿಯಿಂದ ಸದರಿದಾವೆಯು ತೀರ್ಮಾನಿಸಲ್ಪಡುವದೆಂದು ಸದರಿ ಪ್ರತಿವಾದಿರೀಗೆ ಈ ಮೂಲಕ ತಿಳಿಸೋಣಾಗಿಯದೆ

M Damodar Kamath
Advocate for Plff

ತಾ 2—5—1955 ಉಡುಪಿ,

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ

ಬೆಲೆ 0—2—0, ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ

NAVAYUGA
Popular Kannada Weekly
Founder:—
Sri A. B. SHETTY, M.L.A.
Minister for Public Health, Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೫-೫-'೫೫	೩೫

ಕಾಂಗ್ರೆಸಿನ ಪುನರುಜ್ಜೀವನ

ನೆಹರುಗಳ ನಂತರ ಯಾರು? ಎಂಬ ಪ್ರಶ್ನೆಯು ಕೆಲವು ತಿಂಗಳ ಪೂರ್ವದಲ್ಲಿ ಎಲ್ಲರ ಜಿಜ್ಞಾಸೆಯನ್ನು ಕೆರಳಿಸಿದ್ದಿತಷ್ಟೇ—ನೆಹರುಗಳು ದೇಶಕ್ಕೆ ಮಾತ್ರ ಬೇಕಾದವರಲ್ಲ; ಅವರು ಕಾಂಗ್ರೆಸಿನ ಸೂತ್ರಧಾರರು ಎಂಬುದರಿಂದ ಕಾಂಗ್ರೆಸಿನ ಮುಂದಿನ ಬೆಳವಣಿಗೆಯ ದೃಷ್ಟಿಯಿಂದಲೂ ಈ ಪ್ರಶ್ನೆಯನ್ನು ಉತ್ತರಿಸುವುದು ಅಗತ್ಯವಿದೆ. ದೇಶದ ನಾಯಕ ಪಟ್ಟವನ್ನು ನಾವು ಭವಿಷ್ಯದ ಚರಿತ್ರೆಗೆ ಬಿಟ್ಟುಕೊಡುವುದೇ ಲೇಸೆಂದು ಹೇಳುತ್ತಿದ್ದೇವೆ; ಇದರಂತೆ, ಕಾಂಗ್ರೆಸಿನ ಭವಿಷ್ಯವನ್ನೂ ಇತಿಹಾಸದ ಕೈಯಲ್ಲಿ ಕೊಡಬೇಕೇ ಎಂಬುದನ್ನು ಕಾಂಗ್ರೆಸಿಗರು ಉತ್ತರಿಸಬೇಕಾಗಿದೆ. ನಾವು ಮರೆತು ಬಿಟ್ಟದ್ದ, ಕೊನೆಯ ಪಕ್ಷಕ್ಕೆ ಮರೆತು ಬಿಡಬಹುದಾಗಿದ್ದ, ಈ ಪ್ರಶ್ನೆಯನ್ನು ಮೊನ್ನೆ ಅಹಮದಾಬಾದಿನಲ್ಲಿ ಕಾಂಗ್ರೆಸಿನ ಕಾರ್ಯಕರ್ತರ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದ ಶ್ರೀ. ಸ. ಕಾ. ಪಾಟೀಲರು ನೆನಪಿಗೆ ತಂದು ಕೊಟ್ಟಿದ್ದಾರೆ. ಅವರು ಹೀಗೆ ಹೇಳಿದರೆಂದು ವರದಿಯಾಗಿದೆ—"ಕಾಂಗ್ರೆಸಿನಲ್ಲಿಯ ಸ್ತ್ರೀ ಪುರುಷರು ಈ ಸಂಸ್ಥೆಯನ್ನು ಬಲಪಡಿಸಲು ಸಕಾಲಿಕವಾದ ಮತ್ತು ಪ್ರಭಾವಿಯಾದ ಕ್ರಮಗಳನ್ನು ಕೂಡಲೇ ಕೈಗೊಳ್ಳದಿದ್ದರೆ ನೆಹರುಗಳ ಗೈರ್ ಹಾಜರಿಯಲ್ಲಿ ಕಾಂಗ್ರೆಸು ಇಸ್ಪೀಟಿನ ಮನೆಯಂತೆ ಕುಸಿದು ಬೀಳುವುದು ನಿಶ್ಚಯ. ಯಾವುದೊಂದು ಸಂಸ್ಥೆಯೂ ಒಬ್ಬನ ಪ್ರತಿಷ್ಠೆ ಮತ್ತು ಗೌರವಗಳಿಂದ ಚಿರಕಾಲ ಬಾಳಲಾರದು. ನಾವೀಗ ನೆಹರುಗಳ ಹೆಸರಿನ ಬಲದಿಂದ ಚುನಾವಣೆಗಳನ್ನು ಗೆಲ್ಲುತ್ತಿದ್ದೇವೆ; ಇನ್ನೂ ಕೆಲವು ಚುನಾವಣೆಗಳನ್ನು ನೆಹರುಗಳ ವ್ಯಕ್ತಿತ್ವದ ಪ್ರಭಾವದಿಂದ ಗೆಲ್ಲಬಹುದು. ಆದರೆ ಕೊನೆಗೇನು?" ಮುಂದುವರಿದು ಪಾಟೀಲರು ನೆಹರುಗಳೇ ಈ ಕುರಿತು ಅಸಮಾಧಾನದಿಂದಿರುವರೆಂಬುದನ್ನು ವಿದಿತ ಪಡಿಸಿದರು. ಕಾಂಗ್ರೆಸಿನ ಕಾರ್ಯಕ್ರಮದ ಬಗ್ಗೆ ಪ್ರತಿಯೊಬ್ಬ ಸದಸ್ಯನೂ ವಿಚಾರಿಸಲು ತೊಡಗಬೇಕೆಂದೂ ಧ್ಯೇಯಗಳನ್ನೂ ಗೊತ್ತುವಳಿಗಳನ್ನೂ ಕಾರ್ಯಾಚರಣೆಗೆ ತಂದು ಸಂಸ್ಥೆಯ ಪುನರುಜ್ಜೀವನ ಕಾರ್ಯದಲ್ಲಿ ನೆರವಾಗಬೇಕೆಂದೂ ನೆಹರುಗಳು ಅಪೇಕ್ಷಿಸುವುದಾಗಿ ಪಾಟೀಲರು ತಿಳಿಸಿದರು. ಕಾಂಗ್ರೆಸು ಸಂಸ್ಥೆಯೊಡನೆ ಸಂಬಂಧವಿರಿಸಿಕೊಂಡಿರುವ ನಾಗರಿಕರ ಸಂಖ್ಯಾಪ್ರಮಾಣವು ಈಗ ಸ್ವಾತಂತ್ರ್ಯ ದೊರೆತ ಸಮಯದಲ್ಲಿದ್ದುದಕ್ಕಿಂತ ಬಹಳ ಕಡಿಮೆಯಾಗಿರುವುದನ್ನೂ ಅವರು ಉಲ್ಲೇಖಿಸಿದರು. "ಸ್ವಾತಂತ್ರ್ಯ ಪೂರ್ವದಲ್ಲಿ ಐದು ಕೋಟಿ ಸದಸ್ಯರಿದ್ದರು; ಇದು ಐದು ಕೋಟಿಗಳಾದರೂ ಏರಬೇಕೆಂದು ನಾನು ಬಯಸುತ್ತೇನೆ. ಕಳೆದ ಮಹಾ ಚುನಾವಣೆಯಲ್ಲಿ ಏಳು ಕೋಟಿ ಮತಗಳನ್ನು ಕಾಂಗ್ರೆಸು ಸಂಪಾದಿಸಿರುವುದನ್ನು ನೋಡಿದರೆ, ಈ ಆಸೆಯನ್ನು ಕೈಗೂಡಿಸುವುದು ಕಷ್ಟವೆಂದು ಹೇಳಲಿಕ್ಕಾಗದು" ಎಂದು ಪಾಟೀಲರು ಅಭಿಪ್ರಾಯಪಟ್ಟರು. ಕಾಂಗ್ರೆಸಿನ ವಾರ್ಷಿಕ ವರ್ಗಣಿ ಕೇವಲ ನಾಲ್ಕಾಣೆ ಮಾತ್ರ—ಆದುದರಿಂದ ಹಿಂದೆ ಕಾಂಗ್ರೆಸನ್ನು ಬೆಂಬಲಿಸಿ ಮತವಿತ್ತವರು ಸಂಸ್ಥೆಯ ಅಭ್ಯುದಯ ದೃಷ್ಟಿಯಿಂದ ಇಷ್ಟು ಹಣ ತೆತ್ತು ಸದಸ್ಯರಾಗಲು ಹಿಂಜರಿಯಲಿಕ್ಕಿಲ್ಲವೆಂದು ಹೇಳಬಹುದು. ಆದರೆ, ಅವರು ಕಾಂಗ್ರೆಸಿನ ಕಾರ್ಯಕ್ರಮಗಳಲ್ಲಿ ಸದಾ ಕಾಲ ಆಸಕ್ತಿಯನ್ನು ತೆಗೆದುಕೊಳ್ಳುವಂತೆ ನೋಡಿಕೊಳ್ಳುವುದೇ ಕಠಿಣವಾದ ಕಾರ್ಯ. ಅದೂ ಅಲ್ಲದೆ, ಹಾಗೆ ಕಾಂಗ್ರೆಸು ಸದಸ್ಯರನ್ನು ಸೇರಿಸಿಕೊಳ್ಳಲು ಪ್ರಯತ್ನಿಸುವವರು ಯಾರು? ಈಗಿನ ಸದಸ್ಯರೇ ಅದಕ್ಕೆ ಸೊಂಟ ಕಟ್ಟಬೇಕಾಗುತ್ತದೆ. ಆದರೆ ಪಾಟೀಲರೇ ಹೇಳುವಂತೆ "ರಾಜಕೀಯ ಸ್ವಾತಂತ್ರ್ಯವು ಭಾರತಕ್ಕೆ ದೊರೆತ ಕೂಡಲೇ ಸಂಸ್ಥೆಯಲ್ಲಿ ಸೋಮಾರಿತನವು ನೆಲೆಯೂರಿತು. ಕಾಂಗ್ರೆಸು ಕಾರ್ಯಕರ್ತರು ದೇಶದ ಭವಿಷ್ಯದ ವಿಚಾರ ಮಾಡುವುದನ್ನು ಬಿಟ್ಟು ಕೊಟ್ಟರು; ಸ್ಥಾನಮಾನಗಳ ಹಿಂದೆ ಓಡ ತೊಡಗಿದರು. ಜನತೆಯ ಪ್ರೀತಿ ವಿಶ್ವಾಸಗಳ ಬೆಂಬಲ ಪಡೆಯುವ ಕ್ರಮದ ಬದಲು ನೆಹರುಗಳ ವ್ಯಕ್ತಿತ್ವವನ್ನೇ ನಂಬಿ ಕುಳಿತರು. ಹೀಗೆ ಒಬ್ಬ ವ್ಯಕ್ತಿಯನ್ನು ಆಶ್ರಯಿಸಿರುವ ಕಾಂಗ್ರೆಸಿನ ಪ್ರಜಾಪ್ರಭುತ್ವವು ಸರ್ವಾಧಿಕಾರದ ಛಾಯೆಯಾಗಿರುವಂತೆ ಭಾಸವಾಗುತ್ತದೆ; ಮತ್ತದು ರಾಷ್ಟ್ರದ ಉತ್ಕರ್ಷದ ದೃಷ್ಟಿಯಿಂದ ಗಂಡಾಂತರಕಾರಿಯಾದುದೂ ನಿಜ" ಎಂದು ಪಾಟೀಲರು ಎಚ್ಚರಿಸಿದರು. ಮೇಲಿನೆಲ್ಲ ಮಾತುಗಳೂ ಕಾಂಗ್ರೆಸನ್ನು ಬಲಗೊಳಿಸುವ ಸಮಸ್ಯೆಯ ಮೇಲೆ ವಿಶೇಷವಾದ ಬೆಳಕನ್ನು ಚೆಲ್ಲುತ್ತವೆ ಎಂದು ನಮ್ಮ ಸ್ಪಷ್ಟ ಅಭಿಪ್ರಾಯ. ಕಾಂಗ್ರೆಸು ಸಂಸ್ಥೆಯು ಹಳಬರ ಮತ್ತು ಸೋಮಾರಿಗಳ ಕೂಟವಾಗಿ ಪರಿಣಮಿಸಬಾರದು—ಸ್ವಾತಂತ್ರ್ಯಕ್ಕೋಸ್ಕರ ಹೋರಾಟವನ್ನು ಕೊಟ್ಟ ಪ್ರಭೃತಿಗಳಿಂದ, ಹಣ್ಣೆಲೆಯಾಗಿದ್ದು, ಯಾವ ಕಾಲಕ್ಕೂ ಉದುರಿ ಬೀಳಬಲ್ಲರು; ಅಥವಾ ತೆರೆಯ ಹಿಂದೆ ಸರಿದು ನಿಲ್ಲಬಲ್ಲರು. ಅವರ ಸ್ಥಾನವನ್ನು ಶೂನ್ಯವಾಗಿಡಗೊಡದೆ ಕರ್ತೃತ್ವಶಾಲಿಗಳನ್ನು ಅಲ್ಲಿ ತುಂಬಬೇಕಿರುವುದರಿಂದ ಯುವಕರನ್ನು ಕಾಂಗ್ರೆಸು ಹೆಚ್ಚಾಗಿ ಆಕರ್ಷಿಸಿಕೊಳ್ಳಬೇಕು. ಜೀವದ ಪುನಾರಚನೆಯ ಕ್ಷೇತ್ರದಲ್ಲಿ ಹಳೆಯ ಕಾಂಗ್ರೆಸಿಗರಿಗಿಂತಲೂ ಉತ್ಸಾಹಿಗಳಾದ ತರುಣ ತರುಣಿಯರೇ ಹೆಚ್ಚು ಪ್ರಭಾವಿಯಾದ ಪಾತ್ರವನ್ನು ನಿರ್ವಹಿಸಬಲ್ಲರು. ಅವರನ್ನು ಕಾಂಗ್ರೆಸು ಸಂಸ್ಥೆಯು ಪ್ರೀತಿಯಿಂದ ಸ್ವಾಗತಿಸಬೇಕು; ಅಲ್ಲದೆ, ಇದಕ್ಕೋಸ್ಕರ ಸಭೆ, ಸಮ್ಮೇಳನಗಳನ್ನು ಜರಗಿಸಿ ಯುವಕರ ಮನೋಭಾವ ಜಾಗೃತವಾಗುವಂತೆ ಭರದಿಂದ ಪ್ರಚಾರವನ್ನು ಕೈಗೊಳ್ಳಬೇಕು. ರಾಜಕೀಯದಲ್ಲಿ ಆಸಕ್ತಿಯಿರದ ಯಾವ ಸುಶಿಕ್ಷಿತ ಯುವಕನೂ ಯುವತಿಯೂ ಇಂದು ನೋಡಸಿಗಲಿಕ್ಕಿಲ್ಲ—ಆದುದರಿಂದ ಅವರನ್ನು ಕಾಂಗ್ರೆಸಿನ ಕಡೆಗೆ ಸೆಳೆದುಕೊಳ್ಳುವ ಮತ್ತು ಅವರ ಮೂಲಕ ಪ್ರತಿಯೊಂದೂ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸಿನ ಪುನರುಜ್ಜೀವನಕ್ಕೆ ಪ್ರಯತ್ನಿಸುವ ಕಾರ್ಯಕ್ರಮಗಳನ್ನು ಈಗಿನ ಹಿರಿಯರು ಮತ್ತವರ ಬೆಂಬಲಿಗರು ರಾಷ್ಟ್ರದ, ಅದಕ್ಕೂ ಹೆಚ್ಚಾಗಿ ಸಂಸ್ಥೆಯ, ಭದ್ರಭವಿಷ್ಯದ ದೂರದೃಷ್ಟಿಯಿಂದ ವಿಳಂಬಿಸದೆ ಕೈಗೊಳ್ಳಬೇಕೆಂದು ನಾವು ನಮ್ರತೆಯಿಂದ ವಿನಂತಿಸುತ್ತೇವೆ. ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ಆವಡಿಯ ಸಂದೇಶವನ್ನು ಎಷ್ಟರ ಮಟ್ಟಿಗೆ ಜನರಲ್ಲಿ ಪ್ರಚಾರಗೊಳಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಕೇಳಿರುವರೆಂದು ವರದಿಯೊಂದು ಹೇಳುತ್ತದೆ. ಆದರೆ ನಮ್ಮಲ್ಲಿಯ ವಾಸ್ತವ ಪರಿಸ್ಥಿತಿಯನ್ನು ನೋಡಿದರೆ, ಈ ವಿಷಯದಲ್ಲಿ ಯಾವ ಹೆಜ್ಜೆಯನ್ನೂ ಸಾಕಷ್ಟು ಪ್ರಭಾವಶಾಲಿಯಾದ ರೀತಿಯಲ್ಲಿ ಕಾಂಗ್ರೆಸು ಸಂಸ್ಥೆಗಳೂ ಕಾರ್ಯಕರ್ತರೂ ಇಟ್ಟಿರುವಂತೆ ತೋರುವುದಿಲ್ಲ. ಕಟ್ಟುನಿಟ್ಟಿನ ಆಜ್ಞೆಗಳನ್ನಿತ್ತರೂ ಅವುಗಳನ್ನು ಉಪೇಕ್ಷಿಸುವಷ್ಟು ನಿಷ್ಕ್ರಿಯಾವಸ್ಥೆಗೆ ಹೊಣೆಗಾರ ವ್ಯಕ್ತಿಗಳು ಮುಟ್ಟಿದ್ದಾರೆ. ಇಂಥವರ ಕೈಯಲ್ಲಿ ಸಂಸ್ಥೆಯ ಪುನರುಜ್ಜೀವನವಾಗುವುದೆಂಬ ಆಸೆ ದುರಾಸೆಯಾಗದಿರದು. ಕಾಂಗ್ರೆಸಿನ ಪುನರುಜ್ಜೀವನದ ಸಮಸ್ಯೆಯ ಸಮರ್ಥ ಪರಿಹಾರವು ಜನರಲ್ಲಿ ಪ್ರಚಾರ ಮತ್ತು ರಚನಾತ್ಮಕ ಕಾರ್ಯಗಳಿಂದ ಜಾಗೃತಿ ಹುಟ್ಟಿಸುವುದರಲ್ಲಿಯೇ ಇದೆ ಎಂಬುದನ್ನು ಎಷ್ಟು ಸಲ ಒತ್ತಿಯೊತ್ತಿ ಹೇಳಿದರೂ ಕಡಿಮೆಯಾದೀತು.

ದಕ್ಷಿಣ ವೀಟನಾಮಿನಲ್ಲಿ ಯಾದವಿ ಯುದ್ಧ

ಬಾವ್ರೊ ದ್ಯಾಯುವರ ಪದಚ್ಯುತಿ

ನಾಲ್ಕೈದು ವಾರಗಳ ಯುದ್ಧ ಸ್ತಂಭನದ ಬಳಿಕ ಕಳೆದ ವಾರ ದಕ್ಷಿಣ ವೀಟನಾಮಿನ ರಾಜಧಾನಿಯಾದ ಸೈಗಾನಿನಲ್ಲಿ ಮರಳಿ ಅಂತಃಕಲಹದ ಜ್ವಾಲೆ ಉರಿದೆದ್ದಿತು. ಪ್ರಧಾನಿ ಡೀಮರಿಗೂ ಖಾಸಗಿ ಸೇನೆಗಳ ಮುಂದಾಳುಗಳಿಗೂ ಚಕಮಕಿಯುಂಟಾಗಿ ಐನೂರಕ್ಕೂ ಹೆಚ್ಚು ಮಂದಿ ಯುದ್ಧದಲ್ಲಿ ಸತ್ತರು.

ರಾಜಾಜ್ಞೆಯ ಉಲ್ಲಂಘನೆ

ಇಲ್ಲಿಯ ರಾಜರಾದ ಬಾವ್ರೊದ್ಯಾ ಫ್ರಾನ್ಸಿನ ಕ್ಯಾನೆಸ್ ನಗರದಲ್ಲಿಯೇ ಈಗಲೂ ಇದ್ದಾರೆ. ಅವರು ಅಲ್ಲಿಂದಲೇ ಡೀಮರಿಗೊಂದು ಸಂದೇಶ ಕಳಿಸಿ ಅಂತಃಕಲಹವನ್ನು ಕೊನೆಗೊಳಿಸುವ ಉದ್ದೇಶದಿಂದ ಮಾತುಕತೆ ನಡೆಸಲು ತಾನಿದ್ದಲ್ಲಿಗೆ ಬರಬೇಕೆಂದು ಅಪ್ಪಣೆಕೊಟ್ಟರು. ಆದರೆ ಪ್ರಧಾನಿಗಳು ಅದನ್ನು ಮನ್ನಿಸಲಿಲ್ಲ. ಇದನ್ನು ನೋಡಿದ ಬಾವ್ರೊದ್ಯಾ ಎರಡನೆಯ ಹಾಗೂ ಕೊನೆಯ ಎಚ್ಚರಿಕೆಯನ್ನು ಕೊಟ್ಟು ತಾನಿದ್ದಲ್ಲಿ ಬರಬೇಕೆಂದೂ ಸೇನೆಯ ಪ್ರಧಾನಿ ಪಟ್ಟವನ್ನು ಜನರಲ್ ವೀ ಎಂಬವರಿಗೆ ವಹಿಸಿಕೊಡಬೇಕೆಂದೂ ತಿಳಿಸಿದರು.

ಚೋದ್ಯದ ಪ್ರಸಂಗ

ಆದರೆ ಈ ಆಜ್ಞೆಗೂ ಬೆಲೆಬರಲಿಲ್ಲ. ಬದಲು ಚೋದ್ಯದ ಪ್ರಸಂಗವೇ ನಡೆಯಿತು. ಜನರಲ್ ವೀಯವರು ಸೇನೆಗಳ ಪ್ರಧಾನ ಪಟ್ಟವನ್ನು ವಹಿಸಿಕೊಳ್ಳಲೆಂದು ಡೀಮರಿದ್ದಲ್ಲಿಗೆ ಬಂದೊಡನೆಯೇ ಕೈಸೆರೆ ಹಿಡಿಯಲ್ಪಟ್ಟರು; ಮತ್ತು ಅವರ ಬಾಯಿಂದ ತಾವು ಬಾವ್ರೊದ್ಯಾಯವರ ಆಜ್ಞೆಯನ್ನು ಪಾಲಿಸುವುದಿಲ್ಲವಾಗಿ ಒತ್ತಾಯದಿಂದ ಹೇಳಿಸಲಾಯಿತು. ಹಿಂದಿನಿಂದ ಅವರು ಓಡಿಹೋದರೆಂದೂ ವದಂತಿಗಳು ಹೇಳುತ್ತವೆ.

ಕ್ರಾಂತಿಕಾರರ ನಿಶ್ಚಯ

ತಂತ್ರವು ಇಷ್ಟಕ್ಕೆ ನಿಂತಿಲ್ಲ— ಡೀಮರಿಗೆ ನಿಷ್ಠೆಯನ್ನು ವ್ಯಕ್ತಪಡಿಸಿದ ಸೈನ್ಯವು ಬಾವ್ರೊದ್ಯಾಯವರನ್ನು ಪದಚ್ಯುತಗೊಳಿಸುವುದಕ್ಕೂ ಮುಂದಾಯಿತು. ಬಾವ್ರೊದ್ಯಾಯವರು ಫ್ರೆಂಚರ ಸೂತ್ರದ ಗೊಂಬೆ ಎಂದು ಮುಂತಾಗಿ ಅವರನ್ನು ಅವಹೇಳನಗೈದು, ಕ್ರಾಂತಿಕಾರ ಪ್ರಜಾಸತ್ತಾತ್ಮಕ ಶಕ್ತಿಗಳ ಕೂಟವೊಂದನ್ನು ಅದು ರಚಿಸಿತು; ಮತ್ತು ದಕ್ಷಿಣ ವೀಟನಾಮನ್ನು ಗಣರಾಜ್ಯವಾಗಿ ಘೋಷಿಸಿತು.

ಅಮೇರಿಕದ ಚಾಲನೆ

ಡೀಮರಿಗೆ ಅಮೇರಿಕದ ಬೆಂಬಲವಿದೆ ಎಂಬುದು ಸ್ಪಷ್ಟ; ಆದರೆ ಈ ಅಂತಃಕಲಹಕ್ಕೆ ಉತ್ತೇಜನ ಕೊಡುವುದರಿಂದ ಅಮೇರಿಕಕ್ಕೇನು ಲಾಭವೋ ಗೊತ್ತಾಗುವುದಿಲ್ಲ. ಇಷ್ಟು ಮಾತ್ರ ಹೇಳಬಹುದು— ಜಿನೇವಾ ಒಡಂಬಡಿಕೆಯಂತೆ ಇನ್ನು ಕೆಲವೇ ತಿಂಗಳಲ್ಲಿ ಉತ್ತರ ಮತ್ತು ದಕ್ಷಿಣ ವೀಟನಾಂಗಳಲ್ಲಿ ಚುನಾವಣೆ ನಡೆಯಬೇಕಾಗಿದೆ; ದಕ್ಷಿಣ ವೀಟನಾಮಿನಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನೆಲೆಗೊಂಡರೆ ಈ ಚುನಾವಣೆ ಸ್ವಾಭಾವಿಕವಾಗಿ ಮುಂದೆ ಬೀಳುತ್ತದೆ. ಈಗಿನ ಪರಿಸ್ಥಿತಿಯಲ್ಲಿ ದಕ್ಷಿಣ ವೀಟನಾಮಿನಲ್ಲೂ ಕಮ್ಯೂನಿಸ್ಟರ ವರ್ಚಸ್ಸು ಕಂಡುಬರುತ್ತಿರುವುದರಿಂದ ಚುನಾವಣೆ ಮುಂದೆ ಬೀಳುವುದೇ ಅಮೇರಿಕಕ್ಕೆ ಸಮ್ಮತವಾದ ವಿಷಯ.

ನೆಹರುಗಳ ಹೇಳಿಕೆ

ಬಾಂಡುಂಗಿನ ಪರಿಷತ್ತು ಫಲಪ್ರದವಾಯಿತೆಂದೂ ಅಲ್ಲಿ ಪಂಚ ಶೀಲಗಳಲ್ಲಿ ಅಡಕವಾದ ತತ್ವಗಳನ್ನೇ ಎಲ್ಲ ರಾಷ್ಟ್ರಗಳ ಸಮ್ಮತಿಗಳಿಸುವಂತೆ ತುಸು ಪರಿವರ್ತಿಸಲಾಯಿತೆಂದೂ ನೆಹರುಗಳು ಲೋಕಸಭೆಯಲ್ಲಿ ಭಾಷಣ ಮಾಡುತ್ತ ತಿಳಿಸಿದರು; ಮತ್ತು ಆಫ್ರೋಏಷ್ಯ ಪರಿಷತ್ತಿನ ನಿರ್ಣಯಗಳನ್ನು ಭಾರತವು ಸಂಪೂರ್ಣ ಬೆಂಬಲಿಸುವುದೆಂದು ಸಾರಿದರು.

ಚೀನದ ನಿರ್ಧಾರ

ಪರಿಷತ್ತು ನಡೆದಿದ್ದಾಗ ಚೀನದ ಪ್ರಧಾನ ಮಂತ್ರಿಗಳು [illegible] ಫಾರ್ಮೋಸ [illegible] ವನ್ನು [illegible] ಮಾತುಕತೆ ನಡೆಸಲು ಚೀನ ಸಿದ್ಧವಿರುವುದೆಂದು ಹೇಳಿದರು. ಚೀನದ ನೆಲದಿಂದ ತನ್ನ ಹಕ್ಕುಗಳನ್ನು ಬಿಟ್ಟುಕೊಡದೆ, ತಾತ್ಕಾಲಿಕ ವ್ಯವಸ್ಥೆಯ ಬಗ್ಗೆ ಪರ್ಯಾಲೋಚಿಸಬಹುದು ಎಂಬುದೇ ಚೀನದ ಅಭಿಪ್ರಾಯ.

(ಆರನೇ ಪುಟ ನೋಡಿರಿ)

THE VIJA…

BALANCE SHEET AS…

CAPITAL & LIABILITIES		Rs. As. Ps.	Rs. As…
1. Capital:			
AUTHORISED CAPITAL:			
24 000 shares of Rs. 50/- each		12,00,000 0 0	
32,000 shares of Rs. 25/- each		8,00,000 0 0	20,00,000 0
ISSUED & SUBSCRIBED CAPITAL:			
24,000 shares of Rs. 50/- each		12,00,000 0 0	
12,000 shares of Rs. 25/- each		3,00,000 0 0	15,00,000 0
AMOUNT CALLED UP:			
On 24,000 shares of Rs 50/- each at Rs. 25/- per share		6,00,000 0 0	
On 12,000 shares of Rs. 25/- each at Rs. 25/- per share		3,00,000 0 0	
		9,00,000 0 0	
Less allotment money due		17,575 4 0	
		8,82,424 12 0	
Add Calls in advance		24,975 0 0	9,07,399 12
2. Reserve Fund and other Reserves			2,00,545 9
3. Deposits and other Accounts:			
Fixed Deposits		40,34,838 15 4	
Savings Bank Deposits		5,49,411 6 10	
Current Accounts, Contingency Accounts, etc.		5,46,570 6 1	51,30,820 12
4. Borrowings from other Banking Companies, Agents, etc:			
(i) In India		Nil	
(ii) Outside India		Nil	Nil
5. Bills Payable:			17,661 10
6. Bills for Collection being Bills Receivable as per contra:			
(i) Payable in India		47,410 6 0	
(ii) Payable outside India		4,995 0 0	52,405 6
7. Other Liabilities:			1,03,520 11
8. Acceptances, Endorsements and other obligations per contra:			Nil
9. Profit & Loss :			
Profit as per last Balance Sheet		48,419 10 5	
Less Appropriations:—			
To Statutory Reserve	Rs. 16,000 0 0		
,, Dividend at 3% free of Income Tax	Rs. 26,364 11 6		
,, Contingency Reserve	Rs. 4,000 0 0		
,, Bonus to Staff	Rs. 2,000 0 0	48,364 11 6	
Balance brought forward		54 14 11	
Add: Profit for the year brought from the Profit & Loss A/c...		56,923 11 8	56,978 10
10. Contingent Liabilities:		Nil	
Total ...			64,69,341 8

Office of The Vijaya Bank, Ltd., Mangalore, Dated, 27—2—1955.

(Sd) K. B. SHETTY. ,, K. P. B. SHETTY ,, A. S. M. RAI. (Sd) K. C. ALVA. ,, N. M. ADYANTHAYA ,, M. G. G. N. RAI. (Sd) K. ACHANNA SHETTY ,, B. M. HEGDE. ,, M. SUNDERRAMA SHETTY. (Sd) S. S. SHETTY. ,, B. B. SHETTY. ,, K. M. HEGDE } DIRECTORS.

PROFIT AND LOSS ACCOUNT FOR…

EXPENDITURE	Rs. As…
1. Interest paid on Deposits, Borrowings, etc., ...	1,50,645 1
2. Salaries and Allowances and Provident Fund (Secretary's salary and allowances Rs. 2,620—8—0)	93,487 1…
3. Directors and Local Committee Members' fees and allowances	2,252 1…
4. Rent, Taxes, Insurance, Lighting etc.	40,827 1…
5. Law Charges	563 1…
6. Postage, Telegrams and Stamps	2,730 …
7. Auditor's Fees and travelling expenses	1,150 …
8. Depreciation on and repairs to Banking Company's property	6,000 1…
9. Stationery, Printing, Advertisement, etc., ...	9,144 …
10. Loss from the sale of or dealing with non-Banking Assets	Nil
11. Other expenditure	8,372 1
12. Balance of Profit	56,923 11
Total ...	3,72,098 11

Office of The Vijaya Bank, Ltd., Mangalore, Dated, 27—2—1955.

(Sd.) K. B. SHETTY. ,, K. P. B. SHETTY ,, A. S. M. RAI. (Sd) K. C. ALVA. ,, N. M. ADYANTHAYA ,, M. G. G. N. RAI. (Sd) K. ACHANNA SHETTY. ,, B. M. HEGDE. ,, M. SUNDERRAMA SHETTY. (Sd) S. S. SHETTY. ,, B. B. SHETTY. ,, K. M. HEGDE. } DIRECTORS.

AUDITOR'S REPORT TO THE SHARE HOL…

I have audited at the Head Office and Branches, the Balance Sheet of the Vijaya Bank, Limited as at 31st December 1954 and also the Profit a… the Head Office and the Branch Offices on the dates of my visits. I report that:— (1) I have obtained all the information and explanations I have re… correct view of the state of the Bank's affairs according to the best of my information and the explanations given to me and as shown by the books of the…

BANK LTD.

ST DECEMBER, 1954.

PROPERTY & ASSETS	Rs. As. Ps.	Rs. As. Ps.
...h:		
In hand and with Reserve Bank and Imperial Bank		9,68,578 11 9
...lances with other Banks:		
(i) In India—On Current A/c	1,50,692 15 11	
On Fixed Deposits	1,13,600 0 0	
(of which receipt for Rs. 1,00,000 lodged with Bankers for O. D. Facility)		
... Outside India	Nil	2,64,292 15 11
...ney at call and short notice:		Nil
...vestment at cost:		11,92,522 9 0
(i) Securities of the Central and State Governments and other Trustee Securities of the face value of Rs. 11,99,200/-, of which securities of the face value of Rs. 2,50,000/- lodged with Bankers for loan Facilities...	11,92,522 9 0	
... Shares (iii) Debentures or Bonds (iv) Other Investments (v) Gold	Nil	
...vances:		36,32,680 2 3
(...r than bad and doubtful debts for which provision has been made to the satisfaction of the Auditor)		
Loans, Cash Credits, Over Drafts etc.		
... In India	34,02,913 3 2	
... Outside India	Nil	
Bills Discounted and purchased		
(excluding Treasury Bills of Central & State Governments)		
... Payable in India	2,17,497 3 1	
... Payable outside India	12,269 12 0	
...ticulars:		
... Debts considered good in respect of which the Banking Company is fully secured	30,15,856 3 5	
... Debts considered good for which the Banking Company holds no other security than the Debtors' personal security	5,56,994 11 6	
... Debts considered good secured by the personal liabilities of one or more parties in addition to the personal security of the Debtors	59,829 3 4	
... Debts considered doubtful or bad, not provided for	Nil	
Debts due by Directors or Officers of the Banking Company or any of them either severally or jointly with any other persons	9,450 1 6	
Debts due by Companies or Firms in which the Directors of the Banking Company are interested as Directors, Partners or Managing Agents, or, in the case of Private Companies, as Members	1,35,876 2 9	
... Maximum total amount of advances, including temporary advances made at any time during the year to Directors or Managers or Officers of the Banking Company or any of them either severally or jointly with any other persons	11,073 6 0	
... Maximum total amount of advances, including temporary advances granted during the year to the Companies or Firms in which the Directors of the Banking Company are interested as Directors, Partners, Managing Agents, or in the case of Private Companies, as Members	1,93,544 6 7	
... Due from Banking Companies	Nil	
...ills Receivable being Bills For Collection, as per contra:		52,405 6 9
Payable in India	47,410 6 9	
Payable outside India	4,995 0 0	
...nstituents' Liabilities For Acceptances, Endorsements and Other Obligations per contra:....		Nil
...emises at cost	27,556 2 4	
Add additions	668 13 9	
	28,225 0 1	
Less depreciation	5,785 15 9	22,439 0 4
...rniture and Fixtures at cost	65,525 8 9	
Less sale	35 0 0	
	65,490 8 9	
Add additions during the year	4,261 8 11	
	69,752 1 8	
Less: Depreciation	19,312 6 9	50,439 10 11
...her Assets:		
Land purchased for Head Office building...	14,595 8 0	
Head Office Building construction Account	36,450 5 0	
Interest receivable on loans and Investments	26,323 8 8	
Stock of Printing and Stationery and books	14,984 3 3	
Advance payment of Income-tax	20,007 9 0	
Income-tax deducted at source	9,260 9 0	
Sundry advances receivable	3,598 10 9	
Telephone, Electric & Rent deposit and Rent Receivable	3,040 0 10	1,28,260 6 6
...on-Banking Assets Acquired in Satisfaction of claims:		
Land and Building at cost and / or estimated realisable value...		1,57,722 9 2
Total :		64,69,341 8 7

(Sd) P. J. SHETTY, *Superintendent.*   (Sd) B. MAHABALA SHETTY, *Secretary.*   (Sd) K. S. R. SHETTY, *Chairman.*

YEAR ENDED 31st DECEMBER, 1954.

INCOME	Rs. As. Ps.
(...provision made during the year for bad and doubtful debts and other usual or necessary provisions)	
...erest and Discount	[illegible] 10 3
...mmission, Exchange and Brokerage	13,431 6 5
...nts	[illegible] 471 13 0
...t Profits on sale of Investments, gold and silver, land, premises and other assets (not credited to reserves or any particular Fund or Account.) ..	Nil
...t Profit on revaluation of Investments, gold and silver, land, premises and other assets .. .	Nil
...come from non Banking Assets, and profit from sale or dealing with such Assets ...	Nil
...her receipts	18,749 13 11
Total ...	3,72,098 11 7

(Sd) P. J. SHETTY, *Superintendent.*   (Sd) B. MAHABALA SHETTY, *Secretary.*   (Sd) K. S. R. SHETTY, *Chairman.*

...HE VIJAYA BANK, LTD.
...unt for the year ended that day in which are incorporated the authenticated returns from the Branches and I have verified cash and securities both at ...my opinion, the Balance Sheet and Profit & Loss Account are drawn up in conformity with the law, (3) Such Balance Sheet exhibits a true and ... In my opinion the books of accounts have been kept by the Bank as required ...

ಕಾರ್ಕಳ: ಕಳೆದ ತಾ. 26ನೇ ಸಂಜೆ ಮುಖ್ಯ ಮಂತ್ರಿ ಶ್ರೀ ನಾಡರರು, ಶ್ರೀ. ಎ. ಬಿ. ಸೆಟ್ಟಿ, ಶ್ರೀ. ಶ್ರೀನಿವಾಸ ಮಲ್ಯ, ಶ್ರೀ. ಬಿ. ವೈಕುಂಠ ಬಾಳಿಗ, ಎಂ. ಎಲ್. ಎ., ಡಾ. ಕೆ. ಕೆ. ಹೆಗ್ಡೆ, ಟಿ. ಎ. ಪೈ, ಎಂ. ಎಲ್. ಎ., ಮೊದಲಾದವರೊಡನೆ ಇಲ್ಲಿಗೆ ಬಂದೊಡನೆ ಸಂಭ್ರಮದ ಸ್ವಾಗತವೀಯಲಾಯಿತು. ಕಾರ್ಕಳ ಪಂಚಾಯತ ಬೋರ್ಡಿನ ಪರವಾಗಿ ಶ್ರೀ. ಆರ್. ಹರಿ ಶೆಣೈಯವರು ಸ್ವಾಗತಿಸಿ ಬೋರ್ಡ್ ಹೈಸ್ಕೂಲಿನ ಸಭಾಸದನದಲ್ಲಿ ಉಡುಪಿಯಿಂದ ಕಾರ್ಕಳಕ್ಕೆ ಒದಗಿಸುವ ಇಲೆಕ್ಟ್ರಿಸಿಟಿಯನ್ನು ಬೆಳಗಿಸುವಂತೆ ವಿನಂತಿಸಿ ಕೊಂಡರು ಮಂತ್ರಿಗಳು ವಿದ್ಯುದ್ದೀಪಗಳನ್ನು ಬೆಳಗಿಸಿದರು. ಜೋಗ್ ಇಲೆಕ್ಟ್ರಿಸಿಟಿ ಎಕ್ಸ್‌ಟೆನ್ಶನಿನ ಇಂಜಿನಿಯರರು ಸಿ. ಆರ್. ಪಾರ್ಥ ಸಾರಥಿಗಳು ಕೆಲವೊಂದು ವಿವರಗಳನ್ನಿತ್ತರು. ಶ್ರೀ. ಹರಿ ಶೆಣೈಯವರು ಪಂಚಾಯತ ಕ್ಷೇತ್ರದ ಅಭಿವೃದ್ಧಿಗಾಗಿ ಕೆಲವೊಂದು ಕೇಳಿಕೆಗಳಿರುವ ಮನವಿಯನ್ನರ್ಪಿಸಿದರು. ಡಾ. ಎನ್. ಎಂ. ಅದ್ಯಂತಾಯರು ಧನ್ಯವಾದಗಳನ್ನಿತ್ತರು. ಪುರಪ್ರಮುಖರು ಏರ್ಪಡಿಸಿದ ಭೋಜನ ಸತ್ಕಾರದಲ್ಲಿ ಮಂತ್ರಿಗಳು ಭಾಗವಹಿಸಿ ರಾತ್ರಿ ಮಂಗಳೂರಿಗೆ ತೆರಳಿದರು.

ಮಲ್ಪೆ:— ತಾ. 27ನೇ ಮಧ್ಯಾಹ್ನ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾದರ, ಶ್ರೀ. ಎ. ಬಿ. ಸೆಟ್ಟಿ ಶ್ರೀ. ಯು. ಯಸ್. ಮಲ್ಯ ಮೊದಲಾದವರೊಂದಿಗೆ ಮಲ್ಪೆಗೆ ಬರುತ್ತಲೇ ಫಿಷರೀಸ್ ಹೈಸ್ಕೂಲಿನ ಮುಖ್ಯಾಧ್ಯಾಪಿಕೆ ಶ್ರೀಮತಿ ಸಾರಾ ಎಸ್. ಅಮೀನ್, ಶ್ರೀ. ರಾಮಪ್ಪ, ಮಂಜಪ್ಪ ಮೊದಲಾದವರು ಸ್ವಾಗತಿಸಿದರು. ಶ್ರೀ ಮಧ್ವರಾಜರು ಬೆಸ್ತರು ಬರಗಾಲ ಪರಿಸ್ಥಿತಿಯಲ್ಲಿರುವರೆಂದೂ ಇವರಿಗೆ ತಕ್ಕ ಪರಿಹಾರ ಒದಗಿಸಬೇಕೆಂದೂ ಮಲ್ಪೆಯಲ್ಲಿ ಒಂದು ಮತ್ಸ್ಯ ಟೆಕ್ನಿಕಲ್ ಕಾಲೇಜು ಗೊಬ್ಬರ ಕಾರ್ಖಾನೆ ತೆರೆಯುವ ಇತ್ಯಾದಿ ಕೇಳಿಕೆಗಳ ಮನವಿಯನ್ನರ್ಪಿಸಿದರು. ಮಂತ್ರಿಗಳು ಮತ್ಸ್ಯವ್ಯವಸಾಯಿಗಳಿಗೆ ಸಾಧ್ಯವಾದ ಸೌಕರ್ಯ ನೆರವು ಒದಗಿಸಲು ಸರಕಾರ ಪ್ರಯತ್ನಿಸುವುದಾಗಿ ಹೇಳಿದರು

ಕುಂದಾಪುರ— ಕಳೆದ ತಾ. 27ರಂದು ಮುಖ್ಯ ಮಂತ್ರಿ ಶ್ರೀ ಕಾಮರಾಜನಾದರ, ಶ್ರೀ ಎ. ಬಿ. ಸೆಟ್ಟಿ, ಶ್ರೀ ಯು. ಎಸ್. ಮಲ್ಯ, ಟಿ. ಎ. ಪೈ, ಡಾ. ಕೆ. ಕೆ. ಹೆಗ್ಡೆ ಮೊದಲಾದವರು ಉಡುಪಿಯಿಂದ ಕುಂದಾಪುರಕ್ಕೆ ಬರುವಾಗ ಭದ್ರಗಿರಿಯಲ್ಲಿ ಶ್ರೀ ಯಸ್. ಯಸ್. ಕೊಳ್ಕೆಬೈಲ್ ಎಂ. ಎಲ್. ಎ. ಬಿ ಜಗಜ್ಜೀವನದಾಸ ಸೆಟ್ಟಿ ಮೊದಲಾದವರು ಸ್ವಾಗತಿಸಿದರು. ಬ್ರಹ್ಮಾವರದಲ್ಲಿ ಪಂಚಾಯತ ಬೋರ್ಡಿನ ಮಾನಪತ್ರವನ್ನು ಸ್ವೀಕರಿಸಿದರು. ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿ ಅಲ್ಲಲ್ಲಿ ಬೇರೆ ಬೇರೆ ಸಂಘಸಂಸ್ಥೆಗಳ ಮನವಿಗಳನ್ನು ಪಡೆದರು. ಕೋಟದ ವಿವೇಕ ಹೈಸ್ಕೂಲಿನಲ್ಲಿ ಪಂಚ್ಯಾತ ಬೋರ್ಡು ಸಹಕಾರಿ ಸಂಘಗಳ ಕಡೆಯಿಂದ ಸ್ವಾಗತವೀಯಲಾಯಿತು. ಸಾಲಿಗ್ರಾಮದಲ್ಲಿ ಇನಾಜಿ ಮುತೇದಾರರ ಮುಕ್ತಳಿಗೆ ಮಂತ್ರಿಗಳು ವಸ್ತ್ರ ಹಂಚಿ ಕುಂದಾಪುರಕ್ಕೆ ಬಂದಾಗ ಸಂಭ್ರಮದ ಸ್ವಾಗತ ಕೊಡಲಾಯಿತು. ಶ್ರೀ ವೈ. ಮಂಜಯ್ಯ ಸೆಟ್ಟಿ ಎಂ. ಎಲ್. ಎ. ರವರು ಸ್ವಾಗತಿಸಿದರು. ಕುಂದಾಪುರ ಪಂಚ್ಯಾತ. ಬೋರ್ಡು ಕಡೆಯಿಂದ ಶ್ರೀ ವೆಂಕಪ್ಪಸೆಟ್ಟರೂ ಸರ್ಕಲ್ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀ ಎನ್. ಎಸ್. ಪರಮೇಶ್ವರಯ್ಯನವರೂ ಮಾನ ಪತ್ರಗಳನ್ನರ್ಪಿಸಿದರು. ಮಂತ್ರಿಗಳು ಸಾರ್ವಜನಿಕ ಭಾಷಣಮಾಡುತ್ತಾ ಪಂಚಾಯತ ಬೋರ್ಡುಗಳು ಜನರ ಸಹಕಾರದಿಂದ ಸ್ಥಳೀಯ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸಬೇಕೆಂದರು. ಶ್ರೀ ಎ. ಬಿ. ಸೆಟ್ಟರು ಕಾಂಗ್ರೆಸು ಸರಕಾರ ಸಾಧಿಸಿದ ಕೆಲಸಗಳನ್ನು ತಮ್ಮ ಭಾಷಣದಲ್ಲಿ ತಿಳಿಸಿದರು. ತಾ 28 ನೇ ಬೆಳಿಗ್ಗೆ ಕಾಳಾವರದಲ್ಲಿ ಶಾಲಾ ಕಟ್ಟಡದ ಉದ್ಘಾಟನೆ ನೆರವೇರಿಸಿ ಪಂಚ್ಯಾತಬೋರ್ಡಿನ ಅಧ್ಯಕ್ಷ ಕಾಮ ಸಂಜೀವ ಸೆಟ್ಟರು ಕೊಟ್ಟ ಮನವಿಯನ್ನು ಸ್ವೀಕರಿಸಿ ಮಂಗಳೂರತ್ತ ಹೊರಟು ಹೋದರು.

ಸಾಪಂಜೆ— ತಾ 28 ನೇ, ಸಂಜೆ ಪಾಪಂಜೆ ಹೊಳೆಯ ಸೇತುವೆಯ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿ ಶ್ರೀ ಕಾಮರಾಜ ನಾದರರು ಶ್ರೀ ಎ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಆರಂಭದಲ್ಲಿ ಇಂಜಿನಿಯರ್ ಶ್ರೀ ಎಂ. ಎನ್. ಕಾಮತರು ಸ್ವಾಗತಭಾಷಣಮಾಡಿದರು. ಚೀಫ್ ಇಂಜಿನಿಯರ್ ಶ್ರೀ ಕೆ. ಕೆ. ನಂಬಿಯಾರರು ದ. ಕ. ಜಿಲ್ಲೆಯಲ್ಲಾದ ಹೈ-ವೇ-ಯ ಕೆಲಸಗಳನ್ನು ವಿವರಿಸಿದರು. ಕೇಂದ್ರ ಸರಕಾರದ ಸಹಾಯ ಧನದಿಂದ ಪಾಪಂಜೆ, ಮೂಲ್ಕಿ, ಉದ್ಯಾವರ ಹೊಳೆಗಳಿಗೆ ಸೇತುವೆ ನಿರ್ಮಿಸಲಾಗುವುದೆಂದರು. ಈ ಮೂರು ಸಂಕಗಳಿಗೆ ಅಂದಾಜು ವೆಚ್ಚ ರೂ. 35ಲಕ್ಷವಿದ್ದು ಈ ಸೇತುವೆಗೆ ಸುಮಾರು ರೂ. 7½ ಲಕ್ಷಖರ್ಚಾಗಬಹುದೆಂದರು. ಶ್ರೀ ಟಿ. ಎಸ್. ನಾರಾಯಣ ಸ್ವಾಮಿಯವರು ಧನ್ಯವಾದಗಳನ್ನಿತ್ತರು.

ಕೊಡ್ಲಮೊಗರು:- ಇಲ್ಲಿಯ ವಾಣಿ ವಿಜಯ ಹೈಸ್ಕೂಲ್‌ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಕಾಮರಾಜನಾದರರು ತಾ. 30ನೇ ಪೂರ್ವಾಹ್ನ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಪುತ್ತೂರು— ತಾ. 30ನೇ ಬೆಳಿಗ್ಗೆ ಮುಖ್ಯಮಂತ್ರಿಗಳು ಆಗಮಿಸಿದಾಗ ಶ್ರೀ ಕೆ. ವೆಂಕಟ್ರಮಣ ಗೌಡ ಎಂ. ಎಲ್. ಎ. ಸಂಜೀವ ಶೆಟ್ಟಿ, ಬೀಮ ಭಟ್, ಬಿ. ಚಿದಾನಂದರಾವ್ ಮೊದಲಾದವರು ಸ್ವಾಗತವಿತ್ತರು ಅರುಣ ಥಿಯೇಟರಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಪಂಚ್ಯಾತ ಬೋರ್ಡಿನ ಮಾನಪತ್ರ ಅರ್ಪಿಸಲಾಯಿತು. ಮಲೆನಾಡಿಗರ ಕಡೆಯಿಂದ ಶ್ರೀ ಎನ್. ಎಂ. ಬಾಲಕೃಷ್ಣ ಅವರು ಮನವಿಯೊಂದನ್ನರ್ಪಿಸಿ ಮಲೆನಾಡಿನ ಸಾರಿಗೆಯ ಆವಶ್ಯಕತೆ, ಹೊಳೆಗಳಿಗೆ ಸಂಕ, ವೇಣೂರು ಮತ್ತು ಬೆಳ್ತಂಗಡಿಗಳಲ್ಲಿ ಹೈಸ್ಕೂಲುಗಳ ಆವಶ್ಯಕತೆಗಳನ್ನು ವಿವರಿಸಿದರು. ಬಳಿಕ ಪುತ್ತೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಮನವಿಯನ್ನು ಸ್ವೀಕರಿಸಿ ವಿಟ್ಲಕ್ಕೆ ತೆರಳಿ ಸಾರ್ವಜನಿಕ ಸಭೆಯಲ್ಲಿ ಬಿನ್ನವತ್ತಳೆ ಸ್ವೀಕರಿಸಿ ಬಾಣೆ ಮಂಗಳೂರು ಬಂಟ್ವಾಳಗಳಲ್ಲಿ ಏರ್ಪಡಿಸಲಾದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ ಮಂಗಳೂರಿಗೆ ತೆರಳಿದರು.

ಕಿದಿಯೂರು— ತಾ 8-5 55 ನೇ ಅಪರಾಹ್ನ 3 ಗಂಟೆಗೆ ಹಳೇ ವಿದ್ಯಾರ್ಥಿ ಸಂಘದ ಮಹಾ ಸಭೆ ಜರಗಲಿರುವುದೆಂದೂ ಹಳೇ ವಿದ್ಯಾರ್ಥಿಗಳು ಬರಬೇಕೆಂದೂ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬೆಳ್ವಾಯಿ— ಬೋರ್ಡುಹಾಯರ್ ಎಲಿಮೆಂಟರಿ ಶಾಲೆಯ ಮಕ್ಕಳ ಮಾತೆಯರ ದಿನಾಚರಣೆಯು ಕಳೆದ ತಾ 26 ರಲ್ಲಿ ಶ್ರೀಮತಿ ಎಚ್. ಪಾರ್ವತಿ ಎಂ. ಎ. ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು. ಮಾತೆಯರ ಸಮಿತಿಯ ಅಧ್ಯಕ್ಷೆ ಶ್ರೀಮತಿ ರುಕ್ಮಿಣಿ ಎನ್. ಶೇಕರು ಸ್ವಾಗತ ಭಾಷಣಮಾಡಿದರು. ಅಂತ್ಯದಲ್ಲಿ ವಿವಿಧ ವಿನೋದಾವಳಿಗಳಿದ್ದುವು.

ಹಳೇ ವಿದ್ಯಾರ್ಥಿ ಸಂಘದ ವಸಂತೋತ್ಸವವು ಮಂಗಳೂರು ನಗರ ಸಭಾಧ್ಯಕ್ಷ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಪೆರ್ಡೂರು— ಬಿ. ಇ. ಎಂ. ಹಾ। ಎ। ಶಾಲೆಯ ವಾರ್ಷಿಕೋತ್ಸವವು ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ತಾ 1 ರಂದು ಯಥಾಪ್ರಕಾರ ನೆರವೇರಿತು.

ಕಡೆಕಾರು— ಕೃಷ್ಣಮೂರುತಿ ವ್ಯಾಯಾಮ ಶಾಲೆಯ ವಾರ್ಷಿಕೋತ್ಸವವು ಕಳೆದ ತಾ 25 ರಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ರಾಮ ಸಾಲಿಯಾನರು ವರದಿಯನ್ನೋದಿದರು. ಸಭಿಕರಲ್ಲಿ ತಹಶಿಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯ, ಶ್ರೀ ಎ. ಜೆ. ಆಳ್ವ ಮೊದಲಾದವರು ಮಾತನಾಡಿದರು. ಅಂತ್ಯದಲ್ಲಿ ವ್ಯಾಯಾಮ ಪ್ರದರ್ಶನ ಸಂಗೀತಾದಿ ಕಾರ್ಯಕ್ರಮಗಳಿದ್ದುವು.

ಕುಂಬಳೆ— ತಾ 24 ರಂದು ಡಾ. ಟಿ. ಮಾಧವ ಪೈಗಳವರಿಗೆ ಶ್ರೀ ಐ. ಸಿ. ಭಂಡಾರಿಯವರ ಅಧ್ಯಕ್ಷತೆಯಲ್ಲಿ ಸ್ವಾಗತ ಸತ್ಕಾರವೊಂದು ನಡೆದು ಹಲವರ ಭಾಷಣಗಳಾದುವು.

ಬೊಬ್ಬೆಕೇರಿ— ಶಾಲಾವಠಾರದ ಸಮೀಪ ಸರಕಾರಿ ಬಾವಿಯೊಂದು ತೋಡಲ್ಪಟ್ಟು ಆಸುಪಾಸಿನ ಜನರಿಗೆ ತುಂಬ ಉಪಯೋಗವಾಗಿದೆಯೆಂದು ಊರವರೊಬ್ಬರು ಬರೆಯುತ್ತಾರೆ

ಉಡುಪಿ

ಮೋಡರ್ನ್ ಹಾ। ಎ। ಶಾಲೆಯ ವರ್ಧಂತಿಯು ಕಳೆದ ತಾ 27 ರಂದು ವಕೀಲ್ ಬಿ ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ವರ್ಧಂತ್ಯುತ್ಸವ ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರಿಂದ ಸ್ವಾಗತಭಾಷಣ, ಮುಖ್ಯೋಪಾಧ್ಯಾಯರಿಂದ ವರದಿವಾಚನ, ಶ್ರೀ ಎ. ಜೆ. ಆಳ್ವೆಯವರಿಂದ ಟ್ರಸ್ಟಿನ ಪರಿಚಯ ನಿರೂಪಣ, ಶ್ರೀ ಯು. ವ್ಯಾಸರಾಯರಿಂದ ಸ್ವಸ್ತಿವಾಚನ, ವಿಜಯೇಂದ್ರ ಪಡಿಯಾರರಿಂದ ಉತ್ತರ, ಅಧ್ಯಕ್ಷರ ಭಾಷಣ, ಮೆನೇಜರ ಶ್ರೀ ಕೆ. ಜಗನ್ನಾಥ ನಾಯಕರಿಂದ ಆತ್ಮನಿವೇದನೆ ಮತ್ತು ಧನ್ಯವಾದಗಳಾದುವು. ಅನಂತರ ವಿವಿಧ ವಿನೋದಾವಳಿಗಳು ಯಶಸ್ವಿಯಾಗಿ ಜರಗಿಸಲ್ಪಟ್ಟವು. ಬೆಳಿಗ್ಗೆ ನಗರ ಸಭಾಪತಿ ಡಾ। ಪಿ. ವಿ. ವ್ಯಾಸರಾಯರಿಂದ ಧ್ವಜಾರೋಹಣ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರಿಂದ ಲಕ್ಷ್ಮಿ ಡಿಸ್ಪೆ ಮತ್ತು ವಸ್ತುಪ್ರದರ್ಶನದ ಉದ್ಘಾಟನೆ ನಡೆದಿತ್ತು.

ಮರುದಿನ ಹಳೆ ವಿದ್ಯಾರ್ಥಿ ದಿನಾಚರಣೆಯು ಶ್ರೀ ಕೊಚ್ಚಿಕಾರ್ ಜನಾರ್ಧನ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಡಾ। ಕೆ. ಎಲ್. ಆಚಾರ್ಯರು ಕಸ್ತೂರ್ಬಾರವರ ಭಾವಚಿತ್ರ ಅನಾವರಣಮಾಡಿದರು. ಶ್ರೀಮತಿ ರೋಹಿಣಿ ಜನಾರ್ಧನ ಪೈಯವರು ಬಹುಮಾನ ವಿತರಣೆಮಾಡಿದರು. ಶ್ರೀಗಳಾದ ಎ. ಜೆ. ಆಳ್ವ, ಪಿ. ಶೀನ ಶೆಟ್ಟಿ ಮೊದಲಾದವರ ಭಾಷಣಗಳಾದುವು. ಈ ದಿನವೂ ವಿವಿಧ ವಿನೋದಾವಳಿ, ನಾಟಕಗಳು ಜಯಶೀಲವಾಗಿ ಪ್ರದರ್ಶಿಸಲ್ಪಟ್ಟಿತು.

ಸರಸ್ವತಿ ಎ. ಎ. ಶಾಲೆ ಸಿರಿಬೀಡು:— ಇದರ ಮಕ್ಕಳ ಹಬ್ಬ ಸಮಾರಂಭವು ತಾ. 1ರಲ್ಲಿ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಸ್ಥಳಾಂತರ— ಈ ವರೆಗೆ ಉಡುಪಿಯಲ್ಲಿದ್ದ ಇಲೆಕ್ಟ್ರಿಕಲ್ ಕಮರ್ಶಿಯಲ್ ಎಂಡ್ ಕನ್‌ಸ್ಟ್ರಕ್ಷನ್, ಗವರ್ನಮೆಂಟ್ ಇಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟ್ ಇದರ ಆಫೀಸು ಇದೇ ತಾ. 2ರಂದ ಮಂಗಳೂರಿಗೆ, 67-37 ಬ್ರಿಟೊ ಲೇನ್ ಫಳ್ನೀರು ಇಲ್ಲಿಗೆ ವರ್ಗಾಯಿಸಲ್ಪಟ್ಟಿದೆ. ಈ ವರೆಗೆ ಕಟಪಾಡಿ, ಕಾಪು, ಮಾಬುಕಳ, ಮಲ್ಪೆ, ಕಡೆಗಳ ಕನ್‌ಸ್ಟ್ರಕ್ಷನ್ ಕೆಲಸ ಮುಗಿದಿರುತ್ತದೆ. ಇನ್ನು ಕುಂದಾಪುರ, ಕೆಮ್ಮಣ್ಣು, ಉಪ್ಪೂರು, ಬಂಟ್ವಾಳ, ಮೂಲ್ಕಿ, ಪೆಜಮಾಡಿ, ಉಳ್ಳಾಲ ಮೊದಲಾದ ಕಡೆಗಳ ವಿದ್ಯುತ್ ಸರಬರಾಯಿಯ ಕೆಲಸ ನಡೆಯಲಿರುವುದೆಂದು ಅಸಿಸ್ಟಾಂಟ್ ಎಂಜಿನಿಯರ್ ಎಸ್. ಬಿ. ಕೆ. ಶೆಣೈಯವರು ತಿಳಿಸುತ್ತಾರೆ.

ಶಿಕ್ಷಕರ ಸಮ್ಮೇಳನ— ಉಡುಪಿ ತಾಲೂಕು ಎಯ್ಡೆಡ್ ಶಾಲೆಗಳ ಶಿಕ್ಷಕರ ಸಮ್ಮೇಳನವು ತಾ 1 ರಂದು ಶ್ರೀ ಟಿ ಎ. ಪೈ, ಎಂ. ಎಲ್. ಎ. ಗಳ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಭಾಷಣವನ್ನು ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಮಾಡಿದ ತರುವಾಯ ಶ್ರೀ ಟಿ. ಶೀನಪ್ಪ ಹೆಗ್ಡೆಯವರು ,,ಬುನಾದಿ ಶಿಕ್ಷಣದ ಮೂಲ ತತ್ವಗಳು" ಎಂಬ ಕುರಿತಾಗಿಯೂ ಶ್ರೀ ಕೆ. ಪಟ್ಕಲ ಶೆಣೈಯವರು "ಅಮೇರಿಕದಲ್ಲಿ ಪ್ರಾಥಮಿಕ ಶಿಕ್ಷಣ"ದ ಮೇಲೂ ಉಪನ್ಯಾಸಗಳನ್ನಿತ್ತರು. ಅಧ್ಯಕ್ಷರು ವಿದ್ಯಾಭ್ಯಾಸದ ಧ್ಯೇಯವನ್ನು ಒಮ್ಮೆ ಗೊತ್ತುಪಡಿಸಿದರೆ ಅದಕ್ಕೆ ಸಂಬಂಧಿಸಿದ ಅನೇಕ ಸಮಸ್ಯೆಗಳನ್ನು ಸುಲಭದಲ್ಲಿ ಪರಿಹರಿಸಬಹುದು ಎಂದರು.

ಇದಕ್ಕೆ ಮುಂಚೆ ಪ್ರಾ. ಶಿಕ್ಷಕರ ಮಹಾಸಭೆಯು ಶ್ರೀ ವೆಂಕಟಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಫ್ರಾನ್ಸಿಸ್ ದಾಂತಿಯವರು ವರದಿ ಓದಿದರು. ಸಂಘಟನೆ ಮತ್ತು ಕಾರ್ಯಕ್ರಮದ ಕುರಿತು ಶ್ರೀಗಳಾದ ಶ್ರೀನಿವಾಸ ರಾವ್, ಗೋವಿಂದ ಶೆಟ್ಟಿ ಮುಂತಾದವರು ಭಾಷಣವಿತ್ತ ಬಳಿಕ ಕೆಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು. ಹೊಸ ಕಾರ್ಯಕಾರಿ ಸಮಿತಿಯನ್ನಾ ಆರಿಸಲಾಯಿತು.

ಮರ್ಣೆ— ಪ್ರಾಥಮಿಕ ಶಾಲಾ ವಾರ್ಷಿಕೋತ್ಸವವು ಶ್ರೀ ಉಗ್ರಾಣ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಳೇವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ಶ್ರೀ ಎಚ್. ಸಂಜೀವರಾಯರು ನೆರವೇರಿಸಿದರು. ಶ್ರೀ ಎಂ. ಶೇಖರ ಸೆಟ್ಟರಿಂದ ಸ್ವಸ್ತಿವಾಚನ ಮುಖ್ಯೋಪಾಧ್ಯಾಯರಿಂದ ವರದಿವಾಚನ ಮಕ್ಕಳಿಂದ ವಿವಿಧ ವಿನೋದಾವಳಿಗಳು ಜರಗಿದವು.

ಎವರ್ಗಾಳು— ಪಂಚಾಯತ್ ಮತ್ತು ತಾಲೂಕು ಬೋರ್ಡು ಮುಂತಾದುವುಗಳ ಮೂಲಕ ಜನಸೇವೆ ಸಲ್ಲಿಸಿದ್ದ ಎವರ್ಗಾಳು ಬೀಡಿನ ಪಟ್ಟಾಧಿಕಾರಿಗಳಾಗಿದ್ದ ನಾಭಿರಾಜ ಅರಸು ಮಾರಪ್ಪ ಹೆಗ್ಗಡೆಯವರು ತಮ್ಮ 79 ನೇ ವಯಸ್ಸಿನಲ್ಲಿ ತಾ 29 ರಂದು ಸ್ವರ್ಗಸ್ಥರಾದುದು ವಿಷಾದಕರವಿದೆ.

(೫ನೇ ಪುಟದಿಂದ)

ಸರ್ವತ್ರ ಸ್ವಾಗತ

ಇದನ್ನು ಆಫ್ರೇಸ್ಯ ರಾಷ್ಟ್ರಗಳಷ್ಟೇ ಯಲ್ಲ— ಬ್ರಿಟನು ಮತ್ತು ಅಮೇರಿಕಗಳೂ ಸ್ವಾಗತಿಸಿವೆ. ರಾಷ್ಟ್ರೀಯ ಚೀನಕ್ಕೆ ಈ ಮಾತುಕತೆಯಲ್ಲಿ ಭಾಗವಹಿಸಗೊಡಬೇಕೆಂದು ಅಮೇರಿಕ ಮೊದಲು ಹೇಳಿದರೂ ಐಸೆನ್ ಹೋವರರು ಈಗ ಹಾಗೆ ಹಟ ಹಿಡಿಯದಿರಲು ನಿರ್ಧರಿಸಿರುವರೆಂದು ತಿಳಿದು ಬರುತ್ತದೆ.

ಮೆನೋನರ ರಾಯಭಾರ

ಚೀನೀ ಪ್ರಧಾನಿಗಳ ಈ ಮಹತ್ವದ ಘೋಷಣೆಯು ಭಾರತ,ಅಮೆರಿಕ ಮುಂತಾದ ರಾಷ್ಟ್ರಗಳ ವರಿಷ್ಠರ ಮಟ್ಟಿಗೆ ಆಕಸ್ಮಿಕ ವಾಗಿರಲಿಲ್ಲವೆಂದು ಹೇಳಲಾಗುತ್ತದೆ. ಕೆಲವು ತಿಂಗಳುಗಳಿಂದೀಚೆಗೆ ವಿಚಾರ ವಿನಿಮಯಗಳು ನಡೆದಿದ್ದವೆಂದೂ ಚೀನದ ನಿಲುಮೆಯ ಬಗ್ಗೆ ಎಲ್ಲರಿಗೂ ಮನವರಿಕೆಯೂ ಗಿತ್ತೆಂದೂ ಸುದ್ದಿ. ಭಾರತವು ಇಲ್ಲಿ ವಹಿಸಿದ ಪಾತ್ರ ಮಹತ್ವದ್ದಾಗಿದ್ದು, ಮುಂದಿನ ಹಂತಗಳನ್ನು ಗೊತ್ತು ಪಡಿಸಲು ಶ್ರೀ ಕೃಷ್ಣ ಮೆನೊನ್ನರು ಈ ತಿಂಗಳ ಮಧ್ಯದಲ್ಲಿ ಪೇಕಿಂಗಿಗೆ ಪ್ರಯಾಣಿಸುವರು.

ಹೊಸ ಘೋಷಣೆ

ಪಾಕಿಸ್ತಾನದಲ್ಲಿ ಘಟನಾ ಪರಿಷತ್ತನ್ನು ಸೇರಿಸುವ ದಿನವನ್ನು ಈಗ ಅನಿಶ್ಚಿತ ಅವಧಿಯ ವರೆಗೆ ಮುಂದೂಡಲಾಗಿದೆ ಶ್ರೇಷ್ಠ ನ್ಯಾಯಾಲಯಕ್ಕೆ ಸಲಹೆಗಾಗಿ ಒಪ್ಪಿಸಲಾದ ವಿಷಯಗಳ ಮೇಲೆ ಅಭಿಪ್ರಾಯವು ವ್ಯಕ್ತಗೊಳಿಸಲ್ಪಟ್ಟ ಬಳಿಕವೇ ದಿನವನ್ನು ಗೊತ್ತುಪಡಿಸಲಾಗುವುದೆಂದು ಗವರ್ನರ ಜನರಲರು ಸಾರಿದ್ದಾರೆ.

ಪಾಕ ಅಫಘಾನ ಸಂಬಂಧ

ನೆರೆಯ ಆಫಘಾನಿಸ್ತಾನದೊಡನೆ ಈಚೆಗೆ ರಾಯಭಾರಿ ಕಚೇರಿಯ ಮೇಲೆ ದಾಳಿ ನಡೆದ ಪ್ರಸಂಗದಿಂದ ಉಂಟಾದ ಮನಸ್ತಾಪವು ಸೇಡು ತೀರಿಸಿಕೊಳ್ಳಲು ಪಾಕಿಸ್ತಾನದ ಉಗ್ರ ಕ್ರಮಗಳನ್ನು ಕೈಗೊಂಡಿವೆ. ಕಂದಹಾರ ಮತ್ತು ಜಲಾಲಾಬಾದಿನಲ್ಲಿರುವ ತನ್ನ ಕಾರ್ಯಾಲಯವನ್ನು ಪಾಕಿಸ್ತಾನ ಮುಚ್ಚಿ ಬಿಡಲು ನಿರ್ಧರಿಸಿದೆಯಲ್ಲದೆ ಪೆಶಾವರ, ಕ್ವೆಟ್ಟ ಮತ್ತಿತರ ಎರಡು ನಗರಗಳಲ್ಲಿರುವ ಅಫಘಾನಿಸ್ತಾನದ ಕಾರ್ಯಾಲಯಗಳನ್ನು ತೆರವು ಮಾಡಬೇಕೆಂದು ಅದು ಹೇಳಿದೆ.

ಚುನಾವಣೆಯ ಘೋಷಣೆ

ಬ್ರಿಟನಿನಲ್ಲಿ ಚುನಾವಣೆಯ ಘೋಷಣೆಗಳನ್ನು ಟೋರಿಗಳೂ ಕೂಲಿಕಾರರೂ ಕಳೆದವಾರ ಪ್ರಕಟಿಸಿದರು. ಕೂಲಿಕಾರರು ಜಲಜನಕ ಬಾಂಬಿನ ಪ್ರಯೋಗವನ್ನು ನಿರ್ಬಂಧಿಸುವುದು ತಮ್ಮ ಧೋರಣೆಯೆಂದು ತಿಳಿಸಿದ್ದರೆ, ಜಲಜನಕ ಬಾಂಬಿನ ಉತ್ಪಾದನೆ ಮತ್ತು ಸಂಗ್ರಹದಿಂದಲೇ ಸಂಭಾವ್ಯ ಆಕ್ರಮಣದ ಭಯವನ್ನು ಹೋಗಲಾಡಿಸಿ ಶಾಂತ ಜೀವನ ನಡೆಸುವುದು ಸಾಧ್ಯವೆಂದು ಈಗ ಅಧಿಕಾರದಲ್ಲಿರುವ ಟೋರಿಗಳ ಅಭಿಪ್ರಾಯ.

ಮಂಗಳೂರು

ಮುಖ್ಯಮಂತ್ರಿಗಳಿಗೆ ನಗರ ಸಭೆಯವರ ಮಾನ ಪತ್ರ— ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾಡರರು ಕಳೆದ ತಾ 26ನೇ ಬೆಳಿಗ್ಗೆ ಆಗಮಿಸಿದಾಗ ರೈಲ್ವೆ ನಿಲ್ದಾಣದಲ್ಲಿ ಶ್ರೀಗಳಾದ ಕೆ. ವೆಂಕಟ್ರಮಣ ಗೌಡ ಎಂ. ಎಲ್. ಎ; ಕೆ. ಈಶ್ವರ ಎಂ. ಎಲ್. ಎ; ಬಿ. ಆರ್. ಕರ್ಕೇರ, ಬಿ. ಬಿ ಸೆಟ್ಟರೇ ಮೊದಲಾದವರು ಸ್ವಾಗತವಿತ್ತರು. ಹೊರಬರುತ್ತಲೇ ರಿಜರ್ವ್ ದಳದವರು ಗೌರವ ರಕ್ಷೆಯನ್ನರ್ಪಿಸುತ್ತಲೇ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟಿ, ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆ, ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಎಸ್. ನರ್ಸಪ್ಪಯ್ಯ ಎಂ. ಎಲ್. ಸಿ., ಯು. ಶ್ರೀನಿವಾಸ ಮಲ್ಯ, ಎಂ. ಪಿ., ಬಿ. ವೈಕುಂಠ ಬಾಳಿಗ ಎಂ. ಎಲ್. ಎ., ವಿ. ಎಸ್. ಕುಡುವ ಮೊದಲಾದವರು ಮಂತ್ರಿಗಳನ್ನು ಸ್ವಾಗತಿಸಿದರು. ಮಧ್ಯಾಹ್ನ ನಗರ ಸಭೆಯವರು ಮುಖ್ಯ ಮಂತ್ರಿಗಳಿಗೆ ಮಾನ ಪತ್ರವಿತ್ತು ಗೌರವಿಸಿದರು. ಮಾನ ಪತ್ರದಲ್ಲಿ ಶ್ರೀ ನಾಡರರ ರಾಷ್ಟ್ರ ಸೇವೆ, ಕಾರ್ಯದಕ್ಷತೆಯನ್ನು ಕೊಂಡಾಡಿತ್ತಲ್ಲದೆ ಮಂಗಳೂರಿಗೆ ಭೂಗತ ಚರಂಡಿಯೋಜನೆಯನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆನ್ನುವ ನಗರ ಸಭಾ ಕಟ್ಟಡಕ್ಕೆ ಜಿಲ್ಲಾ ಬೋರ್ಡ್ ಆಫೀಸಿನ ಸಮೀಪದ ಖಾಲಿಸ್ಥಳ ಕೊಡಿಸಬೇಕೆನ್ನುವ, ವೆಬ್ಸ್ಟರ್ ಮಾರ್ಕೆಟಿನ ಪುನರ್ನಿರ್ಮಾಣಕ್ಕೆ ಸಾಲವೆತ್ತಲು ಅನುಮತಿ ಕೊಡಬೇಕೆನ್ನುವ ಇತ್ಯಾದಿ ಕೇಳಿಕೆಗಳಿದ್ದುವು. ಮಂತ್ರಿಗಳು ಪ್ರತ ಮ ಧಃ ಸ್ವಾಗತವಿತ್ತುದಕ್ಕೆ ಆ ಭಾ ರ ಸೂ ಚಿಸಿದರು, ಕೇಳಿಕೆಗಳ ಕುರಿತು ಯೋಚಿಸುವುದಾಗಿ ಸೂಚಿಸಿದರು. ನಗರ ಸಭಾ ಕಟ್ಟಡಕ್ಕೆ ಬೇರೆ ಖಾಲಿ ಜಾಗ ತೋರಿಸಿದರೆ ಆ ಕುರಿತು ಪರ್ಯಾಲೋಚಿಸುವುದಾಗಿ ತಿಳಿಸಿದರು.

ಶ್ರೀ ನಾಡರರಿಗೆ ಜಮೀನ್ದಾರರ ಮನವಿ:— ಕಳೆದ ತಾ. 28ರಲ್ಲು ಜಿಲ್ಲೆಯ ಜಮೀನ್ದಾರರ ಕಡೆಯಿಂದ ಶ್ರೀ ಬಿ. ಪುಟ್ಟುಸ್ವಾಮಿಯವರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಭೂಮಾಲಿಕನೊಬ್ಬನನ್ನೇ ನಿಂಗಡಿಸಿ ಕಾನೂನು ತರಬಾರದೆನ್ನುವ, ಈ ಜಿಲ್ಲೆಯ ವೈಶಿಷ್ಟ್ಯವನ್ನು ಲಕ್ಷ್ಯದಲ್ಲಿಟ್ಟು ಕಾನೂನು ರೂಪಿಸಬೇಕೆನ್ನುವ, ಉತ್ಪತ್ತಿಯಲ್ಲಿ ಅರೆವಾಸಿಯಷ್ಟನ್ನು ಗೇಣಿಯಾಗಿ ನಿರ್ಧರಿಸ ಬೇಕೆನ್ನುವ ಇತ್ಯಾದಿ ಕೇಳಿಕೆಗಳ ಮನವಿಯೊಂದನ್ನರ್ಪಿಸಿದರು. ಮುಖ್ಯ ಮಂತ್ರಿಗಳು ಭೂಮಾಲಕ- ಒಕ್ಕಲುಗಳ ಸಮಸ್ಯೆಯನ್ನು ಬೇಗನೇ ಪರಿಹರಿಸಬೇಕಾಗಿದೆ ಎಂದೂ ನಮ್ಮಲ್ಲಿ ಹೆಚ್ಚಿನವರು ಒಕ್ಕಲುಗಳಾಗಿರುವುದರಿಂದ ಅವರು ಆದಷ್ಟು ಕಡಿಮೆ ಗೇಣಿಯಾಗಬೇಕೆಂದು ಬಯಸುತ್ತಾರೆಂದೂ ಸಮಾಜದ ಹಿತ ದೃಷ್ಟಿಯಿಂದ ಈ ಸಮಸ್ಯೆಯನ್ನು ತ್ವರ್ಯ ಪರ್ಯಾಲೋಚಿಸಿ ಕಾನೂನು ತರಲಾಗುವುದೆಂದೂ ಹೇಳಿದರು. ಆರಂಭದಲ್ಲಿ ಶ್ರೀ ಯಚ್. ದಾಸಣ್ಣ ಆಳ್ವರು ಸ್ವಾಗತಿಸಿದರು. ಅಂತ್ಯದಲ್ಲಿ ಶ್ರೀ ಪಿ. ಆರ್. ರಂಗನಾಥ ಪೂಂಜರು ಆಭಾರ ಸೂಚಿಸಿದರು.

ಕಾಂಗ್ರೆಸ್ ಕಾರ್ಯ ಕರ್ತರಿಗೆ ಹಿತೋಪದೇಶ—ಕಳೆದ ತಾ. 28ನೇ ಸಂಜೆ ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಮುಖ್ಯ ಮಂತ್ರಿಗಳನ್ನು ಡಾ. ಯು. ಪಿ. ಮಲ್ಯರು ಸ್ವಾಗತಿಸಿದರು. ಶ್ರೀ. ಬಿ. ಬಿ ಸೆಟ್ಟರು ಮಂಗಳೂರನ್ನು ಸರ್ವ ಋತು ಬಂದರವನ್ನಾಗಿ ಮಾಡಬೇಕೆನ್ನುವ, ಹಾಸನ ಮಂಗಳೂರು ರೈಲ್ವೆ ತ್ವರಿತದಲ್ಲಾಗಬೇಕೆನ್ನುವ ಮನವಿಯನ್ನೂ ಶ್ರೀ ಪಿ.ಲದಾಸ ಸೆಟ್ಟರು ರಾಜಕೀಯ ಸಂತ್ರಸ್ತರಿಗೆ ಕೆಲವೊಂದು ಸವಲತ್ತುಗಳನ್ನೊದಗಿಸಬೇಕೆನ್ನುವ ಮನವಿಯನ್ನೂ ಅರ್ಪಿಸಿದರು. ಆರಂಭದಲ್ಲಿ ಮುಖ್ಯ ಮಂತ್ರಿಗಳು ದಿವಂಗತ ಕೋಚಣ್ಣ ಭಂಡಾರಿಗಳ ಭಾವಚಿತ್ರವನ್ನು ಅನಾವರಣ ಮಾಡಿ ನಾವು ಭಿನ್ನಾಭಿಪ್ರಾಯಗಳನ್ನು ಮರೆತು ಒಕ್ಕಟ್ಟಿನಿಂದ ದುಡಿದು ದೇಶಾಭಿವೃದ್ಧಿ ಕಾರ್ಯಗಳನ್ನು ಸಾಧಿಸಬೇಕೆಂದೂ ಹಿಂದಿಗಿಂತಲೂ ಇಂದು ಉತ್ಸಾಹ ಮತ್ತು ಸೇವಾ ಬುದ್ಧಿ ಹೆಚ್ಚಾಗಿ ಬೇಕಾಗಿದೆ ಎಂದೂ ಹೇಳಿದರು. ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಧನ್ಯವಾದಗಳನ್ನರ್ಪಿಸಿದರು.

ಸಾರ್ವಜನಿಕ ಸಭೆ— ಕಳೆದ ತಾ 29ನೇ ಸಂಜೆ ಕೇಂದ್ರ ಮೈದಾನಿನಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಏರ್ಪಡಿಸಿದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡರರು ಅತ್ಯಂತ ಪರಿಣಾಮಕಾರಿಯಾದ ಭಾಷಣಮಾಡಿದರು. ನಮ್ಮದು ಪ್ರಜಾರಾಜ್ಯವೆಂದೂ ರಷ್ಯವು ಸರ್ವಾಧಿಕಾರಿ ರಾಷ್ಟ್ರವೆಂದೂ ಅಲ್ಲಿ ಯಾವುದೇ ಅಭಿಪ್ರಾಯಸ್ವಾತಂತ್ರ್ಯವಿಲ್ಲವೆಂದೂ ಮಹಾತ್ಮರು ನಾವು ನಡೆಯತಕ್ಕ ದಾರಿತೋರಿಸಿರುವರೆಂದೂ ನಾವೆಲ್ಲರೂ ಪರಸ್ಪರ ಸೌಹಾರ್ದ ಸಹಕಾರಗಳಿಂದ ವರ್ತಿಸಿ ನವಸಮಾಜ ನಿರ್ಮಾಣಗೊಳಿಸಬೇಕೆಂದೂ ಜನಸಾಮಾನ್ಯರಿಗೆ ಸ್ವಾತಂತ್ರ್ಯದ ಸವಿ ತಿಳಿಯಬೇಕಾದರೆ ಸಾಮಾಜಿಕ ಪ್ರಗತಿಯಾಗಬೇಕೆಂದೂ ಇದಕ್ಕಾಗಿ ಕಾಂಗ್ರೆಸು ದುಡಿಯುತ್ತಿದೆಯೆಂದೂ ಕಮ್ಯೂನಿಷ್ಟರು ಮಜೂರರನ್ನು ಪಕ್ಷಾಭಿವೃದ್ಧಿಗಾಗಿ ದುರುಪಯೋಗಗೊಳಿಸಿ ಅಡ್ಡದಾರಿಗೆಳೆಯುತ್ತಾರೆಂದೂ ಎಲ್ಲರೂ ಉತ್ಪಾದನೆ ಹೆಚ್ಚಿಸಲು ಸತತವಾಗಿ ದುಡಿಯಬೇಕೆಂದೂ ಮಂತ್ರಿಗಳು ಹೇಳಿದರು. ಆರೋಗ್ಯಮಂತ್ರಿ ಶ್ರೀ ಎ. ಬಿ. ಸೆಟ್ಟರು ಸಭಾಧ್ಯಕ್ಷತೆ ವಹಿಸಿದ್ದು ತಮ್ಮ ಭಾಷಣದಲ್ಲಿ ಶ್ರೀ ನಾಡರರ ದಕ್ಷತೆಯನ್ನು ಕೊಂಡಾಡಿದರು. ಆರಂಭದಲ್ಲಿ ಶ್ರೀ ಬಿ. ಆರ್. ಕರ್ಕೇರರು ಸ್ವಾಗತಭಾಷಣ ಮಾಡಿದರು. ಶ್ರೀ ಬಿ. ಬಿ. ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ಬೋರ್ಡಿನ ಮಾನಪತ್ರ— ತಾ. 29ನೇ ಅಪರಾಹ್ನ ಮುಖ್ಯಮಂತ್ರಿ ಶ್ರೀ ನಾಡರರು ಜಿಲ್ಲಾ ಬೋರ್ಡಿನ ಮಾನಪತ್ರವನ್ನು ಸ್ವೀಕರಿಸಿದರು ಆರಂಭದಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆಯವರು ಸ್ವಾಗತವನ್ನಿತ್ತರು. ಜಿಲ್ಲೆಯಲ್ಲಾಗ ಬೇಕಾದ ರಸ್ತೆ ಸೇತುವೆಗಳ ನಿರ್ಮಾಣ, ಶಾಲೆಗಳನ್ನು ಒದಗಿಸಲು ಸರಕಾರ ನೀಡಬೇಕಾದ ಸಹಾಯ ಮೊದಲಾದ ವಿಷಯಗಳನ್ನೊಳಗೊಂಡ ಮಾನಪತ್ರಕ್ಕೆ ಮಂತ್ರಿಗಳು ಉತ್ತರಿಸುತ್ತಾ ಜಿಲ್ಲಾ ಬೋರ್ಡ್ ಮತ್ತು ಸರಕಾರ ಪ್ರತ್ಯೇಕ ಪತ್ರೀಕವೆಂದು ತಿಳಿಯಬಾರದೆಂದೂ ಪರಸ್ಪರ ಸಹಕಾರದಿಂದ ಜನಸೇವೆಮಾಡಬೇಕೆಂದೂ ದ್ವಿತೀಯ ಪಂಚವಾರ್ಷಿಕ ಯೋಜನೆಯಿಂದ ಹೆಚ್ಚಿನ ಸಹಾಯ ವಾಗಬಹುದೆಂದೂ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯ ಕಡೆಗೆ ತುಂಬಾ ಲಕ್ಷ್ಯವಿಡಬೇಕೆಂದೂ ಭಾಷಾವಾರು ಪ್ರಾಂತ್ಯರಚನಾಕಾಲದಲ್ಲಿ ನೀವೇ ನಿಮ್ಮ ಭವಿಷ್ಯವನ್ನು ನಿರ್ಧರಿಸಿ ಕೊಳ್ಳತಕ್ಕವರೆಂದೂ ಆದರೆ ನಮ್ಮೊಡನಿರುವ ತನಕ ಇತರ ತಮಿಳುಜಿಲ್ಲೆಗಳಂತೆಯೇ ನಿಮ್ಮನ್ನು ಸೋದರರಂತೆ ನೋಡಲಾಗುವುದೆಂದೂ ಹೇಳಿದರು.

ಬಳಿಕ ಕಲೆಕ್ಟರರ ಬಂಗ್ಲೆಯ ಸಮೀಪ ನೀರು ಸರಬರಾಯಿ ಯೋಜನೆಯಂತೆ ನಳ್ಳಿ ಮೂಲಕ ನಗರಕ್ಕೆ ಬಂದ ನೀರನ್ನು ಶುದ್ಧೀಕರಿಸುವ ಕೆರೆಯ ಶಂಕು ಸ್ಥಾಪನೆಯನ್ನು ಮುಖ್ಯ ಮಂತ್ರಿಗಳು ನೆರವೇರಿಸುತ್ತಾ ನಳ್ಳಿ ನೀರಿನ ಕೆಲಸವು ಶೀಘ್ರವಾಗಿ ನೆರವೇರುವುದೆಂದು ಹೇಳಿದರು.

ಮೂಡುಶೆಡ್ಡೆ ಕ್ಷಯರೋಗಾಸ್ಪತ್ರೆಯ ಉದ್ಘಾಟನೆ— ಯನ್ನು ತಾ 29ನೇ ಬೆಳಿಗ್ಗೆ ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡರರು ನೆರವೇರಿಸುತ್ತಾ ಪ್ರಾಂತಿಯ ಹಿತಚಿಂತನಾ ನಿಧಿಯ ಜಿಲ್ಲಾ ಶಾಖೆಯವರು ಸಾರ್ವಜನಿಕರ ಸಹಾಯದಿಂದ ಇದನ್ನು ಸ್ಥಾಪಿಸಿರುವುದು ಅಭಿನಂದನೀಯವೆಂದೂ ಧನಾಢ್ಯರು ಈ ತರದ ಸತ್ಕಾರ್ಯಗಳಿಗೆ ಸಹಾಯನೀಡಬೇಕೆಂಬಿತ್ಯಾದಿಯಾಗಿ ಹೇಳಿದರು. ಆರಂಭದಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಸೆಟ್ಟರು ಮುಖ್ಯಮಂತ್ರಿಗಳನ್ನು ಸ್ವಾಗತಿಸಿ ಇಂತಹ ಆಸ್ಪತ್ರೆಯ ಆವಶ್ಯಕತೆಯನ್ನು ವಿವರಿಸಿ ಮಹಾಜನರ ಸಹಾಯವನ್ನು ಕೋರಿದರು. ಡಾ। ಯು. ಪಿ. ಮಲ್ಯರು ಸ್ವಾಗತಿಸಿದರು ಶ್ರೀ ಮೋಹನ ರಾಯರು 270 ಎಕ್ರೆ ವಿಶಾಲ ಸ್ಥಳದಲ್ಲಿರುವ ಆಸ್ಪತ್ರೆಯ ವಿವರಗಳನ್ನಿತ್ತು ಬಂದಸಂದೇಶಗಳನ್ನೋದಿದರು. ಜಿಲ್ಲಾ ಮೆಡಿಕಲ್ ಆಫೀಸರ್ ಕೇಪ್ಟನ್ ಆರ್. ಎಸ್. ಕೇಶವರಾಜರು ಇಲ್ಲಿ ಇಲೆಕ್ಟ್ರಿಸಿಟಿ ಇಲ್ಲದ್ದರಿಂದ ಎಕ್ಸ್–ರೇ–ಪ್ಲಾಂಟ್ ಇಡಲು ಅಸಾಧ್ಯವಾಗಿರುವುದೆಂದೂ ಇಲ್ಲಿ ನೀರಿನ ಸೌಕರ್ಯವು ಕಡಿಮೆಎಂದೂ ಹೇಳಿದರು. ಶ್ರೀ ಕೆ. ಪಿ. ಜನಾರ್ಧನ ಪ್ರಭುಗಳು ಧನ್ಯವಾದಗಳನ್ನರ್ಪಿಸಿದರು.

ಕೆನರಾ ಚೇಂಬರ್ ಆಫ್ ಕಾಮರ್ಸಿನಲ್ಲಿ— ಮುಖ್ಯಮಂತ್ರಿಗಳಿಗೆ ತಾ. 29ನೇ ಪೂರ್ವಾಹ್ನ ಮಾರಾಟಕರ ಕಾನೂನಿನ ಕೆಲವೊಂದು ದೋಷದೋಷಗಳನ್ನು ವಿವರಿಸಿ ಕೊಡಲಾದ ಮಾನಪತ್ರಕ್ಕೆ ಮಂತ್ರಿಗಳು ಸರಕಾರವೂ ಜನತೆಯದೇ ಆಗಿದ್ದು ತೆರಿಗೆ ತೆರಲು ಯಾರೂ ಬೇಸರಿಸ ಬಾರದೆಂದರು.

ಭಾವಚಿತ್ರ ಅನಾವರಣ— ತಾ. 29ನೇ ಮಧ್ಯಾಹ್ನ ಕೆನರಾ ಹೈಸ್ಕೂಲಿನಲ್ಲಿ, ಹಳೇ ವಿದ್ಯಾರ್ಥಿ ದಿವಂಗತ ಬೆನಗಲ್ ನರಸಿಂಗರಾಯರ ಭಾವಚಿತ್ರವನ್ನು ಶ್ರೀ ಕಾಮರಾಜ ನಾಡರರು ಅನಾವರಣ ಮಾಡಿದರು. ಶ್ರೀ ಬಿ. ವೈಕುಂಠ ಬಾಳಿಗ ಎಂ. ಎಲ್. ಎ. ಯವರು ಧನ್ಯವಾದಗಳನ್ನಿತ್ತರು.

ತಾ. 29ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಮುಖ್ಯಮಂತ್ರಿಗಳಿಗೆ ಭೋಜನ ಸಮಾರಂಭ ನಡೆಯಿತು. ಅಲ್ಲದೆ ಸಂಜೆ ಸಹಕಾರಿ ಸಮಾಜದಲ್ಲಿ ಎಲ್ಲಾ ಸಹಕಾರಿ ಸಂಘಗಳ ಕಡೆಯಿಂದ ಸತ್ಕಾರ ಕೂಟವನ್ನೇರ್ಪಡಿಸಲಾಗಿತ್ತು.

ರಾಮಕೃಷ್ಣ ಮಿಶನಿನ ಕಡೆಯಿಂದ ಸ್ಥಾಪನೆಯಾಗಿರುವ ಧರ್ಮಾಸ್ಪತ್ರೆಯ ಉದ್ಘಾಟನೆಯನ್ನು ತಾ. 30ನೇ ಅಪರಾಹ್ನ ನೆರವೇರಿಸುತ್ತಾ ರಾಮಕೃಷ್ಣ ಮಿಶನಿನವರು ಸಲ್ಲಿಸುತ್ತಿರುವ ಸೇವಾಕಾರ್ಯವನ್ನು ಮಂತ್ರಿಗಳು ಪ್ರಶಂಸಿಸಿದರು.

ಮುಖ್ಯ ಮಂತ್ರಿಗಳು ಇಲ್ಲಿಯ ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಭೇಟಿಯನ್ನಿತ್ತರು. ತೋಟಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ತಾ. 1ನೇ ಪೂರ್ವಾಹ್ನ ಮುಖ್ಯ ಮಂತ್ರಿಗಳು ಕಾಸರಗೋಡಿನ ಕಾರ್ಯಕ್ರಮ ಮುಗಿಸಿ ಮದ್ರಾಸಿಗೆ ತೆರಳಿದರು.

ಬರಲಿರುವರು:— ಕೇಂದ್ರ ಸರಕಾರದ ಸಾರಿಗೆ ಮಂತ್ರಿ ಶ್ರೀ. ಲಾಲ್ ಬಹದ್ದೂರ್ ಶಾಸ್ತ್ರಿಗಳು ಈ ತಿಂಗಳ 28ಕ್ಕೆ ಇಲ್ಲಿಗೆ ಬಂದು 3 ದಿನಗಳ ಜಿಲ್ಲಾ ಪ್ರವಾಸ ಮಾಡುವರೆಂದೂ ಮೂಲ್ಕಿ ಮತ್ತು ಉದಿಯಾವರ ಹೊಳೆಗಳ ಸೇತುವೆ ಶಂಕುಸ್ಥಾಪನೆ ಮಾಡಲಿರುವರೆಂದೂ ತಿಳಿದು ಬರುತ್ತದೆ.

ಹಿರೇಬೆಟ್ಟು— ಪಾಟ್ಲ ಲೋಕಮಾನ್ಯ ತಿಲಕ ಹಾ। ಎ। ಶಾಲೆ ಮತ್ತು ಗಣಪತಿ ಎಯಿಡೆಡ್ ಎ। ಶಾಲೆಗಳ ಸಂಯುಕ್ತ ವಾರ್ಷಿಕೋತ್ಸವವು ಇದೇ 17 ರಂದು ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಉಗ್ರಾಣ ಕೃಷ್ಣರಾಯರು ಬಹುಮಾನ ವಿತರಣೆಯನ್ನೂ ಶ್ರೀ ಕೆ. ಬಿ. ಕೃಷ್ಣರಾಯರು ಲೋಕಮಾನ್ಯತಿಲಕರ ಭಾವಚಿತ್ರದ ಅನಾವರಣವನ್ನೂ ಮಾಡಿದರು. ಶ್ರೀ ಹಿರೇಬೆಟ್ಟು ಸದಾಶಿವ ಹೆಗ್ಡೆಯವರು ಸಂದೇಶಗಳನ್ನು ಓದಿದರು. ಮಕ್ಕಳಿಂದ ನಾಟಕಾದಿ ವಿವಿಧ ವಿನೋದಾವಳಿಗಳು ಜರಗಿದವು. ಅಂದು ಬೆಳಿಗ್ಗೆ ಶ್ರೀ ಮರ್ಡಿ ಬೊಮ್ಮಯ್ಯ ಸೆಟ್ಟರು ಧ್ವಜವನ್ನರಳಿಸಿದ್ದರು.

ಕಾಸರಗೋಡು ಕನ್ನಡ ಉಪಾಧ್ಯಾಯರ ಕೇಂದ್ರದ ವಾರ್ಷಿಕಸಭೆಯು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ತಾ 23 ರಲ್ಲಿ ಜರಗಿತು.

ದಿ ವಿಜಯಾ ಬೇಂಕ್ ಲಿಮಿಟೆಡ್, ಪುತ್ತೂರು.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ಕಾಣಿಸಿದ ಕುಳವಾರುಗಳು ಈ ಮೇಲಿನ ಬೇಂಕಿನಿಂದ ಚಿನ್ನಾಭರಣ ಅಡವಿನಲ್ಲಿ ಸಾಲ ಪಡಕೊಂಡು ದೀರ್ಘ ಕಾಲದಿಂದ ಅಸ್ಲು ಬಡ್ಡಿಯನ್ನು ಬಾಕಿ ಮಾಡಿಕೊಂಡಿರುವುದರಿಂದಲೂ ಸದ್ರಿಯವರಿಗೆ ರಿಜಿಸ್ಟ್ರಿನಿಂದ ನೋಟೀಸು ಕೊಟ್ಟರೂ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದಲೂ ಸದ್ರಿ ನಗಗಳನ್ನು ತಾ. 14—5—55ನೇ ಶನಿವಾರ ಅಪರಾಹ್ನ ಘಂಟೆ 12ಕ್ಕೆ ಯಾ, ಆ ನಂತರ ಬೇಂಕಿಗೆ ಯುಕ್ತ ಕಂಡ ದಿವಸ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ತಿಳಿದಿರಲಿ.

ಲೋನ್ ನಂಬ್ರ	ಸಾಲಗಾರರ ವಿಳಾಸ	ಅಸಲು ಮೊಬಲಗು. ರೂ.	ಆ.	ಪೈ.
685/53	ಬಿ. ಸಂಜೀವ ರೈ ಸಂಕಪ್ಪ ರೈ ಅಳಿಯ ಉಪ್ಪಿನಂಗಡಿ ಪೋಸ್ಟು ಉಪ್ಪಿನಂಗಡಿ.	217	2	0
1508/53	ರಾಮಣ್ಣರೈ ಕೊರಗಪ್ಪ ರೈ ಅಳಿಯ ಮುಂಡೆಕೋಲು ಗ್ರಾಮದ ಪೂಜಾರಿ ಮೂಲೆ, ಪೋಸ್ಟು ಮುಂಡೆಕೋಲು	66	10	0
178/54	ಕೆ. ಪೂವಣಿ ಶೆಟ್ಟಿ ಕೊರಗ ಶೆಟ್ಟಿಯ ಅಳಿಯ ಪುತ್ತೂರು ಕಸಬಾ ಗ್ರಾಮದ ಪಾಲೆಪಾಡಿ ಪೋಸ್ಟು ಪುತ್ತೂರು.	28	4	0
234/51	ಯಂ. ಪದ್ಮಯ್ಯ ಗೌಡ ತಿಮ್ಮಪ್ಪ ಗೌಡರ ಮಗ ದೇವಚಳ್ಳ ಗ್ರಾಮದ ಮುಂಡೋಡಿ ಮನೆ ಪೋಸ್ಟು ದೇವಚಳ್ಳ.	61	14	0
251/51	ವಿಶ್ವನಾಥ ರೈ ನಂದಪ್ಪ ರೈಯ ಅಳಿಯ ಮುಂಡೆಕೋಲು ಗ್ರಾಮದ ಪಡ್ಡೆಯಬನ ಮನೆ. ಪೋಸ್ಟು ಮುಂಡೆಕೋಲು.	46	10	0
354/51	ಆಲ್ಬರ್ಟ್ ಡಿ'ಸೋಜ ಸಬೆಸ್ಟಿನ್ ಸೋಜರ ಮಗ ಟೈಲರ್ ಕೋರ್ಟು ರಸ್ತೆ ಪುತ್ತೂರು.	59	7	0
494/51	ಪಿ. ಎ ದಾಮೋದರನ್ ಪಿಳ್ಳೈ, ಎ. ಆರ್. ಅಯ್ಯಪ್ಪ ಪಣಿಕ್ಕರರ ಮಗ ನೆಕ್ಕಿಲಾಡಿ ಗ್ರಾಮದ ಕಮ್ಮಾರ್ಪ ಮನೆ ಪೋಸ್ಟು ಕಡಬ.	77	8	0
561/54	ಬಿ. ಕೆ. ಪಮ್ಮಟ್ಟಿ. ಕಾದ್ರಿ ಬ್ಯಾರಿಯ ಮಗ ಕೆದಿಲ ಗ್ರಾಮದ ಕೊಳಚಪ್ಪ ಪೋಸ್ಟು ನೇರಳಕಟ್ಟೆ.	43	4	0
717/54	ಸಿ. ಸೀತಾರಾಮ ಶೆಟ್ಟಿ ಕೊರಗ ಶೆಟ್ಟಿ ಮಗ C/o ನೇಮಿರಾಜ್ ಪುತ್ತೂರು ಪೋಸ್ಟು ಪುತ್ತೂರು.	65	11	0
951/54	ಟಿ. ಬಿ. ಶಂಕರ್ ರಾವ್, ಬ್ರಾಸ್‌ಫೋರ್ಗ್ ಆತ್ತೂರು ಕರ್ಪೂರ ಪೋಸ್ಟು ಕಡಬ.	51	7	0
961/54	ಯಸ್ ಶೇಷಪ್ಪಯ್ಯ, ಸುಬ್ರಾಯ ನಿಡ್ವಣ್ಣಾಯರ ಮಗ ಪುಣ್ಚಪ್ಪಾಡಿ ಗ್ರಾಮದ ನೂಜಿಬೈಲು ಮನೆ ಪೋ. ಸವಣೂರು.	26	7	0
1422/54	ಪಿ. ನೇಮಿರಾಜ್ ಶಾಂತಿರಾಜ ಹೆಗ್ಡೆಯ ಮಗ ಆರ್ಯಾಪು ಗ್ರಾಮ. ಪೋಸ್ಟು ಆರ್ಯಾಪು	16	1	0

ಪುತ್ತೂರು,
ತಾ. 30-4-55.

K. Kochanna Rai
Agent

ಸ್ವಂತ ಜವಾಬ್ದಾರಿಯ ಮೇಲೆ **ಸಾಲ** ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. O. Box No. 3219, BOBMAY 3.

(೩ನೇ ಪುಟದಿಂದ)

ಇಲ್ಲಿಯ ರಾಷ್ಟ್ರಗಳು ನಿರ್ಯಾತ ಮಾಡುವ ವಸ್ತುಗಳಲ್ಲಿ ವೈವಿಧ್ಯವಿಲ್ಲವೆಂಬುದನ್ನು ಅರ್ಥ ಶಾಸ್ತ್ರದ ದೃಷ್ಟಿಯಿಂದ ದೌರ್ಬಲ್ಯವಾಗಿಯೇ ಪರಿಗಣಿಸಲಾಗುತ್ತದೆ. ಉದಾಹರಣೆಗೆ ಬರ್ಮದೊಡನೆ ಬೇರೆ ದೇಶಗಳಿಗೆ ಕಳಿಸಲಿಕ್ಕಿರುವುದು ಅಕ್ಕಿ ಮತ್ತು ಮೋಸು ಮಾತ್ರ. ಥೈಲೆಂಡಿನೊಡನೆ ತವರ, ಮಲಯದೊಡನೆ ರಬ್ಬರು, ಮಧ್ಯ ಏಶಿಯದಲ್ಲಿ ಎಣ್ಣೆ ಮಾತ್ರ ಸಿಗುತ್ತದೆ. ಇದರಿಂದ ಜಾಗತಿಕ ಪೇಟೆಯ ಬೆಲೆಯಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಆದರ ಲಾಭದಂತೆ ನಷ್ಟಕ್ಕೂ ಈ ರಾಷ್ಟ್ರಗಳು ಅನಿವಾರ್ಯವಾಗಿ ಗುರಿಯಾಗುತ್ತವೆ.

ಇಷ್ಟರ ವರೆಗೆ ಯಾವುದೇ ನ್ಯಾಯಬದ್ಧ ರೀತಿಯಲ್ಲಿ ನಡೆಸಿಕೊಳ್ಳಲ್ಪಡದ ಕೋಟ್ಯಾಂತರ ಪ್ರಜೆಗಳ ಜೀವನ ಮಟ್ಟವನ್ನು ಎತ್ತರಿಸುವುದೇ ಆಫ್ರೇಸ್ಯ ರಾಷ್ಟ್ರಗಳ ಮುಖ್ಯೋದ್ದೇಶ. ಇದನ್ನು ಕೈಗಾರಿಕೆಗಳ ಅಭಿವೃದ್ಧಿಯನ್ನು ಕೈಗೂಡಿಸುವುದರಿಂದ ಮಾತ್ರವೇ ಸಾಧಿಸಬಹುದೆಂದು ಈ ರಾಷ್ಟ್ರಗಳಿಗೆ ಈಗಾಗಲೇ ಹೊಳೆದಿರುತ್ತದೆ. ಇದಕ್ಕೋಸ್ಕರ ಆರ್ಥಿಕ ಯೋಜನೆಗಳನ್ನು ಮಾಡಿಕೊಳ್ಳುವುದಕ್ಕೆ ಮುಂಚೆ, ಸಮಸ್ಯೆಗಳ ಅಧ್ಯಯನ ಗೈಯಬೇಕೆಂದು ಮೊದಲೇ ಹೇಳಿದ್ದೇವೆ. ಆಗ್ನೇಯ ಏಶ್ಯದ ಮಟ್ಟಿಗೆ "ಇಕ್ಯಾಫೆ"ಯಂಥ ಸಂಯುಕ್ತ ರಾಷ್ಟ್ರ ಸಂಘದಿಂದ ಏರ್ಪಡಿಸಿದ ಮಂಡಳಿ ಈ ಕೆಲಸವನ್ನು ಮಾಡುತ್ತದೆ; ಆದರೆ ಮಧ್ಯ ಪೂರ್ವ ಹಾಗು ಆಫ್ರಿಕದ ರಾಷ್ಟ್ರಗಳ ಕುರಿತು ಇಂಥ ಸಂಸ್ಥೆ ಇನ್ನೂ ತಲೆ ಎತ್ತಿಲ್ಲ. ಆರ್ಥಿಕ ಸಹಕಾರದಲ್ಲಿ ಯಶಸ್ಸು ಸಿಗಬೇಕಾದರೆ ಇಂಥ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಯೋಜನೆಯ ಸಮಸ್ಯೆಯನ್ನು ಅಭ್ಯಸಿಸುವ ಮಂಡಳಿ ಇರುವುದು ಅತ್ಯಗತ್ಯ.

ಪರಿಣಾಮಕಾರಿಯಾದ ಸಹಕಾರದ ವಿಧಾನಗಳಲ್ಲಿ ತಾಂತ್ರಿಕ ಸಹಾಯದ ಕೆಲವು ಯೋಜನೆಗಳನ್ನು ರೂಪಿಸುವುದಕ್ಕೆ ಪ್ರಾಮುಖ್ಯತೆ ದೊರಕಬಹುದೆಂದು ತಜ್ಞರ ಅಭಿಪ್ರಾಯ. ಯಂತ್ರ ವಿಜ್ಞಾನ, ಶಿಕ್ಷಣ, ವಾಣಿಜ್ಯ ಹಾಗು ಬ್ಯಾಂಕಿಂಗುಗಳ ಕ್ಷೇತ್ರದಲ್ಲಿ ನುರಿತವರನ್ನು ಜಪಾನು ಮತ್ತು ಭಾರತಗಳು ಉಳಿದ ಆಫ್ರೇಸ್ಯ ರಾಷ್ಟ್ರಗಳಿಗೆ ಕಳಿಸಿಕೊಟ್ಟರೆ ಮಹದುಪಕಾರವಾಗುತ್ತದೆ. ಹಿಂದುಳಿದ ದೇಶಗಳ ಅಭಿವೃದ್ಧಿಯ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ತಜ್ಞರು ವಿಫಲ ಹೊಂದುವುದೇ ಹೆಚ್ಚೆಂದು ಅನುಭವದಿಂದ ಗೊತ್ತಾಗುತ್ತದೆ. ಅವರಿಗೆ ಇಲ್ಲಿಯ ವಿಶಿಷ್ಟ ಪರಿಸ್ಥಿತಿಯ ಪರಿಚಯ ಸಾಕಷ್ಟಿರುವುದಿಲ್ಲವೆಂಬುದೇ ಇದಕ್ಕೆ ಕಾರಣ. ಆದುದರಿಂದ ಈ ಪರಿಸ್ಥಿತಿಗೆ ಯೋಗ್ಯವಾದ ತಂತ್ರಗಳನ್ನು ಯಶಸ್ವಿಯಾಗಿ ಅಳವಡಿಸಿಕೊಂಡ ಜಪಾನು, ಭಾರತ ಮುಂತಾದ ರಾಷ್ಟ್ರಗಳೇ ಮುಂಚೂಣಿಯಲ್ಲಿ ನಿಲ್ಲುವುದು ಹಿತಕರ.

ಉದಾಹರಣೆಗಾಗಿ ಜಪಾನುದೇಶವು ಮಧ್ಯ ಏಶ್ಯ ಮತ್ತು ಆಫ್ರಿಕದ ರಾಷ್ಟ್ರಗಳಿಗೆ ಉಕ್ಕಿನ ತಜ್ಞರನ್ನು ಕಳಿಸಬಹುದು; ಭಾರತವು ವಸ್ತ್ರದ ಉದ್ಯೋಗದಲ್ಲಿ ಪರಿಣತರ ನೆರವನ್ನು ನೀಡಬಹುದು. ಬೇರೆ ದೇಶಗಳವರು ವಸ್ತ್ರದ ಉದ್ದಿಮೆ ಮುಂತಾದ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಹೊಂದಿದರೆ ನಮ್ಮೊಡನೆ ಕಾಲಾಂತರದಲ್ಲಿ ಸ್ಪರ್ಧೆಗೆ ನಿಲ್ಲಬಹುದೆಂಬ ಅಂಜಿಕೆ ಕೆಲವರಿಗಿರುವಂತೆ ತೋರುತ್ತದೆ. ಆದರೆ ಇದಕ್ಕೇನೂ ಆಧಾರವಿಲ್ಲ. ಆ ದೇಶಗಳವರು ನಮ್ಮಿಂದ ಕಲಿತು ನಮ್ಮ ಈಗಿನ ಮಟ್ಟಕ್ಕೆ ತಮ್ಮ ಕೈಗಾರಿಕೆಗಳನ್ನು ತಂದುಕೊಳ್ಳುವ ಹೊತ್ತಿಗೆ ನಮ್ಮ ದೇಶದಲ್ಲಿ ಮತ್ತಷ್ಟು ಪ್ರಗತಿ ಸಾಧಿಸಲ್ಪಟ್ಟಿರುವುದು ನಿಶ್ಚಯ. ಆದುದರಿಂದ ಇಲ್ಲಿ ಸ್ಪರ್ಧೆಗೆ ಅವಕಾಶ ಕೊಡುವ ಪ್ರಶ್ನೆಯೇ ಇಲ್ಲ. ಸಹಾಯ ಮತ್ತು ಪ್ರೋತ್ಸಾಹ ನೀಡಿ ನೆರೆಯವರನ್ನು ಅಭಿವೃದ್ಧಿ ಮಾರ್ಗದಲ್ಲಿ ಮುನ್ನಡೆಸುವುದೇ ಇಲ್ಲಿಯ ಉದ್ದೇಶ.

ಭಾರತವು ಆಡಳಿತ ಶಾಸ್ತ್ರದಲ್ಲಿಯೂ ಬ್ಯಾಂಕಿಂಗೇ ಮುಂತಾದ ವಾಣಿಜ್ಯಕ್ಷೇತ್ರದಲ್ಲಿಯೂ ಬಹಳ ಮುಂದುವರಿದಿರುವುದರಿಂದ ಪರಿಷತ್ತಿನ ರಾಷ್ಟ್ರಗಳ ಸಹಕಾರದಿಂದ ಆಫ್ರೇಸ್ಯದ ವಲಯದಲ್ಲಿ ವಿಮೆ ಮತ್ತು ಬೇಂಕುಗಳ ಸೌಲಭ್ಯವನ್ನು ವಿಸ್ತರಿಸುವುದಕ್ಕೂ ಹಡಗು ಸಾರಿಗೆ ಮುಂತಾದವುಗಳನ್ನು ಪ್ರವರ್ತಿಸುವುದಕ್ಕೂ ಮನಸ್ಸು ಮಾಡಿದರೆ ವಿದೇಶಗಳವರ ನಿರ್ಗಮನದಿಂದ ಈ ಕ್ಷೇತ್ರದಲ್ಲಿ ಉಂಟಾದ ಶೂನ್ಯ ವಾತಾವರಣವನ್ನು ತುಂಬಲು ನೆರವಿತ್ತಂತಾಗುತ್ತದೆ. ಪ್ರಾದೇಶಿಕ ತಾಂತ್ರಿಕ ಶಿಕ್ಷಣ ಕೇಂದ್ರಗಳನ್ನು ತೆರೆಯುವುದೂ ಒಂದು ಉತ್ತಮ ಉಪಾಯ. ಈಗ ಅಸ್ತಿತ್ವದಲ್ಲಿರುವ ಅಂತಾರಾಷ್ಟ್ರೀಯ ಚಟುವಟಿಕೆಯ ಸಂಸ್ಥೆಗಳೊಡನೆ ಸಹಕರಿಸಿಕೊಂಡು ಹೋಗಬಹುದಾದ ಹೊಸ ಸಂಸ್ಥೆಗಳಿಗೆ ಈ ಪ್ರದೇಶದಲ್ಲಿ ಸ್ವಾಗತ ಸಿಗುವುದೆಂದು ನಂಬ ಬಹುದು. ಕೊಲೊಂಬೋ ಯೋಜನೆಯಂತೆ ಈಗಾಗಲೇ ಆಫ್ರೇಸ್ಯ ರಾಷ್ಟ್ರಗಳಲ್ಲಿ ಹಲವು ಅನೇಕ ಬಗೆಯ ಪ್ರಯೋಜನಗಳನ್ನು ಪಡೆಯುತ್ತಿವೆ — ಈ ಯೋಜನೆಯ ಮಾದರಿಯಲ್ಲೆ ಎಲ್ಲ ಆಫ್ರೇಸ್ಯ ರಾಷ್ಟ್ರಗಳಿಗೂ ಇನ್ನೊಂದು ಯೋಜನೆಯನ್ನು ಸಿದ್ಧಪಡಿಸಿದರೆ ಒಳಿತಾದೀತು.

ಮೊದಲೇ ಹೇಳಿದಂತೆ ಇಲ್ಲಿಯ ನಿರ್ಯಾತ ವ್ಯಾಪಾರವು ಪ್ರತಿಯೊಂದೂ ದೇಶದ ಮಟ್ಟಿಗೆ ಒಂದೆರಡು ನಿಶ್ಚಿತ ವಸ್ತುವಿಗೆ ಸೀಮಿತವಿರುವುದರಿಂದ ಅಂತಾರಾಷ್ಟ್ರೀಯ ಬೆಲೆಯಲ್ಲಿ ಹೆಚ್ಚು ಕಡಿಮೆಯಾದರೆ ಆರ್ಥಿಕ ಸ್ಥಿತಿಯೇ ಬದಲಾವಣೆಯಾಗುತ್ತದೆ ಆದಷ್ಟು ಮಟ್ಟಿಗೆ ಇಲ್ಲಿ ಸ್ಥಿರತೆ ಮತ್ತು ಭದ್ರತೆಗಳನ್ನು ನೆಲೆಗೊಳಿಸಲು ಪ್ರಯತ್ನಿಸುವುದು ಇಷ್ಟವಾಗಿದೆ. ಈ ರಾಷ್ಟ್ರಗಳು ಇತರ ರೀತಿಯಲ್ಲಿ ಅಭಿವೃದ್ಧಿಹೊಂದಲು ಯೋಜನೆಗಳನ್ನು ಕೈಗೊಳ್ಳುವುದೂ ಅಪೇಕ್ಷಣೀಯ. ಬೆಲೆಗಳ ವಿಷಯದಲ್ಲಿ ಯೋಗ್ಯ ವ್ಯವಸ್ಥೆ ಮಾಡದಿದ್ದರೆ ಅಭಿವೃದ್ಧಿಯ ಆಸೆ ಕೈಗೂಡುವುದು ಕಷ್ಟ. ಅಂತಾರಾಷ್ಟ್ರೀಯ ವ್ಯಾಪಾರವನ್ನು ಆದಷ್ಟು ಮಟ್ಟಿಗೆ ಮಿತವ್ಯಯದಿಂದಲೂ ತಮ್ಮ ಹತೋಟಿಯಲ್ಲಿಯೂ ನಡೆಸಲು ಅವು ಸಾಹಸಪಡುವುದು ಶ್ರೇಯಸ್ಕರ. ಈಗ ಬ್ರಿಟನ್, ಹೊಲ್ಲೆಂಡ್ ಮುಂತಾದ ಪರದೇಶಗಳ ಕಂಪೆನಿಗಳ ಕೈಗೆಯೇ ಈ ರಾಷ್ಟ್ರಗಳು ತಮ್ಮ ವ್ಯಾಪಾರದ ಗುತ್ತಿಗೆಯನ್ನು ಕೊಟ್ಟಿದ್ದು, ಎಲ್ಲ ಲಾಭವೂ ಆ ದೇಶಗಳಿಗೆ ಹೋಗುತ್ತದೆ. ಆದಷ್ಟು ಮಟ್ಟಿಗೆ ಹೀಗೆ ಹಣದ ಹೊಳೆ ಹೊರವಲಯಕ್ಕೆ ಹರಿದುಹೋಗುವುದನ್ನು ನಿಷ್ಟಿಸಲು ಬಾಂಡುಂಗಿನ ಪರಿಷತ್ತು ತೀರ್ಮಾನಿಸಿರುವುದು ಸ್ತುತ್ಯ. ಆಫ್ರೇಸ್ಯ ರಾಷ್ಟ್ರಗಳು ತಂತಮ್ಮಲ್ಲಿ ವಾಣಿಜ್ಯ ಸರಕುಗಳ ವಿನಿಮಯ ಒಪ್ಪಂದಗಳನ್ನು ಮಾಡಿಕೊಳ್ಳುವುದಕ್ಕೂ ವಾಣಿಜ್ಯ ನಿಯಮಗಳನ್ನು ತುಸು ಸಡಲಿಸುವುದಕ್ಕೂ ಮುಂದಾದರೆ ಆದರಿಂದ ಆರ್ಥಿಕ ಸಹಕಾರ ಹೆಚ್ಚುವುದಕ್ಕೆ ಮತ್ತಷ್ಟು ಉತ್ತೇಜನ ದೊರಕಬಲ್ಲುದು.

(ಶ್ರೀ ಆರುಣಮುಖರ್ಜಿಯವರ ಲೇಖನದಿಂದ)

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 43/1955

1. ಸಿದ್ದಮ್ಮ ಪುಟ್ಟಮ್ಮನ ಮಗಳು
2. ನಾಗರಾಜ ಬುಂಣು } ಪುಟ್ಟಮ್ಮನ ಮ
3. ಶಾಂತಿರಾಜ ಬುಂಣು } ಗಂದಿರು
4. ತಂಗಪ್ಪಿ ಚಂದಪ್ಪಿ ಮಗಳು
5. ಕುಮಾರು ಬಂಗ ತಂಗಪ್ಪಿ ಮಗ.
6. ಶ್ರೀಯಾಳ ತಂಗಪ್ಪಿ ಮಗಳು.
7. ನಾಭಿರಾಜ ಬುಂಣು ತಂಗಪ್ಪಿ ಮಗ.

ಕಾರ್ಕಳ ತಾಲ್ಲೂಕು ಪೆಂಾಡಿ ಗ್ರಾಮಸ್ತರು— ವಾದಿರು

ಮತ್ತು.

1. ಅಂಣು ಬುಂಣು ಗುಮ್ಮಕ್ಕನ ಮಗ ಕಾರ್ಕಳತಾಲ್ಕು ಮರೋಡಿಗ್ರಾಮಸ್ತ—
2. ನರಸಿಂಹ ಭಟ್ ಬಳಂಜೆ ಕೃಷ್ಣಭಟ್ರ ಮಗ ಮಂಗಳೂರು ತಾಲ್ಕು ಯಲಿಯನರುಗೋಡುಗ್ರಾಮಸ್ತ.

ಪ್ರತಿವಾದಿರು

1ನೇ ಪ್ರತಿವಾದಿ ಅಂಣು ಬುಂಣುರೀಗೆ ತಿಳಿಯಪಡಿಸಿದ್ದು - ವಾದಿರು 1ನೇ ಪ್ರತಿವಾದಿಯಾದ ನೀವು 2ನೇ ಪ್ರತಿವಾದಿಗೆ ಕಳೆದ ತಾ. 11-6-1954ರಲ್ಲು ಬರಕೊಟ್ಟ ಮೂಲಗೇಣಿ ಚೀಟು ಕುಟುಂಬದ ಮೇಲೆ ಭಾದಿಸತಕ್ಕದಲ್ಲವೆಂತ ಡಿಕ್ಲೇರ್ ಮಾಡಬೇಕಾಗಿಯೂ, ಆಸ್ತಿಯನ್ನು ಹುಟ್ಟುವಳಿ ಸಹಿತ ಸ್ವಾಧೀನತೆ ಕೊಡಬೇಕಾಗಿಯೂ ನಿವೃತ್ತಿ ಕೇಳಿವಾಕಲು ಮಾಡಿದ ಮೇಲಿನದಾವೆಯು ನಿಮ್ಮ ಹಾಜರಾತಿಯ ಬಗ್ಗೆ ತಾರೀಕು 10-6-1955 ನೇ ಬೆಳಿಗ್ಗೆ 10 ಘಂಟೆಗೆ ಯಿಟ್ಟಿರುವ್ರದರಿಂದ, ಆ ಕುರಿತು ನಿಮ್ಮ ಉಜಾಹರಣೆಯು ಯಿರುವಲ್ಲಿ ಸದರಿ ತಾರೀಕಿನಲ್ಲಿ ನೀವು ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರು ಆಗಿ ಜಾಹೀರು ಮಾಡಿಕೊಳ್ಳಬಹುದೆಂತ್ತ ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

A. N. Sitaramachar,
Advocate for Pliantiffs.
Karkla 30-4-1955



BE YOUNG

Take "Elixir Aswaghandh" the pride of Ayurveda best nervine tonic quickly gives Radiant Health, removes constipation, relieves hip and back pain, Rheumatism, Vatharoga, Asthma, Bleeding Piles cured. Most popular and leading Vajjkarana and Rasayana. 1 lb Rs. 10/-. Postage Extra. AYURVEDA VAIDYA T. V. JAYARAMA SASTRI, Veera Ragava Vaidyasala, Srirangam, S. India.

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದನ್ನು ಮನಿಯಾರ್ಡರ್ ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇವೆ."

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ $4\frac{1}{4}$%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಭಾರತ್

ಹಣ್ಣಿನ ಶರಬತ್ತು ಮತ್ತು ಸಿರಪುಗಳು

ಪಕ್ಕದ ತೋಟದ ಹೆಕ್ಕಿ ತೆಗೆದ ಹಣ್ಣುಗಳ ತಾಜಾ ತಯಾರಿಕೆ. ಬಳಲಿ ಬಾಯಾರಿದಾಗ, ಉಲ್ಲಾಸ ಮತ್ತು ಆರೋಗ್ಯ ಕೊಡುವ ತಂಪಾದ, ಉತ್ತಮ ಪಾನೀಯ. ಅತಿಥಿಗಳ ಆದರದ ಪ್ರಥಮ ಸತ್ಕಾರಕ್ಕೆ ಒಂದು ಬಾಟ್ಲಿ ಸದಾ ಮನೆಯಲ್ಲಿದ್ದರೆ ಮನೆಯೊಡತಿಗೆ ಅತಿ ಅನುಕೂಲ. ಒಂದು ಬಾಟ್ಲಿ ಇಂದೇ ಖರೀದಿಸಿರಿ.

ಪ್ರತಿ ಹೋಟೇಲು ಮತ್ತು ಸೋಡಾ ಅಂಗಡಿಗಳಲ್ಲಿ ಭಾರತ್ ಹಣ್ಣಿನ ಶರಬತ್ತು ಮತ್ತು ಸಿರಪುಗಳನ್ನೇ ಕೇಳಿ ಕುಡಿಯಿರಿ. ಅಂದರೆ ನಿಮಗೆ ಉತ್ತಮ ಪಾನೀಯ ದೊರೆಯುತ್ತದೆ.

Bharath Industrial & Canning Co., Ltd., Kaup, S. K.

(೨ನೇ ಪುಟದಿಂದ)

ಗಿದ ನಂತರ ಪಾಸುಮಾಡಲಾಯಿತು. ಒಟ್ಟು ಹತ್ತುಸಲ ಸರ್ವ ಸದಸ್ಯರ ಪೂರ್ಣಾಧಿವೇಶನಗಳು ನಡೆದುವು. ಅಲ್ಲಿ ಪ್ರತಿಯೊಂದು ಪಂಕ್ತಿಯನ್ನೂ ಅರ್ಥವಿನ್ಯಾಸವನ್ನೂ ಕೂಲಂಕಷವಾಗಿ ಪರಿಶೋಧಿಸಲಾಯಿತು. ೧೯೪೫ರ ಜೂನ್ ೨೬ರಂದು ಪ್ರತಿನಿಧಿಗಳು ಕೊನೆಯಬಾರಿ ಸಾನ್ ಫ್ರಾನ್ಸಿಸ್ಕೊದಲ್ಲಿ ಸಮಾವೇಶಗೊಂಡರು. ಲಾರ್ಡ್‌ಹಾಲಿಫಾಕ್ಸ್ ಈ ಪರಿಷತ್ತಿನ ಅಧ್ಯಕ್ಷತೆ ವಹಿಸಿ ವಿಶ್ವಸಂಸ್ಥೆಯ ನಿಯಮಾವಳಿಯ ಅಂತಿಮಕರಡನ್ನು ಸಭೆಯ ಮುಂದೆ ಇಟ್ಟರು. ಭಾಗವಹಿಸಿದ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳೂ ಇದಕ್ಕೆ ಸಹಿ ಹಾಕಿದರು. ಮುಂದೆ ಸಂಬಂಧಪಟ್ಟ ಸರಕಾರಗಳು ಈ ಪ್ರಣಾಳಿಕೆಯನ್ನು ಅನುಮತಿಸಿದ ನಂತರ, ೧೯೪೫ರ ಅಕ್ಟೋಬರ್ ೨೪ ರಂದು ಸಂಯುಕ್ತ ರಾಷ್ಟ್ರಸಂಘ ಸ್ಥಾಪನೆಗೊಂಡಿತು. ಹೀಗೆ ನಾಲ್ಕು ವರ್ಷಗಳ ಯೋಜನೆ ಮತ್ತು ಸತತ ಪ್ರಯತ್ನದಿಂದ ಮಾನವವರ್ಗಕ್ಕೆ ಶಾಂತಿ ಪರಿಪಾಲನಾ ಸಂಸ್ಥೆಯೊಂದು ಉದಯವಾಯಿತು.

ಮಾನವನ ಮುನ್ನಡೆಯ ಪ್ರತಿರೂಪದಲ್ಲಿಯೂ ಕಾಣಿಸುವ ಈ ಸಂಸ್ಥೆಯ ಕಾರ್ಯವ್ಯಾಪ್ತಿ ಅತ್ಯಂತ ವಿಶಾಲವಾಗಿದೆ. ಅದರ ಮಹತ್ಸಾಧನೆಗಳನ್ನು ವಿಮರ್ಶಿಸಲು ಒಂದು ದಶಕದ ಅಸ್ತಿತ್ವ ಕಾಲವು ಅತ್ಯಲ್ಪವಾಗಿದೆ. ಆದರೆ ಅದು ಉತ್ತೇಜಕವಿರುವುದರಲ್ಲಿ ಮಾತ್ರ ಸಂಶಯವಿಲ್ಲ. ಮುಖ್ಯವಾದ ಸಾಮಾನ್ಯ ಧ್ಯೇಯಗಳ ಬಗ್ಗೆ ಸದಸ್ಯ ರಾಷ್ಟ್ರಗಳ ಕ್ರಿಯೆಗಳಲ್ಲಿ ಸಮರಸವಿರುವಂತೆ ಮಾಡಲು ಈ ಸಂಸ್ಥೆಯು ಕೇಂದ್ರವಾಗಿದೆ ಎಂಬುದಿಲ್ಲಿ ಉಲ್ಲೇಖನೀಯ ಈ ಧ್ಯೇಯಗಳಾವುವೆಂದರೆ.- ಸಾಮೂಹಿಕ ರಕ್ಷಣೆ, ಸರ್ವ ಅಂತಾರಾಷ್ಟ್ರೀಯ ವ್ಯವಹಾರಗಳನ್ನೂ ಮಾತುಕತೆಗಳಿಂದ ಶಾಂತಿಯುತವಾಗಿ ತೀರ್ಮಾನಿಸುವುದು, ಶಸ್ತ್ರಾಸ್ತ್ರಗಳ ಬಗ್ಗೆ ಅಂತಾರಾಷ್ಟ್ರೀಯ ಹತೋಟಿ, ಜಗತ್ತಿನ ಜನತೆಯ ಆರ್ಥಿಕ ಹಾಗೂ ಸಾಮಾಜಿಕ ಹಿತಗಳ ಬಗ್ಗೆ ಅಂತಾರಾಷ್ಟ್ರೀಯ ಸಹಕಾರ.

ಸಂಯುಕ್ತ ರಾಷ್ಟ್ರಸಂಘವು ಶಾಸನಸಭೆಯಲ್ಲ ಆದಾಗ್ಯೂ ಜಗತ್ತಿನ ಜನರು ತಮ್ಮ ತಮ್ಮ ಸರ್ಕಾರಗಳ ಮೂಲಕ ಸರ್ವಸ್ವತಂತ್ರ ರಾಷ್ಟ್ರಗಳ ಈ ಸಂಸ್ಥೆಯೊಂದಿಗೆ ಸಹಕರಿಸುವುದಕ್ಕೆ ಯೋಗ್ಯ ಕಾರ್ಯಕ್ರಮ ರೂಪಿಸಲಾಗಿದೆ. ಈ ಸಹಕಾರವು, ೬೦ ಸದಸ್ಯರಿರುವ ಸಾಧಾರಣ ಸಭೆ, ೧೧ ಸದಸ್ಯರಿರುವ ಭದ್ರತಾ ಸಮಿತಿ, ೧೮ ಸದಸ್ಯರಿರುವ ಆರ್ಥಿಕ ಹಾಗೂ ಸಾಮಾಜಿಕ ಮಂಡಳ, ೧೨ ಸದಸ್ಯರ ವಿಶ್ವಸ್ತ ಮಂಡಳ ಮತ್ತು ಇತರ ಅನೇಕ ಸಮಿತಿಗಳಲ್ಲಿ, ಕಾಣಬರುತ್ತದೆ.

ಶಕ್ತಿ ಹಾಗೂ ಪಕ್ಷಗಳಿಗಾಗಿ ಅನೇಕ ಘರ್ಷಣೆಗಳಿದ್ದಾಗ್ಯೂ, ಸಂಯುಕ್ತ ರಾಷ್ಟ್ರ ಸಂಘವು ತನ್ನ ಉದಯದ ಪ್ರಥಮ ದಶಕದಲ್ಲಿಯೇ ಉತ್ತಮ ಪಾತ್ರವನ್ನು ನಿರ್ವಹಿಸಿದೆ. ಇಂಡೋನೇಶ್ಯ ಹಾಗೂ ನೆದರ್ ಲೆಂಡ್ಸ್‌ಗಳ ನಡುವೆ ತಲೆದೋರಿದ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಲು ಈ ವಿಶ್ವ ಸಂಸ್ಥೆಯು ಮುಖ್ಯ ಕಾರಣವಾಯಿತು. ಪ್ಯಾಲೆಸ್ಟೈನ್ ಕದನವನ್ನು ವಿಶ್ವಸಂಸ್ಥೆಯೇ ಸಂಧಾನ ಮಾರ್ಗದಿಂದ ನಿಲ್ಲಿಸಿತು. ಬರ್ಲಿನ್ ವಿಷಯದಲ್ಲಿ ಸೋವಿಯಟ್ ರಷ್ಯಕ್ಕೂ ಫ್ರಾನ್ಸ್, ಬ್ರಿಟನ್ ಮತ್ತು ಅಮೇರಿಕಾಗಳಿಗೂ ನಡುವೆ ಬಗೆ ಹರಿಯದೆ ಇದ್ದ ವಿವಾದವನ್ನು ವಿಶ್ವ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಈ ಪ್ರಬಲ ರಾಷ್ಟ್ರಗಳ ಪ್ರತಿನಿಧಿಗಳಲ್ಲಿ ಆದ ಒಪ್ಪಂದದ ಪರಿಣಾಮವಾಗಿ ಬಗೆಹರಿಸಲಾಯಿತು. ನಿಶ್ಶಸ್ತ್ರೀಕರಣ ಹಾಗೂ ಪರಮಾಣು ನಿಯಂತ್ರಣ ಕ್ಷೇತ್ರಗಳಲ್ಲಿ ಅಂತಿಮ ಗುರಿಯ ಬಗ್ಗೆ ಸಾಮಾನ್ಯ ಒಪ್ಪಂದವಾಗಿದೆ. ಆದರೆ ಆ ಗುರಿಯ ಸಾಧನೆಯ ಬಗ್ಗೆ ಮಾತ್ರ ಇನ್ನೂ ಆಗಿಲ್ಲ. ಈ ಪ್ರಶ್ನೆಯ ಒಪ್ಪಂದಪೂರ್ವದ ಬಗ್ಗೆ ನಡೆದ ಅನ್ವೇಷಣ ಕ್ರಮಕ್ಕೆ ಅಂತ್ಯವಿಲ್ಲ.

ರಾಜಕೀಯದಲ್ಲಿನಂತೆಯೇ ಆರ್ಥಿಕ ಹಾಗೂ ಸಾಮಾಜಿಕ ವಲಯಗಳಲ್ಲಿಯೂ ವಿಶ್ವಸಂಸ್ಥೆಯು ಚುರುಕಿನಿಂದ ಕೆಲಸಮಾಡುತ್ತಿದೆ. ಜಗತ್ತಿನ ಕ್ಷುತ್ಪೀಡಿತರಿಗೆ, ರೋಗಿಗಳಿಗೆ ಮತ್ತು ಬಡವರಿಗೆ ಆಶಾಕಿರಣವನ್ನು ತರಲು ಇದು ಶ್ರಮಿಸುತ್ತಿದೆ. ಈ ಚಟುವಟಿಕೆಗಳು ವಿಶ್ವಸಂಸ್ಥೆಯ ವಿಶೇಷ 'ಏಜನ್ಸಿ' ಗಳ ಕಾರ್ಯದಲ್ಲಿ ಪ್ರತಿಬಿಂಬಿತವಾಗಿವೆ. ಈ ಏಜನ್ಸಿಗಳಲ್ಲಿ ೬೦ ರಾಷ್ಟ್ರಗಳಿಂದ ಆರಿಸಲ್ಪಟ್ಟ ಸುಮಾರು ೪,೦೦೦ ಪ್ರವೀಣರು ಆರ್ಥಿಕ ಹಾಗೂ ಸಾಮಾಜಿಕ ಮಟ್ಟಗಳನ್ನು ಏರಿಸಲು ಜಗತ್ತಿನಾದ್ಯಂತ ಶ್ರಮಿಸುತ್ತಿರುವರು. ೧೯೪೭ ರಿಂದ ಇದುವರೆಗೆ ಸಹಾಯ ಧನ ಮತ್ತು ವಿದ್ಯಾರ್ಥಿವೇತನಗಳ ಸಹಾಯದಿಂದ ೬೦೦೦ ಮಂದಿ ವಿದೇಶಗಳಿಗೆ ತೆರಳಿ ತಮ್ಮ ತಮ್ಮ ರಾಷ್ಟ್ರಗಳಲ್ಲಿ ದೊರೆಯದೆ ಇರುವ ಅಭಿವೃದ್ಧಿಯ ತಂತ್ರಗಳನ್ನು ಅಧ್ಯಯನ ಮಾಡಿದ್ದಾರೆ.

ಈ ನೆರವನ್ನು ೧೦೦ ರಾಷ್ಟ್ರಗಳು ಪಡೆದಿವೆ, ಆರ್ಥಿಕ ಅಭಿವೃದ್ಧಿಗೆ ಹಣಕಾಸನ್ನು ಒದಗಿಸುವ ಬಗ್ಗೆ ವಿಶ್ವ ಸಂಸ್ಥೆಯು ಹೆಚ್ಚು ಬಂಡವಾಳವನ್ನು ಪಡೆಯುವುದಕ್ಕಾಗಿ ತಕ್ಕ ಮಾರ್ಗದ ಅನ್ವೇಷಣ ಕ್ರಮದಲ್ಲಿದೆ. ಜೀವನ ಮಟ್ಟವನ್ನು ಏರಿಸುವುದಕ್ಕಾಗಿ ವಿಶ್ವ ಸಂಸ್ಥೆಯು ಸಮಾಜ ಕಲ್ಯಾಣ ಹಾಗೂ ಸಹಕಾರ ಕ್ರಮವನ್ನು ಪ್ರೋತ್ಸಾಹಿಸುತ್ತಿದೆ.

ಸಂಗ್ರಾಮಗಳೂ ಮತ್ತು ಇತರ ರಾಜಕೀಯ ವಿಪ್ಲವಗಳೂ ಈಚಿನ ವರ್ಷಗಳಲ್ಲಿ ಮಾನವ ಕೋಟಿಯನ್ನು ತೊಂದರೆಗೆ ಈಡು ಮಾಡಿದ ಫಲವಾಗಿ ಲಕ್ಷಾಂತರ ಮಂದಿ ತಮ್ಮ ಮಾತೃ ಭೂಮಿಯನ್ನು ತ್ಯಜಿಸಿಓಡಿ ಹೋಗಬೇಕಾಯಿತು. ಈ ನಿರಾಶ್ರಿತರ ಅವಸ್ಥೆಯನ್ನು ಬಗೆಹರಿಸುವುದು ಒಂದು ಹಿರಿಯ ಅಂತಾರಾಷ್ಟ್ರೀಯ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಬಗೆಹರಿಸಲು ವಿಶ್ವಸಂಸ್ಥೆಯು ಪ್ರಯತ್ನಿಸುತ್ತಿದೆ. ರೋಗ ಪೀಡಿತರಾದ ಮತ್ತು ಸರಿಯಾಗಿ ಪೋಷಣೆ ದೊರಕದ ಮಕ್ಕಳಿಗೆ ನೆರವನ್ನು ನೀಡುವುದಕ್ಕಾಗಿ ವಿಶ್ವಸಂಸ್ಥೆಯ ಮಕ್ಕಳ ನಿಧಿಯನ್ನು ರಚಿಸಲಾಗಿದೆ. ಮಾನವನ ಹಕ್ಕು ಬಾಧ್ಯತೆಗಳ ಬಗ್ಗೆ ಪ್ರಥಮಬಾರಿ ಅಂತಾರಾಷ್ಟ್ರೀಯ ಸೂತ್ರವೊಂದನ್ನು ವಿಶ್ವಸಂಸ್ಥೆಯ ಮೂಲಕ ರಚಿಸಲಾಯಿತು. ಇದೇ ೧೯೪೮ ರ ದಶಂಬರ ೧೦ ರಂದು ಸಂಯುಕ್ತರಾಷ್ಟ್ರ ಸಂಘದ ಸಾಧಾರಣ ಸಭೆಯಲ್ಲಿ ಸಾರಲಾದ ಮಾನವನ ಹಕ್ಕುಗಳ ಜಾಗತಿಕ ಘೋಷಣೆಯಾಗಿದೆ. ವಿಶ್ವಸ್ತ ಮಂಡಳದ ಕೆಲಸಕ್ಕೆ ಇದೇ ತಳಹದಿ.

ಶಾಂತಿಯ ನಿರ್ಮಾಣವು ಬರೀ ರಾಜಕೀಯವಲ್ಲ. ಇದು ಆರ್ಥಿಕ ಹಾಗು ಸಾಮಾಜಿಕ ನಡವಳಿಕೆಯ ವರೆಗೂ ವ್ಯಾಪಕವಾಗಿದೆ. ಈ ತತ್ವದ ಪ್ರಾಮುಖ್ಯತೆಯನ್ನು ಗಣನೆಗೆ ತೆಗೆದುಕೊಂಡು ವಿಶ್ವಸಂಸ್ಥೆಯು ವಿಶೇಷ ಏಜನ್ಸಿಗಳನ್ನು ರಚಿಸಿದೆ. ೧೯೫೪ರ ಅಕ್ಟೋಬರ್ ವೇಳೆಗೆ ಅಂಥ ೧೦ ಏಜನ್ಸಿಗಳನ್ನು ರೂಪಿಸಿದ್ದರು. ಅವುಗಳಾವುವೆಂದರೆ-ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಆಹಾರ ಮತ್ತು ಕೃಷಿ ಸಂಸ್ಥೆ, ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಬಾಂಧವ್ಯದ ಸಂಸ್ಥೆ, ಅಂತಾರಾಷ್ಟ್ರೀಯ ವಿಮಾನ ಸಾರಿಗೆ ಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ ಮತ್ತು ವಿಶ್ವ ಹವಾಮಾನ ಸಂಸ್ಥೆ. ಈ ಎಲ್ಲ ಮಂಡಳಿಗಳನ್ನು ನಡೆಸಲು ಬರುವ ವೆಚ್ಚ ಅಷ್ಟೇನೂ ಹೆಚ್ಚಾಗಿಲ್ಲ. ಸದಸ್ಯ ರಾಷ್ಟ್ರಗಳಿಗೆ ೧೯೫೪ರಲ್ಲಿ ತಗಲಿದ ಒಟ್ಟು ವೆಚ್ಚವು ಸುಮಾರು ೧೮ ಕೋಟಿ ರೂಪಾಯಿಗಳೆಂದು ಅಂದಾಜು. ಈ ವೆಚ್ಚವನ್ನು ಸದಸ್ಯ ರಾಷ್ಟ್ರಗಳ ಪ್ರಜೆಗಳಲ್ಲಿ ಹಂಚಿದ್ದೇ ಆದರೆ, ಆ ಪ್ರಜೆಗಳು ಕೊಡಬೇಕಾದ ಹಣವು ಅತ್ಯಲ್ಪವಾಗುತ್ತದೆ. ಉದಾಹರಣೆಗೆ ಭಾರತದಲ್ಲಿ ಈ ಹಣವು ಒಮ್ಮೆ ಮೀಸೆಯ ಬೆಲೆ ತಿನ್ನಲು ತಗಲುವ ಬೆಲೆಗೆ ಸಮನಾಗಲಾರದು! ಕೈರೋವಿನಲ್ಲಿ ಇದು ಒಂದೆರಡು ಸುಲಭ ಬೆಲೆಯ ಸಿಗರೇಟ್ ಗಳ ಬೆಲೆಗೆ ಸಮನಾಗುವುದು! ಕ್ಯೂಬಾದಲ್ಲಿ ಒಂದು ಬಾಳೆಯ ಹಣ್ಣನ್ನು ಕೊಳ್ಳಬಹುದು!

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

	ರೂ.	ಅ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಮಾಲೆ	೪	೦
ಜ್ಞಾನಯೋಗ	೪	೦
ಗುರುವಿನೊಡನೆ ದೇವರಡಿಗೆ(ಕುವೆಂಪು)	೪	೦
ರಾಜಯೋಗ	೩	೧೦
ಶ್ರೀ ಶಾರದಾದೇವಿ ಸಂಭಾಷಣೆ	೩	೮
ಗೀತಾ ಪತ್ರಗಳು	೩	೮
ಮಿಂಚುನೋಟಕೆ ಹಿಂದೂಧರ್ಮ	೩	೮
ಶ್ರೀ ಶಾರದಾದೇವಿ	೩	೦
ಸಾಧಕನ ಕೈದೀವಿಗೆ	೩	೦
ಪರಮಾರ್ಥ ಪ್ರಸಂಗ	೩	೦
ಹೈಮಾಚಲ ಸಾನ್ನಿಧ್ಯದಲ್ಲಿ(ಹರಿದ್ವಾರದಿಂದ ಕೇದಾರ ಬದರಿಗೆ)	೩	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ಜ್ಞಾನ ಮಾರ್ಗ	೦	೮
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ(ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦ ೬	೫ ೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಧ್ಯಾನ	೦	೪

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ನಿಮ್ಮ ಎಲ್ಲಾ ಜೋತಿಷ್ಯ ವಿಷಯಗಳಿಗೆ ಇಂದೇ ಬರೆಯಿರಿ—

ಪಂಡಿತ ಕೆ. ಎಸ್. ಶಾಸ್ತ್ರಿ

ಜ್ಯೋತಿರ್ವಿದ್ಯಾ ಸಂಶೋಧನಾ ಕೇಂದ್ರ, ಪಂಚವಟಿ, ನಾಶಿಕ.

ಅಮೇರಿಕದಲ್ಲಿ ಪ್ರಾಥಮಿಕ ಶಿಕ್ಷಣ

ವ್ಯಕ್ತಿತ್ವದ ಪೂರ್ಣ ವಿಕಾಸವೇ ಧ್ಯೇಯ

ನಮ್ಮ ಉಡುಪಿಯ ಪ್ರಮುಖ ಶಿಕ್ಷಣ ತಜ್ಞರೂ ಸದ್ಯ ಪುತ್ತೂರಿನ ಸರಕಾರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರೂ ಆಗಿರುವ ಶ್ರೀ ಕೆ. ವಿಟ್ಠಲ ಶೆಣೈಯವರು ಈಚೆಗೆ ಅಮೇರಿಕ ದೇಶದಲ್ಲಿ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡಿದ್ದರು, ಅವರು ಶಿಕ್ಷಕ ವಿನಿಮಯ ಯೋಜನೆಯಂತೆ ಆ ದೇಶಕ್ಕೆ ಹೋಗಿದ್ದರು. ಅಮೇರಿಕದ ಸರಕಾರವು ಪ್ರತಿ ವರ್ಷವೂ ಸುಮಾರು ೬೦ ದೇಶಗಳಿಂದ ಉಪಾಧ್ಯಾಯರನ್ನು ಆ ದೇಶಕ್ಕೆ ಆಮಂತ್ರಿಸಿಯೂ ಆ ದೇಶದ ಉಪಾಧ್ಯಾಯರನ್ನು ಬೇರೆ ದೇಶಗಳಿಗೆ ಕಳಿಸಿಯೂ ರಾಷ್ಟ್ರ ರಾಷ್ಟ್ರಗಳಲ್ಲಿ ಪರಸ್ಪರ ಸ್ನೇಹ, ತಿಳಿವಳಿಕೆ ಮತ್ತು ಸೌಹಾರ್ದವನ್ನುಂಟುಮಾಡುವುದಕ್ಕೆ ಪ್ರಯತ್ನಿಸುತ್ತದೆ. ಅಮೇರಿಕದ ಜನ ಜೀವನ, ಅಲ್ಲಿಯ ಸಾಂಸ್ಕೃತಿಕ ವೈಶಿಷ್ಟ್ಯ, ವಿದ್ಯಾಭ್ಯಾಸದ ಕ್ರಮ ಮುಂತಾದವುಗಳನ್ನು ಬೇರೆ ದೇಶಗಳವರು ತಿಳಿದುಕೊಳ್ಳುವುದರಿಂದ ಮತ್ತು ಅದನ್ನು ಪ್ರಚಾರ ಮಾಡುವುದರಿಂದ ರಾಜಕೀಯ ಲಾಭವಾಗುವುದೂ ಸಾಧ್ಯ—ಕಮ್ಯುನಿಸ್ಟ ಪಕ್ಷಕ್ಕೆ ಬಿಕ್ಕಟ್ಟು ಅಳಿದು ಹೋಗಿ ಮೈತ್ರಿ ಸಂಭವಿಸುತ್ತದೆ. ಬೇರೆ ದೇಶಗಳವರು ಅಮೇರಿಕದ ಕ್ರಮದಿಂದ ಸ್ಫೂರ್ತಿಪಡೆದು ತಮ್ಮ ದೇಶದಲ್ಲಿ ಸುಧಾರಣೆಗಳನ್ನು ನಡೆಸಲು ಅಥವಾ ಅಮೇರಿಕದ ಪದ್ಧತಿಯ ಸದುಪಯೋಗಪಡೆಯಲು ಸಹ ಇದು ನೆರವಾಗುತ್ತದೆ.

ಉದಾತ್ತವಾದ ಈ ಧ್ಯೇಯ ಅಮೇರಿಕದ ಜನರಲ್ಲಿ ಕಂಡು ಬರುವ ವೈಶಿಷ್ಟ್ಯಗಳಲ್ಲಿ ಒಂದು. ಅವರಿಗೆ ಕೊಡಲಾಗುವ ಶಿಕ್ಷಣ ಬಹಳವಾಗಿ ಈ ವೈಶಿಷ್ಟ್ಯವನ್ನು ಪೋಷಿಸುತ್ತದೆ ಎಂಬುದು ಶ್ರೀ ಶೆಣೈಯವರು ಮಾಡಿದೊಂದು ಭಾಷಣದಿಂದ ವ್ಯಕ್ತವಾಗುತ್ತದೆ. ಅವರ ಅಭಿಪ್ರಾಯದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವದ ಸಂಪೂರ್ಣ ವಿಕಾಸವು ಸ್ವತಂತ್ರ ರೀತಿಯಲ್ಲಿ ನೆರವೇರುವುದಕ್ಕೆ ಅನುಕೂಲತೆ ಕಲ್ಪಿಸಿಕೊಡುವುದೇ ಅಮೇರಿಕದಲ್ಲಿ ಶಿಕ್ಷಣದ ಧ್ಯೇಯ. ಪ್ರಜಾಪ್ರಭುತ್ವವನ್ನು ಮನ್ನಿಸುವ ಅಮೇರಿಕದ ಜನರು ಅದರ ತಳಹದಿಯಾಗಿರುವ ನಾಗರಿಕ ಹಕ್ಕು ಬಾಧ್ಯತೆಗಳ ವಿಷಯದಲ್ಲಿ ಮಕ್ಕಳಾಗಿರುವಾಗಲೇ ಶಿಕ್ಷಣಹೊಂದಿರುತ್ತಾರೆ. ತಂತಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳುವುದಕ್ಕೂ ಇತರರ ಹಕ್ಕು ಬಾಧ್ಯತೆಗಳನ್ನು ಮನ್ನಿಸುವುದಕ್ಕೂ ವಿದ್ಯಾರ್ಥಿಗಳಿರುವಾಗಲೇ ಅವರಿಗೆ ತರಬೇತಿ ಕೊಡಲಾಗುತ್ತದೆ. ಶಿಷ್ಟ ಸಂಪ್ರದಾಯಗಳ ವಿಷಯದಲ್ಲಿ ಹೆಚ್ಚಿನ ತಿಳಿವಳಿಕೆಯನ್ನು ಮಕ್ಕಳಿಗೆ ಕೊಡಲಾಗುತ್ತದೆ. "ಉಪಕಾರವಾಯಿತು" "ಕ್ಷಮಿಸಿ" ಎಂಬಿತ್ಯಾದಿಯಾದ ಚಿಕ್ಕ ಆದರೆ ಚೊಕ್ಕ ಮಾತುಗಳಿಂದ ಯಾರ ಮನಸ್ಸನ್ನೂ ನೋಯಿಸದೆ ಸ್ನೇಹ ಕಾಯ್ದುಕೊಂಡು ಹೋಗುವ ತಂತ್ರ ಪ್ರಾಥಮಿಕ ಶಿಕ್ಷಣದಿಂದಲೇ ಮಕ್ಕಳಿಗೂ ದೊಡ್ಡವರಿಗೂ ಅಲ್ಲಿ ಕರಗತವಾಗಿರುತ್ತದೆ.

ಅಮೇರಿಕದಲ್ಲಿ ೪೮ ರಾಜ್ಯಗಳಿವೆ--ಇಲ್ಲಿ ಪ್ರತಿಯೊಂದರಲ್ಲಿ ಒಂದೊಂದು ಬಗೆಯ ಶಿಕ್ಷಣ ಕ್ರಮವಿದೆ ಎಂದರೆ ಅತಿಶಯೋಕ್ತಿಯಾಗದು. ಕೇಂದ್ರ ಸರಕಾರದವರು ವಿದ್ಯಾಭ್ಯಾಸವನ್ನು ತಮ್ಮ ಹೊಗಳಿರುವ ಜವಾಬ್ದಾರಿ ಎಂದು ತಿಳಿದಿಲ್ಲ. ಅದು ರಾಜ್ಯ ಸರಕಾರಗಳಿಗೆ ಸೇರಿದ ವಿಷಯ. ಕೇಂದ್ರ ಸರಕಾರದವರು ಕೆಲವು ರೀತಿಯಲ್ಲಿ ಶಿಕ್ಷಣಕ್ಕೆ ನೆರವಾಗುವರೆಂಬುದು ಸುಳ್ಳಲ್ಲ — ಉದಾಹರಣೆಗೆ, ಉಗ್ರಾಣದಲ್ಲಿ ಸಂಗ್ರಹವಾದ ಹೆಚ್ಚಿನ ಫಲವಸ್ತುಗಳು, ಬ್ರೆಡ್ಡುಗಳು, ಹೈನ ಪದಾರ್ಥಗಳು ಮುಂತಾದವನ್ನು ವಿದ್ಯಾರ್ಥಿಗಳ ಮಧ್ಯಾಹ್ನದ ಊಟಕ್ಕೋಸ್ಕರ ಕೇಂದ್ರಸರಕಾರ ಕೊಡುತ್ತದೆ; ಅಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ಹೊಸ ಸಂಶೋಧನೆಗಳನ್ನು ನಡೆಸಲು ಅದು ಅನುಕೂಲತೆಯನ್ನು ಒದಗಿಸುತ್ತದೆ, ಶಿಕ್ಷಣ ಸಂಸ್ಥೆಗಳಿಗೆ ಬೇಕಾದ ಮಾಹಿತಿಯನ್ನೂ ಸಲಹೆಗಳನ್ನೂ ಪೂರೈಸಲು ಅದು ನೋಡುತ್ತದೆ; ಸಾಧ್ಯವಾದಷ್ಟು ಮಟ್ಟಿಗೆ ಶಿಕ್ಷಣಕ್ರಮದಲ್ಲಿ ರಾಷ್ಟ್ರದಾದ್ಯಂತ ಏಕರೂಪತೆಯನ್ನು ತರಲೂ ಅದು ಹೆಣಗುತ್ತದೆ. ಇಷ್ಟಾದರೂ ಅಮೇರಿಕದಲ್ಲಿ ಒಂದೊಂದೂ ರಾಜ್ಯದಲ್ಲಿ ಶಿಕ್ಷಣಕ್ರಮದಲ್ಲಿ ವೈವಿಧ್ಯ ಎದ್ದುಕಾಣುತ್ತದೆ—ಅದಕ್ಕೆ ಸ್ಥಳೀಯ ಆವಶ್ಯಕತೆಗಳಿಗೆ ಜನರು ಕೊಟ್ಟಿರುವ ಮಹತ್ವವೇ ಹೇತು.

ಮಕ್ಕಳ ಆರನೇ ವರ್ಷದಿಂದ ಪ್ರಾಥಮಿಕ ಶಿಕ್ಷಣವನ್ನು ಕೊಡಲಾಗುತ್ತದೆ. ಕಡ್ಡಾಯದ ಶಿಕ್ಷಣವು ೪೧ರಾಜ್ಯಗಳಲ್ಲಿ ೧೬ನೇ ಪ್ರಾಯದ ವರೆಗೂ ೩ ರಾಜ್ಯಗಳಲ್ಲಿ ೧೭ನೇ ಪ್ರಾಯದ ವರೆಗೂ ಉಳಿದ ೪ ರಾಜ್ಯಗಳಲ್ಲಿ ೧೮ನೇ ಪ್ರಾಯದ ವರೆಗೂ ಕೊಡಲ್ಪಡುತ್ತದೆ. ಪ್ರತಿಯೊಂದು ರಾಜ್ಯದಲ್ಲಿ ಶಾಲೆಗಳಲ್ಲಿ ಶಿಕ್ಷಣ ಪದ್ಧತಿಯು ಹೇಗಿರಬೇಕೆಂಬುದರ ಸ್ಥೂಲಚಿತ್ರವನ್ನು ರೇಖಿಸುವ ಒಂದು ಕೇಂದ್ರ ಮಂಡಲವಿರುತ್ತದೆ. ಜನರಿಂದ ಚುನಾಯಿಸಲ್ಪಟ್ಟ ಅಥವಾ ಗವರ್ನರರಿಂದ ನೇಮಕಗೊಂಡ ಪ್ರತಿನಿಧಿಗಳು ಈ ಮಂಡಳದಲ್ಲಿದ್ದು ಅವರು ಪಾಠಪಟ್ಟಿ, ಉಪಾಧ್ಯಾಯರ ಯೋಗ್ಯತೆ ಮುಂತಾದ ಮುಖ್ಯ ವಿಷಯಗಳ ಬಗ್ಗೆ ಸಾಮಾನ್ಯ ನಿಯಮಗಳನ್ನೂ ವಿವರಗಳನ್ನೂ ಗೊತ್ತುಪಡಿಸುತ್ತಾರೆ. ಹೆಚ್ಚಿನ ವಿವರಗಳನ್ನು ರೂಪಿಸುವುದು ಸ್ಥಾನಿಕ ವಿದ್ಯಾ ಕ್ಷೇತ್ರಗಳಿಗೆ ಸೇರಿದ ಕೆಲಸ. ಅಮೇರಿಕದಲ್ಲಿ ಸುಮಾರು ೯೦,೦೦೦ ಸ್ಥಾನಿಕ ವಿದ್ಯಾ ಕ್ಷೇತ್ರಗಳಿವೆ ಎಂದು ಅಂದಾಜು. ಇವುಗಳಲ್ಲಿ ಅತಿ ಚಿಕ್ಕದು, ಐದು ಮೈಲು ವಿಸ್ತೀರ್ಣದ ಪ್ರದೇಶಕ್ಕೆ ಪ್ರಯೋಜನವನ್ನುಂಟು ಮಾಡುವ, ೨೦-೨೫ ಮಕ್ಕಳಿರುವ, ಒಬ್ಬ ಉಪಾಧ್ಯಾಯನಿರುವ ಒಂದೇ ಕೋಣೆಯ ಶಾಲೆಯಾಗಿದ್ದರೆ ದೊಡ್ಡ ಕೇಂದ್ರವು ಒಂದು ಸಾವಿರ ಚದರ ಮೈಲು ವಿಸ್ತೀರ್ಣದ ಪ್ರದೇಶದಲ್ಲಿರುವ ೫ ಲಕ್ಷ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಿಸುವ ಆಧ್ಯತೆಯನ್ನು ತೋರಿಸುತ್ತದೆ.

ಶಾಲೆಗಳು ಸಾಮಾನ್ಯವಾಗಿ ಶಾಲಾ ಮಂಡಳದ ಆಡಳಿತಾಧಿಕಾರಕ್ಕೆ ಒಳಪಟ್ಟಿರುತ್ತವೆ. ಈಮಂಡಳದಸದಸ್ಯರು ಚುನಾವಣೆಯಲ್ಲಿಗೆದ್ದು ಬರಬೇಕಾಗುತ್ತದೆ. ಅವರು ಶಿಕ್ಷಣತಜ್ಞರಾಗಿರುವರೆಂದೇನೂ ಇಲ್ಲ. ಆದರೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಾಮಾಣಿಕವಾದ ಅಭಿರುಚಿ ಅವರಿಗಿರುತ್ತದೆ, ಅವರು ವರ್ಚಸ್ಸುಳ್ಳ ವ್ಯಕ್ತಿಯೂ ಹೌದು. ಶಾಲೆಯ ಚಟುವಟಿಕೆಗಳನ್ನು ನಡೆಸಲು ಈ ಚುನಾಯಿತ ಮಂಡಳವು ತೆರಿಗೆಯನ್ನು ವಸೂಲು ಮಾಡುತ್ತದೆ. ಅಧಿಕಾರ ಬಲದಿಂದ ವಸೂಲು ಮಾಡಿದ ತೆರಿಗೆ ಹಣವನ್ನು ವಿನಿಯೋಗಿಸುವ ಹೊಣೆಗಾರಿಕೆ ಸಹ ಮಂಡಳಕ್ಕೆಯೇ ಸೇರಿದೆ. ಸರಕಾರದವರಿಂದ ಮಗುವಿಗೆ ಇಂತಿಷ್ಟೆಂದು ನಿಗದಿಯಾದ ಸಹಾಯ ಧನವೂ ಅವರಿಗೆ ಸಿಗುತ್ತದೆ. ಆದರೆ ಹೆಚ್ಚಿನ ಹಣವನ್ನು ಪ್ರತ್ಯೇಕ ಶಿಕ್ಷಣ ತೆರಿಗೆ ಹೇರಿಸಿಯೇ ಪಡೆಯಲಾಗುತ್ತದೆ ಉಪಾಧ್ಯಾಯರನ್ನು ನೇಮಿಸುವುದು ಈ ಮಂಡಳದ ಕೆಲಸ.. ಸ್ಥಳೀಯ ಆವಶ್ಯಕತೆಗಳನ್ನು ಅಭ್ಯಸಿಸಿ, ಉಪಯುಕ್ತ ರೀತಿಯಲ್ಲಿ ಪಾಠಪಟ್ಟಿಯನ್ನು ಬದಲಿಸುವುದೂ ಮಂಡಳದ ಕರ್ತವ್ಯ. ದೊಡ್ಡ ವಿದ್ಯಾಕ್ಷೇತ್ರಗಳಲ್ಲಿ ಮಾತ್ರ ಶಿಕ್ಷಣ ತಜ್ಞರಿರುತ್ತಾರೆ—ಅವರು ಉಪಾಧ್ಯಾಯರ ಸಲಹೆಯನ್ನು ಪಡೆದು,ತಮ್ಮ ಕೆಲಸ ನಡೆಸುತ್ತಾರೆ. ಚಿಕ್ಕ ಕ್ಷೇತ್ರಗಳಲ್ಲಿ ಶಾಲಾಮಂಡಳವೇ ಶಿಕ್ಷಣ ಸುಧಾರಣೆಗೆ ಮನಸ್ಸು ಕೊಡುತ್ತದೆ.

ಸರಕಾರದಿಂದ ನಡೆಸಲ್ಪಡುವುದೆಂದು ಹೇಳಬಹುದಾದ ಈ ಶಾಲೆಗಳಲ್ಲಿ ಧರ್ಮಾರ್ಥವಾಗಿ ಶಿಕ್ಷಣ ಕೊಡಲಾಗುತ್ತದೆ. ಅಲ್ಲದೆ ಮಕ್ಕಳಿಗೆ ಪುಸ್ತಕ ಮತ್ತಿತರ ಸಲಕರಣೆಗಳನ್ನು ಸಹ ಒದಗಿಸಿ ಕೊಡಲಾಗುತ್ತದೆ. ದೂರದ ಮಕ್ಕಳನ್ನು ಬಸ್ಸುಗಳಲ್ಲಿ ಶಾಲೆಗೆ ಬರಮಾಡಿಸಿಕೊಳ್ಳುತ್ತಾರೆ. ಮಧ್ಯಾಹ್ನದ ಊಟವನ್ನೂ ಕೆಲವೆಡೆ ಕೊಡಲಾಗುತ್ತದೆ. ಇದಕ್ಕೆ ಹಸರಿಗಷ್ಟೇ ಹಣವನ್ನು ತೆರಬೇಕಾಗುತ್ತದೆ. ಶಾಲೆಯು ಸಾಮಾನ್ಯವಾಗಿ ೮.೩೦ರಿಂದ ೩.೩೦ರ ವರೆಗೆ ನಡುವೆ ಒಂದು ಗಂಟೆ ಬಿಡುವಿನ ಸಮಯವನ್ನು ಬಿಟ್ಟು ಒಟ್ಟು ಆರು ತಾಸುಗಳು ನಡೆಯುತ್ತದೆ. ಶಾಲಾ ದಿನಗಳು ಪ್ರಾಥಮಿಕ ಶಾಲೆಯಿಂದ ಕಾಲೇಜುಗಳ ವರೆಗೂ ಒಂದೇ, ಅಂದರೆ ವರ್ಷಕ್ಕೆ ೧೮೦. ಒಂದು ತಾಸಿನ, ಪಿರೇಡಿನಲ್ಲಿ ೩೦—೩೫ ನಿಮಿಷಗಳ ವರೆಗೆ ಉಪಾಧ್ಯಾಯರು ಪಾಠ ಕಲಿಸುತ್ತಾರೆ; ಉಳಿದ ಸಮಯವನ್ನು ಮಕ್ಕಳು ಆ ಪಾಠವನ್ನು ಹೇಗೆ ಗ್ರಹಿಸಿರುವರೆಂದು ತನಿಖೆ ಮಾಡುತ್ತಾರೆ. ಇದರಿಂದ ಮಕ್ಕಳ ತಪ್ಪನ್ನು ಸಹನೆಯಿಂದ ತಿದ್ದಲು ಅನುಕೂಲವಾಗುತ್ತದೆ ವಿಷಯಗಳು ನಮ್ಮಲ್ಲಿಯಂತೆಯೇ ತೋರುತ್ತವೆ. ಆದರೆ ಸಂಗೀತ, ವ್ಯಾಯಾಮ, ಈಜುವಿಕೆ ಮುಂತಾದವಕ್ಕೆ ನಮ್ಮಲ್ಲಿನದಕ್ಕಿಂತ ಹೆಚ್ಚು ಪ್ರಾಧಾನ್ಯ ಕೊಡಲ್ಪಡುತ್ತದೆ. ಶಿಷ್ಟ ಸಂಪ್ರದಾಯಗಳ ವಿಷಯದಲ್ಲೂ ಸೌಂದರ್ಯ ಪ್ರಜ್ಞೆಯ ಪೋಷಣೆಯಲ್ಲೂ ವಿದ್ಯಾರ್ಥಿಗಳನ್ನು ವಿಶೇಷ ಮುತುವರ್ಜಿಯಿಂದ ತರಬೇತಿ ಗೊಳಿಸಲಾಗುತ್ತದೆ.

ಯಾವಶಾಲೆಯನ್ನು ನೋಡಿದರೂ ಅದರ ನಾಜೂಕು ಮತ್ತು ಚೆಲುವು ನಮ್ಮನ್ನು ಸೆರೆಹಿಡಿಯುತ್ತದೆ ಹಬ್ಬದದಿನಗಳಲ್ಲಿ ಆ ಹಬ್ಬಕ್ಕೆ ಸಂಬಂಧಿಸಿದ ಬಗೆಬಗೆಯ ಚಿತ್ರಗಳೂ ಮಕ್ಕಳ ಕೃತಿಗಳೂ ಗೋಡೆಯಲ್ಲಿ ತೂಗುತ್ತಿದ್ದರೆ, ಬೇರೆದಿನಗಳಲ್ಲಿ ಶೈಕ್ಷಣಿಕ ಮಹತ್ವದ ವಸ್ತುಗಳನ್ನು ಕೋಣೆಯಲ್ಲಿ ಇಡಲಾಗುತ್ತದೆ. ಮಕ್ಕಳು ಚೆಲುವಾದ ಕವಿತೆ ರಚಿಸಿದರೆ, ಒಂದೂ ತಪ್ಪಿಲ್ಲದೆ ಉಕ್ತಲೇಖನದಲ್ಲಿ ಯಶಸ್ಸು ಗಳಿಸಿದರೆ, ಅವರನ್ನು ಗೌರವಿಸಿ ಇತರ ಹುಡುಗರೂ ಅವರ ಆದರ್ಶವನ್ನು ಅನುಕರಿಸುವಂತೆ ಉತ್ತೇಜನೆ ಕೊಡಲಾಗುತ್ತದೆ. ಪ್ರಾಥಮಿಕ ಶಿಕ್ಷಣ ನೀಡುವ ಅಧ್ಯಾಪಕರಲ್ಲಿ ಹೆಚ್ಚಿನವರು ಹೆಂಗಸರು – ಅವರಿಗೆ ಗಂಡಸರಿಗಿಂತ ತುಸು ಕಡಿಮೆ ಸಂಬಳ ಸಿಗುತ್ತದೆ. ಇದರ ವಿರುದ್ಧ ಹೆಂಗಸರು ಚಳವಳಿ ನಡೆಸುತ್ತಿದ್ದಾರೆ. ಅಧ್ಯಾಪಕ ವೃಂದದವರು ತಮ್ಮ ಸಂಬಳದ ವಿಷಯದಲ್ಲಿ ಉಳಿದ ವೃತ್ತಿಯವರಷ್ಟು ಹೆಚ್ಚು ತಮಗೆ ಸಿಗುತ್ತಿಲ್ಲವೆಂದು ಹೇಳುತ್ತಿದ್ದಾರೆ – ಆದರೆ ನಮ್ಮಲ್ಲಿಯಂತೆ ಗೋಣಗುವುದಿಲ್ಲ. ಹಾಗೆ ನೋಡಿದರೆ ಅವರಿಗೆ ವರ್ಷಕ್ಕೆ೩೦೦೦ ಡಾಲರು ಸಿಗುತ್ತದೆ—ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಕಾರು ಇದೆ; ಸುಂದರವಾದ ಮನೆ ಇದೆ; ರೇಡಿಯೊ, ಟೆಲಿಫೋನುಗಳಿವೆ. ಆದಾಗ್ಯೂ ಅಮೇರಿಕದ ಜೀವನ ಮಟ್ಟದ ದೃಷ್ಟಿಯಿಂದ ಅವರಿಗೆ ಸಂಬಳ ಸಾಲುವುದಿಲ್ಲ— ಅವರು ಶಾಲೆ ಬಿಟ್ಟ ಬಳಿಕ ಹೋಟೆಲಿನಲ್ಲಿ ದುಡ್ಡು ತೆಗೆದುಕೊಳ್ಳುವ, ಸಿನೆಮಾ ಥಿಯೇಟರಿನ ಬಾಗಿಲು ಕಾಯುವ, ಯಾರಾದರೊಬ್ಬ ಅಧಿಕಾರಿಯ ಮನೆಯಲ್ಲಿ ಮಕ್ಕಳನ್ನು ನೋಡಿಕೊಳ್ಳುವ ಇತ್ಯಾದಿ ಉಪವೃತ್ತಿಗಳಿಂದ ಹೆಚ್ಚು ಹಣ ಸಂಪಾದಿಸುತ್ತಾರೆ.

ಶಿಕ್ಷಣದ ಪ್ರಚಾರದಲ್ಲಿ ಅಲ್ಲಿಯ ಹೆತ್ತವರು ವಹಿಸುವ ಆಸ್ಥೆ ಸ್ಪೃಹಣೀಯ. ಪ್ರತಿಯೊಂದು ಶಾಲೆಗೂ ಹೆತ್ತವರು ಮತ್ತು ಅಧ್ಯಾಪಕರು ವಿಚಾರ ವಿನಿಮಯ ನಡೆಸುವ ಸಂಘವೊಂದಿದ್ದು, ಅದು ಬಹಳ ಹೆಚ್ಚಿನ ಚಟುವಟಿಕೆಯನ್ನು ತೋರಿಸುತ್ತದೆ. ಶಾಲೆಯಲ್ಲಿ ಶಿಕ್ಷಣದ ಪ್ರಗತಿ ಮತ್ತು ಸುಧಾರಣೆಗಳ ವಿಷಯವಲ್ಲಿ ಗಂಭೀರ ಚರ್ಚೆಗಳು ನಡೆಯುತ್ತವೆ ಇದರಂತೆ ಕೈಗಾರಿಕೆ ಮತ್ತು ವ್ಯಾಪಾರಿ ಸಂಸ್ಥೆಗಳವರೂ ಶಿಕ್ಷಣ ಪ್ರಚಾರದಲ್ಲಿ ನೆರವಾಗುತ್ತಾರೆ. ಅವರು ತಮ್ಮ ಕೇಂದ್ರಗಳ ಚಟುವಟಿಕೆಯನ್ನು ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ತಿಳಿಸಿಹೇಳಲುಉತ್ಸವವನ್ನು ಏರ್ಪಡಿಸುತ್ತಾರೆ, ಮತ್ತು ತಮ್ಮ ಉದ್ಯೋಗಕ್ಕೆ ಹಿತಕರವಾದ ರೀತಿಯಲ್ಲಿ ಯಾವ್ಯಾವ ಶೈಕ್ಷಣಿಕಸುಧಾರಣೆಗಳನ್ನು ಮಾಡಬಹುದೆಂದು ಸೂಚಿಸುತ್ತಾರೆ. ಇದರಿಂದ ಶಿಕ್ಷಕರಿಗೆ ಸರಿಯಾದ ಮಾರ್ಗದಲ್ಲಿ ಮುನ್ನಡೆದು ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ನಾಗರಿಕ ಹೊಣೆಗಾರಿಕೆಗಳಿಗೆ ಹೆಗಲು ಕೊಡಲು ಮತ್ತು ಸುಖ ಜೀವನ ನಡೆಸಲು ಯೋಗ್ಯನಿರುವಂತೆ ಸಿದ್ಧಗೊಳಿಸಲು ಅನುಕೂಲವಾಗುತ್ತದೆ ಇದಲ್ಲದೆ ಪ್ರಾಥಮಿಕ ಶಿಕ್ಷಕರಿಂದ ಹಿಡಿದು ಕಾಲೇಜಿನ ಉಪನ್ಯಾಸಕರವರೆಗಿನ ಎಲ್ಲ ಹಂತಗಳ ತಜ್ಞರೂ ಸಭೆಗಳಲ್ಲಿ ವಿಚಾರವಿನಿಮಯ ನಡೆಸಿ ವಿದ್ಯಾಂಗದ ಸಮಗ್ರ ಸಮನ್ವಯವನ್ನು ಹೇಗೆ ಸಾಧಿಸಬಹುದೆಂದು ತೀರ್ಮಾನಿಸುತ್ತಾರೆ. ಇಲ್ಲಿ ಯಾರೊಬ್ಬರೂ ತಮ್ಮ ತಪ್ಪನ್ನು ಇನ್ನೊಬ್ಬರ ಮೇಲೆ ಹಾಕಿ ಕುಳಿತುಕೊಳ್ಳುವುದಿಲ್ಲ— ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವುದರಲ್ಲಿಯೇ ಅವರಿಗೆ ಆಸಕ್ತಿ ಹೆಚ್ಚು.

[illegible]

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು. ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ,

ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ 2) ನವಯುಗ ಪ್ರೆಸ್, ಉಡುಪಿ, ದ. ಕ.

(೧ನೇ ಪುಟದಿಂದ)

ನಮಗೆ ಸಂತೋಷವಾಗುತ್ತದೆ. ಹಳ್ಳಿಗಳ ಅಭಿವೃದ್ಧಿಯಲ್ಲಿ ಆಯಾ ಪ್ರದೇಶದ ವಿದ್ಯಾರ್ಥಿಗಳೇ ಜಾಗೃತ ಭಾವದಿಂದ ಭಾಗವಹಿಸಿದರೆ, ಭಾರತವನ್ನು ಕಟ್ಟುವ ನಮ್ಮ ಧ್ಯೇಯ ಶೀಘ್ರದಲ್ಲಿ ಕೈಗೂಡಬಲ್ಲುದು. ಇಲ್ಲಿ ಮದ್ರಾಸಿನ "ಹಿಂದು" ಪತ್ರಿಕೆಯ ಹಿತವಚನವೊಂದನ್ನು ನಮ್ಮ ವಿದ್ಯಾರ್ಥಿಗಳು ನೆನಪಿಡುವುದೊಳಿತು. ಅದೆಂದರೆ, ವರ್ಷಕ್ಕೊಮ್ಮೆ ಒಂದು ಹಳ್ಳಿಗೆ ಹೋಗಿ ನಾಲ್ಕಾರು ವಾರ ಅಲ್ಲಿದ್ದು, ಅನೇಕ ಚಟುವಟಿಕೆಗಳನ್ನು ನಡೆಸಿ ಬಂದರೆ ಸಾಲದು; ಈ ಕೆಲಸಗಳಿಂದ ಹಳ್ಳಿಗರು ಎಷ್ಟರ ಮಟ್ಟಿನ ಪ್ರಯೋಜನ ಪಡೆದಿರುವರ, ಅವರಲ್ಲಿ ಎಷ್ಟರ ಮಟ್ಟಿನ ಉತ್ಸಾಹ ನೆಲೆಗೊಂಡಿರುವುದು ಎಂಬುದನ್ನು ತಿಳಿಯಲು ಮತ್ತೆ ಎರಡು ಮೂರು ಸಲವಾದರೂ ಅದೇ ಹಳ್ಳಿಯಲ್ಲಿ ಬಂದಿಳಿಯಬೇಕು ಇಲ್ಲದಿದ್ದರೆ, ಭರತದ ನೀರಿನಂತೆ, ಒಮ್ಮೆ ತುಂಬಿದ ಉತ್ಸಾಹ ಕೆಲವೇ ದಿನಗಳಲ್ಲಿ ತಗ್ಗಿ ಹೋಗುತ್ತದೆ. ಹಾಗಾದರೆ,ಹಳ್ಳಿಗರ ಏಳಿಗೆಗೆ ದುಡಿದೆವೆಂಬ ತೃಪ್ತಿ ಅರ್ಥ ಶೂನ್ಯವೆನಿಸುತ್ತದೆ.

—ಕಾರ್ತಿಕೇಯ.

REGD. NO.
M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೪ — VOL. 34

ಉಡುಪಿ, 12—5—1955

ಸಂಚಿಕೆ ೩೬ — NO. 36

ಅವನು ಓಡಿಯೋಡಿ ಬರುತ್ತಿರುವುದನ್ನು ದೂರದಿಂದಲೇ ಕಂಡು ನಿಂತವನೊಬ್ಬನು 'ಏಕೆ ಓಡುತ್ತಿದ್ದೀರಿ?' ಎಂದು ಪ್ರಶ್ನಿಸಿದನು.

"ಇಬ್ಬರಲ್ಲಿ ಆಗಲಿರುವ ಜಗಳವನ್ನು ತಪ್ಪಿಸುವುದಕ್ಕಾಗಿ ಓಡುತ್ತಿದ್ದೇನೆ"

"ಅವರು ಯಾರು? ಎಲ್ಲಿದ್ದಾರೆ? ನಾನೂ ಬರುತ್ತೇನೆ"

'ಇಬ್ಬರಲ್ಲಿ ಒಬ್ಬ ನಾನೇ— ಇನ್ನೊಬ್ಬ ಹಿಂದೆ ಎಲ್ಲೋ ಇರಬೇಕು' ಎಂದಾತ ಉತ್ತರಿಸಿ ಪುನಃ ಓಡತೊಡಗಿದ

ಗೋವೆಯ ಆಂದೋಲನ

ಭಾರತವು ಸ್ವತಂತ್ರವಾಗಿದ್ದರೂ ಫ್ರೆಂಚರು ಬ್ರಿಟಿಷರ ಪರಂಪರೆಯನ್ನನುಸರಿಸಿ ತಮ್ಮ ಕೈಯಲ್ಲಿದ್ದ ನಾಲ್ಕು ತುಣುಕುಗಳನ್ನು ಸ್ವತಂತ್ರ ಭಾರತದ ವಶಕ್ಕೆ ಒಪ್ಪಿಸಿಕೊಟ್ಟಿದ್ದರೂ ಪೋರ್ಚುಗೀಜರು ವಸಾಹತುಗಳನ್ನು ಬಿಟ್ಟುಕೊಡುವಂತೇನೂ ಕಾಣುವುದಿಲ್ಲ ಬದಲಿಗೆ ಬಹಳ ಬಿಗುವಾದ, ಕಠಿಣವಾದ ಮತ್ತು ಕ್ರೂರವಾದ ಕ್ರಮಗಳನ್ನು ಅನುಸರಿಸಿ, ಭಯಂಕರ ವಾತಾವರಣದಿಂದ ಪ್ರಜೆಗಳಲ್ಲಿ ಉಂಟಾಗಿರುವ ಜಾಗೃತಿಯನ್ನು ದಮನಿಸಲು ಅವರು ನೋಡುತ್ತಿರುವರೆಂದೇ ಅನುಭವವು ಹೇಳುತ್ತದೆ ಕಾರಣ, ನಾವು ಎಷ್ಟು ಸಮಯದವರೆಗೆ ಪೋರ್ಚುಗೀಜರು ಒಳ್ಳೆಯವರಾಗುವರೆಂದು ಕಾದು ಕುಳಿತಿರಬೇಕು ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಏಳುತ್ತದೆ.

ಇದನ್ನು ಉತ್ತರಿಸುವಾಗ ನಾವು ಅನೇಕ ಪ್ರಶ್ನೆಗಳ ಸಿಂಹಾವಲೋಕನವನ್ನು ಮಾಡುವುದು ಅಪೇಕ್ಷಣೀಯ. ಲೋಕಸಭೆಯ ಮುಂದೆ ಈ ಪ್ರಶ್ನೆಯು ಕಳೆದ ವಾರ ಮಂಡಿಸಲ್ಪಟ್ಟಿತು. ಪ್ರಧಾನ ಮಂತ್ರಿ ನೆಹರುಗಳು ಗೋವೆಯ ಕುರಿತು ಬಹಳ ವಿವರವಾದ ಅಂಶಗಳನ್ನು ಸಾದರಪಡಿಸಿದರು. ಗೋವೆಯಲ್ಲಿ ಸತ್ಯಾಗ್ರಹವನ್ನು ಕೈಗೊಳ್ಳುವ ಪ್ರಯತ್ನಗಳು ನಡೆದ ಹಾಗೆಲ್ಲ ಅವನ್ನು ದಮನಿಸಲು ಪೋರ್ಚುಗೀಜರು ಪೋಲೀಸರ ಮತ್ತು ಅದಕ್ಕೂ ಹೆಚ್ಚಾಗಿ ಸೈನ್ಯ ಪಡೆಯವರ ಸಹಾಯವನ್ನು ತೆಗೆದುಕೊಳ್ಳುತ್ತಿದ್ದಾರೆ ಸತ್ಯಾಗ್ರಹಿಗಳನ್ನು ಬಂಧಿಸುವ, ಥಳಿಸುವ, ಅವರಿಗೆ ದೀರ್ಘಾವಧಿ ಸೆರೆಮನೆವಾಸದ ಶಿಕ್ಷೆಯನ್ನು ಕೊಡುವ ನೀತಿಯು ಪೋರ್ಚುಗೀಜ ಸರಕಾರದಿಂದ ಅನುಸರಿಸಲ್ಪಡುತ್ತದೆ—ಎಂದು ನೆಹರು ತಿಳಿಸಿದರು.

ಸತ್ಯಾಗ್ರಹಿಗಳಲ್ಲಿ ಕೆಲವರನ್ನು ಪೂರ್ವ ಆಫ್ರಿಕದಲ್ಲಿರುವ ಪೋರ್ಚುಗೀಜ ವಸಾಹತುಗಳಿಗೆ ಸ್ಥಳಾಂತರಿಸಲಾಗಿದೆಯೋ ಏನೆಂಬ ಬಗ್ಗೆ ಖಚಿತವಾದ ಸುದ್ದಿ ಸರಕಾರಕ್ಕೆ ತಿಳಿದಿಲ್ಲವೆಂದು ನೆಹರುಗಳು ವಿಷಾದದಿಂದ ಹೇಳಿದರು ಆದರೆ ಇಂಥ ವಾರ್ತೆಗಳು ಆಗಾಗ್ಗೆ ಬರುತ್ತಿರುತ್ತವೆ ಎಂದವರು ಒಪ್ಪಿಕೊಂಡರು ಸುದ್ದಿಗಳ ನಿಯಂತ್ರಣ ಮತ್ತು ಇತರ ಕಠೋರ ನಿರ್ಬಂಧಗಳಿರುವ ದೆಸೆಯಿಂದ ಸತ್ಯವನ್ನು ತಿಳಿದುಕೊಳ್ಳುವುದು ನಾಗರಿಕರಿಗೆ ಅಸಾಧ್ಯವಾಗಿರುವುದಂತೂ ನಿಜ— ನೆಹರುಗಳ ಹೇಳಿಕೆಯನ್ನು ನೋಡಿದರೆ, ಪೋರ್ಚುಗೀಜ ಸರಕಾರವು ಭಾರತ ಸರಕಾರದ ಅಧಿಕೃತ ಪ್ರಶ್ನೆಗಳಿಗೆ ಸಹ ಚೆನ್ನಾಗಿ ಉತ್ತರಿಸುತ್ತಿಲ್ಲವೆಂದೂ ಸರಕಾರದ ಪ್ರತಿನಿಧಿಗಳು ಕೇಳಿದ ಮಾಹಿತಿಯನ್ನು ಒದಗಿಸುವಷ್ಟು ಸೌಜನ್ಯವನ್ನು ಸಹ ತೋರಿಸುತ್ತಿಲ್ಲವೆಂದೂ ವ್ಯಕ್ತವಾಗುತ್ತದೆ

ಪೋರ್ಚುಗೀಜ ಸರಕಾರದೊಡನೆ ಭಾರತದ ಸಂಬಂಧವು ಎಷ್ಟರ ಮಟ್ಟಿಗೆ ಹದಗೆಟ್ಟು ಹೋಗಿರುವುದೆಂಬುದನ್ನಿದು ತೋರಿಸಿ ಕೊಡುತ್ತದೆ ಕಾಲ ಕಾಲಕ್ಕೆ ಸಂಧಾನದಿಂದ ವಸಾಹತುಗಳ ಪ್ರಶ್ನೆಯನ್ನು ಬಗೆಹರಿಸುವ ಸೂಚನೆಯನ್ನು ಭಾರತ ಮುಂದಿಟ್ಟಿತು ಅದನ್ನು ಹೊರನೋಟಕ್ಕೆ ಸ್ವೀಕರಿಸಿದಂತೆ ಮಾಡಿ, ಪೋರ್ಚುಗಾಲವು ಹಿಂದಿನಿಂದ ಆಕ್ಷೇಪಿಸಿ, ತಳ್ಳಿ ಹಾಕಿತು ಸಂಧಾನದ ಆಶೆಯೇ ಉಳಿದಿಲ್ಲವೆಂದು ಹೇಳುವಷ್ಟು ಈಗ ಪರಿಸ್ಥಿತಿ ಕೆಟ್ಟಿರುತ್ತದೆ. ಸತ್ಯಾಗ್ರಹವು ಬಲಗೊಂಡಿರುವುದನ್ನು ಕಂಡಂತೆ, ಪೋರ್ಚುಗೀಜ ಸರಕಾರವು ತನ್ನ ಅಧಿಕಾರದಲ್ಲಿರುವ ಪೋಲೀಸರ ವರ್ತನೆಯ ಮೇಲೆಯೇ ಸಂಪ್ರಯುಕ್ತವಾಯಿತು, ಮತ್ತು ಪರಿಣಾಮದಲ್ಲಿ ಸೈನ್ಯಪಡೆಯ ಮೇಲೆಯೇ ಹೆಚ್ಚು ಭರವಸೆ ಇಟ್ಟು ಕೆಲಸ ಮಾಡಲು ಉಪಕ್ರಮಿಸಿತು.

ಹೀಗಿರುವಾಗ ಭಾರತ ಸರಕಾರ ಏನು ಮಾಡಬೇಕು? ನೆಹರುಗಳು ಗೋವೆ ಮತ್ತಿತರ ಪೋರ್ಚುಗೀಜ ವಸಾಹತುಗಳ ಈಗಿನ ವಾತಾವರಣವನ್ನು ಕಂಡು ಭಾರತ ಸರಕಾರಕ್ಕೆ ಬಹಳ ಚಿಂತೆಯುಂಟಾಗಿದೆ ಎಂದೇನೋ ಹೇಳಿದರು ಆದರೆ ಮುಂದಿನ ನಿಲುವಿನ ಬಗ್ಗೆ ಸ್ಪಷ್ಟವಾಗಿ ಏನನ್ನೂ ಹೇಳಲಿಲ್ಲ. ಭಾರತ ಸರಕಾರದ ಎಚ್ಚರಿಕೆಯ ಪತ್ರಗಳು ಪೋರ್ಚುಗೀಜರ ಮೇಲೇನೂ ಪರಿಣಾಮವನ್ನು ಮಾಡಿರುವುದಿಲ್ಲ ಸಾಲಾಜ಼ಾರರು ಎಲ್ಲ ಆರೋಪಗಳನ್ನೂ ನಿರಾಕರಿಸಿ, ಪ್ರತಿಪಕ್ಷದ (ಅಂದರೆ ಭಾರತದ) ಸಹನೆಗೆಡಿಸಬೇಕೆಂದು ಪ್ರತಿಜ್ಞಾಬದ್ಧರಿರುವಂತೆ ಕಾಣುತ್ತದೆ ಒಮ್ಮೆ ಸಹನೆ ತಪ್ಪಿದರೆ, ದುಡುಕಿನ ಘಟನೆ ಏನಾದರೂ ಜರಗುವುದು, ಆಗ ಸಹಜವಾಗಿ ಭಾರತದ ಶಾಂತಿಪ್ರಿಯ ಧೋರಣೆ ಬುಡ ಮೇಲಾಗುವುದು, ಮತ್ತು ಭಾರತವೇ ತಪ್ಪಿತಸ್ಥ ರಾಷ್ಟ್ರವಾಗುವುದು— ಎಂದು ಮುಂತಾಗಿ ಸಾಲಾಜ಼ಾರರು ಎಣಿಕೆ ಹಾಕಿರಲೂ ಸಾಕು

ಇದನ್ನು ಕಣ್ಣ ಮುಂದಿಟ್ಟುಕೊಂಡು ನಾವು ಭಾರತ ಸರಕಾರದ ರೂಪರೇಖೆಯನ್ನು ನಿರ್ಧರಿಸಬೇಕು— ಇದಿರಾಳಿಯು ನಮ್ಮ ಮುಖಭಂಗ ಮಾಡದ ರೀತಿಯಲ್ಲಿ ಹೊಸ ಧೋರಣೆಯನ್ನು ರೂಪಿಸುವುದೇ ನಮ್ಮ ಈಗಿನ ಕೆಲಸ ನಾವೀಗ ಸಂಧಾನದ ಹೆಸರಿನಲ್ಲಿ ದೊಣ್ಣೆ ಹಿಡಿದು ಓಡಿಸಿಕೊಂಡು ಬರುವ ಪ್ರತಿಪಕ್ಷದವನೊಡನೆ ಕತ್ತಿಯುದ್ಧ ಮಾಡಲಿಚ್ಛಿಸದೆ ಓಡುತ್ತಿದ್ದೇವೆ. ಇದು ಸಲ್ಲದು— ಅವರು ಕ್ರೂರ ಹತ್ಯೆ, ಶಿಕ್ಷೆ ಮತ್ತು ಅತ್ಯಾಚಾರಗಳಿಗೆ ಹೇಸುವುದಿಲ್ಲವಾದರೆ ನಾವು ಮಾತ್ರ ಶಾಂತಿಯ ಮಂತ್ರ ಪಠಣ ಮಾಡಿದರೆ ಉಪಯೋಗವಾಗದು. ನಮ್ಮ ಸಾತ್ವಿಕ ಶಕ್ತಿಯನ್ನು ನಿಶ್ಶಕ್ತಿ ಎಂದು ಪೋರ್ಚುಗೀಜರು ಭಾವಿಸಬಾರದು— ಇದಕ್ಕೆ ತಕ್ಕ ರೀತಿಯಲ್ಲಿ ನಮ್ಮ ವರ್ತನೆ ಇರುವುದು ಅಗತ್ಯವಾಗಿದೆ

ಗೋವೆಯ [illegible] ಅಸಹನೀಯವಾಗುತ್ತ ಬರುತ್ತಿವೆಯೆಂದು ನಾವೆಲ್ಲರೂ ಭಾವಿಸಿದ್ದೇವೆ [illegible] ಎಂಬುದನ್ನು ತಿಳಿದಿರುವುದಾಗಲಿ [illegible]

—ಶ್ರೀ ಅಶೋಕ ಮೆಹತಾ

ನೆಹರುಗಳು ಕೆಲಮಟ್ಟಿಗೆ ಇದನ್ನು ಒಪ್ಪಿರುವಂತೆ ಕಾಣುತ್ತದೆ—ಏಕೆಂದರೆ, ಅವರು ಭಾರತ ಸರಕಾರದ ಮುಂದಿನ ನಿಲುವನ್ನು ಇದಮಿತ್ಥಂ ಎಂದು ಹೇಳಲಿಲ್ಲ. ನಮ್ಮದು ಸ್ಥಿತ್ಯಾತ್ಮಕವಾದ ಧೋರಣೆಯಲ್ಲ, ಅದು ಗತ್ಯಾತ್ಮಕ—ಬದಲಾವಣೆ ಹೊಂದದಂತಿಲ್ಲ ಅದನ್ನು ಸಂಸತ್ತಿನ ಗಮನಕ್ಕೆ ತರಲಾಗುವುದು ಎಂದವರು ಪುನರುಚ್ಚರಿಸಿದರು ಇದರ ಮೇಲಿಂದ ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಧುರೀಣ ಶ್ರೀ ಪೀಟರ್ ಅಲ್ವಾರಿಸರು ಹೇಳಿದಂತೆ ಭಾರತ ಸರಕಾರವು ಹೊಸ ಉಪಾಯಗಳನ್ನು ಯೋಜಿಸಲು ಹಿಂಜರಿಯದೆಂದು ತಿಳಿದು ಬರುತ್ತದೆ. ಈ ಉಪಾಯಗಳೇನು ಎಂಬವನ್ನು ನಾವು ಕಾದು ನೋಡಬೇಕು; ಹೊರತು, ನಾವೇ ಏನಾದರೂ ಸಲಹೆಯನ್ನು ಮುಂದಿಡುವುದು ಅಷ್ಟು ಪ್ರಶಸ್ತವಲ್ಲ.

ಇಷ್ಟು ಮಾತ್ರ ಹೇಳಬಹುದು — ಸರಕಾರದ ಧೋರಣೆಯ ಮೇಲೆ ಬಹಳ ಹೆಚ್ಚಿನ ಪರಿಣಾಮವನ್ನು ಮಾಡುವ ಸಂಸತ್ತಿನ ಸದಸ್ಯರ ಸಹಕಾರವನ್ನು ಸರಕಾರ ಮುಂಚಿತವಾಗಿ ಪಡೆದುಕೊಂಡು ತನ್ನ ಮುಂದಿ

([illegible]ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD
Estd: 1925 — H O UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಆವಶ್ಯಕತೆ ಬೀಳುವುದು ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ ಹಣವನ್ನು ಠೇವಣಿಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿರಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು [illegible] ಶಾಖಾ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸಬಲ್ಲುದು ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕ್ರೋಡೀಕರಿಸಲಾಗಿದೆ ಆದುದರಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅನುಕೂಲ ಸವಲತ್ತನ್ನು ಪಡೆದುಕೊಳ್ಳಿರಿ

ಚಲಾವಣೆ ಭಂಡವಾಳ ರೂ ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ, ದ ಭಾರತ.

ಅಪೂರ್ವ ಗುಣದ ಮೂಲಿಕೆ - ಸರ್ಪಗಂಧ

ಹಳೆಯ ಔಷಧದ ಹೊಸ ಉಪಯೋಗ

ಭಾರತದ ಪ್ರಾಚೀನ ವೈದ್ಯ ವಿಜ್ಞಾನವಾಗಿರುವ ಆಯುರ್ವೇದ ಮತ್ತು ಅಮೇರಿಕದ ವೈದ್ಯಕೀಯ ಸಂಶೋಧನೆಯ ಸಂಯೋಜನೆಯಿಂದ ರಕ್ತದ ಅಧಿಕ ಒತ್ತಡದ ಚಿಕಿತ್ಸೆಗೆ ಹೊಸತಾದ ಔಷಧವೊಂದನ್ನು ಸಿದ್ಧಪಡಿಸಲಾಗಿದೆ. ಉಷ್ಣ ಪ್ರದೇಶಗಳ ಕಾಡುಗಳಲ್ಲಿ ಬೆಳೆಯುವ ಸರ್ಪಗಂಧ ಅಥವಾ ಗರುಡ ಪಾತಾಳವೆಂಬ (ರಾವೋಲ್ಫಿಯ ಸರ್ಪೆಂಟಿನಾ) ಗಿಡದ ಬೇರೇ ಈ ಔಷಧದ ಆಧಾರವಾಗಿರುತ್ತದೆ.

ಭಾರತೀಯರು ಅನೇಕ ಶತಮಾನಗಳಿಂದ ನಿದ್ರಾಹೀನತೆ, ಹಾವು ಕಡಿತ ಮತ್ತು ಕರುಳಿನ ಜಾಡ್ಯಗಳಿಗೆ ಈ ಬೇರನ್ನು ಉಪಯೋಗಿಸುತ್ತಿದ್ದರು. ಸರ್ಪಗಂಧದ ಗಿಡಕ್ಕೆ ವೈದ್ಯಕೀಯ ಗುಣಗಳಿವೆಯೆಂದು ಆಯುರ್ವೇದ ವೈದ್ಯರಿಗೆ ಸಾವಿರಾರು ವರ್ಷಗಳ ಮೊದಲೇ ತಿಳಿದಿತ್ತೆಂದು ಇದು ತೋರಿಸಿ ಕೊಡುತ್ತದೆ. ಆದರೆ ರಕ್ತದ ಅಧಿಕ ಒತ್ತಡದ ಚಿಕಿತ್ಸೆಗೆ ಇದರ ಉಪಯೋಗವು ಆಧುನಿಕ ಶೋಧವಾಗಿದೆ.

ಈ ಔಷಧವು ಉಂಟುಮಾಡುವ ಓಕರಿಕೆ, ಜಡತೆ ಮುಂತಾದ "ಉಪ ಪ್ರತಿಕ್ರಿಯೆಗಳ" ಪ್ರಮಾಣ ಅತ್ಯಲ್ಪವೆಂದೂ ರಕ್ತದ ಒತ್ತಡವನ್ನಿದು ನಿಧಾನವಾಗಿ, ಕ್ರಮಬದ್ಧವಾಗಿ ತಗ್ಗಿಸುವುದೆಂದೂ ಇದು ವರೆಗೆ ನಡೆಸಿದ ಪರೀಕ್ಷೆಗಳಿಂದ ತಿಳಿದುಬಂದಿದೆ. ಮಾನಸಿಕ ಅವ್ಯವಸ್ಥೆಗಳಿಂದ ನರಳುವ ರೋಗಿಗಳಿಗೆ ಉಪಶಮನ ಕೊಡಲೂ ಸರ್ಪಗಂಧವನ್ನು ಬಳಸಲಾಗಿದೆ.

ನ್ಯೂಯಾರ್ಕ್ ನಗರದ ವಿಜ್ಞಾನಿಗಳ ಅಕಾಡೆಮಿಯು ಕೆಲವು ತಿಂಗಳುಗಳ ಹಿಂದೆ ಏರ್ಪಡಿಸಿದ ಸಮ್ಮೇಳನವೊಂದರಲ್ಲಿ ೧೨ ಪ್ರಮುಖ ವೈದ್ಯಕೀಯ ಸಂಶೋಧಕರು ಈ ಹೊಸತಾದ ಔಷಧದ ರಾಸಾಯನಿಕ ಸ್ವರೂಪ ಮತ್ತು ವೈದ್ಯಕೀಯ ಉಪಯೋಗಗಳನ್ನು ವಿವರಿಸಿದರು.

"ಈ ಔಷಧಕ್ಕೆ ಉಪಶಮನ ಕಾರಕ ಗುಣವಿರುವಂತೆ ಕಂಡು ಬರುತ್ತದೆ; ಮತ್ತಿದು ರೋಗಿಯ ಮೇಲೆ ಮಾದಕ ಪರಿಣಾಮವನ್ನುಂಟುಮಾಡುವುದಿಲ್ಲ" ಎಂದು ೩೬ ಸ್ತ್ರೀಯರ ಚಿಕಿತ್ಸೆ ಮಾಡಿದ ನಂತರ, ಜಾರ್ಜಿಯಾದ ವೈದ್ಯಕೀಯ ಶಾಲೆಯ ಡಾ|| ರಾಬರ್ಟ್ ಬಿ. ಗ್ರೀನ್ ಬ್ಲಾಟ್‌ರು ವರದಿ ಮಾಡಿದರು. ನ್ಯೂಯಾರ್ಕಿನ ವೃದ್ಧ ಸಂಸ್ಥೆಯೊಂದರಲ್ಲಿರುವ ಅನೇಕ ವೃದ್ಧ ರೋಗಿಗಳಿಗೆ ಈ ಔಷಧವನ್ನು ಕೊಟ್ಟಾಗ, ಇದು ವ್ಯಥೆ ಮತ್ತು ಮಾನಸಿಕ ಆಯಾಸಗಳ ವಿರುದ್ಧ ಒಳ್ಳೆಯ ಪ್ರಯೋಜನವಿರುವ ಅಸ್ತ್ರವಾಗಿದೆಯೆಂದು ತಿಳಿದು ಬಂತು.

ಇತ್ತೀಚೆಗೆ ಪ್ರಧಾನಿ ನೆಹರೂರವರ ಅಧ್ಯಕ್ಷತೆಯಲ್ಲಿ ಜರಗಿದ ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನ ಕೇಂದ್ರದ ವ್ಯವಸ್ಥಾಪಕ ಮಂಡಳಿಯ ಸಭೆಯು ಸರ್ಪಗಂಧದ ಬಗ್ಗೆ ಈ ವರ್ಷ ಒಂದು ವಿಚಾರ ಸಂಕೀರ್ಣವನ್ನೇರ್ಪಡಿಸಲು ನಿರ್ಧರಿಸಿದೆ. ಇದರಿಂದ ನಮಗೆ ಹೆಚ್ಚಿನ ವಿಷಯ ತಿಳಿದು ಬಂದೀತು.

ಭಾರತದಲ್ಲಿ ಸರ್ಪಗಂಧದ (ರಾವೋಲ್ಫಿಯಾ) ಗುಂಪಿಗೆ ಸೇರಿದ ಅನೇಕ ಜಾತಿಯ ಗಿಡಗಳಿವೆ ಮತ್ತು ರಾವೋಲ್ಫಿಯಾ ಸರ್ಪಗಂಧದಲ್ಲೂ ಹಲವು ಉಪಜಾತಿಗಳಿವೆ. ಅತ್ಯುಪಯುಕ್ತವಾಗಿರುವ ಈ ಗಿಡಮೂಲಿಕೆಯು ಹಿಮಾಲಯದ ತಪ್ಪಲುಗಳಲ್ಲಿ ಬೆಳೆಯುತ್ತದೆ. ಹಲವು ಉಪಭಾಷೆಗಳನ್ನಾಡುವ ಜನರಿರುವ ಈ ಅರಣ್ಯಪ್ರದೇಶಗಳಲ್ಲಿ ಮೂಲಿಕೆಗಳನ್ನು ಹುಡುಕುವ ಮತ್ತು ಗುರುತಿಸುವ ಕೌಶಲ್ಯವು ತಂದೆಯಿಂದ ಮಗನಿಗೆ ಸಾವಿರಾರು ವರ್ಷಗಳಿಂದ ವಂಶಪಾರಂಪರ್ಯವಾಗಿ ಬಂದಿರುತ್ತವೆ.

ಈ ಮೂಲಿಕೆಗೆ ರಕ್ತದ ಅಧಿಕ ಒತ್ತಡದ ಉಪಶಮನ ಮಾಡುವ ಶಕ್ತಿಯಿದೆ ಎಂದು ಸಿದ್ಧಗೊಳಿಸಲ್ಪಟ್ಟಾಗ, ಹಠಾತ್ತಾಗಿ ಮೂಲಿಕೆಯ ಬೇಡಿಕೆಯು ಹೆಚ್ಚಿಕೊಂಡಿತು. ಕೇವಲ ಅಮೇರಿಕದಲ್ಲೇ, ಕನಿಷ್ಠ ಪಕ್ಷ ನಾಲ್ಕು ಔಷಧ ನಿರ್ಮಾಪಕ ಸಂಸ್ಥೆಗಳು ಈಗ ಟನ್‌ಗಟ್ಟಲೆಯಾಗಿ ಈ ಮೂಲಿಕೆಯನ್ನು ತರಿಸುತ್ತಿವೆ, ಮತ್ತು ಒಂದಲ್ಲ ಒಂದು ರೂಪದಲ್ಲಿ ಈ ಮೂಲಿಕೆಯನ್ನು ೫ ಲಕ್ಷ ರೋಗಿಗಳ ಚಿಕಿತ್ಸೆಗೆ ಉಪಯೋಗಿಸಲಾಗುತ್ತದೆ.

ಅಮೇರಿಕದಲ್ಲಿರುವ ಪ್ರಸಿದ್ಧ ವೈದ್ಯರ ಸಂಘವು ಸರ್ಪಗಂಧದಿಂದ ತಯಾರಿಸಿದ ಔಷಧಗಳಿಗೆ ಮಾತ್ರ ಅಂಗೀಕಾರವೀಯುತ್ತದೆ. ರಾವೋಲ್ಫಿಯಾ ಜಾತಿಗೆ ಸೇರಿದ ಇತರ ಮೂಲಿಕೆಗಳಿಂದ ಸಿದ್ಧಪಡಿಸಿದವುಗಳನ್ನು ಅದು ಮನ್ನಿಸುತ್ತಿಲ್ಲ.

ಭಾರತದ ಪ್ರಾಚೀನ ವೈದ್ಯರು ಅನೇಕ ರೋಗಗಳಲ್ಲಿ ಉಪಯುಕ್ತವಾಗುವ ಮೂಲಿಕೆಯೆಂದು ಸರ್ಪಗಂಧವನ್ನು ಪ್ರಶಂಸಿಸಿದ್ದಾರೆ. ಇತ್ತೀಚೆಗೆ ಉನ್ಮಾದಕ್ಕೆ ಚಿಕಿತ್ಸೆಯಾಗಿ ಇದನ್ನು ಭಾರತದಲ್ಲಿ ಉಪಯೋಗಿಸಲಾಯಿತು.

ಆದರೆ ರಕ್ತದ ಒತ್ತಡದ ಚಿಕಿತ್ಸೆಯಲ್ಲಿ ಇದು ಪ್ರಯೋಜನಕರವೆಂದು ೨೫ ವರ್ಷಗಳ ಮೊದಲು ಹೆಚ್ಚಿನ ಜನರಿಗೆ ತಿಳಿದಿರಲಿಲ್ಲ ಮತ್ತು ಅನೇಕ ತಾಯಂದಿರು ತಮ್ಮ ಶಿಶುಗಳಿಗೆ ಈ ಮೂಲಿಕೆಯ ಚೂರ್ಣವನ್ನು ಕೊಡುತ್ತಿದ್ದರಾದರೂ, ಡಾಕ್ಟರರಿಗೆ ಇದರ ಉಪಶಮನಕಾರಕ ಗುಣ ಗೊತ್ತಿರಲಿಲ್ಲ.

ಸರ್ಪಗಂಧದ ಆಧುನಿಕ ಇತಿಹಾಸವು ೧೯೩೧ರಲ್ಲಿ ಪ್ರಾರಂಭವಾಯಿತು. ಆ ವರ್ಷ ದೆಹಲಿಯ ಟಿಬ್ಬಾ ಕಾಲೇಜಿನ ಇಬ್ಬರು ರಸಾಯನ ವಿಜ್ಞಾನಿಗಳು ಬಿಹಾರಿನ ಒಂದು ಸಂತೆಯಲ್ಲಿ ಈ ಮೂಲಿಕೆಯನ್ನು ಪಡೆದರು ಮತ್ತಿದರ ಘಟಕಗಳನ್ನು ಪ್ರತ್ಯೇಕಿಸಲು ಪ್ರಯತ್ನಿಸಿದರು.

"ಒಣಗಿದ ಮೂಲಿಕೆಯ ಚೂರ್ಣದಿಂದ ನಾವು ಐದು ಹರಳುಗಳನ್ನುಂಟುಮಾಡಬಲ್ಲ ವಸ್ತುಗಳನ್ನು ಪ್ರತ್ಯೇಕಿಸಿದ್ದೇವೆ. ಮತ್ತವು ಹೊಸತಾಗಿರುವಂತೆ ತೋರುತ್ತವೆ" ಎಂದು ತಮ್ಮ ಪರಿಶೀಲನೆಗಳ ನಂತರ ಈ ವಿಜ್ಞಾನಿಗಳು ಹೇಳಿದರು.

ಇದೇ ಕಾಲದಲ್ಲಿ, ಅನೇಕ ವರ್ಷಗಳಿಂದ ಈ ಮೂಲಿಕೆಯ ಬಗ್ಗೆ ಸಂಶೋಧನೆ ನಡೆಸುತ್ತಿದ್ದ ಕಲ್ಕತ್ತದ ಇಬ್ಬರು ಭೌತ ವಿಜ್ಞಾನಿಗಳು, "ಇದು ಉದ್ವೇಗದಲ್ಲಿ ಉಪಶಮನವೀಯುತ್ತದೆ ಮಾತ್ರವಲ್ಲದೆ ರಕ್ತದ ಒತ್ತಡವನ್ನು ತಗ್ಗಿಸುತ್ತದೆ" ಎಂದು ಸಾರಿದರು.

"ಜಾಗರೂಕತೆಯಿಂದ, ನಿಯಮಿತ ಪ್ರಮಾಣಗಳಲ್ಲಿ ಉಪಯೋಗಿಸಿದರೆ ಈ ಮೂಲಿಕೆಯು ರಕ್ತದ ಅಧಿಕ ಒತ್ತಡದಲ್ಲಿ ಬಹಳ ಪರಿಣಾಮಕಾರಿ ಔಷಧವಾಗುವುದು. ಉದ್ರೇಕಗೊಳ್ಳುವ ಸ್ವಭಾವದ ಜನರಿಗೆ ಇದು ಬಹಳ ಒಳ್ಳೆಯದು .... ತಲೆ ಸಿಡಿತ, ಉಷ್ಣ ಪ್ರಕೋಪ ಮತ್ತು ನಿದ್ರಾಹೀನತೆ ಮುಂತಾದ ಲಕ್ಷಣಗಳು ಬೇಗನೆ ಅದೃಶ್ಯವಾಗುವುವು ಮತ್ತು ಒಂದು ಅಥವಾ ಎರಡು ವಾರಗಳೊಳಗೆ ರಕ್ತದ ಒತ್ತಡವು ೨೦೦ ರಿಂದ ೧೧೬ಕ್ಕೆ ಇಳಿಯಬಲ್ಲುದು" ಎಂದು ಕವಿರಾಜ ಗಣನಾಥ ಸೇನ್ ಮತ್ತು ಡಾ| ಕಾರ್ತಿಕ ಚಂದ್ರ ಬೋಸರು ಹೇಳಿದರು.

ಸರ್ಪಗಂಧ ಗರ್ಭಜವಾಯು (ಹಿಸ್ಟೀರಿಯ) ರೋಗಿಗಳ ನರ ಮಂಡಲಗಳ ಮೇಲೆ ಬಹಳ ಉಪಶಮನಕಾರಕ ಪರಿಣಾಮವುಂಟುಮಾಡುವುದೆಂದು ತಿಳಿದು ಬಂದಿದೆ. ಕವಿರಾಜ ಸೇನ್ ಮತ್ತು ಡಾ. ಬೋಸ್‌ರು ಈ ಮೂಲಿಕೆಯು 'ಅಪೂರ್ವ ಗುಣದ ಮೂಲಿಕೆ'ಯಾಗಿರುತ್ತದೆ ಎಂಬ ನಿರ್ಣಯಕ್ಕೆ ಬಂದರು ಮತ್ತು ಜಗತ್ತಿನ ಎಲ್ಲಾ ವೈದ್ಯಕೀಯ ತಜ್ಞರು ಸ್ವತಃ ಪರಿಶೀಲನೆಗಳನ್ನು ನಡೆಸಬೇಕೆಂದು ಕೇಳಿಕೊಂಡರು.

ಇದೇ ಸಮಯದಲ್ಲಿ ಕಲ್ಕತ್ತದ ಸ್ಕೂಲ್ ಆಫ್ ಟ್ರೊಪಿಕಲ್ ಮೆಡಿಸಿನ್‌ನಲ್ಲಿ ಜಗದ್ವಿಖ್ಯಾತ ಮೂಲಿಕಾ ತಜ್ಞ ಕರ್ನಲ್ (ಈಗ ಸರ್) ರಾಮನಾಥ ಚೋಪ್ರಾರವರ ನೇತೃತ್ವದಲ್ಲಿ ಇದರ ಬಗ್ಗೆ ರಾಸಾಯನಿಕ ಮತ್ತು ವೈದ್ಯಕೀಯ ವ್ಯಾಸಂಗಗಳನ್ನು ಪ್ರಾರಂಭಿಸಲಾಯಿತು.

ರಕ್ತದ ಅಧಿಕ ಒತ್ತಡದ ಚಿಕಿತ್ಸೆಗೆ ಸರ್ಪಗಂಧದ ಉಪಯೋಗದ ಬಗ್ಗೆ ಪರಿಶೀಲನೆ ನಡೆಸಿದ ಭಾರತೀಯ ವೈದ್ಯರ ಪೈಕಿ ಶ್ರೀ ಬಿ. ಬಿ ಭಾಟಿಯಾ, ಶ್ರೀ ಎನ್. ಕೆ. ಚಕ್ರವರ್ತಿ, ಶ್ರೀ ಎಂ. ಎಸ್. ರಾಯ್‌ಚೌಧುರಿ ಮತ್ತು ಶ್ರೀ ಆರ್. ಎನ್. ಚೌಧುರಿಯವರು ಪ್ರಮುಖರು.

ರಕ್ತದ ಅಧಿಕ ಒತ್ತಡದಿಂದ ಉಂಟಾಗುವ ಮಾನಸಿಕ ಉದ್ವೇಗದಲ್ಲಿ ಸರ್ಪಗಂಧದ ಉಪಯೋಗದ ಬಗ್ಗೆ ವರದಿಯಿತ್ತ ಅಮೇರಿಕನ್ ಡಾಕ್ಟರರಲ್ಲಿ ಡಾ| ರಾಬರ್ಟ್ ಡಬ್ಲ್ಯು. ವಿಲ್ಕಿನ್ಸ್‌ರು ಮೊದಲಿಗರು. ಇವರು ಬಾಸ್ಟನ್ ವಿಶ್ವವಿದ್ಯಾಲಯದ ವೈದ್ಯಕೀಯ ವಿಭಾಗದ

(೧೧ನೇ ಪುಟ ನೋಡಿರಿ)

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.

ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18	ರೂ. 15
ಹೋಲ್ ಲೈಫ್ ಎಶ್ಯೂರೆನ್ಸಿಗೆ	ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು ಒಂದು ಕೋಟಿ ರೂಪಾಯಿಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Nivas" UDIPI, S. India.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಬುದ್ಧನು ಪ್ರವರ್ತಿಸಿದ ನವಮನ್ವಂತರ

ಸೌಹಾರ್ದ ಭಾವನೆಯೇ ತಥಾಗತನ ಜೀವನ ಸಂದೇಶ

ಮೊನ್ನೆ ಶುಕ್ರವಾರ ದಿನ ಮೂಡಣ ಬೆಟ್ಟದ ಕೋಡಿನೆಡೆಯಿಂದ ಮೂಡಿ ಬಂದ ಚಂದ್ರನ ಶೀತಲ ಕಿರಣಗಳು ಭಾರತೀಯರೆಲ್ಲರ ಹೃದಯದಲ್ಲಿ ಬಹಳ ಸವಿಯಾದ ಭಾವನೆಗಳನ್ನು ಮೂಡಿಸಿದವೆಂದರೆ ಅತಿಶಯೋಕ್ತಿಯಾಗದು. ವೈಶಾಖ ಪೂರ್ಣಿಮೆಯ ಶುಭದಿನವು ನಮ್ಮ ಜಿಲ್ಲೆಯ ತುಳುವರ ಮಟ್ಟಿಗೆ ಹಿರಿಯಡಕ ಜಾತ್ರೆಯ ನೆನಪನ್ನಷ್ಟೆ ತಂದು ಕೊಟ್ಟಿದ್ದರೂ ಭಾರತೀಯ ಸಂಸ್ಕೃತಿಯ ಪರಿಚಯವಿದ್ದವರಿಗೆ ಇಪ್ಪತ್ತೈದು ಶತಕಗಳ ಹಿಂದೆ ಆಗಿ ಹೋದ ಮಹಾತ್ಮ ಬುದ್ಧ ಭಗವಾನನ ಸ್ಮೃತಿಯನ್ನೂ ನೀಡಿತು. ಸಿದ್ಧಾರ್ಥನಾಗಿ ಜನಿಸಿ, ಬುದ್ಧನಾಗಿ ಜ್ಞಾನ ಸಂಪಾದಿಸಿ, ಮಹಾತ್ಮನಾಗಿ ನಿರ್ವಾಣ ಹೊಂದಿದ ಮಹಾಜೀವದ ಜೀವನ ಕಾಲದಲ್ಲಿ ಮೇಲಿನ ಮೂರೂ ಘಟನೆಗಳು ವೈಶಾಖದ ಪೂರ್ಣಿಮೆಯಲ್ಲಿಯೇ ನಡೆದುವೆಂಬುದು ಆಶ್ಚರ್ಯಕರವಾದ ವಿಚಾರ.

ಆದ್ದರಿಂದ ಇಂದಿನ— ವೈಶಾಖದ ಪೂರ್ಣಿಮೆ ನಮ್ಮನ್ನು ಬುದ್ಧ ಭಗವಾನನ ಜೀವನ ಮತ್ತು ಉಪದೇಶಗಳ ಮನನ ಮಾಡುವುದಕ್ಕೆ ಪ್ರೇರಣೆಯನ್ನೊದಗಿಸಿ ತೆಂಬುದು ಸುಳ್ಳಲ್ಲ. ಬುದ್ಧನಿಗೆ ಜ್ಞಾನೋದಯವಾದ ಕ್ಷೇತ್ರವೆನಿಸಿದ ಗಯೆಯಲ್ಲಿ ೧೭೦೦ ವರ್ಷ ಪುರಾತನವಾದ ಮಹಾಬೋಧಿ ದೇವಾಲಯಕ್ಕೆ ಕೇಸರಿ ಬಣ್ಣದ ಉಡುಪನ್ನು ಧರಿಸಿದ ಬೌದ್ಧ ಭಿಕ್ಷುಗಳ ಸಮೂಹವು ಮಂತ್ರೋಚ್ಚಾರಣೆಯೊಡನೆ ಹೋಗಿ, ಬುದ್ಧನಿಗೆ ಗೌರವವನ್ನು ಅರ್ಪಿಸಿತು. ಟಿಬೇಟು ಬರ್ಮಾ, ಸಿಂಹಳ, ಚೀನಗಳಿಂದ ಬಂದಿದ್ದ ಭಿಕ್ಷುಗಳೂ ಈ ಸಮೂಹದಲ್ಲಿದ್ದರು. ಅವರೆಲ್ಲರೂ ಬೋಧಿ ವೃಕ್ಷಕ್ಕೆ ಸಹ ಸುತ್ತು ಬಂದು ಬೌದ್ಧ ಧರ್ಮ ಸೂತ್ರಗಳಲ್ಲಿನ ಪಂಚಶೀಲಗಳನ್ನು ಜಪಿಸಿದರು.

ರಾಜಧಾನಿಯಾದ ಹೊಸದೆಹಲಿಯಲ್ಲಿ ಬುದ್ಧನ ಹುಣ್ಣಿಮೆಯನ್ನು ಸಾರ್ವಜನಿಕ ಸಭೆಯೊಂದನ್ನು ಜರಗಿಸುವ ಮೂಲಕ ಆಚರಿಸಲಾಯಿತು. ಶ್ರೀ ಪುರುಷೋತ್ತಮ ದಾಸ ತಂಡನ್ನರು ಅಧ್ಯಕ್ಷತೆ ವಹಿಸಿ ಬುದ್ಧನು ಭಾರತಕ್ಕಷ್ಟೇಯಲ್ಲ, ಜಗತ್ತಿಗೆಯೇ ಹೊಸ ಯುಗದ ಪ್ರವರ್ತಕ. ಅವನು ಬೋಧಿಸಿದ ತತ್ವಗಳನ್ನು ವ್ಯವಹಾರದಲ್ಲಿಳಿಸಿ ಮಾನವ ಜನಾಂಗವು ಸುಖಿಯಾಗಬಲ್ಲುದು ಎಂದರು. ಸಿಂಹಳದ ಕೊಲಂಬೋದಲ್ಲಿ ಬೌದ್ಧ ಅವಶೇಷಗಳ ಕಲಾ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು. ಅದನ್ನು ಸಾವಿರಾರು ಜನರು ನೋಡಿ ತೃಪ್ತಿಪಟ್ಟರು. ಖಾಟ್ಮಂಡುವಿನಲ್ಲಿ ಬುದ್ಧನಿಂದ ಪೂಜಿಸಲ್ಪಟ್ಟ ದೇವಾಲಯದಲ್ಲಿ ಅತ್ಯಧಿಕ ಜನರು ಸೇರಿದ್ದರು. ಅಜ್ಮೀರದಲ್ಲಿ ಬರ್ಮಾದ ರಾಯಭಾರಿಗಳು ಬುದ್ಧನ ಪ್ರತಿಮೆಯೊಂದನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಿದರು.

ಲೋಕದಾದ್ಯಂತ ಹೀಗೆ ನೆನೆಯಲ್ಪಡುವ ಹಾಗು ಪೂಜಿಸಲ್ಪಡುವ ಬುದ್ಧನ ಕುರಿತು ನಾವು ಏನನ್ನು ಹೇಳ ಹೋದರೂ ಕಡಿಮೆಯಾದೀತು— ಸಮುದ್ರವನ್ನು ಆಳೆಯಲು ಬಿಂದಿಗೆ ಎಷ್ಟಕ್ಕೂ ಸಾಲದು. ಆದರೆ ಬುದ್ಧನ ಪರಿಚಯ ಸ್ವಲ್ಪ ಮಟ್ಟಿಗಾದರೂ ಸಾಕು— ನಾವು ಪುನೀತರಾಗುವ ಸಂಭವ ಹೆಚ್ಚುತ್ತದೆ. ಕುಶಿನಾರದಲ್ಲಿ ಮಹಾತ್ಮ ಬುದ್ಧನು ದೇಹವಿಟ್ಟಾಗ ಅದಕ್ಕಾಗಿ ಶೋಕಿಸಿದ ಜನರ ಮತ್ತು ಜ್ಞಾನಿಗಳ ಉದ್ಗಾರ ಕೇಳಿದರೆ ಸಾಕು—ನಮ್ಮ ಮೈಯಲ್ಲಿ ಈಗಲೂ ರೋಮಾಂಚನವಾಗುತ್ತದೆ. “ಜಗತ್ತಿನ ಜ್ಯೋತಿ ಇನ್ನಿಲ್ಲದಾಯಿತು!” ಎಂದವರು ಆಗ ಮರುಗಿದ್ದರು. ಇಂದೂ ನಾವು ಹೀಗೆ ಮರುಗುತ್ತಿದ್ದೇವೆ; ಈ ಕೊರಗಿನ ದೆಸೆಯಿಂದಲೇ ಬುದ್ಧ ದೇವನ ಕುರಿತು ತಿಳಿಯುವ ಲವಲವಿಕೆ ಹೆಚ್ಚುಕೊಳ್ಳುತ್ತದೆ.

ತನ್ನ ಜೀವಿತ ಕಾಲದಲ್ಲಿ ಆನಂದ ಮುಂತಾದ ಪ್ರಿಯ ಶಿಷ್ಯರನ್ನು ಕುರಿತು ಭಗವಂತನಾದ ತಥಾಗತ ಬುದ್ಧನು ಹೀಗೆಂದಿದ್ದನು —“ನಿಮಗೆ ನೀವೇ ಬೆಳಕಾಗಬೇಕು. ನಿಮ್ಮಲ್ಲಿ ನೀವೇ ಆಶ್ರಯವನ್ನು ಹೊಂದಬೇಕು; ಬಾಹ್ಯ ವಸ್ತುಗಳಗೊಡವೆ ಬೇಡ. ಸತ್ಯವನ್ನೆ ಜ್ಯೋತಿಯಾಗಿ ಭಾವಿಸಿ, ನಿಮ್ಮಲ್ಲಿ ಭರವಸೆ ಇಟ್ಟು ಆ ಬೆಳಕನ್ನು ಅನುಸರಿಸಿ ನಡೆಯಿರಿ.” ಆದುದರಿಂದ ನಾವು ಬುದ್ಧನ ವಿರಹಕ್ಕೋಸ್ಕರ ಅಳಬೇಕೆಂದೇನೂ ಇಲ್ಲ. ಸ್ವತಃ ಅವನೇ ತನ್ನ ದೇಹವಿಟ್ಟು ಅಮರನಾಗುವುದಕ್ಕೆ ಕೆಲವು ಗಳಿಗೆಗೆ ಮುಂಚೆ “ಆನಂದ, ನಾನು ನಿನಗೆ ಈ ಮೊದಲು ಎಷ್ಟು ಸಲ ಹೇಳಲಿಲ್ಲ— ಸ್ವಾಭಾವಿಕವಾಗಿಯೇ ನಾವು ನಮಗೆ ಪ್ರಿಯರಾದವರಿಂದ ಬಿಡುಗಡೆಯನ್ನು ಹೊಂದಬೇಕಾಗುತ್ತದೆ-” ಎಂದಿದ್ದನು. ಕಾರಣ, ಅತನಿಲ್ಲವೆಂಬುದಕ್ಕಾಗಿ ನಾವು ಕೊರಗುವುದು ಅಪ್ರಯೋಜಕ.

ನಮಗೆ ಮಾರ್ಗದರ್ಶನ ಬೇಕು— ಅದಕ್ಕೆ ಸಮರ್ಥರಾದವರು ಕಣ್ಣ ಮುಂದಿಲ್ಲ ಎಂಬುದಕ್ಕಾಗಿ ನಾವು ಅಳುವುದಿದ್ದರೆ ಅದೊಂದು ರೀತಿಯಾದೀತು. ಸುದೈವದಿಂದ ನಮ್ಮ ಮಟ್ಟಿಗೆ ಬುದ್ಧನಿಲ್ಲದಿದ್ದರೂ ಆ ಮಹಾತ್ಮನ ಉಪದೇಶ ಸಾರಗಳನ್ನು ವಿವರವಾಗಿ ತಿಳಿಸುವ ಪವಿತ್ರ ಗ್ರಂಥಗಳು ಉಪಲಬ್ಧವಿರುತ್ತವೆ. ನಾವು ಈ ಗ್ರಂಥಗಳ ಪಠಣಕ್ಕೆ ಮನಸ್ಸುಗೊಡಬೇಕು. ಬುದ್ಧದೇವನು ಸ್ವತಃ ಇವುಗಳನ್ನು ಬರೆಯಲಿಲ್ಲವೆಂಬುದು ನಿಜ—ಅವನ್ನು ಆತನು ತನ್ನ ಕೆಲಸವಾಗಿ ತಿಳಿಯಲಿಲ್ಲ. ಆತನು ಮುಂಜಾನೆ ಐದು ಗಂಟೆಗೆ ಏಳುತ್ತಿದ್ದನು; ಕೆಲವು ಗಳಿಗೆಗಳ ವರೆಗೆ ಧ್ಯಾನಾಸಕ್ತನಾಗಿದ್ದು ಬಳಿಕ ಭಿಕ್ಷೆಗೆ ತೆರಳುತ್ತಿದ್ದನು. ಭಿಕ್ಷೆ ಎತ್ತಿದ ಬಳಿಕ ಶಿಷ್ಯರೊಡನೆ ಚರ್ಚೆ ನಡೆಸುತ್ತಿದ್ದನು. ಆಗ ಮತ್ತು ಮಧ್ಯಾಹ್ನದ ವಿರಾಮದ ಬಳಿಕ ಬಂದು ನೆರೆಯುತ್ತಿದ್ದ ಜನರ ಸಮೂಹವನ್ನು ಉದ್ದೇಶಿಸಿ ಹೇಳಿದ ಮಾತುಗಳೇ ಬುದ್ಧನ ಉಪದೇಶರೂಪದಲ್ಲಿ ನಮಗಿಂದು ಸಿಗುತ್ತವೆ.

“ನಾನು ನಿಮಗೆ ಹೆಚ್ಚೇನನ್ನೂ ಹೇಳುವುದಿಲ್ಲ--ದುಃಖವನ್ನು ಬೇರು ಸಹಿತ ಕಿತ್ತು ಹಾಕಲು ಪ್ರಯತ್ನಿಸಿರೆಂಬುದೇ ನನ್ನ ಹಿತವಚನ” ಎಂದು ಬುದ್ಧನು ಜನರನ್ನು ಎಚ್ಚರಿಸಿದನು. ಭಾರತೀಯ ಪರಂಪರೆಯ ವಿರುದ್ಧ ಬಂಡೆದ್ದವನಂತೆ ಆವನು ಕೆಲವರಿಗೆ ತೋರಿದರೂ ಸಹ, ಬುದ್ಧನು ನಿಜವಾದ ಭಾರತೀಯ ಸಂಸ್ಕೃತಿಯ ಪ್ರತಿಪಾದಕನಾಗಿದ್ದನೆಂದು ತಿಳಿದವರ ಅಭಿಮತ. ಏಕೆಂದರೆ ಬುದ್ಧನ ಉಪದೇಶದಲ್ಲಿ ಭಾರತೀಯ ವಿಚಾರಕರು ಒಪ್ಪದಿರುವ ಅಂಶವೇನೂ ಗೋಚರಿಸುವುದಿಲ್ಲ. ಬಹಳ ಉದಾತ್ತವಾದ ಮತ್ತು ಬಹುಕಾಲ ಬಾಳುವ ಮಾನವ ಸಮಾಜದ ರಚನೆಗೆ ಬುದ್ಧನಿಂದಾದಷ್ಟು ನೆರವು ಬೇರಾರಿಂದಲೂ ಇಷ್ಟರ ವರೆಗೆ ಸಿಕ್ಕಿಲ್ಲ.

ಬುದ್ಧನು ಭಾರತೀಯತೆಯ ಪ್ರತೀಕವೆಂಬುದಕ್ಕೆ ಒಂದು ನಿದರ್ಶನವನ್ನಿತ್ತರೆ ಸಾಕು — ಎಲ್ಲಕ್ಕೂ ಮನಸ್ಸೇ ಮೂಲವೆಂದು ನಾವನ್ನುತ್ತೇವೆ. ಇದು ಬಹಳ ಹಿಂದಿನಿಂದ ನಡೆದುಕೊಂಡು ಬಂದ ಮಾತು. “ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ” (ಅಂದರೆ ಮನುಷ್ಯರು ದುಃಖದಲ್ಲಿ ಸಿಕ್ಕಿಬಿದ್ದು ನರಳುವುದಕ್ಕಾಗಲೀ ದುಃಖದಿಂದ ತಪ್ಪಿಸಿಕೊಂಡು ನಲಿಯುವುದಕ್ಕಾಗಲೀ ಅವರವರ ಮನಸ್ಸೇ ಕಾರಣ) ಎಂಬ ಸೂಕ್ತಿಯೂ ದುಃಖಕ್ಕೆ ಸಿಕ್ಕದಂತೆ ಮತ್ತು ಸುಖವೇ ದಕ್ಕುವಂತೆ “ಯೋಗಶ್ಚಿತ್ತ ವೃತ್ತಿ ನಿರೋಧಃ” (ಅಂದರೆ ಚಿತ್ತದ ವರ್ತನೆಗಳನ್ನು ತಡೆದಿಡುವುದೇ ಯೋಗ) ಎಂಬ ಸೂತ್ರವನ್ನು ಅಪ್ರಯೋಜಕವೆನ್ನಲಾಗದು. ಇದು ಬುದ್ಧನ ವಾದವು ಭಾರತೀಯರ ಪ್ರಾಚೀನ ನಿರ್ಣಯ. ಬುದ್ಧನ ಧರ್ಮಪದದ ಕೆಲವು ಶ್ಲೋಕಗಳು ಇದನ್ನೆ ಸ್ವತಂತ್ರ ರೀತಿಯಲ್ಲಿ ವಿಸ್ತರಿಸಿ ಹೇಳುತ್ತವೆ.

ಮನಸ್ಸಿನ ಮಹಿಮೆಯನ್ನು ಘೋಷಿಸುವ ಬುದ್ಧನ ವಾಣಿಯು “ಮನಸ್ಸು ಪ್ರವೃತ್ತವಾದ ಹೊರತು ಮಾತು ಹೊರಡುವುದಿಲ್ಲ, ಕೆಲಸ ನಡೆಯುವುದಿಲ್ಲ. ಮನಸ್ಸನ್ನು ಕೆಡಿಸಿಕೊಂಡರೆ ದುಃಖವಾಗುವುದು ತಪ್ಪದು; ಮನಸ್ಸನ್ನು ಪ್ರಸನ್ನವಾಗಿಟ್ಟರೆ ಸುಖ ದೊರೆಯದೆ ಬಿಡದು.” ಎಂದು ಸಾರುತ್ತದೆ. ಮನಸ್ಸನ್ನು ಪ್ರಸನ್ನವಾಗಿಡುವುದೆಂತೆಂಬುದನ್ನು ವಿವರಿಸುವ ಶ್ಲೋಕವು ಇವನು ನನ್ನನ್ನು ಬೈದ, ಇವನು ನನ್ನನ್ನು ಬಡಿದ, ಇವನು ನನ್ನದನ್ನು ಅಪಹರಿಸಿದ ಎಂದು ಮುಂತಾದ ಕ್ಲೇಶದಾಯಕ ವಿಷಯಗಳನ್ನು ನೆನೆಯದೆ, ವೈರಕ್ಕೆ ಮನಸ್ಸಿನಲ್ಲಿ ಎಡೆಕೊಡದೆ, ಮೈತ್ರಿಯನ್ನು ಬೆಳೆಸುವುದೇ ಬುದ್ಧನ ಮಾರ್ಗವೆಂದು ಬೋಧಿಸುತ್ತದೆ.

ತನ್ನ ಜೀವನದ [illegible] ಜನ ಕಲ್ಯಾಣವನ್ನು ಸಾಧಿಸಬೇಕೆಂಬುದು [illegible] ಕಾಣುತ್ತದೆ [illegible]

(ಶ್ರೀ ಪು. [illegible])



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಮುಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಕ್ಕೋಸ್ಕರವಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಧೀನಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ದಕ್ಷಿಣ ವೀಟನಾಮಿನ ಆಂತರಿಕ ಯುದ್ಧ

ಹಲವು ಹಿತಾಸಕ್ತಿಗಳ ತೀವ್ರ ತಿಕ್ಕಾಟದ ರಂಗ

ಯುದ್ಧದ ಕೋಲಾಹಲಕ್ಕೆ ಎಡೆಕೊಡಬಾರದೆಂದು ರಾಜಕಾರಣಿಗಳು ಬಯಸುತ್ತಿದ್ದಂತೆಯೇ ದೂರ ಪೂರ್ವದಲ್ಲಿ ಫೊರ್ಮೋಸದ ವಲಯದಲ್ಲಿ ದ್ವೇಷ ಹುಟ್ಟಿಕೊಂಡಿತು. ಅದನ್ನು ಉಪಶಮನಿಸಲು ಪ್ರಯತ್ನ ನಡೆಯುತ್ತಿರುವಾಗಲೇ ದಕ್ಷಿಣ ವೀಟನಾಮಿನಲ್ಲಿ ಯಾದವಿ ಯುದ್ಧದ ಜ್ವಾಲೆ ಭುಗಿಲ್ಲೆಂದಿತು.

ವಿಚಿತ್ರ ಪ್ರಸಂಗ

ದಕ್ಷಿಣ ವೀಟನಾಮಿನಲ್ಲಿ ನಡೆಯುತ್ತಿರುವ ಕಾಳಗದ ಸ್ವರೂಪ ಬಹಳ ವಿಚಿತ್ರ—ಅಲ್ಲಿ ಸರಕಾರದ ಸೈನ್ಯದ ವಿರುದ್ಧ ಇನ್ನೊಂದು ಸರಕಾರದ ಸೈನ್ಯ ಯುದ್ಧ ಮಾಡುತ್ತಿರದೆ "ಖಾಸಗಿ" ಸೈನ್ಯಗಳೇ ಹೋರಾಡುತ್ತವೆ. ಅಲ್ಲಿಯ ರಾಷ್ಟ್ರ ಪ್ರಮುಖರಾದ ಬಾವೊ ದ್ಯಾಯವರು ಪ್ರಧಾನ ಮಂತ್ರಿಯನ್ನು ಎತ್ತಿ ಕಟ್ಟುವ ಬದಲು, ದಂಗೆ ಕೋರರೆನ್ನಬಹುದಾದ ಖಾಸಗಿ ಸೈನ್ಯಗಳ ಧುರೀಣರ ಪಕ್ಷಪಾತಿಯಾಗಿರುವಂತೆ ತೋರುತ್ತದೆ.

ಸದ್ಯಕ್ಕೆ ಬಾವೊದ್ಯಾಯವರ ಕೈ ಶಕ್ತಿಹೀನವಾಗಿ ಪ್ರಧಾನ ಮಂತ್ರಿ ದೀಮರ ವರ್ಚಸ್ಸೇ ನಡೆಯುತ್ತಿರುವಂತೆ ಭಾಸವಾಗುತ್ತದೆ. ದೀಮರು ತಮ್ಮ ಸರಕಾರಿ ಸೈನ್ಯವನ್ನು ಪ್ರತಿಭಟಿಸುತ್ತಿರುವ ಖಾಸಗಿ ಸೈನ್ಯಗಳನ್ನು ಬಹಳವಾಗಿ ಹಿಮ್ಮೆಟ್ಟಿಸಲು ಶಕ್ತರಾಗಿದ್ದಾರೆ; ಬಾವೊ ದ್ಯಾಯವರನ್ನು "ಪದಚ್ಯುತ" ಮಾಡಿ, ದಕ್ಷಿಣ ವೀಟನಾಮನ್ನು ಸ್ವತಂತ್ರ ರಾಜ್ಯವೆಂದು ಘೋಷಿಸಿದ್ದಾರೆ. ಇದಕ್ಕೆ ಕ್ರಾಂತಿಕಾರಿ ಪರಿಷತ್ತಿನ ಬೆಂಬಲವೂ ಸಿಕ್ಕಿದೆ.

ಚಿಂತೆಯ ಕಾರಣಗಳು

ಆದರೆ ಚಿಂತೆಗೆ ಬೇರೆ ಅನೇಕ ಕಾರಣಗಳಿವೆ— ದೀಮರು ತಮ್ಮ ವಿರೋಧಿಗಳನ್ನು ಸಂಪೂರ್ಣ ಹತ್ತಿಕ್ಕಿರುವರೆಂದು ಇನ್ನೂ ಹೇಳುವಂತಿಲ್ಲ. ಏಕೆಂದರೆ, ಕ್ರಾಂತಿಕಾರಿ ಪರಿಷತ್ತಿನ ಬೆಂಬಲ ಅವರಿಗೆ ಸಿಕ್ಕಿದ್ದರೂ ಪ್ರಾಂತೀಯ ಪ್ರತಿನಿಧಿಗಳ ಸಭೆಯಲ್ಲಿ ಬಾವೊ ದ್ಯಾಯವರ ಭವಿತವ್ಯದ ಬಗ್ಗೆ ಯಾವುದೇ ನಿರ್ಣಯಕ್ಕೆ ಬರಲಾಗಲಿಲ್ಲ. ಅದರ ಕೊನೆಯ ಅಧಿವೇಶನವು ಸೇರದೆ; ಇರುವಷ್ಟು ಭಿನ್ನಾಭಿಪ್ರಾಯ ವ್ಯಕ್ತವಾಯಿತು.

ತಮ್ಮನ್ನು ಪದಚ್ಯುತ ಮಾಡಿರುವುದು ಅಕ್ರಮ ವ್ಯವಹಾರವೆಂದು ಬಾವೊದ್ಯಾ ಹೇಳಿದ್ದಾರೆ; ಅವರಿಗೆ ಫ್ರೆಂಚರ ಸಂಪೂರ್ಣ ಬೆಂಬಲವಿದೆ. ದೀಮರು ತಮ್ಮನ್ನೆದುರಿಸುತ್ತಿರುವ ಖಾಸಗಿ ಸೈನ್ಯಗಳ ವರಿಷ್ಠರೊಡನೆ ಸಮಾಲೋಚನೆ ನಡೆಸಿ, ಅವರ ಪ್ರತಿನಿಧಿಗಳಿಗೂ ಮಂತ್ರಿಮಂಡಳದಲ್ಲಿ ಸ್ಥಾನ ಕೊಡಬೇಕೆಂದೂ ಬಾವೊದ್ಯಾಯವರೇ ದಕ್ಷಿಣ ವೀಟನಾಮಿನಲ್ಲಿ ಮುಂದಿನ ವರ್ಷ ಯೋಗ್ಯ ಚುನಾವಣೆ ನಡೆಸಿ, ಉತ್ತರದ ಕಮ್ಯುನಿಸ್ಟರ ವರ್ಚಸ್ಸನ್ನು ಕುಗ್ಗಿಸಿ, ವಿಭಜಿತ ವೀಟನಾಮನ್ನು ಏಕೀಕರಿಸಲು ಶಕ್ತರೆಂದೂ ಫ್ರೆಂಚರ ಅಭಿಪ್ರಾಯ.

ಭದ್ರ ವಿಜಯವಲ್ಲ

ಪರಿಸ್ಥಿತಿ ಹೀಗಿರುವಾಗ ದೀಮರಿಗೆ ಈಗ ದೊರೆತಿರುವ ವಿಜಯ ಭದ್ರವಾದುದಲ್ಲವೆಂದು ಹೊಳೆಯುತ್ತದೆ. ರಾಜಧಾನಿಯಾದ ಸೈಗಾನನ್ನು ಬಿಟ್ಟರೆ ಹೊರಗೆ ಅವರ ಮಾತೇ ನಡೆಯುವುದಿಲ್ಲವೆಂದು ಕಾಣುತ್ತದೆ. ಸೈಗಾನಿನಲ್ಲಿ ಸಹ ೬೦೦೦ ಮಂದಿ "ಖಾಸಗಿ" ಸೈನಿಕರು ಬೀಡು ಬಿಟ್ಟಿರುವರೆಂಬುದೂ ಅಲ್ಲದೆ ೪೦೦೦೦ ಸೈನಿಕರು ಫ್ರೆಂಚರ ವಿತ್ತ ಜೀವಿತಗಳ ಸಂರಕ್ಷಣೆಯ ಉದ್ದೇಶದಿಂದ ಇರುವರೆಂಬುದೂ ಗಮನಿಸಬೇಕಾದ ವಿಷಯ.

ಫ್ರೆಂಚರು ದೀಮರ ಪ್ರತಿಸ್ಪರ್ಧಿಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ. ಇಲ್ಲಿ ದೀಮರಿಗೆ ಅಮೇರಿಕದಿಂದ ಬಹಿರಂಗವಾಗಿ ಬೆಂಬಲ ಸಿಗುತ್ತಿದೆ ಎಂಬುದನ್ನು ನೆನೆಯದಿರಲಾಗುವುದಿಲ್ಲ. ವೀಟನಾಮಿನ ಜನರು ತಮಗೆ ಬೇಕಾದ ಸರಕಾರ ಮತ್ತು ರಾಜ್ಯಾಂಗ ಘಟನೆಯನ್ನು ರಚಿಸಿಕೊಳ್ಳಬೇಕೆಂಬುದೇ ಅಮೇರಿಕದ ಧೋರಣೆಯೆಂದು ಹೇಳಲಾಗುತ್ತದೆ. ದೀಮರ ಸರಕಾರ ನ್ಯಾಯಬದ್ಧವಾದುದೆಂದೂ ರಾಷ್ಟ್ರೀಯ ಉದ್ದೇಶಗಳಿಗೆ ತನ್ನ ದೇಶದ ಬೆಂಬಲವಿದೆಯೆಂದೂ ಅಮೇರಿಕದ ವಕ್ತಾರರು ಸಾರಿದ್ದಾರೆ.

ಹಿತಾಸಕ್ತಿಗಳ ತಿಕ್ಕಾಟ

ಇದನ್ನೆಲ್ಲ ನೋಡುವಾಗ ಒಂದು ವಿಷಯ ಸ್ಪಷ್ಟವಾಗುತ್ತದೆ— ಅದೇನೆಂದರೆ, ದಕ್ಷಿಣ ವೀಟನಾಮಿನಲ್ಲಿ ಹಲವಾರು ಹಿತಾಸಕ್ತಿಗಳ ನಡುವೆ ತೀವ್ರ ತಿಕ್ಕಾಟ ನಡೆಯುತ್ತಿದೆ. ರಾಜಕೀಯ ಸ್ವಾರ್ಥದ ತಂತ್ರದೊಡನೆ ವೈಯಕ್ತಿಕ ಸ್ಪರ್ಧೆಯ ಹುಚ್ಚು ಸೇರಿಕೊಂಡು ದೇಶವನ್ನು ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಮುಳುಗಿಸಿರುತ್ತದೆ. ಇದರ ಹಿನ್ನೆಲೆಯೇನು? ಆ ರಾಜ್ಯದ ಕ್ಷೇಮ ದೃಷ್ಟಿಯುಳ್ಳವರು ಈ ಪ್ರಶ್ನೆಗೆ ಉತ್ತರ ತಿಳಿದಿರುವುದು ಶ್ರೇಯಸ್ಕರ.

ಫ್ರೆಂಚರ ಪ್ರಭುತ್ವಕ್ಕೊಳಪಟ್ಟ ಇಂಡೋ ಚೀನದ ಮೂರು ಆಶ್ರಿತ ರಾಜ್ಯಗಳಲ್ಲಿ ವೀಟನಾಂ ಒಂದಾಗಿದ್ದು, ಆ ಪರ್ಯಾಯ ದ್ವೀಪದ ಪೂರ್ವ ಕರಾವಳಿಯ ಉದ್ದಕ್ಕೂ ಚಾಚಿರುತ್ತದೆ. ಅನ್ನಂ ಎಂಬ ಇಲ್ಲಿಯ ಪುರಾತನ ಪ್ರಾಂತದ "ದೇವಾಂಶ ಸಂಭೂತ" ಚಕ್ರವರ್ತಿ ಬಾವೊದ್ಯಾಯವರನ್ನು ೧೯೩೨ನೇ ವರ್ಷದಲ್ಲಿ ಇಲ್ಲಿಯ ಅರಸರಾಗಿ ಪಟ್ಟಕ್ಕೇರಿಸಲಾಯಿತು. ಆದರೆ ಈ ಅರಸನು ಮೃಗಯಾ ವಿನೋದಕ್ಕೂ ಸ್ತ್ರೀಲೋಲುಪತೆಗೂ ಹೆಸರಾದಷ್ಟು ರಾಜ್ಯನಿರ್ವಹಣೆಯಲ್ಲಿ ಚಾತುರ್ಯ ತೋರಿಸಲಿಲ್ಲ. ಇದು ಫ್ರೆಂಚರ ತಂತ್ರ ನಡೆಸುವುದಕ್ಕೆ ಯೋಗ್ಯ ಅವಕಾಶವನ್ನಿತ್ತಿತು.

ವಿಶ್ವಸಮರದ ಕಾಲದಲ್ಲಿ

ದ್ವಿತೀಯ ಮಹಾಯುದ್ಧ ಕಾಲದಲ್ಲಿ ಜಪಾನರು ಈ ದೇಶವನ್ನು ಆಕ್ರಮಿಸಿ, ಜಯಿಸಿದರು ಬಾವೊದ್ಯಾಯವರನ್ನು ಸೆರೆಹಿಡಿದು ತಮ್ಮ ಕೈಗೊಂಬೆಯಾಗಿ ಜಪಾನರು ಮಾಡಿಕೊಂಡರು. ಆದರೆ ಹಿಂದಿನಿಂದ ಅವರು ಸೋತು ಓಡಿಹೋಗಲು, ಕಮ್ಯೂನಿಸಂ ಪ್ರಿಯರಾದ ಕೂಟಯೋಧರ ಕೈಗೆ ಬಾವೊದ್ಯಾ ಸಿಕ್ಕಿಬಿದ್ದರು. ಚಿಯಾಂಗರ ನಾಯಕರು ಜಪಾನಿನ ಸೈನಿಕರನ್ನು ನಿಶ್ಶಸ್ತ್ರಗೊಳಿಸಲು ಬಂದಾಗ ಬಾವೊದ್ಯಾ ಹೇಗೋ ಅವರ ಅನುಗ್ರಹದಿಂದ ಸೆರೆಯಿಂದ ತಪ್ಪಿಸಿ ಹಾಂಗ್ ಕಾಂಗಿಗೆ ಓಡಿದರು.

ಜಪಾನರನ್ನು ಸೋಲಿಸುವಲ್ಲಿ ಇಂಡೋಚೀನದ ರಾಷ್ಟ್ರೀಯ ಸ್ಫೂರ್ತಿಯ ಜನರೇ ಕೆಲಸ ಮಾಡಿದ್ದರಲ್ಲದೆ, ಫ್ರೆಂಚರು ಏನೇನೂ ಸಹಾಯವಿತ್ತಿರಲಿಲ್ಲ. ಆದರೆ, ಜಪಾನರು ಸೋತ ಬಳಿಕ, ಫ್ರೆಂಚರು ತಮ್ಮ ಪ್ರಭುತ್ವವನ್ನು ಇಲ್ಲಿ ಹೇರಿದರು. ಇದು ರಾಷ್ಟ್ರೀಯ ಜಾಗೃತಿ ಹೊಂದಿದ ಜನರಿಗೆ ಸರಿಬರಲಿಲ್ಲ—ಅವರು ಹೋಚಿಮಿನ್ನರ ಧುರೀಣತ್ವದಲ್ಲಿ ಫ್ರೆಂಚರನ್ನು ಪ್ರತಿಭಟಿಸಿದರು.

ಬಾವೊದ್ಯೆ ಪ್ರಭುತ್ವ

ಎಂಟು ವರ್ಷಗಳಷ್ಟು ದೀರ್ಘ ಕಾಲ ನಡೆದ ಈ ಯುದ್ಧದಲ್ಲಿ ಫ್ರೆಂಚರಿಗೆ ವೀಟನಾಮಿಯರ ಬೆಂಬಲ ದೊರಕಿಸಿ ಕೊಡಲು ಒಬ್ಬ ಪ್ರಮುಖನು ಬೇಕಾಯಿತು. ಇದಕ್ಕೋಸ್ಕರ ೧೯೪೯ರಲ್ಲಿ ಬಾವೊದ್ಯಾಯವರನ್ನು ಹಾಂಗ್‌ಕಾಂಗಿನಿಂದ ಕರೆಸಿಕೊಂಡು ಸಿಂಹಾಸನಕ್ಕೆ ಏರಿಸಿದರು. ಆದರೆ ಡೀನ್ ಬೀನ್‌ಫು ಕೋಟೆಯ ಪತನದ ಬಳಿಕ ಫ್ರೆಂಚರ ವರ್ಚಸ್ಸು ಸಂಪೂರ್ಣ ಕುಗ್ಗಿ, ಜಿನೇವಾ ಒಪ್ಪಂದವನ್ನು ಕಳೆದ ವರ್ಷ ಮಾಡಿಕೊಂಡು, ಯುದ್ಧ ನಿಲ್ಲಿಸಲಾಯಿತು.

ಜಿನೇವಾ ಒಪ್ಪಂದವು ವೀಟನಾಮನ್ನು ಉತ್ತರ ಮತ್ತು ದಕ್ಷಿಣ ಎಂದು ವಿಭಾಜಿಸಿತು —ಉತ್ತರದಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಹೊಂದಿದ ಕಮ್ಯುನಿಸ್ಟರಿದ್ದರೆ, ದಕ್ಷಿಣದಲ್ಲಿ ಬಾವೊದ್ಯಾಯವರ ಆಳ್ವಿಕೆ ನಡೆಯುತ್ತದೆ. ಆದರೆ ಇಲ್ಲಿಯೂ ರಾಷ್ಟ್ರೀಯ ಸ್ವರೂಪದ ಸರಕಾರ ಇರಬೇಕೆಂಬುದರಿಂದ, ದೀಮರನ್ನು ಪ್ರಧಾನ ಮಂತ್ರಿಯಾಗಿ ನೇಮಿಸಲಾಯಿತು. ಇವರು ತೀವ್ರ ರಾಷ್ಟ್ರೀಯ ವಾದಿ; ಇದಿನಾರು ವರ್ಷಗಳ ಹಿಂದೆ ದೇಶವನ್ನು ತ್ಯಜಿಸಿ ನ್ಯೂಯೋರ್ಕಿನಲ್ಲಿ ಕೆಥೋಲಿಕ್ ಧರ್ಮ ಶಿಕ್ಷಣವನ್ನು ಹೊಂದಿದವರು; ಶುದ್ಧ ಚರಿತ್ರರು; ಹಟವಾದಿಗಳೂ ಹೌದು.

ಖಾಸಗಿ ಸೈನ್ಯಗಳು

ಫ್ರೆಂಚರು ಇಂಡೋಚೀನದಲ್ಲಿ ನಡೆಸಿದ್ದ ಯುದ್ಧದ ರಾಜಕೀಯ ಪರಿಣಾಮ

ರೈತ ಗೃಹಿಣಿಯರ ಸಮ್ಮೇಳನ

ಪ್ರದೇಶದ ಮಹಿಳೆಯರ ರಾಷ್ಟ್ರೀಯ ಪರಿಷತ್ತೊಂದು ಇತ್ತೀಚೆಗೆ ಹೊಸ ದಿಲ್ಲಿಯಲ್ಲಿ ಜರಗಿತು. ರೈತ ಗೃಹಿಣಿಯರು ತಮ್ಮ ಅನೇಕ ಸಮಸ್ಯೆಗಳ ಕುರಿತು ಇಲ್ಲಿ ಮಾತನಾಡಿದರು. ಚಿತ್ರದಲ್ಲಿ ಬೇರೆ ಬೇರೆ ರಾಷ್ಟ್ರಗಳಿಂದ ಬಂದ ಮಹಿಳೆಯರಲ್ಲಿ ಕೆಲವರನ್ನು ಕಾಣಬಹುದು.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ನಿಮ್ಮ ಹಣಕ್ಕೆ ಅತ್ಯಂತ ಸುರಕ್ಷಿತತೆ ಮತ್ತು ಭದ್ರತೆ; ನಿಮ್ಮ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಅತ್ಯಂತ ತ್ವರಿತ ಹಾಗೂ ತೃಪ್ತಿಕರ ಸೇವೆ; ಮತ್ತು ನಿಮ್ಮ ಬ್ಯಾಂಕಿಂಗ್ ಸಮಸ್ಯೆಗಳಲ್ಲಿ ಯೋಗ್ಯ ಸಲಹೆ; ಬೇಕಿದ್ದರೆ, ನಿಮಗೆ ಸಮೀಪವಿರುವ "ಕೊರ್ಪೊರೇಶನ್" ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

ಡಾ| ಯು. ಸುಂದರ ರಾವ್ ಪೈ,
ಎಮ್. ಬಿ., ಬಿ. ಎಸ್.,
ಅಧ್ಯಕ್ಷ.

ವಿ. ಆರ್. ಕಾಮತ್,
ಬಿ ಎ., ಎಲ್‌ಎಲ್. ಬಿ.,
ಜನರಲ್ ಮೆನೇಜರ್.

Estd:- 1906] [H. O. UDIPI (S India)

THE CANARA BANKING CORPORATION LIMITED

ಭಾರತ್

ಹಣ್ಣಿನ ಶರಬತ್ತು ಮತ್ತು ಸಿರಪುಗಳು

ಪಕ್ವವ ತೋಟದ ಹಕ್ಕಿ ತೆಗೆದ ಹಣ್ಣುಗಳ ತಾಜಾ ತಯಾರಿಕೆ ಬಳಲಿ ಬಾಯಾರಿದಾಗ, ಉಲ್ಲಾಸ ಮತ್ತು ಆರೋಗ್ಯ ಕೊಡುವ ತಂಪಾದ, ಉತ್ತಮ ಪಾನೀಯ, ಅತಿಥಿಗಳ ಆದರದ ಪ್ರಥಮ ಸತ್ಕಾರಕ್ಕೆ ಒಂದು ಬಾಟ್ಲಿ ಸದಾ ಮನೆಯಲ್ಲಿದ್ದರೆ ಮನೆಯೊಡತಿಗೆ ಅತಿ ಅನುಕೂಲ. ಒಂದು ಬಾಟ್ಲಿ ಇಂದೇ ಖರೀದಿಸಿರಿ.

ಪ್ರತಿ ಹೋಟೇಲು ಮತ್ತು ಸೋಡಾ ಅಂಗಡಿಗಳಲ್ಲಿ ಭಾರತ್ ಹಣ್ಣಿನ ಶರಬತ್ತು ಮತ್ತು ಸಿರಪುಗಳನ್ನೇ ಕೇಳಿ ಕುಡಿಯಿರಿ. ಅಂದರೆ ನಿಮಗೆ ಉತ್ತಮ ಪಾನೀಯ ದೊರೆಯುತ್ತದೆ.

Bharath Industrial & Canning Co., Ltd., Kaup, S. K.

ಈ ರೀತಿಯಾದಾದರೆ, ಆಂತರಿಕವಾಗಿ ಅವರು ಬೇರೆ ಕೆಲವು ಅದೂರದರ್ಶಿ ಕೆಲಸಗಳನ್ನು ಮಾಡಿದರು. ಅವುಗಳಲ್ಲಿ ಖಾಸಗಿ ಸೈನ್ಯಗಳ ರಚನೆಗೆ ಅವಕಾಶ ಕೊಟ್ಟದ್ದು ಉಲ್ಲೇಖನೀಯ. ತಮ್ಮ ಹೋರಾಟದಲ್ಲಿ ಬೆಂಬಲನೀಡಲೆಂದು ಪ್ರಭಾವಶಾಲಿಯಾದ ಕೆಲವು ಗುಂಪುಗಳಿಗೆ ಸೈನ್ಯ ಕಟ್ಟಿಕೊಳ್ಳಲು ಮತ್ತು ಈ ಸೈನ್ಯಗಳ ಪೋಷಣೆಗಾಗಿ ಆಯಾ ವಲಯದಲ್ಲಿ ತೆರಿಗೆಯನ್ನು ವಸೂಲು ಮಾಡಲು ಅವರು ಅಧಿಕಾರ ವಿತ್ತರು. ಈ ಖಾಸಗಿಸೈನ್ಯಗಳು ೪೦ ಲಕ್ಷ ಪ್ರಜೆಗಳುಳ್ಳ ಪ್ರದೇಶದ ಮೇಲೆ ತಮ್ಮ ಪ್ರಭುತ್ವ ನಡೆಸುತ್ತವೆ.

ಪ್ರಧಾನ ಮಂತ್ರಿಗಳನ್ನು ಎದುರಿಸುತ್ತಿರುವ ಪಂಗಡಗಳು ನಾಲ್ಕು—ಅವುಗಳಲ್ಲಿ ಮಧ್ಯ ವೀಟನಾಮಿನಲ್ಲಿರುವ "ದ್ಯಾವಿಯತ್" ಎಂಬುದು ಕ್ರಾಂತಿಕಾರಿ ಸ್ವರೂಪವುಳ್ಳ ಗುಂಪು. ಕಾವೊದ್ಯಾ, ಮತ್ತು ಹೋವಾ ಹೋವಾ ಎಂಬುವುಧಾರ್ಮಿಕ ಪ್ರಭಾವದವುಗಳಾಗಿದ್ದು, ಫಲವತ್ತಾದ ಭತ್ತದ ಗದ್ದೆಗಳು ಅವುಗಳಿಗೆ ಸೇರಿರುತ್ತವೆ. ಅವುಗಳೊಡನೆ ೨೦೦೦೦ ಸೈನ್ಯ ಬಲವಿದೆ; ಅವುಗಳು ಸುಶಿಕ್ಷಿತವಿರದಿದ್ದರೂ ಶಸ್ತ್ರ ಸಜ್ಜಿತವಾಗಿವೆ.

ಬಲವಾದ ಹೋರಾಟ

ಬಿನ್ ಝುಯೆನ್ ಎಂಬುದು ಪ್ರಬಲ ಪ್ರತಿಸ್ಪರ್ಧಿಯಾಗಿರುವ ಖಾಸಗಿ ಸೈನ್ಯ ಇದು ಸಮುದ್ರ ಕಳ್ಳರ ಮತ್ತು ಪುಂಡರ ಗುಂಪಾಗಿ ಮೂಲದಲ್ಲಿದ್ದರೂ ಈಗ ರಾಜಕೀಯ ಮುಖವಾಡವನ್ನು ಧರಿಸಿದೆ. ವ್ಯಭಿಚಾರ ಮತ್ತು ಜೂಜಾಟದ ಕೇಂದ್ರಗಳನ್ನು ನಡೆಸುತ್ತಾ ಅಫೀಮಿನ ವ್ಯಾಪಾರವನ್ನು ಸಾಗಿಸುತ್ತಾ ಈ ಗುಂಪು ಬಹಳ ಲಾಭವನ್ನು ಮುಕ್ಕುತ್ತದೆ. ಈ ಗುಂಪು ಹೋವಾ ಹೋವಾ ಮತ್ತು ಕಾವೊದ್ಯಾ ಗುಂಪುಗಳ ಸ್ನೇಹ ಸಂಪಾದಿಸಿ, ಧರ್ಮಗುರುಗಳ ಆಶೀರ್ವಾದದೊಡನೆ, ಹಸಿರು ಶಿರಸ್ತ್ರಾಣವನ್ನಿಟ್ಟುಕೊಂಡು, ಕೇಸರಿ ಬಣ್ಣದ ಧ್ವಜದಡಿಯಲ್ಲಿ ಸಂಯುಕ್ತ ಹೋರಾಟ ಕೊಡುತ್ತಿದೆ.

ರಾಷ್ಟ್ರೀಯ ಪ್ರವೃತ್ತಿಯ ದೀಮರು ಖಾಸಗಿ ಸೈನ್ಯಗಳ ಪ್ರಭುತ್ವವನ್ನು ಮೆಚ್ಚುವುದಿಲ್ಲ — ಖಾಸಗಿ ಸೈನ್ಯಗಳವರು ದೀಮರ ಸರಕಾರ ತನ್ನ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುವುದನ್ನು ಸಹಿಸುವುದಿಲ್ಲ. ಕೇಂದ್ರ ಸರಕಾರದ ರಚನೆಗೆ ಖಾಸಗಿ ಸೈನ್ಯಗಳ ಪ್ರತಿಭಟನೆ ಇದ್ದಂತೆ ಕಾಣುವುದಿಲ್ಲ—ಆದರೆ ತಮ್ಮ ಹಕ್ಕುಗಳ ನಾಶಕ್ಕೆ ಅವರ ವಿರೋಧವಿದ್ದು ದೀಮರು ಮೊದಲು ಹೊರಗೆ ಹೋಗಲಿ, ಬೇರೆ ಯಾರಾದರೂ ಪ್ರಧಾನ ಮಂತ್ರಿಯಾಗಲಿ, ಆ ಮಂತ್ರಿ ಮಂಡಳದಲ್ಲಿ ತಮ್ಮವರಿಗೂ ಯೋಗ್ಯ ಪ್ರಾತಿನಿಧ್ಯ ಸಿಗಲಿ ಎಂದು ಖಾಸಗಿ ಸೈನ್ಯಗಳು ಹೇಳುತ್ತವೆ.

ಉತ್ಸಾಹದ ಮಬ್ಬು

ತಮ್ಮ ಉತ್ಸಾಹದ ಮಬ್ಬಿನಲ್ಲಿ ಶಕ್ತಿಯ ಪ್ರಮಾಣವನ್ನು ಮರೆತು ದೀಮರು ವಿರೋಧವನ್ನು ಹೆಚ್ಚಿಸಿಕೊಂಡರೆಂದೂ ಹೇಳಲಾಗುತ್ತದೆ–ಜೂಜಿನ ಗುತ್ತಿಗೆಯನ್ನು ಬಿನ್‌ಝುಯೆನ್‌ರಿಂದ ಕಸಿದು ಕೊಂಡರು; ಉತ್ತರ ಭಾಗದ ಕೆಥೋಲಿಕರನ್ನು ಅಧಿಕಾರಕ್ಕೇರಿಸಿ, ದೇಶೀಯರ ಧಾರ್ಮಿಕ ಭಾವನೆಯನ್ನು ಕೆರಳಿಸಿದರು. ಇದು ಅವರ ವಶದಲ್ಲಿರುವ ಸೈನ್ಯದಲ್ಲಿಯೇ ಅತೃಪ್ತಿ ಹುಟ್ಟಿಸಿದೆ ಎನ್ನಲಾಗುತ್ತದೆ. ಇದು ಸತ್ಯವಿದ್ದರೆ ಅವರ ಪಾಡು ನಿಜಕ್ಕೂ ಶೋಚನೀಯ.

ಮೇಲಿನೆಲ್ಲ ಸಂಗತಿಗಳ ನಡುವೆ ಎದ್ದು ಕಾಣುವ ವಿಷಯವೊಂದಿದೆ— ಅದು ಫ್ರೆಂಚರ ಮತ್ತು ಅಮೇರಿಕನ್ನರ ಸ್ವಾರ್ಥ. ಫ್ರೆಂಚರಿಗೆ ತಮ್ಮ ಬಂಡವಾಳವನ್ನು ವೀಟನಾಮಿನಲ್ಲಿ ಉಳಿಸಿಕೊಳ್ಳುವುದು ಬೇಕಾಗಿದೆ. ಬಿನ್‌ಝುಯೆನ್ ಪಂಗಡಗಳವರು ಕಮ್ಯೂನಿಸ್ಟರೊಡನೆ ಸಹಜೀವನದ ತತ್ವವನ್ನು ಎತ್ತಿಹಿಡಿದಿರುವುದರಿಂದ ತಮ್ಮ ವ್ಯಾಪಾರ ಕ್ಷೇತ್ರವನ್ನು ವಿಸ್ತರಿಸಲೂ ಬಂಡವಾಳದ ಲಾಭ ಪಡೆಯಲೂ ಸಾಧ್ಯವೆಂದು ಭಾವಿಸಿ ಬಾವೊದ್ಯಾಯವರನ್ನೂ ಖಾಸಗಿ ಸೈನ್ಯಗಳನ್ನೂ ಫ್ರೆಂಚರು ಬೆಂಬಲಿಸುತ್ತಿದ್ದಾರೆ.

ಕಮ್ಯೂನಿಸಮ್ಮಿನ ಭಯ

ಅಮೇರಿಕನರಿಗೆ ಕಮ್ಯೂನಿಸಮ್ಮಿನ ಚಿಂತೆ—ಉತ್ತರ ವೀಟನಾಂದಲ್ಲಿ ಈಗಾಗಲೇ ಕಮ್ಯೂನಿಸ್ಟರಿದ್ದಾರೆ. ಅವರ ವರ್ಚಸ್ಸು ದಕ್ಷಿಣದಲ್ಲಿ ಹಬ್ಬದೆ, ೧೯೫೬ ನೇ ಜುಲಾಯಿಯಲ್ಲಿ ಚುನಾವಣೆ ನಡೆದಾಗ ಕಮ್ಯೂನಿಸಮ್ಮಿನ ವಿರೋಧಿಗಳೇ ಜಯಗಳಿಸುವಂತೆ ನೋಡಿಕೊಳ್ಳಲು ಅಮೇರಿಕದ ಆತುರಪಡುತ್ತದೆ. ಇದಕ್ಕೆ ಯೋಗ್ಯ ವ್ಯಕ್ತಿ ದೀಮರೆಂದೇ ಅಮೇರಿಕದ ತೀರ್ಮಾನ. ಆದುದರಿಂದಲೇ ಅದು ಫ್ರಾನ್ಸಿನ ಒತ್ತಾಯವನ್ನು ಲೆಕ್ಕಿಸದೆ ದೀಮರಿಗೆ ನೆರವೀಯುತ್ತಾ ಬಂದಿರುತ್ತದೆ.

ಇದೇ ಜುಲಾಯಿ ತಿಂಗಳಲ್ಲಿ ಚುನಾವಣೆಗಳ ಕುರಿತು ವಿಚಾರ ವಿನಿಮಯ ನಡೆಸಲು ಒಂದು ಪರಿಷತ್ತು ಸೇರಲಿದ್ದು, ಅದರಲ್ಲಿ ದಕ್ಷಿಣ ವೀಟನಾಮಿನ ಪಾತ್ರವೇನೆಂದು ಇನ್ನೂ ತಿಳಿದಿಲ್ಲ. ಆಂತರಿಕ ಗೊಂದಲದಿಂದ ಕಂಗೆಟ್ಟಿರುವ ಈ ನಾಡಿನಲ್ಲಿ ಭವಿಷ್ಯ ನಿರ್ಣಯದ ದಿನ ಸಮೀಪಿಸುತ್ತಿದ್ದರೂ ಯಾರೂ ಎಚ್ಚರಗೊಳ್ಳುವುದಿಲ್ಲ. ದೀಮರು ಅಮೇರಿಕದ ಧಾರಾಳ ನೆರವಿನ ಬಲದಿಂದ ಎಲ್ಲ ಪ್ರತಿಸ್ಪರ್ಧಿಗಳನ್ನೂ ದಮನಿಸಬಹುದೆಂದು ತಿಳಿದಿರುವಂತೆ ಭಾಸವಾಗುತ್ತದೆ. ಆದರೆ, ಪ್ರಜೆಗಳ ಹೃದಯಗಳನ್ನು ಗೆದ್ದುಕೊಳ್ಳಲು ಅವರಿಗೆ ಯುದ್ಧದ ಗೊಂದಲದಲ್ಲಿ ಸಮಯ ಸಿಗುವುದು ಕಷ್ಟ.

ದಶಾಂಶ ನಾಣ್ಯ ಪದ್ಧತಿಯ ವಿಧೇಯಕ

ಲೋಕ ಸಭೆಯ ಮುಂದೆ ಮಂಡನೆ

ಕೆಲವು ದಿನಗಳ ಹಿಂದೆ ವಾಣಿಜ್ಯ ಮಂತ್ರಿಗಳು, ನಾಣ್ಯ ತೂಕ ಮತ್ತು ಅಳತೆಯ ಪದ್ಧತಿಗಳ ಪರಿಷ್ಕಾರದ ವಿಷಯವನ್ನು ವಿಚಾರಿಸಲಾಗುತ್ತದೆ ಎಂದಿದ್ದರು. ಅದರಂತೆ ಇದೇ ೭ನೇ ದಿನಾಂಕ ಲೋಕ ಸಭೆಯ ಮುಂದೆ ಮಂತ್ರಿ ಶ್ರೀ. ಎ. ಸಿ. ಗುಹಾರವರು ನಮ್ಮ ನಾಣ್ಯ ಪದ್ಧತಿಯಲ್ಲಿ ಬದಲಾವಣೆ ಮಾಡುವ ವಿಧೇಯಕವನ್ನು ಮಂಡಿಸಿದರು.

ರೂಪಾಯಿಗೆ ನೂರು ಸೆಂಟು

ಇಷ್ಟರ ವರೆಗೆ ನಾವು ಬಳಸುತ್ತಿದ್ದಂತೆ ರೂಪಾಯಿಯೇ ಇನ್ನು ಮುಂದೆ ಸಹ ಪ್ರಧಾನ ನಾಣ್ಯವಾಗಿ ಉಳಿಯುವುದೆಂದು ಈ ವಿಧೇಯಕ ಹೇಳುತ್ತದೆ. ಆದರೆ ಎರಡಾಣೆ, ಆಣೆ, ಅರ್ಧಾಣೆ, ಪಾವಾಣೆ, ಪೈ ಮುಂತಾದ ನಾಣ್ಯಗಳು ಕ್ರಮೇಣ ರದ್ದಾಗುತ್ತವೆ; ಮತ್ತು ರೂಪಾಯಿಗೆ ನೂರು ಸೆಂಟು ಎಂಬ ಹೊಸ ನಾಣ್ಯ ಪದ್ಧತಿಯು ವ್ಯವಹಾರಕ್ಕೆ ಬರುತ್ತದೆ.

ಪರಿಷ್ಕಾರದ ಉದ್ದೇಶ

ಇದರ ಉದ್ದೇಶವನ್ನು ವಿವರಿಸುವ ವಿಧೇಯಕದ ಪರಿಚ್ಛೇದವು ಹೀಗೆನ್ನುತ್ತದೆ— "ಆಧುನಿಕ ವಾಣಿಜ್ಯ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಗಣಿತ ವ್ಯವಹಾರಗಳನ್ನು ಮಾಡುವ ವಿಧಾನ ಬಹಳ ಸುಲಭ ರೀತಿಯದಿರಬೇಕಾಗುತ್ತದೆ. ಇದಕ್ಕೆ ದಶಮಾಂಶ ಪದ್ಧತಿಯೇ ಅತ್ಯಂತ ಉಪಯುಕ್ತವಿರುತ್ತದೆ. ಜಗತ್ತಿನಲ್ಲಿ ಮುಂದರಿದ ಎಲ್ಲ ರಾಷ್ಟ್ರಗಳಲ್ಲೂ ಈ ಪದ್ಧತಿ ಬಳಸಲ್ಪಡುತ್ತದೆ ಭಾರತದಲ್ಲಿ ಸಹ ಇದನ್ನು ಜ್ಯಾರಿಗೆ ತರಲು ಸಾರ್ವಜನಿಕ ಅಭಿಪ್ರಾಯ ಅನುಕೂಲವಿರುತ್ತದೆ."

ವಿವಾಹ ವಿಧೇಯಕ

ಹಿಂದೂ ವಿವಾಹ ವಿಧೇಯಕವನ್ನು ಲೋಕ ಸಭೆಯು ಪ್ರಚಂಡ ಹರ್ಷೋದ್ಗಾರಗಳ ಮಧ್ಯೆ ಸ್ವೀಕರಿಸಿತು. ಪ್ರಧಾನ ಮಂತ್ರಿ ನೆಹರುಗಳು ವಿಧೇಯಕವನ್ನು ಬಲವಾಗಿ ಸಮರ್ಥಿಸಿದರು. ಭಾರತೀಯ ಸ್ತ್ರೀಯರ ವಿಷಯದಲ್ಲಿ ತಮಗೆ ವಿಶೇಷ ಅಭಿಮಾನವಿರುವುದಾಗಿ ಅವರು ಹೇಳಿದರಲ್ಲದೆ ಸಮಾಜವನ್ನು ಬಹಳ ಬಿಗಿಯಾದ ನಿಯಮ ನಿರ್ಬಂಧಗಳಿಗೆ ಗುರಿಪಡಿಸಿದರೆ ಅದು ಒಡೆದುಹೋದೀತೆಂದು ಎಚ್ಚರಿಸಿದರು.

ಹೊಸ ಬ್ಯಾಂಕಿನ ಸ್ಥಾಪನೆ

ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಪಾಲಿನ ಅಧಿಕಾರ ನೀಡುವ ವಾರಸಾವಿಧೇಯಕವನ್ನು ಪರಿಶೀಲಕ ಸಮಿತಿಗೊಪ್ಪಿಸುವ ಸೂಚನೆಯ ಮೇಲೆ ಚರ್ಚೆನಡೆಯುತ್ತಿದ್ದಂತೆಯೆ ಲೋಕ ಸಭೆ ಮುಂದರಿಯಿತು. ರಾಜ ಸಭೆಯು ಅಧಿವೇಶನ ಸಹ ಸ್ಟೇಟ್ ಬ್ಯಾಂಕ್ ಅಫ್ ಇಂಡಿಯದ ಸ್ಥಾಪನೆಗೆ ತನ್ನ ಸಮ್ಮತಿಯನ್ನು ವ್ಯಕ್ತಪಡಿಸಿದ ಬಳಿಕ ಮುಂದೂಡಲ್ಪಟ್ಟಿತು. ಈ ಬ್ಯಾಂಕು ಇದೇ ಜುಲಾಯಿ ೧ ನೇ ತಾರೀಕಿನೊಳಗೆ ಅಸ್ತಿತ್ವಕ್ಕೆ ಬರುವುದೆಂದು ತಿಳಿಯುತ್ತೇವೆ.

ಹಿಂದೀ ಆಯೋಗ

ಗೃಹ ಮಂತ್ರಿ ಪಂಡಿತ ಪಂತರು ಹಿಂದಿ ಆಯೋಗವೊಂದನ್ನು ಭಾರತ ಸರಕಾರ ರಚಿಸಲಿರುವುದಾಗಿಯೂ ಶ್ರೀ. ಬಿ. ಜಿ. ಖೇರರು ಅದರ ಅಧ್ಯಕ್ಷರಿರುವರೆಂದೂ ಲೋಕಸಭೆಯಲ್ಲಿ ದಿನಾಂಕ ೫ರಂದು ಸಾರಿದರು. ಘಟನೆಯಲ್ಲಿ ಹೇಳಿದ ಪ್ರಕಾರ ಹಿಂದಿಯನ್ನು ಭಾರತದಲ್ಲಿ ಸರಕಾರದ ವ್ಯವಹಾರಗಳಿಗೆ ಬಳಸುವ ವಿಧಾನವನ್ನು ಈ ಆಯೋಗ ಪರಿಶೀಲಿಸುತ್ತದೆ. ಆಯೋಗದಲ್ಲಿ ಘಟನೆಯ ಪರಿಶಿಷ್ಟದಲ್ಲಿ ನಮೂದಿಸಲಾದ ಎಲ್ಲ ಭಾರತೀಯ ಭಾಷೆಗಳ ಪ್ರತಿನಿಧಿಗಳೂ ಇರುವರು; ಇದರಿಂದ ಹಿಂದೀಯೇತರ ಪ್ರದೇಶಗಳವರ ಭಾವನೆಯನ್ನು ಗಮನಿಸಲು ಅನುಕೂಲ.

ದಯಮಾಡಿ ಚಂದಾಹಣ ಮನಿಯಾರ್ಡರ್ ಮಾಡಿರಿ. ಇಲ್ಲವೆ ನಾವು ಕಳಿಸುವ ವಿ.ಪಿ.ಯನ್ನು ಸ್ವೀಕರಿಸಿರಿ.

ಪ್ರಗತಿಯಿಂದ ಪ್ರಗತಿಗೆ.......

30 12-1954ರ ಅಂಕೆಗಳು. (ಸಾವಿರದ ಸರಾಸರಿ ಅಂಕೆಗಳಲ್ಲಿ)

ಅಧಿಕೃತ ಮೂಲಧನ	ರೂ.	50,00,000
ಚಂದಾ ಅರ್ಪಿಸಲ್ಪಟ್ಟ ಮತ್ತು ತೆತ್ತ ಮೂಲಧನ....	ರೂ.	29,00,000
ಕ್ಷೇಮನಿಧಿ	ರೂ.	26,00,000
ಠೇವುಗಳು	ರೂ.	8,91,80,000
ನಿವ್ವಳ ಲಾಭ	ರೂ.	9,20,000

ಪ್ರಗತಿಯನ್ನು ಸೂಚಿಸುವ ಮೇಲಿನ ಅಂಕೆಸಂಖ್ಯೆಗಳು, ನೀವು ಬ್ಯಾಂಕಿನಲ್ಲಿ ಇಟ್ಟ ಆದರ, ಪ್ರೀತಿ ವಿಶ್ವಾಸಗಳ ಸಾಂಕೇತಿಕ ಚಿಹ್ನೆ. ನಿಮ್ಮ ಆಶ್ರಯವು ಬ್ಯಾಂಕಿನ ಮಹೋನ್ನತ ಪ್ರಗತಿಯ ಮೂಲಕಾರಣ.

ಕೆನರಾ ಬ್ಯಾಂಕ್, ಲಿಮಿಟೆಡ್.

CANARA BANK, LTD.

ESTD: 1906.

ಪ್ರಧಾನ ಕಚೇರಿ— ಮಂಗಳೂರು. | ಆಡಳಿತ ಕಚೇರಿ— ಬೆಂಗಳೂರು. | ಜನರಲ್ ಮೆನೇಜರರ ಕಚೇರಿ ಮತ್ತು ವಿದೇಶಿ ಇಲಾಖೆ— ಬೊಂಬಾಯಿ.

NAVAYUGA ENTERPRISE LTD., UDIPI.

NOTICE

The Register of members and Share transfer books of the Company will remain closed from the 23rd May, 1955 to 10th June, 1955. (both days inclusive)

(By order of the Board)

Office of the Company
Udipi
Date, 9—5—1955

K. H. Shetty.
Managing Director.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೨-೫-'೫೫	೩೬

ಭಾಷೆಯ ತೊಡಕು

ಭಾರತ ಸರಕಾರದವರು ಇಷ್ಟರಲ್ಲಿಯೇ ಹಿಂದೀ ಆಯೋಗವೊಂದನ್ನು ಶ್ರೀ. ಬಿ. ಜಿ. ಖೇರರ ಅಧ್ಯಕ್ಷತೆಯಲ್ಲಿ ನೇಮಿಸಲಿದ್ದಾರೆ ಎಂದು ಲೋಕ ಸಭೆಯಲ್ಲಿ ಗೃಹ ಮಂತ್ರಿಗಳು ಕಳೆದ ವಾರ ಕೊಟ್ಟ ಹೇಳಿಕೆಯಿಂದ ಗೊತ್ತಾಗುತ್ತದೆ. ಆಯೋಗವು ಭಾರತ ಸರಕಾರದ ಭಾಷೆಯಾಗಿ ಹಿಂದಿಯನ್ನು ಹೇಗೆ ಪ್ರಗತಿಪರವಾಗಿ ಬಳಸಬಹುದೆಂದೂ ಇಂಗ್ಲೀಷಿನ ಬಳಕೆಯನ್ನು ಹೇಗೆ ನಿಧಾನವಾಗಿ ಕಡಿಮೆ ಮಾಡುತ್ತಾ ಹೋಗಬಹುದೆಂದೂ ವಿಚಾರಿಸುವುದಾಗಿ ತಿಳಿದು ಬರುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಪರಸ್ಪರ ವ್ಯವಹಾರದ ಭಾಷೆಯಾಗಿಯೂ ವರಿಷ್ಠ ನ್ಯಾಯಾಲಯ ಮುಂತಾದವುಗಳು ಉಪಯೋಗಿಸುವ ಭಾಷೆಯಾಗಿಯೂ ಶಾಸನವನ್ನು ಬರೆದಿಡ ತಕ್ಕ ಭಾಷೆಯಾಗಿಯೂ ಹಿಂದಿಯನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂಬ ಮಹತ್ವದ ಪ್ರಶ್ನೆಯನ್ನು ಈ ಆಯೋಗ ಸುಮಾರು ಒಂದು ವರ್ಷದ ಅವಧಿಯಲ್ಲಿ ವಿಚಾರಿಸಿ, ತನ್ನ ಸಲಹೆಗಳನ್ನು ಕೊಡಬೇಕಾಗಿರುತ್ತದೆ. ಒಟ್ಟಾರೆ, ಇಂಗ್ಲೀಷಿನ ಸ್ಥಾನದಲ್ಲಿ ಹಿಂದಿಯನ್ನು ಪ್ರತಿಷ್ಠಾಪಿಸುವ ದೃಢವಾದ—ಆದರೆ ನಿಧಾನವಾದ—ಪ್ರಗತಿಪರ ಕ್ರಮಗಳನ್ನು ಸೂಚಿಸುವುದೇ ಆಯೋಗದ ಮುಖ್ಯ ಕರ್ತವ್ಯ. ತಮ್ಮ ಸೂಚನೆಗಳನ್ನು ಮುಂದಿಡುವಾಗ ಭಾರತ ಸರಕಾರದ ನೌಕರಿಗಳ ಮಟ್ಟಿಗೆ ಹಿಂದೀಯೇತರ ಭಾಷೆಗಳವರ ಹಿತಾಸಕ್ತಿಗೆ ಧಕ್ಕೆ ಬರದಂತೆಯೂ ಸಮಗ್ರ ಭಾರತದ ಔದ್ಯಮಿಕ, ಸಾಂಸ್ಕೃತಿಕ ಹಾಗು ವೈಜ್ಞಾನಿಕ ಅಭಿವೃದ್ಧಿಗೆ ಆತಂಕವಾಗದಂತೆಯೂ ಜಾಗರೂಕತೆ ವಹಿಸಲಾಗುವುದೆಂದು ಮಂತ್ರಿಗಳು ಭರವಸೆ ನೀಡಿದರು. ಹಿಂದೀಯೇತರ ಭಾಷೆಗಳವರಿಗೆ ಅನ್ಯಾಯವಾಗುವುದನ್ನು ತಪ್ಪಿಸಲು ಅದಕ್ಕೂ ಹೆಚ್ಚಾಗಿ ಅವರ ಹೃದಯವನ್ನು ಗೆದ್ದುಕೊಳ್ಳಲು ಆಯೋಗದಲ್ಲಿ ಭಾರತದ ಪ್ರಾದೇಶಿಕ ಭಾಷೆಗಳ ಪ್ರತಿನಿಧಿಗಳಿಗೂ ಸ್ಥಾನ ಕಲ್ಪಿಸಲಾಗಿದೆ. ಇದನ್ನು ನಾವು ಸಮಾಧಾನ ಚಿತ್ತದಿಂದ ಸ್ವಾಗತಿಸುತ್ತೇವೆ. ಆದರೆ, ಒಂದು ಸಂಗತಿ ಮಾತ್ರ ಸ್ಪಷ್ಟವಾಗಿ ತೋರಿಬರುತ್ತದೆ—ಭಾರತ ಸರಕಾರವು ಹಿಂದಿಯನ್ನು ತನ್ನೆಲ್ಲ ವ್ಯವಹಾರಗಳಿಗೆ ಬಳಸಲು ಕಟಿಬದ್ಧವಾಗಿದೆ ಎಂಬುದೇ ಅದು. ನಮ್ಮ ರಾಜ್ಯಾಂಗ ಘಟನೆಯು ೧೯೬೫ನೇ ವರ್ಷದೊಳಗಾಗಿ ಹಿಂದಿಯನ್ನು ಭಾರತ ಸರಕಾರವು ತನ್ನೆಲ್ಲ ವ್ಯಾವಹಾರಿಕ ಉದ್ದೇಶಗಳಿಗೆ ಬಳಸಲು ಯೋಗ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿಧಿಸುತ್ತದೆ. ಇದಕ್ಕನುಗುಣವಾಗಿ ನಡೆದುಕೊಳ್ಳುವ ಉತ್ಸಾಹದಿಂದ ಅಖಿಲ ಭಾರತ ಸ್ವರೂಪದ ನೌಕರಿಸ್ಥಾನಗಳಿಗೆ ಪರೀಕ್ಷೆಗಳನ್ನು ನಡೆಸಲು ಹಿಂದಿಯನ್ನು ಮಾಧ್ಯಮವಾಗಿ ಬಳಸಬೇಕೆಂದು ಭಾರತ ಸರಕಾರ ಈಗಾಗಲೇ ನಿಶ್ಚಯಿಸಿರುತ್ತದೆ. ಆದರೆ ಹಿಂದೀಯೇತರ ಭಾಷೆಗಳ ಉಮೇದ್ವಾರರಿಗೆ ತೊಂದರೆಯಾಗದಂತೆ ಜಾಗರೂಕತೆ ವಹಿಸಲಾಗುವುದೆಂದೂ ಈ ಉದ್ದೇಶದಿಂದ ಪ್ರಾದೇಶಿಕ ಭಾಷೆಗಳಲ್ಲಿ ಸಹ ಪ್ರಶ್ನಾಪತ್ರಗಳನ್ನು ಉತ್ತರಿಸಗೊಡಲಾಗುವುದೆಂದೂ ಸರಕಾರದ ಹೇಳಿಕೆಯು ತಿಳಿಸುತ್ತದೆ. ಇವೆಲ್ಲ ವಿಷಯಗಳು ನಾವು ಭಾಷೆಯ ವಿಷಯದಲ್ಲಿ ಸಂಕ್ರಮಣದ ಕಾಲವನ್ನು ಇದಿರಿಸುತ್ತಿದ್ದೇವೆಂದು ಎತ್ತಿ ಹೇಳುತ್ತವೆ. ಪ್ರಾದೇಶಿಕ ಭಾಷೆಗಳಲ್ಲಿ ಉತ್ತರಿಸಲು ಹಿಂದೀಯೇತರ ಭಾಷೆಗಳವರಿಗೆ—ಪ್ರಥಮ ಹಂತದಲ್ಲಿ—ಬಿಡಲಾಗುವುದೆಂಬ ಸೌಕರ್ಯವು ವ್ಯವಹಾರದಲ್ಲಿ ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗುವುದೋ ಎಂದು ನಮಗೆ ಸಂಶಯ. ಏಕೆಂದರೆ ಈಗ ಪ್ರಾದೇಶಿಕ ಭಾಷೆಗಳನ್ನಾಗಲೀ ಹಿಂದೀಯನ್ನೇ ಆಗಲೀ ಶಿಕ್ಷಣದ ಮಾಧ್ಯಮವಾಗಿ ಬಳಸಿಕೊಂಡಿರುವ ವಿಶ್ವವಿದ್ಯಾಲಯಗಳೆಷ್ಟು? ಕಾಲೇಜುಗಳಲ್ಲಿ ನಾಲ್ಕೈದು ವರ್ಷ ವ್ಯಾಸಂಗ ಮಾಡಿ, ಪದವೀಧರರಾಗಿ, ಅಖಿಲ ಭಾರತ ಸ್ವರೂಪದ ಕೆಲಸಗಳಿಗೆ ಅರ್ಜಿ ಹಾಕುವ ಈಗಿನವರಲ್ಲಿ ಹೆಚ್ಚಿನವರು-ಅವರ ಪ್ರಮಾಣ ೯೦% ಇದ್ದೀತು- ಇಂಗ್ಲೀಷಿನಲ್ಲಿಯೇ ಶಿಕ್ಷಣ ಹೊಂದಿದವರಾಗಿರುತ್ತಾರೆ. ಅವರು ಹಿಂದಿಯಲ್ಲಿ ಅಥವಾ ಪ್ರಾದೇಶಿಕ ಭಾಷೆಗಳಲ್ಲಿ ಪ್ರಶ್ನಾಪತ್ರಗಳನ್ನು ಉತ್ತರಿಸುವುದೆಂತು? ಇದರಿಂದ ನಾವೊಂದು ಮಾತನ್ನು ಹೇಳಬಹುದು-ಹಿಂದಿಯನ್ನು ಭಾರತ ಸರಕಾರದ ವ್ಯವಹಾರದ ಭಾಷೆಯಾಗಿ ಉಪಯೋಗಿಸಲು ಆತುರಪಡುವವರು ದಯವಿಟ್ಟು ಹಿಂದಿಯ ಪ್ರಬುದ್ಧ ಅಭ್ಯಾಸಕ್ಕೆ ಅನುಕೂಲತೆಯನ್ನು ಅತ್ಯಧಿಕ ಪ್ರಮಾಣದಲ್ಲಿಯೂ ಅತ್ಯಂತ ಶೀಘ್ರವಾಗಿಯೂ ಒದಗಿಸಿಕೊಡಬೇಕು. ಇದೇನೂ ಸುಲಭದ ಕೆಲಸವಲ್ಲ—ಏಕೆಂದರೆ, ಭಾರತ ಸರಕಾರ "ಹಿಂದಿ-ಹಿಂದಿ" ಎಂದು ಹೇಳುತ್ತಾ ಹೋದರೆ ಉತ್ತರ ಭಾರತದಲ್ಲಿರುವ ವಿಶ್ವವಿದ್ಯಾಲಯಗಳು ತಮ್ಮ ಪ್ರಾದೇಶಿಕ ಭಾಷೆಯಾಗಿರುವ-ಮತ್ತು ಘಟನೆಯನ್ವಯ ಭಾರತ ಸರಕಾರದ ವ್ಯವಹಾರದ ಭಾಷೆಯಾಗುವ-ಹಿಂದಿಯನ್ನು ಶಿಕ್ಷಣ ಮಾಧ್ಯಮವಾಗಿ ಸಾರಿದರೆ, ಬಂಗಾಳ, ಅಸ್ಸಾಮುಗಳನ್ನೊಳಗೊಂಡು ದಕ್ಷಿಣದ ಸ್ವಾಭಿಮಾನವುಳ್ಳ ವಿಶ್ವವಿದ್ಯಾಲಯಗಳು ಆಯಾ ಪ್ರಾದೇಶಿಕ ಭಾಷೆಗಳನ್ನು ತಮ್ಮ ಶಿಕ್ಷಣದ ಮಾಧ್ಯಮವಾಗಿ ಸಾರುವ ಸಂಭವವೇ ಹೆಚ್ಚು. ಹೀಗೆ ಈಗ ಇಂಗ್ಲೀಷು ಇನ್ನು ಐದೋ ಹತ್ತೋ ವರ್ಷಗಳಲ್ಲಿ ಪ್ರಾದೇಶಿಕ ಭಾಷೆಯನ್ನು ಹಿಂದೀಯೇತರ ಪ್ರದೇಶದ ವಿಶ್ವವಿದ್ಯಾಲಯಗಳು ಶಿಕ್ಷಣ ಮಾಧ್ಯಮವಾಗಿಟ್ಟುಕೊಳ್ಳುವಾಗ, ಭಾರತ ಸರಕಾರ ಮಾತ್ರ ಹಿಂದಿಯನ್ನೇ ಮನ್ನಿಸಿದರೆ ಹಿಂದೀಯೇತರ ಭಾಷೆಗಳವರಿಗೆ ಅನ್ಯಾಯ ಆಗಿಯೇ ಆಗುತ್ತದೆ. ಕಳೆದ ಐದು ವರ್ಷಗಳಲ್ಲಿ ವಿಶ್ವವಿದ್ಯಾಲಯಗಳು ಏನಾದರೂ ಪ್ರಗತಿಪರ ಪರಿಶೀಲನೆಗಳನ್ನು ಕೈಗೊಂಡಿದ್ದರೆ, ಆಗ ಇಷ್ಟು ಹೊತ್ತಿಗೆ ಒಂದು ನಿರ್ಣಯಕ್ಕೆ ಬರಬಹುದಿತ್ತು—ಹಾಗಾಗಲಿಲ್ಲ. ಆದುದರಿಂದ ಇನ್ನು ಮುಂದಾದರೂ ವಿಶ್ವವಿದ್ಯಾಲಯಗಳೇ ಭಾಷೆಯ ಈ ತೊಡಕನ್ನು ಬಿಡಿಸಲು ಮುಂದಾಗಬೇಕು; ಸ್ವಾಯತ್ತಾಧಿಕಾರವುಳ್ಳ ಅವುಗಳ ಕಾರ್ಯಕ್ರಮವನ್ನೂ ಅದರ ಸಾಧಕ ಬಾಧಕ ಅಂಶಗಳನ್ನೂ ಗಮನಿಸದೆ ಸರಕಾರವೇ ಶಾಸನದ ಬಲವನ್ನು ಉಪಯೋಗಿಸಿ ಹಿಂದಿಯನ್ನು ಹೇರಲು ಹೊರಟರೆ ಹಿಂದೀಯೇತರ ಭಾಷೆಗಳವರಿಗೆ ನಿಶ್ಚಯವಾಗಿಯೂ ತೊಂದರೆಯಾಗುವುದು ತಪ್ಪದು. ಇದರಿಂದ ನಾವು ಹಿಂದಿಯನ್ನು ವಿರೋಧಿಸುತ್ತೇವೆಂದು ಯಾರೊಬ್ಬರೂ ತಿಳಿದುಕೊಳ್ಳತಕ್ಕದ್ದಲ್ಲ—ಹಿಂದಿಯನ್ನು ಕಲಿಯಲಿಕ್ಕಿರುವ ಸೌಕರ್ಯದ ಅಭಾವವನ್ನಷ್ಟೇ ನಾವು ದೂರುತ್ತಿದ್ದೇವೆ. ಪ್ರಾದೇಶಿಕ ಭಾಷೆಯ ಸ್ಥಾನವನ್ನು ಅದುಮಿ ಹಿಡಿದು ಹಿಂದಿ ಹೆಡೆಯೆತ್ತಿ ನಿಲ್ಲುವುದನ್ನು ನಾವು ಪ್ರತಿಭಟಿಸುತ್ತೇವೆಂಬುದು ನಿಜ—ಆದರೆ ಅಖಿಲ ಭಾರತ ಸ್ವರೂಪದ ವ್ಯವಹಾರಗಳಿಗೆ ಈಗಿನ ಸ್ಥಿತಿಯಲ್ಲಿ ಇಂಗ್ಲೀಷಿನ ಬಳಿಕ ಹಿಂದಿಯೇ ಯೋಗ್ಯ ಭಾಷೆಯಾಗಿದೆ ಎಂಬುದರಲ್ಲಿ ನಮ್ಮದೇನೂ ತಕರಾರಿಲ್ಲ.

ಕಾಂಗ್ರೆಸಿನ ಶುದ್ಧೀಕರಣಕ್ಕೆ ಮಹತ್ವ

ಬರ್ಹಾಂಪುರ ಅಧಿವೇಶನದ ಕಾರ್ಯಕಲಾಪ

ಒಡಿಸದ ಬರ್ಹಾಂಪುರದಲ್ಲಿ ಇದೇ ೯ ಮತ್ತು ೧೦ನೇ ದಿನಾಂಕಗಳಲ್ಲಿ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಸಭೆಯು ಜರಗಿತು. ಸುಮಾರು ೪೦೦ ಪ್ರತಿನಿಧಿಗಳಲ್ಲಿ ಕೇವಲ ೧೫೦ ಮಂದಿ ಹಾಜರಿದ್ದರು; ಇವರ ಹೊರತಾಗಿ ೫೦೦೦ ಪ್ರೇಕ್ಷಕರೂ ಸಮಿತಿಯ ಕಾರ್ಯಕಲಾಪಗಳನ್ನು ನಿರೀಕ್ಷಿಸಿದರು. ಈ ಅಧಿವೇಶನದ ವಿಶೇಷ ಸಂಗತಿಯೆಂದರೆ ಭೂದಾನ ಚಳವಳಿಯ ಪ್ರವರ್ತಕರಾದ ಆಚಾರ್ಯ ವಿನೋಬಾ ಭಾವೆಯವರು ಮಾಡಿದ ಭಾಷಣ.

ಭೂದಾನ ಚಳವಳಿ

ಭಾವೆಯವರು ತಮ್ಮ ಭಾಷಣದಲ್ಲಿ ಭೂದಾನ ಚಳವಳಿಯು ಅಹಿಂಸೆಯನ್ನು ಆಧರಿಸಿದೆಯಲ್ಲದೆ ಆಧ್ಯಾತ್ಮಿಕ ಸತ್ವದಿಂದ ಕೂಡಿದೆ ಎಂದರು. ಆದಕ್ಕಾಗಿ ದುಡಿದರೆ ಜಗತ್ತಿನಲ್ಲಿ ಶಾಂತಿಯ ಸಂವರ್ಧನೆಯಾಗುವುದೆಂದು ಸಾರಿದರು. ಜಗತ್ತಿನ ಲಕ್ಷ್ಯವನ್ನು ಸೆಳೆದು ಕೊಂಡಿರುವ ಗಾಂಧೀಜಿಯವರ ಅಹಿಂಸೆಯ ತತ್ವದ ವ್ಯಾವಹಾರಿಕ ಪ್ರಯೋಗವೇ ಇದೆಂದು ಅವರು ವಿವರಿಸಿದರು.

ಕಾಂಗ್ರೆಸಿಗರಿಗೆ ಬಿನ್ನಹ

ತಮ್ಮ ಸಮಸ್ಯೆಗಳನ್ನು ಅಹಿಂಸಾತ್ಮಕ ಪದ್ಧತಿಯಿಂದಲೇ ನಿವಾರಿಸಿಕೊಳ್ಳಲು ಜನರು ತಯಾರಾಗಬೇಕೆಂದು ಹೇಳುತ್ತಾ ಭೂದಾನವು ವ್ಯಕ್ತಿಯ ಒಡೆತನವನ್ನು ರದ್ದುಗೊಳಿಸಿ, ಸಂಪತ್ತಿನ ವಿತರಣೆ ಮಾಡುತ್ತದೆ. ಈ ಉದ್ದೇಶದಿಂದ ಹಳ್ಳಿಯ ಒಂದಾರಂಶ ಭೂಮಿಯನ್ನು ಸಂಗ್ರಹಿಸಿ ಯೋಗ್ಯ ವಾತಾವರಣ ನಿರ್ಮಿಸಬೇಕು. ಕಾಂಗ್ರೆಸು ಕಾರ್ಯಕರ್ತರು ಕನಿಷ್ಠ ಎರಡು ವರ್ಷಗಳಾದರೂ ಭೂದಾನ ಆಂದೋಲನಕ್ಕೆ ಮೀಸಲಿಟ್ಟು ದುಡಿಯಬೇಕು ಎಂದವರು ಕೇಳಿಕೊಂಡರು. ಗೊತ್ತುವಳಿಯನ್ನು ಸ್ವೀಕರಿಸಿದಷ್ಟಕ್ಕೆ ಕೆಲಸವಾಗದು; ಜನರಲ್ಲಿ ನವಚೈತನ್ಯವನ್ನುಂಟುಮಾಡಿ, ವಿವಿಧ ಸಮಸ್ಯೆಗಳನ್ನು ನೋಡುವ ದೃಷ್ಟಿಕೋಣದಲ್ಲಿ ಪರಿವರ್ತನೆ ಮಾಡುವುದೇ ಗೊತ್ತುವಳಿಯ ಸಾರ್ಥಕತೆಯ ಪರೀಕ್ಷೆ ಎಂದರು.

ಕಚ್ಚಾಟ ಸಲ್ಲದು

ಕಾಂಗ್ರೆಸಿನ ಅಧ್ಯಕ್ಷ ಢೇಬರರು ಪರಿಷತ್ತನ್ನು ಉದ್ದೇಶಿಸಿ ಮಾಡಿದ ಪ್ರಾಸ್ತಾವಿಕ ಭಾಷಣವು ಕಣ್ಣಿಗೆ ಅಂಜನವನ್ನು ಹಾಕುವಂತಿತ್ತೆಂದರೆ ಅತಿಶಯೋಕ್ತಿಯಲ್ಲ. ಅವರು ಕಾಂಗ್ರೆಸಿನಲ್ಲಿರುವ ದುಷ್ಟ ಶಕ್ತಿಗಳಿಗೆ ಬಲವಾದ ಎಚ್ಚರಿಕೆಯನ್ನು ಕೊಟ್ಟರು. ಸರಕಾರ ಮತ್ತು ಪಕ್ಷದಲ್ಲಿಯ ಅಧಿಕಾರದ ಸ್ಥಾನಗಳನ್ನು ಶಾಶ್ವತವಾಗಿ ಆಕ್ರಮಿಸುವ ಉದ್ದೇಶದಿಂದ ಕಾಂಗ್ರೆಸಿಗರಲ್ಲಿ ಕೆಲವರು ಆಕರ್ಷಕ ತಂತ್ರಗಳನ್ನು ನಡೆಸುತ್ತಿದ್ದಾರೆ ಎಂದು ಹೇಳುತ್ತಾ ಪ್ರಜಾಪ್ರಭುತ್ವ ಸಂಸ್ಥೆಯಲ್ಲಿ ಇಂಥ ಮನೋವೃತ್ತಿ ಒಳ್ಳೆಯದಲ್ಲವೆಂದು ಖಂಡಿಸಿದರು. ಅಧಿಕಾರ ಸ್ಥಳದಲ್ಲಿದ್ದವರ ಮಾತಿಗಷ್ಟೇ ಬೆಲೆ ಬರುತ್ತದೆ ಎಂಬ ಭಾವನೆಯಿಂದ ಕಚ್ಚಾಟಗಳು ಕಾಂಗ್ರೆಸಿಗರಲ್ಲಿ ನಡೆಯುತ್ತವೆ ಎಂದರು. ಆದುದರಿಂದ ಅಂಥ ಸ್ಥಾನಗಳ ಸಂಖ್ಯೆಯನ್ನು ಇಳಿಸಲು ಯೋಜನೆ ಮಾಡಿರುವುದಾಗಿ ಅವರು ತಿಳಿಸಿದರು.

ಚುನಾವಣೆಯ ಟಿಕೇಟು

ಹೊಸ ರಕ್ತದವರಿಗೆ ಕಾಂಗ್ರೆಸಿನಲ್ಲಿ ಅವಕಾಶವಿರಬೇಕೆಂಬ ತತ್ವವನ್ನು ಅವರು ಎತ್ತಿಹಿಡಿದರು. ಆದರೆ ಚುನಾವಣೆಯ ಟಿಕೇಟುಗಳಿಗಾಗಿ ಪ್ರಕಟವಾಗುವ ಲೋಭವನ್ನು ಅವರು ನಿಷೇಧಿಸಿದರು. ಈಗ ಜನರ ಪ್ರತಿನಿಧಿಗಳಾಗಿರುವ ಸದಸ್ಯರು ತಮ್ಮ ಮತದಾರ ಕ್ಷೇತ್ರದೊಡನೆ ಸಂಪರ್ಕವಿಟ್ಟುಕೊಂಡು ಯೋಗ್ಯ ಕೆಲಸ ಮಾಡದಿದ್ದರೆ ಮತ್ತು ಹೊಸಬರೆನಿಸಿದವರಿಗೆ ಅವರು ಆಯ್ದುಕೊಂಡ ಮತದಾರ ಕ್ಷೇತ್ರದಲ್ಲಿ ಕ್ರಿಯಾತ್ಮಕ ಸೇವೆಯ ದಾಖಲೆ ಸಾಕಷ್ಟಿಲ್ಲದಿದ್ದರೆ ಚುನಾವಣೆಯ ಟಿಕೇಟುಗಳು ಸಿಗಲಾರವೆಂದು ಎಚ್ಚರಿಸಿದರು. ಚುನಾವಣೆಯ ಸಮಿತಿಗಳ ನಿಷ್ಪಕ್ಷಪಾತತನದ ಕುರಿತು ಸಂಶಯಕ್ಕೆ ತಿಲಾಂಶ ಅವಕಾಶ ದೊರೆತರೂ ಸಾಕು—ಅವುಗಳ ಸಿಫಾರಸನ್ನು ಪಾರ್ಲಿಮೆಂಟರಿ ಬೋರ್ಡು ಅಂಗೀಕರಿಸಲಾರದು ಎಂದೂ ಢೇಬರರು ಸಾರಿದರು.

ಶಿಸ್ತಿನ ಕ್ರಮ

ಗುಂಪುಗಳನ್ನು ಕಟ್ಟಿಕೊಂಡು ಅಕೃತ್ಯಗಳಲ್ಲಿ ಪ್ರವೃತ್ತರಾಗುವವರ ವಿರುದ್ಧ ಮಾತನಾಡುತ್ತಾ ಕಾಂಗ್ರೆಸಿನ ವರಿಷ್ಠರು ವಿಧಾಯಕ ಕಾರ್ಯಕ್ರಮದ ಮೂಲಕ ಸಂಸ್ಥೆಯ ಉಪಯುಕ್ತತೆಯನ್ನೂ ಮಟ್ಟವನ್ನೂ ಎತ್ತರಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. ಜಾತೀಯತೆ, ಸ್ವಜನಹಿತ

ಮುಂತಾದ ಗುಂಪುಗಳಾಗಿ ಕಾಂಗ್ರೆಸಿನಲ್ಲಿ ಕೊಳೆ ತುಂಬಲು ಪ್ರಯತ್ನಿಸುವವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಾಗಿ ಬುದ್ಧಿ ಹೇಳಿದರು. ನಮಗೀಗ ಕಾಂಗ್ರೆಸು ನಲ್ವತ್ತು ವರ್ಷಗಳಿಂದ ಅನುಸರಿಸಿಕೊಂಡುಬಂದ ಉದಾತ್ತ ತತ್ವಗಳಲ್ಲಿ ಶ್ರದ್ಧೆ ಇರುವ ಮತ್ತು ಅದಕ್ಕಾಗಿ ಕೆಲಸಮಾಡುವ ಕಾರ್ಯಕರ್ತರು ಬೇಕೆನ್ನುತ್ತಾ ಪ್ರತಿಯೊಬ್ಬ ಕಾಂಗ್ರೆಸಿಗನೂ ಜನ ಪ್ರತಿನಿಧಿಯೂ ತೋರಿಕೆನಲ್ಲ, ಅಂತಃಕರಣ ಪೂರ್ವಕವಾಗಿ ರಚನಾತ್ಮಕ ಕಾರ್ಯಗಳಲ್ಲಿ ಭಾಗವಹಿಸಬೇಕೆಂದು ವಿನಂತಿಸಿದರು.

ಆರ್ಥಿಕ ಪುನಾರಚನೆ

ಆವಡಿ ಮ ಅಧಿವೇಶನದಲ್ಲಿ ಸ್ವೀಕರಿಸಿದ ಆರ್ಥಿಕ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವ ಕುರಿತು ಢೇಬರರು ಕೆಲವು ಸೂಚನೆಗಳನ್ನು ಮುಂದಿಟ್ಟರು. ಹತ್ತು ವರ್ಷಗಳಲ್ಲಿ ನಿರುದ್ಯೋಗದ ಸಂಪೂರ್ಣ ನಿವಾರಣೆಯಾಗಬೇಕು; ಅಷ್ಟೇ ಅವಧಿಯಲ್ಲಿ ಮಾಧ್ಯಮಿಕ ಶಿಕ್ಷಣದ ವರೆಗೆ ಮೂಲಶಿಕ್ಷಣದ ಏರ್ಪಾಡು ನಡೆಯಬೇಕು; ರಾಷ್ಟ್ರೀಯ ಆದಾಯವನ್ನು ೧೫ ವರ್ಷಗಳಲ್ಲಿ ಇಮ್ಮಡಿಗೊಳಿಸಬೇಕು; ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿ ಎಲ್ಲರಿಗೂ ಸಮಾನಾವಕಾಶ ಕಲ್ಪಿಸಿಕೊಡಬೇಕು—ಎಂದವರು ತಮ್ಮ ಸೂಚನೆಗಳನ್ನು ವಿಶದೀಕರಿಸಿದರು. ರಾಷ್ಟ್ರದ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ಪ್ರಗತಿಗೆ ಪೋಷಕವಾದ ಅಭಿವೃದ್ಧಿ ಪ್ರಯತ್ನಗಳಲ್ಲಿ ನ್ಯಾಯ ಸಮ್ಮತ ರೀತಿಯಲ್ಲಿ ಅತ್ಯಂತ ಆಸಕ್ತಿಯನ್ನು ವಹಿಸುವುದರಿಂದಲೇ ಕಾಂಗ್ರೆಸಿನ ಉದ್ದೇಶ ಫಲಿಸುವುದೆಂದು ಢೇಬರರು ಸ್ಪಷ್ಟೀಕರಿಸಿದರು.

ನಾಳೆಯ ಯೋಜನೆ

ಸಮಿತಿಯು ಸಮಾಜವಾದಿ ಸ್ವರೂಪದ ರಚನೆಯ ನಿರ್ಣಯಕ್ಕೆ ರಾಷ್ಟ್ರದಾದ್ಯಂತ ದೊರೆತ ಸ್ವಾಗತ ಮತ್ತು ಬೆಂಬಲಕ್ಕಾಗಿ ಸಮಾಧಾನವನ್ನು ವ್ಯಕ್ತಪಡಿಸಿತು. ಆರ್ಥಿಕ ಪುನಾರಚನೆಯ ವಿಷಯದಲ್ಲೂ ಎರಡನೆಯ ಪಂಚವಾರ್ಷಿಕ ಯೋಜನೆಯ ಕುರಿತಾಗಿಯೂ ಗೊತ್ತುವಳಿಗಳನ್ನು ಅಂಗೀಕರಿಸಿತು. ನೆಹರುಗಳು ಈ ಸಂದರ್ಭದಲ್ಲಿ ಮಾತನಾಡುತ್ತಾ ಮೊದಲನೆಯ ಯೋಜನೆಯು ರಾಷ್ಟ್ರೀಯ ಆದಾಯವನ್ನು ಪ್ರತಿ ವರ್ಷ ೩% ಹೆಚ್ಚಿಸಿತು; ಮುಂದಿನ ಯೋಜನೆಯು ಪ್ರತಿ ವರ್ಷ ೫% ಹೆಚ್ಚಿಸಬೇಕೆಂಬುದು ನಮ್ಮ ಉದ್ದೇಶ. ಜನರಲ್ಲಿ ಈಗ ನವ ನಿರ್ಮಾಣದ ಲವಲವಿಕೆ ವಿಶೇಷವಾಗಿ ಕಂಡು ಬರುತ್ತದೆ. ಅದರ ಸದುಪಯೋಗ ಪಡೆದುಕೊಳ್ಳಬೇಕು. ಮಹೋದ್ಯಮಗಳೊಡನೆ ಗೃಹೋದ್ಯಮಗಳ ಪಾತ್ರವನ್ನು ಸಮನ್ವಯಿಸುವುದರಿಂದ ಪ್ರಯೋಜನವಿದೆ ಎಂದು ಆ ಬಗೆಯನ್ನು ವಿವರಿಸಿದರು.

ಢೇಬರರ ವಿನಂತಿ

ರಾಜ್ಯಗಳ ಪುನರ್ಘಟನೆಯ ಬಗ್ಗೆ ಆಯೋಗವು ಶಾಂತ ರೀತಿಯಲ್ಲಿ ನಿರ್ಣಯಕ್ಕೆ ಬರುವಂತೆ ನೆರವಾಗಬೇಕೆಂದು ಸಮಿತಿ ಕೇಳಿಕೊಂಡಿತು; ಬಾಂಡುಂಗಿನ ಪರಿಷತ್ತಿನ ನಿರ್ಣಯಗಳನ್ನು ಅದು ಸ್ವಾಗತಿಸಿತು; ಕಾಂಗ್ರೆಸಿನ ಘಟನೆಗೆ ಗೆಲವು ತಿದ್ದುಪಡಿಗಳನ್ನು ಮಾಡಲಾಯಿತು. ತಮ್ಮ ಮುಕ್ತಾಯ ಭಾಷಣದಲ್ಲಿ ಢೇಬರರು ಭೂದಾನ ಚಳವಳಿಯಲ್ಲಿಯೂ ರಚನಾತ್ಮಕ ಕಾರ್ಯಕ್ರಮಗಳಲ್ಲಿಯೂ ಕಾಂಗ್ರೆಸಿಗರು ವಿಶೇಷ ಶ್ರಮವಹಿಸಿ ದುಡಿಯಬೇಕೆಂದು ಪುನಃ ವಿನಂತಿಸಿದರು.

ಪಶ್ಚಿಮ ಜರ್ಮನಿಗೆ ಸ್ವಾತಂತ್ರ್ಯ

ಅಮೇರಿಕ, ಬ್ರಿಟನ ಮತ್ತು ಫ್ರಾನ್ಸುಗಳು ಪಶ್ಚಿಮ ಜರ್ಮನಿಯನ್ನು ಸಾರ್ವಭೌಮ ರಾಷ್ಟ್ರವಾಗಿ ಸಾರಿದವು; ಮತ್ತು ಅಟ್ಲಾಂಟಿಕ ಒಪ್ಪಂದಲ್ಲಿ ಆ ದೇಶಕ್ಕೆ ಸ್ಥಾನವನ್ನು ಕೊಡಲಾಯಿತು. ಜರ್ಮನಿಯ ಪುನರುತ್ಥಾನದ ಉಪಕ್ರಮವು ಹೀಗೆ ಸಂಪೂರ್ಣವಾಯಿತು.

ಉಡುಪಿ

ವರದೇಂದ್ರ ಕಲಾಮಂದಿರದ ಉದ್ಘಾಟನೆ

ಉದ್ಘಾಟನೆ—ಸ್ಥಳೀಯ ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಹತ್ತು ಸಮಸ್ತರ ಧನ ಸಹಾಯ ಹಾಗೂ ಶ್ರಮದಾನದಿಂದ ಕಟ್ಟಿಸಲಾದ ಸುಮಾರು 60 ಸಾವಿರ ರೂ. ವೆಚ್ಚದ ವರದೇಂದ್ರ ಕಲಾಮಂದಿರ ಎಂಬ ಸುಂದರ ಸಭಾಸದನದ ಉದ್ಘಾಟನೆಯನ್ನು ಕಾಶೀಮಠಾಧಿಪತಿ ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳವರು ಇದೇ ತಾ 9 ರಲ್ಲಿ ಪೂರ್ವಾಹ್ನ 10-35 ತಾಸಿಗೆ ಜಯಘೋಷಗಳೊಡನೆ ವಿಜೃಂಭಣೆಯಿಂದ ನೆರವೇರಿಸಿದರು.

ಉದ್ಘಾಟನೆಯ ಪೂರ್ವದಲ್ಲಿ ಡಾ! ಎಸ್. ಆರ್. ಪೈಗಳು ಸ್ವಾಮಿಗಳವರನ್ನು ಪಾದಪೂಜೆ, ಮಾಲಿಕೆ ಮಂಗಳಾರತಿಗಳಿಂದ ಗೌರವಿಸಿದರು. ಬಳಿಕ ಕಲಾಮಂದಿರದ ಕುರಿತು ವರದಿಯನ್ನೋದಿ ಸಹಾಯನಿತ್ತವರಿಗೆ ಆಭಾರ ಸೂಚಿಸಿದರು. ಸ್ವಾಮಿಗಳವರು ಹರ್ಷಚಿತ್ತರಾಗಿ, ಸಮಾಜದವರ ಸ್ತುತ್ಯ ಕಾರ್ಯಕ್ಕೆ ಶುಭಾಶೀರ್ವಾದಗಳನ್ನಿತ್ತರು. ಮಂದನಾರ್ಪಣೆ ಫಲಮಂತ್ರಾಕ್ಷತೆವಿತರಣೆಗಳಾಗಿ ಸಮಾರಂಭ ಕೊನೆಗೊಂಡಿತು. ಅಂದು ಮಹಾಸಂತರ್ಪಣೆ, ರಾತ್ರಿ ಉತ್ಸವಗಳು ಯಶಸ್ವಿಯಾಗಿ ಜರಗಿದವು.

"ಚರಖಾ" ದ ಕರೆ—ಇದೇ ಬರುವ ಆಗಸ್ಟ್ ೧೯೫೫ ರಂದು ಉಡುಪಿಯಿಂದ ಪ್ರಕಟವಾಗುತ್ತಿರುವ "ಚರಖಾ" ತನ್ನ ಎಂಟನೇ ವರ್ಷವನ್ನು ಸಡಗರದಿಂದ ಆಚರಿಸಲು ನಿಶ್ಚೈಸಿದೆ. ಸುಮಾರು ೩೦೦ ಪುಟಗಳ ಈ ಹೊತ್ತಿಗೆಯು ಕಲೆ, ಸಾಹಿತ್ಯ ಹಾಗೂ ಇನ್ನಿತರ ವೈವಿಧ್ಯತೆಗಳಲ್ಲಿ ತನ್ನದೇ ಆದ ವೈಶಿಷ್ಟ್ಯದಿಂದ ಬೆಳಗಲು ಯೋಚಿಸಿದೆ. ಅದಕ್ಕಾಗಿ ಕನ್ನಡದ ಹಿರಿಕಿರಿಯ ಬರಹಗಾರರು, ಚಿತ್ರಕಾರರು ತಮ್ಮ ಲೇಖನ, ಚಿತ್ರಗಳನ್ನು ಕಳುಹಿಸಿಕೊಡಬೇಕೆಂದೂ ಈ ಹಸ್ತಾಕ್ಷರ ಕಲಾಕೃತಿಯನ್ನು ನಾಡಿನ ಪ್ರಮುಖ ಪ್ರದರ್ಶನಗಳಲ್ಲಿ ಪ್ರದರ್ಶಿಸಲಾಗುವದೆಂದೂ "ಚರಖಾ" ಹಸ್ತಲಿಖಿತ ಪತ್ರಿಕೆಯ ಸಂಪಾದಕರು ತಿಳಿಸುತ್ತಾರೆ. ಲೇಖನಾದಿಗಳನ್ನು—ಸಂಪಾದಕರು, "ಚರಖಾ" ಹಸ್ತಲಿಖಿತ ಪತ್ರಿಕೆ, ಕೋರ್ಟು ರಸ್ತೆ, ಉಡುಪಿ, ದ. ಭಾರತ. ಈ ವಿಳಾಸಕ್ಕೆ ಕಳುಹಿಸಬೇಕಾಗಿದೆ.

ವಿದಾಯ ಸತ್ಕಾರ—ಉಡುಪಿ ನಗರ ಸಭೆಯ ಕಮಿಶನರ್ ಶ್ರೀ ಕೆ. ಗೋಪಾಲ ಮೆನೊನ್ ಅವರು ವರ್ಗವಾಗಿ ಹೋಗಲಿರುವುದರಿಂದಲೂ, ನಗರ ಸಭೆಯ ಮೆನೇಜರ್ ಶ್ರೀ ಆರ್. ಎ. ಕಾಮತರು ಕೆಲಸದಿಂದ ನಿವೃತ್ತಿ ಹೊಂದಲಿರುವುದರಿಂದಲೂ ಅವರೀರ್ವರನ್ನು ಮುನ್ಸಿಪಲ್ ನೌಕರರು ಇದೇ ತಾ 4 ರಲ್ಲಿ ಉಪಹಾರ ಸತ್ಕಾರವಿತ್ತು ಗೌರವಿಸಿದರು. ನಿವೃತ್ತ ಹೆಲ್ತ್ ಆಫೀಸರ್ ಡಾ! ಕೆ. ರಾಮಚಂದ್ರರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಾನ್ಯ ಅತಿಥಿಗಳ ಕುರಿತು ಹಲವರ ಭಾಷಣಗಳಾದ ನಂತರ ನಗರ ಸಭಾ ಮೆನೇಜರ್ ಶ್ರೀ ಸುಬ್ಬಣ್ಣ ಭಟ್ಟರು ಧನ್ಯವಾದಗಳನ್ನರ್ಪಿಸಿದರು. ಶ್ರೀ ಮೆನೊನ್ನರ ಸ್ಥಾನದಲ್ಲಿ ಕಮಿಶನರಾಗಿ ಶ್ರೀ ಉನ್ನಿ ಕೃಷ್ಣ ಮಂಬೀಶನ್‌ರವರು ನೇಮಕ ಹೊಂದಿರುವರು.

ಸಂಸ್ಥಾಪಕರ ದಿನಾಚರಣೆ—ಸ್ಥಳೀಯ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯ ಸಂಸ್ಥಾಪಕರ ದಿನಾಚರಣೆಯು ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ತಾ 30 ರಂದು ನೆರವೇರಿತು. ಸಂಸ್ಥಾಪಕರಾದ ಡಾ! ಟಿ. ಎಂ. ಎ. ಪೈಗಳ ಕಾರ್ಯ ಪ್ರವೀಣತೆ, ಜಾಣ್ಮೆ ಮೊದಲಾದವುಗಳನ್ನು ಕುರಿತು ಶ್ರೀಗಳಾದ ಶ್ರೀಪತಿ ಆಚಾರ್, ಎ. ಜಿ. ಅಕ್ಕಿ, ಆರ್. ಫೆರ್ನಾಂಡಿಸ್, ಪ್ರಿನ್ಸಿಪಾಲ್ ಎಚ್. ಸುಂದರರಾವ್, ಡಾ! ಸಿ. ಆರ್. ನಾಯಕ್ ಇವರು ಭಾಷಣವಿತ್ತರು. ಡಾ! ಟಿ. ಎಂ. ಎ. ಪೈಗಳು ತಮ್ಮ ಕಾರ್ಯಗಳ ಯಶಸ್ಸಿಗೆ ಜನಸಹಾಯವೇ ಕಾರಣವೆಂದರು. ಅಧ್ಯಕ್ಷರು ಸಂಸ್ಥಾಪಕರ ನಿಷ್ಕಲ ಧ್ಯೇಯವನ್ನು ಕೊಂಡಾಡಿ, ವಿಮಾ ಕಂಪೆನಿಯು ವಸತಿಗೃಹ ನಿರ್ಮಾಣ, ನಿರುದ್ಯೋಗಿಗಳಿಗೆ ತಾತ್ಕಾಲಿಕ ಜೀವನ ವ್ಯವಸ್ಥೆ ಕೈಗೊಳ್ಳಬಹುದೆಂದು ಸೂಚಿಸಿದರು. ಡೈರೆಕ್ಟರ್ ಡಾ! ಕೆ. ಎಲ್. ಬಲ್ಲಾಳರು ಆಭಾರ ಮನ್ನಿಸಿದರು.

ಉಪಾಹಾರ—ಸಾರ್ವಜನಿಕ ಕೆಲಸಾಸಕ್ತರಾದ ಡಾ! ಕೆ. ಎಲ್. ಬಲ್ಲಾಳರು ಶ್ರೀ ಸೋದೆ ಮಠದಲ್ಲಿ ತಾ. 4ರಲ್ಲಿ ಜರಗಿದ ತಮ್ಮ ಪುತ್ರ ಬಿ. ಮಾಧವ ಬಲ್ಲಾಳರ ಬ್ರಹ್ಮೋಪದೇಶದ ಪರವಾಗಿ ಮರುದಿನ ತಮ್ಮ ಹರಿನಿವಾಸ'ದಲ್ಲಿ ಆಪ್ತ ಮಹನೀಯರನೇಕರಿಗೆ ಉಪಾಹಾರ ಕೂಟವೊಂದನ್ನು ಏರ್ಪಡಿಸಿದ್ದರು.

ಅಂತೆಯೇ ಹನುಮಾನ್ ಟ್ರಾನ್ಸ್‌ಪೋರ್ಟಿನ ಡೈರೆಕ್ಟರ್ ಶ್ರೀ ಕೆ. ಅನಂತ ಸೆಟ್ಟರು ತಮ್ಮ ಪುತ್ರ ಡಾ| ವಿ. ಬಾಲಕೃಷ್ಣ ಹೆಗ್ಡೆಯವರ ವಿವಾಹದ ಸಂಬಂಧ ತಾ 6 ರಲ್ಲಿ ತಮ್ಮ "ಸೀಮ್ಸ್" ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು.

ಮಹಾರಾಷ್ಟ್ರ ಎಪೆಕ್ಸ್ ಬ್ಯಾಂಕ್ ಲಿಮಿಟೆಡ್‌ನ ಮಹಾಸಭೆ-ಯು ಇದೇ ತಾ 8 ರಂದು ಶ್ರೀ ಯು. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ನಿಶ್ಚಿತ ವ್ಯವಹಾರಗಳು ನೆರವೇರಿದ ಮೇಲೆ, ಅಧ್ಯಕ್ಷರು ಪಾಲು ಭಂಡವಾಳವನ್ನು ಇಳಿಸಿ, ಬ್ಯಾಂಕಿಂಗ್ ವ್ಯವಹಾರವನ್ನು ನಿಲ್ಲಿಸಿ ಮುಂದೇನುಮಾಡುವುದೆಂಬುದನ್ನು ಸೂಚಿಸಿದರು. ಶ್ರೀ ಟಿ. ಎ ಪೈಗಳು ನವೀನ ಉದ್ಯಮವನ್ನು ಕೈಗೊಳ್ಳುವುದೊಳ್ಳೆಯದೆಂದರು. ಡಾ! ಟಿ. ಎಂ. ಎ. ಪೈಗಳು ಜಿಲ್ಲೆಯ ಆವಶ್ಯಕತೆಯಾದ ನೂಲು ತಯಾರಿಕೆಯ ಕಾರ್ಖಾನೆ ತೆರೆಯುವುದು ಉಚಿತವೆಂದರು. ಸದಸ್ಯರೂ ಈ ಸೂಚನೆಯನ್ನು ಸ್ವಾಗತಿಸಿದರು. ಸಂಬಂಧಪಟ್ಟವರು ಈ ಕುರಿತು ತಕ್ಕ ಕಾರ್ಯಕ್ರಮ ಕೈಗೊಳ್ಳುವರೆಂದು ನಿರೀಕ್ಷಿಸಲಾಗಿದೆ.

ಪುತ್ತೂರಿನಲ್ಲಿ ಜಿಲ್ಲಾ ರಾಜಕೀಯ ಪರಿಷತ್ತಿನ ಪೂರ್ವ ಸಿದ್ಧತೆ—ದ. ಕ ಜಿಲ್ಲಾ ರಾಜಕೀಯ ಪರಿಷತ್ತು ಇದೇ ತಾ 28 ಮತ್ತು 29 ರಲ್ಲಿ ಪುತ್ತೂರಿನಲ್ಲಿ ಜರಗಲಿರುವುದು. ತತ್ಸಂಬಂಧ ಸ್ವಾಗತ ಕಮಿಟಿಯೊಂದು ರಚಿಸಲ್ಪಟ್ಟಿತ್ತು ಶ್ರೀ ಕೆ. ವೇಣುಗೋಪಾಲ ನಾಯರ್, ಅಧ್ಯಕ್ಷ; ಶ್ರೀಮತಿ ವಿ. ಕಮಲಾ ಬಾಯಿ, ಶ್ರೀಗಳಾದ, ಬಿ. ರಾಮಚಂದ್ರ ರಾವ್, ಎಂ. ರಾಮಕೃಷ್ಣ ರಾವ್, ಕೆ. ವೆಂಕಟ್ರಮಣ ಗೌಡ, ಎಂ. ಎಲ್. ಎ, ಉಪಾಧ್ಯಕ್ಷರು, ವಿ ಭೀಮ ಭಟ್ಟ, ಕೋಶಾಧಿಕಾರಿ; ವೈ. ಸಂಜೀವ ಶೆಣೈ, ಮತ್ತು ವಿ. ವಿಟ್ಠಲದಾಸ ಶೆಟ್ಟಿ, ಜತೆಕಾರ್ಯದರ್ಶಿಗಳು; ಕೆ. ರಾಮ ಕುಡ್ವ ಮತ್ತು ವಿ. ಅನಂತ ಉಪಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವರು.

ಪರಿಷತ್ತಿನ ವೆಚ್ಚವು ಸುಮಾರು ಹತ್ತು ಸಾವಿರ ರೂಪಾಯಿಗಳಾಗಬಹುದೆಂಬ ಅಂದಾಜು ಮಾಡಲಾಗಿದ್ದು ಆ ಬಗ್ಗೆ ಜನತೆಯ ಸಹಾಯ ಸಹಕಾರಗಳನ್ನು ನಿರೀಕ್ಷಿಸಲಾಗಿದೆ. ಪರಿಷತ್ತನ್ನು ಉದ್ಘಾಟಿಸಲು ಕೇಂದ್ರಸರಕಾರದ ಯೋಜನಾ ಖಾತೆಯ ಮಂತ್ರಿಗಳೂ, ಕೇಂದ್ರ ಯೋಜನಾಸಮಿತಿಯ ಅಧ್ಯಕ್ಷರೂ ಆದ ಮಾನ್ಯ ಶ್ರೀ ಗುಲ್ಜಾರಿಲಾಲ ನಂದಾರವನ್ನು ಕೇಳಿಕೊಳ್ಳಲಾಗಿದೆ. ಪರಿಷತ್ತಿನ ಅಧ್ಯಕ್ಷತೆಯನ್ನು ವಹಿಸಲು ಮೈಸೂರಿನ ಮುಖ್ಯಮಂತ್ರಿ ಮಾನ್ಯ ಶ್ರೀ ಕೆ. ಹನುಮಂತಯ್ಯನವರನ್ನು ಕೇಳಿಕೊಳ್ಳಲಾಗಿದೆ. ಇದೇ ಪರಿಷತ್ತಿನ ಅಂಗವಾಗಿ ಜಿಲ್ಲಾ ಯುವಕ ಕಾಂಗ್ರೆಸಿನ ಅಧಿವೇಶನವು ಶ್ರೀ ಟಿ. ಎ. ಪೈ, ಎಂ. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಕೊಡಗಿನ ಮುಖ್ಯಮಂತ್ರಿಗಳಾದ ಮಾನ್ಯ ಸಿ. ಎಮ್. ಪೂಣಚ್ಚ ಅವರಿಂದ ಉದ್ಘಾಟಿಸಲ್ಪಡುವುದು. ಜಿಲ್ಲಾ ಮಹಿಳಾ ಅಧಿವೇಶನವನ್ನು ಮೈಸೂರಿನ ಶ್ರೀಮತಿ ಡಾ! ಸಾವಿತ್ರಿ ಬ್ಯಾ ನಾಗಣ್ಣ ಗೌಡರು ಉದ್ಘಾಟಿಸಲಿರುವರು. ದ. ಕ. ಜಿಲ್ಲಾ ಬೋರ್ಡು ಸದಸ್ಯ ಶ್ರೀಮತಿ ಉಮಾ ನಿ. ಕಾಮತರು ಅಧ್ಯಕ್ಷತೆ ವಹಿಸುವರು. ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚೆನ್ನಬಸಪ್ಪ ಅಂಬಲಿಯವರೂ ಪರಿಷತ್ ಕಾರ್ಯಗಳಲ್ಲಿ ಭಾಗವಹಿಸಲಿರುವರು.

ಮೇಳ— ಡಾ! ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಸಂಜೀವ ರಾಯರು ತಾ. 3ರಂದು ಪ್ರಾದೇಶಿಕ ಪಾಠಶಾಲೆಯೊಂದನ್ನು ಉದ್ಘಾಟಿಸಿದರು. ಶ್ರೀಗಳಾದ ಎನ್. ಕೆ. ಕುಡ್ವ, ಟಿ. ರಮೇಶ ಪೈ, ಎ. ಜಿ. ಅಕ್ಕಿ, ಮೊದಲಾದವರು ಭಾಷಣ ಮಾಡಿದರು.

ನೋಟೀಸು

ದ. ಕ. ಜಿಲ್ಲಾ ಬಂಟರಯಾನೆ ನಾಡವರ ವಿದ್ಯಾವರ್ಧಕ ಸಂಘ, (ರಿಜಿಸ್ಟರ್ಡ್)

ಈ ಸಂಘದ ಆಡಳಿತೆಗೆ ಒಳಪಟ್ಟ ಎಲಿಮೆಂಟ್ರಿ, ಹಾಯರ್ ಎಲಿಮೆಂಟ್ರಿ ಮತ್ತು ಹಾಸ್ಟೆಲ್‌ಗಳ ಸರಿಯಾದ ಅಭಿವೃದ್ಧಿ ವ್ಯವಸ್ಥೆಗೆ ತಕ್ಕ ಏರ್ಪಾಡು ಅತೀ ಶೀಘ್ರದಲ್ಲಿ ಮಾಡುವ ಅಗತ್ಯವಿರುವುದರಿಂದ ಇದೇ ತಾರೀಕು 25—5—1955ನೇ ಬುಧವಾರ ದಿನ ಉಡುಪಿ ವಕೀಲ್ ಶ್ರೀ ಕೆ. ಜಿ. ಬಲ್ಲಾಳ್ B. A. L. L. B. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಶಿರ್ವ ಹಿಂದೂ ಹಾಯರ್ ಎಲಿಮೆಂಟ್ರಿ ಶಾಲಾ ವಿದ್ಯಾಮಂದಿರದಲ್ಲಿ ಅಪರಾಹ್ನ ಘಂಟೆ 3ಕ್ಕೆ ಜರಗಲಿರುವ ವಿಶೇಷ ಮಹಾಸಭೆಗೆ ಸಂಘದ ಎಲ್ಲಾ ಮೆಂಬರರು ತಪ್ಪದೆ ಬರಬೇಕಾಗಿ ವಿನಂತಿ—

ಕಾರ್ಯಕ್ರಮ

1. ಎಲಿಮೆಂಟರಿ ಮತ್ತು ಹಾಯರ್ ಎಲಿಮೆಂಟರಿ ಶಾಲೆಗಳ ಮುಂದುವರಿಕೆಯನ್ನು ತಾ. 31—5—55ಕ್ಕೆ ಕೊನೆಗೊಳಿಸುವ ಬಗ್ಗೆ D. E. O. ರವರಿಗೆ ತಿಳಿಸುವ ಬಗ್ಗೆ ... ಪ್ರಸ್ತಾಪ ... 3 ... ಸಂಘದ ... ಅಧ್ಯಕ್ಷರ ಸೂಚನೆ ... 55—56 ನೇ ಇಸವಿಗೆ ... ಮಂಡಳಿಯ ಚುನಾವಣೆ.— ಇತ್ಯಾದಿ.

Shirva Duggappa Hegde.

B Chandrahasa Hegde.

ಸಂಘದ ಮೆಂಬರರು—

ಶಿರ್ವ ತಾ. 10. 5. 55

ಹೈಸ್ಕೂಲುಗಳಿಗೆ—

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

(Vide Page 7 of Fort St. George Gazette Part I B Dated 4—5—55

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಹೊಸ ಪೋಸ್ಟಲ್ ಸುಪರಿಂಟೆಂಡೆಂಟರು:— ಶ್ರೀ ವಿ. ಪಿ. ನಾಯರ್ ಬಿ. ಎ., ಇವರನ್ನು ಇದೇ ತಾ ೧೦ರ ದ. ಕ. ಜಿಲ್ಲೆಯ ಪೋಸ್ಟಲ್ ಸುಪರಿಂಟೆಂಡೆಂಟರಾಗಿ ನೇಮಿಸಲಾಗಿದೆ. ಮೊದಲಿನ ಸುಪರಿಂಟೆಂಡೆಂಟ್ ಶ್ರೀ ಎ. ಕೆ ನರಸಿಂಗರಾಯರು ಶಹರಾನಪುರದ ತರಬೇತಿ ಕೇಂದ್ರಕ್ಕೆ ಪ್ರಿನ್ಸಿಪಾಲರಾಗಿ ವರ್ಗಾಯಿಸಲ್ಪಟ್ಟಿರುವರು.

ಮೇ ದಿನಾಚರಣೆಯು— ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲಿನ ವತಿಯಿಂದ ಶ್ರೀ ಎ ಶಾಂತಾರಾಮರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಪೋನಪ್ಪ ಸೆಟ್ಟರು ಸ್ವಾಗತ ಭಾಷಣಮಾಡಿದರು. ಡಾ। ಎಂ. ಸಿ. ಶಾಸ್ತ್ರಿ, ಡಾ. ಸುಬ್ಬರಾವ್, ಶ್ರೀಗಳಾದ ಬಿ. ಎನ್. ಅಡಿಯೋಡಿ, ಸಂಜೀವ ರೈ, ಕೊರಗಪ್ಪ ರೈ, ಯು ಪಿ ಡಿ' ಸೋಜ, ಕೃಷ್ಣಪ್ಪ ಸೆಟ್ಟಿ ಮೊದಲಾದವರು ಭಾಷಣಮಾಡಿದರು

ಪ್ರಜಾ ಸೋಶಲಿಸ್ಟ್ ಪಕ್ಷದ ಕಡೆಯಿಂದಲೂ ಮೇ ದಿನಾಚರಣೆಯು ಸಾರ್ವಜನಿಕ ಸಭಾದಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ಪೋಸ್ಟಲ್ ಡಿಪಾರ್ಟ್‌ಮೆಂಟಿನ ನೌಕರರು ಶ್ರೀ ಡಿ. ಪೋಪನ ರಾಯರ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆಯನ್ನು ಹಲವರ ಭಾಷಣಗಳೊಂದಿಗೆ ಜರಗಿಸಿದರು.

ವಾರ್ಷಿಕೋತ್ಸವ:— ಕದ್ರಿ ಶ್ರೀ ಮಂಜುನಾಥ ಕೃಪಾಪೋಷಿತ ಯಕ್ಷಗಾನ ಕಲಾವರ್ಧಕ ಸಂಘದ ವಾರ್ಷಿಕ ದಿನಾಚರಣೆಯು ಶ್ರೀ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಪಂಡಿತ ನಿಡ್ಡೋಡಿ ಅನಂತ ಉಪಾಧ್ಯಾಯರ ನಿಧನ:— ಸುಪ್ರಸಿದ್ಧ ವಾಗ್ಮಿಗಳೂ, ವಿದ್ವಾಂಸರೂ, ಸಂಸ್ಕೃತ ಪಂಡಿತರೂ, ವೈದಿಕ ವಿದ್ಯಾಪಾರಂಗತರೂ, ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಹಲವು ವರ್ಷಗಳವರೆಗೆ ಕೆಲಸಮಾಡಿ ಹತ್ತು ಹನ್ನೆರಡು ವರ್ಷಗಳಿಂದೆ ನಿವೃತ್ತರಾಗಿದ್ದ ಶ್ರೀ ನಿಡ್ಡೋಡಿ ಅನಂತ ಉಪಾಧ್ಯಾಯರು ಇದೇ ತಾ. ೬ರಲ್ಲಿ ಮೃತರಾದುದು ವಿಷಾದಕರವಿದೆ ದಿವಂಗತರು ಸುಮಾರು 4 ವರ್ಷಗಳಿಂದ ವಾತಬಾಧೆಗೊಳಗಾಗಿದ್ದರೆಂದು ತಿಳಿದುಬರುತ್ತದೆ.

ಹರಿಜನ ದಿನಾಚರಣೆಯು – ಕೊಡಿಯಾಲಬೈಲ್ ಕನಕದಾಸ ವಿದ್ಯಾರ್ಥಿನಿ ಭವನದಲ್ಲಿ ಅತ್ತಾವರ ಮತ್ತು ಬೋಳೂರು ಗವರ್ನ್‌ಮೆಂಟ್ ವೆಲ್ ಫೇರ್ ಶಾಲೆಗಳ ವಾರ್ಷಿಕೋತ್ಸವದೊಂದಿಗೆ ಜಿಲ್ಲಾ ಸಹಾಯಕ ಕಲೆಕ್ಟರ್ ಶ್ರೀ ಎಸ್. ನೃಪಭದಾಸ ಎಂ ಎ ಬಿ ಎಲ್. ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನೆರವೇರಿತು

ಮೂಡಬಿದ್ರಿ – ಇದೇ ತಾ ೫ರಲ್ಲು ಶ್ರೀ ಇರಾ ಸೋಮನಾಥೇಶ್ವರ ಯಕ್ಷಗಾನ ನಾಟಕ ಸಭೆಯವರು ಶ್ರೀ ಕೆ. ಪಿ ವೆಂಕಪ್ಪ ಸೆಟ್ಟರ ಸಾಹಸ ಭೀಮ ವಿಜಯ ಪ್ರಸಂಗವನ್ನು ಅಭಿನಯಿಸಿದರು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ತಾ ೪ರಂದು ಭಾಗವತ ಕೆ. ಪಿ. ವೆಂಕಪ್ಪ ಸೆಟ್ಟಿಗೆ ಅಲ್ಲಿನ ಕಲಾಭಿಮಾನಿಗಳು ಮಾನ ಪತ್ರಪ್ರದಾನ ಮಾಡಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಕವಿ ಮೋಹನರು ಯಶೋಧರ ಚರಿತೆ ಎಂಬ ಯಕ್ಷಗಾನ ನಾಟಕವನ್ನು ಉದ್ಘಾಟಿಸಿದರು. ಶ್ರೀಗಳಾದ ಕೈಯ್ಯಾರ ಕಿಞ್ಞಣ್ಣ ರೈ, ಟಿ ರಘುಚಂದ್ರ ಸೆಟ್ಟಿ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು ರೂ ೨೦೦/– ಬೆಲೆ ಬಾಳುವ ಒಂದು ಚಿನ್ನದ ಪದಕವನ್ನು ಶ್ರೀ ಕೆ ಪಿ. ವೆಂಕಪ್ಪ ಸೆಟ್ಟರಿಗೆ ಕೊಟ್ಟು ಸನ್ಮಾನಿಸಲಾಯಿತು.

"ಯಶೋಧರ ಚರಿತೆ" ಯಕ್ಷಗಾನ ನಾಟಕಾಂತ್ಯದಲ್ಲಿ ಶ್ರೀ ಬಿ ಜಿನರಾಜ ಹೆಗ್ಗಡೆಯವರು ತಮ್ಮ ಚಿನ್ನದ ರಿಸ್ಟ್‌ವಾಚನ್ನು ಯಶೋಧರನ ಪಾತ್ರ ವಹಿಸಿದ ಶ್ರೀ ಸುಬ್ಬಯ್ಯ ಸೆಟ್ಟರಿಗೆ ಪಾರಿತೋಷಕವಿತ್ತರು.

ಬಂಟಕಲ್ಲು — ಇದೇ ತಾ. ೬ರಲ್ಲು ಶ್ರೀ ದುರ್ಗಾಪರಮೇಶ್ವರಿ ಶಾಲೆಯ ವರ್ಧಂತಿಯು ಶ್ರೀ ಹರ್ಷ ಪೈಕ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಪಡುಕರ್ಣಾಡು:— ಮಣಿಪಾಲದಿಂದ ವರ್ಗವಾಗಿ ಹೋಗುವ ಪೋಸ್ಟ್‌ಮಾಸ್ತರ್ ಬಿ. ಆರ್. ಜೋಶಿಯವರನ್ನೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬಂದ ಡಾ। ಬಿ. ಬಾಲಕೃಷ್ಣ ಹೆಗ್ಡೆ ಎಂ. ಬಿ ಬಿ. ಎಸ್. ಇವರನ್ನೂ ಸತ್ಕರಿಸುವ ಬಗ್ಗೆ ಇದೇ ತಾ. ೮ರಲ್ಲಿ ಡಾ. ಗಿರಿಧರ ರಾವ್, ಬಿ. ಮಾಧವ ಹೆಗ್ಡೆ, ಕೆ. ಆನಂದ ಸೆಟ್ಟಿ ಮೊದಲಾದವರು ಶ್ರೀ ಬಿ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಂತೋಷ ಕೂಟವೊಂದನ್ನು ಏರ್ಪಡಿಸಿದ್ದರು. ಶ್ರೀ ಕೆ. ಆನಂದ ಸೆಟ್ಟಿ, ರಾಜೀವ ಕೋಟ್ಯಾನ್ ಮೊದಲಾದವರು ಭಾಷಣ ಮಾಡಿದರು.

ಕೋಟ:— ಕೋಟ ವಿದ್ಯಾಸಂಘದ ಸಹಾಯಾರ್ಥವಾಗಿ ಇದೇ ತಾ. ೮ರಲ್ಲು ಶ್ರೀ ಎಸ್. ಎಸ್. ಕೊಳ್ಕೆಬೈಲ್ ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ಕುಂದಾಪುರದ ಕರ್ನಾಟಕ ಕಲಾ ಸಂಘದವರು ಭೌಮಾಸುರ ವಧೆ ಮತ್ತು ಸತ್ಯಹರಿಶ್ಚಂದ್ರವೆಂಬ ನಾಟಕಗಳನ್ನು ಅಭಿನಯಿಸಿದರು.

ಬ್ರಹ್ಮಾವರ— ಇದೇ ತಾ. 16 ಮತ್ತು 17—5—55ರಂದು ಜಿಲ್ಲಾ ರಾಜಕೀಯ ಮತ್ತು ಕಿಸಾನ್ ಪರಿಷತ್ತುಗಳೊಂದಿಗೆ ಕರ್ನಾಟಕ ಪ್ರ ಸೋ. ಪಕ್ಷದ ಕಾರ್ಯಕರ್ತರ ಪರಿಷತ್ತನ್ನು ಬ್ರಹ್ಮಾವರದಲ್ಲಿ ಜರಗಿಸುವುದೆಂತ ನಿಶ್ಚೈಸಲಾಗಿದೆ. ಭಾರತ ಪ್ರಜಾ ಸೋಶಲಿಸ್ಟ್ ಪಕ್ಷದ ಜತೆಕಾರ್ಯದರ್ಶಿ ಶ್ರೀ ಎಂ. ಆರ್. ದಂಡವತೆ ಇವರು ಈ ಸಮ್ಮೇಲನವನ್ನೂ ಜಿಲ್ಲಾ ಕಿಸಾನ್ ಸಮ್ಮೇಳನವನ್ನು ಮೈಸೂರಿನ ಶ್ರೀ ಗೋಪಾಲ ಗೌಡರೂ ಉದ್ಘಾಟಿಸುವರು ಜಿಲ್ಲಾ ರಾಜಕೀಯ ಪರಿಷತ್ತನ್ನು ತಿರುವಾಂಕೂರು–ಕೊಚ್ಚಿ ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಪಟ್ಟಂತಾನು ಪಿಳ್ಳೆಯವರು ಉದ್ಘಾಟಿಸುವರು. ಕರ್ನಾಟಕದ ಎಲ್ಲಾ ಕಾರ್ಯಕರ್ತರು ಈ ಸಮ್ಮೇಳನದಲ್ಲಿ ಭಾಗವಹಿಸಿ, ಅದು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ವಿನಂತಿ ಎಂದು ಪಿ. ಶ್ರೀನಿವಾಸ ಶೆಟ್ಟಿ, ಅಧ್ಯಕ್ಷ, ಸ್ವಾಗತ ಸಮಿತಿ. ಕೆ. ಆರ್. ಕಾರಂತ ಅಧ್ಯಕ್ಷ, ದ ಕ. ಜಿಲ್ಲಾ ಪ್ರ. ಸೋ ಪಕ್ಷ. ಇವರು ವಿನಂತಿಸುತ್ತಾರೆ.

ಕುಂದಾಪುರ— ಬೋರ್ಡ್ ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘದ 1955ನೇ ಇಸವಿಯ ಹಬ್ಬವು ಇದೇ ಎಪ್ರಿಲ್ ದಿನಾಂಕ29, 30 ಮತ್ತು ಮೇ 1ರಲ್ಲು ವಿಜೃಂಭಣೆಯಿಂದ ಜರಗಿತು. ಹಬ್ಬದ ಅಂಗವಾದ 'ಕಲೆ–ವೃತ್ತಿ–ಕೈಗಾರಿಕೆ' ಪ್ರದರ್ಶನವನ್ನು ತಾ. 29—1—55ರಂದು ಬೆಳಿಗ್ಗೆ ಕುಂದಾಪುರದ ಮುನ್ಸಿಫ್ ಶ್ರೀ ಎಚ್. ಎಲ್ ಸಾಲಿಯಾನ್, ಬಿ. ಎ; ಬಿ. ಎಲ್ ಇವರು ಉದ್ಘಾಟಿಸಿದರು ಅದೇ ಸಂದರ್ಭದಲ್ಲಿ ಪ್ರದರ್ಶನ ರಂಗದಲ್ಲಿ ರಾಷ್ಟ್ರಧ್ವಜಾರೋಹಣವನ್ನು ಶ್ರೀ ಎ ನರಸಿಂಹಯ್ಯ ಎಂ ಎ ಎಲ್. ಟಿ ಕುಂದಾಪುರ ರೇಂಜಿನ ಶಾಲೆಗಳ ಪರೀಕ್ಷಾಧಿಕಾರಿ ಇವರು ನೆರವೇರಿಸಿದರು. ತಾ 29—1—55 ರ ರಾತ್ರಿ ಮಹಿಳೆಯರಿಂದ 'ರಾಜಾಗೋಪಿಚಂದ' ನಾಟಕವು ಅತ್ಯುತ್ತಮವಾಗಿ ಪ್ರದರ್ಶಿಸಲ್ಪಟ್ಟಿತು ತಾ. ೩೦ 4.55 ರ ರಾತ್ರಿ ಹಳೆವಿದ್ಯಾರ್ಥಿ ವಿದ್ಯಾವಂತರಿಂದ ಯಕ್ಷಗಾನ ಜೋಡಾಟವು ನುರಿತ ಕಲಾವಿದರ ಮಟ್ಟಕ್ಕೆ ಕಡಿಮೆ ಇಲ್ಲದ ರೀತಿಯಲ್ಲಿ ಹೃದಯಂಗಮವಾಗಿ ಪ್ರದರ್ಶಿಸಲಟ್ಟಿತು. ತಾ. 1—5—55ರಂದು ಸಂಜೆ ಡಾ ಟಿ ಎಂ. ಎ. ಪೈ ಗಳವರ ಅಗ್ರಸ್ಥಾನದಲ್ಲಿ ಸಾರ್ವಜನಿಕ ಸಭೆ ಜರಗಿ ಸಂಘದ ಉಪಾಧ್ಯಕ್ಷ ಶ್ರೀ ಎನ್. ಎಸ್ ಪರಮೇಶ್ವರಯ್ಯನವರು ಸ್ವಾಗತ ಭಾಷಣಮಾಡಿದ ಮೇಲೆ ಕಾರ್ಯದರ್ಶಿ ಶ್ರೀ ಎಮ್. ಎಮ್. ಹೆಗ್ಡೆಯವರು ವರದಿ ವಾಚನ ಮಾಡಿದರು. ಆ ಮೇಲೆ ಶ್ರೀ ಕೋಟ ಶಿವರಾಮ ಕಾರಂತರು ಸಂಘದ ಸ್ವಸ್ತಿವಾಚನ ಮಾಡಿದರು ಅಧ್ಯಕ್ಷರ ವಿಚಾರಪೂರಿತ ಭಾಷಣದ ತರುವಾಯ, ಸಂಘದ ಅಧ್ಯಕ್ಷ ಶ್ರೀ ಯಡ್ತರೆ ಮಂಜಯ್ಯ ಸೆಟ್ಟಿ, ಎಂ. ಎಲ್. ಎ. ಇವರು ಆಭಾರಮನ್ನಿಸಿದರು. ರಾತ್ರಿ ವಿದ್ಯುದ್ದೀಪಾಲಂಕೃತವಾದ ಶಾಲಾವರಾಂಡದಲ್ಲಿ ಸದಸ್ಯರಿಗೂ ಆಮಂತ್ರಿತರಿಗೂ ಭೋಜನವಿದ್ದಿತ್ತು. ರಾತ್ರಿ 9ಘಂಟೆಗೆ ಸರಿಯಾಗಿ ಹಳೆವಿದ್ಯಾರ್ಥಿಗಳಿಂದ 'ಕುಂಕುಮ' ವೆಂಬ ಸಾಮಾಜಿಕ ನಾಟಕವು ಹೃದಯಂಗಮವಾಗಿ ಪ್ರದರ್ಶಿಸಲ್ಪಟ್ಟಿತು. ಕಾರ್ಯದರ್ಶಿ ಎಂ. ಎಂ. ಹೆಗ್ಡೆಯವರಿಂದ ಧನ್ಯವಾದ ಸಮರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಮೂರುದಿನಗಳ ಕಾರ್ಯಕ್ರಮ ಮುಕ್ತಾಯ ಗೊಂಡಿತು

ವೀರಶೈವ ಸಜ್ಜನ ಮಹಾಸಭೆಯ ಅಧಿವೇಶನ, ಹುಬ್ಬಳ್ಳಿ.

ಹುಬ್ಬಳ್ಳಿಯಲ್ಲಿ ಕೂಡುವ ಈ ಐದನೆಯ ಅಧಿವೇಶನವನ್ನು ಸ್ವಾಗತ ಸಮಿತಿಯು ತಾ. ೧೫–೫–೧೯೫೫ನೇ ರವಿವಾರ ಮಧ್ಯಾಹ್ನ ೩ ಗಂಟೆಗೆ ಹುಬ್ಬಳ್ಳಿಯ ಶ್ರೀ ಸಂಗಮೇಶ್ವರ ಆಯಿಲ ಮಿಲ್ಲಿನಲ್ಲಿ ಜರಗಿಸುವದಾಗಿ ನಿರ್ಣಯಿಸಿದೆ.

ಈ ಅಧಿವೇಶನಕ್ಕೆ ಶ್ರೀ ನಿರಂಜನ ಜಗದ್ಗುರು ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳು ಮೂರುಸಾವಿರಮಠ ಹುಬ್ಬಳ್ಳಿ ಇವರು ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ. ಹಾಗೂ ಶ್ರೀ ನಿರಂಜನ ಪ್ರಣವ ಸ್ವರೂಪಿಗಳಾದ ಬಸವಲಿಂಗ ಮಹಾಸ್ವಾಮಿಗಳು ಸವಿಲುಗುಂದ ಇವರು ಆಶೀರ್ವಾದಪರ ಭಾಷಣವನ್ನು ಮಾಡಲು ಒಪ್ಪಿಕೊಂಡಿದ್ದಾರೆ. ಶ್ರೀಮಾನ್ ಜಿ. ಭೂಷಣ್ಣ ಎಂ. ಎಲ್. ಎ. (ಆಂಧ್ರ) ಆದವಾನಿ ಇವರು ಅಧಿವೇಶನದ ಉದ್ಘಾಟನವನ್ನು ಜರುಗಿಸಲು ಒಪ್ಪಿಕೊಂಡಿದ್ದಾರೆ.

ನಮ್ಮ ಸಮಾಜದವರು ಮುಂಬಯಿ, ಮದ್ರಾಸ, ಆಂಧ್ರ, ಹೈದರಾಬಾದ, ಮೈಸೂರ ಮತ್ತು ಕೊಡಗು ರಾಜ್ಯಗಳಲ್ಲಿ ವಿಶೇಷವಾಗಿದ್ದು ಅವರು ಅಧಿವೇಶನಕ್ಕೆ ತಂಡ ತಂಡವಾಗಿ ಬಂದು ಪರಸ್ಪರ ಸಂಬಂಧವನ್ನು ಹೆಚ್ಚಾಗಿ ಬೆಳಿಸಬೇಕೆಂಬ ನಮ್ಮ ಉತ್ಕಟೇಚ್ಛೆಯನ್ನು ಪೂರ್ಣಗೊಳಿಸುವಿರೆಂದು ಬೇಡಿಕೊಳ್ಳುತ್ತೇವೆ.

ಹುಬ್ಬಳ್ಳಿಯ ರೇಲ್ವೆ ಸ್ಟೇಶನ ಮತ್ತು ಮೋಟರ ಸ್ಟ್ಯಾಂಡುಗಳಲ್ಲಿ ಸ್ವಯಂಸೇವಕರನ್ನು ಇಡಲಾಗುವದು. ಅಧಿವೇಶನಕ್ಕೆ ಬರುವ ಯಾವತ್ತೂ ಅತಿಥಿಗಳ ಸಲುವಾಗಿ ಊಟ ವಸತಿಗಳ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ.

ಜೈನ ಧರ್ಮದಲ್ಲಿ ಸಂಶೋಧನೆ ಬಗ್ಗೆ ರಾಷ್ಟ್ರಾಧ್ಯಕ್ಷರ ಕರೆ– ನವದೆಹಲಿಯಲ್ಲಿ ಕಳೆದ ದಿನಾಂಕ ೭ರಂದು ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರು ಮಹಾ ವೀರ ಜಯಂತ್ಯುತ್ಸವ ಕಾಲದಲ್ಲಿ ಮಾತನಾಡುತ್ತಾ ಜೈನ ಧರ್ಮದಲ್ಲಿ ಸಂಶೋಧನೆ ನಡೆಯುವ ಆವಶ್ಯಕತೆಯನ್ನು ಸೂಚಿಸಿರುವರು.

2551 ವರುಷಗಳ ಹಿಂದೆ ಮಹಾವೀರರು ಜನ್ಮ ತಾಳಿದ ಶಾಲಿಯಲ್ಲಿ ಜೈನಮತ ಮತ್ತ ಸಂಶೋಧನಾಲಯವೊಂದನ್ನು ತೆರೆಯುವ ಬಗ್ಗೆ ಬಿಹಾರ ಸರಕಾರವು ಐದು ಲಕ್ಷ ರೂಪಾಯಿಗಳ ಕಾಣಿಕೆ ನೀಡುವ ಆಶ್ವಾಸನಾ ಪತ್ರ ಕೂಡಾ ಬಂದಿರುವುದಾಗಿ ಅವರು ಹೇಳಿದರು.

ಭಾರತೀಯ ಜನಜೀವನದಲ್ಲಿ ಜೈನ ಧರ್ಮವು ತನ್ನ ವರ್ಚಸ್ಸನ್ನು ಸಾಕಷ್ಟು ಬೀರಿರುವುದಾದರೂ ಜನರಿಗೆ ಮಾತ್ರ ಜೈನ ಗ್ರಂಥಗಳ ಜ್ಞಾನೋದಯವಾಗಿಲ್ಲ ಕಳೆದ 25 ವರ್ಷಗಳಿಂದ ಬರೆಯಲ್ಪಟ್ಟ ಹಸ್ತಲಿಖಿತ ಜೈನ ಗ್ರಂಥಗಳು ಇನ್ನೂ ಪ್ರಕಾಶವನ್ನು ಕಂಡಿಲ್ಲ. ರಾಷ್ಟ್ರಾಧ್ಯಕ್ಷರು ಈಚೆಗೆ ರಾಜಸ್ಥಾನ ಪ್ರವಾಸ ಕೈಕೊಂಡಿದ್ದಾಗ ಜೈಸಲ್ಮೇರಿನಲ್ಲಿ ಸಾವಿರಾರು ಹಸ್ತಲಿಖಿತ ಜೈನ ಗ್ರಂಥಗಳು ನೆಲಮಾಳಿಗೆಗಳಲ್ಲಿರುವುದನ್ನು ನೋಡಿರುವರು. ಆ ಗ್ರಂಥಗಳನ್ನು ಪ್ರಚಾರಕ್ಕೆ ತಂದು ತನ್ಮೂಲಕ ಜೈನ ತತ್ವಪ್ರಚಾರವಾಗಬೇಕಾಗಿ ಡಾ। ಪ್ರಸಾದರ ಅಪೇಕ್ಷೆಯಿರುವುದು. ಬಿಹಾರ ಪ್ರದೇಶದ ವೈಶಾಲಿಯ ಆಸುಪಾಸಿನಲ್ಲಿ ಮಹಾವೀರರು ಹನ್ನೆರಡು ವರ್ಷ ತಪಸ್ಸು ಮಾಡಿದ ಸ್ಥಳಗಳನ್ನು ಪತ್ತೆಹಚ್ಚಿ, ಮಹಾವೀರರ ಜೀವನ ಚರಿತ್ರೆಯ ಸಂಶೋಧನೆಯೂ ಆಗ ಬೇಕಾಗಿ ರಾಷ್ಟ್ರಾಧ್ಯಕ್ಷರು ಸಲಹೆಗಳನ್ನಿತ್ತಿರುವರು.

ಭಾರತದ ಗುರುಕುಲ

(ಯಕ್ಷಗಾನ)

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಬೆಲೆ: ೧ ૮ ೦

ಕಲಾವಿದರಿಗೆ ಬಹುಮಾನ

ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ। ರಾಧಾಕೃಷ್ಣನ್ನರು ಸಂಗೀತ ನಾಟಕ ಅಕಾಡಮಿಯವರು ಈ ವರ್ಷ ಸನ್ಮಾನಿಸಿದ ಕಲಾಕ್ಷೇತ್ರದ ಅಷ್ಟದಿಗ್ಗಜರಿಗೆ ಬಹುಮಾನಗಳನ್ನು ಈಚೆಗೆ ನೀಡಿದರು. ಚಿತ್ರದಲ್ಲಿ ಶ್ರೀ ಗೋವಿಂದ ರಾವ್ ಬರ್ಹಾನಪುರ್‌ಕರರು ಪ್ರಶಸ್ತಿಪತ್ರ ಸ್ವೀಕರಿಸುತ್ತಿರುವುದನ್ನು ನೋಡಬಹುದು.

ನಡೆಯುವ ಚಿತ್ರ:— 'ಜಗನ್ಮೋಹಿನಿ'ಯ ಕನಸು ನಿಮಗೆ ಅಪೂರ್ವ ನೆನಪನ್ನು ತಂದಿಕ್ಕಿ ಅದನ್ನು ಮೆಲುಕು ಹಾಕುತ್ತಿರುವಾಗಲೇ ಇನ್ನೊಬ್ಬ ಸುಂದರಕನ್ಯೆ ಅವತರಿಸಿದ್ದಾಳೆ–

ಅವಳೇ ಮಹಾತ್ಮರವರ

ಗಂಧರ್ವ ಕನ್ಯೆ (ಕನ್ನಡ)

ರಾಜಸುಲೋಚನಾ, ಹರಿಣಿ, ರೇವತಿ, ಸರೋಜ, ಇಂದು ಶೇಖರ್ ಮೊದಲಾದವರು

ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್‌ನಲ್ಲಿ

ನೋಟೀಸು

ಉಡುಪಿ ತಾಲ್ಲೂಕು ಹೆಗ್ಗುಂಜೆ ಗ್ರಾಮದ ಮೈ...ಕೋಸೆ ಸುಬ್ರಾಯರ ಮಗ ನಾರಾಯಣ ...ಯನು ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನನ್ನ ಭಾವ, ಕಟ್ಟ್ಬ್ರರು ಗ್ರಾಮದ ಪಳ್ಳಿ ...ತ್ತು ವೆಂಕಟರಮಣಯ್ಯನೆಂಬವರಿಗೆ 3 ...ಣ್ಣು ಮಕ್ಕಳು 2 ಗಂಡು ಮಕ್ಕಳು ಕೂಡಾ ...ರುತ್ತಿದ್ದು, ನನ್ನ ಭಾವ ವೆಂಕಟರಮಣಯ್ಯನವರು ಸುಮಾರು 3 ವರುಷಗಳ ಹಿಂದೆ ಮೃತರಾದರು. ಅಂದಿನಿಂದ ನನ್ನ ಅಕ್ಕ ಮೂಕಾಂಬೆ ಅಮ್ಮನು ಆ ಎಲ್ಲಾ ಮೈನರ ಮಕ್ಕಳ ...ಸ್ತೂರಿ ಮಾಡಿಕೊಂಡು ಬರುತ್ತಿರುವಲ್ಲಿ ...ರ ಬಾಬ್ತು ಸುಮಾರು 50/- ರೂಪಾಯಿ ...ರ್ಗ ತೆರುವ ಆಸ್ತಿ ಮತ್ತು ಕೆಲವು ಚಿನ್ನಾಭರಣ ಚರಸೊತ್ತು ಕೂಡಾ ಇದ್ದು ಅವುಗಳ ...ಲ್ಲಿ ಅವರು ಮೃತಪಟ್ಟಂದಿನಿಂದ ಇವಕ್ಕೆಲ್ಲಾ ನನ್ನ ಅಕ್ಕ ಮೂಕಾಂಬೆ ಅಮ್ಮನೇ ಸ್ವಾಧೀನದಾರಳಾಗಿರುತ್ತಿರುವಲ್ಲಿ ಆಸುಪಾಸಿನ ಕೆಲವರು ...ದನ್ನೆಲ್ಲಾ ಸ್ವಾಧೀನವಾಗಬೇಕೆಂಬ ದುರುದ್ದೇಶದಿಂದ ದುಬೋಧನೆ ಕೊಟ್ಟು ಪರಾಧೀನಕ್ಕೆ ಅಸ್ಪದವಾಗುವಂತೆಯೂ ತಾಯಿಗೆ ವೈಷ...ಬರುವಂತೆಯೂ ಬುದ್ಧಿ ಸರಿಯಿಲ್ಲದ ...ರೀ ಮಗ ಆನಂದಯೆಂಬನನ್ನು ಕಳೆದ ಮೇ ...ಗಳ ಸಮಯ ದುರ್ಬೋಧಿಸಿ ಮನೆಯಿಂದ ...ಸುಮಾರು 1200—0—0 ಸಾವಿರದಿನ್ನೂರು ...ಯ ಚಿನ್ನಾಭರಣಗಳನ್ನು ಕಳವು ಮಾಡಿಸಿ... ಆ ಸಮಯದಲ್ಲೆ ಅವನ ತಾಯಿಗೂ ಕೂಡಾ ಅವನ ಪಾಲು ಕೊಟ್ಟರೆ ನಿಮಗೆ ಸುಖವಾಗುತ್ತದೆಂದು ಹಲವು ಬಗೆಯಿಂದ ದುರ್ಬೋಧಿಸಿದರು. ಮೋಸವೆಂದು ತಿಳಿಯದೇ ಈ ಕಾರಣ ತಾಯಿಗು ಬೇಸರಪಟ್ಟು ಆಸ್ತಿ ಚರ ...ಸೊತ್ತುಗಳನ್ನೆಲ್ಲಾ ವಿಭಾಗಿಸಬೇಕೆಂಬ ...ಲೋಚನೆಮಾಡಿ ನನ್ನ ಅಣ್ಣಂದಿರಾದ ರಾಮ...ಪ್ರಯ್ಯ ಮತ್ತು ಶ್ರೀನಿವಾಸ ರಾವ್ ಇವ...ರನ್ನು 2 ಎರಡು ಗಂಡು ಮಕ್ಕಳ ಬಗ್ಗೆ ...ರ್ಡಿಯನ್ನಾಗಿ ಮಾಡಿ ಅಗತ್ಯವಿಲ್ಲದ ವಿಭಾಗ ಪತ್ರಮಾಡಿಸಿದ್ದರಂತೆ. ಈ ವಿಭಾಗ ಪತ್ರವೆಂಬುದು ಕೇವಲ ನೋಸತರದ್ದು ಮತ್ತು ನ್ಯಾಯವಾದ್ದು ಕೂಡಾ ಅಲ್ಲಾ. ವಿಭಾಗ ಪತ್ರವೆಂಬುದು ಹಿರೀ ಮಗನ ಬುದ್ಧಿಗನುಸಾರವಾಗಿ ತಮಗೆ ಬೇಕಾದಂತೆ ಪರಾಧೀನಕ್ಕೆ ಅಸ್ಪದವಾಗಿ ಅಲ್ಲದೆ ಯಾವ ತರದ ನ್ಯಾಯವಾದ ವಿಭಾಗ ಪತ್ರವಲ್ಲ. ಅದು ಕೇವಲ ಈ ಹುಡುಗರಿಗೆ ಅನರ್ತಕರವು ವಿಭಾಗ ಪತ್ರವು ಕೇವಲ ಕಿರೀ ಹುಡುಗನನ್ನು ಹಾಳು ಮಾಡುವಂತಾದ್ದು. ಪಾಲಿನಲ್ಲಿ ಕೂಡಾ ಕಿರೀ ಹುಡುಗನಿಗೆ ತುಂಬಾ ಅನ್ಯಾಯವಾಗಿದೆಂದು ಕೇಳುತ್ತೇನೆ. ಈ ಹುಡುಗರಿಗೆ ರಕ್ಷಕರಾದ ನನ್ನ ಅಣ್ಣ ಏನು ದುರ್ಬೋಧನೆಗೆ ವಳಪಟ್ಟೋ ಅಥವಾ ತಿಳುವಳಿಕೆಯಿಲ್ಲದೆಯೋ ಯೆಂಬುದು ನಾನು ಅರಿಯಲಾರೆ. ಅಂತೂ ಈ ವಿಭಾಗ ಪತ್ರವು ಕಿರೀ ಹುಡುಗನಿಗೆ ಕಂಟಕತರವಾದ್ದರಿಂದ ಈತನು ಅನಿಷ್ಕಾರಣವಾದ ವಿಭಾಗ ಪತ್ರಕ್ಕೆ ಒಪ್ಪತಕ್ಕದ್ದಲ್ಲವಾದ್ದರಿಂದ ಆ ಗಾರ್ಡಿಯನ್ ರಾಮಚಂದ್ರಯ್ಯನಿಂದ ರದ್ದುಮಾಡಿಸಿ ನಾನೇ ಗಾರ್ಡಿಯನ್ನಾಗಿ ಈ ವಿಭಾಗ ಪತ್ರ ರದ್ದು ಮಾಡುವ ಹೆಚ್ಚಿನ ಅಗತ್ಯವಿರುವುದರಿಂದ ಆ ಸಮ್ಮಂಧ ರಿಕಾರ್ಡು ಪಡೆದು ಅಲ್ಲಾದ ಸಿವಿಲ್ ದಾವಾ ದಾಖಲು ಮಾಡುತ್ತೇನೆ. ಅದ್ದರಿಂದ ಈ ಹಿಂದೆ ಯಾ ಇನ್ನು ಮುಂದೆ ಈ ವಿಭಾಗ ಪತ್ರದ ಆಧಾರವಾಗಿ ಮಾಡಿದ ಯಾ ಇನ್ನು ಮಾಡತಕ್ಕ ಯಾವ ತರದ ಕ್ರಯ ಅಡವು ಈಡು ಮುಂತಾದ ಯಾವದೊಂದು ಪರಾಧೀನವು ಸಿಂಧುವಾಗತಕ್ಕದ್ದಲ್ಲಾ. ಸಿಂಧುವಾಗಲಿಕ್ಕೆ ಕಾರಣವು ಇಲ್ಲಾ ದುರಾಲೋಚನೆಯಿಂದ ಮಾಡಿದ ಈ ಹುಡುಗ ಆಂದ್ರ...ಕೈಸ್ಸ ಮೂರ್ತಿಗೆ ಬಾಧಕ ತಕ್ಕದ್ದಲ್ಲವೆಂಬುದು ಸರ್ವರೂ ತಿಳಿದಿರತಕ್ಕದ್ದು ತಿಳಿದಿರಲಿ.

H. Narayana Rao.

ಹೆಗ್ಗುಂಜೆ, 9—5—55.

ನಿಮ್ಮ ಎಲ್ಲಾ ಜ್ಯೋತಿಷ್ಯ ವಿಷಯಗಳಿಗೆ ಇಂದೇ ಬರೆಯಿರಿ—

ಪಂಡಿತ ಕೆ. ಎಸ್. ಶಾಸ್ತ್ರಿ

ಜ್ಯೋತಿರ್ವಿದ್ಯಾ ಸಂಶೋಧನಾ ಕೇಂದ್ರ

ಪಂಚವಟಿ, ನಾಶಿಕ.

(೩ನೇ ಪುಟದಿಂದ)

ರ್ಥೈಸುವಷ್ಟು ವಿಶಾಲವಾದ ಹೃದಯ, ಅದಕ್ಕೆ ತಕ್ಕ ವ್ಯವಹಾರ ಆವರಲ್ಲಿರಬೇಕೆಂಬುವನ್ನು ಇದು ಎತ್ತಿ ಹೇಳುತ್ತದೆ. ಆದರೆ ಮನಸ್ಸು ಚಪಲ ಗತಿಯುಳ್ಳದ್ದೆಂಬ ಉಪನಿಷತ್ತಿನ ಮತ್ತು ಗೀತೆಯ ವಾಕ್ಯವು ಬುದ್ಧನಿಗೂ ಸಮ್ಮತವೇ - ಅವನು ಚಪ್ಪದಾರಿಗೆ ಎಳೆಯುವ, ಪಾಪ ಶಕ್ತಿಯಾದ ಮಾರನ ಪ್ರಭಾವದಿಂದ ಮತ್ತು ಇಂದ್ರಿಯಗಳ ಆಕರ್ಷಣೆಯಿಂದ ಚಿತ್ತವನ್ನು ವಿಮುಖಗೊಳಿಸಲು ಪ್ರಯತ್ನಿಸಬೇಕೆಂದೂ ಮೇಧಾವಿಯಾದವನಿಗಿದೇ ಭೂಷಣವೆಂದೂ ಸಾರುತ್ತಾನೆ. "ರಾಗಕ್ಕೆ ಸಮನಾದ ಅಗ್ನಿಯಿಲ್ಲ, ದ್ವೇಷಕ್ಕೆ ಸಮನಾದ ದೌಷ್ಟ್ಯವಿಲ್ಲ, ದೇಹ-ಮನಸ್ಸುಗಳಿಗೆ ಸಮನಾದ ದುಃಖವಿಲ್ಲ—ಶಾಂತಿಗೆ ಸಮನಾದ ಸುಖವಿಲ್ಲ. ಆದುದರಿಂದ ಸುಖ ಬಯಸುವವನು ಶಾಂತಿಗೆ ವಿಘಾತಕವಾದ ರಾಗದ್ವೇಷಗಳನ್ನು ಮನಸ್ಸಿನೊಳಗೆ ಸೇರಿಸಿಕೊಳ್ಳಕೂಡದು" ಎಂದು ಬುದ್ಧನ ತೀರ್ಮಾನ.

ಬಹಳ ಗಂಭೀರವಾಗಿರುವ ಮೇಲಿನ ಮಾತುಗಳನ್ನು ಉಪದೇಶಿಸುವಾಗ ಬುದ್ಧನು ಅಹಂಕಾರವನ್ನು ಎಂದೂ ಪ್ರದರ್ಶಿಸುತ್ತಿರಲಿಲ್ಲ. ಒಮ್ಮೆ ಅವನ ಶಿಷ್ಯರಲ್ಲೊಬ್ಬನಾದ ಶಾರಿಪುತ್ರನು "ನಿಮಗಿಂತ ಜ್ಞಾನದಲ್ಲಿ ದೊಡ್ಡವನೆನಿಸಿದವನು ಹಿಂದೆ ಯಾರೂ ಇರಲಿಲ್ಲ, ಈಗ ಯಾರೂ ಇಲ್ಲ, ಮುಂದೆಯೂ ಇರುವುದು ಅಶಕ್ಯ" ಎಂದನು. ಬುದ್ಧದೇವನ ಉತ್ತರ ಒಡನೆಯೇ ಬಂತು—"ನಿನ್ನ ಮಾತಿನಲ್ಲಿ ಶಾಸ್ತ್ರ ಲಕ್ಷಣ ಕಂಡು ಬರುತ್ತದೆ." ಅವರು ಮುಂದೆ ಪ್ರಶ್ನಿಸಿದರು— "ನೀನು ಹಿಂದಿನವರದೆಲ್ಲವನ್ನೂ ತಿಳಿದಿದ್ದಿಯಾ?" ಇಲ್ಲವೆಂದು ಶಿಷ್ಯ ಉತ್ತರಿಸಿದ. ಇಂದಿನವರ ಮತ್ತು ಮುಂದಿನವರ ಸಂಗತಿಯಲ್ಲೂ ಇಲ್ಲವೆಂಬ ಉತ್ತರವೇ ದೊರಕಿತು "ನನ್ನ ಮನಸ್ಸನ್ನಾದರೂ ಹೊಕ್ಕು ನೋಡಿದ್ದಿಯಾ?" ಎಂದು ಬುದ್ಧದೇವನು ಕೇಳಿದಾಗ ಅದಿನ್ನೂ ತನಗೆ ಸಾಧ್ಯವಾಗಿಲ್ಲ ಎಂದು ಸಾರಿಪುತ್ರ ಒಪ್ಪಿಕೊಂಡನು. "ಹಾಗಾದರೆ ಹಾಗೆಲ್ಲ ಹೇಳಬೇಡ" ಎಂದು ಬುದ್ಧ ದೇವನು ಉಪದೇಶಿಸಿದ.

ಬುದ್ಧ ದೇವನು ಎಂದೂ ಕೋಪಿಸುತ್ತಿರಲಿಲ್ಲ—ಒಮ್ಮೆ ಅವನನ್ನು ಯಾರೋ ಜೆನ್ನಾಗಿ ಬೈದರು. ಆಗ ಭಗವಾನನು ಅವನನ್ನು ಹತ್ತಿರ ಕರೆದು "ನೋಡು ಒಬ್ಬನು ಇನ್ನೊಬ್ಬನಿಗೊಂದು ವಸ್ತು ಕೊಟ್ಟಾಗ ಅದು ಸ್ವೀಕರಿಸಲ್ಪಡದಿದ್ದರೆ, ಆ ವಸ್ತು ಯಾರಿಗೆ ಸೇರುತ್ತದೆ?" ಎಂದು ಕೇಳಿದನು. "ಅದು ಕೊಡ ಮಾಡಿದವನ ಹತ್ತಿರವೇ ಉಳಿಯುತ್ತದೆ" ಎಂಬ ಉತ್ತರ ದೊರೆಯಿತು. "ಹಾಗಾದರೆ ನೀನು ಇಷ್ಟೆಲ್ಲ ಹೇಳಿದಿಯಲ್ಲ - ಅವುಗಳಲ್ಲಿ ಒಂದನ್ನೂ ನಾನು ಸ್ವೀಕರಿಸುವುದಿಲ್ಲ ನಿನ್ನೊಡನೆಯೇ ಇರಲಿ" ಎಂದು ಬುದ್ಧ ದೇವನು ನಕ್ಕು ನುಡಿದನು. ಈ ನಗು ಎಲ್ಲ ಹೊರೆಯನ್ನೂ ಇಳಿಸಬಲ್ಲುದು; ಮಾರ್ಗದರ್ಶನವನ್ನೂ ಮಾಡಬಲ್ಲುದು.

ತನ್ನನ್ನು ಕೊಲ್ಲ ಬಂದ ಬೇಡನನ್ನು "ಕೊಂದೇನು ಪ್ರಯೋಜನ ನಿನಗೆ?" ಎಂಬ ಒಂದೇ ಮಾತಿನಿಂದ ಹೃದಯ ಪರಿವರ್ತನೆಗೆ ಗುರಿಮಾಡಿದ ಮಹಿಮನೂ ಬುದ್ಧನಾಗಿದ್ದನು. ಅವನು ಉಪದೇಶಿಸಿದ ಧರ್ಮ ವ್ಯವಹಾರಕ್ಕೆ ವಿರುದ್ಧವಿಲ್ಲ; ಪ್ರಗತಿಗೆ ಆತಂಕ ಮಾಡುವುದಿಲ್ಲ; ಮಾನವ ಕಲ್ಯಾಣದ ಧ್ಯೇಯವನ್ನು ಅದು ಎಷ್ಟಕ್ಕೂ ಬಿಟ್ಟಿಲ್ಲ. ಎಂತಲೇ

ಬುದ್ಧಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ಎಂಬ ಉದ್ಘೋಷದಲ್ಲಿ ಭಾಗವಹಿಸಲು ಎಲ್ಲರಿಗೂ ಉತ್ಸಾಹ.

ಕರ್ನಾಟಕ ಸಂಘ, ದೆಹಲಿ

ಇದರ ಸರ್ವ ಸದಸ್ಯರ ವಾರ್ಷಿಕ ಸಭೆಯು ತಾ. 21-4-55ರಂದು ನವದೆಹಲಿಯಲ್ಲಿರುವ ಕೇಂದ್ರ ಸಾರ್ವಜನಿಕ ಕಾರ್ಯ ಶಾಖಾ ಭವನದಲ್ಲಿ ಸೇರಿತ್ತು. ಸುಮಾರು 200ಕ್ಕೂ ಮಿಕ್ಕಿ ಸದಸ್ಯರು ಹಾಜರಿದ್ದರು. ಸಂಘದ ಅಧ್ಯಕ್ಷ ಶ್ರೀ. ಎಸ್. ವಿ. ಕೃಷ್ಣ ಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ. ಎಂ. ವಿ. ಕೃಷ್ಣಸ್ವಾಮಿಯವರು ಗತವರ್ಷದ ವರದಿ ಓದಿದರು. ಕೋಶಾಧಿಕಾರಿ ಶ್ರೀ. ಎನ್. ಕೆ. ಶಂಕರರಾಯರು ಲೆಕ್ಕಪತ್ರಗಳನ್ನು ಹಾಜರು ಪಡಿಸಿದರು. ಬಳಿಕ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಶ್ರೀ ಎಸ್. ವಿ. ಕೃಷ್ಣ ಮೂರ್ತಿರಾಯರು ಅಧ್ಯಕ್ಷರು, ಶ್ರೀ. ಕೆ. ಎನ್ ರಂಗರಾಯರು ಉಪಾಧ್ಯಕ್ಷರು, ಶ್ರೀ. ಎನ್. ಕೆ. ಶಂಕರರಾಯರು ಕೋಶಾಧಿಕಾರಿಗಳು, ಶ್ರೀ. ಸಿ. ಕೆ. ತಿರುಮಲೇಶ್ ಇವರು ಪ್ರಧಾನ ಕಾರ್ಯದರ್ಶಿಗಳು, ಶ್ರೀ. ಎಚ್ ಜಿ. ಗುತ್ತಲ್ ಇವರು ಜೊತೆ ಕಾರ್ಯದರ್ಶಿಗಳೆಂದು ಸರ್ವಾನುಮತದಿಂದ ಆರಿಸಿ ಬಂದರು. ಕಾರ್ಯಕಾರಿ ಸಮಿತಿಯು ಸದಸ್ಯರಾಗಿ ಶ್ರೀಗಳಾದ ಎಚ್. ಎಸ್ ಪಾಟೀಲ್, ಬಿ. ಎನ್. ಶಾಸ್ತ್ರಿ, ವೈ. ವೆಂಕಟಸುಬ್ರಮಣ್ಯ, ವೈ. ಕೆ. ಮೂರ್ತಿ, ಎನ್. ಸೋಮಣ್ಣ (ಎಂ. ಸಿ.) ಸಿ. ಆರ್. ಬಸಪ್ಪ (ಎಂ. ಪಿ.) ಇವರು ಬಹುಮತದಿಂದ ಆರಿಸಿ ಬಂದರು. ಲಘೂಪಹಾರದ ಬಳಿಕ ಶ್ರೀ. ಕೇಶವಯ್ಯನವರ ಸಂಗೀತದೊಡನೆ ಸಭೆಯು ಮುಕ್ತಾಯವಾಯಿತು.

---

೧೨೦ ರೂ. ಬಹುಮಾನದ ಆಶ್ಚರ್ಯಕಾರಕ

ಸಿದ್ಧ ಕವಚ

ಈ ಕವಚ, ಧಾರಣೆಯಿಂದ ಆಶಾಪ್ತಗಳನ್ನೆಲ್ಲ ಸಾಧಿಸಿಕೊಳ್ಳಬಹುದು. ಇದರ ಸಿದ್ಧಿಗೆ ಯಾವ ಸಂಕಲ್ಪವೂ ಇಲ್ಲ; ಯಾವ ಸಿದ್ಧತೆಯೂ ಬೇಕಾಗಿಲ್ಲ. ನಿಮಗೆ ಬೇಕಾದ ವ್ಯಕ್ತಿ ಆವಳ ಯವನು ನಿಮ್ಮ ವಶವರ್ತಿಯಾಗುವನು. ದುಷ್ಟ ಗ್ರಹ ಬಾಧೆಗಳನ್ನು ನಿವಾರಿಸುವದು. ವೈರಿಗಳನ್ನು ಸೋಲಿಸಿ, ಪರೀಕ್ಷೆ ವ್ಯಾಪಾರ, ವ್ಯಾಜ್ಯ, ನೌಕರಿ, ಉದ್ಯೋಗ ಇತ್ಯಾದಿಗಳಲ್ಲಿ ಜಯವನ್ನೊದಗಿಸಿ ರೋಗದಿಂದ ಮತ್ತು ಸಾಲದಿಂದ ಉದ್ಧರಿಸುವದು. ಅದೃಷ್ಟಶಾಲಿಗಳಾಗಿ ಮಾಡುವದು, ಇದು ಸುಳ್ಳೆಂದು ಸಿದ್ಧಪಡಿಸಿದವರಿಗೆ 100 ರೂ. ಬಹುಮಾನ. ತಾಮ್ರ ರೂ. 2-9-0 ಬೆಳ್ಳಿಯ ರೂ. 3 ಚಿನ್ನ ರೂ. 15, for special Rs 25—0—0

Shree Panchvati Ashram
No. 8, P. O. KATRISARAI
(GAYA)

S. D. Short hand ಬೇಕಾಗಿದ್ದಾರೆ

ಅತಿ ಸುಲಭ, ನವೀನ, ಚಿಕ್ಕ, ಅತೀವೇಗ ಕೊಡುವ ಶೋರ್ಟ್‌ಹೇಂಡ್ ಪದ್ಧತಿಕ್ಕೆ ವಿದ್ಯಾರ್ಥಿಗಳು ಬೇಕಾಗಿದ್ದಾರೆ. ಇದರಲ್ಲಿ ಬರೇ 3 ತಿಂಗಳಲ್ಲಿ ಪ್ರವೀಣರಾಗಬಹುದು. ಟಪಾಲು ಮೂಲಕ ಸಹಾ ಕಲಿಸ ಬಹುದು. ವಿವರಕ್ಕೆ ಸ್ಟಾಂಪು ಕಳುಹಿಸಬೇಕು. ಶೋರ್ಟ್‌ಹೇಂಡ್ ಕಲಿತವರಿಗೆ ಕೆಲಸ ಖಂಡಿತ ಸಿಗುತ್ತದೆಂದು ತಿಳಿಸುವೆವು.

S. A. Shorthand School,
Maidan Cross Road,
Mangalore—1

ಕುಮಾರಿ ಬಿಲ್ಲೆಗಳು (ಸರಕಾರಿ ರಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. **P. DEVEE**, F. Ds. (N. J.)
CALCUTTA—10

(ವಿ. ಪಿ. ಪಿ. ಪ್ರತ್ಯೇಕ)

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ಮನದಲ್ಲಿ ನಗುವಿದೆ! ನಗುವಿದ್ದಲ್ಲಿ ಸ್ವರ್ಗವಿದೆ!

ದಣಿದ ಮನವನ್ನು ತಣಿಸಿ ನಗಿಸಲು -

ನಗೆ ಸೋಟೆಗಳು

(೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ)

ಲೇಖಕರು: ಕೆ. ವಿಟ್ಠಲ ಶೆಟ್ಟಿ, ಬಿ. ಎ., ಎಲ್. ಟಿ

(ಮುಳಿಯ ತಿಮ್ಮಪ್ಪಯ್ಯನವರ ಮುನ್ನುಡಿಯೊಡನೆ)

ನೀವೂ ನಕ್ಕು ಅನ್ಯರನ್ನೂ ನಗಿಸಬೇಕಾದರೆ ಈ ಪುಸ್ತಕದ ಪ್ರತಿಯೊಂದು ನಿಮ್ಮ ಬಳಿಯಲ್ಲಿರಲಿ.

ಬೆಲೆ: ೧—೪—೦ (ಟ. ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಸ್ವೀಕಾರ ವಿಮರ್ಶೆ

ಮನೆ—ಜಗತ್ತು

ಅನುವಾದಕರು: ಶ್ರೀಮತಿ ಎಚ್. ವಿ. ಸಾವಿತ್ರಮ್ಮ. ಪ್ರಕಾಶಕರು: ಕಾವ್ಯಾಲಯ ಮೈಸೂರು. ಬೆಲೆ: ರೂ. ೧-೮-೦.

ಕವೀಂದ್ರ ರವೀಂದ್ರರೇ "ಮನೆ-ಜಗತ್ತು" ಎಂಬ ಈ ಕಾದಂಬರಿಯ ಮೂಲಲೇಖಕರು. ಅವರು ಇದನ್ನು ಬಹಳ ಮಾರ್ಮಿಕವಾಗಿಯೂ ಪರಿಣಾಮಕಾರಿಯಾಗಿಯೂ ಬರೆದಿದ್ದಾರೆ; ಪ್ರಧಾನ ಶಾಲಿಯಾದ ಶೈಲಿಯಲ್ಲಿ ಅತ್ಯಪೂರ್ವ ವಸ್ತುವನ್ನು ಅವರು ಯಶಸ್ವಿಯಾಗಿ ನಿರೂಪಿಸಿದ್ದಾರೆ. ಹೆಂಗಸು ಆದರ್ಶವಾದಿಗಳ ಬೆಂಬತ್ತಿ ಹೇಗೆ ಹೋಗಬಲ್ಲಳೆಂಬುದನ್ನು ತೋರಿಸುವ ನೆವದಲ್ಲಿ ಶ್ರೇಷ್ಠ ಮಟ್ಟದ ಮನೋವೈಜ್ಞಾನಿಕ ದೃಷ್ಟಿಯಿಂದ ಅವರು ಇಲ್ಲಿಬರುವ ಮೂರು ಮುಖ್ಯಪಾತ್ರಗಳ ಹೃದಯ ಮಥನವನ್ನು ಮಾಡಿದ್ದಾರೆ. ನಿಖಿಲನ ಸಂಸ್ಕೃತಿ, ಸಂದೀಪನ ಸಾಹಸ ಮತ್ತು ನಿಖಿಲನ ಹೆಂಡತಿಯಾಗಿದ್ದರೂ ಸಂದೀಪನ ಆಕರ್ಷಣೆಗೆ ಬಲಿಯಾದ ವಿಮಲೆಯ ಒದ್ದಾಟ ಇವು ಕತೆಯಲ್ಲಿ ಮೊದಲಿನಿಂದ ಕೊನೆಯ ವರೆಗೂ ಓದುಗರ ಕುತೂಹಲವನ್ನು ಕೆರಳಿಸಿ, ಹಿಡಿದುನಿಲ್ಲಿಸುತ್ತವೆ. ಆನುಷಂಗಿಕವಾಗಿ ರಾಜಕೀಯ ಹಾಗು ಸಾಮಾಜಿಕ ಮಹತ್ವದ ಹಲವು ವಿಷಯಗಳು ಚರ್ಚಿಸಲ್ಪಟ್ಟಿರುವುದರಿಂದ ವಿಚಾರ ಪ್ರಚೋದನೆಗೂ ಈ ಕಾದಂಬರಿ ನೆರವಾಗುತ್ತದೆ. ಎಲ್ಲರೂ ಸುಲಭದಲ್ಲಿ ಓದಬಹುದಾದ ಸರಳಭಾಷೆಯನ್ನು ಅನುವಾದಕಿಯರು ಬಳಸಿದ್ದರೂ ಮೂಲದ ಸ್ವಾರಸ್ಯ ಎಳ್ಳಷ್ಟೂ ಕೆಟ್ಟಿಲ್ಲದಿರುವುದು ತುಂಬ ಸಮಾಧಾನಕರವಾದ ವಿಷಯ. ವಸ್ತು, ತಂತ್ರ ಮತ್ತು ನಿರೂಪಣೆಯ ಕ್ಷೇತ್ರದಲ್ಲಿ ಹೊಸ ಪ್ರಯೋಗವೆನಿಸಬಹುದಾದ ಈ ಕಾದಂಬರಿಯನ್ನು ಕನ್ನಡಿಗರಿಗೆ ಒದಗಿಸಿಕೊಟ್ಟ ಪ್ರಕಾಶಕರ ಉತ್ಸಾಹ ಅಭಿನಂದನೀಯ.

ನೊಗದ ನೇಣು

ಬರೆದವರು: ಶ್ರೀ ಕೋ. ಚನ್ನಬಸಪ್ಪ. ಪ್ರಕಾಶಕರು: ಶ್ರೀ ಸಂಗಮೇಶ ಪ್ರಕಾಶನ, ಹರಿಹರ. ಬೆಲೆ. ರೂ ೧—೪—೦

ಕಳೆದ ಮಹಾ ಚುನಾವಣೆಯು ದೇಶಕ್ಕೆ ಏನನ್ನು ತಂದುಕೊಟ್ಟಿತೆಂದು ಆತ್ಮ ವಿಮರ್ಶೆಗೆ ಪ್ರಯತ್ನಿಸಿದ ಪಕ್ಷದಲ್ಲಿ ದ್ವೇಷ-ಮಾತ್ಸರ್ಯಗಳನ್ನು ಪ್ರೋತ್ಸಾಹಿಸಿದ ಪಾಪಕ್ಕೆ ಪ್ರತಿಯೊಂದು ಪಕ್ಷದವರೂ ಪ್ರಜಾಪ್ರಭುತ್ವದ ಪುರಸ್ಕರ್ತರೂ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾದೀತು. ಜಗಳಾಡುವ ಸ್ವಭಾವಿಕವಾದ ಇಚ್ಛೆಗೆ ಶಾಸನದ ಮನ್ನಣೆಯಿತ್ತಂತೆ ಕಳೆದ ಚುನಾವಣೆ ಜರಗಿತೆಂದರೆ ಅತಿಶಯೋಕ್ತಿಯಾಗದು. ಕಳೆದ ಚುನಾವಣೆಯಿಂದ—ಮತ್ತು ಇನ್ನು ಜರಗಲಿರುವ ಅನೇಕ ಚುನಾವಣೆಗಳಿಂದ-ನಮ್ಮ ಹಳ್ಳಿ ಮತ್ತು ಪಟ್ಟಣಗಳ ರಚನೆ ತೀರಾ ಸಡಿಲುಬೀಳುವ ಭಯವೇ ನಿಷ್ಪಕ್ಷಪಾತ ನಿರೀಕ್ಷಕರಿಗೆ ತೋರಿಬರುತ್ತದೆ. ಚುನಾವಣೆಯು ಇಂದು ತಂದೆಯನ್ನು ಮಗನಿಂದ, ಹೆಂಡತಿಯನ್ನು ಗಂಡನಿಂದ, ವ್ಯಕ್ತಿಯನ್ನು ಆಪ್ತೇಷ್ಟರಿಂದ ಬೇರ್ಪಡಿಸಿದೆಯಲ್ಲದೆ, ಕೀಳ್ತರಗತಿಯ ಸ್ಪರ್ಧೆಗೆ ಪ್ರತಿಯೊಂದು ಹಂತದಲ್ಲೂ ಅವಕಾಶಮಾಡಿಕೊಟ್ಟಿರುವುದನ್ನು ಅಲ್ಲಗಳೆದು ಪ್ರಯೋಜನವಿಲ್ಲ. ಶ್ರೀ ಚೆನ್ನಬಸಪ್ಪನವರ "ನೊಗದ ನೇಣು" ಕಾದಂಬರಿಯು ಚುನಾವಣೆಯ ಕಾಲದ ಭೀಭತ್ಸಕರ ಚಿತ್ರವನ್ನು ನಮ್ಮ ಕಣ್ಣಮುಂದಿಡುತ್ತದೆ. ಅವರು ಕಾಂಗ್ರೆಸಿನ ವಿಷಯದಲ್ಲಿ ಬಹಳ ಕಠಿಣವಾದ ರೀತಿಯಲ್ಲಿ ನಡೆದುಕೊಂಡಂತೆ ಕಂಡುಬಂದರೂ (ಎಲ್ಲ ರಾಜಕೀಯ ಪಕ್ಷಗಳಲ್ಲೂ ದೌರ್ಬಲ್ಯವಿದ್ದಿತೆಂಬುದನ್ನು ಒಪ್ಪಲು ಹಿಂಜರಿದಂತೆ ತೋರಿದರೂ) ಕಾದಂಬರಿಯಲ್ಲಿ ಆದಷ್ಟು ಹೆಚ್ಚು ಸತ್ವವನ್ನೂ ಸತ್ಯವನ್ನೂ ತುಂಬಲು ಅವರು ಸಮರ್ಥರಾಗಿದ್ದಾರೆ. ಅವರ ಶೈಲಿ ಮೊನಚಾಗಿದೆ; ಅನುಭವ ಆದಕ್ಕೆ ನೆರವಾಗುತ್ತದೆ. ವಾಸ್ತವತೆಗೆ ಕನ್ನಡಿ ಹಿಡಿಯುವ ಈ ಭವ್ಯ ಕೃತಿ ಎಚ್ಚರಿಕೆಯ ಕಹಳೆಯನ್ನು ಮೊಳಗುತ್ತದೆ.

ಜ್ಯೋತಿರ್ಗನ್ನಡಿ

ಬರೆದವರು: ಶ್ರೀ ರಮಾಕಾಂತ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ. ರೂ. ೩-೦-೦

೩೩೦ ಪುಟಗಳ ಈ ಬೃಹದ್ಗ್ರಂಥವು ನಮ್ಮಲ್ಲಿ ಹೆಚ್ಚಿನವರು ದಿನವೂ ಕುತೂಹಲವನ್ನು ವ್ಯಕ್ತಪಡಿಸುವ ಜೋತಿಷ್ಯ ಶಾಸ್ತ್ರದ ವಿಷಯವನ್ನು ಬಹಳ ವಿವರವಾಗಿ ಪ್ರಸ್ತಾಪಿಸುತ್ತದೆ. ದುಕ್ಷ ಬರವೆಂದು ಹೆಚ್ಚಿನವರು ಶಾಸ್ತ್ರಗ್ರಂಥಗಳನ್ನು ದೂರತಳ್ಳುತ್ತಿದ್ದರೂ ಆ ಕ್ಷೇತ್ರದಲ್ಲಿ ಸಾಕಷ್ಟು ಪರಿಚಯ ಮಾಡಿಕೊಳ್ಳಬೇಕೆಂದಿರುವವರಿಗೆ ಯೋಗ್ಯ ಪುಸ್ತಕಗಳು ಸಿಗುವಂತಿರುವುದು ಅಗತ್ಯವೆಂಬುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರಲಾರದು. ಈ ದೃಷ್ಟಿಯಿಂದ ನೋಡಿದರೆ, ಕನ್ನಡದಲ್ಲಿ ಜ್ಯೋತಿರ್ವಿಜ್ಞಾನಕ್ಕೆ ಸಂಬಂಧಿಸಿದ ಶಾಸ್ತ್ರೀಯ ಪುಸ್ತಕಗಳ ಕೊರತೆ ವಿಶೇಷವಾಗಿರುವ ಈ ಸಮಯದಲ್ಲಿ ಶ್ರೀ ರಮಾಕಾಂತರು ಪಟ್ಟ ಪರಿಶ್ರಮ ಸಾರ್ಥಕವೆಂದು ಹೇಳಬೇಕಾಗುತ್ತದೆ. ಅವರು ಬಹಳ ಜಾಗರೂಕತೆಯಿಂದಲೂ ಹೆಚ್ಚಿನ ಅಧ್ಯಯನದಿಂದಲೂ ಇಲ್ಲಿ ಅನೇಕ ವಿಷಯಗಳನ್ನು ಕ್ರೋಢೀಕರಿಸಿದ್ದಾರೆ; ಮತ್ತು ಸುಲಭ ಗ್ರಾಹ್ಯವಾಗುವಂತೆ ಅವುಗಳನ್ನು ನಿರೂಪಿಸಿದ್ದಾರೆ. ಯೋಗ್ಯ ಕೋಷ್ಟಕಗಳಿಂದಲೂ ಉಪಯುಕ್ತ ರೇಖಾಚಿತ್ರಗಳಿಂದಲೂ ಪುಸ್ತಕವನ್ನು ಸಜ್ಜುಗೊಳಿಸಿದ್ದಾರೆ. ನಿತ್ಯವ್ಯವಹಾರದಲ್ಲಿ ನಮಗೆ ಯಾವ್ಯಾವ ಸಂಗತಿಗಳಲ್ಲಿ ಜೋಯಿಸರ ನೆರವು ಬೇಕೆನಿಸುತ್ತದೋ ಅವೆಲ್ಲವಕ್ಕೂ ಸಂಬಂಧಿಸಿದ ಪ್ರಕರಣಗಳು ಈ ಪುಸ್ತಕದಲ್ಲಿರುವುದರಿಂದ ಇದರಲ್ಲಿಲ್ಲದ ವಿಷಯವೇ ಇಲ್ಲವೆಂದರೆ ಸಾಮಾನ್ಯರದೃಷ್ಟಿಯಲ್ಲಿ ತಪ್ಪಾಗಲಾರದು. ಪಾಶ್ಚಾತ್ಯ ಮತ್ತು ಪೌರಸ್ತ್ಯ ವಿಚಾರಸರಣಿಗಳನ್ನು ಆದಷ್ಟು ಮಟ್ಟಿಗೆ ಹೊಂದಿಸಿಕೊಳ್ಳುವ ಪ್ರಯತ್ನ ಇಲ್ಲಿ ನಡೆದಿರುವುದು ಸ್ತುತ್ಯ.

ವೇದಾಂತದ ರೂಪರೇಖೆ

ಬರೆದವರು: ಶ್ರೀ ಹೊಸಕೆರೆ ಚಿದಂಬರಯ್ಯ. ಪ್ರಕಾಶಕರು: ಎಸ್. ಎಸ್. ಎನ್. ಬುಕ್‌ಡಿಪೋ, ಕೃಷ್ಣರಾಜೇಂದ್ರ ಮಾರ್ಕೆಟ್, ಬೆಂಗಳೂರು ೨. ಬೆಲೆ: ರೂ. ೦—೧೨—೦.

ಓಜಸ್ವಿಯಾದ ಶೈಲಿಯಲ್ಲಿ ಗಂಭೀರವಾದ ಆಧ್ಯಾತ್ಮಿಕ ಸೂತ್ರಗಳನ್ನು ವಿವರಿಸಿ, ಮುಮುಕ್ಷುಮಾರ್ಗವನ್ನು ನಿರ್ದೇಶಿಸುವ ಈ ಚಿಕ್ಕ ಪುಸ್ತಕವು ವಯಸ್ಸು ಮೀರಿದವರಿಗಿಂತಲೂ ತರುಣಜನಾಂಗದವರ ಕೈಯಲ್ಲಿ ಶೋಭಿಸುವುದು ಅಪೇಕ್ಷಣೀಯ. ಏಕೆಂದರೆ ಆಗ ನಮ್ಮ ತರುಣ—ತರುಣಿಯರು ಭಾರತೀಯ ಸಂಸ್ಕೃತಿಯ ಮೂಲತತ್ತ್ವಗಳನ್ನು ಮನನಮಾಡಿಕೊಳ್ಳಲು ಸಾಧ್ಯವಾಗುವುದಲ್ಲದೆ, ಅವುಗಳನ್ನು ಅನುಷ್ಠಾನದಲ್ಲಿ ಇಳಿಸುವ ಪ್ರಯತ್ನಮಾಡುವ ಮೂಲಕ ಭಾರತದ ನೈತಿಕ ಚರಿತ್ರೆಯ ಹೊಸ ಅಧ್ಯಾಯವನ್ನು ಬರೆಯಲೂ ಸಾಧ್ಯವಾಗುತ್ತದೆ. ಆಧುನಿಕ ವಿಜ್ಞಾನಿಗಳ ಪ್ರಭಾವದ ಸುಳಿಯಲ್ಲಿ ಬಿದ್ದು ಕೆಲವರು ವೇದಾಂತದಲ್ಲಿ ಸಂಶಯ ವ್ಯಕ್ತಪಡಿಸಬಹುದು—ಅವರೆ ಈ ಪುಸ್ತಕದಲ್ಲಿ ಅಂಥವರ ಸಂದೇಹಗಳನ್ನು ನಿವಾರಿಸಬಲ್ಲ ಸಮಾಧಾನೋಕ್ತಿಗಳಿದ್ದು, ನೈಜ ಆಸಕ್ತಿಯಿಂದ ಇದನ್ನು ಒಮ್ಮೆ ಓದಿದರೆ ಅವರ ಮನೋಭಾವದಲ್ಲಿ ಪರಿವರ್ತನೆಯಾಗುವುದು ನಿಶ್ಚಯ.

ಮೂವರೂ ಅವರೇ ಮತ್ತು ಸಂದೇಹ

ಬರೆದವರು: ಶ್ರೀ ಬಿ. ಟಿ ಅಶ್ವತ್ಥನಾರಾಯಣ ರಾವ್. ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ನಗರ. ಬೆಲೆ: ರೂ. ೦—೧೨—೦.

ಇದರಲ್ಲಿರುವ ಎರಡು ಏಕಾಂಕ ಪ್ರಹಸನಗಳಲ್ಲಿ "ಸಂದೇಹ" ಎಂಬ ಎರಡನೆಯದಕ್ಕಿಂತಲೂ "ಮೂವರೂ ಅವರೇ" ಎಂಬ ಮೊದಲನೆಯದು ಓದುಗರಿಗೂ ಪ್ರೇಕ್ಷಕರಿಗೂ ಚೆನ್ನಾಗಿ ಹಿಡಿಯಬಲ್ಲುದು—ಏಕೆಂದರೆ ಇದರ ಕಥಾವಸ್ತು ಅನುಭವಕ್ಕೆ ಬಹಳ ಸಮೀಪವಾಗಿದೆ; ಅಷ್ಟೇಯಲ್ಲದೆ, ಅದನ್ನು ಬರೆದ ರೀತಿ ಉದ್ದೇಶವನ್ನು ಚೆನ್ನಾಗಿ ಸಾಧಿಸುತ್ತದೆ. ನಿಯಂತ್ರಣಗಳೂ ಪಡಿತರ (ರೇಶನ್) ಪದ್ಧತಿಯೂ ಇದ್ದ ಕಾಲದಲ್ಲಿ ಫೂಡ್ ಇನ್ಸ್‌ಪೆಕ್ಟರು, ಪೋಲೀಸ್ ಕಾನ್‌ಸ್ಟೇಬಲ್ ಆದಿಯಾಗಿ ಅಧಿಕಾರಿ ವರ್ಗದವರೇ ಹೇಗೆ ಬ್ಲಾಕ್ ಮಾರ್ಕೆಟನ್ನು ಆಶ್ರಯಿಸುತ್ತಿದ್ದರು ಎಂಬುವದನ್ನು ಈ ಪ್ರಹಸನ ಚಿತ್ರಿಸುತ್ತದೆ. "ಸಂದೇಹ"ದಲ್ಲಿ ಸರೋಜಳ ನಡತೆಯ ಮೇಲೆಯೂ ರಂಗದ ಹೊರಗಿನ ವ್ಯಕ್ತಿ ರಮೇಶನ ಮೇಲೆಯೂ ಆಜ್ಞೆ ಮಾಡಿದ ಆರೋಪಣೆಯಲ್ಲಿ ಸರೋಜಳತಂದೆ ಕೃಷ್ಣಮೂರ್ತಿ ವಿಶ್ವಾಸವಿಡುವುದು ಅಷ್ಟು ಸುಲಭ ಸಾಧ್ಯವೆಂದು ಕಾಣುವುದಿಲ್ಲ. ಇದು ಪಾತ್ರ ಪೋಷಣೆಯ ಮೇಲೆ ಸ್ವಲ್ಪ ಮಟ್ಟಿನ ಪ್ರತಿಕೂಲತೆಯನ್ನು ಮಾಡುವುದರಿಂದಲೂ ಕೊನೆಯಲ್ಲಿ ನಾಟಕೀಯತೆಯ ಅಂಶ ಹೆಚ್ಚಿಕೊಂಡಿರುವುದರಿಂದಲೂ ಪ್ರಹಸನವಾಗಿದ್ದರೂ ಅಷ್ಟು ಮೆಚ್ಚುಗೆಯನ್ನು ಗಳಿಸದು—ಆದರೆ ಅದಿ ತೋರಿಕುವ ಮತ್ತು ವಿನೋದ ಪ್ರಿಯರ ಮನಸ್ಸಂತೋಷಗೊಳಿಸುವ ಮಟ್ಟಿಗೆ "ಸಂದೇಹ"ವೇ ಹೆಚ್ಚು ಉಪಯುಕ್ತವೆನಿಸುವ ಸಂಭವ ಹೆಚ್ಚು.

ಲಘು ಪರಿಚಯ

◯ ಮುಂಬಾಯಿಯ ವಿಚಾರ ಸಾಹಿತ್ಯ ಮಾಲೆಯವರು ಶ್ರೀ. ಲಕ್ಷ್ಮಣ ಭಟ್ ದೊಂಗ್ರೆಯವರಿಂದ ರಚಿಸಲ್ಪಟ್ಟ ಕವನಗಳ ಸಂಗ್ರಹವನ್ನು "ರಸವಾಹಿನಿ" ಎಂಬ ಆಣೆ ಬೆಲೆಯ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ ಬಣ್ಣ ಬಣ್ಣದ ಮುದ್ರಣಶಾಯಿಯನ್ನು ಉಪಯೋಗಿಸಿ ಅಚ್ಚುಕಟ್ಟಿನಿಂದ ಮಕ್ಕಳ ಮನಸ್ಸನ್ನು ಸೆರೆಹಿಡಿಯಲು ಪ್ರಕಾಶಕರು ಪ್ರಯತ್ನಿಸಿದ್ದಾರೆ. ಲೇಖಕರು ಇನ್ನಷ್ಟು ತಮ್ಮ ವ್ಯವಸಾಯದಲ್ಲಿ ಪಳಗ ಬೇಕಾಗಿದೆ ಎಂಬುದನ್ನು ಈ ಕವನಗಳ ಪಠಣ ಮತ್ತು ಮನನದ ಬಳಿಕ ನಾವು ಸೂಚಿಸ ಬೇಕಾಗುತ್ತದೆ. ಬರೆದುದೆಲ್ಲವೂ ಅಚ್ಚಿನಲ್ಲಿ ಬರಬೇಕೇ ಎಂಬ ಮೂಲ ಪ್ರಶ್ನೆಯನ್ನು ಅವರಿಗೆ ಹಾಕಬಹುದು.

◯ ಉಡುಪಿಯ ಕೋರ್ಟು ರಸ್ತೆಯಲ್ಲಿ ಶ್ರೀ ವಾಣೀಸಾಹಿತ್ಯಮಾಲೆ ಎಂಬ ಸಂಸ್ಥೆಯು ಈಚೆಗೆ ಒಂದಾಣೆ ಬೆಲೆಯ ಕೈಹೊತ್ತಿಗೆಗಳನ್ನು ಪ್ರಕಟಿಸಲು ತೊಡಗಿದೆ. "ಸಿಲ್ಕಿನ ಸೀರೆ ಮತ್ತು ಎರಡು ನೋಟುಗಳು" "ಬೇಡವಾದ ಬದುಕು" "ನಟರಾಜ" ಎಂಬ ಮೂರು ಚಿಕ್ಕ ಪುಸ್ತಕಗಳನ್ನು ಅವರು ಇದು ವರೆಗೆ ಪ್ರಕಟಿಸಿದ್ದಾರೆ. ಇವುಗಳಲ್ಲಿ ಶ್ರೀಗಳಾದ ಕೆ. ಕೇಶವ ಕುಡುವ, ಕೆ. ಪ್ರಭಾಕರ ರಾವ್, ಎಸ್ಸೆಲ್ ಇವರ ಕಥನಕಲೆ ವ್ಯಕ್ತವಾಗಿದೆ. ಕುಡುವರ ವಿನೋದ, ಕೆ ಪಿ ಯವರ ಆದರ್ಶ ಮತ್ತು ಎಸ್ಸೆಲರ ವಾಸ್ತವಿಕತೆಯ ಸಾಮಾನ್ಯ ಸ್ವರೂಪವನ್ನವು ಹೊರಗೆಡವುತ್ತವೆ.

◯ ಮಂಗಳೂರಿನಲ್ಲಿರುವ ಹಿಂದ್ ಮಜ್ದೂರ್ ಸಭೆಯ ಜಿಲ್ಲಾ ಶಾಖೆಯು ಒಂದಾಣೆ ಬೆಲೆಗೆ ಶ್ರೀ ಮ. ರಾಜೀವರಿಂದ ಬರೆಯಲ್ಪಟ್ಟ "ನಮ್ಮ ಜಿಲ್ಲೆಯಲ್ಲಿ ಟ್ರೇಡ್ ಯೂನಿಯನ್ ಚಳವಳಿ" ಎಂಬ ಪರಿಚಯಾತ್ಮಕ ಪುಸ್ತಕವನ್ನು ಪ್ರಕಟಿಸಿದೆ. ಹನ್ನೊಂದು ಪುಟಗಳ ಈ ಚಿಕ್ಕ ಪ್ರಕಟಣೆಯಲ್ಲಿ ಲೇಖಕರು ೧೯೩೬ನೇ ಇಸವಿಯಿಂದ ಈ ವರೆಗೆ ದಕ್ಷಿಣ ಕನ್ನಡದಲ್ಲಿ ಟ್ರೇಡ್ ಯೂನಿಯನ್ ಚಳವಳದ ಹೆಸರಿನಲ್ಲಿ ನಡೆದ ಮುಷ್ಕರಗಳ ಸಂಕ್ಷಿಪ್ತ ವಿವರವನ್ನು ಒದಗಿಸಿದ್ದಾರೆ. ಸೋಶಲಿಸ್ಟರೇ ಚಳವಳವನ್ನು ಮೊದಲು ತೊಡಗಿದರೆಂದೂ ಆದರೆ ಹಿಂದಿನಿಂದ ಕಮ್ಯುನಿಸ್ಟರು ಅದರ ಪ್ರಯೋಜನ ಪಡೆದು ಕೊಂಡರೆಂದೂ ಈ ಪ್ರಕಟಣೆ ಹೇಳುತ್ತದೆ. ಅದೇನೇ ಇರಲಿ—ಮುಷ್ಕರ ನಡೆಸುವುದಕ್ಕಾಗಿಯೇ ಸಂಘಟನೆ ನಡೆಸುವುದು ಟ್ರೇಡ್ ಯೂನಿಯನ್ ಚಳವಳವೆನಿಸಲಾರದು. ಹೆರೋಲ್ಡ್ ಲಾಸ್ಕಿ ಹೇಳಿದ ಪ್ರಜಾಸತ್ತಾತ್ಮಕ ಘಟಕವಾಗಿ ಟ್ರೇಡ್ ಯೂನಿಯನುಗಳು ಕೆಲಸಮಾಡಬೇಕಾದರೆ ಮುಷ್ಕರಗಳ ವಿಚಾರಕ್ಕಿಂತಲೂ ಇತರ ತತ್ವಗಳ ಕುರಿತು ಕೆಲಸಗಾರರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂಬುದು ಈ ಪುಸ್ತಕದಿಂದ ಗೊತ್ತಾಗುತ್ತದೆ.

◯ ಮುಂಬಯಿಯ ಕನ್ನಡ ವಿದ್ಯಾರ್ಥಿ ಸಂಘದ ಮುಖ ಪತ್ರವಾದ "ವಿದ್ಯಾರ್ಥಿ"ಯು ಈ ವರ್ಷದ ಸಂಚಿಕೆತುಂಬ ಆಕರ್ಷಕವಾಗಿ ಹೊರ ಬಂದಿದೆ. "ಸಾಹಿತ್ಯವು ಜೀವನವನ್ನು ರೂಪಿಸಬಲ್ಲುದೆ?" ಎಂಬ ವಿಷಯದ ಮೇಲೆ ಕಾದಂಬ ಉತ್ತರ ಕೊಡುವ ಮೂರು ವಿಶೇಷ ಲೇಖನಗಳಲ್ಲದೆ ಬೇರೆ ಕೆಲವು ವಿಚಾರ ಪ್ರಚೋದಕ ಬರೆಹಗಳೂ ಕತೆ ಕವಿತೆಗಳೂ ಇದರಲ್ಲಿದ್ದು, ಕನ್ನಡದ ಮೇಲೆ ವಿದ್ಯಾರ್ಥಿಗಳಿಗಿರುವ ಆಸಕ್ತಿ ಮತ್ತು ಪ್ರೌಢಿಮೆಯನ್ನು ಅವು ತೋರಿಸಿಕೊಡುತ್ತವೆ. ಕನ್ನಡದ ಬಾವುಟವನ್ನು ಮುಂಬಯಿಯಲ್ಲಿ ಈ ವಿದ್ಯಾರ್ಥಿಗಳು ಮುಂದಕ್ಕೂ ತಮ್ಮ ವ್ಯಾಪಕ ಚಟುವಟಿಕೆಗಳ ಮೂಲಕ ಎತ್ತಿಹಿಡಿಯಲೆಂದು ಹಾರೈಸುತ್ತೇವೆ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. o. Box No. 3219, BOBMAY 3-

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದನ್ನು ಮನಿಯಾರ್ಡರ್ ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇವೆ.

ಜನಾದರಣೀಯವಾದ ಪುಸ್ತಕಗಳು

ಕೆಲವೇ ಪ್ರತಿಗಳಿವೆ! ಈಗಲೇ ತರಿಸಿಕೊಳ್ಳಿ!

—ಹಿಂದಿನಿಂದ ನಿರಾಶರಾಗಬೇಡಿ!—

ವಾಚನಾಲಯದವರಿಗೆ ಯೋಗ್ಯಕಮೀಶನ್ನು!

ವ್ಹಿ. ಪಿ. ಇಲ್ಲ! ಮುಂಗಡ ಹಣ ಕಳಿಸಬೇಕು!!

೨ ಕಾದಂಬರಿ! ೨ ನಾಟಕ! ೩ ಕಥೆಗಳು! ೧ ಪ್ರಬಂಧ!

೧ ತೆರೆದ ಕಣ್ಣು (ಕಾ.)	೩-೦-೦	೫ ಆರು ಕಥೆಗಳು	೧-೪-೦
೨ ಸ್ವಾಭಿಮಾನ (ಕಾ.)	೩-೮-೦	೬ ಪ್ರತಿಫಲ ಇ. ಕಥೆಗಳು	೧-೪-೦
೩ ಸಂಗೊಳ್ಳಿರಾಯಣ್ಣ (ನಾ.)	೧-೮-೦	೭ ವೀರಾಗ್ರಣಿ ಎಚ್ಚಮ	೦-೫-೦
೪ ವಿಜಯಸಾಮ್ರಾಜ್ಯ (ನಾ.)	೧-೮-೦	೮ ಕನ್ನಡ ಸಾಹಿತ್ಯವಾಹಿನಿ	೨-೮-೦

ಮೇಲಿನ ೮ ಪುಸ್ತಕಗಳನ್ನು ಒಮ್ಮೆಲೆ ೧೪-೧೨-೦ ರೂ. M. O. ಕಳಿಸಿದವರಿಗೆ ಅಂಚೆ ವೆಚ್ಚ ನಾವೇ ವಹಿಸಿಕೊಂಡು ಪುಕ್ಕಟೆಯಾಗಿ ಕಳಿಸುವೆವು.

—ಯಾವ ಪುಸ್ತಕಗಳು ಬೇಕಾದರೂ ಬರೆಯಿರಿ—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

(೨ನೇ ಪುಟದಿಂದ)

ಸಹ ಪ್ರಾಧ್ಯಾಪಕರು ಮತ್ತು ಮೆಸಾಚು ಸೆಟ್ಸ್ ಸ್ಮಾರಕ ಆಸ್ಪತ್ರೆಯಲ್ಲಿ ರಕ್ತದ ಅಧಿಕ ಒತ್ತಡಕ್ಕೆ ಸಂಬಂಧಿಸಿದ ವಿಭಾಗ ದ ಮುಖ್ಯಾಧಿಕಾರಿಗಳು. ಇವರು ೧೯೫೦ ರಲ್ಲಿ ಬ್ರಿಟಿಷ್ ಹಾರ್ಟ್ ಜರ್ನಲ್‌ನಲ್ಲಿ ಡಾ। ರುಸ್ತುಂಜಿ ವಕೀಲರು ಮುಂಬಯಿ ಯ ಕಿಂಗ್ ಎಡ್ವರ್ಡ್ ಸ್ಮಾರಕ ಆಸ್ಪತ್ರೆ ಯಲ್ಲಿ ಜರಗಿದ ಸರಳ ಪ್ರಯೋಗವೊಂದ ರ ಬಗ್ಗೆ ಬರೆದ ವಿವರಣಾತ್ಮಕ ಲೇಖನ ವನ್ನೋದಿದರು.

'ನಾವು ವಕೀಲರ ವರದಿಯನ್ನು ಮೊದಲು ಓದಿದಾಗ ಅದು ಒಳ್ಳೆ ಯ ವರದಿಯೆಂದು ಕಂಡು ಬಂತು. ಯಾರಿಗೂ ಯಾವುದನ್ನೂ ಮರೆ ಮಾ ಡಲಿಚ್ಛಿಸದ ಪ್ರಾಮಾಣಿಕ ವಿಜ್ಞಾ ನಿಯಂತೆ ಅವರು ಬರೆದಿದ್ದರು' ಎಂದು ಅನಂತರ ಡಾ. ವಿಲ್ಕಿನ್ಸ್ ನುಡಿದರು.

ಡಾ. ವಿಲ್ಕಿನ್ಸ್‌ರು ವೈದ್ಯಕೀಯ ಸಂ ಶೋಧನೆಯ ಇ. ಆರ್. ಸ್ಕ್ವಿಬ್ ಇನ್ ಸ್ಟಿಟ್ಯೂಟ್‌ನಲ್ಲಿ ಮಾತನಾಡುತ್ತ 'ನಿಮಗೆ ಭಾರತದಿಂದ ಕೆಲವು ಸರ್ಪಗಂಧದ ಗುಳಿ ಗೆಗಳನ್ನು ಪಡೆಯಲು ಸಾಧ್ಯವಿದ್ದರೆ ನ ಮಗದನ್ನು ಪ್ರಯೋಗಿಸಿ ನೋಡುವ ಇ ಚ್ಛೆಯಿದೆ' ಎಂದು ತಮ್ಮ ಮಿತ್ರರಿಗೆ ಹೇಳಿ ದರು.

೧೯೫೨ನೇ ಇಸವಿಯ ಆದಿಯಲ್ಲಿ ಡಾ. ವಿಲ್ಕಿನ್ಸ್ ಮತ್ತವರ ಸಹ ಕಾರ್ಯಕರ್ತ ರು ತಮ್ಮ ಪ್ರಾಥಮಿಕ ವರದಿ ಸಲ್ಲಿಸಿ ದ್ರು. ಎಂಟು ತಿಂಗಳುಗಳ ವರೆಗೆ ಐವತ್ತ ಕ್ಕಿಂತಲೂ ಹೆಚ್ಚಿನ ರೋಗಿಗಳ ಮೇಲೆ ಪರೀಕ್ಷೆ ಜರಗಿಸಿದ ನಂತರ ಈ ಮೂಲಿಕೆ ಯು ರಕ್ತದ ಒತ್ತಡವನ್ನು ತಗ್ಗಿಸಬಲ್ಲ ದೆಂದು ಅವರಿಗೆ ಮನವರಿಕೆಯಾಯಿತು.

ಸಾಧಾರಣ ಇದೇ ಕಾಲದಲ್ಲಿ ಅಮೇರಿ ಕದ ಇತರ ಅನೇಕ ಸಾಹಸಿ ಔಷಧ ನಿ ರ್ಮಾಪಕ ಸಂಸ್ಥೆಗಳು ಪರಿಶೀಲನೆಯನ್ನು ಪ್ರಾರಂಭಿಸಿದವು. ಕ್ಯಾಲಿಫೋರ್ನಿಯದ ಲಾಸ್ ಏಂಜಲೀಸ್‌ನಲ್ಲಿ ಡಾ. ಜೋರ್ಜ್ ಮೋಸನ್‌ರು ಪ್ರಾಣಿಗಳ ಮೇಲೆ ಪ್ರಯೋ ಗಿಸಿ ಈ ಮೂಲಿಕೆಯ ಪರಿಣಾಮಗಳನ್ನು ಪರೀಕ್ಷಿಸಿದರು. ಇದರ ರಾಸಾಯನಿಕ ಘ ಟನೆಗಳು ರಕ್ತದ ಒತ್ತಡವನ್ನು ನಿಯಂ ತ್ರಿಸುವ ನರಗಳ ಮೇಲೆ ನೇರವಾಗಿ ಕೆಲ ಸ ಮಾಡುವುದಿಲ್ಲವೆಂದೂ, ಅಥವಾ ರಕ್ತ ಕೋಶಗಳ ಮೇಲೆ ನೇರವಾಗಿ ಕೆಲಸ ಮಾಡುವುದಿಲ್ಲವೆಂದೂ, ಪ್ರಾಯಶಃ ಹೈ ಪೋಥಲಮಸ್ ಎಂಬ ಮಿದುಳಿನ ಆಳದ ಲ್ಲಿರುವ ಭಾಗದ ಮೇಲೆಯೇ ನೇರವಾಗಿ ಪ್ರಭಾವ ಬೀರುವುದೆಂದೂ ಕಂಡು ಹಿಡಿ ಯಲು ಈ ಪರೀಕ್ಷೆಗಳಿಂದ ಸಹಾಯವಾ ಯಿತು.

ಸೀಬಾ ಫಾರ್ಮಸ್ಯುಟಿಕಲ್ ವರ್ಕ್ಸ್‌ ಇದರಲ್ಲಿನ ಅನೇಕ ವಿಜ್ಞಾನಿಗಳು ಇದರ ಬಗ್ಗೆ ಸಂಶೋಧನೆಗೆ ತೊಡಗಿದ್ದರು.

ಪ್ರಕೃತ ಈ ಮೂಲಿಕೆಯಿಂದ ತಯಾ ರಿಸಿದ ನಾಲ್ಕು ವಿಧದ ಔಷಧಿಗಳನ್ನು ಲೋಕದ ಕೋಟಿಗಟ್ಟಲೆ ರೋಗಿಗಳಿಗೆ ಕೊಡಲಾಗುತ್ತದೆ. ಸೆರ್ಪಸಿಲ್, ರಾಡೊ ಕ್ಸಿನ್, ರಾವಿಲ್ಲೋಯ್ಡ್ ಮತ್ತು ರೆಸಿಪಿಲ್ ಎಂಬ ವ್ಯಾಪಾರ ಚಿಹ್ನೆಗಳ ಹೆಸರಿನಿಂದ ಈ ನಾಲ್ಕು ಔಷಧಗಳನ್ನು ಒದಗಿಸಲಾ ಗುತ್ತದೆ. ಹೆಚ್ಚಿನ ಔಷಧಗಳನ್ನು ರಕ್ತದ ಒತ್ತಡದ ಅವ್ಯವಸ್ಥೆಗಳ ಚಿಕಿತ್ಸೆಗೆ ಬಳಸ ಲಾಗುತ್ತಿದೆಯಾದರೂ, ಭಾವೋದ್ವೇಗದ ಅವ್ಯವಸ್ಥೆಗಳಿಗೂ ಕೆಲವು ಔಷಧಗಳನ್ನು ಉಪಯೋಗಿಸಲಾಗುತ್ತದೆ.

'ನಾವು ಭಾರತದ ನಮ್ಮ ಸಹೋ ದ್ಯೋಗಿಗಳಿಗೆ ತುಂಬ ಋಣಿಗಳಾಗಿದ್ದೇ ವೆ. ಅವರು ಸರ್ಪಗಂಧದ ಮೂಲಿಕೆಗಳ ಮೂಲಕ ಬಹಳ ಸಾಮಾನ್ಯವೂ ಭೀಕ ರವೂ ಆಗಿರುವ ಕೆಲವು ಹಳೆಯ ರೋಗ ಗಳ ಚಿಕಿತ್ಸೆಯಲ್ಲಿ ನವವಿಧಾನವನ್ನನುಸರಿ ಸಲು ಮಾರ್ಗದರ್ಶನವಿತ್ತು ಸಹಾಯ ಮಾಡಿದ್ದಾರೆ' ಎಂದು ಬಾಸ್ಟನ್ ವಿಶ್ವ ವಿದ್ಯಾನಿಲಯದ ಡಾ। ವಿಲ್ಕಿನ್ಸ್‌ರು ಸಹ ಜವಾಗಿ ಭಾರತಕ್ಕೆ ಕೃತಜ್ಞತಾರ್ಪಣೆ ಮಾಡಿದ್ದಾರೆ.

ಮನುಷ್ಯನು ಆರೋಗ್ಯ ಸಾಧನಗಳ ಅನ್ವೇಷಣೆಯಲ್ಲಿ ಅನೇಕ ದಿಶೆಗಳಲ್ಲಿ ಸಂ ಚರಿಸುತ್ತಾನೆ. ಕೆಲವು ಬಾರಿ ಇವುಗಳು ಹೊಸತಾಗಿ ಕಂಡು ಹಿಡಿಯಲ್ಪಡುತ್ತವೆ. ಅಥವಾ, ಕೆಲವು ಬಾರಿ ಹಳೆಯವುಗಳನ್ನೇ ಪುನಃ ಸಂಶೋಧಿಸಿ, ಅಭಿವೃದ್ಧಿಗೊಳಿಸ ಲಾಗುತ್ತದೆ. ಅಮೇರಿಕದಲ್ಲಿ ಪ್ರಾಚೀನ ಪೌರ್ವಾತ್ಯ ಮೂಲಿಕೆಗಳ ಪುನಃ ಸಂಶೋ ಧನೆ ಮತ್ತು ಅಭಿವೃದ್ಧಿಗಳಾಗುತ್ತಿರುವುದು ಅಮೇರಿಕದ ವೈದ್ಯಕೀಯ ತಜ್ಞರ ತೆರೆದ ಮನಸ್ಸನ್ನು ಸೂಚಿಸುತ್ತದೆ; ಮತ್ತಿದು ಪ್ರಾಚೀನಭಾರತದ ಋಷಿಗಳಿಗೆ ಅಮೇರಿ ಕನರೂ ಬಹಳ ಋಣಿಗಳಾಗಿರುವರೆಂಬು ದನ್ನು ಸಾರಿ ಹೇಳುತ್ತದೆ. ಯಾತನೆಯ ಪರಿಹಾರವೆಂಬ ಮಾನವೀಯ ಕಾರ್ಯ ದಲ್ಲಿ, ಪೂರ್ವ ಪಶ್ಚಿಮಗಳ ಪ್ರಯತ್ನಗಳ ಸಂಗಮವನ್ನೂ ಇದು ಸೂಚಿಸುತ್ತದೆ.

—ಶ್ರೀ ಜಗದೀಶ್ ಆರ್.
ಮಾಲ್ಹೋತ್ರಾ.

ಸಿಲಿಕೋನ್— ಅಮೇರಿಕದಲ್ಲಿ ಪ್ರಾರಂಭವಾಗಿರುವ ಹೊಸ ಕೈಗಾರಿಕೆ

೨ನೇ ಜಾಗತಿಕ ಯುದ್ಧದ ನಂತರ ಅಮೇ ರಿಕದಲ್ಲಿ ಮರಳಿಗೆ ಸಂಬಂಧಿಸಿದ ದೊಡ್ಡ ಹೊಸಕೈಗಾರಿಕೆಯೊಂದು ತಲೆಯೆತ್ತಿದೆ ಮತ್ತಿ ದು ಅತಿ ವೇಗದಲ್ಲಿ ಅಭಿವೃದ್ಧಿಯಾಗುತ್ತಿದೆ.

ಸಿಲಿಕೋನ್‌ಗಳ ಉತ್ಪಾದನೆ ಮತ್ತು ಮಾರಾಟವೇ ಈ ಹೊಸ ಉದ್ದಿಮೆ. ಆಮ್ಲಜ ನಕದ ನಂತರ ಅತಿವಿಪುಲವಾಗಿ ದೊರೆಯು ವ ಮೂಲಧಾತುವಾಗಿರುವ ಸಿಲಿಕನ್‌ನಿಂದ ಮನುಷ್ಯನು ನಿರ್ಮಿಸುವ ರಾಸಾಯನಿಕ ವ ಸ್ತುಗಳನ್ನು ಸಿಲಿಕೋನ್ ಎಂದು ಕರೆಯಲಾ ಗುತ್ತಿದೆ. ಸಿಲಿಕನ್ ಮರಳಿನ ಮುಖ್ಯಾಂಶ ವಾಗಿದ್ದು, ಗಾಜು ಮತ್ತು ಕಾಂಕ್ರೀಟ್ ಮೊ ದಲಾದ ವಸ್ತುಗಳ ತಯಾರಿಕೆಯಲ್ಲಿದನ್ನು ವಿ ಸ್ತೃತ ಪ್ರಮಾಣದಲ್ಲಿ ಉಪಯೋಗಿಸಲಾಗು ತ್ತಿದೆ.

ಅಮೇರಿಕದಲ್ಲಿ ೨ನೇ ಜಾಗತಿಕ ಯುದ್ಧ ದ ಸಮಯದಲ್ಲಿ ಈ ಕೈಗಾರಿಕೆ ಪ್ರಾರಂಭವಾ ಯಿತು. ಆದರೆ 1910ರ ವರೆಗೆ ಇದನ್ನು ಬ ಳಕೆಗಾರರಿಗೆ ಪೂರೈಸಲು ಪ್ರಾರಂಭಿಸ ಲಿಲ್ಲ. ಈಗ ಈ ಕೈಗಾರಿಕೆಗೆ ವರ್ಷಕ್ಕೆ ಸಾಧಾ ರಣ 3 ಕೋಟಿ ಡಾಲರ್‌ಗಳಷ್ಟು ವ್ಯಾಪಾರವಾ ಗುತ್ತಿದೆ. ಬಹೂಪಯೋಗಿ ಸಿಲಿಕೋ ನ್‌ಗಳಿಗೆ ಇನ್ನೂ ಹೆಚ್ಚಿನ ಬಳಕೆಗಳ ಶೋಧ ವಾದಂತೆ, ಈ ಕೈಗಾರಿಕೆಗೆ ಇನ್ನೂ ಅಧಿಕ ವ್ಯಾಪಾರವಾಗುವುದೆಂಬ ನಿರೀಕ್ಷೆಯಿದೆ.

ಈಗಾಗಲೇ ಕೈಗಾರಿಕೆಯ 30 ಕ್ಷೇತ್ರಗಳ ಲ್ಲಿ ಸಿಲಿಕೋನ್‌ಗಳನ್ನುಪಯೋಗಿಸಲಾಗುತ್ತಿದೆ. ಸಿಲಿಕೋನ್‌ಗಳಿಗೆ ಶೀತ ಮತ್ತು ಉಷ್ಣಾಧಿಕ್ಯ ಗಳನ್ನು ಇದಿರಿಸುವ ಶಕ್ತಿಯಿದೆ, ಜಲನಿರೋ ಧಕ ಮತ್ತು ಕಳಂಕ ನಿರೋಧಕ ಶಕ್ತಿಗಳಿವೆ ಮತ್ತು ವಿಶೇಷ ರೀತಿಯಲ್ಲಿ ತಯಾರಿಸಿದಾಗ ಗಣನೀಯ ಪ್ರಮಾಣದಲ್ಲಿ ಅಂಟಿಕೊಳ್ಳುವ ಗುಣವಿದೆ, ಅಂಟಿಕೊಂಡಿರುವ ವಸ್ತುಗಳನ್ನು ಸಡಿಲು ಮಾಡಲು ಮತ್ತು ಬಂದು ವಸ್ತುವಿ ನಿಂದ ಗಾಳಿಯ ಗುಳ್ಳೆಗಳನ್ನು ನಿವಾರಿಸಲು ಇವು ಉಪಯುಕ್ತವಾಗುತ್ತವೆ.

ತೊಗಲಿಗೆ ವಾಯು ಬಂಧನವಾಗದ ರೀ ತಿಯಲ್ಲಿ ಜಲನಿರೋಧಕ ಶಕ್ತಿಕೊಡುವುದು ಸಿಲಿಕೋನುಗಳ ಇತ್ತೀಚಿಗಿನ ಉಪಯೋಗಗ ಳಲ್ಲೊಂದಾಗಿರುತ್ತದೆ. ಇತ್ತೀಚೆಗೆ ಮಿಚಿಗನ್ ನ ಮಿಡ್‌ಲೆಂಡಿನ ಡಾಕಾರ್ನಿಂಗ್ ಕಂಪೆನಿಯು ತಯಾರಿಸಿದ ಸಿಲಿಕೋನ್ ಉತ್ಪನ್ನವೊಂದನ್ನು ಸಮಗಾರರು ಬೂಟ್ಸ್‌ಗಳಿಗೆ ಜಲನಿರೋಧಕ ಗುಣವಿರುವ ಮೇಲ್ ಚರ್ಮವನ್ನು ತಯಾರಿ ಸಲು ಬಳಸುತ್ತಿದ್ದಾರೆಂದು ಕಂಪೆನಿ ವರದಿ ಮಾಡಿದೆ.

ಇದೇ ಸಮಯದಲ್ಲಿ ಜನರಲ್ ಇಲೆಕ್ಟ್ರಿಕ್ ಕಂಪೆನಿಯೂ, ತನ್ನ ಸಿಲಿಕೋನ್ ಉತ್ಪನ್ನ ವೊಂದನ್ನು ಸಮಗಾರರು ಜಲನಿರೋಧಕವಾ ಗಿರುವ ಚರ್ಮದ ಜ್ಯಾಕೆಟ್‌ಗಳ ತಯಾರಿಗೆ ಬಳಸುತ್ತಿರುವರೆಂದು ವರದಿ ಮಾಡಿತು.

ಈ ವರದಿಗೆ ಮುಂಚಿತವಾಗಿ, ಕೆಲವುಸಮ ಯದ ವರೆಗೆ ಕೃತಕ ವಸ್ತ್ರಗಳಿಗೆ ಉಪಯೋ ಗಿಸಲಾಗುತ್ತಿದ್ದ ಜಲನಿರೋಧಕ, ಕಳಂಕ ನಿ ರೋಧಕ ಸಿಲಿಕೋನ್ ಉತ್ಪನ್ನ ಗಳನ್ನು ಉಣ್ಣೆಯ ಬಟ್ಟೆಗಳಲ್ಲಿ ಯಶಸ್ವಿಯಾ ಗಿ ಪ್ರಯೋಗಿಸಲಾಗಿದೆಎಂದು ಪ್ರಕಟಿಸಲಾಗಿ ತ್ತು. ಸಿಲಿಕೋನ್‌ಗಳ ಪ್ರಯೋಗಕ್ಕೆ ಗುರಿ ಯಾದ ಬಟ್ಟೆಗಳು, ಜಲನಿರೋಧಕ ಮತ್ತು ಕಳಂಕ ನಿರೋಧಕ ಗುಣಗಳೊಂದಿಗೆ, ದರಿ ಯುವಿಕೆ, ನವೆತ ಮತ್ತು ಮಡಿಕೆಗಳನ್ನು ಇದಿರಿಸುವ ಗುಣಗಳನ್ನೂ ಪಡೆಯುವುವು. ಬಟ್ಟೆಗಳನ್ನು ಅನೇಕ ಬಾರಿ ಡ್ರೈ ಕ್ಲೀನಿಂಗ್ ಮಾಡಿದರೂ, ಸಿಲಿಕೋನ್‌ನ ಪದ ರು ನಷ್ಟವಾಗುವುದಿಲ್ಲವೆಂದೂ ತಿಳಿದುಬಂದಿದೆ.

ಈ ಕೈಗಾರಿಕೆಯ ಶೀಘ್ರ ಅಭಿವೃದ್ಧಿಯ ನ್ನು ಒಂದು ನಿದರ್ಶನದಿಂದ ಸ್ಪಷ್ಟಪಡಿಸಬಹು ದು: ಬಟ್ಟೆ ಸುಡದಂತೆ, ಇಸ್ತ್ರಿ ಪೆಟ್ಟಿಗೆಗೆ ಸಿಲಿ ಕೋನ್ ಮಿಶ್ರಿತ ಗೊದಿಕೆಯನ್ನು ಉಪಯೋ ಗಿಸಲು ಸಾಧ್ಯವಾಗಬಹುದೆಂದು, 1954 ನೇ ಆಗೋಸ್ತಿನಲ್ಲಿ ಜನರಲ್ ಇಲೆಕ್ಟ್ರಿಕ್ ಕಂಪೆನಿ ಯು ಸೂಚಿಸಿತು. ಕೇವಲ ಆರೇ ತಿಂಗಳುಗ ಳ ನಂತರ ಇಂಥ ಹೊದಿಕೆಗಳು ಮಾರಾಟ ಕ್ಕಾದಗಿದುವು

ಸಿಲಿಕೋನ್‌ನ ಇಂಥ ಇನ್ನೂ ಅನೇಕ ಉಪಯೋಗಗಳ ಬಗ್ಗೆ ಜನರಲ್ ಇಲೆಕ್ಟ್ರಿಕ್ ಕಂಪೆನಿಯು ಸೂಚನೆಯಿತ್ತಿದೆ.

ಅಮೇರಿಕದಲ್ಲೀಗ ಎರಡು ಸಿಲಿಕೋನ್ ಕಾರ್ಖಾನೆಗಳಿವೆ ಮತ್ತು ಮೂರನೇ ಕಾರ್ಖಾ ನೆಯೊಂದು ನಿರ್ಮಾಣವಾಗುತ್ತಿದೆ. ಸಿಲಿಕೋ ನ್‌ಗೆ ಬೇಳಿಕೆ ಹೆಚ್ಚಬಹುದೆಂಬ ನಿರೀಕ್ಷೆಯಿ ರುವುದರಿಂದ, ಇನ್ನೂಹೆಚ್ಚಿನ ಕಾರ್ಖಾನೆಗಳು ರಚಿತವಾಗುವುವು ಎಂದು ವೈಜ್ಞಾನಿಕ ವಲಯ ಗಳಿಂದ ತಿಳಿದುಬರುತ್ತದೆ.

BE YOUNG

Take "Elixir Aswaghandh" the pride of Ayurveda best nervine tonic quickly gives Radiant Health, removes constipation, relieves hip and back pain, Rheumatism, Vatharoga, Asthma, Bleeding Piles cured. Most popular and leading Vajikarana and Rasayana. 1 lb Rs. 10/-. Postage Extra. AYURVEDA VAIDYA T. V. JAYARAMA SASTRI, Veera Ragava Vaidyasala, Srirangam, S. India.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಒರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ $4\frac{1}{2}$%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ
! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಅಣು ಶಸ್ತ್ರಗಳ ಸ್ಫೋಟನ ಪ್ರಯೋಗ ವಿರುದ್ಧ ಅಮೇರಿಕೆಯ ಆರ್ಥಿಕ ನೆರವು

ಅಮೇರಿಕದ ರಾಜಧಾನಿಯಾದ ವಾಷಿಂಗ್‌ಟನ್ನಿನಲ್ಲಿ ಸನೇಟಿನ ಸಭೆ ಮೇ ೭ರಂದು ನೆರೆದಿದ್ದಾಗ ಅಲ್ಲಿಯ ವಿದೇಶಾಂಗ ನೆರವಿನ ವಿಭಾಗದ ಮುಖ್ಯಾಧಿಕಾರಿಗಳಾದ ಮಿ ಹೆರಾಲ್ಡ್ ಸ್ಟಾಸನರು "ಇಡೀ ವಿಶ್ವ ಮತ್ತು ಜಗತ್ತಿನ ಕಣ್ಣು ಈಗ ಭಾರತದಲ್ಲಿ ನಡೆಯುತ್ತಿರುವ ಅಗಾಧವಾದ ಅಭಿವೃದ್ಧಿ ಪ್ರಯತ್ನಗಳ ಕಡೆಗೆ ತಿರುಗಿದೆ" ಎಂದು ಸಾರಿದರು. ಇತಿಹಾಸದಲ್ಲಿ ಹಿಂದೆಂದೂ ನಡೆಯದ ಪ್ರಮಾಣದಲ್ಲಿ ಭಾರತದ ೩೭ ಕೋಟಿ ಜನತೆಯು ಅನಕ್ಷರತೆ, ಅಜ್ಞಾನ, ಬಡತನ ಮತ್ತು ರೋಗರುಜಿನಗಳ ವಿರುದ್ಧ ಹೋರಾಡುತ್ತಿದೆ; ಕಮ್ಯುನಿಸ್ಟರನ್ನು ಆಂಧ್ರದಲ್ಲಿ ಸೋಲಿಸಿ ಸಂಭ್ರಾಂತರನ್ನಾಗಿ ಮಾಡಿರುವುದೇ ಭಾರತದ ಅಭಿವೃದ್ಧಿಯ ಪ್ರತ್ಯಕ್ಷ ನಿದರ್ಶನ. ಆದುದರಿಂದ ಕಮ್ಯುನಿಸಮ್ಮಿನ ಅತಿಕ್ರಮಣವನ್ನು ತಡೆಗಟ್ಟಲು ಭಾರತಕ್ಕೆ ಅಭಿವೃದ್ಧಿಗೆ ನೆರವೀಯುವ ರೂಪದಲ್ಲಿ ಕೊಡಬೇಕೆಂದಿರುವ ೭೫ ಮಿಲಿಯ ಡಾಲರುಗಳನ್ನು ಮಂಜೂರು ಮಾಡಬೇಕು ಎಂದವರು ಸೆನೇಟನ್ನು ವಿನಂತಿಸಿದರು.

ದ್ರವ್ಯ ಸಹಾಯದ ಬಗ್ಗೆ ಹೀಗೆ ಅಮೇರಿಕದಲ್ಲಿ ಭಾರತದ ಯೋಗ್ಯತೆಯ ಪ್ರಶಂಸೆ ನಡೆಯುತ್ತಿದ್ದಾಗ, ಮದ್ರಾಸಿನಲ್ಲಿ ಶ್ರೀ ಅಶೋಕ ಮೆಹತರು ೯೦ ನಿಮಿಷಗಳ ಕಾಲ ಶ್ರೀ ರಾಜಗೋಪಾಲಾಚಾರಿಯವರೊಡನೆ ಮಾತನಾಡಿ ಸುದ್ದಿಗಾರರೊಡನೆ "ಈ ಸಂಭಾಷಣೆಯ ಪರಿಣಾಮವಾಗಿ ರಾಜಾಜಿ ನನ್ನನ್ನು ತನ್ನ ಅಭಿಪ್ರಾಯಗಳಿಗೆ ಮತಾಂತರಿಸಿದರು" ಎಂದರು. ಮತಾಂತರಕ್ಕೆ ಸಂಬಂಧಿಸಿದ ವಿಷಯವು ಅಮೇರಿಕವು ಭಾರತದ ಅಭಿವೃದ್ಧಿಗೋಸ್ಕರ ಕೊಡುವ ದ್ರವ್ಯ ಸಹಾಯವಾಗಿದ್ದಿತು. "ಅಮೇರಿಕವು ತನ್ನ ಅಣು ಬಾಂಬುಗಳ ಪರೀಕ್ಷಾರ್ಥ ಸ್ಫೋಟನಗಳನ್ನು ಇನ್ನೂ ನಡೆಸುತ್ತಾ ಹೋದರೆ, ಭಾರತ ಸರಕಾರವು ಅವರ ಹಣಸಹಾಯವನ್ನು ಅಂಗೀಕರಿಸಲು ನಿರಾಕರಿಸಬೇಕು" ಎಂಬುದೇ ರಾಜಾಜಿಯವರ ವಾದ. ಇದನ್ನು ಶ್ರೀ ಮೆಹತರು ಸಂಪೂರ್ಣ ಅನುಮೋದಿಸುತ್ತಾ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಮುಂದೆ ಈ ಅಭಿಪ್ರಾಯ ಮಂಡಿಸಲು ಮುಂದಾದರು. ಅಲ್ಲದೆ, ಮುಂದಿನ ಯೋಜನೆಯ ಅವಧಿಯಲ್ಲಿ ಅಮೇರಿಕದಿಂದ ನಮಗೆ ಸಿಗುವ ನೆರವು ೬೦೦ ಕೋಟಿ ರೂಪಾಯಿಗಳಷ್ಟಿರಬಹುದೆಂದು ಅಂದಾಜು ಕಟ್ಟುತ್ತಾ ಹೀಗೆ ಹೇಳಿದರು:—

"ಅಮೇರಿಕ ಮುಂತಾದ ಅನ್ಯ ರಾಷ್ಟ್ರಗಳಿಂದ ಧಾರಾಳ ಸಹಾಯವನ್ನು ಪಡೆಯದೆ ಸದ್ಯದ ಸ್ಥಿತಿಯಲ್ಲಿ ಭಾರತವು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಕಷ್ಟದ ಕೆಲಸವೆಂದು ರಾಜಾಜಿ ಚೆನ್ನಾಗಿ ಬಲ್ಲರು. ಆದರೆ, ಸಹಾಯ ಸ್ವೀಕರಿಸಲು ನಮಗೆಷ್ಟೇ ಆತುರವಿರಲಿ, ನಮ್ಮ ನಿವೇದನೆಯು ಅಮೇರಿಕದ ಮೇಲೆ ಪರಿಣಾಮಕಾರಿಯಾಗುವಂತೆ ಮಾಡುವುದಕ್ಕೋಸ್ಕರ ನಾವದನ್ನು ಬಿಟ್ಟುಬಿಡಲು ಸಿದ್ಧರಿರಬೇಕು. ನಮ್ಮ ವಿರೋಧಿಯೊಬ್ಬನಿದ್ದರೂ ಆತನ ಹೃದಯ ಪರಿವರ್ತನೆಗೋಸ್ಕರ ತ್ಯಾಗಕ್ಕೆ ಸಿದ್ಧರಿರಬೇಕೆಂದು ಗಾಂಧೀಜಿ ಬೋಧಿಸಿದರು. ನಮಗೆ ಅತ್ಯಾವಶ್ಯಕವಿರುವುದನ್ನೆ ಸ್ವಯಂ ಪ್ರೇರಣೆಯಿಂದ ತ್ಯಜಿಸಿದ ಪಕ್ಷದಲ್ಲಿ ಅದರಿಂದ ನಮ್ಮ ಕೇಳಿಕೆಯ ತೂಕ ಹೆಚ್ಚುತ್ತದೆ". ಅಮೇರಿಕಕ್ಕೆ ಮಾಡಿಕೊಂಡ ವಿಜ್ಞಾಪನೆಯು ರಕ್ತಕ್ಕೊಪ್ಪುವಂತೆ ಉಪಯುಕ್ತವಾಗುವುದೆಂದು ರಾಜಾಜಿಯ ಅಭಿಪ್ರಾಯವೆಂದೂ ಮೆಹತರು ತಮ್ಮ ಹೇಳಿಕೆಯಲ್ಲಿ ತಿಳಿಸಿದರು.

ನೆರವಿನ ನಿರಾಕರಣೆಯ ಕುರಿತು ರಾಜಾಜಿ ಮೇ ಮೊದಲನೇ ತಾರೀಕಿನಂದು ಸಾರ್ವಜನಿಕವಾಗಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರು. ಮದ್ರಾಸಿನಲ್ಲಿ ನೆರೆದಿದ್ದೊಂದು ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ಅವರು ರಾಜಕಾರಣದಿಂದ ದೂರವಿರುವಂತೆ ತೋರುತ್ತದೆ; ಆದರೆ ಬಹಳ ಗಂಭೀರವಾದ ಸಮಸ್ಯೆಗಳ ಮೇಲೆ ಅವರು ನಾಗರಿಕನಾಗಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸುತ್ತಿದ್ದಾರೆ; ರಾಜಕೀಯ ಧುರೀಣನಾಗಿದ್ದಾಗಿನದಕ್ಕಿಂತಲೂ ಹೆಚ್ಚು ತೀಕ್ಷ್ಣವಾದ ರೀತಿಯಲ್ಲೀಗ ಅವರು ಮಾತನಾಡುತ್ತಿದ್ದಾರೆಂದರೂ ಸಲ್ಲುತ್ತದೆ. ಭಾರತ ಸರಕಾರಕ್ಕೆ ತನ್ನ ಹೇಳಿಕೆಗಳಿಂದ ತಲೆಬಿಸಿತವುಂಟಾಗುತ್ತಿಲ್ಲವೆ ಎಂದೆಲ್ಲ ಆಲೋಚಿಸಲು ಅವರು ಹೋಗುವುದಿಲ್ಲ—ತನ್ನ ಹೇಳಿಕೆಯ ತಿರುಳನ್ನು ಗ್ರಹಿಸುವುದೂ ಬಿಡುವುದೂ ಸಂಬಂಧಿಸಿದವರಿಗೆ ಸೇರಿದ್ದೆಂದು ಅವರ ಅಂಬೋಣ. ತನ್ನೊಬ್ಬನ ವಾಣಿಗೆ ಅಷ್ಟು ಬೆಲೆ ಬರಲಾರದು—ತನ್ನ ಮಾತಿನ ಸ್ಫೂರ್ತಿಯಿಂದ ಸಾರ್ವಜನಿಕ ಚಳವಳವೇ ನಡೆಯಬೇಕು. ಹಾಗೆ ಜನತೆ ಆಂದೋಲನಗೈದರೆ ಮಾತ್ರ ಅವರನ್ನು ಪ್ರತಿನಿಧಿಸುವ ಶಾಸನ ಕರ್ತರಿಗೆ, ನೈತಿಕ ಬೆಂಬಲ ಸಿಗುತ್ತದೆ; ಆಗ ಸರಕಾರದ ಧೋರಣೆಯ ಮೇಲೂ ಪರಿಣಾಮವಾಗುತ್ತದೆ ಎಂದವರು ಬಲ್ಲರು.

ತಮ್ಮ ಮಾತಿನ ಸ್ಪಷ್ಟೀಕರಣವೊಂದನ್ನು ರಾಜಾಜಿ ಹಿಂದಿನಿಂದ ಕೊಟ್ಟರು. ತಾನು "ಬಹಿಷ್ಕಾರ" ಎಂಬ ಶಬ್ದವನ್ನು ಪ್ರಯೋಗಿಸಿಲ್ಲ ಎಂದರು. ಆದರೆ ತ್ಯಾಗಮನೋಭಾವದ ಬಲದಿಂದ ಅಮೇರಿಕದ ನೆರವನ್ನು ನಿರಾಕರಿಸಲು ನಾವು ಸಮರ್ಥರಾಗುವುದರಿಂದ ಪ್ರಯೋಜನವಿದೆ ಎಂಬ ಅಭಿಪ್ರಾಯವನ್ನು ಒತ್ತಿ ಹೇಳಿದರು. "ಅಮೇರಿಕದೊಡನೆ ಸ್ನೇಹವನ್ನು ಬಿಡಬೇಕೆಂದು ನಾನು ಕೇಳುತ್ತಿಲ್ಲ. ಕಾಲ ಮತ್ತು ವ್ಯಾಪ್ತಿಯಲ್ಲಿ ನನ್ನ ಸಲಹೆ ಪರಿಮಿತಿಯಿಂದ ಕೂಡಿದೆ" ಎನ್ನುತ್ತಾ ಭಾರತದಲ್ಲಿ ಬ್ರಿಟಿಷರ ಸರಕಾರದೊಡನೆ ನಡೆಸಿದ ಅಸಹಕಾರ ಆಂದೋಲನದ ನೆನಪನ್ನು ಅವರು ಮಾಡಿಕೊಟ್ಟರು. "ಹಾಗೆ ಅಸಹಕರಿಸುವುದು ತಪ್ಪೆಂದು ಆಗ ಕೆಲವರು ಹೇಳಿದ್ದರು; ಆದರೆ ಅದಕ್ಕೆ ಕಿವಿಗೊಡದೆ ಹೋದುದರಿಂದಲೇ ಬ್ರಿಟಿಷರ ಆಳ್ವಿಕೆಯ ಅಂತ್ಯಕ್ಕೆ ನಾಂದಿಯನ್ನು ಹಾಡಿದಂತಾಯಿತು. ಈಗ ನಮಗೆ ಸ್ವಾತಂತ್ರ್ಯ ಸಿಕ್ಕಿದೆಯಲ್ಲದೆ, ೨೭ ವರ್ಷ ಅಸಹಕಾರ ನಡೆಸಿದ ಬಳಿಕವೂ ಬ್ರಿಟಿಷರೊಡನೆ ಸ್ನೇಹ ಮತ್ತು ಸೌಹಾರ್ದ ಸಂಬಂಧವನ್ನು ನಾವು ಉಳಿಸಿಕೊಂಡಿದ್ದೇವೆ. ಆದುದರಿಂದ ನನ್ನ ಸಲಹೆಯಿಂದ ಅಮೇರಿಕನ್ನರೊಡನೆ ಸ್ನೇಹ ವಿಚ್ಛೇದವಾಗುವ ಸಂಭವದ ಅಪಾಯವೇನೂ ಇಲ್ಲ" ಎಂದು ರಾಜಾಜಿ ತಮ್ಮ ನಿಲುವೆಯನ್ನು ತರ್ಕಶುದ್ಧ ರೀತಿಯಲ್ಲಿ ಪ್ರತಿಪಾದಿಸಿದರು.

ಮದ್ರಾಸಿನ ಸಭೆಯಲ್ಲಿ ರಾಜಾಜಿ ಹಾಕಿದ್ದ ಪ್ರಶ್ನೆ ಇದು— "ಅಮೇರಿಕದ ನೆರವನ್ನು ಸ್ವೀಕರಿಸಿದರೆ, ಅವರೊಡನೆ ನಾವು ಅಸಹಕರಿಸುವುದು ಹೇಗೆ? ಮತ್ತು ಅಣುಶಸ್ತ್ರಗಳ ಪ್ರಯೋಗವನ್ನು ನಾವು ಪ್ರತಿಭಟಿಸುತ್ತೇವೆ ಎಂದು ಹೇಳುವುದು ಹೇಗೆ?" ರಾಜಕಾರಣಿಗಳು ಇದಕ್ಕೆ ಕೊಡಬಹುದಾದ ಉತ್ತರವನ್ನು ಊಹಿಸುತ್ತಾ "ನಾವು ಯಾವುದೇ ಬಂಧನವಿಲ್ಲದೆ ನೆರವನ್ನು ಸ್ವೀಕರಿಸುತ್ತಿದ್ದೇವೆ ಎಂಬುದು ನಿಜ. ಪಾಕಿಸ್ತಾನ, ಸಿಂಹಳ, ಇರಾಕ್, ಲೆಬನಾನ್, ಥೈಲೆಂಡ್ ಮುಂತಾದ ರಾಷ್ಟ್ರಗಳಿಗೆ ನೀಡಲಾದ ನೆರವಿಗೂ ಯಾವುದೇ ನಿರ್ಬಂಧವಿರಲಿಲ್ಲ. ಆದಾಗ್ಯೂ ಬಾಂಡುಂಗಿನ ಪರಿಷತ್ತಿನಲ್ಲಿ ಆ ರಾಷ್ಟ್ರಗಳ ನಿಲುವೆ ಹೇಗೆ ವ್ಯಕ್ತವಾಯಿತು?" ಎಂದು ರಾಜಾಜಿ ಕೇಳಿದರು. "ಸ್ಫೋಟನ ಪ್ರಯೋಗಗಳನ್ನು ಆಕ್ಷೇಪಿಸುತ್ತೇವಾದರೆ, ಮತ್ತು ಅದೇ ಸಮಯದಲ್ಲಿ ಅಮೇರಿಕದ ನೆರವನ್ನು ಸ್ವೀಕರಿಸುತ್ತಿದ್ದರೆ, ನಾವು ಯಾವ ಪರಿಣಾಮವನ್ನೂ ಮೂಡಿಸಲು ಸಮರ್ಥರಾಗುವುದಿಲ್ಲ. ನೈತಿಕ ಬಂಧನದಷ್ಟು ಬೇರಾವುದೇ ನಿರ್ಬಂಧವು ಬಲವಾದುದಲ್ಲ. ತ್ಯಾಗವಿಲ್ಲದೆ ನೈತಿಕ ಶಕ್ತಿ ದೊರಕುವುದಿಲ್ಲ."

ನಾವು ತೆರಿಗೆ ರೂಪದಲ್ಲಿ ಒದಗಿಸಿ ಕೊಡುತ್ತಿರುವ ಹಣದ ಕ್ಷುಲ್ಲಕ ಅಂಶವೊಂದು ನೆರವಿನ ರೂಪದಲ್ಲಿ ಅಮೇರಿಕದಿಂದ ಸಿಗುತ್ತದೆ; ಆ ನೆರವು ಸ್ಫೋಟನ ಪ್ರಯೋಗಗಳ ಹಿನ್ನೆಲೆಯಲ್ಲಿ ದೂಷಿತವಾಗಿದೆ ಎಂದು ರಾಜಾಜಿ ಬೋಧಿಸಿದರು. ಕಲಂಕದಿಂದ ಕೂಡಿದ ಈ ಹಣ ಬೇಡವೆಂದರೆ ಅಮೇರಿಕದ ಸರಕಾರ, ಮತ್ತು ಜನತೆ ಕಣ್ಣು ತೆರೆಯುತ್ತದೆ ಎನ್ನುತ್ತಾ "ಇದೇ ನನ್ನ ಸಲಹೆಯ ತಿರುಳು" ಎಂದರು.

ರಾಜಾಜಿಯವರು ಅಣುಶಕ್ತಿಯನ್ನು ರಚನಾತ್ಮಕ ಕೆಲಸಗಳಿಗೆ ಉಪಯೋಗಿಸುವ ವಿಚಾರದಲ್ಲೂ ಕೆಲವು ಕಠಿಣ ಮಾತುಗಳನ್ನು ಆಡಿದರು. ರಾಜಕಾರಣಿಗಳು ಈ ಕುರಿತು ಬಹಳ ಪ್ರಚಾರ ಮಾಡುತ್ತಿರುವರೆಂದು ಹೇಳುತ್ತಾ ಜನರು ಇದಕ್ಕೆ ಮಾರುಹೋಗಬಾರದೆಂದು ಎಚ್ಚರಿಸಿದರು. "ನಾವು ಈ ಕುರಿತು ಅಷ್ಟು ಉತ್ಸಾಹವನ್ನು ತೋರಿಸುವುದಕ್ಕೆ ಅವಸರಪಡಬೇಕಾಗಿಲ್ಲ; ಒಂದು ಕೇಂದ್ರದ ಸ್ಥಾಪನೆಯಾಗಬೇಕಾದರೂ ಅನೇಕ ವರ್ಷ ಕಳೆಯುತ್ತದೆ' ಎಂದರು. ಅಲ್ಲದೆ ಭಾರತದಲ್ಲಿ ನಾವು ಇದರ ಕುರಿತು ಯೋಚಿಸಬೇಕಾಗಿಯೇ ಇಲ್ಲವೆಂದರು.

ಜನರನ್ನು ಪ್ರಚಾರಕರು ವಂಚನೆಗೆ ಗುರಿಮಾಡುವರೆಂದು ಹೇಳುತ್ತಾ ಅಣುಶಕ್ತಿಯು ಕಲ್ಲಿದ್ದಲಿಗಿಂತ ೨೦೦೦೦ ಪಾಲು ಅಗ್ಗದಲ್ಲಿ ದೊರಕುವುದೆಂಬ ಹೇಳಿಕೆಯನ್ನು ಪ್ರಸ್ತಾಪಿಸಿದರು. ಇದು ಸರಿಯಲ್ಲ—ಅಣುಶಕ್ತಿಯು ನಮ್ಮ ಉಪಯೋಗಕ್ಕೆ ದೊರಕುವಂತೆ ಅದನ್ನು ಅಳವಡಿಸಿಕೊಳ್ಳುವ ಉಪಾಯಕ್ಕೆ ತಗಲುವ ಖರ್ಚನ್ನು ಕಣ್ಣ ಮುಂದಿಟ್ಟುಕೊಂಡರೆ ಕಲ್ಲಿದ್ದಲಿಗಿಂತ ೨೫% ಲಾಭವನ್ನು ಮಾತ್ರ ಅದು ತಂದು ಕೊಟ್ಟೀತು. ಆದರೆ ಇಲ್ಲಿ ಸಹ ವಿಧ್ವಂಸಕ ಉದ್ದೇಶಗಳಿಗೆ ಉಪಯೋಗಿಸುವಾಗ ಉಂಟಾಗುವ ಎಲ್ಲ ಅನಿಷ್ಟ ಪರಿಣಾಮಗಳಿಗೆ ಎಡೆ ಇದೆ—ರಚನಾತ್ಮಕ ಉದ್ದೇಶಗಳಿಗೆ ಬಳಸುವ ಕ್ರಿಯೆಯಲ್ಲಿ ನಿರತರಾದ ಕೆಲಸಗಾರರಿಗಷ್ಟೇ ಅಲ್ಲ, ಇತರರಿಗೂ ಹಾನಿಯಾಗುವುದು ತಪ್ಪದು. ಈ ದೃಷ್ಟಿಯಿಂದ ನಮ್ಮ ಕಲ್ಲಿದ್ದಲು ಮುಂತಾದ ಈಗಿನ ಉರುವಲುಗಳ ಭಂಡಾರ ಮುಗಿದ ಬಳಿಕವೇ ಅಣುಶಕ್ತಿಯನ್ನು ಉತ್ಪಾದಕ ಕಾರ್ಯಗಳಿಗೆ ಬಳಸುವ ಕುರಿತು ವಿಚಾರ ನಡೆಸಿದರೆ ಸಾಕು ಎಂದವರ ಖಚಿತ ಅಭಿಪ್ರಾಯ.

(೧ನೇ ಪುಟದಿಂದ)

ನ ನಿಲುವೆಯನ್ನು ನಿರ್ಧರಿಸುವುದು ಯೋಗ್ಯ. ಸಂಸತ್ತಿನ ಸದಸ್ಯರು ಈಗಾಗಲೇ ಇಂಥ ಸಹಕಾರವನ್ನು ಕೊಡಲು ಮುಂಬಂದಿದ್ದಾರೆ. ಶ್ರೀಗಳಾದ ನಿಜಲಿಂಗಪ್ಪ, ಗೋಪಾಲನ್, ಅಶೋಕ ಮೆಹತ, ಲಂಕಾಸುಂದರಂ ಮುಂತಾದ ಎಲ್ಲ ಪಕ್ಷಗಳ ಪ್ರತಿನಿಧಿಗಳಿರುವ ಸಮಿತಿಯೊಂದು ಗೋವೆ ಮತ್ತಿತರ ಪೋರ್ಚುಗೀಜ ವಸಾಹತುಗಳ ಆಂದೋಲನದ ಕುರಿತು ಜನರಲ್ಲಿ ಜಾಗೃತಿಯನ್ನುಂಟುಮಾಡಲು ಏರ್ಪಟ್ಟಿರುತ್ತದೆ. ಈ ಸಮಿತಿಯು ಸರಕಾರದೊಡನೆ ಸಂಬಂಧವಿಟ್ಟುಕೊಂಡು ಜನತೆಯ ಆಶೆ ಆಕಾಂಕ್ಷೆಗಳನ್ನು ಆಗಿಂದಾಗ್ಗೆ ತಿಳಿಸುತ್ತಾ ವಿಧಾಯಕ ಸೂಚನೆ ಮಾಡಿದರೆ ಅದರಿಂದ ಪ್ರಯೋಜನ ದೊರಕಬಲ್ಲುದು.

—ಕಾರ್ತಿಕೇಯ

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಮನಸ್ಸಿಗೆ ಶಾಂತಿ ಬೇಕೇ?

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ತಿಳಿಗನ್ನಡಿ'ಎಂಬ ಭಗವದ್ಗೀತೆಯನ್ನು ಓದಿರಿ.

ಗೀತೆಯ ತಿಳಿಗನ್ನಡಿ

ಬೆಲೆ: ಉತ್ತಮ ಪ್ರತಿ ರೂ. 0-12-0

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

Edited, Printed & Published By K. H. Shetty at the Navayuga Press, Udipi, S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೪ VOL. 34

ಉಡುಪಿ, 19—5—1955

ಸಂಚಿಕೆ ೩೭ NO. 37

ರಾಯರು ಮರಣಾಸನ್ನರಾಗಿದ್ದರು. ಹೆಂಡತಿಗೆ ಕೊನೆಯ ಮಾತನ್ನು ಹೇಳಬಯಸಿ "ನೋಡು, ಆ ರಾಮರಾಯನಿಂದ ನಮಗೆ ೫೦೦ ರೂಪಾಯಿ ಬರಬೇಕು" ಎಂದರು.

ಹೆಂಡತಿ ಸುತ್ತ ನೆರೆದಿದ್ದವರೊಡನೆ "ಕೇಳಿದಿರಾ, ಇವರಿಗೆ ಕೊನೆಯ ಗಳಿಗೆಯಲ್ಲೂ ಬುದ್ಧಿ ಚೆನ್ನಾಗಿದೆ" ಎಂದಳು.

ಮರುಕ್ಷಣ ರಾಯರು "ಮತ್ತೆ ಆ ಭೀಮರಾಯರಿಗೆ ನಾವು ೬೦೦ ರೂಪಾಯಿ ಕೊಡಬೇಕಾಗಿದೆ" ಎಂದರು.

ಇದನ್ನು ಕೇಳಿದ ಹೆಂಡತಿ "ಅಯ್ಯೋ, ಇವರಿಗೆ ಚಿತ್ತ ಭ್ರಮಣೆಯಾಗಿದೆಯಲ್ಲ" ಎಂದು ಸುತ್ತಲಿನವರನ್ನೆಲ್ಲ ಕರೆದು ಗೋಳಿಟ್ಟಳು.

ಹೊರಗಿನವರ ನೆರವು

ಅಮೇರಿಕದ ಆರ್ಥಿಕ ನೆರವನ್ನು ಅದು ಅಣುಶಸ್ತ್ರಗಳ ಸ್ಫೋಟನ ಪ್ರಯೋಗಗಳನ್ನು ನಿಲ್ಲಿಸಿಬಿಡಬೇಕೆಂಬ ನೈತಿಕ ಒತ್ತಾಯ ಹೇರುವುದಕ್ಕೋಸ್ಕರ ನಿರಾಕರಿಸಬೇಕೆಂದು ರಾಜಾಜಿಯವರು ಮಾಡಿದ ಸೂಚನೆಯು—ಅಥವಾ ವ್ಯಕ್ತಗೊಳಿಸಿದ ಅಭಿಪ್ರಾಯವು—ದೇಶದಲ್ಲಿ ಮಿಶ್ರಪ್ರತಿಕ್ರಿಯೆಯನ್ನುಂಟು ಮಾಡಿದೆ ಎಂದರೆ ತಪ್ಪಾಗಲಾರದು. ಹೀಗೆ ಸಲಹೆ ಮಾಡಿದವರು ಅಥವಾ ತಮ್ಮ ಅಭಿಪ್ರಾಯ ಹೀಗೆಂದು ಹೇಳಿದವರು ಸಾಮಾನ್ಯ ಪ್ರಜೆಯಾಗಿದ್ದರೆ ಯಾರೂ ಅದಕ್ಕೆ ಕಿವಿಗೊಡುತ್ತಿರಲಿಲ್ಲ; ಮತ್ತು ವಿದೇಶಗಳಿಂದ ದೊರಕುವ ಆರ್ಥಿಕ ನೆರವಿನ ಬಗ್ಗೆ ಚಿಂತಿಸಲು ಯಾರೂ ಹೋಗುತ್ತಿರಲಿಲ್ಲ. ಆದರೆ ಭಾರತದ ಶ್ರೇಷ್ಠ ರಾಜಕಾರಣಿ ಹಾಗು ಗಾಂಧೀಯವರ ಶ್ರದ್ಧಾನಿಷ್ಠ ಅನುಯಾಯಿ ರಾಜಾಜಿಯಾಗಿರುವುದರಿಂದ ಅವರ ಮಾತಿನ ಪರಿಣಾಮವಾಗಿ ಜನರು ವಿಚಾರ ಪರವಶರಾಗುವುದು ತೀರ ಸಹಜ.

ಜನರು ತಂತಮ್ಮಲ್ಲಿಯೇ ರಾಜಾಜಿಯ ಮಾತನ್ನು ಮಥಿಸುತ್ತಿರುವಾಗಲೇ ಭಾರತ ಸರಕಾರದ ಅರ್ಥ ಸಚಿವರಿಂದ ರಾಜಾಜಿಯ ಸೂಚನೆಗೆ ನೇರವಾದ ಪ್ರತಿಕ್ರಿಯೆ ವ್ಯಕ್ತವಾಯಿತು. ಹೈದರಾಬಾದಿಗೆ ಬಂದಿದ್ದ ಮಂತ್ರಿ ಚಿಂತಾಮಣಿ ದೇಶಮುಖರು ವಿದೇಶಗಳ ನೆರವನ್ನು ಲಘುವಾಗಿ ಭಾವಿಸಿ ತಿರಸ್ಕರಿಸ ಕೂಡದು ಎಂದರು. ಯೋಜನಾ ಮಂತ್ರಿ ಶ್ರೀ ನಂದಾರವರು ಅಹಮದಾಬಾದಿನಲ್ಲಿ ನಮ್ಮ ಯೋಜನೆಯ ಖರ್ಚಿನಲ್ಲಿ ಶೇಕಡಾ ೧೦--೧೨ ವಿದೇಶಗಳ ಸಹಾಯ ರೂಪದಲ್ಲಿ ದೊರೆಯಬಹುದಾದರೆ ನಾವೀಗ ಇಟ್ಟುಕೊಂಡಿರುವ ಗುರಿಯನ್ನು ಮುಟ್ಟಬಹುದು ಎಂದರು. ವಿದೇಶಗಳ ನೆರವು ಸಿಗದೆ ಹೋದರೆ ನಮ್ಮ ರಾಷ್ಟ್ರೀಯ ಉತ್ಪನ್ನದಲ್ಲಿ ಪ್ರತಿ ವರ್ಷ ೫% ಹೆಚ್ಚಳವಾಗುವ ಬದಲು ೪½% ಮಾತ್ರ ಹೆಚ್ಚಳವಾದೀತು, ಉದ್ಯೋಗದ ಅವಕಾಶಗಳು ೧೧೦ ಲಕ್ಷದಷ್ಟು ಹೆಚ್ಚಿಕೊಳ್ಳುವ ಬದಲು ೧ ಕೋಟಿ ಮಾತ್ರ ಅಧಿಕವಾದೀತು ಎಂದು ದೇಶಮುಖರ ಅಭಿಪ್ರಾಯ.

ಈಗಾಗಲೇ ತಿಳಿದಿರುವಂತೆ ನಮ್ಮ ಎರಡನೆಯ ಪಂಚ ವಾರ್ಷಿಕ ಯೋಜನೆಯು ೭೨೦೦ ಕೋಟಿ ರೂಪಾಯಿಗಳ ವೆಚ್ಚವನ್ನೊಳಗೊಳ್ಳುತ್ತದೆ. ಇದರಲ್ಲಿ ಖಾಸಗಿ ವಲಯಕ್ಕೆ ೨೪೦೦ ಕೋಟಿ ರೂಪಾಯಿ ಸಲ್ಲುತ್ತದೆ. ಸರಕಾರವು ಒಂದು ಸಾವಿರ ಕೋಟಿ ರೂಪಾಯಿಯನ್ನು ಸಾರ್ವಜನಿಕ ಉಳಿತಾಯ ಮತ್ತು ಸಾಲಗಳಿಂದಲೂ ಮತ್ತೆ ಒಂದು ಸಾವಿರ ರೂಪಾಯಿಯನ್ನು ಕೊರತೆ ಧನ ವಿನಿಯೋಗ ಪದ್ಧತಿಯಿಂದಲೂ ಒದಗಿಸುವುದೆಂದು ಹೇಳಲಾಗುತ್ತದೆ. ಹೀಗೆ ಲೆಕ್ಕ ಹಾಕುವಾಗ ನಮಗೆ ಸುಮಾರು ೮೦೦ ಕೋಟಿ ರೂಪಾಯಿಯಷ್ಟು ಸಹಾಯವು ವಿದೇಶಗಳಿಂದ ಸಿಗಬಹುದೆಂಬ ಆಶೆಯನ್ನು ಇಟ್ಟುಕೊಂಡಿದ್ದು, ಆ ಸಹಾಯ ಬರದಿದ್ದರೆ, ಯೋಜನೆಯ ಅಂದಾಜು ಮತ್ತು ವೆಚ್ಚದ ಪ್ರಮಾಣದಲ್ಲಿ ವ್ಯತ್ಯಾಸವಾಗಲೇ ಬೇಕಾಗುತ್ತದೆ. ಈಗ ಐದನೆಯ ವರ್ಷದಲ್ಲಿರುವ ನಮ್ಮ ಮೊದಲನೆಯ ಯೋಜನೆಯ ಅವಧಿಯಲ್ಲಿ ಸುಮಾರು ೨೫೦ ಕೋಟಿ ರೂಪಾಯಿ ಹೊರದೇಶಗಳ ಸಹಾಯವಾಗಿ ಸಿಕ್ಕಿರುತ್ತದೆ.

ನಮ್ಮ ಯೋಜನೆಯ ಸ್ವರೂಪವನ್ನು ನೂರಕ್ಕೆ ಹತ್ತರಷ್ಟು ಕಡಿಮೆ ಮಾಡುವಷ್ಟು ಶಕ್ತಿಯಿಂದ ಕೂಡಿದ ಹೊರಗಿನವರ ನೆರವನ್ನು ನಿರಾಕರಿಸುವುದು ಬುದ್ಧಿವಂತಿಕೆಯಾದೀತೆ? ಎಂಬುದೇ ನಮ್ಮ ಮುಂದಿರುವ ಸಮಸ್ಯೆ. ರಾಜಾಜಿಯವರು ಅರ್ಥ ಸಚಿವರ ಹೇಳಿಕೆಯ ಕುರಿತು ಹೀಗೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. "ನಮ್ಮ ಮುಂದಿರುವುದು ಎರಡೇ ಮಾರ್ಗ—ನಮ್ಮ ಅಭಿವೃದ್ಧಿಯ ಹಂಬಲದಲ್ಲಿ ಅಮೇರಿಕದ ನೆರವನ್ನು ಸ್ವೀಕರಿಸಿ, ಮಹಾ ನೈತಿಕ ಶಕ್ತಿಯನ್ನು ಕಳೆದುಕೊಳ್ಳುವುದು; ಅಥವಾ ಸಹಾಯದ ಆಮಿಷವನ್ನು ಸಂಯಮದಿಂದ ದಮನಿಸಿ, ಶಕ್ತಿಯ ಸಂವರ್ಧನೆ ಮಾಡಿಕೊಳ್ಳುವುದು—ಇವೆರಡರಲ್ಲಿ ನಾವು ಮೊದಲಿನದನ್ನು ಆರಿಸಿಕೊಂಡರೆ ನಾವು ತತ್ಕಾಲ ಸುಖಾನುಭವವನ್ನು ಗಳಿಸಬಹುದು, ಆದರೆ ಅದೆಷ್ಟು ಕಾಲದ ವರೆಗೆ ಉಳಿದೀತು? ನನ್ನ ಅಭಿಪ್ರಾಯದಲ್ಲಿ ನಾವಿನ್ನೂ ಧೈರ್ಯಶಾಲಿಗಳಾದ ಜನಾಂಗವಾಗಿದ್ದು ಅಣು ಶಸ್ತ್ರಗಳ ಸ್ಫೋಟನ ಪ್ರಯೋಗವನ್ನು ವಿರೋಧಿಸುತ್ತಿದ್ದೇವೆ. ಆದುದರಿಂದ ನಾವು ನಮ್ಮ ಸ್ವಾಭಿಮಾನವನ್ನು ಉಳಿಸಿಕೊಂಡು, ನೈತಿಕ ಶಕ್ತಿಯನ್ನು ಕಾಯ್ದುಕೊಂಡು, ಸಹಾಯ ಪಡೆಯುವ ಆಮಿಷದಿಂದ ದೂರವಿರಬೇಕು."

ಸಹಾಯವು ಯಾವ ಬಂಧನವನ್ನೂ ಒಡ್ಡಗೊಳ್ಳದೆ ಬರುತ್ತದೆ ಎನ್ನುವ ವಾದಕ್ಕೆ ರಾಜಾಜಿಯ ಪ್ರತ್ಯುತ್ತರ ಹೀಗಿರುತ್ತದೆ—"ಕರಾರಿನ ಶರ್ತಗಳಲ್ಲ, ಮಾನವನ ಪ್ರಕೃತಿ ನಮ್ಮ ಕ್ರಿಯೆಗಳನ್ನು ನಿಯಂತ್ರಿಸುತ್ತದೆ." ಆದುದರಿಂದ, ನಾವು ಅಮೇರಿಕದ ಸಹಾಯವನ್ನು ಪಡೆಯುತ್ತಿದ್ದರೆ, ಅಣುಶಸ್ತ್ರಗಳ ಸ್ಫೋಟನ ಪ್ರಯೋಗದ ಕುರಿತು ನಾವು ವ್ಯಕ್ತಪಡಿಸುವ ವಿರೋಧಕ್ಕೆ ಬೆಲೆಬಾರದೆಂದು ಅವರ ದೃಢವಾದ ವಿಶ್ವಾಸ. ಆದರೆ ಇಲ್ಲಿಯೊಂದು ಪ್ರಶ್ನೆಯೇಳುತ್ತದೆ—ನಮ್ಮ ಮಿತ್ರರೊಬ್ಬರ ವಿಶಿಷ್ಟ ಕ್ರಿಯೆಯೊಂದು ನಮಗೆ ಸರಿಬರುವುದಿಲ್ಲವೆಂದಾಕ್ಷಣ, ನಾವು ಅವರ ಇತರ ಬಗೆಯ ಸ್ನೇಹಪೂರಿತ ವರ್ತನೆಗಳಿಂದ ವಂಚಿತರಾಗಬೇಕೇ? ಅವರ ಸ್ನೇಹ ಭಾವನೆಯನ್ನು ಕೆಡಿಸಿಕೊಳ್ಳದೆ, ಪ್ರೀತಿಯ ಯೋಗ ಮಾಯೆಯಿಂದ ಅವರ ತಪ್ಪನ್ನು ತೋರಿಸಿ ಕೊಟ್ಟು, ಅದನ್ನವರು ತಿದ್ದಿಕೊಳ್ಳುವಂತೆ ಮಾಡುವುದು ಮಾನವನ ಸ್ವಭಾವಕ್ಕೆ ವಿರುದ್ಧವಾದುದೇ?

ನಮಗೆ ತಿಳಿದಷ್ಟು ಮಟ್ಟಿಗೆ ಮೇಲಿನೆರಡು ಪ್ರಶ್ನೆಗಳಿಗೂ ನಕಾರಾತ್ಮಕವಾದ ಉತ್ತರವನ್ನೆ ವಿವೇಕಿಗಳೂ ದೂರದರ್ಶಿಗಳೂ ಕೊಡಬಹುದು. ಇದನ್ನು ಆಧಾರವಾಗಿ ಹಿಡಿದುಕೊಂಡಲ್ಲಿ, ರಾಜಾಜಿಯವರು ಅಮೇರಿಕದ ಆರ್ಥಿಕ ನೆರವಿನ ನಿರಾಕರಣೆ ಮಾಡಬೇಕೆಂದು ಕೊಟ್ಟ ಸಲಹೆಯನ್ನು ನಾವು ಪುರಸ್ಕರಿಸಬೇಕಾಗಿಲ್ಲವೆಂಬ ತೀರ್ಮಾನ ಹೊರಡುತ್ತದೆ. ಅಣುಶಸ್ತ್ರಗಳ ಸ್ಫೋಟನ ಪ್ರಯೋಗಗಳನ್ನು ನಿಲ್ಲಿಸುವಂತೆ ಅಮೇರಿಕವನ್ನು ಒತ್ತಾಯಿಸುವುದಕ್ಕೋಸ್ಕರ ಆರ್ಥಿಕ ನೆರವನ್ನು ನಿರಾಕರಿಸಬೇಕಾಗಿಲ್ಲ—ರಾಜಕೀಯ ಪ್ರಭಾವವನ್ನು ಬೀರಿ, ವಿವೇಕದ ಮಾರ್ಗವನ್ನು ತಿಳಿಸಿ ಹೇಳಿ, ಆ ಧೋರಣೆ ನಿಲ್ಲುವ ಬದಲಾವಣೆಯನ್ನು ಸಾಧಿಸಬಹುದು. ಇವತ್ತು ಆರ್ಥಿಕ ಸಹಾಯದ ನಿರಾಕರಣೆ ಮಾಡಿದರೆ, ನಾಳೆ ಅಮೇರಿಕದ ಒಡನೆಯೇ ಸಂಬಂಧವನ್ನು ತೊರೆಯುತ್ತಾ ಬರಬೇಕಾದೀತು. ನಮ್ಮ ಎಲ್ಲ ಭಿನ್ನಾಭಿಪ್ರಾಯಗಳನ್ನೂ ಸಂಧಾನ ಮತ್ತು ವಿಚಾರವಿನಿಮಯದ ಮೂಲಕ ಬಗೆ ಹರಿಸಿಕೊಳ್ಳುವುದೇ ಸೂಕ್ತವಾದುದಾಗ ನಾವು

([illegible]ನೇ ಪುಟ ನೋಡಿರಿ)

ವಿದೇಶಗಳಿಂದ ಸಹಾಯ ದೊರೆತುದನ್ನು ಸುಲಭದಲ್ಲಿ ನಿರಾಕರಿಸಿ ಬಿಡಲಾಗದು. ಅಂಥ ನಿರಾಕರಣೆಯಿಂದ ನಮ್ಮ ಮೇಲೆ ಬರಲಿರುವ ಭಾರಜೀಳುವ ಸಂಭವ ಹೆಚ್ಚುತ್ತದೆ. ಅಮೇರಿಕದಿಂದ ಬರುವ ಸಹಾಯ ಸಿಗದೆ ಹೋದರೆ ನಮ್ಮ ಎರಡನೆಯ ಪಂಚವಾರ್ಷಿಕ ಯೋಜನೆಯ ಗುರಿಗಳನ್ನು ತಗ್ಗಿಸಬೇಕಾದೀತು. ರಾಷ್ಟ್ರೀಯ ಆದಾಯದ ಹೆಚ್ಚಳದ ಪ್ರಮಾಣವೂ ಉದ್ಯೋಗದ ಅವಕಾಶಗಳ ಸಂಖ್ಯೆಯೂ ಕಡಿಮೆಯಾದೀತು. ಆದುದರಿಂದ ವಿದೇಶಗಳ ಸಹಾಯದ ನಿರಾಕರಣೆ ಮಾಡಬೇಕೋ ಎಂಬುದು ನಮ್ಮ ಆರ್ಥಿಕ ಶಕ್ತಿಯ ಪರೀಕ್ಷೆಯ ವಿಷಯವಾಗುತ್ತದೆ.

—ಸಿ. ಡಿ. ದೇಶಮುಖ

THE CANARA INDUSTRIAL & BANKING SYNDICATE LTD
Estd: 1925 H. O UDIPI, S India

ನಿಮ್ಮ ಹಣವು ಮಾತನಾಡಬಲ್ಲುದಾದರೆ.

ಎಲ್ಲರಂತೆ ನಿಮಗೂ ಸಂದರ್ಭಾನುಸಾರ ನಗದು ಹಣದ ಅವಶ್ಯಕತೆ ಬೀಳುವುದು. ಆ ಕಾಲಕ್ಕೆ ನೀವು ಸ್ವಲ್ಪ ಹಣವನ್ನು ಕೂಡಲೇ ಪಡೆಯಬಲ್ಲಿರಿ. ವಿನಾಕಾರಣ ಹಣವನ್ನು ಮನೆಯಲ್ಲೇ ಇರಿಸಿಕೊಳ್ಳುವುದಕ್ಕೆ ಬದಲಾಗಿ ರಾತ್ರಿ ಹಗಲೂ ಸುರಕ್ಷಿತ ಭದ್ರತೆಯಲ್ಲಿಡಲು ನೀವು ಅಪೇಕ್ಷಿಸುವಿರಿ. ಹಣವನ್ನು ಲೇವಾಗಿರಿಸಲು ನೀವು ತಯಾರಿಲ್ಲವಾದರೂ ಅದಕ್ಕೆ ಬಡ್ಡಿ ಸಿಕ್ಕಿದರಾಗಬಹುದೆಂಬ ಅಪೇಕ್ಷೆ ನಿಮಗಿದೆ. ನೀವು ಸಾಲ ಪಡೆಯಲು ಸೌಕರ್ಯಗಳಿರುವ ಬೇಂಕಿನಲ್ಲಿ ನಿಮ್ಮ ಹಣವನ್ನು ಠೇವಣಿಸಿಡಲು ನೀವು ಇಚ್ಛಿಸುವಿರಿ. ಬೇಂಕಿನಲ್ಲಿ ತೆರೆಯಲಾಗುವ ಲೆಕ್ಕವೇ ನಿಮಗೆ ಯಾವ ಕಾಲದಲ್ಲೂ ಎಲ್ಲಾ ಸೌಕರ್ಯವನ್ನು ಒದಗಿಸಬಲ್ಲುದು. ೧೫ ವರ್ಷ ಕಚೇರಿಗಳುಳ್ಳ ನಮ್ಮ ಬ್ಯಾಂಕು ಶೀಘ್ರ ಲೇವಾದೇವಿ ಸೌಲಭ್ಯಗಳನ್ನು ಒದಗಿಸುತ್ತದೆ. ನಿಮ್ಮ ಅನುಕೂಲತೆಗಳಿಗಾಗಿ ವಿವಿಧ ಬೇಂಕಿಂಗ್ ಸೇವೆಗಳನ್ನು ಕೈಗೊಳ್ಳಲಾಗಿದೆ. ಅನುಭವದಿಂದ ನಮ್ಮಲ್ಲಿಯೇ ಬೇಂಕಿಂಗ್ ವ್ಯವಹಾರವನ್ನು ಮಾಡಿ ಅನುಕೂಲ ಸಮಯವನ್ನು ಉಳಿಸಿಕೊಳ್ಳಿರಿ.

ಚಲಾವಣೆ ಭಂಡವಾಳ ರೂ ೬,೫೦,೦೦,೦೦೦

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ, ದ ಭಾರತ

ವೈದ್ಯಕೀಯ ಕ್ಷೇತ್ರದಲ್ಲಿ ವೈಜ್ಞಾನಿಕ ಪ್ರಯೋಗ

ಸಾವು-ನೋವುಗಳ ಮೇಲೆ ಹೋರಾಟ

ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ, ಮುಖ್ಯವಾಗಿ ಕೋಟ, ಕುಂದಾಪುರ, ಬಾರಕೂರು ಮುಂತಾದ ಕಡೆಗಳಲ್ಲಿ, ಕಳೆದ ವಾರ ನೂರಾರು ಮಂದಿ ಕೆಂಗಣ್ಣಿನ ರೋಗಕ್ಕೆ ಬಲಿಯಾದರು. ಸರಕಾರದವರು ರೋಗನಿಯಂತ್ರಣ ಕ್ರಮಗಳನ್ನು ಒಡನೆಯೇ ಕೈಗೊಳ್ಳುವುದು ಹೇಗೆಂದು ವಿಚಾರಿಸುತ್ತಿದ್ದರೂ ಅಷ್ಟರೊಳಗೆ ಅನೇಕರು ದೃಷ್ಟಿಹೀನರಾಗಿದ್ದಾರೆಂದು ತಿಳಿದು ಬರುತ್ತದೆ.

ವೈದ್ಯಕೀಯ ಕ್ಷೇತ್ರದಲ್ಲಿ ವೈಜ್ಞಾನಿಕ ಪ್ರಯೋಗಗಳನ್ನು ನಡೆಸದೆ ಇದ್ದುದರ ಪರಿಣಾಮವಾಗಿ ರೋಗಗಳ ಹಾವಳಿ ಮಿತಿಮೀರುವುದೆಂದೇನಲ್ಲ. ಆದರೆ ಪ್ರಯೋಗಗಳು ಎಷ್ಟೇ ಹೆಚ್ಚಿದ್ದರೂ ಎಲ್ಲ ರೋಗಗಳ ಮೇಲೆ ನಿಯಂತ್ರಣ ಪಡೆಯುವುದಿನ್ನೂ ಸಾಧ್ಯವಾಗಿಲ್ಲ.

ಆದಾಗ್ಯೂ ಕಳೆದ ೫೦ ವರ್ಷಗಳ ಅವಧಿಯಲ್ಲಿ ವೈದ್ಯಕೀಯ ವಿಜ್ಞಾನವು ಲೋಕದ ಅನೇಕ ಭಾಗಗಳಲ್ಲಿ ಪುರಾತನ ಕಾಲದಿಂದಲೂ ಜನರನ್ನು ಪೀಡಿಸುತ್ತಿದ್ದ ಅನೇಕ ರೋಗಗಳನ್ನು ನಿರ್ಮೂಲಿಸಿದೆ ಎಂಬುದರಲ್ಲಿ ಪ್ರತಿಮಾತಿಲ್ಲ.

ಇಂದು ಹುಟ್ಟಿದ ಮಗುವಿನ ಆಯುರ್ಮಾನವನ್ನು ೫೦ ವರ್ಷಗಳ ಹಿಂದೆ ಜನಿಸಿದ ಮಗುವಿನ ಆಯುರ್ಮಾನದೊಂದಿಗೆ ಹೋಲಿಸುವವರ ಮೂಲಕ ಕಳೆದ ಅರ್ಧ ಶತಮಾನದಲ್ಲಾದ ಪ್ರಗತಿಯನ್ನರಿಯಬಹುದು. ಸಾಧಾರಣ ಲೋಕದ ಎಲ್ಲ ಭಾಗಗಳಲ್ಲೂ ಆಯುರ್ಮಾನವು ಹೆಚ್ಚಿದೆ.

ಉದಾಹರಣೆಗೆ ೧೯೦೦ರಲ್ಲಿ ಅಮೇರಿಕದಲ್ಲಿನ ಆಯುರ್ಮಾನವು ೫೦ ವರ್ಷಗಳಾಗಿದ್ದರೆ ಇಂದು ಅದು ಸಾಧಾರಣ ೭೦ ವರ್ಷಗಳಿಗೇರಿದೆ. ಭಾರತದಲ್ಲಿ ೩೩ರಿಂದ ೩೮ ವರ್ಷಗಳಿಗೆ ಅದು ಹೆಚ್ಚಿರುತ್ತದೆ.

ಪ್ರಾಣಗಳನ್ನುಳಿಸಿ ಜೀವಮಾನವನ್ನು ಹೆಚ್ಚಿಸುವ ಕಾರ್ಯದಲ್ಲಿನ ಪ್ರಗತಿಯು ಹೆಚ್ಚಿನಂಶವು, ಸಾಂಕ್ರಾಮಿಕ ರೋಗಗಳ, ವಿಶೇಷವಾಗಿ ಮಕ್ಕಳಿಗೆ ತಗಲುವ ರೋಗಗಳ ನಿಯಂತ್ರಣದಿಂದ ಸಾಧಿತವಾಗಿರುತ್ತದೆ.

ಆಹಾರ ಮತ್ತು ನೀರಿನ ಪೂರೈಕೆಗಳ ವೈಜ್ಞಾನಿಕ ಮೇಲ್ವಿಚಾರಣೆ, ಸಾಕಷ್ಟು ಆರೋಗ್ಯಕರ ಸೌಕರ್ಯಗಳನ್ನೊದಗಿಸುವಿಕೆ, ಜನರಿಗೆ ತಮ್ಮ ಪರಿಸ್ಥಿತಿಗಳಲ್ಲಿ ಅನ್ವಯಿಸಲು ಉಪಯುಕ್ತವಾಗುವಂಥ ಆರೋಗ್ಯ ಮಾಹಿತಿಗಳ ವಿಸ್ತೃತ ವಿತರಣೆಗಳು ಆಯುರ್ಮಾನದ ಅಭಿವೃದ್ಧಿಯಲ್ಲಾಗಿರುವ ಪ್ರಗತಿಗೆ ಕಾರಣಗಳಾಗಿವೆ. ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳೂ ಮತ್ತು ರೋಗವಾಹಕ ಕೀಟ ಮತ್ತು ಇಲಿಗಳ ನಿಯಂತ್ರಣಗಳೂ ಈ ಪ್ರಗತಿಗೆ ಸಾಧಕಗಳಾಗಿವೆ.

ಅರ್ಧ ಶತಮಾನದ ಹಿಂದೆ, ಮೀಸಲ್ಸ್ ಸ್ಕಾರ್ಲೆಟ್ ಫೀವರ್, ನಾಯಿಕೆಮ್ಮು, ಡಿಫ್ತೀರಿಯಾ ಮತ್ತು ಸಿಡುಬುಗಳು ಮಕ್ಕಳಿಗೆ ತಗಲುತ್ತಿದ್ದ ಐದು ಮುಖ್ಯ ಸಾಂಕ್ರಾಮಿಕ ರೋಗಗಳಾಗಿದ್ದುವು. ಈ ರೋಗಗಳ ನಿಯಂತ್ರಣವು ಈಗ ಸಾಧ್ಯವಾಗಿರುವುದು ಜೀವಮಾನವನ್ನು ಹೆಚ್ಚಿಸಿರುವ ಮುಖ್ಯ ಅಂಶಗಳಲ್ಲೊಂದಾಗಿರುತ್ತದೆ.

ಇಂದು ಮೀಸಲ್ಸನ್ನು ಗಾಮ್ಮಾ ಗ್ಲೊಬ್ಯುಲಿನ್‌ನ ಚುಚ್ಚು ಮದ್ದುಗಳ ಮೂಲಕ ಉಪಶಮನಗೊಳಿಸಲಾಗುತ್ತಿದೆ. ಇದು ಮೆಸಾಚುಸೆಟ್ಸ್‌ನ ಕೇಂಬ್ರಿಜ್‌ನ ಹಾರ್ವರ್ಡ್ ಪ್ಲಾಸ್ಮಾ ಫ್ರಾಕ್ಷನೇಶನ್ ಲೆಬರೇಟರಿಯಲ್ಲಿ ಕಂಡು ಹಿಡಿದು ಸಿದ್ಧಪಡಿಸಿದ ರಕ್ತದ ಅಂಶ.

ಸೀರಂ ಮತ್ತು ಆಂಟಿ ಬಯೋಟಿಕ್ ಔಷಧಗಳ ಸಂಯೋಜನೆಯಿಂದ ರೋಗ ನಿರೋಧಕ ಕಾರ್ಯ ಕೈಗೊಂಡ ಬಳಿಕ ಸ್ಕಾರ್ಲೆಟ್ ಫೀವರ್‌ನಿಂದಾಗುವ ಮರಣ ಪ್ರಮಾಣವು ಗಣನೀಯವಾಗಿ ಕೆಳಗಿಳಿದಿವೆ.

ನಾಯಿಕೆಮ್ಮಿಗೆ ನಿರೋಧವೊದಗಿಸುವ ಒಂದು ದಾಕಿನ ಮೂಲಕ ಮತ್ತು ಆಂಟಿ ಬಯೋಟಿಕ್ ಔಷಧಗಳ ಉಪಯೋಗದ ಮೂಲಕ ಈ ರೋಗದ ಅಪಾಯಗಳನ್ನು ಬಹಳ ಮಟ್ಟಿಗೆ ತಗ್ಗಿಸಲಾಗಿದೆ. ನಾಯಿಕೆಮ್ಮನ್ನು ಗುಣಪಡಿಸಲು, ಡಾ|| ಪಾಲ್ ಆರ್. ಬರ್ಕ್ ಹೋಲ್ಡರ್ ಎಂಬ ಅಮೇರಿಕನ್ ವಿಜ್ಞಾನಿ ಅಭಿವೃದ್ಧಿಗೊಳಿಸಿದ ಕ್ಲೋರೋಮೈಸಿಟಿನ್ ಎಂಬ ಆಂಟಿಬಯೋಟಿಕ್ ಔಷಧವನ್ನು ವಿಸ್ತೃತ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ. ಕೆಂದರಿಕ್ ವಿಧಾನದ ಪ್ರಕಾರ ತಯಾರಿಸಿದ ದಾಕುಗಳು ಅತ್ಯುತ್ತಮ ನಿರೋಧಕಗಳಾಗಿವೆ ಎಂದು ಕಂಡುಬಂದಿದೆ. ಮಿಚಿಗನ್ ರಾಜ್ಯದ ಆರೋಗ್ಯ ಖಾತೆಯಲ್ಲಿರುವ ಅಮೇರಿಕನ್ ಸೂಕ್ಷ್ಮಾಣುತಜ್ಞ ಡಾ|| ಪರ್ಲ್‌ಯಲ್. ಕೆಂಡರಿಕ್‌ರು ಈ ವಿಧಾನವನ್ನು ಕಂಡು ಹಿಡಿದರು.

ಅನೇಕ ದೇಶಗಳಲ್ಲೀಗ ಡಿಫ್ತೀರಿಯ ಮತ್ತು ಸಿಡುಬುಗಳನ್ನು ನಿರೋಧಕಗಳ ಮೂಲಕ ನಿಯಂತ್ರಿಸಲಾಗುತ್ತಿದೆ. ಹಂಗೇರಿಯಲ್ಲಿ ಜನಿಸಿ ಅಮೇರಿಕದಲ್ಲಿ ತನ್ನ ಕಾರ್ಯವನ್ನು ಮುಂದುವರಿಸಿದ ಡಾ|| ಬೆಲಾ ಶಿಕ್‌ರವರು ಡಿಫ್ತೀರಿಯಾದ ವಿರುದ್ಧವಾದ ಹೋರಾಟದ ಮುಖಂಡರಲ್ಲೊಬ್ಬರಾಗಿದ್ದರು. ಈ ರೋಗವು ಕಳೆದವರ್ಷ ಮಂಗಳೂರಿನಲ್ಲಿ ಹಾವಳಿಯನ್ನು ನಡೆಸಿದ್ದಿತು. ಒಬ್ಬ ವ್ಯಕ್ತಿಗೆ ಡಿಫ್ತೀರಿಯ ತಗಲುವ ಸಂಭವವಿದೆಯೋ ಎಂಬುದನ್ನು ನಿರ್ಧರಿಸುವ ಪ್ರಖ್ಯಾತವಾದ ಶಿಕ್ ಪರೀಕ್ಷಾ ವಿಧಾನವನ್ನವರು ಕಂಡುಹಿಡಿದರು. ನ್ಯೂಯಾರ್ಕ್ ವಿಶ್ವವಿದ್ಯಾನಿಲಯದ ಡಾ|ವಿಲಿಯಂ. ಯಚ್ ಪಾರ್ಕ್‌ರು ಡಿಫ್ತೀರಿಯದ ಚಿಕಿತ್ಸೆಗೆ ಒಂದು ಸೀರಂ ವಿಧಾನವನ್ನು ಕಂಡು ಹಿಡಿದು, ಮತ್ತು ಒಂದು ನಿರೋಧಕ ಔಷಧವನ್ನು ಶೋಧಿಸಿ ಮಹತ್ವದ ಸೇವೆ ಸಲ್ಲಿಸಿದರು.

ಜಪಾನಿನಲ್ಲಿ ಜನಿಸಿದ ಡಾ| ಹಿಡೆಯೋ ನೊಗೂಚಿ ಎಂಬ ವಿಜ್ಞಾನಿ ಸಿಡುಬಿನ ವಿರುದ್ಧ ಪರಿಣಾಮಕಾರಿ ಕ್ರಮಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ಅಗ್ರಗಾಮಿಯಾಗಿದ್ದರು. ಇವರು ತಮ್ಮ ಅತ್ಯುತ್ತಮ ಕಾರ್ಯವನ್ನು ನ್ಯೂಯಾರ್ಕ್‌ನ ವೈದ್ಯಕೀಯ ಸಂಶೋಧನೆಯ ರಾಕ್‌ಫೆಲರ್ ಸಂಸ್ಥೆಯ ಸದಸ್ಯರಾಗಿದ್ದಾಗ ನಿರ್ವಹಿಸಿದರು. ಇವರ ಸಂಶೋಧನೆಯಿಂದಾಗಿ ಶುದ್ಧವಾದ ಸಿಡುಬಿನ ದಾಕು ಪಡೆಯುವ ಕ್ರಮವು ಕಂಡು ಹಿಡಿಯಲ್ಪಟ್ಟಿತು.

೧೯೦೦ರಲ್ಲಿ ಅಮೇರಿಕದಲ್ಲಿ ನ್ಯುಮೋನಿಯ ಮತ್ತು ಇನ್‌ಫ್ಲುಯೆಂಜಗಳು ಮರಣಗಳ ಮುಖ್ಯ ಕಾರಣಗಳಾಗಿದ್ದುವು. ಇಡೀ ಲೋಕದ ಮರಣಗಳಿಗೂ ಈ ರೋಗಗಳು ಮುಖ್ಯ ಕಾರಣಗಳಾಗಿದ್ದುವು. ಈಗ ಆಂಟಿ ಬಯೋಟಿಕ್ ಔಷಧಿಗಳ ಉಪಯೋಗದಿಂದಾಗಿ, ಈ ರೋಗಗಳಿಂದಾಗುವ ಮರಣ ಪ್ರಮಾಣ ಬಹಳ ಕಡಿಮೆಯಾಗಿದೆ. ನ್ಯುಮೋನಿಯವನ್ನು ತಡೆಗಟ್ಟಲು ಪೆನ್ಸಿಲಿನ್ ಎಂಬ ಆಂಟಿ ಬಯೋಟಿಕನ್ನು ವಿಸ್ತೃತ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ. ಅಲ್ಲದೆ ಅರೋಮೈಸಿನ್, ಸ್ಟ್ರೆಪ್ಟೊಮೈಸಿನ್ ಮತ್ತಿತರ ಆಂಟಿ ಬಯೋಟಿಕ್‌ಗಳನ್ನೂ ಉಪಯೋಗಿಸಲಾಗುತ್ತಿದೆ.

ಸರ್ ಅಲೆಕ್ಸಾಂಡರ್ ಫ್ಲೆಮಿಂಗ್ ಎಂಬ ಇಂಗ್ಲಿಷ್ ವಿಜ್ಞಾನಿ ಪೆನಿಸಿಲಿನ್‌ನನ್ನು ಸಂಶೋಧಿಸಿದರು. ರಷ್ಯದಲ್ಲಿ ಜನಿಸಿದ ಅಮೇರಿಕನ್ ವಿಜ್ಞಾನಿ ಡಾ| ಸೆಲ್ಮನ್ ಎ. ವಾಕ್ಸ್‌ಮನ್‌ರಿಂದ ೧೯೪೪ರಲ್ಲಿ ಸ್ಟ್ರೆಪ್ಟೊಮೈಸಿನ್ ಶೋಧವಾಯಿತು ಮತ್ತು ಲೆಡರ್ಲ್ ಲೆಬೊರೇಟರೀಸ್ ಎಂಬ ಅಮೆರಿಕದ ಮದ್ದಿನ ಕಂಪೆನಿಯು ೧೯೪೭ರಲ್ಲಿ ಅರೊಮೈಸಿನನ್ನು ಕಂಡು ಹಿಡಿಯಿತು.

ಕ್ಷಯ ರೋಗವು ೧೯೦೦ರಲ್ಲಿ ಭಾರತದಲ್ಲಿ ಅತಿ ಹೆಚ್ಚು ಜನರನ್ನು ಆಹುತಿ ತೆಗೆದುಕೊಳ್ಳುತ್ತಿತ್ತು; ಅಮೇರಿಕದ ಮರಣಗಳಿಗೆ ಎರಡನೆಯ ಪ್ರಧಾನ ಕಾರಣವಾಗಿತ್ತು; ಇಡೀ ಲೋಕಕ್ಕೆ ಹಾನಿಕರವಾಗಿದ್ದ ಮಾರಕ ರೋಗವಾಗಿತ್ತು. ಈ ರೋಗವೀಗ ನಿಧಾನವಾಗಿ ಹತೋಟಿಗೆ ಬರುತ್ತಿದೆ.

ಇಂದು ಔಷಧೋಪಯೋಗ, ಸಾರ್ವಜನಿಕಾರೋಗ್ಯ ರಕ್ಷಣೆ, ಶಸ್ತ್ರಚಿಕಿತ್ಸೆ ಮತ್ತು ದಾಕುಗಳ ಸಂಯೋಜನೆಯ ಮೂಲಕ ಕ್ಷಯವನ್ನು ಅಂಶತಃ ನಿಯಂತ್ರಿಸಲಾಗಿದೆ. ಆಂಟಿ ಬಯೋಟಿಕ್ ಔಷಧಗಳು, ವಿಶೇಷವಾಗಿ ಸ್ಟ್ರೆಪ್ಟೊಮೈಸಿನ್ ಕ್ಷಯದ ಪ್ರಮಾಣವನ್ನು ತಗ್ಗಿಸಲು ವಿಶೇಷವಾಗಿ ಪ್ರಯೋಜನಕರವಾಗಿದೆ. ಬಿ. ಸಿ. ಜಿ. ಎಂಬ ಕ್ಷಯರೋಗ ನಿರೋಧಕ ದಾಕನ್ನು ಯುರೋಪಿನಲ್ಲಿ ಮತ್ತು ಭಾರತವನ್ನೊಳಗೊಂಡು ಏಷ್ಯದ ಕೆಲವು ಭಾಗಗಳಲ್ಲಿ ವಿಸ್ತೃತ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ.

ಲೋಕದ ಅನೇಕ ಕಡೆಗಳಲ್ಲಿ ಖಾಸಗಿ ಸಂಸ್ಥೆಗಳು, ಸಾರ್ವಜನಿಕರಲ್ಲಿ ಕ್ಷಯದ ಕುರಿತಾದ ತಿಳುವಳಿಕೆಯನ್ನು ಹೆಚ್ಚಿಸಿವೆ ಮತ್ತಿದರಿಂದ, ಸಾರ್ವಜನಿಕರಿಗೆ ಕ್ಷಯದ ವಿರುದ್ಧ ಹೆಚ್ಚಿನ ರಕ್ಷಣೆ ಪಡೆಯಲು ಸಾಧ್ಯವಾಗಿದೆ.

(೧೦ನೇ ಪುಟ ನೋಡಿರಿ)

ನಿಮ್ಮ ಎಲ್ಲಾ ಜೋತಿಷ್ಯ ವಿಷಯಗಳಿಗೆ ಇಂದೇ ಬರೆಯಿರಿ—
ಪಂಡಿತ ಕೆ. ಎಸ್. ಶಾಸ್ತ್ರಿ,
ಜ್ಯೋತಿರ್ವಿದ್ಯಾ ಸಂಶೋಧನಾ ಕೇಂದ್ರ
ಪಂಚವಟಿ, ನಾಶಿಕ.

ZANDU'S THREE GEMS of AYURVEDIC MEDICINES
ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0
ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.
ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.
ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು
ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.
DAMODAR & CO.,
113 Nainiappa Naicken Street, P. T.-MADRAS-3.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಸೇನೆಯ ಪುನಾರಚನೆ ಹಾಗು ಬಲ ಸಂವರ್ಧನೆ

ಅಣು ಯುಗದಲ್ಲಿ ಶಕ್ತಿ ಸಂಚಯದ ರಹಸ್ಯ

ಇದೇ ೧೫ನೇ ದಿನಾಂಕ ಭಾರತೀಯ ಸೇನೆಯ ಮುಖ್ಯಾಧಿಕಾರವನ್ನು ಜನರಲ್ ಶ್ರೀ ನಾಗೇಶರವರು ರಾಜೇಂದ್ರ ಸಿಂಹಜೀಯವರಿಂದ ವಹಿಸಿಕೊಂಡರು. ಅತಿ ಹೆಚ್ಚಿನ ಹೊಣೆಗಾರಿಕೆಯ ಈ ಸ್ಥಾನವನ್ನು ವಹಿಸಿದ ಭಾರತೀಯರಲ್ಲಿ ಶ್ರೀ ನಾಗೇಶರು ಮೂರನೆಯವರಾಗಿದ್ದಾರೆ. ಅವರ ಮುಂದೆ ಸೇನೆಯ ಪುನಾರಚನೆ ಮತ್ತು ಬಲಸಂವರ್ಧನೆಯ ಸಮಸ್ಯೆಗಳಿರುತ್ತವೆ.

ಈಚಿನ ವರ್ಷಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಶಾಂತಿಯ ಪ್ರವಾದಿ ಎಂದೆನಿಸಿಕೊಂಡಿರುವ ಭಾರತವು ತನ್ನ ಸೇನೆಗಳಿಗಾಗಿ ಅಪಾಯದ ಅರಿವಾಗಿಸುವಷ್ಟು ಮೊತ್ತವನ್ನು ವ್ಯಯಿಸುತ್ತಿದೆ ಎಂಬುದನ್ನು ಕೇಳಿ ಅನೇಕರು ಆಶ್ಚರ್ಯಚಕಿತರಾಗಬಹುದು. ಸತ್ಯ ಮತ್ತು ಅಹಿಂಸೆಗಳ ತತ್ವಗಳನ್ನು ಸಾರಿದ ಮಹಾತ್ಮರ ವಾರೀಸುದಾರರು ಹೀಗೆ ಮಾಡುವುದೆಂದರೇನು? ಎಂದೂ ಕೇಳುವ ಮನಸ್ಸು ನಮಗಾದೀತು.

ಸೇನೆಯ ವೆಚ್ಚದ ಮಟ್ಟಿಗೆ ಹೇಳುವುದಾದರೆ, ಪಾಶ್ಚಾತ್ಯ ರಾಷ್ಟ್ರಗಳು ವೆಚ್ಚ ಮಾಡುವ ಹಣದ ಮುಂದೆ ನಮ್ಮದು ಬಹಳ ಕ್ಷುಲ್ಲಕವಾದ ಮೊತ್ತ. ಇನ್ನು ಮಹಾತ್ಮರ ತತ್ವದ ಬಗ್ಗೆ ವ್ಯವಹಾರಜ್ಞರೆಲ್ಲರೂ ಹೇಳುವುದೊಂದೇ ಮಾತು — ನಮ್ಮ ಒಳ್ಳೆಯತನವನ್ನು ತಿಳಿಯದ ಮೂರ್ಖರು ಲೋಕದಲ್ಲಿರುವಷ್ಟು ಕಾಲ ನಾವು ಭದ್ರತೆಯ ಬಗ್ಗೆ ಉದಾಸೀನ ಮಾಡಲಾಗದು.

ಪ್ರಧಾನ ಮಂತ್ರಿ ನೆಹರುಗಳು ನೂರಾರು ಸಲ ಬಹಿರಂಗಗೊಳಿಸಿರುವಂತೆ, ನಮಗೆ ಆಕ್ರಮಣದ ದುರುದ್ದೇಶವಿಲ್ಲವೇ ಇಲ್ಲ, ಆದರೂ ನಾವು ಸೇನೆಯನ್ನು ಇಟ್ಟುಕೊಂಡಿದ್ದೇವಾದರೆ ಅದು ಸಂರಕ್ಷಣೆಗೋಸ್ಕರ ಶಾಂತಿಯ ಸೂತ್ರಗಳನ್ನು ಅತಿಕ್ರಮಿಸುವವರನ್ನು ನಮ್ಮ ಗಡಿಯಿಂದಾಚೆ ನೂಕುವುದಷ್ಟೇ ನಮ್ಮ ಸೇನೆಯ ಕೆಲಸ. ನಾವು ಯಾವ "ಯುದ್ಧ"ದ ಕುರಿತಾಗಿಯೂ ಮಾತಾಡುವುದಿಲ್ಲ.

ವಾಸ್ತವಿಕತೆಯ ಚಿತ್ರವನ್ನು ಕಣ್ಣಮುಂದಿಟ್ಟುಕೊಂಡೇ ನಾವು ಸೇನೆಯನ್ನು ಕಾಯ್ದುಕೊಂಡು ಹೋಗುತ್ತಿದ್ದೇವೆ. ಈಚೆಗೆ ಸೈನ್ಯದ ವಿಸ್ತರಣೆಗಿಂತಲೂ ಸೈನ್ಯದ ಬಲ ಸಂವರ್ಧನೆಯತ್ತ ನಾವು ಹೆಚ್ಚು ಗಮನವಿತ್ತಿದ್ದೇವೆ. ನಮಗೆ ತಾಂತ್ರಿಕ ವಿಭಾಗದಲ್ಲಿ ನುರಿತವರ ಕೊರತೆ ಹೇಳತೀರದು. ಸ್ವಾತಂತ್ರ್ಯೋತ್ತರದಲ್ಲಿ ಸೈನ್ಯಾಧಿಕಾರಿಗಳಿಗೆ ಭಾರತದಲ್ಲಿಯೇ ಉತ್ತಮ ತರಬೇತಿಯನ್ನು ಒದಗಿಸಿಕೊಡುವ ವಿಶಾಲ ಪ್ರಯತ್ನ ನಡೆಯಿತು. ಆದರೆ ಹೊರದೇಶಗಳ ಕಲಿಕೆಯ ಆವಶ್ಯಕತೆ ಇನ್ನೂ ಮುಗಿದಿಲ್ಲ.

ದೊಡ್ಡ ಸೈನ್ಯವನ್ನು ಕಟ್ಟಿಕೊಳ್ಳುವುದಕ್ಕಿಂತಲೂ ಅತ್ಯುತ್ತಮ ಹಾಗು ಅತ್ಯಾಧುನಿಕ ಶಸ್ತ್ರಗಳಿಂದ ಸುಸಜ್ಜಿತವಾದ ಸೇನೆಯನ್ನು ಕಟ್ಟಿಕೊಳ್ಳಬೇಕೆಂಬುದೇ ನಮ್ಮ ಹಂಬಲ. ಅಣುಬಾಂಬಿನಂಥ ಘೋರ ಶಸ್ತ್ರಗಳು ಬಳಸಲ್ಪಡುವ ಮುಂದಿನ ಮಹಾ ಯುದ್ಧದಲ್ಲಿ ದೊಡ್ಡ ಸೈನ್ಯಗಳಿಗೆ ಸ್ಥಾನವೇ ಇಲ್ಲವೆಂದು ತಜ್ಞರ ಅಭಿಪ್ರಾಯ. ಅಣು ಬಾಂಬಿನ ದಾಳಿಯನ್ನು ಇದಿರಿಸುವ ಶಕ್ತಿ ಬರಬೇಕಾದರೆ ಗೆರಿಲ್ಲಾ ಮಾದರಿಯಲ್ಲಿ ಚಿಕ್ಕ ಪಡೆಗಳ ಮೂಲಕವೇ ಹೋರಾಟ ಕೊಡಬೇಕಾಗುವುದೆಂದು ಹೇಳಲಾಗುತ್ತದೆ.

ಅಣು ಬಾಂಬನ್ನು ಸಾಮಾನ್ಯವಾಗಿ ದೊಡ್ಡ ನಗರಗಳ ಮೇಲೆ, ಕೈಗಾರಿಕೆಯ ಕೇಂದ್ರಗಳ ಮೇಲೆ, ಸೈನ್ಯದ ಠಾಣ್ಯಗಳ ಮೇಲೆ ಚೆಲ್ಲಲಾಗುತ್ತದೆ. ಇದರಿಂದ ಸೈನ್ಯ ತಪ್ಪಿಸಿಕೊಳ್ಳಬೇಕಿದ್ದರೆ ಚಿಕ್ಕ ತುಣುಕುಗಳಲ್ಲಿ ಅದು ಚದರಿರುವುದು ಅಗತ್ಯ. ಚಿಕ್ಕ ತುಣುಕುಗಳ ಮೇಲೆ ಸಹ ಚೆಲ್ಲುವಷ್ಟು ಬಾಂಬು ಅಗ್ಗವಾಗಿಲ್ಲ! ಆದುದರಿಂದ ಸೇನೆಯ ಪುನಾರಚನೆ ಈ ದಿಸೆಯಲ್ಲಿ ನಡೆಯುತ್ತಿರುವುದು ಲಾಭದಾಯಕ.

ದಕ್ಷತೆಯ ತರಬೇತಿಯು ಸೈನ್ಯದ ಚಲನವಲನದ ಮತ್ತು ವ್ಯೂಹ ನಿರ್ಮಾಣದ ಪಾತ್ರವನ್ನು ವಹಿಸುತ್ತದೆ. ಶತ್ರುವಿನ [illegible] ಹಿಮ್ಮೆಟ್ಟಿಸುವುದಕ್ಕೆ ಮತ್ತು ಅವರ ಪ್ರಗತಿಯನ್ನು ತಡೆಯುವುದಕ್ಕೆ ವ್ಯೂಹ ರಚನೆಯಲ್ಲಿ ಕೌಶಲ್ಯ ತೋರಿಸದಿದ್ದರೆ ಆಗದು. ಆಯಕಟ್ಟಿನ ಪ್ರದೇಶಗಳ ರಕ್ಷಣೆ ಮತ್ತು ಶತ್ರು ಕೇಂದ್ರಗಳಿಗೆ ಗುರಿಯಿಟ್ಟು ಹೊಡೆಯುವುದರಲ್ಲಿ ಪ್ರಾವೀಣ್ಯ ಹೆಚ್ಚಿದಷ್ಟು, ಸೇನೆಯ ಉಪಯುಕ್ತತೆ ಅಧಿಕವಾಗುತ್ತದೆ.

ಹಿಂದಿನ ಯುದ್ಧಗಳಲ್ಲಿ ಸೈನಿಕರ ಸಂಖ್ಯಾ ಪ್ರಮಾಣ ಜಯಾಪಜಯಗಳ ನಿರ್ಣಯದಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಿತು. ಆದರೆ, ಈಗ ಹಾಗೇನಿಲ್ಲ— ಗುಂಡಿನೆಸೆತದ, ಬಾಂಬುದಾಳಿಯ ಶಕ್ತಿಯೇ ಶಕ್ತಿ, ಹೊರತು ಸೈನಿಕರ ಸಮೂಹವಲ್ಲ. ವಿಮಾನಗಳ ಬಾಂಬುಗಳನ್ನು ಹೇರಿಕೊಂಡು ಅತಿ ಎತ್ತರದಲ್ಲಿ ಹಾರಿ ಬರುತ್ತಿರುವಾಗ ಅದನ್ನುರುಳಿಸಬಲ್ಲ ತುಪಾಕಿ ನಮಗೀಗ ಬೇಕಲ್ಲದೆ, ಖಡ್ಗ ಅಥವಾ ಈಟಿಯಲ್ಲ.

ಸೈನ್ಯದ ಬಲ ಸಂವರ್ಧನೆಯಲ್ಲೀಗ ಶಸ್ತ್ರದ ಪೂರೈಕೆಯ ವಿಷಯವೇ ಪ್ರಾಮುಖ್ಯತೆ ಪಡೆಯುತ್ತದೆ. ಸೈನಿಕರಿಗೆ ಕೊಡುವ ಸಂಬಳಕ್ಕಿಂತ ಎಷ್ಟೋ ಹೆಚ್ಚು ಪಾಲು ಹಣವನ್ನು ಶಸ್ತ್ರಗಳಿಗಾಗಿ ಸುರಿಯಬೇಕಾಗುತ್ತದೆ. ಅಷ್ಟಾಗಿಯೂ ಇವತ್ತು "ಅತ್ಯಾಧುನಿಕ"ವೆಂದು ಬಣ್ಣಿಸಲ್ಪಟ್ಟ ಆಯುಧವು ನಾಳೆ ಹಳೆಯದಾಗಿ ಹೋಗುವ ಸಂಭವ ಈ ವೈಜ್ಞಾನಿಕ ಯುಗದಲ್ಲಿ ಅಪರೂಪವಲ್ಲ. ಆದುದರಿಂದ ಆಯುಧಗಳಿಗಾಗಿ ಹಣ ವೆಚ್ಚ ಮಾಡುವಾಗ ಎಷ್ಟು ಜಾಗರೂಕತೆ ವಹಿಸಿದರೂ ಸಾಲದು.

ಆಯುಧಗಳ ವಿಷಯದಲ್ಲಿ ನಾವಿನ್ನೂ ಸ್ವಾವಲಂಬಿಯಾಗಿಲ್ಲ — ನಮ್ಮ ಕೆಲವು ಕೇಂದ್ರಗಳಲ್ಲಿ ಸಾಮಾನ್ಯ ಶಸ್ತ್ರಗಳು

(೧೨ನೇ ಪುಟ ನೋಡಿ)

ಜಾಗತಿಕ ಶಾಂತಿಯ ಆಶಾದಾಯಕ ವಾತಾವರಣ

ದ್ವೇಷ ಶಮನಕ್ಕೋಸ್ಕರ ನಾಲ್ಕು ಮಹಾರಾಷ್ಟ್ರಗಳ ವರಿಷ್ಠರ ಪರಿಷತ್ತು

ರಶಿಯದೊಡನೆ ಸಂಧಾನ ನಡೆಸಬೇಕೆಂಬ ಹಲವಾರು ಸೂಚನೆಗಳು ಕಳೆದ ಐದಾರು ವರ್ಷಗಳಿಂದ ಪದೇಪದೇ ಪಾಶ್ಚಾತ್ಯ ರಾಷ್ಟ್ರಗಳ ಮುಂದೆ ಬರುತ್ತಿದ್ದರೂ ರಶಿಯದ ಪ್ರಾಮಾಣಿಕತೆಯ ವಿಷಯದಲ್ಲಿ ಯಾವ ಗ್ಯಾರಂಟಿಯೂ ದೊರಕದ ಮೂಲಕ ನಾಲ್ಕು ಮಹಾರಾಷ್ಟ್ರಗಳ ವರಿಷ್ಠರ ಪರಿಷತ್ತನ್ನು ಸೇರಿಸುವುದೇ ಮುಂತಾದ ಕ್ರಮಗಳಲ್ಲಿ ಅಮೇರಿಕಕ್ಕೆ ಅಷ್ಟು ಆಸಕ್ತಿ ಉಳಿಯದಾಯಿತು. ವಿದೇಶ ಮಂತ್ರಿಗಳ ಮಟ್ಟದಲ್ಲಿ ಕೆಲವು ಸಲ ಸಮಾಲೋಚನೆಗಳನ್ನು ನಡೆಸಿದಾಗ, ಪರಿಣಾಮ ಉತ್ತೇಜನಕಾರಿಯಾಗಲಿಲ್ಲವಾದುದರಿಂದ, ಅಮೇರಿಕವು ತೀರ ಉದಾಸೀನವಾಯಿತು

ಅಮೇರಿಕದ ನಿಲುವು

ನಾಲ್ಕು ಮಹಾ ರಾಷ್ಟ್ರಗಳ ವರಿಷ್ಠರ ಪರಿಷತ್ತಿನ ಸುದ್ದಿಯನ್ನೆ ಎತ್ತದಿರುವಷ್ಟು ಅಮೇರಿಕ ಹಿಂಜರಿದಿರುವುದಕ್ಕೆ ಬಲವಾದ ಕಾರಣಗಳಿವೆ—ವರಿಷ್ಠರು ಹೀಗೆ ಭೇಟಿಯಾಗಿ ಸಮಾಲೋಚನೆ ನಡೆಸುವರೆಂಬ ಸುದ್ದಿ ಎಲ್ಲ ರಾಷ್ಟ್ರಗಳಲ್ಲೂ ಸಂತೋಷದ ಚಿಲುಮೆಯನ್ನು ಚಿಮ್ಮಿಸುತ್ತದೇನೋ ಸರಿ ಆದರೆ, ಸಮಾಲೋಚನೆಗಳಲ್ಲಿ ಯಾವ ಪ್ರಗತಿಯೂ ಸಾಧಿಸಲ್ಪಡಲಿಲ್ಲ; ಭಿನ್ನಾಭಿಪ್ರಾಯಗಳ ಪರಿಹಾರವಾಗಲಿಲ್ಲ ಎಂಬ ಸುದ್ದಿ ಜನರಲ್ಲಿ ಮೂಡಿದ ಆಶೆಯ ಬದಲು ನಿರಾಶೆಯನ್ನೂ ಆದರ ಪರಿಣಾಮವಾಗಿ ತೀವ್ರ ಕ್ಷೋಭೆಯನ್ನೂ ಉಂಟುಮಾಡಬಹುದು. ಪರಿಸ್ಥಿತಿಯನ್ನು ಹೀಗೆ ಹದಗೆಡಿಸಲು ಹೋಗುವುದೇ ಸರಿಯಲ್ಲ ಎಂಬುದು ಅಮೇರಿಕದ ವಾದ.

ಪರಿಷತ್ತಿನ ಸ್ವರೂಪ

ಹೀಗಿದ್ದರೂ ಈ ಸಲ ಆದು ನಾಲ್ಕು ಮಹಾರಾಷ್ಟ್ರಗಳ ವರಿಷ್ಠರು ಪರಿಷತ್ತಿನಲ್ಲಿ ಸೇರಿ ಸಮಾಲೋಚನೆ ನಡೆಸಲು ಒಪ್ಪಿದೆ. ಈ ಪರಿಷತ್ತು ಇದೇ ಜೂನಿನಿಂದ ಆಗೋಸ್ಟಿನೊಳಗೆ ಎಂದಾದರೊಂದು ದಿನ ಸೇರಬಹುದೆಂದು ಹೇಳಲಾಗುತ್ತದೆ. ಪರಿಷತ್ತು ಸೇರುವುದೆಲ್ಲಿ ಎಂದೇನೂ ನಿರ್ಧಾರವಾಗಿಲ್ಲ. ಆದರೆ, ನಾಲ್ಕು ಮಹಾರಾಷ್ಟ್ರಗಳ ವರಿಷ್ಠರಲ್ಲದೆ ಆಯಾ ವಿದೇಶ ಮಂತ್ರಿಗಳೂ ಸಮಾಲೋಚನೆಗಳಲ್ಲಿ ಭಾಗ ವಹಿಸುವರೆಂದು ತಿಳಿದು ಬರುತ್ತದೆ. ನಿಜ ಹೇಳಬೇಕೆಂದರೆ, ವರಿಷ್ಠರು ಕೇವಲ ಮಾರ್ಗದರ್ಶನ ಸೂತ್ರಗಳನ್ನು ಕಂಡು ಹಿಡಿಯುವರು—ವಿದೇಶ ಮಂತ್ರಿಗಳೇ ವಿವರಗಳನ್ನು ಗೊತ್ತುಪಡಿಸಿ ದ್ವೇಷಶಮನದ ಉಪಾಯಗಳನ್ನು ಜಾರಿಗೆ ತರುವರು.

ಬ್ರಿಟನಿನ ಒತ್ತಾಯ

ಪಶ್ಚಿಮ ಜರ್ಮನಿಗೆ ಸ್ವಾತಂತ್ರ್ಯವನ್ನು ನೀಡಲು ಪ್ಯಾರಿಸಿನಲ್ಲಿ ಸೇರಿದ್ದ ತ್ರಿರಾಷ್ಟ್ರಗಳ ವಿದೇಶ ಮಂತ್ರಿಗಳು ರಶಿಯಕ್ಕೆ ಆಮಂತ್ರಣ ಕೊಡಬೇಕಾದರೆ ಡಲ್ಲೇಸರನ್ನು ಬ್ರಿಟನಿನ ವಿದೇಶಾಂಗ ಸಚಿವರು ಬಹಳವಾಗಿ ಒಲಿಸಿಕೊಳ್ಳಬೇಕಾಯಿತು. ಬ್ರಿಟನಿನ ಒತ್ತಾಯವು ಅಮೇರಿಕದ ಮೇಲೆ ಮೊದಲಿಂದಲೂ ಇದ್ದಿತು. ಈಚೆಗೆ ರಶಿಯದ ಧೋರಣೆಯಲ್ಲಿ ಕೆಲವು ಮಹತ್ವದ ಪರಿವರ್ತನೆ ಸಂಭವಿಸಿರುವುದನ್ನು ಗಮನಿಸಿದ ಅಧ್ಯಕ್ಷ ಐಸೆನ ಹೋವರರು ಬ್ರಿಟನಿನ ಆಗ್ರಹಕ್ಕೆ ಸೈಗುಟ್ಟಿದರು. ದ್ವೇಷ ಶಮನಕ್ಕೋಸ್ಕರ ಯಾರನ್ನು ಎಲ್ಲಿ ಭೇಟಿಯಾಗಲೂ ತಾನು ಸಿದ್ಧನೆಂದು ಅವರು ಸಾರಿದರು. ಡಲ್ಲೇಸರ ವಿರೋಧ ಹೀಗೆ ದೂರವಾಗಲು, ರಶಿಯಕ್ಕೆ ಆಮಂತ್ರಣ ಕೊಡಲಾಯಿತು. ಅದನ್ನು ಮೊಲೊಟೋವರು ಸ್ವೀಕರಿಸಿರುವರೆಂದು ವರದಿಗಳು ಹೇಳುತ್ತವೆ.

ಆಸ್ಟ್ರಿಯಕ್ಕೆ ಸ್ವಾತಂತ್ರ್ಯ

ಯಾಲ್ಟಾ ಪರಿಷತ್ತಿನ ಬಳಿಕ ಇದೀಗ ಮೊದಲನೆಯ ಸಲ ರಶಿಯದ ವರಿಷ್ಠರೊಡನೆ ಸಮಾಲೋಚನೆ ನಡೆಸಲಿರುವ ಪಾಶ್ಚಾತ್ಯರಾಷ್ಟ್ರಗಳು ಆಸ್ಟ್ರಿಯದ ಒಗ್ಗೆ ಒಪ್ಪಂದ ಮಾಡಿಕೊಳ್ಳುವಲ್ಲಿ ಮತ್ತು ನಿಶ್ಶಸ್ತ್ರೀಕರಣದ ಉದ್ದೇಶವನ್ನು ಸಾಧಿಸಿಕೊಳ್ಳುವಲ್ಲಿ ರಶಿಯವು ತೋರಿಸಿದ 'ಔದಾರ್ಯ"ದಿಂದ ಬಹಳಷ್ಟು ಪ್ರಭಾವಿತರಾಗಿರುವುದನ್ನು ಇದು ತೋರಿಸಿ ಕೊಡುತ್ತದೆ. ಆಸ್ಟ್ರಿಯವನ್ನು ಹಿಟ್ಲರನು ಆಕ್ರಮಿಸಿದಂದಿನಿಂದ ಇಂದಿನ ವರೆಗೆ ೧೭ ವರ್ಷಗಳಲ್ಲಿ ಅದು ಸ್ವಾತಂತ್ರ್ಯವನ್ನು ಕಳೆದುಕೊಂಡು ಪೇಚಾಟಕ್ಕೊಳಗಾಗಿದ್ದಿತು. ಯುದ್ಧೋತ್ತರದಲ್ಲಿ ನಾಲ್ಕು ಮಹಾರಾಷ್ಟ್ರಗಳು ಆ ದೇಶದ ವಿಷಯದಲ್ಲಿ ಒಪ್ಪಂದಕ್ಕೆ ಬರಲಾರದ ಕಚ್ಚಾಡಿಕೊಂಡವು. ಆಸ್ಟ್ರಿಯನರು ಇದರಿಂದ ಬಹಳವಾಗಿ ಬೇಸತ್ತರು.

ರಶಿಯದ ಕರಾರು

ಕಳೆದ ತಿಂಗಳಲ್ಲಿ ಒಮ್ಮಿಂದೊಮ್ಮೆ ಆಶೆಯ ಕಿರಣ ಕಾಣಿಸಿಕೊಂಡಿತು ಆಸ್ಟ್ರಿಯದ ವರಿಷ್ಠರಾದ ರಾಬರು ರಶಿಯದ ರಾಜಧಾನಿಗೆ ಹೋಗಿ ಬಲ್ಗೇನಿನ್ನರನ್ನು ಕಂಡು ಆಸ್ಟ್ರಿಯವನ್ನು ಸ್ವತಂತ್ರಗೊಳಿಸುವ ಕುರಿತು ಸಮಾಲೋಚನೆ ನಡೆಸಿದರು. ರಶಿಯವು ಇದುವರೆಗೆ ಮುಂದೊಡುತ್ತಾ ಬಂದಿದ್ದ ತನ್ನ ಆಕ್ಷೇಪಗಳನ್ನು ಒಂದು ಶರ್ತದ ಮೇಲೆ ಹಿಂದೆಗೆದುಕೊಂಡಿತು. ಸ್ವತಂತ್ರ ಆಸ್ಟ್ರಿಯವು ರಶಿಯದ ವಿರುದ್ಧ ಯಾವುದೇ ಒಪ್ಪಂದ ಮಾಡಿಕೊಳ್ಳಕೂಡದೆಂಬುದೇ ಆ ಕರಾರು.

ಆದರೂ ಸಂತೋಷ

ಪಾಶ್ಚಾತ್ಯ ರಾಷ್ಟ್ರಗಳ ದೃಷ್ಟಿಯಲ್ಲಿ ರಶಿಯಕ್ಕೆ ಕೊಡಲಾದ ವಿಶೇಷವಾದ ಸವಲತ್ತೆಂದು ಇದು ತೋರಿದರೂ ತನ್ನಂತೆ ಆ ರಾಷ್ಟ್ರವೂ ಸೈನ್ಯವನ್ನು ಹಿಂದೆಗೆದುಕೊಳ್ಳಲು ಒಪ್ಪಿದುದರಿಂದ ಸಮಾಧಾನವಾಗಿ, ಆತಂಕ ತೊಲಗಿದಂತೆನಿಸಿರಬೇಕು. ಆಸ್ಟ್ರಿಯದ ಮಟ್ಟಿಗೆ ತಟಸ್ಥ ಪರಿಸ್ಥಿತಿಯು ವ್ಯಾಪಾರ ಸಂಬಂಧವನ್ನು ಐರೋಪ್ಯ ರಾಷ್ಟ್ರಗಳಲ್ಲೆಲ್ಲ ಬೆಳೆಸಿಕೊಳ್ಳುವುದಕ್ಕೆ ನೆರವಾಗದಿರದು. ಮೊನ್ನೆ ಆದಿತ್ಯವಾರ ವಿಯೆನ್ನದಲ್ಲಿ ನಾಲ್ಕು ಮಹಾ ರಾಷ್ಟ್ರಗಳ ವಿದೇಶ ಮಂತ್ರಿಗಳು ಒಪ್ಪಂದಕ್ಕೆ ಸಹಿ ಹಾಕಿದಾಗ ಕುಣಿದಾಡಿದ ಆಸ್ಟ್ರಿಯನರ ಸಂತೋಷಕ್ಕೆ ಇದೂ ಒಂದು ಕಾರಣ.

ನಿಶ್ಶಸ್ತ್ರೀಕರಣ

ಲಂಡನಿನಲ್ಲಿ ನಿಶ್ಶಸ್ತ್ರೀಕರಣ ಸೂಚನೆಗಳನ್ನು ಪರ್ಯಾಲೋಚಿಸಲು ಸೇರಿದ್ದ ಸಭೆಯಲ್ಲಿ ರಶಿಯವು ಪಾಶ್ಚಾತ್ಯರಿಗೆ ಅನುಕೂಲವಾದ ಕೆಲವು ಸೂಚನೆಗಳನ್ನು ಮುಂದಿಟ್ಟದ್ದು ದ್ವೇಷ ಶಮನದ ದಿಸೆಯಲ್ಲಿಟ್ಟ ಇನ್ನೊಂದು ಹೆಜ್ಜೆ. ಇಷ್ಟರ ವರೆಗೆ ರಶಿಯವು ಅಣುಶಸ್ತ್ರಗಳನ್ನು ನಾಶಗೊಳಿಸುವ ಮತ್ತು ಉತ್ಪಾದನೆ ಯಾಗುವುದನ್ನು ತಡೆಯುವ ಘಟಕವೊಂದಿರಬೇಕೆಂಬುದನ್ನು ಮನ್ನಿಸಿರಲಿಲ್ಲ. ಅಲ್ಲದೆ ಸೈನ್ಯ ಪ್ರಮಾಣವನ್ನು ಮೂರರಲ್ಲಿ ಒಂದಂಶದಷ್ಟು ಕಡಿಮೆ ಮಾಡಬೇಕೆಂಬ ತನ್ನ ಮೊದಲಿನ ಸೂಚನೆಯನ್ನು ಬದಲಿಸಿರಲಿಲ್ಲ ಆದರೆ ಈಗ ಅದು ಪಾಶ್ಚಾತ್ಯ ರಾಷ್ಟ್ರಗಳ ನಿಲುವಿಗೆ ಹತ್ತಿರವಾದ ಸೂಚನೆಗಳನ್ನು ಮಂಡಿಸಿರುತ್ತದೆ.

ಹೊಸ ಸೂಚನೆ

ಇದರಂತೆ ೧೯೫೭ ಮತ್ತು ೫೮ನೇ ವರ್ಷಗಳಲ್ಲಿ—ಎರಡು ಘಟ್ಟಗಳಲ್ಲಿ—ನಿಶ್ಶಸ್ತ್ರೀಕರಣ ಕಾರ್ಯ ನಡೆಯಬೇಕು. ಅಮೇರಿಕ, ಚೀನ ಮತ್ತು ರಶಿಯಗಳೊಡನೆ ೧೫ ಲಕ್ಷ ಸೈನ್ಯವೂ ಬ್ರಿಟನು ಮತ್ತು ಫ್ರಾನ್ಸುಗಳೊಡನೆ ಆರೂವರೆ ಲಕ್ಷ ಸೈನ್ಯವೂ ಇರಬಹುದು. ಅಣುಶಸ್ತ್ರಗಳ ಪ್ರಯೋಗವು ನಿಲ್ಲಿಸಲ್ಪಡಬೇಕಲ್ಲದೆ, ಅದನ್ನು ಬಹಿಷ್ಕರಿಸಲೂ ಬೇಕು ಬೇರೆ ದೇಶಗಳಲ್ಲಿರುವ ತಮ್ಮ ಸೈನಿಕ ಠಾಣ್ಯಗಳನ್ನು ಬಿಟ್ಟುಗೊಡಬೇಕು. ಈ ಸೂಚನೆಗಳುಹೊರತಾಗಿ ರಶಿಯವು ಬೇರೆ ಅನೇಕ ವಿಷಯಗಳನ್ನೂ ಪಾ

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service, sound investment and a personal touch with its Policy-holders and Representatives At whatever stage we welcome your association with the POPULAR

THE POPULAR INSURANCE CO., LTD.
"POPULAR BUILDINGS" MANGALORE-1

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುವದು, ಈ ಎಲ್ಲಾ ವ್ಯಾಧಿಗಳಿಗೆ ಮಹಾ ಔಷಧವಾಗಿದೆ ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ 1—0—0

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ— ಬೆಂಗಳೂರು 2.
(2) ಷಾ ಕಂಪೆನಿ— ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್—ಚಿಂತಾಮಣಿ.

ಧನಾಢ್ಯರ ದುರಹಂಕಾರ--ದುರ್ನೀತಿಯ ದುಸ್ಸಾಧನೆ—
ಮೊದಲಾದುವುಗಳನ್ನು ಚಿತ್ರಿಸುವ –
ಬಡವರ ಭೀಕರ ಪರಿಸ್ಥಿತಿಯನ್ನು ಕನಿಕರಾವಸ್ಥೆಯನ್ನು—
ಹೃದ್ರಾವಕವಾಗಿ ಪ್ರತಿಬಿಂಬಿಸುವ—

ನವೀನ ಸಾಮಾಜಿಕ ಕಾದಂಬರಿ—

ಜಮೀನ್ದಾರ

ಹಿಂದಿಯ ಮೂಲ ಲೇಖಕರು:- ಪ್ರೊಫೆಸರ್ ಇಂದ್ರ, ವಿದ್ಯಾ ವಾಚಸ್ಪತಿ.
ಅನುವಾದಕರು: ವಿದ್ವಾನ್ ಹೊಸಮನೆ ಗುಡ್ಡಪ್ಪ,
ರಾ. ಭಾ. ವಿಶಾರದ (ಮದ್ರಾಸ್), ಎಚ್. ಟಿ ಸಿ (ಮುಂಬಯಿ).
ಧನಿಕರೆನ್ನದೆ, ಬಡವರೆನ್ನದೆ ಓದಲೇಬೇಕಾದ ಜನತಾಸಾಹಿತ್ಯ.
ಬೆಲೆ.– ೧ –೮—೦. (ಟ. ಖರ್ಚು ಬೇರೆ)
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ
ನವಭಾರತ ಪುಸ್ತಕ ಭಂಡಾರ ಉಡುಪಿ – ...

ಶ್ಚಾತ್ಯ ರಾಷ್ಟ್ರಗಳ ಪರಿಶೀಲನೆಗಾಗಿ ಮುಂದಿಟ್ಟಿರುತ್ತದೆ.

ಪಾಶ್ಚಾತ್ಯರ ಪ್ರತಿಕ್ರಿಯೆ

ಬಹಳ ದಿನಗಳಿಂದ ಪರಿಹಾರ ಹೊಂದದಿರುವ ಈ ಸಮಸ್ಯೆಯ ಕುರಿತು ರಶಿಯವು ಮಾಡಿದ ಹೊಸ ಸೂಚನೆಗಳಿಗೆ ಪಾಶ್ಚಾತ್ಯ ರಾಷ್ಟ್ರಗಳ ಸ್ವಾಗತ ಪ್ರಥಮ ಹಂತದಲ್ಲಿ ಸಿಕ್ಕಿರುತ್ತದೆ. ಆದರೆ, ಪೂರಾ ಸ್ಪಷ್ಟವಾಗಿಲ್ಲವೆಂದು ಭಾವಿಸಲಾದ ಕೆಲವು ವಿಷಯಗಳ ಕುರಿತು ರಶಿಯದೊಡನೆ ಆ ರಾಷ್ಟ್ರಗಳು ವಿವರಣೆಯನ್ನು ಕೇಳಿರುತ್ತವೆ ರಶಿಯವು ಹೀಗೆ ತನ್ನಿಂದ ಹುಟ್ಟಿಕೊಂಡ ಆತಂಕಗಳನ್ನು ಸ್ವೇಚ್ಛೆಯಿಂದ ದೂರ ಮಾಡಲು ಪ್ರಯತ್ನಿಸುತ್ತಿರುವುದು ಜಾಗತಿಕ ಶಾಂತಿಯ ದಿಸೆಯಲ್ಲಿಡುತ್ತಿರುವ ಮಹತ್ವದ ಹೆಜ್ಜೆ ಎನ್ನಲಡ್ಡಿಯಿಲ್ಲ.

ಇನ್ನೊಂದು ಸೈನಿಕ ವ್ಯೂಹ

ಆದಾಗ್ಯೂ ರಶಿಯವು ಪಾಶ್ಚಾತ್ಯ ರಾಷ್ಟ್ರಗಳ ಧೋರಣೆಯ ಕುರಿತು ತನ್ನ ನಿಲುಮೆಯನ್ನು ಪೂರಾ ಬದಲಿಸಿರುವುದೆಂದು ಭಾವಿಸಬಾರದು. ಪಶ್ಚಿಮ ಜರ್ಮನಿಯ ಪುನರುತ್ಥಾನಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಅನುಮತಿಯನ್ನಿತ್ತು ಉತ್ತರ ಅಟ್ಲಾಂಟಿಕ ಒಡಂಬಡಿಕೆಯ ರಾಷ್ಟ್ರಗಳ ಸಾಲಿನಲ್ಲಿ ಸೇರಲು ಬಿಟ್ಟುದನ್ನು ರಶಿಯ ಕ್ಷಮಿಸಿರುವುದಿಲ್ಲ. ತನ್ನ ಎಚ್ಚರಿಕೆಗಳನ್ನು ಕಡೆಗಣಿಸಿರುವುದರ ಪ್ರತೀಕಾರ ರೂಪದಲ್ಲಿ ರಶಿಯವು ಫ್ರಾನ್ಸು ಮತ್ತು ಬ್ರಿಟನುಗಳೊಡನೆ ಮಾಡಿಕೊಂಡಿದ್ದ ಮೈತ್ರಿ ಒಪ್ಪಂದಗಳನ್ನು ರದ್ದು ಮಾಡಿದೆಯಲ್ಲದೆ ಪಾಶ್ಚಾತ್ಯ ರಾಷ್ಟ್ರಗಳ ಸೈನಿಕ ವ್ಯೂಹದ ವಿರುದ್ಧ ತನ್ನ ಬೆಂಬಲಿಗರ ಕೋಟೆಯನ್ನು ಕಟ್ಟಲು ತೀರ್ಮಾನಿಸಿರುತ್ತದೆ.

ಕಮ್ಯೂನಿಸ್ಟರ ಮೈತ್ರಿ

ಈ ಉದ್ದೇಶವನ್ನಿಟ್ಟು ಕೊಂಡು ವಾರ್ಸಾದಲ್ಲಿ ಕಳೆದ ವಾರ ಪರಿಷತ್ತೊಂದನ್ನು ರಶಿಯ ನೆರೆಯಿಸಿತು. ಅದರಲ್ಲಿ ಪೂರ್ವ ಯುರೋಪಿನ ೩೦ ಕೋಟಿ ಪ್ರಜೆಗಳುಳ್ಳ ಆಲ್ಬೇನಿಯ, ಬಲ್ಗೇರಿಯ, ಹಂಗೆರಿ, ರುಮೇನಿಯ, ಜೆಕೋಸ್ಲೊವಾಕಿಯ, ಪೂರ್ವ ಜರ್ಮನಿ ರಾಷ್ಟ್ರಗಳು ಭಾಗ ವಹಿಸಿದ್ದುವಲ್ಲದೆ ೬೦ ಕೋಟಿ ನಾಗರಿಕರಿರುವ ಚೀನದ ಪ್ರತಿನಿಧಿಗಳೂ ಭಾಗ ವಹಿಸಿದ್ದರು. ಪರಸ್ಪರ ಮೈತ್ರಿ, ಸಹಕಾರ ಮತ್ತು ಸಹಾಯದ ಒಪ್ಪಂದದ ಕರಡನ್ನು ಇಲ್ಲಿವಿವರವಾಗಿ ಪರಿಶೀಲಿಸಲಾಯಿತು.

ಪಾಕ - ಅಫಘಾನಗಳ ನಾಜೂಕು ಸಂಬಂಧ

ಮುಸ್ಲಿಂ ರಾಷ್ಟ್ರಗಳ ಮಧ್ಯಸ್ಥಿಕೆಯ ಪ್ರಯತ್ನ

ಚೀನದ ಬೆಂಬಲ

ಒಪ್ಪಂದವು ಎಂಟು ರಾಷ್ಟ್ರಗಳಿಗಷ್ಟೇಯಲ್ಲ, ಒಡಂಬಡಿಕೆಯ ತತ್ವಗಳನ್ನು ಮನ್ನಿಸಲು ಸಿದ್ಧವಿರುವ ಯಾವುದೇ ರಾಷ್ಟ್ರಕ್ಕೂ ತೆರೆದಿರುತ್ತದೆ. ಜಾಗತಿಕ ಶಾಂತಿಯನ್ನು ಕಾಯ್ದುಕೊಂಡು ಹೋಗುವುದು ಒಪ್ಪಂದದ ಉದ್ದೇಶಗಳಲ್ಲಿ ಒಂದೆಂದು ಹೇಳಲಾಗಿದೆಯಲ್ಲದೆ ಸೈನಿಕ ಸಹಾಯವನ್ನೊಳಗೊಂಡು ಎಲ್ಲ ರೀತಿಯಿಂದಲೂ ಒಪ್ಪಂದದ ರಾಷ್ಟ್ರಗಳು ಪರಸ್ಪರ ಶೀಘ್ರವಾಗಿ ನೆರವೀಯುತ್ತಿರಬೇಕೆಂದು ವಿಧಿಸಲ್ಪಟ್ಟಿರುತ್ತದೆ. ಪೂರ್ವಜರ್ಮನಿ ಮಾತ್ರ ಕಮ್ಯೂನಿಸ್ಟರ ಸಂಯುಕ್ತಸೇನೆಯಲ್ಲಿ ಸೇರಿಸಿಕೊಳ್ಳಲ್ಪಟ್ಟಿಲ್ಲ. ಆದರೆ ಸೇನೆಯ ರಚನೆಯ ಬಗ್ಗೆ ಒಮ್ಮತ ವ್ಯಕ್ತವಾಯಿತು. ಚೀನದ ಪ್ರತಿನಿಧಿಗಳು ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿದರು.

ಬಲ್ಗೇನಿನ್ನರ ಪ್ರವಾಸ

ಇದು ನಿಶ್ಚಯವಾಗಿಯೂ ಪಾಶ್ಚಾತ್ಯ ರಾಷ್ಟ್ರಗಳ ಮನಸ್ಸಿಗೆ ಬಂದಿಲ್ಲ—ಆದರೆ ತಾವು ಅನುಸರಿಸಿದ ಭದ್ರತೆಯ ಕ್ರಮವನ್ನು ಉಳಿದವರು ಅನುಕರಿಸಬಾರದೆಂದು ಅವು ಹೇಳುವುದೆಂತು? ಹೀಗೆ ಒಳಗಿಂದೊಳಗೆ ಕುದಿಯುತ್ತಿರುವಾಗಲೇ ಇನ್ನೊಂದು ಸುದ್ದಿಯೂ ಪಾಶ್ಚಾತ್ಯ ರಾಷ್ಟ್ರಗಳನ್ನು ಚಕಿತಗೊಳಿಸಿತು. ಯುಗೊಸ್ಲಾವಿಯಕ್ಕೆ ರಶಿಯದ ಪ್ರಧಾನಿ ಬಲ್ಗೇನಿನ್ನರೂ ಕಮ್ಯೂನಿಸ್ಟ ಪಕ್ಷದ ಪ್ರಧಾನ ಕಾರ್ಯದರ್ಶಿ ಕ್ರುಶೇವರೂ ಮತ್ತೊಬ್ಬ ಉಪಪ್ರಧಾನ ಮಂತ್ರಿಯೂ ಈ ತಿಂಗಳ ಅಂತ್ಯದಲ್ಲಿ ಭೇಟಿ ಕೊಡುವರೆಂದು ಆ ಸುದ್ದಿ ಹೇಳುತ್ತದೆ. ಇದನ್ನು ಯಾರೂ ನಿರೀಕ್ಷಿಸಿರಲಿಲ್ಲವೆಂಬುದೇ ಆಶ್ಚರ್ಯದ ಕಾರಣ.

ಟಿಟೋರ ಗುರಿಯೇನು?

ಸ್ಟಾಲಿನ್ನರು ಜೀವಂತರಿದ್ದಾಗ ಅವರ ವಿರುದ್ಧ ನಿಂತು ಯುಗೊಸ್ಲಾವಿಯವನ್ನು ಸ್ವತಂತ್ರಗೊಳಿಸಿದ್ದ ಟಿಟೋರವರು ರಶಿಯದ ಸರಕಾರದೊಡನೆ ಪುನಃ ಸಂಬಂಧವನ್ನು ಬೆಳೆಸಿಕೊಳ್ಳುವರೇ ಎಂಬುದು ಪಾಶ್ಚಾತ್ಯ ರಾಷ್ಟ್ರಗಳ ತಲೆ ತಿನ್ನುತ್ತದೆ. ರಶಿಯದೊಡನೆ ರಾಯಭಾರ ಸಂಪರ್ಕ ತಪ್ಪಿದ ಬಳಿಕ ಪಾಶ್ಚಾತ್ಯ ರಾಷ್ಟ್ರಗಳ ಮೈತ್ರಿಯನ್ನು ಟಿಟೋ ಸಂಪಾದಿಸಿದ್ದರು. ಈಗ ಅವರು ಪಾಶ್ಚಾತ್ಯರ ಮೈತ್ರಿಯನ್ನು ಉಳಿಸಿಕೊಂಡೂ, ರಶಿಯದ ಗೆಳೆತನವನ್ನು ಪಡೆಯಬೇಕೆಂದು; ಆತುರ ಪಡುವಂತೆ ಕಾಣುತ್ತದೆ. ಭಾರತದ ನೆಹರುಗಳೊಡನೆ ಸಮಾಲೋಚನೆ ನಡೆಸಿ ಹೋದ ಬಳಿಕ, ಸಹ ಜೀವನದ ತತ್ವದಲ್ಲಿ ತಾವು ಇಟ್ಟ ವಿಶ್ವಾಸವನ್ನು ಟಿಟೋ ಹೀಗೆ ಕಾರ್ಯ ರೂಪದಲ್ಲಿ ಪ್ರಕಟಿಸುತ್ತಿರುವರೆಂದು ಈ ಸುದ್ದಿಯ ಮಥಿತಾರ್ಥ.

ಪಾಕ-ಅಫಘಾನ ವಿರಸ

ತಮ್ಮ ಮಿತ್ರರ ದೆಸೆಯಿಂದ ಪಾಶ್ಚಾತ್ಯ ರಾಷ್ಟ್ರಗಳು ಇನ್ನೊಂದು ಗಂಭೀರ ಸಮಸ್ಯೆಯನ್ನೂ ಎದುರಿಸಬೇಕಾಗಿ ಬಂದಿರುತ್ತದೆ. ಅದೆಂದರೆ, ಪಾಕಿಸ್ತಾನಕ್ಕೂ ಅಫಘಾನಿಸ್ತಾನಕ್ಕೂ ಉಂಟಾಗಿರುವ ಮನಸ್ತಾಪ. ಕಾಬೂಲು ಮತ್ತು ಪೇಶಾವರಗಳಲ್ಲಿ ನಡೆದ 'ಧ್ವಜ ಪ್ರಕರಣ'ಗಳು ಇವೆರಡು ರಾಷ್ಟ್ರಗಳಲ್ಲಿ ತೀವ್ರ ಕ್ಷೋಭೆಯನ್ನು ಹುಟ್ಟಿಸಿದ್ದು, ಅದು ಬೇಗನೇ ಉಪಶಮನ ಹೊಂದದಿದ್ದರೆ ಪರಿಣಾಮ ಭೀಕರವಾದೀತು. ಇದನ್ನು ಚೆನ್ನಾಗಿ ತಿಳಿದಿರುವ ಪಾಶ್ಚಾತ್ಯ ರಾಷ್ಟ್ರಗಳು ಗೋಪ್ಯವಾಗಿ ತಂತಮ್ಮ ರಾಯಭಾರಿಗಳಿಂದ ಬುದ್ಧಿ ಹೇಳಿಸುವ ಮೂಲಕವೂ ಪ್ರಕಟವಾಗಿ ಮುಸ್ಲಿಂ ರಾಷ್ಟ್ರಗಳಾದ ತುರ್ಕಿ, ಇರಾಕ್, ಸೌದಿ ಅರೇಬಿಯ, ಇಜಿಪ್ಟ್ ಇತ್ಯಾದಿಗಳ ಮಧ್ಯಸ್ಥಿಕೆಯಿಂದಲೂ ಉಭಯ ರಾಷ್ಟ್ರಗಳೂ ಗುದುಕದಂತೆ ಪ್ರಯತ್ನ ಮಾಡುತ್ತಿವೆ.

ಎಚ್ಚರಿಕೆಯ ಪ್ರತಿಕ್ರಿಯೆ

ಪಾಕಿಸ್ತಾನವು ಕೆಲವು ದಿನಗಳ ಹಿಂದೆ ಇದೇ ೧೫ನೇ ತಾರೀಕಿನೊಳಗೆ ಅಫಘಾನಿಸ್ತಾನವು ತನ್ನ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಸಿಕೊಳ್ಳಬೇಕೆಂದು ಸಾರಿತು. ಹಾಗೆ ಮಾಡದಿದ್ದರೆ ಉಗ್ರಕ್ರಮಗಳನ್ನು ಕೈಗೊಳ್ಳಬೇಕಾದೀತೆಂದು ಪಾಕಿಸ್ತಾನ ಎಚ್ಚರಿಸಿತು. ಅಫಘಾನಿಸ್ತಾನದ ವಿರುದ್ಧ ಪಾಕಿಸ್ತಾನ ಮಾಡಬಹುದಾದ ಕೆಲಸವೆಂದರೆ ಆರ್ಥಿಕ ದಿಗ್ಬಂಧನ; ಮತ್ತು ಸೈನಿಕ ಧಾಳಿ ಮಾತ್ರ. ಇವೆರಡನ್ನೂ ಎದುರಿಸಲು ಅಫಘಾನಿಸ್ತಾನ ಸೊಂಟ ಕಟ್ಟಿತು. ಆರ್ಥಿಕ ದಿಗ್ಬಂಧನ ಹೇರಿದರೆ, ರಶಿಯದಿಂದ ತನಗೆ ಬೇಕಾದ ಸರಕುಗಳನ್ನು ತರುವೆನೆಂದಿತು; ಸೈನಿಕ ಆಕ್ರಮಣದ ವಿರುದ್ಧ ಹೋರಾಡಲು ಪ್ರಬುದ್ಧ ವಯಸ್ಕರಿಗೆಲ್ಲ ಆಜ್ಞೆಯಿತ್ತು ಕರೆಸಿ ಕೊಂಡಿತು.

ಸಂಧಾನದ ಆತುರ

ಇದರಿಂದ ಪಾಶ್ಚಾತ್ಯ ರಾಷ್ಟ್ರಗಳಿಗೆ ಭಯವುಂಟಾಯಿತು. ಅಫಘಾನಿಸ್ತಾನವು ರಶಿಯದ ಸ್ನೇಹವನ್ನು ಹೆಚ್ಚಿಸಿಕೊಂಡು, ಅದರ ಬಲೆಯಲ್ಲಿ ಬೀಳುವುದನ್ನು ತಮ್ಮ ಸ್ವಾರ್ಥ ದೃಷ್ಟಿಯ ಮೂಲಕ ಪಾಶ್ಚಾತ್ಯ ರಾಷ್ಟ್ರಗಳು ಇಚ್ಛಿಸುವುದಿಲ್ಲ. ಆದುದರಿಂದ ಮಧ್ಯಸ್ಥಿಕೆಯ ಪ್ರಯತ್ನ ನಡೆಯಿತು. ಇದರಿಂದ ಫಲವೇನಾದೀತೋ ಗೊತ್ತಿಲ್ಲ. ಆದರೆ ಪ್ರಾಯಶ್ಚಿತ್ತಕ್ಕಾಗಿ ಪಾಕಿಸ್ತಾನ ಹಾಕಿದ ಕೊನೆಯಗಳಿಗೆ ಮಾತ್ರ ಅನಿಶ್ಚಿತವಾಗಿ ಮುಂದುವರಿಸಲ್ಪಟ್ಟುದು ನಿಜ. ಅಫಘಾನಿಸ್ತಾನವು ಪಠಾಣರ ಪ್ರಶ್ನೆಯನ್ನು ಎತ್ತಲು ಅವಕಾಶವಿಲ್ಲದ ಸಂಧಾನಕ್ಕೆ ಒಪ್ಪುವುದಿಲ್ಲ. ಡ್ಯೂರಂಡ ರೇಖೆಯನ್ನು ಪಾಕಿಸ್ತಾನ ತನ್ನ ಗಡಿಯೆಂದು ಹೇಳುತ್ತಿದ್ದರೂ ಬ್ರಿಟಿಷರು ಭಾರತದಲ್ಲಿದ್ದಾಗ ಅವರೊಡನೆ ಮಾಡಿಕೊಂಡ ಒಪ್ಪಂದದ ಲಾಭವನ್ನು ಪಾಕಿಸ್ತಾನ ಪಡೆಯಲಾರದೆಂದೂ ಪಾಕಿಸ್ತಾನದಲ್ಲಿರುವ ಪಠಾಣರು ತಮ್ಮವರೇ ಎಂದೂ ಅಫಘಾನಿಸ್ತಾನ ಹೇಳುತ್ತದೆ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.
P. o. Box No. 3219, BOBMAY 3-

ಪಂಚಾಯತ ಬೋರ್ಡ್, ಹೈಸ್ಕೂಲ್ ಮೊದಲಾದ ಲೈಬ್ರರಿಗಳಿಗೆ
ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.
ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ
ನವಭಾರತ ಪುಸ್ತಕ ಭಂಡಾರ ಉಡುಪಿ

ಮನದಲ್ಲಿ ನಗುವಿದೆ! ನಗುವಿದ್ದಲ್ಲಿ ಸ್ವರ್ಗವಿದೆ!
ದಣಿದ ಮನವನ್ನು ತಣಿಸಿ ನಗಿಸಲು—
ನಗೆ ನೋಟಗಳು
(೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ)
ಲೇಖಕರು: ಕೆ. ವಿಟ್ಠಲ ಶೆಣೈ, ಬಿ. ಎ., ಎಲ್. ಟಿ.
(ಮುಳಿಯ ತಿಮ್ಮಪ್ಪಯ್ಯನವರ ಮುನ್ನುಡಿಯೊಡನೆ)
ನೀವೂ ನಕ್ಕು ಅನ್ಯರನ್ನೂ ನಗಿಸಬೇಕಾದರೆ ಈ ಪುಸ್ತಕದ ಪ್ರತಿಯೊಂದು ನಿಮ್ಮ ಬಳಿಯಲ್ಲಿರಲಿ.
ಬೆಲೆ: ೧—೪—೦ (ಟ. ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಏಶಿಯದ ಸಂಪತ್ತು
(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)
ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.
ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ
ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ,
ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.
ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.
ಕರ್ನಾಟಕದ ಎಲ್ಲ ಕಡೆಗಳ ಪುಸ್ತಕಗಳೂ ಸಿಗುತ್ತವೆ. ವಿಶೇಷ ಸವಲತ್ತಿಗೂ ಕೆಟಲಾಗಿಗೂ ಬರೆಯಿರಿ—
ನವಯುಗ ಪ್ರೆಸ್, ಉಡುಪಿ.

NAVAYUGA

Popular Kannada Weekly

Founder:—

Sri A. B. SHETTY, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೨೪	೧೯-೫-'೫೫	೩೭

ಗೋವೆಯ ವಿಮೋಚನೆ

ಪೋರ್ಚುಗಾಲಿನ ವಿದೇಶ ಮಂತ್ರಿಗಳು ಅಟ್ಲಾಂಟಿಕ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳ ಪರಿಷತ್ತಿನಲ್ಲಿ ಮೊನ್ನೆ ಭಾಗವಹಿಸಿದ್ದರು. ಆಗ ತಾವು ಗೋವೆ ಮುಂತಾದ ಭಾರತದಲ್ಲಿರುವ ತಮ್ಮ ವಸಾಹತುಗಳ ಪರಿವರ್ತಿತ ಪರಿಸ್ಥಿತಿಯನ್ನು ಸಂಧಿಗೆ ಸಹಿ ಹಾಕಿರುವ ಇತರ ರಾಷ್ಟ್ರಗಳ ವಿದೇಶ ಮಂತ್ರಿಗಳಿಗೆ ವಿದಿತಪಡಿಸಿರುವರೆಂದು ಲಿಸ್ಬನಿನಲ್ಲಿ ಅವರಿತ್ತ ಹೇಳಿಕೆಯೊಂದರಿಂದ ತಿಳಿದು ಬರುತ್ತದೆ. ಅವರೇನು ಹೇಳಿದರು ಎಂಬ ವಿವರ ಗೊತ್ತಾಗುವ ಸಂಭವವಿಲ್ಲ. ಏಕೆಂದರೆ, ಈ ಪರಿಷತ್ತಿನ ಕಾರ್ಯಕ್ರಮವೆಲ್ಲ ಗೋಪ್ಯ. ಆದರೆ ನಮ್ಮ ಈ ವರೆಗಿನ ಅನುಭವದ ಬಲದ ಮೇಲಿಂದ ಹೇಳುವುದಾದರೆ, ಭಾರತದ ಮಟ್ಟಿಗೆ ಏನೇನೂ ಅನುಕೂಲವಿರದ, ಅದರ ಮೇಲೆ ಹೇರಳ ದೋಷಾರೋಪಣೆಗಳಿರುವ, ವಸಾಹತುವಾದವನ್ನು ಶಾಶ್ವತವಾಗಿ ಮುಂದರಿಸುವ ರೀತಿಯಲ್ಲಿ ಡಾ. ಕುಂಞರು ಮಾತಾಡಿರಬೇಕೆಂದು ಊಹಿಸುವುದು ತಪ್ಪಾಗಲಾರದು. ಇದಕ್ಕೆ ಸಂಧಿಗೆ ಸಹಿ ಹಾಕಿದ ಬೇರೆ ರಾಷ್ಟ್ರಗಳ ಪ್ರಕಟ ಪ್ರತಿಕ್ರಿಯೆ ವ್ಯಕ್ತವಾಗಲಿಕ್ಕಿಲ್ಲ. ಆದರೆ ಆ ರಾಷ್ಟ್ರಗಳ ಮನಸ್ಸಿನಲ್ಲಿ ವಿಷಪೂರಿತ ಭಾವನೆಯನ್ನು ತುಂಬಿಸುವ ಡಾ! ಕುಂಞರ ಪ್ರಯತ್ನ ಭಾರತಕ್ಕೆ ಒಳ್ಳೆಯದನ್ನುಂಟುಮಾಡಲಾರದೆಂಬುದು ಸ್ಪಷ್ಟ. ಒಳಗಿಂದೊಳಗೆಯೇ ಭಾರತವನ್ನು ಸಂಶಯಚಿತ್ತದಿಂದ "ನ್ಯಾಟೋ" ರಾಷ್ಟ್ರಗಳು ನೋಡುತ್ತಿರುವುದಕ್ಕೆ ಇದು ನೆಪವಾಗದಿರದು. ಸದ್ಭಾವನೆಯ ಸ್ಥಾನದಲ್ಲಿ ಕುಟಿಲ ಮನೋಭಾವ ನೆಲೆಗೊಳ್ಳಬಹುದಾದ ಇಂಥ ಪ್ರಸಂಗಗಳನ್ನು ಭಾರತ ಸರಕಾರ ಹೇಗೆ ಇದಿರಿಸುತ್ತಿದೆ ಎಂಬುದು ಬಹಳ ಮುಖ್ಯವಾದ ವಿಷಯ. ಅಂತಾರಾಷ್ಟ್ರೀಯ ಪರಿಸ್ಥಿತಿಯನ್ನು ಚರ್ಚಿಸುವ ನೆಪದಲ್ಲಿ, ಗೋವೆಯ ಕುರಿತು ಭಾರತ ಸರಕಾರ ತಳೆದ ನಿಲುವೆಯ ಟೀಕೆಯೊಂದನ್ನೆ ಕಿವಿಗೊಟ್ಟು ನ್ಯಾಟೋ ರಾಷ್ಟ್ರಗಳು ಕೇಳುತ್ತಿದ್ದರೆ, ಭಾರತ ಸರಕಾರದ ಪ್ರತಿಷ್ಠೆಗೆ ನಿಶ್ಚಯವಾಗಿಯೂ ಪೆಟ್ಟು ತಗಲುತ್ತದೆ. ಗೋವೆಯ ಕುರಿತು ನ್ಯಾಟೋ ರಾಷ್ಟ್ರಗಳ ನಿಲುವೆ ಏನೆಂದು ಇನ್ನೂ ಸ್ಪಷ್ಟವಾಗಿಲ್ಲ—ಪೋರ್ಚುಗಾಲವು ಗೋವೆಯ ಮೇಲೆ ಭಾರತ ಸರಕಾರ ಅಭಿಯೋಗ ಹೂಡಿದ ಪಕ್ಷದಲ್ಲಿ ತನ್ನ ಬೆಂಬಲಕ್ಕೆ ನ್ಯಾಟೋ ರಾಷ್ಟ್ರಗಳ ತಂಡ ಬರುತ್ತದೆ ಎಂದು ಬಹಿರಂಗವಾಗಿ ಈಗಾಗಲೇ ಹಲವು ಸಲ ಹೇಳಿರುತ್ತದೆ. ಇದನ್ನು ನ್ಯಾಟೋದ ಇತರ ರಾಷ್ಟ್ರಗಳು ಪೂರ್ಣ ಪುಷ್ಟೀಕರಿಸಿಲ್ಲವಾದರೂ ಪೋರ್ಚುಗಾಲದ ನಿಲುವೆಯನ್ನು ಪೂರ್ಣ ಖಂಡಿಸಿರುವುದೂ ಇಲ್ಲವೆಂಬುದನ್ನು ಗಮನಿಸದಿರಲಾಗದು. ಆದುದರಿಂದ ಕುಟಿಲ ತಂತ್ರಗಳಿಗೆ ಹೆಸರಾದ ಪಾಶ್ಚಾತ್ಯ ರಾಷ್ಟ್ರಗಳವರು ಪರಿಸ್ಥಿತಿಗೆ ಹೊಂದಿಕೊಂಡು ನ್ಯಾಟೋ ಒಪ್ಪಂದದ ವ್ಯಾಪ್ತಿಯ ವ್ಯಾಖ್ಯೆಯನ್ನು ಮಾಡಹೋಗುವರೆಂಬ ಸಂಗತಿ ಖಚಿತವಾಗುತ್ತದೆ—ಪರಿಣಾಮದಲ್ಲಿ ನ್ಯಾಟೋ ಒಪ್ಪಂದವು ಗೋವೆ ಮತ್ತಿತರ ಭಾರತದಲ್ಲಿರುವ ಪೋರ್ಚುಗೀಜರ ವಸಾಹತುಗಳಿಗೆ ಅನ್ವಯವಾಗುವ ಸಂಭವ ಬಂದೊದಗಲೂಬಹುದು. ಭಾರತ ಸರಕಾರ ಇದನ್ನು ತಿಳಿದಿದೆ ಎಂದು ನಾವು ಭಾವಿಸುತ್ತೇವೆ. ಏಕೆಂದರೆ ಗೋವೆಯ ಗಡಿಯನ್ನು ದಾಟಿ ಒಳ ನುಗ್ಗುವ ವಿಷಯದಲ್ಲಿ ಸರಕಾರ ವಹಿಸಿದ ಧೋರಣೆಯು ಅಂತಾರಾಷ್ಟ್ರೀಯ ದೃಷ್ಟಿಯಲ್ಲಿ ಭಾರತ ಸರಕಾರದ ಮೇಲೆ ದೋಷಾರೋಪಣೆಗೆ ಎಡೆಸಿಗಬಾರದೆಂಬ ಗುರಿಯನ್ನಿಟ್ಟುಕೊಂಡಿರುವುದು ಕಳೆದ ಹತ್ತು ತಿಂಗಳ ಹೋರಾಟದಲ್ಲಿ ಪ್ರಕಟವಾಗಿರುತ್ತದೆ. ಗೋವೆ ಮತ್ತಿತರ ಪೋರ್ಚುಗೀಜರ ಕೈಯಲ್ಲಿರುವ ಭಾರತೀಯ ಪ್ರದೇಶಗಳಲ್ಲಿ ನುಗ್ಗಲು ಹವಣಿಸಿದ ಸತ್ಯಾಗ್ರಹಿಗಳನ್ನು ಭಾರತದ ಪೋಲೀಸರೇ ತಡೆದು ನಿಲ್ಲಿಸಿರುವುದು ಇದಕ್ಕೆ ಪ್ರತ್ಯಕ್ಷ ನಿದರ್ಶನ. ಅಂತಾರಾಷ್ಟ್ರೀಯ ದೃಷ್ಟಿಯಲ್ಲಿ ಸಮಸ್ಯೆಯನ್ನು ಭಾರತಕ್ಕೆ ಕೆಡಕಾಗುವ, ಕಲಂಕ ತರುವ ರೀತಿಯಲ್ಲಿ ಜಟಿಲಗೊಳಿಸಬಾರದೆನ್ನುವ ಭಾರತ ಸರಕಾರದ ಧೋರಣೆಯನ್ನು ವಿಚಾರವಂತರು ಅರ್ಥ ಮಾಡಿಕೊಳ್ಳಬಲ್ಲರು. ಆದಾಗ್ಯೂ ಭಾರತ ಸರಕಾರದ ಕರ್ತವ್ಯ ಸತ್ಯಾಗ್ರಹಿಗಳ ತಂಡವನ್ನು ತಡೆಯುವ ಮಟ್ಟಿಗೆ ಮುಗಿಯಿತೆಂಬು ಯಾರೂ ಒಪ್ಪಲಿಕ್ಕಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ, ವೈಯಕ್ತಿಕವಾಗಿ ಅಹಿಂಸಾತ್ಮಕ ಸತ್ಯಾಗ್ರಹ ಮಾಡಲು ಹೋಗುವವರನ್ನು ಭಾರತ ಸರಕಾರದ ಪೋಲೀಸರು ತಡೆಯುವುದೇ ಅನಾವಶ್ಯಕ; ಪೋರ್ಚುಗೀಜ ಪೋಲೀಸರಿಗೆ ಸೇರಿದ ವಿಷಯ ಅದು. ಇದೇ ಬುಧವಾರ (ದಿನಾಂಕ ೧೮) ಸ್ವಯಂ ಸೇವಕರ ತಂಡದೊಡನೆ ಹೊರಟಿರುವ ಗೋರೆ, ಚಾಪಟೆ ಮುಂತಾದವರನ್ನು ಭಾರತದ ಪೋಲೀಸರೇ ದಾರಿಯಲ್ಲಿ ತಡೆದು ನಿಲ್ಲಿಸುವರೇ ಹೇಗೆ ಎಂಬುದರ ಮೇಲಿಂದ ಭಾರತ ಸರಕಾರದ ಧೋರಣೆಯಲ್ಲಿ ಶಕ್ತಿಯುತ ಪರಿವರ್ತನೆ ಏನಾದರೂ ಆಗಿದೆಯೆ ಎಂಬುವನ್ನು ತಿಳಿದುಕೊಳ್ಳಲಾದೀತು. ಸತ್ಯಾಗ್ರಹಿಗಳನ್ನು ಪ್ರೋತ್ಸಾಹಿಸದಿದ್ದರೂ ಚಿಂತೆಯಿಲ್ಲ—ಭಾರತ ಸರಕಾರ ಅವರನ್ನು ತಡೆಯದಿದ್ದರೆ ಸಾಕು ಎಂಬುದೇ ನಮ್ಮಲ್ಲಿಯ ಸಾರ್ವಜನಿಕ ಅಭಿಪ್ರಾಯ. ಇದು ಗೋವಗಾಂತಕರ ಶಕ್ತಿಯನ್ನು ಹೆಚ್ಚಿಸುವುದಕ್ಕೆ ನೆರವಾಗುವ ಕ್ರಮ. ಆದರೆ ಇಷ್ಟರಿಂದಲೇ ಗೋವೆಯ ವಿಮೋಚನೆ ಸಾಧ್ಯವಾಗಲಾರದು. ಪೋರ್ಚುಗಾಲದ ಮೇಲೆ ಸಹ ಬಲವಾದ ಒತ್ತಾಯವನ್ನು ತರುವುದು ಅಗತ್ಯ. ಇದಕ್ಕೋಸ್ಕರ ಭಾರತ ಸರಕಾರವು ರಾಜಕೀಯ ರಂಗದ ಚಟುವಟಿಕೆಗಳನ್ನು ಹೆಚ್ಚು ಉತ್ಸಾಹದಿಂದಲೂ ಚೈತನ್ಯ ಪೂರ್ಣವಾಗಿಯೂ ಮಾಡುವುದು ಅಪೇಕ್ಷಣೀಯ. ನ್ಯಾಟೋ ರಾಷ್ಟ್ರಗಳಿಗೆ ಭಾರತ ಸರಕಾರ ತನ್ನ ನಿಲುವೆಯನ್ನು ಸ್ಪಷ್ಟ ಮಾತುಗಳಲ್ಲಿ ತಿಳಿಸಬೇಕು; ಪೋರ್ಚುಗಾಲದ ವಾದ ಬಹಳ ದಿನ ತಡೆಯಲಾರದೆಂಬ ಅಂಶವನ್ನು ಬಿಂಬಿಸಬೇಕು; ಪೋರ್ಚುಗಾಲದೊಡನೆ ಸಹಾನುಭೂತಿ ವ್ಯಕ್ತಪಡಿಸಿ, ಗೋವೆಯ ವಿಮೋಚನೆಯ ಕುರಿತು ಉದಾಸೀನರಾಗಿರುವ ರಾಷ್ಟ್ರಗಳಿಗೆಲ್ಲ ಭಾರತ ವಿವೇಕವನ್ನು ಬೋಧಿಸಬೇಕು. ಅವೆಲ್ಲವೂ ಪೋರ್ಚುಗಾಲದ ಮೇಲೆ ತಮ್ಮ ನೈತಿಕ ಶಕ್ತಿಯನ್ನು ಉಪಯೋಗಿಸಿ, ಗೋವೆ ಮತ್ತಿತರ ವಸಾಹತುಗಳ ಪ್ರಶ್ನೆಯನ್ನು ಸಂಧಾನದ ಕ್ರಮದಲ್ಲಿ ಬಗೆಹರಿಸುವಂತೆ ಸಾಲಾಜ಼ಾರರ ಮೇಲೆ ಒತ್ತಾಯ ಹೇರುವಂತೆ ಕೇಳಿಕೊಳ್ಳಬೇಕು. ಅಸಂಬದ್ಧ ಪ್ರಚಾರಕ್ಕೆ ಕಿವಿಗೊಡದಿರುವುದು ಸಾತ್ವಿಕ ಬುದ್ಧಿ ಎಂಬುದು ನಿಜವಾದರೂ, ರಾಜಕೀಯದಲ್ಲಿ ನಮ್ಮ ಮೇಲೆ ಕೆಸರು ಚೆಲ್ಲಲ್ಪಟ್ಟಾಗ ವೈತೊಳೆದುಕೊಳ್ಳದಿರುವುದು ಚಂದವಲ್ಲ. ಪೋರ್ಚುಗಾಲಿಗೆ ತನ್ನ ಸಹಾಯಕರು ಯಾರೂ ಇಲ್ಲವೆಂಬುದೂ ತನ್ನ ಧೋರಣೆ ಎಷ್ಟಕ್ಕೂ ಸಮರ್ಪಕವಲ್ಲವೆಂಬುದೂ ಮನವರಿಕೆಯಾಗುವಂತೆ ಭಾರತದ ರಾಜಕೀಯ ಚಟುವಟಿಕೆ ನಡೆಯಬೇಕು. ಕೇವಲ ಘೋಷಣೆ, ಹೇಳಿಕೆ ಮತ್ತು ಎಚ್ಚರಿಕೆಯ ಪತ್ರಗಳಿಂದಲೇ ಇದನ್ನು ಸಾಧಿಸಬಹುದೆಂದು ನಮಗನಿಸುವುದಿಲ್ಲ. ಫೊರ್ಮೋಸ ಮುಂತಾದ ಸಮಸ್ಯೆಗಳಲ್ಲಿ ಕೃಷ್ಣ ಮೆನೊನ್ನರಂಥ ಮುತ್ಸದ್ದಿಗಳನ್ನು ರಾಯಭಾರಿಯಾಗಿ ಕಳಿಸಿ ಪರಿಹಾರ ಮಾರ್ಗವನ್ನು ಹುಡುಕುವ ನೆಹರುಗಳು ಸಾಮೂಹಿಕವಾಗಿ ಸಂಯುಕ್ತ ರಾಷ್ಟ್ರ ಸಂಘದಲ್ಲಿಯೂ ವೈಯಕ್ತಿಕವಾಗಿ ನ್ಯಾಟೋ ರಾಷ್ಟ್ರಗಳಲ್ಲಿಯೂ ಭಾರತ ಸರಕಾರದ ಪ್ರತಿನಿಧಿಗಳ ಮೂಲಕ ಗೋವೆಯ ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸಬೇಕೆಂದು ಸೂಚಿಸುತ್ತೇವೆ. ಅದು ಫಲಿಸುವ ವರೆಗೆ, ಪೋರ್ಚುಗಾಲದ ಛಲನೆಗೆ ಪ್ರತಿಯಾಗಿ ಆ ಸರಕಾರದ ಶಕ್ತಿಯನು ಕ್ಷೀಣಿಸುವ ಬಿಗುವಾದ ಆರ್ಥಿಕ ನೀತಿಯನ್ನು ಅನುಸರಿಸಬಹುದು. ಭಾರತದ ಗಡಿಯನ್ನು ದಕ್ಷತೆಯಿಂದ ಕಾಯ್ದು ನಾಣ್ಯ ಮತ್ತು ಸಾಮಗ್ರಿಗಳು ಕಳ್ಳ ರೀತಿಯಲ್ಲಿ ಗೋವೆಯೊಳಗೆ ಹೋಗದಂತೆ ಜಾಗ್ರತೆ ವಹಿಸಬಹುದು; ಗೋವೆಯು ಭಾರತದ ಆಶ್ರಯವಿಲ್ಲದೆ ಸ್ವತಂತ್ರವಾಗಿ ಅಸ್ತಿತ್ವದಲ್ಲಿ ಉಳಿಯಲಾರದೆಂಬುದನ್ನು ಮನಗಾಣಿಸುವುದಕ್ಕೆ ಇದು ಅನುಕೂಲ. ಒಟ್ಟಾರೆ, ಭಾರತ ಸರಕಾರದ ನೀತಿಯಲ್ಲಿ ಕಸುವು ಹೆಚ್ಚಬೇಕು; ಮಾತಿನ ಗಾಂಭೀರ್ಯದೊಡನೆ ಕ್ರತು ಶಕ್ತಿಯೂ ವ್ಯಕ್ತವಾಗಬೇಕು.

ಜಿಲ್ಲಾ ಗೇರುಬೀಜ ಶ್ರಮಿಕ ಸಂಘ—ಇದೇ ದಿನಾಂಕ ೧೫ ರಂದು ದ. ಕ. ಜಿಲ್ಲಾ ಗೇರುಬೀಜ ಶ್ರಮಿಕ ಸಂಘದ ವಾರ್ಷಿಕ ಸಭೆಯು ಶ್ರೀ ಕೆ. ಸದಾನಂದ ಹೆಗ್ಡೆ ಎಂ. ಪಿ. ಇವರ ಅಧ್ಯಕ್ಷತೆಯಲ್ಲಿ ಮಂಗಳೂರು ಕೇಂಪ್ರ ಮೈದಾನಿನಲ್ಲಿ ಜರಗಿತು ಸ್ವಾಗತ ಭಾಷಣ, ಸಂದೇಶಗಳ ಓದುವಿಕೆಗಳಾದ ನಂತರ ಸಂಘದ ಅಧ್ಯಕ್ಷರು ಭಾಷಣವಿತ್ತರು. ಇವರು ಮಜೂರರು ಒಕ್ಕಟ್ಟಾಗಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಬೇಕೆಂದರು. ಬಳಿಕ ಕೆಲವು ಠರಾವುಗಳು ಪಾಸಾದವು. ಠರಾವುಗಳು ಶ್ರಮಿಕರ ಸಂಬಳದ ಹಾಗೂ ದಯನೀಯ ದುಸ್ಥಿತಿಯ ನಿವಾರಣೆ ಬಗ್ಗೆ ಆಗಿತ್ತು.

ಶ್ರೀ ಹೆಗ್ಡೆಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಜೂರರು ರಾಜಕೀಯ ಗೊಂದಲಕ್ಕೆ ಬೀಳಬಾರದೆಂದೂ, ವ್ಯಕ್ತಿ ಸ್ವಾರ್ಥವನ್ನು ಉದ್ದೇಶವಾಗಿಟ್ಟುಕೊಂಡು ದುಬೋಧನೆ ಕೊಡುವವರ ಬಲೆಗೆ ಬೀಳಬಾರದು ಎಂದೂ ಎಚ್ಚರಿಸಿದರು. ಶ್ರಮಿಕರೇ ಇಂದಿ ಭಾರತ ಬೆನ್ನೆಲುಬೆಂದ ಹಲ್ಲದೆ ಮಜೂರರ ಸ್ಥಿತಿ ಸುಧಾರಣೆಯ ಬಗ್ಗೆ ಸರಕಾರವು ಮಾಡಿದ ಹಾಗೂ ಮಾಡುತ್ತಿರುವ ಕಾರ್ಯಗಳ ಸ್ಥೂಲ ಪರಿಚಯವನ್ನು ಮಾಡಿಕೊಟ್ಟರು. ಸರಕಾರವು ತ ಮಗಿತ್ತಿರುವ ಸೌಕರ್ಯಗಳ ಸದುಪಯೋಗವನ್ನು ಮಜೂರರು ಪಡೆಯ ಬೇಕೆಂದರು. ವಂದನಾರ್ಪಣೆ, ಮಂಗಲಗಾನದೊಂದಿಗೆ ಸಭೆಯು ಮುಕ್ತಾಯವಾಯಿತು.

Kannada non-detailed Tex Book for Higher Forms

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ಮಾದರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

(Vide Page 7 of Fort St. George Gazette Part I B Dated 4—5—55

The book contains 30 essays and to quote a review that appeared in the columns of 'The Hindu', Madras, "these are designed to emphasise the duties and obligations of every individual to society, the State and the country in order that in the environmental and other complexities of modern life, one can live a full, purposeful and useful life. Each essay is introduced with a short story drawn from the literatures of the world, modern and ancient, with a view to bringing out clearly the import of the essay that follows. When it is recognised that the orderly progress of any State depends upon each individual conducting oneself with a full realisation of one's duties and obligations, the usefulness of this publication will be evident."

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ಕಾಶ್ಮೀರ ಸಮಸ್ಯೆಯ ಇತ್ಯರ್ಥ

ಎರಡು ವರ್ಷಗಳ ಬಳಿಕ ಇದೀಗ ಪುನಃ ಕಾಶ್ಮೀರ ಸಮಸ್ಯೆಯು ಕುರಿತು ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳೊಡನೆ ಸಮಾಲೋಚನೆ ನಡೆಯುತ್ತಿವೆ. ಈ ಸಂಚಿಕೆಯು ಮುದ್ರಣ ಮುಗಿಯುವ ವರೆಗೆ ಭೇಟಿಯು ಸಂಬಂಧದ ವಿವರಗಳನ್ನು ತಿಳಿಸುವ ಕೊನೆಯ ಹೇಳಿಕೆ ಹೊರಟಿರುವುದಿಲ್ಲ. ಆದರೆ ಅದು ಓದುಗರ ಕೈಸೇರುವಷ್ಟರಲ್ಲಿ ಪ್ರಕಟವಾಗುವುದು ನಿಶ್ಚಯ.

ಅಲಿಗಳ ಪರಿವಾರ

ಹೊಸದೆಹಲಿಗೆ ಶನಿವಾರ ವಿಮಾನದ ಮೂಲಕ ಮಹಮ್ಮದಾಲಿಗಳು ಆಗಮಿಸಿ ಹಾಗ ಅವರನ್ನು ಪ್ರಧಾನ ಮಂತ್ರಿ ನೆಹರುಗಳೂ ರಾಜಕೀಯ ವಲಯಗಳವರೂ ಸ್ವಾಗತಿಸಿದರು. ಆದರೆ ೧೯೫೩ನೇ ವರ್ಷದ ಬೇಸಿಗೆಯಲ್ಲಿ ಅವರ ಸ್ವಾಗತಕ್ಕೋಸ್ಕರ ನೆರೆದಿದ್ದ ಜನ ಸಮ್ಮರ್ದವಾಗಲೀ ಆಗಿನ ಅಟ್ಟಹಾಸವಾಗಲೀ ವ್ಯಕ್ತವಾಗಲಿಲ್ಲ. ಔಪಚಾರಿಕ ರೀತಿಯ ಸ್ವಾಗತ ಮಾತ್ರ ದೊರೆಯಿತು. ಮಹಮ್ಮದಾಲಿಗಳೊಡನೆ ಪಾಕಿಸ್ತಾನದ ಗೃಹಮಂತ್ರಿ ಮಿರ್ಜಾರೂ ಇದ್ದರು.

ಹೊಸ ಸೂಚನೆಗಳಿಲ್ಲ

ಪತ್ರಿಕೆಗಳ ಸುದ್ದಿಗಾರರೊಡನೆ ಮಾತನಾಡುತ್ತಾ ಮಹಮ್ಮದಾಲಿಗಳು ತಾವು ಹೊಸ ಸೂಚನೆಗಳೇನನ್ನೂ ತಂದಿಲ್ಲ ಎಂದರು. ಸಂಯುಕ್ತ ರಾಷ್ಟ್ರಸಂಘದ ಮಧ್ಯಗಾರರಾಗಿದ್ದ ಗ್ರಾಹಾಮರ ಸೂಚನೆಗಳೊಡನೆ ಈ ಭೇಟಿಯನ್ನು ಥಳಕು ಹಾಕಬಾರದೆಂದು ಅವರು ಹೇಳಿದರು. ಪಾಕಿಸ್ತಾನದ ಪತ್ರಿಕೆಗಳು ಮಹಮ್ಮದಾಲಿಗಳ ಪ್ರಯಾಣದ ಸಂದರ್ಭದಲ್ಲಿ ಪ್ರಕಟಿಸಿದ ಬರಹಗಳನ್ನು ನೋಡಿದರೆ ಕಾಶ್ಮೀರದಲ್ಲಿ ಜನಮತಸಂಗ್ರಹ ನಡೆಯಬೇಕೆಂದೇ ಪಾಕಿಸ್ತಾನದ ಅಭಿಪ್ರಾಯವಿದ್ದಂತೆ ಭಾಸವಾಗುತ್ತದೆ.

ಯಶಸ್ಸಿನ ತಕ್ಕಡಿ

ಜನಮತ ಸಂಗ್ರಹವಾಗಬೇಕೆಂಬುದೇನೂ ಹೊಸ ಸೂಚನೆಯಲ್ಲ; ಅದು ಇಕ್ಕಡೆಯವರೂ ಒಪ್ಪಿದ ಮಾತು. ಇದಕ್ಕಾಗಿ ಅನುಸರಿಸುವ ಸಾಮಾನ್ಯ ಸೂತ್ರಗಳ ಕುರಿತಾಗಿಯೇ ಭಿನ್ನಾಭಿಪ್ರಾಯ. ಈಗಿನ ಮಾತುಕತೆಯಲ್ಲಿ ಈ ಸೂತ್ರಗಳ ವಿಷಯದಲ್ಲಿ ಎಷ್ಟರ ಮಟ್ಟಿಗೆ ಒಮ್ಮತವಾಗಿದೆ ಎಂಬುದರ ಮೇಲಿಂದಲೇ ಸಮಾಲೋಚನೆಯ ಯಶಸ್ಸನ್ನು ತೂಗಬೇಕಾಗುತ್ತದೆ.

ವಿಷಾದ ಪ್ರದರ್ಶನ

ಮಹಮ್ಮದಾಲಿಗಳು ಬಂದೊಡನೆಯೇ ಒಂದು ಒಳ್ಳೆಯ ಕೆಲಸವನ್ನು ಮಾಡಿದರು. ಅವರು ಪರಿವಾರ ಸಮೇತ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರನ್ನು ಕಂಡರು. ಮೊದಲಿನ ಕಾರ್ಯಕ್ರಮದಂತೆ ಪಾಕಿಸ್ತಾನದ ಗವರ್ನರ ಜನರಲರಾದ ಗುಲಾಂ ಮಹಮ್ಮದರು ಸಹ ನೆಹರು-ಅಲಿ ಸಮಾಲೋಚನೆಯಲ್ಲಿ ಭಾಗವಹಿಸಬೇಕಾಗಿತ್ತು; ಆದರೆ ಗುಲಾಂ ಮಹಮ್ಮದರ ಅಸ್ವಾಸ್ಥ್ಯದ ಕಾರಣದಿಂದ ಅವರು ವೈಯಕ್ತಿಕ ಪತ್ರಗಳನ್ನು ರಾಷ್ಟ್ರಾಧ್ಯಕ್ಷರಿಗೆ ಮಹಮ್ಮದಾಲಿಗಳ ಮೂಲಕ ಕಳಿಸಿಕೊಟ್ಟರು.

ನೆಕೋಲಾಲದ ದುರ್ಘಟನೆ

ಗವರ್ನರ ಜನರಲರ ಶುಭಾಶಯಗಳನ್ನು ತಿಳಿಸುವುದರೊಂದಿಗೆ ಮಹಮ್ಮದಾಲಿಗಳು ಭಾರತದ ರಾಷ್ಟ್ರಾಧ್ಯಕ್ಷರಿಗೆ ನೇಕೋಲಾಲದ ಬಳಿ ಕಳೆದ ವಾರ ನಡೆದ ದುರ್ಘಟನೆಯ ಕುರಿತಾಗಿಯೂ ವಿಷಾದವನ್ನು ವ್ಯಕ್ತಪಡಿಸಿದರು. ಮೂರು ಸುತ್ತುಗಳಿಂದಲೂ ಪಾಕಿಸ್ತಾನದ ಪ್ರದೇಶದಿಂದ ಆವರಿಸಲ್ಪಟ್ಟ ಜಮ್ಮು ರಾಜ್ಯದ ನೆಕೋಲಾಲ ಗ್ರಾಮದಲ್ಲಿ ಉಳುಮೆಯ ಕೆಲಸ ಮಾಡುತ್ತಿದ್ದ ಟ್ರ್ಯಾಕ್ಟರು ಸಂಸ್ಥೆಯ ಸದಸ್ಯರ ಮೇಲೆ ಪಾಕಿಸ್ತಾನದ ಸೈನಿಕರು ಗುಂಡನ್ನು ಹಾರಿಸಿದ್ದರು; ಇದರಿಂದ ೧೨ ಮಂದಿ ಭಾರತೀಯರು ಮೃತ್ಯುವಶರಾಗಿದ್ದರು. ಅದಕ್ಕಾಗಿ ಮಹಮ್ಮದಾಲಿಗಳ ಸಂತಾಪ.

ಪಾಕಿಸ್ತಾನದ ಉತ್ತರ

ಸೈನಿಕರು ಗುಂಡು ಹಾರಿಸಿದ ಸುದ್ದಿ ಬಂದೊಡನೆಯೇ ರಾಷ್ಟ್ರಸಂಘದ ನಿರೀಕ್ಷಕರು ಅಲ್ಲಿಗೆ ಬಂದರು. ಅವರ ಮೇಲೂ ಗುಂಡು ಹಾರಿಸಲಾಯಿತೆಂದು ತಿಳಿದು ಬರುತ್ತದೆ. ಮುಂದೆ ಗುಂಡಿನ ಹಾರಾಟ ನಿಂತಿತು. ಪರಿಸ್ಥಿತಿಯನ್ನು ಪರಿಶೀಲಿಸಲು ಭಾರತದ ಸಂರಕ್ಷಣಾ ಶಾಖೆಯ ಮಂತ್ರಿ ಶ್ರೀ ಮಹಾವೀರ ತ್ಯಾಗಿಯವರು ಹೋದರು. ಭಾರತ ಸರಕಾರವು ಪಾಕಿಸ್ತಾನಕ್ಕೆ ಉಗ್ರ ನಿಷೇಧವನ್ನು ಸೂಚಿಸುವ ಪತ್ರ ಕಳಿಸಿತು. ಅದಕ್ಕೆ ಉತ್ತರ ಕೊಡುವಾಗ ಮಾತ್ರ ಭಾರತೀಯರೇ ಪಾಕಿಸ್ತಾನದ ಹಳ್ಳಿಗಳನ್ನು ನುಗ್ಗಿ ಛಲಿಸಿದ್ದರೆಂತೂ ಅದಕ್ಕೆ ಪ್ರತೀಕಾರವಾಗಿ ಈ ಪ್ರಕರಣ ನಡೆಯಿತೆಂದೂ ಪಾಕಿಸ್ತಾನ ಆರೋಪಿಸಿತು.

ಗೃಹ ಮಂತ್ರಿಗಳ ನಿಶ್ಚಯ

ಪತ್ರದಲ್ಲಿ ಹೀಗೆ ಹೇಳಿದ್ದರೂ ಮಹಮ್ಮದಾಲಿಗಳು "ವಿಷಾದ"ವ್ಯಕ್ತಪಡಿಸಿ ಪ್ರಧಾನ ಮಂತ್ರಿಗಳ ಭೇಟಿಯ ಕಾಲದಲ್ಲಿ ಉಳಿಯಬಹುದಾಗಿದ್ದ ಉದ್ವೇಗವನ್ನು ಉಪಶಮಿಸಿದರು. ಅಲ್ಲದೆ ತಮ್ಮ ಗೃಹ ಮಂತ್ರಿಗಳನ್ನು ಭಾರತದ ಗೃಹ ಮಂತ್ರಿಗಳ ಬಳಿಗೆ ಕಳಿಸಿ, ಇನ್ನು ಮುಂದೆ ಗಡಿ ಪ್ರದೇಶಗಳಲ್ಲಿ ಇಂಥ ದುರ್ಘಟನೆಗಳಾಗದಂತೆ ತೆಗೆದುಕೊಳ್ಳಬೇಕಾದ ಮುಂಜಾಗ್ರತೆಯ ಕ್ರಮಗಳ ಪರಿಶೀಲನೆ ನಡೆಯಗೊಟ್ಟರು. ಈ ಕುರಿತು ಪರಸ್ಪರ ಸಮ್ಮತವಾದ ನಿರ್ಣಯಕ್ಕೆ ಬರಲಾಗಿದೆಯೆಂದು ಕೇಳುತ್ತೇವೆ

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು— ತಾ. 14ರಲ್ಲಿ ಸಂಜೆ ಚೇರ್‌ಮೇನ್ ಡಾ! ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಮಂಗಳೂರು-ಉಡುಪಿ ರೈಲ್ವೆ ಹಾಕುವುದನ್ನು ಕೂಡಾ ಸೇರಿಸುವಂತೆ ಕೇಂದ್ರ ಸರಕಾರವನ್ನು ಒತ್ತಾಯಿಸಲು ಮದ್ರಾಸು ಸರಕಾರವನ್ನು ಮನವಿ ಕೇಳಿಕೊಳ್ಳಬೇಕೆನ್ನುವ ಡಾ! ಕೆ. ಎಲ್. ಐತಾಳರ ನಿರ್ಣಯವು ಒಮ್ಮತದಿಂದ ಪಾಸಾಯಿತು. ಮುನಿಸಿಪಲ್ ನೌಕರರ ಪ್ರೊವಿಡೆಂಟ್ ಫಂಡು ಹಣವನ್ನು ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟಿನಲ್ಲಿ ಇರಗೊಡಿಸಬೇಕೆಂದಾಯಿತು. 1955-56ನೇ ವರ್ಷದ ಎಲಿಮೆಂಟರಿ ಎಡ್ಯುಕೇಶನ್ ಬಜೆಟ್ ಕುರಿತು ಬಂದ ಸರಕಾರಿ ಆರ್ಡರನ್ನು ರಿಕಾರ್ಡು ಮಾಡುವಾಗ, ಹಿಂದಿನ ಬಾಕಿ ಗ್ರ್ಯಾಂಟನ್ನು ಬೇಗನೆ ಕೊಡುವಂತೆ ಸರಕಾರವನ್ನು ವಿನಂತಿಸಲಾಯಿತು. ಕೆನರಾ ಲೇಂಡ್ ಇನ್ವೆಸ್ಟ್‌ಮೆಂಟಿನವರ ಕೆಲವೊಂದು ಮನೆಗಳಿಗೆ ಸ್ಕೆವೆಂಜಿಂಗ್ ಟಾಕ್ಸಿನಲ್ಲಿ ಸೇಕಡಾ 50ರಷ್ಟು ರಿಯಾಯತಿ ತೋರಿಸಬಹುದೆನ್ನುವ ಶ್ರೀ ಪಿ. ವಿ. ಆಚಾರ್ಯರ ನಿರ್ಣಯಬಹುಮತದಿಂದ ಪಾಸಾಯಿತು. ಶ್ರೀ ನಾರಾಯಣ ಕಾಮತರಿಂದ ಬರತಕ್ಕ ಪ್ರಾಪರ್ಟಿ ಟೇಕ್ಸ್ ರೂಪಾಯಿ 123-15-6ನ್ನು ಬಡ್ಡಿದಿಂದ ವಜಾ ಬರೆಯಬೇಕೆನ್ನುವ ಆಫೀಸು ನೋಟಿನ ಕುರಿತು ಇಡೀ ಕೌನ್ಸಿಲೇ ತಟಸ್ಥ ನಿಂತಿತು. ರಾತ್ರಿ ಘಂಟೆ 8-25ಕ್ಕೆ ಶ್ರೀ ಪಿ. ವಿ. ಆಚಾರ್ಯರ ಸೂಚನೆಯಂತೆ ಸಭೆ ಮುಂದುವರಿಸಲ್ಪಟ್ಟಿತು.

ಸತ್ಕಾರ ಕೂಟ— ಉಡುಪಿ ಪೋಸ್ಟಾಫೀಸಿನ ಸುಪರ್‌ವೈಜರ್ ಶ್ರೀ ಎ. ಬಿ. ಶಂಕರರಾಯರು ಮಂಗಳೂರಿಗೆ ವರ್ಗಾಯಿಸಲ್ಪಟ್ಟ ಕಾರಣ ಅವರಿಗೊಂದು ಸತ್ಕಾರ ಕೂಟವು ತಾ 12 ರಲ್ಲಿ ಜರಗಿತು. ಶ್ರೀಗಳಾದ ಶಿವರಾಮನ್ ನಾಯರ್, ಕುಟ್ಟಿ ಕೃಷ್ಣ ಮೇನನ್, ಬಿ. ಬಾಲಕೃಷ್ಣ, ಕೆ. ಮಹಾಲಿಂಗ, ಬಿ. ಬಾಬು, ಮತ್ತು ಕೆ. ರಘು ಸೆಟ್ಟರು ಸಂದರ್ಭೋಚಿತ ಮಾತುಗಳನ್ನಾಡಿದರು.

ವಿವಾಹ— ಶ್ರೀ ಬೇಳಂಜೆ ಕೃಷ್ಣಯ್ಯ ಹೆಗ್ಡೇರ ಪುತ್ರಿ ಸೌ! ವತ್ಸಲಾಳನ್ನು ಶ್ರೀ ಒಡ್ಡಾಡಿ ಕೊರಗ ಸೆಟ್ರ ಪುತ್ರ ಶ್ರೀ ಶಿವಣ್ಣ ಶೆಟ್ಟರು, ತಾ 12 ರಂದು ಬೈಲೂರು ಒಡ್ಡಾಡಿ ಮನೆಯಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಬ್ರಹ್ಮೋಪದೇಶ— ಮುನಿಯಾಲದ ಶ್ರೀ ಯಚ್. ವೆಂಕಟೇಶ ನಾಯ್ಕರ ಪುತ್ರ ಚಿ! ರಾಮದಾಸನ ಬ್ರಹ್ಮೋಪದೇಶವು ತಾ 13 ರಂದು ವಿಜೃಂಭಣೆಯಿಂದ ಜರಗಿತು.

ದ. ಕ. ಜಿಲ್ಲಾ ರಾಜಕೀಯ ಪರಿಷತ್ತು

ಇದೇ ತಾ 28, 29ಕ್ಕೆ ಪುತ್ತೂರಲ್ಲಿ ಜರಗುವುದು.

ಕೇಂದ್ರದ ರೈಲ್ವೆ ಮಂತ್ರಿ ಶ್ರೀಲಾಲ್ ಬಹದ್ದೂರ್ ಶಾಸ್ತ್ರಿಗಳು ಪರಿಷತ್ತನ್ನು ಉದ್ಘಾಟಿಸುವರು.

ಪ್ರಜಾ ಸೋಶಲಿಸ್ಟ ಪಕ್ಷದ ಜಿಲ್ಲಾ ಸಮ್ಮೇಳನಗಳು

ದಕ್ಷಿಣ ಕನ್ನಡ ಜಿಲ್ಲಾ ಪ್ರಜಾಸೋಶಿಯಲಿಸ್ಟ್ ಪಾರ್ಟಿಯ ವತಿಯಿಂದ ಜಿಲ್ಲಾ ಕಿಸಾನ್, ರಾಜಕೀಯ ಮತ್ತು ಕರ್ನಾಟಕದ ಕಾರ್ಯಕರ್ತರ ಸಮ್ಮೇಳನವು ಸುವ್ಯವಸ್ಥಿತವಾಗಿ ಕಳೆದ 16, 17ರಂದು ಬ್ರಹ್ಮಾವರದಲ್ಲಿ ನಡೆಯಿತು. ಮೊದಲದಿನದ ಕಿಸಾನ್ ಸಮ್ಮೇಳನವನ್ನು ಮೈಸೂರ ಎಂ. ಎಲ್. ಎ. ಗೋಪಾಲ ಗೌಡರು ಉದ್ಘಾಟಿಸಿದರು. ಕೆ. ಆರ್. ಕಾರಂತರು ಅತಿಥಿಗಳ ಪರಿಚಯ ಮಾಡಿಸಿದರು. ವಿ. ಶ್ರೀನಿವಾಸ ಶೆಟ್ಟರು ಸ್ವಾಗತಿಸಿದರು. ಅಂದು ಡೇನಿಸ್ ಲೂವಿಸರು ಅಧ್ಯಕ್ಷತೆ ವಹಿಸಿದ್ದರು. ಎರಡನೆಯ ದಿನ ಮುಂಜಾನೆ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಕಾರ್ಯಕರ್ತರ ಸಮ್ಮೇಳನವು ಜರಗಿತು. ಅದನ್ನು ಅಖಿಲ ಭಾರತ ಪ್ರಜಾ ಸೋಶಿಯಲಿಸ್ಟ್ ಪಾರ್ಟಿಯ ಸಹಕಾರ್ಯದರ್ಶಿ ಎಸ್. ಆರ್. ದಂಡವತೇಯವರು. ಉದ್ಘಾಟಿಸಿದರು ಧಾರವಾಡ ಇತ್ಯಾದಿ ಕಡೆಗಳಿಂದ ಬಂದ ಕಾರ್ಯಕರ್ತರು ಸೂಚನೆಗಳನ್ನಿತ್ತರು. ಅಪರಾಹ್ನ ಬ್ರಹ್ಮಾವರ ಪಂಚಾಯತ ಬೋರ್ಡಿನ ವತಿಯಿಂದ ಅತಿಥಿಗಳಾದ ಶ್ರೀ ಗೌಡ, ದಂಡವತೆ ಮತ್ತು ಪಟ್ಟಂತಾನು ಪಿಳ್ಳೆಯವರಿಗೆ ಮಾನ ಪತ್ರವನ್ನರ್ಪಿಸಲಾಯಿತು. ಆ ಮೇಲೆ ಜಿಲ್ಲಾ ರಾಜಕೀಯ ಸಮ್ಮೇಳನವು ಡಾ! ನಾಗಪ್ಪ ಆಳ್ವರು. ಅಧ್ಯಕ್ಷತೆಯಲ್ಲಿ ತಿರುಕೊಚ್ಚಿಯ ಮಾಜಿ ಪ್ರಧಾನಿ ಪಟ್ಟಂ ಅವರಿಂದ ಉದ್ಘಾಟಿಸಲ್ಪಟ್ಟಿತು.

ಮೈಸೂರು ಸಹಿತ ಕರ್ನಾಟಕ ಏಕೀಕರಣದ ಆವಶ್ಯಕತೆಯನ್ನೆಂಬ ಠರಾವನ್ನು ಶ್ರೀ. ಶಿವರಾಮ ಕಾರಂತರ ಮಂಡಿಸಿದರು, ದಿವೋಹನ ರಾಯರು ಅನುಮೋದಿಸಿದರು. ರಾಷ್ಟ್ರೀಯ ಕಾರ್ಯ ಸಮಿತಿಯು ಕಾಂಗ್ರೆಸಿನ ಆವಡಿ ಸಮಾಜ ವಾದದ ಕುರಿತು ಮಾಡಿದ ಠರಾವನ್ನು ಜಿಲ್ಲಾ ಸಮ್ಮೇಳನವು ಸಂಪೂರ್ಣವಾಗಿ ಅನುಮೋದಿಸುತ್ತದೆಂಬ ಇನ್ನೊಂದು ಠರಾವನ್ನು ಶ್ರೀ ವಿ. ಶ್ರೀನಿವಾಸ ಶೆಟ್ಟರು ಮುಂದಿಟ್ಟು ಶ್ರೀ ಮಹಾಬಲ ರೈಗಳು ಅನುಮೋದಿಸಿದರು. ಎರಡೂ ಸರ್ವಾನುಮತಿಯಿಂದ ಸ್ವೀಕರಿಸಲ್ಪಟ್ಟವು. ಎರಡು ದಿನವೂ ರಾತ್ರಿ ನರ್ತನ, ನಾಟಕ ಮುಂತಾದ ವಿನೋದಾವಳಿಗಳೂ ನಡೆದುವು.

ಪ್ರಾಥಮಿಕ ಶಾಲೆಗಳಿಗೆ

ಹೊಸ ಚರಿತ್ರೆಯ ಪುಸ್ತಕಗಳು

ಮಂಗಳೂರಿನ ಸೈಂಟ್ ಅನ್ಸ್ ಮತ್ತು ಪುತ್ತೂರಿನ ಸೈಂಟ್ ಫಿಲೊಮಿನಾಸ್ ಹೈಸ್ಕೂಲ್‌ಗಳಲ್ಲಿ ಅಧ್ಯಾಪಿಕೆಯರಾಗಿದ್ದ

ಶ್ರೀಮತಿ ಬಿ. ಸರಸ್ವತಿ ಭಟ್, ಬಿ. ಎ. ಬಿ. ಟಿ.

ಇವರಿಂದ ರಚಿತವಾದ

"ಚರಿತ್ರೆಯ ಪಾಠಗಳು"

ಮೂರನೆಯ, ನಾಲ್ಕನೆಯ ಮತ್ತು ಐದನೆಯ ತರಗತಿಗಳಿಗೆ

[ಮದ್ರಾಸು ಸರಕಾರದ ಪಠ್ಯ ಪುಸ್ತಕ ಸಮಿತಿಯ ಮಂಜೂರಾತಿ (R. C. No. 9/55/ T. B. C. dated 10—5—55)ಯನ್ನು ಪಡೆದಿವೆ.]

"ಚರಿತ್ರೆಯ ಪಾಠಗಳು" ಉತ್ತಮವಾದ ಚಿತ್ರಗಳಿಂದ ಕೂಡಿದ್ದು ದೇಶವು ಸ್ವಾತಂತ್ರ್ಯವನ್ನು ಗಳಿಸುವ ವರೆಗಿನ ಇತಿಹಾಸವನ್ನು ಒಳಗೊಂಡಿವೆ.

ಪುಸ್ತಕಗಳ ಬೆಲೆ:

ಮೂರನೆಯ ತರಗತಿ: ಆರಾಣೆ; ನಾಲ್ಕನೆಯ ತರಗತಿ: ಆರಾಣೆ;

ಐದನೆಯ ತರಗತಿ: ಎಂಟಾಣೆ.

ಪ್ರಕಾಶಕರು:

ಕನ್ನಡ ಪ್ರಪಂಚ ಪ್ರಕಾಶನ, ಕದ್ರಿ, ಮಂಗಳೂರು—2.

ಬರುವ ವಾರ

ನಾವು ವರ್ಷಕ್ಕೊಮ್ಮೆ ರಜೆ ಪಡೆಯುವ ಪದ್ಧತಿಯಂತೆ ಬರುವ ವಾರ ನವಯುಗ ಸಂಚಿಕೆಯನ್ನು ನಿಲ್ಲಿಸಲಾಗಿದೆ.

ಸಂ. ಸ.

ಉಳ್ಳೂರು- ಕುಂದಾಪುರ ತಾಲೂಕಿನ ಉಳ್ಳೂರು ಬೋರ್ಡ್ ಎಲಿಮೆಂಟರಿ ಶಾಲಾ ನೂತನ ಕಟ್ಟಡದ ಉದ್ಘಾಟನೆಯು ತಾ ೫ ರಲ್ಲು ಕುಂದಾಪುರ ಡಿಪ್ಯೂಟಿ ತಹಶಿಲ್ದಾರ್ ಶ್ರೀ ಸಂಜೀವ ಪ್ರಭುಗಳಿಂದ ನೆರವೇರಿಸಲ್ಪಟ್ಟಿತು. ಶ್ರೀ ವೈ. ಮಂಜಯ್ಯ ಸೆಟ್ಟಿ ಎಂ. ಎಲ್. ಎ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಬೆಳ್ವೆ—ಸ್ಥಳೀಯ ಬೋಡು ಪ್ರೌಢ ಪ್ರಾಥಮಿಕ ಶಾಲೆಯ ವರ್ಧಂತಿ ಸಮಾರಂಭವು ತಾ 10 ರಲ್ಲು ಮಂಗಳೂರು ನಗರ ಸಭಾಪತಿ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನವಾದ ಬಳಿಕ ಶ್ರೀಗಳಾದ ಕೆ. ರಾಮಕೃಷ್ಣ ಅಡಿಗ, ಎಚ್. ಆನಂದ ಸೆಟ್ಟಿ, ಹಾಗೂ ನಾಗಪ್ಪ ಹೆಬ್ಬಾರರು ಭಾಷಣವಿತ್ತರು. ಶಾಲಾ ಹೆಡ್ಮಾಸ್ತರ್ ಶ್ರೀ ಎಚ್. ಎಲ್. ಹಂದೆಯವರು ಧನ್ಯವಾದಗಳನ್ನಿತ್ತರು.

ಕುಂಬಳೆ— ಮಂಜೇಶ್ವರ ಬ್ಲೋಕಿನ ಸಲಹಾ ಸಮಿತಿಯ ಸಭೆಯು ತಾ 12 ರಲ್ಲು ಬಿ. ಎಚ್. ಈ ಕಟ್ಟಡದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿತು. ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಪಿ. ಸಂಕಪ್ಪನವರು ಕಳೆದ ಫೆಬ್ರವರಿ—ಮಾರ್ಚ್ ತಿಂಗಳುಗಳಲ್ಲಾದ ಕೆಲಸಗಳ ವರದಿಯನ್ನೋದಿದರು. ಈ ಸಲಹಾ ಸಮಿತಿಗೆ ಮಂಜೇಶ್ವರ ಫಿರ್ಕಾದಿಂದ ಶ್ರೀ ಎಮ್. ಅಮೃತಕೃಷ್ಣ ರಾಯರನ್ನೂ ಕುಂಬಳೆ ಫಿರ್ಕಾದಿಂದ ಶ್ರೀ ನೇಮಪ್ಪಾಳ್ವರನ್ನೂ ಆರಿಸಬೇಕೆಂದು ತೀರ್ಮಾನವಾಯಿತು. ಸಭೆಗೆ ಜಿಲ್ಲಾ ವಿವಿಧ ಇಲಾಖಾಧಿಕಾರಿಗಳೂ ಗ್ರಾಮ ಉದ್ಯೋಗಸ್ಥರೂ ಬಂದಿದ್ದರು.

ಕೆಮ್ಮಣ್ಣು— ಸ್ಥಳೀಯ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಇದೇ ದಿನಾಂಕ ೧೧ರಂದು ಶ್ರೀ ಸಂಜೀವರಾವ್, B. A. L. T. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಯರ ವರದಿ ವಾಚನದ ಬಳಿಕ, ಬಾಲಕರಿಗೆ ಬಹುಮಾನ ಹಂಚೋಣವೂ ಹಾಗೂ ಮಕ್ಕಳ ಏಳಿಗೆಯ ಕುರಿತು ಉಪನ್ಯಾಸಗಳೂ ನಡೆದವು. 'ಸತ್ಯ ಹರಿಶ್ಚಂದ್ರ'ವೆಂಬ ಪೌರಾಣಿಕ ನಾಟಕವೂ, 'ಗಧಾಯುದ್ಧ' ವೆಂಬ ಯಕ್ಷಗಾನ ನಾಟಕವೂ ಮಕ್ಕಳಿಂದ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ಅಧ್ಯಕ್ಷರ ಕೊನೆಯ ಮಾತು, ಧನ್ಯವಾದ ಸಮರ್ಪಣೆ, ಮಂಗಲಗಾನದೊಂದಿಗೆ ಸಭೆಯು ಮುಕ್ತಾಯವಾಯಿತು.

ಅಜೆಕಾರು— ಸ್ಥಳೀಯ ಕೇಂದ್ರ ಅಧ್ಯಾಪಕರ ದಿನಾಚರಣೆಯು ದಿನಾಂಕ ೧೪ರಂದು ಶ್ರೀ। ಯು. ಕಷ್ಣ ನವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಭಾಷಣ, ವರದಿ ವಾಚನ, ಪುರಸ್ಕಾರಗಳ ವಿತರಣೆಯಾದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾ ಪ್ರಸಾರದಲ್ಲಿ ಗ್ರಾಮಸ್ಥರ, ಅಧ್ಯಾಪಕರ ಹಾಗೂ ಸರಕಾರದ ಕರ್ತವ್ಯಗಳನ್ನು ವಿವರಿಸಿದರು. ಕೊನೆಯಲ್ಲಿ ವಿವಿಧ ಶಾಲಾ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳೂ, ಅಧ್ಯಾಪಕರುಗಳ 'ಕಲ್ಡಿ ಪೊಣ್ಣು' ಎಂಬ ತುಳುನಾಟಕವೂ ಯಶಸ್ವಿಯಾಗಿ ನಡೆಯಿತು.

ಕರ್ಕುಂಜೆ— ಸ್ಥಳೀಯ 'ವಿವೇಕಾ ಮಿತ್ರ ಮಂಡಳಿ'ಯ ಉದ್ಘಾಟನಾ ಸಮಾರಂಭವು ಶ್ರೀ। ಮುದಗ ರಾಮಚಂದ್ರ ಕಾಮತರಿಂದ, ದಿನಾಂಕ ೧೩ರಂದು ಸಂಘದ ಅಧ್ಯಕ್ಷರಾದ ಶ್ರೀ। ದುಗ್ಗಪ್ಪ ಶೆಟ್ಟರು ಬಾಡಿಗೆಗೆ ವಿನಾಯಿತಿಯಿಂದ ಕೊಟ್ಟ ಒಂದು ಕಟ್ಟಡದಲ್ಲಿ ಉದ್ಘಾಟಿಸಲ್ಪಟ್ಟಿತು.

ಕಾವಡಿ—ಸ್ಥಳೀಯ ಪಂಚಾಯತ್ ಬೋರ್ಡಿನ ಚುನಾವಣೆಯು ದಿನಾಂಕ ೧೩ ರಂದು ಜರಗಿ ಶ್ರೀ ಕೆ. ಚಂದ್ರಶೇಖರ ಸೆಟ್ಟಿಯವರೂ ಅಧ್ಯಕ್ಷರಾಗಿಯೂ, ಶ್ರೀಗಳಾದ ಮಹಾಬಲ ಸೆಟ್ಟಿ, ಪಾಂಡುರಂಗ, ಸಣ್ಣು ಯಾನೆ ಅಹಮ್ಮದ್ ಸಾಹೇಬ್, ವೆಂಕಟೇಶ ನಾಯಕ್. ಹಸನ್ ಸಾಹೇಬ್, ಪುಟ್ಟ, ಮಾದ ಎಂಬವರು ಮೆಂಬರುಗಳಾಗಿಯೂ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ.

ಚೇನಾರು—ಸ್ಥಳೀಯ ಶ್ರೀ ಶಾರದಾ ಪ್ರೌಢ ಪ್ರಾಥಮಿಕ ಶಾಲಾ ವಿಸ್ತರಣಾ ಭಾಗದ ಉದ್ಘಾಟನೆಯು ದಿನಾಂಕ ೧೪ ರಂದು ದ. ಕ. ಜಿಲ್ಲಾ ಕಲೆಕ್ಟರರಾದ ಶ್ರೀ ಎಂ. ಜಿ. ರಾಜಾರಾಮ್ ಇವರಿಂದ ನೆರವೇರಿತು, ತರುವಾಯ ಕಲೆಕ್ಟರ್ ಮೋರೆಯವರ ಅಧ್ಯಕ್ಷತೆಯಲ್ಲಿ ಸದ್ರಿ ಶಾಲೆಯ ವಾರ್ಷಿಕೋತ್ಸವವು ಜರಗಿತು. ಭಾಷಣ, ಬಹುಮಾನ ವಿತರಣಗಳು ಜರಗಿದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸದ್ರಿ ಶಾಲಾ ಅವಶ್ಯಕತೆಗಳ ಕುರಿತು ಶೀಘ್ರ ಕಾರ್ಯಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ವಿವಿಧ ವಿನೋದಾವಳಿ, ಮಂಗಲ ಗಾನದೊಂದಿಗೆ ಸಭೆಯು ಮುಕ್ತಾಯವಾಯಿತು.

ಬೈಲೂರು-ಸ್ಥಳೀಯ ಎಡ್ಯುಕೇಶನಲ್ ಸೊಸೈಟಿಯವರು ಧನ ಸಂಗ್ರಹಕ್ಕಾಗಿ ಹೊರಟು ಹಲವಾರು ಕಡೆಗಳಿಂದ ಒಟ್ಟು ರೂಪಾಯಿ ೧೦, ೬೦೦ ನ್ನು ಸಂಗ್ರಹಿಸಿರುತ್ತಾರೆ. ಅವರಿಗೆ ಈ ಪ್ರವಾಸದಲ್ಲಿ ಸಹಕಾರವನ್ನಿತ್ತ ಎಲ್ಲಾ ಮಹನಿಯರುಗಳಿಗೂ ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಾರೆ.

ಕಟಪಾಡಿ—ಯೇಣಗುಡ್ಡೆ ದುರ್ಗಾಪರಮೇಶ್ವರಿ ಶಾಲೆಯ ಹಳೇ ವಿದ್ಯಾರ್ಥಿ ಸಂಘದ ವರ್ಧಂತಿ ಸಮಾರಂಭವು ಡಾ। ಕೆ. ಜಿ. ಕಿಣಿಯವರ ಅಧ್ಯಕ್ಷತೆಯಲ್ಲಿ ಜರಗಿತಲ್ಲದೆ, ಸದ್ರಿ ಶಾಲಾ ವರ್ಧಂತಿ ಸಮಾರಂಭವು ಶ್ರೀ ಕೆ. ವಿಠಲ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿವಿಧ ವಿನೋದಾವಳಿಗಳೂ, ನಾಟಕಗಳೂ ಇದ್ದುವು.

ಬಾರ್ಕೂರು— ಇಲ್ಲಿನ ಬೋರ್ಡ್ ಎಲಿಮೆಂಟರಿ ಶಾಲಾ ವರ್ಧಂತಿ ಸಮಾರಂಭವು ದಿನಾಂಕ ೧೧ರಂದು ಮಂಗಳೂರಿನ ಡಿ। ಮು। ಶ್ರೀ ಕೆ. ಚಂದ್ರಶೇಖರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಬೆಳ್ವೆ—ಇಲ್ಲಿ ಒಂದು ಸಮಾಲೋಚನಾ ಸಭೆಯು ದಿನಾಂಕ ೬ರಂದು ಶ್ರೀ ಎಂ. ಕೇಶವ ಕಿಣಿಗಳ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯು ಬೆಳ್ವೆಯಲ್ಲಿ । ಹೈಸ್ಕೂಲು ಸ್ಥಾಪಿಸುವ ಸಾಧ್ಯಾಸಾಧ್ಯತೆಗಳ ಕುರಿತು ಸಮಾಲೋಚನೆ ನಡೆಸಿತು.

ಕೋಟ—ಹಾಗೂ ಬಾರಕೂರು, ಕುಂದಾಪುರವೇ ಮೊದಲಾದ ಕಡೆಗಳಲ್ಲಿ "ಕೆಂಗಣ್ಣು ರೋಗ" ವು ಬಹಳ ತೀವ್ರವಾಗಿ ಹರಡುತ್ತಿರುವುದರಿಂದ, ಅದಕ್ಕೆ ಯೋಗ್ಯ ವೈದ್ಯಕೀಯ ಸಹಾಯವನ್ನು ಸರಕಾರವು ನೀಡಬೇಕೆಂದು ಶ್ರೀ ಕೊಳ್ಕೆಬೈಲ್, ಎಂ. ಎಲ್. ಎ. ಗಳು ಕೇಳಿಕೊಂಡುದಕ್ಕೆ, ಈ ಕುರಿತು ತೀವ್ರ ಗಮನಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಮದರಾಸು ಸರಕಾರದ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಸೆಟ್ಟರು ತಿಳಿಸುತ್ತಾರೆಂದು ತಿಳಿದು ಬಂದಿರುತ್ತದೆ.

ಬೊಂಬಾಯಿ:—ಸುರತ್ಕಲ್ ಮುಕ್ಕ ಮಿತ್ರ ಪಟ್ಟಣ ಗಂಗಯ ಸ್ಮಾರಕ ಫಂಡಿನವರು ನಡೆಸಿಕೊಂಡು ಬರುವ ರಾತ್ರಿ ಶಾಲೆಯ ಭವನದ ಶಂಕುಸ್ಥಾಪನಾ ಸಮಾರಂಭವು ಇದೇ ತಾ. 26ರಲ್ಲು ಸಂಜೆ 4-15ಕ್ಕೆ ಶ್ರೀ. ಮಾನಂಪಾಡಿ ಕೃಷ್ಣಪ್ಪ ಎಮ್. ಸಾಲಿಯಾನರ ಅಧ್ಯಕ್ಷತೆಯಲ್ಲಿ ಶ್ರೀ. ಎಚ್. ಬಿ. ಮೊಹನಪ್ಪ ತಿಂಗಳಾಯರಿಂದ ನೆರವೇರಿಸಲ್ಪಡುವುದು. ಸಂಘದ ವರ್ಧಂತಿಯುತ್ಸವವು ತಾ. 29ರಲ್ಲು ಸಂಜೆ 4-30ಕ್ಕೆ ಡಾ। ಎಮ್. ಪುರುಷೋತ್ತಮ ಕಾಮತರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸಾರ್ವಜನಿಕರು ಸಹಕರಿಸಬೇಕಾಗಿ ಕಾರ್ಯದರ್ಶಿಗಳ ವಿನಂತಿಯಿದೆ.

ಕಥೆ, ಕಾದಂಬರಿ, ಕವಿತೆ, ನಾಟಕಾದಿ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	8
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ಸಂಧ್ಯಾದೀಪ	1	0
13	ದೇಶಭಕ್ತ	1	4
14	ಪ್ರೇಮ ವಿಜಯ	1	4
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾರ	2	4
20	ನೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮೀನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು.ಬೇಕಾಗಿದ್ದಾರೆ.
ಕಿರಿಯರ ಪ್ರಪಂಚ ಉಡುಪಿ.
ಅಥವಾ
ನವಭಾರತ ಬುಕ್ ಡಿಪ್ಪೊ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ -- ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವಸ್ಥಳ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸ ಪುಸ್ತಕ

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಸಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೂಟದ ಮರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರದಕ್ಷಿಣೆ, ಸಿಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇನಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—10—0

ನವಭಾರತ ಪುಸ್ತಕ ಭಂಡಾರ, ಉಡುಪಿ. ನವಯುಗ ಪ್ರೆಸ್, ಉಡುಪಿ

ಆಮಂತ್ರಣ ಪತ್ರಿಕೆ
ಮೊದಲಾದ
ಪ್ರಿಂಟಿಂಗ್ ಕೆಲಸಗಳಿಗೆ-

ನವಯುಗ ಪ್ರೆಸ್,

ಉಡುಪಿ.

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದನ್ನು ಮನಿಯಾರ್ಡರ್ ಮಾಡಿ ಕಳಿಸಿಕೊಡುವಂತೆ ವಿನಂತಿಸುತ್ತೇವೆ.

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಒಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣ ನಟಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೀಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0-12-0.

(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ನಿಮಗೆ ಬೇಕಾದ ಪ್ರತಿಗಳಿಗೆಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

(೧ನೇ ಪುಟದಿಂದ)

ಕಟು ಮಾತನ್ನು ಬಳಸುವುದು ಇಷ್ಟವಾಗುದಲ್ಲ.

ಅಭಿವೃದ್ಧಿ ಪ್ರಯತ್ನಗಳಿಗೆ ಹೊರದೇಶಗಳವರ ನೆರವು ಎಷ್ಟು ದೊರೆತರೆ ಅಷ್ಟು ಲಾಭವೆಂದು ಏಶಿಯಾದ ಅನೇಕ ರಾಷ್ಟ್ರಗಳು ಭಾವಿಸುತ್ತವೆ. ಸಿಮ್ಲಾದಲ್ಲಿ ಕಳೆದ ವಾರ ಜರಗಿದ ಏಶಿಯದ ರಾಷ್ಟ್ರಗಳ ಪರಿಷತ್ತು ಹೊರ ದೇಶಗಳವರ—ಮುಖ್ಯವಾಗಿ ಅಮೇರಿಕದ—ನೆರವಿಗೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿತು. ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ಯಂತ್ರೋಪಕರಣಗಳ ಪೂರೈಕೆ ಮತ್ತು ತಾಂತ್ರಿಕ ವಿಭಾಗದಲ್ಲಿ ತಜ್ಞರಾದವರ ಸಹಕಾರ ಅತೀ ಅಗತ್ಯವಾಗಿದ್ದು ಅಮೇರಿಕದ ನೆರವು ಇದನ್ನು ಒದಗಿಸಿ ಕೊಡುತ್ತದೆ. ರಾಜಾಜಿಯ ಸಲಹೆಯಂತೆ ಭಾರತವು ಈ ಸಹಾಯವನ್ನು ನಿರಾಕರಿಸಿದರೆ ನಮ್ಮ ಅನೇಕ ಯೋಜನೆಗಳ ಪ್ರಗತಿಗೆ ಆತಂಕವಾಗದಿರದು. ನೈತಿಕ ಪ್ರಶ್ನೆಗೆ ಮಹತ್ವಕೊಡಬಾರದೆಂದಿದರ ಅರ್ಥವಲ್ಲ—ಆದರೆ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳ ಪ್ರಶ್ನೆಯನ್ನು ಪರಸ್ಪರ ಜೋಡಿಸುವುದು ಸವ್ಯಕ್ಕೆ ಸಮಂಜಸವಲ್ಲ. ನಮಗೆ ಬೇಕಾದ ಅಂಶವನ್ನು ಸ್ವೀಕರಿಸಿ, ಸಮ್ಮತವಲ್ಲದುದನ್ನು ಕಂಠೋಕ್ತವಾಗಿ ಪ್ರತಿಭಟಿಸುವುದು ಭಾರತ ಸರಕಾರದ ಈ ವರೆಗಿನ ನೀತಿಯಾಗಿದ್ದು ಅದನ್ನೇ ಮುಂದರಿಸುವುದು ಹಿತಕರ. ನಾವು ಲೋಕಕ್ಕೆ ಹೊಸ ಮಾದರಿಯನ್ನು ಹಾಕಿಕೊಡುವುದು ಗೌರವದ ಸಂಗತಿಯಾಗ ಬಹುದಾದರೂ ವ್ಯಾವಹಾರಿಕ ಜಾಣ್ಮೆಯನ್ನು ಪ್ರದರ್ಶಿಸದಿರಬಾರದು.

—ಕಾರ್ತಿಕೇಯ.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4¼% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.



ಮಂಗಳೂರು

ಕ್ಯಾನ್ಸರ್ ಕಾಯಿಲೆ ಕುರಿತು ಭಾಷಣ— ಮಂಗಳೂರು ರೋಟರಿ ಕ್ಲಬ್ಬಿನಲ್ಲಿ ತಾ 12 ರಲ್ಲಿ ಮಿರಾಜ್ ಸ್ಥೈಲ್ ಮೆಮೋರಿಯಲ್ ಕ್ಯಾನ್ಸರ್ ಇನ್ಸ್ಟಿಟ್ಯೂಟಿನ ಡಾಕ್ಟರ್ ಡಬ್ಲ್ಯು. ಒ. ಏರನ್‌ರವರು ಕ್ಯಾನ್ಸರ್ ರೋಗದ ಕುರಿತು ಭಾಷಣವೀಯುತ್ತಾ, ಈ ಕಾಯಿಲೆಗೆ ತುತ್ತಾಗುವ ಬಡ ಜನರಿಗೆ ರೋಟರಿ ಕ್ಲಬ್ಬಿನಂತಹ ಸಂಸ್ಥೆಗಳು ಸಹಾಯ ನೀಡಲು ಮುಂದೆಬರಬೇಕಾಗಿದೆ ಎಂದರು. ರಕ್ತಸ್ರಾವ, ಕೆಲವೆಡೆಗಳಲ್ಲಿ ಗುಳ್ಳೆಯೇಳುವುದು, ಮುಂತಾದ ಚಿಹ್ನೆಗಳು ತೋರಿದ ಕೂಡಲೇ ವೈದ್ಯರ ಸಲಹೆ ಪಡೆಯಬೇಕು. ಈ ಚಿಹ್ನೆಗಳೇ ಕ್ಯಾನ್ಸರ್ ರೋಗದ ಆರಂಭವಾಗಿರಬಹುದು. ಹೊಗೆಸೊಪ್ಪಿನೊಡನೆ ಸುಣ್ಣ ಸೇರಿಸಿ ಜಗಿಯುವುದರಿಂದ ದವಡೆಯ ಕ್ಯಾನ್ಸರ್ ರೋಗ ಬರಬಹುದು. ಅಂತೆಯೇ ಹೆಚ್ಚು ಹೊಗೆಬತ್ತಿ ಸೇವನೆಯಿಂದ ಶ್ವಾಸಕೋಶದ ಕ್ಯಾನ್ಸರ್ ಬರುವ ಸಂಭವವಿದೆಯಾಗಿಯೂ ಹೇಳಿದರು. ಈ ರೋಗದ ಚಿಕಿತ್ಸೆಗೆ ಭಾರತದಲ್ಲಿ ಸಾಕಷ್ಟು ಚಿಕಿತ್ಸಾಲಯಗಳಿಲ್ಲವೆಂದರು. ಕ್ಲಬ್ಬಿನ ಉಪಾಧ್ಯಕ್ಷ ಶ್ರೀ ಪಿ. ಆರ್. ಆರ್. ಪೂಂಜರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ವಿಶ್ವನಾಥ ಕಾಮತರು ವಂದನೆಗಳನ್ನರ್ಪಿಸಿದರು.

ಕೈ ಬರಹ ಸ್ಪರ್ಧೆ— ಎಸ್. ಕೆ. ನಾಟಕ ಸಭೆಯವರು ಏರ್ಪಡಿಸಿದ ಇಂಗ್ಲಿಷು ಕನ್ನಡ ಕೈ ಬರಹ ಸ್ಪರ್ಧೆಯಲ್ಲಿ, ಶ್ರೀಗಳಾದ ಎಂ. ಮಾಧವ ಮತ್ತು ಯು. ಯಶವಂತ ನಾಯ್ಕರಿಗೆ ಇಂಗ್ಲಿಷ್ ಕೈ ಬರಹಕ್ಕೆ ಪ್ರಥಮ ಮತ್ತು ದ್ವಿತೀಯ ಬಹುಮಾನಗಳನ್ನೂ, ಶ್ರೀಗಳಾದ ಎ. ರಾಘವ ಭಂಡಾರಿ, ಶ್ರೀಧರರಾವ್ ಮತ್ತು ಜಯವಂತ ಕಾರ್ನಾಡರವರಿಗೆ ಕನ್ನಡ ಕೈ ಬರಹಕ್ಕೆ ಪ್ರಥಮ, ದ್ವಿತೀಯ ಬಹುಮಾನಗಳನ್ನೂ ಅನುಕ್ರಮವಾಗಿ ಕೊಡಲಾಗುವುದು. ಬಹುಮಾನ ವಿತರಣಾ ಸಮಾರಂಭವು ತಾ 22 ರಲ್ಲಿ ಸಂಜೆ 5½ ತಾಸಿಗೆ ಗಣಪತಿ ಹ್ಯಾಸ್ಕೂಲಿನಲ್ಲಿ ಜರಗುವ ಸಭೆಯ ವಾರ್ಷಿಕೋತ್ಸವ ದಿನದಲ್ಲಿ ಕೊಡಲಾಗುವುದು.

ರೈಲ್ವೆ ಅಧಿಕಾರಿಗಳಿಗೆ ಮನವಿ— ಮದ್ರಾಸ್ ದಕ್ಷಿಣ ಭಾರತ ರೈಲ್ವೇ ಪ್ರಮುಖ ಓಪರೇಟಿಂಗ್ ಸುಪರಿಂಟೆಂಡೆಂಟ್ ಶ್ರೀ ಬಿ. ಸಿ. ದೇಶಿಕಾಚಾರಿಯವರು ಚಲ್ಲಾ ಟ್ರಿಪಿಕ್ ಸುಪರಿಂಟೆಂಡೆಂಟ್ ಪೊದನೂರು ಶ್ರೀ ಕೆ. ಯಸ್. ಕೃಷ್ಣನ್‌ರೊಡನೆ ತಾ 13 ರಲ್ಲಿ ಬೆಳಿಗ್ಗೆ ಕೆನರಾ ಚೆಂಬರ್ ಒಫ್ ಕಮರ್ಶಿಗೆ ಸಂದರ್ಶನವಿತ್ತು ಮನವಿಯೊಂದನ್ನು ಸ್ವೀಕರಿಸಿದರು. ಶ್ರೀ ಆಚಾರಿಯವರು ಮನವಿಗೆ ಉತ್ತರಕೊಡುತ್ತಾ 'ಮಂಗಳೂರು ಮದ್ರಾಸು ರೈಲ್ವೆಯ ವೇಗವನ್ನು ಹೆಚ್ಚಿಸಲು ಮುಂದಿನ ಅಕ್ಟೋಬರ ತಾ 1 ರಲ್ಲಿ ಆಲೋಚಿಸಿ, ಕೊಚ್ಚಿನ್ ಎಕ್ಸ್‌ಪ್ರೆಸ್ ಸಮಯವನ್ನು ಹೊಂದಿಕೊಳ್ಳಬೇಕಾದ ಕಾರಣ, ಅದರ ಸಾಧ್ಯಾಸಾಧ್ಯತೆಗಳನ್ನು ನಿರ್ಣಯಿಸಲಾಗುವುದು. ದ. ಕ. ಜಿಲ್ಲೆಯಿಂದ ಬೊಂಬಾಯಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನಲ್ಲಿ ಹಿಂದೆ ಇದ್ದ ವಿಶೇಷ ರೈಲು ಬಂಡಿಯನ್ನು ಈಗ ತೆಗೆದು ಹಾಕಿರುವ ಕಾರಣದ ಕುರಿತು ವಿಚಾರಿಸಲಾಗುವುದು. ಮನವಿಯ ಇತರ ವಿಷಯಗಳನ್ನು ಆಲೋಚಿಸಲಾಗುವುದು.'' ಎಂದು ಹೇಳಿದರು. ಆರಂಭದಲ್ಲಿ ಶ್ರೀ ಗಜಾನನ ರಾವ್ ಪಂಡಿತರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಯು. ಸುಬ್ರಾಯ ಮಲ್ಯರು ಮನವಿಯನ್ನು ಓದಿದರು. ಕೊನೆಯಲ್ಲಿ ಶ್ರೀ ಕೆ. ಉಪೇಂದ್ರ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರು ನಗರಸಭೆಯು:— ತಾ. 14ರಲ್ಲಿ ಸಂಜೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿ ಈ ತಿಂಗಳ ಕೊನೆಯ ವಾರದಲ್ಲಿ ಜಿಲ್ಲಾಪ್ರವಾಸವನ್ನು ಕೈಕೊಳ್ಳಲಿರುವ ಕೇಂದ್ರ ರೈಲ್ವೆ ಮಂತ್ರಿ ಶ್ರೀ ಲಾಲ್ ಬಹದೂರ್ ಶಾಸ್ತ್ರಿಗಳಿಗೆ ಮಾನಪತ್ರನೀಯಬೇಕೆಂದು ನಿರ್ಧಾರವಾಯಿತು. ಕೊಡಿಯಾಲ ಬೈಲಿನ ನಾಗರಿಕ ಸಂಘದವರು ಕೊಡಲೊಪ್ಪಿದ, ದಿವಂಗತ ಡಾ ಕೆ ವಿಠಲ ಸೆಟ್ಟರ ಭಾವಚಿತ್ರವನ್ನು ಕೃತಜ್ಞತಾ ಪೂರ್ವಕ ಸ್ವೀಕರಿಸಲಾಯಿತಲ್ಲದೆ, ಅದರ ಅನಾವರಣದ ಬಗ್ಗೆ ಕಾರ್ಯಕ್ರಮ ನಿರ್ಣಯಿಸಬೇಕೆಂದಾಯಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಗರ ಕ್ಷೇತ್ರಕ್ಕೆ ಸಂಬಂಧಿಸಿದ ಯೋಜನೆಯನ್ನು ತಯಾರಿಸಲು ಚೆರ್‌ಮೇನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ವೈಸ್ ಚೆರ್‌ಮೇನ್ ಶ್ರೀ ಬಿ. ಎಸ್. ಭಾಸ್ಕರ ರೈ, ಮತ್ತು ಶ್ರೀಗಳಾದ ಡಾ! ಯು. ಪಿ. ಮಲ್ಯ, ಎಮ್. ಶ್ರೀನಿವಾಸ ನಾಯಕ್, ಡಾ! ಎಮ್. ಸಿ. ಶಾಸ್ತ್ರಿ, ಬಿ. ಆರ್ ಕರ್ಕೇರ ಮತ್ತು ಎಸ್. ಗೋಪಾಲ ಸಾಲೆನ್ನರಿರುವ ಕಮಿಟಿ ರಚಿಸಲಾಯಿತು. ಮುನಿಸಿಪಲ್ ಚುನಾವಣೆಗಳನ್ನು ಆಗೋಸ್ತು-ಸಪ್ಟಂಬರ ತಿಂಗಳುಗಳ ಬದಲಿಗೆ ಈ ಜಿಲ್ಲೆಯಲ್ಲಿ ಅಕ್ಟೋಬರ ತಿಂಗಳಿಗೆ ಮುಂದೆ ಹಾಕುವಂತೆ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ವಾರ್ಷಿಕೋತ್ಸವ— ಮಂಗಳೂರಿನ ಅಂಚೆ ಮತ್ತು ತಂತಿ ಇಲಾಖೆಯ ಕ್ಲಬ್ಬಿನ ವಾರ್ಷಿಕೋತ್ಸವವು ತಾ 16 ರಲ್ಲಿ ಸಂಜೆ ಮದ್ರಾಸಿನ ತಂತಿ ಇಲಾಖೆಯ ಡಿಸ್ಟ್ರಿಕ್ಟ್ ಡೈರೆಕ್ಟರ್ ಶ್ರೀ ಯಮ್. ಕೆ. ಪದ್ಮನಾಭನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ ಗಂಗಾಧರ ದಾಸರು ಪ್ರಾರಂಭಿಕ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಜಿ. ಗಂಗೋಳ್ಳಿಯವರು ವರದಿಯನ್ನೋದಿದರು. ತಂತಿ ಇಲಾಖೆಯ ಸುಪರಿಂಟೆಂಡೆಂಟ್ ಶ್ರೀ ಪಿ. ವಿ ನಾಯರ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಮೊಗವೀರ ಸ್ಟೂಡೆಂಟ್ಸ್ ಯೂನಿಯನ್— ಇದರ ವಾರ್ಷಿಕೋತ್ಸವವು ತಾ 15 ರಲ್ಲಿ ಸಂಜೆ ಡಾ| ಎಸ್ ಚೌಟ, ಅವರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಕಾರ್ಯಕ್ರಮಗಳಾದುವು.

ಜಿಲ್ಲೆಗೆ ಜೋಗ್ ವಿದ್ಯುತ್ ಪ್ರೊಜೆಕ್ಟ್— ಬಗ್ಗೆ ದ. ಕ. ಜಿಲ್ಲೆಯಿಂದ ಶ್ರೀಗಳಾದ ಕೆ. ಎಸ್. ಹೆಗ್ಡೆ ಎಂ.ಪಿ., ಟಿ. ಎ. ಪೈ, ಎಂ. ಎಲ್. ಎ, ಬಿ. ವಿ. ಬಾಳಿಗ, ಎಂ. ಎಲ್. ಎ, ಸರ್ವಪ್ಪಯ್ಯ, ಎಂ. ಎಲ್ ಸಿ., ವಿ. ಎಸ್. ಕುಡ್ವರು ತಾ 13 ರಲ್ಲಿ ಮಧ್ಯಾಹ್ನ ಬೆಂಗಳೂರಲ್ಲಿ ಮೈಸೂರು ಮುಖ್ಯಮಂತ್ರಿ ಮಾನ್ಯ ಶ್ರೀ ಹನುಮಂತಯ್ಯನವರನ್ನು ಭೇಟಿಯಾಗಿ ವಿಚಾರವಿನಿಮಯ ನಡೆಸಿದರು. ಮೈಸೂರು-ಮದರಾಸು ಒಪ್ಪಂದದ ಪ್ರಕಾರ 1957 ನೇ ಜೂನ್ ವರೆಗೆ ಅವರ ಇರುವುದಾದರೂ ತಪ್ಪು 1956 ನೇ ಜೂನ್ ತಿಂಗಳಲ್ಲಿ ವಿದ್ಯುತ್ತನ್ನು ಒದಗಿಸುವುದಾಗಿ ಮೈಸೂರಿನ ಚೀಫ್ ಇಂಜಿನಿಯರರು ಹೇಳಿದರು. ಕೆಲಸವು ಶೀಘ್ರ ನಡೆಯುವಂತೆ ಮುಖ್ಯ ಮಂತ್ರಿಗಳು ಚೀಫ್ ಇಂಜಿನಿಯರರಿಗೆ ಸೂಚಿಸಿದರು.

ಸೆಂಟ್ರಲ್ ಎಕ್ಸೈಜ್ ಕಲೆಕ್ಟರ್— ಶ್ರೀ ಡಿ. ಪಿ. ಆನಂದ ನವರು ತಾ. 13ರಲ್ಲಿ ಸ್ಥಳೀಯ ಪಣಕ್ ಸಂಘಕ್ಕೆ ಭೆಟ್ಟಿಯಿತ್ತಾಗ ಅವರಿಗೊಂದು ಮನವಿ ಅರ್ಪಿಸಲಾಯಿತು. ಅವರು ಮನವಿಗೆ ಉತ್ತರ ಕೊಡುತ್ತಾ ಮನವಿಯಲ್ಲಿ ಹೇಳಲಾದ ವಿಷಯಗಳಿಗೆ ಗಮನವೀಯಲಾಗುವುದೆಂದು ಹೇಳಿ ಕಳ್ಳಪಟ್ಟೆಯ ಸರಕುಗಳ ಪರಿಶೋಧನೆಯಿಂದ ಜನರನ್ನು ಕಷ್ಟಕ್ಕೀಡುಮಾಡುವುದು ತಮ್ಮ ಉದ್ದೇಶವಲ್ಲ. ಆದರೆ ಕಳ್ಳಪಟ್ಟೆಯಿಂದ ಸಾಮಾನು ಸಾಗುತ್ತಿರುವುದರಿಂದ ಅದರ ಪರಿಶೋಧನೆ ಬಿಟ್ಟುಕೊಡಲು ಸಾಧ್ಯವಿಲ್ಲ. ಪ್ರಯಾಣಿಕರ ಸಾಮಾನುಗಳ ಪರಿಶೋಧನೆಯನ್ನು ಬಿಡಲು ಅಸಾಧ್ಯವೆಂದರು. ಕಾಫಿ ರೇಂಜಿಗೆ ಇನ್ನೊಬ್ಬ ಇನ್ಸ್‌ಪೆಕ್ಟರರನ್ನು ಕೋರುವ ವಿಚಾರ ಕಾರ್ಯಕ್ರಮ ಕೈಕೊಳ್ಳಬಹುದು. ತೂಕಮಾಡುವ ಯಂತ್ರ ಈಗಾಗಲೇ ಬಂದಿದೆ ಎಂದು ಸಹ ಹೇಳಿದರು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ನೋಡಿದರೆ ಸಾಕು, ಓದದೆ ಬಿಡಲಾರಿರಿ!

ಮುಗಿದಾಗ ಮುಗಿದು ಹೋಯಿತಲ್ಲಾ ಎಂದು – ತೊಡಗಿದಾಗ ಹೇಗೆ ಮುಗಿವುದಿದು ಎಂದು ಕೌತುಕವಡಿಸುವ ಹದಿಮೂರು ಚಿಕ್ಕ ಚೊಕ್ಕ ಕತೆಗಳ ಸಂಗ್ರಹ.

ಅಂತರಂಗದ ಕತೆಗಳು

ಸೊಗಸಾದ ದ್ವಿತೀಯ ಮುದ್ರಣ. ಆಕರ್ಷಕ ಹೊರಹೊದಿಕೆ,

ಅಂತರಂಗವನ್ನು ತೆರೆಗಿಸಿ, ಬಹಿರಂಗವನ್ನು ಹೊಳೆಸಿ ಹರಿವ ಮಾತು.

ಇಷ್ಟಾದರೂ ಬೆಲೆ ೧-೪-೦ (ಟಪಾಲು ಖರ್ಚು ಬೇರೆ)

ಪ್ರತಿಗಳು ಎಲ್ಲಾ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೂ ಸಿಗುತ್ತವೆ

ನವಭಾರತ ಪುಸ್ತಕ ಭಂಡಾರ, ಉಡುಪಿ.

BE YOUNG

Take "Elixir Aswaghandh" the pride of Ayurveda best nervine tonic quickly gives Radiant Health, removes constipation, relieves hip and back pain, Rheumatism, Vatharoga, Asthma, Bleeding Piles cured. Most popular and leading Vajikarana and Rasayana. 1 lb Rs. 10/-. Postage Extra. AYURVEDA VAIDYA T. V JAYARAMA SASTRI, Veera Ragava Vaidyasala, Srirangam S. India.

(೩ನೇ ಪುಟದಿಂದ)

ಜಗತ್ತಿನ ಅತ್ಯಂತ ಹಾನಿಕರವಾದ ರೋಗಗಳಲ್ಲೊಂದಾಗಿರುವ ಮಲೇರಿಯ ವನ್ನೀಗ ಲೋಕದ ಎಲ್ಲ ಭಾಗಗಳಲ್ಲೂ ಹತೋಟಿಗೆ ತರಲಾಗುತ್ತಿದೆ. ಡಿಡಿಟಿ ಎಂಬ ರಾಸಾಯನಿಕವು ಮಲೇರಿಯವನ್ನು ನಾಶಪಡಿಸಲು ಉಪಯೋಗಿಸುವ ಮುಖ್ಯವಸ್ತುವಾಗಿರುತ್ತದೆ. ವಿಶ್ವಸಂಸ್ಥೆಯ ಜಾಗತಿಕ ಆರೋಗ್ಯ ಸಂಘವು ಸಾವಿರಾರು ಟನ್ ಅಮೇರಿಕನ್ ನಿರ್ಮಿತ ಡಿಡಿಟಿಗಳ ಬೆಂಬಲದಿಂದ ಜರಗಿಸುತ್ತಿರುವ ಕಾರ್ಯಕ್ರಮಗಳು ಮಲೇರಿಯಾ ವಾಹಕ ಸೊಳ್ಳೆಗಳನ್ನು ನಿಧಾನವಾಗಿ, ಆದರೆ ನಿಶ್ಚಿತವಾಗಿ ನಾಶಪಡಿಸುತ್ತಿವೆ. ಭಾರತದ ಅನೇಕ ಪ್ರದೇಶಗಳಲ್ಲಿ ಈಗಾಗಲೇ ಈ ರೋಗವು ನಿರ್ಮೂಲವಾಗಿದೆ. ಅಮೇರಿಕನ್ ಸೈನಮಿಡ್ ಕಂಪೆನಿಯು ತಯಾರಿಸಿದ ಮೇಟಾಕ್ಲೋರೈಡಿನ್ ಎಂಬ ಸಲ್ಫಾ ಔಷಧವು ಮಲೇರಿಯಾವನ್ನು ಇದಿರಿಸುವ ಕಾರ್ಯದಲ್ಲಿ ಬಹಳ ಪರಿಣಾಮಕಾರಿಯಾಗಿದೆ.

ವಾಂತಿಭೇದಿ ಮತ್ತು ವಿಷಮ ಜ್ವರಗಳಿಗೂ ವೈದ್ಯ ವಿಜ್ಞಾನವು ಪರಿಹಾರಗಳನ್ನು ಕಂಡು ಹಿಡಿದಿದೆ. ವಾಂತಿಭೇದಿ ನಿರೋಧಕ ದಾಕೊಂದರ ಉಪಯೋಗದಿಂದ ಈ ರೋಗಕ್ಕೆ ನಿರೋಧಕ ಶಕ್ತಿ ಗಣನೀಯವಾಗಿ ಹೆಚ್ಚಿದೆ. ಮತ್ತು ಸಲ್ಫಾಡಯಜಿನ್ ಮತ್ತು ಸಲ್ಫಾಗನ್ಡೈನ್ ಎಂಬ ಔಷಧಗಳ ಉಪಯೋಗದಿಂದ ರೋಗವು ಯಶಸ್ವಿಯಾಗಿ ತಡೆಗಟ್ಟಲ್ಪಟ್ಟಿದೆ.

ಇವುಗಳನ್ನು ಮತ್ತಿತರ ಸಲ್ಫಾ ಔಷಧಿಗಳನ್ನು ಅನೇಕ ದೇಶಗಳಲ್ಲಿ, ಮುಖ್ಯವಾಗಿ ಅಮೇರಿಕದಲ್ಲಿ ಅಭಿವೃದ್ಧಿಗೊಳಿಸಲಾಯಿತು. ಅಮೇರಿಕನ್ ಸೈನಮಿಡ್ ಕಂಪೆನಿಯ ಡಾ|| ಯಂ. ಎಲ್. ಕ್ರಾಸ್ಲೀಯವರು ಇವುಗಳನ್ನು ಪರಿಪೂರ್ಣಗೊಳಿಸಿದವರಲ್ಲಿ ಪ್ರಮುಖರು ಮತ್ತು ಅಮೇರಿಕನ್ ಸೈನಮಿಡ್ ಕಂಪೆನಿಯು ಅತಿ ಹೆಚ್ಚಿನ ಪ್ರಮಾಣದವುಗಳನ್ನು ಉತ್ಪಾದಿಸುತ್ತಿದೆ.

ಡಾ|| ಹೆನ್ರೀ ಸೆನೆಕಾ ಮತ್ತು ಡಾ|| ಎಡ್ವರ್ಡ್ ಹೆಂಡರ್ಸನ್‌ರು ವಾಂತಿ ಭೇದಿಯ ವಿರುದ್ಧ ಬಹಳ ಪರಿಣಾಮಕಾರಿಯಾಗಿರುವ ಇನ್ನೊಂದು ಸಲ್ಫಾ ಔಷಧವನ್ನು ಅಭಿವೃದ್ಧಿಗೊಳಿಸಿದ್ದಾರೆ.

ಹಿಂದಿನ ದಾಕುಗಳಿಗಿಂತ ಅನೇಕ ವಿಧಗಳಲ್ಲಿ ಹೆಚ್ಚು ಪ್ರಯೋಜನಕಾರಿಯಾಗಿರುವ ಹೊಸ ರೀತಿಯ ವಾಂತಿ ಭೇದಿ ನಿರೋಧಕ ದಾಕೊಂದನ್ನು ೧೯೪೪ ರಲ್ಲಿ ಡಿಜಾ ವೇರ್‌ನ ನೇವಾರ್ಕ್‌ನ ಬಯೋಕೆಮಿಕಲ್ ಫೌಂಡೇಷನಿನಲ್ಲಿ ಅಭಿವೃದ್ಧಿಗೊಳಿಸಲಾಯಿತು.

ಬಿ ಆರ್ ಯಫ್ ಎಂದು ಈ ದಾಕಿನ ಹೆಸರು. ಇದು "ಜಗತ್ತಿನಲ್ಲಿ ವಾಂತಿ ಭೇದಿಯು ನಿರ್ಮೂಲನಕ್ಕೆ, ಹಾದಿಮಾಡಿಕೊಡಬಲ್ಲುದು" ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮುಖ್ಯವಾಗಿ ಅಶುದ್ಧ ಜಲದ ಉಪಯೋಗದಿಂದುಂಟಾಗುವ ವಿಷಮ ಜ್ವರವನ್ನು ಅನೇಕ ಪ್ರದೇಶಗಳಲ್ಲಿ ಸುಧಾರಿತ ಸಾರ್ವಜನಿಕ ಆರೋಗ್ಯ ವಿಧಾನಗಳಿಂದ, ಒಂದು ವಿಶಿಷ್ಟ ದಾಕಿನ ಉಪಯೋಗದಿಂದ ಮತ್ತು ಕ್ಲೋರೋಮೈಸಿಟಿನ್ ಎಂಬ ಆಂಟಿ ಬಯೋಟಿಕ್ ಔಷಧದ ಉಪಯೋಗದಿಂದ ನಿಯಂತ್ರಿಸಲಾಗಿದೆ.

೧೯೫೪ ರಲ್ಲಿ ಸಿನ್ನೆ ಮಾಟಿನ್ ಎಂಬ ಹೊಸ ಆಂಟಿ ಬಯೋಟಿಕ್ ಔಷಧವನ್ನು ಪರಿಪೂರ್ಣಗೊಳಿಸಲಾಯಿತು ಮತ್ತಿದನ್ನು ವಿಷಮ ಜ್ವರಕ್ಕೆ ನಿಶ್ಚಿತ ಗುಣ ಕೊಡುವ ಔಷಧವೆಂದು ವರ್ಣಿಸಲಾಗಿದೆ. ಮಿಚಿಗನ್ ರಾಜ್ಯದ ಸಾರ್ವಜನಿಕಾರೋಗ್ಯದ ಲೆಬರೇಟರಿಗಳಲ್ಲಿ ಐದು ವರ್ಷಗಳಸಂಶೋಧನೆಯ ಬಳಿಕ ಈ ಔಷಧವನ್ನು ಅಭಿವೃದ್ಧಿಗೊಳಿಸಲಾಯಿತು.

ಇತ್ತೀಚೆಗಿನ ವರ್ಷಗಳಲ್ಲಿ ವೈದ್ಯಕೀಯ ವಿಜ್ಞಾನದಲ್ಲಿ ಅದ್ಭುತ ಪ್ರಗತಿಗಳಾಗಿವೆಯಾದರೂ, ಕೆಲವು ಪ್ರದೇಶಗಳಲ್ಲಿ ಮರಣ ಪ್ರಮಾಣವು ಹೆಚ್ಚಿದಂತೆ ಕಂಡುಬರುತ್ತದೆ. ಆಯುರ್ಮಾನ ಹೆಚ್ಚಿದುದರಿಂದಾಗಿ, ವೃದ್ಧರ ಸಂಖ್ಯೆಯು ಹೆಚ್ಚಿ, ತಾತ್ಕಾಲಿಕವಾಗಿ ಮರಣ ಸಂಖ್ಯೆ ಹೆಚ್ಚಾದುದೇ ಇದರ ಮುಖ್ಯ ಕಾರಣವಿರಬಹುದು. ಹೃದ್ರೋಗ ಮತ್ತು ಕ್ಯಾನ್ಸರ್‌ಗಳು ಹೆಚ್ಚಾಗಿ ವೃದ್ಧರ ಮರಣವನ್ನು ತರುತ್ತವೆ.

ಅಮೇರಿಕದ ಅನೇಕ ಪ್ರಯೋಗಾಲಯಗಳಲ್ಲಿ ಮತ್ತು ಇತರ ದೇಶಗಳಲ್ಲೂ ಹೃದ್ರೋಗ ಮತ್ತು ಕ್ಯಾನ್ಸರ್‌ಗಳನ್ನಿದಿರಿಸುವ ಹೊಸ ಕ್ರಮಗಳನ್ನು ಪರಿಶೋಧಿಸಲಾಗುತ್ತಿದೆ. ಇಂಥ ಕೆಲವು ಪರಿಶೋಧನೆಗಳಿಗೆ ಸಾರ್ವಜನಿಕ ನಿಧಿ ಆಂದೋಳನಗಳಿಂದ ಮತ್ತು ಅಮೇರಿಕ ಸರಕಾರದಿಂದ ಅವಶ್ಯವಿರುವ ಹಣಕಾಸು ದೊರೆಯುತ್ತಿದೆ.

ಅಮೇರಿಕನ್ ಹಾರ್ಟ್ ಅಸೋಸಿಯೇಷನ್ ಮತ್ತು ಅಮೇರಿಕನ್ ಕ್ಯಾನ್ಸರ್ ಸೊಸೈಟಿಗಳು, ಈಗ ಹೃದ್ರೋಗ ಮತ್ತು ಕ್ಯಾನ್ಸರ್‌ಗಳ ಬಗ್ಗೆ ದೊಡ್ಡ ಪ್ರಮಾಣದಲ್ಲಿ ಸಂಶೋಧನೆ ನಡೆಸುತ್ತಿರುವ ಪ್ರಮುಖ ಸಂಘಗಳಾಗಿರುತ್ತವೆ.

ಇಷ್ಟು ಸಂಶೋಧನೆಗಳು ಹೆಚ್ಚುತ್ತಿದ್ದರೂ ಕೆಲವು ರೋಗಗಳು ಅನಿರೀಕ್ಷಿತವಾಗಿ ಕಾಣಿಸಿಕೊಂಡು ಸಾವಿರಾರು ಜನರನ್ನು ಪೀಡಿಸುತ್ತಿರುವುದು ಶೋಚನೀಯ. ರೋಗೋಪಶಮನ ಮತ್ತು ನಿರೋಧದ ದಿಸೆಯಲ್ಲಿ ಮನುಷ್ಯ ಪ್ರಯತ್ನವನ್ನು ಎಷ್ಟು ಮುಂದೊತ್ತಿದರೂ ಕಡಿಮೆ ಎಂಬುದನ್ನಿದು ತೋರಿಸಿ ಕೊಡುತ್ತದೆ—ಅಲ್ಲವೆ?

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೩	೮
ಸ್ವಾಮಿ ವಿವೇಕಾನಂದ (ಕುವೆಂಪು)	೩	೮
ಭಗವಾನ್ ಶ್ರೀ ರಾಮಕೃಷ್ಣ	೩	೦
ಪತ್ರಮಾಲೆ	೩	೦
ಜ್ಞಾನಯೋಗ	೩	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೩	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಿಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಪೈಮಾಚಲ ಸಾನ್ನಿಧ್ಯದಲ್ಲಿ (ಪರಿವ್ರಾರದಿಂದ ಕೇದಾರ ಬದರಿಗೆ)	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ಸಿಷ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ಜ್ಞಾನ ಮಾರ್ಗ	೦	೮
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ	೦	೫
ತ್ರಿವೇಣಿಯಿಂದ)	೬	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮಹಾಪುರುಷ ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವಮಾನವ ಕ್ರಿಸ್ತ	೦	೪
ಧ್ಯಾನ	೦	೪

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಭಾರತ್
ಹಣ್ಣಿನ ಶರಬತ್ತು ಮತ್ತು ಸಿರಪುಗಳು

ಪಕ್ವದ ತೋಟದ ಹೆಕ್ಕಿ ತೆಗೆದ ಹಣ್ಣುಗಳ ತಾಜಾ ತಯಾರಿಕೆ. ಬಳಲಿ ಬಾಯಾರಿದಾಗ, ಉಲ್ಲಾಸ ಮತ್ತು ಆರೋಗ್ಯ ಕೊಡುವ ತಂಪಾದ, ಉತ್ತಮ ಪಾನೀಯ. ಅತಿಥಿಗಳ ಆದರದ ಪ್ರಥಮ ಸತ್ಕಾರಕ್ಕೆ ಒಂದು ಬಾಟ್ಲಿ ಸದಾ ಮನೆಯಲ್ಲಿದ್ದರೆ ಮನೆಯೊಡತಿಗೆ ಅತಿ ಅನುಕೂಲ. ಒಂದು ಬಾಟ್ಲಿ ಇಂದೇ ಖರೀದಿಸಿರಿ.

ಪ್ರತಿ ಹೋಟೇಲು ಮತ್ತು ಸೋಡಾ ಅಂಗಡಿಗಳಲ್ಲಿ ಭಾರತ್ ಹಣ್ಣಿನ ಶರಬತ್ತು ಮತ್ತು ಸಿರಪುಗಳನ್ನೇ ಕೇಳಿ ಕುಡಿಯಿರಿ. ಅಂದರೆ ನಿಮಗೆ ಉತ್ತಮ ಪಾನೀಯ ದೊರೆಯಿತು.

Bharath Industrial & Canning Co., Ltd., Kaup, S. K.

ಭರ್ತ ಕಂಟ್ರೋಲ
[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟಿನ ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ.ಪಿ.ಪಿ. ಪ್ರತ್ಯೇಕ)

Mrs. P. DEVEE, F. Ds. (N. J.)
CALCUTTA—40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

೧೦೦ ರೂ. ಬಹುಮಾನದ ಆಶ್ಚರ್ಯಕಾರಕ

ಸಿದ್ಧ ಕವಚ

ಈ ಕವಚ, ಧಾರಣೆಯಿಂದ ಅಸಾಧ್ಯಗಳನ್ನೆಲ್ಲ ಸಾಧಿಸಿಕೊಳ್ಳಬಹುದು. ಇದರ ಸಿದ್ಧಿಗೆ ಯಾವ ಸಂಕಷ್ಟವೂ ಇಲ್ಲ; ಯಾವ ಸಿದ್ಧತೆಯೂ ಬೇಕಾಗಿಲ್ಲ. ಅವಳ ಯಾವನು ನಿಮ್ಮ ವಶವರ್ತಿಯಾಗುವನು. ನಿಮಗೆ ಬೇಕಾದ ವ್ಯಕ್ತಿ ದುಷ್ಟ ಗ್ರಹ ಬಾಧೆಗಳನ್ನು ನಿವಾರಿಸುವದು. ವೈರಿಗಳನ್ನು ಸೋಲಿಸಿ, ಪರೀಕ್ಷೆ ವ್ಯಾಪಾರ, ವ್ಯಾಜ್ಯ, ಸೋಟ್ಟು, ಉದ್ಯೋಗ ಐಶ್ವರ್ಯಾದಿಗಳಲ್ಲಿ ಜಯವನ್ನೊದಗಿಸಿ ರೋಗದಿಂದ ಮತ್ತು ಸಾಲದಿಂದ ಉದ್ಧರಿಸುವದು. ಅದೃಷ್ಟಶಾಲಿಗಳಾಗಿ ಮಾಡುವದು, ಇದು ಸುಳ್ಳೆಂದು ಸಿದ್ಧಪಡಿಸಿದವರಿಗೆ 100 ರೂ. ಬಹುಮಾನ. ತಾಮ್ರ ರೂ. 2-8-0 ಬೆಳ್ಳಿಯ ರೂ. 3 ಚಿನ್ನ ರೂ. 15, for special Rs 25—0—0

Shree Panchvati Ashram
No. 8, P. O. KATRISARAI
(GAYA)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 84/1954.

ದಿ. ಸ್ಟೇಟ್ ಆಫ್ ಮದ್ರಾಸ್—ವಾದಿ.

ಯನ್. ತಿಮ್ಮಪ್ಪ ಪೂಜಾರಿ-ಕೋಚ ಪೂಜಾರಿಯ ಮಗ, ಪುತ್ತೂರು ತಾಲೂಕು ಬಲಿಯೂರು ಗ್ರಾಮದ ಸಾಂತ್ಯ ಎಂಬಲ್ಲಿರುವವ.

ಸದ್ರಿ ಪ್ರತಿವಾದಿಗೆ, ಪ್ರತಿವಾದಿಯು ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಸ್ಕೂಲಿನಲ್ಲಿ ಸ್ಟೈಪೆಂಡಿಯರಿ ಸ್ಟೂಡೆಂಟ್ ಆಗಿ ಟ್ರೈನ್ ಆಗುವಾಗೋಸ್ಕರ ಮದ್ರಾಸ್ ಗವರ್ನ್‌ಮೆಂಟಿನಿಂದ ಸಾಲಪಡೆದು ಬರಕೊಟ್ಟ ಬೋಂಡ್ ರಕ್ತ ಪ್ರಕಾರ ವರ್ತಿಸಲಿಕ್ಕೆ ತಪ್ಪಿದ ಕಾರಣ ಪ್ರತಿವಾದಿಯಿಂದ ಗವರ್ನ್‌ಮೆಂಟಿಗೆ ಬರು ಅಸ್ಲು ರೂಪಾಯಿ 136/- ಮತ್ತು ಅದ್ರ ಬಡ್ಡಿ ವ ನೋಟೀಸಿನ ಖರ್ಚು ಕೂಡಾ ಒಟ್ಟು ರೂಪಾಯಿ 178—13—9 ಪ್ರತಿವಾದಿಯಿಂದ ಬರಮಾಡಿಕೊಳ್ಳುವರೆ ವಾದಿಕಡೆಯಿಂದ ದಾಖ್ಲೆ ಮಾಡಲ್ಪಟ್ಟ ಮೇಲಿನ ವ್ಯಾಜ್ಯವು ಬರುವ ತಾರೀಕು 9—6—55ಕ್ಕೆ ಈ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿದೆ. ಸದ್ರಿ ದಾವೆಯ ಕುರಿತು ಪ್ರತಿವಾದಿಯು ಆಕ್ಷೇಪಯಿದ್ದರೆ ಸದ್ರಿ ವ್ಯಾದೆಯ ದಿವಸ ಹಗಲು 11 ಘಂಟೆಗೆ ಈ ಕೋರ್ಟಿನ ಮುಂದೆ ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ಉತ್ತರಿಸದಿದ್ದಲ್ಲಿ ಪ್ರತಿವಾದಿಗೆ ವಿರುದ್ಧವಾಗಿ ವ್ಯಾಜ್ಯ ತೀರ್ಮಾನಿಸಲ್ಪಡುವದೆಂತ ಇದರಿಂದ ತಿಳಿಸೋಣಾಗುತ್ತದೆ.

H. Sanjiva Shetty.
Advocat e& Pleader for
Government at Puttur.

ತಾ. 1—5—1955.

ಪಂಜಾಬಿನ ಹಳ್ಳಿಯೊಂದರಲ್ಲಿ ಹಿಂದೆ ರೈತರು ತಮ್ಮ ಹೊಲಗೆಲಸಗಳನ್ನು ಒಮ್ಮಿಂದೊಮ್ಮೆ ಬಿಟ್ಟರು. ವರ್ತಕರು ತಮ್ಮ ಅಂಗಡಿಗಳನ್ನು ಮುಚ್ಚಿದರು. ಶಾಲಾ ಮಕ್ಕಳು ಮನೆಬಿಟ್ಟು ಕದಲಲಿಲ್ಲ. ಮಾರ್ಗಗಳು ನಿರ್ಜನವಾಗಿದ್ದುವು.

1908 ನೇ ಇಸವಿಯ ಬೇಸಗೆಯಲ್ಲಿ ಅಮೃತಸರದ ಜೀವನದಲ್ಲಿ ಗಭೀರ ನೀರವತೆ ಆವರಿಸಿತು. ಗಾಳಿಯಲ್ಲಿ ಬರುವ ಧಾಳಿಕಾರನ ಧಾಳಿಗೆ ಜನರು ಗುಂಪು ಗುಂಪಾಗಿ ಬಲಿಯಾದರು. ಮಲೇರಿಯ ಸೊಳ್ಳೆಯು ಅನಾಹುತವನ್ನು ಪ್ರಾರಂಭಿಸಿತ್ತು. ಅವಿಭಕ್ತ ಪಂಜಾಬದ ಹಳ್ಳಿ ಪಟ್ಟಣಗಳ ಎರಡುಕೋಟಿ ಜನರ ಪೈಕಿ ಎರಡು ತಿಂಗಳುಗಳೊಳಗೆ 3 ಲಕ್ಷ ಜನರು ಇದಕ್ಕೆ ಬಲಿಯಾದರು

ಈ ಧಾಳಿ ಅಮೃತಸರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಒಂದು ವರ್ಷ ಅಮೃತಸರ ಹಲ್ಲಾಡುದು ಮುಂದಿನ ವರ್ಷ ಕಲ್ಕತ್ತದಲ್ಲಿ ಮತ್ತು ಮತ್ತಿನ ವರ್ಷ ಮೈಸೂರಿನಲ್ಲಿ ಪುನಃ ಸಂಭವಿಸಿತು. ಮಲೇರಿಯದ ಸೊಳ್ಳೆಗೆ ಭಾಷೆಯ ಗಡಿಇರಲಿಲ್ಲ; ಯಾವ ಪ್ರದೇಶವೂ ಅದರ ಸಂಚಾರಕ್ಕೆ ದೂರವಾಗಿರಲಿಲ್ಲ.

1950 ನೇ ಇಸವಿಯಷ್ಟು ಇತ್ತೀಚೆಗೂ, ಕೇವಲ ಪೂರ್ವ ಪಂಜಾಬ ಒಂದರಲ್ಲೇ (ಜನಸಂಖ್ಯೆ: ಒಂದುಕೋಟಿ ಇಪ್ಪತ್ತೈದು ಲಕ್ಷ) ಮಲೇರಿಯದಿಂದಾಗಿ 52,700 ಮಂದಿ ಮಡಿದರು.

ಇಂದು ಪಂಜಾಬದಲ್ಲಿ, ಮತ್ತು ಇಡೀ ಭಾರತದಲ್ಲಿ, ಮಲೇರಿಯವು ಮುಂಚಿನಂಥ ಭೀಕರ ವ್ಯಾಧಿಯಾಗಿಲ್ಲ. ಕಳೆದ ವರ್ಷ ಪಂಜಾಬದಲ್ಲಿ ಮಲೇರಿಯದಿಂದ ಮಡಿದವರ ಸಂಖ್ಯೆ 31,000 ವಾಗಿದ್ದರೆ ಅದರ ವಿರುದ್ಧ ರಕ್ಷಣ ಪಡೆದವರ ಸಂಖ್ಯೆ 31,00,000 ವಾಗಿತ್ತು. 1950 ರಲ್ಲಿ, ಸರಕಾರಿ ಆಸ್ಪತ್ರೆಗಳಲ್ಲಿ ಮತ್ತು ಔಷಧಾಲಯಗಳಲ್ಲಿ ದಾಖಲಾದ ಕೇಸುಗಳು 6,80,000 ವಾಗಿದ್ದರೆ 1 54 ಈ ಸಂಖ್ಯೆ 3,60,000 ಕ್ಕಿಳಿದಿತ್ತು. 1950 ರೋಗದಿಂದಾದ ಆದಾಯಗಳ ನಷ್ಟವು 330 ಲಕ್ಷ ರೂಪಾಯಿಗಳಷ್ಟು 1951ರಲ್ಲಿ ಈ ನಷ್ಟ 17 ಲಕ್ಷ ರೂಪಾಯಿಗಳಷ್ಟು— ಎಂದರೆ ಅರ್ಧಕ್ಕಿಂತಲೂ ಕಡಿಮೆಯಾಗಿತ್ತು. ಇದರಂತೆ ಶವ ಸಂಸ್ಕಾರದ ವೆಚ್ಚಗಳೂ 21 ಲಕ್ಷ ರೂಪಾಯಿಗಳಿಂದ 12ಲಕ್ಷ ರೂಪಾಯಿಗಳಿಗಿಳಿದುವು.

ಮಲೇರಿಯ ರೋಗ ನಿರೋಧದ ಈ ಸತ್ಪರಿಣಾಮವು ಇಡೀ ಭಾರತಕ್ಕೆ ಅನ್ವಯಿಸುತ್ತದೆ. ಕಳೆದ ವರ್ಷ ಭಾರತದಲ್ಲೆಲ್ಲ 7 ಕೋಟಿ 50 ಲಕ್ಷ ಜನರಿಗೆ ರಕ್ಷಣೆಯನ್ನೀಯಲಾಯಿತು ಮತ್ತು 10 ಲಕ್ಷ ರೂಪಾಯಿಗಳಷ್ಟು ಉಳಿತಾಯ ಸಾಧಿಸಲಾಯಿತು.

ಮರಣ ಸಂಖ್ಯೆಯು ತಗ್ಗಿದುದು ಮತ್ತು ಮನುಷ್ಯರ ಮತ್ತು ಹಣದ ಉಳಿತಾಯವಾದುದು, ಪಂಜಾಬದಲ್ಲಿ

ಪಂಜಾಬಿನಲ್ಲಿ ಮಲೇರಿಯ ನಿರೋಧ ಕಾರ್ಯಕ್ರಮ

ಎರಡು ವರ್ಷಗಳ ಹಿಂದೆ ವ್ಯಾಪಕವಾಗಿ ಪ್ರಾರಂಭಿಸಿದ ಮಲೇರಿಯ ನಿಯಂತ್ರಣಕಾರ್ಯಕ್ರಮದಿಂದೊದಗಿರುವ ಪ್ರತ್ಯಕ್ಷ ಸತ್ಪರಿಣಾಮಗಳಾಗಿರುತ್ತವೆ. ಇದು ಮೂರು ವರ್ಷಗಳ ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮದ ಅಂಗವಾಗಿರುತ್ತದೆ. ಈ ರಾಷ್ಟ್ರೀಯ ಕಾರ್ಯಕ್ರಮವು, ಇದು ವರೆಗೆ ಜಗತ್ತಿನಲ್ಲಿ ಜರುಗಿದ ಇಂಥ ಕಾರ್ಯಕ್ರಮಗಳಲ್ಲೇ ಅತಿ ದೊಡ್ಡದಾಗಿದ್ದು 1956 ರೊಳಗೆ ಮಲೇರಿಯಾ ಪೀಡಿತ ಪ್ರದೇಶಗಳಲ್ಲಿರುವ 20 ಕೋಟಿ ಜನರ ಪೈಕಿ 12 ಕೋಟಿ 60 ಲಕ್ಷ ಜನರಿಗೆ ರಕ್ಷಣೆಯೊದಗಿಸುವ ಉದ್ದೇಶವುಳ್ಳದ್ದಾಗಿದೆ. ಇದಕ್ಕೆ ಒಟ್ಟು 15½ ಕೋಟಿ ರೂಪಾಯಿಗಳಷ್ಟು ವೆಚ್ಚವಾಗಬಹುದು.

ಈ ಮೊತ್ತಕ್ಕೆ ಅಮೇರಿಕದ ತಾಂತ್ರಿಕ ಸಹಕಾರ ನಿಯೋಗವು 7. 75 ಕೋಟಿ ರೂಪಾಯಿಗಳಷ್ಟು, ಯುನಿಸೆಫ್‌ಯು 15 ಲಕ್ಷ ರೂಪಾಯಿಗಳಷ್ಟು, ಕೇಂದ್ರ ಸರಕಾರವು 2. 25 ಕೋಟಿ ರೂಪಾಯಿಗಳಷ್ಟು ಮತ್ತು ರಾಜ್ಯ ಸರಕಾರಗಳು 5. 25 ಕೋಟಿ ರೂಪಾಯಿಗಳಷ್ಟು ವಂತಿಗೆ ಹಾಕುವುವು. ಅಮೇರಿಕವು ಮಲೇರಿಯದ ವಿರುದ್ಧವಾದ ಹೋರಾಟದ ಸಾಧನಗಳಾಗಿರುವ ಪ್ರಬಲ ಕೀಟ ನಾಶಕ ಡಿ ಡಿ ಟಿ, ಸ್ಪ್ರೇಯರ್‌ಗಳು, ಜೀಪ್ ಮತ್ತು ಟ್ರಕ್‌ಗಳನ್ನು ಬೃಹತ್ಪ್ರಮಾಣದಲ್ಲಿ ಪೂರೈಸಿ ಸಹಾಯ ಮಾಡುತ್ತಿದೆ. 1954 ರ ವರೆಗೆ ಕೇವಲ ಪಂಜಾಬ ರಾಜ್ಯವೊಂದೇ 11, 36, 060 ರಾತ್ತಲ ಡಿ ಡಿ ಟಿ, 1,9,3,333 ರೆಸೋಚಿನ್ ಗುಳಿಗೆಗಳು 120 ಹಡ್ಸನ್ ಸ್ಪ್ರೇಯರುಗಳು, 1 ಪವರ್ ಸ್ಪ್ರೇಯರ್‌ಗಳು, 240 ಸ್ಟಿರಪ್ ಪಂಪುಗಳು, 26 ಟ್ರಕ್‌ಗಳು, 4 ಜೀಪ್‌ಗಳು, 1 ಸ್ಟೇಶನ್ ವ್ಯಾಗನ್ ಮತ್ತು ಎರಡು ಸೂಕ್ಷ್ಮದರ್ಶಕ ಇತ್ಯಾದಿಗಳನ್ನು ಪಡೆದಿರುತ್ತದೆ.

ಮಲೇರಿಯವು ಮುಖ್ಯವಾಗಿ ಗ್ರಾಮಗಳ ಸಮಸ್ಯೆಯಾಗಿರುವುದರಿಂದ, ಚಳವಳದ ಸಾಫಲ್ಯಕ್ಕೆ ಸಾರಿಗೆಯು ಅತಿ ಮುಖ್ಯ ಅಂಶಗಳಲ್ಲೊಂದಾಗಿರುತ್ತದೆ. ಆದುದರಿಂದ ಅಮೇರಿಕೆಯು ಕೀಟ ನಾಶಕಗಳನ್ನಲ್ಲದೆ, ಜೀಪ್ ಟ್ರಕ್ ಮತ್ತು ಸ್ಪ್ರೇಯಿಂಗ್ ಉಪಕರಣಗಳನ್ನೂ ಹೆಚ್ಚಿನ ಪ್ರಮಾಣದಲ್ಲಿ ಒದಗಿಸುತ್ತಿದೆ. ರಾಜ್ಯ ಸರಕಾರಗಳು ಕಾರ್ಯಕ್ರಮ ಆಡಳಿತದ ವೆಚ್ಚಗಳನ್ನು ನಿರ್ವಹಿಸುತ್ತವೆ.

ಪಂಜಾಬದ ಮಲೇರಿಯಾ ವಿರೋಧಿ ಚಳವಳದ ಯಶಸ್ವೀ ಪ್ರಥಮ ಫಲಗಳು ರೈತರು ಪಡೆದಿರುವ ಅಧಿಕ ಬೆಳೆ ಮತ್ತು ಅಧಿಕ ಲಾಭಗಳಲ್ಲಿ ಕಂಡುಬರುತ್ತವೆ. ಮಲೇರಿಯಾಗ್ರಸ್ತ ಪ್ರದೇಶಗಳಲ್ಲಿ, ಇದುವರೆಗೆ ಸಾಗುವಳಿಯಾಗದಿದ್ದ, ವಿಶಾಲವಾದ ಕೃಷಿ ಯೋಗ್ಯ ಭೂಪ್ರದೇಶಗಳನ್ನು, ಸಮೃದ್ಧವಾದ ಬೆಳೆಕೊಡುವ ಹೊಲಗಳನ್ನಾಗಿ ಮಾರ್ಪಡಿಸಲಾಗಿದೆ. ಕೇವಲ ಕರ್ನಾಲ್ ಜಿಲ್ಲೆಯೊಂದರಲ್ಲೇ (ಕರ್ನಲ್ ಪೂರ್ವ ಪಂಜಾಬದ 13 ಜಿಲ್ಲೆಗಳಲ್ಲೊಂದು) ಮೂರು ತಹಸೀಲ್‌ಗಳಲ್ಲಿ 1, 30,000 ಎಕರೆಗಳಷ್ಟು ನೆಲವನ್ನು ಹೊಸತಾಗಿ ಸಾಗುವಳಿಮಾಡಲಾಗಿದೆ.

ಮಲೇರಿಯಾ ವಿರೋಧಿಕಾರ್ಯಕ್ರಮದ ಪರಿಣಾಮವಾಗಿ ಭಕ್ರಾ ನಂಗಲ್ ಅಣೆಕಟ್ಟಿನ ಪ್ರಾಜೆಕ್ಟಿನಲ್ಲಿ ಕಾರ್ಮಿಕರ ಹಾಜರಾತಿಯು ಹೆಚ್ಚಿತು.

ಗ್ರಾಮ ಶಾಲೆಗಳಲ್ಲಿ ಗೈರುಹಾಜರಾತಿಯ ಪ್ರಮಾಣ ಗಣನೀಯವಾಗಿ ತಗ್ಗಿತು.

ಆಗಾಗ್ಗೆ ಮಲೇರಿಯಾ ಪೀಡೆಗೆ ಬಲಿಯಾಗುತ್ತಿದ್ದ ಗಿಗಾರಿ ಗ್ರಾಮದಲ್ಲಿ ಕಳೆದ ವರ್ಷ ಇತರ ಎಲ್ಲ ವರ್ಷಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮದುವೆಗಳು ಜರುಗಿದುವು. ಇದಕ್ಕೆ ಮೊದಲು ಎಲ್ಲ ಹತ್ತಿರದ ಗ್ರಾಮದ ಅಶಕ್ತ ತರುಣರಿಗೆ ತಮ್ಮ ಮಗಳಂದಿರನ್ನು ಕೊಡಲು ಬಹಳ ಅಂಜುತ್ತಿದ್ದರು.

ಮತ್ತು ಇವೆಲ್ಲವನ್ನೂ—ಅಧಿಕ ಬೆಳೆಗಳನ್ನು, ಅಧಿಕ ಲಾಭಗಳನ್ನು, ಹೆಚ್ಚು ಮದುವೆಗಳನ್ನು ಮತ್ತು ಹೆಚ್ಚಿನ ರಕ್ಷಣೆಯನ್ನು— ರಾಜ್ಯದ 10.8 ಲಕ್ಷ ರೂಪಾಯಿಗಳ ವಾರ್ಷಿಕ ಮುಂಗಡ ಪತ್ರದಿಂದ ಸಾಧಿಸಲಾಗಿದೆ.

ಮುಂಗಾರು ಪ್ರಾರಂಭವಾದೊಡನೆ ಸೊಳ್ಳೆಗಳ ವಿರುದ್ಧವಾದ ಮನುಷ್ಯನ ಹೋರಾಟ ಪ್ರಾರಂಭವಾಗುತ್ತದೆ. ಮಳೆ ನೀರಿನ ಸಂಗ್ರಹಗಳು ಮಲೇರಿಯದ ಸೊಳ್ಳೆಗಳ ಅಭಿವೃದ್ಧಿಗೆ ಒಳ್ಳೆಯ ಅವಕಾಶವನ್ನು ಕೊಡುತ್ತವೆ. ಹೆಚ್ಚು ಜನರು ನಂಬುವಂತೆ ಮಲೇರಿಯಾ ವಾಹಕವು ಚರಂಡಿಗಳಲ್ಲಿ ಮತ್ತು ಕೊಳಕು ಸ್ಥಳಗಳಲ್ಲಿ ತತ್ತಿಯಿಡುವುದಿಲ್ಲ; ಶುದ್ಧ ಜಲವನ್ನೇ ಅದು ಅಪೇಕ್ಷಿಸುತ್ತದೆ.

ಡಿ ಡಿ ಟಿ, ಸ್ಪ್ರೇಯರ್‌ಗಳು, ಬಕೆಟ್‌ಗಳು ಮತ್ತು ಹಗ್ಗಗಳಿಂದ ಸಜ್ಜಿತನಾಗಿರುವ ಕಾರ್ಯಕರ್ತರ ದಳಗಳು, ಈ ಸಮಯದಲ್ಲಿ, ಮಲೇರಿಯ ಸೊಳ್ಳೆಗಳ ಮೇಲೆ ಸಾನನ್ನು ಸಿಂಪಡಿಸಲು ದೂರ ದೂರದ ಹಳ್ಳಿ ಹಳ್ಳಿಗಳಿಗೆ ನುಗ್ಗುತ್ತವೆ. ಮಲೇರಿಯಾ ಋತುವಿನಲ್ಲಿ ಪ್ರತಿಯೊಂದು ಮನೆ ಪತ್ತು ದೊಡ್ಡಿಯನ್ನು ಕನಿಷ್ಟ ಪಕ್ಷ ಒಂದು ಬಾರಿಯಾದರೂ ಸಿಂಪಡಿಸಲಾಗುವುದು. ಡಿ ಡಿ ಟಿ ಯು ಎಂಟರಿಂದ ಒಂಬತ್ತು ವಾರಗಳ ವರೆಗೆ ಗೋಡೆಗಳಲ್ಲುಳಿಯುವುದು ಮತ್ತು ಆಹಾರ ಪಡೆಯಲು ಮನುಷ್ಯರ ವಸತಿಗಳನ್ನು ಸಂದರ್ಶಿಸುವ ಸೊಳ್ಳೆಗಳಿಗೆ ಮೃತ್ಯುವನ್ನೊಡ್ಡುವುದು. ಇದು ಅತ್ಯಂತ ಮಿತವ್ಯಯದ ಮಲೇರಿಯಾ ನಿಯಂತ್ರಣ ವಿಧಾನವಾಗಿರುತ್ತದೆ.

ಮನೆ ಮನೆಗೆ ಡಿ ಡಿ ಟಿ ಸಿಂಪಡಿಸುವ ಕಾರ್ಯ ಪ್ರಾರಂಭಿಸುವ ಮೊದಲು ರಾಜ್ಯದ ಏಳು ವಿಭಾಗಗಳಲ್ಲಿ ಕಾರ್ಯಸ್ಥರಾಗಿರುವ ಮಲೇರಿಯಾ ಅಧಿಕಾರಿಗಳು ಮಲೇರಿಯಕ್ಕೆ ಕಾರಣವಾಗಬಹುದಾದಂಥ ಹಳ್ಳ ಕೊಳ್ಳಗಳ ಪರಿಶೀಲನೆ ಜರುಗಿಸುತ್ತಾರೆ. ಪ್ರತಿಯೊಂದು ವಿಭಾಗದಲ್ಲೂ ಒಬ್ಬ ಮಲೇರಿಯಾ ಅಧಿಕಾರಿ, ಎಂಟು ಇನ್ಸ್‌ಪೆಕ್ಟರರು, 23 ಸುಪರ್‌ವೈಸರರು, 120 ಸ್ಯಾನಿಟರಿ ಬೆಲ್ದಾರರು, ಐದು ಮೋಟರ್ ಡ್ರೈವರ್‌ರು ಮತ್ತು ಒಬ್ಬ ಮೆಕಾನಿಕ್‌ರು ಇದ್ದಾರೆ. ದಳಗಳು ಶಾಲೆಗಳನ್ನು ಸಂದರ್ಶಿಸಿ ಮಕ್ಕಳ ಪ್ಲೀಹಗಳನ್ನು ಪರೀಕ್ಷಿಸುವುವು. ರೋಗ ಗ್ರಸ್ತರಿಗೆ ಉಚಿತ ಔಷಧ ಮತ್ತು ಸಲಹೆಗಳನ್ನು ಕೊಡಲಾಗುವುದು.

ಪಂಜಾಬದ ಮಲೇರಿಯಾ ನಿರೋಧಿ ಆಂದೋಳನದಿಂದ ಇತರ ಕೆಲವು ಪ್ರಯೋಜನಗಳೂ ಲಭಿಸಿವೆ. ಅತಿಸಾರ ಮತ್ತು ಆಮಶಂಕೆ ಮುಂತಾದ ಕೀಟಗಳಿಂದುಂಟಾಗುವ ರೋಗಗಳು ಕಡಿಮೆಯಾಗಿವೆ ಮತ್ತು ಇಲಿಗಳ ನಿರುದ್ಧಕ್ರಮ ಕೈಗೊಳ್ಳದೆಯೇ ಪ್ಲೇಗ್ ರೋಗವು ನಿರ್ಮೂಲವಾಗಿದೆ. ತಮ್ಮ ಪಶುಗಳ ಆರೋಗ್ಯವು ಸುಧಾರಿಸಿದೆ. ಎಂದು ರೈತರು ಹೇಳುತ್ತಾರೆ. ಕೀಟಗಳ ವಿನಾಶದಿಂದಾಗಿ, ಧಾನ್ಯಗಳ ಸಂಗ್ರಹ ಸುರಕ್ಷಿತವಾಗುಳಿದು, ಆಹಾರದ ಪೂರೈಕೆಯು ಹೆಚ್ಚಿದೆ.

ಪಟ್ಟಣಿಗರಿಗೂ ಪ್ರಯೋಜನವಾಗಿದೆ. ಅವರ ಆರೋಗ್ಯ ಉತ್ತಮಗೊಂಡಿದೆ, ಕಿಟಕಿ ಬಾಗಿಲುಗಳನ್ನು ಮುಚ್ಚದೆ ಇಲ್ಲವೇ ಸೊಳ್ಳೆ ಪರದೆಗಳಿಲ್ಲದೆ ಅವರು ಸುಖಕರವಾದ ನಿದ್ದೆಯನ್ನನುಭವಿಸುತ್ತಾರೆ.

ಡಾ| ದೇವ್‌ರಾಜ್ ಮೆಹತಾ ಎಂಬ ಉತ್ಸಾಹಿ ಮಲೇರಿಯಾ ತಜ್ಞರು ರಾಜ್ಯದ ಈ ಮಲೇರಿಯಾ ನಿರೋಧಿ ಆಂದೋಲನದ ಮುಖ್ಯಸ್ಥರಾಗಿದ್ದಾರೆ. ಇವರಿಗೆ ಈ ವಿಷಯದಲ್ಲಿ ತುಂಬ ವೈಜ್ಞಾನಿಕ ಮತ್ತು ವ್ಯಾವಹಾರಿಕ ಅನುಭವವಿದೆ. ಕೇಂಬ್ರಿಜ್ ಮತ್ತು ಹಾರ್ವರ್ಡ್‌ಗಳಲ್ಲಿ ಕಲಿತ ಇವರು ರಾಕ್‌ಫೆಲರ್‌ರ ವಿಶೇಷ ಶಿಷ್ಯ ವೃತ್ತಿ ಪಡೆದು ಪ್ಯೂಟೋರಿಕೋದಲ್ಲಿ ತಮ್ಮ ಮೊದಲ ಅನುಭವಗಳಿಸಿದರು. ಇನ್ನೊಂದು ರಾಕ್‌ಫೆಲರ್ ಗ್ರ್ಯಾಂಟ್ ಪಡೆದು ಅವರು ಕಸೌಲಿಯ (ಈಗ ದೇಹಲಿಯ) ಮಲೇರಿಯ ಇನ್ಸ್‌ಟಿಟ್ಯೂಟಿಗೆ ಹೆಚ್ಚಿನ ವ್ಯಾಸಂಗ ಜರುಗಿಸಲು ಬಂದರು. ಅಂದಿನಿಂದ ಇವರು ಮಲೇರಿಯಾ ಧ್ವಂಸ ಕಾರ್ಯಕ್ರಮದಲ್ಲಿ ನಿರತರಾಗಿದ್ದಾರೆ.

ವೈಷ್ಣವ ಶಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ಎಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: 0—3—0; ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು. ನೂರು ಪ್ರತಿಗಳಿಗೆ ರಿಯಾಯಿತಿ ದರವಿದೆ. ವಿಚಾರಿಸಿರಿ.

ನವಯುಗ ಪ್ರೆಸ್, ಉಡುಪಿ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ
ನೀವೂ ಭಾಗಿಗಳಾಗಿರಿ !!!
! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬ್ಯಾಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ
! ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ
ದಿ ವಿಜಯ ಬ್ಯಾಂಕ್ ಲಿಮಿಟೆಡ್.

(೩ನೇ ಪುಟದಿಂದ)

ತೆಯಾರಿಸಲ್ಪಡುತ್ತವೆಂಬುದು ನಿಜ. ಆದರೆ ವಿದೇಶಗಳ ಅವಲಂಬನೆಯನ್ನು ನಾವು ತ್ಯಜಿಸುವುದಕ್ಕೆ ಇನ್ನೂ ಬಹಳ ಕಾಲ ಬೇಕಾದೀತು. ಸ್ವಾವಲಂಬನದ ದೀಕ್ಷೆಗೆ ಬದ್ಧರಾಗಬೇಕೆಂದು ಹಟತೊಡಬೇಕಾದರೂ ಹೊರಗಿನವರ ನೆರವನ್ನೆ ನಿರಾಕರಿಸಿದರೆ, ಮೊಗಲರ ಗುಂಡಿನೇಟನ್ನು ಈಟಿಯ ಶಿವಿರದಿಂದ ಇದಿರಿಸಿದ ರಜಪೂತರ ಪಾಡು ನಮ್ಮದಾಗುವ ಸಂಭವ ಹೆಚ್ಚು.

ಭಾರತವು ಬಹಳ ವಿಶಾಲವಾದ ದೇಶವಾದುದರಿಂದ, ಅದರ ರಕ್ಷಣೆಗಾಗಿ ಸಣ್ಣ ಮಟ್ಟಿನ ಕಾರ್ಯಕ್ರಮ ಸಾಲದು ಆಯಕಟ್ಟಿನ ಕ್ಷೇತ್ರಗಳ ರಕ್ಷಣೆಗೆ ವಾಯುಸೇನೆಯೂ ಹಡಗು ಪಡೆಯೂ ಒಟ್ಟಾಗಿ ಹೊಣೆಯನ್ನು ಹೊರಬೇಕು ಹಿಮಾಲಯದ ಕಣಿವೆಗಳು, ಮೂರೂ ಕಡೆಯಿಂದ ಆವರಿಸಿರುವ ಸಮುದ್ರಗಳು ಈ ಎಚ್ಚರಿಕೆಯನ್ನು ಕೊಡುತ್ತವೆ. ಈ ದೃಷ್ಟಿಯಿಂದ ಸೇನೆಯ ಇವೆರಡೂ ವಿಭಾಗಗಳು ಬಹಳ ಅಭಿವೃದ್ಧಿಯನ್ನು ಹೊಂದಬೇಕಾಗಿದೆ ಎಂಬುದರಲ್ಲಿ ಅನುಮಾನವಿಲ್ಲ.

ಶಸ್ತ್ರಗಳು ಅತ್ಯಾಧುನಿಕವಿದ್ದರೆ, ಸೈನ್ಯದ ತುಣುಕು ಸಣ್ಣದಿರಬಹುದೆಂದು ಇಟ್ಟುಕೊಂಡರೂ ಒಮ್ಮೆ ಯುದ್ಧ ತೊಡಗಿದರೆ, ಆಗ ಅನೇಕರ ಹತ್ಯೆಯಾಗುವುದರಿಂದ ಸೇನೆಯಲ್ಲಿ ಒಡನೆಯೇ ಭರ್ತಿ ಮಾಡಿಕೊಳ್ಳಬಲ್ಲ ರಾಷ್ಟ್ರನಿಷ್ಠ ವ್ಯಕ್ತಿಗಳ ಸಮೂಹ ಸಿದ್ಧಗೊಂಡಿರುವುದು ಅಗತ್ಯವಾಗುತ್ತದೆ ಇದಕ್ಕೋಸ್ಕರ ಭಾರತ ಸರಕಾರವು ಪ್ರಾದೇಶಿಕ ಸೈನ್ಯ ವಿಭಾಗ, ರಾಷ್ಟ್ರೀಯ ಸೈನಿಕ ವಿದ್ಯಾರ್ಥಿ ಸಂದಳಗಳನ್ನಲ್ಲದೆ, ಇದೇ ಮೇ ೧ರಂದು ರಾಷ್ಟ್ರೀಯ ಸ್ವಯಂ ಸೇವಕರ ಪಡೆಯನ್ನು ನಿರ್ಮಿಸಲೂ ಉದ್ಯುಕ್ತವಾಯಿತು.

ರಾಷ್ಟ್ರ ರಕ್ಷಣೆಯ ಜವಾಬ್ದಾರಿಯು ಸರಕಾರಕ್ಕೆ ಸೇರಿದ್ದೆಂಬುದು ನಿರ್ವಿವಾದ—ಆದರೆ ಜನರಿಗೂ ಸರಕಾರ ಏನು ಮಾಡುತ್ತಿದೆ ಎಂಬುದನ್ನು ತಿಳಿದುಕೊಳ್ಳುವ ಅಧಿಕಾರ ಪ್ರಜಾಪ್ರಭುತ್ವ ಪದ್ಧತಿಯಂತೆ ಸಿಕ್ಕಿರುತ್ತದೆ. ನಮ್ಮ ಭದ್ರತೆಗಾಗಿ ಸರಕಾರ ಏನು ಮಾಡಿದೆ, ಸೇನೆಯ ಕೆಲಸ ಹೇಗೆ ಸಾಗಿದೆ ಎಂಬುದನ್ನು ನಾವು ಕೇಳಿ ತಿಳಿದುಕೊಳ್ಳುವುದರಲ್ಲಿ ತಪ್ಪೇನಿಲ್ಲ. ಮೇಲಿನ ಮಾತುಗಳಿಂದ ಸರಕಾರ ಪರಿಸ್ಥಿತಿಯ ಕಟುಪ್ಪಾಗೊಳಪಟ್ಟು ಚೆನ್ನಾದ ರೀತಿಯಲ್ಲಿಯೇ ಕಾರ್ಯ ನಿರ್ವಹಿಸುತ್ತದೆಂದು ಸಮಾಧಾನಪಡಬಹುದು.

ಮಾವಿನ ಹಣ್ಣಿನ ಋತು

ಮದುವೆಯಾದವರಿಗೆ ಮಾವನ ಹೆಣ್ಣು ಎಷ್ಟು ಪ್ರಿಯಳೆನಿಸುವಳೋ ಮಕ್ಕಳಿಂದ ಮುದುಕರ ವರೆಗೆ ಎಲ್ಲರಿಗೂ ಮಾವಿನ ಹಣ್ಣು ಅಷ್ಟೇ ಪ್ರಿಯವಾದ ವಸ್ತು. ಚೈತ್ರ ಮಾಸದಲ್ಲಿ ತಿನ್ನಲು ಸಿಗುವ ಈ ಚೂತಫಲವು ಜಗತ್ತಿಗೆ ಭಾರತ ನೀಡಿದ ಅತ್ಯುತ್ತಮ ಹಣ್ಣು

ತೆನ್ನಾಲಿ ರಾಮಕೃಷ್ಣನಿಗೆ ಸಂಬಂಧಿಸಿದ ಕತೆಯೊಂದು ಮಾವಿನ ಹಣ್ಣಿನ ವಿಷಯದಲ್ಲಿ ವ್ಯಂಗ್ಯ ಪ್ರಕರಣವೊಂದನ್ನು ವಿವರಿಸುತ್ತದೆ- ಕೃಷ್ಣದೇವರಾಯರು ಮಾವಿನ ಹಣ್ಣನ್ನು ತಿನ್ನಬೇಕೆಂಬ ತಮ್ಮ ತಾಯಿಯ ಅಂತ್ಯಾಸೆಯನ್ನು ಕೈಗೂಡಿಸದುದಕ್ಕೆ ಚಿನ್ನದ ಮಾವಿನ ಹಣ್ಣನ್ನು ಬ್ರಾಹ್ಮಣರಿಗೆ ದಾನವಿತ್ತರು ಆದರೆ ಇದನ್ನು ಮೆಚ್ಚದ ತೆನ್ನಾಲಿ ರಾಮಕೃಷ್ಣನು ತನ್ನ ತಂದೆಯು ಅಂತ್ಯಕಾಲದಲ್ಲಿ ಕಾಸಿದ ಕಬ್ಬಿಣದ ಬರೆ ಎಳೆಯಲು ಹೇಳಿದ್ದರೆನ್ನುತ್ತಾ ಆ ಬ್ರಾಹ್ಮಣರಿಗೆಲ್ಲ ಪೀಡೆಕೊಟ್ಟನು

ಕತೆಯ ತಿರುಳೇನೇ ಇರಲಿ—ಮಾವಿನ ಹಣ್ಣನ್ನು ತಿನ್ನಬೇಕೆಂಬ ಆತುರ ಎಲ್ಲರಿಗೂ ಆಗುವುದೇನು ಸುಳ್ಳಲ್ಲ ಭಾರತದ ಹಣ್ಣುಹಂಪಲುಗಳಲ್ಲಿ ಬಾಳೆ ಅಗ್ಗವಾದದ್ದು, ಮತ್ತು ವರ್ಷದ ಹನ್ನೆರಡೂ ತಿಂಗಳು ಅದು ಸಿಗುತ್ತದೆ. ಆದರೆ ವಿದೇಶಗಳಲ್ಲಿ ಕೀರ್ತಿಗಳಿಸಿರುವ ಫಲ ಮಾತ್ರ ಮಾವಿನ ಹಣ್ಣು

ಪ್ರಧಾನ ಮಂತ್ರಿ ನೆಹರುಗಳು ಬರ್ನಾಡ್ ಶಾರನ್ನು ನೋಡಲು ಹೋಗಿದ್ದಾಗ ಅವರಿಗೆ ಮಾವಿನ ಹಣ್ಣನ್ನು ತಿನ್ನಕೊಟ್ಟು ಮೆಚ್ಚಿಗೆ ಸಂಪಾದಿಸಿದರು, ಮೊನ್ನೆ ಬಾಂಡುಂಗಿನಿಂದ ಮರಳಿಬಂದಿದ್ದಾಗ ಅಲ್ಲಿ ನೆರೆದಿದ್ದ ಆಫ್ರೋಏಸ್ಯ ರಾಷ್ಟ್ರಗಳ ಪ್ರತಿನಿಧಿ ಮಂಡಳಗಳಿಗೆ ಸ್ವಾದಿಷ್ಟವಾದ ಮಾವಿನ ಹಣ್ಣುಗಳನ್ನು ವಿಮಾನ ಮೂಲಕ ತರಿಸಿಕೊಟ್ಟರು ಪ್ರಾಣಿಗಳ ಮಟ್ಟಿಗೆ ಆನೆ ಹೇಗೋ, ಪುಷ್ಪಗಳಲ್ಲಿ ಕಮಲ ಹೇಗೋ, ಹಾಗೆ ಹಣ್ಣುಗಳಲ್ಲಿ ಮಾವು ಭಾರತದ ವೈಶಿಷ್ಟ್ಯ.

ಇದೇ ೨೧ ನೇ ದಿನಾಂಕ ಮುಂಬಯಿ ನಗರದಲ್ಲಿ ಮಾವಿನ ಹಣ್ಣಿನ ಅಖಿಲ ಭಾರತ ಸ್ವರೂಪದ ಪ್ರದರ್ಶನವೊಂದು ಜರಗುತ್ತದೆ. ಇದು ಹಣ್ಣಿನ ಕೀರ್ತಿಯನ್ನು ನಾಲ್ದೆಸೆಗೆ ವಿಸ್ತರಿಸುವುದಕ್ಕೆ ಮತ್ತು ಹಣ್ಣಿನ ಕೃಷಿಗೆ ಸಂಬಂಧಿಸಿದ ವಿಷಯಗಳ ಸಮಸ್ಯೆಗಳನ್ನು ಪರ್ಯಾಲೋಚಿಸುವುದಕ್ಕೆ ತುಂಬ ನೆರವಾಗದಿರದು ನಮ್ಮಲ್ಲಿ ಹಿಂದುಗಳಿಗೆ ಮಾವಿನ ಮರದ ಗುರುತು ಇದ್ದೇ ಇದೆ—ಏಕೆಂದರೆ ಹೆಣ ಸುಡಲು ಅದರ ಕಟ್ಟಿಗೆ ಬೇಕೇ ಬೇಕು ಮಾವಿನ ಮರದ ಅಗತ್ಯವಿಲ್ಲದಿದ್ದವರು ಹಣ್ಣಿನ ಆಶೆಯಿಂದಾದರೂ ಅದರತ್ತ ಗಮನ ಕೊಡಬಹುದು

ಸಾಮಾನ್ಯವಾಗಿ ಮಾವಿನ ಮರ ಸಮುದ್ರ ಮಟ್ಟದಿಂದ ಮೂರೂವರೆ ಸಾವಿರ ಅಡಿ ಎತ್ತರದ ವರೆಗೆ, ಸಾಕಷ್ಟು ಫಲವತ್ತಾದ ಮಣ್ಣಿನಲ್ಲಿ ಬೆಳೆಯುತ್ತದೆ. ಹೂ ಬಿಡುವ ಮತ್ತು ಹೀಚು ಮಿಡಿಯಾಗಿ ಪಕ್ವಾಗುವ ವರೆಗಿನ ಅವಧಿಯಲ್ಲಿ ಮಳೆಯಿಲ್ಲದೆ ಒಣಕಲಾದ ಹವಾಮಾನವಿರಬೇಕು, ಯಾವ ಸಂದರ್ಭದಲ್ಲೂ ಹಿಮ, ಮಂಜು, ವಿಪರೀತ ಚಳಿ ಇತ್ಯಾದಿ ಇರಬಾರದು ನೀರು ಹೆಚ್ಚುಬೇಕೆಂದೇನಿಲ್ಲ— ಆದರೆ ನೀರಿನ ಆಶ್ರಯ ತಪ್ಪಿ ಮರ ಬಾಳಲಾರದು

ಹಳ್ಳಿಗಳಲ್ಲಿ ಹೆಚ್ಚಾಗಿ ಅಲ್ಲೊಂದು ಇಲ್ಲೊಂದು ಮರ ಬೆಳೆದಿರುವುದನ್ನು ನಾವು ಕಾಣುತ್ತೇವೆ. ಅವುಗಳಲ್ಲಿ ಕೆಲವದರ ಹಣ್ಣು ಸಿಹಿಯಾಗಿದ್ದರೆ ಹಲವದರದ್ದು ಹುಳಿ ಮೊದಲನೆಯದನ್ನು ತಿನ್ನಲು ಉಪಯೋಗಿಸಲಾಗುತ್ತದೆ, ಎರಡನೆಯ ವರ್ಗದವು ಇನ್ನೂ ಕಾಯಿಯಾಗಿರುವಾಗಲೇ ಕೊಯ್ಯಲ್ಪಟ್ಟು ಉಪ್ಪಿನಕಾಯಿಯಾಗಿ ಬಳಸಲ್ಪಡುತ್ತವೆ

ಶಾಸ್ತ್ರೀಯ ರೀತಿಯಲ್ಲಿ ತೋಟಗಳನ್ನು ನಿರ್ಮಿಸಿ ಕಸಿಮಾಡಿದ ಸಸಿಗಳನ್ನು ಪೋಷಿಸಿ, ತಿನ್ನಲು ರುಚಿಕರವಾದ ಹಣ್ಣನ್ನು ಉತ್ಪಾದಿಸುವ ಕ್ರಮ ಈಗ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ ಚಿಕ್ಕದಾದ ಗೊರಟೆನ ಹಾಗೂ ನಾರಿಲ್ಲದೆ ಸಿಹಿ ನೀರನ್ನೆ ಚಿಮ್ಮುವ ಪಕ್ವವಾದ ಈ ಹಣ್ಣುಗಳು ಹಲವು ಮಂದಿಗೆ ಜೀವನೋಪಾಯವನ್ನು ಒದಗಿಸಿಕೊಡುತ್ತವೆ

ಕಸಿ ಹಣ್ಣುಗಳಲ್ಲಿ ಮಾರ್ಚಿಯಿಂದ ಮೇ ವರೆಗೆ, ಮೇ ಯಿಂದ ಜೂನಿನ ವರೆಗೆ, ಜುಲಾಯಿಯಿಂದ ಆಗೋಸ್ತು ವರೆಗೆ ಪಕ್ವವಾಗುವ ಬೇರೆ ಬೇರೆ ಜಾತಿಗಳುಂಟು ಅಷ್ಟೇ ಯಲ್ಲ— ಸಪ್ತಂಬರದಿಂದ ಜನವರಿ ತಿಂಗಳ ತನಕವೂ ಹಣ್ಣುಕೊಡುವ ವಿಶಿಷ್ಟ ಕಸಿಯೂ ನೋಡ ಸಿಗುತ್ತವೆ

ಜುಲಾಯಿ ತಿಂಗಳಿಂದ ಡಿಸಂಬರದ ವರೆಗೆ ಅನುಕೂಲ ಸಮಯ ನೋಡಿಕೊಂಡು ಮಾವಿನ ಸಸಿಗಳನ್ನು ನಡಲಾಗುತ್ತದೆ ಜೋರಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ಮಳೆಗಾಲ ಕಳೆದ ಮೇಲೆಯೇ ಈ ಕೆಲಸ ನಡೆಯುತ್ತದೆ ನಾಲ್ಕು ಅಡಿ ಆಳವಾದ ಹೊಂಡ ತೋಡಿ ಅದನ್ನು ಕೆಂಪು ಹೊತಿಯ ಫಲವತ್ತಾದ ಮಣ್ಣು, ಎಲುಬಿನ ಹುಡಿ, ಹಟ್ಟಿಯ ಗೊಬ್ಬರ ಮುಂತಾದವುಗಳಿಂದ ತುಂಬಿಸಿ, ಸಸಿಯನ್ನು ನಟ್ಟು ನೀರೆರೆಯುವುದು ಕ್ರಮ

ದೊಡ್ಡದಾದ ಬಳಿಕವೂ ವಾರಕ್ಕೆರಡು ಸಲ ನೀರು ಬಿಟ್ಟು, ಚೆನ್ನಾದ ಗೊಬ್ಬರವನ್ನು ಹಾಕಿದರೆ ಗಿಡ ಪುಷ್ಟಿಯಾಗಿ ಬೆಳೆಯುತ್ತದೆ. ನಾಲ್ಕು ವರ್ಷಗಳ ವರೆಗೆ ಹೂ ಬಿಟ್ಟಾಗಲೆಲ್ಲ ಅದನ್ನು ಕೈಯಿಂದ ಕಿತ್ತೊಗೆಯುವುದು ಹಿತಕರ ಕೊಂಬೆರೆಂಬೆಗಳು ವಿಶಾಲವಾಗಿ ಹಬ್ಬಿದಾಗ ಒಂದು ಇನ್ನೊಂದಕ್ಕೆ ಆತಂಕಮಾಡದಂತೆ ಹೊಂಡ ತೋಡುವಾಗಲೇ ಸುಮಾರು ೪೦ ಅಡಿ ದೂರವನ್ನಿಟ್ಟುಕೊಳ್ಳುವುದು ಅಪೇಕ್ಷಣೀಯ

ಬಂದಣಿಕೆಯು ಮಾವಿನ ಮರಕ್ಕೆ ಬಹಳ ಬೇಗ ಹಬ್ಬುತ್ತದೆ, ಇದನ್ನು ಕೂಡಲೇ ಕಿತ್ತು ತೆಗೆಯದಿದ್ದರೆ ಮರಕ್ಕೆ ಅಪಾಯ ತಪ್ಪದು ಕೆಲವು ಕೀಟಗಳೂ ಬಾಧೆ ಕೊಡುತ್ತವೆ ತೋಟಗಾರರು ಆಡು ಮತ್ತಿತರ ಜಾನುವಾರುಗಳಿಂದ ಗಿಡದ ಸಂರಕ್ಷಣೆಗೆ ಮನಸ್ಸು ಕೊಟ್ಟಷ್ಟೇ ಈ ವಿಷಯಗಳಿಗೂ ಗಮನವೀಯಬೇಕಾಗುತ್ತದೆ

ಹಲ್ಲಿಲ್ಲದ ಬೊಚ್ಚುಬಾಯಿಯವರಿಗೂ ತಿನ್ನಲು ರುಚಿಯೆನಿಸಿದ ಈ ಹಣ್ಣು ವೈದ್ಯಕೀಯ ವಿಜ್ಞಾನದ ಶಾಪಕ್ಕೆ ಗುರಿಯಾಗಿರುವುದು ಮಾತ್ರ ಶೋಚನೀಯ ಮಾವಿನ ಹಣ್ಣಿನ ಅತಿಯಾದ ಉಪಯೋಗವು ಆಮಶಂಕೆ, ಅಜೀರ್ಣ ಮುಂತಾದ ರೋಗಗಳಿಗೆ ನೆಪವಾಗುತ್ತದೆಂದು ವೈದ್ಯರ ಅಭಿಪ್ರಾಯ ಆದರೆ ಆರೋಗ್ಯವಂತರು ದಿನಕ್ಕೊಂದು ಹಣ್ಣನ್ನು ತಿಂದರೆ ಅಪಾಯವಾಗಲಿಕ್ಕಿಲ್ಲ—ರೋಗ ಪೀಡಿತರ ವಿಷಯದಲ್ಲಿ ಮಾತ್ರ ಜಾಗ್ರತೆ ವಹಿಸಿದರಾಯಿತು

ಸ್ವೀಕಾರ- ವಿಮರ್ಶೆ

ಪಾಲಿಗೆ ಬಂದ ಪಂಚಾಮೃತ

ಬರೆದವರು: ನಿರಂಜನ ಪ್ರಕಾಶಕರು: ಸುಧಾ ಪ್ರಕಾಶನ, ೨೮೧, ೫ನೇ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು ೨ ಬೆಲೆ. ರೂ ೦—೧೫—೦.

ಸುನಂದೆ ಸುಂದರಿ ಮತ್ತು ಸುಗುಣೆ—ಮದುವೆಯಾಗಿ ಗಂಡನ ಮನೆಗ ಬಂದ ಮೊದಲಲ್ಲಿ ಅವನ ಪ್ರೀತಿ ಪಾತ್ರಳಾಗಿದ್ದಳು, ಆದರೆ ಒಮ್ಮಿಂದೊಮ್ಮೆ ಎಂದು ಹೇಳಬಹುದಾದಂತೆ, ಗಂಡನಿಗೆ ಹೆಂಡತಿಯು ಗುಲಾಮ ತಾನ ಗಟಾರದೆಂಬ ಭಾವನೆ ಮೂಡಿ, ಕಠೋರ ರೀತಿಯಲ್ಲಿ ಅವನು ನಡೆದುಕೊಳ್ಳುತ್ತಾನೆ. ಇದರಿಂದ ಸುನಂದೆಯ ಜೀವನ ಅಂದಗೆಡುತ್ತದೆ ಆದರೆ ಗಂಡನಿಂದ ಬಿಡುಗಡೆಯನ್ನು ಈ ಮಧ್ಯಮ ವರ್ಗದ ಹೆಣ್ಣು ಮಗಳು ಪಡೆಯಲಾರದವಳಾಗುತ್ತಾಳೆ—ಆದುದರಿಂದ ಪಾಲಿಗೆ ಬಂದದ್ದೇ ಪಂಚಾಮೃತವೆನ್ನಬೇಕಾಗುತ್ತದೆ ಕರುಣಾಜನಕವಾದ ಈ ಕತೆಯನ್ನು ನಿರಂಜನರು ತಮ್ಮ ಸೊಗಸಾದ ಶೈಲಿಯಲ್ಲಿ ಆಕರ್ಷಕವಾಗುವಂತೆ ನಿರೂಪಿಸಿದ್ದಾರೆ. ಕೂಲಿಯ ಕುಟುಂಬ, ಧನಿಕ ದಂಪತಿಗಳು ಮುಂತಾದವರ ಪ್ರಸಂಗಗಳನ್ನು ನಡುವೆ ತಂದು, ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದರೆ ಮಾತ್ರ ಹೆಂಗಸು ಗಂಡನಿಗೆ ಸಮಾನಳಾಗಿರಬಹುದು, ಅಥವಾ ದಾಂಪತ್ಯ ವಿಚ್ಛೇದನದ ಸ್ವಾತಂತ್ರ್ಯವನ್ನು ಪಡೆಯಬಹುದು ಎಂಬ ತತ್ವವನ್ನು ಪ್ರತಿಪಾದಿಸಿದ್ದಾರೆ ಆದರೆ ಕತೆಯಲ್ಲಿ ಎರಡು ಮುಖ್ಯ ದೋಷಗಳಿವೆ— ಒಂದನೆಯದು, ಕತೆ ಪೂರ್ಣವಾದಂತೆ ತೋರುವುದಿಲ್ಲ, ಬ್ರೇಕು ಹಾಕಿ ನಡುದಾರಿಯಲ್ಲಿ ನಿಲ್ಲಿಸಿದಂತೆ ಭಾಸವಾಗುತ್ತದೆ ಎರಡನೆಯದು, ಸುನಂದೆಯ ಗಂಡನ ಮನೋಭಾವನೆ ಬದಲಾದುದಕ್ಕೆ ಕೊಟ್ಟ ಕಾರಣಗಳು ಸತ್ಯವೆನಿಸುವುದಿಲ್ಲ, ಅವು ಕೃತಕ ಹಾಗು ಕಲ್ಪಿತವಾಗಿಯೇ ತೋರುತ್ತವೆ ಕಾದಂಬರಿ ಲೇಖನದಲ್ಲಿ ಪಳಗಿರುವ ನಿರಂಜನರು ಇವನ್ನು ಸರಿಯಾಗಿ ಸಂಘಟಿಸಲಿಲ್ಲವೊ ಎಂದೆನಿಸುತ್ತದೆ.

ವೀರಶೈವ ಸಾಹಿತ್ಯ

ಬರೆದವರು ಶ್ರೀ ಬಿ ವಿ. ಶ್ರೀನಿವಾಸ ರಾವ್, ಎಂ. ಎ ಪ್ರಕಾಶಕರು ಶ್ರೀ ಬಿ. ಪಿ ರಾಜೋಜಿ ರಾವ್, ಮುಖ್ಯೋಪಾಧ್ಯಾಯ, ರಾಜೋಜಿ ರಾವ್ ಪ್ರೈವೇಟ್ ಹೈಸ್ಕೂಲ್, ತುಮಕೂರು ಬೆಲೆ: ರೂ ೦-೫-೦

ಕುತೂಹಲವನ್ನು ಕೆರಳಿಸುವ ಶೀರ್ಷಿಕೆಯುಳ್ಳ ಈ ಪುಸ್ತಕವನ್ನು ತೆರೆದು ಓದಿದ ಬಳಿಕ ನಮಗೆ ಪೂರಾ ನಿರಾಶೆಯಾಗುತ್ತದೆ ವೀರಶೈವ ಸಾಹಿತ್ಯದ ಪರಿಚಯ ಮಾಡಿಕೊಡುವ ವಿಮರ್ಶಾತ್ಮಕ ಗ್ರಂಥವಿದೆಂದು ಭಾವಿಸಿದವರು ಕೆಲವು ವ್ಯಕ್ತಿಗಳ ಪ್ರಶಂಸೆಗಾಗಿಯೇ ಬರೆದ ಈ ಸಣ್ಣ ಲೇಖನದಿಂದ ನಿಜಕ್ಕೂ ಜುಗುಪ್ಸೆಹೊಂದುತ್ತಾರೆ ಇಲ್ಲಿ ಪ್ರಸ್ತಾಪಿಸಿರುವ ತಮ್ಮ ಪರಿಚಯದವರು ನೆರೆದ ಸಭೆಯೊಂದರಲ್ಲಿ ಭಾಷಣಮಾಡಲು ಈ ಪುಸ್ತಕವನ್ನು ಲೇಖಕರು ಉಪಯೋಗಿಸಬಹುದೇ ಹೊರತು, ಗ್ರಂಥ ರೂಪದಲ್ಲಿ ಪ್ರಕಟಿಸುವಷ್ಟು ಯೋಗ್ಯತೆಯ ವಿಷಯ, ಸಂಗತಿ ಇದರಲ್ಲಿಲ್ಲ

ಗೀತೆಯ ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ
ಭಗವದ್ಗೀತೆಯ ಸಮೂಲ
ಭಾಷಾಂತರ.
ನವಯುಗ ಪ್ರೆಸ್ ಉಡುಪಿ.

ಜನಾದರಣೀಯವಾದ ಪುಸ್ತಕಗಳು
ಕೆಲವೇ ಪ್ರತಿಗಳಿವೆ! ಈಗಲೇ ತರಿಸಿಕೊಳ್ಳಿ!
— ಹಿಂದಿನಿಂದ ನಿರಾಶರಾಗಬೇಡಿ' —
ವಾಚನಾಲಯದವರಿಗೆ ಯೋಗ್ಯ ಕಮಿಶನು!
ವ್ಹಿ. ಪಿ. ಇಲ್ಲ! ಮುಂಗಡ ಹಣ ಕಳಿಸಬೇಕು!!
೨ ಕಾದಂಬರಿ! ೨ ನಾಟಕ! ೩ ಕಥೆಗಳು! ೧ಪ್ರಬಂಧ!

೧ ತೆರೆದ ಕಣ್ಣು (ಕಾ.)	೩-೦-೦	೫ ಆರು ಕಥೆಗಳು	೧-೪-೦
೨ ಪ್ರಾಣಾಹುತಿ (ಕಾ.)	೩-೮-೦	೬ ಪ್ರತಿಫಲ ೩ ಕಥೆಗಳು	೧-೩-೦
೩ ಸಂಗೊಳ್ಳಿರಾಯಣ್ಣ (ನಾ.)	೧-೮-೦	೭ ವೀರಾಗ್ರಣಿ ಎಚ್ಚಮ	೦-೫-೦
೪ ವಿಜಯಸಾಮ್ರಾಜ್ಯ (ನಾ.)	೧-೮-೦	೮ ಕನ್ನಡ ಸಾಹಿತ್ಯವಾಹಿನಿ	೨-೮-೦

ಮೇಲಿನ ೮ ಪುಸ್ತಕಗಳನ್ನು ಒಮ್ಮೆಲೆ ೧೪-೧೩-೦ ರೂ. M. O. ಕಳಿಸಿದವರಿಗೆ ಅಂಚೆ ವೆಚ್ಚ ನಾವೇ ವಹಿಸಿಕೊಂಡು ಪುಕ್ಕಟೆಯಾಗಿ ಕಳಿಸುವೆವು,
—ಯಾವ ಪುಸ್ತಕಗಳು ಬೇಕಾದರೂ ಬರೆಯಿರಿ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರರಿಗಳೂ
'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.
ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.
1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ,

Edited Printed & Published By K. H. Shetty at the Navayuga Press, Udipi, S. India